ಕರ್ನಾಟಕ ಸಾಹಿತ್ಯ
ಪರಿಷತ್ಪತ್ರಿಕೆ

ಸಂಪುಟ	ಸಂಚಿಕೆ	ಇಸವಿ
೧೦	೩	೧೯೨೫-೨೬ ~~[illegible]~~ ~~[illegible]~~
೧೧	೩-೪	೧೯೨೬-೨೭
೧೨	೧-೪	೧೯೨೭-೨೮
೧೩	೧-೪	೧೯೨೮-೨೯

ಶ್ರೀ

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ

ಸಂಪುಟ ೧೦] ಕ್ರೋಧನ ಸಂ॥ ಆಶ್ವಯುಜ ಮಾಸ [ಸಂಚಿಕೆ ೩

ಸಾಹಿತ್ಯ ಶಾಸ್ತ್ರ ವಿಚಾರ — ೬

೬. ಶಬ್ದದ ಲಕ್ಷಣಾ ಶಕ್ತಿ

೧. ಪೂರ್ವ ಲೇಖನದ ಕೆಲವು ವಿಚಾರಗಳು.—ಹಿಂದಿನ ಲೇಖನದಲ್ಲಿ, ಕಾವ್ಯಕ್ಕೆ ಮುಖ್ಯಾಂಗವಾಗಿ ಎಣಿಸಲ್ಪಟ್ಟ ಶಬ್ದಶಕ್ತಿಯು ಅಭಿಧಾ ಲಕ್ಷಣಾ ಮತ್ತು ವ್ಯಂಜನಾ ರೂಪದಿಂದ ಮೂರು ವಿಧವಾಗಿರುವುದೆಂದು ನಿರೂಪಿಸಿದೆ. ಅವುಗಳಲ್ಲಿ ಶಬ್ದದ ಅಭಿಧಾ ಶಕ್ತಿಯು ವಿಷಯವಾಗಿ ಪೂರ್ವ ಲೇಖನದಲ್ಲಿ ವಿಚಾರ ಮಾಡಿದುದಾಯಿತು. ಈ ಲೇಖನದಲ್ಲಿ ಲಕ್ಷಣಾ ಶಕ್ತಿಯು ನಿರೂಪಣೆಯನ್ನು ಮಾಡಬೇಕಾಗಿದೆ. ಶಬ್ದದ ಮುಖ್ಯಾರ್ಥ, ಅಥವಾ ರೂಢಾರ್ಥಕ್ಕೆ ಬಾಧೆಯುಂಟಾದರೆ, ತತ್ಸಂಬಂಧವಾದ ಬೇರೆ ಅರ್ಥವನ್ನು ಸ್ವಲ್ಪದರಲ್ಲಿಯೇ ಬೋಧಿಸುವ ಶಕ್ತಿಯೇ ಲಕ್ಷಣಾ ಶಕ್ತಿಯೆಂದು ನ್ಯಾಯಶಾಸ್ತ್ರಜ್ಞರು ಸಂಕ್ಷೇಪವಾಗಿ ನಿರೂಪಿಸಿರುತ್ತಾರೆ. ಶಬ್ದಗಳ ಪ್ರಯೋಗವಾದನಂತರ ತನ್ನಿರೂಪಕವಾದ ವಾಕ್ಯಾರ್ಥ ವಿಚಾರಮಾಡುವಲ್ಲಿ ಮನಸ್ಸಿಗೆ ಹೊಳೆಯುವ ಹೆಚ್ಚು ಅರ್ಥಗಳಿಗೆ ಅವಕಾಶವು ವ್ಯಂಜನಾ ಶಕ್ತಿಯು ಮೂಲಕ ಉಂಟಾಗುತ್ತದೆಂದು ಸಾಹಿತ್ಯ ಶಾಸ್ತ್ರಜ್ಞರು ನಿರೂಪಿಸುತ್ತಾರೆ.

೨. ಲಕ್ಷಣಾ ಶಕ್ತಿಯು ಸ್ವರೂಪ.—ಈಗ ನ್ಯಾಯಶಾಸ್ತ್ರಕ್ಕನುಸಾರವಾಗಿ "ಶಕ್ಯ ಸಂಬಂಧಿನೀ ಲಕ್ಷಣಾ" ಎಂಬ ವಾಕ್ಯವನ್ನು ಕುರಿತು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಒಬ್ಬ ಮನುಷ್ಯನನ್ನು ವರ್ಣಿಸುವಾಗ, ಅವನು ಸಿಂಹವೆಂದು ಪ್ರಯೋಗಮಾಡಿದರೆ ಸಿಂಹದಂತೆ ಅವನಿಗೆ ನಾಲ್ಕು ಕಾಲುಗಳಾಗಲಿ ಜಟಾಯುಕ್ತವಾದ ತಲೆಯಾಗಲಿ ಇರುತ್ತದೆಯೆಂದು ಭಾವಿಸುವುದಕ್ಕಾಗುವುದಿಲ್ಲ. ಆದರೂ, ಈ ಪದಪ್ರಯೋಗವೇನೋ ರೂಢಿಯಲ್ಲಿ ಕಂಡುಬರುತ್ತದೆ.

ಉದ್ದೇಶ ಕೋಟಿಯಲ್ಲಿ ಸೇರಿದ ಮನುಷ್ಯನಿಗೂ ವಿಧೇಯ ಕೋಟಿಯಲ್ಲಿ ಸೇರಿದ ಸಿಂಹಕ್ಕೂ ಒಂದಾನೊಂದು ಸಂಬಂಧವಿಲ್ಲದೆ ಇಂತಹ ಪ್ರಯೋಗವು ರೂಢಿಯಲ್ಲಿ ಬರಲಾರದೆಂಬುದು ಸರ್ವಸಿದ್ಧವಾದ ವಿಷಯ. ಈ ಪ್ರಯೋಗವನ್ನು ಮಾಡುವ ಪುರುಷನು ಯಾವುದಾದರೊಂದು ತಾತ್ಪರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ವಿಧೇಯ ಕೋಟಿಯಲ್ಲಿ ಸೇರಿದ ಸಿಂಹ ಶಬ್ದಕ್ಕೆ ತತ್ಸಂಬಂಧವಾದ ಬೇರೆ ಅರ್ಥವನ್ನು ಕಲ್ಪಿಸುವುದೂ, ಸಿಂಹ ಶಬ್ದದಲ್ಲಿಯೇ ಇಂತಹ ಕಲ್ಪನೆಗೆ ಅನುಗುಣವಾ ಬೇರೆ ಅರ್ಥವನ್ನು ಕೊಡುವ ಬೇರೆ ಶಕ್ತಿಯನ್ನು ಆರೋಪಣೆ ಮಾಡುವುದ ಶಬ್ದದ ಲಕ್ಷಣಾ ಶಕ್ತಿಯ ಮೂಲಾಧಾರವಾಗಿರುತ್ತದೆ.

ಇಲ್ಲಿ ನಿರೂಪಿಸಿರತಕ್ಕ ಪ್ರಯೋಗಕ್ಕೆ ವಿಷಯನಾದ ಮನುಷ್ಯನು ಸಿಂ ದಂತೆ ಕ್ರೂರ ಸ್ವಭಾವವುಳ್ಳವನೂ ಅಥವಾ, ನಿರ್ಭೀತನಾಗಿ ಧೈರ್ಯದಿಂದ ಕಾರ್ಯದಲ್ಲಿ ಪ್ರವರ್ತಿಸುವವನೂ ಎಂಬ ಗೂಢಾರ್ಥವನ್ನು ಮನಸ್ಸಿನಲ್ಲಿಟ್ಟುಕೊಂ ಇಂತಹ ಪ್ರಯೋಗವನ್ನು ಮಾಡುವ ಪದ್ಧತಿಯುಂಟು. ಹೀಗೆಯೇ, ನಾ ವಿಧವಾಗಿ ಸಾಮಾನ್ಯ ಜನರೂ ಸಹ ಪ್ರಯೋಗಮಾಡುವುದು ರೂಢಿಯಲ್ಲಿ ಕುತಂತ್ರಯುಕ್ತನಾದ ಒಬ್ಬ ಮನುಷ್ಯನನ್ನು ಕಂಡು ಅವನನ್ನು ನರಿಯೆಂತಲ ಕೇವಲ ದಡ್ಡನಾದ ಪುರುಷನೊಬ್ಬನನ್ನು ಕಂಡು ಅವನನ್ನು ಕೋಣನೆಂತಲ ನಿರೂಪಿಸುವುದು ವಾಡಿಕೆಯಾಗಿದೆ. ಈ ಪ್ರಯೋಗಗಳಲ್ಲಿಯೂ ನರಿ, ಕೋಣ ಮುಂತಾದ ಶಬ್ದಗಳಿಗೆ ಮೃಗಗಳೆಂಬ ಮುಖ್ಯಾರ್ಥವನ್ನು ಪರಿತ್ಯಾಗಮಾಡಿ ಅವು ಗಳಲ್ಲಿ ಕಾಣಬರುವ ಗುಣಗಳನ್ನೇ ನಿರೂಪಿಸುವ ಬೇರೆ ಅರ್ಥವನ್ನು ಈ ಶಬ್ದ ಗಳಿಂದ ತೋರ್ಪಡಿಸುವ ರೂಢಿಯೂ ಲಕ್ಷಣಾ ಶಕ್ತಿಯನ್ನನುಸರಿಸಿರುತ್ತದೆ.

ಇಲ್ಲಿ, 'ಮನುಷ್ಯನು ಸಿಂಹ' ಎಂದು ತಿಳಿಸುವ ವಾಕ್ಯವು ವ್ಯಾಕರ ರೀತ್ಯಾ ಯಾವ ವಿಧವಾಗಿಯೂ ಬಾಧಿತವಾಗದೆ ಇದ್ದರೂ ಅರ್ಥಗ್ರಹಣದ ಸಿಂಹದ ಮುಖ್ಯಾರ್ಥವನ್ನು ಇಲ್ಲಿ ಸಮನ್ವಯಿಸಲಾಗದೆ ಇರುವು ಪ್ರಯೋಕ್ತೃವಿನ ತಾತ್ಪರ್ಯಕ್ಕನುಗುಣವಾಗಿ ಸಿಂಹ ಶಬ್ದಕ್ಕೆ ಬೇರೆ ಅರ್ಥ ಕಲ್ಪಿಸುವುದೇ ಲಕ್ಷಣಾ ಶಕ್ತಿಯ ಮೂಲವೆಂದು ಶಾಸ್ತ್ರಜ್ಞರು ನಿರ್ಧರಿಸಿರ ಆದುದರಿಂದ, ವ್ಯಾಕರಣಾನುಪಪತ್ತಿಗಿಂತಲೂ ತಾತ್ಪರ್ಯಾನುಪಪ ಲಕ್ಷಣಾ ಶಕ್ತಿಯ ಕಲ್ಪನೆಗೆ ಮೂಲಕಾರಣವಾಗಿರುತ್ತದೆ. ಮೋಸಗಾರ ಅಪಾಯಕರನೂ ಆದ ದ್ವೇಷಿಯೊಬ್ಬನ ಮನೆಗೆ ಭೋಜನಕ್ಕೆ ಹೋಗುವ ತನ್ನ ಸ್ನೇಹಿತನನ್ನು ಕುರಿತು, 'ನೀನು ವಿಷವನ್ನು ಭುಜಿಸುವೆ' ಎಂಬ ವಾಕ್ಯವನ್ನು ಒಬ್ಬಾನೊಬ್ಬನು ಪ್ರಯೋಗಿಸಿದರೆ, ಇಂತಹ ವಾಕ್ಯದಲ್ಲಿ ವ್ಯಾಕರಣ ರೀತ್ಯಾ ಯಾವ ವಿಧವಾದ ಅನ್ವಯಾನುಪಪತ್ತಿಯೂ ಇಲ್ಲದಿದ್ದರೂ ಮುಖ್ಯಾರ್ಥ ಗ್ರಹಣ ದಲ್ಲಿ ತಾತ್ಪರ್ಯಾನುಪಪತ್ತಿಯು ಸ್ಪಷ್ಟವಾಗಿ ಕಂಡುಬರುವುದು. 'ದ್ವೇಷಿಯ ಮನೆಗೆ ಭೋಜನಕ್ಕೆ ಹೋಗತಕ್ಕದ್ದೇ ಅಲ್ಲ' ಎಂದು ಬೋಧಿಸುವುದೇ ಈ ವಾಕ್ಯದ ತಾತ್ಪರ್ಯ. ಶಬ್ದದ ಕಾಕು ಅಥವಾ ವಿರೋಧಾರ್ಥ ಸಂಬಂಧದಿಂದ, 'ವಿಷ

ಭೋಜನವು ಕೂಡದು' ಎಂಬುದೇ ಮೇಲೆ ನಿರೂಪಿಸಿದ ವಾಕ್ಯದ ತಾತ್ಪರ್ಯ ವಾಗುತ್ತದೆ. ಈ ರೀತಿಯಾಗಿ ವಿಷ ಶಬ್ದಾರ್ಥದಲ್ಲಿಯೂ 'ಭಕ್ಷಿಸು' ಎಂಬ ಶಬ್ದಾರ್ಥದಲ್ಲಿಯೂ ಬೇರೆ ಅರ್ಥಗಳು ಬರುವಂತೆ ಪ್ರಯೋಗಿಸುವುದು ಶಬ್ದದಲ್ಲಿ ಸಾಧಾರಣವಾಗಿ ಕಾಣಬರುವ ಲಕ್ಷಣಾ ಶಕ್ತಿಯನ್ನನುಸರಿಸಿರುತ್ತದೆ.

೩. ಲಕ್ಷಣಾ ಶಕ್ತಿಯ ಲಕ್ಷಣ ಶ್ಲೋಕ.—ಈ ರೀತಿಯಾಗಿ ಒಂದೆರಡು ಸಾಮಾನ್ಯ ದೃಷ್ಟಾಂತಗಳನ್ನು ಉದಾಹರಿಸಿದನಂತರ ಶಾಸ್ತ್ರಜ್ಞರು ಲಕ್ಷಣಾ ಶಕ್ತಿಯ ವಿಷಯವಾಗಿ ನಿರೂಪಿಸಿರುವ ಲಕ್ಷಣ ವಾಕ್ಯವನ್ನೂ, ಅಥವಾ ವಿವರಣ ಶ್ಲೋಕವನ್ನೂ, ಅದರ ಅರ್ಥವನ್ನೂ ವಿಶದಪಡಿಸುವುದು ಆವಶ್ಯಕವಾಗಿರುತ್ತದೆ.

ವಾಚ್ಯಾರ್ಥ ಬಾಧೇ ತದ್ಯೋಗೇ ರೂಢಿತೋವಾ ಪ್ರಯೋಜನಾತ್ ।
ಯಯಾನ್ಯಂ ಬೋಧಯೇತ್ ಶಬ್ದೋ ವ್ಯಾಪೃತ್ಯಾ ಸಾಸ್ಯಲಕ್ಷಣಾ ॥

ಎಂದು ಸಾಹಿತ್ಯ ರತ್ನಾಕರಕಾರನು ಲಕ್ಷಣಾ ಶಕ್ತಿಯನ್ನು ಕುರಿತು ವರ್ಣಿಸಿರುತ್ತಾನೆ. ವಾಚ್ಯಾರ್ಥಕ್ಕೆ ಬಾಧೆ ಬಂದಾಗ, ಅಥವಾ ಆ ವಾಚ್ಯಾರ್ಥದ ಸಂಬದ್ಧಾರ್ಥವನ್ನು ನಿರೂಪಿಸುವಾಗ, ರೂಢಿಯ ಮೂಲಕವಾಗಿಯೂ, ಅಥವಾ ಒಂದು ಪ್ರಯೋಜನೋದ್ದೇಶವಾಗಿಯೂ ಶಬ್ದದಲ್ಲಿ ಇರುವ ಸಹಜವಾದ ಅಭಿಧಾ ಶಕ್ತಿಯಿಂದ ಹುಟ್ಟುವ ಅರ್ಥವನ್ನು ಪರಿತ್ಯಜಿಸಿ ಬೇರೆ ಶಕ್ತಿಯನ್ನು ಕಲ್ಪಿಸಬೇಕಾಗಿರುವುದರಿಂದ ಅಂತಹ ಬೇರೆ ಶಕ್ತಿಯೇ ಶಬ್ದದಲ್ಲಿ ಆರೋಪಿಸಲ್ಪಡುವುದೆಂದು ಭಾವಿಸಿ ಆ ಶಕ್ತಿಯನ್ನು ಲಕ್ಷಣಾ ಶಕ್ತಿಯೆಂದು ಶಾಸ್ತ್ರಜ್ಞರು ನಿರೂಪಿಸುತ್ತಾರೆ ಎಂಬುದೇ ಮೇಲೆ ಉದಾಹರಿಸಿದ ಶ್ಲೋಕದ ಅರ್ಥವಾಗುತ್ತದೆ.

ಆದರೆ, ಈ ಶ್ಲೋಕದ ಭಾವವನ್ನು ಪೂರ್ಣವಾಗಿ ನಿರೂಪಿಸಬೇಕಾದರೆ ಶ್ಲೋಕದ ಪ್ರತಿಯೊಂದು ಪದವನ್ನೂ ಕುರಿತು ಸ್ವಲ್ಪ ಮಟ್ಟಿಗೆ ವಿವರಿಸುವುದು ಅಪ್ರಸಕ್ತವಾಗಲಾರದು. 'ವಾಚ್ಯಾರ್ಥ ಬಾಧೇ' ಎಂಬ ಪದದಿಂದ ಶಬ್ದದ ಸ್ವಾಭಾವಿಕವಾದ ಅರ್ಥವು ಬಾಧಿತವಾದಾಗ ಲಕ್ಷಣಾ ಶಕ್ತಿಯನ್ನು ಶಬ್ದ ವ್ಯಾಪಾರದಲ್ಲಿ ಕಲ್ಪಿಸಬೇಕಾಗುತ್ತದೆ ಎಂದು ಭಾವಿಸಬೇಕು. ದೃಷ್ಟಾಂತವಾಗಿ, "ಗಂಗಾಯಾಂ ಘೋಷಃ" ಎಂಬ ಪ್ರಸಿದ್ಧವಾದ ಪ್ರಯೋಗವನ್ನು ಇಲ್ಲಿ ಉದಾಹರಿಸಬಹುದು. 'ಘೋಷ' ಎಂದರೆ ಕೆಲವು ಗುಡಿಸಲುಗಳುಳ್ಳ ಚಿಕ್ಕ ಹಳ್ಳಿ; 'ಗಂಗಾ' ಶಬ್ದವು ಆ ನದಿಯ ನೀರಿನ ಪ್ರವಾಹವನ್ನು ಬೋಧಿಸುತ್ತದೆ. "ಗಂಗಾಯಾಂ ಘೋಷಃ" ಎಂಬ ವಾಕ್ಯಕ್ಕೆ ನೀರಿನ ಪ್ರವಾಹದಲ್ಲಿ ಹಳ್ಳಿಯಿರುವುದೆಂದು ಅರ್ಥವಾಗುವುದರಿಂದ ಬಾಧಿತವಾಗುತ್ತದೆ. ಹೀಗೆ ಬಾಧಿತವಾದಾಗ 'ಗಂಗಾಯಾಂ' ಎಂಬ ಶಬ್ದದಿಂದ ಗಂಗಾ ಪ್ರವಾಹಕ್ಕೆ ಬದಲಾಗಿ ಅದರ ತೀರ, ಅಥವಾ ದಡವೆಂದು ಅರ್ಥವನ್ನು ಕಲ್ಪಿಸಬೇಕಾಗುತ್ತದೆ. ಇದರಿಂದ ಗಂಗಾ ತೀರದಲ್ಲಿ ಹಳ್ಳಿಯು ಇರುತ್ತದೆಯೆಂದು ಅರ್ಥವು ಸ್ಪಷ್ಟವಾಗುತ್ತದೆ.

ಇನ್ನು, "ತದ್ಯೋಗೇ ರೂಢಿತಃ ಪ್ರಯೋಜನಾತ್" ಎಂದು ಮೂಲ ಶ್ಲೋಕದಲ್ಲಿ ಕಂಡುಬರುವ ಇತರ ಶಬ್ದಗಳ ಅರ್ಥವು ಬಹುಶಃ ಈ ದೃಷ್ಟಾಂತ

ದಿಂದಲೇ ನಿರೂಪಿತವಾದಂತೆ ತೋರಿಸಬಹುದು. ಯೋಗವೆಂದರೆ ಎರಡು ಪದಾರ್ಥಗಳ ಸಂಬಂಧ, ಅಥವಾ ಸಂಯೋಗವೆಂದು ಅರ್ಥವಾಗುತ್ತದೆ. "ಕಳಿಂಗಃ ಸಾಹಸಿಕಃ" ಎಂಬ ವಾಕ್ಯದಲ್ಲಿ ಕಳಿಂಗ ಶಬ್ದವು ಒಂದು ದೇಶವನ್ನು ನಿರೂಪಿಸುತ್ತದೆ; ಸಾಹಸಿಕ ಎಂಬ ಶಬ್ದವು ಸಾಹಸಶಾಲಿಯಾದ ಮನುಷ್ಯನಲ್ಲಿರುವ ಧರ್ಮವಾಗಿರುವುದು. ಈ ವಾಕ್ಯದ ಅರ್ಥವು ಸಾರ್ಥಕವಾಗಬೇಕಾದರೆ ಕಳಿಂಗವೆಂಬ ದೇಶವಾಚಕವಾದ ಶಬ್ದದಲ್ಲಿ ಅದರ ಯೋಗ, ಅಥವಾ ಸಂಬಂಧವನ್ನು ಸೂಚಿಸುವ ಮನುಷ್ಯನು ಎಂಬ ಅಧಿಕಾರ್ಥವನ್ನು ಆರೋಪಿಸಬೇಕಾಗುತ್ತದೆ. ಹೀಗೆ ಮಾಡುವುದು ಬಹುತರವಾಗಿ **ರೂಢ**ವಾಗಿರುತ್ತದೆ. "ಗಂಗಾಯಾಂ ಘೋಷಃ" ಎಂಬ ಉದಾಹರಣೆಯು ಗಂಗಾ ನದಿಗೆ ಸಂಬಂಧಪಟ್ಟ ಶೈತ್ಯವೂ ಪಾವನತ್ವವೂ ಆ ನದಿಯ ತೀರದಲ್ಲಿರುವ ಹಳ್ಳಿಯಲ್ಲಿರುವಂತೆ ಭಾವನೆಯುಂಟಾಗಬೇಕೆಂಬ ತಾತ್ಪರ್ಯದಿಂದ, ಇಂತಹ **ಪ್ರಯೋಜನ**ವನ್ನು ತೋರಿಸುವುದಕ್ಕಾಗಿ ಉಪಯೋಗಕರವಾಗುತ್ತದೆ.

ಸಾರಾಂಶವೇನೆಂದರೆ, ನಾಲ್ಕು ಸಂದರ್ಭಗಳಲ್ಲಿ ಶಬ್ದದ ಲಕ್ಷಣಾ ಶಕ್ತಿಯು ವ್ಯಕ್ತವಾಗುತ್ತದೆಂದು ಈ ಶ್ಲೋಕದಿಂದ ಭಾವಿಸಬೇಕು. ಮುಖ್ಯಾರ್ಥವು ಬಾಧಿತವಾದಾಗ ರೂಢಿಯಿಂದ ಹುಟ್ಟುವ ಲಕ್ಷಣಾ ಶಕ್ತಿಯೊಂದು; ಮುಖ್ಯಾರ್ಥದ ಯೋಗ, ಅಥವಾ ಸಂಬಂಧದಿಂದ ರೂಢಿಯ ಮೂಲವಾಗಿ ಹುಟ್ಟುವ ಶಕ್ತಿಯೊಂದು; ಮುಖ್ಯಾರ್ಥ ಬಾಧಿತವಾಗಿ ಒಂದಾನೊಂದು ಪ್ರಯೋಜನದಿಂದ ಹುಟ್ಟುವ ಶಕ್ತಿಯೊಂದು; ಮುಖ್ಯಾರ್ಥದ ಯೋಗ, ಅಥವಾ ಸಂಬಂಧದಿಂದ ತೋರಿಬರುವ ಒಂದಾನೊಂದು ಪ್ರಯೋಜನದಿಂದ ಹುಟ್ಟುವ ಶಕ್ತಿಯೊಂದು. ಹೀಗೆ ನಾಲ್ಕು ವಿಧವಾಗಿ ಲಕ್ಷಣಾ ಶಕ್ತಿಯು ಆವಿರ್ಭೂತವಾಗುತ್ತದೆಂದು ಮೇಲಿನ ಶ್ಲೋಕದಿಂದ ಗೊತ್ತಾಗುತ್ತದೆ.

ಇವುಗಳಲ್ಲಿ ಮೊದಲನೆಯ ಶಕ್ತಿಯನ್ನು ನಿರೂಪಿಸುವುದಕ್ಕೆ 'ಕುಶಲ', 'ಪ್ರವೀಣ' ಎಂಬ ಶಬ್ದಗಳು ದೃಷ್ಟಾಂತವಾಗಿರುತ್ತವೆ. 'ಕುಶಾನ್ ಲಾತೀತಿ ಕುಶಲಃ', 'ವೀಣಾವಾದನೇ ಪ್ರಕೃಷ್ಟ ಇತಿ ಪ್ರವೀಣಃ' ಎಂಬ ಯೌಗಿಕಾರ್ಥಕ್ಕನುಸಾರವಾಗಿ, ಸರಿಯಾದ ದರ್ಭೆಗಳನ್ನು ಹುಲ್ಲು ಮುಂತಾದ ಕಡ್ಡಿಗಳಿಂದ ವಿಂಗಡಿಸಿ ಕುಯ್ದು ತರುವನೇ 'ಕುಶಲನು' ಎಂದೂ, ವೀಣೆಯನ್ನು ಬಾರಿಸುವುದರಲ್ಲಿ ಗಟ್ಟಿಗನಾದವನೇ 'ಪ್ರವೀಣನು' ಎಂದೂ ಅರ್ಥವಾಗುತ್ತದೆ. ಹೀಗಿದ್ದರೂ, 'ರಾಮನು ಓದುವುದರಲ್ಲಿ ಕುಶಲನು', 'ತಿಮ್ಮನು ಗಡಿಗೆ ಮಾಡುವುದರಲ್ಲಿ ಪ್ರವೀಣನು' ಎಂಬ ಪ್ರಯೋಗಗಳು ವಿಶೇಷವಾಗಿ ರೂಢಿಯಲ್ಲಿ ಕಾಣುತ್ತವೆ. ಇವುಗಳಲ್ಲಿ 'ಕುಶಲ', 'ಪ್ರವೀಣ' ಮೊದಲಾದ ಶಬ್ದಗಳು, ತಮ್ಮ ಮುಖ್ಯಾರ್ಥಗಳಿಗೆ ಬಾಧೆ ಬರುವುದರಿಂದ, ಅವುಗಳನ್ನು ಪರಿತ್ಯಜಿಸಿ ಬುದ್ಧಿವಂತನೂ ಗಟ್ಟಿಗನೂ ಎಂಬ ಅರ್ಥವನ್ನು ಹೊಸದಾಗಿ ಸ್ವೀಕರಿಸುತ್ತವೆ. ಆದುದರಿಂದ, ಇಂತಹ ಪ್ರಯೋಗಗಳು ಮೇಲೆ ನಿರೂಪಿಸಿದ ಮೊದಲನೆಯ ವಿಧದ ಲಕ್ಷಣಾ ಶಕ್ತಿಯ ದೃಷ್ಟಾಂತವಾಗಿರುತ್ತವೆ.

ಎರಡನೆಯ ವಿಧದ ಶಕ್ತಿಯ ದೃಷ್ಟಾಂತವು "ಕಳಿಂಗಸ್ಸಾಹಸಿಕಃ" ಎಂಬ ಮೇಲೆ ಉದಾಹರಿಸಿದ ಪ್ರಯೋಗದಿಂದ ವ್ಯಕ್ತವಾಗುತ್ತದೆ. ಮೂರನೆಯ ವಿಧದ ಶಕ್ತಿಯ ದೃಷ್ಟಾಂತವು "ಗಂಗಾಯಾಂ ಘೋಷಃ" ಎಂಬ ಉದಾಹರಣೆ ಯಿಂದ ವ್ಯಕ್ತವಾಗುತ್ತದೆ. ಇದರಲ್ಲಿ ಗಂಗಾ ಶಬ್ದಾರ್ಥವಾದ ಪ್ರವಾಹ ಎಂಬ ಅರ್ಥಕ್ಕೆ ಬಾಧೆ ಬರುವುದರಿಂದ ಈ ಪ್ರಯೋಗದ ಮುಖ್ಯ ತಾತ್ಪರ್ಯಾನು ಗುಣವಾಗಿ ಪ್ರಯೋಜನವನ್ನು ಕಲ್ಪಿಸಿ ಗಂಗಾ ತೀರದಲ್ಲಿರುವ ಹಳ್ಳಿಯ ವಾಸವು ಶೈತ್ಯ ಮತ್ತು ಪಾವನತ್ವ ಎಂಬ ಪ್ರಯೋಜನಗಳನ್ನು ಹುಟ್ಟಿಸುವುದು ಎಂಬ ಭಾವನೆಯನ್ನು ಸಂಪಾದಿಸುವುದೇ ಆಗಿರುತ್ತದೆ. ನಾಲ್ಕನೆಯ ಜಾತಿಯ ಶಕ್ತಿಗೆ ದೃಷ್ಟಾಂತವಾಗಿ, "ಕುಂತಾಃ ಪ್ರವಿಶಂತಿ" ಎಂಬ ವಾಕ್ಯವನ್ನು ಉದಾಹರಿಸಬಹುದು. ಇಲ್ಲಿ, 'ಭಲ್ಲೆಗಳು ಪ್ರವೇಶವಾಡುತ್ತವೆ' ಎಂಬ ಪ್ರಯೋಗದಿಂದ 'ಕುಂತ ಸಂಬಂಧವಾದ, ಅಥವಾ ಕುಂತಯುಕ್ತರಾದ ಭಟರು ಪ್ರವೇಶಿಸುತ್ತಾರೆ' ಎಂಬ ಅರ್ಥವು ಲಭ್ಯವಾಗುತ್ತದೆ. ಈ ದೃಷ್ಟಾಂತದಲ್ಲಿ ಕುಂತ ಶಬ್ದವು ತನ್ನ ಮುಖ್ಯಾರ್ಥವನ್ನು ಪರಿತ್ಯಜಿಸದೆ ಅದರಿಂದ ಯುಕ್ತವಾದ ಬೇರೆ ಅರ್ಥವನ್ನು ಬೋಧಿಸುತ್ತ ಇಂತಹ ಬೋಧನೆಯಿಂದಾಗುವ ಹೆಚ್ಚು ಪ್ರಯೋಜನ ವನ್ನು ತೋರಿಸುತ್ತದೆ.

೪. ಲಕ್ಷಣಾ ಶಕ್ತಿಯು ಶಕ್ಯಾರ್ಥಕ್ಕೆ ಸಂಬದ್ಧವಾದುದು.—ಈ ರೀತಿ ಯಲ್ಲಿ ಲಕ್ಷಣಾ ಶಕ್ತಿಯನ್ನು ನಾಲ್ಕು ವಿಧವಾಗಿ ವಿಭಾಗಿಸಬಹುದಾದರೂ ನ್ಯಾಯಮತಾನುಗುಣವಾಗಿ ಮೇಲೆ ನಿರೂಪಿಸಿದ "ಶಕ್ಯ ಸಂಬಂಧಿನೀ ಲಕ್ಷಣಾ" ಎಂಬ ವಾಕ್ಯವೂ ಈ ನಾಲ್ಕು ವಿಭಾಗಗಳ ವಿಷಯದಲ್ಲಿಯೂ ಸಾರ್ಥಕ ವಾಗುತ್ತದೆ. ಈ ವಾಕ್ಯದಲ್ಲಿ ಶಕ್ಯವೆಂದರೆ, ಶಬ್ದವು ತನ್ನ ಸ್ವಾಭಾವಿಕ ಶಕ್ತಿ, ಅಥವಾ ಅಭಿಧಾ ಶಕ್ತಿಯ ಮೂಲಕ ಬೋಧಿಸುವ ಮುಖ್ಯವಾದ ಪದಾರ್ಥ ವಾಗಿರುತ್ತದೆ. ಇಂತಹ ಪದಾರ್ಥವನ್ನು ಸ್ವಾಭಾವಿಕವಾಗಿ ವಾಕ್ಯಾರ್ಥದಿಂದ ಗ್ರಹಿಸುವುದಕ್ಕೆ ಸಾಧ್ಯವಲ್ಲದಿರುವಾಗ ಅಂತಹ ಮುಖ್ಯಾರ್ಥಕ್ಕೆ ಯಾವುದಾದ ರೊಂದು ವಿಧವಾಗಿ ಸಂಬಂಧಪಟ್ಟ ಅರ್ಥವನ್ನು ವಿಚಾರಮೂಲಕವಾಗಿ ಕಲ್ಪಿಸಿ ವಕ್ತೃವಿನ ತಾತ್ಪರ್ಯಕ್ಕನುಗುಣವಾಗಿ ವಾಕ್ಯದ ಅರ್ಥವನ್ನು ಗ್ರಹಿಸುವುದಕ್ಕೆ ಶಬ್ದದಲ್ಲಿರುವ ಯಾವ ಶಕ್ತಿಯು ಸಹಾಯಕವಾಗುತ್ತದೆಯೋ ಅಂತಹ ಶಕ್ತಿ ಯನ್ನೇ ಶಾಸ್ತ್ರಜ್ಞರು ಅಂತಹ ಶಬ್ದದ ಲಕ್ಷಣಾ ಶಕ್ತಿಯೆಂದು ನಿರೂಪಿಸುತ್ತಾರೆ ಎಂಬುದೇ ಈ ಸಂಕ್ಷೇಪ ಲಕ್ಷಣದ ಸಾರವು.

ಈ ಶಕ್ತಿಯ ಮೂಲಕವೇ ಕಾವ್ಯಗಳಲ್ಲಿ ಅನೇಕ ವಿಧವಾದ ವೈಚಿತ್ರ್ಯವನ್ನು ಸಂಪಾದಿಸಬಹುದು. ಕವಿಯು ತನ್ನ ಮನೋಭಾವಗಳನ್ನು ವಾಚಕರ ಅವಗಾಹ ನೆಗೆ ಬರುವಂತೆ ಮಾಡುವುದಕ್ಕೂ, ಅವರಲ್ಲಿ ಆನಂದೋದ್ರೇಕವಾಗುವಂತೆ ಅಲಂಕಾರಗಳಿಂದ ಕಾವ್ಯಾರ್ಥವನ್ನು ಪುಷ್ಟೀಕರಿಸುವುದಕ್ಕೂ, ಕಾವ್ಯದಲ್ಲೊಂದು ವಿಶೇಷವಾದ ಪ್ರಾಶಸ್ತ್ಯವನ್ನು ಸಂಪಾದಿಸುವುದಕ್ಕೂ ಈ ವಿಧವಾದ ಲಕ್ಷಣಾ

ಶಕ್ತಿಯು ಮುಖ್ಯ ಸಾಧನವಾಗುತ್ತದೆ. ಕಾವ್ಯಕ್ಕೆ ವಿಶೇಷವಾದ ಪೋಷಣೆಯನ್ನು ಕೊಟ್ಟು, ಅಲಂಕಾರವೆಂಬ ಸಾರ್ಥಕ ನಾಮಧೇಯವನ್ನು ಪಡೆದಿರುವ ಉಪಮಾಮೂಲಕವಾದ ರೂಪಕ, ವ್ಯತಿರೇಕ, ಅತಿಶಯೋಕ್ತಿ, ಅಪಹ್ನುತಿ, ಶ್ಲೇಷ, ದೀಪಕ ಮುಂತಾದ ಅಲಂಕಾರಗಳೂ, ಅವುಗಳ ಪರಸ್ಪರ ಮಿಶ್ರಣದಿಂದ ಉದ್ಭವಿಸುವ ಸಂಸೃಷ್ಟಿ ಸಂಕರ ಮೂಲಕವಾದ ಪ್ರಭೇದಗಳೂ ಈ ಲಕ್ಷಣಾ ಶಕ್ತಿಯ ಬಲದಿಂದಲೇ ಕಾವ್ಯಜ್ಞರಿಂದ ಉಪಯೋಗಿಸಲ್ಪಡುತ್ತವೆ ಎಂಬ ವಿಷಯವನ್ನೂ ಸಹ ಇಲ್ಲಿ ದಿಗ್ದರ್ಶನವಾಗಿ ನಿರೂಪಿಸುವುದು ಆವಶ್ಯಕವಾಗಿರುತ್ತದೆ.

೫. ಲಕ್ಷಣಾ ಶಕ್ತಿಯ ಬೇರೆ ಬೇರೆ ನಾಮಗಳು.—ಲಕ್ಷಣಾ ಶಕ್ತಿಯ ಅವಾಂತರ ಪ್ರಭೇದಗಳನ್ನು ಬೇರೆ ಬೇರೆ ಸಾಹಿತ್ಯ ಶಾಸ್ತ್ರಜ್ಞರು ಬೇರೆ ಬೇರೆ ವಿಧವಾಗಿ ವರ್ಣಿಸಿರುತ್ತಾರೆ. ಇವುಗಳಲ್ಲಿ ಪ್ರಸಿದ್ಧವಾದ ಕೆಲವು ಪ್ರಭೇದಗಳನ್ನು ಇಲ್ಲಿ ವರ್ಣಿಸಿದರೆ ಸಾಕಾಗಿರುತ್ತದೆ. ಲಕ್ಷಣಾ ಶಕ್ತಿಯನ್ನು ಜಹಲ್ಲಕ್ಷಣಾ, ಅಜಹಲ್ಲಕ್ಷಣಾ, ಜಹಜದಜಹಲ್ಲಕ್ಷಣಾ ಎಂದು ಮೂರು ವಿಧವಾಗಿ ನಿರೂಪಿಸಿರುವ ರೂಢಿಯು ಕಂಡುಬರುತ್ತದೆ. ಇವುಗಳಲ್ಲಿ, "ಗಂಗಾಯಾಂ ಘೋಷಃ" ಎಂಬುದು ಜಹಲ್ಲಕ್ಷಣಕ್ಕೆ ದೃಷ್ಟಾಂತವಾಗುತ್ತದೆ. ಜಹಲ್ಲಕ್ಷಣವೆಂದರೆ, ಶಬ್ದವು ತನ್ನ ಸ್ವಾಭಾವಿಕವಾದ ಅರ್ಥವನ್ನು, ಅಥವಾ ಮುಖ್ಯಾರ್ಥವನ್ನು ಪರಿತ್ಯಾಗ ಮಾಡಿ ಬೇರೆ ಅರ್ಥವನ್ನು ತೋರ್ಪಡಿಸುವುದು ಎಂದು ತಿಳಿಯಬೇಕು. ಮೇಲಿನ ದೃಷ್ಟಾಂತದಲ್ಲಿ, ಗಂಗಾ ಶಬ್ದವು ತನ್ನ ಸ್ವಾಭಾವಿಕವಾದ ಪ್ರವಾಹವೆಂಬ ಅರ್ಥವನ್ನು ಪರಿತ್ಯಜಿಸಿ ತೀರವೆಂಬರ್ಥವನ್ನು ಸ್ವೀಕರಿಸುವುದು. ಅಜಹಲ್ಲಕ್ಷಣವೆಂದರೆ, ಶಬ್ದವು ತನ್ನ ಸ್ವಾಭಾವಿಕವಾದ ಅರ್ಥವನ್ನು ಪರಿತ್ಯಜಿಸದೆ ತತ್ಸಂಬಂಧವಾದ ಅರ್ಥಾಂತರವನ್ನು ಸಹ ಬೋಧಿಸುವುದು ಎಂದು ತಿಳಿಯಬೇಕು. ಇದಕ್ಕೆ ದೃಷ್ಟಾಂತವಾಗಿ, "ಕುಂತಾಃ ಪ್ರವಿಶಂತಿ" ಎಂಬ ಮೇಲೆ ನಿರೂಪಿಸಿದ ವಾಕ್ಯವನ್ನು ಉದಾಹರಿಸಬಹುದು. ಈ ವಾಕ್ಯದಲ್ಲಿ 'ಕುಂತಾಃ' ಎಂಬ ಶಬ್ದವು ತನ್ನ ಸ್ವಾಭಾವಿಕವಾದ 'ಭಲ್ಲೆಗಳು' ಎಂಬ ಅರ್ಥವನ್ನು ಪರಿತ್ಯಜಿಸದೆ 'ಕುಂತ ಸಹಿತರಾದ ಪುರುಷರು' ಎಂಬ ಅರ್ಥವನ್ನು ವಕ್ತೃವಿನ ತಾತ್ಪರ್ಯಾನುಗುಣವಾಗಿ ಸಮನ್ವಯಪಡಿಸುವುದಕ್ಕಾಗಿ ಸ್ವೀಕರಿಸುತ್ತದೆ. ಮೂರನೆಯ ವಿಧವಾದ ಜಹದಜಹಲ್ಲಕ್ಷಣ ಎಂದರೆ, ಶಬ್ದವು ತನ್ನ ಸ್ವಾಭಾವಿಕವಾದ ಅರ್ಥವನ್ನು ಕೆಲವು ಭಾಗಗಳಲ್ಲಿ ಪರಿತ್ಯಜಿಸದಿದ್ದರೂ ಮತ್ತೆ ಕೆಲವು ಭಾಗಗಳಲ್ಲಿ ಪರಿತ್ಯಜಿಸಿ ಬೇರೆ ಅರ್ಥವನ್ನು ಬೋಧಿಸುವಂತೆ ಇರುವ ಶಕ್ತಿಯೆಂದು ಭಾವಿಸಬೇಕು. ಇದಕ್ಕೆ ದೃಷ್ಟಾಂತವಾಗಿ, "ಸೋಯಂ ದೇವದತ್ತಃ" ಎಂಬ ವಾಕ್ಯವನ್ನು ಉದಾಹರಿಸಬಹುದು. 'ಸೋಯಂ' ಎಂದರೆ, ಪೂರ್ವದಲ್ಲಿ ನೋಡಲ್ಪಟ್ಟವನೇ ಈ ದೇವದತ್ತನು ಆಗಿರುವನು, ಎಂಬುದೇ ಈ ವಾಕ್ಯದ ಅರ್ಥವು. ಇಲ್ಲಿ ಪೂರ್ವದಲ್ಲಿ ಕಂಡ ದೇವದತ್ತನು ಈಗಿನ ಕಾಲದವರೆಗೂ ಒಂದೇ ರೂಪವಾಗಿರುವುದು ಅಸಾಧ್ಯವಾದುದರಿಂದ ಈ ದೃಷ್ಟಾಂತದಲ್ಲಿ ಸಃ, ಅಥವಾ ಅವನು ಎಂಬ ಸರ್ವನಾಮ

ಶಬ್ದವು ದೇವದತ್ತನಲ್ಲಿದ್ದ ಪೂರ್ವಕಾಲದ ಕೆಲವು ಧರ್ಮಗಳನ್ನು ಪರಿತ್ಯಜಿಸಿ ಈಗಿನ ಕಾಲದ ಧರ್ಮಗಳನ್ನು ಬೋಧಿಸುವುದರಲ್ಲಿ ಪ್ರಯುಕ್ತವಾಗುತ್ತದೆ. ಆದುದರಿಂದ ಈ ದೃಷ್ಟಾಂತದಲ್ಲಿ ಜಹಲ್ಲಕ್ಷಣವಿರುವುದು ವ್ಯಕ್ತವಾಗುತ್ತದೆ. ಹೀಗೆಯೇ ಈಗ ಕಾಣುವ ದೇವದತ್ತನಲ್ಲಿ ಪೂರ್ವದಲ್ಲಿ ಕಂಡ ದೇವದತ್ತನಲ್ಲಿದ್ದ ಕೆಲವು ಧರ್ಮಗಳು ಇದ್ದೇ ಇರುವುವು ಎಂಬ ಭಾವನೆಯೇ ಈ ಪ್ರಯೋಗಕ್ಕೆ ಮೂಲ ಕಾರಣವಾಗಿರುವುದರಿಂದ ಇದೇ ವಾಕ್ಯವು ಅಜಹಲ್ಲಕ್ಷಣಾ ಶಕ್ತಿಯನ್ನು ತೋರಿಸುವ ದೃಷ್ಟಾಂತವೂ ಆಗಿರುವುದೆಂದು ಭಾವಿಸಬಹುದು. ಆದುದರಿಂದ 'ಆ ದೇವದತ್ತನೇ ಇವನು' ಎಂಬ ದೃಷ್ಟಾಂತದಿಂದ ಜಹದಜಹಲ್ಲಕ್ಷಣಾ ಎಂಬ ಮೂರನೆಯ ವಿಧವು ವ್ಯಕ್ತವಾಗುವುದು.

ಇದೇ ವಿಷಯವನ್ನು ಹೆಚ್ಚು ವಿಶದಪಡಿಸುವುದಕ್ಕಾಗಿ ಮತ್ತೊಂದು ದೃಷ್ಟಾಂತವನ್ನು ಇಲ್ಲಿ ಉದಾಹರಿಸಬಹುದು. "ಕಾಕೇಭ್ಯೋ ದಧಿ ರಕ್ಷ್ಯತಾಂ" —'ಕಾಗೆಗಳಿಂದ ಮೊಸರನ್ನು ಕಾಪಾಡು' ಎಂಬ ಅರ್ಥವುಳ್ಳ ವಾಕ್ಯವೇ ಈ ಜಹದಜಹಲ್ಲಕ್ಷಣೆಯ ಸ್ವರೂಪವನ್ನು ವಿಶದೀಕರಿಸುವುದು. ಈ ವಾಕ್ಯವನ್ನು ಪ್ರಯೋಗಿಸುವವನ ತಾತ್ಪರ್ಯವು ಮೊಸರನ್ನು ಕಾಪಾಡಬೇಕೆಂಬುದೇ ಆಗಿರುತ್ತದೆ. ಕಾಗೆಗಳು ಹೇಗೆ ಮೊಸರನ್ನು ತಿಂದುಬಿಡುವುವೋ ಹಾಗೆಯೇ ಬೆಕ್ಕು, ನಾಯಿ, ಮುಂತಾದ ಪ್ರಾಣಿಗಳೂ ಸಹ ತಿನ್ನುವುವು ಎಂಬ ವಿಷಯವು ಸರ್ವವೇದ್ಯವಾಗಿರುವುದು. ಈ ವಾಕ್ಯದಲ್ಲಿ 'ಕಾಗೆ' ಎಂಬ ಶಬ್ದವು ತನ್ನ ಸ್ವಾಭಾವಿಕಾರ್ಥವನ್ನು ಪರಿತ್ಯಜಿಸದೆ ಬೆಕ್ಕು, ನಾಯಿ ಮುಂತಾದ ಇತರ ಜಂತುವಿಶೇಷಗಳನ್ನೂ ಬೋಧಿಸುವಾಗ, ತನ್ನ ಮುಖ್ಯಾರ್ಥವನ್ನು ಪರಿತ್ಯಜಿಸಿ ಇತರಾರ್ಥವನ್ನು ನಿರೂಪಿಸುವುದರಿಂದ ಈ ವಾಕ್ಯದಲ್ಲಿ ಕಾಕ ಶಬ್ದವು ಜಹದಜಹಲ್ಲಕ್ಷಣಾ ಶಕ್ತಿಗನುಸಾರವಾಗಿ ಎರಡು ವಿಧವಾದ ಅರ್ಥಗಳನ್ನು ಬೋಧಿಸುತ್ತದೆ ಎಂದು ಭಾವಿಸಬೇಕು.

೬. ಲಕ್ಷಣಾ ಶಕ್ತಿಯ ವಿಷಯವಾಗಿ ಸಾಹಿತ್ಯ ಶಾಸ್ತ್ರಜ್ಞರ ಭಿನ್ನಾಭಿಪ್ರಾಯಗಳು.—ಮೇಲೆ ನಿರೂಪಿಸಿದಂತೆ ಇಂತಹ ಪ್ರಭೇದಗಳನ್ನು ವರ್ಣಿಸುವುದರಲ್ಲಿ ಆಯಾ ಗ್ರಂಥಕರ್ತರು ಬೇರೆ ಬೇರೆ ವಿಧವಾಗಿ ವಿಭಾಗಗಳನ್ನು ಮಾಡಿರುವುದು ಕಂಡುಬರುತ್ತದೆ. ಸಾಹಿತ್ಯಶಾಸ್ತ್ರಕ್ಕೆ ಪಿತಾಮಹನೆಂದೆನಿಸಿದ ಮತ್ತು ಪ್ರಸಿದ್ಧವಾದ 'ಕಾವ್ಯಪ್ರಕಾಶ' ಗ್ರಂಥಕರ್ತೃವಾದ ಮಮ್ಮಟನು ಲಕ್ಷಣಾ ನಿರೂಪಣೆಯಲ್ಲಿ ಆರು ಪ್ರಭೇದಗಳನ್ನು ಮಾತ್ರವೇ ಕಲ್ಪಿಸಿರುವಂತೆ ಕಂಡುಬಂದರೂ ಆ ಗ್ರಂಥದ ಟೀಕಾಕಾರರು ಇತರವಾದ ಅಂತರ ಪ್ರಭೇದಗಳನ್ನು ವಿಶೇಷವಾಗಿ ಬೆಳೆಯಿಸಿ ಇಪ್ಪತ್ತನಾಲ್ಕು, ಅಥವಾ ಇಪ್ಪತ್ತೆಂಟು ವಿಧವಾಗಿ ನಿರೂಪಿಸಿರುವರು. ಆದರೆ ಸಾಹಿತ್ಯ ಶಾಸ್ತ್ರದ ನವೀನ ಗ್ರಂಥವಾದ 'ಸಾಹಿತ್ಯದರ್ಪಣ'ದಲ್ಲಿ ಲಕ್ಷಣಾ ಶಕ್ತಿಯು ಎಂಟು ಪ್ರಭೇದಗಳಾಗಿ ಭಾಗಿಸಲ್ಪಟ್ಟು ಇವುಗಳಲ್ಲಿಯೇ ಇತರರು ನಿರೂಪಿಸಿರುವ ಪ್ರಭೇದಗಳು ಅಂತರ್ಭೂತವಾಗುವಂತೆ ವರ್ಣಿಸಿದೆ.

ಈ ಎಂಟು ಪ್ರಭೇದಗಳನ್ನು ಮಾತ್ರ ಈ ಲೇಖನದಲ್ಲಿ ವರ್ಣಿಸಿದರೆ ಸಾಕಾಗಿರುವುದು.

೭. **ಲಕ್ಷಣಾ ಶಕ್ತಿಯ ಎಂಟು ಪ್ರಭೇದಗಳು.**—ಲಕ್ಷಣಾ ಶಕ್ತಿಯ ಇಂತಹ ಪ್ರಭೇದಗಳನ್ನು ವರ್ಣಿಸುವುದರಲ್ಲಿ ಸಾಹಿತ್ಯಶಾಸ್ತ್ರಜ್ಞರು ಅತಿವ್ಯಾಪ್ತಿ ಅವ್ಯಾಪ್ತಿ ಅಸಂಭವ ಮುಂತಾದ ದೋಷಗಳು ಬಾರದಂತೆ ಪ್ರತಿಯೊಂದು ಪ್ರಭೇದದ ಲಕ್ಷಣವನ್ನೂ ಕಲ್ಪಿಸಿ ಬಹು ವಿಧವಾಗಿ ಶಾಸ್ತ್ರಾರ್ಥ ವಿಚಾರವನ್ನು ಬೆಳೆಯಿಸಿರುವರು. ಇಂತಹ ಗಹನ ವಿಚಾರಗಳನ್ನು ಈ ಲೇಖನದಲ್ಲಿ ನಿರೂಪಿಸುವುದು ಅಷ್ಟು ಆವಶ್ಯಕವಾಗಿ ತೋರುವುದಿಲ್ಲ. ಮುಖ್ಯವಾಗಿ, ಲಕ್ಷಣಾ ಶಕ್ತಿಯ ಒಂದೊಂದು ಪ್ರಭೇದವನ್ನು ತೋರ್ಪಡಿಸುವ ಒಂದೆರಡು ದೃಷ್ಟಾಂತಗಳನ್ನು ಮಾತ್ರ ಮಾದರಿಗಾಗಿ ನಿರೂಪಿಸಿ ಈ ದೃಷ್ಟಾಂತಗಳ ಮೂಲಕವೇ ಶಾಸ್ತ್ರಜ್ಞರು ಚರ್ಚೆಯನ್ನು ಬೆಳೆಯಿಸಿರುವ ವಿಷಯವನ್ನು ಸಂಕ್ಷೇಪವಾಗಿ ನಿರೂಪಿಸಿದರೆ ಈ ಲೇಖನದ ಉದ್ದೇಶವು ಸಫಲವಾಗುವುದು. ಈ ಲೇಖನದಲ್ಲಿ ನಿರೂಪಿಸಿರುವ ದೃಷ್ಟಾಂತಗಳಿಂದ ಕನ್ನಡ ಭಾಷೆಯಲ್ಲಿ ರಚಿತವಾದ ಕಾವ್ಯ ಗ್ರಂಥಗಳಲ್ಲಿ ಕಾಣುವ ಶಬ್ದದ ಲಕ್ಷಣಾ ಶಕ್ತಿ ಮೂಲವಾದ ಪ್ರಯೋಗಗಳ ಸ್ವಾರಸ್ಯವನ್ನು ಸಹ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಬಹುದೆಂದು ಭಾವಿಸಲ್ಪಟ್ಟಿದೆ.

ಲಕ್ಷಣಾ ಶಕ್ತಿಯನ್ನು ಶುದ್ಧ ಲಕ್ಷಣಾ, ಗೌಣೀ ಲಕ್ಷಣಾ ಎಂದು ಎರಡು ವಿಧವಾಗಿ ಮೊದಲು ವಿಭಾಗಿಸಿ ಈ ಪ್ರತಿಯೊಂದು ಭಾಗವನ್ನೂ ಉಪಾದಾನ ಲಕ್ಷಣಾ, ಲಕ್ಷಣ ಲಕ್ಷಣಾ ಎಂದು ಎರಡು ವಿಧವಾಗಿ ವಿಭಾಗಿಸುತ್ತಾರೆ. ಇದರಿಂದ ಲಕ್ಷಣಾ ಶಕ್ತಿಯು—(೧) ಶುದ್ಧ ಉಪಾದಾನ, (೨) ಶುದ್ಧ ಲಕ್ಷಣಾ, (೩) ಗೌಣೀ ಉಪಾದಾನ, (೪) ಗೌಣೀ ಲಕ್ಷಣಾ ಎಂದು ನಾಲ್ಕು ಭಾಗಗಳಾಗುತ್ತದೆ. ಈ ನಾಲ್ಕರಲ್ಲಿ ಪ್ರತಿಯೊಂದು ಭಾಗವನ್ನೂ ಸಾರೋಪ, ಸಾಧ್ಯವಸಾಯ ಎಂದು ಎರಡು ವಿಧವಾಗಿ ಭಾಗಿಸಿ ಎಂಟು ಭಾಗಗಳಾಗಿ ನಿರೂಪಿಸುವ ರೂಢಿಯುಂಟು. ಮೇಲೆ ಉದಾಹರಿಸಿದ "ವಾಚ್ಯಾರ್ಥಬಾಧೇ ತದ್ಯೋಗೇ ರೂಢಿತೋಽಥ ಪ್ರಯೋಜನಾತ್" ಎಂಬ ಶ್ಲೋಕದ ಅರ್ಥಕ್ಕನುಗುಣವಾಗಿ ಲಕ್ಷಣಾ ಶಕ್ತಿಯನ್ನು ನಾಲ್ಕು ರೀತಿಯಾಗಿ ಕಲ್ಪಿಸಬೇಕಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಮನಸ್ಸಿಗೆ ತಂದರೆ, ಮೇಲೆ ನಿರೂಪಿಸಿದ ಎಂಟು ಅವಾಂತರ ಪ್ರಭೇದಗಳಲ್ಲಿ ಪ್ರತಿಯೊಂದು ಪ್ರಭೇದವೂ ನಾಲ್ಕು ನಾಲ್ಕು ವಿಧವಾಗಿ, ಒಟ್ಟು ಮೂವತ್ತೆರಡು ಪ್ರಭೇದಗಳು ಆಗುವುವು.

ಇಂತಹ ಪ್ರಭೇದಗಳನ್ನು, ಮೇಲೆ ನಿರೂಪಿಸಿದಂತೆ, ದೃಷ್ಟಾಂತ ಮೂಲಕ ವರ್ಣಿಸುವುದಕ್ಕೆ ಮೊದಲು ಈ ಪ್ರಭೇದಗಳ ನಾಮಧೇಯಗಳಲ್ಲಿ ಕಂಡುಬರುವ ಶುದ್ಧ, ಗೌಣೀ, ಉಪಾದಾನ, ಲಕ್ಷಣಾ, ಸಾರೋಪ, ಸಾಧ್ಯವಸಾಯ ಮುಂತಾದ ಶಾಸ್ತ್ರೀಯ ಸಂಕೇತ ಶಬ್ದಗಳ ಅರ್ಥವನ್ನು ನಿರೂಪಿಸುವುದು ಆವಶ್ಯಕವಾಗಿರುತ್ತದೆ. ಮೇಲೆ ಹೇಳಿದ ಮೂವತ್ತೆರಡು ಪ್ರಭೇದಗಳಲ್ಲಿ ಪ್ರತಿ

ಯೊಂದರಲ್ಲಿಯೂ ಲಕ್ಷಣಾ ಶಕ್ತಿಯೆಂಬ ಮುಖ್ಯ ಜಾತಿಯು ಸಾಮಾನ್ಯವಾಗಿ ಕಾಣುವುದರಿಂದ ಇಂತಹ ಸಾಮಾನ್ಯ ಶಕ್ತಿಯನ್ನು "ಶಕ್ಯ ಸಂಬಂಧಃ ಲಕ್ಷಣಾ" ಎಂದು ನ್ಯಾಯ ಶಾಸ್ತ್ರಜ್ಞರು ಸಂಕ್ಷೇಪವಾಗಿ ಹೇಳಿರುತ್ತಾರೆ. ಇಂತಹ ಸಂಕ್ಷೇಪವಾದ ವಿವರಣೆಯಿಂದಲೇ ಶುದ್ಧ ಮತ್ತು ಗೌಣೀ ಎಂಬ ಶಬ್ದಗಳ ಅರ್ಥವನ್ನು ನಿರೂಪಿಸಿದರೆ ಅಂತಹ ಅರ್ಥವು ಸುಲಭವಾಗಿ ಅವಗಾಹನೆಗೆ ಬರುವುದು. ಶಕ್ಯ, ಅಥವಾ ಶಬ್ದದ ಮುಖ್ಯಾರ್ಥಕ್ಕೂ ಲಕ್ಷಣಾ ಶಕ್ತಿಯಿಂದ ನಿರೂಪಿತವಾದ ಪದಾರ್ಥಕ್ಕೂ ಇರುವ ಸಂಬಂಧವು ಯಾವುದಾದರೂ ಒಂದು ಗುಣದ, ಅಥವಾ ಧರ್ಮದ ಮೂಲಕ ಸಾದೃಶ್ಯ ಭಾವವನ್ನು ಅವಲಂಬಿಸಿದ್ದಲ್ಲಿ ಅಂತಹ ಸಂಬಂಧಮೂಲವಾದ ಲಕ್ಷಣಾ ಶಕ್ತಿಯನ್ನು ಶಾಸ್ತ್ರಜ್ಞರು 'ಗೌಣೀ ಲಕ್ಷಣಾ' ಎಂದು ನಿರೂಪಿಸುವರು. ಇಂತಹ ಸಾದೃಶ್ಯ ಸಂಬಂಧವೊಂದನ್ನು ಮಾತ್ರ ಬಿಟ್ಟು ಇತರ ಧರ್ಮಗಳು, ಅಥವಾ ಸಂಬಂಧಗಳ ಮೂಲಕ ಲಕ್ಷಣಾ ಶಕ್ತಿಯು ಸ್ವಭಾವವು ನಿಷ್ಪನ್ನವಾದರೆ ಅಂತಹ ಶಕ್ತಿಯನ್ನು 'ಶುದ್ಧ ಲಕ್ಷಣಾ' ಎಂದು ಶಾಸ್ತ್ರಜ್ಞರು ನಿರೂಪಿಸುವರು.

ಗೌಣೀ ಲಕ್ಷಣಾ, ಶುದ್ಧ ಲಕ್ಷಣಾ—ಇವುಗಳೆರಡೂ ಉಪಾದಾನ ಮತ್ತು ಲಕ್ಷಣಾ ಎಂಬ ಭೇದದಿಂದ ಎರಡು ವಿಧವಾಗಿರುವುವೆಂದು ಮೇಲೆ ನಿರೂಪಿಸಿದೆಯಷ್ಟೆ. ಇದರಲ್ಲಿ ಕಾಣುವ ಉಪಾದಾನ ಮತ್ತು ಲಕ್ಷಣಾ ಶಬ್ದಗಳ ಅರ್ಥವನ್ನು ದೃಷ್ಟಾಂತವಾಗಿ ವರ್ಣಿಸಿದರೆ ಸಾಕಾಗಿರುತ್ತದೆ. "ಕುಂತಾಃ ಪ್ರವಿಶಂತಿ" ಎಂಬ ಮೇಲೆ ಉದಾಹರಿಸಿದ ದೃಷ್ಟಾಂತದಲ್ಲಿ ಅಚೇತನವಾದ ಕುಂತಗಳು, ಅಥವಾ ಭಲ್ಲೆಯುಗಳಿಗೆ ಚೇತನ ಧರ್ಮವಾದ ಪ್ರವೇಶನ ಶಕ್ತಿಯು ಇಲ್ಲದಿರುವುದರಿಂದ, ಕುಂತ ಶಬ್ದದ ಅರ್ಥವು ಈ ವಾಕ್ಯದ ಅರ್ಥದಲ್ಲಿ ಸರಿಯಾದ ಸಮನ್ವಯವನ್ನು ಹೊಂದಬೇಕಾದರೆ ತನ್ನ ಜೊತೆಯಲ್ಲಿ ಕುಂತಯುಕ್ತನಾದ ಪುರುಷನು, ಅಥವಾ ಸವಾರನು ಎಂಬ ಸ್ವಸಂಬಂಧ ನಿರೂಪಿತವಾದ ಲಕ್ಷಣಾರ್ಥವನ್ನು ಹೊಸದಾಗಿ ಕಲ್ಪಿಸಿಕೊಳ್ಳಬೇಕಾಗುತ್ತದೆ. ಇಂತಹ ಕಲ್ಪಿತಾರ್ಥಕ್ಕೆ ಮೂಲಾಧಾರವಾದ ಕುಂತವೆಂಬ ಪದಾರ್ಥವು ಉಪಾದಾನ, ಅಥವಾ ಮೂಲ ಕಾರಣವಾಗುತ್ತದೆ ಎಂದು ಶಾಸ್ತ್ರೀಯ ಸಂಕೇತವಿರುವುದರಿಂದ ಇಂತಹ ಸಂಕೇತ ಮೂಲವಾದ ಲಕ್ಷಣಾ ಶಕ್ತಿಯನ್ನು ಉಪಾದಾನ ಲಕ್ಷಣ ಎಂದು ಶಾಸ್ತ್ರಜ್ಞರು ನಿರೂಪಿಸುವರು.

ಈಗ ಲಕ್ಷಣ ಲಕ್ಷಣಾ ಎಂಬ ಎರಡನೆಯ ಅವಾಂತರ ವಿಭೇದದಲ್ಲಿ ಕಾಣಬರುವ 'ಲಕ್ಷಣಾ' ಎಂಬ ಶಬ್ದದ ಅರ್ಥವನ್ನು ನಿರೂಪಿಸಬೇಕಾಗಿದೆ. "ಕಳಿಂಗ ಸ್ಸಾಹಸಿಕಃ" ಎಂಬ ಮೇಲೆ ನಿರೂಪಿಸಿರುವ ದೃಷ್ಟಾಂತವನ್ನು ವಿವರಿಸಿದರೆ ಈ ಅರ್ಥವು ಗೋಚರವಾಗುವುದು. 'ಕಳಿಂಗಃ' ಎಂಬ ಈ ಶಬ್ದವು ಒಂದು ದೇಶವಾಚಕವಾಗಿರುವುದರಿಂದ ಮನುಷ್ಯನಿಗೆ ಸಹಜವಾದ 'ಸಾಹಸಿಕಃ' ಎಂಬ ಶಬ್ದದಿಂದ ನಿರೂಪಿತವಾದ ಅರ್ಥದ ಜೊತೆಯಲ್ಲಿ ಸಮನ್ವಿತವಾಗಲಾರದು.

ಹೇಳಿರುವಲ್ಲಿ, ಕಳಿಂಗ ಶಬ್ದವು ತನ್ನ ಸ್ವಾಭಾವಿಕಾರ್ಥವನ್ನು ಪರಿತ್ಯಜಿಸಿ ಕಳಿಂಗ ದೇಶೀಯರೆಂಬ ಅರ್ಥವನ್ನು ತೋರಿಸುವುದು. ಹೀಗೆ ಅರ್ಥಾಂತರವನ್ನು ತೋರ್ಪಡಿಸುವುದಕ್ಕಾಗಿ ಕಳಿಂಗ ಶಬ್ದವು ತನ್ನ ಮುಖ್ಯಾರ್ಥವನ್ನು ಪರಿತ್ಯಜಿಸಿರುವುದರಿಂದ ಇಂತಹ ಪರಿತ್ಯಾಗ, ಅಥವಾ ಅರ್ಪಣೆಗೆ ಮೂಲಕಾರಣವಾದ ಶಕ್ತಿಯನ್ನೇ ಉಪಲಕ್ಷಣಾ, ಅಥವಾ ಲಕ್ಷಣಾ ಎಂಬ ಶಬ್ದದಿಂದ ಶಾಸ್ತ್ರಜ್ಞರು ನಿರೂಪಿಸುವ ರೂಢಿಯುಂಟು.

ಈಗ ಇವುಗಳ ಪ್ರಭೇದಗಳಾದ ಸಾರೋಪ ಮತ್ತು ಸಾಧ್ಯವಸಾಯ ಎಂಬ ಸಂಕೇತಗಳ ಅರ್ಥವನ್ನು ದೃಷ್ಟಾಂತ ಮೂಲಕವಾಗಿ ನಿರೂಪಿಸಬೇಕಾಗಿದೆ. "ಸಿಂಹೋ ದೇವದತ್ತಃ" ಎಂಬ ದೃಷ್ಟಾಂತದಲ್ಲಿ ದೇವದತ್ತನನ್ನು ಕುರಿತು, ಅವನಲ್ಲಿ ಸಿಂಹದ ಧರ್ಮವನ್ನು ಆರೋಪಣೆ ಮಾಡಿರುತ್ತದೆ. ಇಂತಹ ಲಕ್ಷಣಾ ಶಕ್ತಿಯನ್ನು 'ಸಾರೋಪಾ' ಎಂದು ಶಾಸ್ತ್ರಜ್ಞರು ನಿರೂಪಿಸಿದ್ದಾರೆ. ಇದರಲ್ಲಿ ತಿಳಿಯತಕ್ಕ ಮುಖ್ಯಾಂಶವೇನೆಂದರೆ: 'ದೇವದತ್ತನು ಧೈರ್ಯ ಗುಣದಲ್ಲಿ ಸಿಂಹದಂತೆ ಇರುವನು' ಎಂದು ಪ್ರಯೋಗ ಮಾಡಿದಲ್ಲಿ ಅದು ಉಪಮಾಲಂಕಾರವಾಗಿ, ಅಲ್ಲಿ ಉಪಯೋಗಿಸಿದ ಪ್ರತಿಯೊಂದು ಶಬ್ದವೂ ತನ್ನ ಸ್ವಾಭಾವಿಕವಾದ ಮುಖ್ಯಾರ್ಥಕ್ಕೆ ಬಾಧೆಯಿಲ್ಲದಂತಿದ್ದು ವಾಕ್ಯಾರ್ಥದ ಅವಗಾಹನೆಗೆ ಅವಕಾಶವನ್ನುಂಟುಮಾಡಿಕೊಡುತ್ತದೆ. ಆದರೆ ಮೇಲೆ ಹೇಳಿದ ಉಪಮಾಲಂಕಾರದಿಂದ ನಿರೂಪಿಸಿದ ಅರ್ಥವನ್ನೇ ಮತ್ತಷ್ಟು ಸ್ವಾರಸ್ಯವಾಗುವಂತೆ ರೂಪಕಾಲಂಕಾರದಿಂದ ನಿರೂಪಿಸಬೇಕಾದರೆ ಉಪಮಾಲಂಕಾರದಲ್ಲಿ ಕಾಣಬರುವ ಸಾದೃಶ್ಯ ಬೋಧಕವಾದ ಶಬ್ದಗಳನ್ನು ಬಿಟ್ಟು 'ದೇವದತ್ತನು ಸಿಂಹನು' ಎಂದು ಎರಡು ಶಬ್ದಗಳನ್ನು ಮಾತ್ರ ನಿರೂಪಿಸಿದಲ್ಲಿ ಇಂತಹ ವಾಕ್ಯವು ರೂಪಕಾಲಂಕಾರವಾಗುತ್ತದೆ. ಇದರಲ್ಲಿ ಉಪಮಾನವಾದ ಸಿಂಹದ ಧರ್ಮವನ್ನು ಉಪಮೇಯವಾದ ದೇವದತ್ತನಲ್ಲಿ ಆರೋಪಣೆ ಮಾಡಿರುವುದರಿಂದ ಇಂತಹ ಅಲಂಕಾರಕ್ಕೆ ಮೂಲಭೂತವಾಗಿರುವುದೇ ಸಿಂಹ ಶಬ್ದದಿಂದ ನಿರೂಪಿತವಾದ ಲಕ್ಷಣಾ ಶಕ್ತಿಯು. ಇಂತಹ ಶಕ್ತಿಯು ಸಾರೋಪ ಲಕ್ಷಣಾ ಎಂದು ಶಾಸ್ತ್ರ ಸಂಕೇತವಿರುವುದು. ಇದರಿಂದ ಸಾರೋಪ ಲಕ್ಷಣಾ ಎಂಬುದರಲ್ಲಿ ಕಾಣಬರುವ 'ಸಾರೋಪ' ಎಂಬ ಶಬ್ದದ ಅರ್ಥವನ್ನು ನಿರೂಪಿಸಿದಂತೆ ಆಗುವುದು.

ಹೀಗಲ್ಲದೆ, "ಸಿಂಹನಾದ ದೇವದತ್ತನು ಬಂದನು" ಎಂಬ ವಾಕ್ಯದ ಬದಲು, "ಸಿಂಹನು ಬಂದನು" ಎಂದು ಅದೇ ದೇವದತ್ತನನ್ನು ಕುರಿತು ಪ್ರಯೋಗಮಾಡಿದಲ್ಲಿ, 'ದೇವದತ್ತ' ಮತ್ತು 'ಸಿಂಹ' ಎಂಬ ಎರಡು ಶಬ್ದಗಳು ಒಂದರಮೇಲೊಂದು ಆರೋಪಿತವಾಗಿ ನಿರೂಪಿಸಲ್ಪಡುವುದರ ಬದಲಾಗಿ 'ಸಿಂಹ' ಮತ್ತು 'ದೇವದತ್ತ' ಎಂಬ ಎರಡು ಪದಾರ್ಥಗಳೂ ಒಂದೇ ರೂಪವಾಗಿರುವುದೆಂಬ ಭಾವನೆಯು ಹುಟ್ಟುವಂತೆ ಪ್ರಯೋಗಿಸಲ್ಪಟ್ಟರೆ, ಸಿಂಹ ಶಬ್ದದ ಸಾಧ್ಯವಸಾನ ಮೂಲವಾದ ಲಕ್ಷಣಾ ಶಕ್ತಿಯ ಬಲದಿಂದ ಆ ಶಬ್ದವು ದೇವದತ್ತ

ನನ್ನು ಕುರಿತು ನಿರೂಪಿಸಲ್ಪಡುತ್ತದೆ. ಸಾಧ್ಯವಸಾಯವೆಂದರೆ ನಿಶ್ಚಿತ ಜ್ಞಾನವು. ಸಿಂಹ ಶಬ್ದವು ದೇವದತ್ತನೆಂಬ ಪದಾರ್ಥವನ್ನು ಪೂರ್ಣವಾಗಿ ನುಂಗಿ ತಾನೇ ತಾನಾಗಿ 'ದೇವದತ್ತ' ಮತ್ತು 'ಸಿಂಹ' ಎಂಬ ಎರಡು ಪದಾರ್ಥಗಳನ್ನೂ ಪರಸ್ಪರ ಭೇದವಿಲ್ಲದಂತೆ ಕಾಣುವ ಹಾಗೆ ಮಾಡುವ ಉದ್ದೇಶದಿಂದ ಪ್ರಯೋಗಿಸಲ್ಪಟ್ಟರೆ ಇಂತಹ ಪ್ರಯೋಗಕ್ಕೆ ಮೂಲವಾದ ಸಿಂಹ ಶಬ್ದದಲ್ಲಿ ಕಾಣಬರುವ ಶಕ್ತಿಯನ್ನು ಸಾಧ್ಯವಸಾನ ಲಕ್ಷಣಾ ಎಂದು ಶಾಸ್ತ್ರಜ್ಞರು ನಿರೂಪಿಸುವರು.

ಇಂತಹ ಸಾಧ್ಯವಸಾನ ಲಕ್ಷಣಾ ಶಕ್ತಿಯನ್ನವಲಂಬಿಸಿ, ಕೇವಲ ಅಪಹ್ನುತಿ, ಅತಿಶಯೋಕ್ತಿ ಮುಂತಾದ ಅಲಂಕಾರಗಳು ಹುಟ್ಟಿರುವುವು. ಅಭಿಧಾ ಶಕ್ತಿಯಿಂದಲೇ ವಿಶೇಷವಾದ ಅಲಂಕಾರ ಪ್ರಭೇದಗಳೂ, ತನ್ಮೂಲಕವಾಗಿ ಕಾವ್ಯಕ್ಕುಂಟಾಗುವ ಸೌಂದರ್ಯವೂ, ಚಮತ್ಕೃತಿ ಜನಕತ್ವವೂ, ಅಸಂಪ್ರದಾಯಕತ್ವವೂ ಲಭಿಸಲಾರವು. ಆದುದರಿಂದಲೇ, ಸಾಹಿತ್ಯ ಶಾಸ್ತ್ರ ನಿರೂಪಣೆಯಲ್ಲಿ ಶಬ್ದದ ಮುಖ್ಯಾರ್ಥ, ಅಥವಾ ಅಭಿಧಾ ಶಕ್ತಿಯನ್ನು ನಿರೂಪಿಸುವುದು ಎಷ್ಟು ಆವಶ್ಯಕವೋ ಅದಕ್ಕಿಂತಲೂ ಲಕ್ಷಣಾ ಶಕ್ತಿಯನ್ನು ನಿರೂಪಿಸುವುದು ಹೆಚ್ಚು ಆವಶ್ಯಕವಾಗಿರುವುದು. ಈ ರೀತಿಯಾಗಿರುವ ವಿಶೇಷಾರ್ಥಗಳೂ ಪರಸ್ಪರ ಸಂಬಂಧಾರ್ಥಗಳೂ ಬೋಧಿತವಾಗುವ ಲಕ್ಷಣಾ ಶಕ್ತಿಯನ್ನು ಪರಿತ್ಯಜಿಸಿದರೆ ವ್ಯವಹಾರದಲ್ಲಿ ಪ್ರಯೋಗಮಾಡುವ ಅನೇಕ ಚಮತ್ಕಾರಗಳಿಗೆ ಆಸ್ಪದವಿಲ್ಲದೆ ಹೋಗಿ ಉತ್ತಮ ಕಾವ್ಯಗಳ ಪರಿಸ್ಥಿತಿಯೇ ಇಲ್ಲದಂತಾಗುವುದು.

೮. **ಶುದ್ಧ ಲಕ್ಷಣಾ ನಿರೂಪಕ ದೃಷ್ಟಾಂತಗಳು.**—ಮೇಲೆ ನಿರೂಪಿಸಿದ ಮೂವತ್ತೆರಡು ಪ್ರಭೇದಗಳಲ್ಲಿ ಕೆಲವುಗಳಿಗೆ ದೃಷ್ಟಾಂತಗಳನ್ನು ಕೊಟ್ಟಲ್ಲಿ ಇತರ ಪ್ರಭೇದಗಳನ್ನು ವಾಚಕರು ಆಯಾ ಸಂದರ್ಭಾನುಗುಣವಾಗಿ ಪ್ರಸಿದ್ಧ ಕಾವ್ಯಗಳಲ್ಲಿ ಕಾಣುವ ಪ್ರಯೋಗಗಳಿಂದ ಊಹಿಸಿಕೊಳ್ಳಬಹುದು.

ಶುದ್ಧೋಪಾದಾನ ಸಾರೋಪ ಲಕ್ಷಣಕ್ಕೆ ದೃಷ್ಟಾಂತವಾಗಿ "ಕುಂತಾಃ ಪುರುಷಾಃ ಪ್ರವಿಶಂತಿ" ಎಂಬ ವಾಕ್ಯವನ್ನು ಉದಾಹರಿಸಬಹುದು. ಇದರಲ್ಲಿ ಕುಂತ ಶಬ್ದದಿಂದ ನಿಷ್ಪನ್ನವಾಗುವ ಅರ್ಥದಲ್ಲಿ 'ಪ್ರವಿಶಂತಿ' ಎಂಬ ಶಬ್ದದ ಅರ್ಥವು ಆರೋಪಿತವಾಗಿರುತ್ತದೆ. 'ಪುರುಷ' ಎಂಬ ಶಬ್ದದ ಅರ್ಥಕ್ಕೆ 'ಕುಂತಾಃ' ಎಂಬ ಶಬ್ದವು ಉಪಾದಾನ, ಅಥವಾ ಮೂಲಕಾರಣವಾಗಿರುತ್ತದೆ ಎಂದು ಭಾವಿಸಬೇಕು.

ಶುದ್ಧೋಪಾದಾನ ಸಾಧ್ಯವಸಾನ ಲಕ್ಷಣಕ್ಕೆ ದೃಷ್ಟಾಂತವಾಗಿ, ಮೇಲಿನ ವಾಕ್ಯದಲ್ಲಿ 'ಪುರುಷಾಃ' ಎಂಬ ಶಬ್ದವನ್ನು ಬಿಟ್ಟು 'ಕುಂತಾಃ ಪ್ರವಿಶಂತಿ' ಎಂದು ಪ್ರಯೋಗಿಸಿದರೆ ಕುಂತ ಶಬ್ದವು ತನ್ನ ಅರ್ಥವನ್ನು ಸಾರ್ಥಕಪಡಿಸಿಕೊಂಡು 'ಕುಂತ ಸಹಿತಃ ಪುರುಷಃ' ಎಂಬ ಅರ್ಥವನ್ನು ತೋರಿಸುವುದರಿಂದ ಉಪಾದಾನ ಲಕ್ಷಣಾ ಶಕ್ತಿಗೆ ದೃಷ್ಟಾಂತವಾಗುತ್ತದೆ. ಮತ್ತು, 'ಕುಂತ'

ಎಂಬ ಒಂದು ಶಬ್ದವೇ 'ಕುಂತ' ಮತ್ತು 'ಪುರುಷ' ಎಂಬ ಎರಡು ಶಬ್ದಗಳ ಕಾರ್ಯವನ್ನು ನೆರವೇರಿಸಿ ಪರಸ್ಪರ ಭೇದವಿಲ್ಲವೆಂಬ ನಿಶ್ಚಯವುಂಟಾಗುವಂತೆ ಪ್ರಯೋಗಿಸಲ್ಪಟ್ಟಿದೆಯಾಗಿ ಇಂತಹ ಪ್ರಯೋಗಕ್ಕೆ ಶುದ್ಧೋಪಾದಾನ ಸಾಧ್ಯವಸಾನ ಲಕ್ಷಣಾ ನಿರೂಪಿತವಾದ ಶಕ್ತಿಯು ಮೂಲವಾಗಿರುವುದೆಂದು ಭಾವಿಸಬೇಕು.

ಈಗ, ಶುದ್ಧ ಲಕ್ಷಣಾ ಸಾರೋಪ ಲಕ್ಷಣಾ ಶಕ್ತಿಯ ಉದಾಹರಣೆಯನ್ನು "ಆಯುರ್ಘೃತಂ" ಎಂಬ ದೃಷ್ಟಾಂತದಿಂದ ನಿರೂಪಿಸಬಹುದು. ಆಯುಸ್ಸಿನ ವೃದ್ಧಿಗೆ ಘೃತಯುಕ್ತವಾದ ಅನ್ನದ ಭೋಜನವೇ ಮುಖ್ಯ ಕಾರಣವೆಂದು ವೈದ್ಯಶಾಸ್ತ್ರಜ್ಞರು ನಿರ್ಧರಿಸಿರುತ್ತಾರೆ. ಈ ದೃಷ್ಟಾಂತದಲ್ಲಿ, ಭೋಜನಕ್ಕೆ ಅಂಗಗಳಾದ ಅನ್ನಾದಿಗಳನ್ನು ಬಿಟ್ಟು ತುಪ್ಪವನ್ನೇ ಮುಖ್ಯಾಂಗವನ್ನಾಗಿಟ್ಟುಕೊಂಡು ಘೃತವೇ ಆಯುಸ್ಸು ಎಂಬ ಪ್ರಯೋಗವು ರೂಢಿಯಲ್ಲಿ ಬಂದಿರುತ್ತದೆ. ಆಯುರ್ವೃದ್ಧಿಗೆ ಕಾರಣವಾಗಿರುವ ಘೃತಕ್ಕೂ ಸಾಕ್ಷಾತ್ ಆಯುಷ್ಯಕ್ಕೂ ಅಭೇದ ಸಂಬಂಧವನ್ನು ಕಲ್ಪಿಸಿ, 'ಘೃತ' ಎಂಬ ಶಬ್ದದ ಅರ್ಥದಲ್ಲಿ ವಿಶೇಷಾಂಶವನ್ನು ಆರೋಪಣೆ ಮಾಡಿರುವುದರಿಂದ ಈ ದೃಷ್ಟಾಂತವು ಶುದ್ಧ ಲಕ್ಷಣ ಸಾರೋಪ ಎಂಬ ಆಂತರಿಕ ವಿಭಾಗದ ಸ್ವರೂಪವನ್ನು ತೋರಿಸುವುದು. ಇದರಂತೆಯೇ, ಲೋಕವ್ಯವಹಾರದಲ್ಲಿ, "ನನ್ನ ಮಗನೇ ನನ್ನ ಪ್ರಾಣವು", "ಕಾಶಿಯೇ ನನ್ನ ಜೀವವು" ಮುಂತಾದ ಪ್ರಯೋಗಗಳು ಕಾಣಬರುತ್ತವೆ. ಈ ದೃಷ್ಟಾಂತಗಳಲ್ಲಿ 'ಮಗ' ಮತ್ತು 'ಕಾಶಿ' ಎಂಬ ಶಬ್ದಗಳು ತಮ್ಮ ರೂಢಾರ್ಥಗಳನ್ನು ಪರಿತ್ಯಜಿಸಿ 'ಪ್ರಾಣಕ್ಕೆ ಮೂಲಾಧಾರ' ಎಂಬ ಆರೋಪಿತವಾದ ಬೇರೆ ಅರ್ಥವನ್ನು ಕೊಡುವುವು.

ಈ ದೃಷ್ಟಾಂತಗಳಲ್ಲಿಯೇ 'ಆಯುಸ್ಸು' ಮತ್ತು 'ಘೃತ', 'ಮಗ' ಮತ್ತು 'ಪ್ರಾಣ', 'ಕಾಶಿ' ಮತ್ತು 'ಜೀವ' ಎಂಬ ಎರಡೆರಡು ಶಬ್ದಗಳನ್ನು ಒಂದರಮೇಲೊಂದು ಆರೋಪಿತವಾಗುವಂತೆ ಪ್ರಯೋಗಮಾಡದೆ, ಘೃತವನ್ನು ಕುರಿತು ಮತ್ತು ಮಗನನ್ನು ಕುರಿತು, 'ಇದೇ ನನ್ನ ಆಯುಷ್ಯ', 'ಇದೇ ನನ್ನ ಪ್ರಾಣ' ಮುಂತಾಗಿ ಒಂದೇ ಶಬ್ದವನ್ನು ಪ್ರಯೋಗಮಾಡಿದಲ್ಲಿ ಆಯುಸ್ಸಿಗೆ ಕಾರಣವಾದ ತುಪ್ಪದಲ್ಲಿ ಆಯುಸ್ಸು ಎಂಬ ಅರ್ಥಕ್ಕೆ ಭೇದವಿಲ್ಲದಂತೆ ನಿಶ್ಚಯ ಹುಟ್ಟುವುದರಿಂದ ಇಂತಹ ಪ್ರಯೋಗವು ಶುದ್ಧ ಲಕ್ಷಣ ಸಾಧ್ಯವಸಾನ ಲಕ್ಷಣಾ ಮೂಲವೆಂದು ಶಾಸ್ತ್ರಜ್ಞರು ಸಂಕೇತಿಸಿರುತ್ತಾರೆ.

೯. ಗೌಣೀ ಲಕ್ಷಣಾ ನಿರೂಪಕ ದೃಷ್ಟಾಂತಗಳು.—ಈಗ ಗೌಣೀ ಲಕ್ಷಣಾ ಶಕ್ತಿಯ ನಾಲ್ಕು ಆಂತರಿಕ ವಿಭಾಗಗಳನ್ನು ವರ್ಣಿಸಬೇಕಾಗಿದೆ. ಶುದ್ಧ ಲಕ್ಷಣಾ ಮತ್ತು ಗೌಣೀ ಲಕ್ಷಣಾ—ಈ ಎರಡು ಮುಖ್ಯ ಭಾಗಗಳಲ್ಲಿ ವಾಚ್ಯಾರ್ಥಕ್ಕೂ ಲಕ್ಷ್ಯಾರ್ಥಕ್ಕೂ ಒಂದಾನೊಂದು ಸಂಬಂಧವು ಇದ್ದೇ ಇರಬೇಕು ಎಂದು "ವಾಚ್ಯ ಸಂಬಂಧಿನೀ ಲಕ್ಷಣಾ" ಎಂಬ ನ್ಯಾಯ ಮತದ ಸಿದ್ಧಾಂತ

ವನ್ನನುಸರಿಸಿ ನಿರೂಪಿಸಿರುವುದು ಸರಿಯಷ್ಟೆ. ಇದರಲ್ಲಿ ಗೌಣೀ ಲಕ್ಷಣಾ ಪ್ರಯೋಗವು ಯಾವುದಾದರೊಂದು ಸಾದೃಶ್ಯ ಸಂಬಂಧವನ್ನು ಮಾತ್ರ ಅವಲಂಬಿಸಿಕೊಂಡಿರುತ್ತದೆ. "ದೇವದತ್ತನು ಸಿಂಹನು" ಎಂಬ ದೃಷ್ಟಾಂತದಲ್ಲಿ, ದೇವದತ್ತನಿಗೂ ಸಿಂಹನಿಗೂ ಇರುವ ಧೈರ್ಯ ಸಾದೃಶ್ಯ ಅಥವಾ, ಬಲ ಸಾದೃಶ್ಯವೇ ಮೂಲಕಾರಣವಾಗಿರುತ್ತದೆ ಎಂಬ ವಿಷಯವನ್ನು ಸ್ಮರಣೆಗೆ ತಂದರೆ ಗೌಣೀ ಲಕ್ಷಣಾ ಶಕ್ತಿಯ ಸ್ವರೂಪವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಆದರೆ, ಶುದ್ಧ ಲಕ್ಷಣಾ ಪ್ರಯೋಗದಲ್ಲಿ ಸಾದೃಶ್ಯ ಸಂಬಂಧವೊಂದನ್ನು ಬಿಟ್ಟು ಇತರ ಯಾವತ್ತೂ ಸಂಬಂಧಗಳೂ ಅಂತರ್ಭೂತವಾಗುತ್ತವೆ. ರಾಜನೂ ಸೇವಕರೂ ಪರಿವಾರವೂ ಮೆರವಣಿಗೆಯಲ್ಲಿ ಹೋಗುವಾಗ, 'ರಾಜನು ಹೋಗುತ್ತಾನೆ' ಎಂಬ ಪ್ರಯೋಗವು ರೂಢಿಯಲ್ಲಿರುವುದು. ಈ ಪ್ರಯೋಗದಲ್ಲಿ ಸ್ವಸ್ವಾಮಿಭಾವ ರೂಪವಾದ ಸಂಬಂಧವು ಶುದ್ಧ ಲಕ್ಷಣಾ ಶಕ್ತಿಗೆ ಮೂಲ ಕಾರಣವೆಂದು ತಿಳಿಯಬೇಕಾಗಿದೆ. ಹಸ್ತದ ಬೆರಳುಗಳನ್ನು ಮಾತ್ರ ನೋಡಿ, ಇದು 'ಕೈ' ಎಂದು ಪ್ರಯೋಗ ಮಾಡುವುದುಂಟು. ಇದರಲ್ಲಿ ಅವಯವಿಯಾದ ಹಸ್ತವೆಂಬ ಅರ್ಥವು ಅವಯವವಾದ ಬೆರಳುಗಳಲ್ಲಿ ಆರೋಪಿಸಲ್ಪಟ್ಟಿರುವುದರಿಂದ ಇಲ್ಲಿ ಅಂಗಾಂಗೀಭಾವ ಸಂಬಂಧವು ಲಕ್ಷಣಾ ಶಕ್ತಿಗೆ ಮೂಲ ಕಾರಣವೆಂದು ಭಾವಿಸಬೇಕು. ಒಬ್ಬ ಮನುಷ್ಯನನ್ನು ಕುರಿತು, 'ಇವನು ಬಳ್ಳಿಯ ಅಡಿಗೆಯವನು', ಅಥವಾ, 'ಬಳ್ಳಿಯ ಬಡಗಿ' ಎಂದು ಪ್ರಯೋಗಿಸಿದರೆ, ಈ ಪ್ರಯೋಗಗಳಲ್ಲಿ ಕರ್ತೃ, ಕರ್ಮ ಭಾವರೂಪವಾದ ಸಂಬಂಧವು ಲಕ್ಷಣಾ ಶಕ್ತಿಗೆ ಮೂಲಕಾರಣವಾಗುತ್ತದೆ. ಮೇಲೆ ನಿರೂಪಿಸಿರುವ "ಆಯುರ್ಘೃತಂ" ಎಂಬ ದೃಷ್ಟಾಂತದಲ್ಲಿ ಕಾರ್ಯಕಾರಣ ಭಾವರೂಪವಾದ ಸಂಬಂಧವು ಲಕ್ಷಣಾ ಶಕ್ತಿಗೆ ಮೂಲಕಾರಣವಾಗಿರುತ್ತದೆ. ಈ ರೀತಿಯಾಗಿ ಸಾದೃಶ್ಯ ಸಂಬಂಧವನ್ನು ಬಿಟ್ಟು ಇತರ ಸಂಬಂಧಗಳಲ್ಲೂ ಶುದ್ಧ ಲಕ್ಷಣಾ ಪ್ರಯೋಗಕ್ಕೆ ಆಧಾರವಿರುತ್ತದೆ.

ಈಗ ಗೌಣೀ ಲಕ್ಷಣಾ ನಿರೂಪಿತವಾದ ಅಂತರ ಪ್ರಭೇದಗಳನ್ನು ದೃಷ್ಟಾಂತವಾಗಿ ವಿವರಿಸಬೇಕಾಗಿದೆ. ಗೌಣೀ ಲಕ್ಷಣದಲ್ಲಿಯೂ ಉಪಾದಾನ ಲಕ್ಷಣಾ ಮತ್ತು ಲಕ್ಷಣ ಲಕ್ಷಣಾ ಎಂದು ಎರಡು ಮುಖ್ಯ ಪ್ರಭೇದಗಳುಂಟು. ಈ ಪ್ರಭೇದಗಳಲ್ಲಿ ಪ್ರತಿಯೊಂದೂ ಸಾರೋಪ ಮತ್ತು ಸಾಧ್ಯವಸಾಯವೆಂಬ ಎರಡು ಪ್ರಭೇದಗಳನ್ನುಳ್ಳದ್ದಾಗಿರುತ್ತದೆ. ಆದುದರಿಂದ ಗೌಣೀ ಲಕ್ಷಣದಲ್ಲಿ, (೧) ಉಪಾದಾನ ಸಾರೋಪಾ (೨) ಉಪಾದಾನ ಸಾಧ್ಯಾವಸಾಯ (೩) ಲಕ್ಷಣಾ ಸಾರೋಪಾ (೪) ಲಕ್ಷಣಾ ಸಾಧ್ಯವಸಾಯ ಎಂದು ನಾಲ್ಕು ಪ್ರಭೇದಗಳಿರುವುವು. "ಮುಖವು ಚಂದ್ರನು" ಎಂದು ಪ್ರಯೋಗಮಾಡಿದಲ್ಲಿ ಚಂದ್ರನಲ್ಲಿರುವ ಆಹ್ಲಾದಕತ್ವ ಗುಣವನ್ನು ಮುಖದಲ್ಲಿ ಆರೋಪಣೆಮಾಡಿದಂತಾಗಿ ಚಂದ್ರನಲ್ಲಿನ ಆಹ್ಲಾದಕತ್ವವು ಸಿದ್ಧವಾಗುವುದಿಲ್ಲವಾದುದರಿಂದ, ಈ ದೃಷ್ಟಾಂತವು ಗೌಣೀ

ಉಪಾದಾನ ಸಾರೋಪಾ ಲಕ್ಷಣಾ ಶಕ್ತಿಗೆ ಉದಾಹರಣವಾಗಿರುತ್ತದೆ. ಇದೇ ದೃಷ್ಟಾಂತದಲ್ಲಿ ಮುಖವೆಂಬ ಶಬ್ದವನ್ನು ಬಿಟ್ಟು ಕೇವಲ ಚಂದ್ರನೆಂದು ಮುಖವನ್ನುದ್ದೇಶಿಸಿ ಪ್ರಯೋಗಿಸಿದರೆ ಗೌಣೀ ಉಪಾದಾನ ಸಾಧ್ಯವಸಾನ ಲಕ್ಷಣಾ ಶಕ್ತಿಯು ಇದರಿಂದ ಸೂಚಿತವಾಗುತ್ತದೆ. ಹೀಗೆಯೇ, ಗೌಣೀ ಲಕ್ಷಣಾ ಸಾರೋಪವೆಂಬ ಮೂರನೆಯ ಪ್ರಭೇದವನ್ನು ತೋರಿಸಬೇಕಾದರೆ, "ಗೌಃ ವಾಹೀಕಃ" ಎಂಬ ದೃಷ್ಟಾಂತವನ್ನು ಉದಾಹರಿಸಬಹುದು. ಇದರಲ್ಲಿ, ವಾಹೀಕನೆಂದರೆ ಒಂದು ದೇಶದ ಹೆಸರಾದರೂ ಲಕ್ಷಣಾ ಬಲದಿಂದ ಅದು ಆ ದೇಶವಾಸಸ್ಥನನ್ನು ನಿರೂಪಿಸುತ್ತದೆ. ಆದುದರಿಂದ, ಒಂದು ಪ್ರಕಾರವಾಗಿ ಲಕ್ಷಣಾ ಶಕ್ತಿಯಿಂದ ವಾಹೀಕ ಶಬ್ದವು ತದ್ದೇಶೀಯನಾದ ಪುರುಷನನ್ನು ನಿರೂಪಿಸುವಂತೆ ಪ್ರಯೋಗಿಸಲ್ಪಟ್ಟು, ಪುನಃ ಈ ಪ್ರಯೋಗದಲ್ಲಿ ಗೋವಿಗೂ ವಾಹೀಕನಿಗೂ ಇರುವ ದಡ್ಡತನವೆಂಬ, ಅಥವಾ ಮೂರ್ಖತನವೆಂಬ ಸಾದೃಶ್ಯ ಧರ್ಮವನ್ನು ತೋರಿಸುವ ಸಾರೋಪ ಲಕ್ಷಣಾ ಶಕ್ತಿಯ ಅನುಭಾವವು ಕಾಣುತ್ತದೆ. ವಾಹೀಕ ಶಬ್ದದ ಪ್ರಯೋಗದಲ್ಲಿ ಒಂದು ಸಲ, 'ಗೌಃ ವಾಹೀಕಃ' ಎಂಬ ಪ್ರಯೋಗದಲ್ಲಿ ಮತ್ತೊಂದು ಸಲ—ಹೀಗೆ ಎರಡು ಸಲ ಲಕ್ಷಣಾ ಶಕ್ತಿಯು ಕಾಣುವುದರಿಂದ ಈ ಉದಾಹರಣೆಯು ಗೌಣೀ ಸಾರೋಪ ಲಕ್ಷಣ ಲಕ್ಷಣಾ ಎಂಬ ಪ್ರಭೇದಕ್ಕೆ ಉದಾಹರಣೆಯಾಗಿರುತ್ತದೆ. ಇದೇ ದೃಷ್ಟಾಂತದಲ್ಲಿ, ವಾಹೀಕ ಶಬ್ದವನ್ನು ಬಿಟ್ಟು ಅದೇ ವಾಹೀಕನನ್ನುದ್ದೇಶಿಸಿ, 'ಇವನು ಗೋವು' ಎಂದು ಪ್ರಯೋಗ ಮಾಡಿದಲ್ಲಿ ಅದು ಗೌಣೀ ಸಾಧ್ಯವಸಾನ ಲಕ್ಷಣ ಲಕ್ಷಣಾ ಎಂಬ ಪ್ರಭೇದದ ಸ್ವರೂಪವನ್ನು ತೋರಿಸುವುದು.

೧೦. ರೂಢ ಲಕ್ಷಣಾ ಪ್ರಭೇದಗಳು.—ಹಿಂದೆ ಹೇಳಿದ ಶ್ಲೋಕದಲ್ಲಿ ನಿರೂಪಿಸಿದ 'ರೂಢಿತಃ' ಎಂಬ ವಿಕಲ್ಪಕ್ಕನುಗುಣವಾಗಿ ಪುನಃ ಶುದ್ಧಾ ಗೌಣೀ ಪ್ರಭೇದದಿಂದಲೂ ಉಪಾದಾನ ಲಕ್ಷಣಾ ಪ್ರಭೇದಗಳಿಂದಲೂ ಸಾರೋಪಾ ಸಾಧ್ಯವಸಾನ ಪ್ರಭೇದಗಳಿಂದಲೂ ಎಂಟು ಅವಾಂತರ ಭೇದಗಳನ್ನು ಕಲ್ಪಿಸಬಹುದು.

ಇವುಗಳಲ್ಲಿ ಪ್ರತಿಯೊಂದಕ್ಕೂ ದೃಷ್ಟಾಂತಗಳನ್ನು ಕೊಟ್ಟು ಉದಾಹರಣೆಗಳಿಂದ ಇವುಗಳಲ್ಲಿರುವ ಪರಸ್ಪರ ಪ್ರಭೇದಗಳನ್ನು ವಿಸ್ತಾರವಾಗಿ ನಿರೂಪಿಸುವುದು ಅಷ್ಟು ಆವಶ್ಯಕವಾಗಿರುವುದಿಲ್ಲ. ಮೇಲೆ ವಿವರಿಸಿದ ಪ್ರಯೋಜನ ಮೂಲವಾದ ಎಂಟು ವಿಧ ಲಕ್ಷಣಾ ಪ್ರಯೋಗಗಳಂತೆಯೇ, ಸ್ವಲ್ಪ ಹೆಚ್ಚು ಕಡಿಮೆಯಾಗಿ, ಈಗ ನಿರೂಪಿಸಬೇಕಾದ ರೂಢಮೂಲ ಪ್ರಭೇದಗಳೂ ಸಹ ಇರುವುವೆಂದು ಸ್ಥೂಲವಾಗಿ ಹೇಳಬಹುದು. ಇವುಗಳಲ್ಲಿ ವಿಶೇಷವೇನೆಂದರೆ, ಮೊದಲು ನಿರೂಪಿಸಿದ ಪ್ರಯೋಜನ ಮೂಲವಾದ ಎಂಟು ಪ್ರಭೇದಗಳಲ್ಲಿ ಪ್ರತಿಯೊಂದರಲ್ಲಿಯೂ ಶಬ್ದವು ತನ್ನ ವಾಚ್ಯಾರ್ಥವನ್ನು ಬಿಟ್ಟು ಲಕ್ಷಣಾ ಬಲದಿಂದ ಬೇರೆ ವಸ್ತುವನ್ನು ತೋರಿಸಬೇಕಾದರೆ ಏನಾದರೊಂದು ಪ್ರಯೋಜನವು

ಅಂತಹ ಅರ್ಥದ ಬದಲಾವಣೆಯಲ್ಲಿ ಕಾಣಬರುವುದು. ಆದರೆ, ರೂಢಮೂಲ ವಾದ ಲಕ್ಷಣಾ ನಿರೂಪಕ ದೃಷ್ಟಾಂತಗಳಲ್ಲಿ ಅಂತಹ ಪ್ರಯೋಜನವು ಕಾಣ ಬರದೆ ಕೇವಲ ರೂಢಿಬಲದಿಂದಲೇ ಶಬ್ದವು ತನ್ನ ವಾಚ್ಯಾರ್ಥವನ್ನು ಬಿಟ್ಟು ಬೇರೆ ಅರ್ಥವನ್ನು ನಿರೂಪಿಸುವುದು.

ಈ ಮುಖ್ಯವಾದ ಭೇದವನ್ನು ಮನಸ್ಸಿನಲ್ಲಿಟ್ಟು ಈ ಲೇಖನದ ಕೊನೆಯಲ್ಲಿ ಕೊಟ್ಟಿರುವ ಕೋಷ್ಟಕ, ಅಥವಾ ವೃಕ್ಷದಲ್ಲಿ ಪ್ರಯೋಜನಮೂಲ ಮತ್ತು ರೂಢಮೂಲವೆಂಬ ಪ್ರಭೇದಗಳನ್ನು ತೋರಿಸುವುದಕ್ಕೆ ನಿರೂಪಿಸಿರುವ ದೃಷ್ಟಾಂತ ಗಳನ್ನು ಪರಿಶೋಧಿಸಿದಲ್ಲಿ ಈ ಎರಡು ಮುಖ್ಯ ವಿಭಾಗದ ಸ್ವರೂಪವು ವಾಚಕರ ಮನಸ್ಸಿಗೆ ಗೋಚರವಾಗುವುದು. "ತೈಲಗಳು ಹೇಮಂತ ಕಾಲದಲ್ಲಿ ಉಪ ಯೋಗವಾಗುತ್ತವೆ" ಎಂಬ ಪ್ರಯೋಗದಲ್ಲಿ, ತೈಲ ಶಬ್ದವು ತಿಲ ಅಥವಾ ಎಳ್ಳಿನ ಸಂಬಂಧವಾದದ್ದು ಎಂಬ ಅರ್ಥವನ್ನು ಮಾತ್ರ ಕೊಡುತ್ತದೆ. ಆದರೆ ರೂಢಿ ಯಲ್ಲಿ ಉಪಾದಾನ, ಅಥವಾ ಕಾರ್ಯಕಾರಣ ಭಾವದಿಂದ ಎಳ್ಳಿನಲ್ಲಿ ಹುಟ್ಟಿದ ಎಣ್ಣೆಯೇ ತೈಲವೆಂದು ಕರೆಯಲ್ಪಡುತ್ತದೆ. ಯೌಗಿಕಾರ್ಥದಿಂದ ಎಳ್ಳಿನ ಹೊಟ್ಟು, ಎಳ್ಳಿನ ಹಿಂಡಿ, ಅಥವಾ ಎಳ್ಳಿನ ಗಿಡ ಮುಂತಾದವುಗಳೆಲ್ಲವೂ ಎಳ್ಳಿನ ಸಂಬಂಧವುಳ್ಳವುಗಳಾದರೂ ರೂಢಿಯಿಂದ ತೈಲ ಶಬ್ದವು ಎಳ್ಳಿನ ಎಣ್ಣೆಯನ್ನೇ ನಿರೂಪಿಸುತ್ತದೆ.

ಆದರೆ, ಈ ರೂಢಮೂಲವಾದ ತೈಲ ಶಬ್ದದ ಪ್ರಯೋಗವು ಮೇಲೆ ಉದಾ ಹರಿಸಿದ "ತೈಲಗಳು ಹೇಮಂತ ಕಾಲದಲ್ಲಿ ಉಪಯೋಗವಾಗುತ್ತವೆ" ಎಂಬ ದೃಷ್ಟಾಂತ ವಾಕ್ಯದಲ್ಲಿ 'ತೈಲಗಳು' ಎಂಬ ಬಹುವಚನವಿರುವುದರಿಂದಲೂ, ಎಳ್ಳೆಂಬ ಒಂದೇ ಜಾತಿಯ ಕಾಳಿನಿಂದ ಅನೇಕ ವಿಧವಾದ ಎಣ್ಣೆಗಳನ್ನು ಕಲ್ಪಿಸು ವುದು ಬಾಧಿತವಾಗಿರುವುದರಿಂದಲೂ ಅಂತಹ ಮುಖ್ಯಾರ್ಥದ ಬಾಧೆಯಿಂದ ರೂಢಮೂಲವಾಗಿ ತೈಲ ಶಬ್ದವು ಬಾದಾಮಿ ತೈಲ, ಕುಸುಂಬೆ ತೈಲ, ಗಂಧದ ತೈಲ ಎಂಬ ಪ್ರಯೋಗಗಳಲ್ಲಿ ಕಾಣುವಂತೆ ಬೇರೆ ಬೇರೆ ಪದಾರ್ಥದಿಂದ ಹುಟ್ಟುವ ಎಣ್ಣೆಗಳನ್ನು ನಿರೂಪಿಸುತ್ತದೆ. ಅಂತಹ ನಿರೂಪಣೆಗೆ ಈ ರೀತಿಯಾದ ರೂಢಿಯೇ ಕಾರಣವಲ್ಲದೆ ಪ್ರಯೋಜನವು ಕಾರಣವಾಗಿರುವುದಿಲ್ಲ. ಆದರಿಂದ, ಮೇಲಿನ ಪ್ರಯೋಗವು ಗೌಣೀ ಉಪಾದಾನ ಸಾಧ್ಯವಸಾನಾ ಲಕ್ಷಣಾ ಎಂಬ ರೂಢಮೂಲವಾದ ಅವಾಂತರ ಪ್ರಭೇದಕ್ಕೆ ಸೇರುತ್ತದೆ ಎಂಬ ವಿಷಯವು ವ್ಯಕ್ತವಾಗುವುದು. ಮುಂದೆ ಕೊಟ್ಟಿರುವ ಲಕ್ಷಣಾ ಕೋಷ್ಟಕ ಅಥವಾ, ಲಕ್ಷಣಾ ವೃಕ್ಷವನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ಇದರ ಸಂಗತಿಯು ವಾಚಕರ ಅವಗಾಹನೆಗೆ ಬರುವುದು.

ಇನ್ನು, ರೂಢಮೂಲವಾದ ಲಕ್ಷಣಲಕ್ಷಣಾ ನಿರೂಪಣೆಯನ್ನು ಉದಾ ಹರಿಸುವುದಕ್ಕೆ ಮತ್ತೊಂದು ದೃಷ್ಟಾಂತವನ್ನು ಕೊಟ್ಟು, ರೂಢ ಲಕ್ಷಣಕ್ಕೂ ಪ್ರಯೋಜನ ಲಕ್ಷಣಕ್ಕೂ ಇರುವ ಪ್ರಭೇದವನ್ನು ತೋರಿಸಬೇಕಾಗಿದೆ.

"ರಾಜನು ಕಂಟಕ ಶೋಧನೆ ಮಾಡುತ್ತಾನೆ" ಎಂಬ ದೃಷ್ಟಾಂತದಲ್ಲಿ 'ಕಂಟಕ' ಎಂಬ ಶಬ್ದವೂ 'ಶೋಧಿಸು' ಎಂಬ ಶಬ್ದವೂ ತಮ್ಮ ಮೂಲಾರ್ಥವನ್ನು ರೂಢಿ ಬಲದಿಂದ ಪರಿತ್ಯಜಿಸಿ ಬೇರೆ ಅರ್ಥಗಳನ್ನು ನಿರೂಪಿಸುತ್ತವೆ. ಕಂಟಕ ಶಬ್ದವು ಕಂಟಕ ಸದೃಶನಾದ ರಾಜನನ್ನು ಬೋಧಿಸುವುದರಿಂದ 'ಗೌಣೀ ಲಕ್ಷಣಾ' ಎಂಬ ಪ್ರಭೇದಕ್ಕೆ ದೃಷ್ಟಾಂತವಾಗುತ್ತದೆ. 'ಶೋಧಿಸು' ಎಂಬ ಶಬ್ದವು ಕೇವಲ ಕಂಟಕ, ಅಥವಾ ಮುಳ್ಳನ್ನು ಕುರಿತು ಮಾತ್ರವೇ ಪ್ರಯೋಗಿಸಲ್ಪಟ್ಟರೂ ರೂಢಿ ಬಲದಿಂದ, 'ಕಂಟಕ ರೂಪನಾದ ರಾಜನ ಬಾಧೆಯನ್ನು ಪರಿಹಾರ ಮಾಡುವಿಕೆ' ಎಂಬ ಬೇರೆ ಅರ್ಥವನ್ನು ಸ್ವೀಕರಿಸಿ, ವಾಕ್ಯದ ಅರ್ಥವನ್ನು ಸಾರ್ಥಕ ಮಾಡುತ್ತದೆ. ಆದುದರಿಂದ, ಕಂಟಕ ಶಬ್ದದ ಲಕ್ಷ್ಯಾರ್ಥವನ್ನನುಸರಿಸಿ 'ಶೋಧಿಸು' ಎಂಬ ಶಬ್ದವು ಪುನಃ ಬೇರೆ ವಿಧವಾದ ಅರ್ಥವನ್ನು ಲಕ್ಷಣಾ ಬಲದಿಂದ ಸ್ವೀಕರಿಸುವುದರಿಂದ ಈ ಶಬ್ದದ ಪ್ರಯೋಗದಲ್ಲಿ 'ಗೌಣೀ ಲಕ್ಷಣ ಲಕ್ಷಣಾ' ಎಂಬ ಪ್ರಭೇದವು ಅನ್ವರ್ಥಕವಾಗಿ ಕಂಡುಬರುವುದು. ಕಂಟಕ ಶಬ್ದವು ವಿರೋಧಿ ರಾಜನನ್ನು ಅಭೇದ ಸಂಬಂಧದಿಂದ ನಿರೂಪಿಸುವುದರಿಂದ ಮೇಲೆ ಉದಾಹರಿಸಿದ "ರಾಜನು ಕಂಟಕ ಶೋಧನೆ ಮಾಡುತ್ತಾನೆ" ಎಂಬ ವಾಕ್ಯವು ಗೌಣೀ ಲಕ್ಷಣಾ ಸಾಧ್ಯವಸಾನದ ಪ್ರಭೇದದಲ್ಲಿ ರೂಢ ಮೂಲವನ್ನು ತೋರಿಸುತ್ತದೆ ಎಂಬುದು ಕೋಷ್ಟಕದಿಂದ ಗೊತ್ತಾಗುವುದು.

೧೧. ಲಕ್ಷಣಾ ನಿರೂಪಕ ವೃಕ್ಷ.—ಈ ರೀತಿಯಾಗಿ ಕೋಷ್ಟಕದಲ್ಲಿ ಕೊಟ್ಟಿರುವ ದೃಷ್ಟಾಂತರಗಳನ್ನೂ ಅವುಗಳ ಪ್ರಭೇದಗಳ ನಾಮಗಳಿಗನುಗುಣವಾಗಿ ಸಮನ್ವಯಿಸುವ ರೀತಿಯನ್ನೂ ಕುಶಲರಾದ ವಾಚಕರು ತಾವಾಗಿಯೇ ಊಹಿಸಿಕೊಳ್ಳಬಹುದು. ಹೆಚ್ಚು ವಿಸ್ತರಿಸಿದರೆ ಪುನರುಕ್ತಿಯು ವಿಶೇಷವಾಗಿ ಕಾಣಬರುವುದರಿಂದ ಆ ಎಲ್ಲ ದೃಷ್ಟಾಂತಗಳ ವಿವರಣೆಯನ್ನೂ ಈ ಲೇಖನದಲ್ಲಿ ಮಾಡುವುದು ಸಮಂಜಸವಾಗಲಾರದು.

ಈ ಕೋಷ್ಟಕದಲ್ಲಿ, ಮೇಲೆ ನಿರೂಪಿಸಿದ "ವಾಚ್ಯಾರ್ಥ ಬಾಧೇ ತದ್ಯೋಗೇ ರೂಢಿತೋಽಥ ಪ್ರಯೋಜನಾತ್" ಎಂಬ ಶ್ಲೋಕದ ತಾತ್ಪರ್ಯವು ಯಾವತ್ತೂ ಬರುವ ಹಾಗೆ ಅವಾಂತರ ಭೇದಗಳ ಸಹಿತವಾಗಿ ದೃಷ್ಟಾಂತಗಳನ್ನು ಕೊಟ್ಟಿದೆ. ಇಂತಹ ದೃಷ್ಟಾಂತಗಳ ನಾಮ ನಿರ್ದೇಶವನ್ನೂ ನಾಮಾನುಗುಣವಾದ ಲಕ್ಷಣ ಸಮನ್ವಯವನ್ನೂ ಮೇಲೆ ವಿವರಿಸಿರುತ್ತದೆ. ಆದರೂ "ವಾಚ್ಯಾರ್ಥ ಬಾಧೇ ತದ್ಯೋಗೇ" ಎಂದರೆ, ಶಬ್ದದ ಮುಖ್ಯಾರ್ಥಕ್ಕೆ ಬಾಧೆ ಬಂದಾಗಲೂ ಮುಖ್ಯಾರ್ಥ ಸಹಿತವಾಗಿ ಬೇರೆ ಅರ್ಥದ ಸಂಯೋಗ, ಅಥವಾ ಸಂಬಂಧ ಬಂದಾಗಲೂ ರೂಢಿಯನ್ನನುಸರಿಸಿ, ಅಥವಾ ಪ್ರಯೋಜನವನ್ನು ಮನಸ್ಸಿನಲ್ಲಿಟ್ಟು, ಲಕ್ಷಣಾ ಶಕ್ತಿಯ ಬಲದಿಂದ ಶಬ್ದಗಳು ವ್ಯವಹಾರದಲ್ಲಿಯೂ ಕಾವ್ಯಗಳಲ್ಲಿಯೂ ಉಪಯೋಗಕ್ಕೆ ಬರುತ್ತವೆ ಎಂದು ಈ ಶ್ಲೋಕದ ತಾತ್ಪರ್ಯವಾದರೂ ಮುಂದೆ ಕೊಟ್ಟಿರುವ ಕೋಷ್ಟಕದಲ್ಲಿ ರೂಢಿಯನ್ನೂ ಪ್ರಯೋಜನವನ್ನೂ ಅನುಸರಿಸಿ

ಸಾಕಷ್ಟು ದೃಷ್ಟಾಂತಗಳು ಉದಾಹರಿಸಲ್ಪಟ್ಟಿವೆ. ಮುಖ್ಯಾರ್ಥದ ಬಾಧೆ, ತದ್ಯೋಗ—ಈ ನಿಯಮಗಳನ್ನನುಸರಿಸಿ ಪ್ರತ್ಯೇಕ ಪ್ರತ್ಯೇಕವಾಗಿ ದೃಷ್ಟಾಂತಗಳನ್ನು ಅಷ್ಟು ವಿವರವಾಗಿ ನಿರೂಪಿಸಿರುವುದಿಲ್ಲ. ಆದರೆ ಪ್ರತಿಯೊಂದು ರೂಢಿಮೂಲವಾದ, ಅಥವಾ ಪ್ರಯೋಜನಮೂಲವಾದ ದೃಷ್ಟಾಂತದಲ್ಲಿ ಯಾವುದಾದರೂ ಒಂದು ವಿಧವಾದ ಶಬ್ದದ ಮುಖ್ಯಾರ್ಥದ ಬಾಧೆಯೇ ಆಗಲಿ ಇತರಾರ್ಥದ ಸಂಬಂಧವೇ ಆಗಲಿ, ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಕಂಡುಬರುವುದು. ಆದುದರಿಂದ ಈ ಪ್ರಭೇದಗಳನ್ನು ಬೇರೆ ವಿಧವಾದ ಕೋಷ್ಟಕ ಮೂಲಕ ನಿರೂಪಿಸುವುದು ಆವಶ್ಯಕವಾಗಿರುವುದಿಲ್ಲ.

ಇದಲ್ಲದೆ, ಮೇಲೆ ನಿರೂಪಿಸಿದ ಜಹಲ್ಲಕ್ಷಣಾ, ಅಜಹಲ್ಲಕ್ಷಣಾ, ಜಹದಜಹಲ್ಲಕ್ಷಣಾ ಎಂಬ ಮೂರು ವಿಭಾಗಗಳನ್ನು ಮಾತ್ರವೇ ಅನುಸರಿಸಿ ನೈಯಾಯಿಕರೇ ಮುಂತಾದ ಅನೇಕ ಶಾಸ್ತ್ರಜ್ಞರು ಲಕ್ಷಣಾಶಕ್ತಿಯನ್ನು ನಿರೂಪಿಸುತ್ತಾರೆ. ಈ ಮೂರು ವಿಭಾಗಗಳಲ್ಲಿ ಶಬ್ದದ ಮುಖ್ಯಾರ್ಥ ಬಾಧೆಯು ಜಹಲ್ಲಕ್ಷಣದಲ್ಲಿಯೂ, 'ತದ್ಯೋಗ' ಎಂಬ ಎರಡನೆಯ ಪ್ರಭೇದವು ಅಜಹಲ್ಲಕ್ಷಣದಲ್ಲಿಯೂ ಜಹದಜಹಲ್ಲಕ್ಷಣದಲ್ಲಿಯೂ ಕಂಡುಬರುತ್ತದೆ. ಇದೂ ಅಲ್ಲದೆ, ಮುಂದೆ ಕೊಟ್ಟಿರುವ ಕೋಷ್ಟಕದಲ್ಲಿ ತೋರಿಸಿದ ಹಲವಾರು ದೃಷ್ಟಾಂತಗಳಲ್ಲಿ ಪ್ರತಿಯೊಂದು ದೃಷ್ಟಾಂತವನ್ನೂ ಈ ಮೂರು ವಿಧವಾದ ಲಕ್ಷಣಗಳಲ್ಲಿ ಯಾವುದಾದರೂ ಒಂದು ವಿಧವಾಗಿ ಸಮನ್ವಯಿಸಬಹುದು. ಆದುದರಿಂದ ಕೋಷ್ಟಕದಲ್ಲಿಯ ಪ್ರಭೇದಗಳು ಸಾಮಾನ್ಯವಾಗಿ ಸಾಹಿತ್ಯ ಶಾಸ್ತ್ರಜ್ಞರು ಒಪ್ಪಿಕೊಂಡಿರುವಂತೆ ಉದಾಹರಿಸಲ್ಪಟ್ಟಿವೆ.


೧೨. ಲಕ್ಷಣಾ ಮೂಲವಾದ ಅನಂತ ಪ್ರಯೋಗಗಳು.—ಶಬ್ದಶಾಸ್ತ್ರವು ಅನಂತವಾಗಿರುವುದರಿಂದಲೂ ಶಬ್ದಗಳ ಪ್ರಯೋಗವೂ ಸಹ ಆಯಾ ಕವಿಯ ತಾತ್ಪರ್ಯವನ್ನನುಸರಿಸಿ ಬಹು ವಿಧವಾಗಿ ಪರಿಣಮಿಸುವುದರಿಂದಲೂ, ನಾನಾನೇಕವಾದ ವಸ್ತುಗಳಲ್ಲಿ ಅನೇಕ ವಿಧವಾದ ಗೌಣೀ, ಅಥವಾ ಸಾದೃಶ್ಯ ಸಂಬಂಧವೂ ಇತರ ನಾನಾ ವಿಧವಾದ ಶುದ್ಧ ಸಂಬಂಧಗಳೂ ಇರುವುದರಿಂದಲೂ, ಇಂತಹ ಸಂಬಂಧಗಳ ಮೂಲಕ ಆ ಸಂಬಂಧ ನಿರೂಪಿತ ಪದಾರ್ಥಗಳ ಸಮ್ಮೇಳನವನ್ನು ಬಹು ವಿಧವಾಗಿ ಸಂಪಾದಿಸುವುದಕ್ಕೆ ಅವಕಾಶವಿರುವುದರಿಂದಲೂ, ಎಲ್ಲಾ ವಿಧವಾದ ಸಂಬಂಧಗಳಿಂದ ಹುಟ್ಟುವ ಲಕ್ಷಣಾ ಪ್ರಯೋಗದ ಪ್ರಭೇದಗಳನ್ನೂ ವರ್ಣಿಸುವುದು ಸಾಧ್ಯವಲ್ಲ; ಅಲ್ಲದೆ, ಇದೇ ರೀತಿಯಾಗಿ ಪ್ರಯೋಗವಾಗಬೇಕು, ಬೇರೆ ವಿಧವಾಗಿ ಮಾಡಕೂಡದು—ಎಂದು ನಿರ್ಬಂಧಪಡಿಸುವುದಕ್ಕೂ ಯಾರಿಗೂ ಅಧಿಕಾರವಿರುವುದಿಲ್ಲ. ಆದುದರಿಂದ, ಈ ಲೇಖನದಲ್ಲಿ ಲಕ್ಷಣಾ ಪ್ರಯೋಗದ ಸ್ವರೂಪವನ್ನು ಕೆಲವು ದೃಷ್ಟಾಂತಗಳಿಂದ ಮಾತ್ರವೇ ಸುಗ್ರಾಹ್ಯವಾಗುವಂತೆ ವಿವರಿಸಿರುತ್ತದೆ.

ಮೇಲೆ ನಿರೂಪಿಸಿದ ಹಲವಾರು ಪ್ರಭೇದಗಳೂ ಕಾವ್ಯಗಳಲ್ಲಿ ಇಂತಹ ಶುದ್ಧ ಸ್ವರೂಪವನ್ನನುಸರಿಸದೆ ಸಂಕರ ಮಿಶ್ರಣದಿಂದ ಪ್ರಯೋಗಿಸಲ್ಪಟ್ಟು

ತಿಲ ತಂಡುಲ ನ್ಯಾಯದಿಂದ ಸಂಸೃಷ್ಟಿ, ನೀರ ಕ್ಷೀರ ನ್ಯಾಯದಿಂದ ಸಂಕರ—ಎಂಬ ಪ್ರಭೇದಗಳುಳ್ಳದ್ದು) ಅನೇಕ ಅಲಂಕಾರಗಳಿಗೂ ವಿಚಿತ್ರ ವರ್ಣನೆಗಳಿಗೂ ಆಧಾರಭೂತವಾಗುತ್ತವೆ. ಆದುದರಿಂದ, ಸಾಹಿತ್ಯ ಶಾಸ್ತ್ರಜ್ಞರು ಶಬ್ದದ ಅಭಿಧಾ ಶಕ್ತಿಯ ಸ್ವರೂಪವನ್ನೂ ತನ್ಮೂಲವಾದ, ಅಥವಾ ತತ್ಸಂಬಂಧವಾದ, ಲಕ್ಷಣಾ ಶಕ್ತಿಯ ಸ್ವರೂಪವನ್ನೂ ಸೂಕ್ಷ್ಮದೃಷ್ಟಿಯಿಂದ ಅನೇಕ ವಿಧವಾಗಿ ವಿವರಿಸಿ ವಿಸ್ತರಿಸಿರುವರು. ಈ ಪದ್ಧತಿಯನ್ನನುಸರಿಸಿ ಸ್ವಲ್ಪ ಮಟ್ಟಿಗೆ ಸಂಸ್ಕೃತದಲ್ಲಿರುವ ಸಾಹಿತ್ಯ ಶಾಸ್ತ್ರದ ವಿಷಯಗಳನ್ನು ಕನ್ನಡ ನುಡಿಯಲ್ಲಿ ಪ್ರಕಟಿಸುವುದಕ್ಕೆ ಈ ಲೇಖನದಲ್ಲಿ ಪ್ರಯತ್ನಮಾಡಿರುತ್ತದೆ. ಇದೇ ವಿಷಯವಾಗಿ ಹೆಚ್ಚು ಸಂಗತಿಗಳನ್ನು ಸಂಸ್ಕೃತ ಗ್ರಂಥಗಳಿಂದಲೇ ತಿಳಿದುಕೊಳ್ಳಬಹುದು.

ಮುಂದಿನ ಲೇಖನದಲ್ಲಿ ಶಬ್ದದ ವ್ಯಂಜನಾ ಶಕ್ತಿಯನ್ನೂ ಅದರಿಂದ ಕಾವ್ಯ ರಚನೆಗಾಗುವ ಉಪಕಾರವನ್ನೂ ವರ್ಣಿಸಬೇಕಾಗಿದೆ.

ಕರ್ಪೂರ ಶ್ರೀನಿವಾಸರಾವ್.



ದೃಷ್ಟಾಂತಗಳು

	ಶುದ್ಧ ಉಪಾದಾನ ಸಾರೋಪಾ	ಶುದ್ಧ ಉಪಾದಾನ ಸಾಧ್ಯವಸಾಯ	ಶುದ್ಧ ಲಕ್ಷಣಾ ಸಾರೋಪಾ	ಶುದ್ಧ ಲಕ್ಷಣಾ ಸಾಧ್ಯವಸಾಯ	ಗೌಣೀ ಉಪಾದಾನ ಸಾರೋಪಾ	ಗೌಣೀ ಉಪಾದಾನ ಸಾಧ್ಯವಸಾಯ	ಗೌಣೀ ಲಕ್ಷಣಾ ಸಾರೋಪಾ	ಗೌಣೀ ಲಕ್ಷಣಾ ಸಾಧ್ಯವಸಾಯ
ರೂಢ ಲಕ್ಷಣಾ	ಕುಂತಾಃ ಪುರುಷಾಃ ಪ್ರವಿಶಂತಿ	ಕುಂತಾಃ ಪ್ರವಿಶಂತಿ	ಆಯುರ್ಘೃತಂ	ಆಯುರ್‍ರ್ವೇದಂ	ಏತೇ ಗಾವಃ ಯಾಂತಿ	ಗಾವಃ ಯಾಂತಿ	ಗೌಃ ವಾಹೀಕಃ	ಗೌರಯಂ
ಪ್ರಯೋಜನ ಲಕ್ಷಣಾ	ಅಶ್ವಃ ಶ್ವೇತೋ ಧಾವತಿ	ಶ್ವೇತೋ ಧಾವತಿ	ಕಳಿಂಗಃ ಪುರುಷಃ	ಕಳಿಂಗಃ ಸಾಹಸಿಕಃ	ಏತಾನಿ ತೈಲಾನಿ ಹೇಮಂತೇ ಸುಖಾನಿ	ತೈಲಾನಿ ಹೇಮಂತೇ ಸುಖಾನಿ	ರಾಜಾ ಗೌಡೇಂದ್ರಃ ಕಂಟಕಂ ಶೋಧಯತಿ	ರಾಜಾ ಕಂಟಕಂ ಶೋಧಯತಿ

ಆಂಗ್ಲೇಯರ ಪ್ರಾಚೀನ ಸಾಹಿತ್ಯ

ಮಾನವ ವರ್ಗವು ಚರಿತ್ರೆಯ ಅನಾದಿ ಕಾಲದಲ್ಲಿ ಶಿಲೆಯ ಉಪಕರಣಗಳನ್ನು ಉಪಯೋಗಿಸುತ್ತಿದ್ದುದರಿಂದ ಪಾಶ್ಚಾತ್ಯ ಶಾಸ್ತ್ರಕಾರರು ಆ ಕಾಲವನ್ನು ಶಿಲಾಯುಗವೆಂದು ಕರೆಯುತ್ತಾರೆ. ಶಿಲಾಯುಗದಲ್ಲಿ ಬ್ರಿಟಿಷ್ ದ್ವೀಪಗಳಲ್ಲಿ ವಾಸವಾಗಿದ್ದ ಜನರ ಜೀವನದ ವಿಚಾರ ನಮಗೆ ಏನೂ ತಿಳಿಯದು; ಅವರ ಕಾವ್ಯಮಾಲೆಯ ವಿಚಾರವೂ ಏನೂ ತಿಳಿಯದು. ಆದರೆ ಅವರಲ್ಲಿ ಸಾಹಿತ್ಯವೇ ಇರಲಿಲ್ಲವೆಂದು ಹೇಳಲಾಗದು. ಸಾಹಿತ್ಯವು ಜನಾಂಗದ ಮಾತು. ವಯಸ್ಸಾದ ಜನಾಂಗವು ತನ್ನ ಮಾತನ್ನು ಚೆನ್ನಾಗಿ ಬಿಡಿಸಿ ಆಡಬಹುದು; ಸಣ್ಣ ವಯಸ್ಸಿನ ಜನಾಂಗವು ಮಾತನ್ನು ತೊದಲುತ್ತ ಆಡಬಹುದು; ಎಳೆಯ ಜನಾಂಗವು ಮಾತನಾಡದೆ ಸುಮ್ಮನೆ ಅರ್ಥರಹಿತವಾದ ಧ್ವನಿಯನ್ನು ಮಾತ್ರ ಮಾಡಬಹುದು. ಪ್ರಪಂಚದಲ್ಲಿ ಶಿಲಾಯುಗದಲ್ಲಿ ವಾಸಮಾಡುತ್ತಿದ್ದ ಜನರು ಎಳೆಯ ವಯಸ್ಸಿನ ಜನಾಂಗಗಳು; ಅವಕ್ಕೂ ಒಂದು ರೀತಿಯ ಮಾತು ಇದ್ದಿರಲೇಬೇಕು. ಸಾಹಿತ್ಯಕ್ಕೆ ವಿಷಯವಾದ ಮಾನವನ ಮೂಲ ಮನೋಭಾವಗಳು ಆ ಜನರಲ್ಲೂ ಇದ್ದುವು. ಶತ್ರುಗಳ ಮೇಲೆ ಜಯವುಂಟಾದಾಗ ಉತ್ಸಾಹವನ್ನೂ ಸೂರ್ಯ ಚಂದ್ರಾದಿಗಳ ದಿನದಿನದ ಬದಲಿನಿಂದುಂಟಾದ ಆಶ್ಚರ್ಯವನ್ನೂ ಇನ್ನೂ ಇತರ ಇಂಥ ಸರಳವಾದ ಭಾವಗಳನ್ನೂ ಅವರು ತಮ್ಮ ತೃಪ್ತಿಗಾಗಿ ಆಗಾಗ ವ್ಯಕ್ತಪಡಿಸುತ್ತಿದ್ದಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಈಚೆಗೆ ನಮಗೆ ತಿಳಿದುಬಂದಿರುವ ಇತರ ಕಾಡುಗಳ ಕಾಡುಜನರಲ್ಲಿ ಇಂತಹ ಭಾವಗಳನ್ನು ಸೂಚಿಸುವ ಹಾಡುಗಳೂ ಒಗಟುಗಳೂ ಇರುವುದು ಕಂಡುಬಂದಿದೆ. ಆದರೆ ಆಗಿನ ನಾಗರಿಕತೆಯ ವಿಷಯಗಳಲ್ಲಿ ಬರವಣಿಗೆಯು ಸೇರಿರಲಿಲ್ಲವಾದುದರಿಂದ ಇಂಗ್ಲೆಂಡಿನ ಶಿಲಾಯುಗದ ಜನರಲ್ಲಿ ಇಂತಹ ಸಾಹಿತ್ಯವು ಎಷ್ಟು ಇದ್ದಿತು, ಅದು ಯಾವ ರೀತಿಯದು ಎಂದು ನಮಗೆ ಈಗ ತಿಳಿಯಲು ಸಾಧ್ಯವಿಲ್ಲ.

ಈ ಜನರನಂತರ ಈ ದ್ವೀಪಗಳಿಗೆ ಬಂದವರು ಕೆಲ್ಟ್ ಜನರು. ಇವರ ವಿಚಾರವೂ ನಮಗೆ ಹೆಚ್ಚಾಗಿ ತಿಳಿಯದು. ಇವರಲ್ಲಿ ಸಾಹಿತ್ಯವು ಇನ್ನು ಸ್ವಲ್ಪ ಹೆಚ್ಚಾಗಿದ್ದಿರಬೇಕು. ಇವರ ಆಗಿನ ಕಾಲದ ಗ್ರಂಥಗಳು ಯಾವುವೂ ನಮಗೆ ಸಿಕ್ಕಿಲ್ಲ. ಆದರೂ ಇವರು ಸಾಹಿತ್ಯಕ್ಕೆ ವಿಷಯವಾದ ಮನೋಭಾವಗಳ ವರ್ಣನೆಯಲ್ಲಿ ಬಹಳ ಮುಂದುವರಿದ ಜನರೆಂಬುದರಲ್ಲಿ ಸಂದೇಹವಿಲ್ಲ. ಇವರಿಗೆ ಸಹಜವಾದ ಅಸಾಧಾರಣ ಕಲ್ಪನಾ ಶಕ್ತಿಯು ಈಚೆಗೆ ಆಂಗ್ಲೇಯ ಸಾಹಿತ್ಯದ ಕೆಲವು ಅತ್ಯುತ್ತಮ ಕಾವ್ಯಗಳ ಪ್ರೇರಕ ಶಕ್ತಿಯೆಂದು ತೋರುತ್ತದೆ. ಆದರೆ ಹಿಂದೆ ಈ ಜನರು ಬರೆದ ಯಾವ ಕಾವ್ಯವನ್ನೇ ಆಗಲಿ ನಾವು ಕಾಣೆವು.

ಕೆಲ್ಟ್ ಜನರನಂತರ ಈ ದ್ವೀಪಕ್ಕೆ ಆಂಗ್ಲೊ ಸ್ಯಾಕ್ಸನ್ ಎಂಬ ಜನರು ಬಂದರು. ಆಂಗ್ಲೇಯ ಸಾಹಿತ್ಯದ ಆರಂಭವು ಈ ಆಂಗ್ಲೊ ಸ್ಯಾಕ್ಸನ್ ಜನರನ್ನು ಸೇರಿದ್ದು. ಇದರಲ್ಲೂ ಕವಿಗಳ ಹೆಸರು, ಕಾವ್ಯಗಳ ನಿಜಸ್ವರೂಪ, ಅವುಗಳನ್ನು ಬರೆದ ಕಾಲ—ಈ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವು ಗ್ರಂಥಗಳನ್ನು ಆಂಗ್ಲೇಯರು ಈ ದ್ವೀಪಗಳಿಗೆ ಬಂದಮೇಲೆ ಬರೆದರೇ, ಅಲ್ಲಿಗೆ ಬರುವುದಕ್ಕೆ ಮೊದಲು ಯೂರೋಪಿನ ಭೂಖಂಡದಲ್ಲಿ ವಾಸವಾಗಿದ್ದಾಗ ಬರೆದರೇ ಎಂದು ನಿರ್ಧರಿಸಲೂ ಆಗುವುದಿಲ್ಲ. ಅಂತೂ, ಯೂರೋಪಿನಲ್ಲಿದ್ದಾಗ ಇವರಲ್ಲಿ ಒಂದು ಮಾದರಿಯ ಸಾಹಿತ್ಯವಿದ್ದಿತೆಂಬುದು ಚೆನ್ನಾಗಿ ತಿಳಿಯುವುದು. ಈಗ ಇವರಿಗೆ ಸೇರಿದುದೆಂದು ಹೇಳಬಹುದಾದ ಹಳೆಯ ಗ್ರಂಥಗಳಿಗೂ ಇವರ ಸಂಬಂಧಿಗಳಾಗಿದ್ದ ಐಸ್ಲೆಂಡಿನ ಜನರ ಮತ್ತು ಫ್ರಿಸಿಯನ್ನರ ಸಾಹಿತ್ಯದ ಪೂರ್ವ ಗ್ರಂಥಗಳಿಗೂ ಅನೇಕ ವಿಷಯಗಳಲ್ಲಿ ಹೋಲಿಕೆಯಿದೆ. ಹೀಗೆ ಇಂಗ್ಲೆಂಡಿಗೆ ಬರುವುದಕ್ಕೆ ಮೊದಲು ಆಂಗ್ಲೇಯರಲ್ಲಿದ್ದ ಸಾಹಿತ್ಯವೆಂದು ಹೇಳಬಹುದಾದ ಪದ್ಯಗಳಲ್ಲಿ, ಶೂನ್ಯ ಮೊದಲಾದುವನ್ನು ಬಿಡಿಸುವ ಮಂತ್ರಗಳೂ, ಕೆಲವು ಒಗಟೆಗಳೂ, "ವಿಡ್ಸಿತ್", "ಡಿಯೋರನ ಫಿರ್ಯಾದು", "ವಾಲ್ಡೇರ್", "ಫಿನ್ಸ್‌ಬರ್ಗಿನ ಕದನ" ಎಂಬ ಕವಿತೆಗಳೂ ಮುಖ್ಯವಾದುವು. ಇನ್ನೂ ಕ್ರೈಸ್ತರಾಗದಿದ್ದ ಈ ಜನರ ಆ ಕಾಲದ ಸಾಹಿತ್ಯದಲ್ಲಿ ಅನೇಕ ಅಕ್ರೈಸ್ತ ಭಾವಗಳಿವೆ. ಈ ವಿಷಯವು ಶೂನ್ಯ ನಿವಾರಕವಾದ ಮಂತ್ರಗಳಲ್ಲಿ ವ್ಯಕ್ತವಾಗುವುದು. ಇದಕ್ಕೆ ಭೂದೇವಿಯನ್ನು ಕುರಿತ ಈ ಸ್ತೋತ್ರವು ಉದಾಹರಣೆ:—

> ತಾಯೇ! ಭೂದೇವಿಯೇ ॥ ಮಾನವನ ಮಾತೆಯೇ ॥ ಜಯವಾಗಲಮ್ಮ ನಿನಗೆ! ದೇವರಾಳಿಕೆಯೊಳಗೆ ಫಲಶಾಲಿಯಾಗು ! ಮಾನವನ ಸಲುವಾಗಿ ಫಲ ಭರಿತಳಾಗು.

ಜೇನುದುಂಬಿಗೆ ಹೇಳುವ ಈ ಮಾತೂ ಹಾಗೆಯೇ :—

> ಕುಳ್ಳಿರಿ, ವಿಜಯ ದೇವತೆಗಳಿರಾ ! ನೆಲದೊಳಗೆ ತಗ್ಗಿರಿ ॥

ಇದೇ ರೀತಿಯ ಅಕ್ರೈಸ್ತ ಭಾವಗಳು ಮುಕ್ತ ಪದ್ಯಗಳಲ್ಲೂ ಇವೆ. ಸರ್ವದಾ ಸಮುದ್ರದ ಮೇಲೆ ಪ್ರಯಾಣ ಮಾಡುತ್ತ ಅದರ ಅಧೀನಕ್ಕೆ ಸಿಕ್ಕಿದ್ದ ಈ ಜನರ ಪದ್ಯಗಳಲ್ಲಿ ಸಮುದ್ರದ ರಭಸವೂ ರೋದನವೂ ದೌಷ್ಟ್ಯವೂ ಕೃತ್ರಿಮವೂ ಸದಾ ಪ್ರತ್ಯಕ್ಷವಾಗಿವೆ. "ವಿಡ್ಸಿತ್" ಎಂಬ ಕವಿತೆಯು ರಾಜರ ಆಸ್ಥಾನಗಳಿಗೆ ಹೋಗುತ್ತಿದ್ದ ಒಬ್ಬ ಕವಿಯ ಪ್ರಯಾಣಗಳನ್ನು ವರ್ಣಿಸುತ್ತದೆ. 'ಡಿಯೋರನ ಫಿರ್ಯಾದು' ಎಂಬ ಕವಿತೆಯು ಆ ಹೆಸರಿನ ಕವಿಯು ಪ್ರಭುವಿನ ಆದರವನ್ನು ಕಳೆದುಕೊಂಡು ವ್ಯಥೆಪಡುತ್ತಿರುವುದನ್ನು ವರ್ಣಿಸುತ್ತದೆ. ಪ್ರತಿ ಪದ್ಯದ ಕೊನೆಯಲ್ಲೂ ಹಿಂದೆ ಕಷ್ಟಗಳನ್ನು ಅನುಭವಿಸಿದ ವೀರರನ್ನು ನೆನೆದು ಕವಿಯು, "ಅವನದು ಕಳೆದಾಯ್ತು ನನ್ನದೂ ಕಳೆಯುವುದು !" ಎಂದು ಸಮಾಧಾನ ಹೇಳಿಕೊಳ್ಳುತ್ತಾನೆ. 'ಫಿನ್ಸ್‌ಬರ್ಗಿನ ಯುದ್ಧ' ಎಂಬುದು ಈಗಲೂ

ಯೂರೋಪಿನಲ್ಲಿ ಹೇಳಿಕೊಳ್ಳುವ ಒಂದು ದೊಡ್ಡ ಕಥೆಯ ಒಂದು ಭಾಗದ ಇಂಗ್ಲಿಷ್ ಅನುವಾದ. ಯೂರೋಪಿನ ಭೂಖಂಡದಲ್ಲಿ ಬರೆದುದೋ, ಅಥವಾ ಇಂಗ್ಲೆಂಡ್ ದ್ವೀಪದಲ್ಲಿ ಬರೆದುದೋ ಎಂಬ ಸಂದೇಹಕ್ಕೆ ಆಸ್ಪದವಾಗಿರುವ "ಬಿಯೋವುಲ್ಫ್" ಎಂಬ ಕಾವ್ಯವು ಇವೆಲ್ಲಕ್ಕಿಂತಲೂ ಶ್ರೇಷ್ಠವಾದದ್ದು. ಪೂರ್ವದಲ್ಲಿ ಇಂತಹ ಕತೆಗಳು ಒಬ್ಬನಿಂದಲೇ ರಚಿಸಲ್ಪಡುತ್ತಿರಲಿಲ್ಲ. ಕತೆಯು ಹೇಗೋ ಪ್ರಾರಂಭವಾಗಿ ಬಾಯಿಂದ ಬಾಯಿಗೆ ಹೋಗುತ್ತ, ಹಾಡು ಬಲ್ಲವರು ಅದನ್ನು ಹಬ್ಬ ಹುಣ್ಣಿಮೆಗಳಲ್ಲಿ ಗಾನಮಾಡುತ್ತಿದ್ದರು. ಬಿಯೋವುಲ್ಫ ಕಾವ್ಯವೂ ಯೂರೋಪಿನ ಭೂಖಂಡದಲ್ಲಿ ಸ್ವಲ್ಪ ಕಾಲ ಬೆಳೆದು ಆಂಗ್ಲೋ ಸ್ಯಾಕ್ಸನ್ನರು ಇಂಗ್ಲೆಂಡಿಗೆ ಬಂದಾಗ ಅವರ ಜೊತೆಯಲ್ಲಿ ಬಂದಿರಬೇಕು. ಬಿಯೋವುಲ್ಫ ಎಂಬ ವೀರನು ತನ್ನ ಬಂಧುವಾದ ಹೈಗೆಲ್ಯಾಕ್ ಎಂಬ ದೊರೆಯ ರಾಜ್ಯಕ್ಕೆ ಒಂದು ಸಲ ಹೋದನೆಂದೂ, ಆತನ ರಾಜ್ಯದಲ್ಲಿ ಬಹಳ ಹಾವಳಿಯನ್ನು ಮಾಡುತ್ತಿದ್ದ ಗ್ರೆಂಡಲ್ ಎಂಬ ಭೇತಾಳನನ್ನು ಯುದ್ಧದಲ್ಲಿ ಕೊಂದನೆಂದೂ, ಆಮೇಲೆ ಅದೇ ರಾಜ್ಯಕ್ಕೆ ದೊರೆಯಾಗಿ ಒಂದು ಜಲಸರ್ಪದೊಡನೆ ಯುದ್ಧಮಾಡಿ ಅದನ್ನು ಸದೆದು ತಾನೂ ಮಡಿದನೆಂದೂ ಈ ಕಾವ್ಯದ ಕಥೆಯ ಸಾರಾಂಶವು. ಸಮುದ್ರ ಪ್ರಯಾಣವೂ, ಹೈಗೆಲ್ಯಾಕನು ಅವನ ಸಂಟಸಿಗೆ ಕೊಟ್ಟ ಔತಣವೂ, ಬಿಯೋವುಲ್ಫಿಗೂ ಭೇತಾಳನಿಗೂ ನಡೆದ ಯುದ್ಧವೂ, ಮುಂದಕ್ಕೆ ವೀರನು ಯುದ್ಧಮಾಡಿದ ನೀರೊಳಗಿನ ಒಂದು ಗುಹೆಯೂ ಕಾವ್ಯದಲ್ಲಿ ಬಹಳ ಸ್ವಾರಸ್ಯವಾಗಿ ವರ್ಣಿಸಲ್ಪಟ್ಟಿವೆ. ಇಂಗ್ಲೆಂಡಿಗೆ ಬಂದಮೇಲೆ ಕ್ರೈಸ್ತರಾದ ಈ ಜನರು ಈ ಕಾವ್ಯದಲ್ಲಿ, ತಾವು ಕ್ರೈಸ್ತರಾದನಂತರ ಅಲ್ಲಲ್ಲಿ ತಿದ್ದುಪಾಟುಗಳನ್ನುಮಾಡಿ ಈಗಿರುವಂತೆ ಅದನ್ನು ಕ್ರೈಸ್ತ ಕಾವ್ಯವನ್ನಾಗಿ ಮಾಡಿದ್ದಾರೆ. ಇದರಲ್ಲಿಯ ವರ್ಣನೆಯೊಂದನ್ನು ಮಾದರಿಗಾಗಿ ಇಲ್ಲಿ ಕೊಡಬಹುದು:—

> "ಆಗ ಇಳಿಜಾರಾದ ಕಲ್ಲುಬಂಡೆಯ ಮೇಲೆ। ಸಣ್ಣ ಮಾರ್ಗದಲ್ಲಿ ಇಕ್ಕಟ್ಟಾದ ಅಡ್ಡಹಾದಿಯಲ್ಲಿ। ತಿಳಿಯದ ದಾರಿಯಲ್ಲಿ! ಎದ್ದುನಿಂತ ಹಲಗೆ ಕಲ್ಲಿರುವ। ಜಲಸರ್ಪದ ಗುಹೆಯ ಪಕ್ಕದಲ್ಲಿ । ನಡೆದನಯ್ಯಾ ವೀರ ಕುವರನು। ತಿಳಿವುಳ್ಳ ಪಲರೊಡನೆ ಸ್ಥಳವ ನೋಡುವುದಕ್ಕೆ। ಹೋದನವನು ಒಡನೆ। ಪರ್ವತ ಜಾತ ಉನ್ನತ ವೃಕ್ಷಗಳು। ಮುಚ್ಚಿದಾವರಣದಾ ಕಾಡು। ಮೊದಲರಿಯದಲ್ಲಿಯಾ ಬೋರ್ಗಲ್ಲ ಮೇಲಿಂದ। ಬಗ್ಗಿ ನೋಡುವುದ ಕಂಡ। ಕೆಳಗೆ ನೀರು ರಕ್ತಮಯ. ಅಲೆಗಳಿಂದ ಕುಣಿಯುತಹುದು। ದೇನ ಮಹಾ ಜನರಿಗೆಲ್ಲ. ವೀರರಾಪ್ತ ಮಂದಿಗೆಲ್ಲ। ತಡೆಯಲಾರದಂತಹ ದೊಡ್ಡ ಸಂಕಟವು ಅದು । ವೀರರಿಗೂ ಶೂರರಿಗೂ ಖೇದವು ಅದು। ಅಲ್ಲಿ ಕಣ್ಣಿಗೆ ಬಿದ್ದ ನಂಟ ಏಷರನ ರುಂಡ। ಕೆಳಗೆ ಜನರು ನೋಡಿದಾಗ। ರಕ್ತದಿಂದ ಮುನ್ನೀರ ಜಲವು। ಅವನ ಬಿಸಿಯ ಶೋಣಿತದಿಂದ। ಕುದಿಯುತಿದ್ದುದು."

ಈ ಕಾವ್ಯದ ಮತ್ತು ಇಲ್ಲಿ ಹೇಳಿರುವ ಇತರ ಕಾವ್ಯಗಳ ಛಂದಸ್ಸು ಹಾಡುವ ಕವಿತೆಗಳ ಛಂದಸ್ಸು. ಇವುಗಳಲ್ಲಿ ಪಂಕ್ತಿಗಳು ಸಣ್ಣವು; ಪದಾದಿ

ಪ್ರಾಸವಿದೆ; ಮಾತ್ರ ಅಷ್ಟೇನೂ ವ್ಯತ್ಯಾಸವಾದುದಲ್ಲ. ಹಾಡುವ ಕವಿತೆಯಾದುದರಿಂದ ಒಂದೊಂದು ವಿಷಯವನ್ನು ಎರಡೆರಡು ಸಲ ಹೇಳುವ ವಾಡಿಕೆಯುಂಟು. ನಮ್ಮ ಹಿಂದಿನ ಲಾವಣಿಗಳಲ್ಲಿಯೂ ಇದು ತೋರಿಬರುವುದು. ಮಂಜು, ವೃಕ್ಷಗಳು, ಕಾಡು ಬೆಳೆದಿರುವುದೂ, ಹೇಸರಿಗೆಲ್ಲ, ಹಿಮದಿಗೆಲ್ಲ ಬಂದಿರುವುದೂ, ಸಂಕಟ, ಶೀತ ಬಂದಿರುವುದೂ ಈ ರೀತಿಯ ವಸ್ತುಗಳು. ಕಾವ್ಯದ ವಿಷಯ ವರ್ಣನೆಗಳು ರಸವತ್ತಾಗಿವೆ.

ಐರೋಪ್ಯ ಕಾವ್ಯ ಇಂಗ್ಲಂಡಿಗೆ ಬಂದು ಅಲ್ಲಿ ಸ್ಥಿರವಾಗುವ ವೇಳೆಗೆ ಆಂಗ್ಲರಲ್ಲಿ ಕ್ರೈಸ್ತ ಮತವು ಹರಡಿದ್ದಿತು. ಹೀಗೆ ಆ ಮತವು ಹರಡುವುದಕ್ಕೆ ಮೊದಲೂ ಅವರು ಕೆಲವು ಪದ್ಯಗಳನ್ನು ಬರೆದಿದ್ದರು. ಇವುಗಳಲ್ಲೂ ಕ್ರೈಸ್ತ ಭಾವಗಳೂ ಅಕ್ರೈಸ್ತ ಭಾವಗಳೂ ಸೇರಿವೆ. ಈ ಪದ್ಯಗಳಲ್ಲಿ 'ನಾಶವಾದ ನಗರ', 'ಅಲೆಯುವವನು', 'ಜಲ ಪ್ರಯಾಣಿಕನು', 'ಹೆಂಡತಿಯ ವ್ಯಥೆ', 'ಗಂಡನ ಸಂದೇಶ'—ಇವು ನಮಗೆ ಈಗ ತಿಳಿದಿರುವುವು. ಕೆಲವು ಒಗಟುಗಳೂ ಇವೆ. ಈ ಕಾವ್ಯಗಳಿಂದ ಕೆಲವು ಪಂಕ್ತಿಗಳನ್ನು ಇಲ್ಲಿ ಭಾಷಾಂತರ ಮಾಡಿದೆ:—

ಹಾಳು ಗೋಡೆಗಳಿವನು ತಿಳಿದು ಯೋಚಿಸಿದವಗೆ। ಮಾನವನ ಮಸಕು ಜೀವನವ ಅರಿಯ್ವವಗೆ। ಮನದೊಳಗೆ ತಿಳಿವಿಂದ। ಮುನ್ನ ದಿನದ ಕಾರ್ಯವನು। ಅಸದಳದ ಕೊಲೆಗಳನು। ನೆನೆದು ನೋಡಿದವನಿಗೆ। ತೋರುವುದು ಈ ತೆರದೊಳು। 'ವಾಜಿಯೇನಾದುದು? ಏರಿದವನೇನಾದ? । ಉಚಿತವನು ಕೊಡುವಂಥ ಉನ್ನತದ ದೊರೆಯೂ?। ಔತಣದ ಮನೆಯೆಲ್ಲಿ? ಸುಖದ ಸಾಗರವೆಲ್ಲಿ? ಹಿಡಿದ ಆಯುಧವೆಲ್ಲಿ? ತಳೆದ ಮಕುಟವು ಎಲ್ಲಿ?। ಜನದ ಜಂಬವು ಎಲ್ಲಿ? ಎಲ್ಲ ಎಲ್ಲಿ। ಇರುಳ ಕತ್ತಲೆಯಲ್ಲಿ। ಎಲ್ಲವೂ ಮುಸುಕಿಹುದು ಎಲ್ಲವೂ ಮರೆದಿಹುದು। ಎಂದೆಂದು ಇಲ್ಲದಿರ್ದಂತೆ।

ಇದು ನೇಗಿಲನ್ನು ಕುರಿತ ಒಗಟೆಯ ಒಂದು ಭಾಗ :—

ತುದಿಯು ತಳವ ಮುಟ್ಟಿಹುದು। ಆಳದೊಳಗೆ ಪೋಗುವುದದು। ನೆಲವ ಕಡಿಯುತ ನಡೆದು। ನಡೆವನಂತೆಯು ಬಹುದು। ನಾಗಿ ನಡೆಯುವವನು, ನನ್ನ ಕಾವಲುಗಾರ। ನೆಲದ ಮೇಲೆ ತಳ್ಳುವನು, ನಡೆಸುವನು, ಒತ್ತುವನು। ಎನ್ನ ಹಿಂದೆಯೇ ಬಿತ್ತುವನು। ಒಂದು ಕಡೆ ಹಸುರು, ಒಂದು ಕಡೆ ಕಪ್ಪು। ನಾನು ಹೋಗುವ ದಾರಿ

ಈ ಪದ್ಯಗಳು ಹುಟ್ಟಿದ ಮೇಲೆ ಆಂಗ್ಲರ ಕ್ರೈಸ್ತ ಕಾವ್ಯಗಳು ಪ್ರಾರಂಭವಾದುವು. ಇವನ್ನು ಬರೆದವರಲ್ಲಿ ಮೊದಲನೆಯವನು ಕೇಡ್ಮನ್ ಎಂಬಾತನು. ಕೇಡ್ಮನ್ನಿಗೆ ಕವಿತಾ ಶಕ್ತಿಯು ಬಂದ ವಿಷಯವಾಗಿ ಒಂದು ಐತಿಹ್ಯವುಂಟು. ಹಾಡುವುದನ್ನರಿಯದ ಕೇಡ್ಮನ್ನನು ತನ್ನ ಯಜಮಾನನ ಮನೆಯಲ್ಲಿ ನಡೆದ ಹಬ್ಬವೊಂದರಲ್ಲಿ, ಸ್ನೇಹಿತರ ಗೋಷ್ಠಿಯಲ್ಲಿದ್ದವರು ಒಂದೊಂದು ಹಾಡನ್ನು ಹೇಳುವಾಗ, ತನಗೆ ಹಾಡು ಬಾರದ್ದರಿಂದ ಹೊರಗೆ ಬಂದು ಮಲಗಿದ ನಂತರ. ಸ್ವಪ್ನ ಬಿದ್ದಿತು. ಯಾರೋ ಇವನ ಹತ್ತಿರಕ್ಕೆ ಬಂದು, "ಕೇಡ

ಮನ್, ನನಗಾಗಿ ಒಂದು ಹಾಡನ್ನು ಹಾಡು" ಎಂದನಂತೆ. "ನನಗೆ ಹಾಡುವುದಕ್ಕೆ ಬಾರದು; ಆದರಿಂದಲೇ ನಾನು ಹೊರಗೆ ಬಂದುದು" ಎಂದು ಕೇಡ್ಮನ್ ಹೇಳಲು, ಬಂದಾತನು "ಆದರೂ ಈಗ ನೀನು ಹಾಡಬೇಕು" ಎಂದನಂತೆ. ಕೇಡ್ಮನ್ನನು "ಏನನ್ನು ಹಾಡಲಿ?" ಎಂದು ಕೇಳಿದನಂತೆ. ಬಂದಾತನು "ಸೃಷ್ಟಿಯ ಆರಂಭವನ್ನು ವರ್ಣಿಸು" ಎಂದನಂತೆ. ಒಡನೆಯೇ ಕೇಡ್ಮನ್ನನು ಒಂದು ಸ್ತೋತ್ರವನ್ನು ಪ್ರಾರಂಭಿಸಿ ಸೃಷ್ಟಿಕರ್ತನನ್ನು ಸ್ತೋತ್ರ ಮಾಡಿದನಂತೆ. ಕೂಡಲೆ ಎಚ್ಚರವಾಗಲು, ತಾನು ಹಾಡಿದ್ದ ಸ್ತೋತ್ರವನ್ನು ನೆನೆದುಕೊಂಡು ಕೇಡ್ಮನ್ನನು ಬಂದು ಊರ ಯಜಮಾನನಿಗೆ ಈ ಸಂಗತಿಯನ್ನೆಲ್ಲ ಹೇಳಿದನಂತೆ. ಹೀಗೆ ಕವಿತಾ ಶಕ್ತಿಯನ್ನು ಪಡೆದ ಕೇಡ್ಮನ್ನನು ಬರೆದುದೆಂದು ಗೊತ್ತಾಗಿ ಹೇಳಬಹುದಾದ ಗ್ರಂಥಗಳು ನಮಗೆ ಸಿಕ್ಕಿಲ್ಲ. 'ರೂತ್‌ವೆಲ್ ಶಿಲುಬೆ' ಎಂಬ ಒಂದು ಶಿಲುಬೆಯ ಮೇಲೆ ಬರೆದಿರುವ ಪದ್ಯಗಳಲ್ಲಿ ಕೆಲವೂ, ಹತ್ತನೆಯ ಶತಮಾನದಲ್ಲಿ ಬರೆದ ಕೆಲವು ಪದ್ಯಗಳಲ್ಲಿ ಒಂದು ಭಾಗವೂ ಇವನು ಬರೆದುದೆಂದು ಹೇಳುತ್ತಾರೆ. ಇದು ಯಾವುದನ್ನೂ ಹೀಗೆಯೇ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಆದರೆ ಕೇಡ್ಮನ್ನನಿಂದ ಪ್ರಾರಂಭವಾದ ಕಾವ್ಯ ನದಿಯು ಮುಂದಣ ಕವಿಗಳಿಂದ ವೃದ್ಧಿಯಾಯಿತು. 'ಜೆನೆಸಿಸ್', 'ಎಕ್ಸೊಡಸ್', 'ಡ್ಯಾನಿಯಲ್', 'ಜೂಡಿತ್' ಎಂಬ ಕ್ರೈಸ್ತ ಬೈಬಲ್ ಕತೆಗಳನ್ನು ಕುರಿತ ಪದ್ಯಗಳು ಕೇಡ್ಮನ್ನನ ಪದ್ಧತಿಗನುಸರಿಸಿದ ಕವಿತೆಗಳು. ಕಥೆಗಳು ಕ್ರೈಸ್ತ ಕಥೆಗಳಾದರೂ ವರ್ಣನೆಯಲ್ಲಿ ಕವಿಗಳು ತಮ್ಮ ಪೂರ್ವಜರ ಕವಿಸಮಯಗಳನ್ನು ಅನುಸರಿಸಿದ್ದಾರೆ. ಈ ಪದ್ಯಗಳಲ್ಲಿ ಕವಿಯ ಸ್ವಂತ ಭಾವನೆಗಳು ಮುಂಬರಿದು ಬರುವುದಿಲ್ಲ. ಕವಿಗೆ ಕತೆಯು ಮುಖ್ಯ; ಅದರಲ್ಲಿಯ ವರ್ಣನೆಯು ಮುಖ್ಯ. ಈ ಪದ್ಯಗಳಾದ ಮೇಲೆ, ಕಿನೆವುಲ್ಫ್ ಎಂಬ ಕವಿಯು ಬರೆದ ಕೆಲವು ಕಾವ್ಯಗಳಿವೆ. ಈತನ ವಿಚಾರವಾಗಿ ಪಂಡಿತರು ಭಿನ್ನಾಭಿಪ್ರಾಯಗಳನ್ನು ಸೂಚಿಸಿದ್ದಾರೆ. ಇವನವೆಂದು ಹೇಳುವ ಕಾವ್ಯಗಳನ್ನು ಓದಿದ ಕೆಲವರು ಅಂತಹ ಕಾವ್ಯಗಳು ಇವನವೇ ಎಂದೂ, ಇವನು ಆ ಕಾವ್ಯಗಳಲ್ಲಿ ತನ್ನ ಹೆಸರನ್ನು ಸೇರಿಸಿ ಬರೆದಿರುವನೆಂದೂ, ಕಾವ್ಯಗಳಲ್ಲಿ ಇವನ ಸ್ವಂತವಾದ ಚರಿತ್ರವೂ ಸೂಚಿಸಲ್ಪಟ್ಟಿದೆಯೆಂದೂ ಅಭಿಪ್ರಾಯಪಡುತ್ತಾರೆ. ಮತ್ತೆ ಕೆಲವರು ಕಿನೆವುಲ್ಫ್ ಎಂಬ ಕವಿಯಿದ್ದನೆಂದೇ ನಂಬುವುದಿಲ್ಲ. ಪ್ರಾಯಶಃ ಈ ಕವಿಯು ಇದ್ದನೆಂದು ಹೇಳುವ ವಾದವು ಸರಿಯಾದುದೆಂದು ತೋರುತ್ತದೆ. ಈತನು ಬರೆದ ಗ್ರಂಥಗಳಲ್ಲಿ 'ಒಗಟುಗಳು', 'ಜೂಲಿಯಾನಾ', 'ಕ್ರೈಸ್ಟ್', 'ಫೀನಿಕ್ಸ್', 'ಗುತ್ಲಕ್', 'ನರಕಕ್ಕೆ ಇಳಿದದ್ದು', 'ಪ್ರಥಮ ಆಚಾರ್ಯರ ಚರಿತ್ರೆ', 'ಎಲೀನಳ ಚರಿತ್ರೆ', 'ಅಂಡ್ರಿಯಾಸಿನ ಚರಿತ್ರೆ', 'ಶಿಲುಬೆಯ ಸ್ವಪ್ನ'—ಇವು ತಿಳಿದುಬಂದಿರುವುವು. ಕಿನೆವುಲ್ಫನು ಮೊದಲು ಅಕ್ರೈಸ್ತನಾಗಿದ್ದು ತರುವಾಯ ಕ್ರೈಸ್ತನಾದನು. ಹೊಸದಾಗಿ ಅವಲಂಬಿಸಿದ ಮತದಲ್ಲಿಯ ಭಕ್ತಿಯ ಭಾರದಿಂದಲೂ ತನ್ನ ಪೂರ್ವ ಚರಿತದ ವಿಷಯವಾಗಿ ಹುಟ್ಟಿದ ಪಶ್ಚಾತ್ತಾಪದಿಂದಲೂ ಇವನ ಕವಿತೆಯ ಮೊದಲ ಕೆಲವು ಪದ್ಯಗಳು ಬಹಳ ಗಂಭೀರವಾಗಿವೆ.

ಬರಬರುತ್ತ ದೇವರ ದಯೆಯ ವಿಷಯದಲ್ಲಿ ಇವನಿಗೆ ಧೈರ್ಯ ಹುಟ್ಟಿ ಕಾವ್ಯದಲ್ಲಿಯೂ ಧೈರ್ಯವು ಹೆಚ್ಚಿದೆ. ಇವನು ಬರೆದ ಪದ್ಯಗಳೂ ಕೂಡ ಬೈಬಲಿನ ಕಥಾಭಾಗಗಳಾಗಿವೆ. ಆದರೆ ಇವನ ವರ್ಣನೆಯು ಬಹಳ ಶ್ರೇಷ್ಠವಾದುದು. ಒಟ್ಟು ಕತೆಯು ಬೈಬಲಿನದಾದರೂ ಕವಿಯು ಅನೇಕ ಕಡೆ ತನ್ನ ಕಲ್ಪನಾ ಶಕ್ತಿಯನ್ನು ವ್ಯಕ್ತಪಡಿಸಿದ್ದಾನೆ. 'ಶಿಲುಬೆಯ ಸ್ವಪ್ನ'ವು ಇವನು ಬರೆದ ಕೊನೆಯ ಕಾವ್ಯವೆಂದು ಹೇಳುತ್ತಾರೆ. ಈ ಕಾವ್ಯವು ಕ್ರಿಸ್ತನನ್ನು ಯೆಹೂದ್ಯರು ಶಿಲುಬೆಯ ಮೇಲಿಟ್ಟು ಮೊಳೆಗಳನ್ನು ಹೊಡೆದು ಕೊಂದ ಕತೆಯನ್ನು ಸೂಚಿಸುತ್ತದೆ. ಇದರಲ್ಲಿ ಕವಿಯ ದೈವಭಕ್ತಿಯು ಬಹಳ ಚೆನ್ನಾಗಿ ತೋರಿಬರುತ್ತದೆ. ಉದಾಹರಣೆಗಾಗಿ ಇದರ ಒಂದು ಭಾಗವನ್ನು ಇಲ್ಲಿ ಬರೆದಿದೆ. ಇದು ಶಿಲುಬೆಯು ಹೇಳುವ ಮಾತಿನ ಮೊದಲು :—

"ನನ್ನನ್ನು ಕಾಡಿನಲ್ಲಿ ಕಡಿದು ಈ ರೂಪಿಗೆ ಕಡೆದು ಬೆಟ್ಟದ ಮೇಲೆ ನೆಟ್ಟರು.
ಲೋಕಗಳ ಅಧೀಶ್ವರನು ನನ್ನ ಮೇಲೆ ಏರಿದನು ; ಲೋಕವನ್ನು ರಕ್ಷಿಸುವವನವನು.
ಮೊಳೆಗಳು ಚುಚ್ಚಿದುವು ; ವೀರನ ಶೋಣಿತದಿಂದ ನಾನು ನೆನೆದೆನು. ಸುತ್ತ ಮರುಗಿತು
ಜೀವರಾಶಿ. ಆಗ ಉತ್ತಮನ ಶತ್ರುಗಳು ಅವನನ್ನು ನನ್ನ ಮೇಲಿನಿಂದ ಇಳಿಸಿದರು ;
ಗೋರಿಯನ್ನು ಮಾಡಿದರು : ಶೋಕವನು ಸೂಚಿಸುವ ಸಾಂಗತ್ಯ ಹಾಡಿದರು."

ಕಿನೆವುಲ್ಫನ ತರುವಾಯ ಅವನ ಪದ್ಧತಿಯನ್ನನುಸರಿಸಿ ಕೆಲವರು ಕವಿಗಳು ಪದ್ಯಗಳನ್ನು ಬರೆದರು. ಆದರೆ ಆಂಗ್ಲೊ ಸ್ಯಾಕ್ಸನಿನಲ್ಲಿ ಬರೆದ ಪದ್ಯ ಕಾವ್ಯಗಳಲ್ಲಿ ಕಿನೆವುಲ್ಫನನಂತರ ಬರೆದ ಯಾವ ಕಾವ್ಯವೂ ಅವನ ಕಾವ್ಯದ ಜೊತೆಗೆ ಬಾರದು. ಈ ಕಾವ್ಯಗಳಲ್ಲಿ ಹತ್ತನೆಯ ಶತಮಾನದಲ್ಲಿ ಬರೆದ 'ಜೆನೆಸಿಸು', 'ಕ್ರೈಸ್ತನೂ ಸೈತಾನನೂ', 'ಬ್ರುನಾನ್‌ಬರ್ಗ್‌ನ ಯುದ್ಧ', 'ಮಾಲ್ಡನ್ನಿನ ಯುದ್ಧ'—ಇವು ಮುಖ್ಯವಾದುವು. ಈ ಕೊನೆಯ ಎರಡು ಕಾವ್ಯಗಳೂ ಎರಡು ಚಾರಿತ್ರಕ ವಿಷಯಗಳನ್ನು ವರ್ಣಿಸುತ್ತವೆ. ಒಟ್ಟಿನಲ್ಲಿ, ಆಂಗ್ಲೊ ಸ್ಯಾಕ್ಸನ್ ಪದ್ಯ ಕಾವ್ಯವು ಇಲ್ಲಿಗೆ ಮುಗಿಯಿತೆನ್ನಬಹುದು. ಈ ವೇಳೆಗೆ ಯೂರೋಪಿನ ನಾರ್ಮನ್ ಎಂಬ ಜನರು ದಂಡೆತ್ತಿ ಬಂದು ಇಂಗ್ಲೆಂಡನ್ನು ಜಯಿಸಿದರು. ಇದರಿಂದಲೋ, ಬೇರೆ ಕಾರಣದಿಂದಲೋ ಆಂಗ್ಲೊ ಸ್ಯಾಕ್ಸನ್ ಪದ್ಯ ಕಾವ್ಯವು ಇಲ್ಲಿಗೆ ನಿಂತುಹೋಯಿತು. ಹಾಗಾಗದಿದ್ದರೆ ಅದು ಮುಂದಕ್ಕೆ ಯಾವ ಸ್ಥಿತಿಗೆ ಬರುತ್ತಿದ್ದಿತೊ ಈಗ ಹೇಳುವುದು ಸಾಧ್ಯವಲ್ಲ. ಈ ಕಾವ್ಯಗಳನ್ನು ಬಹಳ ಒಳ್ಳೆಯವೆಂದು ಹೇಳುವ ಪಂಡಿತರು ಅವು ಮತ್ತಷ್ಟು ಉತ್ತಮ ಸ್ಥಿತಿಗೆ ಬರುತ್ತಿದ್ದುವೆಂದು ಅಭಿಪ್ರಾಯ ಪಡುತ್ತಾರೆ. ಮತ್ತೆ ಕೆಲವರು ಆ ಭಾಷೆಯಲ್ಲಿ ಕಾವ್ಯ ರಚನೆಗೆ ತೊಡಕುಗಳು ಹೆಚ್ಚಾಗಿದ್ದುವೆಂದೂ, ಪದ್ಯದ ಕಟ್ಟಡವು ಸ್ವಾದು ಶಬ್ದಚಯಕ್ಕೆ ಅನುಕೂಲವಾಗಿರಲಿಲ್ಲವೆಂದೂ, ಇದುವರೆಗೆ ಬರೆದಿದ್ದ ಕಾವ್ಯಗಳಿಂದಲೇ ಇನ್ನು ಆ ಭಾಷೆಯಲ್ಲಿ ಹೆಚ್ಚು ನಯವಾದ ಕೆಲಸಕ್ಕೆ ಅವಕಾಶವಿಲ್ಲದುದು ವ್ಯಕ್ತವಾಗಿದೆಯೆಂದೂ ಅಭಿಪ್ರಾಯ ಪಡುತ್ತಾರೆ. ಅಂತೂ ಆಂಗ್ಲೊ ಸ್ಯಾಕ್ಸನ್ ಪದ್ಯ ಕಾವ್ಯವು ಇಲ್ಲಿಗೇ ಮುಗಿಯಿತು.

ಇನ್ನು ಆಂಗ್ಲೊಸ್ಯಾಕ್ಸನ್ನಿನ ಗದ್ಯ ಕಾವ್ಯವನ್ನು ಕುರಿತು ಕೆಲವು ಮಾತನ್ನು ಹೇಳಬಹುದು. ಯಾವ ಭಾಷೆಯ ಚರಿತ್ರೆಯಲ್ಲಿಯೂ ಗದ್ಯವು ಪದ್ಯವಾದಮೇಲೆಯೇ ಬರುವುದು. ಆಂಗ್ಲೊಸ್ಯಾಕ್ಸನ್ ಭಾಷೆಯಲ್ಲಿಯೂ ಹಾಗೆಯೇ ಆಯಿತು. ಆದರೆ ಆಂಗ್ಲೊಸ್ಯಾಕ್ಸನ್ನಿನಲ್ಲಿ ಗದ್ಯವನ್ನು ಬರೆಯುವ ಕಾಲಕ್ಕೆ ಇಂಗ್ಲಂಡಿನ ವಿದ್ವಾಂಸರು ಕ್ರೈಸ್ತರಾಗಿದ್ದದ್ದರಿಂದ ಕ್ರೈಸ್ತರ ಮುಖ್ಯ ಭಾಷೆಯಾದ ರೋಮಿನ ಲ್ಯಾಟಿನ್ ಭಾಷೆಯು ಎಲ್ಲರಿಗೂ ಮತಭಾಷೆಯಾಗಿದ್ದಿತು. ನಮ್ಮ ಪೂರ್ವಿಕರು ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದಂತೆ ಆ ಜನರು ಲ್ಯಾಟಿನಿನಲ್ಲಿ ಗ್ರಂಥಗಳನ್ನು ಬರೆಯುತ್ತಿದ್ದರು. ಗ್ರಂಥ ರಚನೆಯು ಬಹು ಕಾಲ ಮಠೀಯರಲ್ಲಿ ನಿಂತಿದ್ದಿತು; ಅವರು ತಕ್ಕ ಮಟ್ಟಿಗೆ ಒಳ್ಳೆಯ ಗ್ರಂಥಗಳನ್ನು ಬರೆಯುತ್ತಿದ್ದರು. ರಾಜ್ಯದಲ್ಲಿಯ ತಿಳಿವಿಗೆ ಇವರ ಮಠಗಳು ಆಸರೆಯಾಗಿದ್ದುವು. ಇವರಲ್ಲಿ ಪ್ರಸಿದ್ಧನಾದ 'ಬೀಡ' ಎಂಬುವನ ವಿಷಯವಾಗಿ ಎರಡು ಮಾತನ್ನು ಇಲ್ಲಿ ಹೇಳಬಹುದು. ಈತನು ಆಗಿನ ಪಂಡಿತರಲ್ಲಿ ಅಗ್ರೇಸರನಾಗಿದ್ದನು. ಅದುವರೆಗೆ ಜನರಿಗೆ ತಿಳಿದಿದ್ದ ಎಲ್ಲ ಜ್ಞಾನವನ್ನೂ ಆರ್ಜಿಸಿ ಈತನು ತನ್ನ ಜನರಲ್ಲಿ ಆ ಜ್ಞಾನವು ಹರಡುವುದಕ್ಕೆ ತಕ್ಕ ಪ್ರಯತ್ನಗಳನ್ನೆಲ್ಲ ಮಾಡಿದನು. ಕೇಡ್ಮನ್ನಿನ ವಿಷಯವಾಗಿ ನಾವು ಮೇಲೆ ಹೇಳಿದ ಕತೆಯಿರುವುದು. ಈತನು ಬರೆದಿರುವ ಮಠೀಯ ಚರಿತ್ರೆಯಲ್ಲೇ. ಬೀಡನ ತರುವಾಯ ಎಗ್ಬರ್ಟ್, ಅಲ್ಕ್ವಿನ್ ಮುಂತಾದ ಕೆಲವರು ಪಂಡಿತರು ಪ್ರಸಿದ್ಧರಾದರು. ಆಮೇಲೆ, ಅಲ್ಫ್ರೆಡ್ ಎಂಬ ದೊರೆಯು ಸಿಂಹಾಸನಕ್ಕೆ ಬಂದಾಗ ಆಂಗ್ಲೊಸ್ಯಾಕ್ಸನ್ ಗದ್ಯವು ವಿಶೇಷವಾಗಿ ಪ್ರಚಾರಕ್ಕೆ ಬಂದಿತು. ಜನರ ತಿಳಿವು ಹೆಚ್ಚುವಂತೆ ಮಾಡಬೇಕೆನ್ನುವುದೇ ಅಲಾಫ್ರೆಡ್ಡಿನ ಪ್ರತಿಯೊಂದು ಗ್ರಂಥದ ಉದ್ದೇಶವು. ಈ ಉದ್ದೇಶದಿಂದ ಅಲಾಫ್ರೆಡ್ ದೊರೆಯು ತಾನು ಪುಸ್ತಕಗಳನ್ನು ಬರೆದದ್ದಲ್ಲದೆ ಇತರರಿಂದಲೂ ಬರೆಯಿಸಿದನು. ರಾಜ್ಯದ ಕಾನೂನುಗಳು ಎಲ್ಲರಿಗೂ ತಿಳಿಯುವಂತೆ ಬರೆದ ಒಂದು ನ್ಯಾಯ ಶಾಸ್ತ್ರವೂ, ದೇವಸ್ಥಾನಗಳಲ್ಲಿಯ ಪ್ರಾರ್ಥಕರ ಕರ್ತವ್ಯವನ್ನು ಸೂಚಿಸತಕ್ಕ ಪೋಪು ಗ್ರೆಗೊರಿಯ ಪ್ರಾರ್ಥನಾ ಗ್ರಂಥದ ಭಾಷಾಂತರವೂ, ಇಂಗ್ಲೆಂಡಿನ ಮಠೀಯ ಚರಿತ್ರೆಯು ತಿಳಿಯುವುದಕ್ಕಾಗಿ ನಾವು ಮೇಲೆ ಹೇಳಿದ ಬೀಡನ ಲ್ಯಾಟಿನ್ ಭಾಷೆಯ ಆಂಗ್ಲ ಮಠೀಯ ಚರಿತ್ರೆಯ ಭಾಷಾಂತರವೂ, ರಾಜಕೀಯ ಚರಿತ್ರೆಯು ಸರಿಯಾಗಿ ನಿಲ್ಲುವಂತೆ ವಿಂಚೆಸ್ಟರ್ ಮಠದಲ್ಲಿ ಬರೆದ ಚರಿತ್ರೆಯೂ, 'ಒರೋಸಿಯಸ್' ಎಂಬಾತನ ಪ್ರಾಪಂಚಿಕ ಚರಿತ್ರೆಯ ಭಾಷಾಂತರವೂ, ಒಥೇರ್, ವುಲ್ಫಸ್ಟನ್ ಎಂಬ ಇಬ್ಬರು ನಾವಿಕರು ಮಾಡಿದ ಸಮುದ್ರ ಪ್ರಯಾಣದ ವರ್ಣನೆಯೂ, ಬುಯೋಸಿಯಸ್ ಎಂಬ ಕವಿಯ 'ತತ್ತ್ವ ಜ್ಞಾನದಿಂದ ಬರುವ ಸ್ವಾಸ್ಥ್ಯವು' ಎಂಬ ಪುಸ್ತಕದ ಭಾಷಾಂತರವೂ ಇವನಿಂದ, ಅಥವಾ ಇವನ ಪ್ರೋತ್ಸಾಹದಿಂದ ರಚಿತವಾದ ಇತರ ಗ್ರಂಥಗಳು. ಈ ಗ್ರಂಥಗಳೆಲ್ಲ ಇಂಗ್ಲಿಷ್ ಭಾಷೆಯಲ್ಲೇ ಇವೆ. ಅಲಾಫ್ರೆಡ್ ದೊರೆಯು ಕಾವ್ಯದ ಸೊಗಸಿಗೆಂದಾಗಲಿ ಸುಖಕ್ಕೆಂದಾಗಲಿ ಪುಸ್ತಕಗಳನ್ನು ಬರೆಯಲಿಲ್ಲ; ಜನರಿಗೆ ತಿಳಿವು

ಉಂಟಾಗಲೆಂದು ಪುಸ್ತಕಗಳನ್ನು ಬರೆಯಿಸಿದನು. ಕಷ್ಟ ಸುಖಗಳೆರಡನ್ನೂ ಅರಿತು ಜೀವನದ ಸಾರವನ್ನು ಬಲ್ಲವನಾದ ಈ ರಾಜ ಋಷಿಯು ಎಷ್ಟು ಸರಳ ಹೃದಯನು ಶುದ್ಧ ಹೃದಯನು ದೇಶವತ್ಸಲನು ಎಂಬುದು ಇವನ ಪ್ರತಿಯೊಂದು ಪುಸ್ತಕದಲ್ಲಿಯೂ ವ್ಯಕ್ತವಾಗುತ್ತದೆ. ಇವನ ಪುಸ್ತಕಗಳಲ್ಲಿಯ ಭಾಷೆಯು ಸುಲಭವಾಗಿದೆ, ಸ್ಪಷ್ಟವಾಗಿದೆ; ಆದರೂ ತೂಕವಾಗಿದೆ. ಹೀಗೆ ಆಂಗ್ಲೇಯ ಗದ್ಯಮಾಲೆಯು ಆಲ್ಫ್ರೆಡ್ ದೊರೆಯ ಕೈಯಿಂದ ಬಹಳ ಚೆನ್ನಾಗಿ ಪ್ರಾರಂಭವಾಯಿತು.

ಆಲ್ಫ್ರೆಡ್ಡನ ತರುವಾಯ ಗದ್ಯವನ್ನು ಬರೆದವರಲ್ಲಿ ಇಬ್ಬರು ಮುಖ್ಯರು: ಎಲ್ಫ್ರಿಕ್ ಮತ್ತು ವುಲ್ಸ್ಟನ್. ಆಲ್ಫ್ರೆಡ್ಡನ ಕಾಲದಲ್ಲಿ ಬರೆಯುವುದಕ್ಕೆ ಪ್ರಾರಂಭವಾದ ಇಂಗ್ಲೆಂಡಿನ ಚರಿತ್ರೆಯೂ ಅವನನಂತರ ಮುಂದಕ್ಕೆ ಬರೆಯಲ್ಪಟ್ಟಿತು. ಆದರೆ ಬಹಳ ಕೆಲಸ ನಡೆಯಲಿಲ್ಲ. ಮತಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಮಾತ್ರ ಅಲ್ಲಲ್ಲಿ ಮಠಗಳಲ್ಲಿ ಕೆಲವರು ಬರೆಯುತ್ತಿದ್ದರು. ಇವರಲ್ಲಿ ಡನ್ಸ್ಟನ್ ಮತ್ತು ಇವನ ಶಿಷ್ಯ ಎಥೆಲ್ವೋಲ್ಡ್—ಇವರು ಮುಖ್ಯರು. ಈ ಎಥೆಲ್ವೋಲ್ಡನ ಶಿಷ್ಯನೇ ಪ್ರಸಿದ್ಧನಾದ ಎಲ್ಫ್ರಿಕ್ ಎಂಬಾತನು. ಹಿಂದೆ, ಪ್ರಪಂಚದಲ್ಲಿ ಅದುವರೆಗೆ ತಿಳಿದಿದ್ದ ವಿಷಯಗಳನ್ನೆಲ್ಲ ಒಟ್ಟಿಗೆ ತಿಳಿದು ಬೀಡನು ಹೇಗೆ ಉಪಾಧ್ಯಾಯ ಪಂಡಿತನಾಗಿದ್ದನೊ ಹಾಗೆಯೇ ಎಲ್ಫ್ರಿಕ್ಕನು ತನ್ನ ಕಾಲದಲ್ಲಿ ಉಪಾಧ್ಯಾಯ ಪಂಡಿತನಾಗಿದ್ದನು. ಈತನು ಕೆಲವು ನೀತಿ ವಚನಗಳನ್ನೂ ಒಂದು ವ್ಯಾಕರಣವನ್ನೂ ಒಂದು ಶಬ್ದಕೋಶವನ್ನೂ ಬರೆದನು; ಆಗಣ ದೊರೆಯ ಇಷ್ಟದಂತೆ ಬೈಬಲಿನ ಇತಿಹಾಸದ ಕೆಲವು ಭಾಗದ ಆಧಾರದ ಮೇಲೆ, ನೈತಿಕ ಉಪನ್ಯಾಸಗಳನ್ನೂ ಕಥೆಗಳನ್ನೂ ಇಂಗ್ಲಿಷಿನಲ್ಲಿ ರಚಿಸಿದನು. ಇಂಗ್ಲಿಷಿನಲ್ಲಿ ಬರೆದ ಈ ಪುಸ್ತಕಗಳಲ್ಲದೆ ಇವನು ಲ್ಯಾಟಿನಿನಲ್ಲಿಯೂ ಕೆಲವನ್ನು ಬರೆದನು. ಅವುಗಳ ಮಾತು ಇಲ್ಲಿ ಪ್ರಕೃತವಲ್ಲ. ಅಂತೂ, ಆಲ್ಫ್ರೆಡ್ ದೊರೆಯು ಪ್ರಾರಂಭಿಸಿದ್ದ ವಿದ್ಯಾಪ್ರಚಾರ ಕಾರ್ಯವನ್ನು ಎಲ್ಫ್ರಿಕ್ಕನು ಮುಂದಕ್ಕೆ ನಡೆಯಿಸಿದನು. ಇವನು ಹೊಸ ಗ್ರಂಥವೊಂದನ್ನೂ ನಿರ್ಮಿಸದಿದ್ದರೂ ಜನರ ತಿಳಿವಿಗೆ ಬೇಕಾದ ವಿಷಯಗಳನ್ನು ಬರೆದಿಟ್ಟನು. ಈತನ ವಿಷಯದಲ್ಲಿ ಇನ್ನೊಂದು ಮಾತು ಮುಖ್ಯವಾದದ್ದು. ಆಲ್ಫ್ರೆಡ್ಡನ ಕಾಲದಲ್ಲಿ ಪ್ರಾರಂಭವಾದ ಗದ್ಯಶೈಲಿಯು ಇವನ ಕೈಯಲ್ಲಿ ಮತ್ತಷ್ಟು ಲಲಿತವೂ ಸರಳವೂ ಆಯಿತು. ಆದರೆ ಆಂಗ್ಲೊಸ್ಯಾಕ್ಸನ್ ಪದ್ಯಗಳಲ್ಲಿ ಹೇಗೊ ಹಾಗೆ ಇವನು ಪದಗಳ ಆದಿ ಪ್ರಾಸವನ್ನು ಹೆಚ್ಚಾಗಿ ಉಪಯೋಗಿಸಿದನು. ನಾರ್ಮನರ ವಿಜಯದಿಂದ ತಡೆಯಾಗದಿದ್ದರೆ ಪದ್ಯವು ಬಹಳ ಉತ್ತಮ ಸ್ಥಿತಿಗೆ ಬರುತ್ತಿದ್ದಿತೆಂದು ಹೇಳುವಂತೆ ಕೆಲವರು ಈ ಗದ್ಯಶೈಲಿಯ ವಿಷಯದಲ್ಲಿಯೂ ಅಭಿಪ್ರಾಯಪಡುತ್ತಾರೆ. ಹೀಗೆ ಹೇಳುವುದಕ್ಕೆ ಸಾಕಾದಷ್ಟು ಆಧಾರವಿಲ್ಲವೆಂದು ಇತರರ ಅಭಿಪ್ರಾಯ. ಎಲ್ಫ್ರಿಕ್ಕನ ತರುವಾಯ, ಅಥವಾ ಅವನ ಕಾಲದಲ್ಲೇ ಜೀವಂತನಾಗಿದ್ದ ವುಲ್ಸ್ಟನ್ನನು ಕೆಲವು ನೈತಿಕ ಉಪನ್ಯಾಸಗಳನ್ನು ಬರೆದನು. ಇವುಗಳ ಶೈಲಿಯೂ ಸಾಮಾನ್ಯವಾ

ಗಯೇ ಇದೆ. ಭಾವಗಳನ್ನು ಸೂಚಿಸುವುದಕ್ಕೆ ವಿಸ್ತಾರವಾಗಿ ಪದ ಸಂಯೋಜನೆ ಮಾಡಿರುವುದೇ ಈ ಕೃತಿಯ ವಿಶೇಷ ಗುಣ.

ಆಲ್ಫ್ರೆಡ್ ದೊರೆಯು ವಿಂಚೆಸ್ಟರ್ ಮಠದಲ್ಲಿ ಚರಿತ್ರೆ ಬರೆಯಿಸಿದ್ದನ್ನು ಮೇಲೆಯೇ ಹೇಳಿದೆ. ಇದನ್ನು ಬರೆಯಿಸಿದ ಭಾಗವು ೮೯೧ನೆಯ ಇಸವಿಗೆ ನಿಂತಿತು. ಆಮೇಲೆ ಆ ಗ್ರಂಥದಲ್ಲಿ ಕೆಲವು ವರ್ಷಗಳ ಚರಿತ್ರೆಯು ವಿಶದವಾಗಿಯೂ ಮತ್ತೆ ಕೆಲವು ವರ್ಷಗಳ ಚರಿತ್ರೆಯು ಸಂಕ್ಷೇಪವಾಗಿಯೂ ೧೦೦೧ನೆಯ ಇಸವಿಯವರೆಗೆ ಬರೆಯಲ್ಪಟ್ಟಿತು. ಮುಂದಣ ಚರಿತ್ರೆಯು ವೂಸ್ಟರ್ ಮತ್ತು ಪೀಟರಬರೋ ಎಂಬ ಬೇರೆ ಎರಡು ಮಠಗಳಲ್ಲಿ ಬರೆಯಲ್ಪಟ್ಟಿತು. ಅದರ ಈ ಭಾಗಗಳು ನಾರ್ಮನರ ವಿಜಯಾನಂತರದ ಚರಿತ್ರೆಯನ್ನು ಕುರಿತವು. ಇಂಗ್ಲೀಷಿನಲ್ಲಿ ಬರೆದ ಈ ಚರಿತ್ರೆಯು ೧೧೫೪ನೆಯ ಇಸವಿಯ ಚರಿತ್ರೆಯೊಂದಿಗೆ ಕೊನೆಯಾಗಿದೆ. ಮೇಲೆ ಹೇಳಿದ ಬ್ರುನಾನಬರ್ಗಿನ ಯುದ್ಧ ಮತ್ತು ಮಾಲ್ಡನ್ ಯುದ್ಧ—ಈ ವಿಷಯವಾದ ಪದ್ಯಗಳು ಈ ಆಂಗ್ಲೋ ಸ್ಯಾಕ್ಸನ್ ಚರಿತ್ರ ಗ್ರಂಥದಲ್ಲಿಯೇ ಸೇರಿರುವುವು. ಇಲ್ಲಿಗೆ ಆಂಗ್ಲೋ ಸ್ಯಾಕ್ಸನ್ ಭಾಷೆಯಲ್ಲಿ ಆರಂಭವಾಗಿದ್ದ ಗದ್ಯ ಗ್ರಂಥ ರಚನೆಯೂ ಮುಗಿಯಿತು.

ನಾರ್ಮನರು ಇಂಗ್ಲೆಂಡಿಗೆ ಬಂದಮೇಲೆ ಆಂಗ್ಲೋ ಸ್ಯಾಕ್ಸನ್ ಭಾಷೆಗೂ ನಾರ್ಮನರ ಭಾಷೆಯಾದ ಫ್ರೆಂಚಿಗೂ ಸಂಪರ್ಕ ಉಂಟಾಗಿ ಇಂಗ್ಲೆಂಡಿನ ಭಾಷೆಯಲ್ಲಿ ಅದೊಂದು ಬೇರೆಯ ಭಾಷೆಯಾಯಿತೆನ್ನುವಷ್ಟರ ಮಟ್ಟಿಗೆ ಪರಿವರ್ತನಗಳುಂಟಾದುವು. ಹೀಗೆ ಪರಿವರ್ತನ ಹೊಂದಿದ ಇಂಗ್ಲೀಷನ್ನು ಆಂಗ್ಲೇಯ ಸಾಹಿತ್ಯದಲ್ಲಿ 'ಮಿಡಲ್ ಇಂಗ್ಲಿಷ್' ಎಂದರೆ, ಮಧ್ಯಕಾಲದ ಇಂಗ್ಲಿಷು ಎಂದು ಕರೆಯುತ್ತಾರೆ.

ನಾರ್ಮನರು ಬಾರದಿದ್ದರೂ ಆಂಗ್ಲೋ ಸ್ಯಾಕ್ಸನ್ ಸಾಹಿತ್ಯವು ಮೇಲೆ ವರ್ಣಿಸಿರುವ ಅಂತಸ್ತಿಗಿಂತ ಮೇಲಕ್ಕೆ ಹೋಗುತ್ತಿರಲಾರದೆಂದು ಇನ್ನು ಕೆಲವರು ಅಭಿಪ್ರಾಯವನ್ನು ಸೂಚಿಸಿರುತ್ತಾರೆ. ಆಂಗ್ಲೋ ಸ್ಯಾಕ್ಸನ್ ಪದ್ಯದಲ್ಲಿ ಪಙ್ಕ್ತಿ ಪಙ್ಕ್ತಿಯಲ್ಲೂ ಪದಾದಿ ಪ್ರಾಸವು ಉಪಯೋಗದಲ್ಲಿದ್ದಿತು. ಇದು ಹೊರತು ಛಂದಸ್ಸು ಮಿಕ್ಕ ಯಾವ ಭದ್ರವಾದ ನಿಯಮಕ್ಕೂ ಒಳಪಟ್ಟಿರಲಿಲ್ಲ. ಪದ್ಯವನ್ನು ಗಾಯಕರು ಸಭೆಗಳಲ್ಲಿ ಸಂಗೀತದಂತೆ ಹೇಳುತ್ತಿದ್ದರೆಂದು ಮೊದಲೇ ಹೇಳಿದೆ. ಹೀಗೆ ಹೇಳುವಾಗ ನಮ್ಮ ಲಾವಣಿ ಸಂಗೀತಗಳಲ್ಲಿ ಹೇಗೊ ಹಾಗೆಯೇ ಒಂದು ಮಾತ್ರೆ ಹೆಚ್ಚು ಎರಡು ಮಾತ್ರೆ ಕಡಿಮೆಯಾದರೂ ಕಿವಿಗೆ ಸರಿಹೋಗುವಂತೆ ಆ ಛಂದಸ್ಸು ಏರ್ಪಟ್ಟಿದ್ದಿತು. ಹಳೆಯ ಪದ್ಧತಿಗಳನ್ನು ಅನುಸರಿಸುತ್ತಿದ್ದಷ್ಟು ಕಾವ್ಯಗಳು ಬೆಳೆಯುವುದಕ್ಕೂ ಉತ್ತಮವಾಗುವುದಕ್ಕೂ ಅವಕಾಶವಿದ್ದಿರಲಾರದೆಂದು ತೋರುತ್ತದೆ. ಗದ್ಯದ ವಿಚಾರದಲ್ಲೂ ಇದೇ ಮಾತನ್ನು ಹೇಳಬಹುದು. ನಿಜವಾಗಿ ನೋಡುವುದಾದರೆ ಫ್ರಾನ್ಸಿನಿಂದ ಬಂದ ನವೀನ ಮಾರ್ಗವೆನ್ನುವುದು ಯಾವುದೂ ಇರಲಿಲ್ಲ. ನಾರ್ಮನ್ನರು ಫ್ರಾನ್ಸನ್ನು

ಬರುವ ವೇಳೆಗೆ ಫ್ರಾನ್ಸಿನಲ್ಲಿಯು ಸಾಹಿತ್ಯವೂ ಕೇವಲ ಆರಂಭ ದೆಸೆಯಲ್ಲಿದ್ದಿತು. ಯಾವ ಕಾರಣದಿಂದಲೇ ಆಗಲಿ, ನಾರ್ಮನ್ನರು ಬಂದಮೇಲೆ ೧೫೦ ವರ್ಷಗಳ ವರೆಗೆ ಇಂಗ್ಲೆಂಡಿನಲ್ಲಿ ಗ್ರಂಥ ರಚನೆಯೆನ್ನುವುದು ಏನೂ ಇರಲಿಲ್ಲ. ಜನರಲ್ಲಿ ಹಾಡುಗಳೂ ನೀತಿ ಬೋಧೆಯೂ ಇದ್ದಿರಬಹುದು. ಅಲ್ಲಲ್ಲಿ ಮಠಗಳಲ್ಲಿ ಮುನಿಯರು ಆಂಗ್ಲ ಭಾಷೆಯನ್ನು ಸ್ವಲ್ಪ ನೋಡುತ್ತಿದ್ದಿರಬಹುದು. ಆದರೆ ಯಾರೂ ಏನನ್ನೂ ಬರೆಯಲಿಲ್ಲ. ನಾರ್ಮನನಾದ ರಾಜನ ಭಾಷೆಯು ಫ್ರೆಂಚ್ ಭಾಷೆ. ಪಂಡಿತರಾದ ಮುನಿಯರ ಭಾಷೆ ಮೃತ ಭಾಷೆಯಾದ ಲ್ಯಾಟಿನ್. ಇವುಗಳ ಮಧ್ಯೇ ಸಾಮಾನ್ಯ ಜನರ ಮಾತಾದ ಇಂಗ್ಲಿಷಿಗೆ ಅವಕಾಶವಿರಲಿಲ್ಲ. ಎಲ್ಲರೂ ಫ್ರೆಂಚನ್ನೂ ಲ್ಯಾಟಿನ್ನನ್ನೂ ಕಲಿಯುತ್ತಿದ್ದರು. ಮೊದಮೊದಲು ಫ್ರೆಂಚು ಲ್ಯಾಟಿನ್ ಭಾಷೆಗಳ ಮಧ್ಯೇ ಇಂಗ್ಲಿಷಿಗೆ ಬಂದ ಅವಸ್ಥೆಯನ್ನು ಚರಿತ್ರಕಾರನಾದ ರಾಬರ್ಟ್ ಕವಿಯು ಹೀಗೆಂದು ವರ್ಣಿಸಿರುವನು:—"ಇಂಗ್ಲೆಂಡು ಹೀಗೆ ನಾರ್ಮನ್ನರ ಕೈಸೇರಿತು. ಆಗ ನಾರ್ಮನ್ನರಿಗೆ ತಮ್ಮ ಭಾಷೆ ಮಾತ್ರ ಗೊತ್ತಿದ್ದಿತು. ಅವರು ಮನೆಯಲ್ಲಿ ಹೇಗೋ ಹಾಗೆಯೇ ಹೊರಗೂ ಫ್ರೆಂಚನ್ನು ಮಾತಾಡುತ್ತಿದ್ದರು; ಮಕ್ಕಳಿಗೆ ಫ್ರೆಂಚನ್ನು ಹೇಳಿಕೊಡುತ್ತಿದ್ದರು. ದೊಡ್ಡ ಪದವಿಯಲ್ಲಿರುವ ಜನರೆಲ್ಲರೂ ಅವರ ಸಂಬಂಧಿಗಳೂ ಈಗಲೂ ಅದೇ ಮಾತನ್ನೇ ಆಡುತ್ತಾರೆ. ಫ್ರೆಂಚ್ ಬಾರದವನನ್ನು ಜನರು ದೊಡ್ಡಮನುಷ್ಯನೆನ್ನುವುದಿಲ್ಲ. ಆದರೆ ಸಾಮಾನ್ಯ ಜನರು ಈಗಲೂ ತಮ್ಮ ಮಾತೃ ಭಾಷೆಯನ್ನೇ ಆಡುತ್ತಾರೆ. ತನ್ನ ಭಾಷೆಯನ್ನು ಬಿಟ್ಟು ಇತರ ಭಾಷೆಯನ್ನು ಅವಲಂಬಿಸಿರುವ ದೇಶವು ಇಂಗ್ಲೆಂಡ್ ಅಲ್ಲದೆ ಪ್ರಪಂಚದಲ್ಲಿ ಮತ್ತೊಂದಿರಲಾರದು." ಇಂಗ್ಲೆಂಡಿನ ಚರಿತ್ರೆಯನ್ನು ಹದಿನಾಲ್ಕನೆಯ ಶತಮಾನದ ಮಧ್ಯಕಾಲದಲ್ಲಿ ಲ್ಯಾಟಿನ್ನಿನಲ್ಲಿ ಬರೆದ ಹಿಗ್ಡನ್ ಎಂಬ ಮುನಿಯನು ಆಂಗ್ಲರ ಭಾಷೆಯು ಫ್ರೆಂಚ್ ಭಾಷೆಯ ಸಂಪರ್ಕದಿಂದ ಕೆಟ್ಟುಹೋಗಿದ್ದಿತೆಂದು ಹೀಗೆ ಹೇಳಿದ್ದಾನೆ:—"ಭಾಷೆಯು ಕೆಡುವುದಕ್ಕೆ ಎರಡು ಕಾರಣಗಳಿವೆ. ಪ್ರಪಂಚದ ಮಿಕ್ಕ ಎಲ್ಲ ಜನಾಂಗದ ಪದ್ಧತಿಗೆ ವಿರೋಧವಾಗಿ, ಈ ಸೀಮೆಯ ಪಾಠಶಾಲೆಗಳಲ್ಲಿ ನಾರ್ಮನ್ನರು ಬಂದಂದಿನಿಂದಲೂ ಹುಡುಗರು ತಮ್ಮ ಮಾತೃ ಭಾಷೆಯನ್ನು ಬಿಟ್ಟು ಅದನ್ನು ಫ್ರೆಂಚ್ ಭಾಷೆಗೆ ಭಾಷಾಂತರ ಮಾಡುವುದನ್ನು ಕಲಿಯಬೇಕಾಗಿದೆ. ದೊಡ್ಡ ಮನುಷ್ಯರ ಮಕ್ಕಳು, ಹುಟ್ಟಿದ್ದು ಮೊದಲು ಫ್ರೆಂಚನ್ನೇ ಕಲಿಯುತ್ತಾರೆ. ದೊಡ್ಡವರ ಹಾಗೆ ತಾವೂ ಮಾಡಿ ದೊಡ್ಡಮನುಷ್ಯರಾಗಬೇಕೆಂದು ಸಾಮಾನ್ಯರೂ ಕೂಡ ಫ್ರೆಂಚ್ ಮಾತನ್ನಾಡುವುದಕ್ಕೆ ಪ್ರಯತ್ನಪಡುತ್ತಾರೆ. ಹೀಗೆ ಬಂದು ದ್ವೀಪದ ಆಂಗ್ಲ ಭಾಷೆಯು ಹತ್ತಾರು ವಿಧವಾಗಿ ಕೆಟ್ಟುಹೋಗಿದೆ." ಭಾಷೆಯ ಈ ದುರವಸ್ಥೆಯನ್ನು ನೋಡಿ ಕೆಲವರಾದರೂ ಚಿಂತಿಸುತ್ತಿದ್ದರೆಂದು ಇದರಿಂದ ತಿಳಿಯಬರುತ್ತದೆ. ಸಾಮಾನ್ಯ ಜನಕ್ಕಾಗಿ ದೇಶಭಾಷೆಯಲ್ಲಿ ಗ್ರಂಥ ರಚನೆಮಾಡಬೇಕೆಂಬ ಪ್ರಯತ್ನವೂ ಆಗಾಗ ನಡೆಯುತ್ತಲೇ ಇದ್ದಿತು. ಎಲ್ಲರೂ ಪರಭಾಷೆಗಳಲ್ಲಿ ಗ್ರಂಥ ರಚನೆ ಮಾಡುವುದನ್ನು ನೋಡಿ ಒಬ್ಬ ಕವಿಯು

ಸುಮಾರು ಅದೇ ಕಾಲದಲ್ಲಿ ಬರೆದ ತನ್ನ 'ಕರ್ಸಾರ್ ಮುಂಡೈ' ಎಂಬ ಗ್ರಂಥದಲ್ಲಿ, "ಈ ಪುಸ್ತಕವನ್ನು ಇಂಗ್ಲಿಷ್ ಭಾಷೆಯನ್ನು ಓದುವವರಿಗಾಗಿ ಬರೆದಿದ್ದೇನೆ; ಇಂಗ್ಲೆಂಡಿನಲ್ಲಿರುವ ಇಂಗ್ಲಿಷ್ ಜನರಿಗಾಗಿ, ಸಾಮಾನ್ಯ ಜನರು ತಿಳಿಯುವುದಕ್ಕಾಗಿ. ಎಲ್ಲೆಲ್ಲಿ ನೋಡಿದರೂ ಫ್ರೆಂಚು ಪುಸ್ತಕಗಳೇ ನನ್ನ ಕಣ್ಣಿಗೆ ಬೀಳುತ್ತವೆ. ಫ್ರೆಂಚನ್ನು ತಿಳಿದವರಿಗೇನೊ ಅವು ಸರಿ; ಅದು ಬಾರದವರ ಪಾಡೇನು? ಇಂಗ್ಲೆಂಡಿನ ಜನಾಂಗದಲ್ಲಿ ಇಂಗ್ಲಿಷು ಜನರು ಹೆಚ್ಚಾಗಿದ್ದಾರೆ. ಜನರಿಗೆ ಯಾವ ಮಾತು ಸುಲಭವಾಗಿ ತಿಳಿಯುವುದೊ ಆ ಮಾತಿನಲ್ಲಿ ಅವರು ವಿದ್ಯೆಯನ್ನು ಕಲಿಯಬೇಕು. ಎಂದೇ ಆಗಲಿ, ಎತಕ್ಕೇ ಆಗಲಿ, ಇಂಗ್ಲಿಷ್ ಭಾಷೆಯನ್ನು ಫ್ರಾನ್ಸಿನಲ್ಲಿ ಬಳಕೆಗೆ ತರಲಿಲ್ಲ. ಅವರ ಭಾಷೆ ಅವರಿಗೆ, ನಮ್ಮ ಭಾಷೆ ನಮಗೆ. ಹೀಗೆ ಮಾಡಿದರೆ ಯಾರಿಗೂ ಅನ್ಯಾಯವಿಲ್ಲ" ಎಂದು ಟೀಕಿಸಿದನು. ಈ ಮಾತುಗಳನ್ನೆಲ್ಲ ಈಗ ನಾವು ಇಂಗ್ಲಿಷು ಸಂಸ್ಕೃತ ಭಾಷೆಗಳ ಮಧ್ಯೇ ಅನಾದರಣೆಗೆ ಗುರಿಯಾಗಿರುವ ನಮ್ಮ ದೇಶಭಾಷೆಗಳ ವಿಚಾರವಾಗಿ ಹೇಳಬಹುದಾಗಿದೆ. ಈ ರೀತಿಯಾಗಿ ಇಂಗ್ಲಿಷ್ ಭಾಷೆಯು ಆಗ ತನ್ನ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕೆ ಫ್ರೆಂಚ್ ಭಾಷೆಯೊಂದಿಗೂ ಲ್ಯಾಟಿನ್ ಭಾಷೆಯೊಂದಿಗೂ ಹೋರಾಡಬೇಕಾಯಿತು. ಈ ಕಾಲದಲ್ಲಿ ಆರಂಭವಾದ ಪರಭಾಷಾ ಪಕ್ಷಪಾತವು ಇಂಗ್ಲಿಷ್ ಭಾಷೆಯು ಸ್ಥಿರವಾದ ಮೇಲೂ ತೀರ ಹೋಗದೆ ಬಹು ಕಾಲದವರೆಗೆ ಇಂಗ್ಲಿಷ್ ಜನರು ಫ್ರೆಂಚಿನಲ್ಲೂ ಲ್ಯಾಟಿನಿನಲ್ಲೂ ಗ್ರಂಥಗಳನ್ನು ಬರೆಯುವ ವಾಡಿಕೆಯೇ ಇದ್ದಿತು. ಆದರೂ ದೇಶಭಕ್ತರು ಸಂತತವಾಗಿ ದೇಶಭಾಷೆಗಾಗಿ ಕಷ್ಟಪಡುತ್ತಿದ್ದುದರಿಂದ ಬರಬರುತ್ತ ಇಂಗ್ಲಿಷಿಗೆ ಪ್ರಾಮುಖ್ಯವು ಬಂದಿತು. ೧೩೬೨ನೆಯ ಇಸವಿಯಲ್ಲಿ ಆಗ ದೊರೆಯಾಗಿದ್ದ ಮೂರನೆಯ ಎಡ್ವರ್ಡನು ಲಂಡನ್ನಿನ ಜನರು ತಮ್ಮ ಫಿರ್ಯಾದುಗಳನ್ನು ಫ್ರೆಂಚಿಗೆ ಬದಲಾಗಿ ಇಂಗ್ಲಿಷಿನಲ್ಲಿ ಹಾಕಬಹುದೆಂದು ಅಪ್ಪಣೆಕೊಟ್ಟನು. ಆಗಲೇ ಇಂಗ್ಲಿಷು ಅರಮನೆಯ ಭಾಷೆಯಾಗಿಯೂ ಉಪಯೋಗಕ್ಕೆ ಬಂದಿತು. ಹೀಗೆ ನಾರ್ಮನ್ನರೂ ಆಂಗ್ಲೊ ಸ್ಯಾಕ್ಸನ್ನರೂ ಮೊದಲು ಬೇರೆ ಬೇರೆ ಜನರಾಗಿದ್ದರೂ ಬರಬರುತ್ತ ಒಬ್ಬರಲ್ಲೊಬ್ಬರು ಕಲೆತು ಒಂದು ಜನವಾದರು. ಆ ಕಾಲದಲ್ಲಿ ಆಂಗ್ಲ ರಾಜನಿಗೆ ಫ್ರಾನ್ಸಿನ ರಾಜ್ಯದ ಕೊಂಚ ಭಾಗವು ಸೇರಿದ್ದಿತು. ಅದು ಆಂಗ್ಲ ರಾಜನ ಕೈ ತಪ್ಪಿದಮೇಲೆ ನಾರ್ಮನ್ ಮತ್ತು ಆಂಗ್ಲ ಜನರ ಮಿಲನವು ಜಾಗ್ರತೆಯಾಗಿ ಸಂಪೂರ್ಣವಾಯಿತು. ಹೀಗೆ ಎರಡು ಜನವೂ ಸೇರಿ ಆದ ಆಂಗ್ಲೇಯ ಜನಾಂಗವು ಇಂಗ್ಲೆಂಡು ಒಂದನ್ನೇ ಮಾತೃಭೂಮಿಯಾಗೆಣಿಸುವುದು ಮೆಲ್ಲನೆ ವಾಡಿಕೆಗೆ ಬಂದಿತು. ಆಂಗ್ಲೇಯ ಭೂಮಿಯ ಮೇಲಣ ಪ್ರೇಮವು ಜನರಲ್ಲಿ ಯಾವ ರೀತಿ ಇದ್ದಿತೆಂದು ರಾಬರ್ಟ್ ಕವಿ ಬರೆದ ಈ ಪಙ್ಕ್ತಿಗಳಿಂದ ತೋರಿಬರುವುದು :—

> ಇಂಗ್ಲೆಂಡು ಬಹಳ ಒಳ್ಳೆಯ ಸೀಮೆ. ಇದು ಎಲ್ಲ ಸೀಮೆಗಳಿಗಿಂತ ಉತ್ತಮ
> ವಾದುದೆಂದು ನನಗೆ ತೋರುತ್ತವೆ. ಭೂಮಿಯ ಒಂದು ಕೊನೆಯಲ್ಲಿ, ಪಶ್ಚಿಮ

ದಿಕ್ಕಿನಲ್ಲಿ, ಇದು ನೆಲಸಿದೆ. ಸಮುದ್ರವು ಇದನ್ನು ಆವರಿಸಿಕೊಂಡಿದೆ. ನಡುವೆ ಇದು ದ್ವೀಪವಾಗಿ ನಿಂತಿದೆ. ಮೋಸದಿಂದ ಬಂದರೆ ಹೊರತು, ಯಾವ ಶತ್ರುವಿಗೂ ಈ ದೇಶವು ಹೆದರಬೇಕಾದುದಿಲ್ಲ.

ಹೀಗೆ ಜನಾಂಗವು ಒಂದಾಗಿ, ದೇಶ ಭಾಷೆಯು ಉಜ್ಜೀವಿತವಾಗಿ ಪುನಃ ಇಂಗ್ಲಿಷಿನಲ್ಲಿ ಪುಸ್ತಕಗಳು ಪ್ರಾರಂಭವಾಗುವ ವೇಳೆಗೆ ವೆಲ್ಷ್ ಕಥೆಗಳೂ, ಫ್ರಾನ್ಸಿನಲ್ಲಿ ಆ ವೇಳೆಗೆ ಎದ್ದಿದ್ದ ರೋಮ್ಯಾನ್ಸುಗಳೂ ಕೇಳಿಕೆಗಳೂ ಪ್ರೇಮ ವ್ಯಂಜಕವಾದ ಹಾಡುಗಳೂ, ಕ್ರೈಸ್ತರೆಲ್ಲ ಸೇರಿ ಮಹಮ್ಮದೀಯರ ಮೇಲೆ ನಡೆಯಿಸಿದ 'ಕ್ರೂಸೇಡ್' ಎಂಬ ಚೈತ್ರಯಾತ್ರೆಗೆ ಹೋದ ಜನಗಳು ಹಿಂದಕ್ಕೆ ಬಂದಾಗ ತಂದ ಪೂರ್ವದೇಶೀಯರ ಕಥೆಗಳೂ ವಿದ್ಯಾವಂತರಲ್ಲಿ ಹರಡಿದ್ದುವು. ಇವೆಲ್ಲವೂ ಆಂಗ್ಲ ಜನರ ಮನಸ್ಸಿನಲ್ಲಿ ಹೊಕ್ಕು ಅವರ ಭಾಷೆಯಲ್ಲಿ ಹೊಸ ರೀತಿಯ ಕಾವ್ಯಗಳಾಗಿ ಉದ್ಭವವಾದುವು. ಆದರೂ ಓದು ತಿಳಿದ ಜನರು ವಿಶೇಷವಾಗಿಲ್ಲದುದರಿಂದಲೂ, ಅವರಲ್ಲಿ ಮುಕ್ಕಾಲುಪಾಲು ಜನಕ್ಕೆ ಫ್ರೆಂಚ್ ಭಾಷೆಯು ಬರುತ್ತಿದ್ದುದರಿಂದಲೂ, ಇಂಗ್ಲಿಷಿನಲ್ಲಿ ಹೊಸ ವಿಷಯಗಳನ್ನು ಕುರಿತು ಬರೆಯಬೇಕಾದ ಆವಶ್ಯಕತೆಯುಂಟಾಗುವುದಕ್ಕೆ ಬಹು ಕಾಲವಾಯಿತು. ಎಲ್ಲರಿಗೂ ಬೇಕಾಗಿದ್ದ ಬೈಬಲು ಪುಸ್ತಕವೂ ಕೂಡ ವಿದ್ಯಾವಂತರಿಗೆ ಫ್ರೆಂಚಿನಲ್ಲಿ ಸುಲಭವಾಗಿ ಸಿಕ್ಕುವಂತಿದ್ದುದರಿಂದ ಅದು ಇಂಗ್ಲಿಷಿಗೆ ಭಾಷಾಂತರವಾಗುವುದು ವಿಕ್ಲಿಫ್ ಎಂಬ ಮಹನೀಯನ ಕಾಲದ ವರೆಗೆ ಸಾವಕಾಶವಾಯಿತು.

ಮಾಸ್ತಿ ವೆಂಕಟೇಶ ಐಯಂಗಾರ್.

ಮೈಸೂರು ದೇಶದಲ್ಲಿಯ ಹನ್ನೆರಡನೆಯ ಶತಮಾನದ ಒಂದು ವಿಶ್ವವಿದ್ಯಾನಿಲಯ

(೧೫೭ನೆಯ ಪುಟದಿಂದ ಮುಂದುವರಿದದ್ದು)

ಪಂಚಲಿಂಗ ದೇವಸ್ಥಾನ.—ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುತ್ತಿದ್ದ ಬೆಳಗಾವೆಯ ಸಂಸ್ಥೆಗಳಲ್ಲಿ ಪಂಚಲಿಂಗ ದೇವಸ್ಥಾನ, ಅಥವಾ ಮಠವು ಒಂದು. ಇದೂ ಕಾಳಾಮುಖರಿಗೇ ಸೇರಿದ್ದು. ಈ ಕಾಳಾಮುಖರ ಪರ್ವತಾವಳಿಯ ಮೂವರ ಕೋಣೆಯ ಸಂತತಿಯವರಲ್ಲ; ಶಕ್ತಿಪರ್ಷೆಯ ಭುಜಂಗಾವಳಿಗೆ ಸೇರಿದ ಇಟ್ಟಿಗೆಯ ಸಂತತಿಯವರು. ಈ ಮಠಾಧಿಪತಿಗಳು ಪ್ರಾಮುಖ್ಯವಾಗಿ ಕಂಡುಬರುವುದು ೧೧ನೆಯ ಶತಮಾನದ ಶಾಸನಗಳಲ್ಲಿ ಮಾತ್ರ. ಕೋಡಿಯ ಮಠದವರು ೧೨ನೆಯ ಶತಮಾನದಲ್ಲಿ ಪ್ರಾಮುಖ್ಯತೆಯನ್ನು ಪಡೆದರು. ಇದರಿಂದ, ೧೧ನೆಯ ಶತಮಾನದಲ್ಲಿ ಈ ಮಠವೇ ಮುಂದಾಗಿದ್ದಿತೆಂದೂ ೧೨ನೆಯ ಶತಮಾನದಲ್ಲಿ ಕೋಡಿಯ ಮಠವು ಇದನ್ನು ಹಿಂದಕ್ಕೆ ತಳ್ಳಿ ಮುಂದುವರಿಯಿತೆಂದೂ ನಾವು ನಿರ್ಧರಿಸಬಹುದು. ಈ ಮಠಾಧಿಪತಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ:—

ಮಠಾಧಿಪತಿಯ ಹೆಸರು	ಕಾಲ
ಲಕುಲೀಶ	೧೦೩೭
ಕಾಶ್ಮೀರ ಪಂಡಿತ ದೇವ, ಅಥವಾ ೧ನೆಯ ಸರ್ವೇಶ್ವರ	೧೦೫೪
ತ್ರಿಲೋಚನ	೧೦೫೦ ರಿಂದ ೧೦೬೭
ವರೇಶ್ವರ	೧೦೭೮ ರಿಂದ ೧೦೯೩
ಶ್ರೀಕಂಠ	೧೦೯೯
೨ನೆಯ ಸರ್ವೇಶ್ವರ	೧೧೧೮
ರುದ್ರಶಕ್ತಿ	೧೧೮೧

ಪಂಚಲಿಂಗ ದೇವಸ್ಥಾನವು ಪಾಂಡವರಿಂದ ಸ್ಥಾಪಿತವಾದುದೆಂದೂ ಆದ ಕಾರಣ ಅತ್ಯಂತ ಪ್ರಾಚೀನ ಕಾಲದುದೆಂದೂ ಒಂದು ಶಾಸನದಿಂದ ತಿಳಿದು ಬರುತ್ತದೆ. ಈ ನಂಬಿಕೆಯು ನಿರಾಧಾರವಾದುದೆಂದು ತೋರುತ್ತದೆ. ಏಕೆಂದರೆ, ಈ ದೇವಸ್ಥಾನವು ಐದು ಮೂಲ ಮಠಗಳಲ್ಲಿ ಸೇರಿಲ್ಲ. ಬಹುಶಃ ಇದು ಸುಮಾರು ಕ್ರಿ. ಶ. ೧೦೦೦ದಲ್ಲಿ ಸ್ಥಾಪಿತವಾಯಿತೆಂದು ನಾವು ಇಟ್ಟುಕೊಳ್ಳಬಹುದು.

ನಮಗೆ ತಿಳಿದುಬಂದಿರುವುದರಲ್ಲಿ ಲಕುಲೀಶನೇ ಈ ದೇವಸ್ಥಾನದ ಅಧಿಪತಿಗಳಲ್ಲಿ ಮೊದಲನೆಯವನು. ಈತನು ಶಾಸನಗಳಲ್ಲಿ ಹೀಗೆ ವರ್ಣಿತನಾಗಿದ್ದಾನೆ:—

ಸಮಸ್ತ ತರ್ಕಾದಿ ಶಾಸ್ತ್ರ ಪಾರಾವಾರ ಪಾರಗ ನಾದಿರುದ್ರ ವಾದೀಭ ಮಸ್ತಕ ವಿದಾರಣ ಕಠೋರ ಕೇಸರಿ ನವ ಮಹಾರಾಜ್ಯ ದಾನ ಪಟು ಮುಷ್ಟವಾದಿ ಸಮುದ್ರ ಪಟಿಷ್ಠ ಶಾಸ್ತ್ರಾರ್ಣವಂ ಪ್ರತಿವಾದಿ ವಾದನಾಮುಖ ಮಹಾಮಾನಸ ಧಾತ್ರೀಧರ ವಜ್ರಂ ವೈಶೇಷಿಕ ಮಹಾತರು ವಿದಾರಣ ಕ್ರಕಚಂ ಸಾಂಖ್ಯಮಹೀಂದ್ರ ರುಂದ್ರ ವೈಶಾರದ ಅದ್ವೈತವಾದಿ ಭುಜ ಕುಠಾರಂ ಅಕಳಂಕ ತ್ರಿಪುರ ದಹನ ತ್ರಿನೇತ್ರಂ ಪಾಶುಪತ ಘರಟ್ಟ ವಿರಾಜಿತ ಮಹಾಘನಪಟು ಘರಟ್ಟಂ ಬೌದ್ಧ ನಾನಂದ ಮದಭಂಜನ ವಿಶ್ವಾನಳ ಸ್ಯಾದ್ವಾದಿ ಗಾತ್ರಾನಲಂ ಅಭಯಚಂದ್ರ ಕಾನನಾನಳಂ ವಾದಿ ಭಂಗಪ್ರಭಂ ವಾದಿರಾಜ ಮುಖ ಮುದ್ರ ನಯನಾದಿ ವಿರಾಪಟ್ಟಂ ಸ್ವಯಾಯುಕ ಸಂಪತ್ಕಕ ಪಕ್ಷಂ ಸ್ವಪಕ್ಷ ಪೋಷಣ ಪರಪಕ್ಷ ದೂಷಣ ಪಟುತರ ಪಿಲಿಂಚಂ ವಾಗ್ವಧೂ ಮಂಡನಂ ಆಸ್ಥಾನ ಪದ್ಮಾಸನಂ ವಿವೇಕ ನಾರಾಯಣಂ ಗಮಕ ಮಹೇಶ್ವರಂ ಉಪನ್ಯಾಸಾಮರಾಪಗಾ ಪ್ರವಾಹಂ ವ್ಯಾಖ್ಯಾನ ಕೇಳೀ ಲಂಪಟ ಮನೋಹರ ಸರೋರುಹ ಭೃಂಗಂ ಅವದಾತ ಕೀರ್ತಿ ಧ್ವಜಂ ಅಮಳಿನ ಚರಿತ್ರಂ ಶ್ರಿಷ್ಟ ದರ್ಶನ ಪಂಡಿತ ಗಳ ಕಾಳಪಾಶಂ ವಾದಿ ದಿಗಂಬರ ಧೂಮಕೇತುಂ ವಾದಿ ರುದ್ರ ನಾಮಾಂಕಿತರಪ್ಪ ಶ್ರೀಮುಲ ಕಾಲೀಶ್ವರ ಪಂಡಿತರ್—

ಇದನ್ನು ನೋಡಿದರೆ ಈತನು ಬಹಳ ದೊಡ್ಡ ಪಂಡಿತನಾಗಿದ್ದನೆಂದು ಗೊತ್ತಾಗುತ್ತದೆ. ಚಾಳುಕ್ಯ ಚಕ್ರವರ್ತಿ ಜಯಸಿಂಹನು ಈ ದೇವಸ್ಥಾನಕ್ಕೆ ೧೦೩೬ರಲ್ಲಿ ಕೆಲವು ಜಮೀನುಗಳನ್ನು ದಾನ ಕೊಡುವಂತೆ ಈ ವಿದ್ವಾಂಸನ ಕೀರ್ತಿಯೇ ಪ್ರೇರಿಸಿತು. ಆತನು ದಾನ ಮಾಡಿದುದರ ಉದ್ದೇಶಗಳಲ್ಲಿ ಆ ಮಠದಲ್ಲಿ ಶಿಕ್ಷಣವನ್ನು ಹೊಂದುತ್ತಿದ್ದ ವಿದ್ಯಾರ್ಥಿಗಳಿಗೆ ಅನ್ನ ವಸ್ತ್ರಗಳಿಗೆ ಅನುಕೂಲ ಪಡಿಸಿಕೊಡುವುದು ಒಂದಾಗಿದ್ದಿತು.

ಅಕಾಲೇಶನಾದಮೇಲೆ ಪಂಚಲಿಂಗ ದೇವಸ್ಥಾನಕ್ಕೆ ಆಚಾರ್ಯ, ಅಥವಾ ಅಧಿಪತಿಯಾದವನು ಸರ್ವೇಶ್ವರನು. ಈತನಿಗೆ ಶಾಸ್ತ್ರೀರಪಂಡಿತದೇವನೆಂಬ ಹೆಸರು ಇದ್ದಂತೆ ತೋರುತ್ತದೆ. ಆಮೇಲೆ ತ್ರಿಲೋಚನನೂ ಅನಂತರ ವರೇಶ್ವರನೂ ಆ ಮಠದ ಅಧಿಪತಿಗಳಾದರು. ವರೇಶ್ವರನ ಕಾಲದಲ್ಲಿ ಮಹಾ ಸಾಮಂತಾಧಿಪತಿ ಸರ್ವದೇವರಸನು ತಾನು ಹೊಸದಾಗಿ ಕಟ್ಟಿಸಿದ ಸರ್ವೇಶ್ವರ ದೇವಾಲಯವನ್ನು ಮೇಲ್ವಿಚಾರಣೆಗಾಗಿ ಪಂಚಲಿಂಗ ದೇವಸ್ಥಾನಕ್ಕೆ ಒಪ್ಪಿಸಿದನು.

ಅನಂತರದಲ್ಲಿ ಅಧಿಪತಿಗಳಾದ ಶ್ರೀಕಂಠ, ಸರ್ವೇಶ್ವರ, ರುದ್ರಶಕ್ತಿ—ಇವರು ಕೆಲವು ಪ್ರಾಮುಖ್ಯ ಸಮಯಗಳಲ್ಲಿ ಬದುಕಿದ್ದರೆಂದು ಶಾಸನಗಳಲ್ಲಿ ಹೇಳಿದೆ.

ಮಠವೆಂಬ ಹೆಸರನ್ನು ಪಡೆಯದೆ ಇದ್ದ ಅನೇಕ ದೇವಸ್ಥಾನಗಳೂ ಆ ಪಟ್ಟಣದಲ್ಲಿದ್ದುವು. ಅವುಗಳಲ್ಲಿ ಸಿದ್ಧೇಶ್ವರ, ನರಸಿಂಹ, ನಾಗೇಶ್ವರ—ಈ ದೇವಸ್ಥಾನಗಳಲ್ಲಿ ವಿದ್ಯಾ ಬೋಧನೆಗೆ ಏರ್ಪಾಡಾಗಿದ್ದಿತೆಂದು ಶಾಸನಗಳು ತಿಳಿಸುತ್ತವೆ. ಚಾಳುಕ್ಯ ಚಕ್ರವರ್ತಿ ಜಯಸಿಂಹನು ಸಿದ್ಧೇಶ್ವರ ದೇವಸ್ಥಾನಕ್ಕೆ ಕೆಲವು ಭೂಮಿಗಳನ್ನು ದಾನ ಮಾಡಿದನು. ಹಾಗೆ ದಾನ ಮಾಡುವ ಉದ್ದೇಶಗಳಲ್ಲಿ ಆ

ದೇವಸ್ಥಾನದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೆ ಅನ್ನ ವಸ್ತ್ರಗಳನ್ನು ಕೊಡುವುದು ಒಂದಾಗಿದ್ದಿತು. ಈ ದೇವಸ್ಥಾನವೂ ಕಾಳಾಮುಖರಿಗೇ ಸೇರಿದ್ದಿತು; ಆದರೆ ಅವರು ಪರ್ವತಾವಳಿಯ ಗಾವೆಯ ಸಂತತಿಯವರು; ಕ್ರಿಯಾಶಕ್ತಿಯೆಂಬ ಸಂನ್ಯಾಸಿಯು ಆ ಕಾಲದಲ್ಲಿ ಮಠಾಧಿಪತಿಯಾಗಿದ್ದನು. ಬಳ್ಳಿಗಾವೆಯಲ್ಲಿ ಪೆರ್ಗಟ್ಟ ತಟಾಕದ ಸಮೀಪದಲ್ಲಿದ್ದ ಕ್ರಿಯಾಶಕ್ತಿ ದೇವಸ್ಥಾನಕ್ಕೆ ಒಂದು ಗ್ರಾಮವೂ ಕೆಲವು ಬಹುಮಾನಗಳೂ ದತ್ತಿ ಬಿಡಲ್ಪಟ್ಟುವೆಂದು ಶಾಸನಗಳಿಂದ ತಿಳಿಯಬರುತ್ತದೆ. ಕ್ರಿಯಾಶಕ್ತಿ ದೇವಸ್ಥಾನದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಲು ೧೨ ಮಂದಿ ವ್ಯಾಖ್ಯಾತೃಗಳಿದ್ದರೆಂದೂ ಆ ದೇವಸ್ಥಾನದ ಆಚಾರ್ಯನು ಪೂರ್ಣಾನಂದ ಭಟ್ಟಾರಕನಾಗಿದ್ದನೆಂದೂ ಒಂದು ಶಾಸನವು ತಿಳಿಸುತ್ತದೆ. ಮತ್ತೊಂದು ಶಾಸನವು ಬಳ್ಳಿಗಾವೆಯ ವರ್ತಕಮಂಡಲಿಯವರು ಕೆಲವು ತೆರಿಗೆಗಳನ್ನು ವಿದ್ಯಾರ್ಥಿಗಳಿಗೆ ಅನ್ನದಾನ ಮಾಡುವುದಕ್ಕಾಗಿ ೧೦೯೪ರಲ್ಲಿ ಕೊಟ್ಟರೆಂದು ತಿಳಿಸುತ್ತದೆ.

ಇತರ ಮಠಗಳೂ ದೇವಸ್ಥಾನಗಳೂ.—ಬೆಳಗಾವೆಯ ಶಾಸನಗಳಲ್ಲಿ ಮೂಲಸ್ಥಾನ ನಂದಿಕೇಶ್ವರ ದೇವಸ್ಥಾನದ ಹೆಸರು ಒಂದು ಸಲ ಮಾತ್ರ ಸಿಕ್ಕುತ್ತದೆ. ಮಹಾಮಂಡಲೇಶ್ವರ ಕುಂದಮರಸನು ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದನೆಂದೂ ೧೦೧೭ರಲ್ಲಿ ಅದಕ್ಕೆ ಕೆಲವು ದಾನಗಳನ್ನು ಕೊಟ್ಟನೆಂದೂ ಆ ಕಾಲದಲ್ಲಿ ಶಿವಶಕ್ತಿಯು ಆ ದೇವಸ್ಥಾನದ ಆಚಾರ್ಯನಾಗಿದ್ದನೆಂದೂ ತಿಳಿದುಬರುತ್ತದೆ. ಇದರಿಂದ ಈ ದೇವಸ್ಥಾನವು ಕಾಳಾಮುಖರಿಗೇ ಸೇರಿದ್ದಿತೆಂದು ತೋರುತ್ತದೆ.

ನಾಲ್ಕೈದು ಶಾಸನಗಳು ಭೇರುಂಡೇಶ್ವರ, ಅಥವಾ ಜಗದೇಕಮಲ್ಲೇಶ್ವರ ದೇವಸ್ಥಾನವನ್ನು ಹಿರಿಯ ಮಠವೆಂದು ಕರೆಯುತ್ತವೆ. ಈ ಮಠಾಧಿಪತಿಗಳಲ್ಲಿ ಕೆಲವರ ಹೆಸರುಗಳು ಶಿವ ಎಂದು ಮುಗಿಯುತ್ತವೆ. ಇದರಿಂದ ಈ ಮಠವು ಕಾಳಾಮುಖರಿಗೆ, ಅಥವಾ ಅವರಿಗೆ ಸಂಬಂಧಿಸಿದ ಮತ್ತೊಂದು ಶೈವ ಮತದ ಪಂಗಡದವರಿಗೆ ಸೇರಿದ್ದಿತೆಂದು ಗೊತ್ತಾಗುತ್ತದೆ. ಈ ದೇವಸ್ಥಾನಕ್ಕೆ ೧೦೪೭ರಲ್ಲಿ ಅನಂತಶಿವನು ಮಠಾಧಿಪತಿಯಾಗಿದ್ದಾಗ ಮಹಾಮಂಡಲೇಶ್ವರ ಚಾವುಂಡರಾಯರಸನು ಒಂದು ಗ್ರಾಮವನ್ನು ದಾನ ಮಾಡಿದನು. ಮತ್ತೊಂದು ಶಾಸನದಿಂದ, ಮಧುಕೇಶ್ವರ ಪಂಡಿತನು ೧೦೫೪ರಲ್ಲಿ ಮಠಾಧಿಪತಿಯಾಗಿದ್ದನೆಂದೂ ಆತನಿಗೆ ಧರ್ಮಸೇನನೆಂಬ ಮಗನಿದ್ದನೆಂದೂ ಗೊತ್ತಾಗುತ್ತದೆ. ೧೦೯೯ರಲ್ಲಿ ಗೌರಪಂಡಿತನೂ ೧೧೫೮ರಲ್ಲಿ ಮಧುಕೇಶ್ವರನೂ ಈ ದೇವಸ್ಥಾನದ ಆಚಾರ್ಯರಾಗಿದ್ದರು.

ಪಂಚಮಠ ದೇವಸ್ಥಾನ, ಅಥವಾ ಮಠವು ೩ ಶಾಸನಗಳಲ್ಲಿ ಉಕ್ತವಾಗಿದೆ. ಅವುಗಳಲ್ಲಿ ಒಂದು ಇದನ್ನು ಮೂಲಸ್ಥಾನವೆಂದು ಕರೆಯುತ್ತದೆ; ಅಲ್ಲದೆ, ೧೦೩೯ರಲ್ಲಿ ಹೊನ್ನಯ್ಯಜೀಯನು ಆಚಾರ್ಯನಾಗಿದ್ದನೆಂದು ತಿಳಿಸುತ್ತದೆ.

೧೧೫೮ರಲ್ಲಿ ಧರ್ಮಶಿವನು ಆಚಾರ್ಯನಾಗಿದ್ದನು. ಮಠಾಧಿಪತಿಗಳ ಹೆಸರುಗಳನ್ನು ನೋಡಿದರೆ ಈ ದೇವಸ್ಥಾನವು ಕಾಳಾಮುಖರಿಗೆ, ಅಥವಾ ಮತ್ತೊಂದು ಪಂಗಡದ ಶೈವರಿಗೆ ಸೇರಿದ್ದಿತೆಂದು ಕಾಣುತ್ತದೆ.

ಸುಮಾರು ೬ ಶಾಸನಗಳು ತ್ರಿಪುರಾಂತಕ ದೇವಸ್ಥಾನ, ಅಥವಾ ಮಠದ ಹೆಸರನ್ನು ಹೇಳುತ್ತವೆ. ಅವುಗಳಲ್ಲಿ ಒಂದರಿಂದ, ೧೦೫೪ರಲ್ಲಿ ಜ್ಞಾನಶಕ್ತಿಯೂ ಮತ್ತೊಂದರಿಂದ, ೧೦೯೯ರಲ್ಲಿ ಚತುರಾನನನೂ ಇನ್ನೊಂದರಿಂದ, ೧೧೫೪ರಿಂದ ೧೧೬೧ರ ವರೆಗೂ ಜ್ಞಾನಶಕ್ತಿಯೂ ಆಚಾರ್ಯರಾಗಿದ್ದರೆಂದು ತಿಳಿಯಬರುತ್ತದೆ. ಈ ದೇವಸ್ಥಾನವು ಬಹುಶಃ ಕಾಳಾಮುಖರಿಗೇ ಸೇರಿದ್ದಿತು.

ಹರಿಹರಾದಿತ್ಯ ದೇವಸ್ಥಾನ, ಅಥವಾ ಮಠದ ವಿಷಯವನ್ನು ತಿಳಿಸುವುದು ೧೦೭೨ರಲ್ಲಿ ಹುಟ್ಟಿದ ಒಂದು ಶಾಸನ. ಈ ಶಾಸನವು, ಚಾಳುಕ್ಯ ಚಕ್ರವರ್ತಿ ೨ನೆಯ ಸೋಮೇಶ್ವರ ಭುವನೈಕಮಲ್ಲನು ಮಹಾಪ್ರಧಾನ ಉದಯಾದಿತ್ಯ ದಂಡನಾಯಕನಿಂದ ಪ್ರೇರಿತನಾಗಿ ಆ ದೇವಸ್ಥಾನಕ್ಕೆ ಒಂದು ಗ್ರಾಮವನ್ನು ದಾನ ಮಾಡಿದನೆಂದೂ ಆ ಕಾಲದಲ್ಲಿ ಗುಣಗಲ್ಲ ನಾಗವರ್ಮನು ಆ ಮಠದ ಅಧಿಪತಿಯಾಗಿದ್ದನೆಂದೂ ಆ ಗುಣಗಲ್ಲ ನಾಗವರ್ಮನೇ ಹರಿಹರಾದಿತ್ಯ ಯೋಗೇಶ್ವರ.. ....ರಯನ ದೇವಸ್ಥಾನಗಳನ್ನು ಕಟ್ಟಿಸಿದನೆಂದೂ ತಿಳಿಸುತ್ತದೆ.

ಸರ್ವೇಶ್ವರ ದೇವಸ್ಥಾನವು ೧೦೯೩ರಲ್ಲಿ ಸ್ಥಾಪಿಸಲ್ಪಟ್ಟಿತೆಂದೂ, ಒಂದು ಕಾಲದಲ್ಲಿ ಕಮಲಾಸನ ಪಂಡಿತನು ಆ ದೇವಸ್ಥಾನದ ಆಚಾರ್ಯನಾಗಿದ್ದನೆಂದೂ ಶಾಸನಗಳಿಂದ ಗೊತ್ತಾಗುತ್ತದೆ. ಈ ದೇವಸ್ಥಾನವು ಕಾಳಾಮುಖರಿಗೆ ಸೇರಿದ್ದಿತು.

೧೧೧೭ರಲ್ಲಿ ಕುಮಾರೇಶ್ವರ ದೇವಸ್ಥಾನವು ನಿರ್ಮಿತವಾಯಿತೆಂದೂ ಆ ದೇವಸ್ಥಾನವು, ಅದರ ಜೀರ್ಣೋದ್ಧಾರಣೆಗಾಗಿ, ಕೋಡಿಯ ಮಠದ ಗೌತಮನ ವಶಕ್ಕೆ ಕೊಡಲ್ಪಟ್ಟಿತೆಂದೂ ಒಂದು ಶಾಸನದಿಂದ ಗೊತ್ತಾಗುತ್ತದೆ. ೨ನೆಯ ಬಲ್ಲಾಳನ ಕೈಕೆಳಗೆ ಒಬ್ಬ ಅಧಿಕಾರಿಯಾಗಿದ್ದ ಪದ್ಮದೇವನು ೧೧೯೪ರಲ್ಲಿ ಅಗ್ನೀಶ್ವರ ದೇವಸ್ಥಾನಕ್ಕೆ ಒಂದು ದಾನವನ್ನು ಕೊಟ್ಟನೆಂದೂ ಆ ದೇವಸ್ಥಾನದ ಆಚಾರ್ಯರು ಕ್ರಮವಾಗಿ ಕುಮಾರಶಿವ, ವಾಮಶಿವ, ವೇದಶಿವರಾಗಿದ್ದರೆಂದೂ ಒಂದು ಶಾಸನದಿಂದ ಗೊತ್ತಾಗುತ್ತದೆ. ಈ ದೇವಸ್ಥಾನವೂ ಕಾಳಾಮುಖರಿಗೆ, ಅಥವಾ ಶೈವರಿಗೆ ಸೇರಿದ್ದಿತು.

ಮೇಲೆ ಹೇಳಿದುವಲ್ಲದೆ ಇನ್ನೂ ಅನೇಕ ದೇವಾಲಯಗಳ ಹೆಸರುಗಳೂ ಶಾಸನಗಳಲ್ಲಿ ದೊರೆಯುತ್ತವೆ:—ಚಂದೇಶ್ವರ, ಪಟ್ಟಣಸ್ಥಾನ (ಕಾಳಾಮುಖರ ಸಂಸ್ಥೆ; ಆಚಾರ್ಯ—ಜ್ಞಾನಶಿವ), ಗೌರೀಶ್ವರ, ಚತುರ್ಮುಖ, ಮಲ್ಲಿಕಾರ್ಜುನ, ರಾಮೇಶ್ವರ—ಈ ದೇವಸ್ಥಾನಗಳು. ವಾಲ್ಮೀಕಿ ರುದ್ರಾಭರಣರೆಂಬ ಕಾಳಾಮುಖರು ಇವಾವುದೋ ಒಂದು ದೇವಸ್ಥಾನದ ಆಚಾರ್ಯರಾಗಿದ್ದರೆಂದು ಒಂದು ಶಾಸನವು ತಿಳಿಸುತ್ತದೆ. ಹಿಂದೆಯೇ ಹೇಳಿದಂತೆ ಈ ದೇವಸ್ಥಾನಗಳಲ್ಲಿಯೂ

ಮಠಗಳಲ್ಲಿಯೂ ಕೆಲವು ವಿದ್ಯಾರ್ಥಿ ವರ್ಗಕ್ಕೆ ಶಿಕ್ಷಣ ಕೊಡಲು ತಕ್ಕ ಏರ್ಪಾಡನ್ನು ಮಾಡಿದ್ದಿರಬೇಕು. ಆದರೆ ಅವುಗಳ ಹೆಸರುಗಳು ಶಾಸನಗಳಲ್ಲಿ ಪ್ರಾಸಂಗಿಕವಾಗಿ ಬರುವುದರಿಂದ ಅವುಗಳ ವಿಷಯವಾಗಿ ಹೆಚ್ಚೇನೂ ಗೊತ್ತಾಗುವಂತಿಲ್ಲ.

ತ್ರಿಪುರಾಂತಕ ಪಂಚಲಿಂಗ ಮಠಗಳು ಐಶ್ವರ್ಯದಿಂದ ಕೂಡಿದ್ದುವೆಂದು ತೋರುತ್ತದೆ. ಆ ಶಾಸನಗಳಲ್ಲಿ ಹೇಳಿರುವ ದಾನವನ್ನು ಕೊಡತಕ್ಕ ಕಾಲದಲ್ಲಿ ಮೇಲೆ ಹೇಳಿದ ಮಠಗಳ ಹೆಗ್ಗಡೆಗಳಾದ ದೆಣ್ಣಮರಸ ನಾಯಿಮರಸರೂ, ನಾಯಿಮರಸನ ಪುತ್ರ ಪದ್ಮನಾದ ತಿಪ್ಪಣನೂ ಇದ್ದರೆಂದು ತಿಳಿಯುತ್ತದೆ. ಈ ಎರಡು ಮಠಗಳಿಗೆ ಮಾತ್ರವೇ ಜನರ ಗೌರವಕ್ಕೆ ಪಾತ್ರರಾದ ಹೆಗ್ಗಡೆಗಳಿದ್ದುದರಿಂದ ಇವೆರಡೂ ಮಿಕ್ಕ ಎಲ್ಲ ಮಠಗಳಿಗಿಂತಲೂ ಐಶ್ವರ್ಯಾನ್ವಿತವಾಗಿದ್ದುವೆಂದು ತೋರುತ್ತದೆ.

ಬೌದ್ಧ ಜೈನ ಸಂಸ್ಥೆಗಳು.—ಮೇಲೆ ಹೇಳಿರುವುದೆಲ್ಲವೂ ಬ್ರಾಹ್ಮಣ ಸಂಸ್ಥೆಗಳಿಗೆ ಸಂಬಂಧಪಟ್ಟುದೆಂದೂ ಜೈನ ಬೌದ್ಧ ಸಂಸ್ಥೆಗಳಿಗೆ ಸಂಬಂಧಿಸಿದುದಲ್ಲವೆಂದೂ ಹೇಳುವುದು ಅವಶ್ಯವಲ್ಲ. ವಿದ್ಯಾಪೀಠಗಳು, ಶಿಕ್ಷಣ ವಿಷಯಗಳು, ಶಿಕ್ಷಣಕ್ಕೆ ಆವಶ್ಯಕವಾದ ಕಾಲ, ಇತ್ಯಾದಿಗಳಲ್ಲಿ ಮೇಲೆ ಬರೆದಿರುವುದೆಲ್ಲವೂ ಬ್ರಾಹ್ಮಣ ಸಂಸ್ಥೆಗಳಿಗೆ ಮಾತ್ರವೇ ಸಂಬಂಧಿಸುತ್ತದೆ. ಆ ಸಂಸ್ಥೆಗಳಿಗೆ ಮೂರು ವರ್ಣದ ವಿದ್ಯಾರ್ಥಿಗಳು ಮಾತ್ರ ಹೋಗಬಹುದಾಗಿತ್ತು. ನಾಲ್ಕನೆಯ ವರ್ಣದವರು ವೇದವನ್ನಾಗಲೀ ವೇದಾಂಗಗಳನ್ನಾಗಲೀ ಓದಲು ಅನರ್ಹರಾಗಿದ್ದರು. ಆದರೆ ಶೂದ್ರರು ನೃತ್ಯವನ್ನಾಗಲೀ, ಚಿತ್ರ ಸಂಗೀತಾದಿ ಕುಶಲ ಕಲೆಗಳನ್ನಾಗಲೀ ಕಲಿಯಬಾರದೆಂಬ ಆಜ್ಞೆಯೇನೂ ಇರಲಿಲ್ಲ. ಯಾವ ವರ್ಣದ ವಿದ್ಯಾರ್ಥಿಗಳು ಮೇಲೆ ಹೇಳಿದ ಸಂಸ್ಥೆಗಳಿಗೆ ಹೋಗುತ್ತಿದ್ದರೆಂಬುದು ಗೊತ್ತಾಗಿಲ್ಲ. ಆದ ಕಾರಣ ಶೂದ್ರರಿಗೆ ಉಚ್ಚ ಶಿಕ್ಷಣದ ಲಾಭವಾಗುತ್ತಿದ್ದಿತೊ ಇಲ್ಲವೊ ನಿರ್ಧಾರವಾಗಿ ಹೇಳಲಾಗುವುದಿಲ್ಲ. ಪ್ರಾಥಮಿಕ ಶಿಕ್ಷಣ ವಿಷಯದಲ್ಲಿ ಯಾವ ತೊಂದರೆಯೂ ಇದ್ದಿರಲಾರದು. ಮೈಸೂರು ದೇಶದಲ್ಲಿ ಶೂದ್ರರು ಸಹಿಮಾಡಿರುವ ಅನೇಕ ಶಾಸನಗಳಿರುವುದರಿಂದ ಅವರಿಗೆ ಲೇಖನ ಜ್ಞಾನವಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಆದರೆ ಈ ಜ್ಞಾನವನ್ನು ಅವರು ಪಡೆದುದು ಬ್ರಾಹ್ಮಣ ಸಂಸ್ಥೆಗಳಲ್ಲಿಯೆ ಅಥವಾ, ಜೈನ ಸಂಸ್ಥೆಗಳಲ್ಲಿಯೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಸಾಧನವಾವುದೂ ಇಲ್ಲ.

ಬೆಳಗಾವೆಯ ಐದು ಮೂಲ ಮಠಗಳಲ್ಲಿ, ಒಂದು ಜಿನನಿಗೂ ಮತ್ತೊಂದು ಬುದ್ಧನಿಗೂ ಅರ್ಪಿತವಾಗಿತ್ತೆಂದು ಹಿಂದೆಯೇ ಹೇಳಿದ್ದೇವೆ. ಅವು ಯಾವುವು ಎಂಬುದು ನಮಗೆ ಗೊತ್ತಾಗಿಲ್ಲ; ಜೈನರು ಎಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು, ಅವರು ಅಭ್ಯಾಸ ಮಾಡುತ್ತಿದ್ದ ವಿಷಯಗಳಾವುವು ಎಂಬುದೂ ನಮಗೆ ಗೊತ್ತಿಲ್ಲ. ಈ ವಿಷಯಗಳಲ್ಲಿ ಯಾವುದನ್ನೂ ಶಾಸನಗಳು ತಿಳಿಸುವುದಿಲ್ಲ. ಬೌದ್ಧರ ವಿಷಯದಲ್ಲಿಯೂ ಹೀಗೆಯೇ. ಆದರೆ ಬೆಳಗಾವೆಯು ಒಂದು ವಿದ್ಯಾಪೀಠವಾ

ಗಿದ್ದುದರಿಂದಲೂ, ಅಲ್ಲಿ ಒಂದು ಜೈನ ಮತವೂ ಒಂದು ಬೌದ್ಧ ಮತವೂ ಇದ್ದುದರಿಂದಲೂ ಆ ಸಂಸ್ಥೆಗಳು ವಿದ್ಯಾರ್ಥಿಗಳಿಗೆ, ಮುಖ್ಯ ವಿಷಯಗಳನ್ನು ಹೇಳಿಕೊಡಲಿ ಹೇಳಿಕೊಡದಿರಲಿ, ತಮ್ಮ ಮತ ಧರ್ಮಗಳನ್ನಾದರೂ ಬೋಧಿಸುತ್ತಿದ್ದಿರಬೇಕೆಂದು ಊಹಿಸುವುದು ತಪ್ಪಾಗಲಾರದು.

ಜೈನ ಬೌದ್ಧ ಸಂಸ್ಥೆಗಳಿಗೂ ಬ್ರಾಹ್ಮಣ ಸಂಸ್ಥೆಗಳಿಗೂ ಇದ್ದ ಒಂದು ಮುಖ್ಯ ವ್ಯತ್ಯಾಸವೇನೆಂದರೆ, ಮೊದಲಿನವು ಚಾತುರ್ವರ್ಣ್ಯವನ್ನು ಒಪ್ಪಿರಲಿಲ್ಲ; ಆದಕಾರಣ ಈ ಸಂಸ್ಥೆಗಳು ತರ್ಕ, ವ್ಯಾಕರಣ, ತತ್ತ್ವಶಾಸ್ತ್ರ, ಲಲಿತ ಕಲೆಗಳು ಮೊದಲಾದುವನ್ನು ಪಾಠಹೇಳುವುದಕ್ಕೆ ಏರ್ಪಾಟುಮಾಡಿದ್ದ ಪಕ್ಷದಲ್ಲಿ, ಅವು ಬೆಳಗಾವೆಯ ಬಹು ಮಂದಿ ಶೂದ್ರ ವಿದ್ಯಾರ್ಥಿಗಳನ್ನು ಓದಿಸುತ್ತಿದ್ದುವು ಎಂದು ಹೇಳಬಹುದು. ಬೆಳಗಾವೆಯಲ್ಲಿ ೧೨ನೆಯ ಶತಮಾನದಲ್ಲಿ ಜೈನರ, ಅಥವಾ ಬೌದ್ಧರ ಸುದ್ದಿಯು ಹೆಚ್ಚು ಕೇಳಬರುವುದಿಲ್ಲ. ಆದರೆ ೧೧ನೆಯ ಶತಮಾನದಲ್ಲಿ ಅವರು ತಕ್ಕಮಟ್ಟಿಗೆ ಕಾರ್ಯನಿರತರಾಗಿದ್ದರೆಂದು ತೋರುತ್ತದೆ.

೧೦೬೮ನೆಯ ಇಸವಿಯ ಶಾಸನವೊಂದರಿಂದ ಚಾಳುಕ್ಯ ಚಕ್ರವರ್ತಿ ೨ನೆಯ ಸೋಮೇಶ್ವರ ಭುವನೈಕಮಲ್ಲನು ಮಲ್ಲಿಕಾಮೋದ ಶಾಂತಿನಾಥ ಜಿನಾಲಯಕ್ಕೆ ಕೆಲವು ಭೂಮಿಗಳನ್ನು ದಾನಮಾಡಿದಂತೆಯೂ ಗೋಳಸ್ಯೆಯ್ಯನ ಬಸದಿ, ನಂದನ ವನದ ಬಸದಿ—ಇವುಗಳಿಗೆ ಕೆಲವು ದಾನಗಳು ದೊರೆತುವೆಂದೂ ಗೊತ್ತಾಗುತ್ತದೆ. ಮತ್ತೊಂದು ಶಾಸನವು ಚಾಳುಕ್ಯ ಚಕ್ರವರ್ತಿ ೬ನೆಯ ವಿಕ್ರಮಾದಿತ್ಯ ತ್ರಿಭುವನ ಮಲ್ಲನು ೧೦೭೭ರಲ್ಲಿ ಒಂದು ಗ್ರಾಮವನ್ನೂ ಚಾಳುಕ್ಯ ಗಂಗ ಪೆರ್ಮಾನಡಿ ಜಿನಾಲಯಕ್ಕೆ ಒಂದು ಗ್ರಾಮವನ್ನೂ ದಾನಮಾಡಿದನೆಂದು ತಿಳಿಸುತ್ತದೆ.

ಇನ್ನು, ಬೌದ್ಧ ಸಂಸ್ಥೆಗಳ ವಿಚಾರಮಾಡೋಣ. ೧೦೬೭ನೆಯ ಇಸವಿಯ ಶಾಸನವೊಂದು, ಸಾವಾಸಿ ನಾಗಿಯಕ್ಕನು ತಾರಾಭಗವತೀ ದೇವಿಯ ವಿಗ್ರಹವನ್ನು ಮಾಡಿಸಿದಳೆಂದು ಹೇಳುವುದಲ್ಲದೆ……ಪ್ರಭಾ ಬೌದ್ಧ ಭಾಲರಸ ಹೆಸರನ್ನು ತಿಳಿಸುತ್ತದೆ. ೧೦೬೫ನೆಯ ಇಸವಿಯ ಒಂದು ಶಾಸನವು ದಂಡನಾಯಕ ರೂಪಭಟ್ಟಯ್ಯನು ಜಯಂತಿ ಪ್ರ ಬೌದ್ಧ ವಿಹಾರ ಎಂಬ ವಿಹಾರವನ್ನು ಕಟ್ಟಿಸಿದನೆಂದೂ ತಾರಾಭಗವತಿ, ಬೌದ್ಧದೇವ, ಲೋಕೇಶ್ವರದೇವ ದೇವಸ್ಥಾನಗಳಿಗೆ ಕೆಲವು ದಾನಗಳನ್ನು ಕೊಟ್ಟನೆಂದೂ ತಿಳಿಸುತ್ತದೆ.

ಮೇಲೆ ಹೇಳಿರುವುದನ್ನೆಲ್ಲ ಪರಿಶೀಲಿಸಿದರೆ ೧೧–೧೨ನೆಯ ಶತಮಾನಗಳಲ್ಲಿ ಬೆಳಗಾವೆಯು ಅನೇಕ ವಿದ್ಯಾಸಂಸ್ಥೆಗಳು, ಎಂದರೆ ಮಠಗಳು, ದೇವಸ್ಥಾನಗಳು, ಬ್ರಹ್ಮಪುರಿಗಳು—ಇವಕ್ಕೆ ಮುಖ್ಯಸ್ಥಾನವಾಗಿತ್ತೆಂದೂ, ಆ ಸಂಸ್ಥೆಗಳಲ್ಲಿ ಎಲ್ಲ ಮತದ, ಎಂದರೆ ಬ್ರಾಹ್ಮಣ, ಜೈನ, ಬೌದ್ಧ ಮತಗಳ ವಿದ್ಯಾರ್ಥಿಗಳಿಗೂ ಎಲ್ಲ ಶಾಸ್ತ್ರಗಳಲ್ಲಿಯೂ ಶಿಕ್ಷಣವು ದೊರೆಯುತ್ತಿದ್ದಿತೆಂದೂ ಗೊತ್ತಾಗುತ್ತದೆ. ಈ ರೀತಿಯಾಗಿ ಆ ಪಟ್ಟಣವು ವಿದ್ಯೆಯ ಮುಖ್ಯಸ್ಥಾನವೆಂದು ತನಗೆ ನ್ಯಾಯವಾಗಿ ಸಲ್ಲತಕ್ಕ ಮಹಾಖ್ಯಾತಿಯನ್ನು ಪಡೆದಿದ್ದಿತು. ಆ ಕಾಲದ ರಾಜಕುಮಾರರೂ ಮಹಾ ಮಂಡಲೇಶ್ವರ ಮಹಾ ಸಾಮಂತಾಧಿಪತಿಗಳ ಮಕ್ಕಳೂ

ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರೆಂದು ಊಹಿಸಬಹುದು. ಈ ವಿಷಯವು ಒಂದು ಶಾಸನದಲ್ಲಿ ಉಕ್ತವಾಗಿದೆ. ಅದರಲ್ಲಿ ಹೇಳಿರುವುದೇನೆಂದರೆ, ಮಹಾ ಮಂಡಲೇಶ್ವರರಾದ ತ್ರೈಲಪದೇವ ಯುವರಸರು ಬಳ್ಳಿಗಾವೆಗೆ ಬಂದು ಕೋಡಿಯ ಮಠಕ್ಕೆ ಹೋಗಿ ಇದು ನಮ್ಮ ವಂಶಪಾರಂಪರ್ಯವಾದ ಗುರುಕುಲ, ನಾವು ಇದಕ್ಕೆ ಕೆಲವು ದಾನಗಳನ್ನು ಮಾಡಬೇಕು ಎಂದು ಒಂದು ಗ್ರಾಮವನ್ನು ಅದಕ್ಕೆ ದಾನಮಾಡಿದರು. ಈ ಎಲ್ಲ ಕಾರಣಗಳಿಂದಲೂ, ಎಂದರೆ ಅಲ್ಲಿದ್ದ ಅನೇಕ ಬ್ರಾಹ್ಮಣ, ಬೌದ್ಧ, ಜೈನ ವಿದ್ಯಾ ಸಂಸ್ಥೆಗಳಿಂದಲೂ, ಆ ಸಂಸ್ಥೆಗಳ ಆಚಾರ್ಯರ, ಅಥವಾ ಅಧಿಪತಿಗಳ ಅದ್ಭುತವಾದ ಪಾಂಡಿತ್ಯದಿಂದಲೂ, ಅನೇಕ ಶ್ರೀಮಂತರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಕಳುಹಿಸುತ್ತಿದ್ದುದರಿಂದಲೂ, ಬೆಳಗಾವೆಯ ಪ್ರಖ್ಯಾತಿಯು ಅತ್ಯಧಿಕವಾಯಿತು. ಆ ಪಟ್ಟಣದ ಮಹತ್ತ್ವವನ್ನು ಒಪ್ಪಿಕೊಂಡು ಅನೇಕ ಚಕ್ರವರ್ತಿಗಳೂ ಅವರ ಕೈ ಕೆಳಗಿನ ಅಧಿಕಾರಿಗಳೂ ಅಲ್ಲಿನ ಸಂಸ್ಥೆಗಳಿಗೆ ಬೇಕಾದ ಹಾಗೆ ಆಶ್ರಯವನ್ನು ಕೊಟ್ಟರು.

ಬೆಳಗಾವೆಯ ಅನೇಕ ಸಂಸ್ಥೆಗಳ ಇತಿಹಾಸವನ್ನು ಪರಿಶೀಲಿಸುವಾಗ, ಇಂತಹ ಆಶ್ರಯದಾತರಲ್ಲಿ ಅನೇಕರ ಹೆಸರನ್ನು ನಾವು ತಿಳಿದುಕೊಂಡಿರುತ್ತೇವೆ. ಚಾಳುಕ್ಯ ಚಕ್ರವರ್ತಿಗಳಾದ ಜಯಸಿಂಹ ಜಗದೇಕಮಲ್ಲ, ೨ನೆಯ ಸೋಮೇಶ್ವರ ಭುವನೈಕಮಲ್ಲ, ೬ನೆಯ ವಿಕ್ರಮಾದಿತ್ಯ ತ್ರಿಭುವನಮಲ್ಲ, ೩ನೆಯ ಸೋಮೇಶ್ವರ ಭುವನೈಕಮಲ್ಲ—ಇವರೂ, ಕಾಳಚೂರ್ಯ ರಾಜರಾದ ಬಿಜ್ಜಣ, ರಾಯಮುರಾರಿ ಸೋವಿದೇವ, ಸಂಕಮ—ಇವರೂ, ಹೊಯಿಸಳ ರಾಜನಾದ ೨ನೆಯ ಬಲ್ಲಾಳನೂ, ಮಹಾ ಮಂಡಲೇಶ್ವರರಾದ ಯುವರಸ, ತ್ರೈಲಪದೇವ, ತ್ರೈಲಪ, ಜಗದೇವರಸ, ಸೋಮದೇವ, ಚಾವುಂಡರಾಯ, ಕುಂದಮರಸ, ಲಕ್ಷ್ಮರಸ—ಇವರೂ, ಮಹಾ ಸಾಮಂತಾಧಿಪತಿಗಳಾದ ಬಿಕ್ಕಮರಸ, ಧರ್ಮದೇವ—ಇವರೂ, ಇನ್ನೂ ಎಷ್ಟೋ ಜನ ಚಿಕ್ಕ ಚಿಕ್ಕ ಅಧಿಕಾರಿಗಳೂ, ಎಂದರೆ ವಡ್ಡರಾವುಳ, ಪಣ್ಣಾಯ, ಸುಂಕ—ಇವುಗಳ ಅಧಿಕಾರಿಗಳೂ, ಬನವಾಸಿ ೧೨ ಸಾವಿರದ ಅಧಿಕಾರಿಗಳೂ, ಇತರ ದಂಡನಾಯಕರೂ ಬೆಳಗಾವೆಯ ಒಂದು, ಅಥವಾ ಹೆಚ್ಚು ಸಂಸ್ಥೆಗಳ ಆಶ್ರಯದಾತರಾಗಿದ್ದರು. ಈ ಮಹಾ ಮಂಡಲೇಶ್ವರ, ಮಹಾ ಸಾಮಂತಾಧಿಪತಿ, ದಂಡನಾಯಕ — ಇವರಲ್ಲಿ ಕೆಲವರು ಚಾಳುಕ್ಯ ಚಕ್ರವರ್ತಿಗಳಿಗೂ ಮತ್ತೆ ಕೆಲವರು ಕಾಲಚೂರ್ಯರಿಗೂ ಇನ್ನು ಕೆಲವರು ಹೊಯ್ಸಳರಿಗೂ ಅಧೀನರಾಗಿದ್ದರು.

ಈ ಆಶ್ರಯದಾತರ ಹೆಸರುಗಳಿಂದಲೇ ಬನವಾಸೆ ಹನ್ನೆರಡು ಸಾವಿರವು ಮೊದಲು ಚಾಳುಕ್ಯರು, ಆಮೇಲೆ ಕಾಲಚೂರ್ಯರು, ಆಮೇಲೆ ಹೊಯ್ಸಳರು —ಇವರ ಅಧಿಪತ್ಯಕ್ಕೊಳಪಟ್ಟಿತ್ತೆಂದು ಗೊತ್ತಾಗುತ್ತದೆ. ಹೀಗೆ ರಾಜ್ಯವು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಹೋಗುವಾಗ ಯುದ್ಧಗಳು, ಕದನಗಳು, ಹೊಡೆದಾಟಗಳು, ಗೋಗ್ರಹಣಗಳು ಮೊದಲಾದುವು ಆಗದೆ

ಇರಲಾರವು. ಬನವಾಸೆ ಪ್ರಾಂತದ ರಾಜಧಾನಿಯಾದ ಬೆಳಗಾವೆಯು ಅಂತಹ ಕಾಲಗಳಲ್ಲಿ ನಾನಾ ವಿಧದ ಉಪಹತಿಗೂ ಸಿಕ್ಕದೆ ತನ್ನ ವಿದ್ಯಾಭ್ಯಾಸ, ಧಾರ್ಮಿಕ ಜೀವನ—ಇವನ್ನು ಶಾಂತ ಸ್ಥಿತಿಯಲ್ಲಿ ನಡೆಯಿಸಿಕೊಂಡು ಹೋಗುವುದು ಅಸಾಧ್ಯವಾದುದು. ಆಗಿನ ಕಾಲದ ಕೆಲವು ಶಾಸನಗಳಿಂದ ಆ ಕಾಲದ ಅವ್ಯವಸ್ಥೆಯು ಸ್ವಲ್ಪ ಮಟ್ಟಿಗೆ ಕಂಡುಬರುತ್ತದೆ. ೧೧೧೦ನೆಯ ಇಸವಿಯ ಒಂದು ಶಾಸನವು ಬೆಳಗಾವೆಯ ದನಕರುಗಳನ್ನು ಶತ್ರುಗಳು ಹಿಡಿಕೊಂಡು ಹೋಗುತ್ತಿದ್ದಾಗ ರೇವಯ್ಯನಾಯಕನು ಗೋವುಗಳನ್ನು ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಶತ್ರುಗಳೊಡನೆ ಹೋರಾಡಿ ಸತ್ತನೆಂದು ತಿಳಿಸುತ್ತದೆ. ಮತ್ತೊಂದು ಸಲ ೧೧೫೮ರಲ್ಲಿ ಗೋಗ್ರಹಣವಾದಾಗ ಮಾಸಿದ್ಯಯ್ಯನ ಮಗನಾದ ಕೇತಣನು ಶತ್ರುಗಳೊಡನೆ ಹೋರಾಡಿ ಗೋವುಗಳನ್ನು ಕಾಪಾಡಿ ಸತ್ತುಹೋದನು. ಮತ್ತೊಂದು ಸಲ ದಂಡನಾಯಕ ಬಿರಿಯಣನು ಸಿಂಗಿದೇವನೊಡನೆ ಯುದ್ಧಮಾಡಿದಾಗ ತ್ರಿಪುರಾಂತಕ ದೇವಸ್ಥಾನದ ಕಾವಲುಗಾರನಾದ ತಿಪ್ಪಬೋವನು ಯುದ್ಧಮಾಡಿ ಸತ್ತನು. ಆ ಯುದ್ಧದಲ್ಲಿ ಬಹುಶಃ ತ್ರಿಪುರಾಂತಕ ದೇವಸ್ಥಾನದ ಮೇಲೆ ಶತ್ರುಗಳು ಬಿದ್ದಿದ್ದರೆಂದು ನಾವು ಊಹಿಸಬೇಕಾಗುತ್ತದೆ. ಮತ್ತೊಂದು ಸಲ ದಕ್ಷಿಣ ಕೇದಾರೇಶ್ವರ ಸ್ವಾಮಿಯ ಅರ್ಚಕನಾದ ವಾಮಶಕ್ತಿಯು (ಕೇದಾರೇಶ್ವರ ಮಠದ ಪ್ರಖ್ಯಾತ ಆಚಾರ್ಯ; ರಾಜಗುರು ವಾಮಶಕ್ತಿಯೇ ಈತನಿರಬಹುದು) ದಂಡನಾಯಕ ಮಲ್ಲರಸನ ಆಜ್ಞೆಯ ಪ್ರಕಾರ ಸೆರೆಹಿಡಿಯಲ್ಪಟ್ಟಾಗ ಬಾಚೆಯನಾಯಕನು ಗುರುವಿಗಾಗಿ ಹೊಡೆದಾಡಿ ಸತ್ತುಹೋದನು.

ಈ ವಿಷಯವಾಗಿ ಕುಪ್ಪಟೂರು ಅಗ್ರಹಾರದ ಶಾಸನಗಳು ಇನ್ನೂ ಕುತೂಹಲ ಜನಕವಾದ ಅಂಶಗಳನ್ನು ತಿಳಿಸುತ್ತವೆ. ಆದುದರಿಂದ, ಅವುಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಲಾಗಿದೆ. ೧೧೪೧ನೆಯ ಶಾಸನವೊಂದರಿಂದ ಕುಪ್ಪಟೂರು ಅಗ್ರಹಾರಕ್ಕೂ ಅದರ ನೆರೆಯಲ್ಲಿರುವ ನೇರಿಳಿಗೆಗೂ ಅವುಗಳ ಮೇರೆಗಳ ವಿಷಯದಲ್ಲಿ ವ್ಯಾಜ್ಯವುಂಟಾಗಿ ಕದನವಾಯಿತೆಂದೂ ಆ ಕದನದಲ್ಲಿ ಅನೇಕರು ಸತ್ತರೆಂದೂ, ಮತ್ತೊಂದು ಶಾಸನದಿಂದ ೧೧೪೭ರಲ್ಲಿ ಮತ್ತೊಮ್ಮೆ ಅವೆರಡು ಗ್ರಾಮಗಳಿಗೂ ಕದನವಾಯಿತೆಂದೂ ತಿಳಿದುಬರುತ್ತದೆ. ೧೧೫೯ರಲ್ಲಿ ಮಹಾಮಂಡಲೇಶ್ವರ ಬೊಪ್ಪದೇವನ ಸೈನ್ಯಕ್ಕೂ ಬೊಮ್ಮರಸನ ಸೈನ್ಯಕ್ಕೂ ಕುಪ್ಪಟೂರು ಸ್ಥಾನದಲ್ಲಿ ಯುದ್ಧವಾಗಲು, ಕುಪ್ಪಟೂರು ಅಗ್ರಹಾರದ ಬೆಸಮಗನಾದ ಕೇಶಿಗನು ಯುದ್ಧದಲ್ಲಿ ಸತ್ತನು. ೧೨೦೮ರಲ್ಲಿ ಜಗದೇವ ಸಾಹಣಿಯು ಅನ್ಯಾಯಮಾರ್ಗದಿಂದ ಬಲ್ಲಹದೇವಣನಾಯಕನು ಕುಪ್ಪಟೂರು ಅಗ್ರಹಾರದ ಬ್ರಾಹ್ಮಣರನ್ನು ಸೆರೆಹಿಡಿದನು. ಆಗ ಕುಪ್ಪಟೂರು ಅಗ್ರಹಾರದ ಬೆಸಮಗನಾದ ದೋಸಮನು ಬ್ರಾಹ್ಮಣರನ್ನು ಬಿಡಿಸಿ, ಆ ಕದನದಲ್ಲಿ ತನಗಾದ ಗಾಯಗಳಿಂದ ಸತ್ತುಹೋದನು. ೧೨೭೭ನೆಯ ಇಸವಿಯ ಒಂದು ಶಾಸನವು ಕುಪ್ಪಟೂರಿನ ಬ್ರಾಹ್ಮಣರು ತಮ್ಮ ಗ್ರಾಮವನ್ನು ಮುತ್ತಿ ತೊಂದರೆ ಕೊಡುತ್ತಿದ್ದ ದಂಡನಾಯಕ ಗೋವಿಂದರಾಯನನ್ನೂ ಅವನ ಸೈನಿಕರನ್ನೂ ಹಿಡಿದು ಸೆರೆಯಲ್ಲಿ ಹಾಕಿದ

ರೆಂದೂ ಅದಕ್ಕೆ ಪ್ರತೀಕಾರವಾಗಿ ಗೌಡಸ್ವಾಮಿಯು ತನಗೆ ಸೆರೆ ತಪ್ಪಿದಮೇಲೆ ಉಜ್ಜಂಗಿಯ ಮಹದೇವನ ಸೈನ್ಯವನ್ನು ಕರೆಯಿಸಿಕೊಂಡು ಅಗ್ರಹಾರವನ್ನು ಮುತ್ತಿದನೆಂದೂ, ಆಮೇಲೆ ದಂಡೆತ್ತಿಬಂದವರು ಆ ಗ್ರಾಮವನ್ನು ಮುತ್ತಿ ಅದರೊಳಕ್ಕೆ ನುಗ್ಗಿ ಅದನ್ನು ಕೊಳ್ಳೆಹೊಡೆದು ಆ ಗ್ರಾಮದ ಹೆಂಗಸರನ್ನು ಸೆರೆಹಿಡಿದರೆಂದೂ, ಅನಂತರ ಕೇತಯನಾಯಕನು ಶತ್ರುಗಳ ಮೇಲೆಬಿದ್ದು ಅನೇಕರನ್ನು ಕೊಂದು ಹೆಂಗಸರನ್ನೂ ದನಕರುಗಳನ್ನೂ ಶತ್ರುಗಳ ಕೈಯಿಂದ ಬಿಡಿಸಿ ಆ ಯುದ್ಧದಲ್ಲಿ ಆದ ಗಾಯಗಳಿಂದ ಸತ್ತನೆಂದೂ ತಿಳಿಸುತ್ತದೆ. ೧೨೩೦ರಲ್ಲಿ ಗುತ್ತಿಯ ಸೋವಿದೇವನು ಕುಪ್ಪಟೂರಿನ ದನಕರುಗಳನ್ನು ಹಿಡಿದುಕೊಂಡನೆಂದೂ ಆ ಅಗ್ರಹಾರದ ಜನಮಕ್ಕಳಾದ ಮಾರ ಕಾಮರೆಂಬುವರು ಅವುಗಳನ್ನು ಉಳಿಸಿಕೊಂಡರೆಂದೂ ಮತ್ತೊಂದು ಶಾಸನದಿಂದ ಗೊತ್ತಾಗುತ್ತದೆ.

ಒಂದು ಕಾಲದಲ್ಲಿ ದೊಡ್ಡ ಹುಲಿಯೊಂದು ಕುಪ್ಪಟೂರಿನ ಹತ್ತಿರವಿದ್ದ ಒಂದು ಅಡವಿಯಲ್ಲಿ ಸೇರಿಕೊಳ್ಳಲು, ಕೋರಣ ಹರಿಹನ ಮಗನು ಅದನ್ನು ಬೇಟೆಯಾಡಿ ಕಷ್ಟಪಟ್ಟು ಕೊಂದನು. ೧೧೮೩ರಲ್ಲಿ ಪೋಡಳಿಯನನ್ನು ಒಂದು ಹಂದಿಯು ಕೊಂದಿತು. ಒಂದು ಸಲ ರಾಜಗುರು ವಾಮಶಕ್ತಿಯ ಶಿಷ್ಯರು ಪ್ರಯಾಣ ಮಾಡುತ್ತಿದ್ದಾಗ ಕಳ್ಳರು ಅವರ ಮೇಲೆ ಬೀಳಲು, ಆ ಎರಡು ಪಕ್ಷದವರಿಗೂ ಹೊಡೆದಾಟವಾಗಿ ಎರಡು ಕಡೆಯಲ್ಲಿಯೂ ಕೆಲವು ಜನರು ಸತ್ತುಹೋದರು.

ಇದನ್ನೆಲ್ಲ ನೋಡಿದರೆ, ಆ ಕಾಲದಲ್ಲಿ ಜನರ ಜೀವವೂ ಆಸ್ತಿಯೂ ಎಷ್ಟು ಅಪಾಯಕ್ಕೆ ಒಳಗಾಗಿದ್ದುವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಗ್ರಹಾರಗಳೂ ಮಠಗಳೂ ಕೂಡ ಈ ಅಪಾಯಕ್ಕೆ ಒಳಗಾಗದೆ ಇರುತ್ತಿರಲಿಲ್ಲ; ಅನೇಕ ವೇಳೆ ರಾಜ್ಯಾಧಿಕಾರಿಗಳ ಆಗ್ರಹಕ್ಕೆ ಪಾತ್ರವಾಗುತ್ತಿದ್ದುವು.

ಬೆಳಗಾವೆಯ ಶಾಸನಗಳಲ್ಲಿ ವಿದ್ಯಾಸಂಸ್ಥೆಗಳ ವಿಷಯಕವಾದ ಪ್ರಸ್ತಾವ ಕೊನೆಯ ಸಲ ಬರುವುದು ಕೋಡಿಯಮಠ ಮತ್ತು ಅದರ ಗುರು ೩ನೆಯ ವಾಮಶಕ್ತಿಯ ವಿಷಯವಾಗಿ. ಈ ಶಾಸನವು ೧೨೧೧ನೆಯ ಇಸವಿಯದು. ಅಲ್ಲಿಂದ ಈಚೆಯ ಶಾಸನಗಳಲ್ಲಿ ವಿದ್ಯಾಸಂಸ್ಥೆಗಳ ಸುದ್ದಿಯು ಕಂಡುಬರುವುದಿಲ್ಲ. ಆ ಶಾಸನಗಳೆಲ್ಲವೂ ಸಾಮಾನ್ಯವಾಗಿ ಯುದ್ಧದಲ್ಲಿ ಮಡಿದ ವೀರರ ಜ್ಞಾಪಕಾರ್ಥವಾಗಿ ನಟ್ಟ ವೀರಕಲ್ಲುಗಳು. ಆದರೂ ಆ ವಿದ್ಯಾಸಂಸ್ಥೆಗಳೆಲ್ಲವೂ ಆ ಕಾಲಕ್ಕೆ ಎಂದರೆ, ೧೨೫೦ರ ಸುಮಾರಿಗೆ ನಿರ್ನಾಮವಾಗಿರಲಾರವು. ಬಹುಶಃ ಬೆಳಗಾವೆಯು ಇತರ ಅನೇಕ ಮುಖ್ಯ ಪಟ್ಟಣಗಳಂತೆ ೧೩ನೆಯ ಶತಮಾನದ ಅಂತ್ಯಭಾಗದಲ್ಲಿ ಮಹಮ್ಮದೀಯರ ಕೊಳ್ಳೆಗೆ ಈಡಾಗಿರಬಹುದು. ಘಟ್ಟಗಳ ತಪ್ಪಲುಗಳಲ್ಲಿ ವಾಸಮಾಡುತ್ತಿದ್ದ ಕಾಡುಜನರು ಆ ಪಟ್ಟಣದ ಮೇಲೆ ಬಿದ್ದು ಅದರ ಹೀನಸ್ಥಿತಿಗೆ ಕಾರಣರಾಗಿದ್ದಿರಬಹುದು. ೧೩ನೆಯ ಶತಮಾನವು ಮುಗಿಯುವ ಹೊತ್ತಿಗೆ ಬೆಳಗಾವೆಯು ತನ್ನ ವೈಭವವನ್ನೆಲ್ಲ ಕಳೆದುಕೊಂಡು. ಕುಗ್ರಾಮವಾಗಿ ಹೋಯಿತು.

ಗ್ರಂಥ ಪರಿಚಯ

೪. *ಭಾವ ಚಿಂತಾರತ್ನಂ

ಗ್ರಂಥ ವಿಚಾರ.—ಇದು ವಾರ್ಧಕ ಷಟ್ಪದಿಯಲ್ಲಿ ಬರೆದ ಕನ್ನಡ ಕವಿತೆ. ಇದರಲ್ಲಿ ಐಂಬತ್ತು ಸಂಧಿಗಳೂ, ಒಟ್ಟು ೩೨೪ ಪದ್ಯಗಳೂ ಇವೆ.

ಇದು 'ಕರ್ಣಾಟಕ ಕಾವ್ಯಕಲಾನಿಧಿ'ಯ ಎರಡನೆಯ ಗ್ರಂಥ; ಮ|| ಎಸ್. ಜಿ. ನರಸಿಂಹಾಚಾರ್ಯರೂ, ಮ|| ಎಂ. ಎ. ರಾಮಾನುಜಯ್ಯಂಗಾರ್ಯರೂ ೧೯೦೦ನೆಯ ಇಸವಿಯಲ್ಲಿ ಪರಿಷ್ಕರಿಸಿ ಮುದ್ರಿಸಿದುದು. ಇದಕ್ಕೆ ಉಪೋದ್ಘಾತವನ್ನಾಗಲಿ ಟೀಕೆಯನ್ನಾಗಲಿ ಕೊಟ್ಟಿಲ್ಲ. ಈ ಗ್ರಂಥಕ್ಕೆ 'ಸತ್ಯೇಂದ್ರ ಚೋಳ ಕಥೆ' ಎಂಬ ಹೆಸರೂ ಉಂಟು. 'ಭಾವಚಿಂತಾರತ್ನ' ಎಂಬ ಹೆಸರನ್ನು ಈ ಗ್ರಂಥಕ್ಕೆ ಕೊಡಲು ಕಾರಣವನ್ನು ಕವಿಯು ಹೀಗೆ ಹೇಳುತ್ತಾನೆ:—

ಕೃತಿಯ ಪಲ್ಲವಿ ತೊಡಗಿ ಪೂರ್ಣಮಪ್ಪನ್ನವೀ|
ಕೃತಿಯೊಳುತ್ಪ್ರೇಕ್ಷೆ ಯಿಲ್ಲದುದೊಂದು ಪದವಿಲ್ಲ|
ಕೃತಿಗದು ನಿಮಿತ್ತದಿಂ ಭಾವಚಿಂತಾರತ್ನವೆಂಬ ಪೆಸರೀ ಕಾವ್ಯಕೆ|| (೧–೧೭)

ಪ್ರಣವ ಪಂಚಾಕ್ಷರಿಯ ಮಹಿಮೆಯನ್ನು ಕುಲಚ್ಛುರಿಯನಿಗೆ ತಿಳಿಸುವದಕ್ಕಾಗಿ ತಿರುಜ್ಞಾನಿ ಸಂಬಂಧೀಶನು ಸತ್ಯೇಂದ್ರಚೋಳ ಭೂಪನ ಕಥೆಯನ್ನು ತಮಿಳಿನಲ್ಲಿ ಹೇಳಿದುದನ್ನು ಮಲ್ಲಣಾರ್ಯನು ಶಿವಪೂಜೆಯಾರ್ಯನ ಆಜ್ಞೆಯಂತೆ ಕನ್ನಡದಲ್ಲಿ ಹೇಳಿರುವೆನೆಂದೂ (೧–೨೧), ತನ್ನ ಮೋಹದ ಭಕ್ತನಾದ ಚಾರುಮಾಂಕನ ಅಪೇಕ್ಷೆಯಂತೆ ಅತನಿಗೆ ಹೇಳಿದೆನೆಂದೂ (೧–೧೬) ತಿಳಿಸಿರುವನು.

ಕವಿಯ ವಿಚಾರ.—ಈತನ ಹೆಸರು ''ಗುಬ್ಬಿಯ ಮಲ್ಲಣಾರ್ಯ.'' ಈತನು ವೀರಶೈವ ಕವಿ; ಈತನ ಸ್ಥಳ ಮೈಸೂರು ದೇಶದ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಗುಬ್ಬಿ. ತನ್ನ ವಂಶಪರಂಪರೆಯನ್ನು ಕವಿಯು ಈ ಗ್ರಂಥದಲ್ಲಿ ಹೀಗೆಂದು ಹೇಳಿಕೊಳ್ಳುತ್ತಾನೆ:—

ಕರುಣಾಳುವಮರಗುಂಡದ ಮಲ್ಲಿಕಾರ್ಜುನಾ|
ರ್ಯರ ನಿರೂಪದಿ ನಿಶಿತ ಶೂಲವೇರಿದ ಮಹಾ|
ಗುರುಭಕ್ತನನ್ವಯಾಂಬುರುಹ ದಿನನಾಥ ಗುಬ್ಬಿಯ ಮಲ್ಲಣಾಚಾರ್ಯ |

* ಇದರ ಬೆಲೆ [illegible] ಆಣೆ. ಕಾವ್ಯ ಕಲಾನಿಧಿಯ ಮಾಲೀಕರಾದ ಮೈಸೂರಿನ [illegible] ರಾಮಾನುಜಯ್ಯಂಗಾರ್ಯರವರಲ್ಲಿ ಪ್ರತಿಗಳು ದೊರೆಯಬಹುದು.

ತರುಣ ಗುರುಭಕ್ತಾಖ್ಯ ಗರ್ಭಾಬ್ಧಿ ಚಂದ್ರಮಂ!
ವರ ಬಸವಪೌರಾಣದುರು ಮಲ್ಲಣಾರ್ಯನಘ|
ವರ ಪದ್ಮನುಜ್ಞೆಯಿಂ ಗುರು ಚರಣ ಸರಸಿಜಂ ಹೃದಬ್ಜದೊಳಿರೆ ಮನವೊಲಿಯುತ (೧—೧೫)

ಈತನು ''ಕರ್ಣಾಟ ಸಂಸ್ಕೃತಶೋಧಯು'' ಭಾಷಾ ಕವಿಯೆಂದೂ ಬಸವ ಪುರಾಣದ ಅರ್ಥವನ್ನು ಹೇಳುವುದರಲ್ಲಿ ಪ್ರೌಢನೆಂದೂ ತಿಳಿಯುತ್ತದೆ. ಇವನಿಗೆ ಬಸವ ಪೌರಾಣಿಕ ಮಲ್ಲಣಾರ್ಯ ಎಂಬ ಹೆಸರೂ ಉಂಟು. ಚೇರಮನು (೧೫೨೬) ತನ್ನ 'ಚೇರಮ ಕಾವ್ಯ'ದಲ್ಲಿ, ''ವೇದಾಂತ ಸಿದ್ಧಾಂತ ಲಕ್ಷಣ ವೈದ್ಯ ಭರತ ಸಾಮುದ್ರಿಕ ಜ್ಯೋತಿಷಾಲಂಕಾರ ಸರಸಗೀತಂ ವಾದ್ಯ ಶಕುನ ಸದ್ವ್ಯಾಕರಣ ಸೂಪ ರತಿಶಾಸ್ತ್ರ ಪರಿಣತಂ'' ಎಂದು ಇವನನ್ನು ಹೊಗಳಿರುವುದರಿಂದ ಇವನು ಈ ಇತರ ಶಾಸ್ತ್ರಗಳಲ್ಲಿಯೂ ಪಂಡಿತನಾಗಿದ್ದಂತೆ ತೋರುತ್ತದೆ. *

ಈ ಗ್ರಂಥವನ್ನು ಕವಿಯು ಶಕ ೧೪೩೫ ನೆಯ ಶ್ರೀಮುಖ ಸಂವತ್ಸರದಲ್ಲಿ, ಎಂದರೆ ೧೫೧೩ನೆಯ ಇಸವಿಯಲ್ಲಿ ಬರೆದಂತೆ ಮುಂದಿನ ಪದ್ಯದಲ್ಲಿ ಹೇಳುತ್ತಾನೆ:—

ಬಾಣ ಗುಣ ವಾರ್ಧಿ ವಿಧು ಸಂದ ಶಕ ವರ್ಷದಿಂ|
ಮೇಣಮಲವತ್ಸರಂ ಶ್ರೀಮುಖಂ ಕಾರ್ತಿಕ ಧು|
ರೀಣವಹ ಶುದ್ಧ ಸಪ್ತಮಿ ಶುಕ್ರವಾರದಾ ಶ್ರವಣ ನಕ್ಷತ್ರದೊಳ್
ಜಾಣನಾ ನಾಗಲಿಂಗಾಹ್ವಯ ಸುತಂ ಶಿವ|
ಪ್ರಾಣ ಲಿಂಗಪ್ಪನಾತ್ಮಜ ಚೇರಮಾಂಕ ಗ|
ಕ್ಷೋಣಿಪನೆ ಮಲ್ಲಣಾರ್ಯಂ ನಿರೂಪಿಸಿದನೀ ಭಾವಚಿಂತಾರತ್ನಮಂ॥ (೯—೬೦)

ಪೂರ್ವ ಕವಿಗಳನ್ನು ಈ ಪದ್ಯಗಳಲ್ಲಿ ಸ್ಮರಿಸಿದ್ದಾನೆ:—

ಕಾಮಿತಾರ್ಥಾಮೃತ ರಸಾದಿ ಲಕ್ಷಣ ಸೌಮ್ಯ|
ರಾಮಣೀಯಕ ಪದಾಲಂಕಾರಗಳ್ಗೆ ನಿಜ|
ಸೀಮೆಯೆನಿಸುವ ಸ್ವೈಪನೀ ಕೃತಿಗೆ ಕುಡುವ ಚಿಂತಾರತ್ನವೆನಿಪ ಪುಣ್ಯ॥
ನಾಮನಂ ಸದ್ಗುಣ ಸ್ತೋಮನಂ ಬುಧ ಸಾರ್ವ|
ಭೌಮನಂ ಸಜ್ಜನ ಪ್ರೇಮನಂ ಶೀಲವಿ|
ಶ್ರಾಮನಂ ಪಾಲ್ಕುರಿಕೆ ಸೋಮನಂ ಹೃತ್ಕುಮುದ ಧಾಮದೊಳ್ ಮಿಗೆ ಜಾನಿಸೆಂ॥ (೧—೮)

ಪರಮ ಸುಖವಾಸನಂ ವರ ಕಾಳಿದಾಸನಂ|
ಕರದಾನಿ ಜಾಣನಂ ಶರಣನಹ ಬಾಣನಂ|
ನಿರುಪಮ ವಿಚಾರನಂ ಗರುವ ಮಾಯೂರನಂ ಪದ್ಮರಸನಂ ಸರಸನಂ॥

* ಕವಿಚರಿತೆ II, 192—193.

ಹರಿಹರ ಕವೀಶನಂ ಗುರು ಭಕ್ತಿ ಕೋಶನಂ ।
ಹರನ ಕಣ್ಗೆಮ್ಮೆಗಳಾಗಿ ತನು ಮನವಿತ್ತ ।
ಪರಿಣತರ ನೆನೆವು ಕೃತಿವೇಱಿತೆನಗೆ ಮೊಗಂ ನಿರ್ವಿಘ್ನತೆಯನೀಯುನೇ (೧–೯)

"ಈತನನ್ನು ಚೇರಮ (ಕ್ರಿ. ಶ. ೧೫೨೬), ಸಿದ್ಧನಂಜೇಶ (ಸು. ೧೬೫೦), ಷಡಕ್ಷರದೇವ (೧೬೫೫) ಮೊದಲಾದ ಅನೇಕ ವೀರಶೈವ ಕವಿಗಳು ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ."*

ಈತನು 'ವೀರಶೈವಾಮೃತ ಪುರಾಣ'ವೆಂಬ ಗ್ರಂಥವನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿರುತ್ತಾನೆ; 'ಪುರಾತನ ರಗಳೆ' ಎಂಬ ಗ್ರಂಥವನ್ನು ಬರೆದಿರುವಂತೆ ಪ್ರತೀತಿಯಿದೆ; ಆದರೆ ಅದು ದೊರೆತಿಲ್ಲ.*

ಈತನ ತಾತನಾದ ಮಲ್ಲಣಾರ್ಯನು 'ವಾತೂಲ ತಂತ್ರ'ಕ್ಕೆ ಟೀಕೆಯನ್ನು ಮಾಡಿ "ಆಗಮ ಗ್ರಂಥ ವಚನ"ದಿಂದ 'ಗಣಭಾಷ್ಯ ರತ್ನಮಾಲೆ'ಯನ್ನು ರಚಿಸಿದಂತೆ ಪ್ರಕೃತ ಗ್ರಂಥದಲ್ಲಿ ಹೇಳಿದೆ (೧–೧೪).

ಕವಿತೆಯ ವಿಚಾರ.—

ಕೃತಿಯ ಪಲ್ಲವಿ ತೊಡಗಿ ಪೂರ್ಣಮಪ್ಪನ್ನವೀ ।
ಕೃತಿಯೊಳುತ್ಪ್ರೇಕ್ಷೆ ಯಿಲ್ಲದುದೊಂದು ಪದವಿಲ್ಲ । (೧–೧೭)

ಎಂದು ಕವಿಯೇ ಹೇಳಿಕೊಂಡಿರುವನು. ಇದು ಪದಶಃ ಸತ್ಯವಲ್ಲದಿದ್ದರೂ, ಅನೇಕ ಪದ್ಯಗಳು ಉತ್ಪ್ರೇಕ್ಷಾದ್ಯಲಂಕಾರಗಳಿಂದ ರಮ್ಯವಾಗಿರುವುವು. ಶೈಲಿಯು ಪ್ರೌಢವಾಗಿಯೂ ಅನೇಕ ಕಡೆ ಕ್ಲಿಷ್ಟವಾಗಿಯೂ ಇರುವುದು. ಪದಪ್ರಯೋಗದಲ್ಲಿ ಕವಿಯು ಸಂಸ್ಕೃತವನ್ನು ಅಷ್ಟು ಹೆಚ್ಚಾಗಿ ಉಪಯೋಗಿಸಿಲ್ಲ. ಕನ್ನಡ ಷಟ್ಪದೀ ಕಾವ್ಯಗಳ ಶೈಲಿಯು ಚಂಪೂ ಕಾವ್ಯಗಳ ಶೈಲಿಗಿಂತಲೂ ಸುಲಭವೆಂದು ಹೇಳುವ ಕೆಲವರ ಮಾತು ಈ ಕವಿತೆಯಲ್ಲಿ ಅಬದ್ಧವಾಗಿರುವುದು. ಕೆಲವು ಪದ್ಯಗಳಿಗೆ ಥಟ್ಟನೆ ಅರ್ಥವು ಹೊಳೆಯುವಂತಿಲ್ಲ. ಅಲ್ಲಲ್ಲಿ ಶಿವಶರಣರ ಪೂರ್ವ ಕಥೆಗಳ ಪ್ರಕಾರವು ಸೂಚಿತವಾಗಿರುವುದರಿಂದ ಈ ಕಥೆಗಳನ್ನು ತಿಳಿದ ಹೊರತು ಅಲ್ಲಿಯ ಸಂದರ್ಭಗಳು ಸ್ಪಷ್ಟವಾಗುವುದಿಲ್ಲ.

ಇದರ ಕಥಾವಸ್ತುವನ್ನೇ ಷಡಕ್ಷರದೇವನು ತನ್ನ 'ರಾಜಶೇಖರ'ದಲ್ಲಿ ಉಪಯೋಗಿಸಿಕೊಂಡಿದ್ದರೂ ಈ ಕಥೆಯು ರಸವತ್ತಾಗಿದೆಯೆಂದಾಗಲಿ ಪ್ರೌಢ ಕಲ್ಪನೆಗಳಿಂದ ಕೂಡಿದೆಯೆಂದಾಗಲಿ ಹೇಳಲಾಗುವುದಿಲ್ಲ.

ಪ್ರತಿ ಸಂಧಿಯ ಆದಿಯಲ್ಲಿಯೂ ಆ ಸಂಧಿಯಲ್ಲಿ ಹೇಳಿರುವ ಕಥಾ ಸಂದರ್ಭವನ್ನು ತಿಳಿಸುವ ಪಲ್ಲವಿಯಿದೆ; ತರುವಾಯ ಮೊದಲನೆಯ ಪದ್ಯವು ಶಿವನ, ಅಥವಾ ಪಾರ್ವತಿಯ ಸ್ತೋತ್ರವಾಗಿದೆ; ಕಡೆಯಲ್ಲಿ ಮುಂದೆ ಹೇಳುವ ಪದ್ಯವಿದೆ:–

* ಕವಿಚರಿತೆ II, 193, 191.

ಇದು ಸಕಲ ಭಕ್ತ ಪದ ಪಂಕೇಜ ರೇಣು ಮು|
ಸ್ತದ ಮಲ್ಲಣಾರ್ಯನಾ ಚೇರಮಾಂಕಂಗೆ ಬೆಸ|
ಸಿದ ಭಕ್ತ ಸತ್ಯೇಂದ್ರಚೋಳ ಕೃತಿ ಭಾವಚಿಂತಾರತ್ನವಮಲ ಕರ್ಣ|
ಹೃದಯ ಮಸ್ತಕ ವದನ ಸರ್ವಾಂಗ ಸೌಖ್ಯ ಕಾ|
ಸ್ಪದಮಖಿಳ ಸುಜನರ್ಗೆ ಪಂಚಾಕ್ಷರಿಯ ಮಹ|
ತ್ತ್ವದ ಬೋಧೆಯಿಂದೊದವಿದೊಡೆ ಕೇಳಿ ವಿಷಾರ್ಥ ಸಿದ್ಧಿ ಸರ್ವಾಂಗಸ್ಪದು|

ಕವಿಯು ತನ್ನ ಕವಿತೆಯನ್ನು ಹೀಗೆ ಹೊಗಳಿಕೊಂಡಿದ್ದಾನೆ:—

ಅಮಮ ಚಂದ್ರನ ಕಂಡು ವಾರ್ಧಿ ಮೈವೆರ್ಚುಗುಂ|
ಹಿಮಕಾಂತ ಕರಗುಗುಮದೇಕೆ ಗಾಂಭೀರ್ಯ ಹೃ|
ದ್ವಿಮಲಂಗಳಪ್ಪದಱಂತೆನ್ನ ಕಬ್ಬದಿಂದಱಿಂ ಸಜ್ಜನರಿಗಕ್ಕು|
ಕುಮತಿ ದುರ್ಜನರು ಪರಿಣಮಿಸದಿರಲೇನಾಯ್ತು|
ಕಮಲಾರಿ ಪೂರ್ಣತೆಯೊಳೊಗೆಯೆ ಕಾಣುತವೆ ಕ|
ರ್ಮ ಜಲದ ಬೆಂಚೆ ಕಗ್ಗಲ್ಲುಗಳು ಪೆರ್ಚಿ ಕರಗಿದೊಡೆ ಸಂಗಡ ಹಾಸಿಯೆ| (೧–೧೮)

ರಸ ಜೀವ ಚಿತ್ರಾರ್ಥ ನಿರ್ದೋಷ ನೆಲೆಯಾದ|
ಹೊಸ ರನ್ನಮಂ ವೇಗಡಂಗಳಂ ಕಳೆದು ಸೇ|
ರಿಸೆ ಹಾರದಲ್ಲಿ ಛಿದ್ರಂಗಂಡೆವೆಂಬೊಲಿಂತೀ ಕಾವ್ಯರತ್ನದಲ್ಲಿ||
ಒಸೆದು ತೋಱುವ ಲಕ್ಷಣೋಕ್ತಿಯಱಿಯದ ಕುಜನ|
ವಿಸರವುಱಿತಿ ಮಾಱ್ಪಿ ತಪ್ಪಂ ಕಂಡೆವೆಂದು ಗ|
ರ್ವಿಸುವರೇಕವೆ ಗುಣಕೆ ಕಾರಣಂ ಹೃದಯ ಭೂಷಣವೆಂದು ನೆಱೆ ನೋಡದೆ| (೧–೨೦)

ಕಥಾ ಪ್ರಸಂಗ.—(ಮೊದಲನೆಯ ಸಂಧಿ). ಯೋಗಿಜನ ಹೃನ್ನಿವಾಸನೂ ರಾಗಾದಿ ರಹಿತನೂ ಸುಖ ಸಾಗರನೂ ಆದ ಭೋಗಮಲ್ಲೇಶನು ಈ ಕೃತಿಯನ್ನು ಎಲ್ಲೆಲ್ಲಿಯೂ ಪ್ರಸರಿಸುವಂತೆ ದಯೆಮಾಡಲಿ. ನಂದೀಶ ಭೃಂಗೀಶ ವೀರೇಶರು ಈ ಕೃತಿಯನ್ನು ನವ ರಸ ಭರಿತವನ್ನಾಗಿ ಮಾಡಲಿ. ನಿರುಪಮ ನಿರಂಗನಾದ ಅಲ್ಲಮ ಪ್ರಭು, ಹರಭಕ್ತರಾದ ಸಂಗಮೇಶ, ಬಸವರಸ, ಚೆನ್ನಬಸವೇಶ—ಇವರ ಪಾದಗಳು ಪರಮ ಪವಿತ್ರವಾದುವು; ಅವನ್ನು ನುತಿಸುವೆನು. ಶಂಕರ ಲೆಂಕ ಮಂಚಣ್ಣ, ಶ್ರೀಪತೀಶ್ವರದೇವ, ಮಲ್ಲಿಕಾರ್ಜುನ—ಈ ಪಂಡಿತತ್ರಯವನ್ನೂ, ಸುಗ್ಗಲೆಯ ಗುರುಸಿದ್ಧರಾಮ, ಪಾಲ್ಕುರಿಕೆಯ ಸೋಮ, ಕಾಳಿದಾಸ, ಬಾಣ, ಮಯೂರ, ಪದ್ಮರಸ, ಹರಿಹರ, ಗೂಳೂರ ಶಾಂತಿದೇವ, ಗುಮ್ಮಳಾಪುರದ ಶಾಂತೇಶ, ಶಿವಪೂಜೆಯಾರ್ಯ, ಚಿಕ್ಕಬಸವಾಂಕ, ಅಮರಗುಂಡದ ಮಲ್ಲಿಕಾರ್ಜುನ—ಇವರನ್ನು ಧ್ಯಾನಿಸಿ ನಮಿಸುವೆನು.

"ಅಯ್ಯಾ, ಮಲ್ಲಣಾರ್ಯನೆ, ನಿನ್ನ ತಾತನು 'ವಾತೂಲ ತಂತ್ರ'ಕ್ಕೆ ಟೀಕೆಯನ್ನು ಮಾಡಿ ಗಣಭಾಷ್ಯ ರತ್ನಮಾಲೆಯನ್ನು ರಚಿಸಿದನು; ನೀನು

ನನ್ನ ಭಕ್ತನಾದ ಸತ್ಯೇಂದ್ರಚೋಳರಾಜನ ಕೃತಿಯನ್ನು ಬರೆ” ಎಂದು ಶಿವಪೂಜೆಯಾರ್ಯರು ಅನುಜ್ಞೆಮಾಡಲು, ಈ ಕೆಲಸಕ್ಕೆ ನಾನು ತೊಡಗಿದೆನು (೧೧). ಇದಲ್ಲದೆ, ನನ್ನ ಪ್ರಿಯ ಭಕ್ತನಾದ ಚಾರುಮಾಂಕನು ಇದೇ ಕಥೆಯನ್ನು ತನಗೆ ಹೇಳಬೇಕೆಂದು ಕೇಳಿಕೊಂಡದ್ದರಿಂದ ಅತನಿಗೆ ಹೇಳಿದೆನು. ಈ ಕಥೆಯನ್ನು ಜಿನಮತ ಧ್ವಂಸಿಯಾದ ತಿರುಜ್ಞಾನಿ ಸಂಬಂಧೀಶನು ಕುಲಚ್ಛರಿಯನಿಗೆ ಪ್ರಣವ ಪಂಚಾಕ್ಷರಿಯ ಮಹಿಮೆಯನ್ನು ತಿಳಿಸುವುದಕ್ಕಾಗಿ ದ್ರಾವಿಡ ಭಾಷೆಯಲ್ಲಿ ಹೇಳಿದುದನ್ನು ನಾನು ಕನ್ನಡದಲ್ಲಿ ಹೇಳುವೆನು (೨೧).

ತನ್ನ ಮಗನ ಕುದುರೆಯ ತುಳಿತದಿಂದ ಸತ್ತ ಹರಭಕ್ತನಾದ ಹುಡುಗನೊಬ್ಬನ ಸಾವಿನ ತೆರವನ್ನು ಕಂಡು ಸತ್ಯೇಂದ್ರಚೋಳನು ತನ್ನ ಮುದ್ದು ಮಗನ ತಲೆಯನ್ನು ಕಡಿಸುವ ಸಮಯದಲ್ಲಿ, ಭಕ್ತವಧೆಯೆಂದು ತಿಳಿದು ತನ್ನ ತಲೆಯನ್ನು ಕತ್ತರಿಸಿಕೊಂಡನು, ಹೀಗೆ ತಲೆ ಕತ್ತರಿಸಿಕೊಂಡ ಪರಿಮಂದಿಯೊಡನೆ ಸತ್ಯೇಂದ್ರಚೋಳನು ಕೈಲಾಸಕ್ಕೆ ಹೋದ ಕಥೆಯನ್ನು ನಾನು ಬೆಳೆ ಈ ಕೃತಿಯನ್ನಾಗಿ ಮಾಡುವೆನು (೨೨).

ಘೋರ್ಗರೆವ ಸಮುದ್ರ ಮಧ್ಯದಲ್ಲಿ ಹಡಗುಗಳಂತೆ ಮೆರೆಯುತ್ತಿರುವ ದೇವವೃಕ್ಷಗಳಿಂದಲೂ ನೈದಿಲೆಗಳಿಂದ ರಮಣೀಯವಾದ ಪೂಗೊಳಗಳಿಂದಲೂ, ಮನೋರಥವನ್ನು ಬರೆಯುತ್ತ ತಪಸ್ಸುಮಾಡುತ್ತಿರುವ ಮುನಿಶ್ರೇಷ್ಠರಿಂದಲೂ, ಬೆಲೆಯುಳ್ಳ ರತ್ನಸಮೂಹದಿಂದ ಕೂಡಿದ ತಪ್ಪಲುಗಳಿಂದಲೂ ಶೋಭಿಸುವ ಮೇರುಪರ್ವತದ ಬಳಿ ರಜತಾದ್ರಿಯು ಶಂಕರನ ವಾಸಸ್ಥಾನವಾದ ಕೈಲಾಸವನ್ನೊಳಕೊಂಡು ಕಣ್ಣಿಗೆ ಬೆಡಗನ್ನು ಬೀರುತ್ತಿದ್ದಿತು. ಆ ಕೈಲಾಸಪುರ ಮಧ್ಯದಲ್ಲಿ ದೇವಪುರುಷರು ಮೊದಲಾದವರ ವಾಸಗೃಹಗಳ ನಡುವೆ ಮಹಾದೇವನರಮನೆಯು ಪ್ರಕಾಶಿಸುತ್ತಿದ್ದಿತು. ಅದರಲ್ಲಿಯ ಸಭಾಮಂಟಪದಲ್ಲಿ ತುಂಬುರ ನಾರದರು, ಸನಕಾದಿ ಯೋಗೀಶರು, ದೇವತೆಗಳು, ಇಂದ್ರ, ಬ್ರಹ್ಮ, ವಿಷ್ಣು—ಇವರೇ ಮೊದಲಾದವರು ಭಯ ಭಕ್ತಿಗಳಿಂದ ಸುತ್ತಲೂ ಓಲಗಿಸುತ್ತಿರಲು, ಅರ್ಧನಾರೀಶ್ವರನು ಮಧ್ಯೆ ಇದ್ದ ರತ್ನದ ಜಗಲಿಯಮೇಲೆ ಮೆರೆಯುತ್ತಿದ್ದನು (೩೦). ಚಂದಕೀರ್ತಿಗಳು ಕೈಮುತ್ತಿ ಶಿವನನ್ನು ಹೊಗಳುತ್ತಿದ್ದರು. ಪಂಚಮ ವಾದ್ಯಗಳು ಕಿವಿಗಿಂಪನ್ನುಂಟುಮಾಡುತ್ತಿದ್ದುವು. ಭೃಂಗಿ ರಿಟಿ ಮೊದಲಾದವರು ನಾಟ್ಯವಾಡುತ್ತಿದ್ದರು (೩೬).

ಆಗ ಶಿವನು ತನ್ನ ಮಗ ಗುಹನನ್ನು ನೋಡುತ್ತ, ಬ್ರಹ್ಮನ ಕಡೆ ತಿರುಗಲು, ಬ್ರಹ್ಮನು ಎದ್ದು ನಿಂತು ಕೈಜೋಡಿಸಿಕೊಂಡು, “ದೇವಾ! ಕುಮಾರನಿಗೆ ಅಕ್ಷರಾಭ್ಯಾಸ ಮಾಡಿಸುವುದಕ್ಕಾಗಿ ನನ್ನನ್ನು ನೀನು ಕಳುಹಿದ ವಿಚಾರವನ್ನು ಚಿತ್ತೈಸು. ಪ್ರಾತಃಕಾಲದಲ್ಲಿ ನಾನು ಪಾಠಶಾಲೆಗೆ ಹೋಗಿ ಅರುಮೊಗನನ್ನು ಗದ್ದುಗೆಯ ಮೇಲೆ ಕುಳ್ಳಿರಿಸಿ ಓಂಕಾರವನ್ನು ಬರೆಯಲು, ಅತನು ನನ್ನ ಕೈಹಿಡಿದು ಅದಕ್ಕೆ ಅರ್ಥವನ್ನು ಕೇಳಲಾಗಿ, ಮೊದಲೇ ಅರ್ಥವನ್ನು

ತೋರುವುದು ಸರಿಯಲ್ಲವೆನಲು, ನನ್ನನ್ನು ಕಠಾರಗಂಡದಿಂದ ಹೊಡೆದನಯ್ಯಾ! ಈತನು ಬಹಳ ಗಟ್ಟಿಗನೆಂದರಿತು ಕಡೆಗೆ ಏನು ಮಾಡುವನೋ ಎಂಬ ಭಯದಿಂದ ನಾನು ಪ್ರಣವದರ್ಥವನ್ನು ಈತನಿಗೆ ಬರೆಯದೆ ಹನ್ನೆರಡು ಸಾವಿರ ಶ್ಲೋಕ ಗಳಿಂದ ಹೇಳಿದೆನು. ಅದಕ್ಕಾತನು "ಜಡಮತಿಯೇ, ತೊಲಗು" ಎಂದು ಹೇಳಿ ನನ್ನನ್ನು ಬಿಡಲು ತಮ್ಮ ಸಮ್ಮುಖಕ್ಕೆ ಬಂದಿರುವೆನು. ಅಯ್ಯಾ ಸ್ವಾಮಿಯೆ! ವಿಶೇಷಾರ್ಥವನ್ನು ಹೇಳಲು ನಾನರಿಯೆನಯ್ಯಾ, ನೀನು ಹೇಳು" ಎಂದು ಬಿನ್ನೈಸಿದನು.

ಬ್ರಹ್ಮನು ಹೀಗೆ ಹೇಳಲು, ಶಿವನು ಹನ್ನೆರಡು ಲಕ್ಷ ಶ್ಲೋಕಗಳಿಂದ ವಿಶೇಷಾರ್ಥವನ್ನು ತಿಳಿಸಿದನು. ಗುಹನು ಕೈಮುಗಿದು, "ಅಗಜಾ ಕಾಂತನೆ, ಕೇಳು, ನಾನು ಬ್ರಹ್ಮನನ್ನು ಜಡನೆಂದುದು ಅಪರಾಧವಾಯಿತು" ಎಂದು ಹೇಳಲು ಶಿವನು, "ಅಂತಹ ವ್ಯಾಜೋಕ್ತಿಗಳು ಹಾಗಿರಲಿ, ಪ್ರಣವಾರ್ಥವೆಷ್ಟೆಂ ಬುದನ್ನು ಹೇಳು" ಎನಲು, ಗುಹನು ಹನ್ನೆರಡು ಮಹಾಕೋಟಿ ಎಂದನು. ಇದನ್ನು ಕೇಳಿ ಪಿನಾಕಿಯು, "ಈ ವಿಷಯವು ನನ್ನ ನಾಲಗೆಯಿಂದ ಹೊರಟು ಇವನಿಗೆ ಯಾವಾಗ ತಿಳಿಯಿತು?" ಎಂದು ಚಿಂತಿಸುತ್ತ, ತಾನು ಕೋಟ್ಯನು ಕೋಟಿ ಯುಗಗಳ ಹಿಂದೆ ಸಮುದ್ರದಲ್ಲಿ ಒಂದು ಜಲಪ್ರಾಣಿಯನ್ನಾದರೂ ಇರ ಲೀಯದೆ ಪಾರ್ವತಿಗೆ ಇದನ್ನು ಹೇಳುವಾಗ ಆಕೆಯ ಮಡಿಯಲ್ಲಿ ಇವನು ಭ್ರಮರ ನಾಗಿ ಚಾತುರ್ಯದಿಂದಿದ್ದು ಕೇಳಿದನು, ಎಂದರಿತು, "ಎಲೈ ಚಪಲನೆ, ಅದನ್ನು ಹೇಳು" ಎಂದನು. ಗುಹನು, "ತಂದೆಯೇ! ಗದ್ದುಗೆಯಿಂದಿಳಿ; ನಾನು ಅಲ್ಲಿ ಕುಳಿತು ಹೇಳುವೆನು" ಎನಲು, ಶಿವನು ಬಹಳ ಕೋಪಗೊಂಡು, ಹದಿನಾರು ಸಾವಿರ ಜನ್ಮದಲ್ಲಿ ಹುಟ್ಟೆಂದು ಗುಹನನ್ನು ಶಪಿಸಿದನು (೪೧). ಈ ವಿಷಮ ಶಾಪ ವನ್ನು ಕೇಳಿ ಪ್ರಮಥ ಗಣಗಳು, "ಆತನು ನಿಮ್ಮ ಮಗನಲ್ಲವೆ?" ಎನಲು, ಶಿವನು ಕೋಪದಿಂದ, "ನೀವೂ ಇವನೊಡನೆ ಹುಟ್ಟಿರಿ" ಎಂದು ಮೂರು ಸಾವಿರ ಗಣ ಗಳನ್ನೂ ಶಪಿಸಿದನು. ಅದಕ್ಕವರು, "ದೇವಾ! ತಮ್ಮ ಮುಂಗೋಪದಲ್ಲಿ ನಾವು ಮಾತಾಡುವುದುಚಿತವಲ್ಲ; ಆದರೂ ಈ ಹುಡುಗನಿಗೆ ಹದಿನಾರು ಸಾವಿರ ಜನ್ಮ ಬೇಡ, ಒಂದು ಜನ್ಮ ಸಾಕು ಎಂದು ಬಿನ್ನೈಸಿಕೊಳ್ಳುವೆವು" ಎನಲು, ಪಶುಪತಿಯು ನಗುತ್ತ, "ಅಯ್ಯಾ! ನಿಮ್ಮವರಿಗೆ ಶಾಪವುಂಟೆ? ನೀವು ಭೂ ಪವಿತ್ರಾರ್ಥವಾಗಿ ಹುಟ್ಟಿ ಭಕ್ತರ ನಡತೆಯನ್ನು ತಿದ್ದುವುದಕ್ಕಾಗಿ ಹೋಗಿರಿ" ಎಂದು ಪ್ರಣವಾರ್ಥವನ್ನು ತಿಳಿಯುವುದಕ್ಕಾಗಿ ಬ್ರಹ್ಮನನ್ನು ನಾಗೇಶನಾಗೆಂದು ಹೇಳಿ ತನ್ನ ಮಗನನ್ನು ಶಿವಜ್ಞಾನ ಸಂಬಂಧಿಯಾಗುವಂತೆ ನಿಯಮಿಸಿ ಇಬ್ಬ ರನ್ನೂ ಕಳುಹಿದನು. ಬ್ರಹ್ಮನು ಶ್ರೀಕಾಂತಯಾದವೃಷಭಂಗೆ ಹುಟ್ಟಿ ಕುಲ ಸ್ಥಾಪಕನೆಂಬ ಹೆಸರಿನಿಂದ ಅನೇಕ ಮಹಿಮೆಗಳನ್ನು ಮೆರೆದು ಲೋಕ ಗುರುವಾದ ಬಸವನು ಸಾಧಿಸಿದ ಪಂಚಾಕ್ಷರೀ ಜ್ಯೋತಿಯನ್ನು ಪಡೆದನು. ಶಿಷ್ಯನಾದ ನಾರನು ಹೇಳಿದ ಸತ್ಯೇಂದ್ರಚೋಳನ ಕಥೆಯನ್ನು ನಾನು ಇಲ್ಲಿ ಹೇಳು ವೆನು (೪೪).

(ಎರಡನೆಯ ಸಂಧಿ). ಕೇಳೈ ಕುಲೋತ್ತುಂಗನೆ, ಉತ್ತಾನಪಾದನೆಂಬ ರಾಜರ್ಷಿಯು ತನ್ನ ಹಿರಿಯ ಮಗನಾದ ಭರತನಿಗೆ ಹಿಮವತ್ಪರ್ವತಕ್ಕೆ ದಕ್ಷಿಣ ದಿಕ್ಕಿನಲ್ಲಿ ಕೊಟ್ಟ ಭೂಮಿಯು ಭಾರತವರ್ಷವೆಂದೆನಿಸುವುದು. ಈ ಪ್ರದೇಶದಲ್ಲಿಯ ನಾನಾ ದೇಶಗಳ ಮಧ್ಯೇ ಭಾಗಸ್ಥಿತವಾಗಿರುವ ಚೋಳದೇಶವಿರುವುದು. ಇದು ನದಿ, ತಟಾಕ, ವನ, ಅಗ್ರಹಾರ, ರಾಜಧಾನಿ ಮೊದಲಾದುವುಗಳಿಂದ ಶೋಭಿಸುತ್ತಿರುವುದು. ಇಲ್ಲಿ ಕಾವೇರೀ ಪುಣ್ಯನದಿಯು ಹರಿಯುತ್ತಿರುವುದು. ಈ ದೇಶದಲ್ಲಿ ಎಲ್ಲ ಸಂಪತ್ತಿನಿಂದ ಕೂಡಿದ ಧರ್ಮಾವತಿಯೆಂಬ ದೊಡ್ಡ ಪಟ್ಟಣವಿರುವುದು. ಇದರ ಮಧ್ಯದಲ್ಲಿ ಪ್ರಸಿದ್ಧರಾದ ವೈಶ್ಯರು, ಶಿವಭಕ್ತರು, ವೇದಾಂತಿಕರು ಮೊದಲಾದವರ ಮನೆಗಳ ನಡುವೆ ಸತ್ಯೇಂದ್ರಚೋಳನ ಅರಮನೆಯಿರುವುದು. ಸತ್ಯೇಂದ್ರನು ಸಕಲ ವಿಧ ಸಂಪತ್ತುಗಳನ್ನು ಪಡೆದು ಪತಿಭಕ್ತಿಯಲ್ಲಿ ಅರುಂಧತಿಯನ್ನೂ ಸಿರಿಯಲ್ಲಿ ಲಕ್ಷ್ಮಿಯನ್ನೂ ಹೋಲುವ ಅಮೃತವತಿಯೆಂಬ ಹೆಂಡತಿಯೊಡನೆ ಸುಖದಿಂದಿರುವನು. ಆತನಿಗೆ ಮತಿಯೋಜಿಯೆಂಬ ಮಂತ್ರಿಶ್ರೇಷ್ಠನು, ಶಿವತತ್ತ್ವದಲ್ಲಿ ನೆಲಸಿದ ಮನದಂತೆ, ಅನುಕೂಲನಾಗಿರುವನು (೧೯).

ಒಂದು ದಿನ ಸತ್ಯೇಂದ್ರಚೋಳನು, ಕಾಶಿಯಲ್ಲಿ ಈಶ್ವರನಿಗೆ ಭಕ್ತಿ ಪುರಸ್ಸರವಾಗಿ ಭಾಗೀರಥಿಯ ಪಾವನೋದಕದಿಂದ ಅಭಿಷೇಕವನ್ನು ಮಾಡಿಸ ಬೇಕು ಎಂದು ಯೋಚನೆಯಾದುದರಿಂದ ನಾಲಿಸಲು, ಮಂತ್ರಿಯು ಬಂದು ದೊರೆಗೆ ನಮಸ್ಕರಿಸಿ ಇಂದು ಕಾಶಿಯಿಂದ ತೀರ್ಥವನ್ನು ತಮ್ಮ ಅರಮನೆಗೆ ತರಿಸು ವೆನು ಎಂದು ಬಿನ್ನವಿಸಿ ಧರ್ಮಾವತಿಯಿಂದ ಸಾವಿರಾರು ಗಾವುದ ದೂರದಲ್ಲಿರುವ ಕಾಶಿಯವರೆಗೂ ಮುಕುಟವರ್ಧನರನ್ನೇ ಸಾಲಾಗಿ ನಿಲ್ಲಿಸಿ ಒಬ್ಬರಿಂದೊಬ್ಬರಿಗೆ ಪಾವನೋದಕವನ್ನು ತುಂಬಿದ ಚಿನ್ನದ ಕೊಡವು ಸಾಗಿಬರುವಂತೆ ಏರ್ಪಾಟು ಮಾಡಿದನು. ಈ ತೆರನಾಗಿ ರಾಯನು ವಿಶ್ವೇಶ್ವರನ ಪೂಜೆಯನ್ನು ಮಾಡಿದ ನೆಂದರೆ ಇನ್ನು ಅವನ ಸೈನ್ಯವೆಷ್ಟಿರುವುದೆಂದು ಎಣಿಸುವರಾರು ? (೨೧)

ಹೀಗೆ ಚೋಳಭೂಪನು ಸದ್ಭಕ್ತಿ ಸಂಪತ್ತಿಯಿಂದಿರುತ್ತಿರಲು, ಒಂದು ದಿನ ಪರಮ ಜ್ಞಾನಿಗಳಾದ ಚಿನ್ಮಯ ಶಿವಾಚಾರ್ಯರು ಬಿಜಯಂಗೈದರೆಂದು ಕೇಳಿ, ಬಹಳ ಸಂಭ್ರಮದಿಂದ ಹೊರಟು ಪಟ್ಟಣವನ್ನು ಅಲಂಕರಿಸುವಂತೆ ತನ್ನವರಿ ಗಪ್ಪಣೆಮಾಡಿ ಗುರುಶ್ರೇಷ್ಠನಿದ್ದ ಸ್ಥಳಕ್ಕೆ ಹೋಗಿ ಬಹಳ ಭಕ್ತಿಯಿಂದ ಆತನಿಗೆ ಸಾಷ್ಟಾಂಗ ನಮಸ್ಕಾರ ಮಾಡಲು, ಶಿವಾಚಾರ್ಯನು ದೊರೆಯನ್ನು ಹರಸಿ ಬಹಳ ಪ್ರೀತಿಯಿಂದ ನೋಡಿ ಭಸ್ಮವನ್ನಿಟ್ಟು, ದ್ವಿಜರು ಮಂತ್ರಾಕ್ಷತೆ ಯನ್ನು ಸುರಿಯುತ್ತಿರಲು, ಛತ್ರಕ್ಕೆ ಬಾರೆಂದು ಹೇಳಿ ಆತನ ಮೇಲೆ ಕೃಪಾ ಮೃತದ ನೋಟವನ್ನು ಕರೆದನು. ಬಳಿಕ, ಗುರುವು ಚಿನ್ನದ ಪಾಲಕ್ಕಿಯನ್ನೇರಿ ಹೊರಟು ಅರಮನೆಗೆ ಬಂದು ಅಲ್ಲಿ ಭಕ್ತಿಯಿಂದೆರಗಿದ ರಾಜನನ್ನು ಹರಸಿ, ಶಿವಪೂಜೆಯನ್ನು ಮಾಡಿ, ಸಿಂಹಾಸನದಲ್ಲಿ ಕುಳಿತು, ನಿನ್ನ ಕೋರಿಕೆಯೇನೆಂದು ದೊರೆಯನ್ನು ಕೇಳಿದನು. ಅದಕ್ಕೆ ದೊರೆಯು, "ನಿಮ್ಮ ದರ್ಶನದಿಂದ ನನ್ನ

ಅಜ್ಞಾನವು ಪರಿಹಾರವಾಯಿತು ; ನೀವೇ ಶಿವಸ್ವರೂಪವು ; ನನಗೆ ಶ್ರೇಷ್ಠವಾದ ತತ್ವ ಬೋಧೆಯನ್ನು ನಿರೂಪಣಮಾಡಬೇಕು'' ಎಂದನು. ಅದಕ್ಕೆ ಶಿವಾಚಾರ್ಯನು ಶಿವತತ್ವವನ್ನು ಮಹೇಶ್ವರನ ಪಂಚವಿಂಶತಿ ಲೀಲೆಯ ಮೂಲಕವಾಗಿ ಬೋಧಿಸುವೆನೆಂದು ಹೇಳಲು ಚೋಳನು ರೋಮಾಂಚವುಳ್ಳವನಾದನು (೩೧).

(ಮೂರನೆಯ ಸಂಧಿ)· ಗುರುವು ಚೋಳನಿಗೆ ಶಿವನ ಪಂಚವಿಂಶತಿ ಲೀಲೆಗಳನ್ನು ವಿವರಿಸಿ, ಈ ಕಥೆಯನ್ನು ಪ್ರೀತಿಯಿಂದ ಕೇಳಿದವರು ಅಷ್ಟಮದಗಳನ್ನೂ ಸಪ್ತವ್ಯಸನಗಳನ್ನೂ ಅರಿಷಡ್ವರ್ಗಗಳನ್ನೂ ಜಯಿಸಿ ಭೋಗ ಮೋಕ್ಷಗಳನ್ನು ಪಡೆಯುವರೆಂದು ಹೇಳಿದನು (೨೬). ಹೀಗೆ ಚಿದ್ಘನ ಶಿವಾಚಾರ್ಯರು ಆ ಚೋಳಭೂಪತಿಗೆ ಬೋಧಿಸುತ್ತಿರಲು, ಆ ದೊರೆಯ ಪತ್ನಿಯಾದ ಅಮೃತಮತಿಯು ಇದನ್ನು ಕಂಡು ಸಂತೋಷಪಟ್ಟು, ಮಹಾತ್ಮರಾದ ಈ ಗುರುಗಳ ಕೃಪೆಯಿಂದ ಪುತ್ರಸಂತಾನ ಲಾಭವನ್ನು ಪಡೆದು ತನ್ನ ಅಭೀಷ್ಟವನ್ನು ಸಲಿಸಿಕೊಳ್ಳಬೇಕೆಂದಾಲೋಚಿಸಿ, ಗುರುಗಳಿಗೆ ಭಕ್ತಿಯಿಂದ ನಮಸ್ಕಾರಮಾಡಿ ಕೈಮುಗಿದು ನಿಂತು, ಚೋಳಕುಲತಿಲಕನಾಗುವ ಬಾಲಕನನ್ನು ನನಗೆ ಕೊಟ್ಟು ಸಲಹಬೇಕೆಂದು ಕೇಳಿಕೊಳ್ಳಲು, ದೇಶಿಕನು ಪ್ರೀತಿಯಿಂದ ಕರ್ಪೂರ ಯೋಗ ತಾಂಬೂಲದೊಡನೆ ಆಕೆಯ ಇಷ್ಟಾರ್ಥಿಯನ್ನಿತ್ತು ಆಕೆಯನ್ನಾನಂದಪಡಿಸಿ ಸಕಲ ಸತ್ಕಾರವನ್ನು ಹೊಂದಿ ಗಣಸಂತತಿಯೊಡನೆ ತನ್ನ ನಿವಾಸಕ್ಕೆ ಹೊರಟು ಹೋದನು (೩೩).

ಇತ್ತ, ಚೋಳರಾಜನು ಈಶ್ವರ ಪೂಜೆಯನ್ನು ಮಾಡುತ್ತ ಶಿವಶರಣರ ಗೋಷ್ಠಿಯಲ್ಲಿ ಸಂತೋಷದಿಂದಿರುತ್ತ ಶಿವ ಪುರಾಣ ಕಾಲಕ್ಷೇಪ ಮಾಡುತ್ತ ಪತ್ನಿಯೊಡನೆ ಸುಖವಾಗಿ ರಾಜ್ಯವಾಳುತ್ತಿದ್ದನು. ಹೀಗಿರುವಲ್ಲಿ, ಅಮೃತಮತಿಯು ಗರ್ಭವನ್ನು ಧರಿಸಿದಳು (೫೨). ಕಾಲಕ್ರಮದಲ್ಲಿ ಆಕೆಯ ಗರ್ಭದಿಂದ ಸುಕುಮಾರನು, ಸತ್ಪ್ರಣವದಿಂದ ಮೂಲಮಂತ್ರವು ಹುಟ್ಟುವಂತೆ, ಉದಯಿಸಿದನು (೫೭).

(ನಾಲ್ಕನೆಯ ಸಂಧಿ). ದೊರೆಗೆ ಪುತ್ರೋತ್ಪನ್ನವಾದ ಶುಭವಾರ್ತೆಯು ಎಲ್ಲೆಲ್ಲಿಯೂ ಹರಡಿ ಸರ್ವರೂ ಆನಂದಭರಿತರಾದರು. ಆ ಕಾಲಕ್ಕೆ ಸರಿಯಾಗಿ ಚಿದ್ಘನ ಶಿವಾಚಾರ್ಯರು ಬಂದು ಅರಸುಮಗನಿಗೆ ಜಾತಕರ್ಮವನ್ನು ಮಾಡಿ ಲಿಂಗೋಪದೇಶ ಪ್ರಭಾಪುಂಜವನ್ನು ಕರುಣಿಸಿ ಮಂತ್ರಲಕ್ಷಕನೆಂಬ ಹೆಸರನ್ನಿಟ್ಟು ದೊರೆಯಿಂದಲೂ ರಾಣಿಯಿಂದಲೂ ತಕ್ಕ ಮರ್ಯಾದೆಯನ್ನು ಹೊಂದಿ ಹೊರಟು ಹೋದರು. ಕುಮಾರನು ದಿನದಿನಕ್ಕೆ ಬೆಳೆಯುತ್ತ ಆಟಪಾಟಗಳನ್ನು ತೋರಿಸುತ್ತ ತಾಯಿತಂದೆಗಳನ್ನು ಆನಂದಪಡಿಸಿದನು (೧೦). ರಾಣಿಯು ಮೊದಲಿಂದಲೂ ತನ್ನ ಮಗನಂತೆ ಸಾಕುತ್ತಿದ್ದ ವಿಂತವಚನನನ್ನೂ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಂತ್ರಲಕ್ಷಕನನ್ನೂ ಒಂದೇ ಸಮನಾಗಿ ಸಲಹುತ್ತಿದ್ದಳು. ಕಾಲ

ಕ್ರಮದಲ್ಲಿ ಇವರಿಬ್ಬರೂ ಯೌವನಸ್ಥರಾಗಿ ಶರ ಶಸ್ತ್ರ ಕರಿ ತುರಗಾಭ್ಯಾಸದಲ್ಲಿ ಅಸಮಾನರಾದರು (೧೫).

ಹೀಗಿರುತ್ತಿರುವಲ್ಲಿ, ವಸಂತ ಕಾಲವು ಬರಲು, ವನಪಾಲನು ಬಂದು ವನದ ಸಿರಿಯನ್ನು ದೊರೆಗೆ ಬಿನ್ನವಿಸಿದನು. ಇದನ್ನು ಕೇಳಿ ದೊರೆಯು ಅಮೃತಮತಿಯೊಡನೆ ಹೊರಟು ತನ್ನ ಪರಿವಾರದೊಡನೆ ವನವನ್ನು ಹೊಕ್ಕು ಬಳಿಕೇಳಿ ಬಂದಾನಂದಹೊಂದಿ ವಿಭೂತಿ ರುದ್ರಾಕ್ಷಿಗಳನ್ನು ಆಗಮ ಕ್ರಮದಿಂದ ಧರಿಸಿ ಶಿವಧ್ಯಾನ ತತ್ಪರನಾಗಿ ಅಷ್ಟ ವಿಧ ಪೂಜೆಯನ್ನು ಮಾಡಿ ಶಿವನನ್ನು ಭಕ್ತಿಯಿಂದ ಸ್ತುತಿಸಿದನು (೨೬).

(ಐದನೆಯ ಸಂಧಿ). ಹೀಗೆ ವಸಂತೋತ್ಸವವನ್ನನುಭವಿಸಿ ದೊರೆಯು ಅಮೃತಮತಿಯೊಡನೆ ಅರಮನೆಗೆ ಹೊರಡಲು ಸಿದ್ಧನಾಗುತ್ತಿರುವಲ್ಲಿ, ಶಬರನಾಯಕನ ಮಗನೊಬ್ಬನು ತನ್ನೆಡೆಗೆ ತ್ವರಿತದಿಂದ ಬರುತ್ತಿರುವುದನ್ನು ಕಂಡನು. ಆಗ ಶಬರನ ಮಗನು ಬಂದು ದೊರೆಗೆ ಸಾಷ್ಟಾಂಗ ನಮಸ್ಕಾರ ಮಾಡಿ ಒಂದು ಮಾಣಿಕ್ಯವನ್ನು ಕಾಣಿಕೆಕೊಟ್ಟು ಕೈಮುಗಿದು ನಿಂತು ತನ್ನನ್ನು ರಕ್ಷಿಸಬೇಕೆಂದು ಬೇಡಿಕೊಂಡನು. ದೊರೆಯು ಆ ರತ್ನದ ಅಸಾಧಾರಣವಾದ ಹೊಳಪನ್ನು ಕಂಡು ಪರೀಕ್ಷೆಗಾಗಿ ಅದನ್ನು ಪರೀಕ್ಷಕರಿಗೆ ಕೊಡಲು, ಅವರು ನೋಡಿ ಅದು ಶತಕೋಟಿ ಬೆಲೆ ಬಾಳುವುದೆಂದೂ ವಿಷ್ಣುವಿನ ಕೌಸ್ತುಭ ಮಣಿಯೆಂದೂ ಚಿಂತಾಮಣಿಯೆಂದೂ ಹೇಳಿದರು. ಅದನ್ನು ಕೇಳಿ ಸತ್ಯೇಂದ್ರಚೋಳನು ಆ ಬೇಡನನ್ನು ನೋಡಲು, ಅವನು ಹೀಗೆ ಬಿನ್ನವಿಸಿದನು :—" ನಾನು ಹುಟ್ಟಿದ ಊರು ದಕ್ಷಿಣ ಸಮುದ್ರದ ಸೀಮೆಯ ಕಿರಾತ ನಗರವು; ಅಲ್ಲಿಯ ಅಧಿಪರು ನಮ್ಮವರು; ತಮ್ಮ ಪಾದಸೇವಕರು; ನಮ್ಮ ನಾಯಕನು ಕಾಳಮೇಘನೆಂಬವನು. ಗ್ರೀಷ್ಮಕಾಲವು ಬರಲು, ಕಾಳಮೇಘನು ಲುಬ್ಧಕ ಸೇನೆಯೊಡನೆ ಬೇಟೆಯಾಡಲು ಅಡವಿಗೆ ಹೋದನು. ಅಲ್ಲಿ ಬೇಟೆಯಾಡುತ್ತಿರುವಾಗ ಸಿಂಹಳದ್ವೀಪದಿಂದ ಬಂದ ಸಿಂಹವು ಬಹಳ ಆಟೋಪದಿಂದ ಆ ಸ್ಥಳಕ್ಕೆ ಬರಲು, ಶಬರ ಸೇನೆಯು ಅದನ್ನು ಮುತ್ತಿತು. ಸಿಂಹವು ಕೋಪದಿಂದ ನುಗ್ಗಿ ಅರ್ಧ ಸೇನೆಯನ್ನು ನಾಶಮಾಡಿತು. ಆಗ ಕಾಳಮೇಘನು ಸಿಂಹದ ಮೇಲೆ ನುಗ್ಗಿ ಅದನ್ನು ಖಡ್ಗದಿಂದ ಹೊಡೆಯಲು ಅದು ಕೆಳಕ್ಕೆ ಬಿದ್ದಿತು. ಆ ಹೊತ್ತಿಗೆ ಸಿಂಹಳನೃಪನ ಸೇನೆಯು ಅರ್ಭಟಿಸುತ್ತ ಅಲ್ಲಿಗೆ ಬಂದು, 'ಇದು ನಮ್ಮ ಸೀಮೆಯ ಸಿಂಹವು, ಇಲ್ಲಿಗೆ ಬಂದಿರುವುದು; ಆದುದರಿಂದ ಇದು ನಮ್ಮದು' ಎಂದು ಗರ್ಜಿಸಿ ಹೇಳಲು, ಕಾಳಮೇಘನು ಸಿಂಹದ ತಲೆಯನ್ನು ಸೀಳಿ ಅಲ್ಲಿದ್ದ ಕೆಂಪು ರತ್ನವನ್ನು ತಂದು ನನ್ನ ಕೈಯಲ್ಲಿಟ್ಟು ಅದನ್ನು ಒಡೆಯರಾದ ತಮ್ಮ ಪಾದಕ್ಕರ್ಪಿಸಿ ಈ ಸಮಾಚಾರವನ್ನು ತಮ್ಮಲ್ಲಿ ಬಿನ್ನಯಿಸುವಂತೆ ಹೇಳಿ ನನ್ನನ್ನಿಲ್ಲಿಗೆ ಕಳುಹಿಸಿ, ಅವನು ರಭಸದಿಂದ ಕಾದುತ್ತಿರುವನು."

ಇದನ್ನು ದೊರೆಯು ಕೇಳುತ್ತಿರುವಲ್ಲಿ, ಈ ರತ್ನದ ಅಗಾಧವಾದ ಬೆಲೆಯನ್ನರಿತವನಾಗಿ ಸಮುದ್ರಮಧ್ಯದಲ್ಲಿ ಸಿಂಹಳನೃಪನು ಘಲೆಯುತ್ತಿರುವ

ನೆಂದೂ ಅವನಿಂದ ಚೋಳನಿಗೆ ಕಪ್ಪವು ಬಂದಿಲ್ಲವೆಂದೂ ಕರಣಿಕರು ದೊರೆಗೆ ತಿಳಿಸಿದರು. ದೊರೆಯು ಕೋಪದಿಂದ ಕೂಡಲೆ ಸಿಂಹಳೇಶ್ವರನ ಮೇಲೆ ಯುದ್ಧಕ್ಕೆ ಹೊರಡಲು ಸನ್ನದ್ಧನಾಗುತ್ತಿರಲು ಮಂತ್ರಿಯು ಕೈಮುಗಿದು, ಅಷ್ಟು ಸುಲಭವಾದ ಕಾರ್ಯಕ್ಕೆ ದೊರೆಯು ಹೋಗಬೇಕಾದುದಿಲ್ಲವೆಂದೂ ತಾನೇ ದಂಡೆತ್ತಿ ಹೋಗಿ ಸಿಂಹಳನೃಪನನ್ನು ಜಯಿಸಿ ತಂದೊಪ್ಪಿಸುವೆನೆಂದೂ ಹೇಳಲು ದೊರೆಯು ಅದಕ್ಕೊಪ್ಪಿ ಅರಮನೆಯನ್ನು ಹೊಕ್ಕನು (೧೮).

ಮಂತ್ರಿಯು ಸೇನಾಸಮೇತನಾಗಿ ಸಿಂಹಳನೃಪನ ಸೇನೆಯ ಮೇಲೆ ಬೀಳಲು ಆ ಸೇನೆಯು ಮುರಿದೋಡಿ ಸಮುದ್ರವನ್ನು ದಾಟಿತು. ಮಂತ್ರಿಯು ಆ ಸೇನೆಯನ್ನು ಬೆನ್ನಟ್ಟಿ ಹೋಗಿ ಸಿಂಹಳ ದ್ವೀಪವನ್ನು ಹೊಕ್ಕು ಮೇಲೆ ಬಿದ್ದು ಸಿಂಹಳನ ದೊಡ್ಡ ಸೈನ್ಯವನ್ನು ನಾಶಮಾಡಲು, ಸಿಂಹಳನೃಪನು ಕೆಟ್ಟೋಡಿ ಕೋಟೆಯನ್ನು ಸೇರಿ, ತನ್ನ ಮಂತ್ರಿಯೊಡನಾಲೋಚಿಸಿ ಪ್ರಬಲನಾದರನನೊಡನೆ ವೈರವು ಸರಿಯಲ್ಲವೆಂದು ತಿಳಿದು ತನ್ನ ಹೆಣ್ಣುಮಕ್ಕಳಿಬ್ಬರನ್ನೂ ಪಟ್ಟವಸ್ತ್ರಗಳನ್ನೂ ಆನೆ ಕುದುರೆ ಮೊದಲಾದುವನ್ನೂ ಕಾಣಿಕೆಯಾಗಿ ತಂದೊಪ್ಪಿಸಿ, ತನ್ನೊಡನೆ ಬರಲು, ಮತಿಮೋಹಿಯು ಆ ದೊರೆಯೊಡನೆ ಧರ್ಮವತಿಗೆ ಹಿಂದಿರುಗಿ ಚೋಳನನ್ನು ಕಾಣಿಸಿಕೊಂಡು ಸಿಂಹಳನನ್ನೂ ಆತನು ಕೊಟ್ಟ ಕಾಣಿಕೆಯನ್ನೂ ಒಪ್ಪಿಸಿ ಸಿಂಹಳನನ್ನು ಸಲಹಬೇಕೆಂದು ಚೋಳನನ್ನು ಕೇಳಿಕೊಂಡನು. ಚೋಳನು ಸಿಂಹಳನನ್ನು ಮರ್ಯಾದೆಯಿಂದ ಕಂಡು ಕಮಳೆಯೆಂಬ ಆತನ ಮಗಳನ್ನು ಮಿತ್ರಸಹನನಿಗೂ ಕುಮುದಿನಿಯೆಂಬ ಮತ್ತೊಬ್ಬ ಮಗಳನ್ನು ಮಂತ್ರಲಕ್ಷನಿಗೂ ಮಹಾ ವಿಭವದಿಂದ ಮದುವೆಮಾಡಿದನು. ವಿವಾಹ ವೈಭವವು ಮುಗಿದನಂತರ ಚೋಳನು ಸಿಂಹಳನೇ ಮೊದಲಾದ ದೊರೆಗಳಿಗೆ ಧನ ಕನಕ ವಸ್ತ್ರ ವಾಹನ ದೇವಾಂಬರಾದಿಗಳನ್ನಿತ್ತು ಮರ್ಯಾದೆ ಮಾಡಿ ಅವರವರ ದೇಶಗಳಿಗೆ ಹೊರಡಲು ಅಪ್ಪಣೆ ಕೊಟ್ಟನು (೨೧).

(ಆರನೆಯ ಸಂಧಿ). ಹೀಗೆ ಸತ್ಯೇಂದ್ರಚೋಳನು ಸುಖದಿಂದ ರಾಜ್ಯಭಾರ ಮಾಡುತ್ತಿರಲು ವರ್ಷಾಕಾಲವು ಬಂದಿತು. ದೊರೆಯು ಶಿವಭಕ್ತರಿಗೆ ದಿವ್ಯ ಭೋಗಗಳನ್ನು ಸಲಿಸುತ್ತ ಅವರ ಪ್ರಸಾದವನ್ನು ಪಡೆದು ಶಿವಪೂಜೆಯಿಂದಲೂ ಪುರಾತನರ ಸಜನಾಗಮಾರ್ಥವನ್ನು ತಿಳಿಸುವ ಶಿವಗೀತ ಶ್ರವಣದಿಂದಲೂ ಆನಂದವನ್ನನುಭವಿಸುತ್ತಿರಲು, ಶರತ್ಕಾಲವು ಪ್ರಾಪ್ತವಾಯಿತು. ಹೀಗೆಯೇ ಸರಸೆಯಾಗಿ ಹಿಮಕಾಲ ಶಿಶಿರಕಾಲಗಳು ಬಂದುವು (೧೯). ಒಂದು ದಿನ ಸಂಧ್ಯಾಸಮಯದಲ್ಲಿ ರಾಜಪುತ್ರರು ಸಿಂಗರಿಸಿಕೊಂಡು ರಾತ್ರಿಯ ವಿಹಾರಕ್ಕಾಗಿ ತಮ್ಮ ಸಖರೊಡನೆ ಹೊರಟು ಸೂಳೆಗೇರಿಯನ್ನು ಹೊಕ್ಕು ಅಲ್ಲಿಯ ವಿಲಾಸಗಳನ್ನೂ ಚಮತ್ಕಾರಗಳನ್ನೂ ನೋಡುತ್ತ ಸಂಚರಿಸುತ್ತಿದ್ದರು. ಅಷ್ಟು ಹೊತ್ತಿಗೆ ಚಂದ್ರನಸ್ತಮಿಸಲು ರಾಜಕುಮಾರರು ಅರಮನೆಗೆ ಹಿಂದಿರುಗಿದರು (೨೨).

(ಏಳನೆಯ ಸಂಧಿ). ಪ್ರಾತಃಕಾಲದಲ್ಲಿ ರಾಜಕುಮಾರರು ಸ್ನಾನಮಾಡಿ ಲಿಂಗಾರ್ಚನೆಯನ್ನು ಭಕ್ತಿಯಿಂದ ನಡೆಯಿಸಿ ಶಿವಪ್ರಸಾದ ತಾಂಬೂಲವನ್ನು

ಸೇವಿಸಬೇಕೆಂದಿರುವ ಹೊತ್ತಿಗೆ ಚೋಳಾಧೀಶನು ಹೊರಟನೆನಲು, ಆ ಕುಮಾರರು ದೊರೆಗೆ ಹಸ್ತಲಾಘವವನ್ನು ಕೊಟ್ಟು ಓಲೈಸುತ್ತಿರಲು, ದೊರೆಯು ಅಲ್ಲಿಂದ ಹೊರಟು, ಕಂಚುಕಿಗಳು ಹೊಗಳುತ್ತಿರೆ, ಸಿಂಹಾಸನವನ್ನೇರಿ ಒಡ್ಡೋಲಗಗೊಟ್ಟು ಮಹಾ ವಿಭವದಿಂದ ಮೆರೆಯುತ್ತಿದ್ದನು. ಆಗ ಸಿಂಧುದೇಶಾಧಿಪನು ಅಲ್ಲಿಗೆ ಬಂದು ಆನೆಯಿಂದಿಳಿದು ದೊರೆಯನ್ನು ನಮಸ್ಕರಿಸಿ ನಿಂತು ಎರಡು ಉತ್ತಮವಾಜಿಗಳನ್ನು ಕಾಣಿಕೆ ಕೊಟ್ಟನು (೧೧). ಚೋಳನು ಸಿಂಧುದೇಶಾಧಿಪನನ್ನು ಮರ್ಯಾದೆಮಾಡಿ ಕಳುಹಿ ಆ ಕುದುರೆಗಳನ್ನು ತನ್ನ ಮಕ್ಕಳಿಬ್ಬರಿಗೂ ಕೊಡುವೆನೆಂದು ಸಂಕಲ್ಪಮಾಡಿದನು. ಮಾರನೆಯ ದಿನ ಪ್ರಾತಃಕಾಲದಲ್ಲಿ ರಾಜಕುಮಾರರು ನಿತ್ಯಕೃತ್ಯಗಳನ್ನು ತೀರಿಸಿ ದೊರೆಯು ಕೊಟ್ಟ ಕುದುರೆಗಳನ್ನು ತರಿಸಿ ಅಶ್ವಶಾಸ್ತ್ರ ಪ್ರವೀಣರಿಗೆ ಅವನ್ನು ತೋರಿಸಿದರು. ಆ ಶಾಸ್ತ್ರಜ್ಞರು ಕುದುರೆಗಳನ್ನು ಪರೀಕ್ಷಿಸಿ ಅವು ಸರ್ವ ಲಕ್ಷಣ ಸಂಪನ್ನವಾದುವೆಂದೂ ಅಂತಹವು ಮತ್ತೆಲ್ಲಿಯೂ ದೊರೆಯವೆಂದೂ ತಿಳಿಸಿದರು. ಇದನ್ನು ಕೇಳಿ ಮಂತ್ರಲಕ್ಷ್ಮನು ಆನಂದದಿಂದ ಆ ಕುದುರೆಗಳನ್ನು ತಾವಿಬ್ಬರೂ ಏರಿ ಸವಾರಿ ಮಾಡಬೇಕೆಂದು ತನ್ನ ಅಣ್ಣನಾದ ಮಿತವಚನನೊಡನೆ ತವಕದಿಂದ ಹೇಳಿದನು. ಇದನ್ನು ಕೇಳಿ ಮಿತವಚನನು, "ತಮ್ಮಾ! ಮುಂದಣ ಆಗುಹೋಗುಗಳನ್ನು ನೀನರಿಯೆ. ನಮ್ಮ ತಂದೆಯು ಇತರ ದೊರೆಗಳಂತೆ ಸತಿಸುತ ಮೋಹಿಯಲ್ಲ; ಸಕಲ ಸೌಭಾಗ್ಯವಿದ್ದರೂ ಜ್ಞಾನಿ; ಶಿವಭಕ್ತರಿಗೆ ನಮ್ಮಿಂದೇನಾದರೂ ನೋವಾದಲ್ಲಿ ತನ್ನ ಮಕ್ಕಳೆಂದು ನಮ್ಮನ್ನು ಮನ್ನಿಸುವನಲ್ಲ. ಆದುದರಿಂದ ಈ ಹೊಸ ಕುದುರೆಗಳನ್ನು ಮೊದಲು ತಿದ್ದಿಸುವುದು ಆವಶ್ಯಕ" ಎಂದನು. ಇದಕ್ಕೆ ಮಂತ್ರಲಕ್ಷ್ಮನು, "ಅಣ್ಣಾ! ಉತ್ಸಾಹವನ್ನು ಕೆಡಿಸಬೇಡ; ಪರಿಮಳವನ್ನು ಬೀರುತ್ತಿರುವ ಹೂವಿನ ಮಕರಂದವನ್ನು ಸವಿಯಲು ಭ್ರಮರಗಳು ವಿಚಾರಮಾಡುತ್ತವೆಯೆ? ಇದಕ್ಕೆ ತಂದೆಯೇನು ಮಾಡುವನು?" ಎಂದನು. ಇದನ್ನು ಕೇಳಿ ಮಿತವಚನನು "ತಮ್ಮಾ, ಧರ್ಮರಾಜನು ಬಳಲಿ ಬಾಯಾರಿ ಸರಸ್ಸಿನಲ್ಲಿ ನೀರನ್ನು ಕುಡಿಯುವುದಕ್ಕೆ ಹೋದಾಗ ಆಕಾಶವಾಣಿಯನ್ನು ಕೇಳಿ, ದುಡುಕದೆ ಮನಸ್ಸನ್ನು ಬಿಗಿಹಿಡಿದದ್ದರಿಂದ ಸತ್ತುಹೋಗಿದ್ದ ತನ್ನ ತಮ್ಮಂದಿರನ್ನು ಬದುಕಿಸಿಕೊಳ್ಳಲಿಲ್ಲವೆ? ಹಿಂದೆ ಅನೇಕರು ಆತುರಪಟ್ಟು ಕಷ್ಟಗಳನ್ನನುಭವಿಸಿರುವರು; ಆದಕಾರಣ ಈ ವಿಷಯದಲ್ಲಿ ವಿಚಾರಮಾಡುವುದು ಆವಶ್ಯಕ" ಎಂದನು. ಮಂತ್ರಲಕ್ಷ್ಮನು ಇದಕ್ಕೊಪ್ಪದೆ ಶಿವಭಕ್ತರಿಗೆ ಯಾವ ಕೇಡೂ ಬಾರದೆಂದೂ, ಕುದುರೆಯ ಸವಾರಿ ಬೇಡವೆಂದರೆ ತಾನು ಒಲ್ಲೆನೆಂದೂ, ಮುಂದೆ ಆಗಹೋಗುವುದು ಶಿವನಿಗಲ್ಲದೆ ಮತ್ತೊಬ್ಬರಿಗೆ ತಿಳಿಯದೆಂದೂ, ಮಿತವಚನನಿಂದ ಏನಾದರೂ ತಪ್ಪುಂಟಾದರೆ ಅದನ್ನು ತನ್ನದಾಗಿ ತಿಳಿಯುವೆನೆಂದೂ ಅದಕ್ಕೆ ಸಂದೇಹಪಡಬೇಡವೆಂದೂ ಅಣ್ಣನಿಗೆ ಬೋಧಿಸಿ ಅವನನ್ನು ಒಡಂಬಡಿಸಿದನು (೨೪).

(ಎಂಟನೆಯ ಸಂಧಿ). ರಾಜಕುಮಾರರು ಆ ಉತ್ತಮವಾಜಿಗಳನ್ನೇರಿ ಸಕಲ ವಾದ್ಯಗಳೊಡನೆ ಕೂಡಿ ಸೇನಾಸಮೇತರಾಗಿ ವೈಭವದಿಂದ ರಾಜವೀಥಿಯಲ್ಲಿ

ಹೊರಟು ಪುರಜನರ ನೋಟಕ್ಕೆ ಬೆಡಗನ್ನು ಬೀರುತ್ತ ಊರುಬಾಗಿಲನ್ನು ದಾಟಿ ಕುದುರೆಯ ಸವಾರಿಮಾಡುವ ಸ್ಥಳವನ್ನು ಸೇರಿ, ಕುದುರೆಗಳನ್ನು ನಾನಾ ತೆರನಾಗಿ ನಡಿಸುತ್ತ ಉತ್ಸಾಹವನ್ನು ಹೊಂದಿದರು (೧೫). ಅವರು ಹಿಂದಕ್ಕೆ ಬರುತ್ತಿರುವಾಗ, ಶಿವಭಕ್ತಳಾದ ಕೋಳಿವಾಡಿಯೆಂಬಾಕೆಯು ನೀರಿನ ಕೊಡವನ್ನು ಹೊತ್ತುಕೊಂಡು ಐದು ವರುಷ ವಯಸ್ಸಿನ ತನ್ನ ಬಾಲನೊಡನೆ ತಾನು ನೀರು ಹಾಕುತ್ತಿದ್ದ ಲಿಂಗವಂತರ ಮನೆಯನ್ನು ಹೊಕ್ಕು ಮರಿಯನ್ನಿರಿಸಲು, ಅಂಗಳದಲ್ಲಿದ್ದ ಬಾಲಕನು ವಾದ್ಯಗಳಿಂದ ಬರುವ ಸೇನೆಯನ್ನು ನೋಡುವ ವಶ್ವಾಗಿ ಹೊರಟು ನಡುಬೀದಿಗೆ ಬಂದನು. ಅಷ್ಟು ಹೊತ್ತಿಗೆ ಆ ದೊಡ್ಡ ಸೈನ್ಯವು ಸುತ್ತಲೂ ಕವಿದುಕೊಳ್ಳಲು, ಬಾಲಕನು ಬೇಗನೆ ಜನರ ಸಂದಣಿಯಿಂದ ನೆಲಕ್ಕೆ ಬಿದ್ದನು. ಇದನ್ನು ಬಹಳ ವೇಗದಿಂದ ಬರುತ್ತಿದ್ದ ಮಂತ್ರಿ ಲಕ್ಷ್ಮಣನು ನೋಡಿ ಗಟ್ಟಿಯಾಗಿ ಕೂಗಿ ತನ್ನ ಕುದುರೆಯನ್ನು ಆ ಹುಡುಗನ ಮೇಲೆ ದಾಟಿಸಿದನು. ಹುಡುಗನು ಕೈಯೂರಿ ಮೇಲಕ್ಕೇಳುತ್ತಿರುವಷ್ಟರಲ್ಲಿ ಹಿಂತಿರುಗಿದ ಕುದುರೆಯು ವೇಗದಿಂದ ಬಂದು ಬಾಲಕನನ್ನು ತುಳಿಯಲು ಅವನ ತಲೆಯು ಪುಟನೆಗೆದು ಕೆಳಗೆ ಬಿದ್ದಿತು. ಆಗ ರಾಜಕುಮಾರರೂ ಮುಕುಟವರ್ಧನರೂ ಗಾಬರಿಪಟ್ಟು ಶಿವಭಕ್ತನ ವಧೆಯಾಯಿತಲ್ಲಾ ಎಂದು ವ್ಯಥೆಪಡುತ್ತ ಹೊರಟು ಅರಮನೆಯನ್ನು ಸೇರಿದರು. ಇತ್ತ, ಪುರಜನರು ಆ ಬಾಲಕನ ರುಂಡ ಮುಂಡಗಳನ್ನು ಕಂಡು ಮರುಗಿ ಈ ಶಿವದ್ರೋಹಕ್ಕೆ ಶಿವಭಕ್ತನಾದ ದೊರೆಯು ಏನು ಮಾಡುವನೋ ಎಂದು ನಾನಾ ವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು. ಇಷ್ಟರಲ್ಲಿ ತಾಯಿಯು ತನ್ನ ಹುಡುಗನನ್ನು ಕಾಣದೆ ಗಾಬರಿಪಟ್ಟು ಶಂಕರ, ಶಂಕರ ಎಂದು ಅವನ ಹೆಸರು ಹಿಡಿದು ಕೂಗುತ್ತ ಬೀದಿಯಲ್ಲಿ ಬರುತ್ತಿದ್ದಳು. ಆಗ ಅಲ್ಲಿದ್ದ ಜನರು ಈಕೆಯ ವ್ಯಥೆಯನ್ನು ಕಂಡು, ಬಿಟ್ಟ ಹುಡುಗನನ್ನು ಈಗ ತಾನೆ ರಾಜಕುಮಾರನ ಕುದುರೆಯು ತುಳಿದು ಕೊಂದುಹಾಕಿತೆಂದು ಹೇಳಿದರು. ಇದನ್ನು ಕೇಳಿ ಆಕೆಯು ಅಳುತ್ತ ಹುಡುಗನ ಶವವಿದ್ದ ಸ್ಥಳಕ್ಕೆ ಬಂದು ಅದನ್ನು ಕಂಡು ನೆಲದ ಮೇಲೆ ಬಿದ್ದು ಹೊರಳುತ್ತ ರೋದನಮಾಡುತ್ತ ದುಃಖಾತಿಶಯದಿಂದ ತನ್ನ ಕಂದನನ್ನು ನೆನೆನೆನೆದು ಬಳಲುತ್ತ ಎಲ್ಲರಿಗೂ ಕರುಣವನ್ನು ಹುಟ್ಟಿಸುತ್ತ ಆ ರುಂಡವನ್ನು ಹೊತ್ತುಕೊಂಡು ಅರಮನೆಗೆ ಬಂದು ಮೊರೆಯಿಟ್ಟಳು. ದೊರೆಯು ಈ ಸುದ್ದಿಯನ್ನು ಕೇಳಿ ಮರುಗಿ, ಶಿವಭಕ್ತನ ವಧೆಯಾಗಿರಬೇಕೆಂದೂಹಿಸಿ ತಾನೇ ಪರೀಕ್ಷಿಸಬೇಕೆಂದು ಹೊರಡುತ್ತಿರುವಲ್ಲಿ ದ್ವಾರಪಾಲಕನು ಬಂದು ಕೈಮುಗಿದು "ಜೀಯಾ! ಕತ್ತರಿಸಿಹೋದ ಬಾಲಕನ ತಲೆಯನ್ನು ಹೊತ್ತುಕೊಂಡು ಒಬ್ಬ ಸ್ತ್ರೀಯು ರೋದನಮಾಡುತ್ತ ಬಂದಿರುವಳು" ಎಂದು ಹೇಳಿ, ದೊರೆಯ ಆಜ್ಞೆಯ ಮೇರೆಗೆ ಆ ಸ್ತ್ರೀಯನ್ನು ಸಭಾಮಂಟಪಕ್ಕೆ ಕರೆತರಲು, ಆಕೆಯು ಬಾಲಕನ ತಲೆಯನ್ನು ದೊರೆಯ ಮುಂದಿಟ್ಟು ಹಾ! ಎಂದು ಬಿದ್ದು ಹೊರಳುತ್ತಿದ್ದಳು. ದೊರೆಯು ಆಕೆಯನ್ನು ಕರುಣದಿಂದ ಕಂಡು, "ನೀನು ಯಾರು? ಕಡಿದ ತಲೆಯ ಹುಡುಗನು ಯಾರವನು? ಈ ಚೆಲುವನನ್ನು ಕೊಂದ ದುಷ್ಕರ್ಮಿ

ಯಾರು?" ಎಂದು ಕೇಳಲು, ಆ ಸ್ತ್ರೀಯು ಅಳುತ್ತ, "ಪ್ರಭುವೆ! ತಮ್ಮ ಪಟ್ಟಣದ ವರ್ತಕರಲ್ಲೊಬ್ಬನಾಗಿ ಅಧಿಕ ಸಂಪತ್ತುಳ್ಳವನಾಗಿದ್ದ ಸಾಗರದತ್ತನೆಂಬ ಗುಣ ಸಂಪನ್ನನ ಹೆಂಡತಿಯು ನಾನು. ಆರು ಮಂದಿ ಗಂಡುಮಕ್ಕಳನ್ನು ಪಡೆದು ಸಕಲ ಸೌಭಾಗ್ಯವನ್ನನುಭವಿಸುತ್ತಿದ್ದೆನು. ಹೀಗಿರುವಾಗ ಒಂದು ಸಂದರ್ಭದಲ್ಲಿ ನನ್ನ ಪತಿಯು ಒಂದು ದೊಡ್ಡ ಹಡಗಿನಲ್ಲಿ ತನ್ನ ವಸ್ತುಗಳೆಲ್ಲವನ್ನೂ ಹಣವನ್ನೂ ತುಂಬಿ ಸಮುದ್ರ ಪ್ರಯಾಣ ಹೊರಟನು. ಹಡಗು ಒಡೆದು ಅವನೂ ಅವನ ವಸ್ತುಗಳೂ ಮುಳುಗಿಹೋದುವು. ಅಂದಿನಿಂದ ನನ್ನ ದೌರ್ಭಾಗ್ಯಕ್ಕೆ ಎಣೆಯಿಲ್ಲ; ಆದರೂ ನನ್ನ ಆರು ಮಂದಿ ಮಕ್ಕಳನ್ನೂ ನೋಡಿಕೊಂಡು ಜೀವದಿಂದಿದ್ದೆನು. ನನ್ನ ಪತಿಯು ಸಾಯುವ ಕಾಲಕ್ಕೆ ನಾನು ಮೂರು ತಿಂಗಳ ಗರ್ಭಿಣಿ; ಬಡತನವ ನೀಗಿಸುತ್ತಿದ್ದರೂ ಲಕ್ಷ್ಯಮಾಡದೆಯಿದ್ದೆನು. ಆರು ತಿಂಗಳೊಳಗಾಗಿ ಆರು ಮಂದಿ ಮಕ್ಕಳೂ ಸತ್ತರು. ಆಗ ಶಿವನು ನನ್ನ ಕನಸಿನಲ್ಲಿ ಬಂದು ನನಗೆ ಉತ್ತಮನಾದ ಮಗನು ಹುಟ್ಟುವನೆಂದೂ, ಅವನು ನನಗೆ ಮುಕ್ತಿಮಾರ್ಗವನ್ನು ತೋರಿಸುವನೆಂದೂ, ಚಿಂತಿಸಬೇಡವೆಂದೂ ಹೇಳಲು, ನಾನು ಸಂತೋಷಭರಿತಳಾಗಿ ಈ ಕುಮಾರನನ್ನು ಹೆತ್ತೆನು. ನನ್ನ ಪತಿಯು ಕಡಲಲ್ಲಿ ಮುಳುಗಿಹೋದ ವ್ಯಥೆಯನ್ನೂ, ದಾರಿದ್ರ್ಯದ ಚಿಂತೆಯನ್ನೂ, ಆರು ಮಕ್ಕಳು ಮಡಿದ ತಾಪವನ್ನೂ ಈ ಕಂದನು ಮರೆಯಿಸುವುದರಿಂದ ಇವನಿಗೆ ಶಂಕರನೆಂಬ ಹೆಸರನ್ನಿಟ್ಟು ಪರರ ಮನೆಗೆ ನೀರನ್ನು ಹೊತ್ತು ಇವನನ್ನು ಸಾಕುತ್ತಿದ್ದೆನು. ಈ ನನ್ನ ಮುದ್ದು ಮಗನು, ವಿನೋದಾರ್ಥವಾಗಿ ಸವಾರಿಮಾಡುತ್ತಿದ್ದ ನಿನ್ನ ಮಕ್ಕಳ ಕುದುರೆಯ ಕಾಲಿಗೆ ಬಲಿಯಾದನಲ್ಲಾ ಶಿವ ಶಿವಾ" ಎಂದು ಹೇಳಿ ತಿರುಕೊಳಬನಾಚಿಯು ಬಳಲುತ್ತಿರಲು, ದೊರೆಯು ಅಂತಹ ಶಿವಭಕ್ತಳ ಮಗನ ಮರಣವು ಸುಮ್ಮನೆ ಹೋಗದೆಂದು ನುಡಿದು ತನ್ನ ಮಕ್ಕಳನ್ನು ಬರಹೇಳಿದನು (೨೮).

(ಐಂಬತ್ತನೆಯ ಸಂಧಿ). ರಾಜಕುಮಾರರು ಶಿವಪೂಜೆಯನ್ನು ಮಾಡಿ ಹೊರಟು ರಾಜಸಭೆಯನ್ನು ಹೊಕ್ಕು ದೊರೆಗೆ ಕೈಮುಗಿದು ನಿಂತಿರಲು, ಇವರನ್ನು ನೋಡಿ ದೊರೆಯು ಬಹಳ ಕೋಪದಿಂದ, "ಎಲೈ! ನೀವು ಯೌವನದ ಸ್ವಭಾವದಿಂದ ಶಿವಭಕ್ತನನ್ನು ಕೊಂದಿರಲ್ಲವೆ? ಸುಗಂಧವನ್ನು ಬೀರುತ್ತಿರುವ ಪುಷ್ಪದಲ್ಲಿ ಹುಳು ಹುಟ್ಟಿದಂತೆ ನನ್ನ ಕುಲದಲ್ಲಿ ನೀವು ಹುಟ್ಟಿದಿರಿ. ಶಿವಭಕ್ತನ ಸಾವಿಗೆ ನಿಮ್ಮ ಪ್ರಾಣ ನೀಡಿದ ಕಣದ ಕೋಟ್ಯಂಶಕ್ಕೂ ಸಾಟಿಯಿಲ್ಲ. ಈ ಕುಮಾರನನ್ನು ಕುದುರೆಯ ತುಳಿತದಿಂದ ಕೊಂದವನು ಯಾರು?" ಎಂದು ಕೇಳಲು, ಸುಕೇತನನು, "ದೇವಾ! ನಾವಿಬ್ಬರೂ ಕುದುರೆಯ ಸವಾರಿಗೆ ಹೋಗಿಬರುತ್ತಿರುವ ಸಂದರ್ಭದಲ್ಲಿ ಈ ಹುಡುಗನು ಎದುರಾಗಲು, ನನ್ನ ತಮ್ಮನ ಕುದುರೆಯು ಅವನನ್ನು ದಾಟಿತು; ನನ್ನ ಕುದುರೆಯ ಗೊರಸಿನಿಂದಾದ ಗಾಯದಿಂದ ಹುಡುಗನು ಮಡಿದನು; ಆದುದರಿಂದ ತಪ್ಪು ನನ್ನದು; ನನ್ನ ತಲೆಯನ್ನು ತೆಗೆಯುವುದೇ ಧರ್ಮವು" ಎಂದು ಹೇಳಿದನು. "ಹಾಗಾದರೆ ಈ ಅನ್ಯಾಯವನ್ನು ತೀರಿಸುವದಕ್ಕೆ ನಿಂತವನನ ತಲೆಯನ್ನು ಕತ್ತರಿಸಬೇಕು" ಎಂದು ಅರಸನು ನುಡಿಯಲು,

ಮಂತ್ರಿಲಕ್ಷ್ಮಣನು ದೊರೆಗೆ ಕೈಮುಗಿದು ಈ ರೀತಿಯಾಗಿ ಬಿನ್ನವಿಸಿದನು:—"ಅಪ್ಪಾ! ಕೇಳು, ನಾನು ಸುಳ್ಳು ಹೇಳಲಾರೆನು. ಈ ದಿನ ನಾವು ಕುದುರೆಯ ಸವಾರಿ ಹೋಗುವಲ್ಲಿ, ನಿನ್ನಿಂದಾದ ಅಪರಾಧವ ನನ್ನಿಂದು ಅಣ್ಣನೊಡನೆ ಹೇಳಿದೆನು; ಆದುದರಿಂದ ಈ ತಪ್ಪು ನನ್ನದು; ಇದು ನಿಶ್ಚಯ. ಈ ಶಿವಭಕ್ತನ ತಲೆಗೆ ನನ್ನ ತಲೆಯನ್ನು ತೆಗೆಯಬೇಕಪ್ಪಾ; ಇದಕ್ಕೆ ಸಂಶಯಪಡುವುದನುಚಿತ" ಎಂದು ಕುಮಾರನು ಪ್ರಾಣದಾಸೆಯನ್ನು ಬಿಟ್ಟು ಧೈರ್ಯದಿಂದ ಮಾತನಾಡಲು, ತಪ್ಪು ಇವನ ಮೇಲೆ ಹೊತ್ತದ್ದನ್ನರಿತು ದೊರೆಯು ತನ್ನ ಜೀವಸ್ವರೂಪನಾದ ಮಂತ್ರಿಯ ಮುಖವನ್ನು ಕೋಪದಿಂದ ನೋಡಿ, "ಇವನ ತಲೆಯನ್ನು ಈಗಲೇ ಕತ್ತರಿಸಿ ನನ್ನಿದಿರಿಗೆ ತಂದು ಕೊಡುವುದು" ಎಂದು ಹೇಳಿದನು. ಮಂತ್ರಿಯು ಪ್ರಸಾದವೆಂದು ಹೇಳಿ ಕುಮಾರನನ್ನು ಶಿವಪೂಜೆ ಮಾಡಲು ಕಳುಹಿ, ತಾನು ಬೇಗನೆ ತನ್ನ ಮನೆಯನ್ನು ಹೊಕ್ಕು, ಪರಿಶುದ್ಧನಾದ ರಾಜಪುತ್ರನ ತಲೆಯನ್ನು ಕತ್ತರಿಸುವುದಕ್ಕೆ ಮೊದಲು ತಾನೇ ಸಾಯುವೆನೆಂದು ನಿಶ್ಚಯಿಸಿ ಖಡ್ಗದಿಂದ ತನ್ನ ಕೊರಳನ್ನು ಕೊಯ್ದುಕೊಂಡನು. ಇದನ್ನು ಕೇಳಿ ಸುಜನರೆಲ್ಲರೂ ಮರುಗಿದರು.

ಕುಮಾರನು ಶಿವಪೂಜೆಯನ್ನು ಮಾಡಿ ಮರಣಕ್ಕೆ ಸಿದ್ಧನಾಗುತ್ತಿರಲು ಅಮೃತವತಿಯು ಈ ಸಮಾಚಾರವನ್ನು ಕೇಳಿ ಓಡಿಬಂದು ತನ್ನ ಪಾದಕ್ಕೆರಗಿದ ಮಗನನ್ನು ಬಿಗಿದಪ್ಪಿ ಮುಖವನ್ನು ನೋಡುತ್ತಿರಲು ಮಂತ್ರಿಲಕ್ಷ್ಮಣನು, "ತಾಯೆ! ಬಹು ಕಾಲ ಮಕ್ಕಳಿಲ್ಲದೆ ಗುರುಕರುಣದಿಂದ ನನ್ನನ್ನು ಹೆತ್ತು ಸಲಹಿ ಪ್ರಾಯದಲ್ಲಿ ನನ್ನ ಸಿರಿಯನ್ನು ನೋಡಿ ಆನಂದಿಸುವ ಕಾಲದಲ್ಲಿ ನಾನು ಮಾಡಿದ ತಪ್ಪಿಗೆ ತಂದೆಯು ನನ್ನ ಕೊರಳನ್ನು ಕೊಯಿಸುವನೆಂದು ನೀನು ನೊಂದರೆ ಪಾಪ ಬರುವುದು; ಆದುದರಿಂದ ತಾಯೆ! ಮರುಗಬೇಡ" ಎಂದು ಹೇಳಿದನು. ಇದನ್ನು ಕೇಳಿ ಅಮೃತವತಿಯು ಮಗನನ್ನು ಮುದ್ದಾಡಿ, "ಕಂದನೇ! ನನಗೆ ಚಿಂತೆಯೇಕೆ! ಪತಿಯು ಸತ್ಯವನ್ನು ಹಿಡಿದು ಭಕ್ತನಿಗೆ ನಿನ್ನ ತಲೆಯನ್ನು ಕೊಡುವಲ್ಲಿ, ನಾನು ನನ್ನ ಕಂದನನ್ನು ಅತ್ತೆಯೊಡನೆ ತವರೂರಿಗೆ ತಾಯಿಯು ಬಿಡಗೆ ಕಳುಹಿಸಿದಂತೆ ಭಾವಿಸುವೆನು; ನಿನ್ನ ಹೆತ್ತ ತಾಯಿ ಪಾರ್ವತಿಯ ತೊಡೆಯನ್ನೇರಿ ಮುದ್ದು ಕೊಡು ಹೋಗು" ಎಂದು ಅಪ್ಪಣೆ ಕೊಟ್ಟಳು. ಆಕೆಯು ಎಷ್ಟು ಕೃತಕೃತ್ಯೆಯೊ?

ಈ ರೀತಿಯಾಗಿ ಕುಮಾರನು ಮರಣಕ್ಕೆ ಸಿದ್ಧನಾಗಿ ತಂದೆಗೆ ನಮಸ್ಕರಿಸಲು, ದೊರೆಯು ಇವನ ತಲೆಯನ್ನು ಕಡಿಯುವಂತೆ ಮಂತ್ರಿಗೆ ಆಜ್ಞೆ ಕೊಟ್ಟದ್ದು ಏನಾಯಿತೆಂದು ಕೇಳಿದನು. ಅದಕ್ಕೆ ಸಭ್ಯರು, "ಜೀಯಾ! ಮಂತ್ರಿಯು ನಿಮ್ಮ ಆಜ್ಞೆಯನ್ನು ಮೀರಲಾರದೆಯೂ, ಈ ಕುಮಾರನನ್ನು ಕೊಲ್ಲಲಾರದೆಯೂ, ಈಶ್ವರ ಪೂಜೆಯನ್ನು ಮಾಡಿ ಬರುವುದೆಂದು ಇವನನ್ನು ಕಳುಹಿ ತಾನು ಬೇಗನೆ ಮನೆಗೆ ಹೋಗಿ ತನ್ನ ಕೊರಳನ್ನು ಕೊಯ್ದುಕೊಂಡನು" ಎಂದು ಹೇಳಿದರು. ಅದಕ್ಕೆ ದೊರೆಯು, ಆಗಲಿ ಎಂದು ಹೇಳುತ್ತ ತನ್ನ ಮುಂದಿದ್ದ

ಸಂದಾಯಿಯೆಂಬ ಭಟನ ಮಾತನ್ನು ನೋಡಿ ಮಂತ್ರಲಕ್ಷ್ಮನ ಶಿರವನ್ನು ಕತ್ತರಿಸಿ ಶಂಕರನ ತಲೆಗೆ ಮುಚ್ಚಿಕೊಂಡೆನೆಂದು ಹೇಳಲು, ಅವನು ಪ್ರಸಾದವೆಂದು ಹೇಳಿ ಅರಸುಮಗನನ್ನು ಕರೆದುಕೊಂಡು ಹೊರಟು ಬೀದಿಯಲ್ಲಿ ಬರುತ್ತಿರಲು, ಜನರು ನೋಡಿ ಗೋಳಾಡಿದರು. ಮಂತ್ರಲಕ್ಷ್ಮನು ಸಂದಾಯಿಯೊಡನೆ ಊರ ಹೊರಗಣ ಉದ್ಯಾನಕ್ಕೆ ಬಂದು ತತ್ಪುರುಷ ಮೂರ್ತಿಯನ್ನು ನೋಡಿ ಪರಬ್ರಹ್ಮವನ್ನು ನೆನೆದು ಪದ್ಮಾಸನದಲ್ಲಿ ಕುಳ್ಳಿರಲು, ಸಂದಾಯಿಯು ಕತ್ತಿ ಮಸೆಯುತ್ತ, "ದೇವಾ! ತನ್ನ ತಲೆ ದೇಹದಿಂದ ಬೀಳುವ ವೇಳೆಗೆ ಪರಮಪಂಚಾಕ್ಷರಿಯನ್ನು ತಾವು ಮರೆಯದಿರಿ" ಎನಲು, ಕುಮಾರನು ನಗುತ್ತ, ಆ ಮಂತ್ರವನ್ನು ನಾನು ಮರೆತರೆ ಆಗ ನೀನು ಸೂಚಯಿಸು ಎಂದನು. ಸಂದಾಯಿಯು ಅದೇ ಕೆಡದು ಕೇಳಲು, ಮಂತ್ರಲಕ್ಷ್ಮನು "ಅಯ್ಯಾ! ಮಂತ್ರಿಯು ತನ್ನ ಪ್ರಭುವಿನ ಆಜ್ಞೆಯನ್ನು ಮನ್ನಿಸದೆ ಮಾಡಿದನು; ನಿನ್ನ ಘಟತನವೂ ಹಾಗೆಯೇ ಆಗುವುದು" ಎಂದು ಉತ್ತರಿಸಿದನು (೨೬). ಅದು ಹೇಗೆಂದು ಸಂದಾಯಿಯು ಕೇಳಲು, ಕುಮಾರನು, "ಈ ಮಂತ್ರವು ಸರ್ವಕರ್ಮ ಮೂಲಸ್ತಂಭವು; ಇದರ ಸಾಮರ್ಥ್ಯದಿಂದ ಕತ್ತಿಯು ಪುಟ ನೆಗೆಯುವುದು, ಇಲ್ಲದಿದ್ದರೆ ಹೂವಿನಮಾಲೆಯಾಗುವುದು" ಎಂದನು. ಸಂದಾಯಿಯು, "ದೇವಾ, ಆದರೆ ನನ್ನೊಡೆಯನ ಆಜ್ಞೆಗೆ ಹಾನಿಯಾದರೇನು? ನನ್ನ ಭೃತ್ಯತ್ವ ಕೆಟ್ಟರೇನು? ಮಹಾದೇವನನ್ನು ನೆನೆಯದ ಬರಿಗಾಯದಿಂದ ತಾವು ಸಾಯಬಹುದೆ?" ಎನಲು, ಮಂತ್ರಲಕ್ಷ್ಮನು ತನ್ನ ಪ್ರಭಾವವನ್ನು ತೋರಿಸುವೆನೆಂದೂ ತನ್ನನ್ನು ಹೊಡೆಯಬೇಕೆಂದೂ ಹೇಳಿದನು. ಆಗ ಸಂದಾಯಿಯು ಕತ್ತಿಯನ್ನು ಬೀಸಲು ತಲೆಯುರುಳಿದು ಆಕಾಶಕ್ಕೆ ಪುಟ ನೆಗೆದು ಕೆಳಕ್ಕಿಳಿದು ಪಂಚಾಕ್ಷರಿಯನ್ನು ಎಡೆಬಿಡದೆ ಜಪಿಸುತ್ತಿದ್ದಿತು. ಹೀಗೆ ಪಂಚಾಕ್ಷರಿಯನ್ನು ಜಪಿಸುತ್ತಿದ್ದ ತಲೆಯನ್ನು ಹಿಡಿದುಕೊಂಡು ಸಂದಾಯಿಯು ನೃಪಸಭೆಗೆ ಬರುತ್ತಿರಲು ಪುರಜನರು ಆಶ್ಚರ್ಯಪಟ್ಟು ಮಂತ್ರಲಕ್ಷ್ಮನನ್ನು ಹೊಗಳುತ್ತಿದ್ದರು. ಆಗ ಸುರದುಂದುಭಿ ಮೊಳಗಿದುವು, ಹೂಮಳೆ ಸುರಿಯಿತು. ಭೃತ್ಯನು ಸಭಾಮಂದಿರಕ್ಕೆ ಬಂದು ಪಂಚಾಕ್ಷರಿಯನ್ನು ಜಪಿಸುತ್ತಿದ್ದ ತಲೆಯನ್ನು ದೊರೆಯ ಕೈಗೆ ಕೊಡಲು, ಆತನು ಈ ಆಶ್ಚರ್ಯವನ್ನು ಕಂಡು ವೃತ್ತಾಂತವನ್ನೆಲ್ಲ ತಿಳಿಸುವಂತೆ ಸಂದಾಯಿಗೆ ನೇಮಿಸಿದನು. ಅವನು ಎಲ್ಲ ವೃತ್ತಾಂತವನ್ನೂ ತಿಳಿಸಿ ಕುಮಾರನ ನಿಷ್ಠೆಯ ಜ್ಞಾನವನ್ನು ತೋರಿಸಿ ಬೊಬ್ಬಿಡುತ್ತ ತನ್ನ ತಲೆಯನ್ನು ಕತ್ತರಿಸಿಕೊಂಡನು; ಆ ತಲೆಯೂ ಪಂಚಾಕ್ಷರಿಯನ್ನು ಜಪಿಸುತ್ತಿದ್ದಿತು. ಇದೆಲ್ಲವನ್ನೂ ಕಂಡು ಸಭೆಯು ಅವರನ್ನು ಕೊಂಡಾಡಿತು. ಈ ಎರಡು ತಲೆಗಳೂ ಜಪಿಸುವ ಮಂತ್ರಾಮೃತದಿಂದ ಶಂಕರನ ತಲೆಗೆ ಪ್ರಾಣ ಬಂದು ಅದೂ ಪಂಚಾಕ್ಷರಿಯನ್ನು ಜಪಿಸಲಾರಂಭಿಸಿತು. ಆಗ ತಿರುಕೊಳನಾಚಿಯು, "ದೊರೆಯೇ! ನನ್ನ ಮಗನ ತಲೆಗೆ ನಿನ್ನ ಮಗನ ತಲೆ ಮುಯ್ಯಾಯಿತು; ನಿನ್ನ ಭೃತ್ಯವರ್ಯನ ತಲೆಗೆ ನನ್ನ ತಲೆ ಮುಯ್ಯಿ" ಎಂದು ಹೇಳಿ ಅಕೆ ತನ್ನ ತಲೆಯನ್ನು ಕತ್ತರಿಸಿಕೊಂಡಳು. ಆ ತಲೆಯೂ ಶಿವ ಮಂತ್ರವನ್ನು ಜಪಿಸಲಾರಂಭಿಸಿತು. ಇದನ್ನು ನೋಡಿ

ಚೋಳನು ತನ್ನ ತಲೆಯನ್ನು ಕೊಡುವೆನೆಂದು ನಿಶ್ಚಯಿಸಲು, ಪ್ರಧಾನಿಯ ಶಿರಕ್ಕೆ ಪ್ರಾಣಬಂದು ಅದೂ ಪಂಚಾಕ್ಷರಿಯನ್ನು ಹೇಳತೊಡಗಿತು. ದೊರೆಯು ತನ್ನ ಶಿರವನ್ನು ಕತ್ತರಿಸಿಕೊಳ್ಳಲು, ಅದರಿಂದಲೂ ಮಂತ್ರವು ಹೊರಟಿತು. ಈ ಎರಡು ತಲೆಗಳನ್ನೂ ಕಂಡು ಮಿತವಚನನು ತನ್ನ ತಲೆಯನ್ನೂ ಕತ್ತರಿಸಿ-ಕೊಂಡನು. ಅದೂ ಪಂಚಾಕ್ಷರಿಯನ್ನು ಜಪಿಸತೊಡಗಿತು. ಇದೆಲ್ಲವನ್ನೂ ಕೇಳಿದ ಅಮೃತವತಿಯು ಮಿತವಚನನ ಶಿರಕ್ಕೆ ಮುಯ್ಯಿಗೊಡಲೆಂದು ತನ್ನ ತಲೆಯನ್ನು ಕೊಯ್ದುಕೊಳ್ಳಬೇಕೆಂದಿರುವಲ್ಲಿ ಶಿವನು ಪ್ರತ್ಯಕ್ಷನಾಗಿ, ಆಕೆಯ ಕೈಯಹಿಡಿದುಕೊಂಡನು. ಸುರದುಂದುಭಿಗಳು ಮೊಳಗಿದುವು, ಪೂಮಳೆಗರೆಯಿತು. ಆಗ ಶಿವನು ಅಮೃತವತಿಗೆ ಇಷ್ಟಸಿದ್ಧಿಯನ್ನುಂಟುಮಾಡಬೇಕೆಂದೆಣಿಸಿ, “ಸತಿಯೆ! ಇಷ್ಟು ಮಂದಿಯಲ್ಲಿ ಒಬ್ಬನನ್ನು ಬದುಕಿಸಿಕೊಡುವೆನು, ನಿನಗೆ ಬೇಕಾದವರನ್ನು ಬೇಡು” ಎನಲು, ಆಕೆಯು ಪತಿ ಪುತ್ರ ಮೊದಲಾದವರನ್ನು ಲಕ್ಷಿಸದೆ ಶಂಕರನನ್ನು ಬದುಕಿಸಿಕೊಟ್ಟಲ್ಲಿ ಅದು ತನಗೆ ಅತಿಶಯದ ಸುಖವೆಂದು ಹೇಳಿದಳು. ಹೀಗೆಂದ ಅಮೃತವತಿಯ ನುಡಿಗೆ ಸಂತೋಷಪಟ್ಟು ಶಿವನು, “ಈತನಿಂದಲ್ಲವೇ ಇಷ್ಟು ಮಂದಿ ಸಾಯಬೇಕಾಯಿತು? ಈತನು ಬದುಕಿದಲ್ಲಿ ಎಲ್ಲರೂ ಬದುಕುವರು” ಎಂದು ಹೇಳಲು, ಆ ಆ ತಲೆಗಳು ಆ ಆ ಅಟ್ಟೆಗಳನ್ನು ಕೂಡಿ ಸಪ್ರಾಣವಾದುವು. ಎಲ್ಲರೂ ಎದ್ದು ಕೂಡಲೆ ಸಾಷ್ಟಾಂಗವೆರಗಿ ಶಿವನನ್ನು ಸ್ತೋತ್ರಮಾಡಿದರು. ಆಗ ಇವರಿಗಾಗಿ ನವರತ್ನ ಖಚಿತವಾದ ಎಂಟು ವಿಮಾನಗಳು ಆಕಾಶದಿಂದಿಳಿಯಲು ಒಂದೊಂದನ್ನು ಒಬ್ಬೊಬ್ಬರೇರಿದರು. ಕೂಡಲೆ ಅವು ಆಕಾಶಕ್ಕೆ ನೆಗೆದು ಕೈಲಾಸವನ್ನು ಸೇರಿದುವು. ಇವರೆಲ್ಲರೂ ಶಿವನ ಸಭೆಯನ್ನು ಹೊಕ್ಕು ಶಿವನನ್ನು ಸ್ತೋತ್ರಮಾಡಿದರು.

ಕವಿತೆಯ ಮಾದರಿಗಳು:—

ವರ್ಣನೆ

ಇಂತು ಕುವರರು ನಾಡೆ ಮೆಚ್ಚಿರೆ ಧರೆ ಕೊಂಡಾಡೆ|
ಸಂತಸದ ಚೈತ್ರಕಾಲಂ ಮೂಡೆ ದಕ್ಷಿಣದಿ|
ವಾಂತಪೊಳಗೆಲರು ತಣ್ಣನೆ ತೀಡೆ ಕೋಕಿಲಂಗಳ್ ಕೊರಲೆತ್ತಿ ರವಮಾಡೆ|
ಕಂತು ನಲಿದಾಡೆ ವನಿತೆಯರಳಿಪಿನಿಂ ನೋಡೆ|
ಮುಂತೆ ಪಾರ್ವಲರ್ವಕ್ಕಿ ಝುಂಕಾರದಿಂ ಪಾಡೆ|
ಕಾಂತ ಸಹಕಾರವಾ ಕೆಂದಳಿರ್ಗಳೊಳ್ ಕೂಡಿ ರಾಜಿಸುಮುದಾ ವಸಂತಂ| (೪–೬)

ಸೂರಿಜನ ಹರ್ಷ ವಿಸ್ತಾರಿ ಸುಖ ಸಂಕಥಾ|
ಕಾರಿ ಬಟ್ಟಿನೆರ್ದೆಗಂ ಕಠಾರಿ ಬೆಳೆ ಸಿರಿಯ ಭರ|
ಭಾರಿ ಕುಶ್ರಮ ಸಂಗ ವೈರಿ ಜಲಚರ ಸದಾಧಾರಿ ಕಾಲಾರಿ ಶಿವನ ||
ನಾರಿ ಗಂಗಾಂಬಾವತಾರಿ ದುರ್ದೋಷ ಸಂ|
ಹಾರಿಯೆಂದೊದಚ್ಚುವತಿ ಭೇರಿಯಾರ್ಭಟೆ ವೀಚಿ|
ಧಾರಿ ಬಹು ಮಾರ್ಗ ಪ್ರಚಾರಿಯಾನಾಡ ಕಾವೇರಿ ಭೋರ್ಗರೆದೆಸೆದುದು || (೨–೭)

ಕುಸುಮ ರಜದಿಂದ ಫಲ ರಸದಿಂದ ನಾಡೆ ನ।
ರ್ತಿಸುವ ಶಿಖಿಯಿಂದ ತೆಂಬೆಲರಿಂದನಂತ ರಂ।
ಜಿಸುವ ಕನಕಾಬ್ಜ ಪಙ್ಕ್ತಿಗಳ ನಿರ್ಮಳ ಜೀವನಂಗಳ ಸರೋವರಗಳ।
ಒಸೆದು ಸಾರ್ದೊರೆವುತಿಹ ಹಂಸ ಮಿಥುನಂಗಳಿಂ।
ವೆಸೆವಷ್ಟಮೂರ್ತಿವಿತತ್ತಾದ ತದ್ವನದೇವಿ।
ವಸುಧಾಧಿಪತಿಯನುಪಚರಿಪಂತೆ ಮುನ್ನೀದುದಂತಾವನಂ ಪಿಂಗೆ ಪಾವನಂ। (೪–೧೯)

ಅಲಂಕಾರಗಳು

ಉಡುವರಂ ದಕ್ಷಸುತೆಯರ ಮದುವೆಯಾಗಿ ಬ।
ರ್ಪೆಡೆಯೊಳಿಂದಿರೆ ನಿಜಾಗ್ರಜನನುರೆ ಬಾಗಿಲಂ।
ತಡೆಯಲಚಲತ್ವದಿಂದಿರ್ದಂತಿರಿರ್ಪ ಮೇರುವಿನ ಸಾನ್ನಿಧ್ಯದಲ್ಲಿ॥
ಕಡು ನೇಹದಿಂ ಸುತ ವಿವಾಹಕ್ಕೆ ಬಂದು ಪಾ।
ಲ್ಗಡಲಜಾಧ್ವರ್ಗೆ ಭಾವಿಸೆ ಗೋತ್ರವಾಗುತಂ।
ಪುಡುಕ ಮುಂಸುಕಿಟು ಪಂಬರವನೆಸೆ ಜಗಜಗಿಸುತೊಪ್ಪಿತಾ ರಜತಾಚಲಂ। (೨೧–೫)

ನಡೆ ಮಂದವಾಯ್ತು ನಡುಗಡಸಿತ್ತು ಬಡತನಂ।
ನುಡಿಮೆಲ್ಲನಾಯ್ತು ಕಣ್ಬಿವೆಯು ಮಡಿಗಳಂ ಕಾವ।
ನುಡದಿಯುರ್ಗೆ ಸುತೆ ಮುತ್ತಿಪುವು ತಲೆಯುಂ ತುಂಬಿ ಕೋಕಂಗಳೆರ್ದೆಯುಡದುರ್ವು॥
ಅಡಿಗೆ ತೊಡಕಾದುವಂಬೆಗಳಿದೇ ಕಾಲವೆನು।
ತೊಡನೆ ಗಿಳಿವಿಂಡು ಗರ್ದೆಯ ಸೂರೆಗೊಳೆ ಕಿತ್ತು!
ಪಿಡಿದು ಕರಕಂಜದಿಂದರಲ್ವ ಸೆಬ್ಬಲ್ವನಿಡುವರಾ ಶಶಿಮುಖಿಯರು॥ (೨–೯)

ಕಾಲ ರಜಕಂ ಮಲಿನ ದಿವಸಾಂಬರವನಾ ವಿ।
ಶಾಲ ಸಾತಿಯ ಮಲ್ಲಿಕೆಯೊಳೊಗೆದು ದಕ್ಷಾಂಗೀಯ।
ಶಾಲೋಕಿಸುತ್ತುವೆ ಬೆಳಗಳಂ ಸಲಹಿದಳಿಯುಂಗೆ ಧವಲಾಂಬರವನು॥
ಮೂಲ ವೈರಂ ಪೋಗೆ ದೀವಳಿಗೆಯೊಳು ಕರೆದು।
ಮೇಲವಂ ಪೊದಿಸಿ ಪರಸುತ್ತಕ್ಷತೆಯನಿಟ್ಟ।
ಶ್ರೀಶೊಪ್ಪಿದಂ ಶರನ್ನೇಘದೊಳ್ ಚಂದ್ರಮಂ ತಾರಕಾನೀಕದಿಂದ॥ (೭–೧೭)

ಪರಮ ಮೈತ್ರೇಯರಿಂ ಪುಂಡರೀಕಾಕ್ಷಿಯರ।
ತರದಿಂದೆ ಸೂತರಿಂ ಮತ್ತೆ ತತ್ಕ್ರತು ಕರ್ತೃ।
ಪುರುಷರಿಂ ಪಳ್ಳಬಗುಗಳ ಮುನೀಶಗಳಿಂದಲೆಸೆವ ಸಂಗರ ದಕ್ಷರಿಂ।
ಮರಳಿ ನಿರ್ಜರ ಗುರುವ ಪೋಲ್ವ ವಿಬುಧರ್ಕಳಿಂ।
ವರ ಮುನಿಯ ಸಭೆಯಂತೆ ತದ್ಬ್ರಹ್ಮ ಸಭೆಯಂತೆ।
ಸುರಪತಿಯ ಸಭೆಯಂತೆ ಮುನ್ನೀದುದಾರಾಯನೊಡ್ಡೋಲಗಂ ಸೈಪಿನಿಂದೆ (೭–೫)

ನರಕ ಬಂಧಂಗಳೆಂಬಿವು ಕೊಳುಗುಳಂಗಳೊಳು।
ಸರಿಕಿಸಲ್ಕಿಟ್ಟಯೋಱಿತೆಂಬುದು ಮಹೀಜ ಕರಿ।
ತುರಗಂಗಳೊಳು ದೇಹಿ ನಾಸ್ತಿ ಶಬ್ದಂಗಳಬಲಾ ಜನದ ಮಧ್ಯದಲ್ಲಿ।
ಅರಿಯೆಂಬ ನುಡಿ ಕೆಯ್ಗಳೊಳು ನುಡಿದು ತಪ್ಪುವುದು।
ಗರುಡಿಯೊಳಗಱಿತಿ ಮಱಿತಿಗಳೆಂಬ ನುಡಿ ಸಾಡೆ ಭೂ।
ಧರ ಕುಲಂಗಳೊಳಿದಿರುದಲೆನಾತು ಕನ್ನಡಿಯೊಳಲ್ಲದಾನಾಡೊಳಿಲ್ಲ। (೨–೫)

ಪದ ಚಿತ್ರ

ಅತ್ತಸೆವ ಮಾವನಳಿಯಂ ಮಗಮುಗಿಪ ಕೆಂಪು।
ವೆತ್ತ ಕುಸುಮಮನೀಕ್ಷಿಸೊಸೆಯುಂತುಂ ಮನದೊಳಂ।
ಪತ್ತಿಗೇಕೇ ಹುಟ್ಟಿಕುತನವೆಂದು ಭಾವಜಂ ತಮ್ಮಯ್ಯನೆಯ ಬಾಣದ।
ಉತ್ತಮದ ಕರ್ನೆಯ್ದಿಲೆಂಬ ಕಣ್ಮುಚ್ಚಿದುವೆ।
ನುತ್ತನಾದಿನಿದುಗಂಪಿಂ ನಗುವ ತಾವರೆಯು।
ಮೊತ್ತಮುಂ ನೋಡೆಂಬ ನೆವದೆ ಬಂಧುಗಳ ಸೆನೆದಾಡುತಿರಲಾ ಸತಿಯುರು। (೪–೨೮)

ಆ ಸಮಯದೊಳು ಕಾಳಹಸ್ತಿ ಬಱಿೀಕಾ ವಾರ।
ಣಾಸಿಮಯವೆನಿಸುವಾಸೆಯ ಪೌಜಿನಿಂ ಪರ್ವ।
ತಾಸವಿಾಚೀನ ಧಾನುಷ್ಕೋಟ ರೌದ್ರ ಪಾದಾತಿ ಬಲದೇಱಿಗೆಯಿಂದ।
ಭಾಸುರದ ಚಕ್ರ ಗಂಧರ್ವರಣುಗರ ವರವಿ।
ಲಾಸದಾ ರಥ ಹಯಂಗಳ ಚಾತುರಂಗ ಬಲ।
ವೀಶ ಭಕ್ತರ ಪಂಪಿನಿಂ ಭಾಷು ಕೂಡಿತ್ತು ಭೂಮಿ ಬೆಸಲಾದಂದದಿಂ। (೮–೨)

ಯಮಕ

ಲಾಳನಂ ಬರ್ಬರನ ಗೌಳನಂ ವೈರಿ ಪಾಂ।
ಚಾಳನಂ ಗೆಲ್ದು ಕರವಾಳನಂ ಭಸ್ಮಮಯ।
ಭಾಳನಂ ತತ್ಸದೋದ್ಧೂಳನಂ ರಂಜಿಸುವ ಕಾಳನಂ ಗೆಲ್ದು ವಿಧೃತ।
ವ್ಯಾಳನಂ ನಮಿತ ಸುರಜಾಳನಂ ಹಸ್ತಕಂ।
ಕಾಳನಂ ಕೊರ್ಬಿರ್ದ ಕೋಳನಂ ಕೊಂದ ಸೊ।
ಡ್ಡಾಳನಂ ಭಜಿಸ ಭೂಪಾಳನಂ ಸತ್ಯೇಂದ್ರಚೋಳನಂ ಪೊಗೞಲಳವೆ॥ (೨–೧೬)

* * *

ಕಂದನಂ ಕಲ್ಪಕುಜದಂದನಂ ವಿಮಲಗುಣ।
ವೃಂದನಂ ಸಾಕ್ಷಾತು ನಂದನನನವಿಚಾರ।
ದಿಂದಾವಕೊಂದನೊ ಎಂದು ಪರಿದಾಜನಂ ನಿಂದಲ್ಲಿಗೈತಂದಳು (೮–೨೫)

ಎಱಿ ತಲೆಗಳ ಬಗೆಯ ಕೇಳುತಲಿ ನಡೆತರು।
ತ್ರೇಱಿತಲೆಗಳ ಕಾಣುತಾಱಿತಲಿ ಸಂತಸದೊ।
ಳೇಱಿ ತಲೆಗಳ ಕುಳಿರ್ಕೊಳುತಲೆ ಬರ್ದನಂದೇಱಿ ತಲೆ ಚಿತ್ತಾಂತಿಯ ॥
ಆಱಿತಲಿ ಮಱೆಯುತಿರಲೇಱಿತಲಿ ಮಂತ್ರಮಂ।
ಪೇಱಿತಲಿ ಬೋಧಿಸುತ್ತೇಱಿ ತಲೆ ರಾಜಿಸಲು।
ಬಾಱಿತಲೆಯೆನಲೊಪ್ಪುವೇಱಿತಲೆಗಳ ಗುಣವನಱಿತಲೆ ಸತಿ ನಿಂದಳು ॥ (೯—೪೧)

ಎಚ್ಚರಿಕೆ

ಮಱೆಯದಿರು ಜೀಯ ಪಂಚಾಕ್ಷರಿಯ ಪಾಠಮಂ।
ಮಱೆಯದಿರು ಮುರುಗರಿಪ್ಪವನಿತ್ತು ಕೂರ್ತುದಂ।
ಮಱೆಯದಿರು ಭಯಮುಮಂ ತೀರ್ಚಿಯುಪಮನ್ಯುವಂ ಶಿವನ ಸಾರ್ಚಿದ ಮಂತ್ರಮಂ ॥
ಮಱೆಯಬೇಡಯ್ಯ ಪಿಳ್ಳೆಯನಾರ ಮಹಿಮೆಯಂ।
ಮಱೆಯದೆ ನಮಶ್ಶಿವಾ ಎಂಬುದೆಂದೆನುತಲೆ।
ಚಿತ್ತೈಸಿ ಭಸಿತದಪುಟ್ಟಿಗೋಲ್ಗಳಿಂದಡಿಗಡಿಗೆ ತಿವಿವರಿರ್ವರು ಚೋಳನ ॥ (೭—೬)

ಈ ಗ್ರಂಥವನ್ನು ಪಾಠಕರು ಸಾವಧಾನದಿಂದೋದಿ ಕವಿತೆಯ ಅಲಂಕಾರ ಚಾತುರಿಯನ್ನು ಗ್ರಹಿಸಿ ಆನಂದಪಡುವರೆಂದು ಹಾರೈಸುವೆವು.

ಬೆಳ್ಳಾವೆ ವೆಂಕಟನಾರಾಯಣಪ್ಪ.

ಗ್ರಂಥ ವಿಮರ್ಶೆ

ಕರ್ಣಾಟಕ

೧. ಜೈಮಿನಿ ಭಾರತವು

ಕ್ರೌನ್ ಅಷ್ಟಪತ್ರ ಪುಟಗಳು ೮+೪೮೭; ಬೆಲೆ ರೂ. ೧–೮–೦.

ಪರಿಶೋಧಕರು.—ಭಾರತಿ ಸಂಪಂಗಿರಾಮಯ್ಯನವರು, ಬೆಂಗಳೂರು.

ಪ್ರಕಾಶಕರು.—ಟಿ. ಎಸ್. ಶ್ರೀನಿವಾಸಸೆಟ್ಟರು, ಬೆಂಗಳೂರು.

ಈ ಪುಸ್ತಕದ ಪ್ರಕಾಶಕರು ಸುಪ್ರಸಿದ್ಧವಾದ ಈ ಕಾವ್ಯದ ಶುದ್ಧ ಪ್ರತಿಯನ್ನು ಅಂದವಾಗಿ ಮುದ್ರಣಮಾಡಿ ವಾಚಕರಿಗೆ ಸುಲಭವಾದ ಬೆಲೆಗೆ ದೊರೆಯುವಂತೆ ಮಾಡಬೇಕೆಂಬ ಅಭಿಪ್ರಾಯದಿಂದ ಇದನ್ನು ಪ್ರಕಟಪಡಿಸಿರುತ್ತಾರೆ. ಇದು ಸ್ತೋತ್ರಾರ್ಹವಾದುದೇ ಸರಿ. ಒಳ್ಳೆಯ ಕಾಗದ, ಸುಲಕ್ಷಣವಾದ ಮುದ್ರಣ, ಪದ್ಯದ ಪ್ರತಿ ಪಾದಕ್ಕೂ ಒಂದೊಂದು ಪಙ್ಕ್ತಿ, ಅಂದವಾದ ರಕ್ಷಾಪತ್ರ, ಅಡಕವಾದ ಆಕಾರ—ಈ ವಿಷಯಗಳಲ್ಲಿ ಪ್ರಕೃತ ಪುಸ್ತಕವು ಅಂಗಡಿಗಳಲ್ಲಿ ಸಾಮಾನ್ಯವಾಗಿ ದೊರೆಯುವ ಪುಸ್ತಕಗಳಿಗಿಂತ ಮೇಲೆಯಾಗಿದೆ. ಇದಕ್ಕೆ ಹಾಕಿರುವ ಬೆಲೆಯು (೧॥ ರೂ.) ಬಹಳ ಕಡಿಮೆಯೆಂದೇ ಹೇಳಬೇಕು. ಮುದ್ರಣದ ತಪ್ಪುಗಳಿಲ್ಲದಂತೆ ಚೆನ್ನಾಗಿ ಪರಿಶೋಧಿಸಿ ಅಸಮಂಜಸಗಳನ್ನೆಲ್ಲ ತಿದ್ದಿ ಕೆಲವೆಡೆಗಳಲ್ಲಿ ಪಾಠಾಂತರಗಳನ್ನು ಕೆಳಗಡೆ ಕೊಟ್ಟಿದ್ದಲ್ಲಿ ಈ ಪುಸ್ತಕದ ಉಪಯೋಗವು ಮತ್ತಷ್ಟು ಹೆಚ್ಚುತ್ತಿದ್ದಿತು. ಮೊದಲನೆಯ ಇಪ್ಪತ್ತೈದು ಪುಟಗಳಲ್ಲಿ ಕಂಡುಬರುವ ಕೆಲವು ತಪ್ಪುಗಳನ್ನು ಇಲ್ಲಿ ಸೂಚಿಸುವೆವು:—

ಪೇರ್ಚಿನಿಂ (ಪು. ೧), ಎಳೆನಗೆ (೧), ಭುವನದೋಳ್ (೨), ತಾಯನಗೆ (೨), ಪರಾರ್ಧಮಂ (೨), ಗಭೇಂದಪಸೆ (೨), ಪುಳಿವಿಡಿದು (೨), ಕರ್ನಾಟ ಕವಿ (೩), ಓರ್ವನು (೩), ಅಂಗಭವಿ (೪), ಚಿತ್ತ್ಯಸಾಮೊಡ್ಡನಖಿಳ (೯), ಎನಲ್ಭಂತಿಸುತ (೧೧), ವ್ಯರಿವ್ಯಮು (೧೪), ಕರ್ಷ್ಣಜರ್ಗನು (೧೫), ಕಲಮಂಗಲಿಕ್ಕೆದೊಳು (೨೨), ಪೊಂಗಳಸವರೆಜುಳಿಯೊಳಿಟ್ಟ (೨೪), ಮೇಜ್ಞಲ್ಲಲಿತ (೨೫), ಕತ್ತಲೆ ಪರವುದಲ್ಲದೆ (೨೫).

ಪದವಿಭಾಗ ಮಾಡುವುದರಲ್ಲಿ ಹೊಸ ಪದ್ಧತಿಯು ಕಾಣಬರುವುದು.

ಕೆಲವು ಸಾಮಾನ್ಯವಾದ ತಪ್ಪುಗಳನ್ನು ತೋರಿಸಿದ ಮಾತ್ರಕ್ಕೇ ಪ್ರಕಾಶಕರು ಕನ್ನಡಿಗರಿಗೆ ಮಾಡಿರುವ ಉಪಕಾರವನ್ನು ನಾವು ಗಣನೆಗೆ ತಂದಿಲ್ಲವೆಂದು ಹೇಳಬಾರದು.

೨. ಚಿಗುರೆಲೆ

ಸಣ್ಣ ಪುಟಗಳು ೧೨; ಬೆಲೆ ೩ ಆಣೆ; ೧೯೨೫.

ಲೇಖಕರು.—ರಾಮಚಂದ್ರ ಸುಬ್ಬರಾವ ಸಾಲಿ, ಕರ್ಜಗಿ (ಧಾರವಾಡ ಡಿ॥)

ಇದೊಂದು ಪದ್ಯ ಗ್ರಂಥ. ಇದರಲ್ಲಿ ಕಪಿಲ ಪಯಣ, ವಿಕೃತವೃತ್ತಿ, ನಿಷ್ಪಾಪ ಜೀವನ, ಪ್ರವಾಸಿ, ತಿರುಕ, ಕರುಣ, ಮಾತೃಶ್ರಾದ್ಧ, ಪ್ರಾರ್ಥನೆ, ಮತ್ತೀನು ಬೇಡನು—ಎಂಬ ಒಂಬತ್ತು ವಿಷಯಗಳ ಮೇಲಣ ಕವಿತೆಗಳು ಭಾಮಿನೀ ಷಟ್ಪದಿಯಲ್ಲಿ ಬರೆದಿವೆ. ಒಟ್ಟು ಪದ್ಯಗಳು ೩೬.

ಭಾಷಾ ಶೈಲಿಯು ಬಹಳ ಸುಲಭವಾಗಿದೆ; ಸಾಮಾನ್ಯವಾಗಿ ಎಲ್ಲರಿಗೂ ತಿಳಿಯುವಂತೆ ಹೊಸಗನ್ನಡದಲ್ಲಿ ಬರೆದಿದೆ. ವ್ಯಾಕರಣಕ್ಕೆ ಅಷ್ಟು ಗಮನ ಕೊಟ್ಟಂತೆ ತೋರುವುದಿಲ್ಲ. ವಿಷಯ ವರ್ಣನೆಯು ಎಲ್ಲರ ಮನಸ್ಸಿಗೂ ಚೆನ್ನಾಗಿ ಗೊತ್ತಾಗುವಂತಿದೆ.

ಪರಮಾತ್ಮನಿಗೆ ಬೇಡಿಕೊಳ್ಳುತ್ತೀನೆ. ಯಾಕೆ (ಪು. ೧), ಮೊಸಳಗಳು (೧),
ಎನ್ನೊನು (೧), ಗುಡಿಸಲದ (೫), ತಂದಿಳಿವಿ (೫)—
ಇವೇ ಮೊದಲಾದ ಕೆಲವು ಅಶುದ್ಧ ರೂಪಗಳು ಅಲ್ಲಲ್ಲಿವೆ.

---

೩. ಶ್ರೀಕೃಷ್ಣ ಲೀಲಾ ವಿನೋದಂ

ಕ್ರೌನ್ ಅಷ್ಟಪತ್ರ ಪುಟಗಳು ೧೨೫; ೧೯೨೫.

ಲೇಖಕರು.—ಬೆಳ್ಳಾವೆ ನರಹರಿಶಾಸ್ತ್ರಿಗಳು, ಬೆಂಗಳೂರು.

ಇದು ಐದು ಅಂಕಗಳುಳ್ಳ ಒಂದು ನಾಟಕ; ಗುಬ್ಬಿ ಚೆನ್ನಬಸವೇಶ್ವರ ನಾಟಕ ಕಂಪೆನಿಗಾಗಿ ರಚಿತವಾದುದು. ಇದರಲ್ಲಿ ಶ್ರೀಕೃಷ್ಣನ ಬಾಲಲೀಲೆಗಳು ವರ್ಣಿತವಾಗಿವೆ. ಈ ಗ್ರಂಥಕ್ಕೆ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು ಪ್ರಸ್ತಾವನೆಯನ್ನು ಬರೆದು, ಅದರಲ್ಲಿ, "ಈ ರೀತಿಯಲ್ಲಿ ಈ ನಾಟಕವು ಶುದ್ಧವಾದ ಭಾಷೆಯಲ್ಲಿ ಮನೋಹರವಾದ ಶೈಲಿಯಲ್ಲಿ ಕವಿತಾ ಪ್ರೌಢಿಮೆಯನ್ನು ವ್ಯಕ್ತಗೊಳಿಸುತ್ತ (ಗ್ರಂಥಕರ್ತರಿಗೆ) ಕೋಲಾರದ ಮಹಾಜನಗಳಿಂದ ಕೊಡಲ್ಪಟ್ಟಿರುವ 'ಕರ್ಣಾಟಕ ಕವಿ ಕೇಸರಿ' ಎಂಬ ಬಿರುದನ್ನು ಸಾರ್ಥಕಗೊಳಿಸುತ್ತದೆ" ಎಂದು ಹೇಳಿರುವರು.

ಪದ್ಯಗಳೂ ಹಾಡುಗಳೂ ಸರಳವಾಗಿಯೂ ಲಲಿತವಾಗಿಯೂ ಪ್ರಾಸ ಬದ್ಧವಾಗಿಯೂ ಇವೆ. ಪದ್ಯಗಳ ಭಾಷೆಯು ಹಳಗನ್ನಡವೇ ಆದರೂ ಅಲ್ಲಲ್ಲಿ ಹೊಸಗನ್ನಡ ಪ್ರಯೋಗಗಳೂ ಇವೆ. ಈ ನಾಟಕವನ್ನು ಪ್ರದರ್ಶನಕ್ಕಾಗಿ ಬರೆದಿರುವುದರಿಂದ ಲೇಖಕರು ಭಾಷೆಯನ್ನು ಅಷ್ಟು ನಿರ್ದೋಷವಾಗಿ ಬರೆಯಲು ಯತ್ನಿಸಿದಂತೆ ತೋರುವುದಿಲ್ಲ.

ಕಾಗದವೂ ಮುದ್ರಣವೂ ಚಿತ್ರಪಟಗಳೂ ಅಷ್ಟು ಅಂದವಾಗಿಲ್ಲ.

ಶ್ರೀಮದ್ಗೋಸ್ವಾಮಿ

೪. ತುಲಸೀದಾಸ ರಾಮಾಯಣ

(ಸಚಿತ್ರ, ಭಾಗ ೧)

ಡೆಮ್ಮಿ ಅಷ್ಟಪತ್ರ ಪುಟ ೭೪ : ವಾರ್ಷಿಕ ವರ್ಗಣಿ—ಸಾಧಾರಣ ಪ್ರತಿಗೆ ರೂ. ೪—೦—೦,
ಗ್ಲೇಜು ಕಾಗದದ ಪ್ರತಿಗೆ ರೂ. ೫—೦—೦ ; ೧೯೨೫.

ಲೇಖಕರು.—ದತ್ತಾತ್ರೇಯ ಕೃಷ್ಣ ಭಾರದ್ವಾಜ,

ಆನಂದಾಶ್ರಮ, ಬಸವನಗುಡಿ, ಬೆಂಗಳೂರು.

ಇದು ಹಿಂದೀ ಭಾಷೆಯಲ್ಲಿ ಛಂದೋಬದ್ಧವಾಗಿ ಬರೆದಿರುವ ತುಲಸೀದಾಸ ರಾಮಾಯಣದ ಕರ್ನಾಟಕ ಭಾಷಾ ಟೀಕಾ ರೂಪವಾದ ವಚನ ಗ್ರಂಥ. ಈ ಸಂಚಿಕೆಯಲ್ಲಿ ಬಾಲಕಾಂಡವನ್ನು ಕೊಟ್ಟಿದೆ.

ಪೀಠಿಕೆಯಲ್ಲಿ, ಟೀಕಾಕಾರರು—"ಇದು ವೇದ, ಪುರಾಣ ಮತ್ತು ಶಾಸ್ತ್ರಗಳ ಸಾರವಾಗಿದೆ. ಶ್ರೀ ತುಳಸೀದಾಸರು ಈ ಗ್ರಂಥವನ್ನು 'ದೋಹಾ, ಸೋರಟಾ, ಚೌಪಾಯಿ'ಗಳೆಂಬ ಛಂದಸ್ಸನ್ನು ಅನುಸರಿಸಿ ಬರೆದಿರುವರು. ಇದರ ವಿವರವನ್ನು ೧೨ನೆಯ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ನಾವು ಪ್ರಕಟಿಸಿರುವ ಈ ಕನ್ನಡ ಭಾಷಾಂತರದಲ್ಲಿ ಮೂಲಗ್ರಂಥದ ಭಾಷಾಂತರವನ್ನು ಕೊಟ್ಟಿರುವೆವಲ್ಲದೆ, ಇದರ ಉಪಯುಕ್ತತೆಯು ಹೆಚ್ಚಾಗಿ ಇದು ಧಾರ್ಮಿಕ ವಿಚಾರಗಳ ವಿಶ್ವಕೋಶದಂತಾಗಬೇಕೆಂದು, ಹಲವು ಗ್ರಂಥಗಳ ಆಧಾರದಿಂದ ಭಾಷಾಂತರದ ಕೆಳಗೆ ಅಲ್ಲಲ್ಲಿ ಟಿಪ್ಪಣಿಗಳನ್ನೂ ಕೊಟ್ಟಿರುವೆವು. ಇದರಿಂದ ನಮ್ಮ ಸನಾತನ ಧರ್ಮಕ್ಕೆ ಸಂಬಂಧಿಸಿದ ಹಲವು ವಿಷಯಗಳ ಜ್ಞಾನವು ಉಂಟಾಗುವುದು. ಅಲ್ಲಲ್ಲಿ ಕಂಸ (ಬ್ರಾಕೆಟ್ಸ್)ಗಳಲ್ಲಿ ಹಾಕಿರುವ ವಾಕ್ಯಗಳೂ, ಪದಗಳೂ ಮೂಲಪಾಠದಲ್ಲಿಲ್ಲ. ಆದರೆ ಅರ್ಥವು ಸ್ಪಷ್ಟವಾಗುವುದಕ್ಕಾಗಿ ಅವನ್ನು ಸೇರಿಸಲಾಗಿದೆ" ಎಂದು ಬರೆದಿರುತ್ತಾರೆ. ಹಿಂದೀ ಭಾಷೆಯಲ್ಲಿರುವ 'ದೋಹಾ'ಗಳ ಮೂಲವನ್ನೂ ಕೊಟ್ಟಿದ್ದರೆ ಅನುಕೂಲವಾಗಿದ್ದಿತು.

ಶೈಲಿಯು ಸರಳವಾಗಿಯೂ ತಿಳಿಗನ್ನಡವಾಗಿಯೂ ಇದೆ. ಅಲ್ಲಲ್ಲಿ ಕೆಲವು ದೋಷಗಳೂ ಸ್ಖಾಲಿತ್ಯಗಳೂ ಕಾಣಬರುವುವು. ಉದಾಹರಣೆಗಾಗಿ—

ಮನೋಹರಾ ಕರ್ನಾಟಕ ಭಾಷಾ ಟೀಕಾತ್ಮಕವು, ಅಧಿಷ್ಟಾತ್ರಿ (ಪು. ೧), ಸ್ವರಣೆಮಾತ್ರ (೩), ಉಪದೇಶರೂಪೀ ಸೂರ್ಯಕಿರಣ (೩), ಸನ್ತಜನರೇ (೭).

ಪುಟ ೩.—ಯಾವನ ಪ್ರಸನ್ನತೆಯಿಂದ ವಾಚಾಳನು ಎಂದರೆ ವಿಶೇಷ ಮಾತನಾಡುವ ಶಕ್ತಿಯುಳ್ಳವನು ಮೂಕನಾಗುವನೋ, ಕುಂಟನಾದವನು ಕೂಡ ವಿಶಾಲವೂ ದುರಾರೋಹವೂ ಆದ ಪರ್ವತವನ್ನು ಹತ್ತಬಲ್ಲನೋ, ಮತ್ತೆ ಯಾವನು ಸಂಪೂರ್ಣ ಕಲಿ

ಮಲ ಸಂಭೂತ ಪಾಪರಾಶಿಯನ್ನು ಪರಿಹರಿಸಲಿ. ಅಂತಹ ಮಾಧವನು ನನ್ನ ಮೇಲೆ ಪ್ರಸನ್ನನಾಗಿರಲಿ.

ಎಂದು ಹೇಳಿ, ಇಲ್ಲಿ—

ಮೂಕಂ ಕರೋತಿ ವಾಚಾಲಂ ಪಙ್ಗುಂ ಲಂಘಯತೇ ಗಿರಿಂ।
ಯತ್ಕೃಪಾ ತಮಹಂ ವನ್ದೇ ಪರಮಾನಂದ ಮಾಧವಮ್॥

ಎಂಬ ವ್ಯಾಸ ಮಹಾಮುನಿಯ ಶ್ಲೋಕದ ಛಾಯೆಯಿರುವುದೆಂದು ಹೇಳುವರು. ಮೇಲೆ ಹೇಳಿರುವ ಮೂರು ವಿಷಯಗಳಲ್ಲಿ ಮೂರನೆಯದು ಈ ಶ್ಲೋಕದಲ್ಲಿಲ್ಲ; ಎರಡನೆಯದೊಂದು ಮಾತ್ರವೇ ಸರಿಯಾಗಿರುವುದು. ಮೊದಲನೆಯದಕ್ಕೆ ಈ ಶ್ಲೋಕದಲ್ಲಿ ವಿಪರೀತಾರ್ಥವಿರುವುದು; 'ಮೂಗನನ್ನು ಮಾತಾಳಿಯನ್ನಾಗಿ ಮಾಡುವುದು' ಎಂದು ಈ ಶ್ಲೋಕದಲ್ಲಿ ತೋರುವ ಸಂಗತಿ. ಇದೇ, ಪ್ರಕೃತಕ್ಕೆ ಸರಿಯಾದ ಅರ್ಥವಾಗಿದೆ. ಇದನ್ನು, 'ಮಾತಾಡುವವನು ಮೂಗನಾಗುವನು' ಎಂದು ಕಲ್ಪಿಸಿ ಮಾಡುವುದಕ್ಕಾಗಲಿ ಅಥವಾ, ಆ 'ದೋಹಾ'ದಲ್ಲಿ ಹಾಗೆಯೇ ತೋರುವುದೆಂಬುದಕ್ಕಾಗಲಿ ಗಮಕವೇನೂ ಇಲ್ಲ. ಇದು ಅಸಮಂಜಸವಾಗಿರಬಹುದೋ ಏನೋ ತಿಳಿಯದು. ಹಾಗಿರುವ ಪಕ್ಷದಲ್ಲಿ ಇಂತಹ ಸಂದರ್ಭಕ್ಕೆ ಗಮನಕೊಡಬೇಕಾದುದು ಅತ್ಯಾವಶ್ಯಕವಾಗಿ ಕಾಣಬರುವುದು.

ಈ ಗ್ರಂಥವು ರಾಮಾಯಣ ಕಥೆಯನ್ನು ತಿಳಿಸುವುದರಲ್ಲಿ ಹೊಸ ಬಗೆಯಾಗಿಯೂ, ವಿಶೇಷಾಂಶಗಳನ್ನು ತಿಳಿಸುವುದಾಗಿಯೂ ಇರುವುದರಿಂದ ಟೀಕಾಕಾರರ ಶ್ರಮವು ಸಾರ್ಥಕವಾಗುವಂತೆ ಕನ್ನಡಿಗರು ಇದಕ್ಕೆ ಪ್ರೋತ್ಸಾಹವನ್ನುಂಟುಮಾಡಬೇಕೆಂಬುದೇ ನಮ್ಮ ಹಾರೈಕೆ.

---

೫. ಪೂರ್ವ ಪುರಾಣ

(ಪೂರ್ವ ಭಾಗ)

ದೊಡ್ಡ ಪುಟಗಳು ೮ + ೫೪೯; ಬೆಲೆ ರೂ. ೬—೦—೦; ೧೯೨೫.

ಗ್ರಂಥಕರ್ತರು.—ಭಗವಜ್ಜಿನಸೇನಾಚಾರ್ಯರು.

ಟೀಕಾಕಾರರು.—ನ್ಯಾಯತೀರ್ಥ ಎ. ಶಾಂತಿರಾಜಶಾಸ್ತ್ರಿಗಳು, ಮೈಸೂರು.

ಪ್ರಕಾಶಕರು.—ಎಂ. ಕೃಷ್ಣಯ್ಯ ಗೌಡರು,
ಮಣಿಯಂಗೂಡು ಜಹಗೀರು, ವೈನಾಡು ತಾಲ್ಲೂಕು.

ಇದು "ಇಪ್ಪತ್ತನಾಲ್ಕು ಮಂದಿ ತೀರ್ಥಂಕರರೂ, ಹನ್ನೆರಡು ಮಂದಿ ಚಕ್ರವರ್ತಿಗಳೂ, ಒಂಬತ್ತು ಮಂದಿ ಬಲಭದ್ರರೂ, ಒಂಬತ್ತು ಮಂದಿ ನಾರಾಯಣರೂ, ಒಂಬತ್ತು ಮಂದಿ ಪ್ರತಿನಾರಾಯಣರೂ ಸೇರಿ ಅರುವತ್ತಮೂರು ಮಂದಿ ಪ್ರಸಿದ್ಧ ಪುರುಷರ (ತ್ರಿಷಷ್ಟಿಶಲಾಕಾ ಪುರುಷರ) ಚರಿತ್ರೆಯನ್ನು ಪ್ರತಿಪಾದಿಸುವ"

ಮಹಾ ಪುರಾಣವೆಂಬ ಜೈನಮತ ಸಾಹಿತ್ಯ ಗ್ರಂಥದ ಪೂರ್ವ ಭಾಗ. ಇದರಲ್ಲಿ "ಶ್ರೀ ವೃಷಭಸ್ವಾಮಿಯೆಂಬ ಪ್ರಥಮ ತೀರ್ಥಂಕರರ ಪುತ್ರ ಭರತನೆಂಬ ಪ್ರಥಮ ಚಕ್ರವರ್ತಿಯ ಚರಿತ್ರೆಗಳು ಬಹಳ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. ಮಿಕ್ಕ ಅರುವತ್ತೊಂದು ಸುಂಟ ಮಹಾ ಪುರುಷರ ಚರಿತ್ರೆಗಳು ಉತ್ತರ ಪುರಾಣ ದಲ್ಲಿ ವರ್ಣಿಸಲ್ಪಟ್ಟಿವೆ." ಈ ಗ್ರಂಥವು ಸಂಸ್ಕೃತ ಅನುಷ್ಟುಪುಗಳಲ್ಲಿ ಬರೆದಿದೆ. ಇದನ್ನು ಕನ್ನಡಿಗರು ಸುಲಭವಾಗಿ ತಿಳಿಯಲು ಅನುಕೂಲವಾಗುವಂತೆ 'ಭಾವ ದೀಪಿಕೆ' ಎಂಬ ಟೀಕೆಯನ್ನೂ ಕೊಟ್ಟಿದೆ.

ಟೀಕೆಯ ಭಾಷೆಯು ಸುಲಭವಾಗಿಯೂ ಲಲಿತವಾಗಿಯೂ ಇದೆ. ಪುಸ್ತಕದ ಕಾಗದವೂ ಮುದ್ರಣವೂ ರಕ್ಷಾಫಲಕವೂ ಬಹಳ ಉತ್ತಮವಾಗಿವೆ. ಮುದ್ರಣದ ತಪ್ಪುಗಳು ಬಹಳ ಕಡಿಮೆ. ಮೂಲ ಶ್ಲೋಕಗಳನ್ನು ಬಹಳ ದೊಡ್ಡ ಅಕ್ಷರಗಳಲ್ಲಿ ಪಾದ ಪಾದವಾಗಿ ಬೇರೆ ಬೇರೆ ಕೊಟ್ಟು ಕೆಳಗಡೆ ಕನ್ನಡದ ಟೀಕೆ ಯನ್ನು ಸಾಮಾನ್ಯ ಅಕ್ಷರಗಳಲ್ಲಿಯೂ, ಅದರ ಕೆಳಗಡೆ ಟಿಪ್ಪಣವನ್ನು ಸಣ್ಣ ಅಕ್ಷರಗಳಲ್ಲಿಯೂ ಕೊಟ್ಟಿದೆ.

ಈ ಪೂರ್ವಪುರಾಣದಂತೆಯೇ ಕನ್ನಡದಲ್ಲಿ ಪಂಪನ **ಆದಿಪುರಾಣ**ವೆಂಬ ಚಂಪೂಕಾವ್ಯವೂ **ಚಾವುಂಡರಾಯಪುರಾಣ**ವೆಂಬ ಗದ್ಯಕಾವ್ಯವೂ ರಚಿತ ವಾಗಿರುವುವು. ಇದರೆ ಆದಿಪುರಾಣವು ಜಿನಸೇನಪುರಾಣದ ಆಧಾರದಿಂದ ಹುಟ್ಟಿದುದಲ್ಲವೆಂತಲೂ ವ್ಯಾಸನೆಂಬ ಕವಿಯ ಗ್ರಂಥವನ್ನನುಸರಿಸಿ ಹುಟ್ಟಿ ದಂತೆಯೂ ತೋರುತ್ತದೆಂದು ಆದಿಪುರಾಣದ ಆದಿಯಲ್ಲಿರುವ 'ಪಂಪಕವಿ ಚರಿತಂ' ಎಂಬ ಭಾಗದಿಂದ ತಿಳಿಯಬರುತ್ತದೆ (ಆದಿ ಪುರಾಣ ಪುಟ, XIV).

ಈ ಪುಸ್ತಕವು ಇಷ್ಟು ಸುಲಕ್ಷಣವಾಗಿ ಪ್ರಕಟವಾಗುವುದಕ್ಕೆ ಕಾರಣಭೂತ ರಾದ ಮ॥ ಕೃಷ್ಣಯ್ಯಗೌಡರನ್ನೂ ಟೀಕಾಕಾರರೂ ಸಂಪಾದಕರೂ ಆದ ಮ॥ ನ್ಯಾಯತೀರ್ಥ ಶಾಂತಿರಾಜ ಶಾಸ್ತ್ರಿಗಳನ್ನೂ ನಾವು ಅಭಿನಂದಿಸುತ್ತೇವೆ. ಹೀಗೆಯೇ, ಈ ಮಹಾ ಪುರಾಣದ ಉತ್ತರ ಭಾಗವೂ ಪ್ರಕಾಶಕರ ಉದ್ದೇಶದಂತೆ, ಬೇಗನೆ ಪ್ರಕಟವಾಗುವುದನ್ನು ಎದುರುನೋಡುತ್ತಿರುವೆವು.

---

೬. ಅಶ್ರು ಬಲವೇ ಬಲವು.

ಧಾರವಾಡ ಕರ್ಣಾಟಕ ವಾಙ್ಮಯ ಸೇವಾ ಸಂಘದ ಗ್ರಂಥ.

ಕ್ರೌನ್ ಅಷ್ಟಪತ್ರ ಪುಟ ೬೪ ; ಬೆಲೆ ೫ ಆಣೆ ; ೧೯೨೫.

ಲೇಖಕರು.—ಬಾಳಾಜಿ ಕೃಷ್ಣ ಹಳಸೇಟ, ಬೆಂಗಳೂರು.

ಇದು ಈ ಕಾಲದ ಪರಿಸ್ಥಿತಿಯನ್ನು ಹಾಸ್ಯಕರವಾದ ರೀತಿಯಲ್ಲಿ ವಿವರಿಸುವ ಗದ್ಯ ಗ್ರಂಥ. "ಸಾಮಾನ್ಯ ಜನಗಳಲ್ಲಿಯಾದರೂ ತಮ್ಮಕಿಂತ ಬಲಾಢ್ಯರನ್ನೂ ರಾಜನೇ ಆಗಲಿ, ಒಡೆಯನೇ ಆಗಲಿ, ಶ್ರೀಮಂತನಾಗಲಿ, ಚಿಕ್ಕಪುಟ್ಟ ಅಧಿಕಾರಿ

ವರಾಗಲಿ, ಅವರ ಸಂಗಡ ನೈಜವಾದ ಭಕ್ತಿಯನ್ನು ತೋರಿಸದೆ ಕಪಟ ಭಕ್ತಿಯಿಂದಲೇ ನಡೆಕೊಳ್ಳಬೇಕಾಗಿದೆ.................. ಆದಕಾರಣ ಈಗಿನ ಕಾಲದಲ್ಲಿ ಜನರು ವ್ಯವಹಾರದೇವತೆ (ಅಶುದ್ಧದೇವತೆ)ಯನ್ನೇ ಭಜಿಸಬೇಕು ; ವ್ಯವಹಾರ ಜ್ಞಾನವನ್ನೇ ಸಂಪಾದಿಸಬೇಕು ; ವ್ಯವಹಾರಕ್ಕನುಗುಣವಾಗಿಯೇ ನಡೆಯಬೇಕು. ಈ ನಡವಳಿಕೆಗಳಿಗನುಗುಣವಾದ ಆನಂದಾಶ್ರುಗಳನ್ನೋ ದುಃಖಾಶ್ರುಗಳನ್ನೋ ಸುರಿಸುತ್ತ ಅವುಗಳಿಗನುಗುಣವಾದ ಮೋಕ್ಷವನ್ನೇ ಪಡೆಯಬೇಕು. ವಿಧಿಯಿಲ್ಲ ; ವ್ಯವಹಾರ ದೇವತೆಯ ಆಳಿಕೆಯ ಕಾಲ! ''— ಹೀಗೆಂದು ಪ್ರಸ್ತಾವನೆಯಲ್ಲಿ ಬರೆದಿದೆ.

ಲೇಖಕರು ತಮಗಿರುವ ಪ್ರಾಪಂಚಿಕ ಜ್ಞಾನವನ್ನು ಈ ಗ್ರಂಥದಲ್ಲಿ ಬಹಳ ಚೆನ್ನಾಗಿ ತೋರಿಸಿರುವರು ; ತಮ್ಮ ತಿಳಿವಳಿಕೆಗೆ ಬಂದ ಅನೇಕ ಉದಾಹರಣೆಗಳನ್ನೂ ಕೊಟ್ಟಿರುವರು.

ಭಾಷಾಶೈಲಿಯು ಬಹಳ ಸುಲಭವಾಗಿದೆ.

---

೭. ಸ್ಕೌಟುಗಳ ಕನ್ನಡ ಕೈಪಿಡಿ.

ಕ್ರೌನ್ ಅಷ್ಟಪತ್ರ ಪುಟ ೨೨೭ ; ಬೆಲೆ ೮ ಆಣೆ ; ೧೯೩೫.

ಗ್ರಂಥಕರ್ತೃ.—ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ., ಬೆಂಗಳೂರು.

ಈಗ ಸಾಮಾನ್ಯವಾಗಿ ಸ್ಕೂಲು ಹುಡುಗರಲ್ಲಿ ಎಲ್ಲೆಲ್ಲಿಯೂ ಹರಡಿರುವ 'ಸ್ಕೌಟು' ಪದ್ಧತಿಯನ್ನು ಈ ಪುಸ್ತಕದಲ್ಲಿ ಸುಲಭವಾದ ಭಾಷೆಯಲ್ಲಿ ವಿಶದವಾಗಿ ವಿವರಿಸಿದೆ. ಇದರಲ್ಲಿಯ ಅನೇಕ ವಿಷಯಗಳನ್ನು ಈ "ಸ್ಕೌಟು ಕ್ರಮಾಚರಣೆಗೆ ಪಿತಾಮಹರೆನಿಸಿದ" ಬೇಡನ್ ಪವಲ್ ಸಾಹೇಬರ ಪುಸ್ತಕದಿಂದ ಪರಿವರ್ತಿಸಿರುವುದಾಗಿ ಮುನ್ನುಡಿಯಲ್ಲಿ ಹೇಳಿದೆ. ಈ ಪದ್ಧತಿಯು ನಮ್ಮ ದೇಶಕ್ಕೆ ಹೊಸದಲ್ಲವೆಂದೂ ರಾಮಾಯಣ ಮಹಾಭಾರತಗಳಲ್ಲಿಯೂ ನಮ್ಮ ದೇಶದ ಚರಿತ್ರೆಯಲ್ಲಿಯೂ ಇದಕ್ಕೆ ಅನೇಕ ನಿದರ್ಶನಗಳು ದೊರೆಯುತ್ತವೆಂದೂ ಈ ಪುಸ್ತಕದ ಮೊದಲನೆಯ ಅಧ್ಯಾಯದಿಂದ ತಿಳಿದುಬರುತ್ತದೆ. "ಬೆಟ್ಟದ ಮೇಲೆ ಬಿಟ್ಟರೂ ಅರಣ್ಯಮಧ್ಯದಲ್ಲಿ ಬಿಟ್ಟರೂ ತಮ್ಮ ಆಹಾರವನ್ನು ಒದಗಿಸಿಕೊಂಡು ತಮಗೊದಗಬಹುದಾದ ವಿಪತ್ಪರಂಪರೆಗಳನ್ನು ದಾಟಿ ಜೀವಿಸಬಲ್ಲವರು, ಉದಾರಬುದ್ಧಿಯೂ ದೃಢಪ್ರತಿಜ್ಞೆಯೂ ದೇಶಸೇವಾತತ್ಪರತೆಯೂ ವಿಶೇಷವಾಗಿರುವವರು, ದೇಶಭಕ್ತಿಯುಳ್ಳವರಾಗಿದ್ದರೂ ದಯಾಳುಗಳಾಗಿರುವವರು, ರಾಜ್ಯಭೋಗ ವಿಲಾಸಗಳನ್ನು ಅನುಭವಿಸುವವರಾಗಿದ್ದರೂ ಶ್ರಮಸಹಿಷ್ಣುಗಳಾಗಿರುವವರು", ಇಂತಹ ಗುಣಗಳುಳ್ಳ ವೀರರು ನಮ್ಮಲ್ಲಿ ಅನೇಕ ಮಂದಿ ಇದ್ದರೆಂದೂ, ಇವರೆಲ್ಲರೂ 'ಸ್ಕೌಟು'ಗಳೆಂದೂ, ಈ ಎಲ್ಲ ಗುಣಗಳೂ ಬಾಲಕರಲ್ಲಿ ನೆಲಸುವಂತೆ ಮಾಡುವ ಶಿಕ್ಷಾಕ್ರಮವೇ ಸ್ಕೌಟು ಕ್ರಮವೆಂದು ಕರೆಯಲ್ಪಡುತ್ತದೆಂದೂ

ಹೇಳಿದೆ. ವಿಚಿತ್ರವಾದ ಉಡುಪನ್ನು ಧರಿಸಿ ಉದ್ದವಾದ ಬಿದಿರುಕೋಲುಗಳನ್ನು ಹಿಡಿದು ಸೈನಿಕರಂತೆ ತಿರುಗಾಡುವ ನಮ್ಮ ಸ್ಕೂಲು ಹುಡುಗರಲ್ಲಿ ಸ್ಕೌಟು ಶಿಕ್ಷಣವು ಮೇಲೆ ಹೇಳಿದಂತಹ ಸದ್ಗುಣಗಳನ್ನು ಹುಟ್ಟಿಸುವುದಾದರೆ ಇದಕ್ಕೆ ಯಾರ ಆಕ್ಷೇಪವು ತಾನೆ ಇದ್ದೀತು?

---

೮. ಪ್ರಬುದ್ಧ ಕರ್ಣಾಟಕದ

ಮುದ್ದಣನ ಸಂಚಿಕೆ.

ಸಂಪುಟ ೭, ಸಂಚಿಕೆ ೧; ಡೆಮ್ಮೈ ಅಷ್ಟಪತ್ರ ಪುಟ ೬೩; ೧೯೨೫.

ಪ್ರಕಾಶಕರು.—ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ.

ಈ ಉತ್ತಮವಾದ ತ್ರೈಮಾಸಿಕ ಪತ್ರಿಕೆಯು ಈಗ ೭ ವರುಷಗಳಿಂದಲೂ ಕನ್ನಡ ಸಾಹಿತ್ಯಕ್ಕೆ ವಿಶೇಷ ಸಹಾಯಮಾಡುತ್ತಿರುವ ವಿಷಯವು ಕನ್ನಡ ಭಾಷಾಭಿಮಾನಿಗಳಿಗೆ ತಿಳಿಯದಿರದು. ಈ ಸಂಘದವರು 'ಶ್ರೀರಾಮಾಶ್ವಮೇಧ' ಮೊದಲಾದ ಉತ್ತಮ ಹಳಗನ್ನಡ ಕಾವ್ಯ (ಗದ್ಯ ಮತ್ತು ಪದ್ಯ)ಗಳನ್ನು ಬರೆದು ಬೇರೆ ಹೆಸರಿನಿಂದ ಪ್ರಸಿದ್ಧಿಪಡಿಸಿದ ಮಂಗಳೂರಿನ ನಂದಳಿಕೆ ಲಕ್ಷ್ಮೀನಾರಣಪ್ಪನವರ ಹೆಸರನ್ನು ಪ್ರಕಟಗೊಳಿಸಿ ಅವರೇ ಆ ಗ್ರಂಥಗಳನ್ನು ಬರೆದವರೆಂದು ನಿರ್ಧರಿಸಿದುದಕ್ಕಾಗಿ ಕನ್ನಡಿಗರೆಲ್ಲರೂ ಈ ಸಂಘದವರಿಗೆ ಕೃತಜ್ಞರಾಗಿರಬೇಕು. ಪ್ರಕೃತ ಸಂಚಿಕೆಯಲ್ಲಿ ಮೇಲೆ ಹೇಳಿದ ಕವಿಯ ವಿಷಯವಾಗಿ ಪ್ರಾಜ್ಞರ ವಿಮರ್ಶವಿಚಕ್ಷಣ ರಾವ್ ಬಹಾದೂರ್ ಮ॥ ಆರ್. ನರಸಿಂಹಾಚಾರ್, ಎಂ.ಎ. ಅವರೂ, ಮ॥ ಬಿ. ಮಂಗೇಶರಾವ್, ಬಿ.ಎ., ಎಲ್.ಟಿ. ಅವರೂ, ಮ॥ ಹುರುಳಿ ಭೀಮರಾಯರೂ ಬರೆದಿರುವ ಲೇಖನಗಳೂ, ಮ॥ ಯು. ಮಂಗೇಶರಾವ್, ಬಿ.ಎ., ಎಲ್.ಟಿ. ಅವರು ಬರೆದಿರುವ "ಅದ್ಭುತ ರಾಮಾಯಣ"ದ ವಿಮರ್ಶೆಯೂ, ಮ॥ ಪಂಡಿತ ಮಹಾದೇವ ಪ್ರಭಾಕರ ಪೂಜಾರರವರು ಬರೆದಿರುವ "ಶ್ರೀರಾಮಪಟ್ಟಾಭಿಷೇಕ"ದ ವಿಮರ್ಶೆಯೂ, ಮ॥ ಮಾಸ್ತಿ ವೆಂಕಟೇಶ ಐಯಂಗಾರ್, ಎಂ.ಎ. ಅವರು ಬರೆದಿರುವ "ಶ್ರೀರಾಮಾಶ್ವಮೇಧ"ದ ವಿಮರ್ಶೆಯೂ, ನಂದಳಿಕೆ ಲಕ್ಷ್ಮೀನಾರಣಪ್ಪನವರು 'ಸುವಾಸಿನೀ' ಪತ್ರಿಕೆಯಲ್ಲಿ ಬರೆದ "ಜೋ ಜೋ" ಎಂಬ ಒಂದು ಲೇಖನದ ಪ್ರತಿಯೂ, ಕವಿಯ ಮಿತ್ರರಾದ ಮ॥ ಜಿ. ಸೀತಾರಾಮಯ್ಯನವರು ಮ॥ ಹುರುಳಿ ಭೀಮರಾಯರಿಗೆ ಬರೆದ ಒಂದು ಕಾಗದದ ಪ್ರತಿಯೂ ಇರುವುವು; ನಂದಳಿಕೆ ಲಕ್ಷ್ಮೀನಾರಣಪ್ಪನವರ ಮತ್ತು ಈ ಸಂಚಿಕೆಯಲ್ಲಿಯ ಕೆಲವರು ಲೇಖಕರ ಉತ್ತಮ ತರದ ಭಾವಚಿತ್ರಗಳೂ, ಕವಿಯ ಕೈಬರೆಹದ 'ಅದ್ಭುತ ರಾಮಾಯಣ' ಗ್ರಂಥದ ಮುಖಪತ್ರದ ಮತ್ತು ಮೊದಲನೆಯ ಸಂಪುಟದ ಭಾವಚಿತ್ರವೂ ಕೊಟ್ಟಿರುವುವು.

ಇಂತಹ ಸುಪ್ರಸಿದ್ಧರಾದ ಕನ್ನಡ ಪಂಡಿತರೂ ಭಾಷಾಭಿಮಾನಿಗಳೂ ಈ ಕವಿಯ ವಿಷಯವಾಗಿ ಬರೆದಿರುವ ಪ್ರೌಢ ಲೇಖನಗಳನ್ನೋದಿ, ಇದುವರೆಗೂ ಅನಾದರಣೀಯನಾಗಿದ್ದ ಈ ಉದ್ದಾಮ ಕನ್ನಡ ಕವಿಯ ಪರಿಚಯವನ್ನು ಮಾಡಿಕೊಳ್ಳಬೇಕೆಂದು ಕನ್ನಡಿಗರಿಗೆ ಅಭಿಮಾನಪೂರ್ವಕವಾಗಿ ಹೇಳುತ್ತೇವೆ.

---

೯. ರಂಗಭೂಮಿ

ವರ್ಷ ೧. ಸಂ. ೧: ಕ್ರೌನ್ ಚತುಷ್ಪತ್ರ ಪುಟ ೨೪; ವಾರ್ಷಿಕ ವರ್ಗಣಿ ರೂ. ೩: ೧೯೨೫.

ಸಂಪಾದಕರು.—ದ. ಕೃ. ಭಾರದ್ವಾಜ, ಆನಂದಾಶ್ರಮ,
ಬಸವನಗುಡಿ, ಬೆಂಗಳೂರು.

ಇದು ಗದಗದ ದತ್ತಾತ್ರೇಯ ಸಂಗೀತ ನಾಟಕ ಮಂಡಲದ ಆಶ್ರಯದಲ್ಲಿ ಪ್ರಕಟವಾಗುವ ಸಚಿತ್ರ ಮಾಸಪತ್ರಿಕೆ. ಇದರಲ್ಲಿಯ ವಿಷಯಗಳು ನಾಟ್ಯ ರಂಗ ಪ್ರವರ್ತಕರಿಗೂ ನಾಟಕ ವಿಷಯಗಳನ್ನು ತಿಳಿಯಲಪೇಕ್ಷೆಯುಳ್ಳವರಿಗೂ ಉಪಯುಕ್ತವಾಗಿವೆ. ಪ್ರಸ್ತುತ ಸಂಚಿಕೆಯಲ್ಲಿ “ ‘ರಂಗಭೂಮಿ’ಯ ಶ್ರೇಯಃ ಪ್ರಾರ್ಥನೆಯ ಪದ್ಯಗಳೂ, ಸ್ವವಿಷಯ, ಭಾರತೀಯ ನಾಟಕಗಳು, ನಾಟಕವೂ ಸಮಾಜವೂ, ರಂಗಸ್ಥಳಗಳೂ ನಾಟಕಾಭಿನಯಗಳೂ, ಮೈಸೂರು ರಂಗಭೂಮಿಯ ಇತಿಹಾಸ, ನಟವಿದ್ಯೆಯ ಅಭ್ಯಾಸಕ್ರಮ, ರಂಗಭೂಮಿಯೆಂದರೇನು?”—ಈ ವಿಷಯಕವಾದ ಲೇಖನಗಳೂ, ‘ತಾಳೀಕೋಟೆ’ ಎಂಬ ಐತಿಹಾಸಿಕ ನಾಟಕದ ಮೊದಲನೆಯ ಅಂಕವೂ ಇರುವುವು; ಉತ್ತಮವಾಗಿಯೂ ಸ್ಫುಟವಾಗಿಯೂ ಸುಂದರವಾಗಿಯೂ ಇರುವ ಎಂಟು ಭಾವಚಿತ್ರ ಪಟಗಳೂ ಇವೆ.

ಭಾಷಾಶೈಲಿಯು ಸುಲಭವೂ ಲಲಿತವೂ ಆದ ತಿಳಿಗನ್ನಡವಾಗಿದೆ. ಕಾಗದವೂ ಮುದ್ರಣವೂ ಅಂದವಾಗಿವೆ. ಅಲ್ಲಲ್ಲಿ ಕಾಣಬರುವ ಸಾಮಾನ್ಯವಾದ ಕೆಲವು ಭಾಷಾದೋಷಗಳನ್ನು ಸಂಪಾದಕರು ಮುಂದೆ ನೇರ್ಪಡಿಸಿಕೊಳ್ಳುವರೆಂದು ನಂಬುತ್ತೇವೆ.

ಕನ್ನಡದಲ್ಲಿ ಇಂತಹ ಪತ್ರಿಕೆಗಳನ್ನು ನಡೆಯಿಸುವುದು ಬಹಳ ಕಷ್ಟಸಾಧ್ಯವಾಗಿದ್ದರೂ ಈ ಹೊಸ ತೆರದ ಪತ್ರಿಕೆಯನ್ನು ಸಂಪಾದಕರು ಹೊರಡಿಸಿದುದಕ್ಕಾಗಿ ಅವರನ್ನು ಅಭಿನಂದಿಸುವೆವಲ್ಲದೆ, ಈ ಪತ್ರಿಕೆಯು ಚಿರಕಾಲ ನಡೆಯಲೆಂದೂ ಕರ್ಣಾಟಕಕ್ಕೆ ಭೂಷಣಪ್ರಾಯವಾಗಿರಲೆಂದೂ ಬಯಸುತ್ತೇವೆ.

---

೧೦. ಸುವಾಸಿನಿ

ಸಂಪುಟ ೩. ಸಂಚಿಕೆ ೧: ಸೆಪಟಂಬರು ೧೯೨೫ : ಕ್ರೌನ್ ಚತುಷ್ಪತ್ರ ಪುಟ ೩೨:
ವಾರ್ಷಿಕ ಚಂದಾ ರೂ. ೩-೪-೦.

ಇದು "ವಿದ್ಯಾವರ್ಧನ, ತತ್ತ್ವಶಾಸ್ತ್ರ, ಕಲಾ ಕೌಶಲ್ಯ—ಇತ್ಯಾದಿ ವಿಷಯಗಳನ್ನು ಸ್ತ್ರೀ ಬಾಲರಾದಿಯಾಗಿ ಸರ್ವ ಜನ ಮನೋರಂಜನೆಯಾಗುವಂತೆ ವರ್ಣಿಸುವ ತಿಳಿಗನ್ನಡ ಮಾಸಪತ್ರಿಕೆ." ಈ ಪತ್ರಿಕೆಯು ಇಪ್ಪತ್ತೈದು ವರ್ಷಗಳ ಹಿಂದೆ ಹುಟ್ಟಿ, ಹದಿನೆಂಟು ವರ್ಷಗಳ ಕಾಲ ಪ್ರಕಾಶಿಸಿದ್ದು ಅಂತರ್ಧಾನವಾಗಿ ಮರಳಿ ಈಗ ಉದಯಿಸಿರುವುದು.

ಪ್ರಕೃತ ಸಂಚಿಕೆಯಲ್ಲಿ ಕಾದಂಬರಿ, ಶಿಕ್ಷಣ ಪ್ರಚಾರ, ಹಾಸ್ಯ ವಿಷಯಗಳು, ಪುರಾಣ ಕಥೆ, ಚರಿತ್ರಾಂಶಗಳು, ಜೀವನ ಚರಿತ್ರೆ, ಕವಿತೆಗಳು, ಮಕ್ಕಳ ಚೊಕ್ಕಸ, ಒಗಟುಗಳು, ವಿಚಿತ್ರ ವಿಷಯ ಸಂಗ್ರಹ—ಇವೇ ಮೊದಲಾದುವು ಎಲ್ಲರಿಗೂ ಮನೋರಂಜಕವಾಗುವಂತೆ ಬರೆದಿವೆ. ಭಾಷೆಯು ಸುಲಭವಾಗಿಯೂ ಲಲಿತವಾಗಿಯೂ ಇದೆ.

ಕನ್ನಡಿಗರು 'ಸುವಾಸಿನಿ'ಗೆ ಪ್ರೋತ್ಸಾಹವಿತ್ತು ತನ್ಮೂಲಕ ಚಿರಕಾಲ ದೇಶಸೇವೆಯಾಗುವಂತೆ ಮಾಡುವರೆಂದು ಹಾರೈಸುತ್ತೇವೆ.

---

೧೧. ಸುಬೋಧ

ಸಂಪುಟ ೧, ಸಂಚಿಕೆ ೧ : ಸೆಪಟಂಬರು ೧೯೨೫ : ಕ್ರೌನ್ ಚತುಷ್ಪತ್ರ ಪುಟ ೨೦:
ವಾರ್ಷಿಕ ಚಂದಾ ೧ ರೂಪಾಯಿಂದ ರೂ. ೧-೮-೦ ವರೆಗೆ.

ಸಂಪಾದಕರು.—ಯಂ. ರಾಮರಾವ್, ಬೆಂಗಳೂರು ಸಿಟಿ.

ಇದೊಂದು ಸಚಿತ್ರ ಮಾಸಪತ್ರಿಕೆ. ಇದರಲ್ಲಿ ವಾಚಕರಿಗುಪಯುಕ್ತವಾದ ವಿವಿಧ ವಿಷಯಗಳು ಗದ್ಯರೂಪವಾಗಿಯೂ ಪದ್ಯರೂಪವಾಗಿಯೂ ಪ್ರಕಟವಾಗುತ್ತವೆ. ಪ್ರಕೃತ ಸಂಚಿಕೆಯಲ್ಲಿ 'ಭಗವನ್ನಾಮಾಮೃತ,' 'ವಿದ್ಯಾಮಹಿಮೆ,' 'ರವೀಂದ್ರನಾಥ ಠಾಕೂರರು' ಎಂಬ ಮೂರು ಪದ್ಯರೂಪವಾದ ಕವಿತೆಗಳೂ, ಭಗವದ್ಗೀತೆಯ ಮೊದಲನೆಯ ಅಧ್ಯಾಯದ ಕಥಾಸಾರವೂ, ಚರಿತ್ರೆಯ ವಿಷಯಗಳೂ, 'ಜೀವಿತ'ಗಳೂ ಸೂಕ್ತಿಮಾಲೆಯೂ, ಹುಡುಗರಿಗೆ ಸಣ್ಣ ಕಥೆಗಳೂ, ಸ್ವಾಮಿ ವಿವೇಕಾನಂದರ ಉಪನ್ಯಾಸ ಸಾರಾಂಶವೂ, ಆರೋಗ್ಯ ವಿಷಯಗಳೂ, ವಿದ್ಯಾಭ್ಯಾಸ ವಿಚಾರಗಳೂ, ಲೋಕವಾರ್ತೆಯೂ, ಆ ತಿಂಗಳ ಲಘುಪಂಚಾಂಗವೂ ಕೊಟ್ಟಿದೆ.

ರಾಜಸಭಾಭೂಷಣ ಮ॥ ಕರ್ಪೂರ ಶ್ರೀನಿವಾಸರಾಯರು ಈ ಪತ್ರಿಕೆಯ ಉದ್ದೇಶ, ಪ್ರಯೋಜನ, ಭಾಷಾಶೈಲಿ ಮೊದಲಾದುವನ್ನು ಕುರಿತು ತಮ್ಮ ಉಪೋದ್ಘಾತದಲ್ಲಿ ಬರೆದಿರುವರು.

ಸಂಪಾದಕರ ಉದ್ದೇಶವು, "ಸ್ವಲ್ಪಮಾತ್ರ ವಿದ್ಯಾಭ್ಯಾಸ ಮಾಡಿಯೂ ಅನಕಾಶವಿದ್ದು ತರುವಾಯ ಮನೆಯಲ್ಲಿ ನಿಂತುಬಿಡುವ ಸ್ತ್ರೀಯರು, ಬಾಲಕ ಬಾಲಿಕೆಯರು ಮತ್ತು ಸಾಮಾನ್ಯ ಜನಸಮೂಹ"— ಇವರಿಗೆ ದೇಶಾಭಿವೃದ್ಧಿ ಭಾಷಾಭಿವೃದ್ಧಿಗಳ ವಿಚಾರದಲ್ಲಿ ಮುಖ್ಯವಾದ ಸಂಗತಿಗಳನ್ನು ತಿಳಿಸಬೇಕೆಂದೂ, ಭಾಷಾ ಏಕೀಕರಣಕ್ಕೆ ತಳಹದಿಯನ್ನು ಹಾಕಬೇಕೆಂದೂ ಇರುವಂತೆ 'ಸ್ವವಿಷಯ'ದಲ್ಲಿ ಹೇಳಿದೆ.

ಭಾಷಾ ಶೈಲಿಯು ಸುಲಭವಾಗಿಯೂ ಸರಳವಾಗಿಯೂ ಇದೆ. ಅಲ್ಲಲ್ಲಿ ಸಾಮಾನ್ಯವಾದ ಕೆಲವು ತಪ್ಪುಗಳೂ ಅಸಮಂಜಸಗಳೂ ಕಾಣಬರುವುವು. ಇವನ್ನು ಸಂಪಾದಕರು ನಿವಾರಿಸಿಕೊಳ್ಳುವರೆಂದು ಕೋರುತ್ತೇವೆ. ಸಣ್ಣ ಕಥೆಗಳನ್ನು ಅನೇಕ ಮಾಸಗಳಿಂದಲೂ ಬರೆದು ಕನ್ನಡಿಗರೆಲ್ಲರಿಗೂ ಪರಿಚಿತರಾಗಿರುವ ಈ ಪತ್ರಿಕಾ ಸಂಪಾದಕರಿಗೆ ತಕ್ಕಷ್ಟು ಪ್ರೋತ್ಸಾಹವನ್ನು ಕನ್ನಡಿಗರು ಒದಗಿಸಿಕೊಡುವರೆಂದು ಹಾರೈಸುತ್ತೇವೆ.

---

೧೨. ಕರ್ನಾಟಕ ಬಂಧು

ಸಂಪುಟ ೧, ಸಂಚಿಕೆ ೧: ಅಕ್ಟೋಬರು ೧೯೨೫ : ಡೆಮ್ಮಿ ಅಷ್ಟಪತ್ರ ಪುಟ ೧೬ :

ವಾರ್ಷಿಕ ಚಂದಾ ೧ ರೂಪಾಯಿ; ಪೋಷಕರಿಗೆ ೩ ರೂಪಾಯಿ.

ಸಂಪಾದಕರು.—ವೈ. ನಾಗೇಶಶಾಸ್ತ್ರಿ, ಸರ್ವದರ್ಶನತೀರ್ಥ
ಮೊದಲಾದವರು, ಬಳ್ಳಾರಿ.

ಇದೊಂದು ಮಾಸಪತ್ರಿಕೆ. ಇದರಲ್ಲಿ ಧಾರ್ಮಿಕ, ಸಾಮಾಜಿಕ, ನೈತಿಕ, ಐತಿಹಾಸಿಕ, ವಾಙ್ಮಯಾತ್ಮಕಾದಿ ವಿವಿಧ ವಿಷಯಗಳನ್ನು ಪ್ರಕಟಿಸಲಾಗುವುದೆಂದು 'ವಿಜ್ಞಾಪನೆ'ಯಲ್ಲಿ ಹೇಳಿದೆ. ಪ್ರಸ್ತುತ ಸಂಚಿಕೆಯಲ್ಲಿ 'ಕರ್ನಾಟಕ ಭಾಷಾಜನನೀ ಸ್ತೋತ್ರ ಪಂಚಕ, ಮೋಹರೋಗ ಗರ್ವಾಣಂ ಎಂಬ ಪದ್ಯರೂಪವಾದ ಕವಿತೆಗಳೂ, ಮಾತೃಭಾಷಾ ಭಕ್ತಿ, ದಾನೇನ ಸರ್ವೇ ವಶಾಃ, ಅನೈಕ್ಯ ಮುಕ್ತಿದ ಮಹಾಸರ್ಥವು, ಹಿಂದೂ ತರುಣರೆ ಉದ್ಯೋಗಿಗಳಾಗಿರಿ—ಎಂಬ ಲೇಖನಗಳೂ, ಅದ್ಭುತ ಸಮಾಚಾರಗಳೂ, ವಿನೋದ ಗಣಿತವೂ, 'ವಸಂತ' ಎಂಬ ಪತ್ತೇದಾರಿ ನವಲಿನ ಪ್ರಥಮ ಪುಟವೂ ಇವೆ.

ಭಾಷಾಶೈಲಿಯು ಲಲಿತವಾಗಿಯೂ ಸುಲಭವಾಗಿಯೂ ಇದೆ. ದೋಷಗಳು ಅಲ್ಲಲ್ಲಿ ಕಾಣಬರುವುವು. ಇವನ್ನು ತಿದ್ದಿಕೊಳ್ಳಬೇಕೆಂದು ಬೇಡುವೆವು. ಕನ್ನಡಿಗರು ಇಂತಹ ಪತ್ರಿಕೆಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಅವುಗಳನ್ನು ಉತ್ತಮ ಸ್ಥಿತಿಗೆ ತಂದು ಭಾಷಾಭಿವೃದ್ಧಿ ಮಾಡುವರೆಂದು ಹಾರೈಸುತ್ತೇವೆ.

ಪ್ರೊಫೆಸರ ಗೋಖಲೇ ಕೃತ

೧೩. ಅಂಕಗಣಿತ

(ಮೊದಲನೆಯ ಭಾಗ)

ಡೆ॥ ಅಷ್ಟಪತ್ರ ಪುಟ ೧೪೬ : ನಾಲ್ಕನೆಯಾವೃತ್ತಿ : ಬೆಲೆ ೫ ಆಣೆ : ೧೯೨೫.

ಲೇಖಕರು.—ಕೃಷ್ಣಾಜೀ ಗೋವಿಂದ ಗಜ್ಜೆ, ಬಿ.ಎ., ಎಲ್.ಎಲ್. ಬಿ., ಬೆಳಗಾವ.

ಇದರಲ್ಲಿ ಕನ್ನಡ ೭ನೆಯ ಇಯತ್ತೆಯ ವರೆಗಿನ ಗಣಿತ ವಿಷಯವೆಲ್ಲ ಬಂದಿರುತ್ತದೆಂದೂ, ಇದು ಶಾಲೆಯೊಳಗಿನ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳಿಗೂ ಉಪಯೋಗಿಸುವದೆಂದೂ ಪ್ರಸ್ತಾವನೆಯಲ್ಲಿ ಹೇಳಿದೆ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ

ರಕ್ತಾಕ್ಷಿ ಸಂವತ್ಸರದ ವರದಿ

೧೯೨೪

ಶ್ರೀಃ

ಕರ್ಣಾಟಕ ಸಾಹಿತ್ಯ ಪರಿಷತ್ತು

ರಕ್ತಾಕ್ಷಿ ಸಂವತ್ಸರದ ವರದಿ

---

೧. ಕರ್ಣಾಟಕ ಸಾಹಿತ್ಯ ಪರಿಷತ್ತು ಸ್ಥಾಪಿತವಾಗಿ ಇಂದಿಗೆ ಹತ್ತು ವರ್ಷಗಳಾದುವು. ಇದಕ್ಕೆ ಮೊದಲು ಅನೇಕ ವರ್ಷಗಳಿಂದಲೂ, ನಾನಾ ಪ್ರಾಂತಗಳ ಕನ್ನಡಿಗರನ್ನು ಒಟ್ಟುಗೂಡಿಸಿ ಅವರಲ್ಲಿ ಸ್ನೇಹಭಾವವನ್ನು ಬೆಳೆಯಿಸುವುದರ ಮೂಲಕ, ಒಡೆದಿರುವ ಭಾಷೆಯನ್ನು ಕ್ರಮೇಣ ಒಂದಾಗಿ ಮಾಡಿ, ಮುಂದುವರಿದಿರುವ ಮಹಾರಾಷ್ಟ್ರ ತಮಿಳು ತೆಲುಗು ಮೊದಲಾದ ಭಾಷೆಗಳಂತೆಯೇ ಕನ್ನಡವನ್ನೂ ಅಭಿವೃದ್ಧಿಗೊಳಿಸಬೇಕೆಂಬ ಆಸೆಯು ಅನೇಕ ಮಂದಿ ಕನ್ನಡ ಭಾಷಾಭಿಮಾನಿಗಳಲ್ಲಿ ಮೂಡಿದ್ದಿತು. ಆದರೂ ಈ ಕೆಲಸಕ್ಕೆ ಪ್ರಮುಖರಾಗಿ ನಿಂತು ಕಾರ್ಯ ಸಾಧನೆ ಮಾಡಲು ಯಾರಿಗೂ ತಕ್ಕಷ್ಟು ಪ್ರೋತ್ಸಾಹ ದೊರಿಯಲಿಲ್ಲ.

ಮೈಸೂರು ದೇಶದಲ್ಲಿ, ದಿವಾನ್ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಆಧಿಪತ್ಯದಲ್ಲಿ, ಪ್ರಜೆಗಳನ್ನು ಉತ್ತೇಜನಗೊಳಿಸಿ ದೇಶಾಭಿವೃದ್ಧಿಯ ಕಾರ್ಯದಲ್ಲಿ ಅವರನ್ನು ಮುಂದಾಳುಗಳಾಗಿ ಮಾಡುವ ಉದ್ದೇಶದಿಂದ 'ಎಕನಾಮಿಕ್ ಕಾನ್ಫರೆನ್ಸ್' ಎಂಬ ಅರ್ಥಸಾಧಕ ಸಮಾಜವೊಂದು ೧೯೧೧ನೆಯ ಇಸವಿಯಲ್ಲಿ ಸ್ಥಾಪಿತವಾಯಿತು. ಈ ಸಮಾಜದಲ್ಲಿ ಮಾರ್ಗದರ್ಶಿಗಳಾಗಿದ್ದ ರಾಜಮಂತ್ರ ಪ್ರವೀಣ ಎಚ್. ವಿ. ನಂಜುಂಡಯ್ಯನವರು, ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು, ರಾಜಕಾರ್ಯ ಪ್ರಸಕ್ತ ರಾವ್ ಬಹಾದೂರ್ ಎಂ. ಶಾಮರಾಯರು—ಇವರೇ ಮೊದಲಾದ ಕನ್ನಡ ಭಾಷಾಭಿಮಾನಿಗಳು, ಕನ್ನಡ ಗ್ರಾಂಥಿಕ ಭಾಷೆಯು ಸಹ ಒಂದಾಗಿರದೆ ಮೂರು ವಿಧವಾಗಿ ಒಡೆದಿರುವುದರಿಂದ ಇದರ ಏಳಿಗೆಗೆ ಕುಂದಕವುಂಟಾಗಿರುವುದೆಂಬುದನ್ನರಿತು, ರಾಕ್ಷಸ ಸಂವತ್ಸರದಲ್ಲಿ—ಎಂದರೆ ೧೯೧೫ನೆಯ ಇಸವಿಯ ಮೇ ತಿಂಗಳಲ್ಲಿ, ಮುಂಬಯಿ ಮದರಾಸು ಮೊದಲಾದ ಪ್ರಾಂತಗಳ ಅನೇಕ ಮಂದಿ ಪ್ರಮುಖ ಭಾಷಾಭಿಮಾನಿಗಳನ್ನು ಬೆಂಗಳೂರಿಗೆ ಕರೆಯಿಸಿ ಒಂದು ಸಮ್ಮೇಳನವನ್ನು ಬಹಳ ವಿಜೃಂಭಣೆಯಿಂದ ನಡೆಯಿಸಿದರು. ಆಗ ಆ ಪ್ರಾಂತಗಳಿಂದ ಬಂದಿದ್ದ ಕನ್ನಡಿಗರು ಮೈಸೂರು ಕನ್ನಡಿಗರೊಡನೆ ಸೇರಿ, ಎಲ್ಲರೂ ಒಬ್ಬ ತಾಯಿಯ ಮಕ್ಕಳಂತೆ ಅತ್ಯುತ್ಸಾಹದಿಂದ ಕನ್ನಡ ಭಾಷೆಯ ಏಕೀಕರಣಕ್ಕೆ ತಳಹದಿ ಹಾಕುವಂತೆ ಕರ್ಣಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ ಸಂಭ್ರಮವನ್ನು ಅದರಲ್ಲಿ ಭಾಗಿಗಳಾಗಿದ್ದವರು ಯಾರೂ ಮರೆಯುವಂತಿಲ್ಲ. ಈ ಸಂಸ್ಥೆಯು ಎಷ್ಟು

ಮಟ್ಟಿಗೆ ತನ್ನ ಉದ್ದಿಷ್ಟ ಕಾರ್ಯವನ್ನು ನೆರವೇರಿಸಿರುವುದೆಂಬುದು ಕನ್ನಡ ಭಾಷಾಭಿಮಾನಿಗಳಿಗೆ ತಿಳಿಯದೆಯಿಲ್ಲ.

ಇಂತಹ ಮಹಾ ಕಾರ್ಯಕ್ಕಾಗಲಿ ದ್ರವ್ಯ ಸಹಾಯವೂ ಜನರ ಪರಸ್ಪರ ಸಹಾನುಭೂತಿಯೂ ಅತ್ಯಾವಶ್ಯಕವೆಂದು ಹೇಳಬೇಕಾದುದಿಲ್ಲ. ದ್ರವ್ಯ ಸಹಾಯವು ತಕ್ಕಷ್ಟು ಮಟ್ಟಿಗೆ ಕನ್ನಡಿಗರಿಂದ ದೊರೆತಿಲ್ಲ. ಮೈಸೂರು ಶ್ರೀಮನ್ಮಹಾರಾಜರವರ ಸರಕಾರದವರು ಈ ಸಂಸ್ಥೆಯು ಸ್ಥಾಪಿತವಾದಂದಿನಿಂದಲೂ ಇದಕ್ಕೆ ಕೊಡುತ್ತಿರುವ ಉದಾರಾಶ್ರಯವು ನಡೆದುಬಾರದಿದ್ದರೆ ಸಂಸ್ಥೆಯ ಗತಿಯೇನಾಗುವುದೊ ಎಂಬ ಭಯವು ಅದರ ಚಾಲಕರನ್ನು ಪೀಡಿಸುತ್ತಿರುವುದು. ಮೈಸೂರು ಸರಕಾರದವರು ಈ ಸಂಸ್ಥೆಗೆ ತಾವು ಮಾಡುತ್ತಿದ್ದ ಧನ ಸಹಾಯವನ್ನು ದ್ರವ್ಯಾಭಾವದಿಂದ ಈಚೆಗೆ ಕಡಿಮೆ ಮಾಡಿರುತ್ತಾರೆ. ಈ ಕಾರಣದಿಂದ ಹೆಚ್ಚು ಕೆಲಸ ಮಾಡುವುದಕ್ಕೆ ಕುಂದಕವುಂಟಾಗಿದೆ. ಸುಮಾರು ಒಂದೂವರೆ ಕೋಟಿ ಕನ್ನಡಿಗರಿರುವ ಕರ್ಣಾಟಕ ದೇಶದಲ್ಲಿ ಇಂತಹ ಸಂಸ್ಥೆಗೆ ಪ್ರಜೆಗಳಿಂದ ತಕ್ಕಷ್ಟು ಪ್ರೋತ್ಸಾಹವಿಲ್ಲವೆಂದು ಹೇಳಿದರೆ ದೂರದರ್ಶಿಗಳಾದ ಕನ್ನಡ ಪಕ್ಷಪಾತಿಗಳ ಮನಸ್ಸು ನೋಯದಿರದು. ಆದುದರಿಂದ ಕನ್ನಡ ಭಾಷಾಭಿಮಾನಿಗಳೆಲ್ಲರೂ ಈ ಸಂಸ್ಥೆಯ ಏಳಿಗೆಗಾಗಿ ಇನ್ನೂ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡಲು ಪ್ರಯತ್ನಿಸಬೇಕೆಂದು ನಾವು ಅವರನ್ನು ಬೇಡಿಕೊಳ್ಳುತ್ತೇವೆ.

೨. ಕಾರ್ಯ ನಿರ್ವಾಹಕ ಮಂಡಲಿ.—೧೯೨೪ನೆಯ ಇಸವಿ ಮೇ ತಿಂಗಳು ೧೮ನೆಯ ತಾರೀಖಿನಲ್ಲಿ ಕೋಲಾರದಲ್ಲಿ ನಡೆದ ಪರಿಷತ್ತಿನ ವಾರ್ಷಿಕ ಅಧಿವೇಶನದಲ್ಲಿ ಮುಂದೆ ಹೇಳುವ ಸದಸ್ಯರನ್ನು ಕಾರ್ಯ ನಿರ್ವಾಹಕ ಮಂಡಲಿಗೆ ಮೈಸೂರು, ಮುಂಬಯಿ ಮತ್ತು ಮದರಾಸು ಪ್ರಾಂತಗಳ ಸದಸ್ಯರು ಚುನಾಯಿಸಿದರು. ಮದರಾಸು, ಹೈದರಾಬಾದು, ಕೊಡಗು—ಈ ಪ್ರಾಂತಗಳ ಸದಸ್ಯರು ಕೆಲವು ವರುಷಗಳಿಂದ ಪರಿಷತ್ತಿನ ವಾರ್ಷಿಕ ಅಧಿವೇಶನಕ್ಕೆ ಬಾರದಿರುವುದರಿಂದ ಹಿಂದೆ ಗೊತ್ತಾದ ಸದಸ್ಯರನ್ನೇ ಉಳಿಸಿಕೊಳ್ಳಲಾಗಿದ್ದಿತು. ಹೋದ ವರುಷ ಕೋಲಾರದ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದ ರಾವ್ ಬಹಾದೂರ್ ಮ॥ ರಾ॥ ಎಚ್. ಕೃಷ್ಣಶಾಸ್ತ್ರಿಗಳವರೊಬ್ಬರೇ ಮದರಾಸು ಪ್ರಾಂತದ ಸದಸ್ಯರ ಪ್ರತಿನಿಧಿಗಳಾಗಿದ್ದವರು. ಅವರು ಐದು ಮಂದಿಯನ್ನು ಚುನಾಯಿಸುವುದಕ್ಕೆ ಬದಲಾಗಿ ಹಿಂದಣವರುಷದಲ್ಲಿದ್ದಂತೆಯೇ ನಾಲ್ಕು ಮಂದಿಯನ್ನು ಮಾತ್ರ ಚುನಾಯಿಸಿದರು. ಹೈದರಾಬಾದು ಸಂಸ್ಥಾನದ ಪ್ರತಿನಿಧಿಗಳಾಗಿದ್ದವರಿಗೆ ಪರಿಷತ್ತಿನ ಸದಸ್ಯತ್ವವು ತಪ್ಪಿಹೋದುದರಿಂದ ಈಗ ಅದರ ಪ್ರತಿನಿಧಿಗಳು ಯಾರೂ ಕಾರ್ಯ ನಿರ್ವಾಹಕ ಮಂಡಲಿಯಲ್ಲಿಲ್ಲ. ಮೊದಲಿಂದಲೂ ಉತ್ತರ ಕರ್ಣಾಟಕ ಸಂಸ್ಥಾನಗಳ ಪ್ರತಿನಿಧಿಗಳಲ್ಲೊಬ್ಬರಾಗಿದ್ದ ಶಿರಹಟ್ಟಿಯ ಮ॥ ರಾ॥ ಆರ್. ಎಸ್. ಮಂಗಸೂಲಿಯವರು, ತಾವು ಕಾರ್ಯ ನಿರ್ವಾಹಕ ಮಂಡಲಿಯ ಕೆಲಸವಾವುದನ್ನೂ ಮಾಡುತ್ತಿಲ್ಲವಾದುದರಿಂದ, ತಮ್ಮ ಹೆಸರನ್ನು ಆ ಮಂಡಲಿಯಿಂದ ತೆಗೆದುಹಾಕಬೇಕೆಂದು ಬರೆದರು. ಆದರಿಂದ ಆ ಸಂಸ್ಥಾನಗಳಿಗೆ ಈಗಿರುವ ಪ್ರತಿನಿಧಿಗಳು ಒಬ್ಬರೇ. ಕೊಡಗಿನ ಪ್ರತಿನಿಧಿಗಳನ್ನಾಗಿ ಹಿಂದಣ ವರುಷದವರನ್ನೇ ಉಳಿಸಿಕೊಳ್ಳಲಾಯಿತು.

ಈಗಿರುವ ಕಾರ್ಯನಿರ್ವಾಹಕ ಮಂಡಲಿ :—

ಅಧ್ಯಕ್ಷರು.—ಮೈಸೂರು ಶ್ರೀಮದ್ಯುವರಾಜರವರು ಸರ್ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹಾದೂರ್, ಜಿ.ಸಿ.ಐ.ಇ. ಅವರು.

ಉಪಾಧ್ಯಕ್ಷರು.—ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸ ರಾಯರು, ಬಿ.ಎಸ್‌ಸಿ., ಎಲ್.ಸಿ.ಇ.

ಗೌ॥ ಕಾರ್ಯದರ್ಶಿಗಳು.—ಮ॥ ರಾ॥ ಬೆಳ್ಳಾವೆ ವೆಂಕಟನಾರಾಯಣಪ್ಪನವರು, ಎಂ.ಎ.

ಗೌ॥ ಕೋಶಾಧ್ಯಕ್ಷರು.—ಮ॥ ರಾ॥ ಸಂಗಪುರಂ ವೆಂಕಟೇಶ ಅಯ್ಯಂಗಾರ್ಯರು, ಬಿ.ಎ.

ಸದಸ್ಯರು.—

ಮೈಸೂರು ಸಂಸ್ಥಾನಕ್ಕೆ

೧. ಪ್ರಾಕ್ತನ ವಿಮರ್ಶವಿಚಕ್ಷಣ ರಾವ್ ಬಹಾದೂರ್
ಮ॥ ರಾ॥ ರಾ. ನರಸಿಂಹಾಚಾರ್ಯರು, ಎಂ.ಎ.
೨. ರಾಜಕಾರ್ಯ ಪ್ರಸಕ್ತ ರಾವ್ ಬಹಾದೂರ್
ಮ॥ ರಾ॥ ಎಂ. ಶಾಮರಾಯರು, ಎಂ.ಎ.
೩. ರಾಜಸಭಾಭೂಷಣ ದಿವಾನ್ ಬಹಾದೂರ್
ಮ॥ ರಾ॥ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ.ಐ.ಇ.
೪. ಮ॥ ರಾ॥ ಎಂ. ಎಲ್. ವರ್ಧಮಾನಯ್ಯನವರು.
೫. ,, ರಾಜಕವಿಭೂಷಣ ಎಚ್. ಲಿಂಗರಾಜ ಅರಸಿನವರು.
೬. ,, ಬಿ. ಕೃಷ್ಣಪ್ಪನವರು, ಎಂ.ಎ.
೭. ,, ಕೆ. ಸಂಪದ್ಗಿರಿರಾಯರು, ಎಂ.ಎ.
೮. ,, ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ.
೯. ,, ಟಿ. ಅಪ್ಪೂರಾಯರು, ಬಿ.ಎ., ಬಿ.ಎಲ್.
೧೦. ,, ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ.
೧೧. ,, ಎಂ. ಆರ್. ಶ್ರೀನಿವಾಸಮೂರ್ತಿಗಳು, ಬಿ.ಎ.
೧೨. ,, ಡಿ. ಕೊಂಗಾಡಿಯಪ್ಪನವರು.

ಮುಂಬಯಿ ಪ್ರಾಂತಕ್ಕೆ

೧. ಮ॥ ರಾ॥ ರಾವ್ ಸಾಹೆಬ್ ಪಿ. ಜಿ. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.
೨. ,, ವಿ. ಬಿ. ಆಲೂರ್, ಬಿ.ಎ., ಎಲ್‌ಎಲ್. ಬಿ.
೩. ,, ಆರ್. ಎ. ಜಹಗೀರ್‌ದಾರ್, ಎಂ.ಎ., ಎಲ್‌ಎಲ್.ಬಿ.
೪. ,, ಎನ್. ಆರ್ ದೇಶಪಾಂಡೆ, ಬಿ.ಎ., ಎಲ್‌ಎಲ್.ಬಿ.
೫. ,, ಕೆ. ಜಿ. ಗೆಜ್ಜಿ, ಬಿ.ಎ., ಎಲ್‌ಎಲ್.ಬಿ.
೬. ,, ನಾ. ಕೃ. ಹುಯಿಲುಗೋಳ್, ಬಿ.ಎ., ಎಲ್‌ಎಲ್.ಬಿ.
೭. ,, ನಾ. ಶ್ರೀ. ರಾಜಪುರೋಹಿತರು.

೭. ಮ॥ ರಾ॥ ವಿ. ಬಿ. ಧಾರವಾರಕರ್, ಬಿ.ಎ.
೯. ,, ಶಂಕರ ನರಸಿಂಹ ಕುಲಕರ್ಣಿ.

ಮದರಾಸು ಪ್ರಾಂತಕ್ಕೆ

೧. ಮ॥ ರಾ॥ ಜಿ. ರಾಮರಾಯರು, ಎಂ.ಎ., ಎಲ್‌ಎಲ್. ಬಿ.
೨. ,, ರಾವ್ ಬಹಾದೂರ್ ಎಚ್. ಕೃಷ್ಣಶಾಸ್ತ್ರಿಗಳು, ಬಿ.ಎ.
೩. ,, ರಾವ್ ಬಹಾದೂರ್ ಎಚ್. ನಾರಾಯಣರಾಯರು, ಎಂ.ಎ.
೪. ,, ಎಚ್. ತಿಮ್ಮಕೃಷ್ಣರಾಯರು, ಬಿ.ಎ., ಬಿ.ಎಲ್.

ಉತ್ತರ ಕರ್ಣಾಟಕ ಸಂಸ್ಥಾನಗಳಿಗೆ

೧. ಮ॥ ರಾ॥ ತಮ್ಮಣ್ಣಪ್ಪಾ ಸತ್ಯಪ್ಪಾ ಚಿಕ್ಕೋಡಿ, ರಾಜಾಪುರ.

ಕೊಡಗಿಗೆ

೧. ಮ॥ ರಾ॥ ಬಿ. ಎನ್. ಕೃಷ್ಣಮೂರ್ತಿಗಳು.

೩. ಅಧಿವೇಶನಗಳು.—ಪರಿಷತ್ತಿನ ಸದಸ್ಯರ ರಕ್ತಾಕ್ಷಿ ಸಂವತ್ಸರದ ವಾರ್ಷಿಕ ಅಧಿವೇಶನವು ಮೇ ೧೮ನೆಯ ತಾರೀಖು ಭಾನುವಾರ ಕೋಲಾರದಲ್ಲಿ ನಡೆಯಿತು.

ಕಾರ್ಯನಿರ್ವಾಹಕ ಮಂಡಲಿಯ ಅಧಿವೇಶನಗಳು ಆರು (೧೯೨೪ನೆಯ ಏಪ್ರಿಲ್ ೧೩, ಮೇ ೧೧, ಆಗಸ್ಟ್ ೩, ಅಕ್ಟೋಬರು ೨೬, ೧೯೨೫ನೆಯ ಜನವರಿ ೧೮, ಮಾರ್ಚಿ ೮ರಲ್ಲಿ) ನಡೆದುವು. ಈ ಅಧಿವೇಶನಗಳಿಗೆ ಬಂದಿದ್ದ ಸದಸ್ಯರುಗಳ ಹೆಸರು ಮತ್ತು ಅಧಿವೇಶನಗಳ ಸಂಖ್ಯೆ:—

ಉಪಾಧ್ಯಕ್ಷರು ೬, ಗೌ॥ ಕಾರ್ಯದರ್ಶಿಗಳು ೬, ಗೌ॥ ಕೋಶಾಧ್ಯಕ್ಷರು ೬, ಮ॥ ರಾ॥ ಟಿ. ಅಪ್ಪೂರಾಯರು ೬, ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯನವರು ೬, ಮ॥ ರಾ॥ ಕೆ. ಕೃಷ್ಣಯ್ಯಂಗಾರ್ಯರು ೬, ಮ॥ ರಾ॥ ಎಂ. ಆರ್. ಶ್ರೀನಿವಾಸ ಮೂರ್ತಿಗಳು ೪, ಮ॥ ರಾ॥ ಕೆ. ಸಂಪದ್ಗಿರಿರಾಯರು ೩, ಮ॥ ರಾ॥ ಡಿ. ಕೊಂಗಾಡಿಯಪ್ಪನವರು ೨, ಮ॥ ರಾ॥ ರಾ. ನರಸಿಂಹಾಚಾರ್ಯರು ೧, ಮ॥ ರಾ॥ ಬಿ. ಕೃಷ್ಣಪ್ಪನವರು ೧.

೪. ಸದಸ್ಯರು.—ರಕ್ತಾಕ್ಷಿ ಸಂವತ್ಸರಾಂತ್ಯದಲ್ಲಿದ್ದ ಸದಸ್ಯರ ಸಂಖ್ಯೆ ಮೊದಲಾದುವು :—

ತರಗತಿ	ಸದಸ್ಯರ ಸಂಖ್ಯೆ	ಈ ವರುಷ ವಸೂಲಾದ ಚಂದಾ ಹಣ ರೂ. ಆ. ಪೈ.	ಬಾಕಿ ಬರಬೇಕಾದ ಚಂದಾ ಹಣ ರೂ. ಆ. ಪೈ.
* ಪ್ರದಾತೃಗಳು	(೧)	..	೫೦೦—೦—೦
ಸಹಾಯಕರು	೨	..	..
ಆಜೀವ ಸದಸ್ಯರು	೬೪ + (೬) †	೧೯೫—೦—೦	೧೩೫—೦—೦
ಸಾಮಾನ್ಯ ಸದಸ್ಯರು	೭೯	೧೯೯—೦—೦	೩೨೯—೦—೦
ಒಟ್ಟು ..	೧೪೫ + (೬)	೩೯೪—೦—೦	೯೯೪—೦—೦

* ಇವರು ಪ್ರಥಮ ವರ್ಗದ ಸದಸ್ಯರಾಗಿಯೂ ಇರುವರು.

† ಕಂಸ ಚಿಹ್ನೆಯಲ್ಲಿರುವವರಿಂದ ಸದಸ್ಯತ್ವಕ್ಕೆ ದರಖಾಸ್ತುಗಳು ಬಂದಿಲ್ಲ.

ರಕ್ತಾಕ್ಷಿ ಸಂವತ್ಸರದಲ್ಲಿ ಆಜೀವ ಸದಸ್ಯರೊಬ್ಬರು ಕಾಲಾಧೀನರಾದರು; ಒಬ್ಬರು ಹೊಸದಾಗಿ ಸೇರಿದರು; ಇಬ್ಬರು ಸಾಮಾನ್ಯ ಸದಸ್ಯತ್ವದಿಂದ ಆಜೀವ ಸದಸ್ಯತ್ವಕ್ಕೆ ಬದಲಾಯಿಸಿಕೊಂಡರು. ಸಾಮಾನ್ಯ ಸದಸ್ಯರಲ್ಲಿ ೪ ಮಂದಿ ರಾಜೀನಾಮೆಕೊಟ್ಟರು; ೮ ಮಂದಿಯನ್ನು ಎರಡು ವರ್ಷದ ಚಂದಾ ಕೊಡದೆ ಹೋದುದರಿಂದ ವಜಾ ಮಾಡಲಾಯಿತು; ಹೊಸದಾಗಿ ೯ ಮಂದಿ ಸೇರಿದರು.

ಮೇಲೆ ಹೇಳಿದ ಸದಸ್ಯರಲ್ಲದೆ ಪರಿಷತ್ಪತ್ರಿಕೆಗೆ ಮಾತ್ರ ಚಂದಾದಾರರಾಗಿರುವವರ ಸಂಖ್ಯೆ ೬೪; ಅವರಿಂದ ಈ ವರುಷ ಬಂದಿರುವ ಮೊಬಲಗು ರೂ. ೧೫೦-೮-೦; ಬಾಕಿ ಬರಬೇಕಾದುದು ರೂ. ೧೩೬-೦-೦.

ಪರಿಷತ್ತು ಹುಟ್ಟಿದಂದಿನಿಂದಲೂ ಅದರ ಸದಸ್ಯರ ಸಂಖ್ಯೆಯು ೧೯೬ಕ್ಕಿಂತಲೂ ಯಾವ ವರುಷವೂ ಹೆಚ್ಚಾಗಿರಲಿಲ್ಲ.

೫. ಸಂಪಾದಕ ಮಂಡಲಿ.—ಹಿಂದಿನ ಸಂಪಾದಕ ಮಂಡಲಿಯನ್ನೇ ಈ ವರುಷವೂ ಉಳಿಸಿಕೊಳ್ಳಲಾಗಿದೆ. ಸದಸ್ಯರು.—

೧. ಮ|| ರಾ|| ಬಿ. ಕೃಷ್ಣಪ್ಪನವರು, ಎಂ.ಎ. (ಮೈಸೂರು)
೨. ,, ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ. (ಬೆಂಗಳೂರು)
೩. ,, ಬೆಳ್ಳಾವೆ ವೆಂಕಟನಾರಾಯಣಪ್ಪನವರು, ಎಂ.ಎ. (ಬೆಂಗಳೂರು)
೪. ,, ಆರ್ಕಾಟು ಭೀಮಾಚಾರ್ಯರು, ಎಂ.ಎ., ಎಲ್.ಟಿ. (ಬಳ್ಳಾರಿ)
೫. ,, ಪ್ರಭಾಕರ ಪೂಜಾರ ಮಹಾದೇವ ಶಾಸ್ತ್ರಿಗಳು, ಧಾರವಾಡ.

೬. ಪರಿಷತ್ತಿನ ವಾಙ್ಮಯ ಕಾರ್ಯ ವಿಚಾರ.—

(೧) **ಪರಿಷತ್ಪತ್ರಿಕೆ.**—ರಕ್ತಾಕ್ಷಿ ಸಂವತ್ಸರದ ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾಗಿರುವ ವಿಷಯಗಳು:—

	ಪುಟಗಳು
ಮ|| ರಾ|| ಎಂ. ಆರ್. ಶ್ರೀನಿವಾಸಮೂರ್ತಿಗಳ	
ವೀರಶೈವರ ವಚನಗಳು	೧೮
ಜೈನ ಕವಿಗಳು	೬
ಮ|| ರಾ|| ನಾರಾಯಣ ಶ್ರೀನಿವಾಸ ರಾಜಪುರೋಹಿತರ	
ಚೌಂಡರಸ ಕವಿ	೭
ಮ|| ರಾ|| ಮಾಸ್ತಿ ವೆಂಕಟೇಶ ಐಯಂಗಾರ್ಯರವರ	
ಗೀತಾಂಜಲಿ	೩೪
ಕನ್ನಡ ಲಾವಣಿ ಸಾಂಗತ್ಯಗಳು	೨೨
ಮ|| ರಾ|| ಮುತ್ಯಾ ನಾಗೇಶಾಚಾರ್ಯರವರ	
ವಿದೂಷಕನ ಪಾತ್ರದಿಂದ ನಾಟಕಗಳಿಗೆ ಆಗುವ ಪ್ರಯೋಜನಗಳು ..	೯
ಮ|| ರಾ|| ಬಿ. ಕೃಷ್ಣಪ್ಪನವರ	
ಪಾರಸೀ ರಾಮಾಯಣಗಳು	೬
ತಲಕಾಡಿನ ಪಶ್ಚಿಮ ಗಂಗರು (ಪರಿವರ್ತಿತ)	೧೯

(೨) **ಪಂಪ ಭಾರತ.**—ಹಿಂದಣ ವರದಿಯಲ್ಲಿ ಹೇಳಿದ್ದಂತೆ ಈ ಗ್ರಂಥದ ಮತ್ತೊಂದು ತಾಳೆಯೋಲೆಯ ಪ್ರತಿಯು ನಮ್ಮ ಅದೃಷ್ಟ ವಶದಿಂದ ಬಂಗಾಳಾ ಪ್ರಾಂತದಲ್ಲಿರುವ ಅರ್ರಾ ಎಂಬ ಪಟ್ಟಣದಲ್ಲಿಯ ಸೆಂಟ್ರಲ್ ಜೈನಾ ಓರಿಯಂಟಲ್ ಲೈಬ್ರೆರಿಯಲ್ಲಿ ದೊರೆಯಿತು. ಈ ಪ್ರತಿಯನ್ನು ಆ ಲೈಬ್ರೆರಿಯ ಅಧಿಕಾರಿಗಳು ನಮಗೆ ಎರವಲಾಗಿ ಕೊಟ್ಟಿರುವರು. ಈ ಉಪಕಾರಕ್ಕಾಗಿ ನಾವು ಅವರಿಗೆ ಬಹಳ ಕೃತಜ್ಞರಾಗಿರುವೆವು. ಇದು ಬಂದಂದಿನಿಂದಲೂ ನಾವು ಮುದ್ರಣಕ್ಕೆ ಸಿದ್ಧಮಾಡಿದ್ದ ಪ್ರತಿಯನ್ನು ಈ ಪ್ರತಿಯ ಸಹಾಯದಿಂದ ಮರಳಿ ತಿದ್ದುತ್ತಿರುವೆವು; ಅನೇಕ ಕಡೆ ತಪ್ಪುಗಳನ್ನೂ ಬಿಟ್ಟುಹೋಗಿರುವ ಭಾಗಗಳನ್ನೂ ಸರಿಪಡಿಸಲಾಗಿದೆ. ಅಕ್ಟೋಬರು ತಿಂಗಳಲ್ಲಿ ಪರಿಷತ್ತಿನ ಸಂಪಾದಕ ಮಂಡಲಿಯ ಬೆಂಗಳೂರಿನ ಸದಸ್ಯರಿಬ್ಬರೂ ಪರಿಷತ್ಪಂಡಿತರೂ ಗ್ರಂಥದ ಎಲ್ಲ ಪ್ರತಿಗಳೊಡನೆ ಮೈಸೂರಿಗೆ ಹೋಗಿ ಅಲ್ಲಿಯ ಪರಿಷತ್ತಿನ ಸಂಪಾದಕರ ಸಹಾಯದಿಂದಲೂ, ಹಿಂದೆ ಪಂಪರಾಮಾಯಣವನ್ನು ಪರಿಷ್ಕರಿಸಿದ ಪಂಡಿತರಲ್ಲಿ ಇಬ್ಬರು ಪಂಡಿತರ ಸಹಾಯದಿಂದಲೂ, ಮೈಸೂರು ಮಹಾರಾಜಾ ಕಾಲೇಜಿನ ಪ್ರೊಫೆಸರ್ ಮ॥ ರಾ॥ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಅವರ ಮತ್ತು ಓರಿಯಂಟಲ್ ಲೈಬ್ರೆರಿಯಲ್ಲಿ ಕನ್ನಡ ಭಾಷಾ ವಿಶಾರದರಾದ ಮ॥ ರಾ॥ ಎ. ಆರ್. ಕೃಷ್ಣಶಾಸ್ತ್ರಿಗಳು, ಎಂ.ಎ. ಅವರ ಸಹಾಯದಿಂದಲೂ ಸಂಪಾದಕರಿಗಿದ್ದ ಸಂಶಯಗಳನ್ನು ಸಾಧ್ಯವಾದ ಮಟ್ಟಿಗೆ ಸರಿಪಡಿಸಿದರು. ಸಾಮಾನ್ಯವಾಗಿ

ಪ್ರತಿ ಪದ್ಯದಲ್ಲಿಯೂ ಏನಾದರೂ ಒಂದು ತೊಡಕು ಇದ್ದೇ ಇರುವುದು. ಹೋದ ಡಿಸೆಂಬರು ತಿಂಗಳಲ್ಲಿ ಪೂನಾ ಭಂಡಾರ್ಕರ್ ಇನ್ಸ್ಟಿಟ್ಯೂಟಿನಲ್ಲಿದ್ದ ಪಂಪ ಭಾರತದ ತಾಳೆಯೋಲೆಯ ಪ್ರತಿಯನ್ನೂ ತರಿಸಿಕೊಂಡೆವು. ಇದನ್ನು ನಮಗೆ ೬ ತಿಂಗಳ ವರೆಗೆ ಎರವಲಾಗಿ ಕೊಟ್ಟಿರುವುದಕ್ಕಾಗಿ ಆ ಭಂಡಾರದ ಅಧಿಕಾರಿಗಳಿಗೆ ನಾವು ಬಹಳ ಕೃತಜ್ಞರಾಗಿರುತ್ತೇವೆ. ಇಷ್ಟರಲ್ಲಿಯೇ ಗ್ರಂಥದ ಮುದ್ರಣವನ್ನು ಆರಂಭಿಸುವೆವು.

(೩) **ದೇವಕವಿಯ ಕುಸುಮಾವಳೀ ಕಾವ್ಯ.**—ಈ ಗ್ರಂಥದ ಮೂಲವು ಪೂರ್ತಿಯಾಗಿ (೩೬೦ ಪುಟಗಳು) ಹಿಂದೆಯೇ ಪರಿಷತ್ತಿನಿಂದ ಮುದ್ರಿತವಾಯಿತು. ಇದನ್ನು ಪರಿಶೋಧಿಸಿ ಮುದ್ರಣದ ತಪ್ಪುಗಳನ್ನು ಗುರುತುಮಾಡಿ ಕ್ಲಿಷ್ಟ ಪದಗಳ ನಿಘಂಟುವನ್ನು ಬರೆಯುವ ಕೆಲಸವು ಸಾವಕಾಶವಾಗಿ ನಡೆಯುತ್ತಿದೆ.

(೪) **ಕನ್ನಡ ಷಟ್ಪದೀ ಕಾವ್ಯಗಳ ನಿಘಂಟು.**—ಈ ಕೆಲಸವು, ತಕ್ಕ ಸಹಾಯಕರು ದೊರೆಯದಿರುವ ಕಾರಣ, ಇದ್ದಂತೆಯೇ ಉಳಿದಿದೆ.

(೫) **ಹರಿಭಕ್ತಿಸಾರ, ಶಿವಭಕ್ತಿಸಾರ.**—ಬಾಲಕರಿಗುಪಯೋಗವಾಗುವಂತೆ ಈ ಎರಡು ಪುಸ್ತಕಗಳಿಗೂ, ಸೋಮೇಶ್ವರ ಶತಕದಂತೆಯೇ, ತಾತ್ಪರ್ಯ ಟಿಪ್ಪಣಗಳನ್ನು ಬರೆದು ಮುದ್ರಣಕ್ಕೆ ಸಿದ್ಧಮಾಡಲಾಗಿದೆ.

(೬) **ಗ್ರಂಥ ವಿಮರ್ಶೆ.**—ಈ ವರುಷದ ಪರಿಷತ್ಪತ್ರಿಕೆಯ ಸಂಚಿಕೆಗಳಲ್ಲಿ ನಾವು ವಿಮರ್ಶೆಮಾಡಿರುವ ಕನ್ನಡ ಗ್ರಂಥಗಳ ಸಂಖ್ಯೆ ೨೯. ಇವುಗಳಲ್ಲಿ ಪದ್ಯಕಾವ್ಯಗಳು ಮತ್ತು ಕೀರ್ತನೆಗಳು ೯, ನಾಟಕ ೧, ಕಾದಂಬರಿಗಳು ಮತ್ತು ಕಥೆಗಳು ೬, ಜೀವನ ಚರಿತ್ರೆಗಳು ೫, ಕವಿ ಚರಿತ್ರೆ ೧, ಇತರ ಗ್ರಂಥಗಳು ೭. ಇವಲ್ಲದೆ, ಹೊಸ ಕನ್ನಡ ಮಾಸ ಪತ್ರಿಕೆಗಳು ೩, ತೆಲುಗು ಮಾಸ ಪತ್ರಿಕೆಗಳು ೨, ಇಂಗ್ಲಿಷು ಮಾಸಪತ್ರಿಕೆ ೧, ಇಂಗ್ಲಿಷು ಗ್ರಂಥಗಳು ೩, ಶಾಸನ ಗ್ರಂಥ ೧, ಶಾಸನದ ಇಲಾಖೆಯ ವರದಿ ೧—ಇನೇ ಮೊದಲಾದುವನ್ನು ವಿಮರ್ಶೆಮಾಡಲಾಯಿತು.

(೭) ಪರಿಷತ್ತಿನ ಅಭಿಪ್ರಾಯಕ್ಕಾಗಿಯೂ ಸಹಾಯಕ್ಕಾಗಿಯೂ ಬಂದ ಗ್ರಂಥಗಳ ಕೈಬರೆಹದ ಪ್ರತಿಗಳು.—

೧. ಮೈಸೂರಿನ ಮ। ರಾ। ಯೂ. ಶ್ರೀಕಂಠಯ್ಯನವರು ಕಳುಹಿಸಿದ ಚಿತ್ರದುರ್ಗದ ಚರಿತ್ರೆ.

೨. ಸೂಲಿಕುಂಟೆಯ ಮ। ರಾ। ಪರಿಮಿ ಪದ್ಮನಾಭಯ್ಯನವರು ರಚಿಸಿದ ವೀರಕನ್ಯಾಸಂದೇಶ ನಾಟಕಂ.

೩. ಹಲಕೂರಿನ ವಿದ್ಯಾನಿಧಿ ಮ। ರಾ। ಹಲಕೂರು ವೆಂಕಟರಮಣಯ್ಯನವರು ರಚಿಸಿದ ಕಲಾವತೀ ರೂಪಕಂ.

೪. ಮಾಗಡಿಯ ಮ। ರಾ। ಕೆ. ರಾಮಸ್ವಾಮಯ್ಯಂಗಾರ್ಯರವರು ಕಳುಹಿಸಿದ ಶುಕಸಪ್ತತಿಯ ಪದ್ಯಕಾವ್ಯ.

ಈ ಗ್ರಂಥಗಳನ್ನು ಸಂಪಾದಕರು ಪರಿಶೀಲಿಸಿ ಅಭಿಪ್ರಾಯ ಕೊಟ್ಟಿರುತ್ತಾರೆ. ಪರಿಷತ್ತಿನ ಆರ್ಥಿಕ ಸ್ಥಿತಿಯು ಸಮರ್ಪಕವಲ್ಲದಿರುವುದರಿಂದ ಈ ಗ್ರಂಥಗಳನ್ನು ಪರಿಷತ್ತಿನವರು ಮುದ್ರಣಮಾಡಿಸುವುದಕ್ಕಾಗಲಿ, ಅದಕ್ಕೆ ಸನ್ಮಾನ

ವಿಧವಾದ ದ್ರವ್ಯ ಸಹಾಯವನ್ನು ಮಾಡುವುದಕ್ಕಾಗಲಿ ಅನುಕೂಲವಿಲ್ಲವೆಂದು ತಿಳಿಸಿ, ಅವನ್ನು ಹಿಂದಕ್ಕೆ ಕಳುಹಿಸಲಾಗಿದೆ.

೭. **ಧರ್ಮದ ವಾಚನ ಮಂದಿರ.**—ಇದಕ್ಕೆ ಮೈಸೂರು ಸರಕಾರದವರು ತಿಂಗಳುಗಟ್ಟಲೆ ೧೦ ರೂಪಾಯಿಗಳ ಮೇರೆ ಕೊಡುತ್ತಿದ್ದ ಸಹಾಯವು ನಿಂತುಹೋಗಿ ಸುಮಾರು ೫ ವರುಷಗಳಾದುವು. ಆದರೂ ನಮ್ಮಿಂದ ಸಾಧ್ಯವಾಗುವ ಮಟ್ಟಿಗೆ ವಾಚನ ಮಂದಿರವನ್ನು ನಡೆಯಿಸಿಕೊಂಡು ಬರುತ್ತಿದ್ದೇವೆ. ವಾಚಕರ ಸರಾಸರಿ ಸಂಖ್ಯೆ ದಿನ ೧ಕ್ಕೆ ೩೦.

ಈ ವಾಚನ ಮಂದಿರದಲ್ಲಿ ವಾಚಕರಿಗೆ ದೊರೆಯುವ ಪತ್ರಿಕೆಗಳು.—

ಕನ್ನಡ.—ವೃತ್ತಾಂತ ಪತ್ರಿಕೆ, ವಿಶ್ವಬಂಧು, ಮೈಸೂರು ಕ್ರಾನಿಕಲ್, ಕಂಠೀರವ, ಸ್ವದೇಶಾಭಿಮಾನಿ, ಕರ್ಣಾಟಕ ವೃತ್ತ, ರಾಜಹಂಸ, ನವೀನಭಾರತ, ಕರ್ಮವೀರ, ಸತ್ಯಾಗ್ರಹೀ, ಕರ್ಣಾಟಕ ವೈಭವ, ಆತ್ಮಾಹ್ಲಾದಿನಿ, ಸನ್ಮಾರ್ಗದರ್ಶಿ, ವಾಗ್ಭೂಷಣ, ಜಯಕರ್ನಾಟಕ, ಪ್ರಬೋಧ, ಮಾತೃಭೂಮಿ, ಕನ್ನಡ ಸಹಕಾರ, ಬೋಧಕ ಸೇವೆ, ಸ್ವಧರ್ಮ, ಶರೀರ ವ್ಯಾಯಾಮ, ಆರೋಗ್ಯ ಚಂದ್ರಿಕೆ, ಆನಂದ ಚಂದ್ರಿಕೆ, ಕಾದಂಬರೀ ಸಂಗ್ರಹ, ಶ್ರೀಕೃಷ್ಣ ಸಂದೇಶ, ಒಕ್ಕಲಿಗನೂ ಒಕ್ಕಲುತನವೂ, ಪ್ರಬುದ್ಧ ಕರ್ಣಾಟಕ, ಪ್ರೇಮ, ಸುಧಾರಕ, ಕಾವ್ಯಗುಚ್ಛ, ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕ ಸಂಘದ ಪತ್ರಿಕೆ, ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ತೆಲುಗು.—ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ.

ಮರಾಠಿ.—ವಿವಿಧ ಜ್ಞಾನ ವಿಸ್ತಾರ.

ವಂಗ.—ವಂಗೀಯ ಸಾಹಿತ್ಯ ಪರಿಷತ್ಪತ್ರಿಕೆ.

ಇಂಗ್ಲಿಷ್.—Daily Post, Hindu, Mysore Gazette, Indian Antiquary, Modern Review, School Folk (Tumkur), The Quarterly Journal of the Mythic Society.

೮. **ಪುಸ್ತಕ ಭಂಡಾರ.**—ವಿಮರ್ಶೆಗಾಗಿ ಬಂದ ಪುಸ್ತಕಗಳ ಜೊತೆಗೆ ಈ ವರುಷ ೭ ಪುಸ್ತಕಗಳನ್ನು ಭಂಡಾರಕ್ಕೆ ಸೇರಿಸಲಾಯಿತು. ಈಗ ಪರಿಷತ್ತಿನ ಭಂಡಾರದಲ್ಲಿರುವ ಪುಸ್ತಕಗಳ ಒಟ್ಟು ಸಂಖ್ಯೆ ಸುಮಾರು ೧,೭೦೦. ಕನ್ನಡ ಭಾಷೆಯಲ್ಲಿ ದೊರೆಯಬಹುದಾದ ಎಲ್ಲ ಪುಸ್ತಕಗಳ ಒಂದೊಂದು ಪ್ರತಿಯನ್ನಾದರೂ ಶೇಖರಿಸಿ ಈ ಭಂಡಾರದಲ್ಲಿಡಬೇಕೆಂಬ ಕುತೂಹಲ ಬಹಳವಾಗಿದೆ.

ಕನ್ನಡ ಪುಸ್ತಕಗಳನ್ನು ಪ್ರಕಟನ ಮಾಡುವ ಪ್ರತಿಯೊಬ್ಬರೂ ಈ ಭಂಡಾರಕ್ಕೆ ತಮ್ಮ ಪುಸ್ತಕಗಳೊಂದೊಂದನ್ನು ಉಚಿತವಾಗಿ ಕೊಟ್ಟಲ್ಲಿ ಎಷ್ಟೋ ಸಹಾಯವಾಗುವುದು.

೯. ಹೋದ ಸಮ್ಮೇಳನದ ನಿರ್ಣಯಗಳ ವಿಷಯವಾಗಿ ನಡೆಯಿಸಿದ ಕಾರ್ಯಕ್ರಮ:—

ಠರಾವು ೧.—ಗ್ರಾಮ ಸಂಸ್ಥೆ ಮೊದಲಾದ ಎಲ್ಲ ಪ್ರಾದೇಶಿಕ ಸ್ವರಾಜ್ಯ ಸಂಸ್ಥೆಗಳೂ ತಮ್ಮ ಕಾರ್ಯ ವಿವರ ಮೊದಲಾದುವನ್ನು ಕನ್ನಡದಲ್ಲಿಯೇ ಬರೆದಿಡಬೇಕೆಂಬ ವಿಚಾರ.—

ಈ ಠರಾವಿನ ಪ್ರತಿಯನ್ನು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು—ಈ ಸರಕಾರಗಳಿಗೆ ಕಳುಹಿಸಿಕೊಡಲಾಗಿದೆ. ಮದರಾಸು ಸರಕಾರದಿಂದ ಮಾತ್ರ ಅದು ತಲಪಿದುದಕ್ಕೆ ಉತ್ತರಬಂದಿದೆ.

ಠರಾವು ೨.—ಕನ್ನಡ ನಾಡಿನ ವಿದ್ಯೆ, ವೈಭವ, ಏಳಿಗೆ, ಚರಿತ್ರೆ—ಇವುಗಳಿಗೆ ಸಂಬಂಧಪಟ್ಟ ತಾಮ್ರ ಮತ್ತು ಶಿಲಾ ಶಾಸನಗಳ ಲೇಖನಗಳನ್ನು ಪರಿಷತ್ಪತ್ರಿಕೆಯಲ್ಲಿ ಮುದ್ರಿಸುವ ವಿಚಾರ.—

ಈ ವಿಷಯಕ್ಕೆ ಗಮನಕೊಡಲಾಗಿದೆ. ಪರಿಷತ್ಪತ್ರಿಕೆಯ ೯ನೆಯ ಸಂಪುಟದ ೨ನೆಯ ಸಂಚಿಕೆಯಲ್ಲಿ 'ಬಾಳಚಂದ್ರ ಕವಿ ಕಂದರ್ಪ' ಎಂಬ ಲೇಖನವನ್ನೂ, ಅದೇ ಸಂಪುಟದ ೪ನೆಯ ಸಂಚಿಕೆಯಲ್ಲಿ 'ಸೂಡಿಯ ಶಾಸನಗಳು' ಎಂಬ ಲೇಖನವನ್ನೂ, 'ಎಪಿಗ್ರಾಫಿಯಾ ಇಂಡಿಕಾ' ಎಂಬ ನಿಯತಕಾಲಿಕ ಇಂಗ್ಲಿಷು ಪತ್ರಿಕೆಯಿಂದ ಸಂಗ್ರಹಿಸಿ, ಸಂಪಾದಕರ ಅಪ್ಪಣೆ ಪಡೆದು, ಕನ್ನಡದಲ್ಲಿ ಪ್ರಕಟಮಾಡಲಾಗಿದೆ. ಅದೇ ಸಂಪುಟದ ೩ನೆಯ ಸಂಚಿಕೆಯಲ್ಲಿ 'ತಲಕಾಡಿನ ಪಶ್ಚಿಮ ಗಂಗರು' ಎಂಬ ಲೇಖನವನ್ನು ಶಾಸನ ಶಾಸ್ತ್ರ ವಿಶಾರದರಾದ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹಾದೂರ್ ಮ|| ರಾ|| ರಾ. ನರಸಿಂಹಾಚಾರ್ಯರವರ ಇಂಗ್ಲಿಷು ಭಾಷಣದಿಂದ ಪರಿವರ್ತಿಸಿ ಪ್ರಕಟಿಸಲಾಗಿದೆ.

ಠರಾವು ೩.—ಕರ್ಣಾಟಕದ ಎಲ್ಲಾ ಭಾಗಗಳಲ್ಲಿಯೂ ವಿದ್ಯಾಶಾಲೆಗಳ ಉಪಯೋಗಕ್ಕೆ ತಕ್ಕಂತೆ ಕನ್ನಡ ನಾಡಿನ ಚರಿತ್ರೆಯೊಂದನ್ನು ಪರಿಷತ್ತಿನವರು ಬರೆಯಿಸುವ ವಿಚಾರ.—

ಇದರ ಉಪ ಸಭೆಯ ಕಾರ್ಯದರ್ಶಿಗಳು ಮ|ರಾ|| ತಿರುಮಲೆ ತಾತಾಚಾರ್ಯ ಶರ್ಮರು ವಿಶದವಾಗಿ ರಚಿಸಿದ ಈ ಗ್ರಂಥದ ವಿಷಯ ಸಂಗ್ರಹ ಲೇಖನವನ್ನು ಉಪ ಸಭೆಯ ಅಧ್ಯಕ್ಷರಾದ ರಾವ್ ಬಹಾದೂರ್ ಮ|| ರಾ|| ಎಚ್. ಕೃಷ್ಣಶಾಸ್ತ್ರಿಗಳವರಿಗೆ ಕಳೆದ ಅಕ್ಟೋಬರು ತಿಂಗಳಲ್ಲಿ ಕಳುಹಿಸಿ ಅದಕ್ಕೆ ಅವರ ಅನುಮತಿಯನ್ನು ಪಡೆಯಲಾಗಿದೆ. ಪುಸ್ತಕವು ತಯಾರಾಗುತ್ತಿದೆ. ಅದನ್ನು ಮುದ್ರಣಮಾಡಿಸಲು ಕನ್ನಡಿಗರು ಹಣವನ್ನು ಒದಗಿಸಬೇಕು.

ಠರಾವು ೪.—ಪರಿಷತ್ತಿನವರು ಹೊಸ್ತ ಪುರಾತನ ಕನ್ನಡ ಗ್ರಂಥಗಳ ಸಂಕ್ಷಿಪ್ತಾವೃತ್ತಿಗಳನ್ನು ಮಾಡಿಸಿ ಅವನ್ನು ಟಿಪ್ಪಣಿಗಳೊಡನೆ ಮುದ್ರಿಸಿ ಪ್ರಕಟಿಸುವ ವಿಚಾರ.—

ದ್ರವ್ಯಾಭಾವದಿಂದಲೂ, ಈ ಕೆಲಸವನ್ನು ಮಾಡುವುದಕ್ಕೆ ಪರಿಷತ್ಪಂಡಿತರಿಗಾಗಲಿ ಸಂಪಾದಕ ಮಂಡಲಿಗಾಗಲಿ ಸಮಯಕ್ಕೆ ಅವಕಾಶವಿಲ್ಲದುದರಿಂದಲೂ ಇದುವರೆಗೂ ಏನೂ ಮಾಡಲಾಗಲಿಲ್ಲ.

ಠರಾವು ೫.—ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಭಾಷೆಗೆ ತಕ್ಕ ಪ್ರಾಮುಖ್ಯವು ದೊರೆತಿಲ್ಲವಾಗಿ ಕನ್ನಡ ಭಾಷಾ ಪಂಡಿತರಿಗೆ ಇಂಗ್ಲಿಷು ಭಾಷಾ ಪಂಡಿತರಷ್ಟೇ ವೇತನ ಮತ್ತು ಗೌರವವನ್ನು ಕೊಡಿಸಬೇಕೆಂದೂ, ಕನ್ನಡ ಭಾಷೆಯಲ್ಲಿ ಎಂ.ಎ. ಡಿಗ್ರಿಯನ್ನು ಪಡೆಯಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದೂ ವಿಶ್ವವಿದ್ಯಾನಿಲಯದವರನ್ನು ಕೇಳಿಕೊಳ್ಳುವ ವಿಚಾರ.—

ಈ ಠರಾವನ್ನು ಮೈಸೂರು ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರವರಿಗೆ ಕಳುಹಿಸಿಕೊಡಲಾಗಿದೆ. ಉತ್ತರವಿನ್ನೂ ಬಂದಿಲ್ಲ.

ಠರಾವು ೬.—ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ವಿದ್ಯಾರ್ಥಿಗಳಿಗೆ ಹಿಂದಿನಂತೆಯೇ ಬಹುಮಾನಗಳನ್ನು ಕೊಡುವ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುವ ವಿಚಾರ.—

ಈ ಠರಾವನ್ನು ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಅಧ್ಯಕ್ಷರಿಗೆ ಕಳುಹಿಸಿಕೊಡಲಾಗಿದೆ. ಉತ್ತರವಿನ್ನೂ ಬಂದಿಲ್ಲ.

ಠರಾವು ೭.—ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿ ಕೋರ್ಟು, ಸರಕಾರ, ಪಾಠಶಾಲೆಗಳು—ಇವುಗಳಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯವನ್ನು ಕೊಡುವಂತೆ ಆಯಾ ಸಂಸ್ಥಾನಾಧಿಪತಿಗಳನ್ನೂ ಇತರ ಅಧಿಕಾರಿಗಳನ್ನೂ ಇದಕ್ಕಾಗಿ ಗೊತ್ತುಮಾಡಿದ ಉಪಸಭೆಯವರು ಮುಖತಃ ಸಂಧಿಸಿ, ಏರ್ಪಾಡು ಮಾಡುವ ವಿಚಾರ.—

ನಾನಾ ಪ್ರಾಂತಗಳಲ್ಲಿರುವ ಈ ಉಪ ಸಭೆಯ ಸದಸ್ಯರಲ್ಲಿ ಪತ್ರ ಪ್ರಸಂಗವು ನಡೆಯುತ್ತಿದೆ. ಇದರ ಕಾರ್ಯದರ್ಶಿಗಳಾದ ಬಾಗಲಕೋಟೆಯ ಮ। ರಾ। ಶ್ರೀನಿವಾಸ ರಾಜೇರಾವ್ ಮಂಗಳವೇಢೆಯವರು ಬಹಳ ಆಸಕ್ತಿಯನ್ನು ವಹಿಸಿ ಒಂದು ಅಧಿವೇಶನವನ್ನು ಧಾರವಾಡದಲ್ಲಿ ನಡೆಯಿಸಿದರು. ಈ ಉಪ ಸಭೆಯವರು ಕೆಲವು ತೀರ್ಮಾನಗಳನ್ನು ಮಾಡಿರುವುದಲ್ಲದೆ ಉದ್ದೇಶ ಸಾಧನೆಗೆ ಆವಶ್ಯಕವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಠರಾವು ೮.—ಮೈಸೂರು ಕನ್ನಡ ಲೋವರ್ ಸೆಕಂಡರಿ ಪರೀಕ್ಷೆಯನ್ನು ಮುಂದೆಯೂ ನಡೆಯಿಸುತ್ತ ಬರುವಂತೆ ಮೈಸೂರು ಸರಕಾರವನ್ನು ಕೇಳಿಕೊಳ್ಳುವ ವಿಚಾರ.—

ಈ ಠರಾವನ್ನು ಮೈಸೂರು ಸರಕಾರದ ಛೀಫ್ ಸೆಕ್ರೆಟರಿಯವರಿಗೆ ಕಳುಹಿಸಲಾಗಿದೆ. ಉತ್ತರವಿನ್ನೂ ಬಂದಿಲ್ಲ.

ಠರಾವು ೯.—ಕನ್ನಡ ಭಾಷಾ ಜಾಗೃತಿಯನ್ನುಂಟುಮಾಡಲಿಕ್ಕೂ ಪರಿಷತ್ತಿಗೆ ಸದಸ್ಯರು ಮುಂತಾದ ಸಹಾಯವನ್ನು ಸಂಪಾದಿಸಲಿಕ್ಕೂ ಕರ್ಣಾಟಕದ ನಾನಾ ಪ್ರಾಂತಗಳಿಗೆ ಪ್ರಚಾರಕರನ್ನು ಕಳುಹಿಸುವ ವಿಚಾರ.—

ದ್ರವ್ಯಾಭಾವದಿಂದ ಈ ಕಾರ್ಯವನ್ನು ವಿಸ್ತಾರವಾಗಿ ನಡೆಯಿಸಲು ಸಾಧ್ಯವಾಗಲಿಲ್ಲ : ೨೦೦ ರೂಪಾಯಿಗಳನ್ನು ಮಾತ್ರ ಸದ್ಯಕ್ಕೆ ಮಂಜೂರು ಮಾಡಲಾಗಿದೆ. ಮ॥ ರಾ॥ ವಿ. ಬಿ. ಆಲೂರರವರನ್ನೂ ಮ॥ ರಾ॥ ತಿರುಮಲೆ ತಾತಾ

ಚಾರ್ಯ ಶರ್ಮರನ್ನೂ ಸದ್ಯಕ್ಕೆ ಮಂಗಳೂರು ಪ್ರಾಂತ್ಯಕ್ಕೆ ದಯಮಾಡಿಸಿ ಅಲ್ಲಿಯವರ ಸಹಾನುಭೂತಿಯನ್ನು ಪಡೆಯುವ ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳಲಾಯಿತು. ಮ। ರಾ। ತಾತಾಚಾರ್ಯರು ಕೆಲವು ಅನಿವಾರ್ಯಗಳಿಂದ ಹೊರಡಲು ಸಾಧ್ಯವಾಗಲಿಲ್ಲ. ಮ॥ ರಾ॥ ಆಲೂರವರು ಮಂಗಳೂರಿಗೆ ದಯಮಾಡಿಸಿ ಅಲ್ಲಿ ಕೆಲಸ ಮಾಡುತ್ತಿರುವರು. ಕೇವಲ ಭಾಷಾಭಿಮಾನದಿಂದಲೇ ಈ ಕೆಲಸವನ್ನು ಕೈಕೊಂಡು ಶ್ರಮಿಸುತ್ತಿರುವ ಮ॥ ರಾ॥ ಆಲೂರವರಿಗೆ ಪರಿಷತ್ತಿನವರು ಅತ್ಯಂತ ಕೃತಜ್ಞರಾಗಿರಬೇಕು.

ಠರಾವು ೧೦.—ಹಿಂದುಸ್ಥಾನದ ಬೇರೆ ಬೇರೆ ಭಾಷಾ ಪ್ರಾಂತಗಳೊಳಗೆ ಪ್ರೇಮಭಾವವು ಅಭಿವೃದ್ಧಿಯಾಗುವ ಉದ್ದೇಶದಿಂದಲೂ ಕನ್ನಡ ವಾಙ್ಮಯವು ವಿಕಾಸ ಪಡೆಯುವ ಉದ್ದೇಶದಿಂದಲೂ ಇತರ ಭಾಷೆಗಳ ಪಂಡಿತರನ್ನು ಸಮ್ಮೇಳನಕ್ಕೆ ಬರಮಾಡಿಕೊಳ್ಳುವ ವಿಚಾರ.—

ಆಂಧ್ರ, ಮಹಾರಾಷ್ಟ್ರ ಮತ್ತು ವಂಗೀಯ ಸಾಹಿತ್ಯ ಪರಿಷತ್ತುಗಳ ಅಧಿಕಾರಿಗಳಿಗೆ ಈ ವಿಚಾರವಾಗಿ ಪತ್ರಗಳನ್ನು ಬರೆಯಲಾಗಿದೆ.

ಠರಾವು ೧೧.—ಕನ್ನಡ ದೇಶದ ಚರಿತ್ರಾಂಶಗಳನ್ನೊಳಕೊಂಡ ಕಾದಂಬರಿಗಳಿಗೂ ನಾಟಕಗಳಿಗೂ ಪರಿಷತ್ತಿನವರು ಬಹುಮಾನಗಳನ್ನು ಏರ್ಪಡಿಸುವ ವಿಚಾರ.—

ದ್ರವ್ಯಾಭಾವದಿಂದ ಸದ್ಯಕ್ಕೆ ಈ ಕೆಲಸವು ಸಾಧ್ಯವಿಲ್ಲದಿದೆ.

ಠರಾವು ೧೨.—ಹಿಂದಿನಂತೆಯೇ ಸಂಸ್ಕೃತವನ್ನು ಎರಡನೆಯ ಭಾಷೆಯಾಗಿ ವ್ಯಾಸಂಗಮಾಡಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡಬೇಕೆಂದು ಮೊದಲಾಗಿ ಸರಕಾರಗಳನ್ನು ಕೇಳಿಕೊಳ್ಳುವ ವಿಚಾರ.—

ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು—ಈ ಸರಕಾರಗಳಿಗೆ ವಿನಂತಿ ಮಾಡಿಕೊಳ್ಳಲಾಗಿದೆ. ಮುಂಬಯಿ ಸರಕಾರದಿಂದ ಮಾತ್ರ ನಮ್ಮ ಪತ್ರಕ್ಕೆ ಗಮನಕೊಡುತ್ತಿರುವುದಾಗಿ ಉತ್ತರ ಬಂದಿದೆ.

ಠರಾವು ೧೩.—ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಡಿಸ್ಟ್ರಿಕ್ಟು ಬೋರ್ಡು ಮೊದಲಾದ ಸ್ಥಳೀಯ ರಾಜ್ಯಸಂಸ್ಥೆಗಳಿಂದ ದ್ರವ್ಯ ಸಹಾಯವನ್ನು ಮಾಡಿಸುವಂತೆ ಮೈಸೂರು ಸರಕಾರವನ್ನೂ ಆಯಾ ಸಂಸ್ಥೆಗಳನ್ನೂ ಕೇಳಿಕೊಳ್ಳುವ ವಿಚಾರ.—

ಸಾಹಿತ್ಯಾಭಿವೃದ್ಧಿಗೆ ಸಹಾಯಮಾಡುವುದು ಅಂತಹ ಸ್ಥಳೀಯ ರಾಜ್ಯಸಂಸ್ಥೆಗಳ ಕರ್ತವ್ಯವಲ್ಲವೆಂದು ಮೈಸೂರು ಸರಕಾರದವರು ತಮ್ಮ ೧೯೨೫ನೆಯ ಫೆಬ್ರವರಿ ೭ನೆಯ ತಾರೀಖಿನ L. 5787/LB. 52–24–5 ನೆಯ ನಂಬರಿನ ಹುಕುಮಿನಲ್ಲಿ ತಿಳಿಯಪಡಿಸಿರುತ್ತಾರೆ.

೧೦. ಪರಿಷತ್ಪ್ರಚಾರಕ ಕಾರ್ಯ.—ಈ ವರ್ಷವೂ ಪರಿಷತ್ಪ್ರಚಾರಕ ಕಾರ್ಯವನ್ನು ಮೇಲೆ ಹೇಳಿದಂತೆ ತಕ್ಕಮಟ್ಟಿಗೆ ನಡೆಯಿಸಲಾಗಿದೆ.

೧೧. ಆಯ ವ್ಯಯ.—ಇದರ ಪಟ್ಟಿಯನ್ನು ೧೪–೧೫ನೆಯ ಪುಟಗಳಲ್ಲಿ ಕೊಟ್ಟಿದೆ. ಸಂವತ್ಸರಾದಿಯಲ್ಲಿ ನಮ್ಮಲ್ಲಿದ್ದ ಮೊಬಲಗು ರೂ. ೮,೫೧೪–೪–೧೦. ಈ ವರುಷ ವಸೂಲಾದದ್ದು ರೂ. ೩,೫೬೦–೧–೬; ಈ ಪೈಕಿ ಮೈಸೂರು ಸರಕಾರದಿಂದ ಈ ವರುಷಕ್ಕಾಗಿ ಬಂದ ಮೊಬಲಗು ರೂ. ೧,೨೦೦, ಹಿಂದಣ ವರುಷದ ಬಾಕಿಗಾಗಿ ರೂ. ೮೦೦. ಈ ವರುಷ ಪರಿಷತ್ತಿನಿಂದ ವೆಚ್ಚವಾದ ಮೊಬಲಗು ೨,೯೦೪–೮–೧. ಆಯಕ್ಕಿಂತಲೂ ವ್ಯಯವು ರೂ. ೬೫೫–೯–೫ ರಷ್ಟು ಕಡಿಮೆಯಾಗಿದೆ.

ಈ ವರುಷದ ನಮ್ಮ ಲೆಕ್ಕ ಪತ್ರಗಳನ್ನು ಪರಿಶೀಲಿಸಿಕೊಟ್ಟದ್ದಕ್ಕಾಗಿ ಮೈಸೂರು ಸರಕಾರದ ಇನ್‌ಕಂ ಟ್ಯಾಕ್ಸ್ ಅಸಿಸ್ಟೆಂಟ್ ಕಮಿಷನರ್ ಮ॥ ರಾ॥ ಜಿ. ಮಾಧವರಾವ್, ಬಿ.ಎ., ಬಿ.ಎಲ್. ಅವರಿಗೆ ಪರಿಷತ್ತಿನವರು ಬಹಳ ಕೃತಜ್ಞರಾಗಿರಬೇಕು.

ಪರಿಷತ್ತು ಹುಟ್ಟಿದಂದಿನಿಂದಲೂ ಇದುವರೆಗೆ ವಸೂಲಾಗಿರುವ ಒಟ್ಟು ಚಂದಾ ಮೊಬಲಗು (ಪತ್ರಿಕೆಯ ಚಂದಾ ಮೊಬಲಗೂ ಸೇರಿ) ರೂ. ೮,೭೯೬—೧೩—೦; ವರುಷ ೧ ಕ್ಕೆ ಸರಾಸರಿ ರೂ. ೭೩೩—೧—೦ ಆದಂತಾಯಿತು. ಮೈಸೂರು ಶ್ರೀಮನ್ಮಹಾರಾಜರವರ ಸರಕಾರದಿಂದ ದೊರೆತಿರುವ ಸಹಾಯ ದ್ರವ್ಯ ರೂ. ೧೬,೦೩೫—೧೨—೧೦; ವರುಷ ೧ ಕ್ಕೆ ಸರಾಸರಿ ರೂ. ೧,೩೩೬—೫—೦ ಆದಂತಾಯಿತು.

೧೨. ಪರಿಷತ್ತಿನ ಕಟ್ಟಡ.—ನಮ್ಮ ಹಿಂದಣ ಅಧ್ಯಕ್ಷರಾಗಿದ್ದ ರಾಜಸೇವಾಧುರೀಣ ಸರ್ ಎಂ. ಕಾಂತರಾಜ ಅರಸಿನವರು ಪರಿಷತ್ತಿನ ಕಟ್ಟಡಕ್ಕಾಗಿ ದಯಪಾಲಿಸಿರುವ ೫,೦೦೦ ರೂಪಾಯಿಗಳ ಜೊತೆಗೆ, ಬೆಂಗಳೂರು ಸಿಟಿ ಮುನ್ಸಿಪಾಲಿಟಿಯವರೊಡನೆ ನಾವು ಮಾಡಿಕೊಂಡಿರುವ ಕರಾರಿನ ಮೇರೆಗೆ, ಇನ್ನು ೨೫,೦೦೦ ರೂಪಾಯಿಗಳನ್ನು ಜಮಾಯಿಸಬೇಕು. ಕರ್ಣಾಟಕ ದೇಶದಲ್ಲೆಲ್ಲ ಸುತ್ತಿ ಈ ಕೆಲಸಕ್ಕಾಗಿ ಹಣ ಜಮಾಯಿಸಬೇಕೆಂಬ ಕುತೂಹಲವು ನಮ್ಮ ಉಪಾಧ್ಯಕ್ಷರಾದ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರಿಗೆ ಇರುವುದು. ಕರ್ಣಾಟಕ ಸಿಂಹಾಸನಾಧೀಶ್ವರರ ಗೌರವಕ್ಕೆ ತಕ್ಕಂತೆ ಕಟ್ಟಡವನ್ನು ಕಟ್ಟಬೇಕಾಗಿರುವುದರಿಂದ ಕನ್ನಡಿಗರೆಲ್ಲರೂ ಇದಕ್ಕೆ ಉದಾರವಾಗಿ ಸಹಾಯ ಮಾಡಬೇಕೆಂದು ನಮ್ಮ ಬೇಡಿಕೆ. ಕನ್ನಡಿಗರು ಈ ವಿಷಯದಲ್ಲಿ ತಕ್ಕಷ್ಟು ಉತ್ಸಾಹವನ್ನು ದ್ರವ್ಯರೂಪವಾಗಿ ತೋರಿಸಿದಲ್ಲಿ ಶ್ರೀಮನ್ಮಹಾರಾಜರವರ ಮತ್ತು ಅವರ ಸರಕಾರದವರ ಧಾರಾಳವಾದ ಪ್ರೋತ್ಸಾಹಕ್ಕೆ ನಾವು ಪಾತ್ರರಾಗುವೆವೆಂಬುದರಲ್ಲಿ ಸಂಶಯವಿಲ್ಲ.

೧೩. ಉಪಸಂಹಾರ.—ಪರಿಷತ್ತಿನ ಉದ್ದಿಷ್ಟ ಕಾರ್ಯಗಳು ಸಮರ್ಪಕವಾಗಿ ನೆರವೇರಬೇಕಾದರೆ ಈಗಿರುವುದಕ್ಕಿಂತಲೂ ಹೆಚ್ಚಿನ ದ್ರವ್ಯ ಸಹಾಯವು ಅತ್ಯಾವಶ್ಯಕ. ಕರ್ಣಾಟಕದ ಮಹಾಜನರು ತಮ್ಮಿಂದಾಗಬಹುದಾದಷ್ಟು ದ್ರವ್ಯಸಹಾಯವನ್ನು ಮಾಡುತ್ತಿಲ್ಲವೆಂಬುದು ಸ್ಪಷ್ಟವಾಗಿದೆ. ಸುಮಾರು ಒಂದೂವರೆ ಕೋಟಿ ಕನ್ನಡ ಪ್ರಜೆಗಳಿರುವ ಕರ್ಣಾಟಕ ರಾಷ್ಟ್ರದಲ್ಲಿ ೧೫೦

ಸುಂಬ ಮಾತ್ರ ಪರಿಷತ್ತಿನ ಸದಸ್ಯರಾಗಿರುವುದು, ಲಕ್ಷಕ್ಕೆ ಒಬ್ಬರಿದ್ದಂತಾಯಿತು. ಈ ವಿಷಯವನ್ನು ಕನ್ನಡ ಭಾಷಾಭಿಮಾನಿಗಳು ಲಕ್ಷ್ಯಕ್ಕೆ ತಂದು ತಮ್ಮ ಭಾಷೆಯ ಏಕೀಕರಣಕ್ಕೆ ನೆರವಾಗಿ, ತನ್ಮೂಲಕ ದೇಶಸೇವೆಯನ್ನು ಕೈಕೊಂಡು, ಕೀರ್ತಿಯನ್ನು ಗಳಿಸಬೇಕೆಂದು ಹಾರೈಸುತ್ತೇವೆ.

ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಅಪ್ಪಣೆಯ ಮೇರೆಗೆ, ಅವರ ಪರವಾಗಿ,

ಬೆಳ್ಳಾವೆ ವೆಂಕಟನಾರಾಯಣಪ್ಪ, ಎಂ.ಎ.,
ಗೌ॥ ಕಾರ್ಯದರ್ಶಿ.

ಕರ್ಣಾಟಕ ಸಾಹಿತ್ಯ ಪರಿಷತ್ತು

ಲೇಣೆ ದೇಣೆಗಳ ತಃಖ್ತೆ

ಲೇಣೆ	ರೂ. ಆ. ಪೈ.	ದೇಣೆ	ರೂ. ಆ. ಪೈ.
ಪುಸ್ತಕ ವ್ಯಾಪಾರಿಗಳಿಂದ	೩೦೫-೯-೦	ಸಿಬ್ಬಂದಿಯ ವೆಚ್ಚ	೫೧-೦-೦
ಇತರರಿಂದ	೧೨೩-೧೩-೦	ದೀಪದ ವೆಚ್ಚ	೩-೪-೬
ಸರಕಾರದ ಗ್ರಾಂಟು	೪೦೦-೦-೦	ಮುದ್ರಣಾಲಯಕ್ಕೆ	೨೭೫-೦-೦
ಬರಬಹುದಾದ ಚಂದಾ ಬಾಕಿ (ಸುಮಾರು)	೯೦೦-೦-೦	ಸಹಾಯಕರ ಮತ್ತು ಆಜೀವ ಸದಸ್ಯರ ಚಂದಾ ಮೊಬಲಗು	೩,೭೦೦-೦-೦
ಡಿಪಾಜಿಟ್ಟುಗಳು	೯,೦೭೫-೪-೯		
ನಗದು ಹಣ	೮೬-೩-೦		
ಡಿಪಾಜಿಟ್ಟುಗಳ ಮೇಲಿನ ಬಡ್ಡಿ	೬೨-೦-೦	ಕಟ್ಟಡದ ಹಣ	೫,೦೦೦-೦-೦
ಕೈಯಲ್ಲಿರುವ ಅಚ್ಚಿನಕಾಗದದ ಬೆಲೆ (ಸುಮಾರು)	೧೨೫-೦-೦	ಲೇಣೆಗಿಂತಲೂ ದೇಣೆಯ ಹೆಚ್ಚು	೮,೨೪೮-೯-೩
ಕೈಯಲ್ಲಿರುವ ಪುಸ್ತಕಗಳ ಬೆಲೆ (ಸುಮಾರು)	೨,೦೦೦-೦-೦		
ಪುಸ್ತಕ ಭಂಡಾರ (ಸುಮಾರು)	೩,೦೦೦-೦-೦		
ಸಾಮಾನುಗಳು ವಗೈರೆ (ಸುಮಾರು)	೧,೨೦೦-೦-೦		
ಒಟ್ಟು, ರೂ. ..	೧೭,೨೭೭-೧೩-೯	ಒಟ್ಟು ರೂ. ..	೧೭,೨೭೭-೧೩-೯

ಕರ್ಣಾಟಕ ಸಾಹಿತ್ಯ

ರಕ್ತಾಕ್ಷಿ ಸಂವತ್ಸರದ

ಆಯ

		ರೂ.	ಆ.	ಪೈ.
೧.	ಹೋದ ವರುಷದ ಶಿಲ್ಕು	೮,೫೧೪	೪	೧೦
೨.	ತಿಂಗಳುಗಟ್ಟಲೆ ಸರಕಾರದಿಂದ ಬಂದ ಸಹಾಯ ದ್ರವ್ಯ	*೨,೦೦೦	೦	೦
೩.	ಪರಿಷತ್ತಿನ ಸದಸ್ಯರಿಂದ ಬಂದ ಚಂದಾ ಹಣ ..	೩೯೪	೦	೦
೪.	ಪರಿಷತ್ಪತ್ರಿಕೆಯ ಚಂದಾ ಹಣ ..	೧೫೦	೮	೦
೫.	ಪರಿಷತ್ತಿನ ಪುಸ್ತಕಗಳ ಮಾರಾಟದಿಂದ ಬಂದ ಹಣ	೩೧೨	೫	೦
೬.	ಡಿಪಾಜಿಟ್ಟುಗಳ ಮೇಲೆ ಬಂದ ಬಡ್ಡಿ ..	೪೯೯	೧೫	೬
೭.	ಅಂಚೆಯ ಹಾಸಲು ವಸೂಲಾದದ್ದು ..	೬	೧೦	೦
೮.	ಕೊಠಡಿಯ ಬಾಡಿಗೆ	೧೬	೦	೦
೯.	ಹಳೆಯ ಕಾಗದದ ಮಾರಾಟದಿಂದ ..	೨೦	೧೧	೬
೧೦.	ಗಾರ್ಫೀಲ್ಡ್ ಚರಿತ್ರೆಗಾಗಿ ಮೈಸೂರು ಸರ್ಕಾರದಿಂದ ಬಂದ ಮೊಬಲಗು	೧೭೦	೦	೦
	ಒಟ್ಟು ..	೧೨,೦೭೪	೬	೧೦

* ಹೋದ ವರುಷದ ಬಾಕಿ ಮೊಬಲಗು ರೂ. ೮೦೦.

Certified as correct.

(Sd.) G. MADHAVA RAO, B.A., B.L.,

Special Auditor.

ಪರಿಷತ್ತು, ಬೆಂಗಳೂರು.

ಆಯ ವ್ಯಯದ ಪಟ್ಟಿ

ವ್ಯಯ

		ರೂ.	ಆ.	ಪೈ.
೧.	ಪರಿಷತ್ತಿನ ಆಫೀಸಿನ ಸಿಬ್ಬಂದಿಯ ವೆಚ್ಚ ..	೫೭೭	೧	೬
೨.	ಪರಿಷನ್ಮಂದಿರದ ಬಾಡಿಗೆ	೩೬೦	೦	೦
೩.	ದೀಪದ ವೆಚ್ಚ	೩೯	೬	೦
೪.	ಸಾದಿಲ್ವಾರು	೩೯	೮	೩
೫.	ಅಂಚೆಯ ಹಾಸಲು	೧೫೩	೧೫	೯
೬.	ಅಚ್ಚಿನ ಕಾಗದ	೯	೧೪	೬
೭.	ಮುದ್ರಣ, ಬೈಂಡಿಂಗ್ ಮೊದಲಾದುವುಗಳ ವೆಚ್ಚ	೧,೧೪೬	೧೧	೦
೮.	ಪುಸ್ತಕ ಭಂಡಾರಕ್ಕಾಗಿ ವೆಚ್ಚ	೫೭	೫	೦
೯.	ವಾಚನ ಮಂದಿರದ ಪತ್ರಿಕೆಗಳ ಚಂದಾ ಮೊಬಲಗು	೧೦೨	೮	೦
೧೦.	ಸಮ್ಮೇಳನದ ವೆಚ್ಚ	೩೧	೮	೩
೧೧.	ಬಹುಮಾನಗಳಿಗಾಗಿ	೭೫	೦	೦
೧೨.	ಅರ್ರಾದ ಪಂಪ ಭಾರತದ ಪ್ರತಿಗಾಗಿ ಠೇವಣಿ ..	೧೦೦	೦	೦
೧೩.	ಪಂಪ ಭಾರತದ ಪರಿಶೋಧನೆಗಾಗಿ ವೆಚ್ಚ ..	೧೨೩	೬	೦
೧೪.	ಪಂಪ ಭಾರತದ ಪ್ರತಿ ಮಾಡಿದುದಕ್ಕಾಗಿ ರುಸುಮು	೫೦	೦	೦
೧೫.	ಚಿಲ್ಲರೆಯ ವೆಚ್ಚಗಳು	೪೬	೧೦	೧೦
	ಒಟ್ಟು ..	೨,೯೧೨	೧೫	೧
	* ಶಿಲ್ಕು ನಿಂತಿರುವುದು ..	೯,೧೬೧	೭	೯
	ಒಟ್ಟು ..	೧೨,೦೭೪	೬	೧೦

* ಶಿಲ್ಕಿಗೆ ತಪಸೀಲು :—

ಬೆಂಗಳೂರು ಸಿಟಿ ಕೋ॥ ಸೊಸೈಟಿಯಲ್ಲಿ

ಫಿ॥ ಡಿಪಾಜಿಟ್ಟು	೮,೨೦೦	೦	೦
ಡಿಟೊ ಕರೆಂಟ್ ಡಿಪಾಜಿಟ್ಟು	೮೭೫	೪	೯
ಗೌ॥ ಕಾರ್ಯದರ್ಶಿಯವರ ಬಳಿ ನಗದು	೮೬	೩	೦
ಒಟ್ಟು ರೂ. ..	೯,೧೬೧	೭	೯

(Sd.) B. VENKATANARANAPPA, M.A.,
Honorary Secretary.

(Sd.) N. VENKATESA IYENGAR, B.A.,
Honorary Treasurer.

ಪರಿಶಿಷ್ಟ

ಕರ್ಣಾಟಕ ಸಾಹಿತ್ಯ ಪರಿಷತ್ತಿನ

ಸದಸ್ಯರ ಪಟ್ಟಿ

(೧೯೨೫ನೆಯ ಇಸವಿ ಏಪ್ರಿಲ್ ಮೊದಲನೆಯ ತಾರೀಖಿನಲ್ಲಿದ್ದಂತೆ)

ಪ್ರದಾತೃಗಳು

*‡ ೧. ರಾಜಸಭಾಭೂಷಣ ಮ|| ರಾ|| ಕರ್ಪೂರ ಶ್ರೀನಿವಾಸರಾಯರು, ಬಿ.ಎಸ್‌ಸಿ., ಎಲ್.ಸಿ.ಇ., ರಿ|| ಛೀಫ್ ಎಂಜನಿಯರ್, ಬೆಂಗಳೂರು.

ಸಹಾಯಕರು

*೨. ರಾಜಸಭಾಭೂಷಣ ದಿವಾನ್ ಬಹಾದೂರ್ ಮ|| ರಾ|| ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಐ. ಇ., ರಿ|| ಕೌನ್ಸಿಲರ್, ಬೆಂಗಳೂರು.

*೩. ಮ|| ರಾ|| ಎಂ. ಎಲ್. ವರ್ಧಮಾನಯ್ಯನವರು, ಸಾಹುಕಾರರು, ಮೈಸೂರು.

ಆಜೀವ ಸದಸ್ಯರು

(ಮೈಸೂರು ದೇಶದ ಸದಸ್ಯರು)

ಮ|| ರಾ|| ಗಳಾದ

೪. ಎಸ್. ಎನ್. ಅಪ್ಪಣ್ಣಯ್ಯಂಗಾರ್ಯರು, ಬಿ.ಎ., ಬಿ.ಎಲ್., ಸಬ್‌ಡಿವಿಜನ್ ಆಫಿಸರ್, ನಂಜನಗೂಡು.

೫. ಪಿ. ಅಪ್ಪಾಜೀರಾಯರು, ಬಿ.ಎಸ್‌ಸಿ., 32, ಕಾಲೇಜು ಸ್ಟ್ರೀಟ್, ಬೌ ಬಜಾರ್, ಕಲ್ಕತ್ತ.

*೬. ಟಿ. ಅಪ್ಪೂರಾಯರು, ಬಿ.ಎ., ಬಿ.ಎಲ್., ಅಡ್ವೊಕೇಟ್, ಬೆಂಗಳೂರು.

೭. ಡಿ. ಆದೆಪ್ಪನವರು, ಸಾಹುಕಾರರು, ಜುಮ್ಮಾಮಸೀದಿ ರಸ್ತೆ, ಬೆಂಗಳೂರು.

೮. ಮಾಗಡಿ ಕರಣಿಕ ಕೃಷ್ಣಮೂರ್ತಿರಾಯರು, ಜಮೀನ್ದಾರರು, ಬಸವನಗುಡಿ, ಬೆಂಗಳೂರು.

*೯. ಬಿ. ಕೃಷ್ಣಪ್ಪನವರು, ಎಂ.ಎ., ಅ|| ಪ್ರೊ|| ಮಹಾರಾಜಾ ಕಾಲೇಜು, ಮೈಸೂರು.

೧೦. ಸಿ. ಕೃಷ್ಣರಾಯರು, ಬಿ.ಎ., ವಿದ್ಯಾಭ್ಯಾಸದ ಇಲಾಖೆಯ ರಿ|| ಡೆ||ಇನ್||ಜನರಲ್, ತುಮಕೂರು.

೧೧. ಎ. ಕೇಶವಯ್ಯನವರು, ರಿ|| ಸ್ಕೂಲ್ ಮಾಸ್ಟರು, ಚಿಕ್ಕಬಳ್ಳಾಪುರ.

*೧೨. ಡಿ. ಕೊಂಗಾಡಿಯಪ್ಪನವರು, ಮ್ಯುನಿಸಿಪಲ್ ವೈಸ್-ಪ್ರೆಸಿಡೆಂಟರು, ದೊಡ್ಡಬಳ್ಳಾಪುರ.

೧೩. ಎಂ. ಎನ್. ಗೋಪಾಲರಾಯರು, ಎಲೆಕ್ಟ್ರಿಕಲ್ ಡಿಪಾರ್ಟಮೆಂಟು, ಮಲ್ಲೇಶ್ವರ, ಬೆಂಗಳೂರು.

೧೪. ಎಚ್. ಚೆನ್ನಕೇಶವಯ್ಯಂಗಾರ್ಯರು, ಕಿಲಾರಿ ರೋಡು, ಬೆಂಗಳೂರು.

೧೫. ವಿ. ಆರ್. ತ್ಯಾಗರಾಜಅಯ್ಯರವರು, ಎಂ.ಎ., ಎಕ್ಸೈಜ್ ಕಮಿಷನರ್, ಬೆಂಗಳೂರು.

---

* ಈ ಗುರುತು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರ ಹೆಸರನ್ನು ತೋರಿಸುತ್ತದೆ.

‡ ಇವರು ಸಾಮಾನ್ಯ ಸದಸ್ಯರಾಗಿಯೂ ಇರುವರು.

ಮ|| ರಾ|| ಗಳಾದ

೧೬. ವೈ. ನರಸಿಂಗರಾಯರು, ಬಿ.ಎ., ಬಿ.ಎಲ್., ಡೈರೆಕ್ಟರು, ಗಂಧದ ಎಣ್ಣೆಯ ಕಾರ್ಖಾನೆ, ಬೆಂಗಳೂರು.

೧೭. ಸಿ. ಆರ್. ನರಸಿಂಹಯ್ಯಂಗಾರ್ರು, ಬಿ.ಎ., ಜಿಯಾಲೊಜಿಸ್ಟ್, ಕಡಕೊಳ (ಮೈಸೂರು).

*೧೮. ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹಾದೂರ್ ಆರ್. ನರಸಿಂಹಾಚಾರ್ರು, ಎಂ.ಎ., ರಿ|| ಡೈರೆಕ್ಟರು, ಶಾಸನದ ಇಲಾಖೆ, ಮಲ್ಲೇಶ್ವರ, ಬೆಂಗಳೂರು.

೧೯. ಬಿ. ನರಹರಿ ಶಾಸ್ತ್ರಿಗಳು, ಹೆ|| ಮಾಸ್ಟರ್, ದೊಡ್ಡಬಳ್ಳಾಪುರ.

೨೦. ಎಂ. ಎಸ್. ಪುಟ್ಟಣ್ಣನವರು, ಬಿ.ಎ., ರಿ|| ಅಮಲ್ದಾರರು, ಬಸವನಗುಡಿ.

೨೧. ವೈ. ಕೆ. ರಾಮಚಂದ್ರರಾಯರು, ಬಿ.ಎ., ಎಲ್.ಸಿ.ಇ., ಎಂಜನಿಯರು, ಭದ್ರಾವತಿ.

೨೨. ಸಿ. ರಾಮರಾಯರು, ರಿ|| ಸೀ|| ಅ|| ಕ|| ಚಾಮರಾಜಪೇಟೆ, ಬೆಂಗಳೂರು.

೨೩. ರಾವ್ ಸಾಹೆಬ್ ಎಂ. ರಾಮರಾಯರು, ರಿ|| ಫಾರೆಸ್ಟ್ ಆಫಿಸರ್, ಬಸವನಗುಡಿ.

೨೪. ಎಂ. ಎ. ರಾಮಾನುಜಯ್ಯಂಗಾರ್ರು, ''ಕಾವ್ಯಕಲಾನಿಧಿ''ಯ ಸಂಪಾದಕರು, ಮೈಸೂರು.

೨೫. ವೀಣೆ ರಂಗಸ್ವಾಮಯ್ಯಂಗಾರ್ರು, ಜಮೀನ್ದಾರರು, ಶ್ರೀರಂಗಪಟ್ಟಣ.

*೨೬. ರಾಜಕವಿಭೂಷಣ ಎಚ್. ಲಿಂಗರಾಜ ಅರಸಿನವರು, ಅರಮನೆಯ ಮುಜರಾಯಿ ಬಕ್ಷಿ, ಮೈಸೂರು.

೨೭. ಎಚ್. ಕೆ. ವೀರಬಸವಯ್ಯನವರು, ಬಿ.ಎ., ಬಿ.ಎಲ್., ಮುನಸಿಫರು, ಶ್ರೀರಂಗಪಟ್ಟಣ.

೨೮. ಎಂ. ವೆಂಕಟಕೃಷ್ಣಯ್ಯನವರು, 'ಸಾಧ್ವೀ' ಸಂಪಾದಕರು, ಮೈಸೂರು.

*೨೯. ಬಿ. ವೆಂಕಟನಾರಾಯಣಪ್ಪನವರು, ಎಂ.ಎ., ರಿ|| ಕಾಲೇಜು ಪ್ರೊ|| ಬಸವನಗುಡಿ.

೩೦. ಹಲಕೂರು ವೆಂಕಟರಮಣಯ್ಯನವರು, ವಿದ್ಯಾನಿಧಿ, ಹಲಕೂರು (ಕೋಲಾರ ಡಿ||).

*೩೧. ಎನ್. ವೆಂಕಟೇಶಯ್ಯಂಗಾರ್ರು, ಬಿ.ಎ., ರಿ|| ಮೀಟಿಯೊರೊಲಾಜಿಕಲ್ ರಿಪೋರ್ಟರು, ಚಾಮರಾಜಪೇಟೆ, ಬೆಂಗಳೂರು.

೩೨. ಬಿ. ವೆಂಕಟೇಶಾಚಾರ್ರು, ಎಂ.ಎ., ಪ್ರೊಫೆಸರ್, ಸೆಂಟ್ರಲ್ ಕಾಲೇಜು, ಬೆಂಗಳೂರು.

೩೩. ಬಿ. ವೆಂಕೋಬರಾಯರು, ಬಿ.ಎ., ಡೆಪ್ಯುಟಿ ಕಮಿಷನರು, ಬೆಂಗಳೂರು.

೩೪. ಕೆ. ಶಂಕರನಾರಾಯಣರಾಯರು, ಎಂ.ಎ., ಬಿ.ಎಲ್., ಗ|| ಅಡ್ವೊಕೇಟ್, ಬೆಂಗಳೂರು.

೩೫. ಕೆ. ಶ್ರೀನರಸಿಂಹಯ್ಯನವರು, ಎಂ.ಎ., ಎಲ್.ಟಿ., ಸೆಕೆಂಡರಿ ಸ್ಕೂಲುಗಳ ಇನ್ಸ್ಪೆಕ್ಟರು, ಬೆಂಗಳೂರು.

೩೬. ಟಿ. ಶ್ರೀನಿವಾಸರಾಘವಾಚಾರ್ರು, ಕನ್ನಡ ಪಂಡಿತರು, ಟ್ರೈನಿಂಗ್ ಕಾಲೇಜು, ಮೈಸೂರು.

೩೭. ಎಂ. ಶ್ರೀನಿವಾಸರಾಯರು, ಬಿ.ಎ., ರಿ|| ಸರ್ಕಲ್ ಇನ್ಸ್ಪೆಕ್ಟರು, ಮೈಸೂರು.

(ಮುಂಬಯಿ ಪ್ರಾಂತದ ಸದಸ್ಯರು)

ಮ|| ರಾ|| ಗಳಾದ

*೩೮. ವಿ. ಬಿ. ಆಲೂರ್, ಬಿ.ಎ., ಎಲ್ಎಲ್.ಬಿ., ''ಜಯಕರ್ಣಾಟಕ''ದ ಸಂಪಾದಕರು, ಧಾರವಾಡ.

೩೯. ಗಂಗಾಧರಪ್ಪ ಸಂಗಪ್ಪ ಸಾಬೋಜಿ, ವರ್ತಕರು, ತಳಕವಾಡಿ (ಬೆಳಗಾಂ ಡಿ||).

*೪೦. ಆರ್. ಎ. ಜಹಗೀರ್ದಾರ್, ಎಂ.ಎ., ಎಲ್ಎಲ್.ಬಿ., ಹೈಕೋರ್ಟು ವಕೀಲರು, ಮುಂಬಯಿ.

ಮ॥ ರಾ॥ ಗಳಾದ

೪೧. ರಾವ್ ಬಹಾದೂರ್ ವಿ. ಬಿ. ಜೋಶಿ, ಬಿ.ಎ., ರಿ॥ ಪ್ರಿನ್ಸಿಪಾಲ್, ಟ್ರೈನಿಂಗ್ ಕಾಲೇಜು, ಧಾರವಾಡ.

*೪೨. ಎನ್. ಆರ್. ದೇಶಪಾಂಡೆ, ಬಿ.ಎ., ಎಲ್‌ಎಲ್.ಬಿ., ಪ್ಲೀಡರು, ಧಾರವಾಡ.

೪೩. ರಾ. ಹ. ದೇಶಪಾಂಡೆ, ಎಂ.ಎ., ಮಾಳಮಡ್ಡಿ, ಧಾರವಾಡ.

*೪೪. ವಿ. ಬಿ. ಧಾರವಾರಕರ್, ಬಿ.ಎ., ಕಾಮನಕಟ್ಟಿ, ಧಾರವಾಡ.

*೪೫. ನಾರಾಯಣ ಶ್ರೀನಿವಾಸ ರಾಜಪುರೋಹಿತರು, ಶುಕ್ರವಾರ ಪೇಟೆ, ಧಾರವಾಡ.

೪೬. ಆರ್. ಬಿ. ಪೋತುದಾರ್, ಗಿಬ್‌ಟೌನ್, ಧಾರವಾಡ.

೪೭. ಬಿ. ಎಸ್. ಬೆಟ್ಟಗೆರೆ, ಕೋರ್ಟು ಕ್ಲಾರ್ಕ್, ಗೋಕಾಕ್ (ಬೆಳಗಾಂ ಡಿ॥).

೪೮. ವಿ. ಎನ್. ಮಗದಾಳ್, ಬಿ.ಎ., ಟ್ರೈನಿಂಗ್ ಸ್ಕೂಲು, ಬಿಜಾಪುರ.

೪೯. ರಾವ್ ಬಹಾದೂರ್ ಕೆಂಭಾವಿ ರಾಘವೇಂದ್ರರಾಯರು, ಪ್ಲೀಡರು, ಬಿಜಾಪುರ.

೫೦. ಶ್ರೀನಿವಾಸ ಪಾಂಡುರಂಗ ಕೋಟೀ, ರೇಂಜು ಫಾರೆಸ್ಟು ಆಫಿಸರ್, ಶಿರಸಿ.

೫೧. ಶ್ರೀನಿವಾಸ ರಾಜೇರಾವ ಮಂಗಳವೇಡೆ, ಪತ್ರಿಕಾ ಕರ್ತರು, ಬಾಗಲಕೋಟೆ.

೫೨. ಸಣ್ಣಪ್ಪನಾಯಿಕ ರಾಮಚಂದ್ರನಾಯಿಕ ಪಡಕೂಟ, ಹುಲಸಿಗೆ (ಬೆಳಗಾಂ ಡಿ॥).

೫೩. ರಾವ್ ಸಾಹೆಬ್ ಪಿ. ಜಿ. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ., ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಪ್ಲೀಡರ್, ಬಿಜಾಪುರ.

(ಉತ್ತರ ಕರ್ಣಾಟಕ ಸಂಸ್ಥಾನಗಳ ಸದಸ್ಯರು)

ಮ॥ ರಾ॥ ಗಳಾದ

*೫೪. ತಮ್ಮಪ್ಪಾ ಸತ್ಯಪ್ಪಾ ಚಿಕ್ಕೋಡಿ, ವರ್ತಕರು, ರಾಬ್‌ಕವಿ (ಬೆಳಗಾಂ ಡಿ॥).

೫೫. ರಾಮಚಂದ್ರ ಶಂಕರ ಮಂಗಸೂಲಿ, ಶಿರಹಟ್ಟಿ (ಧಾರವಾಡ ಡಿ॥).

(ಹೈದರಾಬಾದು ಪ್ರಾಂತದ ಸದಸ್ಯರು)

ಮ॥ ರಾ॥ ಗಳಾದ

೫೬. ಬಿ. ವಿ. ಕೃಷ್ಣಯ್ಯಂಗಾರ್ರು, ಎ॥ ಎಂಜನಿಯರ್, ಐ.ಬಿ. ನಲಗೊಂಡ, ಹೈದರಾಬಾದು.

೫೭. ಜಿ. ಗಿರಿರಾಯರು, ಹೈಕೋರ್ಟು ವಕೀಲರು, ರೆಸಿಡೆನ್ಸೀ, ಹೈದರಾಬಾದು.

೫೮. ಟಿ. ಆರ್. ರಾಮರಾಯರು, ಬಿ.ಎ., ಕನ್ನಡ ಪ್ರೊಫೆಸರ್, ಹೈದರಾಬಾದು.

೫೯. ಎಂ. ಎಸ್. ಲಕ್ಷ್ಮೀನಾರಾಯಣರಾಯರು, ಬಿ.ಎ., ಎಲ್‌ಎಲ್.ಬಿ., ಹೈಕೋರ್ಟು ವಕೀಲರು, ಹೈದರಾಬಾದು.

೬೦. ಕೆ. ವೆಂಕಟರಾಯರು, ಕೋ-ಆಪರೆಟಿವ್ ಸೊಸೈಟಿಗಳ ಇನ್ಸ್ಪೆಕ್ಟರು, ಹೈದರಾಬಾದು.

೬೧. ಶಂಕರರಾವ್ ಗೋಪಾಲರಾಯರು, ಮುನ್ಸಬ್ದಾರ್, ಗುಲ್ಬರ್ಗ.

(ಮದರಾಸು ಪ್ರಾಂತದ ಸದಸ್ಯರು)

ಮ॥ ರಾ॥ ಗಳಾದ

* ೬೨. ರಾವ್ ಬಹಾದೂರ್ ಎಚ್. ಕೃಷ್ಣಶಾಸ್ತ್ರಿಗಳು, ಬಿ.ಎ., ಎಪಿಗ್ರಫಿಸ್ಟ್, ನೀಲಗಿರಿ.

೬೩. ಆರ್. ತಾತಾಚಾರ್ರು, ಎಂ.ಎ., ಎಲ್.ಟಿ., ಸ್ಕೂಲುಗಳ ಇನ್ಸ್ಪೆಕ್ಟರು, ವೆಲ್ಲೂರು.

* ೬೪. ಎಚ್. ತಿಮ್ಮಕೃಷ್ಣರಾಯರು, ಬಿ.ಎ., ಬಿ.ಎಲ್., ಹೈಕೋರ್ಟು ವಕೀಲರು, ಬಳ್ಳಾರಿ.

ಮ॥ ರಾ॥ ಗಳಾದ

೬೫. ಎಂ. ರಾಜಗೋಪಾಲಕೃಷ್ಣರಾಯರು, ಜಮೀನ್‌ದಾರರು ಮತ್ತು ಪತ್ರಿಕಾಕರ್ತರು, ಉಡುಪಿ.

* ೬೬. ಬಿ. ರಾಮರಾಯರು, ಎಂ.ಎ., ಎಲ್‌ಎಲ್.ಬಿ., ಸೀನಿಯರ್ ಟ್ರಾನ್ಸ್‌ಲೇಟರ್, ಮದರಾಸು.

೬೭. ಪತ್ತಿಕೊಂಡ ವೆಂಗಣ್ಣನವರು, ವರ್ತಕರು, ಹೊಸಪೇಟೆ.

ಸಾಮಾನ್ಯ ಸದಸ್ಯರು

(ಮೈಸೂರು ಪ್ರಾಂತದ ಸದಸ್ಯರು)

ಮ॥ ರಾ॥ ಗಳಾದ

* ೬೮. ಕೆ. ಕೃಷ್ಣಯ್ಯಂಗಾರ್ರು, ಬಿ.ಎ., ನ್ಯಾಷನಲ್ ಹೈಸ್ಕೂಲು, ಬೆಂಗಳೂರು.

೬೯. ಎಸ್. ಕೃಷ್ಣಸ್ವಾಮಿಶಾಸ್ತ್ರಿಗಳು, "ಕವಿತಿಲಕ ವಿಲಾಸ," ಚಾಮರಾಜಪುರ, ಮೈಸೂರು.

೭೦. ಬೇಲೂರು ಕೇಶವದಾಸರು, ಹರಿಕಥಾ ವಿದ್ವಾನ್, ದೇವರಾಜ ಮೊಹಲ್ಲಾ, ಮೈಸೂರು.

೭೧. ಎಂ. ಚಿನ್ನಕೃಷ್ಣಯ್ಯನವರು, ಕನ್ನಡ ಪಂಡಿತರು, ಹೈಸ್ಕೂಲ್, ಕೋಲಾರ.

೭೨. ಕಾರ್ಯದರ್ಶಿ, ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್, ಮೈಸೂರು.

೭೩. ತಿರುಮಲೆ ತಾತಾಚಾರ್ಯ ಶರ್ಮರು, ಕಾಶೀವಿಶ್ವೇಶ್ವರ ದೇವಸ್ಥಾನದ ಬೀದಿ, ಬೆಂಗಳೂರು.

೭೪. ಕೆ. ಮಗ್ಗಪ್ಪಯ್ಯನವರು, ಶೇಕದಾರರು, ಕರೂರು ಹೋಬಳಿ (ಶಿವಮೊಗ್ಗ ಡಿ॥).

೭೫. ಬಿ. ಎಸ್. ನರಸಿಂಗರಾಯರು, ಬಿ.ಎ., ಬಿ.ಇ., ಅಸಿಸ್ಟೆಂಟ್ ಎಂಜನಿಯರ್, ಮಂಡ್ಯ.

೭೬. ಎನ್. ನರಸಿಂಹಮೂರ್ತಿಯವರು, ಎಂ.ಎ., ಬಿ.ಎಲ್., ಯೂನಿವರ್ಸಿಟಿ ಲೈಬ್ರೇರಿಯನ್, ಮೈಸೂರು.

೭೭. ಎಸ್. ಕೆ. ನರಸಿಂಹಯ್ಯನವರು, ವರ್ತಕರು, ಶಂಕರಪುರ, ಬೆಂಗಳೂರು.

೭೮. ಕೆ. ನಂಜುಂಡಶಾಸ್ತ್ರಿಗಳು, ಕರ್ಣಾಟಕ ಸಾಹಿತ್ಯ ಪರಿಷತ್ಪಂಡಿತರು, ಬಸವನಗುಡಿ.

೭೯. ಪಿ. ಪದ್ಮನಾಭಯ್ಯನವರು, ಹೆಡ್ ಮಾಸ್ಟರ್, ಸೂಲಿಕುಂಟೆ (ಕೋಲಾರ ಡಿ॥).

೮೦. ಡಿ. ಕೆ. ದಾರಾಷಾ, ಬಿ.ಎ., ರಿ॥ ಸೂಪರಿಂಟೆಂಡೆಂಟರು, ರೆವಿನ್ಯೂ ಸರ್ವೇ, ಬೆಂಗಳೂರು.

೮೧. ಬಿ. ಪುಟ್ಟಯ್ಯನವರು, ಬಿ.ಎ., ಸೂಪರಿನ್‌ಟೆಂಡೆಂಟರು, ಗ॥ ಪ್ರೆಸ್, ಬೆಂಗಳೂರು.

೮೨. ಪಿ. ಎಸ್. ಪೂರ್ಣಯ್ಯನವರು, ಬಿ.ಎ., ಅಮಲ್ದಾರ್, ನಂಜನಗೂಡು.

೮೩. ಎಸ್. ಬೊಮ್ಮರಸ ಪಂಡಿತರು, ಕತ್ತಾಡಿಪುರ ಅಗ್ರಹಾರ, ಮೈಸೂರು.

೮೪. ಎಚ್. ಕೆ. ಮಲ್ಲಪ್ಪನವರು, ವಿದ್ಯಾಭ್ಯಾಸದ ಅಸಿಸ್ಟೆಂಟ್ ಇನ್ಸ್‌ಪೆಕ್ಟರು, ಹಾಸನ.

೮೫. ಟಿ. ಮಾದಯ್ಯನವರು, ತಿಮ್ಮಸಂದ್ರ, ಚನ್ನಪಟ್ಟಣ ತಾ॥

೮೬. ಜಿ. ಕೆ. ಮುನಿಸ್ವಾಮಯ್ಯನವರು, ಹೆ॥ ಮಾ॥ ಹುಡುಗರ ಸ್ಕೂಲು, ಚೆನ್ನಪಟ್ಟಣ.

೮೭. ಸಿ. ರಾಘವಾಚಾರ್ರು, ಬಿ.ಎಸ್‌ಸಿ., ನ್ಯಾಷನಲ್ ಹೈಸ್ಕೂಲ್, ಬೆಂಗಳೂರು.

೮೮. ಬಿ. ಡಿ. ರಾಘವೇಂದ್ರರಾಯರು, ಎಲ್.ಎಂ.ಅಂಡ್‌ಎಸ್., ರಿ॥ ಸಿವಿಲ್ ಸರ್ಜನ್, ಚಾಮರಾಜಪೇಟೆ, ಬೆಂಗಳೂರು.

೮೯. ಎಚ್. ರಾಮರಾಯರು, ಬಿ.ಎ., ನ್ಯಾಷನಲ್ ಹೈಸ್ಕೂಲ್, ಬೆಂಗಳೂರು.

೯೦. ರಾವ್ ಬಹಾದೂರ್ ಡಾ॥ ಸಿ. ಬಿ. ರಾಮರಾಯರು, "ಕಾಂತಿನಿವಾಸ," ಬಸವನಗುಡಿ.

೯೧. ಪಟ್ಟಣಗೆರೆ ರಂಗಣ್ಣನವರು, ಜಮೀನ್‌ದಾರರು, ಪಟ್ಟಣಗೆರೆ (ಕಡೂರು ತಾ॥).

೯೨. ಬಿ. ವಿ. ಲಕ್ಷ್ಮಣರಾಯರು, ರಿ॥ ಅ॥ ಕಮಿಷನರು, ಶಂಕರಪುರ, ಬೆಂಗಳೂರು ಸಿಟಿ.

ಮ|| ರಾ|| ಗಳಾದ

೯೩. ಕೆ. ಲಕ್ಷ್ಮೀನರಸಿಂಹಯ್ಯನವರು, ಪೋಸ್ಟುಮಾಸ್ಟರು, ಬರೋಡ.
೯೪. ಸಿ. ವಾಸುದೇವಯ್ಯನವರು, ವಿದ್ಯಾಭ್ಯಾಸದ ಇಲಾಖೆಯ ರಿ|| ಅಸಿಸ್ಟೆಂಟರು, ಮಲ್ಲೇಶ್ವರ.
೯೫. ಎಂ. ವೆಂಕಟನಾರಣಪ್ಪನವರು, ಬಿ.ಎ., ಅ|| ಕಮಿಷನರು, ಭದ್ರಾವತಿ.
೯೬. ಸಿ. ವೆಂಕಟರಮಣಶಾಸ್ತ್ರಿಗಳು. "ಕಾದಂಬರಿ ಸಂಗ್ರಹ"ದ ಸಂಪಾದಕರು, ಚಾಮರಾಜನಗರ.
* ೯೭. ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ., ಕನ್ನಡ ಅ|| ಪ್ರೊಫೆಸರ್, ಸೆಂಟ್ರಲ್ ಕಾಲೇಜು, ಬೆಂಗಳೂರು.
೯೮. ಎಂ. ವೆಂಕಟೇಶ ಐಯಂಗಾರ್ಯರು, ಎಂ.ಎ., ಅಂಡರ್ ಸೆಕ್ರೆಟರಿ, ಗವೀಪುರ, ಬೆಂಗಳೂರು.
೯೯. ಬಿ. ಐ. ಶಾಮರಾಯರು, ರಿ|| ಫಾರೆಸ್ಟ್ ಆಫಿಸರ್, ಬಸವನಗುಡಿ.
*೧೦೦. ರಾಜಕಾರ್ಯ ಪ್ರಸಕ್ತ ರಾವ್ ಬಹಾದೂರ್ ಎಂ. ರಾಮರಾಯರು, ಎಂ.ಎ., ಚಾಮರಾಜಪೇಟೆ, ಬೆಂಗಳೂರು.
೧೦೧. ಯೂ. ಎಸ್. ಶ್ರೀಕಂಠಯ್ಯನವರು, ಹೆ|| ಮಾ|| ದೇವರಾಜ ಪ್ರೈಮರಿ ಸ್ಕೂಲ್, ಮೈಸೂರು.
*೧೦೨. ಎಂ. ಆರ್. ಶ್ರೀನಿವಾಸಮೂರ್ತಿಗಳು, ಬಿ.ಎ., ಅ|| ಮಾ|| ಕೊ|| ಹೈಸ್ಕೂಲ್, ತುಮಕೂರು.
೧೦೩. ನಿಟ್ಟೂರು ಶ್ರೀನಿವಾಸರಾಯರು, ರಾಯಪೇಟೆ, ಮದರಾಸು.
೧೦೪. ಎನ್. ಶೇಷಶಾಸ್ತ್ರಿಗಳು, ಡಿ|| ಶಿರಸ್ತೇದಾರರು, ಶಿವಮೊಗ್ಗ.
೧೦೫. ಸಿ. ಶೇಷಾಚಾರ್ಯರು, ಎಂ.ಎ., ಮೀಟಿಯೊರೊಲಾಜಿಕಲ್ ರಿಪೋರ್ಟರು, ಬಸವನಗುಡಿ.
೧೦೬. ಬಿ. ಸುಬ್ಬರಾಯರು, ಎಲೆಕ್ಟ್ರಿಕಲ್ ಡಿಪಾರ್ಟಮೆಂಟು, ಬಸವನಗುಡಿ, ಬೆಂಗಳೂರು.
೧೦೭. ಸಿ. ಸುಬ್ಬರಾಯರು, ಎಂ.ಎ., ಸ್ಕೌಟು ಕಮಿಷನರ್, ಬೆಂಗಳೂರು.
೧೦೮. ಭಾರತಿ ಸಂಪಂಗಿರಾಮಯ್ಯನವರು, 'ಸವಿನುಡಿ'ಯ ಸಂಪಾದಕರು, ಕೋಟೆ, ಬೆಂಗಳೂರು.
*೧೦೯. ಕೆ. ಸಂಪದ್ಗಿರಿರಾಯರು, ಎಂ.ಎ., ಹೆ|| ಮಾ|| ನ್ಯಾ|| ಹೈಸ್ಕೂಲ್, ಬೆಂಗಳೂರು.
೧೧೦. ಎಚ್. ಹನುಮಂತಯ್ಯನವರು, ಸ್ಕೂ|| ಹೆ|| ಮಾ|| ಹೆಸರುಘಟ್ಟ (ಬೆಂಗಳೂರು ತಾ||).
೧೧೧. ಎಚ್. ಹನುಮಂತರಾಯರು, ಕನ್ನಡ ಪಂಡಿತರು, ಹೈಸ್ಕೂಲು, ಚಿತ್ರದುರ್ಗ.
೧೧೨. ಎಸ್. ಹಿರಿಯಣ್ಣಯ್ಯನವರು, ಎಂ.ಎ., ಬಿ.ಎಲ್., ಡೆ|| ಕಮಿಷನರ್, ಕೋಲಾರ.

(ಮುಂಬಯಿ ಪ್ರಾಂತದ ಸದಸ್ಯರು)

ಮ|| ರಾ|| ಗಳಾದ

೧೧೩. ಎಂ. ಗೋಪಾಲರಾಯರು, ೧೭, ಎಲ್‌ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಮುಂಬಯಿ.
*೧೧೪. ಎಸ್. ಎನ್. ಕುಲಕರಣಿ, ಹೆ|| ಮಾ|| ಉಣಕಲ್ಲು (ಹುಬ್ಬಳ್ಳಿ ತಾ||).
*೧೧೫. ಕೆ. ಜಿ. ಗೆಜ್ಜಿ, ಬಿ.ಎ., ಎಲ್‌ಎಲ್. ಬಿ., ಪ್ಲೀಡರ್, ಬೆಳಗಾಂವಿ.
೧೧೬. ತಮ್ಮಾಜೀ ನಾರಾಯಣ ಅಮೀನ್‌ಭಾವಿ, ಅ|| ಮಾ|| ಹೆಂಗಸರ ಟ್ರೈನಿಂಗು ಕಾಲೇಜು, ಧಾರವಾಡ.
೧೧೭. ಜಿ. ಮಹಾಲಿಂಗಪ್ಪ ಮಿರ್ಜಿ, ಬಿ.ಎ., ದಾಜೀಬಾ ಪೇಟೆ, ಹುಬ್ಬಳ್ಳಿ.
೧೧೮. ರಾಮರಾವ್ ದೇಸಾಯಿ, ಬಿ.ಎ., ಎಲ್‌ಎಲ್.ಬಿ., ವಕೀಲ್, ಧಾರವಾಡ.
೧೧೯. ರಾವ್ ಬಹಾದೂರ್ ಎಸ್. ಕೆ. ರೊದ್ದ, ಪ್ರೆಸಿಡೆಂಟರು, ಡಿ|| ಬೋರ್ಡು, ಧಾರವಾಡ.
೧೨೦. ಎಚ್. ಬಿ. ಲಕ್ಷ್ಮೇಶ್ವರ, ಬಿ.ಎ., ಎಲ್‌ಎಲ್.ಬಿ., ವಕೀಲ್, ಧಾರವಾಡ.
*೧೨೧. ಎನ್. ಕೆ. ಹುಯಿಲಗೋಳ, ಬಿ.ಎ., ಎಲ್‌ಎಲ್.ಬಿ., ಪ್ಲೀಡರ್, ಗದಗ.

(ಮದರಾಸು ಪ್ರಾಂತದ ಸದಸ್ಯರು)

ಮ॥ ರಾ॥ ಗಳಾದ

೧೨೨. ಕೆ. ಗುರುರಾಜ ರಾಯರು, ವಕೀಲರು, ಬಳ್ಳಾರಿ.

೧೨೩. ಆರ್. ಚಿದಂಬರರಾಯರು, ವಕೀಲರು, ಆದವಾನಿ.

೧೨೪. ಪಂಡಿತ ತಾರಾನಾಥರು, 'ಪ್ರೇಮಾಯತನ' ತುಂಗಭದ್ರಾ.

*೧೨೫. ರಾವ್ ಬಹಾದೂರ್ ಎಚ್. ನಾರಾಯಣರಾಯರು, ಎಂ.ಎ., ರಿ॥ ಪ್ರೊಫೆಸರ್, ಪ್ರೆಸಿಡೆನ್ಸೀ ಕಾಲೇಜು, ಮದರಾಸು.

(ಕೊಡಗಿನ ಸದ್ಯಸರು)

ಮ॥ ರಾ॥ ಗಳಾದ

*೧೨೬. ಬಿ. ಎನ್. ಕೃಷ್ಣಮೂರ್ತಿಗಳು, ಅ॥ ಮಾ॥ ಸೆಂಟ್ರಲ್ ಹೈಸ್ಕೂಲು, ಮಡಕೇರಿ.

೧೨೭. ಸಿ. ಎನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್., ಅಡ್ವೊಕೇಟ್, ಮಡಕೇರಿ.

೧೨೮. ಎನ್. ಆರ್. ಸುಬ್ರಹ್ಮಣ್ಯಯ್ಯನವರು, ಕಾಫೀ ಪ್ಲಾಂಟರು, ನಿಡತ (ಕೊಡಗು).

(ಹೈದರಾಬಾದು ಪ್ರಾಂತದ ಸದಸ್ಯರು)

ಮ॥ ರಾ॥ ಗಳಾದ

೧೨೯. ಜಿ. ಅಮರಪ್ಪನವರು, ವಕೀಲರು, ರಾಯಚೂರು.

೧೩೦. ಜಿ. ಕೆ. ಕೇರ್ಲೋಸ್ಕರ್, ಮೆಡಿಕಲ್ ಪ್ರಾಕ್ಟಿಷನರ್, ರೆಸಿಡೆನ್ಸೀ, ಹೈದರಾಬಾದು.

೧೩೧. ಕೃಷ್ಣರಾವ್ ಕಪಟ್ರಾಲ್, ಪ್ಲೀಡರ್, ಗುಲ್ಬರ್ಗ.

೧೩೨. ಜಿ. ಕೃಷ್ಣರಾಯರು, ಹೈಕೋರ್ಟು ವಕೀಲರು, ರಾಯಚೂರು.

೧೩೩. ಪಿ. ಕೃಷ್ಣರಾಯರು, ವಕೀಲರು, ರಾಯಚೂರು.

೧೩೪. ಐ. ಕೊಂಡಲರಾವ್, ಅಸಿಸ್ಟೆಂಟ್ ಮಾಸ್ಟರು, ಹೈಸ್ಕೂಲ್, ವಾರಾಂಗಲ್.

೧೩೫. ಚಿಮಲ್ಗಿಕರ್ ಬ್ರದರ್ಸ್, ಫೋಟೊಗ್ರಾಫರ್ಸ್, ಅಫ್ಜಲ್‌ಗಂಜ್ ರೋಡು, ಹೈದರಾಬಾದು.

೧೩೬. ಡಿ. ಮಂಗೇಶರಾಯರು, ಸ್ಕೂಲ್ ಮಾಸ್ಟರು, ಟೆಲಿಗ್ರಾಫ್ ಆಫೀಸಿನ ಎದುರು ಹೈದರಾಬಾದು.

೧೩೭. ಎಂ. ಸಿ. ರಂಗಯ್ಯಂಗಾರ್ರು, ಅಸಿಸ್ಟೆಂಟ್ ಸೂ॥ ಪಿ. ಡಬ್ಲ್ಯು., ಹೈದರಾಬಾದು.

೧೩೮. ರಾಘವೇಂದ್ರರಾಯರು, ಮರ್ಚೇಡ, ಮಾಸ್ಕಿ ಜಿಲ್ಲ, ರಾಯಚೂರು.

೧೩೯. ವೆಂಕಟಾಚಾರ್ಯರು, ವಕೀಲರು, ರಾಯಚೂರು.

೧೪೦. ಡಿ. ಶ್ರೀನಿವಾಸರಾಯರು, ಆಡಿಟರು, ಪಿ.ಡಬ್ಲ್ಯು.ಡಿ. ಆಫೀಸು, ಹೈದರಾಬಾದು.

೧೪೧. ಶ್ರೀನಿವಾಸರಾವ್, ಕೆ. ಕಾರವಾಂಕರ್, ವಿದ್ಯಾರ್ಥಿ, ಸ್ಟೇಷನ್ ರೋಡ್, ಹೈದರಾಬಾದು.

೧೪೨ ಶೇಷಗಿರಿರಾವ್ ಚೆಂಜ, ಜಹಗೀರದಾರರು, ಸ್ಟೇಷನ್ ರೋಡ್, ಹೈದರಾಬಾದು.

೧೪೩. ಎಸ್. ಆರ್. ಎಸ್. ಅಯ್ಯಂಗಾರ್ರು, ೨೯, ವಿಠಲವಾಡಿ, ಹೈದರಾಬಾದು.

೧೪೪. ಸುಬ್ಬರಾಯ ಬೆಳವಾಡಿ, ಸೂಪರ್‌ವೈಸರು, ಸಂಗಾರೆಡ್ಡಿ, ಹೈದರಾಬಾದು.

೧೪೫. ಅರಸಂಗಿ ಹನುಮಂತರಾಯರು, ವಕೀಲರು, ರಾಯಚೂರು.

THE BANGALORE PRESS

ಶ್ರೀಃ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೧] ಅಕ್ಷಯ ಸಂ॥ ಆಶ್ವಯುಜ ಮಾಸ [ಸಂಚಿಕೆ ೩

ಆಂಗ್ಲೇಯ ನಾಟಕದ ಪೂರ್ವ ಚರಿತ್ರೆ

ಆಂಗ್ಲೇಯ ಕವಿಗೋಷ್ಠಿಯಲ್ಲಿ ಅಗ್ರಸ್ಥಾನಕ್ಕೆ ಅಧಿಕಾರಿಯಾದವನು ಷೇಕ್ಸ್‌ಪಿಯರ್ ಕವಿ ಎಂದು ತಿಳಿಯದವರೇ ಇಲ್ಲ. ಈ ಮಹಾ ಕವಿಯು ಮುಖ್ಯವಾಗಿ ನಾಟಕಗಳನ್ನು ಬರೆದನು. ಅವನ ಆ ನಾಟಕಗಳ ದೆಸೆಯಿಂದ ಆಂಗ್ಲೇಯ ಸಾಹಿತ್ಯಕ್ಕೆ ಬಂದಿರುವ ಪೂಜ್ಯತೆಯು ಇಷ್ಟಿಷ್ಟೆಂದು ಹೇಳುವಂತಿಲ್ಲ. ಈ ಕವಿಗಾದರೋ ಪ್ರಪಂಚದಲ್ಲೇ ಅವನಿಗೆ ಸಮಾನರಿಲ್ಲವೆಂದು ಹೆಸರು ಬಂದಿದೆ. ಇಂಥ ಉತ್ತಮ ರೀತಿಯ ನಾಟಕಗಳನ್ನು ಇವನು ರಚಿಸುವ ಸ್ಥಿತಿ ಬರುವ ಮೊದಲು ಆಂಗ್ಲೇಯ ನಾಟಕವು ಯಾವ ರೀತಿಯಲ್ಲಿ ಆರಂಭವಾಯಿತು, ಯಾವ ರೀತಿಯಲ್ಲಿ ಬೆಳೆಯಿತು ಎಂದು ತಿಳಿಯುವುದರಲ್ಲಿ ಅನೇಕರಿಗೆ ಕುತೂಹಲವಿರಬಹುದು. ಈ ವಿವರವನ್ನು ಸ್ವಲ್ಪ ತಿಳಿಸಬೇಕೆಂದು ಈ ಉಪನ್ಯಾಸದಲ್ಲಿ ಯತ್ನಮಾಡಿದೆ.

ಹನ್ನೆರಡನೆಯ ಮತ್ತು ಹದಿಮೂರನೆಯ ಶತಮಾನದಲ್ಲಿ ಇಂಗ್ಲೆಂಡಿನ ಮಠಗಳಲ್ಲಿ ಅನೇಕವಾಗಿ ಲ್ಯಾಟಿನ್ ಗ್ರಂಥಗಳು ರಚಿತವಾಗುತ್ತಿದ್ದುವು. ಇವುಗಳಲ್ಲಿ ಕೆಲವು ಇಂಗ್ಲೆಂಡಿನ ಚರಿತ್ರೆಗಳು; ಕೆಲವು ಮಠಾಧಿಕಾರಿಗಳ ಜೀವನ ಚರಿತ್ರೆಗಳು; ಕೆಲವು ಸಣ್ಣಸಣ್ಣ ವಿಷಯಗಳನ್ನು ಕುರಿತ ಪುಸ್ತಕಗಳು; ಇವೆಲ್ಲಕ್ಕಿಂತಲೂ ಮುಖ್ಯವಾಗಿ ಮಠಗಳಲ್ಲಿ ಹಬ್ಬದ ದಿನಗಳಲ್ಲಿ ಮಠೀಯರು ಆಡುವುದಕ್ಕಾಗಿ ಲ್ಯಾಟಿನ್ ಭಾಷೆಯಲ್ಲಿ ಬರೆದ ಕೇಳಿಕೆಗಳು. ಆರಂಭದ ಕೇಳಿಕೆಗಳೆಲ್ಲವೂ ಮತ ಸಂಬಂಧವಾದ ವಿಷಯಗಳನ್ನು ಕುರಿತುವಾದರೂ ಮುಂದೆ ಆಂಗ್ಲೇಯ ನಾಟಕದ ಉದ್ಭವಕ್ಕೆ ಈ ಲ್ಯಾಟಿನ್ ಕೇಳಿಕೆಗಳು ಕಾರಣವಾದುವು. ಇವುಗಳಲ್ಲಿ ಮೊದಲನೆಯದು ಈಗ ತಿಳಿದಿರುವಮಟ್ಟಿಗೆ ಸೆಂಟ್ ಕ್ಯಾಥರಿನ್ ದೇವಿಯ ವಿಷಯವಾದ ಕೇಳಿಕೆಯೊಂದು.

ಮೊದಲು ಲ್ಯಾಟಿನ್ ಭಾಷೆಯಲ್ಲಿ ನಡೆಯುತ್ತಿದ್ದ ಈ ಕೇಳಿಕೆಗಳು ಆಮೇಲೆ ಇಂಗ್ಲಿಷಿನಲ್ಲಿ ಪ್ರಾರಂಭವಾದುವು. ಆರಂಭದಲ್ಲಿ ಕೇಳಿಕೆಗಳೆಲ್ಲವೂ ಮಠಗಳಲ್ಲೇ ನಡೆಯುತ್ತಿದ್ದು ಅವುಗಳಲ್ಲಿ ಮಠೀಯರೇ ವಿಶೇಷವಾಗಿ ನಟಿಸುತ್ತಿದ್ದುದರಿಂದಲೂ, ಜನರಿಗೆ ಬೈಬಲಿನ ವಿಷಯಗಳು ಚೆನ್ನಾಗಿ ತಿಳಿಯಬೇಕೆಂಬುದೇ ಅವುಗಳ ಉದ್ದೇಶವಾಗಿದ್ದುದರಿಂದಲೂ, ಅವುಗಳ ಕಥೆಯು ಬೈಬಲಿನ ಮೂಲವನ್ನು ಸಮೀಪವಾಗಿ ಅನುಸರಿಸಿ ಇದೆ. ಕೇಳಿಕೆಗಳಿಂದ ಜನರಿಗೆ ಬೈಬಲಿನ ಕಥೆಗಳಲ್ಲಿ ಆದರವು ಹೆಚ್ಚಿ ಹದಿನಾಲ್ಕನೆಯ ಶತಮಾನದಲ್ಲಿ ಮಿರಕಲ್ ಪ್ಲೇ ಎಂಬ ಹೆಸರಿನ ಬೈಬಲ್ ಕೇಳಿಕೆಗಳು ವಿಶೇಷವಾಗಿ ಪ್ರಚಾರಕ್ಕೆ ಬಂದು, ಬೈಬಲಿನ ಕಥೆಯನ್ನೆಲ್ಲ ಮೊದಲಿಂದ ಕೊನೆಯವರೆಗೂ ಸೂಚಿಸುವ ದೃಶ್ಯಮಾಲೆಗಳು ಅಲ್ಲಲ್ಲಿ ಇದ್ದುವು. ಇಂಥ ಮಾಲೆಗಳಲ್ಲಿ ಒಂದೊಂದರಲ್ಲಿ ಹತ್ತಾರು ನಾಟಕಗಳು ಸೇರಿರುತ್ತಿದ್ದುವು. ಬೈಬಲ್ ಕಥೆಯ ಒಂದೊಂದು ಭಾಗವು ಒಂದೊಂದರಲ್ಲಿ ನಿರೂಪಿಸಲ್ಪಟ್ಟು ಒಟ್ಟು ಒಂದು ಮಾಲೆಯಲ್ಲಿ ಕಥೆಯು ಮುಗಿಯುವುದು. ಒಂದು ಮಾಲೆಯಲ್ಲಿದ್ದ ಕಥೆಗಳೇ ಇನ್ನೊಂದರಲ್ಲಿರಬೇಕೆಂದಾಗಲಿ, ಒಂದರಲ್ಲಿದ್ದಷ್ಟೇ ಕಥೆಗಳು ಇನ್ನೊಂದರಲ್ಲಿರಬೇಕೆಂದಾಗಲಿ ನಿಯಮಗಳೇನೂ ಇರಲಿಲ್ಲ. ಕಥೆಗಳ ಸಂಖ್ಯೆ ಹೀಗೆ ಹೆಚ್ಚಿದಾಗ ಅವುಗಳಲ್ಲಿ ಮಠೀಯರು ಮಾತ್ರ ನಟಿಸುವುದಕ್ಕೆ ಸಾಧ್ಯವಾಗದೆ ಆ ಪದ್ಧತಿಯು ನಿಂತುಹೋಯಿತು. ಅವು ಮಠಗಳಲ್ಲೇ ನಡೆಯುವ ಪದ್ಧತಿಯೂ ಕೊನೆಗಂಡಿತು. ಹಬ್ಬ ಹುಣ್ಣಿಮೆಗಳಲ್ಲಿ ಊರಿನ ಜನರು ಸೇರಿ ಮಠೀಯರ ಸಹಾಯವನ್ನು ಪಡೆದು ಕೇಳಿಕೆಗಳನ್ನು ತಾವೇ ನಟಿಸುವುದಕ್ಕೆ ಪ್ರಾರಂಭ ಮಾಡಿದರು. ಹೊಸ ರೀತಿಯ ಕೇಳಿಕೆಗಳು ಸಾಮಾನ್ಯವಾಗಿ ಬರೆಯಲ್ಪಟ್ಟುದರಿಂದ ಅವುಗಳಲ್ಲಿ ಜನರ ಮನೋರಂಜನಕ್ಕಾಗಿ ವಿನೋದವಾದ ಕೆಲವು ಭಾಗಗಳನ್ನು ಸೇರಿಸುವುದು ಶೀಘ್ರದಲ್ಲಿ ವಾಡಿಕೆಗೆ ಬಂದಿತು. ಒಂದೊಂದು ದೃಶ್ಯಮಾಲೆಯಲ್ಲೂ ಮೂವತ್ತು ನಲವತ್ತು ಕೇಳಿಕೆಗಳು ಸೇರಿದುದರಿಂದ ಒಂದೇ ಗುಂಪಿನ ಜನರು ಎಲ್ಲವನ್ನೂ ನಡೆಯಿಸುವುದು ಕಷ್ಟವಾಯಿತು. ಈ ಕಾರಣದಿಂದ ಕೆಲಕೆಲವು ಜನರು ಕೆಲಕೆಲವು ಕೇಳಿಕೆಗಳನ್ನು ಆಡುವುದಕ್ಕೆ ಒಪ್ಪಿಕೊಳ್ಳುತ್ತಿದ್ದರು. ಒಂದೊಂದು ದೊಡ್ಡ ಊರಿನಲ್ಲಿ ಇಂಥ ಒಂದು ದೃಶ್ಯಮಾಲೆಯು ಸಿದ್ಧವಾಗುತ್ತಿತ್ತು. ಆ ಕಾಲದಲ್ಲಿ ಒಂದೊಂದು ವ್ಯಾಪಾರದ ಜನರು ಒಂದೊಂದು ಸಂಘವನ್ನು ಏರ್ಪಡಿಸಿಕೊಂಡು ಪರಸ್ಪರ ಸಹಾಯ ಮಾಡುತ್ತ ವ್ಯಾಪಾರದ ಕೆಲಸ ಮಾಡುವುದು ರೂಢಿಯಲ್ಲಿತ್ತು. ಇಂತಹ ಸಂಘದವರು ಇಂಥ ದೃಶ್ಯಮಾಲೆಗಳಲ್ಲಿ ಒಂದೊಂದು ದೃಶ್ಯವನ್ನು ನಡೆಯಿಸುವ ಭಾರವನ್ನು ತಾವು ವಹಿಸಿಕೊಳ್ಳುವರು. ಅವರು ತಮ್ಮ ವ್ಯಾಪಾರಕ್ಕೆ ಸಂಬಂಧಪಟ್ಟ ಕೇಳಿಕೆಗಳನ್ನು ತೆಗೆದುಕೊಳ್ಳುವುದೂ ಉಂಟು; ಎಂದರೆ ಬೈಬಲಿನ ಪ್ರಳಯದ ಮತ್ತು ಅದರಲ್ಲಿ ಉಳಿದುಕೊಂಡ ನೋವಾ ಮಹಾರಾಜನ ಕಥೆಯನ್ನು ನಾವಿಕರ ಸಂಘದವರು ತೆಗೆದುಕೊಳ್ಳುತ್ತಿದ್ದರು. ಕೆಲವು ಸಂಘಗಳವರು ತಮ್ಮ ವ್ಯಾಪಾರಕ್ಕೆ ಸೇರಿದುವುಗಳಾಗಲಿ ಸೇರದವುಗಳಾಗಲಿ ತಮಗೆ ಇಷ್ಟಬಂದಷ್ಟು ಕೇಳಿಕೆಗಳನ್ನು ತಮ್ಮ

ಉಪಪತ್ತಿಗೆ ತಕ್ಕಂತೆ ತೆಗೆದುಕೊಳ್ಳುತ್ತಿದ್ದರು. ನಾಟಕಗಳು ಇನ್ನೂ ಹೊಸ ವಾಗಿದ್ದಾಗ ಅದುಷ್ಟೋ ಆಗ ಆಟಗಾರರೇ ಬಂದು ಕಲಿಯಾಯಿತು. ಸಂಘಗಳ ಜನರು ಊರಿನಲ್ಲಿ ಹೆಸರಾಗಿ ಇರುವವರೆಲ್ಲರನ್ನೂ ಆದುದಕ್ಕೆ ಬರೆದು ಯಂಗಳು ನೊಡಲೇ ಒಟ್ಟುಗೂಡಿ ಅಭ್ಯಾಸಕ್ಕೆ ಪ್ರಾರಂಭಿಸುತ್ತಿದ್ದರು. ಆಟಗಾರರಿಗೆ ತಿಂಡಿ ತೀರ್ಥವೂ ಆಟದ ದಿನಕ್ಕೆ ಸ್ವಲ್ಪ ದುಡ್ಡೂ ಸಿಕ್ಕುತ್ತಿದ್ದುವು. ಈ ಖರ್ಚೆಲ್ಲವೂ ಇದಕ್ಕಾಗಿ ಎತ್ತಿದ ಚಂದಾ ಹಣದಿಂದ ನಡೆಯುತ್ತಿತ್ತು. ಮೊದಲು ಒಂದೇ ಕಥೆ ತೋರಿಸುತ್ತಿದ್ದ ಕೇಳಿಕೆಗಳನ್ನು ಜನರು ಅಪೇಕ್ಷಿಸಿದರೆ ಬೇರೆ ಬೇರೆ ಕಥೆ ತೋರಿಸುವುದಕ್ಕೆ ಏರ್ಪಾಡು ಮಾಡಬೇಕಾಯಿತು. ಇದಕ್ಕಾಗಿ ಗಾಲಿಯ ಮೇಲೆ ಹೋಗುವ ನಾಗಾಲಿಗಳನ್ನು ಮಾಡಿ ಅವುಗಳಲ್ಲಿ ಎರಡಂತಸ್ತುಗಳನ್ನಿಟ್ಟು, ಕೆಳಗಿನ ಅಂತಸ್ತಿನಲ್ಲಿ ಆಟಗಾರರು ಬಟ್ಟೆಬರೆಗಳನ್ನು ಹಾಕಿಕೊಳ್ಳುವುದಕ್ಕೂ, ಮೇಲಿನ ಅಂತಸ್ತಿನಲ್ಲಿ ಕೇಳಿಕೆಯನ್ನಾಡುವುದಕ್ಕೂ ಏರ್ಪಡಿಸುತ್ತಿದ್ದರು. ಒಂದೊಂದು ನಾಗಾಲಿಯಲ್ಲಿ ಒಂದೊಂದು ಕೇಳಿಕೆ ನಡೆಯುವುದು. ಊರಿನ ಎಲ್ಲಾ ಭಾಗದ ಜನರೂ ನೋಡುವುದಕ್ಕಾಗಿ ಒಂದೊಂದು ನಾಗಾಲಿಯೂ ಚೌಕದಿಂದ ಚೌಕಕ್ಕೆ ಹೋಗಿ ಪ್ರತಿಯೊಂದು ಚೌಕದಲ್ಲಿಯೂ ಎಲ್ಲಾ ಕೇಳಿಕೆಗಳೂ ಒಂದಾದ ಮೇಲೊಂದು ನಡೆಯುತ್ತಿದ್ದುವು. ಈ ರೀತಿಯಾಗಿ ಆಗ ಏರ್ಪಾಡಾದ ದೃಶ್ಯಮಾಲೆಗಳಲ್ಲಿ ನಾಲ್ಕು ಈಗ ಕೈಗೆ ಸಿಕ್ಕಿವೆ. ಇವು ಯಾರ್ಕ್, ವೇಕ್‌ಫೀಲ್ಡ್, ಚೆಸ್ಟರ್ ಮತ್ತು ಕಾವೆಂಟ್ರಿ ಎಂಬ ಪಟ್ಟಣಗಳಲ್ಲಿ ಉಪಯೋಗದಲ್ಲಿದ್ದುವಾದುದರಿಂದ ಇವಕ್ಕೆ ಆಯಾ ಹೆಸರನ್ನು ಕೊಟ್ಟಿದ್ದಾರೆ. ಕೇಳಿಕೆಗಳಲ್ಲಿ ವಿಶೇಷ ಗುಣವನ್ನು ತೋರಿಸುವ ಭಾಗಗಳು ಅಷ್ಟಾಗಿ ಇಲ್ಲ. ಆದರೆ, ಮುಂದಣ ಶತಮಾನದಲ್ಲಿ ಇವುಗಳ ಆಧಾರದಮೇಲೆ ಅನೇಕ ಕೇಳಿಕೆಗಳು ಬರೆಯಲ್ಪಟ್ಟುವು. ಆಂಗ್ಲೇಯ ಸಾಹಿತ್ಯದಲ್ಲಿ ಮುಂದೆ ಬರುವ ನಾಟಕ ಸಮೂಹಕ್ಕೆ ಇವು ಭದ್ರವಾದ ಅಸ್ತಿವಾರವನ್ನು ಹಾಕಿದುವು.

ಹೀಗೆ ಆರಂಭವಾದ ದೃಶ್ಯ ಸಾಹಿತ್ಯವು ಹದಿನೈದನೆಯ ಶತಮಾನದಲ್ಲಿ ಮತ್ತಷ್ಟು ಅಭಿವೃದ್ಧಿಗೆ ಬಂದಿತು. ಪ್ರಾರಂಭದಲ್ಲಿ ಬೈಬಲಿನ ಕಥೆಯನ್ನು ಜನರಿಗೆ ತಿಳಿಸುವುದಕ್ಕಾಗಿ ರಚಿಸಿದ ದೃಶ್ಯಗಳಲ್ಲಿ ಜನರ ರಂಜನಕ್ಕೆಂದು ಬೈಬಲಿನಲ್ಲಿಲ್ಲದ ಕೆಲವು ಸಾಮಾನ್ಯ ವಿಷಯವನ್ನು ದೃಶ್ಯಕಾರರು ಸೇರಿಸುತ್ತಿದ್ದರಷ್ಟೆ. ಇದರಿಂದ ಬೈಬಲಿನ ಪಾತ್ರಗಳು ಇಲ್ಲದಿದ್ದರೂ ಅದರಲ್ಲಿಯ ನೀತಿಗಳನ್ನು ಆಪಾದಿಸುವ ದೃಶ್ಯಗಳು ಪ್ರಚಾರಕ್ಕೆ ಬರಲು ದಾರಿಯಾಯಿತು. ಬೈಬಲಿನ ಚರಿತ್ರೆಯನ್ನು ಕುರಿತ ದೃಶ್ಯಗಳಿಗೆ Mystery Play ಎಂದರೆ ಮಾಯದ ಕೇಳಿಕೆ–ಎಂದರೆ ಕ್ರೈಸ್ತನ ಜನ್ಮ ಜನ್ಮ ಮೊದಲಾದ ಅಗೋಚರ ವಿಷಯಗಳನ್ನು ಕುರಿತ ಕೇಳಿಕೆ—ಎಂದೂ, ಬೈಬಲಿನ ಪಾತ್ರಗಳಿಲ್ಲದೆ ನೀತಿಯನ್ನು ಬೋಧಿಸುವುದಕ್ಕೆ ಬರೆದ ದೃಶ್ಯಗಳಿಗೆ Moralities ಎಂದರೆ ನೀತಿ ದೃಶ್ಯಗಳೆಂದೂ ಹೆಸರಾಯಿತು. ಈ ನೀತಿ ದೃಶ್ಯಗಳಲ್ಲಿ ಗುಣಗಳೇ ಮೂರ್ತಿಮತ್ತಾಗಿ ಬಂದು ಮಾನವರಾದಂತೆ ಕಾಣಿಸಿ ವ್ಯವಹರಿಸುತ್ತಿದ್ದುವು.

ಇದಕ್ಕೆ ಮೊದಲೇ, ಪ್ರಾಯಶಃ ಮಾಯದ ಕೇಳಿಕೆಗಳಲ್ಲಿಯೇ ವಿನೋದಕ್ಕಾಗಿ ಕಥೆಗೆ ಯಾವ ವಿಧವಾದ ಸಂಬಂಧವೂ ಇಲ್ಲದ ಸನ್ನಿವೇಶಗಳನ್ನು ಸೇರಿಸುವುದಕ್ಕೆ ಪ್ರಾರಂಭವಾಗಿರಬೇಕು. ಹೀಗೆ ಸೇರಿಸಲ್ಪಟ್ಟ ಕಥಾಸಂಧಿಗೆ ಒಂದು ಉದಾಹರಣೆಯನ್ನು ಕೊಡಬಹುದು.

ಕ್ರಿಸ್ತನು ಹುಟ್ಟಿದಾಗ ಕೆಲವರು ಕುರುಬರು ಒಂದು ಪ್ರಭೆಯನ್ನು ಕಂಡಹಾಗೂ, ಆಕಾಶವಾಣಿಯೊಂದನ್ನು ಕೇಳಿದಹಾಗೂ ಈ ಪ್ರಭೆಯನ್ನು ನೋಡಿ ವಾಣಿಯನ್ನು ಕೇಳಿದುದರಿಂದ ಅವರು ಕ್ರಿಸ್ತನು ಹುಟ್ಟಿದ ಸ್ಥಳವನ್ನು ಹುಡುಕಿಕೊಂಡು ಹೋದಹಾಗೂ ಬೈಬಲಿನಲ್ಲಿ ಬರೆದಿದೆ. ಇದರಲ್ಲಿ ಕುರುಬರು ಎಂದು ಬಂದ ಮಾತ್ರಕ್ಕೆ ವೇಕ್‌ಫೀಲ್ಡ್ ದೃಶ್ಯಮಾಲೆಯ ಕೇಳಿಕೆಯಲ್ಲಿ ಕವಿಯು ಒಂದು ದೊಡ್ಡ ಹಾಸ್ಯದ ಸನ್ನಿವೇಶವನ್ನು ನಿರ್ಮಿಸಿದ್ದಾನೆ. ಈ ಕುರುಬರಲ್ಲಿ ಮ್ಯಾಕ್ ಎಂಬವನೊಬ್ಬನು ಕುರಿಗಳ ಕಳ್ಳನಿರುವನು. ಅವನು ಕುರಿಗಳನ್ನು ಮೇಯಿಸುವುದಕ್ಕೆಂದು ತನ್ನ ಜೊತೆಗಾರರೊಡನೆ ಇದ್ದು ಊಟಮಾಡಿ, ಅವರು ಮಲಗಿದಾಗ ತಾನೂ ಮಲಗಿದಂತೆ ಮಾಡಿ, ಅವರು ನಿದ್ರೆಯಲ್ಲಿದ್ದಾಗ ಎದ್ದು ಕೊಬ್ಬಿದ ಕುರಿಯೊಂದನ್ನು ತನ್ನ ಗುಡಿಸಲಿಗೆ ಕದ್ದೊಯ್ದು, ಅಲ್ಲಿ ಬಿಟ್ಟು ಹಿಂದಕ್ಕೆ ಬಂದು ಏನೂ ತಿಳಿಯದವನಂತೆ ಮಲಗಿ ನಿದ್ದೆ ಹೋಗುವನು. ಎದ್ದಾಗ ಒಂದು ಕುರಿ ಕಡಿಮೆಯಾಗಿರುವುದನ್ನು ಕಂಡು ಉಳಿದವರು ಇವನು ಕದ್ದಿರಬಹುದೆಂದು ಸಂದೇಹಪಟ್ಟು ಅವನ ಗುಡಿಸಲಿಗೆ ಹೋಗುವರು. ಮ್ಯಾಕನು ಇವರನ್ನು ಒಳಗೆ ಬರಹೇಳಿ ತನ್ನ ಹೆಂಡತಿಯು ಒಂದು ಮಗುವನ್ನು ಹೆತ್ತಿರುವಳೆಂದು ತಿಳಿಸಿ ಅವರನ್ನು ಉಪಚರಿಸುವನು. ಅವರು ತಮಗೊಂದು ಉಪಚಾರವೂ ಬೇಡವೆನ್ನುವರು. "ಏಕೆ?" "ನಮ್ಮ ಕುರಿಯೊಂದು ಹೋಯಿತು. ಅದರಿಂದ." ಅವರಲ್ಲೊಬ್ಬನು ಅಯ್ಯಾ ನೀನೇ ಕದ್ದಿರಬಹುದು ಎನ್ನುವನು. ಇನ್ನೊಬ್ಬನು ನೀನೋ ನಿನ್ನ ಹೆಂಡತಿಯೋ ಎನ್ನುವನು. ಮ್ಯಾಕನು "ನೀವೇ ಮನೆಯನ್ನೆಲ್ಲ ನೋಡಿ, ನಾನು ಆ ತಂಟೆಗೇ ಹೋಗಲಿಲ್ಲ. ನನ್ನ ಹೆಂಡತಿ ಹೆರಿಗೆಯ ನೋವಿನಿಂದ ಮಲಗಿದವಳು ಏಳಲೇ ಇಲ್ಲ" ಎನ್ನುವನು. "ಕದ್ದವರು ಕದ್ದೆನೆನ್ನುವರೇ" ಎಂದು ಒಬ್ಬನು ಹೇಳಲು, ಮ್ಯಾಕನ ಹೆಂಡತಿ ಜಿಲ್ಲಳು "ಯಾರು ಕದ್ದವರು? ಹೋಗು ಆಚೆಗೆ" ಎನ್ನುವಳು. ಮ್ಯಾಕನು "ನೋಡಿದಿರೊ? ನಾನು ಹೇಳಿದೆ. ಅವಳಿಗೆ ಹೆರಿಗೆಯ ನೋವು" ಎನ್ನುವನು. ಅವನ ಹೆಂಡತಿ "ಹೋಗಿ, ನಮ್ಮ ಮನೆಯನ್ನು ಬಿಟ್ಟು; ನನ್ನ ಮಗುವಿನ ಹತ್ತಿರ ಬರಬೇಡಿ" ಎನ್ನುವಳು. ಗಂಡನು "ಅವಳ ಕಷ್ಟವನ್ನು ನೋಡಿದರೆ ಕಣ್ಣಿನಲ್ಲಿ ನೀರು ಸುರಿಸೀರಿ. ಇಂಥ ಸಮಯದಲ್ಲಿ ಒಂದು ತೊಂದರೆ ಕೊಡುವುದು ಸರಿಯಲ್ಲವೆಂದು ತೋರುತ್ತದೆ. ನಾನು ಹೆಚ್ಚಾಗಿ ಹೇಳಲಾರೆನು" ಎನ್ನುವನು. ಹೆಂಡತಿಯು "ಏನೇನೋ ಮಾತು, ನಾನು ನಿಮ್ಮ ಕುರಿಯನ್ನು ಕದ್ದಿದ್ದರೆ ನಾನು ಈ ತೊಟ್ಟಿಲಲ್ಲಿರುವ ಈ ಮಗುವನ್ನು ತಿಂದ ಆಣೆ" ಎನ್ನುವಳು. ಗಂಡನು "ಸಾಕು ಬಿಡು ಹೆಂಗಸೆ, ಸುಮ್ಮನೆ

ಅಳಬೇಡ. ಅತ್ತರೆ ಮಗುವಿಗೆ ಒಳ್ಳೆಯದಲ್ಲ. ನಾನು ನೋಡಲಾರೆ" ಎನ್ನುವನು. ಕುರುಬರಲ್ಲೊಬ್ಬನು "ಕುರಿ ಹೋಯಿತು ನಡೆಯಿರಿ" ಎನ್ನುವನು. ಮತ್ತೊಬ್ಬನು "ಎಲ್ಲೆಲ್ಲಿಯೂ ಇರುವಹಾಗೆ ಇಲ್ಲ" ಎನ್ನುವನು. ಎಲ್ಲರೂ ಸಮಾಧಾನ ಚಿತ್ತರಾಗಿ ಮ್ಯಾಕನಿಗೆ ಹೇಳಿ ಹೊರಟುಹೋಗುವರು. ಹೊರಗೆ ಹೋದ ಮೇಲೆ ಒಬ್ಬನು "ಅಯ್ಯೋ! ಮಗು ಹುಟ್ಟಿದ ಮನೆಗೆ ಹೋಗಿ ಮಗುವಿನ ಕೈಯಲ್ಲಿ ಏನನ್ನೂ ಇಡದೆ ಬಂದೆವಲ್ಲಾ" ಎನ್ನುವನು. ಮತ್ತೊಬ್ಬನು ಒಳಗೆ ಹೋಗಿ "ಮ್ಯಾಕ್! ಮಗುವಿಗೆ ಏನನ್ನೂ ಕೊಡದೆ ಹೊರಟು ಹೋಗುತ್ತಿದ್ದೆವು. ಈ ಹಣವನ್ನು ಅದರ ಕೈಯಲ್ಲಿಡುತ್ತೇನೆ, ಬಾ" ಎನ್ನುವನು. ಮ್ಯಾಕ್ "ಬೇಡಬೇಡ, ಮಗು ನಿದ್ದೆ ಹೋಗುತ್ತಿದೆ." ಕುರುಬ "ಕಣ್ಣು ತೆರೆದಿರುವಹಾಗಿದೆ." ಮ್ಯಾಕ್ "ಅದು ಎದ್ದರೆ ಇನ್ನು ಅಳುತ್ತದಪ್ಪಾ. ನೀನು ಕಾಸು ಕೊಡಬೇಡ ನಡ." ಈ ವೇಳೆಗೆ ಇನ್ನಿಬ್ಬರು ಕುರುಬರು ಒಳಕ್ಕೆ ಹೋಗುವರು. ಅವರಲ್ಲೊಬ್ಬನು ಮಗುವಿಗೆ ಒಂದು ಮುತ್ತು ಕೊಡುತ್ತೇನೆಂದು ಹೊದಿಕೆಯನ್ನು ತೆಗೆಯುವನು. ಅಲ್ಲಿರುವುದು ಕಳವಾದ ಕುರಿ. ಅದನ್ನು ನೋಡಿ ಕುರುಬನು "ಅಬ್ಬ!! ಇದು ಎಷ್ಟು ಉದ್ದದ ಮೂಸುಡಿಯಪ್ಪಾ!" ಎನ್ನುವನು. ಇನ್ನೊಬ್ಬ "ಏನು, ನಮ್ಮ ಕುರಿ ಇದ್ದಹಾಗಿದೆ." ಮ್ಯಾಕ್ "ಸಾಕುಬಿಡಿ, ಅದು ನನ್ನ ಮಗು; ಅವಳು ಹೆತ್ತದ್ದು." ಇದಾದಮೇಲೆ ಕುರುಬರು ಕಳ್ಳನಿಗೆ ಸ್ವಲ್ಪ ತಂಟೆಮಾಡಿ, ಆ ವೇಳೆಗೆ ದೇವದೂತನು ಕ್ರಿಸ್ತನು ಹುಟ್ಟಿದ್ದನ್ನು ಸಾರಲು ಕ್ರಿಸ್ತನನ್ನು ನೋಡುವುದಕ್ಕಾಗಿ ಹೊರಡುವರು.

ಮಾಯೆಯ ಕೇಳಿಕೆಗಳಲ್ಲಿ ಬೈಬಲಿನ ಕಥೆಗೆ ಇಂಥ ವಿಷಯಗಳು ಸೇರುತ್ತಿರುವಲ್ಲಿ ನೀತಿ ದೃಶ್ಯಗಳಲ್ಲಿ ಗುಣಗಳೇ ಮಾತನಾಡುವಂತೆಯೂ, ಕೆಲಸ ಮಾಡುವಂತೆಯೂ ವ್ಯವಹಾರವು ವಾಡಿಕೆಗೆ ಬಂದಿತು. ಈ ಮಾದರಿಯ ಕಥೆಯೂ ಮೇಲೆ ಹೇಳಿದ ಕಥೆಯಷ್ಟು ಸ್ವಾರಸ್ಯವಾಗಿರುತ್ತಿರಲಿಲ್ಲ. ಹದಿನೈದನೆಯ ಶತಮಾನದ್ದೆಂದು ಹೇಳಬಹುದಾದ ನೀತಿ ದೃಶ್ಯಗಳಲ್ಲಿ "ಅಧ್ಯವಸಾಯ" ಎಂಬುದೂ, "ಮನಸ್ಸೂ ಚಿತ್ತವೂ ಬುದ್ಧಿಯೂ" ಎಂಬುದೂ, "ಮನುಜ ವರ್ಗ" ಎಂಬುದೂ ಇವೆ. ಇವುಗಳಲ್ಲಿ ಮೊದಲನೆಯದರಲ್ಲಿ ದುಷ್ಟ ಸತ್ವಗಳು ಎಲ್ಲವೂ ಸೇರಿ ಸಭೆ ಮಾಡಿದಂತೆಯೂ, ಮನುಜನು ಹೊಸದಾಗಿ ಸೃಷ್ಟಿಸಲ್ಪಟ್ಟು ಬಂದಂತೆಯೂ, ಆಗ ದುಸ್ಸತ್ವವೂ, ಸತ್ಸತ್ವವೂ ಅವನ ಬಳಿ ಬಂದಂತೆಯೂ, ಅವನು ದುಸ್ಸತ್ವವನ್ನು ಹಿಂಬಾಲಿಸಿದಂತೆಯೂ, ಅದು ಅವನನ್ನು ಪ್ರಾಪಂಚಿಕ ವಿಷಯಕ್ಕೆ ತರಲು ಮನಃ, ಅವಿವೇಕ, ಹಿಂದೆ ಬಯ್ಯುವುದು, ವಿಷಯಸುಖ ಎಂಬುವು ಅವನ ಸ್ನೇಹಿತರಾದಂತೆಯೂ, ಸತ್ಸತ್ವವು ಆಮೇಲೆ ತಪ್ಪೊಪ್ಪಿಗೆ, ಕ್ಷಮೆ, ಪಶ್ಚಾತ್ತಾಪ ಇವುಗಳನ್ನು ಅವನ ಸಹಾಯಕ್ಕೆ ಕರೆತರಲು ಸತ್ಸತ್ವದ ಸೈನ್ಯಕ್ಕೂ ದುಸ್ಸತ್ವದ ಸೈನ್ಯಕ್ಕೂ ಯುದ್ಧವಾಗಿ ಮೊದಲು ಸತ್ಸತ್ವಗಳು ಗೆದ್ದು ಆಮೇಲೆ ಇತರ ಗುಣಗಳು ಬರಲು ಸೋತು ಕೊನೆಗೆ ಕರುಣೆಯ

ಪುನರಾಂತರ ಮನುಜನಿಗೆ ಮೋಕ್ಷವು ಬಂದಹಾಗೂ ಕಥೆಯಲ್ಲಿ ಉಕ್ತವಾಗಿದೆ.

ಮೊದಮೊದಲು ಕೇಳಿಕೆಗಳಲ್ಲಿ ವಿನೋದಕ್ಕಾಗಿ ಸೇರಿಸುತ್ತಿದ್ದ ಪ್ರಾಕೃತ ಜನರ ಕಳಪೆ ಕಥೆಯಂತಹ ಕಥೆಗಳಿಂದ ಬರಬರುತ್ತ ಬೈಬಲಿನ ಕಥೆಗಳನ್ನು ಬಿಟ್ಟು, ಬರಿಯ ವಿನೋದದ ಕಲ್ಪಿತ ವಿಷಯಗಳನ್ನು ಬರೆಯುವದು ವಾಡಿಕೆಯಾಯಿತೆಂದು ತೋರುವದು. ಹೀಗೆಯೇ ನೀತಿಬೋಧಕ ದೃಶ್ಯಗಳಲ್ಲಿ ಮೊದಲು ಗುಣಗಳು ತಾವೇ ಬಂದು ಮಾತನಾಡುತಿದ್ದುದು, ಆಮೇಲೆ ಆಯಾ ಗುಣಗಳನ್ನುಳ್ಳ ಜನರು ಬಂದು ಮಾತನಾಡುವಂತೆ ಬರೆಯುವದು ವಾಡಿಕೆಯಾಯಿತು. ಹೀಗೆ ಈ ಎರಡು ಪ್ರವೃತ್ತಿಗಳಿಂದ ಬೈಬಲಿಗೆ ಸಂಬಂಧಪಡದ ಕಥೆಗಳನ್ನು, ಗುಣಗಳ ಹೆಸರನ್ನು ಬಿಟ್ಟು ವಿನೋದಕ್ಕಾಗಿಯೂ ನೀತಿಯನ್ನು ಬೋಧಿಸುವದಕ್ಕಾಗಿಯೂ ರಚಿಸಿ ಆಡುವದು ವಾಡಿಕೆಗೆ ಬಂತು. ಈ ವೇಳೆಗೆ ಕಾಲಾನುಗುಣವಾದ ಪರಿವರ್ತನೆಗಳಿಂದ ಬಂದು ರಾತ್ರಿಯೆಲ್ಲ ಕೇಳಿಕೆಗಳನ್ನು ಸಾಲುಸಾಲಾಗಿ ಆಡುವ ಪದ್ಧತಿಯು ತಪ್ಪಿಹೋಗಿ ಅಲ್ಲಲ್ಲಿ ದೊಡ್ಡ ಊರುಗಳಲ್ಲಿ ಚಾವಡಿಗಳಲ್ಲೋ ಅಥವಾ ಯಾರಾದರೂ ದೊಡ್ಡಮನುಷ್ಯರ ಮನೆಗಳಲ್ಲೋ ಆಟಗಳನ್ನಾಡಿ ತೋರಿಸುವದು ಪ್ರಾರಂಭವಾಯಿತು. ಬೈಬಲಿನ ಕಥೆಯನ್ನೋ ಅಥವಾ ನೀತಿಯನ್ನೋ ಬೋಧಿಸುವದಕ್ಕೆಂದು ಆರಂಭಿಸಲ್ಪಟ್ಟುದರಿಂದ ಈ ಹೊಸ ಮಾದರಿಯ ದೃಶ್ಯದಲ್ಲಿಯೂ ಮೊದಮೊದಲು ಯಾವುದಾದರೊಂದು ನೀತಿಯು ಸೂಚಿಸಲ್ಪಡುತ್ತಿತ್ತು. ಬರಬರುತ್ತ ಕಥೆಯ ಸ್ವಾರಸ್ಯಕ್ಕೆ ಹೆಚ್ಚು ಗಮನ ಬಂದು ನೀತಿಬೋಧನೆಯು ದ್ವಿತೀಯ ಲಕ್ಷಣವಾಯಿತು. ಈ ಹೊಸ ರೀತಿಯ ದೃಶ್ಯಗಳನ್ನು ಆಗ "ಇಂಟರ್‌ಲೂಡ್" ಎಂದರೆ ಪ್ರವೇಶಕಗಳೆಂದು ಕರೆಯುತ್ತಿದ್ದರು. ಇವುಗಳಲ್ಲಿ ಸೈತಾನನನ್ನು ದುಷ್ಟರಿ ತೊಂದರೆಪಡಿಸುವಂತೆಯೂ, ಸೈತಾನನು ಕಷ್ಟಪಡುವಂತೆಯೂ ಕೊನೆಗೆ ದುಷ್ಟರಿಯು ನರಕಕ್ಕೆ ಕೊಂಡುಹೋಗುವಂತೆಯೂ ವರ್ಣಿಸುವದರಲ್ಲಿ ತಮಾಷೆಯ ಭಾಗಗಳನ್ನು ಗ್ರಂಥಕರ್ತರು ಸೇರಿಸುತ್ತಾರೆ. ಕೊನೆಕೊನೆಗೆ ವಿನೋದದ ಆಟಗಳಲ್ಲಿ ತಮಾಷೆ ಮಾಡುವದಕ್ಕಾಗಿ ಬಂದು ಪಾತ್ರವು ಸೇರುವದು ಪದ್ಧತಿಯಾಯಿತು. ತಾತ್ಕಾಲಿಕವಾದ ಕೆಲವು ಪ್ರಸಂಗಗಳೂ ಈ ದೃಶ್ಯಗಳಲ್ಲಿ ಚರ್ಚೆಗೆ ಬರುವು. ಆಗ ಕ್ರೈಸ್ತಮತದ ಸಂಸ್ಕಾರವೊಂದು ನಡೆಯುತ್ತಲಿತ್ತು. ಕೆಲವು ಪ್ರವೇಶಕಗಳಲ್ಲಿ ಮತ ಸಂಸ್ಕಾರವನ್ನು ಪ್ರಶಂಸೆ ಮಾಡಿಯೂ ಮತ್ತೆ ಕೆಲವುದರಲ್ಲಿ ಮತ ಸಂಸ್ಕಾರವನ್ನು ದೂಷಿಸಿಯೂ ಭಾಷಣಗಳಿವೆ. ಪ್ರವೇಶಕಗಳನ್ನು ದೊಡ್ಡಮನುಷ್ಯರ ಮನೆಗಳಲ್ಲಿ ಆಡುತ್ತಿದ್ದುದರಿಂದ ಪ್ರೇಕ್ಷಕರ ಇಷ್ಟಕ್ಕೆ ಅನುಸಾರವಾಗಿ ಈ ಅಭಿಪ್ರಾಯಗಳು ಸೇರಿಸಲ್ಪಡುತ್ತಿದ್ದುವೆಂದು ತೋರುತ್ತದೆ. ಈ ದೃಶ್ಯಗಳನ್ನು ಔತಣದ ಕಾಲಗಳಲ್ಲಿ, ಹಬ್ಬ ಮೊದಲಾದ ಕಾಲಗಳಲ್ಲಿ ಊಟಕ್ಕೆ ಮೊದಲೋ, ಊಟವಾದ

ಮೇಲೋ, ಸ್ವಲ್ಪ ಹೊತ್ತು ಆಡುತ್ತಿದ್ದಂತೆಯೂ, ಅವಕಾಶವಿದ್ದರೆ ಮುಗಿಸುವುದು ಇಲ್ಲದಿದ್ದರೆ ಎಷ್ಟೋ ಅಷ್ಟಕ್ಕೆ ನಿಲ್ಲಿಸುವುದು ಪದ್ಧತಿಯಾಗಿದ್ದಂತೆಯೂ ಸರ್ ಥಾಮಸ್ ಮೋರಿನ ಹೆಸರು ಬರುವ ಒಂದು ಪ್ರವೇಶಕದಿಂದ ಕಂಡುಬಂದಿದೆ. ಆಗಣ ಕವಿಗಳಲ್ಲಿ ಪ್ರಸಿದ್ಧನಾದ ಸ್ಕೆಲ್ಟನ್ ಕವಿಯು "ವೈಭವ"ವೆಂಬ ಹೆಸರಿನ ಒಂದು ನೀತಿಬೋಧಕ ಪ್ರವೇಶಕವನ್ನು ಬರೆದನು. ನೀತಿಯನ್ನು ಬೋಧಿಸುವುದಲ್ಲದೆ ಈ ಪ್ರವೇಶಕಗಳಲ್ಲಿ ಆಗ ಹೊಸದಾಗಿ ತಿಳಿದುಬರುತ್ತಿದ್ದ ಭೌತಿಕಶಾಸ್ತ್ರ ವಿಚಾರಗಳನ್ನು ಕೆಲವು ವೇಳೆ ಬೋಧಿಸುತ್ತಿದ್ದುದು ಕಂಡುಬಂದಿದೆ. ಪ್ರಾಯಶಃ ಇವು ಪಾಠಶಾಲೆಗಳಲ್ಲಿ ಹುಡುಗರಿಗಾಗಿ ರಚಿಸಲ್ಪಟ್ಟ ಪ್ರವೇಶಕಗಳೆಂದು ಹೇಳಬಹುದು. ಈ ರೀತಿಯ ಪ್ರವೇಶಕಗಳಲ್ಲಿ ಚತುರ್ಭೂತಗಳೆಂಬ ಪ್ರವೇಶಕವು ಪ್ರಸಿದ್ಧವಾದುದು. ಇನ್ನು ಕೆಲವುದರಲ್ಲಿ ಬೇರೆ ಬೇರೆ ಜಾತಿಯ ಜನರು ಬಂದು ತಮ್ಮ ತಮ್ಮ ಜಾತಿಯ ಸದ್ಗುಣಗಳನ್ನು ವರ್ಣಿಸಿ ಕೊನೆಗೆ ಎಲ್ಲರೂ ಮರ್ಯಾದೆಮಾಡಿ ಹೊರಟು ಹೋಗುವರೆಂಬುದು ಒಂದು. ಇದು ಜನರಲ್ಲಿ ಹೊಸದಾಗಿ ಅಂಕುರವಾಗುತ್ತಿದ್ದ ಸದಭಿಮಾನವನ್ನು ಸೂಚಿಸುವುದು. ಇವುಗಳಲ್ಲೆಲ್ಲ ನೀತಿಯನ್ನು ಬೋಧಿಸಬೇಕೆಂಬ ಅಭಿಪ್ರಾಯವು ವ್ಯಕ್ತವಾಗುವುದು. ಎಲ್ಲಕ್ಕೂ ಮೊದಮೊದಲಲ್ಲಿ ಬರೆಯಲ್ಪಟ್ಟ ಪ್ರವೇಶಕಗಳು, "ಋತುಗಳ ಕೇಳಿಕೆ" ಮತ್ತು "ಥರ್ಸೈಟೀಸ್" ಎಂಬುವು. "ನಾಲ್ಕು 'ಪ'ಕಾರಗಳು," "ಜೋಹಾನನ ಕೇಳಿಕೆ" ಎಂಬ ದೃಶ್ಯಗಳು ಪ್ರವೇಶಕಗಳಲ್ಲಿ ಕೊನೆಕೊನೆಗೆ ಬರೆಯಲ್ಪಟ್ಟುವು. ಇವುಗಳನ್ನು ಬರೆದವನು ಜಾನ್ ಹೇವುಡ್ ಎಂಬಾತನು. ಇವುಗಳಲ್ಲಿ ನೀತಿಯನ್ನು ಸೂಚಿಸಬೇಕೆಂಬ ಭಾವವಾಗಲಿ ವ್ಯವಹಾರ ಸಂಭಾವ್ಯವಸ್ತುವನ್ನು ಬಿಟ್ಟು ಗುಣದುರ್ಗುಣಗಳಲ್ಲಿ ಗುಣಗಳೇ ಜಯಿಸುವುವೆಂದು ಆಪಾದಿಸುವ ಉದ್ದೇಶವಾಗಲಿ ಮುಂದಾಗಿಲ್ಲ. "ನಾಲ್ಕು 'ಪ'ಕಾರಗಳ"ಲ್ಲಿ ಒಬ್ಬ ಯಾತ್ರಿಕನೂ, ಒಬ್ಬ ಪರ್ಡೀಯನೂ, ಒಬ್ಬ ವೈದ್ಯನೂ, ಒಬ್ಬ ಪಸುಬೆಯುವನೂ ಸೇರಿ, ಯಾರು ದೊಡ್ಡ ಸುಳ್ಳನ್ನು ಹೇಳುವರೆಂದು ಪಂಥ ಕಟ್ಟಿ ಒಬ್ಬೊಬ್ಬನೂ ಒಂದೊಂದು ಸುಳ್ಳನ್ನು ಹೇಳುವರು. ಯಾತ್ರಿಕನು ತನ್ನ ದೇಶಯಾತ್ರೆಯಲ್ಲೆಲ್ಲ ಕೋಪಿಸಿಕೊಂಡಿದ್ದ ಹೆಂಗಸನ್ನೇ ನೋಡಿಲ್ಲವೆಂದು ಹೇಳಿ ಈ ಸುಳ್ಳು ಸಾತಿಸಿಂದ ಪಂಥವನ್ನು ಗೆಲ್ಲುವನು. ಜೋಹಾನನ ಕೇಳಿಕೆಯಲ್ಲಿ ಜೋಹಾನನ ಹೆಂಡತಿಯೂ, ಗ್ರಾಮದ ಅರ್ಚಕನೂ ಜೋಹಾನನಿಗೆ ಮೋಸಮಾಡಿದ ವಿಷಯವು ವ್ಯವಹರಿಸಲ್ಪಟ್ಟಿದೆ.

ಆಂಗ್ಲ ಸಾಹಿತ್ಯದಲ್ಲಿ ಇನ್ನು ಮುಂದೆ ಬಂದ ನಾಟಕಗಳಲ್ಲಿ ಕೆಲವನ್ನು ಶೋಕಪ್ರಧಾನಗಳೆಂದೂ ಕೆಲವನ್ನು ಹರ್ಷಪ್ರಧಾನಗಳೆಂದೂ ಕೆಲವನ್ನು ಐತಿಹಾಸಿಕಗಳೆಂದೂ ಭಾಗ ಮಾಡುವುದು ಇಂಗ್ಲಿಷ್ ಸಾಹಿತ್ಯದಲ್ಲಿ ಪದ್ಧತಿಯಾಗಿದೆ. ಪ್ರವೇಶಕಗಳು ಈ ಸ್ಥಿತಿಗೆ ಬಂದಾಗ್ಗೆ ಹರ್ಷಪ್ರಧಾನ ನಾಟಕಗಳ ಆರಂಭವು ಸಮೀಪಿಸಿದೆಯೆಂದು ಹೇಳಬಹುದು. ಇದೇ ಕಾಲದಲ್ಲಿ ಐತಿಹಾಸಿಕ

ನಾಟಕಗಳಿಗೆ ಬಿಷಪ್ ಬೇಲ್ ಎಂಬಾತನು ಆರಂಭ ಮಾಡಿದನು. ಈತನು ಮೊದಲು ಮಾದರಿಯ ಗುಣಗಳು ಪಾತ್ರವಾಗಿರುವ ಕೆಲವು ನೀತಿ ಬೋಧಕ ದೃಶ್ಯಗಳನ್ನು ಬರೆದನು. ಇವುಗಳ ಜೊತೆಗೆ ಬರೆದ ಐತಿಹಾಸಿಕ ದೃಶ್ಯವು ಜಾನ್ ದೊರೆಯನ್ನು ಕುರಿತದ್ದು. ಇಂಗ್ಲೆಂಡಿನ ಸ್ವಾತಂತ್ರ್ಯವನ್ನು ರಕ್ಷಿಸಿದವನೆಂದು ಅದು ಅವನನ್ನು ಮುಖ್ಯಪಾತ್ರವಾಗಿ ಉಳ್ಳದ್ದಾಗಿದೆ. ಬೇಲನ ಇತರ ದೃಶ್ಯಗಳು ಗುಣಗಳನ್ನು ಪಾತ್ರಗಳನ್ನಾಗಿ ವ್ಯವಹರಿಸುವಂತೆಯೇ ಈ ದೃಶ್ಯದಲ್ಲಿಯೂ ಐತಿಹಾಸಿಕಗಳಾದ ಪಾತ್ರಗಳು ಗುಣಗಳಿಗೆ ಬದಲಾಗಿ ನಿಂತಿವೆ. ಎಂದರೆ, ಮೋಸವೆಂಬ ಗುಣವನ್ನು ಪಾತ್ರವೆಂದು ಹೇಳುವುದಕ್ಕೆ ಬದಲಾಗಿ ಮತೀಯನು ಮೋಸ ಎಂಬ ಪಾತ್ರವು ಇರುವುದು, ಮತಾಧಿಕಾರಿ ಧನಾರ್ಜನೆ ಎಂಬ ಪಾತ್ರವು ದುರಾಶೆಯನ್ನು ಸೂಚಿಸುವುದು. ಅದರೆ ಒಟ್ಟಿನಲ್ಲಿ ಗುಣಗಳನ್ನು ಹಾಕಿ ಕಥೆಯನ್ನು ಹೇಳುವುದಕ್ಕೆ ಬದಲಾಗಿ ಗುಣಿಗಳಾದ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಬರೆಯಬಹುದೆಂದು ಈತನು ತೋರಿಸಿದಹಾಗಾಯಿತು. ಬಿಷಪ್ ಬೇಲನು ೧೫೬೩ನೆಯ ಇಸವಿಯಲ್ಲಿ ತೀರಿಹೋದನು.

ಈ ವೇಳೆಗೆ ಹರ್ಷಪ್ರಧಾನ ನಾಟಕಗಳಲ್ಲಿ ಮೊದಲನೆಯದಾದ ರಾಲ್ಫ್ ರಾಯಿಸ್ಟರ್ ಡಾಯಿಸ್ಟರ್ ಎಂಬ ನಾಟಕವನ್ನು ನಿಕೋಲಾಸ್ ಯೂಡಾಲ್ ಎಂಬಾತನು ಬರೆದಿದ್ದನು. ನಿಕೋಲಾಸ್ ಯೂಡಾಲನು ಲ್ಯಾಟಿನ್ ಮತ್ತು ಗ್ರೀಕನ್ನು ಚೆನ್ನಾಗಿ ಬಲ್ಲ ಉಪಾಧ್ಯಾಯನು. ಮೇಲೆ ಹೇಳಿದ ಕೆಲವು ಪ್ರವೇಶಕಗಳಲ್ಲಿ ಇಟಲಿಯ ಪ್ಲೌಟಸ್ ಎಂಬ ಹಾಸ್ಯಪ್ರಧಾನ ನಾಟಕಕಾರನ ದೃಶ್ಯಗಳಲ್ಲಿಯ ಧ್ವನಿಯು ಮೊದಲೇ ತೋರಿತ್ತು. ಯೂಡಾಲನ ನಾಟಕದಲ್ಲಿ ಇಟಲಿಯ ಟೆರೆನ್ಸ್ ಕವಿಯ ಹಾಸ್ಯದ ಧ್ವನಿಯೂ ಇದೆ. ದೃಶ್ಯವನ್ನು ಅಂಕಗಳಾಗಿ ವಿಭಾಗಿಸತಕ್ಕದ್ದಕ್ಕೆ ಇದೇ ಮೊದಲು. ಇದು ಮೊದಲನೆಯ ನಾಟಕವಾದುದರಿಂದ ಇದರ ಕಥೆಯನ್ನು ಸೂಕ್ಷ್ಮವಾಗಿ ಸೂಚಿಸಬಹುದು. ಡಾಯಿಸ್ಟರನು ಐಶ್ವರ್ಯಶಾಲಿ, ಆದರೆ ಜಿಪುಣನು. ಕಂಡ ಹೆಂಗಸರೆಲ್ಲ ತನ್ನನ್ನು ಮೋಹಿಸುವರೆಂದು ಅವನ ಭಾವನೆ. ಗ್ಯಾಪಿನ್ ಎಂಬವನ ಸ್ತ್ರೀಯನ್ನು ಪಡೆಯಬೇಕೆಂದು ಇವನು ಪ್ರಯತ್ನಿಸುವನು. ರಾಲ್ಫನನ್ನು ಹಾಸ್ಯಮಾಡುತ್ತ, ಅವನನ್ನು ಹೊಂದಿಕೊಂಡು, ಅವನಿಂದ ಪ್ರಯೋಜನಗಳನ್ನು ಪಡೆಯುತ್ತ, ಆಟದಲ್ಲಿ ವಿನೋದಕ್ಕೆ ಮುಖ್ಯನಾದ ಮ್ಯಾತ್ಯು ಎಂಬುವನೊಬ್ಬನಿದ್ದಾನೆ. ಕೊನೆಗೆ ಡಾಯಿಸ್ಟರಿಗೆ ಪರಿಭವವು ಉಂಟಾಗುವುದು. ಪ್ರವೇಶಕಗಳಲ್ಲಿ ಸೈತಾನನಿಗೆ ತೊಂದರೆಯನ್ನುಂಟುಮಾಡುತ್ತ ಹಾಸ್ಯಕ್ಕೆ ಕಾರಣವಾಗುತ್ತಿದ್ದ ದುಷ್ಟರಿಗೆ ಬದಲು ಇಲ್ಲಿ ಮ್ಯಾತ್ಯು ಬಂದಿದ್ದಾನೆ. ಈ ಪಾತ್ರವೇ ಷೇಕ್ಸ್‌ಪಿಯರನ ನಾಟಕಗಳಲ್ಲಿ ವಿದೂಷಕನಾಗುವುದು. ಈ ಮೊದಮೊದಲ ಹರ್ಷಪ್ರಧಾನ ನಾಟಕಗಳಲ್ಲಿ ಮುಖ್ಯವಾದುದು "ಗಟ್ಟನ ಅಮ್ಮನ ಸೂಜಿ" ಎಂಬುದು ಇನ್ನೊಂದು. ಗಟ್ಟನ್ನಳು ತನ್ನ ಗಂಡನ ಷರಾಯನ್ನು ಹೊಲಿದು ಸೂಜಿಯನ್ನು ಕಳೆದುಕೊಂಡಳೆಂದೂ, ಸೂಜಿಗಾಗಿ ಐದಾರು ಜನ ಎಲ್ಲೆಲ್ಲೋ ಹುಡುಕಿದರೆಂದೂ, ಕೊನೆಗೆ

ಅವಳ ಗಂಡನು ಪಾಯಜಾಮನ್ನು ಹಾಕಿಕೊಂಡು ಕುಳಿತಾಗ ಸೂಜಿಯು ಚುಚ್ಚಿ ಅದು ಇರುವ ಸ್ಥಳವು ತಿಳಿಯಿತೆಂದೂ ಈ ನಾಟಕದ ವಸ್ತು. ಇದನ್ನು ಸ್ಟಿಲ್ ಎಂಬಾತನು ಬರೆದನೆಂದು ಈವರೆಗೆ ತಿಳಿದಿತ್ತು. ಈಚೆಗೆ ಸ್ಟೀವನ್ಸ್ ಎಂಬಾತನು ಬರೆದನೆಂದು ತಿಳಿಯಬಂದಿದೆ. ವಿಲಿಯಂ ಹುನಿಸ್ ಎಂಬ ಕವಿಯು ಬರೆದುದೆನ್ನುವ ಬೈಬಲಿಗೆ ಸಂಬಂಧಪಟ್ಟ ಜೇಕಬ್-ಈಸಾವರ ಚರಿತ್ರೆಯೆಂಬುದು ಈ ಕಾಲದ ಇನ್ನೊಂದು ಹರ್ಷಪ್ರಧಾನ ನಾಟಕವು; ಗರ್ಟನ್ ಅಮ್ಮನ ಸೂಜಿ ಎಂಬುದು ೧೫೬೬ರಲ್ಲಿ ಮೊದಲು ಆಡಲ್ಪಟ್ಟಿತು. ಹುನಿಸಿನ ನಾಟಕವು ೧೫೬೮ರಲ್ಲಿ ಅಚ್ಚಾದಂತೆ ತೋರುತ್ತದೆ. ಆದುದರಿಂದ ಇವೆರಡೂ ಪ್ರಾಯಶಃ ಎಲಿಜಬೆತ್ ರಾಣಿಯ ಸಿಂಹಾಸನಾರೋಹಣಾನಂತರ ರಚಿತವಾದುದೆಂದು ತೋರುವುದು. ಆದರೆ ರೀತಿಯಲ್ಲಿ ಅವು ಅವಳು ಬರುವುದಕ್ಕೆ ಮೊದಲು ಬರೆಯಲ್ಪಟ್ಟ ಡಾಯಿಸ್ಟರ್ ನಾಟಕವನ್ನು ಹೋಲುವುವು. ಆ ರಾಣಿಯು ಸಿಂಹಾಸನವನ್ನೇರುವ ವೇಳೆಗೆ ನಾಟಕವು ಈ ಸ್ಥಿತಿಗೆ ಬಂದಿತ್ತು.

ಐತಿಹಾಸಿಕ ನಾಟಕಗಳೂ, ಹರ್ಷಪ್ರಧಾನ ನಾಟಕಗಳೂ ಹಿಂದಣ ಪ್ರವೇಶಕಗಳಿಂದ ಸ್ವಭಾವವಾಗಿ ಉದ್ಭವವಾದುವೆಂದು ಹೇಳಬಹುದು. ಹರ್ಷಪ್ರಧಾನ ನಾಟಕಗಳಲ್ಲಿ ಇಟಲಿಯ ಸಾಹಿತ್ಯದ ಪ್ರಭಾವವು ಕಂಡುಬರುವುದಾದರೂ ಅವಕ್ಕೂ ಹಿಂದಣ ಪ್ರವೇಶಕಗಳಿಗೂ ಅಂತರವು ಅಷ್ಟು ಹೆಚ್ಚಾಗಿಲ್ಲ. ಆದರೆ ಇಟಲಿಯ ನಾಟಕದ ಆದರ್ಶವಿಲ್ಲದೆ ಇಂಗ್ಲೆಂಡಿನ ಶೋಕಪ್ರಧಾನ ನಾಟಕವು ಈಗ ಪ್ರಾರಂಭವಾಗುತ್ತಿರಲಿಲ್ಲವೆಂದು ತೋರುತ್ತದೆ. ಪುನರಭ್ಯುತ್ಥಾನದ ಪ್ರಭಾವದಿಂದ ಆಂಗ್ಲೇಯ ವಿದ್ಯಾವಂತರಿಗೆ ಇಟಲಿಯ ಕಾವ್ಯಗಳ ಪರಿಚಯವೂ ಗ್ರೀಕರ ಕಾವ್ಯಗಳ ಪರಿಚಯವೂ ವಿಶೇಷವಾಗಿ ಉಂಟಾಗಿತ್ತು. ಗ್ರೀಕರ ಶೋಕಪ್ರಧಾನ ನಾಟಕಗಳು ಸರ್ವೋತ್ಕೃಷ್ಟವಾದರೂ, ಈ ಕಾಲದಲ್ಲಿ ಇಂಗ್ಲೆಂಡಿನ ಕವಿಗಳಿಬ್ಬರು ಇಟಲಿಯ ಕವಿಗಳಲ್ಲಿ ಹೆಚ್ಚು ಬಳಕೆಯಿದ್ದ ಕಾರಣದಿಂದ ಅಲ್ಲಿಯ ನಾಟಕಕಾರ ಸೆನೆಕ ಎಂಬವನ ನಾಟಕಗಳನ್ನು ಮೇಲುಪಙ್ಕ್ತಿಯಾಗಿಟ್ಟುಕೊಂಡು ಒಂದು ನಾಟಕವನ್ನು ಬರೆದರು. ಕವಿಗಳ ಹೆಸರು ಸ್ಯಾಕ್ವಿಲ್ ಮತ್ತು ನಾರ್ಟನ್. ಕಥೆಯಲ್ಲಿ ಬ್ರಿಟನ್ನಿನ ಗಾರ್ಬೊಡಕ್ ಎಂಬ ದೊರೆಯು ತನ್ನ ಮಕ್ಕಳಿಬ್ಬರಿಗೆ ರಾಜ್ಯವನ್ನು ಹಂಚಿದಂತೆಯೂ, ಅವರಿಬ್ಬರಿಗೂ ಜಗಳ ಬಂದಂತೆಯೂ, ಚಿಕ್ಕವನು ದೊಡ್ಡವನನ್ನು ಕೊಂದಂತೆಯೂ, ತಾಯಿಯು ಕೋಪದಿಂದ ಚಿಕ್ಕವನನ್ನು ಕೊಂದಂತೆಯೂ, ಇದರಿಂದ ಜನರು ದಂಗೆಯೆದ್ದು ರಾಜರಾಣಿಯರನ್ನು ಕೊಂದಂತೆಯೂ, ಪಾಳೆಯಗಾರರು ಗುಂಪುಕಟ್ಟಿಕೊಂಡು ದಂಗೆ ಎದ್ದವರನ್ನು ಧ್ವಂಸಮಾಡಿದಂತೆಯೂ, ರಾಜನು ಯಾರಾಗಬೇಕೆಂದು ತಿಳಿಯದೆ ಅವರು ಅಂತಃಕಲಹಗಳಿಗೆ ಪ್ರಾರಂಭಿಸಿದಂತೆಯೂ, ಇದರಿಂದ ರಾಜ್ಯವು ಅನೇಕ ಕಾಲ ಅನಾಯಕವಾಗಿದ್ದಂತೆಯೂ ಹೇಳಿದೆ. ಈ ನಾಟಕವು ೧೫೬೫ರಲ್ಲಿ ಮೊದಲು ಅಚ್ಚಾಯಿತು. ಅದಕ್ಕೆ ಮೊದಲೇ ೧೫೬೧ರಲ್ಲಿ ಇದು ಆಡಲ್ಪಟ್ಟಿ

ಬೇಕು. ಸರೆ ಕವಿಯಿಂದ ಈ ಮೊದಲು ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟಿದ್ದ ಬಿಡಿವೃತ್ತವು ಈ ನಾಟಕದಲ್ಲಿ ವಿಶೇಷವಾಗಿ ಬರುತ್ತದೆ.

ಎಲಿಜಬೆತ್ ರಾಣಿಯು ಸಿಂಹಾಸನಕ್ಕೆ ಬರುವುದಕ್ಕೆ ಮೊದಲೇ ಅಥವಾ ಬಂದ ಬಳಿಕ ಮೂರು ವರ್ಷಗಳಲ್ಲೇ ಆಂಗ್ಲೇಯ ಸಾಹಿತ್ಯದಲ್ಲಿ ನಾಟಕವು ಒಂದು ಸ್ವತಂತ್ರ ರೂಪವನ್ನು ತಾಳಿತು. ರೂಪು ಸ್ಫುಟವಾಗಿ ಇಲ್ಲವಿದ್ದರೂ ಮಹಾಕವಿಯಾದ ಷೇಕ್ಸ್‌ಪಿಯರನು ಬರೆದ ಮೂರು ನಾಟಕ ಜಾತಿಗಳಿಗೂ ಒಂದೊಂದು ಆಕಾರವು ಉಂಟಾಗಿತ್ತು. ಶೋಕಪ್ರಧಾನ ನಾಟಕಗಳಿಗೆ ಗಾರ್ಬೊಡಕ್, ಹರ್ಷಪ್ರಧಾನಗಳಿಗೆ ರಾಲ್ಫ್ ರಾಯಿಸ್ಟರ್ ಡಾಯಿಸ್ಟರ್, ಇತಿಹಾಸಕಗಳಿಗೆ ಬಿಷಪ್ ಬೇಲನ ಜಾನ್ ದೊರೆ ಎಂಬ ನಾಟಕ. ಅಸ್ಪಷ್ಟವಾದ ಈ ರೂಪಗಳಿಂದ ಷೇಕ್ಸ್‌ಪಿಯರ ನಾಟಕದ ಸ್ಫುರದ್ರೂಪವು ಬರುವುದಕ್ಕೆ ಯುರೋಪಿನ ಖಂಡದಲ್ಲಿ ಈ ಕಾಲದಲ್ಲಿ ಉಂಟಾದ ಜ್ಞಾನೋದಯವು ಕಾರಣವಾಯಿತು. ಹದಿನೈದನೆಯ ಶತಮಾನದ ಕೊನೆಕೊನೆಯ ಕಾಲವನ್ನು ಯುರೋಪಿನ ಚರಿತ್ರೆಯಲ್ಲಿ ಪುನರಭ್ಯುತ್ಥಾನದ ಕಾಲವೆಂದು ಹೇಳುವರು. ಅದುವರೆಗೆ ಕೆಲವರಿಗೆ ಮಾತ್ರ ಸೇರಿದ್ದ ಜ್ಞಾನವು ಆಗ ಜನರಲ್ಲಿ ಹರಡುವುದಕ್ಕಾರಂಭವಾಯಿತು. ಹದಿನೈದನೆಯ ಶತಮಾನದ ಮಧ್ಯಕಾಲಕ್ಕೆ ಹಿಂದಣ ಸಮಾಜಸ್ಥಿತಿಯ ಸತ್ವಗಳೆಲ್ಲವೂ ಅನುಭವಕ್ಕೆ ಬಂದು ಮುಗಿದು ದುಷ್ಫಲಗಳು ಪ್ರಕಾಶಕ್ಕೆ ಬರುತ್ತಿದ್ದುವು. ಇದರಿಂದ ಜನರ ಮನಸ್ಸು ಹೊಸ ದಾರಿಗಳಲ್ಲಿ ತಿರುಗುವುದಕ್ಕೆ ಆರಂಭವಾಯಿತು. ಹೇಗಾದರೂ ಬರಬಹುದಾಗಿದ್ದ ಈ ಬದಲಾವಣೆಗೆ ೧೪೫೩ರಲ್ಲಿ ಕಾನ್‌ಸ್ಟಂಟಿನೋಪಲ್ ನಗರದಲ್ಲಿದ್ದ ರೋಮನ್ ಚಕ್ರವರ್ತಿಯನ್ನು ತುರುಕರು ಸೋಲಿಸಿ ಆ ನಗರವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡದ್ದು ಸಹಾಯವಾಯಿತು. ಕಾನ್‌ಸ್ಟಂಟಿನೋಪಲ್ ನಗರವು ಕ್ರೈಸ್ತರಾಜನ ರಾಜಧಾನಿಯಾಗಿದ್ದುದರಿಂದ ಪುರಾತನದ ಗ್ರೀಕರ ರಾಷ್ಟ್ರದ ನಡುವೆ ಇದ್ದ ಆ ನಗರದಲ್ಲಿ ಆ ಜನರಲ್ಲಿದ್ದ ಅದ್ಭುತವಾದ ತತ್ವಜ್ಞಾನವೂ, ಕಲಾಕೌಶಲವೂ, ಪ್ರತಿಭಾಶಕ್ತಿಯೂ ನೆಲೆಯಾಗಿದ್ದುವು. ರಾಜ್ಯವು ಮಹಮ್ಮದೀಯರ ಕೈಸೇರಲು ಈ ಜ್ಞಾನಸಂಪತ್ತನ್ನು ಅಲ್ಲಿಯ ಪಂಡಿತರು ರೋಮಿಗೆ ಹೊತ್ತುಕೊಂಡು ಬಂದರು. ಗ್ರೀಕರ ಈ ತಿಳಿವು ಅಲ್ಲಿಂದ ಫ್ರಾನ್ಸ್, ಸ್ಪೆಯಿನ್, ಜರ್ಮನಿ ಮೊದಲಾದ ಐರೋಪ್ಯ ರಾಜ್ಯಗಳಿಗೂ ಹರಡಿತು. ಅಲ್ಲಿಂದ ಇಂಗ್ಲೆಂಡಿಗೂ ಬಂತು. ಇದನ್ನೇ ಪುನರಭ್ಯುತ್ಥಾನವೆಂದು ಕರೆಯುವರು. ಒಂದು ನೇಮದಿಂದ ಇಂಗ್ಲಿಷ್ ಜನರಲ್ಲಿ ಈ ರೀತಿಯಲ್ಲಿ ಪುನಃ ಜ್ಞಾನವುಂಟಾಗುವುದಕ್ಕೆ ಪ್ರಾರಂಭವಾಯಿತು. ಇದಕ್ಕೆ ಹಿಂದೆ ವಿದ್ಯೆಯನ್ನು ಕಲಿಯುತ್ತಿದ್ದವರು ದೊಡ್ಡ ಮನುಷ್ಯರ ಮನೆಯವರು, ಇಲ್ಲವೆ ಮಠವನ್ನು ಸೇರಿದ್ದವರು. ದೊಡ್ಡ ಮನುಷ್ಯರ ಮನೆಯವರಿಗೆ ಸಾಮಾನ್ಯವಾಗಿ ಬೇರೆ ಕೆಲಸವಿರುವುದು. ಆದರೂ ಕೆಲವರು ಗ್ರಂಥಗಳನ್ನು ಬರೆಯುತ್ತಿದ್ದರು. ಇದುವರೆಗೆ ಹೇಳಿದ ಹೆಸರುಗಳಲ್ಲಿ ಅನೇಕವು

ಇಂತಹವರ ಹೆಸರುಗಳು. ಮತವನ್ನು ಸೇರುವುದಕ್ಕೆಂದು ವಿದ್ಯೆಯನ್ನು ಕಲಿತವರು ಮತಗಳನ್ನು ಸೇರಿ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗುವರು. ಈಗ ಆ ಸ್ಥಿತಿಯು ಕೊನೆಯಾಯಿತು. ಪ್ರಾಟೆಸ್ಟೆಂಟ್ ಮತದ ಬದಲಾವಣೆಗಳಲ್ಲಿ ಸಾಮಾನ್ಯ ಜನರೂ ವಿದ್ಯೆಯನ್ನು ಕಲಿಯುವುದೂ, ಕಲಿಯುವುದರಲ್ಲಿ ಮತವನ್ನು ಸೇರಬೇಕೆಂಬ ಉದ್ದೇಶವನ್ನಿಟ್ಟುಕೊಳ್ಳದೆ ಇರುವುದೂ ಬಂದಾಯಿತು. ಹೀಗೆ ವಿದ್ಯೆಯನ್ನು ಕಲಿತವರು ಎಲ್ಲರೂ ಸರ್ಕಾರದ ಕೆಲಸವನ್ನು ಸೇರುವಂತಿರಲಿಲ್ಲ, ಮತವನ್ನು ಸೇರುವಂತಿರಲಿಲ್ಲ. ಈ ಎರಡೂ ಇಲ್ಲದೆ ತಮ್ಮ ವಿದ್ಯೆಯನ್ನು ಉಪಯೋಗಿಸಬಹುದಾದ ಬೇರೆ ಮಾರ್ಗವನ್ನು ಇವರು ಅವಲಂಬಿಸಬೇಕಾಯಿತು. ಜನರಿಗೆ ಇಷ್ಟವಾದ ಗ್ರಂಥಗಳನ್ನು ಬರೆಯುವುದು ಈ ಮಾರ್ಗಗಳಲ್ಲಿ ಒಂದಾಯಿತು. ಈ ತೆರದ ಎಂಟು ಹತ್ತುಜನ ವಿದ್ವಾಂಸರು ಎಲಿಜಬೆತ್ ರಾಣಿಯ ಆಳಿಕೆಯ ಮೊದಲು ಮೊದಲಲ್ಲಿ ಅಸ್ಫುಟವಾದ ಸ್ವರೂಪದಲ್ಲಿದ್ದ ನಾಟಕವನ್ನು ತೆಗೆದುಕೊಂಡು ಅದನ್ನು ತಿದ್ದಿ ಅದಕ್ಕೆ ಸ್ಫುಟವಾದ ರೂಪವನ್ನು ಕೊಟ್ಟರು. ಇವರಲ್ಲಿ ಪ್ರಮುಖರಾದವರು ಲಿಲೀ, ಮಾರ್ಲೋ, ಕಿಡ್, ಗ್ರೀನ್, ನ್ಯಾಷ್ ಎಂಬವರು.

ನಾಟಕಕ್ಕೆ ಸ್ಫುಟವಾದ ರೂಪು ಬಂದುದಲ್ಲದೆ ಈ ವರ್ಷಗಳಲ್ಲಿ ಮೊದಲು ನಾಟಕಶಾಲೆಯೂ ಏರ್ಪಟ್ಟಿತು. ಇದುವರೆಗೆ ಒಂದೊಂದು ಊರಿನಲ್ಲಿ ಏರ್ಪಟ್ಟಿದ್ದ ನಾಟಕ ಮಂಡಲಿಯೂ ಅಲ್ಲಲ್ಲಿಯೇ ಮೊದಲು ಆಡುತ್ತಿದ್ದಂತೆ ಆಡುತ್ತಿರಲಿಲ್ಲ. ಪ್ರಹಸನಗಳು ದೊಡ್ಡ ಮನುಷ್ಯರ ಮನೆಗಳಲ್ಲಿ ಹಬ್ಬಹುಣ್ಣಿಮೆಗಳಲ್ಲಿ ಸ್ವಲ್ಪಹೊತ್ತು ವಿನೋದವಾಗಿ ಕಾಲ ಕಳೆಯುವುದಕ್ಕೆ ಆಡಲ್ಪಡುತ್ತಿದ್ದುವೆಂದು ಮೇಲೆ ಹೇಳಿದೆ. ಹೀಗೆ ಆಡುವುದಕ್ಕಾಗಿ ದೊಡ್ಡ ಮನುಷ್ಯರ ಮನೆಯ ಊಳಿಗದವರು ಆಟಗಳನ್ನು ಅಭ್ಯಾಸಮಾಡುತ್ತಿದ್ದರು. ಯಾವ ಕಾರಣದಿಂದಲಾದರೂ ಯಜಮಾನನ ರಕ್ಷಣೆಯು ತಪ್ಪಿದರೆ ಇಂತಹ ಊಳಿಗದವರು ಜೀವನಕ್ಕಾಗಿ ಬೇರೆ ಕಡೆಗಳಲ್ಲಿ ಹೋಗಿ ಆಡುವುದು ಏರ್ಪಟ್ಟಿತು. ಇದರಿಂದಲೂ ಭೂಮಿ ಕಾಣಿಗಳಿಲ್ಲದೆ ಜೀವನಕ್ಕಾಗಿ ಅನೇಕರು ಕಷ್ಟಪಡಬೇಕಾಗಿದ್ದುದರಿಂದಲೂ ಸೀಮೆಯಲ್ಲಿ ನಾಟಕ ಮಂಡಲಿಗಳು ಹೆಚ್ಚಿದುವು. ಹಿಂದಿನಿಂದ ಬಂದಿದ್ದ ನಾಟಕಗಳನ್ನು ಇದ್ದ ಹಾಗೆಯೋ ಸ್ವಲ್ಪ ತಿದ್ದಿಯೋ ಅನುಕೂಲವಾದ ಸ್ಥಳ ಎಲ್ಲಿ ಆದರೆ ಅಲ್ಲಿ ಈ ಮಂಡಲಿಗಳು ಆಡಿ ತೋರಿಸುವುವು. ಹೀಗಾಗುತ್ತಿರುವಲ್ಲಿ ಜನರಿಗೆ ನಾಟಕದಲ್ಲಿ ಅಭಿರುಚಿಯು ಹೆಚ್ಚಿ ೧೫೭೬ರಲ್ಲಿ ಪ್ರಿಯ ಮಹಾ ಅರ್ಲ್ ಲೆಸ್ಟರಿನ ಜವಾನರಾದ, ನಾಟಕಗಳನ್ನಾಡುವುದಕ್ಕಾಗಿ ಲಂಡನ್ನಿನಲ್ಲಿ ಬ್ಲ್ಯಾಕ್ ಫ್ರಯರ್ಸ್ ಎಂಬ ಒಂದು ನಾಟಕಶಾಲೆಯನ್ನು ಕಟ್ಟಿದರು. ಅದೇ ವರ್ಷದಲ್ಲಿಯೇ ಇನ್ನೆರಡು ನಾಟಕಶಾಲೆಗಳೂ ಎದ್ದುವು. ನಾಟಕ ಮಂಡಲಿಯವರು ಬೇರೆ ಜಾಗಗಳನ್ನು ಹುಡುಕಬೇಕಾಗುತ್ತಿರಲಿಲ್ಲ. ಆಡುವುದಕ್ಕೆ ಒಂದು ಜಗಲಿ. ಅದರ ಮೇಲೆಯೇ ದೊಡ್ಡ ಮನುಷ್ಯರು ಕೂಡುವರು. ಜಗಲಿಯ ಮೂರು ಕಡೆಯೂ ತಗ್ಗಿನಲ್ಲಿ ಜನರು ಕುಳಿತುಕೊಳ್ಳುತ್ತಿದ್ದರು. ರಂಗಸ್ಥಳವು ಎತ್ತರವಾದ ಒಂದಷ್ಟು ಜಾಗ. ಮನೆ

ಕೋಟೆ ದೃಶ್ಯಗಳು ಕಾಡು ಬೇಕಾದಾಗ ಮರದ ಸಾಮಾನುಗಳನ್ನು ರಂಗದಲ್ಲಿಡುತ್ತಿದ್ದರು. ಸ್ಥಾನವು ಬದಲಾಯಿಸಿದಾಗ ಇದು ಇಂತಹ ಸ್ಥಳವೆಂದು ಒಂದು ರಟ್ಟಿನಮೇಲೆ ಬರೆದು ಆ ರಟ್ಟನ್ನು ರಂಗಸ್ಥಳದ ಮುಂದುಗಡೆ ತೂಗಹಾಕುವರು. ನಾಟಕದಲ್ಲಿಯ ಪಾತ್ರಗಳು ಜಗಲಿಯ ಹಿಂಭಾಗದಿಂದ ಏರಿ ನಾಟಕ ರಂಗಕ್ಕೆ ಬರುವರು. ನಾಟಕವಾಡುತ್ತಿರುವಾಗ ಜನರು ಅವರನ್ನು ಮೂರು ಕಡೆಯಿಂದಲೂ ನೋಡಬಹುದಾಗಿತ್ತು. ರಂಗದಲ್ಲಿ ಹೆಚ್ಚು ಯಾವ ಸಾಮಗ್ರಿಗಳೂ ಇರುತ್ತಿರಲಿಲ್ಲ.

ವಿದ್ಯಾವಂತರಾದ ಹೊಸ ನಾಟಕಕಾರರಲ್ಲಿ ಲಿಲೀ ಎಂಬಾತನು ಒಂಭತ್ತು ನಾಟಕಗಳನ್ನು ಬರೆದನು. ಈ ಕಾಲದ ನಾಟಕಗಳು ಕೆಲವು ಗದ್ಯದಲ್ಲಿಯೂ ಕೆಲವು ಪದ್ಯದಲ್ಲಿ ಮಾತ್ರವೂ ಮತ್ತೆ ಕೆಲವು ಗದ್ಯಪದ್ಯ ಅಥವಾ ಚಂಪುವಾಗಿಯೂ ಈ ಮೂರು ವಿಧವಾಗಿ ಇವೆ. ಲಿಲೀಯು ಈ ಮೂರು ಮಾದರಿಯಲ್ಲಿಯೂ ನಾಟಕಗಳನ್ನು ಬರೆದಿದ್ದಾನೆ. ಈತನು ಇವುಗಳನ್ನು ಮಹಾರಾಣಿಯ ಆಸ್ಥಾನದಲ್ಲಿ ಆಡುವುದಕ್ಕಾಗಿ ಬರೆದನು. ಇವನ ಭಾಷೆಯು ಸ್ಪಷ್ಟವಾದುದು. ಇವನು ಶೈಲಿಯಲ್ಲಿ ಒಂದು ಹೊಸ ವೈಖರಿಯನ್ನು ವಾಡಿಕೆಗೆ ತಂದನು. ನಾಟಕದ ಭಾಷೆಯು ಮೊದಲಿಗಿಂತ ಬಲವಾಯಿತು. ಆ ಕಾಲದಲ್ಲಿ ಹಾಡುಗಳು ವಿಶೇಷ ವಾಡಿಕೆಗೆ ಬರುತ್ತಿದ್ದುದರಿಂದ ಈ ನಾಟಕಗಳಲ್ಲಿ ಅಲ್ಲಲ್ಲಿ ಹಾಡುಗಳೂ ಸೇರಿದುವು. ಇತರ ಸಾಹಿತ್ಯದ ಉತ್ತಮ ನಾಟಕಗಳನ್ನು ನೋಡಿದವನು ಬರೆದದ್ದರಿಂದ ಈ ನಾಟಕಗಳಲ್ಲಿ ಪಾತ್ರಗಳೂ ಸಂಧಾನಗಳೂ ಕಥಾಸಂಧಿಗಳೂ ಗೌರವವಾದುವಾಗಿ, ಇದೇ ವಾಡಿಕೆಯಾಗಿಬಂದು ಹಿಂದಣ ಧರ್ಮಪ್ರಧಾನ ನಾಟಕಗಳಲ್ಲಿಯ ಗ್ರಾಮ್ಯ ವಿಷಯಗಳು ನಾಟಕದಲ್ಲಿ ಬರುವುದು ಕೊನೆಯಾಯಿತು. ಹೀಗೆ ನಾಟಕಕ್ಕೆ ಲಿಲೀ ಕವಿಯು ಹೊಸ ರೂಪನ್ನು ಕೊಟ್ಟನು. ಆದರೂ ಈತನು ಬರೆದ ನಾಟಕಗಳು ಸಾಮಾನ್ಯವಾಗಿ ಆಡುವುದಕ್ಕೆ ಅಷ್ಟು ಅನುಕೂಲವಾದುವಲ್ಲ.

ಆಡುವುದಕ್ಕೆ ಅನುಕೂಲವಾದ ನಾಟಕಗಳನ್ನು ಬರೆದವರಲ್ಲಿ ಪೀಲ್ ಎಂಬವನು ಪ್ರಮುಖನು. ಇವನು "ಪ್ಯಾರಿಸನ ವಿಚಾರಣೆ" ಎಂಬ ನಾಟಕವನ್ನು ಬರೆದನು. ಇದು ೧೫೮೪ರಲ್ಲಿ ಎಲಿಸಬೇತ್ ರಾಣಿಯ ಎದುರಿಗೆ ಅವಳ ಪ್ರಾರ್ಥನಾಲಯದ ಮಕ್ಕಳಿಂದ ಆಡಲ್ಪಟ್ಟಿತು. ಗ್ರೀನ್ ಎಂಬಾತನು ಕೆಲವು ನಾಟಕಗಳನ್ನು ಬರೆದನು. ಆ ಕಾಲದಲ್ಲಿ ಇವರು ನಾಟಕ ಬರೆಯುವುದಕ್ಕೆ ಪ್ರಾರಂಭಿಸಿದ್ದು ಹೇಗೆಂದು ಈತನು ತನ್ನ ಉಪನ್ಯಾಸಗಳೊಂದರಲ್ಲಿ ಹೇಳಿದ್ದಾನೆ. ಕವಿಯು ವೆಚ್ಚಕ್ಕೆ ಕಾಸಿಲ್ಲದೆ ಏನು ಮಾಡುವುದೆಂದು ಯೋಚಿಸುತ್ತ ಲಂಡನ್ನಿನ ಒಂದು ಚಿಂದಿಯ ಅಂಗಡಿಗೆ ಹೋಗಿ ಕುಳಿತಿರುವಾಗ ಬೇಕಾದ ಉಡುಪನ್ನು ಸೊಗಸು ಸೊಗಸಾಗಿ ಹಾಕಿಕೊಂಡು ಹಣವಂತನಂತೆ ತೋರುತ್ತಿದ್ದ ಒಬ್ಬನು ಅಲ್ಲಿಗೆ ಬಂದನು. ಈತನು ಒಂದು ನಾಟಕ ಮಂಡಲಿಯ ಅಧ್ಯಕ್ಷನು. ಕವಿಯು ಅಕ್ಷರಜ್ಞನೆಂದು ತಿಳಿದು ಅವನು ಕವಿಯನ್ನು ತನ್ನೊಂದಿಗೆ ಬಂದು ನಾಟಕಗಳನ್ನು

ಅಸ್ಸು ಕೊಟ್ಟರೆ ಸಂಬಳ ಕೊಡುವೆನೆಂದು ಕರೆಯಲು, ಕವಿಯು ಅವನೊಂದಿಗೆ ಹೋದನು. ಎಂದರೆ ನಾಟಕದಿಂದ ಲಾಭವನ್ನು ಸಂಪಾದಿಸುವುದು ಆಗ ಸಾಧ್ಯವಾಗಿತ್ತು. ಈ ವಿದ್ಯಾವಂತ ನಾಟಕಕಾರರ ಸಮೂಹದಲ್ಲಿ ಅತಿ ಪ್ರಸಿದ್ಧನಾದವನು ಮಾರ್ಲೋ ಎಂಬಾತನು. ಇವನನ್ನು ಬಿಟ್ಟರೆ ನಾಟಕದ ಅಭಿವೃದ್ಧಿಯಲ್ಲಿ ಹೆಚ್ಚು ಭಾಗವಹಿಸಿದವನು ಈ ಗುಂಪಿನಲ್ಲಿ ಕಿಡ್ ಎಂಬಾತನು. ಸ್ಯಾಕ್ವಿಲ್ ನಾರ್ಟನರ ಗಾರ್ಬೊಡಕ್ ನಾಟಕವನ್ನು ನೋಡಿದವರು ಶೋಕಪ್ರಧಾನ ನಾಟಕವು ಒಳ್ಳೆಯ ಸ್ಥಿತಿಗೆ ಬಂದೀತೆಂದು ಎಣಿಸುವ ಹಾಗಿರಲಿಲ್ಲ. ಅಲ್ಲದೆ ಸಿಡ್ನಿಯಾರ್ಸ್ ಎಂಬ ಪಂಡಿತರು ಆಗ ಇಟಲಿಯ ನವೀನ ಕವಿಯ ನಾಟಕಗಳು ಅನುಸರಣೀಯವಾದುವೆಂದು ಅಭಿಪ್ರಾಯವುಳ್ಳವರಾಗಿದ್ದರು. ಇದನ್ನು ನೋಡಿದರೆ, ಆಂಗ್ಲೇಯ ನಾಟಕದಲ್ಲಿ ಈ ಜಾತಿಯ ನಾಟಕವು ಮುಂದಕ್ಕೆ ಬರುವಂತೆ ತೋರುತ್ತಿರಲಿಲ್ಲ. ಹೀಗಿರುವಲ್ಲಿ, ಮಾರ್ಲೋ ಕವಿಯು ತನ್ನ ತೀವ್ರವಾದ ಭಾವನಾಶಕ್ತಿಯಿಂದಲೂ, ಅದ್ಭುತ ಸನ್ನಿವೇಶಗಳ ವರ್ಣನೆಯ ಚಮತ್ಕಾರದಿಂದಲೂ, ಕಟ್ಟುಕಟ್ಟಳೆಗೆ ಸಿಗದ ಸ್ವತಂತ್ರ ಪ್ರವೃತ್ತಿಯಿಂದಲೂ, ಶೋಕಪ್ರಧಾನ ನಾಟಕಕ್ಕೆ ಹೊಸ ಮುಖವನ್ನು ಕೊಟ್ಟು ಆಂಗ್ಲೇಯ ನಾಟಕವನ್ನು ಬಹಳ ಉನ್ನತಸ್ಥಿತಿಗೆ ತಂದನು. ಈತನು ಬರೆದ ನಾಟಕಗಳಲ್ಲಿ ಟಾಮರ್ಲೇನ್, ಫೌಸ್ಟಸ್, ಮಾಲ್ಟಾ ನಗರದ ಯೆಹೂದ್ಯನು, ಎರಡನೆಯ ಎಡ್ವರ್ಡ್ ದೊರೆ ಎಂಬುವು ಮುಖ್ಯವಾದುವು. ಎಲ್ಲವರಲ್ಲೂ ಕವಿಯು ಶಕ್ತಿದೇವತೆಗೆ ಆಕಾರವನ್ನು ಕೊಟ್ಟು ಅದನ್ನು ಮುಂದಿಟ್ಟಿರುವನು. ವೃತ್ತವು ಶಕ್ತಿಯುಕ್ತವಾದುದು, ಧಾರಾಳವಾದುದು, ಕವಿಯ ಭಾವದ ಗತಿಗೆ ಅನುಗುಣವಾದ ವಿವಿಧ ಗತಿಯುಳ್ಳುದು. ಅದುವರೆಗೆ ಯಾವ ಕವಿಯ ಕಾವ್ಯದಲ್ಲೂ ಕಾಣದ ಹೊಸತ್ರಾಣವೊಂದು ಈತನ ಭಾವನೆಯಲ್ಲಿ ತೋರುವುದು. ಕಿಡ್ ಕವಿಯು ಸ್ಪ್ಯಾನಿಷ್ ಟ್ರ್ಯಾಜೆಡಿ ಎಂಬ ಶೋಕರಸಪ್ರಧಾನ ನಾಟಕದಲ್ಲಿ ಇದೇ ರೀತಿಯ ಕಾರ್ಯವನ್ನು ಮಾಡಿದನು. ಈ ಕಾವ್ಯಗಳಲ್ಲಿ ನಾಯಕರು ಕೆಲವುವೇಳೆ ಕೊಚ್ಚಿಕೊಳ್ಳುವಂತೆಯೂ ಹರಟುವಂತೆಯೂ ತೋರುವುದು. ಮೊದಮೊದಲು ಬರೆದ ಕಾವ್ಯಗಳಾದುದರಿಂದ ಇದು ಸ್ವಭಾವ ದೋಷವೆಂದು ಹೇಳಬೇಕಾಗಿದೆ. ಲಾಡ್ಜ್ ಕವಿಯು ಅಂತಃಕಲಹದ ನೋವು ಎಂಬ ನಾಟಕವನ್ನೂ, ನ್ಯಾಷ್ ಎಂಬಾತನು ಬೇರೆ ಎರಡು ನಾಟಕಗಳನ್ನೂ ಬರೆದರು. ಇವರ ನಾಟಕಗಳಲ್ಲೆಲ್ಲ ಲಿಲೀ ಕವಿಯ ನಾಟಕಗಳಲ್ಲಿ ಹೇಗೋ ಹಾಗೆಯೇ ಅಲ್ಲಲ್ಲಿ ಹಾಡುಗಳಿವೆ. ಎಲ್ಲರ ವೃತ್ತಗಳಲ್ಲಿಯೂ ಮಾರ್ಲೋವಿನ ವೃತ್ತಗಳಲ್ಲಿ ಹೇಗೋ ಹಾಗೆಯೇ ಶಕ್ತಿಯೂ ಭಾವಾನುಗುಣವಾದ ಗತಿಯೂ ತೋರಿಬರುತ್ತವೆ. ಈ ವೃತ್ತವು ಸರೆ ಕವಿಯಿಂದ ಮೊದಲು ನಾಡಿಕೆಗೆ ಬಂದ ಬಿಡಿವೃತ್ತವು. ನಾಟಕದ ಮಾತುಗಳಲ್ಲಿ ಗದ್ಯದ ಉಚ್ಛೃಂಖಲಗತಿಯೂ ಪ್ರಾಸಬದ್ಧವಾದ ಪದ್ಯದ ನೇಮವೂ, ಎರಡೂ ಅರ್ಥನಿರೂಪಣಕ್ಕೆ ಅಡ್ಡಿಯಾಗುವ ಸಂಭವವುಂಟು. ಬಿಡಿ ವೃತ್ತವು ಗದ್ಯದ ಉಚ್ಛೃಂಖಲತೆಯನ್ನಳಿದು ಅದರ ಸೌಲಭ್ಯವನ್ನೂ ಪದ್ಯದ ಪ್ರಾಸಬಂಧ

ವನ್ನು ಬಿಟ್ಟು ಅವರ ಗೌರವವನ್ನು ಜೊತೆಗೊಳಿಸುವುದು. ಮಹಾಕವಿ ಷೇಕ್ಸ್ಪಿಯರನ ನಾಟಕಗಳಲ್ಲಿ ಎಣೆಯಿಲ್ಲದ ಔನ್ನತ್ಯವನ್ನು ಪಡೆದ ಈ ವೃತ್ತವು ಈ ನಾಟಕಕಾರರ ಕೈಯಲ್ಲಿ, ಇವರಲ್ಲೂ ಮುಖ್ಯವಾಗಿ ಮಾರ್ಲೋ ಕವಿಯ ಕೈಯಲ್ಲಿ ನಯವಾಗಿ ಆ ಮಹಾಕವಿಯ ಕೈಗೆ ಅಣಿಯಾಯಿತು. ಈ ಮಾತಿನಿಂದಲೇ ಇವರು ಎಷ್ಟು ದೊಡ್ಡ ಕೆಲಸವನ್ನು ಮಾಡಿದರೆಂಬುದು ಅವಗಾಹನೆಗೆ ಬರುವುದು. ಮೊತ್ತದಲ್ಲಿ ಈ ನಾಟಕಕಾರರ ಕೈಯಲ್ಲಿ ನಾಟಕಕ್ಕೆ ವಿಷಯವಾದ ಕಥೆಗಳ ಮಾದರಿಯು ಉತ್ತಮವಾಯಿತು, ಭಾವವು ಉತ್ತಮವಾಯಿತು, ಪಾತ್ರಗಳ ಮಾತು ನಯವಾಯಿತು, ಇದೆಲ್ಲಕ್ಕೂ ಸಾಧನವಾದ ವೃತ್ತವು ಅಣಿಯಾಯಿತು. ಈ ಕವಿಗಳು ಮಾಡಿದ ಕೆಲಸದಿಂದ ಹಿಂದೆ ಅಸ್ಫುಟವಾಗಿದ್ದ ನಾಟಕದ ಸ್ವರೂಪವು ಸ್ಪಷ್ಟವಾಗಿ ಷೇಕ್ಸ್ಪಿಯರ್ ಮಹಾಕವಿಯು ಬರುವುದು ಸಾಧ್ಯವಾಯಿತು.

ಮಾಸ್ತಿ ವೆಂಕಟೇಶ ಐಯಂಗಾರ್

ವಾಸುದೇವೀಯ ಲಘುಕಥಾ ವಾಙ್ಮಯ

ಅಥವಾ

'ಶ್ರೀನಿವಾಸ ಸುತ'ನ ಸಣ್ಣ ಕಥೆಗಳು

'ಹಿರಿದ ನೋಡಿದೊಡೆ ಅರಿವ ದೃಷ್ಟಿ ಶಕ್ತಿಯನು | ಹರಿ ಎನಗೆ ನೀಡು ನಿನ್ನನು ಅರಿವರೆ'

ಶ್ರೀನಿವಾಸನ ಈ ಹೊಸ ಹಾಡನ್ನೇ ಹೊಸತಿಲನ್ನಾಗಿ ಮಾಡಿ ವಾಸುದೇವನ ಕಥಾಮಂದಿರವನ್ನು ನಾನು ಪ್ರವೇಶಿಸುತ್ತೇನೆ. ವಾಸುದೇವನು ನಮ್ಮ ಪ್ರೀತಿಯ ಒಬ್ಬ ವಾಙ್ಮಯ ಮೂರ್ತಿಯು. ಅವನ ಹಿರಿಯತನವು ಎಲ್ಲಿ ಇದೆ ಎಂಬುದನ್ನು ತಿಳಿಸಿ ಅವನಲ್ಲಿ ಯೋಗ್ಯವಾದ ಭಕ್ತಿಯನ್ನು ಕೊಡಲೆಂಬುದೇ ಈ ಹೊಸತಿಲವನ್ನು ದಾಟುವದರ ಆಶಯ.

ಪೂರ್ವ ಪೀಠಿಕೆ

ಸುಶಿಕ್ಷಿತರಿಗೊಂದು—ಸಾಮಾನ್ಯರಿಗೊಂದು—ಹೀಗೆ ವಾಙ್ಮಯದಲ್ಲಿ ಎರಡು ವಿಭಾಗಗಳನ್ನು ಮಾಡಬಹುದು. ಸುಶಿಕ್ಷಿತರಿಗೆ ಒಂದು ಪಕ್ಷಕ್ಕೆ ವಾಙ್ಮಯ ನಿಸಿಸಿಕೊಳ್ಳುವದೆಲ್ಲ ಸೇರಿದರೂ ಸಾಮಾನ್ಯರಿಗೆ ಇಳಿತರದ ಸರಳವಾದ ಬೇರೆ ವಾಙ್ಮಯವು ಬೇಕು. ಅದೇ ಅವರಿಗೆ ಮಾನ್ಯವಾಗಿ ರಸಮಯವೆನಿಸುತ್ತದೆ. ಅಂತೆಯೇ ಕೀರ್ತನಗಳಿಗೂ ನಾಟಕಗಳಿಗೂ ನೆರೆದಷ್ಟು ಜನತೆಯು ಪುರಾಣಕ್ಕೆ ಹೋಗುವದಿಲ್ಲ. ಲಾವಣಿಗಳನ್ನೂ ದಾಸರ ಪದಗಳನ್ನೂ ಕೇಳುವವರಿದ್ದಷ್ಟು ಕಾವ್ಯ ಪಠನ ಮಾಡುವವರಿಲ್ಲ. ಇದೇ ಪ್ರಕಾರವಾಗಿ ತಾಯಿಯ ಸುತ್ತು ಕಲೆತು ಸಂಜೆಯ ಹೊತ್ತಿನಲ್ಲಿ ಸುಖವಾಗಿ ಸಾವುಕ್ಕ ದೇವಕ್ಕನ ಕಥೆಗಳನ್ನೂ ದೇವದಾನವರ ಕಥೆಗಳನ್ನೂ ಕೇಳುವ ಬಾಲಕರು ಬಹಳ; ಅದರಂತೆ ಮಾಸಿಕ ಪತ್ರಗಳು ಮನೆಗೆ ಬಂದಕೂಡಲೆ ಕಥೆ ಯಾವದೆಂದು ಹಿರಿಯರು ಕಣ್ಣಿಕ್ಕಿ ನೋಡುವದಾದರೂ ಬಹಳ; ಅದೇ ಸ್ವಾಮಿಗಳ ಉಪನ್ಯಾಸಕ್ಕೆ ಅಹಂಮನ್ಯರ ಹೊರತು ಅನ್ಯರು ಹಣಿಕೆ ಹಾಕುವದು ಕೂಡ ವಿರಳ. ಹೀಗೆಂದಮೇಲೆ ಕಥೆಗಳು ಸಾಮಾನ್ಯರ ಸೇರಿಕೆಯವು. ಅವು ಜನ ಜೀವಿತವನ್ನು ಜನರ ಭಾಷೆಯ ಮುಖದಿಂದ ಹೇಳುವದರಿಂದ ಜನರಿಗೆ ಬೇಕಾದ ಸಾಹಿತ್ಯ ಸರ್ವಸ್ವವಾಗಿ ಉಳಿಯುತ್ತವೆ. ಅವು ದಿನ ದಿನಕ್ಕೆ ಬೆಳೆದಂತೆ ವಾಙ್ಮಯವು ಹೆಚ್ಚು ಹೆಚ್ಚು ಲೋಕ ಪ್ರಿಯವಾಗುತ್ತದೆ. ಈ ದೃಷ್ಟಿಯಿಂದ ಈಗಿನ ಮಾಸಿಕಗಳು 'ಜಯ ಕರ್ನಾಟಕ' 'ಪ್ರಬುದ್ಧ ಕರ್ನಾಟಕ' ಮುಂತಾದವುಗಳು, ತಪ್ಪದೆ ಒಂದಿಲ್ಲ ಒಂದು ಕಥೆಯನ್ನು ಪ್ರಚುರಪಡಿಸುತ್ತಿರುವದೆಂಬುದು ಅಭಿಮಾನದ ಮಾತು. ಇದರಂತೆ ಪುಸ್ತಕ ರೂಪದಲ್ಲಿ ಕೂಡ ಶ್ರೀನಿವಾಸನ 'ಸಣ್ಣ ಕತೆಗಳು' ಬಯಲಿಗೆ ಬರುತ್ತಿವೆ. ಅತ್ತ ಶ್ರೀನಿವಾಸ

ಸಿದ್ಧಾಂತಿ ಕೀರ್ತಿಶೇಷನಾಗಿ ರತ್ನ ಶ್ರೀನಿವಾಸ ಸುತನು (ವಾಸುದೇವನ ಸಾಂಕೇತಿಕ ನಾಮ) ಇದ್ದಾನೆ. ಆದರೆ ಅವನ ಸಣ್ಣ ಕಥೆಗಳು ಏಕ ಗಾತ್ರವಾಗಿ ಒತ್ತಟ್ಟಿಗೆ ಹೊಂದಿಕೆಯಾಗಿಲ್ಲ. ಅವನ ಭಕ್ತರನ್ನು ಕೇಳಿದರೂ 'ಗುಲಾಬಾಯಿ' ಎಂಬ ಕಥೆಯ ಗುಣ ಗಾಯನವನ್ನು ಅವರು ಮಾಡುತ್ತಾರೆ, ಸಂವಾದ ಸರಣಿಯು ಅತ್ಯುತ್ತಮವೆಂದು ಹೊಗಳುತ್ತಾರೆ. ಅದರಲ್ಲಿಯ ಹಾಸ್ಯವು ಮಾತು ತೆಗೆದಾಗೆಲ್ಲ ಬಾಯಿ ತೆರೆಯಿಸುತ್ತದೆ, ಎಂದೆನ್ನುತ್ತಾರೆ. ಆದರೆ "ಇಂತಿಷ್ಟು ಕಥೆಗಳನ್ನು ವಾಸುದೇವನು ಬರೆದಿದ್ದಾನೆ. ಅವುಗಳಲ್ಲಿ ಇಂಥ ಮಾಧುರ್ಯವಿದೆ" ಎಂದು ಮಾತನಾಡಲಿಕ್ಕೆ ಹಾದಿಯಾಗಬೇಕಾದರೆ ಒಂದು ಪುಸ್ತಕದಲ್ಲಿಯೇ ಅವನ ಕಥೆಗಳ ಪ್ರಕಟನೆಯಾಗಬೇಕಾಗಿದೆ. ಈ ವಿಚಾರವನ್ನು ಅವನ ಕಥೆಗಳ ವಿಮರ್ಶೆಯೊಂದಿಗೆ ಸಮರ್ಥಿಸುವದೇ ಈ ಲೇಖನದ ಒಂದು ಉದ್ದೇಶ. ಮೊದಲು ವಾಸುದೇವನ ವಾಙ್ಮಯವೆಂದರೆ ಒಂದು ಪ್ರಾಚೀನ ಗ್ರಂಥದಷ್ಟು ಪುಣ್ಯವೃಕ್ಷವಾಗಿದೆ. ತನ್ನ ಸಚಿತ್ರ ಭಾರತದಿಂದಲೂ, ಶುಭೋದಯದಿಂದಲೂ, ಇಂದಿರಾದಿ ಕಾದಂಬರಿಗಳಿಂದಲೂ ಅಚ್ಚು ಹಾಕಿದ ವಾಸುದೇವನು ಹೆಸರಾಗಿ ಹೋದದ್ದು ನಿಜ. ಆದರೆ ಚಮತ್ಕಾರವೆಂದರೆ ಮುದ್ರಾಲಯಕ್ಕೆ ಕೊಡಲಿಕ್ಕೆ ಈಗ ಒಂದು ಪ್ರತಿಯು ಕೂಡ ಅಪೂರ್ವವಾಗಿದೆ. ಎಲ್ಲಿಯಾದರೂ ಸಚಿತ್ರ ಭಾರತ ಸಂಗ್ರಹವಿದೆಯೆಂದು ಕೇಳಿದರೆ ನಮಗೆ ಒಂದನೆಯ ಶತಮಾನದ ಗುಡಿಯನ್ನು ಕಂಡಷ್ಟು ಅಥವಾ ಕಾಳಿದಾಸನ ಕಾಲ ನಿರ್ಣಯವನ್ನು ಮಾಡಿದಷ್ಟು ಸಂತೋಷವಾಗುತ್ತದೆ. ಇಂಥ ಸ್ಥಿತಿಯಲ್ಲಿ ಪುನರುಜ್ಜೀವಿಸಬೇಕೆಂದು 'ವಾಸುದೇವನ ಕೌಸ್ತುಭಗಳು' ಎಂಬ ಹೆಸರಿನ ಕೆಳಗೆ ನಮ್ಮ ಹಿರಿಯರೊಬ್ಬರು ಸಾಧನ ಸಾಮಗ್ರಿಯನ್ನು ಕೂಡ ಹಾಕುತ್ತಿದ್ದಾರೆ. ಈ ಸಣ್ಣ ಕಥೆಗಳ ಮುದ್ರಣ ವಿಚಾರವನ್ನಾದರೂ ಅವರು ಮಾಡಿದ್ದಾರೆ. ಆದರೆ ಎಲ್ಲ ಪುಸ್ತಕಗಳ ಪೂರ್ಣದಲ್ಲಿ ಇದನ್ನು ಪ್ರಕಾಶಿಸಬೇಕೆಂದು ನೀವೆಲ್ಲ ಅವರಿಗೆ ಒತ್ತಾಯಮಾಡುವಂತೆ ಈ ಕಥೆಗಳ ಸ್ವಾರಸ್ಯವನ್ನು ಸ್ಥಾಪಿಸಲಿಕ್ಕೆ ನಾನು ಹೊರಟಿದ್ದೇನೆ.

ಇನ್ನೊಂದು ನನ್ನ ಉದ್ದೇಶವೆಂದರೆ—ಶ್ರೀನಿವಾಸ ಸುತನ ಕಥೆಗಳು ಮುಂದೆ ಬರೆಯಲ್ಪಡುವ ಕಥೆಗಳಿಗೆ ಏನು ಕಲಿಸುವವೆಂಬದನ್ನಾದರೂ ಅರಿಯತಕ್ಕದ್ದಿದೆ. ಯಾಕೆಂದರೆ ತನ್ನ ಕಾಲದಲ್ಲಿ ಜನ ಸಮಾಜವನ್ನು ಯಾವ ತನ್ನ ಕಥಾ ಕೌಶಲದಿಂದ ಆತನು ಕೌತುಕಪಡಿಸುತ್ತಿದ್ದನೋ ಅದನ್ನು ಮನನಮಾಡಿ ಮುಂದೆ ಅಂಥ ಕಥೆಗಳನ್ನು ಹುಟ್ಟಿಸುವದು ನಮ್ಮ ಧ್ಯೇಯವಾಗಲಿಕ್ಕೆ ಬೇಕು.

ನನಗೆ ಗೊತ್ತಿದ್ದಮಟ್ಟಿಗೆ ಹದಿನೈದು ಹದಿನಾರು ಕಥೆಗಳನ್ನು ವಾಸುದೇವನು ಬರೆದಿದ್ದಾನೆ. ಅವುಗಳ ವಿವರ ಹೀಗೆ—೧. ಗುಲಾಬಾಯಿ. ೨. ಗೃಹ ಕಥೆ. ೩. ಪ್ರಕೃತಿ ಬಲ. ೪. ಪ್ರಥಮ ದರ್ಶನದ ಪ್ರೇಮವು. ೫. ಮಲ್ಲೇಶಿಯ ನಲ್ಲೆಯರು. ೬. ಮೂಢಭಕ್ತಿಯ ದುಷ್ಪರಿಣಾಮಗಳು. ೭. ನರಗುಂದದ ಸಾವಿತ್ರೀಬಾಯಿ. ೮. ಪತಿಗಳ ಸ್ವಾತಂತ್ರ್ಯಹಾನಿಯು. ೯. ಎದೆಯಮೇಲಿನ ಕಲ್ಲು

ನೇರಿಯುತು. ೧೦. ಬಾಗಲಕೋಟೆಯ ಆಚಾರ್ಯರು. ೧೧. ರಾಸಪುಟಿನ. ೧೨. ವಿಸ್ಮಯ ಜನಿತವಾದ ಹಿಂಸೆಯ ಕ್ರಮವು. ೧೩. ಅಪರಾಧಿಗಳ ಶೋಧಕನು ಮರಣೋನ್ಮುಖನಾದದ್ದು. ೧೪. ಬೆಳ್ಳೀಚಿಕ್ಕೆ. ೧೫. ಚಿತ್ರಭ್ರಮವೋ ವೃತ್ತಾಂತವೋ. ೧೬. ಪಂಡಿತ ಬೃಹಲ್ಲಾಂಗೂಲ ವ್ಯಾಘ್ರ. ಇವುಗಳಲ್ಲಿ ಮೊದಲನೆಯ ಆರು ಸ್ವತಂತ್ರ ಸಾಮಾಜಿಕ ಕಥೆಗಳಿರುತ್ತವೆ. ಮುಂದಿನ ಮೂರು ಐತಿಹಾಸಿಕವಿರುತ್ತವೆ. ಮತ್ತೆ ಎರಡು ಜೀವನ ಚರಿತ್ರೆಗಳಾಗಿವೆ. ಒಂದು ಮಾತ್ರ ಭಾಷಾಂತರವಿರುವಂತೆ ರೂಪಾಂತರವಿರಲಿಕ್ಕೆ ಬೇಕು. ಕಡೆಯ ನಾಲ್ಕು ಕಾಲ್ಪನಿಕವಾಗಿರುತ್ತವೆ. ಇಷ್ಟರಮೇಲಿಂದ ವೃತ್ತಪತ್ರಕಾರರು ಒಪ್ಪಿಗೆಯನ್ನೂ ನಿರೂಪಣೆಯನ್ನೂ ಮಾಡಿದಂತೆ ಮುದ್ರಣವು ಅಂದವಾಗಿದೆ. ಕಥೆಯು ಚೆಂದಾಗಿದೆ ಎಂದು ಹೇಳಿ ಮುಗಿಸುವೆನೆಂದು ಯಾರೂ ಬಗೆಯತಕ್ಕದ್ದಲ್ಲ. ಇವುಗಳಲ್ಲಿಯ ಒಂದೊಂದೆ ಕಥೆಯನ್ನು ತೆಗೆದುಕೊಂಡು ಅದರ ಸಾರೋದ್ಧಾರವನ್ನು ಮಾಡುತ್ತ ಸ್ವಲ್ಪದರಲ್ಲಿ ಕಥಾಮೃತವನ್ನು ಕುಡಿಸಬೇಕೆಂದು ಇಚ್ಛೆಯಿದೆ.

೧. **ಗುಲ್‌ಬಾಯಿ.**—ಇದು ಸರ್ವೋತ್ತಮವೆನ್ನಬಹುದು. ಇದು ಸುಧಾರಣಾಪ್ರಿಯಳಾದ ಒಬ್ಬ ಪ್ರೌಢಸ್ತ್ರೀಯ ವಿವಾಹ ಘಟನೆಯ ವೃತ್ತಾಂತವು. ಅವಳೇ ಗುಲ್‌ಬಾಯಿಯು. ಮೊದಲು ಪುರುಷರೆಂದರೆ ಅವಳು ಬಕ್ಕನೆ ಜರಿಯುತ್ತಿದ್ದಳು. ಲಗ್ನವನ್ನು ಮಾಡಿಕೊಳ್ಳದೆ ಹಾಗೆಯೇ ಇರಬೇಕೆಂದು ಬಂಧನಕ್ಕೆ ಹೇಸುವದು ಅವಳ ಬುದ್ಧಿಯು. ಆದರೆ ವಾದ ಸಾಮರ್ಥ್ಯದಿಂದ ಶ್ಯಾಮರಾಯನು ಹೇಗೆ ಅವಳನ್ನು ಒಲಿಸಿಕೊಂಡು ಹದಿನೈದು ದಿವಸಗಳಲ್ಲಿ ವಿಚಾರಕ್ರಾಂತಿಯನ್ನು ಮಾಡಿ ಅವಳನ್ನು ಮದುವೆಯಾದನೆಂಬುದು ಇದರಲ್ಲಿ ವರ್ಣಿತವಾಗಿದೆ. ಇದೇನೋ ಸಾಮಾನ್ಯ ವಿಷಯ. ಆದರೆ ಯಾವ ಕಥೆಯಾದರೂ ತಿಳಿದುಕೊಳ್ಳಬೇಕಾದರೆ ವಿಷಯಕ್ಕಿಂತ ವಿಷಯ ಕಥನವು ಮಹತ್ತರವಾದದ್ದು. ಹಾಗೆ ಹೇಳಿ ನೋಡಿದರೆ ಇದೊಂದು ಸ್ವಾಭಾವಿಕವಾಗಿ ಮನೋಹಾತ್ಮಕವಾದ ಸಂವಾದವುಳ್ಳ ಕಥೆಯೆಂದು ಕರೆಯಬಹುದು. ನಾಟಕಕಾರನ ಗುಣವಿದ್ದ ಹೊರತು ಸ್ವಭಾವಕ್ಕೆ ತಕ್ಕ ಸಂಭಾಷಣೆಯನ್ನು ಹಾಕುವದು ವಾಸುದೇವನಿಗೆ ಶಕ್ಯವಿರಲಿಲ್ಲ. ಆದರ ಕೂಡ ಯಾವ ಮಾತಿನ ಭಾವವು ಯಾರಿಗೆ ಹೇಗೆ ತೋರುತ್ತೆಂಬ ಮನೋವಿಕಾರಗಳನ್ನು ತೋರಿಸುವೋಲಿ ಗುರುತಿಸುವ ಮಾರ್ಮಿಕತೆಯಾದರೂ ವಾಸುದೇವನಲ್ಲಿ ನಟ್ಟಿದೆ. ಸ್ವಾಭಾವಿಕ ಚಿತ್ರವನ್ನಂತು ಅವನು ಸಹಜವಾಗಿ ಮಾಡುವನು. ಇದರಂತೆ ರೂಪ ವರ್ಣನೆ, ಪ್ರಕೃತಿ ವರ್ಣನೆ, ಪ್ರದೇಶ ವರ್ಣನೆ ಇವೆಲ್ಲವುಗಳೂ ಅವನ ಬಲಗೊಂಬೆಗಳು. ಅವನ ವರ್ಣನೆಯ ವಸ್ತುಗಳು ಅಕಲ್ಪಿತವಾದ ಅಥವಾ ಅತ್ಯದ್ಭುತವಾದ ಗುಣಗಳಿರುವದಿಲ್ಲ; ಎಲ್ಲರಿಗೂ ಗೊತ್ತಿದ್ದ ಸೃಷ್ಟಿ ಸೌಂದರ್ಯ. ಆದರೆ ಅವನ ಕಥಾರೀತಿಯೂ ವಾಕ್ಯರಚನೆಯೂ ಮನೋಹರ ಮೃದುವಾದವುಗಳು. ಅವನ ಎಲ್ಲ ವರ್ಣನೆಗಳಲ್ಲಿ ಅತೀವ ಸುಂದರವೆಂದು ಕರೆಯಿಸಿಕೊಳ್ಳಲಿಕ್ಕೆ ಯೋಗ್ಯವಾದ ಒಂದು ವಸಂತ ಮಾಸದ ವರ್ಣನೆ ಇದೆ. ಅದನ್ನು

ನೋಡದೆ ಮುಂದಿನ ಕಥೆಗೆ ಹೋಗುವ ಮನಸ್ಸೇ ಆಗುವಂತಿಲ್ಲ. "ವಸಂತ ರಾಜನ ಆಗಮನದ ಕಾಲವದು! ಗಿಡ ಬಳ್ಳಿಗಳಲ್ಲಿ ಹೊಸ ತಳಿರು ಹೂ ಮೊಗ್ಗೆಗಳನ್ನಾಂತು ನೋಟವಿಂದ ಜಗಜಗನೆ ಹೊಳೆಯುತ್ತಿದ್ದುವು. ಗಿಳಿ ಕೋಗಿಲೆ ಮುಂತಾದ ಚೆಲುವ ಹಕ್ಕಿಗಳು ಇನಿದಾದ ಸ್ವರಗೈದು ಉಬ್ಬಿನಿಂದ ಹಾಡುತ್ತಿದ್ದುವು. ಮುಂಜಾವಿನ ಎಳ ಬಿಸಿಲಿನ ಹೊಂಬಣ್ಣದಿಂದೊಪ್ಪುವ ಹಸಿರುಬಣ್ಣದ ಹೊಸ ಸೀರೆಯನ್ನುಟ್ಟು ಒಯ್ಯಾರದಿಂದ ಮಲ್ಲಿಗೆಗಳನ್ನಿಕ್ಕುತ್ತ ಅತ್ತಿತ್ತ ಸುಳಿದಾಡಿ ತನ್ನ ಸಿರಿಯನ್ನು ಕಂಡು ಹಿಗ್ಗಿ ಮುಗುಳು ನಗೆದೋರುತ್ತಿರುವ ವನಸಿರಿಯ ಚೆಲುವಿಕೆಯನ್ನು ಕಂಡು ಮನಸೋತವನಾಗಿ ಮಾರುತನು ಮೆಲ್ಲನೆ ಬಂದು ಆ ಗಾಡಿಗಾತಿಯನ್ನು ಬಿಗಿದಪ್ಪಿ ಅವಳ ಪೂಗಂಪಿನ ಮೊಗಕ್ಕೆ ಮುದ್ದಿಟ್ಟನು. ಎರಳೆ ನೋಟದ ಆ ಹರೆಯವು ಬೆದರಿ ನಿಂತು ತನ್ನ ಮೈ ಮುಟ್ಟಿಬಂದ ಅರಿವುಗೇಡಿ ಯಾರೆಂದು ಮುನಿಸಿನಿಂದ ಹೊರಳಿ ನೋಡಿದಳು. ಇದನ್ನು ಸರಿಯಲ್ಲವೆಂದು ತಂಬೆಲರನು ಆ ತಾಣವನ್ನು ಬಿಟ್ಟೋಡಿ ಗಿಡ ಬಳ್ಳಿಗಳನ್ನಲುಗುತ್ತ ಮುಗ್ಗುತ್ತ ಹೇಗೋ ಗುಲಾಬಾಯಿಯು ಕುಳಿತಿರುವ ಮನೆಯಲ್ಲಿ ಹೊಕ್ಕು ಅಡಗಿಕೊಂಡನು." ಗುಲಾಬಾಯಿಗೆ ಸಂಗೀತವನ್ನು ಕಲಿಸುವ ಧೊಂಡೋಪಂಥ ಘಂಟೇರೆಯವರ ಆಕೃತಿ ವರ್ಣನೆಯಾದರೂ ಮುದ್ದಾಗಿದೆ. ಉದಾಹರಣಾರ್ಥವಾಗಿ, ಮುಕ್ಕಾಡಿಸುವ ಆನೆಯು ಕಲ್ಲಿನಂತೆ ಮೋರೆಯತುಂಬೆಲ್ಲ ಹುಳುಕು. ಹೀಗೆ ಉಪಮೆಯನ್ನು ಸಮರ್ಪಕವಾಗಿ ನವೀನವಾಗಿ ಇಟ್ಟಿದೆ. ಇನ್ನು ಇಲ್ಲಿ ಕಥೆಯನ್ನೂ ಓದಿರೆಂದು ಹೇಳುವದೇ ದೊಡ್ಡ ಹರ್ಷಾನುಭವವಾಗಿದ್ದರೂ ಕೆಲವು ಮಾತಿನ ನವ್ಯತೆಗಳನ್ನು ತೋರಿಸುತ್ತೇನೆ:—(೧) ಶ್ಯಾಮರಾಯರು ಬಹು ಸುಶ್ರಾವ್ಯವಾಗಿ ಬಾರಿಸೆ ಬೆರಗಾಗಿ ಕುಳಿತಿರುವ ಗುಲಾಬಾಯಿಗೆ How is that Umpire? (ಹೇಗಾಯಿತು ನಿರ್ಣಾಯಕರೇ) ಎಂದು ಉತ್ಸುಕತೆಯಿಂದ ಕೇಳಿದರು. (೨) ಅತ್ತಿತ್ತ ಸುತ್ತಾಡಿ ಹರಟೆಯು ಅಶ್ವಮೇಧದ ಕುದುರೆಯಂತೆ ಸ್ತ್ರೀ ಸ್ವಾತಂತ್ರ್ಯದ ವಿಷಯವನ್ನು ಪ್ರವೇಶಿಸಿತು. (೩) ಇತಿ ಶ್ರೀ ಗುಲಾಬಾಯಿಕಾ ಶ್ಯಾಮರಾವ ವಾದೇ ಶ್ಯಾಮರಾವ ವಿಜಯೋನಾಮ ಪ್ರಥಮೋಧ್ಯಾಯಃ (೪) ಆಶ್ರಮ ವಾಸಿಯಾಗಿದ್ದು ನಗರ ವಾಸಿಗಳ ಕೌಟಿಲ್ಯವನ್ನರಿಯದ ಶಕುಂತಲೆಯೆಂಬ ಮುಗ್ಧ ವಧುವನ್ನು ಹಿಂದು ಹೆಂಡರ ಗಂಡನಾದ (परिग्रहबहुत्वेऽपि) ದುಷ್ಯಂತನು ವಂಚಿಸಲಿಲ್ಲೇ? (೫) वाचा दत्ता मया कन्या पुत्रार्थं याचिता त्वया ಇದರ ಆಧಾರದಿಂದ ಪತಿಯು ಕನ್ಯಾರ್ಥಿಯಾಗಿ ಹೋಗುವದು ಆರ್ಯರ ಪದ್ಧತಿಯು ಕೂಡ ಇರುವದೆಂದು ಸಿದ್ಧಾಂತವು. ಇವೆಲ್ಲ ವಿನೋದಗಳು ಪೂರ್ವಿಕರ ಶ್ಲೋಕಗಳಿಗೆ ಅಥವಾ ಕಥೆಗಳಿಗೆ ಹೊಸ ಅರ್ಥವನ್ನು ಕಲ್ಪಿಸಿದುದನ್ನೂ ಮಾತಿನಲ್ಲಿಯ ಹೊಸ ಬಗೆಗಳನ್ನೂ ತೋರಿಸುವದಿಲ್ಲವೆ? ಈ ಮಟ್ಟಿಗೆ ಕಥೆಯ ಸಂಪೂರ್ಣ ಸ್ವಾರಸ್ಯವು ಅರಿಕೆಯಾಗುವದೆಂದು ನಂಬಿ ನಾವು ಮುಂದಡಿಯಿಡುತ್ತೇವೆ.

೨. **ಗೃಹ ಕಥೆ.**—ಇದು ವಾಸುದೇವನ ಮೊದಲನೆಯ ವಿವಾಹ ತತ್ತ್ವವನ್ನೊಳಗೊಂಡ ಕಥೆಯಾಗಿ ಕಾಣಿಸುತ್ತದೆ. ಆ ತತ್ತ್ವವನ್ನು ವಾಸುದೇವನೇ

ಮನುಸ್ಮೃತಿಯಲ್ಲಿ ಹೇಳಿದ್ದಾನೆ. "ಸತಿಯು ಪತಿಯ, ಹಾಗೂ ಪತಿಯು ಸತಿಯ, ಮನೋವೃತ್ತಿಗಳನ್ನರಿತು ಪರಸ್ಪರ ಸಂತೋಷಗೊಳಿಸಿದರೆ ಮಾತ್ರ ಸಂಸಾರವು ಉಭಯರಿಗೂ ಸುಖಮಯವಾಗುವದು. ಹೊರತಾಗಿ ಅವರಲ್ಲಿ ಯಾರಾದರೂ ಅಹಂಭಾವಪ್ರೇರಿತರಾಗಿ ಪರರ ಮನೋವೃತ್ತಿಗಳನ್ನು ಲಕ್ಷಿಸದೆ ಸ್ವಸುಖಾಭಿಲಾಷಿಯಾದರೆ ಹೇಗೆ ಸಂಸಾರವು ಕಷ್ಟಮಯವಾಗುವದೆಂಬದನ್ನು ಈ ಚಿಕ್ಕ ಕಥೆಯಲ್ಲಿ ತೋರಿಸಿದೆ." ಇಬ್ಬರು ಸುಶಿಕ್ಷಿತ ತರುಣ ತರುಣಿಯರು, ದಿವಾಕರ ಪ್ರೇಮವಲ್ಲರಿಯರು ಮದುವೆಯಾಗುತ್ತಾರೆ. ವಲ್ಲರಿಯ ಅಜ್ಯವು ಮಿತಿಗೆಟ್ಟು ಬೆಳೆಯಲು ಅವಳು ಒಂದು ದಿವಸ ಹೇಳದೆ ಕೇಳದೆ ನಾಟಕಕ್ಕೆ ಹೋಗುತ್ತಾಳೆ. ಮರುದಿವಸ ಆ ಮೂಲಕ ಪರಸ್ಪರ ವೈಮನಸ್ಯವುಂಟಾಗುತ್ತದೆ. ಅನ್ನಪೂರ್ಣಾಬಾಯಿ ಎಂಬ ಸ್ವತಂತ್ರ ಸ್ತ್ರೀಯು ಬೋಧಿಸಿ ವಲ್ಲರಿಯನ್ನು ಹಾದಿಗೆ ತರುತ್ತಾಳೆ. ಅವಳ ಉಪದೇಶವೆಂದರೆ "ರಾಯರಿಗೆ ನೀವು ಮಾಡಿಕೊಟ್ಟ ತಾಂಬೂಲವನ್ನು ಸೇವಿಸುವದು ಬಲು ಅಕ್ಕರೆ. ಅವರು ಪ್ರೇಮದಿಂದ ನಿಮ್ಮ ತುರುಬಿಗೆ ಹಾರವನ್ನು ತೊಡಿಸಿದರೆಂದು ತಿಳಿಯಿರಿ. ಆ ಸೊಬಗು ಸ್ವರ್ಗದ ಪುಷ್ಪವೃಷ್ಟಿಯಿಂದಾದರೂ ಬರಬಲ್ಲದೇ?" ಇದೇ ತತ್ವದ ಸಲುವಾಗಿ ಬರೆದ ಕಥೆಯಿದು. ಈ ಕಥೆಗೆ ವಸ್ತು ವಿಶೇಷವಿಲ್ಲದಿದ್ದರೂ ಕತೆಗಾರನು ವಿಸ್ತಾರಕ್ಕೆ ಅನುಕೂಲವಾದ ಸಹಜವಾದ ಪ್ರಸಂಗಗಳನ್ನು ತಂದಿದ್ದಾನೆ. ಆ ಕಲಿತ ಹುಡುಗ-ಹುಡುಗಿಯರ ಪ್ರೇಮವು ಎಲ್ಲಿ ಕೂಡಿತು ಎಂಬುದಕ್ಕೆ ವಲ್ಲರಿಯು ಒಂದು "Sonnet" ನ್ನು ಸುಸ್ವರದಲ್ಲಿ ಎನ್ನುತ್ತ ಸಮುದ್ರತೀರದಲ್ಲಿ ನಿಂತ ಪ್ರಸಂಗವನ್ನು ಬರಮಾಡಿದ್ದಾನೆ. ಆದರೆ ತತ್ವವು ಮನಗಾಣುವಂತೆ ಮಾಡಲಿಕ್ಕೆ ನಾಟಕದ ಪ್ರಸಂಗಕ್ಕಿಂತ ಬೇರೊಂದು ಚಟವಟಿಕೆಯು ಬೇಕಾಗಿತ್ತು. ಯಾಕೆಂದರೆ, ಇಷ್ಟು ಮಾತಿಗೇ ಹಚ್ಚಿಕೊಳ್ಳುವಷ್ಟು ಸ್ತ್ರೀಯರು ಇರುವದಿಲ್ಲ. ವಲ್ಲರಿಯಂತೆ ಅವಳ ಮನಸ್ಸಿನ ಮೇಲೆ ಅದರ ಪರಿಣಾಮವಾಯಿತು.

೩. ಪ್ರಕೃತಿ ಬಲ.—ಇದು ಒಂದು ವಿವಾಹದ ಸಮಸ್ಯೆ. ವತ್ಸಲೆ ನಾಯಕಿಯು. ಆನಂದರಾಯನು ನಾಯಕನು. ಪ್ರಕೃತಿ ಬಲದಿಂದ ಕೂಡಿದ ಪ್ರೀತಿಯು ಬಿಡಲಾರದೆಂಬುವದೇ ಕಥೆಯ ಸಾರ. ವತ್ಸಲೆಯು ಅಂದಂತೆ "ಪ್ರೇಮವೇ ನೀನೆಷ್ಟು ಉದ್ಭವಿಸಿದೆಯೆಂದರೆ ಎಷ್ಟು ಕಡಿಕಡಿದು ಹಾಕಿದರೂ ನಿನ್ನ ಬೇರುಗಳು ಇಲ್ಲದಂತಾಗುವದಿಲ್ಲವಲ್ಲ" ಇದೇ ಪ್ರಕೃತಿ ಬಲವು. ಆದರೆ ಪ್ರೀತಿಯಿಂದ ಪ್ರಣಯಿಗಳು ಕೂಡಿದ್ದಲ್ಲಿ ಮನೆತನಗಳು ಕೂಡಿರುವದಿಲ್ಲ. ತದನುರೋಧವಾಗಿ ವತ್ಸಲೆಯು ಬೇರಾದವನ ಪಾಣಿಗ್ರಹಣವನ್ನು ಮಾಡಬೇಕಾಗುತ್ತದೆ. ಆದರೆ ಆನಂದರಾಯನ ಪತಿಯಾಗಲಿಲ್ಲವೆಂದು ಅವಳಿಗೆ ಬಹಳ ಖೇದವಾಗುತ್ತದೆ. ಯಾಕೆಂದರೆ ಅವನು ಬದಿಯೆತ್ತಿ ಕೊಟ್ಟ ಪತಿಯು. ಇತ್ತ ಹೋಮ ಹವನದಿಂದ ಕೊಟ್ಟ ಪತಿಯಾದರೂ ಸುಖದಿಂದಿರಬೇಡವೇ? ದುರ್ವ್ಯಸನಕ್ಕೆ ಬಿದ್ದು ಹೋಗುತ್ತಾನೆ. ಮುಂದೆ ಸತ್ತು ಹೋಗುತ್ತಾನೆ. ಆಗ ವತ್ಸಲೆಯು ಅತ್ತು ಸುಮ್ಮ

ನಾದಳು. ಆನಂದರಾಯನು ಕನಿಕರಪಟ್ಟನು. ಆದರೆ ಉಪಾಯವು ತೋರಲಿಲ್ಲ. ವತ್ಸಲೆಯ ತಂದೆಯು ಮಾತ್ರ ಮನಸ್ಸಿಗೆ ತೆಗೆದುಕೊಂಡು ಆನಂದರಾಯನ ಕೂಡೆ ಪುನರ್ವಿವಾಹವನ್ನು ತಂದುಕೊಡುತ್ತಾನೆ. ಪುನರ್ವಿವಾಹವು ರೂಢಿಯಲ್ಲಿ ನಿಷಿದ್ಧವಾಗಿದ್ದರೂ ಇಲ್ಲಿ ವಾಸುದೇವನು ಅದಕ್ಕೊಂದು ಸಮಂಜಸ ಸ್ವರೂಪವನ್ನು ಕೊಟ್ಟಿದ್ದಾನೆ. ಯಾಕೆಂದರೆ ಮೊದಲನೆಯ ಪತಿಯನ್ನು ವತ್ಸಲೆಯು ಕಂಡಿದ್ದಿಲ್ಲ. ಮೇಲಾಗಿ ಅವನು ದುರಾಚಾರಿಯು, ಅಸಹ್ಯನು; ಮೃತನಾಗಿ ಬಿಟ್ಟಿದ್ದನು. ಪ್ರಕೃತಿ ಮೊದಲಿಂದ ಆನಂದರಾಯನಲ್ಲಿ ಪ್ರೇಮವಿತ್ತು. ಇಂಥ ಹೊತ್ತಿನಲ್ಲಿ ಪುನರ್ವಿವಾಹವು ಒಬ್ಬ ತರುಣಿಗೆ ಅವ್ಯಭಿಚಾರವೆಂದೂ ಸ್ಪೃಹಣೀಯವೆಂದೂ ತೋರಿಸಲ್ಪಟ್ಟಿದೆ. ಈ ಕಥೆಯಲ್ಲಿ ವರ್ಣನೆಯು ವಾಸುದೇವನಿಗೆ ಚಿತ್ರಕಾರನ ಕಲೆಯನ್ನು ತಂದುಕೊಟ್ಟಿದೆ. ಮಕರ ಸಂಕ್ರಮಣದ ಹಬ್ಬವು ಕಥೆಯನ್ನು ಆರಂಭಮಾಡಿದೆ. ಅಲ್ಲಿ ಮೈಸೂರ ನಗರ ಲಕ್ಷ್ಮಿಯನ್ನು ಭಾವಿಸಿ ಕತೆಗಾರನು ಸರಸ ಕವಿಯಾಗಿಬಿಟ್ಟಿದ್ದಾನೆ.

೪. ಪ್ರಥಮ ದರ್ಶನದ ಪ್ರೇಮವು.—ಇದೊಂದು ಕಾಲೇಜಿನಲ್ಲಿಯ Romantic Love ಅಥವಾ ಅದ್ಭುತ ಪ್ರೀತಿಯ ವರ್ಣನೆ. ಕುಸುಮಪುರವೆಂಬಲ್ಲಿ ಒಂದು ಕಾಲೇಜು. ಅಲ್ಲಿ ಧ್ರುವರಾಯನು ತೇರ್ಗಡೆಹೊಂದಿ ತನ್ನ ಬುದ್ಧಿ ಗೌರವದಿಂದ ಫೆಲೋ ಆಗುತ್ತಾನೆ. ರಮಾಸುಂದರಿಯೆಂಬ ವಿದ್ಯಾರ್ಥಿನಿಯು ಹೇಗೆ ಅವನನ್ನು ಪ್ರೀತಿಸ ಬಂದಳೆಂಬುದೇ ಈ ಕಥೆಯ ಕೈವಲ್ಯ. ಮೊದಲು ಧ್ರುವರಾಯನ ಹೆಸರುಗೊಂಡ ನಿಬಂಧವನ್ನು ಓದಲಿಕ್ಕೆ ತರಿಸಿ ರಮಾಸುಂದರಿಯು ಅವನ ವಿಷಯಕ್ಕೆ ಮಾನಾದರಗಳನ್ನು ತಾಳಿ ಮುಂದೆ ಅವನು ಪ್ರಸಂಗವಶಾತ್ ಕ್ಲಾಸಿನಲ್ಲಿ ಕಲಿಸಲಿಕ್ಕೆ ಬಂದಾಗ ಮಾತಾಡಿಸುತ್ತ ಹೇಗೆ ಮೋಹದಲ್ಲಿ ಕೆಡಹಿದಳೆಂಬುದೇ ಈ ಪ್ರೀತಿ ಕಥೆಯ ಪಲ್ಲವಿಯು. ಆಗ ಪ್ರಥಮ ದರ್ಶನದ ಪ್ರೇಮವನ್ನು ಕತೆಗಾರನು ಚಿತ್ರ ಬರೆಯಲಿಕ್ಕೂ ಅಸಾಧ್ಯವಾಗುವಂತೆ ಈ ಬಗೆಯಾಗಿ ಬಣ್ಣಿಸಿದ್ದಾನೆ. “ಇತ್ತ ನೋಟಕ್ಕೆ ಹಾದಿ ಕಟ್ಟಾಗಲು ಆ ನೋಟವು ಫಕ್ಕನೆ ಧ್ರುವರಾಯನ ಮುಖದ ಕಡೆಗೆ ಧಾವಿಸಿತು. ಹಗಲು ಪಂಜಿನ ಚಮತ್ಕಾರವಾದ ಪ್ರಕಾಶಗಳಲ್ಲಿ ವಸ್ತುಗಳ ಸೌಂದರ್ಯವು ಎದ್ದುಕಾಣುವಂತೆ ರಮಾಸುಂದರಿಯ ಹೃದಯದಲ್ಲಿ ಉದ್ಭವಿಸಿದ ಕೆಲವೊಂದು ನೂತನವಾದ ಜ್ಯೋತಿಯ ಮೂಲಕ ಧ್ರುವರಾಯನ ಮುಖದ ಸೌಂದರ್ಯವು ಆ ಕ್ಷಣದಲ್ಲಿ ಮನ್ಮಥನ ಸೌಂದರ್ಯವಾಗಿ ಕಂಡಿತು. ಒಂದು ಪಳದ ಎಷ್ಟನೆಯಂಶವೋ ಅಷ್ಟು ಅಲ್ಪಕಾಲಮಾತ್ರ ರಮಾಸುಂದರಿಯ ದೃಷ್ಟಿಯು ಸಾಭಿಲಾಷವಾಗಿ ಧ್ರುವರಾಯನ ಮುಖಚಂದ್ರಮನಲ್ಲಿ ನೆಲಸಿದ್ದರೂ ಆ ಅಲ್ಪಾವಧಿಯಲ್ಲಿ ಅನುರಾಗಯುಕ್ತವಾದವುಗಳಾದ ಮೂರ್ತಿಗಳು ಪರಸ್ಪರ ಹೃದಯ ಪಟಗಳ ಮೇಲೆ ಬಿಂಬಿತವಾದವು (ಫೋಟೋ ಹೊರಟವು). ಇದೊಂದು ವರ್ಣನೆಯಲ್ಲಿಯೇ ಈ ಕಥೆಯ ಅಥವಾ ಸಮಗ್ರ ವಾಸುದೇವೀಯ ಕಲೆಯ ಪ್ರಧಾನ ಗುಣವು. ಹಿಂದೆ ಹೇಳಿದ ವಸಂತ ವರ್ಣನೆಯನ್ನು ಇದಕ್ಕೆ ಜೋಡಿಸಿದರೆ ಪ್ರಕೃತಿಯ ವರ್ಣನೆಗಳಿಂದ ಈ ದಾಂಪತ್ಯವನ್ನು ಪ್ರತಿಯೊಬ್ಬರೂ ನೆನಸುವಂತಿದೆ.

೫. ಮಲ್ಲೇಶಿಯ ನಲ್ಲೆಯರು.—ಇದು ಒಕ್ಕಲಿಗರ ನಡೆನುಡಿಗಳನ್ನು ಸಾಹಿತ್ಯಕ್ಕೆ ಒಪ್ಪುವಂತೆ ತೋರಿಸಿದ ಉತ್ತಮ ಕಥೆಯು. ಎಷ್ಟೋ ಕಥೆಗಳಲ್ಲಿ ನಾವು ಬ್ರಾಹ್ಮಣರ ಹೆಸರುಗಳನ್ನೂ ಅವರ ಸಂಸ್ಕೃತಿಗಳನ್ನೂ ಓದುತ್ತೇವೆ. ವೀರಶೈವರು ಕಥೆ ಬರೆದರೂ ಕೂಡ ಗಂಗಾಬಾಯಿ ತುಂಗಾಬಾಯಿ ಬರುವವರೇ! ಅದೇನೋ ರೂಢವಾಗಿದೆ. ಆದರೆ ವಾಸುದೇವನು ಈ ಕಥೆಯನ್ನು ಬರೆದು ತನ್ನ ಕಲಾನೈಪುಣ್ಯಕ್ಕೆ ಬೇರೆ ಹೊಸ ಹಾದಿಯನ್ನು ತೋರಿಸಿದ್ದಾನೆ. ಯಾರಾದರೂ ವಾಙ್ಮಯಕ್ಕೆ ತಕ್ಕ ವಿಚಾರ ಉಚ್ಚಾರಗಳು ಹಳ್ಳಿಯ ಜನರಲ್ಲಿ ಇಲ್ಲವೆಂದು ಆಕ್ಷೇಪಿಸಬಹುದು. ಆದರೆ ಈ ಕಥೆಯನ್ನು ಓದಿದರೆ ಎಷ್ಟು ರಸವು ತಾನೆ ಇರುವದೆಂಬುದು ಸ್ಪಷ್ಟವಾಗುತ್ತದೆ. ಕಥೆಯ ತಾತ್ಪರ್ಯ—ಮಲ್ಲೇಶಿಯು ಹೇಮರಡ್ಡಿಯ ನಂಬುಗೆಯ ಆಳು. ಅನ್ನನೆಂದರೆ ಗೊತ್ತಿಲ್ಲದ ಕೂಸು! ಗಂಗಾಬಾಯಿಯು ಪುರುಷರನ್ನು ಸ್ಪೃಶ್ಯರೆಂದೂ ಅಸ್ಪೃಶ್ಯರೆಂದೂ ನೋಡಲು ತಿಳಿದಿದ್ದರೆ, ಮಲ್ಲೇಶಿಗೆ ಸ್ತ್ರೀಯರು ಲಗ್ನವಾಗತಕ್ಕವರೆಂಬ ಕಲ್ಪನೆಯೇ ಇದ್ದಿಲ್ಲ. ಒಡೆಯನ ಮಾತು ಕೇಳಿ ತನ್ನ ಹೆಂಡತಿಯ ಶೋಧಾರ್ಥವಾಗಿ ಅವನು ಊರಲ್ಲಿ ತಿರುಗುತ್ತಾನೆ. ತರತರದ ಹರೆಯದ ಹುಡುಗಿಯರನ್ನು ಬೀದಿಯಲ್ಲಿ ಮಾತನಾಡಿಸುತ್ತಾನೆ. ಮೂವರು ನಾಲ್ವರು ಸ್ತ್ರೀಯರು ಸುಮ್ಮನೆ ನಲ್ಲೆಯರಾದಂತೆ ವಚನ ಕೊಡುತ್ತಾರೆ. ಅದೆಲ್ಲ ಹುಸಿಯಾಗಿ ಒಂದು ಕಾರಣಾಂತರದಿಂದ ಒಡೆಯನ ಮನೆಯಲ್ಲಿ ದುಡಿಯಲಿಕ್ಕೆ ಬಂದ ಸ್ತ್ರೀಯು ಅವನಿಗೆ ಹೆಂಡತಿಯಾಗುತ್ತಾಳೆ. ತತ್ಪೂರ್ವವಾದ ಅವರಿಬ್ಬರ ಶುದ್ಧ ಭಾವಗಳನ್ನೂ ಪ್ರೀತಿಯ ಮಾತುಗಳನ್ನೂ ವಾಸುದೇವನು ದುಷ್ಯಂತ ಶಕುಂತಲೆಯರನ್ನು ನೆನಸುವಂತೆ ಇಟ್ಟಿದ್ದಾನೆ. ''ಓ ಅಮೃತ ಹಸ್ತವೇ! ಓ ಶ್ರೀಗಂಧದ ಲೇಪನೇ!' ಹೀಗೆನ್ನುವ ಮಲ್ಲೇಶಿಯು ಮುಗ್ಧನಾಗಬಹುದೇ ಎಂದು ಸಂಶಯವು ಬರುತ್ತದೆ. ಅಂತು ಸ್ವಲ್ಪ ಅತ್ಯುಕ್ತಿಯಾಗಿದೆ.

೬. ಮೂಢಭಕ್ತಿಯ ದುಷ್ಪರಿಣಾಮಗಳು.—ಹೆಸರಿನಿಂದಲೇ ವಿಷಯವು ತಿಳಿದರೂ ಈ ವಿಷಯದಮೇಲೆ ಇದೊಂದು ನಿಬಂಧವೆಂಬಂತೆ ತೋರಬಹುದು. ಆದರೆ ಕೇಳ್ವಿಗಾಥೆಯಲ್ಲಿ (ಸಟೆಯಾದದ್ದೋ ದಿಟವಾದದ್ದೋ) ಕಾಶೀಯಾತ್ರೆಯನ್ನು ಮಾಡಿ ತಿರುಗಿಬಂದ ಒಬ್ಬ ಆಚಾರ್ಯರ ಕೂಡ ತನ್ನ ಸಂವಾದವನ್ನು ವಾಸುದೇವನು ಇಲ್ಲಿ ಕೊಟ್ಟಿದ್ದಾನೆ. ಕಥೆಯ ರುಚಿಯು ಕೆಡದಂತೆ ಮಾತು ಕಥೆಗಳಾಗಿವೆ. ಯಾತ್ರೆಗೆ ಹೋಗಿ ಬಂದ ಆಚಾರ್ಯವರ್ಯರು ಎಷ್ಟೋ ಕ್ಷೇತ್ರ ಮಹಿಮೆಗಳನ್ನು ನಂಬುತ್ತಾರೆ. ಆದರೆ ಅವೆಲ್ಲ ಮೂಢ ಭಕ್ತಿಯ ಪರಿಣಾಮಗಳೆಂದೂ ಮೋಡಿಕಾರನ ಆಟದಂತೆ ಮೋಸಗಳೆಂದೂ ಪ್ರತಿವಾದಿಯಿಂದ ನಿರ್ಣಯವಾಗುತ್ತದೆ. ಈಗ ಸಾಧುಗಳಂತೆ ನಟಿಸುವ ಜನರು ಹೇಗೆ ಟೊಪ್ಪಿಗೆಯನ್ನು ಹಾಕುವರೆಂಬುದನ್ನು ವರ್ಣಿಸಿದೆ. ಅದರಲ್ಲಿ ಹಾಸ್ಯೋತ್ಪಾದಕವಾದ ಒಂದು ಸಂಗತಿಯೆಂದರೆ ''ಒಬ್ಬ ಮುದಿಗೆ ಮುಂಬಗೆನ್ನುವವನು ಕೆಲವು ವೇಷದ ಕಪ್ಪೆಗಳನ್ನು ಸಂಪಾದಿಸಿ ಹಳ್ಳಿಗೆ ಬಂದು 'ನೋಡಿರಿ, ಇಲ್ಲಿಯ ಜನರು

ಸಾಧುಗಳು; ಅವರಲ್ಲಿ ದಾನಧರ್ಮಗಳಿಲ್ಲ. ಇಂಥವರನ್ನು ಸುಟ್ಟು ಬೂದಿ ಮಾಡಲು ಅವನ್ನು ದುರ್ಗಮ್ಮನು ಅಗ್ನಿದೇವರನ್ನು ಆಜ್ಞಾಪಿಸಿರುವಳು. ಅಗ್ನಿ ದೇವರನ್ನು ಕರೆಯುತ್ತೀರೋ ದಾನಮಾಡುತ್ತೀರೋ' ಎಂದವನೆ ಚರಕ್ಕನೆ ಒಂದು ಕಡ್ಡಿಯನ್ನು ಕೊರೆಯುವನು" ಹೀಗೆ ಮರುಳರಾಗದೆ ನಿಜವಾದ ದೇವರ ಮಹಿಮೆಯನ್ನು ಕಂಡು ಅದರಲ್ಲಿ ಶ್ರದ್ಧೆಯನ್ನಿಟ್ಟು ನಡೆಯಬೇಕೆಂದು ಇದರ ಉಪಸಂಹಾರವಾಗಿದೆ. ಆಚಾರ್ಯರ ಪ್ರಶ್ನೋತ್ತರವಾದ ವಿಚಿತ್ರ ವೇಷದ ವರ್ಣನೆಯ ಹೊರತು ಕಥಾ ಕಲೆಯು ಇದರಲ್ಲಿ ವಿಪುಲವಾಗಿಲ್ಲ.

೭. ಐತಿಹಾಸಿಕ ನರಗುಂದದ ಸಾವಿತ್ರೀಬಾಯಿ (ಐತಿಹ್ಯ).—ಹಿಂದಿನ ಕಥೆಗಳಲ್ಲಿ ವಸ್ತುಗಳನ್ನು ಕೂಡ ಕತೆಗಾರನು ತಾನೇ ಕಲ್ಪಿಸಿಕೊಳ್ಳಬೇಕಾಗಿತ್ತು. ಆದರೆ ಇಲ್ಲಿ ಸಂವಿಧಾನಕವು ಸಜ್ಜಾಗಿರುತ್ತದೆ; ಮರ್ಮಜ್ಞನಾಗಿ ಚಿತ್ರಚಿತ್ರವಾಗಿ ಬಿಡಿಬಿಡಿಸಿ ಬೆಳಗಿಸುವದೇ ಕಥೆ ಬರೆಯುವವನ ಕಲಾ ಸೌಂದರ್ಯ. ಇಲ್ಲಿ ಕಥೆಯೇನೋ ಚಿಕ್ಕದು. ನರಗುಂದದ ರಾಜ್ಯವು ಹಾಳಾಗಿ ವೈರಿ ವಶವಾಗಲು ಅತ್ತೆಯೊಂದಿಗೆ ಸಾವಿತ್ರೀಬಾಯಿಯು ನದಿಯಲ್ಲಿ ಧುಮುಕಿ ಸತ್ತ ವೃತ್ತಾಂತವು. ಆದರೆ ವಿಸ್ತಾರಕ್ಕೆ ವಾಸುದೇವನೇ ಕಾರಣನು. ಅಂಥ ಸುಂದರ ಭಾಗಗಳನ್ನು ಇಲ್ಲಿ ಸಾದರಿಸುತ್ತೇವೆ:—

(೧) ಮಕರಂದಮಯವಾದ ಪುಷ್ಪಗಳಲ್ಲಿಯ ಸಾರವನ್ನು ಸಂಗ್ರಹಿಸುವಾಗ ಗಂಧಿಗನು ಅವುಗಳನ್ನು ಹಿಂಡಿ ಹಿಪ್ಪೆಯಾಗಿ ಮಾಡುವಂತೆ ಸುಚರಿತೆಯರ ಸ್ವಭಾವಗಳನ್ನು ಪರೀಕ್ಷಿಸುವದಕ್ಕಾಗಿ ಪರಮಾತ್ಮನು ಅವರನ್ನು ಬಾಧೆಗೀಡುಮಾಡುವದುಂಟು.

(೨) ಕೋಟೆಗೆ ಮುತ್ತಿಗೆ ಬಿದ್ದಾಗ ಜೀವ ಹೋದರೂ ತನ್ನ ಜನಿವಾರ ವೊಂದುಳಿಯಲೆಂದು ಚಿಂತಿಸಿ ಸಾಧು ಭಾವನಾದ ಬ್ರಾಹ್ಮಣನೊಬ್ಬನು ತನ್ನ ಯಜ್ಞೋಪವೀತವನ್ನು ಬೊಂಕದಲ್ಲಿಯ ಪಂಚೆಯಲ್ಲಿ ಅಡಗಿಸಿಟ್ಟು ವೆಂಕಟೇಶ ಸ್ತೋತ್ರವನ್ನು ಆರಂಭದಿಂದ संग्रामे रिपुसंकटे ದವರೆಗೆ ಕಣ್ಣುಮುಚ್ಚಿ ಪಠಿಸುವಷ್ಟರಲ್ಲಿ ಸೋಲ್ಜರನೊಬ್ಬನು ಆ ಬಡಬ್ರಾಹ್ಮಣನ ಬೆನ್ನಮೇಲೆ ಒಳಿತಾಗಿ ಗುದ್ದಿ ಅವನ ಮನೆಯಲ್ಲಿದ್ದ ವಸ್ತುಗಳನ್ನೆಲ್ಲ ಎತ್ತಿಕೊಂಡು ನಡೆದನು.

(೩) 'ಸಾವಿತ್ರೀ ಪುರಾಣದಲ್ಲಿಯ ಸಾವಿತ್ರಿಗೆ ಮಿಗಿಲಾದ ಇನ್ನು ಸಾವಿತ್ರೀ'.

(೪) ಸಾವಿತ್ರೀಬಾಯಿಯು ಹಾದಿಯಲ್ಲಿ ಹೋಗುವಾಗೆಂದದ್ದು "ಪರಮಾತ್ಮ ಕೃಷ್ಣನು 'सुखदुःखे समेकृत्वा' ಎಂದು ಹೇಳುವಾಗ ಸುಲಭವಾಯಿತು. ಈ ದುಃಖವನ್ನು ಅನುಭವಿಸಲು ಬರಬಾರದೇ."

೮. ಪತಿಗಳ ಸ್ವಾತಂತ್ರ್ಯಹಾನಿಯು.—ಇಲ್ಲಿಯ ಐತಿಹ್ಯವೆಂದರೆ ಸುಧಾ ಲಹರೀ ಸುರೇಂದ್ರರಾಜ ರಾಜ್ಞಿಯರ ಅತಿಶಯ ಪ್ರೀತಿ. ಅದನ್ನು

ಅನುಕರಣ ಮಾಡಬೇಕೆಂದು ನಾಗರಿಕ ನಾರಿಯರು ಗಂಡಂದಿರ ಜೀವವನ್ನು ಅರಿಯುತ್ತಾರೆ. ಸೇವೆಯನ್ನು ಮಾಡಿಸಿಕೊಳ್ಳುತ್ತಾರೆ. 'किमपि किमपि मंदं . . . अविदितगतयामा रात्रिरेवं व्यरंसीत्' ಎಂಬಂತೆ ಅನುರತವಾಗಿ ಪ್ರೇಮ ಸಂಯೋಗದಲ್ಲಿದ್ದ ಅರಸು ಅರಸಿಯರು ಅವರಿಗೆ ಇದನ್ನೆಲ್ಲ ಕಲಿಸಿಕೊಟ್ಟಂತೆ ಆಗುತ್ತದೆ. ಅದೇ ಮುಟ್ಟು ಬಿಡದು. ಆ ಲಲನೆಯರು ಕೆಲಸ ಬೊಗಸೆಗಳನ್ನು ಬಿಟ್ಟು "ಗಂಡನಾಗಬಲ್ಲ ಪುರುಷನೇ, ರಾಜನು ರಾಣಿಯವರನ್ನು ಪ್ರೀತಿಸುವಂತೆ ನೀನು ನನ್ನನ್ನು ಪ್ರೀತಿಸದಿರಲು ಏನು ಬೇನೆ" ಎಂದು ಸ್ತ್ರೀ ಸ್ವಾತಂತ್ರ್ಯವನ್ನು ಸಮರ್ಥಿಸುತ್ತಾರೆ. ಪುರುಷರು ನಿರುಪಾಯರಾಗಿ ಅವರ ದೀನ ದಾಸರಾಗುತ್ತಾರೆ. ರಾಜನು ಕೂಡ ಕೇಳದಾಗುತ್ತಾನೆ. ಎಂದಕ್ಕೊಮ್ಮೆ ಇಂಥದೊಂದು ಸ್ತ್ರೀ ಸಾಮ್ರಾಜ್ಯದ ಕಥೆಯನ್ನು ಓದಿದ್ದೆವು. ಅದರಲ್ಲಿ ಎಲ್ಲವೂ ವಿಪರೀತವಾಗಿತ್ತು. ವೇಶ್ಯೆಯರಂತೆ ಸ್ತ್ರೀಯರ ಬರುವಿಕೆಯ ಹಾದಿಯನ್ನು ನೋಡುತ್ತ ಗಡ್ಡ ಮೀಸೆಗಳಿಗೆ ಭೂಷಣಗಳನ್ನಿಟ್ಟು ಪುರುಷರು ಸಂಜೆಯಲ್ಲಿ ಕೂಡುತ್ತಿದ್ದರು. ಆ ಪ್ರಕಾರವಾದ ಕಥೆಯು ಒಂದಾದರೂ ಇದೆ. ಈ ಕಥೆಗೆ ಐತಿಹ್ಯವು ತಳಹದಿಯು. ಕಲ್ಪನೆಯು ಕಂಥವಿದ್ದಂತೆ. ಸಮಾಜ ಪರವಾದ ಟೀಕೆಯು ತೊಲೆ ಜಂತೆಯಂತೆ. ಇದರ ಜೇಪುಗಲ್ಲುಗಳೆಂದರೆ ಚಿಕ್ಕ ಚಿಕ್ಕ ವರ್ಣನೆಗಳು. ಅದರ ಮಾದರಿಯನ್ನೊಂದನ್ನು ಇಲ್ಲಿ ಕೊಟ್ಟಿದೆ. "ನೀಲಾಳಕಿಯರು ತಮ್ಮ ಹಿಕ್ಕಿದ ಕೂದಲುಗಳನ್ನೂ ಜಂತಣಿಗೆಗಳನ್ನೂ ಹಾಗೆಯೇ ಬಿಟಕೊಂಡು ಬಂದಿದ್ದರು. ಮೈ ತೊಳೆದು ಸೀರೆಯನ್ನುಟ್ಟುಕೊಂಡ ಸುಸ್ನಾತೆಯರು ಕುಪ್ಪುಸವನ್ನು ತೊಡುವ ವಿಚಾರವನ್ನು ಬಿಟ್ಟು ಬಂದಿದ್ದರು. ಹಂಚಿನ ಮೇಲೆ ಹೋಳಿಗೆಯು ಹೊತ್ತಲೊಲ್ಲದೇಕೆಂದು ಬಿಟ್ಟುಕೊಟ್ಟು ಕೆಲವರು ನಡೆದರು. ಕೆಲವರ ಕೈಯಲ್ಲಿ ಸಂಮಾರ್ಜನಿಗಳು, ಕೆಲವರ ಕೈಯಲ್ಲಿ ಲಟ್ಟಣಿಗೆಗಳಿದ್ದವು. ಉಂಡು ಕೈ ಬಾಯಿ ತೊಳೆದುಕೊಳ್ಳುವ ಎಚ್ಚರವು ಕೆಲವರಿಗಿಲ್ಲ. ಹೀಗೆ ಸ್ತ್ರೀ ಸೇನೆಯು ರಾಜ ರಾಣಿಯರ ರಕ್ಷಣಾರ್ಥವಾಗಿ ಸಾಗಿಬಂತು." ಇನ್ನು ಈ ಕಥೆಯಲ್ಲಿಯ ಉತ್ತಮ ವಿನೋದವೊಂದನ್ನು ಉದಾಹರಿಸಿ ಮುಂದುವರಿಯುತ್ತೇನೆ. "ಈ ದಶಾಸ್ಯನು ಹತ್ತು ಬಾಯಿಗಳಿಂದಲೂ ಉಣ್ಣಬೇಕಾಗುತ್ತಿತ್ತೋ? ಒಂದೇ ಬಾಯಿಂದ ಉಣ್ಣುವ ಕೆಲಸವಾಗುತ್ತಿದ್ದರೆ ಆವನು ತನ್ನ ಬಾಯಿಗಳನ್ನೆಲ್ಲ ಎಂಜಲು ಮಾಡಿಕೊಳ್ಳುತ್ತಿದ್ದಿಲ್ಲ; ನಾಪಿತನು ಇವನ ಹತ್ತು ತಲೆಯ ಕ್ಷೌರವನ್ನು ತೀರಿಸುವಷ್ಟರಲ್ಲಿಯೇ ಮೊದಲನೆಯ ತಲೆಯು ಮತ್ತೆ ಬೇರೆ ಕ್ಷೌರಕ್ಕೆ ಯೋಗ್ಯವಾಗುತ್ತಿದ್ದಿಲ್ಲವೆ?"

೯. ಎದೆಯ ಮೇಲಿನ ಕಲ್ಲು ಇಳಿಯಿತು.--ಸಮಾಜ ಯುಸುಫಖಾನನ ಆತ್ಮಚರಿತ್ರವು. ಇದೇನು ಐತಿಹ್ಯವೋ ಕಲ್ಪಿತವೋ ಚೆನ್ನಾಗಿ ತಿಳಿಯದು. ಯುಸುಫ ರಸೂಲಹಕ್ಕ ಸೂರಜಬ್ಬೀಸಾ ಇವೇ ಮೊದಲಾದ ಹೆಸರುಗಳು ಮಾತ್ರ ಇತಿಹಾಸದಿಂದ ಬಂದಿವೆ. ಹೇಗಾದರೂ ಸಮಸ್ತರಚನೆಯು ಕವಿಯ ಕಲ್ಪನಾಶಕ್ತಿಯನ್ನು ಒಳಿತಾಗಿ ತೋರಿದೆ. ದೈವವುಳ್ಳ ಯುಸುಫನು ನೃಪ ಹಿತನಾಗುತ್ತಾನೆ.

ಒಬ್ಬ ಫಕೀರನು ಅವನನ್ನು ಒಯ್ದು 'ಮೌನ ಮಂದಿರ'ದಲ್ಲಿ ಇರಿಸುತ್ತಾನೆ. ಇದಿಷ್ಟು ಹೇಳಲಿಕ್ಕೆ ಐದಾರು ಪುಟಗಳು ಬೇಕಾಗಿವೆ. ಅಲ್ಲಿಯು ನಿಯಮದಂತೆ ಸೂರಜುನ್ನೀಸಳ ತಂದೆಯು ವಧವನ್ನು ಮಾಡುವ ಪ್ರಸಂಗವು ಬರುತ್ತದೆ. ಆದರೆ ಸೂರಜುನ್ನೀಸಳು ಅವನ ಸಂಜೀವಪ್ರಾಣ. ಇತ್ತ ಬಿಟ್ಟರೆ ತನ್ನ ವಧವಾಗುತ್ತಿತ್ತು. ಅವನು ಯತ್ನವಾಡದೆ ಸುಮ್ಮನೆ ತೊಳಲುತ್ತಾನೆ. ಯೋಗಾಯೋಗದಿಂದ ಆ ತಂದೆಯು ಹೊತ್ತಿಗೆ ರೋಗದಿಂದ ಸಾಯುತ್ತಾನೆ. ಆಗ ಎದೆಯ ಮೇಲಿನ ಕಲ್ಲು ಇಳಿಯಿತು. ಇನ್ನು 'ಮೌನಮಂದಿರ'ದ ವರ್ಣನೆಯು ಭಯಾನಕವಾಗಿದೆ. ಘೋರ ದೀವಿಗೆಗಳಿಂದಲೂ ಕತ್ತಲೆಯ ಮುಸುಕಿನಿಂದಲೂ ಒಸರಿದ್ದೂ ನಿರ್ಜನವಾದಂತೆ ಮೌನವಾಗಿರುವುದರಿಂದಲೂ ಮಂದಿರವು ರಣಗುಡುತ್ತದೆ. ಒಟ್ಟು ಇಲ್ಲಿ ಕಲ್ಪನೆಯು ನೀರು ನೀರಾಗಿ ಹರಿದಿದೆ. ಆತ್ಮ ಚರಿತ್ರೆಯಿದ್ದುದರಿಂದ ಅಪ್ರತ್ಯಕ್ಷವಾಗಿ ಸಂಘಟಿಸುವ ಸುದ್ದಿಗಳನ್ನು ಯುಸುಫನು ಸ್ವಾಭಾವಿಕವಾಗಿ ತಿಳಿದುಕೊಳ್ಳುವ ರೀತಿಯು ಇದರಲ್ಲಿಯ ಕೌಶಲವು.

೧೦, ೧೧. ಜೀವನ ಚರಿತ್ರೆಗಳು.—ಬಾಗಲಕೋಟೆಯ ಆಚಾರ್ಯರು ವಾಸುದೇವನ ಮುತ್ತ್ಯಾರು. ಅವರು ಮಹಾಪಂಡಿತರಿದ್ದರಂತೆ. ಅವರ ಮಾಹಾತ್ಮ್ಯವನ್ನು ಸರಸವಾಗಿ ಇಲ್ಲಿ ಹೇಳಿದೆ. ಇಲ್ಲಿಯವಾದರೂ ಆರಂಭ ಮಾಡಲಿಕ್ಕೆ ವರ್ಣನೆ. ಇದೇ ಕಬಿಗಾರನ ಕವಿತ್ವ ಮಾಪಕವು. ಓದಿದಲ್ಲಿ ವಿಷಯವು ಯಾವದೇ ಇರಲಿ, ವರ್ಣನೆಯು ವಾಸುದೇವನ ಸಾಧನೆಯೊಂದು. ಆ ವರ್ಣನೆಯು objective ಎಂದರೆ (ವಸ್ತುತಃ) ಅಥವಾ ಆಕೃತಿಯನ್ನು ಚೆನ್ನಾಗಿ ತಂದುಕೊಡುವಂತಹದು. ಒಳಗಿನ ಸ್ವಭಾವದ ಛಾಯೆಯನ್ನು ತರಿಸುವ ಬಲವಿಲ್ಲ. ಇನ್ನು ಎರಡನೆಯ ಚರಿತ್ರವೂ 'ರಾಸಪುಟಿನ' ಎಂಬುದು; ಕೇವಲವಾಗಿ ಅನುಕ್ರಮದಿಂದ ಹೇಳಿದ ಬಿಬ್ಬರೀಯವಾದ ಕ್ರಾಂತಿಕಾರಕ ಪಕ್ಷದ ವೈರಿಯ ವೃತ್ತವು. ಅದೇನು ಅಷ್ಟು ಹೇಳಿಕೊಳ್ಳುವಂತಿಲ್ಲ. ಯಾಕೆಂದರೆ ಕಥೆಯು ಕ್ರಮವಾಗಿ ಇರದೆ ಕುತೂಹಲವು ಹೆಚ್ಚುವುದಕ್ಕೆ ಹಿಂದು ಮುಂದೆ ಮಾಡಿರಲಿಕ್ಕೆ ಬೇಕು.

೧೨. ವಿಸ್ಮಯಜನಕವಾದ ಹಿಂಸೆಯ ಕ್ರಮವು.—ಇದು ಇಂಗ್ಲಂಡದಲ್ಲಿಯ ಒಂದು ಕಥೆಯಿದೆ. ಅಂತೇ ಭಾಷಾಂತರವಾಗಲಿ ರೂಪಾಂತರವಾಗಲಿ ಇರಬಹುದೆಂದು ತಿಳಿದುಕೊಳ್ಳಲಿಕ್ಕೆ ಪ್ರತ್ಯಯವಿಲ್ಲ. ಯಾಕೆಂದರೆ, ಇಲ್ಲಿಯ ಕತೆಗಾರನು ಇಂಗ್ಲಂಡಕ್ಕೆ ತಾನೇ ಜಿಗಿಯುವದು ರುಚಿಕರವಲ್ಲ. ವ್ಯಾಲೆಂಟಾಯಿನಾ ಟಿಗ್ಲಿಯು ಒಂದು ದುರ್ಗಮ ಪ್ರದೇಶದಲ್ಲಿ ಹಣವನ್ನು ಕಂಡಿರುತ್ತಾನೆ. ಯಾರಿಗೂ ಹೇಳಿರುವದಿಲ್ಲ. ತನ್ನ ಸ್ನೇಹಿತೆಯಾದ ಟಿಯಾನಾಳಿಗೆ ಮಾತ್ರ ಮೋಹಕ್ಕೆ ಬಲಿಬಿದ್ದು ಹೇಳುತ್ತಾನೆ. ಆಗಿನಿಂದ ಅವಳು ಅವನನ್ನು ನಿರತಿಶಯವಾಗಿ ಪ್ರೀತಿಸುತ್ತಾಳೆ. ಹೊತ್ತು ಬಂದಕೂಡಲೆ ಅವನನ್ನು ವಂಚಿಸಿ ಕೊಂದು ರಸಾಯನಶಾಸ್ತ್ರಬಲದಿಂದ ಪುಡಿಪುಡಿಯಾಗಿ ಮಾಡುತ್ತಾಳೆ. ಅವನ

ಶವವು ಮಾಯವಾಗುತ್ತದೆ. ಆ ಸಕಾಶಿಯನ್ನು ಅವಳು ತನ್ನ ಸ್ವಾಧೀನದಲ್ಲಿ ತೆಗೆದುಕೊಳ್ಳುತ್ತಾಳೆ. ವಿಸ್ಮಯ ಜನಕವಾದ ಹಿಂಸೆಯೆಂದರೆ ಇದೇ. ಎಂಥ ಶೋಧಕರು ಕೂಡ ಬೆಪ್ಪಾಗುತ್ತಾರೆ. ಅಂತೇ ಕಡೆತನಕ ಡಿಯಾನಾ ಡಿಗ್ಬಿ ಯವರ ಸ್ನೇಹವು ಕೃತ್ರಿಮವಾದುದೋ ಹೇಗೆಂಬ ಸಂಶಯವು ಕೂಡ ತಟ್ಟುವ ದಿಲ್ಲ. ಆದರ್ಶ ಪ್ರೇಮಿಗಳಂತೆ ಅವರ ವರ್ತನೆ ಇರುತ್ತದೆ. ಇದರಂತೆ ಮರಣದ ವಿಚಿತ್ರ ವೃತ್ತಾಂತವೂ ಸೋಜಿಗವನ್ನು ಹುಟ್ಟಿಸುತ್ತದೆ. ಹಿಂಸೆಯಂತೆ ಕಥೆಯೂ ವಿಸ್ಮಯ ಜನಕವಾಗಿರುವದು ಸಹಜವೇ !

೧೩, ೧೪. ಕಾಲ್ಪನಿಕ ಕಥೆಗಳು.—ಪ್ರತ್ಯೇಕವಾಗಿ ಹೊಸ ಹೊಸ ಕಥಾ ಶೈಲಿಯನ್ನು ಹೊಂದಿವೆ. ಇವುಗಳಲ್ಲಿ ಮೊದಲನೆಯೆರಡು ಸಿ. ಆಯ. ಡಿ. (ಅಥವಾ ಶೋಧಕ ಸಂಘ) ದಲ್ಲಿ ಪ್ರವೀಣನಾದ ಸರಲಾಷ ಹುಲಿವಿಾಸೆ ಎಂಬವನ ಕಾಲ್ಪನಿಕವಾದ ಶೋಧನ ಚಮತ್ಕಾರಗಳು. ಮೊದಲೇ ಈ ಶೋಧಕರ ಕಥೆ ಗಳು ಕೇಳಲಿಕ್ಕೆ ಸೊಗಸಾಗಿರುತ್ತವೆ. ಕಥೆಯಲ್ಲಿಯ ಮುಖ್ಯ ತತ್ವವೆಂದರೆ ಒಂದು ಸರ್ವ ಸಂಬಂಧಿಕವಾದ ಸಂಗತಿಯನ್ನು ಬಚ್ಚಿಡುವದು; ಅದನ್ನು ಮೆಲ್ಲನೆ ಬಚ್ಚಿಟ್ಟು ತುದಿಯಲ್ಲಿ ಝಗ್ಗನೆ ವಾಚಕರಿಗೆ ತೋರಿಸಿಬಿಡುವದು. ಇದೇ ಕಥಾ ಪ್ರಾವೀಣ್ಯ. ಇದಕ್ಕೆ ಶೋಧಕರ ಕಥೆಗಳು ತಾವಾಗಿಯೇ ಸಹಾಯಕಾರಿಗಳಾಗುತ್ತವೆ. ವಾಚಕರಂತೆ ಇಂಥ ಕಥೆಗಳಲ್ಲಿ ಶೋಧಕರದಾದರೂ ಕುತೂಹಲವಿರುತ್ತದೆ. ಮೊದಲನೆಯದರಲ್ಲಿ ಹುಲಿವಿಾಸೆಯು ಮರಣೋನ್ಮುಖ ನಾಗಿ ಸಾಯುವವನ ವೇಷಗು ಹಾಕಿಕೊಂಡು ಬಬ್ಬ ಧನಲೋಭಿಯಾದ ಪಾತಕಿಯನ್ನು ಗೊತ್ತುಹಚ್ಚುತ್ತಾನೆ. ಇನ್ನೊಂದರಲ್ಲಿ ಎಂದರೆ ಬೆಳ್ಳಿ ಚುಕ್ಕೆ ಯಲ್ಲಿ ಆ ಹೆಸರಿನ ಕುದುರೆಯು ಹೇಗೆ ಆಕಸ್ಮಿಕವಾಗಿ ಅದೃಶ್ಯವಾಯಿತು? ಅದರ ಕೂಡ ಠಾಕುರದಾಸನೆಂಬೊಬ್ಬ ಪುರುಷನು ಹೇಗೆ ಮೃತನಾದನು? ಇವೆರಡು ಸಂಗತಿಗಳ ವಿಸ್ಕೃರ್ಷಯಾಗಬೇಕಾಗಿರುತ್ತದೆ. ಎರಡೂ ಕಥೆಗಳು ಆದಿಯಿಂದ ತುದಿಯವರೆಗೆ ಮನಸ್ಸುಗೊಟ್ಟು ಓದುವಂತೆ ಇವೆ.

೧೫. 'ಚಿತ್ತ ಭ್ರಮವೋ ದೃಷ್ಟಾಂತವೋ'.—ಇದು Addison ನ 'Vision of the Mirza' ದ ವಾಸಲೆಯ ಒಂದು ಕನಸಿನ ಕಥೆಯು. ಇದ ರಲ್ಲಿಯೆಂತೂ ವಾಸುದೇವನು ಸಂಪೂರ್ಣವಾಗಿ ತಾನೇ ತಾನಾಗಿದ್ದಾನೆ. ತೀರ ಕಣ್ಣುಮುಚ್ಚಿ ಕಲ್ಪನೆಯ ದೀವಿಗೆಯಿಂದ ತಾನೇ ಚಿತ್ರ ಪಟಗಳನ್ನು ಸರಿಸುತ್ತ ವರ್ಣನಾನುಭವವನ್ನು ತೆಗೆದುಕೊಳ್ಳುತ್ತಿದ್ದಾನೆ. ಇದರ ವಿಶೇಷವೆಂದರೆ— ಸನಾತನ ಕವಿ ವರ್ಗಕ್ಕೆ ಸ್ಫೂರ್ತಿಕೊಟ್ಟ ಮುರಲೀಧರನು ಈ ಕನಸಿನ ಕಾಣಿಕೆ. ತುಂಬೆಲ್ಲ ಅವನ ಹಾಗೂ ಅವನ ಕೊಳಲಿನ ಸುತ್ತು ನೆರೆಯಾಗಿ ನೆರೆಯುವ ಗಣಗಳ ವರ್ಣನೆ. ರಾಸ-ಕ್ರೀಡೆಯೂ ಬಂದಿದೆ. ಗೋಪಾಲ ದಾರಕನೆಂದು ಅವನಿಗಿಲ್ಲಿ ಹೆಸರು. ಅವನ ವರ್ಣನೆಯಲ್ಲಿ ಕೆಲವು ಸರಸ ಭಾಗಗಳನ್ನು ಇಲ್ಲಿ ಕೊಡುತ್ತೇವೆ. "ಆ ಸುಂದರಾಂಗನು ಧರಿಸಿದ ಮುಕುಟವು ಅವನ ಮುಂಬನೆಂಬ ಕಮಲದ ಚಿತ್ರ

ಮಯವಾದ ತುಂಬುನಂತೆ ಶೋಭಿಸಿತು. **ಛಿದ್ರೇಷ್ವನರ್ಥಾ ಬಹುಲೀ ಭವಂತಿ** ಎಂಬ ಶಂಕೆಯಿಂದಲೋ ಎಂಬಂತೆ ಆ ವಿಲಾಸಿಯು ತನ್ನ ಬೆರಳುಗಳಿಂದ ಆ ಕೊಳಲಿನ ಛಿದ್ರಗಳನ್ನು ಮುಚ್ಚಿ ಮುಚ್ಚಿ ಬಲು ಇಂಪಾಗಿ ಊದಿದನು.'' ಎಂಥ ಪರತರ ಪರಮಾನಂದವಿದು! ಎಷ್ಟು ಸಾಮರ್ಥ್ಯವು ಈ ಭಾವನೆಯಲ್ಲಿ! ಮುಂದೆ ಇದೇ ಕನಸಿನಲ್ಲಿ ಗೋಪಾಲದಾರಕನು ದೊಡ್ಡವನಾಗಿ ಎಲ್ಲ ಧರ್ಮಾನುಯಾಯಿಗಳ ಮುಂದೆ ತನ್ನ ಗೀತೆಯನ್ನು ಹೇಳುತ್ತಾನೆ. ಕನಕದಾಸನು ಆ ಜನಸಮುದಾಯದಲ್ಲಿ ಕೂಡಿಕೊಳ್ಳುವ ಮಾನವನ್ನು ಹೊಂದುತ್ತಾನೆ. ಸರ್ವ ಧರ್ಮ ಸಾರವನ್ನು ಕೇಳಿ ನೆರೆದವರು ಸಂತುಷ್ಟರಾಗಿ ಗೀತೆಯ ಗೋಪಾಲನನ್ನು ಹಾಡಿ ಹರಸುತ್ತಾರೆ.

೧೬. ಪಂಡಿತ ಬೃಹಲ್ಲಾಂಗೂಲ ವ್ಯಾಘ್ರ.—ಇದೊಂದು ಅದ್ಭುತ ಕಲ್ಪನೆಯ ಚಿತ್ರವು. ನಾವೇಕೆ ಹಿಂದುಳಿದವರೆಂದು ಬೇಕಾದಂಥ ಸಮಾಜವು ಕೂಡ ಈಗಿನ ಕಾಲದಲ್ಲಿ ಸಭಾ ಸಂಮೇಳನಗಳನ್ನು ಕರೆಯುವದರ ಮೇಲೆ ಟೀಕಾಸ್ತ್ರವನ್ನು ಬಿಡಲಿಕ್ಕೆ ವಿನೋದಯುಕ್ತವಾಗಿ ಬರೆದ ಹುಲಿಗಳ ಸಭೆಯ ಕಥೆಯಿದು. ಇದರಲ್ಲಿ ವ್ಯಾಖ್ಯಾತರು ಪಂಡಿತ ಬೃಹಲ್ಲಾಂಗೂಲ ವ್ಯಾಘ್ರರು. ವಿಷಯವು 'ಮನುಷ್ಯ ಸ್ವಭಾವ ದಿಗ್ದರ್ಶನ.' ಉದ್ದೇಶವು ಮನುಷ್ಯರನ್ನು ಸುಧಾರಿಸುವದು. ಮತ್ತು ಹುಲಿಗಳು ಹಿಂದುಳಿದವರಲ್ಲವೆಂದು ಸಿದ್ಧಮಾಡುವದು. ಈ ಮಾದರಿಯ ಕಳ್ಳರ ಸಭೆಯ ವೃತ್ತಾಂತವನ್ನು ಹಿಂದಕ್ಕೆ 'ಜಯ ಕರ್ನಾಟಕ' ದಲ್ಲಿ ಯಾರೋ ಕೊಟ್ಟಿದ್ದರು. ಅದೇ ತೆರನಾಗಿ ಇದೊಂದು ಹೊಸ ರೀತಿ. ಇದರಲ್ಲಿಯ ಟೀಕಾಸ್ತ್ರಗಳನ್ನು ಒಂದೊಂದೆ ಹಿಡಿದುಕೊಳ್ಳುತ್ತೇವೆ:—(೧) ಬಂಧುಪ್ರೇಮದಿಂದ ಬಲಿತರಾಗಿ ಏಕಮತದಿಂದ ಕೆಲಸಮಾಡುವದು ವ್ಯಾಘ್ರರಿಗೆ ಗೊತ್ತಿಲ್ಲ. ಈ ನಿಂದಾತ್ಮಕವಾದ ವಾದವನ್ನು ಖಂಡಿಸುವದೇ ಈ ಪರಿಷತ್ತಿನ ಮುಖ್ಯವಾದ ಉದ್ದೇಶಗಳಲ್ಲಿ ಒಂದಾಗಿದೆ. (೨) ಚೌಕಟ್ಟಿನ ಪಂಜರದಲ್ಲಿ ಸಿಕ್ಕುಬಿದ್ದು ತನ್ನ ಪೂರ್ವ ಕಥೆಯನ್ನು ಆತ್ಮ ಪ್ರೌಢಿಯಿಂದ ಹೇಳುವಾಗ ಅಧ್ಯಕ್ಷ ವ್ಯಾಘ್ರವು ಎಂದಿತು—''ಕೆಲವರಂತೂ ಪ್ರೇಮದಿಂದ ನನ್ನನ್ನು ತಾಯಿ ಗಂಡನೆಂಬ ಮರ್ಯಾದಾಯುತವಾದ ವಿಶೇಷಣದಿಂದ ಸಂಭಾವಿಸಿದರು. ಬೃಹಲ್ಲಾಂಗೂಲರ ವ್ಯಾಖ್ಯಾನದ ಕೆಲವು ಭಾಗಗಳು: (೧) ಮನುಷ್ಯರು ಆಕಳುಗಳನ್ನಾದರೂ ಭಜಿಸುವರು. ಮತ್ತೊಂದು ವಿಲಕ್ಷಣ ಸಂಗತಿಯೆಂದರೆ ಅವರು ಆಕಳಿನ ಹಾಲು ಕುಡಿಯುತ್ತಾರೆ, ಕೇಳಿದಿರಾ! ಈ ಸಂಗತಿಯಿಂದ ಮುಂಚಿನ ಕಾಲದ ಕೆಲ ಜನ ವ್ಯಾಘ್ರ ಪಂಡಿತರು ತರ್ಕಿಸಿದ್ದೇನೆಂದರೆ, ಮನುಷ್ಯರು ಪೂರ್ವಜನ್ಮದಲ್ಲಿ ದನ ಕರುಗಳೇ ಆಗಿರಬಹುದು; ಹೀಗೆ ವಾದಮಾಡುವದಕ್ಕಿಂತ ಮನುಷ್ಯರು ಸ್ವಭಾವತಃ ಪಶುತುಲ್ಯ ಬುದ್ಧಿಯವರೇ ಎಂದು ಅವರಿಗೆ ಪಶುಗಳ ಹಾಲಿನ ಮೇಲೆ ಪ್ರೇಮ ಹೆಚ್ಚೆಂದು ನಾನು ಅನುಮಾನಿಸುತ್ತೇನೆ. (೨) ದುಡ್ಡೆಂದರೆ ಮನುಷ್ಯನು ಭಕ್ತಿಪೂರ್ವಕವಾಗಿ ಪೂಜಿಸುತ್ತಿರುವ ದೇವತೆಯು. (೩) ಉಪಾಧ್ಯಾಯರೆಂದರೆ ವಿವಾಹದಲ್ಲಿ ದುಡ್ಡು ಪೂಜಿಸಿ ವಂಚನೆ ಮಾಡುವವರು.

ಈ ಪ್ರಕಾರವಾಗಿ ನಮಗೆ ಪರಿಚಯವಿದ್ದ ವಾಸುದೇವನ ಎಲ್ಲ ಕಥೆಗಳನ್ನೂ ಅವುಗಳ ಶಕ್ತಿಯೂ ಹಾಗೂ ಮಿತಿಯುತ್ತರವು ಎಲ್ಲಿರುವದೆಂಬುದನ್ನೂ ಸಾದ್ಯಂತವಾಗಿ ನಿರೂಪಿಸಿದೆವು. ಇನ್ನು ವಾಸುದೇವನ ಕೆಲವು ಸಾಮಾನ್ಯ ಗುಣಗಳನ್ನು ಹೇಳಿ ಅವನು ಈಗಿನ ಅಥವಾ ಇನ್ನು ಮುಂದಾಗುವ ಕತೆಗಾರರಿಗೆ ಯಾವ ತೆರದ ಆದರ್ಶ ಪುರುಷನೆಂಬುದನ್ನು ಸಂಕ್ಷೇಪವಾಗಿ ಹೇಳಿ ಸಮಾಪ್ತಿ ಮಾಡುತ್ತೇವೆ.

ಸ್ವತಂತ್ರ ಸಾಮಾಜಿಕ ಕಥೆಗಳು ಮೇಲ್ಕಂಡವುಗಳಲ್ಲಿ ಬಹು ಸಂಖ್ಯಾತ ವಿದ್ದುದನ್ನು ಎಲ್ಲರೂ ಅರಿತಿರಲಿಕ್ಕೆ ಬೇಕು. ಎಂದರೆ ಇನ್ನು ಮುಂದಿನ ಕಥೆಗ ವಸ್ತುವು ಸಮಾಜವೇ ಅಧಿಕವಾಗಿ ಆಗತಕ್ಕದೆಂಬ ಸೂಚನೆಯು ಅದರಲ್ಲಿ ಅಡಕ ವಾಗಿದೆ. ಸಾಂಪ್ರತದಲ್ಲಿ ಕರ್ನಾಟಕದ ಸಮಾಜ ವೃಕ್ಷಕ್ಕೆ ಸಾವಿರಾರು ಹುಳು ಹುಪ್ಪಟೆಗಳು ಹತ್ತಿವೆ ಎಂಬುದನ್ನು ಹೇಳಬೇಕಾಗಿಲ್ಲ. ಅವನ್ನು ಕಿತ್ತೊಗೆದು ಈ ನಮ್ಮ ವೃಕ್ಷದ ಏಳಿಗೆಗೆ ಉಪಾಯಗಳನ್ನು ತೀಡಿಕೊಡುವಂತೆ ಹೃದಯಂಗಮ ವಾದ ಸ್ವಾಭಾವಿಕ ಸಾಮಾಜಿಕ ಕಥೆಗಳು ಉತ್ಪತ್ತಿಯಾಗಬೇಕು. ವಾಸು ದೇವನ ಕಥಾಬೀಜವೆಂದರೆ ಇದೇ. ಸಮಾಜದ ಇಲ್ಲದ ಅತಿಚಿತ್ರವನ್ನು ಕೊರೆಯ ಕೂಡದು. ಇದ್ದಂತೆ ಬಣ್ಣಿಸಿ ಬೇಕಾದ ತತ್ವವನ್ನು ಸಕಲ ವೇದ್ಯವಾದ ಉದಾ ಹರಣೆಯಿಂದ ರೂಪಿಸಿ ಆಗಬೇಕಾದ ಕರ್ನಾಟಕ ಸಮಾಜವನ್ನು ಧ್ವನಿಸಿದರೂ ಅಡ್ಡಿಯಿಲ್ಲ. ಅಸ್ವಾಭಾವಿಕವಾಗುವುದೊಂದು ನಮ್ಮವರ ದೊಡ್ಡ ದೋಷವು. ದೆವ್ವ ಭೂತಗಳ ಕಥೆಗಳನ್ನು ಕೇಳಿ ಮರೆಗೆಟ್ಟ ಕಿವಿಗಳು ಆ ಅದ್ಭುತ ಸೃಷ್ಟಿಯನ್ನೇ ಆಲಾಪಿಸುತ್ತವೆ. ಒಮ್ಮೆಗೆ ಯಾರಾದರೂ ಸುಮ್ಮಸುಮ್ಮನೆ ಸಾಯುವುದು, ಅಪ್ರಾಸಂಗಿಕವಾಗಿ ವಿಷವನ್ನು ತೆಗೆದುಕೊಳ್ಳುವದು, ಅಥವಾ ಸ್ವಭಾವಕ್ಕೆ ಸರಿಯಾಗದ್ದನ್ನು ಕತೆಗಾರನ ಸಲುವಾಗಿ ಮಾಡಿ ತೀರುವುದು—ಇತ್ಯಾದಿಗಳು ಜನ ಸಮಾಜಕ್ಕೆ ಹೇಯವವೆ. ಅಂತೇ ನಿಷ್ಕಾರಣವಾಗಿ ಒಬ್ಬರ ಜೀವವನ್ನು ತೆಗೆದುಕೊಳ್ಳಬಾರದು. ಸಾಯುವದೇ ಸತ್ಯವಿದ್ದಲ್ಲಿ ನಿತ್ಯ ಸಂಸಾರದಲ್ಲಿ ಸಾಯು ವಂತೆ ವ್ಯವಸ್ಥಿತವಾಗಿ ಕಥೆಯನ್ನು ಹಾಗೆ ನಾದುತ್ತ ಶ್ಮಶಾನಕ್ಕೆ ತಂದು ಹಚ್ಚ ಬೇಕು.

ಇನ್ನು ಇತಿಹಾಸದ ವಿಷಯಗಳನ್ನು ಎತ್ತಬೇಕಾದರೆ ಕನ್ನಡಿಗರ ಇತಿ ಹಾಸವನ್ನೇ ಓದಿ ಕಥೆಗಳನ್ನು ಬರೆಯಬೇಕೆಂದು ಬರೆಹಗಾರರಿಗೆ ನಮ್ಮ ಬಿನ್ನಹ. ಒಂದು ರೀತಿಯಿಂದ ನಮ್ಮ ಇತಿಹಾಸವನ್ನು ಉಜ್ವಲಿಸಿದಂತಾಗುವದು, ಹಾಗೂ ಐತಿಹ್ಯಗಳು ಕಥೆಗೆ ನಿರಂತರವಾಗಿ ಪುಷ್ಟಿ ತುಷ್ಟಿಯನ್ನೀಯುತ್ತವೆ. ಈಗ ವಾಸು ದೇವನು ಬರೆದ 'ನರಗುಂದದ ಸಾವಿತ್ರೀಬಾಯಿ' ಎಂಬ ಕಥೆಯು ಹೇಗೆ ಚಿರಸ್ಮರ ಣೀಯವಾಗುವಂತೆ ಹಿಂದಿನ ಕಾಲವನ್ನು ಇಂದಿನದಾಗಿ ಮಾಡುವಂತೆ ಬರೆದಿರುವ ದೆಂಬುದು ದೃಷ್ಟಾಂತವು. ಇಂತಹ ಎಷ್ಟೋ ನಾವು ಕಾಲಿಡದ ಹಿಂದಿನ ಕಾಲದ ಹಚ್ಚಹಸುರಾದ ಸ್ಥಳಗಳಿವೆ. ಅಲ್ಲಿ ಪ್ರವಾಸ ಮಾಡುವದು ನಮ್ಮ ಆದ್ಯ ಕರ್ತ ವ್ಯವು. ಹೀಗೆ ವಸ್ತುವಿಷಯವನ್ನು ನಾವು ಹೇಳಿಕೊಟ್ಟರೂ ಸ್ಫೂರ್ತಿಯ

ಮೇಲೆ ಯಾವನೊಬ್ಬ ಕಥಾ ನಿಪುಣನ ಕಲಾ ವ್ಯಕ್ತಿಯು ಕಾಲೂರಿ ಇದ್ದ ಪಕ್ಷಕ್ಕೆ ನಾವು ಹೇಳಲಿಕ್ಕೂ ಕೇಳಲಿಕ್ಕೂ ಸಮಯವೇ ಇಲ್ಲೆಂಬುದು ಸ್ಪಷ್ಟವು.

ಅನಂತರದಲ್ಲಿ ಕಥೆಯ ರೀತಿಯನ್ನೂ ಶೈಲಿಯನ್ನೂ ಕುರಿತು ವಾಸುದೇವನ ಗುಣಗಳನ್ನು ಹೇಳುವದು ವಿಹಿತವಾದದ್ದು. ಅವನ ಎಲ್ಲ ಕಥೆಗಳೂ ಸ್ವತಂತ್ರವಾಗಿದ್ದು ತದ್ರೂಪವಾಗಿ ಭಾಷಾಂತರಿಸಿದ ಕಥೆಯು ಒಂದಾದರೂ ಇಲ್ಲ. ಆದರೆ ಭಾಷಾಂತರ ಕಲೆಯು ವಾಸುದೇವನ ಪ್ರಧಾನ ಗುಣಗಳಲ್ಲಿ ಒಂದು ಹಿರಿದೆಂಬುದನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗಿದೆ. ಅದು ಅವನು ಬರೆದ ಒಂದೆರಡು ಕಾದಂಬರಿಗಳಲ್ಲಿ ವ್ಯಕ್ತವಾಗಿದೆ; ವಿಶೇಷತಃ ಹೆಚ್ಚು ಪ್ರಕಾಶವಾಗಿ ಅವನು ಮಾಡಿದ ಶೇಕ್ಸ್ಪಿಯರ್ ನಾಟಕಗಳ ಭಾಷಾಂತರಗಳಲ್ಲಿ ಇದೆ. ಕನ್ನಡಿಗರ ಸಲುವಾಗಿ ಇನ್ನೂ ಕೆಲದಿನ ಬಾಳಿ ಎಲ್ಲ ಶೇಕ್ಸ್ಪಿಯರನನ್ನು ಕನ್ನಡದ ಕನ್ನಡಿಯಲ್ಲಿ ಇಟ್ಟಿದ್ದರೆ ಎಷ್ಟು ಪುಣ್ಯವು ಅವನಿಗೆ ಬರುತ್ತಿತ್ತಲ್ಲವೆಂದು ಅಣಿಸುವಷ್ಟು ಒಂದೆರಡು ನಾಟಕಗಳು ಆಗಿವೆ. ಶೇಕ್ಸ್ಪಿಯರನಂಥವನ ಕೈಹಿಡಿದು ದಕ್ಕುವಂತೆ ಅವನ ಸರಿ ಸಮಾನವಾಗಿ ಕನ್ನಡ ಸಂಸ್ಕೃತಿಗೆ ತಕ್ಕಂತೆ ವರ್ತಿಸಿದ ಅವನ ಭಾಷಾಂತರ ಕಲೆಯು 'ವಸಂತ ಯಾಮಿನೀ ಸ್ವಪ್ನ ಚಮತ್ಕಾರ' ಒಂದನ್ನು ಓದುವದರಿಂದಲೇ ವಿದಿತವಾಗುತ್ತದೆ. ಅವನಿಂದ ನಾವು ಕಲಿಯತಕ್ಕ ಪಾಠವೆಂದರೆ ಇಂಗ್ಲಿಷ್ ಬಂಗಾಲೀ ಮರಾಠೀ ಅಥವಾ ಬೇರೆ ಭಾಷೆಯ ಕಥೆಗಳು ಉತ್ತಮವೆಂದು ಕಂಡಕೂಡಲೆ ಅನುವಾದ ಮಾಡುವ ಪ್ರವೃತ್ತಿಯುಳ್ಳ ನಾವು ಕನ್ನಡದ ಆಚಾರ ವಿಚಾರಗಳಿಗೆ ಹೇಗೆ ಬಗ್ಗಿಸಬೇಕೆಂಬುದನ್ನು ಮನನ ಮಾಡಬೇಕು. ಹಾಗಾದ ಹೊರತು ಒಂದು ವಿಶಿಷ್ಟ ಸಂಸ್ಕೃತಿಯನ್ನೊಳಕೊಂಡ ಕಥೆಗಳು ಪರಭಾಷೆಯಲ್ಲಾಗಲಿ ಸ್ವಭಾಷೆಯಲ್ಲಾಗಲಿ ಒಂದೇ. ಇನ್ನೇನು ಅಪರ ಸಂಸ್ಕೃತಿಯನ್ನೇ ರುಚಿಕರವಾಗಿ ತಿಳಿಸುವದಿದ್ದರೆ ಉಪಾಯವಿಲ್ಲ. ಸಂಸ್ಕೃತಿ ಭೇದವು ಶಕ್ಯವಿಲ್ಲದಲ್ಲಿ ಅಲ್ಲಿಯ ವಿಚಾರವನ್ನಿಷ್ಟೇ ಸ್ವೀಕರಿಸಿ ಕನ್ನಡದ ಪಡದೆಯಲ್ಲಿ ಬಣ್ಣ ಕೊಡುವದೇ ಉಚಿತವಾದದ್ದು.

ಕಥೆಗಳಿಗೆ ಹೆಸರಿಡಲಿಕ್ಕೆಯಾಗಲಿ ಕಥೆಯ ಪಾತ್ರಗಳ ನಾಮಕರಣದಲ್ಲಿಯಾಗಲಿ ವಾಸುದೇವನು ಒಳ್ಳೆ ನಿಷ್ಣಾತನು. ಹೆಸರಿನಿಂದ ಸಹಿತ ಕಥೆಯು ಚಿತ್ತಾಕರ್ಷಕವಾಗಿ ಹೆಸರುವಾಸಿಯಾಗಬೇಕೆಂಬುದೇ 'ಪ್ರಕೃತಿ ಬಲ, ಪ್ರಥಮ ದರ್ಶನದ ಪ್ರೇಮವು' ಇತ್ಯಾದಿಗಳ ಉದ್ದೇಶವು. ಇನ್ನು ಪಾತ್ರಗಳ ಹೆಸರುಗಳೆಂದರೆ ವಾಸುದೇವನ ವಿನೋದಮಯ ಸೃಷ್ಟಿಯಲ್ಲಿ ವಿನೂತನವಾಗಿರುತ್ತವೆ. ಧೊಂಡೋಪಂತ ಘಂಟೇರಿ, ಸರಲಾಕ್ಷ ಹುಲಿಮಿಾಸೆ, ವಾತಾತ್ಮಜ ಬೃಹಲ್ಲಾಂಗೂಲ ವ್ಯಾಘ್ರ, ಗೋಮಾಜಿ ಕಾಪಸೆ, ಘಾಳೆಪ್ಪ ಬಿನ್ ಧೂಳೆಪ್ಪಾ, ಬರಿ ಬುಟ್ಟಿ ರಂಗಯ್ಯ ಇವೇ ಮೊದಲಾದವುಗಳು ಹುಚ್ಚು ನಗೆಯನ್ನು ಹುಟ್ಟಿಸುತ್ತವೆ.

ಇದಾದಮೇಲೆ ಎಲ್ಲ ಕಥೆಗಳಲ್ಲಿ ಕಂಡುಬಂದ ಅವನ ಗುಣ ವಿಶೇಷವೆಂದರೆ ಸಾಮಾನ್ಯ ಭಾವಕ್ಕೂ ಸಾಮಾನ್ಯ ಭಾಷೆಗೂ ಪ್ರಾಧಾನ್ಯ. ಅವನ ಬಾಯಲ್ಲಿ

ಪ್ರಸಂಗೋಚಿತವಾದ ಸಾಂಸಾರಿಕರ ಮಾತು ಕಥೆಗಳು ನಡಿದಾಡುತ್ತವೆ. ಅವನ್ನು ಕಥೆಗಳಲ್ಲಿ ತಂದು ಸುಪರಿಣಾಮವಾಗುವಂತೆ ಅವನು ಒಳಿಕ ಮಾಡುತ್ತಾನೆ. ಆದುದರಿಂದ ಅವನಂತೆ ವಾಙ್ಮಯಕ್ಕೆ ಒಪ್ಪುವ ಮನೆಮಾತುಗಳನ್ನೂ ವ್ಯವಹಾರದಲ್ಲಿಯ ವಾಕ್ಪ್ರಚಾರಗಳನ್ನೂ ಭಾವ ವ್ಯಂಜಕವಾದ ಸಾಮಾನ್ಯ ಭಾಷೆಯಲ್ಲಿಯ ಉದ್ಗಾರಗಳನ್ನೂ ನಮ್ಮ ವಾಣಿಯಲ್ಲಿ ಬೆರಸಬೇಕು. ಎಂದರೆ ಕಥೆಯನ್ನು ಪ್ರಖ್ಯಾತಿಪಡಿಯಿಸಲಿಕ್ಕೆ ನಾವು ಶಕ್ತರಾಗುತ್ತೇವೆ.

ಇಷ್ಟೆಲ್ಲ ಭಾಷಾ ಶೈಲಿಯ ವಿಷಯಕ್ಕೆ ಆಯಿತು. ಆದರೆ ಕಥಾ ವಾಙ್ಮಯವು ಸುರುಚಿರವಾಗಿ ವಿಸಂಪ್ರತಿಯಲ್ಲಿ ಧನ್ಯಸಂದೇಶಿಸಿಕೊಳ್ಳಬೇಕಾದರೆ ವಾಸುದೇವನಂತೆ ನಮ್ಮಲ್ಲಿ ಹೊಸ ಹೊಸ ರೀತಿಗಳು ಬೇಕು. ಆನಂದದ ಸಂಗತಿಯೆಂದರೆ ಈಗ ಬರೆಯಲ್ಪಡುವ ಅನೇಕ ಕಥೆಗಳು ಏವಂ ವಿಧವಾಗಿರುತ್ತವೆ. ಕೆಲವು ಡಾಯರಿಯಿಂದ ಎತ್ತಿದ ಒಂದು ಪ್ರಸಂಗವೆನ್ನುತ್ತಾರೆ. ಹಬ್ಬದ ದಿನ ಕಂಡ ಒಬ್ಬ ಮಿತ್ರನು ಹೇಳಿದ ಕಥೆಯೆನ್ನುತ್ತಾರೆ. ಹಿಂದಿನ ಓಲೆಗಳಲ್ಲಿ ಸಿಕ್ಕಿದ ವೃತ್ತಾಂತವೆನ್ನುತ್ತಾರೆ. ಇದೆಲ್ಲ ಯೋಗ್ಯವೆ! ಯಾಕೆಂದರೆ ಪ್ರಸಂಗವು ಯಾವದೇ ಇರಲಿ ಸರಸವಾಗಿ ಮಾಡುವದು ಕಥಾ ಕರ್ತೃವಿನ ಕೆಲಸವು. ಆದುದರಿಂದ ನಾವು ಅತ್ತ ಗಮನಿಸಿದರೆ ಹೊಸ ಹೊಸ ರೀತಿಗಳು ತೋರಬಹುದು. ಉಪಕರಣಕ್ಕಾಗಿ ಬೇಕಾದರೆ ಇಂಗ್ಲೀಷು ಕಥೆಗಳನ್ನು ನಾವು ಓದಬೇಕು. ಅವರಲ್ಲಿ ವೈವಿಧ್ಯವು ಬಹಳ. ಇನ್ನು ವರ್ಣನೆಯ ವಿಷಯವಾಗಿ ಒಂದೆರಡು ಮಾತು. ವರ್ಣನೆಯನ್ನು ಕಥಾರಂಭಕ್ಕೆ ಮಾಡಲೇ ಬೇಕೆಂದು ಬದ್ಧ ನಿಯಮವಿಲ್ಲ. ಸ್ವತಂತ್ರವಾಗಿ ಯಾವದೋ ಮನೋರಂಜಕವಾದ ವ್ಯತಿಕರದಿಂದ ಮೊದಲು ಮಾಡಬಹುದು. ಇದನ್ನು ಲಕ್ಷಿಸದೆ ಸಾಂಪ್ರದಾಯದ ಗಾಲಿಗಳಲ್ಲಿ ಸಿಕ್ಕುಬಿದ್ದ ಕೆಲವರು ಅವೇಳೆಯಲ್ಲಿ ಕೂಡ ಕೆಲವು ವರ್ಣನೆಯನ್ನು ಮಾಡುತ್ತಾರೆ. ಉದಾಹರಣಾರ್ಥವಾಗಿ ಒಂದು ಪೂರ್ಣ ಪುಟವನ್ನೆಲ್ಲ ಪ್ರಾತಃಕಾಲದ ವರ್ಣನೆಯಲ್ಲಿ ಕಳೆದು ಒಬ್ಬ ಕತೆಗಾರನು ಎನ್ನಬಹುದು. ನಾರಾಯಣನು ಮನೆಯ ಕಂಬಳಿಯ ಮೇಲೆ ಪೆನ್ಸಿಲ್ಲು ಕೆತ್ತುತ್ತ ಕುಳಿತಿದ್ದನು. ಎಂದರೇನು? ಪ್ರಾತಃಕಾಲಕ್ಕೂ ನಾರಾಯಣನ ಆ ಕೆತ್ತನೆಗೂ ಏನೂ ಪರಸ್ಪರ ಸಂಬಂಧವಿಲ್ಲ. ಇಷ್ಟು ಕಟ್ಟು ಬೀಳಬಾರದೆಂಬದೇ ನಮ್ಮ ಬೇಡಿಕೆ.

ಯಾವ ಕಾಲದ ವರ್ಣನೆಯನ್ನಾಗಲಿ ಹಾಕಿಕೊಟ್ಟ ರೀತಿಯಂತೆಯೇ ಅಕ್ಷರಗಳನ್ನು ಬದಲಿಸಿ ತೀಡುವದು ಸಲ್ಲಕ್ಷಣವಲ್ಲ. ತಮ್ಮ ವ್ಯಕ್ತಿತ್ವವು ಸ್ವಲ್ಪಾದರೂ ಬೇಕು. ಸೂರ್ಯನು ಉದಯಿಸಿದನು. ರೈತರು ಹೊಲಕ್ಕೆ ಹೋಗುತ್ತಿದ್ದಾರೆ. ಕಾಗೆ ಕಾಕಾ ಎನ್ನುತ್ತವೆ. ಗುಬ್ಬಿ ಚಿಂವು ಚಿಂವು ಎನ್ನುತ್ತವೆ. ಕೂಸುಗಳು ಅಳುತ್ತಿವೆ—ಇತ್ಯಾದಿ ಮೊದಲನೆಯ ಪುಸ್ತಕದ ಪರಿಪಾಠವನ್ನು ತ್ಯಜಿಸಬೇಕು. ಕಲಾವಂತನಾಗಹತ್ತಿದಂತೆ ನವತೆಯು ಅತ್ಯವಶ್ಯ!!

ಇದೆಲ್ಲವಾದಮೇಲೆ ಮುಖ್ಯ ಮರ್ಮವೆಂದರೆ ನಿಜವಾದ ಕತೆಗಾರನು ತ್ರಿವೇಣೀ ಸಂಗಮನಾಗಲಿಕ್ಕೆ ಬೇಕು. ಕವಿಯೂ ವಿನೋದಿಯೂ ನಾಟಕ

ಕಾರನೂ ಹೀಗೆ ಗುಣತ್ರಯ ಸಂಪನ್ನನಾಗಿರಬೇಕು. ಹೀಗಿದ್ದುದ್ದೇ ವಾಸುದೇವನ ಯಶಸ್ಸಿಗೆ ಕಾರಣವು. ಅವನು ತನ್ನ ಗುಣತ್ರಯಂಗಳನ್ನು ಬೇರೆ ಬೇರೆಯಾಗಿ ತೋರ್ಪಡಿಸಿದ್ದರೂ ತನ್ನ ಕಥೆಗಳಲ್ಲಿ ಏಕತ್ರ ಅವುಗಳ ಸಮಾಕರಣವನ್ನು ಮಾಡಿದ್ದಾನೆ.

ಉಪಸಂಹಾರ

ಈ ವಿಧವಾಗಿ ವಾಸುದೇವನ ಕಥಾ ಮಂದಿರವನ್ನು ಪ್ರವೇಶಿಸಿ ಎಲ್ಲ ಸಣ್ಣ ಸಣ್ಣ ಕೋಣೆಗಳಲ್ಲಿಯೂ ಹೊಕ್ಕು ಪರೀಕ್ಷಿಸಿ ನಮ್ಮ ಭಾವಿ ಕಥಾ ಮಂದಿರದ ಆಕಾರವನ್ನು ಕೂಡ ಹಾಕಿಕೊಂಡೆವು. ಇವೆರಡೇ ನಮ್ಮ ಉದ್ದೇಶಗಳಿದ್ದು, ಇವು ಸಫಲವಾದರೆ ನಾವು ಕೃತಕೃತ್ಯರಾದಂತೆ ತಿಳಿಯಬಲ್ಲೆವು. ಈ ಸಾಫಲ್ಯದ ಪರಿಣಾಮವು ನಮ್ಮೆಲ್ಲರಲ್ಲಿ ಆಗಿದ್ದರೆ ಹಿಂದೆ ಹೇಳಿದಂತೆ ಶ್ರೀನಿವಾಸನ 'ಸಣ್ಣ ಕತೆಗಳ' ಕೂಡ ಶ್ರೀನಿವಾಸ ಸುತನ ಸಣ್ಣ ಕತೆಗಳನ್ನು ಸಹ ನಾವು ಓದುವ ಭಾಗ್ಯವು ಬಂದೊದಗುವದು. ಆಗ ಅಖಂಡ ಕರ್ನಾಟಕವನ್ನೆಲ್ಲ ಅಣ್ಣ ತಮ್ಮಂದಿರಾದ ಪ್ರಚಾರಕರಂತೆ ಸಂಚರಿಸುತ್ತ ಈ ಕಥಾ ದ್ವಂದ್ವವು ಏಕೀಕರಣಕ್ಕೆ ಏಕವಾಕ್ಯತೆಯನ್ನು ಉಂಟುಮಾಡುವದು. ಇಂಥ ನಮ್ಮ ಎಲ್ಲ ಲಘುಕಥಾ ವಾಙ್ಮಯಕ್ಕೆ ದೇವರು ಆಯುರಾರೋಗ್ಯಗಳನ್ನು ಕೊಡಲೆಂದು ಬೇಡಿ ಬಯಸುವ,

ರಂಗನಾಥ ಮುಗುಳಿ

ದಕ್ಷಿಣ ಹೈದರಾಬಾದು ಪಟ್ಟಣದ ಹುಟ್ಟುವಿಕೆ ಹಾಗೂ ಬೆಳವಣಿಗೆಯ ಸಂಕ್ಷಿಪ್ತ ವಿವರಣೆಯು

ಇತ್ತೀಚೆಗಾಗಿ ಕನ್ನಡಿಗರು ಸ್ವಾಭಿಮಾನಪೂರಿತರಾಗಿ ಹಲವು ಬಗೆಯಿಂದಲೂ ತಮ್ಮ ಉನ್ನತಿಯಾಗಬೇಕೆಂಬ ದೃಢ ಸಂಕಲ್ಪದಿಂದ ಬೇರೆ ಬೇರೆ ಮಾರ್ಗಗಳನ್ನು ಹಿಡಿದು ಪ್ರಯತ್ನಿಸುತ್ತಿರುವುದು ಸಂತೋಷದ ಸಂಗತಿಯು. ಇತಿಹಾಸವೂ ಸಾಹಿತ್ಯದ ಒಂದು ಅಂಗವಾಗಿರುವುದರಿಂದ ಮೇಲಿನ ವಿಷಯವನ್ನು ಕುರಿತು ಕುತೂಹಲಿಗಳಾದ ಕನ್ನಡಿಗರ ಸಲುವಾಗಿ ನಾಲ್ಕು ಮಾತುಗಳನ್ನು ಬರೆಯುವುದು ಅತ್ಯವಶ್ಯವಾಗಿದೆ.

ದಕ್ಷಿಣ ಹೈದರಾಬಾದು ಪಟ್ಟಣವು ಅಷ್ಟೇನೂ ಪುರಾತನವಾದುದಲ್ಲ. ಇದನ್ನು ಇ.ಸ. ೧೫೯೧ರಲ್ಲಿ ಗೋವಳಕೊಂಡದ ರಾಜನಾದ ಮುಹಮ್ಮದ್ ಕುಲಿ ಕುತುಬ ಶಹನು ಸ್ಥಾಪಿಸಿದನು. ಎಂದರೆ ೩೩೫ ವರುಷಗಳಾದವು. ಅದಕ್ಕಿಂತ ಪೂರ್ವದಲ್ಲಿ ಕುತುಬಶಾಹೀ ರಾಜಧಾನಿಯು ಗೋವಳಕೊಂಡವಿತ್ತು. ಗೋವಳಕೊಂಡವನ್ನಾದರೂ ಕುತುಬಶಾಹೀ ರಾಜರೇನೂ ಕಟ್ಟಿಸಿಲ್ಲ. ಆದರೆ ವರಂಗಲ್ಲಿನ ರಾಜರು ಕಟ್ಟಿಸಿ ಇದನ್ನು ತಮ್ಮ ಸೈನ್ಯದ ಒಂದು ಭಾಗದ ವಸಾಹತನ್ನು ಮಾಡಿದ್ದರು. ಅವರಿಂದ ಆ ಕೋಟೆಯೂ ಅದರ ಸುತ್ತಮುತ್ತಲಿನ ಪ್ರಾಂತವೂ ಇ. ಸ. ೧೩೬೪ರಲ್ಲಿ ಕಲ್ಬುರ್ಗಿಯ ಬಹಮನೀ ರಾಜನಾದ ಮುಹಮ್ಮದ ಶಹನಿಗೆ ಬಂದಿತು. ಕುತುಬ್-ಉಲ್-ಮುಲ್ಕ ಮುಹಮ್ಮದ ಕುಲಿ ಎಂಬ ಬಹಮನೀ ಪ್ರತಿನಿಧಿಯು ಆ ರಾಜ್ಯದ ಅಸ್ತವ್ಯಸ್ತತೆಯ ಸ್ಥಿತಿಗಳನ್ನು ಕಂಡು ಗೋವಳಕೊಂಡದಲ್ಲಿ ತಾನೊಬ್ಬ ರಾಜನೆಂದೇ ಪ್ರಸಿದ್ಧಮಾಡಿ ಸ್ವತಂತ್ರನಾದನು. ಈತನಿಂದಲೇ ಕುತುಬಶಾಹೀ ರಾಜ್ಯವಾರಂಭವಾಯಿತು. ಇದಕ್ಕೆ 'ಗೋವಳಕೊಂಡ'ವೆಂದು ಹೆಸರು ಬರಲು ಕಾರಣವೇನೆಂದರೆ, ಇಲ್ಲಿ ಕೋಟೆಯನ್ನು ಕಟ್ಟಲು ಸ್ಥಳವು ಯೋಗ್ಯವೆಂದು ಒಬ್ಬ ಕುರುಬನು ತೋರಿಸಿದ್ದನಂತೆ. 'ಗೋಲಕಾರ,' 'ಗುರಿಕಾರ' ನೆಂದರೆ ಕುರುಬನೆಂದರ್ಥವಾಗುವುದು.

ಕುತುಬಶಾಹಿಯ ಐದನೆಯ ರಾಜನಾದ ಮುಹಮ್ಮದ ಕುಲಿಯ ಕಾಲದಲ್ಲಿ ಗೋವಳಕೊಂಡದಲ್ಲಿ ಜನ ವಸತಿಯು ತೀರ ಹೆಚ್ಚಾಗಿ ಊರು ದಟ್ಟವಾಗಿ ವೃದ್ಧಿ ಹೊಂದಿದ್ದರಿಂದ ಜನರ ಅನಾರೋಗ್ಯಕ್ಕೂ ನೀರಿನ ಕೊರತೆಗೂ ಪ್ರಾರಂಭವಾಯಿತು. ಆದುದರಿಂದ ಹೊಸ ಊರನ್ನು ಸ್ಥಾಪಿಸಬೇಕೆಂಬ ವಿಚಾರವು ಹುಟ್ಟಿತು. ಆಗ ೧೫೯೧ನೆಯ ಇಸವಿಯಲ್ಲಿ ಈಗಿನ ಹೈದರಾಬಾದು ಇರುವ ಸ್ಥಳವು ಆರಿಸಲ್ಪಟ್ಟಿತು. ಆದರೆ ಇದೇ ಸ್ಥಳವೇ ಏಕೆ ಆರಿಸಲ್ಪಟ್ಟಿತೆಂಬುದಕ್ಕೆ ವಿಶೇಷ ಕಾರಣಗಳಾವವೂ ಕಾಣಲಿಲ್ಲ. ಯಾಕೆಂದರೆ, ಗೋವಳಕೊಂಡ ಹಾಗೂ

ಈಗಿನ ಹೈದರಾಬಾದಿನ ನಡುವೆ ಮೂಸಾನದಿಯು ಇದ್ದು ಒಮ್ಮೊಮ್ಮೆ ಇದರಲ್ಲಿ ಭಯಂಕರವಾದ ಪ್ರವಾಹವು ಬರುತ್ತಿದ್ದಿತು. ಆಗ ಈ ನದಿಯ ಮೇಲೆ ಪೂಲು ಸಹ ಇದ್ದಿಲ್ಲ. ಹೈದರಾಬಾದಿನ ಹವೆಯು ಚನ್ನಾಗಿದ್ದ ಕಾರಣವನ್ನಾಗಲಿ, ಇಲ್ಲವೆ ಅಲ್ಲಿ ನೀರಿನ ವಿಪುಲತೆಯಿರುವುದನ್ನಾಗಲಿ ಯಾವುದನ್ನೂ ಐತಿಹಾಸಿಕರು ವಿಶೇಷ ವಾಗಿ ಮಹತ್ವದ ದೃಷ್ಟಿಯಿಂದ ವಿಚಾರಿಸಿ ಬರೆದಿಲ್ಲ. ಆದರೆ ಆ ಕಾಲದಲ್ಲಿ ಅಲ್ಲಿ ಚಿಚ್ಲಲಂಪಾ ಎಂಬ ಸಣ್ಣ ಹಳ್ಳಿಯು ಮಾತ್ರವಿತ್ತು. ರಾಜನು ಈ ಸ್ಥಳವನ್ನು ಆರಿಸಿದುದೊಂದೇ ತಡ, ಅದು ದೊಡ್ಡ ಪಟ್ಟಣವೇ ಆಯಿತು. ಇದಕ್ಕೆ ಭಾಗ್ಯ ನಗರ ವೆಂದು ಹೆಸರಿಟ್ಟರು. ಇದರ ಕಾರಣವನ್ನು ಹಲವರು ಹಲವು ಬಗೆಯಾಗಿ ಹೇಳುವರು.

೧. ಇದೇ ಮಹಮ್ಮದ ಕುಲಿಯ ರಾಣಿಯರಲ್ಲಿ ಭಾಗ್ಮತಿ ಎಂಬೊಬ್ಬ ಹಿಂದೂ ರಾಣಿಯಿದ್ದಳು. ಆಕೆಯ ಮೇಲೆ ಮಹಮ್ಮದ ಕುಲಿಯು ಪ್ರೇಮವತಿಶಯವಿದ್ದುದರಿಂದ ಅವನು ಇದಕ್ಕೆ ಭಾಗ್ ನಗರವೆಂದು ಹೆಸರಿಟ್ಟನು. ಬರಬರುತ್ತ ಭಾಗ್ಯ ನಗರವೇ ಆಯಿತು.

೨. ಗೋವಳಕೊಂಡದ ಮುಸಲ್ಮಾನ ರಾಜರ ಕಾಲದಲ್ಲಿ ಹೈದರಾಬಾದು ಇರುವ ಸ್ಥಳದಲ್ಲಿ ಪಹರೆ ಮಾಡುತ್ತಿರುವ ಸಿಪಾಯಿಯೊಬ್ಬನು ಪ್ರತಿದಿನ ಮಧ್ಯ ರಾತ್ರಿಯಲ್ಲಿ ಅತ್ಯಂತ ಸೌಂದರ್ಯ ವೈಭವಗಳಿಂದೊಪ್ಪುವ ರಮಣಿಯು ಬರುವುದನ್ನು ನೋಡಿದನು. ಅವನಿಗೆ ಕುತೂಹಲವುಂಟಾಗಿ ಧೈರ್ಯಮಾಡಿ ಸಂಚಾರ ಮಾಡುತ್ತಿರುವ ಅವಳನ್ನು ರಾತ್ರಿಯಲ್ಲಿ ತರುಬಿದನು. ಹಾಗೂ ತನ್ನ ಬಾದಶಹನಿಗೆ ಇವಳ ವರ್ತಮಾನವನ್ನು ತಿಳಿಸಿ ಅವನ ಅಪ್ಪಣೆಯಾದರೆ ಬಿಡುವೆನೆಂತಲೂ ತಾನು ಬಾದಶಹನಿಗೆ ಆ ಸಂಗತಿಯನ್ನು ತಿಳಿಸಿ ಬರುವವರೆಗೂ ಅವಳು ಅಲ್ಲಿಯೇ ಇರುವಂತೆಯೂ ಅವಳಿಂದ ವಚನವನ್ನು ತೆಗೆದುಕೊಂಡನು. ಕೂಡಲೆ ಬಾದಶಹನಿಗೆ ಈ ಸಂಗತಿಯನ್ನು ತಿಳಿಸಲು ಅವನು ದೂರ ದೃಷ್ಟಿಯಿಂದ ವಿಚಾರಿಸಿ ಆ ದೂತನ ತಲೆಯನ್ನು ಅಲ್ಲಿಯೇ ಕತ್ತರಿಸಿದನು. ಹಾಗೂ ತತ್‍ಕ್ಷಣವೇ ಪುರ ಜನರನ್ನು ಕರಸಿ ಆ ದೇವತೆಯನ್ನೆದುರ್ಗೊಳ್ಳಲು ವೈಭವದಿಂದ ಹೋಗಲು ದೇವತೆಯು ಅಲ್ಲಿಯೇ ಮೂರ್ತಿಯಾಗಿದ್ದಳು. ಅದೇ ಸ್ಥಳದಲ್ಲಿ ಚಾರಮಿನಾರ ವೆಂಬ ನಾಲ್ಕು ಶಿಖರದ ನಾಲ್ಕು ಕಮಾನಿನ ದೊಡ್ಡ ಕಟ್ಟಡವನ್ನು ಕಟ್ಟಿಸಿದನು. ಅಲ್ಲಿ ಈಗಲೂ ಲಕ್ಷ್ಮಿಯ ಗುಡಿಯೂ ಮೂರ್ತಿಯೂ ಒಂದು ಭಾಗದಲ್ಲಿದ್ದು ಪ್ರತಿವರುಷ ದೀವಳಿಗೆಯ ಹಬ್ಬದಲ್ಲಿ ಉತ್ಸವವಾಗುತ್ತದೆ. ಆದುದರಿಂದಲೇ ಇದನ್ನು ಭಾಗ್ಯ ನಗರವೆಂತಲೂ ಶ್ರೀನಗರವೆಂತಲೂ ಎನ್ನುವರು. ಮತ್ತು ಹಿಂದುಸ್ಥಾನದ ಇತರ ರಾಜಧಾನಿಗಳಿಗಿಂತ ಇಲ್ಲಿಯ ವೈಭವವೂ ಭಾಗ್ಯವೂ ವಿಶೇಷವಿದೆ ಎಂಬ ಆಖ್ಯಾಯಿಕೆಯು ಇಂದಿಗೂ ಇದ್ದು ಎಷ್ಟೋಸಾರೆ ನದಿಯ ಸೆಳವಿನಿಂದ ಅರ್ಧ ಊರೇ ನಾಶವಾದರೂ ಅಲ್ಲಿಯ ಸಂಪತ್ತಿಗೂ ಅಭಿವೃದ್ಧಿಗೂ ಕೊರತೆಯಿಲ್ಲ.

ಮೊದಲಿನ ಕಾರಣದ ವಿಷಯವಾದ ಪ್ರಮಾಣಗಳೆಂದರೆ ಗೋವಳಕೊಂಡದ ಹತ್ತಿರ 'ಭಾಗ್ಮತಿಯ ಬಾರಾದರಿ'ಎಂಬ ಕಟ್ಟಡವೊಂದುಂಟು. ಅದರಲ್ಲಿ ಒಂದು ಶಿಲಾ ಲೇಖವಿತ್ತಂತೆ. ಅದರಲ್ಲಿ, ಅದನ್ನು ಕಟ್ಟಿಸಿದವರು ಇ. ಸ. ೧೬೨೫ರಲ್ಲಿ ಮೃತಪಟ್ಟರೆಂದು ಬರೆದಿದ್ದಿತಂತೆ. ಆದರೆ ಈ ತೆರದ ಲೇಖನವೀಗ ಎಲ್ಲಿಯೂ ಕಾಣುವುದಿಲ್ಲ. ಆದುದರಿಂದ ಇದೂ ಒಂದು ಹೇಳಿಕೆಯೇ. ಮತ್ತು ಈ ಭಾಗ್ಮತಿ ರಾಣಿಯು ಮೃತಳಾದ ತರುವಾಯ ಕೆಲವು ಮುಸಲ್ಮಾನ ಧರ್ಮ ಬೋಧಕರು ತಮ್ಮ ಬಾದಶಹನು ಹಿಂದೂ ಹೆಂಡತಿಗೆ ಮೋಹಿತನಾದವನೆಂಬ ಹೆಸರಿನಿಂದ ಕಲಂಕಿತನಾಗುವನೆಂದು ಅವನಿಗೆ ಹೆಸರನ್ನು ಬದಲಿಸಲು ಹೇಳಿದರು. ಅದರಿಂದ ಅವನು ತನ್ನ ಬಿರುದಾವಳಿಯಲ್ಲಿರುವ 'ಹೈದರ' ಎಂಬುದನ್ನು ಮೊದಲಿಟ್ಟು 'ಹೈದರಾಬಾದು' ಎಂದು ಹೆಸರಿಟ್ಟನೆಂದು ಹೇಳುತ್ತಾರೆ. ಆದರೂ ಈ ಹೊತ್ತಿಗೂ ಎಲ್ಲ ಸಾಹುಕಾರರೂ ತಮ್ಮ ಲೆಕ್ಕಪತ್ರಗಳಲ್ಲಿ ಭಾಗ್ಯನಗರವೆಂದೇ ಬರೆಯುವರು. ಆದುದರಿಂದ ಇವೆರಡು ಕಾರಣಗಳಲ್ಲಿ ಯಾವುದು ಸಾಧಾರವೆಂಬುದನ್ನು ಯಾರೂ ನಿರ್ಧರಿಸಿಲ್ಲವಾದರೂ ಒಂದನೆಯ ಕಾರಣವೇ ಸುಳ್ಳಾಗಿಯೂ ಎರಡನೆಯದೇ ನಿಜವಾಗಿಯೂ ತೋರುತ್ತದೆ. ಯಾಕೆಂದರೆ ರಾಜನು ತನ್ನ ಹೆಂಡತಿಯ ಮೇಲಿನ ಪ್ರೇಮದಿಂದಲೇ ಆ ಹೆಸರನ್ನಿಟ್ಟಿದ್ದರೆ ಹೆಂಡತಿಯ ಮರಣಾನಂತರ ಆ ಹೆಸರನ್ನೆಂದಿಗೂ ಬದಲಿಸುತ್ತಿದ್ದಿಲ್ಲ. ಮರಣಾನಂತರ ಉಪದೇಶಿಸುವ ಧಾರ್ಮಿಕರು ಮೊದಲು ಹೆಸರಿಡುವಾಗಲಾದರೂ ಸಾಮರ್ಥ್ಯಹೀನರಾಗಿದ್ದಿಲ್ಲ. ಹಾಗಿದ್ದರೆ ನಿಜವಾಗಿಯೂ ಈಗಲಿದ್ದ 'ಭಾಗ್ಮತಿ ಬಾರಾದರಿ'ಗಾದರೂ ಹೆಸರನ್ನು ಬದಲಿಸುತ್ತಿದ್ದನು. ಎರಡನೆಯ ಕಾರಣದ ವಿರೋಧವಾಗಿ ಯಾವ ಸಂಗತಿಯೂ ಇಲ್ಲ. ಚಾರ್ ಮಿನಾರದಲ್ಲಿರುವ ಲಕ್ಷ್ಮೀಗುಡಿಯು ಇದಕ್ಕೆ ಹೆಚ್ಚಿನ ಪುರಾವೆಯು. ಏನೇ ಆಗಲಿ ಇದೊಂದು ವಿವಾದಾಸ್ಪದವಾದ ವಿಷಯವು.

ಗೋವಳಕೊಂಡದಿಂದ ರಾಜಧಾನಿಯನ್ನು ಕಿತ್ತು ಹೈದರಾಬಾದಿಗೆ ಒಯ್ಯುವ ಕಾರಣಗಳಾವವೂ ಹೇಳಲ್ಪಟ್ಟಿಲ್ಲ. ಆ ಕಾಲಕ್ಕೆ ಹೈದರಾಬಾದನ್ನು ಶತ್ರುಗಳಿಂದ ಸಂರಕ್ಷಿಸುವ ಬಂಧನೋಪಾಯಗಳನ್ನು ಕೈಕೊಂಡಿದ್ದಿಲ್ಲ. ಮುಂದೆ ಕುತುಬ ಶಾಹಿಯವರು ಮೊಗಲರ ಮಾಂಡಲಿಕರಾದನಂತರ ಸುಮಾರು ಇ. ಸ. ೧೬೮೭ಕ್ಕೆ ಕುತುಬಶಾಹಿ ರಾಜನಾದ ಅಬು-ಉಲ್-ಹಸನನೆಂಬವನು ಮೊಗಲರ ಕಪ್ಪ ಕಾಣಿಕೆಯನ್ನು ಸರಿಯಾಗಿ ಕೊಡದಾಗ ಮೊಗಲರು ಮುತ್ತಿಗೆಹಾಕಿದರು. ಆ ಹೈದರಾಬಾದು ಆಗ ಮೊಗಲರ ಅಧೀನವಾಯಿತು. ಇ. ಸ. ೧೭೨೪ರಲ್ಲಿ ಮುಬಾರಿಜ ಖಾನನೆಂಬ ಸುಬೇದಾರನು ನಿಜಾಮ್-ಉಲ್-ಮುಲ್ಕನ ಮೇಲೆ ದಂಡೆತ್ತಿಬಂದು ಅವನಿಂದಲೇ ಯುದ್ಧದಲ್ಲಿ ಹತನಾದನು. ಅದರ ಮರುವರುಷವೇ ನಿಜಾಮ್-ಉಲ್-ಮುಲ್ಕನು ಹೈದರಾಬಾದಿಗೆ ಬಂದು ಅದರ ಸುತ್ತಲೂ ಭದ್ರವಾದ ಕಟ್ಟಡಗಳನ್ನು ಕಟ್ಟಿಸಿ ಅದನ್ನೇ ರಾಜಧಾನಿಯನ್ನಾಗಿ ಮಾಡಿದನು.

ಈ ಪಟ್ಟಣವನ್ನಾಳಿದ ರಾಜರ ವಂಶಗಳ ವಿಭಾಗಣೆಯು ಈ ಕೆಳಗೆ ಬರೆದಂತಿದೆ:—

(೧) ಕುತುಬಶಾಹೀ ಮನೆತನ ೧೫೭೫ರಿಂದ ೧೬೮೭ರವರೆಗೆ ೧೧೨ ವರುಷ.

(೨) ಮೊಗಲರ ಮನೆತನ ೧೬೮೭ರಿಂದ ೧೭೨೪ರ ವರೆಗೆ ೩೭ ವರುಷ.

(೩) ಆಸಫಜಾಹೀ (ನಿಜಾಮರ) ಮನೆತನ ೧೭೨೪ರಿಂದ ಇವತ್ತಿನ ವರೆಗೆ ೨೦೨ ವರುಷಗಳಿಗೆ ಮೇಲ್ಪಟ್ಟು. ಆಸಫಜಾಹೀ ಮನೆತನದವರು ಸ್ಥಾಪಿಸಿದ ಈ ರಾಜ್ಯದ ದಿವಸವನ್ನು ಸಂಸ್ಮರಣಾರ್ಥವಾಗಿ ಈಗಿನ ನಿಜಾಮರು ೧೯೨೪ನೆಯ ಇಸವಿಯಿಂದ ಸರಕಾರೀ ರಜೆಯ ದಿವಸವನ್ನಾಗಿ ಮಾಡಿದ್ದಾರೆ.

ಕುತುಬಶಾಹೀ ಮನೆತನದವರ ಆಳಿಕೆಯೇ ಅತ್ಯಂತ ಮಹತ್ವದ್ದಾಗಿರುವದು. ಆಗಿನ ಕಾಲದಲ್ಲಿ ಎಷ್ಟೋ ಸಾರ್ವಜನಿಕ ಉಪಯೋಗಿ ಕಟ್ಟಡಗಳಾದವು. ಹೈದರಾಬಾದಿಗೆಲ್ಲ ನೀರನ್ನು ಪೂರೈಸುತ್ತಿದ್ದ ಹುಸೇನ ಸಾಗರವೆಂಬ ವಿಶಾಲವಾದ ಕೆರೆಯು ಇ. ಸ. ೧೫೭೫ರಲ್ಲಿ ಎಂದರೆ ಹೈದರಾಬಾದು ಸ್ಥಾಪಿಸಲ್ಪಡುವ ಹದಿನಾಲ್ಕು ವರುಷ ಮೊದಲೇ ಇಬ್ರಾಹಿಮಕುಲಿ ಕುತುಬಶಹನ ಆಳಿಕೆಯಲ್ಲಿ ಎರಡೂವರೆಲಕ್ಷ ರೂಪಾಯಿಗಳ ವೆಚ್ಚದಿಂದ ದಂಡೆಯನ್ನು ಕಟ್ಟಿಸಿ ಕಟ್ಟಲ್ಪಟ್ಟಿತು. ಕಲಬುರ್ಗಿಯ ಪ್ರಸಿದ್ಧ ಸಾಧುವಾದ ಹಜರತ ಖ್ವಾಜಾ ಬಂದೇನವಾಜರ ಶಿಷ್ಯ ಪರಂಪರೆಯಲ್ಲಿ ಎಂಟನೆಯವನಾದ ಹುಸೇನ ಷಾಹವಾಲೀ ಎಂಬವನು ತನ್ನ ಹೆಸರಿನಿಂದ ಕಟ್ಟಿಸಿದನು. ಈ ಸಾಧುವು ಈ ಕೆರೆಯನ್ನು ತನ್ನ ಹೆಸರಿನಿಂದ ಕಟ್ಟಿಸಿದ್ದರಿಂದ ರಾಜನ ಕೋಪಾಗ್ನಿಗೀಡಾಗಬೇಕಾಯಿತು. ಆಗ್ಗೆ ಇಬ್ರಾಹಿಮ ಕುತುಬಶಹನೇ ರಾಜನಿದ್ದನು. ಕೆರೆಯನ್ನು ಕಟ್ಟಿದ ನಾಲ್ಕು ವರುಷಗಳವರೆಗೆ ಒಂದು ಹನಿಯು ಕೂಡ ನೀರು ಅದರಲ್ಲಿ ಬರಲಿಲ್ಲ. ಇದರ ಸಂಬಂಧವಾಗಿ "Our Faithful Ally" ಎಂಬುದರಲ್ಲಿ ಹೀಗೆ ಬರೆದಿದೆ.

"His Highness having been disappointed and his expectations unrealized with respect to the filling of the tank, directed a nobleman of his Court of the name of Khwaja Nek Nam Khan to cause a channel to be made from the river Musi to the Hussain Sagar Tank in order that it might be filled. Nek Nam Khan accordingly cut a small channel, paying the expenses out of his private funds, and succeeded as an experiment in bringing the water into the Hussain Sagar Tank. When he had thus far succeeded he intended to enlarge the channel and make it a complete work, but he unfortunately died. One day His Highness went on a pleasure

excursion to the Hussain Sagar Tank and inquired of the spectators what its name was. They replied that its name was "Hussain Sahib Cherroo". His Highness indignant that his own name should not be given to the Tank, resolved that another be built. He accordingly on leaving the tank proceeded to Ibrahimpatam, where he marked out the outlines of a tank himself in order that it should bear his own name."

ಮೇಲೆ ಹೇಳಿದ ಮೂಸಾ ನದಿಯಿಂದ ಹುಸೇನ ಸಾಗರಕ್ಕೆ ತಂದ ಕಾಲುವೆಯು ೧೬ ಮೈಲು ಉದ್ದವಿದ್ದು ಬಾಲಕಾಪುರ ಕಾಲುವೆಯೆಂಬ ಹೆಸರಿನದಿದೆ. ಇದು ೧೮೫೬ರಿಂದ ೧೮೬೦ರಲ್ಲಿ ಮುಗಿಸಲ್ಪಟ್ಟಿತು. ಮಹಮ್ಮದ ಕುಲಿಯ ಕಾಲಕ್ಕೆ ಹೈದರಾಬಾದಿನ ಎಷ್ಟೋ ಕಟ್ಟಡಗಳು ಕಟ್ಟಲ್ಪಟ್ಟವಲ್ಲದೆ ಪಟ್ಟಣವು ಆರೋಗ್ಯಕ್ಕನುಸರಿಸಿ ಶೋಭಾಯಮಾನವಾಗಿ ಮಾಡಲ್ಪಟ್ಟಿತು. ಆಗಿನ ಮಂದಿರಗಳಿರದಿದ್ದರೂ ಚಂದನಮಹಾಲ, ಹೀರಾಮಹಾಲ, ನದೀಮಹಾಲ, ಲಬ್ಬಿನಮಹಾಲವೆಂಬ ಕಟ್ಟಡಗಳ ಗುರುತುಗಳು ಮಾತ್ರ ಇವೆ. ಈ ರಾಜನ ಕಾಲದಲ್ಲಿ ೪,೫೦,೦೦,೦೦೦ ರೂಪಾಯಿಗಳು ಕಟ್ಟಡಗಳಿಗಾಗಿಯೂ ಕಾಲುವೆಗಳಿಗಾಗಿಯೂ ವೆಚ್ಚವಾದವೆಂದು ಬರೆದಿದೆ. ಮೊದಲು ಗೋವಳಕೊಂಡದಿಂದ ಹೈದರಾಬಾದಿನವರೆಗೆ ಪಶ್ಚಿಮ ಪೂರ್ವಾಭಿಮುಖವಾದ ಒಂದು ರಾಜಮಾರ್ಗವು ಸಿದ್ಧವಾಗಿ ಮಚ್ಛಲೀಪಟ್ಟಣಕ್ಕೆ ಹೋಗುವ ಮಾರ್ಗಕ್ಕೆ ಕೂಡಿಸಲ್ಪಟ್ಟಿತು. ಆಮೇಲೆ ಉತ್ತರ ದಕ್ಷಿಣವಾಗಿ ಮೊದಲಿನ ರಸ್ತೆಯನ್ನು ಸರಳರೇಖೆಯಾಗಿ ಕೊರೆಯುವ ಒಂದು ಮಾರ್ಗವು ಹಾಕಲ್ಪಟ್ಟಿತು. ಇವೆರಡು ಮಾರ್ಗಗಳೂ ಕೂಡಿದಲ್ಲಿಯೇ ಚಾರಮಿನಾರವಿರುವದು. ಈ ಪ್ರಕಾರ ಮಾರ್ಗದ ನಾಲ್ಕು ಭಾಗಗಳಲ್ಲಿ ನಾಲ್ಕು ಕಮಾನುಗಳನ್ನು ಕಟ್ಟಿಸಿದನು. ಅವುಗಳ ಮಧ್ಯದಲ್ಲಿ 'ಗುಲ್ಝಾರಹೌಜ' ಎಂಬ ಕಾರಂಜಿಯು ಹೊಂದಿರುವದು. 'ಚಾರಮಿನಾರ'ವು ಅತ್ಯಂತ ಪ್ರೇಕ್ಷಣೀಯವಾದ ಬಹಳ ಎತ್ತರವಾದ ಕಟ್ಟಡವಿದೆ. ಇದು ಯಾವದರ ಸ್ಮರಣಾರ್ಥವಾಗಿ ಕಟ್ಟಲ್ಪಟ್ಟಿತೆಂಬ ಸಂಗತಿಯು ಎಲ್ಲಿಯೂ ಬರೆದಿಲ್ಲ. ಇದರ ವಿಷಯದಲ್ಲಿರುವ ಆಖ್ಯಾಯಿಕೆಯೇನೆಂದರೆ, ಇದನ್ನು ಕಟ್ಟುವ ಮುಂಚಿನ ವರುಷದಲ್ಲಿ ದೊಡ್ಡ ಬರವು ಬೀಳಲು 'ಪಂಜಾ' ಅಮುಉತ್ 'ತಾಬೂತು'ಗಳನ್ನು ಹೊತ್ತ ಜನರ ಪ್ರಾರ್ಥನೆಯಿಂದ ದೊಡ್ಡ ಮಳೆಯು ಬಂದು ಕ್ಷಾಮವು ನಾಶವಾಗಲು ರಾಜನು ಇದರ ಸ್ಮರಣಾರ್ಥವಾಗಿ 'ತಾಬೂತ'ದಂತೆ ಇದನ್ನು ಕಟ್ಟಲಪ್ಪಣೆಮಾಡಿದನು. 'ಚಾರಮಿನಾರವು' ಕಲ್ಲಿನ ಘನ್ನ 'ತಾಬೂತ' ದಂತಿರುವದೇನೋ ನಿಜ. ಆದರೆ ಈ ಕಥೆಯನ್ನು ನಂಬಲು ಸಾಕಷ್ಟು ಕಾರಣಗಳಿಲ್ಲ. ಕುತುಬಶಾಹೀ ಜನರು 'ಶಿಯಾ' ಪಂಥಿಗಳು. ಹೀಗಿದ್ದು ಅವರು 'ತಾಬೂತು'ಗಳನ್ನು ಮನ್ನಿಸುವದಿಲ್ಲ. ಇಷ್ಟೇ ಅಲ್ಲ. ಆಗಿನ ಕಾಲದ ಬಹುಸಂಖ್ಯಾತ ಮುಸಲ್ಮಾನ ಪ್ರಜೆಯೂ

ಕೂಡ ‘ಪಿಯಸ್ಕಾ’ ಬಸರೇ ಆಗಿದ್ದರು. ರಾಜನು ಬಲಸಲ್ಲಿಯಿಂದ ಚಾರಮಿನಾರದವರೆಗೆ ನೀರಿನ ಕಾಲುವೆಯನ್ನು ಕಟ್ಟಿಸಿದ್ದನು. ಆ ನೀರನ್ನು ಚಾರಮಿನಾರದ ಮೇಲೇರಿಸಿ ಅಲ್ಲಿಂದ ಅರಮನೆಯ ಉತ್ತರದ ಭಾಗಗಳಿಗೆ ಮುಟ್ಟುವ ವ್ಯವಸ್ಥೆಯನ್ನು ಮಾಡಿಸಿದ್ದನಂತೆ. ಅರ್ಥಾತ್ ಈರೀತಿ ನಂಬಲರ್ಹವಾದ ಈ ಕಾರಣವನ್ನು ಸ್ವೀಕರಿಸುವುದಕ್ಕಿಂತ ಭಾಗ್ಯನಗರವೆಂದೇ ನಂಬಲು ಯೋಗ್ಯವಾದ ಕಾರಣವೇ ಇದನ್ನಾದರೂ ಸಮರ್ಥನ ಮಾಡುವುದೆಂದರೆ ಸಾಕು.

ಔರಂಗಜೇಬನ ಆಳಿಕೆಯಲ್ಲಿ ಹೈದರಾಬಾದಿನ ಸುಬೇದಾರನಾದ ಖ್ವಾಜಾ ಬಹುದೂರ ದಿಲಾವಾರನ ಕಾಲಕ್ಕೆ ನೈಋತ್ಯ ಮೂಲೆಯ ಗೋಪುರವು ಮಿಂಚಿನ ಹೊಡೆತಕ್ಕೆ ಬೀಳಲು, ಆಗಿನ ಕಾಲದಲ್ಲಿ ‘ವಾರಸುದಾರ’ರಿಲ್ಲದೆ ಸತ್ತ ಒಬ್ಬ ವ್ಯಾಪಾರಿಯ ೬೦,೦೦೦ ರೂಪಾಯಿಗಳ ವೆಚ್ಚದಿಂದ ಸುಬೇದಾರನು ಪುನಃ ಕಟ್ಟಿಸಿದನು.

೧೭೫೬ರಲ್ಲಿ ಚಾರಮಿನಾರವೂ ಅದರ ಸುತ್ತಮುತ್ತಲಿನ ತೋಟಗಳೂ ಫ್ರೆಂಚ್ ಜನರಲ್ಲನಾದ ಬುಸ್ಸಿ ಯೆಂಬವನ ವಶದಲ್ಲಿದ್ದವು. ಪುನಃ ೧೮೮೦ರಲ್ಲಿ ಸಂಪೂರ್ಣವಾಗಿ ದುರಸ್ತ ಮಾಡಲ್ಪಟ್ಟಿತು.

ನದಿಯ ದಂಡೆಗುಂಟ ಹಾಗೂ ಅರಮನೆಯ ಸುತ್ತುಮುತ್ತಲೂ ರಾಜರ ಹಾಗೂ ನವಾಬರ ಮಂದಿರಗಳನ್ನು ಕಟ್ಟಿಸಿ ಭದ್ರಮಾಡಿ ಎಲ್ಲ ಕಡೆಗೂ ಬಾಗಿಲುಗಳನ್ನು ಹಚ್ಚಿಸಿದ್ದರು. ಅಲ್ಲಿಯೇ ವಿಶಾಲವಾದ ಬಯಲಿನಲ್ಲಿ ತಂಗಾಳಿಗೆ ಅವಕಾಶ ಕೊಟ್ಟು ಭವ್ಯವಾದ ಆಸ್ಪತ್ರೆಯನ್ನು ಸಹ ಕಟ್ಟಿಸಿದ್ದರು. ಗೋವಳಕೊಂಡಕ್ಕೂ ಹೈದರಾಬಾದಿಗೂ ಹೋಗುವ ದಾರಿಯಲ್ಲಿರುವ ಮೂಸಾನದಿಗೆ ಪೂಲನ್ನು ೧೫೯೩ನೆಯ ಇಸವಿಯಲ್ಲಿ ಕಟ್ಟಿಸಿದರು. ಅದಕ್ಕೆ ಪುರಾನಾ ಪುಲ್ಲ ಎನ್ನುವರು. ಇದನ್ನು ಪುನಃ ಈಗೆರಡು ವರುಷಗಳ ಹಿಂದೆ ತಿದ್ದಿಸಿದರು. ಮೊದಲು ಕಟ್ಟಿಸಬೇಕಾದರೆ ಒಂದೂವರೆ ವರ್ಷಗಳವರೆಗೆ ಕೆಲಸ ನಡೆಯಿತು. ಎರಡೂವರೆ ಲಕ್ಷ ರೂಪಾಯಿಗಳು ವೆಚ್ಚವಾದವು. ಈ ಕೆಲಸದಲ್ಲಿ ಇನ್ನೂ ಒಂದು ಲಕ್ಷ ರೂಪಾಯಿಗಳು ಉಳಿದದ್ದರಿಂದ ಅದರಲ್ಲೊಂದು ಭಾಗವನ್ನು ಕಟ್ಟಿಸಿದ ಎಂಜಿನಿಯರಿಗೂ ಉಳಿದೆರಡು ಭಾಗಗಳನ್ನು ದಾನವಾಗಿಯೂ ಕೊಟ್ಟುಬಿಟ್ಟನು. ೧೫೯೩ನೆಯ ಇಸವಿಯ ತರುವಾಯ ಸಹ ನಿಜಾಂ ಸಿಕಂದರಜಹನ ಕಾಲದಲ್ಲಿ ತಿದ್ದುಪಾಟು ಮಾಡಲ್ಪಟ್ಟಿತು. ಇದರ ವಿವರವು ಇದೇ ಹಳೆಯ ಪೂಲಿನ ಹತ್ತಿರವಿರುವ ದೊಡ್ಡ ಬಾಗಿಲಿನ ಗೋಡೆಯ ಮೇಲೆ ಬರೆದಿದೆ:—

The bridge was re-built in the reign of King Sikandar.

Owing to the interest taken by Raja Chandulal, it has been rendered better than it formerly was.

A voice whispered to Shadan that its date can be got from the words "Jai Gharibi".

The bridge will now be safe from floods like a beast in the shell.

ಕುತುಬಶಾಹಿಯ ಆಳಿಕೆಯಲ್ಲಿ ಕಟ್ಟಿಸಿದುದು ಒಂದೇ ಒಂದು ಮಸೀದಿಯು. ಅದಕ್ಕೆ 'ಜಾಮಾ ಮಸಜಿದ' ಎಂದೆನ್ನುವರು. ಇದನ್ನು ಇ. ಸ. ೧೫೯೮ರಲ್ಲಿ ಕಟ್ಟಿದರು. ಇದರ ಮೇಲಿನ ಶಿಲಾ ಲೇಖವು ಈ ರೀತಿಯಲ್ಲಿದೆ:--

A ruler who is a king of kings in whose reign Virtue got great support.

Such a one that the heart gets comforted and the life gets refreshed when his ruby (red lips) utters a speech.

He has rendered the Earth so beautiful that the Heavens envy its beauty and the 'Garden of Iram' has been put to shame.

Under his august command a mosque has been built in whose roof the firmament is as if it were a ball.

The Paradise placed in its court-yard does sweeping work every moment.

I feel proud to see that in that spot are exercised all the virtues of Islam to one's heart's content.

If anybody asks you about the date of its construction tell him it is 10006.

An excellent lofty building of virtue (completed under the auspices of Malik Amin-ul-Mulk.)

Engraved by BABA KHAN.

ಇದೇ ಆಳಿಕೆಯಲ್ಲಿ ದಾರುಷಫಾ (ಆಸ್ಪತ್ರೆ) ಹಾಗೂ ಪುರಾನಾ ಹವೇಲಿಗಳು ಕಟ್ಟಲ್ಪಟ್ಟವು. ಮುಹಮ್ಮದ ಕುಲಿಯು ಜನರ ಆರೋಗ್ಯ ರಕ್ಷಣೆಗಾಗಿ ಆಯುರ್ವೇದ ಹಾಗೂ ಯೂನಾನೀ ವೈದ್ಯರನ್ನಿಟ್ಟಿದ್ದನಲ್ಲದೆ ರೋಗಿಗಳ ವಸತಿಗೆ ಸಹ ಸ್ಥಳ ಮಾಡಿಕೊಟ್ಟಿದ್ದನು. ನವಾಬ ಸರ್ ಸಾಲಾರಜಂಗರ ಅರಮನೆ ಎದುರಿಗೆ 'ಆಷೂರ್ ಖಾನಾ' ಎಂಬ ಕಟ್ಟಡವಿದ್ದು ಇದನ್ನು ಮುಹಮ್ಮದ ಕುಲಿಯು ೧೫೯೪ರಲ್ಲಿ ೬೬,೦೦೦ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿದನು. ಇದು ಜೀರ್ಣವಾಗಿದ್ದುದರಿಂದ ಪುರಾತನ ವಸ್ತು ಸಂಶೋಧನದ ಖಾತೆಯವರ (Archaeological Department) ಹೇಳಿಕೆಯಂತೆ ಸರಕಾರದವರು ನೆಟ್ಟಗೆ ಮಾಡಿಸಿದ್ದಾರೆ.

ಇದೇ ರಾಜನು ಚಾರಸುರಾ ಹೌಜದ ಬಳಿಯಲ್ಲಿಯೇ ದಾದಮಹಾಲ (ನ್ಯಾಯ ಮಂದಿರ) ವನ್ನು ಕಟ್ಟಿಸಿದ್ದನಂತೆ. ಆದರೆ ಈಗ ಅದರ ಗುರುತು ಸಹ ಇಲ್ಲ. ದಾದಮಹಾಲನ್ನು ಸಹ ಬುಸ್ಸಿಯು ಇ. ಸ. ೧೭೫೭ರಲ್ಲಿ ಮುತ್ತಿದ್ದನು. ಮದ್ದಿನ ಹೊಡೆತದಿಂದ ೧೭೭೧ರಲ್ಲಿ ಈ ಮಂದಿರವು ನೆಲಸಮವಾಯಿತು. ಆ ವರುಷ ಮೂಸಾನದಿಗೆ ಪ್ರವಾಹ ವೇಗವು ಬಂದು ಮದ್ದಿನ ಕೋಣೆಯೊಳಗಿನ ಮದ್ದು ತೋಯಲು ಬಿಸಲಿಗೆ ಒಣಹಾಕಿದಾಗ ಒಣಗಿ ಕಾವು ಹೆಚ್ಚಾದುದರಿಂದ ಮದ್ದು ಸುಟ್ಟು ಈ ಮಂದಿರವೂ ಅನೇಕ ಇತರ ಮನೆಗಳೂ ಸುಟ್ಟವಲ್ಲದೆ ಎಷ್ಟೋ ಜನರು ಸಹ ಸತ್ತರು.

ತರುವಾಯ ಅಬ್ದುಲ್ಲಾ ಕುತುಬ ಶಹನ ಈ ಆಳಿಕೆಯಲ್ಲಿ ಕೆಳಗಿನ ಕಾರ್ಯಗಳು ಕೈಕೊಂಡು ಮುಗಿಸಲ್ಪಟ್ಟವು :—

(೧) ಮೀರಜುಮ್ಲಾ ಕೆರೆ. (೩) ತೋಲಿ ಮಸಜಿದ
(೨) ದಾಯರೆ ಮೋಮಿನ್ (೪) ಮಕ್ಕಾ ಮಸಜಿದ.

'ಮೀರಜುಮಲಾ' ಕೆರೆಯನ್ನು ಇ. ಸ. ೧೬೨೫ರಲ್ಲಿ ಕುತುಬಶಾಹಿಯ ಪ್ರಧಾನಿಯಾದ ಮೀರಜುಮಲಾ ಎಂಬವನು ಕಡಿಸಿದನು. ಆದರೆ ಈಗ ಇತ್ತೀಚೆಗೆ ಅದರ ನೀರು ಅನಾರೋಗ್ಯವಾದುದರಿಂದಲೂ ಸಿಕಂದರಾಬಾದ ಗದಗ ರೇಲ್ವೆಯು ಅದರಲ್ಲಿಯೂ ಹಾಯ್ದು ಹೋಗಿರುವುದರಿಂದಲೂ ಕೇವಲ ಆಟದ ಬಯಲಾಗಿ ಹೋಯಿತು.

ದಾಯರೆ ಮೀರಮೋಮಿನ ಅಥವಾ ಮೀರಮೋಮಿನನ ಶ್ಮಶಾನ ಭೂಮಿಯಲ್ಲಿ ಸರ್ ಸಾಲಾರಜಂಗರವರ ಗೋರಿಗಳಿರುವವು. ಇದಾದರೂ ಮೀರಜುಮಲಾ ಕೆರೆಯ ಹತ್ತಿರವೇ ಇದ್ದು ಅವರಿಂದಲೇ ಕಟ್ಟಿಸಲ್ಪಟ್ಟಿತು. ಮೀರಮೋಮಿನನೆಂಬ ಪ್ರಸಿದ್ಧ ಸಾಧುವು ಅಬ್ದುಲ್ಲಾ ಕುತುಬ ಶಹನ ಕಾಲಕ್ಕೆ ಕರ್ಬಲಾದಿಂದ ಹೈದರಾಬಾದಿಗೆ ಬಂದನು. ಆತನು ಬರುವ ಕಾಲಕ್ಕೆ ಕರ್ಬಲಾದ ಪವಿತ್ರ ಭೂಮಿಯ ಮಣ್ಣನ್ನು ತನ್ನ ಸಂಗಡ ತಂದಿದ್ದನು. ಅದೇ ಮಣ್ಣನ್ನು ಈ ಭೂಮಿಯಲ್ಲಿ ಹಾಕಿ ಶಿಯ್ಯಾ ಜನರ ಸಲುವಾಗಿ ಇದನ್ನು ಸಿದ್ಧಮಾಡಿದರು. ಈ ಮೀರಮೋಮಿನನ ಗೋರಿಯು ಹೆಬ್ಬಾಗಿಲ ಸಮೀಪದಲ್ಲಿಯೇ ಬಲಗಡೆಗಿರುವದು. ಇದರಲ್ಲಿ ಶಿಯ್ಯಾ ಸುನ್ನೀ ಎರಡು ಪಂಗಡದವರ ಗೋರಿಗಳಿರುವವು. ನೂರಾರು ಗೋರಿಗಳಿದ್ದು ಪ್ರತಿಯೊಂದರಮೇಲೆಯೂ ಚರಿತ್ರೆಗಳನ್ನೊಳಗೊಂಡ ದೊಡ್ಡದೊಡ್ಡ ಕಲ್ಲುಗಳಿರುವವು. ಇದರ ಒಂದು ಭಾಗವನ್ನು ಸುತ್ತಲೂ ಗೋಡೆ ಕಟ್ಟಿ ಇತರ ಗೋರಿಗಳಿಂದ ಬಿಂಗಡಿಸಿ ಸಾಲಾರಜಂಗರವರ ಮನೆತನದವರೆಲ್ಲರ ಗೋರಿಗಳಿರುವವು.

ಮಕ್ಕಾ ಮಸೀದೆ ಎಂಬ ಪ್ರಸಿದ್ಧ ಮಸೀದೆಯ ಕಟ್ಟುವಿಕೆಯನ್ನು ಸುಲ್ತಾನ ಮಹಮ್ಮದ ಕುತುಬಶಹನು ಪ್ರಾರಂಭಿಸಿದರೂ, ಅವನ ಕಾಲಕ್ಕೆ ಮುಗಿ

ಯುದೆ ಅವನ ತರುವಾಯ ಆಳಿದ ಅಬ್ದುಲ್ಲಾ ಹಾಗೂ ಅಲ್ಲೀಶಹರು ಅದನ್ನು ಕೈಕೊಂಡು ಮುಗಿಸುವಾಗ, ಔರಂಗಜೇಬನು ಕಡೆಯವನನ್ನು ಸೆರೆ ಹಿಡಿದು ಮಸೀದೆಯ ಶಿಖರಗಳು ಮುಗಿಯುವ ಪೂರ್ವದಲ್ಲಿ ಅಷ್ಟಕ್ಕಷ್ಟೇ ನಿಲ್ಲಿಸಿ ಶಿಖರಗಳನ್ನು ಸಣ್ಣಾಗಿ ಕಟ್ಟಿಸಿದನು. ಇವುಗಳನ್ನು ಸಣ್ಣನಾಗಿಡಲು ಅಪ್ಪಣೆ ಕೊಡುವಾಗ ಔರಂಗಜೇಬನು ಹೀಗೆಂದನಂತೆ :—

"None ever fully satisfied his worldly desires, whatever one ought to do ought to be on a small scale."

ಔರಂಗಜೇಬನ ಈ ಕೃತ್ಯವನ್ನು ಅತ್ಯಂತ ಕಠೋರ ರೀತಿಯಿಂದ ನಿಷೇಧಿಸಿದರು. ಏನೇ ಆಗಲಿ, ಇದರ ಹೆಬ್ಬಾಗಿಲನ್ನು ಈತನೇ ಇ. ಸ. ೧೬೯೨ರಲ್ಲಿ ಕಟ್ಟಿಸಿ ಮುಗಿಸಿದನು.

ಟ್ಯಾವರ್ನಿಯರ ಎಂಬ ಫ್ರೆಂಚ ಪ್ರವಾಸಿಕನು ಈ ಮಸೀದೆಯನ್ನು ಪೂರ್ವದಲ್ಲಿ ನೋಡಿ ಹೀಗೆ ಬರೆದಿದ್ದಾನೆ :—

"About fifty years since they began to build magnificent Pagod (Mecca Musjid) in the city, which would have been the finest in all India had it been finished. The stones are to be admired for their bigness. And that wherein the nich (MEHRAB) is made, which is on the side where they say their prayers, is an entire rock of such prodigious bulk that it was five years before five or six hundred men continually engaged could get it out of its place. They were also to roll it along upon an engine with wheels, upon which they brought it to the Pagod, and several affirmed to me that there were fourteen hundred oxen to draw it."

ತೋಲಿ ಮಸೀದೆಯು ಕೋಟೆಗೆ ಹೋಗುವ ಮಧ್ಯ ಮಾರ್ಗದಲ್ಲಿ ಇ. ಸ. ೧೬೭೧ರಿಂದ ೧೬೭೨ರಲ್ಲಿ ಕಟ್ಟಲ್ಪಟ್ಟಿದೆ. ಇದರಲ್ಲಿ ಸರ್ವೋತ್ಕೃಷ್ಟ ಶಿಲ್ಪಕಲೆಯು ಕಾಣುವುದು. ಈ ಮಸೀದೆಯು ಒಳಗೊಂದೂ ಅಂಗಳದಲ್ಲೊಂದೂ ಹೀಗೆ ಎರಡಕ್ಕೂ ಲೇಖನಗಳಿವೆ. ಅವುಗಳಲ್ಲಿ ಅಬ್ದುಲ್ಲಾ ರಾಜನಿಂದ ಉತ್ತೇಜಿತನಾಗಿ ಶೇಖಸೇಶವಾ ಎಂಬ ಧಾರ್ಮಿಕನ ಹೇಳಿಕೆಯಂತೆ ಮೂಸಾಖಾನನೆಂಬುವದಾಗಿ ಬರೆದಿದೆ. ಇ. ಸ. ೧೬೪೫ ಹಾಗೂ ೧೬೫೨, ಆಗ್ಗ ಎರಡುಸಾರೆ ಫ್ರೆಂಚ ಪ್ರವಾಸಿಕನಾದ ಟ್ಯಾವರ್ನಿಯರನೂ ಮತ್ತು ೧೬೬೭ರಲ್ಲಿ ಥೆವ್ನಾಟ್ ಎಂಬವನೂ ಹೈದರಾಬಾದಿಗೆ ಬಂದಿದ್ದರು. ಥೆವ್ನಾಟನು ಔರಂಗಾಬಾದದಿಂದ ಹೈದರಾಬಾದಕ್ಕೆ ಬಂದನು. ಆಗ್ಗೆ ಅವನು ಈ ಪಟ್ಟಣದ ವಿಷಯವಾಗಿ ಹೀಗೆ ಬರೆಯುವನು :—

"The capital city of Golconda is called Bhagnagar, the Persians call it Hyderabad ; it is fourteen or fifteen leagues from Viziapur (in the Nizam's Dominions), situated in the latitude of seventeen degrees, ten minutes, in a very long plain hemmed in with little hills, some *coses* distant from the Town, which makes the air of that place very wholesome, besides that the country of Golconda lies very high, the houses of the suburbs where we arrived are only built of earth and thatched with straw. They are so low and ill-contrived that they can be no more than huts. We went from one end to the other of that suburb, which is very long and stops near the Bridge (Purana Pul) which is at the farther end of it ...." ಎಂದು ಮುಂತಾಗಿ ಅತ್ಯಂತ ವಿಶೇಷವಾಗಿ ಬರೆದಿರುವನಾದುದರಿಂದ ಕುತೂಹಲವುಳ್ಳವರು ಸಂಪೂರ್ಣ ಅವನ ಪುಸ್ತಕವನ್ನೇ ಓದಬೇಕಾಗುವುದು. ಟ್ಯಾವರ್ನಿಯರನ ಕೇವಲ ಸಂಕ್ಷಿಪ್ತ ಶಬ್ದಗಳನ್ನೇ ಹೇಳುವುದೆಂದರೆ:—

"At Bhagnagar you cross the river over a bridge no less beautiful than Pont Nef at Paris (he means the Old Bridge). The City is little less than Orleans, well built and full of windows." ಇದಾದ ಮೇಲೆ ಓದುಗರು ಒಮ್ಮೆಯೆ ಕುತುಬಶಾಹಿಯ ಕಡೆಯ ಅರಸನಾದ ಅಬುಲ್‌ಹಸನ ತಾನಾಶಹನ ಆಳಿಕೆಗೆ ಬರಬೇಕು. ಗೋಷಾ ಮಹಾಲವನ್ನು ಈತನೇ ಕಟ್ಟಿಸಿದನು. ಈ ಮಹಾಲಿಗೆ ಗೋವಳಕೊಂಡದ ಕೋಟೆಯಿಂದ ಭೂಮಿಯೊಳಕ್ಕೆ ಮಾರ್ಗವಿರುವುದೆಂದೆನ್ನುವರು. ಇದರಲ್ಲಿಯೂ ಅರಸರ 'ಜನಾನಾ' ಇರುತ್ತಿದ್ದರು. ಇದೇ ಸ್ಥಳದಲ್ಲಿಯೇ ಮಿರಜುಮುಲಾನ ಉಪದೇಶದಂತೆ ಔರಂಗಜೇಬನು ರಾಯಬಾರಿಯ ವೇಷದಿಂದ ತಾನಾಶಹನನ್ನು ಭೆಟ್ಟಿಯಾದನು. ಆದರೆ ಇವನು ಔರಂಗಜೇಬನೇ ಎಂದು ತಿಳಿದ ಕೂಡಲೆ ಅವನು ಗೋವಳಕೊಂಡಕ್ಕೆ ಓಡಿದನು. ಆಗ ಔರಂಗಜೇಬನ ಸೈನಿಕರು ನಾನಾವಿಧವಾಗಿ ಊರನ್ನು ಸುಲಿದರು. ಈಗಲೂ ಹೈದರಾಬಾದಿನಿಂದ ಗೋವಳಕೊಂಡಕ್ಕೆ ಹೋಗುವ ಮಾರ್ಗದಲ್ಲಿ ಅರ್ಧಾರ್ಧವಾಗಿ ಉಳಿದು ಬಿದ್ದ, ಅನೇಕ ಮಂದಿರಗಳನ್ನು ನೋಟಕರು ನೋಡಬಹುದು. ಇವುಗಳು ಕೆಲವು ಒಂಟೆಯ ಹಾಗೂ ಕುದುರೆಯ ಸವಾರರ ಮನೆಗಳಿರುವವು. ಕೆಲವು ದರಗಾ ಹಾಗೂ ಮಸೀದೆಗಳು ಮಾತ್ರ ಈಗಲೂ ಉಳಿದಿವೆ. ಇವಲ್ಲದೆ ಇನ್ನೂ ಅನೇಕ ಮಂದಿರಗಳೂ ಉಂಟು. ಕುತುಬಶಾಹಿಯ ಕಾಲದ ವಿವರಣೆಯನ್ನು ಮುಗಿಸುವ ಪೂರ್ವದಲ್ಲಿ ಆಗ ಹೈದರಾಬಾದು ಬೆಳೆದು ಪುನಃ ಮೂರು ಊರುಗಳು ಅದರಲ್ಲಿಯೇ ಸಮಾವೇಶವಾದುವೆಂಬುದನ್ನು ತಿಳಿಸುವದು ಅವಶ್ಯವಿದೆ.—

(೧) ಹೈದರಾಬಾದು.—ಸುಲ್ತಾನ ಇಬ್ರಾಹಿಮ ಕುತುಬ ಶಹನ ಮಗನಾದ ಹೈದರನು ಎಂಬವನ ಸ್ಮಾರಕದ ಹೆಸರು. ಇವನ ಗೋರಿಯು ಇದೇ ಊರ ಮಸೀದೆಯ ಹತ್ತಿರವಿದೆ.

(೨) ನೌಬತ ಪಹಾಡ.—ಇದು ಹುಸೇನಸಾಗರದ ಹತ್ತಿರವಿದೆ. ಇದೇ ಸ್ಥಳದಲ್ಲಿ ಎಲ್ಲ ಫರಮಾನುಗಳ ಪ್ರಕಟನೆಯು ತಂಬೂರವ ಬಾರಿಸುತ್ತಿತ್ತು. ಇದು ಇಬ್ರಾಹಿಮ ಕುಲಿ ಕುತುಬ ಶಹನ ಕೇವಲ ಪ್ರೀತಿಯ ಸ್ಥಳವು. ಆಗ ಇದರ ಸುತ್ತಮುತ್ತಲೂ ಸುಂದರೋಪವನಗಳಿದ್ದವು.

(೩) ಲಿಂಗಮಪಲ್ಲಿ ತೋಟಗಳು.—ಇವು ಕುತುಬಶಹರ ಕಾಲದಲ್ಲಿ ಅತ್ಯಂತ ಪ್ರಖ್ಯಾತವಾಗಿದ್ದವು.

ಕುತುಬಶಾಹಿಯ ಮಸೀದೆಗಳ ಕಟ್ಟಡಕ್ಕೂ ಈಗಿನ ಕಟ್ಟಡಕ್ಕೂ ಭೇದವಿದೆ ಎಂಬುದನ್ನು ನೋಡುವವರು ಪ್ರತ್ಯಕ್ಷ ನೋಟದಲ್ಲಿ ಕಂಡುಹಿಡಿಯುವರು.

ಇನ್ನು ಮೊಗಲರ ಆಳಿಕೆಯಲ್ಲಿ ಚಾರಮಿನಾರದ ಗೋಪುರವನ್ನೊಂದನ್ನು ಮೊದಲು ಹೇಳಿದಂತೆ ಕಟ್ಟಿಸಿದ್ದು, ಹಾಗೂ ಹೈದರಾಬಾದಿನ ಸುತ್ತಲೂ ಭದ್ರವಾದ ಗೋಡೆಯನ್ನು ಮುಬಾರಿಜಖಾನನೆಂಬ ಸುಭೇದಾರನು ಕಟ್ಟಿಸಲಿಕ್ಕೆ ಪ್ರಾರಂಭಿಸಿದ್ದು. ಹೀಗೆ ಎರಡೇ ಕೆಲಸಗಳು ಹೇಳಿಕೊಳ್ಳುವಂಥವು. ಕೋಟೆಯ ಗೋಡೆಯು ಸಹ ಮೊದಲೇ ಹೇಳಿದಂತೆ ನಿಜಾಮುಲ್‌ಮುಲ್ಕನಿಂದಲೇ ಮುಗಿಸಲ್ಪಟ್ಟಿತು. ಈ ಊರಿನ ಸುತ್ತಲಿನ ಗೋಡೆಗಳಲ್ಲಿ ೧೩ ಬಾಗಿಲುಗಳಿವೆ. ಅವುಗಳ ಹೆಸರು: (೧) ಚೌದರಘಾಟ ದರವಾಜಾ, (೨) ದೆಹಲಿ ದರವಾಜಾ, (೩) ಅಫಜಲ್ ದರವಾಜಾ, (೪) ಚಂದಾ ದರವಾಜಾ, (೫) ಪುರಾನಾ ಪುಲ್ ದರವಾಜಾ, (೬) ದುಧಬಾವಲಿ ದರವಾಜಾ, (೭) ಗಾಝಿಬಂದಾ ದರವಾಜಾ, (೮) ಅಲಿಅಬಾದ ದರವಾಜಾ, (೯) ಲಾಲ ದರವಾಜಾ, (೧೦) ಗವಲಿಪುರಾ ದರವಾಜಾ, (೧೧) ಮೀರಜುಮಲಾ ದರವಾಜಾ, (೧೨) ಯಾಕೂತಪುರಾ ದರವಾಜಾ, (೧೩) ದಬೀಪುರಾ ದರವಾಜಾ.

ಈ ಬಾಗಿಲುಗಳಲ್ಲಿ ರಾತ್ರಿಯಲ್ಲಿ ಎಷ್ಟೋ ಬಾಗಿಲುಗಳು ಈಗಲೂ ಮುಚ್ಚಲ್ಪಟ್ಟು ಅವುಗಳಿಗೆ ಕೀಲಿಯನ್ನು ಹಾಕಿ ಕೈಯನ್ನು ನಗರ ಕೊತವಾಲನ ಕಡೆಗೆ ಕೊಡುತ್ತಾರೆ. ಮತ್ತು ಮುಂಜಾನೆ ತೆಗೆಯುತ್ತಾರೆ. ಈ ಗೋಡೆಯ ಸುತ್ತಳತೆಯು ಆರು ಮೈಲು. ಮತ್ತು ಒಳಗು ಎರಡೂಕಾಲು ಚೌರಸಮೈಲು ಇದೆ. ಈಗ ಫತೇಹ ಮೈದಾನವೆಂದು ಕರೆಯಲ್ಪಡುವ ವಿಶಾಲವಾದ ಬಯಲಿನ ಹೆಸರು ಔರಂಗಜೇಬನ ಕಾಲಕ್ಕೆ ಬಂದಿತು.

ಮೊಗಲರನಂತರ ನಿಜಾಮ ಶಾಹಿಯವರ ಕಾಲದಲ್ಲಿ ಎಂದರೆ ಸುಮಾರು ಒಂದುನೂರು ವರುಷ (೧೭೨೪ರಿಂದ ೧೮೦೦) ವರೆಗೆ ಯಾವ ಕಟ್ಟಡಗಳೂ

ಕಟ್ಟಲ್ಪಡಲಿಲ್ಲ. ಆದರೆ ಸಿಕಂದರಜಹನು ಪಾತ್ರ ಪುರಾನಾ ಹವೇಲಿ ಎಂದು ಕರೆಯಲ್ಪಡುವ ಮಹಲನ್ನು ಕಟ್ಟಿಸಿದನು. ೧೭೯೪ರಿಂದ ೧೮೦೦ರಲ್ಲಿ ಅತ್ಯಂತ ಭಯಂಕರವಾದ ಮೂಸಾನದಿಯ ಪ್ರವಾಹದಿಂದ ಎರಡು ಜಲಪ್ರಳಯಗಳಾದವು. ಎಷ್ಟೋ ಮನೆಗಳೂ ಜೀವನಗಳೂ ಸುಖಸಂಪತ್ತಿಗಳೂ ಹೇಳ ಹೆಸರಿಲ್ಲದೆ ಹೋದವು. ಇದೇ ಕಾಲದಲ್ಲಿಯೇ ಅತ್ಯಂತ ಪ್ರಸಿದ್ಧನಾದ ಫ್ರೆಂಚ ಜನರಲ್ಲನು ಅಂದರೆ ಎಮ್. ಜೆ. ರೇಮಂಡನು ಮೃತಪಟ್ಟನು. ೧೫,೦೦೦ ತರಬೇತಾದ ಸೈನ್ಯದ ಅಧಿಪತಿಯಾಗಿ ನಿಜಾಮನ ಅಂಕಿತದಲ್ಲಿದ್ದನು. ಕರ್ನಲ್ ಮಾಲ್‌ಸನ್ನಂಬವನು ಅವನ ವಿಷಯವಾಗಿ ಹೀಗೆ ಬರೆಯುತ್ತಾನೆ:—"No European of mark who preceded him, no European of mark who followed him in India ever succeeded in gaining to such an extent the love, the esteem, the admiration of the natives of the country." ರೇಮಂಡನು ತನ್ನ ತುಪಾಕಿಗಳನ್ನು ತಾನೇ ಮಾಡುತ್ತಿದ್ದನಲ್ಲದೆ 'ತೋಪಖಾನಾಂಚಾ' ಎಂಬ ಕಾರಖಾನೆಯನ್ನು ಸಹ ಸ್ಥಾಪಿಸಿದ್ದನು. ಇವನು ಇಸವಿ ೧೭೯೮ ರ ಮಾರ್ಚ ಇಪ್ಪತ್ತೈದನೆಯ ದಿವಸ ಹೈದರಾಬಾದಿನಲ್ಲಿ ಸತ್ತನು. ಇವನ ಗೋರಿಯು ಸರೂರ ನಗರಕ್ಕೆ ಹೋಗುವ ಮಾರ್ಗದಲ್ಲಿದೆ. ಸರೂರ ನಗರವು ಸರ್ ಸಾಲಾರಜಂಗರವರ ಜಹಗೀರಿಯಲ್ಲಿಯ ಒಂದು ಊರು. ರೇಮಂಡನ ಧೈರ್ಯಕ್ಕಾಗಿ ಎಷ್ಟೋ ಹಿಂದೂ ಮುಸಲ್ಮಾನರು ಅವನ ಗೋರಿಗೆ ನಮಸ್ಕಾರ ಮಾಡುತ್ತಾರೆ.

ಇಸವಿ ೧೮೦೦ರಲ್ಲಿ ರೆಸಿಡೆನ್ಸಿಯ ಕಟ್ಟಡವು ಪ್ರಾರಂಭವಾಯಿತು. ಇಡೀ ಹಿಂದುಸ್ಥಾನದೊಳಗಿನ ಎಲ್ಲಕ್ಕೂ ದೊಡ್ಡದಾದ ಸಂಸ್ಥಾನಕ್ಕೊಪ್ಪುವಂಥ ಹಿಂದುಸ್ಥಾನದಲ್ಲೆಲ್ಲಿಯೂ ಇಲ್ಲದಂಥ ಪ್ರೇಕ್ಷಣೀಯವಾದ ಕಟ್ಟಡವಿದು. ಇದನ್ನು ಕಟ್ಟಲು ಆರು ವರುಷಗಳಾದವು. ಈ ಕಟ್ಟಡವು ಮೇಜರ್ ಕೆರ್ಕಪ್ಯಾಟ್ರಿಕ್ ಎಂಬ ರೆಸಿಡೆಂಟರ ಕಾಲದಲ್ಲಿ ಮದರಾಸಿನ ಎಂಜಿನಿಯರರೊಬ್ಬರಾದ ರಸಲ್ ಎಂಬವರ ನೇತೃತ್ವದಲ್ಲಿ ಕಟ್ಟಲ್ಪಟ್ಟಿತು. ಇದರಲ್ಲಿರುವ ಕನ್ನಡಿಗಳೂ ಕುರ್ಚಿ ಮೇಜುಗಳಂಥವು ಎಲ್ಲಿಯೂ ಇಲ್ಲ. ಆಗಿನ ಕಾಲದ ಯುವರಾಜರಾದ ನಾಲ್ಕನೆಯ ಜಾರ್ಜರು ತಮಗಾಗಿ ಕೊಂಡದ್ದು ಯಾವುದೋ ಕಾರಣದಿಂದ ಈಸ್ಟ ಇಂಡಿಯಾ ಕಂಪೆನಿಯವರಿಗೆ ಮಾರಿಬಿಟ್ಟರು.

ಇಸವಿ ೧೮೧೧ರಲ್ಲಿ ಮೀರ ಆಲಂ ಎಂಬ ಕೆರೆಯು ಕಟ್ಟಲ್ಪಟ್ಟಿತು. ಶಿಕಂದರ ಜಹನ ಮಂತ್ರಿಯಾದ 'ಮೀರ ಆಲಮ'ನ ಹೆಸರನ್ನೇ ಇದಕ್ಕೆ ಇಟ್ಟರು. ಇದನ್ನು ಕಟ್ಟಿಸಲು ಎಂಟು ಲಕ್ಷ ರೂಪಾಯಿಗಳು ವೆಚ್ಚವಾದುವು. ಇಂಗ್ಲಿಷರಿಗೂ ಟೀಪೂ ಸುಲ್ತಾನನಿಗೂ ಶ್ರೀರಂಗಪಟ್ಟಣದ ಬಳಿಯಲ್ಲಿ ಯುದ್ಧವಾದಾಗ ಮೀರ ಆಲಮನು ನಿಜಾಮನಿಂದ ಇಂಗ್ಲಿಷರ ಸಹಾಯಾರ್ಥವಾಗಿ ಕಳುಹಿಸಿದ ಸೈನ್ಯದ ಅಧಿಪತಿಯಾಗಿದ್ದನು. ಆಗ್ಗೆ ಅಲ್ಲಿಯ ಯಶಸ್ಸಿನ ಬಗ್ಗೆ ತನ್ನ ಭಾಗಕ್ಕೆ ಬಂದ ಹಣದಿಂದಲೇ

ಈ ಕೆರೆಯನ್ನೂ ತನ್ನ ಬಾರಾದರಿಯನ್ನೂ ಕಟ್ಟಿಸಿದನು. ಮೂಸಾನದಿಯ ದಂಡೆಯ ಮೇಲೆ ಸುಂದರವಾದ ಹಾಗೂ ವಿಶಾಲವಾದ ತೋಟದ ಮಧ್ಯದಲ್ಲಿ ವಿರಮಂತಸ್ತುಗಳುಳ್ಳ ರಮಣೀಯವಾದ ಈ ಬಾರಾದರಿಯು ಕಟ್ಟಡವಿದೆ. ಇದನ್ನು ಸಂಪೂರ್ಣ ಕಟ್ಟಿಗೆಯಿಂದಲೇ ಕಟ್ಟಿರುವರು. ಬೆಂಗಳೂರಿನ ಟೀಪೂ ಸುಲ್ತಾನರ ಅರಮನೆಯೂ ಕಟ್ಟಿಗೆಯದೆ ಇದ್ದರೂ ಅದರಲ್ಲಿಯ ಕೆಲಸಕ್ಕೂ ಇದರಲ್ಲಿಯ ಕೆಲಸಕ್ಕೂ ಮಹದಂತರವಿದೆ. ಈಗ ಈ ಬಾರಾದರಿಯು ನವಾಬ ಸಾಲಾರ್ಜಂಗ ರವರ ಸ್ವಾಧೀನದಲ್ಲಿದೆ. ಇದರಲ್ಲಿ ಮೊದಲು ಲಾ ಸ್ಕೂಲು ಇತ್ತು. ಆಗ ಒಂದು ಒಂದೂವರೆ ಸಾವಿರ ಹುಡುಗರು ಕ್ಲಾಸುಗಳಲ್ಲಿರುತ್ತಿದ್ದರೂ ಇನ್ನೂ ಎಷ್ಟೋ ಸ್ಥಳವು ಹಾಗೆಯೇ ಬಿದ್ದಿರುತ್ತಿತ್ತು. ಇದನ್ನು ಈಗಿನ ನಿಜಾಮ ಸಾಹೇಬರು ಕಿತ್ತು ಇಲ್ಲಿ ಯೂನಾನಿ ವೈದ್ಯಾಲಯವನ್ನು ಕಟ್ಟಬೇಕೆಂದೆಣಿಸಿದುದರಿಂದ ಕಟ್ಟಡಕ್ಕೆ ಐದು ಲಕ್ಷ ರೂಪಾಯಿಗಳು ಮಂಜೂರಾಗಿವೆ. ನದಿಯ ದಂಡೆಗುಂಟ ಲಕ್ಷಾವಧಿ ರೂಪಾಯಿಗಳ ವೆಚ್ಚದಿಂದ ಹೈಕೋರ್ಟು, ಮೆಡಿಕಲ್ ಕಾಲೇಜು, ಸಿಟಿ ಕಾಲೆಜಿಯೇಟ ಹಾಯಸ್ಕೂಲುಗಳು ನೋಟಕರ ದೃಷ್ಟಿಯನ್ನು ಗರಗರ ತಿರುಗಿಸುವಂಥವಿರುವವು. ಅದೇ ಸಾಲಿನಲ್ಲಿ ವೈದ್ಯಾಲಯವನ್ನು ಕಟ್ಟಿದರೆ ಇದೂ ರಮಣೀಯವೇ ಸರಿ. ಆದರೆ ಪುರಾತನ ವಸ್ತು ಕೌಶಲವನ್ನು ತೋರಿಸುವ ಮಂದಿರವಿದ್ದರೆ ಎಷ್ಟೋ ಭೂಷಣ. ಈ ಬಾರಾದರಿಯ ಫೋಟೋವನ್ನು ಲಂಡನ್ನಿನಲ್ಲಿಟ್ಟಿರುವರು. ಇದನ್ನು ಫ್ರೆಂಚ ಎಂಜನಿಯರು ಕಟ್ಟಿದ್ದರು.

ಇಸವಿ ೧೮೩೧ರಲ್ಲಿ ಚೌದರಘಾಟಿನ ಪೂಲು ಕಟ್ಟಲ್ಪಟ್ಟಿತು. ನಿಜಾಮ ನಾಸಿರುದ್ದೌಲಾನ ಕಾಲದಲ್ಲಿ ರ್‍ಯಾಮಬಾಲ್ಡ ಕೋಠಿ ಹಾಗೂ ಪೆಸ್ತೊನಜಿ ಕೋಠಿಗಳೆಂಬ ಅರಮನೆಗಳು ಕಟ್ಟಲ್ಪಟ್ಟವು. ರ್‍ಯಾಮಬಾಲ್ಡ ಕೋಟೆಯು ಸರ್ ಮ್ಯುರ್‍ಯಾಮಬಾಲ್ಡರವರಿಂದ ಕಟ್ಟಿಸಲ್ಪಟ್ಟಿತು. ಇವರು ಆಗರ್ಭ ಶ್ರೀಮಂತರು. ಇವರ ವರುಷದ ಹುಟ್ಟುವಳಿಯು ೧,೨೦,೦೦೦ ರೂಪಾಯಿ ಇತ್ತು. ಲಾರ್ಡ ಹೇಸ್ಟಿಂಗ್ಸರು ಹಿಂದೂಸ್ಥಾನದ ವಾಯಿಸರಾಯರಿದ್ದಾಗ ಅವರ ಮನೆತನದ ಕನ್ಯೆಯನ್ನು ಮದುವೆ ಮಾಡಿಕೊಂಡು ಬಂದರು. ಇವರು ಇಸವಿ ೧೮೩೩ರಲ್ಲಿ ಸತ್ತರು. ತರುವಾಯ ಈ ಮನೆಯನ್ನು ಈಗಿನ ನಿಜಾಮರಿರುವ ಕಿಂಗ ಕೋಠಿಗೆ ಜೋಡಿಸಿದರು.

ಪೆಸ್ತೊನಜಿ ಮಹಾಲವೆಂಬುವದೂ ಇದೇ ಸುಮಾರಿಗೆ ಕಟ್ಟಲ್ಪಟ್ಟ ಭವ್ಯ ಅರಮನೆಯು. ಪೆಸ್ತೊನಜಿ ಎಂಬ ದೊಡ್ಡ ವ್ಯಾಪಾರಿಯಿದ್ದನು. ಈಗ ಈ ಮಹಾಲು ನವಾಬ ಮೊಹಸಿನುಲ್ಮುಲ್ಕರ ಸ್ವಾಧೀನದಲ್ಲಿದೆ. ಇವರು ಇದನ್ನು ಒಂದು ಲಕ್ಷ ರೂಪಾಯಿಗೆ ಕೊಂಡುಕೊಂಡರು.

ನಿಜಾಮ ಅಫಜುಲುದ್ದೌಲಾ ಇವರ ಕಾಲದಲ್ಲಿ ಈಗ ಅತ್ಯಂತ ಪ್ರೇಕ್ಷಣೀಯವಾದ ಅಫಜುಲಗಂಜ ಬಾಜಾರವು ನಿರ್ಮಿತವಾಯಿತು. ಮೂಸಾನದಿಯ

ದಂಡೆಯ ಈಚೆಯ ಭಾಗವದು. ಇಲ್ಲಿ ಒಂದು ಸುಂದರವಾದ ಮಸೀದೆಯಿದ್ದು, ಒಂದು ಲಕ್ಷ ರೂಪಾಯಿಗಳ ವೆಚ್ಚದಿಂದ ಕಟ್ಟಲ್ಪಟ್ಟಿದೆ. ಅಫಜುಲಗಂಜ ಬಾಜಾರಕ್ಕೆ ಹೊಂದಿಯೇ ಬೇಗಮ್ ಬಾಜಾರವಿರುವದು. ಈ ಬೇಗಮ್ ಬಾಜಾರವನ್ನು ಅಫಜುಲುದ್ದೌಲನು ತನ್ನ ಮುಖ್ಯ ಹೆಂಡತಿಯ ಸಲುವಾಗಿ ಕಟ್ಟಿಸಿದನು. ಈ ಬಾಜಾರದ ಕಂದಾಯವು ನಿಜಾಮರ ಮೊದಲನೆಯ ಹೆಂಡತಿಗೆ ಹೋಗುವದು.

ಚಾದರಘಾಟವು ೧೮೩೧ರಲ್ಲಿ ನಿರ್ಮಿತವಾಯಿತು. ೧೮೬೦ರಲ್ಲಿ ರೆಸಿಡೆನ್ಸಿ ಹಾಗೂ ಅದರ ಬಾಜಾರಗಳ ಹೊರತು ಅಲ್ಲಿ ಜನವಸತಿಯೇ ಇರಲಿಲ್ಲ. ಇದೇ ಸುಮಾರಿಗೆ ನಾಮಪಲ್ಲಿ ರೈಲ್ವೇಸ್ಟೇಶನ್ ಭವ್ಯ ಉಪವನ ಹಾಗೂ ಸೈಫಾಬಾದದ ಅರಮನೆಗಳು ಕಟ್ಟಲ್ಪಟ್ಟವು. ಆಗಿನಿಂದ ಜನವಸತಿಯು ತೀರ ದಟ್ಟವಾಗಿ ಹೋಯಿತು. ಆಗಿನ ಕಾಲಕ್ಕೆ ಹಣವಿಲ್ಲದೆ ಬೇಕಾದವರು ಬೇಕಾದಷ್ಟು ಸ್ಥಳವನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಬಹುದಾಗಿದ್ದಿತು. ಆದರೆ ಈಗ ಒಂದು ಚೌರಸ ಗಜ ಅಳತೆಯ ಸ್ಥಳಕ್ಕೆ ಹತ್ತು ರೂಪಾಯಿ ಬೆಲೆಯಾಗಿಹೋಗಿದೆ. ಅಫಜುಲುದ್ದೌಲರ ಕಾಲಕ್ಕೆ (ಒಂದನೆಯ) ಸರ್ ಸಾಲಾರಜಂಗರು ಮಂತ್ರಿಯಿದ್ದು ಅವರೇ ಅಫಜುಲಗಂಜ ಪೂಲನ್ನು ನದಿಗೆ ಕಟ್ಟಿಸಿದರು. ತತ್ಪೂರ್ವದಲ್ಲಿ ಹೈದರಾಬಾದಿನಿಂದ ರೆಸಿಡೆನ್ಸಿಗೆ ಹೋಗಬೇಕಾದರೆ ನವಾಬರು ಆನೆಗಳ ಮೇಲೆ ಹೋಗುತ್ತಿದ್ದರು.

ಗತನಿಜಾಮರಾದ ಮೀರ ಮಹಬೂಬ ಅಲ್ಲೀಖಾನರವರ ಕಾಲದಲ್ಲಿ ಮುಸಲ್ಲಮಪೂಲು ಹಾಗೂ ಫಲಕನುಮಾ ಅರಮನೆಗಳು ಕಟ್ಟಲ್ಪಟ್ಟವು. ಫಲಕನುಮಾ ಅರಮನೆಯನ್ನು ಪಾಯಿಗಾದ ಜಹಾಗೀರದಾರರಾದ ನವಾಬ ಸರವಿಕಾರುಲ ಉಮುರಾ ಇವರು ಕಟ್ಟಿಸಿದರು. ಇದನ್ನೇ ಪುನಃ ೩೫ ಲಕ್ಷ ರೂಪಾಯಿ ಕೊಟ್ಟು ನಿಜಾಮರು ಕೊಂಡುಕೊಂಡರು. ಇದು ಬಹಳ ಎತ್ತರವಾದ ದಿನ್ನೆಯ ಮೇಲಿದ್ದು ಅತ್ಯಂತ ಸೌಂದರ್ಯ ಉಳ್ಳದ್ದಾಗಿದೆ. ಇದರಲ್ಲಿಯ ಫರ್ನಿಚರ ಮೊದಲಾದವುಗಳು ಕೋಟ್ಯಾವಧಿ ರೂಪಾಯಿ ಬೆಲೆ ಬಾಳುವವು. ಇದರ ಮೇಲೆ ಯಾವಾಗಲೂ ಕಾವಲಿದ್ದು ಇದನ್ನು ನೋಡಬೇಕಾದರೆ ಕೊತವಾಲರ ಅಪ್ಪಣೆಯು ಬೇಕು.

ಈಗಿನ ನಿಜಾಮರ ಕಾಲವೆಂದರೆ ಮೊಗಲರ ಶಹಾಜಹಾನರ ಕಾಲವೆಂದೇ ತಿಳಿಯಬೇಕು. ಇವರ ಕಾಲದಲ್ಲಿ ಕೋಟ್ಯಾವಧಿ ರೂಪಾಯಿಗಳು ಮಂದಿರದ ಸಲುವಾಗಿಯೂ ಕೆರೆ ಕಾಲುವೆಗಳ ಸಲುವಾಗಿಯೂ ವೆಚ್ಚವಾದುವು. ಮೊದಲು ಹೆಸರಾಗಿದ್ದ ಬಾಗ ಆಮಾ (Public Gardens) ಇದು ಸ್ವರ್ಗದ ಉಪವನದಂತೆಯೇ ಇರುವುದು. ಒಂದು ಬಾಗಿಲಿನಿಂದ ಒಳಗೆ ಹೋದವರಿಗೆ ಪುನಃ ಅದೇ ಬಾಗಿಲಿನಿಂದ ಬರಬೇಕೆಂದರೆ ಬೇಗ ಸಿಕ್ಕುವುದೇ ಇಲ್ಲ. ದೊಡ್ಡದೊಡ್ಡ ನಾನಾಕಾರದ ಸರೋವರಗಳಿರುವವು. ಬರುವವರಿಗೆ ಯಾವಾಗಲೂ ತಂಪನ್ನೀಯುವಂತೆ ಅಲ್ಲಲ್ಲಿ ಕಾರಂಜಿ

ಗಳಿರುವವು. ಕರಮ್ನ ತುಂಬ ಸಕ್ಲಿಸ್ನ್ವ ನೆಂದವರನ್ನು ಹೇಗೆ ಹಸಿದವ ಸ್ತ್ರೀಗೆ ಒಪ್ಪುವದೋ ಹಾಗೆಯೇ ಈ ತೋಟವು ಒಪ್ಪುವದು. ಇದರಲ್ಲಿಯೇ ಪ್ರಸಿದ್ಧವಾದ ಟೌನ್‌ಹಾಲ್ ಹಾಗೂ ಮ್ಯೂಝಿಯಮ್‌ಗಳಿರುವವು. ಈಗ ನೂರು ವರುಷಗಳಿಂದ ಇಲ್ಲಿ ಒಂದು ಪ್ರದರ್ಶನ ಮಂದಿರವನ್ನು ಕಟ್ಟಿದ್ದಾರೆ. ಆದರೆ ಅದರಲ್ಲಿ ಇನ್ನೂ ಬೇಕಾದ ಸಾಮಾನುಗಳು ಇಲ್ಲ. ತೋಟದಲ್ಲಿ ಒಂದು ಗೈರುಮುಕಿತರ ನಮಾಜಿಗೆ ಅನುಕೂಲವಾಗಬಾರದೆಂದು ಇಲ್ಲಿ ಸಣ್ಣ ಸಣ್ಣ ಸುಂದರವಾದ ಮಸೀದೆಯನ್ನು ಕಟ್ಟಿರುವರು.

ಮೂಸಾನದಿಯು ಪ್ರವಾಹವು ಹೆಚ್ಚಾಗಲು ಹರಿಬಂದು ಊರಿಗೆ ಬಹಳ ಕೇಡುಮಾಡುತ್ತಿದ್ದಿತು. ಅದನ್ನು ಕಂಡು ಅದರ ಬೀಜವನ್ನೇ ತೆಗೆಯಬೇಕೆಂದು ಹಾಯ್ದು ಬರುತ್ತಿರುವ ಗುಡ್ಡಗಳೆದುರಿಗೆ ಒಡ್ಡು ಹಾಕಿ, ಅಲ್ಲಿಯೇ ದೊಡ್ಡ ದಂಡೆಯನ್ನು ಕಟ್ಟಿ ಕೆರೆ ಮಾಡಿದ್ದಾರೆ. ಇದಕ್ಕೆ ನಾಲ್ಕೂವರೆಕೋಟಿ ರೂಪಾಯಿಗಳು ವೆಚ್ಚವಾದುವು. ಇದರಿಂದ ಇಡೀ ಹೈದರಾಬಾದಿಗೆ ಬೇರೆ ಕೆರೆಗಳ ಸಹಾಯವಿಲ್ಲದೆ ನೀರು ಪೂರೈಸುವದು. ನದಿಯ ಪಾತ್ರೆಯನ್ನು ಅಗಲ ಮಾಡಿ ಎರಡೂ ದಂಡೆಗಳನ್ನೂ ಗಟ್ಟಿಯಾಗಿ ಕಟ್ಟಿಸಿರುವರು. ಊರಿನಲ್ಲೆಲ್ಲಿ ನದಿಯು ಹಾಯ್ದಿರುವದೋ ಅದರಲ್ಲಿ ಅರ್ಧಭಾಗವನ್ನೆಲ್ಲ ಸುಂದರವಾದ ತೋಟಮಾಡಿದ್ದಾರೆ. ನದಿಯನ್ನು ಅಡ್ಡಗಟ್ಟಿದ ಸರೋವರಕ್ಕೆ ಉಸ್ಮಾನ ಸಾಗರವೆನ್ನುವರು. ಇದು ಹೈದರಾಬಾದಿನಿಂದ ಹದಿನಾಲ್ಕು ಮೈಲು ಇದೆ. ಇದರ ನೀರನ್ನೇ ಪಟ್ಟಣದ ನದಿಗೆ ಹರಿಬಿಟ್ಟು ಅಲ್ಲಿ ಸಾವ್ರಗಳನ್ನಿಡುವರು. ಇದರ ದಂಡಗುಂಟ ಭವ್ಯ ಕಟ್ಟಡಗಳಾಗಿರುವವು. ಈಗಿರುವ ಹೈಕೋರ್ಟು ಹದಿನಾರು ಲಕ್ಷ ರೂಪಾಯಿಗಳ ವೆಚ್ಚದಿಂದಾಗಿದೆ. ಅದರೆದುರಿಗೆ ಹನ್ನೆರಡು ಲಕ್ಷ ರೂಪಾಯಿಗಳ ವೆಚ್ಚದಿಂದ ಮೆಡಿಕಲ್ ಕಾಲೇಜ ಹಾಗೂ ಆಸ್ಪತ್ರೆಯನ್ನು ಕಟ್ಟಿಸಿದ್ದಾರೆ. ಹೈಕೋರ್ಟಿನ ಪಕ್ಕದಲ್ಲಿಯೇ ಆರು ಲಕ್ಷ ರೂಪಾಯಿಗಳ ವೆಚ್ಚದಿಂದ ಸಿಟಿ ಕಾಲೇಜಿಯೇಟ ಹಾಯಿಸ್ಕೂಲ ಕಟ್ಟಿಸಿರುವರು. ಸ್ಟೇಟ ಲಾಯಬ್ರರಿಯು ಇನ್ನೂ ಕಟ್ಟಲಿರುವುದು.

ಉಸ್ಮಾನಿಯಾ ಯುನಿವರ್ಸಿಟಿಯ ಕಟ್ಟಡಕ್ಕಾಗಿ ಒಂದು ಕೋಟಿ ರೂಪಾಯಿಗಳು ಮಂಜೂರಾಗಿರುವವು. ಇದೂ ಅಲ್ಲದೆ ಎಲ್ಲಕ್ಕೂ ಹೆಚ್ಚಿನ ಸಂಗತಿಯೆಂದರೆ ಚೌರಮಾನಾರದಿಂದ ಅಫಜುಲಗಂಜದ ಪೂಲಿನವರೆಗಿನ ಮಾರ್ಗವು ಅತ್ಯಂತ ಕಿರಿದಾಗಿದ್ದುದರಿಂದ ಅದನ್ನು ಈಗಿನ ಎರಡರಷ್ಟು ಅಗಲಮಾಡಿ ಅದರೆರಡು ಪಕ್ಕದ ಅಂಗಡಿಗಳನ್ನು (City Improvement) ಅವರು ಕೋಟ್ಯಾವಧಿ ರೂಪಾಯಿಗಳಿಂದ ಕಟ್ಟಿಸುತ್ತಿದ್ದು ಚೌರಮಾನಾರದ ನಾಲ್ಕು ಮಾರ್ಗಗಳ ಅಂಗಡಿಗಳೆಲ್ಲವೂ ಒಂದೇ ತೆರದ ಬಿಳಿ ಕಲ್ಲಿನವೇ ಆಗುವದರಿಂದ ಈ ನೋಟದಂಥ ನೋಟವು ಹಿಂದುಸ್ತಾನದಲ್ಲಿಂತೂ ಎಲ್ಲಿಯೂ ಗೋಚರವಾಗಲಿಕ್ಕಿಲ್ಲ. ಇವಲ್ಲದೆ ಇನ್ನೂ ಹಲವು ಯೋಜನೆಗಳು ಈಗಿನ ವಿಚಾರದಲ್ಲಿರುವವು.

ಏನೇ ಆಗಲಿ ಇಷ್ಟು ಸುಂದರವಾಗಿಯೂ ತಂಪಾಗಿಯೂ ಎಲ್ಲಿ ನೋಡಿದರಲ್ಲಿ ಸೃಷ್ಟಿ ಸೌಂದರ್ಯದಿಂದೊಪ್ಪುವ ಪಟ್ಟಣಗಳು ಬಹಳ ಕಡಿಮೆ. ಹೈದರಾಬಾದಿನ ಪುರಾತನ ಸ್ಥಿತಿಗಳು ಹೋಗಿ ಹೊಸ ಯುಗದ ಹಾದಿಯಲ್ಲಿ ಸಹಾಯವಾಗಲೆಂದು ಹಾರೈಸಿ ಇಲ್ಲಿಗೆ ವಿರಮಿಸುತ್ತೇನೆ.*

ರಾ. ರಾ. ಚಾಕಲಬ್ಬಿ, ವಕೀಲ, ಕೊಪ್ಪಳ.

---

* ಈ ಲೇಖನವು ಹೈದರಾಬಾದ ಆರ್ಕಿಯಾಲಾಜಿಕಲ್ ಜರ್ನಲದಲ್ಲಿ ವಿ. ಪ. ಎ. ಭವನಾನಿಯವರು ಬರೆದುದರ ಆಧಾರದಿಂದ ಬರೆದಿದೆ. ಕಾರಣ ಅವರಿಗೆ ನಾನು ಕೃತಜ್ಞನಾಗಿರುವೆನು.

ಮದ್ರಾಸ್ ಸರಕಾರದ ಪ್ರಾಚ್ಯ ಗ್ರಂಥಶಾಲೆ

ಈ ಕೋಶಾಗಾರವು ಕ್ರಿ. ಶ. ೧೮೬೯ನೆಯ ಸಂವತ್ಸರದಲ್ಲಿ ಮದ್ರಾಸು ಸರಕಾರದವರಿಂದ ಸ್ಥಾಪಿತವಾಗಿ ವಿದ್ಯಾಭ್ಯಾಸದ ಇಲಾಖೆಯವರ ಮೇಲ್ವಿಚಾರಣೆಗೆ ಒಳಪಟ್ಟು ಪ್ರೆಸಿಡೆನ್ಸಿ ಕಾಲೇಜಿನ ಸಂಸ್ಕೃತ ಅಧ್ಯಾಪಕ (Professor)ರ ಅಧಿಕಾರಕ್ಕೆ ಸೇರಿರುವುದು. ಈಗ ಈ ಮಂದಿರದಲ್ಲಿ ೩೪,೫೦೦ ಹಸ್ತ ಪ್ರತಿಗಳೂ ಸುಮಾರು ೬,೭೦೦ ಮುದ್ರಿತ ಗ್ರಂಥಗಳೂ ಇವೆ. ಇದರಲ್ಲಿ ಮುಖ್ಯವಾಗಿ ಸಂಸ್ಕೃತ, ತಮಿಳು, ತೆಲುಗು, ಕನ್ನಡ, ಉರ್ದು ಭಾಷೆಗೆ ಸಂಬಂಧಪಟ್ಟ ಗ್ರಂಥಗಳೂ, ಮಲೆಯಾಳ, ಒಢ್ರ (Oriya), ಮಹಾರಾಷ್ಟ್ರ ಭಾಷೆಗಳ ಕೆಲಕೆಲವು ಗ್ರಂಥಗಳೂ ಇರುತ್ತವೆ. ಸಾಮಾನ್ಯವಾಗಿ ಭೂಮಂಡಲದಲ್ಲಿರುವ ಪ್ರಾಚ್ಯ ಗ್ರಂಥಶಾಲೆಗಳಿಗಿಂತಲೂ ಸರ್ವ ವಿಧದಲ್ಲಿಯೂ ಇದರ ಪ್ರಾಶಸ್ತ್ಯವು ಶ್ಲಾಘನೀಯವಾಗಿರುವುದೆಂದು ಅನೇಕ ಮಂದಿ ಐರೋಪ್ಯ ಸಂಸ್ಕೃತ ವಿಶಾರದರೇ ಒಪ್ಪಿಕೊಂಡಿರುವರು. ಆದರೆ ಈ ಕೋಶಾಗಾರದ ವಿಷಯವಾಗಿ ಆಂತರಿಕ ವಿಷಯಗಳನ್ನು ವಿಮರ್ಶಿಸುವುದಕ್ಕೆ ಮೊದಲು, ಇಂತಹ ಕೋಶವನ್ನು ಮೊತ್ತಮೊದಲು ಸಂಗ್ರಹಿಸಲು ಉಜ್ಜುಗಿಸಿದ ಮಹನೀಯನಾರು ? ಆತನ ಕಾಲವಾವುದು ? ಆತನ ಜನ್ಮಭೂಮಿ ಯಾವುದು ? ಅಂತಹ ಗ್ರಂಥ ಸಂಗ್ರಹಕ್ಕೆ ಕಾರಣವೇನು ? ಈ ಶಾಲೆಯನ್ನು ಸ್ಥಾಪಿಸುವುದರಲ್ಲಿ ಒದಗಿದ ಸನ್ನಿವೇಶಗಳಾದರೂ ಯಾವುವು ? ಎಂಬ ವಿಚಾರವು ಸಾಮಾನ್ಯವಾಗಿ ಈ ಲೇಖನವನ್ನು ಓದುವ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಹೊಳೆಯದಿರಲಾರದು. ಕ್ರಿ. ಶ. ೧೭೮೨ರಿಂದ ೧೮೨೧ರ ವರೆಗೆ ದಕ್ಷಿಣ ಹಿಂದುಸ್ಥಾನದ ಬೇರೆ ಬೇರೆ ಆಧಿಪತ್ಯಗಳಲ್ಲಿಯೂ ದೇಶೀಯ ಸಂಸ್ಥಾನಗಳಲ್ಲಿಯೂ ಭಿನ್ನ ಭಿನ್ನವಾದ ಅಧಿಕಾರಗಳನ್ನು ನಿರ್ವಹಿಸಿ ಕೀರ್ತಿಶೇಷರಾದ ಕರ್ನಲ್ ಮೆಕೆಂಜಿ (Col. Mackenzie)ಯವರು ಸಂಗ್ರಹಿಸಿದ್ದ ಗ್ರಂಥರಾಶಿಯನ್ನು ಅವರ ಜೀವಿತಾನಂತರದಲ್ಲಿ ಅವರ ಕುಟುಂಬದಿಂದ ಈಸ್ಟ್ ಇಂಡಿಯಾ ಕಂಪೆನಿ(East India Company)ಯವರು ೧೦,೦೦೦ ಪವನುಗಳಿಗೆ ಕ್ರಯಕ್ಕೆ ತೆಗೆದುಕೊಂಡು, ಅವುಗಳಲ್ಲಿ ಮುಖ್ಯ ಮುಖ್ಯವಾದವುಗಳನ್ನೆಲ್ಲ ವಿಲಾಯತಿಗೆ ತೆಗೆದುಕೊಂಡು ಹೋದರು. ಮಿಕ್ಕ ಭಾಗವು ಈಗ ಮದ್ರಾಸಿನಲ್ಲಿರುವ ಪ್ರಾಚ್ಯ ಗ್ರಂಥಗಳ ಭಂಡಾರದ ಸ್ಥಾಪನೆಗೆ ಕಾರಣವಾಗಿ ಪರ್ಯವಸಿತವಾಯಿತೆಂದು ತಿಳಿಯಬರುತ್ತಿದೆ.

ಕರ್ನಲ್ ಮೆಕೆಂಜಿಯವರ ಗ್ರಂಥಗಳನ್ನು ಪರಿಶೋಧಿಸಿ, ಪಟ್ಟಿಕೆಯನ್ನು (Catalogue) ರಚಿಸುವ ಕಾರ್ಯದಲ್ಲಿ ಮದ್ರಾಸು ಸರಕಾರದಿಂದ ನಿಯುಕ್ತರಾದ ವಿಲ್ಸನ್ (H. H. Wilson)ರವರು ತಮ್ಮ ಸೂಚೀ ಪತ್ರದ ಉಪೋದ್ಘಾತ

ದಲ್ಲಿ ಕರ್ನಲ್ ಮೆಕೆಂಜಿಯವರ ವಿಷಯವಾಗಿ ಈ ರೀತಿ ಬರೆದಿರುತ್ತಾರೆ:—
'ಅಸದೃಶವಾದ ಗ್ರಂಥ ಸಮುದಾಯವನ್ನು ಸಂಗ್ರಹಿಸಿದ ಕರ್ನಲ್ ಮೆಕೆಂಜಿಯವರು ಲ್ಯೂಯಿಸ್ (Lewis) ದ್ವೀಪದಲ್ಲಿ ಜನಿಸಿದವರು. ಇವರ ತಾಯಿ ತಂದೆಗಳ ವಿಷಯವಾಗಲಿ, ಇವರ ಬಾಲ್ಯ, ವಿದ್ಯಾಭ್ಯಾಸ ಮುಂತಾದ ವಿಷಯಗಳಾಗಲಿ, ಸ್ಪಷ್ಟವಾಗಿ ತಿಳಿಯಬಾರದಿರುವುವು. ಈತನು ಹಿಂದುಸ್ಥಾನಕ್ಕೆ ಬರುವುದಕ್ಕೆ ಮುಂಚಿತವಾಗಿ ಮೆರ್ಚಿನ್‌ಸ್ಟೌನಿನ ಐದನೆಯ ಪ್ರಭುವಾದ ಫ್ರಾನ್ಸಿಸ್ (Francis, the fifth Lord of Merchinstoun) ಎಂಬಾತನು, ಹಿಂದೂ ಜನಗಳ ವಿದ್ವತ್ತೆಯನ್ನೂ, ಮುಖ್ಯವಾಗಿ ಗಣಿತ ಶಾಸ್ತ್ರದ **ಘಾತ ಪ್ರಮಾಪಕ ಸಂಖ್ಯೆ** ಅಥವಾ **ಸಂವರ್ಗ ಮಾನ**(Logarithms)ವನ್ನು ಕುರಿತು ಹಿಂದೂದೇಶದಲ್ಲಿ ದೊರೆಯಬಹುದಾದ ವಿಷಯಗಳನ್ನೆಲ್ಲವನ್ನೂ ಸಂಗ್ರಹಿಸುವ ಸಲುವಾಗಿ ಈತನನ್ನು ಹಿಂದೂ ದೇಶಕ್ಕೆ ಕಳುಹಿಸಿದಂತೆ ಸಿಂಹಳದ್ವೀಪದ ಪ್ರಧಾನ ನ್ಯಾಯಮೂರ್ತಿಗಳಾದ ಸರ್ ಅಲೆಕ್ಸಾಂಡರ್ ಜಾನ್‌ಸ್ಟನ್ (Sir Alexander Johnston, late Chief Justice of Ceylon) ರವರು ೧೮೩೨ರಲ್ಲಿ ನಡೆದ ಈಸ್ಟ್ ಇಂಡಿಯಾ ಕಂಪೆನಿಯ ಸಂಬಂಧವಾದ ಪ್ರಜಾಪ್ರತಿನಿಧಿ ಸಭೆಯ ಸೆಲೆಕ್ಟ್ ಕಮಿಟಿಯಲ್ಲಿ ಹೇಳಿರುತ್ತಾರೆ.'

ಇದನ್ನು ನೋಡಿದರೆ ಪ್ರಾಯಶಃ ಇಂಗ್ಲಿಷ್ ಭಾಷೆಯಲ್ಲಿ ಸಂವರ್ಗ ಮಾನವನ್ನು (Logarithms) ಹೊಸದಾಗಿ ಕಂಡುಹಿಡಿದ, ತನ್ನ ಮೂಲ ಪುರುಷನಾದ ಜಾನ್ ನೇಪಿಯರ್ (John Napier) ಎಂಬಾತನ ಜೀವನ ಚರಿತ್ರೆಯನ್ನು ಬರೆಯುವ ಸಂದರ್ಭದಲ್ಲಿ ಲಾರ್ಡ್ ಮೆರ್ಚಿನ್‌ಸ್ಟೌನ್‌ರವರು ಈತನನ್ನು * ಈ ಕಾರ್ಯದಲ್ಲಿ ನಿಯಮಿಸಿರಬಹುದೆಂದು ತೋರುತ್ತದೆ. ಆದರೆ ಈ ಕಾರ್ಯವು ಮುಗಿಯುವುದರೊಳಗಾಗಿ ಲಾರ್ಡ್ ಮೆರ್ಚಿನ್‌ಸ್ಟೌನ್‌ರವರು ಈ ಲೋಕವನ್ನು ಬಿಟ್ಟುಬಿಟ್ಟರು. ಆದರೂ ಕ. ಮೆಕೆಂಜಿಯವರು ಮಾತ್ರ ಉತ್ಸಾಹ ಭರಿತರಾಗಿಯೇ ಹಿಂದೂಸ್ಥಾನದ ಅನೇಕ ಪ್ರದೇಶಗಳನ್ನು ಸಂಚರಿಸಿ, ತಮಗೆ ಆವಶ್ಯಕಗಳಾಗಿದ್ದ ಅನೇಕ ವಿಷಯಗಳನ್ನು ಸಂಪಾದಿಸ ತೊಡಗಿದರು. ಇವರು ಇಂಡಿಯಾದೇಶಕ್ಕೆ ಬರುವ ಕಾಲದಲ್ಲಿ, ಅಗ್ಗ ಮದ್ರಾಸಿನ ಗವರ್ನರಾಗಿದ್ದ ಲಾರ್ಡ್ ಮೆಕಾರ್ಟ್ನಿ (Lord Macartney)ಯವರಿಗೂ, ಮಧುರೆಯ ಹಿಂದೂ ಕಾಲೇಜಿನ ಪ್ರಧಾನಾಧ್ಯಾಪಕರಾಗಿದ್ದ ಮಿ. ಜಾನ್‌ಸ್ಟನ್ (Johnston)ರವರಿಗೂ ಕೆಲವು ಶಿಫಾರಸು ಕಾಗದಗಳನ್ನು ತಂದಿದ್ದರು. ಒಡನೆ ಮದ್ರಾಸು ಸರಕಾರದ ಮರಮ್ಮತ್ (Public Works) ಇಲಾಖೆಯಲ್ಲಿ ಒಂದು ಅಧಿಕಾರಕ್ಕೆ (Cadet of Engineers) ದಯಾಸ್ವರೂಪರಾದ ಲಾರ್ಡ್ ಸೀಫೋರ್ತ್ (Lord Seaforth) ರವರ ಶಿಫಾರಸಿನಿಂದ ಆ ಅಧಿಕಾರವನ್ನು ಸಂಪಾದಿಸಿಕೊಂಡರು. ಈ ವಿಧವಾದ ಸಹಾಯ ಸಂಪತ್ತಿಯಿಂದ, ಗ್ರಂಥ ಸಂಗ್ರಹದಲ್ಲಿ ಮತ್ತಷ್ಟು ಉತ್ಸಾಹದಿಂದ ಕೆಲಸ

* ರಾಯಲ್ ಏಸಿಯಾಟಿಕ್ ಸೊಸೈಟಿಯ ಮಾಸಪತ್ರಿಕೆ ಸಂ. ೧, ಪು. ೩೩೩.

ಮಾಡತಕ್ಕೊಡನೆ ಕಟ್ಟಕಡೆಗೆ ಯೂರೋಪ್ ಮತ್ತು ಏಷಿಯಾ ಖಂಡಗಳಲ್ಲಿ ಅದುವರೆಗೆ ಯಾರೂ ಸಂಗ್ರಹಿಸದಿದ್ದ ಅಪೂರ್ವವಾದ ಅನೇಕ ವಿಷಯಗಳನ್ನು ಶೇಖರಿಸಿದರು.

ಕರ್ನಲ್ ಮೆಕೆಂಜಿಯವರು ಇಂಡಿಯಾ ದೇಶದಲ್ಲಿದ್ದ ೩೮ (೧೭೮೩-೧೮೨೧ರ ವರೆಗೆ) ವರ್ಷಗಳ ಕಾಲದಲ್ಲಿ ೧೭೮೩ರಿಂದ ೧೭೯೬ರ ವರೆಗೆ, ಎಂದರೆ ೧೩ ವರ್ಷಗಳ ಕಾಲ ಸೈನ್ಯದಲ್ಲಿಯೇ ಕಳೆದುಹೋಯಿತು. ಆ ಸಮಯದಲ್ಲಿ ಹಿಂದೂದೇಶವು ಯುದ್ಧ ಮೂಲಕವಾದ ಕ್ಷಾಮ ಡಾಮರಗಳಿಗೆ ಈಡಾಗಿ ಕೇವಲ ಹೀನಸ್ಥಿತಿಯಲ್ಲಿದ್ದಿತು. ೧೭೮೩ರಲ್ಲಿ ಕೊಯಮುತ್ತೂರು ಮತ್ತು ದಿಂಡಿಗಲ್ಲು ಪ್ರಾಂತಗಳಲ್ಲಿಯೂ, ಬಳಿಕ ಕೆಲವು ಕಾಲ ಗುಂಟೂರು ನೆಲ್ಲೂರು ಪ್ರಾಂತಗಳಲ್ಲಿಯೂ, ೧೭೯೦ರಿಂದ ೧೭೯೫ರ ವರೆಗೆ ಮೈಸೂರು ಸೀಮೆ ಮತ್ತು ದತ್ತ ಮಂಡಲ(Ceded Districts)ದಲ್ಲಿಯೂ, ಆ ತರುವಾಯ ಕೆಲಕಾಲ ಸಿಂಹಳ ದ್ವೀಪದಲ್ಲಿಯೂ ರಾಜಕೀಯ ಕಾರ್ಯಗಳಲ್ಲಿ ಕಳೆದುಹೋಯಿತು. ಹೀಗೆ ಮೇಲೆ ಮೇಲೆ ರಾಜ್ಯದಿಂದ ನಗರಕ್ಕೂ, ಒಂದು ಆಧಿಪತ್ಯದಿಂದ ಮತ್ತೊಂದು ಸೀಮೆಗೂ ಪದೇಪದೇ ಸುತ್ತಬೇಕಾಗಿ ಬಂದುದರಿಂದ ಗ್ರಂಥಸಂಗ್ರಹ ರೂಪವಾದ ಇವರ ಮುಖ್ಯೋದ್ದೇಶವು ಸಮರ್ಪಕವಾಗಿ ಈಡೇರುವುದಕ್ಕೆ ಅವಕಾಶವಿಲ್ಲದೆ ಹೋಯಿತು. ಇವರು ೧೭೯೬ರಲ್ಲಿ ಸಿಂಹಳದಿಂದ ಹಿಂದಿರುಗಿದರು.

ಕ. ಮೆಕೆಂಜಿಯವರು ಹಿಂದೂದೇಶದ ವಿಷಯವಾದ ಚರಿತ್ರೆ, ವಿದ್ಯಾನೈಪುಣ್ಯ, ಹಿಂದೂಜನರ ಪರಿಶೋಧನೆ ಮುಂತಾದ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ಅನುಭವಿಸಿದ ತೊಂದರೆಗಳನ್ನು ವಿ. ವಿಲ್ಸನ್‌ರವರು ತಮ್ಮ ಉಪೋದ್ಘಾತದಲ್ಲಿ ವಿಶದೀಕರಿಸಿರುವರು. ಬಳಿಕ ೧೭೯೬ರಿಂದ ೧೮೦೬ರ ವರೆಗೆ ಎಂದರೆ ಹತ್ತು ವರ್ಷಗಳ ಕಾಲ ಡೆಕ್ಕನ್ ಪ್ರಾಂತದ ಭೂವಿವರಣೆ (Geography) ಯನ್ನು ಭೂಪಟ (Map) ವನ್ನೂ ಸಿದ್ಧಗೊಳಿಸುವುದರಲ್ಲಿ ನಿರತರಾಗಿದ್ದರು. ಈ ಕಾರ್ಯವು ಮುಗಿದಕೂಡಲೆ ಮದ್ರಾಸ್ ಸರಕಾರದ ಸರ್ವೇಯರ್ ಜನರಲ್ (Surveyor General) ಅಧಿಕಾರದಲ್ಲಿ ನಿಯುಕ್ತರಾದರು. ನಾಲ್ಕು ವರ್ಷಗಳು ಈ ರೀತಿಯಾಗಿ ಕಳೆದುಹೋದುವು. ಆ ಸಮಯದಲ್ಲಿ ಈತನ ಗ್ರಂಥ ಸಂಗ್ರಹ ಕಾರ್ಯವು ತಕ್ಕ ಮಟ್ಟಿಗೆ ಸಮರ್ಪಕವಾಗಿ ನಡೆಯಿತು. ಬಳಿಕ ೧೮೧೧ನೆಯ ವರ್ಷದಲ್ಲಿ ಸೈನ್ಯದ ಕಾರ್ಯಭಾರವನ್ನು ವಹಿಸಿ ಜಾವ (Java) ಪ್ರಾಂತಕ್ಕೆ ತೆರಳಬೇಕಾಗಿ ಬಂದಿತು. ಆ ಕಾಲದಲ್ಲಿಯೂ ಹಸ್ತಪ್ರತಿಗಳನ್ನು ಸಂಪಾದಿಸುವುದರಲ್ಲಿಯೇ, ವ್ಯಗ್ರರಾಗಿದ್ದುದಲ್ಲದೆ ತಮಗೆ ದೊರೆತ ಅತ್ಯಲ್ಪ ವಿರಾಮ ಕಾಲದಲ್ಲಿ ಕೂಡ ಕೆಲಕೆಲವು ವ್ಯಾಸಗಳನ್ನು ಬರೆದು ಬಟೇವಿಯನ್ ಸೊಸೈಟಿ (Batavian Society) ಯವರಿಗೆ ಕಳುಹಿಸಿ ತಮ್ಮ ಲೇಖನಗಳನ್ನು ಪ್ರಕಟಗೊಳಿಸುತ್ತಿದ್ದರು.

ಬಳಿಕ ೧೮೧೫ರಲ್ಲಿ ಇಂಡಿಯಾ ಸರಕಾರದವರು ಕರ್ನಲ್ ಮೆಕೆಂಜಿಯವರನ್ನು ಹಿಂದೂದೇಶದ ಸರ್ವೇಯರ್ ಜನರಲ್ (Surveyor General) ಅಧಿ

ಕಾರದಲ್ಲಿ ನಿಯಮಿಸಿದರು. ಈ ಕಾರಣದಿಂದ ಅವರು ಮದ್ರಾಸನ್ನು ಸಂಪೂರ್ಣವಾಗಿ ಬಿಟ್ಟು ಕಲ್ಕತ್ತೆಯಲ್ಲಿ ವಾಸ ಮಾಡಬೇಕಾಗಿ ಬಂದಿತು. ಆಗ ಕ. ಮೆಕೆಂಜಿಯವರು ತಮ್ಮ ಪ್ರತಿನಿಧಿಯಾಗಿ ಕೆಲವರನ್ನು ಮದ್ರಾಸ್ ಆಧಿಪತ್ಯದ ಕೆಲವು ಪ್ರದೇಶಗಳಲ್ಲಿ ನಿಯಮಿಸಿ ಅಲ್ಲಿನ ಚಾರಿತ್ರಕ ಮತ್ತು ಐತಿಹಾಸಿಕ ವಿಷಯಗಳನ್ನು ಸಂಗ್ರಹಿಸುವುದಕ್ಕೂ ಅವುಗಳನ್ನು ಭಾಷಾಂತರ ಮಾಡುವುದಕ್ಕೂ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಅದುವರೆಗೆ ತಾವು ಸಂಗ್ರಹಿಸಿದ್ದ ಗ್ರಂಥಗಳ ಸೂಚೀಪತ್ರವನ್ನು ಕಲ್ಕತ್ತೆಯಲ್ಲಿಯೇ ಮಾಡಬೇಕೆಂದು ಸಂಕಲ್ಪಿಸಿ, ತಮ್ಮ ಹೊಸ ಹುದ್ದೆಯ ಆಡಳಿತವನ್ನು ಕೈಕೊಳ್ಳಲು ಕಲ್ಕತ್ತೆಗೆ ಹೋದರು. ಹೀಗೆ ನಿಯುಕ್ತರಾದವರಲ್ಲಿ ಕೆಲವು ಮಂದಿ ರೋಗಗ್ರಸ್ತರಾದುದರಿಂದಲೂ, ಮತ್ತೆ ಕೆಲವರು ಈ ಲೋಕದಿಂದ ಅಂತರಿಸಿದುದರಿಂದಲೂ, ಇವರ ಸಂಕಲ್ಪವು ನಿರ್ವಿಘ್ನವಾಗಿ ನೆರವೇರದೆ ಹೋಯಿತು. ಇದೇ ಸಮಯದಲ್ಲಿ ಸರ್ ಅಲೆಕ್ಸಾಂಡರ್ ಜಾನಸ್ಟನ್‌ರವರು, ಕರ್ನಲ್ ಮೆಕೆಂಜಿಯವರನ್ನು ಕೂಡಲೆ ವಿಲಾಯತಿಗೆ ಕರೆಯಿಸಬೇಕೆಂತಲೂ, ಅದುವರೆಗೆ ಅವರು ಹಿಂದೂದೇಶದಲ್ಲಿ ಸಂಗ್ರಹಿಸಿದ್ದ ಪ್ರಾಚೀನೈತಿಹಾಸಿಕ ಸಂಬಂಧವಾದ ಅನರ್ಘ ವಿಷಯಗಳನ್ನೆಲ್ಲ ಪರಿಷ್ಕರಿಸಿ ಐರೋಪ್ಯರ ಸಹಾಯದಿಂದ ಪ್ರಕಟಗೊಳಿಸಬೇಕೆಂತಲೂ ಕೋರ್ಟ್ ಆಫ್ ಡೈರೆಕ್ಟರ್ಸ್ (Court of Directors) ಸಂಸ್ಥೆಯ ಅಧ್ಯಕ್ಷ (Chairman) ರ ಮೂಲಕ ಮೇಲೆ ಮೇಲೆ ಒತ್ತಾಯಪಡಿಸತೊಡಗಿದರು. ಆದರೆ ಈ ಕಾರ್ಯವು ಈಡೇರುವುದಕ್ಕೆ ಮೊದಲೇ ಕ. ಮೆಕೆಂಜಿಯವರು, ಕಾಲ ವ್ಯವಸ್ಥೆಯಿಲ್ಲದೆ ತಮ್ಮ ವಾರ್ಧಕದಲ್ಲಿ ಶ್ರಮಪಟ್ಟು ಕೆಲಸ ಮಾಡುತ್ತಿದ್ದ ಕಾರಣ ದೇಹಾರೋಗ್ಯವು ವಿಕಟಿಸಿ ತಮ್ಮ ೬೮ನೆಯ ವಯಸ್ಸಿನಲ್ಲಿ (೧೮೨೧) ತಮ್ಮ ಸೂಚೀ ಪತ್ರವು ಮುಗಿಯುವುದರೊಳಗಾಗಿಯೇ ಕಲ್ಕತ್ತೆಯಲ್ಲಿಯೇ ಮೃತ್ಯುವಿಗೆ ತುತ್ತಾದರು.

ಹೀಗಾಗಿ ಇವರು ಸಂಗ್ರಹಿಸಿದ ವಿಷಯಗಳ ಪರಿಚಯವು ಯಾರೊಬ್ಬರಿಗೂ ಅಶಕ್ಯವಾಯಿತು. ಆದರೆ, ಇವರು ತಮ್ಮ ಜೀವಿತ ಕಾಲದಲ್ಲಿ ಆಗಿಂದಾಗ್ಗೆ ತಾವು ಸಂಗ್ರಹಿಸಿದ ಪರಿಶೋಧನೆಗಳ ಸಾರಾಂಶವನ್ನು ಕ್ರೋಢೀಕರಿಸಿ * ಮುಖ್ಯವಾದ ಕೆಲಕೆಲವು ಮಾಸಿಕ ಪತ್ರಗಳಲ್ಲಿ ಪ್ರಕಟಗೊಳಿಸಿದ್ದರು.

ಇದೇ ಸಮಯದಲ್ಲಿಯೇ ಕ. ವಿಲ್ಕ್ಸ್ (Col. Wilks) ರವರು ಮೈಸೂರು ಸಂಸ್ಥಾನದ ಚರಿತ್ರೆಯನ್ನು ಬರೆಯತೊಡಗಿ, ತಮ್ಮ ಸೌಕರ್ಯಕ್ಕಾಗಿ ಕ. ಮೆಕೆಂಜಿಯವರ ಸಹಾಯವನ್ನು ಕೇಳಲಾಗಿ, ಕ. ಮೆಕೆಂಜಿಯವರು ತಾವು ಸಂಗ್ರಹಿಸಿದ್ದ ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನೊಳಗೊಂಡ ದಸ್ತೈವಜುಗಳನ್ನೆಲ್ಲ ಇವರ ವಶಪಡಿಸಿದ್ದರು. ಈ ಕಾರಣದಿಂದ ವಿಲಾಯತಿಯ ಈಸ್ಟ್ ಇಂಡಿಯಾ ಕಂಪೆನಿಯ ಕೋರ್ಟ್ ಆಫ್ ಡೈರೆಕ್ಟರ್ಸ್‌ರವರು ಕ. ವಿಲ್ಕ್ಸ್‌ರವರನ್ನೂ ಕೂಡ ಒತ್ತಾಯಪಡಿಸಲಾಗಿ, ಇವರು ಅದುವರೆಗೆ ತಾವು

* ಮೆ. ವಿಲ್ಸನ್‌ರವರ ಸೂಚೀ ಪತ್ರದ ೮ನೆಯ ಪುಟವನ್ನು ನೋಡುವುದು.

ಸಂಗ್ರಹಿಸಿದ್ದ ಚರಿತ್ರೆ, ಭೂಗೋಳ, ಸಾಮಾನ್ಯ ಭೂಪಟ (General Map) ಪ್ರಾಂತಿಕ ನಕ್ಷೆ (Provincial Map) ಮುಂತಾದ ವಿಷಯಗಳನ್ನೊಳಗೊಂಡ ೭ ದೊಡ್ಡ ಸಂಪುಟಗಳನ್ನು (Seven folio Volumes) ಮೇಲ್ಕಂಡ ಸಭೆಯ ಉಪಯೋಗಕ್ಕಾಗಿ ವಿಲಾಯತಿಗೆ ಕಳುಹಿಸಿದ್ದರು.

ಕ. ಮೆಕೆಂಜಿಯವರು ದಕ್ಷಿಣ ಹಿಂದೂಸ್ಥಾನದಲ್ಲಿ ಕೃಷ್ಣಾನದಿಯಿಂದ ಕನ್ಯಾಕುಮಾರಿಯವರೆಗೆ ಸರ್ವೆ ಇಲಾಖೆಯ ಕೆಲಸದಮೇಲೆ ಸಂಚರಿಸುತ್ತಿದ್ದಾಗ ಆಯಾ ಪ್ರದೇಶಗಳಿಗೆ ಸಂಬಂಧಪಟ್ಟ ಸ್ಥಳ ಪುರಾಣಗಳು, ಇತಿಹಾಸಗಳು, ಚಾರಿತ್ರಿಕ ವಿಷಯಗಳು, ಶಾಸನಗಳೇ ಮುಂತಾದುವುಗಳನ್ನು ತಮ್ಮ ಸ್ವಂತ ಪರಿಶ್ರಮದಿಂದಲೇ ಸಂಗ್ರಹಿಸಿದ್ದರು. ಇಂತಹ ವಿಷಯಗಳುಳ್ಳ ಗ್ರಂಥಗಳು ಹೇರಳವಾಗಿರುತ್ತಿದ್ದುವು. ಇವರು ಗತಿಸಿದ ಅನಂತರ ಸರ್ ಅಲೆಕ್ಸಾಂಡರ್ ಜಾನ್‌ಸ್ಟನ್ ರವರು ಕ. ಮೆಕೆಂಜಿಯವರ ಗ್ರಂಥರಾಶಿಯಲ್ಲಿ ದೊರೆತ ಕೆಲಕೆಲವು ಕಾಗದ ಪತ್ರಗಳನ್ನು ಪರಿಶೀಲಿಸಿ ಕರ್ನಲ್ ಮೆಕೆಂಜಿಯವರು ಈ ಗ್ರಂಥ ಸಂಗ್ರಹಕ್ಕಾಗಿ ಸುಮಾರು ೧೫ ಸಾವಿರ ಪವನುಗಳನ್ನು ವೆಚ್ಚಮಾಡಿರಬಹುದೆಂದು ಅಂದಾಜಿನ ಮೇಲೆ ಗೊತ್ತುಮಾಡಿ, ಮೇಲೆ ಹೇಳಿದ ದ್ರವ್ಯವನ್ನು ಪಾವತಿಮಾಡಿ, ಕ. ಮೆಕೆಂಜಿಯವರು ಸಂಗ್ರಹಿಸಿದ್ದ ವಿಷಯಗಳನ್ನೆಲ್ಲ ಇಂಡಿಯಾ ಸರಕಾರದವರು ಕ್ರಯಕ್ಕೆ ತೆಗೆದುಕೊಳ್ಳಬೇಕೆಂದು ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಸೂಚಿಸಿದರು.

ಈ ಸೂಚನೆಯಂತೆ, ಆ ಕಾಲದಲ್ಲಿ ಹಿಂದೂಸ್ಥಾನದ ಗವರ್ನರ್ ಜನರಲಾಗಿದ್ದ (Governor General) ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸ್ (Marquis of Hastings) ರವರು, ಈಸ್ಟ್ ಇಂಡಿಯಾ ಕಂಪೆನಿಯವರ ಸಮ್ಮತಿಯನ್ನು ಪಡೆದು ಈ ಮಹತ್ತಾದ * ಗ್ರಂಥ ರಾಶಿಯನ್ನು ೧೦,೦೦೦ ಪವನುಗಳಿಗೆ ಕ. ಮೆಕೆಂಜಿಯವರ ಪತ್ನಿಯ ಮೂಲಕ ಈಸ್ಟ್ ಇಂಡಿಯಾ ಕಂಪೆನಿಯವರ ಪರವಾಗಿ ಕ್ರಯಕ್ಕೆ ತೆಗೆದು ಕೊಂಡರು.

ಸುಮಾರು ೧೫ ಭಾಷೆಗಳಲ್ಲಿಯೂ, ೧೭ ಲಿಪಿಗಳಲ್ಲಿಯೂ ಬರೆಯಲ್ಪಟ್ಟ ಮತ, ಚರಿತ್ರೆ, ಇತಿಹಾಸ, ಭೂಗೋಳ, ವೈದ್ಯ, ರಸಾಯನ, ಶಾಸನಗಳೂ, ಸಾಹಿತ್ಯ ಮುಂತಾದ ವಿಷಯಗಳೂ, ಭೂಪಟಗಳೂ, ನಕ್ಷೆಗಳೂ (Plans), ನಾಣ್ಯಗಳೂ, ವಿಗ್ರಹಗಳೂ, ಕ. ಮೆಕೆಂಜಿಯವರ ಸಂಗ್ರಹದಲ್ಲಿ ಹೇರಳವಾಗಿದ್ದುವು. ಇವುಗಳಲ್ಲಿ ಮುಖ್ಯಮುಖ್ಯವಾದ ಸಂಸ್ಕೃತ, ಅರಾಬಿಕ್, ಪಾರ್ಸಿ, ಜವಾಪಿ, ಬರ್ಮ ಮುಂತಾದ ಭಾಷೆಗಳಲ್ಲಿದ್ದ ಅನೇಕ ಗ್ರಂಥಗಳೂ, ನಕಾಶೆಗಳೂ (Plans and Maps), ನಾಣ್ಯಗಳೂ, ವಿಗ್ರಹಗಳೂ ಇನ್ನೂ ಕೆಲವು ಭಾಷಾಂತರೀಕರಣ ಸಂಪುಟಗಳೂ, ಮುಖ್ಯವಾಗಿ ಕ. ಮೆಕೆಂಜಿಯವರ ಸಂಗ್ರಹದ ಮುಖ್ಯ ಸಾರಾಂಶವು ೧೮೨೩-೧೮೨೮ರಲ್ಲಿಯೂ ಮತ್ತು ಇನ್ನೊಂದು ಸಮಯ

* ಈ ಗ್ರಂಥರಾಶಿಯ ಪಟ್ಟಿಯು ವಿಲ್ಸನ್ನರ 'Wilson's Mackenzie collections' ಎಂಬ ಪುಸ್ತಕದ ಉಪೋದ್ಘಾತದ ೧೪ನೆಯ ಪುಟದಲ್ಲಿ ಕೊಟ್ಟಿದೆ.

ದಲ್ಲಿಯೂ ಒಟ್ಟಿಗೆ ಮೂರುಸಾರಿ * ವಿಲಾಯತಿಗೆ ಕಳುಹಿಸಲ್ಪಟ್ಟುವು. ಮಿಕ್ಕ ಗ್ರಂಥಗಳನ್ನು ೧೮೨೮ರಲ್ಲಿ ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನ ಲೈಬ್ರರಿಯಲ್ಲಿರಿಸಿದರು.

ಇದಾದ ಎರಡು ವರ್ಷಗಳ ತರುವಾಯ (ಕ್ರಿ. ಶ. ೧೮೩೦ನೆಯ ವರ್ಷದಲ್ಲಿ) ಮದ್ರಾಸ್ ಲಿಟರರಿ ಸೊಸೈಟಿಯ (Madras Literary Society and Auxiliary of the Royal Asiatic Society) ಆಡಳಿತೆಯ ಸಂಘದ ಸದಸ್ಯರು, ಈ ಗ್ರಂಥರಾಶಿಯು ಜನರ ಉಪಯೋಗಕ್ಕೆ ಬಾರದೆ ಕಾಲೇಜು ಲೈಬ್ರರಿಯಲ್ಲಿ ವ್ಯರ್ಥವಾಗಿ ಬಿದ್ದಿರುವುದಕ್ಕಿಂತಲೂ, ಅದನ್ನು ತಮಗೆ ಒಪ್ಪಿಸಿದಲ್ಲಿ ಅದರ ಸಾರಾಂಶಗಳನ್ನು ಸಂಗ್ರಹಿಸಿ, ಮನೋರಂಜಕವಾದ ಅನರ್ಘ ವಿಷಯಗಳನ್ನು ಮಾತ್ರ ಆಯ್ದುಕೊಂಡು ಮಾಸಿಕ ಪತ್ರಗಳಲ್ಲಿ ಪ್ರಚಾರಗೊಳಿಸುವುದಾಗಿಯೂ, ತತ್ಕಾಲದಲ್ಲಿ ತಮ್ಮ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಹೀನವಾಗಿರುವಕಾರಣ, ಮೊತ್ತಮೊದಲು ಜೈನ ವಿದ್ವತ್ಕೃತಿಗೂ, ಅದರಲ್ಲಿಯೂ ಮುಖ್ಯವಾಗಿ ಶಾಸನಗಳಿಗೂ, ಅತಿಶಯವಾದ ಗಮನವನ್ನು ಕೊಡುವುದಾಗಿಯೂ ಮದ್ರಾಸು ಸರಕಾರದವರಲ್ಲಿ ತಿಳಿಯಪಡಿಸಿದರು.† ಇದೇ ಸಮಯದಲ್ಲಿಯೇ ಕ. ಮೆಕೆಂಜಿಯವರ ಪ್ರಧಾನ ಪಂಡಿತನಾಗಿದ್ದ ಕಾವಲಿ ವೆಂಕಟಲಕ್ಷ್ಮಯ್ಯ ಎಂಬಾತನು, ಸರಕಾರದವರು ತಕ್ಕ ಸೌಕರ್ಯಗಳನ್ನು ಉಂಟುಮಾಡಿಕೊಟ್ಟಲ್ಲಿ, ತಾನು ಕ. ಮೆಕೆಂಜಿಯವರು ಸಂಚರಿಸದಿದ್ದ ಪ್ರದೇಶಗಳನ್ನೆಲ್ಲ ಸಂಚರಿಸಿ ಗ್ರಂಥಸಂಗ್ರಹ ಕಾರ್ಯವನ್ನು ಮುಗಿಸುವುದಾಗಿ ಮನವಿ ಮಾಡಿಕೊಂಡನು. ಆದರೆ ಸರಕಾರದವರು ಮದ್ರಾಸು ಲಿಟರರಿ ಸೊಸೈಟಿಯವರ ಕೋರಿಕೆಯನ್ನು ಅನುಮೋದಿಸಿದರು. ತಥಾಪಿ ಈ ಸಂಸ್ಥೆಯ ಮೂಲಕ ಆಗಿಂದಾಗ್ಗೆ, "Madras Journal of Literature and Science" ಎಂಬ ಮಾಸಿಕ ಪತ್ರದಲ್ಲಿ ಕೆಲವು ವ್ಯಾಸಗಳು ಮಾತ್ರ ಪ್ರಕಟವಾದುವೇ ಹೊರತು ಮಹತ್ವದ ಕಾರ್ಯವೂ ನಡೆಯಲಿಲ್ಲ.

ಇದೇ ಸಮಯದಲ್ಲಿಯೇ ರಾಯಲ್ ಏಸಿಯಾಟಿಕ್ ಸೊಸೈಟಿಯ ಕಾರ್ಯದರ್ಶಿಯಾಗಿದ್ದ ಕ್ಯಾಪ್ಟನ್ ಹಾರ್ಕ್‌ನೆಸ್ (Captain Harkness) ಎಂಬಾತನು ‡ ವಿಲಾಯತಿಗೆ ಕಳುಹಿಸಲ್ಪಟ್ಟು, ಈಸ್ಟ್ ಇಂಡಿಯಾ ಕಂಪೆನಿಯವರ ಅಧೀನದಲ್ಲಿದ್ದ, ಕ. ಮೆಕೆಂಜಿಯವರ ಗ್ರಂಥಗಳ ಕೆಲವು ಭಾಗಗಳನ್ನು ಸಂಗ್ರಹವಾಗಿ ಭಾಷಾಂತರ ಮಾಡುವ ಕಾರ್ಯವನ್ನು ಕೈಕೊಂಡನು. ಇದೇ ಸಂದರ್ಭದಲ್ಲಿಯೇ

* ರೆವರೆಂಡ್ ವಿಲಿಯಮ್ ಟೇಲರವರ ಸೂಚೀಪತ್ರದ ಉಪೋದ್ಘಾತದ ೧೭–೧೭ ಪುಟ; ಮತ್ತು ವಿಲ್ಸನ್‌ರವರ ಸೂಚೀಪತ್ರದ ಉಪೋದ್ಘಾತದ ೧೨ನೆಯ ಪುಟಗಳನ್ನು ನೋಡುವುದು.

† Letter from the Secretary, Asiatic Dept., Madras Literature Society, to Govt. Dated 9—3—1830.

‡ Report of the Committee of papers Calcutta, Branch of the Asiatic Society, submitted to Govt. of India. Dated 20th August 1836.

ಪಾರಿಸ್ ಪಟ್ಟಣದ ಎಂ. ಜಾಕ್ವೆಟ್ (M. Jacqet) ಎಂಬಾತನು, ತಾನು ಪ್ರಕಟಗೊಳಿಸುತ್ತಿದ್ದ "ಕಾರ್ಪಸ್ ಇನ್‌ಸ್ಕ್ರಿಪ್ಟೋರಿಯಂ" (Corpus Inscriptrorium) ಎಂಬ ಪತ್ರಿಕೆಯಲ್ಲಿ ಕ. ಮೆಕೆಂಜಿಯವರು ಸಂಗ್ರಹಿಸಿದ ಶಾಸನಗಳನ್ನು ಪ್ರಕಟಗೊಳಿಸುವುದಾಗಿ ಒಪ್ಪಿಕೊಂಡನು.

ಕರ್ನಲ್ ವಿಲ್ಕ್ಸ್‌ರವರು ಮೈಸೂರು ದೇಶದ ಚರಿತ್ರೆಯನ್ನು ಬರೆಯುವಲ್ಲಿ ಕ. ಮೆಕೆಂಜಿಯವರು ತಮ್ಮ ಸಂಗ್ರಹದ ಕೆಲಭಾಗಗಳನ್ನು ಇವರ ವಶಪಡಿಸಿದ್ದರೆಂದು ಮೇಲೆಯೇ ಹೇಳಲ್ಪಟ್ಟಿದೆ. ಈ ಸಹಾಯವು ಮೈಸೂರು ದೇಶದ ಚರಿತ್ರೆಯನ್ನು ಬರೆಯುವ ವಿಷಯದಲ್ಲಿ ತಮಗೆ ವಿಶೇಷ ಪ್ರಯೋಜನಕಾರಿಯಾಯಿತೆಂತಲೂ, ಇದಕ್ಕಾಗಿ ತಾವು ಕ. ಮೆಕೆಂಜಿಯವರಿಗೆ ಋಣಿಯಾಗಿರುವುದಾಗಿಯೂ ಕ. ವಿಲ್ಕ್ಸ್‌ರವರು ತಮ್ಮ ಉಪೋದ್ಘಾತದಲ್ಲಿಯೇ ಬರೆದಿರುತ್ತಾರೆ. ಈ ವಿಷಯದಲ್ಲಿ ಇನ್ನೂ ಅನೇಕ ನಿದರ್ಶನಗಳಿವೆ.

ಈ ಮುಂದೆ, ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿದ್ದ ಹಸ್ತಪ್ರತಿಗಳು ಯಾರ ಉಪಯೋಗಕ್ಕೂ ಬಾರದಂತೆಯೇ ೬ ವರ್ಷಗಳವರೆಗೆ ಅಲ್ಲಿಯೇ ಬಿದ್ದಿದ್ದುವು. ಮದ್ರಾಸು ಲಿಟರರಿ ಸೊಸೈಟಿಯವರು ಕೂಡ ತಕ್ಕ ರೀತಿಯಲ್ಲಿ ಅವುಗಳನ್ನು ಉಪಯೋಗಿಸಲಾರದೆ ಹೋದರು. ತರುವಾಯ ೧೮೩೭ರಲ್ಲಿ ಕಾವಲಿ ವೆಂಕಟಲಕ್ಷ್ಮಯ್ಯನು, ಪುನಃ ಮದ್ರಾಸು ಸರಕಾರದವರಲ್ಲಿ ಅರಿಕೆಮಾಡಿಕೊಂಡನು. ಸ್ಥಳೀಯ ಸರಕಾರದವರು ಈತನ ಮನವಿಯನ್ನು ಇಂಡಿಯಾ ಸರಕಾರದವರಿಗೆ ತಿಳಿಯಪಡಿಸಿದರು. ಅವರು ಆ ಸಂಬಂಧವಾದ ಕಾಗದ ಪತ್ರಗಳನ್ನು ಕಲ್ಕತ್ತೆಯಲ್ಲಿದ್ದ ರಾಯಲ್ ಏಸಿಯಾಟಿಕ್ ಸೊಸೈಟಿಯ ಶಾಖೆಯ (Auxiliary of the Royal Asiatic Society) ವರಿಗೆ ಅಭಿಪ್ರಾಯಕ್ಕಾಗಿ ಕಳುಹಿದರು. ಅವರು ಪಂ॥ ವೆಂಕಟಲಕ್ಷ್ಮಯ್ಯನ ವಿದ್ವತ್ತು ಮತ್ತು ಯೋಗ್ಯತೆಯ ವಿಷಯದಲ್ಲಿ ತಮಗೆ ಭರವಸೆಯಿಲ್ಲವೆಂತಲೂ, ರೆವರೆಂಡ್ ವಿಲಿಯಂ ಟೇಲರ್ ಎಂಬ ಪ್ರಾಚ್ಯ ವಿದ್ಯಾವಿಶಾರದ (Oriental Scholar) ರಿಗೆ ಈ ಗ್ರಂಥಗಳ ಪರಿಶೋಧನಾ ಕಾರ್ಯವನ್ನು ಒಪ್ಪಿಸಬೇಕೆಂತಲೂ ಬತ್ತಿ ಬರೆದರು.* ಚರಿತ್ರೆ, ಹಿಂದೂ ರಸಾಯನ ಶಾಸ್ತ್ರ, ತತ್ವಶಾಸ್ತ್ರ, ಮತ, ಜಾತಿ ಪದ್ಧತಿಗಳು ಮುಂತಾದ ಮನೋರಂಜಕ ವಿಷಯಗಳನ್ನು ಪ್ರಸಿದ್ಧಿಗೊಳಿಸಬೇಕೆಂತಲೂ ಇಂಡಿಯಾ ಸರ್ಕಾರದವರಿಗೆ ಶಿಫಾರಸು ಮಾಡಿದ್ದರು. ಬಳಿಕ ಇಂಡಿಯಾ ಸರಕಾರದವರು **ವಿಲಿಯಂ ಟೇಲರವರಿಗೆ** ಸಾಕಾದಷ್ಟು ಸಿಬ್ಬಂದಿಯನ್ನು ಒದಗಿಸಿಕೊಟ್ಟು ಅದರ ವೆಚ್ಚವನ್ನು ತಾವು ವಹಿಸಿದುದು ಮಾತ್ರವಲ್ಲದೆ, ವಿಲಿಯಂ ಟೇಲರವರಿಗೆ ಕೂಡ ತಿಂಗಳು ಒಂದಕ್ಕೆ ೪೦೦ ರೂಪಾಯಿಗಳ ಭತ್ಯ

* 'Men whom India has known' ಎಂಬುದರ ಪರಿಶಿಷ್ಟದ ೯ನೆಯ ಪುಟದಲ್ಲಿ ನೋಡುವುದು.

(Allowance) ವನ್ನು ಕೊಡುವುದಾಗಿ ಒಪ್ಪಿಕೊಂಡರು. ಹೀಗಾಗಿ, ರೆವರೆಂಡ್ ವಿಲಿಯಂ ಟೇಲರವರು ಈ ಕೆಲಸವನ್ನು ಸುಮಾರು ೧೮ ತಿಂಗಳಲ್ಲಿ ನೆರವೇರಿಸಿದರು.

ಇವರು ೧೮೩೭ನೆಯ ಜುಲಾಯಿ ತಿಂಗಳಲ್ಲಿ ಈ ಕಾರ್ಯವನ್ನು ಪ್ರಾರಂಭಿಸಿ ೧೮೩೮ನೆಯ ಡಿಸೆಂಬರ ತಿಂಗಳಲ್ಲಿ ಮುಗಿಸಿದರು. ಮುಖ್ಯವಾಗಿ, ವಾಚಕರಿಗೆ ಮನೋರಂಜಕವಾಗಿರುವ ವಿಷಯಗಳನ್ನೊಳಗೊಂಡ ದೊಡ್ಡ ಪ್ರಮಾಣದ ೫ ಸಂಪುಟಗಳನ್ನು ಪ್ರಕಟಗೊಳಿಸಿ ಮತ್ತಷ್ಟು ಹೃದಯಾಕರ್ಷಕವಾದ ವಿಷಯಗಳನ್ನು ಆಗಿಂದಾಗ್ಗೆ ಮಾಸಿಕ ಪತ್ರಗಳಲ್ಲಿ ಪ್ರಕಟಗೊಳಿಸಿ ಜನರ ಮನೋವೃತ್ತಿಯನ್ನು ಇತ್ತಕಡೆಗೆ ತಿರುಗಿಸಿದರು (ಮದ್ರಾಸ್ ಲಿಟರರಿ ಸೊಸೈಟಿಯ ೭ನೆಯ ಸಂಪುಟ). ಇವರ ಪರಿಶೋಧನೆಯು ಸಂಪೂರ್ಣವಾಗುವಾಗ್ಗೆ ಕೆಲವು ಕಾಗದ ಪತ್ರಗಳು ಹಿಂದು ಮುಂದಿನ ಸಂಬಂಧವಿಲ್ಲದೆಯೇ ದೊರೆತುವು. ಮತ್ತು ಕೆಲವು ಕಾಗದ ಪತ್ರಗಳಲ್ಲಿ ಶಾಯಿಯು ತುಂಬ ಒಣಗಿ ಕೆಟ್ಟು ಅಕ್ಷರಗಳನ್ನು ಕಂಡು ಹಿಡಿಯಲು ಬರುವಂತಿದ್ದಿಲ್ಲ. ಇನ್ನು ಕೆಲವು ಕಾಗದ ಪತ್ರಗಳು ಇಲಿಗಳಿಗೂ ರಾಮಬಾಣ (Book-worms) ಗಳಿಗೂ ತುತ್ತಾಗಿ ಅವುಗಳ ಪೂರ್ವೋತ್ತರ ವಿಷಯಗಳೇನೆಂಬುದನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಇವರು, ತಮಗೆ (ಮದ್ರಾಸ್ ಲಿಟರರಿ ಸೊಸೈಟಿಯ ೭ನೆಯ ಸಂಪುಟ, ಪುಟ ೨) ದೊರೆತಮಟ್ಟಿಗಾದರೂ ಶಿಥಿಲವಾಗದಿರುವಂತೆ ಮುಖ್ಯಮುಖ್ಯವಾದ ಪ್ರಾಚೀನೈತಿಹಾಸಿಕ, ಚರಿತ್ರೆ, ಮತ, ಜಾತಿ, ಶಾಸನ ಮುಂತಾದ ವಿಷಯಗಳನ್ನೊಳಗೊಂಡ ಸುಮಾರು ೪ ಸಾವಿರ ಪುಟಗಳುಳ್ಳ ಅತ್ಯಂತ ದೊಡ್ಡ ಪ್ರಮಾಣದ (Royal Demy) ೫ ಸಂಪುಟಗಳನ್ನು ಸಿದ್ಧಗೊಳಿಸಿ, ಅತ್ಯಂತ ಶಿಥಿಲವಾಗಿದ್ದ ಹಸ್ತಪ್ರತಿಗಳಲ್ಲಿ ಕೆಲವು ಪ್ರತಿಗಳನ್ನು ಮಾತ್ರ ಎತ್ತಿ ಬರೆಯಿಸಿದರು.

ರೆವರೆಂಡ್ ಟೇಲರವರು ತಮ್ಮ ವರದಿ (Report) ಯನ್ನು ಸರಕಾರಕ್ಕೆ ಒಪ್ಪಿಸಿದ ಬಳಿಕ ಕೆಲವು ಕಾಲದವರೆಗೆ ಯಾರೂ ಇದರ ಗೋಜಿಗೆ ಹೋಗಲೇ ಇಲ್ಲ. ಲಕ್ಷಾಂತರ ದ್ರವ್ಯವ್ಯಯದಿಂದ ಅಹರ್ನಿಶವೂ ಶ್ರಮಪಟ್ಟು ಸಂಪಾದಿಸಿದ ಕ. ಮೆಕೆಂಜಿಯವರ (ವಿಲಾಯತಿಗೆ ಕಳುಹಿಸಿ ಮಿಕ್ಕ) ಗ್ರಂಥ ಜಾಲವು ಇದ್ದಕಡೆಯಲ್ಲಿಯೇ ಇಲಿಗಳಿಗೂ ರಾಮಬಾಣಗಳಿಗೂ ಆಹಾರವಾಗಿ ಕ್ರಮೇಣ ಹೀನ ಸ್ಥಿತಿಗೆ ಬರುತ್ತಿತ್ತು.

ರೆ. ವಿಲ್ಸನರವರು ತಮ್ಮ ಸೂಚೀ ಪತ್ರದ ಉಪೋದ್ಘಾತದಲ್ಲಿ ಈ ವಿಷಯದಲ್ಲಿ ತಮ್ಮ ಪರಿತಾಪವನ್ನು ವಿಶೇಷವಾಗಿ ಪ್ರಕಾಶಗೊಳಿಸಿರುವರು. ಹೀಗೆಯೇ ಸುಮಾರು ೧೦ ವರ್ಷಗಳು ಕಳೆದುಹೋದುವು. ೧೮೪೭ರಲ್ಲಿ ಕರ್ನಲ್ ಸಿ. ಪಿ. ಬ್ರೌನ್ (Col. C. P. Brown) ರವರು ಈ ವಿಷಯದಲ್ಲಿ ಕೈಹಾಕಿ ಕ. ಮೆಕೆಂಜಿಯವರ ಉದ್ದೇಶವನ್ನು ಸ್ವಲ್ಪಮಟ್ಟಿಗೆ ನೆರವೇರಿಸಿದರೆಂದು ಹೇಳಬಹುದಾಗಿದೆ. ಈ ಕಾಲದಲ್ಲಿ, ಕ. ಮೆಕೆಂಜಿಯವರ ಗ್ರಂಥ ಸಂಗ್ರಹ ವಿಷಯವು ಪುನಃ ಈಸ್ಟ್ ಇಂಡಿಯಾ ಕಂಪೆನಿಯವರ ಗಮನಕ್ಕೆ ಬಂದಿತು. ಆಗ ಇಂಡಿಯಾ ಸರಕಾರದವರು

ಈ ಗ್ರಂಥಗಳನ್ನೆಲ್ಲ ಮರಳಿ ಪ್ರೆಸಿಡೆನ್ಸಿ ಕಾಲೇಜು ಲೈಬ್ರರಿಗೆ ವರ್ಗಾಯಿಸಿ ಪರೀಕ್ಷಕ ಮಂಡಲಿ (Board of Examiners) ಯವರ ವಶಕ್ಕೆ ಒಪ್ಪಿಸಿದರು. ಆಗ ಕ. ಸಿ. ಪಿ. ಬ್ರೌನ್‌ರವರು ಈಸ್ಟ್ ಇಂಡಿಯಾ ಕಂಪೆನಿಯವರ ಅನುಮತಿಯನ್ನು ಪಡೆದು ಮತ್ತೊಂದು ಸೂಚೀ ಪತ್ರವನ್ನು ಪ್ರಕಟಗೊಳಿಸಿದುದಲ್ಲದೆ, ಸ್ಥಳೀಯ ಚರಿತ್ರೆ (Local Records) ಗಳನ್ನೊಳಗೊಂಡ ೬೨ ಸಂಪುಟಗಳನ್ನು ಬರೆಯಿಸಿ ಚರಿತ್ರೆಗೆ ಸಂಬಂಧಪಟ್ಟ ತೇದಿ (Dates) ಗಳನ್ನೆಲ್ಲ ತಮ್ಮ ಕೈ ಬರೆಹವಿಂದಲೇ ತಿದ್ದಿ ಅಲ್ಲಲ್ಲಿ ಟಿಪ್ಪಣಿಗಳನ್ನೂ ಬರೆದಿರುವರು. ಸಾಮಾನ್ಯವಾಗಿ ಒಂದೊಂದು ಸಂಪುಟದಲ್ಲಿಯೂ ೮೦೦ ಪುಟಗಳಿಗೆ ಕಡಿಮೆಯಿಲ್ಲದೆ ಕನ್ನಡ, ತೆಲುಗು, ಮಲೆಯಾಳ, ತಮಿಳು ಭಾಷೆಗಳಲ್ಲಿದ್ದ ವಿಷಯಗಳನ್ನೆಲ್ಲ ತಕ್ಕ ಸಿಬ್ಬಂದಿಯ ಮೂಲಕ ಪರಿಷ್ಕರಿಸಿದರು. ಪ್ರಾಯಶಃ ಒಂದೊಂದು ವಿಷಯದಲ್ಲಿಯೂ ಇವರ ಕೈ ಬರೆಹದ ಟಿಪ್ಪಣಿಗಳು ೬೨ ಸಂಪುಟಗಳಲ್ಲಿಯೂ ಇಲ್ಲದಿಲ್ಲವೆಂದು ಹೇಳಬಹುದು. ಕ. ಸಿ. ಪಿ. ಬ್ರೌನ್‌ರವರ ಸೂಚೀ ಪತ್ರವು ವಿಲ್ಸನ್‌ರವರ ಸೂಚೀ ಪತ್ರಕ್ಕಿಂತಲೂ ವಿಶೇಷ ಪ್ರಯೋಜನಕಾರಿಯಾಗಿರುವುದು. ಇವರು ಕ. ಮೆಕೆಂಜಿಯವರಷ್ಟೇ ಅಥವಾ ಅವರಿಗಿಂತಲೂ ಹೆಚ್ಚಾಗಿಯೇ ಈ ವಿಷಯದಲ್ಲಿ ಪರಿಶ್ರಮಪಟ್ಟಿರುವರೆಂದು ಹೇಳಬಹುದಾಗಿದೆ.

ಆ ಕಾಲದಲ್ಲಿ ಮದ್ರಾಸ್ ಸರಕಾರದ ಮೆಂಬರರಾಗಿದ್ದ ಮಿ|| ವಾಲ್ಟರ್ ಇಲಿಯಟ್ (Mr. Walter Elliot) ಎಂಬಾತನು ಇವುಗಳ ಮುದ್ರಣದ ವಿಷಯವನ್ನು ಕುರಿತು ಇಂಡಿಯಾ ಸರ್ಕಾರಕ್ಕೆ ತನ್ನ ಸಲಹೆಯನ್ನು ಬರೆಹ ಮೂಲಕ ತಿಳಿಯಪಡಿಸಿದನು. ಆದರೆ, ಆ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರ ಅಧಿಕಾರವು ತಪ್ಪಿ, ಚಕ್ರವರ್ತಿನಿಯವರ ಅಧಿಕಾರವು ಪ್ರಾರಂಭವಾಗಿದ್ದ ಕಾರಣ, ಈತನ ಸಲಹೆಗೆ ಪ್ರತ್ಯುತ್ತರವು ದೊರೆಯದೆ ಹೋಯಿತು. * ಹೀಗೆ ಕೆಲಕಾಲವು ಕಳೆದ ಬಳಿಕ, ಇದೇ ವಿಕ್ಟೋರಿಯಾ ಚಕ್ರವರ್ತಿನಿಯವರ ಆಳಿಕೆಯ ಕಾಲದಲ್ಲಿಯೇ, 'ಮದ್ರಾಸಿನಲ್ಲಿರುವ, ಕ. ಮೆಕೆಂಜಿಯವರ ಗ್ರಂಥಗಳನ್ನು ಯಾವ ರೀತಿಯಿಂದಾದರೆ ಸಮರ್ಪಕವಾಗಿ ಉಪಯೋಗಿಸಬಹುದು?' ಎಂಬ ಸಮಸ್ಯೆಯು ಹೊರಟಿತು. ಬಳಿಕ ೧೮೬೯ರಲ್ಲಿ **'ಮದ್ರಾಸ್ ಸರಕಾರದ ಪ್ರಾಚ್ಯ ಗ್ರಂಥಶಾಲೆ'** (Government Oriental Manuscripts Library) ಎಂಬ ಹೆಸರಿನಿಂದ ಈ ಗ್ರಂಥಗಳನ್ನೆಲ್ಲ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಲೈಬ್ರರಿಯಲ್ಲಿರಿಸಿ, ಆ

* ಇದಕ್ಕಾಗಿ ಮಿ|| ವಿಲ್ಸನ್‌ರವರು ತಮ್ಮ ಉಪೋದ್ಘಾತದಲ್ಲಿ ಈ ರೀತಿ ಬರೆದಿರುತ್ತಾರೆ. "...... The question, how shall this magnificent collection be turned to the best account still remains unsolved. Northern India has its '*Bibliotheca Indica*'; but the literature of Southern India, containing a mine hitherto almost unexplored out of India and affording ample material for speculation and research by the literati of Europe, remains unnoticed........the utilization of a collection of such considerable value and extent as the Govt. Oriental Manuscripts, is well worthy of patronage of a liberal and enlightened Government."

ಕಾಲೇಜಿನ ಸಂಸ್ಕೃತದ ಮಹೋಪಾಧ್ಯಾಯ(Sans. Professor)ರೇ ಇದರ ವಿಚಾರಣೆಯಲ್ಲಿರಬೇಕೆಂದು ನಿಷ್ಕರ್ಷೆಯಾಯಿತು.

ಆ ಕಾಲದಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಸಂಸ್ಕೃತ ಪ್ರೊಫೆಸರರಾಗಿದ್ದ ಡಾ॥ ಗಸ್ಟವ್ ಆಪರ್ಟರವರು (Dr. Gustav Oppert) ಕರ್ನಲ್ ಮೆಕೆಂಜಿಯವರ ಗ್ರಂಥ ಜಾಲವು ತಮ್ಮ ವಶಕ್ಕೆ ಬಂದ ಕೂಡಲೆ ಆ ಗ್ರಂಥಗಳನ್ನೆಲ್ಲ ಪ್ರತ್ಯೇಕವಾಗಿ ವಿಂಗಡಿಸಿ ವಿಸ್ತಾರವಾದ ಒಂದು ಸೂಚೀ ಪತ್ರವನ್ನು ಪ್ರಕಟಿಸಿ, ದಕ್ಷಿಣ ಹಿಂದೂಸ್ಥಾನದಲ್ಲಿರುವ ಸುಪ್ರಸಿದ್ಧ ವಿದ್ಯಾವಂತರು ವಾಸಮಾಡುತ್ತಿದ್ದ ಗ್ರಾಮಗಳಿಗೆ ಹೋಗಿ ಅಲ್ಲಿಯ ಪಂಡಿತರೊಡನೆ ಕಲೆತು ಮಾತನಾಡಿ ಅವರಲ್ಲಿದ್ದ ಗ್ರಂಥಗಳನ್ನೆಲ್ಲ ಪರಿಶೀಲಿಸಿ ಅವುಗಳ ಪಟ್ಟಿಕೆಯನ್ನು ಮೂರು ಸಂಪುಟಗಳಾಗಿ (Oppert's list of Sans. manuscripts in Southern India in 3 vols.) ಪ್ರಕಟಗೊಳಿಸಿದರು. ಇದಾದ ತರುವಾಯ ಕರ್ನಲ್ ಮೆಕೆಂಜಿಯವರಿಂದಲೂ, ಸಿ.ಪಿ. ಬ್ರೌನ್‌ರವರಿಂದಲೂ ಸಂಗೃಹೀತವಾದ ಪ್ರಾಚೀನೈತಿಹಾಸಿಕ ವಿಷಯಗಳನ್ನೂ, ಸ್ಥಳಪುರಾಣಗಳನ್ನೂ, ದಾನಶಾಸನಗಳನ್ನೂ, ಚಾರಿತ್ರಿಕ ವಿಷಯಗಳನ್ನೂ, ಕೆಲಕೆಲವು ಮತಸಂಪ್ರದಾಯ ವಿಷಯಗಳನ್ನೂ ಪರಿಷ್ಕರಿಸಿ ಆಯಾ ವಿಷಯಗಳನ್ನು ವಾಚಕರು ಸುಲಭವಾಗಿ ಕಂಡುಹಿಡಿಯುವ ಸಲುವಾಗಿ ವಿಶದವಾದ ಒಂದು ಸೂಚೀ ಪತ್ರವನ್ನು ಮುದ್ರಣಮಾಡಿಸಿದರು. ಅವಕಾಶ ದೊರೆತ ಕಾಲದಲ್ಲೆಲ್ಲ ದೇಶದ ಮೇಲೆ ಸಂಚರಿಸಿ ಕೆಲವು ಗ್ರಂಥಗಳನ್ನೂ ಸಂಗ್ರಹಿಸಿದರು. ಆ ಕಾಲದಲ್ಲಿ ವರ್ನಾಕ್ಯುಲರ್ ಮುನ್ಷಿ (ಈಗಿನ ಲೈಬ್ರರಿಯನ್ ಹುದ್ದೆ), ಅಸಿಸ್ಟೆಂಟ್ ಲೈಬ್ರರಿಯನ್ (ಈಗಿನ ಸೀನಿಯರ್ ಪಂಡಿತ), ಒಬ್ಬ ಮುತ್ಸದ್ದಿ (ಈಗಿನ ಜೂನಿಯರ್ ಪಂಡಿತ), ಇಬ್ಬರು ಸೇವಕರು ಇರುತ್ತಿದ್ದರು. ಇವರ ಸಂಬಳದ ವೆಚ್ಚವು ತಿಂಗಳಿಗೆ ೧೦೭ ರೂಪಾಯಿಗಳಾಗಿದ್ದುವು. ೧೮೯೧ರ ವರೆಗೆ ಡಾ॥ ಆಪರ್ಟರವರು ವಿಶೇಷವಾದ ಪರಿಶ್ರಮವನ್ನು ವಹಿಸಿ ಅನೇಕ ಗ್ರಂಥಗಳನ್ನು ಸಂಪಾದಿಸಿ ಲೈಬ್ರರಿಯನ್ನು ಬಹಳಮಟ್ಟಿಗೆ ಅಭಿವೃದ್ಧಿಗೆ ತಂದು, ಜನಸಾಮಾನ್ಯದ ಉಪಯೋಗಕ್ಕೂ ಅನುಕೂಲಿಸುವಂತೆ ಏರ್ಪಾಡನ್ನು ಮಾಡಿದರು. ಇವರ ಕಾಲದಲ್ಲಿ ಈ ಭಾಂಡಾಗಾರವು ಕೆಲವು ಕಾಲ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಕೆಲವು ಕಾಲ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರ ಕಚೇರಿಯಲ್ಲಿಯೂ ಸ್ವಲ್ಪ ಕಾಲ (Fort St. George) ಕೋಟೆಯಲ್ಲಿಯ ಸರಕಾರದವರ ಕಚೇರಿ(Secretariat)ಯಲ್ಲಿಯೂ ಪ್ರವಾಸಮಾಡಿ, ಕಟ್ಟಕಡೆಗೆ ೧೮೯೧ರ ಸುಮಾರಿನಲ್ಲಿ ಈಗಿರುವ ವಿಶ್ವವಸ್ತು ಪ್ರದರ್ಶನ ಶಾಲೆ(Govt. Museum)ಯ ಒಂದು ಭಾಗದಲ್ಲಿ ನೆಲಸಿತು.

೧೮೯೩ರಲ್ಲಿ ಡಾ॥ ಆಪರ್ಟರವರು ಗತಿಸಿದ ಕಾರಣ ಇವರ ಸ್ಥಾನದಲ್ಲಿ ಶ್ರೀ॥ ಶೇಷಗಿರಿ ಶಾಸ್ತ್ರಿಗಳವರು ನಿಯುಕ್ತರಾದರು. ಇವರು ತಮ್ಮ ೮ ವರ್ಷಗಳ ಕಾಲದಲ್ಲಿ (೧೯೦೧ರ ವರೆಗೆ) ಮೇಲ್ಕಂಡ ಹಸ್ತಪ್ರತಿಗಳ ವಿಷಯವನ್ನು ವಾಚಕರ ಅವಗಾಹನೆಯ ಸಲುವಾಗಿ ಅವುಗಳ ಆಕಾರ, ಸ್ವರೂಪ, ಪುಟ, ಪಙ್ಕ್ತಿಗಳ

ಸಂಖ್ಯೆ, ಲಿಪಿ, ಗ್ರಂಥದ ಸ್ಥಿತಿ (size, substance, pages, lines, character, condition and extent) ಮುಂತಾದ ವಿಷಯಗಳೊಂದಿಗೆ ಅವುಗಳ ಆದ್ಯಂತ (beginning and end)ಗಳನ್ನು ಒಳಗೊಂಡ ಮೂರು ವರದಿ(Report on Oriental Manuscripts)ಗಳನ್ನು ಪ್ರಕಟಗೊಳಿಸಿ, ಸಕಲ ಗ್ರಂಥಗಳನ್ನೂ ಅವುಗಳ ಒಳಗಣ ವಿಷಯಗಳಿಗೆ ತಕ್ಕಂತೆ ವಿಂಗಡಿಸಿ (Classification of Mss.) ಸಾರಾಂಶವನ್ನು ತಿಳಿಸುವ ಬಗ್ಗೆ ಮೇಲೆ ಹೇಳಿದ ಕ್ರಮದಲ್ಲಿಯೇ "Descriptive Catalogue of Sans. Mss." ಎಂಬ ಹೆಸರಿನಿಂದ ಸೂಚೀ ಪತ್ರಗಳನ್ನು ಪ್ರಕಟಗೊಳಿಸತೊಡಗಿ, ಆಗಾಗ್ಗೆ ಸಂಚಾರ ಮಾಡಿ ಅನೇಕ ಗ್ರಂಥಗಳನ್ನೂ ಸಂಗ್ರಹಿಸಿದರು. ಮೇಲೆ ಹೇಳಿದ ಸೂಚೀ ಪತ್ರಗಳಲ್ಲಿ ವೇದ, ವೇದಲಕ್ಷಣ, ವೈದಿಕ ಕೋಶ, ಶಿಕ್ಷೆ(Vedas and Vedic Literature)ಗಳ ಸಂಬಂಧವಾದ ಗ್ರಂಥಗಳ ಪರಿಶೋಧನೆಯು ಮುಗಿದು ಸೂಚೀ ಪತ್ರಗಳು ಪ್ರಕಟಿತಗಳಾದುವು. ಇಷ್ಟರಲ್ಲಿಯೇ ೧೯೦೧ನೆಯ ಮಾರ್ಚಿ ತಿಂಗಳಲ್ಲಿ ದೈವವು ಇವರನ್ನು ತನ್ನಲ್ಲಿಗೆ ಕರೆದುಕೊಂಡುಬಿಟ್ಟಿತು. ಬಳಿಕ ಮದ್ರಾಸಿನ ಸಂಸ್ಕೃತ ಪಾಠಶಾಲೆಗಳ ವಿಚಾರಣಾಧಿಕಾರಿ(Supt. of Sans. Schools)ಗಳಾಗಿದ್ದ ಶ್ರೀ॥ ಆರ್. ಕೃಷ್ಣಮಾಚಾರ್ಯರವರು ಇವರ ಸ್ಥಾನದಲ್ಲಿ ೬ ತಿಂಗಳ ಕಾಲ ಹಂಗಾಮಿಯಾಗಿ ಕೆಲಸಮಾಡಿದರು. ಇವರ ಕಾಲದಲ್ಲಿ ಯಾವ ವಿಶೇಷವಾದ ಕಾರ್ಯಕ್ರಮಗಳೂ ನಡೆಯಲಿಲ್ಲ.

ತರುವಾಯ ೧೯೦೧ನೆಯ ಸೆಪ್ಟಂಬರು ತಿಂಗಳಲ್ಲಿ, ಕೀರ್ತಿಶೇಷರಾದ ರಾವ್ ಬಹದೂರ್ ಶ್ರೀ॥ ಮಳೂರು ರಂಗಾಚಾರ್ಯರವರು ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನ ಸಂಸ್ಕೃತ ವಿಶಾರದ ಪದವಿಯನ್ನು ಕೈಕೊಂಡು ಇದರ ಮೇಲ್ವಿಚಾರಣೆಯನ್ನು ವಹಿಸಿಕೊಂಡರು. ಇವರು ತಮ್ಮ ಪೂರ್ವಿಕರಿಗಿಂತಲೂ ಅತಿಶಯವಾದ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ, ಪ್ರಾಚ್ಯ ವಿದ್ಯಾವಿಷಯಕವಾದ ಪ್ರೇಮದಿಂದಲೂ, ಲೈಬ್ರರಿಯ ಕಾರ್ಯಗಳನ್ನು ಬಹಳಮಟ್ಟಿಗೆ ಮುತುವರ್ಜಿಯಿಂದ ನಡೆಯಿಸಿ ಅಪೂರ್ವಗಳಾದ ಅನೇಕ ಗ್ರಂಥಗಳನ್ನು ಸಂಗ್ರಹಿಸಿದರು.

ಬಳಿಕ ಶ್ರೀ ಶಂಕರಾಚಾರ್ಯಪ್ರಣೀತವಾದ **"ಸರ್ವ ಸಿದ್ಧಾಂತ ಸಂಗ್ರಹ"**ವನ್ನು ಪರಿಷ್ಕರಿಸಿ ಗ್ರಂಥ ಯೋಗ್ಯತೆಗೆ ಅನುರೂಪವಾದ ಉಪೋದ್ಘಾತವನ್ನು ಆಂಗ್ಲ ಭಾಷೆಯಲ್ಲಿ ತಾವೇ ಬರೆದು ಮುದ್ರಣ ಮಾಡಿಸಿ ೧೯೦೯ರಲ್ಲಿ ಪ್ರಕಟಗೊಳಿಸಿದರು. ಇಂತೆಯೇ ಕೆಲವು ವರ್ಷಗಳು ನಡೆದ ಬಳಿಕ ಮದ್ರಾಸಿನ ಪ್ರಾಚ್ಯ ಗ್ರಂಥಶಾಲೆಯು ನಾನಾಪಕ್ಷೇಪಿತವಾಗಬಹುದಾದ ಕೆಲವು ಸನ್ನಿವೇಶಗಳು ಒದಗಿದುವು. ಆಗ ಶ್ರೀ॥ ರಂಗಾಚಾರ್ಯರು ಅನೇಕ ಮಂದಿ ಆಂಗ್ಲ ವಿದ್ಯಾವಂತರ ಸಹಾನುಭೂತಿಯನ್ನು ಪಡೆದು, ಗವರ್ನರವರಿಗೂ ಹೋರಾಡಿ, ಸಂಸ್ಕೃತ ವಿದ್ಯಾಪ್ರಾಶಸ್ತ್ಯ ಮಹತ್ವಗಳನ್ನು ತೋರಪಡಿಸಿ, ಕ. ಮೆಕೆಂಜಿ ಮುಂತಾದ ಆಂಗ್ಲ ವಿದ್ಯಾವಿಶಾರದರು ಇದಕ್ಕಾಗಿ ಪಟ್ಟ ಶ್ರಮವನ್ನೂ, ಆ ಕೋಶದ ಮಹತ್ವವನ್ನೂ ಪ್ರಕಟಗೊಳಿಸಿ ಕೆಲವು ಕಾಲದ ಮಟ್ಟಿಗಾದರೂ ಇದನ್ನು ನಡೆಯಿಸುವಂತೆ

ರಾಜಕೀಯ ಶಾಸನವನ್ನು ಪಡೆದುಕೊಂಡು, ಹೇಗಾದರೂ ಈ ಭಂಡಾರವನ್ನು ಶಾಶ್ವತಗೊಳಿಸಲೇ ಬೇಕೆಂಬ ದೃಢ ಸಂಕಲ್ಪವನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ವತೋಮುಖವಾದ ತಮ್ಮ ಆಂಗ್ಲ ವಿದ್ಯಾ ನೈಪುಣ್ಯದ ಸಹಾಯದಿಂದ **ಮಹಾವೀರಾಚಾರ್ಯ** ಪ್ರಣೀತವಾದ "**ಗಣಿತಸಾರ ಸಂಗ್ರಹ**" ವನ್ನು ಮುದ್ರಣಗೊಳಿಸಿ ಆ ಗ್ರಂಥದ ಮಹತ್ವವನ್ನು ಹೊರಪಡಿಸುವ ಬಗ್ಗೆ, ಗಣಿತ ವಿದ್ಯಾವಿಶಾರದರಲ್ಲಿ ಸುಪ್ರಸಿದ್ಧರಾದ ನ್ಯೂಯಾರ್ಕ್ ಪಟ್ಟಣದ ಕೊಲಂಬಿಯಾ ವಿಶ್ವವಿದ್ಯಾಮಂದಿರದ ಗಣಿತ ಶಾಸ್ತ್ರಪಾರಂಗತರಾದ ಪ್ರೊ॥ ಡೇವಿಡ್ ಯೂಜಿನ್ ಸ್ಮಿತ್ (David Eugene Smith, Prof. of Mathematics in the Teachers College, Columbia University, New York)ಅವರಿಂದ ಉಪೋದ್ಘಾತವನ್ನು ಬರೆಯಿಸಿ ೧೯೧೨ರಲ್ಲಿ ಪ್ರಕಟಗೊಳಿಸಿದರು. ಇದರಿಂದ ಇವರ ಸಾಹಸಕ್ಕೂ, ವಿದ್ಯಾನಿಪುಣತೆಗೂ ಮೆಚ್ಚಿ ಸಂಸ್ಕೃತ ಪ್ರಾಶಸ್ತ್ಯ ಮಹತ್ವಗಳನ್ನು ತಿಳಿದುಕೊಂಡ ಸರಕಾರದವರಿಂದ ಸದರಿ ಶಾಲೆಯನ್ನು ಶಾಶ್ವತಗೊಳಿಸಿದರು.

ಇಂತು ಶಾಲಾಸ್ಥಿತಿಯು ಶಾಶ್ವತವಾದ ಕೆಲವು ಕಾಲದ ಬಳಿಕ, ಆ ಕಾಲದಲ್ಲಿಯೂ ಮೊದಲಿನಂತೆಯೇ ೧೦೬ ರೂಪಾಯಿಗಳು ವೆಚ್ಚವಾಗುವ, ಮೇಲೆ ಹೇಳಿದ ಸಿಬ್ಬಂದಿಯು ಮಾತ್ರವೇ ಇದ್ದುದರಿಂದ ಸಿಬ್ಬಂದಿಯು ಸಾಲದೆಂತಲೂ, ತಕ್ಕ ಸಿಬ್ಬಂದಿಯನ್ನು ಸರಕಾರದವರು ಕೊಡದಿದ್ದ ಪಕ್ಷದಲ್ಲಿ ಸಮರ್ಪಕವಾದ ಕೆಲಸವು ನಡೆಯಲಾರದೆಂತಲೂ ಸರಕಾರದವರೊಂದಿಗೆ ಹೋರಾಡಿ, ಈಗಿರುವ ಸಿಬ್ಬಂದಿಯನ್ನು (ಲೈಬ್ರರಿಯನ್, ಅಸಿಸ್ಟೆಂಟ್ ಲೈಬ್ರರಿಯನ್, ಕ್ಲಾರ್ಕ್, ಸೀನಿಯರ್ ಪಂಡಿತ, ಜೂನಿಯರ್ ಪಂಡಿತ, ಸಂಸ್ಕೃತ ಪಂಡಿತ, ಕಾಪಿಯಿಸ್ಟ್, ತೆಲುಗು ಪಂಡಿತ, ತಮಿಳು ಪಂಡಿತ, ಅಟೆಂಡರು, ಮೂರು ಮಂದಿ ಜವಾನರು) ಮಂಜೂರು ಮಾಡಿಸಿಕೊಂಡರು. ಹೀಗಾಗಿ ಸಿಬ್ಬಂದಿಯ ವೆಚ್ಚವು, ಸಾದಿಲ್ವಾರು ಸಹ ಸೇರಿ ವರ್ಷ ಒಂದಕ್ಕೆ ೩,೦೦೦ ರೂಪಾಯಿಗಳಿಂದ ೬,೦೦೦ ರೂಪಾಯಿಗಳಿಗೆ ಏರಿತು.

ತರುವಾಯ ಶ್ರೀ॥ ರಂಗಾಚಾರ್ಯರವರು **ಬುದ್ಧಘೋಷ** ಪ್ರಣೀತವಾದ "**ಪದ್ಯ ಚೂಡಾಮಣಿ**" ಎಂಬ ಚಾರಿತ್ರಿಕ ಗ್ರಂಥವನ್ನು ಪರಿಷ್ಕರಿಸಿ, ಲೈಬ್ರರಿಯ ಪಂಡಿತರಿಂದಲೇ ಅದಕ್ಕೆ ವ್ಯಾಖ್ಯಾನವನ್ನು ಬರೆಯಿಸಿ ಮುದ್ರಿಸತೊಡಗಿದರು. ೧೯೧೪ರ ವರೆಗೆ ಇದರ ಮುದ್ರಣ ಕಾರ್ಯವು ಸಂಪೂರ್ಣವಾಯಿತು. ಇದಕ್ಕೆ ಸರಸವಾದ ಉಪೋದ್ಘಾತವನ್ನು ಬರೆದು ಪ್ರಕಟಗೊಳಿಸಬೇಕೆಂದಿರುವಷ್ಟರಲ್ಲಿಯೇ ಉತ್ಕಟಾವಸ್ಥೆಗೆ ಬಂದ ದೇಹ ದೌರ್ಬಲ್ಯದ ಪ್ರಯುಕ್ತ ಕೆಲವು ಕಾಲ ವಿರಾಮವನ್ನು ಪಡೆಯಬೇಕಾಯಿತು. ಸ್ವಲ್ಪವೂ ವಿಶ್ರಾಂತಿಯಿಲ್ಲದೆ ಅನವರತವೂ ಯಾವುದಾದರೊಂದು ವಿಷಯದಲ್ಲಿ ಬುದ್ಧಿಯನ್ನು ಕ್ಷೋಭೆಗೊಳಿಸುತ್ತಿದ್ದುದರಿಂದಲೂ, ಸಾಂಸಾರಿಕ ತಾಪತ್ರಯಗಳಿಂದಲೂ, ಇವರ ದೇಹಸ್ಥಿತಿಯು ದಿನೇ ದಿನೇ ಕ್ಷೀಣವಾಗುತ್ತ ಬಂದು ಕಡೆಗೆ ಸರಕಾರದ ಉದ್ಯೋಗದಿಂದ ಆತ್ಯಂತಿಕ

ವಾಗಿ ನಿವೃತ್ತರಾಗಬೇಕಾಯಿತು. * ಈ ಕಾರಣದಿಂದ ಈ ಮಹನೀಯರು ೧೯೧೫ನೆಯ ವರ್ಷದಲ್ಲಿ ತಮ್ಮ ಉದ್ಯೋಗದಿಂದ ನಿವೃತ್ತರಾಗಿ, ಆರು ತಿಂಗಳೊಳಗಾಗಿಯೇ ಈ ಲೋಕವನ್ನೇ ಪರಿತ್ಯಜಿಸಿದರು.

ಇವರ ಕಾಲದಲ್ಲಿ ೨೦ ಸಂಸ್ಕೃತ ಸೂಚೀ ಪತ್ರಗಳೂ ತೆಲುಗು ಮತ್ತು ತಮಿಳು ಭಾಷೆಗಳ ಕೆಲವು ಸೂಚೀ ಪತ್ರಗಳೂ (Descriptive and Triennial Catalogues) ಪ್ರಕಟಿತಗಳಾದುವು.

ಶ್ರೀ॥ ರಂಗಾಚಾರ್ಯರವರ ಅನಂತರ ಈಗಿನ ಕ್ಯೂರೇಟರಾದ ಶ್ರೀ॥ ಎಸ್. ಕುಪ್ಪುಸ್ವಾಮಿ ಶಾಸ್ತ್ರಿಗಳವರು ಅವರ ಅಧಿಕಾರವನ್ನು ವಹಿಸಿಕೊಂಡರು. ಜರ್ಮನರಿಗೂ, ಐರೋಪ್ಯರಿಗೂ ಇದೇ ಸಮಯದಲ್ಲಿ ಘೋರಯುದ್ಧವು ನಡೆಯುತ್ತಿದ್ದ ಕಾರಣ, ಹಿಂದೂಸ್ಥಾನದಿಂದ ಅನರ್ಘ್ಯವಾದ ಗ್ರಂಥಗಳು ದ್ವೀಪಾಂತರಗಳಿಗೆ ಹೋಗುತ್ತಿದ್ದ ವಿಷಯವು ಸರಕಾರದವರ ಗಮನಕ್ಕೆ ಬಂದು.... ಪುರಾತನ ವಸ್ತುಶೋಧನೆಗೆ ತಮರ್ಪಣೆಯಾಗಿರುವ ಮದ್ರಾಸ್ ಆಧಿಪತ್ಯದ ಪ್ರದೇಶಗಳಲ್ಲೆಲ್ಲ ಸಂಚರಿಸಿ ಹಸ್ತಪ್ರತಿಗಳನ್ನು ಸರಕಾರದ ಪರವಾಗಿ ಸಂಗ್ರಹಿಸುವ ಸಲುವಾಗಿ ಎಂಟು ಮಂದಿ ಸಿಬ್ಬಂದಿಯು (Spl. Assistant, one Pandit for Sans., Tamil, Telugu and Malayalam, four Pandits and three Peons) ಸರಕಾರದಿಂದ ಮಂಜೂರಾಯಿತು. ಹೀಗಾಗಿ ಲೈಬ್ರರಿಯ ವಾರ್ಷಿಕ ವೆಚ್ಚವು ೬ ಸಾವಿರ ರೂಪಾಯಿಗಳಿಂದ ೧೫ ಸಾವಿರ ರೂಪಾಯಿಗಳಿಗೆ ಏರಿತು. ಈ ಶಾಖೆಯವರು ಮದ್ರಾಸ್ ಆಧಿಪತ್ಯದ ತಮಿಳು, ತೆಲುಗು, ಮಲೆಯಾಳ ಜಿಲ್ಲೆಗಳಲ್ಲೆಲ್ಲ ಸಂಚರಿಸಿ ಸಾವಿರಾರು ಗ್ರಂಥಗಳನ್ನು ಸಂಗ್ರಹಿಸಿದರು. ಈ ಮೂಲಕ ಪ್ರಪಂಚದ ಮತ್ತಾವ ಭಾಂಡಾಗಾರದಲ್ಲಿಯೂ ದೊರೆಯದಿರುವ, ಇದುವರೆಗೆ ಕಿವಿಯಿಂದಲೂ ಕೇಳದಿರುವ ಅನೇಕ ಗ್ರಂಥಗಳು ಭಾಂಡಾಗಾರಕ್ಕೆ ಬಂದು ಸೇರಿದುವು. ಇದೇ ಶಾಖೆಯವರು ಕನ್ನಡ ಜಿಲ್ಲೆಗಳಲ್ಲಿಯೂ ಸಂಚರಿಸಿ, ತಮ್ಮ ಗ್ರಂಥ ಸಂಗ್ರಹ ಕಾರ್ಯವನ್ನು ನೆರವೇರಿಸಬೇಕೆಂಬ ಪ್ರಯತ್ನದಲ್ಲಿರುವಷ್ಟರಲ್ಲಿಯೇ ೧೯೨೨ನೆಯ ಏಪ್ರಿಲ್ ೧ನೆಯ ತಾರೀಖು ಮೊದಲು, ಸರಕಾರದವರು ಈ ಶಾಖೆಯನ್ನು ಹಣದ ಕೊರತೆಯ ದೆಸೆಯಿಂದ ತೆಗೆದುಹಾಕಬೇಕಾಯಿತು. ಫಲವು ಕೈಗೂಡುವ ಕಾಲದಲ್ಲಿ ಈ ಶಾಖೆಯನ್ನು ತೆಗೆದುಹಾಕಿದುದು ಕನ್ನಡಿಗರ ದುರದೃಷ್ಟವೇ ಸರಿ.

೧೯೨೦ರಲ್ಲಿ ಮದ್ರಾಸ್ ಸರಕಾರದ ಪರವಾಗಿ, ಲೈಬ್ರರಿಯಲ್ಲಿರುವ ಅಪೂರ್ವವಾದ ಗ್ರಂಥಗಳನ್ನು ಪರಿಷ್ಕರಿಸಿ ಮುದ್ರಿಸುವ ಸಲುವಾಗಿ (Assistant Editor, two Sans. Pandits, two Pandit Copyists and one

* ಇವರು ಮುದ್ರಣಗೊಳಿಸಿ ಪ್ರಕಟಿಸಬೇಕೆಂಬ ಬಾಧ್ಯೆಯಿಂದ ಆಂಗ್ಲ ಭಾಷೆಗೆ ಪರಿವರ್ತನಮಾಡಿ ಪರಿಷ್ಕರಿಸಿದ್ದ ಆಪಸ್ತಂಬ ಕಲ್ಪ ಸೂತ್ರ, ವಾಕ್ಯಪದೀಯ ಮುಂತಾದ ಕೆಲವು ಗ್ರಂಥಗಳು ಇನ್ನೂ ಮುದ್ರಿತವಾಗದಿರತಕ್ಕ ವಿಷಯವು ಶೋಚನೀಯವಾಗಿರುವುದು.

Peon) ಆರು ಮಂದಿಯ ಸಿಬ್ಬಂದಿಯುಳ್ಳ ಶಾಖೆಯೊಂದನ್ನು ಹೊಸದಾಗಿ ಏರ್ಪಡಿಸಿ **"ಪ್ರಾಚ್ಯ ಗ್ರಂಥ ಪ್ರಕಟನ ಶಾಖೆ"** (Publication Section for the Publication of Oriental Manuscripts) ಯೊಂದನ್ನು ಮಂಜೂರು ಮಾಡಿದರು. ಒಂದೆರಡು ವರ್ಷಗಳವರೆಗೆ ಸಂಸ್ಕೃತ ಗ್ರಂಥಗಳನ್ನು ಮಾತ್ರವೇ ಪ್ರಕಟಿಸುತ್ತಿದ್ದು, ತರುವಾಯ, ತೆಲುಗು ಮತ್ತು ತಮಿಳು ಭಾಷೆಗಳ ಗ್ರಂಥ ಪ್ರಚಾರಣೆಗೂ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂಬ ಅಭಿಪ್ರಾಯವು ಸರಕಾರದವರ ಮನಸ್ಸಿನಲ್ಲಿದ್ದಿತು. ಈ ಕಾರಣದಿಂದ ಮದ್ರಾಸು ಪ್ರಾಚ್ಯ ಗ್ರಂಥಶಾಲೆಯ ವಾರ್ಷಿಕ ವ್ಯಯವು ೧೫ರಿಂದ ೩೨ ಸಾವಿರದ ವರೆಗೆ ಏರಿತು. ಆದರೆ ೧೯೨೩ನೆಯ ಮಾರ್ಚಿ ೩೧ರ ವರೆಗೆ ಮಾತ್ರ ಈ ಶಾಖೆಯು ಕೆಲಸಮಾಡಿತು. ಬಳಿಕ ೧೯೨೩ನೆಯ ಏಪ್ರಿಲ್ ೧ನೆಯ ತಾರೀಖು ಮೊದಲು ಸರಕಾರದವರು ಬಹುಶಃ ಧನಾಭಾವದ ದೆಸೆಯಿಂದ ಈ ಶಾಖೆಯನ್ನೂ ತೆಗೆದು ಹಾಕಿದರು. ಹೀಗಾಗಿ ಸದರಿ ಲೈಬ್ರರಿಯ ವಾರ್ಷಿಕ ವ್ಯಯವು ಈಗ ೧೦ ಸಾವಿರಕ್ಕೆ ಇಳಿದಿದೆ.

ಮದ್ರಾಸಿನ ನಿವಾಸಿಗಳಾಗಿದ್ದ ಶ್ರೀ॥ ಯೋಗಿ ಪಾರ್ಥಸಾರಥಿ ಅಯ್ಯಂಗಾರ್ಯರೆಂಬವರು ಕೆಲವು ಹಸ್ತಪ್ರತಿಗಳನ್ನೂ, ಆಂಗ್ಲ ಭಾಷಾ ಮುದ್ರಿತ ಗ್ರಂಥಗಳನ್ನೂ ಸಂಪಾದಿಸಿದ್ದರು. ಇವರು ಗತಿಸಿದ ತರುವಾಯ ಇವರ ಆಸ್ತಿ ಪಾಸ್ತಿ ಮುಂತಾದುವುಗಳ ಪರಿಶೀಲನವು ಪಂಚಾಯಿತರ ವಶಕ್ಕೆ ಬಂದು ಸೇರಿತು. ಈ ಪಂಚಾಯಿತ ಮಂಡಲಿಯ ಕಾರ್ಯದರ್ಶಿಗಳಾದ ರಾವ್‌ಬಹದೂರ್ ಶ್ರೀ॥ ರಂಗನಾಥ ಸೆಟ್ಟಿಯವರು ಸುಮಾರು ೧,೭೦೦ ಆಂಗ್ಲ ಪುಸ್ತಕಗಳನ್ನೂ, ಕೆಲವು ಹಸ್ತಪ್ರತಿಗಳನ್ನೂ ಮೇಲ್ಕಂಡ ಪಂಚಾಯಿತ ಮಂಡಲಿಯ ಪರವಾಗಿ ೧೯೨೪ರಲ್ಲಿ ಈ ಭಾಂಡಾಗಾರಕ್ಕೆ ಉಚಿತವಾಗಿ ಸಮರ್ಪಿಸಿದರು.

ಕರ್ನಲ್ ಮೆಕೆಂಜಿಯವರು ಸಂಗ್ರಹಿಸಿದ್ದ ಗ್ರಂಥ ಸಮುದಾಯದ ಬಹು ಭಾಗವು ವಿಲಾಯತಿಗೆ ಕಳುಹಿಸಲ್ಪಟ್ಟಿತೆಂದು ಹಿಂದೆಯೇ ಹೇಳಿರುವೆನು. ಮಿಕ್ಕ ಭಾಗದಲ್ಲಿ ಗೆದ್ದಲು, ಇಲಿ, ರಾಮಬಾಣಗಳಿಗೆ ಆಹುತಿಯಾಗಿ ಉಳಿದ ಗ್ರಂಥಗಳ ಸಂಖ್ಯೆ (ಈ ಲೈಬ್ರರಿಯ ಸ್ಥಾಪನ ಸಮಯದಲ್ಲಿದ್ದುದು) ಸುಮಾರು ೮,೦೦೦.

ಪ್ರಕೃತ ಈ ಲೈಬ್ರರಿಯಲ್ಲಿರುವ ಒಟ್ಟು ಸುಮಾರು ೩೫,೦೦೦ ಹಸ್ತಪ್ರತಿಗಳೊಳಗೆ ೨೪,೬೮೭ ಹಸ್ತಪ್ರತಿಗಳನ್ನು ಸಂಸ್ಕೃತದಲ್ಲಿಯೂ, ೪,೫೨೫ ತೆಲುಗಿನಲ್ಲಿಯೂ, ೩,೯೦೫ ತಮಿಳಿನಲ್ಲಿಯೂ, ೧,೫೦೦ ಕನ್ನಡದಲ್ಲಿಯೂ, ೮೬೧ ಉರ್ದು, ಪಾರ್ಸಿ, ಹಿಂದುಸ್ಥಾನೀ ಭಾಷೆಗಳಲ್ಲಿಯೂ, ೩೦೦ ಮಲೆಯಾಳದಲ್ಲಿಯೂ, ಉಳಿದ ಭಾಗವನ್ನು ಪಾಳಿ, ಸಿಂಹಳಿ, ಬರ್ಮಾ ಭಾಷೆಗಳಲ್ಲಿಯೂ ಸೇರಿಸಬಹುದು.

ಸಂಸ್ಕೃತದಲ್ಲಿ ೨,೫೮೨, ತೆಲುಗಿನಲ್ಲಿ ೬೦೧, ತಮಿಳಿನಲ್ಲಿ ೧,೦೪೦, ಕನ್ನಡದಲ್ಲಿ ೭೩, ಮಲೆಯಾಳದಲ್ಲಿ ೧೩, ಇಂಗ್ಲೀಷಿನಲ್ಲಿ ೨,೩೩೨, ಹೀಗೆ ಒಟ್ಟು ಸುಮಾರು ೬,೭೦೦ ಮುದ್ರಿತ ಗ್ರಂಥಗಳೂ ಇವೆ.

ಮೈಸೂರಿನ **ಕಾವ್ಯಮಂಜರಿ, ಕಾವ್ಯಕಲಾನಿಧಿ**ಗಳಲ್ಲಿ ಪ್ರಕಟಿತವಾಗಿರುವ ಅನೇಕ ಗ್ರಂಥಗಳಿಗೆ ಮಾತೃಕೆಗಳನ್ನು ಈ ಲೈಬ್ರರಿಯಿಂದಲೇ ಪಡೆದು ಪ್ರಕಟಿಸಿರುವರೆಂದು ಹೇಳುವುದಕ್ಕೆ ನಿದರ್ಶನಗಳು ಹೇರಳವಾಗಿವೆ. ಆದರೆ, ಇತ್ತೀಚೆಗೆ ಕಾವ್ಯಮಂಜರಿ ಮತ್ತು ಕಾವ್ಯಕಲಾನಿಧಿಗಳ ಮುದ್ರಣ ಕಾರ್ಯವು ಅಷ್ಟು ಕ್ರಮವಾಗಿಯೂ, ಸಮರ್ಪಕವಾಗಿಯೂ ನಡೆಯದಿರುವುದು ಕನ್ನಡಿಗರ ಭಾಷಾಭಿಮಾನಕ್ಕೂ, ಸಂಸ್ಕೃತಿಯ ಅಭಿವೃದ್ಧಿಗೂ ಕಳಂಕವನ್ನುಂಟುಮಾಡತಕ್ಕದ್ದಾಗಿರುವುದು ಮಾತ್ರವಲ್ಲದೆ, ಕನ್ನಡ ನಾಡಿಗೇ ಅಪಮಾನಕರವೆಂದು ಹೇಳಬೇಕಾಗಿದೆ.

ಇತ್ತೀಚೆಗೆ ತಿರುವಾಂಕೂರಿನ ಪ್ರಾಚ್ಯ ಕೋಶಾಗಾರದವರು ತಮ್ಮ ದೇಶ ಭಾಷೆಯಾದ ಮಲೆಯಾಳದಲ್ಲಿ ಗ್ರಂಥ ಪ್ರಕಟನ ಕಾರ್ಯವನ್ನು ಕೈಕೊಂಡ ಒಂದೆರಡು ವರ್ಷಗಳೊಳಗಾಗಿ (ಇನ್ನೂ ಎರಡು ವರ್ಷಗಳು ತುಂಬಲಿಲ್ಲ.) ೧೪ ಗ್ರಂಥಗಳನ್ನು ಉತ್ತಮ ರೀತಿಯಿಂದ ಪರಿಷ್ಕರಿಸಿ ಪ್ರಕಟಗೊಳಿಸಿರುವುದು ಅವರ ದೇಶಭಾಷಾಭಿಮಾನಗಳನ್ನು ವ್ಯಕ್ತಪಡಿಸುವುದರ ಮೂಲಕ ಸ್ತುತ್ಯವಾಗಿರುವುದು. ಕನ್ನಡ ದೇಶದಲ್ಲಿಯೂ ಅಂತಹ ಸಂಸ್ಥೆಯೊಂದು ಇರುವುದಾದರೂ ಅದರ ಮೂಲಕ ಗ್ರಂಥ ಪ್ರಚಾರವು ಆಗಬಹುದಾಗಿದ್ದಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಹೇಳಲು ವಿಷಾದಿಸುತ್ತೇನೆ.

ಈ ಲೈಬ್ರರಿಯಲ್ಲಿರುವ ಕನ್ನಡ ಹಸ್ತಪ್ರತಿಗಳಲ್ಲಿ ಅಮುದ್ರಿತಗಳಾದ ನೂರಾರು ಗ್ರಂಥಗಳಿವೆ. ಅವುಗಳಲ್ಲಿ ಆದಿತ್ಯಪುರಾಣ (ಷ. ಕಾ.), ವಿಷ್ಣುಪುರಾಣ ಚಂಪೂ (ಚಿಕ್ಕುಪಾಧ್ಯಾಯ), ಭಾರತ, ಭಾಗವತ, ರಾಮಾಯಣಗಳ ವಚನ (ಕಳಲೆ ನಂಜರಾಜ), ಭಾರತ ಕಥಾಸಂಗ್ರಹ, ರುಕ್ಮಾಂಗದ ಚರಿತೆ ಚಂಪೂ (ಚಿಕ್ಕುಪಾಧ್ಯ), ಸೋಮನಾಥ ಚರಿತೆ (ಷ. ರಾಘವಾಂಕ), ಕಂಠೀರವ ನರಸರಾಜ ವಿಜಯ (ಸಾಂಗತ್ಯ), ರಾಮನಾಥ ವಿಲಾಸ ಚಂಪೂ (ಸದಾಶಿವ ಯೋಗಿ), ದಶಪರ್ವ ಭಾರತ (ಜಣಕನಾಯಕ), ರಾಮಾಮೃತ ಕಥಾ ಸುಧಾನಿಧಿ ಮುಂತಾದ ಅಪೂರ್ವವಾದ ಗ್ರಂಥಗಳೂ, ಮೈಸೂರು ದೇಶ ಮತ್ತು ಇತರ ಕರ್ಣಾಟಕ ಪ್ರಾಂತದ ಐತಿಹಾಸಿಕ ವಿಷಯ (ಕೈಫಿಯತ್ತು-ಬಖೈರು)ಗಳೂ, ಚರಿತ್ರೆ, ದಾನ ಶಾಸನ, ಸ್ಥಳ ಪುರಾಣ ಮುಂತಾದುವೂ, ಶೃಂಗೇರಿ ಮಠಕ್ಕೆ ಸಂಬಂಧಪಟ್ಟ ವಿಷಯಗಳೂ ಬಹಳವಾಗಿವೆ.

೪. ಮೆಕೆಂಜಿಯವರ ಶಾಸನಗಳು (Mackenzie's Inscriptions) ಎಂಬ ಮೂರು ದೊಡ್ಡ ಸಂಪುಟಗಳಲ್ಲಿ ಸುಮಾರು ಆರು ಸಾವಿರ ಶಾಸನಗಳಿವೆ. ಇವುಗಳಲ್ಲಿ ನೇಕವಾಗಿ ೧೮ನೆಯ ವರೆಗೆ ಕನ್ನಡನಾಡಿನ ಅರಸರ ವಿಷಯವೇ ಪ್ರತಿಪಾದಿತವಾಗಿರುವುದು. ಭಾಷಾಭಿಮಾನಿಗಳು ಇವುಗಳನ್ನೆಲ್ಲ ತಕ್ಕ ರೀತಿಯಿಂದ ಉಪಯೋಗಿಸಿ ಜೀರ್ಣವಾಗುತ್ತಿರುವ ಕರ್ಣಾಟಕ ಭಾಷೆಯ ಹಸ್ತಪ್ರತಿಗಳನ್ನು

ಪುನರುಜ್ಜೀವನ ಮಾಡುವ ಮೂಲಕ ದೇಶೋಪಕಾರಿಗಳಾಗುವುದು ಮಾತ್ರವಲ್ಲದೆ ಕ. ಮೆಕೆಂಜಿ, ಸಿ. ಪಿ. ಬ್ರೌನ್ ಮುಂತಾದವರಂತೆಯೇ ಶಾಶ್ವತವಾದ ಕೀರ್ತಿಯನ್ನು ಪಡೆಯಬಹುದಾಗಿದೆ.

೧೯೨೫ರಲ್ಲಿ ಮದ್ರಾಸ್ ಸರಕಾರದವರು ಈ ಲೈಬ್ರರಿಯ ಕಾರ್ಯಭಾರವು ಮತ್ತಷ್ಟು ಸಮರ್ಪಕವಾಗಿ ನಡೆಯುವ ಸಲುವಾಗಿ ಭಾಷಾ ಪ್ರತಿನಿಧಿಗಳನ್ನೊಳಗೊಂಡ ಒಂದು ಕಮಿಟಿಯನ್ನು ನಿರ್ಮಿಸಿರುವರು. ಮದ್ರಾಸು ವಿಶ್ವವಿದ್ಯಾಲಯದ ಪುಸ್ತಕ ಭಾಂಡಾಗಾರದ ಕಟ್ಟಡವು ಸಿದ್ಧವಾದ ಒಳಕ ಈ ಲೈಬ್ರರಿಯ ಆಡಳಿತವನ್ನು ಯೂನಿವರ್ಸಿಟಿಯವರ ಕೈಗೆ ಒಪ್ಪಿಸಿಕೊಡಬೇಕೆಂಬ ಅಭಿಪ್ರಾಯವು ಸರಕಾರದವರಿಗೆ ಇರುವಂತೆ ತಿಳಿಯಬರುತ್ತಿದೆ. ಪ್ರಾಚ್ಯ ವಿಷಯ ಪರಿಶೋಧನಕ್ಕೆ ಅಧಿಕಾಧಿಕವಾಗಿ ಗಮನಕೊಡಲ್ಪಡುತ್ತಿರುವ ಈಗಳಿನ ಕಾಲದಲ್ಲಿ ಉದ್ದೇಶಿಸಿರುವ ಈ ಪರಾವರ್ತನವು ಅನುರೂಪವಾಗಿಯೇ ಇರುವುದೆಂದು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ.*

ಪಿ. ಸುಂದರಶಾಸ್ತ್ರಿ,
ಮದ್ರಾಸು.

---

* ಈ ಪ್ರಬಂಧವನ್ನು ಲೇಖಕರು ಬಳ್ಳಾರಿಯಲ್ಲಿ ಅಕ್ಷಯ ಸಂವತ್ಸರದ ವೈಶಾಖ ಶು॥ ನವಮಿ ದಶಮಿ (೧೯೨೬, ಮೆ ೨೨, ೨೩ ತಾರೀಖುಗಳಲ್ಲಿ) ನಡೆದ ಕರ್ಣಾಟಕ ಸಾಹಿತ್ಯ ಸಮ್ಮೇಳನದಲ್ಲಿ ಓದುವುದಕ್ಕಾಗಿ ಬರೆದರು. ಕಾರಣಾಂತರಗಳಿಂದ ಅದನ್ನು ಓದಲಿಕ್ಕಾಗದೆ ಹೋದ ಕಾರಣ ಅದು ಮಂಗಳೂರು 'ಕಂಠೀರವ'ದಲ್ಲಿ ಮೊದಲು ಪ್ರಕಾಶಿತವಾಯಿತು.

ಗ್ರಂಥವಿಮರ್ಶೆ

೧. ಕರ್ಣಾಟಕ ಘೋಷಯಾತ್ರೆ

ಕ್ರೌನ್ ಪುಟಗಳು ೪೭; ಬೆಂಗಳೂರು ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು ; ೧೯೨೨ ; ಬೆಲೆ ೭ ಆಣೆ.

೨. ಕರ್ಣಾಟಕ ಕುಂದಮಾಲೆ

ಡೆಮ್ಮಿ ಪುಟಗಳು ೭೫ : ಮೈಸೂರು ಶ್ರೀನಿವಾಸ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತವಾದುದು ; ೧೯೨೩ ; ಬೆಲೆ ೧೨ ಆಣೆ.

ಲೇಖಕರು.—ಜಿ. ರಾಮರಾಯರವರು, ಸೀನಿಯರ್ ಟ್ರಾನ್ಸ್‌ಲೇಟರ್, ಮದ್ರಾಸ್.

ಘೋಷಯಾತ್ರೆ—ಇದು ಲಕ್ಷ್ಮಣಸೂರಿಗಳು ಸಂಸ್ಕೃತದಲ್ಲಿ ರಚಿಸಿರುವ ನಾಲ್ಕು ಅಂಕಗಳುಳ್ಳ ದೃಶ್ಯ ಪ್ರಬಂಧದ, ಕರ್ಣಾಟಕ ಗದ್ಯ ರೂಪದ ಪರಿವರ್ತನೆ.

ಕುಂದಮಾಲೆ—ಇದು ದಿಙ್ನಾಗಾಚಾರ್ಯರು ಸಂಸ್ಕೃತದಲ್ಲಿ ಬರೆದಿರುವ ನಾಟಕದ, ಗದ್ಯ ರೂಪದ ಪರಿವರ್ತನೆ.

ಮೇಲ್ಕಂಡ ಎರಡು ಗ್ರಂಥಗಳ ಭಾಷಾಶೈಲಿಯೂ ಸುಲಭವಾಗಿಯೂ ಸರಳವಾಗಿಯೂ ಇದೆ. ಕಥಾವಸ್ತುವೂ ಸಂವಿಧಾನವೂ ಮೂಲವನ್ನನುಸರಿಸಿರುವುದರಿಂದ ಹೊಸದೇನೂ ಇರುವುದಿಲ್ಲ. ಪರಿವರ್ತನೆಯು ತಕ್ಕಹಾಗೆಯೇ ಇರುವುದು. ಈ ಎರಡು ರೂಪಕಗಳೂ ಎಲ್ಲರೂ ಓದಿ ಗ್ರಹಿಸಲು ಅರ್ಹವಾಗಿರುವುವು.

---

೩. ಜೈಮಿನಿ ಭಾರತ ಕಥಾಸಂಗ್ರಹ—೨ನೆಯ ಭಾಗ

ಡೆಮ್ಮಿ ಪುಟಗಳು xxxii + (೧೦೮—೩೧೩) ೨೦೫ ; ಮೈಸೂರು ಶ್ರೀನಿವಾಸ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು ; ೧೯೨೫ ; ಬೆಲೆ ರೂ. ೧–೬–೦.

ಲೇಖಕರು.—ರಾ. ರಾಮರಾವ್, ಬಿ.ಎ., ಮೈಸೂರು ಶಾಸನದ ಇಲಾಖೆಯ ಅಸಿಸ್ಟೆಂಟ್.

ಇದು ಕನ್ನಡ ಜೈಮಿನಿ ಭಾರತಕ್ಕೆ ತಿಳಿಗನ್ನಡದಲ್ಲಿ ಬರೆದಿರುವ ಗದ್ಯಾನುವಾದವು. ಇದರ ಮೊದಲನೆಯ ಭಾಗವನ್ನು ಪರಿಷತ್ಪತ್ರಿಕೆಯಲ್ಲಿ (ಸಂ. ೭, ಪು. ೧೨೮–೧೨೯) ವಿಮರ್ಶೆಮಾಡಿದೆ. ಈ ಎರಡನೆಯ ಭಾಗವೂ ಎಲ್ಲ ವಿಷಯಗಳಲ್ಲಿಯೂ ಮೊದಲನೆಯ ಭಾಗದಂತೆಯೇ ಇದೆ. ಪ್ರಾರಂಭದಲ್ಲಿ ಬರೆದಿರುವ ೩೨ ಪುಟಗಳುಳ್ಳ ಪೀಠಿಕೆಯಲ್ಲಿ ಸಂಸ್ಕೃತ ವ್ಯಾಸ ಭಾರತಕ್ಕೂ, ಸಂಸ್ಕೃತ ಜೈಮಿನಿ ಭಾರತಕ್ಕೂ, ಕನ್ನಡ ಜೈಮಿನಿ ಭಾರತಕ್ಕೂ, ಕಥಾ ಭಾಗದಲ್ಲಿರುವ ಸಾಮ್ಯವನ್ನೂ ವ್ಯತ್ಯಾಸವನ್ನೂ ತಿಳಿಯಪಡಿಸಿರುವುದಲ್ಲದೆ ಲಕ್ಷ್ಮೀಶಕವಿಯ ವಿಚಾರವನ್ನೂ ವಿಸ್ತಾರವಾಗಿ ವಿವರಿಸಿ ಜೈಮಿನಿ ಭಾರತ ಪದ್ಯಗಳನ್ನು ಚೆನ್ನಬಸವ ಪುರಾಣದ ಪದ್ಯಗಳೊಡನೆ ಹೋಲಿಸಿ ಅನೇಕ ವಿಷಯಗಳನ್ನು ಸೂಚಿಸಿದ್ದಾರೆ. ಈ ಪೀಠಿಕಾ ಭಾಗವು ವಾಚಕರಿಗೆ ಅನೇಕ ಸಂಗತಿಗಳನ್ನು ತಿಳಿಸುತ್ತ ಬಹಳ

ಉಪಕಾರಕವಾಗಿರುವುದು. ಭಾಷಾ ಶೈಲಿಯು ಸುಲಭವಾಗಿಯೂ ಸರಳವಾಗಿಯೂ ಇದ್ದು ಇದು ಪ್ರಾಯಶಃ ಶುದ್ಧವಾದ ಭಾಷೆಯಲ್ಲಿ ಬರೆದಿದೆ. ಮುದ್ರಣದ ತಪ್ಪುಗಳು ಬಹಳ ಕಡಿಮೆ. ಒಂದೊಂದೆಡೆಯಲ್ಲಿ ಶಬ್ದರೂಪಗಳು ಅಷ್ಟು ಶುದ್ಧವಾಗಿಲ್ಲ. ಪ್ರಸಕ್ತಾನುಪ್ರಸಕ್ತಿಯಿಂದ ಮೊದಲನೆಯ ಭಾಗದ ಒಂದೆರಡು ಸಂಗತಿಗಳನ್ನು ಇಲ್ಲಿ ಹೇಳಬೇಕಾಗಿದೆ. ಸಂಸ್ಕೃತ ಜೈಮಿನಿ ಭಾರತದಲ್ಲಿ ೬೮ ಅಧ್ಯಾಯಗಳಿವೆ. ಕನ್ನಡ ಜೈಮಿನಿ ಭಾರತದಲ್ಲಿ ೩೪ ಸಂಧಿಗಳಿವೆ. ಈ ಗದ್ಯಾನುವಾದದಲ್ಲಿ ಮೊದಲನೆಯ ಭಾಗದಲ್ಲಿ ಮೊದಲನೆಯ ೧೬ ಸಂಧಿಗಳನ್ನು ೧೨ ಅಧ್ಯಾಯಗಳಾಗಿಯೂ ಉಳಿದ ೧೮ ಸಂಧಿಗಳನ್ನು ಎರಡನೆಯ ಭಾಗದಲ್ಲಿ ೨೦ ಸಂಧಿಗಳಾಗಿಯೂ ವಿಭಾಗಿಸಿ, ಒಟ್ಟು ೩೨ ಸಂಧಿಗಳಾಗಿ ಮಾರ್ಪಡಿಸಿದೆ. ಮೊದಲನೆಯ ಭಾಗದಲ್ಲಿ ೧೨೦ ಪುಟಗಳಿವೆ. ಎರಡನೆಯ ಭಾಗವು ೧೦೭ನೆಯ ಪುಟವನ್ನು ಆರಂಭವಾಗಿಕೊಂಡು ಬರೆದಿದೆ. ಜೈಮಿನಿ ಭಾರತದ ಕಥೆಯನ್ನು ಸಾಮಾನ್ಯ ಜನರೂ ಸುಲಭವಾಗಿ ಗ್ರಹಿಸಲು ಈ ಗ್ರಂಥವು ಅನುಕೂಲವಾಗಿರುವುದೆಂಬುದಕ್ಕೆ ಸಂದೇಹವಿಲ್ಲ. ಈ ಗ್ರಂಥಕ್ಕೆ ಸರ್ವರೂ ಪ್ರೋತ್ಸಾಹಕರಾಗಬೇಕೆಂಬುದು ನಮ್ಮ ಆಶಯ.

---

೪. ಸ್ಕೂಲ ಲೀವ್ಹಿಂಗ ಪರೀಕ್ಷೆ, ೧೯೨೭

ಸಂಪಾದಕರು.—ರ. ವೆ. ಹಿರೇಕೆರೂರ, ಬಿ.ಎ.

ಪುಟಗಳು ಸುಮಾರು ೩೦೦; ಬಿಜಾಪುರದ ಹಿತಚಿಂತಕ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು;
ಬೆಲೆ ರೂ. ೧–೮–೦.

ಈ ಪುಸ್ತಕದ ೧೨೪ರಿಂದ ೧೪೫ನೆಯ ಪುಟಗಳವರೆಗೆ ಎಂದರೆ ೨೨ ಪುಟಗಳಲ್ಲಿ, ಸೋಮೇಶ್ವರ ಶತಕದ ಮೊದಲಿನ ೫೦ ಪದ್ಯಗಳು ಶಬ್ದಾರ್ಥ ಭಾವಾರ್ಥಗಳೊಡನೆ ಮುದ್ರಿತವಾಗಿದೆ. "ಸೋಮೇಶ್ವರ ಶತಕದಲ್ಲಿಯ ಕೆಲವು ಪದ್ಯಗಳ ಶಬ್ದಾರ್ಥ ಭಾವಾರ್ಥವು ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಪ್ರಸಿದ್ಧಿಪಡಿಸಲ್ಪಟ್ಟ ಪುಸ್ತಕದೊಳಗಿಂದ ತೆಗೆದುಕೊಳ್ಳಲ್ಪಟ್ಟಿದೆ" ಎಂದು ಸಂಪಾದಕರು ಮುನ್ನುಡಿಯಲ್ಲಿ ತಿಳಿಸಿರುತ್ತಾರೆ. ಇದನ್ನು ನೋಡಿದರೆ ಪರಿಷತ್ತಿನ ಮುದ್ರಣದ ಅನುಕರಣವಾಗಿ ಮುದ್ರಿಸಿರುವುದೆಂದು ತೋರುತ್ತದೆ. ಗ್ರಂಥವನ್ನು ಪರಿಶೋಧಿಸುವುದರಲ್ಲಿ ಹಾಗೆ ಕಾಣಬರುವುದಿಲ್ಲ. ಪದ್ಯಗಳು ಪರಿಷತ್ತಿನಲ್ಲಿ ತಿದ್ದಿದ ಪಾಠವನ್ನನುಸರಿಸಿ ಅದೇ ಕ್ರಮದಲ್ಲಿವೆ. ವಿಷಯ ವಿಭಾಗದ ಹೆಸರುಗಳೇ ಇದರಲ್ಲಿಲ್ಲ. ಶಬ್ದಾರ್ಥ ಭಾವಾರ್ಥಗಳು ಪರಿಷತ್ತಿನ ಮುದ್ರಣದ ಆನುಪೂರ್ವಿಯನ್ನು ಬಹುಶಃ ಅನುಸರಿಸಿಲ್ಲ. ಸ್ವತಂತ್ರವಾಗಿರುವಂತೆ ಕಾಣುತ್ತದೆ. ಪರಿಷತ್ತಿನ ಮುದ್ರಣದ ಪದ್ಯಗಳಲ್ಲಿ ಬರವಣಿಗೆಯ ಚಿಹ್ನೆಗಳನ್ನುಪಯೋಗಿಸಿಲ್ಲ. ಸಂಪಾದಕರು ಈ ಭಾಗದ ವಿಷಯವಾಗಿ ಮುನ್ನುಡಿಯಲ್ಲಿ ಸೂಚಿಸಿರುವ ಅಂಶದಿಂದ ಶಬ್ದಾರ್ಥ ಭಾವಾರ್ಥಗಳೂ ಪರಿಷತ್ತಿನಲ್ಲಿ ಪ್ರಕಟವಾದ ಪುಸ್ತಕದಲ್ಲಿರುವುದೇ ಆಗಿದೆ; ಎಂಬ ಅಭಿಪ್ರಾಯವು ತೋರುತ್ತದೆ. ಈ ಸಂದೇಹಕ್ಕವಕಾಶವಿಲ್ಲದಂತೆ ಸೂಚಿಸಿದ್ದರೆ ಚೆನ್ನಾಗಿದ್ದಿತು.

ಶ್ರೀ:

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೧] ಅಕ್ಷಯ ಸಂ॥ ಪುಷ್ಯ ಮಾಸ [ಸಂಚಿಕೆ ೪

ಕಾಳಿದಾಸನ ಮೇಲಿನ ಆಕ್ಷೇಪಣೆಗೆ ಸಮಾಧಾನ

ಭಾರತ ವರ್ಷವು ಪ್ರಪಂಚಕ್ಕೇ ಅಲಂಕಾರ ಭೂತವಾದ ಪುಣ್ಯ ಭೂಮಿ. ಲಕ್ಷ್ಮೀ ಸರಸ್ವತಿಯರ ಪೂರ್ಣಾನುಗ್ರಹಕ್ಕೆ ಪಾತ್ರವಾಗಿದ್ದ ದಿವ್ಯ ದೇಶ. ಸಕಲ ಕಲೆಗಳಿಗೂ, ಸಕಲ ವಿದ್ಯೆಗಳಿಗೂ ಮಾತೃಭೂಮಿ. ಸಾಹಿತ್ಯ ಸಾಗರವನ್ನು ಮಥನಮಾಡಿ ಕರ್ಣಾಮೃತವನ್ನು ಪಡೆದು ತಾವೂ ಧನ್ಯರಾಗಿ, ಇತರರಿಗೂ ಅದನ್ನು ಹಂಚಿದ ಯಶಸ್ವಿಗಳೂ, ಪ್ರತಿಭಾಶಾಲಿಗಳೂ ಆದ ಅಸಂಖ್ಯಾತ ಕವಿಗಳ ಜನ್ಮಸ್ಥಾನ. ಭರತಖಂಡದ ಕವಿಗಳಲ್ಲೆಲ್ಲ ಕಾಳಿದಾಸನೇ ಶ್ರೇಷ್ಠತಮನಾಗಿದ್ದಾನೆ. ಅವನ ಗ್ರಂಥಗಳೆಂದರೆ, ಪ್ರವೃತ್ತಿಮಾರ್ಗ ಪ್ರಧಾನವಾಗಿದ್ದ ಅವನ ಕಾಲದ ನಾಗರಿಕತೆಯ ಚಿತ್ರ ಫಲಕಗಳು. ಭೋಗೇಚ್ಛೆಯ ಜೊತೆಗೆ ಪಾರಮಾರ್ಥಿಕತೆಯನ್ನೂ ಸಮ್ಮಿಳಿತವಾಗಿ ಸೇರಿಸದಲ್ಲದೆ ಜಗತ್ತಿನ ಕಲ್ಯಾಣವಾಗಲಾರದೆಂಬ ತತ್ತ್ವವನ್ನು ಕಲಾ ಸೌಂದರ್ಯದಿಂದ ಭವ್ಯವಾಗಿ ತನ್ನ ಗ್ರಂಥಗಳಲ್ಲಿ ಅಡಗಿಸಿದ ನಿಸ್ಸೀಮನೆಂದರೆ, ಕಾಳಿದಾಸನೇ ಸರಿ. ಕವಿತಾ ವೀಣೆಯ ಮೇಲೆ ತರಂಗ ತರಂಗವಾಗಿ ರಾಗ ಲಹರಿಯನ್ನೆಬ್ಬಿಸಿ, ಶ್ರೋತೃ ವೃಂದವನ್ನು ಸ್ವರ್ಗೀಯ ಧಾಮಕ್ಕೆ ಕರೆದೊಯ್ಯುವ ಕಲೋಪಾಸಕನೆಂದರೆ, ಕಾಳಿದಾಸನೇ ಸರಿ. ಕವಿ ಕಾಳಿದಾಸನಿಗೆ ಪ್ರಪಂಚದಲ್ಲೆಲ್ಲ ಅತ್ಯುತ್ತಮರೆನಿಸಿದ ಕವಿಪುಂಗವರ ಸಹಪಙ್ಕ್ತಿಯಲ್ಲಿ ಶ್ರೇಷ್ಠವಾದ ಆಸನದಲ್ಲಿ ಮಂಡಿಸಲು ಯೋಗ್ಯತೆಯುಂಟು. ಅಪರಿಮಿತವಾದ ಕಲ್ಪನಾ ಸಾಮರ್ಥ್ಯವೂ, ಹೃದಯಂಗಮವಾಗಿ ನಾನಾ ಭಾವಗಳನ್ನು ವರ್ಣಿಸಬಲ್ಲ ಚಾತುರ್ಯವೂ ಅವನ ಗ್ರಂಥಗಳಿಗೆ ಪ್ರಪಂಚದ ಸಾಹಿತ್ಯಮಾಲೆಯಲ್ಲಿ ಉಚ್ಚಸ್ಥಾನವು ದೊರೆಯುವಂತೆ ಮಾಡಿವೆ. ಅದ್ಭುತವಾದ ಅವನ ಧೀಶಕ್ತಿಯೂ, ರಮಣೀಯವಾಗಿರುವ ಅವನ ವರ್ಣನಾ ಸಾಮರ್ಥ್ಯವೂ, ಆಸ್ವಾದ್ಯಕರವಾದ ಅವನ ಪರಿಶೀಲನಾ ಶಕ್ತಿಯೂ, ಮಾಧುರ್ಯಮಯವಾದ ಅವನ ಶೈಲಿಯೂ ಪ್ರಪಂಚವನ್ನೇ

ಮುಗ್ಧಗೊಳಿಸಿದೆ. ಗೇಟೆ, ಹಂಬೋಲ್ಟ್, ಹರ್ಡರ್, ಸರ್ ವಿಲಿಯಂ ಜೋನ್ಸ್ ಮುಂತಾದ ಅನೇಕ ಪಾಶ್ಚಾತ್ಯ ಪಂಡಿತೋತ್ತಮರು ಈ ನಮ್ಮ ಕವಿಯನ್ನು ಕೊಂಡಾಡಿದ್ದಾರೆ. ಗೇಟೆಯು ಜರ್ಮನಿ ದೇಶದ ಪ್ರಸಿದ್ಧ ಕವಿ. ಪ್ರಪಂಚದಲ್ಲೆಲ್ಲ ಅತ್ಯಂತ ಶ್ರೇಷ್ಠರೆನಿಸಿದ ಕವಿಗಳಲ್ಲೊಬ್ಬನು. ಅಂತಹವನು ಕಾಳಿದಾಸನ ಶಾಕುಂತಲ ನಾಟಕವನ್ನು ಮುಕ್ತಕಂಠದಿಂದ ಹೊಗಳಿದ್ದಾನೆಂದಮೇಲೆ, ನಮ್ಮ ಕವಿಯ ಹಿರಿಮೆಯನ್ನು ಅಳೆಯಲು, ಮತ್ತಾವ ಹೆಚ್ಚಿನ ಮಾನ ದಂಡವು ಬೇಕು! ಕಾಳಿದಾಸನು ರಚಿಸಿರುವ ನಾಟಕಗಳಿಗೂ, ಷೇಕ್ಸ್‌ಪಿಯರ್ ಮಹಾಕವಿಯು ರಚಿಸಿರುವ ನಾಟಕಗಳಿಗೂ ಅನೇಕ ವಿಷಯಗಳಲ್ಲಿ ಸಾಮ್ಯವುಂಟೆಂಬುದಾಗಿ ಅನೇಕ ಪಂಡಿತೋತ್ತಮರು ಪ್ರಶಂಸಿಸಿದ್ದಾರೆ.

ನಮ್ಮ ದೇಶದ ಕವಿಪುಂಗವನಲ್ಲಿ ಇಷ್ಟು ಅಮೋಘ ಗುಣಗಳಿದ್ದರೂ, ಅವನ ಮೇಲೆ ಕೆಲವು ಆಕ್ಷೇಪಣೆಗಳು ಹೊರಟಿವೆ. ಅವು ಸಾಧುವಾದ ಆಕ್ಷೇಪಣೆಗಳೇ? ಎಂಬುದನ್ನು ಸಮಾಲೋಚಿಸುವುದು ಭಾರತೀಯರಾದ ನಮ್ಮಲ್ಲಿ ಪ್ರತಿಯೊಬ್ಬನಿಗೂ ಆವಶ್ಯಕರ್ತವ್ಯ. ಹೀಗೆಂದಮಾತ್ರಕ್ಕೇ ಕಾಳಿದಾಸನು ರಚಿಸಿರುವ ಗ್ರಂಥಗಳಲ್ಲಿ ದೋಷಗಳೇ ಇಲ್ಲವೆಂದು ಎಲ್ಲರೂ ಭಾವಿಸಬೇಕೆಂಬುದು ನನ್ನ ಅಭಿಮತವಲ್ಲ. ಕಾಳಿದಾಸನೂ ದೇವನಲ್ಲ. ಷೇಕ್ಸ್‌ಪಿಯರ್ ಕವಿಯೂ ದೇವನಲ್ಲ. ಅವರೂ ಮನುಷ್ಯರು; ಅಂತರಾತ್ಮೇರಣೆಯಿಂದ ತುಂಬಿದ ಸ್ಫೂರ್ತಿ ಸಹಿತರಾದ ಪುರುಷ ಶ್ರೇಷ್ಠರು. ಮನುಷ್ಯತ್ವವು ಬೆನ್ನಿಗೆ ಕಟ್ಟಿತೆಂದರೆ, ಅದರೊಡನೆ ಅಪರಿಪೂರ್ಣತೆಯು ಸ್ವತಸ್ಸಿದ್ಧವಾಗಿಯೇ ಇದೆ. ಆದರೂ ನಮ್ಮ ಕವಿಯ ಮೇಲೆ ಇಲ್ಲದ ಸಲ್ಲದ ದುರಾಕ್ಷೇಪಗಳು ಬಂದಿದ್ದರೂ ನಾವು ಸುಮ್ಮನೆ ಕೈಕಟ್ಟಿಕೊಂಡು ಕುಳಿತು ಅವುಗಳು ತಿರೋಧಾಯಕವೆಂದು ಭಾವಿಸಬೇಕಾಗಿಲ್ಲ. ಸ್ಕಾಟ್ಲಂಡಿನಲ್ಲಿರುವ ಒಂದು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದ ಪ್ರೊಫೆಸರಾಗಿರುವ ಡಾಕ್ಟರ್ ಎ. ಬೆರ್ರಿಡೇಲ್ ಕೀತ್ ರವರು ಸಂಸ್ಕೃತ ನಾಟಕಗಳ ಮೇಲೆ ಒಂದು ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ಕಾಳಿದಾಸನ ವಿಷಯದಲ್ಲಿ ಅವರು ಕೆಲವು ದುರಾಕ್ಷೇಪಗಳನ್ನು ಮಾಡಿದ್ದಾರೆ. ಅವುಗಳಿಗೆ ಸಂಕ್ಷೇಪವಾಗಿ ಉತ್ತರ ಹೇಳುವುದು ಈ ಲೇಖನದ ಉದ್ದೇಶವಾಗಿದೆ. ಆದಮಾತ್ರಕ್ಕೇ ಆ ದೊಡ್ಡಮನುಷ್ಯರಲ್ಲಿ ನಮಗಿರುವ ಗೌರವವು ಕಡಮೆಯೆಂದು ಅರ್ಥವಲ್ಲ. ಅವರು ಉತ್ತಮ ರೀತಿಯಲ್ಲಿ ಗ್ರಂಥ ರಚನೆ ಮಾಡಿದ್ದಾರೆ. ಅನೇಕ ವಿಷಯಗಳನ್ನು ಮನೋಜ್ಞವಾಗಿ ವರ್ಣಿಸಿದ್ದಾರೆ. ನಮ್ಮ ದೇಶದ ಕವಿಗಳನ್ನು ಅವರು ಹೊಗಳಿರುವುದಕ್ಕಾಗಿ ನಾವೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕಾಗಿದೆ.

ಕಾಳಿದಾಸನಲ್ಲಿ ದೋಷಾರೋಪಣೆ ಮಾಡುವುದರಲ್ಲಿ ಅವರು ಹೇಳುವುದರ ಸಾರಾಂಶವೇನೆಂದರೆ:—"ಕಾಳಿದಾಸನ ಗ್ರಂಥಗಳೇನೂ ಸೊಗಸಾಗಿವೆ. ಆದರೂ ಅವುಗಳಲ್ಲಿರುವ ಒಂದು ದೋಷವನ್ನು ಉಪೇಕ್ಷೆ ಮಾಡುವುದು ಯುಕ್ತವಲ್ಲ. ಜೀವನದ ಘನತರವಾದ ಸಮಸ್ಯೆಗಳಲ್ಲಿ ಆತನು ಆಸಕ್ತಿಯನ್ನೇ ತೋರಿಸಿಲ್ಲ.

ಅವನು ರಚಿಸಿರುವ ನಾಟಕಗಳನ್ನು ಓದಿದರೂ ಈ ಅಂಶವು ವ್ಯಕ್ತಪಡುತ್ತದೆ. ಅವನು ರಚಿಸಿರುವ ಕಾವ್ಯಗಳನ್ನು ಓದಿದರೂ ಈ ಅಂಶವು ವ್ಯಕ್ತಪಡುತ್ತದೆ. ಗೇಟೆಯು ಕಾಳಿದಾಸನನ್ನು ಮೆಚ್ಚಿ ಕೊಂಡಾಡಿರುವುದು ನ್ಯಾಯವಾಗಿದೆ. ಮೊಟ್ಟಮೊದಲು ಶಾಕುಂತಲ ನಾಟಕವನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ ಸರ್ ವಿಲಿಯಂ ಜೋನ್ಸ್ ಎಂಬುವರು ಅವನನ್ನು ಇಂಡಿಯಾದೇಶದ ಷೇಕ್ಸ್‌ಪಿಯರ್ ಎಂದು ಕರೆದುದೂ ಯುಕ್ತವಾಗಿದೆ. ಆದಮಾತ್ರವೇ, ಕಾಳಿದಾಸನಲ್ಲಿರುವ ಒಂದು ದೋಷವನ್ನು ನೋಡದೆ ನಾವು ಕಣ್ಣು ಮುಚ್ಚಿಕೊಂಡಿರಬೇಕಾದುದಿಲ್ಲ. ಕಾಳಿದಾಸನಿಗೆ ಅವನ ಕಾಲದ ಬ್ರಾಹ್ಮಣ ಮತದಲ್ಲಿ ಕೇವಲ ಶ್ರದ್ಧೆಯೂ, ಅಭಿಮಾನವೂ ಇದ್ದುದರಿಂದ ಅದರ ಪರಿಣಾಮವಾಗಿ ಅವನ ಕವಿತೆಯ ತರಂಗವು ದೂರವ್ಯಾಪಿಯಾಗಲು ಅವಕಾಶ ತಪ್ಪಿತು. ಮನುಷ್ಯನು ತನ್ನ ಕರ್ಮಾನುಸಾರವಾಗಿ ಪರ್ಯಟಿಸಿಕೊಳ್ಳುವ ಅದೃಷ್ಟ ಪರಿಪಾಕಕ್ಕನುಗುಣವಾಗಿ ಸಮಸ್ತವೂ ನ್ಯಾಯವಾಗಿಯೇ ಇದ್ದಿತೆಂದು ಅವನಿಗೆ ನಂಬಿಕೆಯಿದ್ದಿತು. ಇದರ ಫಲಿತಾಂಶವಾಗಿ ಪ್ರಪಂಚವು ದುಃಖಮಯವೆಂಬುದನ್ನು ಅವನು ಅರಿಯಲಾರದೆ ಹೋದನು. ಅಲ್ಲದೆ, ಜನರಲ್ಲಿ ಬಹು ಭಾಗದವರು ಕಷ್ಟಕ್ಕೊಳಗಾಗಿ, ಗೋಳಾಡುತ್ತಿರುವುದಕ್ಕಾಗಿ ಅನುತಾಪಪಡುವುದೂ, ಸಹಾನುಭೂತಿಯನ್ನು ತೋರಿಸುವುದೂ ಅವನಿಗೆ ಅಸಾಧ್ಯವೆನಿಸಿದುವು. ಈ ಪ್ರಪಂಚದಲ್ಲಿ ಅನ್ಯಾಯದ ಪ್ರಾಬಲ್ಯವಿರುವುದನ್ನು ಮನಗಾಣುವುದೂ ಅವನಿಗೆ ಸಾಧ್ಯವಿರಲಿಲ್ಲ. ಅವನ ಸಂಕುಚಿತ ಸೀಮೆಯನ್ನು ದಾಟಿಕೊಂಡು ಹೋಗುವುದು ಅವನಿಗೆ ಅಸಾಧ್ಯವಾಗಿದ್ದಿತು. ಹೀಗೆ ಸ್ವಮತಬದ್ಧನಾಗಿದ್ದೂ ಕೂಡ, ಅವನು ಚಿರಕಾಲ ಉಜ್ವಲತೆಯಿಂದ ಬಾಳುವ ಮತ್ತು ಸಮಸ್ತರನ್ನೂ ಮುಗ್ಧಗೊಳಿಸುವ ಶಾಕುಂತಲ ನಾಟಕವನ್ನು—ತಿರುಕಲ್ಲದ ಭಾಷಾಂತರಗಳ ರೂಪದಲ್ಲಿ ಕೂಡ ಉದ್ದಾಮ ಗ್ರಂಥವೆಂದು ಸಾರ್ವತ್ರಿಕವಾಗಿ ಹೊಗಳಿಸಿಕೊಂಡಿರುವ ಶಾಕುಂತಲ ನಾಟಕವನ್ನು—ಅವನು ಬರೆದಿರುವುದಕ್ಕಾಗಿ ನಾವೆಲ್ಲರೂ ಅವನಿಗೆ ಕೃತಜ್ಞರಾಗಿರಬೇಕು.'' ಅವರು ಈ ರೀತಿ ಅಭಿಪ್ರಾಯಪಟ್ಟಿರುತ್ತಾರೆ. ಈ ವಿಧದ ಪರಾಮರ್ಶನವನ್ನೂ, ಈ ವಿಧದ ವಿಮರ್ಶೆಯನ್ನೂ ಯಾವ ಕವಿಯ ಮೇಲಾದರೂ ಬರೆಯಬಹುದು. ಜನತೆಯ ದುಃಖಮಯವಾದ ದಾರುಣಸ್ಥಿತಿಯನ್ನು ಕಂಡು, ಮನ ಮರುಗದೆ ಇರುವಾತನು ಮನುಷ್ಯನೆನಿಸುವನೆ? ಅದರಲ್ಲಿಯೂ ಕವಿಯೆನಿಸುವನೆ? ಬೇಡನು ಕಾಮಮೋಹಿತವಾದ ಕ್ರೌಂಚ ಮಿಥುನದಲ್ಲೊಂದು ಹಕ್ಕಿಯನ್ನು ಹೊಡೆದುದನ್ನು ಕಂಡು, ಕವಿಪುಂಗವರಾದ ವಾಲ್ಮೀಕಿ ಋಷಿಗಳ ಕಾರುಣ್ಯಾರ್ದ್ರ ಹೃದಯದಲ್ಲಿಯ ಶೋಕವು ಶ್ಲೋಕತ್ವವನ್ನು ಹೊಂದದೆಯೇ ಅವರು ಆದಿ ಕವಿಯೆನಿಸಿ ಮೆರೆಯುತ್ತಿದ್ದಾರೆಯೆ? ಮನುಷ್ಯರ ಕಷ್ಟದಲ್ಲಿ ಸಹಾನುಭೂತಿಯೂ, ಅನುತಾಪವೂ ಇಲ್ಲದೆಯೇ ಕಾಳಿದಾಸನಿಗೆ ಕವಿಶ್ರೇಷ್ಠನೆಂಬ ಬಿರುದು ಬಂದಿದೆಯೆ? ಡಾಕ್ಟರ್ ಎ. ಬೆರ್ರಿಡೇಲ್ ಕೀತರವರು ಷೇಕ್ಸ್‌ಪಿಯರ್ ಕವಿಯ ಗ್ರಂಥಗಳ ಮುಖ್ಯ ಲಕ್ಷಣಗಳನ್ನೇ ಮಾನದಂಡವಾಗಿಟ್ಟುಕೊಂಡು ಕಾಳಿದಾಸನ ಗ್ರಂಥಗಳ ಯೋಗ್ಯತೆ

ಯನ್ನು ಅಳೆಯುತ್ತಿರುತ್ತಾರೆ. ಕವಿ ಹೃದಯವನ್ನು ತಿಳಿದು, ಸಹಾನುಭೂತಿಯನ್ನು ತೋರಿಸದೆ, ಕವಿಯ ದೇಶ ಕಾಲಾದಿಗಳನ್ನು ಗಮನಿಸದೆ, ವಿಮರ್ಶೆಗೆ ಹೊರಟರೆ ಅಭಾಸಕ್ಕೀಡಾಗುವುದು ಖಂಡಿತ. ಇದನ್ನು ಕೇಳಿ, ಷೇಕ್ಸ್ಪಿಯರ್ ಕವಿಯ ಪಕ್ಷಪಾತಿಗಳಾಗಿರುವವರಿಗೆ ಅಸಹ್ಯಕರವಾದ ಜಿಜ್ಞಾಸೆಗಾರಂಭವಾಯಿತೆಂದು ಮನಸ್ಸಿಗೆ ಬೇಸರವಾಗಬಹುದು. ಅಂಥವರೆದುರಿಗೆ ನಾನು ಬೊಗಸೆಯೊಡ್ಡಿ ಬೇಡಿಕೊಳ್ಳುವುದೇನೆಂದರೆ:—"ಸೋದರರೆ, ಬೇಸರಿಸಬೇಡಿ, ಭಾರತಮಾತೆಯ ಮಕ್ಕಳಾದ ಕಾಳಿದಾಸಾದಿ ಕವಿಗಳೂ ನಮ್ಮ ಅಣ್ಣಂದಿರೇ. ಅವರನ್ನು—ಯಾರು ಎಷ್ಟು ದುರಾಕ್ಷೇಪಣೆ ಮಾಡಿದರೂ ಎದ್ದು ಬಂದು ಉತ್ತರ ಹೇಳಲಾರದ ಆ ಯಶಃಕಾಯರನ್ನು—ಇತರರು ತಕ್ಕಷ್ಟು ಕಾರಣವಿಲ್ಲದೆ ಹಳಿದರೆ, ನಮ್ಮ ಮನಸ್ಸು ಏತಕ್ಕೆ ಸೈರಿಸಬೇಕು? ಹಾಗಾದರೆ ಅಳಿದುಬಿಡಿ. ನಮ್ಮ ಕವಿಗಳ ಗ್ರಂಥಗಳ ಮುಖ್ಯ ಲಕ್ಷಣಗಳೆಂಬ ಒರೆಗಲ್ಲಿನಮೇಲೆ ಇತರರು ಚಿನ್ನದ ಗಟ್ಟಿಗಳೆಂದು ತರುವವುಗಳನ್ನು ಉಜ್ಜಿ ನೋಡಿಬಿಡಿ. ಇದೂ ಒಂದು ವಿಧದಲ್ಲಿ ಅವಿವೇಕವೆಂದು ತಾವು ಹೇಳುವಿರೇನೋ! ಹಾಗಾದರೆ ಹೊರಗಿನವರ ಗ್ರಂಥಗಳ ಮಡಿಯುಜ್ಜಿ ನಂತಿಲ್ಲವೆಂಬ ಕಾರಣದಮೇಲೆ ನಮ್ಮ ಗ್ರಂಥಗಳನ್ನು ಅವಹೇಳನ ಮಾಡುವುದೂ ಅವಿವೇಕವೇ ಅಲ್ಲವೆ?"

ನಾಟಕ ಲೇಖಕನು ತಾನು ಯಾವ ದೇಶ ಕಾಲಗಳಲ್ಲಿಯ ವಿದ್ಯಮಾನಗಳನ್ನು ಕುರಿತು ನಾಟಕವನ್ನು ಬರೆಯುವನೋ, ಆ ದೇಶ ಕಾಲಗಳ ಸಮಾಜ ಲಕ್ಷಣಗಳನ್ನು ಗಮನಿಸಿ, ದೈವಿಕವಾಗಿ ತನ್ನಲ್ಲಿ ನೆಲಸಿರುವ ಅಂತರಾವೇಶ ಶಕ್ತಿಯ ಮಹಿಮೆಯಿಂದಲೂ, ಅಸಾಧಾರಣವಾದ ತನ್ನ ಪ್ರತಿಭಾ ವಿಶೇಷದಿಂದಲೂ ಅವುಗಳನ್ನೆಲ್ಲ ಸುಸಜ್ಜಿತವಾಗಿ ಅಳವಡಿಸಿ, ನಾಟಕವೆಂಬ ಹೂದೇರನ್ನು ಕಟ್ಟುತ್ತಾನೆ. ಕವಿಯ ಕಾಲದ ಸಮಾಜ ಲಕ್ಷಣಗಳು ಅವನ ಕಣ್ಣಿಗೆ ಕಟ್ಟಿದಂತಿರುತ್ತದೆ. ಅವನು ಅವುಗಳನ್ನು ಅಯುವರಿತು ಚಿತ್ರಿಸುತ್ತಾನೆ. ಹಿಂದಣ ಕಾಲದ ಕವಿಯು ನಮ್ಮ ಕಾಲದಲ್ಲಿರುವ ದುಸ್ಸಹವಾದ ದುರವಸ್ಥೆಗಳನ್ನು ಚಿತ್ರಿಸಿ ಪ್ರಾಪಂಚಿಕ ಜೀವನವು ವಿಷಾದಮಯವಾದ ದೃಶ್ಯವಾಗಿ ತೋರುವಂತೆ ಮಾಡಲಿಲ್ಲವೆಂಬುದು ಯಾವ ನ್ಯಾಯ? ಹಾಗೆ ನೋಡುವುದಾದರೆ ಷೇಕ್ಸ್ಪಿಯರಾ ಕವಿಯೂ ಕೂಡ, ಇಂದಿನ ಭಾರಿ ಭಾರಿ ಕಾರ್ಖಾನೆಗಳ ದೆಸೆಯಿಂದ ಮನುಷ್ಯ ಜೀವನವೇ ಜರ್ಝರಿಸಿ ಹೋಗುತ್ತಿರುವುದನ್ನು ವರ್ಣಿಸಿಲ್ಲವೆಂಬ ಕಾರಣದಮೇಲೆ ಅವನ ಗ್ರಂಥಗಳನ್ನು ತುಚ್ಛೀಕರಿಸಿ ಮಾತನಾಡುವುದು ಯಾವ ನ್ಯಾಯ? ಇಂತಹ ಘೋರವಾದ ದುಸ್ಥಿತಿಗಳು ಅವನ ಕಾಲದಲ್ಲಿಯ ಸಮಾಜದಲ್ಲಿರಲಿಲ್ಲ. ಆದುದರಿಂದ, ತಾನೇ ಕಂಡರಿಯದವುಗಳನ್ನು ಅವನು ಚಿತ್ರಿಸಲಿಲ್ಲ. ಕಾಳಿದಾಸನು ಜೀವಿಸುತ್ತಿದ್ದುದು ಸುಖಮಯವಾದ ಕಾಲ. ಗುಪ್ತ ಚಕ್ರೇಶ್ವರರು ಪ್ರಭುತ್ವ ಮಾಡುತ್ತಿದ್ದ ಆಗಿನ ಕಾಲದಲ್ಲಿ ಭಾರತವರ್ಷವು ಸುಖ ಸಾಮ್ರಾಜ್ಯದ ಶಿಖರವನ್ನೇರಿ ಮೆರೆಯುತ್ತಿದ್ದಿತು. ಜನರಲ್ಲಿ ದುರ್ಗುಣಗಳು ಆಲೋಚನೆಯಲ್ಲಿರಲಿಲ್ಲ. ಆಗಿನ ಕಾಲದಲ್ಲಿ ಇಂಡಿಯಾ

ದೇಶದಲ್ಲಿ ಕಳ್ಳತನವೇ ನಡೆಯುತ್ತಿರಲಿಲ್ಲವೆಂದೂ, ಜನರು ರಾತ್ರಿಯ ವೇಳೆ ಬಾಗಿಲನ್ನೇ ಭದ್ರಪಡಿಸದೆ ಮಲಗಿ ನಿದ್ರಿಸುತ್ತಿದ್ದರೆಂದೂ ಮೆಗಾಸ್ತನೀಸನು—ಪಕ್ಷಪಾತವಿಲ್ಲದೆ ಕಂಡುದನ್ನು ಕಂಡಂತೆಯೇ ವರ್ಣಿಸಿರುವ ಆ ಮಹಾನುಭಾವನು ಬರೆದಿಟ್ಟಿದ್ದಾನೆ. ನಾವು ನಾಗರಿಕರೆಂದು ಬಂಡವಾಳವಿಲ್ಲದ ಬಡಾಯಿ ಕೊಚ್ಚುತ್ತಿದ್ದೇವಲ್ಲಾ. ಈಗ ರಾತ್ರಿಯ ವೇಳೆ ಹಾಗೆ ಮಾಡಿದರೆ ಎಂತಹ ಅಪರಾಧಗಳಿಗೆ ಆಸ್ಪದವಾಗುವುದೋ ತಿಳಿಯದು. ಅಂತು ಆಗಿನ ಧರ್ಮಪರಾಯಣತೆಯು ಅಷ್ಟು ಮುಟ್ಟಿನದಾಗಿದ್ದಿತು. ಆಗಿನ ಭಾರತವರ್ಷವು ಎಲ್ಲಾ ಜನಾಂಗಗಳಿಗಿಂತಲೂ ಹೆಚ್ಚಿನದಾಗಿ ಸರ್ವಶ್ರೇಷ್ಠವೆನಿಸಿ ರಾಜಿಸುತ್ತಿದ್ದಿತು. ಅನೇಕ ಜನಾಂಗಗಳು ಇನ್ನೂ ತೊಟ್ಟಿಲ ಮಕ್ಕಳುಗಳಾಗಿ ಕಣ್ಣು ತೆರೆದು ನೋಡುತ್ತಿದ್ದುವು. ಸೊಗದ ಗಗನವನ್ನೇರಿದ ಸೂರ್ಯಬಿಂಬದಂತೆ ನಮ್ಮ ದೇಶವು ದೇದೀಪ್ಯಮಾನವಾಗಿ ತೊಳಗುತ್ತಿದ್ದಿತು. ಬ್ರಾಹ್ಮಣರು ಧರ್ಮಾವಲಂಬನೆಯಿಂದ ಕೂಡಿದ ಸಾತ್ವಿಕ ವೃತ್ತಿಯನ್ನು ಈಗಿನಂತೆ ಪರಿತ್ಯಜಿಸಿರಲಿಲ್ಲ. ಲೋಕಾನುಗ್ರಹಾರ್ಥವಾಗಿ ತಪಶ್ಚರ್ಯೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದ ಮಹಾಪುರುಷರು ಅನೇಕ ಮಂದಿಗಳಿದ್ದರು. ಒಟ್ಟು ದೇಶಕ್ಕೇ ಮಂಗಳವಾಗಬೇಕೆಂಬ ಉದ್ದೇಶದಿಂದ ಗ್ರಂಥ ರಚನೆಯಾಗುತ್ತಿದ್ದಿತು. ತಮ್ಮ ಬಾಹುಬಲದಿಂದ ಸಮಾಜವನ್ನು ರಕ್ಷಿಸುತ್ತಿದ್ದ ರಾಜರ್ಷಿಗಳು ಧರ್ಮವನ್ನೇ ಆಶ್ರಯಿಸಿ ಪ್ರಜೆಗಳನ್ನು ಪುತ್ರ ವಾತ್ಸಲ್ಯದಿಂದ ಸಲಹುತ್ತಿದ್ದರು. ಸ್ವದೇಶದ ಸೌಭಾಗ್ಯವನ್ನು ಹೆಚ್ಚಿಸುವುದಕ್ಕೆ ಸಾಧಕವಾದ ಯಾವ ಉದ್ಯಮವನ್ನು ಕೈಗೊಳ್ಳುವುದಕ್ಕೂ ಹಿಂಜರಿಯದೆ, ದೇಶೋನ್ನತಿಯನ್ನೇ ಧ್ಯೇಯ ತತ್ತ್ವವನ್ನಾಗಿ ಇಟ್ಟುಕೊಂಡಿದ್ದ ಧನ್ಯರು ಅವರು. ಅವರು ಹಾಗೆ ಧರ್ಮಪರಾಯಣರಾಗಿದ್ದುದರಿಂದಲೇ "ನಾವಿಷ್ಣುಃ ಪೃಥಿವೀ ಪತಿಃ", "ಸರ್ವದೇವಮಯೋ ರಾಜಾ" ಎಂಬವೇ ಮುಂತಾದುವು ಹುಟ್ಟಿದುದು.

ಪ್ರಾಚೀನ ಕಾಲದ ನೃಪಕುಲ ಲಲಾಮರ ಸದ್ಗುಣಾವಳಿಗಳು ಎಂಥವಾಗಿದ್ದುವೆಂಬುದನ್ನು, ನಮ್ಮನ್ನು ಆಳುವ ಮಹಾಸ್ವಾಮಿಯವರಾದ ನಮ್ಮ ಶ್ರೀಮನ್ಮಹಾರಾಜರವರ ಪ್ರತ್ಯಕ್ಷ ನಿದರ್ಶನದಿಂದಲೇ ಸಂಪೂರ್ಣವಾಗಿ ಗ್ರಹಿಸಬಹುದಾಗಿದೆ. ನಮ್ಮ ದೇಶದ ಕವಿಶ್ರೇಷ್ಠರಾದ ಡಾಕ್ಟರ್ ರವೀಂದ್ರನಾಥ ಠಾಕೂರರವರು ಅಪ್ಪಣೆ ಕೊಡಿಸಿರುವಂತೆ, ಕಾಳಿದಾಸನ ಕಾಲದಲ್ಲಿ ಸುಖ ಭೋಗದಲ್ಲಿಯೂ, ಸಾಹಿತ್ಯ ಪುಷ್ಟಿಯಲ್ಲಿಯೂ, ಕಲಾ ನೈಪುಣ್ಯದಲ್ಲಿಯೂ ಭಾರತೀಯರು ಸರ್ವಶ್ರೇಷ್ಠರಾಗಿ ಮೆರೆಯುತ್ತಿದ್ದರು. ಭಾರತವರ್ಷದಲ್ಲಿ ನಾಗರಿಕತೆಯು ಪರಮ ಸೀಮೆಯನ್ನಡರಿ ರಾಜಿಸುತ್ತಿದ್ದಿತು. ಇಲ್ಲಿಯ ವೈಶ್ಯೋತ್ತಮರು ಹಡಗುಗಳ ವ್ಯಾಪಾರವಮಾಡುತ್ತ, ಇಲ್ಲಿಯ ಪದಾರ್ಥಗಳನ್ನು ಜಾವಾ, ಸುಮಾತ್ರ, ಈಜಿಪ್ಟ್, ಚೀಣ ಮುಂತಾದ ದೇಶಗಳಿಗೆ ಕಳುಹಿಸುತ್ತಿದ್ದರು. ಅಲ್ಲಿಯ ಜನರು ಈ ದೇಶದವರ ಕಲಾಕೌಶಲಕ್ಕೆ ಬೆರಗಾಗಿ, ಅಚ್ಚರಿಯಿಂದ ತಲೆದೂಗುತ್ತ ಅವುಗಳನ್ನು ಕೊಳ್ಳುತ್ತಿದ್ದರು. ರಾಶಿ ರಾಶಿ ಹಣವನ್ನು ನಮ್ಮ ದೇಶಕ್ಕೆ ಬಂದುಬೀಳುತ್ತಿದ್ದಿತು. ಇದನ್ನು ಕೇಳಿ ಯಾರೂ

ಅಸಂಭವವೆನ್ನುವಂತಿಲ್ಲ. ಅದ್ಭುತವಾದ ಯಂತ್ರ ಸಾಧನಗಳಿರುವ ಈ ಇಪ್ಪತ್ತನೆಯ ಶತಮಾನದಲ್ಲಿಯೂ ಕೂಡ, ಹಿಂದೆ ಢಾಕಾಮಸ್ಲಿನಿಗೆ ಉಪಯೋಗಿಸುತ್ತಿದ್ದಷ್ಟು ಸೂಕ್ಷ್ಮವಾದ ಹತ್ತಿಯ ದಾರವನ್ನು ತೆಗೆಯುವುದು ಸಾಧ್ಯವಿಲ್ಲವೆಂದು ಪಾಶ್ಚಾತ್ಯರೇ ಒಪ್ಪಿಕೊಂಡಿದ್ದಾರೆ. ಇತರ ಅನೇಕ ವಿಷಯಗಳಲ್ಲಿಯೂ ಭಾರತೀಯರ ಕಲಾ ಕೌಶಲವು ಇದೇ ರೀತಿಯಲ್ಲಿದೆ. ಅದನ್ನು ಕುರಿತು ಪ್ರಸ್ತಾವಿಸುವುದು ಇಲ್ಲಿ ಅಪ್ರಕೃತವೆನಿಸುತ್ತದೆ.

ಅಂತು, ಗುಪ್ತ ಚಕ್ರೇಶ್ವರರ ಕಾಲದಲ್ಲಿ ಇಂಡಿಯಾದೇಶವು ಪ್ರಪಂಚದಲ್ಲೆಲ್ಲ ಅತ್ಯಂತ ಸಂಪದ್ಯುಕ್ತವಾದ ದೇಶವಾಗಿದ್ದಿತು. ಅದರ ಜೊತೆಗೆ ಧರ್ಮ ಪರಾಯಣತೆಯೂ, ಕರ್ಮಶ್ರದ್ಧೆಯೂ ಸೇರಿ ಬಂಗಾರದ ಕಮಲಕ್ಕೆ ಪರಿಮಳವೂ ಬಂದಂತಿದ್ದುವು. ಪರೋಪಕಾರದಿಂದ ಪುಣ್ಯಾರ್ಜನೆಯುಂಟೆಂಬ ಭಾವನೆಯು ಜನರಲ್ಲಿ ರೂಢಮೂಲವಾಗಿ ನೆಲೆಗೊಂಡಿದ್ದುದರಿಂದ, ಇದರ ಪರಿಣಾಮವಾಗಿ ಐಶ್ವರ್ಯವಂತರ ಹಣವು ವಿವಿಧ ರೂಪದಲ್ಲಿ ಬಡವರ ಕಡೆಗೂ ವಿನಿಯೋಗವಾಗುತ್ತಿದ್ದಿತು. ಆದಕಾರಣ ಧನಿಕರು ದಿನ ದಿನವೂ ಹೆಚ್ಚು ಹೆಚ್ಚಾಗಿ ಹೊನ್ನಿನ ರಾಶಿಯಮೇಲೆ ಕುಳಿತುಕೊಳ್ಳುತ್ತ ಬಂದ ಹಾಗೆಲ್ಲ ಬಡವರ ದಾರಿದ್ರ್ಯವು ದಿನ ದಿನವೂ ಹೆಚ್ಚಿ, ಅವರು ಕಾರ್ಪಣ್ಯದ ಕೆಸರಿನಲ್ಲಿ ಹೂತುಹೋಗುತ್ತ ಬರುವ ದಾರುಣ ಘಟನೆ ಇರಲಿಲ್ಲ. ದೇಶದಲ್ಲಿ ಶಾಂತಿಯು ತುಂಬಿದ್ದಿತು. ಭಾರತವರ್ಷವೇ ಭಗವಂತನ ವಿಲಾಸ ಭವನವೋ ಎಂಬಂತೆ ಇಲ್ಲಿ ಸುಖ ಸಂತೋಷಗಳು ತಾಂಡವವಾಡುತ್ತಿದ್ದುವು. ಆದಕಾರಣ ಪ್ರಪಂಚವು ದುಃಖಮಯವೆಂಬುದಾಗಿ ಭಾವಿಸಬೇಕಾದ ಆವಶ್ಯಕತೆಯೂ ಇರಲಿಲ್ಲ. ಅಲ್ಲದೆ ಜನರಲ್ಲಿ ಬಹು ಭಾಗದವರು ಕಷ್ಟಕ್ಕೊಳಗಾಗಿ ಗೋಳಿಡುತ್ತಿರುವುದನ್ನು ಕಂಡು ಅನುತಾಪಪಟ್ಟು ಸಹಾನುಭೂತಿಯನ್ನು ತೋರಿಸಬೇಕಾದ ಆವಶ್ಯಕತೆಯೂ ಇರಲಿಲ್ಲ. ಇದರ ಮೇಲೋ ಕಾಳಿದಾಸನೂ ಬಡತನದಿಂದ ದಿಂಡುಗೆಟ್ಟವನಲ್ಲ. ಅವನು ರಾಜಾನುಗ್ರಹಕ್ಕೆ ಪಾತ್ರನಾಗಿ ಸುಖಜೀವನಮಾಡುತ್ತಿದ್ದ ಭಾಗ್ಯಶಾಲಿ. ಇಂತಹ ಸಂದರ್ಭಗಳಲ್ಲಿ ಪ್ರಪಂಚವು ವಿಷಾದಮಯವೆಂದು ಚಿತ್ರಿಸುವ ಆವಶ್ಯಕತೆ ಎತ್ತಣದು? ಒಂದುವೇಳೆ ಕಾಳಿದಾಸನು ಈಗ ನಮ್ಮ ದೇಶದಲ್ಲಿ ಹುಟ್ಟಿದ್ದರೆ ಹಾಗೆ ಮಾಡುತ್ತಿದ್ದನೋ ಏನೋ! ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರರವರು ಅಪ್ಪಣೆಕೊಡಿಸಿರುವಂತೆ ಆಗ್ಗೆ ಜೀವನದ ಉದ್ದೇಶವು ಇತರರನ್ನು ಸದೆಬಡಿದು ತನ್ನ ಇರವನ್ನು ಕಾಪಾಡಿಕೊಳ್ಳುವುದಾಗಿರಲಿಲ್ಲ; ಇತರರ ಮೇಲೆ ಅಧಿಕಾರವನ್ನು ಚಲಾಯಿಸಿ ಅವರನ್ನು ಅಡಗುಮೆಟ್ಟಿ ಭೋಗಪರಾಯಣತೆಯ ಫಲಸಿದ್ಧಿಗಾಗಿ ಕಾದಾಡುವುದು ಜೀವನದ ಉದ್ದೇಶವಾಗಿರಲಿಲ್ಲ. ಇದೂ ಅಲ್ಲದೆ ಷೇಕ್ಸ್‌ಪಿಯರ್ ಮಹಾಕವಿಗೆ ಸಂಭವಿಸಿದಂತೆ ದುಸ್ಸಹವಾದ ಕಷ್ಟಗಳು ಕಾಳಿದಾಸನ ಜೀವಮಾನದಲ್ಲೆಂದಿಗೂ ಸಂಭವಿಸಲಿಲ್ಲ. "ಷೇಕ್ಸ್‌ಪಿಯರ್ ಕವಿಯ ಜೀವನವೇ ಹಠಾತ್ತಾಗಿ ಅಂಧಕಾರಮಯವಾದಂತೆ ತೋರಿತು. ತೊಂದರೆಗಳ ಮೇಲೆ ತೊಂದರೆಗಳು ಬಂದುವು. ಕಷ್ಟಗಳ ಮೇಲೆ ಕಷ್ಟಗಳು ಸಂಭವಿಸಿದುವು. ಅವನ ಆಪ್ತಮಿತ್ರರೆಲ್ಲರೂ ವಿಪದ್ಗ್ರಸ್ತರಾದರು. ಎಸೆಕ್ಸನೆಂಬ

ಅವನ ಮಿತ್ರನು ಕೊಲ್ಲಲ್ಪಟ್ಟನು. (ಸರ್ಕಾರದವರು ಅವನ ತಲೆಯನ್ನು ಕಡಿಸಿ ಹಾಕಿದರು.) ಸೌಥಾಂಪ್ಟನನೆಂಬ ಅವನ ಮಿತ್ರನು ಕಾರಾಗೃಹವಾಸಕ್ಕೆ ಗುರಿಯಾದನು. ಪೆಂಬ್ರೋಕನೆಂಬ ಅವನ ಮತ್ತೊಬ್ಬ ಮಿತ್ರನಿಗೆ ಆಸ್ಥಾನದಿಂದ ಉಚ್ಚಾಟನೆಯಾಯಿತು. ಷೇಕ್ಸ್‌ಪಿಯರನು ಕೂಡ ದಂಗೆಯೆದ್ದವರ ಜೊತೆಗೆ ಸೇರಿ ತೊಂದರೆಪಟ್ಟನೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ'' ಎಂಬುದಾಗಿ ಒಬ್ಬ ಲೇಖಕನು ಬರೆದಿದ್ದಾನೆ.

ಭಯಾನಕವಾದ ಈ ವಿಧದ ಘಟನಾವಳಿಗಳ ಸಂಘರ್ಷಣಕ್ಕೆ ಸಿಕ್ಕಿ ಕೋಟಲೆಪಟ್ಟವನಿಗೆ ವಿಷಾದಾಂತ ನಾಟಕಗಳನ್ನು ಬರೆಯಲು ಪ್ರೇರಣೆಯುಂಟಾದುದೇನು ಹೆಚ್ಚು? ಕಾಳಿದಾಸನು ಕಷ್ಟಗಳಿಗೆ ಒಳಗಾಗಲೂ ಇಲ್ಲ. ಪ್ರಪಂಚವು ವಿಷಾದಮಯವೆಂಬುದಾಗಿ ಅವನ ಮನಸ್ಸಿಗೆ ಗೋಚರಿಸುವಂತೆ ಜನರು ಕಷ್ಟಪಡುತ್ತಲೂ ಇರಲಿಲ್ಲ. ಇದರ ಮೇಲೆ ಹಿಂದೂ ಜನರ ಲಾಕ್ಷಣಿಕ ಗ್ರಂಥಗಳ ಪ್ರಕಾರ ವಿಷಾದಾಂತ ನಾಟಕಗಳನ್ನು ಬರೆಯುವುದಕ್ಕೂ, ಮರಣವನ್ನು ರಂಗಸ್ಥಳದಲ್ಲಿ ತೋರಿಸುವುದಕ್ಕೂ ಅನುಮತಿಯೂ ಇರಲಿಲ್ಲ. ಆದಕಾರಣ ಕಾಳಿದಾಸನು ವಿಷಾದಾಂತ ನಾಟಕಗಳನ್ನು ಬರೆಯಲಿಲ್ಲ. "ಷೇಕ್ಸ್‌ಪಿಯರ್ ಕವಿಯು ವಿಷಾದಾಂತ ನಾಟಕಗಳನ್ನು ಬರೆದಿದ್ದಾನೆ. ಕಾಳಿದಾಸನು ಅವುಗಳನ್ನು ಬರೆದಿಲ್ಲ. ಇದೊಂದು ದೊಡ್ಡ ನ್ಯೂನತೆ'' ಎಂದು ಚರ್ವಿತ ಚರ್ವಣವಾಗಿ ಹೇಳಲು ಉಚಿತವಾಗಿಯೂ ಯಾವ ಕಾರಣವೂ ಇಲ್ಲ. ಇದರಮೇಲೂ ದೇವರು ಕೊಟ್ಟಿರುವ ಕಣ್ಣುಗಳಲ್ಲಿ ಪ್ರಕೃತಿ ಸೌಂದರ್ಯದ ನಿಜ ಸ್ಥಿತಿಯನ್ನು ನೋಡದೆ, ಹಳದಿಯ ಗಾಜಿನ ಮುಖಾಂತರವೇ ನೋಡಲಭ್ಯಸಿಸುವವರಿಗೆ ಹೆಚ್ಚೇನನ್ನು ಹೇಳುವುದಕ್ಕೂ ಯಾರಿಗೂ ಶಕ್ತಿಯಿಲ್ಲ. ಒಂದು ವಿಧದಲ್ಲಿ ನೋಡಿದರೆ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್ ಮತ್ತು ಮಿಲ್ಟನ್ ಈ ಮೂವರು ಕವಿಗಳಲ್ಲಿದ್ದ ಉತ್ತಮ ಗುಣಗಳನ್ನೆಲ್ಲ ಒಟ್ಟುಗೂಡಿಸಿ ಎರಕಹೊಯ್ದು, ಆ ಮೂವರೂ ಹುಟ್ಟುವುದಕ್ಕೆ ಎಷ್ಟೋ ಕಾಲಕ್ಕೆ ಮೊದಲೇ ಕಾಳಿದಾಸನೆಂಬ ದಿವ್ಯ ಪ್ರತಿಮೆಯನ್ನು ಭಗವಂತನು ಸಿದ್ಧಮಾಡಿಟ್ಟು, ತಾನೇ ತನ್ನ ಅಮೃತಹಸ್ತದಿಂದ ಅದಕ್ಕೆ ಜೀವಕಳೆಯನ್ನು ತುಂಬಿದನೆಂದು ತೋರುತ್ತದೆ. ಕಾಳಿದಾಸನ ನಾಟಕಗಳು ವಿಷಾದಾಂತವಾಗಿಲ್ಲದಿದ್ದರೂ ಅವುಗಳಲ್ಲಿ ಶೋಕರಸವೂ, ಕರುಣರಸವೂ ಇಲ್ಲದೆ ಇಲ್ಲ. ಕಾಳಿದಾಸನ ಕಾಲದಲ್ಲಿದ್ದುದು ಹೊಟ್ಟೆಗಾಗಿ ಬಡಿದಾಡಬೇಕಾದ ಜೀವನ ಸಂಗ್ರಾಮದ ದುಃಖವಲ್ಲ. ದುರಾಶಾಪಿಶಾಚಗ್ರಸ್ತರಾದವರು ಸ್ವಪ್ರಯೋಜನಕ್ಕಾಗಿ ದುರ್ಬಲರನ್ನೂ, ಬಡವರನ್ನೂ ಹಿಂಸಿಸುವ ದುಃಖವಲ್ಲ. ಆಗಿದ್ದುದು ಕೇವಲ ಸಾಂಸಾರಿಕವಾದ ಸಾಧಾರಣ ವಿಧದ ದುಃಖ. ಷೇಕ್ಸ್‌ಪಿಯರ್ ಕವಿಗೆ ಕಂಡಂತೆ ಕಾಳಿದಾಸ ಕವಿಗೆ ಜೀವನ ಸಾಗರವು ಕ್ಷುಬ್ಧವಾಗಿ ಬೆಟ್ಟದಂತಹ ತೆರೆಗಳಿಂದ ಗೋಚರಿಸಲಿಲ್ಲ. ಕಾಳಿದಾಸನು ಕಂಡುದು ಪ್ರಶಾಂತವಾದ ಸಮುದ್ರ. ಆದರೂ ಅದು ಲೇಶವೂ ವಾತಾಹತವಾಗದೆ ಇರಲಿಲ್ಲ. ಅದರಲ್ಲಿ ಅಲೆಗಳಿಲ್ಲದೆ ಇರಲಿಲ್ಲ. ಅಲೆಗಳೇನೋ ಇದ್ದುವು. ಅವು ಬೆಟ್ಟದಂತಿರಲಿಲ್ಲ. ಸಣ್ಣ ಸಣ್ಣಗೆ ಎದ್ದುಕೊಂಡು, ಒಟ್ಟಿನಲ್ಲಿ

ಹೃದಯ ವಿದ್ರಾವಕವಾಗದೆ ಜೀವನಕ್ಕೆ ವೈವಿಧ್ಯವನ್ನು ಕೊಡತಕ್ಕವುಗಳು ಮಾತ್ರವೇ ಆಗಿದ್ದುವು. ಇದರಮೇಲೆ ಕಾಳಿದಾಸನು ಐಂದ್ರಜಾಲಿಕ. ಶಾಕುಂತಲ ನಾಟಕದಲ್ಲಿ, ವಿಷಾದ ಪರಿಪೂರ್ಣವಾದ ಅಂಶಗಳನ್ನೇ ತುಂಬಿಬಿಟ್ಟಿದ್ದಾನೆ. ಇಷ್ಟಾದರೂ ನಾಟಕವನ್ನು ನೋಡಿ, ಪ್ರೇಕ್ಷಕರು ಮನೆಗೆ ಹೊರಡುವಾಗ ಅವರ ಮನಸ್ಸು ಪರಿತೃಪ್ತಿಯನ್ನು ಹೊಂದಿ ಪ್ರಫುಲ್ಲವಾಗಿರುತ್ತದೆ. ಶೋಕದಿಂದ ಆಹತವಾಗಿ ಜರ್ಝರಿಸಿ ಹೋಗಿರುವುದಿಲ್ಲ. ಕಾಳಿದಾಸನ ಇತರ ನಾಟಕಗಳಲ್ಲಿಯೂ, ಅವನ ಕಾವ್ಯಗಳಲ್ಲಿಯೂ ಸಹ, ಆಗಿನ ಕಾಲದಲ್ಲಿ ಸಮಾಜದಲ್ಲಿದ್ದ ಶೋಕರಸ ಮಿಶ್ರವಾದ ಸನ್ನಿವೇಶಗಳನ್ನೆಲ್ಲ ಅವನು ಚಿತ್ರಿಸಿಯೇ ಇದ್ದಾನೆ.

ಅವನಿಗೆ ದೃಷ್ಟಿ ವೈಶಾಲ್ಯವಿರಲಿಲ್ಲವೆಂದೂ, ಅವನ ಮನಸ್ಸು ಕ್ಷುಂಬಿತಾ ಬದ್ಧವಾಗಿದ್ದಿತೆಂದೂ, ಜನರಲ್ಲಿ ಬಹುಭಾಗದವರ ಕಷ್ಟವನ್ನು ನೋಡಿ ಅನುತಾಪ ಪಡುವುದು ಅವನಿಗೆ ಅಸಾಧ್ಯವಾಯಿತೆಂದೂ, ಜೀವನದ ಸಮಸ್ಯೆಗಳು ಅವನ ಮನಸ್ಸಿಗೆ ಅಂಟಲಿಲ್ಲವೆಂದೂ ಆಕ್ಷೇಪಿಸುವುದು ಸರ್ವಥಾ ಅನ್ಯಾಯ. ಕಾಳಿದಾಸನು ತನ್ನ ಕಾಲದ ಸಮಾಜವನ್ನು ಚಿತ್ರಿಸಿದ್ದು ಕೂಡ, ಅವನು ಮತ್ತಾವುದೋ ಕಾಲದ ಸಮಾಜದ ಹೃದಯ ವಿದಾರಕವಾದ ದೃಶ್ಯಗಳನ್ನು ಭಯಾನಕವಾಗಿ ಚಿತ್ರಿಸಲಿಲ್ಲವೆಂದು ದೋಷಾರೋಪಣೆ ಮಾಡುವುದು ಕುತರ್ಕವೇ ಸರಿ. ಷೇಕ್ಸ್‌ಪಿಯರ್ ಕವಿಯಲ್ಲಿ ನಮಗೆ ಸಂಪೂರ್ಣವಾಗಿ ಗೌರವವುಂಟು. ಆದರೂ, ಆತನು ಬರೆದಿರುವ ಹ್ಯಾಮ್ಲೆಟ್, ಮೆಕ್ಬೆತ್, ಕಿಂಗ್‌ಲಿಯರ್ ಮುಂತಾದ ವಿಷಾದ ನಾಟಕಗಳನ್ನೋದುವಾಗ ನಮ್ಮ ಹೃದಯವೇ ಜರ್ಝರಿಸಿಹೋಗಿ, ಮನಸ್ಸು ಶೋಕ ಭರವನ್ನು ತಾಳಲಾರದೆ ಕುಸಿದು ಬೀಳುವುದೆಂದೂ, ಪರಿಣಾಮದಲ್ಲಿ ಸತ್ಪುರುಷರೂ, ರಮಣೀರತ್ನಗಳೂ ವಿಷಾದಾಂತ ನಾಟಕ ಲಕ್ಷಣವೆಂಬ ಬಡಬಾಗ್ನಿಯಿಂದ ಭಸ್ಮವಾಗಲ್ಪಡುವುದನ್ನು ನೋಡಿ ನಮ್ಮ ಮನಸ್ಸಿನ ಉದ್ವೇಗವನ್ನು ಸಹಿಸಲಾರದೆ, ವಿಕಟ ಧ್ವನಿಯಿಂದ ಕಿರಚಿಬಿಡೋಣವೇ ಎನ್ನಿಸುವುದೆಂದೂ ಒಪ್ಪಿಕೊಳ್ಳಲೇ ಬೇಕಾಗಿದೆ. ಷೇಕ್ಸ್‌ಪಿಯರ್ ಕವಿಯನ್ನು ಮನಸಾರೆ ಅಭಿನಂದಿಸುವೆವಾದರೂ, ಅವನು ಚಿತ್ರಿಸಿರುವ ಅಸಂಭವವಾದ ಮತ್ತು ಪ್ರಕೃತಿ ವಿರುದ್ಧವಾದ ಘಟನಾವಳಿಗಳ ವಿಲಕ್ಷಣ ಸ್ವಭಾವವನ್ನು ಗ್ರಹಿಸದೆ, ಅವುಗಳನ್ನೂ ಮಹಾಪ್ರಸಾದವೆಂದು ಸ್ವೀಕರಿಸುವುದು ನಮ್ಮಿಂದ ನಾಗದು.

ಬ್ರಾಹ್ಮಣ ಮತದಲ್ಲಿ ಕಾಳಿದಾಸನಿಗೆ ಅಭಿಮಾನವೂ ಶ್ರದ್ಧೆಯೂ ಇದ್ದುದರಿಂದ, ಅದರ ಪರಿಣಾಮವಾಗಿ ಅವನ ಕವಿತೆಯ ತರಂಗವು ದೂರವ್ಯಾಪಿಯಾಗಲು ಅವಕಾಶ ತಪ್ಪಿದುದು ನಿಜವೇ ಎಂಬ ವಿಷಯದಲ್ಲಿ, ಒಂದೆರಡು ಮಾತುಗಳನ್ನು ಹೇಳಿ ಈ ಲೇಖನವನ್ನು ಮುಗಿಸುವೆನು. ನಮ್ಮ ದೇಶದ ಪ್ರಸಿದ್ಧ ಲೇಖಕರಲ್ಲೊಬ್ಬರಾದ ಶ್ರೀಯುತ ಅರವಿಂದ ಘೋಷರವರು ಹೇಳಿರುವಂತೆ ವಾಲ್ಮೀಕಿ ಋಷಿಗಳೂ ವ್ಯಾಸರೂ ಮತ್ತು ಕಾಳಿದಾಸನೂ ಬರೆದಿರುವ ಗ್ರಂಥಗಳೇ ಪ್ರಾಚೀನ ಭಾರತವರ್ಷದ ಇತಿಹಾಸ. ಇವರು ಮೂರು ಮಂದಿಗಳೂ

ಭಾರತವರ್ಷದ ಇತಿಹಾಸದ ಮೂರು ಸ್ಥಾಯಿಗಳಿಗೂ ಸೂಚೀಪತ್ರದಂತಿರುವ ಮಹಾನುಭಾವರು. ನೀತಿ ಪ್ರಧಾನವಾದ ಭವ್ಯ ನಾಗರಿಕತೆಯ ಚಿತ್ರಫಲಕ ದಂತಿರುವ ರಾಮಾಯಣವನ್ನು ಕರುಣಿಸಿದವರು ವಾಲ್ಮೀಕಿ ಋಷಿಗಳು. ಧೀಶಕ್ತಿ ಪ್ರಧಾನವಾಗಿರುವ ರಮ್ಯವಾದ ಘಟನೆಗಳನ್ನು ಚಿತ್ರಿಸಿರುವವರು ವ್ಯಾಸರು. ಪ್ರವೃತ್ತಿಮಾರ್ಗ ಪ್ರಧಾನವಾದವುಗಳು ಕಾಳಿದಾಸನ ಉಜ್ಜ್ವಲವಾದ ಚಿತ್ರಗಳು. ಕಾಳಿದಾಸನು ತನ್ನ ಕಾಲದ ಸಾಮಾಜಿಕ ಚಿತ್ರವನ್ನು ಕೂಲಂಕಷವಾಗಿಯೂ, ರಮಣೀಯವಾಗಿಯೂ ತನ್ನ ಗ್ರಂಥಗಳಲ್ಲಿ ಅಡಗಿಸಿದ್ದಾನೆ. ಅವನ ಮನಸ್ಸೇ ಬ್ರಾಹ್ಮಣ ಮತದ ಅಭಿಮಾನದ ದೆಸೆಯಿಂದ ಸಂಕುಚಿತವಾಗಿಹೋಗಿ, ಅವನ ಕವಿತ್ವದ ಸೀಮೆಯು ಉಡುಗಿಹೋಗಿದ್ದ ಪಕ್ಷಕ್ಕೆ, ಅವನಿಂದ ಇಂತಹ ಮಹಾಕಾರ್ಯವು ಸಾಧಿಸಲ್ಪಡುತ್ತಿದ್ದಿತೆ? ಡಾಕ್ಟರ್ ಕೀತ್‌ರವರು ಆಗಿನ ಕಾಲದ ಬ್ರಾಹ್ಮಣ್ಯದ ನಿಜಸ್ವಭಾವವನ್ನು ಗ್ರಹಿಸಿದಂತೆ ತೋರುವುದಿಲ್ಲ. ಬ್ರಾಹ್ಮಣ ಧರ್ಮವು ಶಿಥಿಲವಾಗುತ್ತ ಬಂದು ಈಗ ನಾಮಾವಶೇಷವಾಗಿ ನಿಂತಿರುವ ಇಂದಿನ ಸ್ಥಿತಿಯನ್ನು ಕೇಳಿ ತಿಳಿದುಕೊಂಡು ಅವರು ಹೀಗೇನಾದರೂ ಬರೆದಿರುವರೋ ಏನೋ! ನಮ್ಮ ಹಿರಿಯರ ವಂಶದವರೆಂದು ಹೇಳಿಕೊಳ್ಳುವುದಕ್ಕೂ ಲಜ್ಜಿಪಡು ವಂತಿರುವ ಸ್ಥಿತಿಗೆ ನಾವು ಇಳಿದಿದ್ದೇವೆ. ನಾನು ಹಿಂದೆ ಇದೇ ಪತ್ರಿಕೆಯಲ್ಲಿಯ ಲೇಖನದಲ್ಲಿ ಬರೆದಿದ್ದಂತೆ, ಭಾರತಮಾತೆಯ ರತ್ನ ಕಂಕಣವಾಗಿದ್ದ ಜಾತಿ ಪದ್ಧತಿಯು ಈಗ ಆಕೆಯ ಶೃಂಖಲವಾಗಿ ಪರಿಣಮಿಸಿದೆ. ಜಾತಿ ಪದ್ಧತಿಯಲ್ಲಿ ಹಿಂದಿದ್ದ ಸುವ್ಯವಸ್ಥೆಯನ್ನೂ, ಅದರಲ್ಲಿ ಈಗ ಉಂಟಾಗಿರುವ ಅವ್ಯವಸ್ಥೆಯ ದುಷ್ಪರಿಣಾಮವನ್ನೂ, ಬರೆಯಹೊರಟರೆ ಅದೇ ಒಂದು ಲೇಖನವಾಗುವುದು. ಕಾಳಿದಾಸನು ಜಾತಿ ದ್ವೇಷವನ್ನು ತೋರಿಸಿಲ್ಲ. ಉಚ್ಚ ಜಾತಿಯ ದುರಭಿಮಾನ ವನ್ನು ಅವನ ಗ್ರಂಥಗಳಲ್ಲಿ ನಾವು ಕಾಣುವುದಿಲ್ಲ. ಬೆದರು ಬಿನ್ನಾಣಗಳಿಂದ ಇತರರನ್ನು ಬೆದರಿಸಿ ಧನಾಕರ್ಷಣೆಮಾಡಲು, ವಜ್ರಶುಂಠರಾದವರು ಹೂಡುವ ಪೌರೋಹಿತ್ಯದ ಬಲೆಯನ್ನು ಕಾಳಿದಾಸನ ಗ್ರಂಥಗಳಲ್ಲಿ ಯಾರೂ ನೋಡುವುದಿಲ್ಲ. (ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರು ಪೌರೋಹಿತ್ಯವೇ ಮುಂತಾದವುಗಳು ತಮಗೆ ಜನ್ಮ ಜನ್ಮಾಂತರಕ್ಕೂ ಬೇಡವೆಂದು ಹೇಳಿದ್ದಾರೆ.) ಮನುಷ್ಯರಲ್ಲಿ ಪರಸ್ಪರವಾಗಿಯೂ, ಮನುಷ್ಯರಿಗೂ ಪ್ರಕೃತಿಗೂ ಪರಸ್ಪರ ವಾಗಿಯೂ ಎಷ್ಟುಮಟ್ಟಿನ ಸಾಮರಸ್ಯವಿರಬೇಕೆಂದು ಉದಾರ ಹೃದಯರಲ್ಲಿ ಉದಾರ ಹೃದಯರೆನಿಸಿರತಕ್ಕವರು ಬಯಸುವಷ್ಟುಮಟ್ಟಿನ ಸಾಮರಸ್ಯವನ್ನೂ ಕಾಳಿದಾಸನ ಗ್ರಂಥಗಳಲ್ಲಿ ಕಾಣಬಹುದಾಗಿದೆ. ಹೀಗಿದ್ದೂ ನಮ್ಮ ಕವಿಯ ಮೇಲೆ ಆಕ್ಷೇಪಣೆಯೆ? ಪೂರ್ವದಲ್ಲಿದ್ದ ಶ್ರೇಷ್ಠರಾದ ಆರ್ಯರು ಈಗಿನ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಧನ ಜನ್ಮ ವಿಭಾಗದಿಂದ ಬಹು ವರ್ಣಗಳನ್ನು ಸೃಷ್ಟಿಸಲಿಲ್ಲ. ಗುಣಕರ್ಮ ವಿಭಾಗದಿಂದ ಚಾತುರ್ವರ್ಣ್ಯವನ್ನು ಕಲ್ಪಿಸಿಕೊಂಡಿದ್ದರು. ವರ್ಣವಿಭಾಗದ ಮೂಲ ಮನಸ್ಸಿಗೆ ತಾರದೆಯೇ ನಮ್ಮ ಸಮಾಜದ ಈಗಿನ ಹೇಯ ವಾದ ಸ್ಥಿತಿಯನ್ನೂ, ಅವ್ಯವಸ್ಥಿತಿಯನ್ನೂ ನೋಡಿಕೊಂಡು ನಮ್ಮ ಪೂರ್ವಿಕರನ್ನು,

ಸಂಕುಚಿತ ಬುದ್ಧಿಯುಳ್ಳವರೆಂಬುದಾಗಿ ಶಪಿಸಲಾರಂಭಿಸುವವರು ಈ ಅಂಶವನ್ನು ಗಮನಿಸುವುದೇ ಇಲ್ಲ. ಅಂತಹವರು ಡಾಕ್ಟರ್ ರವೀಂದ್ರನಾಥ ಠಾಕೂರರ—

"Be it said to the credit of India, that this diversity was not her own creation; she has had to accept it as a fact from the beginning of her history. In America and Australia, Europe has simplified her problem by almost exterminating the original population even in the present age, this spirit of exterminating is making itself manifest in the inhospitable shutting out of aliens, by those who were themselves aliens in the lands they now occupy. But India tolerated difference of races from the first and that spirit of toleration has acted all throughout her history.

Her caste system is the outcome of this spirit of toleration. For India has all along been trying experiments in evolving a social unity within which all the different people could be held together while fully enjoying the freedom of maintaining their own differences the tie has been as loose as possible, yet as close as the circumstances permitted. This has produced something like a united states of a social federation, whose common name is Hinduism."

ಎಂಬ ದಿವ್ಯ ವಾಣಿಯನ್ನು ಪಾಶ್ಚಾತ್ಯರು ತಪ್ಪದೆ ಪಾರಾಯಣಮಾಡಿ ನೋಡಬೇಕು.

ಕಾಳಿದಾಸನು ಚಿತ್ರಿಸಿರುವ ಪಾತ್ರಗಳಲ್ಲಿ ಕಣ್ವರ ಹೊರತು ಉಳಿದ ಅತ್ಯುತ್ತಮ ಪಾತ್ರಗಳೆಲ್ಲ ಬ್ರಾಹ್ಮಣರೇ ಅಲ್ಲ. ಕಾಳಿದಾಸನ ಮನಸ್ಸು ಬ್ರಾಹ್ಮಣ್ಯದ ದುರಭಿಮಾನದಿಂದ ಸಂಕುಚಿತವಾಗಿ ಹೋಗಿದ್ದ ಪಕ್ಷದಲ್ಲಿ ಅವನೆಂದಿಗೂ ಹೀಗೆ ಮಾಡುತ್ತಿರಲಿಲ್ಲ. ಕಣ್ವರು ಬ್ರಾಹ್ಮಣ ಪಾತ್ರವೆಂಬುದೇನೋ ನಿಜ. ಆದರೂ, ಪಾತ್ರ ರಚನೆಯಲ್ಲಿ ಕಾಳಿದಾಸನು ಎಷ್ಟು ಕೌಶಲವನ್ನು ತೋರಿಸಿದ್ದಾನೆ! ಕಣ್ವರು ಮೊದಲೇ ತಪೋಧನರು. ಅವರ ಮೇಲೆ ಕುಲಪತಿಗಳು. ಎಂದರೆ, ಅವರ ಆಶ್ರಮದಲ್ಲಿ ಹತ್ತುಸಾವಿರ ಮಂದಿಗಳಿಗೆ ಕಡಮೆಯಿಲ್ಲದೆ ವಿದ್ಯಾರ್ಥಿಗಳಿಗೆ ವ್ಯಾಸಂಗವು ನಡೆಯುತ್ತಿದ್ದಿತು. ಅವರ ಆಶ್ರಮವು ಒಂದು ವಿಶ್ವವಿದ್ಯಾನಿಲಯವೇ ಆಗಿದ್ದಿತು. ಅಂತು ಜಾತಿಯಲ್ಲಿ ಬ್ರಾಹ್ಮಣರೂ, ವೃತ್ತಿಯಲ್ಲಿ ಕುಲಪತಿಗಳೂ ಆದ್ದು ಅವರ ಮನಸ್ಸು ಸಂಕುಚಿತ ಸ್ವಭಾವವನ್ನೇ ಅರಿಯದು. ಅವರ ಸಹಾನುಭೂತಿಯಾದರೂ ಎಷ್ಟು ಮಟ್ಟಿನದು! ಮಾತಾಪಿತೃಗಳಿಂದಲೇ ಪರಿತ್ಯಜಿಸಲ್ಪಟ್ಟ ಶಕುಂತಲೆಯನ್ನು ಅವರು ಪುತ್ರಿಯಂತೆ ಸಾಕುತ್ತಾರೆ. ಅವಳು ಕ್ಷತ್ರಿಯ ಕನ್ಯೆಯೆಂಬುದನ್ನೂ ನಾವು ಗಮನಿಸಿದರೆ,

ಬ್ರಾಹ್ಮಣ ವರ್ಣದವರಿಗೂ ಇತರ ವರ್ಣದವರಿಗೂ ಏರ್ಪಟ್ಟಿದ್ದ ಸಾಮರಸ್ಯ ವಿದ್ಯತೆಂಬುದು ಗೊತ್ತಾಗುತ್ತದೆ. ಕಣ್ವರು ವೇದಾಭ್ಯಾಸ ಜಡರಾಗಿ ಜಗತ್ಕಲ್ಯಾಣಕ್ಕೆ ಗಮನಕೊಡದೆ, ಜೀವನದಲ್ಲಿ ಆಸಕ್ತಿಯನ್ನಿಡದೆ ಇದ್ದವರಲ್ಲ. ಸಾವಿರಾರು ಮಂದಿ ವಿದ್ಯಾರ್ಥಿಗಳ ಪೋಷಣೆಯ ಭಾರವನ್ನು ಅವರು ವಹಿಸಿದ್ದುದರಿಂದಲೂ, ಶಕುಂತಲೆಯನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದುದರಿಂದಲೂ ಇದು ವ್ಯಕ್ತಪಡುತ್ತದೆ. ಪ್ರವೃತ್ತಿಮಾರ್ಗವೂ, ನಿವೃತ್ತಿಮಾರ್ಗವೂ ಅವರಲ್ಲಿ ಹದವರಿತು ಸೇರಿದ್ದುದರಿಂದ, ಅವರು ಮಹಾಪುರುಷರೆನ್ನಲು ಯಾವ ಅಡ್ಡಿಯೂ ಇಲ್ಲ. ಕಣ್ವರು ತಮ್ಮ ಸಾಕುಮಗಳಲ್ಲಿ ಇಟ್ಟಿದ್ದ ಅನನ್ಯಪ್ರೇಮ, ಅವರ ಉಚಿತಜ್ಞತೆ, ಅವರ ಸರಳತೆ ಮತ್ತು ಅವರ ಕೋಮಲ ಸ್ವಭಾವ—ಇವುಗಳು ಎಂತಹವರ ಮನಸ್ಸನ್ನೂ ಮುಗ್ಧಗೊಳಿಸುತ್ತವೆ. ಕಣ್ವರಿಗೆ ಸರಿದೂಗುವ ಪಾತ್ರವನ್ನು ಪ್ರಪಂಚದ ಮತ್ತಾವ ನಾಟಕ ಲೇಖಕನು ಸೃಜಿಸಿರುವನೆಂಬುದನ್ನು ಹೇಳುವುದು ಸ್ವಲ್ಪ ತೊಡಕಿನ ಸಂಗತಿಯೇ ಸರಿ. ಕಾಳಿದಾಸನ ಮನಸ್ಸು ಸಂಕುಚಿತವಾಗಿದ್ದ ಪಕ್ಷಕ್ಕೆ ಕಣ್ವರ ಪಾತ್ರವನ್ನು ಸೃಜಿಸುವುದು ಅವನಿಂದ ಸಾಧ್ಯವೇ ಆಗುತ್ತಿರಲಿಲ್ಲ. ಕಣ್ವರು ಶಕುಂತಲೆಯನ್ನು ಪತಿ ಮಂದಿರಕ್ಕೆ ಕಳುಹಿಸುವ ದಿನ ಹೇಳುವ.—

"ಯಾಸ್ಯತ್ಯದ್ಯ ಶಂಕುತಲೇತಿ ಹೃದಯಂ ಸಂಸ್ಪೃಷ್ಟಮುತ್ಕಂಠಯಾ।
ಕಂಠಸ್ತಂಭಿತ ಬಾಷ್ಪವೃತ್ತಿ ಕಲುಷಶ್ಚಿಂತಾ ಜಡಂ ದರ್ಶನಂ ॥
ವೈಕ್ಲಬ್ಯಂ ಮಮ ತಾವದೀದೃಶಮಿದಂ ಸ್ನೇಹಾದರಣ್ಯೌಕಸಃ।
ಪೀಡ್ಯಂತೇ ಗೃಹಿಣಃ ಕಥನ್ನು ತನಯಾ ವಿಶ್ಲೇಷ ದುಃಖೈರ್ನವೈಃ ॥"

ಎಂಬ ಶ್ಲೋಕದ ವಿಷಯದಲ್ಲಿ ಎಷ್ಟು ಹೇಳಿದರೂ ಸ್ವಲ್ಪವೇ ಸರಿ.

ಹಿಂದಿನ ಕಾಲದಲ್ಲಿ ಬ್ರಾಹ್ಮಣ್ಯವು ಸಾಣೆಹಿಡಿದ ವಜ್ರದಂತೆ ತೊಳಗುತ್ತಿದ್ದಿತು. ಸ್ವಾರ್ಥತ್ಯಾಗಕ್ಕೂ, ಪಾರಿಶುದ್ಧ್ಯಕ್ಕೂ, ವಿನೀತಭಾವಕ್ಕೂ, ಸಾತ್ವಿಕ ವರ್ತನೆಗೂ ಅದು ಆದರ್ಶವೆನಿಸಿದ್ದಿತು. 'ವೇಣೀ ಸಂಹಾರ ನಾಟಕ'ದಲ್ಲಿ ಅಶ್ವತ್ಥಾಮನು ತಮ್ಮ ತಂದೆಯ ಸಾರಥಿಯನ್ನು "ಆರ್ಯ" ಎಂದು ಸಂಬೋಧಿಸುವನು. ಭಾಸನು ರಚಿಸಿರುವ ಪ್ರತಿಮಾ ನಾಟಕದಲ್ಲಿ ದಶರಥಚಕ್ರವರ್ತಿಯು ತನ್ನ ಸಾರಥಿಯಾದ ಸುಮಂತ್ರನನ್ನು "ಭ್ರಾತಃ ಸುಮಂತ್ರ" (ಸೋದರನಾದ ಸುಮಂತ್ರ) ಎಂದು ಸಂಬೋಧಿಸುವಂತೆ ಚಿತ್ರಿತವಾಗಿರುವುದು. ನವನಾಗರಿಕರೆಂದು ಹೆಮ್ಮೆಪಡುವ ನಮ್ಮಲ್ಲಿ ಎಷ್ಟು ಮಂದಿಗಳು ಬಂಡಿಗಳನ್ನು ಹೊಡೆಯುವವರನ್ನು ಹೇಗೆ ಸಂಬೋಧಿಸುತ್ತೇವೆ? ತಮ್ಮ ತಂದೆಯ ಸಾರಥಿಯಾದ ಸುಮಂತ್ರನನ್ನು ರಾಮನೂ, ಲಕ್ಷ್ಮಣನೂ, ಭರತನೂ "ತಾತ" ಎಂದು ಸಂಬೋಧಿಸಿದಂತೆ ಭಾಸನು ಪ್ರತಿಮಾ ನಾಟಕದಲ್ಲಿ ಬರೆದಿದ್ದಾನೆ. "ಜ್ಞಾನಿಯಾದ ಮನುಷ್ಯನು ಜಾತಿಯಲ್ಲಿ ದ್ವಿಜನಾಗಿರಲಿ ಅಥವಾ ಚಂಡಾಲನಾಗಿರಲಿ, ಅವನು ನನ್ನ ಗುರುವೆಂದು ಭಾವಿಸಿರುವೆನು" ಎಂದು ಅರ್ಥವಾಗುವಂತೆ ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರು "ಚಂಡಾಲೋಸ್ತು ದ್ವಿಜೋಸ್ತು

ಪಾ ಮಮ ಗುರುರ್ಜೀವಿತಾ ಮಮ'' ಎಂದು ಅಪ್ಪಣೆಕೊಡಿಸಿದ್ದಾರೆ. ಚಂಡಾಲ ಸ್ತ್ರೀಯು ಗಿಳಿಯೊಡನೆ ರಾಜಸಭೆಗೆ ಹೋಗಿ ಬಂದುದನ್ನು ಬಾಣಭಟ್ಟನು ತನ್ನ 'ಕಾದಂಬರಿ'ಯಲ್ಲಿ ವರ್ಣಿಸಿದ್ದಾನೆ. ಕಾಳಿದಾಸನು 'ಕುಮಾರಸಂಭವ'ಕಾವ್ಯದಲ್ಲಿ ಉಮಾದೇವಿಯರ ತಪಸ್ಸನ್ನು ವರ್ಣಿಸುತ್ತ—

''ಕೃತಾಭಿಷೇಕಾಂ ಹುತಜಾತವೇದಸಂ ತ್ವಗುತ್ತರಾಸಂಗವತೀಮಧೀತಿನೀಂ।
ದಿದೃಕ್ಷವಸ್ತಾಂ ಋಷಯೋಽಭ್ಯುಪಾಗಮನ್ನ ಧರ್ಮವೃದ್ಧೇಷು ವಯಸ್ಸಮೀಕ್ಷ್ಯತೇ ॥

ಎಂಬುದಾಗಿ ಹೇಳಿದ್ದಾನೆ. ವಯೋವೃದ್ಧರಾದ ಮತ್ತು ಬ್ರಾಹ್ಮಣರಾದ ಋಷಿಗಳು ಬಾಲೆಯಾದ ಮತ್ತು ಕ್ಷತ್ರಿಯ ವಂಶೋದ್ಭವಳಾದ ಉಮಾದೇವಿಯ ದರ್ಶನಾಕಾಂಕ್ಷಿತರಾಗಿ ಬಂದರೆಂದೂ, ಧರ್ಮವೃದ್ಧರ ವಯಸ್ಸು ಪ್ರಾಧಾನ್ಯವಲ್ಲವೆಂದೂ ವರ್ಣಿಸುವುದು ಸಂಕುಚಿತ ಮನೋವೃತ್ತಿಯವನಿಗೆ ಸಾಧ್ಯವೆ? 'ರಷ್ಯ ಹಿಂದು' ಎಂಬ ಗ್ರಂಥವನ್ನು ಬರೆದಾತನು ಹಿಂದುಗಳ ವಿಗ್ರಹಾರಾಧನೆಯನ್ನು ಆಕ್ಷೇಪಿಸಿ ''ಕಾಯ್ಕು ಪೂಜೀ ಪತ್ತರ್ ತುಮನೆ'' (ನೀವು ಕಲ್ಲುಗಳನ್ನೇಕೆ ಪೂಜಿಸುತ್ತೀರಿ?) ಎಂದು ಕೇಳಿರುವನಂತೆ. ಅವನ ಕಾಲಕ್ಕಿಂತ ಎಷ್ಟೋ ಶತಮಾನಗಳಿಗೆ ಮೊದಲೇ—

''ನ ಕಾಷ್ಠೇ ವಿದ್ಯತೇ ದೇವೋ ನ ಪಾಷಾಣೇ ನ ಮೃಣ್ಮಯೇ।''

ಎಂಬುದಾಗಿಯೂ ಮತ್ತು

''ಸಂದರ್ಶ್ಯಾಥ ಶಿಲಾಂ ಶಿಲಾಮಯುಗ್ಮಹೇ ಸಾಕ್ಷಾದಯಂ ಶ್ರೀಪತಿ
ರ್ಭಕ್ತೇಭ್ಯೋ ವಿವಿಧಾನ್ವಯಚ್ಛತಿ ವರಾನ್ಸಂಸೇವ್ಯಮಾನಸ್ತ್ವಿತಿ।
ಉಕ್ತ್ವಾಂ ದೇವಲಕಸ್ಯ ವಾಚಮಧಿಕಂ ವಿಶ್ವಸ್ಯ ಸಂಸೇವತೇ ॥

ಶ್ರುತೇರಹೋ ತತ್ತ್ವಮಸೀತಿ ವಾಕ್ಯಂ ನ ವಿಶ್ವಸಂತ್ಯದ್ಭುತಮೇತದೇವ ।''

ಎಂದೂ ನಮ್ಮವರು ಹೇಳಿಯೇ ಇದ್ದಾರೆ. ಹೀಗೆಂದಮಾತ್ರವೇ ವಿಗ್ರಹಾರಾಧನೆಯು ತಪ್ಪೆಂದು ನಾನು ವಾದಿಸುತ್ತಿಲ್ಲ. ವಿಗ್ರಹಗಳೇ ದೇವರೆಂದು ನಮ್ಮವರೂ ನಂಬಿರಲಿಲ್ಲವೆಂಬುದನ್ನೂ, ಅವು ಕೇವಲ ಲಾಂಛನಪ್ರಾಯವಾದವುಗಳೆಂಬುದನ್ನು ಅವರೂ ಅರಿತಿದ್ದರೆಂಬುದನ್ನೂ ತೋರ್ಪಡಿಸುವುದಕ್ಕಾಗಿ ಇವೆರಡು ಶ್ಲೋಕಗಳನ್ನೂ ತಿಳಿಸಬೇಕಾಯಿತು.

ಸಂಸ್ಕೃತ ಸಾಹಿತ್ಯದಲ್ಲೆಲ್ಲ ಎಲ್ಲಿ ನೋಡಿದರೂ ಒಂದು ಉದಾತ್ತ ತತ್ತ್ವವು ನೆಲೆಗೊಂಡಿದೆ. ಅಣುರೇಣು ತೃಣ ಕಾಷ್ಠಪರ್ಯಂತವಾಗಿ ಸಮಸ್ತ ವಸ್ತುಗಳಲ್ಲಿಯೂ ಪರಮಾತ್ಮನು ವ್ಯಾಪಿಸಿ ಪ್ರಕೃತಿಗೆ ಅವನೇ ಅಧಿಷ್ಠಾತೃವಾಗಿ ನೆಲೆಗೊಂಡಿರುವನೆಂಬುದೇ ಆ ಉದಾತ್ತ ತತ್ತ್ವ. ಕಾಳಿದಾಸನೂ ಅದೇ ತತ್ತ್ವವನ್ನರಿತು, ಮೃದು ಮಧುರವಾಗಿ ಅದನ್ನೇ ಕುರಿತು ಗಾನಮಾಡಿದ್ದಾನೆ. ಆರ್ಯಮತದ ಅಭಿಮಾನದಿಂದ ಅವನ ಅಂತಃಕರಣವು ಮತ್ತಷ್ಟು ಪ್ರದೀಪ್ತವಾಗಿ ಉಜ್ಜ್ವಲತೆಯಿಂದ ರಂಜಿಸಿತೇ ಹೊರತು, ಯಾವ ಭಾವದಿಂದ ಎಷ್ಟೇ ಸೂಕ್ಷ್ಮವಾಗಿ

ಪರಿಶೀಲಿಸಿದರೂ ಅವನ ಅಂತಃಕರಣವು ಅವರ ಪಡೆಯಿಂದ ಮಲಿನವಾದಂತೆ ಬಿಂಬಿತವಾಗಿಯೂ ಕಂಡುಬರುವುದಿಲ್ಲ. ಅವನು ಸಂಕುಚಿತ ಸ್ವಭಾವದವನಾಗಿಯೂ, ಇತರರ ಕಷ್ಟದಲ್ಲಿ ಅನುತಾಪರಹಿತನಾಗಿಯೂ ಇರಲೇ ಇಲ್ಲವೆಂದು ಕೃತಿಯಿಂದ ಹೇಳಬಹುದಾಗಿದೆ. ಅವನಲ್ಲಿ ಆ ವಿಧವಾದ ಹೇಯ ಗುಣಗಳಿದ್ದಲ್ಲಿ ಅವನೆಂದಿಗೂ ಪ್ರಪಂಚದಲ್ಲೆಲ್ಲ ಅತ್ಯಂತ ಶ್ರೇಷ್ಠರಾದ ಕವಿಪುಂಗವರ ಸಮಪಙ್ಕ್ತಿಗೆ ಯೋಗ್ಯನೆನಿಸುತ್ತಲೇ ಇರಲಿಲ್ಲ; ಅವನು ಯೋಗ್ಯನೆನಿಸಬೇಕೆಂದು ನಾವು ಬಯಸುತ್ತಲೂ ಇರಲಿಲ್ಲ. ಉದಾರ ಹೃದಯರಲ್ಲಿ ಅಪ್ರತಿಮರೆನಿಸಿದವರಲ್ಲೊಬ್ಬನೆನಿಸಿ, ಭಾರತವರ್ಷದ ಜ್ಯೋತಿಃಪಿಂಡಗಳ ಗುಂಪಿಗೆ ಸೇರಿರುವ ಮಹಾನುಭಾವನಾದ ಈ ಮಹಾ ಕವಿಯು ನಮ್ಮ ದೇಶದಲ್ಲಿ ಅವತರಿಸುವಂತೆ ಭಗವಂತನು ಅನುಗ್ರಹಿಸಿದುದೇ ನಮ್ಮ ಪರಮ ಸೌಭಾಗ್ಯ, ಜಗದೀಶ್ವರ! ಭರತಭೂಮಿಯ ಮೇಲೆ ನಿನ್ನ ಕರುಣೆಯು ಎಂದೆಂದಿಗೂ ಇದೇ ರೀತಿಯಲ್ಲಿರಲಿ!

ಸಿ. ಕೆ. ವೆಂಕಟರಾಮಯ್ಯ

ಉತ್ತರ ರಾಮ ಚರಿತ ನಾಟಕ ಪ್ರಶಂಸೆ

ಪುನರಿದಮಯಂ ದೇವೋ ರಾಮಃ ಸ್ವಯಂ ವನಮಾಗತಃ।

'ಸಂಸ್ಕೃತ ಭಾಷೆಯಲ್ಲಿ ವಿಶಿಷ್ಟ ಬುದ್ಧಿಯುಳ್ಳವನಾದರೂ ಭಾಷಾಂತರದಲ್ಲಿ ನನಗೆ ಪ್ರೀತಿಯುಂಟು' ಎಂದು ಹೇಳುವಲ್ಲಿ, 'ಕಾವ್ಯ ವಿಷಯದಲ್ಲಿ' ಎಂಬ ಶಬ್ದವನ್ನು ಸಂಸ್ಕೃತಕ್ಕೆ ಬದಲಾಗಿ ಸೇರಿಸಿ ನಾವೀಗ ಹೇಳುತ್ತಿರುವೆವು. ಭರತಖಂಡದವರ ಶಾಸ್ತ್ರೀಯ ಭಾಷೆಯೆಂದರೆ ಸಂಸ್ಕೃತವೇ ಆಗಿರುವದರಿಂದ ಅದು ನಮಗೆ ಪೂಜ್ಯವಾಗಿರುವದು. ಸಂಸ್ಕೃತವಷ್ಟು ಅತಿಸುಂದರವೂ ಸರ್ವಾಂಗ ಪೂರ್ಣವೂ ಆದ ಮಾತು ಈ ಲೋಕದಲ್ಲಿ ಮತ್ತೊಂದಿರಲಿಕ್ಕಿಲ್ಲವೆಂದರೆ ತಪ್ಪಾಗದು. ಸಾಮಾಸಿಕ ಶಬ್ದಗಳ ಮನೋಹಾರಿತ್ವವು ಅದರಲ್ಲಿಯಷ್ಟು ಮತ್ತಾವ ಭಾಷೆಗೂ ಬರಲಿಕ್ಕಿಲ್ಲ! ಭಾರತ ವಾಸಿಗಳು ಸಂಸ್ಕೃತ ಭಾಷೆಯನ್ನು ಅಗತ್ಯವಾಗಿ ಅಭ್ಯಸಿಸಬೇಕಾಗಿರುವದು. ಕಾವ್ಯಗಳ ಮಾತಿದು ಮೊದಲಿನ ಮೆಟ್ಟಲು, ಶಾಸ್ತ್ರ ಗ್ರಂಥಗಳು ಮುಂದಿನವು. ಮಹಾ ಕವಿಯಾದ ಭವಭೂತಿಯ ಕೆಲವು ವಿಚಾರಗಳನ್ನಿಲ್ಲಿ ಕಾಳಿದಾಸನ ಮಾತಿನ ತುಲನೆಯೊಡನೆ ಕನ್ನಡಿಗರ ಮನೋರಂಜನಾರ್ಥವಾಗಿ ಸೂಚಿಸುತ್ತಿರುವೆವು.

ಜೈನ ಬೌದ್ಧರ ಸಂಸರ್ಗದಿಂದ ಬಂದಿರುವ ಮೂರ್ತಿ ಪೂಜೆಯ ಯೋಜನೆಯಲ್ಲಿ ವಸ್ತು ಜಾತದ ಸರ್ಗ ಸ್ಥಿತಿ ಲಯ ಕಾರಣಗಳನ್ನು ನೋಡಿ ಕಲ್ಪಿಸಿದ ಬ್ರಹ್ಮ ವಿಷ್ಣು ಮಹೇಶರೆಂಬ ದೇವತೆಗಳು ಪುರಾಣಿಕರಿಂದ ಪುರಸ್ಕೃತವಾಗಿರುವವು. ವಿಷ್ಣುವಿನ ಅವತಾರಗಳಾದ ರಾಮ ಕೃಷ್ಣರೆಂದು ಭಾವಿಸಿದ ಈ ದೇವತೆಗಳು ನಮ್ಮ ಹೃದಯದಲ್ಲಿ ಮನೆಮಾಡಿಕೊಂಡಿರುವವು. ಅಂತಹ ಉದಾರ ಚರಿತರಾದ ಮಹಾ ಪುರುಷರ ಚರಿತ್ರಗಳನ್ನು ನಮ್ಮ ಕವಿಗಳು ಸ್ವೀಕರಿಸಿರುವರು. 'ಪೂರ್ವದವರಿಂದ ತುಳಿಯಲ್ಪಟ್ಟಿರುವ ಮಾರ್ಗದಲ್ಲಿಯು ರಾಮ ಚರಿತವೆಂದೆನಬೇಡಿ; ಲೋಕದಲ್ಲಿ ಅಂತಹ ಮಹಾ ಪುರುಷನು ಮತ್ತೊಬ್ಬನುಂಟೇ?' ಎಂದು ಮುರಾರಿ ಕವಿಯು ಕೇಳುತ್ತಿರುವನು! ಆ ದೃಷ್ಟಿಯಲ್ಲಿ ರಾಮ ಚರಿತವು ಅತ್ಯಂತ ಹೃದಯಂಗಮವಾಗಿರುವದು.

ಕಾವ್ಯ ವಾಙ್ಮಯದಲ್ಲಿ ವಾಲ್ಮೀಕಿ, ಕಾಳಿದಾಸ, ಭವಭೂತಿಗಳು ಅತಿಶ್ರೇಷ್ಠರಾಗಿರುವರು. ಕಾಳಿದಾಸನಲ್ಲಿ ಪಂಪನ ಗಭೀರತೆಯೂ ನಾಗಚಂದ್ರನ ದಿವ್ಯ ಕವಿತ್ವವೂ ನೇಮಿಚಂದ್ರನ ಅಪ್ರತಿಮ ಪ್ರತಿಭೆಯೂ ನಮಗೆ ಕಾಣಬಹುದು. ಭವಭೂತಿಯು—

ಯಂ ಬ್ರಹ್ಮಾಣಮಿಯಂ ದೇವೀ ವಾಗ್ವಶ್ಯೇವಾನ್ವವರ್ತತ।
ಉತ್ತರಂ ರಾಮ ಚರಿತಂ ತತ್ಪ್ರಣೀತಂ ಪ್ರಯೋಕ್ಷ್ಯತೇ॥ (ಉ. ರಾ. ಚ. ೧, ೨)

ಎಂದು ಹೇಳಿರುವದನ್ನು ಲಕ್ಷಿಸಿದಲ್ಲಿ, ಕವಿತಾ ಸಾಮ್ರಾಜ್ಯಾಧಿಪತಿಯಾದ ತನಗೆ ಸರಸ್ವತಿಯು ಮಾದೇವಿಯೆಂದು ಕವಿಚಕ್ರವರ್ತಿ ರನ್ನನು ಹೇಳುವದು ನೆನಪಿಗೆ ಬರಬಹುದು. ಕರುಣದಲ್ಲಿ ಭವಭೂತಿಯೂ ವೀರದಲ್ಲಿ ರನ್ನನೂ ಹೇಗೋ ಹಾಗೆ ಕಾಳಿದಾಸ ಪಂಪರು ಸರ್ವಾತಿಶಾಯಿ ದಿವ್ಯ ಪ್ರತಿಭೆಯಲ್ಲಿ ಅದ್ವಿತೀಯರಾಗಿರುವರು. ಇಂತು ಕನ್ನಡಿಗರಿಗೆ ವಂದ್ಯರಾದ ಪಂಪ ರನ್ನ ಮಹಾಕವಿ ಸದೃಶರಾದ ಕಾಳಿದಾಸ ಭವಭೂತಿಗಳ ಉತ್ತರ ರಾಮ ಕಥೆಯು ಕುತೂಹಲತೆಯನ್ನೂ ಸ್ವರ್ಗೀಯವಾದ ಕಾವ್ಯಾನಂದವನ್ನೂ ಮನಃಶುದ್ಧಿಯನ್ನೂ ಉಂಟುಮಾಡುತ್ತಿರುವದು.

ಪಂಪ ಭಾರತ ಗದಾ ಯುದ್ಧಗಳ ತುಲನೆಯಂತೆಯೇ ಇಲ್ಲಿಯಾದರೂ ರಘುವಂಶೋತ್ತರ ರಾಮಚರಿತಗಳ ಸ್ಥಿತಿಯಿರುವದು. ಕ್ರಿಸ್ತ ಪೂರ್ವದ ಒಂದನೆಯ ಶತಮಾನದಿಂದ ಕ್ರಿಸ್ತ ಶಕದ ೫ನೆಯ ಶತಮಾನದವರೆಗಿನ ಮಧ್ಯಾಂತರದಲ್ಲಿ ಕಾಲಿದಾಸನೂ ಕ್ರಿಸ್ತ ಶಕದ ೮ನೆಯ ಶತಮಾನದಲ್ಲಿ ಭವಭೂತಿಯೂ ಇದ್ದರೆಂದು ಬಲ್ಲವರ ಅಭಿಪ್ರಾಯವಾಗಿರುವದು. ರಘುವಂಶದ ೧೪ನೆಯ ಸರ್ಗದ ಮಾತುಗಳನ್ನು ಸ್ವೀಕರಿಸಿ ಭವಭೂತಿಯು ತನ್ನ ನಾಟಕವನ್ನು ರಚಿಸಿರುವನು. ಭವಭೂತಿಯ ಒಂದು ವಿಶೇಷವನ್ನು ಹೇಳಬಹುದು. ಮನುಷ್ಯನ ಹೃದ್ಗತವನ್ನು ಚೆಂದವಾಗಿ ಅವಲೋಕಿಸಿದ ಕಾಳಿದಾಸನ ಶಾಕುಂತಲವು ಅಪ್ರತಿಮವೆಂಬ ಮಾತು ಸರ್ವಮಾನ್ಯವೇ ಆಗಿರುವದು. ಹೀಗಿದ್ದರೂ ಅದರಲ್ಲಿಯ ಕಥಾನಾಯಕನ ಮೋಹಕವಾದ ತೊದಲು ಮಾತುಗಳಿಗಿಂತ ಭವಭೂತಿಯ ನಾಟಕದ ರಾಮನ ಉತ್ತರ ಚರಿತವು ಅತ್ಯಗಾಧವೂ ದಿವ್ಯ ಸಂತೋಷವನ್ನುಂಟುಮಾಡುವದೂ ಆಗಿರುವದು. ಜೊಲ್ಲು ಸುರಿಸುತ್ತ ನಡೆವ ಮಗುವಿನ ತೊದಲು ಮಾತುಗಳು ಅತ್ಯಂತ ಹೃದಯಂಗಮವಾದರೂ ಜ್ಞಾನ ವಯೋವೃದ್ಧರಾದವರ ಮಾತುಗಳಲ್ಲಿ ವಿಶೇಷ ತಾತ್ಪರ್ಯವಿರುವದೆಂಬುದನ್ನು ರಸಿಕರು ಒಪ್ಪುವರು. ರಾಜಾಶ್ರಯ ರಹಿತನಾದ ಭವಭೂತಿ ಮಹಾಕವಿಯು ಊರೂರುಗಳ ದೇವತೆಗಳ ಉತ್ಸವಗಳಲ್ಲಿ ತನ್ನ ನಾಟಕಗಳನ್ನಾಡಿಸುತ್ತ, 'ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ' (ಮಾಲತೀಮಾಧವ ೧-೮) ಹೀಗೆಂದು ರಸಿಕರ ದಾರಿ ನೋಡುತ್ತ ನಿಂತಿರುವನು. ನಿರ್ಧನನಾಗಿದ್ದರೂ ಉದಾತ್ತ ಗಂಭೀರ ಚರಿತನು. ಅವನಂತೆ ಅವನ ನಾಟಕಗಳಾದರೂ ಉದಾರ ಚರಿತ ಸಂಪನ್ನವೇ ಇದ್ದು ಉತ್ತರ ರಾಮ ಚರಿತ್ರದ ಅಂಕಗಳಲ್ಲಿ ವಿಶೇಷ ಪ್ರಶಾಂತವಾಗಿರುವದು. ಲೋಕದಲ್ಲಿ ಕರುಣರಸ ಒಂದೇ ಎಲ್ಲರಿಗೂ ಎಲ್ಲ ಸಮಯಗಳಲ್ಲಿಯೂ ಆನಂದ ದಾಯಕವು. ಅದೇ ಆಶ್ರಯ ವಿಶೇಷದಿಂದ ಬೇರೆ ಬೇರೆ ರೂಪಗಳನ್ನು ಧರಿಸುವದು (ಉ. ರಾ. ಚ. ೩-೪೭) ಎಂದು ಕವಿಯು ಹೇಳುವದು ನಿಜವೇ ಆಗಿರುವದು. ಶೃಂಗಾರಕ್ಕಿಂತ ಹೆಚ್ಚು ಚಿರಸ್ಥಾಯಿಯಾಗುವದು ಕರುಣವೇ ಸರಿ. ಶೃಂಗಾರವಾದರೂ ನಿರ್ದಿಷ್ಟ ಕಾಲದಲ್ಲಿಯೇ ಸ್ಫುರಿಸುವದು.

ಭವಭೂತಿಯ ಈ ವಿಶೇಷವು ಅತ್ಯಂತ ಸ್ತೋತ್ರಾರ್ಹವಾದರೂ ಸಾಕಲ್ಯ ದೃಷ್ಟಿಯಿಂದ ಶ್ರೇಷ್ಠ ಕವಿಯಾಗಿರುವ ಕಾಲಿದಾಸನ ಪ್ರಚಂಡ ಕವಿತ್ವವು ಅದರಿಂದ ಮಸುಕಾಗಲಾರದು. ಸಂಸ್ಕೃತದಲ್ಲಿ ಪಂಚ ಮಹಾ ಕಾವ್ಯಗಳೆಂದು ಖ್ಯಾತವಾದವು ಗಳಲ್ಲಿ ಅತನ ರಘುವಂಶವು ಅನೇಕ ದೃಷ್ಟಿಗಳಿಂದ ಮಹತ್ವದ್ದಾಗಿರುವದು. ಶೃಂಗಾರದ ಅಂಶವೇನೂ ಇಲ್ಲದ ಉತ್ತಮೋತ್ತಮ ಚಾರಿತ್ರ್ಯಮಯವಾದ ದ್ವಿತೀಯ ಸರ್ಗವು, ಅನುಷ್ಟುಭ ವೃತ್ತದಲ್ಲಿಯೇ ಕವಿತ್ವ ಸೀಮೆಯನ್ನು ಮೀರಿದ ೧—೪ನೆಯ ಸರ್ಗಗಳು, ಸ್ವಯಂವರ ಪ್ರಕರಣದ ಅತಿಸುಂದರವಾದ ಆರನೆಯ ಸರ್ಗವು, ಭಿನ್ನ ಭಿನ್ನ ವರ್ಣನೆಗಳ ೧೮ನೆಯ ವಂಶಾನುಕ್ರಮವು ಇವೆಲ್ಲ ಅತ್ಯಂತ ಆಕರ್ಷಕವಾಗಿರುವವು. ಮಹಾರಾಜ ಮಹಾರಾಣಿಯವರು ಋಷ್ಯಾಶ್ರಮಾಭಿಮುಖರಾದುದು, ಋಷ್ಯಾಶ್ರಮ, ರಘುವಿನ ದಿಗ್ವಿಜಯ, ಅತನು ಸಮಾಪ್ತ ವಿದ್ಯನಾದ ಋಷಿಕುಮಾರನನ್ನು ತನ್ನ ಔದಾರ್ಯದಿಂದ ಸಂತೋಷಗೊಳಿಸುವದು, ಅಜನ ವಿಲಾಪ, ಹಾಳುಬಿದ್ದ ಅಯೋಧ್ಯಾಧಿದೇವತೆಯು ತನ್ನ ಶೋಚನೀಯ ಸ್ವರೂಪವನ್ನು ಕುಶಮಹಾರಾಜನಿಗೆ ಹೇಳುವದು—ಇವೇ ಮೊದಲಾದ ಸಂಗತಿ ಗಳು ಅದ್ಭುತ ಪ್ರತಿಭಾ ಮಂಡಿತವಾಗಿರುವವು.

ಶಾಕುಂತಲವು ಅಪ್ರತಿಮ ನಾಟಕವು, ಮೇಘದೂತವು ಅದ್ಭುತ ಕಲ್ಪನಾ ತರಂಗ ದೃಶ್ಯವು, ಕುಮಾರಸಂಭವವು ಮಹಾ ಕಾವ್ಯವು. ಹೀಗಿದ್ದರೂ ರಘು ವಂಶದ ಮಹತ್ವವು ಕಡಿಮೆಯೆಂದು ಹೇಳಲಾಗದು. ಒಂದು ದೃಷ್ಟಿಯಿಂದ ಅವೆಲ್ಲವುಗಳಿಗಿಂತ ಇದೇ ವಿಶೇಷವಾಗಿರುವದು. ಕುಮಾರಸಂಭವದ ಮದುವೆಯ ವರ್ಣನೆಯು ಆಕರ್ಷಕವಾಗಿದ್ದರೂ '......ಅಥೋ ವಿವೇಶ। ನಾರೀ ಮನಾಂಸೀವ ಚತುಷ್ಕಮಂತಃ' ಎಂದು ವರನ ಆಗಮನವನ್ನು ಕುರಿತು (ರ. ವಂ. ೭—೧೭) ಹೇಳಿದ ರಘುವಂಶದ ಮಾತೇ ವಿಶೇಷ ಸಮರ್ಪಕವಾಗಿರುವದು. ಕಾಲಿದಾಸ ನಲ್ಲಿ ಯತಿಭಂಗವು ಬಹುಶಃ ಎಲ್ಲಿಯೂ ಬರುವದಿಲ್ಲ. ಅರ್ಥಾಲಂಕಾರಗಳಾದರೂ ಎಷ್ಟೋ ರಮ್ಯವಾಗಿ ಅತನ ಇದೇ ಕೃತಿಯಲ್ಲಿ ಬರುವವು:—

ಅಥಾಂಗದಾಶ್ಲಿಷ್ಟಭುಜಂ ಭುಜಿಷ್ಯಾ।
ಹೇಮಾಂಗದಂ ನಾಮ ಕಲಿಂಗ ನಾಥಂ ॥
ಆಸೇದುಷೀಂ ಸಾಧಿತ ಶತ್ರುಪಕ್ಷಂ।
ಬಾಲಾಮಬಾಲೇಂದು ಮುಖೀಂ ಬಭಾಷೇ ॥ (೬—೫೩.)

ಉಪಮೆಗಳ ವಿಷಯದಲ್ಲಿ ಕವಿಯು ಸುಪ್ರಸಿದ್ಧನು. ಇಲ್ಲಿ ಒಂದನ್ನೇ ಉದ್ಧರಿ ಸುತ್ತೇವೆ:—

ಪ್ರತ್ಯಗ್ರಹೀತ್ಪಾರ್ಥಿವ ವಾಹಿನೀಂ ತಾಂ।
ಭಾಗೀರಥೀಂ ಶೋಣ ಇವೋತ್ತರಂಗಃ॥ (೭—೩೬.)

ಆರನೆಯ ಸರ್ಗದ ಸ್ವಯಂವರದಲ್ಲಿ, ಕಲ್ಲುಸಕ್ಕರೆ ಮಧುಗಳೊಡನೆ ಔಷಧವು ಮಧುರತ್ವ-ರುಚಿಯೂ ಆದಂತೆಯೂ, ಹೊಳೆಯುತ್ತಿರುವ ಹೇಮ

ಸೂತ್ರದಲ್ಲಿ ವೈಡೂರ್ಯ ಮಣಿ ರತ್ನಗಳು ಬರುತ್ತಿರುವಂತೆಯೂ, ಶೃಂಗಾರದ ಸುಪಾತ್ರಗಳಲ್ಲಿ ಸೇರಿದ ಚಾರಿತ್ರ್ಯ ಸುಂದರವಾದ ಮಹಾರಾಜರ ವರ್ಣನೆಗಳು ಬಂದಿರುವವು :—ಈತನು ಪ್ರಜಾರಂಜನೆಯಿಂದ ರಾಜನೆಂದು ಕರೆಯಿಸಿಕೊಳ್ಳುವನು; (೨೧) ಸ್ವಭಾವತಃ ಕೂಡಿಯಿರಲಾರದ ಲಕ್ಷ್ಮೀ ಸರಸ್ವತಿಯರು ಈತನಲ್ಲಿ ಸ್ನೇಹವಾಗಿರುವರು; (೨೯) ನವೋದಿತನಾದ ಬಿದಿಗೆಯ ಚಂದ್ರನಂತೆ ಸುತ್ತೊಬ್ಬಿಸು; (೩೧) ಪ್ರಜೆಗಳಲ್ಲಿ ಯಾರಾದರೂ ಅಕಾರ್ಯವನ್ನು ಮನಸ್ಸಿನಲ್ಲಿ ಯೋಚಿಸಿದೊಡನೆ ಅವರ ಮುಂದೆ ಚಾಪಧರನಾಗಿ ನಿಂತು ಶಿಕ್ಷಕನಾದ ಇವನು ಅವರ ಅವಿನಯವನ್ನು ನಿವಾರಿಸುವನು; (೩೯) ಅಂತಹ ಖ್ಯಾತನಾದ ಕಾರ್ತವೀರ್ಯನ ವಂಶದಲ್ಲಿ ಜನಿಸಿರುವ ಶ್ರುತಸ್ಮೃತ ಸೇವಕನಾದ ಪ್ರತೀಪನು ದ್ರೋಹಿಗಳಾದ ಅನೇಕ ಜನರ ಸಂಸರ್ಗದಿಂದ ಪ್ರಾಪ್ತವಾದ ಚಂಚಲತೆಯ ದೋಷವನ್ನು ಲಕ್ಷ್ಮಿಯಲ್ಲಿಂದ ತನ್ನ ದೋಷರಾಹಿತ್ಯತೆಯ ಮೂಲಕ ತೆಗೆದುಹಾಕಿದನು; (೪೧) ಶೂರ ಸೇನಾಧಿಪತಿ ಸುಷೇಣ ಮಹಾರಾಜನ ಕೀರ್ತಿಯು ದಿಗಂತದಲ್ಲಿಯೂ ಲೋಕಾಂತರದಲ್ಲಿಯೂ ವ್ಯಾಪಿಸಿರುವದು. ತನ್ನ ಆಚಾರ ಶುದ್ಧತೆಯಿಂದ ತಾಯಿ ತಂದೆಗಳಿಬ್ಬರ ಕುಲಕ್ಕೂ ಈತನು ದೀಪದಂತೆ ಪ್ರಕಾಶಕನು; (೪೪) ಧನುಷ್ಯದ ಹುರಿಯು ಸನ್ನಿಕಾಶತ್ವದಿಂದ ಬರದೂ ಕ್ರೋಡಗಳಿಗೆ ತಗಲಿದ್ದರಿಂದುಂಟಾದ ಕಪ್ಪು ಕಲೆಗಳನ್ನು ಕುರಿತ ಕವಿಯ ಉತ್ಪ್ರೇಕ್ಷೆಯು ಹೃದಯಂಗಮವಾಗಿರುವದು :—

> ಜ್ಯಾಘಾತ ರೇಖೇ ಸುಭುಜೋ ಭುಜಾಭ್ಯಾಂ।
> ಬಿಭರ್ತಿ ಯಶ್ಚಾಪಭೃತಾಂ ಪುರೋಗಃ ॥
> ರಿಪುಶ್ರಿಯಾಂ ಸಾಂಜನ ಬಾಷ್ಪ ಸೇಕೇ।
> ಬಂದೀಕೃತಾನಾಮಿವ ಪದ್ಧತೀ ದ್ವೇ ॥   (೫೫)

ಇಂತು ಕಾಳಿದಾಸನ ರಘುವಂಶದ ಮಹತ್ತ್ವವನ್ನು ಎಷ್ಟು ಹೇಳಿದರೂ ಕಡಿಮೆಯೇ. ರಘುವಂಶದಂತಹ ಕೃತಿಯು ರಘುವಂಶವೇ ಆಗಿರುವದು.

ಕನ್ನಡದಲ್ಲಿ ಪ್ರಖ್ಯಾತವಾಗಿರುವ ಪಂಪ ಭಾರತ ಮಹಾ ಕಾವ್ಯದ ಕೊನೆಯ ಸ್ವಲ್ಪ ಭಾಗದಿಂದ ಕವಿಚಕ್ರವರ್ತಿ ರನ್ನನು ಗದಾ ಯುದ್ಧವನ್ನು ರಚಿಸಿದಂತೆ ರಘುವಂಶ ಮಹಾ ಕಾವ್ಯದ ಕೊನೆಯ ಸರ್ಗದ ಪಾತ್ರಗಳನ್ನು ಭವಭೂತಿಯು ತನ್ನ ನಾಟಕದಲ್ಲಿ ಸ್ವೀಕರಿಸಿರುವನು. ರನ್ನನ ಕೃತಿಯು ನಾಟಕದಂತೆಯೇ ಶೋಭಿಸುತ್ತಿರುವಂತೆಯೇ ಇದೂ ಕೂಡ ಮತ್ತಷ್ಟು ಸಮರ್ಪಕವಾಗುತ್ತಿರುವದು. ರಘುವಂಶದ ಸಾಧಾರಣ ಕಲ್ಪನೆಯು ವಾಚಕರಿಗೆ ಇರಬೇಕೆಂದು ಮೇಲೆ ತದ್ವಿಷಯದಲ್ಲಿ ಒಂದಿಷ್ಟು ಹೇಳಿದ್ದೇನೆ. ನಾಟಕವೆಂದು ಶಾಕುಂತಲವನ್ನೇ ನೋಡಿದಲ್ಲಿ ಅದರಲ್ಲಿಯ ಸುಬದ್ಧತೆಯೂ ಹೃದಯಂಗಮತೆಯೂ ಮನೋಹಾರಿತ್ವವೂ ಅತ್ಯಂತಾಕರ್ಷಕವಾಗಿ ಕಾಣುವವು. ಅದ್ಭುತಮಯವಾದ ಕವಿಯ ವಾಕ್ಯರಚನೆ ಸಮಗಳಲ್ಲಿ ನಾಟಕವನ್ನು ರಂಗಗೊಳಿಸುವನು. ಚತುರ್ಥಾಂಕದಲ್ಲಿ ಕಣ್ವರು

ಮರಿಸದ ರಸಿಕನಿರಲಿಕ್ಕಿಲ್ಲ! ಆ ದೃಷ್ಟಿಯಲ್ಲಿ ಭವಭೂತಿಯ ಕೆಲವು ಪದ್ಯಗಳು ಕ್ಲಿಷ್ಟವೆಂದು ಒಪ್ಪಬೇಕಾಗುವದು. ಶೃಂಗಾರ ಕರುಣಾದಿ ಕೆಲವೊಂದು ಭಾಗದಲ್ಲಿ ಮಾತ್ರ ಆತನು ಕಾಳಿದಾಸನನ್ನು ಮೀರಿಸಿಯೂ ಇರುವನು. ಪ್ರಸ್ತುತ ಕವಿದ್ವಯ ವಿಚಾರದಲ್ಲಿ ಮ. ರಾ.ಗಳಾದ ಪುಣೆಯ ವಿಷ್ಣುಶಾಸ್ತ್ರಿ ಚಿಪಳೂಣಕರರು ಅಭಿಮಾನದಿಂದ ಹೇಳುವದನ್ನಿಲ್ಲಿ ಅನುವದಿಸಬಹುದು:—"ನಾವಿಲ್ಲಿ ಅವತರಣಗಳನ್ನು ಬಹಳವಾಗಿ ಸ್ವೀಕರಿಸಿದೆವೆಂದು ವಾಚಕರಲ್ಲಿ ಕ್ಷಮೆ ಕೇಳಬೇಕಾಗಿಲ್ಲ. ಈ ಪೂರ್ವದಲ್ಲಿ ಆರಿಂದಲೂ ನಮ್ಮ ಈ ಅಮೂಲ್ಯ ವಿದ್ಯಾಭಾಂಡಾರದ ಲೂಟಿ ಮಾಡುವದಾಗಲಿಲ್ಲ. ಒಂದು ಸಮಯದಲ್ಲಿ ಅಮೇರಿಕೆಯ ಮೂಲನಿವಾಸಿಗಳಂತೆ ನಾವು ಗಣನೆಗೆ ಬಾರದವರಂತಾದರೂ—(ದೇವರ ದಯೆಯಿಂದ ಹಾಗಾಗದಿರಲಿ) ಅವು ನಮ್ಮ ವಿಶುದ್ಧ ಕೀರ್ತಿಯನ್ನು ಜಗತ್ಪ್ರಲಯಾವಧಿಯಾಗಿ ನಿಲ್ಲಿಸಬಹುದೋ, ನಮ್ಮ ಭವಿಷ್ಯದುನ್ನತಿಗೆ ಆ ವಿದ್ಯಾಭಾಂಡಾಗಾರವೇ ಮೂಲಕಾರಣವಾದೀತೋ ಅಂತಹ ವಿದ್ಯಾಭಾಂಡಾಗಾರದ ಯಜಮಾನರಾದ ಮಹಾ ಕವಿಗಳ ಕೃತಿಯ ವಿಷಯದಲ್ಲಿ ಕೇವಲ ಅಂಧಪರಂಪರೆಯಿಂದ ಶುಷ್ಕವಾದ ವಿವಾದವನ್ನು ಮಾಡುವದಕ್ಕಿಂತ ಯಥಾರ್ಥ ಚರ್ಚೆಯು ಶ್ರೇಯಸ್ಕರವೇ ಆಗಿರುವದು. ಅದು ಒಂದಿಷ್ಟು ಲಂಬಿಸಿತೆಂದು ಅಡಿಗಡಿಗೆ ಕ್ಷಮಾಪಣೆ ಕೇಳಬೇಕಾಗಿಲ್ಲ."

ಇನ್ನು, ರಘುವಂಶದ ಸೀತಾ ತ್ಯಾಗದ ಕಥೆಯನ್ನು ಸಂಕ್ಷೇಪವಾಗಿ ಬರೆಯುತ್ತೇವೆ.

ರಾಕ್ಷಸ ವಾನರ ಸೇನಾ ಸಮೇತನಾದ ರಾಮನು, ಆನಂದಿತರಾದ ಪುರಜನರು ಜಯ ಜಯಕಾರದಿಂದಲೂ ಪುಷ್ಪವರ್ಷಾಭಿಷವದಿಂದಲೂ ಅಭಿನಂದಿಸುತ್ತಿರುವಲ್ಲಿ ರಾಜಧಾನಿಗೆ ಬಂದನು; (ರ. ವಂ. ೧೪-೧೦) ಲಕ್ಷ್ಮಣ ಶತ್ರುಘ್ನರು ಚಾಮರ ಬೀಸುತ್ತಿರಲು, ಭರತನು ಶ್ವೇತಚ್ಛತ್ರವನ್ನು ಧರಿಸಿರಲು ಚತುರುಪಾಯ ಸಂಘದಂತೆ ಆತನು ಶೋಭಿಸಿದನು; (೧೧) ಅತ್ತೆಯಂದಿರಿಂದ ಅಲಂಕೃತಳಾಗಿ ಸ್ತ್ರೀಯೋಗ್ಯವಾದ ಚಿಕ್ಕ ರಥದಲ್ಲಿ ಬರುತ್ತಿರುವ ರಘುವೀರ ಪತ್ನಿಯನ್ನು ಮೇಲುಪ್ಪರಿಗೆಯ ಗವಾಕ್ಷದಲ್ಲಿದ್ದ ಅಯೋಧ್ಯಾ ನಿವಾಸಿಗಳಾದ ನಾರಿಯರು ನಮಸ್ಕರಿಸಿದರು; (೧೪) ಎಲ್ಲರಿಗೂ ಉತ್ತಮೋತ್ತಮವಾದ ವಸತಿಗಳನ್ನು ಕಲ್ಪಿಸಿ, ತಂದೆಯ ಮಂದಿರಕ್ಕೆ ಕಣ್ಣೀರು ಸುರಿಸುತ್ತ ಹೋಗಿ, (೧೫) 'ಪೂಜ್ಯನಾದ ತಂದೆಯು ಸದ್ಗತಿಗೆ ಹೋದುದು, ಅಮ್ಮ! ನಿನ್ನ ಪುಣ್ಯದಿಂದಲೇ ಸರಿ' ಹೀಗೆ ಹೇಳುತ್ತ ಭರತನಮಾತೆಯ ಲಜ್ಜೆಯನ್ನು ಆತನು ಕಳೆದನು; (೧೬) ಸುಹೃದ್ಗಳೊಡನೆ ಸಲ್ಲಾಪ ಬೆಳೆಯಿಸಿ ಅವರನ್ನು ಕಳುಹಿಸಿರಲು, ಸುಖದಲ್ಲಿ ಬಹುಬೇಗನೆ ಹದಿನೈದು ದಿನಗಳು ಕಳೆದಾಗ ಮಹಾರಾಜನು ವಾನರ ರಾಕ್ಷಸರನ್ನು ಅವರವರ ನಿವಾಸಗಳಿಗೆ ಕಳುಹಿಸಿದನು; (೧೯) ವನ ಗಮನ ಕಾಲದ ಹಿಂದಿನ ಚರಿತವನ್ನು ಸೂಚಿಸುವ ಚಿತ್ರಪಟಗಳುಳ್ಳ ಮನೆಯಲ್ಲಿ ವಿನೋದಪಡುತ್ತಿರಲು; (೨೫) ಗರ್ಭಿಣಿಯಾದ ಸೀತೆಗೆ ಭಾಗೀ

ರಥೀ ತೀರದ ತಪೋವನಕ್ಕೆ ಹೋಗಬೇಕೆಂಬ ಮನೋರಥವಿರುವದನ್ನು ಮಹಾರಾಜನು ಏಕಾಂತದಲ್ಲಿ ತಿಳಿದುಕೊಂಡನು; (೨೮) ಭದ್ರನೆಂಬ ಗೂಢಚಾರನಿಂದ ಲೋಕಾಪವಾದವನ್ನು ಕೇಳಿ ಆತನ ಹೃದಯವು ವಿದೀರ್ಣವಾಯಿತು; (೩೩) ಕ್ಷಣಹೊತ್ತು ದೋಲಾಚಲ ಚಿತ್ತವೃತ್ತಿಯುಳ್ಳವನಾಗಿ; (೩೪) ಸ್ವದೇಹ, ಇಂದ್ರಿಯಾರ್ಥಗಳಿಗಿಂತ ಯಶಸ್ಸೇ ಹೆಚ್ಚಿನದೆಂದು ಸೀತಾ ತ್ಯಾಗ ಮಾಡುವದನ್ನೇ ರಘುವೀರನು ನಿಶ್ಚಯಿಸಿದನು; (೩೫) ತಮ್ಮಂದಿರನ್ನು ಕರೆದು ಅವರಿಗೆ 'ಸೀತೆಯು ನಿಷ್ಕಳಂಕಳು ನನಗೆ ಗೊತ್ತಾದರೂ ಬಲವಾಗಿ ಹರಡುತ್ತಿರುವ ಲೋಕವಾದವು ನನಗೆ ಉಪೇಕ್ಷಣೀಯವಲ್ಲ. ಭೂಛಾಯೆಯಿಂದ ಮುಚ್ಚಲ್ಪಟ್ಟ ನಿರ್ಮಲನಾದ ಚಂದ್ರನನ್ನು ಜನರು ಕಲಂಕಿತನೆನ್ನುವರು; (೪೦) ರಾಕ್ಷಸ ವಧೆಯು ಸುಮ್ಮನೆಯಲ್ಲಿ, ಮುಯ್ಯನ್ನು ತೀರಿಸುವದಕ್ಕಾಗಿ; ತನ್ನನ್ನು ತುಳಿದವನನ್ನು ಸರ್ಪವು ರಕ್ತ ಕುಡಿಯುವುದಕ್ಕಾಗಿ ಕಚ್ಚುವದೇ?' (೪೧) ಹೀಗೆ ಹೇಳಿ ತನ್ನ ನಿಶ್ಚಯವನ್ನು ಸೂಚಿಸಿದನು. ಆರೂ ಆತನ ಆಗ್ರಹದ ಮಾತನ್ನು ಅನುಮೋದಿಸಲು ಅಥವಾ ವಿರೋಧಿಸಲು ಸಮರ್ಥರಾಗಲಿಲ್ಲ; (೪೩) ಗರ್ಭಿಣೀ ಮನೋರಥವನ್ನೇ ಮುಂದೆಮಾಡಿ ಹೇಳಿದ ಗುರುವಿನ ಮಾತಿಗೆ ಪ್ರತ್ಯುತ್ತರಕೊಡದೆ (೪೬) ಲಕ್ಷ್ಮಣನು ಬೆದರದಿರುವ ಕುದುರೆಗಳನ್ನು ಹೂಡಿದ, ಸದ್ದಾಗದ ರಥದಲ್ಲಿ ಅತ್ತಿಗೆಯನ್ನು ಕುಳ್ಳಿರಿಸಿಕೊಂಡು ವನಕ್ಕೆ ಹೊರಟನು; (೪೭) ಮಾರ್ಗ ಮಧ್ಯದಲ್ಲಿ ದುಶ್ಚಿಹ್ನಗಳನ್ನು ಕಂಡ ಸೀತೆಯು ಬಾಡಿದ ಮುಖವುಳ್ಳವಳಾಗಿ ಸಾನುಜನಾದ ರಾಜನಿಗೆ ಶುಭವಾಗಲೆಂದು ಮನಸ್ಸಿನಲ್ಲಿಯೇ ಬಹುವಾಗಿ ಇಚ್ಛಿಸಿದಳು; (೫೦) ಗಂಗೆಯ ಈಚೆಯಲ್ಲಿಯೆ ರಥವನ್ನು ನಿಲ್ಲಿಸಿ ನಾವೆಯಿಂದ ಸೀತೆಯೊಡನೆ ಆಚೆಗೆ ಬಂದು, (೫೨) ರುದ್ಧಕಂಠನಾಗಿ ಅತಿ ಪ್ರಯತ್ನಪೂರ್ವಕವಾಗಿ ಮಾತನಾಡುತ್ತ ಪ್ರಲಯ ಕಾಲದ ಮೇಘವು ಶಿಲಾವರ್ಷ ಮಾಡುವಂತೆ ಲಕ್ಷ್ಮಣನು ಮಹಾರಾಜನ ಶಾಸನವನ್ನು ಆಕೆಗೆ ತಿಳಿಯಪಡಿಸಿದನು; (೫೩) ರಾಮಾನುಜನ ಪ್ರಯತ್ನದಿಂದ ಮೂರ್ಛೆಯನ್ನು ತಿಳಿದೆಚ್ಚತ್ತ ಸೀತೆಗೆ ದುಃಖವನ್ನು ತಿಳಿಯದೆ ಇರುವ ಮೂರ್ಛಾವಸ್ಥೆಗಿಂತ ಎಚ್ಚತ್ತಿರುವದೇ ಹೆಚ್ಚು ಕಷ್ಟಕರವಾಯಿತು; (೫೬) ಸ್ವಾಮಿಗೆ ಅಪ್ರಿಯವನ್ನಾಡದೆ ತನ್ನನ್ನೇ ತಾನು ಆ ಆರ್ಯೆಯು ನಿಂದಿಸಿಕೊಂಡಳು; (೫೭) ಅತ್ತೆಯವರ ಆಶೀರ್ವಾದವು ತನ್ನ ಗರ್ಭದಲ್ಲಿರುವ ಮಗುವಿನ ಮೇಲಿರಲೆಂದು ಸೂಚಿಸಿ ಅವರಿಗೆ ತನ್ನ ನಮಸ್ಕಾರಗಳನ್ನು ಹೇಳಿದಳು; (೬೦) ಪತಿಯನ್ನು ಕುರಿತು ಅವಳು ಹೇಳಿದ್ದೇನೆಂದರೆ—"ಅಗ್ನಿಶುದ್ಧಳಾದವಳನ್ನು ಲೋಕವಾದದಿಂದ ತ್ಯಜಿಸುವ ನಿನ್ನ ಕೆಲಸವಿದು ನಿನ್ನ ವಿವೇಕಕ್ಕೂ ಕುಲಕ್ಕೂ ಉಚಿತವೇ? (೬೧) ಅಥವಾ ನೀನು ಒಳ್ಳೆಯದನ್ನೇ ಮಾಡುವವನು. ನನ್ನ ಕರ್ಮಗತಿಯೇ ಹೀಗಿರುವದು; (೬೨) ಈ ಮೊದಲು ಸಾಪತ್ನ್ಯಳಾದ ಲಕ್ಷ್ಮಿಯನ್ನು ತೊರೆದು ನೀನು ನನ್ನೊಡನೆ ವನಗಮನೋದ್ಯತನಾದೆ. ಈಗ ನಾನು ನಿನ್ನ ಹತ್ತಿರವಿರುವದನ್ನು ಕುಪಿತಳಾದ ಲಕ್ಷ್ಮಿಯು ಸಹಿಸಲಿಲ್ಲ; (೬೩) ನಿನ್ನ ಕೃಪೆಯಿಂದ ರಾಕ್ಷಸರಿಗೆ ಹೆದರಿದ ಅನೇಕ ತಪಸ್ವಿನಿಯರಿಗೆ ಅಭಯವನ್ನು ಕೊಟ್ಟವಳು, ನೀನು

ಪ್ರಕಾಶಿಸುತ್ತಿರುವಲ್ಲಿ ಬಚ್ಚಿರ ಬಾಗಿಲಿಗೆ ಆಶ್ರಯಪದಾರ್ಥವಾಗಿ ಅದೆಂತು ಹೋಗಲಿ? (೬೫) ಅಥವಾ, ನಿನ್ನ ವಿಯೋಗದಲ್ಲಿ ಕಷ್ಟದ ಜೀವವದನ್ನು ತ್ಯಜಿಸುವೆನೆಂದರೆ, ಅದಕ್ಕೆ ಪ್ರತಿಬಂಧಕವಾಗಿ ನಿನ್ನ ತೇಜಸ್ಸು ನನ್ನ ಗರ್ಭದಲ್ಲಿರುವದು; (೬೬) ಪ್ರಸೂತಿಯ ಅನಂತರದಲ್ಲಿ ಸೂರ್ಯನನ್ನು ನೋಡುತ್ತ ಜನ್ಮಾಂತರದಲ್ಲಿಯೂ ನೀನೇ ನನಗೆ ಪತಿಯಾಗಬೇಕೆಂದು ತಪಸ್ಸನ್ನು ಕೈಕೊಳ್ಳುವೆನು; (೬೭) ವರ್ಣಾಶ್ರಮ ಪಾಲನವು ರಾಜನ ಕರ್ತವ್ಯವೆಂದು ಮನುವು ಹೇಳುವನು. ಹೊರಗೆ ಹಾಕಲ್ಪಟ್ಟವಳಾದರೂ ನಾನು ತಪಸ್ವಿನಿಯೊಬ್ಬಳೆಂದು ನೀನು ಭಾವಿಸತಕ್ಕದ್ದು;" (೬೮) ಸೀತೆಯ ಮಾತು ಹೀಗೆ ಮುಗಿದಿರಲು ರಾಮಾನುಜನು ಅವಳ ಅಪ್ಪಣೆ ಕೇಳಿ ಕಣ್ಮರೆಯಾದನು. ಆಗ ಸೀತೆಯು ದುಃಖಾವೇಗದಿಂದ ದೊಡ್ಡದಾದ ಧ್ವನಿಯಿಂದ ರೋದಿಸಿದಳು! (೬೯)

ಸಮಿತ್ತುಗಳನ್ನು ತರಲು ಅರಣ್ಯಕ್ಕೆ ಬಂದ ವಾಲ್ಮೀಕಿಯು ರೋದನ ಸ್ವರವನ್ನು ಕೇಳಿ ಅಲ್ಲಿಗೆ ಬಂದು (೭೦) "ಅಂತರ್ಜ್ಞಾನದಿಂದ ನನಗೆಲ್ಲವೂ ಗೊತ್ತು, ನಿನ್ನ ತಂದೆಯ ಹತ್ತಿರವೇ ಬಂದಿರುವೆ; (೭೧) ಮಹಾ ಪುರುಷನಾದ ರಾಮನಲ್ಲಿ ಈ ವಿಷಯದಲ್ಲಿ ನನಗೆ ಕೋಪವಿರುವದು; (೭೨) ಇತ್ಯಾದಿ ಸಮಾಧಾನೋಕ್ತಿಗಳಿಂದ ಅವಳನ್ನು ಸಾಂತ್ವನಗೊಳಿಸಿ ಕರೆದುಕೊಂಡು ತನ್ನ ಆಶ್ರಮಕ್ಕೆ ಬಂದನು; (೭೩) ಇತ್ತ 'ಪೃಥಿವಿ ಈಗಲಾದರೂ ಅನುತಾಪಪಡುವನೋ?' ಎಂದು ಉತ್ಸುಕನಾದ ಲಕ್ಷ್ಮಣನು ರಾಮನಲ್ಲಿಗೆ ಬಂದು ಸೀತೆಯು ಅಳತೊಡಗಿದವರೆಗಿನ ಆತನ ಆಜ್ಞೆಯನ್ನು ಪಾಲಿಸಿದ ತನ್ನ ಕೆಲಸವನ್ನು ನಿವೇದಿಸಿದನು; (೭೪) ಅದನ್ನು ಕೇಳಿ ಕಣ್ಣೀರು ಸುರಿಸಿದಾಗ ದೇವನು ಹಿಮವರ್ಷ ಮಾಡುವ ಪುಷ್ಯ ಚಂದ್ರನಂತೆ ಕಾಣಿಸಿದನು. ಅಪವಾದ ಭೀತಿಯಿಂದ ಸೀತೆಯನ್ನು ತ್ಯಜಿಸಿದನೇ ಹೊರತು ಆತನು ಮನಸ್ಸಿನಿಂದ ತ್ಯಜಿಸಿದ್ದಿಲ್ಲ; (೭೫) ಬುದ್ಧಿವಂತನಾದುದರಿಂದ ಶೋಕವನ್ನು ನುಂಗಿಕೊಂಡು ಯಥಾಪೂರ್ವವಾಗಿ ತನ್ನ ಕರ್ತವ್ಯಗಳನ್ನು ಮಾಡಲಾರಂಭಿಸಿದನು; (೭೬) ಸಾಧ್ವಿಯಾದ ಒಬ್ಬಳೇ ಪತ್ನಿಯನ್ನಾದರೂ ತ್ಯಜಿಸಿದ ಮಹಾರಾಜನನ್ನು ಅನುಸರಿಸಿ ಲಕ್ಷ್ಮಿಯು ಸಪತ್ನೀರಹಿತನಾಗಿ ಅತಿಸುಖಿನಿಯಾದಳು: (೭೭) ತನ್ನನ್ನು ತ್ಯಜಿಸಿದ ಮೇಲೆ ಇನ್ನೊಬ್ಬಳನ್ನು ಮದುವೆಯಾಗದೆ ಚಿನ್ನದಿಂದ ತನ್ನ ಪ್ರತಿಮೆಯನ್ನು ಮಾಡಿಸಿ ಯಜ್ಞಗಳನ್ನು ಮಾಡುತ್ತಿರುವ ಪತಿಯ ವೃತ್ತವನ್ನು ಕೇಳಿ ಸೀತೆಯು ತನ್ನ ಪರಿತ್ಯಾಗ ದುಃಖವನ್ನು ಬಹಳಷ್ಟು ಸಮಾಧಾನದಿಂದಲೆ ಸಹನಮಾಡಿದಳು. (೭೮)

ಕಾವ್ಯದ ದಾಟಿಯಲ್ಲಿ ವೃತ್ತವಿದು ವಕ್ತೃತ್ವದ ಆವೇಶದಲ್ಲಿಯೇ ಬಂದಿರುವದು. ತದ್ವಾಚನಾವಸರದಲ್ಲಿ ವಾಚಕನು ರುದ್ಧಕಂಠನಾಗುವನು. ಮೂಲ ವಾಚನದಲ್ಲಿಯ ಈ ಅನುಭವವು ಭಾಷಾಂತರದಲ್ಲಿ ಬರುವದು ಶಕ್ಯವಲ್ಲ. ರಘುವಂಶದ ಕಥೆಯು ಮುಂದಿನ ವಿವೇಚನೆಗೆ ಅನುಕೂಲವೆಂದು ಅದನ್ನಿಲ್ಲಿ ಸ್ವಲ್ಪವಾಗಿ ಸ್ವೀಕರಿಸಿದ್ದೇವೆ.

ಪೂರ್ವದವರಿಂದ ನಮ್ಮ ಸಮುತ್ತೀರ್ಣರಾದ ಮುನಿಗಳಲ್ಲಿ ಸೂತ್ರದಂತೆ ನಡೆದ ಕಾಳಿದಾಸನ ಕಾವ್ಯ ಮಾರ್ಗಕ್ಕೂ ಭವಭೂತಿಯ ನಾಟಕದ ದಾರಿಗೂ ಹೆಚ್ಚು ಕಡಿಮೆ ಇರುವದು. ಮುನಿಗಳು ಬೇರೆ ಬೇರೆಯಾಗಿ ಮೂಲದಲ್ಲಿ ಶೋಭಿಸಬಹುದಾದರೂ ನಾಟಕದಲ್ಲಿ ಪರಸ್ಪರ ಸಂಬಂಧವು ಹೆಚ್ಚಾಗಿದ್ದು ಎಲ್ಲ ಮಾತುಗಳೂ ಮೂಲಾಗ್ರವಾಗಿ ಒಂದೇ ಕಥಾ ವಸ್ತುವನ್ನು ಒಂದೇ ಲತೆಯಂತೆ ಅನುಸರಿಸಬೇಕಾಗುವದು. ಆ ದೃಷ್ಟಿಯಲ್ಲಿ ಕಾಳಿದಾಸನಿಗಿಂತ ಹೆಚ್ಚಾದ ಜಾಗರೂಕತೆಯನ್ನು ಭವಭೂತಿಯು ತನ್ನ ಕೃತಿಯಲ್ಲಿ ವಹಿಸಿರುವದು ಕ್ರಮ ಪ್ರಾಪ್ತವೇ ಆಗಿರುವದು. ಉದಾರ ಗುಣ ಸಂಪನ್ನರಾದ ನಾಯಕಾದಿ ಪಾತ್ರಗಳು ಸ್ಪಷ್ಟಸ್ಪಷ್ಟರೂ ಅವರ ಗುಣ ವಿಕಾಸಕ್ಕೆ ಅನುಕೂಲವಾಗುವಂತೆ ಹೆಚ್ಚು ಕಡಿಮೆ ಮಾಡುವದು ನಾಟಕದಲ್ಲಿ ಉಚಿತವಾಗಿರುವದು. ಸೀತಾ ಪರಿತ್ಯಾಗ ಸಮಯದಲ್ಲಿ ವಶಿಷ್ಠಾದಿಗಳಾದ ಹಿರಿಯರು ರಾಜಧಾನಿಯಲ್ಲಿರುವದು ಕಥಾ ಪ್ರವಾಹಕ್ಕೆ ಅಡಚಣೆಯೆಂದು ಕವಿಯು ಅವರೆಲ್ಲರನ್ನೂ ದ್ವಾದಶ ವಾರ್ಷಿಕ ಸತ್ರಕ್ಕೆ ಕಳುಹಿಸಿರುವನು. ಇದರಿಂದ ವಾಲ್ಮೀಕಿಯ ಕಥೆಗೆ ಹೆಚ್ಚಾದ ಮೆರುಗು ಬಂದಿರುವದು. ಕೊನೆಯಲ್ಲಿ ವಾಲ್ಮೀಕಿಯ ಮಾತಾದ—ಸೀತೆಯು ಭೂದೇವಿಯ ಅಂಕದಲ್ಲಿ ತಿರೋಹಿತ ಭೂವಿವರದಲ್ಲಿ ಲುಪ್ತಳಾಗುವಳು ಎಂಬುದನ್ನು, ಉಪ ನಾಟಕದಲ್ಲಿ ಸೂಚಿಸಿ ಕಥೆಯನ್ನು ಸುಖ ಪರ್ಯವಸಾಯಿಯಾಗಿ ಕವಿಯು ಮಾಡಿರುವನು. ಈ ಉದಾಹರಣೆಯಿಂದ ಕವಿಯ ಚಾತುರ್ಯವು ಗೊತ್ತಾಗಬಹುದು.

ಸಂಸ್ಕೃತದಲ್ಲಿಯ ಮೊದಲನೆಯ ತರಗತಿಯ ಇವರಿಬ್ಬರು ಮಹಾ ಕವಿಗಳಿಗೆ ವಾಲ್ಮೀಕಿಯ ಮೂಲ ಕಥೆಯು ಆಧಾರವಾಗಿಯೇ ಇರುವದು. ಮೇಲೆ ತೋರಿಸಿದ ರಘುವಂಶದ ಮಾತುಗಳನ್ನು ನಾಟಕಕಾರನಾದ ಕವಿಯು ಅದೆಂತು ಉಜ್ವಲಿಸಿರುವನೆಂಬ ಮಾತು ಇಲ್ಲಿ ಲಕ್ಷ್ಯವಾಗಿರುವದು. ಕಥಾ ನಾಯಕ ನಾಯಿಕೆಯರಿಬ್ಬರೇ ಚಿತ್ರಪಟ ಯುಕ್ತ ಮಂದಿರದಲ್ಲಿ ವಿನೋದದಿಂದ ಕಾಲ ಕಳೆದರೆಂಬ ಕಾವ್ಯದ (ರ. ವಂ. ೧೪-೨೫) ಮಾತನ್ನು ಭವಭೂತಿಯು ತನ್ನ ನಾಟಕದಲ್ಲಿಯ ಮೊದಲನೆಯ ಅಂಕದಲ್ಲಿ ವಿಶೇಷವಾಗಿ ಹೇಳುತ್ತ ಸಿಂಹಾವಲೋಕನ ಕ್ರಮದಿಂದ ನಡೆಸಿರುವನು. ಗರ್ಭಿಣಿಯಾದ ಸೀತಾದೇವಿಯ ಮನೋರಥ ಕಥನವು ಸಹ ಅದರಲ್ಲಿ ಬರುವದು. ಲೋಕವಾದವನ್ನು ಹೇಳುವ ಭದ್ರನು (೨೧) ಇಲ್ಲಿ ದುರ್ಮುಖನೆಂಬ ಹೆಸರನ್ನು ಪಡೆದಿರುವದು ಅನ್ವರ್ಥಕವಾಗಿರುವದು. ಸೀತೆಯು ಸನಾಥಾನಾಥವಾಗಿ ಈ ವಿಷಯದಲ್ಲಿ ನನಗೆ ರಾಮನಲ್ಲಿ ಕೋಪ ಬರುವದೆಂದು (೭೩) ವಾಲ್ಮೀಕಿಯು ಹೇಳಿದುದರ ಸಮಾಚಾರವು ಚತುರ್ಥಾಂಕದ ಜನಕರಾಜನ ಮಾತಿನಲ್ಲಿ ಆವೇಶದಿಂದ ಬಂದಿರುವದು. ಸೀತಾ ತ್ಯಾಗ ವಾರ್ತೆಯನ್ನು ಕೇಳಿ ರಾಮನು ಕಣ್ಣೀರು ಸುರಿಸಿದನೆಂಬ (೮೪) ಮಾತು ಪ್ರಥಮಾಂಕದ ಕೊನೆಯಲ್ಲಿಯೂ, ನಾಟಕದಲ್ಲಿ ಸರ್ವತ್ರವೂ ಪ್ರಚಂಡವಾದ ನದಿಯ ಓಘದಂತೆ ತುಂಬಿ ಸೂಸುತ್ತಿರುವನು. ಸೀತಾ ಪ್ರತಿಕೃತಿಯ (೮೭) ಕೊನೆಯ ಮಾತು ಮತ್ತು ಯತ್ನದ ಸ್ಮೃತಿಯ (೮೮) ಮಾತುಗಳು ಎಲ್ಲರ ಮನಸ್ಸಿನಲ್ಲಿ

ನಿರಂತರವಾಗಿ ನಿಲ್ಲಲು ತಕ್ಕಂತೆ ಅತಿ ಸುಂದರವಾದ ಅನುಷ್ಟುಭಗಳಾಗಿ ನಾಟಕದಲ್ಲಿ (ಉ. ರಾ. ಚ. ೨–೭; ೧–೧೨) ನಿರೂಪಿಸಲ್ಪಟ್ಟಿರುವವು.

ನಾಟಕವನ್ನು ರಚಿಸುವಾಗ ಭವಭೂತಿಗೆ ಇತರ ಕೃತಿಗಳಂತೆ ರಘುವಂಶವೂ ಒಂದು ಆಧಾರವಾಗಿರುವುದೆಂಬುದನ್ನಷ್ಟೇ ಸೂಚಿಸುವ ಉದ್ದೇಶವಿರುವದು. ಹಿಂದಿನ ಕಾಲದವರು ಕಾಳಿದಾಸ–ಭವಭೂತಿಗಳನ್ನು ಒಂದೇ ವೇದಿಕೆಯಲ್ಲಿ ನಿಲ್ಲಿಸಿ, ಕವಿಕುಲ ಮಕುಟಮಣಿಯು ಭವಭೂತಿಯ ನಾಟಕದಲ್ಲಿ 'ಬಿಂದುಮಾತ್ರಂ ವಿಸ್ಮೃತೇ' ಎಂದು ಹೇಳಿ, 'ರಾತ್ರಿರೇವಂ' (ಉ. ರಾ. ಚ. ೧–೨೭) ಎಂಬಲ್ಲಿ 'ರಾತ್ರಿರೇವ' * ಎಂದು ತಿದ್ದಿ ಕೃತಾರ್ಥನಾದನೆಂದು ಹೇಳಿರುವರು. ಆಖ್ಯಾಯಿಕೆ—ಇವರಲ್ಲಿ ಕಾಲವಿಪರ್ಯಾಸದ ದೊಡ್ಡದಾದ ದೋಷವಿದ್ದರೂ ಇದನ್ನು ಕಲ್ಪಿಸಿದವರು ನಿಶ್ಚಯವಾಗಿಯೂ ರಸಿಕರೇ ಆಹುದೆಂದು ಹೇಳಬೇಕಾಗಿರುವದರಿಂದ ಅದನ್ನು ಕೇಳಿ ನಾವೀಗ ಸಂತೋಷಿಸಬೇಕಾಗಿರುವದು. ಕವಿನಾಯಕನಾದ ಕಾಳಿದಾಸನು ಭವಭೂತಿಯ ನಾಟಕವನ್ನು ನೋಡಿದ್ದೇ ಆಗಿದ್ದರೆ ನಿಶ್ಚಯವಾಗಿಯೂ ಸಂತೋಷದಿಂದ ತಲೆದೂಗಿ ಕವಿಯನ್ನು ಅಭಿನಂದಿಸುತ್ತಿದ್ದನೆಂಬ ಕಲ್ಪನೆಯು ಹೃದಯಂಗಮವಾಗಿದೆ. ತಾತ್ಪರ್ಯವೆಂದರೆ, ರಘುವಂಶದ ಕೆಲವು ಮಾತುಗಳು ಭವಭೂತಿ ಕೃತಿಯಲ್ಲಿ ಉಪಯೋಗಿಸಲ್ಪಟ್ಟವೆಂಬ ಮಾತು ವಿಶೇಷವಲ್ಲ. ರಚನಾ ಕೌಶಲವೆಲ್ಲವೂ ಕವಿಯನ್ನೇ ಸೇರಿರುವದು. ಮೇಲಕ್ಕೆ ಸೂಚಿಸಿದ ರಘುವಂಶದ (೧೪–೪೧) ಕಾವ್ಯ ಶರೀರದಲ್ಲಿಯ ಒಂದು ಮಾತು ಉದಾತ್ತವಾದ ಸ್ವರ್ಗೀಯ ಸುಖ ಭಾವನೆಯನ್ನು ತಾಳಿ ನಾಟಕದಲ್ಲಿ ಶೋಭಿಸುತ್ತಿರುವದು:—'ಇದೆಂತಹ ಸ್ಥಿತಿಪಲ್ಲಟವು ಸಂಘಟಿಸಿತೋ? ಪ್ರಿಯೆಯ ಪೂರ್ವದ ವಿಯೋಗವು ಯುದ್ಧಾಧ್ಯಸೇತೂಪಾಯಗಳಿಂದ ನಿವಾರಿಸಲು ಸಾಧ್ಯವಾಗಿ ಅದ್ಭುತ ರಸಯುಕ್ತವೂ; ದುಃಖ ವಿಸ್ಮಾರಕ ವಿನೋದಗಳಿಂದ ಒಂದೇ ಸಮವಾಗಿ ಕೂಡಿದ್ದೂ ಆಗಿ ಶತ್ರು ಸಂಹಾರಾಂತವಾಗಿತ್ತು; ಪ್ರಸ್ತುತದ ಪ್ರಿಯೆಯ ಸದ್ಯೋವಿಯೋಗವು ಅತ್ಯಂತ ಕ್ರೂರವು. ಇದು ಉಪಾಯಾಭಾವದಿಂದ ಯಾವಜ್ಜೀವವೂ ಸುಮ್ಮನಿದ್ದು ಸಹಿಸಬೇಕಾಗಿದೆ! (ಉ.ರಾ. ಚ. ೩–೪೪) ಮೇಲೆ ಅವತರಿಸಿದ (ರ. ವಂ.ದ) ಮತ್ತೊಂದು (೧೪,೮೩–೮೪) ಕಲ್ಪನೆಗೆ ಈ ಬದಲಾವಣೆಯು ಉಜ್ವಲಿಸಿಕೊಂಡು ಬಂದಿದ್ದು ಅದರ ಹಿಂದಿನ ಸೀತೆಯ ಉದ್ಗಾರವು (೬೪) ಅವಳು ಹಾರಿಬಿದ್ದು ಗಂಗೆಯಲ್ಲಿ ಮುಳುಗಿಕೊಂಡಳೆಂದೇ ಭವಭೂತಿ ಕೃತಿಯಲ್ಲಿ ಪರ್ಯವಸಾನಗೊಂಡಿರುವದು!

ರಾಮ ಚರಿತ್ರದಲ್ಲಿ ಮತ್ತೆ ಕೆಲವು ವಿಚಾರಗಳನ್ನು ಹೇಳಬಹುದು. ಮನುಷ್ಯ ಮಾತ್ರದವರ ಗುಣಗಳೆಲ್ಲ ಸಾಪೇಕ್ಷವಾಗಿರುವವು. ಒಂದು ಸದ್ಗುಣದಲ್ಲಿ ಕಿಂಚಿತ್ತಾದರೂ ದೋಷವು ಇದ್ದೇ ಇರುವದು. ವಾಲ್ಮೀಕಿಯು ಹೇಳಿದ ಇತಿಹಾಸ

* 'ಅವಿದಿತ ಗತಯಾಮಾ ರಾತ್ರಿರೇವ ವ್ಯರಂಸೀತ್'—ಹೊತ್ತೆಷ್ಟಾಯಿತೆನ್ನುವದೇ ಗೊತ್ತಾಗದೆ ಸುಖಭರದಲ್ಲಿ ರಾತ್ರಿಯೇ ಕಳೆದುಹೋಯಿತೆಂಬ ವಿಶೇಷಾರ್ಥ: 'ಈ ರೀತಿಯಲ್ಲಿ ರಾತ್ರಿ'ಯೆಂಬುದಕ್ಕಿಂತ 'ರಾತ್ರಿಯೇ' ಎಂಬದಾಗಿ ಕಾಲಿದಾಸನು ತಿದ್ದಿದನಂತೆ!

ಅಥವಾ ಕಥೆಯು ಹೇಗಿರುವದೋ ಹಾಗೆಯೇ ಅದರ ಮುಖ್ಯ ಸೂತ್ರವು ಸಡಿಲಾಗದಂತೆ ಅದನ್ನು ಬಣ್ಣಿಸುವದೇ ಯುಕ್ತವು. ಸೀತಾ ತ್ಯಾಗವನ್ನು ಮಾಡದಿದ್ದರೂ ಮನುಷ್ಯ ಶ್ರೇಷ್ಠನಾದ ರಾಮನ ಚರಿತ್ರವು ನಿಷ್ಕಲಂಕವಾಗುತ್ತಿದ್ದಿತೆಂದು ಎದೆ ತಟ್ಟಿ ಹೇಳಲಿಕ್ಕೆ ಬಾರದಿರಲು ಕವಿಗಳಾದ ಕಾಳಿದಾಸ ಭವಭೂತಿಗಳು ಮೂಲ ಕಥೆಯನ್ನು ಇದ್ದದ್ದಿದ್ದ ಹಾಗೆಯೇ ಸ್ವೀಕರಿಸಿದ್ದು ಸಮರ್ಥನೀಯವಾಗಿರುವದು. ವಾಸಂತಿ ಮೊದಲಾದ ಹೆಚ್ಚಿನ ಪಾತ್ರಗಳಲ್ಲಿಯೂ ಶಂಕೆಗೊಳ್ಳಬೇಕಾಗಿಲ್ಲ. ವಾಲ್ಮೀಕಿಯ ಮಾತುಗಳನ್ನು ಅವು ಪುಷ್ಟೀಕರಿಸುತ್ತಲೇ ಇರುವವು. ಶೋಕ ವ್ಯಾಕುಲನಾದ ಮನುಷ್ಯನ ಮನೋವ್ಯಾಪಾರಗಳಲ್ಲಿ ಅನೇಕ ಚಿತ್ರಗಳು ಆತನ ಕಣ್ಮುಂದೆ ನಿಲ್ಲುವದನ್ನು ಭವಭೂತಿಯು ಅನುಭವಿಸಿಯೇ ತಿಳಿದಿರುವಂತೆ ಕಾಣುತ್ತಿರುವದು.

ಯಾವದೊಂದು ಮಾತಿನ ನಿದಿಧ್ಯಾಸವು ಒಂದೇ ಸಮನಾಗಿದ್ದರೆ ಆ ವಿಷಯವು ಸ್ವಪ್ನದಲ್ಲಿ ಕಂಡುಬರುವದು ನಿಶ್ಚಿತವೆಂಬುದನ್ನು ಅನುಭವವುಳ್ಳವರು ಒಪ್ಪುವರು. ಸಮೀಪದ ಸಂಬಂಧದ ಆಪ್ತರು ಗತಿಸಿದಾಗ ಸ್ವಪ್ನದಲ್ಲಿ ಅಂತಹವರ ದರ್ಶನವು ಅನೇಕರಿಗೆ ಆಗುವದು. ವಿರಹ ಶೋಕವದು ತೀವ್ರವಾಗಿದ್ದಾಗ ಕ್ಷಣ ಕಾಲ ತಾದಾತ್ಮ್ಯವುಂಟಾಗಿ ಗತಿಸಿದವರು ತಮ್ಮ ಮುಂದೆ ನಿಂತಿರುವಂತೆಯೂ ತೋರುವದು! ಇವೆಲ್ಲ ಮನಸ್ಸಿನ ಧರ್ಮಗಳು ಭವಭೂತಿಯ ಈ ನಾಟಕ ವಾಚನದಲ್ಲಿ ಅನುಭವಿಗಳಿಗೆ ಬಹುವಾಗಿ ಹೃದಯಂಗಮವಾಗಿ ತೋರುವವು. ಭವಭೂತಿಯ ಈ ನಾಟಕದ ಅಧ್ಯಯನದಿಂದ ಮನುಷ್ಯನು ನಿಶ್ಚಿತವಾಗಿಯೂ ಸುಶಿಕ್ಷಿತನಾಗುವನೆಂದು ನಮ್ಮ ಸ್ನೇಹಿತರು ಹೇಳಿದ್ದರು. ಶೃಂಗಾರ ವಿಷಯಗಳ ಮಾತಾದರೂ ಹೀಗೆಯೇ ಇರುವದು. ಉದಾಹರಣಾರ್ಥವಾಗಿ ಇಲ್ಲಿ ಪಂಪ ಕೃತಿಯಲ್ಲಿಯ ಒಂದು ಮಾತನ್ನು ಸೂಚಿಸಬಹುದು:—

"ಮತ್ತೊರ್ವಳುತ್ತುಂಗ ಸೌಧೋತ್ಸಂಗದೊಳ್ ನಿಂದು ಮನುವಂಶ ಧ್ವಜನಂ
ಮಕರಧ್ವಜನೆಂದು ಬಗೆದು—

ಮ ॥ ಇದು ನಿನ್ನಾರ್ಜಿಸುವಿಕ್ಷು ಚಾಪಮಿದು ನಿನ್ನೀ ಲೋಕಮಂ ಕ್ಕೆಗೆ ಮಾ ।
ಡಿದ ಪುಷ್ಪಾಸ್ತ್ರಮಿದತ್ತಿ ನಿನ್ನ ವಿಜಯ ಪ್ರಾರಂಭದೊಳ್ಮೀರ್ಕೆಗೆ ॥
ತ್ತಿದ ಚತ್ರಧ್ವಜಮೆಂದು ತೋರ್ಪ ತೆಱದಿಂ ಭ್ರೂಲಾಸ್ಯಮಂ ನೀಳ್ಪಪಾಂ ।
ಗದ ಬೆಳ್ದಿಂಗಳನೆಡ್ಡಮಪ್ಪ ಕಬರೀ ವಿಸ್ತಾರಮಂ ತೋಱಿದಳ್ ॥

(ಆ. ಪು. ೧೧, ೧೭)

ಹೀಗೆಂದು ಸ್ತ್ರೀಯು ಪಾತ್ರೀಭೂತನಾದ ಭರತ ಚಕ್ರವರ್ತಿಯ ರಾಜಧಾನೀ ನಿರ್ಗಮನವನ್ನು ಕುರಿತು ವರ್ಣಿಸುವಾಗ ಮಹಾಕವಿ ಪಂಪನು ತನ್ನ ಆದಿ ಪುರಾಣ ಮಹಾ ಪ್ರಬಂಧದಲ್ಲಿ ಹೇಳಿರುವನು. ವಾಸ್ತವವಾಗಿ ಆವ ಯೌವನ ಮದ ಗರ್ವಿತೆಯೂ ಹೀಗೆ ಕೂಗಿಕೊಂಡು ಆತ್ಮಪ್ರಶಂಸೆ ಮಾಡಿಕೊಳ್ಳಲಾರಳು. ಮನಸ್ಸಿನಲ್ಲಿ ಬೇಕಾದರೆ ಅಂದುಕೊಂಡಾಳು. ಈಗ ಅವಳ ಮನೋಗತ

ನೆಂತು ಆಗ ಸ್ಫುರಿಸುತ್ತೆಂದು ಕೇಳಲಾಗದು. ಪಂಪನು ಸೇನಾಧಿಪತಿಯೂ ಸಂಪನ್ನನೂ ಆಗಿದ್ದು ಒಳ್ಳೆಯ ರಸಿಕನಾದ ಮಹಾಕವಿಯಾಗಿದ್ದುದರಿಂದ ಅವನು ಹಾಗೆ ಉತ್ಪ್ರೇಕ್ಷಿಸಬಹುದು. ಅಥವಾ ಅಂತಹ ಅನೇಕ ಬಿನ್ನಣದ ಪಾತ್ರೆಗಳನ್ನು ಅತನು ಸ್ವತಃ ಮಾಡಿಯೂ ನೋಡಿಯೂ ಇರುವುದರಿಂದ ಪುರಸ್ತ್ರೀ ಸೀತಾನಂದದ ಅಂತಹ ದೃಶ್ಯಗಳು ಅವನ ದೃಷ್ಟಿಪಥಕ್ಕೆ ಅನೇಕವಾಗಿ ಬಂದಿರಬಹುದು. ಅಂತಹ ಸುಂದರಿಯನ್ನು ಕುರಿತು ಕವಿಯು ಹೇಳುವಲ್ಲಿ ನಿಜಾಂಶವೇ ಇರುವದು. ಮತ್ತು ಕವಿತೆಗೆ ಅತಿಶಯೋಕ್ತಿಯು ಅತ್ಯವಾಗಿರುವದರಿಂದ ಅಲ್ಲದ ಶಂಕೆಗಳನ್ನೆತ್ತುವದು ರಸಹಾನಿಯನ್ನೇ ಮಾಡಿದಂತಾಗುವದು. ಇದೇ ರೀತಿಯಲ್ಲಿ ಮಹಾಕವಿ ಭವಭೂತಿಯ ಅನೇಕ ವರ್ಣನೆಗಳ ಸಮರ್ಥನವನ್ನು ಮಾಡಬಹುದು. ವಿಶೇಷವೆಂದರೆ, ನಿಜವಾದ ಸೃಷ್ಟಿಯಲ್ಲಿ ಇಲ್ಲದಿರುವದು ಕಾಲ್ಪನಿಕ ಸೃಷ್ಟಿಯಲ್ಲಿರುವದೆಂಬುದನ್ನು ಅನುಭವಿಗಳು ಸತ್ಯವೆಂದೇ ಹೇಳುವರು. 'ರವಿ ಕಾಣದುದನ್ನು ಕವಿ ಕಂಡನೆಂ'ದು ಜನರು ಆಡಿಕೊಳ್ಳುವ ಮಾತಿನ ತಾತ್ಪರ್ಯವಾದರೂ ಇದೇ ಇರುವದು. ಈ ದೃಷ್ಟಿಯಲ್ಲಿ ನಮ್ಮ ಕಥಾನಾಯಕನ ಸಖಿಯಾದ ಪ್ರಜ್ಞಾವಂತೆಯಾದ ವಾಸಂತಿಯ ಸ್ವಾಗತವನ್ನು ಪೂಜ್ಯಬುದ್ಧಿಯಿಂದಲೇ ರಸಿಕ ವರ್ಯರು ಮಾಡಬಹುದು.

ಭವಭೂತಿಯ ಈ ಅಪ್ರತಿಮ ಕೃತಿಯ ಚಿರಸ್ಮರಣೀಯವಾದ ಕೆಲವು ಸಂಗತಿಗಳನ್ನು ಸೂಚಿಸಿ ಬಂದಿಷ್ಟು ಲಂಬಿಸುತ್ತ ನಡೆದ ಈ ಬರೆಹವನ್ನು ನಿಲ್ಲಿಸಬೇಕಾಗಿದೆ.

ಮಂಗಲಾಚರಣದ ಸಮಾಪ್ತಿಯಲ್ಲಿಯೇ ಸೂತ್ರಧಾರನು ಕವಿ ವಶನಾಗಿ ಅಯೋಧ್ಯೆಯವನೂ ರಾಮ ಪಟ್ಟಾಭಿಷೇಕ ಕಾಲೀನನೂ ಆಗಿ ಕವಿಕೃತಿಗಳ ಮತ್ತು ಸ್ತ್ರೀಯರ ಸಾಧುತ್ವ ವಿಚಾರದಲ್ಲಿ ಜನರು ದುರ್ಜನರೆಂದು (ಉ. ರಾ. ಚ. ೧–೫) ಸಾರಿಹೇಳಿ ನಾಟಕದ ಮುಖ್ಯ ಸೂತ್ರವನ್ನೇ ಅದರಲ್ಲಿ ಸೂಚಿಸುತ್ತಿರುವನು. ಚಿತ್ರಪಟ ದರ್ಶನ ವಿನೋದದಲ್ಲಿ, ಸಾಮಾನ್ಯರು ಅರ್ಥಾನುಸಾರವಾಗಿ ಮಾತನಾಡುವರು; ಆದರೆ, ಆದಿ ಋಷಿಗಳ ವಚನಾನುಸಾರವಾಗಿ ಅರ್ಥವು ಸಾಗುವದೆಂದು (೧೦) ವಶಿಷ್ಠ ಮಹರ್ಷಿಯ ಆಶೀರ್ವಾದದ ಪ್ರಶಂಸೆಯಿರುವದು. ಲೋಕಾರಾಧನೆಗಾಗಿ ಸ್ನೇಹ, ದಯೆ, ಸೌಖ್ಯ ವಿಶೇಷವೇನು! ಜೀವನ ಸರ್ವಸ್ವವಾದ ಜಾನಕಿಯನ್ನು ಸಹ ತ್ಯಜಿಸಲು ಸಿದ್ಧನಾದ ಪ್ರಜಾರಂಜಕ ಮಹಾರಾಜನ ವರ್ಣನೆಯೂ ಮೋಹಕವೇ. (೧೨) ತಾಯಿತಂದೆಗಳು ಸಮಸ್ತವನ್ನೂ ನೋಡಿಕೊಳ್ಳುತ್ತಿರುವ, ಹೊಸದಾಗಿ ಮದುವೆಯಾದಾಗಿನ ಸೌಖ್ಯಶಿಖರವು, (೧೪) ಕವಿ ರವೀಂದ್ರರು ಆಕ್ಷೇಪಿಸಿದ ಊರ್ಮಿಲೆಯ ಕಿಂಚಿತ್ ದರ್ಶನ, ಕಲ್ಲು ಅಳುತ್ತಿರುವ ವಜ್ರದ ಎದೆಯೊಡೆಯಬಹುದಾದ ರಾಮನ ಪೂರ್ವದ ವಿಯೋಗ, (೨೮) ಲೋಕವೆಲ್ಲವನ್ನೂ ಧನ್ಯವನ್ನಾಗಿ ಮಾಡಿದ ವೀರ ಹನುಮಂತ. (೩೨) ಲೋಕವನ್ನು ಪುನೀತವನ್ನಾಗಿ ಮಾಡುವವನನ್ನು ಲೋಕವು ನಿಂದಿಸುವದು. ಅವನಿಂದ ಲೋಕವು ಸನಾಥವೋ

ಅಂತಹ ಪುಣ್ಯವಂತೆಯೂ ಮಹಾರಾಣಿಯೂ ಆಗಿ ಅನಾಥಳಾದ ಸೀತಾ ತ್ಯಾಗ ವಿಚಾರ; (೪೩) ಇವೆಲ್ಲ ಮಾತುಗಳು ಹೃದಯಸ್ಪರ್ಶಿಯಾಗಿರುವವು. "ಇವೇ ಅಲ್ಲವೆ? ಆ ತಪೋವನ, ಆ ಪಂಚವಟಿ, ಆ ಗೋದಾವರಿ ಮೊದಲಾದವುಗಳೆಂದು ಆತ್ರೇಯಿಯು ಕೇಳುತ್ತ ವಾಚಕನನ್ನು ಸಗದ್ಗದಿತ ಕಂಠನನ್ನಾಗಿ ಮಾಡುವಳು! ಆತ್ರೇಯಿಯು ಹಿರಣ್ಮಯ ಸೀತಾ ಪ್ರತಿಕೃತಿಯ ಮಾತನ್ನು ಕೇಳಿ ವಜ್ರಕ್ಕಿಂತ ಕಠಿನವೂ ಕುಸುಮಕ್ಕಿಂತ ಕೋಮಲವೂ ಆದ ಮಹಾತ್ಮರ ಹೃದಯವೆಂದುದು" (೨-೭) ಮುಖ್ಯವಾದ ಉಕ್ತಿಯಾಗಿರುವದು.

ಮಹಾರಾಣಿಯನ್ನು ತೊರೆದು ೧೨ ವರುಷಗಳಾಗಿರಲು ದಂಡಕಾರಣ್ಯದಲ್ಲಿ ನದಿಯ ಪ್ರವಾಹವಿದ್ದಲ್ಲಿ ಮರಳಿನ ಬಯಲಾಗಿರುವದು; ಮರಗಳೆಲ್ಲವೂ ಕೆಲವು ಹೋಗಿ ಹೊಸದಾಗಿ ಕೆಲವು ನಿಂತಿರುವವು; ಕೇವಲ ಶಿಲಾ ರಾಶಿಗಳು ಹಾಗೆಯೇ ನಿಂತಿರುವವು; ಅವುಗಳಿಂದಲೇ ಆ ಭೂಪ್ರದೇಶವು ಅದೇ ಎಂದು ತಿಳಿದುಬರುವಷ್ಟು ವಿಪರ್ಯಸ್ತವಾಗಿ ರಾಮನಿಗೆ ತೋರಿತು. (೨-೨೭) ಕರುಣೆಯು * ಮೂರ್ತಿಮತ್ತಾಗಿ ಬರುತ್ತಿರುವಂತೆ ಸೀತೆಯು ಗೋದಾವರಿಯ ಮಡುವಿನಿಂದ ಹೊರಗೆ ಬಂದು (೩-೪) ಗುಪ್ತಳಾಗಿ ರಾಮನ ಹತ್ತಿರ ಸಖೀ ಸಮೇತಳಾಗಿರುವಳು! ರಘು ರಾಮಚಂದ್ರನು ಅಲ್ಲಲ್ಲಿಯ ಚಿರಪರಿಚಿತ ಭೂಭಾಗಗಳನ್ನೂ ಪ್ರಾಣಿ ವಿಶೇಷಗಳನ್ನೂ ನೋಡಿ ಹಿಂದಿನ ಮಾತುಗಳನ್ನು ನೆನೆದುಕೊಂಡು ಮೂರ್ಛಿತನಾಗುತ್ತಿರುವಾಗ ಸೀತೆಯು ತನ್ನ ಸಂಜೀವಕವಾದ ಸ್ಪರ್ಶದಿಂದ ಗುಪ್ತವಾಗಿಯೇ ಅವನನ್ನು ಸಾವಧಗೊಳಿಸುತ್ತಿರುವಳು! "ವೃಕ್ಷಗಳು ಫಲ ಪುಷ್ಪಗಳಿಂದಲೂ, ವನಾನಿಲನು ಅರಳಿದ ಕಮಲ ಸ್ಪರ್ಶದಿಂದ ತನ್ನಲ್ಲಿ ಉಂಟಾದ ಸುಗಂಧತೆಯಿಂದಲೂ, ಪಕ್ಷಿಗಳು ಮಧುರ ಗಾನದಿಂದಲೂ ಸೇವಿಸಲು, ಸತ್ಕರಿಸಲು ಸಿದ್ಧರಾಗಿರಬೇಕು; ಶ್ರೀರಾಮದೇವನು ಪುನಃ ಈ ವನಕ್ಕೆ ತಾನಾಗಿಯೇ ಬಂದಿರುವನು" (೩೪) ಹೀಗೆನ್ನುತ್ತ ವಾಸಂತಿಯು ರಾಮನ ಹತ್ತಿರ ಬಂದು 'ಮಹಾರಾಜರೆ! ಲಕ್ಷ್ಮಣನು ಕುಶಲವಷ್ಟೆ?' ಎಂದು ಕೇಳುವಳು. ಇದೇನು ವಿಚಿತ್ರ! 'ರಾಮಭದ್ರನೆ'ನ್ನದೆ ನಿಷ್ಠುರಳಾಗಿ 'ಮಹಾರಾಜನೆಂ'ದು ಸಂಬೋಧಿಸುವಳು; ಬಾಷ್ಪರುದ್ಧ ಕಂಠಳಾಗಿ ತೊದಲುತ್ತ ಕುಮಾರ ಲಕ್ಷ್ಮಣನ ಕುಶಲವನ್ನು ಕೇಳುವಳು. ಇವಳಿಗೆ ಸೀತೆಯ ವೃತ್ತಾಂತವು ವಿದಿತವಾಗಿರಬಹುದು! ಎಂದು ರಾಮನು ವಿಹ್ವಲನಾಗುವನು. ಒಡನೆ, ಅಳುತ್ತಳುತ್ತ, 'ಅಯ್ಯೋ ದೇವನೆ ನೀನೆಂತಹ ದಾರುಣನು! ನೀನೆನ್ನ ಜೀವಿತ, ನೀನೆನ್ನ ದ್ವಿತೀಯ ಹೃದಯ, ಬೆಳದಿಂಗಳಂತೆ ನೇತ್ರಾಹ್ಲಾದಕಳು, ಅಮೃತಮಯಳು ಇತ್ಯಾದಿ ನೂರಾರು ಮುದ್ದು ಮಾತುಗಳನ್ನಾಡಿ ಅಂತವಳನ್ನೇ.... ಇನ್ನೇನು ಹೇಳುವದು ಇರಲಿ!!' ಹೀಗೆನ್ನುತ್ತ ಮೂರ್ಛಿತಳಾಗುವಳು; (೩೭) ಇತ್ತ ಲೋಕರಂಜನೆಯ ಮಾತನ್ನು ತಿಳಿದು

* 'ಅರುಮಂ ಮುಱುಗಿಸೆ ಬಂದುದಂದು ಕರುಣಂ ಬರೆ ವೈರಿ ನೃಪಾಂಗನಾಜನಂ'
ಪಂ. ಭಾ. (೧೪–೫)

ಬಿಕ್ಕಿ ಬಿಕ್ಕಿ ಅಳುತ್ತ ಮತ್ತೆ ವಾಸಂತಿಯು ಮಾತನಾಡುವಳು. ಅರುಂಧತಿ ವಾಸಂತಿಯರ ಮಾತುಗಳು ಪ್ರಾಕೃತ ನಾಟಕದಲ್ಲಿಯ, ಅದೇಕೆ? ಸಂಸ್ಕೃತ ವಾಙ್ಮಯದಲ್ಲಿಯೇ ಅತಿಶಯ ಮಹತ್ತ್ವದವಾಗಿರುವುವು. ಮುಂದಕ್ಕೆ—"ಪ್ರಜೆಗಳಿರಾ! ನಿಮಗಾಗಿ ತೃಣವತ್ತಾಗಿ ಸೀತೆಯನ್ನು ತೊರೆದೆನು, ಚಿರ ಪರಿಚಿತ ಭಾವನೆಗಳಿಂದ ಈಗ ರೋದಿಸುತ್ತಿರುವೆನು; ಕ್ಷಮಿಸಬೇಕು" (೩.೨) ಹೀಗೆ ರಾಮನು ಹೇಳುವನು. ವಾಸಂತಿಯು ರಾಮನ ವಿನೋದಾರ್ಥವಾಗಿ, 'ಇದೇ ಲತಾ ಮಂಟಪದಲ್ಲಿ ಅವಳನ್ನು ಎದುರುನೋಡುತ್ತ ನೀನಿದ್ದೆ, ಹಂಸಕ್ರೀಡೆಯನ್ನು ನೋಡುತ್ತಿದ್ದುದರಿಂದ ಸೀತೆಯು ಗೋದಾವರಿಯಿಂದ ಬಂದಿಷ್ಟು ವಿಳಂಬದಿಂದ ಬಂದಿರಲು, ನಿನ್ನನ್ನು ಬೇಸರಗೊಂಡವನಂತೆ ತಿಳಿದು ಬೆದರಿ ಹೋದವಳು, ಕಮಲದ ಮೊಗ್ಗಿನಂತೆ ಅಂಜಲಿಬದ್ಧಳಾಗಿ ಕೈಮುಗಿದಳಲ್ಲಾ!' (೩.೭) ಎಂದು ಕೇಳಿರಲು, ಸೀತೆಯನ್ನು ಸ್ಮರಿಸುತ್ತ ದೀನನು ಮೂರ್ಛೆ ಹೋಗುವನು.

ಜ್ಞಾನವಯೋವೃದ್ಧರಾದ ಅರುಂಧತೀ ಜನಕ ಕೌಸಲ್ಯೆಯರೂ ಶಿಷ್ಟಾಗಮನ ನಿಮಿತ್ತವಾದ ಅನಧ್ಯಾಯದಿಂದ ಆಡುತ್ತಿರುವ ಸಂಗಡಿಗರೊಡನಿದ್ದ ರಾಮ ಪುತ್ರನಾದ ಶೂರ ಲವ ಬಾಲಕನೂ ಇವರ ಪರಸ್ಪರ ಸಂದರ್ಶನವು ಋಷ್ಯಾಶ್ರಮದಲ್ಲಾದುದು ಅತ್ಯಂತ ಹೃದಯಂಗಮವಾಗಿರುವುದು. ತ್ರಿಲೋಕಕ್ಕೆ ಮಾಂಗಲ್ಯವನ್ನು ತಂದ ಉಷೆಯಂತೆ ಮುಂದೆ ಬಂದ ಅರುಂಧತೀ ದೇವಿಯನ್ನು ಜನಕ ಮಹಾರಾಯನು ಸಾಷ್ಟಾಂಗವಾಗಿ ನಮಸ್ಕರಿಸುವನು; (೪-೧೦) ಎಂತಹ ಪವಿತ್ರವಾದ ಸನ್ನಿವೇಶ! ಭವಭೂತಿಯು ಧನ್ಯನು. ನಮ್ಮ ಮಗುವನ್ನು ಶುದ್ಧಗೊಳಿಸಲು ಅಗ್ನಿಯು ಎಷ್ಟು ಪಾತ್ರದವನೆಂದು ಸರೋಷನಾದ ಜನಕನು ಕೇಳುವನು. ಅರುಂಧತಿಯು ನಿಟ್ಟುಸಿರುಬಿಡುತ್ತ ಹೀಗೆಂದಳು:—'ಅಗ್ನಿ ಅಗ್ನಿ ಎಂಬ ಮಾತಿದು ವತ್ಸೆಯ ವಿಷಯದಲ್ಲಿ ಹಗುರವಾದ ಮಾತು, ಸೀತೆಯೆಂದರೆ ಸಾಲದೇ? ಆಹಾ! ಮಗು, ನೀನೆನ್ನ ಕೂಸೋ ಶಿಷ್ಯಳೋ ಆಗಲಿ, ಶುದ್ಧತೆಯ ನಿನ್ನ ಉತ್ಕರ್ಷವು ನಿನ್ನಲ್ಲಿರುವ ನನ್ನ ಪ್ರೇಮವನ್ನು ದೃಢಗೊಳಿಸುವುದು. ನೀನು ಮಗುವಾಗಿರಲಿ, ಹೆಂಗಸಾಗಿರಲಿ, ಸಮಸ್ತ ಲೋಕಕ್ಕೂ ನಿಶ್ಚಿತವಾಗಿಯೂ ವಂದ್ಯಳಾಗಿರುವೆ! ಪೂಜೆಗೆ ಗುಣವೇ ಅರ್ಹವಾದುದು. ಗುಣವಂತರು ಹೆಂಗಸರಾದರೇನು? ಚಿಕ್ಕವರಾದರೇನು?' (೧೧) ಸೀತೆಯ ಈ ಪ್ರಶಂಸೆಯನ್ನು ಕೇಳಿ ಕುಸುಮ ಕೋಮಲ ಹೃದಯಳಾದ ಕೌಸಲ್ಯೆಯು ಮೂರ್ಛಿತಳಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಯಜ್ಞಕ್ಕೆಂದು ಅಯೋಧ್ಯೆಯನ್ನು ಬಿಟ್ಟವಳು ಸೀತಾ ವೃತ್ತಾಂತದಿಂದ ರಾಮನ ದರ್ಶನವನ್ನು ತೊರೆದು ನಿಂತ ಮಹಾತ್ಮಳವಳು.

ಅಲ್ಲಿಗೆ ಬಂದಿರುವ ಲವನು ಸೀತೆಯ ಮಗನಾಗಿರಬೇಕೆಂದು ವೃದ್ಧರೆಲ್ಲರೂ ಯೋಚಿಸಿ ಪುಲಕಿತ ಗಾತ್ರರಾಗುವರು. 'ಅಶ್ವವೆಂಬ ಪ್ರಾಣಿಯನ್ನು ನಾವಿಂದು ನೋಡಿದೆವೆಂ'ದು ಹೇಳುತ್ತ ಋಷಿ ಕುಮಾರರು ಲವನನ್ನು ಅಲ್ಲಿಂದ ಕರೆದುಕೊಂಡು ಹೋಗುವರು. ರಾಮಚಂದ್ರ ಮಹಾರಾಜನ ಪ್ರತಾಪವನ್ನು ಕೇಳಿ

ಕ್ಷತ್ರಿಯ ಕುಲಕಿಶೋರನಾದ ಲವನು ಸಹಿಸದೆ ಅಶ್ವವನ್ನು ಕಟ್ಟಿಹಾಕುವನು. 'ಕುಮಾರನೆ! ಅಶ್ವವಿರಲಿ, ಅತ್ತ ಸೈನಿಕರು ಬಂದರು, ಆಶ್ರಮವು ದೂರವಾಯಿತು, ಜಿಂಕೆಗಳಂತೆ ಒಂದೇ ಓಟದಿಂದ ಪಲಾಯನಮಾಡಿ ಹೋಗೋಣವೆಂ'ದು ವಟುಗಳು ಹೇಳುವರು! ರಣದಲ್ಲಿ, 'ಜಾಮದಗ್ನ್ಯಿಯ ಮದವನ್ನು ಮುರಿದವನ ಮುಂದೆ ಆರ ಆಟವೂ ಸಾಗದೆಂ'ದು ಸುಮಂತ್ರನು ಹೇಳಿರಲು, ಲವನು ನಕ್ಕು, 'ಯಜಮಾನರೆ, ಪರಶುರಾಮನನ್ನು ರಾಜರ್ಷಿಯಾದವನು ಸೋಲಿಸಿದನೆಂದೇನು ಕೂಗಿಕೊಂಡು ಹೇಳುವಿರಿ? ಬ್ರಾಹ್ಮಣನ ಶೌರ್ಯವು ವಚನದಲ್ಲಿಯೂ, ಕ್ಷತ್ರಿಯನ ಶೌರ್ಯವು ಬಾಹುವಿನಲ್ಲಿಯೂ ಎಂಬುದು ಸಿದ್ಧವಲ್ಲವೇ? ಹೀಗಿರಲು ಶಸ್ತ್ರಧರನಾದ ಜಾಮದಗ್ನ್ಯಿಯ ಸೊಕ್ಕನ್ನು ಆತನು ಅಡಗಿಸಿದ್ದೇನು ಹೆಚ್ಚಿನದು?' (೫–೩೨) ಎಂದು ಕೇಳಲು, ಸುಮಂತ್ರನು ಗರ್ವದಿಂದ, 'ಇವನಾವನೋ ನವಾವತಾರವಾದ ಮಹಾಪುರುಷನು, ಭಗವಂತನಾದ ಭೃಗುನಂದನನು ಸಹ ಇವನ ಮುಂದೆ ಏನೂ ಅಲ್ಲ; ತ್ರಿಲೋಕಕ್ಕೆ ಅಭಯದಾತರಾದ ತಾತಪಾದರ ಪುಣ್ಯಚರಿತಗಳನ್ನೀತನೇನು ಬಲ್ಲನು?' (೩೩) ಹೀಗೆಂದಿರಲು ಲವನು ಅಂಜದೆ ಉತ್ತರಿಸಿದನು—'ರಘುಪತಿಯ ಚರಿತ್ರವೂ ಮಹಿಮೆಯೂ ಆರಿಗೆ ಗೊತ್ತಿಲ್ಲ? ನೀವೇನು ಹೊಸದಾಗಿ ಹೇಳಬಂದಿರಿ! ಹೋಗಲಿ ಬಿಡಿ; ವೃದ್ಧರಾದವರ ಮಹಿಮೆಯನ್ನು ಹೆಚ್ಚಾಗಿ ಹೊಗಳಲಾಗದು; ಅದನ್ನೇನು ಬೆಳೆಯಿಸುವಿರಿ? ತಾಟಕಿಯನ್ನು ಕೊಂದವನೊಬ್ಬ ಶೂರನೇ ಸರಿ. ಖರನೊಡನೆ ಕಾದುವಾಗ ಹಿಮ್ಮೆಟ್ಟಿದವನೇನು ಗಂಡುಗಲಿಯೋ? ವಾಲಿ ವಧೆಯಲ್ಲಿಯ ಆತನ ಕೌಶಲವು ಎಲ್ಲರಿಗೂ ವಿದಿತವಾಗಿರುವದು!' (೩೪) ಆಗ ಚಂದ್ರಕೇತುವು, 'ಎಲೈ ಪೂಜ್ಯರನ್ನು ನಿಂದಿಸುವೆ, ಸ್ವಲ್ಪವೂ ಮರ್ಯಾದೆಯಿಲ್ಲ, ಬಹಳವಾಗಿ ಜಲ್ಪಿಸುವೆ!' ಹೀಗೆಂದಿರಲು ಯುದ್ಧವಾರಂಭಿಸುವದು.

ಶ್ರೀರಾಮಚಂದ್ರನು ಪುಷ್ಪಕ ವಿಮಾನದಿಂದಿಳಿದು ಬಂದಿರಲು ಆತನನ್ನು ನೋಡಿ, 'ನನ್ನ ವಿರೋಧವೆಲ್ಲ ವಿಶ್ರಾಂತವಾಯಿತು, ಆನಂದದಿಂದುಂಟಾದ ವಿನಯವು ನನ್ನನ್ನು ಬಗ್ಗಿಸುತ್ತಿರುವದು. ಇವನೆಂತಹ ವಿಖ್ಯಾತ ಪುಣ್ಯನೋ! ಪೂಜ್ಯನೋ!' (೬–೧೧) ಹೀಗೆನ್ನುತ್ತ ಲವನು ನಿಂತಿರುವಲ್ಲಿ ರಾಮನೂ ಪರವಶನಾಗುವನು. ಬಂದಿರುವಾತನು ರಾಮಾಯಣ ಕಥಾನಾಯಕನಾದ ರಘುನಾಥನೆಂಬುದನ್ನು ಚಂದ್ರಕೇತುವಿನಿಂದ ತಿಳಿದು ಲವನು ಮನಸ್ಸಿನಲ್ಲಿಯೆ 'ಇಂದು ಸುಪ್ರಭಾತವೆಂ'ದುಕೊಳ್ಳುವನು. ಲವನ ಕ್ಷತ್ರಿಯೋಚಿತ ಶೌರ್ಯ ಪ್ರಕರ್ಷವನ್ನು ಕೇಳಿ ರಾಮನು ಆತನನ್ನು ಅಭಿನಂದಿಸುವನು. ಜಗತ್ತ್ರಯವನ್ನೇ ತೃಣವತ್ತಾಗಿ ನೋಡುತ್ತಿರುವ, ಧೀರೋದ್ಧತಿಯಿಂದ ಭೂಮಿಯನ್ನೇ ಬಗ್ಗಿಸುತ್ತಿರುವ ಕುಮಾರನಾದರೂ ಪರ್ವತದಂತೆ ಗುರುವಾಗಿ ತೋರುವ, ವೀರರಸವೇ ಮೈವೆತ್ತು ಬಂದಂತಿರುವ, ಕುಶಕುಮಾರನು ಅಲ್ಲಿ ಬರುವನು. (೬-೧೯) ಮಾತು ಕಥೆಗಳೊಂದಿಷ್ಟು ನಡೆದಿರಲು ವಸಿಷ್ಠ ವಾಲ್ಮೀಕಿಯರೂ ರಾಮನ ತಾಯಿ

ಗಳೂ ಜನಕನೂ ಅರುಂಧತಿಯೊಡನೆ ಶಿಶು ಕಲಹ ವಾರ್ತೆಯನ್ನು ಕೇಳಿ ಅಲ್ಲಿಗೆ ಬರುತ್ತಿರುವುದನ್ನು ತಿಳಿದು ರಾಮಾದಿಗಳೆಲ್ಲರೂ ಅಲ್ಲಿಂದ ತೆರಳುವರು.

ದೊರೆತನವೇ ಬಲು ಕಷ್ಟವಾಗಿರುವುದು. ದೊರೆಯು ಭೂಮಿಗೆ ಉಪಭೋಗ ಶೂನ್ಯನಾದ ಸ್ವಾಮಿಯು. 'ಬೇರೆಯವರನ್ನು ಅನುಸರಿಸುವಲ್ಲಿ ನೃಪನನ್ನು ಸ್ವಾರ್ಥವು ಬಿಡುವುದು. ಸ್ವಾರ್ಥತ್ಯಾಗಿಯಾದವನು ಅದೆಂತಹ ಭೂಪತಿ? ಸ್ವಾರ್ಥಕ್ಕಿಂತ ಪರಾರ್ಥವೇ ಹೆಚ್ಚು ಶ್ರೇಯಸ್ಕರವಾದರೆ ರಾಜನು ಒಬ್ಬ ಸೇವಕನೇ ಸರಿ; ಅಂತಹವನು ಅದಾವ ಸುಖಭೋಗಗಳನ್ನು ಅನುಭವಿಸುವನು?' (ಮುದ್ರಾರಾಕ್ಷಸ ೩-೪) ಎಂದು ಚಂದ್ರಗುಪ್ತನು ಹೇಳುವನು. 'ರಾಜ್ಯಂ ಸ್ವಹಸ್ತ ಧೃತ ದಂಡಮಿವಾತಪತ್ರಂ'—ಅರಸುತನವು ಕೊಡೆಯನ್ನು ಹಿಡಿದುಕೊಳ್ಳುವಂತೆ ಸುಖದುಃಖ ಮಿಶ್ರವೆಂದು (ಶಾಕುಂತಲ ೫-೬) ದುಷ್ಯಂತನು ಸಹ ಹೇಳುವನು. ಭವಭೂತಿಯ ಕಥಾ ನಾಯಕನಾದ ಶ್ರೀರಾಮನು ಅನುಭವಿಸಿದಷ್ಟು ಕಷ್ಟವನ್ನು ಅವರಿಬ್ಬರೂ ಅನುಭವಿಸಿಲ್ಲವಾದರೂ ಜವಾಬದಾರಿಯ ದೊರೆತನವು ಕಷ್ಟವೆಂದೇ ಹೇಳುತ್ತಿರುವರು. ಮಹಾತ್ಮನ ಪದವಿಯು ಸುಮ್ಮನೆ ಬರುವಂತಿಲ್ಲ. ಉಕ್ಕಿನ ಕಡಲೆಯನ್ನು ಜೀರ್ಣಿಸಿದಾಗ ಬ್ರಹ್ಮ ಪದವಿಯು ಬರುವದೆಂದು ತುಕಾರಾಮ ಸಾಧುವು ಹೇಳುವನು. ಪುಣ್ಯಪುರುಷನಾದ ರಾಮನು ಪಟ್ಟಿರುವ ಕಷ್ಟದ ಚಿತ್ರವನ್ನು ಹೃದಯದ್ರಾವಕವಾಗಿ ಭವಭೂತಿಯು ವರ್ಣಿಸಿರುವನು. ವಿಪ್ರವರ್ಯನಾದ ರಾಕ್ಷಸನು ಹೇಳುವಂತೆ (ಮು. ರಾ. ೪-೩) ಸ್ವತಃ ನಾಟಕಕಾರನಾದ ಭವಭೂತಿಯೂ ಇದರ ರಚನೆಯಲ್ಲಿ ಬಹಳ ಕ್ಲೇಶಪಟ್ಟಿರಬಹುದು. ಕವಿಯ ಆ ಶ್ರಮೆಯಿಂದಲೇ ರಾಮನ ಉದಾತ್ತ ಚರಿತ್ರವು ನಮಗೆಲ್ಲ ತಿಳಿದು ಬಂದಿತೆಂದು ಒಂದು ದೃಷ್ಟಿಯಲ್ಲಿ ಸ್ವತಃ ರಾಮನಿಗಿಂತ ಭವಭೂತಿಯೇ ನಮಗೆ ಹೆಚ್ಚಾಗಿ ತೋರುತ್ತಿರುವನು. ಅದೇ ದಾರಿಯಲ್ಲಿ ಟೀಕಾಕಾರನಾದ ವೀರರಾಘವನು ಕವಿಗಿಂತ ತನ್ನ ರಹಸ್ಯಗ್ರಾಹಿಯಾದ ಟೀಕೆಯಿಂದ ನಮಗೆಲ್ಲ ಹೆಚ್ಚು ಸ್ಮರಣೀಯನಾಗಿರುವನೆಂದೂ ಹೇಳಬಹುದು.

ಸೀತೆಯು ಗಂಗೆಯಲ್ಲಿ ಹಾರಿ ಮುಳುಗಲು ಗಂಗಾದೇವಿ ಭೂಮಾತೆಯರು ಅವಳನ್ನು ರಸಾತಲದಲ್ಲಿಟ್ಟು ಸಂರಕ್ಷಿಸಿದರು. ಲವಕುಶರು ಸ್ತನ್ಯತ್ಯಾಗಮಾಡಿದ ನಂತರದಲ್ಲಿ ಅವರನ್ನು ಆ ದೇವಿಯರೇ ವಾಲ್ಮೀಕಿಗೆ ಒಪ್ಪಿಸಿದರು. ಆ ದೇವಿಯರೇ ಕೊನೆಯಲ್ಲಿ ಮಹಾರಾಣಿಯನ್ನು ರಾಮರಾಜನಿಗೆ ಒಪ್ಪಿಸುವರು. ಸೀತೆಯು ಭೂಮಿಯ ಗರ್ಭದಲ್ಲಿ ಗುಪ್ತಳಾದುದು ಸ್ವಪ್ನದಂತೆ ಮಾತ್ರ. ಈ ರೀತಿಯಲ್ಲಿ ಕವಿಯು ಕಥೆ ಇದನ್ನು ಸುಖಪರ್ಯವಸಾಯಿಯಾಗಿ ಮಾಡಿರುವನು.

ಮಹಾ ಕವಿಯಾದ ಭವಭೂತಿಯ ಉತ್ತಮೋತ್ತಮ ನಾಟಕದ ಅಲ್ಪವಾದ ಪರಿಚಯವು ಕನ್ನಡಿಗರಾದ ವಾಚಕರಿಗಾಗಲೆಂದು ಅಪೇಕ್ಷಿಸಿ ಬರೆಹವಿದನ್ನು ತಯಾರಿಸಿದ್ದೇವೆ. ಅಮೃತಮಯವಾದ ಅನೇಕ ಪದ್ಯಗಳನ್ನು ಅವತರಿಸುವ ಮೋಹಕ್ಕೆ ಪರರಾಗದೆ ಅವುಗಳ ಛಾಯೆಯಲ್ಲಿ ಮಾತ್ರ ನಡೆದಿದ್ದೇವೆ. ಅವುಗಳ

ರುಚಿಯು ಸಂಸ್ಕೃತದಲ್ಲಿ ಓದಿದರೆ ಮಾತ್ರ ಗೊತ್ತಾಗಬಹುದು. ಈ ಲೇಖನವನ್ನು ಬರೆಯುವಲ್ಲಿ, ಮೂಲ ಸಂಸ್ಕೃತ ನಾಟಕವನ್ನು ಓದಿ ತಿಳಿದುಕೊಳ್ಳುವ ಅಪೇಕ್ಷೆಯು ವಾಚಕರಿಗಾಗಬೇಕೆಂಬ ಉದ್ದೇಶವೇ ಮುಖ್ಯವಾಗಿದೆ. ಪ್ರಸ್ತುತ ವಿಷಯದಲ್ಲಿ ಅನೇಕರು ಬರೆದೇ ಇರುವರು. ಸೂರ್ಯದೇವನಿಗೆ ಅನೇಕರು ನಮಸ್ಕರಿಸುವರು. ಅದೇ ದೃಷ್ಟಿಯಲ್ಲಿ ಭಾರತವರ್ಷಕ್ಕೆ ಅಭಿಮಾನಾಸ್ಪದನಾದ ಕವಿವರ್ಯನ ಅಲ್ಪಸೇವೆ ಇದಾಗಿರುವದು.

ಶೇಷ ಭಿ. ಪಾರಿಶವಾಡ

ಬಳ್ಳಾರಿಯ ಕೈಫಿಯತ್ತು

ಪಂಪಾಂಬಿಕಾನಾಥನಾದ ಶ್ರೀ **ವಿರೂಪಾಕ್ಷೇಶ್ವರ** ಕ್ಷೇತ್ರಕ್ಕೆ ಪೂರ್ವ ಭಾಗದಲ್ಲಿ ಮೂರು ಗಾವುದದ ಮೇಲೆ ಕೇವಲ ಅರಣ್ಯವಾಗಿದ್ದ ಸ್ಥಳದಲ್ಲಿ ಕೆಲವು ಪರ್ವತಗಳುಂಟು. ಈ ಪ್ರದೇಶವು **ಸ್ವಾಯಂಭುವ ಮನು**ವಿನ ಆದಿ ಕೃತಯುಗ ಮೊದಲಾಗಿ ಈ ಕಡೆಗೆ **ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ ಮನು**ವಿನ ಇಪ್ಪತ್ತೆಂಟನೆಯ ಮಹಾ ಯುಗದಲ್ಲಿ **ಕೃತಯುಗ** ಪರ್ಯಂತವೂ ಮನುಷ್ಯ ಸಂಚಾರವಿಲ್ಲದೆ, ವನವಾಸಿಗಳಾಗಿ ಇರುವ ಋಷಿಗಳಿಗೆ ಆಸ್ಪದವಾಗಿತ್ತು. **ತ್ರೇತಾಯುಗ**ದಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. **ದ್ವಾಪರ**ದಲ್ಲಿ **ಹಸ್ತಿನಪುರ**ದ ರಾಜಧಾನಿಯ ರತ್ನ ಸಿಂಹಾಸನಾಧೀಶ್ವರರಾಗಿ ರಾಜ್ಯವಾಳಿದ ಚಂದ್ರವಂಶದ ಅರಸುಗಳು—**ಯಯಾತಿ** ಸಂತತಿಯ **ದುಷ್ಯಂತ** ಮಹಾರಾಯ, ಈತನ ಮಗ **ಭರತ,** ಈ ಸಂತತಿಯವನಾದ **ಶಂತನು** ಚಕ್ರವರ್ತಿ, ಈತನ ಪೌತ್ರನಾದ **ಪಾಂಡುರಾಯ,** ಈತನ ಸಂಬಂಧಿಯಾದ **ದುರ್ಯೋಧನ** ಮಹಾರಾಯ; ಆ ತರುವಾಯ ಪಾಂಡುರಾಯನ ಪುತ್ರನಾದ **ಧರ್ಮರಾಯ**ನು ಹಸ್ತಿನಪುರ ಸಿಂಹಾಸನಾಧೀಶ್ವರನಾಗಿ ರಾಜ್ಯವಾಡುವ ವೇಳೆಯಲ್ಲಿ **ನರ್ಮದಾನದಿ**ಗೆ ದಕ್ಷಿಣ ದೇಶದಲ್ಲಿ **ತುಂಗಭದ್ರಾ** ಮಹಾ ನದಿಗೆ ದಕ್ಷಿಣಕ್ಕೆ ಎರಡು ಹರಿದಾರಿಯಲ್ಲಿ ಇರುವ **ಕುಂತಳನಗರ**ವೆಂಬ ಪಟ್ಟಣದಲ್ಲಿ ಇದ್ದ **ಚಂದ್ರಹಾಸರಾಯ**ನು ಈ ಸೀಮೆಯ ಪ್ರಭುತ್ವವಾಡುವ ವೇಳೆಯಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. ಆ ತರುವಾಯ ಈ ಸ್ಥಳದ ಗುಡ್ಡದ ಮೇಲೆ **ಬಳಾಸುರ**ನೆಂಬ ಒಬ್ಬ ರಾಕ್ಷಸನು ಆಶ್ರಯವಾಡಿಕೊಂಡು ಜೀವ ಕೋಟಿಗಳಿಗೆ ಬಹು ಉಪದ್ರವವಾಡುತ್ತ ಇರಲಾಗಿ, ಸ್ವರ್ಗಲೋಕದಿಂದ ದೇವ ಕನ್ಯಕೆಗಳು ಇಚ್ಛಾ ವಿಹಾರದಲ್ಲಿ ವಿಹರಿಸುತ್ತ ಈ ಪರ್ವತದ ಮೇಲೆ ಖೇಚರ ಮಾರ್ಗದಲ್ಲಿ ಹೋಗುತ್ತಿರಲಾಗಿ, ಈ ಪರ್ವತದಲ್ಲಿ ವಾಸವಾಡಿಕೊಂಡಿರುವ ಬಳಾಸುರನೆಂಬ ದೈತ್ಯನು, ಆ ದೇವ ಕನ್ಯಕೆಗಳನ್ನು ಕಂಡು ಕಾಮಾತುರನಾಗಿ ಅವರಿಗೆ ಉಪದ್ರವ ಕೊಟ್ಟದ್ದರಿಂದ ಆ ದೇವ ಕನ್ನಿಕೆಗಳು ದೇವಲೋಕಕ್ಕೆ ಹೋಗಿ **ದೇವೇಂದ್ರ**ನಿಗೆ ಮೊರೆಯಿಡಲಾಗಿ, ಇಂದ್ರದೇವರು ಬಳಾಸುರನನ್ನು ವಧೆ ಮಾಡುವ ನಿಮಿತ್ತ ಭೂಲೋಕಕ್ಕೆ ಬಂದು ಬಳಾಸುರನ ಸಂಗಡ ಘೋರ ಯುದ್ಧವನ್ನು ಮಾಡಿ ಅವನನ್ನು ವಜ್ರಾಯುಧದಿಂದ ಸಂಹಾರಮಾಡಿದ್ದರಿಂದ ಈ ಗುಡ್ಡಕ್ಕೆ **ಬಳ್ಳಾರಿ** (ಬಳಾರಿ) ಯೆಂಬ ನಾಮವು ಪ್ರಸಿದ್ಧಿಹೊಂದಿತು.

ಕಲಿಯುಗದಲ್ಲಿ **ಬಳ್ಳಾಳರಾಯ**ನ ವಂಶಸ್ಥನಾದ **ಸಿಂಧುಬಳ್ಳಾಳ ರಾಯ**ನು ಇಲ್ಲಿ ರಾಜ್ಯಭಾರವಾಡುತ್ತ ಇರುವ ವೇಳೆಯಲ್ಲಿ ಚತುರಂಗ ಬಲ

ಸಮೇತನಾಗಿ ಬೇಟೆಗೆ ಹೊರಟು ಅರಣ್ಯದಲ್ಲಿ ವ್ಯಾಘ್ರ ಮುಂತಾದ ಕ್ರೂರ ಮೃಗಗಳನ್ನು ಸಂಹಾರಮಾಡುತ್ತ ಈ ಪರ್ವತ ಪ್ರದೇಶಕ್ಕೆ ಬಂದು, ಈ ಪರ್ವತದ ಮೇಲೆ ಇರುವ ಸಿದ್ಧಲೋದಕ ಪೂರಿತವಾಗಿರುವ ಬಿಸ ದೇವಜಾತಕಗಳನ್ನು ಕಂಡು, ಈ ಸ್ಥಳವು ಗ್ರಾಮ ಕಟ್ಟಿಸಲಿಕ್ಕೆ ಚೆನ್ನಾಗಿದ್ದೀತೆಂದು ತಿಳಿದು, ಅರಣ್ಯವನ್ನು ಛೇದಿಸಿ, ಈ ಪರ್ವತಕ್ಕೆ ಪೂರ್ವ ಭಾಗದಲ್ಲಿ ಕೆಳಗೆ ವಿಷ್ಣು ದೇವಾಲಯ, ಶಿವ ದೇವಾಲಯ, ಜೈನ ಬಸ್ತಿಗಳನ್ನು ನಿರ್ಮಿಸಿ, ಇದಕ್ಕೂ ಈ ಪರ್ವತದ ಉತ್ತರ ಭಾಗಕ್ಕೆ ಸಮೀಪವಾಗಿರುವ **ಬಾಲಗುಡ್ಡ**ಕ್ಕೂ ಮಧ್ಯದಲ್ಲಿ ಭೂಮಿ ಸಮನಾಗಿದ್ದ ಸ್ಥಳದಲ್ಲಿ ಪಟ್ಟಣವನ್ನು ಕಟ್ಟಿಸಿ, **ಬಳಹರಿ**ಯೆಂಬ ನಾಮವಿಟ್ಟು ವ್ಯವಹರಿಸಿಕೊಂಡರು. ಅವರ ಆಳಿಕೆಯಾದ ತರುವಾಯ **ಮಲ್ಲರಾಯ**ರ ವಂಶಸ್ಥನಾದ **ಸೋವಿದೇವ** ಅರಸುಗಳು ಶಾಸನಹಾಕಿಸಿದ್ದರು. ಅದು ಬಹಳ ಶಿಥಿಲವಾಗಿದ್ದಿತು. ಅದರಲ್ಲಿ ಹುಡುಕಿ ನೋಡಿದರೆ ಸೋವಿದೇವ ಅರಸುಗಳು ಎಂದು ಕಾಣಿಸುತ್ತದೆ. ಅದೇ ಗ್ರಾಮದಲ್ಲಿ ಇರುವ ಗುಡಿ ಮಡಿಕಟ್ಟು ನೋಡಿದಲ್ಲಿ **ಮಲ್ಲರಾಯ** ವಂಶದವರೂ ಕೆಲವು ಗುಡಿಗಳನ್ನು ಕಟ್ಟಿಸಿದ ಹಾಗೆ ಕಾಣಿಸುತ್ತದೆ. ಈ ಪರ್ವತಕ್ಕೆ ಪೂರ್ವ ಭಾಗದಲ್ಲಿ ಇರುವ ದೇವಾಲಯಗಳು ಯಾವುವೆಂದರೆ—**ಕಾಶೀ ವಿಶ್ವನಾಥ ದೇವಳ, ಮಲ್ಲಿಕಾರ್ಜುನ ದೇವಳ, ಗೌರೀಶ್ವರ ದೇವಳ.**

ತರುವಾಯ **ವಿದ್ಯಾನಗರದ** ರತ್ನಸಿಂಹಾಸನಾಧೀಶ್ವರರಾದ ವೀರಶ್ರೀ **ಬುಕ್ಕರಾಯ** ಮಹಾರಾಯರವರ ಆಳಿಕೆಯು ನಡೆದು ಬಂದಿದ್ದಿತು. ಬುಕ್ಕರಾಯನ ಮಗ **ಹರಿಹರರಾಯ**ರು ಈ ರಾಜ್ಯವನ್ನಾಳಿದರು. ಅವರ ಆಳಿಕೆ ಕೆಲವು ವರ್ಷ ನಡೆದು ಬಂದಿದ್ದಿತು. ಅವರ ಮಗ **ಪ್ರೌಢದೇವರಾಯ**ನೂ ತರುವಾಯ ಅವರ ಮಗ **ಮುಮ್ಮಡಿ ಪ್ರೌಢದೇವರಾಯ**ನೂ ಆಳಿದರು. ತರುವಾಯ **ಸಾಳ್ವ ನರಸಿಂಗರಾಯ**ರವರು ಕೆಲವು ದಿವಸ ಪ್ರಭುತ್ವನಾಡಿದ್ದಾರೆ. ಅವರ ಕಡೆಯಿಂದ **ತಿಮ್ಮಣ್ಣನಾಯಕ**ನೆಂಬಾತನು ಈ ಬಳ್ಳಾರಿ ದೇಶದ ಅಧಿಕಾರ ನಡಿಸಿಕೊಂಡಿರಲಾಗಿ, ಬಳ್ಳಾರಿ ಗುಡ್ಡಕ್ಕೆ ದಕ್ಷಿಣದ **ನಾಗರಕೆರೆ** ಕೆಳಗೆ ಶ್ರೀ ಹಂಪೆ ವಿರೂಪಾಕ್ಷ ದೇವರಿಗೆ ಬಕ್ಕೀದ ಮೋಪಾ ಇನಾಮತಿ ಕೊಟ್ಟು ಶಾ. ಶಕ ೧೪೨೦ನೆಯ ಕಾಳಯುಕ್ತಿ ಸಂವತ್ಸರದ ಆಷಾಢ ಶು॥ ೧೫ ಮಂಗಳವಾರದಲ್ಲಿ ನಮ್ಮ ಧರ್ಮವನ್ನು ದೇವರಿಗೆ ಕೊಟ್ಟು ಕರಿಯ ಕಲ್ಲಿನ ಮೇಲೆ ಶಾಸನವನ್ನು ಹಾಕಿ ಇದ್ದಾರೆ.

ಈ **ನರಸಿಂಗರಾಯ**ರ ಕುಮಾರ **ಅಚ್ಯುತರಾಯ**ರು ಈ ಪರ್ವತಕ್ಕೆ ಪೂರ್ವ ಭಾಗದಲ್ಲಿ ಗುಡಿಯನ್ನು ಕಟ್ಟಿಸಿ ಬಾಗಿಲಿಗೆ ಕೌಲುಕೊಟ್ಟು ಶಾ. ಶ. ೧೪೫೭ನೆಯ ಮನ್ಮಥ ಸಂವತ್ಸರದ ಆಷಾಢ ಬಹುಳ ೧೦ರಲ್ಲಿ ಶಿಲಾ ಶಾಸನ ಹಾಕಿಸಿದ್ದಾರೆ.

ಅವರ ಸಂಬಂಧಿಕಳಾದ **ನಾಗರಮ್ಮ**ನೆಂಬ ಹೆಣ್ಣುಮಗಳು ಪರ್ವತದ ದಕ್ಷಿಣ ಭಾಗಕ್ಕೆ, ತತ್ಪೂರ್ವದಲ್ಲಿ ತನ್ನ ಹೆಸರಿನಲ್ಲಿ ನಾಗರಕೆರೆಯನ್ನು ಕಟ್ಟಿಸಿ,

ಪರ್ವತಕ್ಕೆ ಪೂರ್ವ ಭಾಗದಲ್ಲಿ **ಚೆನ್ನಕೇಶವಸ್ವಾಮಿಯ** ಗುಡಿಯನ್ನು ಕಟ್ಟಿಸಿದನು. **ಅಚ್ಯುತರಾಯ ಕೃಷ್ಣರಾಯರ** ಆಳಿಕೆ ಆದ ಬಳಿಕ ಕೃಷ್ಣರಾಯರ ಅಳಿಯ **ರಾಮರಾಜನು** ಶಾ. ಶ. ೧೪೮೬ನೆಯ ರಕ್ತಾಕ್ಷಿ ಸಂವತ್ಸರದಲ್ಲಿ ಬಿಜಾಪುರದ **ಅಲಿಯದುಲು(ಅದಿಲ್)ಶಾ** ಬಾದಶಹಾ, ದೌಲತಾಬಾದಿನ **ನಿಜಾಮುಶಹಾ** ಬಾದಶಾಹರುಗಳ ಸಂಗಡ ಕೃಷ್ಣಾತೀರದಲ್ಲಿ ಯುದ್ಧವನ್ನು ಮಾಡಿ ರಾಮರಾಜನು ಸೇನಾ ಸಹಿತವಾಗಿ ಹತವಾಗಿ ಹೋದಬಳಿಕ, ಕರ್ನಾಟಕ ದೇಶವನ್ನು ದಖಣಿಯರು ಆಕ್ರಮಿಸಿಕೊಂಡ ಬಳಿಕ, ಬಿಜಾಪುರದ ಅಲಿಯದುಲು ಶಹಾ ಬಾದುಶಹರ ಕೈ ಕೆಳಗೆ ಈ ದಕ್ಷಿಣ ರಾಜ್ಯವು ನಡೆಯುತ್ತಿರಲಾಗಿ, ಬಿಜಾಪುರದ ದೇಶದಲ್ಲಿ ಕೃಷ್ಣಾನದಿಗೆ ಉತ್ತರ ಭಾಗದಲ್ಲಿರುವ **ಮೂರ್ತಿಗಿರಿಯೆಂಬ** ಗ್ರಾಮದಲ್ಲಿ **ಹಂಡೆಕುರುಬ** ಜಾತಿಯವರು ಗೌಡಿಕೆ ಮಾಡಿಕೊಂಡು ಇದ್ದರು. ಅವರ ಸಂತತಿಯ **ಬಾಲದ ಹನುಮಪ್ಪನಾಯಕನು** ಪ್ರತಿದಿನದಲ್ಲಿಯೂ ದೇವರ ಅನುಗ್ರಹದಿಂದ ಬುದ್ಧಿವಂತನೆನಿಸಿಕೊಂಡು ಬಿಜಾಪುರದ ಪಾದುಶಹರ ಅನುಗ್ರಹವನ್ನು ಸಂಪಾದಿಸಿದುದರಿಂದ ಆತನಿಗೆ ಫೌಜುದಾರಿ ನೌಕರಿಯು ಮಾಡಿಕೊಟ್ಟರು. ಕೆಲವು ದಿವಸ ಆ ಕೆಲಸದಲ್ಲಿದ್ದು ಒಂದೆರಡು ಸ್ವಾಮಿ ಕಾರ್ಯದಲ್ಲಿ ಮೆಹನತ್ತು ಮಾಡಿದ್ದು ಕಂಡುಬಂದು ಪಾದುಶಾಹರವರು "**ವಜೀರಪ್ಪನಹ**" ಎಂಬ ಕಿತಾಬು ಕೊಟ್ಟರು.

ಆ ತರುವಾಯ ಕರ್ನಾಟಕ ದೇಶವು ಅರಾಜಕದಿಂದ ಹಾಳಾಗಿರಲಾಗಿ, ಈ ಬಾಲದ ಹನುಮಪ್ಪನಾಯಕನನ್ನು ಕಳುಹಿಸಿದರೆ ರಾಜ್ಯ ಬಸ್ತಿ ಆದೀತೆಂದು ಪಾದುಷಾಹರವರು ತಿಳಿದು ಕೆಲವು ಫೌಜುಕೊಟ್ಟು ಈ ದಕ್ಷಿಣ ಪ್ರಾಂತಕ್ಕೆ ಕಳುಹಿಸಿದರು. ಈತನು ಅಪ್ಪಣೆ ತೆಗೆದುಕೊಂಡು ಬರುವ ವೇಳೆಯಲ್ಲಿ ಪಾದುಷಾಹರವರ ಸಂಗಡ **ಬಳ್ಳಾರಿ, ತೆಕ್ಕಲುಕೋಟೆ, ಕುರುಗೋಡು**—ಈ ಮೂರು ಪರಗಣೆಗಳಿಗೆ **ಸರನಾಡ ಗೌಡಿಕೆ** ಸನ್ನದು ಬರಸಿಕೊಂಡು ಪಾದಷಹಾರವರ ಸಂಗಡ ಅಪ್ಪಣೆ ತೆಗೆದುಕೊಂಡು ಬಾಲದ ಹನುಮಪ್ಪನಾಯಕನು **ಬಂಕಾಪುರಕ್ಕೆ** ಬಂದು ಕಿಲ್ಲೆ ಕಟ್ಟಿಸಿ ಆ ರಾಜ್ಯ ಬಸ್ತಿಮಾಡಿ ಅಲ್ಲಿಂದ ತುಂಗಭದ್ರಾ ಮಹಾನದಿಯನ್ನು ದಾಟಿ ಈ ಸೀಮೆಗೆ ಬಂದು, ಬಳ್ಳಾರಿಯಲ್ಲಿರುವ ಶಾನುಭಾಗ [**ಬುಡ್ಡೆ ತಿಮ್ಮರಸಯ್ಯ**ನೆಂಬಾತನು ಕಸಬಾ ಬಳ್ಳಾರಿ ಈ ತಾಲ್ಲೋಕು ಪೈಕಿ ಕೆಲವು ಹಳ್ಳಿಗಳು ಪೂರ್ವಾರಭ್ಯವಾಗಿ ತಮ್ಮ ಹಿರಿಯರು ಶಾನುಭೋಗಿಕೆ ಮಾಡಿಕೊಂಡುಬಂದ ಪದಕಿ(?); ತಾನು ಸಹ ಈ ಎರಡು ಬಾಬೂ ಮಾಡಿಕೊಂಡು ಇರುವ] ಬುಡ್ಡೆ ತಿಮ್ಮರಸಯ್ಯನನ್ನು ಕರೆಯಿಸಿ, ಹಳ್ಳಿಗಳು ಬಸ್ತಿಮಾಡುವ ನಿಮಿತ್ತ ಈತನಿಗೆ **ದೇಶಾಯಿ ಸ್ವಾಸ್ತಿನಾಡು ಕುಲಕರ್ಣಿಕೆ** ಈ ಪ್ರಕಾರ ನೇಮಕ ಮಾಡಿಕೊಟ್ಟು ಈತನಿಗೆ ವರ್ತನೆ ನೂರಕ್ಕೆ ಐದು ಹೊನ್ನು, ದೇಶಾಯಿ ಸ್ವಾಸ್ತಿಗೆ ನಾಡ ಕುಲಕರ್ಣಿ ಸ್ವಾಸ್ತಿಗೆ ಐದು ಹೊನ್ನು, ಏಕೂನ ಐದು ವರಹ ಈ ಪ್ರಕಾರ ಗ್ರಾಮಗಳ ಮುನಾಸಬು ಹಕ್ಕು, ಭೂಸ್ವಾಸ್ತಿಯನ್ನೂ ಇದರ ಹೊರತು ದೇಶಾಯಿಕೆ ಸ್ವಾಸ್ತಿಗೆ **ಬೊಬ್ಬುಕುಂಟೆ** ಉಂಬಳಿ, ನಾಡ ಕುಲಕರ್ಣಿಕೆ

ಸ್ವಾಸ್ತಿಗೆ **ಚರಕುಂಟೆ** ಉಂಬಳಿಯನ್ನು ಕೊಟ್ಟು ಗ್ರಾಮಗಳ ಬಸ್ತಿಮಾಡುವುದಕ್ಕೆ ಅಪ್ಪಣೆಕೊಟ್ಟನು. ತರುವಾಯ **ಬಸವನಗೌಡ**ನೆಂಬಾತನು ಗ್ರಾಮದ ಗೌಡಿಕೆ ಮಾಡಿಕೊಂಡಿರಲಾಗಿ, ಆತನನ್ನು ಕರೆಯಿಸಿ ಆತನಿಗೆ ಗ್ರಾಮಗೌಡಿಕೆ ಸ್ವಾಸ್ತಿ ನೇಮಕ ಮಾಡಿಕೊಟ್ಟು, ನೂರು ವರಹಕ್ಕೆ ಐದು ಹೊನ್ನಿನ ಪ್ರಕಾರ ವರ್ತನೆ ಗ್ರಾಮಗಳ ಮುನಾಸಬು ಅರಿತು ಭೂಸ್ವಾಸ್ತಿ ಇದರ ಹೊರತು **ಮುಂಡರಗಿ** ಉಂಬಳಿ, ಪಾಲಕಿಗೆ ಒಂದು ಹೊಲವನ್ನು ಕೊಟ್ಟು ಗ್ರಾಮಗಳನ್ನು ಬಸ್ತಿಮಾಡಲಿಕ್ಕೆ ಅಪ್ಪಣೆಕೊಟ್ಟನು.

ಈ ಬಳ್ಳಾರಿ ಗುಡ್ಡದ ಮೇಲೆ ಇರುವ ಉದಕಪೂರಿತವಾದ ದೇವಪಾತ್ರೆಗಳನ್ನು ಕಂಡು ಕಿಲ್ಲೆ ಕಟ್ಟಿಸಿದರೆ ಬಹಳ ಉಪಯೋಗವಿದ್ದೀತೆಂದು ತಿಳಿದು ಗುಡ್ಡದ ಮೇಲೆ ಕಿಲ್ಲೆ ಕಟ್ಟಿಸಿ ತನ್ನ ಠಾಣ್ಯ ಹಾಕಿದನು. ಈ ಗುಡ್ಡಕ್ಕೆ ಉತ್ತರ ಭಾಗದಲ್ಲಿ ಸಿಂಧುಬಲ್ಲಾಳರಾಯನಿಂದ ನಿರ್ಮಿತವಾದ ಬಳ್ಳಾರಿಯೆಂಬ ಗ್ರಾಮವು ರಾಮರಾಜನ ಅಪಾಂತರಕ್ಕೆ ಹಾಳಾಗಿದ್ದುದರಿಂದ ಅದನ್ನು ಬಿಟ್ಟು, ಗುಡ್ಡಕ್ಕೆ ಪೂರ್ವ ಭಾಗದಲ್ಲಿ ಕಿಲ್ಲೆಪೇಟೆ ಕಟ್ಟಿಸಿ ಇಲ್ಲಿ ಮೊಕ್ಕಾಮು ಮಾಡಿಕೊಂಡು ಇದ್ದ ಬಳಿಕ ಬಾಲದ ಹನುಮಪ್ಪನಾಯಕನು ತನ್ನ ಸರನಾಡ ಗೌಡಿಕೆ ಸ್ವಾಸ್ತಿಗೆ ನೂರಕ್ಕೆ ಐದು ಹೊನ್ನು ವರ್ತನೆ ಗ್ರಾಮಗಳ ಮುನಾಸಬು ಭೂಸ್ವಾಸ್ತಿ, **ಎತ್ತಿನ ಬೂದಿಹಾಳು** ಎಂಬ ಗ್ರಾಮವು ಉಂಬಳಿ—ಈ ಪ್ರಕಾರ ಸರನಾಡ ಗೌಡಿಕೆ ಸ್ವಾಸ್ತಿಗೆ ನೌಕರೂರು ಮಾಡಿಸಿಕೊಂಡನು. ತರುವಾಯ **ತೆಕ್ಕಲುಕೋಟೆ, ಕಣೆಕಲ್ಲು, ಕುಂದರ್ಪಿ, ಧರ್ಮಾವರ, ಅನಂತಪುರ, ನಂದ್ಯಾಲ, ಶಿರಿವಾಳ, ಸಿರಗುಪ್ಪೆ, ಶಿನ್ನೂರು, ನಾಗಲಾಪುರ, ಒಡ್ಡುದರೋಜಿ, ಕುರುಗೋಡು** ಮುಂತಾದ ಪರಗಣೆಗಳನ್ನು ಯಾವತ್ತೂ ಠಾಣ್ಯ ಹಾಕಿಕೊಂಡು, ಕೆಲವು ಗ್ರಾಮಗಳಲ್ಲಿ ಕಿಲ್ಲೆಗಳನ್ನು ಕಟ್ಟಿಸಿ ಯಾವತ್ತೂ ರಾಜ್ಯ ಬಸ್ತಿಮಾಡಿದನು.

ಈ ಸಮಾಚಾರವು ಪಾದುಷಾಹರವರಿಗೆ ಅರಿಕೆಯಾದುದರಿಂದ ಬಾಲದ ಹನುಮಪ್ಪನಾಯಕನನ್ನು ಹುಜೂರಿಗೆ ಕರೆಕಳುಹಿಸಿ ಬಹಳ ಬಹುಮಾನ ಮಾಡಿ ಕಳುಹಿಸಿಕೊಟ್ಟರು. ಅಲ್ಲಿಂದ ಬಂದ ಬಳಿಕ ಸದರಿ ಪರಗಣೆಗಳ ವ್ಯವಹಾರ ನೋಡಿಕೊಳ್ಳುತ್ತಿದ್ದು, ಬಿಜಾಪುರದಿಂದ **ಆದವಾನಿ** ಸರಕಾರ ಸುಭೆ ಮಾಡಲಿಕ್ಕೆ ಬಂದ ಸರದಾರರ ಮುಖಾಂತರ ಖಂಡಣಿ ಕಟ್ಟಿಕೊಳ್ಳುತ್ತಿದ್ದನು. ಈ ಬಾಲದ ಹನುಮಪ್ಪನಾಯಕನಿಗೆ ೧. ಹಿರಿಯ ಮಗ **ಅಂಕುಶರಾಯ,** ೨. **ದೇವಪ್ಪನಾಯಕ,** ೩. ಚಿಕ್ಕಮಗ **ಲಿಂಗರಾಮಪ್ಪನಾಯಕ,** ೪. ಹಿರಿಯ **ಮಲುಕಪ್ಪನಾಯಕ,** ೫. **ಚಿಕ್ಕ ಮಲುಕಪ್ಪನಾಯಕ**—ಇಂತು ಐದು ಮಂದಿ ಮಕ್ಕಳು.

ಹಂಪೆಬಾಲದ ಹನುಮಪ್ಪನಾಯಕನು ಈ ಐದು ಮಂದಿ ಮಕ್ಕಳು ಸಹಿತವಾಗಿ ಬಿಜಾಪುರದ ಪಾದುಷಹನ ಭೇಟಿಗೆ ಹೋದ ವೇಳೆಯಲ್ಲಿ ಪಾದುಷಹನು ಸುಂದರರಾದ ಈ ಐದು ಮಂದಿ ಮಕ್ಕಳನ್ನು ನೋಡಿ ಇವರೊಳಗೆ ಒಬ್ಬ ಮಗನನ್ನು ಕೊಟ್ಟರೆ ಸುಂತಿಮಾಡಿ ತನ್ನ ಬಳಿಯಲ್ಲಿ ಇಟ್ಟುಕೊಳ್ಳಬೇಕೆಂದು

ಮನಸ್ಸಿನಲ್ಲಿ ಮಾಡಿಕೊಂಡು ಹಂಪೆಬಾಲದ ಹನುಮಪ್ಪನಾಯಕನನ್ನು ಕಂಡು, “ನಿನ್ನ ಮಕ್ಕಳೊಳಗೆ ಒಬ್ಬ ಮಗನನ್ನು ನನಗೆ ಕೊಡು”—ಎಂದು ಕೇಳಿದಲ್ಲಿ ಈತನು ಬಹಳ ಕೋಪವಾಗಿ ಪಾದುಷಾಹರವರಿಗೆ “ನಿಮ್ಮ ಜನಾನ ಒಳಗೆ ಒಬ್ಬ ಬೀಜವನ್ನು ಕೊಟ್ಟರೆ ಇಂತಹ ಮಗನನ್ನು ಹುಟ್ಟಿಸಿ ಕೊಡುತ್ತೇನೆ”—ಎಂದು ಹೇಳಿ, ತನ್ನ ಠಿಕಾಣಿಗೆ ತನ್ನ ಸೈನ್ಯ ಸಹಿತ ಅದೇ ಕ್ಷಣದಲ್ಲಿ ಹೊರಟು ಬರಲು ಪಾದುಷಹನು ತನ್ನ ಕಡೆ ಫೌಜನ್ನು ಬೆನ್ನುಹತ್ತಿ ಕಳುಹಿಸಲಾಗಿ, ಅವರ ಸಂಗಡ ಯುದ್ಧಮಾಡಿ ಕೃಷ್ಣಾನದಿ ಪಾರಾಗಿ ಈಚೆಯ ದಡಕ್ಕೆ ಬಂದನು. ಪಾದುಷಾಹನ ಫೌಜು ಕೃಷ್ಣಾನದಿಗೆ ಬರಲಾಗಿ ನದಿ ತುಂಬಬಂತು. ಅವರಿಗೆ ಮಾರ್ಗ ಕೂಡದುದರಿಂದ ಬಿಜಾಪುರಕ್ಕೆ ಫೌಜು ತಿರುಗಿ ಹೋಯಿತು. ಹಂಪೆಬಾಲದ ಹನುಮಪ್ಪನಾಯಕನು ತನ್ನ ಐದು ಮಂದಿ ಮಕ್ಕಳು ಸಹಿತವಾಗಿ ಬಳ್ಳಾರಿಗೆ ಬಂದನು. ಈತನು ಕೆಲವು ದಿವಸ ರಾಜ್ಯವಾಳಿದ ಬಳಿಕ ಈತನ ಮಕ್ಕಳು ರಾಜ್ಯವನ್ನು ಹಿರಿಯ ಮಗ ಅಂಕುಶರಾಯನಿಗೆ ಬಂಕಾಪುರದ ಸೀಮೆ, ದೇವಪ್ಪನಾಯಕನಿಗೆ ಶಿರಿವಾಳದ ಸೀಮೆ, ನಿಜ್ಜಮದ ಲಿಂಗರಾಮಪ್ಪನಾಯಕನಿಗೆ ಕುಂದರ್ಪಿ ಸೀಮೆ, ಚಿಕ್ಕ ಮುಲುಕಪ್ಪನಾಯಕನಿಗೆ ಅನಂತಪುರ, ಧರ್ಮಾವರ ವಗೈರೆ ಸೀಮೆ, ಕಿರಿಯ ಮುಲುಕಪ್ಪ ನಾಯಕನಿಗೆ ಬಳ್ಳಾರಿ, ಕುರುಗೋಡು, ಕಿಕ್ಕಲಕೋಟೆ, ತಿಸ್ನೂರು, ಶಿರಗುಪ್ಪೆ, ಮೋಕೆ ವಗೈರೆ—ಈ ಪ್ರಕಾರ ಹಂಚಿಕೊಂಡರು. ಬಳ್ಳಾರಿ, ಕುರುಗೋಡು ವಗೈರೆ ಪರಗಣೆಗಳನ್ನು **ಹಿರೆ ಮುಲುಕಪ್ಪನಾಯಕನು** ಕೆಲವು ದಿವಸ ಆಳಿದನು. ಈತನ ಮಗ **ಸಿದ್ದಪ್ಪನಾಯಕನು** ಕೆಲವು ದಿವಸ ಆಳಿದನು. ಬಳಿಕ ಈತನ ಮಗ **ಹಿರೆ ರಾಮಪ್ಪನಾಯಕನು** ಕೆಲವು ದಿವಸ ಆಳಿದನು. ಈ ನಾಲ್ಕು ಮಂದಿಯ ಆಳಿಕೆಯೊಳಗೆ ಬಳ್ಳಾರಿ ಪರಗಣೆ ಗ್ರಾಮಗಳ ವಿವರ:—(೧) ಕಸಬಾ ಬಳ್ಳಾರಿ, (೨) ಶಿರಗುಪ್ಪೆ, (೩) ಸಂಗನಕಲ್ಲು, (೪) ಬಸಲಹಳ್ಳಿ, (೫) ಬೇವಿನಹಳ್ಳಿ, (೬) ಹದ್ದಿನಗುಂಡು, (೭) ಮಾರಿನಾಯಕನದೊಡ್ಡಿ, (೮) ಕಕ್ಕಬೇವಿನಹಳ್ಳಿ, (೯) ಚಿಕ್ಕ ಬಳ್ಳಾರಿ (ಗುಡ್ಡಕ್ಕೆ ಪಶ್ಚಿಮದಲ್ಲಿ ಕೆಲವು ಮನೆಗಳು ಇದ್ದುದರಿಂದ “ಚಿಕ್ಕ ಬಳ್ಳಾರಿ” ಎಂದು ಹೆಸರು), (೧೦) ಶಿರಿವಾಪುರ—ಅಂತು ೧೦; (೧) ಅಮರಾಪುರ, (೨) ರಂಕರಬಂಡೆ, (೩) ಇಭರಾಮಪುರ, (೪) ಬೊಬ್ಬಕುಂಟೆ, (೫) ಗೂನಹಾಳು, (೬) ಹಂದರಹಾಳು, (೭) ಚರಕುಂಟೆ, (೮) ಪಾದ ಬೂದಿಹಾಳು, (೯) ಮುಂಡರಗಿ, (೧೦) ಕೃಷ್ಣಾಪುರ. (೧೧) ಕೆರೆಹಳ್ಳಿ, (೧೨) ಚಿಕ್ಕಹಾಳು—ಅಂತು ೧೨. (೧) ಎತ್ತಿನ ಬೂದಿಹಾಳು, (೨) ಬುಡ್ಡನಾಯಕನಹಳ್ಳಿ, (೩) ಸಂಜೀವರಾಯನ ಕೋಟೆ, (೪) ಮಿಂಚೇರಿ, (೫) ಹಲ್ಲಕುಂಟೆ, (೬) ಹೊನ್ನಹಳ್ಳಿ, (೭) ಚಿಕ್ಕನಾಯಕನಹಳ್ಳಿ, (೮) ಅಲಿವಹಳ್ಳಿ, (೯) ಬೆಳಗಲ್ಲು, (೧೦) ಮಣೂರು —ಅಂತು ೧೦. ಜುಮ್ಲಾ ಗ್ರಾಮಗಳು ೩೨.

ಈ ನಾಲ್ಕು ಮಂದಿಯು ಶಾ. ಶ. ೧೪೮೯ನೆಯ ಪ್ರಭವ ಸಂವತ್ಸರದ ಲಾಗಾಯಿತು ಶಕ ೧೫೫೪ನೆಯ ಅಂಗೀರಸ ಸಂವತ್ಸರದ ವರೆಗೆ ಅರುವತ್ತಾರು ವರ್ಷ ಆಳಿದ ತರುವಾಯ ಬಿಜಾಪುರದ ಪಾದುಷಾಹನವರ ಕಡೆಯಿಂದ **ಬಡೇ**

ಸಾಹೇಬನೆಂಬ ಸರದಾರನ ಸಂಗಡ ಫೌಜು ಬಂದು ಬಳ್ಳಾರಿ ಸಮೀಪದಲ್ಲಿ ಇಳಿದು ಭೇಟಿ ನಿಮಿತ್ತವಾಗಿ ಹಿರಿಯ ರಾಮಪ್ಪನಾಯಕನನ್ನು ಕರೆಕಳುಹಿಸಿ, ಅವನನ್ನು ಹಿಡಿದುಕೊಂಡು ಬಿಜಾಪುರಕ್ಕೆ ಕಳುಹಿಸಿಕೊಟ್ಟು, ಬಳ್ಳಾರಿಯಲ್ಲಿ ಠಾಣ್ಯಹಾಕಿ, ಸದರೀ ಒಡೇಸಾಹೇಬನು ಶಕ ೧೬೧೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೬೨೧ನೆಯ ಪ್ರಮಾದಿ ಸಂವತ್ಸರದ ವರೆಗೆ— ಏಳುವರ್ಷ ವ್ಯವಹಾರ ಮಾಡಿದನು.

ತರುವಾಯ ಈತನ ಅಮಲು ತಗ್ಗಿರಲು ಮಾಡಿ **ಕರೀಮುಸಾಹೇಬ**ನೆಂಬ ಸರದಾರನನ್ನು ಫೌಜು ಸಹ ಕಳುಹಿಸಲಾಗಿ, ಆತನು ಬಂದು ಠಾಣ್ಯ ಹಾಕಿ ಕೊಂಡು ಶಕ ೧೬೨೨ನೆಯ ವಿಕ್ರಮ ಸಂವತ್ಸರದ ಲಾಗಾಯಿತು ೧೬೨೬ನೆಯ ತಾರಣ ಸಂವತ್ಸರದ ವರೆಗೆ—೪ ವರ್ಷ ವ್ಯವಹಾರ ಮಾಡಿದನು.

ಈತನ ತರುವಾಯ ಪಾದಷಹಾನವರ ಕಡೆಯಿಂದ ಆದವಾನಿ ಸುಭೆ ಮಾಡ ಲಿಕ್ಕೆ **ಸಿದ್ದಿ ಮಸೂದ್ ಖಾನನು** ಬಂದು ಆದವಾನಿಯಲ್ಲಿದ್ದು ಬಳ್ಳಾರಿ ವ್ಯವ ಹಾರ ಮಾಡಿದನು. ಆ ವೇಳೆಯಲ್ಲಿ **ತಿಮ್ಮಾಜಿ** ಎಂಬವನಿಗೆ ಸನ್ನದು ಬರೆಯಿಸಿ ಕೊಟ್ಟು ಬಳ್ಳಾರಿ ತಾಲ್ಲೂಕು, ತೆಕ್ಕಲಕೋಟೆ, ಸಿರಗುಪ್ಪೆ, ರೂಪನಗುಡಿ, ಮೋಕ್ಕ, ಕಣೆಕಲ್ಲು ಸಮ್ಮತು ವ್ಯವರಹಾಳು ಈ ಪ್ರಕಾರ ಏಳುಪರಗಣೆ ಸರದೇಶ ಗತಿ ಮೊಕರೂರ್ ಮಾಡಿಸಿ ಕಳುಹಿಸಿಕೊಟ್ಟರು. ಈತನಿಗೆ ನೂರಕ್ಕೆ ಐದು ಹೊನ್ನು ವರ್ತನೆ, ಗ್ರಾಮ ಒಂದಕ್ಕೆ ಮುನಾಸಬು ನೋಡಿ ಭೂಸ್ವಾಸ್ತಿ, ಬಳ್ಳಾರಿ ಪರಗಣೆಯ ಪೈಕಿಯಲ್ಲಿ ಅಮರಾಪುರವೆಂಬ ಗ್ರಾಮ ಉಂಬಳಿ, ಈ ಪ್ರಕಾರ ಕೊಟ್ಟು ಕಳುಹಿಸಿದರು. ಸಿದ್ದಿ ಮಸೂದಖಾನನು ಆಳಿದ ಶಕ ೧೬೨೭ ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು ಶಕ ೧೬೩೮ನೆಯ ದುರ್ಮುಖಿ ಸಂವತ್ಸರದ ವರೆಗೆ ಹನ್ನೆರಡು ವರ್ಷ ವ್ಯವಹಾರ ಮಾಡಿದನು. ಮಸೂದ ಸಾಹೇಬರವರ ಸಂಗಡ ಕೆಲವು ದಿವಸ **ರಾಮಪ್ಪನಾಯಕ**ನು ಮಿಲಾಕತ್ತು ಆಗಿ ಬಂದು ವ್ಯವಹಾರ ಮಾಡಿದನು. ತರುವಾಯ ರಾಮಪ್ಪನಾಯಕನನ್ನು ಪುನಃ ಬಿಜಾಪುರಕ್ಕೆ ತೆಗೆದುಕೊಂಡು ಹೋದರು. ಬಳಿಕ ಮಸೂದ ಸಾಹೇಬ ರವರ ಕಡೆ **ಬಾಬಾಸಾಹೇಬ**ನೆಂಬಾತನು ವ್ಯವಹಾರಮಾಡಿದನು.

ತರುವಾಯ ಕಂದನೂಲು ವಗೈರೆ ಮೊಗಲಾಯಿಯವರು ಶಕ ೧೬೩೯ನೆಯ ಹೇವಿಳಂಬಿ ಸಂವತ್ಸರದ ಲಾಗಾಯಿತು ಶಕ ೧೬೭೪ನೆಯ ಅಂಗೀರಸ ಸಂವತ್ಸರದ ವರೆಗೆ (ವರ್ಷ ೩೫) ವ್ಯವಹಾರಮಾಡಿದರು. ಇವರ ಆಳಿಕೆಯೊಳಗೆ ಹಂಡೆಯವರ ಸಂಬಂಧಿಗಳು ಕೆಲವು ದಿವಸ ಬಂದು ಕೆಲವು ಕೆಲವು ಗ್ರಾಮಗಳನ್ನು ಸ್ವಾಧೀನ ಮಾಡಿಕೊಳ್ಳುತ್ತಿದ್ದರು. ತರುವಾಯ ಕಂದನೂಲವರ ಆಳಿಕೆ ಆದಮೇಲೆ **ಹಂಡೆ ಹಿರೆಯ ಮಲುಕಪ್ಪನಾಯಕ**ನ ಮಗ **ಚಿಕ್ಕಮಲುಕಪ್ಪ**ನಿಗೆ ಆನೇ ಗೊಂದಿ ಅರಸರು ತಮ್ಮ ತಾಲೂಕು ಪೈಕಿ **ಮುದ್ದಲಾಪುರ**ವೆಂಬ ಗ್ರಾಮ ಜಹಗೀರು ಕೊಟ್ಟಿರಲಾಗಿ ಆತನು ಆ ಗ್ರಾಮವನ್ನು, ಬಳ್ಳಾರಿ ಸೀಮೆಯ

ಪೈಕಿ **ಮಣೂರು** ಎಂಬ ಗ್ರಾಮವನ್ನೂ ಒಬ್ಬರಿಗೂ ತಾಣ್ಯ ಕೊಡದೆ ಬಲುಕಾಯಿಸಿ ಕೊಂಡು ಲೂಟಾಯಿಸಿಕೊಂಡು ಇದ್ದನು.

ಚಿಕ್ಕ ಮಲಕಪ್ಪನ ಮಗ **ಚಿಕ್ಕನಾಯಕ ಸಾಹೇಬ:**—ಇವನು ತಂದೆ ಇದ್ದವೇಳೆಗೆ ಮುದ್ದಲಾಪುರ, ಮಣೂರು ಈ ಎರಡು ಗ್ರಾಮಗಳನ್ನೂ ಅನುಭವಿಸಿ ಕೊಂಡಿದ್ದನು. ಚಿಕ್ಕನಾಯಕ ಸಾಹೇಬನ ಹೆಂಡತಿ **ಸಂಗನಾಗರಿ**ಯೆಂಬ ಹೆಣ್ಣಿನ ಮಗಳ ಹೊಟ್ಟೆಯಲ್ಲಿ **ದ್ಯಾವಪ್ಪನಾಯಕ**ನು ಹುಟ್ಟಿದನು. ಸಂಗನಾಗರಿಯು ಆನೆಗೊಂದಿ ಅರಸುಗಳನ್ನು ಕೇಳಿಕೊಂಡು ಕೆಲವು ಮಂದಿಯನ್ನು ಜಮಾಯಿಸಿ ಕೊಂಡು ಒಂದು ಉಪಾಯವನಾಡಿ ಬಳ್ಳಾರಿ ಕಿಲ್ಲೆ ತಾಣ್ಯ ಹಾಕಿಕೊಂಡು ದ್ಯಾವಪ್ಪ ನಾಯಕನಿಗೆ ಪಟ್ಟ ಕಟ್ಟಿದಳು. ದ್ಯಾವಪ್ಪನಾಯಕನು ಪ್ರಬಲನಾಗಿ ಕುರು ಗೋಡು, ತೆಕ್ಕಲಕೋಟೆ ಸಹ ತಾಣ್ಯ ಹಾಕಿಕೊಂಡು ಈ ಮೂರು ಪರಗಣೆ ಗಳನ್ನು ಶಕ ೧೬೧೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೬೩೦ ನೆಯ ಸರ್ವಧಾರಿ ಸಂವತ್ಸರದ ವರೆಗೆ ೧೬ ವರ್ಷ ಆಳಿದನು. ಸದರಿ ದ್ಯಾವಪ್ಪ ನಾಯಕನ ಮಕ್ಕಳು **ಹನುಮಪ್ಪನಾಯಕ, ಹಿರಿಯ ರಾಮಪ್ಪನಾಯಕ, ಚಿಕ್ಕ ರಾಮಪ್ಪನಾಯಕ** ಈ ಮೂರು ಮಂದಿ. ಹಿರಿಯ ಹನುಮಪ್ಪನಾಯಕನು ರಾಜ್ಯವಾಳಿದುದು ಶಕ ೧೬೩೧ನೆಯ ವಿರೋಧಿ ಸಂವತ್ಸರದ ಲಾಗಾಯಿತು ಶಕ ೧೬೪೦ನೆಯ ವಿಳಂಬಿ ಸಂವತ್ಸರದ ವರೆಗೆ ಹತ್ತು ವರ್ಷ. ತರುವಾಯ ಹಿರೆರಾಮಪ್ಪನಾಯಕ ಆಳಿದ್ದು ಶಕ ೧೬೪೧ನೆಯ ವಿಕಾರಿ ಸಂವತ್ಸರದ ಲಾಗಾ ಯಿತು ಶಕ ೧೬೪೭ನೆಯ ವಿಶ್ವಾವಸು ಸಂವತ್ಸರದ ವರೆಗೆ ಏಳು ವರ್ಷ. ಇವನು ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ ಈ ಮೂರು ಪರಗಣೆ ಮಾತ್ರ ಆಳಿದನು. ತರವಾಯ ಈತನ ತಮ್ಮ ಚಿಕ್ಕ ರಾಮಪ್ಪನಾಯಕನು ಆಳಿದುದು ಶಕ ೧೬೪೮ನೆಯ ಪರಾಭವ ಸಂವತ್ಸರದ ಲಾಗಾಯಿತು ಶಕ ೧೬೫೨ನೆಯ ಸಾಧಾರಣ ಸಂವತ್ಸರದ ವರೆಗೆ ಐದು ವರ್ಷ. ಈತನು ಕೆಳಗಿನ ಕೋಟೆಯನ್ನು ಸಮಗ್ರ ಕಟ್ಟಿಸಿದನು. ತರುವಾಯ ಈ ಅಣ್ಣತಮ್ಮಂದಿರು ಮೂರು ಮಂದಿಗೂ ಸಂತಾನವಿಲ್ಲದೆಹೋದ ಕಾರಣ, ಚಿಕ್ಕ ರಾಮಪ್ಪನಾಯಕನ ಅಂತ್ಯ ಕಾಲದಲ್ಲಿ ಇವರ ಬಲತಾಯಿ ನೀಲಮ್ಮನೂ, ಬಾಲದ ಹನುಮಪ್ಪನಾಯಕನ ಹಿರಿಯ ಮಗ ಅಂಕುಶನಾಯಕನ ವಂಶದ **ಸಿದ್ದಪ್ಪನಾಯಕ, ಪ್ರಸನ್ನಪ್ಪನಾಯಕ** ಇಬ್ಬರು ಅಣ್ಣತಮ್ಮಂದಿರೂ ಬಂಕಾಪುರದ ಸೀಮೆ ಮೊಗಲಾಯಿ ತಾಣ್ಯವಾಗುವಷ್ಟರಲ್ಲಿ ಅಲ್ಲಿಂದ ಹೊರಟುಬಂದು, ಸಂದ್ಯಾಲ, ಸಿರವಾಳದ ಸೀಮೆ ಮೊಗಲಾಯಿ ತಾಣ್ಯ ವಾದಬಳಿಕ ಸಿದ್ದಪ್ಪನಾಯಕನು ಹಂದರಹಾಳಿಗೂ, ಪ್ರಸನ್ನಪ್ಪನು **ಅನಂತ ಪುರ**ಕ್ಕೂ ಹೋದರು. ಹಂದರಹಾಳಿಗೆ ಬಂದ ಸಿದ್ದಪ್ಪನಾಯಕನ ಮಗ **ರಾಮಪ್ಪನಾಯಕ, ಹನುಮಪ್ಪನಾಯಕ** ಈ ಇಬ್ಬರು ಮಕ್ಕಳನ್ನೂ ನೀಲಮ್ಮನು ಬಳ್ಳಾರಿಗೆ ಕರೆದುಕೊಂಡು ಬಂದು ರಾಮಪ್ಪನಾಯಕನಿಗೆ **ಪಟ್ಟ** ಕಟ್ಟಿಸಿದಳು. ರಾಮಪ್ಪನಾಯಕ ಚಿಕ್ಕಾತನಾದಕಾರಣ, **ನೀಲಮ್ಮ**ನು ಚಿಕ್ಕಾತ

ನನ್ನು ಮುಂದಿಟ್ಟುಕೊಂಡು ವ್ಯವಹಾರಮಾಡುತ್ತಿರಲಾಗಿ, ಮೊಗಲಾಯಿ ಆದವಾನಿಯವರ ಫೌಜು ಬಂದು ತೆಕ್ಕಲಕೋಟೆ ಠಾಣ್ಯಾಹಾಕಿಕೊಂಡಿತು. ಬಳ್ಳಾರಿ, ಕುರುಗೋಡು ಎರಡು ಪರಗಣೆಗಳಲ್ಲಿ ಮಾತ್ರ ಇವಳು ವ್ಯವಹಾರಮಾಡಿದಳು. ಸೀಲಮ್ಮನಿಗೂ ರಾಮಪ್ಪನಾಯಕನಿಗೂ ಮನಸ್ತಾಪವಾದಕಾರಣ ಇವನು ಸೀಲಮ್ಮನನ್ನು ಕಡಿಸಿ ಹಾಕಿಸಿದನು. ರಾಮಪ್ಪನಾಯಕನು ಪ್ರಬಲನಾಗಿ ಗ್ರಾಮಕ್ಕೆ ಉತ್ತರ ಭಾಗದಲ್ಲಿ ಹೊಂಡ ೧. ಹೊಂಡಕ್ಕೆ ಪಶ್ಚಿಮದಲ್ಲಿ ಸಿಂಹಾಸನ ೧. ಹೊಂಡಕ್ಕೆ ದಕ್ಷಿಣದಲ್ಲಿ ಹೊಸದಾಗಿ ಇವುಗಳನ್ನು ಕಟ್ಟಿಸಿ ಬಳ್ಳಾರಿ ಕೋಟೆ ಬಿದ್ದು ಬಿದ್ದಲ್ಲಿ ದುರಸ್ತಾಗಿ ಕಟ್ಟಿಸಿ ಅಗಳ್ತೆಯನ್ನು ಅಗೆಯಿಸಿದನು. ಗ್ರಾಮಕ್ಕೆ ಪಶ್ಚಿಮದಲ್ಲಿ ನಾಗರಕೆರೆಗೆ ದಕ್ಷಿಣದ ಕಲ್ಲುಕಟ್ಟಿದ ಭಾವಿಯನ್ನು ನಿರ್ಮಿತಮಾಡಿ ವ್ಯವಹಾರ ಮಾಡಿದನು. ಮಂದಿ ಕುದುರೆಗಳನ್ನು ಜಮಾಯಿಸಿಕೊಂಡು ಠಾಣ್ಯ ಹಾಕಿಕೊಂಡ ವಿವರ:—ಆನೆಗೊಂದಿಯವರ ರಾಜ್ಯದ ಪೈಕಿ:—ಶಿರಿಗೆರೆ, ಎಮ್ಮಿಗನೂರು, ಈ ಪ್ರಕಾರ ಎರಡು ಕಿಲ್ಲೆ ಠಾಣ್ಯಾಹಾಕಿಕೊಂಡು ತೆಕ್ಕಲಕೋಟೆಯಮೇಲೆ ಶರಾರತ್ತುಮಾಡಿ ಎರಡು ಮೂರಾವೃತ್ತಿ ಹೋಗಿ ಮುತ್ತಿಕೊಳ್ಳಲಾಗಿ ಈತನ ತಹಾರ ಸಾಗದೆ ತೆಕ್ಕಲುಕೋಟೆಯನ್ನು ಬಿಟ್ಟು ಬಂದನು. ಈ ಪ್ರಕಾರ ಕೆಲವು ದಿವಸ ರಾಜ್ಯಮಾಡಿಕೊಂಡಿದ್ದು ಒಂದಾನೊಂದು ಸಮಯದಲ್ಲಿ ಹಂಡೆ ಅನಂತಪುರದಲ್ಲಿದ್ದ ಚಿಕ್ಕ ಮಲುಕಪ್ಪನಾಯಕನ ಸಂತತಿಯವನಾದ ರಾಮಪ್ಪನಾಯಕನನ್ನು ಬಳ್ಳಾರಿಗೆ ಕರೆಯಿಸಿ ದಿವಾಣದ ಒಳಗೆ ಇಳಿಸಿ ಬಹುಮಾನಮಾಡಿ ಉಡುಗರೆಗಳನ್ನು ಕೊಟ್ಟು, ಅವನ ಸಂಗಡ ಬಂದ ಕಾರಕೂನ, ಸರದಾರ, ನಾಯಕವಾಡಿ, ಕಾಲುಪೇದೆ, ಖಿಜಮತಗಾರರಿಗೆ ಸಹ ಅವರವರ ಯೋಗ್ಯತಾನುಸಾರ ಉಡುಗರೆಗಳನ್ನು ಕೊಟ್ಟು, ಬಂದ ಸಮಸ್ತರಿಗೂ ಸಂತೋಷಮಾಡಿ, "ನೀವು ನಮ್ಮ ವಂಶದವರು. ಈ ದೌಲತ್ತು ನಿಮ್ಮದೇ ಇದ್ದೀತು" ಎಂದು ಹೇಳಿ ಈ ಹಂಡೆ ಅನಂತಪುರದಿಂದ ಬಂದ ರಾಮಪ್ಪನಾಯಕನಿಗೆ ಬಳ್ಳಾರಿಯಲ್ಲಿರುವ ರಾಮಪ್ಪನಾಯಕನು ಉಪಚಾರ ಹೇಳಿ ಅನುಂಡಿಯ ಪರ್ಯಂತರ ತನ್ನ ಮಂದಿ ಕುದುರೆಗಳ ಸಂಗಡ ಹೋಗಿ ಕಳುಹಿಸಿಕೊಟ್ಟನು. ಅವರು ಹಂಡೆ ಅನಂತಪುರಕ್ಕೆ ಹೋದರು. ರಾಮಪ್ಪನಾಯಕನು ಬಳ್ಳಾರಿಗೆ ಬಂದನು.

ಆ ತರುವಾಯ ತಿಂಗಳು ಆದ ಬಳಿಕ ಅನಂತಪುರದಿಂದ ಕಾರಕೂನರು ಬಂದು—"ನಮ್ಮ ದೊರೆಗಳು ತಮ್ಮನ್ನು ಕರೆದುಕೊಂಡು ಬರುವುದೆಂದು ಆಜ್ಞೆ ಕೊಟ್ಟಿದ್ದಾರೆ, ತಾವು ಬಂದು ಸರ್ವರ ಭೇಟಿ ತೆಗೆದುಕೊಂಡು ಬರಬೇಕು" ಎಂದು ಮನವಿ ಮಾಡಿಕೊಂಡದ್ದರಿಂದ, ಸದರಿ ಬಳ್ಳಾರಿಯಲ್ಲಿರುವ ರಾಮಪ್ಪನಾಯಕನು ತನ್ನ ಮಂದಿ, ಕುದುರೆ, ಬಾಣ ವಗೈರೆ ಸನ್ನಾಹಮಾಡಿಕೊಂಡು ಅನಂತಪುರಕ್ಕೆ ಹೋಗುವಷ್ಟಕ್ಕೆ ಅನಂತಪುರದವರು ಈತನನ್ನು ಕರೆದುಕೊಂಡು ಹೋಗಿ ಮಂದಿ, ಕುದುರೆ ಸಹ ದಿವಾಣದಲ್ಲಿ ಇಳಿಸಿ ಬಹಳ ಉಪಚಾರಮಾಡಿದರು. ಈ ಪ್ರಕಾರ ನಾಲ್ಕು ದಿವಸವಿದ್ದು ಗ್ರಾಮದೊಳಗೆ ಇರುವ ಹೂಡೆ, ಹುಲಿಮುಖ

ಮುಂಗಾದವರುಗಳಲ್ಲಿ, ತನ್ನ ದಂಡಿ ಠಾಣ್ಯ ಹಾಕಿ, ಅನಂತಪುರದಲ್ಲಿರುವ ರಾಮಪ್ಪ ನಾಯಕನು ಪಜಾಮತ್ತು ಮಾಡಿಸಿಕೊಳ್ಳುತ್ತಿರಲಾಗಿ ಬಳ್ಳಾರಿಯ ರಾಮಪ್ಪ ನಾಯಕನು ಇವನ ತಲೆ ಹೊಡಿಸಿ ದಿವಾಣದೊಳಗೆ ಇದ್ದ ಸಾಮಾನು ಸಹವಾಗಿ ತೆಗೆದುಕೊಂಡು ಅಲ್ಲಿದ್ದ ಕಾರಕೂನರು, ದೊರೆಗಳ ಮಕ್ಕಳು, ದೊರೆಗಳ ಹೆಂಡಿರು ಸರ್ವರನ್ನೂ ಖೈದಿನಲ್ಲಿಟ್ಟು ಅನಂತಪುರದಲ್ಲಿ ಕೂಡಲೆ ಠಾಣ್ಯ ಹಾಕಿಕೊಂಡು, ಕೊರುಗೋಡಿಗೆ ಹೋಗಿ ಮುತ್ತಿಕೊಂಡನು. ಕೊರುಗೋಡದವರು ಠಾಣ್ಯ ಕೊಡಲಿಲ್ಲ. ಅಷ್ಟರೊಳಗೆ ರಾಮಪ್ಪನಾಯಕನಿಗೆ ಶರೀರದಲ್ಲಿ ಆಯಾಸವಾಗಲು ಅನಂತಪುರದಿಂದ ಕೈದು ಮಾಡಿಟ್ಟವರನ್ನೆಲ್ಲ ಬಳ್ಳಾರಿಗೆ ತೆಗೆದುಕೊಂಡು ಬರುವ ವೇಳೆಯಲ್ಲಿ ಅನಂತಪುರದ ಕಿಲ್ಲೆದಾರಿಯನ್ನು ಜಿಂದಾಬಾಸಗೆ ಕೊಟ್ಟು ಕೆಲವು ದಂಡಿಯನ್ನು ಠಾಣ್ಯಹಾಕಿ ಕಿಲ್ಲೆ ಬಂದೋಬಸ್ತು ಮಾಡಿ, ಅಲ್ಲಿಂದ ಎಂಟು ಜನ ಅರಸು ಮಕ್ಕಳು, ನಾಲ್ಕು ಜನ ದೊರೆಗಳ ಹೆಂಡಿರು, ಕರೋಲಿ ರಾಮಪ್ಪ, ದೊರೆಗಳ ಅಳಿಯ ಈ ಖೈದಿ ಜನರನ್ನೂ ಎರಡು ಆನೆ, ಎರಡು ಒಂಟೆ, ಪಾಲಕಿ ಸಾತು ಸಾಮಾನು ಕಲಂ ತೋಷಾಖಾನೆ ವಗೈರೆ ತಂದ ಕಲಂ, ಈ ಪ್ರಕಾರ ಸಾಮುಗ್ರಿಗಳನ್ನೂ ಸಾಗಿಸಿಕೊಂಡು ಬಳ್ಳಾರಿಗೆ ಬಂದು, ಸೆರೆ ಹಿಡಿದುಕೊಂಡು ಬಂದ ಸದರಿ ೧೩ ದಂಡಿಯನ್ನೂ ಗುಡ್ಡದ ಮೇಲೆ ಬೇಡಿ ಹಾಕಿಸಿ ಪಾರಾದಲ್ಲಿಟ್ಟನು. ರಾಮಪ್ಪನಾಯಕನಿಗೆ ಶರೀರದಲ್ಲಿ ಆಯಾಸವಾಗಿ ಕರೆ ದುಯ್ಯಲ್ಲಿ ಬಿದ್ದು ಬಹಳ ಶ್ರಮವಾಗಿರಲಾಗಿ, ಹಂಡೆ ಅನಂತಪುರದಲ್ಲಿ ಠಾಣ್ಯ ಇರುವ ಜಿಂದಾಬಾಸ ವಗೈರೆ ಠಾಣ್ಯದಾರರಿಗೆ ಹೊರಗೆ ಹೊರಡದ ಹಾಗೆ ಅನಂತಪುರದ ದೊರೆಗಳ ಸಂಬಂಧಿಕರು ಹಳ್ಳಿಗಳು ಕಿಲ್ಲೆಗಳು ಬಂದೋಬಸ್ತು ಮಾಡಿಕೊಂಡು ಪಥ ಬಂದು ಮಾಡುವಷ್ಟಕ್ಕೆ, ಆ ಕಿಲ್ಲೆಯಲ್ಲಿ ನಿಂದಿರಲಾರದೆ ಜಿಂದಾಬಾಸನು ರಾತ್ರಿಯಲ್ಲಿ ತನ್ನ ದಂಡಿ ಸಹ ಅನಂತಪುರದ ಠಾಣ್ಯ ಬಿಟ್ಟು ಬಳ್ಳಾರಿಗೆ ಹೊರಟು ಬಂದನು. ಅನಂತಪುರದಲ್ಲಿದ್ದವರು ಠಾಣ್ಯ ಹಾಕಿಕೊಂಡರು.

ಬಳ್ಳಾರಿಯಲ್ಲಿ ಗುಡ್ಡದ ಮೇಲೆ ಸೆರೆಹಾಕಿದ್ದ ಅನಂತಪುರದ ಅರಸು ಮಕ್ಕಳು ಎಂಟು ದಂಡಿಯಲ್ಲಿ ಹಿರಿಯ ಮಗ **ಸಿದ್ದರಾಮಪ್ಪನಾಯಕ**ನನ್ನು **ಕರೋಲಿ ಬಸವಪ್ಪ**ನೆಂಬಾತನು ರಾತ್ರಿವೇಳೆಯಲ್ಲಿ ಪಹರಾದವರನ್ನು ಒಳ್ಳೆಯವರನ್ನು ಮಾಡಿಕೊಂಡು ಸಿದ್ದರಾಮಪ್ಪನಾಯಕನನ್ನು ಕರೆದುಕೊಂಡು ಬೇಡಿಯ ಸಂಗಡಲೆ ಗುಡ್ಡಕ್ಕೆ ಪಶ್ಚಿಮ **ನಾಗರಕೆರೆ**ಯ ಜಾರಿಕೆ ಬಂಡೆಯಮೇಲೆ ಜರುಗಿಸಿಕೊಂಡು ಕೆಳಗೆ ಬಂದು, **ಹಿರೆಯಹಾಳು** ತಾಲೂಕು ಪೈಕಿ **ಓಬಳಾಪುರ**ವೆಂಬ ಗ್ರಾಮವು ಆರೇರ ಠಾಣ್ಯವಿರಲಾಗಿ ಆ ಗ್ರಾಮಕ್ಕೆ ಇಬ್ಬರೂ ಬೇಡಿಯ ಸಂಗಡ ರಾತ್ರಿಯಲ್ಲಿ ಹೋಗಲಾಗಿ ಆ ಗ್ರಾಮದವರು ಇವರನ್ನು ಗ್ರಾಮದೊಳಗೆ ಕರೆದುಕೊಂಡು ಹೋಗಿ ಬೇಡಿ ಕಡಿಸಿ, ಅಲ್ಲಿಂದ ಹಿರೇಹಾಳಿಗೆ ಕಳುಹಿಸಿದರು. ಹಿರೇಹಾಳಿನಲ್ಲಿ ಆರೇರ ಕಡೆ **ಶಿವಪ್ಪ**ನವರು ವ್ಯವಹಾರ ಮಾಡಿಕೊಂಡಿರ

ಲಾಗಿ ಅನಂತಪುರದ ಸಿದ್ಧರಾಮಪ್ಪನಾಯಕನು, ಕರೋಲಿ ಬಸವಪ್ಪನು ಓಡಿ ಬಂದ ಸಮಾಚಾರ ಕೇಳಿ ಕಿಲ್ಲೆಯೊಳಕ್ಕೆ ಕರೆದುಕೊಂಡು ಹೋಗಿ ಅವನನ್ನು ಪರಾಮರ್ಶೆಮಾಡಿ ಇಟ್ಟುಕೊಂಡು ಅನಂತಪುರಕ್ಕೆ ಕಾಗದ ಬರೆದು ಕಳುಹಿಸಲಾಗಿ ಅಲ್ಲಿಂದ ಮಂದಿ ಕುದುರೆ ಬರಲು ಸಿದ್ಧರಾಮಪ್ಪನಾಯಕನನ್ನು ತೆಗೆದುಕೊಂಡು ಹೋಗಿ ಪಟ್ಟಕಟ್ಟಿದರು. ಸದರಿ ಸಿದ್ಧರಾಮಪ್ಪನಾಯಕ, ಬಸಪ್ಪ ಈ ಎರಡು ಮಂದಿ ಗುಡ್ಡದ ಮೇಲಿನಿಂದ ಓಡಿಹೋದ ಸಮಾಚಾರ ಕೇಳಿ ಬಳ್ಳಾರಿ ರಾಮಪ್ಪನಾಯಕನು ಉಳಿದ ಅರಸುಮಕ್ಕಳು ಏಳು ಮಂದಿಯನ್ನೂ ಹೊಡೆಯಿಸಿಹಾಕಿದನು. ತರುವಾಯ ಕೆಲವು ದಿವಸ ಈತನು ದೊರೆತನ ಮಾಡಿದನು. ಈತನ ಆಳಿಕೆಯ ಶಕ, ಸೀಲಮ್ಮನ ಆಳಿಕೆ ಶಕ ೧೬೫೩ನೆಯ ವಿರೋಧಿಕೃತು ಸಂವತ್ಸರದ ಲಾಗಾಯಿತು ೧೬೫೬ನೆಯ ಆನಂದ ಸಂವತ್ಸರದ ವರೆಗೆ ೪ ವರ್ಷ. ಹಂಡರಹಾಳಿನಲ್ಲಿದ್ದ ರಾಮಪ್ಪನಾಯಕನ ಆಳಿಕೆ ಶಕ ೧೬೫೭ನೆಯ ರಾಕ್ಷಸ ಸಂವತ್ಸರದ ಲಾಗಾಯಿತು ಶಕ ೧೬೮೬ನೆಯ ತಾರಣ ಸಂವತ್ಸರದ ವರೆಗೆ ೩೦ ವರ್ಷ. ಇವನ ಆಳಿಕೆಯಲ್ಲಿ ಮೊಗಲರು ಬಂದು ಸರಹದ್ದು ಗ್ರಾಮಗಳಿಗೆ ಶಹ ಕೊಡಲಾಗಿ ಅವರಿಗೆ ಕೆಲವು ಖಂಡಣಿ ಮುಗಿಸಿಕೊಂಡು ತಮ್ಮನಾದ **ಹನುಮಪ್ಪನಾಯ**ಕನನ್ನು ಓಲು (ಹೊಣೆ) ಕೊಟ್ಟನು. ಮೊಗಲರು ಹನುಮಪ್ಪನಾಯಕನನ್ನು ಓಲು ತೆಗೆದುಕೊಂಡು ಹೋಗಿ ಹಚ್ಚಹಳ್ಳಿ ಕಿಲ್ಲೆಯೊಳಗೆ ಪಹರಾದಲ್ಲಿಟ್ಟರು. ಓಲುಕೊಟ್ಟ ಹನುಮಪ್ಪನಾಯಕನನ್ನು ಬಿಡಿಸಲಿಲ್ಲ. ಆತನು ಪಾರಾದಲ್ಲಿರುತ್ತಿರಲಾಗಿ ದೇವತಾನುಗ್ರಹದಿಂದ ತುಂಗಭದ್ರಾನದಿಯು ರಾತ್ರಿವೇಳೆಯಲ್ಲಿ ಪೂರ್ತಿಯಾಗಿ ಪ್ರವಾಹವು ಬಂದು ಕೆಲವು ಕಿಲ್ಲೆ ಕೆಲವು ಮನೆಗಳು ಸಹಿತವಾಗಿ ಬಿದ್ದುಕೊಂಡು ಹೋಗುವ ಸಮಯದಲ್ಲಿ ಕಾದಿದ್ದ ಓಲೆಯಕಾರರು ತಮ್ಮ ಬದುಕು, ಹೆಂಡಿರು, ಮಕ್ಕಳು ವಗೈರೆ ತಾವು ಸಹ ಬಚಾವು ಆಗುವ ನಿಮಿತ್ತ ಈತನ ಪರವೆ ಬಿಟ್ಟು ತಮ್ಮ ತಮ್ಮ ಮನೆಗಳ ಕಡೆಗೆ ಹೋಗಿ ಜೀವಗಳನ್ನುಳಿಸಿಕೊಂಡರು. ಕೆಲವು ಮಂದಿ ಪ್ರವಾಹದಲ್ಲಿ ಕೊಚ್ಚಿ ಹರಿದು ಹೋದರು. ಅದೇ ಸಮಯದಲ್ಲಿ ಹನುಮಪ್ಪನಾಯಕನು ರಾತ್ರೋರಾತ್ರಿ **ಕೆಂಚನಗೌಡನ ಗುಡ್ಡ**ಕ್ಕೆ ಬರಲಾಗಿ, ಕೆಂಚನಗೌಡನ ಗುಡ್ಡದ **ಪಂಪಾಪತಿಗೌ**ಡನು ಈತನನ್ನು ಕರೆದುಕೊಂಡು ಹೋಗಿ ಬಹಳ ಮಾನಮಾಡಿ ತನ್ನ ಸ್ಥಳದಲ್ಲಿ ಖರ್ಚಿಗೆ ಕೊಟ್ಟು ಬಹಳ ದಿವಸ ಇಟ್ಟುಕೊಂಡಿದ್ದನು. ರಾಮಪ್ಪನಾಯಕನಿಗೂ ಹನುಮಪ್ಪನಾಯಕನಿಗೂ ಈ ಇಬ್ಬರು ಅಣ್ಣತಮ್ಮಂದಿರಿಗೂ ಮನಸ್ಸು ಸೆಟ್ಟಿಗಿಲ್ಲದೆ ಇದ್ದುದರಿಂದ ಹನುಮಪ್ಪನಾಯಕನನ್ನು ಬಳ್ಳಾರಿಗೆ ಕರೆಯಿಸದೆ ರಾಮಪ್ಪನಾಯಕನು ಬಿಟ್ಟು ತಾನೊಬ್ಬನೇ ವ್ಯವಹಾರ ಮಾಡಿದನು. ರಾಮಪ್ಪನಾಯಕನು ದೈವಾಧೀನನಾದ ಕಾರಣ ಕೆಂಚನಗೌಡನ ಗುಡ್ಡಕ್ಕೆ ಕಾರಕೂನರು ಹೋಗಿ ಹನುಮಪ್ಪನಾಯಕನನ್ನು ಕರೆದುಕೊಂಡು ಹೋಗಿ ಪಟ್ಟ ಕಟ್ಟಿದರು.

ಈತನ ಆಳಿಕೆಯೊಳಗೆ **ನಿಜಾಮಲ್ಲಿಖಾನ**ನವರ ಕಡೆ **ಬಸಾಲತ್ತುಜಂಗ ಬಹದರ**ವರು ಬಂದು ಬಳ್ಳಾರಿಗೆ ಮುತ್ತಿಗೆ ಹಾಕಿ ಲಡಾಯಿಮಾಡಿದರು. ಅಷ್ಟರೊಳಗೆ ಸಲ್ಲಾ ಮಾಡಿಕೊಳ್ಳುವಷ್ಟಕ್ಕೆ ದಂಡು ಹೊರಟುಹೋಯಿತು. ಆ ವೇಳೆಯಲ್ಲಿ ರಾಮಪ್ಪನಾಯಕನು ಕಟ್ಟಿಸಿದ್ದ ಹೊಸಪೇಟೆಯು ಹಾಳಾಗಿ ಹೋಯಿತು. ಈ ರಾಮಪ್ಪನಾಯಕನಿಗೂ ಹನುಮಪ್ಪನಾಯಕನಿಗೂ ಆಗದುದರಿಂದ, ಅಣ್ಣನು ಕಟ್ಟಿಸಿದ ಹೊಂಡ ಬಿಚ್ಚಿಸಿ ಆ ಕಲ್ಲು ತರಿಸಿ ಕೋಟೆ ಕಟ್ಟಿಸಿ ಆತನು ಕಟ್ಟಿಸಿದ್ದ ಸಿಂಹಾಸನದ ಕಟ್ಟೆಯನ್ನು ಸಹ ಬಿಚ್ಚಿಸಿದನು. ಸಿಂಹಾಸನವು ಮಾತ್ರ ಇದ್ದಿತು. ಈ ಹನುಮಪ್ಪನಾಯಕನ ಆಳಿಕೆ ಶಕ ೧೬೮೭ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು ಶಕ ೧೬೯೧ನೆಯ ವಿರೋಧಿ ಸಂವತ್ಸರದ ವರೆಗೆ ಸಾಲು ೫.

ತರುವಾಯ ಹನುಮಪ್ಪನಾಯಕನ ಹೆಂಡತಿ **ಪದ್ಮಮ್ಮ**ನು ತನ್ನ ಗಂಡ ಸಾಕಿದ **ದೊಡ್ಡಪ್ಪನಾಯಕ**ನಿರಲಾಗಿ ಅವನಿಗೆ ಪಟ್ಟ ಕಟ್ಟದೆ ತನ್ನ ಅಣ್ಣ **ಚನ್ನಬಸಪ್ಪ**ನ ಮಗ ಒಂದು ವರ್ಷದ ಕೂಸಿಗೆ **ದ್ಯಾವಪ್ಪನಾಯಕ**ನೆಂದು ಹೆಸರಿಟ್ಟು, ಗ್ರಾಮದಲ್ಲಿರುವ ಸಾಮಾಜಿಕರಿಗೂ ತಾಣ್ಯದವರಿಗೂ ರಾಜಿಯಿಲ್ಲದಿದ್ದರೂ ಪಟ್ಟಕಟ್ಟಿಸಿದಳು. ಈಕೆಯು ತಮ್ಮನಾದ ದಳವಾಯಿ ರುದ್ರಪ್ಪ, ಚನ್ನಬಸಪ್ಪನವರು ವ್ಯವಹಾರಮಾಡಲಿಕ್ಕೆ ಕುಳಿತು, ಒಂದು ದಿವಸ ಹನುಮಪ್ಪನಾಯಕನು ಸಾಕಿದ ಮಗ ದೊಡ್ಡಪ್ಪನಾಯಕನನ್ನು ಹೊಡೆದು ಹಾಕಿದರೆ ಸಂಸ್ಥಾನವು ನಮ್ಮದೇ ಆಗುತ್ತದೆಂದು ಆಲೋಚನೆಮಾಡಿ ತನ್ನ ಕಡೆಯ ರಾವುತರನ್ನು ಜಮೆ ಮಾಡಿಕೊಂಡು ಸಂಜೆಗೆ ಬರುತ್ತಿದ್ದಾರೆಂಬ ಸಮಾಚಾರವನ್ನು ರಾಮಪ್ಪನಾಯಕನ ಹೆಂಡತಿ ಕೇಳಿ ನಾಯಕವಾಡಿಗಳನ್ನು ಕರೆಯಿಸಿ ಅವರಿಗೆ ಈ ಸಮಾಚಾರ ಹೇಳಲಾಗಿ, ನಾಯಕವಾಡಿಗಳು ತಮ್ಮ ಮಂದಿ ಸಹವಾಗಿ ಕರೆದುಕೊಂಡು ಬಂದು ದಿವಾಣದ ಸುತ್ತ ರಾತ್ರಿಯಲ್ಲಿ ಕಾದಿರಲಾಗಿ ದೊಡ್ಡಪ್ಪನಾಯಕನು ಸರ್ವದಾ ಮಲಗುವ ಸ್ಥಳದಲ್ಲಿ ಮಂಚ ಹಾಕಿಸಿ ಹಾಸಿ ಒಂದು ಲೋಡು ಉದ್ದಕ್ಕೆ ಹಾಕಿ ಅದರ ಮೇಲೆ ಹೂವಿನ ಹಚ್ಚಡ ಹೊದ್ದಿಸಿ ದೊಡ್ಡಪ್ಪನಾಯಕನನ್ನು ದಿವಾಣದೊಳಗೆ ಒಂದು ಕೊಟ್ಟಡಿಯೊಳಗೆ ಬಚ್ಚಿಟ್ಟು ಬೀಗ ಹಾಕಿಸಿದಳು. ರಾತ್ರಿ ಆರು ತಾಸು ಆದ ಬಳಿಕ ದಳವಾಯಿ ರುದ್ರಪ್ಪ, ಚನ್ನಪ್ಪನವರೂ ತನ್ನ ಕಡೆಯ ಹತ್ತು ಹನ್ನೆರಡು ಮಂದಿ ರಾವುತರೂ ಸಹಿತವಾಗಿ ಕತ್ತಿ ಕಿತ್ತುಕೊಂಡು ದಿವಾಣದೊಳಗೆ ಬಂದು ದೊಡ್ಡಪ್ಪನಾಯಕನು ಮಲಗುವ ಮಂಚದ ಮೇಲೆ ಕಡಿಯಲಾಗಿ ಹೂವಿನ ಹಚ್ಚಡದೊಳಗೆ ಇದ್ದ ದಿಂಡು ಸಹ ಚೂರುಚೂರಾಗಿ ಹೋಯಿತು. ದೊಡ್ಡಪ್ಪನಾಯಕನನ್ನು ಕಾಣದೆ ಬರಿಯ ದಿಂಡು ಇದ್ದುದನ್ನು ಕಂಡು ಗಾಬರಿಯಾದರು. ಅಷ್ಟರೊಳಗೆ ಗುಲ್ಲು ಆಯಿತು. ಸುತ್ತಲೂ ಕಾದಿದ್ದ ನಾಯಕವಾಡಿಗಳು ಮಂದಿ ಸಹಿತವಾಗಿ ಬಂದು ಮುತ್ತಿಕೊಂಡರು. ಈ ರುದ್ರಪ್ಪ, ಚನ್ನಬಸಪ್ಪನವರು ತಮ್ಮ ಸಂಗಡ ಕರೆದುಕೊಂಡು

ಬಂದ ಮಂದಿಯ ಸಂಗಡ ಹೊರಟುಹೋಗುವುದಕ್ಕೆ ಮಾರ್ಗವಿಲ್ಲದೆ ಇದ್ದುದರಿಂದ ರುದ್ರಪ್ಪ, ಚನ್ನಬಸಪ್ಪ ಇಬ್ಬರೂ ಅಕ್ಕನಾದ ಹನುಮಪ್ಪನಾಯಕನ ಹೆಂಡತಿ ಪದ್ಮಮ್ಮನಿರುವ ಮಹಲಿಗೆ ನಿಚ್ಚಣಿಗೆ ಹಾಕುವಷ್ಟಕ್ಕೆ ಆ ಹೆಣ್ಣು ಮಗಳು ಕಿಟಿಕಿ ತೆಗೆದು ಇಬ್ಬರು ಅಣ್ಣ ತಮ್ಮಂದಿರನ್ನೂ ಒಳಗೆ ಕರೆದುಕೊಂಡು ಬಾಗಿಲು ಹಾಕಿಕೊಂಡಳು. ಬಾಕಿ ಕೆಳಗೆ ಉಳಿದವರನ್ನು ಹೊಡೆದು ಹಾಕಿ ರಾತ್ರಿಯಲ್ಲಿ ದಿವಾಣಕ್ಕೂ, ಹಾಗೆಯೇ ದ್ಯಾವಪ್ಪನಾಯಕನೆಂದು ಹೆಸರಿಟ್ಟ ಕೂಸಿಗೂ ಸಹಿತವಾಗಿ ಪಾರಾಯಿಟ್ಟು ಅದೇ ರಾತ್ರಿಯಲ್ಲಿ ದೊಡ್ಡಪ್ಪನಾಯಕನನ್ನು ಕರೆತಂದು ಪಟ್ಟಕಟ್ಟಿ, ನಾಯಕವಾಡಿ, ಸಾಮಾಜಿಕ ಮೊದಲಾದವರು ಸಲ್ಲಾಂ ಮಾಡಿದರು.

ಈ ವರ್ತಮಾನವನ್ನು ಕುರುಗೋಡಿಗೆ ಹೇಳಿ ಕಳುಹಿಸಲಾಗಿ ಅಲ್ಲಿಂದ ಕೆಲವು ಮಂದಿ ನಾಯಕವಾಡಿಗಳು ಬೆಳಗಾಗುವಷ್ಟಕ್ಕೆ ಬಂದರು. ಬೆಳಗಾದ ಮೇಲೆ ದಿವಾಣಕ್ಕೆ ಏಣಿಹಾಕಿ ಕಿಟಿಕಿಗಳನ್ನು ಮುರಿಯಬಡಿದು ರುದ್ರಪ್ಪ, ಚನ್ನಬಸಪ್ಪನನ್ನು ಹಿಡಿದುಕೊಂಡು ಪಟ್ಟ ಕಟ್ಟಿದ್ದ ದ್ಯಾವಪ್ಪನಾಯಕನೆಂಬ ಕೂಸಿನ ಕುತ್ತಿಗೆ ಮುರಿದು ಗ್ರಾಮದೊಳಗೆ ಮೆರೆಯಿಸಿ ರುದ್ರಪ್ಪ, ಚನ್ನಬಸಪ್ಪನನ್ನು ಕರೆದುಕೊಂಡು ಹೋಗಿ ಬಳ್ಳಾರಿ ಗುಡ್ಡಕ್ಕೆ ಉತ್ತರ, ಬಾಗಿಲ ಗುಡ್ಡಕ್ಕೆ ದಕ್ಷಿಣ—ಈ ಉಭಯ ಗುಡ್ಡದ ನಡುವೆ ಕಡಿದು ಚೂರು ಚೂರು ಮಾಡಿ ಒಂದು ಹಾಳು ಭಾವಿಯೊಳಗೆ ಹಾಕಿ ಬಂದರು. ಹೀಗೆ ಪಟ್ಟಕಟ್ಟಿದ ಮೇಲೆ ಏಳು ದಿವಸಕ್ಕೆ ಕೂಸನ್ನು ಕೊಂದರು.

ತರುವಾಯ ದೊಡ್ಡಪ್ಪನಾಯಕನು ರಾಜ್ಯಮಾಡಿಕೊಂಡಿರಲಾಗಿ ಕೆಲವು ದಿವಸವಾದ ತರುವಾಯ ಶ್ರೀರಂಗಪಟ್ಟಣದಿಂದ **ಹಿರಿಯನವಾಬ ಬಹಾದರ**ವರು ದಂಡು ಸಹಿತವಾಗಿ ಬರುವ ವರ್ತಮಾನ ಕೇಳಿ, ಬಳ್ಳಾರಿಯಲ್ಲಿರುವ ದೊಡ್ಡಪ್ಪನಾಯಕನು ದೊರೆಗಳ ಹೆಂಡಿರು ಸಹಿತವಾಗಿ ಕುರುಗೋಡಿಗೆ ವಲಸೆ ಹೋದನು. ಬಳ್ಳಾರಿಯಲ್ಲಿ ಕಿಲ್ಲೇದಾರಿ **ಮುನಿಯಪ್ಪ**, ದೇಶಾಯಿ **ತಿಮ್ಮರಾಯ**, ನಾಯಕವಾಡಿ **ನೀಲಯ್ಯ**, **ಪರಸಯ್ಯ**, **ಹಾವಳಯ್ಯ**, ಬಾಣಕಾರ **ಪೇರಲ್ಲಿ**, ಬಾಣಕಾರ **ಕಾಟಮರಾಜು** ವಗೈರೆಯವರನ್ನು ಇಟ್ಟಿರಲಾಗಿ ಹಿರಿಯ ನವಾಬರು ಬಂದು ಹಂದರಹಾಳು ಹಳ್ಳದ ಬಳಿ ದಂಡು ಇಳಿದು ಅದೇ ದಿವಸ "ನಾವು ಮುಂದಕ್ಕೆ ಹೋಗುತ್ತೇವೆ, ನಮಗೂ ನಿಮಗೂ ಲಡಾಯಿ ಕಾರಣವಿಲ್ಲ"ವೆಂದು ಹೇಳಿ, ಮೋಸದಿಂದ ಸಂಗಡ ಬಂದು **ಶೃಂಗಾರಗೇರಿ**ಪೇಟೆ ಹಿಡಿದರು. ನವಾಬ ಬಹದರವರು ತಮ್ಮ ಕಡೆಯಿಂದ ವಕೀಲಾತಿ ಬಗ್ಗೆ ಬಾರಿನ **ನಾರಾಯಣರಾಯ**ನೆಂಬವನನ್ನು ಕಳುಹಿಸಲಾಗಿ ಆತನು ಪಾಲಕಿ ಸಂಗಡ ಬಂದು ಕಿಲ್ಲೆಯ ಮುಂದೆ ನಿಂತು ತನ್ನ ಕಡೆಯ ಜಹಸೂದರನ್ನು ಕಳುಹಿಸಿ ಕಿಲ್ಲೆಯೊಳಗೆ ಇದ್ದ ಕಿಲ್ಲೇದಾರ ಮುನಿಯಪ್ಪ, ದೇಶಾಯಿ ತಿಮ್ಮರಾಯ ವಗೈರೆ

ನಾಯಕವಾಡಿಗಳಿಗೆ—"ನಮ್ಮ ನವಾಬ ಸಾಹೇಬರ ಅಪ್ಪಣೆಯಾಗಿದ್ದಿತು, ಐದು ನೂರು ಜವಾನರನ್ನು ಒಂದು ನಿಶಾನಿ ಮಾತ್ರಕ್ಕೆ ಕಿಲ್ಲೆಯೊಳಗೆ ತಂದುಕೊಂಡರೆ ನಾಳೆ ಬೆಳಗ್ಗೆ ದಂಡು ಕೂಡ ಆಗಿ ಹೋದೀತು" ಎಂತ ಹೇಳಿ ಕಳುಹಿಸಲಾಗಿ ಇವರು ಆ ಮಾತನ್ನು ಕೇಳಿ ಪುನಃ ಬಂದ ಜವಾಸೂದರಿಗೆ "ನಾವಾದರೆ ಸೇವಾ ವೃತ್ತಿಯುವರಾಗಿದ್ದೇವೆ. ನಮ್ಮ ದೊರೆಗಳು ಕುರುಗೋಡು ಕಿಲ್ಲೆಯೊಳಗೆ ಇದ್ದಾರೆ. ಯಾವ ಮಾತೆಂದರೂ ಅಲ್ಲಿಗೆ ಹೋಗಿ ಅವರ ಸಂಗಡಲೇ ಮಾತನಾಡಿರಿ," ಎಂದು ಹೇಳಿ ಕಳುಹಿಸಲಾಗಿ ಈ ಮಾತನ್ನು ಬಾರಿನ ನಾರಾಯಣರಾಯನು ಕೇಳಿ ಪುನಃ ತನ್ನ ಕಡೆಯ ಜವಾಸೂದರ ಮುಂದೆ ನಾರಾಯಣರಾಯನು—"ನೀವು ಕಿಲ್ಲೆಯೊಳಗೆ ಹೋಗಿ ಬುದ್ಧಿವಂತರಾದ ಕಾರಕೂನ ನಾಯಕವಾಡಿಗಳನ್ನು ನಮ್ಮ ಸಂಗಡ ಕಳುಹಿಸಿದರಾದರೆ ನಮ್ಮ ಧಣಿಗಳು ನಾರಾಯಣರಾಯರು ನಿಮ್ಮನ್ನು ಕರೆದುಕೊಂಡು ಹೋಗಿ ಬಹದರ ನವಾಬರ ಭೇಟಿಮಾಡಿಸಿ ನಿಮಗೆ ಬಂದಣಿ ಹುಕಾಯಿಸಿ ಸಲ್ಲಾ ಮುಗಿಸಿ ಬೆಳಗ್ಗೆ ದಂಡು ಕೂಡು ಆಗಹೋಗುವ ಹಾಗೆ ಮಾಡುತ್ತಾರೆಂದು ಈ ವರ್ತಮಾನ ಹೇಳಿ ಬುದ್ಧಿವಂತರಾದವರನ್ನು ನಮ್ಮ ಬಳಿಗೆ ಕರೆದುಕೊಂಡು ಬರುವುದೆ"ಂದು ಅಪ್ಪಣೆ ಕೊಡಲಾಗಿ, ಜವಸೂದರು ಪುನಃ ಕಿಲ್ಲೆಬಾಗಿಲಿಗೆ ಬಂದು ಅಪ್ಪಣೆ ತರಿಸಿಕೊಂಡು ಒಳಗೆ ಹೋಗಿ ಅಲ್ಲಿ ಕಚ್ಚೇರಿ ಮಾಡಿಕೊಂಡು ಕುಳಿತಿದ್ದ ರಾಪುರ, ಠಾಣ್ಯ ಮೊದಲಾದ ಸಾಮಂತ, ನಾಯಕವಾಡಿ, ಕಿಲ್ಲೇದಾರ, ದೇಸಾಯಿ ಮೊದಲಾದವರಿಗೆ ಈ ವರ್ತಮಾನ ಯಾವತ್ತೂ ಹೇಳಿ—"ನಿಮ್ಮ ಕಡೆಯಿಂದ ಮೊಕ್ಕರರಾದ ನಾಯಕರನ್ನೂ ಹಾಗೂ ಕಾರಕೂನರನ್ನೂ ಕರೆದುಕೊಂಡು ಬರುವುದೆಂದು ನಮ್ಮ ನಾರಾಯಣರಾಯರ ಅಪ್ಪಣೆಯಾಗಿದ್ದಿತು. ನೀವು ಬುದ್ಧಿವಂತರಾದವರನ್ನು ಕಳುಹಿಸಿಕೊಟ್ಟರೆ ನಮ್ಮ ಧಣಿಗಳು ನಿಮ್ಮ ಕಡೆಯವರನ್ನು ಕರೆದುಕೊಂಡು ಹೋಗಿ ನವಾಬ ಸಾಹೇಬರ ಭೇಟಿ ಮಾಡಿಸಿ ಬಂದಣಿ ಮುಗಿಸಿ ಸಲ್ಲಾ ಮಾಡಿಸಿಕೊಡುತ್ತಾರೆ"—ಎಂದು ಹೇಳಲಾಗಿ, ಈ ವರ್ತಮಾನವನ್ನು ಸರ್ವರೂ ಕೇಳಿ ತಮ್ಮೊಳಗೆ ತಾವು ಮಾತನಾಡಿಕೊಂಡು ಜವಸೂದರ ಸಂಗಡ ಸಲ್ಲಾ ಮುಗಿಸಿಕೊಂಡು ಬರಲು ಬಗ್ಗೆ (೧) ನರಸನಾಯಕ, (೨) ಹಾವಳಪ್ಪ, (೩) ಹಿರಿಲಪ್ಪ, (೪) ನಾಗಮೂರ್ತಿ, (೫) ಯಾತಲಗರ, (೬) ಧರಣನಾಯಕ ಕುರುಗೋಡು ಚನ್ನಪ್ಪ, (೭) ಕರೂರು ಬರ್ಕಿನಾಯಕ, (೮) ಹರಕಾರ ಪೀರೋಜಿ, (೯) ವಕೀಲ ರಾಮಚಂದ್ರನಾಯಕನ ಮಗ ಕಾಂತರಾಯ, ಹೀಗೆ ಏಳು ಮಂದಿ ನಾಯಕರು ಒಬ್ಬ ವಕೀಲ ಒಬ್ಬ ಹರಕಾರ ಈ ಪ್ರಕಾರ ಒಂಭತ್ತು ಮಂದಿಯನ್ನು ಕಳುಹಿಸಲು ಇವರು ಕಿಲ್ಲೆಯ ಹೊರಗೆ ಇರುವ ಬಾರಿನ ವಕೀಲ ನಾರಾಯಣರಾಯನ ಬಳಿಗೆ ಬರುವಾಗ್ಗೆ ನಾರಾಯಣರಾಯರು ಇವರನ್ನು ಕರೆದುಕೊಂಡು ಬಹದರ ನವಾಬರ ಬಳಿಗೆ ಹೋಗಿ ಈ ಪೂರ್ವೋತ್ತರವನ್ನು ಹೇಳಲಾಗಿ—"ಜನಗಳು ಯಾವತ್ತೂ ಪಹರಾದಲ್ಲಿ ಇಡುವುದು" ಎಂದು ನವಾಬ ಸಾಹೇಬರ ಅಪ್ಪಣೆಯಾದುದರಿಂದ, ನವರ ಕಿಲ್ಲೆಯೊಳಗಿಂದ ಕರೆತಂದ

ಒಂಭತ್ತು ಮಂದಿಯನ್ನೂ ಪಹರಾದಲ್ಲಿಟ್ಟು ಅನ್ನ ನೀರಿಗೆ ಸಹ ಬಿಡದ ಹಾಗೆ ಮಾಡಿದರು.

ಒಂದು ದಿವಸ ದಂಡಿನೊಳಗೆ ಪಹರಾದಲ್ಲಿದ್ದ ಬಹದರ ನವಾಬರು ಕಿಲ್ಲೆಯೊಳಗೆ ಇರುವ ಜನರಿಗೆ ಈ ಬಗೆ ಜವಾಬು ಸ್ವಾಲಿಗೆ ಹಚ್ಚಿ ಒಳಗಿಂದೊಳಗೆ ಕಿಲ್ಲೆಯ ಸುತ್ತಲೂ ರಾಯದುರ್ಗದ ಕೃಷ್ಣಪ್ಪನಾಯಕನನ್ನು ಗುಡ್ಡದ ದಕ್ಷಿಣ ನಾಗರ ಕೆರೆಯ ಹಿಂದೆ ವಿರಕ್ತಮಠದ ಬಳಿಯ ಮೊಹರ್ಜೆ ಹಾಕಿಕೊಂಡು ಇಳಿದು ಬಾಕಿ ಉಳಿದ ಮೂರು ದಿಕ್ಕಿಗೂ ನವಾಬ ಬಹದರನವರು ತಮ್ಮ ಖಾಸಗಿ ಫೌಜು ಕಾಲುಪೇದೆ ೩,೦೦೦, ಕುದುರೆ ೫೦೦, ತೋಪು ೧೦, ಬಾರು ೫೦೦, ಕರ್ಣಾಟಕ ಕಾಲುಪೇದೆ ೧,೦೦,೦೦೦, ಬಾರು ೫೦,೦೦೦, ತೋಪು ೧೦೦, ಕುದುರೆ ೪೦,೦೦೦, ಆನೆ ೧೦೦, ಒಂಟೆ ೫೦೦ ಈ ಪ್ರಕಾರ ನಾಲ್ಕು ದಿಕ್ಕಿಗೂ ಇಟ್ಟು ಮದ್ದು, ಗುಂಡು ಸರ್ವ ಸನ್ನಾಹಮಾಡಿ ನಾಲ್ಕು ದಿಕ್ಕಿಗೂ ಚೌಕಿ ಕೊಟ್ಟು ಆ ದಿವಸ ಸುಮ್ಮನೆ ಇದ್ದರು. ಬೆಳಗಾದ ಮೇಲೆ ಸದರಿ ಕಿಲ್ಲೆಯೊಳಗಿಂದ ಬಂದ ಏಳು ಮಂದಿ ನಾಯಕರು, ಒಬ್ಬ ವಕೀಲ, ಒಬ್ಬ ಹರಕಾರ ಒಂಭತ್ತು ಮಂದಿಯನ್ನೂ ಕರೆಯಿಸಿ, ನವಾಬ ಸಾಹೇಬರು—"ಕಿಲ್ಲೆ ಠಾಣ್ಯ ಕೊಡಿಸಿದರಂತೂ ಒಳ್ಳಿತು. ಇಲ್ಲವೇ ನಿಮ್ಮನ್ನ ತೋಪಿಗೆ ಕಟ್ಟಿ ಉಡಾಯಿಸಿ ಬಿಡುತ್ತಿದ್ದೇವೆ" ಎಂದು ಅಪ್ಪಣೆ ಕೊಟ್ಟದ್ದರಿಂದ ಈ ಒಂಭತ್ತು ಮಂದಿಯೂ ಗಾಬರಿಯಾಗಿ ಕಿಲ್ಲೆ ಠಾಣ್ಯ ಕೊಡಿಸುತ್ತಿದ್ದೇವೆಂದು ಹೇಳುವಷ್ಟಕ್ಕೆ ಅವರ ಸಂಗಡ ಬಾರಿನ ವಕೀಲ ನಾರಾಯಣರಾಯರು ೩೦೦ ಬಾರು ಕೊಟ್ಟು ಸದರಿ ಒಂಭತ್ತು ಮಂದಿಯನ್ನೂ ಪಹರಾದಲ್ಲಿಟ್ಟುಕೊಂಡು ಊರು ಮುಂದಕ್ಕೆ ಸುಂಕದ ಕಟ್ಟೆಯ ಬಳಿಗೆ ಬಂದರು. ಕಿಲ್ಲೆಯ ಒಳಗಿನವರು ಗುಡ್ಡದ ಮೇಲಿನ ಕಿಲ್ಲೆ ಬಂದೋಬಸ್ತು ಮಾಡುವ ಬಗ್ಗೆ ಮಸಲು **ವೆಂಕಟೇಶನಾಯಕ**—ಈತನು ಪ್ರಬಲವಾದ ನಾಯಕನು, ೩೦೦ ಮಂದಿ ಕರ್ನಾಟಕ, ೧೫ ಮಂದಿ ನಾಯಕರು ಹಾಗೆಯೇ ಮದ್ದು ಗುಂಡು ಸನ್ನಾಹಮಾಡಿ ಹೂಡೆ ಹೂಡೆಕ್ಕೆ ಹುಲಿಮೊಕಕ್ಕೆ ಸಹ ಹಂಚಿಕೆ ಮಾಡಿ ಹಾಕಿ ದುರ್ಗ ಬಂದೋಬಸ್ತು ಮಾಡಿದರು. ಕೆಳಗಿನ ಕಿಲ್ಲೆಯಲ್ಲಿ ಕಿಲ್ಲೇದಾರ **ಮುನಿಯಪ್ಪ**, ಸಬನೀಸಿ **ಗುಂಡಪ್ಪ**, ದೇಶಾಯಿ **ತಿಮ್ಮರಾಯ**, ೭೦೦ ಮಂದಿ ಕರ್ನಾಟಕ ಜನರು, ೩೫ ಮಂದಿ ನಾಯಕರು ಈ ಪ್ರಕಾರ ಮದ್ದು ಗುಂಡು ಸಾಹಿತ್ಯಮಾಡಿ, ಹೂಡೆ ಹೂಡೆಕ್ಕೆ ಹುಲಿಮೊಕಕ್ಕೆ ಸಹ ಹಂಚಿಗೆ ಮಾಡಿ ಹಾಕಿದರು. ಈ ಪ್ರಕಾರ ಹಂಚಿಕೆ ಮಾಡಿ ಹಾಕಿ ಹೂಡೆ ಒಂದಕ್ಕೆ ಒಂದು ಸಾವಿರ ಬಾಣದ ಪ್ರಕಾರ ಕೆಳಗಿನ ಕಿಲ್ಲೆ ಮೇಲಿನ ಕಿಲ್ಲೆ ಸಹಿತವಾಗಿ ಹೂಡೆಗಳಿಗೆ ಹಾಕಿಸಿದರು. ಬಜಾರಿ ರೇಖನೇಗಳು ಬಿಣಿಕೆ ಇಲ್ಲದ ಹಾಗೆ ಕೋಟೆಯ ಸುತ್ತಲೂ ಅಲಂಗದಲ್ಲಿಟ್ಟರು. ಲಗ್ಗಿ, ದುಂಡುಕಲ್ಲು, ಗುಂಡುಗಳನ್ನು ಕೋಟೆಯ ಗೋಡೆಯ ಮೇಲಿಟ್ಟು ಹಾಗೆಯೇ **ಸಿದ್ಧರಾಮ ತೋಪು** ಗುಡ್ಡದ ಮೇಲಿರಲಾಗಿ ಅದಕ್ಕೆ ಹೊಸ ಹಚ್ಚಡ ಮೊದಲಾದದ್ದು ಬಳಿಸಿ ಪೂಜೆಮಾಡಿದರು. ಇನ್ನು ಕೆಲವು ಚಿಲ್ಲರೆ ತೋಪು ಗುಡ್ಡದ ಮೇಲೆ

ಅಲ್ಲಲ್ಲಿ ಬಂದೋಬಸ್ತು ಮಾಡಿ ಗೋಲಂದಾಜನರನ್ನು ಇಟ್ಟರು. ಕೆಳಗಿನ ಕಿಲ್ಲೆಯ ಫಿಲ್ದಿನ ತೋಪುಗಳ ಹೆಸರು **ನಾಗರಕೆರೆ, ಹೂಡೆಕ್ಕೆ ಭೀಮಸೇನ** ಎಂಬ ತೋಪು, ತರುವಾಯ ದಿವಾಣದ ಹಿಂದೆ ಇರುವ ಹೂಡೆಯದೊಳಗೆ **ರಾಮಬಾಣ**ವೆಂಬ ತೋಪು, ಮಾರ್ಗಾಪುರದ ಗುಂಡಿನಮೇಲೆ **ವೀರಭದ್ರ**ನೆಂಬ ತೋಪು, ತರುವಾಯ ತೆರೆತೆರೆ ಮೂಲೆ ಹೂಡೆಯದಲ್ಲಿ **ಜರಮನೆ** ಅವರ ತೋಪು, ತರುವಾಯ ಹೊನ್ನಗುಡಿ ಭಾವಿಯಮೇಲೆ ಇದ್ದ ಹೂಡೆಯದಲ್ಲಿ **ಬಂಗಡಿತೋಪು,** ಚಳ್ಳಾರಪ್ಪನ ಭಾವಿ ಮೇಲಿನ ಹೂಡೆಯಕ್ಕೆ **ಪಂಚರಶಿ ತೋಪು,** ರುದ್ರಪ್ಪನ ಬಾಗಲ ಬಳಿಯಣ ಹೂಡೆಯಕ್ಕೆ **ಖಚ್ಚಖಾನಿ** ಎಂಬ ತೋಪು, ಗುಡ್ಡದ ಅರ ತಟ್ಟಿನಲ್ಲಿ ಇದ್ದ ಹೂಡೆಯಕ್ಕೆ **ಮೂಕನ್ಯೆದಾನ**ವೆಂಬ ತೋಪು—ಈ ಪ್ರಕಾರ ತೋಪುಗಳು ಇಟ್ಟು ಬಂದೋಬಸ್ತು ಮಾಡಿದರು. ಇಷತಕ್ಕ ಸ್ಥಳದಲ್ಲಿ ನಾಲ್ಕಾರು ಮಕರ ಜಬ್ಬಗಳನ್ನು ಇಟ್ಟರು. ರುದ್ರಪ್ಪನ ಅಗಸೆ, ಪೂರ್ವಬಾಗಿಲು, ಕುಂಬಾರ ಬಾಗಿಲು, ನಾಗರಕರೆ ಅಗಸೆ—ಈ ನಾಲ್ಕು ಅಗಸೆಗೆ ಗೋಡೆ ಕಟ್ಟಿಸಿ, ದಿಡ್ಡಿಗಳು ಮಾಡಿ ಅದಕ್ಕೆ ಬಾಗಿಲು ಹಾಕಿ ಕೀಲಿಗಳು ಹಾಕಿಸಿ ಬಂದೋಬಸ್ತು ಮಾಡಿಕೊಳ್ಳುತ್ತಿದ್ದರು.

ಹೀಗಿರಲಾಗಿ ನವಾಬ ಬಹದರರವರ ಕಡೆಯ ವಕೀಲ ನಾರಾಯಣರಾಯನು ಸುಂಕದ ಕಟ್ಟೆ ಬಳಿಯಲ್ಲಿ ಮಂದಿ ಸಹ ನಿಂತು ತಾನು ಕರೆತಂದ ಪಹರೆಯೊಳಗಿದ್ದ ವಕೀಲ ಕಾಂತರಾಯ, ನಾಯಕವಾಡಿಗಳನ್ನು "ಮಾತನಾಡಿರಿ, ನಿಮ್ಮ ಕೋಟೆಯೊಳಗೆ ಇದ್ದವರನ್ನು ಹೊರಕ್ಕೆ ಕರೆದು ಮಾತನಾಡಿರಿ" ಎಂದು ಹೇಳುವಷ್ಟಕ್ಕೆ, "ಪಹರೆಯೊಳಗೆ ಇದ್ದವರಲ್ಲಿ ನಾಲ್ಕು ಮಂದಿಗೆ ಅಪ್ಪಣೆ ಕೊಟ್ಟರೆ ನಾವು ಹೋಗಿ ನಮ್ಮವರ ಸಂಗಡ ಈ ವರ್ತಮಾನ ಹೇಳಿ ಒಡಂಬಡಿಸಿಕೊಂಡು ಬರುತ್ತೇವೆಂತ" ಹೇಳಲು ಆ ಜನರಲ್ಲಿ ನಾಲ್ಕು ಮಂದಿಯನ್ನು ಪಹರಾದಿಂದ ಬಿಟ್ಟರು. ಅವರು ಬಾಗಿಲ ಮುಂದಕ್ಕೆ ಬರುವಷ್ಟು ಹೊತ್ತಿಗೆ ದಿಡ್ಡಿಯಿಂದ ನಾಲ್ಕು ಮಂದಿಯನ್ನೂ ಕರೆದುಕೊಂಡು ಹೋಗಿ ಈ ಸಮಾಚಾರ ಯಾವತ್ತೂ ಕೇಳಿದ ತರುವಾಯ ನಾಲ್ಕು ಮಂದಿಯನ್ನೂ ಅಲ್ಲಿಯೇ ಇಟ್ಟುಕೊಂಡು ಹುಲಿ ಮುಖದ ಮೇಲಿನಿಂದ ಈ ನಾರಾಯಣರಾಯನಿಗೆ "ನೀವು ಉಳಿದ ೫ ಮಂದಿಯನ್ನೂ ನಮ್ಮಲ್ಲಿಗೆ ಕಳುಹಿಸಿದರೆ ನಾವು ಒಬ್ಬರಿಗೊಬ್ಬರು ಮಾತನಾಡಿಕೊಂಡು ಆಣೆ, ಪ್ರಮಾಣ, ಭರವಸೆಗಳನ್ನು ತೆಗೆದುಕೊಂಡು ಮುಂದಕ್ಕೆ ನಮಗೆ ಅನ್ನಕ್ಕೆ ಮಾರ್ಗವಾಗುವ ಹಾಗೆ ಮಾಡಿಕೊಂಡು ನಿಮ್ಮ ಮಂದಿಯನ್ನು ಕಿಲ್ಲೆಯೊಳಗೆ ತಾನ್ನಾ ಕರೆದುಕೊಳ್ಳುತ್ತಿದ್ದೇವೆ"ಂದು ಪ್ರಮಾಣಗಳು ಸಹ ಕೊಡಲಾಗಿ, ವಕೀಲ ನಾರಾಯಣರಾಯನು ವಕೀಲ ಕಾಂತರಾಯನನ್ನು ಇಟ್ಟುಕೊಂಡು ಬಾಕಿ ಉಳಿದ ನಾಲ್ಕು ಮಂದಿಯನ್ನೂ ಬಿಟ್ಟನು. ಅವರು ದಿಡ್ಡಿಯೊಳಗಿಂದ ಕೋಟೆಯೊಳಕ್ಕೆ ಬಂದು ಒಳಗೆ ನಿಂತರು. ತರುವಾಯ ವಕೀಲ ನಾರಾಯಣರಾಯನು ಬಿಟ್ಟಾಗಿ ಬಾರುಸುದಾ ಬಾಗಲಿಗೆ ಬರುತ್ತಿರಲಾಗಿ ಕೋಟೆಯ

ಮೇಲಿಂದ ಕಲ್ಲು ಗುಂಡು ಹಾಕಿ ಗುಂಡುಗಳನ್ನು ಹಾರಿಸುವಷ್ಟಕ್ಕೆ ವಕೀಲ ನಾರಾಯಣರಾಯನು ಕಾಂತರಾಯನನ್ನು ಕರೆದುಕೊಂಡು ತನ್ನ ಬಾರುಸುದಾ ತಿರುಗಿ ಹೋಗಿ ನಡೆದ ಸಮಾಚಾರ ಯಾವತ್ತೂ ಬಹದರ ನವಾಬ ಸಾಹೇಬರಿಗೆ ಹೇಳಲಾಗಿ ನವಾಬ ಸಾಹೇಬರವರು ಈ ವರ್ತಮಾನವನ್ನು ಕೇಳಿ ಬಹಳ ಕೋಪ ದಿಂದ ನಾಲ್ಕು ಕಡೆಗೆ ಚೌಕಿ ಇದ್ದ ಮಂದಿಗೂ ತೋಪು ಹೊಡೆಯುಲಿಕ್ಕೆ ಅಪ್ಪಣೆ ಕೊಡಲಾಗಿ ಗೊಲಂದಾಜರು ಬಂದು ಅಲ್ಲಲ್ಲಿ ತೋಪುಗಳನ್ನು ಇಟ್ಟು ಅಲ್ಲಿ ಸಿಂತು ಮದ್ದಿನ ಚೀಲಗಳು, ಗುಂಡುಗಳು ಒಳಗೆ ಹಾಕಿ ಕೊಳ್ಳಿಯನ್ನು ಹಚ್ಚಲಿಕ್ಕೆ ನಾಲ್ಕು ದಿಕ್ಕಿನವರೂ ಆರಂಭಮಾಡಿದರು. ಈ ಗುಂಡುಗಳು ಕಿಲ್ಲೆಯ ಒಳಗೂ ಮೇಲೆ ಕೋಟೆಯ ಗುಡ್ಡಕ್ಕೂ ಅಪರಿಮಿತವಾಗಿ ಹೋಗಿ ತಗುಲಿದುವು. ಗ್ರಾಮದೊಳಗೆ ಇರುವ **ಪಾಯನಕಿಲ್ಲೆ**ಯೊಳಗಣವರೂ ಗುಡ್ಡದ ಮೇಲಿನ ಕಿಲ್ಲೆಯೊಳಗೆ ಇರುವ ಕೆಲವರೂ ತೋಪುಗಳಿಗೆ ಮದ್ದು, ಗುಂಡು ಹಾಕಿ ಬೆಂಕಿಯಿಟ್ಟರು. ಕೆಲವರು ರೇಖಿಲೆ, ಬಜಾರಿ, ರಾಮಸಿಂಗಿ, ಮಕರಟಿಬ್ಬಿ, ಮೊದಲಾದದ್ದು ಬಿಟ್ಟು ಹೊರಗಿನವರ ಮತ್ತು ಅವರ ಗುಂಡಿನ ಆರ್ಭಟ, ತಮಟೆ, ಕೊಂಬು, ನಗಾರಿ, ನೌಪತ್ತು, ಅನೇಕವಾದ ವಾದ್ಯಗಳ ಬೊಬ್ಬೆ, ಆರ್ಭಟವು ಏಕವಾದುದರಿಂದ ಕೆಲವು ಸ್ತ್ರೀಯರ ಗರ್ಭ ಪತನವಾಗುವಂತಾಯಿತು. ಕಿಲ್ಲೆಯೊಳಗೆ ಇದ್ದ ನಾಯಕರಿಗೆ ಒಬ್ಬೊಬ್ಬರಿಗೂ ಸಾರಾವರಿ, ಜಳ್ಳಿ, ಉಡಾಸ, ಪಾವುಡಾ, ಹೊಕ್ಕಳ ಗಂಟೆ, ಹುಲಿಚರ್ಮ, ಮುತ್ತಿನಹಾರ, ಕಡಗ, ಸರಪಳಿ, ಕಾಲುಗಗ್ಗರಿ—ಇಂತಹ ಬಿರುದುಗಳನ್ನೂ ಇವರಿಗೆ ಒಂದೊಂದು ಸತ್ತಿಗೆಯ ಪ್ರಕಾರ ಹಾರ, ಪೀರಾವಳಿಗಳನ್ನೂ ಎಲೆ, ಅಡಕೆ ಮುಂತಾದುದನ್ನು ಹಿಡಿದು ಹಡಪ ದವರನ್ನೂ ಕೊಟ್ಟು ಜಗಳಕ್ಕೆ ವೀರ ಕಂಕಣ ಕಟ್ಟಿಸಿದರು. ಹೊಡೆ ಹೊಡೆಯಕ್ಕೆ ಒಬ್ಬೊಬ್ಬ ನಾಯಕ, ಅವನ ಸಂಗಡ ತಪ್ಪಟೆ, ಕೊಂಬು, ಭಟಂಗಿ ಮಾಡುವ ಒಬ್ಬ ಭಟ್ಟ ಈ ಪ್ರಕಾರ ಕೆಳಗಿನ ಕಿಲ್ಲೆಯ ಹೊಡೆಯದಲ್ಲಿ ಇದ್ದ ನಾಯಕರು ೩೫ ಮಂದಿ, ಮೇಲಿನ ಕಿಲ್ಲೆಯೊಳಗೆ ಇದ್ದ ನಾಯಕರು ೧೫ ಮಂದಿ—ಈ ಪ್ರಕಾರ ನಾಯಕರು ತಮ್ಮ ಬಿರುದುಗಳ ಸಂಗಡ ರಾತ್ರಿಯಲ್ಲಿ ಸಾಲು ಸಾಲು ಮಹತಾಪು ಹಚ್ಚಿ, ಬೆಳಗಾಗುವ ಪರಿಯಂತ ವಾದ್ಯ ವೈಭವದ ಸಂಗಡ ಇರುವ ಉಡಾಸ, ಪಾವುಡಾಗಳು, ಛತ್ರ ಚಾಮರಗಳು ಸಂಗಡ ಪಹರೆ ತಿರುಗು ವವರು, ನಿಸ್ಸಂಗರಾಗಿ ಗುಂಡುಗಳು ಹೊಡೆಯುವುದನ್ನು ಕಂಡು ಬಹದರ ನವಾಬರಿಗೆ ಬಂದು ಹೇಳಲಾಗಿ ಒಂದು ದಿವ್ಯ ಪಟ್ಟದ ಆನೆ ಶೃಂಗಾರಮಾಡಿಸಿ ಅಂಬಾರಿಯ ಮೇಲೆ ಹತ್ತಿಕೊಂಡು ಐವತ್ತು ಸಾವಿರ ಮಂದಿ, ಐವತ್ತು ಅಂಬಾರಿ ಹಾಕಿದ ಆನೆ, ಇಪ್ಪತ್ತು ಸಾವಿರ ಕುದುರೆ, ನಗಾರಿ ನಿಶಾನಿಗಳ ಸಂಗಡ ಕಿಲ್ಲೆಯ ಗುಡ್ಡದ ಸುತ್ತಲೂ ತಿರುಗಿ, ಕಿಲ್ಲೆ ಬಹಳ ಬಲವಾಗಿ ಇರುವುದನ್ನು ಕಂಡು, ನವಾಬ ಸಾಹೇಬರು ಮೂಗಿನ ಮೇಲೆ ಬೆಟ್ಟಿಟ್ಟು ಬೆರಳು ಕಚ್ಚಿ, "ಮುತ್ತಿಗೆಗೆ ಮಂದಿ ಸಾಲದು" ಎಂದು ಪಾಳೆಯಗಾರರನ್ನು ಕರೆಯ ಲಿಕ್ಕೆ ಜಾಸೂದರನ್ನು ಕಳುಹಿಸಿ, ಕಿಲ್ಲೆಯ ಬಳಿಯಣ ಕೆರೆ ತುಂಬಿರಲಾಗಿ

ಕೆರೆಯನ್ನು ಒಡೆ ಬಿಡಿಯಿಸಿದನು. ಕೆರೆಯೊಳಗಣ ನೀರು ಸಮಗ್ರ ಹೊರಟು ಹೋಗಿ ಬಿಂಚರಾಟಿಗಳು ಯಾವತ್ತೂ ಬಯಲಿಗೆ ಬಿದ್ದುವು. ತರುವಾಯ ಪಾಳೆಯಗಾರರು ತಮ್ಮ ಸೈನ್ಯ ಸಮೇತವಾಗಿ ಬಂದ ಅವರನ್ನು ಅವರ ಮಂದಿ ಸಹಿತವಾಗಿ ಅಲ್ಲಲ್ಲಿ ಮೊಹರ್ಜದಲ್ಲಿ ನವಾಬ ಸಾಹೇಬರ ಅಪ್ಪಣೆ ಪ್ರಕಾರ ಹಾಕಿದರು. ಈ ವರ್ತಮಾನವನ್ನು ಕಿಲ್ಲೆಯೊಳಗಿಹ ಕಿಲ್ಲೇದಾರ ನಾಯಕವಾಡಿಗಳು ದೊಡ್ಡಪ್ಪನಾಯಕರಿಗೆ ಕುರುಗೋಡಿಗೆ ಬರೆದು ಕಳುಹಿಸಿದರು. ನವಾಬ ಸಾಹೇಬರು ಹೇರಾಳವಾಗಿ ಫೌಜು, ಪಾಳೆಯಗಾರರನ್ನು ಸಹ ಕರೆಯಿಸಿದ್ದು ಚೌಕಿ ನಾಟಿದಾರೆಂಬ ವರ್ತಮಾನವನ್ನು ಹೋದ ಕಳ್ಳ ಬಂಟರು ಹೇಳಲಾಗಿ ಈ ವರ್ತಮಾನ ದೊಡ್ಡಪ್ಪನಾಯಕನು ಕೇಳಿ ಕುರುಗೋಡು ನಾಯಕವಾಡಿಗಳನ್ನು ಕರೆಯಿಸಿ, ಅವರಿಗೆ ಕಡಗ, ಸರಪಳಿ ಮುಂತಾದ ಹಾರ ಪೀರಾವಳಿಗಳನ್ನೂ ಉಡುಗೆರೆಗಳನ್ನೂ ಕೊಟ್ಟು, ಅವರ ಸಂಗಡ ಕೆಲವು ಮಂದಿ ಜಮೆ ಮಾಡಿಸಿ,—"ರಾತ್ರೋರಾತ್ರಿ ಹೋಗಿ, ಮೊಹರ್ಜಿಯ ಮೇಲೆ ಬಿದ್ದು ತಡೆದು ಕಿಲ್ಲೆಯೊಳಗೆ ಹೋಗಿರಿ" ಎಂಬುದಾಗಿ ಕಳುಹಿಸಿಕೊಡಲು **ಕಾಮಗೋವಿಂದ, ವಿಭೀಷಣ, ಕಾಲುದಾರಿ ಬಸಪ್ಪ, ಜೀವಾಳದ ಸತ್ಯಪ್ಪ, ಕಾಮಾಸಕ್ಕರಿಗ, ಜೀವಾಳದ ರಘು, ಚಿಕ್ಕಸತ್ಯಪ್ಪ, ಕಾಮಾ ಹನುಮಂತ** ಈ ಮುಂತಾದ ನಾಯಕರು ಐನೂರು ಮಂದಿ ಬೆಳ್ಳಿಕಟ್ಟಿನ ತುಪಾಕಿ ಮಂದಿ ಸಹಿತವಾಗಿ ರಾತ್ರಿ ಆರು ತಾಸಿನಲ್ಲಿ ಗುಡ್ಡಕ್ಕೆ ದಕ್ಷಿಣ ದಿಕ್ಕಿನಲ್ಲಿ ರಾಯದುರ್ಗದ **ಕೃಷ್ಣಪ್ಪನಾಯಕ**ನನ್ನು ಮೊಹರ್ಜಿ ಹಾಕಿಕೊಂಡಿರಲಾಗಿ, ಮೊಹರ್ಜಿಯ ಮೇಲೆ ಬಿದ್ದು ತಡೆದು ಹನ್ನೆರಡು ಕುದುರೆ ಫತಾವು ತೆಗೆದುಕೊಂಡು ಕಿಲ್ಲೆಯೊಳಗೆ ಹೋಗಿ ಬಂದ ಮಂದಿಯನ್ನು ಹೂಡೆ ಹೂಡೆಯಕ್ಕೆ ಹುಲಿಮುಖಕ್ಕೆ ಸಹ ನವಸಿಸಿ ಹಾಕಿದರು.

ಮರುದಿವಸ ಬೆಳಗ್ಗೆ ನವಾಬ ಸಾಹೇಬನು ಈ ಪೂರ್ವೋತ್ತರವನ್ನು ಕೇಳಿ ಬಹಳ ಕೋಪಗೊಂಡು ಅಂಬಾರಿ ಮೇಲೆ ಕುಳಿತುಕೊಂಡು ಸುಡುಗಾಡುಮಟ್ಟಿ ಬಳಿಯಲ್ಲಿ ಬಂದು ನಿಂತು ಹಲ್ಲಾ ಮಾಡಲಿಕ್ಕೆ ನೆರಗು ಹೇಳಿದನು. ಅಷ್ಟರಲ್ಲಿ ಗೋಲಂದಾಜರು ತೋಪುಗಳನ್ನು ಹೊಡೆದು ಕೋಟೆ ಮುಂಡೇರಿ ಸಮಗ್ರ ಕೆಡವಿ ಗುಡ್ಡಕ್ಕೂ ಜಳ್ಳೂರಯ್ಯನ ಭಾವಿಗೂ ಸಹ ಮಧ್ಯೇ ನೆಲಸಮ ಮಾಡಿದರು. ಮುಂಡೇರಿ ಬಿದ್ದುದರಿಂದ ಕೆಳಗೆ ಅಟ್ಟಗಳ ಕಟ್ಟಿಕೊಂಡು ಕಿಲ್ಲೆಯ ಒಳಗಿದ್ದವರು ಮಣ್ಣಿನ ಮೇಲೆ ಬಿದ್ದುಕೊಂಡಿದ್ದರು. ಈ ಬಗೆ ಕೋಟೆಗೋಡೆ ಬಿದ್ದ ಸ್ಥಳಕ್ಕೆ ನಾಲ್ವತ್ತಾವು ಐವತ್ತು ಹೂಡಿಸಿ ಏಕಸಹ ಬತ್ತಿಗಳು ಕೊಡಿಸಿ ಮೂವತ್ತು ಸಾವಿರ ಬಾರು, ಐವತ್ತು ಸಾವಿರ ಕರ್ನಾಟಕ, ನಾಲ್ಕೈದು ಸಾವಿರ ಕಳ್ಳಿ ಹೊತ್ತಮಂದಿ—ಈ ಪ್ರಕಾರ ಸನ್ನಾಹ ಮಾಡಿಕೊಂಡು, ಜೊಬ್ಬೆ, ಆರ್ಭಟ, ನಗಾರಿ, ನೌಪತ್ತು, ಕಹಳೆ ಸಂಗಡ ಗುಂಡುಗಳು ಹೊಡೆದುಕೊಳ್ಳುತ್ತ ಬಂದ ದಂಡು ಮುಗಿಲುದ್ದ ತೆರೆ ಬಂದು ಮುತ್ತಿಕೊಳ್ಳುತ್ತ ಇದ್ದಿತೆಂಬ ಪ್ರಕಾರ ಮದ್ದು ಗುಂಡಿನ ಆರ್ಭಟ ಮಾಡಿಕೊಳ್ಳುತ್ತ ಅಗಳ್ತೆಯ ದಡಕ್ಕೆ ಬಂದುದನ್ನು.

ಕಿಲ್ಲೆಯೊಳಗಿನವರು ಕಂಡು, ತೋಪುಗಳು, ಬಜಾಲಿ, ರೇಖಿಲಿ, ತುಪಾಕಿ, ಬಾಣ ಮುಂತಾಗಿ ನೆಲೆಯಿಲ್ಲದೆ ಹೊಡೆದರು. ಕಿಲ್ಲೆಯೊಳಗಣ ದುಂಡುಗಳ ಜನರು ಕವಣೆಯ ಕಲ್ಲು, ಕೋಲು, ಬಡಗಿ ಮುಂತಾದ್ದರಲ್ಲಿ ಹಾಕಿದರು. ಗುಡ್ಡದ ಮೇಲಿನವರು ಇದೇ ಪ್ರಕಾರ ಹಲ್ಲಾ ಮುರಿಯ ಹೊಡೆದರು. ಅಲ್ಲಿ ಐನೂರು ಬಾರು ಗುಡ್ಡದ ಸರಜಿನ ಒಳಗೆ ಬಿದ್ದು ನೆಲೆಯಿಲ್ಲದೆ ಹೋದರು. ಕೆಳಗಿನ ಕಿಲ್ಲೆಯ ಹಲ್ಲಾದಲ್ಲಿ ಸತ್ತ ಜನರನ್ನು ಎತ್ತಿಕೊಂಡು ಹೋಗುವರಿಲ್ಲದೆ ತೋಪಿನ ಗುಂಡಿನ ಏಟಿಗೆ ಅಗಳ್ತೆಯಲ್ಲಿ ಹೆಣದ ಮೇಲೆ ಹೆಣ ಬಿತ್ತು. ಅಪರಿಮಿತವಾದ ಬಾಣದ ರಭಸಕ್ಕೆ ಮಂದಿ ನಿಲ್ಲದೆ ಮುರಿದು ಓಡಿಬರುವುದನ್ನು ನವಾಬರು ಕಂಡು ಸಿಟ್ಟಿನಿಂದ ಬಡಿಗೆ ಬಡಿಗೆಯಲ್ಲಿ ಹೊಡಿಸಿ ಪುನಃ ಹಲ್ಲಕ್ಕೆ ಕಳುಹಿಸಿದನು. ಕೋಟೆಗೆ ಬಂದು ಏಣಿ ಹಾಕಿ ಹತ್ತುವ ಸಮಯಕ್ಕೆ ಬಾಣಕಾರ ಕಾಟಮರಾಜು ಸೂಡು ಸೂಡು ಬಾಣಗಳನ್ನು ಮುರಿದು ಬೆಂಕಿ ಹಚ್ಚಿಹಾಕಿದನು. ಕೆಲವು ಅಗಳ್ತೆಗೆ ಬಾಣಗಳನ್ನು ಕಟ್ಟಿ ಬೆಂಕಿ ಹಚ್ಚಿಹಾಕಿದರು. ಈ ಬಗೆಯ ಆರ್ಭಟಕ್ಕೆ ಬಹು ಜನ ಅಗಳತೆಯ ಒಳಗೂ ಹೊರಗೂ ಸಹವಾಗಿ ಹೆಣಗಳು ಬಿದ್ದುವು.

ಉದಯ ಕಾಲಕ್ಕೆ ಲಡಾಯಿ ಆರಂಭವಾಗಿ ಒಂಭತ್ತು ಮುಹೂರ್ತದ ಪರಿಯಂತ ಏಳೆಂಟು ಹಲ್ಲಾ ಆಯಿತು. ಸಮಗ್ರ ಹಲ್ಲಾ ಮುರಿದು ಕೆಡಹಿದರು. ಹೆಣಗಳು ಎಣಿಕೆಯಿಲ್ಲದೆ ಹೋಯಿತು. ಒಳಗೂ ಬಹು ಜನ ಹತವಾಗಿ ಹೋಯಿತು. ನವಾಬ ಬಹದರವರು ಹಲ್ಲಾ ಮುರಿದು ಬಂದದ್ದು ಕಂಡು "ಇನ್ನು ಮೇಲೆ ಕಿಲ್ಲೆ ಹೋಗುವುದಿಲ್ಲ. ಹೇಳಿಕೆಯ ಮಾತು ಕೇಳಿ ಬಂದು ಮುತ್ತಿಕೊಂಡು ಬಹು ಜನರನ್ನು ಕೊಂದುಬಿಟ್ಟೆನು" ಎಂದು ತಿಳಿದು, ತನ್ನ ಡೇರೆಗೆ ತಿರುಗಿಹೋದನು. ಹೊರಗೆ ಮುತ್ತಿಕೊಂಡ ದಂಡಿನ ಜನರು ಹಂಡೆಯವರ ಕೌಲು ಕೇಳಿಕೊಂಡು ತಮ್ಮ ತಮ್ಮ ಹೆಣಗಳನ್ನು ತೆಗೆದುಕೊಂಡು ಹೋದರು. ಏಕ್ಕಿಲ್ಲದ ಹೆಣಗಳನ್ನು ಹದ್ದು ಕಾಗೆಗಳು ತಿಂದುವು, ಶಾಕಿನಿ, ಡಾಕಿನೀ ತೃಪ್ತಿ ಬಡಾಯಿತು. ಮರುದಿವಸ ನವಾಬ ಬಹದರವರು ಕಿಲ್ಲೆಯೊಳಗಿಂದ ಪೂರ್ವದಲ್ಲಿ ಬಿಟ್ಟಿತಂದ ವಕೀಲ ಕಾಂತರಾಜುನನ್ನು ಕರೆಯಿಸಿ ಕೆಲವು ಖಂಡಣಿ ಮುಗಿಸಿಕೊಂಡು ಆತನನ್ನು ಊರೊಳಗೆ ಕಳುಹಿಸಿ ತನ್ನ ದಂಡು ಸಹಿತವಾಗಿ ಮುತ್ತಿಗೆ ಬಿಟ್ಟು ಹೊರಟುಹೋದನು. ಖಂಡಣಿ ಮುಗಿದ ಹಣಕ್ಕೆ ಸಾಹುಕಾರ ಹುಂಡೆಕಾರ **ಶೀನಪ್ಪನಾಯಕನ** ಕಡೆಗೆ ಸರ ಹವಾಲತಿ ಕೊಟ್ಟರು. ಹುಂಡೆಕಾರ ಶೀನಪ್ಪನಾಯಕನು **ಕೆಂಚನಗೌಡನ ಗುಡ್ಡ**ದಲ್ಲಿರಲಾಗಿ ಅಲ್ಲಿಗೆ ಕುರುಗೋಡಿನಲ್ಲಿದ್ದ ದೊಡ್ಡಪ್ಪನಾಯಕನನ್ನು ಪ್ರೋಲು ತೆಗೆದುಕೊಂಡುಹೋದರು. ಅವರ ಸಂಗಡ ದೊರೆಗಳ ಹೆಂಡರು ಸಿದ್ದಮ್ಮ, ಪದ್ಮಮ್ಮ ಸಹಿತವಾಗಿ ಕೆಂಚನಗೌಡನ ಗುಡ್ಡಕ್ಕೆ ಹೋದರು. ಅಲ್ಲಿ ಕೆಲವು ದಿವಸವಿದ್ದು ದೊಡ್ಡಪ್ಪನಾಯಕನಿಗೂ ಈ ಹೆಣ್ಣುಮಕ್ಕಳಿಗೂ ಮನಸ್ಸು ಸ್ವಸ್ಥವಿಲ್ಲದುದರಿಂದ ಅಲ್ಲಿಂದ ಸಿದ್ದಮ್ಮ, ಪದ್ಮಮ್ಮ ಉಭಯರೂ ಕುರುಗೋಡಿಗೆ ಬಂದು ತಮ್ಮ ರಾಜ್ಯ ಬಾಲಕಾಯಿಸಿ

ಕೊಂಡು ಬಳ್ಳಾರಿಯ ಮೇಲೆ ರಾಜಾರ್ಥಮಾಡಿದರು. ಬಳ್ಳಾರಿಯವರು ಠಾಣ್ಯ ಕೊಡಲಿಲ್ಲ. ಸಿದ್ದಮ್ಮ, ಪದ್ಮಮ್ಮನವರು ಹಂಡೆ ಅನಂತಪುರದಿಂದ **ಪ್ರಸನ್ನಪ್ಪನ** ಮೊಮ್ಮಗನಾದ **ರಾಮಪ್ಪನಾಯಕ**ನೆಂಬುವವನನ್ನು ಕರೆಯಿಸಿ ಕುರುಗೋಡಿನಲ್ಲಿ ಪಟ್ಟಕಟ್ಟಿದರು. ಕುರುಗೋಡು ಬಳ್ಳಾರಿಯವರಿಗೆ ನಿತ್ಯವೂ ಶರಾರತು ಆಗುತ್ತಲೇ ಇತ್ತು. ಅಷ್ಟರೊಳಗೆ ಕುರುಗೋಡಿನೊಳಗೆ ನಾಯಕವಾಡಿಗಳು ಒಬ್ಬರಿಗೊಬ್ಬರಿಗೆ ಮನಸ್ತಾಪವುಂಟಾಗಿ ಅವರಲ್ಲಿ ಕೆಲವು ನಾಯಕರು ಬಳ್ಳಾರಿಗೆ ಬಂದು ನಾಯಕವಾಡಿಗಳ ಸಂಗಡ ಮಾತನಾಡಿ ಮಂದಿ ತೆಗೆದುಕೊಂಡು ರಾತೋರಾತು ಹೋಗಿ ಗುಡ್ಡದ ಮೇಲೆ ಹತ್ತಿ ಕಿಲ್ಲೆ ಠಾಣ್ಯ ಹಾಕಿ ಕಿಲ್ಲೆಯ ಮೇಲೆ ಇರುವವರನ್ನು ತಲೆ ಹೊಡದು ಗುಡ್ಡದ ಮೇಲೆ ಕೊಂಬು, ತಪಟೆ ವಾದ್ಯ ಮಾಡಿ ಹಗಲುಬತ್ತಿ ಹಚ್ಚಲಾಗಿ ಕೆಳಗಿನ ಕಿಲ್ಲೆಯೊಳಗೆ ಇದ್ದ ಸಿದ್ದಮ್ಮ, ಪದ್ಮಮ್ಮ ಇವರು ಪ್ರಸನ್ನಪ್ಪನ ಮೊಮ್ಮಗನಾದ ರಾಮಪ್ಪನಾಯಕನನ್ನು ಕರೆದುಕೊಂಡು ಹಂಚಿನಹಾಳಿಗೆ ಹೊರಟು ಹೋದರು.

ತರುವಾಯ ಕೆಂಚನಗೌಡನ ಗುಡ್ಡದಲ್ಲಿ ಮೋಲುಇದ್ದ ದೊಡ್ಡಪ್ಪನಾಯಕನನ್ನು **ಶ್ಯಾನವಾಸಪುರದ ಬಸವನಗೌಡ**ನೆಂಬಾತನು ಆ ಗ್ರಾಮದಲ್ಲಿ ತೇರು ಆಗುತ್ತಿರಲಾಗಿ ಸರ್ವರೂ ಉತ್ಸವ ನೋಡುವುದಕ್ಕೆ ಹೋಗುವ ಗದ್ದಲವಾಗಿ ಪಹರೆ ಇದ್ದ ಜನರು ಕೆಲವರು ಉತ್ಸಾಹ ನೋಡಲಿಕ್ಕೆ ಹೋದರು. ಒಂದೆರಡು ಜನ ಕಾದಿರಲಾಗಿ ಅವರಿಗೆ ''ಬೇಡಿ, ಇಷ್ಟು ಹಣ ಕೊಡುತ್ತೇವೆ. ನಿಮಗೆ ಸಾಯುವ ಪರಿಯಂತ ಅನ್ನವಸ್ತ್ರ ನಡೆಯಿಸುತ್ತೇವೆ'' ಎಂದು ಹೇಳಿ ಅವರಿಬ್ಬರನ್ನೂ ದೊಡ್ಡಪ್ಪನಾಯಕನನ್ನೂ ಕರೆದುಕೊಂಡು, ಬಸವನಗೌಡನು ರಾತ್ರಿಯಲ್ಲಿ ಕರೂರಿಗೆ ಬಂದು ಕಿಲ್ಲೆಯೊಳಗೆ ಹೇಳಿ ಕಳುಹಿಸಲಾಗಿ ಊರೊಳಗೆ ಇದ್ದವರು ಬಂದು ದೊಡ್ಡಪ್ಪನಾಯಕನನ್ನು ಕರೆದುಕೊಂಡುಹೋಗಿ ಇಟ್ಟುಕೊಂಡು ಬಳ್ಳಾರಿಗೆ ಮನುಷ್ಯರನ್ನು ಕಳುಹಿಸಲಾಗಿ ಬಳ್ಳಾರಿಯಿಂದ ಮಂದಿ ಕುದುರೆ ಹೋಗಿ ದೊಡ್ಡಪ್ಪನಾಯಕನನ್ನು ಕರೆದುಕೊಂಡು ಬಂದರು.

ಕೆಲವು ದಿವಸ ರಾಜ್ಯಮಾಡಿದ ಮೇಲೆ ಆದವಾನಿಯ ಮೊಗಲಾಯಿ **ಜಸಾಲತ್ತುಜಂಗು** ನವಾಬ ಬಹದರವರು ತಮ್ಮ ಕಡೆಯಿಂದ **ರಾಜಾ ದೇವೀಚಂದಬಹದರ**ನೆಂಬಾತನನ್ನೂ **ಅಮೀನಸಾಹೇಬ**ನೆಂಬ ಸರದಾರನನ್ನೂ ಇವರ ಸಂಗಡ ಜಮಾಯತ್ತು ಕುದುರೆ, ಮಂದಿ, ತೋಫು, ಸಾತು, ಸಾಮಾನು ಸುದಾ **ಮೂಸಾಲಾಲಿ** ಎಂಬ ಪರಂಗಿ ಆತನ ಸಂಗಡ ಕೆಲವು ಪಿರಂಗಿ ಸಹವಾಗಿ ಕೊಟ್ಟು ಕಳುಹಿಸಲಾಗಿ, ಅವರು ಬಂದು ಬಳ್ಳಾರಿಗೆ ಮುತ್ತಿಗೆ ಹಾಕಿದರು. ಮೂರು ತಿಂಗಳು ಮೊಗಲಾಯಿಯವರು ಮುತ್ತಿಕೊಂಡರು. ಅವರ ಸಂಗಡ ಲಡಾಯಿಮಾಡಿ ಗ್ರಾಮದೊಳಗೆ ಅನ್ನಕ್ಕೆ ಇಲ್ಲದ ಹಾಗಾಯಿತು. ಅದೇ ಸಮಯದಲ್ಲಿ ಶ್ರೀರಂಗಪಟ್ಟಣದಿಂದ ಬಹದರ ನವಾಬನು ಟಾಕೋಟಾಕು ತನ್ನ ಜಮಾಯತು ಸಹ ಬಂದು ಮೊಗಲಾಯಿ ದೇವೀಚಂದನ ದಂಡಿಗೆ ಮುತ್ತಿಕೊಳ್ಳ

ಲಾಗಿ ನೊಗಲಾಯಿ ಫೌಜು ಕಿಲ್ಲೆಗೂ ಗುಮ್ಮಟಕ್ಕೂ ಮುತ್ತಿಗೆ ಹಾಕಲು ಚೌಕಿ ಪಹರಾದಲ್ಲಿದ್ದವರು ಎಲ್ಲಿಯವರು ಅಲ್ಲಿಂದಲೇ ತಮ್ಮ ಜಮಾಯತು ಸಹಿತ ಜೀವ ಬದುಕಿಸಿಕೊಂಡು ಹೋದರು. ದೇವೋಜಂಗನು ಆನೆ ಹತ್ತುತ್ತಿರಲಾಗಿ ಅವನ ತಲೆಹೊಡೆದು ಬಿಟ್ಟರು. ನಗಾರಿ, ನೌಬತ್ತು, ಡೇರಾ, ಆನೆ, ಕುದುರೆ ಸಹಿತವಾಗಿ ನವಾಬ ಬಹದರವರ ಕೈವಶವು ಆಯಿತು. ಅಮೀನಸಾಹೇಬನು ಬೆತ್ತಲು ಕುದುರೆ ಹತ್ತಿಕೊಂಡು ಜೀವ ಬದುಕಿಸಿಕೊಂಡು ಹೋದನು. ಮುಸಾಲಾಲಿಗೆ ದಂಡು ಹೋಗಿ ಮುತ್ತಿಕೊಂಡಿತು. ಇವರಿಗೂ ಅವರಿಗೂ ಬಹಳ ಲಡಾಯಿ ಆಯಿತು. ಲಡಾಯಿ ಮಾಡಿಕೊಳ್ಳುತ್ತ **ಹಗರೀ**ಗೆ ಹೋಗುವಷ್ಟಕ್ಕೆ ಅಲ್ಲಿಂದ ಮುಸಾಲಾಲಿಯನ್ನು ಬಿಟ್ಟು ನವಾಬ ಬಹದರವರ ಫೌಜು ತಿರುಗಿ ಬಂದಿತು. ಆ ಹೊತ್ತು ಸಂಜೆಯಾಯಿತು. ನವಾಬ ಬಹದರವರ ದಂಡು **ಹಂದರಹಾಳ** ಹಳ್ಳದಲ್ಲಿ ಇಳಿದುಕೊಂಡಿತ್ತು. ಅದೇ ದಿವಸ ರಾತ್ರಿಯಲ್ಲಿ ಬಳ್ಳಾರಿ ಕಿಲ್ಲೆಯೊಳಗಿದ್ದ ದೊಡ್ಡಪ್ಪನಾಯಕನೂ, ನಾಯಕವಾಡಿಗಳೂ ಸಹಿತವಾಗಿ ನಾಗರಕೆರೆ ಅಗಳ್ತಿಯಲ್ಲಿ ಹೊರಟು ಕೆಲವು ಸಾಮಾನು ತೆಗೆದುಕೊಂಡು ಕಿಲ್ಲೆ ಖಾಲಿಮಾಡಿ ತುಂಗಭದ್ರೆಯನ್ನು ದಾಟಿ ಹೋದರು.

ದೊಡ್ಡಪ್ಪನಾಯಕನು ಆಳಿದುದು ಶಕ ೧೬೯೩ನೆಯ ವಿಕೃತಿ ಸಂವತ್ಸರದ ಲಾಗಾಯಿತು ಆಖೈರು ಶಕ ೧೬೯೭ನೆಯ ಮನ್ಮಥ ಸಂವತ್ಸರದ ಕಾರ್ತಿಕ ಮಾಸದ ವರೆಗೆ ಆರು ವರ್ಷ. ತರುವಾಯ ಬಳ್ಳಾರಿ ಕಿಲ್ಲೆಯೊಳಗಿದ್ದ ದೇಸಾಯಿ, ನಾಡಿಗರು, ಗೌಡ, ಶಾನುಭೋಗ, ದೇಶಾಚಾರರವರು ಕೂಡಿ "ದೊಡ್ಡಪ್ಪನಾಯಕನಾದರೆ ತನ್ನ ಮಂದಿ ಸಹಿತವಾಗಿ ಠಾಣ್ಯ ಬಿಟ್ಟು ಹೋದನು. ನಾವು ಮಾತ್ರ ಕಿಲ್ಲೆಯೊಳಗೆ ಉಳಿದವರಾದೆವು. ನಾವೂ ಸುಮ್ಮನೆ ಊರೊಳಗೆ ಇದ್ದರಾಯಿತೇ, ನವಾಬಸಾಹೇಬರ ಮಂದಿ ಬಂದು ಮುತ್ತಿಕೊಂಡು ಮನೆಗಳು ಲೂಟಿ ಮಾಡಿಯಾರು! ನಾವು ಸಮಗ್ರ ಕೆಟ್ಟು ಹೋದೇವು!" ಎಂದು ಆಲೋಚನೆ ಮಾಡಿದ್ದು ತಿಳಿದು, ಬಾಗಿಲು ತೆರೆಯಿಸಿಕೊಂಡು ದೇಶಾಚಾರ ಸಹಿತವಾಗಿ ನವಾಬಸಾಹೇಬರ ಬಳಿಗೆ ಬಂದು ಈ ಅಭಿಪ್ರಾಯ ಯಾವತ್ತೂ ಮನವಿ ಮಾಡಿಕೊಂಡು ಬೀಗದ ಕೈ ಮುಂದೆ ಇಡಲಾಗಿ, ನವಾಬಸಾಹೇಬರು ತಮ್ಮ ಕಡೆಯ **ಹೈದರಲ್ಲಿಬೇಗ್** ಎಂಬಾತನಿಗೆ ಕಿಲ್ಲೆದಾರಿ ಕೊಟ್ಟು ಅವನ ಸಂಗಡ ಐನೂರು ಜನರು ಕೊಟ್ಟು ಕಳುಹಿಸಿ ಮನ್ಮಥ ಸಂವತ್ಸರದ ಆಖೈರು ವರೆಗೆ ಕಿಲ್ಲೆ ಠಾಣ್ಯ ಹಾಕಿಸಿದರು.

ತರುವಾಯ ಕುರುಗೋಡು, ತೆಕ್ಕಲಕೋಟೆ ಸಹಿತವಾಗಿ ಬಹಾದರು ನವಾಬಸಾಹೇಬರ ಠಾಣ್ಯ ಆಯಿತು. ತರುವಾಯ ರಾಯದುರ್ಗದ ಸಂಸ್ಥಾನಿಕರ ಕಡೆಯ **ಕೃಷ್ಣಪ್ಪನಾಯಕ**ನಿಗೆ ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ ಕೊಟ್ಟರು. ತರುವಾಯ **ಹೈದರುಬಕ್ಷಿ** ಎಂಬ ಕಿಲ್ಲೆದಾರನನ್ನು ಕೊಟ್ಟು ಕಳುಹಿಸಿದರು. ಹೈದರಬಕ್ಷಿಯ ತರುವಾಯ **ರಾಣೋಜಿರಾಯ, ಮಾನೋಜಿರಾಯ**ರ ಕಿಲ್ಲೇದಾರಿ ನೌಕರರು ಮಾಡಿ ಕಳುಹಿಸಿಕೊಟ್ಟರು.

ಬಳ್ಳಾರಿ ಗುಡ್ಡದ ಮೇಲಿರುವ ಕಿಲ್ಲೆಯೂ ಕೆಳಗಿರುವ ಕಿಲ್ಲೆಯೂ ಸಹ ದುರಸ್ತುವಾಗಿ ಕಟ್ಟಿಸಲಿಕ್ಕೆ ನವಾಬ ಬಹದೂರರವರು ಅಪ್ಪಣೆಕೊಟ್ಟು ಅಲ್ಲಿಂದ ಕಾಮಗಾರಿ ಬಗ್ಗೆ ಹಣ ಹೇರಿಸಿ ಕಳುಹಿಸಲಾಗಿ ಪೂರ್ವದ ಪಾಳೆಯಗಾರ ಕಟ್ಟಿಸಿದ ಕೋಟೆ ಕೆಡಹಿಸಿ ಹೊಸದಾಗಿ ಬುನಾದಿ ಹಾಕಿ ಧರಗಳು ಅಡ್ಡಗಲ ಹಿಡಿದು ಕೋಟೆ ಬತ್ತೇರಿಗಳು ಸಹ ಠಾಣ್ಯ ಹಾಕಿದ ಲಾಗಾಯಿತು ನವಾಬ ಸಾಹೇಬರ ಅಖೈರು ವರೆಗೂ ಕಾಮಗಾರಿ ಆಯಿತು. ಆತನ ತರುವಾಯ ಆತನ ಮಗ **ಟಿಪ್ಪೂಸುಲ್ತಾನನ** ದಿವಸದಲ್ಲಿ ಕೋಟೆ, ಕೊತ್ತಲ, ಅಲಂಗ, ಅಗಳತಿ, ಬತ್ತೇರಿ ಯಾವತ್ತೂ ಕಿಲ್ಲೆ ದುರಸ್ತು ಮಾಡಿಸಿ ಗಚ್ಚಿನ ಕಾಮಗಾರಿ ಮಾಡಿಸಿದರು.

ದೇಶಾಯಿ, ನಾಡ ಗೌಡ, ನಾಡು ಕುಲಕರ್ಣಿ, ಸರದೇಶಾಯಿ ಇವರಿಗೆ ನವಾಬ ಬಹದರವರ ದಿವಸದಲ್ಲಿ ಉಂಬಳಿ ಗ್ರಾಮದಲ್ಲಿ ಅರ್ಧ ಹಿಸ್ಸೆ ಕೊಡುತ್ತ ಭೂಸ್ವಾಸ್ತಿ ಇವರಿಗೆ ನಡೆಯಿಸಿದರು, ವರ್ತನೆ ನಡೆಯಿಸಲಿಲ್ಲ. ಟೀಪೂಸುಲ್ತಾನನ ದಿವಸದಲ್ಲಿ ಉಂಬಳಿ ಗ್ರಾಮಗಳು ವರ್ತನೆ ಇವೆರಡೂ ಜಪ್ತಿಯಾಯಿತು. ಭೂಸ್ವಾಸ್ತಿ ಹುಸಿಗೆ ಮುಂತಾದ್ದು ನಡೆಯುತ್ತ ಬಂತು. ಸರನಾಡ ಗೌಡರ ಸ್ವಾಸ್ತಿ ದೊಡ್ಡಪ್ಪನಾಯಕನು ಸ್ಥಳ ಬಿಟ್ಟು ಹೋದಲಾಗಾಯಿತು ಅರಮನೆ ಜಪ್ತಿಯಾಯಿತು. ನವಾಬ ಬಹದರವರು ಆಳಿದ್ದು, ಟೀಪೂಸುಲ್ತಾನನ ಆಳಿಕೆ ಸಹ ಶಕ ೧೬೯೮ನೆಯ ದುರ್ಮುಖಿ ಸಂವತ್ಸರದ ಲಾಗಾಯಿತು ಶಕ ೧೭೧೪ನೆಯ ಪರೀಧಾವಿ ಸಂವತ್ಸರದ ವರೆಗೆ ಸಾಲು ೧೭॥.

ತರುವಾಯ ಮೊಗಲಾಯಿಯವರು, ಶ್ರೀಮಂತರು, ಇಂಗ್ರೇಜ ಬಹದರ ನವರೂ ಸಹ ಪೂರ್ವದಲ್ಲಿ ಬೆಂಗಳೂರ ಮೇಲೆ ಮುತ್ತಿಗೆ ಹಾಕಿದ ವೇಳೆಯಲ್ಲಿ ಕೆಲವು ರಾಜ್ಯ ಶ್ರೀಮಂತರಿಗೂ ಮೊಗಲಾಯಿಯವರಿಗೂ ಸಲ್ಲಾವಾಗುವ ವೇಳೆಯಲ್ಲಿ ಮೊಗಲಾಯಿಯವರ ಹಂಚಿಕೆಯೊಳಗೆ ಬಳ್ಳಾರಿಯನ್ನು ಬರೆದು ಕೊಡಲಾಗಿ ಮೊಗಲಾಯಿಯವರ ಕಡೆಯವರು ಠಾಣ್ಯ ಹಾಕಿಕೊಳ್ಳುವ ನಿಮಿತ್ತ ಬಳ್ಳಾರಿಗೆ ಬಂದು ಕಿಲ್ಲೆಯ ಹೊರಗೆ ಆರು ತಿಂಗಳು ಫೌಜು ಸಹಿತ ವಾಗಿ ಇಳಿದಿದ್ದರು. ಕಿಲ್ಲೆಯೊಳಗೆ ಇದ್ದವರು ಪುನಃ ಟೀಪೂಸುಲ್ತಾನನಿಗೆ ಬರೆದುಕೊಂಡು ಅಲ್ಲಿಂದ ಕಿಲ್ಲೆ ಠಾಣ್ಯ ಕೊಡುವುದೆಂಬ ಪ್ರಕಾರ ಹುಕುಂ ತರಿಸಿಕೊಂಡು ಕಿಲ್ಲೆಯೊಳಗಿದ್ದ ಮದ್ದು, ಗುಂಡು, ತೋಪುಗಳು, ರೇವಿಲೆ, ಬಜಾಲಿ ಮುಂತಾದ ಸಾತು ಸಾಮಾನು ಯಾವತ್ತೂ ಹಿರೇಹಾಳು ಕಿಲ್ಲೆಗೆ ವರಿಸಿ ಮೊಗಲಾಯಿಯವರಿಗೆ ಠಾಣ್ಯ ಕೊಟ್ಟರು. ಮೊಗಲಾಯಿಯವರು ಆಳಿದ್ದು ಶಕ ೧೭೧೫ನೆಯ ಪ್ರಮಾದೀಚ ಸಂವತ್ಸರದ ಲಾಗಾಯಿತು ಶಕ ೧೭೨೨ನೆಯ ರೌದ್ರಿ ಸಂವತ್ಸರದ ಮಾರ್ಗಶಿರ ಮಾಸದ ವರೆಗೆ ೧೭॥ ಸಾಲು ವ್ಯವಹಾರ ನಡೆಯಿಸಿದರು. ಆಗ **ಬೀರಮಾನೆಖಾನ್, ನವಾಬ್ ಖಾನ್, ಅಮಿನಾನ ಸಾಹೇಬ, ಬನಗಾನಪಲ್ಲಿ ಅಸದಲ್ಲಿಖಾನ್, ಚಂದುಲಾಲ್**—ಈ ಪ್ರಕಾರ ಐದುಮಂದಿ ಅಮಲುಮಾಡಿ ಹೋದರು.

ತರುವಾಯ ಮೊಗಲಾಯಿಯವರು ತುಂಗಭದ್ರಾ ನದಿಗೆ ದಕ್ಷಿಣದ ರಾಜ್ಯವನ್ನು ಇಂಗ್ರೇಜಿ ಬಹದರವರಿಗೆ ಬಿಟ್ಟದ್ದರಿಂದ ಬಳ್ಳಾರಿ ಇಂಗ್ರೇಜಿ ಬಹದರವರ ರಾಜ್ಯ ಆಯಿತು. ರಾಜ್ಯವಾದ ತರುವಾಯ ಕಿಲ್ಲೆಯೊಳಗೆ ಬೀದಿಗಳನ್ನು ಸಮನಾಗಿ ಮಾಡುವ ನಿಮಿತ್ತ ಮನೆಗಳನ್ನು ಕೆಡವಿಸಲಾಗಿ ರೈತರು ವಗೈರೆ ಸಮಸ್ತರ ಮನೆಗಳಿಗೆ ಲಾಗುವಾತ ಬರೆಯಿಸಿ ಸರಕಾರದಿಂದ ಕಿಮ್ಮತ್ತು ಸರ್ವರಿಗೂ ಕೊಟ್ಟು, ಕಿಲ್ಲೆಗೆ ಪೂರ್ವಕ್ಕೆ ನೀಲಮ್ಮನ ತೋಟಕ್ಕೆ ಪೂರ್ವ ಬೀಳುಬಿದ್ದ ಭೂಮಿ ಇರಲಾಗಿ ಹೊಸಪೇಟೆ ಕಟ್ಟುವುದಕ್ಕೆ ಕೌಲು ದೇಸಾಚಾರದವರಿಗೆ ಬರೆಯಿಸಿಕೊಟ್ಟ ಹಾಗೆ, ಹಿಂದೂ ಜನ, ಬ್ರಾಹ್ಮಣರು, ಮದುವೆ, ಮುಂಜಿ ಮಾಡಿ, ದೇವರಿಗೆ ನಡೆದುಕೊಳ್ಳುವ ಬಗ್ಗೆ ಹುಜೂರು ಹುಕುಂ ಪ್ರಕಾರ ಹೊಸ ಪೇಟೆಯೊಳಗೆ ನಿರ್ಮಾಣಮಾಡಿ ಇರುವ **ಶ್ರೀ ಲಕ್ಷ್ಮೀನಾರಾಯಣಸ್ವಾಮಿ** ದೇವಾಲಯವನ್ನು ಸರ್ಕಾರದ ಹಣ ಖರ್ಚುಮಾಡಿ ಕಟ್ಟಿಸಿ ಶ್ರೀ ದೇವರನ್ನು **ಸೋಮಸಮುದ್ರ**ದಿಂದ ತರಿಸಿ ಪ್ರತಿಷ್ಠೆ ಮಾಡಿಸಿ ಶ್ರೀ ದೇವರ ಪೂಜೆ ಮಾಡುವ ಬಗ್ಗೆ ಕಸಬಾ ಬಳ್ಳಾರಿಯಲ್ಲಿ ಕೆಲವು ಖುಷ್ಕಿ ಜಮೀನು ಕೊಟ್ಟಿದ್ದರು. **ಅಸುಂಡಿ**ಯಲ್ಲಿ ಕೆಲವು ತರೀ ಜಮೀನು ಕೊಟ್ಟು ಪೂಜೆ ಮಾಡುವ ಬಗ್ಗೆ **ಪೇಟೆ ಸಣ್ಣ ವೆಂಕಪ್ಪಾಚಾರ್ಯ**ರು, **ಮಣೂರು ಶ್ರೀನಿವಾಸಾಚಾರ್ಯ**ರು ಇಬ್ಬರನ್ನೂ ನೇಮಕಮಾಡಿ ಇವರಿಗೆ ಇನಾಮತಿ ಸನ್ನದು ಬರೆಯಿಸಿಕೊಟ್ಟರು. ಬಣಜಿಗರು ಮುಂತಾದ ಲಿಂಗವಂತ ಜನರಿಗೆ **ಪೇಟೆ ಬಸವೇಶ್ವರ ಗುಡಿ** ಕಟ್ಟಿಸಿ ಆ ದೇವರಿಗೆ ಕಸಬಾ ಬಳ್ಳಾರಿ ಖುಷ್ಕಿ ಜಮೀನು ಇನಾಮು ಕೊಟ್ಟು ಪೂಜೆ ಮಾಡುವ ಬಗ್ಗೆ ಪೂಜಾರಿಯವರನ್ನು ನೇಮಕ ಮಾಡಿದರು. ಮುಸಲ್ಮಾನ ಜನರಿಗೆ ಜುಮ್ಮಾ ಮಸಜೀದ ಕಟ್ಟಿಸಿ ಚಿರಾಖ ಬಗ್ಗೆ ಕಸಬಾ ಬಳ್ಳಾರಿ ಖುಷ್ಕಿ ಜಮೀನು ಪೈಕಿ ಇನಾಮು ಕೊಟ್ಟು ನಿಮಾಜು ಮಾಡುವ ಬಗ್ಗೆ ನೇಮಕ ಮಾಡಿದರು. ಈ ಪ್ರಕಾರ ಸರಕಾರದಿಂದ ದೇವಳ ಕಟ್ಟಿಸಿ ಕೌಲು ಕೊಟ್ಟಕಾರಣ ಹೊಸಪೇಟೆಯಲ್ಲಿ ನಾನಾ ಕುಲ, ಸಮಸ್ತ (ಕೋಮಿ)ನವರೂ ಮನೆಗಳು, ಮಳಿಗೆ ಮುಂತಾದ್ದು ಕಟ್ಟಿಕೊಂಡರು. ಪೇಟೆ ಬಸ್ತಿಯಾಗಿ ಸಂತೆಯಾಗುತ್ತಿದ್ದಿತು. ದೇಶಾಯಿ, ನಾಡ ಗೌಡ, ನಾಡ ಕುಲಕರ್ಣಿ, ಸರದೇಶಾಯಿ ಈ ನಾಲ್ಕು ಜಾಗನವರ ಭೂಸ್ವಾಸ್ತಿ ಪೈಕಿ ಕೆಲವು ಜಪ್ತಿಯಾಗಿ ಅಲ್ಪ ಸ್ವಲ್ಪ ಭೂಸ್ವಾಸ್ತಿ ನಡೆಯುತ್ತಿದ್ದಿತು.

ಹಂಡೆಬಾಲದ ಹನುಮಪ್ಪನಾಯಕ ಬಳ್ಳಾರಿಗೆ ಬಂದು ಸಂಸ್ಥಾನ ಮಾಡಿದ ಶಾ. ಶ. ೧೪೮೯ ಪ್ರಭವ ಸಂವತ್ಸರದ ಆರಂಭವಾಯಿತು. ಶಾ. ಶ. ೧೫೩೧ನೆಯ ಶುಕ್ಲ ಸಂವತ್ಸರದ ವರೆಗೆ ಅವರು ಆಳಿದ ಗೋಷ್ವಾರೆ ಸಂವತ್ಸರಗಳು :—

ಬಾಲದ ಹನುಮಪ್ಪನಾಯಕ :—ಶಕ ೧೪೮೯ನೆಯ ಪ್ರಭವ ಸಂವತ್ಸರದ ಆರಂಭವಾಯಿತು ೧೫೫೪ನೆಯ ಅಂಗೀರಸ ಸಂವತ್ಸರದ ವರೆಗೆ ಪಟ್ಟ-ಅರಸತ್ತ್ವಾರಕ್ಕೆ ಆಳಿದವರು :—ಹಂಡೆಬಾಲದ ಹನುಮಪ್ಪನಾಯಕ, ಈತನ ಮಗ

ಹಿರೆ ಮಲಕಪ್ಪನಾಯಕ, ಈತನ ಮಗ ಸಿದ್ದಪ್ಪನಾಯಕ ಈತನ ಮಗ ಹಿರೆ ರಾಮಪ್ಪನಾಯಕ:—ಈ ನಾಲ್ಕು ಮಂದಿ ಆಳಿದ ವರ್ಷಗಳು ೬೬.

ಮೊಗಲಾಯಿಯವರ ಆಳಿಕೆ:—ಬಹೇ ಸಾಹೇಬ ಶಕ ೧೫೫೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೫೬೧ನೆಯ ಪ್ರಮಾದಿ ಸಂವತ್ಸರದ ವರೆಗೆ ವರ್ಷಂಗಳು ೭. **ಕರೀಮ ಸಾಹೇಬ**—ಶಕ ೧೫೬೨ನೆಯ ವಿಕ್ರಮ ಸಂವತ್ಸರದ ಲಾಗಾಯಿತು ಶಕ ೧೫೬೬ನೆಯ ತಾರಣ ಸಂವತ್ಸರದ ವರೆಗೆ ೫ ವರ್ಷ. **ಸಿದ್ದಿ ಮಸೂದಖಾನನು**—ಶಕ ೧೫೬೭ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು ಶಕ ೧೫೭೮ನೆಯ ದುರ್ಮುಖಿ ಸಂವತ್ಸರದ ವರೆಗೆ ೧೨ ವರ್ಷಂಗಳು. **ಕಂದನೂಲು ವಗೈರೆಯವರ ಆಳಿಕೆ**—ಶಕ ೧೫೭೯ನೆಯ ಹೇವಿಳಂಬಿ ಸಂವತ್ಸರದ ಲಾಗಾಯಿತು ಶಕ ೧೬೧೪ ಅಂಗೀರಸ ಸಂವತ್ಸರದ ವರೆಗೆ ವರ್ಷ ೩೬.

ಹಂಡೆಯವರ ಆಳಿಕೆ:—ಹಿರೆ ರಾಮಪ್ಪನಾಯಕನ ಮಗ ಚಿಕ್ಕ ಮಲಕಪ್ಪನಾಯಕ, ಈತನ ಮಗ ಚಿಕ್ಕನಾಯಕ ಸಾಹೇಬ ಇವರು ಇಬ್ಬರೂ, ಮೊಗಲಾಯಿಯವರು ರಾಜ್ಯ ಕಟ್ಟಿಕೊಂಡ ಕಾರಣ ರಾಜ್ಯವಾಳಲಿಲ್ಲ. ಈ ಚಿಕ್ಕನಾಯಕ ಸಾಹೇಬರ ಮಗ ದ್ಯಾವಪ್ಪನಾಯಕ—ಶಕ ೧೬೧೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೬೩೦ನೆಯ ಸರ್ವಧಾರಿ ಸಂವತ್ಸರದ ವರೆಗೆ ೧೬ ವರ್ಷ. ಇವರ ದ್ಯಾವಪ್ಪನಾಯಕನ ಮಕ್ಕಳು:—(೧) ಹನುಮಪ್ಪನಾಯಕ, (೨) ಹಿರೆ ರಾಮಪ್ಪನಾಯಕ, (೩) ಚಿಕ್ಕ ರಾಮಪ್ಪನಾಯಕ—ಈ ಮೂರು ಮಂದಿ ಪೈಕಿ ಹನುಮಪ್ಪನಾಯಕನು ಶಕ ೧೬೩೧ ವಿರೋಧಿ ಸಂವತ್ಸರದ ಲಾಗಾಯಿತು ಶಕ ೧೬೪೦ನೆಯ ವಿಳಂಬಿ ಸಂವತ್ಸರದ ವರೆಗೆ ವರ್ಷ ೧೦. ಈತನ ತಮ್ಮ ಹಿರೆ ರಾಮಪ್ಪನಾಯಕ ಶಕ ೧೬೪೧ನೆಯ ವಿಕಾರಿ ಸಂವತ್ಸರದ ಲಾಗಾಯಿತು ೧೬೪೭ನೆಯ ವಿಶ್ವಾವಸು ಸಂವತ್ಸರದ ವರೆಗೆ ವರ್ಷ ೭. ಈತನ ತಮ್ಮ ಚಿಕ್ಕರಾಮಪ್ಪನಾಯಕನು—ಶಕ ೧೬೪೮ನೆಯ ಪರಾಭವ ಸಂವತ್ಸರದ ಲಾಗಾಯಿತು ಶಕ ೧೬೫೨ನೆಯ ಸಾಧಾರಣ ಸಂವತ್ಸರದವರೆಗೆ ವರ್ಷಗಳು ೫.

ಈ ಮೂರು ಮಂದಿಗೂ ಸಂತಾನವಿಲ್ಲದೆ ಹೋದುದರಿಂದ ಮೂಲ ಪುರುಷನಾದ ಹಂಡೆ ಹನುಮಪ್ಪನಾಯಕನ ಮಗನಾದ ಅಂಕುಶರಾಯನ ವಂಶಸ್ಥರಾದ ಸಿದ್ದಪ್ಪನಾಯಕ, ಪ್ರಸನ್ನಪ್ಪನಾಯಕ ಎಂಬ ಇಬ್ಬರು ಅಣ್ಣತಮ್ಮಂದಿರು ಇರಲಾಗಿ ಸಿದ್ದಪ್ಪನಾಯಕನ ಮಗ ರಾಮನಾಯಕನನ್ನು ಹಂಪರಹಳ್ಳಿಯಿಂದ ಕರೆತಂದು ಪಟ್ಟ ಕಟ್ಟಿದರು. ದ್ಯಾವಪ್ಪನಾಯಕನ ಚಿಕ್ಕ ಹೆಂಡತಿ ನೀಲಮ್ಮನು ಶಕ ೧೬೫೩ನೆಯ ವಿರೋಧಿಕೃತು ಸಂವತ್ಸರದ ಲಾಗಾಯಿತು ಶಕ ೧೬೫೬ನೆಯ ಆನಂದ ಸಂವತ್ಸರದ ವರೆಗೆ ವರ್ಷ ೪. ಹಂಪರಹಾಳ ಸವರಿ ರಾಮಪ್ಪನಾಯಕನು—ಶಕ ೧೬೫೭ನೆಯ ರಾಕ್ಷಸ ಸಂವತ್ಸರದ ಲಾಗಾಯಿತು ಶಕ ೧೬೮೬ನೆಯ ತಾರಣ ಸಂವತ್ಸರದ ವರೆಗ ೩೦ ವರ್ಷ. ಈತನ ತಮ್ಮ ಹನುಮಪ್ಪ

ನಾಯಕನ ಆಳಿಕೆ:—ಶಕ ೧೬೮೭ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು ಶಕ ೧೬೯೧ನೆಯ ವಿರೋಧಿ ಸಂವತ್ಸರದ ವರೆಗೆ ೫ ವರ್ಷ. ಈತನು ಪಾಲನೆ ಮಾಡಿಕೊಂಡ ಮಗ ದೊಡ್ಡಪ್ಪನಾಯಕನು ಶಕ ೧೬೯೨ ವಿಕೃತಿ ಸಂವತ್ಸರದ ಲಾಗಾಯಿತು ಶಕ ೧೬೯೭ ಮನ್ಮಥ ಸಂವತ್ಸರದ ವರೆಗೆ ೬ ವರ್ಷ.

ಬಹದರ ನವಾಬ ಈತನ ಮಗ ಟಿಪ್ಪೂಸುಲ್ತಾನ ಸಹ ಆಳಿದ್ದು ಶಕ ೧೬೯೮ ದುರ್ಮುಖಿ ಸಂವತ್ಸರದ ಲಾಗಾಯಿತು ಶಕ ೧೭೧೪ನೆಯ ಪರೀಧಾವಿ ಸಂವತ್ಸರದ ಶ್ರಾವಣ ಮಾಸದ ವರೆಗೆ ೧೬॥ ವರ್ಷಗಳು.

ಮೊಗಲಾಯಿ ಅಮಲು ಶಕ ೧೭೧೪ನೆಯ ಪರೀಧಾವಿ ಸಂವತ್ಸರದ ಭಾದ್ರಪದ ಮಾಸ ಲಾಗಾಯಿತು ಶಕ ೧೭೨೨ ರೌದ್ರಿ ಸಂವತ್ಸರದ ಕಾರ್ತಿಕ ಮಾಸದ ವರೆಗೆ ವರ್ಷ ೮.

ಕುಂಪಣಿ ಸರ್ಕಾರ ಇಂಗ್ರೇಜಿ ಬಹದರವರ ಅಮಲು:—ಶಕ ೧೭೨೨ ರೌದ್ರಿ ಸಂವತ್ಸರದ ಮಾರ್ಗಶಿರ ಮಾಸದ ಲಾಗಾಯಿತು ಶಕ ೧೭೩೧ ಕಾರ್ತಿಕ ಮಾಸದ ವರೆಗೆ ಜಾರಿ ವರ್ಷಗಳು ೯.

ಅಂತು ಹಂಡೆಬಾಲದ ಹನುಮಪ್ಪನಾಯಕನ ಲಾಗಾಯಿತು ಕುಂಪಣಿ ಅಮಲು ವರೆಗೆ—೨೪೨॥ ವರ್ಷಗಳು.

ಬಿ. ರಾಮರಾವ್

ಆಂಗ್ಲೇಯ ಗದ್ಯದ ಆರಂಭ ಚರಿತ್ರೆ

ನಾರ್ಮನರು ಬಂದಾಗ್ಗೆ ಆಂಗ್ಲೋ ಸ್ಯಾಕ್ಸನ್ ಭಾಷೆಯಲ್ಲಿ ಗದ್ಯರಚನೆಯು ನಿಂತು ಹೋಗಿದ್ದಿತು. ಆಮೇಲೂ ಈ ಭಾಷೆಯಲ್ಲಿ ಗದ್ಯವು ವಿಶೇಷವಾಗಿ ರಚಿತವಾಗಲಿಲ್ಲ. ಸಂನ್ಯಾಸದ ನಿಯಮಗಳನ್ನು ಕುರಿತ "ಆಂಕ್ರುಸ್ ರಿವಿಲ್" ಎಂಬ ಒಂದು ಗ್ರಂಥವನ್ನೂ ರಿಚರ್ಡ್ ರೋಲ್ ಎಂಬಾತನ ಉಪನ್ಯಾಸಗಳನ್ನೂ ಬಿಟ್ಟರೆ ಗಣ್ಯವಾದ ಗದ್ಯ ಲೇಖನವೇ ಇರಲಿಲ್ಲವೆನ್ನಬಹುದು. ಫ್ರೆಂಚ್ ಭಾಷೆಯ ಸಂಪರ್ಕದಿಂದ ಇಂಗ್ಲಿಷು ಮಾರ್ಪಟ್ಟು ಹೊಸ ಭಾಷೆಯಾಯಿತಷ್ಟೆ. ಈ ಹೊಸ ಭಾಷೆಯಲ್ಲಿ ಒಂದು ನೂರು ವರ್ಷಗಳ ಕಾಲಕ್ಕೆ ಛಾಸರ್ ಎಂಬ ಕವಿಯು ಸ್ವತಂತ್ರವೂ ಶ್ರೇಷ್ಠವೂ ಆದ ಪದ್ಯವನ್ನು ರಚಿಸಿದನು. ಈತನೇ ಗದ್ಯದಲ್ಲೂ ಬಹಳ ಶ್ಲಾಘನೀಯವಾದ ಕಾರ್ಯವನ್ನು ಮಾಡಿದನು. ಈತನ ಮಹಾಕಾವ್ಯವಾದ "ಕ್ಯಾಂಟರ್‌ಬರಿ ಕಥಾಮಂಜರಿ" ಎಂಬ ಗ್ರಂಥದಲ್ಲಿ ಎರಡು ಕಥೆಗಳು ಗದ್ಯದಲ್ಲಿವೆ. ಇದಲ್ಲದೆ ಇವನು ಒಂದು ಜ್ಯೋತಿಷ್ಯಶಾಸ್ತ್ರ ವಿಷಯಕವಾದ ಗ್ರಂಥವನ್ನು ಗದ್ಯದಲ್ಲಿ ಬರೆದನು. ಬೋಯೇಸಿಯಸ್ ಎಂಬಾತನ ತತ್ತ್ವಗ್ರಂಥವೊಂದನ್ನು ಆಲ್‌ಫ್ರೆಡ್ ದೊರೆಯು ಆಂಗ್ಲೋ ಸ್ಯಾಕ್ಸನಿಗೆ ಭಾಷಾಂತರ ಮಾಡಿದನೆಂದು ಮೊದಲೇ ಹೇಳಿದೆ. ಛಾಸರ್ ಕವಿಯು ಇದೇ ಗ್ರಂಥವನ್ನು ತಾನೂ ಇಂಗ್ಲಿಷಿಗೆ ಭಾಷಾಂತರ ಮಾಡಿದನು. ಹೊಸದಾಗಿ ಬರೆಯುತ್ತಿದ್ದ ಗದ್ಯವಾದುದರಿಂದ ಛಾಸರ್ ಕವಿಯ ಗದ್ಯವು ಸ್ವಲ್ಪ ಒರಟಾಗಿದೆ. ಆದರೆ ಶಕ್ತಿಯುತವಾದ ವಾಕ್ಯಬಂಧವುಳ್ಳದಾಗಿ ಭದ್ರವಾಗಿದೆ. ಇತರ ಭಾಷೆಯಿಂದ ಭಾಷಾಂತರ ಮಾಡುವುದರಲ್ಲಿ ಅನೇಕ ಹೊಸ ಭಾವಗಳ ವ್ಯವಹಾರಕ್ಕಾಗಿ ಮಾತುಗಳನ್ನು ಉಪಯೋಗಿಸಿ ಈ ಕವಿಯು ಇಂಗ್ಲಿಷ್ ಭಾಷೆಯ ಶಬ್ದಕೋಶವನ್ನು ವೃದ್ಧಿಗೊಳಿಸಿದನು. ಈ ಕಾಲದಲ್ಲಿ ಆಂಗ್ಲೇಯ ಭಾಷೆಯ ಗದ್ಯವು ದಿಟ್ಟವಾಗಿ ಒಂದು ದಾರಿಯಲ್ಲಿ ನಡೆಯತೊಡಗಿತು.

ಈ ಕಾಲದಲ್ಲಿ ಗದ್ಯವನ್ನು ಬರೆಯುತ್ತಿದ್ದ ಇತರರಲ್ಲಿ ಥಾಮಸ್ ಉಸ್ಕ್, ಜಾನ್ ಟ್ರೆವೀಸಾ, "ಸರ್ ಜಾನ್ ಮಾಂಡವಿಲ್" ಎನ್ನುವವರೂ ಈ ಮೊದಲೇ ಉಕ್ತವಾಗಿರುವ ವಿಕ್ಲಿಫ್ ಎಂಬಾತನೂ ಅವನ ಅನುಯಾಯಿಗಳೂ ಪ್ರಮುಖರು. ಥಾಮಸ್ ಉಸ್ಕ್ ಎಂಬಾತನು ಬೋಯೇಸಿಯಸ್ಸಿನ ಕಾವ್ಯವನ್ನು ಅವಲಂಬಿಸಿ "ಟೆಸ್ಟಮೆಂಟ್ ಆಫ್ ಲವ್" ಎಂಬ ಒಂದು ಗ್ರಂಥವನ್ನು ಬರೆದನು. ಜಾನ್ ಆಫ್ ಟ್ರೆವೀಸಾ ಎಂಬವನು ಹದಿಮೂರನೆಯ ಶತಮಾನದಲ್ಲಿ ಹಿಗ್ಡೆನ್ ಎಂಬಾತನು ಬರೆದಿದ್ದ ಲ್ಯಾಟಿನ್ ಚರಿತ್ರೆಯನ್ನು ಇಂಗ್ಲಿಷಿನಲ್ಲಿ ಬರೆದನು. ಈ ಚರಿತ್ರೆಯಿಂದ ಮೊದಲ ಉಪನ್ಯಾಸದಲ್ಲಿ ಫ್ರೆಂಚ್ ಮತ್ತು ಇಂಗ್ಲಿಷಿನ ಸಂಬಂಧವಾದ ಒಂದು ವಾಕ್ಯವನ್ನು ಉದ್ಧರಿಸಿದೆ. "ಸರ್ ಜಾನ್ ಮಾಂಡವಿಲ್" ಎಂಬಾತನು

ಇವರಿಬ್ಬರಿಗಿಂತಲೂ ಹೆಚ್ಚಾದ ಕೆಲಸವನ್ನು ಮಾಡಿದನು. ಬಹುಕಾಲದವರೆಗೆ ಆಂಗ್ಲೇಯ ಪದ್ಯಕಾವ್ಯಕ್ಕೆ ಛಾಸರ್ ಕವಿಯನ್ನೂ ಆಂಗ್ಲೇಯ ಗದ್ಯ ಮಾಲೆಗೆ ಮಾಂಡವೀಲನನ್ನೂ ಪಿತರೆಂದು ಹೇಳುತ್ತಿದ್ದರು. ಈ ಹೆಸರಿನ ಕವಿಗೆ ಆರೋಪಿಸುತ್ತಿದ್ದ ಗ್ರಂಥಕ್ಕೆ ಸರ್ ಜಾನ್ ಮಾಂಡವೀಲನ ದೇಶಯಾತ್ರೆ ಎಂದು ಹೆಸರು. ಸರ್ ಜಾನ್ ಮಾಂಡವೀಲೆಂಬ ಹೆಸರಿನ ಮನುಷ್ಯನೊಬ್ಬನಿದ್ದರೂ ಆತನು ದೇಶಯಾತ್ರೆ ಹೋದದ್ದೇ ಆಗಲಿ, ಈ ಗ್ರಂಥವನ್ನು ಬರೆದದ್ದೇ ಆಗಲಿ ಇಲ್ಲವೆಂದು ಈಚೆಗೆ ಪಂಡಿತರು ಸಿದ್ಧಾಂತ ಮಾಡಿದ್ದಾರೆ. ಈ ಗ್ರಂಥವು ಮೊದಲು ಫ್ರೆಂಚಿನಲ್ಲಿ ಇದ್ದು ಆ ಮೇಲೆ ಈ ಇಂಗ್ಲಿಷ್ ಭಾಷಾಂತರವು ಪ್ರಕಟವಾಯಿತೆಂದು ಕಂಡುಬಂದಿದೆ. ಇದನ್ನು ಬರೆದವನು ಮಾಂಡವೀಲಲ್ಲ, ಜೀಂಡೆ ಬರ್ಗೋನ್ ಎಂಬಾತನಂತೆ. ಮಾಂಡವೀಲ್ ಇಂಗ್ಲಿಷಿನಲ್ಲಿ ರಚಿಸಿದ್ದೆಂದು ತಿಳಿದಿದ್ದಾಗ ಮಿತಿಯಿಲ್ಲದ ಸ್ತುತಿಯನ್ನು ಪಡೆದ ಈ ಗ್ರಂಥವು ಭಾಷಾಂತರವೆಂದು ತಿಳಿದ ಒಡನೆ ಆ ಗೌರವವನ್ನೆಲ್ಲ ಕಳೆದುಕೊಂಡಿತು. ಆದರೆ ಸ್ವತಂತ್ರ ಕಾವ್ಯವಾಗದೆ ಭಾಷಾಂತರವೇ ಆದರೂ "ಮಾಂಡವೀಲನ ದೇಶಯಾತ್ರೆ"ಯು ಆಂಗ್ಲೇಯ ಗದ್ಯದ ಬೆಳವಣಿಗೆಯಲ್ಲಿ ಬಹು ಪ್ರಮುಖವಾದ ಕಾರ್ಯವನ್ನು ಮಾಡಿತೆನ್ನುವುದರಲ್ಲಿ ಸಂದೇಹವಿಲ್ಲ. ಈ ಗ್ರಂಥದಲ್ಲಿ ಆಂಗ್ಲೇಯ ಗದ್ಯಶೈಲಿಯು ಸ್ಥಿರವಾದ ಒಂದು ಸ್ವರೂಪವನ್ನು ಪಡೆಯಿತು. ಭಾಷೆಯು ಮತ್ತಷ್ಟು ವೃದ್ಧಿಗೆ ಬಂದಾಗ ಗ್ರಂಥಕಾರರು ಗದ್ಯದಲ್ಲಿ ತಂದ ಕ್ಷಣಿಕ ಸಿಕ್ಕುಗಳು ಈಗಾಗಲೇ ಇಲ್ಲಿ ಇರದಿದ್ದರೂ ಸಾಮಾನ್ಯನಿಗಾಗಿ ಸಾಮಾನ್ಯ ವಿಷಯಗಳನ್ನು ಕುರಿತು ಸುಲಭವಾಗಿ ಬರೆಯುವುದಕ್ಕೆ ಈ ಗ್ರಂಥದಲ್ಲಿ ಮಾರ್ಗವು ನಿರೂಪಿಸಲ್ಪಟ್ಟಿತು. ವಿಷಯವು ಕೂಡ ಸಾಮಾನ್ಯರಿಗೆ ಸುಲಭವಾಗಿ ಅಭಿರುಚಿಸತಕ್ಕದ್ದು.

ಇನ್ನು ಈ ಕಾಲದ ಗದ್ಯಕಾರರಲ್ಲಿ ವಿಕ್ಲಿಫನನ್ನೂ ಅವನ ಅನುಯಾಯಿಗಳನ್ನೂ ಕುರಿತು ಎರಡು ಮಾತನ್ನು ಹೇಳಬೇಕು. ವಿಕ್ಲಿಫನ ಹೆಸರನ್ನು ಮೊದಲೇ ಹೇಳಿದೆ. ಈತನು ಮೊದಲು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಪಂಡಿತನಾಗಿದ್ದನು. ಆಗ್ಗೆ ಮಠದ ಮತ್ತು ಮಠೀಯರ ಅನ್ಯಾಯವಾದ ಪ್ರಾಬಲ್ಯದಿಂದ ಇವನಿಗೆ ಅಸಮಾಧಾನವಾಗಿತ್ತು. ಈ ಸಮಯದಲ್ಲಿ ಆಂಗ್ಲೇಯ ದೊರೆಯು ರಾಜ್ಯದ ವಿಚಾರದಲ್ಲಿ ರೋಮಿನ ಗುರುವಿಗೆ ಹೊಣೆಯೇ ಅಲ್ಲವೇ ಎಂಬುದು ಪ್ರಶ್ನೆಗೆ ಬಂದಿತು. ರೋಮಿನ ಗುರುವು ತಾನು ಜಗದ್ಗುರುವೆಂಬ ಭಾವದಿಂದ ಇಂಗ್ಲೆಂಡಿನಲ್ಲಿ ಯಾವ ಮಠದ ಅಧಿಕಾರವು ಬರಿದಾದರೂ ತನ್ನವರನ್ನು ಅಲ್ಲಿಗೆ ಕಳುಹಿಸುವನು. ಸಾಲದುದಕ್ಕೆ ಜಾನ್ ದೊರೆಯು ಅವನಿಗೆ ಬರೆದು ಕೊಟ್ಟಿದ್ದ ಕರಾರಿನ ಪ್ರಕಾರ ಕೆಲವು ವರ್ಷಗಳಿಂದ ಕೊಡದೆ ಇದ್ದ ಕಪ್ಪವನ್ನು ಕೊಡಬೇಕೆಂದು ಕೇಳಿದನು. ಇದರಿಂದ ಬಂದ ಚರ್ಚೆಯಲ್ಲಿ ವಿಕ್ಲಿಫನು ಜಗದ್ಗುರುವಿಗೆ ವಿರೋಧಿಯಾಗಿ ರಾಜನ ಪಕ್ಷವನ್ನು ವಹಿಸಿದನು. ವಿದ್ಯಾನಿಲಯದಲ್ಲಿ ಈ ವಿಚಾರಗಳನ್ನೆಲ್ಲವನ್ನೂ ಕುರಿತು ಉಪನ್ಯಾಸ ಕೊಟ್ಟು ಚರ್ಚಿಸಿ ಜಗದ್ಗುರುವಿಗೆ

ಈ ಅಧಿಕಾರವಿಲ್ಲವೆಂದು ಮೊದಲಾಗಿ ಸಾರಿದನು. ಈ ಸಂದರ್ಭದಲ್ಲಿ ನಡೆದ ಇತರ ವಿಷಯಗಳನ್ನೆಲ್ಲ ಇಲ್ಲಿ ಹೇಳಬೇಕಾದುದಿಲ್ಲ. ಕೆಲವು ದಿವಸದ ಮೇಲೆ ವಿಕ್ಲಿಫನನ್ನು ಮಠೀಯರು ಪಾಷಂಡನೆಂದು ವಿಚಾರಣೆಗೆ ಸೆಳೆದರು. ವಿಕ್ಲಿಫನು ವಿಚಾರಣೆಯಲ್ಲಿ ಬಿಡುಗಡೆಯನ್ನು ಹೊಂದಿದನು. ಆಕ್ಸ್‌ಫರ್ಡಿನಲ್ಲಿ ಮಠೀಯರೇ ಪ್ರಬಲರಾಗಿದ್ದುದರಿಂದ ಆ ಸ್ಥಳವನ್ನು ಬಿಟ್ಟು ಒಂದು ಗ್ರಾಮದಲ್ಲಿ ಪುರೋಹಿತನಾಗಿದ್ದುಕೊಂಡು ಇವನು ೧೩೮೪ನೆಯ ಇಸವಿಯಲ್ಲಿ ತೀರಿಹೋದನು. ಈತನು ಮಠೀಯರ ಸ್ವಾರ್ಥತೆಯನ್ನೂ, ಕರ್ತವ್ಯ ಪರಾಙ್ಮುಖತೆಯನ್ನೂ ನೋಡಿ ಇವರಿಂದ ಜನರಿಗೆ ಒಳ್ಳೆಯದಾಗದೆಂದು ಭಾವಿಸಿ ಕ್ರೈಸ್ತನ ಮತವನ್ನು ಜನರಿಗೆ ತಿಳಿಸುವುದಕ್ಕಾಗಿ ಬಡ ಜಂಗಮರ ಸಮಾಜವೊಂದನ್ನು ಸ್ಥಾಪಿಸಿ ಅವರನ್ನು ದೇಶದ ಮೇಲೆ ಕಳುಹಿಸಿದನು. ಇದಲ್ಲದೆ ಈತನು ಬೈಬಲನ್ನು ಭಾಷಾಂತರ ಮಾಡುವುದಕ್ಕೆ ಪ್ರಾರಂಭಿಸಿದನು. ಇವನು ಆರಂಭಿಸಿದ ಆ ಉತ್ತಮ ಕಾರ್ಯವನ್ನು ಇವನ ಪಕ್ಷದ ಜನರು ಮುಂದಕ್ಕೆ ಸಾಗಿಸಿದರು. ಮತದ ವಿಷಯದಲ್ಲಿ ವಾಗ್ಯುದ್ಧ ನಡೆಯುವಲ್ಲಿ ವಿಕ್ಲಿಫನು ಪ್ರಕಟಿಸಿದ ಗದ್ಯದ ಉಪನ್ಯಾಸಗಳೂ ಈ ಬೈಬಲಿನ ಭಾಷಾಂತರವೂ ವಿಕ್ಲಿಫನು ಆಂಗ್ಲೇಯ ಗದ್ಯಕ್ಕೆ ಮಾಡಿದ ಸೇವೆ. ಇವನ ಉಪನ್ಯಾಸಗಳೂ, ಇವನಿಗೆ ಸಹಾಯವಾಗಿ ಇತರರು ಬರೆದ ಉಪನ್ಯಾಸಗಳೂ ಜನರಿಗೆ ತಿಳಿಯುವಂತೆ ಆ ಭಾಷೆಯಲ್ಲಿ ಬರೆದ ಮೊದಲ ಚರ್ಚಾ ಗ್ರಂಥಗಳು. ಬರೆದವರು ಮತ ಭಾಷೆಯಾದ ಲ್ಯಾಟಿನ್‌ನಲ್ಲಿ ಪ್ರಾವೀಣ್ಯವನ್ನು ಪಡೆದು ತರ್ಕದಲ್ಲಿ ಅಭ್ಯಾಸವುಳ್ಳವರಾಗಿದ್ದರು. ಜನಾಂಗದ ಆತ್ಮೋನ್ನತಿಯನ್ನು ಅದರ ಪದ್ಯ ಕಾವ್ಯವು ಸೂಚಿಸುವಂತೆ ಅದರ ಸಾಮಾನ್ಯ ಜ್ಞಾನವನ್ನು ಗದ್ಯವು ತಿಳಿಸುತ್ತದೆ. ಮತದ ವಿಚಾರದ ವಾದ ವಿವಾದಗಳಲ್ಲಿ ಜನರಿಗಾಗಿ ಉಪನ್ಯಾಸಗಳನ್ನು ಬರೆಯುವುದರಲ್ಲಿ ಕ್ಲಿಷ್ಟ ವಿಷಯಗಳನ್ನು ಜನರಿಗೆ ತಿಳಿಸುವುದಕ್ಕಾಗಿ ಇವರು ಭಾಷೆಯನ್ನು ಬಳಸಬೇಕಾಯಿತು; ಮಠೀಯರ ದೂಷಣಾವಚನಗಳಲ್ಲಿ ಮನೋಭಾವಗಳನ್ನು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಬರೆಯಬೇಕಾಯಿತು. ಬಹಳ ಉತ್ತಮ ಸ್ಥಿತಿಯಲ್ಲಿದ್ದ ಲ್ಯಾಟಿನ್ ಭಾಷೆಯನ್ನು ತಿಳಿದವರು ಈ ಉಪನ್ಯಾಸಗಳನ್ನು ಬರೆಯುತ್ತಿದ್ದುದರಿಂದ ಇನ್ನೂ ಎಳೆಯದಾಗಿಯೂ ಇಂಥ ವಿಷಯಗಳಿಗೆ ಹೊಸದಾಗಿಯೂ ಇದ್ದ ಆಂಗ್ಲಭಾಷೆಯಲ್ಲಿ ಲ್ಯಾಟಿನ್ ಭಾಷೆಯ ಉತ್ತಮವಾದ ವಾಕ್ಯಬಂಧ ವಾಕ್ಯರಚನ ಮೊದಲಾದ ಲಕ್ಷಣಗಳು ಮೇಲ್ಪಂಕ್ತಿಯಾದುವು. ಕಥೆ ಹೇಳುವುದರಲ್ಲಿ ಗದ್ಯಕ್ಕೆ ಮಾಂಡವಿಲನ ಶೈಲಿಯು ಸ್ವರೂಪವನ್ನು ಕೊಟ್ಟಂತೆ ಚರ್ಚೆಯಲ್ಲಿ ವಿಕ್ಲಿಫ್ ಮತ್ತು ಇವನ ಪಕ್ಷದವರ ಶೈಲಿಯು ಅದನ್ನು ಹಿತಕ್ಕೆ ತಂದಿತು.

ವಿಕ್ಲಿಫನ ಹೆಸರಿಗೆ ಸಂಬಂಧಪಟ್ಟಿರುವ ಬೈಬಲೂ ಗದ್ಯದ ಈ ಚರಿತ್ರೆಯಲ್ಲಿ ಬಹಳ ಮುಖ್ಯವಾದುದು. ಎಲ್‌ಫ್ರಿಕ್ಕಿನ ಬೈಬಲಿನ ಅನುವಾದದ ಈಚೆಗೆ ಇಂಗ್ಲೆಂಡಿನಲ್ಲಿ ದೇಶಭಾಷೆಯಲ್ಲಿ ಬೈಬಲನ್ನು ಭಾಷಾಂತರ ಮಾಡುವ ಪ್ರಯತ್ನ ನಡೆಯಲಿಲ್ಲ. ಓದು ಬಲ್ಲವರು ಫ್ರೆಂಚನ್ನು ಸಾಮಾನ್ಯವಾಗಿ ತಿಳಿದುಕೊಳ್ಳುವ

ನರಾಗಿದ್ದರು. ಫ್ರೆಂಚಿನಲ್ಲಿ ಒಂದು ಬೈಬಲ್ ಇದ್ದುದ್ದರಿಂದ ಇಂಗ್ಲಿಷಿನಲ್ಲಿ ಅದನ್ನು ಬರೆಯುವುದಕ್ಕೆ ಅವಶ್ಯಕತೆ ತೋರಲಿಲ್ಲ. ಈ ಕಾರಣದಿಂದ ಬೈಬಲನ್ನು ಕ್ರಮವಾಗಿ ಇಂಗ್ಲಿಷಿಗೆ ಭಾಷಾಂತರ ಮಾಡುವ ಕೆಲಸವು ವಿಕ್ಲಿಫನ ಕಾಲದವರೆಗೆ ತಡೆದಿತ್ತು. ಮತೀಯರ ವಿಷಯದ ಅಸಮಾಧಾನದಲ್ಲಿ ವಿಕ್ಲಿಫನು ಅದನ್ನು ಕ್ರಮವಾಗಿ ಭಾಷಾಂತರ ಮಾಡುವುದಕ್ಕೆ ಪ್ರಾರಂಭಿಸಿದನು. ಅವನ ಅನುಯಾಯಿಗಳು ಅದನ್ನು ಮುಂದಕ್ಕೆ ನಡೆಯಿಸಿರಬೇಕು. ಈ ಅನುಯಾಯಿಗಳಲ್ಲಿ ನಿಕಲಾಸ್ ಹರ್‌ಫರ್ಡ್ ಎಂಬಾತನು ಒಬ್ಬನೆಂದೂ ಜಾನ್ ಪರ್ವೆ ಎಂಬವನು ಒಬ್ಬಾತನೆಂದೂ ಊಹಿಸಿದ್ದಾರೆ. ಈಗ ಸಿಕ್ಕಿರುವ ಎರಡು ಪ್ರತಿಗಳಲ್ಲಿ ಮೊದಲನೆಯ ಅರ್ಧವನ್ನು ನಿಕಲಾಸನು ಮಾಡಿದನೆಂದೂ, ಇನ್ನರ್ಧವನ್ನು ವಿಕ್ಲಿಫನೋ ಮತ್ತೆ ಯಾರೋ ಮುಗಿಸಿರಬಹುದೆಂದೂ ಹೇಳುವುದಕ್ಕೆ ಕಾರಣಗಳಿವೆ. ಈ ಪ್ರತಿಯಲ್ಲಿ ಭಾಷಾಂತರವು ಮೂಲಕ್ಕೆ ಪದ ಪದಶಃ ಸಮೀಪವಾಗಿರುತ್ತ ಶೈಲಿಯು ಬಹಳ ತೊಡಕಾಗಿದೆ. ಪರ್ವೆ ಬರೆದುದು ಎರಡನೆಯ ಪ್ರತಿಯೆಂದು ಊಹೆಯುಂಟು. ಪರ್ವೆ ಬರೆದುದೋ ಮತ್ತೆ ಯಾರು ಬರೆದುದೋ; ಭಾಷಾಂತರಕಾರನು ಪೀಠಿಕೆಯಲ್ಲಿ ತಾನೊಬ್ಬ ಹುಲುಮನುಜನೆಂದೂ, ದೇವರು ಕ್ರಿಸ್ತನ ಮೂಲಕ ಯಾರು ಯಾರನ್ನು ರಕ್ಷಿಸಲು ಇಷ್ಟಪಟ್ಟನೋ ಅಂಥ ತನ್ನ ದೇಶೀಯರನ್ನು ರಕ್ಷಿಸುವುದಕ್ಕಾಗಿ ತಾನು ಈ ಪುಸ್ತಕವನ್ನು ಬರೆದೆನೆಂದೂ ಇದನ್ನು ಬರೆಯುವುದಕ್ಕೆ ಅನೇಕರ ಸಹಾಯವನ್ನು ಪಡೆದೆನೆಂದೂ, ಲ್ಯಾಟಿನ್ನಿನ ವಾಕ್ಯಬಂಧವನ್ನು ಅನುಸರಿಸಿದರೆ ಇಂಗ್ಲಿಷಿನಲ್ಲಿ ಸುಲಭವಾಗಿ ತಿಳಿಯಲಾರದಾದಕಾರಣ ಭಾಷಾಂತರದಲ್ಲಿ ತಾನು ಕೆಲವು ಸೂತ್ರಗಳನ್ನು ಅನುಸರಿಸಿದೆನೆಂದೂ ಹೇಳಿದ್ದಾನೆ. ಈ ಪ್ರತಿಯು ಮೊದಲ ಪ್ರತಿಗಿಂತ ಬಹಳ ಮುಂದುವರಿದ ಗದ್ಯ ಶೈಲಿಯನ್ನೊಳಕೊಂಡಿದೆ. ಈ ಕಾಲದ ಗದ್ಯದಲ್ಲಿ ಇದು ಮುಖ್ಯವಾದ ಕೃತಿಯಾಗಿ ಮುಂದಣ ಶತಮಾನದಲ್ಲಿ ಟಿಂಡೇಲ್ ಕಾವರ್‌ಡೇಲ್ ಎಂಬವರು ಮಾಡಿದ ಬೈಬಲಿನ ಭಾಷಾಂತರಕ್ಕೆ ಪಾಯವನ್ನು ಹಾಕಿತು.

ವಿಕ್ಲಿಫನ ಪಕ್ಷದವರು ಮತೀಯರನ್ನು ದೂಷಿಸುತ್ತಿದ್ದರೆಂದು ಮತೀಯರ ಪರವಾಗಿ ಪೀಕಾಕ್ ಎಂಬ ಮತಾಧಿಕಾರಿಯೊಬ್ಬನು ಮತೀಯರನ್ನು ಕುರಿತ ದೂಷಣ ಖಂಡನ ಎಂಬ ಗ್ರಂಥವನ್ನು ಬರೆದನು. ವಿಕ್ಲಿಫನ ಕಡೆಯವರು ಜನರ ತಿಳುವಳಿಕೆಗಾಗಿ ಇಂಗ್ಲಿಷಿನಲ್ಲಿ ಬರೆದುದರಿಂದ ಖಂಡನ ಗ್ರಂಥವನ್ನು ಪೀಕಾಕನು ಇಂಗ್ಲಿಷಿನಲ್ಲಿ ಬರೆಯಬೇಕಾಯಿತು. ಅವರಂತೆಯೇ ಇವನೂ ವಿದ್ವಾಂಸನು. ಆದರೆ ವಿಕ್ಲಿಫನ ಪಕ್ಷದವರು ಜನರಿಗೆ ತಿಳಿಯುವುದಕ್ಕೆ ಮಾತ್ರ ಬರೆಯುತ್ತಿದ್ದರು. ಪೀಕಾಕನು ಜನರನ್ನೊಪ್ಪಿಸುವುದಕ್ಕಲ್ಲದೆ ಪರಪಕ್ಷದವರನ್ನೊಪ್ಪಿಸುವುದಕ್ಕೂ ಬರೆದನು. ಅವನು ಇಂಗ್ಲಿಷಿನಲ್ಲಿ ತರ್ಕಿಸುವುದರಲ್ಲಿ ಲ್ಯಾಟಿನ್ ಭಾಷೆಯಲ್ಲಿ ವಾಡಿಕೆಯಾಗಿದ್ದಂತೆ ಬಲವಾಗಿಯೂ ಸಮಂಜಸವಾಗಿಯೂ ತರ್ಕವನ್ನು ನಡೆಯಿಸಬೇಕಾಯಿತು. ಈ ಕಾರಣದಿಂದ ಪೀಕಾಕನು ತನ್ನ

ಗ್ರಂಥದಲ್ಲಿ ಅನೇಕ ನೂತನ ಭಾವಗಳನ್ನು ಪ್ರಯೋಗಿಸಿದ್ದಾನೆ. ಟೀಕಾಕಾರನ ಸಹಜೀವಿಗಳಾಗಿ ಫಾರ್ಟೆಸ್ಕ್ಯೂ, ಕ್ಯಾಪ್‌ಗ್ರೇವ್, ಫೆಬಿಯನ್ ಎಂಬವರೂ ಗದ್ಯ ಗ್ರಂಥಗಳನ್ನು ಬರೆಯುತ್ತಿದ್ದರು. ಫಾರ್ಟೆಸ್ಕ್ಯೂವಿನ ಗ್ರಂಥಗಳಲ್ಲಿ ಮುಖ್ಯವಾದುದು ಇಂಗ್ಲೆಂಡಿನ ರಾಜ್ಯಭಾರ ವಿಷಯವು. ಕ್ಯಾಪ್‌ಗ್ರೇವ್ ಎಂಬಾತನು ಒಬ್ಬ ಪಾದ್ರಿಯನು. ಆತನ ಗ್ರಂಥಗಳಲ್ಲಿ ಇಂಗ್ಲೆಂಡಿನ ಚರಿತ್ರೆ ಎಂಬುದೊಂದು ಮುಖ್ಯವು. ಈ ಮೂವರಲ್ಲದೆ ಈ ಶತಮಾನದ ಗದ್ಯ ಗ್ರಂಥಕಾರರಲ್ಲಿ ಮುಖ್ಯರಾದವರು ಮ್ಯಾಲರಿ, ಕ್ಯಾಕ್ಸ್ಟನ್ ಎಂಬವರು. ಮ್ಯಾಲರಿಯೂ ಕ್ಯಾಕ್ಸ್ಟನ್ನನೂ ಬೇರೆ ಬೇರೆ ಕಾರಣಗಳಿಗಾಗಿ ಆಂಗ್ಲೇಯ ಸಾಹಿತ್ಯದಲ್ಲಿ ಬಹಳ ಪ್ರಮುಖರಾದವರು.

ಮಹಾಮಾತ್ರನ ಜೆಫ್ರಿಯಿಂದ ಲ್ಯಾಟಿನ್ ಚರಿತ್ರೆಯಲ್ಲಿ ಸೇರಿಸಲ್ಪಟ್ಟು ಫ್ರಾನ್ಸಿನಲ್ಲಿ ಕವಿಗಳಿಂದ ವಿಶೇಷವಾಗಿ ವೃದ್ಧಿಗೆ ಬಂದ ಆರ್ಥರ್ ದೊರೆಯನ್ನು ಕುರಿತ ಕತೆಗಳ ಮಾತನ್ನು ಮೊದಲೇ ಹೇಳಿದೆ. ಈ ಕತೆಯು ಇಂಗ್ಲೆಂಡಿನಲ್ಲಿ ಮೊದಲು ಮೊದಲು ರೋಮಾನ್ಸ್ ಎಂಬ ಕಥೆಗಳ ವಿಷಯವಾಗಿದ್ದು ಇದುವರೆಗೆ ಸ್ವಲ್ಪ ಸ್ವಲ್ಪವಾಗಿ ಅನೇಕ ಕವಿಗಳಿಂದ ವೃದ್ಧಿಯನ್ನು ಹೊಂದಿ ಶಾಖೋಪಶಾಖೆಗಳಿಂದ ಕೂಡಿತ್ತು. ಆರ್ಥರನ್ನು ಕುರಿತ ಈ ರೋಮಾನ್ಸುಗಳನ್ನು ಮ್ಯಾಲರಿಯು ಒಟ್ಟುಗೂಡಿಸಿ ಮೋರ್ಟ್ ಆರ್ಥರ್ ಎಂಬ ಹೆಸರಿನಿಂದ ಇಂಗ್ಲಿಷಿನಲ್ಲಿ ಬರೆದಿಟ್ಟನು. ಯೂರೋಪಿನ ಚರಿತ್ರೆಯಲ್ಲಿ ಮಧ್ಯಯುಗವೆಂದು ವಾಡಿಕೆಯಾಗಿ ಹೇಳುವ ಕಾಲವು ಆಗ ಕೊನೆಯಾಗುತ್ತ ಬಂದಿತ್ತು. ಆ ಯುಗದ ಸಮಾಜ ಸ್ಥಿತಿಯಲ್ಲಿ ಷಿವಲ್ರಿ ಎಂಬುದು ಬಹು ಮುಖ್ಯಾಂಶವಾಗಿತ್ತು. ಹೀಗೆಂದರೆ ಏನೆಂದು ಎರಡು ಮಾತನ್ನು ಹೇಳಬೇಕು. ದೊಡ್ಡ ಮನೆತನಕ್ಕೆ ಸೇರಿದ ಯುವಕರೆಲ್ಲರೂ ಪ್ರಖ್ಯಾತರಾದ ವೀರರಲ್ಲಿ ಸೇವಕರಾಗಿ ಕೆಲವು ವರ್ಷಗಳ ಮೇಲೆ ಅವರಿಂದ ಅನುಮೋದಿಸಲ್ಪಟ್ಟು ನೈಟುಗಳೆಂಬ ಹೆಸರುಗಳನ್ನು ಪಡೆದು ಧರ್ಮಸ್ಥಾಪನೆಯ ಕಾರ್ಯದಲ್ಲಿ ನಿರತರಾಗಿರುತ್ತ ಯಶಸ್ಸನ್ನು ಸಂಪಾದಿಸುವ ಉದ್ದೇಶದಲ್ಲೇ ಇರತಕ್ಕ ಸಂಪ್ರದಾಯವೇ ಷಿವಲ್ರಿ. ಕಷ್ಟದಲ್ಲಿ ಸಿಕ್ಕಿದವರಿಗೆ ಸಹಾಯ ಮಾಡುವುದೂ, ತಪ್ಪು ಮಾಡುವವರನ್ನು ಹಿಡಿದು ಶಿಕ್ಷಿಸುವುದೂ, ದುರ್ಬಲರು ಧೂರ್ತರಿಂದ ತೊಂದರೆಪಡದಂತೆ ನೋಡಿಕೊಳ್ಳುವುದೂ, ತಮ್ಮ ಪ್ರೇಯಸಿಯರನ್ನು ಹೊರತು ಮಿಕ್ಕ ಸ್ತ್ರೀಯರನ್ನು ಒಡಹುಟ್ಟಿದವರಂತೆ ಕಾಣುತ್ತ, ಸ್ತ್ರೀಸಮೂಹದಲ್ಲೇ ಒಂದು ವಿಶೇಷವಾದ ಮರ್ಯಾದೆಯನ್ನೂ ಗೌರವವನ್ನೂ ಭಕ್ತಿಯನ್ನೂ ಅನುಸರಿಸುವುದೂ ಇವು ನೈಟಾದವನ ಕರ್ತವ್ಯಗಳು. ಪಶ್ಚಿಮ ದೇಶದ ಕ್ರೈಸ್ತ ಜನಾಂಗಗಳು ತುರುಕರಿಂದ ಜೆರೂಸಲೇಮನ್ನು ತೆಗೆದುಕೊಳ್ಳಲು ಹೊರಟ ಜೈತ್ರಯಾತ್ರೆಗಳ ಕಾಲದಲ್ಲಿ ಇಂಥ ನೈಟುಗಳ ಸಮುದಾಯಗಳು ಹೆಚ್ಚಿದುವು. ಆಗಿನ ಕಾಲದಲ್ಲಿ ಇಂಥ ಜನರಿಗೆ ಬೇಕಾದಷ್ಟು ಕೆಲಸವಿದ್ದುದರಿಂದ ರಾಜ್ಯದಲ್ಲಿ ರಾಜನು ಪ್ರಮುಖನಾಗಿದ್ದುಕೊಂಡು ಅವನ ಕೈಕೆಳಗೆ ಕೆಲವು ಪಾಳೆಯಗಾರರೂ ಅವರಲ್ಲಿ ಒಬ್ಬೊಬ್ಬರ ಕೈಕೆಳಗೂ ಅನೇಕ ನೈಟುಗಳೂ ಇರುತ್ತಿದ್ದರು. ಉತ್ತಮ

ಸಂಗಡದವರಾದ ಈ ಜನರು ಒಂದು ಸಂಗಡವಾಗಿ ಇರುತ್ತಿದ್ದುದರಿಂದ ಪ್ರತಿಯೊಬ್ಬ ದೊಡ್ಡಮನುಷ್ಯನೂ ತನ್ನ ಮಗನನ್ನು ನೈಟ್ ಪದವಿಗೆ ಅರ್ಹನಾಗುವಂತೆ ಮೊದಲಿಂದಲೂ ತಿದ್ದುವನು; ಯಶಸ್ವಿಗಳಾದ ವೀರರ ಬಳಿಯಲ್ಲಿ ಶಿಕ್ಷೆಗೆ ಬಿಡುವನು. ಹುಡುಗರು ದೊಡ್ಡವರಾಗಿ ತಾವೂ ನೈಟುಗಳಾಗುವರು. ರಾಜ್ಯದಲ್ಲಿ ನೆಲವೆಲ್ಲವೂ ಪಾಳೆಯಗಾರರಿಗೆ ಸೇರಿ ಅವರು ಪ್ರಬಲರಾಗಿರುವವರೆಗೂ ಷಿವಲ್ರಿಯು ಪ್ರಾಬಲ್ಯದಲ್ಲಿತ್ತು. ಬರಬರುತ್ತ ಜನ ಸಾಮಾನ್ಯವು ಮುಂದಕ್ಕೆ ಬಂದು ಪಾಳೆಯಗಾರರ ಪ್ರಾಬಲ್ಯವು ಕಡಿಮೆಯಾಯಿತು. ಮತ್ತು ಮೊದಲಿನ ಶುದ್ಧತೆಯನ್ನು ಕಳೆದುಕೊಂಡು ಮಲಿನವಾಗುತ್ತ ಬಂದು, ಜನರಿಗೆ ಅದರಲ್ಲಿ ಭಕ್ತಿಯು ಕ್ಷೀಣವಾಯಿತು. ಇದೆರಡೂ ಕಡಿಮೆಯಾದುದರಿಂದ ಷಿವಲ್ರಿಯ ಪದ್ಧತಿಗಳೂ ನಶಿಸುತ್ತ ಬಂದುವು. ಈ ಪದ್ಧತಿಗಳು ಸೊಂಪಾಗಿದ್ದ ಕಾಲದಲ್ಲಿ ರೊಮಾನ್ಸುಗಳು ವಿಶೇಷವಾಗಿ ವೃದ್ಧಿಗೊಂಡವು. ಪ್ರತಿಯೊಂದರಲ್ಲಿಯೂ ಒಬ್ಬೊಬ್ಬ ನೈಟು, ಅವನಿಗೆ ಆದ ಅನೇಕ ಸಂಗತಿಗಳು; ಒಂದೊಂದು ಅವನ ಒಂದೊಂದು ಗುಣವನ್ನು ನಿರೂಪಿಸುವುದು. ಒಂದೊಂದರಲ್ಲೂ ಕಷ್ಟದಲ್ಲಿರುವ ಜನರು, ಸಹಾಯಶೂನ್ಯರಾದ ಅಬಲೆಯರು, ಧೂರ್ತರಿಂದ ದುಗುಡಪಡುವ ದುರ್ಬಲರು, ಇವರಿಗೆ ಸಹಾಯವಾಗಿ ಬರುವ ನೈಟುಗಳು; ಇಂಥ ಸನ್ನಿವೇಶಗಳ ಕಥೆಗಳು ಬಹಳವಾಗಿ ಜನರಲ್ಲಿ ಹಬ್ಬಿದುವು. ಆರ್ಥರಿನ ವಿಷಯವಾಗಿ ಬೇಕಾದಹಾಗೆ ರಚಿಸಲ್ಪಟ್ಟ ಕಥೆಗಳೂ ಈ ವಿಷಯಗಳನ್ನು ಕುರಿತಿವೆ.

ಯೂರೋಪಿನ ಜ್ಞಾನದ ಪುನರಭ್ಯುತ್ಥಾನದಲ್ಲಿ ಷಿವಲ್ರಿಯೂ ಕೊನೆಗಂಡಿತು. ಅದರೊಡನೆ ಈ ಕಥೆಗಳು ಕಳೆದುಹೋಗುವುದರೊಳಗಾಗಿ ಮ್ಯಾಲರಿಯು ಅವುಗಳನ್ನು ಒಟ್ಟುಗೂಡಿಸಿ ಬರೆದನು. ಅಲ್ಲಲ್ಲಿ ಕೆಲವು ಕಥೆಗಳನ್ನು ತಾನೇ ಕಲ್ಪಿಸಿ ಸೇರಿಸಿಯೂ ಸೇರಿಸಿರಬಹುದು. ಮ್ಯಾಲರಿಯ ವಿಚಾರದಲ್ಲಿ ಶಕ್ತನೆಂದು ಕೆಲವರೂ ಅವನು ಮಾಡಿದ್ದು ಅಷ್ಟೇನೂ ದೊಡ್ಡ ವಿಷಯವಲ್ಲವೆಂದು ಕೆಲವರೂ ಅಭಿಪ್ರಾಯಪಡುತ್ತಾರೆ. ಅತನು ಸ್ವತಂತ್ರವಾಗಿ ಏನನ್ನೂ ಬರೆಯಲಿಲ್ಲವೆಂತಲೂ ಕೆಲವರು ಹೇಳುತ್ತಾರೆ. ಮ್ಯಾಲರಿಯು ಬರೆದಿರುವ ಕಥೆಗಳು ಸ್ವತಂತ್ರವಾದವು ಅಲ್ಲದಿದ್ದರೂ ಅವನು ಅವುಗಳನ್ನು ಬಹಳ ಚೆನ್ನಾಗಿ ಬರೆದನೆಂದು ಹೇಳಲು ಸಂದೇಹವಿಲ್ಲ. ಕಥೆಯ ವಸ್ತುವು ಬೇರೆಯವರದಾದರೂ ಬರೆದಿರುವ ಕಥೆಯು ಮ್ಯಾಲರಿಯದೇ. ಕಥೆಯಲ್ಲಿ ನಡೆದ ವಿಷಯಗಳೂ, ಬಂದ ಜನರೂ, ಅವರವರ ನಡತೆಗಳೂ ಬಹಳ ಚೆನ್ನಾಗಿ ವರ್ಣಿಸಲ್ಪಟ್ಟಿವೆ. ಅಲ್ಲದೆ ಮ್ಯಾಲರಿಯು ಕಥೆ ಬರೆಯುವುದರಲ್ಲಿ ಬಹಳ ಕೌಶಲವುಳ್ಳವನೆಂಬುದು ಆಗಿನ ಇತರ ಕಥೆಗಳನ್ನು ಓದಿದವರಿಗೆ ಸ್ಪಷ್ಟವಾಗಿ ತಿಳಿಯುವುದು. ಯಾವ ಭಾಗವನ್ನು ವಿಸ್ತರಿಸಬಹುದು, ಯಾವುದನ್ನು ಸಂಕ್ಷೇಪಿಸಬೇಕು ಎಂಬುದನ್ನು ಈತನು ಚೆನ್ನಾಗಿ ಬಲ್ಲನು. ಹೀಗೆ ಕಥೆ ಬರೆಯುವ ಭಾಗದಲ್ಲಿ ಗದ್ಯವು ಮ್ಯಾಲರಿಯ ಕೈಯಲ್ಲಿ ಬಹಳ ನಯವಾಯಿತು. ಇದು ಅವನು ಆಂಗ್ಲೇಯ ಗದ್ಯದಲ್ಲಿ ಮಾಡಿದ ಕೆಲಸದ ಸಾರ.

ಕಳೆದುಹೋಗುತ್ತಿದ್ದ ಕಾಲದ ಕಥೆಗಳನ್ನು ಸೇರಿಸಿ ಮ್ಯಾಲರಿಯು ಪ್ರಸಿದ್ಧನಾಗುವಲ್ಲಿ ಕ್ಯಾಕ್ಸ್ಟನ್ನನು ಪುನರ್ಭ್ಯುತ್ಥಾನದ ಮುದ್ರಣ ಯಂತ್ರವನ್ನು ಇಂಗ್ಲೆಂಡಿನಲ್ಲಿ ಮೊದಲು ತಂದು ಜ್ಞಾನ ಪ್ರಸರಣಕ್ಕೆ ಸಹಾಯಮಾಡಿ ಪ್ರಸಿದ್ಧಿಯನ್ನು ಪಡೆದನು. ಪುಸ್ತಕಗಳನ್ನು ಅಚ್ಚುಹಾಕುವ ವಿಧಾನವೇ ಆ ಯಂತ್ರ. ಈ ವಿಧಾನವನ್ನು ಮೂವತ್ತು ವರ್ಷಗಳ ಹಿಂದೆ ಜರ್ಮನಿಯ ಕೆಲಸಗಾರನೊಬ್ಬನು ಕಂಡುಹಿಡಿದಿದ್ದನು. ಕ್ಯಾಕ್ಸ್ಟನ್ನನು ಜರ್ಮನಿಯಲ್ಲಿ ಇದನ್ನು ಕಲಿತು ಯೂರೋಪಿನ ಕೋಲೋನ್ ನಗರದಲ್ಲಿ ಸ್ವಲ್ಪಕಾಲ ಒಂದು ಮುದ್ರಾಶಾಲೆಯನ್ನು ನಡೆಯಿಸಿ ಆಮೇಲೆ ಇಂಗ್ಲೆಂಡಿನಲ್ಲಿಯೇ ಒಂದು ಮುದ್ರಾಲಯವನ್ನು ಸ್ಥಾಪಿಸಿದನು. ಓದಿನಲ್ಲಿ ಆಸಕ್ತಿಯುಳ್ಳವನಾಗಿ ತಾನೂ ಸ್ವಲ್ಪಮಟ್ಟಿಗೆ ಬರೆಯುವುದನ್ನು ಬಲ್ಲವನಾದುದರಿಂದ ಕ್ಯಾಕ್ಸ್ಟನ್ನನು ತಾನು ಇತರ ಭಾಷೆಗಳಲ್ಲಿ ಓದಿ ಚೆನ್ನಾಗಿದೆಯೆಂದು ಕಂಡ ಪುಸ್ತಕಗಳನ್ನು ಭಾಷಾಂತರ ಮಾಡಿ ಅಚ್ಚುಹಾಕಿದನು. ಇತರರು ಯಾರಾದರೂ ಬರೆದುಕೊಟ್ಟ ಪುಸ್ತಕಗಳನ್ನೂ ಅಚ್ಚುಹಾಕಿದನು. ಇವನು ಬರೆದ ಪುಸ್ತಕಗಳಲ್ಲಿ ಟ್ರಾಯ್ ನಗರದ ಚರಿತ್ರೆ, ಚದುರಂಗದ ಆಟ, ತತ್ತ್ವಜ್ಞಾನಿಗಳ ಸೂಕ್ತಿಗಳು, ಈನೀಡ್ ಕಾವ್ಯದ ಭಾಷಾಂತರ, ಈಸೋಪನ ಕಥೆಗಳ ಭಾಷಾಂತರ, ಇವಲ್ಲದೆ ಐದಾರು ರೊಮಾನ್ಸ್ ಕಥೆಗಳು, ಇವು ಮುಖ್ಯವಾದುವು. ಇದಕ್ಕೆ ಮೊದಲೇ ಪ್ರಸಿದ್ಧವಾಗಿದ್ದು ಜನಗಳಿಗೆ ಬೇಕಾಗಿದ್ದ ಪುಸ್ತಕಗಳನ್ನೂ ಈತನು ಅಚ್ಚುಹಾಕಿದನು. ಇವುಗಳಲ್ಲಿ ಛಾಸರ್ ಕವಿಯ ಕಾವ್ಯಗಳೂ, ಗಾವರ್, ಲಿಡ್ಗೇಟ್ ಎಂಬುವರ ಕಾವ್ಯಗಳೂ ಇದ್ದುವು. ಹಿಗ್ಡನ್ನನ ಚರಿತ್ರೆಯ ಟ್ರಿವಿಸಾ ಕೃತ ಭಾಷಾಂತರವನ್ನೂ, ಮ್ಯಾಲರಿಯ ಮೋರ್ಟೆ ಆರ್ಥರನ್ನೂ, ಇನ್ನೂ ಇತರ ಪುಸ್ತಕಗಳನ್ನೂ ಜನರಿಗೆ ತಿಳಿವನ್ನೂ ಹರ್ಷವನ್ನೂ ಕೊಡತಕ್ಕ ಕಥೆಗಳನ್ನೂ ಆರಿಸಿ ಈತನು ಮುದ್ರಿಸಿದನು. ಇವನು ಬರೆದಿರುವ ಪುಸ್ತಕಗಳು ವಿಶೇಷ ಪಾಂಡಿತ್ಯವನ್ನು ಸೂಚಿಸದಿದ್ದರೂ, ಅಗ್ಗವಾದ ಸ್ವಾರಸ್ಯವಿಲ್ಲದ ಗ್ರಂಥ ರಚನೆಯನ್ನು ಸೂಚಿಸುತ್ತವೆ. ಇಂಗ್ಲಿಷಿನ ಗದ್ಯದ ಅಭಿವೃದ್ಧಿಯಲ್ಲಿ ಕ್ಯಾಕ್ಸ್ಟನ್ನನದು ಒಂದು ಪ್ರಮುಖ ಭಾಗವು. ಈತನು ೧೪೯೧ನೆಯ ಇಸವಿಯಲ್ಲಿ ತೀರಿಹೋದನು.

ತರುವಾಯ ಗಣ್ಯವಾದ ಗದ್ಯ ಗ್ರಂಥಗಳು ಬರುವ ವೇಳೆಗೆ ಇಂಗ್ಲೆಂಡಿನಲ್ಲಿ ಪುನರ್ಭ್ಯುತ್ಥಾನದ ಫಲಗಳು ತಲೆದೋರುವುದಕ್ಕೆ ಪ್ರಾರಂಭವಾಗಿತ್ತು. ಎಂಟನೆಯ ಹೆನ್ರಿಯ ಕಾಲದಲ್ಲಿ ಮತ ಸಂಸ್ಕರಣವು ಪ್ರಾರಂಭವಾಗಿ ರೋಮಿನ ಮತದ ಪರವಾಗಿ ಕೆಲವರೂ ಸಂಸ್ಕರಣದ ಪರವಾಗಿ ಕೆಲವರೂ ವಾದಿಸುವುದರಲ್ಲಿ ಸಂವಾದ ಗ್ರಂಥಗಳು ಹುಟ್ಟಿದುವು. ಈ ಕಾಲದಲ್ಲಿ ಬರೆದವನಾದ ಫಿಷರ್ ಎಂಬಾತನು ಮೊದಮೊದಲಲ್ಲಿ ಗದ್ಯವನ್ನು ಬರೆದುದರಲ್ಲಿ ಅಚ್ಚುಕಟ್ಟಾದ ಶೈಲಿಯನ್ನುಪಯೋಗಿಸುವುದಕ್ಕೆ ಮೊದಲಿನವನೆಂದು ಹೇಳಬಹುದು. ಲ್ಯಾಟಿನ್ನಿನ ಉತ್ತಮ ಗದ್ಯ ಶೈಲಿಗಳನ್ನು ಇವನು ಬಲ್ಲವನಾಗಿದ್ದುದರಿಂದ ಇದು ಇವನಿಗೆ

ಸಾಧ್ಯವಾಯಿತು. ಈ ಫ್ರೆಡ್ ಎಂಬುವನು ಡೇನರ ಉಪದ್ರವಗಳು ಬಂದ ಕಾಲದಲ್ಲಿ ಗುರುತಿನ ಪತ್ರವನ್ನು ನೋಡಿ ಹೊರಗೆ ತನ್ನ ತಿಳಿವನ್ನು ದಂಡನಾಗಿ ಬಿಟ್ಟಿರುವನು. ಇವನಂತೆಯೇ ಇದೇ ಕಾರಣದಿಂದ ತಿಳಿವನ್ನು ಕೆಡಿಸಿ ಸರ್ ಜಾನ್ ವಿಕ್ಲಿಫನು ಇಂಗ್ಲೆಂಡಿನಲ್ಲಿ ಬರೆದ ಗದ್ಯ ಗ್ರಂಥಗಳನ್ನೂ ಬೈಬಲಿನ ಭಾಷಾಂತರ ವಿಷಯವಾಗಿ ಕೆಲವು ಉಪನ್ಯಾಸಗಳನ್ನು ಬರೆದನು; ಎಲ್ಲಕ್ಕಿಂತಲೂ ಪ್ರಸಿದ್ಧವಾದ 'ಮಾಂಡೆವಿಲನ' ಎಂಬ ಗ್ರಂಥವನ್ನು ಫ್ರೆಂಚಿನಲ್ಲಿ ಬರೆದು ಯೂರೋಪಿನಲ್ಲಿ ಅಚ್ಚು ಹಾಕಿಸಿದನು. ಕೆಲವು ವರ್ಷಗಳ ಮೇಲೆ ಇದು ರಾಬಿನ್ ಸನ್ ಎಂಬಾತನಿಂದ ಇಂಗ್ಲೀಷಿಗೆ ಭಾಷಾಂತರಿಸಲ್ಪಟ್ಟಿತು. ಮೊದಲು ಇಂಗ್ಲೆಂಡಿನಲ್ಲಿ ಬರೆಯುವುದರಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಈ ಗ್ರಂಥವು ಮುಖ್ಯವಲ್ಲ ನಾದರೂ ಆ ಕಾಲದ ದೇಶ ಸ್ಥಿತಿಯ ವಿವರಣೆಯಿಂದ ಒಳ್ಳೆ ಬುದ್ಧಿಯು ನಮಗೆ ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಯಾವ ರೀತಿಯಾಗಿ ಪ್ರವರ್ತಿಸುತ್ತಿತ್ತೆಂದು ಈ ಗ್ರಂಥದಿಂದ ಚೆನ್ನಾಗಿ ತಿಳಿಯುವುದು. ಮಾಂಡೆವಿಲನು ಎಂಬ ವ್ಯಕ್ತಿಯನ್ನು ಕುರಿತು, ಅದರಲ್ಲಿ ಬರುವ ವ್ಯಕ್ತಿಗಳ ನಡೆನುಡಿ ವ್ಯಕ್ತಿಗಳ ವಿದ್ಯಾಭ್ಯಾಸವೂ ಸಂತ ಕಷ್ಟ ದೊರೆವಾಯುವುದರ ಮಹಾಜನರೂ ಅಕ್ಷರಸ್ಥರು ವ್ಯಕ್ತಿಯಲ್ಲಿದ್ದ ಹಾಗೆ ಕಾಣುವ ವರ್ಣಿಸಿದ್ದಾನೆ. ಉತ್ತಮ ಸತ್ಪುರುಷರೂ, ಗುಡ್ಡರು ರಾಕ್ಷಸರೂ, ಉತ್ತಮ ವಿದ್ಯಾಭ್ಯಾಸ ಕ್ರಮವೂ, ಉತ್ತಮ ಮನೋಹರವಾದ ರೀತಿಯೂ ಗ್ರಂಥಕಾರನ ಕಥನಾಸಕ್ತಿಯಲ್ಲಿ ಯಾವುದೆಂದರೂ ಇದರಲ್ಲಿ ಚನ್ನಾಗಿ ತಿಳಿಯುವುದು. ವಿವಾದಗಳಲ್ಲಿ ದೊರೆಯುವ ಸತ್ಯವನ್ನು ನೋಡುವ ಕಾ... ಸ್ನಾನರ್ ಎಂಬಾತನು ಈಗಣ ಬರಹಗಾರರಲ್ಲಿ ಒಬ್ಬನು. ಬೈಬಲಿನ ಭಾಷಾಂತರದಲ್ಲೂ ಅವನು ಅನ್ಯ ಕಾಲದಲ್ಲಿ ಭಾಷೆಯು ಸಾಧ್ಯವೆನಿಸುವ ಪುಸ್ತಕವೊಂದನ್ನು ರಚಿಸುವುದರಲ್ಲೂ ಈತನು ಸಹಾಯ ಮಾಡಿದನು. ಸಾಂಪ್ರದಾಯಿಕರ ನಡವಳಿ ಮಾಡಿಸುತ್ತಿರು ... ರೀಯಿಯ ಕಾಲದಲ್ಲಿ ಬಿಕ್ಕಗಾನ ಅನ್ಯಗೆ ಬರುತಿಯವರ ಅಚ್ಚಿನಮನೆ ಎಂಬುವನು ಈ ಕಾಲದಲ್ಲಿ ಇಂಗ್ಲೀಷು ಗದ್ಯದ ಬೆಳವಣಿಗೆಗೆ ಸಹಾಯ ಮಾಡಿದನು. ಇತರರು ಲ್ಯಾಟಿನ್ ಭಾಷೆಯ ಗ್ರಂಥಗಳನ್ನು ನೋಡಿ ಸರಳವಾದ ಶೈಲಿಯಲ್ಲಿ ಬರೆಯುತ್ತಿರುವಲ್ಲಿ ಲ್ಯಾಟಿನನು ಸಾಮಾನ್ಯವಾದ ಜನರ ಭಾಷೆಯನ್ನು ಬಿಟ್ಟು ಗ್ರಾಂಥಿಕ ಭಾಷೆಯಾಗಿ ಉಪಯೋಗಿಸಿದನು. ಇದರಿಂದ ಗದ್ಯದ ಶೈಲಿಯಲ್ಲಿ ಲಾಲಿತ್ಯ ಮಾತ್ರವಲ್ಲದೆ ಇರುವ ಸಾಹಿತ್ಯ ಇತರ ಗುಣಗಳೂ ಸೇರಿದುವು.

ಈ ಗ್ರಂಥಕಾರರ ಹೆಸರುಗಳ ಜೊತೆಗೆ ಈ ಶತಮಾನದಲ್ಲಿ ಟಿಂಡೇಲ್ ಮತ್ತು ಕವರ್‌ಡೇಲ್ ಎಂಬುವರ ಹೆಸರುಗಳನ್ನು ಸೇರಿಸಬೇಕು. ಇಬ್ಬರೂ ಪ್ರಾಟೆಸ್ಟೆಂಟ್ ಬೈಬಲಿನ ಭಾಷಾಂತರವನ್ನು ಶಿಕ್ಷೆಯಾದರೂ ಬಿಡದೆ ಮಾಡಿದವರಾ ಗಿದ್ದುದರಿಂದ ಮುಂದಕ್ಕೆ ಸಾಗಿಸಿದ ರೀತಿಯನ್ನು ತೋರಿಸಿದೆ. ಬೈಬಲನ್ನು ಲ್ಯಾಟಿನ್ನಿನಿಂದ ದೇಶಭಾಷೆಗೆ ಭಾಷಾಂತರ ಮಾಡಬೇಕೆಂದು ಹೇಳಿದವರಿಬ್ಬರೂ ಮತ ಸಂಬಂಧವಾದ ವಾದಗಳಲ್ಲಿ ದೊರೆತ ನ್ಯಾಯಾಂಗವಾಯಿತು.

ಟಿಂಡೇಲ್ ಎಂಬ ಪಾದ್ರಿಯು ದೇಶಭಾಷೆಗಳಿಗೆ ಬೈಬಲನ್ನು ಭಾಷಾಂತರಿಸಬೇಕೆನ್ನುವ ಉಗ್ರಪಕ್ಷಕ್ಕೆ ಸೇರಿದವನು. ರೋಮಿನ ಗುರುವಿಗೆ ವಿರೋಧಿಯಾದರೂ ಎಂಟನೆಯ ಹೆನ್ರಿಯು ಉಗ್ರಸಂಸ್ಕಾರಕರ ಕಡೆಗೆ ಸೇರಿಕೊಳ್ಳಲಿಲ್ಲ. ಇದರಿಂದ ಪೂರ್ಣಸಂಸ್ಕರಣದ ಗುಂಪಿನವರು ಇಂಗ್ಲೆಂಡಿನಲ್ಲಿ ತಮ್ಮ ಕಾರ್ಯವನ್ನು ನಡೆಯಿಸುವುದು ಸಾಧ್ಯವಾಗಲಿಲ್ಲ. ಟಿಂಡೇಲನು ಬೈಬಲನ್ನು ಇಂಗ್ಲೆಂಡಿನಲ್ಲಿದ್ದುಕೊಂಡು ಕೊಂಚವನ್ನೂ ಯೂರೋಪಿನ ಮುಖ್ಯ ಭೂಮಿಯಲ್ಲಿ ಸ್ವತಂತ್ರ ನಗರವಾದ ಅಂಟ್ವರ್ಪ್ ನಗರದಲ್ಲಿದ್ದುಕೊಂಡು ಸ್ವಲ್ಪ ಭಾಗವನ್ನು ಭಾಷಾಂತರಮಾಡಿದನು. ಈ ಭಾಷಾಂತರವು ಹಿಂದಿನವರ ಭಾಷಾಂತರಗಳಂತೆ ಲ್ಯಾಟಿನ್ ಭಾಷೆಯ ಬೈಬಲಿನ ಆಧಾರದಮೇಲೆ ಮಾತ್ರ ಮಾಡಲ್ಪಟ್ಟ ಭಾಷಾಂತರವಲ್ಲ. ಈತನು ಗ್ರೀಕನ್ನು ಚೆನ್ನಾಗಿ ಬಲ್ಲನು. ಬೈಬಲಿನಲ್ಲಿ ಹಳೆಯದು ಯೆಹೂದ್ಯರ ಭಾಷೆಯಲ್ಲೂ ಹೊಸದು ಗ್ರೀಕಿನಲ್ಲೂ ಮೊದಲು ಬರೆಯಲ್ಪಟ್ಟುವು. ಟಿಂಡೇಲನು ಗ್ರೀಕ್ ಬೈಬಲನ್ನು ಎದುರಿಗೆ ಇಟ್ಟುಕೊಂಡು ಇಂಗ್ಲಿಷಿನ ಭಾಷಾಂತರವನ್ನು ಬರೆದನು. ಇವನು ಅಲ್ಲಲ್ಲಿ ಟಿಪ್ಪಣಿಗಳನ್ನು ಬರೆದು ರೋಮಿನ ಗುರುವಿನ ಮತದಲ್ಲೂ ತತ್ತ್ವದಲ್ಲೂ ಇದ್ದ ದೋಷಗಳನ್ನು ಅಲ್ಲಲ್ಲಿ ಸೂಚಿಸಿದನು. ಇವನಿಗೆ ಆಗದವರು ಇವನ ಬೈಬಲನ್ನು ಇಂಗ್ಲೆಂಡಿನಲ್ಲಿ ಒಂದು ಸಲ ಸರ್ಕಾರದ ಅಪ್ಪಣೆಯಿಂದ ಎಲ್ಲರ ಎದುರಿಗೆ ಸುಡಿಸಿದರು. ಆದರೆ ಪುಸ್ತಕವು ಮಾತ್ರ ಜನರಲ್ಲಿ ವಿಶೇಷವಾಗಿ ಪ್ರಚಾರಕ್ಕೆ ಬಂದಿತು; ಈತನ ಕೆಲಸವೇನೋ ಸಾರ್ಥಕವಾಯಿತು. ೧೫೩೬ನೆಯ ಇಸವಿಯಲ್ಲಿ ಟಿಂಡೇಲನನ್ನು ವಿಪಕ್ಷದವರು ಕೊರಳು ಹಿಸುಕಿ ಕೊಂದು ಸುಟ್ಟರು. ಟಿಂಡೇಲನು ಕೊನೆಯವರೆಗೂ ತನ್ನ ಕೆಲಸವನ್ನು ಮಾಡುತ್ತಲೇ ಇದ್ದು ಸತ್ತನು.

ಮೈಲ್ಸ್ ಕವರ್ಡೇಲನು ಟಿಂಡೇಲು ಬರೆದ ಭಾಷಾಂತರವನ್ನು ಸ್ವಲ್ಪ ತಿದ್ದಿ ಅದಕ್ಕೆ ಮತ್ತಷ್ಟನ್ನು ಸೇರಿಸಿ ಹೊಸ ಮುದ್ರಣವೊಂದನ್ನು ಪ್ರಕಟಿಸಿದನು. ಇದಾದಮೇಲೆ ಕೆಲವು ವರ್ಷಗಳಲ್ಲಿ ಈ ಭಾಷಾಂತರದ ಮತ್ತೊಂದು ಮುದ್ರಣವು ಪ್ರಕಟವಾಯಿತು. ೧೫೪೧ರಲ್ಲಿ ಬೈಬಲಿನ ಮತ್ತೊಂದು ಮುದ್ರಣವು ದೊರೆಯ ಅನುಗ್ರಹಕ್ಕೆ ಪಾತ್ರವಾಗಲು ಪ್ರತಿಯೊಂದು ಪ್ರಾರ್ಥನಾಲಯದಲ್ಲೂ ಒಂದೊಂದು ಬೈಬಲು ಇರಬೇಕೆಂದು ಅಪ್ಪಣೆಯಾಯಿತು. ಬೈಬಲಿನ ಈ ಭಾಷಾಂತರ ಕಾರ್ಯವು ಇಂಗ್ಲರ ಸಾಹಿತ್ಯದ ಚರಿತ್ರೆಯಲ್ಲಿ ಬಹು ಮುಖ್ಯವಾದ ವಿಷಯವು.

ಇನ್ನು ಮತಸಂಬಂಧವಾದ ವಿವಾದಕ್ಕೆ ಸೇರದ ಕೆಲವು ಗದ್ಯಕಾರರನ್ನು ಕುರಿತು ಎರಡು ಮಾತನ್ನು ಹೇಳುವುದು ಆವಶ್ಯಕ. ಎಲಿಯಟ್ ಎಂಬಾತನು ರಾಜ್ಯಾಧಿಕಾರಿ ಎಂಬ ಗ್ರಂಥವೊಂದನ್ನು ಬರೆದನು. ಈ ಗ್ರಂಥದ ವಿಷಯವಲ್ಲಾಗಲಿ ಶೈಲಿಯಲ್ಲಾಗಲಿ ಯಾವ ವಿಧದ ವಿಶೇಷವೂ ಇಲ್ಲ. ಬರ್ನರ್ ಎಂಬಾತನು ಫ್ರಾಯಿಸಾರ್ಟ್ ಎಂಬ ಫ್ರೆಂಚ್ ಕವಿಯಿಂದ ರಚಿತವಾದ ಚರಿತ್ರೆಯೊಂದನ್ನು ಭಾಷಾಂತರ ಮಾಡಿದನು. ಇದರ ಶೈಲಿ ವರ್ಣನೆಯಲ್ಲಿ ಶ್ರೇಷ್ಠವಾದದ್ದು; ಗಂಭೀರ

ವಾಗಿಯೂ ರಸಯುಕ್ತವಾಗಿಯೂ ಇದೆ. ಕ್ಯಾವೆಂಡಿಷ್, ಲೇಲಂಡ್, ಚೀಕ್ ಮತ್ತು ವಿಲ್ಸನ್ ಎಂಬವರೂ ಈಗ ಕೆಲವು ಗ್ರಂಥಗಳನ್ನು ಬರೆದರು. ಆಸ್ಕೆಂ ಎಂಬಾತನು ಉದ್ದೇಶಪೂರ್ವಕವಾಗಿ ತನ್ನ ಸೀಮೆಯ ಜನರ ಉಪಯೋಗಕ್ಕಾಗಿ ಇಂಗ್ಲಿಷಿನಲ್ಲಿ ಗ್ರಂಥಗಳನ್ನು ಬರೆದವರಲ್ಲಿ ಒಬ್ಬನು. ಲ್ಯಾಟಿನ್ನಿನಲ್ಲಿ ಬರೆಯುವಷ್ಟು ಚೆನ್ನಾಗಿ ಇಂಗ್ಲಿಷಿನಲ್ಲಿ ಬರೆಯುವುದಕ್ಕೆ ಆಗಲಿಲ್ಲವೆಂದೂ ಈ ದೋಷವನ್ನು ಕ್ಷಮಿಸಬೇಕೆಂದೂ ಇವನು ತನ್ನ ಪುಸ್ತಕವೊಂದರಲ್ಲಿ ಹೇಳಿದ್ದಾನೆ. ಬಾಣ ಪ್ರಯೋಗ ಎಂಬ ಪುಸ್ತಕವೊಂದೂ ವಿದ್ಯಾಭ್ಯಾಸದ ವಿಚಾರವಾಗಿ ಉಪಾಧ್ಯಾಯನೆಂಬ ಪುಸ್ತಕವೂ ಕೆಲವು ಕಾಗದಗಳೂ ಇವನು ಜನರ ಮನೋರಂಜನೆಗಾಗಿ ಬರೆದ ಗ್ರಂಥಗಳಲ್ಲಿ ಮುಖ್ಯ. ಆಗಿನ ಕಾಲದಲ್ಲಿ ಇತರ ಸಾಹಿತ್ಯಗಳ ಸೊಗಸಿಗೆ ಸೋತು ಇಂಗ್ಲಿಷಿನಲ್ಲಿ ಎಲ್ಲಿಯೂ ಇಲ್ಲದ ಸೊಗಸನ್ನು ಮಾಡುವುದಕ್ಕೆ ಹೋಗುತ್ತಿದ್ದ ಇತರ ಗ್ರಂಥಕಾರರ ದಾರಿಯನ್ನು ಸರಿಯಲ್ಲವೆಂದು ಈತನು ತಿರಸ್ಕರಿಸಿ ಮಾತಿನಲ್ಲಿ ಮಿತವೂ ರೀತಿಯಲ್ಲಿ ಲಲಿತವೂ ಆದ ನೂತನ ಶೈಲಿಯೊಂದನ್ನು ವಾಡಿಕೆಗೆ ತರಲು ಯತ್ನಿಸಿದನು. ವಿಷಯವನ್ನು ವಿವರವಾಗಿ ಹೇಳುವುದಕ್ಕೂ ಗ್ರಹಿಸಲಾಗುವಂತೆ ಜಡಿಸುವುದಕ್ಕೂ ಭಾವವು ಏರಿದ ಹಾಗೆ ಭಾಷೆಯೂ ಮೆಟ್ಟಿಲು ಮೆಟ್ಟಿಲಾಗಿ ಏರಿ ಭಾವದ ಮುಕ್ತಾಯವು ಭಾಷೆಯಲ್ಲಿ ಕಂಡುಬರುವಂತೆ ತೋರುವುದಕ್ಕೂ ಇವನ ಶೈಲಿಯಲ್ಲಿ ಅವಕಾಶವುಂಟಾಯಿತು. ಭಾಷೆಯಲ್ಲಿ ಸೊಗಸು ಅತಿಯಾಗಕೂಡದೆಂಬುದೇ ಈತನ ಮುಖ್ಯ ಸೂತ್ರ. ಇವನ ನಂತರ ಬಂದ ಗ್ರಂಥಕಾರರು ಆಸ್ಕೆಂ ಎಂಬವನ ಅಲಂಕಾರ ರಹಿತವಾದ ಗದ್ಯ ಶೈಲಿಯನ್ನು ಬಿಟ್ಟು ಬೇರೆ ಮಾರ್ಗವನ್ನವಲಂಬಿಸಿದರು. ಈ ಹೊಸ ಅಲಂಕಾರದ ಶೈಲಿಯನ್ನು ಇಂಗ್ಲಿಷಿನಲ್ಲಿ ಯೂಫ್ಯೂಯಿಸಂ ಎಂದು ಕರೆಯುತ್ತಾರೆ. ನಾಟಕಕಾರರಲ್ಲಿ ಒಬ್ಬನಾದ ಲಿಲಿ ಯೂಫ್ಯೂಯಿಸ್ ಎಂಬ ಗ್ರಂಥದಲ್ಲಿ ಈ ಶೈಲಿಯನ್ನು ಉಪಯೋಗಿಸಿದ್ದರಿಂದ ಇದಕ್ಕೆ ಈ ಹೆಸರು ಬಂತೆಂದು ಮೊದಲೇ ಹೇಳಿದೆ. ಈ ಕಾಲದಲ್ಲಿ ಬರೆದ ಮುಖ್ಯ ಗ್ರಂಥಗಳಲ್ಲೆಲ್ಲ ಈ ಶೈಲಿಯ ಮುಖ್ಯ ಗುಣಗಳು ಕಾಣುತ್ತಿದ್ದುವು. ಹೇರಳವಾಗಿ ಪ್ರಚಾರಕ್ಕೆ ಬಂದ ಈ ಗದ್ಯ ಗ್ರಂಥಗಳ ವಿಷಯದಲ್ಲಿ ಇನ್ನೊಂದು ವಿಷಯವು ಹೇಳತಕ್ಕುದಿದೆ. ಗದ್ಯದಲ್ಲಿ ಸಾಮಾನ್ಯವಾಗಿ ಯಾವ ಯಾವ ಗ್ರಂಥ ಜಾತಿಗಳು ಮುಂದಕ್ಕೆ ವಾಡಿಕೆಗೆ ಬಂದುವೋ ಅವೆಲ್ಲಕ್ಕೂ ಈ ಕಾಲದಲ್ಲಿ ಸೂಕ್ಷ್ಮವೋ ಅಥವಾ ಸ್ಥೂಲವೋ ಆದ ಆರಂಭವುಂಟಾಯಿತು. ಮುಂದೆ ಬಂದ ನಾವಲಿಗೆ ಇಲ್ಲಿ ಸಣ್ಣ ಸಣ್ಣ ಕಥೆಗಳೂ, ರೊಮಾನ್ಸ್‌ಗಳೂ, ಮುಂದೆ ಬಂದ ಪ್ರಯಾಣದ ಪುಸ್ತಕಗಳಿಗೆ ಇಲ್ಲಿ ಹ್ಯಾಕ್ಲೂಯಿಟ್ ಎಂಬಾತನ ಪ್ರಯಾಣವನ್ನು ಕುರಿತು ಪುಸ್ತಕಗಳೂ ಮುಂದಣ ಗ್ರಂಥ ವಿಮರ್ಶೆಗೆ ಇಲ್ಲಿಯೂ ಕೆಲವು ವಿಮರ್ಶ ಗ್ರಂಥಗಳೂ ಮುಂದಣ ವೃತ್ತಾಂತ ಪತ್ರಿಕೆಗಳಿಗೆ ಇಲ್ಲಿ ಆಖ್ಯಾಯಿಕೆಗಳೂ ಈ ಕಾಲದಲ್ಲಿ ವಾಡಿಕೆಗೆ ಬಂದುವು.

ಲಿಲಿಯ "ಯೂಫ್ಯೂಯಿಸ್" ಗ್ರಂಥವು ಎರಡು ಭಾಗವಾಗಿ ಪ್ರಕಟವಾಯಿತು. ಯೂಫ್ಯೂಯಿಸ್ ಎಂಬಾತನೂ ಅವನ ಸ್ನೇಹಿತನೊಬ್ಬನೂ ಇಟಲಿ

ಯಲ್ಲಿದ್ದುದನ್ನೂ ಅವರಿಗೆ ಅಲ್ಲಿ ನಡೆದ ವಿಷಯಗಳನ್ನೂ ಈ ಗ್ರಂಥವು ವಿವರಿಸುವುದು. ಕಥೆಯು ಕಠಿನ; ಜಿಜ್ಞಾಸವು ಹೆಚ್ಚು. ಮುಖ್ಯವಾಗಿ ನೀತಿಯನ್ನು ಬೋಧಿಸುವುದು ಇದರ ಉದ್ದೇಶ. ಭಾಷೆಗೆ ಈ ಗ್ರಂಥವು ಒಂದು ಹೊಸ ಅಂದವನ್ನು ತಂದಿತು ಎಂದು ಎಲ್ಲರೂ ಒಪ್ಪಿದ್ದಾರೆ. ಕವಿಯಾದ ಸಿಡ್ನಿಯು "ಆರ್ಕೇಡಿಯಾ" ಎಂಬ ಗ್ರಂಥವನ್ನು ಬರೆದನು. ಇದರಲ್ಲಿ ಸಿಡ್ನಿಯು ಆಗಿನ ಕಾಲದ ಯೂರೋಪಿನ ಕೆಲವರು ಪ್ರಸಿದ್ಧ ಗ್ರಂಥಕಾರರು ಲ್ಯಾಟಿನ್ ಸಾಹಿತ್ಯದ ಪರಿಚಯದ ಫಲವಾಗಿ ರಚಿಸುತ್ತಿದ್ದ ಕೆಲವು ವರ್ಣನಾ ಗ್ರಂಥಗಳ ಮಾದರಿಯನ್ನು ಅನುಸರಿಸಿ ಬಹಳ ವಿವರವಾಗಿ ಕವಿ ಸಮಯದ ನಿಯಮದಿಂದ ಒಪ್ಪವಾದ ವರ್ಣನೆಗಳನ್ನು ವಿಶೇಷವಾಗಿ ಬರೆದನು. ನಾಟಕಕಾರ ನ್ಯಾಷ್ ಎಂಬಾತನು ಕಥೆಯೊಂದನ್ನೂ ಇತರ ಉಪನ್ಯಾಸಗಳನ್ನೂ ಬರೆದನು. "ಜಾನ್ ವಿಲ್ಟನ್" ಎಂಬ ಈ ಕಥೆಯೇ ಆಂಗ್ಲೇಯ ನಾವಲ್ಲಿಗೆ ಆದಿ. ಕಥೆಗಳಲ್ಲಿ ಒಂದಾದ "ಆರ್ಕೇಡಿಯಾ"ವನ್ನು ಬರೆದ ಸಿಡ್ನಿಯೇ ವಿಮರ್ಶ ಗ್ರಂಥಗಳಲ್ಲಿ ಆದಿ ಗ್ರಂಥವೆನ್ನಬಹುದಾದ "ಕಾವ್ಯದ ಕಾಪ" ಎಂಬ ಗ್ರಂಥವನ್ನೂ ಬರೆದನು. ಈ ಕಾಲದಲ್ಲಿ ಮತಸಂಸ್ಕಾರ ವಿಚಾರದಲ್ಲಿ ಉತ್ಸಾಹಾತಿಶಯದಿಂದ ಮತದ ನಿಯಮಕ್ಕೆ ಆಶ್ರಯವಲ್ಲದ ಕಾವ್ಯ, ನಾಟಕ, ಇತರ ವಿಧವಾದ ಜನಸಮುದಾಯದ ಉಲ್ಲಾಸ, ಇವುಗಳೆಲ್ಲವನ್ನೂ ತುಚ್ಛೀಕರಿಸುವ ಜನರು ಅಲ್ಲಲ್ಲಿ ಹೆಚ್ಚುತ್ತ ಬಂದರು. ಇವರಿಗೆ ಪ್ಯೂರಿಟನರು ಎಂದರೆ ಶುದ್ಧಿಯ ಮತದವರು ಎಂದು ಹೆಸರು. ಈ ಮತವನ್ನು ಅನುಸರಿಸಿದ ಗಾಸನ್ ಎಂಬಾತನು ಕಾವ್ಯಗಳನ್ನು ದೂಷಿಸಿ "ಅಪವ್ಯವಹಾರ ಸಮಾಜವು" ಎಂಬ ಒಂದು ಗ್ರಂಥವನ್ನು ಬರೆದು ಅದನ್ನು ಸಿಡ್ನಿಗೆ ಅರ್ಪಣ ಮಾಡಿದನು. ಸಿಡ್ನಿಯು ಈ ಪುಸ್ತಕವನ್ನು ನಿರ್ದೇಶಿಸಿ ಇದರಲ್ಲಿಯ ಅಭಿಪ್ರಾಯವನ್ನು ಖಂಡಿಸದಿದ್ದರೂ ಕಾವ್ಯಗಳು ಅವಶ್ಯಕವೆಂದೂ ಅವುಗಳನ್ನು ದೂಷಿಸುವುದು ತಪ್ಪೆಂದೂ ಸ್ಥಾಪಿಸಿ ಮೇಲೆ ಹೇಳಿದ ತನ್ನ ವಿಮರ್ಶ ಗ್ರಂಥವನ್ನು ಬರೆಯಬೇಕಾಯಿತು. ಈ ಕಾಲದಲ್ಲಿ ವೆಬ್ ಎಂಬಾತನೂ, ಪುಟೆನಾಹೇ ಎಂಬಾತನೂ ಇನ್ನೆರಡು ವಿಮರ್ಶ ಗ್ರಂಥಗಳನ್ನು ಬರೆದರು.

ಆಖ್ಯಾಯಿಕೆಗಳನ್ನು ಬರೆದವರಲ್ಲಿ ನಾಟಕಕಾರ ಗ್ರೀನ್ ಎಂಬಾತನು ಮುಖ್ಯನು. ಯಾವುದಾದರೊಂದು ವಿಷಯವನ್ನೆತ್ತಿ ಅಥವಾ ಯಾರಾದರೊಬ್ಬರನ್ನು ನೆವವಾಗಿಟ್ಟುಕೊಂಡು ಸರಸವಾದ ಕೆಲವು ಮಾತುಗಳನ್ನು ಬರೆಯುವುದೇ ಈ ಆಖ್ಯಾಯಿಕಾ ಕರ್ತರ ಉದ್ದೇಶವು. ಜನರಲ್ಲಿ ಓದು ವಾಡಿಕೆಗೆ ಬಂದು ಸ್ತ್ರೀಯರನೇಕರು ಪುಸ್ತಕಗಳನ್ನೋದುವುದು ಆಗ ಹೆಚ್ಚಿತು. ಇಂಥ ಸ್ತ್ರೀಯರಿಗಾಗಿಯೂ ಉದ್ದೇಶಿಸಲ್ಪಟ್ಟುದರಿಂದ ಆಖ್ಯಾಯಿಕೆಗಳಲ್ಲಿ ಒಂದು ರೀತಿಯ ಭಾವಶೌಚವು ವೃದ್ಧಿಯಾಯಿತು. ಸಾಮಾನ್ಯ ವಿಷಯಗಳಲ್ಲದೆ ಇವುಗಳಲ್ಲಿ ಬೇರೆ ಬೇರೆ ಪಂಗಡದ ಜನರು ಮತದ ವಿಚಾರವನ್ನು ಚರ್ಚಿಸಿ ಬರೆಯುತ್ತಿದ್ದರು. ಸಂಸ್ಕರಣದ ಗುಂಪಿನ ಕೆಲವರು "ಮಾರ್ಟಿನ್ ಮಾರ್ಪ್ರಿಲೇಟ್" ಎಂದರೆ ಗುರು

ಸಿಡ್ನಿಯು ಪಾರ್ಟಿನಿಸ್ ಎಂಬ ಅಂಕಿತದಿಂದ ಇಂಥ ಕೆಲವು ಆಖ್ಯಾಯಿಕೆಗಳನ್ನು ಬರೆದನು. ಇತ್ತ ರೋಮನರ ಮತವನ್ನು ಬಿಟ್ಟು ಇತ್ತ ಸಂಸ್ಕಾರಕರ ದೂರದ ನೂತನ ಭಾವಗಳನ್ನು ಸ್ವೀಕರಿಸದ ಮಧ್ಯಸ್ಥವಾದ ಆಂಗ್ಲೇಯ ರಾಜನ ಮತವನ್ನು ಪ್ರತಿಪಾದಿಸಿ ಹೂಕರ್ ಎಂಬಾತನು ಒಂದು ಗ್ರಂಥವನ್ನು ಬರೆದನು. ಒಂದು ಕಡೆ ಹೆಚ್ಚು ಅಲಂಕಾರದಿಂದಲೂ ಒಂದು ಕಡೆ ಅಲಂಕಾರವಿಲ್ಲದೆಯೂ ಇನ್ನೂ ಸಾಧುವಾಗದೆ ಇದ್ದ ಆಂಗ್ಲೇಯ ಗದ್ಯವು ಹೂಕರನ ಕೈಯಲ್ಲಿ ಆಸ್ಕೆಮಿನ ಮಾರ್ಗದ ಸೌಲಭ್ಯವನ್ನೂ ಲಿಲಿಯ ಮಾರ್ಗದ ಅಲಂಕಾರವನ್ನೂ ಒಂದೇ ಸಲ ಹೊಂದಿ ಎಲ್ಲದರ ಜೊತೆಗೆ ಭಾವಕ್ಕೆ ತಕ್ಕ ಗೌರವವನ್ನು ಸಂಪಾದಿಸಿತು. ಆಗಿನ ಭಾಷಾಂತರಕಾರರಲ್ಲಿ ಫ್ಲೋರಿಯೋ ಎಂಬಾತನೂ ನಾರ್ತ್ ಎಂಬಾತನೂ ಮುಖ್ಯರು. ನಾರ್ತನು ಬರೆದ ಪ್ಲೂಟಾರ್ಕ್ ವಿರಚಿತ ಗ್ರೀಕ್ ರೋಮನರ ಜೀವನ ಚರಿತ್ರೆಯ ಭಾಷಾಂತರವು ಆಂಗ್ಲ ಸಾಹಿತ್ಯದಲ್ಲಿ ಅತ್ಯುನ್ನತ ಪದವಿಗೆ ಅರ್ಹವಾದುದು. ನಾರ್ತನು ಮೂಲ ಗ್ರಂಥದಲ್ಲಿಯ ಕೆಲವು ಅಂಶಗಳನ್ನು ಬಿಟ್ಟು ಬಿಡುವನು; ಅದರಲ್ಲಿಲ್ಲದ ಕೆಲವನ್ನು ಇದರಲ್ಲಿ ತರುವನು. ಹೀಗಿದ್ದರೂ ನಾರ್ತನು ಭಾಷಾಂತರಕಾರರಲ್ಲಿ ಅಗ್ರಗಣ್ಯನು. ಷೇಕ್ಸ್‌ಪಿಯರ್ ಕವಿಯು ಗ್ರೀಕ್ ರೋಮನರ ಕೆಲವರನ್ನು ಕುರಿತು ಬರೆದ ನಾಟಕಗಳಲ್ಲಿ ಕೆಲವು ಕಡೆ ನಾರ್ತನ ಗದ್ಯ ವಾಕ್ಯಗಳನ್ನು ಛಂದಸ್ಸಿಗೆ ಸರಿಯಾಗಿ ಸ್ವಲ್ಪಮಟ್ಟಿಗೆ ಬದಲಾಯಿಸಿ ಭಾವ ಸಹಿತವಾದ ಭಾಷಣಗಳನ್ನು ರಚಿಸಿದನು.

ಇದೇ ಅಲ್ಲದೆ ಈ ಕಾಲದಲ್ಲಿ ಹಿಂದೆ ಆಗಿದ್ದ ಬೈಬಲಿನ ಭಾಷಾಂತರವನ್ನು ಸ್ವಲ್ಪ ತಿದ್ದುಪಾಟುಮಾಡಿ ಪ್ರಕಟಿಸಿದರು.

ಹೀಗೆ ಮತದವರಿಗೂ ತಿಳಿದವರಿಗೂ ಬೇಕಾದ ಒಂದೆರಡು ಭಾಷಾಂತರ ಗ್ರಂಥಗಳಲ್ಲಿ ಆರಂಭವಾದ ಆಂಗ್ಲೇಯ ಗದ್ಯವು ಆಮೇಲೆ ಸಾಮಾನ್ಯ ಜನರ ಮನೋರಂಜನೆಗಾಗಿಯೂ ಮತ ನೀತಿ ಬೋಧೆಗಾಗಿಯೂ ಉದ್ದೇಶಿಸಲ್ಪಟ್ಟ ಗ್ರಂಥಗಳ ರಚನೆಯಲ್ಲಿ ಅಭಿವೃದ್ಧಿಗೆ ಬಂದಿತು. ಪುನರಭ್ಯುತ್ಥಾನದ ಜ್ಞಾನ ಪ್ರಸಾರದ ಪ್ರಯತ್ನದಲ್ಲಿ ಅದು ಮುಖ್ಯ ಸಾಧನವಾದದ್ದರಿಂದ ಮತ್ತಷ್ಟು ಬೆಳೆಯಬೇಕಾಯಿತು. ಮತ ಸಂಸ್ಕಾರಕರ ವಾದ ವಿವಾದಗಳೂ ಬೈಬಲಿನ ಭಾಷಾಂತರಗಳೂ ಅದಕ್ಕೆ ಹೊಸ ಹೊಸ ಗುಣಗಳನ್ನು ತಂದುವು. ಆರಂಭದಿಂದ, ಸುಮಾರು ಇನ್ನೂರು ವರುಷಗಳ ಕಾಲದಲ್ಲಿ ಅದರಲ್ಲಿ ನಾವಲು, ಉಪನ್ಯಾಸ, ಪತ್ರಗಳು, ಮತ ಗ್ರಂಥಗಳು ಮೊದಲಾದ ಬಹುವಿಧ ಗ್ರಂಥಗಳು ಸೃಷ್ಟಿಯಾಗುತ್ತಿದ್ದುವು. ಆಗ ಆ ಗದ್ಯಕ್ಕೆ ಒಂದು ನಿಯಮಿತವಾದ ರೂಪವೂ ಗೌರವವಾದ ಸ್ಥಾನವೂ ಪ್ರಾಪ್ತವಾದುವು.

ಮಾಸ್ತಿ ವೆಂಕಟೇಶ ಐಯಂಗಾರ್

ಜೈಮಿನಿ ಭಾರತ—ಅಶ್ವಮೇಧಿಕ ಪರ್ವ

ಸಂಸ್ಕೃತ ಜೈಮಿನಿ ಭಾರತದ ಕನ್ನಡದ ಅನುವಾದ

ಮೊದಲನೆಯ ಅಧ್ಯಾಯ

ಶ್ರೀಕೃಷ್ಣನಿಗೂ ಅರ್ಜುನನಿಗೂ ಸರಸ್ವತಿಗೂ ವ್ಯಾಸ ಮುನಿಗೂ ನಮಸ್ಕಾರ ಮಾಡಿ ಬಳಿಕ ಭಾರತ ಕಥೆಯನ್ನು ಹೇಳಬೇಕು. ನಮ್ಮ ಅಜ್ಜನಾದ ಯುಧಿಷ್ಠಿರನು ಬಂಧುಗಳೊಡನೆ ಸೇರಿ ಪ್ರೀತಿ ಪೂರ್ವಕವಾಗಿ ಅಶ್ವಮೇಧವೆಂಬ ಶ್ರೇಷ್ಠವಾದ ಯಜ್ಞವನ್ನು ಮಾಡಿದ ಬಗೆ ಹೇಗೆ? ಎಂದು ಜನಮೇಜಯನು ಜೈಮಿನಿ ಮುನಿಯನ್ನು ಪ್ರಶ್ನೆ ಮಾಡಲು ಜೈಮಿನಿಯು ಇಂತೆಂದನು:—ಎಲೈ ಜನಮೇಜಯನೇ, ಧರ್ಮರಾಜನು ಮಾಡಿದ ಕಾರ್ಯವನ್ನು ಹೇಳುವೆನು ಕೇಳು. ಭೀಷ್ಮನು ಸ್ವರ್ಗಸ್ಥನಾದ ಬಳಿಕ ಧರ್ಮರಾಜನು ದುಃಖಾಕ್ರಾಂತನಾಗಿರಲು ತಾನಾಗಿ ತನ್ನ ಬಳಿಗೆ ಬಂದ ವ್ಯಾಸ ಮುನಿಯನ್ನು ಕುರಿತು—ಎಲೈ ತಪೋಧನನಾದ ವ್ಯಾಸ ಮುನಿಯೇ ನಾನು ಮಾಡಿದ ಜ್ಞಾತಿ ವಧೆಯ ಪಾಪವು ಯಾವ ಉಪಾಯದಿಂದ ಪರಿಹಾರವಾಗುವುದೋ ತಿಳಿಸು. ನಮ್ಮ ಪೂರ್ವಿಕರು ಸಂಪಾದಿಸಿದ ಈ ರಾಜ್ಯವು ನನಗೆ ಕ್ರಮ ಪ್ರಾಪ್ತವಾಗಿ ಬಂದಿದ್ದರೂ ಭೀಷ್ಮ ದ್ರೋಣ ಕರ್ಣರಿಲ್ಲದುದರಿಂದ ನನಗೆ ಇಷ್ಟವಿಲ್ಲವಾಗಿದೆ. ವೇದ ಘೋಷದಿಂದ ರಮ್ಯವಾಗಿದ್ದ ಕರ್ಣನ ಮನೆಯು ಈಗ ನನ್ನಿಂದ ಹಾಳಾಗಿ ದಾನ ಶೂನ್ಯವಾಗಿದೆ. ಪ್ರತಿ ದಿನವೂ ಯಾಚಕರು ಗುಂಪಾಗಿ ಬಂದು ಎಲ್ಲಿ ಧನ ಮಾನಗಳನ್ನು ಪಡೆದು ತೃಪ್ತರಾಗಿ ತಮ್ಮ ಕಣ್ಣಿನಿಂದ ಆನಂದ ಬಾಷ್ಪಗಳನ್ನು ಸುರಿಸುತ್ತಿದ್ದರೋ ಆ ಕರ್ಣನ ಮನೆಯಲ್ಲಿ ಈಗ ಅವರು ದುಃಖಾಶ್ರುಗಳನ್ನು ಬಿಡುತ್ತಿರುವರು. ಕರ್ಣ ಭೀಷ್ಮರಿಲ್ಲದ ಈ ನನ್ನ ರಾಜ್ಯವೂ ಅವರಿಬ್ಬರಿಲ್ಲದಿರುವುದರಿಂದ ಕಣ್ಣಿಲ್ಲದಂತಿರುವ ನನ್ನ ದೇಹವೂ ವ್ಯರ್ಥವು. ಮಹಾ ಬುದ್ಧಿಶಾಲಿಯಾದ ಭೀಷ್ಮನಿಂದ ಬಹುವಾಗಿ ನಾನು ಶಿಕ್ಷಿತನಾಗಿದ್ದೇನೆ. ಅಂತಹ ಭೀಷ್ಮಾದಿಗಳನ್ನು ಕೊಂದ ನನ್ನ ದುಃಖವು ಶಾಂತವಾಗದು. ಆದಕಾರಣ ನಾನು ರಾಜ್ಯವನ್ನು ಬಿಟ್ಟು ಹೋಗುವೆನು. ಭೀಮನು ರಾಜ್ಯವಾಳಲಿ. ತೀರ್ಥ ಕ್ಷೇತ್ರಗಳ ಯಾತ್ರೆಯನ್ನೂ ಯಜ್ಞಾದಿ ಪುಣ್ಯ ಕರ್ಮಗಳನ್ನೂ ಮಾಡಿ ಶುದ್ಧನಾಗುವೆನು. ಹೀಗಿರುವುದು ನನಗೆ ಚೆನ್ನಾಗಿಲ್ಲ, ಎಂದು ಹೇಳಿದನು.

ಅದಕ್ಕೆ ವ್ಯಾಸ ಮಹರ್ಷಿಯು, ಎಲೈ ರಾಜೇಂದ್ರನೇ ನೀನು ಹೆದರಬೇಡ. ಜ್ಞಾತಿ ವಧೆಯಿಂದುಂಟಾದ ಪಾಪವು ಪರಿಹಾರವಾಗಿ ನಿನಗೆ ಆ ದೋಷವು ಬಾರದಂತೆಯೂ ನೀನು ಶುದ್ಧನಾಗುವಂತೆಯೂ ಒಂದು ಉಪಾಯವನ್ನು ಮಾಡುವೆನು. ಇದಕ್ಕಾಗಿ ನೀನು ಅಶ್ವಮೇಧ ಯಾಗವನ್ನು ಮಾಡು. ಪೂರ್ವದಲ್ಲಿ ಶ್ರೀರಾಮನು ನೂರು ಅಶ್ವಮೇಧಗಳನ್ನು ಮಾಡಿದನು. ನೀನೂ ಹಾಗೆಯೇ ಅಶ್ವಮೇಧವನ್ನು ಮಾಡಿ ರಾಜ್ಯಭಾರ ಮಾಡು. ರಾಜ ಧರ್ಮದಿಂದಲೂ ಶ್ರೀಕೃಷ್ಣನ ಆಜ್ಞೆಯಿಂದಲೂ ಪ್ರಾಪ್ತವಾಗಿರುವ ರಾಜ್ಯವನ್ನು ಬಿಟ್ಟು ಹೋಗಲು ಏಕೆ

ಅಪೇಕ್ಷಿಸುತ್ತೀಯೆ? ನಿನ್ನ ಬಂಧುಗಳೆಲ್ಲರೂ ನಿನ್ನ ಅಧೀನರಾಗಿರುವರು. ನಿನ್ನ ದೇಹವು ದೃಢವಾಗಿರುವವರೆಗೂ ಶ್ರೇಯೋಭಿವೃದ್ಧಿ ಕಾರ್ಯವನ್ನು ಮಾಡಿ ಇಹ ಲೋಕದಲ್ಲಿ ನಿನ್ನ ಕೀರ್ತಿಯು ನೆಲೆಗೊಳ್ಳುವಂತೆ ಮಾಡು. ರಾಜರು ಪುಣ್ಯಕಾರ್ಯ ಗಳನ್ನು ಮಾಡಿ ಸ್ವರ್ಗ ಲೋಕವನ್ನು ಪಡೆಯುವುದಿಲ್ಲವೇ! ಎಂದನು. ಮಹಾ ತೇಜಸ್ವಿಯಾದ ವ್ಯಾಸನು ಹೇಳಿದ ಆ ಮಾತನ್ನು ಕೇಳಿ ಧರ್ಮರಾಜನು ದೈನ್ಯ ವಚನ ದಿಂದ–ಎಲೈ ಬ್ರಹ್ಮರ್ಷಿಯೇ ನನ್ನಲ್ಲಿ ಧನವಿಲ್ಲ. ಹಣವಿಲ್ಲದೆ ಯಜ್ಞವು ನಡೆಯುವು ದಿಲ್ಲ. ಇದಕ್ಕಾಗಿ ಪ್ರಜೆಗಳನ್ನು ಹಿಂಸಿಸಲಾರೆನು. ತಂದೆ ತಾಯಿಗಳಿಲ್ಲದ ದೊರೆ ಗಳನ್ನು ಕೊಲ್ಲಲು ನಾನು ಶಕ್ತನಲ್ಲ. ದುರ್ಯೋಧನನು ಹಣಕ್ಕಾಗಿ ರಾಜ್ಯ ವನ್ನು ಕ್ಷೀಣಗೊಳಿಸಿದನು. ಧನಾಕಾಂಕ್ಷೆಯಿಂದ ನಾನು ಹೇಗೆ ದೇಶ ಪೀಡೆ ಯನ್ನುಂಟುಮಾಡಲಿ. ಸ್ನೇಹಿತರೆಲ್ಲರೂ ಯುದ್ಧದಲ್ಲಿ ಸತ್ತುಹೋದುದರಿಂದ ಇನ್ನು ನನಗೆ ಸಹಾಯಕರು ಯಾರೂ ಇಲ್ಲ. ಆದಕಾರಣ ರಾಜ್ಯವನ್ನು ಪರಿ ತ್ಯಜಿಸಿ ಹೋಗುವುದೇ ನನ್ನ ಅಭಿಮತವು. ಇನ್ನು ಇಲ್ಲಿ ಮಾಡಬೇಕಾದು ದೇನು? ಹೇಳು, ಎಂದು ಕೇಳಿದನು. ಅದಕ್ಕೆ ವ್ಯಾಸ ಮುನಿಯು—ಎಲೈ ರಾಜ ಕುಮಾರನೇ! ಪೂರ್ವದಲ್ಲಿ ಮರುತ್ತ ರಾಜನು ಯಜ್ಞಮಾಡಿ ದಾನ ದಕ್ಷಿಣೆಗಳಿಂದ ಬ್ರಾಹ್ಮಣೋತ್ತಮರನ್ನು ಸಂತುಷ್ಟಿಗೊಳಿಸಿದ್ದಾನೆ. ಅವರು ಆಗ ತಮಗೆ ಕೊಟ್ಟ ದ್ರವ್ಯವನ್ನು ತೆಗೆದುಕೊಂಡು ಹೋಗಲು ಸಾಮರ್ಥ್ಯವಿಲ್ಲದೆ ನೆಲದ ಮೇಲೆ ರಾಶಿ ಯಾಗಿ ಸುರಿದುಹೋಗಿದ್ದಾರೆ. ಹಿಮಾಲಯ ಪರ್ವತದ ಬಳಿಯಲ್ಲಿ ಆ ಧನರಾಶಿಯು ಬಿದ್ದಿದೆ. ಉದಾರನಾದ ಮರುತ್ತ ರಾಜನು ಯಜ್ಞದಲ್ಲಿ ಬಹು ಮುಖವಾಗಿ ಕೊಟ್ಟ ಧನವನ್ನು ತೆಗೆದುಕೊಂಡುಹೋಗಲು ಬ್ರಾಹ್ಮಣರು ಅಸಮರ್ಥರಾದುದ ರಿಂದ ನೀನು ಆ ಧನವನ್ನು ತರಿಸು, ಎಂದನು. ಆಗ ಯುಧಿಷ್ಠಿರನು ಅಷ್ಟು ಧನ ವ್ಯಯಮಾಡಿ ಬ್ರಾಹ್ಮಣರನ್ನು ತೃಪ್ತಿಗೊಳಿಸುವಂತೆ ಯಜ್ಞಮಾಡಿದ ಆ ಮರುತ್ತ ರಾಜನೇ ಧನ್ಯನು. ಆ ಬ್ರಾಹ್ಮಣರು ಹೊರಲಾರದೆ ಬಿಟ್ಟುಹೋದ ಧನವನ್ನು ನಾನು ಹೇಗೆ ತರಲಿ. ಬ್ರಾಹ್ಮಣ ದ್ರವ್ಯವನ್ನು ಅಪಹರಿಸುವುದು ಬಹು ದುಃಖ ಕರವಾದುದು. ನಾನು ಹಾಗೆ ಮಾಡಿದರೆ ರಾಜರಲ್ಲಿ ನನ್ನಂತಹ ನಿಂದಿತನು ಮತ್ತಾವನಿರುವನು. ಬ್ರಹ್ಮಸ್ವವನ್ನಪಹರಿಸುವಷ್ಟು ಕ್ರೂರ ಬುದ್ಧಿಯು ಯಾವ ದೊರೆಗುಂಟಾಗುವುದೋ ಆ ದೊರೆಯು ಅದನ್ನು ಅಪಹರಿಸುವುದರಿಂದ ಭಾರ ವಾದ ಕಲ್ಲು ನೀರಿನಲ್ಲಿ ಮುಳುಗುವಂತೆ ಮುಳುಗಿ ಹೋಗುವನು. ಒಂದು ವೇಳೆ ಆ ಧನವನ್ನು ನಾನು ಅಪಹರಿಸಿ ಯಜ್ಞಮಾಡಿದರೆ ಬ್ರಾಹ್ಮಣರೆಲ್ಲರೂ ತಮ್ಮ ಧನವನ್ನೇ ತನಗೆ ದಕ್ಷಿಣೆಯಾಗಿ ಕೊಟ್ಟನೆಂದು ನನ್ನನ್ನು ಅಪಹಾಸ್ಯ ಮಾಡು ವರು. ಆದಕಾರಣ ಈ ಅಕೃತ್ಯವನ್ನು ಎಂದಿಗೂ ಮಾಡಲೊಲ್ಲೆನು. ಯುದ್ಧ ದಲ್ಲಿ ಕೌರವರನ್ನೂ ಗುರುಗಳನ್ನೂ ಮಿತ್ರ ಬಾಂಧವರನ್ನೂ ಕೊಂದುಹಾಕಿದುದ ರಿಂದುಂಟಾದ ನಾಚಿಕೆಯೊಂದನ್ನು ಪರಿಹರಿಸಿಕೊಳ್ಳುವುದಕ್ಕೂ ನಾನು ಸಮರ್ಥ ನಲ್ಲದೆ ಹೋಗಿರುವಾಗ ಬ್ರಹ್ಮಸ್ವಾಪಹಾರ ರೂಪವಾದ ಎರಡನೆಯ ನಾಚಿಕೆ ಯೊದಗುವುದಲ್ಲಾ! ಏನು ಮಾಡಲಿ ಎಂದನು.

ಅದನ್ನು ಕೇಳಿ ವ್ಯಾಸ ಮಹಾ ಮುನಿಯು ಅಯ್ಯಾ ಚೆನ್ನಾಗಿ ಹೇಳಿದೆ. ನೀನು ಧನ್ಯನು. ಬ್ರಾಹ್ಮಣ ದ್ರವ್ಯವನ್ನು ಕುರಿತು ನೀನು ಸಂದೇಹಪಡುವುದು ವ್ಯರ್ಥವು. ಆ ಬ್ರಾಹ್ಮಣರು ಯಾವಾಗ ದ್ರವ್ಯವನ್ನು ಬಿಟ್ಟುಬಿಟ್ಟರೋ ಆಗಲೇ ಅದಕ್ಕೆ ಅವರ ಸ್ವಾಮ್ಯತ್ವವು ಹೋಯಿತು. ಪೂರ್ವದಲ್ಲಿ ಪರಶುರಾಮನು ಮಹಾತ್ಮನಾದ ಕಶ್ಯಪನಿಗೆ ಭೂಮಂಡಲವನ್ನು ದಾನವಾಗಿ ಕೊಟ್ಟನು. ಪಾಪಭೀತರಾದ ರಾಜರು ಅದನ್ನು ಹೇಗೆ ಸ್ವೀಕರಿಸುತ್ತಿದ್ದಾರೆ? ದೈತ್ಯರು ಈ ಭೂಮಿಯನ್ನು ಜಯಿಸಿದರು. ದೈತ್ಯರನ್ನು ಜಯಿಸಿ ಕ್ಷತ್ರಿಯರು ಇದನ್ನು ಪಡೆದುಕೊಂಡರು. ಇದರಿಂದ ಬ್ರಾಹ್ಮಣರ ಸ್ವಾಮ್ಯವು ಹೋಯಿತು. ಆದಕಾರಣ ಯಾವ ದೋಷವೂ ಇಲ್ಲ. ಯಾವಾಗ ಯಾವ ರಾಜನಿಗೆ ಭೂಮಿಯ ಆಧಿಪತ್ಯವು ಬಂದಿತೋ ಆಗ ಎಲ್ಲ ಧನವೂ ಆ ರಾಜನದಾಯಿತು. ಈ ವಿಷಯದಲ್ಲಿ ಸಂದೇಹವಿಲ್ಲ. ಆದಕಾರಣ ಎಲೈ ಪಾಂಡವನೇ ನೀನು ಆ ದ್ರವ್ಯದಿಂದ ಯಜ್ಞವನ್ನು ಮಾಡು ಎಂದು ಹೇಳಲು, ಅದನ್ನು ಕೇಳಿ ಧರ್ಮರಾಜನು ಯಜ್ಞಕ್ಕೆ ಬೇಕಾದ ಸಾಮಗ್ರಿಯನ್ನು ಕೇಳಿದನು. ಎಲೈ ಮುನಿಯೇ ಯಜ್ಞಕ್ಕೆ ಬ್ರಾಹ್ಮಣರೆಷ್ಟು ಮಂದಿ? ದಕ್ಷಿಣೆ ಎಷ್ಟು? ಎಂತಹ ಕುದುರೆ? ಇದನ್ನು ತಿಳಿಸು ಎಂದನು.

ವ್ಯಾಸ ಮುನಿಯು ಅಯ್ಯಾ, ಯಜ್ಞಾರಂಭಕ್ಕೆ ಸತ್ಕುಲಪ್ರಸೂತರಾಗಿಯೂ ವೇದಶಾಸ್ತ್ರಗಳನ್ನರಿತವರಾಗಿಯೂ ಜ್ಞಾನಿಗಳಾಗಿಯೂ ಇರುವ ಇಪ್ಪತ್ತು ಸಾವಿರ ಮಂದಿ ಬ್ರಾಹ್ಮಣರು ಬೇಕು. ಯಜ್ಞದಲ್ಲಿ ಒಬ್ಬೊಬ್ಬ ಬ್ರಾಹ್ಮಣನಿಗೆ ಒಂದು ಆನೆ ಒಂದು ಕುದುರೆ ಒಂದು ರಥ ಇವುಗಳಿಗೆ ತಕ್ಕ ದಕ್ಷಿಣೆ ಒಂದು ಸಾವಿರ ಗೋವುಗಳು ಒಂದು ಬಳ್ಳ (ಅಳತೆಯ ನಾಲ್ಕು ಸೇರು) ರತ್ನಗಳು ಅದಕ್ಕೆ ತಕ್ಕ ದಕ್ಷಿಣೆ ಒಂದು ಭಾರದ ತೂಕ (೨೦ ತೊಲೆ) ಚಿನ್ನ ಇವನ್ನು ದಕ್ಷಿಣೆಯಾಗಿ ಕೊಡಬೇಕು. ಕುದುರೆಯನ್ನು ಬಿಟ್ಟ ದಿನವೇ ಪ್ರಾರಂಭವು. ಯಜ್ಞಾಶ್ವವು ಹಸುವಿನ ಹಾಲು, ಕುಂದಪುಷ್ಪ, ಚಂದ್ರ, ಹಿಮ ಇವುಗಳಂತೆ ಬಿಳುಪಾಗಿಯೂ ಹಳದಿಯ ಬಣ್ಣದ ಬಾಲವೂ ಕಪ್ಪಾದ ಕಿವಿಯೂ ಉಳ್ಳದಾಗಿಯೂ ವೇಗಶಾಲಿಯಾಗಿಯೂ ಇರಬೇಕು. ಕಪ್ಪುಬಣ್ಣದ ಕುದುರೆಯಾದರೂ ಆಗಬಹುದು. ಇಂತಹ ಕುದುರೆಯನ್ನು ಚೈತ್ರ ಶುದ್ಧ ಪೌರ್ಣಮಿಯಾ ದಿನ ರಾತ್ರಿಯಲ್ಲಿ ಬಿಡಬೇಕು. ಒಂದು ವರ್ಷ ಕಾಲ ಆ ಕುದುರೆಯನ್ನು ರಕ್ಷಣೆ ಮಾಡಿಕೊಂಡಿರಬೇಕು. ಅದಕ್ಕಾಗಿ ಕುದುರೆಯ ಹಿಂದೆ ಕಾವಲಿಗಾಗಿ ಶೂರನಾದ ಮಗನನ್ನೋ ಮತ್ತೊಬ್ಬ ತನ್ನ ಬಂಧು ವರ್ಗದವನನ್ನೋ ಬಲಿಷ್ಠರಾದ ಯೋಧರೊಡನೆ ಕಳುಹಿಸಬೇಕು. ಯಜ್ಞವನ್ನು ಮಾಡುವವನು ನಿಯಮದಿಂದ ಅಸಿಪತ್ರ ವ್ರತವನ್ನಾಚರಿಸಬೇಕು. ಇದಕ್ಕೆ ತಪ್ಪಕೂಡದು. ಯಜಮಾನನು ಒಂದು ವರ್ಷ ಕಾಲ ಸ್ತ್ರೀ ಸಂಭೋಗವನ್ನುಳಿದ ಎಲ್ಲ ವಿಷಯ ಸುಖಗಳನ್ನೂ ಅನುಭವಿಸಬೇಕು. ಪತ್ನಿಯೊಡನೆ ಏಕ ಶಯ್ಯೆಯಲ್ಲಿ ಮಲಗಬೇಕು. ಬಿಟ್ಟ ಕುದುರೆಯು ಹಿಂದಿರುಗಿ ಬರುವವರೆಗೂ ಪ್ರಯತ್ನಪೂರ್ವಕವಾಗಿ ಬ್ರಹ್ಮಚರ್ಯದಿಂದಿರಬೇಕು. ಕುದುರೆಯು ಎಲ್ಲೆಲ್ಲಿ ಮೂತ್ರ ಪುರೀಷೋತ್ಸರ್ಗವನ್ನು ಮಾಡುವುದೋ ಆ ಪ್ರದೇಶಗಳಲ್ಲಿ ಸಹಸ್ರ ಗೋದಾನವನ್ನು

ಸಾಧು ಬ್ರಾಹ್ಮಣರಿಂದ ಹವನವನ್ನು ಮಾಡಿಸಿ ದಕ್ಷಿಣೆಗಳಿಂದ ಅವರನ್ನು ಪೂಜಿಸಬೇಕು. ಒಂದು ಚಿನ್ನದ ಪಟ್ಟಿಯಲ್ಲಿ—ನಾನು ಈ ಕುದುರೆಯನ್ನು ಬಿಟ್ಟಿದ್ದೇನೆ. ಬಲಿಷ್ಠರಾದ ದೊರೆಗಳು ಯಾರಾದರೂ ಇದನ್ನು ಹಿಡಿದು ಕಟ್ಟಬಹುದು. ಅಂತಹವರನ್ನು ನಾನು ಯುದ್ಧದಲ್ಲಿ ಗೆಲ್ಲುತ್ತೇನೆ. ಎಂದು, ವಿವರವಾಗಿ ಸೂಚಿಸಿ ತನ್ನ ಹೆಸರನ್ನೂ ಪರಾಕ್ರಮವನ್ನೂ ಬರೆದು ಕುದುರೆಯ ಹಣೆಗೆ ಆ ಪಟ್ಟಿಯನ್ನು ಕಟ್ಟಬಿಡಬೇಕು. ನೀನು ಅಸಿಪತ್ರ ವ್ರತ ವಿಧಾನದಿಂದ ಈ ರೀತಿಯಲ್ಲಿ ಮಾಡು. ಈ ಯಜ್ಞವು ಬಹು ಪುಣ್ಯಪ್ರದವಾದುದು. ಪೂರ್ವದಲ್ಲಿ ಇಂದ್ರನು ಹೀಗೆಯೇ ನೂರು ಅಶ್ವಮೇಧಗಳನ್ನು ಮಾಡಿದನು. ಅದರಿಂದ ಈಗ ಅವನು ದೇವೇಂದ್ರತ್ವವನ್ನು ಪಡೆದು ಸ್ವರ್ಗಲೋಕದಲ್ಲಿ ಸುಖದಿಂದಿರುವನು. ದೇವೇಂದ್ರನು ಅಶ್ವಮೇಧಗಳನ್ನು ಅಸಿಪತ್ರ ವ್ರತ ರಹಿತನಾಗಿ ಮಾಡಿದನು. ಯಾವನು ಈ ವ್ರತ ಸಹಿತನಾಗಿ ಈ ಮಹಾ ಯಜ್ಞವನ್ನು ಮಾಡುವನೋ ಅವನು ಭೂಮಂಡಲವನ್ನು ಪಾಪ ರಹಿತವನ್ನಾಗಿ ಮಾಡುವನು. ಲೋಕದಲ್ಲಿ ಭೀಷ್ಮನನ್ನುಳಿದು ಮನ್ಮಥನನ್ನು ಜಯಿಸಿದವನಾರು? ಆದಕಾರಣ ವ್ರತ ಯುಕ್ತನಾಗಿ ಈ ಯಜ್ಞವನ್ನು ಮಾಡುವುದಕ್ಕೆ ಹೆದರಿ ಯಾರೂ ಮಾಡರು. ಎಲೈ ರಾಜೇಂದ್ರನೇ ನಿನಗೆ ಮನ್ಮಥನನ್ನು ಗೆಲ್ಲುವ ಸಾಮರ್ಥ್ಯವಿದ್ದರೆ ಈ ಯಜ್ಞಕ್ಕೆ ಪ್ರಾರಂಭಿಸು, ಎಂದು ಹೇಳಿದನು.

ಧರ್ಮರಾಜನು ವ್ಯಾಸಮುನಿಯನ್ನು ಕುರಿತು—ಮುನಿವರ್ಯನೇ, ಈ ಅಶ್ವಮೇಧ ವಿಷಯವು ನನಗೆ ಬಹು ಕಷ್ಟತರವಾಗಿರುವುದು. ನನ್ನಲ್ಲಿ ಹಣವೂ ಇಲ್ಲ. ನನಗೆ ಸಹಾಯಕರು ಯಾರೂ ಇಲ್ಲ. ಭೀಮಾದಿಗಳನ್ನು ನಾನು ಯುದ್ಧದಲ್ಲಿ ಬಹಳ ಕಷ್ಟಪಡಿಸಿದ್ದೇನೆ. ಕರ್ಣನ ಮಗನಾದ ವೃಷಕೇತುವು ಬಲಿಷ್ಠನೂ ಧೀರನೂ ಆಗಿದ್ದರೂ ಹದಿನಾರು ವರ್ಷದವನಾದುದರಿಂದ ಅವನನ್ನು ಈ ಕಾರ್ಯದಲ್ಲಿ ನಿಯಮಿಸುವುದು ಧರ್ಮವಲ್ಲ. ಘಟೋತ್ಕಚನ ಮಗನಾದ ಮೇಘವರ್ಣನನ್ನೂ ನಿಯಮಿಸುವುದಿಲ್ಲ. ಕರ್ಣನು ಇವನ ತಂದೆಯನ್ನು ನನ್ನ ನಿಮಿತ್ತದಿಂದ ರಾತ್ರಿಯಲ್ಲಿ ಕೊಂದುಹಾಕಿದನು. ಯಾವನ ಅನುಗ್ರಹದಿಂದ ಅರ್ಜುನನು ಶತ್ರು ರಾಜರನ್ನು ಜಯಿಸಿದನೋ ಆ ಕೃಷ್ಣನು ದೂರದಲ್ಲಿರುವನು. ಎಂದು ಹೇಳಿ, ಭೀಮನನ್ನು ಕರೆದು ಎಲೈ ಭೀಮನೇ ಯಜ್ಞವು ಹೇಗೆ ನಡೆಯುವುದು! ಜ್ಞಾತಿ ವಧೆಯ ದೋಷವನ್ನು ನಾನು ಹೇಗೆ ಕಳೆಯುವೆನು! ಈ ಯಜ್ಞಕ್ಕೆ ವಿಘ್ನಗಳು ಬಹುವಾಗಿವೆ. ಇದು ಪೂರೈಸದೆಹೋದರೆ ಹಾಸ್ಯಾಸ್ಪದನಾಗುವೆನು. ಎಂದು ಹೇಳಲು, ಭೀಮನು—ಎಲೈ ರಾಜೇಂದ್ರನೇ ದೇಶದಲ್ಲಿ ಕುದುರೆಯಿಲ್ಲ, ನನ್ನಲ್ಲಿ ಹಣವಿಲ್ಲ, ಕೃಷ್ಣನು ಸಮೀಪದಲ್ಲಿಲ್ಲ, ಎಂದು ನೀನು ಹೇಳಬಹುದೇ! ಕೃಷ್ಣನು ಯಾವಾಗಲೂ ನಿನ್ನ ಸಮೀಪದಲ್ಲಿಯೇ ಇರುವನು. ಕೃಷ್ಣನು ಹತ್ತಿರವಿರುವಾಗ ಎಲ್ಲ ಸಂಪತ್ತುಗಳೂ ಇದ್ದಹಾಗೆಯೇ ಅಲ್ಲವೇ. ಯಾವನ ನಾಮಸ್ಮರಣೆಯಿಂದ ಮನುಷ್ಯರು ಸಮಸ್ತ ಪಾಪ ಪರಿಹಾರವನ್ನೂ ಮಾಡಿಕೊಳ್ಳುವರೋ ಅಂತಹ ಕೃಷ್ಣನು ಸಮೀಪದಲ್ಲಿದ್ದರೆ ಅದರ ಫಲವನ್ನು ಹೇಳುವುದಕ್ಕೆ ಸಾಧ್ಯವೇ! ಜ್ಞಾತಿ ವಧೆಯ ದೋಷವು

ನಿನಗೆ ಹೇಗೆ ಬರುವುದು? ಯಜ್ಞವನ್ನು ಮಾಡದಿದ್ದರೂ ಶ್ರೀಕೃಷ್ಣನು ನಿನ್ನನ್ನು ಪುನೀತನನ್ನಾಗಿ ಮಾಡುವನೆಂಬುದಕ್ಕೆ ಸಂದೇಹವಿಲ್ಲ. ಹಿಂದೆ ಯುದ್ಧ ಪ್ರಾರಂಭವಾದ ಕಾಲದಲ್ಲಿಯೇ ಪ್ರಾಜ್ಞನಾದ ಕೃಷ್ಣನು ನೀವೆಲ್ಲರೂ ಯುದ್ಧವನ್ನು ಮಾಡಿ, ಎಂದು ನಮ್ಮೆಲ್ಲರನ್ನೂ ಪ್ರೋತ್ಸಾಹಿಸಲಿಲ್ಲವೇ! ಅದನ್ನು ನೀನು ಹೇಗೆ ಮರೆತೆ! ಎಲೈ ಮಹಾರಾಜನೇ ರಾಜಸೂಯವಾಗಲಿ ಅಶ್ವಮೇಧವಾಗಲಿ ಯಾವ ಯಜ್ಞದ ಪುಣ್ಯವಾದರೂ ಮಹಾ ಯಜ್ಞ ಸ್ವರೂಪನಾದ ಆ ಶ್ರೀಕೃಷ್ಣನನ್ನು ಬಿಟ್ಟು ಜನವನ್ನು ಪಾವನಗೊಳಿಸಲು ಸಮರ್ಥವಾಗದು. ವ್ಯಾಸ ಮುನಿಯನ್ನು ಕೇಳು, ಯಜ್ಞಯೋಗ್ಯವಾದ ಕುದುರೆಯು ಎಲ್ಲಿದೆಯೋ ಅದನ್ನು ತಿಳಿದು ಹೇಳಲಿ, ಎಂದನು.

ಮಹಾ ತೇಜಸ್ವಿಯಾದ ಭೀಮನ ವಾಕ್ಯವನ್ನು ಕೇಳಿ ವ್ಯಾಸಮುನಿಯೂ ಧರ್ಮರಾಜನನ್ನು ಕುರಿತು—ಎಲೈ ವೀರನೇ ನೀನು ಧನ್ಯನು. ನಿನ್ನ ಮಾತು ಯುಕ್ತವಾದುದು. ಇಲ್ಲಿಗೆ ಬಹು ದೂರದಲ್ಲಿರುವ ಭದ್ರಾವತೀ ಪುರಿಯಲ್ಲಿ ಯೌವನಾಶ್ವನೆಂಬ ದೊರೆಯು ಯಜ್ಞಯೋಗ್ಯವಾದ ಕುದುರೆಯನ್ನು ಹತ್ತು ಅಕ್ಷೌಹಿಣೀ ಬಲದ ಕಾವಲಿನಿಂದ ರಕ್ಷಿಸುತ್ತಿರುವನು. ಆ ಕುದುರೆಯನ್ನು ವಾಯುವೂ ಕೂಡ ಹಿಡಿಯಲಾರದು. ಅದನ್ನು ಹಿಡಿಯುವ ವಿಷಯದಲ್ಲಿ ಅಲ್ಪನಾದ ಮನುಷ್ಯನು ಯಾವ ಲೆಕ್ಕಕ್ಕೆ ಸೇರಿದವನು! ದರಿದ್ರನು ಧನವನ್ನು ಹೇಗೆ ರಕ್ಷಿಸಿಕೊಳ್ಳುತ್ತಿರುವನೋ ಹಾಗೆ ಆ ಕುದುರೆಯನ್ನು ಆ ದೊರೆಯು ಬಲದಿಂದ ಕಾದಿರುವನು. ಅಂತಹ ಕುದುರೆಯನ್ನು ಧರ್ಮರಾಜನ ಯಜ್ಞಾರ್ಥವಾಗಿ ತೆಗೆದುಕೊಂಡು ಬರುವವರು ಯಾರು? ಎಂದು ಹೇಳಿದನು.

ಇಂತು ಜೈಮಿನಿಯ ಆಶ್ವಮೇಧಿಕ ಪರ್ವದಲ್ಲಿ ಯಜ್ಞ ಪ್ರಾರಂಭವೆಂಬ ಮೊದಲನೆಯ ಅಧ್ಯಾಯವು.

ಎರಡನೆಯ ಅಧ್ಯಾಯ

ಬಳಿಕ ಭೀಮಸೇನನು ನಗುತ್ತ, ಎಲೈ ರಾಜನೇ ನಾನೊಬ್ಬನೇ ಸೇನಾ ಸಹಿತವಾಗಿ ಹೋಗಿ ಶೂರನಾದ ಆ ದೊರೆಯನ್ನು ಜಯಿಸಿ ಆ ಕುದುರೆಯನ್ನು ಬಲಾತ್ಕಾರವಾಗಿ ಹಿಡಿದು ತರುವೆನು. ನೀನು ಸಂಶಯಪಡಬೇಡ. ವಾಸುದೇವ ಸ್ಮರಣೆ ಮಾಡಿ ಯಾವನು ಕಾರ್ಯವಾಡುವನೋ ಅವನು ಇಷ್ಟ ಸಿದ್ಧಿಯನ್ನು ಪಡೆಯುವನು. ಇದು ಸತ್ಯ. ಆ ವಾಸುದೇವನನ್ನು ಅಲಕ್ಷ್ಯವಾಡಿ ಮಾಡಿದ ತಪೋ ಯಜ್ಞಾದಿಗಳೆಲ್ಲವೂ ನಿರ್ಭಾಗ್ಯನು ಮಾಡಿದ ಕಾರ್ಯದಂತೆ ನಿಷ್ಫಲವಾಗುವುವು. ನಾನು ಆ ಕುದುರೆಯನ್ನು ತಾರದೆ ಹೋದರೆ ನನಗೆ ದುರ್ಗತಿಯುಂಟಾಗಲಿ. ಮಾತಾ ಪಿತೃಗಳನ್ನು ಕೊಂದವರಿಗೆ ಪ್ರಾಪ್ತವಾಗುವ ಅಧೋಲೋಕ ಗತಿಯು ನನಗಾಗಲಿ. ಒಂದೇ ಬಾವಿಯು ಇರುವ ಊರಿನಲ್ಲಿ ವಾಸಮಾಡು

ತ್ತಿರುವ ಬ್ರಾಹ್ಮಣರಿಗೂ, ವೇದಾಧ್ಯಯನವೂ ಶಿವ ಪೂಜೆಯೂ ಇಲ್ಲದೆ ಇರುವ ಬ್ರಾಹ್ಮಣರಿರುವ ಗ್ರಾಮದಲ್ಲಿ ಕ್ಷಣಕಾಲವಾದರೂ ವಾಸ ಮಾಡುವವರಿಗೂ, ಯಾವ ದುರ್ಗತಿಯುಂಟಾಗುವುದೋ ಅಂತಹ ಗತಿಯು ನನಗೆ ಬರಲಿ. ಎಂದು ಹೇಳಿ ಸುಮ್ಮನಾದನು. ಅದಕ್ಕೆ ಧರ್ಮನಂದನನು ಎಲೈ ಮಹಾ ಬಲನಾದ ಭೀಮಸೇನನೇ ಆ ಕುದುರೆಯನ್ನು ನೀನೊಬ್ಬನೇ ಹೋಗಿ ತರುವುದು ಕಷ್ಟತರವೆಂದು ನನಗೆ ತೋರುವುದು. ಯೌವನಾಶ್ವನು ಬಲಿಷ್ಠನು. ಅವನ ಸೇನೆಯವರೂ ಬಲಶಾಲಿಗಳು. ನೀನೊಬ್ಬನೇ ಅಲ್ಲಿಗೆ ಹೋಗುತ್ತೀಯೆ, ಎಂದು ನನಗೆ ಚಿಂತೆಯುಂಟಾಗಿರುವುದು, ಎಂದು ಹೇಳಲು ವೃಷಕೇತು ಆ ಮಾತನ್ನು ಕೇಳಿ ಧರ್ಮನಂದನನ್ನು ಕುರಿತು—ರಾಜೇಂದ್ರನೇ ಭೀಮಸೇನನಿಗೆ ಸಹಾಯಕನಾಗಿ ನನ್ನನ್ನು ಕೂಡಲೆ ಕಳುಹಿಸು ಎಂದು ಕೇಳಿದನು. ಅದಕ್ಕೆ ಭೀಮಸೇನನು—ಎಲೈ ಕುಮಾರನೇ ನಿನ್ನ ತಂದೆಯನ್ನು ನಾವು ಸಂಹರಿಸಿದಂದಿನಿಂದಲೂ ನಿನ್ನ ಮುಖವನ್ನು ನೋಡುವುದಕ್ಕೆ ನಮಗೆ ಬಹಳ ಲಜ್ಜೆಯುಂಟಾಗಿರುವುದು ಎಂದನು. ಅದಕ್ಕೆ ವೃಷಕೇತುವು, ನೀವು ನಮ್ಮ ತಂದೆಯನ್ನು ಕ್ಷಾತ್ರ ಧರ್ಮದಿಂದ ಕೊಂದು ಒಳ್ಳೆಯ ಉಪಕಾರವನ್ನು ಮಾಡಿದಿರಿ. ಇದರಿಂದ ಅವನ ನೀಚ ಕೃತ್ಯವನ್ನು ತಪ್ಪಿಸಿದ ಹಾಗಾಯಿತು. ಅವನು ಯಾವಜ್ಜೀವವೂ ದುರ್ಯೋಧನನಿಗೆ ಭೃತ್ಯನಾಗಿದ್ದು ಧರ್ಮದ್ವೇಷಿಯೂ, ಕೃಷ್ಣನ ಪಕ್ಷವನ್ನು ಬಿಟ್ಟುದರಿಂದ ಪಾಪಿಯೂ ಆದನು. ಆದಕಾರಣ ಮಹಿಳೆಯರಲ್ಲಿ ಶ್ರೇಷ್ಠಳಾದ ದ್ರೌಪದಿಯು ಸಭಾ ಮಧ್ಯದಲ್ಲಿ, ನಿರ್ಜನ ಪ್ರದೇಶದಲ್ಲಿ ಹೇಗೋ ಹಾಗೆ ಕಷ್ಟಕ್ಕೆ ಸಿಕ್ಕಿ ಬಾಧೆಪಡುತ್ತಿದ್ದರೂ ಕರ್ಣನು ನೋಡುತ್ತ ಸುಮ್ಮನಿದ್ದನು. ಮತ್ಸ್ಯರಾಜನ ಗೋ ಸಹಸ್ರಗಳನ್ನು ಕರ್ಣನು ಹಿಡಿದಿರಲು ಅವುಗಳನ್ನು ಅರ್ಜುನನು ಬಿಡಿಸಿದನೆಂದು ತೋರುವುದು. ಅತ್ಯಂತ ದೋಷ ಪೂರ್ಣನಾದ ಕರ್ಣನನ್ನು ಶೂರರಾದ ಪಾಂಡವರು ಯುದ್ಧದಲ್ಲಿ ಕೊಂದುದು ಅವನನ್ನು ಶುದ್ಧನನ್ನಾಗಿ ಮಾಡಿದಹಾಗಾಯಿತು. ಕೈಯಲ್ಲಿದ್ದ ಚಿಂತಾಮಣಿಯನ್ನು ದಾನ ಮಾಡಿ ಗಾಜನ್ನೋ ಕವಡೆಯನ್ನೋ ಉತ್ತಮ ದಾನವೆಂದು ಭಾವಿಸಿ ಕೈಯೊಡ್ಡಿ ಯಾವನಾದರೂ ತೆಗೆದುಕೊಳ್ಳುವನೇ! ಬಬ್ಬನ ಮನೆಯ ಅಂಗಳದಲ್ಲಿರುವ ನಿಷ್ಫಲವಾದ ಮರವನ್ನು ಯಾವನಾದರೂ ಕಿತ್ತು ತೆಗೆದುಕೊಂಡು ಅಲ್ಲಿ ಕಲ್ಪವೃಕ್ಷವನ್ನು ತಂದು ನಡುವನೇ! ಆದಕಾರಣ ಅರ್ಜುನನು ಈ ಸಂದರ್ಭದಲ್ಲಿ ಹಾಗೆ ಮಾಡಿದನು. ಅವನು ಮಾಡಿದ ಅಪರಾಧವೇನು? ನಿಮ್ಮ ಅನುಗ್ರಹದಿಂದ ಕರ್ಣನು ಸೂರ್ಯಲೋಕವನ್ನು ಪಡೆದನು. ಅವನಿಗೆ ಬಂದ ಅಪಖ್ಯಾತಿಯು ಈಗಲೂ ಲೋಕದಲ್ಲಿ ನೆಲಸಿದೆ. ನಾನು ಈ ಯಜ್ಞ ಕಾಲದಲ್ಲಿ ಅದನ್ನು ಹೋಗಲಾಡಿಸುವೆನು. ಯೌವನಾಶ್ವನ ಸೈನ್ಯ ಸಾಗರವನ್ನು ಕಲಕಿ ಭೀಮನು ಬೇಗನೆ ಕುದುರೆಯನ್ನು ತರಲಿ, ಎಂದು ಹೇಳಿದನು.

ಭೀಮಸೇನನು ಆ ಮಾತನ್ನು ಕೇಳಿ ವೃಷಕೇತುವನ್ನು ಆಲಿಂಗಿಸಿ ತನ್ನ ಸಮೀಪದಲ್ಲಿದ್ದ ತನ್ನ ಮೊಮ್ಮಗನಾದ ಮೇಘವರ್ಣನನ್ನು ಕುರಿತು—ನಿಮ್ಮ ತಂದೆಯಾದ ಘಟೋತ್ಕಚನು ಪಾಂಡವರೆಲ್ಲರನ್ನೂ ತನ್ನ ಬೆನ್ನಿನಮೇಲೆ ಹೊತ್ತು

ಕೊಂಡು ಹೋಗಿ ಗಂಧಮಾದನ ಪರ್ವತಕ್ಕೆ ಸೇರಿ ರಕ್ಷಿಸಿರುವೆನು. ನೀನೂ ಹಾಗೆಯೇ ಧರ್ಮರಾಜನ ಹಿಂದೆ ಕಾವಲಾಗಿದ್ದು ಅವನನ್ನು ರಕ್ಷಿಸುತ್ತಿರು. ನಾನು ವೃಷಕೇತುವಿನೊಡನೆ ಹೋಗಿ ಕುದುರೆಯನ್ನು ತೆಗೆದುಕೊಂಡು ಬರುವೆನು. ನಾನು ಕುದುರೆಯನ್ನು ತೆಗೆದುಕೊಂಡು ಬರುವವರೆಗೂ ನೀನೂ ಅರ್ಜುನನೂ ಧರ್ಮರಾಜನನ್ನು ರಕ್ಷಿಸುತ್ತಿರಿ ಎಂದನು. ಅದನ್ನು ಕೇಳಿ ಮೇಘವರ್ಣನು—ಶೂರನಾದ ಆ ಘಟೋತ್ಕಚನು ನಿನ್ನ ಮಗನಲ್ಲವೇ! ಅವನು ಅಂತಹ ಪವಿತ್ರ ಕಾರ್ಯವನ್ನು ಮಾಡಿದುದರಲ್ಲಿ ಆಶ್ಚರ್ಯವೇನು? ದಾರಿಯಲ್ಲಿ ಹರಿವ ನೀರು ಗಂಗೆಯನ್ನು ಸೇರುವುದಕ್ಕೆ ಮೊದಲು ಅಪವಿತ್ರವಾದುದು. ಬಳಿಕ ಅದು ಪಾಪ ಪರಿಹಾರಕವಾಗುವುದು. ದೇಹಿಗಳಿಗೆ ಸಜ್ಜನ ಸಂಗದಿಂದ ಅಸಾಧ್ಯವಾದುದು ಯಾವುದೂ ಇಲ್ಲ. ಪೂರ್ವದಲ್ಲಿ ಶಿಲೆಯಾಗಿ ಹೋಗಿದ್ದ ಅಹಲ್ಯೆಯು ಶ್ರೀರಾಮನ ಪಾದದ ಸ್ಪರ್ಶದಿಂದ ಶುದ್ಧಳಾಗಲಿಲ್ಲವೇ? ಎಲೈ ವೀರನೇ, ನೀನು ಈ ವೃಷಕೇತುವಿನೊಡನೆ ಭದ್ರಾವತಿಗೆ ಹೋಗುವೆಯಷ್ಟೆ. ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗು. ನಾನು ಕುದುರೆಯನ್ನು ತೆಗೆದುಕೊಂಡು ಬರುವೆನು. ನೀನೂ ವೃಷಕೇತುವೂ ಯುದ್ಧಕ್ಕೆ ನಿಲ್ಲಿರಿ. ನಾನು ಕುದುರೆಯನ್ನು ಬೆನ್ನಿನ ಮೇಲೆ ಹೊತ್ತು ತರುವೆನು. ಎಲೈ ಭೀಮನೇ ಧರ್ಮಜನಿಗೆ ನಮಸ್ಕರಿಸಿ, ಬೇಗನೆ ಹೊರಡು. ನಿನಗೆ ನಿಶ್ಚಯವಾಗಿ ವಿಜಯವೂ ಹೆಚ್ಚಾದ ಕೀರ್ತಿಯೂ ಉಂಟಾಗುವುದು. ಕೃಷ್ಣನನ್ನು ನಮಸ್ಕರಿಸಿದ ಮನುಷ್ಯನಿಗೆ ಯಾವ ಕಾರ್ಯವು ತಾನೆ ಕೈಸೇರದಿರುವುದು? ಅದರಿಂದ ಪುತ್ರ ಮಿತ್ರ ಕಳತ್ರ ರಾಜ್ಯ ಸ್ವರ್ಗ ಮೋಕ್ಷಾದಿ ಫಲಗಳುಂಟಾಗುವುವು. ಕೃಷ್ಣನು ಪಾಪವನ್ನು ಧ್ವಂಸ ಮಾಡುವನು. ಆಧಿ ವ್ಯಾಧಿಗಳನ್ನು ತಪ್ಪಿಸುವನು. ನಿತ್ಯವೂ ಧರ್ಮ ವೃದ್ಧಿಯನ್ನೂ ಇಷ್ಟಾರ್ಥ ಸಿದ್ಧಿಯನ್ನೂ ಉಂಟು ಮಾಡುವನು. ಆತನನ್ನು ನಮಸ್ಕರಿಸುವವರಿಗೆ ಯಾವ ಪಾಪವೂ ಪ್ರಾಪ್ತವಾಗಲಾರದು, ಎಂದು ಹೇಳಿದನು. ಅದನ್ನು ಕೇಳಿ ಭೀಮನು—ಎಲೈ ಪುತ್ರನೇ ನೀನು ಧನ್ಯನು. ನೀನು ಇಷ್ಟವಾದ ಶುಭ ವಚನವನ್ನಾಡಿದೆ. ನೀನೂ ವೃಷಕೇತುವೂ ಸಹಾಯಾರ್ಥವಾಗಿ ನನ್ನೊಡನೆ ಬನ್ನಿ. ನಾವೆಲ್ಲರೂ ಪರರಾಜ್ಯಕ್ಕೆ ಹೊರಡೋಣ ಎಂದನು. ಧರ್ಮರಾಜನು ಇವರಿಬ್ಬರ ಮಾತನ್ನು ಕೇಳಿ ಬಹಳ ಸಂತೋಷದಿಂದ ಭೀಮನನ್ನು ಕುರಿತು—ವ್ಯಾಸ ಮುನಿಯು ಹೇಳಿದುದನ್ನೆಲ್ಲ ಕೇಳಿದುದಾಯ್ತು. ನೀನೂ ನಾವಿಬ್ಬರೂ ಸೇರಿ ಎಲ್ಲವನ್ನೂ ಮಾಡೋಣ. ರಾತ್ರಿಯು ಕಳೆದು ಹೋಯಿತು. ವ್ಯಾಸ ಮಹಾಮುನಿಯು ಹೊರಡಬೇಕೆಂದಿದ್ದಾನೆ. ಆದಕಾರಣ ಆತನನ್ನು ಸತ್ಕರಿಸಿ ಕಳುಹಿಸುವುದಕ್ಕೆ ಎಲ್ಲರೂ ಹೋಗೋಣ, ಎಂದು ಹೇಳಿ ಆತನ ಬಳಿಗೆ ಹೋಗಿ ಆತನನ್ನು ಸತ್ಕರಿಸಿ ಕಳುಹಿಸಲು ಆತನು ಅವರಿಂದ ಸತ್ಕೃತನಾಗಿ ಅಲ್ಲಿಂದ ಹೊರಟು ಹೋದನು.

ಬಳಿಕ ಧರ್ಮರಾಜನು ಚಿಂತಾಕ್ರಾಂತನಾಗಿ ಆ ರಾತ್ರಿ ತನ್ನ ಸಹೋದರರೊಡನೆ ಸೇರಿ—ಯಾಗ ಸ್ಥಿತಿಯನ್ನು ಕೇಳಿರಿ! ಯಾಗವೊದಗುವುದು ಹೇಗೆ!

ಎಂದು ದುಃಖಿಸುತ್ತ, ಕುದುರೆಯನ್ನು ತರುವ ಬಗೆ ಹೇಗೆ! ಯಜ್ಞವು ಹೇಗೆ ನಡೆಯುವುದು! ನಮ್ಮನ್ನು ಕಷ್ಟಕಾಲಗಳಲ್ಲೆಲ್ಲ ರಕ್ಷಣೆ ಮಾಡಿದ ಆ ಕೃಷ್ಣನು ದೂರದಲ್ಲಿರುವನು. ನನಗೆ ಹಿತಚಿಂತಕರು ಯಾರು! ಎಲೈ ಗೋಪಾಲನಾದ ಗೋವಿಂದನೇ, ಅಯ್ಯೋ! ನಾನು ಕಷ್ಟಸಮುದ್ರದ ತೆರೆಯಲ್ಲಿ ಮುಳುಗಿಹೋದೆನು. ನನ್ನ ಯಜ್ಞವು ಹೇಗೆ ನೆರವೇರುವುದೆಂಬುದನ್ನು ರಕ್ಷಕನಾದ ನೀನರಿಯೆಯಾ! ಎಲೈ ಕೃಪಾಸಮುದ್ರನಾದ ಕೃಷ್ಣನೇ, ಬಾ! ಲಜ್ಜಾಸಮುದ್ರದಲ್ಲಿ ಮುಳುಗಿದ್ದ ದ್ರೌಪದಿಯನ್ನು ರಕ್ಷಿಸಿದಂತೆ ಈ ಪಾಪದಿಂದ ನಮ್ಮನ್ನು ದಾಟಿಸು. ನನ್ನ ಅದೃಷ್ಟವು ಹೀನವಾದುದು. ನೀನೇ ರಕ್ಷಕನು, ಎಂದು ಹಂಬಲಿಸುತ್ತ, ಮತ್ತೆ ಕೃಷ್ಣಚರಿತ್ರೆಯನ್ನೇ ನೆನೆಯುತ್ತ ಅವನ ಧ್ಯಾನವನ್ನು ಮಾಡುತ್ತಿರುವಷ್ಟರಲ್ಲಿಯೇ, ಸರ್ವವ್ಯಾಪಿಯಾಗಿಯೂ ಲಕ್ಷ್ಮೀಪತಿಯಾಗಿಯೂ ಇರುವ ಕೃಷ್ಣನು ತಾನೇ ಮನೆಯ ಬಾಗಿಲಿಗೆ ಬಂದು, ದೊರೆಗಳನ್ನು ತಕ್ಕ ಕಾಲದಲ್ಲಿ ನೋಡುವುದು ತಿಳಿದವರ ಮತವಾದಕಾರಣ ನಾನು ಬಂದಿರುವ ಸಂಗತಿಯನ್ನು ದೊರೆಗೆ ತಿಳಿಸು, ಎಂದು ದ್ವಾರಪಾಲಕನ ಸಂಗಡ ಹೇಳಲು ಅವನು—ಎಲೈ ಗೋವಿಂದನೇ ನಿನಗೆ ಧರ್ಮರಾಜನ ಬಳಿಯಲ್ಲಿ ಯಾವಾಗಲೂ ಸಮಯವೇ. ಹೀಗೆಂದು ಧರ್ಮನಂದನನು ನನ್ನೊಡನೆ ಹೇಳಿರುವನು. ಪರನಿಂದಕರೂ ಪರದ್ರವ್ಯಾಪಹಾರಿಗಳೂ ಪರಸ್ತ್ರೀಕಾಮುಕರೂ ಆದವರ ಬಳಿಯಲ್ಲಿ ನಿನಗೆ ಅವಕಾಶವು ದೊರೆಯದು. ಧರ್ಮರಾಜನು ಪರದೂಷಕನೂ ಅಲ್ಲ, ಪರದ್ರವ್ಯಾಪಹಾರಕನೂ ಅಲ್ಲ, ಕಾಮುಕನೂ ಅಲ್ಲ. ಆದಕಾರಣ ನೀನು ಸಮಯವನ್ನು ಕಾಯಬೇಕಾದುದಿಲ್ಲ. ಈಗಲೇ ಹೋಗಿ ಆತನನ್ನು ನೋಡಿ ಅವನ ಇಷ್ಟಾರ್ಥಸಿದ್ಧಿಯನ್ನುಂಟುಮಾಡು. ಆತನು ಭೀಮಾರ್ಜುನರೊಡನೆ ಕೂಡಿ ನಿನ್ನನ್ನೇ ಚಿಂತಿಸುತ್ತಿರುವನು. ಅವನ ಇಚ್ಛಾಪೂರ್ತಿ ಮಾಡು ಎಂದನು.

ಅದನ್ನು ಕೇಳಿ ಕೃಷ್ಣನು — ನೀನು ನನ್ನ ಆಜ್ಞೆಯ ಪ್ರಕಾರ ಬೇಗನೆ ದೊರೆಯ ಬಳಿಗೆ ಹೋಗು ಎಂದು ಹೇಳಲು, ದ್ವಾರಪಾಲಕನು ಕೂಡಲೆ ಧರ್ಮರಾಜನ ಬಳಿಗೆ ಹೋಗಿ ನಗುತ್ತ, ಕೃಷ್ಣನು ಅರಮನೆಯ ಬಾಗಿಲಲ್ಲಿ ಬಂದು ನಿಂತು ನಿನ್ನ ಸಮಯವನ್ನು ತಿಳಿಯಲಪೇಕ್ಷಿಸುತ್ತಿರುವನು, ಎಂದನು. ಅದನ್ನು ಕೇಳಿ ಧರ್ಮರಾಜನು ತ್ವರೆಯಿಂದ ಎದ್ದು ಭೀಮನನ್ನು ಕುರಿತು—ಎಲೈ ಭೀಮಸೇನನೇ ನನ್ನ ಮೇಲಿನ ಪ್ರೀತಿಯಿಂದಲೋ ಯಜ್ಞನಿರ್ವಾಹಕನಾಗಿಯೋ, ಈ ಅರ್ಧರಾತ್ರಿಯಲ್ಲಿಯೇ ಕೃಷ್ಣನು ಬಂದಿರುವುದಾಗಿ ಪ್ರತೀಹಾರನು ತಿಳಿಸುವನು. ನೀನೂ ನನ್ನೊಡನೆ ಬಾ, ಆತನ ಬಳಿಗೆ ಹೋಗೋಣ ಎಂದು ಹೇಳಿ, ಸಹೋದರೊಡನೆ ಆತನ ಬಳಿಗೆ ಹೊರಟನು. ಕೃಷ್ಣನು ಧರ್ಮರಾಜನನ್ನು ನೋಡಿ ಆತನಿಗೆ ನಮಸ್ಕರಿಸಿದನು. ಧರ್ಮಜನು ಶ್ರೀಕೃಷ್ಣನನ್ನು ಕೈಯಿಂದ ಹಿಡಿದು ಎತ್ತಿ ತಲೆಯನ್ನು ಆಘ್ರಾಣಿಸಿ ಆತನನ್ನಾಲಿಂಗಿಸಿ ಆತನ ತಲೆಯ ಮೇಲೆ ಕಣ್ಣೀರನ್ನು ಸುರಿಸುತ್ತಿರಲು ಇಬ್ಬರೂ ಪರಸ್ಪರಾಲಿಂಗನಗಳನ್ನು ಮಾಡಿದರು. ಭೀಮಾ

ರ್ಜುನ ನಕುಲ ಸಹದೇವರು ಶ್ರೀಕೃಷ್ಣನ ಪಾದಗಳಿಗೆ ಅಡ್ಡಬಿದ್ದರು. ಬಳಿಕ ಪಾಂಡವರು ಶ್ರೀಕೃಷ್ಣನನ್ನು ಅರ್ಘ್ಯಾದಿಗಳಿಂದ ಸತ್ಕರಿಸಿ ಆಶ್ಚರ್ಯದಿಂದಿರಲು ದ್ರೌಪದಿಯು ಬಂದು ನಮಸ್ಕಾರಮಾಡಿ, ಪತಿಗಳನ್ನು ಕುರಿತು—ಎಲೈ ವೀರರೇ! ಶ್ರೀಕೃಷ್ಣನನ್ನು ನೋಡಿ ನೀವೆಲ್ಲರೂ ಏಕೆ ವಿಸ್ಮಯಪಡುತ್ತಿರುವಿರಿ! ಹಿಂದೆ ದೂರ್ವಾಸ ಮುನಿಯಿಂದ ಭಯವೊದಗಿದ್ದಾಗ ಅರ್ಧರಾತ್ರಿಯಲ್ಲಿ ಶ್ರೀಕೃಷ್ಣನು ರಕ್ಷಣಾರ್ಥವಾಗಿ ನಿಮ್ಮ ಬಳಿಗೆ ಬಂದನು. ತಂದೆ ತಾಯಿಗಳೂ ಬಂಧುಗಳೂ ಪತಿಗಳೂ ದ್ರೋಣ ಭೀಷ್ಮರೂ ಯಾರೂ ನನ್ನನ್ನು ರಕ್ಷಿಸಲಾರದೆ ಹೋದಾಗ ಸಭಾ ಮಧ್ಯದಲ್ಲಿ ನಿಮ್ಮೆದುರಿಗೆ ಭಕ್ತ ರಕ್ಷಕನಾದ ಈತನು ವಸ್ತ್ರರೂಪನಾಗಿ ಬಂದು ನನ್ನನ್ನು ರಕ್ಷಿಸಿದನು. ಯಾವಾಗಲೂ ಇವನ ಆಗಮನವು ಭಕ್ತ ರಕ್ಷಣಾರ್ಥವಾಗಿಯೇ ಅಲ್ಲವೇ! ನಾವು ವನವಾಸ ಮಾಡುತ್ತಿರುವಾಗ ದೂರ್ವಾಸ ಮುನಿಯು ದುರ್ಯೋಧನನಿಂದ ಪ್ರೇರಿತನಾಗಿ ಹತ್ತುಸಾವಿರ ಮಂದಿ ಶಿಷ್ಯರೊಡನೆ ಬರಲು, ಆಗ ನಾನು ಮನಸ್ಸಿನಲ್ಲಿ ಧ್ಯಾನಿಸಿದ ಮಾತ್ರಕ್ಕೆ ಕೃಪಾ ಸಮುದ್ರನಾದ ಈ ಭಗವಂತನು ಲಕ್ಷ್ಮಿಯನ್ನು ತನ್ನ ತೊಡೆಯಿಂದಿಳಿಸಿ ಕೂಡಲೆ ವಾಯು ವೇಗದಿಂದ ಬಂದು ಅಕ್ಷಯ ಪಾತ್ರೆಯಲ್ಲಿ ಹತ್ತಿಕೊಂಡಿದ್ದ ಪಾಕ ಶೇಷವಾದ ಒಂದು ಎಲೆಯನ್ನು ಭುಜಿಸಿ ಅಷ್ಟಕ್ಕೆ ತೃಪ್ತನಾದ ಕೂಡಲೆ ಆ ಮುನಿಗಳೆಲ್ಲರೂ ತೃಪ್ತಿಯನ್ನು ಹೊಂದಿದರು. ಆಗ ಹಾಗೆ ನಮ್ಮನ್ನು ರಕ್ಷಿಸಿದನು. ಲೋಕದಲ್ಲಿ ಯಾವಾಗ ದುಃಖ ಪ್ರಾಪ್ತವಾಗುವುದೋ ಆಗ ನೆನೆದ ಮಾತ್ರಕ್ಕೆ ಬಂದು ರಕ್ಷಿಸುವನು, ಎಂದು ಸ್ತುತಿಸಿದಳು.

ಅದಕ್ಕೆ ಶ್ರೀಕೃಷ್ಣನು ಸಂತುಷ್ಟನಾಗಿ ಕುಳಿತುಕೊಳ್ಳಲು, ಧರ್ಮರಾಜನು ಶ್ರೀಕೃಷ್ಣನನ್ನು ನೋಡಿ—ಎಲೈ ಜನಾರ್ದನನೇ, ನಾನು ಕ್ಲೇಶಕ್ಕೊಳಗಾಗಿ.ಈಗ ತಾನೇ ನಿನ್ನನ್ನು ಧ್ಯಾನಿಸಿದೆನು. ಇನ್ನು ನನ್ನ ಕಾರ್ಯವು ಸಫಲವಾಗುವುದು. ನನಗೆ ಅಶ್ವಮೇಧವನ್ನು ಮಾಡಬೇಕೆಂಬ ಕುತೂಹಲವುಂಟಾಗಿದೆ. ನಾನು ಈ ಯಜ್ಞವನ್ನು ಮಾಡಲು ಸಮರ್ಥನಾಗುತ್ತೇನೆಯೇ? ಇದಕ್ಕಾಗಿ ನಿನ್ನ ಹಿತ ವಚನವನ್ನು ಹೇಳು ಎಂದನು. ಅದನ್ನು ಕೇಳಿ ಕೃಷ್ಣನು—ಎಲೈ ಧರ್ಮನಂದನನೇ ನಿನ್ನಿಂದ ಈ ಯಜ್ಞವನ್ನು ಮಾಡುವುದು ಸಾಧ್ಯವಲ್ಲ. ಈ ಲೋಕದಲ್ಲಿ ಶೂರರಾಗಿ ಯೋಗಿಗಳಂತೆ ತಪಿಸುತ್ತಿರುವವರಿಗೆ ಇದು ಸಾಧ್ಯವು. ನೀನು ಭೀಮನ ಆಲೋಚನೆಯಿಂದ ಈ ಕಾರ್ಯಕ್ಕೆ ಮನಸ್ಸು ಮಾಡಿದ್ದೀಯೆ. ತಿಂಡಿಪೋತನಾದ ಈ ಭೀಮನಿಗೆ ಬುದ್ಧಿಯಿಲ್ಲ. ಮಂತ್ರಾಲೋಚನೆಯು ಅವನಿಗೆ ತಿಳಿಯದು. ಅವನು ದೊಡ್ಡ ಹೊಟ್ಟೆಯುಳ್ಳ ಜಡನಾಗಿರುವನು. ವಿಕಾರ ಸ್ವರೂಪಳಾದ ರಾಕ್ಷಸಿಯು ಇವನಿಗೆ ಹೆಂಡತಿಯಾಗಿ ಇವನ ಮನೆಯಲ್ಲಿ ಯಾವಾಗಲೂ ಇರುವಳು. ಇವನು ಅವಳಿಂದ ಮೋಹಿತನಾಗಿರುವುದರಿಂದ ಯಾವುದನ್ನೂ ಅರಿಯನು. ಇಂತಹ ಅಲ್ಪ ಬುದ್ಧಿಯುಳ್ಳವನೊಡನೆ ನೀನು ಆಲೋಚನೆಯನ್ನು ಮಾಡಿದರೆ ಈ ವೃಕೋದರನ ಮಂತ್ರಿತ್ವದಲ್ಲಿ ನಿನ್ನ ಯಾಗವು ಆದಹಾಗೆಯೇ ಸರಿ! ದೊಡ್ಡ ಅಂಗವುಳ್ಳ

ವರು, ಅಂಗಹೀನರು, ಕಿವುಡರು, ದುಷ್ಟಯೋನಿ ಸಂಬಂಧವುಳ್ಳವರು ಇಂತಹವ ರೊಡನೆ ಮಾಡುವ ಮಂತ್ರಿತ್ವವು ಸುಖಕರವಲ್ಲವೆಂದು ಕವಿಗಳು ಹೇಳಿದ್ದಾರೆ. ಕಾಮುಕರು, ಜಡರು, ಸ್ತ್ರೀ ವ್ಯಾಮೋಹಕ್ಕೊಳಗಾದವರು, ಯಾವಾಗಲೂ ಮಾವನ ಮನೆಯಲ್ಲಿ ಕೆಲಸ ಮಾಡಿಕೊಂಡಿರುವ ಅಳಿಯ ಇವರೊಡನೆ ಮಾಡಿದ ಮಂತ್ರಿತ್ವದಿಂದ ಕಾರ್ಯಸಿದ್ಧಿಯಾಗುವುದಿಲ್ಲ. ಭೀಮನು ಜರಾಸಂಧ, ಹಿಡಿಂಬ, ಬಕ ಇವರನ್ನು ಜಯಿಸಿದನು. ಈಗ ಇರುವ ಬಲಿಷ್ಠರೂ ಧರ್ಮಾತ್ಮರೂ ದಾನ ಶೂರರೂ ಪರಾಕ್ರಮಿಗಳೂ ಜಿತೇಂದ್ರಿಯರೂ ಆದ ರಾಜರನ್ನು ಇವನು ಕಾಣನು. ರಾಜಸೂಯ ಕಾಲದಲ್ಲಿ ಇವನು ನೋಡದ ಮಹಾ ಬಲ ದರ್ಪಿತರಾದ ರಾಜರು ಬಹುಮಂದಿ ಈಗ ಇರುವರು. ಅರ್ಜುನನು ನನ್ನೊಡನೆ ಆಲೋಚನೆ ಮಾಡದೆ ಜಯದ್ರಥ ವಧೆಗಾಗಿ ಪ್ರತಿಜ್ಞೆ ಮಾಡಿದುದು ಬಹು ಸಾಹಸ ಕಾರ್ಯವು. ಭೀಮಸೇನನ ಬೆಂಬಲದಿಂದ ನೀನು ಹೇಗೆ ಯಜ್ಞವನ್ನು ಸಾಂಗವಾಗಿ ಪೂರಯಿ ಸುವೆ? ಇದೂ ಸಾಹಸ ಕಾರ್ಯವೇ ಸರಿ. ನಾನಾ ದಿಕ್ಕುಗಳಿಗೂ ಹೋಗುವ ಕುದುರೆ ಯನ್ನು ರಕ್ಷಿಸುವುದು ಹೇಗೆ? ದೇವ ಗಂಧರ್ವ ಮನುಷ್ಯರಲ್ಲಿ ಯಾರು ಕುದುರೆ ಯನ್ನು ಕಟ್ಟುವ ವೀರರಿರುವರೋ ಅವರನ್ನೆಲ್ಲ ಜಯಿಸಬೇಕಾಗುವುದು. ಯಜ್ಞ ದೀಕ್ಷಿತನು ದುಷ್ಕರವಾದ ಅಸಿಪತ್ರ ವ್ರತವನ್ನು ಕೈಕೊಳ್ಳಬೇಕು. ಪೂರ್ವದಲ್ಲಿ ಶ್ರೀರಾಮನು ಯಜ್ಞಾಶ್ವ ರಕ್ಷಣೆಗಾಗಿ ಶೂರನಾದ ಭರತನನ್ನು ನಿಯಮಿಸಿರಲು ಶಕ್ತಿಮತೀ ಪುರದರಸನಾದ ಸುರಥನೆಂಬ ಶೂರನು ಭರತ ನನ್ನೂ ಕುದುರೆಯನ್ನೂ ಸೆರೆಹಾಕಿಕೊಂಡನು. ಬಳಿಕ ಶ್ರೀರಾಮನೇ ಹೋಗಿ ಬಿಡಿಸಿದನು. ನನ್ನ ಮಿತ್ರನಾದ ಅರ್ಜುನನು ಅಶ್ವ ರಕ್ಷಣೆಗಾಗಿ ಹೋಗ ಬಹುದು. ಇಲ್ಲಿ ನಿನ್ನನ್ನು ರಕ್ಷಿಸುವವರು ಯಾರು? ಶೂರರು ಯಾರಾದರೂ ಅಶ್ವವನ್ನೂ ಅರ್ಜುನನನ್ನೂ ಹಿಡಿದುಕೊಂಡರೆ ಬಿಡಿಸುವವರು ಯಾರು? ನನಗೆ ಇದು ಬಹು ಸಂದೇಹವಾಗಿದೆ, ಎಂದು ಹೇಳಿದನು.

ಇಂತು ಶ್ರೀಕೃಷ್ಣೋಕ್ತಿ ಶ್ರವಣವೆಂಬ ಎರಡನೆಯ ಅಧ್ಯಾಯವು.

ಮೂರನೆಯ ಅಧ್ಯಾಯ

ಭೀಮನು ಶ್ರೀಕೃಷ್ಣನ ವಾಕ್ಯವನ್ನು ಕೇಳಿ ನಸುನಗುತ್ತ ಮೇಘ ಗಂಭೀರ ಧ್ವನಿಯಿಂದ ಇಂತೆಂದನು—ಎಲೈ ಕೃಷ್ಣನೇ, ಶೂರರಿಂದ ಶೋಭಿಸುತ್ತಿರುವ ಈ ರಮ್ಯವಾದ ಕಾಲವೇ ಶ್ಲಾಘ್ಯವಾದುದು. ಈ ಯಜ್ಞವು ಧರ್ಮರಾಜ ನಿಂದಲೇ ಮಾಡುವುದಕ್ಕೆ ಶಕ್ಯವಾದುದು. ನಿನ್ನನ್ನು ನೆನೆದು ಈ ಕಾರ್ಯಕ್ಕೆ ನಾನು ಮಾತು ಕೊಟ್ಟಿರುವೆನು. ದೊಡ್ಡ ಹೊಟ್ಟೆಯುಳ್ಳವನು ಬುದ್ಧಿ ಹೀನನು, ತಿಂಡಿಪೋತನು ಅಲ್ಪಬುದ್ಧಿಯುಳ್ಳವನು, ಎಂದು ನೀನು ಹೇಳಿದುದು ಸತ್ಯ ವಾದುದು. ಇವೆಲ್ಲವೂ ನಿನ್ನ ದೇಹದಲ್ಲಿರುವುದೆಂಬುದನ್ನು ನಾನೇ ಕಂಡಿದ್ದೇನೆ. ನಿನ್ನ ಹೊಟ್ಟೆಯಲ್ಲಿ ಚರಾಚರಾತ್ಮಕವಾದ ಪ್ರಪಂಚವು ಅಡಗಿರುವುದು. ಇನ್ನು

ನಿನಗಿಂತಲೂ ದೊಡ್ಡ ಹೊಟ್ಟೆಯುಳ್ಳವನಾರು! ಬ್ರಹ್ಮಾದಿ ದೇವತೆಗಳನ್ನೂ ಎಲ್ಲ ಸಾಗರಗಳನ್ನೂ ನದಿಗಳನ್ನೂ ಸರ್ವಾಧಾರವಾದ ದಿಕ್ಕುಗಳನ್ನೂ ನೀನು ನುಂಗುವುದಿಲ್ಲವೇ! ನಿನಗಿಂತಲೂ ಹೆಚ್ಚು ತಿಂಡಿಯನ್ನು ತಿನ್ನುವವನು ಯಾರು! ನಿನಗಿಂತಲೂ ದೊಡ್ಡ ಹೊಟ್ಟೆಯುಳ್ಳವನು ಹಿಂದೆ ಯಾವನೂ ಹುಟ್ಟಲಿಲ್ಲ, ಮುಂದೆ ಯಾರೂ ಹುಟ್ಟರು. ಅಂತಹ ನೀನು ನನ್ನ ಹೊಟ್ಟೆಯನ್ನೂ ಭೋಜನವನ್ನೂ ಪ್ರಶಂಸಿಸುತ್ತ ನಾಚಿಕೆಯಿಲ್ಲದೆ ನನ್ನೊಡನೆ ಸುಳ್ಳು ಮಾತನ್ನಾಡುವೆ. ಕೇಶವನು ಬಹು ಗುಣಜ್ಞನಷ್ಟೆ, ತಾನು ರುಕ್ಮಿಣಿಯನ್ನು ಮದುವೆಮಾಡಿಕೊಂಡಿದ್ದರೂ ವಾನರಿಯಾದ ಜಾಂಬವತಿಯನ್ನು ಹೆಂಡತಿಯನ್ನಾಗಿ ಮಾಡಿಕೊಳ್ಳುವವನು ಮಾಧವನನ್ನುಳಿದು ಮತ್ತೆ ಯಾರಾದರೂ ಇರುವರೇ! ವರಾಹ ಮತ್ಸ್ಯ ಕೂರ್ಮಾದಿ ತಿರ್ಯಗ್ಯೋನಿಗಳಲ್ಲಿ ಅವತಾರ ಮಾಡುವುದು ನಿನಗೆ ಇಷ್ಟವಾದುದು. ಪೂರ್ವದಲ್ಲಿ ವಾಮನನಾಗಿ ಹುಟ್ಟಿದುದರಿಂದ ನೀನು ಹೀಗೆ ವಕ್ರವಾಗಿ ಮಾತನಾಡುತ್ತೀಯೆ. ನಾಚಿಕೆಗೇಡಾದ ಮನ್ಮಥನು ನಿನಗೆ ಮಗನೆನಿಸಿಕೊಂಡನು. ದೇವಲೋಕದಲ್ಲಿದ್ದ ಪಾರಿಜಾತವೃಕ್ಷವನ್ನು ಸ್ತ್ರೀನಿಮಿತ್ತದಿಂದ ಕಿತ್ತು ಭೂಲೋಕಕ್ಕೆ ತಂದ ನಿನಗಿಂತಲೂ ಸ್ತ್ರೀಜಿತನಾದವನು ದೇವತೆಗಳಲ್ಲಿ ಮತ್ತಾವನುಂಟು! ನಿನ್ನ ವಾಸವು ಸರ್ವದಾ ನಿಮ್ಮ ಮಾವನ ಮನೆಯಾದ ಕ್ಷೀರಸಮುದ್ರದಲ್ಲಿಯೇ ಅಲ್ಲವೇ! ಇಂತಹ ಉತ್ತಮ ಗುಣಗಳು ನಿನ್ನಲ್ಲಿ ಇನ್ನೂ ಅನೇಕವಾಗಿವೆ. ಅವುಗಳನ್ನು ಏಕೆ ಹೇಳಬೇಕು! ಇಷ್ಟು ಸಾಕು. ದೊರೆಯನ್ನು ಹೆದರಿಸಿ ಏಕೆ ಯುದ್ಧವನ್ನು ದೂಡಿಸುವೆ. ನಾನು ಪೂರ್ವದಲ್ಲಿ ನಿನ್ನ ಸಹಾಯದಿಂದ ಹೇಗೆ ಜರಾಸಂಧ ಮೊದಲಾದ ಕ್ಷತ್ರಿಯರನ್ನು ಸಂಹರಿಸಿದೆನೋ ಹಾಗೆಯೇ ಈಗಲೂ ಶತ್ರುಗಳನ್ನು ಗೆಲ್ಲುವೆನು. ಭೂಮಿಯನ್ನು ತೋಳುಗಳಿಂದ ಬಿಡಿಸಿತ್ತುವೆನು. ಪರ್ವತಗಳೆಲ್ಲವನ್ನೂ ಕಿತ್ತೀಡಾಡುವೆನು. ಅಶ್ವಮೇಧವನ್ನು ಮಾಡಿಸುವೆನು. ದೊರೆಯ ಆಲೋಚನೆಯು ತಪ್ಪದೆ ನೆರವೇರಲಿ. ಎಲೈ ದೇವಕೀನಂದನನೇ—ನಾವು, ನಮ್ಮ ಕೃಷ್ಣನು ಬರುವನು, ನಮ್ಮ ಇಷ್ಟವನ್ನು ಸಲಿಸುವನು, ಎಂದು ಚಿಂತಿಸುತ್ತಿದ್ದೆವು. ನೀನು ಬಂದು ಅದಕ್ಕೆ ವಿರೋಧವಾಗಿ ಮಾತಬಹುದೇ! ನಿನ್ನ ಆಶ್ರಯವು ನಮಗೆ ಸಫಲವಾಗಿ ಪರಿಣಮಿಸಲಿ. ಬಹು ಕಾಲ ಬಾಯಾರಿಕೆಯ ಬಾಧೆಯನ್ನು ತಡೆದು ಯಾವಾಗ ಮೇಘೋದಯವಾಗುವುದೋ ಎಂದು ಕೊರಲನ್ನು ಮೇಲಕ್ಕೆತ್ತಿಕೊಂಡು ನಿರೀಕ್ಷಿಸುತ್ತಿರುವ ಚಾತಕ ಪಕ್ಷಿಯ ಕೊರಳ ಮೇಲೆ ಮೇಘವು ಅಗ್ನಿವೃಷ್ಟಿಯನ್ನು ಸುರಿಸಿದರೆ ಆಗ ಅದು ಏನು ಮಾಡಬಲ್ಲದು! ಕೆಸರಿನಲ್ಲಿ ಸಿಕ್ಕಿಬಿದ್ದಿರುವ ಗೋವು ತನ್ನನ್ನು ಎತ್ತಿ ರಕ್ಷಿಸುವ ನಾಥನು ಬಂದನೆಂದು ಸಂತೋಷಪಡುತ್ತಿರುವಷ್ಟರಲ್ಲಿ ಆತನು ಅದನ್ನು ಕೆಸರಿನಲ್ಲಿ ಮುಳುಗಿಸಿಬಿಟ್ಟರೆ ಆಗ ಅದು ಏನು ಮಾಡುವುದು! ಯಾರೊಡನೆ ಹೇಳಿಕೊಳ್ಳುವುದು! ನಿನ್ನನ್ನು ಆಶ್ರಯಿಸಿರುವ ನಮ್ಮ ಅವಸ್ಥೆಯೂ ಹಾಗೆಯೇ ಕಾಣುತ್ತದೆ, ಎಂದು ಹೇಳಿದನು.

ಭೀಮನ ಮಾತನ್ನು ಕೇಳಿ ಶ್ರೀಕೃಷ್ಣನು ಬಹಳವಾಗಿ ಸಂತೋಷಪಟ್ಟು ಆತ್ಮೀಯತೆಯನ್ನುಂಟುಮಾಡುತ್ತ ಭೀಮನನ್ನು ಕುರಿತು—ಎಲೈ ಭೀಮಸೇನನೇ ನಿನಗೆ ಮಂಗಳವಾಗಲಿ. ನಿನ್ನ ಮಾತಿನಿಂದ ನನ್ನ ಮನಸ್ಸು ಸಂತುಷ್ಟವಾಯಿತು. ನನ್ನನ್ನಾಲಿಂಗಿಸು. ಈ ದೊರೆಯು ಏತಕ್ಕಾಗಿ ಹೀಗೆ ಹೆದರಿ ಅಶ್ವಮೇಧವನ್ನು ಮಾಡಲೆಳಸುವನು? ಕೌರವರನ್ನೂ ಭೀಷ್ಮ ದ್ರೋಣ ಕರ್ಣಾದಿಗಳನ್ನೂ ಮಿತ್ರ ಬಾಂಧವರನ್ನೂ ತಾನು ಯುದ್ಧದಲ್ಲಿ ಕೊಂದ ಪಾಪವು ತನಗೆ ಸಂಘಟಿಸೆಯಾವೆಂದು ತಿಳಿದಿದ್ದರೆ ಆ ಪಾಪವನ್ನೆಲ್ಲ ನನ್ನ ಕೈಯಲ್ಲಿರಿಸಲಿ. ಅದನ್ನೆಲ್ಲ ನಾನು ನಾಶಮಾಡುವೆನು. ಅವನು ಶುದ್ಧನಾಗಲಿ, ಎಂದನು. ಭೀಮನು ಆ ಮಾತನ್ನು ಕೇಳಿ ಶ್ರೀಕೃಷ್ಣನೇ, ನಿನ್ನ ಕೈಯಲ್ಲಿ ಕೊಟ್ಟ ವಸ್ತುವು ಅತ್ಯಲ್ಪವಾಗಿದ್ದರೂ ಮಹತ್ತರವಾಗುವುದೆಂದು ಹೇಳಿ ದೊರೆಯು ತನ್ನ ಪಾಪವನ್ನು ನಿನ್ನ ಕೈಗೆ ಕೊಡನು. ಯಜ್ಞದಿಂದ ಬಂದ ಪುಣ್ಯವನ್ನು ನಿನಗೆ ಅರ್ಪಿಸುವನು. ನಾನು ಕುದುರೆಗಾಗಿ ಭದ್ರಾವತಿಗೆ ಹೋಗುತ್ತೇನೆ. ನಾನು ಬರುವವರೆಗೂ ದೊರೆಯ ರಕ್ಷಣೆಯು ನಿನ್ನದು. ದೊರೆಯು ಸುರಕ್ಷಿತನಾಗಿದ್ದರೆ ಎಲ್ಲ ಇಷ್ಟಾರ್ಥ ಸಿದ್ಧಿಯೂ ಆಗುವುದು. ಧರ್ಮವೂ ಉಂಟಾಗುವುದು. ಇದು ಸತ್ಯವು. ಪ್ರಾಣಿಗಳು ಪುಣ್ಯವಿಲ್ಲದಿದ್ದರೆ ಪ್ರಾಶಸ್ತ್ಯವನ್ನು ಪಡೆಯವು. ಎಲೈ ದೇವಕೀ ನಂದನಾ, ನಮ್ಮ ಸತ್ಕರ್ಮದಿಂದ ಬರುವ ಪುಣ್ಯವೆಲ್ಲವನ್ನೂ ನಮ್ಮ ಕೈಯಿಂದ ನೀನೇ ತೆಗೆದುಕೋ. ನಾನಾಗಲಿ ಧರ್ಮಜನಾಗಲಿ ಫಲಾಕಾಂಕ್ಷೆಯುಳ್ಳವರಲ್ಲ. ಶ್ರೀಹರಿಯನ್ನು ಬಿಟ್ಟು ವೈಕುಂಠಾದಿ ಪುಣ್ಯಲೋಕಗಳು ನಮಗೆ ಇಷ್ಟವೂ ಸುಖಪ್ರದವೂ ಆಗಲಾರವು. ಆದಕಾರಣ ಸರ್ವದಾ ನಿನ್ನ ಸಹವಾಸವೇ ನಮಗಿರಲಿ, ಎಂದು ಹೇಳಿದನು. ಬಳಿಕ ಯುಧಿಷ್ಠಿರನು ಹರ್ಷಗೊಂಡು ಶ್ರೀಕೃಷ್ಣನೊಡನೆ ಭೋಜನಮಾಡಿ ಮನೆಯಲ್ಲಿ ಸುಖದಿಂದ ನಿದ್ರಿಸಿದನು.

ಬೆಳಗಾಗುತ್ತಲೆ ಭೀಮನೂ ವೃಷಕೇತುವೂ ಮೇಘವರ್ಣನೂ ಕುಂತಿಗೂ ಧರ್ಮರಾಜನಿಗೂ ಕೃಷ್ಣನಿಗೂ ಉಳಿದವರಿಗೂ ನಮಸ್ಕರಿಸಿ ಸಂತೋಷದಿಂದ ಪ್ರಯಾಣಮಾಡಿದರು. ಭೀಮನಿಗೆ ಕುಂತೀದೇವಿಯು ಭಕ್ಷ್ಯಗಳನ್ನು ಬುತ್ತಿ ಕಟ್ಟಿ ಕೊಟ್ಟಳು. ತಾಯಿಯು ಕೈಮುಟ್ಟಿ ಕೊಟ್ಟರಲ್ಲದೆ ಮತ್ತಾರ್ಯಾರ ಕೈಯಿಂದ ತೆಗೆದುಕೊಂಡರೆ ಭೀಮನಿಗೆ ತೃಪ್ತಿಯಾಗಲಾರದಾಗಿ ಆಕೆಯ ಕೈಯಿಂದ ತೆಗೆದುಕೊಂಡು ತಿಂದು ತೃಪ್ತನಾದನು. ಉಳಿದ ಬುತ್ತಿಯನ್ನು ಮೇಘನಾದನ ವಶಕ್ಕೆ ಕೊಟ್ಟು ಅರ್ಜುನನನ್ನು ಆಲಿಂಗಿಸಿ ಭೀಮನು—ಎಲೈ ಪಾರ್ಥನೇ ದೊರೆಯನ್ನು ರಕ್ಷಿಸಿಕೊಂಡಿರು. ಬ್ರಾಹ್ಮಣರನ್ನು ಆದರಿಸು. ಕುದುರೆಯನ್ನು ತೆಗೆದುಕೊಂಡು ಮನೆಗೆ ನಾನು ಬಂದೆನೆಂದೇ ತಿಳಿ. ನಮ್ಮಲ್ಲಿ ಪ್ರಸನ್ನನಾದ ಕೃಷ್ಣನನ್ನು ನೋಡಿ ನನ್ನ ಮನಸ್ಸು ಸಂತುಷ್ಟವಾಗಿದೆ. ನನಗೆ ಸಹಾಯಕರಾಗಿ ಈ ಕಾರ್ಯಕ್ಕೆ ನನ್ನೊಡನೆ ಬರುವ ಇವರಿಬ್ಬರೂ ಸಂತೋಷದಿಂದಿರುವರು. ಶ್ರೀಕೃಷ್ಣನ ಸ್ಮರಣೆಯಿಂದ ಬಾಧೆಗಳೆಲ್ಲವೂ ಪರಿಹಾರವಾಗುವುವು. ಪಾಪವು ಓಡುವಂತೆ ಶತ್ರು

ಗಳು ಪಲಾಯನ ಮಾಡುವರು. ಶ್ರೀಕೃಷ್ಣನ ಅನುಗ್ರಹದಿಂದ ಸೇನಾಸಮೇತನಾದ ಯೌವನಾಶ್ವನು ಕುದುರೆಯೊಡನೆ ಸಿಕ್ಕಿದನೆಂದು ತಿಳಿ. ಈ ವಿಷಯದಲ್ಲಿ ನನಗೆ ಸಂದೇಹವಿಲ್ಲ, ಎಂದು ಹೇಳಿ ಭೀಮನು ವೃಷಕೇತು ಮೇಘವರ್ಣರೊಡನೆ ಭದ್ರಾವತಿಗೆ ಪ್ರಯಾಣಮಾಡಿ ಪೂರ್ವಾಭಿಮುಖವಾಗಿ ಹೊರಟನು. ಎರಡು ದಿನಗಳು ನಡೆದು ದೇಶಗಳನ್ನು ದಾಟಿ ಮೂರನೆಯ ದಿನ ಕೆಲವು ಮಂದಿ ಶೂರರೊಡನೆ ರಮ್ಯವಾದ ಆ ಪಟ್ಟಣವನ್ನು ಸೇರಿದನು.

ಸಾವಿರಾರು ವನಗಳಿಂದಲೂ, ತುಂಬಿದ ಸರೋವರಗಳಿಂದಲೂ ಶೋಭಿಸುತ್ತ ಯೌವನಾಶ್ವನಿಂದ ಪಾಲಿತವಾಗಿರುವ ರಮ್ಯವಾದ ಆ ಭದ್ರಾವತೀಪುರವನ್ನು ಭೀಮನು ಬೆಟ್ಟದ ಮೇಲೆ ನಿಂತು ನೋಡಿದನು. ಯೂಪಸ್ತಂಭಗಳು ಎಡೆಬಿಡದಂತಿದ್ದುವು. ಹೋಮ ಧೂಮವು ಮುಚ್ಚಿಕೊಂಡು ಮಾರ್ಗವು ಕಾಣಿಸದಂತಿದ್ದಿತು. ಧನುಷ್ಟಂಕಾರದಂತೆ ಹೊರಡುತ್ತಿರುವ ಗಂಭೀರವಾದ ವೇದಘೋಷದಿಂದ ಇತರ ಶಬ್ದಗಳು ಹೊರಕ್ಕೆ ಕೇಳಿಸದಂತಿದ್ದುವು. ರಮ್ಯವಾದ ತೋರಣಗಳಿಂದಲೂ ದೇವತಾಯತನಗಳಿಂದಲೂ ಮಂಟಪಗಳಿಂದಲೂ ಮರಗಳಿಂದಲೂ ಕೋಟೆಯ ಪ್ರಾಕಾರದಿಂದಲೂ ಕಂದಕದಿಂದಲೂ ಮೆರೆಯುತ್ತ, ಯಜ್ಞದಿಂದ ಮನೋಹರವಾಗಿರುವ ಆ ಪುರವನ್ನು ನೋಡಿ ಮೂವರೂ ಆನಂದಭರಿತರಾದರು. ಭೀಮನು ಅನೇಕ ಫಲ ಪುಷ್ಪ ವೃಕ್ಷಗಳಿಂದ ರಮ್ಯವಾದ ವನವನ್ನು ನೋಡಿದನು. ಸುಗುಣಗಳ ಭಾರದಿಂದ ನಮ್ರರಾಗಿರುವ ಸಜ್ಜನರಂತೆ ತಮ್ಮ ತಮ್ಮ ಗೊನೆಗಳ ಭಾರದಿಂದ ಬಗ್ಗಿರುವ ಬಾಳೆಯ ಮರಗಳು ಅಲ್ಲಿ ಶೋಭಿಸುತ್ತಿದ್ದುವು. ಸತ್ಪುರುಷರಿಂದ ವಂಶವು ಸರಳವಾಗಿಯೂ ಸುವೃತ್ತವಾಗಿಯೂ ದೀರ್ಘವಾಗಿಯೂ ಪ್ರಕಾಶಿಸುವಂತೆ, ಫಲಭರದಿಂದ ಕೂಡಿದ ತೆಂಗಿನ ಮರಗಳು ಕಂಗೊಳಿಸುತ್ತಿದ್ದುವು. ಅಲ್ಲಿಯ ಅಡಕೆಯ ಮರಗಳು ಫಲಭರಿತಗಳಾಗಿದ್ದು, ಜನಗಳು ಹೇಳಿದಂತೆ ಕೇಳುತ್ತ ಸಕಲ ಕಾರ್ಯಗಳನ್ನೂ ಮಾಡುತ್ತಿದ್ದುವು. ಪರರನ್ನು ತೃಪ್ತಿಗೊಳಿಸುವುದಕ್ಕಾಗಿ ಸರ್ವಾಂಗಗಳಲ್ಲಿಯೂ ಫಲಗಳನ್ನು ಯಾವಾಗಲೂ ಧರಿಸಿರುವ ಹಲಸಿನ ಮರಗಳು ಭೀಮನ ದೃಷ್ಟಿಗೆ ಗೋಚರವಾದುವು. ಸಂಕುಚಿತವಾದ ಫಲಗಳಿಂದಲೇ ಜನರ ಪಾಪ ಪರಿಹಾರಕಗಳಾದ ಸಾವಿರಾರು ಖರ್ಜೂರ ವೃಕ್ಷಗಳೂ, ತುಂಬಿದ ಬೀಜಗಳಿಂದ ಕೂಡಿ ಕೆಂಪಗೆ ಹೊಳೆಯುತ್ತ ಬಿರಿದು, ಗಿಳಿಗಳಿಗೆ ಆಶ್ರಯವಾಗಿರುವ ಹಣ್ಣುಗಳಿಂದ ದಾಳಿಂಬೆಯ ಗಿಡಗಳೂ ಜನಕ್ಕೆ ಹಿತಕರವಾಗಿದ್ದುವು. ಶ್ರೀ ಹರಿಯ ಸದ್ಗುಣಗಳನ್ನು ಸುಜನರು ಸೇವಿಸುವಂತೆ ಮಾವಿನ ಮರಗಳನ್ನು ಕೋಗಿಲೆ, ಸಾರಂಗ, ನವಿಲು ಮೊದಲಾದ ಪಕ್ಷಿಗಳು ಫಲಾಪೇಕ್ಷೆಯಿಂದ ಸೇವಿಸುತ್ತಿದ್ದುವು. ಐದು ಭಾಗವಾಗಿ ಕಾಣುತ್ತಿರುವ ಸಿಪ್ಪೆಯುಳ್ಳ ಕಮರಿಕೆಯ ಹಣ್ಣುಗಳು ಹರಿ ನಾಮಗಳಂತೆ ಬಹು ರುಚಿಯನ್ನುಂಟುಮಾಡುತ್ತಿರುವುವು. ಜಲ ಯಂತ್ರಗಳಿಂದ ಹರಿಯುತ್ತಿರುವ ಸರೋವರದ ನೀರು, ಅತಿಥಿಗಳನ್ನು ಸತ್ಕರಿಸುವವನಂತೆ ಬಗೆ ಬಗೆಯ ವೃಕ್ಷಗಳನ್ನು ತೃಪ್ತಿ

ಗೊಳಿಸುತ್ತಿರುವುದು. ದಾಳಿಂಬೆ, ಕಿತ್ತಿಳೆ, ನಿಂಬೆ, ನೆಲ್ಲಿ, ನೇರಿಳೆ, ಬೇವು, ಕಡಹ, ಬಾದಾಮಿ, ಹುಣಿಸೆ, ಎಲಚಿ ಮೊದಲಾದ ವೃಕ್ಷಗಳನ್ನೂ, ಹೂ ಬಿಟ್ಟಿರುವ ಅಶೋಕ, ಸಂಪಗೆ, ನಾಗಕೇಸರ, ಪುನ್ನಾಗ, ಬಕುಳ, ಪಾದರಿ ಮೊದಲಾದ ಗಿಡಗಳನ್ನೂ, ತುಂಬಿ, ಗಿಳಿ, ನವಿಲು, ಸಾರಿಕೆ ಮೊದಲಾದವು ಧ್ವನಿಮಾಡುತ್ತ ಕುಳಿತಿರುವ ಚಿನ್ನದ ಕೇದಗೆ, ಜಾಜಿ, ಶತಪತ್ರಿ, ಸುಪತ್ರಿ, ಕರ್ಣಿಕೆ ಮೊದಲಾದ ಹೂಗಿಡಗಳನ್ನೂ ನೋಡಿ, ಭೀಮನು ಸುವಾಸನೆಯುಳ್ಳ ಆ ಹೂಗಿಡಗಳಿಂದ ಸಂತೋಷಭರಿತನಾದನು. ಆ ಮಹಾ ವನವನ್ನೂ ರಮ್ಯವಾದ ಆ ನಗರವನ್ನೂ ರತ್ನಗಳಿಂದಲೂ ಬೆಳ್ಳಿಯ ಕಲ್ಲುಗಳಿಂದಲೂ ಕಟ್ಟಿದುದಾಗಿಯೂ, ಅನೇಕ ಜಲಚರಗಳಿಗೆ ಆಶ್ರಯವಾಗಿಯೂ, ಶೀತ ಜಲವುಳ್ಳುದಾಗಿಯೂ, ಶ್ರೀ ಹರಿಯ ಮನಸ್ಸಿನಂತೆ ನಿರ್ಮಲವಾಗಿಯೂ ಇರುವ, ಯಜ್ಞದ ಕುದುರೆಗೆ ನೀರನ್ನು ಕುಡಿಸುವ ದಿವ್ಯವಾದ ಸರೋವರವನ್ನೂ ವೀರನಾದ ವೃಷಕೇತುವಿಗೆ ತೋರಿಸಿ, ಎಲೈ ವೃಷಕೇತುವೇ—ಈಗ ನಾನು ಏನು ಮಾಡಲಿ. ಮಧ್ಯಾಹ್ನ ದಲ್ಲಿ ನೀರನ್ನು ಕುಡಿಯುವುದಕ್ಕಾಗಿ ಕುದುರೆಯು ಇಲ್ಲಿಗೆ ಬರುವುದು. ಬಲಿಷ್ಠ ರಾಗಿಯೂ ಯುದ್ಧದಲ್ಲಿ ಗಟ್ಟಿಗರಾಗಿಯೂ ಇರುವ ಯೋಧರು ಸುತ್ತಲೂ ಕಾವಲಿರುವರು. ಕೃಪಣನು ಧನವನ್ನು ಬಿಡದಂತೆ ಅವರು ಕುದುರೆಯನ್ನು ಬಿಡರು. ಕುದುರೆಯು ಇಲ್ಲಿಗೆ ಬರುವವರೆಗೂ ನಾವು ಮೂವರೂ ಗಿಡ ಬಳ್ಳಿ ಗಳಿಂದ ಮರೆಯಾಗಿರುವ ಈ ಪರ್ವತದಲ್ಲಿರೋಣ. ಕುದುರೆಯನ್ನು ಅವರು ಹೇಗೆ ಕಾದಿದ್ದರೂ ನಾವು ಅದನ್ನು ಗ್ರಹಿಸುವುದರಲ್ಲಿ ಸಂದೇಹವಿಲ್ಲ. ನಾನು ಮೊದಲು ಹೋಗಿ ಮಧ್ಯೇ ನಿಂತು ಯುದ್ಧಕ್ಕೆ ಆರಂಭಿಸುವೆನು. ನನ್ನ ಬೆಂಗಾ ವಲಿಗೆ ನೀವಿಬ್ಬರೂ ಇರಿ. ಈ ಆಲೋಚನೆಯೇ ಸುಖಕರವಾಗಿಯೂ ಕೀರ್ತಿ ಪ್ರದವಾಗಿಯೂ ಇರುವುದು, ಎಂದು ಹೇಳಿದನು.

ಇಂತು ಭೀಮ ವಾಕ್ಯನೆಂಬ ಮೂರನೆಯ ಅಧ್ಯಾಯವು.

ನಾಲ್ಕನೆಯ ಅಧ್ಯಾಯ

ವೃಷಕೇತುವು ಭೀಮನ ಮಾತನ್ನು ಕೇಳಿ—ಈ ಯೌವನಾಶ್ವನಿಗೆ ಹತ್ತು ಅಕ್ಷೋಹಿಣೀ ಸೈನ್ಯವಿರುವುದೆಂದು ತಿಳಿಯಬರುತ್ತದೆ. ಅವರಲ್ಲಿ ಕೆಲವರು ಅಶ್ವರಕ್ಷಾರ್ಥವಾಗಿ ಬರುವರು. ನಿನ್ನ ಬಾಹು ಬಲದಿಂದ ಅವರೆಲ್ಲರೂ ಯುದ್ಧದಲ್ಲಿ ನಾಶವಾಗುವರು. ಎಲೈ ಭೀಮನೇ, ಗಂಗಾನದಿಯ ದಡಕ್ಕೆ ಬಂದ ಜನರ ಪಾಪ ಸಮೂಹದಂತೆ ನಿನ್ನ ಶತ್ರುಗಳು ನಾಶವನ್ನು ಪಡೆಯುವರು. ಕಾಲಕೂಟವೆಂಬ ವಿಷವು ಶಿವನೆದುರಿಗೆ ಬರುವವರೆಗೂ ತಾಪಕರವಾಗಿಯೂ ಕ್ರೂರವಾಗಿಯೂ ಇರುವುದಲ್ಲದೆ ಬಂದಮೇಲೆ ತಾಪಕರವಾಗಲಾರದು. ಕಾಮುಕರಾದ ಪ್ರಾಣಿ ಗಳು ಬ್ರಹ್ಮ ವಸ್ತು ವಿಚಾರವಿಲ್ಲದಿರುವಾಗ ವಿಷಯ ಬದ್ಧರಾಗುವರಲ್ಲದೆ ಬಳಿಕ

ಹಾಗೆ ಬದ್ಧರಾಗರು. ವಾಸುದೇವನ ಸ್ಮರಣೆಯು ಎಲ್ಲಿಯವರೆಗೂ ರುಚಿಸುವುದಿಲ್ಲವೊ ಅಲ್ಲಿಯವರೆಗೆ ಪ್ರಾಣಿಗಳಿಗೆ ಜನನ ಮರಣಗಳುಂಟಾಗುವುವು. ಪಿತೃಗಳು ಬಂಧದಲ್ಲಿ ಸಿಕ್ಕಿ ನರಕದಲ್ಲಿ ಬಿದ್ದಿರುವುದು, ತಮ್ಮ ವಂಶದಲ್ಲಿ ಹುಟ್ಟಿದ ಯೋಗ್ಯನಾದ ಮಗನು ಗಯೆಗೆ ಹೋಗಿ ಪಿಂಡಪ್ರದಾನ ಮಾಡುವವರೆಗಷ್ಟೆ. ಧರ್ಮರಾಜನ ನಿಮಿತ್ತವಾಗಿಯೂ ಶ್ರೀಕೃಷ್ಣನ ಪ್ರೀತ್ಯರ್ಥವಾಗಿಯೂ ಮಾಡುವ ಈ ಅಶ್ವಗ್ರಹಣ ಕಾರ್ಯವು ಸಿದ್ಧಿಸುವುದರಲ್ಲಿ ಸಂದೇಹವಿಲ್ಲ. ಭೃಂಗಗಳು ಮುತ್ತಿಕೊಂಡಿರುವ ಮದಿಸಿದ ಆನೆಗಳೂ ಹೆಣ್ಣಾನೆಗಳೂ ಅವುಗಳ ಮರಿಗಳೂ ಅಂಜನ ಪರ್ವತಗಳಂತೆ ಇಲ್ಲಿ ಬರುತ್ತಿರುವುವು. ನೋಡು, ಇವುಗಳ ಮೇಲೆ ಮಾವಟಿಗರು ಕುಳಿತಿರುವರು. ಕಾಮುಕರಾದ ಪುರುಷರು ಸ್ತ್ರೀಯರ ಪ್ರೇಮವೆಂಬ ಜಲದಲ್ಲಿ ಹೇಗೆ ಮುಳುಗಿ ತೇಲುತ್ತಿರುವರೋ ಹಾಗೆ ಈ ಆನೆಗಳು ಈ ಸರೋವರದ ನೀರಿನಲ್ಲಿ ಮುಳುಗಿ ತೇಲುತ್ತಿರುವುವು. ಇವು ನಿರ್ಮಲವಾದ ಜಲವನ್ನು ಪಾನಮಾಡವು. ಕೊಳೆಯ ನೀರನ್ನೇ ಕುಡಿಯುವುವು. ಇವು ತಾವು ಯಾವ ನೀರನ್ನು ಕುಡಿದು ಬೀಳಿಸುತ್ತಿರುವುವೋ ಆ ನೀರನ್ನೇ ತಮ್ಮ ಕಪೋಲ ಪ್ರದೇಶದಿಂದ ಬೀಳುತ್ತಿರುವ ಕೆಂಪು ಬಣ್ಣದ ಜಂಡಿನಿಂದ ಕೊಳೆಯಾಗಿ ಮಾಡುತ್ತಿರುವುವು. ಭ್ರಮರಗಳು ಮದ ಹೀನವಾದ ಗಜ ಕುಂಭಸ್ಥಳಗಳನ್ನು ಬಿಟ್ಟು ಕಮಲವನ್ನು ಸೇರುವುವು. ಮಲಿನರಿಗೆ ಸ್ನೇಹವೆಲ್ಲಿಯದು! ಹಂಸಗಳು, ತಾವರೆಯ ದಂಟುಗಳನ್ನು ತೆಗೆದುಕೊಂಡು ಪ್ರಾಣಿಗಳೆಲ್ಲವೂ ಸಮಾನವೆಂದು ಸರ್ವ ಸಮಬುದ್ಧಿಯಿಂದ ತಿಳಿದಿವೆಯೋ ಎಂಬಂತೆ ತುಂಬಿಗಳಿಗೆ ಕೊಡುತ್ತಿರುವುವು. ಈ ಸರೋವರದಲ್ಲಿ ಮೀನುಗಳು, ಬಡವನು ನಿಧಿಯನ್ನು ಪಡೆದಂತೆ ನೀರನ್ನು ಆಶ್ರಯಿಸಿಕೊಂಡಿರುವುವು. ಹೆಣ್ಣು ಗಂಡು ಚಕ್ರವಾಕಗಳು ಪರಸ್ಪರ ಪ್ರೇಮಭಾವದಿಂದ ಕೂಡಿಕೊಂಡಿರುವುವು. ಮಹಾ ಬಲಶಾಲಿಯಾದ ಭೀಮಸೇನನೇ? ಹಿಂದೆ ಹಸುವಿನ ಹಾಲಿನಂತೆಯೂ ಮಂಜಿನಂತೆಯೂ ಬಿಳುಪಾದ ಕುದುರೆಗಳು ಮಹಾರಥರ ಕಾವಲಿನೊಡನೆ ವೇಗವಾಗಿ ಬರುತ್ತಿರುವುವು. ಕುದುರೆಗಳಿಂದ ಬಹಳವಾಗಿ ಧೂಳಿಯೆದ್ದಿದೆ, ನೋಡು. ವಾದ್ಯಗಳ ಘೋಷವು ಆಕಾಶವನ್ನು ವ್ಯಾಪಿಸುತ್ತಿದೆ. ಧ್ವಜ ಪಟಗಳು ಯಮನ ನಾಲಿಗೆಯಂತೆ ಮೇಲೆ ಚಲಿಸುತ್ತಿರುವುವು. ಯೌವನಾಶ್ವನು ಬರುವನು, ಸಂದೇಹವಿಲ್ಲ. ಧೀರರಾದ ಶೂರರ ಗುಂಪು ಸಾವಿರಾರು ಕಾಣಬರುತ್ತಿವೆ. ಇಲ್ಲಿ ಕಾಣಿಸುತ್ತಿರುವ ಗೃಧ್ರಧ್ವಜವು ಯಾರದೋ ತಿಳಿಯದು. ಮತ್ತೊಂದು ಧ್ವಜದಲ್ಲಿ ಗಣಿಯು ಪ್ರಕಾಶಿಸುತ್ತಿರುವುದು. ದುಂದುಭಿ ಧ್ವನಿಯಾಗುತ್ತಿರುವುದು. ಯುದ್ಧ ವಿಶಾರದರಾದ ಬಹುಮಂದಿ ಯೋಧರು ಬರುತ್ತಿರುವರು. ಹೀಗೆ ಕಾಣಿಸುವುದರಿಂದ ಶೂರರು ಬರುತ್ತಿರಬಹುದು, ಎಂದು ವೀರನಾದ ವೃಷಕೇತುವು ಹೇಳುತ್ತಿರಲಾಗಿ ಮಧ್ಯಾಹ್ನದಲ್ಲಿ ನೀರು ಕುಡಿಯುವುದಕ್ಕಾಗಿ ಯೌವನಾಶ್ವನ ಕುದುರೆಗಳು ಸಾವಿರಾರು, ಬಗೆ ಬಗೆಯ ಬಣ್ಣದಿಂದ ಕೂಡಿ ಅಲ್ಲಿಗೆ ಬಂದುವು. ಧ್ರುವಕವೆಂಬ ಹತ್ತು ಸುಳಿಗಳುಳ್ಳ ಆ ಕುದುರೆಗಳೊಂದೊಂದನ್ನು ನೂರು ಮೂರು

ಮುಂದೆ ಹಿಡಿದಿದ್ದರು. ಬಲಿಷ್ಠರಾದ ಸಾದಿಗಳು ಅವನ್ನು ಶಾಸ್ತ್ರೋಕ್ತವಾಗಿ ಶಿಕ್ಷಿಸಿದ್ದರು. ಅಂದವಾದ ಕೊರಲು, ಚಲಿಸುತ್ತಿರುವ ಮೂಗುಗಳು ಉಳ್ಳ ಆ ಕುದುರೆಗಳು ಆಸ್ಕಂದಿತ ಮೊದಲಾದ ಐದು ಬಗೆಯ ಗಮನ ವಿಶೇಷಗಳಿಂದ ಬರುತ್ತಿರಲು ಅವುಗಳ ಗೊರಸುಗಳು, ಬ್ರಾಹ್ಮಣ ಮುಖದಿಂದ ಪದಕ್ರಮವು ಹೊರಡುವಂತೆ, ಅವುಗಳ ಮುಖದಿಂದ ಹೊರಟುಬರುತ್ತಿದೆಯೋ ಎಂಬಂತೆ ಕಾಣಿಸುತ್ತಿದ್ದಿತು. ನವಿಲು, ತಿತ್ತಿರಿ, ಒಂಟೆ, ಮುಂಗುಸಿ ಇವುಗಳ ನಡಿಗೆಯಂತೆ ನಡಿಗೆಯುಳ್ಳ ಆ ಕುದುರೆಗಳು ಸರೋವರಕ್ಕೆ ಬರುತ್ತಿದ್ದುವು. ಅವು ಕುತ್ತಿಗೆ ಮುದ್ದುದ ನೀರಿಗಿಳಿದು ಸೊರ್ರೆಂದು ಶಬ್ದಮಾಡುತ್ತ ನೀರನ್ನು ಕುಡಿದುವು. ಹೀಗೆ ಬಂದು ಬಂದು ನೀರನ್ನು ಕುಡಿದು ಹೋಗುತ್ತಿರುವ ಕುದುರೆಗಳನ್ನೆಲ್ಲ ವನ್ನೂ ನೋಡಿ ಭೀಮನು ವೃಷಕೇತುವನ್ನು ಕುರಿತು—ಅಯ್ಯಾ ಬಹು ಕುದುರೆಗಳು ಬಂದುವು. ನಾವು ಮೂವರೂ ಯಾವ ಕುದುರೆಯ ಉದ್ದೇಶದಿಂದ ಇಲ್ಲಿಗೆ ಬಂದಿರುವೆವೋ ಅದನ್ನು ಕಾಣಲೇ ಇಲ್ಲ. ಅರಮನೆಯಲ್ಲಿಯೇ ಕಟ್ಟಿ ಅದಕ್ಕೆ ನೀರು ಕುಡಿಸುವರೋ ಏನೋ! ಹೇಗೆ ಮಕ್ಕಳಿಲ್ಲದವರಿಗೆ ಈ ಲೋಕದಲ್ಲಿ ಸುಖವುಂಟಾಗದೋ, ಔದಾರ್ಯವಿಲ್ಲದವರಿಗೂ ಬ್ರಹ್ಮಚಾರಿಗಳಿಗೂ ಹೇಗೆ ಕಾಮ ಗಳು ಸಿದ್ಧಿಸುವುದಿಲ್ಲವೋ, ಸ್ತ್ರೀಜಿತರಿಗೆ ಬಂಧು ಸಮಾಗಮವು ಹೇಗೆ ಸಹಿಸದೋ, ಮಂತ್ರಾಲೋಚನೆಯಿಲ್ಲದ ದೊರೆಗೆ ಹೇಗೆ ರಾಜ್ಯವು ಸ್ಥಿರವಲ್ಲವೋ, ಪುಣ್ಯವಿಲ್ಲದವ ರಿಗೆ ಕೀರ್ತಿಯೂ, ಅಪವಾದವು ಪ್ರಾಪ್ತವಾದವರಿಗೆ ಸುಖವೂ, ವಿಷ್ಣುಭಕ್ತಿ ಹೀನರಿಗೆ ಮೋಕ್ಷವೂ, ಶಂಕರಾರಾಧನೆ ಮಾಡದವರಿಗೆ ವಿಭವವೂ ಹೇಗೆ ಉಂಟಾ ಗದೋ ಹಾಗೆ ಕುದುರೆಯಿಲ್ಲದೆ ಹಸ್ತಿನಪುರಕ್ಕೆ ನಾವು ಹೋಗುವುದು ಯುಕ್ತ ವಲ್ಲ. ಎಂದು ಹೇಳಲು, ಅದನ್ನು ಕೇಳಿ ವೃಷಕೇತುವು ಮಾತನಾಡುವಷ್ಟರಲ್ಲಿ ಅಲ್ಲಿಗೆ ಆ ಕುದುರೆಯು ಬಂದಿತು.

ಅದರ ಸುತ್ತಲೂ ರಕ್ಷಣೆಗಾಗಿ ರಥಿಕರೂ ಮದಿಸಿದ ಆನೆಗಳೂ ಕುದುರೆ ಗಳ ಮೇಲೆ ಕುಳಿತಿರುವ ಸಾದಿಗಳೂ ಕಾಲ್ಬಲವೂ ಸೇರಿದ್ದುವು. ಆ ಕುದುರೆಗೆ ಚಾಮರಗಳನ್ನೂ ಕಿರುಗಂಟೆಗಳನ್ನೂ ಕಟ್ಟಿ ಚಾಮರಗಳಿಂದ ಅದನ್ನು ಬೀಸುತ್ತಿದ್ದರು. ಸ್ತ್ರೀಯರು ಚಂದನ ಗಂಧ ಕುಂಕುಮಗಳನ್ನು ತಮ್ಮ ಕೈಯಿಂದ ಅದಕ್ಕೆ ಲೇಪಿಸಿದ್ದರು. ಹೂವಿನಿಂದಲೂ ಪುಷ್ಪಹಾರಗಳಿಂದಲೂ ಅದನ್ನು ಅಲಂಕರಿಸಿದ್ದರು. ಕೆಲವರು ಮಂಗಳಕರವಾದ ಜಯಧ್ವನಿಮಾಡುತ್ತ ಮುಂದೆ ನಡೆಯುತ್ತಿದ್ದರು. ಕೃಷ್ಣಾಗರು ಮೊದಲಾದ ಧೂಪಗಳ ಹೊಗೆಯು ಅದರ ಸುತ್ತಲೂ ಸುತ್ತಿಕೊಂಡಿದ್ದಿತು. ಇಬ್ಬರು ಅದನ್ನು ಹಿಡಿದುಕೊಂಡು ಬರುತ್ತಿದ್ದರು. ಅನೇಕ ವಾದ್ಯಧ್ವನಿಯಿಂದಲೂ ವೀರರ ಗರ್ಜನೆಯಿಂದಲೂ ಕುದುರೆಗಳ ಹೇಷಿತಗಳಿಂದಲೂ ಆನೆಗಳ ಬೃಂಹಿತಗಳಿಂದಲೂ ಮೆರೆಯುತ್ತ ಆ ಕುದುರೆಯು ಬಹು ಪ್ರೀತಿಯಿಂದ ಭೂಮಿಯನ್ನು ಗೊರಸಿನ ತುದಿಯಿಂದಲೂ ಮುಟ್ಟದೆ ನಡೆಯುತ್ತಿರುವದೋ! ಎಂಬಂತೆ ಬರುತ್ತಿದ್ದಿತು. ಮುಂದೆ ತನ

ಗಾಗುವ ಶ್ರೀಕೃಷ್ಣ ದರ್ಶನದ ಪುಣ್ಯದಿಂದಲೇ ಇದು ಧೂಪ ದೀಪಾದಿ ಪೂಜಾ ಸಾಮಗ್ರಿಯಿಂದ ಪೂಜೆಯನ್ನು ಪಡೆಯುತ್ತಿರುವುದೆಂಬುದಕ್ಕೆ ಸಂದೇಹವಿಲ್ಲ, ಎಂದು ಹೇಳುತ್ತ ಭೀಮ ಪುತ್ರನಾದ ಮೇಘವರ್ಣನು ಮಹಾ ರಥರಿಂದ ರಕ್ಷಿತ ವಾಗಿ ಬರುತ್ತಿದ್ದ ಆ ಕುದುರೆಯನ್ನು ಹಿಡಿಯಲು ಮನಸ್ಸು ಮಾಡಿದನು.

ಅವನ ಕುತೂಹಲವನ್ನು ನೋಡಿ ಭೀಮಸೇನನು—ಎಲೈ ಬಾಲನೇ ನೀನು ಏನು ಮಾಡಬೇಕೆಂದಿರುವೆ, ನನ್ನೆದುರಿಗೆ ಸತ್ಯವಾಗಿ ಹೇಳು ಎಂದು ಕೇಳಲು. ಆಗ ರಾಕ್ಷಸನಾದ ಮೇಘವರ್ಣನು—ಎಲೈ ಭೀಮಸೇನನೇ, ನಾನು ನಿನ್ನ ಅಪ್ಪಣೆ ಯನ್ನು ಪಡೆದು ಈ ವೀರರೆಲ್ಲರೂ ನೋಡುತ್ತಿರುವ ಹಾಗೆಯೇ ಕುದುರೆಯನ್ನು ಬೇಗನೆ ತೆಗೆದುಕೊಂಡುಹೋಗಿ ಪರ್ವತದ ಮೇಲೆ ಬಾಲಕನಂತೆ ಇರುತ್ತೇನೆ. ಇವರೊಬ್ಬರೂ ನನಗೆ ಲಕ್ಷ್ಯವಿಲ್ಲ; ಇದೇ ನನ್ನ ಅಭಿಪ್ರಾಯವು. ಎಂದು ಹೇಳಿ, ಬಳಿಕ ಆ ಕುದುರೆಯನ್ನು ನೋಡಿ — ಎಲೈ ಸ್ವಾಮಿಯೇ ಭೃತ್ಯನಿರುವಾಗ ಸ್ವಾಮಿಯು ಯುದ್ಧ ಮಾಡುವುದೇಕೆ? ನನಗೆ ಅಪ್ಪಣೆಯನ್ನು ಕೊಡು, ನೀವೆಲ್ಲರೂ ನೋಡುತ್ತಿರುವ ಹಾಗೆಯೇ ಯೌವನಾಶ್ವನನ್ನೂ ಅವನ ಮಗ ನನ್ನೂ ಹಿಡಿದು ಕಟ್ಟಿ ತರುವೆನು, ಅಥವಾ ಈ ಮಹಾ ಶತ್ರುವನ್ನು ಕ್ಷಾತ್ರ ಧರ್ಮದಿಂದ ಯುದ್ಧದಲ್ಲಿ ಗೆದ್ದು ಕುದುರೆಯನ್ನು ತಾರದೆ ಹೋದರೆ ನಾನು ನಿನ್ನ ಮಗನೇ! ಆ ಕುದುರೆಯನ್ನು ತಂದು ಮರಕ್ಕೆ ಕಟ್ಟಿಹಾಕುವೆನು, ಎಂದು ಹೇಳಿ ಅಲ್ಲಿಂದ ಹೊರಟನು. ಹೀಗೆ ಹೇಳಿ ಮೇಘವರ್ಣನು ಬೆಟ್ಟದಿಂದ ಹಾರಿ ರಾಕ್ಷಸ ಮಾಯೆಯನ್ನು ಸೃಜಿಸಿದನು. ಪ್ರಳಯ ಕಾಲದಂತೆ ಮೇಘಗಳು ಆಕಾಶ ದಲ್ಲಿ ತುಂಬಿಕೊಂಡುವು. ಗಾಢಾಂಧಕಾರವು ಕವಿಯಿತು. ಮಿಂಚು ಗುಡುಗು ಗಳು ಅವಿಚ್ಛಿನ್ನವಾಗಿ ಹುಟ್ಟುತ್ತಿದ್ದುವು. ಆ ಮೇಘಮಂಡಲ ಮಧ್ಯದಲ್ಲಿ ಮೇಘ ವರ್ಣನು ಅಡಿಗಡಿಗೆ ಸಿಂಹನಾದ ಮಾಡುತ್ತಿದ್ದನು. ದಿಕ್ಕುಗಳೆಲ್ಲವೂ ವ್ಯಾಕುಲ ವಾಯಿತು. ದೇವಾಸುರ ಮನುಷ್ಯರು ಭಯಪಟ್ಟರು. ಯಾರಿಗೂ ಏನೂ ತೋರ ಲಿಲ್ಲ. ಆಕಾಶ ಮಂಡಲವು ಮೇಘನಾದದಿಂದ ವ್ಯಾಪ್ತವಾಯಿತು. ದೇವ ವಿಮಾನ ಗಳೆಲ್ಲವೂ ಕೆಳಕ್ಕೆ ಬಿದ್ದುಹೋದುವು. ಇಷ್ಟರಲ್ಲಿ ಒಬ್ಬ ದೇವತಾ ಪುರುಷನು ಬೇಗನೆ ಓಡಿಬಂದು ಸಭಾ ಮಧ್ಯದಲ್ಲಿ ಕುಳಿತಿದ್ದ ಇಂದ್ರನನ್ನು ಕುರಿತು ದುಃಖ ದಿಂದ—ಎಲೈ ಸ್ವಾಮಿಯೇ, ನಿನಗೊದಗಿರುವ ಶುಭಾಶುಭಗಳನ್ನು ನೀನು ವಿಚಾರಿಸುವುದಿಲ್ಲ. ಯಾವನೋ ಒಬ್ಬ ರಾಕ್ಷಸನು ಇಲ್ಲಿಗೆ ಬಂದು ಲೋಕ ವನ್ನೆಲ್ಲ ಬಾಧೆಪಡಿಸುತ್ತಿರುವನು. ಲೋಕವನ್ನು ನಾಶಪಡಿಸಬೇಕೆಂದು ಘೋರ ವಾದ ಮಾಯೆಯನ್ನು ಬೀರಿರುವನು. ನೀನು ಲೋಕ ರಕ್ಷಣಾರ್ಥವಾಗಿ ಅವ ನನ್ನು ಕೊಲ್ಲು ಎಂದು ಹೇಳಲು, ಆ ಮಾತನ್ನು ಕೇಳಿ ಇಂದ್ರನು ಕೋಪ ದಿಂದ ಅದುರುತ್ತಿರುವ ತುಟಿಯುಳ್ಳವನಾಗಿ, ಬಂದಿರುವವನು ಯಾವನು ? ತಿಳಿದು ಬನ್ನಿ ಎಂದು ದೇವತೆಗಳಿಗೆ ಹೇಳಿದನು.

ಆಗ ದೇವತೆಗಳು ಬಂದು ದೂರದಲ್ಲಿ ನಿಂತು ಅವನನ್ನು ನೋಡಿ ಒಬ್ಬ ದೂತ ನನ್ನು ಕರೆದು ಅವನು ಯಾರೆಂಬುದನ್ನು ವಿಚಾರಿಸಿ ತಿಳಿದುಕೊಂಡು ಬಾ, ಎಂದು

ಹೇಳಿ ಕಳುಹಿಸಿದರು. ಅವನು ಮೇಘವರ್ಣನ ಬಳಿಗೆ ಬಂದು—ಎಲೈ ವೀರನೇ ನೀನು ಯಾರು? ಏತಕ್ಕಾಗಿ ಬಂದಿದ್ದೀಯೆ? ನಿನ್ನನ್ನು ನೋಡಿ ದೇವತೆಗಳೆಲ್ಲರೂ ಭಯಪಟ್ಟು ನನ್ನನ್ನು ನಿನ್ನ ಬಳಿಗೆ ಕಳುಹಿಸಿರುವರು. ನಿನ್ನಿಷ್ಟವೇನು? ಸತ್ಯವಾಗಿ ನನ್ನೊಡನೆ ಹೇಳು, ಎಂದು ಕೇಳಿದನು. ಅದಕ್ಕೆ ಅವನು—ಅಯ್ಯಾ! ದೇವತೆಗಳು ಹೆದರಬೇಕಾದುದಿಲ್ಲ. ನಾನು ಭೀಮಸೇನನ ಮೊಮ್ಮಗನು. ಹಿಡಿಂಬೆಯ ಮಗನು. ನನ್ನ ಹೆಸರು ಮೇಘವರ್ಣನೆಂಬುದು. ಯೌವನಾಶ್ವನ ಬಳಿಯಲ್ಲಿರುವ ಕುದುರೆಯನ್ನು ಯಜ್ಞ ಸಹಾಯಾರ್ಥವಾಗಿ ತೆಗೆದುಕೊಂಡು ಹೋಗುವೆನು. ಧರ್ಮರಾಜನ ಯಜ್ಞ ಸಿದ್ಧಿಗಾಗಿ ನಾನು ಇಷ್ಟು ಸಂಭ್ರಮಪಡುತ್ತಿರುವೆನು ಎಂದು ಹೇಳಲು, ಅದನ್ನು ಕೇಳಿ ಆ ದೇವದೂತನು ಮನಸ್ಸಿನಲ್ಲಿ ಆನಂದಭರಿತನಾಗಿ ಧರ್ಮರಾಜನಿಗಾಗಿ ನಡೆದಿರುವ ಉತ್ತಮವಾದ ಆ ವೃತ್ತಾಂತವನ್ನು ಇಂದ್ರನಿಗೆ ಹೇಳಿದನು. ಅದನ್ನು ಕೇಳಿ ಇಂದ್ರಾದಿ ದೇವತೆಗಳು ಬಂದು ಮೇಘವರ್ಣನ ಯುದ್ಧ ಕೌಶಲವನ್ನು ನೋಡುತ್ತಿರಲು, ಅವನು ಆಕಾಶದಲ್ಲಿದ್ದು ಯಜ್ಞಾಶ್ವವನ್ನಪಹರಿಸಬೇಕೆಂದು ಅದು ಇರುವ ಸ್ಥಳಕ್ಕೆ ಬಂದು ಸುತ್ತಲೂ ಇದ್ದ ಕಾವಲುಗಾರರನ್ನು ಮೋಹಗೊಳಿಸಿ ನೆಲಕ್ಕೆ ಕೆಡಹಿ ಗಾಳಿಯಿಂದ ಬಹಳವಾಗಿ ಧೂಳಿಯನ್ನೆಬ್ಬಿಸಿದನು. ಸೈನಿಕರು ಭಯಗ್ರಸ್ತರಾದರು. ಕೆಲವರು ಆಯುಧಪಾಣಿಗಳಾಗಿ ದಿಕ್ಕು ದಿಕ್ಕಿಗೆ ಓಡಿದರು. ಹೀಗೆ ಬಿರುಗಾಳಿಯಿಂದಲೂ ಕಲ್ಲು ಮಳೆಯಿಂದಲೂ ಎಲ್ಲವನ್ನೂ ವ್ಯಾಕುಲಪಡಿಸಿ ಸಿಂಹನಾದ ಮಾಡುತ್ತ ಆ ಮೇಘವರ್ಣನು ಕುದುರೆಯನ್ನು ಹಿಡಿದುಕೊಂಡು ಆಕಾಶದಲ್ಲಿ ಹಾರಿಹೋಗಲು ನೀಲಮೇಘದಂತಿರುವ ಅವನನ್ನು ಎಲ್ಲರೂ ಕಂಡರು. ಕುಂಡಲಾಂಗದ ಕಿರೀಟಾದಿಗಳಿಂದ ಪ್ರಕಾಶಿಸುತ್ತ ಆಕಾಶದಲ್ಲಿರುವ ಮೇಘವರ್ಣನನ್ನು ನೋಡಿ ಅಲ್ಲಿದ್ದ ವೀರರು, ಇವನು ಯಾರು! ಎಲ್ಲಿಂದ ಬಂದನು! ಕಡಿ! ಇರಿ! ಎಂದು ಕೂಗಿಕೊಂಡರು. ಕುದುರೆಯನ್ನು ತೆಗೆದುಕೊಂಡು ಹೋಗುತ್ತಿರುವ ಅವನ ಮೇಲೆ ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸಿ—ಎಲೈ ಮೇಘವರ್ಣನೇ, ನಿನ್ನಂತಹ ಧರ್ಮ ಸಹಾಯಕನಾದ ಮೊಮ್ಮಗನು ಹುಟ್ಟಿದುದರಿಂದ ತಮ್ಮಂದಿರೊಡನೆ ಧರ್ಮರಾಜನು ಕೃತಕೃತ್ಯನಾದನು, ಎಂದು ಸ್ತುತಿಸುತ್ತ ತಂತಮ್ಮ ಮನೆಗಳಿಗೆ ಹೊರಟುಹೋದರು.

ಮೇಘನಾದನು ಆ ಕುದುರೆಯನ್ನು ತೆಗೆದುಕೊಂಡು ವೇಗನೆ ಆಕಾಶದಲ್ಲಿ ಬರುತ್ತಿರುವುದನ್ನು ನೋಡಿ ಭೀಮ ವೃಷಕೇತುಗಳು ಹರ್ಷಿತರಾಗಿ ಆಗಾಗ್ಗೆ ಸಿಂಹನಾದ ಮಾಡುತ್ತಿದ್ದರು. ಅಷ್ಟರಲ್ಲಿ ಕುದುರೆಯು ಇಲ್ಲದಿರುವುದನ್ನು ನೋಡಿ ಯೌವನಾಶ್ವನ ಸೇನೆಯಲ್ಲಿ ಗದ್ದಲವುಂಟಾಯಿತು. ಭಟರು ಒಬ್ಬರಿಗೊಬ್ಬರು ಹೊಡೆದಾಡಿದರು. ಈ ವೃತ್ತಾಂತವೆಲ್ಲವೂ ದೊರೆಗೆ ತಿಳಿಯಿತು. ಕುದುರೆಯನ್ನು ಅಪಹರಿಸಿದುದನ್ನು ಕೇಳಿ ದೊರೆಯು ದುಃಖಿಸುತ್ತ ಕೋಪಾವಿಷ್ಟನಾಗಿ ವೇಗನೆ ರಾಜಪುತ್ರರೊಡನೆ ಅಲ್ಲಿಗೆ ಬಂದು, ನನ್ನ ಕುದುರೆಯನ್ನು

ಯಾವನು ಅಪಹರಿಸಿದನೋ ಅವನ ಆಯುಃಪ್ರಮಾಣವು ಮುಗಿಯಿತು. ಅವನು ದೇವತೆಗಳಲ್ಲಿಯಾಗಲಿ ಮನುಷ್ಯರಲ್ಲಿಯಾಗಲಿ ಯಾರಾಗಿದ್ದರೂ ಅವನನ್ನು ಯಮಪುರಕ್ಕೆ ಕಳುಹಿಸುವೆನು, ಎಂದು ಹೇಳಿ ಕ್ರೋಧಾವೇಶದಿಂದ ಕಾಲಾಂತಕನಿಗೆ ಸಮಾನಗಳಾದ ದಿವ್ಯ ರಥಗಳನ್ನು ತರಿಸಿದನು. ರಥಿಕರು ದೊರೆಗೆ ನಮಸ್ಕರಿಸಿ, ಸ್ವಾಮಿ? ಯಾರನ್ನು ಕೊಲ್ಲೋಣ, ಬೇಗನೆ ಅಪ್ಪಣೆಯಾಗಬೇಕು, ಎಂದು ಕೇಳಿದರು. ಅದಕ್ಕೆ ದೊರೆಯು—ಎಲೈ ವೀರರೇ, ಯಾರೋ ನಮ್ಮ ಕುದುರೆಯನ್ನಪಹರಿಸಿಕೊಂಡು ಆಕಾಶದಲ್ಲಿ ಹೋಗುತ್ತಿರುವರು. ನಿಲ್ಲದೆ ಬೇಗನೆ ಅವರನ್ನು ಬೆನ್ನಟ್ಟಿ ಓಡಿರಿ, ಎಂದನು. ಅದನ್ನು ಕೇಳಿ ನಾಲ್ಕು ಸಾವಿರ ಮಂದಿ ಯೋಧರು ಥಟ್ಟನೆ ಆಕಾಶಕ್ಕೆ ನೆಗೆದು ಮೇಘವರ್ಣನನ್ನು ಅಡ್ಡಗಟ್ಟಿ ಅವನ ಮೇಲೆ ಬಾಣವರ್ಷವನ್ನು ಸುರಿಸಿದರು. ಆ ವೀರರನ್ನು ನೋಡಿ ನಸುನಕ್ಕು ಮೇಘನಾದನು ನೀವೆಲ್ಲರೂ ಯಮಲೋಕಕ್ಕೆ ಹೋಗುವುದರಲ್ಲಿ ಸಂದೇಹವಿಲ್ಲ, ಎಂದು ಹೇಳಿ ಕೈಯಿಂದಲೂ ಮುಷ್ಟಿಯಿಂದಲೂ ಬಾಣಗಳಿಂದಲೂ ಕಲ್ಲುಗಳಿಂದಲೂ ಎಲ್ಲರನ್ನೂ ಹೊಡೆದು ಕೊಂದನು. ಶಾಪಗ್ರಸ್ತರಾಗಿ ಮನುಷ್ಯರಾಗಿದ್ದರೋ ಎಂಬಂತೆ ಅವರೆಲ್ಲ ದೇಹತ್ಯಾಗಮಾಡಿ ಪರಲೋಕವನ್ನೈದಿದರು. ಮೇಘವರ್ಣನು ಅವರನ್ನು ಕೊಂದು ಕುದುರೆಯೊಡನೆ ಭೀಮನಿರುವ ಸ್ಥಳಕ್ಕೆ ಹೊರಡಲು ಯತ್ನಿಸಿದನು. ಅದನ್ನು ನೋಡಿ ಇತರ ಸೈನಿಕರು ಯುದ್ಧಕ್ಕೆ ಉಪಕ್ರಮಿಸಿದರು. ಎಲ್ಲೆಲ್ಲಿಯೂ ಹಾಹಾಕಾರವುಂಟಾಯಿತು. ನಮ್ಮೆದುರಿಗೆ ಕುದುರೆಯನ್ನಪಹರಿಸಿದವನು ಯಾವನು! ಅವನೆಲ್ಲಿ ಹೋದನು! ಅವನು ತನ್ನ ನಾಶಕ್ಕಾಗಿಯೇ ಕುದುರೆಯನ್ನಪಹರಿಸಿದನು. ಇದು ಸತ್ಯ. ಅವನು ದೇವತೆಯಾಗಿದ್ದರೂ ಅವನನ್ನು ಯಮಪುರಿಗೆ ಸಾಗಿಸುವೆವು. ಆ ಅಶ್ವಾಪಹಾರಕನನ್ನು ಹಿಡಿಯಿರಿ! ಎಂದು ಎಲ್ಲರೂ ಕೂಗಿಕೊಳ್ಳುತ್ತಿದ್ದರು. ಹೀಗೆ ಕೂಗಿಕೊಳ್ಳುತ್ತ ಅವರೆಲ್ಲರೂ ಆಕಾಶಮಾರ್ಗದಲ್ಲಿ ರಾಕ್ಷಸನೊಬ್ಬನು ಕುದುರೆಯನ್ನಪಹರಿಸಿಕೊಂಡು ಹೋಗುತ್ತಿರುವುದನ್ನು ಕಂಡು ಕುಪಿತರಾಗಿ ಅವನನ್ನು ಹತ್ತು ದಿಕ್ಕುಗಳಲ್ಲಿಯೂ ಮುತ್ತಿ ತಡೆದು, ಆಕಾಶವನ್ನು ಬಾಣಗಳಿಂದ ತುಂಬಿಸಿ ಅವನ ಮೇಲೆ ಬಾಣವೃಷ್ಟಿಯನ್ನು ಸುರಿಸಿದರು.

ಅಷ್ಟರಲ್ಲಿ ವೃಷಕೇತುವು ನಗುತ್ತ ಭೀಮನನ್ನು ಕುರಿತು, ಎಲೈ ಭೀಮಸೇನನೇ ಮೇಘನಾದನು ಕುದುರೆಯನ್ನು ತೆಗೆದುಕೊಂಡು ಬಂದುದು ಒಳ್ಳೆಯ ಕೆಲಸವಾಯಿತು. ಅವನೇ ಧನ್ಯನು. ಅವನನ್ನು ಯುದ್ಧದಲ್ಲಿ ಕೆಡಹುವವರು ಯಾರು! ನೋಡು, ಈಗ ಇಲ್ಲಿಗೆ ಯುದ್ಧಕ್ಕಾಗಿ ಬಂದಿರುವ ಶೂರರಾದ ಯೋಧರನ್ನು ಪ್ರತಿಭಟಿಸಿ ನಿನ್ನೆದುರಿಗೆ ಕೆಡಹುವೆನು. ಇದಕ್ಕೆ ಸಂಶಯವಿಲ್ಲ, ಎಂದು ಹೇಳಿ ಶ್ರೇಷ್ಠವಾದ ಧನುವನ್ನು ತೆಗೆದುಕೊಂಡು, ಪರಮೇಶ್ವರನು ರಾಕ್ಷಸರ ಸಮೂಹದ ಮೇಲೆ ಯುದ್ಧಕ್ಕೆ ಹೊರಡುವಂತೆ ಭೀಮನೆದುರಿಗೆ ತಾನೊಬ್ಬನೇ ಹೊರಟನು. ಎಲೈ ವೀರರೇ ಈಗ ಯುದ್ಧಕ್ಕೆ ನಿಲ್ಲಿ. ಇಲ್ಲದಿದ್ದರೆ ಹಿಂದಿರುಗಿರಿ. ಏಕೆ ವ್ಯರ್ಥವಾಗಿ ಪ್ರಾಣಗಳನ್ನು ಕಳೆದುಕೊಳ್ಳುವಿರಿ; ಎಂದು ಕೂಗಿ ಹೇಳುತ್ತಿರುವ ವೃಷಕೇತುವಿನ

ಮಾತುಗಳನ್ನು ಕೇಳಿ ಆ ವೀರರು ಆಶ್ಚರ್ಯದೃಷ್ಟಿಯಿಂದ ನೋಡುತ್ತ—ಇವನು ಯಾರು! ಯಾರ ಮಗನು! ಮಹಾ ಶೂರನಂತೆ ನಮ್ಮೆದುರಿಗೆ ನಿಂತು ಆಜ್ಞೆ ಮಾಡುತ್ತ ಯಮನಂತೆ ನಮ್ಮನ್ನು ಯುದ್ಧಕ್ಕೆ ಕರೆಯುತ್ತಿರುವನು! ಎಂದು ಹೇಳಿಕೊಳ್ಳುತ್ತ ಕರ್ಣಪುತ್ರನಾದ ಆ ವೃಷಕೇತುವನ್ನು ಆವರಿಸಿ ಮೇಘದಂತೆ ಅವನ ಮೇಲೆ ಶರವರ್ಷವನ್ನು ಕರೆದರು. ಅವನು ಕ್ರೂರವಾದ ಬಾಣಗಳಿಂದ ಅವರನ್ನು ತೂಡಿ ಕೆಡಹಿ ಸಿಂಹನಾದ ಮಾಡಿದನು. ಮಹಾರಥರೆಲ್ಲರೂ ಕತ್ತರಿಸಿ ಬಿದ್ದರು. ಆನೆಗಳೆಲ್ಲವನ್ನೂ ಸೀಳಿ ನೆಲಕ್ಕೆ ಕೆಡಹಿದನು. ಸಾವಿರಾರು ಮಂದಿ ರಾವುತರೂ ಕಾಲಾಳುಗಳೂ ಯುದ್ಧದಲ್ಲಿ ಸತ್ತರು. ವಾಸುದೇವ ಸ್ಮರಣೆಯಿಂದ ಪಾಪಗಳು ನಾಶವಾಗುವಂತೆ ವೃಷಕೇತುವಿನಿಂದ ಆ ಸೈನ್ಯವೆಲ್ಲವೂ ನಾಶವಾಯ್ತು. ಅದರಲ್ಲಿ ಕೆಲವರು ಪಟ್ಟಣಕ್ಕೆ ಬಂದು ದೊರೆಯನ್ನು ನೋಡಿ—ಅಯ್ಯಾ! ಶತ್ರುಗಳು ನಮ್ಮ ಹತ್ತು ಸಾವಿರ ಮಂದಿ ರಣಧೀರರಾದ ಯೋಧರನ್ನು ಕೊಂದು ಕುದುರೆಯನ್ನು ತೆಗೆದುಕೊಂಡು ಹೋದರು, ಎಂದು ಹೇಳಲು ಅವರ ಮಾತನ್ನು ಕೇಳಿ ಯೌವನಾಶ್ವನು ವಿಸ್ಮಿತನಾಗಿ, ತಾನೇ ತನ್ನ ಸೇನೆಯನ್ನು ತೆಗೆದುಕೊಂಡು ಕೋಪಾವಿಷ್ಟನಾಗಿ ಯುದ್ಧಕ್ಕೆ ಹೊರಟು ಶೂರರೆಷ್ಟು ಮಂದಿ ಬಂದಿರುವರು? ಅವರ ಬಲವೆಷ್ಟಿರುವುದು? ಎಂದು ಕೇಳಿದನು. ಅದಕ್ಕೆ ಸೈನಿಕರು, ಬಂದಿರುವವರು ಮೂವರಲ್ಲದೆ ನಾಲ್ಕನೆಯವನಿಲ್ಲ. ಅವರಲ್ಲೊಬ್ಬನು ನಿಮ್ಮ ಕುದುರೆಯನ್ನು ಆಕಾಶ ಮಾರ್ಗವಾಗಿ ಕೊಂಡೊಯ್ದನು. ವಿಷ್ಣು ಭಕ್ತನಲ್ಲದ ಮಗನು ತನ್ನ ಕುಲವನ್ನೇ ನರಕಕ್ಕೆ ಕೆಡಹುವಂತೆ ಮತ್ತೊಬ್ಬನು ಸೈನ್ಯವನ್ನೆಲ್ಲ ಹೊಡೆದು ನೆಲಕ್ಕೆ ಕೆಡಹಿದನು. ಇನ್ನೊಬ್ಬನು ಸುಮ್ಮನೆ ನಿಂತಿರುವನು, ಎಂದು ಹೇಳಿದರು.

ಅದಕ್ಕೆ ಯೌವನಾಶ್ವನು—ಅವರು ಮೂವರೂ ದೇವತೆಗಳೇ ಸರಿ. ಇಲ್ಲದಿದ್ದರೆ ನಮ್ಮ ಕುದುರೆಯನ್ನೆಂದಿಗೂ ಅಪಹರಿಸಲಾರರು. ಅವರು ಮನುಷ್ಯರಂತಿದ್ದು ಕುದುರೆಯನ್ನಪಹರಿಸಿದ್ದರೂ ಅವರು ಮನುಷ್ಯರಲ್ಲವೇ ಅಲ್ಲ. ಆದಕಾರಣ ನಾನು ಅವರನ್ನು ರಣಯಜ್ಞದಲ್ಲಿ ಈಗಲೇ ಸಂತೋಷಪಡಿಸುವೆನು; ಎಂದು ಹೇಳಿ ಸೇನಾ ಸಮೇತನಾಗಿ ಹೊರಟು ಮೊದಲು ಭೀಮನನ್ನು ಕಂಡನು. ಬಳಿಕ ಯುದ್ಧಕ್ಕೆ ನಿಂತಿರುವ ವೃಷಕೇತುವನ್ನು ನೋಡಿ—ನಾನು ಬರುತ್ತಿರುವುದನ್ನು ನೋಡುತ್ತ ಸ್ವಲ್ಪವೂ ಹೆದರದೆ ಸಿಂಹರಾಜನಂತೆ ಕಾಣುತ್ತಿರುವ ಈ ಬಾಲಕನು ಧನ್ಯನು. ಈ ಬಾಲನು ಯೋಗಿಯಂತೆ ಮೃತ್ಯುವಿಗೆ ಸ್ವಲ್ಪವೂ ಭಯಪಡದಿರುವನು. ಆದಕಾರಣ ಇವರೆಲ್ಲರೂ ನನ್ನ ಬಲಪರಾಕ್ರಮಗಳನ್ನು ನೋಡಲಿ, ಎಂದು ಹೇಳುತ್ತಿರುವಷ್ಟರಲ್ಲಿ ಸೇನೆಯೊಡನೆ ಯುದ್ಧಕ್ಕಾಗಿ ಬಂದಿರುವ ಯೌವನಾಶ್ವನನ್ನು ನೋಡಿ ಭೀಮನು ಬೇಗನೆ ಗದೆಯನ್ನು ತೆಗೆದುಕೊಂಡು ವೃಷಕೇತುವನ್ನು ತಡೆದು ನಿಲ್ಲಿಸಿ ಶತ್ರುಬಲವನ್ನು ನಾಶಮಾಡುವುದಕ್ಕಾಗಿ ಆ ಯೌವನಾಶ್ವನ ಮೇಲೆ ಯುದ್ಧಕ್ಕೆ ಹೊರಟನು. ಆಗ ವೃಷಕೇತುವು ಭೀಮನನ್ನು ಕುರಿತು—ಎಲೈ ಭೀಮಸೇನನೇ, ತ್ರಿಲೋಕವೂ ಕೂಡಿ ಯುದ್ಧಕ್ಕೆ

ಬಂದರೆ ಆಗ ನೀನು ಯುದ್ಧಮಾಡಬೇಕಾದುದು. ಈ ಅಲ್ಪ ಸೈನ್ಯದ ಮೇಲೆ ಯುದ್ಧ ಮಾಡಲು ನಾನು ಮೊದಲೇ ವರಣವನ್ನು ತೆಗೆದುಕೊಂಡಿರುವೆನಲ್ಲವೇ! ಆದಕಾರಣ ನೀನು ನನ್ನನ್ನೇ ಈ ಯುದ್ಧಕ್ಕೆ ಬಿಡಬೇಕು. ಈ ಸೈನ್ಯವನ್ನೆಲ್ಲ ಧ್ವಂಸಮಾಡಿ ಪಿತ್ರಾರ್ಜಿತವಾದ ಯಶಸ್ಸನ್ನು ನಿನ್ನ ಕೈಯಲ್ಲಿಡುವೆನು. ನೀನು ಯುದ್ಧ ಕ್ರೀಡೆಯನ್ನಾಡದಿರು. ದೇಹವು ಯಾವಾಗಲೂ ಸ್ಥಿರವಲ್ಲ. ಯೌವನವು ಚಂಚಲವಾದುದು. ಲಕ್ಷ್ಮಿಯು ಸ್ಥಿರವಾಗಿ ಯಾವನ ಮನೆಯಲ್ಲಿಯೂ ಇರುವುದಿಲ್ಲ. ಆದಕಾರಣ ಎಲ್ಲಾ ಪ್ರಾಣಿಗಳೂ ಕೀರ್ತಿಯನ್ನು ಸ್ಥಿರಪಡಿಸಿ ಕೊಳ್ಳಬೇಕು. ಲೋಕದಲ್ಲಿ ಕವಿಗಳು ಧರ್ಮವನ್ನು ವಿಪರೀತ ಭಾವನೆಯಿಂದ ಹೇಳಿರುವರು. ಬಲವಾಗಿ ನಾನಾ ಮುಖವಾಗಿ ಕಾಣುತ್ತಿರುವ ಶತ್ರು ಸೈನ್ಯ ವನ್ನು ಯಾವನು ಗೆಲ್ಲುವನೋ ಅವನೇ ತನ್ನ ಕೀರ್ತಿಯನ್ನು ನೆಲೆಗೊಳಿಸುವನು. ನಿನ್ನ ಸೊಸೆಯಾದ ಈ ಸೇನೆಯು ಶೃಂಗಾರ ಭಾವದಿಂದ ನನ್ನನ್ನು ನೋಡುತ್ತ, ಶಸ್ತ್ರ ರೂಪವಾದ ನಖಗಳ ಕ್ಷತಗಳನ್ನು ವಕ್ಷೋಭಾಗದಲ್ಲಿ ಪಡೆಯಲೇ ಬೇಕೆಂದಿರುವ ಕಾರಣ, ಈ ಸೇನಾ ಮುಖವು ನನ್ನ ಮುಖಕ್ಕೆ ಅಭಿಮುಖವಾಗಿ ಕೂಡಿರುವುದು. ಮಾವನಾದ ನಿನ್ನನ್ನು ನೋಡಿ ವಿಮುಖವಾಗುವುದು. ಧ್ವಜಪಟದಿಂದ ತನ್ನ ಮುಖವನ್ನು ಮುಚ್ಚಿಕೊಳ್ಳುವುದು. ನಿನಗೆ ಮುಖವನ್ನು ತೋರಿಸದು. ಆದ ಕಾರಣ ನಾನು ಈ ಸೇನೆಯ ಮೇಲೆ ಯುದ್ಧ ಮಾಡುತ್ತಿರುವವರೆಗೂ ನೋಡು ತ್ತಿರು, ಎಂದು ಹೇಳಿದನು.

ಅದಕ್ಕೆ ಭೀಮನು ಮೊದಲು ಸೇನಾ ವಧುವಿನಮೇಲೆ ನೀನೇ ಹೋಗು. ನೀನು ಯುದ್ಧದಲ್ಲಿ ವಧೂ ಜಿತನಾದರೆ ನಾನು ದೂರದಲ್ಲಿದ್ದು ಗದಾ ದಂಡದಿಂದ ಆ ವಧುವನ್ನು ದಂಡಿಸುತ್ತೇನೆ. ವಧುವು ಶಿಕ್ಷಿತಳಾದರೆ ನಿನಗೆ ಅನುಕೂಲ ವಾಗುವುದು. ಹಿರಿಯರು ಸೊಸೆಯನ್ನು ದಂಡಿಸದಿದ್ದರೆ ಅವಳ ದುರ್ವೃತ್ತತೆ ಯಿಂದ ಅವರಿಗೆ ಕೇಡಾಗುವುದು. ಇದನ್ನು ತಿಳಿದು ನೀನು ಈ ದೊಡ್ಡ ಸೈನ್ಯದ ಮೇಲೆ ಹೊರಡು. ಶತ್ರುಗಳು ರಥಾರೂಢರಾಗಿ ಬಂದಿರುವರು. ನೀನು ಪದಾತಿ ಯಾಗಿ ಹೋಗಬೇಕಾಗಿದೆ. ನಿನ್ನನ್ನು ಏಕಾಕಿಯಾಗಿ ಕಳುಹಿಸಲು ನನಗೆ ಇಷ್ಟವಿಲ್ಲ ಎಂದು ಹೇಳಲು, ಅಷ್ಟರಲ್ಲಿ ಧೀರನಾದ ವೃಷಕೇತು ಭೀಮನಿಗೆ ಪ್ರದಕ್ಷಿಣ ನಮಸ್ಕಾರ ಮಾಡಿ ಯುದ್ಧಕ್ಕೆ ಹೊರಟು ಕಾಮಿಯಂತೆ ಕೆಂಪಾದ ಕಣ್ಣುಳ್ಳವನಾಗಿ ಚಂದನ ಕರ್ಪೂರಗಳಿಂದಲೂ ಮದೋದಕದಿಂದಲೂ ಸುವಾಸನೆ ಯುಳ್ಳ, ಸೇನಾ ವಧುವಿನ ಗಜ ಕುಂಭಸ್ತನವನ್ನು ತೀಕ್ಷ್ಣಗಳಾದ ಬಾಣ ಗಳಿಂದ ಭೇದಿಸುತ್ತ, ತಮ್ಮ ತಾತನ ಮುಖವನ್ನು ನೋಡುತ್ತ, ಶೂರರನ್ನು ರೋಷದಿಂದ ಹೊಡೆದು ಕೆಡಹುತ್ತ ಬರುತ್ತಿರಲು ಅವನ ಕೋಪವು ಶಾಂತವಾಗ ದಂತೆಯೇ ಇದ್ದಿತು. ನನ್ನ ಬಾಣಗಳಿಂದ ಈ ವೀರರು ಮಡಿಯುತ್ತಿದ್ದರೂ ವೈರವನ್ನು ಬಿಡದೆ ಸಾಧಿಸುತ್ತಲೇ ಇರುವರು. ಏನು ಮಾಡಲಿ! ಎಂದು ಚಿಂತಿ ಸುತ್ತ ಅವನು ಶತ್ರುಗಳನ್ನು ಹೊಡೆದು ಕೆಡಹುತ್ತಿದ್ದನು. ಚಂದನಾಗರು ಗಂಧದ ಸುವಾಸನೆಯುಳ್ಳ ದೊರೆಗಳ ಮುಖಗಳನ್ನು ಯುದ್ಧದಲ್ಲಿ ನಸುನಗುತ್ತ ನೋಡಿ,

ಈ ಮುಖ ಕಮಲಗಳು ಕತ್ತರಿಸಿದ ಕಮಲಗಳಂತೆ ಜಲಹೀನವಾಗಿದ್ದರೂ ನನ್ನೆದುರಿಗೆ ಬಾಡದಂತಿರುವುವು, ಎನ್ನುತ್ತ ಆನೆಗಳ ಹಿಂಡನ್ನು ಸೀಳಿ ಅವುಗಳ ತಲೆಯಿಂದುದುರಿದ ಗುಂಡಾಗಿರುವ ಮುತ್ತುಗಳನ್ನು ಸರವಾಗಿ ಪೋಣಿಸಿ ಶೂರರ ಕಂಠಾಭರಣವಾಗಿ ಮಾಡಿದನು. ಹೀಗೆ ವೃಷಕೇತುವು ಯುದ್ಧದಲ್ಲಿ ತನ್ನ ಬಲವನ್ನು ಕೊಲ್ಲುತ್ತಿರುವುದನ್ನು ನೋಡಿ ಯೌವನಾಶ್ವನು ತಾನೇ ಗಜಾರೂಢನಾಗಿ ಯುದ್ಧಭೂಮಿಗೆ ಬಂದು—ಎಲೈ ಶೂರನೇ ನಿನಗೆ ರಥವನ್ನು ಕೊಡುವೆನು. ಇದನ್ನು ಹತ್ತಿ ಯುದ್ಧಮಾಡು. ನೆಲದಮೇಲೆ ನಿಂತವನೊಡನೆ ಯುದ್ಧ ಮಾಡುವುದು ಸಮ್ಮತವಲ್ಲವೆಂದು ಪ್ರಾಜ್ಞರು ಹೇಳುತ್ತಾರೆ. ಅನ್ಯದೇಶದಿಂದ ಬಂದು ಶ್ರಮಪಟ್ಟು ಬಹು ಮಂದಿ ಶೂರರೊಡನೆ ಯುದ್ಧ ಮಾಡಿರುವ ಬಾಲನಾದ ನೀನು ವಿರಥನಾಗಿರುವುದರಿಂದ ನಿನ್ನೊಡನೆ ನಾನು ಹೇಗೆ ಯುದ್ಧಮಾಡಲಿ! ನಿನ್ನ ನಾಮ ಗೋತ್ರಗಳೇನು? ನಿಮ್ಮ ತಂದೆ ಯಾರು? ವಿಷ್ಣುವಿನಂತೆ ಲೋಕಪೂಜ್ಯನಾದ ನೀನು ಯಾರೋ ನಾನರಿಯೆನು. ಆದಕಾರಣ ಈ ಯುದ್ಧಕಾಲದಲ್ಲಿ ನಿನ್ನ ಹೆಸರನ್ನೇ ಅರಿಯದೆ ಯುದ್ಧ ಮಾಡುವುದು ಹೇಗೆ? ನೀನೇ ಧನ್ಯನು. ನಿನಗಿಂತಲೂ ಧನ್ಯನು ಲೋಕದಲ್ಲಿ ಮತ್ತಾವನಿರುವನು? ಎಂದು ಹೇಳಲು ವೃಷಕೇತುವು—ನಾನು ಕಶ್ಯಪ ಸಂಭೂತವಾದ ಸೂರ್ಯವಂಶಕ್ಕೆ ಸೇರಿದವನು. ಸಭಾ ಮಧ್ಯದಲ್ಲಿ ಕಷ್ಟಕ್ಕೊಳಗಾಗಿದ್ದ ದ್ರೌಪದಿಯನ್ನು ನೋಡುತ್ತಿದ್ದವನೂ, ಲೋಕದಲ್ಲಿ ತನಗೆ ಸಮಾನನಾದ ದಾತೃವು ಮತ್ತೊಬ್ಬನಿಲ್ಲವೆಂದು ಹೇಳಿಸಿಕೊಂಡಿರುವವನೂ, ದುರ್ಯೋಧನ ಹಿತಾರ್ಥವಾಗಿ ಧರ್ಮಾದಿಗಳನ್ನು ಲಕ್ಷ್ಯ ಮಾಡದವನೂ ಯಾರೋ, ಅವನೇ ನಮ್ಮ ತಂದೆ. ದುರ್ಯೋಧನನನ್ನು ಬಿಟ್ಟು ಬೇರೆ ಇದ್ದ ನಾನೇ ಆತನ ಪುತ್ರನು. ನಮ್ಮ ತಂದೆಯನ್ನು ಅರ್ಜುನನು ಯುದ್ಧದಲ್ಲಿ ಕೊಲ್ಲಲು ನಾನು ಉಳಿದೆನು. ನನ್ನ ಹೆಸರು ವೃಷಕೇತುವೆಂಬುದು. ಧರ್ಮರಾಜನು ಮಾಡಬೇಕಾದ ಯಜ್ಞಕ್ಕಾಗಿ ನಾನು ಕುದುರೆಯನ್ನು ತೆಗೆದುಕೊಂಡು ಹೋಗುತ್ತೇನೆ. ನೀನು ಕೊಡುವ ರಥವನ್ನು ನಾನು ಸ್ವೀಕರಿಸೆನು. ಯುದ್ಧದಲ್ಲಿ, ತಾನು ಗೆದ್ದ ವಸ್ತುವನ್ನಲ್ಲದೆ ಕೊಟ್ಟ ವಸ್ತುವನ್ನು ಯಾರೂ ತೆಗೆದುಕೊಳ್ಳುವುದಿಲ್ಲ, ಎಂದು ಹೇಳಿದನು.*

ಇಂತು ಯೌವನಾಶ್ವ ವೃಷಕೇತು ವಾಕ್ಯವರ್ಣನವೆಂಬ
ನಾಲ್ಕನೆಯ ಅಧ್ಯಾಯವು.

ಅನುವಾದಕರು—**ಕಡಬದ ನಂಜುಂಡಶಾಸ್ತ್ರಿಗಳು**

---

* ಸಂಸ್ಕೃತದಲ್ಲಿ ಈ ಗ್ರಂಥಕ್ಕೆ 'ಜೈಮಿನೀಯಾಶ್ವಮೇಧಿಕ ಪರ್ವ' ಎಂಬ ಹೆಸರಿದೆ. ಇದನ್ನು ಕನ್ನಡದಲ್ಲಿ ವಾರ್ಧಿಕ ಷಟ್ಪದಿಗಳಾಗಿ ರಚಿಸಿರುವ ಲಕ್ಷ್ಮೀಶ ಕವಿಯು 'ಜೈಮಿನಿ ಭಾರತ' ಎಂದು ಹೆಸರನ್ನು ಕೊಟ್ಟಿದ್ದಾನೆ. ಈತನ ಗ್ರಂಥಕ್ಕೆ ಸಂಸ್ಕೃತದ ಅಶ್ವಮೇಧಿಕ ಪರ್ವವೇ ಮೂಲವಾಗಿದೆ. ಈ ಮೂಲ ಗ್ರಂಥಕ್ಕೂ ಪರಿವರ್ತನರೂಪವಾದ ಷಟ್ಪದೀ ಗ್ರಂಥಕ್ಕೂ ಕಥಾ ಭಾಗದಲ್ಲಿಯೂ, ವರ್ಣನಾ

ಭಾಗದಲ್ಲಿಯೂ ಯಾವ ಸಾಮ್ಯ ವೈಷಮ್ಯಗಳೂ ಹೆಚ್ಚು ಕಡಿಮೆಗಳೂ ಇವೆಯೋ ಎಂಬುದನ್ನು ತಿಳಿಯುವುದು ಆವಶ್ಯಕವಾಗಿದೆ. ಇದು ಸಂಸ್ಕೃತ ಪರಿಚಯ ಹೆಚ್ಚಾಗಿಲ್ಲದ ಕನ್ನಡಿಗರಿಗೆ ಸುಲಭವಲ್ಲವಾದಕಾರಣ ಸಂಸ್ಕೃತ ಮೂಲಕ್ಕೆ ಪ್ರತಿಬಿಂಬವಾಗಿರುವಂತೆ ಪ್ರಾಯಶಃ ಎಲ್ಲ ಭಾಗದಲ್ಲಿಯೂ ಸಮವಾಗಿರುವಹಾಗೆ ಪರಿವರ್ತನರೂಪವಾದ ಈ ಕನ್ನಡದ ಗದ್ಯಾನುವಾದವನ್ನು ಬರೆದಿದೆ. ಅತ್ಯಲ್ಪ ಭಾಗದಲ್ಲಿ ಪರಿವರ್ತನಾಕ್ಲೇಶ ಮೊದಲಾದ ಕಾರಣದಿಂದ ಬಹು ವಿರಳವಾಗಿ ಸ್ವಲ್ಪ ವ್ಯತ್ಯಾಸಗಳು ಕಾಣಬಹುದು. ಆದರೂ ಅದು ಅಷ್ಟು ವ್ಯತ್ಯಾಸವೆಂದು ಹೇಳಿಸಿಕೊಳ್ಳುವಹಾಗಿಲ್ಲವೆನ್ನಬಹುದಾಗಿದೆ. ಕನ್ನಡದ ಜೈಮಿನಿ ಭಾರತವನ್ನನುಸರಿಸಿ ಮೈಸೂರು ಶಾಸನದ ಇಲಾಖೆಯ ಅಸಿಸ್ಟೆಂಟ್ ಮ॥ ರಾ॥ ರಾ. ರಾಮರಾವ್, ಬಿ.ಎ., ಇವರು ಕನ್ನಡದಲ್ಲಿ ಗದ್ಯಾನುವಾದವನ್ನು ಬರೆದಿರುವರು. ಇದಲ್ಲದೆ ಶ್ರೀನಾಥನೆಂಬ ಕವಿಯು ತೆಲುಗಿನಲ್ಲಿ 'ಜೈಮಿನಿ ಭಾರತಮು' ಎಂಬ ಗ್ರಂಥವನ್ನು ಬರೆದಿರುವಂತೆ ತಿಳಿಯಬರುತ್ತದೆ. ಇವೆಲ್ಲವನ್ನೂ ಹೋಲಿಸಿ ನೋಡುವುದರಿಂದ ವಾಚಕರಿಗೆ ಅನೇಕ ಸಂಗತಿಗಳು ಸ್ಪಷ್ಟವಾಗಬಹುದು. ಸಂಸ್ಕೃತ ಮೂಲಕ್ಕೂ ಇವಕ್ಕೂ ಇರುವ ಹೆಚ್ಚು ಕಡಿಮೆಗಳನ್ನು ತಿಳಿಯಲು ಈ ಗ್ರಂಥವನ್ನು ರಚಿಸಿದೆ. ವಾಚಕರು ಇದನ್ನೋದುವುದರಿಂದ ಸೌಲಭ್ಯವುಂಟೆಂದು ತೋರುವುದು. ಪ್ರಾಜ್ಞರು ಈ ಗ್ರಂಥವನ್ನು ಅವಲೋಕಿಸಿ ನ್ಯೂನಾತಿರೇಕಗಳನ್ನು ತಿಳಿಯಪಡಿಸಿ ಗುಣಗ್ರಹಣಮಾಡುವರೆಂದು ಹಾರೈಸುತ್ತೇವೆ.

ಗ್ರಂಥ ವಿಮರ್ಶೆ

೧. ಸುಬೋಧಿನಿ

ಲೇಖಕರು.—ಶಂಭು ತಿಮ್ಮಣ್ಣ ಹೆಗ್ಗಡೆ, ಶಿಕ್ಷಕರು, ಹೊಲಗದ್ದೆ.

ಡೆಮ್ಮಿ ಪುಟಗಳು ೫೦ ; ಶ್ರೀ ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಕುಮಟಾದಲ್ಲಿ ಮುದ್ರಿತವಾಯ್ತು ; ೧೯೨೭ ; ಬೆಲೆ ೩ ಆಣೆ.

ಇದು ಮಕ್ಕಳಿಗೆ ಕಲಿಸಲು ಅನುಕೂಲವಾಗಿರುವ ಬಾಲಬೋಧೆ. ಈ ಪುಸ್ತಕದ ಕಾಗದವು ಉತ್ತಮವಾಗಿಯೂ, ಮಕ್ಕಳಿಗೆ ಅನುಕೂಲವಾಗಿರುವಂತೆ ದಪ್ಪನೆಯ ಸ್ಫುಟಾಕ್ಷರಗಳುಳ್ಳದಾಗಿ ಸಚಿತ್ರವಾಗಿಯೂ ಇದೆ. ಮುದ್ರಣದ ತಪ್ಪುಗಳಿಲ್ಲ. "ಹುಡುಗರು ಮಾತನಾಡತೊಡಗಿದಾಕ್ಷಣ "ಅಕ್ಕ, ಅಪ್ಪ" ಇತ್ಯಾದಿ ಸ್ವರಾದಿಯಾದ ಶಬ್ದಗಳೇ ಉಚ್ಚಾರವಾಗುತ್ತವೆ. ಈ ಧ್ಯೇಯವನ್ನನುಸರಿಸಿಯೇ ಹಿರಿಯರು ವರ್ಣಮಾಲೆಯನ್ನು ಕಲ್ಪಿಸಿದ್ದೆಂದರೆ ತಪ್ಪಾಗಲಾರದು. ಆದ್ದರಿಂದ ಅಂಥ ಸುಸಂಸ್ಕೃತ ಪದ್ಧತಿಯನ್ನು ಬಿಟ್ಟು, ಬೇರೆ ಪದ್ಧತಿಯನ್ನು ಅನುಸರಿಸುವುದೆಂದರೆ ಅದೊಂದು ಗಂಡಾಂತರವೇ ಸರಿ. ಆ ಕಾರಣದಿಂದಲೇ ಈ ಪುಸ್ತಕದಲ್ಲಿ ಅಕ್ಷರಮಾಲೆಯ ಪದ್ಧತಿಯನ್ನು ಅನುಸರಿಸಿರುತ್ತದೆ" ಎಂದು ಲೇಖಕರು ಪ್ರಸ್ತಾವನೆಯಲ್ಲಿ ಸೂಚಿಸಿದ್ದಾರೆ.

ಇದರಿಂದ ಪದಾರ್ಥದ ಹೆಸರುಗಳನ್ನು ತೆಗೆದುಕೊಂಡು ಅಕ್ಷರಾಭ್ಯಾಸ ಮಾಡಿಸುವ ಕ್ರಮವನ್ನು ಬಿಟ್ಟು ವರ್ಣಮಾಲಾ ಕ್ರಮದಲ್ಲಿಯೇ ಮಾಡಿಸಬೇಕೆಂಬುದು ಇವರ ಅಭಿಪ್ರಾಯವಾಗಿದೆ, ಎಂದು ಹೇಳಬೇಕಾಗಿಲ್ಲ. ಈ ಪುಸ್ತಕದಲ್ಲಿ ಇವರು ಹಿಡಿದಿರುವ ಮಾರ್ಗವು ಮಕ್ಕಳಿಗೆ ಅನುಕೂಲವಾಗಿಯೇ ಕಾಣುತ್ತದೆ. ಇವರು ಉಪಾಧ್ಯಾಯರೂ ಆಗಿರುವುದರಿಂದ ವಿಷಯ ಶೋಧನೆಯನ್ನು ಮಾಡಿಯೇ ಬರೆದಿರುವರೆಂಬುದರಲ್ಲಿ ಸಂದೇಹವಿಲ್ಲ. ಅಲ್ಲಲ್ಲಿ ಶಬ್ದರೂಪಗಳು ಅಷ್ಟು ಶುದ್ಧವಾಗಿ ಕಾಣಬರುವುದಿಲ್ಲ. ಪ್ರಥಮ ಶಿಕ್ಷಣದಲ್ಲಿ ಶುದ್ಧರೂಪವು ಮಕ್ಕಳ ಮನಸ್ಸಿಗೆ ಸೇರುವಂತೆ ಮಾಡಬೇಕಾದುದು ಅತ್ಯಾವಶ್ಯಕವಾದಕಾರಣ ಈ ವಿಷಯಕ್ಕೆ ಗಮನಕೊಟ್ಟು ಸರಿಪಡಿಸಿಕೊಳ್ಳಬೇಕಾಗಿರುವುದು. ಅಭಿಜ್ಞರು ಇದನ್ನು ಆಮೂಲಾಗ್ರವಾಗಿ ನೋಡಿ ಇದನ್ನು ಅಂಗೀಕರಿಸಿ ಪಾಠಕರೆಲ್ಲರೂ ಈ ಮಾರ್ಗವನ್ನನುಸರಿಸುವಂತೆ ಮಾಡಿ ಪ್ರೋತ್ಸಾಹಕೊಡಬೇಕಾಗಿ ಹಾರೈಸುತ್ತೇವೆ.

೨. ದ್ರೌಪದಿ ಉದಯರಾಗ, ೩. ಶ್ರೀಕೃಷ್ಣ ಜೋಗುಳ, ೪. ಅನುಕೂಲಸಿಂಧು, ೫. ಸಮೂಲ ಭಾಷಾಂತರ (ಪ್ರಥಮ ಭಾಗ)

ಲೇಖಕರು.—ಗವಾಸಂಡ ಶ್ರೀಯುತ ಕೆರೋಡಿ ಸುಬ್ಬರಾವ್, ಬಿ.ಎ.

(೨) ಸಣ್ಣ ಪುಟಗಳು ೮; ಮಂಗಳೂರು ಕೆನರಾ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಗಿದೆ; ೧೯೨೨; (೩) ಸಣ್ಣ ಪುಟಗಳು ೧೦; ಮಂಗಳೂರು ಕೆನರಾ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಗಿದೆ; ೧೯೨೬; ಬೆಲೆ ೧ ಆಣೆ; (೪) ಸಣ್ಣ ಪುಟಗಳು ೩೭; ಪ್ರಭಾಕರ ಮುದ್ರಾಯಂತ್ರದಲ್ಲಿ ಮುದ್ರಿತವಾಗಿದೆ; ೧೯೨೬; ಬೆಲೆ ೩ ಆಣೆ; (೫) ಕ್ರೌ೯ ಪುಟಗಳು ೫೦; ಉಡುಪಿ ಪ್ರಭಾಕರ ಮುದ್ರಾಯಂತ್ರದಲ್ಲಿ ಮುದ್ರಿತವಾಗಿದೆ; ೧೯೨೬; ಬೆಲೆ ೬ ಆಣೆ.

(೨) ಇದು ವಾರ್ಧಿಕ ಷಟ್ಪದಿಯಲ್ಲಿ ಬರೆದಿದೆ. ಲೇಖಕರು ಇದನ್ನು ಪುರಂದರ ದಾಸರಿಂದ ವಿರಚಿತವಾದುದೆಂದು ತಿಳಿಸಿದ್ದಾರೆ. (೩) ರಾಗ, ತಾಳ, ಮಟ್ಟುಗಳಿಂದ ಕೂಡಿದ ಹಾಡಿನ ರೂಪದಲ್ಲಿದೆ. (೪) ಇದರಲ್ಲಿ ಸತ್ಯ, ಶುದ್ಧಾಚಾರ ಮೊದಲಾದ ನೀತಿಗಳನ್ನು ಹೇಳಿದೆ. ಕಂದ ಪದ್ಯಗಳಿಂದ ರಚಿಸಿದ್ದಾರೆ. (೫) ಇದರಲ್ಲಿ ಸಂಸ್ಕೃತದಲ್ಲಿರುವ ಅನೇಕ ನೀತಿ ಶ್ಲೋಕಗಳನ್ನು ಪರಿವರ್ತಿಸಿ ಕಂದ ವೃತ್ತಗಳಾಗಿ ಬರೆದಿದೆ.

ಈ ಗ್ರಂಥಗಳೆಲ್ಲವೂ ಲಲಿತವಾದ ಶೈಲಿಯಲ್ಲಿ ಬರೆದಿದೆ. ಮುದ್ರಣವೂ ಕಾಗದವೂ ಉತ್ತಮವಾಗಿವೆ. ಇವು ಜನಗಳಿಗೆ ಪಠನ ಯೋಗ್ಯಗಳಾಗಿರುವುದರಿಂದ ಆದರದಿಂದ ಸ್ವೀಕರಿಸುವುದಕ್ಕೆ ಅರ್ಹವಾಗಿವೆ.

---

೬. ಭಾವಗೀತೆ, ೭. ಕಾಣದ ಕೈ, ೮. ಮದುವೆಯಲ್ಲ ಮಾರಿಗೆ ಬಲಿ, ೯. ಸಂಸಾರವೆಂದರೆ ಸೂಜಿಗಲ್ಲು, ೧೦. ಅನಾಥ ಬಂಧು

ಸಂಪಾದಕರು.—ಕೃ. ಶ್ರೀ. ಬೆಟಗೇರಿ, ಕವಿಭೂಷಣ, ಧಾರವಾಡ.

(೬) ಇದರಲ್ಲಿ ಹದಿನೈದು ಮಂದಿ ಪ್ರಾಚೀನ ನವೀನ ಕವಿಗಳು ಬರೆದಿರುವ ರಾಗ, ತಾಳ, ಮಟ್ಟುಗಳಿಂದ ಕೂಡಿದ ಕೆಲವು ಗೀತೆಗಳನ್ನೂ, ಆಯಾ ಕವಿಗಳ ಅಂಕಿತಗಳನ್ನೂ ತೋರಿಸಿದೆ. ಕ್ರೌ೯ ಪುಟಗಳು ೧೯೨ : ಬೆಳಗಾಂವಿ ಶ್ರೀ ಮಹಾವೀರ ಮುದ್ರಣಾಲಯದಲ್ಲಿ ಮುದ್ರಿತವಾಗಿದೆ; ೧೯೨೬; ಬೆಲೆ ರೂ. ೧–೦–೦.

ಇದರಲ್ಲಿರುವ ಹಾಡುಗಳು ಭಜನೆಗೆ ಯೋಗ್ಯವಾಗಿಯೂ ಶುದ್ಧವಾಗಿಯೂ ಇರುವುದರಿಂದ ಭಕ್ತರು ಹಾಡಿಕೊಂಡು ಭಜನೆ ಮಾಡಲು ಅನುಕೂಲವಾಗಿರುವುದು.

(೭) ದೆಮ್ಮಿ ಪುಟಗಳು ೨೪; (೮) ಪುಟಗಳು ೧೬; (೯) ಪುಟಗಳು ೨೨; (೧೦) ಪುಟಗಳು ೨೪.

ಮೇಲ್ಕಂಡ ನಾಲ್ಕು ಪುಸ್ತಕಗಳಿಗೂ ಲೇಖಕರು.—ಆನಂದ ಕಂದ.

ಈ ನಾಲ್ಕು ಧಾರ್ವಾಡದ ಕರ್ಣಾಟಕ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾದುವು; ೧೯೨೬ ;

ಬೆಲೆ (೭–೯–೧೦) ರೂ. ೦–೧–೬; (೮) ರೂ. ೦–೧–೦.

ಈ ನಾಲ್ಕು ಪುಸ್ತಕಗಳೂ ಗೆಳೆಯರ ಗುಂಪಿನ ಸ್ವಧರ್ಮ ಕಥಾಮಾಲೆಗೆ ಸೇರಿವೆ. ಇವುಗಳಲ್ಲಿ ಲೋಕ ವ್ಯವಹಾರಗಳನ್ನೂ ನೀತಿ ಧರ್ಮಗಳನ್ನೂ ಕಥೆಗಳ ಮೂಲಕ ವಿವರಿಸಿದೆ. ವಾಚಕರು ಇವುಗಳನ್ನೋದಿ ಅನೇಕ ವಿಶೇಷ ಸಂಗತಿಗಳನ್ನು ಗ್ರಹಿಸಬಹುದು. ಕಥೆಗಳು ಚಮತ್ಕಾರವಾಗಿ ಸರಳವಾದ ತಿಳಿಗನ್ನಡದಲ್ಲಿ ಬರೆದಿವೆ.

---

೧೧. ಜೈನ ದರ್ಶನ

ಲೇಖಕರು.—ಶ್ರೀ. ಕೆ. ಭುಜಬಲಿ ಶಾಸ್ತ್ರಿಗಳು, ಜೈನ ಸಿದ್ಧಾಂತ ಭವನದ ಮುಖ್ಯ ಲೈಬ್ರೇರಿಯನ್, ಆರಾ.

ಪ್ರಕಾಶಕರು.—ಭಾರತವರ್ಷೀಯ ದಿಗಂಬರ ಜೈನ ಪರಿಷತ್ತಿನ ಕಾರ್ಯದರ್ಶಿ.

ಸಣ್ಣ ಪುಟಗಳು ೩೨; ಮೈಸೂರು ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು; ೧೯೨೬.

ಈ ಪುಸ್ತಕದಲ್ಲಿ ಎಂಟು ಕರ್ಮಗಳು, ಐದು ವರ್ಗಣೆಗಳು, ಸಪ್ತ ತತ್ತ್ವಗಳು ಇವುಗಳನ್ನು ಸುಲಭ ಶೈಲಿಯಲ್ಲಿ ವಿವರಿಸಿ ಅನೇಕ ಜೈನ ಸಿದ್ಧಾಂತಗಳನ್ನು ಪ್ರಕಟಪಡಿಸಿದೆ. ಇದು ಸರ್ವರಿಗೂ ಓದಿ ಗ್ರಹಿಸಲು ಯೋಗ್ಯವಾಗಿರುವುದು.

---

೧೨. ಕಾಣಿಕೆ

ಲೇಖಕರು.—ಕಡೆಂಗೋಡ್ಲು ಶಂಕರಭಟ್ಟರು.

ಪ್ರಕಾಶಕರು.—ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ಕ್ರೌನ್ ಪುಟಗಳು ೩೦; ಸದಾನಂದ ಕೋ-ಆಪರೇಟಿವ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಯ್ತು; ೧೯೨೭; ಬೆಲೆ ೩ ಆಣೆ.

ಇದು ಚೌಪದಿ, ಷಟ್ಪದಿ, ಸೀಸ, ರಗಳೆಗಳ ರೂಪವಾದ ಕವಿತೆಗಳಿಂದ ಕೂಡಿದ ಗ್ರಂಥ. ಇದರಲ್ಲಿ ಪ್ರಕೃತಿ, ನೀತಿ, ಲೋಕ ವ್ಯವಹಾರಗಳಿಗೆ ಸಂಬಂಧಪಟ್ಟ ವಿಷಯಗಳು ಸುಲಭವಾದ ತಿಳಿಗನ್ನಡದ ಶೈಲಿಯಲ್ಲಿ ವರ್ಣಿತವಾಗಿವೆ. ಕಾಣಿಕೆ, ಪತಿತನಿಗುಪಚಾರ, ಭಿಕ್ಷುಕ, ದಿನದ ಕೆಲಸ, ಪ್ರೇಮ ಪಾಶ, ಪೂರ್ವಸ್ಮರಣೆ, ಮುಗುಳು, ಆಕಾಶ ವಾಣಿ, ನಗೆ, ಸಂದೇಶ, ತಾರೆ, ದೊರೆ, ವಿರಹಿಣೀಗೀತ, ಇಂದು, ಮರಣ, ಹಳೆಯ ನೆನಪು, ಮರವು, ಪ್ರಾರ್ಥನೆ—ಎಂಬ ಹದಿನೆಂಟು ವಿಷಯಗಳ ಮೇಲಣ ಕವಿತೆಗಳಿವೆ. ವರ್ಣನೆಯು ಹೃದಯಂಗಮವಾಗಿದೆ. ಕೆಲವು ಶಬ್ದ ಪ್ರಯೋಗಗಳು ಅಷ್ಟು ಶುದ್ಧವಾಗಿಲ್ಲ. ವಿಷಯವು ಎಲ್ಲರೂ ಓದಿ ತಿಳಿದು ಸಂತೋಷಪಡುವುದಕ್ಕೆ ಯೋಗ್ಯವಾಗಿದೆ.

---

೧೩. ವಿಶ್ವ ದರ್ಪಣಂ, ೧೪. ಬಸವೇಶ್ವರನ ಕೀರ್ತನೆಗಳು

ಲೇಖಕರು.—ಜೀರಗೆ ಬಸವಲಿಂಗಪ್ಪನವರು, ಚೀಫ್ ಕೋರ್ಟ್ ಟ್ರಾನ್ಸ್ಲೇಟರು, ಬೆಂಗಳೂರು.

(೧೩) ಡೆಮ್ಮಿ ಪುಟಗಳು ೫೬; ಬೆಂಗಳೂರು ಸಿಟಿ ಯೂನಿವರ್ಸಲ್ ಪವರ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು; ೧೯೨೭; ಬೆಲೆ ೬ ಆಣೆ.

(೧೪) ಡೆಮ್ಮಿ ಪುಟಗಳು ೨೪; ಒಕ್ಕಲಿಗರ ಮುದ್ರಣಾಲಯದಲ್ಲಿ ಮುದ್ರಿತವಾಯ್ತು; ೧೯೨೫; ಬೆಲೆ ೫ ಆಣೆ.

(೧೩) ಇದರಲ್ಲಿ ಅನೇಕ ಲೋಕ ವ್ಯವಹಾರ, ನೀತಿ, ಧರ್ಮ ಮೊದಲಾದ ವಿಷಯಗಳನ್ನು ವರ್ಣಿಸಿ ಬರೆದ ೪೬೯ ಕಂದ ಪದ್ಯಗಳಿವೆ. ೧. ಜಗತ್ತಿನ ಸ್ವಭಾವ, ೨. ದ್ವೇಷ ಪ್ರೀತಿ, ೩. ನಿಜ ರಕ್ಷಣೆ ವಿರೋಧ ಶಿಕ್ಷಣೆ, ೪. ಪ್ರಾಣಿಗಳ ತಾರತಮ್ಯ, ೫. ಸುಳ್ಳಿನ ರುಚಿ, ೬. ಜೀವಿಗಳ ಸಂಬಂಧ, ೭. ಒಳ್ಳೆಯದು ಕೆಟ್ಟದ್ದು, ೮. ಕಷ್ಟ ಸುಖ, ೯. ಹೊರಗಣ ಪ್ರಕಾಶ, ೧೦. ಬಯಲು, ೧೧. ಪ್ರಾಣಿಯ ಕೈಗೆ ಪ್ರಾಣಿ ಸಿಕ್ಕುವುದು, ೧೨. ದಯಾ ರಸ, ೧೩. ವಸ್ತು ಪ್ರೀತಿ, ೧೪. ಮೂಢತ್ವ, ೧೫. ವಾಂಛಕತೆ, ೧೬. ಕಾಲಂ, ೧೭. ಕಪಟಿಗಳು, ೧೮. ವೈರಾಗ್ಯ, ೧೯. ಮರಣ ಭೀತಿ, ೨೦. ಕೃತಿ ಕಾರಣಂ—ಎಂಬ ವಿಷಯಗಳನ್ನು ವಿವರಿಸಿದೆ. ಪದ್ಯಗಳ ಶೈಲಿಯು ಸುಲಭವಾದ ತಿಳಿಗನ್ನಡವಾಗಿದೆ. ಆದರೆ ಕೆಲವೆಡೆಗಳಲ್ಲಿ ಅಷ್ಟು ಸರಳವಾಗಿಯೂ ಶ್ರಾವ್ಯವಾಗಿಯೂ ಕಾಣುವುದಿಲ್ಲ. ಅಲ್ಲಲ್ಲಿ ಅಶುದ್ಧ ರೂಪಗಳೂ ವ್ಯಾಕರಣ ದೋಷಗಳೂ ಕಾಣಬರುವುವು. ಸಂಗತಿಗಳು ಎಲ್ಲರೂ ಓದಿ ಗ್ರಹಿಸಬೇಕಾದುವಾಗಿವೆ. ಕಾಗದವೂ ಮುದ್ರಣವೂ ಉತ್ತಮವಾಗಿವೆ. ಇವರಿಗಿರುವ ಭಾಷಾ ಪ್ರೇಮವು ಈ ಗ್ರಂಥದಿಂದ ವ್ಯಕ್ತವಾಗುವಂತಿದೆ. ಇದನ್ನು ಎಲ್ಲರೂ ಓದಿ ಗ್ರಹಿಸಿ ಪ್ರೋತ್ಸಾಹಕರಾಗುವರೆಂದು ಹಾರೈಸುತ್ತೇವೆ.

(೧೪) ಇದು ಬಗೆ ಬಗೆಯ ಮಟ್ಟುಗಳಿಂದ ಕೂಡಿ ಭಜನೆಗೆ ಯೋಗ್ಯವಾದ ೩೩ ಹಾಡುಗಳಿಂದ ಕೂಡಿದೆ. ಇದರಲ್ಲಿ ಬಸವೇಶ್ವರನ ಮಹಿಮೆಯೂ, ಮಹಾ ಕಾರ್ಯಗಳೂ, ಸ್ತೋತ್ರವೂ ವರ್ಣಿತವಾಗಿವೆ. ಕೊನೆಯಲ್ಲಿ ಲಲಿತ ರಗಳೆಯೂ, ವಿನೋದಕರವಾದ ಪ್ರಹಸನ ರೂಪವಾದ ಸಂಭಾಷಣೆಯೂ ಇವೆ. ಇದರಲ್ಲಿರುವ ಕೀರ್ತನೆಗಳು ಭಕ್ತರು ಭಜನೆ ಮಾಡಿ ಸಂತೋಷಪಡಲು ಅರ್ಹವಾಗಿವೆ.

---

೧೫. ಸತ್ಯ ಪ್ರಕಾಶ, ೧೬. ದಮಯಂತಿ, ೧೭. ಮಾನವ ಧರ್ಮ

ಲೇಖಕರು.—ಬಸವಾಚಾರ್ಯ ಬೂದಪ್ಪಯ್ಯ, ಬೂದಿಹಾಳ ಮಠ, ಕನ್ನಡ ಟೀಚರ, ಹಾಯಸ್ಕೂಲ, ರಾಣೀಬೆನ್ನೂರ.

ಈ ಮೂರು ಪುಸ್ತಕಗಳೂ ಬೆಳಗಾಂವಿ ಶ್ರೀ ಮಹಾವೀರ ಮುದ್ರಣಾಲಯದಲ್ಲಿ ಮುದ್ರಿತವಾದುವು: (೧೫) ೧೯೧೮; ಬೆಲೆ ೪ ಆಣೆ; (೧೬, ೧೭) ೧೯೨೧; ಬೆಲೆ ೮ ಆಣೆ.

ಈ ಮೂರು ಗ್ರಂಥಗಳೂ ಅನೇಕ ನೀತಿಗಳನ್ನೂ ಲೋಕ ವ್ಯವಹಾರಗಳನ್ನೂ ತಿಳಿಸುವುದಕ್ಕಾಗಿ ಪುರಾಣ ಪ್ರಸಿದ್ಧ ಕಥೆಗಳನ್ನೂ, ಪ್ರಸಿದ್ಧ ಮಹನೀಯರನ್ನೂ

ತೆಗೆದುಕೊಂಡು ವಿವರಿಸಿ, ಜನಗಳು ಸದಾಚಾರ ಸಂಪನ್ನರಾಗಬೇಕೆಂಬ ಉದ್ದೇಶದಿಂದ ಬರೆದುದಾಗಿದೆ. ಭಾಷೆಯು ಸುಲಭವಾದ ತಿಳಿಗನ್ನಡವಾಗಿದ್ದರೂ ಪ್ರಯೋಗಗಳೂ ಶಬ್ದರೂಪಗಳೂ ಅಲ್ಲಲ್ಲಿ ಅಷ್ಟು ಸಮಂಜಸವಾಗಿಲ್ಲ. ಈ ದೇಶದ ಕನ್ನಡಿಗರಿಗೆ ಅಷ್ಟು ಸ್ಪಷ್ಟವಾಗಿ ಗೊತ್ತಾಗುವಂತೆ ಕಾಣಬರುವುದಿಲ್ಲ. ಅನೇಕ ಸಂಗತಿಗಳನ್ನು ಸಂಗ್ರಹಿಸಿ ಲೇಖಕರು ಶ್ರಮಪಟ್ಟು ಬರೆದಿದ್ದಾರೆ. ಎಲ್ಲರೂ ಓದಿ ತಿಳಿದು ನಡತೆಯನ್ನು ತಿದ್ದಿಕೊಳ್ಳಲು ಇದು ಸಹಾಯಕವಾಗಿದೆ. ಕಾಗದವು ಉತ್ತಮವಾಗಿಯೂ ಮುದ್ರಣವು ಅಂದವಾಗಿಯೂ ಇದೆ. ಭಾಷಾಭಿಮಾನಿಗಳು ಇದನ್ನು ಓದಿ ಗ್ರಹಿಸಿ ಲೇಖಕರಿಗೆ ಪ್ರೋತ್ಸಾಹವನ್ನುಂಟುಮಾಡುವರೆಂದು ಬಯಸುತ್ತೇವೆ.

---

೧೮. ತಾರಾಪ್ಯಾರಿ

ಲೇಖಕರು.—ನರಶೀಪುರದ ಶೇಷಗಿರಿರಾವ್.

ಕ್ರೌನ್ ಪುಟಗಳು ೨೫೩; ಮೈಸೂರು ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು; ೧೯೨೬; ಬೆಲೆ ರೂ. ೧-೪-೦.

ಇದೊಂದು ಕಥಾರೂಪವಾದ ವಚನ ಗ್ರಂಥ. ಇದಕ್ಕೆ ಆಧಾರವು ಯಾವುದೆಂಬುದು ಗೊತ್ತಾಗುವುದಿಲ್ಲವಾಗಿ ಕಟ್ಟುಕಥೆ ಎಂದು ಹೇಳಬೇಕಾಗಿದೆ. ಲೇಖಕರು ಲೋಕದ ಸದ್ಯಃಸ್ಥಿತಿಯನ್ನು ನೋಡಿ ಈಗಿನ ಆಚಾರ ವ್ಯವಹಾರ ನೀತಿ ಧರ್ಮಗಳು ಸನಾತನ ಧರ್ಮಕ್ಕೆ ವಿರುದ್ಧವಾಗಿದ್ದು ಕೇಡಿಗೆ ಕಾರಣವಾಗಿರುವುದರಿಂದ ಸಾಧ್ಯವಾದಷ್ಟುಮಟ್ಟಿಗೆ ಇವುಗಳನ್ನು ಬಿಡುತ್ತ ಪೂರ್ವ ಮಾರ್ಗವನ್ನನುಸರಿಸಿದರೆ ಸೌಖ್ಯವುಂಟಾಗುವುದೆಂಬುದನ್ನು ನಿದರ್ಶನಗಳೊಡನೆ ತಿಳಿಯಪಡಿಸಬೇಕೆಂಬ ಉದ್ದೇಶದಿಂದ ಇದನ್ನು ಬರೆದಿರುವಂತೆ ತೋರುತ್ತದೆ.

ಪೀಠಿಕೆಯಲ್ಲಿ—"ಭಾರತಮಾತೆಯು ಪರ್ವತದಿಂದ ಕೆಳಗಿಳಿಯಲಾರಂಭಿಸಿದಳು. ಇಳಿಯುವುದು ಸುಲಭ. ನಾವು ಬಹಳ ಕೆಳಗಿಳಿದಿರುವೆವು. ಆದಾಗ್ಯೂ ಕೆಳಗಿರುವ ಘೋರವಾದ ಕಣಿವೆಯನ್ನು ಇನ್ನೂ ಸೇರಿಲ್ಲ. ಆ ಕಣಿವೆಯನ್ನು ಸೇರಿಬಿಟ್ಟರೆ ಅಲ್ಲಿಗೆ ಸರ್ವನಾಶವಾಗುವುದು......'ಕಣಿವೆಯನ್ನು ಸೇರಬೇಡಿ, ಹಿಂದಿರುಗಿ, ಕಷ್ಟವಾದರೂ ಒಂದೊಂದು ಮೆಟ್ಟಿಲನ್ನಾದರೂ ಹತ್ತಿರಿ' ಎಂದು ಹೇಳುವವರು ವಿರಳ......ಕೆಲವು ಶತಮಾನಗಳಿಂದ ಇಳಿದಿರುವ ಪರ್ವತವನ್ನು ಒಂದೆರಡು ವರ್ಷಗಳಲ್ಲಿ ಹತ್ತುವುದು ಸಾಧ್ಯವಿಲ್ಲ. ಆದರೂ ಪ್ರಯತ್ನವನ್ನು ಮಾಡಿ, ನೀವು ಹತ್ತಲು ಕಾಲವು ಮೀರಿಹೋಗಿದ್ದರೆ ನಿಮ್ಮ ಬಾಲಕರಾದರೂ ಹತ್ತುವುದನ್ನು ನೋಡಿ ಸಂತೋಷಪಡಿ. ನಾಸ್ತಿಕ ವಾದವನ್ನು ಬಿಡಿ. ಮತ್ತೊಬ್ಬರಿಗಾಗಿ ಕಾಯಬೇಡಿ ಎಂದು ಪ್ರಾರ್ಥಿಸುವುದಕ್ಕಾಗಿ ಈ ಪುಸ್ತಕವು ಬರೆಯಲ್ಪಟ್ಟಿರುವುದೇ ವಿನಹ ಯಾವ ಮತವನ್ನಾಗಲೀ ಯಾರ ನಡತೆಯನ್ನಾಗಲೀ ಜರಿಯುವುದಕ್ಕಾಗಿ ಅಲ್ಲ. ಜ್ಞಾನವನ್ನು ಸಂಪಾದಿಸಿ ಮತಗಳನ್ನು ಒಂದು

ಕ್ಕೊಂಡನ್ನು ಹೋಲಿಸಿ ಉತ್ಕೃಷ್ಟವಾದ ಮತವನ್ನು ಅವಲಂಬಿಸಬೇಕಲ್ಲದೆ ಹೊಟ್ಟೆಪಾಡಿಗಾಗಿ ಅಥವಾ ಇಂದ್ರಿಯ ಸುಖಕ್ಕಾಗಿ ಮತವನ್ನು ಬದಲಾಯಿಸಬಾರದೆಂತಲೂ, ಅಂಥ ತುಚ್ಛವಾದ ಕಾರಣಗಳನ್ನೇ ಮುಂದಿಟ್ಟುಕೊಂಡು ಅನಾದಿಯಿಂದಲೂ ನಮ್ಮ ದೇಶದಲ್ಲಿ ನೆಲೆಸಿರುವ ಆಚಾರ, ಆಹಾರ, ನಡತೆ, ಉಡುವು ಮುಂತಾದವುಗಳನ್ನು ಬದಲಾಯಿಸಬಾರದೆಂತಲೂ, ಇಹ ಪರಗಳೆರಡರಲ್ಲಿಯೂ ಸುಖವನ್ನುಂಟುಮಾಡಿಕೊಳ್ಳುವ ಜ್ಞಾನವನ್ನು ಕೊಡುವ ವಿದ್ಯೆಯನ್ನು ಕಲಿಯಬೇಕಲ್ಲದೆ ಪರಲೋಕವನ್ನೂ ಪರಮಾತ್ಮನನ್ನೂ ಮರೆಸುವ ವಿದ್ಯೆಯನ್ನು ಮರೆಯಬೇಕೆಂತಲೂ ಕೇಳಿಕೊಳ್ಳುವುದಕ್ಕಾಗಿ ಈ ಗ್ರಂಥವು ಬರೆಯಲ್ಪಟ್ಟಿದೆ'' ಎಂದು ಸೂಚಿಸಿರುತ್ತಾರೆ. ಲೇಖಕರ ಉದ್ದೇಶವು ಉತ್ತಮವೂ ಆವಶ್ಯಕವೂ ಆದುದೆಂಬುದಕ್ಕೆ ಸಂದೇಹವಿಲ್ಲ. ಆಬಾಲವೃದ್ಧರೂ ಇದನ್ನೋದಿ ಗ್ರಹಿಸಬೇಕಾದುದು ಆವಶ್ಯಕವಾಗಿದೆ. ಅನೇಕ ವಿಷಯಗಳನ್ನು ಶ್ರಮಪಟ್ಟು ಸಂಗ್ರಹಿಸಿ ಬರೆದಿರುತ್ತಾರೆ. ಇವನ್ನು ಹೆಚ್ಚಾಗಿ ಓದಬೇಕಾದವರು ಬಾಲಕರಾದುದರಿಂದ ಭಾಷೆಗೆ ಮುಖ್ಯವಾಗಿ ಗಮನಕೊಡಬೇಕು. ಅಶುದ್ಧ ಶಬ್ದರೂಪಗಳು ಈ ಪುಸ್ತಕದಲ್ಲಿ ಅಸಂಖ್ಯಾತಗಳಾಗಿವೆ. ಸರಿಯಾದವರ ಸಹಾಯದಿಂದ ಮತ್ತೊಂದಾವೃತ್ತಿ ಶೋಧಿಸಿ ಮುದ್ರಿಸಿದ್ದರೆ ಅನುಕೂಲವಾಗಿದ್ದಿತು. ಈಗಲೂ ಪುನರ್ಮುದ್ರಣದಲ್ಲಾದರೂ ಆ ರೀತಿ ಮಾಡುವುದು ಅತ್ಯಾವಶ್ಯಕವಾಗಿದೆ. ಎಲ್ಲರೂ ಓದಿ ಸಂಗತಿಗಳನ್ನು ಗ್ರಹಿಸಿದರೆ ಲೇಖಕರ ಶ್ರಮವು ಸಾರ್ಥಕವಾದೀತೆಂದು ಹಾರೈಸುತ್ತೇವೆ.

---

೧೯. ಕರ್ನಾಟಕ ಸಿಂಹಾಸನ ನಾಟಕವು

ಲೇಖಕರು.—ನರಸಿಂಗ ಲಕ್ಷ್ಮಣ ಹೆಗ್ಡೆ, ಬಿ.ಎ.

ಡೆಮ್ಮಿ ಪುಟಗಳು ೧೧೨; ಮಂಗಳೂರು ಸಿಟಿ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು; ೧೯೨೬;
ಬೆಲೆ ೧೨ ಆಣೆ.

ವಿಜಯನಗರದ ಮತ್ತು ವಿದ್ಯಾರಣ್ಯರ ಚರಿತ್ರೆಯನ್ನು ಸೂಚಿಸುವಂತೆ ಇದನ್ನು ಬರೆದಿರುವುದರಿಂದ ಇದು ಚರಿತ್ರೆಗೆ ಸಂಬಂಧಪಟ್ಟ ನಾಟಕವಾಗಿದೆ. ಇದರಲ್ಲಿ ಐದು ಅಂಕಗಳಿವೆ. ಅಲ್ಲಲ್ಲಿ ನಾನಾ ರಾಗ ತಾಳಗಳುಳ್ಳ ಮಟ್ಟುಗಳಿಂದ ಕೂಡಿದೆ. ಭಾಷಾ ಶೈಲಿಯು ಸುಲಭವಾಗಿಯೂ ರಸವತ್ತಾಗಿಯೂ ಇದೆ. ನಾಟಕ ಲಕ್ಷಣಗಳನ್ನು ಸಂಪೂರ್ಣವಾಗಿ ಅನುಸರಿಸಿ ಬರೆದಂತಿಲ್ಲ. ಲೇಖಕರು ಇಂಗ್ಲಿಷಿನಲ್ಲಿ ಬರೆದಿರುವ ತಮ್ಮ ಕಾಗದದಲ್ಲಿ—''ಇದು ರಂಗಸ್ಥಳದಲ್ಲಿ ಅಭಿನಯಿಸುವುದಕ್ಕೂ ಗ್ರಂಥ ರೂಪವಾಗಿ ಓದಿ ಆನಂದಿಸುವುದಕ್ಕೂ ಅನುಕೂಲವಾಗುವಂತೆ ಬರೆದಿದೆ. ಈ ಎರಡು ವಿಧಗಳಿಗೂ ಉಪಯೋಗವಾಗುವಂತೆ ಬರೆದಿರುವ ನಾಟಕಗಳು ಕಡಿಮೆ'' ಎಂದು ತಿಳಿಸಿರುವರು. ಇದರಲ್ಲಿ ಪದ್ಯಗಳೊಂದೂ ಇಲ್ಲ,

ಭಾಷೆಯು ಶುದ್ಧವಾಗಿದೆ. ಕಾಗದವೂ ಮುದ್ರಣವೂ ಉತ್ತಮವಾಗಿವೆ. ಮುದ್ರಣದ ತಪ್ಪುಗಳಿಲ್ಲ. ಇದನ್ನೋದಿ ಅನೇಕ ಚರಿತ್ರಾಂಶಗಳನ್ನು ಗ್ರಹಿಸಬಹುದಾಗಿದೆ. ಎಲ್ಲರೂ ಈ ಗ್ರಂಥಕ್ಕೆ ಪ್ರೋತ್ಸಾಹಕೊಡುತ್ತಾರೆಂದು ನಂಬಿದ್ದೇವೆ.

---

೨೦. ಶ್ರೀ ಗುರು ಚರಿತ್ರ

ಲೇಖಕರು.—ರಾಘವೇಂದ್ರ ಸುಬ್ಬರಾವ ಮೂಡಕಟ್ಟಿ, ಬಿ.ಎ., ಬೆಳಗಾಂವಿ.

ರಾಯಲ್ ೧೨ ಪುಟಗಳ ಸುಮಾರು ೫೮೦ ಪುಟಗಳು ; ಬೆಳಗಾಂವಿ ಶ್ರೀರಾಮ ತತ್ತ್ವ ಪ್ರಕಾಶ ಮುದ್ರಣಾಲಯದಲ್ಲಿ ಮುದ್ರಿತವಾಯ್ತು.

ಇದು ಗುರು ಮಹಿಮೆಯನ್ನು ವಿಸ್ತಾರವಾಗಿ ತೋರ್ಪಡಿಸುವಂತೆ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿರುವ ಪಾರಾಯಣ ಯೋಗ್ಯವಾದ ಪದ್ಯ ಕಾವ್ಯ ಗ್ರಂಥ. ಈ ಗ್ರಂಥದಲ್ಲಿ ೫೩ ಅಧ್ಯಾಯಗಳೂ ಒಟ್ಟು ಸುಮಾರು ೨೦೦೦ ಪದ್ಯಗಳೂ ಇವೆ. ಕಥಾ ಸಂದರ್ಭ ಸೂಚನೆಯ ಉದ್ದೇಶದಿಂದ ಪ್ರತಿ ಒಂದು ಅಧ್ಯಾಯಕ್ಕೂ ಒಂದೊಂದು ಭಾವಚಿತ್ರವನ್ನು ಸೇರಿಸಿದೆ. ಈ ಗ್ರಂಥದ ಭಾಷೆಯು ಲಲಿತವಾಗಿಯೂ ಸರಳವಾಗಿಯೂ ಆಬಾಲವೃದ್ಧರಿಗೂ ತಿಳಿಯುವಷ್ಟು ಸುಲಭವಾಗಿಯೂ ಇದ್ದು ಮಾತನಾಡುವ ಶೈಲಿಯಲ್ಲಿದೆ. ಮುದ್ರಣವು ಅಂದವಾಗಿಯೂ, ಕಾಗದವು ಉತ್ತಮವಾಗಿಯೂ, ದಪ್ಪವಾದ ಸ್ಫುಟಾಕ್ಷರಗಳುಳ್ಳದಾಗಿಯೂ, ಅಚ್ಚಿನ ತಪ್ಪುಗಳು ಬಹಳ ಕಡಿಮೆಯಾಗಿಯೂ ಇದೆ. ಲೇಖಕರು ಈ ಕಾವ್ಯವನ್ನು ಸುಮಾರು ಒಂಬತ್ತು ತಿಂಗಳಲ್ಲಿ ಆಮೂಲಾಗ್ರವಾಗಿ ಬರೆದು ಮುಗಿಸಿದಂತೆ ಗ್ರಂಥಾಂತದಲ್ಲಿ ಹೇಳಿರುವರು. ಇಷ್ಟು ವಿಸ್ತಾರವಾದ ಕಥೆಯನ್ನು ಇಷ್ಟು ಅಲ್ಪ ಕಾಲದಲ್ಲಿ ಎರಡು ಸಾವಿರದಷ್ಟು ಹೆಚ್ಚು ಸಂಖ್ಯೆಯುಳ್ಳ ಪದ್ಯಗಳಲ್ಲಿ ಬರೆದಿರುವುದು ಆಶ್ಚರ್ಯಕರವಾಗಿಯೂ ಶ್ಲಾಘನೀಯವಾಗಿಯೂ ಇದೆ. ಈ ಕಾಲದಲ್ಲಿ ಇಷ್ಟು ತಾಳ್ಮೆಯಿಂದಲೂ ಸ್ಥೈರ್ಯದಿಂದಲೂ ಮನಃಪೂರ್ವಕವಾಗಿ ಕೆಲಸ ಮಾಡಿರುವುದನ್ನು ನೋಡಿದರೆ ಲೇಖಕರ ಸಾಮರ್ಥ್ಯವನ್ನು ಎಲ್ಲರೂ ಕೊಂಡಾಡಬೇಕಾಗಿದೆ. ಈ ಗ್ರಂಥದಲ್ಲಿ ಅಲ್ಲಲ್ಲಿ ಒಳ್ಳೆಯ ನಿದರ್ಶನಗಳನ್ನೂ ಔಪಮ್ಯಗಳನ್ನೂ ಲೋಕ ನ್ಯಾಯಗಳನ್ನೂ ಉಪಯೋಗಿಸಿ ವಾಚಕರಿಗೆ ಉತ್ಸಾಹಕರವಾಗುವಂತೆ ಬರೆದಿದೆ. ಲೇಖಕರು ಗ್ರಂಥಾದಿಯಲ್ಲಿ 'ವ್ಯಾಕರಣ ಛಂದಸ್ಸು ಶಾಸ್ತ್ರವ । ನಾಕಳಿಯದೀ ಕೃತಿಯ ನೆತ್ತಿಸ ।' ಎಂತಲೂ, ಗ್ರಂಥಾಂತದಲ್ಲಿ 'ಅರಿತವನು ನಾನಲ್ಲ ವ್ಯಾಕರಣಾದಿ ಬಂಧಗಳಾ' ಎಂತಲೂ ಹೇಳಿರುವ ಹಾಗೆ ವ್ಯಾಕರಣ ಮೊದಲಾದುವುಗಳಿಗೆ ಅಷ್ಟು ಲಕ್ಷ್ಯ ಕೊಟ್ಟಂತೆ ಕಾಣುವುದಿಲ್ಲ. ಅಲ್ಲಲ್ಲಿ ಶಬ್ದ ರೂಪಗಳು ಅಶುದ್ಧವಾಗಿವೆ. ಶಿಥಿಲ ದ್ವಿತ್ವಗಳು ನಿಯಮವನ್ನು

ಬಿಟ್ಟಂತೆ ಅಲ್ಲಲ್ಲಿ ಕಾಣಬರುವುವು. ಛಂದಸ್ಸೂ ಕೆಲವೆಡೆಯಲ್ಲಿ ಸರಿಯಾಗಿರುವಂತಿಲ್ಲ. ಕೆಲವನ್ನು ಈ ಕೆಳಗೆ ಕೊಟ್ಟಿದೆ:—

ಶಬ್ದ ರೂಪಗಳು.—ಪುಟ ೧. ಶುಭಘೋಷಾಯ ; ೨. ಪಳಿದು, ಪಠಣ, ಪಿಶಾಸಚಿಸ್ವ, ಹುಳದಂಜಲಿಪೆಸುತ್ತಲಿ, ಅಸಮಾಸ್ಯ ; ೩. ತಾಯಿ ಇರುವಳೆ, ಪಾಲಿಸು ದಯೆಯೊಳೆನ್ನಯ, ನಿಗದೆ, ಮಾಡಿದಿ ; ೪. ಸೀಸು ಅಂತಃಕರಣ, ೫. ದೃಷ್ಟಿ ಕರುಣಾದ್ರಿತವು, ತೀರ್ಥಾಟಣ, ಇತ್ಯಾದಿ.

ಶಿಥಿಲ ದ್ವಿತ್ವ.—ಪುಟ ೬. ಬಂತು ದ್ವಾಪರವು, ಕಲಹ ದ್ವೇಷವ, ಪುಣ್ಯಕೆ ಸ್ತುತಿಸಿ, ಉತ್ತರ ಬ್ರಹ್ಮದೇವನಿಗೆ, ಇತ್ಯಾದಿ.

ಛಂದಸ್ಸು.—ಪುಟ ೧. ವಂದಿಸುವೆ ನಾನಿನ್ನ ಗಿರಿಜಾ।ನಂದನನೆ ಗಜ ವದನ ವಿಘ್ನ।ವೃಂದ ಸಂಹಾರಕನೆ .... ॥ ಇಲ್ಲಿ ಎರಡನೆಯ ಪಾದಕ್ಕೆ ೧೩ ಮಾತ್ರೆಗಳಿವೆ; ೧೪ ಇರಬೇಕು.

ಈ ಗ್ರಂಥದ ಕಥಾ ಭಾಗವನ್ನು ಸೂಚಿಸುವುದಕ್ಕಾಗಿ ಸಂಕ್ಷಿಪ್ತ ಕಥೆಯಾಗಲಿ ವಿಷಯಸೂಚಿಕೆಯಾಗಲಿ ಉಪೋದ್ಘಾತವಾಗಲಿ ಇಲ್ಲದಿರುವುದು ವಾಚಕರಿಗೆ ಅನನುಕೂಲವಾಗಿ ವಾಚನಕ್ಕೆ ಪ್ರೋತ್ಸಾಹವನ್ನು ಕೊಡದಂತಾಗಿದೆ. ಕಥಾ ಭಾಗವನ್ನು ನೋಡಿದರೆ ಪುರಾಣ ಪ್ರಸಿದ್ಧ ಕಥೆಯೆಂದು ತೋರುವ ಹಾಗೆಯೂ ಇದೆ. ಈ ಕಥೆಗೆ ಆಧಾರವು ಯಾವುದಾದರೂ ಇದೆಯೋ ಅಥವಾ ಇದು ಕಲ್ಪಿತವೋ ಎಂಬುದು ಗೊತ್ತಾಗುವಂತಿಲ್ಲ. ಈ ಸಂಶಯಗಳ ಪರಿಹಾರಕ್ಕಾಗಿ ತಕ್ಕಷ್ಟು ಪ್ರಯಾಸವನ್ನು ತೆಗೆದುಕೊಂಡಿದ್ದರೆ ಬಹಳ ಅನುಕೂಲವಾಗುತ್ತಿದ್ದಿತು. ಪುಸ್ತಕವು ಬೈಂಡಿಲ್ಲದೆ ಬಿಡಿ ಪುಟಗಳಾಗಿರುವುದರಿಂದ ಪಾರಾಯಣ ಮಾಡುವವರಿಗೆ ಸೌಕರ್ಯವಿದ್ದರೂ ಸಾಮಾನ್ಯವಾಗಿ ಓದಿ ಗ್ರಹಿಸುವರಿಗೆ ಅಷ್ಟು ಅನುಕೂಲವಿಲ್ಲವಾಗಿದೆ. ಪುಟಗಳು ಕಳೆದುಹೋದರೂ ಹೋಗಬಹುದು. ಪುಸ್ತಕದ ಆಕಾರವು ಬೈಂಡು ಮಾಡುವುದಕ್ಕೆ ಅಷ್ಟು ಅನುಕೂಲವಾಗಿಯೂ ಅಂದವಾಗಿಯೂ ಇಲ್ಲ. ಲೇಖಕರು ಬರೆದಮೇಲೆ ಮತ್ತೊಂದಾವೃತ್ತಿ ಶೋಧಿಸಿ ಮುದ್ರಿಸಿದ್ದರೆ ಚೆನ್ನಾಗಿದ್ದಿತು. ಈ ಗ್ರಂಥದಲ್ಲಿ ಗುರು ಭಕ್ತಿಯು ಚೆನ್ನಾಗಿ ವ್ಯಕ್ತವಾಗುವಂತೆ ವಿಸ್ತಾರವಾದ ಕಥೆಗಳಿಂದ ಬರೆದಿರುವುದರಿಂದ ಲೇಖಕರಿಗೆ ಗ್ರಾಹಕರೆಲ್ಲರೂ ಪ್ರೋತ್ಸಾಹಕೊಟ್ಟು ಅನುಕೂಲರಾಗುವಾಗಿ ಈ ಗ್ರಂಥವನ್ನೋದಿ ಆನಂದಪಡಬೇಕೆಂಬುದು ನಮ್ಮ ಹಾರೈಕೆ. ಈ ಗ್ರಂಥವು ಉತ್ತಮವಾಗಿದ್ದರೂ ಮೇಲೆ ತಿಳಿಸಿದ ಕೆಲವು ಸಾಮಾನ್ಯ ನ್ಯೂನತೆಗಳನ್ನು ಸರಿಪಡಿಸಿ ಲೇಖಕರು ಪುನರ್ಮುದ್ರಣದಲ್ಲಿ ಇನ್ನೂ ಉತ್ತಮ ಗ್ರಂಥವಾಗುವಂತೆ ಮಾಡುವರೆಂದು ನಂಬುತ್ತೇವೆ.

೨೧. ಬೋಧಾಮೃತ (ವರ್ಷ ೧, ಸಂಚಿಕೆ ೧)

ಸಂಪಾದಕರು.—ಶ್ರೀ ಶಿವಪುತ್ರಸ್ವಾಮಿ.

ಪ್ರಕಾಶಕರು.—ಶಿವರಾಮ ಲಕ್ಷ್ಮಣ ಚಂದ್ರಗಿರಿ, ಸಿದ್ಧಾಶ್ರಮ, ಹುಬ್ಬಳ್ಳಿ.

ಡೆಮ್ಮೈ ಪುಟಗಳು ೨೬ ; ಧಾರವಾಡದ ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಯ್ತು; ೧೯೨೬; ವಾರ್ಷಿಕ ವರ್ಗಣಿ ರೂ. ೨–೦–೦; ಬಿಡಿ ಸಂಚಿಕೆ ೪ ಆಣೆ, ಅಂಚೆ ವೆಚ್ಚ ಸೇರಿ.

ಇದೊಂದು ಮಾಸಿಕ ಪುಸ್ತಕವು. ಇದರಲ್ಲಿ ಶ್ರೀ ಸದ್ಗುರು ಸಿದ್ಧಾರೂಢ ಬೋಧಾಮೃತ, ಶ್ರೀಮಚ್ಛಂಕರಾಚಾರ್ಯ ವಿರಚಿತ ಶತಶ್ಲೋಕೀ ಟೀಕಾ ತಾತ್ಪರ್ಯ ಸಹಿತ; ಈ ಎರಡು ವಿಷಯಗಳಿವೆ. ಜನರಿಗೆ ವೇದಾಂತ ವಿಚಾರವನ್ನು ತಿಳಿಯ ಪಡಿಸಬೇಕೆಂಬುದೇ ಈ ಪತ್ರಿಕೆಯ ಉದ್ದೇಶವೆಂದು ಕಾಣುತ್ತದೆ. ಲೇಖಕರು ಉಪೋದ್ಘಾತದಲ್ಲಿ "ಅದ್ದರಿಂದ ಈ ಬೋಧಾಮೃತದಲ್ಲಿ ಶ್ರೀ ಸಿದ್ಧಾರೂಢಸ್ವಾಮಿ ಗಳ ಮುಖದಿಂದ ಹೊರಟ ವಿವೇಕ, ವೈರಾಗ್ಯ, ಭಕ್ತಿ, ಜ್ಞಾನ, ನೀತಿ, ಧರ್ಮ ಪರಗಳಾದ ವಾಕ್ಯಗಳೂ, ಕಥೆಗಳೂ ತುಂಬಿಕೊಂಡಿರುತ್ತವೆ. ಮತ್ತು ಕೆಲವು ಸರ್ವೋತ್ಕೃಷ್ಟ ವೇದಾಂತೋಪನ್ಯಾಸಗಳೂ ಸೇರಿಸಲ್ಪಡುತ್ತವೆ. ಅದ್ದರಿಂದ ಶ್ರದ್ಧಾವಂತರಾದ ಸಕಲ ಸದ್ಭಕ್ತರು ಈ ವಾಕ್ಯಗಳನ್ನು ಓದಿ ತಾವು ಕೃತಾರ್ಥ ರಾಗುವದಲ್ಲದೆ, ಅನ್ಯರನ್ನೂ ಉದ್ಧಾರ ಮಾಡುವರು ಎಂಬಲ್ಲಿ ಸಂದೇಹವಿಲ್ಲ. ಮತ್ತು ಕೀರ್ತನಕಾರರಿಗೂ, ಉಪನ್ಯಾಸಕರಿಗೂ, ಪೌರಾಣಿಕರಿಗೂ ಇದರಲ್ಲಿರುವ ವಿಷಯಗಳು ಬಹಳ ಅನುಕೂಲವಾಗಿರುತ್ತವೆ" ಎಂದು ತಿಳಿ ಸಿರುವರು.

ಇದರಲ್ಲಿಯ ವಿಷಯಗಳು ವೈರಾಗ್ಯ ಸಂಪನ್ನರಾಗಿ ವೇದಾಂತ ವಿಚಾರ ವನ್ನು ತಿಳಿಯುವುದರಲ್ಲಿ ಆಸಕ್ತಿಯುಳ್ಳವರೆಲ್ಲರಿಗೂ ಓದುವುದಕ್ಕೆ ಅರ್ಹವಾಗಿರು ವುದರಿಂದ ಎಲ್ಲರೂ ಇದನ್ನು ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

---

೨೨. ಪ್ರಾಥಮಿಕ ವಿದ್ಯ (ಸಂಪುಟ ೪, ಸಂಚಿಕೆ ೪)

ಸಂಪಾದಕರು.—ಗಾಡಿಚೆರ್ಲ ಸೂರ್ಯನಾರಾಯಣ, ಕಾಕಿನಾಡ.

ಡೆಮ್ಮಿ ಪುಟ ೨೪ ; ಕಾಕಿನಾಡ ಆಲ್ಬರ್ಟ್ ಪವರ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತ ವಾಯ್ತು; ೧೯೨೬; ಚಂದಾ ವರ್ಷಕ್ಕೆ ರೂ. ೧–೦–೦.

ಇದು ವಿದ್ಯಾ ವಿಷಯಕವಾದ ತೆಲುಗು ಮಾಸಪತ್ರಿಕೆ. ಆಂಧ್ರ ಭಾಷಾ ಪರಿಚಯವುಳ್ಳವರೆಲ್ಲರೂ ಗ್ರಹಿಸಲು ಇದು ಅರ್ಹವಾಗಿದೆ.

---

೨೩. ಪ್ರಾಣಿ ದಯೆ

ಲೇಖಕರು.—ದಾವಣಗೆರೆ ಬಾಲಿಕಾ ಪಾಠಶಾಲೆಯ ಅಧ್ಯಾಪಕರಾದ ಶ್ರೀಯುತ ಆನೆಕೊಂಡದ ಮುಪ್ಪಣ್ಣನವರು.

ಕ್ರೌನ್ ಪುಟಗಳು ೧೨ ; ಬಿ. ಎಸ್. ಅಯ್ಯಂಗಾರ್, ಪ್ರಿಂಟರ್, ಬಿ. ಸಿಟಿ, ೧೯೨೫ ; ಉಚಿತ ಪುಸ್ತಕ.

ಗೋರಕ್ಷಣೆ ಮೊದಲಾದುವನ್ನು ತಿಳಿಸಿ, ಪ್ರಾಣಿ ದಯೆಯೇ ಧರ್ಮದ ಮೂಲವೆಂದು ತಿಳಿಸುವುದಕ್ಕಾಗಿ ಬರೆದ ಈ ಪುಸ್ತಕವು ದಾವಣಗೆರೆ ಪ್ರಾಣಿದಯಾ ಜ್ಞಾನಪ್ರಸಾರಕ ಸಂಘದವರು ಹೊರಡಿಸುತ್ತಿರುವ ಗ್ರಂಥಮಾಲೆಯ ಎಂಟ ನೆಯ ಪುಷ್ಪವು. ಎಲ್ಲರೂ ಓದಿ ಗ್ರಹಿಸಲು ಇದು ಅರ್ಹವಾಗಿದೆ.

---

೨೪. ಸರಸ್ವತಿ (ಸಂಪುಟ ೫, ಸಂಚಿಕೆ ೧೨)

ಸಂಪಾದಕಿ.—ಆರ್. ಕಲ್ಯಾಣಮ್ಮನವರು.

ಡೆಮ್ಮಿ ಪುಟಗಳು ೪೩ : ಬೆಂಗಳೂರು ಮಾಡಲ್ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಯ್ತು: ೧೯೨೬ ; ವಾರ್ಷಿಕ ಚಂದಾ ರೂ. ೩—೦—೦; ಬಿಡಿ ಸಂಚಿಕೆ ೪ ಆಣೆ.

ಇದೊಂದು ಮಾಸಪತ್ರಿಕೆ. ಈ ಸಂಚಿಕೆಯಲ್ಲಿ ನಿವೇದನ, ಕುಸುಮ ಕುಂಜ, ಪ್ರಾಚೀನ ಭಾರತವರ್ಷದ ರಮಣಿಯರು, ಮುತ್ತಿನ ಸರ, ಮಾನವ ಜನ್ಮದ ಶ್ರೇಷ್ಠತೆಯೂ ಕರ್ತವ್ಯವೂ, ಸಾಹಿತ್ಯ ಸಮಾಲೋಚನೆ, ಗೃಹ ವಿಜ್ಞಾನ, ಸುಮನ ಸಂಚಯ, ಸತೀ ಪದ್ಮಿನಿ (ನಾಟಕ); ಈ ವಿಷಯಗಳು ಪ್ರಕಟವಾಗಿವೆ.

ಈ ಪತ್ರಿಕೆಗೆ ಸುಪ್ರಸಿದ್ಧರಾದ ಅನೇಕ ಮಂದಿ ದೊಡ್ಡಮನುಷ್ಯರು ಲೇಖಕರಾಗಿರುವಂತೆ ನಿವೇದನದಲ್ಲಿ ತಿಳಿಯಪಡಿಸಿದ್ದಾರೆ. ಭಾಷೆಯು ಸುಲಭ ವಾಗಿಯೂ ಲಲಿತವಾಗಿಯೂ ಇದೆ. ಮುದ್ರಣವು ಅಂದವಾಗಿದೆ. ಮುದ್ರಣದ ತಪ್ಪು ಬಹಳ ಕಡಿಮೆ. ಅಲ್ಲಲ್ಲಿ ಅಶುದ್ಧ ರೂಪಗಳೂ ಸ್ಖಾಲಿತ್ಯಗಳೂ ಕಾಣಬರು ತ್ತವೆ. ಕೆಲವನ್ನು ಇಲ್ಲಿ ಕೊಟ್ಟಿದೆ.

ಪುಟ ೩.—ಕುಸುಮ ಕುಂಜ, ಕೊರತ ಎಂಬುದರಲ್ಲಿ ಆರು ಪಾದಗಳಿರುವ ಪದ್ಯಗಳಂತೆ ಆರು ಇರುವುವು. ಇವುಗಳಲ್ಲಿ ನಾಲ್ಕು ಪಾದಗಳಿಗೆ ಒಂದು ಬಗೆಯ ಪ್ರಾಸವೂ, ಉಳಿದೆರಡು ಪಾದಗಳಿಗೆ ಮತ್ತೊಂದು ಬಗೆಯ ಪ್ರಾಸವೂ ಇದೆ. ಇದು ಯಾವ ಬಗೆಯ ಛಂದಸ್ಸೆಂಬುದನ್ನು ಸೂಚಿಸಿಲ್ಲ. ಇದು ವಾಚಕರಿಗೆ ಯಾವುದೂ ತಿಳಿಯದಂತೆ ಸಂದೇಹಾಸ್ಪದವಾಗಿದೆ.

ಪುಟ ೧೨.—ಇಲ್ಲಿ ಒಂದು ಪ್ರಸಿದ್ಧ ಶ್ಲೋಕ ಭಾಗಗಳು—(೧) ಸಾಮಾನ್ಯ ಮೇತತ್, (೨) ಪಶುಭಿರ್ನರಾಣಾಂ, (೩) ಧರ್ಮೇಣ ಹೀನಾ ಪಶುಭಿಸ್ಸಮಾನಾ

ಎಂದಿದೆ. ಯಥಾಸ್ಥಿತವಾಗಿ ಈ ಭಾಗಗಳು ಶ್ಲೋಕದಲ್ಲಿ ಹೀಗಿಲ್ಲ. ಈ ಬದಲಾವಣೆಗೆ ಕಾರಣವೇನೋ ಗೊತ್ತಾಗುವುದಿಲ್ಲ.

ಪುಟ ೧೪.—ಭಗವದ್ಗೀತೆಯ ಒಂದು ಶ್ಲೋಕದ ಕೊನೆಯ ಪಾದವು ಕಿಂ ಭೋಗೈರ್ಜನಿತೇನವಾ ॥ ಎಂದಿದೆ. ಕಿಂ ಭೋಗೈರ್ಜೀವಿತೇನವಾ ॥ ಎಂಬ ಪಾಠವು ಯಥಾಸ್ಥಿತವಾದುದು. ಇಲ್ಲಿ ಏತಕ್ಕೆ ಬದಲಾಯಿಸಿದೆಯೋ ಏನರ್ಥವೋ ಗೊತ್ತಿಲ್ಲ.

“ಅಂತರ್ ತ್ಯಾಗ ಬಹಿರ್ ಭೋಗ, ಅಂತರೇಕೋ ಬಹಿರ್ ನಾನಾ, ಅಂತರ್ ಬಾಲಾ ಬಹಿರ್ ಯುವತಿ” ಎಂಬ ಅಪಶಬ್ದಮಯವಾದ ವಾಕ್ಯವಿದೆ. ಇದನ್ನು ತಿದ್ದಿ ಸರಿಪಡಿಸಿದ್ದರೆ ಚೆನ್ನಾಗಿತ್ತು.

ಪುಟ ೧೫.—ಜಗಹಿತವ ಮಾಡದವನೇ ಷಂಡ ಕಲಿಯುಗದೋಳ್, ಎಂಬ ವಾಕ್ಯವು ಶುದ್ಧವಾಗಿರುವಂತಿಲ್ಲ.

ಪುಟ ೧೯.—ಸುಮನ ಸಂಚಯ, ಈ ಶಬ್ದರೂಪವು ಅಶುದ್ಧವಾಗಿರುವುದು.

ಸುಮಾರು ಐದು ವರ್ಷಗಳಿಂದಲೂ ಶ್ರಮಪಟ್ಟು ಈ ಪತ್ರಿಕೆಯನ್ನು ತಪ್ಪದೆ ನಡೆಯಿಸುತ್ತಿರುವುದರಿಂದಲೂ, ಈ ರೀತಿ ಪತ್ರಿಕೆಗಳನ್ನು ನಡೆಯಿಸುವುದು ಸಹಾಯಕರಿಲ್ಲದೆ ಹೋದರೆ ಅಸಾಧ್ಯವಾದುದರಿಂದಲೂ, ಅನೇಕವಾದ ಉಪಯುಕ್ತ ವಿಷಯಗಳನ್ನು ಇದರಲ್ಲಿ ಪ್ರಕಟಿಸುವುದರಿಂದಲೂ ಎಲ್ಲರೂ ಇದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವರೆಂದು ನಂಬಿದ್ದೇನೆ.

---

೨೫. ಬೆಂಜಮಿನ್ ಫ್ರಾಂಕ್‌ಲಿನ್

ಲೇಖಕರು.—ಕೆ. ಬಿ. ಸುಬ್ಬರಾಯರು, ಬಿ.ಎ., ದೇಶೀಯ ವಿದ್ಯಾಶಾಲಾ, ಬೆಂಗಳೂರು.

ಕ್ರೌನ್ ಅಷ್ಟಪತ್ರ ಪುಟ ೧೬೨; ಬೆಲೆ ೧೨ ಆಣೆ; ೧೯೨೬.

ಇದು ಅಮೆರಿಕದ ರಾಜ್ಯತಂತ್ರಜ್ಞನೂ ವಿಜ್ಞಾನವೇತ್ತನೂ ಆದ ಮಹನೀಯನೊಬ್ಬನ ಜೀವನ ಚರಿತ್ರೆ. ಈತನು ಒಂದು ಬಡ ಕುಟುಂಬದ ಬಹು ಮಂದಿ ಮಕ್ಕಳಲ್ಲಿ ಕಡೆಯವನು. ಕೇವಲ ಚಿಕ್ಕ ವಯಸ್ಸಿನಲ್ಲಿಯೇ ಜೀವನೋಪಾಯವನ್ನು ಹುಡುಕಿಕೊಳ್ಳಬೇಕಾಗಿ ಬಂದುದರಿಂದ ಫ್ರಾಂಕ್ಲಿನ್ನನಿಗೆ ಕ್ರಮವಾದ ವಿದ್ಯಾಶಿಕ್ಷಣವು ದೊರೆಯಲು ಅವಕಾಶವಿಲ್ಲದೆ ಹೋಯಿತು. ಆದರೆ ಆತನಿಗಿದ್ದ ಮಹತ್ತರವಾದ ವಿದ್ಯಾಕಾಂಕ್ಷೆಯಿಂದ ಆತನು ತಾನಾಗಿಯೇ ವಿದ್ಯಾಧನವನ್ನು ವಿಶೇಷವಾಗಿ ಆರ್ಜಿಸಿ ಕಡೆಗೆ ದೊಡ್ಡ ಪಂಡಿತನಾದನು. ಆತನ ಕಸಬು ಮುದ್ರಣಾಲಯದ ಕೆಲಸ. ಇದನ್ನು ಮೊದಲನೆಯ ಮೆಟ್ಟಿಲಿನಿಂದ ಆರಂಭಿಸಿ ಕಡೆಗೆ ತಾನೇ ಸ್ವತಃ ಒಂದು ಮುದ್ರಣಾಲಯಕ್ಕೆ ಯಜಮಾನನಾಗಿ,

ವರ್ತಮಾನ ಪತ್ರಿಕೆಯೊಂದನ್ನು ಪ್ರಕಟಿಸುತ್ತ, ತಾನಿದ್ದ ರಾಷ್ಟ್ರದಲ್ಲಿ ಮಾತ್ರವೇ ಅಲ್ಲದೆ ಎಲ್ಲೆಲ್ಲಿಯೂ ಪ್ರಖ್ಯಾತಿಗೆ ಬಂದನು. ಈತನ ಪ್ರಜ್ಞೆಯೂ ಮೇಧಾಶಕ್ತಿಯೂ ಅಸಾಮಾನ್ಯವಾದುವು. ಈತನು ನಿಯಮಾನುವರ್ತಿಗಳಲ್ಲಿ ಅಗ್ರಗಣ್ಯನು. ಅಮೆರಿಕದಲ್ಲಿ ಮಾತ್ರವಲ್ಲದೆ ಇಂಗ್ಲೆಂಡು, ಫ್ರಾನ್ಸ್ ಮೊದಲಾದ ಪರದೇಶಗಳಲ್ಲಿಯೂ ಈತನ ಶಕ್ತಿ ಸಾಹಸಗಳು ಪ್ರಸಿದ್ಧಿಗೊಂಡು ಈತನಿಗೆ ಮನ್ನಣೆಯನ್ನು ತಂದುವು. ಈತನು ಯಾವ ಕೆಲಸಕ್ಕೆಂದರೆ ಅದಕ್ಕೆ ಕೈಹಾಕಿ ಜಯಶಾಲಿಯಾಗುತ್ತಿದ್ದನು. ಯಾವ ಅನುಭವವೂ ತರಬೇತೂ ಇಲ್ಲದೆ ಸೇನಾಧಿಪತಿತ್ವವನ್ನು ವಹಿಸಿ ಸ್ವಶಕ್ತಿಯಿಂದ ಯುದ್ಧ ವಿದ್ಯೆಯನ್ನು ಕಲಿತು ಸಮರ್ಥನೆನಿಸಿಕೊಂಡನು. ಅಮೆರಿಕದ ಅನೇಕ ರಾಷ್ಟ್ರಗಳಲ್ಲಿ ನೆಲೆಗೊಂಡಿದ್ದ ಪ್ರಜಾಪ್ರಾತಿನಿಧ್ಯದ ಸರಕಾರಗಳಲ್ಲಿ ಪ್ರಮುಖನಾಗಿ ಎಲ್ಲರಿಗೂ ಸಲಹೆಗಳನ್ನು ಕೊಡುತ್ತ ಕೊನೆಗೆ ಈ ರಾಷ್ಟ್ರಗಳನ್ನು ಇಂಗ್ಲಿಷರ ಅಧೀನದಿಂದ ತಪ್ಪಿಸಿ ಸ್ವತಂತ್ರ ರಾಜ್ಯವನ್ನಾಗಿ ಮಾಡಲು ಮುಖ್ಯ ಸಹಾಯಕನಾದನು.

ಇಷ್ಟೇ ಅಲ್ಲ; ಪುಸ್ತಕಗಳನ್ನು ತಾನೇ ಓದಿಕೊಂಡು, ಬಡವನಾದರೂ ತಾನಾಗಿಯೇ ಪ್ರಯೋಗಗಳನ್ನು ಮಾಡುತ್ತ, ಭೌತಿಕ ಶಾಸ್ತ್ರದಲ್ಲಿ ವಿಶೇಷ ಜ್ಞಾನವನ್ನು ಸಂಪಾದಿಸಿ, ವಿದ್ಯುಚ್ಛಕ್ತಿಯ ಮೊದಲನೆಯ ಪಾಠವನ್ನು ಪ್ರಪಂಚಕ್ಕೆ ಹೇಳಿಕೊಟ್ಟವನೇ ಈತನು. ಆಕಾಶದಲ್ಲಿ ತೋರುವ ಮಿಂಚೂ ಗುಡುಗೂ ವಿದ್ಯುತ್ತನ್ನು ಹುಟ್ಟಿಸಲು ಮನುಷ್ಯನು ಉಪಯೋಗಿಸುವ ಸಲಕರಣೆಗಳಿಂದುಂಟಾಗುವ ಕಿಡಿಯೂ ಚಟ ಚಟ ಎಂಬ ಶಬ್ದವೂ ಒಂದೇ ಶಕ್ತಿಯಿಂದ ಹುಟ್ಟಿದುವೆಂದು ಈತನೇ ಮೊದಲು ತೋರಿಸಿದವನು. ರಾಜ್ಯ ತಂತ್ರದಲ್ಲಿ ತೊಡಗದಿದ್ದರೆ ಈತನು ಭೌತಿಕ ಶಾಸ್ತ್ರದಲ್ಲಿ ಅಸಮಾನ ಜ್ಞಾನವನ್ನು ಸಂಪಾದಿಸಿ ಪ್ರಪಂಚಕ್ಕೆ ಉಪಯೋಗವಾಗುವ ಅನೇಕ ಹೊಸ ತಂತ್ರಗಳನ್ನು ಸೃಷ್ಟಿಸುತ್ತಿದ್ದನೆಂಬುದರಲ್ಲಿ ಸಂಶಯವಿಲ್ಲ.

ಬಾಲ್ಯದಿಂದಲೂ ಇತರರ ಸಹಾಯವಿಲ್ಲದೆ ಸ್ವಪ್ರಯತ್ನದಿಂದಲೇ ಅಭಿವೃದ್ಧಿ ಹೊಂದಿ ಪ್ರಪಂಚದಲ್ಲೆಲ್ಲ ಕೇವಲ ಗೌರವವನ್ನು ಪಡೆದ ಇಂತಹ ಮಹನೀಯನ ಚರಿತ್ರೆಯನ್ನು ನಮ್ಮ ಬಾಲಕರು ಆದರದಿಂದ ಓದಬೇಕಾದುದು ಅತ್ಯಾವಶ್ಯಕ.

ಲೇಖಕರು ಈ ಗ್ರಂಥವನ್ನು ಲಲಿತವಾದ ಭಾಷೆಯಲ್ಲಿ ಬಾಲಕರಿಗೆ ಸುಲಭವಾಗಿ ತಿಳಿಯುವಂತೆ ಬರೆದಿರುತ್ತಾರೆ. ನಮ್ಮ ಭಾಷಾ ಮರ್ಯಾದೆಗಳನ್ನೂ ಗಾದೆಗಳನ್ನೂ ಅಲ್ಲಲ್ಲಿ ಸೇರಿಸಿ, ನಮ್ಮ ಭಾಷಾ ವನಿತೆಗೆ ಪರಂಗಿಯ ಪರಿಕಾರವನ್ನುಡಿಸದೆ ನಮ್ಮ ಹೆಂಗಸರಿಗೊಪ್ಪುವ ಪಟ್ಟೆಯ ಸೀರೆಯನ್ನೇ ಉಡಿಸಿ ಸಹಜವಾದ ಅಲಂಕಾರವನ್ನೇ ಮಾಡಿರುವುದರಿಂದ ಈ ಪುಸ್ತಕವು ಕನ್ನಡಿಗರ ಮನ್ನಣೆಗೆ ಪಾತ್ರವಾಗಬಹುದು. ಇವೆಲ್ಲದಕ್ಕಿಂತಲೂ ಮುಖ್ಯವಾಗಿ, ಮುದ್ರಣದ ದೆವ್ವಗಳನ್ನು ಇಷ್ಟು ಸಮರ್ಪಕವಾಗಿ ಉಚ್ಚಾಟನ ಮಾಡಿರುವ ಲೇಖಕರ ಮಂತ್ರ ಶಕ್ತಿಯನ್ನು ನಾವು ಕೊಂಡಾಡುವೆವು. ಇಂತಹ ಗ್ರಂಥಕ್ಕೆ ಕನ್ನಡಿಗರು ಪ್ರೋತ್ಸಾಹವಿತ್ತು ಇನ್ನೂ

ಪೂರ್ವ ಪಯಸ್ಕರಾದ ಈ ಗ್ರಂಥಕರ್ತರನ್ನು ಕನ್ನಡ ಭಾಷಾ ಸೇವೆಯಲ್ಲಿ ನಿರತರಾಗುವಂತೆ ಪ್ರೇರಿಸುವುದು ಎಲ್ಲ ಕನ್ನಡಿಗರ ಕರ್ತವ್ಯವಾಗಿದೆ.

ಈ ಗ್ರಂಥದಲ್ಲಿ ನಮಗೆ ಅಲ್ಲಲ್ಲಿ ತೋರಿಬರುವ ಕೆಲವು ನ್ಯೂನಾತಿರಿಕ್ತಗಳನ್ನು ಗ್ರಂಥಕರ್ತರ ಅವಗಾಹನೆಗೆ ತರುವುದು ನಮ್ಮ ಕರ್ತವ್ಯವಾಗಿರುವುದು :—

ಮುಂದೆ ಕೊಡುವ ಪದಗಳು ಸುಷ್ಠುವಲ್ಲ:—

ಈಚಿಗೆ (ಪುಟ I), ಕೈಗೊಂಡು (VI), ನೆಲೆಸು (೧), ಬರಹ (೫), ಪಜ್ಯ (೭), ಬೆರೆಸಿ (೧೨), ಹುಡಗುತನ (೧೮), ಫಲಹಾರ (೨೪), ತಲೆಯುತ್ತದೆ (೫೯), ಹೆಂಡರು (೬೫), ಕರಿಣ (೭೦), ಅಂತವ (೮೯), ಬರಜೆಣೆಸುವವರು (೯೧), ಪಾಳಯ (೯೪), ನಡವಳಿಕೆ (೧೦೭), ಬೇಟಿ (೧೩೪), ಉದಹರಿಸು (೧೩೫), ತಲೆ ಕೆಳಕಾಗುವಂತೆ (೧೩೯), ಉದರೀತೆ? (೧೫೧)

'ತುಂಬ' ಎಂಬ ಪದವನ್ನು 'ಬಹಳ' ಎಂಬ ಅರ್ಥದಲ್ಲಿ ಅನೇಕ ಕಡೆ ಉಪಯೋಗಿಸಿದೆ (ಪುಟ ೨೬, ೬೨; ೭೪......).

ಮುದ್ರಣದ ತಪ್ಪುಗಳು :—

ಅತಃಕರಣ (೬೮), ಪ್ರಪಂಚದಲ್ಲಿರುವೆಡೆಗಳೆಲ್ಲೆಲ್ಲ (೮೧), ದಂಡವನರು (೯೮), ಗೋಪರ (೧೩೫).

ಭಾಷೆಯ ಏಕೀಕರಣದ ದೃಷ್ಟಿಯಿಂದ ಅಲ್ಲಲ್ಲಿ ಕೆಲವು ಪ್ರಯೋಗಗಳನ್ನು ಮಾಡಿರುವುದಾಗಿ 'ವಿಸಂತಿ'ಯಲ್ಲಿ ಹೇಳಿದೆ. ತುಸ (೬೨, ೭೪), ಚಳವಳಿ (೧೫೦), ಜಾಗರ್ತಿ (೧೫೮)—ಇವು ಉದಾಹರಣೆಗಳೆಂದು ತೋರುವುದು.

ಗೌರವಾರ್ಥದಲ್ಲಿ ಉಪಯೋಗಿಸಿರುವ 'ಕೀತ್**ರವ**ರು' (೨೬), ವೈಟ್ ಫೀಲ್ಡ್**ರವ**ರು (೯೫), ಜಾಂಪ್**ರವ**ರು (೧೦೯)—ಈ ರೂಪಗಳು ಸುಷ್ಠುವಲ್ಲ.

ಪುಟ ೧೦. ಮ್ಯಾಥ್ಯು ಆಡಂಸ್ ಎಂಬೊಬ್ಬ ಸಾಹುಕಾರರು....

ಪುಟ ೯೩. ವೈಟ್‌ಫೀಲ್ಡ್ ಎಂಬ ಪ್ರಸಿದ್ಧರಾದ ಧರ್ಮೋಪದೇಶಕರು ಬಂದಿದ್ದರು.
ಅವರಲ್ಲಿ ವಾಕ್ಚಾತುರ್ಯ.................

ಪುಟ ೧೦೨. ಲೋಗ್ ಎಂಬ ದೊಡ್ಡಮನುಷ್ಯರು.

ಇಂತಹ ಪ್ರಯೋಗಗಳು ಬಹಳವಾಗಿರುವುವು. ಇವು ಸಮರ್ಪಕವಾಗಿಲ್ಲ.

ಪುಟ ೨, ೩. ಬಂದಿದ್ದವರಲ್ಲಿ ಅವನೇ ಮುಂದಾಳೆಂದೂ, ದೈವ ಭಕ್ತನೆಂದೂ, ಪಂಡಿತನೆಂದೂ
ಪ್ರಸಿದ್ಧಿ. ಅವನು ವಿವೇಕಶಾಲಿ ಕೂಡ.

ಪುಟ ೩. ಅವನ ಗುಣವೂ ಅವನ ಘನವಾದ ಆಕಾರಕ್ಕೆ ತಕ್ಕಂತೆ.

ಪುಟ ೭೮. ಈ ಸಂಬಂಧದಲ್ಲಿ ಇನ್ನೊಂದು ಸ್ವಾರಸ್ಯವಾದ ಸಂಗತಿ.

ಪುಟ ೧೨೩. ಇಲ್ಲದಿದ್ದರೆ ಇಪ್ಪತ್ತೈದು ಸಾವಿರ ಪೌಂಡುಗಳನ್ನು ತೆರಬೇಕಾಗಿದ್ದಿತು ಅವನೇ.

ಪುಟ ೧೬೦. ಪರಂತು ಜ್ಞಾನಿಯು ಹೆದರನು ಮರಣಕ್ಕೆ.

ಇಂತಹ ಪ್ರಯೋಗಗಳು ಅಲ್ಲಲ್ಲಿ ಕಾಣಬರುವುವು.

ಪುಟ ೨೧. ಅವನ ಉಡುಪು ಚೆನ್ನಾಗಿರಲಿಲ್ಲ. ಕೂಲಿಯವರ ಅರಿವೆಗಳಂತೆ ಇದ್ದುವು. ಅವೂ ಚೊಕ್ಕಟವಾಗಿರಲಿಲ್ಲ.

ಇಲ್ಲಿ ಎರಡನೆಯ ವಾಕ್ಯವು 'ವಾಕ್ಯ'ವೆಂದು ಹೇಳಲಾಗುವುದಿಲ್ಲ. ಇಂತಹ ಪ್ರಯೋಗಗಳು ಬಹಳ ಕಡೆ ಬರುವುವು. 'ಉಡುಪು.........ಇದ್ದುವು' ಎಂಬುದು ವ್ಯಾಕರಣ ವಿರುದ್ಧ.

ಪುಟ ೨೮. ಈಗ ಬೆಂಜಮಿನ್ನನ ಮೇಲೆ ಹೊಸ ತೊಡಿಗೆಗಳಿದ್ದುವು.

ಪುಟ ೩೧. ಆಗಲೇ ಇನ್ನೊಂದು ಕಡೆ ಹೊಸದಾಗಿ ಪ್ರಯಾಣಿಕರು ಹಡಗು ಹತ್ತಿದರು.

ಪುಟ ೪೦. ನೀನು ಕೆಲಸಗಾರರಿಂದ ಕೌಶಲ್ಯಪಡೆಯಬಹುದು.

ಪುಟ ೪೧. ಅವನು ಕೆಲಸಮಾಡಿದೆಡೆಗಳಲ್ಲೆಲ್ಲ ತೃಪ್ತಿಕರವಾದ ಅಭಿಪ್ರಾಯವೇ ಇದ್ದಿತು.

ಪುಟ ೪೫. ಸೀಸವನ್ನು ಕರಗಿಸಿ ಅಕ್ಷರಗಳನ್ನು ಎರೆಯುವುದು......ಚಿತ್ರಗಳನ್ನು ಬಿಡಿಸುವುದು.

ಪುಟ ೫೬. ಹೊಸ ನಾಣ್ಯಗಳನ್ನು ಮುದ್ರಿಸಬೇಕೆಂದು......

ಪುಟ ೬೨. ಅವಳ ಮನಸ್ಸನ್ನು ಕದಲಿಸುತ್ತಿದ್ದರು.

ಪುಟ ೮೬. ಒಬ್ಬನಿಗೆ ಮತ್ತೊಬ್ಬನು ಪಾಠಗಳನ್ನು ಕೊಡುತ್ತ........

ಪುಟ ೯೦. ಆಯವ್ಯಯಗಳನ್ನಿಡುವುದು........

ಪುಟ ೧೩೭. ಅವನು ತತ್ವವನ್ನು ಸಾಧಾರಣ ಜನರ ಮನೆ ಮನೆಯ ನಿವಾಸಿಯಾಗಿಯೂ ಸೇವಕಳಾಗಿಯೂ ಇರುವಂತೆ ಮಾಡಿರುವನು.

ಇವು ಇಂಗ್ಲಿಷಿನ ಭಾಷಾಂತರವಾಗಿ ಕಾಣುವುವು.

ಪುಟ ೭೯. ಪರಮಸಾಧುಗಳೂ, ಮುನಿಶ್ರೇಷ್ಠರೂ, ತತ್ವಜ್ಞಾನಿಗಳೂ ಅಹಂಕಾರದಿಂದ ಸುಲಭವಾಗಿ ಬಿಡುಗಡೆ ಹೊಂದಿರುವಾಗ ಸಾಮಾನ್ಯರ ಪಾಡೇನು ?

'ಹೊಂದದಿರುವಾಗ' ಎಂದಿರಬೇಕು.

ಮುಂದೆ ಹೇಳುವ ವಾಕ್ಯಗಳು ಅಷ್ಟು ಸಮರ್ಪಕವಾಗಿ ಕಾಣುವುದಿಲ್ಲ:—

ಪುಟ ೩೦. ನೀನು ಸ್ವತಂತ್ರವಾಗಿ ಉದ್ಯೋಗ ಪ್ರಾರಂಭಿಸಬೇಕಾಗುತ್ತದೆ.

ಪುಟ ೫೮. ಉಳಿದವನು ಬ್ರಾಡ್ ಫರ್ಡ್‌ನೊಬ್ಬನೇ.

ಪುಟ ೬೧. ಆದರೆ ಅವನಿನ್ನೂ ಪ್ರಾಪ್ತವಯಸ್ಕನಾಗಿರಲಿಲ್ಲ. ಜತೆಗೆ ಅವನು ಲಂಡನ್ನಿಗೆ ಹೋಗುವ ಸಂಭವವೂ ಕೂಡಿತು.

ಪುಟ ೬೮. ಆಗ ಪಾಪವಿಲ್ಲದ ರೀತಿಯಲ್ಲಿ ಬಾಳಬೇಕೆಂಬ ಆಸೆಯು ಅವನ ಎದೆಯಲ್ಲಿ ಬಲಗೊಂಡಿತು.

ಪುಟ ೭೧. ಬುದ್ಧಿಯು ತೀಕ್ಷ್ಣವಾಗಿಯೂ ಶರೀರವು ಬಲಿಷ್ಠವಾಗಿಯೂ...... ಇರುವುದು.

,, ಕ್ರಮವಾಗಿ ಕೆಲಸಮಾಡಿದರೆ ವಿರಾಮ, ನಿಯಮ, ಶೀಲ ಮುಂತಾದ ಸುಗುಣಗಳುಂಟಾಗುವುವು.

ಪುಟ ೯೯. ಜನರು ಆ ವಿಪತ್ಕಾಲದಲ್ಲಿ ಶುದ್ಧರಾಗಿರುವುದೂ ಪ್ರಾರ್ಥಿಸುವುದೂ ಹಿತಕರವೆಂದು ಅವನಿಗೆ ತೋರಿತು.

ಪುಟ ೧೦೩. ಮಹಾರಾಜರೇ ಅಪ್ಪಣೆ ಮಾಡಿದ್ದರೆ ಅದು ಸರಿಹೋಗುತ್ತಿದ್ದಿತು; ಬೇರೆ ಅಧಿಕಾರಿಗಳು ಮಾಡಿದ್ದರೆ ಹೋಗುತ್ತಿರಲಿಲ್ಲ.

ಪುಟ ೧೦೫. ಆ ಸಾಲವು ತೀರವ ಕಡೆ ಕಡೆಗೆ ಭೂಮಿಯ ಕಂದಾಯವನ್ನು ಕೂಡ ಕೊಟ್ಟಿರಲಿಲ್ಲ.

ಪುಟ ೧೨೫. ಜನ ಸಂಚಾರವಿಲ್ಲದ ಊರೂ ಹೂತುಬಿಟ್ಟಿದ್ದ ಹೆಣಗಳೂ......

,, ಅವನ ಹಿಂಬಾಲಕರೂ ಕೋಟೆ ಕಟ್ಟುವುದಕ್ಕೆ....ಗುರುತುಗಳನ್ನು ನಿಲ್ಲಿಸಿದರು.

ಪುಟ ೧೩೫. ಹತ್ತಿರವಲ್ಲಿಯೇ ಒಂದು ಬೆಳಕಿನ ಗೂಡಿದ್ದುದರಿಂದ ಎಲ್ಲರೂ ಬದುಕಿಕೊಂಡರು.

ಪುಟ ೧೩೬. ಒಬ್ಬೊಬ್ಬ ಪಂಡಿತರು.

,, ಹಿಂದೆ ಕಷ್ಟಪಡುತ್ತಿದ್ದಾಗ ಅವನು ತಾನೆಂದಿಗೆ ಸ್ವತಃ ಪ್ರಯೋಗಶಾಲೆಯಲ್ಲಿ ಕೆಲಸ ಮಾಡುವೆನೋ ಎಂದು ಕನಸು ಕಾಣುತ್ತಿದ್ದನು.

ಪುಟ ೧೩೭. ಅವನ ದೃಷ್ಟಿಯಲ್ಲಿ ಒಂದು ಸಣ್ಣ ಮರಳೇ ಬಹು ಮಹತ್ತುಳ್ಳ ಪದಾರ್ಥವಾಗಿ ತೋರುವುದು.

ಇದು ಭಾಷೆಯನ್ನು ಕಲಿಯುವವರು ಓದುವ ಪುಸ್ತಕವಾದುದರಿಂದ ಇಷ್ಟು ದೂರ ಚರ್ಚಿಸಿರುವೆವು.

ಬಿ. ವೆಂ.

ಶ್ರೀ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೨] ಪ್ರಭವ ಸಂ॥ ಆಷಾಢ ಮಾಸ [ಸಂಚಿಕೆ ೨

ಹದಿಮೂರನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನ

ಈ ಸಮ್ಮೇಳನವು ಈ ಸಾರಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಪಟ್ಟಣವಾದ ಮಂಗಳೂರಿನಲ್ಲಿ ೧೯೨೭ನೆಯ ಇಸವಿ ಮೇ ತಿಂಗಳು ೧೯ನೆಯ ತಾರೀಖು ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಗವರನ್ಮೆಂಟ್ ಹೈಯರ್ ಎಲಿಮೆಂಟರಿ ಟ್ರೈನಿಂಗ್ ಸ್ಕೂಲಿನ ದೊಡ್ಡದೊಂದು ಹಜಾರದಲ್ಲಿ ನೆರೆದಿದ್ದಿತು. ಸಭಾ ಮಂದಿರವು ಬಗೆ ಬಗೆಯ ಬಣ್ಣದ ತಳಿರೆಲೆಗಳಿಂದಲೂ ಪುಷ್ಪಗುಚ್ಛಗಳಿಂದಲೂ ತೋರಣಗಳಿಂದಲೂ ಚಾವುಟಗಳಿಂದಲೂ ಅಲಂಕೃತವಾಗಿ ಶೋಭಾಯಮಾನವಾಗಿತ್ತು. ಆ ಜಿಲ್ಲೆಯ ಅನೇಕ ಮಂದಿ ಗಣ್ಯರೂ, ಭಾಷಾಭಿಮಾನಿಗಳೂ ಅಲ್ಲದೆ ಮೈಸೂರು ಸಂಸ್ಥಾನದಿಂದ ಬಂದಿದ್ದ ಹಲಬರೂ ಸಭೆಯನ್ನಲಂಕರಿಸಿದ್ದರು. ಸಭಾ ಕಾರ್ಯಾರಂಭಕ್ಕೆ ಮೊದಲು ಮ॥ ರಾ॥ ಕೆರೋಡಿ ಸುಬ್ಬರಾಯರವರು ಕರ್ಣಾಟಕ ಮಾತೃ ಸ್ತುತಿಯನ್ನು ಮೃದು ಮಧುರ ಕಂಠದೊಡನೆ ಗಾನಮಾಡಿದರು. ಪಶ್ಚಿಮ ಘಟ್ಟದ ಕೆಳಗಿನ ನಾಡು ಪರಶುರಾಮ ಕ್ಷೇತ್ರವಾದುದರಿಂದ ಬಾಲಕನೊರ್ವನು ಪರಶುರಾಮ ಸ್ತೋತ್ರವನ್ನೂ ಇಂಡಿಯಾ ಚಕ್ರವರ್ತಿಗಳ ಶ್ರೇಯಃಪ್ರಾರ್ಥನೆಯನ್ನೂ ಭಾರತ ಮಾತೆಯ ಸ್ತುತಿಯನ್ನೂ ಮಾಡಿದನು.

ಸ್ವಾಗತ ಮಂಡಲಿಯ ಅಧ್ಯಕ್ಷರಾದ ರಾವ್ ಸಾಹೇಬ್ ಮ॥ ರಾ॥ ಸಿಲ್ಲಿಕಾರು ವೆಂಕಟರಾಯರಿಗೆ ಸ್ವಲ್ಪ ದೇಹಾಲಸ್ಯವಾಗಿದ್ದುದರಿಂದ ಅವರ ಪರವಾಗಿ ಮ॥ ರಾ॥ ಉಳ್ಳಾಲ ಮಂಗೇಶರಾಯರು ಸಭಾಸದರೆಲ್ಲರಿಗೂ ಸ್ವಾಗತವನ್ನು ಬಯಸಿ ದಕ್ಷಿಣ ಕನ್ನಡ ಜಿಲ್ಲೆಯ ಸಂಕ್ಷೇಪ ಚರಿತ್ರೆಯನ್ನೂ ಕರ್ಣಾಟಕ ವಾಙ್ಮಯ ಪ್ರಪಂಚದಲ್ಲಿ ಆ ಜಿಲ್ಲೆಯು ಹಿಂದೆ ಮಾಡಿದ ಮತ್ತೀಗ ಮಾಡುತ್ತಿರುವ ಸಾಹಸ ಕಾರ್ಯವನ್ನೂ ಸ್ವಾರಸ್ಯವಾಗಿ ವಿವರಿಸಿ ಸ್ವಾಗತ ಭಾಷಣವನ್ನು ಮುಗಿಸಿದರು. ಆ ಭಾಷಣವನ್ನು ಮುಂದೆ ಕೊಟ್ಟಿದೆ.

ಇದಾದನಂತರ ಅಧ್ಯಕ್ಷರ ಚುನಾವಣೆ ಆಯಿತು. ಮ॥ ರಾ॥ ಪಂಜೆ ಮಂಗೇಶರಾಯರು ಎದ್ದು ಹಿಂದಿನ ಗೋದಾವರಿ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರಾದ ಮ॥ ರಾ॥ ಆರ್. ತಾತಾಚಾರ್ಯ, ಎಂ.ಎ., ಎಲ್.ಟಿ. ಅವರ ಗುಣಕಥನವನ್ನು ಮಾಡಿ, ಅವರ ಕರ್ಣಾಟಕ ಭಾಷಾಭಿಮಾನವನ್ನೂ ಅವರ ಕವಿತಾಚಾತುರ್ಯವನ್ನೂ ಯುಕ್ತಿಯುಕ್ತವಾಗಿ ವಿವರಿಸಿ ಕೊಂಡಾಡಿ, ಸಮ್ಮೇಳನದ ಸಭಾಪತಿತ್ವಕ್ಕೆ ಅವರ ಅರ್ಹತೆಯನ್ನು ಸಮರ್ಥನೆಮಾಡಿ ಅವರು ಅಗ್ರಾಸನವನ್ನು ಅಲಂಕರಿಸಿ ಸಮ್ಮೇಳನದ ಕಾರ್ಯವನ್ನು ಸಾಂಗವಾಗಿ ನೆರವೇರಿಸಿಕೊಡಬೇಕೆಂದು ಮಾಡಿದ ಸೂಚನೆಯನ್ನು ಮ॥ ರಾ॥ ಸಂ. ವೆಂಕಟೇಶಯ್ಯಂಗಾರ್ಯರು ಯಥೋಚಿತವಾದ ಹಲವು ಮಾತುಗಳಿಂದ ಅನುಮೋದಿಸಿದನಂತರ ಮ॥ ರಾ॥ ಎಸ್. ರಾಜಗೋಪಾಲಕೃಷ್ಣರಾಯರು ಎದ್ದು ಮ॥ ರಾ॥ ತಾತಾಚಾರ್ಯರು ತಮ್ಮ ಚಿರಸ್ನೇಹಿತರೆಂಬುದನ್ನು ತಿಳಿಸಿ, ಅವರು ಶ್ರೀಕೃಷ್ಣ ಸೂಕ್ತಿಗೆ ಬರೆಯುತ್ತಿದ್ದ ಪ್ರಬಂಧಗಳ ವಿಷಯವನ್ನೂ ಅವರ ಕರ್ಣಾಟಕ ಪಾಂಡಿತ್ಯವನ್ನೂ ಸದಸ್ಯರಿಗೆ ವಿಶದಪಡಿಸಿ, ಮೇಲಣ ಸೂಚನೆಯನ್ನು ಪುಷ್ಟೀಕರಿಸಿದರು. ಉತ್ತರ ಕರ್ಣಾಟಕವಾದ ಬೆಳಗಾಂವಿಯಿಂದ ಬಂದಿದ್ದ ಮ॥ ರಾ॥ ಮುದಕಟ್ಟಿ, ಬಿ.ಎ. ಅವರು ಆ ಪ್ರಾಂತದ ಪರವಾಗಿ ಇದೇ ಸೂಚನೆಯನ್ನು ಮತ್ತಿಷ್ಟು ಪುಷ್ಟೀಕರಿಸಿದನಂತರ ಮ॥ ರಾ॥ ತಾತಾಚಾರ್ಯರು ಅಲ್ಲಿ ನೆರೆದಿದ್ದ ಸದಸ್ಯರ ಜಯಘೋಷ ಮಧ್ಯದಲ್ಲಿ ಅಗ್ರಪೀಠವನ್ನಲಂಕರಿಸಿ ಮುಂದೆ ಕೊಟ್ಟಿರುವ ಅಮೋಘವಾದ ತಮ್ಮ ಭಾಷಣವನ್ನು ಓದಿ ಕೊನೆಯಲ್ಲಿ ಕರ್ಣಾಟಕ ಸಾಮ್ರಾಜ್ಯಾಭಿವೃದ್ಧಿಗಾಗಿ ಮೈಸೂರು ಸಂಸ್ಥಾನಾಧೀಶರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹಾದ್ದೂರ್ ಅವರೂ, ಅವರ ತಮ್ಮಂದಿರಾದ ಶ್ರೀಮತ್ಕಂಠೀರವ ಶ್ರೀ ನರಸಿಂಹರಾಜ ಒಡೆಯರ್ ಬಹಾದ್ದೂರ್ ಅವರೂ ಕೊಡುತ್ತಿರುವ ಪ್ರೋತ್ಸಾಹವನ್ನು ಪ್ರಶಂಸಿಸಿ ಅವರ ಶ್ರೇಯಃಪ್ರಾರ್ಥನೆಯನ್ನು ಪದ್ಯರೂಪದಲ್ಲಿ ಬಹಳ ಸ್ವಾರಸ್ಯವಾಗಿ ಮಾಡಿ ಭಾಷಣವನ್ನು ಮುಗಿಸಿದರು.

ತರುವಾಯ ಸಮ್ಮೇಳನಕ್ಕೆ ಬರಲು ಅನುಕೂಲ್ಯವಿಲ್ಲದೆ ಇದ್ದುದಕ್ಕಾಗಿ ತಮ್ಮ ವಿಷಾದವನ್ನೂ ಸಮ್ಮೇಳನವು ಯಶಸ್ವಿಯಾಗಲಿ ಎಂಬ ತಮ್ಮ ಹಾರೈಕೆಯನ್ನೂ ತೋರ್ಪಡಿಸಿ ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸರಾಯರು, ಬಿ.ಎಸ್‌ಸಿ., ಎಲ್.ಸಿ.ಇ. ಅವರು, ಮ॥ ರಾ॥ ಸಿ. ಕೆ. ವೆಂಕಟರಾಮಯ್ಯ ಎಂ.ಎ., ಎಲ್‌ಎಲ್.ಬಿ. ಅವರು, ಮ॥ ರಾ॥ ಟಿ. ಅಪ್ಪೂರಾವ್, ಬಿ.ಎ., ಬಿ.ಎಲ್. ಅವರು, ಮ॥ ರಾ॥ ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಅವರು, ಮ॥ ರಾ॥ ಎಚ್. ಚೆನ್ನಕೇಶವಯ್ಯಂಗಾರ್ಯರು, ಮ॥ ರಾ॥ ಡಿ. ವಿ. ಗುಂಡಪ್ಪನವರು, ಸರಸ್ವತೀ ಕಾರ್ಯಾಲಯದ ಶ್ರೀ ಕಲ್ಯಾಣಮ್ಮನವರು, ಮ॥ ರಾ॥ ಡಿ.ವಿ. ಬೆಳ್ವಿ ಅವರು, ಮ॥ ರಾ॥ ಕೆ. ಜಿ. ಗೆಜ್ಜಿ, ಬಿ.ಎ., ಎಲ್‌ಎಲ್.ಬಿ. ಅವರು—ಇವರುಗಳು ಬರೆದಿದ್ದ ಪತ್ರಗಳನ್ನು ಸ್ವಾಗತ ಮಂಡಲಿಯ ಕಾರ್ಯದರ್ಶಿಯವರಾದ ಮ॥ರಾ॥ ಉಳ್ಳಾಳ ಮಂಗೇಶರಾಯರು ಓದಿದರು. ಆಮೇಲೆ ಕರ್ಣಾಟಕ ಸಾಹಿತ್ಯ

ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಮ॥ ರಾ॥ ಸಂಗಪುರಂ ವೆಂಕಟೇಶಯ್ಯಂಗಾರ್ಯರು ಪರಿಷತ್ತಿನ ಅಕ್ಷಯ ಸಂವತ್ಸರದ ವರದಿಯನ್ನು ಓದಿದರು. ಫಲಾಹಾರವಾದ ಬಳಿಕ ವಿಷಯ ನಿರ್ಧಾರಣ ಸಭೆಯೊಂದು ನಿಯಮಿತವಾಯಿತು. ಸಾಯಂಕಾಲ ೮ ಘಂಟೆಗೆ ಈ ಸಭೆ ಸೇರಿ ಮಾರನೆಯ ದಿವಸ ಸಮ್ಮೇಳನವು ಚರ್ಚಿಸಿ ಅಂಗೀಕರಿಸಬೇಕಾದ ಠರಾವುಗಳನ್ನು ಮುಂದಾಗಿ ವಿಚಾರಮಾಡಿದುದಾಯಿತು. ರಾತ್ರಿ ಭೋಜನವಾದನಂತರ ಪ್ರೈಸಿಂಗ್ ಸ್ಕೂಲಿನ ಹಲವು ವಿದ್ಯಾರ್ಥಿಗಳೂ ಇತರರೂ ಸೇರಿ ಚಿತ್ತಾಕರ್ಷಕವಾದ ಕರ್ಣಾಟಕ ಸಾಮಾಜಿಕ ನಾಟಕವೊಂದನ್ನು ಸಮ್ಮೇಳನದ ಸದಸ್ಯರ ಮುಂದೆ ಅಭಿನಯಿಸಿದರು.

ಎರಡನೆಯ ದಿವಸ—ಮೇ ೨೦ನೆಯ ಶುಕ್ರವಾರ

ಹಿಂದಿನ ದಿವಸ ಏರ್ಪಟ್ಟಿದ್ದಂತೆ ಸಮ್ಮೇಳನವು ಸಭಾ ಮಂದಿರದಲ್ಲಿ ಬೆಳಗಿನ ೮-೩೦ಕ್ಕೆ ಸೇರಿತು. ಕೆಳಗೆ ಕೊಟ್ಟಿರುವ ಠರಾವುಗಳು ಕ್ರಮವಾಗಿ ಚರ್ಚೆಯಾಗಿ ಅಂಗೀಕೃತವಾದುವು:—

೧. ಮೊಗಲಾಯಿಯ ಕರ್ಣಾಟಕದಲ್ಲಿಯೂ, ಬಳ್ಳಾರಿ, ಕೊಯಮುತ್ತೂರು, ಸೇಲಂ ಮೊದಲಾದ ಗಡಿ ನಾಡುಗಳಲ್ಲಿಯೂ ಕನ್ನಡ ಭಾಷೆಯನ್ನು ಕುರಿತು ಜಾಗ್ರತಿಯನ್ನುಂಟುಮಾಡುವ ಬಗ್ಗೆ ಪ್ರಚಾರಕರನ್ನು ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಕಳುಹಿಸತಕ್ಕದ್ದು.

ಸೂಚಕರು :—ಮ॥ ರಾ॥ ವಿ. ಬಿ. ಆಲೂರರ ಪರವಾಗಿ ಮ॥ ರಾ॥ ಎನ್. ವೆಂಕಟೇಶಯ್ಯಂಗಾರ್ಯರು.

ಅನುಮೋದಕರು :—ಮ॥ ರಾ॥ ಗೋವರ್ಧನರಾಯರು.

ಸರ್ವಾನುಮತದಿಂದ ಮಂಜೂರಾಯಿತು.

೨. ವಿಜ್ಞಾನ ಶಾಸ್ತ್ರಗಳ ಪ್ರಚಾರಕ್ಕೆ ಪಾರಿಭಾಷಿಕ ಶಬ್ದಕೋಶವೊಂದು ಅತ್ಯಾವಶ್ಯಕವಾಗಿರುವುದಾದರೂ ಕೂಡ ಅಂಥ ಜ್ಞಾನ ಪ್ರಸಾರವನ್ನು ಸರ್ವತ್ರ ಹರಡಿಸುವ ಕಾರ್ಯಕ್ಕಿಂತ ಗ್ರಾಮ ಪಾಠಶಾಲೆಗಳ ಮುಖಾಂತರ ಪ್ರಾಥಮಿಕ ವಿದ್ಯಾಭ್ಯಾಸದಲ್ಲೇ ಪ್ರಾರಂಭಿಸುವುದು ಹೆಚ್ಚಿನ ಗರಜಿನ ಕಾರ್ಯವಾದುದರಿಂದ ಗ್ರಾಮ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರತ್ಯಕ್ಷೋಪಯೋಗಕ್ಕೆ ಯೋಗ್ಯವೂ ಅನುಕೂಲವೂ ಆಗುವಂತೆ ಸಾಧ್ಯವಿದ್ದಷ್ಟು ತ್ವರೆಯಿಂದ ಅಂಥ ಸಣ್ಣ ಕೋಶವೊಂದನ್ನು ತಯಾರಿಸಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸುಲಭ ಕ್ರಯಕ್ಕೆ ಪ್ರಕಟಗೊಳಿಸಬೇಕಾಗಿ ಈ ಸಮ್ಮೇಳನದ ಅಭಿಪ್ರಾಯವಿದೆ. ಇತರರ ಸಹಾಯದಿಂದ ಈ ರೀತಿಯ ಕೋಶವನ್ನು ತಯಾರಿಸಿ ಪರಿಷತ್ತಿಗೆ ಒಪ್ಪಿಸುವುದಕ್ಕೆ ಶ್ರೀಯುತ ಪಂಜೆ ಮಂಗೇಶರಾಯರವರನ್ನು ನೇಮಿಸಲಾಗಿದೆ.

ಸೂಚಕರು :—ಮು॥ ರಾ॥ ಅಲವಾಸ್ ವೆಂಕಟರಾಯರು.

ಅನುಮೋದಕರು :—ಮು॥ ರಾ॥ ಹುರುಳಿ ಭೀಮರಾಯರು.

ಸರ್ವಾನುಮತದಿಂದ ಮಂಜೂರಾಯಿತು.

೩. ದಕ್ಷಿಣ ಕನ್ನಡ ಜಿಲ್ಲೆಯೊಳಗಣ ಮೂಡಬಿದರೆ, ನಾರಂಗ, ಗುರುಪುರ, ಅತ್ತಾವರ, ಬೇಕಲ ಮುಂತಾದ ಕಡೆಗಳಲ್ಲಿರುವ ಅನೇಕ ಕರ್ಣಾಟಕ ಹಳೆಯ ಸಾಹಿತ್ಯ ಗ್ರಂಥಗಳ ಶೋಧನ, ಪ್ರಕಟನ ಕಾರ್ಯಗಳಲ್ಲಿ ಮದರಾಸು ಸರ್ಕಾರದವರು ಸಾಕಷ್ಟು ಲಕ್ಷ್ಯವನ್ನು ಇದುವರೆಗೆ ಕೊಡದೆ ಅಂಥ ಗ್ರಂಥಗಳು ತೀರ ಕಣ್ಮರೆಯಾಗಿಹೋಗುವ ಸಂಭವವಿರುವುದರಿಂದ ಇನ್ನಾದರೂ ಅಂಥ ಚಟುವಟಿಕೆಗೆ ಮದರಾಸು ಸರ್ಕಾರದ ಇಲಾಖೆಯವರು ತಕ್ಕ ಲಕ್ಷ್ಯಕೊಟ್ಟು ಪ್ರಕಟನೆಯ ಮತ್ತು ಸಂರಕ್ಷಣೆಯ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಈ ಸಮ್ಮೇಳನವು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ. ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕನ್ನಡ ನಾಡಿನ ಮುಖ್ಯ ಭಾಗಗಳಲ್ಲೊಂದಾಗಿರುವುದರಿಂದಲೂ ಅಖಿಲ ಕರ್ಣಾಟಕದ ಚರಿತ್ರೇತಿಹಾಸಗಳಲ್ಲಿ ದಕ್ಷಿಣ ಕನ್ನಡ ಚರಿತ್ರೆ ಕೂಡ ಪ್ರಧಾನವಾದ ಸ್ಥಾನವನ್ನು ಹೊಂದತಕ್ಕದ್ದಾಗಿರುವುದರಿಂದಲೂ ಅಂಥ ಚರಿತ್ರೆಯ ಶೋಧನ ಕಾರ್ಯದಲ್ಲಿ ಈ ಜಿಲ್ಲೆಗಳಲ್ಲಿಯ ಶಿಲಾ ಶಾಸನಗಳು ಬಹಳ ಪ್ರಾಮುಖ್ಯತೆಯುಳ್ಳವಾಗಿರುವುದರಿಂದಲೂ ಮದರಾಸು ಸರ್ಕಾರದ ಶಾಸನ ಇಲಾಖೆಯವರು ಆ ಶಿಲಾ ಶಾಸನಗಳ ಸಂಗ್ರಹ ಮತ್ತು ಪ್ರಕಟನೆಯ ಕೆಲಸವನ್ನು ಇನ್ನಾದರೂ ವಿಳಂಬಮಾಡದೆ ಮುಂದುವರಿಸಬೇಕಾಗಿ ಈ ಸಮ್ಮೇಳನವು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ.

ಸೂಚಕರು :—ಮು॥ ರಾ॥ ಉಗ್ರಾಣ ಮಂಗೇಶರಾವ್.

ಅನುಮೋದಕರು :—ಮು॥ ರಾ॥ ಪಂಜೆ ಮಂಗೇಶರಾವ್.

ಸರ್ವಾನುಮತದಿಂದ ಅಂಗೀಕರಿಸಲಾಯಿತು.

೪. (ಕ) ಮದರಾಸು ಕರ್ಣಾಟಕದ ಸರಕಾರಿ ಶಾಲೆಗಳಲ್ಲಿಯ ವಿದ್ಯಾಭ್ಯಾಸವು ದೇಶ ಭಾಷೆಯಾದ ಕನ್ನಡದಲ್ಲಿಯೇ ನಡೆಯಬೇಕೆಂದು ಸರ್ಕಾರದ ಸಂಶೋಕ್ತವಾದ ಅಜ್ಞೆ ಇರುವುದಾದರೂ, ಪ್ರಕೃತ ಅದು ಹಲವು ಶಾಲೆಗಳಲ್ಲಿ ಇಂಗ್ಲೀಷಿನಲ್ಲಿಯೇ ನಡೆಯುತ್ತಿರುವುದರಿಂದಲೂ, ಮುಖ್ಯವಾಗಿ ಬಾಲಿಕಾ ಪಾಠಶಾಲೆಗಳಲ್ಲಿ ಈ ಸ್ಥಿತಿ ತೋರಿಬರುತ್ತಿರುವುದರಿಂದಲೂ, ಕನ್ನಡದ ಏಳ್ಗೆಗೆ ವಿಶೇಷವಾದ ಹಾನಿಯುಂಟಾಗುವುದರಿಂದ ಮೇಲೆ ಹೇಳಿದ ಸರಕಾರದ ಅಜ್ಞೆಯನ್ನು ಉಪಾಧ್ಯಾಯರೂ ಶಾಲೆಗಳ ವಿಚಾರಕರೂ ಅಕ್ಷರಶಃ ಅನುಸರಿಸುವಂತೆ ಅವರನ್ನು ಒತ್ತಾಯಪಡಿಸಬೇಕೆಂದು ಆ ಸರಕಾರಕ್ಕೆ ಈ ಸಮ್ಮೇಳನವು ಬಿನ್ನಯಿಸುತ್ತದೆ.

(ಖ) ಪ್ರವೇಶ ಪರೀಕ್ಷೆಯ ವಿದ್ಯಾಭ್ಯಾಸವು ಐಚ್ಛಿಕವಾಗಿ ಕನ್ನಡದಲ್ಲಿಯೇ ನಡೆಯಬಹುದೆಂದು ಮದರಾಸು ಸರಕಾರದ ವಿದ್ಯಾ ಇಲಾಖೆಯವರು ಅಪ್ಪಣೆ

ಕೊಟ್ಟಿದ್ದರೂ ಇದುವರೆಗೆ ಆಚರಣೆಯಲ್ಲಿ ಬಾರದೆ ಇರುವುದರಿಂದ ಇನ್ನಾದರೂ ಈ ವಿಷಯದಲ್ಲಿ ತಕ್ಕಂತೆ ವರ್ತಿಸಿ ಭಾಷೋದ್ಧಾರಕರಲ್ಲಿ ಸಹಭಾಗಿಗಳಾಗ ಬೇಕೆಂದು ಮದರಾಸು ಸರ್ಕಾರದ ಶಾಲಾ ಅಧಿಕಾರಿಗಳನ್ನು ಈ ಸಮ್ಮೇಳನವ ಕೇಳಿಕೊಳ್ಳುತ್ತದೆ.

ಸೂಚಕರು :—ಮ|| ರಾ|| ಕೆರೋಡಿ ಸುಬ್ಬರಾಯರು.

ಅನುಮೋದಕರು :—ಮ|| ರಾ|| ಕೆ. ಶಿವರಾಮ ಕಾರಾಂತರು.

ಸರ್ವಾನುಮತದಿಂದ ಅಂಗೀಕೃತವಾಯಿತು.

೧೧ ಘಂಟೆಗೆ ಸಭಾಧ್ಯಕ್ಷರು ಕರ್ಣಾಟಕ ಪುಸ್ತಕ ಪ್ರದರ್ಶನವೊಂದನ್ನು ತೆರೆದರು. ಕನ್ನಡ ಪುಸ್ತಕಗಳೂ, ಓಲೆಯ ಪ್ರತಿಗಳೂ, ಕರ್ಣಾಟಕ ವೃತ್ತಾಂತ ಪತ್ರಿಕೆಗಳೂ, ಸಾಮಯಿಕ ಪತ್ರಿಕೆಗಳೂ ಪ್ರದರ್ಶಿತವಾಗಿದ್ದುವು. ಮಂಗಳೂರಿನಲ್ಲಿ ಅನೇಕ ವರ್ಷಗಳ ಹಿಂದೆ ಸ್ಥಾಪಿತವಾಗಿ ಈಗಲೂ ನಡೆಯುತ್ತಿರುವ ಬೇಸಲ್ ಮಿಷನ್ ಅಚ್ಚು ಕಾರ್ಖಾನೆಯಲ್ಲಿ ತಯಾರಾದ ಪುಸ್ತಕಗಳೂ ಶಾಲೆಗಳಿಗೆ ಉಪಯೋಗವಾಗುವ ಉಪಕರಣಗಳೂ ಅನೇಕರ ಮನಸ್ಸನ್ನು ಆಕರ್ಷಿಸಿದುವು.

ಮಧ್ಯಾಹ್ನ ೨ ಘಂಟೆಗೆ ಸಮ್ಮೇಳನವು ಕೂಡಿ ಕೆಲವು ಪ್ರಬಂಧಗಳನ್ನು ಓದಲಾಯಿತು. ಅವು ಯಾವುವೆಂದರೆ :—

೧. ಉತ್ತರಕಾಂಡ ರಾಮಾಯಣ ಕಥೆ — ಮ|| ಉಗ್ರಾಣ ಮಂಗೇಶರಾಯರು.
೨. ಕನ್ನಡ ಜಿಲ್ಲೆಯ ಕೆಲವು ವಿಶೇಷ ಸ್ಥಳಗಳು ,, ಬಿ. ಶಿವರಾಮಯ್ಯನವರು.
೩. ಷಟ್ಪದೀ ಕಾವ್ಯ—ವೊಸ್ಮನ ವೃತ್ತು ,, ಕೆರೋಡಿ ಸುಬ್ಬರಾಯರು.
೪. ಕೆಳದೀ ನಾಯಕರ ಚರಿತ್ರೆ ,, ಐಗಳ ಗಣಪತಿರಾಯರು.
೫. ಭಾಷಾ ಶಾಸ್ತ್ರ ,, ಕೊಳಕೆ ಪರಮೇಶ್ವರಯ್ಯ.

ಇವುಗಳೆಲ್ಲವನ್ನೂ ಮುಂದೆ ಮುದ್ರಿಸಿದೆ.

ಪ್ರಬಂಧಗಳನ್ನು ಓದಿದನಂತರ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪಂಡಿತರಾದ ಮ|| ರಾ|| ಕಡಬದ ನಂಜುಂಡ ಶಾಸ್ತ್ರಿಗಳು ಕನ್ನಡ ಭಾರತದಲ್ಲಿ ಕೆಲವು ಪದ್ಯಗಳನ್ನು ಶ್ರೋತೃಗಳು ತಲೆದೂಗುವಂತೆ ಸುಸ್ವರದಿಂದ ಗಾನಮಾಡಿದರು. ರಾತ್ರಿ ೭-೧೦ ಘಂಟೆಗೆ ವಿಷಯ ನಿರ್ಧಾರಣ ಸಭೆಯು ಕೂಡಿ ಮರುದಿನದ ಸಮ್ಮೇಳನದಲ್ಲಿ ಅಂಗೀಕೃತವಾಗಬೇಕಾದ ಠರಾವುಗಳನ್ನು ಚರ್ಚಿಸಿ ಸಿದ್ಧಪಡಿಸಲಾಯಿತು.

ಅದೇ ರಾತ್ರಿ ೯ ಘಂಟೆಗೆ ಮಂಟಪದಲ್ಲಿ ಪ್ರಸಿದ್ಧ ಪಂಡಿತರು ಮ|| ರಾ|| ಶ್ರೀನಿವಾಸಾಚಾರ್ಯರೇ ಮುಂತಾದವರು ಕೆಲವರು ವಾಲಿ ಸುಗ್ರೀವ ಸಂವಾದವನ್ನು ಯಕ್ಷಗಾನ ರೂಪದಲ್ಲಿ ಅತ್ಯಂತ ಸ್ವಾರಸ್ಯವಾಗಿ ನಡೆಯಿಸಿದರು.

ಮೂರನೆಯ ದಿವಸ—ಮೇ ೨೧ನೆಯ ಶನಿವಾರ

ಪ್ರಥಮ ಪ್ರಕಾರ ಸಮ್ಮೇಳನವು ಬೆಳಗಿನ ೮-೩೦ ಘಂಟೆಗೆ ಸಭಾ ಮಂಟಪದಲ್ಲಿ ಕೂಡಲು ಮ|| ರಾ|| ಮುಳಿಯ ತಿಮ್ಮಪ್ಪಯ್ಯನವರು 'ಆಂಡಯ್ಯನೂ ಕನ್ನಡ

ಮೊಸಿಪ್ಪಾ ನಾಶ' ಎಂಬ ಪ್ರಬಂಧವನ್ನು ಓದಿದರು. ತರುವಾಯ ಮೈಸೂರು ಶಾಸನ ಇಲಾಖೆಯ ಮ॥ ರಾ॥ ಬಿ. ಆರ್. ಕೃಷ್ಣಶಾಸ್ತ್ರಿಗಳೂ, ಬೆಂಗಳೂರು ಸೆಂಟ್ರಲ್ ಕಾಲೇಜ್ ಕರ್ಣಾಟಕ ಅಧ್ಯಾಪಕರಾದ ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯನವರೂ ಕರ್ಣಾಟಕ ಛಂದಸ್ಸಿನ ವಿಷಯವಾಗಿ ಕೆಲವು ವಿಶೇಷಗಳು ಮಾತನಾಡಿ ಹಲವು ಶುದ್ಧ ಕರ್ಣಾಟಕ ವೃತ್ತಗಳನ್ನು ಹಾಡಿ ತೋರಿಸಿದರು. ಇದಾದನಂತರ ಮ॥ ರಾ॥ ಮುಸ್ಸೂರು ಶಿವರಾಮಯ್ಯನವರಿದ್ದು ಈಗಿನ ಕರ್ಣಾಟಕ ಕವಿಗಳಿಗೂ ಪೂರ್ವ ಕವಿಗಳಿಗೂ ಪ್ರಾಸ, ವ್ಯಾಕರಣ ನುಡಿಯು ಕಟ್ಟು, ಹೊಸ ಶಬ್ದಗಳು—ಈ ವಿಷಯವಾಗಿ ಇರುವ ವ್ಯತ್ಯಾಸ ವಿಷಯದಲ್ಲಿ ಸುಮಾರು ೧ ಘಂಟೆಯ ಮೇಲೆ ಉಪನ್ಯಾಸ ಮಾಡಿದರು. ಆಮೇಲೆ ಮಂಗಳೂರಿನ ಹೈಸ್ಕೂಲ್ ಹೆಡ್ಮಾಸ್ಟರು ಮ॥ ರಾ॥ ಪಂಜೆ ಮಂಗೇಶರಾಯರು ಕನ್ನಡ ಭಾಷಾ ಶಿಕ್ಷಣವನ್ನು ಕೊಡುವ ಕಾರ್ಯದಲ್ಲಿ ತಮ್ಮ ಅನುಭವವನ್ನೂ, ತಾವು ಕನ್ನಡವನ್ನು ಕಲಿಯಲು ಹೇಗೆ ಪ್ರಯಾಸಪಟ್ಟರೋ ಆ ವಿಷಯದಲ್ಲಿ ತಮ್ಮ ಆತ್ಮ ಕಥೆಯನ್ನೂ ಅಲ್ಲಲ್ಲಿ ವಿಶದಪಡಿಸಿ ಸಭಿಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸುವಂತೆ ಅತ್ಯಂತ ಸ್ವಾರಸ್ಯವಾದ ಉಪನ್ಯಾಸ ಮಾಡಿದರು.

ಮಧ್ಯಾಹ್ನೋತ್ತರ ೩-೧೦ ಘಂಟೆಗೆ ಮರಳಿ ಸಭೆ ಕೂಡಿತು. ಕಳೆದ ರಾತ್ರಿ, ಮುಂದಾಗಿಯೇ ಚರ್ಚೆಯಾಗಿದ್ದ ಠರಾವುಗಳನ್ನು ಸಮ್ಮೇಳನದ ಮುಂದೆ ಒಂದೊಂದಾಗಿ ತಂದು ಅವನ್ನು ಮರಳಿ ಚರ್ಚಿಸಿ ಅಂಗೀಕರಿಸಿದುದಾಯಿತು. ಆ ಠರಾವುಗಳಾವುವೆಂದರೆ :—

೫. ಕರ್ಣಾಟಕ ದೇಶವನ್ನೂ ಕನ್ನಡ ಭಾಷೆಯ ಸೇವೆಯನ್ನೂ ಬಲು ಬಗೆಯಾಗಿ ಸೇವಿಸಿ ಕೀರ್ತಿಶೇಷರಾದ ಶ್ರೀಮಾನ್ ಮೈಸೂರು ಮೋತಿಖಾನೆ ವರ್ಧಮಾನಯ್ಯನವರ ಅಕಾಲ ನಿಧನದಿಂದ ಕನ್ನಡ ನಾಡಿಗೆ ಉಂಟಾಗಿರುವ ಅಪಾರ ನಷ್ಟವನ್ನು ಕುರಿತು ಈ ಸಮ್ಮೇಳನವು ಬಹಳ ಶೋಕಿಸುತ್ತದೆ; ಮತ್ತು ಅವರ ಕುಟುಂಬಕ್ಕೆ ಪರಿತಾಪವನ್ನು ಸೂಚಿಸುತ್ತದೆ.

೬. ಮೈಸೂರು ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಷಯದಲ್ಲಿ ತೋರುತ್ತಲಿರುವ ಅಪಾರವಾದ ಔದಾರ್ಯಕ್ಕಾಗಿ ಈ ಸಮ್ಮೇಳನವು ವಿಶೇಷ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ಅಧ್ಯಕ್ಷರವರಿಂದ ಸೂಚಿಸಲ್ಪಟ್ಟು ಅಂಗೀಕೃತವಾಯಿತು.

೭. ಕರ್ಣಾಟಕದ ಪ್ರತಿ ಜಿಲ್ಲೆಯಲ್ಲಿಯೂ ಸಾಧ್ಯವಾದ ಮಟ್ಟಿಗೂ ಕರ್ಣಾಟಕದ ಹೊರಗೂ ಇರುವ ಕನ್ನಡ ಪತ್ರ ಸಂಪಾದಕರು, ಗ್ರಂಥ ಕರ್ತೃಗಳು, ಮುದ್ರಕರು, ಪ್ರಚಾರಕರು, ನಾಟಕ ಮಂಡಲಿಗಳ ಪ್ರವರ್ತಕರು, ಹರಿದಾಸರು ಮೊದಲಾದ ಸ್ತ್ರೀಪುರುಷರ ಒಂದು ಪಟ್ಟಿಯನ್ನು ಕರ್ಣಾಟಕ ಸಾಹಿತ್ಯ ಪರಿಷತ್ತು

ಬರುವ ಸಮ್ಮೇಳನದೊಳಗಾಗಿ ಪ್ರಯತ್ನಪಟ್ಟು ಸಂಗ್ರಹಿಸಬೇಕೆಂದೂ, ಅಮೇಲೆ ಅವುಗಳಲ್ಲಿ ಅಗತ್ಯವಿರುವ ತಿದ್ದುಪಡಿಗಳನ್ನು ಆಗಾಗ ಮಾಡಿಕೊಳ್ಳುತ್ತಿರತಕ್ಕುದೆಂದೂ ಈ ಸಮ್ಮೇಳನವು ನಿರ್ಧರಿಸುತ್ತದೆ.

ಸೂಚಕರು :—ಮ॥ ರಾ॥ ಬಿ. ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು.

ಅನುಮೋದಕರು :—ಮ॥ ರಾ॥ ಎಸ್. ರಾಜಗೋಪಾಲಕೃಷ್ಣರಾಯರು.

ಅಂಗೀಕರಿಸಲ್ಪಟ್ಟಿತು.

೮. ಕನ್ನಡಿಗರು ತಮ್ಮೊಳಗಣ ಪತ್ರವ್ಯವಹಾರವನ್ನು ಅಭ್ಯಾಸಪೂರ್ವಕವಾಗಿ ಕನ್ನಡದಲ್ಲಿಯೇ ನಡೆಯಿಸುವುದು ಕನ್ನಡ ಭಾಷೆಯ ಏಳ್ಗೆಗೆ ಕೇವಲ ಅಗತ್ಯವೆಂದು ಈ ಸಮ್ಮೇಳನವು ಪ್ರಬಲವಾಗಿ ಅಭಿಪ್ರಾಯಪಡುತ್ತದೆ.

ಸೂಚಕರು :—ಮ॥ ರಾ॥ ನಂ. ವೆಂಕಟೇಶಯ್ಯಂಗಾರ್ಯರು.

ಅನುಮೋದಕರು :—ಮ॥ ರಾ॥ ಕೊರಟಿಕಲ್ ಶ್ರೀನಿವಾಸರಾಯರು.

ಅಂಗೀಕೃತವಾಯಿತು.

೯. ಆಂಧ್ರ ವಿಶ್ವವಿದ್ಯಾಲಯದ ಸ್ಥಾಪನೆಯಾದಂತೆ ಕನ್ನಡಿಗರ ಪ್ರೌಢ ಶಿಕ್ಷಣದ ಸೌಕರ್ಯಕ್ಕಾಗಿಯೂ ಏಕೀಕರಣಕ್ಕಾಗಿಯೂ ಅಖಿಲ ಕರ್ಣಾಟಕಕ್ಕೂ ಒಂದು ಕರ್ಣಾಟಕ ವಿಶ್ವವಿದ್ಯಾಲಯವು ಅತ್ಯಾವಶ್ಯಕವಾದುದರಿಂದ ಅಂತಹ ಒಂದು ವಿಶ್ವವಿದ್ಯಾಲಯವನ್ನು ಅಖಿಲ ಕರ್ಣಾಟಕಕ್ಕೂ ಕೊಡಬೇಕೆಂದೂ ಆ ಬಗೆಗೆ ಅಗತ್ಯವಿರುವ ಕಾರ್ಯಗಳನ್ನು ಕೂಡಲೆ ಕೈಕೊಳ್ಳಬೇಕೆಂದೂ ಒಂದು ಮನವಿಯನ್ನು ಸಿದ್ಧಪಡಿಸಿ, ಅದಕ್ಕೆ ಅಖಿಲ ಕರ್ಣಾಟಕದ ಆದಷ್ಟು ಹೆಚ್ಚು ಸಹಿಗಳನ್ನು ಪಡೆದು ಅದನ್ನು ಇಂಡಿಯಾ ಸರ್ಕಾರಕ್ಕೂ ಸಂಬಂಧಪಟ್ಟ ಪ್ರಾಂತಿಕ ಸರ್ಕಾರಗಳಿಗೂ ಕಳುಹಿಸತಕ್ಕದ್ದು. ಈ ಕೆಲಸಗಳನ್ನು ಮಾಡಲು—

ಮುಂಬಯಿ ಕರ್ಣಾಟಕಕ್ಕೆ—ಶ್ರೀಯುತ ಆಲೂರ ವೆಂಕಟರಾಯರು.

ಮದರಾಸು ,, —ಶ್ರೀ ಡಾಕ್ಟರ್ ಯು. ರಾಮರಾಯರು.

ಮೈಸೂರು ,, —ಶ್ರೀ ಡಿ. ವಿ. ಗುಂಡಪ್ಪನವರು (ಕಾರ್ಯದರ್ಶಿ).

ಈ ಮೂರು ಮಂದಿಯುಳ್ಳ ಒಂದು ಸಮಿತಿಯನ್ನು ಏರ್ಪಡಿಸತಕ್ಕದ್ದು. ಮತ್ತು ಈ ಸಮಿತಿಗೆ ಕಾರ್ಯ ಸೌಕರ್ಯಕ್ಕಾಗಿ ಇತರ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರವಿರತಕ್ಕದ್ದು.

ಸೂಚಕರು :—ಮ॥ ರಾ॥ ಯು. ಮಂಗೇಶರಾಯರು.

ಅನುಮೋದಕರು:—ಮ॥ ರಾ॥ ಕೆ. ರಾಮಚಂದ್ರಾಚಾರ್ಯರು.

ಅಂಗೀಕೃತವಾಯಿತು.

೧೦. ವಿಶ್ವವಿದ್ಯಾಲಯದ ಪದವೀಧರರಾದ ಕನ್ನಡ ಮತ್ತು ಸಂಸ್ಕೃತ ಪಂಡಿತರುಗಳಿಗೆ ಗ್ರಾಜುಯೇಟುಗಳಷ್ಟೇ ಅಧಿಕಾರವು ವೇತನ ಮೊದಲಾದ

ಎಲ್ಲ ವಿಷಯಗಳಲ್ಲಿಯೂ ದೊರೆಯುತಕ್ಕದೆಂದು ಈ ಸಮ್ಮೇಳನವು ತಯಾ ಸರ್ಕಾರಗಳನ್ನು ಕೇಳಿಕೊಳ್ಳುತ್ತದೆ.

ಸೂಚಕರು :—ಮ॥ ರಾ॥ ಕೊಳಕೆ ಪರಮೇಶ್ವರಮ್ಮಯ್ಯ.

ಅನುಮೋದಕರು :—ಮ॥ ರಾ॥ ತೊನ್ಸೆ ಮಂಗೇಶರಾವ್.

ಅಂಗೀಕರಿಸಲ್ಪಟ್ಟಿತು.

ಇಷ್ಟಕ್ಕೆ ಠರಾವುಗಳ ಕಾರ್ಯವು ಮುಗಿಯಿತು. ಅಧ್ಯಕ್ಷರು ಎದ್ದು ಈ ಸಾರಿ ಕರ್ಣಾಟಕ ಸಮ್ಮೇಳನವನ್ನು ಮಂಗಳೂರಿನಲ್ಲಿ ನೆರೆಯಿಸಿದುದಕ್ಕಾಗಿ ಮಂಗಳೂರು ಸ್ವಾಗತ ಮಂಡಲಿಗೂ, ಅದರ ಅಧ್ಯಕ್ಷರಾದ ರಾವ್ ಸಾಹೇಬ್ ಮ॥ ರಾ॥ ನಲ್ಲಿಕಾಯಿ ವೆಂಕಟರಾಯರಿಗೂ, ಗೌರವ ಕಾರ್ಯದರ್ಶಿಯವರಾದ ಮ॥ ರಾ॥ ಉಳ್ಳಾಳ ಮಂಗೇಶರಾಯರಿಗೂ ಧನ್ಯವಾದಗಳನ್ನರ್ಪಿಸಿದರು. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ಮ॥ ರಾ॥ ನಂ. ವೆಂಕಟೇಶಯ್ಯಂಗಾರ್ಯರು ಸಮ್ಮೇಳನದ ಅಧ್ಯಕ್ಷರಾದ ಮ॥ ರಾ॥ ತಾತಾಚಾರ್ಯರು ದಯೆಯಿಟ್ಟು ನೂರಾರು ಮೈಲಿಗಳ ದೂರದಿಂದ ಈ ಉರಿಬಿಸಿಲು ಕಾಲದಲ್ಲಿ ಮಂಗಳೂರಿಗೆ ಬಂದು ಸಮ್ಮೇಳನವನ್ನು ಸಾಂಗವಾಗಿ ನೆರವೇರಿಸಿಕೊಟ್ಟು ಅಲ್ಲಿ ನೆರೆದಿದ್ದವರ ಮನಸ್ಸನ್ನು ಕರ್ಣಾಟಕ ಭಾಷಾಭಿವೃದ್ಧಿಯ ವಿಷಯದಲ್ಲಿ ಹುರಿಗೊಳಿಸಿದುದಕ್ಕಾಗಿ ಕೊಂಡಾಡಿ ಧನ್ಯವಾದಗಳನ್ನು ಸಮರ್ಪಿಸಿದರು. ಬಳಿಕ ಸ್ವಾಗತ ಮಂಡಲಿಯ ಅಧ್ಯಕ್ಷರಿಗೂ, ಹಗಲೂ ಇರುಳೂ ವಿರಾಮವಿಲ್ಲದೆ ದುಡಿದು ದಣಿದ ಸ್ವಾಗತ ಮಂಡಲಿಯ ಕಾರ್ಯದರ್ಶಿಯವರಾದ ಮ॥ ರಾ॥ ಉಳ್ಳಾಳ ಮಂಗೇಶರಾಯರಿಗೂ ಧನ್ಯವಾದಗಳನ್ನು ಸಮರ್ಪಿಸಿದರು. ಕೊನೆಗೆ ಮ॥ ರಾ॥ ಉಳ್ಳಾಳ ಮಂಗೇಶರಾಯರು ಸಮ್ಮೇಳನದ ಅಧ್ಯಕ್ಷರಿಗೂ ಅಲ್ಲಿ ನೆರೆದಿದ್ದ ಮಹಾಶಯರಿಗೂ ಅತ್ಯಂತ ತಾಳ್ಮೆಯಿಂದ ಮೂರು ದಿವಸ ಬೆಳಗ್ಗೆ ಸಂಜೆ ವಿರಾಮವಿಲ್ಲದೆ ಕೂಡಿ ಯಾವ ಭಾಗದಲ್ಲಿಯೂ ನ್ಯೂನತೆಯಿಲ್ಲದಂತೆ ಸಮ್ಮೇಳನವನ್ನು ನಡೆಯಿಸಿಕೊಟ್ಟುದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು. ಇಲ್ಲಿಗೆ ಸಮ್ಮೇಳನವು ಮುಕ್ತಾಯವಾಯಿತು.

ಸ್ವಾಗತ ಮಂಡಲಿಯ ಅಧ್ಯಕ್ಷರ ಭಾಷಣ

ಮಹಾಶಯರೇ! ಕರ್ಣಾಟಕ ಭಾಷಾಭಿಮಾನದಿಂದ ಪ್ರೇರಿತರಾಗಿ ಈ ಹದಿಮೂರನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನಕ್ಕೆ ನಮ್ಮ ಆಮಂತ್ರಣವನ್ನು ಸ್ವೀಕರಿಸಿ, ಪ್ರಯಾಣ ಶ್ರಮವನ್ನು ಲಕ್ಷಿಸದೆ, ಇಲ್ಲಿಯ ತನಕ ಚಿತ್ತೈಸಿದ ತಮಗೆ ಈ ಸಮ್ಮೇಳನದ ಸ್ವಾಗತ ಮಂಡಲದ ಪರವಾಗಿ ಅದರ ಅಧ್ಯಕ್ಷರಿಂದ ಆಜ್ಞಪ್ತನಾಗಿ ಸ್ವಾಗತವನ್ನು ಮಾಡುವದಕ್ಕೆ ನಾನು ಕೈಜೋಡಿಸಿ ನಿಂತಿದ್ದೇನೆ. ಪಶ್ಚಿಮ ಕರ್ಣಾಟಕದ ಒಂದು ಭಾಗವೆನ್ನಬಹುದಾದ ಈ ಜಿಲ್ಲೆಯು ಈ ಸಮ್ಮೇಲನವನ್ನು ಇಲ್ಲಿ ಜರುಗಿಸಲು ಮುಂದೆ ಬಂದುದಕ್ಕೆ ಕಾರಣವೇನೆಂದು ನಾವು ಸ್ವಲ್ಪ ಪ್ರಸ್ತಾವಿಸಬೇಕಾಗಿದೆ.

ಕರ್ಣಾಟಕವು ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿಕೊಂಡಿದೆ, ಎಂದು ನೃಪತುಂಗನು ಹೇಳುವನಾದರೂ ಕನ್ನಡವೆಂಬ ಹೆಸರನ್ನು ಇದುವರೆಗೆ ಧರಿಸಿಕೊಂಡಿರುವ ಜಿಲ್ಲೆಗಳು ಉತ್ತರ ಮತ್ತು ದಕ್ಷಿಣ ಕನ್ನಡ ಮಾತ್ರವೇ. ಹೆಸರು ಕನ್ನಡವಾದರೂ ಈ ದಕ್ಷಿಣ ಕನ್ನಡದಲ್ಲಿ ಜನರು ಆಡುವ ಭಾಷೆಯು ತೀರ ಕನ್ನಡವಾಗಿಯೇ ಇಲ್ಲ. ಭದ್ರಗಿರಿಯಿಂದ ಚಂದ್ರಗಿರಿಯವರೆಗೆ ಮಧ್ಯೆ ಇರುವ ಪ್ರಾಂತವು ತುಳು ಆಡುವ ಜನರಿಂದಲೂ, ಇದರ ದಕ್ಷಿಣಕ್ಕಿರುವ ಭಾಗವು ಮಲೆಯಾಳ ಭಾಷೆಯ ಜನರಿಂದಲೂ ತುಂಬಿದೆ. ಹೀಗಿದ್ದರೂ ಈ ಜಿಲ್ಲೆಯು ಕನ್ನಡವನ್ನೇ ದೇಶ ಭಾಷೆಯಾಗಿ ಇಟ್ಟುಕೊಂಡಿದೆ.

ಇತಿಹಾಸ ಮತ್ತು ಇತಿಹಾಸ ಪೂರ್ವದ ಕಥೆಗಳನ್ನು ಕೇಳುವಾಗ ಅನಾದಿಯಿಂದಲೂ ಈ ಜಿಲ್ಲೆಯು ರಾಜಕೀಯ ಪರಿವರ್ತನೆಗಳಲ್ಲಿ ಆಗಾಗ ಉಂಟಾದ ವಿಶೇಷ ಲಕ್ಷಣಗಳನ್ನು ಇನ್ನೂ ಅಳಿಸದೆ ಉಳಿಸಿಕೊಂಡಿದೆ. ಪರಶುರಾಮಾವತಾರದಲ್ಲಿ ಭೂಗರ್ಭದಿಂದ ಮೇಲಕ್ಕೆತ್ತಲ್ಪಟ್ಟಿದ್ದು ಎನಿಸಿಕೊಳ್ಳುವ ಪ್ರಾಂತದ ಒಂದು ಭಾಗವಾಗಿರುವ ಈ ಜಿಲ್ಲೆಯಲ್ಲಿ ಅನೇಕ ರಾಜಕುಲಗಳು ಬೇರೆ ಬೇರೆ ಕಾಲಗಳಲ್ಲಿ ಆಳಿವೆ. ಈ ಸಮ್ಮೇಳನ ಮಂಟಪದಿಂದ ಸುಮಾರು ೩ ಮೈಲು ಪೂರ್ವಕ್ಕೆ ಆಳೂಪ ಕುಲದ ಕುಲಶೇಖರನ ಅರಮನೆಯಿತ್ತು. ಈ ಆಳೂಪರು ಇಲ್ಲಿಂದ ಸುಮಾರು ೩೩ ಮೈಲು ದೂರವಿರುವ ಉದ್ಯಾವರದಲ್ಲಿ ಚಾಲುಕ್ಯ ಅರಸರಿಂದ ಆರನೆಯ ಶತಮಾನದಲ್ಲಿ ಪರಾಜಿತರಾದರೆಂದು ಉಲ್ಲೇಖಿಸಿದ ಶಾಸನವಿದೆ. ಅನಂತರ ದ್ವಾರಸಮುದ್ರದ ಬಲ್ಲಾಳರೂ ವಿಜಯನಗರದ ನರಪತಿಗಳೂ ಕೆಳದಿಯ ನಾಯಕರೂ ಅನುಕ್ರಮವಾಗಿ ಈ ದೇಶವನ್ನು ಆಳುತ್ತಿದ್ದರು. ಆದರೆ ಈ ಎಲ್ಲಾ ರಾಜರುಗಳ ಆಸ್ಥಾನದ ಸಂಸ್ಕೃತಿಯ ಕಿರಣಗಳು ನೇರವಾಗಿ ಬೀಳುವದಕ್ಕೆ ಎತ್ತರವಾದ ಸಹ್ಯಾದ್ರಿ ಪರ್ವತವು ಅಡ್ಡವಾಗಿ ನಿಂತುಬಿಟ್ಟಿತು. ಆದರೂ ಅತಿ ಪೂರ್ವದಲ್ಲಿ ಆಳಿದ ಜೈನರು ಮೂಡುಬಿದ್ರೆ, ಕಾರ್ಕಳ, ವಾರಂಗ ಮೊದಲಾದ ಕ್ಷೇತ್ರಗಳಲ್ಲಿ ಕಟ್ಟಿಸಿದ ವಿಚಿತ್ರವಾದ ಬಸದಿಗಳಿಂದಲೂ ಕಾರ್ಕಳ, ವೇಣೂರು ಈ ಸ್ಥಳಗಳಲ್ಲಿ ಸ್ಥಾಪಿಸಿದ ಗೋಮಟೇಶ್ವರ ಪ್ರತಿಮೆಗಳಿಂದಲೂ ಅವರ ಶಿಲ್ಪ ಕಲಾ ಪರಿಮುಖವಾಗಿ ಆ ಆಳಿಕೆಯ ಸ್ಮಾರಕವನ್ನು ಚಿರಸ್ಥಾಯಿಯಾಗಿ ನಿಲ್ಲಿಸಿಬಿಟ್ಟರು. ಕೆಳದಿಯ ನಾಯಕರು ಪಶ್ಚಿಮ ಕರಾವಳಿಯಲ್ಲಿ ಕಟ್ಟಿಸಿದ ಕೋಟೆಗಳ ಭಗ್ನಾವಶೇಷಗಳು ಈಗಲೂ ಅವರ ಹೆಸರನ್ನು ಸ್ಮರಣೆಗೆ ತರುತ್ತಿವೆ.

ಮತ ಪ್ರಚಾರವನ್ನು ನೋಡಿದರೆ, ಇಲ್ಲಿ ಪ್ರತಿಯೊಂದು ಮತವೂ ತನ್ನ ಅನುಯಾಯಿಗಳನ್ನು ಈಗಲೂ ಅಲ್ಲಲ್ಲಿ ತೋರಿಸುತ್ತಿದೆ. ಇಲ್ಲಿಯ ಮೂಲ ನಿವಾಸಿಗಳ ಭೂತಗಳನ್ನು ಅನಂತರ ಬಂದು ನೆಲಸಿದ ಜೈನರು ನಿರಾಕರಿಸಲಿಲ್ಲ. ಈಗಲೂ ಅವರ ಗುತ್ತಿನ ಮನೆಗಳಲ್ಲಿ ಈ ಭೂತಗಳ ಮಂಚಗಳು ಇವೆ; ಭಂಡಾರವು ಇದೆ. ಜೈನರೇ ಮೊಕ್ತೇಸರರಾಗಿ ಈ ಗುಡಿಗಳಲ್ಲಿಯು ನೇಮ ನಿಯಮಾದಿಗಳು ಜರುಗುತ್ತಿವೆ. ಶ್ರೀ ಶಂಕರಾಚಾರ್ಯರ ಜನ್ಮಭೂಮಿಯು ಈ ಜಿಲ್ಲೆಗೆ ನೆರೆಜಿಲ್ಲೆಯಲ್ಲಿ

ದ್ದರೂ ಶಂಕರಾಚಾರ್ಯರ ಮತ ಪ್ರಚಾರದ ಪರಿಣಾಮವು ಕೊಲ್ಲೂರಿನ ಮೂಕಾಂಬಿಕೆಯ ದೇವಸ್ಥಾನದಿಂದ ಮಾತ್ರವೇ ರೂಪವತ್ತಾಗಿ ಕಾಣುತ್ತದೆ. ಆದರನಂತರ ಕೆಳದಿಯ ನಾಯಕರ ಆಳಿಕೆಯಲ್ಲಿ ಶ್ರೀ ರಾಮಾನುಜರ ಅನಂತರ ಶ್ರೀಮನ್ಮಧ್ವಾಚಾರ್ಯರ ಮತ ಪ್ರಚಾರದ ಕಾರ್ಯವು ಉಡುಪಿ, ಸುಬ್ರಹ್ಮಣ್ಯ, ಧರ್ಮಸ್ಥಳ—ಈ ಸ್ಥಳಗಳಲ್ಲಿ ಕೇಂದ್ರೀಕರಿಸಿ ನಿಂತಿದೆ. ಮುಂದೆ ಈ ಮತಗಳಲ್ಲಿ ಪರಸ್ಪರ ಮೈತ್ರೀಭಾವವೇ ಇತ್ತು ಎಂಬುದಕ್ಕೆ ಶಂಕರನಾರಾಯಣ ದೇವಸ್ಥಾನವೇ ಸಾಕ್ಷಿಯಾಗಿ ನಿಂತಿದೆ. ಆಮೇಲೆ ಬಂದ ಅರಬಸ್ಥಾನದ ಮತ ಪ್ರಚಾರಕರ, ಗೋವೆಯಿಂದ ಬಂದ ಕ್ರೈಸ್ತ ಧರ್ಮಬೋಧಕರ, ಜರ್ಮನಿಯಿಂದ ಬಂದ ಬಾಸೆಲ್ ಮಿಶನ್ ಅವರ ಮತ ಪ್ರಚಾರದ ಪರಿಣಾಮವು ಈಗಲೂ ಜಿಲ್ಲೆಯ ಉದ್ದಕ್ಕೂ ಅಲ್ಲಲ್ಲಿ ಕಾಣುತ್ತಿದೆ. ಈ ರೀತಿಯಲ್ಲಿ ಹಲವು ಮತಗಳು ತಮ್ಮ ಶಾಖೆಗಳನ್ನು ಇಲ್ಲಿ ನಟ್ಟು, ಆ ಮತ ಪ್ರಚಾರದಿಂದ ಯಾವ ಬಗೆಯ ವಾಙ್ಮಯ ಸಂಸ್ಕೃತಿಯನ್ನು ಈ ಜಿಲ್ಲೆಗೆ ಕೊಟ್ಟರು—ಎಂಬುದನ್ನು ಈಗ ಪರಿಶೀಲಿಸಬೇಕಾಗಿದೆ.

ಮೂಲ ನಿವಾಸಿಗಳ ಭೂತಗಳಿಗೆ ಸಂಬಂಧಪಟ್ಟ 'ಪಾಡ್ದನಗಳು' ಈಗಲೂ ನೇಮ ನಿಯಮಗಳ ಕಾಲದಲ್ಲಿಯೂ ನಾಟಿಯ ಕೆಲಸದ ಸಮಯದಲ್ಲಿಯೂ ಅಲ್ಲಲ್ಲಿ ಕೇಳಿಸುತ್ತಿವೆ. ಆದರೆ ಇವೆಲ್ಲ ಅಚ್ಚ ತುಳುವಿನಲ್ಲಿವೆ. ಕನ್ನಡವನ್ನು ಇಲ್ಲಿ ದೇಶ ಭಾಷೆಯಾಗಿ ಮೊದಲು ಏರ್ಪಡಿಸಿದ ಜೈನ ಅರಸುಗಳ ಕಾಲದಲ್ಲಿ ಗಟ್ಟಗಳ ಪೂರ್ವಕ್ಕೆ ಇದ್ದ ಕನ್ನಡ ವಾಙ್ಮಯವನ್ನು ಇಲ್ಲಿಗೆ ತಂದು ಇಲ್ಲಿ ಪ್ರಚುರಗೊಳಿಸಿದುದಲ್ಲದೆ, ನೂತನ ಕಾವ್ಯಗಳನ್ನಾಗಲಿ, ಗ್ರಂಥಗಳನ್ನಾಗಲಿ ಆ ಕಾಲದಲ್ಲಿ ಬರೆದವರು ಅತಿ ವಿರಳ. ಈಗೆ ಮೂಡುಬಿದರೆ, ವಾರಂಗ ಮುಂತಾದ ಬಸದಿಗಳಲ್ಲಿ ಅಚ್ಚಾಗದೆ ಓಲೆ ಪ್ರತಿಗಳಲ್ಲಿರುವ ಗ್ರಂಥಗಳಲ್ಲಿ ಎಷ್ಟನ್ನು ಸ್ಥಳಿಕರು ಬರೆದರು ? ಎಷ್ಟನ್ನು ಕನ್ನಡ ಜೈನರ ಮೂಲ ಸ್ಥಾನಗಳಿಂದ ಸಂಪಾದಿಸಿ ಇಲ್ಲಿಗೆ ತಂದರು ? ಎಂಬುದನ್ನು ಹೇಳಲಸಾಧ್ಯವಾಗಿದೆ. ಅಂತು ಆ ಕಾಲದಲ್ಲಿ ಗ್ರಂಥ ವಾಚನವೇ ವಿಶೇಷವಾಗಿ ರೂಢಿಯಲ್ಲಿತ್ತಲ್ಲದೆ 'ಭರತೇಶ ವೈಭವ' ದಂಥ ಗ್ರಂಥವನ್ನು ಬರೆದ ರತ್ನಾಕರಸಿದ್ಧನಂಥ ಕವಿಗಳು ಕಡಿಮೆಯೆಂದೇ ಹೇಳಬೇಕು. ಇದಕ್ಕೆ ಕಾರಣ ವಿಲ್ಲದೆ ಇಲ್ಲ. ದೇಶದಲ್ಲಿ ಅನ್ಯ ರಾಜರ ದಾಳಿ ಆಗಾಗ ಇದ್ದ ಸಮಯ. ಸಾಹಿತ್ಯ ಕಲೆಯ ಅಭಿವೃದ್ಧಿಗೆ ಅಗತ್ಯವಾದ ಶಾಂತ ಚಿತ್ತತೆಯೂ ಆಗ್ಗೆ ಸಿಕ್ಕಿಲ್ಲವೆನ್ನಬೇಕು. ಅನಂತರ ಶ್ರೀ ರಾಮಾನುಜಾಚಾರ್ಯರ ಮತ್ತು ಶ್ರೀಮನ್ಮಧ್ವಾಚಾರ್ಯರ ಪ್ರತಿಭೆಯ ಕಾಲದಲ್ಲಿ ವೈಷ್ಣವ ಸಂಪ್ರದಾಯದ ದಾಸ ಕೂಟದಲ್ಲಿ ಕೆಲವೇ ಕೆಲವರು ತುಂಡು ಪದಗಳ ಮೂಲಕವಾಗಿ ಜನಸಾಮಾನ್ಯಕ್ಕೆ ತತ್ವ ಬೋಧೆಯನ್ನು ಮಾಡತೊಡಗಿದರು. 'ಕೃಷ್ಣಮೂರ್ತಿ ಕಣ್ಣಾ ಮುಂದೆ ನಿಂತಿದ್ದಂತಿದೆ' ಎಂದು ಪುರಂದರದಾಸರು ಹಾಡಿದುದು ಉಡುಪಿ ಕ್ಷೇತ್ರದಲ್ಲಿಯೇ. 'ಈತನೀಗ ವಾಸುದೇವನು' ಎಂದು ಕನಕದಾಸರು ಅದೇ ಶ್ರೀ ಕೃಷ್ಣನ ಮುಂದೆ ಹಾಡಿದರು.

ಪಾದರಾಜಸ್ವಾಮಿಗಳು ತತ್ವಬೋಧಪರವಾದ ಅನೇಕ ಹಾಡುಗಳನ್ನು ಈ ಜಿಲ್ಲೆಯಲ್ಲಿಯೇ ಪ್ರಚುರಗೊಳಿಸಿರುವರು. ಇದಲ್ಲದೆ ಕನ್ನಡ ಕಾವ್ಯವೆನಿಸಿಕೊಳ್ಳುವ ಯಕ್ಷಗಾನದ ಮೂಲಕವಾಗಿ ರಾಮಾಯಣ, ಮಹಾಭಾರತದ ಕಥೆಗಳನ್ನು ನಟಿಸಿ ತೋರಿಸುವುದು; ರಾಮಾಯಣ, ಭಾರತ, ಭಾಗವತ—ಇವುಗಳನ್ನು ಓದಿಸಿ ಕೇಳುವಷ್ಟರ ಮಟ್ಟಿಗೆ ಮಾತ್ರ ಜನರು ತೃಪ್ತಿಗೊಳ್ಳುತ್ತಿದ್ದರಲ್ಲದೆ, ಪ್ರೌಢ ಗ್ರಂಥಗಳ ರಚನೆಗೆ ಅವಕಾಶ ದೊರೆಯಲಿಲ್ಲ. ಅನಂತರ ಗೋವೆಯಿಂದ ಬಂದ ರೋಮನ್ ಕೆಥೊಲಿಕ್ ಪಾದರಿಗಳು ಕನ್ನಡ ವಾಙ್ಮಯದ ಕಡೆಗೆ ಆದರವನ್ನು ತೋರಿಸಿಲ್ಲ. ಕೊಂಕಣಿಯಲ್ಲಿ ಓವಿಗಳನ್ನು ಬರೆದು ತಮ್ಮ ಮತ ಪ್ರಚಾರದ ಮತ್ತು ಧರ್ಮಬೋಧದ ಕಾರ್ಯವನ್ನು ಸಾಗಿಸುತ್ತಿದ್ದರು. ಆಮೇಲೆ ಬಂದ ಬಾಸೆಲಿನ ಪ್ರೊಟೆಸ್ಟೆಂಟ್ ಮಿಶನರಿಗಳು ತಮ್ಮ ಧರ್ಮ ಪ್ರಚಾರ ಕಾರ್ಯದಲ್ಲಿ ಕನ್ನಡವನ್ನೇ ಪ್ರಾಮುಖ್ಯ ಭಾಷೆಯಾಗಿ ಇಟ್ಟುದಲ್ಲದೆ, ಮುದ್ರಾಲಯಗಳ ಮುಖಾಂತರ ಧರ್ಮಬೋಧೆಯ ಗ್ರಂಥಗಳನ್ನು ಪ್ರಚುರಗೊಳಿಸುವುದರೊಂದಿಗೆ ಹಳೆಯ ಓಲೆ ಪ್ರತಿಗಳಿಂದ ಕೆಲವು ಉತ್ತಮ ಗ್ರಂಥಗಳನ್ನು ಪ್ರಕಟಿಸುವುದಕ್ಕೆ ಹವಣಿಸಿದರು. ಕುಂದಾಪುರ ಹೈಸ್ಕೂಲಿನ ಡ್ರಿಲ್ ಮಾಸ್ತರರಾಗಿ ಕೀರ್ತಿಶೇಷರಾದ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು ಬರೆದ ರಾಮಾಶ್ವಮೇಧ ಮೊದಲಾದ ಪ್ರೌಢ ಗ್ರಂಥಗಳು ಜನ್ಮವೆತ್ತಿದುದು ಈ ಕಾಲದಲ್ಲಿಯೇ. ಅವರೂ ಕೂಡ ಆ ಕಾಲದಲ್ಲಿ ರಾಜಾಶ್ರಯವೂ ಪಂಡಿತ ಜನರ ಪ್ರೋತ್ಸಾಹವೂ ಸಾಕಷ್ಟು ಇಲ್ಲದ ದೆಸೆಯಿಂದ ತಾನು ಆ ಗ್ರಂಥಕರ್ತನೆಂದು ಹೇಳಲು ಧೈರ್ಯಬಾರದೆ, ಪ್ರಾಚೀನ ಓಲೆಯ ಪ್ರತಿಯಿಂದ ಎತ್ತಿ ತೆಗೆದೆನೆಂದು ಪ್ರಕಟಮಾಡಿದುದರಿಂದ ಈಗಲೂ ಅನೇಕರಲ್ಲಿ ಅದು ಪ್ರಾಚ್ಯ ಗ್ರಂಥವೇ—ಎಂಬ ಸಂಶಯವು ತೀರ ಮಾಯವಾಗಲಿಲ್ಲ. ಆದರೆ ವಿಮರ್ಶಕಾರರು ರಾಮಾಶ್ವಮೇಧದಲ್ಲಿರುವ ಒಂದು ವಾಕ್ಯದಿಂದ ಅದು ಆಧುನಿಕ ಗ್ರಂಥವೆಂದು ತಿಳಿಯಬಹುದಿತ್ತು. ಸೀತೆಯನ್ನು ಕಾಡಿಗೆ ಕೊಂಡುಹೋಗಿ, ಅವಳ ಅಪ್ಪಣೆಯನ್ನು ಪಡೆದು, ಹಿಂದಕ್ಕೆ ತೆರಳಲಿಕ್ಕಿರುವ ಲಕ್ಷ್ಮಣನಿಗೆ ಹೇಳಿದ ಮಾತುಗಳಲ್ಲಿ, ಕೊನೆಗೆ ತುಂಬಿದ ಬಸುರಿಯಾಗಿ ಗಂಡನಿಂದ ತ್ಯಜಿಸಲ್ಪಟ್ಟ ಸ್ತ್ರೀಯರ ನಿವಾಸಕ್ಕೆ 'ಒಂದು ದಮ್ಮಣಿಯ ನೇರ್ಪಡಿಸ್ಸು' ಎಂದು ರಾಮನಿಗೆ ತಿಳಿಸುವಂತೆ ಹೇಳಿದ ಮಾತುಗಳ ಅಭಿಪ್ರಾಯವು ತೀರ ಆಧುನಿಕವಾಗಿದೆ. ಅದಂತಿರಲಿ, ಮುಖ್ಯ ಸಾರಾಂಶವೇನೆಂದರೆ, ವಿವಿಧ ಕಾರಣಗಳಿಂದ ಈ ಕನ್ನಡ ಜಿಲ್ಲೆಯಲ್ಲಿ ವಾಙ್ಮಯಾಭಿವೃದ್ಧಿಗೆ ತೊಡಕುಗಳಿದ್ದು ಪ್ರೌಢ ಗ್ರಂಥಗಳು ಈ ಜಿಲ್ಲೆಯವರಿಂದ ಬರೆಯಲ್ಪಡಲಿಲ್ಲವೆಂಬುದೇನೋ ನಿಜ. ಆದರೆ ಕನ್ನಡ ವಾಙ್ಮಯದಲ್ಲಿ ಬಿಡಿಬಿಡಿಯಾಗಿ ಇತ್ತೀಚೆಗೆ ಕೆಲಸ ಮಾಡುತ್ತಿರುವವರ ಹೆಸರೆತ್ತದೆ ಇರಲಾರೆನು. ಹಳೆಯ ಗ್ರಂಥಗಳನ್ನು ಈಗಲೂ ಓದುತ್ತಿದ್ದು, ಅವುಗಳ ಅಮೂಲ್ಯ ವಿಷಯಗಳನ್ನು ಸಂಗ್ರಹಿಸುತ್ತಲಿರುವ ಶ್ರೀಯುತ ಮುಳಿಯದ ತಿಮ್ಮಪ್ಪಯ್ಯನವರೂ, ಕನ್ನಡ ವಾಙ್ಮಯದಲ್ಲಿ ಮುಖ್ಯವಾಗಿ ಕನ್ನಡ ಕಾವ್ಯದಲ್ಲಿ ಅಭಿರುಚಿಯನ್ನು ಹುಟ್ಟಿಸಲಿಕ್ಕೆ ದಾರಿತೋರಿಸಿ ಅದರ ಹುರುಳನ್ನು

ಬೋಧಿಸಲಿಕ್ಕೆ ಕೆಲವು ವರ್ಷಗಳಿಂದ ಸಾಹಸ ಮಾಡಿದ ಶ್ರೀಯುತ ಪಂಜೆ ಮಂಗೇಶರಾಯರೂ—ಇವರು ಈಗಲೂ ಹಳ್ಳಿಗಳಲ್ಲಿ ಸಂಚರಿಸುವಾಗ ಅವರ ಹೆಸರನ್ನು ಕೇಳಿ ಕಾವ್ಯಾಭಿರುಚಿಯುಳ್ಳ ಹಲವರು ಅವರಿಂದ ಅನುಭವ ಪಡೆಯಲಿಕ್ಕೆ ಅವರ ಬೆಂಬತ್ತಿ ಹೋಗುತ್ತಲಿದ್ದಾರೆ. ನೂತನ ಚಿಕ್ಕ ಕಾವ್ಯಗಳನ್ನು ಬರೆದು ಪ್ರಕಟಿಸಿದ ಶ್ರೀಯುತ ಎಂ. ಎನ್. ಕಾಮತರೂ, ಇನ್ನೂ ಮೊಗ್ಗೆಯಲ್ಲೇ ಇರುವ ಕವಿಯಾದ ಶ್ರೀಯುತ ಕಡೆಂಗೋಡ್ಲು ಶಂಕರಭಟ್ಟರೂ, ಕಾವ್ಯ ಕಲೆಯಲ್ಲಿ ವಿಶಾರದರಾದ ಶ್ರೀಯುತ ಮುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರೂ, ವಿವಿಧ ಪಾಶ್ಚಾತ್ಯ ಮತ್ತು ಪೌರಸ್ತ್ಯ ಭಾಷೆಗಳನ್ನು ಅಭ್ಯಸಿಸಿ ಅವುಗಳ ಸಂಸ್ಕೃತಿಯನ್ನು ಕನ್ನಡ ವಾಙ್ಮಯಕ್ಕೆ ತಂದೊತ್ತಲು ಯತ್ನಿಸುವ ಶ್ರೀಯುತ ಎಂ. ಗೋವಿಂದ ಪೈಗಳೂ, ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸವನ್ನು ಶಾಸನ, ಓಲೆ ಗ್ರಂಥ ಮುಂತಾದುವುಗಳಿಂದ ಸಂಗ್ರಹಿಸಿ ರೂಪುಗೊಳಿಸಿದ ಶ್ರೀಯುತ ಬಗಳ ಗಣಪತಿರಾಯರೂ—ಇವರು ಬಹಳ ಜನ ಉಪಾಧ್ಯಾಯರಾಗಿದ್ದು ಪಟ್ಟ ಶ್ರಮವು ಸ್ತುತ್ಯರ್ಹವಾಗಿದೆ. ಇನ್ನೂ ಕೆಲವರು ಪ್ರತ್ಯೇಕ ಪ್ರತ್ಯೇಕವಾಗಿ ಕನ್ನಡ ವಾಙ್ಮಯಾಭಿರುಚಿಯನ್ನು ಬೆಳೆಗೊಳಿಸಲಿಕ್ಕೆ ಸಾಹಸ ಮಾಡುತ್ತಲಿದ್ದಾರೆ. ಆದರೆ ಸಾಮುದಾಯಿಕವಾಗಿ ಪ್ರಯತ್ನಗಳು ಈವರೆಗೂ ನಡೆಯಲಿಲ್ಲ.

ಸರ್ಕಾರದ ಕೇಂದ್ರಸ್ಥಾನದಿಂದ ಬರುವ ಸಂಸ್ಕೃತಿಯ ಕಿರಣಗಳು ಪಶ್ಚಿಮ ಘಟ್ಟಗಳನ್ನು ದಾಟಿ ಪೂರ್ವ ಭಾಗದಿಂದ ಇಲ್ಲಿಗೆ ಸರಿಯಾಗಿ ಪಸರಿಸುವುದೇ ಇಲ್ಲವೆಂದು ಈ ಮೊದಲೇ ಹೇಳಿದ್ದೇನೆ. ರಾಜಾಶ್ರಯವೂ ವಿದ್ವಜ್ಜನರ ಪುರಸ್ಕಾರವೂ ಇಲ್ಲದ್ದರಿಂದ ವಾಙ್ಮಯ ಸಾಹಿತ್ಯಗಳ ಹುಲುಸಾದ ಬೆಳವಣಿಗೆಗೆ ಎಡೆ ಸಿಕ್ಕದೆ ಅವು ಅಲ್ಲಿಯೇ ಕುಗ್ಗಿಹೋಗುತ್ತವೆ. ಇದಕ್ಕಾಗಿಯೇ ಈ ಸಮ್ಮೇಳನದ ಪರಿಣಾಮವಾಗಿ ನಮ್ಮ ಜಿಲ್ಲೆಯ ಜನರಲ್ಲಿ ಕನ್ನಡ ವಾಙ್ಮಯದ ಕಡೆಗೆ ಜಾಗ್ರತಿಯನ್ನು ಹುಟ್ಟಿಸಬೇಕೆಂಬ ತವಕದಿಂದಲೇ ಈ ಸಮ್ಮೇಳನವನ್ನು ಇಲ್ಲಿ ಜರಗಿಸಿದುದಾಯಿತು. ನೀವೆಲ್ಲರೂ ಇಲ್ಲಿ ಬಂದು ತಮ್ಮ ಅನುಭವವನ್ನು ನಮಗೆ ಕೊಟ್ಟು ನಮ್ಮ ಉದ್ದೇಶವನ್ನು ನೆರವೇರಿಸುವುದಕ್ಕೆ ಮನಸ್ಸು ಮಾಡಿದುದಕ್ಕಾಗಿ ತಮ್ಮೆಲ್ಲರಿಗೂ, ಈ ಸಮ್ಮೇಳನವನ್ನು ಇಲ್ಲಿ ಜರುಗಿಸಲಿಕ್ಕೆ ಸಮ್ಮತಿಯನ್ನು ಕೊಟ್ಟ ಕರ್ನಾಟಕ ಸಾಹಿತ್ಯ ಪರಿಷತ್ತಿನ ಮಂಡಲಕ್ಕೂ ಇಲ್ಲಿಯ ಸ್ವಾಗತ ಮಂಡಲದ ಪರವಾಗಿ ವಂದನೆಗಳನ್ನು ಸಮರ್ಪಿಸುತ್ತೇನೆ.

ಉಳ್ಳಾಳ ಮಂಗೇಶರಾವ್.

ಅಧ್ಯಕ್ಷರ ಭಾಷಣ

ಶ್ರೀಯುಂ ಶ್ವೇತಾತಪತ್ರಂ ಪ್ರಥಿತ ವಿಭವವುಂ ಚಾಮರಂ ಬೋಧೆಯುಂ ವಾಕ್ ।
ಪೀಯೂಷಂ ಪೆರ್ಮೆಯುಂ ಭಾಸುರತರ ಪಟಹಂ ಶಕ್ತಿಯುಂ ಸಿಂಹಪೀಠಂ ॥
ಶ್ರಾಯುತ್ತಂ ಮಾಳ್ಪನಂ ಭಾವಳಯ ವಿಳಸಿತಾಶೋಕ ಮಂದಾರ ವರ್ಷ ।
ಚಾಯಚನ್ನಾಂಗನಾದಂ ತ್ರಿಭುವನ ವಿನುತಂ ನೇಮಿ ರಕ್ಷಿಕ್ಕೆ ನಮ್ಮಂ ॥

ಕರ್ಣಾಟ ದೇಶ ಭಾಷಾ ವತ್ಸಲರೂ, ದೇಶ ಸೇವಾ ಧುರಂಧರರೂ, ಭಾಷಾ ಪರಿಣತರೂ, ಕಲಾ ಕೋವಿದರೂ ನೆರೆದ ಈ ಸಾಹಿತ್ಯ ಪರಿಷನ್ಮಂಡಲಿಗೂ, ಸತ್ಕಾರ ಸಂಘಕ್ಕೂ, ಪ್ರೇಕ್ಷಕ ವರ್ಗಕ್ಕೂ ಸೇರಿದ ದೇಶ ಭಾಷಾ ಹಿತೈಷಿಗಳಿಗೂ ವಿನಯ ಪೂರ್ವಕ ವಂದನೆಗಳು. ಕನ್ನಡ ದೇಶದಲ್ಲಿ ಅಧಿಕಾರ, ವಿದ್ಯೆ, ವಯಸ್ಸು, ಧನ, ಗುಣ, ಗೌರವ ಮೊದಲಾದ ಗುಣಗಳನ್ನೊಳಗೊಂಡ ಮಹಾಶಯರನೇಕರು ಈ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಯೋಗ್ಯರಾಗಿರುವಲ್ಲಿ ಈ ಪಂಡಿತ ಪುತ್ರನನ್ನು ಅಧ್ಯಕ್ಷ ಪದವಿಗೆ ವರಿಸಿದ ಮಹನೀಯರಿಗೆ ಧನ್ಯವಾದವು. ಈವರೆಗೆ ಹನ್ನೆರಡು ವಾರ್ಷಿಕ ಸಮ್ಮೇಳನಗಳಾಗಿ ಹೋಗಿವೆ. ಅವುಗಳ ಅಧ್ಯಕ್ಷರುಗಳ ಹೆಸರುಗಳಲ್ಲಾಗಲಿ ಕೀರ್ತಿಯಲ್ಲಾಗಲಿ ವಿದ್ಯೆಯಲ್ಲಾಗಲಿ ಚಾತುರ್ಯದಲ್ಲಾಗಲಿ ವಾಗ್ಧಾಟಿಯಲ್ಲಾಗಲಿ ಒಂದರಲ್ಲಿಯೂ ಅವರ ಸರಿ ದೊರೆಗೆ ಬಾರದ ಈ ನನಗೆ ಇಂತಹ ಅಧ್ಯಕ್ಷ ಪದವಿಯನ್ನು ಕೊಡಿಸಿದ ಮಹನೀಯರಿಗೆ ಶತಶಃ ಧನ್ಯೋಕ್ತಿಗಳು. ತಮ್ಮೆಲ್ಲರ ಸಹಕಾರದಿಂದಲೂ ಸಹಾನುಭೂತಿಯಿಂದಲೂ ಸಮಯೋಚಿತ ಹಿತ ಸೂಚನೆಗಳಿಂದಲೂ ಮುಖ್ಯವಾಗಿ ಸ್ಮರಣೆಯಿಂದಲೂ ಈ ಸಾರಿಯ ಸಮ್ಮೇಳನದ ಕಾರ್ಯಗಳು ಸಾಂಗವಾಗಿಯೂ ಜಯಪ್ರದವಾಗಿಯೂ ನಡೆಯಬೇಕಲ್ಲದೆ ಈ ಬಡ ದಾಸನ ಶಕ್ತ್ಯುತ್ಸಾಹದಿಂದಲ್ಲವೆಂದು ತಿಳಿದೇ ಇರುವುದಾದುದರಿಂದ ಕೃಪೆ ಮಾಡಿ ತಾವುಗಳೆಲ್ಲರೂ ನಡೆಯಬೇಕಾದ ಕಾರ್ಯಗಳಿಗೆ ಆದಷ್ಟು ನೆರವಾಗಬೇಕೆಂದು ಪ್ರಾರ್ಥಿಸುತ್ತೇನೆ. ಇದು ಉಪಚಾರೋಕ್ತಿಯೆಂದೆಣಿಸದೆ ಅವಶ್ಯಕವಾದ ಬಿನ್ನಹವೆಂದೇ ಬಗೆದು ತಾವೆಲ್ಲರೂ ಮನ್ನಿಸುವಂತೆ ಬೇಡಿಕೊಳ್ಳುವೆನು.

ಇನ್ನು ನಾವು ಈ ಸಮ್ಮೇಳನದಲ್ಲಿ ನೆರೆದು ಕನ್ನಡ ಭಾಷೆಗೆ ಮಾಡಬೇಕಾದ ಕೆಲಸಗಳು ಎಷ್ಟೋ ಇವೆ. ಈವರೆಗೆ ನಡೆದ ವಾರ್ಷಿಕ ಸಮ್ಮೇಳನಗಳಲ್ಲಿ ಮಾಡಿರಲಿಕ್ಕೂ ಸಾಕು; ಮಾಡದೆ ಕೇವಲ ಮಾನಸಿಕವಾಗಿಯೇ ಬಿಟ್ಟಿರಲಿಕ್ಕೂ ಸಾಕು. ಅವುಗಳಲ್ಲಿ ಕೆಲವನ್ನು ಮಾತ್ರ ಈಗ ಸೂಚಿಸಲೆಳಸಿರುವೆನು :—

೧. ಕನ್ನಡ ಭಾಷೆ ತಮಿಳಿನಿಂದ ಹುಟ್ಟಿದುದೆಂದು ಒಂದು ಕಡೆಯವರು ವಾದಿಸುತ್ತಾರೆ; ಮತ್ತೊಂದೆಡೆ ತೆಲುಗಿನಿಂದ ಬಂದುದೆಂದು ಕೆಲವರ ವಾದ. ಒಬ್ಬ ತಮಿಳನು ಕನ್ನಡ ತೆಲುಗು ಮಲೆಯಾಳ ಮೊದಲಾದ ಭಾಷೆಗಳಿಗೆ ಹೆತ್ತ ತಾಯಿ ತಮಿಳೆಂದು ಸ್ವಭಾಷಾ ಮಾತೆಯನ್ನು ಸ್ತುತಿಯಿಸಿರುವನು. ನಮ್ಮ ಕರ್ಣಾಟ ಮಂಡಲಿಯಲ್ಲಿ ಬಹು ಭಾಷಾಧಿಕಾರದವರು ಹಲವರು ಇರುವುದರಿಂದ ಇವರು ಈ ವಿಷಯವನ್ನು ಎತ್ತಿಕೊಂಡು ಒಂದು ಚರ್ಚೆಯನ್ನು ನಡೆಯಿಸಿ ಇತ್ಯರ್ಥ

ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಬೌದ್ಧ ಮತದಿಂದ ಜೈನ ಮತವು ಹುಟ್ಟಿತೆಂದು ಹೇಳುವ ಚರಿತ್ರಕಾರರಂತೆ ತಮಿಳಿನಿಂದ ಕನ್ನಡವು ಹುಟ್ಟಿತೆಂದು ನಮ್ಮ ಮಕ್ಕಳಿಗೆ ಕಲಿಸುವುದೋ? ತಮ್ಮ ಅಭಿಪ್ರಾಯವೇನು?

೨. ಱ—ಇದು ಕನ್ನಡ ತಮಿಳು ತೆಲುಗುಗಳಿಗೆ ಸಾಮಾನ್ಯವಾದ ಅಕ್ಷರವಾದರೂ ಕನ್ನಡ ಶಬ್ದಗಳಲ್ಲಿ ಸಂದೇಹವೊದಗಿದುದು, ಕನ್ನಡದ 'ಱ' ತಮಿಳನ್ನು ಅನುಸರಿಸಿರುವುದೋ? ಇಲ್ಲದಿದ್ದರೆ ತೆಲುಗಿನ 'ಱ'ಕ್ಕೆ ಸರಿಹೋಗುವುದೋ?

೩. ೞ—ಇದು ಕನ್ನಡಕ್ಕೂ ತಮಿಳಿಗೂ ಸಮಾನವಾದ ಅಕ್ಷರವಾದರೂ ಶಬ್ದಗಳಲ್ಲಿ ಭೇದವುಂಟೋ? ಸಂಶಯವಾದಾಗ ಅಂತಹ ಶಬ್ದಗಳಲ್ಲಿ ತಮಿಳೇ ಸರಿಯೆಂದು ನಿರ್ಣಯ ಮಾಡಿದವರಾದ ನಾವುಗಳು ಅಂಗೀಕರಿಸಬಹುದೋ?

೪. ಕನ್ನಡ ಲಿಪಿಗೂ ತೆಲುಗಿನ ಲಿಪಿಗೂ ಇರುವ ಸಾಮ್ಯದಿಂದ ಕನ್ನಡ ಲಿಪಿ ತೆಲುಗಿನಿಂದ ಬಂದಿತೆಂದು ಹೇಳಲಿಕ್ಕೆ ಸಾಕಷ್ಟೇ? ಇದಲ್ಲದೆ ಇನ್ನೇನಾದರೂ ಪ್ರಬಲವಾದ ಆಧಾರವಿದೆಯೋ?

೫. ವಿದ್ಯಾನಗರದ ಅರಸುಗಳಲ್ಲಿ ಕೃಷ್ಣದೇವರಾಯನು ಕನ್ನಡ ವಂಶದವನೋ? ನಾಯ್ಡು ವಂಶದವನೋ? ತುಳುವ ವಂಶದವನೋ? ಇವನ ಸ್ವಭಾಷೆ ಕನ್ನಡವೋ, ತೆಲುಗೋ, ತುಳುವೋ? ಇವನ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹವು ಹೆಚ್ಚಾಗಿತ್ತೋ?

೬. ಕನ್ನಡ ನಾಡಿನ ಮೇರೆಗಳು ಕಾವೇರಿಯಿಂದ ಗೋದಾವರಿಯವರೆಗೆ, ಎಂದರೆ ಮೂಡ ಪಡುವಣ ಮೇರೆಗಳನ್ನು ಕಾಲ ಕಾಲಕ್ಕೆ ನಿರ್ಣಯಿಸಿರುವ ಆಧಾರಗಳಾವುವು? ಈ ಕೆಳಗಣ ಪದ್ಯಗಳು ಬರಿಯ ಪ್ರತಾಪದ ಮಾತುಗಳೋ, ಇಲ್ಲದಿದ್ದರೆ ಸಾರ್ಥಕವಾದುವೋ :—

ಪಡುವಲ್ ಪಶ್ಚಿಮ ವಾರ್ಧಿ ಮೂಡ ನೆಗಳ್ದಾ ಕಾಂಚೀಪುರಂ ತೆಂಕ ನೋ।
ಳ್ಪೊಡೆ ಸಚ್ಚಂದನ ಮಂದ ಮಾರುತ ಚಲ ಶ್ರೀಖಂಡ ಷಂಡಾಚಲಂ।
ಬಡಗಲ್ ಪೆರ್ದೊರೆ ಮೇರೆಯಾಗೆ ನೆಲನಂ ವಿಕ್ರಾಂತದಿಂದಾಳ್ದನಂ।
ದೊಡೆ ಪೋಲ್ವನ್ನನದಾವನೀ ಭುಜ ಬಲ ಭ್ರಾಜಿಷ್ಣುವಂ ವಿಷ್ಣುವಂ ॥ ೧ ॥

ತುಳು ದೇಶಂ ಚಕ್ರಗೊಟ್ಟಂ ದಳವನ ಪುರಮುಚ್ಚಂಗಿ ಕೋಳಾಳವೇಳು।
ಮಳಿವಲ್ಲೂರ್ ಕಂಚಿ ಕೊಂಗರ್ ವಿಸುಪ ಹಳಿಯ ಘಟ್ಟಂ ಬಯಲ್ನಾಡು ನೀಳಾ॥
ಚಳ ದುರ್ಗಂ ರಾಯರಾಯೋತ್ತಮಪುರಿ ತೆರೆಯೂರ್ ಕೋಯತೂರಾ ಗೊಂದವಾಡಿ।
ಸ್ಥಳಮಂ ಭ್ರೂಭಂಗದಿಂ ಕೊಂಡತುಳ ಭುಜ ಬಳಾಟೋಪನಾ ವಿಷ್ಣುಭೂಪಂ ॥ ೨ ॥

ಜಳಧಿವ್ಯಾವೇಷ್ಟಿತೋರ್ವೀ ಪತಿಯೆನಿಸಿ ಸುಖಂ ಬಾಳ್ಗೆಯಾಚಂದ್ರತಾರಂ।
ತಳಕಾಡಂ ಕೊಂಡ ಗಂಡಂ ತಿಗುಳರ ಪಡೆಯಂ ಕೂಡೆ ಬೆಂಕೊಂಡ ಗಂಡಂ॥
ತಳವಾರಲ್ತಳ್ತ ಭೂಪಾಲರ ಪಡತಲೆಯಂ ಘೊಪ್ಪನಲ್ ಪೊಯ್ದ ಗಂಡಂ।
ಬಳವದ್ರಾಜಂಗಳಂ ಪೊಯ್ಪುಲಗಿನ ಮೊನೆಯಿಂದೊತ್ತಿ ಕೆಯ್ಕೊಂಡ ಗಂಡಂ ॥ ೩ ॥

ಘನ ಶೌರ್ಯಂ ಬಲ್ಲ ಭೂಪಂ ನಿಜ ವಿಜಯ ಪಯಾರೂಢನಾಗಲ್ ಕಳಿಂಗಂ ।
ವನ ವಾಸೋದ್ಯುಕ್ತನಾದಂ ತುಳುವನಳವಿಗಟ್ಟೋಡಿದಂ ಕೊಂಕಣಂ ಘೋ ।
ಕೆನೆ ಪುಣ್ಯಾರಣ್ಯಮಂ ಸಂವರಿಸಿದನವಟಂ ಗೂರ್ಜರಂ ಮಾಳವಂ ವಿಂ ।
ಧ್ಯ ನಿಕುಂಜ ಪ್ರಾಪ್ತನಾದಂ ಜಳಧಿ ನಿಕಟಮಂ ಚೋಳ ತಾಂ ನೀಳೆಗೊಂಡಂ ॥ ೪

ಗತ ಲೀಳಂ ಲಾಳನಾಳಂಬಿತ ಬಹುಳ ಭಯೋಗ್ರ ಜ್ವರಂ ಗೂರ್ಜರಂ ಸಂ ।
ಧೃತ ಶೂಳಂ ಗೌಳನಂಗೀಕೃತ ಕೃಶತರ ಸಂಪಲ್ಲವಂ ಪಲ್ಲವಂ ಪ್ರೋ ॥
ಜ್ಝಿತ ಚೋಳಂ ಚೋಳನಾದಂ ಕದನ ವದನದೊಳ್ ಭೇರಿಯಂ ಪೊಯ್ಸೆ ವೀರಾ ।
ಹಿತ ಭೂಭೃಜ್ಜಾಳ ಕಾಳಾನಳನತುಳ ಭುಜಂ ವೀರಬಲ್ಲಾಳ ದೇವಂ ॥ ೫ ॥

೭. 'ಕರ್ಣಾಟಕ ಗತ ವೈಭವ'ದಲ್ಲಿ ದೇಶ ಚರಿತ್ರೆಯ ಕೆಲವು ಹೆಗ್ಗುರುತುಗಳು ಕಾಣುತ್ತವೆ. ಇತರ ವಿದ್ವಾಂಸರು ಚರಿತ್ರೆಯನ್ನು ಬರೆಯುವ ಕಾರ್ಯವನ್ನು ಕೈಕೊಳ್ಳಬೇಕೆಂದು ಗ್ರಂಥಕಾರರು ಸಾರಿ ಸಾರಿ ಹೇಳುತ್ತಿರುವರು. ನಮ್ಮ ಕನ್ನಡ ದೇಶದ ಚರಿತ್ರೆಯ ಕಾರ್ಯವನ್ನು ಕೈಕೊಂಡಿರುವ ಮಹಾಶಯರ ಆ ಚರಿತ್ರೆ ಎಂದಿಗೆ ನಮಗೆ ಓದಲಿಕ್ಕೆ ದೊರೆವುದು ?

೮. ಕನ್ನಡ ದೇಶದ ಸ್ಥಿತಿಗತಿಗಳನ್ನು ಅನುಭವಿಸಿ ಈಗಿನ ಕಾಲದಲ್ಲಿ ಕಾದಂಬರಿಗಳಾಗಲಿ ನಾಟಕಗಳಾಗಲಿ ಆಗಿವೆಯೋ? ಆಗುವ ಸಂಭವವೆಂದು ?

೯. ಕನ್ನಡ ಭಾಷೆಯಲ್ಲಿ ಈಗಿನ ಕಾಲಕ್ಕೆ ತಕ್ಕ ವ್ಯಾಕರಣವೊಂದಾಗಬೇಕೆಂದು ಪರಿಷತ್ಪತ್ರಿಕೆಯಲ್ಲಿ ಒಂದೆಡೆಯಲ್ಲಿ ಸೂಚನೆ ಹೊರಟಿದೆ. ಈ ಕೆಲಸವು ಪರಿಷತ್ತಿನ ಸಂಬಂಧವಾಗಿದ್ದರೆ ಅದನ್ನು ಪರಿಷತ್ತಿನವರು ಕೈಕೊಳ್ಳಬಹುದಾದರೂ ಮುಲ್ಲಿಪ್ಸನವರ ಶಬ್ದಾದರ್ಶವು ಸಾಕೆಂದು ತೋರುವುದು. ಅದು ಸಾಲದಿದ್ದಲ್ಲಿ ಮತ್ತೊಮ್ಮೆ ಪುನರಾವೃತ್ತಿ ಆದರೆ ಸಾಕು.

೧೦. ನಿಘಂಟುವಿನ ಕೆಲಸವು ಅಷ್ಟು ಶೀಘ್ರದಲ್ಲಿ ಆಗುವಂತೆ ತೋರುವುದಿಲ್ಲ. ಪುರಾತನ ಗ್ರಂಥಗಳ ವಿಷಯದಲ್ಲಿ ಬೇಕಾದರೆ ತ್ವರೆಗೊಳಿಸಬಹುದು. ಪ್ರಕೃತದಲ್ಲಿ ಹೊಸಗನ್ನಡಕ್ಕೆ ನಿಘಂಟೆಂದರೆ ಒಂದು ಪಾರಿಭಾಷಿಕ ನಿಘಂಟು (Scientific Glossary) ಅತ್ಯಾವಶ್ಯಕವಾಗಿ ತೋರುವುದು. ಈ ಕೆಲಸವನ್ನು ಪ್ರಾಜ್ಞರಿಂದ ಮಾಡಿಸಬೇಕಾಗಿರುವುದು.

೧೧. ನವೀನ ಗ್ರಂಥಗಳ ಪ್ರೋತ್ಸಾಹಕ್ಕಾಗಿ ಸರಕಾರದವರು ಅನುಗ್ರಹದಿಂದ ಬಹುಮಾನ ಸ್ಪರ್ಧೆಗಳನ್ನು ಏರ್ಪಡಿಸಿರುವುದು ಶ್ಲಾಘನೀಯವಾಗಿರುವುದು.

೧೨. ನಾಟಕಗಳಲ್ಲಿ ಪುರಾತನ ಸಂಸ್ಕೃತ ಕವಿಗಳಾದ ಕಾಳಿದಾಸ, ಭಾಸ ಮೊದಲಾದವರ ನಾಟಕಗಳ ಪರಿವರ್ತನೆಗಳಾಗಿವೆ; ಇನ್ನೂ ಆಗುತ್ತಿವೆ. ಇವುಗಳಿಂದ ಕನ್ನಡ ಭಾಷೆಗೆ ಆಗುವ ಅಭಿವೃದ್ಧಿ ಸಾಕೇ? ನಮ್ಮ ನಾಡಿನ ಚರಿತ್ರೆಗೆ ಸಂಬಂಧಪಟ್ಟ ನಾಟಕಗಳೂ ಕಾದಂಬರಿಗಳೂ ಇತಿಹಾಸಗಳೂ ಅತಿ ವಿರಳವಾಗಿವೆ. ಈ ಪ್ರಾಂತದಲ್ಲಿ ಬರೆದಿರುವ 'ಕೋಟಿ-ಚೆನ್ನಯ' ಎಂಬ ಸಣ್ಣ

ಪುಸ್ತಕವು ಶ್ಲಾಘನೀಯವಾದುದೆಂದು ವಿದ್ವಜ್ಜನರ ಸಭೆಯಲ್ಲಿ ಅವಿವೇಕನಂತೆ ನುಡಿದುದಕ್ಕೆ ನನಗೆ ಮಂಗಳಾರತಿಯಾದುದಲ್ಲದೆ, ಗ್ರಂಥ ಕರ್ತರ ವಿಷಯದಲ್ಲಿಯೂ ಗಹಗಹಿಕೆಯಾಗಿ ಪರಿಣಮಿಸಿರುವುದು ಕೇವಲ ಶೋಚನೀಯವಾಗಿದೆ. ಹೀಗೆಯೇ ಎಷ್ಟೋ ಸದುದ್ಯಮಗಳು ಉತ್ಸಾಹ ಭಂಗವಾಗಿ ದುಷ್ಪರಿಣಾಮವನೆಯ್ದಬೇಕಾಗಿದೆ.

೧೩. ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಭಾಷೆಯನ್ನು ಕಲಿಸುವ ಉದ್ದೇಶವು ಆಧುನಿಕ ಗತಿಗೆ ಸಾಧನವಾಗಿರಬೇಕೆಂದು ಪ್ರಬಲವಾಗಿ ಘೋಷಿಸುವುದರಿಂದ ಅಂತಹ ಸಾಧಕ ಕಾರ್ಯವನ್ನು ನಿರ್ವಹಿಸಲಾರದ ಗ್ರಂಥಗಳನ್ನು ದೂರೀಕರಿಸುವುದೇ ಯುಕ್ತವೆಂದೂ ಪ್ರಾಚೀನ ಗ್ರಂಥಗಳಿಗೆ ಅವಕಾಶವು ಬೇಡವೆಂದೂ ಕೆಲ ಕೆಲವೆಡೆಗಳಲ್ಲಿ ಸೂಚನೆಗಳಿವೆ. ಈ ವಿಷಯದಲ್ಲಿ ಕೇವಲ ಉಪಯುಕ್ತಾಂಶವಾದ ಅಭಿಪ್ರಾಯವನ್ನೇ ಇಟ್ಟುಕೊಂಡು ಜ್ಞಾನ ಲಾಭದ ದೃಷ್ಟಿಯಿಲ್ಲದೆ ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಬಾರದು, ಎಂಬುದು ಕೆಲವರ ಅಭಿಪ್ರಾಯ. ಕಾವ್ಯ ಮಂಜರಿ, ಕಾವ್ಯ ಕಲಾನಿಧಿಗಳು ಪ್ರೋತ್ಸಾಹವಿಲ್ಲದೆ ತೆಪ್ಪನಾದ ಬಳಿಕ ಪ್ರಾಚೀನ ಗ್ರಂಥಗಳ ಉದ್ದೇಶಕ್ಕೆ ಮಿಕ್ಕವರು ಮಾಡುವ ಪ್ರಯತ್ನಗಳ ಗತಿಯೇನು? ಪುರಾತನ ಗ್ರಂಥಗಳ ರಚನೆಯನ್ನು ಕೈಕೊಳ್ಳುವವನು ಎಗ್ಗನಾಗಲಿಕ್ಕೆ ಸಾಕು. ಅವರ ಶಿಥಿಲವಾಗಿ ಹೋಗಿ ತೌಡಿನಂತೆ ಧೂಳಾಗಿರುವ ತಾಳೆಯ ಪತ್ರದ ಗ್ರಂಥಗಳು ಇನ್ನೂ ಎಷ್ಟು ಶತಮಾನಗಳಿರಬೇಕೆಂದು ನಾವು ಹಾರೈಸುತ್ತಿರಬೇಕು? ಅತ್ತಿಮಬ್ಬೆಯ ಕಾಲಕ್ಕೆ ಶಾಂತಿ ಪುರಾಣದ ಪ್ರತಿಗಳೇನಾಗಿದ್ದುವು? ದಾನ ಚಿಂತಾಮಣಿಯೆನಿಸಿದ ಆ ಮಹನೀಯಳು ಮಾಡಿದುದೇನು? ಈಗ ನಾವು ಮಾಡುವುದೇನು?

ಶ್ರೀಮದಶೇಷ ಜೈನ ಸಮಯೈಕ ಶಿರೋಮಣಿ ಸರ್ವಜೀವ ರ।
ಕ್ಷಾಮಣಿಯೆಂದು ಭವ್ಯ ತತಿ ಬಿಚ್ಚಳಿಸುತ್ತಿರೆ ಸಂದ ದಾನ ಚಿಂ।
ತಾಮಣಿ ತನ್ನದೊಂದು ಪಿತೃ ಭಕ್ತತೆಯಂ ಮೆರೆಯಲ್ ಪುರಾಣ ಚೂ।
ಡಾಮಣಿಯಂ ನಿವಿರ್ಚಿದಳಿಳಾಗ್ರದೊಳಿಂತು ಜನಕ್ಕೆ ನೋಂತರಾರ್ ॥ ೧ ॥

ಎಸೆಯದೆ ಪೂಳ್ವು ಕೆಟ್ಟಪುದು ಶಾಂತಿ ಪುರಾಣಮದಂ ನೆಗಳ್ತುವೆಂ।
ವಸುಧೆಯೊಳಿನ್ನ ತಂದೆಯು ಪರೋಕ್ಷದೊಳೆಂದು ಸಹಸ್ರ ಪುಸ್ತಕ।
ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆ ಪೇಳ್ದ ಪೆಂ।
ಪಸದಳಮದ್ವಿತೀಯಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್ ॥ ೨ ॥

* * * * *

ಪಡೆಮಾತೇನುದಯಾಚಲಾಸ್ತ ನಗ ಹಮ್ಯಾದ್ರೀಂದ್ರ ಸತ್ಸೇತುವಾ।
ಕಡೆಗಳ್ ರುಂದ್ರ ಫಣೀಂದ್ರ ಲೋಕ ಸುರ ಲೋಕಾಂಭೋಜಜಾತಾಂಡದಾ ॥
ಕಡೆಗಳ್ ಶಾಂತಿ ಪುರಾಣ ಸತ್ಕೃತಿಗಡರ್ಪಪ್ಪನ್ನೆಗಂ ಪರ್ವಿ ದಾಂ।
ಗುಡಿವಿಟ್ಟತ್ತು ಯಶೋ ಲತಾ ಪ್ರತತಿ ಚೆಲ್ವಿಂದತ್ತಿಮಬ್ಬೆಯಾ ॥ ॥ ೩ ॥

ಹೀಗೆ ಪುರಾತನ ಗ್ರಂಥಗಳ ಸಂರಕ್ಷಣೆಯನ್ನೂ ಪ್ರಚಾರವನ್ನೂ ಕೈಕೊಳ್ಳದೆ ಇನ್ನೂ ವಿಳಂಬವಾದರೆ ಆಲಸ್ಯದಿಂದ ಅವು ನಾಶವಾಗುವುದರಲ್ಲಿ ಸಂದೇಹವೇನು? ಹಿಂದೆ ಹೇಳಿದಂತೆ ಜೈನ ರಾಜಮಹಾರಾಜರುಗಳೂ ಶ್ರೀಮಂತ ವರ್ತಕಸ್ವಾಮಿಗಳೂ ಕೈಹಾಕದುದೇಕೆ? ಅವರಿಗೇನು ನಷ್ಟ? ಅವರಿಗ್ಯಾಕೆ ನಿಯೋಗಿಸಿದ ಶಕ್ತಿಯನ್ನು ಅಪ್ರಕಟಿತವಾದ ಪ್ರೌಢ ಗ್ರಂಥಗಳಿಗೆ ವಿನಿಯೋಗಿಸಬಾರದಾಗಿತ್ತೇ?—ಎಂಬುವೇ ಮೊದಲಾದ ಆಕ್ಷೇಪಣೆಗಳನ್ನು ಮಾಡುವುದು ಸುಲಭ. ಕಾರ್ಯವನ್ನು ಸ್ವತಃ ಕೈಕೊಂಡು ಮಾಡುವವರಿಗಲ್ಲದೆ ಮಿಕ್ಕವರಿಗೆ ಅದರ ಕಷ್ಟವು ಹೇಗೆ ತಿಳಿವುದು? ಕನ್ನಡ ನಾಡಿನ ಜನಗಳು ಗಡಿಯುವಂತೆ ಇಂದು ಇಲ್ಲಿಗೆ ಬಂದು ಶಾಂತಿ ಪುರಾಣ, ಅನಂತನಾಥ ಪುರಾಣ ಮುಂತಾದುವುಗಳು ಮುದ್ರಣವಾಗಬೇಕೆಂದು ನಾವು ಹೇಳಿದರೆ ಗ್ರಂಥವನ್ನು ತರುವುದೆಲ್ಲಿಂದ? ಕೊಡುವವರಾರು? ತರುವುದು ಹೇಗೆ? ಪ್ರಚಾರಕ್ಕೆ ತರಲಿಕ್ಕೆ ಮುಂದಾಗಿ ಮಾಡಬೇಕಾದ ಕೆಲಸವೆಲ್ಲವನ್ನೂ ಮಾಡುವವರಾರು? ಈ ಪೂರ್ವ ಸಾಹಿತ್ಯವೆಲ್ಲವನ್ನೂ ಅವಲಂಬಿಸಿದ ಅನೇಕ ಬಲ್ಲಿದರು ವಿದ್ವಾಂಸರುಗಳಿಂದ ವರ್ಷಕ್ಕೆ ಇಷ್ಟೆಂದು ಕ್ಲಪ್ತವಾಗಿ ಬಂದೆರಡು ಗ್ರಂಥಗಳ ರಚನೆಯಾಗಬಹುದು. ಮತ್ತಿನ ಪ್ರಾಂತದ ವಿದ್ವಾಂಸರು ಇದಕ್ಕೆ ತಕ್ಕಷ್ಟು ನೆರವಾದಲ್ಲದೆ ಪ್ರಾಚೀನ ಗ್ರಂಥಗಳ ಪ್ರಚಾರಣೆಯಾಗುವುದು ಸುಲಭವಲ್ಲ. ಇದನ್ನು ಪ್ರತಿಪಾದಿಸಿ ಈಗ್ಗೆ ಐದಾರು ವರ್ಷಗಳ ಹಿಂದೆ ಈ ದೇಶಕ್ಕೆ ನಾವು ಬಂದಿದ್ದೆಂದು ನಡೆದ ವೃತ್ತಾಂತವು ಮೂಡಬಿದರೆಯ ಮಹಾಶಯರಿಗೆ ಸ್ಪಷ್ಟವಾಗಿರಬಹುದಾದರೂ ಮಿಕ್ಕ ಕನ್ನಡಿಗರಿಗೆ ತಿಳಿಯಲೆಂದು ಸುಮಾಸಿಸಿಯಲ್ಲಿ ಪ್ರಕಟವಾದ ಕೆಲವು ಪದ್ಯಗಳನ್ನು ಓದುತ್ತೇನೆ:—

ಶ್ರೀ ರಮಣಾಂಘ್ರಿ ಪದ್ಮಮೆರ್ದೆಯೊಳ್ ನಿಲೆ ಪಂಚ ಪದಸ್ತವಂ ದೃಢೋ।
ಚ್ಚಾರಣದಿಂದೆ ನಾಲಗೆಗೆ ಬಂದಿರೆ ಪೊಣ್ಮೆ ಕೃಪಾಂಬು ಕಣ್ಗಳಿಂ ॥
ದಾರೆರಗರ್ ನಮೋಸ್ತುಗಳನೀಕ್ಷಿಸಿದಾಗಳೆ ಚಾರುಕೀರ್ತಿ ಭ।
ಟ್ಟಾರಕ ಪಾದ ಪದ್ಮಕುಲಿಯುತ್ತಿರೆ ಧರ್ಮ ವಿವರ್ಧನ ಸ್ವನಂ ॥ ೧ ॥

ಬಗೆಗೆಯ್ದಿತ್ತು ಜಿನೇಂದ್ರ ಪಾದ ಕಮಳಂ ಪಂಚಾಕ್ಷರಂ ನಾಡೆ ನಾ।
ಲಗೆಗೆಯ್ದಿತ್ತು ಕೃಪಾಂಬುವಂ ಕರೆಯುತಿರ್ಕುಂ ಕಣ್ಗಳೇನೆಂಬೆನ ॥
ಚ್ಚಿಗಮುಂ ಶ್ರೀಯುತ ಚಾರುಕೀರ್ತಿ ವಿಮಳ ಶ್ರೀಪಾದ ಪದ್ಮಕ್ಕೆ ತುಂ।
ಬಿಗಳೆಂಬಂತಿರೆ ಭವ್ಯ ಕೋಟಿಯೆರಗುತ್ತಿರ್ಕುಂ ಮನಂಗೊಳ್ವಿನಂ ॥ ೨ ॥

ಶ್ರುತ ಭಂಡಾರದ ಪೆರ್ಮೆಯಿಂದೆ ಪಿರಿದುಂ ಚೈತ್ಯಾಲಯೋದ್ಧಾರದಿಂ।
ದತಿ ಕಾರುಣ್ಯದ ದಾನ ಶಾಲೆಯ ಲಸದ್ದಾನಂಗಳಿಂ ನಿತ್ಯ ನಿ ॥
ರ್ವೃತಿ ಲಕ್ಷ್ಮೀಪತಿ ಪೂಜೆಯಿಂದೆ ಪೆಸರಾಯ್ತನ್ವರ್ಥಮೆಂಬಂತೆ ನೆ।
ಟ್ಟಿತು ಸಮ್ಯಕ್ತ್ವವನಿರ್ಪ ನಾಡೆಸೆಯೊಳಂ ಶ್ರೀ ಚಾರುಕೀರ್ತಿಧ್ವಜಂ ॥ ೩ ॥

ಅವರಡಿಗೆರಗುವ ತವಕದಿ।
ನವನಿಯ ಭವ್ಯನ್ನ ನಾಡ ಭವ್ಯಾವಳಿ ಬಂ ॥

ದವಸರಮಂ ಸಾರುಗುಮೆಂ।
ದವರವರಂ ಬರಿಸಿ ಕರುಣೆಯಿಂ ಬೀಳ್ಕೊಡುವರ್ ॥ ೪
ಅದುಮಲ್ಲದೆ ಭವ್ಯೇತರ।
ರೊದವಿರ್ದ ಕುತೂಹಲಕ್ಕೆ ಬಂದಂದವರಂ ॥
ಸದಮಳ ವಚನ ಸುಧಾ ಸಾ।
ರದೆ ತಣಿಯಿಪರುಚಿತ ರೀತಿಯಿಂ ನಯ ನಿಪುಣರ್ ॥ ೫ ॥
ಈ ತೆರದೊಳಿರ್ಪ ವಿಮಳ।
ಖ್ಯಾತರ ಸಂದರ್ಶನಕ್ಕೆ ಗೋದಾವರಿಯಿಂ ॥
ತಾತಂಬರಲಾತಂ ಭ।
ವ್ಯೇತರನೆಂತಾನುಮಲ್ಲನೆಂದೋಲಯಿಸಲ್ ॥ ೬ ॥
ನೆರೆದಾ ಕನ್ನಡಿಗರ ಸಭೆ।
ಗುರು ಮುದಮುಪ್ಪಂತೆ ನೆಟ್ಟನುದ್ಧ್ಯಾಯಣನಾ ॥
ಚರಿತಮನೋದಿಸಿ ಧರ್ಮವ।
ನೊರೆದರ್ ಮಾಗಧಿಯ ಪಲವು ಗಾಹೆಗಳಿಂದಂ ॥ ೭ ॥
ಅರಯೆ ಮುನ್ನಂ ಜೈನರ್।
ಸಾರಸ್ವತರೆನಿಸಿಯೊಡೆದ ವಾಗ್ದೇವಿಯ ಭಂ ॥
ಡಾರದ ಮುದ್ರೆಗೆ ಬೀಯಗ।
ಮೋರಂತಳವಟ್ಟುದಿಂದು ಭವ್ಯಾವಳಿಯಿಂ ॥ ೮ ॥
ಕನ್ನಡದೊಳಗಿರ್ದುವು ಕೇಳ್।
ಮುನ್ನಂ ಜಿನ ಕವಿಗಳೊರೆದ ಪಲವುಂ ಕೃತಿಗಳ್ ॥
ಇನ್ನವನೆಲ್ಲಂ ವಿಸ್ತರಿ।
ಪನ್ನಂ ಬಗೆಗೊಂಡು ಶಾಸ್ತ್ರ ದಾನವನೆಸಗಿಂ ॥ ೯ ॥
ಕಿಡುಗುಂ ನುಡಿ ಕಿಡುಗುಂ ಕೃತಿ।
ಕಿಡುಗುಂ ಹೊತ್ತಗೆಗಳೊಡನೆ ಕಿಡುಗುಂ ಚರಿತಂ ॥
ಕಿಡುಗುಮಯಂ ಕಿಡುಗುಮರಂ।
ಕಿಡೆಯುಲಿಗುಂ ನಾಡೆ ದುರ್ಯಶಃಪಟಹ ರವಂ ॥ ೧೦ ॥
ಎಂದೀ ವ್ಯಾಖ್ಯಾನವನವ।
ರಂದದೆ ಪೇಳ್ದಂದು ನೆರೆದ ಸಭೆಯೊಳಗೇಂ ಕೆ ॥
ಯ್ವಂದವೊಲಾದುದೊ ಭವ್ಯರ।
ಬೃಂದಂ ಭಾಷಾಭಿಮಾನಮಂ ತೋರಲೊಡಂ ॥ ೧೧ ॥
ಎನಿತೊಳವು ಜೈನ ಕೃತಿಗಳ।
ವನಿತಂ ವಿಸ್ತರಿಸಿ ಬರೆದು ಮುದ್ರಿಸುವೆಂ ನಾ ॥

ನೆನುತುಂ ಭವ್ಯೋತ್ತಮರಂ।
ದಿನ ಸಭೆಯೊಳ್ ನುಡಿದ ನುಡಿಗೆ ಮೆಚ್ಚದರೊಳರೇ ॥ ೧೨ ॥

ಪರಿಪಾಲಿಸಲೀ ವಚನವ।
ನುರುಮುದದಿಂ ಕೃಷ್ಣಸೂಕ್ತಿ ಸಂಪಾದಕರಾ ॥
ಬಿರುದಿನ ಕಂಠೀರವ ರಾ।
ಯ ರಾಜಗೋಪಾಲ ಕೃಷ್ಣರಾಯರೆ ನೋಂತರ್ ॥ ೧೩ ॥

ಗುರುಜನ ಸಭೆಯೊಳಗಂದಿಂ।
ತೊರೆದಾ ನುಡಿ ಮೂಡಬಿದಿರೆಯೊಳಗಾಯ್ತೆಂದ ॥
ಚ್ಚರಿಯಿಂ ಮುನ್ನಿನ ಗೋದಾ।
ವರಿಗೆಯ್ದುವ ಬಗೆಯೆ ಬಂದುದಾತನ ಬಗೆಯೊಳ್ ॥ ೧೪ ॥

ಇದೆ ಸಾಲ್ಗುಂ ತನಗಿರ್ದ ಧರ್ಮದೆರಕಕ್ಕೆಂದಿರ್ದ ತಾತಂಗೆ ಮಾ।
ಡಿದ ಸನ್ಮಾನವನೇನನೆಂಬೆನಮವಾ ಭಟ್ಟಾರಕರ್ ಸೇಸೆಯಿ ॥
ಕ್ಕಿದರಾನಂದದೆ ಧರ್ಮಮಕ್ಕೆ ಜಸಮಕ್ಕೈಶ್ವರ್ಯಮಕ್ಕೆಂದು ನೀ।
ಡಿದ ಹಸ್ತಂಗಳಿನಾಯ್ತಲಂಕರಿಸಿದಾ ದಿವ್ಯಾಂಬರಾಚ್ಛಾದನಂ ॥ ೧೫ ॥

ಅಂದಿನ ಪರಕೆಯಿನಿಂದುಂ।
ಚೆಂದದೆ ಭಾಷಾಭಿಮಾನಮಂ ಪ್ರಕಟಿಸುತುಂ ॥
ಕುಂದದ ಭಕ್ತಿಯೊಳೆರಗುವ।
ನಿಂದಾ ನಲ್ಲೂರೊಳೆರಗಿದಾತಂ ತಾತಂ ॥ ೧೬ ॥

ಆಗ ಮೂಡಬಿದರೆಯಲ್ಲಿ ಒಂದು ಸಂಘವು ಏರ್ಪಟ್ಟು ಸದ್ಧರ್ಮ ಪ್ರಚಾರಕ ಸಂಘವೆಂಬ ಹೆಸರಿಂದ ರಿಜಿಸ್ಟರಾಯಿತು. ಅಲ್ಲಿಂದಿತ್ತೀಚೆಗೆ ನಡೆದಿರುವುದೇನೋ ನನಗೆ ತಿಳಿಯದು. ಶ್ರೀ ಅರಮನೆ ಧರ್ಮ ಸಾಮ್ರಾಜ್ಯರಿಗೂ—ರಾಜಗೋಪಾಲ ಕೃಷ್ಣರಾಯರಿಗೂ ತಿಳಿದಿರಬೇಕು.

ಪುರಾತನ ಗ್ರಂಥಗಳನ್ನು ಸಂಗ್ರಹಿಸಿದ ಸಮುದ್ದೇಶವನ್ನು ಮರೆತು ಪುಸ್ತಕಗಳನ್ನು ಹುಳು ತಿನ್ನಲಿಕ್ಕೆ ಬಿಡುವುದೊಳ್ಳೆಯದಲ್ಲ. ಇದರಲ್ಲಿ ಕೆಲವರಿನ್ನೂ ಮತಮೋಹದಿಂದ ತಮ್ಮಲ್ಲಿರುವ ಪುಸ್ತಕಗಳು ಹಾಳಾಗಿ ಹೋದರೂ ಚಿಂತೆಯಿಲ್ಲವೆಂದು ಪರಮತದವರಿಗೆ ಕೊಡದೆ ತಾವೂ ಓದಿಸದೆ ಪ್ರಚುರಗೊಳಿಸದೆ ನಮ್ಮ ಕನ್ನಡ ವಾಙ್ಮಯ ದೇವಿಯ ಆಭರಣಗಳನ್ನು ಒಂದೊಂದಾಗಿ ಹಾಳುಮಾಡ ತೊಡಗಿದ್ದಾರೆ. ಸಮುದ್ದೇಶವೂ ಇಲ್ಲದೆ ದುರುದ್ದೇಶವೂ ಇಲ್ಲದೆ ಇರುವ ಇವರುಗಳನ್ನು ಪುಸ್ತಕಗಳ ಕಾವಲಿಗಿಟ್ಟರು. ಇವರ ಕರ್ಮವೋ ಕನ್ನಡ ಭಾಷೆಯ ಕರ್ಮವೋ ಹೇಳಲರಿಯೆನು. ಈ ವಿಷಯದಲ್ಲಿ ನಾವು ಜಾಗ್ರತೆಯನ್ನು ಕಳೆದುಕೊಂಡು ಸುಷುಪ್ತಿಯಲ್ಲಿರುವುದು ಯುಕ್ತವಲ್ಲ.

ಜಿನ ಧರ್ಮದಲ್ಲಿಯೂ ಜೈನ ಗ್ರಂಥಗಳಲ್ಲಿಯೂ ಕನ್ನಡಿಗರಲ್ಲಿ ಜಾಗ್ರತೆಯನ್ನು ಉಂಟುಮಾಡುತ್ತಿರುವ ಈಗಿನ ಕೆಲವು ಮಹನೀಯರಿಗೆ ನಮ್ಮ ಧನ್ಯವಾದಗಳು.

ಮುಖ್ಯವಾಗಿ ಶಾಂತಿರಾಜ ಶಾಸ್ತ್ರಿಗಳಿಗೂ ಪೂಜ್ಯರಾದ ನೇಮಿ ಸಾಗರ ವರ್ಣಿ ಮಹಾರಾಜರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು. ಜೈನ ವಿದ್ಯಾರ್ಥಿಗಳನ್ನು ತಂದೆಯಂತೆ ಸಲಹುತ್ತಿದ್ದ ಶ್ರೀ ವರ್ಧಮಾನಯ್ಯನವರು ದಿವಂಗತರಾದುದರಿಂದ ಕನ್ನಡ ಸಾಹಿತ್ಯಕ್ಕೆ ಶೋಕವನ್ನುಂಟುಮಾಡಿದೆ. ಅವರ ಆತ್ಮನಿಗೆ ಶಾಂತಿಯಾಗಲಿ !

ಮಹಾಶಯರೇ ! ಈ ಪ್ರಾಚೀನ ಗ್ರಂಥಗಳ ವಿಷಯದಲ್ಲಿ ಎಷ್ಟು ಹೇಳಿದರೂ ಸಮಯವು ಸಾಲದು. ಸುಮ್ಮನೆ ಚಿಂತಿಸುವುದರಿಂದ ಅತಿ ಕರ್ತವ್ಯವೇನೂ ಆದಂತೆ ಕಾಣುವುದಿಲ್ಲ. ಈ ವಿಷಯದಲ್ಲಿ ಪರಿಷತ್ತಿನವರ ಸಂಪಾದಕ ಮಂಡಲಿ ಎಷ್ಟು ವಿಶಾಲವಾದರೂ ಸಾಲದು. ಹಣದ ವಿಷಯದಲ್ಲಿ ಪ್ರತಿಫಲವನ್ನುದ್ದೇಶಿಸಿ ಮಾಡುವ ಕಾರ್ಯವಲ್ಲವೆಂದು ವಿಸ್ತರಣೆಯಿಂದ ಹಾಸುವೆಂದೇ ಒತ್ತಿ ಉದಾರ ರಾಜಪ್ರೋತ್ಸಾಹಕರಾದ ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ತಮ್ಮ ವಿಶಾಲವಾದ ಉದಾರತೆಯಿಂದ ಇದಕ್ಕೆ ನೆರವಾಗುವಂತೆ ಪ್ರಾರ್ಥಿಸುವುದೇ ನಮ್ಮ ಕರ್ತವ್ಯವು.

ಚರಿತ್ರೆಯನ್ನು ಬಲ್ಲ ಮಹನೀಯರೂ ವಿಷಯಾಂತರದ ಚರಿತ್ರೆಗಳಲ್ಲಿ ಸ್ವಪ್ರಜ್ಞೆಯನ್ನು ಪಡೆದವರೂ ಅನೇಕರಿರುವರಲ್ಲದೆ ಕನ್ನಡ ನಾಡಿನ ಚರಿತ್ರಕ್ಕೆ ಬೇಕಾದಷ್ಟು ಸಹಾಯವನ್ನು ಮಾಡಿದಂತೆ ತೋರಲಿಲ್ಲ. ಶಾಸನಗಳ ವಿಷಯದಲ್ಲಿ ನಮ್ಮ ಮೈಸೂರು ಸೀಮೆಯು ಪ್ರಾಚ್ಯವಸ್ತುವಿನ ಸರ್ಕಾರದವರ ಪೂರ್ಣ ವಿಶ್ವಾಸವೂ ಪಾಶ್ಚಾತ್ಯ ವಿಚಕ್ಷಣರ ಶಕ್ತ್ಯುತ್ಸಾಹಗಳೂ ಒಟ್ಟುಗೂಡಿ ಈಗ ಮೈಸೂರು ದೇಶದ ಶಾಸನಗಳು ಪೂರ್ತಿಯಾಗಿ ಪ್ರಕಟಿಸಿಯಾಗಿ ಎಷ್ಟೋ ವರುಷಗಳಾಗಿದ್ದರೂ ಇವುಗಳ ಆಧಾರದಿಂದ ರಚಿಸಬೇಕಾದ ಕಾವ್ಯಗಳೂ, ನಾಟಕಗಳೂ, ಕಾದಂಬರಿಗಳೂ, ಇತಿಹಾಸಗಳೂ ಹೊರಗೆ ಬಂದು ಸಾಧಾರಣವಾದ ಅಕ್ಷರ ಜ್ಞಾನವುಳ್ಳ ಸಕಲ ಕರ್ನಾಟಕ ಜನರಿಗೂ ತಿಳಿಯಬೇಕಾದರೆ ಮಲಯಾಳ, ಬಂಗಾಳಿ, ಮರಾಠಿ, ಗುಜರಾತಿ ದೇಶದ ವಿದ್ವಾಂಸರುಗಳ ನೆರವಾಗಬೇಕಾಗಿರುವುದೋ? ಇಲ್ಲವಿದ್ದರೆ ನಮ್ಮ ಕನ್ನಡಿಗರಿಂದ ಸಾಧ್ಯವಾಗತಕ್ಕ ಕೆಲಸವೋ ಇದು ?

ಕನ್ನಡ ಮಾತೆಯ ಮಕ್ಕಳಿಗೆ ಕಣ್ಣು ಕಿವಿ ಮೂಗು ಬಾಯಿಗಳೇ ಇಲ್ಲದಂತೆ ಕೆಲಸದಲ್ಲಿರುವವರಿಗೆ ಉಚಿತವಾದ ಪ್ರೋತ್ಸಾಹವೇ ದೊರೆಯದೆ ಅವರೂ ಕಷ್ಟಪಡುವುದಲ್ಲದೆ ನಾಡು ನುಡಿಗಳ ಏಳಿಗೆಗೆ ಒಳನಾಡಿನಲ್ಲಿಯೂ ಎಷ್ಟು ಉತ್ತೇಜನವು ಸಾಲದೆ ಹೋಗಿರುವುದೆಂದ ಮೇಲೆ, ಮೈಸೂರ ಹೊರಗಣ ಕನ್ನಡದ ಪಾಡೇನು ? ಕನ್ನಡಿಗರ ದುರ್ಬುದ್ಧಿಗೆ ಗತ್ಯಂತರವೇನು ? ಇವರ ಮಕ್ಕಳು ಕಲಿಯಬೇಕಾಗಿ ಬಂದಿರುವ ತಮಿಳು ತೆಲುಗು ಮರಾಠಿ ಉರ್ದು ಭಾಷೆಗಳಿಂದ ಕನ್ನಡವು ಹಿಂದಿಗಾದರೂ ಮುಂದಕ್ಕೆ ಬಂದೀತೇ ? ಕೆಲವೆಡೆಗಳಲ್ಲಿ ಅಧಿಕಾರಿ ವರ್ಗದಿಂದ ಕನ್ನಡಕ್ಕೆ ತಕ್ಕಷ್ಟು ಆದರವೊದಗದೆ ಮತ್ತಷ್ಟು ಬಾಧೆಯೇ ಆಗುತ್ತಿರುವುದು. ಪ್ರಾಥಮಿಕ ವಿದ್ಯಾಶಾಲೆಗಳಲ್ಲಿ ಕನ್ನಡವನ್ನು ಅಸಡ್ಡೆಯಿಂದ ದೂರೀಕರಿಸಿ ಇತರ ಭಾಷೆಗಳನ್ನು

ಕಲಿಸುತ್ತಿದ್ದ ಪ್ರಾಂತಗಳಲ್ಲಿ ಮಾತೃಭಾಷಾ ಸಮಿತಿಯಂತಿರಬೇಕೆಂದೂ ಅಲ್ಲಿ ಕನ್ನಡವನ್ನು ಕೆಲವೆಡೆಗಳಲ್ಲಿ ಕಲಿಸಲು ಮಾತ್ರ ಅವಕಾಶವೆಂದೂ ಕೇಳಿ ಆನಂದಿಸುವ ಕನ್ನಡಿಗನಾದವನು ಇರಲಾರನು. ಇಂತಹ ಪ್ರದೇಶಗಳಲ್ಲಿ ಮಾತ್ರವೇ ಭಾಷಾಭಿಮಾನದಿಂದ ನೋಡಲಿಕ್ಕಿಂತಲೂ ಅಧಿಕವಾದ ಬಾಧೆಯುಂಟಾಗಿ ಕನ್ನಡವು ನಿರ್ಲಕ್ಷ್ಯಕ್ಕೊಳಗಾದಂತೆ ಕೇಳಿ ಬರುತ್ತಿರುವುದೆಂದು. ಅದೇ ಕನ್ನಡಿಗರು ಕೇಳಬೇಕಾಗಿಬಂದರೆ ಅವರ ಧ್ವನಿ ನೋಡಲಿಕ್ಕಿಂತಲೂ ಸಮರ್ಪಕವಾಗುತ್ತದೆ. ಇಂತಹ ಸಂದರ್ಭದಲ್ಲಿ ಪ್ರೋತ್ಸಾಹಕ ವರ್ಗದವರ ಸಂಘಗಳು ಏರ್ಪಟ್ಟು ಅಧಿಕಾರಿ ವರ್ಗವನ್ನು ಕೇಳಿಕೊಂಡರೆ ಅವರ ಅಭಿಮತವು ನೆರವೇರುವುದು. ಇಂತಹ ಕೆಲಸವನ್ನು ಕೇವಲ ಪರಿಷತ್ತಿನ ಠರಾವುಗಳಿಂದಲೇ ಸಾಧಿಸಬೇಕಾಗಿಲ್ಲ. ಬೇಡದ ನಾಡಿಗೆ ಒಲ್ಲದ ಅಧಿಕಾರಿಗಳಾಗಿ ಹೋಗಿ ಸಲ್ಲದ ಪಾಠಗಳನ್ನು ಒತ್ತಾಯದಿಂದ ಕಲಿಸಲಿಕ್ಕೆ ತೊಡಗುವ ಮಹಾತ್ಮರು ಮೊದಲು ದೇಶ ಭಾಷೆಯ ಕೆಲಸವನ್ನು ಪೂರೈಸಿ ಆಮೇಲೆ ತಮ್ಮಿಚ್ಛೆ ಬಂದಂತೆ ಉರ್ದುವನ್ನೂ ಫಾರಸಿಯನ್ನೂ ಅಗತ್ಯವೆಂದು ಕಂಡುಬಂದರೆ ಕಲಿಸಲಿಕ್ಕೆ ತೊಡಗಲಿ. ಅದಕ್ಕೆ ಮೊದಲೇ ತಮ್ಮ ಉದ್ಯಮವು ಸಫಲವಾಗುವುದೆಂದು ಅವರು ಎಣಿಸುವುದು ಸಮಯೋಚಿತವಾದುದಲ್ಲ.

ಇದೂ ಅಲ್ಲದೆ ನಮ್ಮಲ್ಲಿ ನಾವು ಒಳ ಭೇದಗಳನ್ನು ಮಾಡಿಕೊಂಡು ಕಾಲಕ್ಕೆ ವಿರುದ್ಧವಾದ ಸಮಯ ವಿರೋಧವನ್ನು ಬೆಳೆಯಿಸುವುದರಿಂದ ತಮಿಳಿನಂತೆಯಾಗಲಿ ಆಂಧ್ರದಂತೆಯಾಗಲಿ ಐಕಮತ್ಯವಿಲ್ಲದೆ ಕನ್ನಡವೇ ದುರವಸ್ಥೆಗೆ ಬೀಳುವುದು. ಐಕಮತ್ಯವೆಂದರೆ ರಾಷ್ಟ್ರ ವಿಷಯವಲ್ಲ. ಇದು ರಾಜಕೀಯವಾದ ವಿಷಯವು. ಇದು ಅನ್ಯದಾಯಿಗಳಿಗೆ ಅಪರಿಚಿತವಾದ ಸಂಗತಿ. ಇದರ ಸುದ್ದಿ ನಮಗೆ ಬೇಕಾಗಿಲ್ಲ. ಭಾಷೆಯ ಏಕೀಕರಣವೇ ನಮಗೀಗ ಬೇಕಾಗಿರುವ ಏಕೀಕರಣ. ಇದಕ್ಕಾಗಿ ಬಹು ಕಾಲದಿಂದ ಪ್ರಯತ್ನವು ನಡೆಯುತ್ತಿರುವುದೆಂದು ಹೇಳಿ ಕೇಳಿರುವೆನಾದರೂ ಇದರ ಪ್ರಕೃತ ಸ್ಥಿತಿಯಾಗಲಿ, ಫಲಿತಾಂಶವಾಗಲಿ ನನಗೆ ತಿಳಿಯದು. ಒಳನಾಡಿನವರಿಗೆ ಬೇಗನೆ ತಿಳಿವ ವಿಷಯಗಳು ಗಡಿನಾಡಿನವರಿಗೂ ಗಡಿಗಾಡಿನವರಿಗೂ ತಿಳಿಯಬೇಕಾಗಿಲ್ಲವಷ್ಟೆ? ಫಲಿತಾಂಶದಲ್ಲಿ, ಒಂದು ಶುಭ ಸೂಚಕವಾಗಿರುವುದು. ಕನ್ನಡ ನಾಡಿನ ಬೇರೆ ಬೇರೆ ಪ್ರಾಂತಗಳಲ್ಲಿರುವ ಮಹನೀಯರ ಪರಸ್ಪರ ಪರಿಚಯವೇ ಮಾತ್ರವಲ್ಲದೆ ಕೆಲವೆಡೆ ವ್ಯಕ್ತಿಗಳ ಸ್ನೇಹದಿಂದ ಆ ಆ ವ್ಯಕ್ತಿಗಳಿಗಾಗುವ ಸ್ವಪ್ರಯೋಜನವೂ ಶುಭ ಫಲವೆಂದೇ ತಿಳಿಯತಕ್ಕದ್ದು.

ಪರಿಷತ್ತಿನ ಮೇಲೆಯೇ ಭಾರವೆಲ್ಲವನ್ನೂ ಹೊರಿಸಿ ನಮ್ಮಲ್ಲಿ ಕೆಲವರು ತೆಪ್ಪನೆ ಕುಳಿತಿರುವರು. ತಪ್ಪು ಕಂಡುಬಂದಾಗ ಬಯ್ಯುಗುಟ್ಟುವುದಾಗಲಿ ಗೊಣಗುಟ್ಟುವುದಾಗಲಿ ಎಂತಹ ನ್ಯಾಯ? ಪರಿಷತ್ಕಾರ್ಯವಾಹಕರು ಸರ್ವ ಜನ ಸಮ್ಮತರಾಗಿರಲಾರರಾದರೂ ಅವರು ಮಾಡಿರುವ ಕೆಲಸಗಳನ್ನು ಚೆನ್ನಾಗಿ ಪರಿಶೀಲಿಸಿದಲ್ಲಿ ಇಪ್ಪತ್ತು ವರುಷಗಳೊಳಗೆ ಇಷ್ಟೊಂದು ಕೆಲಸವಾದುದು

ಆಶ್ಚರ್ಯವೇ ಸರಿ. ಮತ್ತಿನವರ ನೆರವಿಲ್ಲದೆ ತಮ್ಮಲ್ಲಿ ತಾವೇ ಶ್ರಮಪಟ್ಟು ಗ್ರಂಥಗಳನ್ನು ರಚಿಯಿಸಿ ಮುದ್ರಿಸಿ ಪ್ರಚುರಿಸಿದುದೂ ಅಲ್ಲದೆ ವಿಶೇಷ ವಿಷಯಗಳನ್ನೊಳಗೊಂಡ ಪರಿಷತ್ಪತ್ರಿಕೆಯನ್ನು ತಕ್ಕಷ್ಟು ಗೌರವದಿಂದ ನಡೆಯಿಸುತ್ತಿರುವುದನ್ನು ನೋಡಿದರೆ ಪರಿಷದ್ವರಿಗೆ ನಾವು ಅಂಜಲಿಬದ್ಧರಾಗಿ ಧನ್ಯವಾದಗಳನ್ನು ಹೇಳಲೇ ಬೇಕು. ತಪ್ಪು ಕಂಡುಹಿಡಿವುದೇ ಮುಖ್ಯೋದ್ದೇಶವೆಂದಿರುವ ನೋಲಿಟ್ಟಿರುವ ಮಹಾಶಯರಿಗೆ ಸ್ವಲ್ಪವಾದರೂ ಗುಣವು ಕಣ್ಣಿಗೆ ಬೀಳುವುದಿಲ್ಲ. ಪರಿಷತ್ತಿಗೆ ಇರುವ ಅಧಿಕ ಕಾರ್ಯವನ್ನು ಲಘುವಾಗಿ ಮಾಡಿ ಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿರುವುದು. ಮಾಜ್ಯ್ರಯ ರಾಜ್ಯದಲ್ಲಿ ಪರಿಷಜ್ಜನರೇ ರಾಜ್ಯ ಭಾರವನ್ನು ವಹಿಸುತ್ತಿರಲಿ; ಭಯವಿಲ್ಲ; ಅನ್ಯಾಯವಾದೀತೆಂಬ ಹೆದರಿಕೆಯೂ ಬೇಡ. ನಮ್ಮ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಉಪಾಧ್ಯಕ್ಷರುಗಳ ಹೆಸರುಗಳೇ ಅಂತಹ ದುಷ್ಟಬುದ್ಧಿಕ್ಕೂ ದುರ್ಗಂಧಕ್ಕೂ ಎಡೆಗೊಡದೆ ರಕ್ಷಿಸುವ ರಕ್ಷಾಮಣಿಗಳು. ಪರಿಷತ್ತಿಗೆ ರಾಜ್ಯಭಾರವಾಗಲಿ ರಾಜಕಾರ್ಯವಾಗಲಿ ರಾಜತಂತ್ರವೇ ಇರಲಿ ನಮಗೇತರ ಗೊಡವೆ? ಸಾಹಿತ್ಯದಲ್ಲಿ ನಡೆಯಬೇಕಾಗಿರುವ ಊಳಿಗಗಳನ್ನು ಮಾತ್ರ, ನಾವೆಲ್ಲರೂ ಕೂಡಿ ಮಾಡದಲ್ಲದೆ ಸಾಹಿತ್ಯದ ಉತ್ತರೋತ್ತರವು ನೆಟ್ಟಗಾಗಲಾರದು. ಆದುದರಿಂದ ಈವರೆಗೆ ಆಗಿದ್ದುದೋ ಸಮಯ ವಿರೋಧವೋ ವ್ಯಕ್ತಿವೈರವೋ ದೇಶಾಂತರ ವಿವಾದವೋ ವಿಷಯಾಂತರಾಳವೋ ಮತ ವಿರೋಧವೋ ಏನಿದ್ದರೂ ತೊರೆದು ಮರೆತು ನಮ್ಮ ಸಜ್ಜನಿಕೆಯನ್ನೂ ಕಾರ್ಯದಕ್ಷತೆಯನ್ನೂ ನೈಪುಣ್ಯವನ್ನೂ ಸಾಹಿತ್ಯವನ್ನೂ ಬೆಳೆಯಲು ನಾವೆಲ್ಲರೂ ನೆರೆಯಬೇಕೆಂಬುದು ನನ್ನ ಸವಿನಯ ಪ್ರಾರ್ಥನೆ.

ಮತಭೇದಂಗಳ ಮರೆಯಿಂಭೋ ಮರೆಯಿಂಭೋ ಮರೆಯಿಂಭೋ! ಸಮಯ ವಿರೋಧವ ತೊರೆಯಿಂಭೋ ತೊರೆಯಿಂಭೋ ತೊರೆಯಿಂಭೋ। ಕನ್ನಡ ಭಾಷೆಯ ಏಕೀಕರಣಕೆ ನೆರೆಯಿಂಭೋ ನೆರೆಯಿಂಭೋ ನೆರೆಯಿಂಭೋ! ನಿಮ್ಮ ಶಕ್ತ್ಯುತ್ಸಾಹವ ಮೆರೆಯಿಂಭೋ ಮೆರೆಯಿಂಭೋ ಮೆರೆಯಿಂಭೋ॥

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ನಮ್ಮ ಕನ್ನಡ ದೇಶ, ದೇಶ ಚರಿತ್ರೆ, ಕನ್ನಡ ರಾಜರು, ಕನ್ನಡ ವೀರರು, ವೀರ ರಮಣಿಯರು, ಗುರುಗಳು, ನಗರಿಗಳು—ಇವೇ ಮೊದಲಾದ ದೇಶ ವಾತ್ಸಲ್ಯವನ್ನು ಕಲಿಸುವ ಮತ್ತು ದೇಶ ಸೇವೆಗೊದಗುವ ವಿಷಯಗಳನ್ನು ಚೆನ್ನಾಗಿಯೂ ನಿರ್ದೋಷವಾಗಿಯೂ ನಿಷ್ಪಕ್ಷಪಾತವಾಗಿಯೂ ಬೋಧಿಸುವ ಸತ್ಯ ಪುಸ್ತಕಗಳನ್ನು ವಿಸ್ತಾರವಾಗಿ ಹರಡತಕ್ಕುದು. ವಿದೇಶ ವೃತ್ತಾಂತಗಳಿಗೆ ಸಕಾಲದಲ್ಲಿ ಅವಕಾಶವನ್ನು ಕೊಡತಕ್ಕುದು. ಕನ್ನಡ ಮಕ್ಕಳಿಗೆ ಕಲಿಸುವ ಉಪಾಧ್ಯಾಯರುಗಳು ಕನ್ನಡದಲ್ಲಿ ಯಥೋಚಿತ ಪಾಂಡಿತ್ಯವನ್ನು ಪಡೆದಿರುವುದು ಮಾತ್ರವಲ್ಲದೆ ಕನ್ನಡ ದೇಶ ಭಾಷೆಗಳಲ್ಲಿ ಯಥಾಶಕ್ತಿ ಸೇವೆಯನ್ನು ಮಾಡತಕ್ಕುದು; ದೇಶ ಭಾಷೆಗಳಲ್ಲಿ ಅಭಿಮಾನವನ್ನು ಹುರಿಗೊಳಿಸುವ ಸಾಮರ್ಥ್ಯವುಳ್ಳವರಾಗಿರತಕ್ಕುದು; ಇಂತಹ ಗುಣಗಳಿಲ್ಲದೆ ಸುಮ್ಮನೆ ನನ್ನಂತೆ ಕನ್ನಡಿಗನೆಂದ ಮಾತ್ರಕ್ಕೆ ಕನ್ನಡವನ್ನು ಕಲಿಸಲಾದೀತೇ?

ಉಪಾಧ್ಯಾಯರು ಸದ್ಗುಣ ಸಂಪನ್ನರಾಗಿರತಕ್ಕದ್ದು. ಇಂಥವರನ್ನು ಆರಿಸಿ ತಂದು ಅವರಿಗೆ ತಕ್ಕ ಉತ್ತೇಜನವನ್ನು ಕೊಟ್ಟು ಬಳಿಕ ನಮ್ಮ ಮಕ್ಕಳನ್ನು ಅವರ ವಶಕ್ಕೆ ಕೊಡಬಹುದು.

ಆವ ನಾಡಿನಲ್ಲಿ ಪುರಾಣ ಪ್ರಸಿದ್ಧರಾದ ಪದ್ಮಾವತಿಯವರೂ ಚೌಟರಸರೂ ಸುರಾಲದರಸರೂ ಧರ್ಮಸಾಮ್ರಾಜ್ಯವನ್ನೂ ಪ್ರಜಾ ಪರಿಪಾಲನೆಯನ್ನು ಮಾಡಿದರೋ, ಆವ ನಾಡಿನಲ್ಲಿ ಜರ್ಮನಾ ದೇಶದ ಪಾದರಿಗಳು ಬಂದು, ಏಕಪಾದದಲ್ಲಿ ಕಲ್ಲಿಲೆ ನಿಂತು ಹದಿನೆಂಟು ಇಪ್ಪತ್ತು ವರುಷಗಳು ದುಡಿದು ಕನ್ನಡ ನಿಘಂಟನ್ನು ರಚಿಯಿಸಿದರೋ, ಪುಸ್ತಕಭಾಂಡಾಗಾರಗಳಿಂದಲೂ ದಾನ ಶಾಲೆಯ ಧರ್ಮದಿಂದಲೂ, ಜಿನ ಭವನಗಳಿಂದಲೂ ಚೈತ್ಯಾಲಯಗಳಿಂದಲೂ ಮಾನಸ್ತಂಭಗಳಿಂದಲೂ ಮೆರೆವ ಮೂಡಬಿದರೆ, ಕಾರ್ಕಳ ಮೊದಲಾದ ಜೈನ ಕ್ಷೇತ್ರಗಳೂ, ಸುಬ್ರಹ್ಮಣ್ಯ ಮೊದಲಾದ ಭಗವದ್ಭಕ್ತಾನಂದನಾರ್ಹವಾದ ಕ್ಷೇತ್ರಗಳೂ, ಶ್ರೀಕೃಷ್ಣ ಪರಮಾತ್ಮನಿಂದ ಪವಿತ್ರವಾದ ರಜತಕ್ಷೇತ್ರವೂ ಆವ ನಾಡಿನಲ್ಲಿ ಕಣ್ಗೊಳಿಸುತ್ತಿರುವುವೋ ಅಂತಹ ದಕ್ಷಿಣ ಕನ್ನಡ ಜಿಲ್ಲೆಯ ವಿದ್ವನ್ಮಂಡಲಿಗೂ, ಸಾಹಿತ್ಯ ವಿಚಾರದ ವರ್ಗಕ್ಕೂ ಇವರು ರಚಿಯಿಸಿರುವ ಗ್ರಂಥಮಾಲೆಗಳಿಗೂ, ಸ್ಥಾಪಿಸಿರುವ ಮುದ್ರಣಾಲಯಗಳಿಗೂ ಮತ್ತಿನ ಪ್ರಾಂತಗಳಲ್ಲಿ ಸರಿದೊರೆ ದೊರೆಯಲಾರವು. ಈಗಲೂ ಮಂಗಳೂರಿನ ಮುದ್ರಣಾಲಯಗಳು ಕನ್ನಡ ಸಾಹಿತ್ಯಕ್ಕೆ ಶಾಶ್ವತವಾದ ಉಪಕಾರವನ್ನು ಮಾಡಿರುವುದರಿಂದ, ಅವುಗಳಿಗೂ ಆ ಮಹನೀಯರುಗಳಿಗೂ ಶತಶಃ ನಮ್ಮ ಧನ್ಯವಾದಗಳು. ಈಗಲೂ ಮಂಗಳೂರಿನ ಶಬ್ದಮಣಿದರ್ಪಣಕ್ಕೆ ಮತ್ತಿನ ದರ್ಪಣಗಳು ಸರಿಬರಲಾರವೆಂಬುದು ಕೆಲವರ ಸದಭಿಪ್ರಾಯವು.

ಇನ್ನು ಕವಿತಾ ಚಾತುರ್ಯದಲ್ಲಿಯಾಗಲಿ ನಾಟಕ ಕಲೆಯಲ್ಲಿಯಾಗಲಿ ಕಲ್ಪನಾ ಕಥೆಗಳಲ್ಲಿಯಾಗಲಿ ಭಗವದ್ಭಾಗವತ ವಿಶ್ವಾಸದಲ್ಲಿಯಾಗಲಿ ಮಂಗಳೂರಿನವರು ಮಿಕ್ಕ ಕನ್ನಡಿಗರಿಗೆ ಹಿಂದಲ್ಲ. ಜನಪದವೇ ಅಂದವಾದುದೆಂದ ಬಳಿಕ ಜನರ ಅಂದವೂ ಅವರು ಬರೆವ ಪದದ ಅಂದವೂ ಅವರು ಹಾಡುವ ಪದಗಳ ಅಂದವೂ ಸಂದೇಹವಿಲ್ಲದೆ ಶ್ಲಾಘನೀಯವಾದುವು. ಪಾಂಡಿತ್ಯದಲ್ಲಿ ನಮ್ಮ ರಾಜಾಚಾರ್ಯರಂತಹ ಪಂಡಿತವರ್ಯರ ಕೀರ್ತಿ ಶಾಶ್ವತವಾದುದು. ವಾರ್ತಾಪತ್ರಿಕೆಗಳಲ್ಲಿಯೂ ಮಂಗಳೂರಿನ ವಾರ್ತಾಪತ್ರಿಕೆಗಳು ಮಿಕ್ಕ ನಾಡುಗಳ ಪತ್ರಿಕೆಗಳಿಗೆ ಹಿಂದಿಲ್ಲ. ಈಗಲೂ ಕಂಠೀರವನ ಗರ್ಜನೆ ಕರ್ನಾಟಕ ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಕೇಳಿಸುತ್ತಿರುವುದು. ಮಾಸಪತ್ರಿಕೆಗಳಲ್ಲಿ ಸೂಕ್ತಿಯೇ ಮೊದಲು ಆದರ್ಶವಾಗಿದ್ದು, ಅವಸರ್ಪಿಣಿಯ ಕಾಲದ ಮಹತ್ವದಿಂದ ಅಲ್ಪಾಯುವಾಗಿ ಹೋಯಿತು. ಸುವಾಸನೆ ಈಗ ಮಗಮಗಿಸುತ್ತಿರುವುದು. ಈ ನಮುನೆ ಕೆಲವು ಕಾಲ ನೀರಿಲ್ಲದೆ ಒಳ್ಳೆ ಒಣಗಿ ಹೋಗಿತ್ತು. ಶ್ರೀರಾಮನ ಕರುಣಾಮೃತ ರಸದಿಂದ ಮತ್ತೆ ಚಿಗುರು ಪುಷ್ಪವತಿಯಾಗಿದೆ. ಕಾವ್ಯ ಕಲೆಯಲ್ಲಿಯೂ ನಾಟಕ ಕಲೆಯಲ್ಲಿಯೂ ನಮ್ಮ ಮುದ್ದಿನ ಮುದ್ದಣ್ಣನನ್ನು ಮರೆಯಲಾದೀತೇ? ಇದಲ್ಲದೆ

ಇಲ್ಲಿಯ ಬಾಲ ಸಾಹಿತ್ಯ ಮಂಡಳಿಯ ಗ್ರಂಥಗಳು ಕನ್ನಡ ಬಾಲಕರಿಗೆ ಮಾಡುತ್ತಿರುವ ಉಪಕಾರವನ್ನು ಆರು ತಾನೆ ಹೊಗಳಲೊಲ್ಲರು? ನಿಷ್ಪಕ್ಷಪಾತದಿಂದ ಪರಿಶೀಲಿಸುವವರು ಇದನ್ನು ನಾಡಾಡಿಯ ನಾಡೆಂದು ತಿರಸ್ಕರಿಸುವರೇ? ದಕ್ಷಿಣ ಕನ್ನಡ ನಾಡು ಕನ್ನಡ ರಾಷ್ಟ್ರಕ್ಕೇ ಶೋಭೆಯನ್ನುಂಟುಮಾಡುತ್ತಿರುವುದೆಂದು ಹೇಳಬೇಕೇ? ಇದು ಕ್ರೈಸ್ತರಿಗೂ, ವೈಷ್ಣವರಿಗೂ, ಜೈನರಿಗೂ ಸಮುದಾಯ ಶೋಭೆಯನ್ನೊದಗಿಸಿ ಸಂತೋಷಪಡಿಸುವ ನಾಡು. ಮಹಾಶಯರೇ! ಇದರ ಹೊಗಳಿಕೆಗಿಂದು ನಾಲಿಗೆ ನಿಮ್ಮ ಮುಂದೆ ನಿಂತಿಲ್ಲ. ಹನ್ನೆರಡು ವರುಷಗಳಾಗಿ ಈ ಪರಿಷತ್ತು ಬಲ್ಲೆಯೋ ಮೂಲೆಯಲ್ಲಿರುವ ಮಂಗಳೂರಿಗೆ ಈಗ ನಮ್ಮನ್ನು ಕರೆಯಿಸಿ ಸಮ್ಮೇಳನದ ಪ್ರಾಬಲ್ಯದಿಂದ ಪ್ರೋತ್ಸಾಹಿಸುತ್ತದೆಂದು ಚಿಂತಿಸದೆ ನಿಮ್ಮ ನಿಮ್ಮ ಬಗೆಗೆ ತೋರಿದ ಕ್ಷೇತ್ರಗಳನ್ನೂ ಪುಸ್ತಕ ಭಾಂಡಾಗಾರಕ್ಕೊಡೆಯರಾದ ಶ್ರೀ ಭಟ್ಟಾರಕಾಚಾರ್ಯವರ್ಯರನ್ನೂ ಸಂದರ್ಶಿಸಿ, ಕನ್ನಡ ಸಾಹಿತ್ಯಕ್ಕೆ ಅವರ ನೆರವನ್ನು ಬಯಸಿ ಕೃತಾರ್ಥರಾಗಬೇಕೆಂಬ ನನ್ನ ಸಂಪೂರ್ಣವಾದ ಅಭಿಲಾಷೆಯನ್ನು ಪ್ರಕಟಿಸಲೆಂದು ಈ ಪ್ರಾರ್ಥನಾಲಾಪವನ್ನು ಮಾಡಿದೆನಲ್ಲದೆ ಮತ್ತಾವ ಅಭಿಪ್ರಾಯದಿಂದಲೂ ಹೇಳಲಿಲ್ಲ.

'ನ ಭೂತೋ ನ ಭವಿಷ್ಯತಿ' ಎನ್ನುವಂತೆ ನನ್ನ ಭಾಷಣವು ಹಿಂದಿನ ಅಧ್ಯಕ್ಷ ಮಹಾಶಯರ ಭಾಷಣಗಳಂತೆ ಇಲ್ಲವೇ ಇಲ್ಲ. ಇನ್ನು ಮುಂದೆ ಬರಲಿಕ್ಕಿರುವ ಅಧ್ಯಕ್ಷರುಗಳ ಭಾಷಣಗಳಂತೆಯೂ ಇರಲಾರದು. ಗುಣವೂ ಇಲ್ಲ, ಹಿತ ಸೂಚನೆಯೂ ಇಲ್ಲ, ವಾಗ್ಮಿತೆಯೂ ಇಲ್ಲ ನನ್ನಲ್ಲಿ. 'ದೇಶಭಾಷಾ ಸೇವೆಗಾದರೂ ಹೆಸರು ಹೊಂದಿದವನಲ್ಲ; ದೇಶಸ್ಥನೂ ಅಲ್ಲ. ಬಡಗಣ ಗಡಿಗಾಹಿನವನೆಂದು ಹನ್ನೆರಡು ವರುಷಕ್ಕೆ ಕಾರುಣ್ಯದಿಂದ ಪರಿಷನ್ಮಂಡಲಿಯವರೂ ದೇಶಬಾಂಧವರೂ ಭಾಷಾಭಿಜ್ಞರೂ ಸ್ವಾಗತ ಮಂಡಲಿಯವರೂ ಈ ದಾಸನನ್ನು ಗೋದಾವರಿಯಿಂದ ಇಲ್ಲಿಗೆ ಬರಿಸಿ ಗೌರವಿಸಿದುದು ಕೇವಲ ಭಾಷಾ ಮಾತೆಯ ಪೂರ್ಣಾನುಗ್ರಹವಲ್ಲದೆ ನನ್ನ ಯೋಗ್ಯತೆಯಿಂದ ಈ ಮನ್ನಣೆ ನನಗೆ ದೊರೆತಿಲ್ಲವೆಂದು ತಿಳಿದಿರುವೆನು. ಆದುದರಿಂದ ಈ ಅಚಾತುರ್ಯದ ಭಾಷಣದಲ್ಲಿರುವ ದೋಷಗಳನ್ನು ಲೆಕ್ಕಿಸದೆ ಸೈರಣೆಯಿಂದ ಈವರೆಗೆ ಈ ಅಲ್ಪಮತಿಯ ಜಲ್ಪವನ್ನು ಲಾಲಿಸಿ ಕೇಳಿದುದಕ್ಕೆ ತಮ್ಮೆಲ್ಲರಿಗೂ ಸಹಸ್ರ ವಂದನೆಗಳು.

ಇನ್ನು ಯಥೋಚಿತವಾಗಿ ಸಮ್ಮೇಳನದ ಕಾರ್ಯಕ್ರಮಗಳನ್ನು ನಡೆಯಿಸಿ ಕನ್ನಡ ಸಾಹಿತ್ಯಾಭಿವೃದ್ಧಿಗಾದಷ್ಟು ಸಹಕಾರವನ್ನು ನಡೆದು ಸುಕ್ಷೇಮಿಗಳಾಗಿ ನಿಮ್ಮ ನಿಮ್ಮ ನಾಡುಗಳಿಗೂ ಬೀಡುಗಳಿಗೂ ತೆರಳಿ ದೇಶ ಭಾಷಾ ವಾತ್ಸಲ್ಯ ರತ್ನಗಳಂತೆ ಕನ್ನಡ ದೇಶದಲ್ಲಿ ಧರ್ಮಪ್ರವೃತ್ತಿಯಲ್ಲಿ ಸುಖವಾಗಿರಬೇಕೆಂಬ ನನ್ನ ಪ್ರಾರ್ಥನೆಯನ್ನು ಸಫಲವಾಗುವಂತೆ ಭಗವಂತನನ್ನು ಪ್ರಾರ್ಥಿಸಿ ಶ್ರೀಮನ್ಮಹಾರಾಜರವರಿಗೆ ಮಂಗಳವಾಗಲೆಂದು ಹಾರೈಸುವ ಪದ್ಯಗಳನ್ನು ಓದಿ ನನ್ನ ಭಾಷಣವನ್ನು ನಿಲ್ಲಿಸುವೆನು.

ಧರೆಯುಂ ಶ್ರೀಕೃಷ್ಣ ಮಹೀ।
ಶ್ವರನಾಳ್ಗೆಂದುಂ ನೆಗಳ್ಗೆ ಕನ್ನಡಿಗರ್ಗೆ ॥
ಸಿರಿ ಮೆಯ್ಸಿರಿಗಳ್ ಬೆಳ್ಕೆ।
ಕ್ಕರಿಗರೊಳಂ ನೆಗಳ್ಗೆ ಕಲೆಗಳೆನಿತೊಳವನಿತುಂ ॥ ೧ ॥

ಆಯುಮನಾರೋಗ್ಯಮನೊಂ।
ದಾಯತಿಯಿಂ ತವದನಂತ ಶುಭ ಸಂತಾನ ॥
ಶ್ರೀಯುಂ ಶ್ರೀಕೃಷ್ಣಮಹಾ।
ರಾಯಂಗೊಲ್ದೀಗೆ ಯದುಗಿರೀಶ್ವರನೆಂದುಂ ॥ ೨ ॥

ಶ್ರೀ ನಾರೀ ಪತಿ ಮಾನಸೋದ್ಭವ ಹರಂ ಶ್ರೀಮಜ್ಜಿನಾಧೀಶ್ವರಂ।
ನಾನಾ ಭಕ್ತ ವಿತಾನಮಂ ಪೊರೆದವೋಲ್ ಕರ್ಣಾಟ ಸಾಮ್ರಾಜ್ಯ ಸಂ ॥
ತಾನ ಶ್ರೀ ಪುರುಷೋತ್ತಮರ್ಗೆ ವಿಲಸಚ್ಚಾಮೇಂದ್ರ ಪುತ್ರರ್ಗೆ ಲ।
ಕ್ಷ್ಮೀನಾಥರ್ ಪಡುಗೆಯ್ಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ ॥ ೩ ॥

ಯದು ವಂಶಾಂಬುಧಿ ಚಂದ್ರಮರ್ಗೆ ಪರಭೂಭೃದ್ಗೋತ್ರ ವಜ್ರಾಯುಧ।
ಗರ್ದಯಕ್ಷತ್ರಧರ ಭಾಸ್ಕರರ್ಗೆ ವಿಲಸತ್ಕರ್ಣಾಟ ಸೀಮಂತಿನೀ ॥
ಸದನಾಂಭೋರುಹ ನಾಳ ದಂಡ ಸುತ ಚಾಮೋರ್ವೀಶ ಪುತ್ರರ್ಗೆ ಸಂ।
ಮುದದಿಂ ಶ್ರೀಧರನೀಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ ॥ ೪ ॥

ಪದೆಪಿಂ ತನ್ನರರಾಯರಾ ನೆಗಳ್ದ ಗಂಗಕ್ಷತ್ರಧರರ್ ಮನ್ನೆ ಖೇ।
ಡದ ಭೂಪರ್ ಪೊಲಕೇಶಿ ವಂಶದರಸರ್ ಬಲ್ಲಾಳ ಭೂಪಾಳರಂ ॥
ಕದ ಮೈಸೂರೊಡೆಯರ್ಕಳೀಗೆ ವಿಲಸತ್ಕರ್ಣಾಟ ಸಾಮ್ರಾಜ್ಯ ಸಂ।
ಪದ ಲಕ್ಷ್ಮೀನಿಳಯರ್ಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ ॥ ೫ ॥

ವರ ಗೋದಾವರಿಯಿಂ ಕವೇರ ತನಯಾ ತೀರಂಬರಂ ತಮ್ಮ ದೋಃ।
ಪರಿಘಕ್ಕುಂಡಿಗೆ ಸಾಧ್ಯಮೆಂದಿನಿಪಿನಂ ಕರ್ಣಾಟ ಭೂಮಂಡಲಂ ॥
ಪರಮಕ್ಷತ್ರಧರ ಸಾರ್ವಭೌಮ ತಿಲಕರ್ ಚಾಮೇಂದ್ರ ಪುತ್ರರ್ಗೆ ಸಾ।
ದರದಿಂದಾವಗಮೀಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ ॥ ೬ ॥

ವಿನತಾನಂದನನಂಜನಾ ತನಯನಾ ಸೂರ್ಯಾತ್ಮಜಂ ಧರ್ಮ ಪು।
ತ್ರನನಂತಂ ಗಿರಿಜಾ ಸುತಂ ಮನಸಿಜಂ ದೇವೇಂದ್ರ ಪುತ್ರಂ ಪ್ರಭಂ ॥
ಜನ ಪುತ್ರಂ ಗುಣಗಳ್ಗರೆಂದಿವರ್ಗೆ ತಾಂ ಮುಂ ಕೊಟ್ಟು ಪಾಲಂ ಬೆಡಂ।
ಗಿನ ರಾಜರ್ಗೊಸೆದೀಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ ॥ ೭ ॥

ನಾರಾಯಣ ಕವಿಯ ಉತ್ತರಕಾಂಡ ರಾಮಾಯಣ

ಶ್ರೀಮದಮಿತ ಗುಣಾಭಿರಾಮ ರ।
ಮಾ ಮನೋಹರ ಮೂರ್ತಿ ಕಮಲಜ।
ಕಾಮಹರ ಮುಖ ದೇವ ಹೃದಯಾಂಭೋಜ ದಿನರಾಜ ॥
ಸಾಮಗಾನಪ್ರೇಮ ತಾರಕ।
ರಾಮ ಮಂತ್ರಾತ್ಮಕನು ರಘುಕುಲ।
ರಾಮ ಸಲಹುಗೆ ಸಕಲ ಲೋಕವನೊಲಿದು ಕರುಣದಲಿ ॥

ಸನ್ಮಾನ್ಯ ಅಧ್ಯಕ್ಷರೇ, ಭಾಷಾಭಿಮಾನಿಗಳಾದ ಮಹಾಸಭ್ಯರೆ,

ನಾನು ಉಪನ್ಯಾಸಕ್ಕಾಗಿ ಎತ್ತಿಕೊಂಡಿರುವ ಉತ್ತರರಾಮ ಕಥೆ, ಅಥವಾ ಉತ್ತರಕಾಂಡ ರಾಮಾಯಣವು ಒಂದು ಪುರಾತನ ಕಾವ್ಯವು. ಅದು ಹಲವು ವರ್ಷಗಳಿಂದ ಅಜ್ಞಾತ ವಾಸದಲ್ಲಿಯೇ ಇದ್ದಿತೆನ್ನಬಹುದು. ನಮ್ಮ ಪ್ರಾಂತದಲ್ಲಿ ಮಾತ್ರ ಅದರ ಕೆಲವು ಅಭಿಮಾನಿಗಳು ಮಳೆಗಾಲದಲ್ಲಿ ಅದನ್ನು ಅಲ್ಲಲ್ಲಿ ವಾಚಿಸುತ್ತಿದ್ದು ಅದನ್ನು ಕಾಲನ ಬಾಯಿಯಿಂದ ತಪ್ಪಿಸಿದರೆಂದು ಕಾಣುತ್ತದೆ. ಅದರ ಒಂದು ಪ್ರತಿ ೧೯೩೩ರಲ್ಲಿ ನನ್ನ ಪರಮ ಮಿತ್ರರಾದ ಮತ್ತು ಈಗ ಪುತ್ತೂರಿನ 'ಸಹಕಾರಿ' ವಾರಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಮಂಜೇಶ್ವರ ಅನಂತರಾಯರ ಮನೆಯ ಪುರಾತನ ಪುಸ್ತಕ ಭಂಡಾರದಲ್ಲಿ ದೊರೆಯಿತು. ಅದನ್ನು ಅವರ ಮುತ್ತಾತಂದಿರಾದ ಕೇಶವ ಶ್ಯಾನುಭಾಗರು ಐಗಳು ಕೇಶವ ಪೈ ಎಂಬವರಿಂದ ಪ್ಲವನಾಮ ಸಂವತ್ಸರದಲ್ಲಿ ಬರೆಯಿಸಿದರೆಂದು ಅದರಿಂದಲೇ ತಿಳಿದು ಬಂದಿತು. ಕವಿ ತನ್ನ ಗ್ರಂಥಕ್ಕೆ 'ಉತ್ತರ ರಾಮ ಕಥೆ' ಎಂಬ ಹೆಸರನ್ನಿಟ್ಟರೂ ಪ್ರಚಾರದಲ್ಲಿ ಅದಕ್ಕೆ ಉತ್ತರಕಾಂಡ ರಾಮಾಯಣವೆಂಬ ಹೆಸರು ಇದ್ದಂತೆ ತಿಳಿದು ಬರುತ್ತದೆ.

ಅಜ್ಞಾದ ತಿರುಮಲೆ ವೈದ್ಯರ ಉತ್ತರ ರಾಮಾಯಣವೂ ಈ ಉತ್ತರಕಾಂಡ ರಾಮಾಯಣವೂ ಭಿನ್ನ ಗ್ರಂಥಗಳೆಂದು ಎರಡೂ ಗ್ರಂಥಗಳ ಗಾತ್ರದಿಂದಲೇ ತಿಳಿಯಲಾಯಿತು. ಅಜ್ಞಾದ ರಾಮಾಯಣಕ್ಕೆ ಸಂಧಿಗಳು ೨೦; ಪದ್ಯ ಸಂಖ್ಯೆ ೧೦೧೯. ಈ ರಾಮಾಯಣಕ್ಕೆ ಸಂಧಿಗಳು ೪೪; ಪದ್ಯ ಸಂಖ್ಯೆ ೨೦೩೬. ಎಂದರೆ ಸರಿ ಎರಡು ಪಾಲಷ್ಟು ಈ ಗ್ರಂಥವು ದೊಡ್ಡದಾಯಿತು. ಕವಿಯ ಹೆಸರು ನಾರಾಯಣನೆಂದು ಪೀಠಿಕಾ ಸಂಧಿಯಿಂದ ತಿಳಿದುಕೊಂಡು ಈ ಕವಿಯನ್ನು ಕುರಿತು ಕವಿಚರಿತೆಯಲ್ಲಿ ಏನು ಉಕ್ತವಾಗಿದೆ ಎಂದು ಕುತೂಹಲದಿಂದ ನೋಡುವಾಗ ಅದರಲ್ಲಿ ಯಾವ ಪ್ರಸ್ತಾಪವೂ ಇಲ್ಲದುದನ್ನು ಕಂಡು ಸಹಜವಾಗಿ ಆಶ್ಚರ್ಯವಾಯಿತು. ಏತಕ್ಕೆಂದರೆ, ಪ್ರಾಕ್ತನ ವಿಮರ್ಶವಿಚಕ್ಷಣರ

ದೃಷ್ಟಿಗೆ ಗೋಚರವಾಗದ ಒಂದು ಕಾವ್ಯವು ಇದ್ದೀತೆಂದು ನಾನು ತಿಳಿದಿರಲಿಲ್ಲ. ಆದುದರಿಂದ ಅದರೊಳಗಿನ ಕೆಲವು ಪದಗಳನ್ನು ಬರೆದು ತೆಗೆದು ಅವರ ಅವಗಾಹನೆಗೆ ಅಭಿಪ್ರಾಯದ ಬಗ್ಗೆ ಕಳುಹಿಸಿಕೊಟ್ಟಾಗ ಅವರು ಅದನ್ನು ಪ್ರೀತಿಯಿಂದ ಗಮನಿಸಿ ಈ ಕೆಳಗಿನ ಅಭಿಪ್ರಾಯವನ್ನು ಅಪ್ಪಣೆ ಕೊಡಿಸಿದರು:—

"ತಾವು ಹೇಳಿದ ಉತ್ತರ ರಾಮಾಯಣವು ನನ್ನ ದೃಷ್ಟಿಗೆ ಬಿದ್ದಿಲ್ಲ. ಹೊಸ ಗ್ರಂಥವಾಗಿರಬೇಕು. ಇದರಿಂದ ಪದ್ಯಗಳನ್ನು ಬರೆದು ಕಳುಹಿಸಿದುದು ಬಹಳ ಉಪಕಾರವಾಯಿತು. ಈ ಕವಿ (ನಾರಾಯಣನು) ಕುಮಾರ ವ್ಯಾಸನನ್ನು (ಸು. ೧೪೫೦) ಸ್ತುತಿಸುವುದರಿಂದ ಅವನ ಕಾಲಕ್ಕೆ ಈಚೆಯವನು ಎಂಬುದು ಸ್ಪಷ್ಟವಾಗಿದೆ. ಇವನ ಇಷ್ಟದೈವವು ಅಹೋಬಲ ನಾರಸಿಂಹ ದೇವರೆಂಬುದರಿಂದ ಈತನು ಆ ಪ್ರಾಂತದವನಿರಬಹುದೋ ಏನೋ ತಿಳಿಯದು. ವಿಷ್ಣುಸ್ತವಾನಂತರ ಆಂಜನೇಯ ಸ್ತುತಿಯಿರುವುದರಿಂದ ಮಾಧ್ವ ಕವಿಯೋ ಎಂಬ ಊಹೆಗೆ ಅವಕಾಶವಿದೆ. ಭಾನುಕವಿಯ ಮಗ ತಿಮ್ಮಣಾರ್ಯನಲ್ಲಿ ಓದಿದಂತೆ ಹೇಳುತ್ತಾನೆ. ಸಂಸ್ಕೃತದಲ್ಲಿ ಒಬ್ಬ ಭಾನುಕವಿ ರಸಮಂಜರಿಯನ್ನು ಬರೆದಿದ್ದಾನೆ. ಇದಕ್ಕೆ ನಾಗೇಶಭಟ್ಟನ (ಸು. ೧೭೫೦) ವ್ಯಾಖ್ಯಾನವಿದೆ. ಈ ಭಾನುಕವಿಯ ಕಾಲ ಚೆನ್ನಾಗಿ ತಿಳಿದಿಲ್ಲ. ನಮ್ಮ ನಾರಾಯಣನ ಕಾಲವು ಸು. ೧೬೦೦ ಆಗಿರಬಹುದೆಂದು ತೋರುತ್ತದೆ."

ಈ ಗ್ರಂಥದ ಪರಿಚಯವು ಜನಸಮುದಾಯಕ್ಕೆ ಸ್ವಲ್ಪ ಸ್ವಲ್ಪವಾಗಿ ಆಗುತ್ತಲೇ ಇದ್ದಿತು. ಅದರ ಒಂದು ಸಂಧಿ 'ಶ್ರೀರಾಮನ ನ್ಯಾಯ ಪರಿಪಾಲನ' ಎಂಬ ಹೆಸರಿನಿಂದ ೧೯೩೫ರಲ್ಲಿ 'ಸಹಕಾರಿ'ಯಲ್ಲಿ ಪ್ರಕಟವಾಗಿದೆ. ಅದೇ ಭಾಗವು ೧೯೩೪-೩೫ನೆಯ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪದ್ಯ ಪಾಠದ ಪುಸ್ತಕದಲ್ಲಿಯೂ ಅಚ್ಚಾಗಿ ವಿದ್ಯಾರ್ಥಿಗಳಿಗೆ ಪರಿಚಯವಾಗಿದೆ. 'ಕಾವ್ಯ ರತ್ನಾಕರ' ಎಂಬ ಒಂದು ಚಿಕ್ಕ ಕಾವ್ಯ ಮಾಲೆಯಲ್ಲಿ 'ವಸಂತ'ನೆಂಬ ನಾಮದಿಂದ ಕೆಲವು ಪದ್ಯಗಳು ಬಾಲಕರ ದೃಷ್ಟಿಗೆ ಬಿದ್ದಿರುವುವು. ಇದು ಷಟ್ಪದೀ ಕಾವ್ಯಗಳಲ್ಲಿ ಒಂದು ಉತ್ತಮ ಗ್ರಂಥವಾದುದರಿಂದ ಕನ್ನಡಿಗರಿಗೆ ಇದರ ಪೂರ್ಣ ಪರಿಚಯವಾಗುವಂತೆ ಇದನ್ನು ಅಚ್ಚು ಹಾಕಿಸಿ ಪ್ರಕಾಶಪಡಿಸುವ ಬಗ್ಗೆ ಬೇರೆ ಪ್ರತಿಗಳನ್ನು ಸಂಪಾದಿಸುವುದು ವಗೈರೆ ಪ್ರಯತ್ನಗಳು ನಡೆಯುತ್ತಿವೆ. ಅದಕ್ಕೆ ಮೊದಲು ಭಾಷಾಭಿಮಾನಿಗಳಾದ ತಮಗೆ ಈ ಕಾವ್ಯದ ಸ್ವಲ್ಪ ಅನುಭವವನ್ನುಂಟು ಮಾಡುವ ಉದ್ದೇಶದಿಂದ ಈ ಉಪನ್ಯಾಸವನ್ನು ನಾನು ತಮ್ಮ ಮುಂದೆ ಓದುತ್ತಿದ್ದೇನೆ. ವಿದ್ವಾಂಸರಾದ ತಾವು ನನ್ನ ನ್ಯೂನತೆಗಳ ಕಡೆಗೆ ಲಕ್ಷ್ಯಕೊಡದೆ ಕಾವ್ಯದ ಯೋಗ್ಯತೆಯನ್ನೇ ಪರಾಂಬರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಕವಿ ಚರಿತೆ

ಈ ಗ್ರಂಥವನ್ನು ಬರೆದ ಕವಿ ನಾರಾಯಣನೆಂಬ ಒಬ್ಬ ಬ್ರಾಹ್ಮಣನು. 'ಈ ಕೃತಿಗೆ ಅಹೋಬಿಲ ನಾರಸಿಂಹನೆ ಪತಿ' ಎಂದು ತನ್ನ ಕಾವ್ಯವನ್ನು [illegible]

ಬೆಳ್ಳಿಯಲ್ಲಿ ಸುಪ್ರಸಿದ್ಧವಾದ ಅಹೋಬಲವೆಂಬ ಪುಣ್ಯ ಕ್ಷೇತ್ರದ ನಾರಸಿಂಹ ದೇವರಿಗೆ ನಮಸ್ಕರಿಸುವುದರಿಂದ, ಆತನು ಆ ಭಾಗದವನೆಂದು ಅನುಮಾನಿಸ ಬಹುದು. ಅಹೋಬಲವು ಮಾಧ್ವರ ಧರ್ಮಕ್ಷೇತ್ರವೆಂದು ಪ್ರಸಿದ್ಧವಾಗಿರು ವುದಲ್ಲದೆ ಕವಿಯೂ ರಾಮಸ್ತುತಿರೂಪದಿಂದ—ತಾನು ಪ್ರಬಂಧದಲ್ಲಿ ಹಾಡಿದ ಪದ್ಯದಿಂದ—ವಿಷ್ಣು ಸ್ತುತಿಯನ್ನು ಮಾಡಿದ ಬಳಿಕ ಹನುಮಂತನ ಧ್ಯಾನ ಮಾಡಿರುವುದರಿಂದ ಆತನು ಮಾಧ್ವ ಬ್ರಾಹ್ಮಣನೆಂದು ಧಾರಾಳವಾಗಿ ಹೇಳ ಬಹುದು.

ಈತನ ಕಾಲವನ್ನು ಕವಿಚರಿತ್ರಕಾರರು ೧೭೦೦ ಎಂದು ಅಭಿಪ್ರಾಯ ಪಟ್ಟರೂ, ಕೆಲವು ಆಧಾರಗಳಿಂದಲೂ ಊಹಾಪೋಹಗಳಿಂದಲೂ ಅದು ಸಾಧಾರಣ ೧೬೫೦ ಎಂದು ನಿರ್ಧರಿಸಬಹುದು. ಅವರ ಅಭಿಪ್ರಾಯದಂತೆ ಕುಮಾರ ವ್ಯಾಸ ನನ್ನು ಸ್ತುತಿಸಿರುವುದರಿಂದ ಆತನಿಂದ ಈಚೆಯವನು ಎಂದರೆ ೧೪೫೦ಕ್ಕೆ ಈಚೆಯವನೆಂಬುದು ಸ್ಪಷ್ಟವಾಯಿತು. ಆದಿ ಕವಿಯಾದ ವಾಲ್ಮೀಕಿಯನ್ನು ಮೊದಲು ಸ್ತುತಿಸಿ, ಆಮೇಲೆ ಮಹಾಭಾರತ ಕರ್ತೃವಾದ ವೇದವ್ಯಾಸರನ್ನು ವಂದಿಸಿ, ತದನಂತರ ಕುಮಾರ ವ್ಯಾಸನನ್ನು ಸ್ತುತಿಸಿ, ಕುಮಾರ ವಾಲ್ಮೀಕಿಯ ಮಾತನ್ನೇ ಎತ್ತದಿರುವುದರಿಂದ ನಾರಾಯಣ ಕವಿ ಆತನಿಗೆ ಪೂರ್ವದವನು ಅಥವಾ ಸಮಕಾಲಿಕನಾಗಿರಬಹುದೆಂದು ಊಹಿಸಬಹುದಾಗಿದೆ. ಏತಕ್ಕೆಂದರೆ, ಆತನಿಗೆ ಈಚೆಯವನಾದರೆ ಆತನಿಗೂ ಕ್ರಮವಾಗಿ ನಮಸ್ಕಾರ ಮಾಡುತ್ತಿದ್ದನು. ನಾರಾಯಣನು ಆತನಿಗೆ ಮೊದಲೇ ಇದ್ದನೆಂದು ಪೂರ್ವಪಕ್ಷ ಮಾಡಿದರೆ ರಾಮಾಯಣದ ಉತ್ತರ ಕಥೆಯನ್ನು ಬರೆಯುವ ಬದಲಾಗಿ ಪೂರ್ವ ಕಥೆಯನ್ನೇ ಏತಕ್ಕೆ ಬರೆಯಬಾರದಿತ್ತೆಂಬ ಪ್ರಶ್ನೆ ಬರುವುದು. ಆತನು ಕಥೆಗೆ ಕೈಹಾಕು ವಾಗ ಪೂರ್ವ ಕಥೆ ಮತ್ತೊಬ್ಬನಿಂದ ಆಗಲೇ ಬರೆಯಲ್ಪಟ್ಟಿದ್ದಿತೆಂದು ಗ್ರಹಿಸು ವುದು ಯುಕ್ತಿಯುಕ್ತವಾಗಿದೆ. ಆದುದರಿಂದ ಇವರಿಬ್ಬರೂ ಸಮಕಾಲಿಕರೆಂಬ ಪಕ್ಷವೇ ಬಲಪಡುವುದು.

ಇದರೊಂದಿಗೆ ಇನ್ನೊಂದು ಸಂಗತಿಯನ್ನು ವಿಚಾರಿಸಬಹುದು. 'ಭಾನು ಕವಿ ಸತ್ಕವಿ ಸರೋರುಹ|ಭಾನು ತತ್ಸುತ ತಿಮ್ಮಣಾರ್ಯನು......ಆ ಸಕಲ ಗುಣನಿಧಿಯೊಳೋದಿದ ನಾನು' ಎಂದು ಕವಿ ಆಡಿದ ಮಾತು ಈತನ ಕಾಲ ನಿರ್ಣ ಯಕ್ಕೆ ಬಹಳ ಸಹಾಯವಾಗುವುದು. ಕವಿಚರಿತ್ರಕಾರರು ಅವಸರದಿಂದ ಅಭಿ ಪ್ರಾಯವನ್ನು ಕೊಡುವಾಗ ಈ ಭಾಗವನ್ನು ಚೆನ್ನಾಗಿ ಪರಾಂಬರಿಸಲಿಲ್ಲವೆಂದು ನಾನು ತಿಳಿಯುತ್ತೇನೆ. ಈ ಭಾನು ಕವಿ ಕೃಷ್ಣರಾಜ ಭಾರತವೆಂದು ಪ್ರಖ್ಯಾತಿ ಯಿರುವ ಉತ್ತರ ಭಾರತ ಕಥೆಯನ್ನು ಬರೆದ ತಿಮ್ಮಣ್ಣ ಕವಿಯ ಜನಕನು. ಆ ತಿಮ್ಮಣ್ಣಾರ್ಯನಲ್ಲಿ ಕವಿ ಓದಿದವನೆಂದರೆ ಆ ಕವಿಯ ಪ್ರೌಢಿಯ ಕಾಲದಲ್ಲಿ ಇವನಿಗೆ ಸಾಧಾರಣ ೨೦ರ ಒಳಗೆ ಪ್ರಾಯವಿದ್ದಿತೆಂದು ಊಹಿಸಬಹುದಾಗಿದೆ. ಕೃಷ್ಣರಾಜ ಭಾರತವು ವಿಜಯನಗರದ ಕೃಷ್ಣದೇವರಾಯನ (೧೫೦೯-೧೫೨೯)

ಕಾಲದಲ್ಲಿ ಆದುದರಿಂದ ಕವಿಯ ಕಾಲ ಸು. ೧೫೧೦ ಎಂದು ಕವಿಚರಿತ್ರಕಾರರು ನಿರ್ಧರಿಸಿರುವರು. ಆದುದರಿಂದ ಆ ಕವಿಯ ಶಿಷ್ಯನಾಗಿ ನಾರಾಯಣನು ಸು. ೧೫೪೦ರಲ್ಲಿದ್ದನೆಂದು ತಿಳಿಯುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಗುರುವು ಉತ್ತರ ಭಾರತ ಕಥೆಯನ್ನು ಬರೆದು ಪ್ರಸಿದ್ಧಿಗೆ ಬಂದಂತೆ ತಾನು ಉತ್ತರ ರಾಮ ಕಥೆಯನ್ನು ರಚಿಸಿ ಕೀರ್ತಿ ಪಡೆಯಬೇಕೆಂದು ಕವಿ ಇದನ್ನು ಬರೆದನೆಂದೂ ಗ್ರಹಿಸ ಬಹುದಾಗಿದೆ. ತೊರವೆ ರಾಮಾಯಣ ಬರೆದ ಕುಮಾರ ವಾಲ್ಮೀಕಿಯ ಕಾಲವು ಸು. ೧೫೦೦ ಎಂದು ಕವಿಚರಿತ್ರೆಯಿಂದ ತಿಳಿಯಬಹುದು. ಆದುದರಿಂದ ಇವ ರಿಬ್ಬರೂ ತಮ್ಮ ಜೀವಮಾನದ ಸ್ವಲ್ಪ ಭಾಗದಲ್ಲಿಯಾದರೂ ಏಕಕಾಲದಲ್ಲಿರು ವುದಕ್ಕೆ ಸಾಧ್ಯವಿದೆ. ಈ ಕಾರಣಗಳಿಂದ ಕವಿಯ ಕಾಲವು ೧೫೪೦ ಎಂದು ನಾನು ಅಭಿಪ್ರಾಯಪಡುತ್ತೇನೆ.

ಕವಿಯ ಶೈಲಿ

ಕವಿ ಸರಸ್ವತಿಯ ಕಟಾಕ್ಷವನ್ನು ಬೇಡುವಾಗ—

ಮನದೊಳಗೆ ಬೇರ್ಪರಿದು ಬುದ್ಧಿಯೊ।
ಳನುನಯದಿ ಕುಡಿವರಿದು ಹಮ್ಮಿನ।
ಘನತೆಯೊಳು ಪಲ್ಲವಿತ ಕುಸುಮಿತವಾಗಿ ಚಿತ್ತದೊಳು॥
ಎನಗೆ ಕವಿತಾ ಕಲ್ಪಲತೆಯನು।
ದಿನವು ಫಲಿಯಿಸುವಂತೆ ಸಲಹೌ।
ಜನನಿ ಶಾರದೆ ನಿನ್ನ ಕರುಣಾಮೃತದ ಮಳೆದಳೆದು॥

ಎಂದು ಆಡಿದ ಮೃದು ಮಧುರವಾದ ಪದಗಳಿಗೆ ವಾಣಿ ತನ್ನ ಕೈಯ ವೀಣೆ ಯನ್ನು ನಿಲಿಸಿ ಮನಮೆಚ್ಚಿ ಆತನ ಕೈಪಿಡಿದು ನುಡಿಸಿದಳೆಂದು ನಾನು ತಿಳಿಯುತ್ತೇನೆ. ನಿಜವಾಗಿಯೂ ಆತನ ಇಚ್ಛೆಯಂತೆ ಆತನ ಚಿತ್ತದಲ್ಲಿ ಕವಿತಾ ಲತೆ ಆ ಶಾರದಾ ದೇವಿಯ ಕಟಾಕ್ಷದಿಂದ ಸದಾ ಫಲಿಸುತ್ತಿದ್ದಿತೆಂಬುದು ಕಾವ್ಯವನ್ನು ಆಮೂ ಲಾಗ್ರವಾಗಿ ಓದಿದಾಗ ಸಮಾಧಾನವಾದೀತು. 'ಕಾಳಿದಾಸಾದಿಗಳ ವರ ಸತ್ಕೀರ್ತಿ ಸುಧೆ ನಾಲಗೆಯೊಳಿರೆ ತನಗರಿದೆ ಮಧುರೋಕ್ತಿಗಳನೆಸಗುವುದು॥' ಎಂದು ಕವಿ ವಿಚಾರಿಸಿದಂತೆ, ಕಿವಿಗಿಂಪಾಗುವಂತೆ, ಹೃದಯಕ್ಕೆ ತಂಪಾಗುವಂತೆ ಸರಸವಾಗಿ ಸರಳವಾಗಿ ಆತನಿಗೆ ಬರೆಯುವುದಕ್ಕೆ ಅವ ಕಷ್ಟವೂ ಆದಂತೆ ಕಾಣಿ ಸುವುದಿಲ್ಲ. ಆತನ ಮಾತು ನುಣುಪಾಗಿದೆ; ಭಾವನೆಗಳು ಹೊಸತಾಗಿವೆ; ಧೋರಣೆ ನದಿಯ ನೀರಿನಂತೆ ಯಾವ ತಡೆಯೂ ಇಲ್ಲದೆ ಹರಿಯುವುದು; ರಸಗಳು ಅಲ್ಲಲ್ಲಿ ತುಂಬಿ ತುಳುಕಾಡುವುವು; ಅಲಂಕಾರಗಳು ಸಮಯೋಚಿತವಾಗಿವೆ. ಅಮೇಲೆ ವಿಷಯವೂ ಅಮೃತಪ್ರಾಯವಾದ ರಾಮಾಯಣವು. ಆದುದರಿಂದ 'ವೀರ ರಘುವರನ ಗುಣಗಳನುಗುಣವಾಗೆ ನಾರಾಯಣ ಕವಿಯ ವಾಗ್ರತ್ನ ಗಳಿಗಾಗಣನೆಯುಳ್ಳುದು ಸುಕೃತಗಳ ಮಾಣಿಪನು ಜಗದೊಳಗೆ॥' ಎಂಬ ನುಡಿಯ ಸತ್ಯಾಂಶದಲ್ಲಿ ಸಂದೇಹವಿರದು. ಮಾತ್ರವಲ್ಲ, ಕುಮಾರವ್ಯಾಸನನ್ನು ಸ್ಮರಿಸ,

ವಾಗ ಆತನನ್ನು 'ಸುಧಾ ಮಧುರ ಕರ್ನಾಟ ಭಾಷಾ ಭಾಮಿನೀಪತಿ' ಎಂದು ಸಂಬೋಧಿಸಿ ಆಡಿದ ಮಾತು ಇವನಿಗಾದರೂ ಅಷ್ಟೇ ಚೆನ್ನಾಗಿ ಒಪ್ಪುವುದು.

ಕುಮಾರ ವ್ಯಾಸನ ಭಾರತದ ಮತ್ತು ಕುಮಾರ ವಾಲ್ಮೀಕಿಯ ರಾಮಾಯಣದ ಪರಿಚಯವುಳ್ಳ ರಸಿಕರು ಈ ಗ್ರಂಥವನ್ನು ಓದಿದಾಗ ಆ ಎರಡು ಸದ್ಗ್ರಂಥಗಳ ಸಾಲಿನಲ್ಲಿಯೇ ಇದಕ್ಕೆ ಸ್ಥಾನ ಕೊಡುವುದಲ್ಲದೆ ಮುಖ್ಯವಾಗಿ ವರ್ಣನಾ ಭಾಗದಲ್ಲಿ ಆ ಕವಿಗಳನ್ನು ಮೀರಿರುವನೆಂದು ಒಪ್ಪದಿರಲಾರರು. ಕಾವ್ಯ ದೃಷ್ಟಿಯಿಂದ ಕುಮಾರ ವ್ಯಾಸ ಭಾರತವನ್ನು ನೋಡಿದರೆ ಅದರಷ್ಟು ಉನ್ನತ ಪದವಿಯಲ್ಲಿರಬಹುದಾದ ಬೇರೆ ಭಾಮಿನೀ ಷಟ್ಪದೀ ಕಾವ್ಯಗಳೇ ಇಲ್ಲವೆನ್ನಬಹುದು. ಆದರೆ ವಿಚಾರಿಗಳಾದ ವಿದ್ವಜ್ಜನರು ಅಲಂಕಾರಾದಿಗಳನ್ನು ಪರೀಕ್ಷಿಸ ಹತ್ತಿದರೆ ಹಲವು ಕಡೆ ಅವುಗಳ ಅವಯವಗಳೇ ನಷ್ಟವಾಗಿದ್ದು ನ್ಯೂನತೆಯೇ ಕಾಣಬರುವವು. ಹೀಗಾಗುವುದಕ್ಕೆ ಸಾವಿರಾರು ಜನರ ಕೈತಪ್ಪುಗಳು, ಅಚ್ಚಿನ ತಪ್ಪುಗಳೇ ಬಹುತರವಾಗಿ ಕಾರಣವಾಗಿರಬಹುದೆಂದು ಇಟ್ಟುಕೊಂಡರೂ ಹಲವು ಕಡೆ 'ಪದವಿಟ್ಟಳಿಪದೊಂದಗ್ಗಳಿಕೆ'ಗೆ ಬಲಿ ಬಿದ್ದು ಕವಿಯೇ ಆ ರೀತಿ ಬರೆದು ಓದಿರಬಹುದೆಂದು ಗ್ರಹಿಸುವುದಕ್ಕೆ ಅವಕಾಶವಿದೆ. ಕುಮಾರ ವಾಲ್ಮೀಕಿಯ ರಾಮಾಯಣದಲ್ಲಿ ಅಸದೃಶವಾದ ಪದಮೈತ್ರಿಯೂ ವಾಕ್ಯಪಾಕವೂ ಹೃದಯಂಗಮವಾದ ಕಥಾನಿರೂಪಣ ಕ್ರಮವೂ ವಾಚಕರ ಮನಸ್ಸನ್ನು ಸೂರೆಮಾಡುವುದು; ಆದರೆ ವಿದ್ವಜ್ಜನರಿಗೆ ಆಹ್ಲಾದವನ್ನುಂಟುಮಾಡುವ ಶಬ್ದಾರ್ಥಾಲಂಕಾರಗಳ ಕಡೆಗೆ ಕವಿ ವಿಶೇಷ ಗಮನಕೊಡಲಿಲ್ಲವೆಂದು ವಿಚಾರ ದೃಷ್ಟಿಗೆ ಗೋಚರವಾಗುವುದು. ನಾರಾಯಣ ಕವಿಯ ಶಕ್ತಿ ಮುಖ್ಯವಾಗಿ ಸುಗಮವಾದ ಪದಗಳನ್ನು ಇಡುವುದರಲ್ಲಿಯೂ ರೂಪಕೋತ್ಪ್ರೇಕ್ಷಾದ್ಯಲಂಕಾರ ಪ್ರಯೋಗದಲ್ಲಿಯೂ ಸಮಯೋಚಿತ ವರ್ಣನೆಗಳಲ್ಲಿಯೂ ವಿವಿಧ ರಸೋತ್ಪಾದನೆಯಲ್ಲಿಯೂ ಅಧಿಕವಾಗಿ ಕಾಣುವುದರಿಂದ ಆ ಎರಡು ಕವಿಗಳ ಗುಣಗಳೂ ಒಂದೇ ಕಾವ್ಯದಲ್ಲಿ ಕೂಡಿದ್ದು ಕವಿ ಅವರಿಬ್ಬರನ್ನೂ ಪರಸ್ಪರ ಮೀರಿಸಿರುವನೆಂದು ನನ್ನ ಅಭಿಪ್ರಾಯವು.

ಆತ್ಮಾಭಿಮಾನವು ಅಧಿಕತರ ಹೋಹದಂತೆ ದೋಷಗಳ ಕಡೆಗೆ ಕಣ್ಣನ್ನು ಮುಚ್ಚಿ ಗುಣಗಳನ್ನೇ ಹೆಚ್ಚಾಗಿ ಕಾಣಿಸುವುದು ಸಹಜವಾದ ಕಾರಣ, ನಾನು ಕವಿಯನ್ನು ಅತಿಶಯವಾಗಿ ಹೊಗಳಿದೆನೆಂದು ತಾವು ತಿಳಿಯಬಾರದು. ತಿರುಮಲೆ ವೈದ್ಯನು ಬರೆದ ಉತ್ತರ ರಾಮಾಯಣವು ೧೦೦೦ ಪದ್ಯಗಳೊಳಗಾಗಿ ಮುಗಿದಾಗ ಅದೇ ಕಥೆಯನ್ನೊಳಕೊಂಡ ಈ ಕಾವ್ಯವು ೨೦೦೦ ಪದ್ಯ ಪ್ರಮಾಣವುಳ್ಳದೆಂಬ ಒಂದೇ ಅಂಶವನ್ನು ನೆನಪಿಗೆ ತಂದುಕೊಂಡರೆ ಈ ಕವಿಯ ಶಕ್ತಿ ವಿಶೇಷತರವಾದುದೆಂದು ಸಮಾಧಾನವಾದೀತು.

ಕಥಾ ಕ್ರಮ

ಕವಿ ಈ ಉತ್ತರ ರಾಮ ಕಥೆಯನ್ನು ಪೂರ್ವ ವಿಭಾಗ ಮತ್ತು ಉತ್ತರ ವಿಭಾಗ ಎಂಬ ಎರಡು ಭಾಗಗಳನ್ನಾಗಿ ಮಾಡಿರುವನು. ಪೂರ್ವ ವಿಭಾಗದಲ್ಲಿ

ಮಾಲಿ ಸುಮಾಲಿಗಳ ಜನನ, ಮಾಲಿ ಸಂಹಾರ, ರಾವಣ ಕುಂಭಕರ್ಣಾದಿಗಳ ಜನನ, ಮೇಘನಾದನ ಜನನ, ರಾವಣನು ಪುಷ್ಪಕ ವಿಮಾನವನ್ನು ಅಪಹರಿಸಿದುದು, ರಾವಣನು ರಜತಾದ್ರಿಯನ್ನು ಎತ್ತಿದುದು, ರಾವಣನಿಗೆ ವೇದವತಿಯ ಶಾಪ, ಅನರಣ್ಯ ಸಂಹಾರ, ರಾವಣನು ಕಾರ್ತವೀರ್ಯಾರ್ಜುನನೊಡನೆ ಸೋತುದು, ರಾವಣನು ವಾಲಿಯ ಕೈಗೆ ಸಿಕ್ಕಿದುದು, ಯಮನೊಡನೆ ಕಾಳೆಗ, ರಾವಣನು ವರುಣನ ಮಕ್ಕಳನ್ನು ಕೊಂದುದು, ರಾವಣನು ಬಲೀಂದ್ರನ ಪಟ್ಟಣಕ್ಕೆ ಹೋಗಿ ವಾಮನನನ್ನು ಕಂಡುದು, ರಾವಣನು ಸೂರ್ಯನನ್ನು ಗೆದ್ದುದು, ಚಂದ್ರನನ್ನು ಹಿಡಿದು ಸ್ತ್ರೀಯರನ್ನು ಬಂಧಿಸಿದುದು, ರಾವಣನು ರಂಭೆಯನ್ನು ಕೂಡಿ ನಳಕೂಬರನ ಶಾಪ ಹೊಂದಿದುದು, ದೇವೇಂದ್ರನೊಡನೆ ಕಾಳೆಗ ಮುಂತಾದ ವಿಷಯಗಳು ಕೂಡಿ ೨೨ ಸಂಧಿಗಳೂ, ೯೯೯ ಪದ್ಯಗಳೂ ಇವೆ. ಉತ್ತರ ವಿಭಾಗದಲ್ಲಿ—ಕಪಿಲ ಮೂರ್ತಿಯ ದರ್ಶನ, ಹನೂಮಂತನ ಜನನ, ವಾಲಿ ಸುಗ್ರೀವರ ಜನನ, ರಾವಣನಿಗೆ ಸನತ್ಕುಮಾರನ ತತ್ತ್ವೋಪದೇಶ, ರಾವಣನು ಶ್ವೇತ ದ್ವೀಪಕ್ಕೆ ಹೋದುದು, ಶ್ರೀರಾಮನು ಬಂಧು ಮಿತ್ರರನ್ನು ಊರಿಗೆ ಕಳುಹಿಸಿಕೊಟ್ಟುದು, ಸೀತಾ ಪರಿತ್ಯಾಗ, ನೃಗರಾಜನ ಕಥೆ, ನಾಯಿಗೆ ರಾಮದೇವರು ಮುಕ್ತಿಕೊಟ್ಟುದು, ಲವಣಾಸುರ ವಧ, ಶ್ರೀರಾಮನು ಮೃತ ಬ್ರಾಹ್ಮಣ ಪುತ್ರನನ್ನು ಬದುಕಿಸಿದುದು, ಉಲೂಕ ಗೃಧ್ರರ ಸಂವಾದ, ಶ್ವೇತಾಖ್ಯ ನೃಪನ ಕಥೆ, ದಂಡಕಾರಣ್ಯ ಕಥೆ, ವೃತ್ರಾಸುರ ಕಥೆ, ಚಂದ್ರಬುಧರ ಕಥೆ, ಅಶ್ವಮೇಧ, ಸೀತಾ ಪರಿಗ್ರಹ, ಶ್ರೀರಾಮ ರಾಜ್ಯ ಪರಿಪಾಲನ—ಇವುಗಳು ಕೂಡಿ ೨೨ ಸಂಧಿಗಳೂ ೧೦೩೭ ಪದ್ಯಗಳೂ ಇವೆ.

ಪ್ರತಿ ಸಂಧಿಯ ಪ್ರಥಮ ಪದ್ಯದಲ್ಲಿಯೂ ರಾಮನ ಗುಣಕಥನವೂ ವಿವಿಧ ಸಂಬೋಧನೆಗಳೂ ಸಂಧಿಯ ಅಂತ್ಯ ಪದ್ಯದಲ್ಲಿ ಬಹುತರವಾಗಿ 'ರಘು ಕುಲ ಸುಧಾಂಬುಧಿ ಚಂದ್ರ' ಎಂಬ ಮುದ್ರಿಕೆಯೂ ಇರುವುವು. ಸಂಧಿಗಳ ಆದಿಯ ಗುಣ ಕಥನರೂಪವಾದ ಸಂಬೋಧನೆಗಳು ಹೃದ್ಯವಾಗಿರುವುದರಿಂದ ಒಂದು ಸಂಧಿ ಮುಗಿದ ಮೇಲೆ ಕವಿ ತನ್ನ ರಾಮನಾಮ ಪ್ರೇಮವನ್ನು ಮುಂದೆಂತು ವಿಶದಗೊಳಿಸುವನೆಂಬುದನ್ನು ನೋಡಲು ವಾಚಕರು ಕುತೂಹಲದಿಂದ ಅದನ್ನು ಓದಿನೋಡುವರೆಂದು ನಾನು ಭಾವಿಸುತ್ತೇನೆ. ಅವುಗಳಲ್ಲಿ ಕೆಲವನ್ನು ತಮ್ಮ ಅವಗಾಹನೆ ಬಗ್ಗೆ ಇಲ್ಲಿ ಕೊಡುವೆನು:—

೧. ಸರಸಿರುಹಭವ ಮಂತ್ರ ಗಾನಾ|ಕ್ಷರ ಮನೋಹರ ಹಾರ ಮಧ್ಯ|
ಸ್ಫುರಿತ ನಾಯಕ ರತ್ನ ಮಂಗಳ ನಾಮ ರಘುರಾಮಾ|

೨. ಪರಮ ಪುಣ್ಯ ಜಿತಾಕ್ಷ ಪುಂಗವ|ತರು ನಿರಂತರ ಜೈತ್ರ ರಾಘವ|
ಧರಣಿಪತಿ……

೩. ಮಿತ್ರವಂಶ ಪವಿತ್ರ ವರ ಸೌ|ಮಿತ್ರಿ ಲೋಚನ ಕುಮುದ ಕೈರವ|
ಮಿತ್ರ ವಿಶ್ವಾಮಿತ್ರ ಮಖ ರಕ್ಷಣ ಜಯೋದ್ದಾಮ||

೪. ವರ ಮುನೀಶ್ವರ ಹರ್ಷ ರತ್ನಾ|ಕರ ಸುಧಾಕರ ಮೂರ್ತಿ ರಾಘವ| ಧರಣಿಪತಿ

೫. ರಾಮ ಕೌಸಲ್ಯಾ ಜಠರ ಸುರ|ಭೂಮಿ ಭವ ಮಂದಾರ ನಿರುಪಮ| ರಾಮಣೀಯಕ ಮೂರ್ತಿ

೬. ವರ ವಿಭೀಷಣ ಹೃದಯ ಗೇಹ ಸ್ಫುರಿತ ಮಂಗಳ ದೀಪ ರಘು ಕುಲ| ಚರಿತ ಸದ್ಗುಣ ದೀಪ

೭. ದನುಜ ವದ ಪರಿತೋಷ ಜಲರಸ| ಘನತರೌಘ ನಿದಾಘ ರಾಘವ| ಜನಪತಿ

೮. ರಾಮ ರಘುಕುಲ ವಾರ್ಧಿ ಚಂದ್ರಮ| ಸಾಮಗಾನ ಪ್ರೇಮ ನಿರುಪಮ|ಕಾಮಿತಾರ್ಥಪಸೀವ ಸದ್ಗುಣಧಾಮ ಶುಭ ನಾಮಾ

ಕಥಾ ಪ್ರಾರಂಭದಲ್ಲೇ ಕವಿ ತನ್ನ ಅಸದೃಶವಾದ ಶಕ್ತಿಯನ್ನು ತೋರ್ಪಡಿಸಿ ಸುರಸವಾದ ನಾಲ್ಕು ಪದ್ಯಗಳಿಂದ ಪೂರ್ವ ಕಥಾಮೃತವನ್ನು ಈ ರೀತಿ ವಾಚಕರ ಕಿವಿಗೆ ಎರೆವನು :—

ಅದರಿನೀ ಸತ್ಕಾವ್ಯವೆಂತೆನೆ|
ಸದಮಳ ಜ್ಞಾನಿಗಳ ಹೃದಯಾ|
ಬ್ಜದಲಿ ಹರಿಯಿಪ್ಪಂತಯೋಧ್ಯಾ ನಾಮ ನಗರಿಯಲಿ॥
ವಿದಿತ ಪುಣ್ಯ ಚರಿತ್ರ ಸೀತಾ|
ವದನ ಪಂಕಜ ಮಿತ್ರ ಜಗದ|
ಭ್ಯುದಯ ಕಾರಣ ರಾಘವೇಶ್ವರನಿರ್ದನೊಲವಿನಲಿ ॥ ೧ ॥

ಪರಮ ಪುರುಷನ ಲೀಲೆಯಲಿ ಗೋ|
ಚರಿಸಿ ತೋರ್ಪ ಗುಣತ್ರಯದವೊಲು |
ಭರತ ಮುಖ್ಯಾನುಜರು ಸೇವಾ ನಿಪುಣರಾಗಿರಲು॥
ಪರಮ ಕರುಣಾ ಸಿಂಧು ದುರಿತೋ|
ತ್ಕರ ವನಾನಿಲ ಬಂಧು ರಘುಪತಿ|
ಧರೆಯನಾಳಲು ಧರ್ಮ ನಿಂದುದು ನಾಲ್ಕು ಪಾದದಲಿ ॥ ೨ ॥

ಸುರರುಘೇಯೆನುತಿರಲು ದಶಕಂ|
ಧರನು ಮೊದಲಾದಸುರರನು ಸಂ|
ಹರಿಸಿ ಕೊಡೆ ವಿಭೀಷಣಗೆ ಲಂಕಾಧಿಪತ್ಯವನು॥
ಕರುಣೆಸುತ ಜಾನಕಿಯ ತಂದನು|
ಪುರಕೆ ರಘುಪತಿಯೆಂಬ ವಾರ್ತಾ|
ಸುರ ತರಂಗಿಣಿಯಿಂದ ತೊಳೆದನು ಜಗದ ಕಿಲ್ಬಿಷವ ॥ ೩ ॥

ವರ ಹರಿಶ್ಚಂದ್ರಾದಿ ಧರಣೀ।
ಶ್ವರರ ಪಾವನ ಶೀಲವೇ ದಾ।
ಶರಥಿಯಾದುದೊ ಕೌಸಲೇಯಾಖ್ಯದಲಿ ರಂಜಿಸಿತೋ॥
ನಿರುಪಮಿತದಯ ಶಕ್ತಿ ಹನುಮ।
ದ್ವಿರದನಾದುದೊ ರಾಜ ತೇಜವೆ।
ತರಣಿ ವಂಶದೊಳುದಿಸಿತೆನೆ ರಘುರಾಮ ರಂಜಿಸಿದ ॥ ೪ ॥

ಎತ್ತಿಕೊಳ್ಳುತ್ತಲೇ ಕಾಣುವ ಅಂದವಾದ ಉಪಮಾಲಂಕಾರವೂ ಅನಂತರದ ಉತ್ಪ್ರೇಕ್ಷೆಯೂ ಸುಶ್ರಾವ್ಯವಾದ ಅನುಪ್ರಾಸವೂ ಕೊನೇಲಿನ ಚಮತ್ಕಾರಕವಾದ ರೂಪಕಾಲಂಕಾರವೂ ನಮಗೆ ಕವಿಯ ಮೇಲೆ ಒಮ್ಮೆಗೆ ಅಭಿಮಾನವನ್ನುಂಟುಮಾಡುವುದು.

ಈ ವಿಷಯದ ಮೊದಲಲ್ಲಿ ಸೂಚಿಸಿದಂತೆ ಕವಿ ಕೂಲಂಕಷವಾಗಿ ಪ್ರತಿ ಒಂದು ಸಂಗತಿಯನ್ನೂ ವಿವರಿಸುವುದರಿಂದ ರಾವಣನಿಗೆ ಹತ್ತು ತಲೆಗಳು ಹೇಗೆ ಆದುವು? ಸೀತೆ ಅವನ ಮೃತ್ಯುವಾಗಿ ಹೇಗೆ ಜನಿಸಿದಳು? ರಾವಣನು ಸುಬುದ್ಧಿಯಿಂದಲೇ ವಿಷ್ಣುವನ್ನು ಹೇಗೆ ವಿರೋಧಿಸುತ್ತಿದ್ದನು? ಸೀತೆಯನ್ನು ಅವನು ಅಪಹರಿಸಿದರೂ ಆಕೆಯ ಪಾತಿವ್ರತ್ಯಕ್ಕೆ ಏತಕ್ಕೆ ಭಂಗವನ್ನು ತರಲಿಲ್ಲ? ಎಂಬ ಗೂಢ ವಿಚಾರಗಳೆಲ್ಲವೂ ಸ್ಪಷ್ಟವಾಗುವುವು. ಈ ಕಥೆಗೆ ಸಂದರ್ಭಾನುಸಾರವಾಗಿ ಅಷ್ಟಾದಶ ವರ್ಣನೆಗಳನ್ನು ಸೇರಿಸಿ ಕವಿ ಈ ಪುರಾಣವನ್ನು ಕಾವ್ಯವನ್ನಾಗಿ ಮಾಡಿರುವನು.

ವರ್ಣನಾ ಭಾಗ

ವರ್ಣನೆಗಳು ಅತಿಮನೋಹರವಾಗಿವೆ. ಯೋಗ್ಯ ಸಂದರ್ಭವಲ್ಲದೆ ಅವು ಬಾರವು. ಪುರಾದಿ ವರ್ಣನೆಗಳನ್ನು ಮಾಹಿಷ್ಮತೀ ನಗರಕ್ಕೆ ರಾವಣನು ಹೋಗುವ ಸಂದರ್ಭಕ್ಕೆ ಸರಿಯಾಗಿ ಅವನೇ ಆ ಪಟ್ಟಣವನ್ನು ನೋಡುವಂತೆ ಮಾಡಿರುವನು. ರಾವಣನು ರಂಭೆಯನ್ನು ಸಂಭೋಗಿಸಿ ನಳಕೂಬರನ ಶಾಪ ಹೊಂದುವ ಕಥಾ ಭಾಗವನ್ನು ಎತ್ತಿಕೊಳ್ಳುವಾಗ ಅದರ ಹಿಮ್ಮೆಯ್ಯಾಗಿ ಸೂರ್ಯಾಸ್ತ ಚಂದ್ರೋದಯ ವರ್ಣನೆಗಳು ಸುಸಂಗತವಾಗಿ ಬರುವುವು. ಈ ವರ್ಣನೆಯಿಂದ ಆ ಕಥೆಯೂ ಆ ಕಥೆಯಿಂದ ಈ ವರ್ಣನೆಯೂ ಎಷ್ಟು ಚಂದಗಾಣುವುದೆಂಬುದನ್ನು ಬಾಯಿಮಾತಿನಿಂದ ವಿವರಿಸುವುದಕ್ಕಿಂತಲೂ ಅಲ್ಲಿಂದ ಕೆಲವು ಪದ್ಯಗಳನ್ನು ಓದುವುದೇ ಸುಖತರವಾದೀತು.

ಅರರೆ ಸಂಧ್ಯಾ ರಮಣಿ ಪಡುವಣ।
ಶರಧಿಯೊಳು ಮುಳುಗಲು ಸಮರ್ಪಿಸಿ।
ದುರುತರದ ಮಾಣಿಕ್ಯವೆನಲಸ್ತಮಿಸಿತಿನ ಬಿಂಬ॥
ಹುರುಳುಗೆಟ್ಟವು ಜಕ್ಕವಕ್ಕಿಗ।
ಳಿರದೆ ದೋಷಾಕರನ ಭಯದಲಿ।
ಸಿರಿಗೆ ಮುಸುಕಿಟ್ಟಂತೆ ಮುಗಿದುವು ವನಜ ಸಂದೋಹ॥

ಕಮಲಗಳು ಸಹಜವಾಗಿ ಸಂಧ್ಯಾ ಕಾಲದಲ್ಲಿ ಮುಚ್ಚಿದುದನ್ನು ಕವಿ ಚಮತ್ಕಾರಕವಾಗಿ ಮುಂದೆ ರಂಭೆಗೆ ರಾವಣನಿಂದ ಆಗುವ ಮಾನ ಭಂಗವನ್ನು ಸೂಚಿಸುವ ಉದ್ದೇಶದಿಂದೆಂಬಂತೆ ದೋಷಾಕರನಾದ ಚಂದ್ರನ ದೃಷ್ಟಿ ತಮ್ಮೊಳಗಿರುವ ಸಿರಿಯಮೇಲೆ ಬಿದ್ದೀತೆಂಬ ಭಯದಿಂದ ಕಮಲಗಳು ಆಕೆಗೆ ಮುಸುಕಿಟ್ಟುವೆಂದು ಉತ್ಪ್ರೇಕ್ಷಿಸಿದ ಪರಿ ರಸಿಕರನ್ನು ತಲೆದೂಗಿಸುವುದು.

ಅಂಬರವ ಬಿಟ್ಟನನು ಹೊಗಲವ।
ರಾಂಬುಧಿಯ . . . . ನಾಚಿಕೆ।
ಯಂಬುಗೊಳೆ ಪಶ್ಚಿಮ ದಿಶಾಂಗನೆಯರುಣ ವಸನವನು॥
ತುಂಬಿ ಮುಸುಕಿಟ್ಟಂತೆ ತೋರಿದು।
ದಂಬುರುಹ ಕೇಸರ ಪರಾಗ ಕ।
ದಂಬ ಭಾಸುರವಾಗಿ ಸಂಧ್ಯಾ ರಾಗ ರಚನೆಯಲಿ॥

ಈ ಪದ್ಯದಲ್ಲಿ ಕೆಲವು ಮಾತ್ರೆಗಳು ಬಿದ್ದುಹೋಗಿವೆ. ಬೇರೆ ಪ್ರತಿಗಳ ಸಹಾಯದಿಂದ ಅದನ್ನು ಸರಿಪಡಿಸುವುದಕ್ಕೆ ಬಾರದಿದ್ದರೆ ಆಮೇಲೆ ಅದನ್ನು ಅಂತೆಯೇ ತಿದ್ದುವ ಆಲೋಚನೆಯಿಂದ ಪ್ರಕೃತ ಅದನ್ನು ಹಾಗೆಯೇ ಇರಗೊಡಿಸಿದ್ದೇನೆ. ಆದರೆ ಪದ್ಯವು ಒಡಕು ಕನ್ನಡಿಯಂತಿದ್ದರೂ ಅದರ ಪ್ರಕಾಶವು ಕಡಿಮೆಯಾಗಿಲ್ಲ. 'ಅಂಬರವ ಬಿಟ್ಟನನು' ಎಂಬ ಪದಗಳಿಗೆ 'ನಾಚಿಕೆಯೆಂಬುಗೊಳೆ ಪಶ್ಚಿಮ ದಿಶಾಂಗನೆಗೆ' ಎಂದು ಒಂದುದರಿಂದ ಹೃದ್ಯವಾದ ಶ್ಲೇಷವು ಪ್ರಾಪ್ತವಾಯಿತು. ಈ ಭಾವನೆಯೂ ರಂಭೆ ರಾವಣರ ಮುಂದಣ ಕಥಾಭಾಗಕ್ಕೆ ಬೆಳಕನ್ನಿಡುವಂತಿದೆ.

ಆ ಸಮಯದಲಿ ಕುಮುದಿನೀ ದರ।
ಹಾಸ ರುಚಿಯೆಂತಂತೆ ಕುಸುಮ ಶ।
ರಾಸನನ ಸತ್ಕೀರ್ತಿ ಸುಧೆಯೆಂತಂತೆ ಯಾಮಿನಿಯ॥
ಭಾಸಮಾನ ದುಕೂಲ ವಸನದ।
ಮೈಸಿರಿಯದೆಂತಂತೆ ಚಾರು ವಿ।
ಲಾಸದಲಿ ಧವಳಿಸಿತು ಚಂದ್ರಿಕೆ ಸಕಲ ದಿಕುತಟವಾ॥

ಸಾಂದ್ರವಾಗಿ ಚಂದ್ರಿಕೆ ಈ ರೀತಿ ಪಸರಿಸಿರುವಾಗ—

ಸುರ ನದಿಯ ತೆರೆ ಮಾಲೆಗಳ ಸೀ।
ಕರಗಳನು ತೆರಳಿಸುತ ತೀರದ।
ತರು ಲತಾ ಕುಸುಮ ಪ್ರತಾನ ಪರಾಗ ಪಟಲದೊಳು॥
ಹೊರಳಿಸುತ ತುಂಬಿಗಳ ನೆರವಿಯ।
ಸುರ ವಿರೋಧಿಗೆ ಸುರತ ಕಾಂಕ್ಷೆಯ।
ಕೆರಳಿಸುತ ಸುಳಿಗಾಳಿ ಸುಳಿದುದು ಮಂದ ಗಮನದಲಿ॥

ಇಂತು ಆನಂದವಾಗಿ ಗಾಳಿ ತೀಡುತ್ತಿದ್ದಾಗ: —

ಧನದನೋಲಗದಿಂದ ಕಿನ್ನರ।
ವನಿತೆಯರು ಪಾಡುವ ಸುಮೋಹನ!
ವೆನಿಪ ಗಾನವನಾಲಿಸುತ ಖಳ ರಾಯ ಚಿತ್ತದಲಿ॥
ಜನಿಸೆ ಕಾಮ ವಿಕಾರ ಹರಿಣಾಂ।
ಕನನು ನೋಡುತಲಿರ್ದನಲ್ಲಿಗೆ।
ಜನಪ ಕೇಳಚ್ಚರಿಯ ರಂಭೆಯ ಬರವು ಪಸರಿಸಿತು॥

ಇಂತಹ ಸನ್ನಿವೇಶದಲ್ಲಿ ರಾವಣನಂದ ಕಠಿಣಮನಸು ಅಥವಾ ಹೆಚ್ಚಿನವನಾದರೂ ಕಾಮನ ಉಪಟಳಕ್ಕೆ ಒಳಗಾಗದಿರುವನೇ? ಈ ವರ್ಣನಾ ಭಾಗವು ಈ ಕಥೆಗೆ ಎಷ್ಟು ಪೌಷ್ಟಿಕವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಅದರಂತೆಯೆ ವಸಂತ ಋತುವನ್ನು ಸೀತಾ ಪರಿತ್ಯಾಗದ ಕಥೆಗೆ ಹೊರವಲಯವಾಗಿ ವರ್ಣಿಸಿ ಅದರ ಸೊಂಪನ್ನು ಪೆಂಪೇರಿಸಿರುವನು. ವಸಂತ ಕಾಲದ ಆನಂದ ಜೀವನದಲ್ಲಿ ಸೀತೆ ಗರ್ಭಿಣಿಯಾದಳೆಂಬುದೂ ಆ ಸುಖಮಯವಾದ ಸಮಯದಲ್ಲೇ ವನಗಳಲ್ಲಿರುವ ಮುನಿಪತ್ನಿಗಳ ದರ್ಶನಮಾಡುವ ಬಯಕೆ ಆಕೆಗೆ ಆಯಿತೆಂಬುದೂ ಕಾಲೋಚಿತವಾಗಿದೆ. ವಸಂತ ಋತುವಿನ ವರ್ಣನೆಯನ್ನು ಅನೇಕ ಕಾವ್ಯಗಳಲ್ಲಿ ತಾವು ಓದಿರುವಿರಾದರೂ ನಮ್ಮ ನಾರಾಯಣನ ವಸಂತ ಋತುವಿನ ವರ್ಣನೆಗೆ ತಮ್ಮ ಮನಸ್ಸು ಸೋಲದಿರದು. ಅದು ಸ್ವಲ್ಪ ಉದ್ದವಾಗಿದ್ದರೂ ಬಹಳ ಮನೋಹರವಾಗಿರುವುದರಿಂದ ಅದನ್ನು ಮಧ್ಯೇ ಮಾತಿನ ತಡೆಯಿಡದೆ ಹಾಡಿ ಹೋಗುವೆನು:—

ಶಿಶಿರದೆಸಕವ ಕಳೆದು ಮೆಲ್ಲನೆ।
ಬಿಸಿಲು ಬಲಿದುದು ಗಾಳಿ ತೆಂಕಣ।
ದೆಸೆಯೊಳೊಗೆದುದು ಜನ ಮುನಿಗಳಾದುವು ಮಹೀಜಗಳು॥
ಶಶಿರುಚಿಗೆ ಸೊಬಗೇರಿದುದು ರೂ।
ಢಿಸಿತು ಕೋಕಿಲ ಗಾನ ಪರಿಪೂ।
ರಿಸಿದುದಂಕುರ ನಿಕರ ಪಾವನ ವಿಟಪಿ ನಿವಹದಲಿ॥

ತರು ಲತಾ ನಿವಹಕ್ಕೆ ಯೌವನ।
ಮರಳಿ ಬರುತಿಹುದಮಮ ಮನಸಿಜ।
ಧರಣಿಪನ ಸೌಭಾಗ್ಯ ವಿರಹಿವ್ರಾತದೆದೆಗಿಚ್ಚು॥
ಕೊರಳ ಕತ್ತರಿಯಿದು ಜಿತಾಕ್ಷರಿ।
ಗರರೆ ಸೌಖ್ಯ ನಿಧಾನಗಳು ಗೋ।
ಚರಿಸುವಂಜನ ಸಿದ್ಧಿಯನುಭವಿಗಳಿಗೆ ಮಧು ಸಮಯ॥

ಕಳಿಕೆಗಳು ಕೊನರಾಗಿ ಕೊನೆಯೊಡೆ।
ದೆಲೆಗಳೊಂದೆರಡಾಗಿ ರಾಗಿಸಿ।
ತಳಿತು ಸೆಳೆಗೊಂಬಾಗಿ ನನೆ ಮೊನೆದೋರಿ ಮುಗುಳಾಗಿ॥
ಅಲರು ಮಾಮಿಡಿ ಬಲ್ಮಿಡಿಯುಲ।
ಗ್ಗಳಿಸಿ ಕಾಯ್ಗಳ ದೋರೆಗಳ ಪ।
ಣ್ಗಳ ಸೊಬಗಿನಿಮ್ಮಾವು ಮೆರೆದುದು ಜರೆದು ಸುರ ಕುಜವ॥

ಹೊಳೆವ ಚಂಚುಗಳಂತೆ ಕೋರಕ।
ಗಳು ವಿರಾಜಿಸೆ ಪಚ್ಚೆಗರಿಯಂ।
ತೊಲೆಯೆ ಪಸುರೆಲೆ ಕಿಂಶುಕಾಳಿ ಶುಕಾಳಿಯೆಂದೆಂಬ॥
ವಿಲಸದಂಗಜ ಹಯ ನಿಕಾಯಂ।
ಗಳನು ತ್ರಿಜಗಜ್ಜೈತ್ರಯಾತ್ರೆಗೆ ।
ನಿಲಿಸಿದಪನೋ ಚೈತ್ರ ಶಿಕ್ಷಕನೆನಲು ರಂಜಿಸಿತು॥

ಮುಳಿದಗಲಿದಿಸೆಯರೊಳು ಬಂದ।
ಗ್ಗಳಿಸಿ ಕೂಡಿದವರ್ಗೆ ತಮವನು।
ಕಳೆದ ಸ್ಮರನ ಪ್ರತಾಪ ದೀಪಾಂಕುರಗಳೆಂಬಂತೆ॥
ಹೊಳೆವ ಪೊನ್ನಲರುಗಳ ತೊಡಿಗೆಯ।
ನೊಲಿದು ವನ ಸಿರಿ ತೊಟ್ಟಳೋಯೆನೆ।
ಸಲೆ ಸೊಗಸಿ ಕೋರಕಿತ ಚಂಪಕ ನಿವಹ ಕಾಣಿಸಿತು॥

ಕೊನರುಗಳನರೆಗಚ್ಚಿ ಕಂಗಳ।
ಕೊನೆಗೆ ನಸುಗೆಂಪೇರೆ ತೀವಿದ।
ಸೊನೆ ವದನದಿಂದಿಳಿದು ತೊಟ್ಟಿಡೆ ಕೋಡುಗರಿಗಳಲಿ॥
ತನಿಸೊಗಸಿ ಪಾಡಿದುವು ಮನ್ಮಥ।
ಜನಪತಿಯ ಶರ ಪಂಚಕದ ಸಂ।
ಜನಿತ ವಿಮಲ ಸುಪಂಚಮ ಸ್ವರದಿಂದ ಪಿಕ ನಿವಹ॥

ನಲಿದು ವನ ಸಿರಿ ಭೃಂಗ ಗಾನಂ।
ಗಳ ಲತಾಂಗದೊಳನುಗೊಳಿಸಿ ಕೋ।
ಮಲಿತ ಪಲ್ಲವ ಹಸ್ತದಿಂದಭಿನಯಿಸಿಯಲರ್ಗಣ್ಣ॥
ಚೆಲುವಿನಲಿ ಬಹು ಭಾವ ಹಂಸೆಯ।
ಲಲಿತ ಗತಿಯಲಿ ತಾಳವಿರೆ ತ।
ಣ್ಣೆಲರ ನಟದಿಂದಾಡಿ ಮೆಚ್ಚಿಸಿದಳು ಮನೋಭವನ॥

ಇಂತಹ ಜಗದಾನಂದಕರವಾದ ಕಾಲದಲ್ಲಿ ಸೀತೆ—

ಶ್ರುತಿ ವಿಹಿತ ಸತ್ಕೀರ್ತಿ ಮಹಿಮಾಂ।
ಚಿತ ಮನೋಹರ ಭಾವ ರಸ ಗ।
ರ್ಭಿತ ಮಹಾಕೃತಿಯಂತೆ ಗರ್ಭಿಣಿಯಾಗಿ ಸೊಗಸಿದಳು॥

ಸ್ತ್ರೀ ವರ್ಣನೆಯಲ್ಲಿ ಕವಿಗಳು ತಮ್ಮ ಸರಸತ್ವವನ್ನೂ ಪದ ಲಾಲಿತ್ಯವನ್ನೂ ಭಾವನಾ ಸೌಂದರ್ಯವನ್ನೂ ವಿಶೇಷವಾಗಿ ಪ್ರಕಟಿಸುವಂತೆ ನಮ್ಮ ನಾರಾಯಣ ನಾದರೂ ರಂಭೆಯ ಸೌಂದರ್ಯ ವರ್ಣನೆಯಲ್ಲಿ ತನ್ನ ಕವಿತಾ ಕೌಶಲವನ್ನು ಮೆರೆಯಿಸಿರುವನು. ಒಂದು ಗ್ರಂಥವನ್ನು ದಿಙ್ಮಾತ್ರವಾಗಿ ನೋಡುವಾಗಲೂ ಅಂತಹ ಭಾಗವನ್ನು ಪರಾಮರ್ಶಿಸುವುದು ವಿದ್ವಜ್ಜನರಿಗೆ ಸಹಜವಾದುದರಿಂದ ಒಂದೆರಡು ಪದ್ಯಗಳನ್ನು ಮಾದರಿಗಾಗಿ ಕೊಡುವೆನು:—

ಸುಳಿಗುರುಳ ಪೆರೆ ನೊಸಲ ಬಂದುಗೆ।
ಯೆಲರ ಪೋಲುವ ಚೆಂದುಟಿಯ ಕೋ।
ಕಿಲರವದ ನವ ಕುಂದ ರದನದ ಕುವಲಯೇಕ್ಷಣದ॥
ತಿಲ ಕುಸುಮ ನಾಸಿಕದ ಮೃಗಮದ।
ಲುಳಿತ ಗಂಧ ಶ್ವಾಸಗಳ ತೊಳ।
ತೊಳಪ ಗಲ್ಲದ ಕೋಮಲಾಂಗಿಯ ರೂಪು ಹೊಸತೆಂದ॥

ಪರಮ ಮನ್ಮಥ ತತ್ವ ವಿದ್ಯಾ।
ಪರಿಣತರ ವಿಜ್ಞಾನ ಲಕ್ಷ್ಮಿಯೊ।
ನಿರುಪಮಿತ ಶೃಂಗಾರ ಪಾರಾವಾರ ವರ ಸುಧೆಯೊ॥
ಸ್ಮರನ ಧೈರ್ಯ ಸುಮೇರು ಧರಣೀ।
ಧರದ ಮಹಿಗಾಧಾರ ಶಕ್ತಿಯೊ।
ಸುರ ಸತೀ ರತ್ನವನು ಬಣ್ಣಿಸಲರಿವನಾರೆಂದ॥

ಹರನನರೆವೆಣ್ಣಾಗಿಸಿದ ತ।
ನ್ನುರು ಪರಾಕ್ರಮಕೊಂದು ಸನ್ಮಾನಿ।
ವರ ವಿವೇಕಾಂಬುರುಹ ಚಂದ್ರಿಕೆಯಾದ ನಿಜ ಯಶಕೆ॥
ಪರಿಕಿಪೊಡಿದೊಂದೆನುತ ಮನ್ಮಥ।
ಧರಣಿ ಪಾಲಕನಾನಿಸಿದ ಭಾ।
ಸುರ ಜಯಸ್ತಂಭಗಳೊ ರಂಭೋರುಗಳೊ ಕೋಮಲೆಯಾ॥

ನಳಿನಗಂಧಿಯ ದಿವ್ಯ ತನು ಪರಿ।
ಮಳವ ವಹಿಸಲು ಗಂಧವಹನೆಂ।
ದೊಲುಮೆ ಮಿಗೆ ಮಂದಾನಿಲಗೆ ಪೆಸರಾಯ್ತು ಕಬರಿಯನು॥
ಬಳಸಿ ನಿಚ್ಚಲು ಭ್ರಮಿಸಲಳಿಸಂ।
ಕುಲಕೆ ಭ್ರಮರವೆನಿಪ್ಪ ನಾಮವೆ।
ಬಳಕೆಯಾಯ್ತೆನೆ ಪೊಗಳಬಲ್ಲವನಾರು ಕೋಮಲೆಯಾ॥

ಒಂದೆರಡು ಪದ್ಯಗಳಿಂದರೂ ಆ ಕವಿತಾ ಸೌಂದರ್ಯದ ಬಯಿಲ್ಗೆ ಎರಡು ಹಜ್ಜೆ ಮುಂದುವರಿಯಿತು; ಕ್ಷಮೆಯಿರಲಿ.

ಕವಿಯ ವರ್ಣನಾ ಶಕ್ತಿಯನ್ನು ಹೊಗಳುವ ಸಂದರ್ಭದಲ್ಲಿ ರಾಮನ ಒಡ್ಡೋಲಗದಲ್ಲಿ ಸ್ತ್ರೀಯರು ಮಾಡಿದ ಗಾನದ ವರ್ಣನೆಯನ್ನು ಬಿಟ್ಟೆನೆಂದರೆ ಕವಿಯ ಯೋಗ್ಯತೆಯನ್ನು ಪೂರ್ಣ ಕಾಣಿಸಿದಂತಾಗದು. ಕಿವಿಯಿಂದ ಹೃದಯಕ್ಕೆ ನೇರವಾಗಿ ಮುಟ್ಟುವ ಸವಿಯಾದ ಆ ಗಾನದ ವರ್ಣನೆ, ಕಿವಿಯಿಂದ ಕೇಳದೆ ಆ ಗಾನದ ಆನಂದವನ್ನು ಭಾಷೆಯಿಂದ ಮಾತ್ರ ಪಡೆವಂತೆ ಮಾಡಬೇಕಾದರೆ ಅದು ಅಸಾಧಾರಣವಾಗಿರಬೇಕಲ್ಲವೆ? ಆದುದರಿಂದ ಅದನ್ನು ತಾವು ಪ್ರೇಮದಿಂದ ಆಲಿಸಬೇಕೆಂದು ವಿಜ್ಞಾಪಿಸುತ್ತೇನೆ:—

ನೆಲಸಿ ನಾದಾನಂದ ತಮ್ಮೊಳು।
ಬಳಸಿ ತಜ್ಞರ ಹೃದಯವನು ಪಂ।
ಮಳದ ಭರಣಿಯ ತೆಗೆವವೋಲ್ ಸೊಗಯಿಸಲು ಶ್ರುತಿಗೂಡಿ॥
ಬಳಿಕ ಸುಸ್ವರಗಳಲಿ ಗ್ರಾಮಂ।
ಗಳನರಿದು ಮೂರ್ಛನಾ ವಿಶೇಷವ।
ತಿಳಿದು ಸಂವಾದದಲಿ ತಾನಂಗಳನು ತುಡುಕಿದರು॥

ರಾಗ ರಸ ಲಹರಿಯಲಿ ಅಧರದ।
ರಾಗ ರಸ ರಂಜಿಸಲು ಕಾಂತೆಯ।
ರಾಗ ರಸಿಕರ ಹೃದಯದನುರಾಗವನು ಹೆಚ್ಚಿಸುತ॥
ಆ ಗರುವ ಮನಸಿಜನ ಬಾಣಗ।
ಳಾಗ ಗರಿಗಳು ಸೊಗಸಿ ಮರ್ಮವ।
ತಾಗೆ ವಿವಿಧ ವ್ಯಾಪ್ತಿ ಠಾಯಂಗಳನು ರಚಿಸಿದರು॥

ಲಲಿತ ಗಾನಾಮೃತ ಸಮುದ್ರದ।
ಜಲ ತರಂಗಗಳಂತೆ ಗಮಕಂ।
ಗಳು ವಿರಾಜಿಸೆ ದೋಷ ವಿರಹಿತ ಧಾಳ ಸೂತ್ರಗಳು॥
ತೊಳೆದ ಮುತ್ತಂಗೈಯೊಳಗೆ ತಳ।
ತಳಿಸುವಂತಿರೆ ಪಾಡಿದರು ರವಿ।
ಕುಲ ವರೇಣ್ಯನ ಗುಣ ಗಣಾಂಚಿತ ಸುಪ್ರಬಂಧಗಳ॥

ಕವಿಯ ವರ್ಣನಾ ಶಕ್ತಿಯನ್ನು ಇನ್ನೂ ಹೊಗಳುತ್ತ ಹೋದರೆ ಕಾಲಾತೀತವಾಗುವುದೇ ನಿಶ್ಚಯವಾದುದರಿಂದ ರಸ ವಿಚಾರದಲ್ಲಿ ಈಗ ನಾಲ್ಕಾರು ಮಾತುಗಳನ್ನಾಡುವೆನು.

ರಸ ವಿಚಾರ

ಈ ಕಾವ್ಯದಲ್ಲಿ ವೀರ ರಸವೇ ಪ್ರಧಾನವಾಗಿದೆ. ಪ್ರತಿಭಟಿಸುವ ವೀರರು ಸಮಬಲರು ಎಂಬಂತೆ ಕವಿ ಉದಾತ್ತ ಭಾವದಿಂದ ಇತ್ತಂಡದವರ ಪರಾಕ್ರಮವನ್ನು ವರ್ಣಿಸುವುದರಿಂದ ಮಾಲಿ ಸುಮಾಲಿ ನಾರಾಯಣರ, ರಾವಣ ಕಾರ್ತ-

ವೀರ್ಯರ, ರಾವಣ ದೇವೇಂದ್ರರ ಯುದ್ಧಗಳಲ್ಲಿ ವೀರ ರಸವು ಪ್ರವಾಹವಾಗಿ ಹರಿಯುವುದು. ಅದಕ್ಕೆ ಪೌಷ್ಟಿಕವಾಗಿ ರೌದ್ರಾದ್ಭುತಗಳು ಅಲ್ಲಲ್ಲಿ ಕೂಡು ವುವು. ರಾವಣನು ವೇದವತಿ ರಂಭೆಯರನ್ನು ಕಾಮಿಸಿ ಅವರೊಡನೆ ಸಂಭಾ ಷಿಸುವಾಗ ಶೃಂಗಾರ ರಸವು ಒಸರುವುದು. ಸೀತೆಯ ದುಃಖದಲ್ಲಿಯೂ ಮೃತ ಪುತ್ರನಿಗಾಗಿ ಬ್ರಾಹ್ಮಣನು ಶೋಕಿಸುತ್ತಿರುವಲ್ಲಿಯೂ ಕರುಣ ರಸವು ಉಕ್ಕಿ ಹರಿಯುವುದು. ಆಯಾ ರಸೋತ್ಪಾದನೆಗೆ ತಕ್ಕ ಪದಗಳನ್ನು ಉಪಯೋಗಿಸಿ ಕವಿ ರಸಿಕರ ಚಿತ್ತಾಕರ್ಷಣ ಮಾಡುವನು. ಬೇರೆ ರಸಗಳ ವಿಷಯವನ್ನು ಪ್ರಕೃತ ಬಿಟ್ಟು ವೀರ ಶೃಂಗಾರ ರಸಗಳಿಗೆ ಮಾತ್ರ ಇಲ್ಲಿ ಉದಾಹರಣೆಗಳನ್ನು ಕೊಡು ವೆನು:—

ರಾವಣನು ಕಾರ್ತವೀರ್ಯನನ್ನು ಮೂದಲಿಸಿ—

ಸುದತಿಯರ ಮೇಳದಲಿ ಸಂಗಮ।
ಪದನಿಗಳ ಮೃದು ಗಾನ ಸುಧೆಯನು।
ಮುದದಿ ಸವಿವಂತಲ್ಲ ನರನಾಯಕ ನಿಧಾನಿಸಲು॥
ಇದು ಮಹಾ ರಣಭೂಮಿ ಬೀಸುವ।
ಗದೆಯ ಬಿರುಹೊಯ್ಲುಗಳು ಸವಿನೋ।
ಡಿದಕೆ ನೀನಂಗೈಸಿದರೆ ಲೇಸೆಂದನಮರಾರಿ॥

ಅದಕ್ಕೆ ಆತನು ಕೊಟ್ಟ ಈ ಪ್ರತ್ಯುತ್ತರವೂ ಪ್ರತಿ ಪ್ರಹಾರವೂ ಸಮು ಚಿತವಾಗಿವೆ—

ಕೆಟ್ಟು ನುಡಿದರೆ ಮೂರ್ಖರನು ಸರಿ।
ಗಟ್ಟಿಕೊಂಬರೆ ಗರುವರೆಲವೋ।
ದಿಟ್ಟನಹೆ ಶೃಂಗಾರ ರಸ ಪತಿಯೆನಿಸಿ ಮಾಧವನು॥
ಮೆಟ್ಟಿ ವೀರಾವೇಶದಲಿ ತರಿ।
ದೊಟ್ಟುವನು ದಾನವರನಂತರೆ।
ಯಟ್ಟಿ ಸದೆಯದೆ ಬಿಡೆನು ನೋಡೆನುತೆರಗಿದನು ಖಳನ॥

ರಾವಣನೂ ಮಹಾ ಪರಾಕ್ರಮಶಾಲಿಯಲ್ಲವೆ? ಆತನು—

ತರಹರಿಸಿ ಗಾಯವನು ಧೈರ್ಯದ।
ಹುರಿಯೊಡನೆ ವಾಸಿಯನು ಬಲಿದ।
ಪ್ಪರಿಸಿ ಗದೆಯನು ಜಡಿದು ನುಡಿದನು ತೋಳ ಸಾಸಿರದ॥
ಧರಣಿಪತಿ ನೀನೆಂಬ ಗರ್ವದ।
ಗಿರಿಗೆ ತಾನಿದು ವಜ್ರದಂಡದ।
ಹರಿ ಕಣಾ ನೋಡೆನುತಲಪ್ಪಳಿಸಿದನು ಕೈಯೊಡನೆ॥

ಶೃಂಗಾರ ರಸವು ನವ ರಸಗಳಲ್ಲಿ ಶ್ರೇಷ್ಠತಮವಾದುದರಿಂದ ಅದಕ್ಕೆ ತಕ್ಕ ಮರ್ಯಾದೆ ಇಲ್ಲಿಯೂ ಸಲ್ಲಬೇಕಾದುದು ನ್ಯಾಯವು.

ರಾವಣನು ರಂಭೆಯನ್ನು ನೋಡಿ ಹಿಡಿಯಲಾರದ ಆನಂದದಿಂದ ಆಕೆಯನ್ನು ಈ ರೀತಿ ಮಾತನಾಡಿಸುವನು:—

ಭರದ ಗಮನವಿದೆಲ್ಲಿಗಾವನ।
ನೆರೆಯಲೈದುವೆ ಕುಂಭಿಕುಂಭದ।
ಸಿರಿಯಲೈದೆ ವಿಜೃಂಭಿಸುವ ಕುಚ ಕುಂಭ ಯುಗಳದಲಿ॥
ಹರುಷಮಿಗೆ ಪರಿರಂಭಣವನಾ।
ಚರಿಸೆ ಸುಖ ಪರತತ್ವದಲಿ ಮನ।
ವೆರಸಿ ನಿರಹಂಕೃತಿಯನೈದುವ ಸುಕೃತಿಯಾರೆಂದ॥

ಕಾಣಿಸಿದ ಸುರಸತಿಯರಲಿ ಕ।
ಟ್ಟಾಣಿಯೆನಿಸಿದೆ ನೀನು ಮನಸಿಜ।
ನಾಣೆ ಪುಣ್ಯದ ಬೆಳಸು ಫಲಿಸುವ ಕಾಲವಿಬ್ಬರಿಗೆ॥
ಏಣಲೋಚನೆ ಸಮನಿಸಿತು ಕಡು।
ಜಾಣನಲ್ಲಾ ವಿಧಿ ಮಹಾತ್ಮನ।
ಹೂಣಿಕೆಯನೇನೆಂಬೆನಘಟಿತ ಘಟಿತವಾಯ್ತೆಂದ॥

ಆಗ ರಂಭೆ ರಾವಣನ ದುರಭಿಪ್ರಾಯವನ್ನು ತಿಳಿದು ಆತನನ್ನು ಮಾತಿನಿಂದ ವಂಚಿಸಲು ನೋಡಿದಾಗ, ಸ್ತ್ರೀಯರು ಮಾಯಕಾತಿಯರೆಂಬುದನ್ನು ತಿಳಿಸಲು ಅವರ ಗುಣಕಥನವನ್ನು ಈ ರೀತಿ ಮಾಡುವನು:—

ಮೊಲೆಯ ಮರೆಯಿರಿತದಲಿ ಕಡೆಗ।
ಣ್ಣಲಗುಗಳ ಮಸೆದೋರದಿರಿತದ।
ಲೆಳನಗೆಯ ಸಮ್ಮೋಹನಾಸ್ತ್ರದ ಮಾಯದಿರಿತದಲಿ॥
ಮೆಲುನುಡಿಯ ಘನ ಮೋಸದಿರಿತದ।
ಲೊಲಿದು ಕಾಮುಕ ಜನದ ಹರಣಕೆ।
ಮುಳಿದ ಕೊಲೆಗಾತಿಯರಿಗೆಲ್ಲಿಯ ನಿಜವು ನಿಮಗೆಂದ॥

ಮೇಲಾಗಿ ಅಪ್ಸರ ಸ್ತ್ರೀಯರಿಗೆ—

ನೋಟವೊಬ್ಬನ ಮೇಲೆ ಸವಿನುಡಿ।
ವೇಟವೊಬ್ಬನ ಮೇಲೆ ಮನದೆಡೆ।
ಯಾಟವೊಬ್ಬನ ಮೇಲೆ ನಗೆ ಸಮ್ಮೇಳವೊಬ್ಬನಲಿ॥
ಕೂಟವೊಬ್ಬನೊಳಿಂತು ಮಾಯಾ।
ನಾಟಕದಿ ಮೋಹಿಸುವ ನಿಮ್ಮಯ।
ಮಾಟ ನಿಮ್ಮಯ ಮನದ ಭಾವದ ಭಂಗಿ ಬೇರೆಂದ॥

ಆಮೇಲಿನ ಮಾತು ಕತೆ ನಮಗೆ ಬೇಕಾಗಿಲ್ಲ. ಉಪನ್ಯಾಸವು ಆಗಲೇ ಉದ್ದ ಬೆಳೆಯಿತು; ಆದರೆ ಅಲಂಕಾರಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನಾದರೂ ಹೇಳದಿದ್ದರೆ ಅದು ಅಪೂರ್ಣವಾಗಿ ತೋರೀತು.

ಅಲಂಕಾರಗಳ ಔಚಿತ್ಯ

ಅಲಂಕಾರಗಳನ್ನು ಕುರಿತು ಈ ಮೊದಲೇ ಅಲ್ಲಲ್ಲಿ ಸೂಚಿಸಿದುದರಿಂದ ಪ್ರತ್ಯೇಕ ವಿಭಾಗವಾಗಿ ಹೇಳುವ ಅಗತ್ಯ ಬಹಳವಾಗಿಲ್ಲ. ಆದರೂ ಒಂದು ಸಂಗತಿಯನ್ನು ಒತ್ತಿ ಹೇಳುವ ಅಗತ್ಯ ತೋರಿ ಅದಕ್ಕೆ ಪ್ರತ್ಯೇಕ ಎಡೆ ಮಾಡಿರುತ್ತೇನೆ. ಕವಿ ಉಪಮೋತ್ಪ್ರೇಕ್ಷೆಗಳನ್ನು ಕಾವ್ಯದಲ್ಲಿ ಅಲ್ಲಲ್ಲಿ ತಂದೊಟ್ಟಿ ಅವುಗಳಲ್ಲಿ ಸಮ ಪ್ರೀತಿಯನ್ನು ತೋರಿದರೂ ರೂಪಕದಲ್ಲಿ ಅತ್ಯಾದರವನ್ನು ಕಾಣಿಸಿ 'ರೂಪಕ ಭೂಪ'ನೆಂದು ಕರೆಯಲ್ಪಡುವಷ್ಟು ಅಲಂಕಾರದಲ್ಲಿ ಅಗ್ರಗಣ್ಯನಾಗಿರುವನೆಂದು ನನ್ನ ಅಭಿಪ್ರಾಯವಿದೆ. ಆತನ ರೂಪಕಾಲಂಕಾರಗಳಲ್ಲಿ ಪ್ರಕಾಶಮಾನವಾದ ಕೆಲವನ್ನು ತಮ್ಮ ಅವಗಾಹನೆ ಬಗ್ಗೆ ಇಲ್ಲಿ ಕೊಡುವೆನು:—

ನಾರಾಯಣನು (ದೇವತೆಗಳು ಮಾಲಿ ಸುಮಾಲಿಗಳನ್ನು ದೂರಿಟ್ಟು ಆತನ ಸಹಾಯ ಬೇಡಿದಾಗ)—

ಎಂಬ ನುಡಿಗಳ ಕೇಳಿ ವರ ಕಮ।
ಲಾಂಬಕನು ಕರುಣಾ ರಸವೆ ಹೃದ।
ಯಾಂಬುಜಕೆ ಮಕರಂದವಾಗಲು ನುಡಿದನಮರರಿಗೆ॥

ಎಂಬಲ್ಲಿಯೂ ರೂಪಕದಿಂದ ನಾರಾಯಣನ ಮಾತು ಕೈಜೋಡಿಸಿ ನಿಂತು ಕೇಳುತ್ತಿದ್ದ ಅಮರರಿಗೆ ಎಷ್ಟು ಇಂಪಾಯಿತೆಂದು ನಾವು ತಿಳಿಯಬಹುದಾಗಿದೆ.

ರಾವಣನ ಪರಾಕ್ರಮವನ್ನು ವರ್ಣಿಸುವಾಗ—

ಹಗಲು ತಾರಗೆಯುಂದವಾದುದು।
ದಿಗಧಿಪರ ಸತ್ಕೀರ್ತಿ ಬಿರು ಬೇ।
ಸಗೆಯ ಪಲ್ಲವವಾಯ್ತು ವೃಂದಾರಕರ ಪರಿತೋಷ॥
ಸೆಗಳಿಕೆಯ ಸಸಿಯಾಯ್ತು ಭೂಪರ।
ಬಿಗುಹು ವರ ಗರ್ವದಲಿ ಹೆಚ್ಚಿದ।
ವಿಗಡನಾತನ ವಿಕ್ರಮಾನಲನೈದೆ ಪಸರಿಸಿತು॥

ಎಂಬ ರೂಪಕವೂ ರಾವಣನ ದಿಗ್ವಿಜಯ ವಾರ್ತೆಯನ್ನು ಕೇಳಿದಾಗ ರಾಮನು ಆಡಿದ—

ಅನಘ ಶೂರರು ಶೂನ್ಯವಾದರೆ।
ಜನಪದಂಗಳೊಳವರ ತೇಜೋ।
ದಿನಪನಸ್ತಮಿಸಿದನೆ ರಾವಣ ಜಲ ಸಮುದ್ರದಲಿ॥

ಎಂಬ ರೂಪಕಾಲಂಕಾರದ ನುಡಿಯೂ ಉತ್ಕೃಷ್ಟವಾಗಿವೆ.

ಕವಿ ಶಬ್ದಾಲಂಕಾರಗಳನ್ನು ಸುಗಮವಾಗಿ ಅಲ್ಲಲ್ಲಿಟ್ಟಿರುವನು. ಅವರಲ್ಲಿಯೂ ಯಮಕದಲ್ಲಿ ಆತನಿಗೆ ವಿಶೇಷ ಪ್ರೀತಿಯಿದ್ದಂತೆ ತೋರುವುದು. ಕೇಳಿ

ದೊಡನೆ ಅರ್ಥವಾಗುವ ಯಮಕಗಳು ಈ ಕೆಳಗಿನವುಗಳಂತೆ ಇದ್ದರೆ ಯಾರಿಗೆ ಸಂತೋಷವಾಗದು?

ಮಾಲಿ ಮಾಲ್ಯವಂತನಿಗೆ ಆಡಿದ ಮಾತು—

ನೀನರಿಯದನೆ ಹೇಳು ಶರ ಸಂ।
ಧಾನವಿಲ್ಲದೆ ಸುರರೊಡನೆ ಸಂ।
ಧಾನದಲಿ ಜೀವಿಸಿದ ಭಟರಾರೆಮ್ಮ ಹಿರಿಯರಲಿ॥
ದಾನವಾರಿಗೆ ಕೈಯ ನೀಡಿದ।
ದಾನವಾರಿಯ ಕೈಯ ಬಲಿ ಸಂ।
ಧಾನವಡೆದುದು ಸಾಲದೇ ನಿಷ್ಕಪಟದಲಿ ಬೆರಸಿ॥

ರಾವಣನು—

ಸಾರೆ ಬರೆ ನಾಲ್ಕೆಂಟು ಹಜ್ಜೆಯ।
ಮೇರೆಗಿರದ್ಭುತಂದು ಕಂಡನು।
ನಾರಿಯನು ಕುಸುಮಾಯುಧದ ಕಾರ್ಮುಕದ ನಾರಿಯನು॥
ಧೀರ ಮುನಿಗಳ ತತ್ತ್ವ ಪಥ ಗಮ।
ನಾರಿಯನು........।
......................।

ಪುನಃ—

ರಾಗ ರಸ ಲಹರಿಯಲಿ ಅಧರದ।
ರಾಗ ರಸ ರಂಜಿಸಲು ಕಾಂತೆಯ।
ರಾಗ ರಸಿಕರ ಹೃದಯದನುರಾಗವನು ಹೆಚ್ಚಿಸುತ॥

ಎಂಬಲ್ಲಿಯ ಸುಲಭ ಯಮಕವು ಯಾರನ್ನು ತಲೆದೂಗಿಸದು?

ಭಾಷಾಭಿಮಾನಿಗಳಾದ ಮಹಾಜನಗಳೇ, ಕೃತಿ ಸುಂದರಿಗೆ ವಿಮರ್ಶಕನು ಒಬ್ಬ ಸಖಿಯಂತಿರಬೇಕೆಂದು ಒಬ್ಬ ಆಂಗ್ಲ ಕವಿ ತಿಳಿಸಿರುವನು. ಎಂದರೆ ತನ್ನ ಒಡತಿಯ ಸೌಂದರ್ಯವನ್ನು ಇತರರು ಮೆಚ್ಚುವಂತೆ, ಅದು ಹೊರಕ್ಕೆ ಕಾಣಿಸಿ ಮೆರೆಯುವಂತೆ ಆಕೆಯನ್ನು ಸಿಂಗರಿಸಿ ಪ್ರದರ್ಶಿಸುವುದೇ ಅವಳ ಕೆಲಸವು. ಈ ಕವಿಯ ಗುಣಗಳನ್ನೂ ಯೋಗ್ಯತೆಯನ್ನೂ ತಿಳಿದು ಈ ಕಾವ್ಯವನ್ನೂ ತಾವು ಮೆಚ್ಚುವಂತೆ ಮಾಡುವುದೇ ನನ್ನ ಉದ್ದೇಶವು. ಅದು ನೆರವೇರಿತೆಂದರೆ ನನ್ನ ಪ್ರಯಾಸವು ಸಾರ್ಥಕವಾಯಿತೆನ್ನುವೆನು.

ಉಗ್ರಾಣ ಮಂಗೇಶರಾವ್.

ಕನ್ನಡ ಜಿಲ್ಲೆಯ ಕೆಲವು ವಿಶೇಷ ಸ್ಥಳಗಳು

ಪೂಜ್ಯರಾದ ಮಹಾಶಯರೆ! ನಮ್ಮ ಕನ್ನಡ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮ, ಪ್ರತಿಯೊಂದು ದೇವಾಲಯ ಇವುಗಳ ಪೂರ್ವ ಚರಿತ್ರೆಯನ್ನು ಕುರಿತು ವಿಚಾರಿಸಿದಲ್ಲಿ ಅವುಗಳಿಗೆ ತಕ್ಕಷ್ಟು ಮಾಹಾತ್ಮ್ಯವು ಇದ್ದೇ ಇರುವದು. ಈ ಮಾಹಾತ್ಮ್ಯವು ಸರಿಯಾದುದೇ ತಪ್ಪಾದುದೇ ಎಂದು ತಿಳಿಯುವದಕ್ಕೆ ಬೇಕಷ್ಟು ಆಧಾರವನ್ನು ಕೊಡತಕ್ಕ ಇತರ ಯಾವ ಪುರಾಣಗಳೂ ದೊರೆಯದಿದ್ದರೂ, ಅಲ್ಲಲ್ಲಿಯ ಸ್ಥಳ ಮಾಹಾತ್ಮ್ಯವು, ಜನರು ವಾಡಿಕೆಯಾಗಿ ಬಾಯಲ್ಲಿ ಹೇಳಿಕೊಳ್ಳುವ ದಂತ ಕಥೆಗಳು, ಕೆಲವು ಮಟ್ಟಿಗೆ ಶಿಲಾ ಶಾಸನಗಳು, ಇವೆಲ್ಲವೂ ಆಯಾ ಸ್ಥಳಗಳ ಪೂರ್ವ ಚರಿತ್ರೆಯನ್ನು ತಿಳಿಯುವುದಕ್ಕೆ ತಕ್ಕ ಮಟ್ಟಿಗೆ ಸಹಾಯ ಮಾಡುತ್ತವೆ. ಇವುಗಳಲ್ಲಿ ನಿಜಾಂಶವೂ ಬೇಕಾದಷ್ಟು ಇರಬಹುದು; ಹಾಗೆಯೇ ಸುಳ್ಳು ಕಥೆಗಳೂ ಸೇರಿರಬಹುದು. ಆದರೆ ಇವುಗಳಲ್ಲಿ ಯಾವ ಕಥೆಯು ಸತ್ಯ ಯಾವ ಕಥೆಯು ಸುಳ್ಳು ಎಂದು ತಿಳಿಯುವುದಕ್ಕೆ ಸರಿಯಾದ ಇತರ ಸಾಧನಗಳು ದೊರೆಯುವವರೆಗೆ ದೊರೆತುದನ್ನೇ ನಾವು ಆಧಾರವಾಗಿ ಇಟ್ಟುಕೊಳ್ಳಬೇಕಾಗಿರುವುದು.

ನಮ್ಮ ಜಿಲ್ಲೆಯು ಪ್ರಾಚೀನ ಗೌರವದಲ್ಲಿ ಏನೂ ಕಡಮೆಯಾದುದಲ್ಲ. ಇದಕ್ಕೆ ದೃಷ್ಟಾಂತವಾಗಿ ಒಂದು ಕಾಲದಲ್ಲಿ ತುಳುವ ನಾಡು ಅಥವಾ ಈಗಿನ ಕನ್ನಡ ಜಿಲ್ಲೆಯನ್ನೆಲ್ಲ ತನ್ನ ಕೈಕೆಳಗಿಟ್ಟುಕೊಂಡು ಆಳಿದ ಬಾರಕೂರು ಸಂಸ್ಥಾನವು ಈ ಜಿಲ್ಲೆಯಲ್ಲಿಯೇ ಇದ್ದಿತು. ದ್ವೈತ ಮತಸ್ಥಾಪಕರಾಗಿ ಪ್ರಸಿದ್ಧರಾದ ಶ್ರೀಮನ್ಮಧ್ವಾಚಾರ್ಯರವರು ಈ ಜಿಲ್ಲೆಯ ಉಡುಪಿಯ ಬಳಿಯಲ್ಲಿ ಹುಟ್ಟಿದರು. ಪರಶುರಾಮ ಕ್ಷೇತ್ರದೊಳಗಿನ ಸಪ್ತ ಕ್ಷೇತ್ರಗಳಲ್ಲಿ ರಜತ ಪೀಠ (ಉಡುಪಿ), ಕುಮಾರಾದ್ರಿ (ಸುಬ್ರಹ್ಮಣ್ಯ), ಕುಂಭಕಾಶಿ (ಇದು ಕುಂದಾಪುರಕ್ಕೆ ಸಮೀಪವಾಗಿದೆ), ಧ್ವಜೇಶ್ವರ (ಕೋಟೇಶ್ವರ), ಕ್ರೋಢ (ಶಂಕರನಾರಾಯಣ), ಮೂಕಾಂಬಾ (ಕೊಲ್ಲೂರು) ಎಂಬ ಆರು ಕ್ಷೇತ್ರಗಳು ಈ ಜಿಲ್ಲೆಯಲ್ಲಿಯೇ ಇವೆ. ವಿಜಯನಗರ, ನಗರ, ಬಾರಕೂರು ಈ ಸಂಸ್ಥಾನಗಳ ಆಡಳಿತೆಯ ಕಾಲದಲ್ಲಿ ಬಹಳ ಅಭಿವೃದ್ಧಿಗೆ ಬಂದಿದ್ದ ಈ ಜಿಲ್ಲೆಯಲ್ಲಿ ದೇವಾಲಯಗಳಿಲ್ಲದ ಗ್ರಾಮಗಳೇ ಇಲ್ಲ. ಬಾರಕೂರೊಂದರಲ್ಲಿಯೇ ಸುಮಾರು ೧೪೭ ದೇವಾಲಯಗಳಿದ್ದುವು. ಇಂತಹ ಪೂರ್ವೇತಿಹಾಸವುಳ್ಳ ಈ ಜಿಲ್ಲೆಯ ಕೆಲಕೆಲವು ಸ್ಥಳಗಳನ್ನು ಕುರಿತು ಕೊಂಚ ಚರಿತ್ರೆಯನ್ನು ಕೆಳಗೆ ಕೊಡುವೆನು:—

ಬಾರಕೂರು

ಈ ಬಾರಕೂರನ್ನು ಕುರಿತು ನಾನು ಹೆಚ್ಚೇನೂ ಬರೆಯಹೋಗುವದಿಲ್ಲ. ಏಕೆಂದರೆ—ಇದನ್ನು ಕುರಿತು ಹಿಂದೆ ಹಲವರು ಹಲವು ಪುಸ್ತಕಗಳನ್ನೇ ಬರೆದಿ

ದ್ದರು. ಈ ಬಾರಕೂರಿಗೂ ಸಮುದ್ರಕ್ಕೂ ಸುಮಾರು ಮೂರು ಮೈಲು ದೂರ ಮಾತ್ರವಿದೆ. ಈಗ ಅಲ್ಲಿ ಹೋಗಿ ನೋಡತಕ್ಕವರಿಗೆ ಈ ಸ್ಥಳವು ಪುರಾತನ ಕಾಲದಲ್ಲಿ ಒಂದು ರಾಜ್ಯದ ರಾಜಧಾನಿಯಾಗಿರಬೇಕೆಂದು ಮನಸ್ಸಿನಲ್ಲಿ ಸ್ಫುರಿಸದೆ ಇಲ್ಲವೆಂತಿಲ್ಲ. ಬಿದ್ದುಹೋದ ಅದರ ಕೋಟೆ, ಆಳವಾದ ಕಂದಕ, ಪಟ್ಟಣವಿದ್ದುದನ್ನು ತೋರಿಸುವ ಕೋಟೆಯ ಸುತ್ತಲಿನ ವಿಶಾಲವಾದ ಮೈದಾನ, ಅಲ್ಲಲ್ಲಿ ಹಾಳುಬಿದ್ದಿರುವ ಜೈನ ಬಸ್ತಿಗಳು, ಪ್ರಸಿದ್ಧವಾದ ದೊಡ್ಡ ದೇವಾಲಯಗಳು (ಈ ದೇವಾಲಯಗಳಲ್ಲಿ ಶಿವಾಲಯಗಳೇ ವಿಶೇಷವಾಗಿರುವುದನ್ನು ಕಂಡರೆ ಇದನ್ನು ಬಹು ಕಾಲವಾಳಿದವರು ಲಿಂಗವಂತರೆಂದು ತೋರುವುದು), ಅಲ್ಲಲ್ಲಿ ಬಿದ್ದುಹೋಗಿರುವ ಅಥವಾ ಬಲಿಯಾಗಿರುವ ಶಿಲೆಯ ಚಪ್ಪರಗಳು, ಇವೆಲ್ಲವೂ ಆ ಪುರಾತನ ಮಹಿಮೆಯನ್ನು ವ್ಯಕ್ತಗೊಳಿಸುತ್ತವೆ.

ಪಟ್ಟಣವು ಅಭಿವೃದ್ಧಿಯಲ್ಲಿರುತ್ತಿದ್ದ ಕಾಲದಲ್ಲಿ ಇದು ದಕ್ಷಿಣೋತ್ತರ ಸುಮಾರು ಮೂರು ಮೈಲು, ಪೂರ್ವ ಪಶ್ಚಿಮವೂ ಸುಮಾರು ಅಷ್ಟೇ ವಿಶಾಲವಾದ ಪಟ್ಟಣವಾಗಿದ್ದಿತು. ಈ ಪಟ್ಟಣದಲ್ಲಿ ಮೂಡುಕೇರಿ, ಕೋಟೆಯ ಕೇರಿ, ವೇಣೆಗಾರರ ಕೇರಿ, ಚೌಳಿಕೇರಿ, ಭಂಡಾರ ಕೇರಿ ಎಂಬ ಪ್ರಸಿದ್ಧವಾದ ಐದು ಕೇರಿಗಳಿದ್ದುವು. ಈಗ ಈ ಕೇರಿಗಳಲ್ಲಿ ಒಂದರಿಂದೊಂದಕ್ಕೆ ಕನಿಷ್ಠಪಕ್ಷ $\frac{3}{4}$ ಮೈಲು ದೂರವಾದರೂ ಇರುವುದು ಮಾತ್ರವಲ್ಲ; ಮಧ್ಯೇ ಇರುವ ಸ್ಥಳವನ್ನು ಜನರು ತಗ್ಗಿಸಿ ಗದ್ದೆ ಬಯಲು ಇಲ್ಲವೆ ತೋಟಗಳನ್ನು ಮಾಡಿಬಿಟ್ಟುದರಿಂದ ಇದರ ಪುರಾತನ ವೈಭವವನ್ನು ತೋರಿಸತಕ್ಕ ಕುರುಹುಗಳಲ್ಲಿ ಈಗ ಬಹಳ್ಳೇ ಮಾಯವಾಗುತ್ತ ಬಂದಿವೆ. ಈ ಜಿಲ್ಲೆಯು ಕುಂಪಣಿಯ ಆಳಿಕೆಗೆ ಬಂದ ಮೇಲೆಯೂ ಬಹಳ್ಳೇ ಕಾಲದವರೆಗೆ ಬಾರಕೂರು ತಾಲೂಕು, ಬಾರಕೂರು ಬಂದರು ಎಂಬ ಹೆಸರೇ ರೂಢಿಯಲ್ಲಿದ್ದಿತು. ಆದರೆ ಈಚೆಗೆ ಅದೂ ಲೋಪವಾಗಿ ಹೋಗಿದೆ.

ಬಾರಕೂರು ಸಂಸ್ಥಾನವಾಗಿದ್ದ ಕಾಲದಲ್ಲಿ ಅದರ ಬಂದರಿನಲ್ಲಿ ತುಂಬ ವ್ಯಾಪಾರವು ನಡೆಯುತ್ತಿದ್ದುದು ಮಾತ್ರವಲ್ಲ, ಪರದೇಶಿಯರು ಕೂಡ ಅಲ್ಲಿಗೆ ಬಂದು ವ್ಯಾಪಾರಮಾಡಿಕೊಂಡು ಹೋಗುತ್ತಿದ್ದರು. ಸೀತಾನದಿ, ಸುವರ್ಣಾನದಿ ಎಂಬ ಎರಡು ಹೊಳೆಗಳು ಈಗಿನ ಬಂದರಿರುವ ಸ್ಥಳದ ಬಳಿಯಲ್ಲಿ ಒಂದಕ್ಕೊಂದು ಸೇರಿ ಒಂದೇ ಹೊಳೆಯಾಗಿ ಸಮುದ್ರಕ್ಕೆ ಕೂಡುತ್ತವೆ. ಈಗ ಈ ಎರಡು ಹೊಳೆಗಳು ಒಂದಕ್ಕೊಂದು ಸೇರಿ ಸಮುದ್ರ ಸಂಗಮವಾಗುವಲ್ಲಿ ಈಗಿನ ಹಂಗಾರಕಟ್ಟೆಯ ಬಂದರವಿದೆ. ಹಂಗಾರಕಟ್ಟೆ ಎಂದು ಹೆಸರು ಬರುವುದಕ್ಕೆ ಹಲವರು ಹಲವು ಕಾರಣವನ್ನು ಹೇಳುತ್ತಿದ್ದಾರೆ. ಆದರೆ ವಾಸ್ತವಿಕವಾಗಿ ಆ ಬಂದರು ಇರುವಲ್ಲಿ ಮುಂಚೆ ಹಂಗರಕನ ಮರಗಳು ಧಾರಾಳವಾಗಿ ಬೆಳೆದಿದ್ದುವು. ಈ ಮರಗಳನ್ನು ಅಲ್ಲಿಯ ಜನರು 'ಹಂಗಾರ ಮರ'ವೆಂದೂ ಅವುಗಳು ಬೆಳೆದಿರುವ ಸ್ಥಳವನ್ನು ಹಂಗಾರ ಕಟ್ಟೆ ಎಂದೂ ಸಾಮಾನ್ಯವಾಗಿ ಕರೆಯುತ್ತಿದ್ದಂತೆ

ತೋರುವುದು. ಈಗಲೂ ಅಲ್ಲಿಂದ ಪೂರ್ವಕ್ಕೆ ಧಾರಾಳವಾಗಿ ಪಂಗರಕನ ಮರಗಳು ಇರುವುದಲ್ಲದೆ ಅವು ಬಲು ದೊಡ್ಡವಾಗಿ ಬೆಳೆದಿವೆ.

ಬಾರಕೂರಲ್ಲಿ ಬಂದರಿದ್ದ ಕಾಲದಲ್ಲಿ ಅಳಿವೆಯು ಈಗ ಇರುವ ಸ್ಥಳದಲ್ಲಿ ಇದ್ದಿಲ್ಲ; ಈಗ ಇರುವ ಅಳಿವೆಗೆ ಬಹಳ ದಕ್ಷಿಣವಾಗಿ ಸೀತಾನದಿಯು ಹರಿದು ಬರುವ ದಿಕ್ಕಿಗೇ ಇದಿರಾಗಿದ್ದಿತು. ಈಗಲೂ ಜನಗಳು ಆ ಸ್ಥಳವನ್ನು ಹಳೆ ಅಳಿವೆ ಎಂದು ಕರೆಯುತ್ತಿದ್ದಾರೆ. ಆ ಕಾಲದಲ್ಲಿ ಹೊಳೆಯು ಬಲು ಆಳವಾಗಿದ್ದು, ಅಲ್ಲಿಂದ ಈಶಾನ್ಯಕ್ಕೆ ಸುಮಾರು ಮೂರು ಮೈಲು ದೂರದಲ್ಲಿದ್ದ ಬಾರಕೂರ ವರೆಗೂ ದೊಡ್ಡ ದೊಡ್ಡ ಹಡಗುಗಳು ಧಾರಾಳವಾಗಿ ಸೀತಾನದಿಯಲ್ಲಿ ಸಾಗಿ ಹೋಗುತ್ತಿದ್ದುವು. ಕ್ರಮ ಕ್ರಮವಾಗಿ ಅಳಿವೆಯು ಅಲ್ಲಿ ಮುಚ್ಚಿಹೋಗಿ ಅದರ ಉತ್ತರಕ್ಕೆ ಸುಮಾರು ಮೂರು ಫರ್ಲಾಂಗು ದೂರದಲ್ಲಿ ಹೊಸತಾಗಿ ಕೊರೆಯಲು, ಕ್ರಮವಾಗಿ ಹೊಳೆಯ ಪ್ರವಾಹಕ್ಕೆ ತಡೆಯಾಗಿ ಹೊಳೆಯಲ್ಲಿ ಬಂದು ನಿಂತು ಹೊಳೆಯು ಮುಚ್ಚುತ್ತಾ ಬಂದುದರಿಂದ ಬಾರಕೂರಲ್ಲಿದ್ದ ಬಂದರನ್ನು ಅಲ್ಲಿಂದ ತೆಗೆದು, ಈಗ ಹಂಗಾರಕಟ್ಟೆಯಲ್ಲಿ ಬಂದರು ಇರುವ ಸ್ಥಳದಿಂದ ದಕ್ಷಿಣಕ್ಕೆ ಸುಮಾರು ಎರಡು ಫರ್ಲಾಂಗು ದೂರದಲ್ಲಿ ಕಟ್ಟಿಸಿದರು. ಆಮೇಲೆ ಅಲ್ಲಿಗೂ ಹಡಗು ಬರಲು ತೊಂದರೆಯಾದಕಾರಣ ಬಂದರು ಈಗ ಇರುವ ಸ್ಥಳಕ್ಕೆ ಒಯ್ಯಲ್ಪಟ್ಟಿತು.

ಬಾರಕೂರು ರಾಜಧಾನಿ ಪಟ್ಟಣವಾಗಿದ್ದ ಕಾಲದಲ್ಲಿ ಅದರಲ್ಲಿ ಹೇರಳ ದ್ರವ್ಯಸಂಪತ್ತಿತ್ತೆನ್ನುವುದಕ್ಕೆ ಅದರಲ್ಲಿ ಈಗಲೂ ಕೆಲ ಕೆಲವು ಸ್ಥಳದಲ್ಲಿ ದೊರೆಯುವ ನಿಕ್ಷೇಪಗಳೇ ಸಾಕ್ಷಿಗಳಾಗಿವೆ. ರಾತ್ರಿ ಕಾಲದಲ್ಲಿ ಈಗಲೂ ಅನೇಕರು ಆ ದ್ರವ್ಯಕ್ಕಾಗಿ ಪ್ರಯತ್ನಪಡುತ್ತಿದ್ದಾರೆ. ಈ ವಿಚಾರವು ಸರಕಾರದ ದೃಷ್ಟಿಗೂ ಬಿದ್ದು ಅವರು ಅಲ್ಲಿಯ ಕೆಲ ಕೆಲವು ಸ್ಥಳಗಳನ್ನು ಅಗೆಯಕೂಡದೆಂದು ಮನ್ನ ಪಡಿಸಿರುವರು. ಈಗಲೂ ಇಲ್ಲಿಯ ಚೌಳಿಕೇರಿ ದೇವಾಲಯದಲ್ಲಿ ದೊಡ್ಡ ಭಂಡಾರವು ಇರುವುದು. ಈ ಭಂಡಾರದ ಕಲ್ಲು ಪತ್ರಾಸುಗಳಲ್ಲಿ ಮುತ್ತು ರತ್ನಾದಿಗಳೂ, ರತ್ನಖಚಿತ ಬಂಗಾರದ ನಗಗಳೂ ಹೇರಳವಾಗಿರುವುವೆಂತಲೂ, ಆ ಪತ್ರಾಸುಗಳನ್ನು ಈವರೆಗೂ ಯಾರೂ ಸರಿಯಾಗಿ ಬಾಯಿತೆರೆದು ನೋಡಿದವರು ಇಲ್ಲವೆಂತಲೂ ಅಲ್ಲಿಯ ಅರ್ಚಕರು ಹೇಳುತ್ತಿದ್ದಾರೆ. ಈಗಲೂ ಆ ಬಾರಕೂರಿನ ಜನರು ಕೋಟೆಯ ಸುತ್ತುಮುತ್ತಿನ ಇಂತಿಂತಹ ಪ್ರದೇಶದಲ್ಲಿ ಅಗಣಿತವಾದ ದ್ರವ್ಯವಿದೆ ಎಂದು ತೋರಿಸುತ್ತಿದ್ದಾರೆ.

ಬಾರಕೂರಲ್ಲಿ ಇರುವಷ್ಟು ಶಿಲಾಶಾಸನಗಳು ನಮ್ಮ ಜಿಲ್ಲೆಯ ಇತರ ಯಾವ ಸ್ಥಳಗಳಲ್ಲಿಯೂ ದೇವಾಲಯಗಳಲ್ಲಿಯೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅವುಗಳಲ್ಲಿ ಎಷ್ಟೋ ಕಲ್ಲುಗಳನ್ನು ಈಗ ದೇವಸ್ಥಾನಗಳ ಸುತ್ತಲೂ ನೆಲಕ್ಕೆ ಹಾಸಿರುವರು. ಕೆಲವನ್ನು ಸುಮ್ಮನೆ ನಿಲ್ಲಿಸಿರುವರು, ಕೆಲವು ನೆಲದಡಿಯಲ್ಲಿ ಹೂತುಹೋಗಿವೆ. ಕೆಲವು ವರ್ಷಗಳ ಹಿಂದೆ ಸರಕಾರದ ಶಾಸನ ಇಲಾಖೆ

ಯುವರು ಇಲ್ಲಿಗೆ ಬಂದು ಹಲವು ಶಾಸನ ಶಿಲೆಯ ನಕಲು ತೆಗೆದುಕೊಂಡರು. ಆದರೆ ಅವರು ಏನು ತೆಗೆದುಕೊಂಡರು, ಆ ಶಾಸನಗಳಲ್ಲಿ ಚರಿತ್ರೆಗೆ ಸಂಬಂಧಪಟ್ಟ ಯಾವ ಯಾವ ಅಮೂಲ್ಯ ವಿಷಯಗಳು ದೊರೆತುವು ಎಂದು ಇದುವರೆಗೂ ಪ್ರಕಟವಾಗದಕಾರಣ ಸರ್ಕಾರವು ಈ ಇಲಾಖೆಯನ್ನಿಟ್ಟು ಯಾವ ಉಪಯೋಗವಾಯಿತೋ ಅದಕ್ಕೇ ಗೊತ್ತು. ಹಿಂದೆ ಸಂಗ್ರಹಿಸಿದ್ದ ಎಷ್ಟೋ ಶಾಸನಗಳ ನಕಲುಗಳು ಮೂಲೆಯಲ್ಲಿ ಬಿದ್ದು ಗೆದ್ದಲು, ಇಲಿ, ಹೆಗ್ಗಣಗಳ ಪಾಲಾಗುತ್ತಿರುವುದನ್ನು ಕಂಡರೆ ಯಾರಿಗೆ ದುಃಖವಾಗದು. ಇದರ ಬದಲು, ಸರ್ಕಾರವು ಇಡೀ ಜಿಲ್ಲೆಯಲ್ಲಿ ದೊರೆಯತಕ್ಕ ಶಾಸನಗಳನ್ನೆಲ್ಲ ಪರಿಗ್ರಹಿಸಿ ಬೇರೆ ಬೇರೆ ಭಾಗಗಳಾಗಿ ಅಚ್ಚುಹಾಕಿಸಿ ಅದನ್ನು ಕಡಿಮೆ ಬೆಲೆಗೆ ದೊರೆಯುವಂತೆ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದರೆ ಚರಿತ್ರೆಯನ್ನು ಬರೆಯುವುದರಲ್ಲಿ ಅಭಿರುಚಿಯುಳ್ಳವರಿಗೆ ಮಹೋಪಕಾರ ಮಾಡಿದಂತಾಗುತ್ತಿದ್ದಿತು.

ಬಾರಕೂರಿಗೆ ಈ ಹೆಸರು ಯಾವಾಗ ಬಂದಿತು? ಹೇಗೆ ಬಂದಿತು? ಎಂಬುದು ಯಾವುದೂ ಇದುವರೆಗೆ ಖಂಡಿತವಾಗಿ ತಿಳಿದುಬರಲಿಲ್ಲ. ಬಹು ಜನರು ಹೇಳುವಂತೆ ಇಲ್ಲಿಯ ಅರಸನೊಬ್ಬನು ಹನ್ನೆರಡು ಮಂದಿ ಕನ್ನೆಯರನ್ನು ಏಕಕಾಲದಲ್ಲಿ ಮದುವೆಯಾದನೆಂದೂ ಈ ವಿಶೇಷದ ಸ್ಮಾರಕವಾಗಿ ಜನರು ಅದನ್ನು ಆಮೇಲೆ 'ಬಾರ ಕನ್ನೆಯರ ಊರು,' 'ಬಾರ ಕನ್ಯಾಪುರ' ಎಂದು ಕರೆಯ ತೊಡಗಿದರೆಂದೂ, ಮುಂದೆ 'ಅದೇ ಬಾರಕ ಊರು' ಎಂದು ಮಾರ್ಪಟ್ಟು ಅದೇ ಬಾರಕೂರಾಯಿತೆಂದೂ ಹೇಳುವರು. ಇದು ವಾಸ್ತವಿಕವಾಗಿ ಇದ್ದರೂ ಇರಬಹುದು. ಅಲ್ಲಿಯ ಸ್ಥಳಪುರಾಣದಲ್ಲಿ ಅದಕ್ಕೆ 'ವೇಲಾ ಕೂಲ ಪುರ,' 'ವೈಜಯಂತಿಪುರ' ಮೊದಲಾದ ಬೇರೆ ಬೇರೆ ಹೆಸರುಗಳಿದ್ದಂತೆ ತೋರುವುದು. ಸಂಸ್ಕೃತದಲ್ಲಿ ಬರೆಯಲ್ಪಟ್ಟಿರುವ ಅಲ್ಲಿಯ ಸ್ಥಳಪುರಾಣದಲ್ಲಿ ತೋರುವ 'ವಾರಿ ಕೂಲ ಪುರ'(=ನೀರಿನ ಬಳಿಯ ಪಟ್ಟಣ ಎಂದರೆ ಸಮುದ್ರಕ್ಕೆ ಸಮೀಪವಾದ ಪಟ್ಟಣ)ವೆಂಬುದೇ ಮುಂದೆ ಬಾರಕೂರಾಯಿತೆಂದು ಕೆಲವರ ಮತವಿದೆ. ಇದನ್ನೂ ಪೂರ್ಣವಾಗಿ ಅಲ್ಲಗಳೆಯಲು ಬರುವಂತಿಲ್ಲ.

ಬಾರಕೂರಿನ ಸಿದ್ಧೇಶ್ವರ ದೇವಾಲಯದ ಬಳಿಯ ಒಂದು ಬಾವಿಯಲ್ಲಿ ಸಿದ್ಧರಸವಿದೆ ಎಂದು ಅಲ್ಲಿಯ ಸ್ಥಳಪುರಾಣದಿಂದಲೂ, ಜನಗಳು ಹೇಳಿಕೊಳ್ಳುವ ಕಥೆಯಿಂದಲೂ ವ್ಯಕ್ತವಾಗುತ್ತಿದೆ. ಈಗ ಆ ಬಾವಿಯ ಮೇಲೆ ದೊಡ್ಡ ದೊಡ್ಡ ಪಾಸರಗಳನ್ನೆಳೆದು ಮೇಲೆ ಕಟ್ಟಡ ಕಟ್ಟಿಸಿ ಕಟ್ಟಡದೊಳಗೆ ಹಾಸುಗಲ್ಲುಗಳನ್ನು ಪ್ರತಿಷ್ಠಿಸಿರುವರು. ಆ ಬಾವಿಯೊಳಗೆ ಏನಿದೆ ಎಂದು ಇದುವರೆಗೂ ಯಾರೂ ಶೋಧಿಸಲಿಲ್ಲ.

ಕೆಲವು ವರುಷಗಳ ಹಿಂದೆ ಇಲ್ಲಿಗೆ ಒಬ್ಬ ಬಿಳಿಮೊಗದ ಸಾಹೇಬರು ಬಂದಿದ್ದು, ಬಾರಕೂರನ್ನು ಅಲ್ಲಲ್ಲಿ ಹುಡುಕಿನೋಡುತ್ತಿದ್ದು ಕೊನೆಗೆ ಸಿಂಹಾಸನವೆಂಬಲ್ಲಿ ದೊರೆತ ಒಂದು ಸಣ್ಣ ಶಿಲೆಯನ್ನು ತಮಗೆ ಕೊಡಬೇಕೆಂದು ಕೇಳಿದರಂತೆ.

ಹಾಗೆ ಸಾಹೇಬರು ಬೇಡುವುದೇ ಮಹಾಪ್ರಸಾದವೆಂದು ತಿಳಿದ ಆ ಜನಗಳು ಚಿತ್ರವಿಚಿತ್ರವಾದ ಕೆತ್ತನೆಯ ಕೆಲಸದಿಂದ ಶೋಭಿಸುತ್ತ ಹಸುರು ಬಣ್ಣದಿಂದ ಥಳಥಳಿಸುತ್ತಿದ್ದ ಆ ಶಿಲೆಯನ್ನು ಏನೂ ಸಂದೇಹವಿಲ್ಲದೆ ಸಾಹೇಬರಿಗೆ ಕೊಟ್ಟುಬಿಟ್ಟರು. ಸಾಹೇಬರಾದರೋ ಬಹು ಆನಂದದಿಂದ ಅದನ್ನು ಸ್ವೀಕರಿಸಿ ತಮ್ಮ ದೇಶಕ್ಕೆ ಸಾಗಹಾಕಿದರಂತೆ. ಈಗ ಜನಗಳು ಆ ಶಿಲೆಯ ವಿಷಯವಾಗಿ ಬಗೆಬಗೆಯಾಗಿ ಹೇಳಿಕೊಳ್ಳುತ್ತಿದ್ದಾರೆ.

ಬಾರಕೂರಲ್ಲಿ ಮೊತ್ತಮೊದಲು ಪಟ್ಟಕ್ಕೆ ಕುಳಿತವನು ವಿಕ್ರಮಾರ್ಕನೆಂದು ಅಲ್ಲಿಯ ಸ್ಥಳಪುರಾಣದಿಂದ ವ್ಯಕ್ತವಾಗುತ್ತಿದೆ. ಈ ವಿಕ್ರಮಾರ್ಕನು ಬೇರೆ; ಉಜ್ಜಯಿನಿಯ ವಿಕ್ರಮಾರ್ಕನು ಬೇರೆ. ಇಲ್ಲಿಯ ಕೊನೆಯ ಅರಸೇ ಯಲ್ಲಪ್ಪನಾಯಕನೆಂಬ ಲಿಂಗಾಯತ ದೊರೆಯೆಂದು ಶಿಲಾಶಾಸನದಿಂದ ತೋರುವುದು. ನಗರ ಸಂಸ್ಥಾನವು ಊರ್ಜಿತವಾಗಿರುವವರೆಗೆ ಬಾರಕೂರೂ ಊರ್ಜಿತವಾಗಿಯೇ ಇದ್ದಿತು. ಎಂದು ನಗರ ಸಂಸ್ಥಾನವು ನಾಶವಾಯಿತೋ ಅಂದೇ ಬಾರಕೂರೂ ಬಿದ್ದಿತು. ಬಾರಕೂರಿನ ಅರಸರಿಗೆ 'ಪಶ್ಚಿಮ ಸಮುದ್ರಾಧೀಶ್ವರ ಶ್ರೀಮನ್ಮಹಾರಾಜಾಧಿರಾಜ'ರೆಂಬ ಬಿರುದಿದ್ದಂತೆ ಶಾಸನಗಳಿಂದ ವ್ಯಕ್ತವಾಗುತ್ತಿದೆ.

ಬಾರಕೂರಲ್ಲಿ ಎಷ್ಟೋ ಕಾಲ ಜೈನರು ಆಳಿದ್ದರು. ಆಮೇಲೆ ಲಿಂಗಾಯತರು ಇಲ್ಲಿಗೆ ಅರಸರಾದರು. ಲಿಂಗಾಯತರ ದೊರೆತನದ ವೇಳೆಯಲ್ಲಿ ಇದು ಮೊದಲು ವಿಜಯನಗರ ಸಾಮ್ರಾಜ್ಯಕ್ಕೂ, ಆಮೇಲೆ ನಗರ ಸಂಸ್ಥಾನಕ್ಕೂ ಅಧೀನವಾಗಿದ್ದು, ನಗರ ಸಂಸ್ಥಾನವು ನಾಶವಾಗುವಾಗ ಇದೂ ಅದರ ಜತೆಯಲ್ಲಿಯೇ ನಾಶವಾಗಿ ಈಗಿನ ಭಗ್ನಾವಸ್ಥೆಗೆ ಬಂದಿತು. ಒಂದು ಕಾಲದಲ್ಲಿ ಬಾರಕೂರನ್ನು ಅಭಿವೃದ್ಧಿಯಲ್ಲಿಟ್ಟಿದ್ದ ಕಾಲವೇ ಅದನ್ನು ಈಗಿನ ದೈನ್ಯಾವಸ್ಥೆಗೆ ಇಳಿಸಿಬಿಟ್ಟುದರಿಂದ ಆ ಕಾಲಕ್ಕೆ ಒಂದು ಪ್ರಣಾಮವು.

ಬಾರಕೂರನ್ನು ಕುರಿತು ಹೇಳತಕ್ಕುದು ಇನ್ನೂ ವಿಶೇಷವಾಗಿದ್ದರೂ, ಅವುಗಳಲ್ಲಿ ಹೆಚ್ಚಿನ ಭಾಗವು ಇತರ ಗ್ರಂಥಗಳಲ್ಲಿ ಬಂದಿರುವುದರಿಂದಲೂ, ಉಳಿದ ಸ್ವಲ್ಪ ಭಾಗವನ್ನು ಕೂಡ ಹೇಳುವುದಕ್ಕೆ ಈ ಚಿಕ್ಕ ಲೇಖನದಲ್ಲಿ ಅವಕಾಶವಿಲ್ಲದುದರಿಂದಲೂ ಮುಂದುವರಿಯಬೇಕಾಯಿತು.

ಬಾಳಕುದುರು

ಬಾರಕೂರಿನಿಂದ ಸುಮಾರು ಎರಡೂವರೆ ಮೈಲು ನೈಋತ್ಯ ದಿಕ್ಕಿನಲ್ಲಿ ಹಂಗಾರಕಟ್ಟೆಯ ಬಳಿಯಲ್ಲಿ 'ಬಾಳಕುದುರು' ಎಂಬ ಒಂದು ಗ್ರಾಮವಿದೆ. ಈ ಗ್ರಾಮದಲ್ಲಿ ಸ್ಮಾರ್ತ ಶಿವಳ್ಳಿ ಬ್ರಾಹ್ಮಣರಿಗೆ ಸಂಬಂಧಿಸಿದ ಒಂದು ಮಠವಿರುವುದು. ಈ ಮಠದಲ್ಲಿ ಈಗಲೂ ಇಬ್ಬರು ಸಂನ್ಯಾಸಿಗಳಿದ್ದು ತಮ್ಮ ಶಿಷ್ಯವರ್ಗಕ್ಕೆ ಸಂಬಂಧಿಸಿದ ಆಚಾರ ವಿಚಾರಗಳನ್ನು ನೋಡಿಕೊಂಡು ಬರುತ್ತಿರುವರು.

ಈ ಮಠವು ಇಲ್ಲಿ ಸುಮಾರು ೫೦೦ ವರುಷಕ್ಕಿಂತ ಹಿಂದೆಯೇ ಇದ್ದಿತೆಂದು ಅಲ್ಲಿಯ ಶಿಲಾಲೇಖಗಳಿಂದ ವ್ಯಕ್ತವಾಗುತ್ತಿದೆ. ವಿಜಯನಗರದ ಹುಕ್ಕಣ, ಬುಕ್ಕಣ ಮಹಾರಾಜರು ಈ ಮಠದ ಸ್ವಾಮಿಗಳ ಭಕ್ತರಾಗಿ ದತ್ತಿ ಬಿಟ್ಟುದು ಈ ಶಾಸನಗಳಲ್ಲಿ ತೋರುವುದು.

ಇಲ್ಲಿಯ ಪೂಜಾ ವಿಗ್ರಹವು 'ಉಗ್ರನರಸಿಂಹ' ಪ್ರತಿಮೆ. ಈ ಪ್ರತಿಮೆಯು ಪಂಚಲೋಹಮಯವಾಗಿದ್ದು ಒಂದು ಗೇಣು ಎತ್ತರವಾಗಿ ಒಂದೇ ಕಾಲಿನ ಮೇಲೆ ನಿಂತು, ತೊಡೆಯ ಮೇಲೆ ಹಿರಣ್ಯಕಶಿಪುವನ್ನು ಮಲಗಿಸಿಕೊಂಡು ಅವನ ಹೊಟ್ಟೆಯನ್ನು ಬಗೆಯುವಂತಿದೆ. ಈ ವಿಗ್ರಹಕ್ಕೆ ಕೈಯಿಂದ ಮುಟ್ಟಿ ಯಾವಾಗಲೂ ಪೂಜೆಯಿಲ್ಲ. ಈ ಸ್ಥಳವನ್ನು ಕುರಿತು ಅಲ್ಲಿ ಪುರಾಣವಿದೆ. ಈ ಪುರಾಣದಿಂದ ವ್ಯಕ್ತವಾಗುವುದೇನೆಂದರೆ:—

ಸುಮಾರು ೬೦೦ ವರುಷಗಳ ಹಿಂದೆ ಬಾರಕೂರು ವೃದ್ಧಿಸ್ಥಿತಿಯಲ್ಲಿರುವ ಕಾಲದಲ್ಲಿ 'ಕೈವಲ್ಯಾಶ್ರಮ ಸ್ವಾಮಿ' ಎಂಬ ಹೆಸರಿನ ಯೋಗಿಗಳೊಬ್ಬರು ಧರ್ಮಸಂಸ್ಥಾಪನೆಗಾಗಿ ಊರೂರು ತಿರುಗುತ್ತ ಬಾರಕೂರಿಗೂ ಬಂದು, ಅಲ್ಲಿಯ ಸೀತಾ ನದಿಯ ತೀರದ ಒಂದು ಅರೆಯ ಮೇಲೆ ತಮ್ಮ ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು, ತಮ್ಮ ಪೂಜಾ ವಿಗ್ರಹವಾದ ನೃಸಿಂಹ ಪ್ರತಿಮೆಯನ್ನಿಟ್ಟುಕೊಂಡು ಪೂಜಿಸುತ್ತಿರುವಲ್ಲಿ, ಬಾರಕೂರಿನ ಅರಸನ ಪಟ್ಟದ ಆನೆಯು ನೀರಿಗಾಗಿ ಅದೇ ಮಾರ್ಗವಾಗಿ ಬಂದು ಆ ಯತಿಗಳು ಕುಳಿತಲ್ಲಿಯೇ ಹೊಳೆಗಿಳಿಯಿತು. ಆದರೆ ಆ ಸ್ವಾಮಿಗಳ ಆ ಪೂಜಾ ವಿಗ್ರಹವಾದ ಆ ನೃಸಿಂಹ ಪ್ರತಿಮೆಯನ್ನು ಕಂಡ ಮಾತ್ರಕ್ಕೆ ಆನೆಯು ಬೆದರಿ ಘೀಳಿಡುತ್ತ ಹಿಂದಕ್ಕೆ ಓಡಿತು. ಥಕ್ಕನೆ ಯಾರಿಗೂ ಇದರ ಕಾರಣವು ತಿಳಿಯಲಿಲ್ಲ. ಕೊನೆಗೆ ವಿಚಾರಿಸುವಲ್ಲಿ ಸ್ವಾಮಿಗಳು ಅಲ್ಲಿ ಪೂಜಿಸುತ್ತಿರುವ ಪೂಜಾ ವಿಗ್ರಹವೇ ಇದಕ್ಕೆ ಕಾರಣವೆಂದು ತಿಳಿದ ಮೇಲೆ, ಆ ರಾಯನು ಅವರನ್ನು ತನ್ನ ಅರಮನೆಗೆ ಬರುವಂತೆ ಬೇಡಿದನು. ಆದರೆ ಗ್ರಾಮೈಕ ಸಂಚಾರಿಗಳಾದ ಆ ಸಂನ್ಯಾಸಿಗಳು ಇದಕ್ಕೊಪ್ಪದೆ ಮೇಲೆ ಹೇಳಿದ ಬಾಳಕುದುರು ಎಂಬಲ್ಲಿಗೆ ಸಾಯಂಕಾಲದ ವೇಳೆಗೆ ತಮ್ಮ ಪೂಜಾ ವಿಗ್ರಹದೊಡನೆ ಬಂದರು. ಈ ಬಾಳಕುದುರಿಗೆ ಈ ಮುಂಚೆ ಸಂಗಮ ಗ್ರಾಮವೆಂದು ಹೆಸರಿದ್ದಂತೆಯೂ, ಅಲ್ಲಿರುವ ಒಂದು ಶಿವಾಲಯಕ್ಕೆ ಸಂಗಮೇಶ್ವರವೆಂದು ಹೆಸರಿದ್ದ ಹಾಗೂ ಸ್ಥಳ ಪುರಾಣದಿಂದ ತೋರುವುದು. ಈ ಗ್ರಾಮದ ಬಳಿಯಲ್ಲಿ ಸೀತಾನದಿಯೂ ಸುವರ್ಣನದಿಯೂ ಒಂದಕ್ಕೊಂದು ಸಂಗಮವಾಗುವುದೇ ಈ ಹೆಸರಿಗೆ ಕಾರಣವೆಂದು ತೋರುವುದು.

ಕೈವಲ್ಯಾಶ್ರಮ ಸ್ವಾಮಿಗಳು ಸಂಗಮ ಗ್ರಾಮದ ಸಂಗಮೇಶ್ವರ ದೇವಾಲಯದಲ್ಲಿ ಸಾಯಂಕಾಲದ ವೇಳೆಗೆ ಬಂದು ಇಳಿದುಕೊಂಡರು. ಆ ಕಾಲದಲ್ಲಿ ಬ್ರಾಹ್ಮಣರ ಮನೆಗಳು ಹೇರಳವಾಗಿದ್ದ ಈ ಗ್ರಾಮದಲ್ಲಿ ಅಕಸ್ಮಾತ್ತಾಗಿ ಒಬ್ಬ ತೇಜಸ್ವಿ ಯೋಗಿಯು ಬಂದ ವಾರ್ತೆಯು ಮಿಂಚಿನಂತೆ ಹರಡಲು ಜನರೆಲ್ಲರೂ

ಈ ಸಾಧು ಸತ್ಪುರುಷರ ದರ್ಶನಕ್ಕೆ ಬರಿಗೈಯಲ್ಲಿ ಹೋಗುವದು ಉಚಿತವಲ್ಲವೆಂದು ಎಣಿಸಿ ಬಾಳೆಯಹಣ್ಣಿನ ಒಂದೊಂದು ಗೊನೆಯನ್ನು ಹಿಡಿದುಕೊಂಡು ಸ್ವಾಮಿಗಳ ದರ್ಶನಕ್ಕೆ ಹೋದರು. ನೂರಾರು ಜನಗಳು ಅಲ್ಲಿ ಬಂದು ಸೇರುವಲ್ಲಿ ನೂರಾರು ಬಾಳೆಯ ಗೊನೆಗಳು ಅಲ್ಲಿ ಜಮೆಯಾದುವು. ಸ್ವಾಮಿಗಳಿಗೆ ಈ ಗೊನೆಗಳ ರಾಶಿಯನ್ನು ಕಂಡು ಆಶ್ಚರ್ಯವಾಯಿತು. ಅವರು 'ಏನಪ್ಪಾ! ನಿಮ್ಮ ಗ್ರಾಮದಲ್ಲಿ ಬಾಳೆಯು ಹೇರಳವಾಗಿ ಬೆಳೆಯುವದೇ?' ಎಂದು ಕೇಳಿದರು. ಜನರೂ ಅದಕ್ಕೆ ಹೌದೆಂದು ಉತ್ತರ ಕೊಟ್ಟುದಾಯಿತು. ಆಗ ಸ್ವಾಮಿಗಳು ಸಂತೋಷದಿಂದ ಹಾಗಾದರೆ "ನಿಮ್ಮ ಗ್ರಾಮವನ್ನು ಸಂಗಮ ಗ್ರಾಮವೆಂದು ಕರೆಯುವದಕ್ಕಿಂತ 'ರಂಭಾದ್ವೀಪ'ವೆಂದು ಕರೆಯುವದು ಉತ್ತಮವಲ್ಲವೇ?" ಎಂದರು. ಅದನ್ನೂ ಜನರು ಒಪ್ಪಿಕೊಂಡರು.

ಹೀಗೆ ಆ ಗ್ರಾಮಕ್ಕೆ ಅಂದಿನಿಂದ 'ರಂಭಾದ್ವೀಪ,' ಕನ್ನಡದಲ್ಲಿ 'ಬಾಳೆ ಕುದುರು' ಎಂದು ಹೆಸರಾಯಿತು. ಇದಕ್ಕೆ ಕುದುರು ಎಂದು ಹೆಸರು ಬರಲು ಕಾರಣವೇನೆಂದರೆ, ಈ ಗ್ರಾಮಕ್ಕೆ ಪೂರ್ವ ದಕ್ಷಿಣ ಪಶ್ಚಿಮವೆಂಬ ಮೂರು ದಿಕ್ಕುಗಳಲ್ಲಿ ಹೊಳೆ ಹರಿಯುತ್ತಿರುವದು. ಉತ್ತರ ದಿಕ್ಕಿಗೆ ಮಾತ್ರ ನೆಲವಿದೆ. ಗ್ರಾಮದ ದಕ್ಷಿಣ ಭಾಗದಲ್ಲಿ ಈಗ ಎಲ್ಲಿ ಅಗೆದರೂ ಅಡಿಯಲ್ಲಿ ನೆಲವು ಕೆಸರಾಗಿದ್ದು ಬಾವಿಯಲ್ಲಿ ಒಗರು ನೀರು ಬರುತ್ತಿರುವದರಿಂದ ಒಂದು ಕಾಲದಲ್ಲಿ ಅಲ್ಲಿ ಹೊಳೆ ಹರಿಯುತ್ತಿದ್ದಿತೆಂದು ಸ್ಪಷ್ಟವಾಗುತ್ತಿದೆ.

ಮುಂದೆ ಜನರೆಲ್ಲರೂ ಸೇರಿ ಆ ಕೈವಲ್ಯಾಶ್ರಮ ಸ್ವಾಮಿಗಳನ್ನು ಅಲ್ಲಿಯೇ ನಿಂತು ತಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಿ ತಮಗೆ ಧರ್ಮೋಪದೇಶ ಮಾಡುತ್ತಿರಬೇಕಾಗಿ ಬೇಡಿಕೊಳ್ಳಲು, ಬ್ರಾಹ್ಮಣ್ಯವೇ ತುಂಬಿದ್ದ ಆ ಸ್ಥಳವನ್ನು ಕಂಡು ಸ್ವಾಮಿಗಳಿಗೂ ಆನಂದವಾಗಿ ಅಲ್ಲಿ ನಿಲ್ಲಲು ಒಪ್ಪಿಕೊಂಡರು. ಆಗ ಜನಗಳೆಲ್ಲರೂ ಸೇರಿ ಸ್ವಾಮಿಗಳ ವಾಸಕ್ಕಾಗಿ ಒಂದು ಮಠವನ್ನು ಕಟ್ಟಿಸಿ, ಅವರ ನಿತ್ಯ ಭಿಕ್ಷಕ್ಕೂ ಏರ್ಪಾಟು ಮಾಡಿದರು. ಹೀಗೆ ಕೆಲವು ಕಾಲ ಸಾಗಿತು. ಆಮೇಲೆ ಕೈವಲ್ಯಾಶ್ರಮ ಸ್ವಾಮಿಗಳು ರಾಮೇಶ್ವರದ ಯಾತ್ರೆ ಮಾಡಿಕೊಂಡು ಬರುವಂತೆ ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡರು. ದಂಡ ಕಮಂಡಲುಗಳೊಡನೆ ಯಾತ್ರಾರ್ಥವಾಗಿ ಹೊರಟುದೂ ಆಯಿತು. ಈಗ ಉಡುಪಿಗೆ ಸುಮಾರು ಮೂರು ಮೈಲು ಉತ್ತರಕ್ಕಿರುವ 'ಮಾಯಾ ಗುಂಡಿ' ಎಂಬ ಸ್ಥಳಕ್ಕೆ ಬಂದು ಮುಟ್ಟಿ (ಇದಕ್ಕೆ ಮುಂಚೆ ಮಾಯಾ ಗುಂಡಿ ಎಂಬ ಹೆಸರು ಇರಲಿಲ್ಲ.) ವಿಶ್ರಮಿಸಿಕೊಳ್ಳುತ್ತಿರುವಾಗ ಅಲ್ಲಿಯೇ ಸಮೀಪದಲ್ಲಿ ಒಬ್ಬ ಶ್ರೀಮಂತನಾದ ಶೂದ್ರನು ಒಂದು ದೊಡ್ಡ ಕೆರೆಯನ್ನು ಕಟ್ಟಿಸಬೇಕೆಂದೆಣಿಸಿ ಎಷ್ಟು ಅಗೆಯಿಸಿದರೂ ನೀರು ಬರಲಿಲ್ಲ. ಕೊನೆಗೆ ಈತನು ತಮ್ಮೂರಿಗೆ ಒಬ್ಬರು ಸಂನ್ಯಾಸಿಗಳು ಬಂದುದನ್ನು ಕೇಳಿ ಅವರ ಬಳಿಗೆ ಹೋಗಿ ಪ್ರಣಾಮವನ್ನು ಮಾಡಿ ತನ್ನ ಶ್ರಮವು ನಿಷ್ಫಲವಾದುದನ್ನು ಆ ಸಂನ್ಯಾಸಿಗಳಿಗೆ ವಿಜ್ಞಾಪಿಸಿಕೊಂಡನು. ಅದಕ್ಕೆ ಸ್ವಾಮಿಗಳು 'ನಾನು ಇನ್ನು

ಒಂದು ವರ್ಷಕ್ಕೆ ರಾಮೇಶ್ವರ ಯಾತ್ರೆಯನ್ನು ಮುಗಿಸಿ ಇದೇ ಮಾರ್ಗವಾಗಿ ಬರುತ್ತೇನೆ. ಆಗ ನಿನ್ನ ಇಷ್ಟಾರ್ಥವನ್ನು ಸಲಿಸುವೆನು' ಎಂದು ವಚನವಿತ್ತು ಹೊರಟುಹೋದರು.

ಇತ್ತ ಆ ಧಾರ್ಮಿಕ ಶೂದ್ರನು ಆ ದಿವಸವನ್ನೇ ಲೆಕ್ಕಮಾಡುತ್ತಿದ್ದನು. ವರ್ಷವು ಸಂಪೂರ್ಣವಾಗಿ ದಾಟುವ ಕಾಲವು ಹತ್ತಿರವಾಯಿತು. ಸ್ವಾಮಿಗಳು ಮಾತುಕೊಟ್ಟ ಪ್ರಕಾರ ಯಾತ್ರೆಯನ್ನು ಮುಗಿಸಿಕೊಂಡು, ಕಾಲಕ್ಕೆ ಸರಿಯಾಗಿ ಅಲ್ಲಿಗೆ ಬಂದರು. ಸ್ವಾಮಿಗಳು ಬಂದುದನ್ನು ಕೇಳಿ ಶೂದ್ರನು ಅವರ ಬಳಿಗೆ ಹೋಗಿ ಅವರನ್ನು ಕೆರೆಯ ಬಳಿಗೆ ಕರೆತಂದನು. ಕೂಡಲೆ ಸ್ವಾಮಿಗಳು ತಮ್ಮ ವಚನವನ್ನು ಸಲಿಸುವುದಕ್ಕಾಗಿ ಕೆರೆಯಲ್ಲಿ ಇಳಿದು ತಮ್ಮ ದಂಡದಿಂದ ಒಂದು ಮೂಲೆಯನ್ನು ಹೊಡೆಯುತ್ತಲೇ ಒಂದು ದೊಡ್ಡ ಪ್ರವಾಹವೇ ಬಂದಂತಾಗಿ ಕೆರೆಯು ಕ್ಷಣದಲ್ಲಿ ತುಂಬಿತು. ಸ್ವಾಮಿಗಳು ಎಲ್ಲಿಗೆ ಹೋದರೋ ಯಾರಿಗೂ ತಿಳಿಯಲಿಲ್ಲ. ಕೆರೆಯಲ್ಲೆಲ್ಲ ಹುಡುಕಿ ನೋಡಿದರೂ ಏನೂ ದೊರೆಯಲಿಲ್ಲ. ಅಂದಿನಿಂದ ಆ ಕೆರೆಗೂ ಆ ಊರಿಗೂ 'ಮಾಯಾ ಕುಂಡ' 'ಮಾಯಾ ಗುಂಡಿ' ಎಂದರೆ ಕೈವಲ್ಯಾಶ್ರಮ ಸ್ವಾಮಿಗಳು ಮಾಯವಾದ ಸ್ಥಳ ಎಂಬ ಹೆಸರೇ ರೂಢಿಯಾಗಿ ಸಲ್ಲತೊಡಗಿತು.

ಈಗಲೂ ಅಲ್ಲಿಗೆ ಎಂದಾದರೂ ಬಾಳಕುದುರು ಮಠದ ಸ್ವಾಮಿಗಳು ಹೋದರೆ, ಆ ಕೆರೆಯನ್ನೇ ಕೈವಲ್ಯಾಶ್ರಮ ಸ್ವಾಮಿಗಳ ವೃಂದಾವನ ಅಥವಾ ಸಮಾಧಿ ಎಂಬ ಭಾವನೆಯಿಂದ ಅದನ್ನೇ ಪೂಜಿಸುವರು. ಈ ಮಹೋಪಕಾರಕ್ಕಾಗಿ ಆ ಶೂದ್ರನೂ ತನ್ನ ಆಸ್ತಿಯ ಅರ್ಧಾಂಶವನ್ನು ಮಠದ ಅಮೃತಪಡಿ ನಂದಾದೀಪದ ವೆಚ್ಚಕ್ಕಾಗಿ ಬಿಟ್ಟು ಅದರ ತೆರಿಗೆಯನ್ನು ಆತನೇ ಸರ್ಕಾರಕ್ಕೆ ಪಾವತಿಮಾಡಿ ಹುಟ್ಟುವಳಿಯನ್ನು ಮಠಕ್ಕೆ ಪಾವತಿಮಾಡುತ್ತಿದ್ದನು. ಈ ಪದ್ಧತಿಯು ಅವನ ಮಕ್ಕಳು ಮೊಮ್ಮಕ್ಕಳ ಕಾಲದವರೆಗೆ ನಡೆದುಬಂದರೂ ಕೆಲವು ವರುಷ ಕಳೆದಮೇಲೆ ಮುಂದಿನವರು ಆ ಭೂಮಿಯ ತೆರಿಗೆಕೊಡುವುದನ್ನು ನಿಲ್ಲಿಸಿಬಿಟ್ಟರು. ಆಗ ತೆರಿಗೆಗಾಗಿ ಆಸ್ತಿಯು ಅನ್ಯಾಕ್ರಾಂತವಾಗಿ ಹೋಗಿ ಮಠಕ್ಕೆ ಅಲ್ಲಿಂದ ಬರುತ್ತಿದ್ದ ಹುಟ್ಟುವಳಿಗೂ ಸೊನ್ನೆಬಿತ್ತು. ಈ ಸಂಬಂಧವಾದ ರಿಕಾರ್ಡುಗಳು ಕೆಲವು ಮಠದಲ್ಲಿ ಈಗಲೂ ಇವೆ. ಆದರೆ ಆ ಸಂಬಂಧವಾದ ಆಸ್ತಿಯು ಯಾವುದು ಏನೆಂಬುವುದು ಈಗ ಯಾರಿಗೂ ಗೊತ್ತಿರುವುದಿಲ್ಲ.

ಕೈವಲ್ಯಾಶ್ರಮ ಸ್ವಾಮಿಗಳ ತರುವಾಯ ಮಠದಲ್ಲಿ ಕೆಲವು ಕಾಲ ಆಶ್ರಮವೇ ಇರಲಿಲ್ಲ. ಮುಂದೆ ಹೀಗಾಗಬಾರದೆಂದು ಶಿಷ್ಯರೆಲ್ಲ ಒಟ್ಟಾಗಿ ಸೇರಿ ಮಠದಿಂದ ಈಶಾನ್ಯಕ್ಕೆ ಸುಮಾರು ೧೫ ಮೈಲು ದೂರ ಕಂದಾವರದ ಬಳಿಯ ಹುತ್ತೂರು ಮಠದಲ್ಲಿದ್ದ ಒಬ್ಬ ಸಂನ್ಯಾಸಿಗಳನ್ನು ಬಾಳಕುದುರು ಮಠಕ್ಕೆ ಕರೆತಂದು ಅಲ್ಲಿಯೇ ನಿಲ್ಲುವಂತೆ ಪ್ರಾರ್ಥಿಸಿಕೊಂಡಂತೆ ಆ ಸ್ವಾಮಿಗಳು ಅಲ್ಲಿಯೇ ನಿಂತು ಶಿಷ್ಯ ವರ್ಗವನ್ನು ಅನುಗ್ರಹಿಸತೊಡಗಿದರು. ಅಂದಿನಿಂದ ಹುತ್ತೂರು ಮಠವೂ

ಬಾಳಕುದುರು ಮಠಕ್ಕೆ ಸೇರಿತು. ಅಲ್ಲಿ ನಡೆಯುತ್ತಿದ್ದ ನವರಾತ್ರಿ ಮೊದಲಾದ ಉತ್ಸವಗಳೂ ಇಲ್ಲಿ ನಡೆಯುತ್ತೊಡಗಿದುವು. ಆಮೇಲೆ ಈ ಮಠದಲ್ಲಿ ಅವಿಚ್ಛಿನ್ನವಾಗಿ ಆಶ್ರಮವು ನಡೆಯುತ್ತ ಬಂದಿರುವುದು.

ಈ ಮಠದಲ್ಲಿ ಹಿಂದೆ ಇದ್ದ ಸ್ವಾಮಿಗಳೆಲ್ಲರೂ ಪರಮ ವೇದಾಂತಿಗಳೆಂದೂ ವಿದ್ವಾಂಸರೆಂದೂ ಕೀರ್ತಿಗೆ ಬಂದವರು. ಅವರಲ್ಲಿ ಒಬ್ಬ ಸ್ವಾಮಿಗಳಂತೂ ಈ ಪಾಂಡಿತ್ಯದ ಜತೆಯಲ್ಲಿ ಇಂದ್ರಜಾಲ ಮಹೇಂದ್ರಜಾಲವನ್ನೂ ತಿಳಿದವರಾಗಿ ಒಮ್ಮೊಮ್ಮೆ ತಮ್ಮ ಈ ವಿದ್ಯೆಯಿಂದ ಜನಗಳನ್ನು ಬೆರಗುಮಾಡಿಬಿಡುತ್ತಿದ್ದರಂತೆ. ಇವರ ಈ ಪಾಂಡಿತ್ಯಕ್ಕಾಗಿ ಜನಗಳು ಇವರನ್ನು ಸಾಮಾನ್ಯವಾಗಿ 'ದೊಡ್ಡ ಸ್ವಾಮಿ'ಗಳೆಂದು ಕರೆಯುತ್ತಿದ್ದರು.

ಈ ಮಠದಲ್ಲಿ ಈಗ ಹಲವು ಪುರಾತನ ಪುಸ್ತಕಗಳ ಸಂಗ್ರಹವು ಇರುವುದು. ಈ ಪುಸ್ತಕಗಳಲ್ಲಿ ಇಲ್ಲಿಯ ಜನಗಳ ವಿಚಾರವನ್ನು ತಿಳಿಸುವ ಸಹ್ಯಾದ್ರಿಯು ಒಂದು. ಈ ಸಹ್ಯಾದ್ರಿಯಲ್ಲಿ ಈ ಜಿಲ್ಲೆಗೆ ನಾಡವರು ಅಥವಾ ಬಂಟರು ಯಾವಾಗ ಅಲ್ಲಿಂದ ಹೇಗೆ ಬಂದರೆಂಬುದನ್ನು ವಿವರವಾಗಿ ಹೇಳಿರುವುದಲ್ಲದೆ. ಅವರ ರೀತಿ, ನೀತಿ, ಆಚಾರ ಮೊದಲಾದುವುಗಳನ್ನೂ ವಿವರಿಸಿರುವುದು. ಅವರ ಅಳಿಯ ಸಂತಾನದ ಕಟ್ಟಿನ ಮೂಲವೂ ಈ ಪುಸ್ತಕದಲ್ಲಿದೆ.

ಬಾಳಕುದುರಿನಿಂದ ಸುಮಾರು ಮೂರು ಮೈಲು ಉತ್ತರಕ್ಕೆ ಹೋಗುವಲ್ಲಿ ಸಾಲಿಗ್ರಾಮವು ಬರುವುದು. ಈ ಸಾಲಿಗ್ರಾಮದಲ್ಲಿರುವ ವಿಶೇಷವೆಂದರೆ ನೃಸಿಂಹ ದೇವಾಲಯವು. ಇಲ್ಲಿಗೂ ಸ್ಥಳಪುರಾಣವಿದೆ. ಈ ಸ್ಥಳ ಪುರಾಣದಲ್ಲಿ ಅಲ್ಲಿಯ ದೇವಾಲಯದ ನಿರ್ಮಾಣದ ವಿಚಾರವಾದ ವಿವರವು ಇರುವುದು. ಲೋಕಾದಿತ್ಯನೆಂಬ ಕದಂಬರಾಜನ ಆಳಿಕೆಯ ಕಾಲದಲ್ಲಿ ಆತನು ಭಟ್ಟಾಚಾರ್ಯರೆಂಬ ಒಬ್ಬ ವೈದಿಕ ಧರ್ಮಾನುಯಾಯಿಗಳಿಂದ ಇಲ್ಲಿ ನೃಸಿಂಹ ವಿಗ್ರಹವನ್ನು ಪ್ರತಿಷ್ಠಿಸಿದನೆಂದು ತೋರುವುದು. ಈ ವಿಗ್ರಹವು ಸಂಪೂರ್ಣ ಸಾಲಿಗ್ರಾಮ ಶಿಲೆಯಿಂದಲೇ ಆದುದರಿಂದ ಈ ಸ್ಥಳಕ್ಕೂ ಸಾಲಿಗ್ರಾಮವೆಂದು ಹೆಸರು ಬಂದುದಾಗಿ ಸ್ಥಳ ಪುರಾಣವು ಹೇಳುವುದು. ಅಂತು ಈ ದೇವಾಲಯವು ಈಗ ಕೋಟಿ ಸಮಾಜದ ಬ್ರಾಹ್ಮಣರ ಗುರುದೇವಸ್ಥಾನವಾಗಿದ್ದು ಆ ದೇವಾಲಯದ ಮೊಕ್ತೇಸರರೇ ಅವರ ಸಮಾಜದ ಆಚಾರ ವಿಚಾರಗಳನ್ನು ನೋಡುತ್ತಿರುವರು.

ಈಗ ಈ ದೇವಾಲಯದ ದ್ವಾರವು ಪಶ್ಚಿಮ ಮೊಗವಾಗಿರುವುದು. ಆದರೆ ಹಿಂದೊಂದು ಕಾಲದಲ್ಲಿ ಅದು ಪೂರ್ವ ಮೊಗವಾಗಿದ್ದಂತೆ ಅಲ್ಲಿಯ ಸ್ಥಳ ಪುರಾಣದಿಂದ ತೋರುವುದು. ಆ ಕಾಲದಲ್ಲಿ ದೇವಾಲಯದ ಮುಂದಿನ ಪೈರು ಪಚ್ಚೆಗಳೆಲ್ಲ ಒಣಗಿ ರೈತರಿಗೆ ಹೇರಳ ನಷ್ಟ ಸಂಭವಿಸುತ್ತಿರಲು, ಯಾರೋ ಹೋತನೆಂಬ ಬ್ರಾಹ್ಮಣನೊಬ್ಬನು ಕೋಪದಿಂದ ಕೊಡಲಿಯನ್ನೆತ್ತಿಕೊಂಡು ಬಂದು ವಿಗ್ರಹದ ಪಕ್ಕದಿಂದ ಹೊಡೆಯಲು ತಲೆಯಿಂದ ಚಕ್ಕೆ ಹಾರಿತು. ಆ ಬ್ರಾಹ್ಮಣನು

ಕೂಡಲೆ ಅಲ್ಲಿ ಸತ್ತು ಬಿದ್ದನು. ಮರುದಿನ ನೋಡುವಾಗ ವಿಗ್ರಹದ ಮೊಗವು ಪಶ್ಚಿಮ ಕಡೆಗೆ ತಿರುಗಿದ್ದಿತು. ಈಗಲೂ ವಿಗ್ರಹದ ಬಳಿಯಲ್ಲಿ ಆ ಚಕ್ಕೆಯು ಇರುವುದು ಮಾತ್ರವಲ್ಲ, ಆ ಹೊಳೆತನ ಸಂತತಿಯವರಿಗೆ ಈಗಲೂ ದೇವಸ್ಥಾನದ ಗರ್ಭಗುಡಿಯೊಳಗೆ ಹೋಗದಂತೆ ಕಟ್ಟಿದೆ.

ಈ ದೇವಾಲಯಕ್ಕೆ ವಿಜಯನಗರದ ದೊರೆತನದ ಕಾಲದಲ್ಲಿ ೩೦೦೦ ಮುಡಿ ಭತ್ತ ಬೆಳೆಯುವಷ್ಟು ಪ್ರದೇಶವು ದೇವಾದಾಯವಾಗಿ ದೊರೆತಿದ್ದಿತು. ಆದರೆ ಈಗ ಅವೆಲ್ಲ ಹೋಗಿ, ಅದರ ಬದಲು ಸರ್ಕಾರದಿಂದ ೯೦೦ ರೂಪಾಯಿ ತಸ್ತೀಕು ದೊರೆಯುತ್ತಿದೆ.

ಒಡ್ಡರಸೆ

ಸಾಲಿಗ್ರಾಮದಿಂದ ಒಂದು ಮೈಲು ಈಶಾನ್ಯಕ್ಕೆ ಒಡ್ಡರಸೆಯೆಂಬ ಒಂದು ಹಳೆಯ ರಾಜಧಾನಿ ಪಟ್ಟಣವು ಇರುವುದು. ಈಗ ಅಲ್ಲಿಗೆ ಹೋಗಿ ನೋಡಿದರೆ, ಹಾಳು ಬಿದ್ದಿರುವ ಸುಮಾರು ಎರಡು ಎಕರೆ ವಿಶಾಲವಾಗಿರುವ ಕೋಟೆ, ಕೋಟೆಗೆ ಸುಮಾರು ಎರಡು ಫರ್ಲಾಂಗು ದೂರದಲ್ಲಿ ಒಂದು ಶಿವಾಲಯವು, ಈ ಆಲಯದ ಮತ್ತು ಕೋಟೆಯ ಸುತ್ತುಮುತ್ತಲೂ ವಿಶಾಲವಾದ ಪ್ರದೇಶಗಳು ಇಷ್ಟಲ್ಲದೆ ಬೇರೇನೂ ವಿಶೇಷಗಳು ಕಾಣುವುದಿಲ್ಲ. ಬಾರಕೂರು ಸಂಸ್ಥಾನದ ಉನ್ನತಿಯ ಕಾಲದಲ್ಲಿ ಈ ಒಡ್ಡರಸೆಯು ಅದಕ್ಕೆ ಅಧೀನವಾಗಿದ್ದಂತೆ ಇಲ್ಲಿಯ ಒಂದು ಮಾಸಿ ಹೋದ ಶಿಲಾಶಾಸನದಿಂದ ತೋರುವುದು.

ಕೋಟೆಯ ಒಳಗಡೆ ಕೆಲವು ನೆಲಗಟ್ಟುಗಳೂ ಒಂದು ಬಾವಿಯೂ ಅಲ್ಲದೆ ಬೇರೇನೂ ತೋರುವುದಿಲ್ಲ. ಕೋಟೆಯ ಸುತ್ತಿನ ಕಂದಕವು ಬಹು ಆಳವಾಗಿರುವುದು. ಕೋಟೆಯ ಹೊರಗಡೆ ಕಬ್ಬಿಣದ ಕಿಟ್ಟದ ಕಲ್ಲುಗಳು ಧಾರಾಳವಾಗಿ ದೊರೆಯುತ್ತಿವೆ. ಜನಗಳು ಔಷಧಕ್ಕಾಗಿ ಇದನ್ನು ಆರಿಸಿಕೊಂಡು ಹೋಗುತ್ತಿರುವರು. ಸುತ್ತುಮುತ್ತಿನ ಪ್ರದೇಶದಲ್ಲಿ ಒಂದು ಕಾಡಿಗೆ 'ಸೂಳೆಕೇರಿ ಕಾಡು' ಎಂದು ಜನಗಳು ಈಗಲೂ ಕರೆಯುವರು. ಇದರಿಂದ ಹಿಂದಿನ ಕಾಲದಲ್ಲಿ ಆ ಪ್ರದೇಶದಲ್ಲಿ ಸೂಳೆಯರ ಕೇರಿಯು ಇದ್ದಿರಬೇಕೆಂದು ಊಹಿಸಬಹುದು. ಈ ಸ್ಥಳದ ಪುರಾತನ ಚರಿತ್ರೆಯನ್ನು ತಿಳಿಯುವುದಕ್ಕೆ ಬೇಕಾದ ಶಾಸನದ ಕಲ್ಲುಗಳು ಮುಂತಾದುವು ಯಾವುವೂ ಇಲ್ಲಿ ವಿಶೇಷವಾಗಿರದ ಕಾರಣ ಕೇವಲ ಜನರ ದಂತಕಥೆಯನ್ನೇ ಅವಲಂಬಿಸಿರಬೇಕಾಗಿರುವುದು.

ಬಾರಕೂರು ಸಂಸ್ಥಾನದ ಏಳಿಗೆಯ ಕಾಲದಲ್ಲಿ ಎಂದರೆ ಸುಮಾರು ೬೦೦ ವರುಷಗಳ ಹಿಂದೆ ಇತ್ತೆಂಬ ಒಡ್ಡರ ಜಾತಿಯ ಅರಸನು ಸುತ್ತುಮುತ್ತಣ ಪ್ರದೇಶಗಳನ್ನು ಆಳಿಕೊಂಡು ಬಾರಕೂರು ಸಂಸ್ಥಾನಕ್ಕೆ ಅಧೀನನಾಗಿರುತ್ತಿದ್ದನು. ಪ್ರತಿ ದಿನವೂ ಅರಮನೆಯ ಒಂದು ದನವು ಮೇಯಲಿಕ್ಕೆ ಹೋದುದು ಹಿಂದಿರುಗಿ ಬರುವಾಗ ಹಾಲಿಲ್ಲದೆ ಬರಿಯ ಕೆಚ್ಚಲಲ್ಲಿ ಬರುತ್ತಿದ್ದಿತು. ಹೀಗೆಯೇ ಕೆಲವು ದಿನ ಸಂದಿತು. ಕಾರಣವು ಯಾರಿಗೂ ತಿಳಿಯಲಿಲ್ಲ. ಒಮ್ಮೆ ದನ ಕಾಯುವ

ಹುಡುಗನೊಬ್ಬನು ಇದರ ಕಾರಣವನ್ನು ಗೊತ್ತುಹಚ್ಚಬೇಕೆಂದು ಎಣಿಸಿ ಆ ದನದ ಹಿಂದೆ ಹಿಂದೆಯೇ ಹೋಗುತ್ತಿದ್ದನು. ದನವು ಒಂದು ಕಾಡನ್ನು ಹೊಕ್ಕು ಕೆಲವು ದೂರ ಹೋದಮೇಲೆ ಒಂದು ಪೊದೆಯ ಬಳಿಗೆ ಹೋಗಿ ಅದರಮೇಲೆ ತನ್ನ ಕೆಚ್ಚಲಿನ ಹಾಲನ್ನು ಸುರಿಸಹತ್ತಿತು. ಇದನ್ನು ಕಂಡು ದನ ಕಾಯುವ ಹುಡುಗನಿಗೆ ಬೆರಗು ಹಿಡಿದು ಓಡುತ್ತೋಡುತ್ತ ಒಂದು ಅರಮನೆಗೆ ದೂರು ಕೊಟ್ಟನು. ಆಗ ಒಡ್ಡರ ಅರಸನು ಕ್ಷೌರಮಾಡಿಸಿಕೊಳ್ಳುವುದಕ್ಕಾಗಿ ಕೂತುಕೊಂಡಿದ್ದನು. ಅವನ ಕಿವಿಗೆ ಈ ಆಶ್ಚರ್ಯಕರವಾದ ವಾರ್ತೆಯು ಬಂದು ಮುಟ್ಟಿದೊಡನೆಯೇ ಆತನು ಅಲ್ಲಿಂದ ಎದ್ದು ಮುಂದುವರಿದನು. ಆಗ ಅವನಿಗೆ ಕ್ಷೌರ ಮಾಡುತ್ತಿದ್ದ ಕ್ಷೌರಕನು ಕೂಡ ಒಂದು ಓಲೆ ಕೊಡೆಯನ್ನು ಹಿಡಿದುಕೊಂಡು ಅರಸನ ಹಿಂದು ಹಿಂದೆಯೇ ಹೋದನು.

ದನ ಕಾಯುವ ಹುಡುಗನು ಅರಸನಿಗೆ ದಾರಿ ತೋರಿಸುತ್ತ ಮುಂದೆ ಮುಂದೆ ಹೋಗುತ್ತಿದ್ದನು. ಅರಸನೂ ಕ್ಷೌರಕನೂ ಅವನ ಹಿಂದೆ ಹೋದರು. ಇವರು ಹೋಗುವಾಗಲೂ ದನವು ಆ ಪೊದೆಯ ಮೇಲೆ ತನ್ನ ಹಾಲನ್ನು ಸುರಿಸುತ್ತಿತ್ತು. ಆ ಕ್ಷಣವೇ ದನವು ಇವರನ್ನು ಕಂಡು ಬೆದರಿ ಆ ಪೊದೆಯ ಮೇಲೆ ಒಂದು ಪಾದವನ್ನಿಟ್ಟು ನೆಗೆದು ಓಡಿಹೋಯಿತು. ಇವರು ಸಮೀಪಕ್ಕೆ ಹೋಗಿ ಪೊದೆಯನ್ನು ಕೆದರಿ ನೋಡುವಾಗ ಅದರೊಳಗೆ ಒಂದು ಲಿಂಗವು ಉದ್ಭವಿಸಿದ್ದಿತು. ಲಿಂಗದ ತಲೆಯಮೇಲೆ ದನದ ಗೊರಸಿನ ಗುರುತೂ ಚೆನ್ನಾಗಿ ಮೂಡಿದ್ದಿತು. ಇದನ್ನು ಕಂಡು ರಾಜನಿಗೆ ಆನಂದವಾಗಿ ಲಿಂಗಕ್ಕೆ ಮರೆಯಾಗಿರುವಂತೆ ಏನು ಮಾಡಬೇಕೆಂದು ಸುತ್ತುಮುತ್ತು ನೋಡುವಾಗ ಕ್ಷೌರಕನು ತನ್ನ ಕೊಡೆಯನ್ನು ಅಲ್ಲಿಯೇ ನೆಲಕ್ಕೆ ಕುತ್ತಿ ಲಿಂಗಕ್ಕೆ ಮರೆಯಾಗಿರುವಂತೆ ಮಾಡಿದನು. ಮುಂದೆ ಅರಸನು ಅಲ್ಲಿಯೇ ದೊಡ್ಡ ದೇವಾಲಯವನ್ನು ಕಟ್ಟಿಸಿ ದೇವಾದಾಯ ವೃತ್ತಿಯನ್ನು ಬಿಟ್ಟನಂತೆ.

ಈಗಲೂ ಆ ಲಿಂಗದ ತಲೆಯಮೇಲೆ ದನದ ಕಾಲ ಗೊರಸಿನ ಗುರುತು ಕಾಣಿಸುವುದೆಂದು ಅರ್ಚಕರು ಹೇಳುತ್ತಾರೆ. ಅದಲ್ಲದೆ ದೇವರು ಉತ್ಸವಕ್ಕೆ ಹೊರಟ ಸಮಯದಲ್ಲಿ ಆ ನಾಪಿತನ ಸಂತತಿಯವರೇ ಈಗಲೂ ದೇವರಿಗೆ ಕೊಡೆ ಹಿಡಿಯತಕ್ಕವರು. ಮುಂಚೆ ಆ ನಾಪಿತನ ಸಂತತಿಯವರು ಅರಸನು ಬಿಟ್ಟ ಸರ್ವಮಾನ್ಯದಿಂದ ಹೇರಳ ಧನಿಕರಾಗಿದ್ದರೆಂದೂ, ಅವರು ಈಗ ಅದನ್ನೆಲ್ಲ ಮಾರಿ ತಿಂದು ಬಡವರಾಗಿರುವರೆಂದೂ ಹೇಳುತ್ತಾರೆ. ಮುಂಚೆ ಈ ದೇವಾಲಯಕ್ಕೆ ಸುಮಾರು ೩೦೦ ವರಹ ತೆರಿಗೆ ಕೊಡುವಷ್ಟು ವಿಶಾಲವಾದ ಭೂಮಿ ಇದ್ದಿತಂತೆ. ಈಗ ಅದೆಲ್ಲ ಹೋಗಿ ಅದರ ಬದಲು ಬರಿಯ ೩೪ ವರಹದ ತಸದೀಕು ಮಾತ್ರ ದೇವಾಲಯಕ್ಕೆ ಸಲ್ಲುತ್ತಿರುವುದರಿಂದ ದೇವಾಲಯವು ತೀರ ಕ್ಷೀಣಸ್ಥಿತಿಯಲ್ಲಿರುವದು. ದೀಪೋತ್ಸವ, ರಥೋತ್ಸವ ಮೊದಲಾದುವು ಹೆಸರಿನ ಪೂರ್ತಿ ನಡೆಯುತ್ತಿವೆ ಅಷ್ಟೆ.

ಒಪ್ಪರಸೆಯಿಂದ ಸುಮಾರು ೭ ಮೈಲು ಉತ್ತರಕ್ಕೆ ರಾಜಮಾರ್ಗದ ಬಳಿಯಲ್ಲಿ ಕುಂಭಾಸಿ ಅಥವಾ ಕುಂಭ ಕಾಶಿ ಎಂಬ ಒಂದು ಕ್ಷೇತ್ರಸ್ಥಳವಿರುವುದು. ಇಲ್ಲಿಗೆ ಹೋಗಿ ನೋಡತಕ್ಕವರಿಗೆ ಕಾಣತಕ್ಕ ವಿಶೇಷವೆಂದರೆ ಎರಡು ಕೆರೆಗಳು, ಒಂದು ದೇವಾಲಯ ಇಷ್ಟೆ. ಇಲ್ಲಿ ವಿಜಯನಗರದ ಸದಾಶಿವರಾಯನ ಕಾಲದ ಕೆಲವು ಶಾಸನದ ಕಲ್ಲುಗಳು ಇರುವುವು. ಗೌತಮ ಋಷಿಯ ತಪಸ್ಸಿಗೆ ಮೆಚ್ಚಿ ಹರಿಹರರು ಪ್ರತ್ಯಕ್ಷರಾದರೆಂಬುದೇ ಇಲ್ಲಿಯ ಸ್ಥಳ ಪುರಾಣವು. ಈ ಸ್ಥಳದಲ್ಲಿ ತಗ್ಗನಲ್ಲಿ ಎರಡು ಕೆರೆಗಳು ಒಂದರ ಪಕ್ಕದಲ್ಲಿ ಒಂದರಂತೆ ಇರುವುವು. ಈ ಎರಡು ಕೆರೆಗಳಲ್ಲಿಯೂ ಮಳೆಗಾಲವೆನ್ನದೆ ಬೇಸಗೆಯೆನ್ನದೆ ಯಾವಾಗಲೂ ನೀರು ತುಂಬಿಯೇ ಇರುವುದು ಮಾತ್ರವಲ್ಲದೆ ನೀರೂ ಬಲು ಶುದ್ಧವಾಗಿರುವುದು. ಬೇಸಗೆಯಲ್ಲಿ ಒಮ್ಮೊಮ್ಮೆ ಕೆರೆಯ ನೀರನ್ನು ಪೂರ್ಣವಾಗಿ ಆರಿಸಿ ಬಿಡುವರು. ಆ ವೇಳೆ ಆ ಕೆರೆಯಲ್ಲಿ ಅಲ್ಲಲ್ಲಿ ಬಹು ಸೊಗಸಾದ ಬೆಣ್ಣೆಯಂತೆ ನುಣ್ಣಗಿರುವ ಭಸ್ಮ ರಾಶಿಯು ತೋರುವುದು. ಅಲ್ಲಿಯ ಜನರು ಈ ಭಸ್ಮ ರಾಶಿಯನ್ನು ಕುರಿತು ಅದು ಗೌತಮ ಋಷಿಯ ಯಜ್ಞ ಕುಂಡವೆಂದು ಹೇಳುವರು.

ದೇವಸ್ಥಾನದೊಳಗೆ ಇನ್ನೇನೂ ವಿಶೇಷವಿಲ್ಲ; ಒಂದು ಸಣ್ಣ ಬಾವಿ ಮಾತ್ರ ವಿರುವುದು. ಬಾವಿಯಲ್ಲಿ ತುಂಬಿರುವ ನೀರು ಗಂಗೋದಕವೆಂದು ಜನರ ನಂಬುಗೆ. ಅದು ಗೌತಮ ಋಷಿಯ ಕಮಂಡಲುವೆಂದೂ, ಅಲ್ಲಿ ಹರಿಹರರ ಸಾನ್ನಿಧ್ಯವಿರುವುದೆಂದೂ, ಪರಶುರಾಮ ಕ್ಷೇತ್ರದ ಸಪ್ತ ಕ್ಷೇತ್ರಗಳಲ್ಲಿ ಒಂದಾದ ಈ ಸ್ಥಳಕ್ಕೆ ವಿಜಯನಗರದ ಸದಾಶಿವರಾಯನೂ, ಅವನ ಕೈಕೆಳಗಿನ ಬಾರಕೂರು ಸಂಸ್ಥಾನದ ಎಲ್ಲಪ್ಪನಾಯಕನೂ ಈ ದೇವಾಲಯಕ್ಕೆ ವಿಶೇಷ ದತ್ತಿಯನ್ನು ಬಿಟ್ಟಂತೆ ಅಲ್ಲಿರುವ ೪—೬ ಶಾಸನದ ಕಲ್ಲುಗಳಿಂದ ವ್ಯಕ್ತವಾಗುತ್ತದೆ. ಈಗ ಈ ದೇವಾಲಯಕ್ಕೆ ಸಲ್ಲುವ ತಸದೀಕು ಬರಿಯ ೧೬೦ ರೂಪಾಯಿ ಮಾತ್ರ. ಈ ಮೊಬಲಗಿನಿಂದ ಅಲ್ಲಿಯ ಉತ್ಸವಾದಿಗಳೆಲ್ಲ ನಡೆಯಬೇಕಾದ ನಿಮಿತ್ತ ದೇವಾಲಯವು ತೀರ ಕ್ಷೀಣ ಸ್ಥಿತಿಯಲ್ಲಿರುವುದು.

ಸರ್ಕಾರವು ತನ್ನ ಸೇವೆಯನ್ನು ಮಾಡುತ್ತಿರುವ ನೌಕರರಿಗೆಲ್ಲ ಆಗಾಗ ಸಂಬಳವನ್ನು ಏರಿಸುವಂತೆ ದೇವಾಲಯಗಳ ತಸದೀಕನ್ನು ಏರಿಸದೆ ಹೋದ ಕಾರಣ ದೇವಾಲಯಗಳಿಂದ ನಿಬಿಡವಾಗಿದ್ದ ಈ ಜಿಲ್ಲೆಯ ಎಷ್ಟೋ ದೇವಸ್ಥಾನಗಳು ಬಿದ್ದುಹೋಗುವ ಸ್ಥಿತಿಯಲ್ಲಿವೆ. ಪೂರ್ವದ ವಿಜಯನಗರ, ನಗರ, ಬಾರಕೂರು ಈ ಸಂಸ್ಥಾನಗಳ ರಾಜರು ಪ್ರತಿಯೊಂದು ದೇವಾಲಯಕ್ಕೂ ಸರ್ವಮಾನ್ಯವನ್ನು ಬಿಟ್ಟಿದ್ದು ಆ ಕಾಲದಲ್ಲಿ ಬಹಳ ಊರ್ಜಿತ ಸ್ಥಿತಿಯಲ್ಲಿದ್ದು ಶಿಲ್ಪ ಕಲೆಗಳ ಮಾದರಿ ಎಂಬಂತಿದ್ದ ಎಷ್ಟೋ ದೇವಾಲಯಗಳು ಈಗ ಭಗ್ನಾವಶೇಷವಾದುದನ್ನು ಕಂಡರೆ ಯಾರಿಗೆ ಕಣ್ಣೀರು ಬಾರದು! ಸರ್ಕಾರವು ನೂರು ವರುಷಗಳ ಹಿಂದೆ ಅಕ್ಕಿ ಛತ್ರಗಳಿಗೂ ಎಣ್ಣೆ ಕಾಯಿಗಳಿಗೂ ಇದ್ದ ಬೆಲೆಯನ್ನೇ ಈಗಲೂ ಸಲಿಸುತ್ತಿರು

ವದರಿಂದ ದೇವಸ್ಥಾನದಲ್ಲಿ ನಡೆಯಬೇಕಾದ ವಿನಿಯೋಗಗಳಾವವೂ ಸರಿಯಾಗಿ ನಡೆಯಲವಕಾಶವಿಲ್ಲದೆ ದೇವಾಲಯಗಳು ಭಗ್ನಾವಸ್ಥೆಗೆ ಬರತೊಡಗಿವೆ.

ಈ ದೇವಸ್ಥಾನಗಳ ಬಳಿ ಇರುವ ಶಾಸನದ ಕಲ್ಲುಗಳು ನಮ್ಮ ಜಿಲ್ಲೆಯ ಪೂರ್ವೇತಿಹಾಸವನ್ನು ತಿಳಿಯಲು ಬಲು ಮಟ್ಟಿಗೆ ಸಹಾಯ ಮಾಡತಕ್ಕವಾಗಿವೆ. ಸರ್ಕಾರವು ಈ ಕಲ್ಲುಗಳಲ್ಲಿ ಕೆಲವು ಶಿಲೆಗಳ ನಕಲನ್ನು ಶಾಸನದ ಇಲಾಖೆಯ ಮೂಲಕ ತೆಗೆಯಿಸಿದರೂ ಅದು ಸರ್ವತ್ರ ಪ್ರಚಾರವಾಗುವಂತೆ ಏರ್ಪಾಡು ಮಾಡದ ಕಾರಣ ನಮ್ಮ ಜಿಲ್ಲೆಯ ಪೂರ್ವೇತಿಹಾಸವನ್ನು ತಿಳಿಯಲು, ಅಥವಾ ಅದನ್ನು ಬರೆಯಲು ಅಭಿರುಚಿಯುಳ್ಳವರಿಗೆ, ಸರ್ಕಾರದ ಈ ಇಲಾಖೆಯಿಂದ ವಿಶೇಷ ಉಪಯೋಗವಾಗದಕಾರಣ ಸರ್ಕಾರವು ಆ ವಿಷಯದಲ್ಲಿ ತುಂಬ ಗಮನಿಸಬೇಕಾದುದು ಮುಖ್ಯವು.

ಕುಂಭಾಸಿಯಿಂದ ಇನ್ನೂ ಎರಡು ಮೈಲು ಉತ್ತರಕ್ಕೆ ಹೋದರೆ ಕೋಟೇಶ್ವರವೆಂಬ ಒಂದು ದೊಡ್ಡ ಶಿವಾಲಯವುಳ್ಳ ಕ್ಷೇತ್ರ ಸ್ಥಳವು ಕಾಣಬರುವುದು. ಈ ದೇವಾಲಯಕ್ಕೆ ಈಗ ಸುಮಾರು ೩೦೦೦ ರೂಪಾಯಿ ತಸದೀಕು ಸಲ್ಲುತ್ತಿರುವುದು. ಈ ದೇವಸ್ಥಾನದ ಕೆರೆಯಷ್ಟು ದೊಡ್ಡ ಕೆರೆಯು ಜಿಲ್ಲೆಯ ಉತ್ತರ ಭಾಗದಲ್ಲಿ ಎಲ್ಲಿಯೂ ಇಲ್ಲ. ಇಲ್ಲಿಯೂ ಕೆಲವು ಶಿಲಾಶಾಸನಗಳಿರುವುವು. ಈ ಶಾಸನಗಳಲ್ಲಿ ಕೆಲವು ಚೆನ್ನಾಗಿ ಓದಲಿಕ್ಕೆ ಬಾರದ ಸ್ಥಿತಿಯಲ್ಲಿ ಸವೆದು ಹೋಗಿರುವುವು. ಓದಲಿಕ್ಕೆ ಬರುವ ಶಾಸನಗಳಿಂದ ಏನು ತಿಳಿಯುವುದೆಂದರೆ:— ವಿಜಯನಗರದ ಹುಕ್ಕರಾಜನ ಕಾಲದಿಂದಲೂ ಈ ದೇವಾಲಯಕ್ಕೆ ಮಾನ್ಯದ ಭೂಮಿಯನ್ನು ಬಿಟ್ಟ ವಿವರವಿದೆ. ಸಾಮಾನ್ಯವಾಗಿ ಕೋಟೇಶ್ವರದ ಸುತ್ತುಮುತ್ತಿನ ಮೂರು ಗ್ರಾಮಗಳ ಹುಟ್ಟುವಳಿಯೆಲ್ಲ ಈ ದೇವಾಲಯಕ್ಕೆ ಸಲ್ಲುತ್ತಿದ್ದಂತೆ ಕೆಲವು ಕಲ್ಲುಗಳಿಂದ ವ್ಯಕ್ತವಾಗುತ್ತಿದೆ. ಈ ದೇವಾಲಯವನ್ನು ಬಸರೂರಿನ ಅರಸನು ಕಟ್ಟಿಸಿದುದಾಗಿ ಶಾಸನಗಳಿಂದಲೂ ಜನರು ಹೇಳುವ ದಂತಕಥೆಯಿಂದಲೂ ವ್ಯಕ್ತವಾಗುತ್ತಿದೆ.

ಈಗ ಈ ದೇವಾಲಯಕ್ಕೂ ಸಮುದ್ರಕ್ಕೂ ಅರ್ಧ ಮೈಲು ದೂರವಿದೆ. ಹಿಂದೆ ಈ ದೇವಾಲಯದವರೆಗೂ ಸಮುದ್ರವಿದ್ದಿತೆಂದೂ, ಅಲ್ಲಿಯ ಮರಳು ರಾಶಿಯಲ್ಲಿ ಹೂತುಹೋಗಿದ್ದ ಲಿಂಗಗಳನ್ನು ಯಜ್ಞಾರ್ಥವಾಗಿ ಭೂಮಿಯನ್ನು ಶೋಧಿಸುತ್ತಿದ್ದ ಬ್ರಾಹ್ಮಣರು ಮೊತ್ತಮೊದಲು ಕಂಡುಕೊಂಡರೆಂದೂ, ತರುವಾಯ ವಸುಪುರ ಅಥವಾ ಬಸರೂರಿನ ರಾಜನೊಬ್ಬನು ಆ ಸ್ಥಳದಲ್ಲಿ ಭಾರಿ ದೇವಾಲಯವನ್ನು ಕಟ್ಟಿಸಿದನೆಂದೂ ಜನವದಂತಿಯೂ ಸ್ಥಳ ಪುರಾಣವೂ ಇರುವುವು.

ವಸುಪುರ ಅಥವಾ ಬಸರೂರೆಂಬುದು ಕೋಟೇಶ್ವರಕ್ಕೆ ಸುಮಾರು ಎರಡು ಮೈಲು ದೂರ ಈಶಾನ್ಯ ದಿಕ್ಕಿಗಿರುವುದು. ನಮ್ಮ ಜಿಲ್ಲೆಯಲ್ಲಿ ಬಾರಕೂರನ್ನು ಬಿಟ್ಟರೆ ಇದೇ ಪುರಾತನ ದೊಡ್ಡ ಪಟ್ಟಣವು. ಇದು ಬಾರಕೂರು ನಾಶವಾಗುವುದಕ್ಕೆ ಮೊದಲೇ ನಾಶವಾಗಿರಬೇಕಾಗಿ ಅಲ್ಲಿಯ ಸನ್ನಿವೇಶಗಳಿಂದ ವ್ಯಕ್ತ

ವಾಗುತ್ತಿದೆ. ಇಲ್ಲಿಯ ದೇವಾಲಯಗಳೂ, ಕೆರೆಗಳೂ, ಕೇರಿಗಳೂ, ಕೇರಿಗಳ ರಚನೆಗಳೂ, ಅಲ್ಲಲ್ಲಿ ಪಟ್ಟಣದೊಳಗೆ ಪ್ರವೇಶಿಸುವುದಕ್ಕಾಗಿ ಮಾಡಿದ್ದ ಶಿಲೆಯ ದ್ವಾರಬಂಧಗಳೂ, ಕೇರಿಗಿದ್ದ ಬೇರೆ ಬೇರೆ ಹೆಸರುಗಳೂ ಇವೆಲ್ಲವೂ ಆ ಪುರಾತನ ವೈಭವವನ್ನು ನಮಗೆ ಸಾರಿ ಹೇಳುವಂತಿವೆ.

ಈ ಪಟ್ಟಣಕ್ಕೆ ಸುಮಾರು ೮೦೦ ವರುಷಗಳ ಹಿಂದಿನಿಂದಲೇ ಬಸರೂರೆಂದು ಹೆಸರು ಬಂದಂತೆಯೂ, ಅಷ್ಟು ವರುಷಗಳ ಹಿಂದಿನಿಂದಲೇ ಇದಕ್ಕೆ ರಾಜನಿಲ್ಲದೆ ಹೋದಂತೆಯೂ ಇಲ್ಲಿರುವ ಎರಡು ಮೂರು ಚೆನ್ನಾಗಿ ಓದಲಿಕ್ಕೆ ಬರುವ ಶಾಸನಗಳಿಂದ ತಿಳಿದುಬರುವುದು. ಇಲ್ಲಿ ಇನ್ನೂ ಕೆಲವು ಶಾಸನಗಳಿವೆ. ಅವನ್ನೆಲ್ಲ ನಕಲು ತೆಗೆದರೆ ಇಲ್ಲಿಯ ಪ್ರಾಚೀನ ಇತಿಹಾಸವನ್ನು ತಿಳಿಯಲಿಕ್ಕೆ ಬಲು ಮಟ್ಟಿಗೆ ಸಹಾಯವಾದೀತೆನ್ನುವುದರಲ್ಲಿ ಸಂದೇಹವಿಲ್ಲ.

ಈ ಜಿಲ್ಲೆಯ ಉತ್ತರ ಭಾಗದಲ್ಲಿ ಇನ್ನೂ ಕೆಲಕೆಲವು ವಿಶೇಷ ಸ್ಥಳಗಳು ಇರುವುವು. ಆದರೆ ಅವುಗಳ ವಿವರವನ್ನೆಲ್ಲ ಈ ಚಿಕ್ಕ ಉಪನ್ಯಾಸದಲ್ಲಿ ಸೇರಿಸುವುದು ಸಾಧ್ಯವಲ್ಲ. ಮತ್ತು ಅವುಗಳ ವಿಷಯದಲ್ಲಿ ಪ್ರಾಚೀನೇತಿಹಾಸದ ಜ್ಞಾನವು ಸ್ವಲ್ಪ ಮಟ್ಟಿಗೆ ಮಾತ್ರವೇ ಆಗಿರುವುದರಿಂದ ಅವುಗಳ ಚರಿತ್ರೆಯನ್ನು ಇದರ ಜತೆಯಲ್ಲಿ ಸೇರಿಸಲಿಲ್ಲ.

ಐ. ಶಿವರಾಮಯ್ಯ.

ಮೊಮ್ಮನ ಮೃತ್ಯು; ಅಜ್ಜನ ಅನುತಾಪ

(ಬತ್ತೀಸು ವೃತ್ತ)

ಚನ್ನಪಟ್ಟಣದಲ್ಲಿ ಮೆರೆಯುವ
ತನ್ನ ಮಾತಾಮಹನ ಮನೆಯಲಿ
ಮುನ್ನ ರೌದ್ರಿಯ ಅಧಿಕ ಶ್ರಾವಣ ಬಹುಳ ನವಮಿಯಲಿ।
ಎನ್ನ ಮಗ ನರಸಿಂಗರಾಯನ
ಚಿನ್ನದಂತಿಹ ಸತಿ ಸರೋಜಿನಿ
ಗಿನ್ನದೇತಕೆ ಜನಿಸಿದನೊ ಮೋಹನ್ನ ಸುಕುಮಾರ ॥ ೧ ॥

ಪಡುಗಡಲ ತೀರದಲಿ ನೆಲಸಿಹ
ಉಡುಪಿ ಕೃಷ್ಣನ ದಯದೊಳೆನ್ನಯ
ಮಡದಿ ಮಕ್ಕಳ ಕೂಡಿ ಕುತಪಾಡಿಯಲಿ ಸುಖವಿರಲು।
ಒಡನೆ ಬಂದುದು ತಂತಿ ಬೇಗನೆ
ಒಡೆದು ನೋಡುತ ಬಾಲನನು ಸೊಸೆ
ಪಡೆದು ಸುಖವಿಹರೆಂದು ಕೇಳ್ದಾನಂದವಾಯ್ತೆಮಗೆ ॥ ೨ ॥

ಜನಿಸಿದೊಡನೆಯೆ ತನ್ನ ಜನನಿಯ
ತನುವಿನಲಿ ಜ್ವರತಾಪ ಪುಟ್ಟುತೆ
ದಿನ ದಿನಕೆ ಬಡವಾಗೆ ಬಿಡಿಸಿದರದಕೆ ಮೊಲೆಹಾಲ।
ಕೊನೆಗೆ ಶಿಶುವಿಗು ಸೌಖ್ಯವಿಲ್ಲದೆ
ಘನ ಪ್ರಯತ್ನವ ಗೈದನಂತರ
ಮನಕೆ ಸಂತಸವೀಯಲಾಯ್ತವರಿರ್ವರಿಗೆ ಸುಖವು ॥ ೩ ॥

ಇತ್ತಲೆನ್ನಯ ಕಿರಿಯ ಮಗನಿಗೆ
ಹತ್ತಿರದ ಕನ್ನೆಯೊಳು ಲಗ್ನವ
ಗೊತ್ತುಮಾಡಿದಮೇಲೆ ಶಿಶುವೈತರುವ ಸಂಜೆಯಲಿ।
ಮುತ್ತಿನಂತಿಹ ಮುದ್ದು ಮೊಮ್ಮನ
ನೆತ್ತಿ ಮುದ್ದಿಪೆನೆಂಬ ಕುತುಕದಿ
ರಸ್ತೆಗಿಳಿಯಲು ಬಸ್ಸು ಬಂದುದು ಎಮ್ಮ ಜನರೊಡನೆ ॥ ೪ ॥

ಮಗುವೆ ಬಾ ಬಾ ಮುದ್ದು ಕಂದನೆ
ಮೊಗವ ನೋಡುವೆನೆಂದು ತಕ್ಕಿಸೆ
ಮುಗುಳು ನಗೆಯೊಳು ಪಟ್ಟು ಮೊಲೆಯನು ಚೀಪುತಿರಲಂದು।

ಸುಗುಣ ನಿನ್ನನು ಎತ್ತಿ ಮುತ್ಕರ
ಯುಗಳ ಸಾರ್ಥಕವಾದುದಿನ್ನೀ
ಜಗದೊಳಾಂ ಬಲು ಧನ್ಯನೆಂದಾನಂದಗೊಂಡೆನಲ್ಲೈ ॥ ೫ ॥

ಕಂದ ನಿನ್ನನು ಕಾಣುವರೆ ಮನೆ
ಮಂದಿಯಿಂ ನಿನ್ನವ್ವೆ ಹರುಷದಿ
ಮುಂದುವರಿದೈತಂದು ಕದಲಾರತಿಯನೆತ್ತುತಲಿ।
ಮಂದಹಾಸದಿ ಪಿಡಿದು ಮುದ್ದಿಸಿ
ತಂದು ಕಟ್ಟಿದ ತೊಟ್ಟಿಲೊಳು ಮಲ
ಗೆಂದು ಮನ್ನಿಸಿ ಜೋಗುಳವ ಪಾಡುತ್ತ ತೂಗಿದಳೈ ॥ ೬ ॥

ಕೆಲರು ಧೂಪವನೊಲಿದು ಕೊಡುವರು
ಕೆಲರು ದೃಷ್ಟಿಯ ಬಳಿದು ಸುಡುವರು
ಕೆಲರು ಹಾಸಿಗೆ ಹಾಸಿ ವಸ್ತ್ರವ ಮಡಿಸಿ ಮಡಗುವರು।
ಕೆಲರು ಕಿಟಕಿಯ ಕದವ ತೆರೆವರು
ಕೆಲರು ಪಾಲನು ಕುಡಿಸೆ ಬರುವರು
ಹಲವರೀ ಪರಿ ನಿನ್ನನೋಲೈಸುತ್ತಲಿರ್ದರಲ್ಲೈ ॥ ೭ ॥

ಎಷ್ಟು ನೋಡಿದರಷ್ಟು ನಿನ್ನೊಳು
ಪುಟ್ಟುವನುರಾಗಕ್ಕೆ ಹಿಗ್ಗುತ
ಬಿಟ್ಟು'ಸಾರದೆ ವಿಧವಿಧದ ಪದಗಳನೆ ಪಾಡುತ್ತ।
ತೊಟ್ಟಿಲನು ತೂಗುತ್ತಲೆಮ್ಮಾ
ಪುಟ್ಟ ಕಂದನಿಗಾವ ಕಷ್ಟವ
ಕೃಷ್ಣ ಕೊಡದಿರೆನುತ್ತ ಮನದೊಳು ಬೇಡುತಿರ್ದೆವಲ್ಲೈ ॥ ೮ ॥

ಇರಲಿನಿತು ದಿನದಿನಕೆ ಸಿತ ಚಂ
ದಿರ ಮೊಗದ ಸಿರಿಯೇರುತಿರೆ ಮಂ
ದಿರ ನಭವು ಬೆಳಗುತಿರೆ ಭವತಿಮಿರೌಘವಡಗುತಿರೆ।
ಸರಿಯದಾರೆಮಗೆಂದು ಬಗೆಯೊಳು
ಹಿರಿಹಿರಿದು ಸಂಸಾರ ವಾರ್ಧಿಯ
ಪರಿಯನರಿಯದೆ ಮೋಹ ಪಾಶದಿ ಹಿಗ್ಗುತಿರ್ದೆವಲ್ಲೈ ॥ ೯ ॥

ಮದುವೆ ಮುಗಿದುದು ಬಂಧು ಮಿತ್ರರು
ವಿಧವಿಧದ ಉಡುಗೊರೆಯ ಗೈದರು
ಮದನ ಮೋಹನ ನಿನ್ನನುರೆ ಕೊಂಡಾಡಿ ತೆರಳಿದರು।
ಚದುರ ನಿನ್ನಯ ಆಟ ಪಾಟದಿ
ಮೃದುತರದ ಕಿರುನಗೆಯ ನೋಟದಿ
ಸದನವೇ ಸುರ ಲೋಕವಾದುದದೇನ ಬಣ್ಣಿಪುದೈ ॥ ೧೦ ॥

ಕೂಚು ಬಳಲುವುದೆಂದು ಬೇಗನೆ
ಬೂಚಿಯನು ಕರೆತಂದು ಕಾಚುತ
ಪಾಚಿಯನು ಕೊಡಲ್ಕೆದೆ ನೀನಾ ಪಾಲಬುದ್ಧಿಯನೂ।
ಯಾಚಿಸುತ ಕೈನೀಡಿ ತವಕದಿ
ಬಾಚಿ ಬಸುಕೊಳುತಿರುವ ಪರಿಯನು
ಗೋಚರಿಸುತಿರ್ದೆಮ್ಮ ಮಾನಸಕೆನಿತು ಸಂತಸವ್ಯ ॥ ೧೧ ॥

ಗಾಳಿ ಬಿಸಿಲಿಗೆ ಬಿಡದೆ ಪಾಲಿಸಿ
ಬಾಲ ತೊಡಿಗೆಯ ತೊಡಿಸಿ ಲಾಲಿಸಿ
ಫಾಲದಲಿ ಬೊಟ್ಟಿಟ್ಟು ಮುಂಗುರುಳುಗಳ ತಿದ್ದುತ್ತ।
ಲೋಲ ಲೋಚನ ತವ ಮನೋಹರ
ಲೀಲೆಗಳನೀಕ್ಷಿಸುತಲಿರೆ ಲವ
ಕಾಲದಂದದಿ ದಿವಸ ದಿವಸವು ಕಳೆದು ಪೋದುದಲೈ ॥ ೧೨ ॥

ಗುಮ್ಮ ಬಹುದೆನ್ನಮ್ಮ ಅಳದಿರು
ಸುಮ್ಮನಿರು ಎಂದೆತ್ತಿಕೊಳ್ಳುತ
ಸುಮ್ಮನಿದ್ದರೆ ಬೆದರಿ ನೋಡುತ ಮಾತನಾಡಿಸುತ।
ಕೆಮ್ಮಿದರೆ ನೆತ್ತಿಯನೆ ತಟ್ಟುತ
ಉಮ್ಮ ಕೊಡು ಕಂದೈಯನೆನ್ನುತ
ಬಿಮ್ಮನಪ್ಪುತ ಮುದ್ದಿಸುತ ಮೋಹಿಸುತಲಿರ್ದೆವಲೈ ॥ ೧೩ ॥

ಕಳೆದುದೀ ಪರಿ ಕೆಲವು ಕಾಲವು
ಬಳಿಕ ಕೊಲ್ಲೂರಲ್ಲಿ ನೆಲಸಿಹ
ಹೊಲಕೆ ಗೋನಂದನಕೆ ತೆರಳುವ ಸಮಯವೈತರಲು।
ಚಲುವ ಚಿನ್ನನನಗಲಿ ಪೋಗಲು
ಬಳಲಿ ಮನದೊಳು ಸಾರುತಲ್ಲಿಯ
ಕೆಲಸಗಳ ಮಧ್ಯದಲಿ ನಿನ್ನನು ನೆನೆಯದಿರ್ದೆನಲೈ ॥ ೧೪ ॥

ಒಂದು ತಿಂಗಳ ಕಾಲವಾಗಲು
ಕಂದನಿಗೆ ಕಡು ಕಷ್ಟವೆನ್ನುತ
ಬಂದ ತಂತಿಯ ಕಂಡು ಕಳವಳಗೊಂಡು ಮರುದಿನವೆ।
ವಂದಿಸುತ ಮೂಕಾಂಬಿಕೆಗೆ ನಾ
ನಿಂದು ಬೇಡುತ ಪಡೆದ ಕುಂಕುಮ
ಗಂಧವದು ಕೈತಪ್ಪುತಕಟಾ ನೆಲಕೆ ಬಿದ್ದುದಲೈ ॥ ೧೫ ॥

ಕೆಟ್ಟುಪೋದುದು ಕಾರ್ಯ ನಾನಿ
ನ್ನೆಷ್ಟು ಪಾಪಿಯೊ ಕಂದನನು ಮಿಗೆ
ದೃಷ್ಟಿಸದೆ ನಿರ್ಭಾಗ್ಯನಾದೆನೆನುತ್ತ ಚಿಂತಿಸುತ।

ಕಷ್ಟ ಕಾಲ್ನಡೆಯೆಂಬುದರಿಯದೆ
ಥಟ್ಟನಲ್ಲಿಂ ಪೊರಟು ಮರುದಿನ
ಮಟ್ಟ ಮಧ್ಯಾಹ್ನಕೆ ಮನೆ ಕಡೆ ಬಂದು ಕಂಡೆನಲ್ಲೈ || ೧೬ ||

ಅಕಟಕಟ ಮನ ಮೋಹನನ ಮುಖ
ವಿಕಲವಾದುದೆ ಮೈಸಿರಿಗೆ ಕುಂ
ದಕವು ಬಂದುದೆ ಕಂಗಳೆರಡು ಕಳಂಕಗೊಂಡಿಹುದೆ।
ನಖರುಚಿಯುಂ ಕೆಟ್ಟುದೆ ತಲೋದರ
ಸುಖ ವಿರೋಚನವಿಲ್ಲದುಬ್ಬಿತೆ
ಪ್ರಕಟವಾದುದೆ ಪಿತ್ಥಕೋಶದ ರುಜೆಯುಂ ನಿನ್ನೊಳಲ್ಲೈ || ೧೭ ||

ಲೋಕ ನಾಯಕ ಬಾಲಕನೊಳಿ
ನ್ನೇಕೆ ಬಾರದೊ ದಯೆಯೆನುತ್ತತಿ
ಶೋಕ ಮಾನಸನಾಗಿ ನಿನ್ನನು ತೂಗುತಿರಲಂದು।
ಈ ಕಡೆಯೊಳಳಲುವರು ಸರ್ವರು
ವ್ಯಾಕುಲಿಸಿ ಕಳವಳಿಸಿ ಚಿತ್ತದಿ
ಭೀಕರದ ಸಂಸಾರ ಗಹನದ ಘೋರವರಿಯರಲ್ಲೈ || ೧೮ ||

ಕಡು ಭಯಂಕರ ರೋಗವಿದು ಬಲು
ಕೆಡಕುಮಾಡದೆ ಬಿಡದು ಕಂದಗೆ
ಕಡೆಯ ಕಾಲವೆನುತ್ತ ನಾನರಿತೆನ್ನ ಸತಿಯೊಡನೆ।
ನುಡಿಯುತಿರಲಿರ್ವರಿಗೆ ಕಂಬನಿ
ಯುಡುಗಿ ಸೂಸಲು ಕಾರ್ಮುಗಿಲ ಘನ
ಸಿಡಿಲು ಬಡಿದಂದದಲಿ ತನು ಮನ ತೊಳಲಿ ಬಳಲಿದೆವೈ || ೧೯ ||

ತಾಳಲಾರೆವು ಚಿಂತೆಯನು ಮಿಗೆ
ಪೇಳಲಾರೆವು ನಿನ್ನ ಜನನಿಗೆ
ಕೇಳೆ ನಿನ್ನಯ ತಂದೆಗೇನೊಂದೊರೆಯಲಳವಲ್ಲ!
ಬಾಲ ದಂಪತಿಗಳಿಗೆ ಪುತ್ರನ
ಗೋಳ ನೋಡುವ ದುಸ್ಸಹದ ದು
ಷ್ಕಾಲ ಬಂದವುದಲ್ತೆಯೆಂದಳಲುತ್ತಲಿರ್ದೆವಲ್ತೆ || ೨೦ ||

ನಿಜವನರಿಯದ ಜನನಿ ಜನಕರು
ರುಜೆಗೆ ಪರಿಹರ ಮಂಗಳೂರೊಳು
ಅಜ ಪಿತನ ಕೃಪೆಯಿಂದಲಾದವುದೆಂಬ ಭ್ರಮೆಯಿಂದ।
ನಿಜ ಪಿತಾಮಹಿ ಸಹಿತಲೇನ
ತ್ನಜವೊ ಪೋದುದು ಬಳಿಕಲಲ್ಲಿಯ
ಸ್ವಜನರೆಲ್ಲರು ಮರುಗೆ ನಿಜ ಮಂದಿರಕೆ ಮರಳಿದೆಯೈ || ೨೧ ||

ಬಂದಮೇಲೊಂದೆರಡು ದಿನ ಗುಣ
ವೆಂದು ಸುಮ್ಮನೆ ಪೇಳುತಿರುವರು
ತಂದು ವೈದ್ಯರ ಕೇಳುವರು ಔಷಧಿಯ ಕುಡಿಸುವರು।
ಕಂದನಿಗೆ ರುಜೆ ಬಹಳ ಕಾಲದ
ಹಿಂದಿನಿಂದಿತ್ತೆಂಬ ನಿಜವನು
ಮಂದ ಬುದ್ಧಿಗಳರಿಯದಲೆ ಕೈಮೀರಿ ಪೋದುದಲ್ಲೈ ॥ ೨೨ ॥

ಚೋದ್ಯವದು ನಿನ್ನನು ಪರೀಕ್ಷಿಪ
ವೈದ್ಯನಹ ಗೋಪಾಲಕೃಷ್ಣಗ
ಭೇದ್ಯವಾದುದು ನಿನ್ನೊಳಡಗಿರುತಿರ್ದ ಘನರುಜೆಯು।
ವೇದ್ಯವಾದುದಕಸ್ಮಿಕದಿ ಶ್ರಮ
ಸಾಧ್ಯವೆಂದರು ವೈದ್ಯರೆಲ್ಲರು
ಇದ್ದುದಿದ್ದಂತಿರದೆ ಸಂಕಟವೇರುತಿರ್ದುದಲ್ಲೈ ॥ ೨೩ ॥

ಕರ ಚರಣ ಮುಖ ನೇತ್ರ ನಖಗಳು
ಅರಿಸಿನಾದವು ಮೂತ್ರವದು ನೆ
ತ್ತರವ ಪೋಲ್ದುದು ಬದ್ಧ ಮಲದಿಂದುದರವುಬ್ಬಿದುದು।
ಸ್ವರವು ಕುಗ್ಗಿತು ಪರಿಪರಿಯ ಕಿರಿ
ಕಿರಿಯು ಹಿಗ್ಗಿತು ತೃಷೆಯು ತಗ್ಗಿತು
ಮರಣಕಾಲವೆ ನೆರೆ ಸಮೀಪಿಸಿ ಬರುತಲಿರ್ದುದಲ್ಲೈ ॥ ೨೪ ॥

ಎತ್ತಿ ನಿನ್ನನು ಸುತ್ತಿ ಬುಸುಗು
ಟ್ಟುತ್ತಲಳುವರ ಕಂಡು ನೀ ಕ
ಣ್ಣೆತ್ತಿ ಸಕಲರ ದೃಷ್ಟಿಸಿದ ಪರಿ ಮರಣ ಪರಿಯಂತ।
ಚಿತ್ತದಲಿ ನಾಟುತ್ತಲೆಮ್ಮನು
ಹೊತ್ತುಹೊತ್ತಿಗೆ ಕೆಣಕಿಯೆಚ್ಚರ
ವಿತ್ತು ನಿತ್ಯದಿ ತತ್ತರಿಪ ಪರಿಗೈಯುತಿರ್ಪುದಲ್ಲೈ ॥ ೨೫ ॥

ಸುತ್ತಮುತ್ತಲು ರೋದನವ ಗೈ
ಯುತ್ತಲಿಹರನು ಲಕ್ಷಿಸದೆ ಶೋ
ಕಾರ್ತೆಯಹ ತಾಯ್ಪುತ್ರ ವ್ಯಾಮೋಹವನು ಸೈರಿಸದೆ।
ಮೃತ್ಯುವಿನ ಬಾಯ್ತುತ್ತಿನಂತಿಹ
ಪುತ್ರನನು ಸೆಳೆದೊತ್ತಿ ಮುದ್ದಿಸಿ
ನೆತ್ತಿಯೊಳು ನೊಸಲಿಟ್ಟು ಗೋಳಿಟ್ಟಳುತಲಿರ್ದಳಲ್ಲೈ ॥ ೨೬ ॥

ಕೊಡಳು ಕಂದನ ಕೇಳುತಿರ್ದರು
ಬಿಡಳು ಕೈಗಳ ಕೀಳುತಿರ್ದರು
ಪಿಡಿದು ಬಿಕ್ಕಿಯ ಬಿರಿದು ಗೋಳಿಟ್ಟಳುವಳನು ಕಂಡು।

ಕೊಡು ಮಗಳೆ ಕೊಡು ಕೊಡು ಸರೋಜನಿ
ಪಡೆದವಳು ನೀನಲ್ತದಿನ್ನಾ
ರೊಡವೆಯೋ ಕೊಡು ತಾಯೆಯೆನೆ ಕೈಬಿಟ್ಟು ಕೊಟ್ಟಳಲ್ಲೆ || ೨೭ ||

ಸಾರ್ಥಕವು ತಾವೆಂದ ಕರಗಳು
ವ್ಯರ್ಥವಾಗುವ ತೆರದಿ ನಿನ್ನನು
ಎತ್ತಿ ತೊಡೆಯೊಳು ಮಡಗಿ ಮೃತ್ಯುವ ತಡೆಯಲರಿಯದಲೆ।
ಸುತ್ತುಮುತ್ತಲು ಸೇರಿ ಭೋರ್ಗರೆ
ದತ್ತು ಕರೆಯುತ್ತಿರಲು ನಾವ್ಗಳು
ತೀರ್ಥವನು ಬಾಯ್ಗೆರೆಯೆ ಹಾ ಹಾ ಹರಣವಳಿದುದಲ್ಲೆ || ೨೮ ||

ಚಿನ್ನ ಪೋದೆಯ ರನ್ನ ಪೋದೆಯ
ಹೊನ್ನೆ ಪೋದೆಯ ಎನ್ನ ಮನಮೋ
ಹನ್ನ ಪೋದೆಯ ಪೋದೆಯಾ ತೊರೆದೆಮ್ಮನೀ ಪರಿಯ।
ಇನ್ನು ನೋಡುವುದೆಲ್ಲಿ ನಮಗೀ
ಬನ್ನ ಬಂದುದೆನುತ್ತಿರಲು ಕು
ಪ್ಪಣ್ಣಭಟ್ಟರು ಸಂತವಿಟ್ಟರು ಸಮಯಕನುವಾಗಿ || ೨೯ ||

ಜನಪನಾದರು ಜೀವ ತೊಲಗಲು
ಕುಣಪನಪ್ಪನು ಕಂದನನು ನೀ
ವೆಣಿಸಿ ಫಲವೇನಿನ್ನು ಬಿಡುವುದು ಮನದ ವೇದನೆಯ।
ಪೆಣನ ಮೇಲಿನಿತಾಸೆ ಗೈಯದೆ
ಮನದಿ ಧೈರ್ಯವ ಪೊಂದಿರೆಂದಾ
ಕುಣಪವನು ಕೊಂಡೊಯ್ದರನುಚರರೊಡನೆ ಕಾನನಕೆ || ೩೦ ||

ದುರ್ಮತಿಯೆ ದುಸ್ತರವು ನೆರೆ ದು
ಷ್ಕರ್ಮಿ ಮೇಣಾಷಾಢ ಮಾಸವು
ಒಮ್ಮೆಯಷ್ಟಮಿ ಕಷ್ಟದಿನ ಸಿತ ಸಂಜೆಯತಿಘೋರ!
ಎಮ್ಮ ಮೊಮ್ಮನಿಗೀ ದಿನದಿ ವಿಧಿ
ಯೊಮ್ಮೆ ಬರೆದಾಯುಷ್ಯ ತೀರುತೆ
ಬೊಮ್ಮನಯ್ಯನ ಬಳಿಗೆ ಸಾರ್ದನು ಕರ್ಮ ವಶದಿಂದ || ೩೧ ||

ಭಾಪು ಭಾಪು ಋಣಾನುಬಂಧದ
ರೂಪದಲಿ ಸತಿ ಸುತರು ಮನೆ ಮಾ
ರೀಪರಿಯ ಸುಖ ಸಾರವೀವುದು ಋಣವು ತೀರ್ದೊಡನೆ।
ಪೋಪುದಲೆ ನಾವೇಕೆ ಸುಮ್ಮನೆ
ತಾಪಗೊಳುವುದೆನುತ್ತೆ ತಿಳಿಯುತೆ
ಶ್ರೀಪತಿಯ ನೆನೆಯುತ್ತೆ ಮರೆದಪುದಲ್ತೆ ಮರುಕವನು || ೩೨ ||

ಕೆರೋಡಿ ಸುಬ್ಬರಾವ್.

ಕೆಳದಿ ನಾಯಕರು

೧. ಹೆಸರು—ಕೆಳದಿಯ ಸಂಸ್ಥಾನವು ಈಗಿನ ಮೈಸೂರು ರಾಜ್ಯದ ಶಿವಮೊಗ್ಗಾ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ಕವಲೆದುರ್ಗ, ನಗರ, ಸಾಗರ, ಶಿಕಾರಿಪುರ, ಶಿವಮೊಗ್ಗಾ, ಸೊರಬ ತಾಲೂಕುಗಳನ್ನೂ; ಕಡೂರು ಜಿಲ್ಲೆಯ ಬಾಣಾವರ, ಚಿಕ್ಕಮಗಳೂರು, ಕೊಪ್ಪ, ಲಕ್ಕವಳ್ಳಿ, ತರೀಕೆರೆ ತಾಲೂಕುಗಳನ್ನೂ; ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕನ್ನೂ; ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ, ಶಿರಸಿ ಮತ್ತು ಸಿದ್ದಾಪುರ ತಾಲೂಕುಗಳನ್ನೂ; ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ, ಕಾರ್ಕಳ, ಮಂಗಳೂರು, ಉಪ್ಪಿನಂಗಡಿ, ಕಾಸರಗೋಡು ತಾಲೂಕುಗಳನ್ನೂ ಒಳಕೊಂಡಿತ್ತು.

ಈ ಸಂಸ್ಥಾನವು ಸಾಧಾರಣ ೩೦೦ ಮೈಲು ಉದ್ದವೂ ೩೦೦ ಮೈಲು ಅಗಲವೂ ಇತ್ತು. ಇದರ ಉತ್ತರಕ್ಕೆ ಬಿಜಾಪುರ ರಾಜ್ಯವೂ, ಪೂರ್ವಕ್ಕೆ ಹರಪನಹಳ್ಳಿ ಸಂಸ್ಥಾನವೂ ಮೈಸೂರು ರಾಜ್ಯವೂ, ದಕ್ಷಿಣದಲ್ಲಿ ಮೈಸೂರು ಮತ್ತು ಕೊಡಗು ರಾಜ್ಯಗಳೂ, ಕೊಲತ್ತರಸನ ಚರಕಲ ರಾಜ್ಯವೂ, ಪಶ್ಚಿಮದಲ್ಲಿ ಅರಬೀಸಮುದ್ರವೂ ಇತ್ತು.

ಕೆಳದಿ ಸಂಸ್ಥಾನವನ್ನು ಆಳಿದ ರಾಜರಿಗೆ ಕೆಳದಿ ನಾಯಕರೆಂದೂ, ಇಕ್ಕೇರಿ ನಾಯಕರೆಂದೂ, ಬಿದರೂರಿನ ಅರಸರೆಂದೂ ಹೆಸರುಗಳು ಇವೆ. ಈ ಅರಸರು ಮೊದಲು ಕೆಳದಿಯನ್ನು ರಾಜಧಾನಿಯಾಗಿಮಾಡಿ ಅಲ್ಲಿ ಆಳಿದುದರಿಂದ ಇವರಿಗೆ ಕೆಳದಿ ನಾಯಕರೆಂದೂ, ಅನಂತರ ಕೆಳದಿಯನ್ನು ಬಿಟ್ಟು ಇಕ್ಕೇರಿಯನ್ನು ರಾಜಧಾನಿಯಾಗಿಮಾಡಿ ಅಲ್ಲಿ ಆಳಿದುದರಿಂದ ಇಕ್ಕೇರಿ ನಾಯಕರೆಂದೂ, ಬಿದರೂರಿನಲ್ಲಿ ರಾಜ್ಯಭಾರ ಮಾಡಿದುದರಿಂದ ಬಿದರೂರಿನ ಅರಸರೆಂದೂ ಹೆಸರು ಬರಲು ಕಾರಣವಾಯಿತು. ಕೆಳದಿ, ಇಕ್ಕೇರಿ, ಬಿದರೂರು ಇವುಗಳು ಶಿವಮೊಗ್ಗಾ ಜಿಲ್ಲೆಯಲ್ಲಿರುವ ಗ್ರಾಮಗಳಾಗಿವೆ. ಬಿದರೂರಿಗೆ ವೇಣುಪುರವೆಂಬ ಸಂಸ್ಕೃತ ಹೆಸರೂ ಇರುವುದರಿಂದ, ಇವರಿಗೆ ವೇಣುಪುರದ ಅರಸರೆಂದೂ ಹೆಸರು ಬಂದಿದೆ.

೨. ಭಗ್ನಾವಶೇಷಗಳು—ಕೆಳದಿ ಸಂಸ್ಥಾನವು ಹಾಳಾಗಿ ಈಗ ನೂರ ಅರುವತ್ತಾರು ವರುಷಗಳಾದುವು. ಇಲ್ಲಿಯ ಅರಸರ ಮೂರು ರಾಜಧಾನಿಗಳೂ ಈಗ ಹಾಳುಬಿದ್ದಿವೆ. ಇವುಗಳ ಕುರುಹುಗಳು ಮಾತ್ರವೇ ಉಳಿದಿವೆ.

ಕೋಟೆಗಳು—ಇವರು ತಮ್ಮ ರಾಜ್ಯದ ಭದ್ರತೆಗಾಗಿ ಸಮುದ್ರ ಕರಾವಳಿಯಲ್ಲಿ ಲಿಂಕೋಲೆಯಿಂದ ಬಲಿಯ ಪಟ್ಟಣದವರೆಗೂ, ಚಂದ್ರಗಿರಿ ನದಿಯೂ ಪಶ್ಚಿಮ ಘಟ್ಟಗಳನ್ನು ಇಳಿದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯಲು ತೊಡಗಿದಂದಿನಿಂದ ಈ ನದಿಯು ಸಮುದ್ರಕ್ಕೆ ಸಂಗಮವಾಗುವಲ್ಲಿಗೂ, ಇನ್ನೂ ಇವರ ಒಳ

ಅರಸರಾಗಿ ಆಳುತ್ತಿದ್ದ ಹಲವು ಪಾಳೆಯಗಾರರ ರಾಜ್ಯಗಳಲ್ಲಿಯೂ ಇರುವ ನೂರಾರು ಕೋಟೆಗಳು ಈಗಲೂ ಇವೆ. ಇವುಗಳಲ್ಲಿ ಹಲವು ಹಾಳಾಗಿ ನೆಲಸಮವಾಗಿವೆ. ಕೆಲವು ಮೊದಲಿದ್ದಂತೆಯೇ ಇವೆ. ಇನ್ನು ಕೆಲವುಗಳ ಕೆಲವು ಬತೇರಿಗಳೂ ಗೋಡೆಗಳ ಸಣ್ಣ ಸಣ್ಣ ಭಾಗಗಳೂ ಮಾತ್ರವೇ ಹಾಳಾಗಿವೆ. ಈ ಕೋಟೆಗಳನ್ನೆಲ್ಲ ಇವರು ಮುರದ ಕಲ್ಲಿನಿಂದಲೇ ಕಟ್ಟಿಸಿರುವರು.

ಅರಮನೆಗಳು—ಈ ರಾಜರು ಇಕ್ಕೇರಿ, ಕೆಳದಿ, ಬಿದರೂರು, ಆನಂದಪುರ ಮುಂತಾದ ಸ್ಥಳಗಳಲ್ಲಿ ಭದ್ರವಾದ ಅರಮನೆಗಳನ್ನು ಕಟ್ಟಿಸಿದ್ದರು. ಆದರೆ, ಇವರು ಈ ಅರಮನೆಗಳನ್ನು ಮಣ್ಣಿನಿಂದಲೂ ಮರದ ತೊಲೆಗಳಿಂದಲೂ ಕಟ್ಟಿದುದರಿಂದ ಇವುಗಳೆಲ್ಲವೂ ಹಾಳಾಗಿವೆ.

ಮಠಗಳು—ಇವರು ಘಟ್ಟದ ಮೇಲಿನ ರಾಜ್ಯದಲ್ಲಿಯೂ, ಘಟ್ಟದ ಕೆಳಗಿನ ರಾಜ್ಯವಾದ ತುಳು ರಾಜ್ಯದಲ್ಲಿಯೂ ಹಲವು ಜಂಗಮ ಮಠಗಳನ್ನು ಕಟ್ಟಿಸಿದ್ದರು. ಈ ಎಲ್ಲ ಮಠಗಳಿಗೂ ಬಾಳೆಹಳ್ಳಿ ಸಿಂಹಾಸನವೇ ಮುಖ್ಯ ಮಠವಾಗಿದ್ದಿತು. ತುಳು ರಾಜ್ಯದಲ್ಲಿ ಇವರು ೭೪ ಮಠಗಳನ್ನು ಕಟ್ಟಿಸಿದ್ದರು. ಇವುಗಳನ್ನು ದಕ್ಷಿಣ ಭಾಗದ ಮಠಗಳೆಂದೂ ಉತ್ತರ ಭಾಗದ ಮಠಗಳೆಂದೂ ಎರಡು ವಿಭಾಗಗಳಾಗಿ ಮಾಡಿದ್ದರು. ಉತ್ತರ ಭಾಗದಲ್ಲಿದ್ದ ೩೭ ಮಠಗಳಿಗೆ ಜೆಣ್ಣೆಕುದುರು ಮಠವು ಮುಖ್ಯ ಮಠವಾಗಿತ್ತು. ದಕ್ಷಿಣ ಭಾಗದಲ್ಲಿರುವ ೩೭ ಮಠಗಳಿಗೆ ಗುರುಪುರ ಮಠವು ಮುಖ್ಯ ಮಠವಾಗಿತ್ತು. ಈ ಮಠಗಳನ್ನು ಇವರು ಎಷ್ಟು ದೊಡ್ಡದಾಗಿ ಕಟ್ಟಿಸಿದ್ದರೂ ಎಲ್ಲವನ್ನೂ ಮಣ್ಣಿನಿಂದಲೂ ಮರದ ತೊಲೆಗಳಿಂದಲೂ ಕಟ್ಟಿಸಿದ್ದುದರಿಂದ ಹೆಚ್ಚಿನವು ಹಾಳಾಗಿವೆ; ಕೆಲವು ಮಾತ್ರವೇ ಉಳಿದಿವೆ.

ಅಗ್ರಹಾರಗಳು—ಈ ನಾಯಕರು ವೈಷ್ಣವ, ಸ್ಮಾರ್ತ ಬ್ರಾಹ್ಮಣರಿಗಾಗಿ ಅನೇಕ ಅಗ್ರಹಾರಗಳನ್ನು ಕಟ್ಟಿಸಿ, ಆ ಅಗ್ರಹಾರಗಳಲ್ಲಿ ಬ್ರಾಹ್ಮಣರಿಗಾಗಿ ಮನೆಗಳನ್ನೂ ಅವರು ಭಜಿಸಿಕೊಂಡು ಬರುವ ದೇವರುಗಳಿಗಾಗಿ ದೇವಸ್ಥಾನಗಳನ್ನೂ ಕಟ್ಟಿಸಿಕೊಟ್ಟು ಅವರಿಗೆ ಭೂಮಿಯನ್ನು ಉಂಬಳಿಯಾಗಿ ಬಿಟ್ಟಿದ್ದರು. ಈ ಅಗ್ರಹಾರಗಳಲ್ಲಿ ಹೆಚ್ಚಿನವು ಇವರ ರಾಜ್ಯದ ಭಾಗವಾದ ಘಟ್ಟದ ಮೇಲಿನ ಸೀಮೆಗಳಲ್ಲಿಯೇ ಇವೆ. ತುಳು ರಾಜ್ಯದಲ್ಲಿ ಚನ್ನಮ್ಮಾಜಿಯ ಕಾಲದಲ್ಲಿ ಕಟ್ಟಿಸಿದ ಶಂಭೂರು, ನಾಟಿ, ಸರ್ಪಾಡಿ, ನಾವೂರು ಅಗ್ರಹಾರಗಳು ಮಾತ್ರವೇ ಕಂಡುಬರುತ್ತಿವೆ. ಇವುಗಳೆಲ್ಲವು ಈಗ ಹಾಳು ಸ್ಥಿತಿಯಲ್ಲಿವೆ.

ಜಲಾಶಯಗಳು—ಇವರು ಕಟ್ಟಿಸಿದ ಹೆಚ್ಚಿನ ಜಲಾಶಯಗಳು ಘಟ್ಟದ ಮೇಲಿನ ಸೀಮೆಯಲ್ಲಿಯೇ ಇವೆ. ತುಳು ರಾಜ್ಯದಲ್ಲಿ ನೀರಾಶ್ರಯವು ಒಳ್ಳೆಯದಾಗಿದ್ದುದರಿಂದಲೂ ಮಳೆ ಸರಿಯಾಗಿ ಬರುತ್ತಿದ್ದುದರಿಂದಲೂ ಈ ತುಳು ರಾಜ್ಯದಲ್ಲಿ ಈ ರಾಜರು ಜಲಾಶಯಗಳನ್ನು ಮಾಡಿಸುವ ಅಗತ್ಯ ಬೀಳಲಿಲ್ಲ. ಹಿರಿಯ ವೆಂಕಟಪ್ಪನಾಯಕನು ಸಂಗಮೇಶ್ವರದಲ್ಲಿ ಒಂದು ಕೆರೆಯನ್ನೂ ಸಂಪೆಕಟ್ಟೆಯೆಂಬ ಕೆರೆಯನ್ನೂ ಕಟ್ಟಿಸಿರುವನು.

ಪಟ್ಟಣಗಳು—ಘಟ್ಟದ ಮೇಲಿನ ರಾಜ್ಯದಲ್ಲಿ ಈ ರಾಜರು ಕೆಳದಿ, ಇಕ್ಕೇರಿ, ಬಿದರೂರು, ಆನಂದಪುರ, ಭದ್ರರಾಜಪುರ, ಸದಾಶಿವ ಸಾಗರ (ಸಾಗರ) ಮುಂತಾದ ಪಟ್ಟಣಗಳನ್ನು ಕಟ್ಟಿಸಿರುವರು. ಇವುಗಳೆಲ್ಲವೂ ಈಗ ಕ್ಷೀಣಾವಸ್ಥೆಯಲ್ಲಿವೆ.

ನಾಣ್ಯಗಳು—ಇವರ ಕಾಲದಲ್ಲಿ ಚಲಾವಣೆಯಲ್ಲಿದ್ದ ಇಕ್ಕೇರಿ ವರಹ ಎಂಬ ೪ ರೂಪಾಯಿ ಬೆಲೆಯುಳ್ಳ ಭಂಗಾರದ ನಾಣ್ಯವೂ, ದುಡ್ಡು ಕಾಸುಗಳೆಂಬ ತಾಮ್ರದ ನಾಣ್ಯಗಳೂ, ಬೆಳ್ಳಿ ಎಂಬ ಬೆಳ್ಳಿಯ ನಾಣ್ಯಗಳೂ ಅಲ್ಲಲ್ಲಿ ನೋಡಲು ಸಿಕ್ಕುತ್ತವೆ.

ಮೇಲೆ ಹೇಳಿದ ಕೋಟೆಗಳು, ಅರಮನೆಗಳು, ಜಂಗಮ ಮಠಗಳು, ಬ್ರಾಹ್ಮಣರ ಅಗ್ರಹಾರಗಳು, ಜಲಾಶಯಗಳು, ಪಟ್ಟಣಗಳು, ನಾಣ್ಯಗಳು—ಇವುಗಳಲ್ಲದೆ ಮರ ಅಳತೆಮಾಡುವ ಇಕ್ಕೇರಿ ಕೋಲು ಎಂಬ ಕೋಲೂ ಈ ರಾಜರ ಆಳಿಕೆಯ ಭಗ್ನಾವಶೇಷಗಳಾಗಿವೆ.

೩. **ಕೆಳದಿ ನಾಯಕರ ವಿಷಯವಿರುವ ಗ್ರಂಥಗಳು**–(a) ದೇಶೀಯ ಗ್ರಂಥಗಳು. (b) ವಿದೇಶೀಯ ಗ್ರಂಥಗಳು. ಈ ಅರಸರ ಕಾಲದಲ್ಲಿಯೂ ಅವರ ಬಳಿಕೆಯನಂತರವೂ ಬರೆದ ಅನೇಕ ಗ್ರಂಥಗಳಿವೆ.

(a) **ದೇಶೀಯ ಗ್ರಂಥಗಳು**—(೧) ಕೆಳದಿ ಸಂಸ್ಥಾನದ ಚರಿತ್ರೆ, (೨) ಕೆಳದಿ ರಾಯ ಪದ್ಧತಿ, (೩) ಇಕ್ಕೇರಿ ಅರಸರ ವಂಶಾವಳಿ, (೪) ಕೆಳದಿ ಅರಸರ ಪೂರ್ವೋತ್ತರ, (೫) ಇಕ್ಕೇರಿ ಅರಸರ ಪೀಳಿಗೆ, (೬) ಕೆಳದಿ ಅರಸರ ವಂಶಾವಳಿ, (೭) ಕೆಳದಿ ನೃಪ ವಿಜಯ, (೮) ನಗರದ ವೀರಭದ್ರಪ್ಪ ನಾಯಕನ ವಂಶಾವಳಿ, (೯) ಬಸವಪ್ಪ ನಾಯಕನ ಚರಿತ್ರೆ, (೧೦) ಬಿದನೂರು ಸೀಮೆಯ ಮೃಗಗಳ ವರ್ಣನೆ, (೧೧) ನಗರದ ಸರ್ಜಪ್ಪ ನಾಯಕರ ಲಾವಣಿಗಳು.

ಇವರ ಒಳ ಅರಸುಗಳ ವಿಷಯಃ ಗ್ರಂಥಗಳು—(೧) ಸಾಸಿಲ ಭೈರ ಸೇಂದ್ರ ಚರಿತ್ರೆ, (೨) ಬಳಿಗ ಅರಸರ ವಂಶಾವಳಿ, (೩) ಸುಧಾಪುರದ (ಸೋದೆ) ಅರಸರ ವಂಶಾವಳಿ, (೪) ಕೆನರಾ ದೇಶದ ಜೈನ ರಾಜ ವಂಶಾವಳಿ, (೫) ಕುಂದಾಪುರ ವರ್ಣನೆ, (೬) ತುಳು ದೇಶದ ವರ್ಣನೆ, (೭) ಸಿಡುಗಲ ಅರಸರ ವಂಶಾವಳಿ, (೮) ಪದ್ಮಾವತಿ ದೇವಿಯ ಕಥೆ (ಸುರಾಲ್ಯ), (೯) ಬೆಳಗುತ್ತಿ ಅರಸುಗಳ ಚರಿತ್ರೆ, (೧೦) ಮಣಿಪುರದ ಪೂರ್ವೋತ್ತರ, (೧೧) ಮದಕೇರಿ ರಾಜೇಂದ್ರ ನಾಮಕ, (೧೨) ಮದಗಿರಿ ನಾಯಕನ ಚರಿತ್ರೆ, (೧೩) ಸೂಗೂರು ಅರಸರ ಚರಿತ್ರೆ, (೧೪) ರಾಯದುರ್ಗದ ಅರಸರ ಪೂರ್ವೋತ್ತರ, (೧೫) ರಾಯದುರ್ಗದ ಅರಸರ ರಾಜ ವಂಶಾವಳಿ, (೧೬) ವಸ್ತಾರೆ ಅರಸರ ವಂಶಾವಳಿ, (೧೭) ಹಳೆ ಸೈಕದ ಮತ ವರ್ಣನೆ, (೧೮) ಹಾರನಹಳ್ಳಿಯ ವರ್ಣನೆ, (೧೯) ಗೋವರ್ಧನಗಿರಿಯ ಕಥೆ, (೨೦) ಬಂಗರ ಕೈಫೀತು, (೨೧) ಚೌಟರ ಕೈಫೀತು, (೨೨) ಅಜಿಲರ ಕೈಫೀತು.

(b) **ವಿದೇಶೀಯ ಗ್ರಂಥಗಳು**—(೧) ಹಿಸ್ಟರಿ ಆಫ್ ದಿ ಪೋರ್ತುಗೀಸ್ ಇನ್ ಇಂಡಿಯಾ. (೨) ಪಿಟ್ರೊ ಡೆಲ್ಲಾ ವೆಲ್ಲಿಯ ಪ್ರಯಾಣ. (ಇಟಲಿ ಭಾಷೆಯಲ್ಲಿ ೧೬೬೦ರಲ್ಲಿ ಛಾಪಿಸಲಾಯಿತು. ೧೬೬೮ರಲ್ಲಿ ಇಂಗ್ಲೀಷು ಭಾಷೆಯಲ್ಲಿ ಛಾಪಿಸಲಾಯಿತು.) ಇದರಲ್ಲಿ ವೆಂಕಟಪ್ಪ (ಹಿರಿಯ) ನಾಯಕನ ಆಳಿಕೆಯ ವಿಷಯವಿದೆ. (೩) ಪ್ರಿನ್ಸ್ ಅರಯೊ ದಿ ಹ್ಯಾಸಿಕೆಯಿಸ್ ಇಂಡಿಕಾಸ. (ಇದನ್ನೇ ಸಿಂಗರಪುರದ ಅರಸನ ಕುಟುಂಬದಲ್ಲಿ ಹುಟ್ಟಿದ ಫಾದರ್ ಡಿಯೋನಾರ್ಡ್ ಪಾಯಸ್ ಎಂಬವರು ೧೬೬೫ರಲ್ಲಿ ಪ್ರಕಟಿಸಿದರು.) ಇದರಲ್ಲಿ ೧೬೪೫–೧೬೬೦ರ ವರೆಗೆ ಆಳಿದ ಶಿವಪ್ಪನಾಯಕನ ವಿಷಯವಿದೆ. (೪) ಸೈಂಟ ಕೆಥರೀನದ ಫಾದರ ವಿನ್ಸೆಂಟರ ಪ್ರಯಾಣ. (೧೬೭೨ರಲ್ಲಿ ಪ್ರಕಟಿಸಲ್ಪಟ್ಟಿದೆ. ಈ ಪ್ರಯಾಣಿಕನು ೧೬೫೭ರಲ್ಲಿ ಮತ್ತು ೧೬೫೯ರಲ್ಲಿ ಕನ್ನಡ ಜಿಲ್ಲೆಯಲ್ಲಿ ಪ್ರಯಾಣ ಬೆಳಸಿ ಬರೆದ ಶಿವಪ್ಪನಾಯಕನ ಮತ್ತು ಅವನ ಸ್ನೇಹಿತನಾದ ಘಟ್ಟದ ಮಹಮ್ಮದೀಯ ಶಾಹಾ ಭಂಡಾರಿ ಇಸಾಕನ ವಿಷಯವಿದೆ.) (೫) ಡೊಕ್ಟರ ಫ್ರಾಯರನ ಪ್ರಯಾಣ. (೧೬೯೮ರಲ್ಲಿ ಛಾಪಿಸಲಾಯಿತು.)

(c) **ಶಾಸನಗಳು**—ಈ ನಾಯಕರು ದೇವಸ್ಥಾನಗಳಿಗೂ, ಜಂಗಮ ಮಠಗಳಿಗೂ, ಶೃಂಗೇರಿ ಮಠಕ್ಕೂ, ಉಡುಪಿಯ ಕೃಷ್ಣ ಮಠಕ್ಕೂ, ಅಷ್ಟಮಠಗಳಿಗೂ, ಗೌಡ ಸಾರಸ್ವತರ ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನಕ್ಕೂ, ಮಂಗಳೂರು ಮಹಾಮಾಯಿ ದೇವಸ್ಥಾನಕ್ಕೂ ಉಂಬಳಿ ಉತ್ತಾರ ಬಿಟ್ಟ ಹಲವು ತಾಮ್ರ ಶಾಸನಗಳಿವೆ. ಇವುಗಳಲ್ಲಿ ಕೆಲವು ಮಾತ್ರವೇ ಉಳಿದಿವೆ. ಈ ಶಾಸನಗಳಿಂದ ಈ ನಾಯಕರು ಯಾವ ಯಾವ ಗ್ರಾಮಗಳನ್ನು ಉಂಬಳಿ, ಉತ್ತಾರ ಬಿಟ್ಟಿರುತ್ತಾರೆಂದೂ, ಈ ನಾಯಕರಿಗೆ ಯಾವ ಯಾವ ಬಿರುದುಗಳಿದ್ದುವೆಂದೂ ತಿಳಿಯಬಹುದು.

ರಾಜರ ಬಿರುದುಗಳು—ವಿಜಯನಗರದ ಅರಸರಾದ ಕೃಷ್ಣದೇವರಾಯನೂ, ರಾಮರಾಯನೂ, ಈ ನಾಯಕರು ಅವರಿಗೆ ಯುದ್ಧಗಳಲ್ಲಿ ಸೈನ್ಯವನ್ನು ನಡೆಸಿಕೊಂಡುಹೋಗಿ ಗೆದ್ದುದಕ್ಕಾಗಿ ಬಿರುದುಗಳನ್ನು ಕೊಟ್ಟಿದ್ದರು. ಅನಂತರದ ಅರಸುಗಳು ಈ ಬಿರುದುಗಳನ್ನೇ ಧರಿಸಿಕೊಳ್ಳುತ್ತ ಬಂದರು. ಇಮ್ಮಡಿ ಸದಾಶಿವೇಂದ್ರ, ಕೋಟೆ ಕೋಲಾಹಲ, ಬಿರುದ ಮುರಾರಿ, ಅಮರಿದಲೆ, ಮೇಘಡಂಬರ, ದಿವಾಪ್ರದೀಪ, ಬಲೀದ ಸಪ್ತಾಂಗ ಹರಣ, ಏಕಾಂಗವೀರ, ಬಲವಂತ, ದೋಸೇಜಿ, ದೋಟಂಡೇರಾಯ, ಪಶ್ಚಿಮ ಸಮುದ್ರಾಧೀಶ್ವರ, ವಿಶುದ್ಧಾದ್ವೈತ ಸಿದ್ಧಾಂತ ಸ್ಥಾಪನಾಚಾರ್ಯ ಎಂಬ ಬಿರುದುಗಳು ಇದ್ದುವೆಂದು ಕಾಣುತ್ತಿದೆ.

೪–೫. ರಾಜ್ಯಸ್ಥಾಪನೆ ಮತ್ತು ರಾಜ್ಯದ ವಿಸ್ತಾರ—ಈ ನಾಯಕರಲ್ಲಿ ಮೊದಲನೆಯವನಾದ ಚೌಡಪ್ಪನಾಯಕನು ಕೆಳದಿಯ ಹತ್ತಿರವಿರುವ ಹಳ್ಳಿಬಯಲಿನ ಗೌಡನಾಗಿದ್ದನು. ಇವನು ಬಹಳ ಐಶ್ವರ್ಯವಂತನಾಗುತ್ತ

ಬಂದುದರಿಂದ ಗ್ರಾಮದವರೆಲ್ಲರೂ ಇವನನ್ನು ಮರ್ಯಾದೆಯಿಂದ ಕಾಣಲಾರಂಭಿಸಿದರು. ಇವನು ಕ್ರಮೇಣ ಹಕ್ಕಿಬಯಲಿನ ಸುತ್ತಮುತ್ತಲಿನ ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡು ಸಣ್ಣ ನಾಯಕನಾಗಿ ಕೆಳದಿಯಲ್ಲಿ ಒಂದು ರಾಮೇಶ್ವರ ದೇವಸ್ಥಾನವನ್ನೂ ಒಂದು ಅರಮನೆಯನ್ನೂ ಕಟ್ಟಿಸಿದನು. ಈ ವಾರ್ತೆಯನ್ನು ವಿಜಯನಗರದ ರಾಜನಾಗಿದ್ದ ಕೃಷ್ಣದೇವರಾಯನು ಕೇಳಿ ಈ ಚೌಡಪ್ಪ ನಾಯಕನನ್ನು ವಿಜಯನಗರಕ್ಕೆ ಕರಸಿ ಇವನ ಭುಜಬಲ ಪರಾಕ್ರಮಕ್ಕೆ ಮೆಚ್ಚಿ ತನ್ನ ಕೈಕೆಳಗಿನ ನಾಯಕನಾಗಿರಬೇಕೆಂದು ಹೇಳಿ ಕೆಳದಿ, ಇಕ್ಕೇರಿ, ಸೆಬ್ಬಾಯಲು, ಬರಗಲ, ಹಕ್ಕಿಬಯಲು, ಮೋದೂರು, ಕಲಸೆ, ತಾವನದಿ ಎಂಬ ಎಂಟು ಮಾಗಣೆಗಳನ್ನು ಬಿಟ್ಟುಕೊಟ್ಟು ವಂಶಪರಂಪರೆಯಿಂದ ಅನುಭವಿಸಿ ಬರಬೇಕೆಂದು ಶಾಸನವನ್ನು ಬರೆಯಿಸಿಕೊಟ್ಟು, ಈ ಮಾಗಣೆಗಳಿಗೆ ರಾಯರಾಗಿ ಸುಖದಿಂದ ಆಚಂದ್ರಾರ್ಕವಾಗಿ ಆಳಿಕೊಂಡು ಬರಬೇಕೆಂದು ಅಪ್ಪಣೆ ಕೊಟ್ಟನು. ಅದಲ್ಲದೆ ಆನೆ, ಕುದುರೆ, ಕಾಲಾಳುಗಳು, ಅಂದಣ, ಸತ್ತಿಗೆ, ಆಲದಲೆ, ಶಂಖ, ಚಕ್ರ, ಕನಕ ಚೌರಿ, ಸೀಗುರಿ, ಉಭಯ ಚಾಮರ, ಸವಸೇಜ ಎಂಬ ಬಿರುದುಗಳನ್ನು ಕೊಟ್ಟನು. ಅದಲ್ಲದೆ ಇನ್ನು ಮುಂದೆ ಕೆಳದಿಯ ಮೂಲಸಂಸ್ಥಾನದ ಮನ್ನೆಯ ಚೌಡಪ್ಪ ನಾಯಕನೆಂಬ ಹೆಸರನ್ನು ಕೊಟ್ಟನು. ಅಷ್ಟರವರೆಗೆ ಗೌಡನಾಗಿದ್ದ ಚೌಡಪ್ಪನು ಚೌಡಪ್ಪ ನಾಯಕನಾದನು. ಅಂದಿನಿಂದ ಇವನ ತರುವಾಯ ಆಳಿದ ಕೆಳದಿ ನಾಯಕರೆಲ್ಲರೂ ನಾಯಕರೆಂಬ ಬಿರುದನ್ನೇ ಧರಿಸಿಕೊಳ್ಳುತ್ತ ಬಂದರು.

ಚೌಡಪ್ಪ ನಾಯಕನು ವಿಜಯನಗರದಿಂದ ಕೆಳದಿಗೆ ಬಂದು ಅರಮನೆಯನ್ನು ಕಟ್ಟಿಸಿ ಅದರ ದಕ್ಷಿಣ ದಿಕ್ಕಿನಲ್ಲಿ ಒಂದು ಕೋಟೆಯನ್ನು ಕಟ್ಟಿಸಿ ಅದರಲ್ಲಿ ರಕ್ಷಣೆಗಾಗಿ ಸೈನ್ಯವನ್ನಿಟ್ಟನು. ಅನಂತರ ಶಾಲಿವಾಹನ ಶಕ ವರುಷ ೧೪೨೨ (೧೫೦೦ ಕ್ರಿ. ಶ.)ನೆಯ ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ೩ಯಲ್ಲಿ ಚೌಡಪ್ಪ ನಾಯಕನಿಗೆ ಕೆಳದಿಪುರದ ಅರಮನೆಯಲ್ಲಿ ಪಟ್ಟಾಭಿಷೇಕವಾಯಿತು. ಈ ನೆನಪಿಗಾಗಿ ತನ್ನ ಕುಲದೇವರಾದ ಕೆಳದಿ ರಾಮೇಶ್ವರನಿಗೆ ಶಿಲಾಮಯವಾದ ಗರ್ಭಗೃಹವನ್ನು ಕಟ್ಟಿಸಿದನು. ಕೆಳದಿ ಗ್ರಾಮವನ್ನು ಅದಕ್ಕೆ ಉಂಬಳಿಯಾಗಿ ಬಿಟ್ಟನು. ಅನಂತರ ಭದ್ರತೆಗಾಗಿ ಕೆಳದಿ, ಇಕ್ಕೇರಿ, ಚಂದ್ರಗುತ್ತಿ ಮುಂತಾದ ಸ್ಥಳಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿಸಿದನು.

ಕೆಳದಿಯು ರಾಜಧಾನಿಯಾಗಿರಲಿಕ್ಕೆ ಭದ್ರವಾದ ಸ್ಥಳವಲ್ಲವೆಂದು ತಿಳಿದು ಒಂದು ಶುಭ ಮುಹೂರ್ತದಲ್ಲಿ ಕೆಳದಿಗಿಂತಲೂ ಭದ್ರವಾದ ಇಕ್ಕೇರಿಯಲ್ಲಿ ಅರಮನೆಯನ್ನು ಕಟ್ಟಿಸಿದನು. ಆ ಅರಮನೆಗೆ ಉಪಯುಕ್ತವಾದ ಬೊಕ್ಕಸ, ಭಂಡಾರ, ಕುದುರೆ ಲಾಯ, ಗಜಶಾಲೆ, ಉಗ್ರಾಣ, ಕಮ್ಮಟ (ಟಂಕಸಾಲೆ) ಮುಂತಾದ ಮಹಲುಗಳನ್ನು ಕಟ್ಟಿಸಿದನು. ಅನಂತರ ಇಕ್ಕೇರಿ ಪೇಟೆಯನ್ನೂ, ತಳವಾರಗಟ್ಟು ಪಟ್ಟಣದ ಸುತ್ತು ಕೋಟೆಯನ್ನೂ, ಕೋಟೆಯ ಹೊರವಲಯದಲ್ಲಿ

ಕಂದಕವನ್ನೂ ಕಟ್ಟಿಸಿದನು. ಪಟ್ಟಣವು ಕಟ್ಟಿ ಆದೊಡನೆ ಒಳ್ಳೆ ಮುಹೂರ್ತದಲ್ಲಿ ಕೆಳದಿ ಅರಮನೆಯಿಂದ ಹೊರಟು ಬಹಳ ಸಂಭ್ರಮದಿಂದ ಪ್ರಜೋತ್ಪತ್ತಿ ಸಂವತ್ಸರದ ಮಾಘ ಶುದ್ಧ ೫ಯಲ್ಲಿ ಇಕ್ಕೇರಿ ಅರಮನೆಯಲ್ಲಿ ಪ್ರವೇಶಿಸಿ ಭದ್ರ ಸಿಂಹಾಸನವನ್ನೇರಿದನು.

ಚೌಡಪ್ಪ ನಾಯಕನ ತರುವಾಯ ಆಳಿದ ಅವನ ಮಗ ಸದಾಶಿವರಾಯನೂ ವಿಜಯನಗರದ ಕೈಕೆಳಗಿನ ಅರಸನಾಗಿದ್ದ. ಅವನಿಗೆ ಸಹಾಯ ಮಾಡುತ್ತ ಇಕ್ಕೇರಿಯಲ್ಲಿ ಆಳಿಕೊಂಡಿದ್ದನು. ಈ ಸದಾಶಿವರಾಯನು ಬಹಳ ಬಲಶಾಲಿಯಾದ ನಾಯಕನಾಗಿದ್ದನು. ಆದರೂ ಇವನ ಕಾಲದಲ್ಲಿ ರಾಜ್ಯವು ಮೊದಲಿನಷ್ಟೆ ವಿಸ್ತಾರವಾಗಿದ್ದಿತು. ಇವನು ಕೆಳದಿಯಲ್ಲಿ ಒಂದು ಜಂಗಮ ಮಠವನ್ನು ಕಟ್ಟಿಸಿದನು. ಅರಗದ ಕುಶಾವತಿ ನದೀತೀರದಲ್ಲಿ ಸದಾಶಿವಪುರವೆಂಬ ಅಗ್ರಹಾರವನ್ನೂ, ಸದಾಶಿವ ದೇವಸ್ಥಾನವನ್ನೂ ಕಟ್ಟಿಸಿದನು.

ಸದಾಶಿವರಾಯ ನಾಯಕನ ತರುವಾಯ ಆಳಿದ ಅವನ ಹಿರಿಯ ಮಗನಾದ ದೊಡ್ಡಸಂಕಣ ನಾಯಕನು ಸ್ವಲ್ಪ ಪ್ರಬಲನಾಗಿ ತನ್ನ ರಾಜ್ಯವನ್ನು ವಿಸ್ತರಿಸುವುದಕ್ಕೆ ಆಲೋಚಿಸಿದನು. ದೊಡ್ಡಸಂಕಣನಾಯಕನ ಕಾಲದಲ್ಲಿ ವಿಜಯನಗರ ರಾಜ್ಯದ ಅಲ್ಲಲ್ಲಿಯ ಒಳ ಅರಸುಗಳು ಸ್ವತಂತ್ರರಾಗುತ್ತ ಬರುತ್ತಿದ್ದರು. ರಾಮರಾಯನು ವಿಜಯನಗರದಲ್ಲಿ ಆಳುತ್ತಿದ್ದನು. ಸಂಕಣನಾಯಕನು ಸ್ವತಂತ್ರನಾಗಲು ಸಾಧಿಸಿ ಅದೇ ಸಮಯದಲ್ಲಿ ಜಂಬೂರು ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಅದರ ಅರಸನಾದ ವಿದೂಷಣ ಒಡೆಯನು ವಿಜಯನಗರಕ್ಕೆ ದೂರು ಕೊಡಲು ರಾಮರಾಯನು ಅವನ ರಾಜ್ಯವನ್ನು ಅವನಿಗೆ ಕೊಡಿಸಿ ಸಂಕಣನಾಯಕನನ್ನು ಇಕ್ಕೇರಿಯಿಂದ ವಿಜಯನಗರಕ್ಕೆ ಕರಸಿ ಅಲ್ಲಿಯೇ ನಿಲ್ಲುವಂತೆ ಅಪ್ಪಣೆ ಕೊಟ್ಟು ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಅನಂತರ ದೊಡ್ಡಸಂಕಣನಾಯಕನ ಸಾಹಸಕ್ಕೆ ಮೆಚ್ಚಿ ಅವನಿಗೆ ಮೊಳೇನಹಳ್ಳಿ ಹೋಬಳಿಯನ್ನು ಉಚಿತವಾಗಿ ಕೊಟ್ಟು ಭುಜಕೀರ್ತಿ ಎಂಬ ಬಿರುದನ್ನೂ ಅವನ ಹಿರಿಯರಾಳಿ ಬರುತ್ತಿದ್ದ ೮ ಮಾಗಣೆಗಳನ್ನೂ ಹಿಂದಿರುಗಿ ಬಿಟ್ಟುಕೊಟ್ಟನು.

ಸಂಕಣನಾಯಕನು ಈ ಅವಮಾನವನ್ನು ತಾಳಲಾರದೆ ರಾಜ್ಯದ ಅಧಿಕಾರವನ್ನು ತನ್ನ ತಮ್ಮನಾದ ಚಿಕ್ಕಸಂಕಣನಾಯಕನಿಗೆ ಒಪ್ಪಿಸಿಕೊಟ್ಟು ತೀರ್ಥಯಾತ್ರೆಗೆ ಹೊರಟನು. ತೀರ್ಥಯಾತ್ರೆಯಿಂದ ಬಂದ ಒಂದು ವರುಷದಲ್ಲಿ ತಾಳಿಕೋಟೆ ಯುದ್ಧದಲ್ಲಿ ವಿಜಯನಗರವು ಹಾಳಾಯಿತು. ದೊಡ್ಡಸಂಕಣ ನಾಯಕನು ಸ್ವತಂತ್ರನಾಗಿ ರಾಜ್ಯವಾಳಲಾರಂಭಿಸಿ, ಉತ್ತರ ಕನ್ನಡ ಜಿಲ್ಲೆಯ ಭಾಗವಾದ ಭಾರಸ ಕುಟುಂಬದ ರಾಜ್ಯವಾದ ಜೈರಾದೇವಿಯ ರಾಜ್ಯವನ್ನೂ ಜಂಬೂರು, ಮಹಾದೇವಪುರ, ಅಂಕೋಲಾ, ಕಳಸದ ಭೈರರಸನ ರಾಜ್ಯದ ಭಾಗವಾದ ಕಳಸ, ಖಾಂಡ್ಯ, ಕೊಪ್ಪ, ಬೆಳ್ಳರೆ ಮಾಗಣೆಗಳನ್ನೂ ಜಯಿಸಿ ಅವನ್ನು ತನ್ನ ಆಶ್ರಿತ ರಾಜ್ಯವನ್ನಾಗಿ ಮಾಡಿಕೊಂಡನು. ದೊಡ್ಡಸಂಕಣ ನಾಯಕನ ಆಳಿಕೆಯ ಅಂತ್ಯ

ಕಾಲದಲ್ಲಿ ಕೆಳದಿ ಅರಸನು ಅಂಕೋಲ, ಹೊನ್ನಾವರ ತಾಲೂಕುಗಳನ್ನೂ, ಮೈಸೂರು ರಾಜ್ಯದ ಭಾಗವಾದ ಮಲೆನಾಡು ಪ್ರದೇಶದ ಬಲ್ಲಾಳರಾಯ ದುರ್ಗದವರೆಗಿನ ಪ್ರದೇಶವನ್ನೂ ಸ್ವಾಧೀನಪಡಿಸಿಕೊಂಡನು. ಅಂಕೋಲೆಯ ಮುಸಲ್ಮಾನ ಅರಸನೂ, ಭಟ್ಕಳದ ಭೈರಾದೇವಿಯೂ, ಬಂಗರ ಅರಸನ ಒಡೆಯನೂ, ಮಹಾದೇವಪುರದರಸನೂ, ಭೈರವರಾಯನೂ ಇವನ ಆಶ್ರಿತ ರಾಜರಾಗಿ ಆಳುತ್ತಿದ್ದರು.

ದೊಡ್ಡ ಸಂಕಣ ನಾಯಕನು ಕಾಲವಾದನಂತರ ಪಟ್ಟಕ್ಕೆ ಬಂದ ಅವನ ತಮ್ಮನಾದ ಚಿಕ್ಕಸಂಕಣ ನಾಯಕನು ಅಷ್ಟು ಬಲಿಷ್ಠನಾದ ಅರಸನಾಗಲಿಲ್ಲ. ಈ ಸಮಯವನ್ನು ನೋಡಿ ಅಂಕೋಲೆ ಮತ್ತು ಸುಧಾಪುರದ ಅರಸನಾದ ಹಿರಿಯ ಅರಸಪ್ಪನಾಯಕನೂ ಬಿಜಾಪುರದವನೂ ಕೂಡಿ ಕೆಳದಿ ಸಂಸ್ಥಾನವನ್ನು ಒಳನುಗ್ಗಿದ್ದರು. ಆದರೆ ಸಂಕಣನಾಯಕನು ಅವರನ್ನು ಸೋಲಿಸಿ ಓಡಿಸಿದನು. ಅಷ್ಟರಲ್ಲಿ ಭಟ್ಕಳದ ಭೈರಾದೇವಿಯು ಸ್ವತಂತ್ರಳಾಗಿ ಕಪ್ಪ ಕೊಡಲು ಒಪ್ಪಲಿಲ್ಲ. ತಿರುಗಿ ಯುದ್ಧವಾಗಿ ಅವಳು ಸೋತುಹೋಗಿ ಕಪ್ಪಕೊಡುವುದಕ್ಕೆ ಒಪ್ಪಿದಳು.

ಚಿಕ್ಕಸಂಕಣನಾಯಕನ ತರುವಾಯ ಆಳಿದ ದೊಡ್ಡಸಂಕಣನಾಯಕನ ಮಗನಾದ ರಾಮರಾಜನಾಯಕನ ಕಾಲದಲ್ಲಿ ರಾಜ್ಯದಲ್ಲಿ ಏನೊಂದು ವಿಶೇಷ ತರದ ಸಂಗತಿಗಳೂ ಸಂಭವಿಸಲಿಲ್ಲ.

ರಾಮರಾಜನಾಯಕನ ತರುವಾಯ ಅವನ ತಮ್ಮನಾದ ಹಿರಿಯ ವೆಂಕಟಪ್ಪನಾಯಕನು ರಾಜ್ಯವಾಳತೊಡಗಿದನು. ಇವನ ಆಳಿಕೆಯಲ್ಲಿ ಕೆಳದಿ ಸಂಸ್ಥಾನವು ಬಹಳ ವಿಸ್ತಾರವಾಯಿತು. ಇವನ ಕಾಲದಲ್ಲಿ ರಾಜ್ಯದ ಆಡಳಿತೆಯು ಒಳ್ಳೆಯದಾಗಿ ನಡೆಯುತ್ತಿತ್ತು. ಕರಾವಳಿಯಲ್ಲಿ ಪೋರ್ತುಗೀಸರ ಹಾವಳಿಯು ಹೆಚ್ಚಾಗುತ್ತ ಬಂತು. ಯುರೋಪಖಂಡದ ಬೇರೆ ಬೇರೆ ರಾಜ್ಯಗಳಿಂದ ದೇಶದ ಸ್ಥಿತಿಯನ್ನು ನೋಡುವುದಕ್ಕಾಗಿ ಪ್ರಯಾಣಿಕರು ಬರುತ್ತಲೇ ಇದ್ದರು. ಈ ಸಮಯದಲ್ಲಿ ಬಿಜಾಪುರದ ಅರಸನು ಕೆಳದಿ ಸಂಸ್ಥಾನವನ್ನು ಸ್ವಾಧೀನಪಡಿಸಿಕೊಳ್ಳಲು ಸಾಧಿಸಿದನು. ಮೊದಲನೆಯ ಸಾರಿ ಕಳುಹಿಸಿದ ಸೈನ್ಯವನ್ನು ವೆಂಕಟಪ್ಪನಾಯಕನು ಸೋಲಿಸಿ ಓಡಿಸಿದನು. ಬಿಜಾಪುರದವನನ್ನು ಸೋಲಿಸಿ ಓಡಿಸಿದ ಅನಂತರ ತನ್ನ ರಾಜ್ಯದ ಸುತ್ತಮುತ್ತಲೂ ಇರುವ ರಾಜ್ಯಗಳನ್ನು ಸ್ವಾಧೀನಪಡಿಸಿಕೊಳ್ಳಲು ಹೊರಟನು. ಮೊದಲು ಹರಕಾಳ ಮತ್ತು ಎಡೆಹಳ್ಳಿಯನ್ನು ಸ್ವಾಧೀನಪಡಿಸಿ ಅದಕ್ಕೆ ಆನಂದಪುರವೆಂಬ ಹೆಸರಿಟ್ಟು ಅನಂತರ ಹೊಳೆಹೊನ್ನೂರು, ತರಿಗೆಯರಾಜ್ಯ, ಕುಂಭಸೆ, ದಾಸಿವಾಳ, ನಾಕೇಳ, ಜೇನಂದೂರು, ಹಚ್ಚಿ, ಮುಂಡಗದ್ದೆ, ಹೊನ್ನೂರು, ಹಾರನಹಳ್ಳಿ ಸೀಮೆಗಳನ್ನೂ, ಬಂಕೀಪುರ, ಭಟ್ಕಳ, ಹೊನ್ನೆಯಕಂಬಳಿ, ಕೋಳಾರ, ಭೈರಸ ಒಡೆಯರ ಬಿಟ್ಟಿದ ತುಳುವ ರಾಜ್ಯದ ಭಾಗಗಳನ್ನು ಹಿಡಿದು ಅದಕ್ಕೆ ಅಧಿಕಾರಿಗಳನ್ನು ನೇಮಿಸಿದನು. ಅನಂತರ ಚೌಟ, ಬಂಗ, ಅಜಿಲ, ಮೂಲ, ತುಂಬಳೆ ರಾಜರನ್ನು ಜಯಿಸಿ ಅವರನ್ನು

ತನ್ನ ಆಶ್ರಿತರಾಜರನ್ನಾಗಿ ಮಾಡಿದನು. ಅನಂತರ ಸೋದೆ, ಬಿಳಗಿ, ತರೀಕೆರೆ ರಾಜ್ಯಗಳನ್ನು ಜಯಿಸಿದನು. ವೆಂಕಟಪ್ಪನಾಯಕನ ಕಾಲದಲ್ಲಿ ಕೆಳದಿ ರಾಜ್ಯವು ಉತ್ತರ ಕನ್ನಡ ಜಿಲ್ಲೆಯ ಗಂಗಾವಳೀ ಹೊಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಪಯಸ್ವಿನೀ ನದಿಯವರೆಗೂ ಹಬ್ಬಿಕೊಂಡಿತ್ತು. ಇವನ ಕಾಲದಲ್ಲಿ ಅಂಕೋಲೆ, ಸೋದೆ, ಬಿಳಿಗಿ, ತರೀಕೆರೆ, ಬೈರಸಒಡೆಯ, ಬಂಗ, ಅಜಿಲ, ಚೌಟ, ಮೂಲ, ಸಾವಂತ, ಕುಂಬಳೆ ಅರಸರು ಒಳ ಅರಸರಾಗಿ ಆಳಿಕೊಂಡಿದ್ದರು.

ಹಿರಿಯವೆಂಕಟಪ್ಪ ನಾಯಕನ ತರುವಾಯ ಆಳಿದ ವೀರಭದ್ರಪ್ಪ ನಾಯಕನ ಕಾಲದಲ್ಲಿ ಮೊದಲನೆ ಭಾಗದಲ್ಲಿ ರಾಜ್ಯವು ಸ್ವತಂತ್ರವಾಗಿಯೇ ಇತ್ತು. ಅನಂತರ ರಾಜ್ಯಭಾರಕ್ಕಾಗಿ ಅರಮನೆಯಲ್ಲಿ ಕಲಹಗಳುಂಟಾಗಿ ವೀರಭದ್ರಪ್ಪ ನಾಯಕನು ಆನಂದಪುರದಲ್ಲಿಯೂ, ಇನ್ನೊಂದು ಭಾಗದವರು ಇಕ್ಕೇರಿಯಲ್ಲಿಯೂ ಆಳುತ್ತಿದ್ದರು. ಆಗ ಒಳ ಅರಸುಗಳು ಸ್ವತಂತ್ರರಾಗಲು ಸಾಧಿಸಿದರು. ಸೋದೆ, ಬಿಳಿಗಿಯವರು, ತರೀಕೆರೆಯವರು, ಬಾಣಾವರದವರು ಸ್ವತಂತ್ರರಾದರು. ವೀರಭದ್ರಪ್ಪ ನಾಯಕನು ಈ ಸಂಗತಿಯನ್ನು ಆಲೋಚಿಸಿ ತನಗೆ ರಾಜ್ಯಭಾರವೇ ಬೇಡವೆಂದು ಬಸರೂರಿನ ಹತ್ತಿರವಿರುವ ಕಂಡ್ಲೂರು ಕೋಟೆಯಲ್ಲಿದ್ದನು. ಆಗ ಜಂಪಾವರದಲ್ಲಿ ಆಳಿಕೊಂಡಿದ್ದ ಶಿವಪ್ಪ ನಾಯಕನು ಬಂದು ವೀರಭದ್ರಪ್ಪ ನಾಯಕರ ಒಪ್ಪಿಗೆಯಿಂದ ಅರಮನೆಯ ಕಲಹಗಳನ್ನು ಶಾಂತಪಡಿಸಿ ದಂಗೆ ಎಬ್ಬಿಸಿದವರನ್ನು ಬಂಧನೆಯಲ್ಲಿಟ್ಟು ರಾಜ್ಯಭಾರವನ್ನು ವಹಿಸಿದನು. ಕಪ್ಪ ಕೊಡದೆ ಇರುವ ತುಳು ಜೈನರಾಜನನ್ನು ಸೆರೆಹಿಡಿದು ಇಕ್ಕೇರಿಗೆ ಕೊಂಡುಹೋಗಿ ಅವರನ್ನು ಬಂಧನೆಯಲ್ಲಿಟ್ಟು ಬರಬೇಕಾದ ಕಪ್ಪವನ್ನು ಅವರಿಂದ ಪಡೆದು ಅವರ ರಾಜ್ಯಗಳ ಹೆಚ್ಚಿನ ಭಾಗವನ್ನು ತನ್ನ ರಾಜ್ಯಕ್ಕೆ ಕೂಡಿಸಿ ಸ್ವಲ್ಪ ಭಾಗವನ್ನು ಮಾತ್ರವೆ ಅವರಿಗೆ ಬಿಟ್ಟು ಕೊಟ್ಟು ಕೊಡಬೇಕಾದ ಕಪ್ಪವನ್ನು ಮೊದಲಿಗಿಂತಲೂ ಹೆಚ್ಚಿಸಿದನು.

ವೀರಭದ್ರಪ್ಪ ನಾಯಕನ ತರುವಾಯ ಚಿಕ್ಕಸಂಕಣ ನಾಯಕನ ಮೊಮ್ಮಗನಾದ ಶಿವಪ್ಪನಾಯಕನು ಆಳಲಾರಂಭಿಸಿದನು. ಕೆಳದಿ ನಾಯಕರಲ್ಲೆಲ್ಲ ಇವನು ಬಹಳ ಪ್ರಸಿದ್ಧಿ ಪಡೆದವನು. ವೀರಭದ್ರಪ್ಪ ನಾಯಕನ ಕಾಲದಲ್ಲಿ ಬಿಜಾಪುರದವರು ೧೫೬೦(೧೬೩೮ ಕ್ರಿ. ಶ.)ನೆಯ ಈಶ್ವರ ಸಂವತ್ಸರದಲ್ಲಿ ಇಕ್ಕೇರಿಯ ಪಟ್ಟಣವನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಆಗ ೧೫೬೧ರಲ್ಲಿ ಬಹುಧಾನ್ಯ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ಬಿದರೂರು ಕೋಟೆಯ ಅರಮನೆಯಲ್ಲಿ ಇಳುಕೊಂಡು ಅಲ್ಲಿಂದ ಆಳಲಾರಂಭಿಸಿದನು. ಶಿವಪ್ಪನಾಯಕನು ಬಿದರೂರು ಪಟ್ಟಣವನ್ನು ನಿರ್ಮಾಣಮಾಡಿದನು. ಅವನು ಈ ಹೊಸತಾದ ರಾಜಧಾನಿಯಲ್ಲಿ ಬೇರೆಬೇರೆ ಊರುಗಳ ವರ್ತಕರನ್ನೂ, ಸುಭಾಷನಾ ಮಿಷ್ಯ ವ್ಯಾಪಾರಿಗಳನ್ನೂ, ಗೌಡಸಾರಸ್ವತರನ್ನೂ ನಾಡವರನ್ನೂ ಬರಮಾಡಿಸಿ ಅವರಿಗೆ ಸ್ಥಳಗಳನ್ನು ಹಂಗಡಿಸಿ ಕೊಟ್ಟು ಅವರು ಪೇಟೆ ಪಟ್ಟಣವನ್ನು ಕಟ್ಟಿ ನಿಲ್ಲುವಂತೆ ಮಾಡಿದನು. ಅಲ್ಲದೆ

ಚಿತ್ರಕಾರರನ್ನು, ಶಿಲ್ಪಿಗಳನ್ನು, ಲೋಹದ ಕೆಲಸಗಾರರನ್ನು, ಕಂಚುಗಾರರನ್ನು, ಗಾಣಿಗರನ್ನು, ಕುಂಬಾರರನ್ನು, ಮಡಿವಾಳರನ್ನು, ಉಳಿದ ಕೈಗಾರಿಕೆಯವರನ್ನು ಕರೆತಂದು ಅವರವರಿಗೆ ಬೇರೆ ಬೇರೆ ಕೇರಿಗಳನ್ನು ಕಟ್ಟಿಸಿಕೊಟ್ಟನು.

ಅನಂತರ ತನ್ನ ಹೋದ ರಾಜ್ಯಗಳನ್ನೂ ಹೊಸ ರಾಜ್ಯಗಳನ್ನೂ ಹಿಡಿಯಲಿಕ್ಕೆ ಪ್ರಾರಂಭಿಸಿದನು. ವಸುಧಾರೆಯ ಕೋಟೆ, ಸಕ್ಕರೆಯಪಟ್ಟಣ, ಹಾಸನ, ಬೇಲೂರು, ಅರಕಲಗೋಡು ಇವುಗಳನ್ನು ಸ್ವಾಧೀನಪಡಿಸಿಕೊಂಡನು. ಈ ಸಮಯದಲ್ಲಿ ಕರಾವಳಿಯಲ್ಲಿ ಪೋರ್ತುಗೀಸರ ಹಾವಳಿಯು ಹೆಚ್ಚಾಗುತ್ತ ಬಂತು. ಈ ಪೋರ್ತುಗೀಸರು ಸ್ವಾಧೀನಪಡಿಸಿಕೊಂಡಿದ್ದ ಕುಂದಾಪುರ, ಗಂಗೊಳ್ಳಿ, ಹೊನ್ನಾವರ, ಮಂಗಳೂರು ಕೋಟೆಗಳನ್ನು ಸ್ವಾಧೀನಪಡಿಸಿಕೊಂಡನು. ಅನಂತರ ಬಿಸ್ನಾಳದ ಹತ್ತಿರವಿರುವ ಕಟ್ಟೀಕೇಳೂರನ್ನು ಹಿಡಿದನು. ಬೇಕಲ, ಪತ್ರಾಳಿ ಮತ್ತು ಚಂದ್ರಗಿರಿ ಕೋಟೆಗಳನ್ನು ಬಲಪಡಿಸಿದನು. ಅನಂತರ ನೀಲೇಶ್ವರದ ಗಡಿಯವರೆಗಿರುವ ಅಲುವತ್ತುನಾಡು, ಪಡುವಲ್ನಾಡು ಮಾಗಣೆಗಳನ್ನು ಸ್ವಾಧೀನಪಡಿಸಿದನು.

ಇದಾದಮೇಲೆ ಬಿಜಾಪುರದ ಪಾದುಶಹನು ಮರಣಪಟ್ಟ ವಾರ್ತೆಯನ್ನು ಕೇಳಿ ಕೆಳದಿ ಸಂಸ್ಥಾನದಿಂದ ಅವನು ಸ್ವಾಧೀನಪಡಿಸಿಕೊಂಡ ಇಕ್ಕೇರಿ, ಸೊರಬ, ಉಡುಗಣಿ, ಮಹದೇವಪುರ, ಅಂಬಲಿಗೊಳ್ಳ ಮುಂತಾದ ಕೋಟೆಗಳನ್ನು ಸಾಧಿಸಿದನು. ಸೋದೆಯ ಅರಸನು ದಂಗೆ ಎಬ್ಬಿಸಲು ಅವನ ರಾಜ್ಯವನ್ನು ಸ್ವಾಧೀನಪಡಿಸಿದಾಗ ಅವನು ಸಂಧಿಯನ್ನು ಮಾಡಿ ಕಪ್ಪಕೊಟ್ಟು ಆಳಲಿಕ್ಕೆ ಒಪ್ಪಿದನು. ಆಗ ಮೈಸೂರಿನವರು ಬೇಲೂರು ರಾಜ್ಯವನ್ನು ಹಿಡಿಯಲಿಕ್ಕೆ ಬರಲು ಶಿವಪ್ಪನಾಯಕನು ಸೋದೆ, ಬಿಳಗಿ, ತರೀಕೆರೆ, ಹರಪುರದ ಅರಸನ ಸೈನ್ಯ ಸಹಿತ ಹೊರಟು ಮೈಸೂರು ಸೈನ್ಯವನ್ನು ಜಯಿಸಿ ಬೇಲೂರು ಸಂಸ್ಥಾನದ ಕಷ್ಟ ಬಾರದಂತೆ ಮಾಡಿದನು. ಅಲ್ಲಿಂದ ಕಾವೇರೀನದಿಗೆ ಸೇತುವೆಯನ್ನು ಕಟ್ಟಿ ಮೈಸೂರಿಗೆ ಮುತ್ತಿಗೆ ಹಾಕಲು ಹೋದಾಗ ಅಸ್ವಸ್ಥನಾಗಲು ಅಲ್ಲಿಂದ ಹಿಂದಕ್ಕೆ ಬಂದನು.

ಶಿವಪ್ಪನಾಯಕನು ಮೊದಲಾಳಿದ ಅರಸರು ಸ್ವಾಧೀನಪಡಿಸಿಕೊಂಡ ರಾಜ್ಯಕ್ಕಿಂತಲೂ ಹೆಚ್ಚು ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು.

ಶಿವಪ್ಪನಾಯಕನ ತರುವಾಯ ಶಿವಪ್ಪನಾಯಕನ ತಮ್ಮನಾದ ಕಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ವಿಶೇಷ ತರದ ಸಂಗತಿಗಳು ಸಂಭವಿಸಲಿಲ್ಲ. ಶಿವಪ್ಪನಾಯಕನ ಮಗನಾದ ಭದ್ರಪ್ಪನಾಯಕನ ಕಾಲದಲ್ಲಿ ಬಿಜಾಪುರದ ಸೈನ್ಯವು ಬಂದು ವೇಣುಪುರವನ್ನೂ ಭುವನಗಿರಿಯ ದುರ್ಗವನ್ನೂ ಸ್ವಾಧೀನಪಡಿಸಿಕೊಂಡಿತು. ಆಗ ಭದ್ರಪ್ಪನಾಯಕನು ಸಂಧಿಯನ್ನು ಮಾಡಿ ಅವರನ್ನು ಹಿಂದಿರುಗಿ ಕಳುಹಿಸಿದನು.

ಭದ್ರಪ್ಪನಾಯಕನ ತರುವಾಯ ಆಳಿದ ಹಿರಿಯ ಸೋಮಶೇಖರನಾಯಕನ ಕಾಲದಲ್ಲಿ ಮೈಸೂರಿನವರು ಒಂದು ಸಾರಿ ದಂಡೆತ್ತಿಕೊಂಡು ಬಂದು

ಸೋತು ಓಡಿಹೋದರು. ತುಳು ಅರಸರು ದಂಗೆ ಎಬ್ಬಿಸುತ್ತಲೇ ಇದ್ದರು. ಈ ಅರಸನಿಗೆ ತನ್ನ ರಾಜ್ಯಭಾರದ ಕಡೆಯ ಭಾಗದಲ್ಲಿ ಹುಚ್ಚು ಹಿಡಿದು ಮರಣ ಹೊಂದಿದನು. ಅರಮನೆಯಲ್ಲಿ ಪಟ್ಟಕ್ಕಾಗಿ ಕಲಹಗಳುಂಟಾದವು. ಆದರೆ ಬಹಳ ಜಾಣೆಯಾದ ಇವನ ರಾಣಿ ಚನ್ನಮ್ಮಾಜಿಯು ರಾಜ್ಯಭಾರ ನಡಿಸಲಾರಂಭಿಸಿ ದಂಗೆ ಎಬ್ಬಿಸಿದವರನ್ನೆಲ್ಲ ಶಿಕ್ಷಿಸಿದಳು. ಅನಂತರ ಬಸವಪ್ಪನಾಯಕನೆಂಬ ಕುಮಾರನನ್ನು ದತ್ತಕ್ಕೆ ತೆಗೆದುಕೊಂಡು ಅವನ ಹೆಸರಿನಲ್ಲಿ ತಾನು ಆಳಲಾರಂಭಿಸಿದಳು. ಇವಳ ಕಾಲದಲ್ಲಿ ತಾಸರಗೋಡು ತಿಮ್ಮಣ್ಣನೆಂಬವನು ಪ್ರಖ್ಯಾತಿಪಡೆದ ಸೇನಾಧಿಪತಿ ಯಾಗಿದ್ದನು. ಈ ಸೇನಾಧಿಪತಿಯು ಭದ್ರಪ್ಪನಾಯಕನ ಕಾಲದಲ್ಲಿ ತಪ್ಪಿ ಹೋದ ಸೀಮೆಗಳನ್ನು ಸ್ವಾಧೀನಪಡಿಸಿಕೊಂಡನು. ಆದರೂ ಸೋದೆಯ ಅರಸನು ದಂಗೆ ಎಬ್ಬಿಸುತ್ತಲೇ ಇದ್ದನು. ಮೈಸೂರಿನವರು ಸ್ವಾಧೀನಪಡಿಸಿ ಕೊಂಡ ಹಾಸನ, ಬೇಲೂರು, ತಡಸೂರು, ಬಾಣಾವರ ರಾಜ್ಯಗಳನ್ನು ಸ್ವಾಧೀನ ಪಡಿಸಿಕೊಂಡಳು. ಈ ರಾಣಿಯ ಆಳಿಕೆಯ ಕಾಲದಲ್ಲಿ ಮರಾಟೆಯವರು ಸುಲಿಗೆ ಮಾಡುತ್ತಲೇ ಇದ್ದರು. ಚೆನ್ನಮ್ಮಾಜಿಯು ಅನೇಕ ದೇವಸ್ಥಾನಗಳಿಗೆ ದೊಡ್ಡ ಭೂಮಿ ಉಂಬಳಿ ಬಿಟ್ಟಿರುತ್ತಾಳೆ. ಮುಖ್ಯವಾಗಿ ಸುಬ್ರಹ್ಮಣ್ಯ ರಥೋತ್ಸ ವಕ್ಕೆ, ಮಂಜೇಶ್ವರ ಅನಂತೇಶ್ವರ ದೇವಸ್ಥಾನದ ರಥೋತ್ಸವಕ್ಕೆ, ಪೊಳಲಿ ರಥೋತ್ಸವಕ್ಕೆ ಉತ್ತಾರ ಬಿಟ್ಟಿರುತ್ತಾಳೆ. ಮಂಗಳೂರಿನಲ್ಲಿ ರೋಮನ್ ಕೆತೊಲಿಕರ ಹಂಪನಕಟ್ಟೆ, ಮಿಲಾಗ್ರಿ, ಇಗರ್ಜಿಗಾಗಿ ಸ್ಥಳವನ್ನು ಉಂಬಳಿ ಬಿಟ್ಟಿರುತ್ತಾಳೆ.

ಚೆನ್ನಮ್ಮಾಜಿಯ ತರುವಾಯ ಅವಳ ಸಾಕುಮಗನಾದ ಹಿರಿಯ ಬಸವಪ್ಪ ನಾಯಕನು ಅರಸನಾದನು. ಇವನ ಕಾಲದಲ್ಲಿ ಮರಾಟೆಯವರ ಹಾವಳಿಯು ಹೆಚ್ಚಾಯಿತು. ಅವರಿಗೆ ಹಣಕೊಟ್ಟು ಹಿಂದಿರುಗಿ ಕಳುಹಿಸುತ್ತಲೇ ಇದ್ದನು. ಅನಂತರ ಆಳಿದ ಸೋಮಶೇಖರ ನಾಯಕನ ಆಳಿಕೆಯಲ್ಲಿ ಸೀಲೇಶ್ವರ ರಾಜ್ಯವು ಇವರ ಸ್ವಾಧೀನವಾಗಿ ಕೆಳದಿ ಸಂಸ್ಥಾನವು ಸಮುದ್ರ ಕರಾವಳಿಯಲ್ಲಿ ಅಂಕೋಲೆ ಯಿಂದ ಬಲಿಯಾ ಪಟ್ಟಣದವರೆಗೂ ಪೂರ್ವದಿಕ್ಕಿನಲ್ಲಿ ಶಿವಮೊಗ್ಗೆಯವರೆಗೂ ವಿಸ್ತರಿಸಿಕೊಂಡಿತು. ಆದರೆ ಮರಾಟೆಯರು ಬಂದು ಸುಲಿಗೆ ಮಾಡುತ್ತಲೇ ಇದ್ದರು.

ಸೋಮಶೇಖರ ನಾಯಕನ ತರುವಾಯ ಆಳಿದ ಕಿರಿಯ ಬಸವಪ್ಪ ನಾಯಕನ ಕಾಲದಲ್ಲಿ ಸಮುದ್ರಕರಾವಳಿಯಲ್ಲಿ ಪೋರ್ತುಗೀಸರ ಹಾವಳಿಯು ಹೆಚ್ಚಾಗುತ್ತ ಬರಲು ಇವನು ಉಡುಪಿಯ ಹತ್ತಿರ ಮಲಪೆಯಲ್ಲಿ ದರಿಯಾಬಾದಿನ ಗಡಿ ಎಂಬ ಕೋಟೆಯನ್ನೂ, ಕಾಪಿನಲ್ಲಿ ಮನೋಹರ ಗಡಿ ಎಂಬ ಕೋಟೆಯನ್ನೂ, ಕೋಸಣೆ ಗ್ರಾಮದಲ್ಲಿ ಒಂದು ಕೋಟೆಯನ್ನೂ ಕಟ್ಟಿಸಿ ಮಂಗಳೂರಿನ ಹಳೇಕೋಟೆಯನ್ನು ಸರಿಪಡಿಸಿ ಅದಕ್ಕೆ ಶಿವರಾಜೇಂದ್ರಗಿರಿ ಎಂಬ ಹೆಸರನ್ನಿಟ್ಟನು. ಈ ಅರಸನ ಕಾಲದಲ್ಲಿಯೂ ಮರಾಟೆಯವರ ಹಾವಳಿಯು ಹೆಚ್ಚಾಗಿತ್ತು. ಈ ನಾಯಕನು ಅವರಿಗೆ ಹಣ ಕೊಟ್ಟು ಹಿಂದಕ್ಕೆ ಕಳುಹಿಸುತ್ತಿದ್ದನು.

ಕಿರಿಯ ಬಸವಪ್ಪ ನಾಯಕನ ತರುವಾಯ ಅವನ ರಾಣಿಯಾದ ವೀರಮ್ಮಾಜಿಯು ಆಳಿದಳು. ಇವಳ ಕಾಲದಲ್ಲಿ ಸುಲ್ತಾನ ಅಲಿರಾಜನೂ, ಕುಂಬಳೆ ರಾಜನೂ ಕನ್ನಡ ಜಿಲ್ಲೆಯಲ್ಲಿರುವ ಮಂಜೇಶ್ವರ ಮತ್ತು ಕೊಲ್ಲೂರು ದೇವಸ್ಥಾನಗಳನ್ನು ಸುಲಿಗೆ ಮಾಡಿದರು. ಈ ರಾಣಿಯ ಕಾಲದಲ್ಲಿ ರಾಜ್ಯವು ಮೊದಲಿನಷ್ಟೇ ವಿಸ್ತಾರವಾಗಿತ್ತು. ಇವಳು ತನಗೆ ಮಕ್ಕಳಿಲ್ಲದುದರಿಂದ ಚನ್ನಬಸವಪ್ಪ ನಾಯಕನನ್ನು ದತ್ತಕ್ಕೆ ತೆಗೆದುಕೊಂಡಳು. ಅವನು ಕಾಲವಾಗಲು ಸೋಮಶೇಖರನೆಂಬ ಮತ್ತೊಬ್ಬನನ್ನು ದತ್ತಕ್ಕೆ ತೆಗೆದುಕೊಂಡಳು. ರಾಜ್ಯದಲ್ಲಿ ಅಂತಃಕಲಹಗಳುಂಟಾಗಿ ಮಂತ್ರಿ, ಪ್ರಧಾನಿಗಳಲ್ಲಿಯೇ ಎರಡು ತಂಡಗಳಾಗಿ ರಾಜ್ಯವು ಹೈದರಲ್ಲಿಯ ಸ್ವಾಧೀನವಾಯಿತು.

೬. ಸುತ್ತಮುತ್ತಲೂ ಇದ್ದ ರಾಜರುಗಳು—ಕೆಳದಿ ಸಂಸ್ಥಾನದ ಉತ್ತರ ದಿಕ್ಕಿನಲ್ಲಿ ಗೋವಾ ರಾಜ್ಯವೂ, ಬಿಜಾಪುರ ರಾಜ್ಯವೂ, ಪೂರ್ವದಲ್ಲಿ ಮೈಸೂರು ಮತ್ತು ಬೇಲೂರು ರಾಜ್ಯಗಳೂ, ದಕ್ಷಿಣದಲ್ಲಿ ಕೊಡಗು ರಾಜ್ಯವೂ ಕೋಲಕರಸನ ರಾಜ್ಯಗಳೂ ಇದ್ದುವು. ಈ ಅರಸರಿಂದ ಕೆಳದಿ ಸಂಸ್ಥಾನಕ್ಕೆ ಯಾವಾಗಲೂ ಬಾಧೆಗಳು ಇದ್ದೇ ಇದ್ದವು.

೭. ಅನ್ಯ ದೇಶೀಯರ ಆಗಮನ—ಈ ಅರಸರ ಆಳಿಕೆಯಲ್ಲಿ ಕರಾವಳಿಯಲ್ಲಿ ಪೋರ್ತುಗೀಸರು ವ್ಯಾಪಾರಕ್ಕಾಗಿ ಅರಬಿಮೂರರೊಡನೆ ಜಗಳವಾಡುತ್ತಲೇ ಇದ್ದರು. ಅರಬಿಮೂರರು ವಿಜಯನಗರದವರ ಕಾಲದಿಂದಲೇ ಕರಾವಳಿಯಲ್ಲಿ ವ್ಯಾಪಾರ ಮಾಡಿಕೊಂಡಿದ್ದರು. ಇವರು ಇಲ್ಲಿಯ ಜೈನ ರಾಜರುಗಳಿಗೆ ಸಹಾಯ ಮಾಡುತ್ತ ಪರಸ್ಪರ ಪ್ರೀತಿಯಿಂದ ಇದ್ದರು. ಪೋರ್ತುಗೀಸರು ಈ ಮೂರರ ವ್ಯಾಪಾರವನ್ನೂ ಹಾಳುಮಾಡಿ, ಅವರ ಭಂಡಸಾಲೆಗಳನ್ನೂ ಹಡಗುಗಳನ್ನೂ ಸುಟ್ಟುಹಾಕುತ್ತಿದ್ದರು. ಇದಕ್ಕಾಗಿ ಕೆಳದಿ ನಾಯಕರು ಅಂಕೋಲೆಯಿಂದ ಬಲಿಯಪಟ್ಟಣದವರೆಗೂ ಪ್ರತಿ ಒಂದು ನದಿಯ ದ್ವಾರದಲ್ಲಿ ಒಂದೊಂದು ಬಲವಾದ ಕೋಟೆಯನ್ನು ಕಟ್ಟಿಸಿ ಸೈನ್ಯವಿಟ್ಟಿದ್ದರು. ಪೋರ್ತುಗೀಸರ ಬಲವು ಸೋಮಶೇಖರನಾಯಕನ ಆಳಿಕೆಯ ಕಾಲದಲ್ಲಿ ಕುಂದುತ್ತ ಬಂತು. ಇಂಗ್ಲಿಷರು ಹೊನ್ನಾವರದಲ್ಲಿಯೂ ತಲಚೇರಿಯಲ್ಲಿಯೂ ಇದ್ದು ವ್ಯಾಪಾರ ಮಾಡಲಾರಂಭಿಸಿದರು. ಆದರೆ ಇವರು ಕರಾವಳಿಯನ್ನು ಹಾಳುಮಾಡದೆ ಈ ರಾಜನೊಡನೆ ಕರಾರುಗಳನ್ನು ಮಾಡಿ ವ್ಯಾಪಾರವನ್ನು ನಡಿಸುತ್ತಿದ್ದರು.

೮. ರಾಜ್ಯಭಾರ ಕ್ರಮ—ಕೆಳದಿ ನಾಯಕರ ರಾಜ್ಯಭಾರವು ಆ ಸಮಯದಲ್ಲಿದ್ದ ಎಲ್ಲ ರಾಜ್ಯಗಳ ರಾಜ್ಯಭಾರದಂತೆಯೇ ಇತ್ತು. ಅರಸರು ತಮ್ಮ ಮನಸು ಬಂದಂತೆ ನಡೆಸುತ್ತಿರಲಿಲ್ಲ. ಮಂತ್ರಿ, ಸಭೆಯು ಇತ್ತು. ಪ್ರತಿ ಒಂದು ಇಲಾಖೆಗಾಗಿ ಬೇರೆ ಬೇರೆ ಕರಣಿಕರು ಇದ್ದರು. ಒಳ ಅರಸುಗಳ ರಾಜಧಾನಿಗಳಲ್ಲಿ ವಕೀಲ, ದಿವಾನ ಎಂಬ ಏಜಂಟರುಗಳಿದ್ದರು. ತಮ್ಮ ಸುತ್ತಮುತ್ತಲಿನ ರಾಜ್ಯ

ಗಳಲ್ಲಿ ತಮ್ಮ ರಾಯಭಾರಿಗಳನ್ನು ಕಳುಹಿಸುತ್ತಿದ್ದರು. ಆ ಅರಸರ ರಾಯಭಾರಿಗಳು ಇವರ ರಾಜಧಾನಿಯಲ್ಲಿದ್ದರು.

ಭೂಕಂದಾಯ—ಕಂದಾಯ ವಸೂಲು ಮಾಡುವುದಕ್ಕಾಗಿ ರಾಜ್ಯವನ್ನು ಜಿಲ್ಲೆಗಳನ್ನಾಗಿಯೂ, ಜಿಲ್ಲೆಗಳನ್ನು ನಾಡುಗಳನ್ನಾಗಿಯೂ, ನಾಡುಗಳನ್ನು ಮಾಗಣೆಗಳನ್ನಾಗಿಯೂ, ಮಾಗಣೆಗಳನ್ನು ಗ್ರಾಮಗಳನ್ನಾಗಿಯೂ, ಗ್ರಾಮಗಳನ್ನು ಗುತ್ತುಗಳನ್ನಾಗಿಯೂ, ಗುತ್ತುಗಳನ್ನು ವರ್ಗಗಳನ್ನಾಗಿಯೂ ವಿಭಾಗಿಸಿದ್ದರು. ಗ್ರಾಮಗಳಿಗೆ ಗಡಿಕಲ್ಲುಗಳನ್ನು ಹಾಕಿಸಿದ್ದರು. ಈ ಗಡಿಕಲ್ಲುಗಳ ಮೇಲುಭಾಗದಲ್ಲಿ ಮಧ್ಯದಲ್ಲಿ ಒಂದು ವಾಮನನ ಚಿತ್ರವೂ ಅದರ ಮುಂದುಗಡೆ ಶಿವಲಿಂಗವೂ ಇತ್ತು. ಕೆಲವುಗಳ ಮೇಲೆ ಒಂದು ಶಿವಲಿಂಗವು ಮಾತ್ರವೇ ಇತ್ತು. ಈ ಕಲ್ಲುಗಳು ಈಗಲೂ ಅಲ್ಲಲ್ಲಿ ಕಾಣಬರುತ್ತವೆ. ಉಂಬಳಿ ಬಿಟ್ಟ ಗದ್ದೆಗಳಲ್ಲಿ ಶಾಸನದ ಕಲ್ಲುಗಳನ್ನು ಹುಗಿದು ನಿಲ್ಲಿಸುತ್ತಿದ್ದರು. ಅವುಗಳಲ್ಲಿ [illegible] ಬೇಸಾಯವಾಗ ಮಧ್ಯದಲ್ಲಿ ಒಂದು ಬಾಳೆ ಗಿಡವನ್ನು ನಡುವ ಕ್ರಮವನ್ನು ಮಾಡಿದ್ದರು. ಇದರಿಂದ ಉಂಬಳಿ ಬಿಟ್ಟ ಗದ್ದೆಯು ಪ್ರತ್ಯೇಕ ಕಾಣುತ್ತಿತ್ತು. ಬೇಸಾಯವು ಒಳ್ಳೆ ರೀತಿಯಲ್ಲಿ ನಡೆಯುತ್ತಿತ್ತು. ಅನ್ಯ ದೇಶೀಯರ ಹಾವಳಿಯು ಹೆಚ್ಚಾಗಿದ್ದರೂ ಬೇಸಾಯಗಾರರಿಗೆ ಏನೊಂದು ಹಾವಳಿಯುಂಟಾಗಲಿಲ್ಲ.

ಕಂದಾಯವನ್ನು ವಸೂಲು ಮಾಡುವುದಕ್ಕಾಗಿ ಗುತ್ತಿನವರು ತಮ್ಮ ಗುತ್ತಿನೊಳಗಿರುವ ವರ್ಗಗಳ ಕಂದಾಯವನ್ನು ವಸೂಲು ಮಾಡಿ ಸರಕಾರದಿಂದ ನೇಮಿಸಲ್ಪಟ್ಟ ಅಧಿಕಾರಿಗಳಿಗೊಪ್ಪಿಸುತ್ತಿದ್ದರು. ಒಳ ಅರಸುಗಳು ತಮ್ಮ ಕಪ್ಪವನ್ನು ಒಳ ಅರಸುಗಳ ಮೇಲುವಿಚಾರ ನೋಡಲಿಕ್ಕಿದ್ದ ಅಧಿಕಾರಿಗಳಿಗೆ ಒಪ್ಪಿಸುತ್ತಿದ್ದರು. ಹಣದ ಲೆಕ್ಕ ಪತ್ರಗಳನ್ನು ಸರಿಯಾಗಿ ಇಡಲಿಕ್ಕೆ ಕಂದಾಚಾರದ ಅಧಿಕಾರಿಗಳು ರಾಜಧಾನಿಯಲ್ಲಿದ್ದರು. ಇದಲ್ಲದೆ ಬೊಕ್ಕಸದ ಅಧಿಕಾರಿಗಳು ಪ್ರತ್ಯೇಕವಿದ್ದರು. ಈ ಸಮಯದಲ್ಲಿ ಕಂದಾಯವನ್ನು ಹಣದ ರೂಪದಲ್ಲಿಯೂ ವಸ್ತುಗಳ ರೂಪದಲ್ಲಿಯೂ ಕೊಡುತ್ತಿದ್ದರು. ಕನ್ನಡ ಜಿಲ್ಲೆಯಲ್ಲಿ ಬಂಗರಾಜನೂ ಚೌಟರಾಜನೂ ಕಪ್ಪವನ್ನು ಹಣದ ರೂಪದಲ್ಲಿಯೇ ಕೊಡುತ್ತಿದ್ದರು. ಅಜಿಲನು ಅಕ್ಕಿಯನ್ನು ಕೊಡುತ್ತಿದ್ದನು. ಹಣಾಲಿ ಕೊಸ್ವಾರನು ತೆಂಗಿನಕಾಯನ್ನೊದಗಿಸುತ್ತಿದ್ದನು. ಬೈರಂಗಡಿಮೂಲನು ಬಲಕ್ಕಿಯನ್ನು ಕೊಡುತ್ತಿದ್ದನು. ಬಿಟ್ಲದ ಅರಸನು ಅಡಕೆಯನ್ನು ಕೊಡುತ್ತಿದ್ದನು. ಉಳಿದ ಅರಸರು ಭತ್ತವನ್ನೂ ಅಕ್ಕಿಯನ್ನೂ ಕೊಡುತ್ತಿದ್ದರು.

ಈ ನಾಯಕರ ಆಳಿಕೆಯಲ್ಲಿ ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ೧೬೧೮ರವರೆಗೆ ರಾಜ್ಯದ ಕಂದಾಯವು ಕಡಿಮೆಯಾಗಿತ್ತು. ವೆಂಕಟಪ್ಪನಾಯಕನು ಇದನ್ನು ಶೇಕಡಾ ೫೦ರಂತೆ ಏರಿಸಿದನು. ಅನಂತರ ೧೬೬೦ರವರೆಗೆ ತೆಂಗಿನಮರಗಳ ಮೇಲೆ ಸುಂಕವನ್ನು ವಿಧಿಸಿದರು. ಸರಕಾರಿ ಲೆಕ್ಕಗಳಲ್ಲಿ ಭೂಕಂದಾಯ, ಅನಂತರ ಏರಿಸಿದ ಶೇಕಡಾ ೫೦ರಷ್ಟು ಕಂದಾಯ, ಫಲಮರಗಳ

ನೇಮಿಸಿದ್ದ ನಾಗಾಯುಕರು ಕಂದಾಯ—ಇವುಗಳನ್ನು ವಸೂಲು ಮಾಡುತ್ತಿದ್ದರು. ಈ ಕಂದಾಯಕ್ಕೆ **ರೇಖು** ಅಥವಾ ಶಿಸ್ತು ಎಂದು ಹೇಳುತ್ತಿದ್ದರು. ಶಿಸ್ತು ಅಲ್ಲದೆ ಇನ್ನು ಕೆಲವು ಬಗೆ ತೆರಿಗೆಗಳು ಇದ್ದುವು. ಬಂದರುಗಳಿಗೆ ಬರುವ ಸಾಮಾನು ಹೋಗುವ ಸರಕುಗಳ ಮೇಲೆ ಸುಂಕವನ್ನು ಹಾಕಿದ್ದರು. ಹೆದ್ದಾರಿಗಳಲ್ಲಿ ಅಲ್ಲಲ್ಲಿ ಈಗ ಟೋಲುಗೇಟುಗಳಲ್ಲಿ ಸುಂಕ ವಸೂಲು ಮಾಡುತ್ತಿದ್ದಂತೆಯೇ ಸುಂಕ ವಸೂಲು ಮಾಡುವ ಕಟ್ಟೆಗಳು ಇದ್ದುವು. ಈ ಸ್ಥಳಗಳಲ್ಲಿ ಕಾವಲಿನವರು ಇದ್ದು ಸುಂಕ ವಸೂಲು ಮಾಡುತ್ತಿದ್ದರು.

ಬಸವಪ್ಪನಾಯಕನ ಮದುವೆಯ ಖರ್ಚಿಗಾಗಿ ೧೭೧೧ರಲ್ಲಿ ಸ್ವಲ್ಪ ಕಂದಾಯವನ್ನು ಹೆಚ್ಚಿಸಿದ್ದರು. ಇದಕ್ಕೆ **ಪ್ರೊಗದಿ** ಎಂದು ಹೇಳುತ್ತಿದ್ದರು. ಮೊಗಲಾಯರು ೧೭೧೮ರಲ್ಲಿ ಕೆಳದಿ ಸಂಸ್ಥಾನವನ್ನು ಮುತ್ತಿದ್ದಾಗ ಅವರಿಗೆ ಹಣ ಕೊಟ್ಟು ಕಳುಹಿಸುವುದಕ್ಕಾಗಿ **ಪಟ್ಟಿ** ಎಂಬ ಹೆಸರಿನಿಂದ ಸ್ವಲ್ಪ ಕಂದಾಯ ವಸೂಲು ಮಾಡುತ್ತಿದ್ದರು. ೧೭೨೦ರಲ್ಲಿ ಸರಕಾರಕ್ಕೆ ಬೇಕಾದ ಸ್ವಲ್ಪ ಹಣವನ್ನು ಸಾಹುಕಾರರಿಂದ ಸಾಲ ತೆಗೆದುಕೊಂಡಿದ್ದರು. ಈ ಹಣದ ಬಡ್ಡಿ ಕೊಡುವುದಕ್ಕಾಗಿ ರೈತರಿಂದ ಸ್ವಲ್ಪ ಹಣ ವಸೂಲು ಮಾಡುತ್ತಿದ್ದರು. ಈ ಹಣಕ್ಕೆ **ಚಕ್ರವಂತಿಗೆ** ಎಂದು ಹೆಸರು. ಚಕ್ರ ಎಂದರೆ ನಾಣ್ಯ. ೧೭೫೮ರಲ್ಲಿ ಬಾದೆ ಕೊಡುತ್ತಿದ್ದ ಮರಾಟೆಯವರಿಗೆ ಕೊಡುವುದಕ್ಕಾಗಿ ಇನ್ನು ಸ್ವಲ್ಪ ಕಂದಾಯವನ್ನು ವಸೂಲು ಮಾಡುತ್ತಿದ್ದರು.

ಕೆಳದಿ ಸಂಸ್ಥಾನದ ರಾಜ್ಯಭಾರದ ಕಡೆ ಕಾಲದಲ್ಲಿ ರಾಜರುಗಳು ಶಿಸ್ತಿನ ಲೆಕ್ಕದ ಪ್ರಕಾರವನ್ನು ವಸೂಲಾಗುತ್ತಿತ್ತು. ಹೆಚ್ಚಿನ ಕಂದಾಯವಾಗಲಿ ಶಿಸ್ತು ಆಗಲಿ ಜನರಿಗೆ ಬಾಧಕವಾಗುವಷ್ಟು ಹೆಚ್ಚಾಗಿರಲಿಲ್ಲ.

ನ್ಯಾಯ ವಿಚಾರ—ನ್ಯಾಯಗಳೆಲ್ಲವೂ ಸರಿಯಾಗಿ ವಿಚಾರಿಸಲ್ಪಡುತ್ತಿದ್ದುವು. ನ್ಯಾಯಗಳನ್ನು ಹಿಂದಿನ ಪೂರ್ವ ಪದ್ಧತಿಗಳಿಗನುಸಾರವಾಗಿ ತೀರ್ಮಾನಿಸುತ್ತಿದ್ದರು. ಚಿಲ್ಲರೆ ಕೆಲವು ತಪ್ಪುಗಳನ್ನು ಕೆಳಗಿನ ಉದ್ಯೋಗಸ್ಥರು ತೀರಿಸುತ್ತಿದ್ದರು. ದೊಡ್ಡ ದೊಡ್ಡ ನ್ಯಾಯಗಳನ್ನು ರಾಜನು ಮಂತ್ರಿಗಳ ಸಹಾಯದಿಂದ ತೀರ್ಮಾನಿಸುತ್ತಿದ್ದನು. ಪ್ರತಿಯೊಂದು ಗ್ರಾಮದಲ್ಲಿ ಗ್ರಾಮದ ನಾಲ್ಕು ಮಂದಿ ಗುತ್ತಿಗೆದಾರರು ಗ್ರಾಮದ ನ್ಯಾಯಗಳನ್ನು ತೀರಿಸುತ್ತಿದ್ದರು. ಗ್ರಾಮ ಗುತ್ತಿಗೆದಾರರಿಂದ ತೀರಿಸಲಿಕ್ಕಾಗದ ನ್ಯಾಯಗಳನ್ನು ಮಾಗಣೆಯ ನಾಲ್ಕು ಮಂದಿ ಗುತ್ತಿಗೆದಾರರು ತೀರಿಸುತ್ತಿದ್ದರು. ಈ ರೀತಿಯಿಂದ ನ್ಯಾಯ ತೀರಿಸುವವರಿಗೆ ಸಂಬಳ ಕೊಡುವ ಅಗತ್ಯವು ಇರಲಿಲ್ಲ. ಜನಾಂಗ ಕೆಲವು ಖರ್ಚು ಇರಲಿಲ್ಲ. ಸ್ವಲ್ಪ ಒಳ್ಳೆ ಅವರಿಗೆ ಸಮಾಧಾನ ಆಗುತ್ತಿತ್ತು. ಹೆಚ್ಚಾಗಿ ಈ ನ್ಯಾಯಗಳನ್ನು ಗ್ರಾಮ ದೇವಸ್ಥಾನ ಅಥವಾ ಮೈದಾನಗಳಲ್ಲಿಯೂ ಮಾಗಣೆ ದೇವಸ್ಥಾನ ಅಥವಾ ಮೈದಾನಗಳಲ್ಲಿಯೂ ತೀರಿಸುತ್ತಿದ್ದುದರಿಂದ ಹೆಚ್ಚು ಸಮಯವು ಹಾಳಾಗುತ್ತಿರಲಿಲ್ಲ. ದೇವ ದೈವಗಳ ಹೆದರಿಕೆಯು ಜನರಿಗಿದ್ದುದರಿಂದ ಅನ್ಯಾಯಗಳು ಆಗುತ್ತಿರಲಿಲ್ಲ. ಮಂದ ಬುದ್ಧಿಯ

ಹಣವಾಗಲಿ ಒಡ್ಡವಾಗಲಿ ದೇವರ ಭಂಡಾರಕ್ಕೆ ಕೊಡಲ್ಪಡುತ್ತಿತ್ತು. ಜನರು ರಾಜಭಕ್ತಿ, ದೇವ ದೈವಗಳ ಮೇಲೆ ಭಕ್ತಿಯುಳ್ಳವರಾಗಿದ್ದುದರಿಂದ ಅನ್ಯಾಯಗಳು ನಡೆಯುವುದೇ ಕಡಿಮೆಯಾಗಿತ್ತು.

ಪೋಲೀಸು—ಕಾಯಿದೆ ಕಾನೂನುಗಳಿಲ್ಲದೆ ಪೂರ್ವ ಪದ್ಧತಿಗನುಸಾರವಾಗಿ ನ್ಯಾಯ ತೀರ್ಮಾನಿಸುವುದರಿಂದ ಪೋಲೀಸು ನಿರ್ಬಂಧವು ಅಗತ್ಯವಿರಲಿಲ್ಲ. ಅಪರಾಧಿಗಳನ್ನು ಗೊತ್ತುಹಚ್ಚುವುದು ಕಷ್ಟವಾಗಿರಲಿಲ್ಲ. ಹಳ್ಳಿ ದಾರಿಗಳಲ್ಲಿಯೂ ಪಹರೆಯವರು ಯಾವಾಗಲೂ ಇರುತ್ತಿದ್ದರು. ಕಾಗದ ಪತ್ರಗಳು ಸರಿಯಾಗಿ ಅರಮನೆಗೆ ಒಪ್ಪಿಸಲ್ಪಡುತ್ತಿದ್ದುವು. ದೇಶದಲ್ಲಿ ಏನಾದರೂ ವಿಶೇಷ ಸಂಗತಿಗಳು ನಡೆದರೆ ತಿಳಿಸುವುದಕ್ಕಾಗಿ ಗೂಢಚಾರರು ಇದ್ದರು. ರಾಜ್ಯದ ಗಡಿಗಳಲ್ಲಿರುವ ಠಾಣ್ಯಗಳಲ್ಲಿ ಪಹರೆಯವರು ಇದ್ದರು. ಪ್ರಯಾಣಿಕರು ಇವರಿಂದ ಪತ್ರ ಪಡೆದ ವಿನಾ ಗಡಿ ದಾಟಿ ಹೋಗಕೂಡದಿತ್ತು.

ಪೇಟೆ ಪೇಟೆ ಬತ್ತೇರಿಗಳಲ್ಲಿರುವ ಪೇದೆಗಳೂ, ಗಡಿಗಳಲ್ಲಿ ಕಾಯುತ್ತಿದ್ದ ಪಹರೆಯವರೂ ಪೋಲೀಸು ಕೆಲಸವನ್ನು ಮಾಡುತ್ತಿದ್ದರು. ಪ್ರಜೆಗಳಲ್ಲಿ ಯಾವ ತೆರದ ಜಗಳಗಳೂ ಇಲ್ಲದುದರಿಂದಲೂ, ಪ್ರತಿ ಒಬ್ಬನೂ ಪ್ರೀತಿಯಿಂದ ಇದ್ದುದರಿಂದಲೂ ಕಳವುಗಳು ಆಗುತ್ತಿರಲಿಲ್ಲ. ಠಾಣ್ಯಗಳಲ್ಲಿಯೂ ಕಳವುಗಳೂ ಮೋಸದಾಟಗಳೂ ಆಗುತ್ತಿರಲಿಲ್ಲ. ಪ್ರಯಾಣಸ್ಥರಿಗೆ ಕಳ್ಳಕಾಕರ ಯಾವ ತೆರದ ಭಯವೂ ಇರಲಿಲ್ಲ. ಯೂರೋಪಿಯನ್ ಪ್ರಯಾಣಸ್ಥರಿಗೆ ಬಹಳ ಸುಲಭವಿತ್ತು. ಅವರಿಗೆ ದೇಶವನ್ನು ಸಂಚರಿಸಿ ಎಲ್ಲ ಸಂಗತಿಗಳನ್ನು ತಿಳುಕೊಳ್ಳುವುದಕ್ಕೆ ಎಲ್ಲಾ ತೆರದ ಅನುಕೂಲತೆಗಳು ಇದ್ದುವು.

ಸೈನ್ಯ—ಕೆಳದಿ ನಾಯಕರು ರಾಜ್ಯದ ಭದ್ರತೆಗಾಗಿ ರಾಜ್ಯ ಗಡಿಗಳಲ್ಲಿಯೂ, ಪ್ರತಿ ಒಂದು ಅಳಿವೆಯ ಬಾಗಿಲಲ್ಲಿಯೂ ಆಶ್ರಿತ ಅರಸುಗಳ ರಾಜಧಾನಿಗಳಲ್ಲಿಯೂ, ಮುರಿದ ಕಲ್ಲಿನಿಂದ ಬಲವಾದ ಕೋಟೆಗಳನ್ನು ಕಟ್ಟಿಸಿ ಅವುಗಳ ಮೇಲೆ ಫಿರಂಗಿಗಳನ್ನು ಇಡುತ್ತಿದ್ದರು. ಕೋಟೆಯ ಒಳಗಡೆಯಲ್ಲಿ ಬಲವಾದ ಸೈನ್ಯವನ್ನಿಟ್ಟಿದ್ದರು. ಕನ್ನಡ ಜಿಲ್ಲೆಯಲ್ಲಿ ಅನೇಕ ಸಣ್ಣ ಜೈನ ರಾಜರುಗಳಿದ್ದುದರಿಂದಲೂ ಆ ರಾಜರ ಸೈನಿಕರಾಗಿಯೂ ಸೇನಾಧಿಪತಿಗಳಾಗಿಯೂ ನಾಡವರೂ ಬಂಟರೂ ಇದ್ದು ಪರಸ್ಪರ ಪ್ರೀತಿಯಿಂದ ಇದ್ದುದರಿಂದ ಕೆಳದಿ ನಾಯಕರಿಗೆ ಇವರ ಮೇಲೆ ನಂಬಿಕೆ ಇಲ್ಲದೆ ಇತರರು ಜಾತಿಗಳೂ ಪ್ರೀತಿ ಇಲ್ಲದೆ ಇರುವ ತೀಯರನ್ನು, ಬಿಲ್ಲವರನ್ನು, ಹಳೆ ಪೈಕದವರನ್ನು, ರಾಮರಾಜ ಕ್ಷತ್ರಿಯರನ್ನು ಸೈನಿಕರಾಗಿಯೂ ಸೇನಾಧಿಪತಿಗಳಾಗಿಯೂ ನೇಮಿಸಿದ್ದರು. ಇವರಿಗೆ ಭೂಮಿಯನ್ನು ಉಂಬಳಿ ಬಿಟ್ಟಿದ್ದರು. ಸೈನಿಕರಿಗೆ ಊಟಕ್ಕೆ ಬೇಕಾದ ವಸ್ತುಗಳೂ ವಸ್ತ್ರವೂ ಒದಗಿಸಲ್ಪಡುತ್ತಿತ್ತು. ಪ್ರತಿಯೊಂದು ಕೋಟೆಯಲ್ಲಿಯೂ ಈ ರಾಮರಾಜ ಕ್ಷತ್ರಿಯರಿಗಾಗಿ ಒಂದೊಂದು ಹನುಮಂತ ದೇವಸ್ಥಾನವನ್ನು ಕಟ್ಟಿಸಿದ್ದರು. ಅಂಗಸಾಧನೆಯ ಶಾಲೆಗಳಲ್ಲಿ ಹನುಮಂತನನ್ನೇ ಎಲ್ಲರೂ ಆರಾಧಿಸುವರು. ಹನುಮಂತನು

ಪ್ರಥಕಾಯಕ್ಕೆ ದೇವತೆಯಾಗಿರುತ್ತಾನೆಂದು ಜಂಗುಗಳ ಭಾವನೆ. ಈ ನಾಯಕರು ಕಟ್ಟಿಸಿದ ಪ್ರತಿ ಒಂದು ಕೋಟೆಯಲ್ಲಿಯೂ ಈ ಗುಡಿಗಳು ಈಗಲೂ ಇವೆ. ಇದಲ್ಲದೆ ರಾಜಧಾನಿಯಲ್ಲಿ ಬುದ್ಧಿವಂತರಾದ ದಳವಾಯಿಗಳು ಯಾವಾಗಲೂ ಸಿದ್ಧರಾಗಿಯೇ ಇದ್ದರು. ಇವರಲ್ಲಿ ಕೆಲವರು ವೀರಶೈವ ಮತಾವಲಂಬಿಗಳೂ, ಕೆಲವರು ವೈಷ್ಣವ ಬ್ರಾಹ್ಮಣರೂ, ಕೆಲವರು ಬಲ್ಲವರೂ, ಹಳೆ ಪೈಕದವರೂ, ರಾಮರಾಜ ಕ್ಷತ್ರಿಯರೂ ಆಗಿದ್ದರು. ಇವರ ಮೇಲಧಿಕಾರಿಯಾಗಿ ಸೇನಬೋವನು ಇದ್ದನು. ಇವನು ಯುದ್ಧದ ಸಮಯದಲ್ಲಿ ಅರಸನು ಸ್ವತಃ ಸರ್ವಸೇನಾಧಿಪತಿಯಾಗಿ ಹೊರಟು ಯುದ್ಧವನಾಡುತ್ತಿದ್ದನು. ಇದರಿಂದ ಸೈನಿಕರು ರಾಜಭಕ್ತಿಯಿಂದಲೂ ಉತ್ಸಾಹದಿಂದಲೂ ಕೆಲಸ ಮಾಡುತ್ತಿದ್ದರು.

ನೌಕಾ ಸೈನ್ಯ—ಈ ನಾಯಕರ ಕಾಲದಲ್ಲಿ ಪೋರ್ತುಗೀಸರೂ, ಮರಾಟೆಯವರೂ, ಮೊಗಲರೂ ಯುದ್ಧದ ಹಡಗುಗಳನ್ನು ತೆಗೆದುಕೊಂಡು ಬಂದು ಬಂದರುಗಳನ್ನು ಹಾಳುಮಾಡಿ ಸುಲಿಗೆ ಮಾಡುತ್ತಿದ್ದುದರಿಂದ ಎಲ್ಲ ಬಂದರುಗಳಲ್ಲಿಯೂ ಇವರ ಯುದ್ಧದ ಹಡಗುಗಳು ಇದ್ದವು. ಇವುಗಳಲ್ಲಿ ಅರಬಮೂರರು ಮಾಪಿಳ್ಳೆಯರೂ ನೌಕಾ ಸೇನಾಧಿಪತಿಗಳೂ ಸೈನಿಕರೂ ಆಗಿದ್ದರು. ಪೋರ್ತುಗೀಸರು ಇವರ ಅನೇಕ ಯುದ್ಧದ ಹಡಗುಗಳನ್ನು ಸುಟ್ಟು ಹಾಕಿರುವರು. ಮಂಗಳೂರು ಬಂದರದಲ್ಲಿಯೂ ದರಿಯಾಬಹಾದುರ ಗಡದಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಸಜಲೆಯ ನಗರದಲ್ಲಿಯೂ ನೌಕಾ ಸೈನ್ಯಗಳು ಇದ್ದವು. ಈ ಹಡಗುಗಳಲ್ಲಿ ಫಿರಂಗಿಗಳನ್ನು ಇಟ್ಟು ಹೊಡೆಯುತ್ತಿದ್ದರು.

೯. ವ್ಯಾಪಾರ—ವ್ಯಾಪಾರವು ಒಳ್ಳೆ ರೀತಿಯಲ್ಲಿ ನಡೆಯುತ್ತಿತ್ತು. ಕಾಸರಗೋಡು, ಕುಂಬಳೆ, ಮಂಜೇಶ್ವರ, ಉಳ್ಳಾಲ, ಮಂಗಳೂರು, ಮೂಲ್ಕಿ, ಮಲಪೆ, ಗಂಗೊಳ್ಳಿ, ಬಸರೂರು, ಹೊನ್ನಾವರ, ಕುಮಟೆ ಇವುಗಳು ಬಲವಾದ ಬಂದರುಗಳಾಗಿದ್ದವು. ಇವುಗಳಿಂದ ಪರದೇಶಕ್ಕೆ ಹೆಚ್ಚಾಗಿ ಅಕ್ಕಿಯು ಹೋಗುತ್ತಿತ್ತು. ಒಳ್ಳೆ ಮೆಣಸಿನ ವ್ಯಾಪಾರವೂ, ಬಿಳಿ ಅಡಕೆಯ ವ್ಯಾಪಾರವೂ ನಡೆಯುತ್ತಿತ್ತು. ವ್ಯಾಪಾರವೆಲ್ಲವೂ ನೆಲದಾರಿಯಾಗಿ ಹೇರೆತ್ತುಗಳ ಮತ್ತು ಕತ್ತೆಗಳ ಮೇಲೆ ನಡೆಯುತ್ತಿತ್ತು. ಸಮುದ್ರ ವ್ಯಾಪಾರವು ಮಂಚಿ, ಪತ್ತೆಮಾರಿ, ಕೋಟಿಯಾ, ಬಗಲೆಗಳಲ್ಲಿ ನಡೆಯುತ್ತಿತ್ತು. ಆ ಸಮಯದಲ್ಲಿ ಇತರ ರಾಜ್ಯಗಳಲ್ಲಿ ನಡೆಯುವ ರೀತಿಯಲ್ಲಿ ಈ ರಾಜ್ಯದಲ್ಲಿಯೂ ವ್ಯಾಪಾರವು ನಡೆಯುತ್ತಿತ್ತು.

ಮಂಗಳೂರು, ಬಸರೂರು, ಹೊನ್ನಾವರ ಬಂದರುಗಳಲ್ಲಿ ಬಹಳ ಐಶ್ವರ್ಯವಂತರಾದ ಸಾಹುಕಾರರಿದ್ದರು. ವ್ಯಾಪಾರಸ್ಥರು ಹೆಚ್ಚಾಗಿ ಅರಬಮೂರರೇ ಆಗಿದ್ದರು. ಈ ವ್ಯಾಪಾರಸ್ಥರು ಅರಸರಿಗೆ ಸಾಲ ಕೊಡುವಷ್ಟು ಐಶ್ವರ್ಯವಂತರಾಗಿದ್ದರು. ಪ್ರತ್ಯೇಕ ಬ್ಯಾಂಕುಗಳು ಇರಲಿಲ್ಲ. ಆದರೆ [illegible] ಹಣವನ್ನು ಸಾಲ ಕೊಡುತ್ತಿದ್ದರು.

ವ್ಯಾಪಾರಕ್ಕಾಗಿ ಮುಖ್ಯವಾದ ಬಂದರುಗಳಿಗೆ ಆ ಕಾಲದ ವ್ಯಾಪಾರಕ್ಕೆ ಬೇಕಾಗುವ ರೀತಿಯ ಹೆದ್ದಾರಿಗಳು ಇದ್ದುವು. ಈ ಹೆದ್ದಾರಿಗಳು ಕಳ್ಳಕಾಕರ ಭಯವಿಲ್ಲದೆ ಸುರಕ್ಷಿತವಾಗಿದ್ದುವು.

೧೦. ಮತ—ಈ ನಾಯಕರು ವೀರಶೈವ ಮತಾವಲಂಬಿಗಳು. ಆದರೆ ಇವರಿಗೆ ಮತ ದ್ವೇಷವಿರಲಿಲ್ಲ. ಇವರ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಜಂಗಮ ಮಠಗಳನ್ನು ಕಟ್ಟಿಸಿ, ಮಠಗಳಿಗೆ ಭೂಮಿಯನ್ನು ಉಂಬಳಿಯಾಗಿ ಬಿಟ್ಟಿರುವರು. ಹಿಂದೂ ದೇವಾಲಯಗಳಿಗೆ ಇವರು ಹೆಚ್ಚು ಭೂಮಿ ಉಂಬಳಿ ಬಿಟ್ಟಿರುತ್ತಾರೆ. ಇವರ ಕುಲದೇವರು ಕೆಳದಿ ರಾಮೇಶ್ವರ. ಇವರು ಪಾರ್ವತಿಯನ್ನು ವೀರಭದ್ರನನ್ನು ಗಣಪತಿಯನ್ನು ಆರಾಧಿಸುತ್ತಿದ್ದರು. ಈ ನಾಯಕರು ಕೆಳದಿ ರಾಮೇಶ್ವರ ದೇವಸ್ಥಾನ, ಶೃಂಗೇರಿ ಮಠ, ಕೊಲ್ಲೂರು ಮೂಕಾಂಬಿಕೆ ದೇವಸ್ಥಾನ, ಬಸರೂರು ಮಹಾಲಿಂಗೇಶ್ವರ ದೇವಸ್ಥಾನ, ಕೋಟೇಶ್ವರ ದೇವಸ್ಥಾನ, ಶಂಕರ ನಾರಾಯಣ ದೇವಸ್ಥಾನ, ಸುಬ್ರಹ್ಮಣ್ಯ ದೇವಸ್ಥಾನ, ಪೊಳಲಿ ರಾಜರಾಜೇಶ್ವರಿ ದೇವಸ್ಥಾನ, ಉಡುಪಿ ಅಷ್ಟ ಮಠಗಳು—ಇವುಗಳಿಗೆ ಹೆಚ್ಚು ಭೂಮಿ ಉಂಬಳಿ ಬಿಟ್ಟಿರುತ್ತಾರೆ. ಕೊಲ್ಲೂರು ಮೂಕಾಂಬಿಕೆಯು ಇವರ ಕುಲದೇವಿಯಾದುದರಿಂದ ಇವರು ಈ ದೇವಸ್ಥಾನವನ್ನು ಶಿಲಾಮಯವಾಗಿ ಕಟ್ಟಿಸಿ, ಮೂಕಾಂಬಿಕೆಯ ಪ್ರತಿಮೆಯನ್ನು ಪ್ರತಿಷ್ಠಿಸಿ ಅದಕ್ಕೆ ಉಚಿತವಾದ ಲಕ್ಷಗಟ್ಟಲೆ ಬೆಲೆ ಬಾಳುವ ರತ್ನಾಭರಣಗಳನ್ನು ಮಾಡಿ ಕೊಟ್ಟಿರುವರು. ಶೃಂಗೇರಿ ಮಠವನ್ನು ಶಿಲೆಯಿಂದಲೇ ಕಟ್ಟಿಸಿರುವರು. ಈ ಮಠಕ್ಕೆ ಇವರು ವಿಶೇಷತರದ ಧನ ಸಹಾಯ ಮಾಡಿರುತ್ತಾರೆ. ಮಠಕ್ಕೆ ಸಾಲವಾದಾಗ ಸಾಲವನ್ನು ಸಹ ಈ ನಾಯಕರೇ ತೀರಿಸಿರುವರು. ಕೋಟೇಶ್ವರ, ಸುಬ್ರಹ್ಮಣ್ಯ, ಪೊಳಲಿ, ಮುಂಡೇಶ್ವರ, ಬಸರೂರು ದೇವಸ್ಥಾನಗಳಿಗೆ ಬಹು ದೊಡ್ಡದಾದ ರಥಗಳನ್ನು ಕಟ್ಟಿಸಿಕೊಟ್ಟು ರಥೋತ್ಸವದ ಖರ್ಚಿಗಾಗಿ ಭೂಮಿ ಉಂಬಳಿ ಬಿಟ್ಟಿರುವರು. ಇದಲ್ಲದೆ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಇರುವ ಮಹಾದೇವಸ್ಥಾನಗಳಲ್ಲಿ ಶ್ರಾವಣ ಮಾಸದಲ್ಲಿ ಪೂಜೆಯೂ ಕಾರ್ತಿಕ ಮಾಸದಲ್ಲಿ ಲಕ್ಷದೀಪೋತ್ಸವವೂ ನಡೆಯುವಂತೆ ಅಪ್ಪಣೆ ವಿಧಿಸಿರುವರು.

ಇವರಿಗೆ ಬ್ರಾಹ್ಮಣರ ಮೇಲೆ ಯಾವ ತರದ ದ್ವೇಷವೂ ಇರಲಿಲ್ಲ. ಮಂತ್ರಿಗಳೂ, ದಿವಾನರೂ, ಕರಣಿಕರೂ, ಬೊಕ್ಕಸದ ಅಧಿಕಾರಿಗಳೂ, ನಿಯೋಗಿಗಳೂ, ರಾಯಸದವರೂ, ವಕೀಲ ದಿವಾನರೂ (ರೆಸಿಡೆಂಟ) ಅನೇಕ ಮಂದಿ ಬ್ರಾಹ್ಮಣರೇ ಆಗಿದ್ದರು. ಇವರಲ್ಲಿ ಹೆಚ್ಚಿನವರು ವೈಷ್ಣವರೂ, ಸ್ಮಾರ್ತರೂ ಆಗಿದ್ದರು. ಈ ಬ್ರಾಹ್ಮಣರಿಗಾಗಿ ಘಟ್ಟದ ಮೇಲಿನ ಸೀಮೆಯಲ್ಲಿಯೂ ಘಟ್ಟದ ಕೆಳಗಿನ ಸೀಮೆಗಳಲ್ಲಿಯೂ ಹಲವು ಅಗ್ರಹಾರಗಳನ್ನು ಕಟ್ಟಿಸಿ ಉಂಬಳಿ ಬಿಟ್ಟಿರುವರು. ಸದಾಶಿವರಾಯ ನಾಯಕನು ಆರಗದ ಕುಶಾವತಿ ನದೀ ತೀರದಲ್ಲಿ ಕಟ್ಟಿಸಿದ ಸದಾಶಿವಪುರ ಎಂಬ ಅಗ್ರಹಾರ, ವೆಂಕಟಪ್ಪ ನಾಯಕನು ವರದಾ ನದೀ ತೀರದಲ್ಲಿ ಸದಾಶಿವ ಸಾಗರದ ಹತ್ತಿರ ಕಟ್ಟಿಸಿದ ವಿಶ್ವನಾಥಪುರವೆಂಬ ಅಗ್ರಹಾರ, ತುಂಗಭದ್ರಾ ನದೀ ತೀರದಲ್ಲಿ

ಆದೇ ಅರಸನು ಕಟ್ಟಿಸಿದ ಸೀರಾಂಬಾಪುರ ಎಂಬ ಅಗ್ರಹಾರ, ಶರಾವತೀ ನದೀ ತೀರದಲ್ಲಿ ಕಟ್ಟಿಸಿದ ಅಭಿನವಸೀರಾಂಬಾಪುರವೆಂಬ ಅಗ್ರಹಾರ, ಧರ್ಮಪ್ಪ ನಾಯಕನು ಕಟ್ಟಿಸಿದ ಶಿವರಾಜಪುರ ಎಂಬ ಅಗ್ರಹಾರ, ವೆಂಕಟಾಪುರ ಎಂಬ ಅಗ್ರಹಾರ, ಚನ್ನಮ್ಮಾಜಿಯು ಕಟ್ಟಿಸಿದ ಬಂಟವಾಳ ಹತ್ತಿರವಿರುವ ರಂಧಾರು, ನಾಟಿ, ಪಡಾರಿ, ನಾವೂರು ಅಗ್ರಹಾರಗಳು ಇದಕ್ಕೆ ಸಾಕ್ಷಿಗಳಾಗಿವೆ. ಇವರೆಲ್ಲರೂ ಸಾಧಾರಣವಾಗಿ ಇವುಗಳೆಲ್ಲ ಪ್ರಾಣಾಯನವರ ಅಗ್ರಹಾರಗಳು, ಭಕ್ತರ ಅಗ್ರಹಾರಗಳು ಎಂದು ಹೇಳುತ್ತಿರುವರು. ಇವರಿಗೆ ಕೆಳದಿ ನಾಯಕರ ಮೇಲೆ ಮಮತೆ ಹೋಗಿದೆ. ಗೌಡಸಾರಸ್ವತ ಸಾಹುಕಾರರು ಇವರೊಳಗಿನವರಲ್ಲಿ ಹಲವು ಮಂದಿ ಇದ್ದರು. ಸಾಗರದ ಹಾವಪ್ಪ ಶೆಟ್ಟಿ ಎಂಬ ಹೆಸರು ಎಲ್ಲರಿಂದಲೂ ಕೇಳಬರುತ್ತಿದೆ. ಈ ಕೆಳದಿ ನಾಯಕರಲ್ಲಿ ಚನ್ನಮ್ಮಾಜಿಯು ಮಂಜೇಶ್ವರ ಅನಂತೇಶ್ವರ ದೇವಸ್ಥಾನದಲ್ಲಿ ಅಮೃತಪಡಿ, ನಂದಾದೀಪ, ರಥೋತ್ಸವದ ಉಪಯೋಗಕ್ಕಾಗಿ ಕುಂಬಳೆ, ಮಂಜೇಶ್ವರ, ಬಂದ್ರುಗಳ ಸುಂಕವನ್ನು ಉತ್ತಾರ ಬಿಟ್ಟಿದ್ದಳು. ಶಿವಪ್ಪ ನಾಯಕನು ಮಂಗಳೂರು ಮಹಾಮಾಯಿ ದೇವಸ್ಥಾನಕ್ಕೆ ತಾಮ್ರಶಾಸನ ಬರೆಯಿಸಿಕೊಟ್ಟಿರುವನೆಂದು ಶಾಸನವು ಇದೆ. ಕೆಳದಿ ನಾಯಕರ ಕಾಲದಲ್ಲಿ ಈ ಎರಡು ದೇವಸ್ಥಾನಗಳೇ ಬಲವಾದ ಮತ್ತೂ ಕಾರಣಿಕವಿದ್ದ ದೇವಸ್ಥಾನಗಳಾಗಿದ್ದವು.

ಚನ್ನಮ್ಮಾಜಿಯು ರೋಮನ ಕೆಥೋಲಿಕರಿಗೂ ಅನೇಕ ವಿಧದಲ್ಲಿ ಸಹಾಯ ಮಾಡಿರುವಳು. ಹಂಪನ ಕಟ್ಟೆಯ ಮಿಲಾಗ್ರಿ ಇಗರ್ಜಿ ಕಟ್ಟುವುದಕ್ಕೆ ಸ್ಥಳವನ್ನು ಧರ್ಮಾರ್ಥವಾಗಿ ಕೊಟ್ಟಿರುವಳು.

ಜೈನರ ಬಸದಿಗಳಿಗೆ ಇವರು ಉಂಬಳಿ ಬಿಟ್ಟಿದ್ದು ಕಂಡುಬರುವುದಿಲ್ಲ. ಆದರೆ ಈ ರೀತಿಯಲ್ಲಿ ಉಂಬಳಿ ಬಿಡುವ ಅಗತ್ಯವಿರಲಿಲ್ಲ. ಆ ಸಮಯದಲ್ಲಿದ್ದ ೧೭ ಮಂದಿ ಜೈನ ಬಳ ಅರಸುಗಳೂ ಇನ್ನು ಉಳಿದ ೧೬ ಸಣ್ಣ ಅರಸರೂ, ಬಲ್ಲಾಳರೂ, ಹೆಗಡೆಯವರೂ ಈ ಬಸದಿಗಳನ್ನು ಉತ್ತಮ ರೀತಿಯಿಂದ ನಡೆಸುತ್ತಿದ್ದರು. ಈ ಜೈನರಾಜರು ಬಲ್ಲಾಳ ಹೆಗಡೆಯವರೂ ಬಹಳ ಐಶ್ವರ್ಯವಂತರಾಗಿದ್ದರು. ವೆಂಕಟಪ್ಪ ನಾಯಕನು ಜೈನರ ಅನೇಕ ಬಸದಿಗಳನ್ನು ಹಾಳುಮಾಡಿರುವನೆಂದು ಅನೇಕರು ನುಡಿಯುತ್ತಿರುವರು. ಭಾರತ ರಾಣಿಯಾದ ಭಟ್ಕಳದ ಭೈರಾದೇವಿಯ ರಾಜ್ಯದಲ್ಲಿರುವ ಬಸದಿಗಳೂ, ಚೌಟರ ರಾಜಧಾನಿಯಾದ ಮೂಡಬಿದರೆಯಲ್ಲಿರುವ ಬಸದಿಗಳೂ, ಅಜಿಲರ ರಾಜಧಾನಿಯಾದ ವೇಣೂರು, ಅಳದಂಗಡಿ, ಕೇಳ, ಪರಂಜೆ ಮುಂತಾದ ಕಡೆಗಳಲ್ಲಿರುವ ಬಸದಿಗಳೂ ಇನ್ನೂ ಹಲವು ಬಸದಿಗಳೂ ಈಗಲೂ ಉಳಿದಿವೆ. ಬಾರಕೂರಿನಲ್ಲಿರುವ ಪಂಚಲಿಂಗೇಶ್ವರ, ಮೂಡಕೇರಿ ಮಹಾಲಿಂಗೇಶ್ವರ, ಚೌಳಿಕೇರಿ ಗಣಪತಿ ದೇವಸ್ಥಾನ ಇವುಗಳನ್ನು ಇಕ್ಕೇರಿ ಸಂಸ್ಥಾನವು ಹುಟ್ಟುವ ಮೊದಲೇ ಆಳುಪ ಅರಸರೂ, ವಿಜಯನಗರದ ಅರಸರೂ ಶಿಲೆಯಿಂದಲೇ ಕಟ್ಟಿಸಿರುವರೆಂಬುದಕ್ಕೆ ಅಲ್ಲಿರುವ ಶಾಸನಗಳೇ ಸಾಕ್ಷಿಗಳಾಗಿವೆ. ಚೌಳಿಕೇರಿಯಲ್ಲಿ ಕತ್ತಲೆ ಬಸ್ತಿ ಎಂಬ ಒಂದು ಬಸದಿಯು ಹಾಳುಬಿದ್ದು ಕಾಣು

ತ್ತಿವೆ. ಇವರ ಕಾಲದಲ್ಲಿಯೇ ಕಾಣುವವುಗಳಿಗೆ ಕಲ್ಲುಚಪ್ಪರಗಳೆಂದು ಕರೆಯುವರು. ಈ ಬೇಲೆಕೇರಿಯನ್ನು ಪೋರ್ತುಗೀಸರು ಮೂರು ಸಾರಿ ಸುಟ್ಟುಹಾಕಿರುವರು. ಆ ಸಮಯದಲ್ಲಿ ಅಲ್ಲಿ ವ್ಯಾಪಾರ ಮಾಡಿಕೊಂಡಿದ್ದ ಸಾಹುಕಾರರು ಬೇಸರಪಟ್ಟು, ಆ ಕಾಲದಲ್ಲಿ ವ್ಯಾಪಾರಸ್ಥಳವಾಗಿದ್ದ ಬಸರೂರನ್ನು ಸೇರಿದರು. ಬಂದರುಗಳು ತಮ್ಮ ಕೈಕ್ಕೆ ಬಿದ್ದುಹೋದವು. ಇದರಿಂದ ಎಲ್ಲಾ ಪ್ರಜೆಗಳನ್ನು ಒಂದೇ ರೀತಿಯಲ್ಲಿ ಪ್ರೀತಿ ವಾತ್ಸಲ್ಯದಿಂದ ನಡೆಸುತ್ತಿದ್ದ ಕೆಳದಿ ನಾಯಕರು ಜೈನ ಬಸದಿಗಳನ್ನು ಹಾಳುಮಾಡಿದರೆಂದು ದೂರಿ ಪ್ರಯೋಜನವಿಲ್ಲ. ಆದುದರಿಂದ ಈ ನಾಯಕರಿಗೆ ಯಾವ ಮತದವರ ಮೇಲೆಯೂ ವೈರವಿರಲಿಲ್ಲವೆಂದು ಹೇಳಬಹುದು.

೧೧. ವಾಙ್ಮಯ—ತಮ್ಮ ರಾಜಧಾನಿಗೆ ಬರುತ್ತಿರುವ ವಿದ್ವಾಂಸರನ್ನು ಮರ್ಯಾದೆಯಿಂದ ಕಾಣುತ್ತಿದ್ದರು. ಅವರಿಂದ ಅನೇಕ ಗ್ರಂಥಗಳನ್ನು ಬರೆಯಿಸಿ ಅವರಿಗೆ ಸನ್ಮಾನ ಮಾಡುತ್ತಿದ್ದರು. ಈ ಅರಸರಲ್ಲಿ ಹಲವರು ವಿದ್ವಾಂಸರಾಗಿದ್ದು ಹಲವು ಗ್ರಂಥಗಳನ್ನು ಬರೆದಿರುವರು. ಹಿರಿಯ ವೆಂಕಟಪ್ಪ ನಾಯಕನು ಕೊಟ್ಟ ಆಶ್ರಯದಿಂದ ಕವಿ ತಿರುಮಲಭಟ್ಟನಿಂದ ಕರ್ನಾಟಕ ಶಿವಗೀತೆ, ಶಿವಾಷ್ಟಪದಿ, ಗೀತ ಗೌರೀಶ, ರಂಗನಾಥ ದೀಕ್ಷಿತನ ತಂತ್ರಸಾರ ವ್ಯಾಖ್ಯಾನ ಮೊದಲಾದ ಗ್ರಂಥಗಳು ಹುಟ್ಟಿದವು. ಹಿರಿಯ ಬಸಪ್ಪ ನಾಯಕನು ಕೊಟ್ಟ ಪ್ರೋತ್ಸಾಹದಿಂದ ಮಂತ್ರಿ ಷಡಕ್ಷರಯ್ಯನ ವೀರಶೈವ ಧರ್ಮಶಿರೋಮಣಿ, ಸಂಗಮೇಶ್ವರನ ಶಿವಸಹಸ್ರನಾಮ ಭಾಷ್ಯ, ಮರಿತೋಂಟದಾರ್ಯನ ವೀರಶೈವಾನಂದ ಚಂದ್ರಿಕೆ ಮೊದಲಾದ ಗ್ರಂಥಗಳು ಹುಟ್ಟಿದವು. ಹಿರಿಯ ಬಸವಪ್ಪ ನಾಯಕನು ಶಿವತತ್ತ್ವ ರತ್ನಾಕರ, ವೀರಶೈವ ಸಂಜೀವಿನಿ, ಸುಭಾಷಿತ ಸುರದ್ರುಮ, ಸೂಕ್ತಿ ಸುಧಾಕರ ಎಂಬ ಗ್ರಂಥಗಳನ್ನು ಬರೆದಿರುವನು.

ಕೆಳದಿಯ ನಾಯಕರ ಆಳಿಕೆಯು ಒಳ್ಳೆ ರೀತಿಯಲ್ಲಿ ನಡೆಯುತ್ತಿತ್ತು. ಈ ನಾಯಕರು ೧೫೦೦ರಿಂದ ೧೫೬೫ನೆಯ ಇಸವಿಯವರೆಗೆ (೬೫ ವರುಷಗಳು) ವಿಜಯನಗರದ ಒಳ ಅರಸರಾಗಿ ಆಳಿದರು. ಅನಂತರ ಸುಮಾರು ೫೦ ವರ್ಷಗಳವರೆಗೆ ಸ್ವತಂತ್ರರಾಗಿ ಆಳಿದರು. ಸುಮಾರು ೫೦ ವರುಷಗಳವರೆಗೆ ಬಿಜಾಪುರಕ್ಕೆ ಕಪ್ಪಕೊಟ್ಟು ಆಳಿಕೊಂಡಿದ್ದರು. ಕಡೆಯ ಭಾಗದಲ್ಲಿ ಸ್ವತಂತ್ರರಾಗಿ ಆಳಿಕೊಂಡಿದ್ದರು. ಒಟ್ಟಾರೆ, ಈ ವಂಶದವರು ಕ್ರಿ. ಶ. ೧೫೦೦ರಿಂದ ೧೭೬೩ರವರೆಗೆ ೨೬೩ ವರುಷ ರಾಜ್ಯಭಾರ ನಡೆಸಿದರು. ರಾಣಿ ವೀರಮ್ಮಾಜಿಯು ಆಳುವ ಕಾಲದಲ್ಲಿ ಕೆಳದಿ ಸಂಸ್ಥಾನವು ನವಾಬ ಹೈದರಲ್ಲಿಯ ಸ್ವಾಧೀನವಾಯಿತು. ಅನಂತರ ಮೈಸೂರು ಸಂಸ್ಥಾನದ ಭಾಗವಾಗಿ ಪರಿಣಮಿಸಿತು.

ಎಮ್. ಗಣಪತಿರಾವ್ ಐಗಳ.

ಮಂಗಳೂರಿನಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಸಮಾರಂಭದಲ್ಲಿ ಗಾನಮಾಡಿದ ಭಾರತ ಮಾತೃ ಸ್ತುತಿ

(೧) ಶ್ರೀಮಾತೆ ಸಿಂಧು ಸಂಭೂತೆ। ಧೀಮಾತೆ ಲೋಕ ವಂದಿತೆ।
ಗೋಮಾತೆ ಮಾತೆ ಭೂಮಾತೆ। ನಮೋಸ್ತು ಪಂಚ ಮಾತೃವೇ ॥

(ರಾಗ: ಆರಭಿ. ಆದಿತಾಳ)

ಭಾರತ ವರ ಮಾತೆ। ಸುಚರಿತೆ ॥ ಭಾರತ ॥ ಪ ॥
ಸಾರ ಗುಣಾನ್ವಿತೆ। ಶೂರ ವೀರ ಯುತೆ।
ನೀರು ಸಮಾಶ್ರಿತೆ। ಪಾರಮಾರ್ಥ ನುತೆ ॥ ಭಾರತ ॥ ಅ ॥

ಸತ್ಯ ಧರ್ಮ ಭಯ। ಭಕ್ತಿ ಭೂತದಯ।
ಚಿತ್ತ ಶುದ್ಧಿ ವಿನಯ। ಇಹ ಪರ। ತತ್ವವೆಂಬ ಉಭಯ ॥
ನಿತ್ಯ ನಿಮಿತ್ತಿಕ। ಕೃತ್ಯ ನಿರತ ಸುಖ।
ವೃತ್ತಿ ಯುತರಮೆ। ಸುತ್ತಿಹ ಘನತರ ॥ ಭಾರತ ॥ ॥ ೧ ॥

ವರ್ಣಾಶ್ರಮಗಳ। ನಿರ್ಣಯ ಕೌಶಲ।
ಸ್ವರ್ಣ ಭೂಮಿ ಸುಜಲ। ಗಿರಿ ತರು। ಪುಣ್ಯಾಶ್ರಮ ವಿಮಲ ॥
ಕಣ್ಮನಕಚ್ಚರಿ। ಯನ್ನೀಯುವ ಪರಿ।
ರನ್ನರಾಶಿ ಸಿರಿ। ಪೂರ್ಣ ಮನೋಹರಿ ॥ ಭಾರತ ॥ ॥ ೨ ॥

ಕಲಿಯುಗದೊಳು ಬಲು। ಬಲು ಬಗೆ ಮತಗಳು।
ಕಲಹಗೊಳ್ಳುತ್ತಿರಲು। ಅವುಗಳ। ಛಲವ ನಿಲಿಸೆ ಮೊದಲು ॥
ಇಳೆಗೆ ಸುಖಪ್ರದ। ಸುಲಲಿತ ತತ್ವದ।
ತಿಳುಹಿಸಿಂದ ಜನ। ಗಳ ಸಲಹುವ ಘನ ॥ ಭಾರತ ॥ ॥ ೩ ॥

(೨) ಶ್ರೀಮದ್ಭಾರತ ಮಾತೆ ವೇದ ನಿರತೇ ಶಾಸ್ತ್ರಾರ್ಥ ಸಂಶೋಭಿತೇ।
ಭೂಮಾಭಾಗ ಪುನೀತೆ ಪೂಜ್ಯ ಚರಿತೇ ದೇವದ್ವಿಜಾರಾಧಿತೇ ॥
ಶ್ರೀಮಂತಾಸ್ಪದ ಪ್ರೀತೆ ಪುಣ್ಯ ಭರಿತೇ ಗೋಸಂಕುಲಾವಾಸಿತೇ।
ಹೇ ಮಾತಾ ನಮೋಸ್ತುತೇ ವಿಜಯಿತೇ ಆರ್ಯಾವೃತೇ ಮಾಸಿತೇ ॥

(ರಾಗ: ತೋಡಿ. ತ್ರಿಪುಟತಾಳ)

ಮಾತೇ ಭಾರತ ಭೂಮಾತೆ। ಸಕಲಾರ್ಥ ದಾತೆ ॥ ಮಾತೆ ॥ ಪ ॥
ಖ್ಯಾತ ಮುನಿ ಮುನಿಜನ ವಿರಾಜಿತೆ। ನೀತಿ ನಯ ಗುಣಗಣ ಸಮಾಶ್ರಿತೆ।
ಭೂತದಯ ಪರಮಾರ್ಥ ಪೂರಿತೆ। ಪ್ರೀತೆ ಪೂತೆ ಸನಾಥೆ ಸುಲಲಿತೆ ॥ ಅ ॥

ಹರುಷದಿಂದಲಿ ನಿನ್ನ। ಚರಣ ಕಮಲವನ್ನ।
ಪರಿಪರಿಯೊಳು ಮುನ್ನ। ಸ್ಮರಿಸುವ ಜನರನ್ನ।
ಕರುಣ ಸಾಗರೆ ಕರೆಯುತ್ತೆ। ಕರವ ಹಿಡಿದುರೆ ಪೊರೆಯುತ್ತೆ।
ಮರುಳತನಕೆಡೆಗುಡದೆ ನಡೆಯುತ್ತೆ। ಮೆರೆವುದಲ್ತೆ ಪುನೀತೆ ಸುಚರಿತೆ ॥ ೧ ॥

ಕೆರೆ ತೊರೆ ಸುರನದಿ। ಗಿರಿ ತರು ಶರನಿಧಿ।
ಪರಿಪರಿ ವಿಭವದಿ। ಪರಮ ಪಾವನವಾದೀ।
ಧರೆಯೊಳಿಹ ಪರದೇವತೆ। ಸುರ ಸುಮಾನಿತೆ ಭಾವಿತೆ।
ನಿರತ ಮಂಗಳ ಭರಿತೆ ಶುಭಯುತೆ। ಕರುಣ ನಿರತೆ ಉದಾತ್ತೆ ಭೂಸುತೆ ॥ ೨ ॥

ಹಿಂದು ಕ್ರೈಸ್ತ ಮೌಲಾನ। ರೊಂದುಗೂಡುತ ಗಾನ।
ದಿಂದ ಪಾಡಲು ನಿನ್ನ। ಹೊಂದಿಹ ಜನರನ್ನ।
ಕಂದರೆಂದದಿನೆರೆಸುತೆ। ಚಂದದಿಂದಲಿ ಪೊರೆಸುತೆ।
ಬಂಧನದ ತತ್ವವನು ತಿಳುಹುತೆ। ಮುಂದಿಯುನು ಸಲಹೌ ನಮೋಸ್ತುತೆ ॥ ೩ ॥

ಕೆರೋಡಿ ಸುಬ್ಬರಾಯರು

ಶ್ರೀ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೨] ಪ್ರಭವ ಸಂ॥ ಆಶ್ವಯುಜ ಮಾಸ [ಸಂಚಿಕೆ ೩

ಭಾಷೆಯ ವಿಕಾರ (Change) ಜನ್ಯ, ಸಮಾನ ಜಾತೀಯ ಮತ್ತು ಸಮಾನ ಪ್ರಕೃತಿಕವಾದ ಭಾಷೆಗಳು (Dialects and Cognate Languages)

ಭಾಷೆಯು ಯಾವಾಗಲೂ ವಿಮರ್ಶಾಸ್ಪದವಾದುದು. ಅದು ಕಾರಣದಿಂದಲೇ ಭಾಷೆಗೆ ಒಂದು ಚರಿತ್ರವು ಇದ್ದೇ ಇದೆ. ಭಾಷೆಯು ಯಾವಾಗಲೂ ವಿಕಾರದಿಂದ ಕೂಡಿಕೊಂಡಿದೆ. ಆಡುವ ಭಾಷೆಯು ತಪ್ಪದೆ ವಿಕಾರವನ್ನು ಹೊಂದುತ್ತಲೇ ಇರುವುದು. ಮನುಷ್ಯರ ಸ್ಥಿತಿ ಗತಿಗಳು ನೂರಾರು ವರ್ಷಕ್ಕೊಮ್ಮೆ ಬದಲಾಯಿಸುವಂತೆ ಆಡುವ ಭಾಷೆಯೂ ಆಗಾಗ ಬದಲಾಯಿಸಿಕೊಂಡೇ ಇರುವುದು.

ಈ ಪರಮೇಶ್ವರನ ಪ್ರಪಂಚದಲ್ಲಿ ಅವನು ಸೃಷ್ಟಿಸಿದ ಪ್ರಾಣಿ ವರ್ಗಗಳಲ್ಲಿ ಮನುಷ್ಯ ವರ್ಗವು ಶ್ರೇಷ್ಠವಾದುದೆಂದು ನಾವಿಲ್ಲಿ ಈಗ ಒತ್ತಿ ಹೇಳುವೆವು. ಏಕೆಂದರೆ, ಆತನು ಸೃಷ್ಟಿಸಿದ ಪ್ರಾಣಿ ವರ್ಗಗಳಲ್ಲಿ ಮನುಷ್ಯ ವರ್ಗದ ಮೇಲೆ ಅವನಿಗೇನೋ ಹೆಚ್ಚು ದಯೆ ತೋರಿರಬೇಕು. ಆದುದರಿಂದಲೇ ಇತರ ಪ್ರಾಣಿ ವರ್ಗಕ್ಕಿಂತ (ಪಶು ಪಕ್ಷ್ಯಾದಿಗಳಿಗಿಂತ) ವಿಶೇಷವಾದ ಆಯುಧಗಳೆರಡನ್ನು ನಮಗೆ ಕೊಟ್ಟಿರುವನು. ಮೊದಲನೆಯದು ಜ್ಞಾನ ಶಕ್ತಿ. ಆ ಜ್ಞಾನ ಶಕ್ತಿಯಿಂದ ಒಳ್ಳೆಯದು, ಕೆಟ್ಟದು, ಸುಖ, ದುಃಖ ಇತ್ಯಾದಿ ಅನೇಕ ವಿಷಯಗಳನ್ನು ಆಲೋಚಿಸಿ, ಐಹಿಕ ಆಮುಷ್ಮಿಕಕ್ಕೆ ಬೇಕಾದ ವಿವೇಕವನ್ನು ಸಂಪಾದಿಸಬಹುದು. ಎರಡನೆಯದೇ ಮಾತು. ಈ ಮಾತು ಸಕಲ ವಿಧದಿಂದಲೂ ಮನುಷ್ಯನಿಗೆ ಮುಖ್ಯವಾಗಿದೆ. ಆದರೆ ಆ ಮಾತನ್ನು ಇಷ್ಟಾನುಸಾರವಾಗಿ ಬದಲಾಯಿಸುವುದು ಮನುಷ್ಯನ ಅಧೀನದಲ್ಲಿದೆ. ಬದಲಾಯಿಸಿದರೂ ಅದೂ ಮಾತೆ. ಯಾವುದಾದರೂ ಮಾತೇ ಸರಿ. ಕನ್ನಡ, ತುಳು, ತಮಿಳು, ತೆಲುಗು, ಮಲೆಯಾಳ,

ಮರಾಠಿ, ಒರಿಯಾ, ಇಂಗ್ಲೀಷು—ಇವುಗಳೆಲ್ಲ ಮಾತಿನ ಸಮೂಹಗಳೇ. ಈಗ ಪ್ರಚಾರದಲ್ಲಿರುವ ಮಾತುಗಳೆಲ್ಲವೂ ವಿಕಾರವನ್ನು ಹೊಂದುತ್ತಲೇ ಇವೆ. ಕನ್ನಡವನ್ನೇ ತೆಗೆದುಕೊಂಡರೆ, ಈ ಕನ್ನಡದಲ್ಲಿ ಅನೇಕ ವಿಕಾರವಿರುವುದು.

ಕನ್ನಡ.—ಕೋಟದವರ ಕನ್ನಡ, ಹವ್ಯಕರ ಕನ್ನಡ, ಕೋಟೇಶ್ವರದವರ ಕನ್ನಡ, ಕರ್ಣಾಟಕರ ಕನ್ನಡ, ಕೋಟೆಯವರ ಕನ್ನಡ, ಕುಂಬಾರರ ಕನ್ನಡ, ಬೈರರ ಕನ್ನಡ, ಕೊನೆಗೆ ಮಂಗಳೂರು ಕನ್ನಡ, ಮತ್ತೆ ಬೆಂಗಳೂರು ಕನ್ನಡ, ಆಮೇಲೆ ಧಾರವಾಡ ಕನ್ನಡ ಮತ್ತೂ ಹೇಳಿದರೆ ಮದರಾಸಿನ ತಿರುವಲ್ಲಿಕೇಣಿಯ ನೊಸರು ಮಾರುವವರ ಕನ್ನಡ (ಅದ್‌ರಂಬ ಕರ್ಣಾಟಕಂ).

ತುಳು.—ಸುಬ್ರಹ್ಮಣ್ಯದ ತುಳು, (ಪೈಟಿ ಪೋದು ಹಡಪು ಕಡರಾದ ಪಡ್ಪುಗ್ ಪೋಂಡ ಪೈಟಿ ಪೋಪುಂಡು, ಮಂಗಳೂರವರೇ ನಿಮಗೆ ಈ ತುಳು ಅರ್ಥವಾಗುತ್ತಿದೆಯೇ?) ಪುತ್ತೂರು ತುಳು, ಮಂಗಳೂರು ತುಳು, ಉಡುಪಿ ತುಳು, ಇತ್ಯಾದಿ.

ತಮಿಳು.—ಕೊಯಮುತ್ತೂರಿನ ತಮಿಳು, ಚೋಳದೇಶದ ತಮಿಳು, ಪಾಂಡ್ಯದೇಶದ ತಮಿಳು, ರಾಮೇಶ್ವರದ ತಮಿಳು, ಮದರಾಸು ತಮಿಳು, ಇತ್ಯಾದಿ.

ತೆಲುಗು.—ದತ್ತಮಂಡಲದ ತೆಲುಗು (Ceded Districts Telugu), ಗುಂಟೂರು ತೆಲುಗು, ರಾಜಮಂದಿರದ ತೆಲುಗು, ವಿಶಾಖಪಟ್ಟಣದ ತೆಲುಗು, ತೂರ್ಪು ತೆಲುಗು, ಇತ್ಯಾದಿ.

ಮಲೆಯಾಳ.—ಕಾಸರಗೋಡಿನ ಮಲೆಯಾಳ, ಕಲ್ಲಿಕೋಟೆಯ ಮಲೆಯಾಳ, ಕೊಚ್ಚಿಯ ಮಲೆಯಾಳ, ತಿರುವಾಂಕೂರಿನ ಮಲೆಯಾಳ, ಕೊನೆಗೆ ನಮ್ಮ ಮಾಪಿಳ್ಳೆಯವರ ಮಲೆಯಾಳ, ಮತ್ತೆ ಬೆಲ್ಚಡರ ಮಲೆಯಾಳ, ಇತ್ಯಾದಿ.

ಮರಾಠಿ.—ಬೆಳಗಾಂವ ಮರಾಠಿ, (ಅಲ್ಲಿ ಕನ್ನಡವೇ? ಇರಲಿ ಅಲ್ಲಿಯವರಿಗೆ ಕೆಲವರಿಗೆ ಮರಾಠಿಯ ಮೇಲೂ ಸ್ವಲ್ಪ ಅಕ್ಕರೆಯುಂಟಂತೆ) ಕೊಲ್ಲಾಪುರದ ಮರಾಠಿ, ಪೂನಾ ಮರಾಠಿ, ಸೂರತ್ ಮರಾಠಿ, ಮುಂಬಯಿ ಮರಾಠಿ, ಇತ್ಯಾದಿ.

ಕೊಂಕಣಿ—ಇದು ಮರಾಠಿಯ ಜನ್ಯಭಾಷೆ. ಸಾರಸ್ವತರ ಕೊಂಕಣಿ, ಗೌಡಸಾರಸ್ವತರ ಕೊಂಕಣಿ, ಕ್ರೈಸ್ತರ ಕೊಂಕಣಿ, ನವಾಯ್ತರ ಕೊಂಕಣಿ, ಇತ್ಯಾದಿ.

ಇಂಗ್ಲೀಷು.—ಸ್ಕಾಟ್ ಇಂಗ್ಲೀಷು, ಐರಿಷ್ ಇಂಗ್ಲೀಷು, ಅಮೇರಿಕನ್ ಇಂಗ್ಲೀಷು, ಇತ್ಯಾದಿ.

ಸಾಧಾರಣವಾಗಿ ನೋಡಿದರೆ ಈ ಎಲ್ಲ ಭಾಷೆಗಳಲ್ಲಿಯೂ ವಿಶೇಷವಾಗಿ ತಪ್ಪದೆ ವಿಕಾರವಿದೆ. ಇದಕ್ಕೆ ಕಾರಣವೇನು? ನಿತ್ಯ ಪ್ರಚಾರದಲ್ಲಿರುವುದೇ. ಆಡುವ

ಭಾಷೆಯು ವಿಕಾರವನ್ನು ಹೊಂದದೆ ಇರಲಾರದು. ಅದು ಯಾವಾಗ ಪ್ರಚಾರದಲ್ಲಿ ತಪ್ಪುವುದೋ ಆಗ ಅದನ್ನು ಆಧುನಿಕರು ಮೃತ ಭಾಷೆ ಎಂದೆನ್ನುವರು (Dead Language). ನಮ್ಮ ಪ್ರಾಚೀನ ಕಾಲದ ಪಂಪನ 'ಆದಿ ಪುರಾಣ', ಅಗ್ಗಳನ 'ಚಂದ್ರಪ್ರಭ ಪುರಾಣ,' ಇತ್ಯಾದಿ ಗ್ರಂಥಗಳ ಭಾಷೆಗೂ ಮೃತ ಭಾಷೆಯೆಂದು ನಾಮಕರಣವು ಮಾಡಲ್ಪಟ್ಟಿತು.

ಸೋಮೇಶ್ವರ ಶತಕ, ಭೀಮನ ಬಸವ ಪುರಾಣ, ಇತ್ಯಾದಿ ಗ್ರಂಥಗಳ ಭಾಷೆಯು ಮಧ್ಯವರ್ತಿ ಭಾಷೆಯಾಗಿಬಿಟ್ಟಿತು. ಶಬ್ದ ಸಂಗ್ರಹ, ಇತ್ಯಾದಿ ಗ್ರಂಥಗಳ ಭಾಷೆಯು ಆಧುನಿಕ ಜನ್ಯ ಭಾಷೆಯಾಗಿಬಿಟ್ಟಿತು.

ನಮ್ಮ ಕನ್ನಡ ಭಾಷೆಯು ಬಹಳ ಪ್ರಾಚೀನವೆಂಬುದಕ್ಕೆ ಕರ್ಣಾಟಕ ಕವಿ ಚರಿತೆಯಲ್ಲಿ ಅನೇಕ ಪ್ರಮಾಣಗಳಿವೆ. ಸಮಂತಭದ್ರನೆಂಬ ಕನ್ನಡ ಕವಿಯು ಸುಮಾರು ೧೧೮ನೆಯ ಇಸವಿಯಲ್ಲಿ ಇದ್ದಿರಬೇಕೆಂದು ಕವಿಚರಿತ್ರಕಾರರಾದ ಶ್ರೀ॥ ರಾ. ನರಸಿಂಹಾಚಾರ್ಯರವರು ಊಹಿಸುತ್ತಾರೆ. ಕನ್ನಡವನ್ನು ಉತ್ತಮ ಸ್ಥಿತಿಗೆ ತಂದವರು ಜೈನ ಮತದವರೆಂದು ಸಂದೇಹವಿಲ್ಲದೆ ಹೇಳಲೇಬೇಕು. ಕನ್ನಡ ಗ್ರಂಥಗಳಲ್ಲಿ ಅತಿ ಪುರಾತನವಾದುದು 'ಕವಿರಾಜಮಾರ್ಗ'ವು. ಇದನ್ನು ಬರೆದ ನೃಪತುಂಗನು ೮೧೪ನೆಯ ಇಸವಿಯಿಂದ ೮೭೭ರವರೆಗೆ ರಾಜ್ಯಭಾರಮಾಡಿದ ರಾಷ್ಟ್ರಕೂಟ ವಂಶದ ಜೈನ ದೊರೆ. ಇವನ ರಾಜಧಾನಿ ಮಾನ್ಯಖೇಟಪುರ. ಇದು ಷೋಲಾಪುರಕ್ಕೆ ಸಮೀಪವಿರುವ ಹೈದರಾಬಾದಿಗೆ ಸೇರಿದ 'ಮಾಲ್ ಖೇಡ್' ಎಂದು ಕೆಲವರೆನ್ನುವರು. ನೃಪತುಂಗನು ಕವಿರಾಜಮಾರ್ಗದಲ್ಲಿ ತನ್ನ ಕಾಲಕ್ಕೆ ಹಿಂದೆ ಹಳಗನ್ನಡವಿದ್ದಿತೆಂದು ಹೇಳುವುದರಿಂದ ನೃಪತುಂಗನ ಕಾಲಕ್ಕೆ ಬಹಳ ಹಿಂದೆಯೇ ನಮ್ಮ ಕನ್ನಡ ಭಾಷೆಯು ಉತ್ತಮ ಸ್ಥಿತಿಗೆ ಬಂದಿರಬೇಕೆಂದು ಕೆಲವರ ಅಭಿಪ್ರಾಯವು. ನಮ್ಮ ಮಾನ್ಯ ಅಧ್ಯಕ್ಷರಾದ ಕನ್ನಡ ಭಾಷೆಗೆ ತಾತರಂತಿರುವ ಈ ಶ್ರೀಮತ್ತಾತಾಚಾರ್ಯರವರು ಸುಮಾರು ಎರಡು ಸಾವಿರ ವರುಷಗಳ ಹಿಂದೆಯೇ ನಮ್ಮ ಕನ್ನಡ ಭಾಷೆಯು ಉತ್ತಮ ಸ್ಥಿತಿಯಲ್ಲಿದ್ದಿತೆಂದೂ, ಅನೇಕ ಗ್ರಂಥಗಳು ಬಹು ಪೂರ್ವಕಾಲದಲ್ಲಿಯೇ ನಾಶವಾಗಿದ್ದಿರಬೇಕೆಂದೂ, ಈಗಿನ ಆಧುನಿಕರು ಮೃತ ಭಾಷೆಯೆಂದು ಹೇಳಲ್ಪಡುವ ಆ ಹಳಗನ್ನಡದ ಸಂಪ್ರದಾಯವನ್ನು ಈಗಲೂ ಇಟ್ಟುಕೊಂಡಿರುವವರು ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕರಿರುವರೆಂದೂ ಹೇಳಿದುದು ನನ್ನ ಸ್ಮೃತಿಪಥಕ್ಕೆ ಬರುವುದು.

ಹಾಗೆಯೇ ನಮ್ಮ ಸಂಸ್ಕೃತ ಭಾಷೆಯೂ ಒಂದಾನೊಂದು ಕಾಲದಲ್ಲಿ ಆಡುವ ಭಾಷೆಯಾಗಿತ್ತು. ಆಗ ಆ ಭಾಷೆಯೂ ವಿಕಾರವನ್ನು ಹೊಂದುತ್ತಲೇ ಇತ್ತು. ಪಾಣಿನಿ ಆಚಾರ್ಯರು ತಮ್ಮ ಅಷ್ಟಾಧ್ಯಾಯಿ (ವ್ಯಾಕರಣ ಸೂತ್ರಗಳು) ಮೂಲಕ ಈ ಭಾಷೆಗೊಂದು ಕಟ್ಟುಮಾಡಿಟ್ಟರು. ಆಮೇಲೆ ಭಾಷೆಯ ವಿಕಾರದ ವೃದ್ಧಿಯು ತಡೆಗಟ್ಟಿಹೋಯಿತು. ಕಾತ್ಯಾಯನ ಪತಂಜಲಿಗಳು

ಮತ್ತಷ್ಟು ಆ ಕಟ್ಟನ್ನು ಗಟ್ಟಿಮಾಡಿದರು. ಮುಂಚೆ ‘ಭಾಷಾ’ ಎಂದು ಒಂದು ಭಾಷೆ ಇತ್ತೆಂದೂ, ಆಗಲೇ ‘ಛಂದಸ್ಸು’ ಎಂಬ ಇನ್ನೊಂದು ಭಾಷೆ ಇತ್ತೆಂದೂ, ಪಾಣಿನಿ ಆಚಾರ್ಯರ ಸೂತ್ರಗಳಲ್ಲಿ ‘ಭಾಷಾಯಾಂ,’ ‘ಛಂದಸಿ’ ಎಂದು ಆಗಾಗ ಕಾಣುವುದರಿಂದ ತಿಳಿಯಲ್ಪಡುತ್ತದೆ. ಶಾಕಟಾಯನ ಪ್ರಭೃತಿಗಳ ಭಾಷಾ ಭೇದವೂ ಕೂಡ ಇತ್ತೆಂದು ತಿಳಿಯಲ್ಪಡುತ್ತದೆ. ಪಾಣಿನಿ ಆಚಾರ್ಯರ ಮೊದಲ್ಗೊಂಡು ಭಾಷೆಯ ನಾಶವೂ, ಅಭಿವೃದ್ಧಿಯೂ, ವಿಕಾರವೂ ತಡೆಯಾಗಿ ಸ್ಥಾಯಿಯಾಗಿಬಿಟ್ಟಿತು. ನಮ್ಮ ಕನ್ನಡದಲ್ಲಿಯೂ ಪ್ರಾಚೀನ ಅರ್ವಾಚೀನ ಗ್ರಂಥಗಳ ಹೊರತು ಆಧುನಿಕವಾದ ಗ್ರಂಥಗಳು ಕಾಲ ಕ್ರಮದಲ್ಲಿ ವಿಕಾರದಿಂದ ಕೂಡಿದ ಭಾಷಾ ಭೇದವನ್ನೊಳಗೊಂಡಿವೆ.

ಭಾಷಾತತ್ವವಿದರು ಈ ವಿಕಾರವನ್ನು ಮೂರು ವಿಧವಾಗಿ ವಿಭಾಗಿಸುವರು:—ಶಬ್ದ ವಿಕಾರ, ಅರ್ಥ ವಿಕಾರ, ಶಬ್ದಾರ್ಥ ವಿಕಾರ. ಈ ವಿಕಾರಗಳಲ್ಲಿಯೂ ಇನ್ನೂ ಎಷ್ಟೋ ವಿಕಾರಗಳಿರುವುವು. ಇವುಗಳಲ್ಲಿ ಕೆಲವು ನಿಯಮಗಳಿಗೊಳಪಟ್ಟವುಗಳು. ನಿಯಮಗಳಿಗೊಳಪಡದಿರುವವುಗಳನ್ನು ಸಾದೃಶ್ಯ ವಿಕಾರಗಳೆನ್ನಬೇಕು. ಸಂಧಿ ಪ್ರಯುಕ್ತವಾದ ವಿಕಾರಗಳು, ಶ್ಚುತ್ವ, ಷ್ಟುತ್ವಾದಿ ನಿಯಮಗಳಿಗನುಸಾರವಾಗಿ ಬಂದ ವಿಕಾರಗಳು—ಇವುಗಳೆಲ್ಲ ಉಚ್ಚಾರಣೆಯ ವಿಕಾರಗಳು (Phonetic Change).

ಖತ್ವಕ್ಕಂ ಬಹುಳತೆಯಿಂ। ಗತ್ವಂ ಛತ್ವಂ ದ್ವಿರುಕ್ತಿಯಿಂ ಕೂಡಿರೆ ಮೇಣ್ ।
ಯತ್ವಾಸ್ತಿತನಿರೆ ಚತ್ವಂ। ದ್ವಿತ್ವಂ ಥತ್ವಕ್ಕೆ ಸತ್ವಮುಂಟರೆ ಎಡೆಯೊಳ್ ॥
ಬತ್ವದ ಸತ್ವದ ಚತ್ವದ। ದತ್ವದ ವಿಧಿ ಜತ್ವದಲ್ಲಿ ಸಂಭವಿಸಿರ್ಕುಂ ॥
ಭತ್ವಕ್ಕೆ ಹಸವಮಕ್ಕುಂ। ರತ್ವಕ್ಕಂ ಳಳಮುಮಕ್ಕುಮೋರೊಂದೆಡೆಯೊಳ್ ॥

ಕೇಶಿರಾಜನ ಈ ನಿಯಮಗಳಿಂದ ಖಕಾರಕ್ಕೆ ಗಕಾರ, ಛಕಾರಕ್ಕೆ ಚಕಾರ, ಜಕಾರಕ್ಕೆ ದಕಾರ, ಭಕಾರಕ್ಕೆ ಹಕಾರಾದಿಗಳಾಗಿ ಬದಲಾಯಿಸಲ್ಪಡುವುದು.

ಉದಾ:—ಮುಖ—ಮೊಗ, ಇಚ್ಛಾ—ಇಚ್ಚೆ, ಮುಂಜ—ಮೊದೆ, ವಲ್ಲಭ—ಬಲ್ಲಹ, ಇತ್ಯಾದಿ.

ಅರ್ಥ ವಿಕಾರವನ್ನು ನಾವು ಅನೇಕ ಕಡೆಗಳಲ್ಲಿ ಕಾಣುತ್ತೇವೆ. ವೇದದಲ್ಲಿ ಕಾಣುವ ಅಸುರ ಶಬ್ದಕ್ಕೆ ಪೂರ್ವದಲ್ಲಿ ಸದರ್ಥವಿತ್ತು. ಬರುತ್ತ ಬರುತ್ತ ಅಸದರ್ಥವು ಬಂತು. ಅದೇ ಶಬ್ದವು ಅವಸ್ಥಾ (Avesta) ಗ್ರಂಥದಲ್ಲಿ ‘ಅಹುರ’ ಎನ್ನಲ್ಪಡುತ್ತದೆ. ಅವಸ್ಥಾ ಗ್ರಂಥದಲ್ಲಿ ದೇವ ಶಬ್ದಕ್ಕೆ ಅಸದರ್ಥವಿದೆ. ಸಂಸ್ಕೃತದಲ್ಲಿ ಸದರ್ಥವು. “ದೇವಾನಾಂ ಪ್ರಿಯಃ ಅಶೋಕಃ” ಈ ವಾಕ್ಯಕ್ಕೆ ಸದರ್ಥವಿತ್ತು. “ದೇವಾನಾಂ ಪ್ರಿಯ ಇತಿ ಚ ಮೂರ್ಖೇ” ಈಗ ಅಸದರ್ಥವಿದೆ. ಕನ್ನಡದಲ್ಲಿ “ನನಗೆ ಸ್ವತಂತ್ರವಿಲ್ಲ” ಎಂದು ಹೇಳುವುದುಂಟು. ಇಲ್ಲಿ ಸ್ವಾತಂತ್ರ್ಯವೆಂದರ್ಥವು. ಇಲ್ಲಿ ಶಬ್ದಾರ್ಥ ವಿಕಾರವಿದೆ.

ಉಚ್ಚಾರಣೆ ಅಥವಾ ವರ್ಣೋಚ್ಚಾರಣೆಯ ವಿಕಾರವು ಕೆಲವು ಕಡೆಗಳಲ್ಲಿ ಸನಿಮಿತ್ತಕವಾಗಿಯೂ, ಕೆಲವು ಕಡೆಗಳಲ್ಲಿ ನಿರ್ನಿಮಿತ್ತಕವಾಗಿಯೂ ಇದೆ.

ನಿರುಪಾಧಿಕ ಅಥವಾ ನಿರ್ನಿಮಿತ್ತಕವಾದ ವಿಕಾರವು
(Isolative Change)

ಈ ವಿಕಾರವು ಪೂರ್ವ ಪರ ವರ್ಣಗಳ ಸಂಯೋಗದಿಂದುಂಟಾಗುವುದಲ್ಲ. ಅದೊಂದು ಬಗೆಯ ಅಭ್ಯಾಸದಿಂದ ಉಂಟಾಗುವುದು. ಉದಾ:—ವಾರಿ ಅಥವಾ ಬಾರಿ, ವಾಲ—ಬಾಲ, ಕೋಶ—ಕೋಷ, ಯಮುನಾ—ಜಮುನಾ, ಋಷಿ—ರಿಸಿ, ಇತ್ಯಾದಿ.

ಲಳಯೋರ್ಡಡಯೋಸ್ತದ್ವತ್ ಜಯಯೋರ್ವಬಯೋಸ್ತಥಾ।
ರಲಯೋರ್ನಣಯೋಶ್ಶಾಂತೇ ಸವಿಸರ್ಗಾವಿಸರ್ಗಯೋಃ ॥
ಸಬಿಂದುಕಾಬಿಂದುಕಯೋಃ ಸ್ಯಾದಭೇದೇನ ಕಲ್ಪನಂ।

ಎಂದು ನ್ಯಾಸೋಲ್ಲಾಸ ಧರ್ಮಾಧಿಕಾರಿ ಚಕ್ರವರ್ತಿಯವರ 'ಸಮಾಸ ಚಕ್ರವರ್ತಿ'ಯಲ್ಲಿ ಕಾಣಲ್ಪಡುತ್ತದೆ. ಇವೆಲ್ಲ ಅಭ್ಯಾಸದಿಂದ ಬಂದ ವಿಕಾರವಿರಬೇಕೆಂದು ನಾವು ತಿಳಿಯಬೇಕಾಗುತ್ತದೆ.

ಪದವಿಧಿ ಕನ್ನಡಕಂ ಸ।
ಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಱಿಂದಿ ॥
ರ್ಪುದು ಬಿರುದಾವಳಿಯೊಳ್ ಪೇ।
ೞ್ವುದು ಪೆಱವರೊಳಾಗದಿದು ವಿರುದ್ಧ ಸಮಾಸಂ ॥

ಎಂದು ಕೇಶಿರಾಜನು ಸಂಸ್ಕೃತಕ್ಕೂ ಕನ್ನಡಕ್ಕೂ ಸಮಾಸವಾಗದೆಂದೂ, ಯಾರೂ ಪ್ರಯೋಗಿಸಬಾರದೆಂದೂ ಹೇಳಿ ಮಹಾಕವಿಗಳ ಪ್ರಯೋಗವನ್ನು ಮಾತ್ರ ಒಪ್ಪಿಕೊಳ್ಳುವನು. ಮಹಾಕವಿಗಳಾದ ಮಾತ್ರಕ್ಕೆ ಹೇಗೆ ಉಪಯೋಗಿಸಿದರೆಂದರೆ ಅದೊಂದು ಬಗೆಯ ಅಭ್ಯಾಸದಿಂದಲೇ ಹೊರತು ನಿಯಮದಿಂದಲ್ಲ.

ಸೋಪಾಧಿಕ ಅಥವಾ ಸನಿಮಿತ್ತಕವಾದ ವಿಕಾರವು
(Conditional Change)

ಈ ವಿಕಾರವು ಪೂರ್ವ ಪರ ವರ್ಣಗಳ ಸಂಬಂಧದಿಂದ ಉಂಟಾಗುತ್ತದೆ. ಉದಾ:—ಚತುರ್ಣಾಂ, ಮುಷ್ಣಾತಿ, ಸ್ತೃಣೋತಿ, ಇತ್ಯಾದಿ. ಇಲ್ಲಿ ಹಿಂದೆ ಷ ಋ ಅಥವಾ ರ ಇವುಗಳ ಇರುವಿಕೆಯಿಂದ ದಂತ್ಯ ನಕಾರವು ಮೂರ್ಧನ್ಯವಾದ ಣಕಾರವಾಗಿ ಬದಲಾಯಿಸಲ್ಪಡುವುದು. ಇದಕ್ಕೆ ಸಂಬಂಧಿಸಿದ ಪಾಣಿನ್ಯಾಚಾರ್ಯರ ಸೂತ್ರವು "ರಷಾಭ್ಯಾಂ ನೋಣಃ ಸಮಾನಪದೇ" "ಅಟ್ಕುಪ್ವಾಙ್ನುಮ್ವ್ಯವಾಯೇಽಪಿ" ಇತ್ಯಾದಿಯಾಗಿರುವುದು.

ಇರೆ ಯಲರಹಿತ ವ್ಯಂಜನ।
ಪರಮಾಗಿ ಸಕಾರಮಲ್ಲಿ ಬಹುಳಂ ಚತ್ವಂ ॥
ಅರೆ ಎಡೆಯೊಳ್ ಜತ್ವಂ ಮೇ।
ಣರೆ ಎಡೆಯೊಳ್ ಸಂಖ್ಯೆಯಾಗೆ ನಿಯತಂ ಛತ್ವಂ ॥

ಯಕಾರ ಲಕಾರಗಳಿಂದ ವಿರಹಿತಗಳಾದ ವ್ಯಂಜನಗಳಿಗೆ ಪರವಾಗಿ ಸಕಾರ ಇದ್ದರೆ ಆ ಸ್ಥಾನದಲ್ಲಿ ಸಾಮಾನ್ಯವಾಗಿ ಚಕಾರವು ಬರುವುದು. ಕೆಲವು ಕಡೆಗಳಲ್ಲಿ ಜಕಾರವಾಗುವುದು. ಅದಲ್ಲದೆ ಕೆಲವು ಕಡೆಗಳಲ್ಲಿ ಸಂಖ್ಯಾವಾಚಿಯಾಗಿದ್ದರೆ ನಿಯತದಿಂದ ಛಕಾರವಾಗುವುದು. ಉದಾ:—ಚತ್ವಕ್ಕೆ—ಸುಣ್ಚರದ ತಿಣ್ಣ್ ಘನ ಘೋಷ ಗಭೀರಂ. ಜಕಾರಕ್ಕೆ—ಮುಂಜೂರ್, ಮುಂಜೆಱಂಗು, ಇತ್ಯಾದಿ. ಛಕಾರಕ್ಕೆ—ಪದಿನೆಣ್ಛಿರ ಲೋಚನಕ್ಕುರಿಯ ಜಾತ್ಯುತ್ಸಂಗಳಿಘಾರ್ಗಿರಂ। ಮದನಂ ಮುಕ್ಕಳಿಸಿರ್ದ ಬಂತಿ ಘಟೆಗಳ್ ಸಾಘಾರ್ಗಿರಂಗಳ್.......... ಇತ್ಯಾದಿ. ಕೇಶಿರಾಜನು ತನ್ನ ಸಂಧಿ ಪ್ರಕರಣದಲ್ಲಿ ಈ ಸನಿಮಿತ್ತಕವಾದ ವಿಕಾರವನ್ನು ತೋರಿಸಿರುವನು.

ಹಿಂದಿನ ವರ್ಣವನ್ನು ಅನುಸರಿಸುವುದರಿಂದ ದಗ್ಧಃ, ತಿಜ್ಞಿತ್ರಂ, ಅನ್ನಂ, ಛಿನ್ನಂ ಇತ್ಯಾದಿಗಳಲ್ಲಿ ಪರಸಾಮ್ಯವೆಂದೂ (Progressive Assimilation). ಕೆಲವು ಕಡೆಗಳಲ್ಲಿ ಪೂರ್ವಸಾಮ್ಯ ಪ್ರಯುಕ್ತವಾದ ವಿಕಾರವೆಂದೂ (Regressive Assimilation) ಹೇಳಬಹುದು. ನಮ್ಮ ಪಾಣಿನಿ ಆಚಾರ್ಯರು 'ಝಲಾಂ ಜಶೋಂತೇ,' 'ಖರಿಚ,' 'ಹೋಢಃ,' 'ತೋರ್ಲಿ,' 'ಸ್ತೋಃ ಶ್ಚುನಾ ಶ್ಚುಃ,' ಇತ್ಯಾದಿ ರಮಣೀಯವಾದ ತಮ್ಮ ಸೂತ್ರಗಳಿಂದ ಈ ವಿಕಾರಗಳನ್ನು ತೋರಿಸಿ ಕೊಟ್ಟಿರುವರು.

ಸಾಮಾನ್ಯವಾದ ವಿಕಾರಗಳು

ಎಲ್ಲ ಸಂಯುಕ್ತ ವಿಕಾರಗಳೂ ಸನಿಮಿತ್ತಕವಾಗಿವೆ. ಆದರೆ ಎಲ್ಲ ಸನಿಮಿತ್ತಕ ವಿಕಾರಗಳೂ ಸಂಯುಕ್ತಗಳಾಗಿರುವುದಿಲ್ಲ. ಆಂತರಿಕ ವರ್ಣ ವಿಕಾರ ಬಾಹ್ಯ ವರ್ಣ ವಿಕಾರವೆಂದು ವರ್ಣ ವಿಕಾರಗಳು ಎರಡು ವಿಧವಾಗಿರುವುವು. ಸಾಮಾನ್ಯವಾಗಿ ವರ್ಣ ವಿಕಾರಗಳು ಕೆಲವು ಕಡೆಗಳಲ್ಲಿ ಶೀಘ್ರವಾಗಿಯೂ ಕೆಲವು ಕಡೆಗಳಲ್ಲಿ ಮೆಲ್ಲನೆಯೂ ಶಬ್ದಗಳಲ್ಲಿ ಉಂಟಾಗುತ್ತವೆ. ಇದಕ್ಕೆ ಮುಖ್ಯ ಕಾರಣವು ಸಂಧಿಯೇ ಆಗಿರುವುದು.

ಈ ಸಂಧಿ ವಿಕಾರವು ಎರಡು ವಿಧವಾಗಿರುವುದು :—

೧. ಎರಡು ಪದಗಳಿಗೆ ಸಂಧಿ (External Sandhi).

೨. ಪದದಲ್ಲಿ ಸಂಧಿ (Internal Sandhi).

ಸುಧ್ಯುಪಾಸ್ಯಃ, ಹಿತೋಪದೇಶಃ, ಗಂಗೌಘಃ, ತವೇಶಃ, ಕವೀಂದ್ರಃ, ಸಾಕಾಲಃ, ಇತ್ಯಾದಿಗಳಲ್ಲಿ ಎರಡು ಪದಗಳಿಗೆ ಸಂಧಿ; ಕ್ರುಙ್ಙಂತಿ, ಅಯಜೇ,

ನಾರಾಯಣಃ, ಅಪಸಂ, ಇತ್ಯಾದಿ ಸ್ಥಳಗಳಲ್ಲಿ ಕೇವಲ ಪದದಲ್ಲಿ ಸಂಧಿಯಿಂದ ವರ್ಣ ವಿಕಾರವಿರುವುದು.

ಸಂಹಿತೈಕ[1]ಪದೇ ನಿತ್ಯಾ ।
ನಿತ್ಯಾ [2]ಧಾತೂಪಸರ್ಗಯೋಃ॥
ನಿತ್ಯಾ [3]ಸಮಾಸೇ ವಾಕ್ಯೇತು ।
ಸಾ ವಿವಕ್ಷಾಮಪೇಕ್ಷತೇ॥

ಎಂದು ನಮ್ಮ ಪೂರ್ವಜರು ಹೇಳುವರು.

ಸದಮಳ ಸಂಸ್ಕೃತ ಕರ್ಣಾ ।
ಟದದಂತ ಪ್ರಕೃತಿಗಳ್ಗೆಸು ಪ್ರತ್ಯಯದಿಂ॥
ತಿದಿರಾಗೆ ಯತ್ವಮನುಕೃತಿ ।
ಪದಕಂ ಮುಂದನುಕೃತಿಸ್ವರಂ ನಿಲೆಯುತ್ವಂ ॥

ಎಂದು ಕೇಶಿರಾಜನು ನಿಯಮವನ್ನು ಹೇಳಿ ಜಾರ–ಇಸಿದಂ=ಜಾರಯಿಸಿದಂ, ತೇರಯಿಸಿದಂ ಎಂಬ ಪದ ಸಂಧಿಯನ್ನು ತೋರಿಸುವನು.

೩. ಕೆಲವು ಕಡೆಗಳಲ್ಲಿ ವರ್ಣ ವಿಪರ್ಯಯ, ವರ್ಣಾಗಮ, ವರ್ಣಾದೇಶ ಗಳಿಂದ ವಿಕಾರವು ಕಂಡುಬರುವುದು.

"ಅಚಿಶ್ನು ಧಾತು ಭ್ರುವಾಂ ಯ್ವೋರಿಯಙುವಙೌ" ಈ ಸೂತ್ರ ರೀತಿಯಿಂದ 'ಸುಧಿಯೌ,' 'ಪ್ರಾಪ್ನುವಂತಿ,' 'ಭ್ರುವಃ,' ಇತ್ಯಾದಿ ಸ್ಥಳಗಳಲ್ಲಿ ಇಯಙ್, ಉವಙ್ ಆದೇಶ ಪ್ರಯುಕ್ತವಾದ ವರ್ಣ ವಿಕಾರವು ಈ ಪದಗಳಲ್ಲಿರುವುದು.

ಆದೇಶಮಾಗಿ ಮುಂಗ ।
ಳ್ಗಾದರುವದು ನಿಲ್ಕುಮಿರ್ಗಮೆವುಗಂ ಪೂರ್ವ॥
ಕ್ಕಾದಿಗೆ ನತ್ವಮದೆನ್ಸರ ।
ವಾದೊಡೆ ಕೆಲರಿಂದೆ ಬಿಂದುವೆವುವಿನ ವತ್ವಂ ॥

ಎಂದು ಕೇಶಿರಾಜನು ನಿಯಮವನ್ನು ಹೇಳಿ—ಕರಿದಪ್ಪರ್ ಕಾಳೆಗದೊಳ್, ಪಿರಿಯನೆನ್, ಅತಿಚತುರನೆನ್, ನೋಡುವೆವು, ನೋಡುವೆಂ, ಎಂದು ಇರ್, ಎನ್, ಇತ್ಯಾದಿ ಆದೇಶಗಳನ್ನು ತೋರಿಸುವನು. ಪಾಶ್ಚಾತ್ಯರು ಇದನ್ನು ಗ್ಲೈಡ್ (Glide) ಎನ್ನುವರು.

೪. ವಿಕಾರ್ ಲೋಪವು ಎಂದರೆ ಏಕವರ್ಣ ಲೋಪವೆನ್ನಬೇಕು (Haplology). ಸಮಾನವಾದ ಎರಡು ಗುಣಿತಾಕ್ಷರಗಳಲ್ಲಿ ಒಂದು ಲೋಪವಾದರೆ ಅದನ್ನು ವಿಕಾರ್ ಲೋಪವೆನ್ನುವರು. ಉದಾ:—ಶಷ್ಪಿಂಜರಃ—ಶಷ್ಪಪಿಂಜರಃ, ಮಧುಘಃ—ಮಧುದುಘಃ, ಕಿಂಸ್ಪೃಧಃ—ಕಿಂನಸ್ಪೃಧಃ, ಜಪಿ—ಜಪೀಪಿ,

ಇತ್ಯಾದಿ ಉದಾಹರಿಸುವನು. ನಮ್ಮ ಕನ್ನಡದಲ್ಲಿ ಎಂಟು+ದೆಸೆ=ಎಣ್ದೆಸೆ, ನಾಲ್ಕು+ದೆಸೆ=ನಾಲ್ದೆಸೆ, ಇತ್ಯಾದಿ.

೫. ವರ್ಣಲೋಪವು (ಪೃಷೋದರಾದಿ ಗಣ) (Syncope). ಇಲ್ಲಿ ಪ್ರಧಾನವಾಗಿ ಒಂದು ಅಚ್ ಲೋಪವಾಗುವುದು. ಉದಾ:—ಪೂಷನ್—ಪೂಷ್ಣಾ, ಭೂಮನ್—ಭೂಮ್ನಾ, ರಾಜನ್—ರಾಜ್ಞಃ, ಇತ್ಯಾದಿ. ಇಂತಹವುಗಳನ್ನು "ಪೃಷೋದರಾದೀನಿ ಯಥೋಪದಿಷ್ಟಂ" ಎಂದು ನಮ್ಮ ಪ್ರಾಚೀನರು ಪೃಷೋದರಾದಿ ಗಣಕ್ಕೆ ಸೇರಿಸಿರುವರು. ನಮ್ಮ ಕನ್ನಡದಲ್ಲಿ ಭಕ್ತಿ—ಬಕುತಿ, ಯುಕ್ತಿ—ಯುಕುತಿ, ರತ್ನ—ರತುನ, ಇತ್ಯಾದಿ ತದ್ಭವಗಳ ಉದಾಹರಣೆಗಳಲ್ಲಿ ಇವು ಸಿಕ್ಕುವುವು.

೬. ಸ್ವರ ಭಕ್ತಿ (Anaptyxis). ವರ್ಣ ಲೋಪಕ್ಕೆ ವಿರುದ್ಧವಾಗಿರುವ ಈ ಸ್ವರ ಭಕ್ತಿಯು ಉಚ್ಚರಿಸಲಿಕ್ಕೆ ಕಷ್ಟವಾದ ಶಬ್ದದ ಮಧ್ಯದಲ್ಲಿ ಹೊಸದೊಂದು ವರ್ಣವು ಹೆಚ್ಚಾಗಿ ಬರುವಿಕೆಯುಳ್ಳದು. ಸಾಧಾರಣವಾದ ಎರಡು ವ್ಯಂಜನಗಳ ನಡುವೆ ಹೊಸದೊಂದು ಅಚ್ ವರ್ಣವುಂಟಾಗುವುದೇ ಸ್ವರ ಭಕ್ತಿಯು. ಉದಾ:—ಪೃಥ್ವೀ—ಪೃಥಿವೀ, ಪ್ರತ್ನ—ಪ್ರತನ, ಸೂತ್ನ—ಸೂತನ, ಇತ್ಯಾದಿ.

ಇದು ಐದು ವಿಧವಾಗಿದೆ:—

(೧) ಕರಿಣೀ ಕುರ್ವಣೀಚೈವ ಹರಿಣೀ ಹರಿತಾ ತಥಾ।
ತದ್ವತ್ ಹಂಸ ಪದಾನಾಮ ಪಂಚೈತಾಃ ಸ್ವರ ಭಕ್ತಯಃ ॥

(೨) ಕರಿಣೀ ರಹಯೋರ್ಯೋಗೇ ಕುರ್ವಣೀ ಲಹಕಾರಯೋಃ।
ಹರಿಣೀ ರಶಯೋರ್ಯೋಗೇ ಹರಿತಾ ಲಶಕಾರಯೋಃ ॥

(೩) ಯಾತು ಹಂಸಪದಾನಾಮ ಸಾತುರೇಫ ಷಕಾರಯೋಃ।

೧. ಕರಿಣೀ	ದೇವಂಬರ್ಹಿಃ	ಬರಿಹಿಃ
೨. ಕುರ್ವಣೀ	ಉಪಬಲ್ಹ	ಉಪಬಲಹ
೩. ಹರಿಣೀ	ದರ್ಶತಂ	ದಾರುಶತಂ
೪. ಹರಿತಾ	ಶತಬಲ್ಶ	ಶತಬಲಶ
೫. ಹಂಸಪದಾ	ತ್ಯರ್ಷಃ	ತ್ಯರುಷಃ

ಈ ವಿಷಯವು ಶಿಕ್ಷಾ ಸಂಗ್ರಹದಲ್ಲಿಯೂ, ಯಾಜ್ಞವಲ್ಕ್ಯ ಶಿಕ್ಷೆಯಲ್ಲಿಯೂ (ಪುಟ ೧೬) ವರ್ಣರತ್ನ ದೀಪಿಕಾ ಶಿಕ್ಷೆಯ ೧೨೧–೧೨೨ನೆಯ ಪುಟಗಳಲ್ಲಿಯೂ ಸ್ವರ ಭಕ್ತಿ ಲಕ್ಷಣಾನು ಪರಿಶಿಷ್ಟ ಶಿಕ್ಷೆಯ ೧೬೫ನೆಯ ಪುಟದಲ್ಲಿಯೂ ವ್ಯಕ್ತವಾಗಿ ಕಾಣಲ್ಪಡುವುದು.

೭. ವರ್ಣಾಗಮವು (Prothesis). ಒಂದಾನೊಂದು ವ್ಯಂಜನದ ಹಿಂದೆ ಒಂದು ಅಚ್ ತನ್ನಷ್ಟಕ್ಕೆ ಕಾಣಿಸಿಕೊಳ್ಳುವುದೇ ವರ್ಣಾಗಮವು. ಉದಾ:—

ಸಂಸ್ಕೃತದ ಸ್ತ್ರೀ ಶಬ್ದವು ಪ್ರಾಕೃತದಲ್ಲಿ 'ಇತ್ಥಿಯಾ' ಅಥವಾ 'ಇತ್ಥೀ' ಎಂದೂ, ಮರಾಠಿಯಲ್ಲಿ ಅಸ್ತುರೀ ಎಂದೂ, ಸಂಸ್ಕೃತದ 'ಸ್ನಾನ' ಶಬ್ದವು ಮರಾಠಿಯಲ್ಲಿ 'ಅಸ್ನಾನ' ಎಂದೂ, ಸಂಸ್ಕೃತದ ರಾಮಾನುಜ ಶಬ್ದವು ತಮಿಳಿನಲ್ಲಿ 'ಇರಾಮಾನುಜ' ಎಂದೂ, ರಾಮ ಶಬ್ದವು ಇರಾಮ ಎಂದೂ, ಲಕ್ಷ್ಮಣ ಶಬ್ದವು ಇಲಕ್ಕಣ ಎಂದೂ, ಸಂಸ್ಕೃತ ಎಂಬ ಶಬ್ದವು ಹಳಗನ್ನಡದ ತದ್ಭವದಲ್ಲಿ ಸಕ್ಕದ ಎಂದೂ, ಲಕ್ಷಣ ಶಬ್ದವು ಹಳಗನ್ನಡ ಮತ್ತು ತುಳುವಿನಲ್ಲಿ ಲಕ್ಕಣ ಎಂದೂ ಕಾಣಲ್ಪಡುವುದು.

೮. ವರ್ಣ ವಿಪರ್ಯಯವು (Metathesis) ಒಂದು ಶಬ್ದದಲ್ಲಿ ಎರಡು ಗುಣಿತಾಕ್ಷರಗಳು ವಿಕಾರವನ್ನು ಹೊಂದುವುದೇ ವರ್ಣ ವಿಪರ್ಯಯವು. ಉದಾ:—ಮರಹಟ್ಟ—ಮಹಾರಾಷ್ಟ್ರ, ಬನಾರಸೀ—ವಾರಾಣಸೀ, ದೀಹರ—ದೀರ್ಘ, ನಟಲ—ಲಲಾಟ, ಸಿಂಹಃ—ಹಿಂಸಃ, ಇತ್ಯಾದಿ.

ಭವೇದ್ವರ್ಣಾಗಮಾದ್ಧಂಸಃ ಸಿಂಹೋ ವರ್ಣ ವಿಪರ್ಯಯಾತ್ ।
ಗೂಢೋತ್ಮಾ ವರ್ಣ ವಿಕೃತೇಃ ವರ್ಣನಾಶಾತ್ಪೃಷೋದರಂ ॥

ಎಂದು ಸಿದ್ಧಾಂತ ಕೌಮುದಿಯ ಸಮಾಸ ಪ್ರಕರಣದಲ್ಲಿ ಕಾಣುವುದು.

೯. ಪದಾದ್ಯಚ್ ಲೋಪವು (Aphoeresis).

ಅಲಂಕಾರ	ಪಾಳಿಯಲ್ಲಿ	ಲಂಕಾರ
ಅರಣ್ಯ	ಪ್ರಾಕೃತದಲ್ಲಿ	ರಣ್ಣ
ಅವಟ	ಸಿಂಗಲಿ ಭಾಷೆಯಲ್ಲಿ	ವಡಾ
ಅಪಿಧಾನ	(ಸಂ.)	ಪಿಧಾನ
ಅವಗಾಹ	(ಸಂ.)	ವಗಾಹ, ಇತ್ಯಾದಿ

ವಷ್ಟಿ ಭಾಗುರಿರಲ್ಲೋಪಮವಾಪ್ಯೋರುಪಸರ್ಗಯೋಃ ।
ಆಪಂ ಚೈವ ಹಲಂತಾನಾಂ ಯಥಾ ವಾಚಾ ನಿಶಾ ದಿಶಾ ॥

ಎಂದು ಸಿದ್ಧಾಂತ ಕೌಮುದಿಯಲ್ಲಿ ಕಾಣುವುದು.

ಭಾಷಾ ತತ್ವ ಕೋವಿದರು ಈ ವಿಕಾರಗಳನ್ನು ಇನ್ನೆರಡು ವಿಧವಾಗಿ ವಿಭಾಗಿಸುವರು. ಸ್ಥಾನ ಪ್ರಯುಕ್ತವಾದ ವಿಕಾರ ಮತ್ತು ಶ್ರವಣ ಪ್ರಯುಕ್ತವಾದ ವಿಕಾರ. ಭಾಷೆಗಳಲ್ಲಿ ವಿಕಾರಗಳುಂಟಾಗಲಿಕ್ಕೆ ಕಾರಣವು ವಿಶೇಷವಾಗಿ ದೋಷ ಯುಕ್ತವಾದ ಅನುಕರಣವೇ. ಹೀಗಿರುವ ಅನೇಕ ಶಬ್ದಗಳು ಭಾಷೆಯಲ್ಲಿ ಸ್ಥಾಯಿಯಾಗಿ ಅಂಟಿಕೊಂಡಿವೆ. ಈ ದೋಷ ಯುಕ್ತವಾದ ಅನುಕರಣವು ಕೆಲವು ವೇಳೆ ಶ್ರವಣ ಪ್ರಯುಕ್ತವಾದ ಮತ್ತು ಸ್ಥಾನ ಪ್ರಯುಕ್ತವಾದ ರೂಪ ಭೇದಗಳನ್ನು ಉಂಟುಮಾಡುವುವು. ದಂತ್ಯ ಮತ್ತು ಊಷ್ಮ ವರ್ಣಗಳಲ್ಲಿ ಈ ಭೇದಗಳನ್ನು ನಾವು ಕಾಣುತ್ತೇವೆ. ಸರ್ಪ, ಸಪ್ತ ಎಂಬೆರಡು ಶಬ್ದಗಳು ಕೆಲವು ವೇಳೆ ತರ್ಪ, ತಪ್ತ ಎಂದುಚ್ಚರಿಸಲ್ಪಡುತ್ತವೆ. ಅಸ್ತಿ, ಅತ್ತಿ, ಇತ್ಯಾದಿ. ಮೊದಲನೆ

ಮೊದಲಲ್ಲಿ ಶ್ರವಣ ಪ್ರಯುಕ್ತವಾದ ವಿಕಾರವೂ, ಎರಡನೆಯದರಲ್ಲಿ ಸ್ಥಾನ ಪ್ರಯುಕ್ತವಾದ ವಿಕಾರವೂ ಕಂಡುಬರುವುದು. ಸಣ್ಣ ಮಕ್ಕಳು ತಕಾರದ ಬದಲಾಗಿ ಸಕಾರವನ್ನು, ಸಕಾರದ ಬದಲಾಗಿ ತಕಾರವನ್ನು ಉಚ್ಚರಿಸುತ್ತವೆ. ಕಾರಣವೇನಿರಬಹುದು? ಏನೋ ಒಂದು ವಿಧವಾದ ಸಾದೃಶ್ಯವು ಇರಲೇಬೇಕು. ಈ ಸ, ತಕಾರಗಳಿಗೆ ಶ್ರವಣ ಸಾಮ್ಯ ಮಾತ್ರವಿರುವುದಿಲ್ಲ. ಪರಂತು ಸ್ಥಾನ ಸಾಮ್ಯವೂ ಇದೆ. ನಾಲಗೆಯ ತುದಿಯ ಅಂಚನ್ನು ಹಲ್ಲುಗಳ ನಡುವೆ ತಂದು ಒತ್ತಿದರೆ ಸಕಾರವು ಉಂಟಾಗುವುದು. ನಾಲಗೆಯ ಅಂಚನ್ನು ವ್ಯತ್ಯಾಸದಿಂದ ಹಲ್ಲುಗಳ ಬೇರಿಗೆ ಮುಟ್ಟುಗರು ತಂದಿಡುವಾಗ ತಕಾರದ ಧ್ವನಿಯು ಉಂಟಾಗುವುದು. ಕಂಠ್ಯ ದಂತ್ಯೋಷ್ಠ್ಯಾದಿ ಸ್ಥಾನಗಳನ್ನು ಸಣ್ಣ ಮಕ್ಕಳು ತಿಳಿಯದಿರುವುದರಿಂದ ಅನುಕರಣದಿಂದುಚ್ಚರಿಸುವಾಗ ಸ್ಥಾನ ವ್ಯತ್ಯಾಸವೂ ಉಚ್ಚಾರಣೆಯ ವ್ಯತ್ಯಾಸವಾಗಿಬಿಡುವುದು. ಸರ್ಪ, ಸಪ್ಪ; ಅಸ್ಥಿ, ಅತ್ತಿ, ಇತ್ಯಾದಿ ಸ್ಥಳಗಳಲ್ಲಿ ಸ್ಥಾನ ಪ್ರಯುಕ್ತವಾದ ವಿಕಾರವೇ ಪ್ರಬಲವಾಗಿ ಕಂಡುಬರುವುದು. ಶ್ರವಣ ಪ್ರಯುಕ್ತವಾದ ವಿಕಾರಕ್ಕೆ ಕಾರಣವೇ ದೋಷ ಯುಕ್ತವಾದ ಅನುಕರಣವು. ಉತ್ತರದೇಶದಲ್ಲಿ ಶಿವ ಶಬ್ದವನ್ನು ಸಿವನೆಂದೂ, ಕೋಶ ಶಬ್ದವನ್ನು ಕೋಷವೆಂದೂ ಹೇಳುವರು. ಧ್ವನಿ ಪ್ರಯುಕ್ತವಾದ ವಿಕಾರವಿವುಗಳಲ್ಲಿರುವುದರಿಂದ ಇಲ್ಲಿ ಶ್ರವಣ ಸಾಮ್ಯವೆನ್ನಬೇಕು. ಶಕಾರವು ತಾಲವ್ಯವು. ಷಕಾರವು ಮೂರ್ಧನ್ಯವು. ಇಲ್ಲಿ ಸ್ಥಾನ ಸಾಮ್ಯವಿಲ್ಲ, ಕೇವಲ ಶ್ರವಣ ಸಾಮ್ಯ ಮಾತ್ರವಿರುವುದು. ಊಷ್ಮತ್ವೇನ ಮಾತ್ರ ಸಾಮ್ಯವಿದೆ.

ಇನ್ನು ಕೆಲವು ಕಡೆಗಳಲ್ಲಿ ಸ್ವರ ಪ್ರಯುಕ್ತವಾದ ವಿಕಾರವಿರುವುದು:—

ಪ—ತಿ	ಇತಸ
ಪೆ—ರೊ	ಪೊರಾ

ಇಲ್ಲಿ ಸ್ವರ ವಿಕಾರ ಪ್ರಯುಕ್ತವಾದ ವರ್ಣ ವಿಕಾರವಿರುವುದು. ದಾರ್ಢ್ಯ ಸ್ವರ (Stress accent) ಉದಾತ್ತಾನುದಾತ್ತ ಸ್ವರಿತ ಸ್ವರಗಳೆಂದು (Pitch accent) ಇವೆ. ದಾರ್ಢ್ಯ ಸ್ವರವು ಹೃದಯದಿಂದ ಶಕ್ತಿಯೊಡನೆ ಶ್ವಾಸಾತ್ಮಕವಾಗಿ ಹೊರಡುವುದು. ವರ್ಣಗಳನ್ನು ಉಚ್ಚರಿಸುವುದರಲ್ಲಿ ಸಹಕಾರವಾದ ಉದಾತ್ತಾನುದಾತ್ತ ಸ್ವರಿತ ಸ್ವರಗಳು ಅನೇಕ ವಿನ್ಯಾಸ ರೂಪಗಳಿಂದ ಉಂಟಾಗುವುವು. ಈ ದಾರ್ಢ್ಯ ಸ್ವರವು ವಿಶೇಷವಾಗಿ ಈಗಿನ ಆಡುವ ಭಾಷೆಗಳಲ್ಲಿವೆ. ಉದಾತ್ತಾದಿ ಸ್ವರಗಳು ವಿಶೇಷವಾಗಿ ವೇದಗಳಲ್ಲಿ ಕಾಣುತ್ತವೆ. ದಾರ್ಢ್ಯ ಸ್ವರವು ಉಚ್ಚಾರಣಾ ಕಾಲ ಪರಿಮಿತಿಯಿಂದ ಕೂಡಿದೆ (ಮಾತ್ರಾ ಕಾಲ). ಇದು ಸಮೀಪದಲ್ಲಿರುವ ಅಚ್ಚಿನ ಸಾಮರ್ಥ್ಯವನ್ನು ತಗ್ಗಿಸುತ್ತದೆ. ಉದಾತ್ತಾದಿ ಸ್ವರಗಳು ಗುಣ ಪ್ರಯುಕ್ತವಾದ ವಿಕಾರಗಳಿಂದ ಕೂಡಿವೆ. ಸ್ವರ ನಿಮಿತ್ತವಾದ ವಿಕಾರಗಳು ಸಾಧಾರಣವಾಗಿ ಮಾತ್ರಾ ಪ್ರಯುಕ್ತ ವಿಕಾರದಿಂದಲೂ, ಗುಣ ಪ್ರಯುಕ್ತ ವಿಕಾರದಿಂದಲೂ ಕೂಡಿವೆ.

ವಿಕಾರದ ಮುಖ್ಯ ತತ್ತ್ವವು

ವಿಕಾರಗಳಲ್ಲಿ ಮುಖ್ಯವಾಗಿ ಮೂರು ವಿಧವಾದ ವಿಕಾರ ತತ್ತ್ವಗಳಿರುವುವು. ಮೊದಲನೆಯದು "ಮಿತ ವಿಕಾರವು." (Economic Change) ಇದನ್ನು ಕೆಲವರು "ಸೋಮಾರಿತನ" ಎಂದರೆ ಸೋಮಾರಿತನದಿಂದುಂಟಾದ ವಿಕಾರವೆನ್ನುವರು. ಉಚ್ಚಾರಣಾ ಪ್ರಯುಕ್ತವಾದ ವಿಕಾರ, ಅರ್ಥ ಪ್ರಯುಕ್ತವಾದ ವಿಕಾರ. ಇವುಗಳೆಲ್ಲ ಏತಕ್ಕುಂಟಾದುವು? ಭಾಷೆಯು ತನ್ನ ಮನೋಭಿಪ್ರಾಯವನ್ನು ಇತರರಿಗೆ ಸುಲಭವಾಗಿಯೂ ಸೂಕ್ಷ್ಮವಾಗಿಯೂ ತಿಳಿಯಿಸಲಿಕ್ಕೆ ಬೇಕಾದ ಮುಖ್ಯ ಸಾಧನವು. ಮಾನಸಿಕ ಪ್ರಯುಕ್ತವಾದ ಶಾರೀರಕ ಸಂಜ್ಞೆಗಳಿಂದಲೇ, ಇತರರಿಗೆ ಮನಸ್ಸಿನ ಅಭಿಪ್ರಾಯವನ್ನು ತಿಳಿಯಿಸಬೇಕು. ಆದುದರಿಂದ ಮನಸ್ಸೂ, ಶರೀರದ ಅವಯವ ಅಥವಾ ಇಂದ್ರಿಯಗಳೂ ಸಾಧನಗಳಾಗಿರುವುವು. ಮನಸ್ಸಿನಿಂದಲೂ, ಅವಯವಗಳಿಂದಲೂ ಸುಲಭ ಮತ್ತು ಸೂಕ್ಷ್ಮವಾಗಿ ತಿಳಿಯಿಸಬೇಕಾದರೆ ಮಿತವಾಗಿರಲೇಬೇಕು. ಆದುದರಿಂದ ಇದೊಂದು ಮಿತ ತತ್ತ್ವವು. ಉದಾ:—"ಸ್ನಾತಾನುಲಿಪ್ತಃ" ಎಂದೊಂದು ಶಬ್ದವಿರುವುದು. ಇದು ಮಿತವಾಗಿಯೇ ಇರುವುದು. ಇದರರ್ಥವು "ಪೂರ್ವಂ ಸ್ನಾತಃ ಪಶ್ಚಾದನುಲಿಪ್ತಃ" ಸೋಮಾರಿತನದಿಂದ "ಸ್ನಾತಾನುಲಿಪ್ತಃ" ಎಂದು ಹೇಳುತ್ತಾರೆಂದು ಕೆಲವರ ಅಭಿಪ್ರಾಯವು. "ಅವನು ಬರುತ್ತಾನೆ," "ನಾನು ಹೋಗುತ್ತೇನೆ" ಎಂಬುದಕ್ಕೆ ಬದಲಾಗಿ "ಅವನ್ ಬರ್ತಾನೆ," "ನಾನ್ ಹೋಗ್ತೇನೆ" ಎಂದು ಜನರು ಉಪಯೋಗಿಸುತ್ತಾರೆ. "ನಾ ಬರ್ತೇನ್," "ನಾ ಹೋಗ್ತೆ" ಎಂದು ತೋಟದವರು ಹೇಳುತ್ತಾರೆ. "ನಾನ್ ವರುಹಿರೇನ್" ಎಂಬುದನ್ನು ಆಡುವಾಗ ತಮಿಳರು "ನಾ ವರೇನ್" ಎಂದೂ, "ನೇನು ವಚ್ಚುಚುನ್ನಾನು" ಎಂಬುದನ್ನು ಆಡುವಾಗ ತೆಲುಗರು "ನೇ ವಸ್ತಾನು" ಎಂದೂ, "ಯಾನ್ ಬರ್ಪೆನ್" ಎಂಬ ತುಳುವಿನ ಶಬ್ದವನ್ನು ಆಡುವಾಗ "ಯಾ ಬರ್ಪೆ" ಎಂದೂ ಆಡುವುದುಂಟು. ಹೀಗೆಲ್ಲ ಹೇಳಿದರೂ ಕ್ರಿಯಾಭಿಪ್ರಾಯವು ನಮಗೆ ತಿಳಿಯುತ್ತದೆ. ಆದರೆ ಬರ್ತಾನೆ, ಹೋಗ್ತಾನೆ, ಬರ್ತೇನ್, ಹೋಗ್ತೆ, ಇತ್ಯಾದಿ ಹೇಳುವಿಕೆಯು ಸೋಮಾರಿತನವೇ ಆಗಲಿ, ಮಿತವಾಗಿರುವಿಕೆಯೇ ಆಗಲಿ, ಸುಜ್ಞಾನಿಯರೇ ನಿಮಗೆ ಕಂಡಂತೆ ನೀವೇ ಆಲೋಚಿಸಿಕೊಳ್ಳಿರಿ.

ಎರಡನೆಯದು ಅವಧಾರಣೆ. ಇದು ಮಾನಸಿಕ ಸ್ಪಷ್ಟ ಸ್ಪೃಹೆಯಿಂದ ಕೂಡಿದೆ. ಪಸ್ತುತಿಗೆ ಬದಲಾಗಿ ಪತ್ತುತಿ ಎನ್ನುವುದರಲ್ಲಿ ಅವಧಾರಣಪೂರ್ವಕವಾದ ಸ್ಪಷ್ಟ ಸ್ಪೃಹೆಯೇ ವಿಶೇಷವಾಗಿ ವ್ಯಕ್ತವಾಗುವುದು.

ಮೂರನೆಯದು ಸಾದೃಶ್ಯವು. ಇದು ಮಾನಸಿಕಪೂರ್ವಕವಾದ ಶಬ್ದದಲ್ಲಿ ವರ್ತಿಸುವುದು. ಮೊದಲು ಶಬ್ದಾರ್ಥ ವಿಕಾರದಲ್ಲಿ ಪ್ರವರ್ತಿಸಿ ಆಮೇಲೆ ಉಚ್ಚಾರಣೆಯಲ್ಲಿ ಆಕರಿಸುವುದು.

ಕೊನೆಯ ಎರಡು ಮುಖ್ಯ ತತ್ತ್ವಗಳೂ ಮೊದಲನೆಯ ತತ್ತ್ವದಲ್ಲಿ ಅಡಗುತ್ತವೆ ಎಂದು ಕೆಲವರ ಅಭಿಪ್ರಾಯವು. ಅವಧಾರಣೆಯೂ ಸಾದೃಶ್ಯವೂ ಒಂದರಿಂದೊಂದು ವಿಶೇಷವಾಗಿ ಸ್ಪಷ್ಟತೆಯನ್ನೇ ಪ್ರತಿಪಾದಿಸುವುದರಿಂದಲೂ, ಆ ಸ್ಪಷ್ಟತೆಯು ಮಿತತೆ ಮತ್ತು ಸೂಕ್ಷ್ಮತೆಗಳನ್ನು ವ್ಯಕ್ತೀಕರಿಸುವುದರಿಂದಲೂ ಪ್ರಥಮ ತತ್ತ್ವವಾದ ಮಿತತೆಯಲ್ಲಿಯೇ ಅಡಗುವುದೆಂದು ಪ್ರಾಚೀನ ಭಾಷಾ ತತ್ತ್ವವಿದರ ಅಭಿಪ್ರಾಯವಿರುವುದು. ಸಾದೃಶ್ಯವು ಆರ್ಥಿಕ ಪೂರ್ವಕವಾಗಿರುವುದರಿಂದಲೂ, ಮಿತತೆಯು ಉಚ್ಚಾರಣಾ ಪ್ರಯುಕ್ತವಾಗಿರುವುದರಿಂದಲೂ ಪ್ರಥಮ ತತ್ತ್ವದಲ್ಲಿ ಅಡಗುವುದಿಲ್ಲೆಂದು ನವೀನ ತತ್ತ್ವಜ್ಞರ ಅಭಿಪ್ರಾಯವಿರುವುದು.

ಇವುಗಳ ಹೊರತು ವಿಕಾರವು ಇನ್ನೂ ಮೂರು ವಿಧವಾಗಿದೆಯೆಂದು ಮತ್ತೆ ಕೆಲ ತತ್ತ್ವಜ್ಞರು ಹೇಳುವರು:—

ಸದೃಶ ವಿಕಾರ
ವಿಸದೃಶ ವಿಕಾರ
ಪ್ರಾತಿನಿಧ್ಯ ವಿಕಾರ

ಈ ಮೂರು ವಿಕಾರಗಳೂ ಹಿಂದೆ ಹೇಳಿದ ಮಿತತೆಯಲ್ಲಿ ಅಂತರ್ಗತವಾಗುತ್ತವೆ. ಪಕ್ಷಾಂತರದಿಂದ ಸದೃಶ ವಿಕಾರವೂ ಇರುವುದೆಂದು ಹೇಳಬಹುದು. ಹೇಗಾದರೂ ಮಿತತೆಯಲ್ಲಿಯೇ ಅಡಗಿದೆಯೆಂದು ಹೇಳುವುದು ಯುಕ್ತಿಯುಕ್ತವಾಗಿದೆ.

ನಾವು ಈವರೆಗೆ ಎಷ್ಟೋ ವಿಕಾರಗಳನ್ನು ವಿಮರ್ಶಿಸಿಯಾಯಿತು. ನಮ್ಮ ಹಿರಿಯರು ಇವುಗಳನ್ನೆಲ್ಲ ಅತಿ ಸೂಕ್ಷ್ಮ ದೃಷ್ಟಿಯಿಂದ ವಿಮರ್ಶಿಸಿ ಇತರರಿಗೆ ಸುಲಭವಾಗಿ ತಿಳಿಯುವಂತೆ, ಅರ್ಥ ಬಾಹುಳ್ಯದಿಂದ ಕೂಡಿದ ಸೂತ್ರಪ್ರಾಯವಾದ ವಾಕ್ಯಗಳಿಂದ ಹೇಳಿಯೇ ಇರುವರು.

ಆದರೆ ಈಗಿನ ಪಾರಿಭಾಷಿಕಗಳಾದ "ಅನಪ್ಟಿಕ್ಸಿಸ್," "ಮೆಟಥಸಿನ್," ಇತ್ಯಾದಿ ಜರ್ಮನ ಶಬ್ದಗಳು ಮಾತ್ರ ಗೊತ್ತಿದ್ದಿಲ್ಲ. ಈಗಿನ ಚರಿತ್ರಕಾರರ ದೃಷ್ಟಿಯಿಂದ ನಮ್ಮ ಪಾಣಿನ್ಯಾಚಾರ್ಯರು ಕ್ರಿಸ್ತ ಪೂರ್ವ ಸುಮಾರು ಮುನ್ನೂರು ವರ್ಷಗಳ ಹಿಂದಿದ್ದ ಸಂಸ್ಕೃತ ಭಾಷಾ ನಿಯಂತೃಗಳಾದ ಋಷಿಗಳೆಂದೂ, ಈ ಮಹಾತ್ಮರಿಗಿಂತಲೂ ಸುಮಾರು ನಾಲ್ಕುನೂರ ವರ್ಷಗಳ ಪೂರ್ವಕಾಲದಲ್ಲಿದ್ದು ನಮ್ಮ ವೇದಗಳಿಗೆ ನಿಘಂಟುರೂಪವಾಗಿ ಆ ಮಹಾ ಸಮುದ್ರದಂತಿರುವ ನಿರುಕ್ತ ಗ್ರಂಥವನ್ನು ಬರೆದಿರುವ "ಯಾಸ್ಕ" ಮಹರ್ಷಿಗಳಿಗೆ ಈ ವಿಷಯವೆಲ್ಲ ಗೊತ್ತಿತ್ತೆಂದೂ ಅವರ ಗ್ರಂಥವನ್ನು ನೋಡಿದರೆ ನಮಗೆ ತಿಳಿಯುವುದು. ಅವರ ಕೆಲವು ವಾಕ್ಯಗಳನ್ನು ತಮ್ಮೆಲ್ಲರ ಅವಗಾಹನೆಗಾಗಿ ಇಲ್ಲಿ ತಿಳಿಸುವೆನು:—

೧. "ಅಥಾಪ್ಯಸ್ತೇರ್ನಿವೃತ್ತಿಸ್ಥಾನೇಷು ಆದಿಲೋಪೋ ಭವತಿ ಸ್ತಃ ಸಂತೀತಿ" ಉದಾಹರಣೆಯ ವಿಷಯದಲ್ಲಿ ಸ್ವರ ಪ್ರಯುಕ್ತವಾದ ವಿಕಾರವನ್ನು ನಾವು ಇದರಿಂದ ತಿಳಿಯುತ್ತೇವೆ.

೨. "ಅಥಾಪ್ಯಂತಲೋಪೋ ಭವತಿ ಗತ್ವಾ ಗತಂ ಇತಿ" ಇದರಿಂದ ಸಂಯುಕ್ತ ಪ್ರಯುಕ್ತವಾದ ವಿಕಾರವನ್ನು ನಾವು ತಿಳಿಯುತ್ತೇವೆ.

೩. "ಅಥಾಪ್ಯುಪಧಾಲೋಪೋ ಭವತಿ ಜಗ್ಮತುರ್ಜಗ್ಮುರಿತಿ" ಇದನ್ನು ಆಧುನಿಕರು ಸಿಂಕೋಪ (Syncope) ಎಂದರೆ ವರ್ಣ ಲೋಪವು (ಪೃಷೋದರಾದಿ ಗಣ) ಎನ್ನುವರು.

೪. "ಅಥಾಪ್ಯಾದಿ ವಿಪರ್ಯಯೋ ಭವತಿ ಜ್ಯೋತಿಃ ಘನಃ ಇತ್ಯಾದಿ" ಇದನ್ನು ಸದೃಶ ವಿಕಾರ (Assimilation), ಕೆಲವು ಕಡೆಗಳಲ್ಲಿ ವಿಸದೃಶ ವಿಕಾರ (Dissimilation) ವೆಂದು ಹೇಳಬಹುದು.

೫. "ಅಥಾಪ್ಯಾದ್ಯಂತ ವಿಪರ್ಯಯೋ ಭವತಿ ಸ್ತೋಕಾ, ರಜ್ಜುಃ ಸಿಕತಾ ಇತಿ" ಇದನ್ನು ಆಧುನಿಕರು "ಮೆಟಥೆಸಿಸ್" (Metathesis) ಎಂದರೆ ವರ್ಣ ವಿಪರ್ಯಯವೆನ್ನುವರು.

೬. "ಅಥಾಪಿ ವರ್ಣೋಪಜನಃ ಆಸ್ಥತ್ ಭರೂಜಾ ಇತಿ" ಇದನ್ನು ಆಧುನಿಕರು ಅನಪ್ಟಿಕ್ಸಿಸ್ (Anaptyxis) ಎಂದರೆ ಸ್ವರ ಭಕ್ತಿಯೆನ್ನುವರು.

ನಮ್ಮ ಕನ್ನಡ ಭಾಷೆಗೆ ನಿಯಮವನ್ನು ಬರೆದ ಈಗ್ಗೆ ಸುಮಾರು ೮೦೦ ವರ್ಷಗಳ ಹಿಂದಿದ್ದ ಕೇಶಿರಾಜನಿಗೂ ಇವುಗಳೆಲ್ಲ ತಿಳಿದಿದೆ ಎಂದು ಹಿಂದೆ ನಾನು ಉದಾಹರಿಸಿದ ಆತನ ಸೂತ್ರಗಳಿಂದಲೇ ತಮಗೆಲ್ಲರಿಗೂ ವೇದ್ಯವಾಗಿದೆಯಷ್ಟೆ. ಇತ್ತೀಚೆಗೆ ವಿದ್ವಾಂಸರಾದ ಪಾಶ್ಚಾತ್ಯ ಸಾಹೇಬರು ಈ ವಿಷಯಗಳನ್ನು ಇತ್ತೀಚೆ ಕಂಡುಹಿಡಿದಿರುವರು. ನಮ್ಮ ಹಿಂದಿನ ಗ್ರಂಥಗಳಲ್ಲಿ ಹೀಗಿರುವುದು ಪಾಪ ಅವರಿಗೆ ತಿಳಿಯದುದರಿಂದ ಈ ನವೀನ ಸೂತ್ರಗಳನ್ನು ಕಂಡುಹಿಡಿದ ಮಹಿಮರೇ ಅವರಾಗಿರುವರು. ನಮ್ಮವರೂ ಇದನ್ನು ವಿಮರ್ಶಿಸದಿದ್ದುದು ಅವರ ಭಾಗ್ಯೋದಯವೇ ಸರಿ.

ಜನ್ಯ ಸಮಾನ ಜಾತೀಯ ಮತ್ತು ಸಮಾನ ಪ್ರಕೃತಿಗಳಾದ ಭಾಷೆಗಳು

ಜನರು ಇತರರಿಗೆ ಅರ್ಥವಾಗುವಂತೆ ಮಾತಾಡಲು ಪ್ರಯತ್ನಪಡುವಾಗ ಅವರಲ್ಲಿ ಉಪಭಾಷೆಗಳುಂಟಾಗಿ ವಿಕಾರವನ್ನು ಹೊಂದಿ ಅದೇ ಒಂದು ಭಾಷೆಯಾಗಿ ನಿಂತುಬಿಡುವುದು. ನಮ್ಮ ಕನ್ನಡವನ್ನೇ ನೋಡಿದರೆ ಎಷ್ಟೋ ವಿಧವಾದ ಕನ್ನಡ ಭಾಷೆಗಳಿದ್ದಂತೆ ತೋರುತ್ತದೆ. ಈಗ ಗ್ರಾಂಥಿಕವಾದುದೇ ಒಂದಾನೊಂದು ಕಾಲದಲ್ಲಿ ಮೂಲ ಭಾಷೆಯಾಗಿದ್ದಿರಬಹುದು. ಈಗ ಅದನ್ನು ಹಳ

ಗನ್ನಡವೆನ್ನುವರು. ಆ ಹಳಗನ್ನಡವನ್ನೇ ಒಂದಾನೊಂದು ಕಾಲದಲ್ಲಿ ಜನರು ಆಡುತ್ತಿದ್ದು ಅನೇಕ ಕಾರಣಗಳಿಂದ ಭೇದವನ್ನು ಹೊಂದಿ ಅನೇಕ ಕನ್ನಡ ಭಾಷೆಗಳಾಗಿದ್ದಿರಬೇಕು.

ಇದನ್ನು ಅನುಕೂಲವಾಗುವಾಗ ವಿಮರ್ಶಿಸದೆ, ಗ್ರಂಥಗಳನ್ನು ನೋಡದೆ ತಮಗೆ ತೋರಿದಂತೆ ಕೆಲವರು ಬರೆಯುವರು. ಅದರಲ್ಲೂ ಕೆಲವರು ನಮ್ಮ ಭಾಷಾ ಪರಿಚಯವಿಲ್ಲದೆ, ತಮ್ಮ ಸಂದೇಹ ಊಹಾಪೋಹೆಗಳಿಗೆಲ್ಲ ನಿಘಂಟನ್ನೇ ಪ್ರಮಾಣವಾಗಿಟ್ಟುಕೊಂಡೂ, ಸ್ವಕಪೋಲ ಕಲ್ಪನೆಗಳಿಂದಲೂ, ಸಂಸ್ಕೃತದಿಂದ ಕನ್ನಡಕ್ಕೂ, ಕನ್ನಡದಿಂದ ಸಂಸ್ಕೃತಕ್ಕೂ ಶಬ್ದಗಳು ಬೆರೆತುಹೋಗಿವೆ ಎಂದೆನ್ನುವರು. ಆದರೆ ಒಂದೊಂದು ವರ್ಷಗಳಲ್ಲಿ ಒಂದೊಂದು ಭಾಷೆಯಿಂದ ತಮಗಿಷ್ಟ ಬಂದಷ್ಟು ಶಬ್ದಗಳನ್ನು ಸಾಲವಾಗಿ ತೆಗೆದುಕೊಳ್ಳುವ ಪದ್ಧತಿಯು ನಮ್ಮ ಪೂರ್ವಜರಿಗಿಲ್ಲವೆಂಬುದನ್ನು ಮರೆತು ತಮ್ಮ ಭಾಷೆಯಂತೆ ಇತರ ಭಾಷೆಗಳಲ್ಲಿಯೂ ಆ ಸೂತ್ರಗಳನ್ನು ತಂದಿರುಕಿಸಿ ಅತಿ ಪರಿಶುದ್ಧವಾದ ಆದುದರಿಂದಲೇ "ಸಂಸ್ಕೃತ"ವೆಂದು ಹೆಸರನ್ನು ಪಡೆದ ಗೀರ್ವಾಣ ಭಾಷೆಯೂ ಕನ್ನಡದಿಂದ ಶಬ್ದಗಳನ್ನು ಸಾಲವಾಗಿ ಪಡೆದಿದೆ ಎಂದೂ. ಅಂಕ, ಅಂಗಣ, ಅಟ್ಟ, ಕಂಕಣ, ಕೋಟೆ, ಗಂಡ, ಗಲ್ಲ, ಗಾಳ, ಗೋಣಿ, ತಳ, ತೋರಣ, ಪಟ್ಟ, ಬಂದಿ, ಬಲ, ಬಿಲ, ಮಂಚ, ಮಣಿ, ಮಲ್ಲ, ಮಾಲೆ, ಲತೆ, ರಣ ಈ ಇಪ್ಪತ್ತೊಂದು ಶಬ್ದಗಳ ಮೇಲೆ ಪೂಜ್ಯ ಕಿತ್ತೆಲ್‌ರವರು ಆರೋಪವನ್ನು ಹೊರಿಸಿದರು.

ಮಣಿ ಮಂಚಂ ಪಟ್ಟಂ ತೋ।
ರಣಮಟ್ಟಂ ಗೋಣಿ ಸಬಳಮಂಕಂ ಲತೆ ಕಂ॥
ಕಣಮೆಸೆವ ಕೋಂಟೆ ಬಲವಂ।
ಗಣಂ ಬಿಲಂ ಬಂದಿ ಮಾಲೆ ಗಾಳಂ ಗಂಡಂ ॥
ಗಲ್ಲಂ ಮಲ್ಲಂ ತಳಮಿಂ।
ತೆಲ್ಲಂ ತತ್ಸಮಮುಮಿವರುದಾಹರಣೆಗಳಂ॥
ಸೊಲ್ಲಿಸುವೆನೆರಡು ಮೆಯ್ಗಂ।
ಬಲ್ಲರ್ಕಳ್ ಮೆಚ್ಚುತಿರೆ ಸಮಾಸೋಕ್ತಿಗಳಿಂ ॥

"ಸಮಾಸೋಕ್ತಿಯಿಂ ಸಂಸ್ಕೃತ ಕರ್ಣಾಟಂಗಳೊಳ್ ಬಲ್ಲರ್ ಮೆಚ್ಚೆ ತೋರಿದಪೆಂ" ಎಂದು ೭೦೦ ವರ್ಷಗಳ ಹಿಂದಿದ್ದ ಕೇಶಿರಾಜನು ಈ ಶಬ್ದಗಳನ್ನೆಲ್ಲ ತತ್ಸಮವೆನ್ನುವನು. ಈಗ ಸುಮಾರು ಮೂವತ್ತು ವರ್ಷಗಳ ಹಿಂದೆ ಈ ಶಬ್ದಗಳು ಕನ್ನಡದಿಂದಲೇ ಸಂಸ್ಕೃತಕ್ಕೆ ಹೋಗಿವೆ ಎಂದು ಹೇಳುವ ಕಿತ್ತೆಲ್‌ರವರ ಬುದ್ಧಿ ಸಾಮರ್ಥ್ಯವು ವಿಚಿತ್ರವಾಗಿರುವುದು. ಕೇಶಿರಾಜನಿಗಿಂತಲೂ ಹಿಂದಿದ್ದ ಶ್ರುತಿ ಸ್ಮೃತಿ ಇತಿಹಾಸಾದಿಗಳನ್ನು ಮಥಿಸಿ ಸ್ವಮತವನ್ನು ಸ್ಥಾಪಿಸಿದ ಕುಮಾರಿಲಭಟ್ಟಾಚಾರ್ಯರು ಕೂಡ, ಚೋರು, ಪಾಂಚ ಇತ್ಯಾದಿ ಶಬ್ದಗಳನ್ನು ಇತರ ಭಾಷೆಗಳಿಂದ ಕಟ್ಟಿರುವರೆಂದು ಮತ್ತೊಂದು

ಕಿತ್ತೆಲ್‌ರವರ ಕನಸು. "ಕನಸಂ ಮಾಸಿಸೆಂದು ಸಂಬದೆಯೊ" ಎಂಬ ಅಭಿಯುಕ್ತ್ಯಂತೆ ಆ ಭಟ್ಟಾಚಾರ್ಯರ ಸೋಲೂ ಕಿತ್ತೆಲ್‌ರವರ ಇದೊಂದು ವಿಧದ ಮಾಸಿಸೇ ಸರಿ. ಭಟ್ಟಾಚಾರ್ಯರವರು ತಮ್ಮ ಶ್ರುತಿ ಸ್ಮೃತಿ ಇತಿಹಾಸಗಳ ವಿಮರ್ಶಕ ಗ್ರಂಥವಾದ ತಂತ್ರವಾರ್ತಿಕ ಶ್ಲೋಕವಾರ್ತಿಕಗಳಲ್ಲಿ "ದ್ರವಿಡ ಭಾಷಾಯಾಂ ಚೋರ ಇತಿ ವದಂತಿ" ಎಂದರೆ ದ್ರವಿಡ ಭಾಷೆಯಲ್ಲಿ ಚೋರರು ಎಂದು ಹೇಳುತ್ತಾರೆ ಎಂದು ಹೇಳುವರೇ ಹೊರತು ದ್ರವಿಡ ಭಾಷೆಯನ್ನು ಸಂಸ್ಕೃತಕ್ಕೆ ತೆಗೆದುಕೊಳ್ಳಲಿಲ್ಲ. ಆದುದರಿಂದ ಕಿತ್ತೆಲ್‌ರವರ ಇದೊಂದು ವಿಧದ ಮಾಸಿಸೇ ಸರಿ. ಕಾಲ್ಡ್‌ವೆಲ್ಲ ಸಾಹೇಬರೂ, ಗುಂಡರ್ಟ ಸಾಹೇಬರೂ, ರೈಸ ಸಾಹೇಬರೂ ಕೆಲವು ವಿಷಯಗಳಲ್ಲಿ ಇವರನ್ನು ಅನುಸರಿಸುವುದೂ ಅವರವರನ್ನನುಸರಿಸುವುದೂ ಉಂಟು. ಅವರವರ ದ್ರಾವಿಡ ಪ್ರಾಣಾಯಾಮಗಳವರವರಿಗೇ ಇರಲಿ.

ಹಳಗನ್ನಡದಲ್ಲಿ 'ಅಕ್ಕುಂ' ಎಂದಿದೆ. ಹೊಸಗನ್ನಡದಲ್ಲಿ 'ಆದೀತು' ಎಂದಿದೆ. ತೋಟದವರ ಕನ್ನಡದಲ್ಲಿ 'ಅಕ್ಕು' ಎಂದೆನ್ನುವರು. ಅಕ್ಕುಂ, ಅಕ್ಕು, ಆದೀತು ಈ ಭೇದವಾದುವುಗಳಿಗೆ ಕಾರಣವನ್ನು ಊಹಿಸುವುದು ಕಷ್ಟವಾಗಿದೆ. ಮಂಗಳೂರವರು "ಅನ್ನವನ್ನು ಉಣ್ಣುತ್ತಾನೆ" ಎನ್ನುವರು. ಉಣ್ಣುತ್ತಾನೆ ಎಂದು ಕೇಳಿದೊಡನೆಯೇ ಮೈಸೂರಿನವರು ನಗುವರು. ಅಲ್ಲಿ ಅದಕ್ಕೆ ಹೀನವಾದ ಅರ್ಥವಿರುವುದು. "ಮಾಡಿದ್ದುಣ್ಣೋ ಮಹಾರಾಯ!" ಎಂಬ ಗಾದೆಯೂ ಅವರಿಗೆ ಮರೆತುಹೋಗಿದೆ! ಮಾದರಿಯ ಮೈಸೂರು ಕನ್ನಡದಲ್ಲಿಯೂ ಒಂದು ಮಾದರಿಯೇ? "ತೆಗೆದುಕೊಂಡು ಹೋಗುತ್ತಾನೆ" ಎಂದರೆ ಮೈಸೂರವರು "ಏನಯ್ಯಾ ಹಣ ತಕ್ಕೊಂಡು ಹೋಗ್ತಾನೆಯೋ" ಎಂದು ಕೇಳುವರು. ಇದು ಅವರ ಮತ್ತೊಂದು ಮಾದರಿ. ನಮಗೆಲ್ಲ ಇದು ವಾತಿನ ಇರಿಯಂತೆ ಕಾಣುವುದು. "ಅವ್ನಾಕೆ ಕಾಣೋ" ಎಂದು ಮೈಸೂರವರು ಹೇಳಿದರೆ ಮಂಗಳೂರವರು "ಅದೇನಯ್ಯಾ ಕಾಣೋ........" ಎನ್ನುವೆ ಎಂದು ನಗುವರು. ಅವನು ಪುಸ್ತಕವನ್ನು ಬಯ್ಯುಬಿಟ್ಟನೆಂದು ಧಾರವಾಡದವರು ಹೇಳುವರು. "ಅದೇನು? ಪುಸ್ತಕದ ಕಾಲುಹಿಡಿದು ಬಯ್ಯುನೇ?" ಎಂದು ಇತರ ಕನ್ನಡಿಗರು ಕೇಳುವರು. "ಒಕ್ಕಲಿಗನು ಉಳುತ್ತಾನೆ" ಎನ್ನುವುದಕ್ಕೆ ಧಾರವಾಡದವರು "ಒಕ್ಕಲಿಗನು ರಂಟೆಹೊಡೆಯುತ್ತಾನೆ" ಎನ್ನುವರು. ಮಂಗಳೂರವರಿಗೆ ಅದು ಅರ್ಥವಾಗಲಾರದು. ದೊಡ್ಡ ದೊಡ್ಡ ಸಂಸ್ಕೃತ ಪಂಡಿತರು ಸಾಮಾನ್ಯ ಜನರೊಡನೆ ಮಾತನಾಡುವಾಗಲೂ "ಪ್ರಾಚೀನ," "ಅರ್ವಾಚೀನ" ಎಂದು ಉದ್ದುದ್ದವಾಗಿ ಹೇಳುವರು. ಇಂಗ್ಲೀಷು ಕಲಿತವರು ಒಂದು ಕನ್ನಡ ವಾಕ್ಯದಲ್ಲಿ ಹತ್ತು ಇಂಗ್ಲೀಷು ಶಬ್ದಗಳನ್ನು ಉಪಯೋಗಿಸುವಂತೆ ಈ ಸಂಸ್ಕೃತ ಪಂಡಿತರು ಯಾರಿಗೂ ಅರ್ಥವಾಗದಿರುವ ಸಂಸ್ಕೃತ ಶಬ್ದಗಳನ್ನು ಉಪಯೋಗಿಸುತ್ತಿರುವರು. ಇಂಗ್ಲೀಷು ಕಲಿತವರು ನಿರಪರಾಧಿಗಳು. ಏಕೆಂದರೆ ಹೆಚ್ಚು ಕೇಳಿದರೆ "ಆ ಶಬ್ದಕ್ಕೆ ಕನ್ನಡ ಗೊತ್ತಿಲ್ಲಯ್ಯಾ, ನಿಘಂಟು

ನೋಡಬೇಕೆಂ''ದಾದರೂ ಹೇಳುವರು. ಈ ಪಂಡಿತರು ಅಷ್ಟು ಹೇಳುವುದಿಲ್ಲ. ಇನ್ನು ಕೆಲ ಸಂಸ್ಕೃತಂ ಮನ್ನವನಾಸರು ''ಆಕೆಯು ರಜಸ್ವಲೆಯಾದಳು ಅಥವಾ ಪುಷ್ಪವತಿಯಾದಳು'' ಎನ್ನುವರು. ಅದು ಸಾಮಾನ್ಯರಿಗೆ ಅರ್ಥವಾಗದು. ಸಾಮಾನ್ಯರು ''ಆಕೆಯು ಋತುಮತಿಯಾದಳು'' ಎನ್ನುವರು. ಇದೂ ಇನ್ನು ಕೆಲವರಿಗೆ (ಹಳ್ಳಿಯವರಿಗೆ) ಅರ್ಥವಾಗುವುದು ಕಷ್ಟವಾಗಿದೆ.'' ಅವಳು ಮೈನೆರೆದಳು'' ಎಂದು ಅವರೆನ್ನುವರು. ಇದು ಕೂಡ ಕೆಲವರಿಗೆ ಅರ್ಥವಾಗದು. ''ಬಾಲೆಗ್ ಮೈಸೀರ್ ಪೋವುಂಡು'' ಎಂದು ಶೂದ್ರರ ತುಳುವಿನಲ್ಲಿರುವಾಗ ''ಬಾಲೆ ಪೋಸ್ರು ಆಟ್ಟುನೆ'' ಎಂದು ಬ್ರಾಹ್ಮಣರ ತುಳುವಿನಲ್ಲಿರುವುದು. ತುಳು ಮಾತಾಡುವವರಿಗೆ ಇದರ ಅರ್ಥವಾಗುವುದು ಕಷ್ಟವಾಗಿದೆ. ತುಳುವಿನಲ್ಲಿ ಬಂಟ್ವಾಳ ಕಡೆಯವರು ''ಆಯೆ ಮರರ್ ಮುತ್ತ್ರೇರುವೇ'' (ಅವನು ಮರಕ್ಕೆ ಹತ್ತುತ್ತಾನೆ.) ಎನ್ನುವರು. ಮೂಲ್ಕಿ ಕಡೆಯವರು ಮುತ್ತ್ರೇರುವೆ ಎಂಬ ಶಬ್ದವನ್ನು ಕೇಳಿದೊಡನೆಯೇ ನಗುವರು. ಅದಕ್ಕೆ ಅವರಲ್ಲಿ ಹೀನವಾದ ಅರ್ಥವಿರುವುದು. ಹವ್ಯಕರು ಕನ್ನಡದಲ್ಲಿ ಸಾಧಾರಣವಾಗಿ ಎಲ್ಲರಿಗೂ ಏಕವಚನವನ್ನು ಉಪಯೋಗಿಸುವರು. ಗಂಡನಿಗೆ ಹೆಂಡತಿಯೂ ಏಕವಚನದ ಶಬ್ದವನ್ನು ಉಪಯೋಗಿಸುವುದುಂಟು. ಆದರೆ ಅದು ಏಕವಚನವೆಂದು ಕಂಡರೂ ಅವರಲ್ಲೊಂದು ಸಾಂಕೇತಿಕವಾದ ಸ್ವರದಿಂದ ಉಪಯೋಗಿಸುವ ಕಾರಣ ಅದಕ್ಕೆ ಬಹುವಚನವೇ ಅರ್ಥವು. ಹವ್ಯಕರ ಕನ್ನಡದಲ್ಲಿ ಸ್ವರ ವಿಶೇಷದಿಂದ ಅರ್ಥ ವಿಶೇಷಗಳುಂಟಾಗುವ ಶಬ್ದಗಳೆಷ್ಟೋ ಇವೆಯೆಂದು ಅವರಲ್ಲಿ ಜ್ಞಾನಿಗಳು ಹೇಳುವರು. ನಮ್ಮ ಕನ್ನಡದಲ್ಲಿ ಮಂಗಳೂರವರು ಮಾತಾಡುವ ಶಬ್ದಗಳೆಷ್ಟೋ ಮೈಸೂರವರಿಗೆ ಅರ್ಥವಾಗದಿರುವುದೂ, ಹಾಗೆಯೇ ಮೈಸೂರವರಾಡುವುದು ಧಾರವಾಡದವರಿಗೂ, ಅವರಾಡುವುದು ಮೈಸೂರವರಿಗೂ, ಅಂತೂ ಪರಸ್ಪರವಾಗಿ ಅರ್ಥವಾಗದಿರುವ ಶಬ್ದಗಳೆಷ್ಟೋ ಇರುವುವು. ಹೇಗಾದರೂ ಇವುಗಳೆಲ್ಲ ಹಳಗನ್ನಡದ ಜನ್ಯ ಭಾಷೆಗಳೇ ಆಗಿರುವುವು. ಕುಂದಾಪುರದ ಕಡೆ ಇಡುವುದಕ್ಕೆ ''ಜೇತಾ'' ಎಂದೂ (ತೋಟದವರೂ ಜೇತ್ ಎನ್ನುವರು), ಅದೇ ಅರ್ಥದಲ್ಲಿ ಶೂದ್ರರು ''ಜೆಟ್ಜ'' ಎಂದೂ ಹೇಳುವುದುಂಟು. ಮರಾಠಿಯಲ್ಲಿ ಉತ್ತಮ ತರಗತಿಯ ಮರಾಠಿಗಿಂತಲೂ, ಬ್ರಾಹ್ಮಣರಾಡುವ ಮರಾಠಿಗೂ, ಹಾಗೆಯೇ ಬ್ರಾಹ್ಮಣ ಹೆಂಗಸಾಡುವ ಮರಾಠಿಗೂ, ಹಾಗೆಯೇ ಕೂಲಿಯವರ ಮರಾಠಿಗೂ ಬಹು ವ್ಯತ್ಯಾಸವಿರುವುದು. ಬ್ರಾಹ್ಮಣನು ''ಬ್ರುಹಸ್ಪತಿವಾರ''ವೆಂದೂ, ಬ್ರಾಹ್ಮಣ ಹೆಂಗಸು ''ಬ್ರುಷ್ಪತವಾರ''ವೆಂದೂ, ಕೂಲಿಯವರು ''ಬೆಸ್ತ್ರವಾರ್ರ''ವೆಂದೂ ಉಪಯೋಗಿಸುತ್ತಾರೆ. ತೋಟದವರು ಗಂಡಸರು ''ಋಷಿಗಳು ಬಂದರು'' ಎಂಬುದಕ್ಕೆ ''ಋಷಿಗ್'ಳ್ ಬಂದ್'ರಾ'' ಎಂದೂ, ಹೆಂಗಸರು ''ರಿಸಿಗ್'ಳ್ ಬಂವ್ರ್'' ಎಂದೂ ಹೇಳುತ್ತಾರೆ. ಅಹಮ್ಮದನಗರದ (Ahmednagar) ಜಿಲ್ಲೆಯವರ ಮರಾಠಿಯಲ್ಲಿ ''ಜಾಘೇಂ ಸಿಘಾಲೇಂ'' ಎಂದಿದೆ. ಅದನ್ನು ಪೂಣದವರು (Poona) ಕೇಳಿ ನಗುವರು. ಅವರಿಗೆ ''ಬಿಟ್ಟೇಂ

ಸಿಘಾಲೇಂ'' ಎಂಬುದು ಮಾತ್ರ ಗೊತ್ತು. ಹಾಗೆಯೇ ಕನ್ನಡ ನಾಡಿನ ಸಮೀಪದಲ್ಲಿರುವ ಮರಾಠಿಯವರು ''ರಟ್ಬ್ಯಾ ಫರಲಾ'' ಎನ್ನುವರು. ಇದು ಕೂಡ ಪೂಣದವರಿಗೆ ಹಾಸ್ಯಾಸ್ಪದವಾಗಿದೆ. ಮರಾಠಿಯ ಜನ್ಯ ಭಾಷೆಗಳಲ್ಲಿ ದಕ್ಷಿಣ ಮರಾಠಿಯಲ್ಲಿ (Deccan Marathi) ''ಪೋತಾಂ'' ಎಂದಿದೆ. ಕೊಂಕಣಿ ಮರಾಠಿಯಲ್ಲಿ ''ಅತಿಲ್ಲೋಂ'' ಎಂದಿದೆ. ಇವುಗಳೆಲ್ಲ ಜನ್ಯ ಭಾಷೆಯ ಭೇದವನ್ನು ಸೂಚಿಸುತ್ತವೆ. ಅಷ್ಟೇಕೆ ನಾವು ಹಿಂದೆ ವಿವರಿಸಿದಂತೆ ನಮ್ಮ ಒಂದೇ ಜಿಲ್ಲೆಯ ಕಾಸರಗೋಡು, ಮಂಗಳೂರು, ಉಡುಪಿ, ಕಾರ್ಕಳ, ಉಪ್ಪಿನಂಗಡಿ ತಾಲ್ಲೂಕುಗಳಲ್ಲಿ ಆಡುವ ತುಳು ಭಾಷೆಯ ಭೇದವನ್ನೇ ನೋಡಿದರೆ ಸಾಕು. ಹಾಗೆಯೇ ನಮ್ಮ ಜಿಲ್ಲೆಯ ಒಂದೊಂದು ತಾಲ್ಲೂಕಿನಲ್ಲಾಡುವ ಕನ್ನಡಕ್ಕೂ ಮೈಸೂರು, ಬೆಂಗಳೂರು, ಧಾರವಾಡ, ಬಳ್ಳಾರಿ, ಉತ್ತರ ಕನ್ನಡ, ಕೊಳ್ಳೇಗಾಲ, ಧರ್ಮಪುರಿ, ಹೊಸೂರು, ಕೋಯಮುತ್ತೂರು, ಅನಂತಪುರ, ಇತ್ಯಾದಿ ಪ್ರದೇಶಗಳ ಕನ್ನಡಕ್ಕೂ ಪರಸ್ಪರ ಹೋಲಿಸಿದರೆ ಸಾವಿರಾರು ಭೇದಗಳಿವೆ. ಹೀಗೆಲ್ಲ ಉಂಟಾಗಲಿಕ್ಕೆ ಕಾರಣವೇನು?

ನಾವು ಊಹಿಸಿ ನೋಡಿದರೆ, ಜನ ಭೇದ, ಜನಾಂಗ ಭೇದ, ಮತ ಭೇದ, ಸಾಮಾಜಿಕ ಭೇದ, ಊರಿನ ಐಶ್ವರ್ಯ ದಾರಿದ್ರ್ಯಾದಿ ಸ್ಥಿತಿ ಭೇದ, ರಾಜಕೀಯ ಪರಿಸ್ಥಿತಿ ಭೇದಗಳೇ ಕಾರಣಗಳಾಗಿರಬೇಕು. ವಿದ್ಯಾಂಗ ಭೇದದಿಂದಲೂ ಈ ಭೇದಗಳುಂಟಾಗಿರಬಹುದು.

ಆಧುನಿಕ ವಿದ್ಯಾವಂತರ ಮಾತಿಗೂ, ಅವಿದ್ಯಾವಂತರ ಮಾತಿಗೂ ಬಹಳ ವ್ಯತ್ಯಾಸವಿರುವುದು. ಪಟ್ಟಣಿಗನು ಬಟ್ಟೆ ಅಂಗಡಿಗೆ ಹೋದಾಗ ವಸ್ತ್ರದ ಬೆಲೆಯನ್ನು ವಿಚಾರಿಸುವನು. ಆಗ ಅಂಗಡಿಯವನು ಈ ವಸ್ತ್ರಕ್ಕೆ ಯಾರ್ಡಿಗೆ ಒನ್-ಫೋರ್ ಎನ್ನುವನು. ಸಾಮಾನ್ಯನು ಹೋದಾಗ ಅಂಗಡಿಯವನು ಈ ವಸ್ತ್ರಕ್ಕೆ ಯಾರ್ಡಿಗೆ ರುಪಾಯಿ ನಾಲ್ಕಾಣೆ ಎನ್ನುವನು. ಆಗ ಹಳ್ಳಿಯವನು ಕೈಬೆರಳು ಗುಣಿಸಿ ಗುಣಿಸಿ ಲೆಕ್ಕಮಾಡಿ ಎರಡು ಮೊಳಕ್ಕೆ ಐದು ಪಾವಲಿ, ಒಂದು ಮೊಳಕ್ಕೆ ಎರಡುವರೆ ಪಾವಲಿ ಎಂದು ಲೆಕ್ಕಿಸಿ ವ್ಯಾಪಾರಮಾಡಿಕೊಂಡು ಹೋಗುವನು. ಇಲ್ಲಿ ಗಮನಿಸಿರಿ. ಯಾರ್ಡ್, ಒನ್-ಫೋರ್, ರುಪಾಯಿನಾಲ್ಕಾಣೆ, ಒಂದುರುಪಾಯಿ ನಾಲ್ಕಾಣೆ, ಐದು ಪಾವಲಿ, ಗಜ, ಮೊಳ ಈ ಶಬ್ದಗಳನ್ನೆಲ್ಲ ಅಂಗಡಿಯವನು ಕ್ರಮವಾಗಿ ಆ ಜನಕ್ಕೆ ತಿಳಿಯುವಂತೆ ಹೇಳುವನು. ಇವುಗಳೆಲ್ಲ ಒಂದೇ ಅರ್ಥವು. ಈ ಭೇದಕ್ಕೆ ಕಾರಣವು ವಿದ್ಯೆ, ಅವಿದ್ಯೆ, ಶೋಕಿ, ನಾಗರಿಕತೆ, ದರ್ಬಾರು, ಇತ್ಯಾದಿ—ಇವುಗಳೇ ಆಗಿರುವುವು.

ಮತ್ತು ಆಧುನಿಕ ವಿದ್ಯಾವಂತರು ಉಪಯೋಗಿಸುವ ಕೆಲವು ಶಬ್ದಗಳು ಹಳ್ಳಿಯವರಿಗೆ ಅರ್ಥವಾಗುವುದು ಕಷ್ಟವಾಗುತ್ತದೆ. ಉದಾ:—ಶಿಕ್ಷಣ ಕ್ರಮ, ಸನದಶೀರ, ನಿಸರ್ಗ ಸಿದ್ಧ ಹಕ್ಕು, ಪ್ರಾತಿನಿಧಿಕ, ಸಂಸಾರ ಸುಧಾರಣಾ ಪರಿಷತ್, ತತ್ವವಾದ, ರಾಜಕೀಯ ಪರಿಸ್ಥಿತಿ, ಅಸಹಕಾರ, ಸಹಾನುಭೂತಿ, ಅಭಿನಂದನ,

ಇತ್ಯಾದಿ. ಹಾಗೆಯೇ ಹಳ್ಳಿಯವರಾಡುವ ಕೆಲವು ಶಬ್ದಗಳು ಆಧುನಿಕ ವಿದ್ವಾಂಸರಿಗೆ ಅರ್ಥವಾಗುವುದು ಕಷ್ಟವಾಗಿದೆ. ಉದಾ:—ತಂಗು, ತೆಂಗು, ಚಾವಣಿ, ಕರಡು (ಮುಳಿಹುಲ್ಲು), ಸೇಜಿ, ಹೊಲಿ (ಇದೊಂದು ಹಳ್ಳಿಯ ಧಾನ್ಯಾದಿಗಳ ಅಳತೆಯ ಲೆಕ್ಕ), ಅಜಿಲೆ, ಬೀಜವರಿ, ತ್ರೋಳು, ಬಣ್ಣಾಟಿಗೆ (ತುಳು=ಬೆಸಲೆ...), ಹೊಸ್ತಿಲು, ದಾರಂದ, ಇತ್ಯಾದಿ ಅನೇಕಗಳಿವೆ. ಪರಸ್ಪರ ಮಾತಾಡುವಾಗ ಬೀರುವ ಅನೇಕ ಶಬ್ದಗಳ ಅರ್ಥವನ್ನು ತಿಳಿಯುವುದು ಕಷ್ಟವಾಗಿದೆ. ಆದರೆ ಭಾಷೆಗೆ ಇದೊಂದು ಕೊರತೆ ಎಂದೆನ್ನಕೂಡದು. ಏಕೆಂದರೆ ಸುಲಭವಾಗಿ ಇತರರಿಗೆ ತಿಳಿಯುವುದೇ ಭಾಷೆಯೆನ್ನಲ್ಪಡುವುದೆಂದು ನಾವು ಹಿಂದಕ್ಕೆ ಹೇಳಿರುತ್ತೇವೆ. ಹಾಗಾದರೂ ಹಳ್ಳಿಯ ಜನರೇ ಪರಸ್ಪರ ಮಾತಾಡುವಾಗ ಆ ಶಬ್ದಗಳೆಲ್ಲ ಅವರಿಗೆ ಅರ್ಥವಾಗುತ್ತಿದೆ. ಆದರೆ ಆಧುನಿಕ ವಿದ್ವಾಂಸರು ಆಡುವ ಶಬ್ದಗಳು ಹಳ್ಳಿಯವರಿಗೂ, ಅವರಾಡುವ ಶಬ್ದಗಳು ಪಟ್ಟಣಿಗ ಆಧುನಿಕ ವಿದ್ವಾಂಸರಿಗೂ ಅರ್ಥವಾಗುವುದು ಸ್ವಲ್ಪ ಕಷ್ಟವಾಗಿದೆ ಯಷ್ಟೆ. ಪಟ್ಟಣಿಗ ಮತ್ತು ಹಳ್ಳಿಯವರು ಕಲೆತು ಮಾತಾಡುವಾಗ ಪರಸ್ಪರ ತಿಳಿಯುವಂತಹ ಶಬ್ದಗಳನ್ನೇ ಉಪಯೋಗಿಸಿಕೊಳ್ಳುವರು. ಆದುದರಿಂದ ಭಾಷೆಗೆ ಇದೊಂದು ಕೊರತೆಯಾಗಲಾರದು; ಪರಂತು ಜನ್ಯ ಭಾಷಾ ಭೇದ ವೆನ್ನಿಸಿಕೊಳ್ಳಲ್ಪಡುವುದು. ಕೋಟೆ, ಕುಂದಾಪುರ, ಹವ್ಯಕ, ಶಿವಳ್ಳಿ, ಕೋಟೇ ಶ್ವರ ಇವರು ಆಡುವುದು ಕನ್ನಡವಾದರೂ ಕೆಲವು ವಿಷಯಗಳಲ್ಲಿ ಒಂದೊಂದು ಪಂಗಡಕ್ಕೂ ಅವರು ಉಪಯೋಗಿಸುವ ಶಬ್ದಗಳ ಅರ್ಥವಾಗುವುದು ಕಠಿನ ವಾಗಿದೆ. ಹಾಗಾದ ಮಾತ್ರದಿಂದ ಅದು ಭಾಷೆಯೇ ಅಲ್ಲವೆಂದು ಹೇಳಲಾಗು ವುದೇ? ಎಂದೂ ಇಲ್ಲ. ಪರಂತು ಪಂಗಡಕ್ಕೆ ಸಂಬಂಧಪಟ್ಟ ಭಾಷಾ ಭೇದ ಮಾತ್ರವಿರುವುದು.

ಮತ್ತು ಹೊಸ ಹೊಸ ವಿದ್ಯೆಗಳಿಂದಲೂ, ವರ್ತಮಾನ ಪತ್ರಿಕೆಗಳಿಂದಲೂ, ವ್ಯಾಪಾರ ಪ್ರಯುಕ್ತವಾದ ಸಾಂಕೇತಿಕ ಶಬ್ದಗಳಿಂದಲೂ, ರೈಲು, ಮೋಟಾರು ಕಾರು, ಸ್ಟೀಮರು, ತಂತಿ, ಟಪ್ಪಾಲು, ವಾಯು ವಿಮಾನ ಇವುಗಳಿಗೆ ಸಂಬಂಧಿ ಸಿದ ನವೀನ ಶಬ್ದಗಳಿಂದಲೂ, ನವೀನ ಶಬ್ದಗಳು ನಮ್ಮ ಭಾಷೆಗೆ ಸೇರಿ ಕ್ರಮೇಣ ಅವುಗಳು ನಮ್ಮ ಭಾಷೆಯೇ ಆಗಬಹುದ ಸಂಭವವಿದೆ. ರಾಜಕೀಯ ಅಧಿಕಾರಿ ಗಳಲ್ಲಿ ಆ ಅಧಿಕಾರದ ಹೆಸರೇ ಬದಲಾಯಿಸಿಹೋಗಿದೆ. ಉದಾ:—ತಹಸಿಲ್ ದಾರ, ಮಣೆಗಾರರ ಬದಲಾಗಿ ರೆವಿನ್ಯೂ ಇನ್ಸ್‌ಪೆಕ್ಟರ್, ಠಾಣೇದಾರ=ತಹಸಿಲ್ ದಾರ, ಇತ್ಯಾದಿ ಅನೇಕಗಳಿವೆ. ಕ್ರಮೇಣ ಜನ್ಯ ಭಾಷಾ ಭೇದಕ್ಕೆ ಇದೂ ಒಂದು ಕಾರಣವಾಗುವುದು. ಮತ್ತು ಸಾಮಾನ್ಯವಾಗಿ ಚರಿತ್ರೆ, ಜನಾಂಗದ ಪರಿಸ್ಥಿತಿ, ದೇಶೀಯ ಪದ್ಯಗಳು, ನವೀನ ಗ್ರಂಥ ವಿಮರ್ಶೆ—ಇವುಗಳು ಕೂಡ ಜನ್ಯ ಭಾಷಾ ಭೇದಕ್ಕೆ ಕಾರಣವಾಗುವುದು. ನಮ್ಮ ಕನ್ನಡವಾದರೂ ಹಲವು ಬಗೆಯಾಗಿ ಮಾರ್ಪಡಲಿಕ್ಕೆ ಕಾರಣವಾದರೂ ಏನಿರಬಹುದು? ಹಿಂದೆ ಹೇಳಿದಂತೆ ಒಂದೊಂದು ಪಂಗಡದ ಕನ್ನಡ, ಒಂದೊಂದು ಜಾತಿಯ ಕನ್ನಡ, ಒಂದೊಂದು

ಜಿಲ್ಲೆಯ ಕನ್ನಡ, ಮಂಗಳೂರು, ಬೆಂಗಳೂರು, ಧಾರವಾಡ, ಇತ್ಯಾದಿ ಒಂದೊಂದು ದೇಶದ ಕನ್ನಡ ಒಂದು ನಮಗೆ ಪ್ರತ್ಯಕ್ಷವಾಗಿ ಕಾಣುತ್ತಿದೆ. ಚರಿತ್ರಕಾರರ ಅಭಿಪ್ರಾಯವು ವಿಚಿತ್ರವಾಗಿಯೇ ಇರುವುದು. ಒಂದು ಕಾಲದಲ್ಲಿ ಒಂದೇ ಭಾಷೆಯನ್ನು ಆಡುವವರಾಗಿದ್ದು, ಜಗಳ, ಅಥವಾ ಗ್ರಾಮಾಂತರ ವಾಸ, ಇತರ ಭಾಷೆಯನ್ನಾಡುವವರ ಸಂಸರ್ಗ, ಆಚೆ ಈಚೆ ಹೋಗಿ ಬರಲು ಅಸಾಧ್ಯವಾದ ಪರ್ವತ ನದಿಗಳ ಪ್ರತಿಬಂಧಕ, ಇತ್ಯಾದಿಗಳೇ ಜನ್ಯ ಭಾಷಾ ಭೇದಕ್ಕೆ ಮುಖ್ಯ ಕಾರಣವಾಗಿದ್ದಿರಬೇಕು. ಈ ಕಾರಣವು, ತುಳು, ಮರಾಠಿ, ಕೊಂಕಣಿ, ತಮಿಳು, ತೆಲುಗು, ಇತ್ಯಾದಿ ನಮ್ಮ ದೇಶೀಯ ಭಾಷೆಗಳಿಗೂ, ಸಂಸ್ಕೃತಕ್ಕೂ ಸಾಮಾನ್ಯವಾಗಿದೆ. ಉದಾ:—ಮಂಗಳೂರು ತಾಲೂಕಿನಲ್ಲಿ ಜನರು ಕನ್ನಡದಲ್ಲಿ ಜಜಂಟು (ಜೆರಣೆ ಅಥವಾ ಕುರುಳು), ಜಜಕೆ (ತರಗೆಲೆ) ಎಂದುಪಯೋಗಿಸುವುದುಂಟು. ಇದಕ್ಕೆ ಕಾರಣವು ತುಳು ಭಾಷೆಯನ್ನು ಇಲ್ಲಿಯ ಕೆಲಜನರಾಡುವುದರಿಂದ ಅದು ಈಗ ಕನ್ನಡವಾಗಿಯೇ ಉಪಯೋಗಿಸಲ್ಪಡುವಂತಿದೆ. ಕ್ರಮೇಣ ಪತ್ರಿಕೆಯಂತಹದು ಕನ್ನಡ ನಿಘಂಟಿಗೆ ಸೇರಿಸಲಿಕ್ಕೂ ಸಾಕು.

ಮರಾಠಿಯ 'ನನ್ನ' ಎಂಬ ಅರ್ಥದಲ್ಲಿ ಕೊಂಕಣಿಯಲ್ಲಿ "ಮೋಜೇಂ" ಎಂದೂ, ಕಾರವಾರದಲ್ಲಿ "ಮಾಗೇಲೇಂ" ಎಂದೂ, ರತ್ನಗಿರಿಯಲ್ಲಿ "ಮಾಝೂಂ" ಎಂದೂ, ಪೂನಾದಲ್ಲಿ "ಮಾಝಾ" ಎಂದೂ, ಬೇರಾರಿನಲ್ಲಿ "ಮಾಜಾ" ಎಂದೂ ಇದೆ. ಮಹಾರಾಷ್ಟ್ರದ ಪ್ರಾಕೃತದಲ್ಲಿ "ಮಾಜ್ಝ" ಎಂದಿರುವುದು. ಸಂಸ್ಕೃತದಲ್ಲಿ ಎರಡಕ್ಕೆ "ದ್ವಿ" ಎಂದೂ, ಮರಾಠಿಯಲ್ಲಿ "ದೋನ" ಎಂದೂ, ಹಿಂದೀಯಲ್ಲಿ "ದೋ" ಎಂದೂ, ಗುಜರಾತಿಯಲ್ಲಿ "ಬೆ" ಎಂದೂ ಇದೆ. ಸಂಸ್ಕೃತದಲ್ಲಿ "ಏಕಾದಶ", ಮರಾಠಿ "ಅಕರಾ", ಗುಜರಾತಿ "ಅಗಾರ" ಅಥವಾ "ಇಗ್ಯಾರಹ", ಹಿಂದೀಯಲ್ಲಿ "ಗ್ಯಾರ" ಎಂದಿದೆ. ಕನ್ನಡದಲ್ಲಿ ಒಂದು, ತುಳು ಒಂಜಿ, ಮಲೆಯಾಳ ಒನ್ನ್, ತಮಿಳು ಒಂಡ್ರು, ತೆಲುಗು ಒಕ್ಕಟಿ ಎಂದಿದೆ. ಕನ್ನಡ ಪತ್ತು, ತುಳು ಪತ್ತು, ಮಲೆಯಾಳ ಪತ್ತು, ತಮಿಳು ಪತ್ತು, ತೆಲುಗು ಪದಿ ಎಂದಿದೆ. ಹೀಗೆ ಅನೇಕ ಸಾಮ್ಯಗಳಿವೆ. ಸಜಾತೀಯ ಭಾಷೆಗಳಲ್ಲಿ ಸಂಸ್ಕೃತ ನೀಡ, ಇಂಗ್ಲಿಷ್ ನೆಸ್ಟ್, ವೃಕ—ಊಲ್ಫ್, ಪಿತೃ—ಫಾದರ್, ಮಾತೃ—ಮದರ್, ಇತ್ಯಾದಿ ಭೇದವಿರುವುದನ್ನು ನಾವು ಕಾಣುತ್ತೇವೆ. ಸಜಾತೀಯ ಜನ್ಯ ಭಾಷೆಗಳಲ್ಲಿ ಹೇಗೆಂದರೆ:—ದೇವಾ? ಆರ್ಯಪುತ್ರ—ಅಯ್ಯಪುತ್ರ ಅಥವಾ ಅಜ್ಜಪುತ್ತ, ಎಂದೂ ಭೇದವಿರುವುದು. ಮೊದಲನೆಯದರಲ್ಲಿ ಶಬ್ದಗಳಿಗೆ ಯಾವುದೋ ಒಂದು ವಿಧವಾದ ಸಂಬಂಧವಿರುವುದು. ಎರಡನೆಯದರಲ್ಲಿ ಸಾಮಾನ್ಯ ಸಂಬಂಧವು ಹೆಚ್ಚಾಗಿರುವುದು. ಇದರಿಂದ ಮೊದಲನೆಯದು ಸಜಾತೀಯ ಭಾಷೆಯೆಂದೂ, ಎರಡನೆಯದು ಸಜಾತೀಯ ಜನ್ಯಭಾಷೆಯೆಂದೂ ಹೇಳಲ್ಪಡುವುದು. ಜರ್ಮನ್, ಅಲ್ಬೇನಿಯನ್, ಅರ್ಮೇನಿಯನ್, ಗ್ರೀಕ, ಕೆಲ್ಟಿಕ ಭಾಷೆಗಳು ಸಜಾತೀಯ ಭಾಷೆಗಳು. (ವೇದದ ಸಂಸ್ಕೃತ) ಗ್ರಾಂಥಿಕ ಸಂಸ್ಕೃತ,

ರಾಮಾಯಣ ಮಹಾಭಾರತಗಳ ಸಂಸ್ಕೃತ, ಪ್ರಾಕೃತಗಳು, ಆಧುನಿಕ ಉತ್ತರ ದೇಶದ ಭಾಷೆಗಳೂ—ಇವುಗಳೆಲ್ಲ ಸಜಾತೀಯ ಜನ್ಯ ಭಾಷೆಗಳಾಗಿರುವುವು. ಇವುಗಳೆಲ್ಲ ಒಂದೇ ಕುಟುಂಬಕ್ಕೆ ಸೇರಿದುವುಗಳು. ಆರ್ಯನ್ ಆಲ್ಪಿನಿಯನ್ ಇವುಗಳೆಲ್ಲ ಒಂದೇ ವಂಶಕ್ಕೆ ಸೇರಿದುವುಗಳು.

ಪ್ರಪಂಚದಲ್ಲಿ ಆದಿ ಕಾಲದಲ್ಲಿ ಆದೊಂದು ಬಗೆಯ ಮಾತೃಭಾಷೆ ಇತ್ತೆಂದೂ, ಅದರ ಹೆಸರೇ (Indo Germanic) ಇಂಡೋ ಜರ್ಮಾನಿಕವೆಂದೂ, ಆ ವಂಶದಿಂದಲೇ ಆರ್ಯನ್, ಆಲ್ಪಿನಿಯನ್, ಇತ್ಯಾದಿಗಳು ಉಂಟಾದುವೆಂದೂ, ಆ ಆರ್ಯನ್ ಭಾಷೆಯೇ ಆ ನಮ್ಮ ವೇದದ ಸಂಸ್ಕೃತವೆಂದೂ, ಅದರಿಂದಲೇ ಪ್ರಾಕೃತ ಇತ್ಯಾದಿಗಳು ಹುಟ್ಟಿ, ಆ ಪ್ರಾಕೃತದಿಂದ ಈಗಿನ ಸಂಸ್ಕೃತ ಹುಟ್ಟಿರುವುದೆಂದು ಹೇಳಲಿಕ್ಕೆ ಆಗಿ ಪಾಶ್ಚಾತ್ಯರು ಈ ದ್ರಾವಿಡ ಪ್ರಾಣಾಯಾಮವನ್ನು ಮಾಡುತ್ತಿರುವರು. ಪ್ರಪಂಚದಲ್ಲಿ ಇಂಡೋ ಜರ್ಮಾನಿಕವೆಂಬ ಮಾತೃ ಭಾಷೆಗೆ ಜ್ಯೇಷ್ಠ ಪುತ್ರಿಯೇ ಸಂಸ್ಕೃತವೆಂದು ಬಹು ಕಷ್ಟದಿಂದ ಅವರು ಒಪ್ಪಿದರೂ, ಆ ಅನಾಮಧೇಯವಾದ ಮಾತೃ ಭಾಷೆಯನ್ನು ತಪ್ಪಿಸಿದರೇ ಹೊರತು, ಆ ಮಾತೃ ಸ್ಥಾನವನ್ನು ನಮ್ಮ ಈ ಸಂಸ್ಕೃತಕ್ಕೆ ಕೊಡಲು ಅವರಿಗೆ ರುಚಿಸಲಿಲ್ಲ.

ಹಾಗೆಯೇ ತುರಾನಿಯನ್ ಎಂಬ ಅನಾಮಧೇಯವಾದ ಒಂದು ವಂಶವಿತ್ತೆಂದೂ, ಆ ವಂಶದಲ್ಲಿ ತಮುಳಿಕ್ ಎಂಬುದೊಂದು ಕುಲವಿತ್ತೆಂದೂ, ಆ ಕುಲಕ್ಕೆ ಹುಟ್ಟಿದ್ದೇ ಈ ನಮ್ಮ ತಮಿಳು, ಕನ್ನಡ, ತೆಲುಗು, ಮಲೆಯಾಳವೆಂದೂ ಆ ದೊಡ್ಡ ದೊಡ್ಡ ಸಾಹೇಬರುಗಳ ಅಭಿಪ್ರಾಯವು. ಈ ನನ್ನ ಅಲ್ಪ ಬುದ್ಧಿಗೆ ಕಾಣುವುದೇನೆಂದರೆ—ಲಲಾಟ ಫಲದಿಂದ ಮೊದಲು ಪ್ರಾಕೃತ ಭಾಷೆಯುಂಟಾಗಿ, ಅದರಿಂದ ಈಗಿನ ಸಂಸ್ಕೃತ, ಆಮೇಲೆ ಉತ್ತರ ದೇಶದ ಬಂಗಾಳಿ, ಬೇಹಾರಿ, ಮಹಾರಾಷ್ಟ್ರ, ಇತ್ಯಾದಿ ಭಾಷೆಗಳುಂಟಾದುವಲ್ಲ. ಪ್ರಪಂಚದಲ್ಲಿ ಮೊದಲು ಇದ್ದುದೇ ವೇದದ ಸಂಸ್ಕೃತ. ಅದರಿಂದ ಪಾರಸೀಯರ ಗ್ರಂಥ ಅವಸ್ತಾ ಭಾಷೆ. ಅದರಿಂದ ಪ್ರಾಚ್ಯ ದೇಶದ ಭಾಷೆಗಳು. ಹಾಗೆಯೇ ನಮ್ಮ ಈಗಿನ ಸಂಸ್ಕೃತ. ಆ ಸಂಸ್ಕೃತದಿಂದ ಪ್ರಾಕೃತ ಭಾಷೆ, ಅದರಿಂದ ಉತ್ತರದೇಶದ ಪಂಜಾಬ, ಬೇಹಾರಿ, ಬಂಗಾಳಿ, ಮಹಾರಾಷ್ಟ್ರಾದಿ ಭಾಷೆಗಳು, ಹಾಗೆಯೇ ನಮ್ಮ ಕನ್ನಡವೂ ಉಂಟಾದ್ದೆಂದು ಕಾಣುತ್ತದೆ. ಈಗಿನ ಪಾಶ್ಚಾತ್ಯರು ಗೋತ್ರವನ್ನೂ ಬದಲಾಯಿಸಿಬಿಟ್ಟಿರುವರು. ಶಬ್ದಮಣಿದರ್ಪಣಕಾರನಾದ ಕೇಶಿರಾಜನೂ ತನ್ನ ಪ್ರತಿ ಸೂತ್ರಗಳಲ್ಲಿ ಸಕ್ಕದ ಕನ್ನಡವೆಂದು ಆಗಾಗ ಉದ್ಘೋಷಿಸುವುದರಿಂದಲೂ, ಕನ್ನಡ ವ್ಯಾಕರಣವನ್ನು ಬರೆದ ಶಬ್ದಾನುಶಾಸನಕಾರನು ಸಂಸ್ಕೃತದಲ್ಲಿಯೇ ಕನ್ನಡ ವ್ಯಾಕರಣವನ್ನು ವಿವರಿಸಿದುದರಿಂದಲೂ, ವಿಶೇಷವಾಗಿ ಸಂಸ್ಕೃತ ಶಬ್ದಗಳು ಗ್ರಂಥಗಳಲ್ಲಿ ಕಂಡು ಬರುವುದರಿಂದಲೂ, ಅಕ್ಷರ ಸಮಾಮ್ನಾಯದಲ್ಲಿ ಸಂಸ್ಕೃತಕ್ಕೂ ಕನ್ನಡಕ್ಕೂ ದೇಶೀಯವಾದ ಱಳಕುಳಗಳ ಹೊರತು ವಿಶೇಷ ಭೇದವು ಕಂಡುಬಾರದಿರುವುದರಿಂದಲೂ ಸಂಸ್ಕೃತ ಅಥವಾ ಪ್ರಾಕೃತದಿಂದಲೇ ಈ ನಮ್ಮ ಕನ್ನಡವು ಹುಟ್ಟಿದ್ದಿರ

ಬೇರೆಂದೂ ಕಾಣುತ್ತದೆ. ತಮಿಳ ಭಾಷೆಯು ಯಾವ ವಿಧದಿಂದಲೂ ಸಂಸ್ಕೃತದೊಡನೆ ಸರಿಹೋಲದಿರುವುದರಿಂದ ಅದು ಬೇಕಾದರೆ ದ್ರಾವಿಡಕುಲಕ್ಕೇ ಸೇರಿರಲಿ, ನಾವು ಬೇಡವೆನ್ನುವುದಿಲ್ಲ. ಆದುದರಿಂದ ಸಂಸ್ಕೃತ ಅಥವಾ ಪ್ರಾಕೃತದಿಂದ ನಮ್ಮ ಹಳಗನ್ನಡವೂ, ಆಮೇಲೆ ಹಿಂದೆ ವಿವರಿಸಿದಂತೆ ಮಧ್ಯಮ ತರಗತಿಯ ಕನ್ನಡವೂ, ಆಮೇಲೆ ಈಗಿನ ಹೊಸಗನ್ನಡವೂ ಉಂಟಾದ್ದಿರಬೇಕು. ಆ ಹಳಗನ್ನಡದಿಂದಲೇ ನಮ್ಮ ಜಿಲ್ಲೆಯವರ ಸಂಗಡಕ್ಕೆ ಸಂಬಂಧಪಟ್ಟ ಕನ್ನಡವು ಸಂದೇಹವಿಲ್ಲದೆ ಉಂಟಾದ್ದಿರಬೇಕು.

ಕೊಳಕೆ ಪರಮೇಶ್ವರಮಯ್ಯ

ಆಂಡಯ್ಯನೂ ಕನ್ನಡಮೆನಿಪ್ಪ ನಾಡೂ

ಉತ್ತಮ ಕಾವ್ಯವೆಂದರೆ ಪ್ರಕೃತಿ ದೇವಿಯ ಮಡಿಲಲ್ಲಿ ಬೆಳೆದು, ಆಕೆಯ ಕೈಗುಣದಿಂದ ಸುಗಂಧದ ಪುಷ್ಪರಸವನ್ನು ಮನಸದಣಿವಂತೆ ಹೀರಿ ತನ್ಮಯವಾಗಿ ಹಾಡಿ ಹಾರಾಡುತ್ತಿರುವ ಕಬ್ಬಿಗನೆಂಬ ತುಂಬಿಯ ಹಾಡು. ಆ ಹಾಡು ಹಲವರಿಗೆ ರುಚಿಸುವುದಿಲ್ಲ; ಕೆಲವರು ಕಾರಣಾಂತರದಿಂದ ತಮಗದು ರುಚಿಸಿದಂತೆ ತೋರಿಸಿಕೊಳ್ಳುತ್ತಾರೆ; ಸಾಗರದೊಳಗೊಬ್ಬರಂತೆ ಕೆಲವು ಮಂದಿ ರಸಿಕರು ಮಾತ್ರ ಅದರ ರಸವನ್ನು ಹೀರುತ್ತಾರೆ. ಹೀಗಾಗಲಿಕ್ಕೆ, ಕ್ರಮವಾಗಿ ಆಯಾ ಜನರ ಅಂತರಂಗದ ಸಂಸ್ಕಾರಾಭಾವವೂ, ಬಿರುದು ಮಹತ್ವಾಕಾಂಕ್ಷೆಯೂ, ಸಂಸ್ಕೃತಿ ವಿಶೇಷವೂ ಕಾರಣಗಳು. ಅಂತಹ ಉತ್ತಮ ಕವಿಯಾದವನು ರಸಾಸ್ವಾದದ ಮಹಿಮೆಯಿಂದಾಗಿ ಹಾಗೆ ಹಾಡುವುದು ಪ್ರಕೃತಿ. ಅದರಿಂದ ಏಕಾರ್ಥವಾದ ಸ್ವಾರ್ಥವು ಎಷ್ಟಾದರೂ ಆ ಕಾವ್ಯದಲ್ಲಿರಲಿಕ್ಕೆ ಸಾಧ್ಯವಿಲ್ಲ. ಸ್ವಾರ್ಥಾಭಿಲಾಷೆಯೆಂಬುದು ಮನುಷ್ಯ ಸಾಮಾನ್ಯದ ಸ್ವಭಾವವು; ವಿಶಿಷ್ಟತೆಗೊಂಡ ಪ್ರಾಮಾಣಿಕ ಕವಿಯ ಸ್ವಭಾವವಲ್ಲ. ಅಂತಹ ಸ್ವಾರ್ಥವೇ ಗುರಿಯಾದ ಕವಿಗಳೆಂಬವರ ಕಾವ್ಯ ರಚನೆಯು ಇತರ ವ್ಯವಹಾರಗಳನ್ನು ಬೆರಸಿ ಹಾಲನ್ನು ಮಾರುವುದೇ ಮೊದಲಾದ ವ್ಯಾಪಾರದಂತಾಗಿ ಕೆಟ್ಟು ಹೋಗುತ್ತದೆ.

ಅಂತಹ ಕಾವ್ಯಗಳನ್ನು ಕಟ್ಟುವ ಕವಿಗಳು ಎಡೆಬಿಡದೆ ಜನಿಸುತ್ತಿರುವುದಿಲ್ಲ. ಬಿದಿರು ಸದ್ವಂಶವಾಗಿದ್ದರೂ ಅದರಲ್ಲಿ ಅರುವತ್ತು ವರ್ಷಕ್ಕೊಮ್ಮೆ ಮಾತ್ರ, ಉತ್ಪನ್ನವಾಗುವುದು. ಹಾಗೆಯೇ ಮಹಾ ಕವಿಗಳ ಉದಯವೂ ಕೂಡ ಸುವಂಶದಲ್ಲಿ ಬಹಳ ಕಾಲಕ್ಕೊಮ್ಮೆಯಾಗುತ್ತದೆ. ಸತ್ಕವಿಗಳ ಜನ್ಮವೆಂದರೆ ಆ ವಂಶದ ಪ್ರತಿಭಾ ಪರಿಪಾಕದ ಪರಮಾವಧಿಯೆನ್ನಬಹುದು. ಅದರಿಂದಲೇ ಅಕ್ಕಿಯಾದ ಮೇಲೆ ಆ ಬಿದಿರ ಕಟ್ಟೆಯೇ ಹೋಗುವಂತೆ, ಆ ಮಹಾ ಕವಿಗಳ ಅನಂತರದಲ್ಲಿ ವಂಶವು ನಿಸ್ಸಂತತಿಯವಾಗುತ್ತದೆ; ಅಥವಾ ಮೂಢಸಂತತಿಯವಾಗುತ್ತದೆ; ಎಂದು ಹಿರಿಯರು ಹೇಳುವುದುಂಟು. ಇದು ಎಷ್ಟರ ಮಟ್ಟಿಗೆ ಯಥಾರ್ಥವೆಂದು ಹೇಳಲಿಕ್ಕೆ ನನ್ನಿಂದಾಗದು. ಹೀಗಾಗುವುದೇ ಭಗವತ್ಸಂಕಲ್ಪವೆಯೆಂದಾದರೆ, ಎರಡನೆಯ ತರ್ಕವೇ ಸತ್ಯವಾಗಲೆಂದು ನನ್ನ ಪ್ರಾರ್ಥನೆ.

ಅಂತಹ ಮಹಾ ಕವಿಗಳು ಉದಿಸುವುದಕ್ಕೆ ಎಷ್ಟೋ ಸಂಸ್ಕಾರಗಳು ಬೇಕಾಗಿವೆ. ಆ ಸಂಸ್ಕಾರಗಳೊಳಗೆ ಕೆಲವು ಲೋಕಕ್ಕೆ ಗೊತ್ತಾಗುತ್ತವೆ; ಹಲವು ಗೊತ್ತಾಗುವುದಿಲ್ಲ. ಸ್ವಾಭಾವಿಕವಾಗಿ ಹಸನಾದ ಅಂತಃಕರಣವೆಂಬ ಹೊಲದಲ್ಲಿ ಪ್ರತಿಭೆಯೆಂಬ ನೀರು ನಿಂತರೆ ಕವಿತಾ ಬೀಜವು ಮೊಳೆಯುತ್ತದೆ. ಸಂಗೀತ ಪ್ರಾವೀಣ್ಯವೂ ಚಿತ್ರರಚನಾ ಚಾತುರ್ಯವೂ ಇದರಂತೆಯೇ. ಅನೇಕರು ವಿದ್ವಾಂಸರಾಗಬಹುದು. ಆದರೆ ರಸಜ್ಞರ "ಆನಂದದ ನಾಡಿಯಂ ತೊಡೆ"ಯಿಸು

ನಂತೆ ವೀಣೆಯನ್ನು ಬಾರಿಸುವ ಕೌಶಲ್ಯವನ್ನು ಎಷ್ಟು ಮಂದಿಯು ಪಡೆದಿದ್ದಾರೆ? ಎಷ್ಟು ಮಂದಿ ರಸಿಕರು ಕಂಗೊಳಿಸಿದ್ದಾರೆ? ಅಷ್ಟು ಅಲ್ಲ. ಅಂದವಾಗಿ ಬಾರಿಸುವವರು ತಮಗೊಪ್ಪುವ ಕೊಳಲನ್ನು ತಯಾರಿಸಲಿಕ್ಕೆಷ್ಟು ಸಮಯ ಕಷ್ಟಪಡುತ್ತಾರೆಂಬುದನ್ನು ಅವರಿಂದಲೇ ಕೇಳಬೇಕು. ಎಲ್ಲವೂ ಓಟೆಗಳೆ. ಆದರೂ ಅವುಗಳೊಳಗೆ ನಿಶ್ಚಿತ ಸ್ವರವನ್ನೀಯಲುಶಕ್ತ ಕೊಳಲಾಗುವ ಓಟೆ ದೊರೆಯಲೊಲ್ಲದಿರುವುದಸಾಧ್ಯವು. ಆ ಕೊಳಲನಂತಿರುವ ಪ್ರಸಾದಿಕ ಪ್ರತಿಭೆ ಯೊದಗಿದವರೇ ಮಹಾ ಕವಿಗಳೆನಿಸುತ್ತಾರೆ. ಅಂತಹ ಸರಸ ಕವೀಶ್ವರರೊಳಗೊಬ್ಬನು ನಮ್ಮ ಕನ್ನಡಿಗರೆಲ್ಲರ ಅಭಿಮಾನಕ್ಕಾಸ್ಪದನಾದ ಆಂಡಯ್ಯನು. ಅಚ್ಚಗನ್ನಡದಲ್ಲಿ "ಕಾವನ ಗೆಲ್ಲ" ಅಥವಾ "ಮದನ ವಿಜಯ"ವೆಂಬ ಕಾವ್ಯವನ್ನು ಬರೆದ ಆ ಆಂಡಯ್ಯನ ವಿಷಯವನ್ನೂ ಅದರಿಂದ ನಮ್ಮ "ಕನ್ನಡಮೆಸಿಪ್ಪ ನಾಡ"ನ ವಿಚಾರವನ್ನೂ ನನ್ನ ತಿಳಿವಾದ ಬಗೆಯನ್ನು ಕರ್ಣಾಟಕದ ಮುಂದಾಳುಗಳಾದ ತಮ್ಮೆಡೆಯಲ್ಲಿ ನಿವೇದಿಸಲಿರುತ್ತೇನೆ.

ಈ ಕವಿ ಕ್ರಿ. ಶ. ಸು. ೧೨೩೫ರಲ್ಲಿದ್ದನೆಂದು ಮಹನೀಯರಾದ ಆರ್. ನರಸಿಂಹಾಚಾರ್ಯರು ಕವಿಚರಿತೆಯ ಪ್ರಥಮ ಭಾಗದಲ್ಲಿ ಹೇಳುತ್ತಾರೆ. ಕ್ರಿ. ಶ. ೧೨೩೦ರಲ್ಲಿ ಅನಂತನಾಥ ಪುರಾಣವನ್ನು ಬರೆದ ಜನ್ನನನ್ನು ಈತನು ಸ್ತುತಿಸಿರುವುದೂ, ಸು. ೧೨೪೫ರಲ್ಲಿದ್ದ ಮಲ್ಲಿಕಾರ್ಜುನನು ತನ್ನ 'ಸೂಕ್ತಿ ಸುಧಾರ್ಣವ'ದಲ್ಲಿ ಈ ಕವಿಯ ಪದ್ಯವನ್ನು ಉದ್ಧರಿಸಿರುವುದೂ ಮೇಲೆ ಹೇಳಿದಂತೆ ಕಾಲನಿರ್ಣಯ ಮಾಡಿರುವುದಕ್ಕೆ ಕಾರಣಗಳು. ಆ ವಿಷಯವನ್ನು ಮುಂದೆ ವಿಚಾರಿಸೋಣ. ತಾನು ಲಕ್ಕಿಗರ ವಿಭುವಾದ ಆಂಡಯ್ಯನ ಪುತ್ರನಾದ ಶಾಂತನ ಮಗನೆಂದೂ, ಲಕ್ಕಿಗರರಸನೆಂದೂ ಕವಿ ಹೇಳಿಕೊಳ್ಳುತ್ತಾನೆ. ಇವನಿಗಿಂತ ಒಂದು ಶತಮಾನಕ್ಕೆ ಮೊದಲಿನವನಾದ ನಯಸೇನನು—

ಸಕ್ಕದಮಂ ಪೇೞ್ವೊಡೆ ನೆರೆ।
ಸಕ್ಕದಮಂ ಪೇೞ್ಗೆ ಸುದ್ಧಗನ್ನಡದೊಳ್ ತಂ॥
ದಿಕ್ಕುವುದೆ ಸಕ್ಕದಂಗಳ।
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ॥

ಎಂದು ಕನ್ನಡ ಕಾವ್ಯಗಳಲ್ಲಿ ಸಂಸ್ಕೃತ ಪದಗಳನ್ನು ಮನಬಂದಂತೆ ಸೇರಿಸುವ ಪದ್ಧತಿಯನ್ನು ನಿಂದಿಸಿದ್ದಾನೆ. ಆದರೂ ಆ ಪದ್ಧತಿ ನಿಲ್ಲಲಿಲ್ಲ. ಹೆಸರ್ಗೊಂಡ ಕವಿಗಳೂ ಸಂಸ್ಕೃತ ಪದಗಳನ್ನು ಧಾರಾಳವಾಗಿ ಬೆರಸದೆ ಕನ್ನಡ ಕಾವ್ಯಗಳನ್ನು ಬರೆಯಲಾರದಾದರು. ಅದರಿಂದಲೆ ಆಂಡಯ್ಯನು—

ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ।
ಬಗೆಗೊಳೆ ಪೇೞಲಾಱರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕೆ॥
ಬ್ಬಿಗರದು ಮಾತನಾಡಿದಪ್ರೊಲಂದವನಾಳ್ವರೆ ಪೇೞ್ವ ಬಲ್ಲ ನೆ।
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ದೊರೆಕೊಳ್ಳದಾರೊಳಂ॥

ಎಂದು ತಮುತಮಗೆ ಬಲ್ಲವ|
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ ||
ನ್ನೆಂದಚ್ಚಗನ್ನಡಂ ಬಿಗಿ|
ವ್ಪೊಂದಿರೆ ಕಬ್ಬಿಗರ ಕಾವನೊಲವಿಂದೊರೆದಂ ||

ಎಂದು ಹೇಳುತ್ತಾನೆ. ಮೈಸೂರಲ್ಲೇ ಅಚ್ಚಾದ ಇನ್ನೊಂದು ಪ್ರತಿಯಲ್ಲಿ ಈ ಪದ್ಯದ ಕಡೆಯ "ಒರೆದಂ" ಎಂಬುದಕ್ಕೆ ಬದಲಾಗಿ "ಬರೆದೆಂ" ಎಂದಿದೆ. ಅಂತೂ "ಸಕ್ಕದಂ ಬೆರಸದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ನೇರ್ಪಿ"ರೆಕ್ಕೆ ಸಾಧ್ಯವೆಂಬುದನ್ನೂ, ಹಿಂದಣ ಕವಿಗಳ ನ್ಯೂನತೆಯನ್ನೂ ಕವಿ ತೋರಿಸಿಕೊಟ್ಟಿದ್ದಾನೆ. ಅವನು ಬರೆದ ಆ "ಕಾವನ ಗೆಲ್ಲ"ದ ಕಥಾ ತಾತ್ಪರ್ಯವು ಹೀಗಿದೆ:—

"ನನೆಯಂಬನೆಂಬರಸನು ಕನ್ನಡಮೆಸಿಪ್ಪ ನಾಡಿನ ಪೂವಿನಪೊಳಲೆಂಬ ಪಟ್ಟಣವನ್ನಾಳುತ್ತಿದ್ದನು. ಅವನೊಮ್ಮೆ ಉಪವನಾಲೋಕನಾರ್ಥವಾಗಿ ಹೋದಲ್ಲಿ ಅಪ್ಸರಸ್ತ್ರೀಯೊಬ್ಬಳನ್ನು ಕಂಡನು. ನನೆಯಂಬನೊಡನೆ, ಆಕೆ ಈ ರೀತಿಯಲಿ ಒಂದು ಕತೆಯನ್ನು ಹೇಳಿದಳು :— ತನಗೆಣೆಯಾದ ಇಚ್ಚೆಗಾರ್ತಿಯೆಂಬ ಅರಸಿಯೊಡಗೂಡಿ ಕರ್ವುನಿಲ್ಲನೆಂಬ ರಾಯನು ಕಂಪಿನ ಪೊಳಲೆಂಬ ನಗರವನ್ನು ಪಾಲಿಸುತ್ತಿದ್ದನು. ಶಶಿ ವಸಂತ ಮಂದಮಾರುತ ಪ್ರಮುಖರೆ ಅವನ ಪರಿಜನರು. ಒಮ್ಮೆ ದೂತನೊಬ್ಬನು ಬಂದು ತುಂಬಿಕೊಂಡಿರುವ ಓಲಗಶಾಲೆಯೊಳಪೊಕ್ಕು, 'ಬೆಳ್ಳಿಯ ಬೆಟ್ಟದ ಶಿವನೆಂಬ ಜೋಗಿ ನಿನ್ನ ಕೆಳೆಯನಾದ ಚಂದ್ರನನ್ನು ಸೆರೆವಿಡಿದ'ನೆಂದು ರಾಯನೊಡನೆ ಬಿನ್ನಯಿಸಿದನು. ಕೇಳಿದೊಡನೆ ಉರಿದೆದ್ದ ಕರ್ವುನಿಲ್ಲನು. ಆ ಗೊರವನನ್ನು ದಂಡಿಸಲೆಂದು, ಪಡೆಗೂಡಿ ಬೆಳ್ಳಿಯ ಬೆಟ್ಟಕ್ಕೈದಿದನು. ಇಕ್ಕಡೆಯವರೊಳಗೆ ಬಿಕ್ಕಟ್ಟಿನ ಕಾಳೆಗವಾಯಿತು. ಕರ್ವುವಿಲ್ಲನು ಆ ಶಿವನ ಕಡೆಯವರನ್ನೆಬ್ಬಟ್ಟಿದನು. ಆಗ ಕ್ರೋಧಾವಿಷ್ಟನಾದ ಶಿವನು ಎದುರಾಗಿ—'ಪಿರಿಯರೆಂಬುದಂ ಬಗೆಯದೆ ಉರ್ಕಿಂದೆನ್ನೊಳ್ಕಾದಿದೆಯಂತದರ್ಕೆ ನಿನ್ನೋಪಳಂ ಕೂಡದೆ ಪೆರ್ಚುರಪ್ಪುದಂತೆಲ್ಲಿಯಾದೊಡಂ ನಾಂ ಕಾವನೆಂಬುದಂ ಮರೆದಿರು' ಎಂದು ಶಾಪವಿತ್ತನು. ಆ ಶಾಪದಿಂದಾಗಿ ತನ್ನ ಪೂರ್ವ ವೃತ್ತಗಳನ್ನೆಲ್ಲ ಮರೆತು ಈ ಪೂವಿನ ಪೊಳಲಲ್ಲಿರುವ ನೀನೇ ಆ ಕಾವನು.—ಹೀಗೆಂದು ಹೇಳಿ ಆ ಅಪ್ಸರಸ್ತ್ರೀ ಹಾರಿಹೋದಳು.

ಅತ್ತ ಯುದ್ಧಾಂಕಣದಲ್ಲಿ ಪ್ರಿಯನನ್ನಗಲಿದ ಇಚ್ಚೆಗಾರ್ತಿ ಶೋಕಿಸುತ್ತಿದ್ದಳು. ಕಾವನ ಬಂಟರೊಳಗಿನ ಗಿಳಿಯೊಂದು ಈ ವಿಷಯವನ್ನರಿತು ಹಾರಿಬಂದು, ಯುದ್ಧರಂಗದಿಂದ ಓಡಿಹೋಗಿ ಕಂಪಿನ ಪೊಳಲಲ್ಲಿದ್ದ ಬಸಂತನೊಡನೆ ಹೇಳಿತು. ಆಮೇಲೆ ಅವರೆಲ್ಲರೂ ಸೇರಿ ಇಚ್ಚೆಗಾರ್ತಿಯೊಡನೆ ಪೂವಿನಪೊಳಲಿಗೆ ಬಂದು, ಉದ್ಬುದ್ಧನಾಗಿ ತಮ್ಮನ್ನು ಹಾರೈಸುತ್ತಿದ್ದ ನನೆಯಂಬನನ್ನು ಕರೆದುಕೊಂಡು ಕಂಪಿನ ಪೊಳಲಿಗೈದಿದರು. ಚಂದ್ರನನ್ನು ಕಳೆದುಕೊಂಡರೂ ಆ ಕಾವನು ವಸಂತ ಮಂದಮಾರುತರೊಡಗೂಡಿ ನಾಡುಗಳನ್ನಾಳುತ್ತ ಸುಖದಿಂದಿದ್ದನು."

ಈ ಕಥಾಂಶವನ್ನೊಳಕೊಂಡ ತನ್ನ ಕಾವ್ಯಕ್ಕೆ ಅಕ್ಕರಿಗರು "ಸೊಬಗಿನ ಸುಗ್ಗಿ" ಎಂಬ ಹೆಸರನ್ನೂ, ಸಂಸ್ಕೃತವರಿತವರು "ಮದನ ವಿಜಯ"ವೆಂಬ ನಾಮವನ್ನೂ ಕೊಟ್ಟರೆಂದು ಹೇಳಿ—

"ಇದು ಪಸುಳೆ ವಿಶಿಲ ಮುಸಕದಿನೆಸಳ್ ಮಿಸುಪ ಪೊಸದಾವರೆಯು ಪಸೆಯೊಳಸದಳ ಮೆಸೆವ ಸರಸತಿಯುಡಿದಳಿರ್ಗೆ ತಳೆದುಡುಗೆಯೆನೆ ಪೆಸರ್ವಡೆದ ಜಿಜ್ಞವಲದಿಂ ಸಮೆದ ಕಾವನ ಗೆಲ್ಲಂ ಮೆಯ್ದೋರೆಯುತಿರ್ಪುದು."

ಎಂಬ ಗದ್ಯದಿಂದ ಕವಿ ಕಾವ್ಯ ಪರಿಸಮಾಪ್ತಿಗೈದಿರುತ್ತಾನೆ. "ಕಾವನ ಗೆಲ್ಲ"ನೆಂಬುದೆ ಕಾವ್ಯದ ನಿಜವಾದ ಹೆಸರೆಂದೂ ತಾನೇ ಹೇಳಿರುತ್ತಾನೆ. ಇದರಿಂದ "ಮದನ ವಿಜಯ"ವೆಂಬುದು ಮೂಲರೂಪವಾದ ಕಾವನ ಗೆಲ್ಲದ ಸಂಸ್ಕೃತ ರೂಪವೆಂದೂ, "ಸೊಬಗಿನ ಸುಗ್ಗಿ" ಎಂಬುದು ಗುಣಾನುರೂಪವಾಗಿ ಅಕ್ಕರಿಗರಿಟ್ಟ ಹೆಸರೆಂದೂ ವ್ಯಕ್ತವಾಗುತ್ತದೆ.

ಆದರೆ ಈ ಕಾವ್ಯಕ್ಕೆ "ಕಬ್ಬಿಗರ ಕಾವಂ" ಎಂಬುದು ಈಗ ನೆಲೆಗೊಂಡ ಹೆಸರಾಗಿ ತೋರುತ್ತದೆ. ೧೮೯೩ನೆಯ ಇಸವಿಯಲ್ಲಿ ಕರ್ಣಾಟಕ ಕಾವ್ಯಮಂಜರಿಯಲ್ಲಿ ಅಚ್ಚಾದ ಈ ಕಾವ್ಯದ ಟಿಪ್ಪಣಿಯಲ್ಲಿ ಮಹನೀಯರಾದ ಟಿಪ್ಪಣಕಾರರು— "ಕವಿಗಳ ಮೇಲಣ ಅಪವಾದವು ಇದರಿಂದ ಹೋದುದರಿಂದ 'ಕಬ್ಬಿಗರ ಕಾವ' ಎಂದರೆ 'ಕವಿಗಳ ರಕ್ಷಕ' ಎಂಬ ಹೆಸರು ಬಂದಿರಬಹುದು" ಎಂದೂಹಿಸುತ್ತಾರೆ. ಈ ಅಭಿಪ್ರಾಯಕ್ಕನುವಾಗಿ ಮದ್ರಾಸು ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಗಾಗಿ ೧೯೧೯ನೆಯ ಇಸವಿಯಲ್ಲಿ ತಯಾರಿಸಿದ ಕನ್ನಡ ಪದ್ಯಸಂಗ್ರಹದ ಎರಡನೆಯ ಭಾಗ (Selections in Kanarese, Vol. II) ದಲ್ಲಿ ಮೇಲೊಮ್ಮೆ ಕಾಣಿಸಿದ ಕಂದವನ್ನು—

ಎಂದು ತಮತಮಗೆ ಬಲ್ಲವ।
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ ॥
ನ್ನೆಂದಚ್ಚಗನ್ನಡಂ ಬಿಗಿ।
ವೊಂದಿರೆ ಕಬ್ಬಿಗರ ಕಾವವಿದನೊಲ್ದೊರೆದೆಂ ॥

ಹೀಗೆ ತಿದ್ದಿರುತ್ತಾರೆ. ಯಾವ ಮಾತೃಕೆಯನ್ನು ಅನುಸರಿಸಿ ಹೀಗೆ ತಿದ್ದಿದುದೆಂದು ಸಂಗ್ರಹಕಾರರು ಹೇಳಲಿಲ್ಲ. "ಕಬ್ಬಿಗರ ಕಾವವಿದನೊಲ್ದೊರೆದೆಂ" ಎಂದು ಮಾರ್ಪಡಿಸಿದುದರಿಂದ "ಕಬ್ಬಿಗರ ಕಾವ"ನೆಂಬ ಹೆಸರು ಕವಿಯೆ ಇಟ್ಟುದೆಂದು ತೋರಿಸಿದಂತಾಯಿತು. ಆದರೆ, "ಕಬ್ಬಿಗರ ಕಾವನೊಲವಿಂದೊರೆದಂ" ಅಥವಾ "ಕಬ್ಬಿಗರ ಕಾವನೊಲವಿಂದೊರೆದೆಂ" ಎಂಬ ಮೊದಲಿನ ಪಾಠವೇ ಸಾಧುವೆಂದೂ, ಅದರಿಂದ "ಕಬ್ಬಿಗರ ಕಾವ"ನೆಂದು ಕಾವ್ಯದ ಹೆಸರನ್ನಿರುಹುವುದು ಕವಿಯ ಉದ್ದೇಶವಾಗಿರಲಿಲ್ಲವೆಂದೂ ನನ್ನ ಎಣಿಕೆ.

"ಕಬ್ಬಿಗರ ಕಾವ" ಎಂಬುದು ಕಾವ್ಯದ ಹೆಸರಾದರೆ, ಅದು ನಪುಂಸಕಲಿಂಗವಾಗಬೇಕು. ಮೇಲೆ ಹೇಳಿದ ಟಿಪ್ಪಣಕಾರರು ಊಹಿಸುವಂತೆ "ಕಬ್ಬಿಗರ ಕಾವ" ಶಬ್ದದ "ಕಾವ" ಎಂಬ ಪದವು ಕನ್ನಡದ "ಕಾ" ಧಾತುವಿನಿಂದೊಗೆದ ಕೃನ್ನಪುಂಸಕ ಶಬ್ದವಾದರೆ "ಕಬ್ಬಿಗರ ಕಾಪು, ಕಬ್ಬಿಗರ ಕಾವು," ಅಥವಾ "ಕಬ್ಬಿಗರ ಕಾವುದು" ಎಂಬುವುಗಳೊಳಗೆ ಯಾವುದಾದರೂ ಒಂದು ರೂಪವನ್ನು

ಪಡೆಯಬೇಕಿತ್ತು. ನಾಗವರ್ಮಾದಿಗಳ ನಿಯಮಾನುಸಾರವಾಗಿಯಾಗಲಿ, ಕಾವ್ಯ ಪ್ರಯೋಗದಲ್ಲಿಯಾಗಲಿ 'ಕಾ' ಧಾತುವಿನಿಂದುದಿಸಿ ನಪುಂಸಕ ಲಿಂಗದಲ್ಲಿ "ಕಾವಂ" ಅಥವಾ "ಕಾವವು" ಎಂದು ರೂಪುಗೊಂಡುದು ಎಲ್ಲಿಯೂ ತೋರುವುದಿಲ್ಲ. ಕಾವ್ಯಮಂಜರಿಯಲ್ಲಿ ಛಾಪಾದ ಪ್ರತಿಯಲ್ಲಿ "ಕಬ್ಬಿಗರ **ಕಾವವೊ**ಲವಿಂದೊರೆದಂ" ಎಂದಿರುತ್ತಿದ್ದರೆ ಒಂದು ವೇಳೆ "ಕಬ್ಬಿಗರ ಕಾವವು" ಎಂಬುದು ಕಾವ್ಯದ ಹೆಸರೆಂದು ತರ್ಕಿಸಬಹುದಿತ್ತು. ಹಾಗಿಲ್ಲ; "ಕಬ್ಬಿಗರ **ಕಾವನೊ**ಲವಿಂದೊರೆದಂ" ಎಂಬಲ್ಲಿ "ಕಬ್ಬಿಗರ ಕಾವ"ನೆಂದರೆ ಒಬ್ಬ ಪುರುಷನೆಂದು ಸೂಚಿಸುವ ನಕಾರಾಗಮವು ವ್ಯಕ್ತವಾಗಿರುವಾಗ, 'ಕಬ್ಬಿಗರ ಕಾವಂ' ಅಥವಾ 'ಕಬ್ಬಿಗರ ಕಾವವು' ಎಂದು ಕಾವ್ಯದ ಹೆಸರನ್ನು ಸೂಚಿಸುವುದು ಕವಿಯ ಉದ್ದೇಶವಾಗಿದ್ದಿಲ್ಲವೆಂಬುದು ಸ್ಫುಟವಾಗುತ್ತದೆ.

ತಮ್ಮ ಕಥಾನಾಯಕರಿಗೂ ದೊರೆಗಳಿಗೂ ಇಷ್ಟದೈವಗಳಿಗೂ ತಮಗೂ ಅಭಿನ್ನಗಳಾದ ಹೆಸರುಗಳನ್ನಿಟ್ಟುಕೊಳ್ಳುವುದು ಪರಂಪರೆಯಿಂದ ಬಂದ ಕನ್ನಡದ ಕಬ್ಬಿಗರ ಸ್ವಭಾವವಷ್ಟೆ. ಅದರಂತೆ "ಕಬ್ಬಿಗರ ಕಾವನೊಲವಿಂದೊರೆದಂ" ಎಂಬಲ್ಲಿ ತೋರುವ "ಕಬ್ಬಿಗರ ಕಾವ" ಶಬ್ದವು "ಕನ್ನಡವೆಸಿಪ್ಪ ನಾಡಿ"ನ ಕಬ್ಬಿಗನ ದೊರೆಗೂ, ಕವಿಗೂ ಅನ್ವಯಿಸಬಹುದಾಗಿ ತೋರುತ್ತದೆ. ಮೇಲೆ ಉದ್ಧರಿಸಿದ ಪದ್ಯ ಭಾಗಕ್ಕೆ, "ಕಬ್ಬಿಗರ ಕಾವನೆಂಬ ರಾಜನ ಬಲದಿಂದ, ಕಬ್ಬಿಗರ ಕಾವನಾದ ಕವಿ ಬರೆದನು" ಎಂಬರ್ಥವು ಸುಗಮವಾಗಿಯೂ ಅಂದವಾಗಿಯೂ ತೋರುತ್ತದೆ. ಮತ್ತು ಕಾವ್ಯ ಸೌಂದರ್ಯವನ್ನು ವರ್ಣಿಸುವ ೧೪ನೆಯ ಪದ್ಯವು—

> **ಎಳಗಿಳಿವಿಂಡಿನಂತೆ ಮಿಳಿರ್ದಾಡುವ ತುಂಬಿಯ ಬಂಬಲಂತೆ ಕೆಂ।**
> **ದಳಿರ್ಗಳ ತೊಂಗಲಂತೆ ನಡೆನೋಡುವ ಪೆಂಡಿರ ನೋಟದಂತೆ ಪೂ ॥**
> **ಗಳ ಪೊಸಗಂಪಿನೊಳ್ ಪೊರೆದು ತೀಡುವ ತಂಬೆಲರಂತೆ ತೋರ್ಪ ತಿಂ।**
> **ಗಳ ಸಿರಿಯಂತೆ ಸೋಲಿಸದೆ ಕಾವನ ಕಬ್ಬಮುದಾರನಾದೊಡಂ ॥**

ಹೀಗಿದೆ. ಇದರಿಂದ, ನಾಯಕನೊಡನೆ ಅಭಿನ್ನನಾಗಿ ವರ್ಣಿಸಲ್ಪಟ್ಟ ಕಾವನೆಂಬರಸನ ಆಶ್ರಯದಲ್ಲಿದ್ದು ಕವಿ ಈ ಕಾವ್ಯವನ್ನು ಬರೆದನೆಂದೂಹಿಸಲಿಕ್ಕೆ ಆಸ್ಪದವಿದೆ. ಆ ಕಾವ ರಾಯನ ಆಶ್ರಯದಲ್ಲಿದ್ದ ಆಂಡಯ್ಯ ಕವಿಗೆ ಕಬ್ಬಿಗರ ಕಾವನೆಂಬ ಬಿರುದಿದ್ದಿರಬೇಕು. ಕವಿಯ ಆ ಬಿರುದು 'ಕಬ್ಬಿಗರನ್ನು ಕಾವವನು' ಎಂಬ ಅರ್ಥದಿಂದುಂಟಾಗಿರಬಹುದು. ಮಾಘ ಕವಿಯ "ಶಿಶುಪಾಲ ವಧ" ಕಾವ್ಯವು 'ಮಾಘ'ವೆಂದು ರೂಢಿವಡೆದಂತೆ, ಕೆಲಕಾಲವು ಕಳೆದ ಮೇಲೆ ಕಬ್ಬಿಗರ ಕಾವನ ಈ ಕಾವ್ಯಕ್ಕೆ "ಕಬ್ಬಿಗರ ಕಾವ" ಎಂಬ ಹೆಸರೊದಗಿರಬಹುದು. ಅಂತೂ. ಕವಿ ಇಟ್ಟ ಹೆಸರು ಕಾವನಗೆಲ್ಲವೆಂದಲ್ಲದೆ ಕಬ್ಬಿಗರ ಕಾವನೆಂದಲ್ಲ.

ಹೀಗೆ ಕನ್ನಡವೆಸಿಪ್ಪ ನಾಡಿನ ದೊರೆಯಾಗಿ, ನಸೆಯಂಬನೆಂಬ ಕಾವ್ಯ ನಾಯಕನೊಡನೆ ಅಭಿನ್ನನಾಗಿ ವರ್ಣಿಸಲ್ಪಟ್ಟ, "ರಾಯನ ನಾಲ್ಕಿಗೆಯೊಳಿರ್ಕೆ" ಎಂಬ ಕಾವ್ಯಾಂತ್ಯ ಪದ್ಯದಲ್ಲಿ ತೋರುವ ಕವಿಯ ರಾಯನಾರು? ಮೇಲೆ

ತರ್ಕೈಸಿದ ಕಾಮನೆಂಬ ರಾಜನು ಆ ಕಾಲದಲ್ಲಿ ಕನ್ನಡ ನಾಡಲ್ಲಿದ್ದನೊ? ಇದ್ದರೆ ಯಾವ ಕಡೆಯಲ್ಲಿ? ಯಾವ ವಂಶದವನು? ಇತ್ಯಾದಿ ವಿಷಯಗಳನ್ನು ವಿಚಾರಿಸ ಬೇಕಾದುದು ಪ್ರಕೃತ ಸಂಗತಿ.

ಕುಸ್ತೂರ ಚಿಕ್ಕ ವಾಸುದೇವ, ದೊಡ್ಡರ ನಾಚಯ್ಯ, ಕೇಶವ ದೇವ ಎಂಬ ಮೂವರು ಕವಿಗಳು ಸೇರಿ ಕ್ರಿ. ಶ. ೧೧೮೯ರಲ್ಲಿ ಸೊರಬದ ೧೭೯ನೆಯ ಶಾಸನವನ್ನು ಬರೆದರೆಂದು ಮ॥ ರಾ॥ ಆರ್. ನರಸಿಂಹಾಚಾರ್ಯರು ಕವಿಚರಿತೆಯ ಪ್ರಥಮ ಭಾಗದಲ್ಲಿ ಹೇಳುತ್ತಾರೆ. ಅದರಲ್ಲಿ ಒಬ್ಬ ಕಾದಂಬ ಕಂಠೀರವ ಕಾಮರಸನನ್ನು ಸ್ತುತಿಸಿದ—

ಮಿಗೆ ತೇಜಂ ಪೆರ್ಚಿಗಾರ್ಗ ಸೈರಿಸುವನೇ ಮಿತ್ರಂ ದಿಟಕ್ಕೆಂದು ಭಾ।
ನುಗೆ ಸೈರಿಪ್ಪನುದಾತ್ತ ದಾನ ಗುಣಮಂ ಸಂತಾನಮೆಂದಲ್ಕಿ ರ್ಚಿ೦ ॥
ನೆಗರ್ತಿಲ್ಲ ಕಲ್ಪ ಕುಜಕ್ಕೆ ಸೈರಿಸುವನುತ್ತುಂಗತ್ವಮಂ ಗೋತ್ರಮಂ।
ದಗದೊಳ್ ಸೈರಿಪನುಂತೆ ಸೈರಿಸುವನೇ ಕಾದಂಬ ಕಂಠೀರವಂ ॥

ಮೊರ್ಚಿತೆಯೆಂಬುದು ಬಾಂಧವರೊಳ್।
ತೊರ್ಚಿತೆಯೆಂಬುದು ನದ ನದೀ ನಿಕಾಯದೊಳಾದಂ ॥
ನೆರ್ಚಿತೆಯೆಂಬುದು ಜೂದುಗಳೊಳ್।
ಪೆರ್ಚಿತೆಡೆಯೊಳಿವಿಲ್ಲ ಕಾಮ ನೃಪನಾಳ್ವಿಳಿಯೊಳ್ ॥

ಧರೆಗುರುಳೆ ತಮ್ಮ ತಲೆಗಳ್।
ಕರಿ ಶಿರಮಂ ನಿಜ ಕಬಂಧದೊಳ್ ಪತ್ತಿಸಿ ಬೀ ॥
ರರ ತಂಡಂ ಗಣಪರವೊಲ್।
ಕರಮೆಸೆದರ್ ಕಾಮ ಭೂಪನಿರ್ದಾಹವದೊಳ್ ॥

ಈ ಪದ್ಯಗಳಿಂದ ಯುದ್ಧವೀರನಾದ ಕಾಮರಸನೆಂಬ ಕದಂಬ ರಾಜನೊಬ್ಬನು ಪ್ರಸಿದ್ಧನಾಗಿದ್ದನೆಂದು ಗೊತ್ತಾಗುತ್ತದೆ. ಇವನು ಧಾರವಾಡದ ಹಂಗಳದಲ್ಲಿ ರಾಜ್ಯವನ್ನಾಳಿಕೊಂಡಿದ್ದ ಕದಂಬರ ಶಾಖೆಯವನು. ಇವನ ವಿಷಯವಾಗಿ ಕ್ರಿ. ಶ. ೧೯೨೩ರಲ್ಲಿ ಅಚ್ಚಾದ ''ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ''ವೆಂಬ ಗ್ರಂಥದಲ್ಲಿ ಮ॥ ರಾ॥ ಎಮ್. ಗಣಪತಿರಾವ್ ಐಗಳರವರು ಹೀಗೆ ಬರೆಯುತ್ತಾರೆ:—

''ಕಾಮದೇವ ಕಾವದೇವ. ಅಥವಾ ತೈಲಮ ಅಂಕಕಾರ ಎಂಬ ಅರಸನು ಕ್ರಿ. ಶ. ೧೧೮೧ರಲ್ಲಿ ಆಳಲಾರಂಭಿಸಿದನೆಂದು ಹೇಳಬಹುದು. ಇವನು ಪಶ್ಚಿಮ ಚಾಲುಕ್ಯರ ಒಡೆಯ ಸೋಮೇಶ್ವರನ ಕೈಕೆಳಗೆ ಮಹಾಮಂಡಲೇಶ್ವರನಾಗಿ ಬನವಾಸಿಯ ೧೨ ಸಾವಿರ ಸೀಮೆಯನ್ನೂ, ಹನುಮಗಳವ ೫೦೦ ಸೀಮೆಯನ್ನೂ, ಲಕ್ಷ್ಮೇಶ್ವರದ ೩೦೦ ಸೀಮೆಯನ್ನೂ ಆಳಿಕೊಂಡಿದ್ದನು. ಇವನ ರಾಣಿ ಕೇತಲದೇವಿ. ಕ್ರಿ. ಶ. ೧೧೮೯ರಲ್ಲಿ ಇವನು ಪಶ್ಚಿಮ ಘಟ್ಟಗಳ ಬುಡದಲ್ಲಿರುವ ಸೀಮೆಯನ್ನೂ ಮಲೆನಾಡುಗಳನ್ನೂ ಕೊಂಕಣವನ್ನೂ ಜಯಿಸಿದನು. ಆಗ ತುಳು ರಾಜ್ಯದಲ್ಲಿ

ನಾಡವರು ಅಥವಾ ಬಂಟರು ದಂಗೆಯೆಬ್ಬಿಸಿ ಜೈನ ರಾಜ್ಯಗಳನ್ನು ತಮ್ಮ ಸ್ವಾಧೀನ ಮಾಡಿಕೊಳ್ಳಲು ಪ್ರಾರಂಭಿಸಿದರು. ಬದ್ದದಾಸ ಪಾಂಡ್ಯನೆಂಬವನು ತನ್ನ ಜಾತಿಯ ನಾಡವರನ್ನು ಕೂಡಿಸಿ ಬಾರ್ಕೂರು ಪಟ್ಟಣವನ್ನು ಹಿಡಿದು ಕ್ರಿ. ಶ. ೧೧೭೮ರಲ್ಲಿ ತನ್ನ ಸ್ವಾಧೀನ ಮಾಡಿಕೊಂಡು, ಚಂದ್ರಗಿರಿ (ಪಯಸ್ವಿನೀ ನದಿ) ನದಿಯಿಂದ ಶುಕ್ತಿಮತೀ ನದಿಯವರೆಗಿನ ರಾಜ್ಯವನ್ನು ಹಿಡಿದುಕೊಂಡನು; ಮತ್ತು ಬೈಂದೂರು ಪರ್ಯಂತ ರಾಜ್ಯವಾಳತೊಡಗಿದನು. ವೇಣೂರು ರಾಜ್ಯದಲ್ಲಿರುವ ಜೈನ ರಾಣಿಯನ್ನು ಓಡಿಸಿ ಬಂಟರು ಆಳತೊಡಗಿದರು. ಈ ದಂಗೆಯೆಬ್ಬಿಸಿದ ಸಂಗತಿಯು ಕಾಮದೇವನಿಗೆ ಗೂಢಚಾರರ ಮುಖಾಂತರ ತಿಳಿಯಿತು. ಕಾಮದೇವನು ಕೂಡಲೆ ಸೈನ್ಯವನ್ನು ತೆಗೆದುಕೊಂಡು ಹೊರಟು ತುಳು ರಾಜ್ಯಕ್ಕೆ ಬಂದು ಕ್ರಿ. ಶ. ೧೧೮೯ರಲ್ಲಿ ಬಂಟರ ದಂಗೆಯನ್ನು ನಿಲ್ಲಿಸಿ ಜೈನ ರಾಜ್ಯವನ್ನು ಮುಂಚಿನ ಅರಸರಿಗೆ ಬಿಡಿಸಿಕೊಟ್ಟು ಕುಂಬಳೆಯಲ್ಲಿ ತನ್ನ ಮಗಳಾದ ಸುಶೀಲೆಗೆ ಪಯಸ್ವಿನೀ ನದಿಯ ಉತ್ತರ ದಿಕ್ಕಿನ ರಾಜ್ಯವನ್ನು ಬಿಟ್ಟುಕೊಟ್ಟು, ತಿರುಗಿ ಬನವಾಸಿಗೆ ಹೊರಟು ಹೋದನು.''

ಈ ಕಾಮದೇವನೇ ಕವಿಯ ರಾಜನಾಗಿರಬಹುದೆ? ಹೀಗೆ ಊಹಿಸಿದರೆ—

ಎನ್ನೀ ಕಬ್ಬದೊಳೆಂದುಂ।
ಸನ್ನಿದಮಾಗಿರ್ಕೆ ಕಣ್ಣಪಯ್ಯನ ಕಡುಜಾಣ್॥
ರನ್ನನ ಮೆಯ್ಸಿರಿ ಗಜಗನ।
ಬಿನ್ನಣಮಗ್ಗಳನ ಕಾಣ್ಕೆ ಜನ್ನಿಗನ ಜಸಂ॥

ಎಂದು ಆಂಡಯ್ಯನೆ ಪೂರ್ವ ಕವಿಗಳನ್ನು ಸ್ತುತಿಸುವ ಪದ್ಯಕ್ಕೆ ವಿರೋಧವಾಗುತ್ತದೆಯಲ್ಲವೆ? ಕವಿ ಕಾದಂಬ ಕಂಠೀರವ ಕಾಮದೇವನ ಆಶ್ರಯದಲ್ಲಿದ್ದವನಾದರೆ ಅದೇ ಸಮಯದಲ್ಲಿ (ಕ್ರಿ. ಶ. ೧೧೮೯ರಲ್ಲಿ) ಚಂದ್ರಪ್ರಭ ಪುರಾಣವನ್ನು ಬರೆದ ಅಗ್ಗಳನನ್ನು ಪೂರ್ವ ಕವಿಗಳೊಡನೆ ಸ್ತುತಿಸುವನೆ? ಮತ್ತು ಕ್ರಿ. ಶ. ೧೨೩೦ರಲ್ಲಿ ಅನಂತನಾಥ ಪುರಾಣವನ್ನು ಬರೆದ ಜನ್ನನನ್ನು ಹೊಗಳುವುದು ಅವನಿಗೆ ಸಾಧ್ಯವೆ? ಎಂಬ ಪ್ರಶ್ನೆಯುಂಟಾಗುತ್ತದೆ.

ಕ್ರಿ. ಶ. ೧೨೩೦ರಲ್ಲಿ ಅನಂತನಾಥ ಪುರಾಣವನ್ನು ಬರೆದುದರಿಂದ ಜನ್ನನು ಆ ಕಾಲದಲ್ಲಿ ವೃದ್ಧನಾಗಿದ್ದನೆಂದು ನಿಶ್ಚಿತವಾಗುತ್ತದೆ. ಏಕೆಂದರೆ, ಜನ್ನನು ಹೊಯ್ಸಳ ನಾರಸಿಂಹ (ಕ್ರಿ. ಶ. ೧೧೩೬—೧೧೭೧)ನಲ್ಲಿ ಕಟಕೋಪಾಧ್ಯಾಯನಾಗಿದ್ದ ಸುಮನೋಬಾಣನ ಮಗನು; ಚಾಳುಕ್ಯ ಜಗದೇಕಮಲ್ಲ (೧೧೩೮—೧೧೫೦)ನಲ್ಲಿ ಕಟಕೋಪಾಧ್ಯಾಯನಾಗಿದ್ದ ಎರಡನೆಯ ನಾಗವರ್ಮನ ಶಿಷ್ಯನು. ಅಷ್ಟೆ ಅಲ್ಲ; ಕ್ರಿ. ಶ. ೧೧೯೧ರಲ್ಲಿ ಹುಟ್ಟಿದ ಚೆನ್ನರಾಯಪಟ್ಟಣದ ೧೭೯ನೆಯ ಶಾಸನವನ್ನೂ, ೧೧೯೭ರಲ್ಲಿ ಹುಟ್ಟಿದ ತರೀಕೆರೆಯ ೪೫ನೆಯ ಶಾಸನವನ್ನೂ ಜನ್ನನು ಬರೆದುದಾಗಿ ಆ ಶಾಸನಗಳ ಅಂತ್ಯದಲ್ಲಿರುವ ''ಜನ್ನಯ್ಯನ ಕವಿತೆ, ಉದ್ದಂಡ ಕವಿ ಭಾಳನೇತ್ರಂ, ಸುಕವಿ ಜನ ಮಿತ್ರಂ'' ಎಂಬೀ ವಾಕ್ಯಗಳಿಂದ ಗೊತ್ತಾಗುತ್ತದೆ ಎಂದು ಮ॥ ರಾ॥ ನರಸಿಂಹಾಚಾರ್ಯರೇ ಬರೆಯುತ್ತಾರೆ. ರಾಜಕುಲದ್ವಯದ ಕಟಕಾಚಾರ್ಯರ ಪುತ್ರತ್ವ ಶಿಷ್ಯತ್ವಗಳಿಂದಲೂ, ರಾಜಾಶ್ರಯದ

ಮಹಿಮೆಯಿಂದಲೂ, ಸ್ವತಃ ಶ್ರೇಷ್ಠ ಕವಿಯಾಗಿದ್ದುದರಿಂದಲೂ ಜನ್ನನು ತನ್ನ ಜೀವಿತ ಕಾಲದಲ್ಲಿಯೆ ಅತಿಶಯ ಕೀರ್ತಿಯನ್ನು ಪಡೆದಿದ್ದನೆಂಬುದರಲ್ಲಿ ಸಂದೇಹವಿಲ್ಲ. ಅವನು ಎಷ್ಟರ ಮಟ್ಟಿಗೆ ಪ್ರಸಿದ್ಧನಾಗಿದ್ದನೆಂಬುದನ್ನು—

ನರಸಿಂಹನ ಚೋಳ ಕುಲೋ।
ದ್ಧರಣನ ಸರ್ವಜ್ಞ ಭೂಪನೋಲಗದೊಳ್ ನಿಂ॥
ದಿರೆ ದಂಡಾಧೀಶಂ ಕು।
ಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನ ದೇವಂ॥

''ಸಾಹಿಪ್ರಭು ಜನಾರ್ದನದೇವ'' ಇತ್ಯಾದಿಗಳಾದ ಅವನ ಮಾತಿನಿಂದ ತಿಳಿದುಕೊಳ್ಳಬಹುದು. ಅದರಿಂದ ತನ್ನ ಸಮಕಾಲಿಕನಾದರೂ ''ಸುಕವಿ ಜನ ಮಿತ್ರ''ನಾದ ಆ ಜನ್ನನನ್ನು ಆಂಡಯ್ಯನು ಹೊಗಳಿದುದಚ್ಚರಿಯಲ್ಲ. ಪುರಾಣ ಕರ್ತೃವಾದ ಅಗ್ಗಳನನ್ನು ಸ್ತುತಿಸಿದುದಾದರೂ ಹೀಗೆಯೇ ಸರಿ. ಅಗ್ಗಳ ಜನ್ನರನ್ನು ಆ ಪದ್ಯದ ಕಡೆಯಲ್ಲಿ ಕ್ರಮವಿಡಿದು ಹೊಗಳಿದ ಕಾರಣ ಅವರು ಅದ್ಯತನರೆಂದೇ ಸೂಚಿಸಿದಂತಾಗುತ್ತದೆ.

ಹೀಗೆ ಅದ್ಯತನ ಕವಿಗಳನ್ನು ನಿರಹಂಕಾರಿಗಳಾದ ಕನ್ನಡ ಕವಿಗಳು ಹೊಗಳಿದುದಿಲ್ಲವೆಂದಿಲ್ಲ. ಆಂಡಯ್ಯನು ಸ್ತುತಿಸುವ ಕಣ್ಣಪಯ್ಯ (ಕರ್ಣಪಾರ್ಯ)ನೂ—''ಅದ್ಯತನನಾಗಿಯುಂ ನೆಗ।ಳ್ದಾದ್ಯರ ದೊರೆಯೆನಿಸಿ....ಸಂದ ನಾಗಚಂದ್ರ ಕವೀಂದ್ರಂ'' ಎಂದು ಅಭಿನವ ಪಂಪನನ್ನು ಆದ್ಯರೊಡಗೂಡಿಸಿ ವರ್ಣಿಸಿದ್ದಾನೆ. ಅದರಿಂದ ಮೇಲೆ ಹೇಳಿದ ಕಾಮದೇವನಾಶ್ರಯದಲ್ಲಿ ಆಂಡಯ್ಯನಿದ್ದಿರಬಹುದೆಂಬುದನ್ನು ವಿದ್ವಾಂಸರು ಅಲ್ಲಗಳೆಯಲಿಕ್ಕಿಲ್ಲವೆಂದು ಭಾವಿಸುತ್ತೇನೆ.

ಕ್ರಿ. ಶ. ೧೧೭೨—೧೨೧೯ರವರೆಗಾಳಿದ ಬಲ್ಲಾಳ ರಾಜನು ಉಚ್ಚಂಗಿಯಲ್ಲಿದ್ದ ಕಾಮನೆಂಬ ಅರಸನನ್ನು ಸೋಲಿಸಿದಂತೆ ಕ್ರಿ. ಶ. ೧೧೮೬ರಲ್ಲಿ ಬರೆದ ಶ್ರವಣಬೆಳ್ಗೊಳದ ೧೨೪ನೆಯ—

ಚಿರಕಾಲಂ ರಿಪುಗಳ್ಗಸಾಧ್ಯಮೆನಿಸಿರ್ದುಚ್ಚಂಗಿಯಂ ಮುತ್ತಿ ದು।
ರ್ಧರ ತೇಜೋನಿಧಿ ಧೂಳಿಗೋಂಟೆಯನೆ ಕೊಂಡಾ ಕಾಮದೇವಾವನೀ॥
ಶ್ವರನಂ ಸಂದೊಡೆಯ ಕ್ಷಿತೀಶ್ವರನನಾ ಭಂಡಾರಮಂ ಸ್ತ್ರೀಯರಂ।
ತುರಗವ್ರಾತಮುಮಂ ಸಮಂತು ಪಿಡಿದಂ ಬಲ್ಲಾಳ ಭೂಮೀಶ್ವರಂ॥

ಈ ಶಾಸನದಲ್ಲಿ ಹೇಳುತ್ತದೆ. ಈ ಕಾಮದೇವನು ಪಾಂಡ್ಯ ವಂಶೀಯನು; ಕಾದಂಬ ಕಾಮದೇವನಲ್ಲ. ಈ ವಿಷಯವು ಮತ್ತೂ ಒಂದು ವರ್ಷಕ್ಕೆ ಮೊದಲು (ಕ್ರಿ. ಶ. ೧೧೮೧) ಬರೆದ ಶ್ರವಣಬೆಳ್ಗೊಳದ ಬೇರೊಂದು ಶಾಸನದ—

ಭರದಿಂದಂ ತನ್ನ ದೋರ್ಗರ್ವದಿನೊಡೆಯರಸಂ ಕಾಯ್ದು ಕಾದಲ್ಕಣಂ ಪೂ।
ಣ್ಪಿರೆ ಬಲ್ಲಾಳ ಕ್ಷಿತೀಶಂ ನಡೆದು ಬಳಸಿಯುಂ ಮುತ್ತೆ ಸೇನಾ ಗಜೇಂದ್ರೋ।
ತ್ಕರ ದಂತಾಘಾತ ಸಂಚೂರ್ಣಿತ ಶಿಖರದೊಳುಚ್ಚಂಗಿಯೊಳ್ ಸಿಲ್ಕಿದಂ ಭಾ।
ಸುರ ಕಾಂತಾ ದೇಶ ಕೋಶ ವ್ರಜ ಜನಕ ಹಯೌಘಾನ್ವಿತಂ ಪಾಂಡ್ಯಭೂಪಂ॥

ಈ ಪದ್ಯದಿಂದ ನಿಶ್ಚಿತವಾಗುತ್ತದೆ; ಮತ್ತು, ಕ್ರಿ. ಶ. ೧೧೮೧ಕ್ಕಿಂತ ಮೊದಲೆ ಬಲ್ಲಾಳರಾಜನಿಂದ ಧ್ವಸಲ್ಪಟ್ಟು ಹೇಳಹೆಸರಿಲ್ಲದಂತಾದ ಪಾಂಡ್ಯ ಕಾಮದೇವನು ಆಂಡಯ್ಯನ ಆಶ್ರಯದಾತನಾಗಿರಲಿಕ್ಕೂ ಕಾರಣವಿಲ್ಲ.

ಮ॥ ರಾ॥ ಆರ್. ನರಸಿಂಹಾಚಾರ್ಯರು ಕ್ರಿ. ಶ. ಸು. ೧೧೮೦ರವನೆಂಬುದಾಗಿ ಊಹಿಸಿದ ರುದ್ರಭಟ್ಟನು—

ಅರಿ ಕಾಮಧ್ವಂಸಿ ನಾಗವ್ರಜಮಯ ಕಟಕಂ ರಾಜರಾಜ ಪ್ರತಿಷ್ಠಾ।
ನಿರತಂ ಲೀಲಾಕ್ರಮೋದಂಚಿತ ನಿರವಧಿ ಗಾಂಗೇಯಕಂ ದ್ವಿಟ್ಪುರಧ್ವಂ।
ಸರತಕ್ರೋಧಂ ವೃಷಾಂಕಂ ವಿಬುಧ ನುತನುಮಾ ಕಾಮಿನೀ ಜೀವಿತೇಶಂ।
ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗ ತ್ರಿಣೇತ್ರಂ।

ಎಂಬ ತನ್ನ ಜಗನ್ನಾಥ ವಿಜಯದ ಪದ್ಯದಲ್ಲಿ ಕಾಮಧ್ವಂಸಿತ್ವಾದಿ ಸಮಾನ ಗುಣ ವಿಶಿಷ್ಟರಾದ ಶಿವನನ್ನೂ ಬಲ್ಲಾಳರಾಜನನ್ನೂ ಶ್ಲೇಷಾಲಂಕಾರದಿಂದ ಬಣ್ಣಿಸುತ್ತಾನೆ. ಆ ಊಹೆಯಂತೆ ಕಾಮಧ್ವಂಸಿತ್ವವೆಂಬ ಶಿವ ಸಮಾನ ಧರ್ಮವು ಉಚ್ಚಂಗಿಯ ಪಾಂಡ್ಯ ಕಾಮದೇವನನ್ನು ಧ್ವಂಸಿಸಿದುದರಿಂದ ಬಲ್ಲಾಳರಾಜನಿಗೆ ಒದಗಿದುದಾಗಿರಬೇಕು. ಆದರೆ ಡಾಕ್ಟರ್ ಎ. ವೆಂಕಟಸುಬ್ಬಯ್ಯ, ಎಂ.ಎ., ಪಿಎಚ್.ಡಿ., ಎಲ್‌ಎಲ್.ಬಿ. ಯವರು ಪ್ರಬುದ್ಧ ಕರ್ಣಾಟಕದ ಕ್ರಿ. ಶ. ೧೯೨೭ರ ಕಾಮನ ಸಂಚಿಕೆಯಲ್ಲಿ ಆ ವಿಷಯವನ್ನು ಈ ತಾತ್ಪರ್ಯದಲ್ಲಿ ವಿಮರ್ಶಿಸಿದ್ದಾರೆ: ''ಉಮಾದೇವಿಯೆಂಬವಳು ವೀರಬಲ್ಲಾಳನಿಗೆ ಸು. ಕ್ರಿ. ಶ. ೧೧೮೫ ಅಥವಾ ೧೧೮೬ರಲ್ಲಿ ಮಹಿಷಿಯಾದಳು; ಆದುದರಿಂದ ರುದ್ರಭಟ್ಟನು ಹೇಳಿದ ಉಮಾಕಾಮಿನೀಜೀವಿತೇಶತ್ವವು ಬಲ್ಲಾಳರಾಜನಿಗೆ ಆಮೇಲೆಯೇ ಉಂಟಾಗಬೇಕು. ಚೋಳರಾಜ (ರಾಜರಾಜ)ನು ಸು. ಕ್ರಿ. ಶ. ೧೨೧೭ರಲ್ಲಿ ಬಲ್ಲಾಳರಾಜನ ಮೂಲಕವಾಗಿ ತನ್ನ ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟನು. ಇವೇ ಮೊದಲಾದ ಕಾರಣಗಳಿಂದ ರುದ್ರಭಟ್ಟನು ತನ್ನ ಗ್ರಂಥವನ್ನು ಕ್ರಿ. ಶ. ೧೨೧೮–೧೨೧೯ರಲ್ಲಿ ಬರೆದಿರಬೇಕು. ಮತ್ತು, ಉಚ್ಚಂಗಿಯಧಿಪತಿಯಾಗಿದ್ದ ಪಾಂಡ್ಯ ವಂಶದ ಮಹಾಮಂಡಲೇಶ್ವರ ಕಾಮನನ್ನಲ್ಲದೆ ಹಾನುಗಲ್ಲ(ಹಂಗಳ)ನಲ್ಲಿ ರಾಜ್ಯವಾಳುತ್ತಿದ್ದ ಕಾಮದೇವನೊಬ್ಬನನ್ನೂ ವೀರಬಲ್ಲಾಳನು ಕ್ರಿ. ಶ. ೧೧೯೬–೧೧೯೭ರಲ್ಲಿ ಸೋಲಿಸಿದನು. ಈ ಕಾರಣದಿಂದ 'ಅರಿ ಕಾಮಧ್ವಂಸಿ' ಎಂಬುದು, ಕಾದಂಬ ಮಹಾಮಂಡಲೇಶ್ವರನಾದ ಕಾಮನ ಪರಾಭವವನ್ನು ಸೂಚಿಸುತ್ತದೆ.'' ಇದು ವೆಂಕಟಸುಬ್ಬಯ್ಯನವರ ಅಭಿಪ್ರಾಯವು.

''ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ''ಕಾರರಾದ ಗಣಪತಿರಾವ್ ಐಗಳರವರು ಹೀಗೆ ಹೇಳುತ್ತಾರೆ—

''ಕ್ರಿ. ಶ. ೧೧೯೬ ರಲ್ಲಿ ಹೊಯ್ಸಳ ರಾಜನಾದ ೨ನೆಯ ವೀರಬಲ್ಲಾಳನು ಹಂಗಳದ ಹತ್ತಿರವಿರುವ ಆನೆಕೆರೆಯ ಹತ್ತಿರ ಸೈನ್ಯವನ್ನಿಳಿಸಿ ಹಂಗಳ ಪಟ್ಟಣವನ್ನು ಮುತ್ತಿಗೆ ಹಾಕಿ ಹಿಡಿಯಲು ಸಾಧಿಸಿದನು. ಆದರೆ ಕಾಮದೇವನ ಸೇನಾಧಿಪತಿಯಾದ ಸೊಹಾನಿಯು ವೀರಬಲ್ಲಾಳ

ನನ್ನು ಸೋಲಿಸಿದನು. ಆದರೆ ವೀರಬಲ್ಲಾಳನು ತಿರುಗಿ ದೊಡ್ಡ ಸೈನ್ಯವನ್ನು ತಂದು ಈ ಅರಸನನ್ನು ಪೂರ್ಣವಾಗಿ ಸೋಲಿಸಿ ಈ ರಾಜ್ಯವನ್ನು ತನ್ನ ರಾಜ್ಯಕ್ಕೆ ಕೂಡಿಸಿದನು. ಕಾಮದೇವನು ಕ್ರಿ. ಶ. ೧೨೦೩ರಲ್ಲಿಯೂ ವೀರಬಲ್ಲಾಳನ ಸಂಗಡ ಯುದ್ಧ ಮಾಡುತ್ತಿದ್ದನೆಂದು ಕೆಲವು ಶಾಸನಗಳಲ್ಲಿದೆ. ಅನಂತರ ಈ ಕಾಮದೇವನ ವಿಷಯ ಏನೂ ತಿಳಿದುಬರುವುದಿಲ್ಲ.''

ಈ ಎರಡು ಅಭಿಪ್ರಾಯಗಳೂ ಸುಮಾರು ಸರಿಹೋಲುತ್ತವೆ. ಆದರಿಂದ ಕಾದಂಬ ಕಾಮದೇವನಿಗೂ ಉಮಾಕಾಮಿನೀ ಜೀವಿತೇಶನಾದ ಬಲ್ಲಾಳ ರಾಜನಿಗೂ ಆದ ಯುದ್ಧವನ್ನೂ, ಅದರ ಪರಿಣಾಮವನ್ನೂ ಮನಸ್ಸಿನಲ್ಲಿಟ್ಟುಕೊಂಡು ಆಂಡಯ್ಯನು ಈ ಕಾವ್ಯವನ್ನು ಬರೆದನೆಂದು ತೋರುತ್ತದೆ. ಮ|| ರಾ|| ಐಗಳವರು ಹೇಳುವಂತೆ, ಕಾಮದೇವನು ಹಂಗಳವನ್ನು ಕಳೆದುಕೊಂಡರೂ, ಆಮೇಲೆ ಯುದ್ಧಮಾಡುತ್ತ ಬನವಾಸಿಯಲ್ಲಿ ನೆಲೆ ನಿಂತಿರಬಹುದು. ಶಿವನೊಡನೆ ಕಾಮನು ಸೋತಂತೆ ವೀರಬಲ್ಲಾಳನೊಡನೆ ಕಾಮದೇವನು ಸೋತು ಬನವಾಸಿಯಲ್ಲಿ ನೆಲೆಗೊಂಡರೂ ರಾಜಭಕ್ತನಾದ ಕವಿ ''ಕಾಮನ ಗೆಲ್ಲಂ'' ಎಂದೇ ಕಾವ್ಯಕ್ಕೆ ಹೆಸರಿಟ್ಟಿದ್ದಾನೆಂದು ತೋರುತ್ತದೆ. ಶಿವ ಕಾಮರೊಳಗಾದ ಪೌರಾಣಿಕ ಯುದ್ಧಕ್ಕೂ ಬಲ್ಲಾಳ ರಾಜ ಕಾಮದೇವರೊಳಗೆ ಸಂಭವಿಸಿದ ಹೋರಾಟಕ್ಕೂ ಕೆಲಮಟ್ಟಿಗೆ ಹೋಲಿಕೆಯನ್ನು ಕಂಡೇ ಕವಿ ಈ ಕಾವ್ಯದ ಪೌರಾಣಿಕ ಕಥೆಯನ್ನು ಪ್ರಕೃತಾನುಸಾರವಾಗಿ ಮಾರ್ಪಡಿಸಿಕೊಂಡಿದ್ದಾನೆಂದು ಹೇಳಬಹುದು. ಹೇಗೆಂದರೆ:—

''ಬೆಳ್ಗೊಡೆಯಾಗಸಕೆಟ್ಟಿ ಚಂದಮಂ ಗಡ'' ಎಂದು ಈ ಕಾವ್ಯದಲ್ಲಿ ವರ್ಣಿಸಿದ ತನ್ನ ರಾಜ ಲಕ್ಷಣವಾದ ಬೆಳ್ಗೊಡೆಯಾಗಿರುವ ಚಂದ್ರನನ್ನು ಸೆರೆ ಹಿಡಿದು ಮಾನಹಾನಿ ಗೆಯ್ದನೆಂದು ಕಾಮನು ಶಿವನೊಡನೆ ಯುದ್ಧಕ್ಕೈದಿದನು. ತನ್ನ ರಾಜಧಾನಿಯಾದ ಹಂಗಳವನ್ನು ವಶೀಕರಿಸಿದನೆಂದು ಕಾಮದೇವನು ಉಮಾಕಾಮಿನೀ ಜೀವಿತೇಶನಾದ ಬಲ್ಲಾಳ ರಾಜನೊಡನೆ ಹೋರಾಡಲೆಂದು ಹೋದನು. ಕಾಮನು ಶಿವನ ಶಾಪದಿಂದಾಗಿ ಪ್ರಿಯೆಯಾದ ಇಚ್ಛೆಗಾರ್ತಿಯನ್ನಗಲಿ ತಾನು ಕಾಮನೆಂಬುದನ್ನು ಮರೆತು ಸನೆಯುಂಬನೆಂಬ ಹೆಸರಿನಿಂದ ಕನ್ನಡವೆನಿಪ್ಪಾ ನಾಡಿನಲ್ಲಿದ್ದನು. ಕಾದಂಬ ಕಂಠೀರವ ಕಾಮರಾಜನು ಬಲ್ಲಾಳ ರಾಜನೊಡನೆ ಯುದ್ಧದಲ್ಲಿ ಸೋತು ಅರಸಿ ಮೊದಲಾದವರನ್ನಗಲಿ ಆ ಮೊದಲೆ ತನ್ನ ಅಧೀನದಲ್ಲಿದ್ದ ಕನ್ನಡವೆಂದು ಹೆಸರುಳ್ಳ ನಾಡಿನಲ್ಲಿದ್ದಿರಬೇಕು. ಅಚ್ಚರಸಿಯೊಬ್ಬಳು ಬಂದು ತನ್ನ ನಿಜಾವಸ್ಥೆಯನ್ನರುಹಿದ ಮೇಲೆ ಉದ್ಬುದ್ಧನಾಗಿ, ತನ್ನೆಡೆಗೆ ಬಂದ ವಸಂತಾದಿಗಳೊಡನೆ ಕಾಮನು ಕಂಪಿನ ಪೊಳಲ್ಗೈದುತ್ತಾನೆ. ಚಿಂತಾಕುಲಿತನಾಗಿ ಕನ್ನಡ ನಾಡಲ್ಲಿದ್ದ ಕಾಮರಾಜನೂ, ಕರೆದುಕೊಂಡು ಹೋಗಲಿಕ್ಕೆ ಬಂದ ತನ್ನವರೊಡನೆ ಬನವಾಸಿಗೆ ಹೋಗಿರಬೇಕು. ಆಮೇಲೆ ಚಂದ್ರನು ಕಾಮನ ವಶವಾಗಲಿಲ್ಲವೆಂಬುದು ಕಾವ್ಯಾಂತ್ಯದ—''ಇಂತು ಕಾಮದೇವನುಂ ವಸಂತನುಂ ರೂಪವಡೆದು ಗಾಡಿಯುಂದೊಲ್ಪುದರ್'' ಎಂಬ ವಾಕ್ಯದಿಂದ ತಿಳಿದುಬರುತ್ತದೆ.

ಕಾಮದೇವನು ಆಮೇಲೆ ಕ್ರಿ. ಶ. ೧೨೦೩ರಲ್ಲಿಯೂ ಬಲ್ಲಾಳ ರಾಜನೊಡನೆ ಸೆಣಸುತ್ತಿದ್ದರೂ ಹಂಗಳವು ಅವನ ವಶವಾಗಲಿಲ್ಲವೆಂಬುದು ಖಂಡಿತವು. "ಕಂಪಿನ ಪೊಳಲೆ"ಂಬುದು ಹೂಗಳ ಕಂಪನ್ನು ಬೀರುವ ಬನವಾಸಿಯ ರಾಜಧಾನಿಯೇ ಆಗಿರಬಹುದಲ್ಲವೆ?

ಈ ಆಂಡಯ್ಯನು ಕಡು ಜೈನನಾಗಿರಲಿಲ್ಲವೆಂಬುದು ಅವನ ಕಾವ್ಯದಿಂದಲೆ ಗೊತ್ತಾಗುತ್ತದೆ. ಶೃಂಗಾರ ಕಾವ್ಯವಾದುದರಿಂದ ಆದಿಯಲ್ಲಿ ಸನೆವಿಲ್ಲ ಬಲ್ಲಹನನ್ನು ಸ್ತುತಿಸಿ ಆಮೇಲೆ ಸರ್ವ ಸಮಾನರಾದ ತ್ರಿಮೂರ್ತಿಗಳನ್ನೂ ಸರಸ್ವತಿಯನ್ನೂ ಹೊಗಳುತ್ತಾನೆ. ಜೈನರ ದೇವತೆಗಳನ್ನೂ ಗುರು ಪರಂಪರೆಯನ್ನೂ ಇತರ ಕವಿಗಳಂತೆ ಆದಿಯಲ್ಲಿ ವರ್ಣಿಸಲಿಲ್ಲ. "ಅರುಹಂತನ ಮೆಲ್ಲಡಿದಾವರೆಗಳ್" ಎಂದು ಹದಿಮೂರನೆಯ ಪದ್ಯದಲ್ಲಿಯೂ, "ಕಟ್ಟಿದ ತಂತಿಯಿಂ ಮಿಡಿದು ಗೊಂದಣವಿಂದರುಹಂತನೇೞಿಸ್ಗಿಯಂ," "ಕೊಲ್ಲದುದು ದಿಟದಿನಜೆಂ" ಎಂದು ಮೊದಲಾಗಿ ಬಂದಿಷ್ಟು ಶ್ರಮಣಕ ದರ್ಶನಾವಸರದಲ್ಲಿಯೂ, "ಅರುಹಂತಂ ನಲ್ಮೆಯಿಂ ಮಾೞ್ಕೆ ಜೆಂಡುಮದಂ ತನ್ನ ಮಪಟ್ಟಿಗರ್ ನೆಲನುಂ ಮುನ್ನೀರು ಮಿರ್ಪನ್ನೆಗಂ" ಎಂದು ಕಡೆಯಲ್ಲಿಯೂ ತಾನು ಜೈನ ಮತೀಯನೆಂದು ತೋರಿಸಿದ್ದಾನೆ.

ಯುದ್ಧಕ್ಕೈದುವ ಕಾಮನಿಗೆ, ಅಪಶಕುನ ಸೂಚಕವಾಗಿಯೆ ಶ್ರಮಣಕ (ಜೈನ ಸಂನ್ಯಾಸಿ) ದರ್ಶನವನ್ನು ಮಾಡಿಸಿದುದಾಗಿ ತೋರುತ್ತದೆ. ಏಕೆಂದರೆ, ಆ ಶ್ರಮಣಕ ದರ್ಶನದಿಂದ ಕಥಾ ಭಾಗಕ್ಕೆ ಬೇರೇನೂ ಪ್ರಯೋಜನವಿಲ್ಲ. ಆ ಶ್ರಮಣಕನನ್ನು ನೋಡಿ ಕಾಮನು ಉರಿದೆದ್ದನೆಂದೂ ವಸಂತನ ಹೇಳಿಕೆಯಿಂದ ಸಮಾಧಾನಗೊಂಡನೆಂದೂ ಹೇಳಿದೆ. ಇದರಿಂದ ಕಾಮದೇವನಿಗೂ ಆಂಡಯ್ಯನಿಗೂ ಜಿನಮತದ ಕರ್ಮಕಾಂಡದಲ್ಲಿ ಅತ್ಯಾದರವಿರಲಿಲ್ಲವೆಂದು ವ್ಯಕ್ತವಾಗುತ್ತದೆ.

ಜೈನರ ಮುಖ್ಯವಾದ ಅಹಿಂಸಾ ರೂಪ ಧರ್ಮದಲ್ಲಿ ಆಂಡಯ್ಯನಿಗೆ ಆದರವಿತ್ತು. ಅದನ್ನು ಎಲ್ಲ ಮತದವರೂ ಸಾಮಾನ್ಯವಾಗಿ ಒಪ್ಪುತ್ತಾರೆ. ಆ ಅಭಿಪ್ರಾಯವನ್ನೆ—

ಕೊಲ್ಲದುದು ದಿಟದಿನಜಿನೆಂ।
ದೆಲ್ಲಾ ಪರಿಯಿಂದೆ ಪೇೞ್ದ ಪಿರಿಯರ ನುಡಿಯಂ ॥
ಬಲ್ಲಿತನೆ ನಂಬಿ ಬೇಂಟೆಯ।
ನೊಲ್ಲದೆ ಬಿಟ್ಟರ್ದ ಬಿಯದರೊಪ್ಪಿದರದಱಿತೊಳ್ ॥

ಎಂಬ ಪದ್ಯದಿಂದ ತೋರಿಸಿದ್ದಾನೆ. ಇದರಿಂದ ಆಂಡಯ್ಯನು ಕರ್ಮಕಾಂಡದವನಲ್ಲವೆಂದು ನಿಶ್ಚಿತವಾಗುತ್ತದೆ.

ಅಷ್ಟೆ ಅಲ್ಲ; ಆದಿಯಲ್ಲಿ ದೇವತೆಗಳಲ್ಲಿ ಶ್ರೇಷ್ಠನಾದ ಮಹಾದೇವ(ಶಿವ)ನ ಸ್ತುತಿಯಿಂದಲೂ, ಶಿವಸಭಾ ವರ್ಣನೆಯಲ್ಲಿ ಬ್ರಹ್ಮ ವಿಷ್ಣುಗಳು ಶಿವನ ಮಾಂಡ

ಶಿಕರಾಗಿದ್ದಂತೆ ವರ್ಣಿಸಿದುದರಿಂದಲೂ, ಶಿವನು ಜೈನನಾಗಿದ್ದ ಕಾಮನನ್ನು ಶಿವ ರಾಜ್ಯ ಭ್ರಷ್ಟನನ್ನಾಗಿ ಮಾಡಿ ತನ್ನ ಅಡಿಯಲ್ಲಿಟ್ಟಂತೆ ಬಣ್ಣಿಸಿದುದರಿಂದಲೂ ಆಂಡಯ್ಯನು ಹರಭಕ್ತನಾಗತೊಡಗಿದ್ದನೆಂದು ಊಹಿಸಲಿಕ್ಕೆ ಎಡೆಯಿಲ್ಲವೆ?

ವಿಶಿಷ್ಟವಾದೊಂದು ಮತ ಭ್ರಾಂತಿಯಿಂದ ಹೀಗೆಣಿಸಿದೆನೆಂದು ಯಾರೂ ಭಾವಿಸಲಾಗದು. ಕನ್ನಡ ಕವಿಗಳ ನಿಜವಾದ ಚರಿತ್ರೆಯು ನಮಗೆಲ್ಲರಿಗೂ ಬೇಕಾದುದು. ಹಾಗೆ ಆಂಡಯ್ಯನು ಹರ ಭಕ್ತನಾಗಿದ್ದರೆ ಕ್ರಿ. ಶ. ಸು. ೧೨೦೦ ರಲ್ಲಿದ್ದನೆಂದೂಹಿಸಲ್ಪಟ್ಟ ಶೃಂಗಾರ ರತ್ನಾಕರವನ್ನು ಬರೆದ ಕವಿ ಕಾಮನೂ ಈ ಕಬ್ಬಿಗರ ಕಾವನಾದ ಆಂಡಯ್ಯನೂ ಅಭಿನ್ನರಾಗಿರಬಹುದೆಂದು ಎಣಿಸಲಿಕ್ಕೂ ಎಡೆಯುಂಟು. ಕವಿಯ ಮಾತಿನಿಂದಲೆ ತಾನು ಜೈನವಂಶದಲ್ಲಿ ಹುಟ್ಟಿದವನೆಂದೂ, ತನ್ನ ಹೆಸರು ಆಂಡಯ್ಯನೆಂದೂ ತಿಳಿದುಬರುವುದರಿಂದ ಕವಿ ಕಾಮನೆ ಮತಾಂತರಗೊಂಡು ಆಂಡಯ್ಯನಾಗಿರಬಹುದೆನ್ನಲಿಕ್ಕೆ ಆಸ್ಪದವಿಲ್ಲ.

ಬಿರುದಿನಂತೆ ತೋರುವ "ಕವಿ ಕಾಮ"ನೆಂಬ ಹೆಸರೂ, ಆಂಡಯ್ಯನ "ಕಬ್ಬಿಗರ ಕಾವಂ" ಎಂಬ ಬಿರುದೂ ಒಂದೇ ಆಗಿರಲಿಕ್ಕೆ ಎಡೆಯುಂಟು. ಕವಿ ಕಾಮನು ತನ್ನ ಗ್ರಂಥದ ಆರಂಭದಲ್ಲಿ ಕಾಮನನ್ನು ಸ್ತುತಿಸಿದ್ದಾನೆ. ಕಬ್ಬಿಗರ ಕಾವನು ಕಾವ್ಯದ ಆದಿಯಲ್ಲಿ ನನೆವಿಲ್ಲ ಬಿಲ್ಲಹ(ಕಾಮ)ನನ್ನು ನುತಿಸಿದ್ದಾನೆ. ಮೊದಲಿನವನು ಶೃಂಗಾರ ರತ್ನಾಕರನೆಂಬ ಲಕ್ಷಣ ಗ್ರಂಥವನ್ನು ಬರೆದಿದ್ದಾನೆ. ಮತ್ತಿನವನು 'ಕಾವನ ಗೆಲ್ಲ'ವೆಂಬ ಶೃಂಗಾರ ಕಾವ್ಯವನ್ನು ಬರೆದಿದ್ದಾನೆ. ಪ್ರಥಮದವನು "ಸರಸ್ವತೀ ಪ್ರಸಾದಾಸಾದಿತ ಕವಿತಾ ಪ್ರಭಾವ"ನೆಂದು ಪರಿಚ್ಛೇದಾಂತ್ಯ ಗದ್ಯದಲ್ಲಿ ತೋರುತ್ತದೆ. ದ್ವಿತೀಯನು—"ಸರಸತಿಯಡಿದಳಿರ್ಗೆ ತಲೆದುಡುಗೆಯೆನೆ ಪೆಸರ್ವಡೆದ ಬಚ್ಚೆವಲದಿಂ ಕಾವನ ಗೆಲ್ಲ"ವನ್ನು ಸಮೆದವನೆಂಬುದು ಕಾವ್ಯಾಂತ್ಯ ಗದ್ಯದಿಂದ ತಿಳಿದುಬರುತ್ತದೆ. ಒಂದನೆಯವನು—"ಜಗದೊಳ್ ಸನ್ನಿದವಾದ ನಾಣ್ಣುಡಿಗಳಂ ಛಂದಕ್ಕೆ ಬರ್ಪಂತೆ ನೆಟ್ಟಗೆ ಮಾತಾಡುವ ಬಲ್ಮೆ"ಯುಳ್ಳವನು. ಎರಡನೆಯವನು ತನ್ನ ಕಾವ್ಯವನ್ನು "ಮಾತನಾಡಿದವೊಲಂದವನಾಳ್ದಿರೆ ಪೇಳ್ವ ಬಲ್ಮು"ಳ್ಳವನು.

ಕವಿ ಕಾಮನು—

> **ಪದವೆತ್ತಿರ್ದ ಗಭೀರ ಭಾವ ಗುಣದಿಂ ಲಾವಣ್ಯ ಲೀಲಾ ವಿಲಾ।**
> **ಸದಿನುದ್ಯದ್ಗುಣ ಶೋಭೆಯಿಂ ವಿವಿಧ ಭೂಭೃದ್ಭೂರಿ ಸಂಭಾವಿತಾ ॥**
> **ಸ್ಪದದಿಂ ಭೂಭುವನ ಪ್ರಸಿದ್ಧಿ ನಿಲೆ ತತ್ಕಾವ್ಯಂ ಜಗತ್ಸೇವ್ಯಮ।**
> **ಪ್ಪುದರಿಂದಂ ಕವಿ ಕಾಮದೇವನೆಸೆದಂ ಶೃಂಗಾರ ರತ್ನಾಕರಂ ॥**

ಹೀಗೆ ಹೇಳುವುದರಿಂದ ಶೃಂಗಾರ ರತ್ನಾಕರನೆಂಬ ಬಿರುದೊದಗಲಿಕ್ಕೆ ಕಾರಣವಾದ ಒಂದು ಶೃಂಗಾರ ಕಾವ್ಯವನ್ನು ಬರೆದಿದ್ದಾನೆಂದು ತೋರುತ್ತದೆ. "ಭೂಭೃದ್ಭೂರಿ ಸಂಭಾವಿತಾಸ್ಪದದಿಂ ಭೂಭುವನ ಪ್ರಸಿದ್ಧಿ ನಿಲೆ" ಬರೆದ ಆ ಕಾವ್ಯವು "ರಾಯನ ನಾಲ್ಕಿತೊಳ್" ಪ್ರಸಿದ್ಧಿವಡೆದ ಕಬ್ಬಿಗರ ಕಾವನ "ಕಾವನ ಗೆಲ್ಲ"ವೆ

ಆಗಿರಲಿಕ್ಕಿಲ್ಲವೆ? "ಕಾಮನ ಗೆಲ್ಲ"ದಲ್ಲಿ ವೀರ ರಸವು ಧಾರಾಳವಾಗಿ ಹರಿದರೂ, ಹದಿನೇಳನೆಯ ಪದ್ಯದಲ್ಲಿ "ಸಿಂಗರವೇಱಿದ್ದಿಯುಂ ಪಡೆಯೆ" ಎಂದು ಮೊದಲಾಗಿ ಅವನೇ ಹೇಳುವಂತೆ ಶೃಂಗಾರ ರಸದ ಕಳೆಗೆ ಚೆನ್ನಾಗಿರುತ್ತದೆ. ಕವಿ ಕಾಮನು ಅವನೆ ಹೇಳುವಂತೆ ಕ್ರಮವಾಗಿ "ಸಾಮಂತರ ಮಾಂಡಳಿಕರ ಚಕ್ರೇಶರ ಸಭೆ"ಗಳಲ್ಲಿ ಪ್ರಸಿದ್ಧನಾಗಿದ್ದನು. ಮಾಂಡಳಿಕನಾದ ಕಾಮರಾಯನ ಆಶ್ರಯದಲ್ಲಿದ್ದು ತದನಂತರ ದಕ್ಷಿಣ ಚಕ್ರವರ್ತಿಯೆಂಬ ಬಿರುದುಳ್ಳ ಬಲ್ಲಾಳರಾಜನ ಆಸ್ಥಾನವನ್ನು ಆಂಡಯ್ಯನು ಪ್ರವೇಶಿಸಿರಲೂ ಬಹುದು.

ಆದರೆ ಕವಿ ಕಾಮನು ಆತ್ಮಶ್ಲಾಘಾ ವಿರತನಾಗಿಯೂ, ಆಂಡಯ್ಯನು "ಪಲರೆಲ್ಲರ್ತೀರ್ದರ್ದೀ ಕಬ್ಬಂ" ಎಂಬುದರಿಂದ ಅಷ್ಟೊಂದು ಉದ್ಧತನಾಗಿರದಂತೆಯೂ ತೋರುತ್ತದೆ. ಕವಿಯಲ್ಲಿ, ಈ ಬದಲಾವಣೆ ಸ್ವತಂತ್ರಗೊಂಡು ಚಕ್ರವರ್ತ್ಯಾಶ್ರಯವಡೆದ ಮೇಲೆ ಉಂಟಾಗಿದ್ದರಲೂ ಸಾಕು. ಈ ಕವಿಗಳ ಶೈಲಿ ಮತ್ತು ಭಾವನೆ ಇವುಗಳನ್ನು ಪರಿಶೋಧಿಸುವುದಕ್ಕಾಗಿ ಈ ಪದ್ಯಗಳನ್ನು ಉದಾಹರಿಸುತ್ತೇನೆ :—

ಕವಿ ಕಾಮ—

> ಕುಳಿರ್ವ ಬನಂಗಳೊಳ್ ಸುೞಿದು ತಣ್ಪುಳಿಲೊಳ್ ನಡೆಪಾಡಿ ಪೂತ ಪೂ।
> ಗೊಳದೊಳಗಿರ್ದು ಕೆಂದಳಿರ ಪಾಸುಗಳೊಳ್ ನಯದಿಂ ಪೊರಳ್ದು ಕ
> ಣ್ಗೊಳಿಸುವ ಕಾವಣಂಗಳೊಳಪೊಕ್ಕು ಲತಾ ಭವನಂಗಳೊಳ್ತಗು।
> ಳ್ದೊಳಸಿ ಬೞಿಲ್ದೊಳಿಂತುಮಣಮಾಱಿಸಲಾರದೆ ಕಾಮ ತಾಪಮಂ ॥

ಆಂಡಯ್ಯ—

> ಕುಳಿರ್ವ ಕೊಳಂಗಳೊಳ್ ಮಳಲ ದಿಂಟೆಗಳೊಳ್ ಸಮೆದಿರ್ದ ಬಿಟ್ಟನೊಳ್।
> ಚೆಳಿದಳಮಾವಿನೊಳ್ ತಳಿರ ಕಾವಣದೊಳ್ ಪರಿತರ್ಪ ಕಾಲ್ಗಳೊಳ್
> ಬಳಸಿದ ಬಳ್ಳಿ ಮಲ್ಲಿಗೆಯ ಮಂಡವದೊಳ್ ಸುಳಿದಾಡಿ ಮತ್ತಮುಂ।
> ಕಳೆಯವಿನಿತ್ತುಮಾಱಿಳವಳುರ್ಬಿದ ತನ್ನಯ ಮೆಯ್ಯ ಬೆಂಕೆಯಂ ॥

ಈ ಕಾರಣದಿಂದ ಪೂರ್ವೋಕ್ತ ಕವಿಗಳು ಅಭಿನ್ನರೋ ಎಂದೆನಿಸಲಿಕ್ಕೆ ಎಡೆ ತೋರುತ್ತದೆ.

ಬರೆಯುತ್ತ ಬರುವಾಗ ಇನ್ನೊಂದು ವಿಷಯವು ನೆನಪಿಗೆ ಬರುತ್ತಿದೆ. ಸು. ಕ್ರಿ. ಶ. ೧೬೫೫ರಲ್ಲಿದ್ದ ಷಡಕ್ಷರದೇವನು ಬರೆದ "ರಾಜಶೇಖರ ವಿಲಾಸ"ದೊಳಗಣ ಪ್ರಥಮಾಶ್ವಾಸಾಂತ್ಯದ ಮೇರು ಪರ್ವತದ ವರ್ಣನೆಯ ಗದ್ಯದಲ್ಲಿ—

"ವಸಂತಾದಿಗಳೋಳ್ಪಿನಿ ಸಲೆ ಶೃಂಗಾರ ಸಾರ ಸರ್ವಸ್ವಮುಂಗಂ ಬಡೆದಂತೆ ಕಂಗೊಳಿಪ ನಂಗ ಚಕ್ರೇಶ್ವರಂ ತನ್ನಂಗನೆಯಾದ ರತಿದೇವಿಯೊಡನೊಡ್ಡೋಲಗಂಗೊಟ್ಟಿರ್ಪ ವೇಳೆಯೊಳಾದು ಕೋಂಕಣ್ಣದಿ ಸಾದರಂ ಪುಗೆ ರತಿಕಾಮರ್ಗೆ ಮಣಿದುಚಿತಸ್ಥಾನದೊಳ್ಕುಳ್ಳಿರ್ದಾ ಪಿಕನಿಂ ಮಾರ ವೀರನ ಬರೆದ ಬಿರುದಾವಳಿಯಂ ಪಾಡಿಸುತ್ತುಂ, ಆ ರಾಜ ಶುಕನಿಂ ತಾನುಸಿರ್ವ ಮದನ

ವಿಜಯಮೆಂಬ ಸರಸಕಾವ್ಯಮಂ ಪಟು ಕೇಳು ತಲೆದೂಗಲೋದಿಸುತ್ತುಂ ಅವೆರಡಂ ಕಾಣ್ಕೆಗೊಟ್ಟು ಇಚ್ಚೆಗಾರ್ತಿ ಪಚ್ಚೆಪಿಲ್ಲರಿಂ ಮಚ್ಚುವಡೆದು ಅಚ್ಚರಿವಿಗೆ ತಳರ್ವ ಬಚ್ಚೇರೆಗಣ್ಣ ಅಚ್ಚರಸಿಯರಿಂ"

ಹೀಗಿದೆ. ಇಲ್ಲಿ ಹೇಳಿದ ವಿಷಯವು ಕಾಮನ ಗೆಲ್ಲವನ್ನೋದಿ ಮನಸೊಚ್ಚಿಹೋದ ಕಪಿಯ ಬಾಯಿಂದ ಹೊರಟಂತೆ ತೋರುತ್ತದೆ.

ಷಡಕ್ಷರನ ಕಾವ್ಯದಲ್ಲಿ, ಅಪ್ಸರಸಿಯರು ತಮ್ಮ ರಾಜಶುಕನಿಂದ, ಆ ರಾಜಶುಕನು ಬರೆದ ಸರಸ ಕಾವ್ಯವನ್ನೋದಿಸುವರು. ಕಾಮನ ಗೆಲ್ಲವೆಂದರೆ, ಅಪ್ಸರಸಿಯೊಬ್ಬಳು ಸನೆಪಲ್ಲಿ ಬಲ್ಲಹನಿಗೆ ಹೇಳಿದ ತನ್ನ ಪೂರ್ವವೃತ್ತದ ಕಥೆಯನ್ನು ರಾಜಕವಿಯಾದ ಆಂಡಯ್ಯನು ಬರೆದುದು. ಆ ರಾಜಶುಕನು ಬರೆದೋದಿದ ಕಾವ್ಯವು ಮದನ ವಿಜಯವು. ಆಂಡಯ್ಯನು ಬರೆದುದೂ ಮದನ ವಿಜಯವು. ಷಡಕ್ಷರನು ಆ ಸರಸ ಕಾವ್ಯಕ್ಕೆ ಮೆಚ್ಚುಗೊಟ್ಟ ರತಿ ಕಾಮರನ್ನು ಇಚ್ಚೆಗಾರ್ತಿ ಪಚ್ಚೆಪಿಲ್ಲರೆಂಬ ಹೆಸರಿನಿಂದ ಕರೆಯುತ್ತಾನೆ. ಆಂಡಯ್ಯನು ತನ್ನ ನಾಯಿಕಾನಾಯಕರಿಗೆ ಇಚ್ಚೆಗಾರ್ತಿ ಸನೆಪಲ್ಲಿಬಲ್ಲಹರೆಂಬ ಹೆಸರನ್ನೀಯುತ್ತಾನೆ. ಷಡಕ್ಷರನು ವರ್ಣಿಸಿದ ಅಪ್ಸರೆ ಆಮೇಲೆ ಹಾರಿಹೋಗುತ್ತಾಳೆ. ಆಂಡಯ್ಯನ ಅಪ್ಸರಸಿಯೂ ಸನೆಪಲ್ಲನಿಗೆ ಪೂರ್ವವೃತ್ತಾಂತವನ್ನೊರೆದು ಹಾರಿ ಹೋಗುತ್ತಾಳೆ.

ಇಷ್ಟು ಹೋಲಿಕೆಯಿರುವುದರಿಂದ ಷಡಕ್ಷರನು ವರ್ಣನಾವಸರದಲ್ಲಿ ಸೂಚಿಸಿದ ಮದನ ವಿಜಯವೆಂಬ ಸರಸ ಕಾವ್ಯವು ಆಂಡಯ್ಯನ ಮದನ ವಿಜಯವೆಂದೇ ತೋರುತ್ತದೆ. ವೀರಶೈವ ಯತಿಯಾದ ಷಡಕ್ಷರನು, ಆಂಡಯ್ಯನು ಜೈನನಾಗಿದ್ದುದರಿಂದ ಅವನ ಸರಸ ಕಾವ್ಯವನ್ನು ಮಾತ್ರ ಹೀಗೆ ಬಣ್ಣಿಸಿದನೆಂದೋ, ಅಥವಾ ಆಮೇಲೆ ಅವನು 'ಹರಪಾದಾಂಬುಜ ಷಟ್ಪದ'ನಾದ ಕವಿ ಕಾಮನೆನಿಸಿದುದರಿಂದ ಹೀಗೆ ವರ್ಣಿಸಿದನೆಂದೋ ಭಾವಿಸಬಹುದು.

ಆಂಡಯ್ಯನು ಹೇಳಿದ ಪೂರ್ವೋಕ್ತವಾದ "ಕನ್ನಡವೆನಿಪ್ಪ ನಾಡು" ಯಾವುದಾಗಿರಬಹುದು? "ಕನ್ನಡ ನಾಡು" ಎಂದು ಹೇಳದೆ "ಕನ್ನಡವೆನಿಪ್ಪ ನಾಡು" ಎಂದುದರಿಂದ 'ಕನ್ನಡ'ವೆಂಬುದು ಆ ನಾಡಿನ ಹೆಸರೆಂದು ಗೊತ್ತಾಗುತ್ತದೆ. ಅಷ್ಟೇ ಅಲ್ಲ; ಕಾವ್ಯಾದಿಯಲ್ಲಿ "ಕನ್ನಡವೆನಿಪ್ಪ ನಾಡು" ಎಂದು ಏಕವಚನದಿಂದುಸಿರಿ, ಕಡೆಯಲ್ಲಿ—"ಇದು ರಾಯನ ನಾಡ್ಗಳೊಳಕರ್ಗೆ ಸಿಚ್ಚನುಂ" ಎಂದು ನಾಡುಗಳನ್ನು ಬಹುವಚನದಿಂದ ಹೇಳಿದ ಕಾರಣ, ತನ್ನ ರಾಯನ ಆಳಿಕೆಯೊಳಗೆ ಈ ಕನ್ನಡಗಬ್ಬದ ಸಾಮರ್ಥ್ಯವನ್ನರಿವ ರಸಿಕರುಳ್ಳ ಬಹಳ ನಾಡುಗಳಿದ್ದುವೆಂದು ವ್ಯಕ್ತವಾಗುತ್ತದೆಯಲ್ಲದೆ ಆ ನಾಡುಗಳೊಳಗೆ ಪ್ರಸಿದ್ಧಿಗೊಂಡುದು ಕನ್ನಡವೆನಿಪ್ಪ ನಾಡೆಂದೂ ನಿಶ್ಚಿತವಾಗುತ್ತದೆ. "ತಮಿಳ್ನಾಡು, ತೆಲುಂಗುನಾಡು, ಕನ್ನಡ ನಾಡು" ಎಂಬ ಇವೇ ಮೊದಲಾಗಿ ರೂಢಿಗೊಂಡ ಶಬ್ದಗಳ ಮುಂಭಾಗದಲ್ಲಿ ಕೂಡಿದ "ನಾಡು" ಶಬ್ದವು ದೇಶವಾಚಕವೆಂಬುದೂ, ಹಿಂದಣ

ತಮುಳಿರ್ ಮೊದಲಾದುವು ವಿಶಿಷ್ಟ (Particular) ಜನಸಮೂಹ ವಾಚಕವೆಂದೂ ಮೇಲಿಂದಮೇಲೆ ಗೊತ್ತಾಗುತ್ತದೆ. ಆದರಿಂದ, ಸರ್ವ ಸಮಾನವಾದ ಆ 'ನಾಡು' ಶಬ್ದದ ಒಳಗಿಂದೊಳಗಣ ತತ್ವವೇನೆಂದು ವಿಚಾರಿಸಬೇಕಾಗಿದೆ.

ರಾಮಾಯಣ ಕಾಲದಲ್ಲಿ ವಿಂಧ್ಯದಿಂದ ದಕ್ಷಿಣಕ್ಕಿರುವ ಈ ದೇಶವೆಲ್ಲ ಕಾಡಾಗಿದ್ದಿತು. ಸಹ್ಯಪರ್ವತದ ಮೇಲೆ ಸಮುಕಟ್ಟಾದ 'ದಂಡಕ'ವೆಂಬ ಕಾಡು ಹಬ್ಬಿತ್ತು. ಪಂಪಾ ಸರೋವರದ ನೆರೆಯ ಕಿಷ್ಕಿಂಧ ಋಷ್ಯಮೂಕಗಳೆಂಬ ಪರ್ವತಗಳಲ್ಲಿ ವಾನರರೆಂಬವರೂ, ಜನಸ್ಥಾನದಲ್ಲಿ ರಾಕ್ಷಸರೆಂಬವರೂ ಮನೆ ಮಾಡಿಕೊಂಡಿದ್ದರು. ಅಗಸ್ತ್ಯನೇ ಮೊದಲಾದ ಋಷಿಗಳು ಅಲ್ಲಲ್ಲಿ ಆಶ್ರಮಗಳನ್ನಿಟ್ಟು ವಾಸಿಸುತ್ತಿದ್ದರು. ವೇದಬ್ರಾಹ್ಮಣಗಳ ಕರ್ಮಕಾಂಡದ ಗುಣಕಾರದಲ್ಲಿ ಮನಸ್ಸೊಪ್ಪದೆ ಉಪನಿಷನ್ಮಾರ್ಗಾವಲಂಬಿಗಳಾಗಿ ಆ ಋಷಿಗಳು ಹಾಗೆ ಬನದಲ್ಲಿ ವಾಸಿಸುತ್ತಿದ್ದರೆಂದು ತೋರುತ್ತದೆ. ವನವಾಸಗೆಯ್ವುದೆಂದರೆ, ಆಗಿನ ಕಾಲದಲ್ಲಿ ಋಷಿಗಳ ಸನ್ನಿಧಿಗೈದಿ ಜ್ಞಾನೋಪಾರ್ಜನೆ ಮಾಡಿಕೊಳ್ಳುವುದಲ್ಲದೆ ಬರಿಯ ಗೊಂಡಾರಣ್ಯವನ್ನು ಹೊಕ್ಕುಬಿಡುವುದಲ್ಲ. ಕೆಲಕಾಲ ಕಳೆದಮೇಲೆ ಶ್ರೀರಾಮನೂ ವನವಾಸಕ್ಕಾಗಿ ಈ ನಮ್ಮ ಬನವಾಸಿಗೇ ಬಂದನು. ಇದರಿಂದ, ಆಗಿನ ಕಾಲದಲ್ಲಿ ಉಪನಿಷನ್ಮಾರ್ಗಾನುಯಾಯಿಗಳಾದ ಋಷಿಗಳ ಆಶ್ರಮಗಳು ದಕ್ಷಿಣಾಪಥದ ನಮ್ಮಾ ದೇಶದಲ್ಲೇ ಇದ್ದುವೆಂದು ವ್ಯಕ್ತವಾಗುತ್ತದೆ. ಶ್ರೀರಾಮನು ಸೀತಾಲಕ್ಷ್ಮಣ ಸಮೇತನಾಗಿ ಬಹಳ ಕಾಲ ವಾಸಮಾಡಿದ ದಂಡಕಾರಣ್ಯದ ಪ್ರಾಂತಕ್ಕೇ 'ವನವಾಸ' ಅಥವಾ 'ಬನವಾಸಿ' ಎಂಬ ಹೆಸರಾಯಿತು.

ಈ ಬನವಾಸ ಭೂಮಿ ಪೂರ್ವದಲ್ಲಿ ಕಾಡಾಗಿತ್ತೆಂದು ಅದರ ಹೆಸರಿಂದಲೆ ವ್ಯಕ್ತವಾಗುತ್ತದೆ. ಕಠಿನಾರ್ಥಕವಾದ 'ಕಟು' ಎಂಬ ಸಂಸ್ಕೃತ ಶಬ್ದವು ತದ್ಭವವಾಗಿ 'ಕಡು'ವೆಂದೂ ಅದೇ ಶಬ್ದವು ಆದಿ ದೀರ್ಘಗೊಂಡು 'ಕಾಡು' ಎಂದೂ ಆಗುತ್ತದೆ. ಅದಕ್ಕೆ ವಿರೋಧವಾದ ಪದವೇ 'ನಾಡು.' ಸ್ಥಾಪನಾರ್ಥಕವಾದ ಕನ್ನಡದ 'ನಡು' ಧಾತುವಿಂದುದಿಸಿ 'ನಾಡು' ಎಂಬ ಪದ ವಾಗಿರಬೇಕು. ಅಂತೂ ನಾಡೆಂದರೆ ನಡುವುದರಿಂದ ಒಕ್ಕಲುತನಕ್ಕರ್ಹವಾದ ಭಾಗವು; ಕಾಡೆಂದರೆ ತದ್ಭಿನ್ನವಾಗಿ ಗಿಡುಮರ ಬಳ್ಳಿಗಳಿಂದ ಹೆಣೆದಿದ್ದು ಭಯಂಕರ ಮೃಗೋರಗಗಳಿಂದ ವ್ಯಾಪ್ತವಾಗಿ ಮನುಷ್ಯರ ಸ್ಥಿತಿಯನ್ನು ಕಾಡುವ ಪ್ರದೇಶವು. ಅನ್ವಯಾರ್ಥವು ಈಗ ಪರದೆಯೊಳಗಾದರೂ ರೂಢಾರ್ಥವು ರಂಗದಲ್ಲೇ ಅಭಿನಯಿಸುತ್ತದೆ. ಆದರಿಂದ ಆದಿಯಲ್ಲಿ ಪ್ರವೇಶಿಸಿದವರು, ತಮ್ಮ ಅನುಕೂಲತೆಗಾಗಿ ಕಾಡನ್ನು ಕಡಿದು ಕೃಷಿಗೆಯ್ವಲೆಡೆ ಮಾಡಿದ ಸ್ಥಳಕ್ಕೆ 'ನಾಡು' ಎಂಬ ಹೆಸರೊದಗಿರಬೇಕೆಂಬುದು ಸಿದ್ಧವಾಗುತ್ತದೆ. ಅಷ್ಟೆ ಅಲ್ಲ; ನಮ್ಮ ಈ ನಾಡಿನ ಚರಿತ್ರೆಯೊಡನೆ 'ನಾಡು ಕಾಡು' ಶಬ್ದಗಳ ಚರಿತ್ರೆಯೂ ಬಹಳ ಹಿಂದಕ್ಕೊಯ್ಯಲ್ಪಡುತ್ತದೆ.

ನೃಪತುಂಗನು—

ಸುಭಟರ್ಕಳ್ ಕವಿಗಳ್ ಸು |
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್ ‖
ಅಭಿಮಾನಿಗಳತ್ಯುಗ್ರರ್ |
ಗಭೀರ ಚಿತ್ತರ್ ವಿವೇಕಿಗಳ್ ನಾಡವರ್ಗಳ್ ‖

ಈ ರೀತಿಯಲ್ಲಿ ನಾಡವರ ವರ್ಣನೆಗೆಯ್ದುದನ್ನೋದಿದರೂ ಮೇಲೆ ಹೇಳಿದ ಭಾವವೇ ಸ್ಫುಟವಾಗುತ್ತದೆ. ಸುಭಟತ್ವಾದ್ಯನೇಕ ಗುಣಯುತರಾದ ನಾಡವರು ಅಭಿಜನರಾಗಿದ್ದರೆಂದೂ ಹೇಳುತ್ತಾನೆ. ಅಭಿಜನರೆಂದರೆ ಪರಂಪರೆವಿಡಿದು ಬಂದ ಮೂಲ ನಿವಾಸಿಗಳಾದ ದೇಶೀಯರೆಂಬರ್ಥವು. ನಾಡವರೆಂದರೆ ನಾಡೊಡೆಯರು, ಅಥವಾ ನಾಡಿನವರು ಎಂಬ ಅರ್ಥವು. ಆದುದರಿಂದ ಅಭಿಜನರಾದ ನಾಡವರನ್ನು ಸಂಬಂಧಿಸಿದ ' ನಾಡು ' ಶಬ್ದವು ಬಹಳ ಪುರಾತನವಾದುದಾಗಿರಲೇಬೇಕು.

ಕೀರ್ತಿಶೇಷರಾದ ವಾಮನ ಶಿವರಾಮ ಆಪ್ಟೆಯವರ ' ಸಂಸ್ಕೃತ ಇಂಗ್ಲಿಷು' ನಿಘಂಟುವಿನಲ್ಲಿಯೂ, ಇನ್ನೂ ಬೇರೆ ನಿಘಂಟುಗಳಲ್ಲಿಯೂ ' ನಾಟ ' ವೆಂದರೆ ಕರ್ಣಾಟದೇಶವೆಂಬರ್ಥವಿದೆ. ಸು. ೮–೯ನೆಯ ಶತಮಾನದವನಾದ ರಾಜಶೇಖರ ಕವಿ ವಿಜಯೆಯೆಂಬ ಕವಯಿತ್ರಿಯನ್ನು ' ಕರ್ಣಾಟಿ 'ಯೆಂದೂ, ' ನಾಟಿ 'ಯೆಂದೂ ಹೇಳುತ್ತಾನೆ. ಈ ನಾಟ ಶಬ್ದವು ಸಂಸ್ಕೃತದ, '' ನಲಿ, ಬೀಳು '' ಎಂಬರ್ಥಗಳುಳ್ಳ ' ನಟ್ ' ಧಾತುವಿನಿಂದ ಹುಟ್ಟಿದೆ. ಪೂರ್ವೋಕ್ತವಾದ ಕನ್ನಡದ ' ನಡು ' ಧಾತುವಿಗೂ ಈ ' ನಟ್ ' ಧಾತುವಿಗೂ ಪರಸ್ಪರ ಸಂಬಂಧವಿರಬೇಕೆಂದು ನನ್ನ ಭಾವನೆ. ಏಕೆಂದರೆ, ಹಾಡುಗಳನ್ನು ಹಾಡಿಕೊಂಡು ಹೆಂಗಸರು ಅಗೆಯುತ್ತ ನಡುವುದನ್ನು ನೋಡಿದರೆ, ಆ ಕೃಷಿ ಕರ್ಮವನ್ನು ಒಂದು ನರ್ತನವಲ್ಲವೆಂದು ಯಾರೂ ಹೇಳಲಿಕ್ಕಿಲ್ಲ. ಸುಮಾರು ೩ನೆಯ ಶತಮಾನದಲ್ಲಿ ಶೆಂಗುಟ್ಟುವನೆಂಬ ಚೇರರಾಜನು ಉತ್ತರ ದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ಕನ್ನಡರು ಆಡುವ ಕುಣಿತವನ್ನು ನೋಡಿ ಸಂತೋಷಿಸಿದನೆಂದು '' ಶಿಲಪ್ಪದಿಕಾರಂ '' ಎಂಬ ತಮಿಳು ಗ್ರಂಥದಲ್ಲಿ ಹೇಳಿದುದಾಗಿ ತಿಳಿದುಬರುತ್ತದೆ. ಇದರಿಂದ ' ಕನ್ನಡ 'ವೆಂಬ ಶಬ್ದದಲ್ಲಿ ತೋರುವ ' ನಡ ' ಧಾತುವಿಗೂ ಸಂಸ್ಕೃತ ' ನಟ್ ' ಧಾತುವಿನಂತೆ ' ಕುಣಿ ' ಎಂಬರ್ಥವಿರಬೇಕೆಂದೂ ಪರಂಪರೆವಿಡಿದು ನಾಟ್ಯವನ್ನರಿತವರಾದುದರಿಂದ ' ಕನ್ನಡ 'ರೆಂಬ ಹೆಸರು ಅವರಿಗೊದಗಿರಬೇಕೆಂದೂ ಊಹಿಸಬಹುದು. ಮತ್ತು ಕನ್ನಡದ ' ನಲಿ ' ಧಾತುವೂ, ' ನಡೆ ' ಧಾತುವೂ ಸಂಸ್ಕೃತದ ' ನಟ್ ' ಧಾತುವನ್ನೇ ಹೊದ್ದಿರಬಹುದು. ಇದರಿಂದ ಸಂಸ್ಕೃತದ ' ನಾಟ ' ಶಬ್ದವೂ, ಕನ್ನಡದ ' ನಾಡು ' ಶಬ್ದವೂ ಏಕಧಾತು ಸಂಬದ್ಧಗಳಾದುವೆಂದು ತಿಳಿದುಬರುತ್ತದೆ. ನಮ್ಮ ಈ ಕನ್ನಡ ಜಿಲ್ಲೆಯಲ್ಲಿ ಕನ್ನಡವೇ ಮನೆ ಮಾತಾಗಿಯೂ ಅಭಿಜನರಾಗಿಯೂ ಇರುವ ಒಕ್ಕಲಿಗರನ್ನು ನಾಡವರೆಂದು ಕರೆಯುತ್ತಾರೆ. ನೃಪತುಂಗನ ನಾಡವರ ಪರಂಪರೆಯವರೇ ಇವರಾಗಿರಬಹುದೆ?

ನಮ್ಮ ನಾಟ ದೇಶದ ಇತಿಹಾಸವು ಸಂಗೀತ ಶಾಸ್ತ್ರದಿಂದಲೂ ಸ್ವಲ್ಪಮಟ್ಟಿಗೆ ತಿಳಿದುಬರುತ್ತದೆ. ಸಂಗೀತವು "ಮಾರ್ಗ, ದೇಶಿ" ಎಂದೆರಡು ವಿಧವಾಗಿದೆ. ಆ ಎರಡು ಸಂಗೀತವನ್ನು ಸಂಗೀತ ಶಾಸ್ತ್ರದಲ್ಲಿ ಹೀಗೆ ವಿಂಗಡಿಸಿದೆ:—

ಸ್ವರ್ಗೇ ಮಾರ್ಗಾಶ್ರಿತಂ ದೇಶಾಶ್ರಿತಂ ಭೂತಲ ರಂಜಕಂ ।
ತತ್ತದ್ದೇಶೀಯಯಾ ರೀತ್ಯಾ ಯತ್ಸ್ಯಾಲ್ಲೋಕಾನುರಂಜನಂ ॥
ದೇಶೇ ದೇಶೇನು ಸಂಗೀತಂ ತದ್ದೇಶೀತ್ಯಭಿಧೀಯತೇ ।

[ಮಾರ್ಗ ಸಂಗೀತವು ಸ್ವರ್ಗದಲ್ಲಿ ಪ್ರಸಿದ್ಧವಾಗಿದೆ. ದೇಶೀ ಸಂಗೀತವು ಭೂತಲ ರಂಜಕವು. ಆಯಾ ದೇಶೀಯ ರೀತ್ಯನುಸಾರವಾಗಿ ಗಾನಮಾಡಲ್ಪಡುವುದರಿಂದ 'ದೇಶಿ' ಎಂಬ ಹೆಸರಾಯಿತು.]

ಅಷ್ಟೇ ಅಲ್ಲ; ಗೀತ ವಾದ್ಯ ನೃತ್ಯಗಳೆಂಬ ಅಂಗತ್ರಯಗೂಡಿ ಸಂಗೀತವೆನಿಸುವುದು. ಅದರಿಂದ ಗೀತ ವಾದ್ಯ ನೃತ್ಯಗಳೆಂಬ ಮೂರರಲ್ಲಿಯೂ ಮಾರ್ಗ ದೇಶಿಗಳೆಂಬ ಎರಡು ಭೇದಗಳಿವೆಯೆಂಬುದು ಸಿದ್ಧಾಂತವಾಗುತ್ತದೆ. ಸಂಗೀತಾಂತರ್ಗತವಾದ ಗೀತವು ರಾಗಾಶ್ರಯವಾಗಿ ಮೂಡುವುದು. ಅಂತಹ ರಾಗಗಳೊಳಗೆ "ಭೈರವ, ಭೂಪಾಲ, ಶ್ರೀರಾಗ, ಫಲಮಂಜರಿ, ವಸಂತ, ಮಾಳವ, ಬಂಗಾಳ, ನಾಟಿ" ಎಂಬ ಪ್ರಸಿದ್ಧಗಳಾದ ಪುರುಷ ರಾಗಗಳೆಂಟು. ಮೊದಲಿನ ಐದು ರಾಗಗಳು ದೇಶೀಯಗಳೊ ಅಥವಾ ಸ್ವರ್ಗೀಯಗಳೊ ಎಂಬುದನ್ನು ವಿಚಾರಪೂರ್ವಕವಾಗಿ ನಿರ್ಣಯಿಸುವುದು ಪ್ರಕೃತಕ್ಕೆ ಸುಲಭ ಸಾಧ್ಯವಲ್ಲವಾದರೂ, ಮತ್ತಿನ ಮಾಳವ, ಬಂಗಾಳ, ನಾಟಿಗಳೆಂಬ ರಾಗಗಳು ದೇಶೀಯಗಳೆಂದು ಅವುಗಳ ಹೆಸರುಗಳಿಂದಲೆ ವ್ಯಕ್ತವಾಗುತ್ತದೆ. ಈ ಪ್ರತಿಯೊಂದು ರಾಗಗಳನ್ನೂ ಆಶ್ರಯಿಸಿದ ಸ್ತ್ರೀರಾಗಗಳೂ, ಪುತ್ರೀ ಪುತ್ರ ರಾಗಗಳೂ, ದಾಸೀ ದಾಸ ರಾಗಗಳೂ, ಮಿಶ್ರ ರಾಗಗಳೂ ಬಹಳವಾಗಿರುತ್ತವೆ. ಇದರಿಂದ, ನಮ್ಮ ನಾಟ ದೇಶದಲ್ಲುದಿಸಿದ ಗೀತ ವಾದ್ಯ ನೃತ್ಯಗಳಿಂದೊಡಗೂಡಿದ ವಿಶಿಷ್ಟವಾದ ಸಂಗೀತವೊಂದು ಅತಿ ಪೂರ್ವ ಕಾಲದಲ್ಲೆ ನೆಲಸಿದ್ದುದೆಂದು ಗೊತ್ತಾಗುತ್ತದೆ. ಆಮೇಲೆ ನಾಟ ದೇಶವು ಕರ್ನಾಟದೇಶವೆಂಬ ಹೆಸರ್ಗೊಂಡ ಕಾರಣ ನಾಟ ಸಂಗೀತವೂ ಕರ್ನಾಟ ಸಂಗೀತವೆಂದು ರೂಢಿಗೊಂಡುದಾಗಿರಬೇಕು. ತೆಲುಗು, ತಮಿಳು ಮೊದಲಾದ ದಕ್ಷಿಣ ದೇಶಗಳಲ್ಲಿ ವಿಶಿಷ್ಟವಾದ ಬೇರೊಂದು ಸಂಗೀತವಿಲ್ಲ; ಈಗಲೂ ಅವರೆಲ್ಲ ಗಾನ ವಿಷಯದಲ್ಲಿ ಕರ್ನಾಟಕ (ನಾಟ) ಸಂಗೀತವನ್ನೆ ಆಶ್ರಯಿಸುತ್ತಿದ್ದಾರೆ. ವಿಶಿಷ್ಟವಾದ ಸಂಗೀತವು ಆಯಾ ದೇಶಗಳ ವಿಶಿಷ್ಟವಾದ ಸಂಸ್ಕೃತಿ (Culture) ಯನ್ನು ಪಸರಿಸಲಿಕ್ಕೆ ಪ್ರಬಲವಾದ ಸಾಧನವೆಂಬುದು ಸಹೃದಯರಾದವರಿಗೆ ಹೊಸತಲ್ಲ.

ಆದಿಯಲ್ಲಿ ನೀಲಗಿರಿಯಿಂದ ಗೋದಾವರಿಯವರೆಗೆ ಹಬ್ಬಿದ ವಿಸ್ತರವಾದ ನಾಡುಗಳ ಸಮೂಹವೆ ನಾಟದೇಶವಾಗಿದ್ದಿತು. ಈ ನಾಡುಗಳ ಉತ್ತರ ಪಶ್ಚಿಮದ ಸಹ್ಯ ಪರ್ವತದ ಕಾಡನ್ನು ಕಡಿದು ಮಾಡಿದ ನಾಡಿಗೇ ಮೊತ್ತಮೊದಲು ಬನವಾಸ ಅಥವಾ 'ಕಾಡು ನಾಡು' ಎಂಬ ಹೆಸರು ಬಂದಿರಬೇಕು. ಕಾಡು ನಾಡೇ

ಕ್ರಮೇಣ ಉಚ್ಚಾರಣೆಯು ಸಂಕುಚಿತ ಕ್ರಮದಿಂದ "ಕರ್ನಾಡು, ಕರ್ನಾಟ" ಎಂದಾಗಿ ಕಡೆಗೆ "ಕನ್ನಡ, ಕನ್ನಡ" ಎಂಬ ಹೆಸರಿನಿಂದ ನೆಲೆಗೊಂಡಿರಬೇಕು. ಪಾಶ್ಚಾತ್ಯ ಪಂಡಿತರು ಐದನೆಯ ಶತಮಾನದವನಾಗಿರಬೇಕೆಂದು ಹೇಳುವ ಕಾಮಸೂತ್ರಕಾರನಾದ ವಾತ್ಸ್ಯಾಯನ ಮುನಿಯೂ ಈ ಬನವಾಸ ಭೂಮಿಜರಾದ ಸ್ತ್ರೀ ಪುರುಷರ ಲಕ್ಷಣಗಳನ್ನು ವಿವರಿಸುತ್ತಾನೆ. ಆ ಬನವಾಸಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲೇ ಇರುತ್ತದೆ.

ನಾಟದೇಶ ವಿಮರ್ಶೆಯ ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ಒಂದಿಷ್ಟು ಹೇಳಬೇಕಾಗಿದೆ. ಪೂರ್ವೋಕ್ತ ನಾಟದೇಶೀಯರಾದ 'ವೆಳಿರ್' ಅಥವಾ 'ಬಲ್ಲಾಳ'ರು ದ್ವಾರಸಮುದ್ರ (ತುವರೈ)ದಲ್ಲಿ ರಾಜ್ಯವನ್ನಾಳುತ್ತಿದ್ದರೆಂದು ಎರಡನೆಯ ಶತಮಾನದ 'ಕಪಿಲಾರ್' ಎಂಬ ಕವಿ ಹೇಳುತ್ತಾನೆ. ಅಷ್ಟೆ ಅಲ್ಲ; ಆಗಿನ ದ್ವಾರಸಮುದ್ರದರಸನನ್ನು ನಾಲ್ವತ್ತೊಂಬತ್ತು ತಲೆ ಮೊದಲ್ಗೊಂಡು ಆ ನಾಡನ್ನಾಳಿಬಂದ ರಾಜವಂಶೀಯನನ್ನಾಗಿ ಅದೇ ಕವಿ ಬಣ್ಣಿಸಿದ ಕಾರಣ ತಲೆಯೊಂದಕ್ಕೆ ೨೫ ರಂತೆ ಎಣಿಸಿದರೆ ಆದಿಯ ಬಲ್ಲಾಳ ರಾಜನು ಸು. ಕ್ರಿ. ಪೂ. ೧೦೨೫ರಲ್ಲಿ ದ್ವಾರಸಮುದ್ರದಲ್ಲಿ ಪ್ರತಿಷ್ಠಿತನಾಗಿದ್ದಿರಬೇಕು. ಆ ದ್ವಾರಸಮುದ್ರದ ನಾಡಿನಿಂದ ತೆಂಕಣ ಕಡೆಗೆ ಕೆಳಗೈದಿದ ನಾಡವರು ಸ್ಥಾಪಿಸಿದ ನಾಡೇ 'ತಮಿಳಗ'ವು. ಎರಡನೆಯ ಶತಮಾನದಲ್ಲಿ 'ಕಪಿಲಾರ್' ಎಂಬ ಆ ತಮಿಳು ಕವಿ ಬಲ್ಲಾಳ ರಾಜನನ್ನು ಹೊಗಳಿದುದರಿಂದ, ದಕ್ಷಿಣ ಚಕ್ರವರ್ತಿಯಾದ ಆ ಬಲ್ಲಾಳನ ಅಧೀನದಲ್ಲಿ ತಮಿಳಗದ ಕೆಲವಂಶವಾದರೂ ಇತ್ತೆಂಬುದು ನಿಶ್ಚಿತವಾಗುತ್ತದೆ. ತಮಿಳಗದಲ್ಲೇ ನಮ್ಮ ನಾಟದೇಶವೂ ಅಂತರ್ಗತವಾಗಿತ್ತೆಂದು ಊಹಿಸಬಹುದೆ? ಕೂಡದು. ಏಕೆಂದರೆ—

ವಡ ವೇಂಗಡಂ ತೆಂಗುಮರಿಯಾಯಿಡೈತ್ತಮಿಬಿಲ್—

[ಬಡಗು ವೇಂಕಟಗಿರಿ ತೆಂಕು ಕನ್ಯಾಕುಮಾರಿ, ಈ ಮಧ್ಯದಲ್ಲಿ ತಮಿಳಗವು.]

ಎಂದು ಕ್ರಿಸ್ತಪೂರ್ವ ಘನನೆಂದೆಣಿಸಲ್ಪಟ್ಟ 'ತೋಲ್ಕಾಪ್ಪಿಯಮ್' ಎಂಬ ತಮಿಳ್ ವ್ಯಾಕರಣ ಗ್ರಂಥದಲ್ಲಿಯೂ, ಅದಕ್ಕನುವಾಗಿ 'ಶಿಲಪ್ಪದಿಗಾರಮ್' ಮೊದಲಾದ ಗ್ರಂಥಗಳಲ್ಲಿಯೂ ತಮಿಳಗದ ಸೀಮಾ ವಿಭಾಗವು ವಿಸ್ತರಿಸಲ್ಪಟ್ಟಿದೆ. ಅದರಿಂದ ತಮಿಳಗವು ವೇಂಕಟಗಿರಿಯ ದಕ್ಷಿಣಕ್ಕಿದೆಯೆಂದು ಸಿದ್ಧಾಂತವಾಗುತ್ತಿದೆ. ಆದರಿಂದ ನಾಟದೇಶವು ತದಂತರ್ಗತವಾಗುವುದಿಲ್ಲವೆಂಬುದು ಖಂಡಿತವು. ಆ ತೋಲ್ಕಾಪ್ಪಿಯಮ್ ಗ್ರಂಥಕ್ಕೆ ವ್ಯಾಖ್ಯಾನ ಬರೆದ 'ನಚ್ಚಿನಾರ್ಕಿನಿಯಾರ್' ಆದಿ ಸೂತ್ರವನ್ನು ವಿವರಿಸುವಾಗ ಹೀಗೆ ಹೇಳುತ್ತಾನೆ:—

> 'ಅಗಸ್ತ್ಯನು ದ್ವಾರಕೆ (Tuvarapati)ಗೈದಿ ಕೃಷ್ಣವಂಶೀಯರಾದ ಹದಿನೆಂಟು ಮಂದಿ ಯಾದವರನ್ನೊಡಗೊಂಡು ಬಂದು, ದ್ವಾರಸಮುದ್ರದಿಂದ ಹದಿನೆಂಟು ಮಂದಿ 'ವೆಳ್' ಅಥವಾ ವೆಳ್ಳಾಳರನ್ನೊಡಗೂಡಿ, ಅರುವಳರನ್ನೂ ಕರೆದುಕೊಂಡು ರಾಜ್ಯವನ್ನು ವಿಸ್ತರಿಸಲಾಗಿ ತೆಂಕಣ ಕಡೆಗೈದಿದನು.''

ತಮಿಳಿಗವನ್ನೂ ತಮಿಳು ಭಾಷೆಯನ್ನೂ ನೆಲೆಗೊಳಿಸಿದವನು ಅಗಸ್ತ್ಯನೆಂದು ತಮಿಳರಲ್ಲಿ ನಂಬುಗೆಯುಂಟು. ಆದರಿಂದ ಅಗಸ್ತ್ಯನ ಶಿಷ್ಯನೆಂದೆಣಿಸಲ್ಪಟ್ಟ ತೊಲ್ಕಾಪ್ಪಿಯನಾರ ವ್ಯಾಕರಣಕ್ಕೆ ಟಿಪ್ಪಣಿ ಬರೆದ ಈ ನಚ್ಚಿನಾರ್ಕಿನಿಯನಾರ ಮಾತಿನಲ್ಲಿ ಕೆಲವಾದರೂ ವಿಶ್ವಾಸಾರ್ಹವಾಗಿರಬಹುದೆಂಬುದಕ್ಕೆ ಅಡ್ಡಿಯಿಲ್ಲ. ಆದರಿಂದ “ದ್ವಾರಕೆ, ದ್ವಾರಸಮುದ್ರ”ಗಳು ಪರಸ್ಪರ ಸಂಬದ್ಧಗಳಾಗಿದ್ದುವೆಂದೂ, ನಾಟದೇಶದಲ್ಲಿದ್ದ ಯದುವಂಶೋತ್ಪನ್ನರಾದ ಬಲ್ಲಾಳರಾಜರೇ ತಮಿಳಿಗ ಸ್ಥಾಪನಾಧಾರರೆಂದೂ, ಆದರಿಂದಲೇ ಎರಡನೆಯ ಶತಮಾನದ ‘ಕಪಿಲಾರ್’ ದ್ವಾರಸಮುದ್ರದ ಬಲ್ಲಾಳರಾಜನ ಆಶ್ರಯದಲ್ಲಿದ್ದನೆಂದೂ ಸಕಾರಣವಾಗಿ ಸಿದ್ಧಾಂತಿಸಬಹುದು. ಈ ಸಿದ್ಧಾಂತದಿಂದ, ಕನ್ನಡ ದೇಶ, ಕನ್ನಡ ಭಾಷೆಗಳಿಗೆ ತಮಿಳರೇ ಜನಕರಾಗಿದ್ದರೆಂಬ ಕೆಲವರ ವಾದವು ನಿರರ್ಥಕವಾಗಿ ನಾಟ(ಕನ್ನಡಿಗ)ರೆ ತಮಿಳಿಗ ತಮಿಳು ಭಾಷೆಗಳಿಗೆ ಜನಕರಾಗಿರಬೇಕೆಂದು ನಿರ್ಧಾರವಾಗುತ್ತದೆ.

ಕೀರ್ತಿಶೇಷರಾದ ರೈಸ್ ಸಾಹೇಬರೇ ಮೊದಲಾದ ಪಾಶ್ಚಾತ್ಯ ಪಂಡಿತರು ಕನ್ನಡ ನಾಡೆಂಬುದಕ್ಕೆ “ಕರಿ ಮಣ್ಣಿನ ನಾಡು” ಎಂಬ ಅರ್ಥವನ್ನೆಸಗಿದ್ದಾರೆ. ‘ಕರುನಾಡಗಂ’ ಎಂಬ ತಮಿಳು ಪ್ರಯೋಗವನ್ನು ನೋಡಿ ಅವರು ಹಾಗೆ ಭ್ರಮೆಗೊಂಡರೆಂದು ತೋರುತ್ತದೆ. ‘ಬನವಾಸಿ’ ಶಬ್ದದ ರೂಪಾಂತರವಾದ ‘ಕರಿನ್ನಾಡು’ ಅಥವಾ ‘ಕರ್ನಾಡು’ ಎಂಬುದೇ ತಮಿಳರ ಉಚ್ಚಾರಣೆಗನುವಾಗಿ ‘ಕರುನಾಡು’ ಎಂದಾಗಿ, ಸ್ವಾರ್ಥದಲ್ಲಿ ಅವರೇ ಹೆಚ್ಚಾಗಿ ಉಪಯೋಗಿಸುವ ‘ಅಗಮ್’ ಶಬ್ದದೊಡಗೂಡಿ “ಕರುನಾಡಗಮ್” ಎಂಬ ರೂಪವಾಗಿದೆ. (“ಅಗಮ್, ಅಗತ್ತು” ಎಂದರೆ ‘ಒಳಗೆ’ ಎಂಬರ್ಥವು.) “ಕರ್ಣಾಟಕ”ವೆಂಬ ಶಬ್ದವೂ ಈ ‘ಕರುನಾಡಗಮ್’ ಶಬ್ದದ ಸಂಸ್ಕೃತ ರೂಪವಲ್ಲದೆ ‘ಕರ್ಣಾಟ’ದ ಮೇಲೆ ‘ಕ’ ಪ್ರತ್ಯಯವನ್ನು ಹಚ್ಚಿ ರೂಪಿಸಿದುದಲ್ಲ. ಕರಿ ಮಣ್ಣಿನ ನಾಡಾದುದರಿಂದಲೇ ಆ ಹೆಸರು ಬಂದಿರಬೇಕಾದರೆ, ತದ್ಭಿನ್ನವಾದ ಬಿಳಿ ಮಣ್ಣಿನ ನಾಡಾಗಲಿ, ಕೆಮ್ಮಣ್ಣಿನ ನಾಡಾಗಲಿ ಇರಬೇಕಲ್ಲವೆ? ಅದಾವುದು? ಪ್ರಸಿದ್ಧವಾದ ಅಂತಹುದೊಂದು ನಾಡಿಲ್ಲದೆ ತದ್ಭಿನ್ನವಾದ ಕರಿ ಮಣ್ಣಿನ ನಾಡೆಂಬ ವ್ಯುತ್ಪತ್ತಿಯನ್ನು ನಮ್ಮ ಕನ್ನಡ ನಾಡಿನ ಮೇಲೆ ಹೊರಿಸುವುದು ಹೇಗೆ? ಅಷ್ಟೆ ಅಲ್ಲ; “ಇದು ಬಿಳಿ ಮಣ್ಣು, ಅದು ಕರಿ ಮಣ್ಣು” ಎಂದು ಮೊದಲಾಗಿ ಮಣ್ಣನ್ನು ಪರೀಕ್ಷಿಸುವ ‘ಸರ್ವೇ’ಯವರ ಪದ್ಧತಿಯೂ, ಆ ನಿರ್ಣಯವನ್ನನುಸರಿಸಿ ನಾಡುಗಳಿಗೆ ಹೆಸರಿಡುವ ಕ್ರಮವೂ ಆ ಪುರಾತನ ಕಾಲದಲ್ಲಿರಲಿಲ್ಲವೆಂಬುದನ್ನು ಧಾರಾಳವಾಗಿ ಹೇಳಬಹುದು.

ಬನವಾಸೆಯ ಪ್ರಾಂತದ ನಾಡಿಗೆ ಆದಿಯಲ್ಲಿ ಕನ್ನಡ ನಾಡೆಂಬ ಹೆಸರಿತ್ತೆಂದು ಮೇಲಿನ ವಿಮರ್ಶೆಯಿಂದ ತಿಳಿದುಬರುತ್ತದೆ. ಆ ಬನವಾಸೆಯ ಪ್ರಾಂತವು ಎಲ್ಲೆಲ್ಲಿ ವ್ಯಾಪಿಸಿದ್ದುದೆಂದು ಆಂಡಯ್ಯನಿಗಿಂತ ಎರಡುವರೆ ಶತಮಾನಕ್ಕೆ ಮೊದಲಿದ್ದ

ಪಂಪ ಮಹಾ ಕವಿಯ "ವಿಕ್ರಮಾರ್ಜುನವಿಜಯ"ದಿಂದಲೂ ತಿಳಿದುಬರುತ್ತದೆ. ಕವಿ ತನ್ನ ದೊರೆಯಾದ ಅರಿಕೇಸರಿಯೊಡನೆ ಅಭಿನ್ನನಾದ ಅರ್ಜುನನು ದೇಶಾಟನೆ ಮಾಡುತ್ತ ನಾಗಾನಂದಕ್ಕೆ ಆಶ್ರಯವಾದ ಮಲಯಾದ್ರಿಗೈತಂದನೆಂದು ಬಣ್ಣಿಸಿ—

"ಎಂದಭಿನವ ಜೀಮೂತವಾಹನಂ ಜೀಮೂತವಾಹನನ ಪರೋಪಕಾರದ ಬೀರದ ಪೆಂಪಂ ಮೆಚ್ಚುತ್ತುಂ ಬಂದು ಗೋಕರ್ಣನಾಥನಂ ಗೌರೀನಾಥನನವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ ಮೂರ್ತಿಯುಂ ತ್ರಿಳೋಕೈಕ ಸಂಗೀತ ಕೀರ್ತಿಯುಂ ಕಂಡು ಕೆಯ್ಗಳಂ ಮುಗಿದು—

ಪೃಥ್ವಿ॥ ಪ್ರಚಂಡ ಲಯ ತಾಂಡವ ಕ್ಷುಭಿತಯಾಶು ಯಸ್ಯಾನಯಾ।
ಸದಿಗ್ವಳಯಯಾ ಭುವಾ ಸಗಿರಿ ಸಾಗರ ದ್ವೀಪಯಾ॥
ಕುಲಾಲಕರ ನಿರ್ಭರ ಭ್ರಮಿತ ಚಕ್ರ ಲೀಲಾಯಿತಂ।
ಸಸರ್ವ ಜಗತಾಂ ಗುರುರ್ಗಿರಿಸುತಾ ಪತಿಃ ಪಾತು ನಃ॥

ಎಂದು ಬಾಳೇಂದು ಮೌಳಿಯುಂ ಸ್ತುತಿಸಿ—

ಚಂ॥ ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ।
ಪಗೆಯ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ॥
ನಗೆ ಮೊಗದೊಳ್ಳಳಂಚಲೆಯೆ ಕೂಡುವ ನಲ್ಲರೆ ನೋಳ್ಪೊಡಾವ ಬೆ।
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್॥

ಉ॥ ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ।
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ॥
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್॥

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ।
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ॥
ಪಂ ಗೆಡೆಗೊಂಡೊಡಂ ಮಧು ಮಹೋತ್ಸವಮಾದೊಡಮೇನನೆಂಬೆನಾ।
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ॥

ಮ॥ ಅಮರ್ದಂ ಮುಕ್ಕುಳಿಸುತ್ತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ।
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ಮಾತುಂ ಕುಳಿರ್ ಕೋಳ್ಪ್ಪಿ ಜೊಂ॥
ಸಮಮೇವೇಳ್ಪ್ಪುದು ಸುಪ್ಪ ಮುಂಚಕಮುಮಿಂತೆನ್ನಂ ಕರಂ ನೋಡಿ ನಾ।
ಡೆ ಮನಂಗೊಂಡಿರೆ ತೆಂಕನಾಡ ಮಾಣ್ಪಿಯಿಲ್ನೆನ್ನಂ ಮನಂ ಬರ್ಕುಮೇ॥

ಎಂದರಿಕೇಸರಿ ತೆಂಕನಾಡು ನಾಡಾಡಿಯಲ್ಲದೆ ಮೆಚ್ಚುತ್ತುಮಾ ನಾಡನೊಂದೆ ಬಿಲೊಳುಂಡಿಗೆ ಸಾಧ್ಯಂಮಾಡಿ ಪಶ್ಚಿಮ ದಿಗ್ಭಾಗಾಭಿಮುಖನಾಗಿ ಬಂದು."

ಈ ಪ್ರಕಾರವಾಗಿ ಮುಂದುವರಿಸುತ್ತಾನೆ. ಈ ವರ್ಣನೆಯಿಂದ ಗೋಕರ್ಣ ಮೊದಲ್ಗೊಂಡ ಈ ಕೆಳಗಿನ ನಾಡು ಬನವಾಸಿ ಪ್ರಾಂತಕ್ಕೆ ಸೇರಿತ್ತೆಂದು ನಿಶ್ಚಿತವಾಗುತ್ತದೆ. ಗೋಕರ್ಣದಿಂದ ದಕ್ಷಿಣಕ್ಕೆ ಬಾರಕೂರುವರೆಗೆ ಈ ಬನವಾಸ ದೇಶವು ವಿಸ್ತರಿಸಿಕೊಂಡಿತ್ತು. ಈ ದೇಶಕ್ಕೆ ಅಂದಿನಿಂದ ಇಂದಿನವರೆಗೂ 'ಕನ್ನಡ' ಎಂಬ ಹೆಸರೇ ಪ್ರಸಿದ್ಧವಾಗಿದೆ. ರಾಜಾಧಿಕಾರದ ಬದಲಾವಣೆಯಿಂದಾಗಿ ತುಳು ನಾಡೂ ಇದರೊಡನೆ ಸೇರಿದು ಉತ್ತರ ಕನ್ನಡವೆಂದೂ ದಕ್ಷಿಣ ಕನ್ನಡವೆಂದೂ ಈಗ ಇಂಗ್ಲಿಷರ ಆಳಿಕೆಯಲ್ಲಿ ಭಿನ್ನವಾಗಿದೆ. ಆ ದಕ್ಷಿಣೋತ್ತರದ ಬೆಸುಗೆಯನ್ನು ಬಿಚ್ಚಿದರೆ ಇದೇ ಕನ್ನಡವೆನಿಸಿಪ್ಪ ನಾಡು.

ಆದರೆ, ನೃಪತುಂಗನು—

ಕಾವೇರಿಯಿಂದಮಾ ಗೋ।
ದಾವರಿವರಮಿರ್ದ ನಾಡದಾ ಕನ್ನಡದೊಳ್ ॥
ಭಾವಿಸಿದ ಜನಪದಂ ವಸು।
ಧಾ ವಳಯ ವಿಲೀನ ವಿಶದ ವಿಷಯ ವಿಶೇಷಂ ॥

ಅದಱೊಳಗಂ ಕಿಸುವೊಳಲಾ।
ವಿದಿತ ಮಹಾ ಕೊಪಣನಗರದಾ ಪುಲಿಗೆಱೆಯಾ ॥
ಸದಭಿಸ್ತುತಮಪ್ಪೊಂಕುಂ।
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥

ಹೀಗೆಂದು ಹೇಳಲಿಲ್ಲವೇ? ಇದರಿಂದ ಮೇಲೆ ಹೇಳಿದುದೇ ಕನ್ನಡ ನಾಡೆಂದು ಹೇಗೆ ಸಿದ್ಧವಾಗುತ್ತದೆ? ಎಂದು ಕೆಲವರು ಕೇಳಬಹುದು.

ಹೌದು, ನೃಪತುಂಗನು ಹಾಗೆ ಹೇಳಿದ್ದಾನೆ. ಆ ಸೀಮಾಂತರದೊಳಗಿದ್ದ ನಾಡು "ಕನ್ನಡದೊಳ್ ಭಾವಿಸಿದ ಜನಪದಂ" ಎಂದುದರಿಂದ ಕನ್ನಡ ದೇಶದಲ್ಲಿ ಎಣಿಸಲ್ಪಟ್ಟಿದ್ದುದು, ಎಂಬ ಅರ್ಥವಾಗುತ್ತದೆಯಲ್ಲದೆ ಆ ಇಡೀ ದೇಶಕ್ಕೆ "ಕನ್ನಡ"ವೆಂಬ ಹೆಸರಿತ್ತೆಂದು ಹೇಳಿದಂತಾಗುವುದಿಲ್ಲ. ರಾಜಕೀಯ ನಿಯಮದಿಂದಾಗಿ ನಮ್ಮ ಕನ್ನಡ ಪ್ರಾಂತದೊಳಪಟ್ಟ ಕೊಯಂಬುತ್ತೂರು, ನೀಲಗಿರಿಗಳು ತಮಿಳು ನಾಡಿನೊಳಗಾಗಿವೆ. ಇಡೀ ತುಳುನಾಡೂ, ಮಲೆಯಾಳದ ಸ್ವಲ್ಪಾಂಶವೂ, ದಕ್ಷಿಣ ಕನ್ನಡಿನೊಳಗಾಗಿವೆ. ಇದರಿಂದ ಆಯಾ ನಾಡುಗಳಿಗೆ ತಂತಮ್ಮ ಸ್ವತ್ವವೇ ಇಲ್ಲವೆಂದಾಗುತ್ತದೆಯೇ? ತಿರುಳ್ಗನ್ನಡಿಗರಾದ ಕದಂಬರ ಒಂದು ಶಾಖೆ ಧಾರವಾಡದ ಹತ್ತಿರದ ಹಂಗಳಲ್ಲಿ ಬಹಳ ಮೊದಲೆ ನೆಲೆಗೊಂಡುದರಿಂದ 'ಕಿಸುವೊಳಲು' ಮುಂತಾದ ವಿಶಿಷ್ಟ ಪ್ರದೇಶಗಳ ನಡುವಣ ನಾಡು ಕನ್ನಡದ ತಿರುಳಾಯಿತು. ಶುದ್ಧ ಕನ್ನಡಿಗರಾದ ಅಲ್ಲಿಯ ನಾಡವರು ಪ್ರಬುದ್ಧರಾದರು. ಆಮೇಲೆಯೂ ಕನ್ನಡವನ್ನಾದರಿಸುತ್ತಿದ್ದ ಚಲುಕ್ಯರೂ ರಾಷ್ಟ್ರಕೂಟರೂ ರಾಜರಾದುದರಿಂದ ಅಲ್ಲಿಯ ಕನ್ನಡದ ಸಂಸ್ಕೃತಿಯೊದಗಿ ಆ ಕನ್ನಡವೇ

ತಿರುಳ್ಗನ್ನಡವಾಗಿ ನೆಲೆಗೊಂಡುದೊಂದಾಶ್ಚರ್ಯವಲ್ಲ. ನೃಪತುಂಗನು "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡು" ಎಂದೂ, "ಕನ್ನಡದೊಳ್ ಭಾವಿಪ" ಎಂದೂ ಭೌತಿಕ ಕ್ಷೇತ್ರಗಳಿಂದ ಹೇಳುವ ಕಾರಣ ಆ ಕನ್ನಡ ಪ್ರಾಂತದ ಮೇರೆ ಅವನ ಕಾಲದಲ್ಲಿಯೇ ಶಿಥಿಲವಾಗುತ್ತ ಬಂದಿದೆಯೆಂದಾಯಿತು. ಆದರಿಂದ, ಈಗಿನಂತೆ ಆಗಲೂ ಒಂದು ಪ್ರಾಂತದ ಅಂಶವು ಇನ್ನೊಂದು ಪ್ರಾಂತದಲ್ಲಿ ಸೇರುತ್ತಿತ್ತೆಂದು ವ್ಯಕ್ತವಾಗುತ್ತದೆ. ಅದಿರಲಿ, ನೃಪತುಂಗನು ಇಂತಹ ಸೀಮಾಂತರದ ನಾಡು ಕನ್ನಡ ಪ್ರಾಂತವೆನ್ನುತ್ತಾನೆ. ಆಂಡಯ್ಯನು ಆ ಪ್ರಾಂತದೊಳಗೆ "ಕನ್ನಡ"ವೆಂಬುದು ಈ ನಾಡಿನ ಹೆಸರೆನ್ನುತ್ತಾನೆ. ಕಡೆಗೆ, "ರಾಯನ ನಾಡ್ಗಳೊಳ್" ಎಂದು ಆಂಡಯ್ಯನು ಬಹುವಚನದಿಂದ ಸೂಚಿಸುವ ನಾಡುಗಳೇ ಕನ್ನಡ ಪ್ರಾಂತಕ್ಕೆ ಸೇರಿ ಕಾಮರಾಯನ ಅಧೀನದಲ್ಲಿದ್ದ ನಾಡುಗಳೆಂದು ನಿರ್ಧಾರಿತವಾಗುತ್ತದೆ.

ಅಷ್ಟೇ ಅಲ್ಲ; "ಕಾವನಗೆಲ್ಲ"ದಲ್ಲಿರುವ ಹಲಕೆಲವು ವರ್ಣನಾ ಭಾಗಗಳಿಂದಲೂ, ಶಬ್ದ ವೈಶಿಷ್ಟ್ಯದಿಂದಲೂ "ಕನ್ನಡವೆಸಿಪ್ಪ ನಾಡು" ಈ ಬನವಾಸಿ ಪ್ರಾಂತವೆಂದೇ ಊಹಿಸಬಹುದು. ತನ್ನೊಡೆಯನ "ಕನ್ನಡವೆಸಿಪ್ಪ ನಾಡ"ನ್ನು ಬಣ್ಣಿಸುವ ಹದಿನೆಂಟನೆಯ ಗದ್ಯದಲ್ಲಿ ಆಂಡಯ್ಯನು—

"ಮೇಲೂರ್ಗಳೊಳಾಗಸಮಂ ಮುಂಡಾಡುವಂತೆ ನೆಗೆದ ನೆಲೆವಾಡಂಗಳ"

ಎನ್ನುತ್ತಾನೆ. ಕನ್ನಡವೆಸಿಪ್ಪ ನಾಡು ಕೆಳಗಣದಲ್ಲದಿರುತ್ತಿದ್ದರೆ "ಮೇಲೂರ್ಗಳೊಳ್" ಎಂದು ಹೇಳುತ್ತಿದ್ದನೆ? ಆ ನಾಡಿನ ತಂಗಾಳಿಯನ್ನು ವರ್ಣಿಸುವ ಸಂದರ್ಭದಲ್ಲಿ—

"ಎಡೆವಿಡದೆ ಕಡಲ ತಡಿಗಳೊಳ್ ಪೊಂಬಾಳೆಯ ಕಂಪು ಪೊಂಪುಳಿವೋಗ ನೆಗೆದ ಕೌಂಗಿನ ಸಾಲ ಸಂದಣಿಗಳೊಳ್ ನಿರಿಗರಿಗಂಪನಾಡಿಯುಂ."

ಎಂದು ಹೇಳುತ್ತಾನೆ. ಇಲ್ಲಿ ಹೇಳಿದ ಪೊಂಬಾಳೆಯೆಂದರೆ ಅಡಕೆ ಮರದ "ಸಿಂಗಾರ"ವೆಂಬ ಹೂದೊಡಂಬೆ ಆವಕವಾಗಿರುವ ತೆಳುವಾದ ಹಾಳೆ; ಅದರಿಂದಲೆ ಅದರಲ್ಲಿ ಅಷ್ಟು ಕಂಪು. ಈ ಪೊಂಬಾಳೆಯೆಂಬುದು ಒಂದು ಜಾತಿಯ ಬಾಳೆಯಲ್ಲ. ಈ ಊರ ಹುಟ್ಟುಗನ್ನಡಿಗರಲ್ಲಿ ಈಗಲೂ ರೂಢವಾಗಿರುವ ಶಬ್ದವಿದು. ಇನ್ನೊಂದೆಡೆಯಲ್ಲಿ—

"ಪೊಂಬಾಳೆಗಳಿಂ ಬಳ್ಕುವ ಅಡಕೆಯ ಸಾಲ್ಗಳೊಳಂ"

ಎಂಬುದರಿಂದ ಮೇಲೆ ಹೇಳಿದ ಅರ್ಥವು ಸ್ಪಷ್ಟವಾಗುತ್ತದೆ. ಮೇಲೆ ಉದ್ಧರಿಸಿದ ಗದ್ಯದಲ್ಲಿ ತೋರುವಂತೆ ಕಡಲ ತಡಿಯಲ್ಲಿ ಪೊಂಬಾಳೆಗಳ ಕಂಪು ಪಸರಿಸುತ್ತಿರಲು ನೆಗೆದ ಕೌಂಗಿನ ಸಾಲ ಸಂಬಂಧವು ಈ ಕನ್ನಡವೆಸಿಪ್ಪ ನಾಡಿಗಲ್ಲದೆ ಬೇರಾವ ಕನ್ನಡ ನಾಡಿಗುಂಟು? ಮತ್ತು,

ಅಡರ್ದೆಲೆವಳ್ಳಿಗಳೆಲೆಯಂ।
ಪಿಡಿದಿರ್ಪೆಳಗೌಂಗಿನಲಿ ತರತರದಿಂ ನೇ ॥
ರ್ಪಡೆ ಸಮೆದಲೆವಸರದವೊಲ್ ।
ಕಡುಚೆಲ್ವಂ ಪಡೆದು ತೋರ್ಪುವೀ ಬನದೆಡೆಗಳ್ ॥

ಇಂದಿಗೂ ಕನ್ನಡ ಪ್ರಾಂತದ ಒಳಗೊಳಗೆ ತಿರುಗಾಡಿದವರು ಈ ಪದ್ಯವನ್ನೋದಬೇಕು; ಕನ್ನಡಮೆಸಿಪ್ಪಾ ನಾಡು ಇದಾವುದೆಂದು ಅವರೇ ಹೇಳಬೇಕು. ಕೆಲಮಟ್ಟಿಗೆ ಕನ್ನಡ ಪ್ರಾಂತದ ಪರಿಚಯವುಳ್ಳ ಪ್ರಕೃತ ಲೇಖಕನಿಗೆ ಈ ಕನ್ನಡ ನಾಡಿನ ಹಳ್ಳಿಗಳ ಬನದೊಳಗಣ ಅಡಕೆ ತೋಟಗಳೇ ಕಣ್ಣೆದುರಲ್ಲಿ ನಿಂತಂತಾಗುತ್ತದೆ.

ಆಂಡಯ್ಯನು ಪ್ರಯೋಗಿಸುವ "ಬಂದಿ, ನೊರೆ, ಅಣಂಜೆ, ಕಣಿಗಿಲೆ, ಬಿದಿಗೆ, ಬಲೆ" ಮೊದಲಾದ ಶಬ್ದಗಳನ್ನು, ಈಗಲೂ ಕ್ರಮವಾಗಿ "ಕೊರಳ ಬಂದಿ, ಪಾಪೆ, ನಾಯಿ ಕೊಡೆ, ಒಂದು ಜಾತಿಯ ಕರವೀರ ಪುಷ್ಪ, ಕೋಲು, ಹೀಳೆಯ ದೆಲೆ" ಮುಂತಾದ ಅರ್ಥಗಳಲ್ಲಿಯೇ ಈ ನಾಡ ಕನ್ನಡಿಗರು ಉಪಯೋಗಿಸುತ್ತಾರೆ. ಕನ್ನಡದ ಬೇರೆ ಪ್ರಾಂತಗಳಲ್ಲಿ ಆಯಾ ಶಬ್ದಗಳನ್ನು ಆಯಾ ವಿಶಿಷ್ಟಾರ್ಥಗಳಲ್ಲಿ ಪ್ರಯೋಗಿಸುತ್ತಿರುವಂತೆ ತೋರುವುದಿಲ್ಲ.

ಅದಲ್ಲದೆ ಕಾಮನು ಶಿವನೊಡನೆ ಯುದ್ಧಕ್ಕಾಗಿ ಸೈನ್ಯದೊಡನೆ ಘಟ್ಟವನ್ನು ಹತ್ತುವಾಗ ಮೆಯ್ಯಲುಗದೆ ಯೋಗಸ್ಥನಾಗಿದ್ದ ಸವಣನನ್ನು ಕಾಣುತ್ತಾನೆಂದು ಕವಿ ವರ್ಣಿಸುತ್ತಾನೆ. ಕಾಮರಾಯನು ತನ್ನೊಳಗಿದ್ದ ಈ ಕನ್ನಡ ತುಳುನಾಡುಗಳಿಂದ ಸೈನ್ಯವನ್ನು ಕೂಡಿಸಿಕೊಂಡು ಬಲ್ಲಾಳರಾಜನೊಡನೆ ಯುದ್ಧಕ್ಕೆ ಹೋಗುವಾಗ ಎದುರಾಗುವ ಚಾವುಂಡರಾಯನಿಂದ ಸ್ಥಾಪಿಸಲ್ಪಟ್ಟ ಭವ್ಯವಾಗಿರುವ ಶ್ರವಣಬೆಳ್ಗೊಳದ ಗುಮ್ಮಟಮೂರ್ತಿಯನ್ನೇ ಮನಸ್ಸಿನಲ್ಲಿಟ್ಟು ಹಾಗೆ ವರ್ಣಿಸಿದುದಾಗಿರಲಿಕ್ಕಿಲ್ಲವೆ? 'ಬಿಲ್ಲು ಮೊಗ್ಗಗರ' ಎಂಬುದಾಗಿ ನೂರ ಐವತ್ತೆಂಟನೆಯ ಪದ್ಯದಲ್ಲಿ ಕಾಣುವ ಶಬ್ದಕ್ಕೆ ಟಿಪ್ಪಣಕಾರರು 'ಶೂರರು' ಎಂಬರ್ಥವನ್ನು ಕೊಟ್ಟು ಸಂದೇಹ ಸೂಚಕವಾಗಿ (?) ಈ ಗುರುತನ್ನು ಹಾಕಿರುತ್ತಾರೆ. ಈ ಕನ್ನಡ ತುಳು ನಾಡುಗಳಲ್ಲಿ ಸ್ವಭಾವತಃ ಅತಿ ಶೂರರೂ ಧರ್ಮಶ್ರದ್ಧಾಳುಗಳೂ ಆದ 'ಮೊಗೇರರೆ'ಂಬ ಅಂಬಿಗರಿರುತ್ತಾರೆ. ಪೂರ್ವಕಾಲದ ರಾಜರಲ್ಲಿ ಅವರು ಸೈನಿಕರಾಗಿಯೂ ಇದ್ದರೆಂದು ತಿಳಿದು ಬರುತ್ತದೆ. ಆದರಿಂದ ಈ ಬಿಲ್ಲುಳ್ಳ ಮೊಗೇರರೇ ಆಂಡಯ್ಯನ 'ಬಿಲ್ಲುಮೊಗ್ಗಗ'ರಾಗಿರಬಹುದೆಂದು ತೋರುತ್ತದೆ.

ಆಂಡಯ್ಯನ ಮತಾಂತರ ಪ್ರವೇಶದ ನಿರ್ಣಯವಾಗಬೇಕಾದರೆ ಇನ್ನೂ "ಇದಮಿತ್ಥಂ" ಸಿದ್ಧಾಂತಗಳು ಬೇಕಾದರೂ ಅವನು ಜಿನಮತದ ವೀರ ವೈದಿಕನಾಗಿದ್ದಿಲ್ಲವೆಂಬುದು ನಿಶ್ಚಯವು. ಅವನಲ್ಲಿ ಜೈನತೆಗಿಂತಲೂ ಸರಸವಾದ ಕನ್ನಡ

ಕವಿತ್ವವಿತ್ತು. "ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ, ಬಗೆಗೊಳೆ ಪೇಳಲಾರದಿರಸಿತುಂ ಸಲೆ ಮುನ್ನಿನ ಪೆಂಪನಾಳ್ದ ಕಬ್ಬಿಗರ್" ಎಂಬ ಮಾತಿನಿಂದ ಆವರೆಗಿನ ಕನ್ನಡ ಕವಿಗಳು ಭಾಷಾ ಸ್ವಾತಂತ್ರ್ಯವನ್ನು ಕಡೆಗಣಿಸಿದ್ದರೆಂದಾಗುತ್ತದೆ. ಅಷ್ಟೇ ಅಲ್ಲ; ಆ ಪೆಂಪನಾಳ್ದ ಕಬ್ಬಿಗರೇ ಹಾಗೆ ಕಬ್ಬವನ್ನು ಬರೆದುದರಿಂದ ಕನ್ನಡ ಭಾಷೆಯೇ ಬೇಕಾದಷ್ಟು ಶಬ್ದ ಸಂಪತ್ತಿಯಿಲ್ಲದುದೆಂದು ಊಹಿಸಲಿಕ್ಕೆ ಎಡೆಯಿತ್ತು. ಹೀಗೆ ಕನ್ನಡ ಕಬ್ಬಿಗರ ಅಸಕ್ತಿಯಿಂದ ಕನ್ನಡ ನುಡಿಯ ಮೇಲೇರಿದ ಈ ದುರ್ಯಶವನ್ನು ನೋಡಿ ಬಲ್ಲವರಾದ ಕನ್ನಡಿಗರಿಗೆ—ಬಹುಶಃ ಕನ್ನಡಮೆಸಿಪ್ಪ ನಾಡಿನ ಕನ್ನಡಿಗರಿಗೆ—ಬೇಸರವಾಯಿತು. ಆ ದುರ್ಯಶವನ್ನು ಹೋಗಾಡಿಸಬೇಕಾದರೆ, ಸರಸವಾಗಿ "ಮಾತನಾಡಿದಂದದೊಳೆ" ಅಚ್ಚಗನ್ನಡದಲ್ಲಿ ಕಬ್ಬವನ್ನು ಬರೆಯಬೇಕಾಯಿತು. ಕನ್ನಡದ ಹೆಸರ್ಗೊಂಡ ಕವಿಗಳಿಗಾರಿಗೂ ಸಾಧ್ಯವಾಗದ ಆ ರೀತಿಯಲ್ಲಿ ಕಾವ್ಯವನ್ನು ಬರೆದು ಕನ್ನಡ ನುಡಿ ಕನ್ನಡಮೆಸಿಪ್ಪ ನಾಡುಗಳ ಮರ್ಯಾದೆಯನ್ನುಳಿಸುವ ಶಕ್ತಿ ನಮ್ಮ ಕನ್ನಡಿಗರೆಲ್ಲರ ತವರೂರಾದ ಬನವಾಸಿ ಪ್ರಾಂತದ ಆಂಡಯ್ಯ ಕವಿಗೆ ಮಾತ್ರವೇ ಇತ್ತು. ಆ ಪದ್ಧತಿಯಲ್ಲಿ ಅದಕ್ಕೆ ಮೊದಲು ಯಾರೂ ಬರೆಯಲಾರದಿದ್ದರೆಂದು ಅವನೇ ಹೇಳುತ್ತಾನೆ; ಆ ಮೇಲೆ ಯಾರಾದರೂ ಬರೆದುದು ಕಂಡುಬರುವುದೂ ಇಲ್ಲ. ಅಷ್ಟೇ ಅಲ್ಲ; ಯಾವ ದ್ರಾವಿಡ ಭಾಷೆಗಳಲ್ಲಾದರೂ ಆ ಪದ್ಧತಿಯ ಗ್ರಂಥಗಳುದಿಸಲಿಲ್ಲ. ಮಲೆಯಾಳದಲ್ಲಿ ಮಾತ್ರ ಮಹನೀಯರಾದ, ಉಳ್ಳೂರು ಪರಮೇಶ್ವರಯ್ಯರೆಂಬವರು ಅಂತಹದೊಂದು ಚಿಕ್ಕ ದೇವತಾ ಸ್ತುತಿ ಪರವಾದ ಕಾವ್ಯವನ್ನು ಮಹಾ ಪ್ರಯತ್ನದಿಂದ ಬರೆದಿರುತ್ತಾರೆ. ಅದರಿಂದ "ಮಾತನಾಡಿದವೊಲಂದವನಾಳ್ದಿರೆ" ಕಾವ್ಯವನ್ನು ಬರೆವುದೆಂದರೆ ಎಷ್ಟು ಅಗಾಧ ವಿಷಯವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಆದರೆ, ಆಂಡಯ್ಯನು ಅನೇಕ ತದ್ಭವ ಪದಗಳನ್ನು ಪ್ರಯೋಗಿಸಿದ್ದಾನೆ. ಅವು ಅಚ್ಚಗನ್ನಡ ಶಬ್ದಗಳಾಗುವುದೆಂತು? ಎಂಬ ಪ್ರಶ್ನೆಯೊದಗುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಹೇಳುವುದಕ್ಕೆ ಬೇರೊಂದು ಸ್ವತಂತ್ರೋಪನ್ಯಾಸವೇ ಬೇಕು. ಆದರೂ ದಿಗ್ದರ್ಶನಕ್ಕಾಗಿ ಇಷ್ಟು ಹೇಳುತ್ತೇನೆ.

ಈಗಿನ ಭಾಷಾ ತತ್ವಜ್ಞರು, ಇಂತಿಂತಹ ಭಾಷೆಗಳು ಇಂತಿಂತಹ ಮೂಲ ಭಾಷೆಯ ಸಂತಾನಗಳೆಂದು ವಿಭಾಗಿಸಿದ್ದಾರೆ. ತದ್ಭವ ಪದಗಳೆಂದರೆ, "ಇಂಡೋಯುರೋಪಿಯನ್" ಭಾಷೆಗಳಲ್ಲಿ ಪ್ರಮುಖವಾದ ಸಂಸ್ಕೃತ ಜನ್ಯಗಳಾದುದರಿಂದ ಅವುಗಳೂ ದ್ರಾವಿಡ ಭಿನ್ನ ಜಾತೀಯವಾದ ಸಂಸ್ಕೃತದಲ್ಲೇ ಸೇರಿದುವು. ಅಚ್ಚಗನ್ನಡ ಪದಗಳೆಂದರೆ ಭಿನ್ನ ಜಾತಿ ಭಾಷಾ ಸಂಬಂಧವಿಲ್ಲದೆ ಮೂಲದ್ರಾವಿಡ ಭಾಷೆಯಿಂದಲೇ ಹುಟ್ಟಿ ಕನ್ನಡದಲ್ಲಿ ನೆಲೆಗೊಂಡುವುಗಳಾಗಬೇಕು. ಅಚ್ಚಗನ್ನಡಕ್ಕೆ ಈ ಲಕ್ಷಣವನ್ನು ಮನಸ್ಸಿನಲ್ಲಿಟ್ಟುಕೊಂಡ ಆಧುನಿಕ ವಿದ್ವಾಂಸರು ಮಾತ್ರವೇ "ತದ್ಭವವು ಅಚ್ಚಗನ್ನಡವೇ?" ಎಂಬ ಪ್ರಶ್ನೆಯನ್ನೆತ್ತಬಹುದು.

ಆದರೆ, ಆಂಡಯ್ಯನೆನ್ನುವ ಅಚ್ಚಗನ್ನಡವು ಅಂತಹ ಲಕ್ಷಣ ಪರಿಶುದ್ಧವಾದುದಾಗಿರ ಲಿಲ್ಲ. "ಸರ್ವ ಭಾಷಾಮಯೀ ಭಾಷಾ ಸಂಸ್ಕೃತಾತ್ ಯಸ್ಮಾದಂಬುಜಾತಾ" ಎಂಬ ಪ್ರಾಕ್ತನ ಮತವಾಗಿನದು. ಎಲ್ಲಾ ಭಾಷೆಗಳೂ ಸರ್ವ ಭಾಷಾಮಯ ವಾದ ದೇವ ಭಾಷೆಯ ಅಂಗಗಳೆಂದ ಹೇಳಿ ನಾನಾ ಮೂಲಭಾಷೆಗಳ ತೊಡಕೇ ಇಲ್ಲ. ಸಂಸ್ಕೃತ ಪದವು ಕನ್ನಡದಲ್ಲಿ ತದ್ಭವವಾದೊಡನೆ, ಅದು ಅಚ್ಚಗನ್ನಡ ವಾಯಿತೆಂದು ಆಗಿನವರ ಅಭಿಪ್ರಾಯವಾಗಿತ್ತು.

ಅವನ ಕಾವ್ಯ ರಚನಾ ಪದ್ಧತಿಯನ್ನು ಯಾರೂ ಅನುಸರಿಸಿದಂತೆ ತೋರುವು ದಿಲ್ಲ; ಅನುಸರಿಸುವರೆಂಬ ನಂಬುಗೆಯಾಗಲಿ ಆಶೆಯಾಗಲಿ ಅವನಿಗಿಲ್ಲದಿದ್ದಿರಲೂ ಬಹುದು. ಆದರೆ, ಅವನು ಮಹಾ ಕವಿಗಳೊಳಗೆ ಗಣನೆಗೊಂಡಿದ್ದನೆಂಬುದು ಕೇಶಿರಾಜನ ತಂದೆಯಾದ ಮಲ್ಲಿಕಾರ್ಜುನನು ತನ್ನ ಸೂಕ್ತಿ ಸುಧಾರ್ಣವ ದಲ್ಲಿಯೂ, ಪ್ರಸಿದ್ಧ ವೈಯಾಕರಣನೂ ಕನ್ನಡಮೆಚ್ಚಾ ನಾಡವನೂ ಆದ ಭಟ್ಟಾಕಳಂಕನು ತನ್ನ ಶಬ್ದಾನುಶಾಸನದಲ್ಲಿಯೂ ಅವನ ಪದ್ಯಗಳನ್ನು ಉದ್ಧರಿಸಿ ರುವುದರಿಂದ ಗೊತ್ತಾಗುತ್ತದೆ. ಮೇಲಿನ ವಿವರಣೆಯಿಂದ, ಕಾದಂಬ ಕಾಮು ರಾಜನು ಕ್ರಿ. ಶ. (ಸು.) ೧೨೦೩ರಲ್ಲಿ ಬಲ್ಲಾಳ ರಾಜನೊಡನೆ ಯುದ್ಧವಾಡಿದ ಮೇಲೆ ಸ್ವಲ್ಪ ಕಾಲದೊಳಗೆ ರಾಜಭಕ್ತನಾದ ಆಂಡಯ್ಯನು ಈ ಕಾವ್ಯವನ್ನು ಬರೆದಿರಬೇಕೆಂದು ಊಹಿಸುತ್ತೇನೆ. ಆಂಡಯ್ಯನ ಆ ಕಾವ್ಯ ರಚನಾ ಪದ್ಧತಿ ನೆಲೆಗೊಳ್ಳದಿದ್ದರೂ, ನಮ್ಮ ಕನ್ನಡ ಭಾಷೆಯಲ್ಲಿ ಎಷ್ಟರ ಸ್ವತಂತ್ರತೆ ಇತ್ತು; ಆ ಕಾವ್ಯರಚನಾ ಕ್ರಮವು ಎಷ್ಟು ಸರಸವಾಗಿತ್ತು; ಎಂಬುದರ ನೆನಪು ನಮ್ಮ ಕನ್ನಡಿಗರೆದೆಯಲ್ಲಿ ಮಾಸಿಹೋಗದಿರಲಿ ಎಂಬುದೇ ನನ್ನ ಹೇಳಿಕೆ. ಅದಕ್ಕಾಗಿ ಕಡೆಯ ಅವನ ಪ್ರಾರ್ಥನಾ ಪದ್ಯವನ್ನೇ ಒಂದಿಷ್ಟು ಬದಲಿಸಿ ಹೀಗೆ ಪ್ರಾರ್ಥಿ ಸುತ್ತೇನೆ—

ದೋಸದ ಮಾತು ಪೊರ್ದದೆನೆ ಬಲ್ಲವರಗ್ಗದ ಕನ್ನಡಂಗಳಂ |
ಬಾಸಣವಾಗೆ ಪೇರ್ಚಿಸ್ಟನೊಲವಿಂ ನೆಱೆಕೆ ಕಬ್ಬಿಗರೊಪ್ಪೆ ನಾಡೆಯುಂ |
ಗೋಸಣೆ ಮಾಳ್ಪವನ್ನವಿದು ನಮ್ಮಯ ಕನ್ನಡ ನಾಡೊಳೆಕ್ಕನಲ್ |
ದೇಸಿಯ ಗೊತ್ತು ಜಾಣ್ನುಡಿಯ ತಾಯ್ನೆ ನುಣ್ಣುರುಳೇರ್ಚಿತ್ತಿಯೆಂಬಿನಂ |

ಮುಳಿಯದ ತಿಮ್ಮಪ್ಪಯ್ಯ

ಕರ್ನಾಟಕ ಸಾಹಿತ್ಯ ಪರಿಷತ್ತು

[ಸನ್ ೧೯೩೭ನೆಯ ಇಸವಿ ಮೇ ತಿಂಗಳು ೧೯, ೨೦, ೨೧ನೆಯ ತಾರೀಖುಗಳಲ್ಲಿ ಮಂಗಳೂರಿನಲ್ಲಿ ನಡೆದ ೨೩ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ನಡೆಯಬೇಕಾಗಿದ್ದ ವಾರ್ಷಿಕಾಧಿವೇಶನಕ್ಕೆ ತಕ್ಕಷ್ಟು ಸದಸ್ಯರ ಸಂಖ್ಯೆ ಸಾಲದೆ ಹೋದುದರಿಂದ ಆಗ ಅದನ್ನು ನಡೆಯಿಸಲಾಗಲಿಲ್ಲ.]

ಸನ್ ೧೯೩೭ನೆಯ ಇಸವಿ ಆಗಸ್ಟ್ ತಿಂಗಳು ೨೮ನೆಯ ತಾರೀಖಿನ ದಿವಸ ಮಧ್ಯಾಹ್ನಾತ್ಪರ ೩ ಗಂಟೆಗೆ ಬೆಂಗಳೂರು ಶಂಕರಪುರದಲ್ಲಿರುವ ಕರ್ನಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ ನಡೆದ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಾಮಾನ್ಯಾಧಿವೇಶನದ ಕಾರ್ಯ ವಿವರ:—

ಸಭೆಗೆ ಬಂದಿದ್ದವರು

(೧) ರಾಜಸಭಾಭೂಷಣ ಮ|| ರಾ|| ಕರ್ಪೂರ ಶ್ರೀನಿವಾಸರಾಯರು, ಬಿ.ಎಸ್‌ಸಿ., ಎಲ್.ಸಿ.ಇ. (ಉಪಾಧ್ಯಕ್ಷರು), ಸಭಾಪತಿಗಳು, (೨) ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹಾದ್ದೂರ್ ಮ|| ರಾ|| ರಾ. ನರಸಿಂಹಾಚಾರ್ಯರು, ಎಂ.ಎ., (೩) ಮ|| ರಾ|| ಮಾಸ್ತಿ ವೆಂಕಟೇಶ ಐಯಂಗಾರ್ಯರು, ಎಂ.ಎ., (೪) ಮ|| ರಾ|| ಬಿ. ಪುಟ್ಟಯ್ಯನವರು, ಬಿ.ಎ., (೫) ಮ|| ರಾ|| ಸಿ. ಕೆ. ವೆಂಕಟರಾಮಯ್ಯನವರು, ಎಂ.ಎ., ಎಲ್‌ಎಲ್.ಬಿ., (೬) ಮ|| ರಾ|| ಮಾದನಹಳ್ಳಿ ಪಂಡಿತ ಚೆನ್ನಕೃಷ್ಣಯ್ಯನವರು (ಕೋಲಾರ), (೭) ಮ|| ರಾ|| ಎಸ್. ಕೆ. ನರಸಿಂಹಯ್ಯನವರು, (೮) ಮ|| ರಾ|| ಟಿ. ಅಪ್ಪೂರಾಯರು, ಬಿ.ಎ., ಬಿ.ಎಲ್., (೯) ರಾವ್ ಬಹಾದ್ದೂರ್ ಡಾಕ್ಟರ್ ಸಿ. ಬಿ. ರಾಮರಾಯರು, ಬಿ.ಎ., ಎಂ.ಡಿ., (೧೦) ಮ|| ರಾ|| ಬಿ. ಐ. ಶಾಮರಾಯರು, (೧೧) ಮ|| ರಾ|| ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ., (೧೨) ಪಂಡಿತ ಕವಬದ ನಂಜುಂಡಶಾಸ್ತ್ರಿಗಳು, (೧೩) ಮ|| ರಾ|| ಎಂ. ಎಸ್. ಗೋಪಾಲರಾಯರು, (೧೪) ಮ|| ರಾ|| ಸಿಟ್ಟೂರು ಶ್ರೀನಿವಾಸರಾಯರು, ಬಿ.ಎಸ್‌ಸಿ., ಬಿ.ಎಲ್., (೧೫) ಮ|| ರಾ|| ಟಿ. ಟಿ. ಶರ್ಮರು, (೧೬) ಮ|| ರಾ|| ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ., (೧೭) ಮ|| ರಾ|| ಕೆ. ಸಂಪದ್ಗಿರಿರಾಯರು, ಎಂ.ಎ., (೧೮) ಮ|| ರಾ|| ಬಿ. ವಿ. ಲಕ್ಷ್ಮಣರಾಯರು, (೧೯) ಮ|| ರಾ|| ಕೆ. ಶಂಕರನಾರಾಯಣರಾಯರು, ಎಂ.ಎ., ಬಿ.ಎಲ್., (೨೦) ಮ|| ರಾ|| ಬೆಳ್ಳಾವೆ ವೆಂಕಟನಾರಾಯಣಪ್ಪನವರು, ಎಂ.ಎ. (ಗೌರವ ಕೋಶಾಧ್ಯಕ್ಷರು), (೨೧) ಮ|| ರಾ|| ನಂಗಪುರಂ ವೆಂಕಟೇಶಯ್ಯಂಗಾರ್ಯರು, ಬಿ.ಎ. (ಗೌರವ ಕಾರ್ಯದರ್ಶಿಗಳು).

೧. ಸಭಾಪತಿಗಳ ಸೂಚನೆ, ಸದಸ್ಯರ ಅನುಮತಿಯ ಪ್ರಕಾರ ಆಯ್ಯ ಸಂವತ್ಸರದ ವರದಿಯನ್ನು ಗೌರವ ಕಾರ್ಯದರ್ಶಿಯವರು ಓದಿ ಮುಗಿಸಲು ಡಾಕ್ಟರ್ ಸಿ. ಬಿ. ರಾಮರಾಯರು ವರದಿಯನ್ನು ಅಂಗೀಕರಿಸಬೇಕೆಂದು

ಮಾಡಿದ ಸೂಚನೆಯನ್ನು ಮ॥ ರಾ॥ ಬಿ. ಐ. ಶಾಮರಾಯರು ಅನುಮೋದಿಸಿದರು. ಮ॥ ರಾ॥ ಬಿ. ಪುಟ್ಟಯ್ಯನವರು ಪುಷ್ಟೀಕರಿಸಿದರು. ಐಕಕಂಠ್ಯದಿಂದ ಠರಾವು ಅಂಗೀಕೃತವಾಯಿತು.

೨. ಮೈಸೂರು ಸಂಸ್ಥಾನವನ್ನುಳಿದು ಇತರ ಕರ್ಣಾಟಕ ಪ್ರಾಂತಗಳಿಂದ ಸದಸ್ಯರಾರೂ ಅಧಿವೇಶನಕ್ಕೆ ಬರಲಿಲ್ಲವಾದಕಾರಣ ಮೈಸೂರು ಪ್ರಾಂತಕ್ಕೆ ಮಾತ್ರ ಪ್ರಥಮ ಸಂವತ್ಸರದ ಕಾರ್ಯನಿರ್ವಾಹಕ ಮಂಡಲಿಗೆ ಕೆಳಗೆ ಕೊಟ್ಟಿರುವ ಸದಸ್ಯರನ್ನು ಅಧಿವೇಶನದಲ್ಲಿ ಸೇರಿದ್ದ ಸದಸ್ಯರ ಬಹುಮತಾನುಸಾರವಾಗಿ ಬ್ಯಾಲೆಟ್ ಮೂಲಕ ಚುನಾಯಿಸಲಾಯಿತು:—

೧. ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹಾದ್ದೂರ್ ಮ॥ ರಾ॥ ರಾ. ನರಸಿಂಹಾಚಾರ್ಯರು, ಎಂ.ಎ.
೨. ಮ॥ ರಾ॥ ಸಿ. ಕೆ. ವೆಂಕಟರಾಮಯ್ಯನವರು, ಎಂ.ಎ., ಎಲ್‌ಎಲ್.ಬಿ.
೩. ,, ಟಿ. ಅಪ್ಪೂರಾಯರು, ಬಿ.ಎ., ಬಿ.ಎಲ್.
೪. ,, ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ.
೫. ,, ತಿ. ತಾ. ಶರ್ಮರವರು
೬. ,, ಕೆ. ಸಂಪದ್ಗಿರಿರಾಯರು, ಎಂ.ಎ.
೭. ,, ಮಾಸ್ತಿ ವೆಂಕಟೇಶ ಐಯಂಗಾರ್ಯರು, ಎಂ.ಎ.
೮. ರಾವ್ ಬಹಾದ್ದೂರ್ ಡಾಕ್ಟರ್ ಸಿ. ಬಿ. ರಾಮರಾಯರು, ಬಿ.ಎ., ಎಂ.ಡಿ.
೯. ರಾಜಕವಿ ಭೂಷಣ ಮ॥ ರಾ॥ ಎಚ್. ಲಿಂಗರಾಜ ಅರಸಿನವರು
೧೦. ಮ॥ ರಾ॥ ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ.
೧೧. ,, ಬಿ. ಐ. ಶಾಮರಾಯರು
೧೨. ,, ಡಿ. ಕೊಂಗಾಡಿಯಪ್ಪನವರು

ಮುಂಬಯಿ, ಮದರಾಸು, ನಿಜಾಂ ಕರ್ಣಾಟಕ, ಕೊಡಗು ಈ ಪ್ರಾಂತಗಳ ಪ್ರತಿನಿಧಿಗಳಾಗಿ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಅಕ್ಷಯ ಸಂವತ್ಸರಕ್ಕೆ ಸದಸ್ಯರಾಗಿದ್ದವರೇ ಪ್ರಥಮ ಸಂವತ್ಸರಕ್ಕೂ ಸದಸ್ಯರಾಗಿರತಕ್ಕದೆಂದು ತೀರ್ಮಾನವಾಯಿತು.

ಸೂಚಕರು : ಸಭಾಪತಿಗಳು

ಅವರ ಹೆಸರುಗಳನ್ನು ಕೆಳಗೆ ಕೊಟ್ಟಿದೆ:—

ಮುಂಬಯಿ ಪ್ರಾಂತಕ್ಕೆ—

೧. ಮ॥ ರಾ॥ ಕೌಜಲಗಿ ಶ್ರೀನಿವಾಸರಾಯರು, ಬಿ.ಎ., ಎಲ್‌ಎಲ್.ಬಿ. (ಬಿಜಾಪುರ)
೨. ರಾವ್ ಸಾಹೆಬ್ ಮ॥ ರಾ॥ ಪಿ. ಜಿ. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ. (ಬಿಜಾಪುರ)

೩. ಮ॥ ರಾ॥ ಕೃಷ್ಣಾಜಿ ಹನುಮಂತ ಮುದವೇಡಕರ (ಧಾರವಾಡ)

೪. ,, ಎನ್. ಕೆ. ಹುಯಿಲಗೋಳ್, ಬಿ.ಎ., ಎಲ್‌ಎಲ್.ಬಿ. (ಗದಗ)

೫. ,, ಕೆ. ಜಿ. ಗೆಜ್ಜಿ, ಬಿ.ಎ., ಎಲ್‌ಎಲ್.ಬಿ. (ಬೆಳಗಾಂವಿ)

೬. ,, ಎ. ಬಿ. ಆಲೂರ್, ಬಿ.ಎ., ಎಲ್‌ಎಲ್.ಬಿ. (ಧಾರವಾಡ)

೭. ,, ಆರ್. ಎ. ಜಹಗೀರದಾರ್, ಎಂ.ಎ., ಎಲ್‌ಎಲ್.ಬಿ. (ಮುಂಬಯಿ)

೮. ,, ರಂಗಪ್ಪ ಭೀಮಪ್ಪ ಪೋದ್ದಾರ್, ಬಿ.ಎ. (ಧಾರವಾಡ)

೯. ,, ಕೆ. ಜಿ. ಕುಂದಣಗಾರ, ಎಂ.ಎ. (ಕೊಲ್ಹಾಪುರ)

ಮದರಾಸು ಪ್ರಾಂತಕ್ಕೆ—

೧. ಮ॥ ರಾ॥ ಬೆನಗಲ್ ರಾಮರಾಯರು, ಎಂ.ಎ., ಎಲ್‌ಎಲ್.ಬಿ. (ಮದರಾಸು)

೨. ,, ರಾಜಗೋಪಾಲಕೃಷ್ಣರಾಯರು (ಉಡುಪಿ)

೩. ,, ಎಚ್. ತಿಮ್ಮಕೃಷ್ಣರಾಯರು, ಬಿ.ಎ., ಬಿ.ಎಲ್. (ಬಳ್ಳಾರಿ)

೪. ,, ಕೆ. ಟಿ. ಶ್ರೀನಿವಾಸಾಚಾರ್ಯರು, ಬಿ.ಎ., ಎಲ್‌ಎಲ್.ಬಿ. (ಬಳ್ಳಾರಿ)

೫. ,, ಪಿ. ವೆಂಕೋಬಾಚಾರ್ಯರು, ಎಂ.ಎ., ಎಲ್‌ಎಲ್.ಬಿ. (ಬಳ್ಳಾರಿ)

ಹೈದರಾಬಾದು ಸಂಸ್ಥಾನಕ್ಕೆ—

೧. ಮ॥ ರಾ॥ ಕೃಷ್ಣರಾವ್ ಕಪಟ್ರಾಲ್, ಪ್ಲೀಡರ್ (ಗುಲ್ಬರ್ಗ)

ಕೊಡಗಿಗೆ—

೧. ಮ॥ ರಾ॥ ಎನ್. ಆರ್. ಸುಬ್ಬಣ್ಣಯ್ಯನವರು (ನಿಡತ)

ಉತ್ತರ ಕರ್ಣಾಟಕಕ್ಕೆ—

೧. ಮ॥ ರಾ॥ ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ (ಬನಹಟ್ಟಿ)

೨. ,, ಗಂಗಾಧರಪ್ಪ ಸಂಗಪ್ಪ ಸಾಬೋಜಿ (ಥಲಕವಾಡಿ)

೩. ನಿಜಾಂ ಸಂಸ್ಥಾನದ ಹೈಕೋರ್ಟಿನ ಉಚ್ಚ ನ್ಯಾಯಾಧೀಶ ಪದವಿಗೆ ಕನ್ನಡಿಗರಾದ ಮ॥ ರಾ॥ ಜಿ. ಗಿರಿರಾಯರು ಅವರ ಉತ್ತಮ ಯೋಗ್ಯತೆಗನುಗುಣವಾಗಿ ನಿಜಾಂ ಸರ್ಕಾರದಿಂದ ಚುನಾಯಿಸಲ್ಪಟ್ಟಿರುವುದಕ್ಕಾಗಿ ಪರಿಷತ್ತಿನ ಸದಸ್ಯರ ಸಂತೋಷ ಸೂಚಕವಾದ ಅಭಿನಂದನ ಪತ್ರವನ್ನು ಆ ಮಹನೀಯರಿಗೆ ಕಳುಹಿಸಿಕೊಡತಕ್ಕದೆಂದು ತೀರ್ಮಾನ ಮಾಡಲಾಯಿತು.

ಸೂಚಕರು :—ಮ॥ ರಾ॥ ಪಿಟ್ಟೂರು ಶ್ರೀನಿವಾಸರಾಯರು.

ಅನುಮೋದಕರು :—ಮ॥ ರಾ॥ ಟಿ. ಅಪ್ಪೂರಾಯರು.

೪. ಪ್ರಥಮ ಸಂವತ್ಸರದ ಆಯವ್ಯಯದ ಅಂದಾಜು ಪಟ್ಟಿಯನ್ನು ಓದಿ, ಅದನ್ನು ಅಂಗೀಕರಿಸತಕ್ಕದೆಂದು ತೀರ್ಮಾನವಾಯಿತು.

ಸೂಚಕರು :—ಮ॥ ರಾ॥ ಕೆ. ಶಂಕರನಾರಾಯಣರಾಯರು.

ಅನುಮೋದಕರು :—ಮ॥ ರಾ॥ ಬಿ. ಐ. ಶಾಮರಾಯರು.

೫. ಆಲೋಚ್ಯ ವಿಷಯಗಳಲ್ಲಿ ಉಳಿದಿರುವುದನ್ನು ಮುಂದಿನ ತಿಂಗಳು ಸೆಪ್ಟಂಬರು ೧೮ನೆಯ ತಾರೀಖು ಭಾನುವಾರ ದಿವಸ ಸಭೆ ಕೂಡಿ ಚರ್ಚಿಸತಕ್ಕದೆಂದು ತೀರ್ಮಾನವಾಯಿತು.

ಸಭಾಪತಿಗಳಿಗೆ ವಂದನೆಯನ್ನು ಸಮರ್ಪಿಸಿ ಸಭೆಯು ಚದರಿತು.

(ಸೈನಾಗಿದೆ) **ನಂ. ವೆಂಕಟೇಶಯ್ಯಂಗಾರ್ಯರು,**
ಗೌ॥ ಕಾರ್ಯದರ್ಶಿ.

(ಸೈನಾಗಿದೆ) **ಕರ್ಪೂರ ಶ್ರೀನಿವಾಸರಾವ್,**
ಸಭಾಪತಿಗಳು.

ಆಗಸ್ಟು ೨೮ನೆಯ ತಾರೀಖಿನ ಅಧಿವೇಶನದಲ್ಲಿ ಅಂಗೀಕೃತವಾದ ೧ನೆಯ ಠರಾವಿಗನುಸಾರವಾಗಿ ಸೆಪ್ಟಂಬರ್ ತಿಂಗಳು ಭಾನುವಾರ ೧೮ನೆಯ ತಾರೀಖಿನ ದಿವಸ ಮಧ್ಯಾಹ್ನಾತ್ಪರ ೩ ಗಂಟೆಗೆ ಪರಿಷನ್ಮಂದಿರದಲ್ಲಿ ವಾರ್ಷಿಕಾಧಿವೇಶನಕ್ಕೆ ಬಂದಿದ್ದ ಸದಸ್ಯರ ಸಂಖ್ಯೆಯು ಸಭಾ ಕಾರ್ಯವನ್ನು ನಡೆಯಿಸುವುದಕ್ಕೆ ನಿಯಮಿತವಾದ ಸಂಖ್ಯೆಗೆ ಕಡಿಮೆಯಾಗಿದ್ದುದರಿಂದ ಅಧಿವೇಶನವು ನಡೆಯಲಿಲ್ಲ.

ಅಧಿವೇಶನಕ್ಕೆ ಬಂದಿದ್ದವರು

೧. ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸರಾಯರು,
ಬಿ.ಎಸ್‌ಸಿ., ಎಲ್.ಸಿ.ಇ. (ಉಪಾಧ್ಯಕ್ಷರು)
೨. ರಾವ್ ಬಹಾದ್ದೂರ್ ಡಾಕ್ಟರ್ ಸಿ.ಬಿ. ರಾಮರಾಯರು, ಬಿ.ಎ., ಎಂ.ಡಿ.
೩. ಮ॥ ರಾ॥ ಬಿ. ಐ. ಶಾಮರಾಯರು
೪. ,, ಮಾಸ್ತಿ ವೆಂಕಟೇಶ ಐಯಂಗಾರ್ಯರು, ಎಂ.ಎ.
೫. ,, ಸಿ. ವೆಂಕಟರಮಣಶಾಸ್ತ್ರಿಗಳು
೬. ,, ಪಂಡಿತ ಕಡಬದ ನಂಜುಂಡಶಾಸ್ತ್ರಿಗಳು
೭. ,, ಬಿ. ಸುಬ್ಬರಾಯರು
೮. ,, ಸಂಗಪುರಂ ವೆಂಕಟೇಶಯ್ಯಂಗಾರ್ಯರು,
(ಗೌ॥ ಕಾರ್ಯದರ್ಶಿ)

(ಸೈನಾಗಿದೆ)

ನಂ. ವೆಂಕಟೇಶಯ್ಯಂಗಾರ್ಯರು,
ಗೌ॥ ಕಾರ್ಯದರ್ಶಿ.

ಕರ್ಪೂರ ಶ್ರೀನಿವಾಸರಾವ್,
ಸಭಾಪತಿಗಳು.

ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು

ಪ್ರಭವ ಸಂವತ್ಸರದ ಆಯ ವ್ಯಯದ ಅಂದಾಜು ಪಟ್ಟಿ

ಆಯ	ರೂ. ಆ. ಪೈ.	ವ್ಯಯ		ರೂ. ಆ. ಪೈ.
೧ ವರ್ಷಾರಂಭದಲ್ಲಿದ್ದ ಶಿಲ್ಕು	೧೬,೭೪೬–೮–೭	೧ ಸಿಬ್ಬಂದಿಯ ವೆಚ್ಚ		
೨ ತಿಂಗಳಗಟ್ಟಲೆ ಮೈಸೂರು ಸರ್ಕಾರದಿಂದ ಬರುವ ವೊಬಲಗು, ರೂ. ೧೨೫ರ ಮೇರೆ ..	೧,೫೦೦–೦–೦	೧ ಸಹಾಯಕ ಕಾರ್ಯದರ್ಶಿ,	೫೦ ರೂ. ಮೇರೆ	೧,೪೦೪–೦–೦
		೧ ಪಂಡಿತರು	.. ೩೦ ,, ,,	
೩ ಸದಸ್ಯರಿಂದ ಚಂದಾ ವೊಬಲಗು (ಸುಮಾರು)	೬೫೦–೦–೦	೧ ಗುಮಾಸ್ತೆ	.. ೨೫ ,, ,,	
೪ ಪರಿಷತ್ಪತ್ರಿಕೆಯ ಚಂದಾ ವೊಬಲಗು (ಸುಮಾರು)	೨೦೦–೦–೦	೧ ಜವಾನ	.. ೧೨ ,, ,,	
೫ ಹಿಂದಣ ಬಾಕಿ ವಸೂಲಾಗಬಹುದಾದುದು (ಸುಮಾರು)	೧೦೦–೦–೦	೨ ಆಫೀಸು ಬಾಡಿಗೆ	.. ೩೦ ರೂ. ಮೇರೆ	೩೬೦–೦–೦
೬ ಪುಸ್ತಕಗಳ ಮಾರಾಟದಿಂದ (ಸುಮಾರು)	೬೦೦–೦–೦	೩ ದೀಪದ ವೆಚ್ಚ	.. ..	೪೦–೦–೦
೭ ಪರಿಷತ್ತಿನಲ್ಲಿರುವ ಅಚ್ಚಿನ ಕಾಗದದ ಬೆಲೆ (ಸುಮಾರು)	೫೦–೦–೦	೪ ಬರೆವಣಿಗೆಯ ಸಾಮಗ್ರಿ	.. ..	೧೦೦–೦–೦
೮ ಡಿಪಾಜಟ್ಟುಗಳ ಮೇಲೆ ಬಡ್ಡಿ	೫೦೦–೦–೦	೫ ಅಂಚೆಯ ಹಾಸಲು	.. ..	೨೦೦–೦–೦
೯ ಪಂಪ ಭಾರತಕ್ಕಾಗಿ ಕೊಟ್ಟಿರುವ ಡಿಪಾಜಟ್ಟು ..	೧೦೦–೦–೦	೬ ಮುದ್ರಣದ ವೆಚ್ಚ ಮತ್ತು ಕಾಗದ	..	೧,೫೦೦–೦–೦
		೭ ಪಂಪ ಭಾರತಕ್ಕೆ ವೆಚ್ಚ	.. ..	೬೦೦–೦–೦
		೮ ಪುಸ್ತಕ ಭಂಡಾರಕ್ಕೆ	.. ..	೨೫೦–೦–೦
		೯ ವಾಚನ ಮಂದಿರಕ್ಕೆ	.. ..	೬೦೦–೦–೦
		೧೦ ಬಹುಮಾನಗಳಿಗಾಗಿ	.. ..	೬೦೦–೦–೦
		೧೧ ಪ್ರಚಾರಕ ಕಾರ್ಯಕ್ಕೆ	.. ..	೪೦೦–೦–೦
		೧೨ ಸಮ್ಮೇಳನದ ವೆಚ್ಚಕ್ಕಾಗಿ	.. ..	೨೫೦–೦–೦
		೧೩ ಮರದ ಅಲಮಾರುಗಳು ೨	.. ..	೨೫೦–೦–೦
		೧೪ ಇತರ ವೆಚ್ಚಗಳು	.. ..	೧೩೮–೮–೭
		೧೫ ಕಟ್ಟಡಕ್ಕೆ	.. ..	೭,೪೦೦–೦–೦
		೧೬ ವಿಜ್ಞಾನ ಸಂಬಂಧವಾದ ಪುಸ್ತಕಗಳ ಮುದ್ರಣ	..	೨,೬೫೦–೦–೦
ಒಟ್ಟು ..	೧೫,೫೪೨–೮–೭	ಒಟ್ಟು	..	೧೫,೫೪೨–೮–೭

ಮೇಘ ದೂತ ಕಾವ್ಯದ ಸೊಬಗು

೧. ಪಂಡಿತರ ಅಭಿಪ್ರಾಯ—ಕಾಳಿದಾಸ ಮಹಾಕವಿಯ ಮೇಘ ದೂತ ಕಾವ್ಯದ ಸೊಬಗನ್ನು ನೋಡಿ ಅನೇಕ ವಿದ್ವನ್ಮಣಿಗಳು ಮುಗ್ಧರಾಗಿಹೋಗಿದ್ದಾರೆ. ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರವರು ಅದು ಅಮೋಘವಾದ ಅದ್ಭುತ ಕಾವ್ಯವೆಂದು ಕರೆದಿದ್ದಾರೆ. ಮೇಘ ದೂತ ಕಾವ್ಯವು ಕಲಾ ನೈಪುಣ್ಯದ ಪರಿಪೂರ್ಣ ಸಿದ್ಧಿಯೆಂದು ಟಾಸಿಯುವರು ಹೊಗಳಿದ್ದಾರೆ. ಫೌಷೆಯುವರು ಮೇಘ ದೂತ ಕಾವ್ಯದ ವಿಷಯವನ್ನು ಪ್ರಸ್ತಾಪಿಸುತ್ತ, ಯೂರೋಪು ಖಂಡದಲ್ಲಿ ರಚಿಸಲ್ಪಟ್ಟಿರುವ ಕರುಣ ರಸ ಪರಿಪೂರ್ಣವಾದ ಗೀತೆಗಳಲ್ಲಿ ಯಾವುದೊಂದೂ ಇದಕ್ಕೆ ಸರಿದೂಗುವಂತಿಲ್ಲವೆಂದು ಮುಕ್ತಕಂಠರಾಗಿ ಹೇಳಿದ್ದಾರೆ. ಪ್ರೊಫೆಸರ್ ಮಾನಿಯರ್ ವಿಲಿಯಂಸ್ ಎಂಬುವರಂತು—"ಮೇಘ ದೂತ ಕಾವ್ಯದಲ್ಲಿ ಹೋಮರ್ ಕವಿಯ ಗ್ರಂಥಗಳ ಘನತೆ ಗಾಂಭೀರ್ಯಗಳೂ, ವರ್ಜಿಲನ ಕವಿತೆಯ ಕೋಮಲತೆಯೂ, ಓವಿಡ್ ಕವಿಯ ಗ್ರಂಥಗಳಲ್ಲಿಯ ರಸಪುಷ್ಟಿಯೂ ಮತ್ತು ಷೇಕ್ಸ್‌ಪಿಯರ್ ಮಹಾ ಕವಿಯ ಗ್ರಂಥಗಳಲ್ಲಿ ಗೋಚರವಾಗುವ ಅಂತರಾವೇಶ ಪೂರಿತವಾದ ಉದಾತ್ತತೆಯೂ ಸಮ್ಮಿಳಿತವಾಗಿ ಸೇರಿವೆ. ಇಷ್ಟಾದರೂ ಅದರಲ್ಲಿ ಆಡಂಬರವಿಲ್ಲ. ಸರಳತೆಯಿಂದ ಕೂಡಿದ್ದೂ ಕಾವ್ಯವು ಅತಿ ಮನೋಹರವಾಗಿದೆ. ಇದನ್ನು ನೋಡಿದರೆ, ಸರಳತೆಯಿಂದ್ದೂ ಸೌಂದರ್ಯದ ಸಿದ್ಧಿಯೆನಿಸುವುದು ಸಾಧ್ಯವೆಂಬ ಅಥೀನಿಯನರ ಬಿಂಕದ ಪ್ರೌಢ ವಾಣಿಯು ನೆನಪಿಗೆ ಬರುವಂತಾಗುತ್ತದೆ." (It combines the majesty of Homer with the tenderness of Virgil, the Luxuriance of Ovid, and the depth of Shakespeare. And yet it is simple and contains enough to suggest the old Athenian boast of beauty without extravagance) ಎಂದು ಹೇಳಿದ್ದಾರೆ. ಪ್ರೊಫೆಸರ್ ವಿಲ್ಸನ್‌ರವರು—"ಮೇಘ ದೂತ ಕಾವ್ಯದ ಭಾಷಾ ಸರಣಿಯು ಸಮಾಸ ಪದಗಳಿಂದ ನಿಬಿಡವಾಗಿದೆ. ಆದರೂ, ಕಾವ್ಯವು ಅಂದಗೆಡುವಷ್ಟು ಹೆಚ್ಚಾಗಿ ಸಮಾಸ ಪದಗಳಿಲ್ಲ. ವಾಕ್ಯಗಳ ಜೋಡಣೆಯು ಸ್ವಾಭಾವಿಕ ಕ್ರಮವನ್ನನುಸರಿಸಿದೆ. ವೃತ್ತ ಲಕ್ಷಣದ ದೆಸೆಯಿಂದಂತು ಮಾಧುರ್ಯವೂ ಘನತೆಯೂ ಅಸಾಧಾರಣವೆನಿಸುವಷ್ಟು ಮಟ್ಟಿಗೆ ಒಟ್ಟುಗೂಡುವ ಅನುಕೂಲ್ಯವುಂಟು" ಎಂದು ಹೇಳಿದ್ದಾರೆ. ಡಾಕ್ಟರ್ ಭೌದಾಜಿಯುವರು—"ಮೇಘ ದೂತ ಕಾವ್ಯವು ಕಾವ್ಯಗಳಲ್ಲಿ ಅತ್ಯುತ್ತಮವಾದ ಪ್ರೌಢ ಗ್ರಂಥಗಳಲ್ಲೊಂದಾಗಿದೆ" ಎಂದು ಹೇಳಿದ್ದಾರೆ. ದಿವಂಗತರಾದ ರೊಮೇಶಚಂದ್ರ ದತ್ತರು ಹೇಳಿರುವುದನ್ನು ನೋಡಿ—"ಕಾಳಿದಾಸನ ಮೇಘ ದೂತ ಕಾವ್ಯವು ಗೀತೆಗಳ ರತ್ನ. ಸಂಸ್ಕೃತ

ಸಾಹಿತ್ಯದಲ್ಲಾಗಲಿ, ಅಥವಾ ಇತರ ಸಾಹಿತ್ಯದಲ್ಲಾಗಲಿ ಈ ಕಾವ್ಯಕ್ಕೆ ಸಮವಾದ ಮತ್ತೊಂದು ಕಾವ್ಯವೇ ಇಲ್ಲವೆಂದು ತೋರುವಷ್ಟು ಮಟ್ಟಿನ ಮಾಧುರ್ಯವೂ, ಘನತೆ ಕರುಣಗಳೂ ಅದರಲ್ಲಿ ತುಂಬಿವೆ.'' ಎಲ್ಫಿನ್‌ಸ್ಟನರಂತು—''ಕಾಳಿದಾಸ ಮಹಾಕವಿಯು ರಚಿಸಿರುವ ಮೇಘದೂತ ಕಾವ್ಯದಲ್ಲಿರುವ ಅನೇಕ ಶ್ಲೋಕಗಳಲ್ಲಿ ಕಂಡುಬರುವ ಭಾಷಾಮಾಧುರ್ಯದ ಅಂದವೂ, ಗಾಂಭೀರ್ಯದ ವೈಖರಿಯೂ ಇಷ್ಟುಮಟ್ಟಿನದೆಂಬುದನ್ನು ಊಹಿಸಿಕೊಳ್ಳುವುದೂ ಅಸಾಧ್ಯ.'' (It is impossible to conceive language so beautifully musical or so magnificently grand as that of many verses of Kalidasa's '*Cloud Messenger.*') ಎಂಬುದಾಗಿಯೇ ಹೇಳಿಬಿಟ್ಟಿದ್ದಾರೆ. ಇಂಥ ಮಹಾಕವಿಯು ಅವತರಿಸಿದ ನಮ್ಮ ದೇಶವು ಪುಣ್ಯಭೂಮಿಯಲ್ಲವೆ?

೨. ಇಷ್ಟು ದೊಡ್ಡ ಪಂಡಿತರೆಲ್ಲರೂ ಬಗೆ ಬಗೆಯಾಗಿ ಬಣ್ಣಿಸಬೇಕಾದರೆ ಮೇಘ ಸಂದೇಶ ಕಾವ್ಯವು ಅಪ್ರತಿಮ ಮನೋಹರವಾಗಿದ್ದೇ ಇರಬೇಕು. ಅದು ಹಾಗಿದ್ದೂ ಇವೆ. ನಮ್ಮ ದೇಶದವರು ಈ ಕಾವ್ಯವನ್ನು ಹೊಗಳಿರುವುದರಲ್ಲಿ ಅಷ್ಟೇನೂ ವಿಶೇಷವಿಲ್ಲ. ಅದು ಸ್ವಾಭಾವಿಕವೇ ಆಗಿದೆ. ಪರದೇಶೀಯರು ತಮ್ಮ ದೇಶದ ಕವಿಗಳನ್ನು ಈ ಗ್ರಂಥವು ಮೀರಿಸಿದೆಯೆಂದು ಹೇಳಿರುವುದು ಹೆಚ್ಚು. ಅವರು ನಿರ್ಮತ್ಸರರಾಗಿ ತಥ್ಯಾಂಶವನ್ನು ತಿಳಿಸಿದುದಕ್ಕಾಗಿ ಅವರನ್ನು ನಾವು ವಂದಿಸಲೇ ಬೇಕು. ನಮ್ಮ ಕವಿಯಲ್ಲಿ ಇಷ್ಟುಮಟ್ಟಿನ ಸಾಮರ್ಥ್ಯವಿರುವುದಕ್ಕಾಗಿ ಆನಂದಪರವಶರಾಗಿ ತಲೆದೂಗಲೂ ಬೇಕು. ಕಾಳಿದಾಸ ಮಹಾಕವಿಯು ಮೇಘ ಸಂದೇಶ ಕಾವ್ಯದಲ್ಲಿ ಹೋಮರ್, ವರ್ಜಿಲ್, ಓವಿಡ್ ಮತ್ತು ಷೇಕ್ಸ್‌ಪಿಯರ್ ಈ ನಾಲ್ವರು ಜಗತ್ಪ್ರಸಿದ್ಧರಾದ ಕವಿಗಳು ಪ್ರದರ್ಶಿಸಿರುವ ವಿಶೇಷ ಗುಣಗಳಿರುವುವೆಂದು ಎಲ್ಫಿನ್‌ಸ್ಟನ್‌ರವರು ಹೇಳಿರುವುದು ಸರಿಯಷ್ಟೆ. ಕಾಳಿದಾಸ ಕವಿಯ ಈ ಕಾವ್ಯದಲ್ಲಿ ಮತ್ತೆರಡು ಲಕ್ಷಣಗಳೂ ಇವೆ. ಲೋಕ ಪ್ರಸಿದ್ಧನಾದ ಮಿಲ್ಟನ್ ಕವಿಯ ಗ್ರಂಥಗಳಲ್ಲಿಯ ಭಾಷಾವೈಖರಿಯೂ, ಅನಿರ್ವಚನೀಯವಾದೊಂದು ವಿಧದ ಉದಾತ್ತತೆಯೂ ಮೇಘದೂತ ಕಾವ್ಯದಲ್ಲಿ ತುಂಬಿವೆ. ಅಲ್ಲದೆ, ಪ್ರಕೃತಿಯಲ್ಲಿಯೂ ಮನುಷ್ಯರೇ ಮುಂತಾದ ಜೀವರಾಶಿಗಳಲ್ಲಿರುವಂತೆಯೇ ಸುಖದುಃಖಾನುಭವವೂ, ಚೇತನ ವಿಶೇಷವೂ ಉಂಟೆಂಬುದೇ ಮುಂತಾದ ಅನೇಕ ಭಾವನೆಗಳೂ ತುಂಬಿವೆ. ಈ ವಿಷಯದಲ್ಲಿ ಮೇಘದೂತ ಕಾವ್ಯವನ್ನು ವರ್ಡ್ಸ್‌ವರ್ತ್ ಕವಿಯು ಬರೆದಿರುವ ಉತ್ತಮವಾದ ಕವಿತೆಗಳೊಡನೆ ಹೋಲಿಸಬಹುದಾಗಿದೆ. ವರ್ಡ್ಸ್‌ವರ್ತ್ ಕವಿಯು ಹುಟ್ಟುವುದಕ್ಕೆ ಎಷ್ಟೋ ಶತಮಾನಗಳಿಗೆ ಮುಂಚೆಯೇ ಕಾಳಿದಾಸನು ಈ ವಿಧದ ಕವಿತೆಯನ್ನು ಬರೆದಿರುವುದು ಮಾತ್ರವು ವಿಶೇಷ. ಪ್ರಸಿದ್ಧ ವಿಮರ್ಶಕರಾದ ರೈಡರ್‌ರವರು ಹೇಳಿರುವಂತೆ ಹತ್ತೊಂಬತ್ತನೆಯ ಶತಮಾನದಲ್ಲಿ ಕಾಣುವ ವರ್ಡ್ಸ್‌ವರ್ತ್ ಮುಂತಾದ ಕವಿಗಳು ಸುಮಾರಾಗಿ ಅರಿತಿದ್ದುದನ್ನು ಕಾಳಿದಾಸ ಮಹಾಕವಿಯೇ

ಮುಂತಾದವರು ಐದನೆಯ ಶತಮಾನದಲ್ಲಿಯೇ ಸಮಗ್ರವಾಗಿ ಅರಿತಿದ್ದರೆಂಬುದು ಭಾರತೀಯರೆಲ್ಲರಿಗೂ ಆನಂದದ ಸುದ್ದಿ; ನಮ್ಮ ಜನಾಂಗಕ್ಕೇ ಅನರ್ಘ್ಯವಾದೊಂದು ಮಣಿ ಕಿರೀಟ.

೩. ಮೇಘ ದೂತ ಕಾವ್ಯದ ಮಹತ್ವ.—ಮೇಘ ದೂತ ಕಾವ್ಯಕ್ಕೆ ಮೇಘ ಸಂದೇಶವೆಂಬ ಹೆಸರೂ ಉಂಟು. ಅದರಲ್ಲಿ ಎರಡು ಭಾಗಗಳುಂಟು. ಒಂದಕ್ಕೆ ಪೂರ್ವ ಮೇಘವೆಂದು ಹೆಸರು; ಮತ್ತೊಂದಕ್ಕೆ ಉತ್ತರ ಮೇಘವೆಂದು ಹೆಸರು. ಪೂರ್ವ ಮೇಘ ಭಾಗದಲ್ಲಿ ಪ್ರಕೃತಿ ಸೌಂದರ್ಯವು ವಿಶೇಷವಾಗಿ ವರ್ಣಿಸಲ್ಪಟ್ಟಿದೆ. ಇಲ್ಲಿ ಪ್ರಕೃತಿಯೇ ಚಿತ್ರಪಟ. ಮಾನವ ಹೃದಯದ ಭಾವಗಳೇ ಅದಕ್ಕೆ ಚೌಕಟ್ಟು. ಉತ್ತರ ಮೇಘ ಭಾಗದಲ್ಲಿ ಮಾನವ ಹೃದಯದ ಭಾವಗಳೇ ಚಿತ್ರಪಟ; ಪ್ರಕೃತಿ ಸೌಂದರ್ಯವೇ ಅದರ ಚೌಕಟ್ಟು. ಅಂತು, ಪ್ರಕೃತಿ ಸೌಂದರ್ಯವು ಸುವರ್ಣದ ಪಂಜರವಾದಾಗ ಮಾನವ ಹೃದಯದಲ್ಲಿಯ ಭಾವನೆಗಳು ಅದರಲ್ಲಾಡುವ ಪಂಚವರ್ಣದ ಅರಗಿಣಿ. ಪ್ರಕೃತಿ ಸೌಂದರ್ಯವೇ ಅರಗಿಣಿಯಾದರೆ, ಮಾನವ ಹೃದಯದ ಭಾವ ತರಂಗಗಳೇ ಅದರ ತಾಂಡವ ಭೂಮಿ—ಹೀಗೆ ಕಾಳಿದಾಸನು ಕವಿತೆಯನ್ನು ರಚಿಸಿದ್ದಾನೆ. ಇದು ಕೇವಲ ಸ್ಥೂಲವಾದ ವಿಭಾಗ. ಒಂದು ವಿಧದಲ್ಲಿ ನೋಡಿದರೆ ಹೀಗೆ ಹೇಳುವುದಕ್ಕೂ ಇಲ್ಲ. ಕಾಳಿದಾಸನು ಇಂದ್ರಜಾಲ ನಿಪುಣನಾದ ಸಿದ್ಧಪುರುಷ. "ಇದೋ! ಇಲ್ಲಿ ಪ್ರಕೃತಿ ಸಂಬಂಧವಾದ ಕವಿತೆಯು ಆರಂಭವಾಯಿತು. ಇದೋ! ಈಗ ಮನುಷ್ಯ ಸಂಬಂಧವಾದ ಕವಿತೆಯು ಆರಂಭವಾಯಿತು" ಎಂದು ನಿರ್ಧರಿಸಿ ಹೇಳಲು ಅವನು ಅವಕಾಶವನ್ನೇ ಕೊಡುವ ಹಾಗಿಲ್ಲ. ಏಕೆಂದರೆ, ಅವನು ಪ್ರಕೃತಿಯ ಹೃದಯವನ್ನೂ ಬಲ್ಲನು. ಮಾನವನ ಹೃದಯವೂ ಅವನಿಗೆ ಕರತಲಾಮಲಕವೇ. ತನ್ನ ಪ್ರತಿಭಾ ಸಾಮರ್ಥ್ಯವನ್ನುಪಯೋಗಿಸಿ ಇವೆರಡರಿಂದಲೂ ಮಿಂಚಿನ ತಂತುಗಳನ್ನೇ ತೆಗೆದು ಅವನು ದಿವ್ಯಾಂಬರವನ್ನು ಸಿದ್ಧಗೊಳಿಸಿದ್ದಾನೆ. ಯೋಗಮಾಯಾ ತಂತುವಿನಿಂದ ಈ ಪ್ರಪಂಚವನ್ನು ಸೃಷ್ಟಿಸಿರುವ ಪರಮಾತ್ಮನು ಸರ್ವಾಂತರ್ಯಾಮಿಯಾಗಿದ್ದೂ ನಾವನಾಸ್ತರಿಗೆ ಹೇಗೆ ಅಗೋಚರನಾಗಿದ್ದಾನೋ, ಅದೇ ರೀತಿಯಲ್ಲಿಯೇ ಕಾಳಿದಾಸನೂ ತಾನು ಸೃಜಿಸಿರುವ ಕಲಾ ಪ್ರಪಂಚದಲ್ಲಿ ತನ್ನ ಕೈಚಳಕವು ಎಲ್ಲೆಲ್ಲಿಯೂ ಕಂಡುಬರುವಂತಿದ್ದರೂ ವಿಭಜನ ಕ್ರಿಯೆಯ ಮಾನದಂಡಕ್ಕೆ ಮಾತ್ರ ತಾನು ಸಿಕ್ಕದೆ ಅಗೋಚರನೆನಿಸಿಯೇ ನಿಂತಿದ್ದಾನೆ. ಮೇಘ ದೂತ ಕಾವ್ಯದಲ್ಲಿ ಎಲ್ಲಿ ನೋಡಿದರೂ ಕಾಳಿದಾಸನ ಅಸೀಮ ಕವಿತಾ ಸಾಮರ್ಥ್ಯದ ಪದ್ಮರಾಗ ಮಣಿಗಳ ರಾಗ ಪ್ರಭೆಯೇ ಕಂಗೊಳಿಸುತ್ತಿದೆ. ಎಲ್ಲಕ್ಕೂ ಮಿಗಿಲೆನಿಸಿ—"ಸರ್ವ ಭೂತೇಷು ಯೇನೈಕಂ ಭಾವಮವ್ಯಯ ಮೀಕ್ಷ್ಯತೇ। ಅವಿಭಕ್ತಂ ವಿಭಕ್ತೇಷು ಮಯಿ ತೇ ತೇಷು ಚಾಪ್ಯಹಂ॥" ಎಂಬ ಗೀತೋಪದಿಷ್ಟ ಧರ್ಮವನ್ನೇ ಮನೋಹರವಾದ ಕವಿತೆಯ ರೂಪದಲ್ಲಿ ಜಗತ್ತಿಗೆ ಸಾರಿದ್ದಾನೆ. ಷೇಕ್ಸ್‌ಪಿಯರ್ ಮಹಾ ಕವಿಯು ಹ್ಯಾಮ್ಲೆಟ್ ನಾಟಕದಲ್ಲಿ

ಬರೆದಿರುವಂತೆ—"What a piece of work is man! How noble in reason! How infinite in faculty! In form and moving how express and admirable! In action how like an angel! In apprehension how like a God! the beauty of the world! The paragon of animals!" ಎಂಬುದೇ ಮುಂತಾದ ತತ್ವಗಳೂ, ಮಾನವನ ಘನತೆಯೂ ಕಾಳಿದಾಸನಿಗೆ ಗೊತ್ತುಂಟು. ಆದರೂ, ಮನುಷ್ಯನು ತನ್ನ ಶ್ರೇಷ್ಠತೆಯನ್ನರಿತು, ಅಷ್ಟಕ್ಕೆ ಮಾತ್ರವೇ ತೃಪ್ತನಾಗಿ ಹಿಗ್ಗುವುದಾದರೆ, ಕಾಳಿದಾಸನಿಗೆ ಮನುಷ್ಯತ್ವದಲ್ಲಿ ಆದರವಿಲ್ಲ. ಮನುಷ್ಯನು ತನ್ನ ಶ್ರೇಷ್ಠತೆಯನ್ನರಿಯುವುದರೊಡನೆ, ತಾನು ನಿರಂಕುಶ ಪ್ರವರ್ತಕನಾಗಲು ಅಧಿಕಾರವಿಲ್ಲದವನೆಂದೂ, ಭಗವಂತನ ಪ್ರಪಂಚದಲ್ಲಿ ತನ್ನಂತೆಯೇ ತರುಲತಾ ಗುಲ್ಮಾದಿಗಳು, ಪಶು ಪಕ್ಷಿಗಳು, ನದೀ ನದ ಪರ್ವತಗಳು ಮುಂತಾದ ಸಮಸ್ತಕ್ಕೂ ಉಚಿತವಾದ ಸ್ಥಾನವೂ, ವೈಶಿಷ್ಟ್ಯವೂ ಇರುವುದರಿಂದ ಒಟ್ಟು ಸೃಷ್ಟಿಯೊಡನೆ ಸಾಮರಸ್ಯದಿಂದಲೂ, ಪ್ರೇಮ ಆದರದಿಂದಲೂ ವರ್ತಿಸುವಲ್ಲಿ ಮಾತ್ರವೇ ಮನುಷ್ಯತ್ವದ ಧನ್ಯತೆಯು ಬೆಳಗುವುದೆಂದೂ ಅರಿತುಕೊಂಡು, ತನಗನುಗುಣವಾದ ಸದ್ವರ್ತನೆಯ ಶಿಷ್ಟ್ಯಯನ್ನವಲಂಬಿಸಬೇಕು. ಹೀಗೆ ಮಾಡದೆ ಹೋದವರ ವಿಚಾರದಲ್ಲಿ ಕಾಳಿದಾಸನಿಗೆ ಸಹಾನುಭೂತಿಯಿಲ್ಲ. ಹ್ಯಾಮ್ಲೆಟ್ ರಾಜಕುಮಾರನು—"And yet, to me, what is this quintessence of dust? Man delights not me; no, nor woman neither, though, by your smiling you seem to say so." ಎಂದು ಹೇಳುವಂತೆಯೇ ಕಾಳಿದಾಸನೂ ಅಂಥವರ ವಿಷಯದಲ್ಲಿ ಅನಾದರವನ್ನು ತೋರಿಸತಕ್ಕವನೇ ಸರಿ. ಮೇಲೆ ಹೇಳಿದಂತೆ ಮಾನವನು ಸದ್ವರ್ತನೆಯ ಶಿಷ್ಟ್ಯಯನ್ನವಲಂಬಿಸಿ, ಪ್ರಕೃತಿಯಲ್ಲಿ ಪ್ರೀತಿ ಗೌರವಗಳನ್ನೂ, ಸೌಹಾರ್ದ ಭಾವವನ್ನೂ ತೋರಿಸಬೇಕೆಂಬ ಉಚ್ಚ ಧ್ಯೇಯಕ್ಕೆ ಕಣ್ವರು ಆದರ್ಶರಾಗಿರುವಂತೆ ಚಿತ್ರಿಸಿ, ತನ್ಮೂಲಕ ಕಾಳಿದಾಸನು ತನ್ನ ಇಂಗಿತವನ್ನು ಸೂಚಿಸಿದ್ದಾನೆ. ಶಕುಂತಳೆಯು ಪತಿ ಮಂದಿರಕ್ಕೆ ಹೋಗಲು ಅನುಜ್ಞೆಯನ್ನು ಕೊಡಬೇಕೆಂದು ತಾತ ಕಣ್ವರು—ಜ್ಞಾನವೃದ್ಧರೂ, ವಯೋವೃದ್ಧರೂ ಆದ ಆ ಋಷಿಪುಂಗವರು ಆಶ್ರಮ ವೃಕ್ಷಗಳನ್ನು ಬೇಡಿಕೊಳ್ಳುತ್ತ—

"ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷು ಯಾ।
ನಾದತ್ತೇ ಪ್ರಿಯಮಂಡನಾಪಿ ಭವತಾಂ ಸ್ನೇಹೇನ ಯಾ ಪಲ್ಲವಂ ॥
ಆದ್ಯೇ ವಃ ಕುಸುಮ ಪ್ರಸೂತಿ ಸಮಯೇ ಯಸ್ಯಾ ಭವತ್ಯುತ್ಸವಃ।
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಂ ॥"

ಎಂದು ಹೇಳುವರು. ಮನುಷ್ಯತ್ವದ ಧನ್ಯತೆಯು ಸೋಪಾನವೆಂದರೆ ಇದೇ. ಕೋಕಿಲ ರವದಿಂದ ಶಕುಂತಳೆಯ ಪ್ರಯಾಣಕ್ಕೆ ಅನುಮತಿಯೂ ದೊರೆಯುವುದು. ಸಾಮಾನ್ಯರು ಸ್ಥಾವರಾತ್ಮಕವಾದ ಸೃಷ್ಟಿಯೆಂದು ಭಾವಿಸುವ ತರು ಲತೆಗಳೇ

ಮುಂತಾದವುಗಳಿಗೂ ಸುಖ ದುಃಖಗಳೂ, ಅಂತರಾತ್ಮವೂ ಉಂಟೆಂಬುದಾಗಿ ವರ್ಡ್ಸ್‌ವರ್ತ್ ಕವಿಯು ಕವಿತೆಗಳನ್ನು ಬರೆದಿರುವುದನ್ನು ನೋಡಿ, ದಿವಂಗತರಾದ ಲಾರ್ಡ್ ಮಾರ್ಲಿ ಪಂಡಿತರು ಅದನ್ನು "Poetic Fancy" ಎಂದರೆ, ಕವಿಜನ ಸುಲಭವಾದ ಭ್ರಮೆಯೆಂದು ಕರೆದು ಹಾಸ್ಯಮಾಡಿದರು. ಕಣ್ವರ ವರ್ತನೆಯನ್ನು ಗಮನಿಸಿದ್ದರೆ ಅವರು ಇನ್ನೆಷ್ಟು ಹಾಸ್ಯಮಾಡುತ್ತಿದ್ದರೋ ಏನೋ! ಆದರೆ ಆ ಕಾಲವು ಹೋಯಿತು. ರಾಮಾಯಣದ ಕಾಲದಿಂದಲೂ ಭಾರತೀಯ ಕವಿಪುಂಗವರು ಹಾಡುತ್ತಿರುವ ತತ್ತ್ವಗಳೂ, ಅವುಗಳ ಪ್ರತಿಬಿಂಬವೋ ಎಂಬಂತೆ ವರ್ಡ್ಸ್‌ವರ್ತ್ ಕವಿಯು ಹಾಡಿರುವ ತತ್ತ್ವಗಳೂ ಸತ್ಯವಾದುವುಗಳೆಂದು ವೈಜ್ಞಾನಿಕ ಪ್ರಯೋಗಗಳ ಮೂಲಕ ಸರ್ ಜಗದೀಶ ಚಂದ್ರ ಬೋಸರು ಪ್ರಪಂಚಕ್ಕೇ ತೋರಿಸಿಕೊಟ್ಟು ಎಲ್ಲರನ್ನೂ ಬೆರಗುಮಾಡಿದ್ದಾರೆ. ಆದಕಾರಣ, ಇನ್ನು ಮುಂದೆ ಯಾರೊಬ್ಬರೂ ಈ ರೀತಿ ಹಾಸ್ಯಮಾಡಲು ಕಾರಣವಿಲ್ಲ.

೪. ಚೇತನಾಚೇತನದ ಐಕೀಭಾವ—ಪ್ರಕೃತಿ ಸಂಬಂಧವಾದ ಸಮಸ್ತ ವಸ್ತುಗಳನ್ನೂ ಮನುಷ್ಯರಂತೆಯೇ ಸಂಬೋಧಿಸುವುದಕ್ಕೆ ಮೇಘದೂತ ಕಾವ್ಯದಲ್ಲಿಯೂ, ಕಾಳಿದಾಸನು ಬರೆದಿರುವ ಇತರ ಕಾವ್ಯಗಳಲ್ಲಿಯೂ ಅನೇಕ ನಿದರ್ಶನಗಳಿವೆ. ಕಾಳಿದಾಸನ ಅಭಿಪ್ರಾಯದಲ್ಲಿ ಬೆಟ್ಟಗಳು, ನದಿಗಳು, ಗಿಡ ಬಳ್ಳಿಗಳು, ಪಶು ಪಕ್ಷಿಗಳು ಮುಂತಾದುವುಗಳೆಲ್ಲವೂ ಸಚೇತನನಾದ ಸಜೀವನಾದ ಮನುಷ್ಯನಂತೆಯೇ ಜೀವದಿಂದಿರುವುವು; ಅವುಗಳಿಗೂ ಮನುಷ್ಯನಂತೆಯೇ ಸುಖ ದುಃಖಗಳು, ರೋಗಾದ್ಯುಪದ್ರವಗಳು ಮುಂತಾದುವುಗಳುಂಟು; ಭಗವಂತನ ಪ್ರೇಮ ಲೀಲಾ ಧಾಮದಲ್ಲಿ ಅವುಗಳಿಗೂ ಮನುಷ್ಯನಿಗಿರುವಂತೆಯೇ ಯಥೋಚಿತವಾದ ಸ್ಥಾನವುಂಟು. ಮೇಘ ಸಂದೇಶ ಕಾವ್ಯದಲ್ಲಿ ಬರುವ—

"ಆಪೃಚ್ಛಸ್ವ ಪ್ರಿಯಸಖಮಮುಂ ತುಂಗಮಾಲಿಂಗ್ಯ ಶೈಲಂ।
ವಂದ್ಯೈಃ ಪುಂಸಾಂ ರಘುಪತಿ ಪದೈರಂಕಿತಂ ಮೇಖಲಾಸು ॥
ಕಾಲೇ ಕಾಲೇ ಭವತಿ ಭವತೋ ಯಸ್ಯ ಸಂಯೋಗಮೇತ್ಯ।
ಸ್ನೇಹವ್ಯಕ್ತಿಶ್ಚಿರ ವಿರಹಜಂ ಮುಂಚತೋ ಬಾಷ್ಪಮುಷ್ಣಂ ॥

ಎಂಬ ಶ್ಲೋಕದಲ್ಲಿ ಮೇಘಕ್ಕೂ ಪರ್ವತಕ್ಕೂ ಇರುವ ಸ್ನೇಹವು ರಮಣೀಯವಾಗಿ ವರ್ಣಿಸಲ್ಪಟ್ಟಿದೆ. ಪರ್ವತವು ಸ್ನೇಹ ಪಾರವಶ್ಯದಿಂದ ಮೇಘವನ್ನು ಅಪ್ಪಿಕೊಂಡು ಉಷ್ಣವಾದ ಬಾಷ್ಪವನ್ನು ಬಿಡುವುದಂತೆ. ಈ ಶ್ಲೋಕವನ್ನು ಓದಿ ಕವಿ ಹೃದಯವನ್ನರಿಯದ ಕೆಲವು ಮಂದಿ ವಿಜ್ಞಾನ ಶಾಸ್ತ್ರಜ್ಞರು—ಯಾರಾದರೂ ಕೆಲವು ಮಂದಿಗಳು ಮಾತ್ರ—ಕಾಳಿದಾಸನನ್ನು ಹಿಡಿದು ಜಗ್ಗಿಸಿದರೂ ಅವನು ಸಗ್ಗುವಹಾಗಿಲ್ಲ. ಮೇಘವು ಪರ್ವತಾಗ್ರವನ್ನು ಸೇರಿದಾಗ ಮಳೆಯು ಬೀಳುವುದೂ, ಕಾದ ಕಲ್ಲಿನಮೇಲೆ ಬಿದ್ದ ಮಳೆಯ ನೀರು ಬೆಚ್ಚಗಿರುವುದೂ, ಸ್ವಾಭಾವಿಕವೇ ಆಗಿದೆ. ಈ ವಿಷಯವು ಹಾಗಿರಲಿ, ಕಾಳಿದಾಸನ ಕವಿತೆಯಲ್ಲಿ ಎಲ್ಲಿ

ನೋಡಿದರೂ ಮನುಷ್ಯನಿಗೂ ಪ್ರಕೃತಿಗೂ ಅನ್ಯಾದೃಶವಾದ ಸಾಮರಸ್ಯವೇ ಕಂಡುಬರುತ್ತದೆ. ಮೇಘದೂತ ಕಾವ್ಯದ—

"ಮಂದಂ ಮಂದಂ ನುದತಿ ಪವನಶ್ಚಾನುಕೂಲೋ ಯಥಾ ತ್ವಾಂ।
ವಾಮಶ್ಚಾಯಂ ನದತಿ ಮಧುರಂ ಚಾತಕಸ್ತೇ ಸಗಂಧಃ ॥
ಗರ್ಭಾಧಾನಕ್ಷಣ ಪರಿಚಯಾನ್ನೂನಮಾಬದ್ಧ ಮಾಲಾಃ।
ಸೇವಿಷ್ಯಂತೇ ನಯನ ಸುಭಗಂ ಖೇ ಭವಂತಂ ಬಲಾಕಾಃ ॥"

ಎಂಬ ಶ್ಲೋಕವನ್ನು ಒಂದು ನಿದರ್ಶನವಾಗಿ ಹೇಳಬಹುದು. ಇಂತಹವು ಎಷ್ಟೋ ಇವೆ. ಪದಗಳ ಜೋಡಣೆಯ ಸೊಬಗಿನಿಂದಲೂ, ಅದಕ್ಕೆ ತಕ್ಕಂತೆ ಭಾವಗಳ ಸೊಗಸಿನಿಂದಲೂ ಈ ಶ್ಲೋಕವೇ ಕುಣಿಯುತ್ತಿರುವಂತೆ ನಮ್ಮ ಮನಸ್ಸಿಗೆ ಭಾಸವಾಗುತ್ತದೆ. ಗಾಳಿಯು ತನಗೆ ಅನುಕೂಲವಾಗಿರುವುದರಿಂದ ಮೇಘವು ಮೆಲ್ಲ ಮೆಲ್ಲಗೆ ಮುಂದೆ ಮುಂದೆ ಸಾಗುವುದು; ಚಾತಕವು ಉತ್ಸಾಹ ಭರದಿಂದ ಮೃದು ಮಧುರವಾಗಿರುವ ತನ್ನ ಕಲರವದಿಂದ ನಿಶ್ಶಬ್ದವಾಗಿರುವ ನಭೋ ಮಾರ್ಗವನ್ನು ತುಂಬುತ್ತ ಮೇಘದ ಎಡ ಪಕ್ಕದಲ್ಲಿ ಹಾರುವುದು; ಕಣ್ಣಿಗೆ ಹಬ್ಬವನ್ನೊದಗಿಸುತ್ತ ಹೆಣ್ಣು ಕೊಕ್ಕರೆಗಳು ಸಾಲುಗಟ್ಟಿ ಆನಂದದಿಂದ ಹಾರಾಡುತ್ತ ಮೇಘರಾಜನನ್ನು ಸೇವಿಸುವುವು—ಇವೆಲ್ಲವೂ ನಮ್ಮ ಕಣ್ಣಿಗೆ ಕಟ್ಟಿದಂತಾಗುವುದು. ಕಾಳಿದಾಸನು ಎಷ್ಟು ಮಟ್ಟಿನ ಸಾಮರಸ್ಯವನ್ನೂ ಸ್ನೇಹವನ್ನೂ ಚಿತ್ರಿಸಿದ್ದಾನೆಂದು ಮನಸ್ಸಿಗೆ ಆಶ್ಚರ್ಯವಾಗುವುದು. ಹಿಂದಿನ ಶ್ಲೋಕದಲ್ಲಿ "ಭ್ರಾತೃ ಜಾಯಾಂ" ಎಂದು ಹೇಳಿ, ಯಕ್ಷನು ಮೇಘವನ್ನು ಸಹೋದರನಂತೆ ಸಂಬೋಧಿಸಿದ ಹಾಗೆ ಚಿತ್ರಿಸಿರುವುದನ್ನು ಸ್ಮರಿಸಿಕೊಂಡರಂತು ನಮ್ಮ ಮನಸ್ಸೇ ಆನಂದದಿಂದ ಕುಣಿದಾಡತೊಡಗುವುದು. ಅಥವಾ ವನ ಜ್ಯೋತ್ಸ್ನೆಯಲ್ಲಿ ಸಹೋದರಿಯಂತೆ ಪ್ರೀತಿಯನ್ನಿಟ್ಟಿದ್ದ ಶಕುಂತಳೆಯನ್ನು ಚಿತ್ರಿಸಿದ ರಮ್ಯ ಹಸ್ತದಿಂದ ಇಂತಹ ಮತ್ತೊಂದು ರಮ್ಯವಾದ ಚಿತ್ರವು ಇಳಿದುದರಲ್ಲಿ ಆಶ್ಚರ್ಯವು ತಾನೇ ಏನು! ಶಕುಂತಳೆಯು ತೋರಿಸುತ್ತಿದ್ದ ಪ್ರೇಮಕ್ಕೆ ಒಟ್ಟು ಪ್ರಕೃತಿಯೇ ಕೃತಜ್ಞತಾಭಾವದಿಂದಿದ್ದು, ಅವಳು ಪತಿ ಮಂದಿರಕ್ಕೆ ಹೊರಟುಹೋಗುವ ದಿವಸ ತದನುಗುಣವಾದ ದುಃಖವನ್ನನುಭವಿಸಿದುದನ್ನಲ್ಲವೇ ಕಾಳಿದಾಸನು—

"ಉದ್ಗಲಿತ ದರ್ಭ ಕವಲಾ ಮೃಗ್ಯಃ ಪರಿತ್ಯಕ್ತ ನರ್ತನಾ ಮಯೂರಾಃ।
ಅಪಸೃತ ಪಾಂಡುಪತ್ರಾ ಮುಂಚಂತ್ಯಶ್ರೂಣೀವ ಲತಾಃ ॥"

ಎಂಬ ಶ್ಲೋಕದಲ್ಲಿ ಚಿತ್ರಿಸಿರುವುದು!

೫. ಸೌಂದರ್ಯ ನಿಧಿ—ಮೇಘದೂತ ಕಾವ್ಯದ—

"ಹಸ್ತೇ ಲೀಲಾ ಕಮಲಮಲಕೇ ಬಾಲ ಕುಂದಾನುವಿದ್ಧಂ।
ನೀತಾ ಲೋಧ್ರಪ್ರಸವ ರಜಸಾ ಪಾಂಡುತಾಮಾನನೇ ಶ್ರೀಃ ॥

ಚೂಡಾ ಪಾಶೇ ನವ ಕುರವಕಂ ಚಾರು ಕರ್ಣೇ ಶಿರೀಷಂ।
ಸೀಮಂತೇ ಚ ತ್ವದುಪಗಮಜಂ ಯತ್ರ ನೀಪಂ ವಧೂನಾಂ ॥''

ಈ ಶ್ಲೋಕವನ್ನು ಓದಿದರೆ, ಕಾಳಿದಾಸನಿಗೆ ಪುಷ್ಪಗಳ ಮೇಲೆ—ಪ್ರಾಕೃತಿಕವಾದ ಮನೋಹರ ವಸ್ತುಗಳ ಗುಂಪಿಗೆ ಸೇರಿದ ಪುಷ್ಪಗಳ ಮೇಲೆ—ಎಷ್ಟು ಮಟ್ಟಿನ ಪ್ರೀತಿಯಿತ್ತೆಂಬುದು ಗೊತ್ತಾಗುತ್ತದೆ. ಅಲ್ಲದೆ, ಅವನು ವರ್ಣಿಸಿರುವ ದೃಶ್ಯವಾದರೂ ಎಷ್ಟು ರಮಣೀಯವಾದುದು! ಅಲಕಾ ನಗರದಲ್ಲಿರುವವರು ಮೊದಲೇ ಅಲಂಕಾರ ಪ್ರಿಯರಾದ ಯಕ್ಷಸ್ತ್ರೀಯರು; ಸ್ಫುರದ್ರೂಪಿಣಿಗಳು. ಅವರ ಕೈಯಲ್ಲಿ ಲೀಲಾ ಕಮಲ. ಮುಂಗುರುಳುಗಳ ಮಧ್ಯದಲ್ಲಿ ಆಗ ತಾನೇ ಅರಳಿದ ಮೊಲ್ಲೆಯ ಹೂಗಳು. (ಕಾಳಿದಾಸನು ಇಲ್ಲಿ ಮಲ್ಲಿಗೆಯ ಹೂಗಳನ್ನು ಸೂಚಿಸಿಲ್ಲ. ಸುವಾಸನೆಯಲ್ಲಿ ಮಲ್ಲಿಗೆಗೆ ಕಡಿಮೆಯಿಲ್ಲದೆಯೂ, ಕೋಮಲತೆಯಲ್ಲಿ ಮಲ್ಲಿಗೆಗೆ ಮಿಗಿಲೆನಿಸಿಯೂ, ಅದರ ಜತೆಗೆ ಮಲ್ಲಿಗೆಗಿಂತ ಚಿಕ್ಕದಾಗಿಯೂ, ಮುಂಗುರುಳುಗಳ ಮಧ್ಯದಲ್ಲಿ ನೆಲಸಿ ಹೊರಕ್ಕೆ ಸ್ವಲ್ಪ ಸ್ವಲ್ಪ ಇಣಿಕಿ ನೋಡುತ್ತ ಲಜ್ಜಾವತಿಯಂತಿರುವ ಮೊಲ್ಲೆಯ ಹೂಗಳನ್ನೇ ಅವನು ಉದ್ದೇಶಪೂರ್ವಕವಾಗಿ ಸೂಚಿಸಿರುವಂತೆ ತೋರುತ್ತದೆ.) ಚೂಡಾ ಪಾಶದಲ್ಲಿ ನವ ಕುರವಕ ಪುಷ್ಪಗಳು, ಕಿವಿಯಲ್ಲಿ ಸುಂದರವಾದ ಮತ್ತು ಕೋಮಲತೆಯ ನೆಲೆಯೆನಿಸಿರುವ ಶಿರೀಷಪುಷ್ಪ, ಬೈತಲೆಯ ಓಣಿಯಲ್ಲಿ ಕದಂಬ ಪುಷ್ಪಗಳು. ಇದರಮೇಲೆ ಲೋಧ್ರ ಪುಷ್ಪ ಧೂಳಿಯಿಂದ ಪಾಂಡು ವರ್ಣವನ್ನು ತಾಳಿ ಮನೋಹರವಾಗಿರುವ ಮುಖ ಪದ್ಮಗಳು. ಇದು ಎಷ್ಟು ರಮಣೀಯವಾದ ದೃಶ್ಯವಾಗಿರಬೇಕು? ಈ ಶ್ಲೋಕವನ್ನು ಓದುವಾಗ ಪುಷ್ಪಗಳ ನಾನಾ ವರ್ಣಗಳೂ ನಮ್ಮ ಕಣ್ಣಿನ ಮುಂದೆ ಪಸರಿಸುವುವು. ವಿವಿಧ ವರ್ಣಗಳೂ ನಮ್ಮ ಮನೋನೇತ್ರದ ಮುಂದೆ ಗೋಚರಿಸಿ ತಾಂಡವವಾಡುವಂತೆ ವಸ್ತುವರ್ಣನೆಯನ್ನು ಅಳವಡಿಸುವುದರಲ್ಲಿ ಸ್ಪೆನ್ಸರನೇ ಮುಂತಾದ ಪಾಶ್ಚಾತ್ಯ ಕವಿಗಳಂತೆಯೇ ಕಾಳಿದಾಸ, ಭಟ್ಟಬಾಣ ಮುಂತಾದ ಪೂರ್ವ ದೇಶೀಯ ಕವಿಗಳೂ ಸುಪ್ರಸಿದ್ಧರು. ಮೇಘ ದೂತ ಕಾವ್ಯದಲ್ಲಿ ಇದಕ್ಕೆ ಎಷ್ಟೋ ನಿದರ್ಶನಗಳಿವೆ. ಇಲ್ಲಿ ಒಂದೇ ಒಂದು ಶ್ಲೋಕವನ್ನು ಸೂಚಿಸುತ್ತೇನೆ :—

''ಯತ್ರೋನ್ಮತ್ತಭ್ರಮರ ಮುಖರಾಃ ಪಾದಪಾ ನಿತ್ಯಪುಷ್ಪಾ।
ಹಂಸಶ್ರೇಣೀ ರಚಿತ ರಶನಾ ನಿತ್ಯಪದ್ಮಾ ನಲಿನ್ಯಃ ॥
ಕೇಕೋತ್ಕಂಠಾ ಭವನ ಶಿಖಿನೋ ನಿತ್ಯ ಭಾಸ್ವತ್ಕಲಾಪಾ।
ನಿತ್ಯಜ್ಯೋತ್ಸ್ನಾಃ ಪ್ರತಿಹತ ತಮೋವೃತ್ತಿ ರಮ್ಯಾಃ ಪ್ರದೋಷಾಃ ॥''

ಹೆಚ್ಚೇಕೆ? ಒಟ್ಟಿನಲ್ಲಿ ಕಾಳಿದಾಸನ ಕವಿತ್ವವು ಚಿತ್ತಾಕರ್ಷಕವಾದ ವಿವಿಧ ದೃಶ್ಯಗಳ ಆಗರವೆನ್ನಬಹುದು. ಆದುದರಿಂದಲೇ ಶ್ರೀಯುತ ಅರವಿಂದಘೋಷರವರು ಕಾಳಿದಾಸ ಮಹಾ ಕವಿಯ ಕಾವ್ಯಗಳಲ್ಲಿಯ ದೃಶ್ಯಗಳೆಂದರೆ, ಸೌಂದರ್ಯನಿಧಿ

ಗಳಂತಿರುವ ವಸ್ತುಗಳಿಂದ ಕೂಡಿದ ಸ್ವರ್ಗೋದ್ಯಾನವೆಂದು ವರ್ಣಿಸಿರುವುದು! ಅವುಗಳು ಸಮಾನರೆಂದೇ ಎಣಿಸಿ ಚಿತ್ರಿಸಲ್ಪಟ್ಟಿರುವುದು ಮತ್ತೊಂದು ವಿಶೇಷ. ಅಂತು ಪ್ರಾಕೃತಿಕ ಸೌಂದರ್ಯವನ್ನು ಕಾಳಿದಾಸನು ಸರ್ವದಾ ಪರಿಶೀಲಿಸುತ್ತಿದ್ದು, ತನ್ನ ಅನುಭವವನ್ನು ಅನನ್ಯ ಸುಲಭ ರೀತಿಯಲ್ಲಿ ಚಿತ್ರಿಸಿದ್ದಾನೆ. ಪ್ರಕೃತಿಯ ಮೇಲಣ ಪ್ರೇಮದಲ್ಲಿ ಕಾಳಿದಾಸನು ಪ್ರಪಂಚದ ಮತ್ತಾವ ಕವಿಗೂ ಕಡಿಮೆಯಾದವನಲ್ಲ. ಪ್ರಪಂಚದ ಮಾನದಂಡವೋ ಎಂಬಂತೆ ಕಂಗೊಳಿಸುತ್ತಿರುವ ಹಿಮವತ್ಪರ್ವತದಿಂದ ಹಿಡಿದು, ಯಾರ ಕಣ್ಣಿಗೂ ಕಾಣದೆ ತಪ್ಪಿಸಿಕೊಳ್ಳುವಷ್ಟು ಸಣ್ಣ ಹೂವಿನವರೆಗೂ ಇರುವ ಸಮಸ್ತ ವಸ್ತುಗಳಲ್ಲಿಯೂ ಕಾಳಿದಾಸನಿಗೆ ಆದರವುಂಟು. ಅವುಗಳಲ್ಲಿ ಪ್ರತಿಯೊಂದಕ್ಕೂ ವ್ಯಕ್ತಿ ವೈಶಿಷ್ಟ್ಯಜ್ಞಾನವುಂಟೆಂಬ ಉದಾತ್ತ ಭಾವನೆಯು ಅವನ ಮನಸ್ಸಿನಲ್ಲುಂಟು. ಮನುಷ್ಯರಂತೆಯೂ, ದೇವತೆಗಳಂತೆಯೂ ಅವುಗಳಿಗೂ ಪರಮಾತ್ಮನ ಸೃಷ್ಟಿಯಲ್ಲಿ ಯಥೋಚಿತವಾದ ಸ್ಥಾನವುಂಟೆಂಬುದೇ ಕಾಳಿದಾಸನು ನಿರಂತರವೂ ಜಪಿಸಿ ಸಿದ್ಧಿ ಹೊಂದಿದ ಮಂತ್ರ. ಆದುದರಿಂದಲೇ ಮನುಷ್ಯನಿಗೂ ಪ್ರಕೃತಿಗೂ ಇರುವ ಸ್ನಿಗ್ಧ ಸಂಬಂಧದ ನಿಜ ಸ್ವರೂಪವು ಅವನಿಗೆ ಗೋಚರಿಸಿದುದು! ಹೀಗೆ ನಿಜದ ನೆಲೆಯನ್ನು ಕಂಡುಹಿಡಿದ ಮಹಾನುಭಾವನಾದ ಕಾಳಿದಾಸನು, ಕಲೋಪಾಸಕನಿಗುಚಿತವಾದ ರಮ್ಯತೆಯಿಂದಲೂ, ಮಾಧುರ್ಯದಿಂದಲೂ ಉಕ್ಕಿ ಹರಿಯುತ್ತಿರುವ ಕಾವ್ಯಗಳ ರೂಪದಲ್ಲಿ ತನ್ನ ಹೃದಯವನ್ನೇ ವಾಚಕರೆದುರಿಗೆ ಪ್ರದರ್ಶಿಸಿದ್ದಾನೆ. ಪ್ರಾಕೃತಿಕ ಸೌಂದರ್ಯವೂ ಮಾನವ ಹೃದಯದ ಭಾವನಾ ತರಂಗಗಳೂ ಸಮ್ಮಿಳಿತವಾಗಿ ಸೇರಿರುವುದಕ್ಕೆ ಮೇಘ ಸಂದೇಶ ಕಾವ್ಯವು ಅತ್ಯುತ್ತಮವಾದ ನಿದರ್ಶನವಾಗಿದೆ.

೬. ಸಮಷ್ಟಿ ದೃಷ್ಟಿಯಿಂದಲೇ ನೋಡಿ, ವ್ಯಷ್ಟಿ ದೃಷ್ಟಿಯಿಂದಲೇ ನೋಡಿ, ಹೇಗೆ ನೋಡಿದರೂ ಮೇಘ ಸಂದೇಶ ಕಾವ್ಯದ ಶ್ಲೋಕಗಳು ರಮಣೀಯವಾಗಿವೆ. ಒಂದೊಂದು ಶ್ಲೋಕವೂ ಒಂದೊಂದು ಜೀವರತ್ನ. ಒಂದೊಂದು ಶ್ಲೋಕದಿಂದಲೂ ಒಂದೊಂದು ಸೌಂದರ್ಯ ಲಹರಿಯೇ ನಮಗೆ ಗೋಚರವಾಗುತ್ತಿದೆ. ಇಷ್ಟಾದರೂ ಯಾವ ಶ್ಲೋಕವೂ ತುಟಿಯನ್ನು ಮೀರಿದ ಹಲ್ಲಿನಂತೆ ಹದ್ದುಮೀರಿ ಹಾಯ್ದು, ಒಟ್ಟು ಕಾವ್ಯದ ಶೋಭೆಯನ್ನು ಕೆಡಿಸುವಂತಿಲ್ಲ. ಇದರಿಂದ ಕವಿಯ ಚಾತುರ್ಯವು ಎಷ್ಟು ಅದ್ಭುತವಾದುದೆಂಬುದು ಗೋಚರವಾಗುತ್ತದೆ.

೭. **ವೈದರ್ಭೀ ಶೈಲಿ**—ಉತ್ತಮ ವಿಧದ ಕಾವ್ಯವೆಂದರೆ ಭಾವ ಪುಷ್ಟಿಯೂ ರಸ ಪುಷ್ಟಿಯೂ ಇರುವುದರೊಡನೆ ಅದಕ್ಕೆ ತಕ್ಕ ಭಾಷಾ ಮಾಧುರ್ಯವೂ ಇರಬೇಕು. ಉದಾತ್ತ ಭಾವಗಳು ಹೃದಯಂಗಮವಾದ ಉತ್ತಮ ಶೈಲಿಯಲ್ಲಿ ಚಿತ್ರಿಸಲ್ಪಟ್ಟಿರಬೇಕು. ರಾಗ ಜ್ಞಾನಕ್ಕೆ ತಕ್ಕಂತೆ ಕಂಠವೂ ಮಧುರವಾಗಿದ್ದಲ್ಲಿ ಮಾತ್ರವೇ ರಾಗದ ಆಲಾಪನೆಯು ಹಿತಕರವೆನಿಸೀತು. ಮೇಘ ದೂತ ಕಾವ್ಯವು

ಈ ದೃಷ್ಟಿಯಿಂದಲೂ ಉತ್ತಮವಾದ ಕಾವ್ಯವೆನಿಸಿದೆ. ಕವಿಯು ತಕ್ಕ ಪದಗಳನ್ನು ಹುಡುಕುವುದು ಹಾಗಿರಲಿ. ಆಯಾ ಸಂದರ್ಭಗಳಿಗೆ ತಕ್ಕ ಪದಗಳೇ ಕವಿ ಕಾಳಿದಾಸನನ್ನು ಓಲೈಸಲಿಚ್ಛಿಸಿದಂತೆ ತೋರುತ್ತದೆ. ಈ ಗ್ರಂಥದಲ್ಲಿ ಪ್ರದರ್ಶಿಸಲ್ಪಟ್ಟಿರುವ ಶಬ್ದ ಸೌಷ್ಠವವು ಅದ್ಭುತವೆನಿಸಿದೆ. ಕಾಳಿದಾಸನ ಕಲ್ಪನಾ ಸಾಮರ್ಥ್ಯವೂ, ರಸಜ್ಞತೆಯೂ ಪ್ರತಿಯೊಂದು ಶ್ಲೋಕದ ಪ್ರತಿಯೊಂದು ಪಾದದಲ್ಲಿಯೂ ವ್ಯಕ್ತವಾಗುತ್ತದೆ. ತದನುಗುಣವಾದ ಶೈಲಿಯಲ್ಲಿ ಉಚಿತ ಪಾದಪದ ಪ್ರಯೋಗಮಾಡಿ ಕಾಳಿದಾಸನು ಕಾವ್ಯರಚನೆ ಮಾಡಿದ್ದಾನೆ. ಪ್ರೇಮ ಕರುಣೆಗಳೇ ಮೇಘ ಸಂದೇಶ ಕಾವ್ಯದಲ್ಲಿ ಪರಿಸ್ಫುಟಗೊಂಡಿರುವ ಮುಖ್ಯ ರಸಗಳು. ಆದುದರಿಂದ ವೈದರ್ಭೀ ರೀತಿಯನ್ನವಲಂಬಿಸಿ ಕವಿಯು ಗ್ರಂಥವನ್ನು ಬರೆದಿದ್ದಾನೆ. "ಉಪಮಾ ಕಾಳಿದಾಸಸ್ಯ" ಎಂಬ ಲೋಕೋಕ್ತಿಯು ಸಾರ್ಥಕವೆನಿಸುವಂತೆ ಈ ಕಾವ್ಯದಲ್ಲಿ ಮನೋಹರವಾದ ಉಪಮಾನಗಳೂ ಇವೆ.

೮. ಕಥಾವಸ್ತು.—ಮೇಘಸಂದೇಶ ಕಾವ್ಯದ ಕಥಾ ವಸ್ತುವಿನ ಸಾರಾಂಶ. ಮೇಘ ದೂತ ಕಾವ್ಯದ ಕಥಾ ವಸ್ತುವು ಅತಿ ಸರಳವಾಗಿಯೂ, ಅತಿ ಮನೋಹರವಾಗಿಯೂ ಇದೆ. ಶಾಪಗ್ರಸ್ತನಾದ ಯಕ್ಷನೊಬ್ಬನು ಒಂದು ವರುಷ ಕಾಲ ತನ್ನ ಪ್ರಾಣಕಾಂತೆಯನ್ನಗಲಿ ರಾಮಗಿರಿಯಲ್ಲಿರಬೇಕಾಗುತ್ತದೆ. ಅವನ ಒಡೆಯನಾದ ಕುಬೇರನು ಯಕ್ಷನು ತನ್ನ ಕರ್ತವ್ಯವನ್ನು ಸರಿಯಾಗಿ ನಡೆಯಿಸದೆ ಹೋದುದಕ್ಕಾಗಿ ಕುಪಿತನಾಗಿ, ಅವನು ಒಂದು ವರುಷ ಕಾಲ ಅಳಕಾಪತಿಯಲ್ಲಿರ ಕೂಡದೆಂದು ವಿಧಿಸಿದುದರ ದೆಸೆಯಿಂದ, ಅವನು ರಾಮಗಿರಿಯಲ್ಲಿರಬೇಕಾಗುತ್ತದೆ. ಯಕ್ಷನು ತನ್ನ ಪ್ರಿಯಳನ್ನು ಅಗಲಿರಲಾರದೆ ಬಹುವಾಗಿ ಕಾತರಿಸುತ್ತಾನೆ. ಅಷ್ಟರಲ್ಲಿ ವರ್ಷಾಕಾಲವು ಪ್ರಾಪ್ತವಾಗುತ್ತದೆ. ಮದದಾನೆಯಂತೆ ಕಂಗೊಳಿಸುವ ಮೇಘವೊಂದು ಅವನ ಕಣ್ಣಿಗೆ ಬೀಳುತ್ತದೆ. ತನ್ನ ಪ್ರಿಯಳಿಗೆ ತಾನು ಕಳುಹಿಸುವ ಸಂದೇಶವನ್ನು ತಿಳಿಸಬೇಕೆಂದು ಯಕ್ಷನು ಮೇಘವನ್ನು ಪ್ರಾರ್ಥಿಸುತ್ತಾನೆ. ಬಳಿಕ, ಆ ಮೇಘವು ರಾಮಗಿರಿಯಿಂದ ಹೊರಟು ಅಳಕಾಪಟ್ಟಣಕ್ಕೆ ಹೋಗುವ ಮಾರ್ಗವನ್ನು ಯಕ್ಷನು ನಿರ್ದೇಶಗೊಳಿಸಿ ಸೂಚಿಸುತ್ತಾನೆ. ಮೇಘವು ಉತ್ತರ ದಿಕ್ಕಿಗೆ ಪ್ರಯಾಣಮಾಡುವುದು ಅವನಿಗೆ ಗೊತ್ತುಂಟು. ಅದು ಪ್ರಯಾಣಮಾಡಬೇಕಾದ ಮಾರ್ಗವನ್ನು ಕಾಳಿದಾಸನು ಮನೋಹರವಾಗಿ ವರ್ಣಿಸಿದ್ದಾನೆ. ಕವಿತೆಯ ತಿರುಳನ್ನೇ ಶ್ಲೋಕಗಳಲ್ಲಿ ತುಂಬಿದ್ದಾನೆ. ಈ ವರ್ಣನಾ ಭಾಗದಲ್ಲಿ ಬರುವ—

"ಉತ್ಪಶ್ಯಾಮಿ ದ್ರುತಮಪಿ ಸಖೇ ಮತ್ಪ್ರಿಯಾರ್ಥಂ ಯಿಯಾಸೋಃ।
ಕಾಲಕ್ಷೇಪಂ ಕಕುಭ ಸುರಭೌ ಪರ್ವತೇ ಪರ್ವತೇ ತೇ ॥
ಶುಕ್ಲಾಪಾಂಗೈಃ ಸಜಲ ನಯನೈಃ ಸ್ವಾಗತೀಕೃತ್ಯ ಕೇಕಾಃ।
ಪ್ರತ್ಯುದ್ಯಾತಃ ಕಥಮಪಿ ಭವಾನ್ ಗಂತುಮಾಶುವ್ಯವಸ್ಯೇತ್ ॥"

ಪಾಂಡುಚ್ಛಾಯೋಪವನ ವೃತಯಃ ಕೇತಕೈಃ ಸೂಚಿಭಿನ್ನೈಃ।
ನೀಡಾರಂಭೈರ್ಗೃಹ ಬಲಿಭುಜಾಮಾಕುಲಗ್ರಾಮ ಚೈತ್ಯಾಃ ॥
ತ್ವಯ್ಯಾಸನ್ನೇ ಪರಿಣತ ಫಲಶ್ಯಾಮ ಜಂಬೂ ವನಾಂತಾಃ।
ಸಂಪತ್ಸ್ಯಂತೇ ಕತಿಪಯ ದಿನಸ್ಥಾಯಿ ಹಂಸಾ ದಶಾರ್ಣಾಃ ॥

. . . .

ವಿಶ್ರಾಂತಃ ಸನ್ವ್ರಜ ವನ ನದೀ ತೀರಜಾನಾಂ ನಿಷಿಂಚ।
ನ್ನುದ್ಯಾನಾನಾಂ ನವಜಲ ಕಣೈರ್ಯೂಥಿಕಾ ಜಾಲಕಾನಿ ॥
ಗಂಡಸ್ವೇದಾಪನಯನ ರುಜಾಕ್ಲಾಂತ ಕರ್ಣೋತ್ಪಲಾನಾಂ।
ಛಾಯಾ ದಾನಾತ್ ಕ್ಷಣ ಪರಿಚಿತಃ ಪುಷ್ಪಲಾವೀ ಮುಖಾನಾಂ ॥''

(ನಿನಗೆ ಪ್ರಿಯವಾದುದನ್ನೆಸಗುವುದಕ್ಕಾಗಿ ವಿಶೇಷ ತ್ವರೆಯಿಂದ ಪ್ರಯಾಣ ಮಾಡಲು ನಿನಗೇನೋ ಇಷ್ಟವುಂಟು. ಆದರೂ, ಕುಟಜ ಪುಷ್ಪಗಳ ಸುವಾಸನೆಯಿಂದ ಕೂಡಿರುವ ಪರ್ವತಗಳಲ್ಲಿ ಪ್ರತಿಯೊಂದನ್ನು ದಾಟುವಾಗಲೂ ಸ್ವಲ್ಪ ಸ್ವಲ್ಪ ಸಾವಕಾಶವೇ ಆಗುವುದು. ಆನಂದಬಾಷ್ಪಪೂರಿತ ನಯನಗಳಿಂದ ಕೂಡಿದ ನವಿಲುಗಳು ತಮ್ಮ ಕೇಕಾಧ್ವನಿಯಿಂದ ನಿನಗೆ ಸ್ವಾಗತವನ್ನು ಬಯಸುವುವು. ಆದರೂ ನೀನು ಹೇಗಾದರೂ ಮಾಡಿ ತ್ವರೆಯಿಂದ ಪ್ರಯಾಣ ಮಾಡುವೆಯೆಂಬುದೇ ನನ್ನ ಹಾರೈಕೆ. ನೀನು ಮುಂದೆ ಹೊರಟರೆ ದಶಾರ್ಣದೇಶ. ಅಲ್ಲಿಯ ಉಪವನಗಳ ಬೇಲಿಗಳಲ್ಲಿರುವ ಕೇತಕೀ ವೃಕ್ಷಗಳಲ್ಲಿ ಹೂಗಳು ಅರಳಿ ಪಾಂಡುಚ್ಛಾಯೆಯಿಂದ ಕಂಗೊಳಿಸುತ್ತಿರುವುವು. ಗ್ರಾಮಗಳಲ್ಲಿ ಮಾರ್ಗಗಳ ಪಕ್ಕದಲ್ಲಿರುವ ಅಶ್ವತ್ಥ ವೃಕ್ಷವೇ ಮುಂತಾದ ಪವಿತ್ರ ವೃಕ್ಷಗಳಲ್ಲಿ ಪಕ್ಷಿಗಳು ಗೂಡುಗಳನ್ನು ಕಟ್ಟಿಕೊಳ್ಳುವ ಉದ್ಯಮದಲ್ಲಿರುತ್ತವೆ. ಅಲ್ಲಿಯ ಕಾಡುಗಳಲ್ಲಿ ಜಂಬೂ ಫಲಗಳು ಮಾಗಿ ಕಪ್ಪಗೆ ಕಂಗೊಳಿಸುತ್ತ ಇರುತ್ತವೆ. ದೂರದಿಂದ ಬಂದ ಹಂಸಗಳು ಅಲ್ಲಿ ಕೆಲವು ಕಾಲ ನಿಲ್ಲುತ್ತವೆ . . . . . . ನೀನು ಸ್ವಲ್ಪ ವಿಶ್ರಮಿಸಿಕೊಂಡು ಮುಂದೆ ಪ್ರಯಾಣ ಮಾಡು. ವನ ನದೀ ತೀರದಲ್ಲಿರುವ ಉದ್ಯಾನಗಳಲ್ಲಿರುವ ಮಲ್ಲಿಗೆ ಮೊಗ್ಗುಗಳಿಗೆ ಸ್ವಲ್ಪ ನೀರೆರೆದು ಮುಂದಕ್ಕೆ ಹೋಗು. ಅಲ್ಲದೆ, ಅಲ್ಲಿ ಹೂಗಳನ್ನು ಕೊಯ್ಯುತ್ತ, ಬಿಸಿಲಿನಲ್ಲಿ ನಿಂತಿರುವ ಕಾರಣ ಆಗಾಗ ಬೆವರನ್ನೊರಸಿಕೊಳ್ಳುವುದರಿಂದ ಕಿವಿಯಲ್ಲಿರುವ ಉತ್ಪಲಗಳು ಬಾಡುವಂತೆ ಮಾಡಿಕೊಂಡಿರುವ ಸ್ತ್ರೀಯರಿಗೆ ಸ್ವಲ್ಪ ಕಾಲ ನೆಳಲನ್ನು ಕೊಡು—ಎಂಬ ತಾತ್ಪರ್ಯವುಳ್ಳ) ಶ್ಲೋಕಗಳು ಬಂಧುರವಾಗಿವೆ. ಕೇವಲ ಉದಾಹರಣೆಗಾಗಿ ಸ್ಥಾಲೀ ಪುಲಾಕ ನ್ಯಾಯವನ್ನನುಸರಿಸಿ ಇವುಗಳನ್ನು ಇಲ್ಲಿ ಸೂಚಿಸಿದ್ದೇನೆ. ಮೇಘವು ಅಳಕಾ ನಗರವನ್ನು ತಲುಪುವವರೆಗಿನ ಸಂಗತಿಯು ಪೂರ್ವಮೇಘದಲ್ಲಿ ವರ್ಣಿಸಲ್ಪಟ್ಟಿದೆ. ಬಳಿಕ, ಉತ್ತರಮೇಘವು ಆರಂಭವಾಗುತ್ತದೆ. ಉತ್ತರ ಮೇಘದ ಪ್ರಾರಂಭದಲ್ಲಿ ಬರುವ ಅಳಕಾ ನಗರ ವೈಭವದ ವರ್ಣನೆಯೊಂದೇ ಸಾಕು. ಯಕ್ಷರೆಂದರೆ ಕೇವಲ ಸುಖಿ ಪುರುಷರು. ಅವರ ಒಡೆಯನಾದ ಕುಬೇರನಿಗೆ ಆವಾಸಸ್ಥಾನವಾಗಿರುವ

ಆ ನಗರಿಯು ತದನುಗುಣವಾದ ವೈಭವದಿಂದ ಕೂಡಿ ಅಮರಾವತಿಗೆ ಮಿಗಿಲೆನಿಸಬೇಡವೆ? ಇದರ ಮೇಲೆ ವರ್ಣನೆಗಾರಂಭಿಸಿರುವವನು ಕಲ್ಪನಾ ಸಾಮರ್ಥ್ಯದಲ್ಲಿ ಅಪ್ರತಿಮನಾದ ಕಾಳಿದಾಸ ಮಹಾಕವಿ. ಅಂಧಕಾರಮಯವಾದ ರಾತ್ರಿಯಲ್ಲಿ ಏಕಕಾಲದಲ್ಲಿ ವಿವಿಧ ವರ್ಣಗಳ ಹಗಲುಬತ್ತಿಗಳನ್ನೂ, ಬಾಣ ಬಿರುಸುಗಳನ್ನೂ ಹಚ್ಚಿಬಿಟ್ಟರೆ, ಅದನ್ನು ನೋಡಿ ಹುಡುಗರು ಆನಂದಿತ ಸ್ವಾಂತರಾಗಿ ಬೆಳುನಗೆಯ ಲಹರಿಯಿಂದ ಚಪ್ಪಾಳೆ ಹೊಡೆದುಕೊಂಡು ಕುಣಿದಾಡುವಂತೆ ಉತ್ತರ ಮೇಘದಲ್ಲಿ ಬರುವ ನಗರ ವರ್ಣನೆಯನ್ನೂ, ಯಕ್ಷನ ಸೌಧ ವರ್ಣನೆಯನ್ನೂ ಓದಿದಾಗ ನಮ್ಮ ಮನಸ್ಸೂ ಅದಾವುದೋ ಒಂದು ಅಮಾನುಷವಾದ ಆನಂದಾನುಭವವಾಗಿ ಉಲ್ಲಾಸದಿಂದ ಕುಣಿದಾಡುತ್ತದೆ. ಈ ವರ್ಣನೆಯಲ್ಲಿ ಕಾಳಿದಾಸನು ಪದಗಳನ್ನು ಪ್ರಯೋಗಿಸಿಲ್ಲವೆಂದೂ, ನಮ್ಮ ಮನೋನೇತ್ರದ ಮುಂದೆ ನೃತ್ಯ ಮಾಡಲು—ವಿವಿಧ ವರ್ಣಗಳನ್ನು ಬೀರಿ, ಕಾಂತಿ ವಿಶೇಷದಿಂದ ನಮ್ಮ ಮನೋನೇತ್ರವನ್ನು ಮುಚ್ಚಿಸಲು—ಜೀವರತ್ನಗಳನ್ನೇ ಸಾಲು ಕಟ್ಟಿ ಜೋಡಿಸಿದ್ದಾನೆಂದೂ ನಮ್ಮ ಮನಸ್ಸಿಗೆ ತೋರುವುದು.

೯. ಅಳಕಾ ನಗರ ವರ್ಣನೆಯೂ, ಯಕ್ಷನ ಮನೆಯ ವರ್ಣನೆಯೂ ಮುಗಿದ ಬಳಿಕ ಯಕ್ಷನ ಪತ್ನಿಯ—ಪತಿಯು ಹಿಂದಿರುಗಿ ಬರಲು ಉಳಿದಿರುವ ದಿನಗಳೆಷ್ಟೆಂಬುದನ್ನೇ ಲೆಕ್ಕಮಾಡುತ್ತ ಕ್ಷಾಮಾಂಗಿಯಾಗಿ, ಉತ್ಸಾಹ ರಹಿತಳಾಗಿ, ದುಃಖದಿಂದ ಕಾಲಯಾಪನೆಮಾಡುತ್ತಿರುವ ಸಾಧ್ವೀಮಣಿಯ—ವಿಪನ್ನಾವಸ್ಥೆಯನ್ನು ಕಾಳಿದಾಸನು ವರ್ಣಿಸಿರುವನು. ಈ ವರ್ಣನೆಯನ್ನೋದುವಾಗ ನಮಗೆ ಕರುಣ ರಸವನ್ನು ಪರಿಸ್ಫುಟಗೊಳಿಸುವುದರಲ್ಲಿ ಸುಪ್ರಸಿದ್ಧನಾದ ಭವಭೂತಿ ಮಹಾಕವಿಯ ನೆನಪುಂಟಾಗುವುದು. ಇಂತಹ ಸ್ಥಿತಿಯಲ್ಲಿರುವ ತನ್ನ ಭ್ರಾತೃಜಾಯೆಯೊಡನೆ ಮೇಘವು ತಿಳಿಸಬೇಕಾದ ಸಂದೇಶವು ಬಳಿಕ ಸೂಚಿಸಲ್ಪಡುವುದು. ಅಲ್ಲದೆ—

"ಶಾಪಾಂತೋ ಮೇ ಭುಜಗ ಶಯನಾದುತ್ಥಿತೇ ಶಾರ್ಙ್ಗಪಾಣೌ |
ಶೇಷಾನ್ಮಾಸಾನ್ಗಮಯ ಚತುರೋ ಲೋಚನೇ ಮೀಲಯಿತ್ವಾ ||
ಪಶ್ಚಾದಾವಾಂ ವಿರಹ ಗುಣಿತಂ ತಂ ತಮಾತ್ಮಾಭಿಲಾಷಂ |
ನಿರ್ವೇಕ್ಷ್ಯಾವಃ ಪರಿಣತ ಶರಚ್ಚಂದ್ರಿಕಾಸು ಕ್ಷಪಾಸು ||"

ಎಂಬ ಶ್ಲೋಕದಿಂದ ಶಾಪದ ಅವಧಿಯು ಇನ್ನು ನಾಲ್ಕು ತಿಂಗಳುಗಳು ಮಾತ್ರವೇ ಉಳಿದಿರುವುದೆಂದೂ, ಅದುವರೆಗೂ ಯಕ್ಷನ ಪತ್ನಿಯು ತಾಳ್ಮೆಯಿಂದಿರಬೇಕೆಂದೂ, ಬಳಿಕ ಸುಖವು ಕರಗತವಾಗುವುದೆಂದೂ ಸೂಚಿಸಲ್ಪಡುವುದು. ಯಕ್ಷನ ಸಂದೇಶವನ್ನು ತಿಳಿಸಿದ ಬಳಿಕ ಮೇಘವು ತನಗೆ ಇಷ್ಟಬಂದ ದೇಶಗಳಿಗೆ ತೆರಳಬಹುದೆಂದೂ ಈ ಸಂದೇಶವನ್ನು ತಿಳಿಸಿ ಉಪಕಾರ ಮಾಡಿದುದಕ್ಕೆ ಮೇಘವು ವಿದ್ಯುತ್ತಿನಿಂದ ಕ್ಷಣಕಾಲವೂ ಅಗಲದೆ ಇರುವಂತಾಗುವುದೇ ಪ್ರತಿ

ಫಲವೆಂದೂ ಯಕ್ಷನು ತಿಳಿಸುವನು. ಅಲ್ಲಿಗೆ ಮೇಘ ಸಂದೇಶ ಕಾವ್ಯವು ಪೂರೈಸುವುದು.

೧೦. **ಶ್ಲೋಕತ್ರಯ**——ಆದರೆ, ಕೆಲವು ಪ್ರತಿಗಳಲ್ಲಿ ಅಲ್ಲಿಂದ ಮುಂದಕ್ಕೂ ಮೂರು ಶ್ಲೋಕಗಳು ಸೇರಿಸಲ್ಪಟ್ಟಿರುವುವು. ಕಾಮರೂಪಿಯಾದ ಮೇಘವು ಯಕ್ಷನ ಸಂದೇಶವನ್ನು ಯಕ್ಷನ ಪತ್ನಿಗೆ ತಿಳಿಸಿತೆಂಬುದೂ, ಅದನ್ನು ಕೇಳಿ ಅವಳು ಆನಂದಿಸಿದಳೆಂಬುದೂ, ಕುಬೇರನೂ ಅದನ್ನು ಕೇಳಿ ತನ್ನ ಶಿಕ್ಷೆಯು ಉಳಿದ ಅವಧಿಯನ್ನು ಯಕ್ಷನು ರಾಮಗಿರಿಯಲ್ಲಿ ಕಳೆಯುವುದನ್ನು ತಪ್ಪಿಸಿ, ದಂಪತಿಗಳಿಗೆ ಉಪಕಾರಮಾಡಿದನೆಂಬುದೂ ಅವುಗಳ ಅಭಿಪ್ರಾಯ. ಮೇಘದೂತ ಕಾವ್ಯಕ್ಕೆ ಈ ಶ್ಲೋಕಗಳು ಸೇರಿದರೆ, ಪಾಯಸವಿರುವ ಪಾತ್ರೆಗೆ ಇಂಗು ಬಿದ್ದ ಹಾಗೆಯೇ ಸರಿ. ಕಾಳಿದಾಸನೆಂದಿಗೂ ಈ ಶ್ಲೋಕಗಳನ್ನು* ಬರೆದಿರಲಾರನು. ಇವು ಮತ್ತಾರೋ ಸೇರಿಸಿದ ಶ್ಲೋಕಗಳಾಗಿರಬೇಕು. ಇದನ್ನು ಕೇಳಿ,—"ಮೇಘವು ಸಂದೇಶವನ್ನು ಯಕ್ಷನ ಪತ್ನಿಗೆ ತಿಳಿಸುವಂತೆ, ಮೇಘವನ್ನು ಅವನು ಕೇಳಲೇ ಬಹುದಂತೆ. ಮೇಘವು ಅದನ್ನು ತಿಳಿಸಿದಂತಿದ್ದರೆ ತಪ್ಪೇನು? ಅದನ್ನು ಬರೆದ ಕಾಳಿದಾಸನು ಇದನ್ನೂ ಬರೆದಿರಬೇಕು. ಆಗಲಿ, ಅಧಿಕಸ್ಯ ಅಧಿಕಂ ಫಲಂ. ಅಬದ್ಧಕ್ಕೆ ಅಪ್ಪಣೆಯೇ ಎಂದರೆ ಬಾಯಿಗೆ ಬಂದುದು ಮಹಾರಾಜ ಎಂದ ಹಾಗೆ." ಎಂದು ಯಾರಾದರೂ ವ್ಯಂಗ್ಯವಾಗಿ ಪರಿಹಾಸ ಮಾಡಿದರೂ ಮಾಡಬಹುದು. ಕಲೋಪಾಸಕರಲ್ಲಿ ಅಗ್ಗಳರೆನಿಸಿರುವವರ ಗುಂಪಿಗೆ ಸೇರಿದ ಕಾಳಿದಾಸನ ಮೇಲೆ ಈ ವಿಧದ ಆಕ್ಷೇಪಣೆಗಳು ಕುಂದು ನಂತೆಯೇ ಇಲ್ಲ. ಈ ವಿಧದ ಆಕ್ಷೇಪಣೆಗೆ ಅವಕಾಶವೇ ಇಲ್ಲದಂತೆ ಅವನು ಮೊದಲೇ ಒಂದು ಶ್ಲೋಕವನ್ನು ಸೇರಿಸಿದ್ದಾನೆ. ಅದು ಯಾವುದೆಂದರೆ—

* ತಸ್ಮಾದದ್ರೇರ್ನಿಗದಿತಮಥೋ ಶೀಘ್ರಮೇತ್ಯಾಲಕಾಯಾಂ|
ಯಕ್ಷಾಗಾರಂ ವಿಗಲಿತ ನಿಭಂ ದೃಷ್ಟಚಿಹ್ನೈರ್ವಿದಿತ್ವಾ ||
ಯತ್ಸಂದಿಷ್ಟಂ ಪ್ರಣಯ ಮಧುರಂ ಗುಹ್ಯಕೇನ ಪ್ರಯತ್ನಾ|
ತ್ತದ್ಗೇಹಿನ್ಯಾಃ ಸಕಲಮವದತ್ಕಾಮರೂಪೀ ಪಯೋದಃ ||

ತಂ ಸಂದೇಶಂ ಜಲಧರವರೋ ದಿವ್ಯ ವಾಚಾಽಚಚಕ್ಷೇ|
ಪ್ರಾಣಾಸ್ತಸ್ಯಾ ಜನಹಿತ ರತೋ ರಕ್ಷಿತುಂ ಯಕ್ಷ ವಧ್ವಾಃ ||
ಪ್ರಾಪ್ಯೋದಂತಂ ಪ್ರಮುದಿತ ಮನಾಃ ಸಾಪಿ ತಸ್ಥೌ ಸ್ವಭರ್ತುಃ|
ಕೇಷಾಂ ನಸ್ಯಾದಭಿಮತ ಫಲ ಪ್ರಾರ್ಥನಾಹ್ಯುತ್ತಮೇಷು ||

ಶ್ರುತ್ವಾ ವಾರ್ತಾಂ ಜಲದ ಕಥಿತಾಂ ತಾಂ ಧನೇಶೋಽಪಿ ಸದ್ಯಃ|
ಶಾಪಸ್ಯಾಂತಂ ಸದಯ ಹೃದಯಃ ಸಂವಿಧಾಯಾಸ್ತ ಕೋಪಃ ||
ಸಂಯೋಜ್ಯೈತೌ ವಿಗಲಿತ ಶುಚೌ ದಂಪತೀ ಹೃಷ್ಟಚಿತ್ತೌ|
ಭೋಗಾನಿಷ್ಟಾನಭಿರತ ಸುಖಂ ಭೋಜಯಾಮಾಸ ಶಶ್ವತ್ ||

"ಧೂಮಜ್ಯೋತಿಃ ಸಲಿಲ ಮರುತಾಂ ಸನ್ನಿಪಾತಃ ಕ್ವ ಮೇಘಃ।
ಸಂದೇಶಾರ್ಥಾಃ ಕ್ವ ಪಟು ಕರಣೈಃ ಪ್ರಾಣಿಭಿಃ ಪ್ರಾಪಣೀಯಾಃ।
ಇತ್ಯೌತ್ಸುಕ್ಯಾದಪರಿಗಣಯನ್ಗುಹ್ಯಕಸ್ತಂ ಯಯಾಚೇ।
ಕಾಮಾರ್ತಾಹಿ ಪ್ರಕೃತಿ ಕೃಪಣಾಶ್ಚೇತನಾಚೇತನೇಷು ॥

ಈ ಶ್ಲೋಕದಲ್ಲಿ ಆಕ್ಷೇಪಕರು ಕೇಳಬಹುದಾದ ಪ್ರಶ್ನೆಗಳನ್ನು ಕಾಳಿದಾಸನೇ ಸೂಚಿಸಿದ್ದಾನೆ. "ಅವಯವ ರಹಿತವಾದ ಮೇಘವೆಲ್ಲಿ! ತಕ್ಕ ಇಂದ್ರಿಯಗಳೊಡನೆ ಕೂಡಿ ಸಮರ್ಥರಾದವರು ಮಾತ್ರವೇ ತಿಳಿಸಲವಕಾಶವುಳ್ಳ ಸಂದೇಶಾರ್ಥಗಳೆಲ್ಲಿ? ಎಂಬುದನ್ನೇ ಪರಿಗಣಿಸದೆ, ಯಕ್ಷನು ಔತ್ಸುಕ್ಯದಿಂದ ತನ್ನ ಸಂದೇಶವನ್ನು ಪ್ರಾಣಪ್ರಿಯೆಗೆ ತಿಳಿಸಲು ಮೇಘವನ್ನು ಬೇಡಿದನು. ಕಾಮಾರ್ತರಾದವರಿಗೆ ಯುಕ್ತಾಯುಕ್ತ ಪರಿಶೀಲನೆಯೇ ಇರದು" ಎಂಬುದೇ ಇದರ ತಾತ್ಪರ್ಯ. ಹಾಗಾದರೆ ಮೇಘದೂತ ಕಾವ್ಯವನ್ನು ಬರೆದುದರಲ್ಲಿ ಕವಿಯ ಆಶಯವೇನು? ಕಾಮಾತುರನ ದೈನ್ಯ ಪ್ರಲಾಪವನ್ನೂ, ಕೆಲವು ವರ್ಣನೆಗಳನ್ನೂ ವಾಚಕರ ಮುಂದೆ ಹಿಡಿಯುವುದು ಮಾತ್ರವೇ ಅವನ ಉದ್ದೇಶವೆ? ಅಥವಾ ಮೇಘದೂತ ಕಾವ್ಯದಿಂದ ನಾವು ಗ್ರಹಿಸಬೇಕಾದ ಹೆಚ್ಚಿನ ಸಂಗತಿಗಳೇನಾದರೂ ಉಂಟೆ? ಎಂಬುದಾಗಿ ಬಗೆಬಗೆಯ ಪ್ರಶ್ನೆಗಳು ನಮಗೆ ತೋರುವುವು. ಮುಂದೆ ಯಥಾಮತಿಯಾಗಿ ಇವುಗಳಿಗೆ ಉತ್ತರ ಹೇಳುವೆನು. (ಸಶೇಷ)

ಸಿ. ಕೆ. ವೆಂಕಟರಾಮಯ್ಯ.

*ಕನ್ನಡ ಭಾಗವತದ ಕವಿಯು ಯಾರು?

ಈಗ ಮುದ್ರಣವಾಗಿರುವ ಭಾಗವತದ ಪ್ರತಿಯಲ್ಲಿ ಇದು "ನಿತ್ಯಾತ್ಮ ಶುಕ ಯೋಗಿ ಎಂಬ ಕವಿಯಿಂದ ರಚಿಸಲ್ಪಟ್ಟುದು" ಎಂದು ಇದೆ. ಕವಿಚರಿತ್ರಕಾರರು ಭಾಗವತವನ್ನು ಬರೆದ ಕವಿಯು ಚಾಟುವಿಟ್ಠಲನಾಥನೆಂದೂ ಅವನ ನಿಜವಾದ ಹೆಸರು "ಸದಾನಂದ ಯೋಗಿ" ಎಂದೂ, "ನಿತ್ಯಾತ್ಮ ಶುಕ"ನೆಂಬುದು ಈ ಕವಿಯ ಬಿರುದೆಂದೂ ಬರೆದಿರುವರು. ಆದರೆ ಭಾಗವತವನ್ನು ಬರೆದ ಕವಿಯು ಒಬ್ಬನೇ ಇರದೆ ಬೇರೆ ಬೇರೆ ನಾಲ್ಕೈದು ಜನರು ಬರೆದು ಮುಗಿಸಿದರೆಂಬುದು ನನ್ನ ಮನವರಿಕೆಯಾಗಿದೆ. ಇದಕ್ಕೆ ತಕ್ಕ ಕಾರಣಗಳೂ ಉಂಟು.

ಈ ಭಾಗವತದ ಕವಿಯು ಒಬ್ಬನೇ ಆಗಿದ್ದಲ್ಲಿ ಮಧ್ಯೇಮಧ್ಯೇ ನಾಲ್ಕೈದು ಪೀಠಿಕೆಗಳೇತಕ್ಕೆ ಬೇಕು? ಎಲ್ಲ ಪೀಠಿಕೆಗಳಲ್ಲಿಯೂ ಕವಿಗಳು ತಮ್ಮ ತಮ್ಮ ಗುರುವಿನ ಆಜ್ಞೆಯಿಂದ ಭಾಗವತವನ್ನು ಕನ್ನಡಿಸುತಿರುವೆವೆಂದು ಹೇಳಿಕೊಂಡಿದ್ದಾರೆ. ಮೊದಲಿನ ಹತ್ತು ಸ್ಕಂದಗಳಲ್ಲಿರುವ ಎಲ್ಲ ಸಂಧ್ಯಂತ ಪದ್ಯಗಳಲ್ಲಿಯೂ "ನಿತ್ಯಾತ್ಮ ನಾರಾಯಣ," "ನಿತ್ಯಾತ್ಮ ಕೃಷ್ಣ," "ನಿತ್ಯಾತ್ಮ ಗೋಪೀನಾಥ," "ನಿತ್ಯಾತ್ಮಕ" ಎಂಬ ಅಂಕಿತವು ಕಾಣುತ್ತಿದೆ. ಮಧ್ಯೇ ಎಂಟನೆಯ ಸ್ಕಂಧದಲ್ಲಿಯ ನಡುವಿನ ಸ್ವಲ್ಪ ಭಾಗವನ್ನು 'ವಿದ್ಯಾಯೋಗಿ' ಎಂಬ ಕವಿಯು ಬರೆದಿರುವನು. ಅವನು ತನ್ನದೊಂದು ಪೀಠಿಕೆಯನ್ನು ಬೇರೆಯಾಗಿ ಮಾಡಿದ್ದಾನೆ. ಅವನೂ ತನ್ನ ಗುರುವಿನ ಅನುಜ್ಞೆಯಿಂದಲೇ ಕನ್ನಡಿಸಿರುವನು. ಎಂಟನೆಯ ಸ್ಕಂಧದ ಉಳಿದ ಭಾಗವನ್ನೆಲ್ಲ "ನಿತ್ಯಾತ್ಮ" ಎಂಬ ಅಂಕಿತವುಳ್ಳ ಕವಿಯೇ ರಚಿಸಿರುವನು. ಇವನ ನಿಜವಾದ ಹೆಸರೇನೆಂಬುದು ಯಾರಿಗಾದರೂ ಗೊತ್ತೇ?

ಇನ್ನು ಮುಂದಿನ ಹನ್ನೊಂದನೆಯ ಸ್ಕಂಧದಲ್ಲಿಯ ಸಂಧ್ಯಂತ ಪದ್ಯದಲ್ಲಿ 'ಸದಾನಂದವರ ಯೋಗೀಂದ್ರ'ನ ಹೆಸರು ತಪ್ಪದೆ ಬರುವುದು. ಕವಿಯು ತನ್ನ ಪೀಠಿಕೆಯ ಪದ್ಯಗಳಲ್ಲಿ ತನ್ನ ಹೆಸರನ್ನೂ ತನ್ನ ಗುರುವಿನ ಆಜ್ಞೆಯಿಂದ ಬರೆಯುವೆನೆಂಬುದನ್ನೂ ಹೇಳುವನು. ಇದನ್ನು 'ಸದಾನಂದ' ಎಂಬ ಕವಿಯು ಬರೆದಿರುವನೆಂಬುದನ್ನು ನಿಶ್ಶಂಕೆಯಿಂದ ಹೇಳಬಹುದು.

ಹನ್ನೆರಡನೆಯ ಸ್ಕಂಧದ ವಿಷಯವಾಗಿ ಸ್ವಲ್ಪ ಹೆಚ್ಚಾಗಿ ವಿಚಾರಮಾಡ ಬೇಕಾಗಿದೆ. ಅಚ್ಚಾದ ಭಾಗವತದಲ್ಲಿಯ ಹನ್ನೆರಡನೆಯ ಸ್ಕಂಧವನ್ನು ಮಾತ್ರ ಬರೆದವನು ಚಾಟುವಿಟ್ಠಲನಾಥನೆಂದು ಒಪ್ಪಿಕೊಳ್ಳಬಹುದಾಗಿದೆ. ಇದು ತೀರ ಸಂಕ್ಷೇಪವಾಗಿರುವುದು. ಈ ಚಾಟುವಿಟ್ಠಲನಾಥನು ಮೊದಲಿನ ಹನ್ನೊಂದು ಸ್ಕಂಧಗಳನ್ನು ಬರೆದು ಸಂಗ್ರಹಿಸಿ ಇನ್ನುಳಿದುದು ತನಗೆ ಸಿಕ್ಕಲಿಲ್ಲವಾದುದರಿಂದ

*'ವಿಶ್ವಕರ್ನಾಟಕ' ಪತ್ರಿಕೆಯಿಂದ ತೆಗೆದುದು (೨ನೆಯ ಅಕ್ಟೋಬರ್ ೧೯೨೭)

ಅದನ್ನೆಷ್ಟು ತಾನೆ ಸ್ವಲ್ಪದರಲ್ಲಿಯೇ ರಚಿಸಿ ಸೇರಿಸಿ ಮುಗಿಸಿದಂತೆ ಕಾಣುವುದು. ಎರಡನೆಯವರು ರಚಿಸಿದ ಕಾವ್ಯವನ್ನು ಬರೆದು ಸಂಗ್ರಹಿಸಿದ "ಚಾಟುವಿಟ್ಠಲನಾಥ"ನು ತನ್ನ ಸ್ವಲ್ಪ ಜಾಣತನದಿಂದ, ಇಡೀ ಭಾಗವತ ಕರ್ತೃವೆನಿಸಿಕೊಳ್ಳುತ್ತಿರುವುದು ವಿಚಿತ್ರವಾದ ಸಂಗತಿಯಲ್ಲವೇ? ಈಗ ಅಚ್ಚಾದ ಪುಸ್ತಕವನ್ನು ಮಾತ್ರ ನೋಡಿದರೂ ಬೇರೆಬೇರೆ ನಾಲ್ಕು ಜನ ಕವಿಗಳ ಹೆಸರು ಸಿಕ್ಕುತ್ತದೆ.

ಈ ವಿಷಯವನ್ನೆಲ್ಲ ನೋಡಿದ ನನಗೆ ಭಾಗವತವನ್ನು ಬರೆದವನು ಒಬ್ಬನೇ ಅಲ್ಲನೆಂದು ಅನುಮಾನವಾಯಿತು. ಕೈಬರೆಹದ ಪುಸ್ತಕಗಳು ಎಲ್ಲಿಯಾದರೂ ದೊರೆತರೆ ಈ ಅನುಮಾನದ ನಿವಾರಣೆಯಾಗಬಹುದೆಂದು ಅವುಗಳನ್ನು ದೊರಕಿಸುವುದಕ್ಕೆ ಹವಣಿಸಿದೆನು. ಕರ್ಮ ಧರ್ಮ ಸಂಯೋಗದಿಂದ ಬೇರೆಬೇರೆ ಮೂರು ಪ್ರತಿಗಳು ನನಗೆ ದೊರೆತುವು. ಅವುಗಳಲ್ಲಿ ಒಂದು ಮೊದಲಿನ ೬ ಸ್ಕಂಧ ಮಾತ್ರವುಳ್ಳದು. ಸುಮಾರು ೧೦೦ ವರ್ಷಗಳ ಕೆಳಗೆ ಬರೆದಿರಬಹುದು. ಇನ್ನೊಂದು ಕೊನೆಯ ಎರಡು ಸ್ಕಂಧಗಳು ಮಾತ್ರವುಳ್ಳದು. ಇದು ತಾಳೆಗರಿಯಲ್ಲಿ ಬರೆದುದು; ಬರೆದು ಮುಗಿಸಿದ ದಿನವನ್ನು ಎಣಿಸಿ ನೋಡಿದರೆ ೧೮೨ ವರ್ಷಗಳಾಗಿ ಹೋಗಿವೆ. ಮೂರನೆಯದು ಸಂಪೂರ್ಣ ಗ್ರಂಥವಿದೆ. ಇದನ್ನೂ ಬರೆದು ಸುಮಾರು ೧೦೦-೧೨೫ ವರ್ಷಗಳಾಗಿರಬಹುದು. ಮಧ್ಯೆ ಮಧ್ಯೆ ಸುಂದರ ಚಿತ್ರಗಳಿರುವುವು.

ಈ ಪ್ರತಿಗಳನ್ನು ನಾನು ಮಗುಚಿಹಾಕುತ್ತಿರಲು ನನ್ನ ಅನುಮಾನವು ಸಿದ್ಧಾಂತವಾಗಿ ಪರಿಣಮಿಸಿತು. ಭಾಗವತದ ಹನ್ನೆರಡನೆಯ ಸ್ಕಂಧವನ್ನು ವಿಸ್ತೃತವಾಗಿ ಬರೆದು ಮುಗಿಸಿರುವನು 'ನಿರ್ವಾಣನಾಥ'ನೆಂಬ ಕವಿ. ನನಗೆ ದೊರೆತ ಕೈಬರೆಹದ ಪ್ರತಿಗಳೆರಡರಲ್ಲಿಯೂ ಹನ್ನೆರಡನೆಯ ಸ್ಕಂಧವು ಅವನದಾಗಿದೆ. ಅವನು ತನ್ನ ಪೀಠಿಕೆಯ ಪದ್ಯವೊಂದರಲ್ಲಿ—

ಸ್ಕಂಧ ಹತ್ತಕೆ ಪದವನಾರಾ।
ಧ್ಯೇಂದ್ರ ಕವಿ ವಿರಚಿಸಿದನಾ ಸದ।
ನಂದವರ ಯೋಗೀಂದ್ರನೇಕಾದಶವ ನಿರ್ಮಿಸಿದ ॥
ಇಂದು ಮಿಕ್ಕಿನತೆನ್ನ ಮತಿ ಬಂ।
ದಂದದಲಿ ನಾ ಪೇಳ್ವೆ............

ಇತ್ಯಾದಿಯಾಗಿ ಹೇಳಿದುದನ್ನು ನೋಡಿದೆನು. ನನ್ನ ಅನುಮಾನವು ಸತ್ಯವಾಯಿತೆಂದು ಹಿಗ್ಗಿದೆನು. ನಿತ್ಯಾತ್ಮನೆಂಬ ಅಂಕಿತದಿಂದ ಬರೆದವನ ಹೆಸರು 'ಆರಾಧ್ಯೇಂದ್ರ' ಅಥವಾ 'ಆರಾಧ್ಯನಾಥ' ಎಂದಿರುವುದನ್ನು ಕಂಡುಹಿಡಿದೆನು.

ಹೀಗೆ ಭಾಗವತದ ಕವಿಗಳು—೧. ಆರಾಧ್ಯೇಂದ್ರ ಅಥವಾ ನಿತ್ಯಾತ್ಮನಾಥ, ೨. ವಿದ್ಯಾಯೋಗಿ ಅಥವಾ ವಿದ್ಯಾನಾಥ, ೩. ಸದಾನಂದಯೋಗಿ, ೪. ನಿರ್ವಾಣನಾಥ, ೫. ಚಾಟುವಿಟ್ಠಲನಾಥ—ಎಂಬ ಬೇರೆ ಬೇರೆ ಐವರಿರುವರು. ಹೆಸರು

ಗಳನ್ನು ನೋಡಿದರೆ ಎಲ್ಲರೂ ಸಂನ್ಯಾಸಿಗಳಾಗಿಯೇ ತೋರುವರು. ಎಲ್ಲರ ಹೆಸರಿನ ಕೊನೆಗೂ 'ನಾಥ' ಎಂಬ ಪದವು ಇರುವುದರಿಂದ ಇವರೆಲ್ಲರೂ ಉತ್ತರ ಹಿಂದೂಸ್ಥಾನದಲ್ಲಿ ನಡೆವಳಿಕೆಯಲ್ಲಿದ್ದ "ನವನಾಥ ಪಂಥ"ದವರಿರಬೇಕು. ಈ ನವನಾಥರ ಧರ್ಮವು ಭಾಗವತ ಧರ್ಮ. ಅವಧೂತ ಸಂಪ್ರದಾಯ. ಕನ್ನಡ ಭಾಗವತದ ಎಲ್ಲ ಕವಿಗಳೂ ಈ ಸಂಪ್ರದಾಯದ ಪುರಸ್ಕರ್ತೃಗಳಾಗಿರುವರು. ಅಲ್ಲದೆ ಇವರ ಕಾಲದಲ್ಲಿಯೇ ಮಹಾರಾಷ್ಟ್ರದಲ್ಲಿಯಾದರೂ ಈ ನಾಥಪಂಥದವನೇ ಆದ, 'ಏಕನಾಥ'ನೆಂಬ ಕವಿಯೂ ಭಾಗವತವನ್ನು ಬರೆದಿರುವನು. ಆ ಕಾಲದಲ್ಲಿ ನಾಥಪಂಥವು ಸಮಸ್ತ ನಾಡಿನಲ್ಲಿಯೂ ಹೆಚ್ಚು ಪ್ರಚಾರದಲ್ಲಿದ್ದಿತೆಂದು ಕಾಣುವುದು. ಈ ಪಂಥದ ಕನ್ನಡ ಸಂನ್ಯಾಸಿಯೊಬ್ಬನು ತನ್ನ ಸಂಪ್ರದಾಯದ ಗ್ರಂಥವಾದ ಭಾಗವತವನ್ನು ಕನ್ನಡದಲ್ಲಿ ತರಬೇಕೆಂದಾಲೋಚಿಸಿ, ತನ್ನ ಶಿಷ್ಯರಲ್ಲಿ ಕೆಲವರಿಗೆ ಬೇರೆ ಬೇರೆ ಭಾಗಗಳನ್ನು ಕನ್ನಡಿಸಲಿಕ್ಕೆ ಹೇಳಿರುವನಾಗಿ ತೋರುವುದು. ಅವನ ಹೇಳಿಕೆಯಂತೆ ಅವನ ಐವರು ಶಿಷ್ಯರು ಬರೆದು ಮುಗಿಸಿರುವರು. ನಿಜವಾದ ಕವಿಗಳು ಇವರಿದ್ದು, ಈ ನಿತ್ಯಾತ್ಮಶುಕನೆಂಬ ಧೂಮಕೇತುವು ಎಂದು ಇವರ ಸ್ಥಳವನ್ನು ಆಕ್ರಮಿಸಿದನೋ ಎಂಬುದು ತಿಳಿಯದ ಸಂಗತಿ.

ಇದರ ವಿಷಯವಾಗಿ ವಿಸ್ತಾರವಾದ ಬರಹವೊಂದನ್ನು ಸಾಧಾರವಾಗಿ ಬರೆಯಲಿರುವೆನು. ನಿಜವಾದ ಸಂಗತಿಯನ್ನು ಆದಷ್ಟು ಬೇಗನೆ ಕನ್ನಡಿಗರಿಗೆ ತಿಳಿಸಬೇಕೆಂದು ತೋರಿದುದರಿಂದ ಈಗ ಸ್ವಲ್ಪದಲ್ಲಿಯೇ ಬರೆದು ತಿಳಿಸಿರುವೆನು. ಸಾಹಿತ್ಯ ಪ್ರೇಮಿಗಳು ಇದರ ಬಗೆಗೆ ಹೆಚ್ಚು ವಿಚಾರ ಮಾಡಬೇಕಾಗಿ ಬಿನ್ನಹ.

ಕೃ. ಶ್ರೀ. ಬೆಟಗೇರಿ, ಕವಿಭೂಷಣ.

(ಮದರಾಸು ಶಿಲಾಶಾಸನ ಶಾಖೆಯ ೧೯೨೦–೨೧ನೆಯ ವರ್ಷದ ವರದಿಯಲ್ಲಿ ಪುಟ ೮) ಮಂಗಳೂರು ಸಮೀಪದ ಕದರಿಯಲ್ಲಿರುವ ಮಂಜುನಾಥ ದೇವಾಲಯದ ವಿಚಾರವಾಗಿ ಬರೆಯುತ್ತ ಅದೇ ದೇವಾಲಯದಲ್ಲಿ ಶಾರ್ಙ್ಗನಾಥ ಮತ್ತು ಮತ್ಸ್ಯೇಂದ್ರನಾಥನ ಶಿಲಾ ಪ್ರತಿಮೆಗಳಿವೆಯೆಂದು ಹೇಳಿ ಅವುಗಳ ಛಾಯಾಚಿತ್ರಗಳನ್ನು ಪ್ರಕಟಿಸಿರುವರು. ಈ ಚಿತ್ರಗಳನ್ನು ಜೈನಮೂರ್ತಿಗಳೆಂದೂ ಹೇಳಿರುವರು.

ಪೂರ್ವದಲ್ಲಿ ಈ ಪ್ರಾಂತ್ಯಕ್ಕೆ 'ಕದರಿಕಾರಾಮ'ವೆಂದು ಹೆಸರಿತ್ತು. ಹತ್ತಿರವಿರುವ ಗುಡ್ಡದ ಮೇಲೊಂದು ನಾಥಪಂಥದ ಮಠವು ಈಗಲೂ ಇದೆ. ಅಲ್ಲೊಬ್ಬ ಸಾಧುವೂ ಇರುವನು. ಇದೆಲ್ಲವನ್ನೂ ಸ್ಥಳದ ಐತಿಹ್ಯವನ್ನೂ ವಿಚಾರಿಸಿ ನೋಡಿದರೆ ದಕ್ಷಿಣ ಕನ್ನಡವು 'ನಾಥಪಂಥ'ಕ್ಕಾಶ್ರಯವಾಗಿದ್ದಿತೆಂದೂ, ಕದರಿಕಾರಾಮವು ಮಂಜುನಾಥ (?). ಶಾರ್ಙ್ಗನಾಥ, ಮತ್ಸ್ಯೇಂದ್ರನಾಥರೇ ಮುಂತಾದ ಸಾಧುವರ್ಯರ ನಿವಾಸಸ್ಥಾನವಾಗಿತ್ತೆಂದೂ ಹೇಳಬಾರದೇಕೆ? [ತಿ. ತಾ. ಶ.]

ಗ್ರಂಥ ವಿಮರ್ಶೆ

೧. ಭಾರತೀಯರ ಇತಿಹಾಸ

ಲೇಖಕರು.—ಶ್ರೀ ನಾರಾಯಣಶರ್ಮರು.

ಪರಿಶೋಧಕರು.—ಶ್ರೀ ಆಲೂರ ವೆಂಕಟರಾಯರು.

ಪುಟಗಳು ೨೨೨ : ಧಾರವಾಡದ ಶ್ರೀಕೃಷ್ಣ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟುದು.

ಬೆಲೆ ರೂ. ೨-೮-೦.

ಇದು ಉತ್ತಮವಾದ ಐತಿಹಾಸಿಕ ಗ್ರಂಥ. ಇದರಲ್ಲಿ ವೇದಗಳ ಕಾಲದಿಂದ ಕ್ರಿ. ಶ. ೮೦೦ನೆಯ ಸಂವತ್ಸರದವರೆಗಿನ ಭಾರತೀಯ ಇತಿಹಾಸವು ಹೃದಯಂಗಮವಾಗಿ ಬರೆಯಲ್ಪಟ್ಟಿದೆ. ನಮ್ಮಲ್ಲಿ ಐತಿಹಾಸಿಕ ಗ್ರಂಥಗಳೇ ಕಡಿಮೆ. ಕೆಲವು ಗ್ರಂಥಗಳಂತು ನೀರಸವಾದ ವಿಷಯಗಳ ಮತ್ತು ಮೇಲಿಂದ ಮೇಲೆ ಒತ್ತಿ ಒತ್ತಿ ಬರೆದ ವರುಷಗಳ ಪಟ್ಟಿಗಳಂತಿವೆಯೆಂದರೂ ಅತಿಶಯೋಕ್ತಿಯಾಗುವ ಭಯವಿಲ್ಲ. ಶ್ರೀ ನಾರಾಯಣಶರ್ಮರವರ ಗ್ರಂಥವು ಈ ವಿಧದ ಗ್ರಂಥಗಳ ಗುಂಪಿಗೆ ಸೇರದೆ, ಸಿಪ್ಪೆಗಿಂತಲೂ ತಿರುಳಿಗೆ ಮಾತ್ರವೇ ಪ್ರಾಮುಖ್ಯತೆಯನ್ನು ಕೊಡುವ ಉತ್ತಮವಾದ ಗ್ರಂಥವಾಗಿರುವುದು ಕನ್ನಡಿಗರೆಲ್ಲರಿಗೂ ಅಭಿಮಾನದ ಸಂಗತಿ. ಆರಂಭದಿಂದ ಹಿಡಿದು ಕೊನೆಯವರೆಗೂ ಗ್ರಂಥವು ಬಹು ಸ್ವಾರಸ್ಯವಾಗಿ ಬರೆಯಲ್ಪಟ್ಟಿರುವುದು ಮತ್ತೊಂದು ವಿಶೇಷ. ಗ್ರಂಥಕರ್ತರು ಅನೇಕ ಪ್ರೌಢ ಗ್ರಂಥಗಳನ್ನು ವ್ಯಾಸಂಗಮಾಡಿ, ವಿಷಯಗಳನ್ನು ಸಂಗ್ರಹಿಸಿರುವುದು ನಿಜವಾದರೂ, ಅವುಗಳೆಲ್ಲಕ್ಕೂ ಅವರು ಸ್ವತಃ ಬಣ್ಣದ ಮೆರುಗನ್ನು ಕೊಟ್ಟು, ತಮ್ಮ ಉತ್ಸಾಹವನ್ನೂ, ದೇಶವಾತ್ಸಲ್ಯವನ್ನೂ ಚೆನ್ನಾಗಿ ತೋರ್ಪಡಿಸಿದ್ದಾರೆ. ಕೆಲವು ವಾಕ್ಯಗಳನ್ನು ಓದುವಾಗಲಂತು ನಮ್ಮ ದೇಶದ ಗತವೈಭವದ ಚಿತ್ರವು ಕಣ್ಣಿಗೆ ಕಟ್ಟಿದಂತಾಗುತ್ತದೆ—"ಮನೆ ಮನೆಯಲ್ಲಿಯ ಗೃಹಿಣಿಯರು ಬ್ರಹ್ಮಚಾರಿಯ ಭಿಕ್ಷೆಗೆ ಬರುವ ದಾರಿಯನ್ನು ಕಾಯ್ದು, ಅವನಿಗೆ ಶುದ್ಧಾನ್ನವನ್ನು ನೀಡುತ್ತಿದ್ದು ತಮ್ಮ ಪುಣ್ಯ ಪಾವಿತ್ರ್ಯಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಬಿಸಿಲಲ್ಲಿ ಬಳಲಿ ಬೆಂಡಾಗಿ ಭಿಕ್ಷೆಗಾಗಿ ಬರುವ ಬಡ, ಹಾಗೂ ಬಾಲ ಬ್ರಹ್ಮಚಾರಿಗಳು, ತಮ್ಮ ಕಂದಮ್ಮಗಳೆಂದು ಕನಿಕರದಿಂದ, ಅವರು ಭಿಕ್ಷೆಗೆ ಬರುವ ದಾರಿಯನ್ನು ಕಾಯುತ್ತ ಕುಳಿತಿರುವ ಆ ದಿವ್ಯ ಮಾತೆಯರೂ, ಮನೆ ಮನೆಗಳಲ್ಲಿ ತಮ್ಮ ತಾಯಂದಿರಿರುವರೆಂಬ ಭಾವನೆಯಿಂದ ನಿಃಸಂದೇಹವಾಗಿ ತಿರುಗುವ ಸೂರ್ಯನಂಥ ತೇಜಸ್ಸಿನ ಬ್ರಹ್ಮಚಾರಿಗಳೂ ಧನ್ಯರು! ಭಾರತಕ್ಕೆ ಇನ್ನೊಂದು ಅಂಥ ದಿವ್ಯ ಮುಹೂರ್ತ ಬರುವುದು?" "ಹೆಂಗಸು ಮತ್ತೊಬ್ಬ ಗಂಡಸನ್ನು ಲಗ್ನ ಮಾಡಿಕೊಂಡರೆ ಅವಳೆಷ್ಟು ಪಾಪಕ್ಕೆ ಗುರಿಯಾಗುವಳೋ, ಗಂಡಸು

ಪತಿಸ್ತ್ರ್ಯಷ್ಟ ಹೆಂಗಸನ್ನು ಭಗ್ನವಾದರೆ ಅಷ್ಟೇ ಪಾಪಕ್ಕೆ ಪಾತ್ರನಾಗುವನೆಂದು ಉದ್ದಾಲಕ ಋಷಿಯು ಮಗನಾದ ಶ್ವೇತಕೇತುವು ಬಂದ ತರುವಾಗ ಹೇಳಿದ್ದಾನೆ." "ಹೀಗೆ ಆರ್ಯರು ಕಡಲ ಪಯಣ ಪ್ರಿಯರಾದ್ದರಿಂದ ಅಲ್ಲಲ್ಲಿ ತಮಗನುಕೂಲವಾಗುವಂತೆ ರೇವುಗಳನ್ನು ಕಟ್ಟಿಸಿದ್ದಲ್ಲದೆ, ದೀಪಸ್ತಂಭಗಳನ್ನು ಇಡಿಸಿದ್ದರು. ಇಂಥದೊಂದು ದೀಪಗಂಬವು ಕಾವೇರಿಯ ಮುಖದ ಹತ್ತಿರ ಇದ್ದು, ಅದನ್ನು ಇಟ್ಟಿಗೆಗಳಿಂದ ಕಟ್ಟಿ ಅದರ ತುದಿಯಲ್ಲಿ ದೊಡ್ಡದೊಂದು ದೀಪವನ್ನು ಇಟ್ಟಿದ್ದರೆಂಬುದರ ಮೇಲಿಂದ ಆಗಿನ ಸಮುದ್ರಯಾನವು ಎಷ್ಟು ವ್ಯವಸ್ಥಿತವಾಗಿ ನಡೆಯುತ್ತಿತ್ತೆಂಬುದು ತಿಳಿದು ನಮಗೆ ಆಶ್ಚರ್ಯವೆನಿಸುವುದು. ಜನಾಂಗದಲ್ಲಿ ಸ್ವಾತಂತ್ರ್ಯತೇಜವೆಂಬುದೊಂದು ಮಿಣುಕುತ್ತಿದ್ದರೆ ಬೇಕಾದುದನ್ನು ಮಾಡಬಹುದೆಂಬುದೊಂದು ಅನ್ಯಾದೃಶವಾದ ಧೈರ್ಯವು ಮನಸ್ಸಿನಲ್ಲಿ ಕುಣಿಯುತ್ತಿರುತ್ತದೆ. ಅದೇ ಮನುಷ್ಯನನ್ನು ಇಂಥ ಕಾರ್ಯಗಳಿಗೆ ಪ್ರೇರಿಸುತ್ತದೆ." "ಧಾರ್ಮಿಕ ದೃಷ್ಟಿಯಿಂದ ವಿಚಾರಿಸಿದ ಅವ್ಯವಸ್ಥಿತವಾದ ಹಿಂದೂದೇಶಕ್ಕೀಗ ಆಚಾರ್ಯರವರ ಪ್ರಭಾವದಿಂದ ಧರ್ಮ ವ್ಯವಸ್ಥೆಗೊಂಡು ಜ್ಞಾನದ ಸುರಿಮಳೆಯಾಗಿ ಎಲ್ಲೆಲ್ಲಿಯೂ ವೈದಿಕ ಧರ್ಮದ ಹೊಸ ಸುಗ್ಗಿಯಾಯಿತು. ಭರತಖಂಡದಂಥ ವಿಸ್ತಾರವಾದ ದೇಶದಲ್ಲಿಂಬುಗೊಂಡಿರುವ ಧಾರ್ಮಿಕ ಗೊಂದಲವನ್ನು ಶ್ರೀಮಚ್ಛಂಕರಾಚಾರ್ಯರಂಥ ಒಬ್ಬ ಧರ್ಮವೀರರು ಅಣಗಿಸಿ, ಧರ್ಮಜೀರ್ಣೋದ್ಧಾರವಾಡಿದ ಕ್ರಾಂತಿಯು ಉದಾಹರಣೆಯು ಜಗತ್ತಿನ ಇತಿಹಾಸದೊಳಗೊಂದು ಕಟ್ಟಚ್ಚರಿಯ ಮಾತಾಗಿದೆ. ಆದುದರಿಂದಲೇ ಆಚಾರ್ಯರು ವಿಭೂತಿ ಪುರುಷರೆಂದೂ, ಅವತಾರಿಕರೆಂದೂ, ಈಗ್ಯೂ ಹಿಂದೂ ಜನರು ಅವರನ್ನು ಪೂಜಿಸುವುದುಂಟು!" —ಎಂಬವೇ ಮುಂತಾದ ಕೆಲವು ವಾಕ್ಯಗಳಲ್ಲಿ ಅಡಗಿರುವ ಭಾವ ವಿಶೇಷದಿಂದ ಅವುಗಳನ್ನೋದುವಾಗ ನಮ್ಮ ಹಿರಿಯರ ಮಹಿಮೆಯು ಸೆಳೆಮಿಂಚಿನಂತೆ ಗೋಚರಿಸಿ ನಮ್ಮ ಧಮನಿಯಲ್ಲಿ ರಕ್ತಗತಿಯೇ ತೀವ್ರವಾಗುತ್ತದೆ. ಐತಿಹಾಸಿಕ ಗ್ರಂಥಗಳ ಉದ್ದೇಶವು ವಾಚಕರ ಮೆದುಳಿಗೆ ಬರಡು ಕಗ್ಗಗಳನ್ನು ಬಲವಂತವಾಗಿ ತುಂಬ ಬೇಸರಪಡಿಸುವುದಲ್ಲವೆಂಬುದನ್ನೂ, ವಾಚಕರಲ್ಲಿ ದೇಶಾಭಿಮಾನದ ಅಂತರಾವೇಶವುಂಟಾಗುವಂತೆ ಸ್ಫೂರ್ತಿದಾಯಕವಾಗಿರುವುದೇ ಅವುಗಳ ನಿಜವಾದ ಉದ್ದೇಶವೆಂಬುದನ್ನೂ ಒಪ್ಪುವ ಪಕ್ಷಕ್ಕೆ, ಮ॥ ರಾ॥ ನಾರಾಯಣ ಶರ್ಮರವರ ಪ್ರಯತ್ನವು ಶ್ಲಾಘ್ಯವಾಗಿದೆಯೆಂಬುದನ್ನೂ ಒಪ್ಪಲೇಬೇಕು. ಗ್ರಂಥದಲ್ಲಿರುವ "ಸ್ವಲ್ಪ," "ತೋಚು," "ಗಿರಿಗಹ್ವರ," "ಬಿರುಗಾಳಿಗೆ ಸಿಕ್ಕು" ಮುಂತಾದ ಅನೇಕ ಪ್ರಯೋಗಗಳು ಸಾಧುವೆಂದು ತೋರುವುದಿಲ್ಲ. ಅಲ್ಲಲ್ಲಿ ವಿವಾದಾಸ್ಪದಗಳಾದ ಕೆಲವು ಅಂಶಗಳೂ ಇವೆ. ಹೀಗೆಂದ ಮಾತ್ರವೇ ದೋಷೈಕದೃಷ್ಟಿಯಿಂದ ಗ್ರಂಥವನ್ನು ಪರಾಮರ್ಶಿಸಲಾಗುತ್ತಿದ್ದೇವೆಂದು ಯಾರೂ ಭಾವಿಸಕೂಡದೆಂದು ಪ್ರಾರ್ಥನೆ. ಒಟ್ಟಿನಲ್ಲಿ ಈ ಗ್ರಂಥವು ಉತ್ತಮವಾಗಿದೆಯೆಂಬುದನ್ನೂ, ನಮ್ಮ ಈಗಿನ ಸ್ಥಿತಿಯಲ್ಲಿ ಇಂತಹ ಇನ್ನೂ ಅನೇಕ

ಗ್ರಂಥಗಳು ಹೊರಬೀಳಬೇಕಾದುದು ತೀರ ಅವಶ್ಯವಾಗಿದೆಯೆಂಬುದನ್ನು ಪ್ರತಿಯೊಬ್ಬ ಕನ್ನಡಿಗನೂ ಒಪ್ಪಿಯೇ ಒಪ್ಪಬಹುದೆಂದು ತೋರುತ್ತದೆ. ಈ ಪುಸ್ತಕದ ಮುದ್ರಣವು ಅಂದವಾಗಿದೆ. ಮೈಸೂರು ಸಂಸ್ಥಾನದ ಸುಪ್ರಸಿದ್ಧ ಚಿತ್ರ ಲೇಖಕರಾದ ಮ|| ರಾ|| ಕೆ. ವೆಂಕಟಪ್ಪನವರು ಬರೆದಿರುವ "ರಾಜಕುಮಾರ ಸಿದ್ಧಾರ್ಥನ ಗೃಹತ್ಯಾಗ" ಎಂಬ ಚಿತ್ರವನ್ನೂ, ಅಜಂತದ ಕೊನೆಯ ಗುಹಾಲಯದಲ್ಲಿರುವ ಎರಡನೆಯ ಪುಲಕೇಶಿಯ ಚಿತ್ರದ ಪ್ರತಿಕೃತಿಯನ್ನೂ ಮುದ್ರಿಸಿರುವುದರಿಂದ, ಪುಸ್ತಕದ ಅಂದವು ಮತ್ತಷ್ಟು ಹೆಚ್ಚಾಗಿದೆ. ಈ ಗ್ರಂಥದಲ್ಲಿ ಇತರ ಕೆಲವು ಚಿತ್ರಗಳೂ ಇವೆ. ಮ|| ರಾ|| ನಾರಾಯಣಶರ್ಮರವರು ಶೀಘ್ರವಾಗಿಯೇ ಕ್ರಿ. ಶ. ಒಂಬತ್ತನೆಯ ಶತಮಾನದಿಂದ ಇತಿಹಾಸವನ್ನು ಮುಂದುವರಿಸಿ ಮತ್ತೊಂದು ಗ್ರಂಥವನ್ನು ಬರೆದು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಲೆಂದೂ, ಅವರ ಈಗಿನ ಕೃತಿಗೆ ತಕ್ಕಷ್ಟು ಪ್ರೋತ್ಸಾಹವು ದೊರೆಯಲೆಂದೂ ಹಾರೈಸುವೆವು.

ಸಿ. ಕೆ. ವೆಂಕಟರಾಮಯ್ಯ.

---

೨. ಚೀಣಾ ಸಂಗ್ರಾಮ

ಪ್ರಕಾಶಕರು.—ವಿಶ್ವಕರ್ಣಾಟಕ ಕಾರ್ಯಾಲಯ, ಬೆಂಗಳೂರು ಸಿಟಿ.

ಸಣ್ಣ ಪುಟಗಳು ೩೭ ; ಬೆಂಗಳೂರು ಶ್ರೀ ಲಕ್ಷ್ಮೀನರಸಿಂಹ ಮುದ್ರಣಾಲಯದಲ್ಲಿ ಮುದ್ರಿತವಾಯಿತು ; ೧೯೨೭.

ಯುರೋಪ್ಯರ ರಾಜ್ಯ ತಂತ್ರವನ್ನು ಇದರಿಂದ ಗ್ರಹಿಸಬಹುದಾಗಿದೆ. "ರಸ್ಸೆಲ್ ಸ್ಮಿತ್ ಎಂಬ ಅಮೆರಿಕಾ ದೇಶದ ಗ್ರಂಥಕರ್ತನೊಬ್ಬನು ಕೆಲವು ವರ್ಷಗಳ ಹಿಂದೆ ಬರೆದನು" ಎಂದು ಪ್ರಾರಂಭದಲ್ಲಿ ಹೇಳಿದೆ.

ಈ ಸಣ್ಣ ಪುಸ್ತಕದಲ್ಲಿ ಪರರಾಜ್ಯಾಕರ್ಷಣೆಗೆ ಬೇಕಾಗಿರುವ ಬಗೆ ಬಗೆಯ ಉಪಾಯಗಳೂ, ತಮಗೆ ಸಂಬಂಧಪಟ್ಟ ಅಥವಾ ಸಂಬಂಧಪಡದ ಇತರ ರಾಜ್ಯಗಳನ್ನು ಅನುಸರಣೆಯಿಂದಲೋ ಸ್ನೇಹಭಾವದಿಂದಲೋ ವೈರದಿಂದಲೋ ಸಂದರ್ಭಾನುಸಾರವಾಗಿ ಆಕ್ರಮಿಸಿಕೊಳ್ಳುವ ಮಾರ್ಗಗಳೂ ವಿಶದವಾಗಿವೆ. ರಾಜ್ಯ ತಂತ್ರವನ್ನು ತಿಳಿಯಲಪೇಕ್ಷಿಸುವವರೂ ಸ್ವರಾಜ್ಯಾಕಾಂಕ್ಷಿಗಳೂ ಮುಖ್ಯವಾಗಿ ಈ ಪುಸ್ತಕವನ್ನೋದಿ ಗ್ರಹಿಸಬಹುದಾಗಿದೆ. ಇತರರೂ ಓದಿ ಅನೇಕ ಚರಿತ್ರಾಂಶಗಳನ್ನು ತಿಳಿಯಬಹುದು.

ಭಾಷಾ ಶೈಲಿಯು ಲಲಿತವಾಗಿಯೂ ಸುಲಭವಾಗಿಯೂ ಇದೆ. ಅಂದರೆ, ಆದ್ದರಿಂದ, ಬೆಳೆಸಿ, ಸೇವಿಸುತ್ತಾ, ಹದಿನೆಂಟನೇ, ಪೌರ್ವಾತ್ಯ ಮೊದಲಾದ ರೀತಿಯಾಗಿ ಬಂದಿರುವ ಅಶುದ್ಧ ರೂಪಗಳು ಅಲ್ಲಲ್ಲಿ ಕಾಣಬರುತ್ತವೆ. ಅಚ್ಚಿನ ತಪ್ಪುಗಳಿಲ್ಲ.

ಸಾಮಾನ್ಯರೂ ಅನೇಕ ಹೊಸ ಸಂಗತಿಗಳನ್ನು ತಿಳಿಯಲು ಈ ಪುಸ್ತಕವು ಅನುಕೂಲವಾಗಿರುವುದರಿಂದ ಎಲ್ಲರೂ ಇದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವ ರೆಂದು ಭಾವಿಸುತ್ತೇವೆ.

---

೩. ಗುರು ಗೋವಿಂದಸಿಂಹ

ಲೇಖಕರು.—ಶಂಕರರಾವ ಕುಲಕರ್ಣಿ, ಸೂಲವಿ.

ಕ್ರೌನ್ ಪುಟಗಳು ೧೩೧+೪; ಆನಂದವನದ ಶ್ರೀ ಶೇಷಾಚಲ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು; ೧೯೩೭; ಬೆಲೆ ರೂ. ೦–೧೨–೦.

ಸಿಕ್ಕರ ಹತ್ತನೆಯ ಗುರುವಾದ ಗೋವಿಂದಸಿಂಹನ ಜೀವನ ಚರಿತ್ರೆಯು ಇದರಲ್ಲಿ ಆಮೂಲಾಗ್ರವಾಗಿ ವರ್ಣಿತವಾಗಿದೆ.

ಪ್ರಸ್ತಾವನೆಯಲ್ಲಿ—"ಹೀಗೆ ಸದ್ಗುಣಗಳ ಒರೆಗಲ್ಲಿಗೆ ಹಚ್ಚಲ್ಪಟ್ಟು ತೇಜವನ್ನು ಚಿಮ್ಮಿದ ಅನೇಕ ಸಾಧಾರಣ ವ್ಯಕ್ತಿಗಳನ್ನು ನಾವು ನಮ್ಮ ಇತಿಹಾಸ ದಲ್ಲಿ ಕಾಣಬಹುದು. ಪೃಥ್ವೀರಾಜ, ನಾನಕ, ಗುರು ಗೋವಿಂದಸಿಂಗ, ರಾಣಾ ಪ್ರತಾಪಸಿಂಗ, ವಿದ್ಯಾರಣ್ಯ, ಹರಿಹರ, ಶಿವಾಜಿ ಮುಂತಾದ ಲೌಕಿಕ ವ್ಯಕ್ತಿ ಗಳೆಲ್ಲವೂ ಈ ಮಾದರಿಯ ವ್ಯಕ್ತಿಗಳೇ.................ಈತನ ಆಯುಷ್ಯ ವೆಲ್ಲವೂ ಸೋಲುಗಳನ್ನು ಸಹಿಸುವುದರಲ್ಲಿಯೂ ಅಪಮಾನಗಳಿಗೆ ಈಡಾಗುವುದ ರಲ್ಲಿಯೂ ಸಂಕಟಗಳಿಗೆ ಗುರಿಯಾಗುವುದರಲ್ಲಿಯೂ ಕಳೆದುಹೋಯಿತು. ಆದರೇನು, ಇದರಿಂದ ಆತನ ಯೋಗ್ಯತೆಯು ಕಡಿಮೆಯಾಗಬಹುದೆ? ಸಂಕಟ ಗಳು ಹೆಚ್ಚು ಹೆಚ್ಚು ಒದಗಿದಷ್ಟು ಆತನ ತೇಜವು ಹೆಚ್ಚುಹೆಚ್ಚು ಪ್ರಕಟ ವಾಗುತ್ತಿತ್ತು. ಗುರು ಗೋವಿಂದಸಿಂಹನ ಈ ಚರಿತ್ರೆಯೆಂದರೆ ರಾಮಾಯಣ ಮಹಾಭಾರತದ ಕಥೆಯಂತೆಯೇ ಕೆಲವು ಕಡೆಗೆ ಭಾಸವಾಗುತ್ತದೆ. ಘೋರವಾದ ವಿಪತ್ತುಗಳಲ್ಲಿ ಆತನು ತನ್ನ ಸದ್ಗುಣಗಳನ್ನು ಅಚ್ಚಳಿಯದೆ ಕಾಯ್ದುಕೊಂಡ ದ್ದೇನೂ ಸಾಮಾನ್ಯ ಸಂಗತಿಯಲ್ಲ. ಅದೇ ಆತನನ್ನು ಅಲೌಕಿಕ ಪುರುಷರಲ್ಲಿ ಗಣಿಸಲಿಕ್ಕೆ ಸಾಕಾಗಿದೆ...................ಆತನು ಅತಿ ಪ್ರಯಾಸದಿಂದ ಅತ್ತ ಸ್ವಾತಂತ್ರ್ಯದೇವಿಯ ಮಂದಿರದ ಒಂದೊಂದೇ ಇಟ್ಟಿಗೆಯನ್ನು ಪೇರಿಸು ತ್ತಿದ್ದಾಗ, ಇತ್ತ ಈ ದುರ್ಗುಣಗಳು ಒಳಗಿಂದೊಳಗೆ ತೂತು ಕೊರೆದು ಇಟ್ಟಿಗೆ ಗಳನ್ನು ಸಡಿಲುಮಾಡುತ್ತಿದ್ದುವು. ಹೀಗಾದ ಬಳಿಕ ಆ ಮಂದಿರವು ಉಳಿಯುವುದು ಹೇಗೆ?

ಇರಲಿ, ಸರಳವಾದ ಮತ್ತು ಸರಸವಾದ ಭಾಷೆಯಲ್ಲಿ ಬರೆಯಲ್ಪಟ್ಟ ಗುರು ಗೋವಿಂದಸಿಂಹನ ಈ ಜೀವನ ಚರಿತ್ರೆಯು ಭಾರತೀಯರ ಹೃದಯದಲ್ಲಿ ಯಾವಾಗಲೂ ಹುರುಪು ಹುಟ್ಟಿಸುವುದೆಂಬ ಮಾತು ನಿಸ್ಸಂದೇಹವಾಗಿದೆ. ಅದನ್ನು

ಓದಿ ನಮ್ಮ ತರುಣರು ಕರ್ತವ್ಯ ದೀಕ್ಷೆಯನ್ನು ಸ್ವೀಕರಿಸುವರೆಂದು ನಂಬುತ್ತೇವೆ'' ಎಂದು ಸೂಚಿಸಿರುತ್ತದೆ.

ಗುರುಗೋವಿಂದಸಿಂಹನ ಧೈರ್ಯ, ಸ್ಥೈರ್ಯ, ಸಾಹಸ, ಕಾರ್ಯದಕ್ಷತೆ, ರಾಜ್ಯಕಾರ್ಯ ನಿಪುಣತೆ ಮೊದಲಾದ ಸುಗುಣಗಳು ಸಂದರ್ಭಗಳೊಡನೆ ಈ ಗ್ರಂಥದಲ್ಲಿ ವಿಶದವಾಗಿರುತ್ತವೆ. ರಾಜಕೀಯ ವಿಚಾರದಲ್ಲಿ ತಿಳಿವಳಿಕೆಯನ್ನು ಪಡೆಯಬೇಕೆಂದಿರುವವರೆಲ್ಲರೂ ಇದನ್ನು ಅತ್ಯಾವಶ್ಯಕವಾಗಿ ಓದಬೇಕು. ನಮ್ಮ ದೇಶದ ಅನೇಕ ಚರಿತ್ರಾಂಶಗಳನ್ನು ಇದು ತಿಳಿಸುವುದರಿಂದ ಎಲ್ಲರೂ ಓದಿ ಗ್ರಹಿಸಬೇಕಾದುದಾಗಿದೆ.

ಭಾಷೆಯು ತಿಳಿಗನ್ನಡವಾಗಿಯೂ ಶೈಲಿಯು ಸರಳವಾಗಿಯೂ ಇದೆ. ಮುದ್ರಣವು ಅಂದವಾಗಿದೆ. ಅಚ್ಚಿನ ತಪ್ಪುಗಳಿಲ್ಲ. ಅಲ್ಲಲ್ಲಿ ಕೆಲವು ರೂಢವಾಗಿರುವ ಅಶುದ್ಧರೂಪಗಳು ಮಾತ್ರ ಇಲ್ಲದಿಲ್ಲ. ಇದು ಕ್ರಮೇಣ ಸರಿಹೋಗಬೇಕಲ್ಲದೆ ಬೇಗನೆ ಅನುಕೂಲವಾಗುವಂತಿಲ್ಲ.

ಎಲ್ಲರೂ ಈ ಗ್ರಂಥಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಇನ್ನೂ ಇಂತಹ ಐತಿಹಾಸಿಕ ಪುಸ್ತಕಗಳು ಹೊರಬೀಳುವಂತೆ ಮಾಡಲು ಸಹಾಯಕರಾಗುವರೆಂದು ನಂಬಿದ್ದೇವೆ.

ಶ್ರೀಃ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೨] ಪ್ರಭವ ಸಂ॥ ಪುಷ್ಯ ಮಾಸ [ಸಂಚಿಕೆ ೪

ನೃಪತುಂಗನ ಮತ ವಿಚಾರ

‘ನೃಪತುಂಗ,’ ‘ಅಮೋಘವರ್ಷ’ ಮೊದಲಾದ ಹಲವು ಬಿರುದುಗಳು ಅಥವಾ ಗೌಣ ನಾಮಗಳುಳ್ಳ ‘ಶರ್ವ’ನೆಂಬ ರಾಷ್ಟ್ರಕೂಟ ವಂಶದ ಅರಸನು ದಿಗಂಬರ ಜೈನಾಚಾರ್ಯನಾದ ‘ಜಿನಸೇನಸೂರಿ’ಯಿಂದ ಜೈನ ಧರ್ಮವನ್ನವಲಂಬಿಸಿ ಜೈನ ಧರ್ಮೀಯನಾಗಿದ್ದನೆಂದು ಅನೇಕ ವಿದ್ವಾಂಸರ ನಂಬುಗೆಯಿದೆ. ಆದರೆ ಈ ವಿಷಯವನ್ನು ಸಮರ್ಥಿಸಲಿಕ್ಕೆ ಇದುವರೆಗೆ ಕಾಣಿಸಿರುವ ಆಧಾರಗಳು ಬಲಹೀನವೆಂದು ನನಗೆ ತೋರುವುದರಿಂದ, ನನ್ನ ಆಕ್ಷೇಪಗಳನ್ನು ಬಲ್ಲವರ ಮುಂದಿರಿಸಿ ಈ ವಿಷಯದಲ್ಲಿ ಅನುರಕ್ತಿಯುಳ್ಳವರು ಇದನ್ನು ಸರ್ವಾಂಗವಾಗಿ ತರ್ಕಿಸಿ ಕಡೆಹಾಯಿಸಬೇಕೆಂದು ಬಿನ್ನವಿಸುವೆನು.

ಈ ಲೇಖದ ತಿರುಳಿಗೆ ಕೈಯಿಕ್ಕುವ ಮುಂಚೆ ರಾಷ್ಟ್ರಕೂಟ ವಂಶವನ್ನು ಕುರಿತು ಸಂಕ್ಷೇಪವಾಗಿ ಹೇಳದೆ, ಹಾಗೆಯೇ ಜಿನಸೇನಾಚಾರ್ಯನನ್ನೂ ಆತನ ಕಾಲ ವಿಚಾರವನ್ನೂ ಕುರಿತು ಸಾಧಾರಣವಾಗಿ ತಿಳಿಸದೆ ಮುಂದುವರಿಸಿದರೆ, ಇದನ್ನು ಸರಿಯಾಗಿ ಅರಿತುಕೊಳ್ಳಲು ತೊಡಕಾಗದಿರದೆಂಬುದರಿಂದ, ಆವೆರಡು ವಿಷಯಗಳನ್ನು ಪೂರ್ವರಂಗದಲ್ಲಿರಿಸಿ, ಆ ಬಳಿಕ ತಾನೇ ಈ ಲೇಖದ ಮುಖ್ಯಾಂಶವನ್ನು ಹೇಳಬೇಕಾಗಿದೆ.

ರಾಷ್ಟ್ರಕೂಟ ವಂಶ

ಈ ವಂಶದ ಅನೇಕ ಅರಸರ ಶಾಸನಗಳಲ್ಲಿ ತೋರುವಂತೆ ಈ ವಂಶೀಯರ ದೊರೆತನವು ಮೊದಲನೆಯ ‘ಗೋವಿಂದ’ನೆಂಬ ಅರಸನಿಂದ ಪ್ರಾರಂಭಿಸುವಂತೆ ಕಂಡುಬಂದರೂ, ‘ಎಲೂರಾ’ ಗವಿಗಳಲ್ಲಿಯ (Caves of Ellora) ಶಿಲೋತ್ಕೀರ್ಣವಾದ ‘ದಶಾವತಾರಗಳ ದೇವಾಲಯ’ದಲ್ಲಿಯ ಒಂದು ಶಿಲಾ ಲೇಖದಲ್ಲಿ ಈ ಗೋವಿಂದನಿಂದ ಹಿಂದಣವರಾದ ‘ದಂತಿವರ್ಮ’ ಮತ್ತು ‘ಇಂದ್ರರಾಜ’

ರಂಬಬ್ಬರ ಹೆಸರುಗಳಿರುವುದರಿಂದಲೂ,* ಹಾಗೆಯೇ 'ಪ್ರಾಚೀನ ಲೇಖಮಾಲೆ'ಯ ನಂ. 6, 9, 133 ಮತ್ತು 156ರಲ್ಲಿಯೂ ಹೇಳಿರುವ ವಂಶಾವಳಿಯಲ್ಲಿಯೂ ಅವರನ್ನು ಹೆಸರಿಸಿರುವುದರಿಂದಲೂ ಆ ದಂತಿವರ್ಮನಿಂದಲೇ ಇವರ ವಂಶಾವಳಿಯನ್ನು ತೋರಿಸುವುದು ಉಚಿತವೆಂದು ಹಾಗೆ ಮಾಡಿದೆ. ಇವರಲ್ಲಿಯ ಮೂರನೆಯ 'ಗೋವಿಂದ'ನೆಂಬ ಅರಸನು (ಕ್ರಿ. ಶ. 794—814) 'ಮಹೀ' ಮತ್ತು 'ತಾಪೀ' (=ತಪತೀ) ನದಿಗಳ ಮಧ್ಯವರ್ತಿಯಾದ 'ಲಾಟ' (ಅಥವಾ 'ಲಾಳ' ಎಂದರೆ ಗುಜರಾತು) ದೇಶವನ್ನು ಅಲ್ಲಿಯ ಅರಸನಿಂದ ಗೆದ್ದು, ತನ್ನ ತಮ್ಮನಾದ (ಮೂರನೆಯ) 'ಇಂದ್ರ'ನಿಗೆ ಕೊಟ್ಟು, ಆತನನ್ನು ಅದರ ಆಳ್ವಿಕೆಯಲ್ಲಿ ನೇಮಿಸಿದಂದಿನಿಂದ,† ಇವರ ವಂಶವು ಕವಲೊಡೆದು ಪ್ರಧಾನ ಶಾಖೆಯು ದಕ್ಷಿಣದ ರಾಷ್ಟ್ರಕೂಟ ವಂಶವೆಂದೂ, ಗೌಣ ಶಾಖೆಯು ಗುಜರಾತಿನ ರಾಷ್ಟ್ರಕೂಟ ವಂಶವೆಂದೂ ಹೆಸರ್ವಡೆದುವು.

ದಂತಿವರ್ಮ
|
ಇಂದ್ರ I
|
1. ಗೋವಿಂದ I
|
2. ಕರ್ಕ (ಕಕ್ಕ) I
|
3. ಇಂದ್ರ II — 5. ಕೃಷ್ಣ I (ಕನ್ನರ) ಅಕಾಲವರ್ಷ, ಶುಭತುಂಗ

3. ಇಂದ್ರ II
|
4. ದಂತಿದುರ್ಗ (ದಂತಿವರ್ಮ, ದಂತಿಗ, ಖಡ್ಗಾವಲೋಕ, ವೈರಮೇಘ)

5. ಕೃಷ್ಣ I
|
6. ಗೋವಿಂದ II ಪ್ರಭೂತವರ್ಷ — 7. ಧ್ರುವ I (ಧೋರ) ನಿರುಪಮ, ಧಾರಾವರ್ಷ, ಕಲಿವಲ್ಲಭ
|

* *E.H.D.*, ಪುಟ 47.

† "ಲಾಟೀಯಂ ಮಂಡಲಂ ಯಸ್ತವನ ಇವ ನಿಜಸ್ವಾಮಿ (=ನಿಜಭ್ರಾತ್ರಾ) ದತ್ತಂ ರರಕ್ಷ॥" (ಪ್ರಾ. ಲೇ. ಮಾ.. ನಂ. 4); "ಭ್ರಾತಾ ತು ತಸ್ಯ (=ಗೋವಿಂದಸ್ಯ)...... ಇಂದ್ರ ರಾಜಃ। ಶಾಸ್ತಾ ಬಭೂವಾದ್ಭುತಕೀರ್ತಿಸೂತಿಸ್ತದ್ದತ್ತ ಲಾಟೇಶ್ವರ ಮಂಡಲಸ್ಯ॥" (ಪ್ರಾ. ಲೇ. ಮಾ.. ನಂ. 5).

ದಕ್ಷಿಣದ ಶಾಖೆ

8. ಗೋವಿಂದ III (ಗೋಯಿಂದ) ಪ್ರಭೂತವರ್ಷ, ಜಗತ್ತುಂಗ, ಶ್ರೀವಲ್ಲಭ, ಪೃಥ್ವೀವಲ್ಲಭ (ಕ್ರಿ. ಶ. 794–814)
9. ಶರ್ವ ಅಮೋಘವರ್ಷ I, ನೃಪತುಂಗ (ಕ್ರಿ. ಶ. 814–877) ಅತಿಶಯಧವಲ, (ವೀರನಾರಾಯಣ)
10. ಕೃಷ್ಣ II (ಕನ್ನರ) ಅಕಾಲವರ್ಷ, ಶುಭತುಂಗ (877–913)
    - ಜಗತ್ತುಂಗ*

ಗುಜರಾತಿನ ಶಾಖೆ

೧. ಇಂದ್ರ III
೨. ಕರ್ಕ (ಕಕ್ಕ) II (ಅಮೋಘವರ್ಷ)
೩. ಧ್ರುವ II (ನಿರುಪಮ)
೪. ಅಕಾಲವರ್ಷ (ಶುಭತುಂಗ)
೫. ಧ್ರುವ III ಅತಿತುಂಗ ನಿರುಪಮ, ಧಾರಾವರ್ಷ
೬. (ಕೃಷ್ಣ ಅಮೋಘವರ್ಷ)

11. ಇಂದ್ರ III (ನಿತ್ಯವರ್ಷ)
12. ಅಮೋಘವರ್ಷ II
13. ಗೋವಿಂದ (ಗಭೀಂದರ) ಪ್ರಭೂತವರ್ಷ
14. ಬದ್ದೆಗ (ವದ್ದಿಗ)† ಅಮೋಘವರ್ಷ III
15. ಕೃಷ್ಣ III (ಕನ್ನರ, ಇಮ್ಮಡಿವಕನ್ನರ) ಅಕಾಲವರ್ಷ
16. ಖೊಟ್ಟಿಗ‡ ನಿತ್ಯವರ್ಷ
    - ನಿರುಪಮ
17. ಕಕ್ಕ II (ಕಕ್ಕಲ) ಅಮೋಘವರ್ಷ, ನೃಪತುಂಗ, ವೀರನಾರಾಯಣ
18. ಇಂದ್ರ IV (ಕ್ರಿ. ಶ. 982ರಲ್ಲಿ ಮಡಿದನು)

---

* ಈತನನ್ನು 'ಅಲಬ್ಧ ರಾಜ್ಯಃ ಸ ದಿವಂ ಪ್ರಪನ್ನೇ......ಧಾತಾ' (ಪ್ರಾ. ಲೇ. ಮಾ., ನಂ. 133 ಮತ್ತು 156) ಎಂದಿರುವುದರಿಂದ ಈತನು ಪಟ್ಟಕ್ಕೇರುವ ಮುಂಚೆಯೇ ಮಡಿದಿರಬೇಕೆಂದು ತಿಳಿಯುತ್ತದೆ.

† 'ಬದ್ದೆಗ (ವದ್ದಿಗ)'—ಇವು ಬಹುಶಃ ಕನ್ನಡ ಭಾಷೆಯ ಹೆಸರುಗಳೆಂದೇ ತೋರುತ್ತದೆ: ''ಬದೆಂದು ಪ್ರೌಢಿ'' ('ಶಬ್ದಮಣಿದರ್ಪಣ') ಎಂಬುದರಿಂದ ಉಂಟಾದ 'ಬದೆಗ' (=ಪ್ರಾಜ್ಞ) ಎಂಬುದರ ರೂಪಾಂತರಗಳಾಗಿರಬಹುದೇನೋ? 'ಪಂಪ ಭಾರತ'ದಲ್ಲಿ (I. 23 ಇತ್ಯಾದಿ) 'ಬದ್ದೆಗ' ಎಂಬ ಹೆಸರಿದೆ.

‡ 'ಖೊಟ್ಟಿಗ' (=ಕೊಟ್ಟಿಗ) ಎಂಬುದೂ ಕನ್ನಡ ಶಬ್ದವಾಗಿರುವಂತೆ ತೋರುತ್ತದೆ; ಇದು ಬಹುಶಃ 'ಕೊಟ್ಟು' (=[illegible]) ಎಂಬುದರಿಂದ ಉಂಟಾಗಿ, 'ಕೊಟ್ಟಿಗ' = '[illegible]' ಎಂದರೆ 'ಅರಸು' (ಅಥವಾ 'ಅರ್ಜುನ') ಎಂಬ ಅರ್ಥವುಳ್ಳುದಾಗಿರಬಹುದು.

ಈ ರಾಷ್ಟ್ರಕೂಟರು ಚಂದ್ರವಂಶದ ಯದುಕುಲದವರೆಂದು ಇವರ ಲೇಖಗಳಿಂದ ಗೊತ್ತಾಗುತ್ತದೆ.

(೧) ಕ್ರಿ. ಶ. 933ನೆಯ ಇಸವಿಯ ಶಾಸನದಲ್ಲಿ—

ವಂಶಃ ಸೋಮಾದಯಂ..................... ॥

ವಂಶೋ ಬಭೂವ ಭುವಿ ಸಿಂಧುನಿಭೋ ಯದೂನಾಮ್ । (ಪ್ರಾ. ಲೇ. ಮಾ., ನಂ. 6)

(೨) ಕ್ರಿ. ಶ. 937ನೆಯ ಚಿತ್ರದುರ್ಗ ನಂ. 76ನೆಯ ಶಾಸನದಲ್ಲಿ—

'..........ಯಾದವರಾತನನ್ವಜರ್ ॥

ಯಾದವಕುಲದೊಳ್ಪಲರುಂ।

ಮೇದಿನಿಯಂ ಸುಖದಿನಾಳ್ದರವರಿಂ ಬಳಿಕಿಯುಂ॥

ಶ್ರೀದಯ್ತುನ್ನನ್ನಿಗನ್.............॥' (*E. C.*; Vol. XI)

ಆ ಯದು ವಂಶದ ಸಾತ್ಯಕಿ ವರ್ಗದವರು ಇವರೆಂದೂ ಇವರ ಕೆಲ ಶಾಸನಗಳಲ್ಲಿದೆ. ಕ್ರಿ. ಶ. 940ನೆಯ ಇಸವಿಯದರಲ್ಲಿ—

ಉದ್ವೃತ್ತ ದೈತ್ಯಕುಲ ಕಂದಲ ಶಾಂತಿಹೇತು।

ಸ್ತತ್ರಾವತಾರಮಕರೋತ್ ಪುರುಷಃ ಪುರಾಣಃ ॥

ತದ್ವಂಶಜಾ ಜಗತಿ ಸಾತ್ಯಕಿ ವರ್ಗಭಾಜ।

ಸ್ತುಂಗಾ ಇತಿ ಕ್ಷಿತಿಭುಜಃ ಪ್ರಥಿತಾ ಬಭೂವುಃ ॥ (ಪ್ರಾ. ಲೇ. ಮಾ., ನಂ. 156)

ಇದೇ ಶ್ಲೋಕದ ಉತ್ತರಾರ್ಧವು ಇವರ ಕ್ರಿ. ಶ. 959ರ ಶಾಸನದಲ್ಲಿ ಇನ್ನೊಂದು ರೀತಿಯಿಂದ ಹೀಗಿದೆ:—

ತದ್ವಂಶಜಾ ಜಗತಿ ತುಂಗ ಯಶಃ ಪ್ರಭಾವಾ।

ಸ್ತುಂಗಾ ಇತಿ ಕ್ಷಿತಿಭುಜಃ ಪ್ರಥಿತಾ ಬಭೂವುಃ ॥ (ಡಿ ನಂ. 133)

ಇದರಿಂದ ಈ ಅರಸರ ಹೆಸರುಗಳಲ್ಲಿ (ಎಂದರೆ ಇವರ ಗೌಣ ನಾಮಗಳಲ್ಲಿ) **'ತುಂಗ'** ಎಂಬ ಪರಪದವು ಇರಬೇಕೆಂಬುದು ಮಾತ್ರವಲ್ಲ. ಹಾಗೆ ಇದ್ದಿರಲು ಕಾರಣವೇನೆಂಬುದೂ ತಿಳಿಯುತ್ತದೆ. ಹಾಗೆಯೇ ಇವರಲ್ಲಿ ಹೆಚ್ಚು ಕಡಿಮೆ ಎಲ್ಲರಿಗೆಂಬಂತೆ, **'ವರ್ಷ'** ಎಂಬ ಪರಪದವುಳ್ಳ ವ್ಯಪದೇಶಗಳಿವೆ ಎಂಬುದನ್ನೂ ಗಮನಿಸತಕ್ಕುದು.

ಈ ಅರಸರಲ್ಲಿ ಆಯಾ ಅರಸರ ನಾಮಧೇಯಗಳಿಗೂ ಅವರವರ ಗೌಣ ನಾಮಗಳಿಗೂ ಒಂದು ಬಗೆಯ ಪಾರಂಪರಿಕ ಮತ್ತು ಕ್ರಮಬದ್ಧವಾದ ಸಂಬಂಧವಿರುವಂತೆ ಕಾಣುತ್ತದೆಂಬುದನ್ನು ಮರೆಯಲಾಗದು; ಅದೇನೆಂದರೆ, ಇವರಲ್ಲಿ 'ಗೋವಿಂದ' ಎಂಬ ಹೆಸರುಳ್ಳವರಿಗೆ 'ಜಗತ್ತುಂಗ' ಮತ್ತು 'ಪ್ರಭೂತವರ್ಷ' ಎಂಬ ಗೌಣ ನಾಮಗಳಿವೆ; 'ಕೃಷ್ಣ' (ಕನ್ನರ) ಎಂಬ ಹೆಸರಿನವರಿಗೆ 'ಶುಭತುಂಗ' ಮತ್ತು 'ಅಕಾಲವರ್ಷ' ಎಂಬ ವಿಶೇಷನಾಮಗಳಿವೆ; 'ಧ್ರುವ' (ಧೋರ) ಎಂಬವರಿಗೆ 'ನಿರುಪಮ' ಮತ್ತು 'ಧಾರಾವರ್ಷ' ಎಂಬ ವ್ಯಪದೇಶಗಳಿವೆ; 'ಕರ್ಕ' (ಕಕ್ಕ) ಎಂಬ ವ್ಯಕ್ತಿಗಳಿಗೆ 'ನೃಪತುಂಗ' ಮತ್ತು 'ಅಮೋಘವರ್ಷ' ಎಂಬ ಬಿರುದುಗಳಿವೆ.

ಈ ಕಾರಣದಿಂದ ಇದೊಂದು ಸಾಕೂತವಾದ ಅನುಮಾನವಾಗುತ್ತದೆ. ಈ ವಂಶಾವಳಿಯಲ್ಲಿಯ 'ಧ್ರುವ' ಎಂಬ ಹೆಸರಿನ ಅರಸರಿಗೆ 'ತುಂಗ' ಎಂಬ ಪರಪದವುಳ್ಳ ಗೌಣ ನಾಮಗಳು ಕಾಣಬರುವುದಿಲ್ಲವೆಂಬುದರಿಂದ* ಇದುವರೆಗೆ ದೊರೆತ ಅವರ ಶಾಸನ ಮುಂತಾದುವುಗಳಲ್ಲಿ ಅಂಥವು ಸಿಕ್ಕಲಿಲ್ಲವೆಂದಷ್ಟನ್ನೇ ಹೇಳಬಹುದಲ್ಲದೆ, ಅವರಿಗಾದರೂ 'ತುಂಗ' ಎಂಬ ಪರಪದಾಶ್ರಿತವಾದ ಹೆಸರುಗಳು ಇದ್ದಿರಲೇ ಬಹುದೆಂದು ಊಹಿಸಬಹುದು.† ಹಾಗೆಯೇ ನಮ್ಮ ಲೇಖದ ನಾಯಕನಾದ ನೃಪತುಂಗನ, 'ನೃಪತುಂಗ,' 'ಅಮೋಘವರ್ಷ'ಗಳೆಂಬ ಗೌಣನಾಮಗಳನ್ನು ಪರಿಶೀಲಿಸುವಲ್ಲಿ, ಆತನ ನಾಮಧೇಯವು 'ಶರ್ವ' ಎಂದು ಮಾತ್ರವಲ್ಲ, ಇದೇ ಬಿರುದುಗಳುಳ್ಳ ಈ ವಂಶದ ಉಭಯ ಶಾಖೆಗಳ ಇತರ ಅರಸರಂತೆಯೇ ಈತನಿಗೆ 'ಕರ್ಕ' (ಕಕ್ಕ) ಎಂದು ಹೆಸರಿರಬೇಕೆಂದೂ ಊಹಿಸಬಹುದು. 'ಕರ್ಕ' ಎಂದರೆ, ಬಿಳಿಯ ಕುದುರೆ 'ಕರ್ಕಃ ಶ್ವೇತಾಶ್ವೇ....'— ಅಥವಾ) 'ಬಿಳಿ'ಯೆಂದು; ಇದೇ ಅರ್ಥವು ಆತನ ಬಿರುದಾಂತರವಾದ 'ಅತಿಶಯಧವಲ' ಎಂಬ ಹೆಸರಿಂದ ತುಂಬ ಹೊರವಡುವುದರಿಂದ ನಮ್ಮ ಊಹೆಯು ನಿರಾಧಾರವೆಂದಾಗದು.

ಈ ನೃಪತುಂಗ (ಅಮೋಘವರ್ಷ)ನಿಗೆ ಈ ಬೇರೆ ಬೇರೆ ಹೆಸರುಗಳು ಅಥವಾ ಬಿರುದುಗಳು ಇದ್ದುವೆಂದು ಕನ್ನಡ 'ಕವಿರಾಜಮಾರ್ಗ'ದಿಂದಲೂ, ಈತನ ಶಾಸನಗಳಿಂದಲೂ ತಿಳಿಯುತ್ತದೆ.

(೧) 'ಶರ್ವ'—ಕ್ರಿ. ಶ. 867ನೆಯ ಇಸವಿಯ ಶಾಸನದಲ್ಲಿ (ಪ್ರಾ. ಲೇ. ಮಾ., ನಂ. ೪)

> ಶ್ರೀ ಮಹಾರಾಜ ಶರ್ವಾಖ್ಯಃ ಖ್ಯಾತೋ ರಾಜಾಭವದ್ಗುಣೈಃ।
> ಅರ್ಥಿಷು ಯಥಾರ್ಥತಾಂ ಯಃ ಸಮಭೀಷ್ಟ ಫಲಾಪ್ತಿ ಲಬ್ಧ ತೋಷೇಷು।
> ವೃದ್ಧಿಂ ನಿನಾಯ ಪರಮಾಮಮೋಘವರ್ಷಾಭಿಧಾನಸ್ಯ ॥

(೨) 'ನೃಪತುಂಗ'—ಕ. ಮಾ., I. 44, 146; II. 2, 42, 98, 105; III. 98, 107, 207, 219, 230 ಮತ್ತು ಪ್ರಾ. ಲೇ. ಮಾ., ನಂ. 133 ಮತ್ತು 156.

(೩) 'ಅಮೋಘವರ್ಷ'—ಕ. ಮಾ., III. 1, 217.

(೪) 'ಅತಿಶಯಧವಳ'—ಕ. ಮಾ., I. 5, 24, 147; II. 27, 53, 151; III. 11, 106.

---

* ಈ ರಾಷ್ಟ್ರಕೂಟವಂಶದ ಗುಜರಾತು ಶಾಖೆಯ ಅರಸನೆಯ 'ಧ್ರುವ'ನಿಗೆ 'ಅತಿತುಂಗ'ನೆಂದು ಹೆಸರಿತ್ತೆಂಬುದರಿಂದ ('ಧ್ರುವತುಂಗಜೋಽತಿತುಂಗ....' ಪ್ರಾ. ಲೇ. ಮಾ., ನಂ 1) ಆ ಹೆಸರ ಇತರ ಅರಸರಿಗೂ ಅದೇ ಹೆಸರಿದ್ದಿರಬೇಕೆಂದು ಊಹಿಸಬಹುದು.

† ಶ್ರವಣಬೆಳ್ಗೊಳದ ನಂ. 57ನೆಯ ಶಾಸನ (E. C., Vol. II) ದಲ್ಲಿ 'ರಾಜನ್ ಸಾಹಸತುಂಗ ಸಂತಿ ಬಹವಃ ಶ್ವೇತಾತಪತ್ರಾ ನೃಪಾಃ|' ಎಂದಿದೆ. ಈ 'ಸಾಹಸತುಂಗ'ನೆಂಬವನು ರಾಷ್ಟ್ರಕೂಟ ವಂಶೀಯ 'ದಂತಿದುರ್ಗ'ನಾಗಿರಬೇಕೆಂದು ಆ ಶಾಸನಗಳ ಉಪೋದ್ಘಾತದಲ್ಲಿ (ಪು. 48) ಹೇಳಿದೆ.

(೫೪) 'ವೀರನಾರಾಯಣ'—ಕ. ಮಾ., I. 2; III. 180. ಈ ಕೆಳಗೆ ಕೊಡಲ್ಪಡುವ ಈತನ ಕಾಲದೊಂದು ಶಾಸನದಲ್ಲಿ ಈತನನ್ನು 'ಕೀರ್ತಿನಾರಾಯಣ' ಎಂದು ಹೇಳಿದೆ.

'ಶಬ್ದಮಣಿದರ್ಪಣ'ದಲ್ಲಿ ಉದ್ಧೃತವಾದ ಕಂದ ಪದ್ಯದಲ್ಲಿ ಹೇಳಲ್ಪಟ್ಟಿರುವ ನೃಪತುಂಗನು ಈತನೇ ಎಂದಾದರೆ, ಆತನನ್ನು ಅಲ್ಲಿ 'ಕೆಯ್ಯುವೊತ್ತರ ದೇವಂ' ಎಂದಿದೆ ಎಂಬುದರಿಂದ, ಅದಾದರೂ ಆತನದೊಂದು ಬಿರುದಾಗಿರುವಂತೆ ಕಾಣುತ್ತದೆ. ('ಶಬ್ದಮಣಿದರ್ಪಣ', Mangalore, 1899, ಪು. 171.)

ಈ ಹೆಸರುಗಳಲ್ಲದೆ, ಈತನಿಗೆ 'ನರಲೋಕಚಂದ್ರ' (ಕ. ಮಾ., I. 23), 'ನೀತಿನಿರಂತರ' (II. 91), 'ಕೃತಕೃತ್ಯ ಮಲ್ಲವಲ್ಲಭ' (I. 61), 'ವಿಜಯಪ್ರಭೂತ' (I. 149; II. 153; III. 236), 'ಸರಸ್ವತೀ ತೀರ್ಥಾವತಾರ' (III. 225 ಮತ್ತು ಗ್ರಂಥಾಂತ್ಯದ ಗದ್ಯ) ಎಂಬ ಬಿರುದುಗಳೂ ಇದ್ದಂತೆ ಕಾಣುತ್ತದೆ.

ಈ ವಂಶದರಸರ ಶಾಸನಗಳಲ್ಲಿಯ ದೇವತಾಸ್ತುತಿ ಪರವಾದ ಅವತಾರಿಕಾ ಪದ್ಯಗಳು ಹೀಗಿವೆ:—

(೧) "ಸವೋಽವ್ಯಾದ್ವೇಧಸಾ ಧಾಮ ಯನ್ನಾಭಿಕಮಲಂ ಕೃತಮ್।
ಹರಶ್ಚ ಯಸ್ಯ ಕಾಂತೇಂದುಕಲಯಾ ಕಮಲಂಕೃತಮ್ ‖"*

ಇದು ಹರಿಹರ ಸ್ತುತಿಪರವಾದ ಶ್ಲೋಕವು; ಈ ಶ್ಲೋಕವೇ ಇವರ ಹೆಚ್ಚಿನ ಶಾಸನಗಳಲ್ಲಿ ದೊರೆಯುತ್ತದೆ:—

(೨) "ಜಯಂತಿ ಬ್ರಹ್ಮಣಃ ಸರ್ಗನಿಷ್ಪತ್ತಿ ಮುದಿತಾತ್ಮನಃ।
ಸರಸ್ವತೀ ಕೃತಾನಂದಾ ಮಧುರಾಃ ಸಾಮಗೀತಯಃ ‖"†

(೩) "ಶ್ರೀ ಸರಸ್ವತ್ಯುಮಾಭಾಸ್ವದ್ವಲ್ಲೀ ಸಂಶ್ಲೇಷ ಭೂಷಿತಮ್।
ಭೂತಯೇ ಭವತಾಂ ಭೂಯಾದಜ ಕಲ್ಪತರುತ್ರಯಮ್ ‖"‡

(೪) "ಸ ಜಯತಿ ಜಗದುತ್ಸವ ಪ್ರವೇಶ ಪ್ರಥನಪರಃ ಕರಪಲ್ಲವೋ ಮುರಾರೇಃ।
ಲಸದಮೃತಪಯಃ ಕಣಾಂಕ ಲಕ್ಷ್ಮೀಸ್ತನಕಲಶಾನನ ಲಬ್ಧ ಸಂನಿವೇಶಃ ‖

---

* ಪ್ರಾ. ಲೇ. ಮಾ., ನಂ. 4, 5, 78; ಮತ್ತು *I. A.*, Vol. XII. ಪುಟ 159, 181, 218. ಎರಡನೆಯ ಬಂತಿಯಲ್ಲಿ 'ಕಮ್ + ಅಲಂಕೃತಮ್' ಎಂದು ಸಂಧಿಮಾಡಿಕೊಳ್ಳಬೇಕು. ('ಕಂ—ಶಿರಃ'—ಹೇಮಚಂದ್ರನ 'ಅನೇಕಾರ್ಥಸಂಗ್ರಹ'. ಅ. 'ಕಮ್ = ತಲೆ') ಇಂತಹ ಪದ್ಯಗಳು ಹಲವು ಸಂಸ್ಕೃತ ಕಾವ್ಯಗಳಲ್ಲಿವೆ; ಮಾಘ ಕವಿಯ 'ಶಿಶುಪಾಲವಧ' ಕಾವ್ಯದ ೧೯ನೆಯ ಸರ್ಗದಲ್ಲಿಯೇ ಹಲವಿವೆ. ಉದಾ.—

'ತಸ್ಯಾವದಾನ್ಯೈಃ ಸಮರೇ ಸಹಸಾ ರೋಮಹರ್ಷಿಭಿಃ।
ಸುರೈರಶಂಸಿ ವ್ಯೋಮಸ್ಥೈಃ ಸಹ ಸಾರೋ ಮಹರ್ಷಿಭಿಃ' ‖೧೧‖

† ಪ್ರಾ. ಲೇ. ಮಾ., ನಂ. 6 ಮತ್ತು *I. A.*, Vol. XII. ಪುಟ 249.

‡ ಪ್ರಾ. ಲೇ. ಮಾ., ನಂ. 9 ಮತ್ತು *I. A.*, ಪುಟ 264.

ಜಯತಿ ಚ ಗಿರಿಜಾ ಕಪೋಲ ಬಿಂಬಾದಧಿಗತ ಪತ್ರ ವಿಚಿತ್ರಿತಾಂಸ ಭಿತ್ತಿಃ।
ತ್ರಿಪುರ ವಿಜಯಿನಃ ಪ್ರಿಯೋಪರೋಧಾದ್ಧೃತಮದನಾಭಯ ದಾನ ಶಾಸನೇವ॥''*

(೫) ''ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ।
ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ॥''† ಇತ್ಯಾದಿ.

ಇವರ ಹಲ ಶಾಸನಗಳಲ್ಲಿ ಯಾವ ಬಗೆಯ ದೇವತಾ ಸ್ತುತಿಪರವಾದ ಅಥವಾ ಇತರ ಶಿರೋಲೇಖವಿಲ್ಲದೆ, 'ಸ್ವಸ್ತಿ' ಎಂಬ ವಚನವಷ್ಟೇ ಆರಂಭದಲ್ಲಿದ್ದು‡ ಅದರ ಹಿಂದೆಯೇ ಲೇಖವು ಬರೆದಿರುತ್ತದೆ. ಆದರೆ ಇವರ ಯಾವುದೊಂದು ಲೇಖವಾಗಲಿ ಶಾಸನವಾಗಲಿ ಜಿನ ಸ್ತುತಿ ಪರವಾದ ಶಿರೋಲೇಖದಿಂದ ಒಡಗೂಡಿಲ್ಲ. ಈ ಕೆಳಗೆ ಕೊಡತಕ್ಕ ನೃಪತುಂಗನ ಶಾಸನವಾದರೂ 'ಸರ್ವೋವ್ಯಾತ' ಎಂಬ ಹರಿಹರ ಸ್ತುತಿಯಿಂದಲೇ ಪ್ರಾರಂಭಿಸುತ್ತದೆ.

ಇವರ ಶಾಸನಗಳಲ್ಲಿಯೂ ತಾಮ್ರಪಟ್ಟಗಳಲ್ಲಿಯೂ ಕೆತ್ತಿರುವ ಚಿಹ್ನಗಳು ಹೀಗಿವೆ:—(೧) ಶಿವನ ಮೂರ್ತಿ (*I. A.*, ಪು. 156); ಪದ್ಮಾಸೀನನಾಗಿ ಹಾವುಗಳನ್ನು ಹಿಡಿದುಕೊಂಡಿರುವ ಶಿವನು (I. *A.*, ಪು. 179, 263); ಶಿವಲಿಂಗ ಮತ್ತು ನಂದಿ (*I. A.*, ಪು. 222, 224, 255, 270); ಮುಂತಾಗಿವೆ. ಇವುಗಳಲ್ಲಿ ಪದ್ಮಾಸೀನನಾಗಿ ಕೈಗಳಲ್ಲಿ ಸರ್ಪಗಳನ್ನೆತ್ತಿಕೊಂಡಿರುವ ಶಿವಮೂರ್ತಿಯು ರಾಷ್ಟ್ರಕೂಟರ ಶಾಸನಗಳಲ್ಲಿ ರೂಢಿಯಾಗಿರುವ ಲಾಂಛನವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ (*I. A.*, ಪು. 179).

ಇವರಲ್ಲಿ ಅನೇಕ ಅರಸರು ಜಿನಾಲಯಗಳಿಗೆ ದತ್ತಿಗಳನ್ನು ಬಿಟ್ಟಿರುವರೆಂಬುದು ಸತ್ಯವೇ; ಆದರೆ ಅವರ ಅಂತಹ ಕೊಡುಗೆಗಳು ಅವರು ತಮ್ಮ ರಾಷ್ಟ್ರದಲ್ಲಿಯ ಎಲ್ಲಾ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಮನ್ನಿಸುತ್ತಿದ್ದರೆಂಬುದನ್ನು ವ್ಯಕ್ತೀಕರಿಸುತ್ತದಲ್ಲದೆ ಅದರಿಂದಲೇ ಅವರನ್ನು ಜೈನ ಧರ್ಮೀಯರೆನ್ನಲಾಗುವುದಿಲ್ಲ. ಏಕೆಂದರೆ, ಇವರಲ್ಲಿಯ ಮೂರನೆಯ ಗೋವಿಂದನು 'ಅಶೇಷ ಗಂಗ ಮಂಡಲಾಧಿರಾಜ ಶ್ರೀ ಚಾಕಿರಾಜ'ನ ವಿಜ್ಞಾಪನೆಯ ಮೇರೆಗೆ ಕ್ರಿ. ಶ. 813ರಲ್ಲಿ ಒಂದು ಜಿನೇಂದ್ರ ಭವನಕ್ಕೆ ದತ್ತಿ ಬಿಟ್ಟಂತೆ ಒಂದು ಶಾಸನದಿಂದ ತೋರುತ್ತದೆ. (*I. A.*, ಪು. 13—16.) ಅದೇ ಅರಸನು ಕ್ರಿ. ಶ. 809ರಲ್ಲಿ ವೇದ ವೇದಾಂಗ ನಿಷ್ಣಾತನಾದ ಬ್ರಾಹ್ಮಣನಿಗೊಂದು ಗ್ರಾಮವನ್ನು ದತ್ತಿ ಬಿಟ್ಟಂತೆಯೂ ಆತನದೊಂದು ತಾಮ್ರಪಟ್ಟದಲ್ಲಿದೆ. (*Mythic Society's Journal*, Vol. XIV, No. 2, ಪುಟ 88); ಮತ್ತೀ ತಾಮ್ರಪಟ್ಟದ ಶಿರೋಲೇಖವು ಹರಿಹರ ಸ್ತುತಿ ಪರವಾದ ('ಸರ್ವೋವ್ಯಾತ' ಎಂಬ) ಶ್ಲೋಕವು; ಹಾಗೆಯೇ ಇದರ ಮುದ್ರೆಯಲ್ಲಿಯ ಚಿತ್ರವು ಶಿವನ ಮೂರ್ತಿಯೆಂದು ಕಾಣುತ್ತದೆ.

---

* ಪ್ರಾ. ಲೇ. ಮಾ., ನಂ. 133, 156.

† ಚಿತ್ರದುರ್ಗ, ನಂ. 77 (*E.C.*, XI).

‡ ಇಂಥವು '*Epigraphia Carnatica*' ಮಾಲಿಕೆಯ ಹಲ ಭಾಗಗಳಲ್ಲಿವೆ. ಮತ್ತು *I. A.*, ಪುಟ 221, 222, 223, 224 ಇತ್ಯಾದಿ.

ಈಗ ನಮ್ಮ ನೃಪತುಂಗನ ಕಾಲದೊಂದು ಶಿಲಾಲೇಖವನ್ನು ಪರಿಶೀಲಿಸೋಣ (*I. A.*, ಪುಟ 218—19.)—

ಸ್ವಸ್ತಿ ॥ ಸವೋವ್ಯಾದ್ವೇಧಸಾ ಧಾಮ ಯನ್ನಾಭಿಕಮಲಂ ಕೃತಮ್ ।
ಹರಶ್ಚ ಯಸ್ಯ ಕಾಂತೇಂದುಕಲಯಾ ಕಮಲಂಕೃತಮ್ ॥
. . . .
ಲಬ್ಧ ಪ್ರತಿಷ್ಠಮಚಿರಾಯ ಕಲಿಂ ಸುದೂರ।
ಮುತ್ಸಾರ್ಯ ಶುದ್ಧ ಚರಿತ್ರೈರ್ಧರಣೀತಲಸ್ಯ ॥
ಕೃತ್ವಾ ಪುನಃ ಕೃತಯುಗಶ್ರಿಯಮಪ್ಯಶೇಷಂ ।
ಚಿತ್ರಂ ಕಥಂ ನಿರುಪಮಃ ಕಲಿವಲ್ಲಭೋ* ಭೂತ್ ॥
. . . .
ಪ್ರಭೂತವರ್ಷ ಗೋವಿಂದರಾಜ† ಶೌರ್ಯೇಷು ವಿಕ್ರಮಂ. . . . . . ಜಗತ್ತುಂಗ†
ಇತಿ ಶ್ರುತಃ ॥. . . . . . ಅಥ ಸ ಕೀರ್ತಿನಾರಾಯಣೋ ಜಗತಿ ॥
ಅರಿನೃಪತಿಮುಕುಟಘಟ್ಟಿತ ಚರಣಸ್ಸಕಲ ಭುವನವಲಯ ವಿದಿತ ಶೌರ್ಯಃ ।
ವಂಗಾಂಗ ಮಗಧ ಮಾಳವ ವೇಂಗೀಶೈರರ್ಚಿತೋತಿಶಯಧವಳಃ

ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾರಾಜಾಧಿರಾಜ ಪರಮೇಶ್ವರ ಭಟ್ಟಾರಕ ಚತುರುದಧಿ ವಲಯ ವಾಲಯುತ ಸಕಲ ಧರಾತಲ ಪ್ರಾತಿರಾಜ್ಯಾನೇಕ ಮಂಡಳಿಕರ್ಕಳಾ ಕಟಕ ಕಟಿಸೂತ್ರ ಕುಂಡಲ ಕೇಯೂರ ಹಾರಾಭರಣಾಲಂಕೃತ . . . . ಅಮೋಘರಾಮಂ ಪರಚಕ್ರ ಪಂಚಾನನಂ. . . . . . ಬದ್ದೆ‡ ಮನೋಹರಂ ಅಭಿಮಾನ ಮಂದಿರಂ ರಟ್ಟ ವಂಶೋದ್ಭವಂ ಗರುಡ ಲಾಂಛನಂ ತಿವಿಳಿಪಲ್ಲಿ ಘೋಷಣಂ ಲಟ್ಟಲೂರಪುರ ಪರಮೇಶ್ವರಂ ಶ್ರೀ ನೃಪತುಂಗ ನಾಮಾಂಕಿತ ಲಕ್ಷ್ಮೀವಲ್ಲಭೇಂದ್ರನಾಚಂದ್ರಾದಿತ್ಯರ ಕಾಲಂ ವರೆಗಂ ಮಹಾಪಸ್ಸಿನ್ನವ ರಾಜ್ಯಂಬೋಲ್ ಉತ್ತರೋತ್ತರಂ ರಾಜ್ಯಾಭಿವೃದ್ಧಿ ಸಲುತ್ತಿರೆ ಶಕ ನೃಪ ಕಾಲಾತೀತ ಸಂವತ್ಸರಂಗಳ್ ಏೞ್ನೂಱೆಣ್ಭತ್ತೆಂಟನೆಯ ವ್ಯಯಮೆಂಬ ಸಂವತ್ಸರಂ ಪ್ರವರ್ತಿಸೆ ಶ್ರೀಮದಮೋಘವರ್ಷ ನೃಪತುಂಗ ನಾಮಾಂಕಿತನಾ ವಿಜಯ ರಾಜ್ಯ ಪ್ರವರ್ಧಮಾನ ಸಂವತ್ಸರಂಗಳ್ ಅಯ್ವತ್ತೆರಡುವರ್ ಉತ್ತರೋತ್ತರಂ ರಾಜ್ಯಾಭಿವೃದ್ಧಿ ಸಲುತ್ತಿರೆ ಅತಿಶಯಧವಳ ನರೇಂದ್ರ ಪ್ರಸಾದದಿಂದಮಮೋಘವರ್ಷದೇವ ಪದಪಂಕಜಭ್ರಮರಂ . . . . ಜ್ಯೇಷ್ಠ ಮಾಸದಮಾಸೆಯುಂ

* ಈ 'ನಿರುಪಮ, ಕಲಿವಲ್ಲಭ'ನೆಂದರೆ ನೃಪತುಂಗನ ಅಜ್ಜನಾದ ಮೊದಲನೆಯ ಧ್ರುವ (ಧೋರ)ನೆಂಬವನು.

† ಈ 'ಪ್ರಭೂತವರ್ಷ, ಜಗತ್ತುಂಗ'ನೆಂಬ ಗೋವಿಂದರಾಜನು ನೃಪತುಂಗನ ತಂದೆ.

‡ ಈ 'ಬದ್ದೆ' ಎಂಬ ಶಬ್ದವು 'ಬದ್ರ್' ('ಬರ್ದೆಂದು ಪ್ರಾಪ್ತಿ') ಎಂಬುದರ ರೂಪಾಂತರವಾಗಿರಬಹುದೇ ?

ಆದಿತ್ಯವಾರಮಾಗಿ ಸೂರ್ಯ್ಯ ಗ್ರಹಣದಂದು........‖.............
ನಾಗಾರ್ಜ್ಜುನಂ ಬೆಸಗೆಯ್ದೊಸಿರಿಗಾವುಂಡನ ಎೞ್ತು* ಪುದಿದುದು ‖

ಇದು ಶಾಲಿವಾಹನ ಶಕದ ೭೮೭ ವರ್ಷಗಳು ಸಂದು ೭೮೮ನೆಯ ವ್ಯಯ ಸಂವತ್ಸರದ ಜ್ಯೇಷ್ಠ ಬ॥ ೩೦ ಸೂರ್ಯ ಗ್ರಹಣದಂದು ಆಯಿತೆಂಬುದರಿಂದ, ಆ ತೇದಿಯು ಕ್ರಿ. ಶ. 866ನೆಯ ಇಸವಿಯ ಜೂನ್ ತಾ॥ 16ನೆಯ ದಿನವಾಗುತ್ತದೆ. ಆ ವರ್ಷವು ನೃಪತುಂಗನ ರಾಜ್ಯಭಾರ ಕಾಲದ ೫೨ನೆಯ ವರ್ಷವೆಂಬುದರಿಂದ, ಆತನು ಕ್ರಿ. ಶ. 815ರಲ್ಲಿ ಪಟ್ಟವೇರಿರಬೇಕು. ಹಾಗೆಯೇ ಆತನ ಇತರ ಶಾಸನಗಳಿಂದ ಆತನು ಕ್ರಿ. ಶ. 877ರವರೆಗೆ ಎಂದರೆ, ಸುಮಾರು ೬೨-೬೩ ವರ್ಷಗಳಿಗೆ ಆಳಿದನೆಂದು ತೋರುತ್ತದೆ; ಆದುದರಿಂದ ಸೊರಬ ನಂ. ೮೫ನೆಯ† ಈತನ ಹೆಸರಿನ ಕ್ರಿ. ಶ. 877ರ ಶಾಸನವು ಈತನ ಆಳಿಕೆಯ ಕೊನೆಯ ವರ್ಷದಲ್ಲಿ ಬರೆದುದಾಗಿರಬೇಕು. ಇಷ್ಟು ಮಾತ್ರವಲ್ಲ, ಆಗ್ಗೆ ಆತನು ಪಟ್ಟದಲ್ಲಿರಬೇಕೆಂದೂ ಅದರಿಂದ ನಿಷ್ಪನ್ನವಾಗುತ್ತದೆ.

ಈತನಿಗೆ ಪಟ್ಟವೇರುವಾಗ ಕಡಿಮೆಯಿಂದ ಕಡಿಮೆಯೆಂದರೆ ೧೮ರಿಂದ ೨೦ರಷ್ಟಾದರೂ ಪ್ರಾಯವಿರಬೇಕೆಂದು ಊಹಿಸಿದರೆ, ಈತನ ಆಳ್ವಿಕೆಯು ಮುಗಿವಾಗ ಈತನಿಗೆ ೮೧ರಿಂದ ೮೩ರಷ್ಟಾದರೂ ಪ್ರಾಯವಿದ್ದಿರಬೇಕು. ಇದಕ್ಕಿಂತಲೂ ಹೆಚ್ಚಾಗಿರಬಹುದಲ್ಲದೆ ಕಡಿಮೆಯಾಗಿರಲಾರದೆಂದು ಹೇಳಬಹುದು. ಆದುದರಿಂದ ಈತನ ಆಳಿಕೆಯ ೫೨ನೆಯ ವರ್ಷದೀ ಶಾಸನದ ಮೊದಲಲ್ಲಿ 'ಸವ್ಯೋಽವ್ಯಾತ್' ಎಂಬ ಹರಿಹರ ಸ್ತುತಿ ಪರವಾದ ಶಿರೋಲೇಖವಿರುವುದರಿಂದ, ಅದುವರೆಗಾದರೂ ಆತನು ಜೈನ ಧರ್ಮವನ್ನು ಅವಲಂಬಿಸಿರಲಾರನೆಂದು ಊಹಿಸಲೇನೂ ಆಕ್ಷೇಪವಿರಲಾರದು; ನಮ್ಮ ಅಂದಾಜಿನ ಮೇರೆಗೆ ಆಗ್ಗೆ ಆತನಿಗೆ ಸುಮಾರು ೭೦-೭೨ರಷ್ಟು ವಯಸ್ಸಾಗಿರಬೇಕು. ಈತನು ಶಾ. ಶ. ೭೯೭ರಲ್ಲಿ (ಕ್ರಿ. ಶ. 875) ಪಟ್ಟವನ್ನು ತನ್ನ ಮಗನಿಗೆ ಬಿಟ್ಟುಕೊಟ್ಟು ರಾಜ್ಯಭಾರದಿಂದ ನಿವೃತ್ತನಾದನೆಂದು ಶ್ರೀಮಾನ್ ಕೆ. ಬಿ. ಪಾಠಕರವರು ಹೇಳಿರುವುದು‡ ಯಾವ ಆಧಾರದ ಮೇಲೆಂದು ತಿಳಿಯುವುದಿಲ್ಲ. ಇಷ್ಟೇ ಅಲ್ಲ, ಸೊರಬ ನಂ. ೮೫ನೆಯ ಕ್ರಿ. ಶ. 877ನೆಯ ಇಸವಿಯ ಶಾಸನದಲ್ಲಿ ಈ ಅಮೋಘವರ್ಷನು 'ಪೃಥಿವೀ ರಾಜ್ಯಂ ಗಯೆ' ಎಂದಿರುವುದರಿಂದ, ಆಗ್ಗೆ ಈತನೇ ಪಟ್ಟದಲ್ಲಿ ಇದ್ದಿರಬೇಕೆಂದು ದೃಢವಾಗಿ ಗೊತ್ತಾಗುವುದರಿಂದ,

---

* ಎೞ್ತು = ಬರೆಹ. ಈ 'ಎೞ್ತು' ಎಂಬ ಶಬ್ದವು ಈಗ ಕನ್ನಡದಿಂದ ಕಳೆದುಹೋಗಿರುವುದಾದರೂ, ತಮಿಳು, ಮಲೆಯಾಳ ಭಾಷೆಗಳಲ್ಲಿ ಇನ್ನೂ ಸರ್ವ ಸಾಮಾನ್ಯವಾಗಿ ಪ್ರಚಾರದಲ್ಲಿದೆ.

† E. C., Vol. VIII. pt. II—''ಸ್ವಸ್ತ್ಯಮೋಘವರ್ಷವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟ್ಟಾರಕರ್ ಪೃಥಿವೀರಾಜ್ಯಂ ಗೆಯೆ........... ಸಕವರ್ಷಮೇೞ್ನೂಱ ತೊಂಭತನೆಯ ಸಂವತ್ಸರಂ ಪ್ರವರ್ತ್ತಿಸೆ.........''—ಈ ಲೇಖದಲ್ಲಿ ದೇವತಾ ಸ್ತುತಿಯ ಶಿರೋಲೇಖವಿಲ್ಲ.

‡ 'ಕವಿರಾಜಮಾರ್ಗ'—ಉಪೋದ್ಘಾತ, ಪುಟ 9.

ಅವರ ಹೇಳಿಕೆಯು ಸರಿಯಲ್ಲವೆಂದಾಗುತ್ತದೆ. ಆದುದರಿಂದ ಕ್ರಿ. ಶ. ೮೭೭ರ ವರೆಗಾದರೂ ಈತನು ರಾಜ್ಯಭಾರದಿಂದ ನಿವೃತ್ತನಾಗಿಲ್ಲವೆಂದು ಹೇಳಬೇಕು.

ಈತನ ತಂದೆಯಾದ ಗೋವಿಂದನ ಕೆಲ ಶಾಸನಗಳಲ್ಲಿ ತೋರುವ ಪ್ರಕಾರ ಗೋವಿಂದನ ತಂದೆಯಾದ ಧ್ರುವ ಅಥವಾ ಧೋರರಾಜನು (ನಿರುಪಮ, ಧಾರಾವರ್ಷ, ಕಲಿವಲ್ಲಭ) ತನ್ನ ಮಗನ ಪರಾಕ್ರಮಾದಿಗಳಿಗೆ ಮೆಚ್ಚಿ ತನ್ನ ಜೀವಕಾಲದಲ್ಲಿಯೇ ಆತನನ್ನು ಅರಸಾಗಿ ಪಟ್ಟದಲ್ಲಿರಿಸಿ, ತಾನು ರಾಜ್ಯಭಾರದಿಂದ ನಿವೃತ್ತನಾಗಬೇಕೆಂದು ಬಗೆದು ತನ್ನ ಮನೋಗತವನ್ನು ಆತನೊಂದಿಗೆ ಅರುಹಲು, ಆತನು ಅದನ್ನೊಲ್ಲದೆ, ತಂದೆಯ ಜೀವಂತ ಕಾಲದಲ್ಲಿ ಆತನ ಪಟ್ಟವನ್ನು ತಾನೇರೆನೆಂದೂ, ತಾನು ಆತನ ಕೈಕೆಳಗೆ ಯುವರಾಜನಾಗಿಯೇ ಇರುವೆನೆಂದೂ* ಹೇಳಿದನೆಂದಿದೆ. ಆದುದರಿಂದ ರಾಷ್ಟ್ರಕೂಟ ವಂಶೀಯ ಅರಸರಲ್ಲಿ ಮುದುಕಿನ ದೆಸೆಯಿಂದಾಗಲಿ, ಪರಾಕ್ರಮಿಯಾದ ಮಗನ ದಿಗ್ವಿಜಯಾದಿ ಸಾಹಸ ಕಾರ್ಯಗಳಿಗೆ ಹೆಚ್ಚಿನ ನೆರವನ್ನೀಯಲೆಂದಾಗಲಿ ತಂದೆಯು ಸ್ವಚ್ಛಂದವಾಗಿ ಪಟ್ಟವನ್ನು ಮಗನಿಗೆ ಒಪ್ಪಿಸಿಬಿಡುವುದಕ್ಕೆ ಇದೊಂದಾದರೂ ದೃಷ್ಟಾಂತವಿರುವುದರಿಂದ, ನೃಪತುಂಗನು ಕ್ರಿ. ಶ. 877ರ ಬಳಿಕ, ಆಗ್ಗಿಯೇ ತನ್ನ ವಯಸ್ಸು ೮೦ಕ್ಕೆ ಮೀರಿರಬೇಕಾದುದರಿಂದ, ರಾಜ್ಯಭಾರದಿಂದ ನಿವೃತ್ತನಾಗಿದ್ದರೆ, ಆತನು ತನ್ನ ವಿವೇಕದಿಂದಲೇ ಹಾಗೆ ಮಾಡಿರಬೇಕೆಂದು ಹೇಳಬಹುದಲ್ಲದೆ, ಹಾಗೆ ಮಾಡಿದುದರಿಂದಲೇ ಆತನು ಸ್ವಧರ್ಮವನ್ನು ತೊರೆದು ಜೈನನಾದನೆಂದಾಗಲಿ, ಅಥವಾ ಆಗ್ಗ ಆತನು ಜೈನ ಧರ್ಮವನ್ನು ಅವಲಂಬಿಸಿದುದರಿಂದಲೇ ಹಾಗೆ ಮಾಡಿರಬೇಕೆಂದಾಗಲಿ ಊಹಿಸಲೇನೂ ಕಾರಣವಿಲ್ಲ.

ಈ ವಂಶದವರ ರಾಜಧಾನಿಯು ‘ಮಾನ್ಯಖೇಟ’ (Malkhed) ಪುರವು. ಅದನ್ನು ಈ ನೃಪತುಂಗನೇ ಪ್ರಥಮತಃ ತನ್ನ ರಾಜಧಾನಿಯಾಗಿ ಮಾಡಿಕೊಂಡನೆಂದು ಕೀರ್ತಿಶೇಷ ಡಾ|| ರಾ. ಗೋ. ಭಂಡಾರಕಾರರವರು ಹೇಳಿರುವರಾದರೂ (*E. H. D.*, ಪುಟ ೫೧), ಶ್ರೀಮಾನ್ ಪಾಠಕರವರು ‘ಕವಿರಾಜಮಾರ್ಗ’ದ ಉಪೋದ್ಘಾತದಲ್ಲಿ (ಪುಟ ೧೦) ಹೇಳಿರುವ ಪ್ರಕಾರ ಮಾನ್ಯಖೇಟವು ಈ ನೃಪತುಂಗನ ಮುತ್ತಜ್ಜನಾದ ಮೊದಲನೆಯ ಕೃಷ್ಣನ ಕಾಲದಿಂದಲೇ ಈ ವಂಶೀಯರ ರಾಜಧಾನಿಯಾಗಿತ್ತೆಂದು ಕಾಣುತ್ತದೆ. ಆ ಮುಂಚೆ ಅವರ ರಾಜಧಾನಿಯು ‘ಮಯೂರಖಂಡಿ’ (ಈಗ ಮುಂಬಾಯಿ ಆಧಿಪತ್ಯದ ‘ನಾಸಿಕ’ ಜಿಲ್ಲೆಯಲ್ಲಿರುವ ‘ಮೋರ್‌ಖಂಡ’) ಎಂಬುದಾಗಿದ್ದಿತೆಂದೂ ಗೊತ್ತಾಗುತ್ತದೆ. ಹೇಗೂ (ಈಗ ‘ಧಾರವಾಡ’ ಜಿಲ್ಲೆಯಲ್ಲಿರುವ) ‘ಬಂಕಾಪುರ’ವು ಅವರ ರಾಜಧಾನಿಯಾಗಿದ್ದಿಲ್ಲವೆಂದು ಧೈರ್ಯವಾಗಿ ಹೇಳಬಹುದು.

* *E. H. D.*, —ಪುಟ 49—50 ; ‘*Mythic Society's Journal*’, Vol. XIV, No. 2, ಪುಟ 84.

ಜಿನಸೇನಾಚಾರ್ಯ—ಜಿನಸೇನಾಚಾರ್ಯನ ಪರಂಪರೆಯು ಹೀಗಿದ್ದಂತೆ ಕಾಣುತ್ತದೆ:—

ಏಲಾಚಾರ್ಯ
|
ವೀರಸೇನಾಚಾರ್ಯ
|
ವಿನಯಸೇನ — ಜಿನಸೇನ — ದಶರಥ
|
ಗುಣಭದ್ರ

ಈ ಪರಂಪರೆಯನ್ನು ಕುರಿತು ಇಂದ್ರನಂದಿಯ 'ಶ್ರುತಾವತಾರ'ದಲ್ಲಿ ಹೀಗೆ ಹೇಳಿದೆ*:—

ಕಾಲೇಗತೇ ಕಿಯತ್ಯಪಿ ತತಃ ಪುನಶ್ಚಿತ್ರಕೂಟಪುರ ವಾಸೀ!
ಶ್ರೀಮಾನೇಲಾಚಾರ್ಯೋ ಬಭೂವ ಸಿದ್ಧಾಂತ ತತ್ತ್ವಜ್ಞಃ ॥ ೧೭೬ ॥
ತಸ್ಯ ಸಮೀಪೇ ಸಕಲಂ ಸಿದ್ಧಾಂತಮಧೀತ್ಯ ವೀರಸೇನ ಗುರುಃ।
ಉಪರಿತಮ ನಿಬಂಧನಾದ್ಯಧಿಕಾರಾನಷ್ಟಂ ಲಿಲೇಖ ॥ ೧೭೭ ॥

ಆ ವೀರಸೇನನ ಶಿಷ್ಯನು ಜಿನಸೇನನೆಂದೂ ಮತ್ತು ವೀರಸೇನನಿಗೆ ವಿನಯಸೇನನೆಂಬ ಹಿರಿಯ ಶಿಷ್ಯನಿದ್ದನೆಂದೂ ಜಿನಸೇನನ ಗ್ರಂಥಗಳಿಂದಲೇ ಕಾಣುತ್ತದೆ.

ಶ್ರೀ ವೀರಸೇನ ಮುನಿಪಾದ ಪಯೋಜ ಭೃಂಗಃ।
ಶ್ರೀಮಾನಭೂದ್ವಿನಯಸೇನ ಮುನಿರ್ಗರೀಯಾನ್।
ತಚ್ಚೋದಿತೇನ ಜಿನಸೇನ ಮುನೀಶ್ವರೇಣ।
ಕಾವ್ಯಂ ವ್ಯಧಾಯಿ ಪರಿವೇಷ್ಟಿತ ಮೇಘದೂತಮ್ ॥ —(ಪಾರ್ಶ್ವಾಭ್ಯುದಯ, IV, ೭೧)

ಗುಣಭದ್ರನ 'ಉತ್ತರಪುರಾಣ'ದ ಪ್ರಶಸ್ತಿಯಲ್ಲಿ† ಈ ಪರಂಪರೆಯನ್ನು ಕುರಿತು ಹೀಗಿದೆ:—

ವೀರಸೇನಾಗ್ರಣೀ ವೀರಸೇನಭಟ್ಟಾರಕೋ ಬಭೌ ॥ ೪ ॥
ಮುನಿರನು ಜಿನಸೇನೋ ವೀರಸೇನಾದಮುಷ್ಮಾತ್ ॥ ೯ ॥
ದಶರಥಗುರುರಾಸೀತ್ತಸ್ಯ ಧೀಮಾನ್ ಸಧರ್ಮಾ ॥ ೧೩ ॥
ಶಿಷ್ಯಃ ಶ್ರೀ ಗುಣಭದ್ರಸೂರಿರನಯೋ‡ರಾಸೀಜ್ಜಗದ್ವಿಶ್ರುತಃ ॥ ೧೪ ॥

ದೇವಸೇನಾಚಾರ್ಯನು ತನ್ನ 'ದರ್ಶನಸಾರ' (ಕ್ರಿ. ಶ. ೯೩೩)ದಲ್ಲಿ ಹೀಗೆ ಹೇಳಿರುವನು:—

* ವಿ. ರ. ಮಾ., ಪುಟ ೧೦.

† ಪ್ರೈ. ಸಿ. ಭಾ., I. ೧, ಪುಟ ೭೭.

‡ 'ಅನಯೋಃ'—ಎಂದರೆ ... ಜಿನಸೇನ ಮತ್ತು [illegible]

ಸಿರಿ ವೀರಸೇಣಸಿಸ್ಸೋ ಜಿಣಸೇಣೋ ಸಯಲಸತ್ಥವಿಣ್ಣಾಣೀ ॥ ೩೦ ॥
ತಸ್ಸ ಯ ಸಿಸ್ಸೋ ಗುಣವಂ ಗುಣಭದ್ದೋ ದಿವ್ವಣಾಣಪರಿಪುಣ್ಣೋ ॥ ೩೧ ॥*

ಈ ವೀರಸೇನ, ಜಿನಸೇನ, ಗುಣಭದ್ರರು ದಿಗಂಬರ ಜೈನಧರ್ಮದ 'ಮೂಲ ಸಂಘ'ದ † 'ಸೇನ' ಸಂಘದವರೆಂದಷ್ಟೇ ತಿಳಿಯಬರುತ್ತಲ್ಲದೆ, ಅವರ ಯಾವ 'ಗಣ'ದ ಮತ್ತು ಯಾವ 'ಗಚ್ಛ'ದವರೆಂದು ತಿಳಿಯುವುದಿಲ್ಲ; ಇವರು ಬಹುಶಃ 'ದೇಶೀಗಣ'ದವರಾಗಿರಬಹುದೆಂದು ನಾನು ಊಹಿಸುತ್ತೇನೆ. ಹೇಗೂ ಇವರು 'ಪುನ್ನಾಟ' ಗಣದವರಲ್ಲವೆಂದು ಜೈನ ವಿದ್ವಾಂಸರಲ್ಲಿ ಅಭಿನ್ನವಾದ ನಂಬುಗೆಯಿದೆ.‡

'ಪುನ್ನಾಟ' ಎಂಬ ಹೆಸರ ಗಣವೂ 'ಸೇನ' ಸಂಘದೊಂದು ಶಾಖೆಯೇ. ಇದೇ ಸೇನ ಸಂಘದ ಪುನ್ನಾಟ ಗಣದವನಾದ§ ಇನ್ನೊಬ್ಬ 'ಜಿನಸೇನ' ನೆಂಬಾತನು ಸಂಸ್ಕೃತದಲ್ಲಿ ಸುಮಾರು ೧೧,೦೦೦ ಶ್ಲೋಕ ಪ್ರಮಾಣವುಳ್ಳ ಜೈನ 'ಹರಿವಂಶ'ವನ್ನು ಬರೆದಿರುವನು. ಅದನ್ನಾತನು ಬರೆದು ಮುಗಿಸಿದುದು ಶಾ. ಶ. ೭೦೫ (ಕ್ರಿ. ಶ. 783)ರಲ್ಲಿ; ಆಗ್ಗೆ ರಾಷ್ಟ್ರಕೂಟ ವಂಶದ ಅರಸಾದ ಮೊದಲನೆಯ ಕೃಷ್ಣರಾಜನ ಮಗನಾದ ಶ್ರೀವಲ್ಲಭನೆಂಬ ಎರಡನೆಯ ಗೋವಿಂದನು ಪಟ್ಟದಲ್ಲಿದ್ದನೆಂದು ಅದರಲ್ಲಿಯ ಪ್ರಶಸ್ತಿಯಿಂದ¶ ಕಾಣುತ್ತದೆ—

ಶಾಕೇಷ್ವಬ್ದಶತೇಷು ಸಪ್ತಸು ದಿಶಾಂ ಪಂಚೋತ್ತರೇಷೂತ್ತರಾಂ।
ಪಾತೀಂದ್ರಾಯುಧನಾಮ್ನಿ ಕೃಷ್ಣನೃಪಜೇ ಶ್ರೀವಲ್ಲಭೇ ದಕ್ಷಿಣಾಂ ॥ ೫೨ ॥

ಈ ಹರಿವಂಶ ಪುರಾಣಿಕನಾದ ಜಿನಸೇನನು ತನ್ನ ಗ್ರಂಥದ ಮಂಗಳಾಚರಣ ದಲ್ಲಿ• ವೀರಸೇನ–ಜಿನಸೇನಾಚಾರ್ಯರನ್ನು ಹೀಗೆಂದು ಹೊಗಳಿರುವನು :—

ಜಿತಾತ್ಮ ಪರಲೋಕಸ್ಯ ಕವೀನಾಂ ಚಕ್ರವರ್ತಿನಃ।
ವೀರಸೇನ ಗುರೋಃ ಕೀರ್ತಿರಕಲಂಕಾವಭಾಸತೇ ॥ ೪೦ ॥
ಯಾಮಿತಾಭ್ಯುದಯೇ ತಸ್ಯ ಜಿನೇಂದ್ರ ಗುಣ ಸಂಸ್ತುತಿಃ।
ಸ್ವಾಮಿನೋ ಜಿನಸೇನಸ್ಯ ಕೀರ್ತಿಃ ಸಂಕೀರ್ತಯತ್ಯಸೌ ॥ ೪೧ ॥

---

* ಸಂಸ್ಕೃತ ಛಾಯೆ—
ಶ್ರೀ ವೀರಸೇನ ಶಿಷ್ಯೋ ಜಿನಸೇನಃ ಸಕಲ ಶಾಸ್ತ್ರವಿಜ್ಞಾನೀ ॥ ೩೦ ॥
ತಸ್ಯ ಚ ಶಿಷ್ಯೋ ಗುಣವಾನ್ ಗುಣಭದ್ರೋ ದಿವ್ಯಜ್ಞಾನಪರಿಪೂರ್ಣಃ ॥ ೩೧ ॥

† ಈ 'ಮೂಲ ಸಂಘ'ವನ್ನೂ, ಇದರ ಶಾಖೆ ಇತ್ಯಾದಿಗಳನ್ನೂ ಕುರಿತು ಶ್ರವಣಬೆಳ್ಗೊಳದ ಹಲವು ಶಾಸನಗಳಲ್ಲಿ ಹೇಳಿದೆ. (*E. C.*, Vol. II.)

‡ ವಿ. ರ. ಮಾ., ಪು. ೮.

§ ಜೈ. ಸಿ. ಭಾ., 1, 2—3, ಪು. ೭೭ ('ಪವಿತ್ರ ಪುನ್ನಾಟ ಗಣಾಗ್ರಣೀ ಗುಣೀ')

§ ಜೈ. ಸಿ. ಭಾ., 1, 2—3, ಪು. ೭೪.

¶ ಜೈ. ಸಿ. ಭಾ., 1, 2—3, ಪು. ೭೭.

ವರ್ಧಮಾನ ಪುರಾಣೋದ್ಯದಾದಿತ್ಯೋಕ್ತಿ ಗಭಸ್ತಯಃ।
ಪ್ರಸ್ಫುರಂತಿ ಗಿರೀಶಾಂತಃ ಸ್ಫುಟಸ್ಫಟಿಕ ಭಿತ್ತಿಷು ॥ ೪೩ ॥

ಈ ಶ್ಲೋಕಗಳು 'ಹರಿವಂಶ'ದ ಆದಿ ಭಾಗದಲ್ಲಿವೆಯಾದುದರಿಂದ, ಅದರ ೧೧,೦೦೦ ಶ್ಲೋಕಗಳನ್ನು ಬರೆವರೆ ಆ ಕವಿಗೆ ಕಡಿಮೆಯೆಂದರೆ ೫ ವರ್ಷಗಳಾದರೂ ಹಿಡಿಯದಿರದೆಂಬುದರಿಂದ, ಇವನ್ನು ಆತನು ಶಾ. ಶ. ೭೦೦ (ಕ್ರಿ. ಶ. 778)ರಲ್ಲಿ ಬರೆದಿರಬಹುದೆಂದು ಊಹಿಸಬಹುದು. ಆಗ್ಗೆ ವೀರಸೇನನು ಕವಿಚಕ್ರವರ್ತಿಯೆಂದು ಗಣಿಸಲ್ಪಡುತ್ತಿದ್ದನೆಂಬುದರಿಂದ, ಆ ಮುಂಚೆಯೇ ಆತನು ಹಲವು ಕಾವ್ಯಗಳನ್ನು ರಚಿಸಿರಬೇಕು; ಹಾಗೆಯೇ ಆತನ ಶಿಷ್ಯನಾದ ಜಿನಸೇನನಾದರೂ ಆ ಮುಂಚೆಯೇ ಸಂಸ್ಕೃತದಲ್ಲಿ 'ವರ್ಧಮಾನಪುರಾಣ'ವನ್ನೂ, 'ಜಿನೇಂದ್ರಗುಣ ಸಂಸ್ತುತಿ'* ಎಂಬ ಕಾವ್ಯವನ್ನೂ ಬರೆದು ಮುಗಿಸಿರಬೇಕು. ಈ 'ಹರಿವಂಶ'ದಲ್ಲಿ ಗುರುವಾದ ವೀರಸೇನನನ್ನು 'ಸ್ವಾಮಿ' ಎನ್ನದೆ, ಆತನ ಶಿಷ್ಯನಾದ ಜಿನಸೇನನನ್ನು 'ಸ್ವಾಮಿನೋ† ಜಿನಸೇನಸ್ಯ' ಎಂದುದರಿಂದ, ಗುರು ಶಿಷ್ಯರಿಬ್ಬರೂ ಜೀವಂತರಾಗಿರುವಾಗ ಹಾಗೆನ್ನುವುದು ಅನುಚಿತವಾಗದಿರದೆಂಬುದರಿಂದ, ಈ ಮಂಗಲಾಚರಣವನ್ನು ರಚಿಸುವಂದು ವೀರಸೇನನು ದಿವಂಗತನಾಗಿರಬೇಕೆಂದೂ, ಜಿನಸೇನನು ಮಾತ್ರ ಇದ್ದಿರಬೇಕೆಂದೂ ಊಹಿಸಬಹುದು; ಹಾಗೆಯೇ ಆತನನ್ನು 'ಸ್ವಾಮಿ' ಎಂದು ಸಂಬೋಧಿಸಿರುವುದರಿಂದ ಆತನು ಆಗ್ಗೆಯೇ ಮಹಾವಿದ್ವಾಂಸನೆಂದೂ, ದೊಡ್ಡ ಆಚಾರ್ಯನೆಂದೂ ಪ್ರಖ್ಯಾತಿಯನ್ನು ಹೊಂದಿರಬೇಕು. ಆದುದರಿಂದ ಅಂತಹ ಕೀರ್ತಿಯನ್ನು ಆತನು ಪಡೆವಾಗ, ಮತ್ತಾ ಕೀರ್ತಿಗೆ ಕಾರಣಭೂತಗಳಾದ ಕಾವ್ಯಗಳನ್ನು ಬರೆದು ಮುಗಿಸಿರುವಾಗ, ಆತನಿಗೆ ಇಪ್ಪತ್ತೈದು ವರ್ಷಗಳಷ್ಟಾದರೂ ವಯಸ್ಸಾಗಿರಬೇಕಲ್ಲದೆ, ಸರ್ವಥಾ ಅದಕ್ಕಿಂತ ಕಡಿಮೆಯಾಗಿರಲಾರದೆಂದು ನಿಶ್ಶಂಕವಾಗಿ ಹೇಳಬಹುದು. ಹೀಗಾದರೆ, ಆತನು ಶಾ. ಶ. ೬೭೫ (ಕ್ರಿ. ಶ.

* ಈ ಕಾವ್ಯದ ಹೆಸರು ''ಪಾರ್ಶ್ವ ಜಿನೇಂದ್ರ ಸ್ತುತಿ'' ಎಂದು 'ವಿದ್ವದ್ರತ್ನಮಾಲೆ'ಯಲ್ಲಿ (ಪು. ೨೮) ಹೇಳಿದೆ; ಅದನ್ನೇ 'ಜಿನಗುಣ ಸ್ತೋತ್ರ' ಎಂದು 'ಪೂರ್ವ ಪುರಾಣ'ದ ಪ್ರಸ್ತಾವನೆ (ಪು. ೪)ಯಲ್ಲಿ ಹೆಸರಿಸಿದೆ. ('ಪೂರ್ವಪುರಾಣ'—ನ್ಯಾಯತೀರ್ಥ ಶಾಂತಿರಾಜ ಶಾಸ್ತ್ರಿಗಳ ಕನ್ನಡ ವ್ಯಾಖ್ಯೆಯುಳ್ಳ ಮುದ್ರಣ—ಮೈಸೂರು ೧೯೨೫.)

† ಈ ಜಿನಸೇನನಿಗೆ 'ಸ್ವಾಮಿ' ಎಂದೆನ್ನುವರೆ ಕಾರಣವೇನಿರಬಹುದೆಂಬುದಕ್ಕೆ 'ತತ್ತ್ವಾರ್ಥ ಸೂತ್ರ ವ್ಯಾಖ್ಯಾತಾ ಸ್ವಾಮೀತಿ ಪರಿಪಠ್ಯತೇ' (ನೀತಿಸಾರ) ಎಂಬ ವಚನದ ಆಧಾರವನ್ನು ಕೊಡುತ್ತಾರೆ (ವಿ. ರ. ಮಾ., ಪು. ೨೭). ಆದರೆ ಜಿನಸೇನನು ತತ್ತ್ವಾರ್ಥ ಸೂತ್ರಕ್ಕೆ ವ್ಯಾಖ್ಯೆಯನ್ನು ಬರೆದುದು ಕ್ರಿ. ಶ. 837—838ರಲ್ಲಿ ಎಂಬುದರಿಂದ, ಕ್ರಿ. ಶ. 778—79ರೊಳಗೆ ಬರೆಯಲ್ಪಟ್ಟ 'ಹರಿವಂಶ'ದಲ್ಲಿ ಆ ಕಾರಣದಿಂದ ಆತನನ್ನು 'ಸ್ವಾಮಿ' ಎನ್ನುದೆಂದಾಗದು. ಅದಲ್ಲದೆ ಆ ವ್ಯಾಖ್ಯೆಯನ್ನು ವೀರಸೇನನು ಬರೆಯಲಾರಂಭಿಸಿ, ಅದನ್ನು ಮುಗಿಸುವ ಮುಂಚೆ ದಿವಂಗತನಾದುದರಿಂದ ಅದನ್ನು ಜಿನಸೇನನು ಮುಂದುವರಿಸಿ ಮುಗಿಸಿದನೆಂದು ಮುಂದೆ ತಿಳಿಯುವೆವು. ಹಾಗಾದರೆ ವೀರಸೇನನನ್ನು 'ಸ್ವಾಮಿ' ಎಂದೇಕೆ ಹೇಳಲಿಲ್ಲ?

753)ಕ್ಕೆ ಮುಂಚೆಯೇ ಹುಟ್ಟಿರಬೇಕಲ್ಲದೆ, ಅದರ ಈಚೆಗಲ್ಲವೆಂದೂ ಭಾವಿಸಬಹುದು.

ವೀರಸೇನಾಚಾರ್ಯನ ಶಿಷ್ಯನಾದ ನಮ್ಮ ಜಿನಸೇನನು ಮೇಲೆ ಹೇಳಿದ ಎರಡನ್ನಲ್ಲದೆ,* ಇನ್ನೂ ಕೆಲವು ಸಂಸ್ಕೃತ ಕಾವ್ಯಗಳನ್ನು ಬರೆದಿರುವನು. ಅವುಗಳಲ್ಲಿ ಮುಖ್ಯವಾದುವಿವು:—

೧. ಉಮಾಸ್ವಾತಿಯ 'ತತ್ತ್ವಾರ್ಥ ಸೂತ್ರ'ಕ್ಕೆ ಈ ಜಿನಸೇನನ ಗುರುವಾದ ವೀರಸೇನನು 'ಜಯ ಧವಲಾ' ಎಂಬ ಟೀಕೆಯನ್ನು ಬರೆಯಲಾರಂಭಿಸಿ, ಸುಮಾರು ೨೦,೦೦೦ ಶ್ಲೋಕಗಳನ್ನು ರಚಿಸಿ ನಿರ್ವಾಣವನ್ನೈದಲು, ಜಿನಸೇನನು ಅದನ್ನು ಅಲ್ಲಿಂದ ಮುಂದೆ ಅದಕ್ಕೆ ಇನ್ನೂ ೪೦,೦೦೦ ಶ್ಲೋಕಗಳನ್ನು ಕೂಡಿಸಿ, ಈಗ ೬೦,೦೦೦ ಶ್ಲೋಕಗಳಿಂದ ಒಡಗೂಡಿರುವ ಆ ಗ್ರಂಥವನ್ನು ಪೂರಯಿಸಿದನು. ಅದನ್ನು ಮುಗಿಸಿದ ಕಾಲವನ್ನು ಕುರಿತು ಜಿನಸೇನನು ಅದರ ಅಂತ್ಯದಲ್ಲಿ ಹೀಗೆ ಹೇಳಿರುವನು :—

ಇತಿ ಶ್ರೀ ವೀರಸೇನೀಯಾ ಟೀಕಾ ಸೂತ್ರಾರ್ಥದರ್ಶಿನೀ।
ಮಟಗ್ರಾಮಪುರೇ ಶ್ರೀಮದ್ಗುರ್ಜರಾರ್ಯಾನು ಪಾಲಿತೇ ॥
ಫಾಲ್ಗುನೇ ಮಾಸಿ ಪೂರ್ವಾಹ್ಣೇ ದಶಮ್ಯಾಂ ಶುಕ್ಲಪಕ್ಷಕೇ।
ಪ್ರವರ್ಧಮಾನ ಪೂಜಾಯಾಂ ನಂದೀಶ್ವರ ಮಹೋತ್ಸವೇ ॥
ಅಮೋಘವರ್ಷ ರಾಜೇಂದ್ರ ಪ್ರಾಜ್ಯರಾಜ್ಯ ಗುಣೋದಯಾ।
ನಿಷ್ಠಿತಪ್ರಚಯಂ ಯಾಯಾದಾಕಲ್ಪಾಂತಮನಲ್ಪಿಕಾ ॥
ಏಕೋನಷಷ್ಟಿ ಸಮಧಿಕ ಸಪ್ತ ಶತಾಬ್ದೇಷು ಶಕ ನರೇಂದ್ರಸ್ಯ।
ಸಮತೀತೇಷು ಸಮಾಪ್ತಾ ಜಯಧವಲಾ ಪ್ರಾಭೃತವ್ಯಾಖ್ಯಾ ॥†

ಎಂದರೆ ಅಮೋಘವರ್ಷನೆಂಬ ರಾಜೇಂದ್ರನ ಪ್ರಾಜ್ಯ(=ವಿಸ್ತೃತ)ವಾದ ರಾಜ್ಯ(=ಆಳ್ತನ)ದ ಗುಣ (=ಪ್ರಭಾವ)ದಿಂದ ಉದಯ ಹೊಂದಿದ (=ಹುಟ್ಟಿದ) ಆ 'ಜಯ ಧವಲಾ'‡ ಎಂಬ ಟೀಕೆಯು, ಗುರ್ಜರ (ಗುಜರಾತಿನ) ಅರಸನ ಆಳಿಕೆಯಲ್ಲಿದ್ದ 'ಮಟಗ್ರಾಮ' ಎಂಬ ಪುರದಲ್ಲಿ ಶಾ. ಶ. ೭೫೯ರ (ಕ್ರಿ. ಶ. 837—838) ಫಾಲ್ಗುಣ ಶು॥ ದಶಮಿಯಂದು ಬರೆದು ಸಮಾಪ್ತವಾಯಿತು.

* ಇವೆರಡೂ ಗ್ರಂಥಗಳು ಇನ್ನೂ ದೊರೆತಿರುವುದಿಲ್ಲ.

† ಜೈ. ಸಿ. ಭಾ., 1. 1, ಪು. ೫೨—೫೬.

‡ ಈ 'ಜಯಧವಲಾ' ಟೀಕೆಗೆ ಸಿದ್ಧಾಂತ ಗ್ರಂಥವೆಂದೂ ಹೆಸರುಂಟು. ಇದರ ಸಮಗ್ರ ಪ್ರತಿಯು ಈಗ (ದಕ್ಷಿಣ ಕನ್ನಡ ಜಿಲ್ಲೆಯ) 'ಮೂಡಬಿದರೆ' ಎಂಬಲ್ಲಿಯ 'ಸಿದ್ಧಾಂತ ಬಸದಿ'ಯಲ್ಲಿದೆ. ಇದೇ ಪ್ರತಿಯು ಹಲಕಾಲಕ್ಕೆ ಮುಂಚೆ ಶ್ರವಣಬೆಳ್ಗೊಳದಲ್ಲಿಯ 'ಸಿದ್ಧಾಂತ ಬಸದಿ'ಯಲ್ಲಿತ್ತೆಂದೂ, ಅಲ್ಲಿಂದಲೇ ಮೂಡಬಿದರೆಗೆ ಕೊಂಡೊಯ್ದುದೆಂದೂ ಶ್ರವಣಬೆಳ್ಗೊಳದ ಶಾಸನ ಗ್ರಂಥಗಳ ಉಪೋದ್ಘಾತದಲ್ಲಿ ಹೇಳಿದೆ. (*E. C.*, Vol. II, Introd., p. 28.)

ಆದುದರಿಂದ ಈ ಟೀಕೆಯನ್ನು ಬರೆದು ತೀರಿಸುವಾಗ ಜಿನಸೇನನಿಗೆ ಸುಮಾರು 84—85 ರಷ್ಟಾದರೂ ವಯಸ್ಸಾಗಿರಬೇಕು.

೨. ‘ಪಾರ್ಶ್ವಾಭ್ಯುದಯ ಕಾವ್ಯ’—ಇದು ಕವಿ ಕುಲ ಗುರುವಾದ ಕಾಳಿದಾಸನ ‘ಮೇಘ ದೂತ’ ಎಂಬ ಕಾವ್ಯದ ಮೇಲೆ ಸಮಸ್ಯಾ ಪೂರ್ತಿಯಾಗಿ ರಚಿಸಿರುವ ಚಿಕ್ಕದೊಂದು ಕಾವ್ಯವು. ಇದರಲ್ಲಿ ಜಿನಸೇನನು ೨೩ನೆಯ ತೀರ್ಥಂಕರನಾದ ಶ್ರೀ ಪಾರ್ಶ್ವನಾಥಸ್ವಾಮಿಯ ಕೈವಲ್ಯ ವರ್ಣನವನ್ನು ಸೊಗಸಾಗಿ ಮಾಡಿರುವನು. ಇದರಲ್ಲಿ ೪ ಸರ್ಗಗಳೂ, ಅವುಗಳಲ್ಲಿ ಒಟ್ಟು ೩೬೪ ವೃತ್ತಗಳೂ ಇವೆ. ಗ್ರಂಥಾಂತ್ಯದಲ್ಲಿ ಹೀಗಿದೆ:—

ಇತಿ ವಿರಚಿತಮೇತತ್ಕಾವ್ಯಮಾವೇಷ್ಟ್ಯ ಮೇಘಂ।
ಬಹುಗುಣಮಪದೋಷಂ ಕಾಲಿದಾಸಸ್ಯ ಕಾವ್ಯಂ ॥
ಮಲಿನಿತ ಪರಕಾವ್ಯಂ ತಿಷ್ಠತಾದಾಶಶಾಂಕಂ।
ಭುವನಮವತು ದೇವಸ್ಸರ್ವದಾಮೋಘವರ್ಷಃ ॥ IV. ೭೦ ॥

ಇದರಿಂದ ಈ ಕಾವ್ಯವು ಅಮೋಘವರ್ಷ ಎಂಬ ಅರಸನೊಬ್ಬನ ಕಾಲದಲ್ಲಿ ರಚಿತವಾಯಿತೆಂದು ತೋರುತ್ತದೆ. ಈ ಕಾವ್ಯವನ್ನು ಓದುವಂದು ಇದನ್ನು ಕವಿಯು ತನ್ನ ನಡುಪ್ರಾಯದಲ್ಲಿ, ಎಂದರೆ ೪೦—೪೫ರ ವಯಸ್ಸಿನ ಮುಂಚೆಯೇ ಬರೆದಿರಬೇಕೆಂದು ಇದರಲ್ಲಿಯ ವರ್ಣನಾ ವೈಖರಿ ಮೊದಲಾದುವುಗಳಿಂದ ತೋರುವುದರಿಂದ, ನಮ್ಮ ಊಹೆಯು ಸರಿಯೆಂದಾದರೆ, ಇದನ್ನು ಜಿನಸೇನನು ಕ್ರಿ. ಶ. 800ಕ್ಕೆ ಮುಂಚೆಯೇ ಬರೆದಿರಬೇಕು; ಎಂದರೆ ನೃಪತುಂಗನು ಪಟ್ಟವನ್ನೇರುವ (ಕ್ರಿ. ಶ. 815) ಸುಮಾರು ೧೫ (ಅಥವಾ ಹೆಚ್ಚು) ವರ್ಷಗಳ ಮುಂಚೆಯೇ ರಚಿಸಿರಬೇಕು. (ಆದರೆ, ‘ಹರಿವಂಶ’ದಲ್ಲಿ ಈ ಕಾವ್ಯವನ್ನು ಹೇಳಿಲ್ಲವಾದುದರಿಂದ ಇದು ಕ್ರಿ. ಶ. 778—783ರ ಈಚೆಗಲ್ಲದೆ ಆಚೆಯಲ್ಲಿ ರಚಿಸಲ್ಪಟ್ಟಿರಲಾರದೆಂದು ಹೇಳಬೇಕು.) ಹಾಗಾದರೆ, ಈ ‘ಪಾರ್ಶ್ವಾಭ್ಯುದಯ’ದಲ್ಲಿ ಹೆಸರಿಸಲ್ಪಟ್ಟಿರುವ ‘ಅಮೋಘವರ್ಷ’ನೆಂಬವನು ರಾಷ್ಟ್ರಕೂಟರ ಗುಜರಾತ ಶಾಖೆಯ ಎರಡನೆಯ ‘ಕಕ್ಕ’ನೆಂಬ ಅಮೋಘವರ್ಷನಾಗಿರಬಹುದೇ? ಏಕೆಂದರೆ, ಜಿನಸೇನನು ತನ್ನ ‘ಜಯಧವಲಾ’ ಟೀಕೆಯನ್ನು ಬರೆದು ಮುಗಿಸಿದುದು ‘ಗುರ್ಜರಾರ್ಯಾನುಪಾಲಿತ’ವಾದ ‘ವಟಗ್ರಾಮ’ದಲ್ಲಿ ಅಲ್ಲದೆ ನೃಪತುಂಗನ (ಅಥವಾ ಆತನ ತಂದೆಯಾದ ಗೋವಿಂದನ) ರಾಜಧಾನಿಯಾದ ಮಾನ್ಯಖೇಟದಲ್ಲಾಗಲಿ, ಆತನ ಆಳ್ವಿಕೆಯೊಳಗುಳ್ಳ ಇತರತ್ರ ಎಲ್ಲಿಯಾಗಲಿ ಅಲ್ಲವೆಂಬುದರಿಂದ, ಜಿನಸೇನನ ಪೋಷಯಿತಾರರು ರಾಷ್ಟ್ರಕೂಟ ವಂಶದ ಗುಜರಾತಿನ ಶಾಖೆಯವರಾಗಿರಬಹುದೇ ಎಂಬ ಶಂಕೆಗೆ ಎಡೆಯಾಗುತ್ತದೆ. ಅಥವಾ ‘ಪಾರ್ಶ್ವಾಭ್ಯುದಯ’ವನ್ನು ಜಿನಸೇನನು ತನ್ನ ೭೦ನೆಯ ವಯಸ್ಸು ಮೀರಿದ ಬಳಿಕ ತಾನೇ ಬರೆದನೆಂದಾದರೆ, ಅದರಲ್ಲಿ ಹೆಸರಿಸಲ್ಪಟ್ಟಿರುವ ಅಮೋಘವರ್ಷ

ನೆಂಬವನು ನಮ್ಮ ಲೋಕನಾಯಕನಾದ ನೃಪತುಂಗನಾಗಿರಬೇಕೆಂದು ಒಪ್ಪಬೇಕು.

೩. ಆದಿಪುರಾಣ (ಅಥವಾ, ಪೂರ್ವ ಪುರಾಣ)—ಇದು ಜಿನಸೇನನ ಕೊನೆಯ ಗ್ರಂಥವು. ಜಿನಸೇನನು ತನ್ನ ಗುರುವಾದ ವೀರಸೇನನ ಮೋಕ್ಷಾನಂತರ ಆತನು ಪೂರಯಿಸಲಾರದೆ ಉಳಿದ 'ಜಯಧವಲಾ' ಟೀಕೆಯನ್ನು ತಾನು ಬರೆದು ಮುಗಿಸಿ, ಆ ಬಳಿಕ ತಾನೇ 'ಆದಿಪುರಾಣ'ವನ್ನು ಬರೆಯತೊಡಗಿರಬೇಕೆಂಬುದು ಸ್ವಾಭಾವಿಕವು; ಹಾಗಾದರೆ ಇದನ್ನಾತನು ತನ್ನ ೮೪—೮೫ ವರ್ಷಗಳ ಪ್ರಾಯದ ಬಳಿಕ ತಾನೇ ಬರೆಯಲಾರಂಭಿಸಿರಬೇಕು. ಆದರೆ ಆತನಿದನ್ನು ಮುಗಿಸಲಾಗಲಿಲ್ಲ; ಇದರ ೪೨ ಪರ್ವಗಳನ್ನೂ ೪೩ನೆಯ ಪರ್ವದಲ್ಲಿಯ ೩ ಶ್ಲೋಕಗಳಷ್ಟನ್ನೂ (ಎಂದರೆ, ಒಟ್ಟಿಗೆ ಸುಮಾರು ೧೦,೩೮೦ ಶ್ಲೋಕಗಳನ್ನು) ಬರೆವಷ್ಟರಲ್ಲಿ ಆತನು ಜಿನಧಾಮಕ್ಕೆ ಸಂದನು. ಆ ಉನ್ನತ ಪ್ರಾಯದಲ್ಲಿ ೧೦,೩೮೦ ಶ್ಲೋಕಗಳನ್ನು ಬರೆವುದಕ್ಕೆ ಆತನಿಗೆ ೧೦ ವರ್ಷಗಳಾದರೂ ಹಿಡಿಯದಿರವೆಂಬುದರಿಂದ, ಆತನಿಗೆ ಅಷ್ಟನ್ನು ಬರೆಯುವಂದು ೯೫ರವರೆಗೆ ಪ್ರಾಯವಾಗಿರಬೇಕು; ಹೀಗಾದರೆ ಆತನು ದೇಹಾವಸಾನವನ್ನು ಹೊಂದಿದುದು ಕ್ರಿ. ಶ. ಸು. 848ರ ಆಜೀಜೆಯಲ್ಲಿ ಆಗಿರಬೇಕೆಂದು ಊಹಿಸಬಹುದು.

೪. ಜಿನಸೇನನ ಮರಣಾನಂತರ ಆತನ ಶಿಷ್ಯನಾದ ಗುಣಭದ್ರನು ಈ ಗ್ರಂಥಕ್ಕೆ ಸುಮಾರು ೧೦,೦೦೦ ಶ್ಲೋಕಗಳನ್ನು ಕೂಡಿಸಿ, ಸುಮಾರು ೨೦,೦೦೦ ಶ್ಲೋಕ ಪ್ರಮಾಣವುಳ್ಳ ಈ 'ಮಹಾಪುರಾಣವನ್ನು'* ಮುಗಿಸಿದನು. ತನ್ನ ರಚನೆಯು ಮುಗಿದ ಕಾಲವನ್ನು ಕುರಿತು ಆತನು ಅದರ ಪ್ರಶಸ್ತಿಯಲ್ಲಿ† ಹೀಗೆಂದಿರುವನು:—

ಅಕಾಲವರ್ಷ ಭೂಪಾಲೇ ಪಾಲಯತ್ಯಖಿಲಾಮಿಲಾಮ್ ॥ ೩೨ ॥
. . . .
ಶ್ರೀಮತಿ ಲೋಕಾದಿತ್ಯೇ . . . . ॥ ೩೩ ॥
ಚೆಲ್ಲಪತಾಕೇ ಚೆಲ್ಲಧ್ವಜಾನುಜೇ ಚೆಲ್ಲಕೇತನ ತನೂಜೇ ।
ಜೈನೇಂದ್ರ ಧರ್ಮ ವೃದ್ಧಿ ವಿಧಾಯಿನಿ. . . . . ॥ ೩೪ ॥
ವನವಾಸದೇಶಮಖಿಲಂ ಭುಂಜತಿ ನಿಷ್ಕಂಟಕಂ ಸುಖಂ ಸುಚಿರಂ ।
ತತ್ಪಿತೃ ನಿಜನಾಮ ಕೃತೇ ಖ್ಯಾತೇ ಬಂಕಾಪುರೇ ಪುರೇಷ್ವಧಿಕೇ ॥ ೩೫ ॥
ಶಕ ನೃಪಕಾಲಾಭ್ಯಂತರ ವಿಂಶತ್ಯಧಿಕಾಷ್ಟ ಶತಮಿತಾಬ್ದಾಂತೇ ।
ಮಂಗಲ ಮಹಾರ್ಥಕಾರಿಣಿ ಪಿಂಗಲನಾಮನಿ ಸಮಸ್ತ ಜನಸುಖದೇ ॥ ೩೬ ॥

* ಇದರಲ್ಲಿ 'ಆದಿಪುರಾಣ' (ಅಥವಾ 'ಪೂರ್ವ ಪುರಾಣ')ದ ಜುಮ್ಲಾ ಶ್ಲೋಕ ಸಂಖ್ಯೆ ೧೨೦೦೦, 'ಉತ್ತರ ಪುರಾಣ'ದ ಸಂಖ್ಯೆ ೮,೦೦೦; ಇವೆರಡು ಭಾಗಗಳೂ ಸೇರಿ 'ಮಹಾಪುರಾಣ'ವೆಂದು ಹೆಸರು.

† ಜೈ. ಸಿ. ಭಾ., V. I, ಪು. ೨೮.

ಎಂದರೆ, ರಾಷ್ಟ್ರಕೂಟ ವಂಶದ (ನೃಪತುಂಗನ ಮಗನಾದ) ಅಕಾಲವರ್ಷನೆಂಬ ಅರಸನೆಯ ಕೃಷ್ಣನು ಭೂಮಿಯನ್ನಾಳುತ್ತಿರುವಾಗ, (ಆತನ ಸಾಮಂತನಾದ) 'ಚೆಲ್ಲಪತಾಕ'ನೆಂಬ ಲೋಕಾದಿತ್ಯನು ಜೈನಧರ್ಮಾಭಿವೃದ್ಧಿಯನ್ನು ಮಾಡುತ್ತ 'ವನವಾಸ'* ದೇಶವನ್ನು ಆಳುತ್ತಿರಲು, (ಆ ವನವಾಸ ದೇಶದಲ್ಲಿ) ಆ ಲೋಕಾದಿತ್ಯನ ತಂದೆಯ ಹೆಸರಿಂದ ನಿರ್ಮಿಸಲ್ಪಟ್ಟ 'ಬಂಕಾಪುರ' ಎಂಬ (ಆತನ ರಾಜಧಾನಿಯ)ಲ್ಲಿ ಶಾ. ಶ. ೮೨೦ (ಕ್ರಿ. ಶ. 897-8)ರಲ್ಲಿ 'ಉತ್ತರ ಪುರಾಣ'ವನ್ನು ಗುಣಭದ್ರನು ಬರೆದು ಮುಗಿಸಿದನು.

ನೃಪತುಂಗನು ಜೈನನಾಗಿದ್ದನೇ?

(ಅ) ಜಿನಸೇನ, ಗುಣಭದ್ರರ ಕಾವ್ಯಗಳಲ್ಲಿಯ ಉಲ್ಲೇಖಗಳು

೧. ನೃಪತುಂಗನು ಜೈನಧರ್ಮವನ್ನು ಅವಲಂಬಿಸಿರಬೇಕೆಂದು ನಂಬುವವರು, ಆತನು ಜಿನಸೇನನಿಂದ ತಾನೇ ಆ ಧರ್ಮದಲ್ಲಿ ದೀಕ್ಷೆವಡೆದನೆಂದು ನಂಬುವರೆಂಬುದನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಳ್ಳತಕ್ಕದು; ಹಾಗೆಯೇ ಅವರ ಆ ನಂಬುಗೆಗೆ ಗುಣಭದ್ರನ 'ಉತ್ತರ ಪುರಾಣ'ದಲ್ಲಿಯ ಈ ವೃತ್ತವೇ ಇತರ ಆಧಾರಗಳಿಗಿಂತ ಬಲವತ್ತರವೆಂದು ಭಾವಿಸಲ್ಪಡುತ್ತದೆಂಬುದನ್ನೂ† ಮರೆಯಲಾಗದು; ಆ ವೃತ್ತವು ಹೀಗಿದೆ‡—

> ಯಸ್ಯ ಪ್ರಾಂಶು ನಖಾಂಶು ಜಾಲ ವಿಸರದ್ಧಾರಾಂತರಾವಿರ್ಭವತ್ ।
> ಪಾದಾಂಭೋಜ ರಜಃ ಪಿಶಂಗ ಮಕುಟ ಪ್ರತ್ಯಗ್ರ ರತ್ನದ್ಯುತಿಃ ॥
> ಸಂಸ್ಮರ್ತಾ ಸ್ವಯಮೋಘವರ್ಷ ನೃಪತಿಃ ಪೂತೋಹಮದ್ಯೇತ್ಯಲಂ ।
> ಸ ಶ್ರೀಮಾನ್ ಜಿನಸೇನಪೂಜ್ಯ ಭಗವತ್ಪಾದೋ ಜಗನ್ಮಂಗಲಮ್ ॥ ೧ ॥

ಇದರಿಂದ ಅಮೋಘವರ್ಷನು ಜಿನಸೇನನನ್ನು ವಂದಿಸಿ, ತಾನು ಇಂದು (='ಅದ್ಯ') ಧನ್ಯನಾದೆನೆಂದು ಭಾವಿಸಿಕೊಂಡನೆಂದಷ್ಟೇ ತಿಳಿಯುತ್ತದಲ್ಲದೆ, ಜಿನಸೇನನಿಂದ ಆತನು ಜೈನ ಧರ್ಮವನ್ನು ಅವಲಂಬಿಸಿದನೆಂದಾಗಲಿ, ಸ್ವಧರ್ಮವನ್ನು ತ್ಯಜಿಸಿ ಜಿನಸೇನನ ಶಿಷ್ಯತೆಯನ್ನು ವಹಿಸಿಕೊಂಡನೆಂದಾಗಲಿ ಅರ್ಥವಾಗುವುದು ಹೇಗೋ ನಾನರಿಯೆನು. ಅದಲ್ಲದೆ ಇದರಲ್ಲಿ 'ಅದ್ಯ' (=ಇಂದು) ಎಂದಿರುವುದರಿಂದ, ಜಿನಸೇನ ಮತ್ತು ಅಮೋಘವರ್ಷರೊಳಗೆ ಒಂದು ಬಾರಿ (ಬಹುಶಃ **ಒಂದೇ** ಬಾರಿಯೇನೋ) ಆದ ಪರಸ್ಪರ ಭೇಟಿಯನ್ನು ವರ್ಣಿಸಿರುವಂತೆ ಮಾತ್ರ ತೋರುತ್ತದಲ್ಲದೆ, ಅದಕ್ಕಿಂತ ಹೆಚ್ಚಿನ ಅರ್ಥವನ್ನು ಇದರಿಂದ ಅನುಮಾನಿಸುವುದು

---

* ಮುಂಬಾಯಿ ಅಧಿಪತ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿಯ 'ಬನವಾಸಿ.'

† "In the *Prasasti* of the '*Uttarapurana*', we are told that he (i.e., Nripatunga or Amoghavarsha I) became the disciple of Jinasena, the well known Jaina Author who also bears testimony to the fact in the Parsvabhudaya". (ಕ. ಮು., ಉಪೋದ್ಘಾತ, ಪು. 6.)

‡ ಜೈ. ಸಿ. ಭಾ., I. 1, ಪು. ೨೬; ವಿ. ರ. ಮೊ., ಪು. ೭೯, *I. A.*, ಪು. 216-217.

ಸರಿಯಲ್ಲವೆಂದು ನನಗೆ ತೋರುತ್ತದೆ. ಅಥವಾ ಅಮೋಘವರ್ಷನು ಜಿನಸೇನನಿಂದ ಜೈನ ದೀಕ್ಷೆ ಪಡೆದಂತೆ ಆತನ ಶಿಷ್ಯನಾಗಿದ್ದನೆಂದಾದರೆ, ಗುಣಭದ್ರನು ಅದನ್ನೇಕೆ ಸ್ಪಷ್ಟವಾಗಿ ಹೇಳದಿರಬೇಕು? ಇದೇ ಗುಣಭದ್ರನು ತನ್ನ 'ಉತ್ತರ ಪುರಾಣ'ದಲ್ಲಿ ಬಂಕಾಪುರದ ಲೋಕಾದಿತ್ಯನನ್ನು 'ಜೈನೇಂದ್ರ ಧರ್ಮ ವೃದ್ಧಿ ವಿಧಾಯಿ' ಎಂದು ಹೇಳಿಲ್ಲವೇ? ಅಮೋಘವರ್ಷನಾದರೂ ತನ್ನ (ಎಂದರೆ ಗುಣಭದ್ರನ) ಖಾಸಾ ಗುರುವಿಂದಲೇ ಜೈನ ಧರ್ಮವನ್ನು ಅವಲಂಬಿಸಿದ್ದನೆಂದಾದರೆ, ಆತನನ್ನೂ ಹಾಗೆಯೇ ಏಕೆ ಉಲ್ಲೇಖಿಸಬಾರದಿತ್ತು? ಮತ್ತು ಅಮೋಘವರ್ಷನು ತನ್ನ ಗುರುವಿನ ಶಿಷ್ಯನೆಂದಾದರೆ ಆತನು ತನ್ನ ಸಧರ್ಮನೆಂಬುದರಿಂದ, ಗುಣಭದ್ರನು ತನ್ನ 'ಉತ್ತರ ಪುರಾಣ'ವನ್ನು ತನ್ನ ಸಧರ್ಮನ ಮಗನಾದ ಅಕಾಲವರ್ಷನ ಆಸ್ಥಾನದಲ್ಲಿ, ಅಥವಾ ರಾಜಧಾನಿಯಲ್ಲಿ, ಅಥವಾ ಆತನ ರಾಜ್ಯದಲ್ಲಿ ಬೇರಾವುದೊಂದು ಊರಲ್ಲಿ ಬರೆಯದೆ, ಆತನ ಸಾಮಂತ ರಾಜನಾದ ಲೋಕಾದಿತ್ಯನ ರಾಜಧಾನಿಯಲ್ಲಿ ತಾನೆ ಏಕೆ ಬರೆದಿರಬೇಕು?

೨. ನೃಪತುಂಗನು ಕ್ರಿ. ಶ. ಸು. 795—797ರೊಳಗೆ ಹುಟ್ಟಿರಬೇಕೆಂದೂ, ಹಾಗೆಯೇ ಜಿನಸೇನನು ಹುಟ್ಟಿದುದು ಕ್ರಿ. ಶ. 753ರ ಆಚೆಯಲ್ಲದೆ ಈಚೆಗಾಗಿರಲಾರದೆಂದೂ ಮೇಲೆ ಊಹಿಸಿರುವ ಮೇರೆಗೆ, ಜಿನಸೇನನು ನೃಪತುಂಗನಿಗಿಂತ ಪ್ರಾಯದಲ್ಲಿ ಸುಮಾರು ೪೨—೪೪ ವರ್ಷಗಳಿಗೆ ಹಿರಿಯವನಾಗಿರಬೇಕು. 'ಉತ್ತರ ಪುರಾಣ'ದಲ್ಲಿಯ ಶ್ಲೋಕದಲ್ಲಿರುವಂತೆ ನೃಪತುಂಗ–ಅಮೋಘವರ್ಷನು ಜಿನಸೇನನನ್ನು ವಂದಿಸಿದನೆಂಬುದು, ಜಿನಸೇನನ ಅವಸಾನಕ್ಕೆ ಮುಂಚಿತವಾಗಿ ಆಗಿರಬೇಕಾದುದರಿಂದ, ಅದು ಕ್ರಿ. ಶ. 848ರ ಹಿಂದಕ್ಕೆ ಆಗಿರಬೇಕು. ಈಗ ಜಿನಸೇನನು ತನ್ನ 'ಜಯಧವಲಾ' ಟೀಕೆಯನ್ನು ಮುಗಿಸಿದುದು ಕ್ರಿ. ಶ. 837ರಲ್ಲಿ; ಆದುದರಿಂದ ಅದಕ್ಕಿಂತ ಮುಂಚೆಯೇ ಆತನನ್ನು ಅಮೋಘವರ್ಷ–ನೃಪತುಂಗನು ತನ್ನ ಗುರುವೆಂದು ಮಾಡಿಕೊಂಡಿದ್ದರೆ, ಆ ಕೀರ್ತಿದಾಯಿಯಾದ ವಿಷಯವನ್ನು ಜಿನಸೇನನು ತನ್ನ ಪವಿತ್ರ ಗ್ರಂಥವಾದ ಆ ಟೀಕೆಯಲ್ಲಿ ವ್ಯಕ್ತೀಕರಿಸದೆ, 'ಅಮೋಘವರ್ಷ ರಾಜೇಂದ್ರ ಪ್ರಾಜ್ಯರಾಜ್ಯಗುಣೋದಯಾ' ಎಂದಿಷ್ಟನ್ನೇ ಹೇಳಿಬಿಡುತ್ತಿದ್ದನೇ? ಅಥವಾ ತನ್ನ ಶಿಷ್ಯನೂ ಸಮ್ರಾಜನೂ ಆಗಿದ್ದ ಅಮೋಘವರ್ಷನ ರಾಜಧಾನಿಯಲ್ಲಾಗಲಿ, ಆತನ ರಾಜ್ಯದಲ್ಲಿ ಇತರತ್ರ ಎಲ್ಲಾಗಲಿ ಅದನ್ನು ಬರೆಯದೆ 'ಗುರ್ಜರಾರ್ಯಾನುಪಾಲಿತ'ವಾದ ವಟಗ್ರಾಮದಲ್ಲಿ ಅದನ್ನು ಬರೆಯುತ್ತಿದ್ದನೇ?

೩. ಜಿನಸೇನನ ಅಂತಿಮ ಗ್ರಂಥವಾದ 'ಆದಿಪುರಾಣ'ದಲ್ಲಿ ನೃಪತುಂಗ–ಅಮೋಘವರ್ಷನ ಹೆಸರಾದರೂ ಇಲ್ಲ; ಅಂತಹ ಸಮ್ರಾಜನು ತನ್ನ ಶಿಷ್ಯನಾಗಿದ್ದರೆ, ಆತನ ಹೆಸರನ್ನು ಜಿನಸೇನನು ಹೇಳದಿರುವ ಬಗೆ ಹೇಗೋ ಊಹಿಸಲಾಗುವುದಿಲ್ಲ.

೪. ಗುಣಭದ್ರನ 'ಉತ್ತರ ಪುರಾಣ'ದಲ್ಲಾಗಲಿ, ಜಿನಸೇನನ 'ಜಯಧವಲಾ' ಟೀಕೆಯಲ್ಲಾಗಲಿ, 'ಪಾರ್ಶ್ವಾಭ್ಯುದಯ'ದಲ್ಲಾಗಲಿ 'ಅಮೋಘವರ್ಷ' ಎಂಬ ಹೆಸರೇ ಇದೆಯಲ್ಲದೆ, ರಾಷ್ಟ್ರಕೂಟ ವಂಶದ ಅರಸಾದ 'ಶರ್ವ'ನ 'ಶರ್ವ'ನೆಂಬ ಹೆಸರಾಗಲಿ, ಮುಖ್ಯತಃ 'ಅಮೋಘವರ್ಷ' ಎಂಬ ಹೆಸರಿಂದ ಹೆಚ್ಚು ಪ್ರಖ್ಯಾತವಿರುವ, (ಅಥವಾ ಹೆಚ್ಚಿಲ್ಲದಿದ್ದರೆ ಅಷ್ಟೇ ಇದರೂ ಪ್ರಖ್ಯಾತ ವಿರುವ) 'ನೃಪತುಂಗ' ಎಂಬ ಹೆಸರಾಗಲಿ ತೀರ ಅಭಾವ ಏಕೆ?

'ಪಾರ್ಶ್ವಾಭ್ಯುದಯ' ಕಾವ್ಯ

ಈ ಕಾವ್ಯದ ಕೊನೆಯಲ್ಲಿ (IV. ೭೦)—

'ಭುವನಮವತು ದೇವಸ್ಸರ್ವದಾಮೋಘವರ್ಷಃ ||'

ಎಂದೊಂದು ಆಶೀರ್ವಚನವಷ್ಟೇ ಇದೆ. ಇದರಿಂದ ಈ ಕಾವ್ಯವನ್ನು ಜಿನಸೇನನು ಬರೆದು ಮುಗಿಸುವಾಗ ಅಮೋಘವರ್ಷನೆಂಬೊಬ್ಬ ಅರಸನಿದ್ದನೆಂದೂ, ಆತನನ್ನು ಈತನು ತನ್ನೀ ಕಾವ್ಯದಲ್ಲಿ ಹರಸಿರುವನೆಂದೂ ಅಷ್ಟೇ ತಿಳಿಯುತ್ತದಲ್ಲದೆ, ಇದರಿಂದ ಆ ಅಮೋಘವರ್ಷನು ಈ ಜಿನಸೇನನಿಂದ ಜೈನ ಧರ್ಮವನ್ನು ಅವಲಂಬಿಸಿದನೆಂದಾಗಲಿ ಈತನ ಶಿಷ್ಯನಾದನೆಂದಾಗಲಿ ಅರ್ಥವಾಗುವುದು ಹೇಗೋ ನಾನರಿಯೆನು.

ಆದರೆ, ಈ ಕಾವ್ಯದ ಅಚ್ಚಾದ ಪ್ರತಿಯ (Nirnayasagara Press, Bombay: ವಿಕ್ರಮ ಸಂವತ್ ೧೯೬೬) ಪ್ರತಿ ಸರ್ಗದ ಕೊನೆಯಲ್ಲಿ ಇದೊಂದು ಗದ್ಯವಿದೆ :—

"ಇತ್ಯಮೋಘವರ್ಷ ಪರಮೇಶ್ವರ ಪರಮಗುರು ಶ್ರೀ ಜಿನಸೇನಾಚಾರ್ಯ ವಿರಚಿತ ಮೇಘದೂತ ವೇಷ್ಟಿತ ವೇಷ್ಟಿತೇ ಪಾರ್ಶ್ವಾಭ್ಯುದಯೇ ಭಗವತ್ ಕೈವಲ್ಯ ವರ್ಣನಂ ನಾಮ (ಪ್ರಥಮಃ, ದ್ವಿತೀಯಃ, ತೃತೀಯಃ, ಚತುರ್ಥಃ) ಸರ್ಗಃ ||"

ಇದರಿಂದ ಜಿನಸೇನನು ಅಮೋಘವರ್ಷನ ಗುರುವಾಗಿದ್ದನೆಂದು ಆಗುತ್ತದೆಂಬುದು ಸರಿಯೇ; ಆದರೆ ಈ ಗದ್ಯವು ಮಾತ್ರ ಜಿನಸೇನನ ಸ್ವಯಂ ರಚನೆಯಲ್ಲ; ಎಷ್ಟೋ ಕಾಲದ ಬಳಿಕ ಪ್ರಕ್ಷೇಪವಾಗಿರಬೇಕೆಂದು ನನಗೆ ಈ ಕಾರಣಗಳಿಂದ ತೋರುತ್ತದೆ :—

೧. ಈ ಕಾವ್ಯವು ಕಾಳಿದಾಸನ 'ಮೇಘದೂತ'ದ ಮೇಲೆ ಸಮಸ್ಯಾಪೂರ್ತಿಯಾಗಿ ರಚಿಸಿರುವ ಕಾವ್ಯವೆಂಬುದರಿಂದ, 'ಮೇಘದೂತ'ದಲ್ಲಿ 'ಪೂರ್ವಮೇಘ, ಉತ್ತರ ಮೇಘ'ಗಳೆಂದು ೨ ಭಾಗಗಳಿರುವಂತೆ ಇದರಲ್ಲಿಯೂ ೨ ಭಾಗಗಳಿರಬೇಕೆಂಬುದು ಉಚಿತವಾದರೂ, ಇದರಲ್ಲಿ ಹಾಗಲ್ಲದೆ ಇದು (ಈಗ) ೪ ಸರ್ಗಗಳಾಗಿ ನ್ಯೂನಾಧಿಕವಾಗಿ* ವಿಭಾಗಿಸಲ್ಪಟ್ಟಿರುತ್ತದೆ; ಮತ್ತು ಈ ಸರ್ಗ ವಿಭಾಗ

* ೧ನೆಯ ಸರ್ಗದಲ್ಲಿ ೧೧೮ ಪದ್ಯಗಳು. ೨ನೆಯದರಲ್ಲಿ ೧೧೮. ೩ನೆಯದರಲ್ಲಿ ೫೭. ೪ನೆಯದರಲ್ಲಿ ೭೧, ಒಟ್ಟು ಪದ್ಯ ಸಂಖ್ಯೆ ೩೬೪.

ಮಾದರೂ ಕಥಾಭಾಗದಲ್ಲಿ ತೋರುವ ಸಮುಚ್ಚಯಕ್ಕೆ ಆವಶ್ಯಕವುಳ್ಳ ಪರಿಚ್ಛೇದಕ್ಕೆ ಅನುಗುಣವಾಗದೆ, 'ಮೇಘದೂತ'ದಿಂದ ಸಮಸ್ಯಾಪೂರ್ತಿಗಾಗಿ ಆಯ್ದುಕೊಂಡ ಪಂಕ್ತಿಗಳ ಸಂಖ್ಯೆಗೆ ಹೊಂದಿಕೆಯಾಗಿ, ಕೃತ್ರಿಮ ರೀತಿಯಿಂದಲೇ ಎಂಬಂತೆ ಮಾಡಲ್ಪಟ್ಟಿರುತ್ತದೆ.* ಆದುದರಿಂದ ಜಿನಸೇನನು ಈ ಸರ್ಗ ವಿಭಕ್ತಿಯನ್ನು ಮಾಡಿದುದಿಲ್ಲವೆಂದೂ, ಆತನ ಟೀಕಾ ವ್ಯಾಖ್ಯಾರಾದರೂ ಮಾಡಿರಬೇಕೆಂದೂ ಕಾಣುತ್ತದೆ. ಅದಲ್ಲದೆ, ಅನರ್ಗಳವಾಗಿ ಹರಿವ (೩೬೪ ಪದ್ಯಗಳು ಮಾತ್ರವುಳ್ಳ) ಈ ಚಿಕ್ಕ ಕಥಾನಕದಲ್ಲಿ ಸರ್ಗ ವಿಭಕ್ತಿಯ ಆವಶ್ಯಕತೆ ಏಕೆಂದಾದರೂ ತೋರುವುದಿಲ್ಲ.

೪. ಯಾವುದಾದರೂ ಕಾವ್ಯದಲ್ಲಿ ಹಲವು ಸರ್ಗಗಳಿದ್ದರೆ, ಆಯಾ ಸರ್ಗದ ಕೊನೆಯ (ಗದ್ಯದ)ಲ್ಲಿ, ಆ ಸರ್ಗದಲ್ಲಿ ವರ್ಣಿತವಾದ ವಿಷಯವನ್ನು ಸೂಚಿಸುವಂತೆ ಅದಕ್ಕೆ ಹೆಸರನ್ನಿತ್ತು ಹೇಳುವುದುಂಟಷ್ಟೇ; ಅಥವಾ ಆಯಾ ಸರ್ಗಕ್ಕೆ ಅನ್ವಯಿಸುವಾದ ಹೆಸರುಗಳನ್ನು ಕವಿ ಇಕ್ಕದಿದ್ದರೆ, ಆತನು ತನ್ನ ಕಾವ್ಯದ ಇಂತಿಷ್ಟನೆಯ ಸರ್ಗವು ಸಮಾಪ್ತಿಯಾಯಿತೆಂದು ಹೇಳುವುದುಂಟು. ವ್ಯಾಖ್ಯಾತೃವು ಅಂತಹ ಸರ್ಗಕ್ಕೆ ತಾನಾಗಿ ಹೆಸರನ್ನು ಕೊಟ್ಟಿದ್ದರೆ, ಅದನ್ನು ಕವಿಯು ಸರ್ಗದ ಕೊನೆಯಲ್ಲಿರಿಸಿದ ಗದ್ಯದಲ್ಲಿ ಹೇಳದೆ, ತನ್ನ ವ್ಯಾಖ್ಯೆಯ ಕೊನೆಯಲ್ಲಿ ತಾನು ಸೇರಿಸುವ ಗದ್ಯದಲ್ಲಿ ಹೇಳುವುದೂ ಉಂಟು. ಆದರೆ ಎಲ್ಲಾ ಸರ್ಗಗಳಿಗೂ ಒಂದೇ ಹೆಸರನ್ನು ಹೇಳುವುದು ಎಲ್ಲಿಯಾದರೂ ಉಂಟೇ? ಈ ಕಾವ್ಯದ ಪ್ರತಿ ಸರ್ಗದ ಕೊನೆಯಲ್ಲಿ ಆ ಸರ್ಗವನ್ನು 'ಭಗವತ್ಕೈವಲ್ಯ ವರ್ಣನಂ ನಾಮ' ಎಂದೇ ಹೇಳಿದೆ. ತನ್ನ 'ಆದಿಪುರಾಣ'ದಲ್ಲಿಯು ಪ್ರತಿ ಸರ್ಗಕ್ಕೂ ಅದರದರಲ್ಲಿಯ ವರ್ಣನಕ್ಕೆ ಅನುಗುಣವಾದ ಬೇರೆ ಬೇರೆ ಹೆಸರನ್ನು ಸಮಂಜಸವಾಗಿ ಕೊಟ್ಟಿರುವ ಮಹಾಕವಿಯಾದ ಜಿನಸೇನನಿಂದ, 'ಪಾರ್ಶ್ವಾಭ್ಯುದಯ'ದಲ್ಲಿ ಮಾತ್ರ ಈ ಬಗೆಯ ದೃಷ್ಟಿದೋಷ (Oversight)ವಾಗಿರಬಹುದೆಂದು ಒಪ್ಪಲಾದರೂ ಶಕ್ಯವಲ್ಲ. ಅಥವಾ ಈ 'ಪಾರ್ಶ್ವಾಭ್ಯುದಯ'ಕ್ಕೇನೇ ಆತನು 'ಭಗವತ್ಕೈವಲ್ಯ ವರ್ಣನಂ' ಎಂಬ ನಾಮಾಂತರವನ್ನು (ಇದರಲ್ಲಿಯ ವಿಷಯದ ಮೇಲಣ ಶ್ರದ್ಧೆಯಿಂದ) ಕೊಟ್ಟಿರಬಹುದೆಂದಾದರೆ, ಸರ್ಗಾಂತ್ಯದ ಗದ್ಯದಲ್ಲಿ—"ಪಾರ್ಶ್ವಾಭ್ಯುದಯೇ ಭಗವತ್ಕೈವಲ್ಯ ವರ್ಣನೇ ಪ್ರಥಮಃ (ದ್ವಿತೀಯಃ—ಇತ್ಯಾದಿ) ಸರ್ಗಃ" ಎಂದಿರಬೇಕಲ್ಲದೆ, ಈಗ ಇಪ್ಪಂತೆ ಇರುವ ಬಗೆ ಹೇಗೆ? ಆದುದರಿಂದ ಈ ಕಾವ್ಯದ ಪ್ರತಿಸರ್ಗದ ಕೊನೆಯಲ್ಲಿಯ ಗದ್ಯವು ಜಿನಸೇನನಿಂದ ಬರೆಯಲ್ಪಟ್ಟುದಲ್ಲ, ಯಾರೋ ಅನ್ಯರ ಲೇಖನಿಯಿಂದ ಉಂಟಾಗಿರಬೇಕೆಂದೇ ಕಾಣುತ್ತದೆ.

* ಉದಾ.—೨ನೆಯ ಸರ್ಗದ ಆದಿಯಲ್ಲಿ ಇದು 'ಪಾದವೇಷ್ಟಿತಾನಿ' ೩ನೆಯ ಸರ್ಗದ ಮೊದಲಲ್ಲಿ 'ಇತೋರ್ಧವೇಷ್ಟಿತಾನಿ.' ೪ನೆಯ ಸರ್ಗದ ಆರಂಭದಲ್ಲಿ 'ಇದು ಪಾದವೇಷ್ಟಿತಾನಿ' ಎಂಬೀ ಸೂಚನೆಗಳಿವೆ. ಆದುದರಿಂದ ಈ ಕಾವ್ಯವನ್ನು ಸರ್ಗಗಳಾಗಿ ವಿಭಾಗಿಸಿದಾತನಿಂದಾಗಲಿ ಅಥವಾ ವ್ಯಾಖ್ಯಾತೃವಿಂದಾಗಲಿ ಈ ಸೂಚನೆಗಳೂ ಕೂಡಿಸಲ್ಪಟ್ಟಿರಬೇಕೆಂದು ಕಾಣುತ್ತದೆ.

೩. ಈ 'ಪಾರ್ಶ್ವಾಭ್ಯುದಯ'ಕ್ಕೆ ವ್ಯಾಖ್ಯೆಯನ್ನು ಬರೆದಾತನು 'ಯೋಗಿರಾಟ್ ಪಂಡಿತಾಚಾರ್ಯ'*ನೆಂಬವನು; ಈತನು ಕ್ರಿ. ಶ. ಸು. 1399 ರಲ್ಲಿ ರಚಿಸಲ್ಪಟ್ಟಿರಬಹುದಾದ 'ನಾನಾರ್ಥಮಾಲಾ' ಎಂಬ ಕೋಶವನ್ನು ತನ್ನ ವ್ಯಾಖ್ಯೆಯಲ್ಲಿ ಹಲವೆಡೆಗಳಲ್ಲಿ ಉಲ್ಲೇಖಿಸಿರುವುದರಿಂದ, ಅದರಿಂದ ಈಚೆಯವನಾಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಎಂದರೆ, ಜಿನಸೇನನಿಂದ ಸುಮಾರು 550—600 ವರ್ಷಗಳಿಗೆ ಈಚೆಯವನೆಂದಾಗುತ್ತದೆ. ಈತನು ತನ್ನೀ ವ್ಯಾಖ್ಯೆಯ ಪ್ರತಿ ಸರ್ಗದ ಕೊನೆಯಲ್ಲಿ ಇತರ ವ್ಯಾಖ್ಯಾತೃಗಳು ರೂಢಿಯಾಗಿ ಹೇಳುವ ಮೇರೆಗೆ ತಾನು ವ್ಯಾಖ್ಯಾನಿಸುವ ಕಾವ್ಯದ ಮತ್ತು ತನ್ನ ವ್ಯಾಖ್ಯೆಯ ಹೆಸರನ್ನು ಮಾತ್ರ ಹೇಳದೆ—'ಇತ್ಯಮೋಘವರ್ಷ ಪರಮೇಶ್ವರ ಪರಮಗುರು ಶ್ರೀ ಜಿನಸೇನಾಚಾರ್ಯ ವಿರಚಿತ ಮೇಘ ದೂತವೇಷ್ಟಿತ ವೇಷ್ಟಿತೇ ಪಾರ್ಶ್ವಾಭ್ಯುದಯೇ ತದ್ವ್ಯಾಖ್ಯಾಯಾಂ ಚ ಸುಬೋಧಿನ್ಯಾಖ್ಯಾಯಾಂ ಭಗವತಃ ಕೈವಲ್ಯ ವರ್ಣನಂ ನಾಮ ಪ್ರಥಮಃ (ದ್ವಿತೀಯಃ, ತೃತೀಯಃ, ಚತುರ್ಥಃ) ಸರ್ಗಃ' ಎಂದಿರುವುದರಿಂದಲೂ, ಇದರಲ್ಲಿ 'ಪಾರ್ಶ್ವಾಭ್ಯುದಯೇ' ಮತ್ತು 'ಭಗವತ್ ಕೈವಲ್ಯ ವರ್ಣನಂ' ಎಂಬವುಗಳ ನಡುವೆ ಈತನು ತನ್ನ ವ್ಯಾಖ್ಯೆಯ ಹೆಸರನ್ನು ಹೇಳಿರುವುದರಿಂದಲೂ, ಆ 'ಭಗವತಃ ಕೈವಲ್ಯ ವರ್ಣನ' ಎಂಬ ವಿಶೇಷವಾಚಿಯನ್ನು (ಅದು ಕಾವ್ಯದ ಹೆಸರೆಂದಾಗಲಿ, ಸರ್ಗದ ಹೆಸರೆಂದಾಗಲಿ) ಈತನೇ ಕೂಡಿಸಿರಬೇಕೆಂದು ವ್ಯಕ್ತವಾಗುತ್ತದೆ; ಹಾಗೆಯೇ ತನ್ನ ವ್ಯಾಖ್ಯೆಯ ಕೊನೆಯ ಗದ್ಯದಲ್ಲಿ ಅವಶ್ಯಕವಿಲ್ಲದೆ, 'ಅಮೋಘವರ್ಷ ಪರಮೇಶ್ವರ ಪರಮಗುರು ಜಿನಸೇನಾಚಾರ್ಯ' ಎಂದು ಪುನರುಕ್ತಿಯ ದೋಷವನ್ನಾದರೂ ಲಕ್ಷಿಸದೆ ಈತನು ಒತ್ತಿಯೊತ್ತಿ ಹೇಳಿರುವುದರಿಂದ, ಮೂಲ ಕಾವ್ಯದ ಸರ್ಗಾಂತ್ಯಗಳಲ್ಲಿಯ ಗದ್ಯಗಳಾದರೂ ಈತನಿಂದಲೇ ಸೇರಿಸಲ್ಪಟ್ಟಿರಬೇಕೆಂದು ಕಾಣುತ್ತದೆ. ಇದಕ್ಕೆ ಇನ್ನು ಬಲವತ್ತರವಾದ ಇನ್ನೊಂದು ಆಧಾರವಿದೆ. ಅದೇನೆಂದರೆ:—

೪. ಈ ಪಂಡಿತಾಚಾರ್ಯನು ತನ್ನ ವ್ಯಾಖ್ಯೆಗೆ ಬರೆದಿರುವ ಅನುಬಂಧದಲ್ಲಿ ತನಗಿಂತ ಸುಮಾರು 550—600 ವರ್ಷಗಳ ಮುಂಚಿನ ಈ 'ಪಾರ್ಶ್ವಾಭ್ಯುದಯ' ಕಾವ್ಯದ ಉತ್ಪತ್ತಿಯನ್ನು ಕುರಿತು ಹೀಗೆಂದು ಹೇಳಿರುವನು. ಕಾಳಿದಾಸನೆಂಬ 'ಕವಿತ್ವಕವಿ'ಯು 'ಮೇಘದೂತ'ವೆಂಬ ಕಾವ್ಯವನ್ನು ರಚಿಸಿ, 'ಅಮೋಘವರ'

* ಈತನು ತನ್ನ ವ್ಯಾಖ್ಯೆಗೆ ಕೂಡಿಸಿರುವ ಅನುಬಂಧದಲ್ಲಿ ತನ್ನನ್ನು ಕುರಿತು:—
ಶ್ರೀಮದ್ ಬೆಲ್ಗುಳ ವಿಂಧ್ಯಾದ್ರಿ ಪ್ರೋಲ್ಲಸದ್ದೋರ್ಬಲೀಶಿನಃ ।
ಶ್ರೀ ಪಾದಾಂಬುಜ ಮೂಲಸ್ಥಃ ಪಂಡಿತಾಚಾರ್ಯ ಯೋಗಿರಾಟ್ ॥ ೧೫ ॥
ಎಂದಿರುವುದರಿಂದ, ಶ್ರವಣಬೆಳ್ಗೊಳದ ನಂ. 23 ನೆಯ (ಕ್ರಿ. ಶ. ಸು. 1410) ಶಾಸನದಲ್ಲಿ ಹೆಸರಿಸಲ್ಪಟ್ಟ 'ಪಂಡಿತಾಚಾರ್ಯ'ನೆಂಬವನು ಈತನಾಗಿರಬಹುದೋ ಎಂದು ಕಾಣುತ್ತದೆ.
—(*E. C.*, Vol. II.)

ನಾಗಿ 'ಜಿನೇಂದ್ರಾಂಘ್ರಿ ಸರೋಜೇಂದಿಂದಿರೋಪಮ'ನಾದ ಅಮೋಘವರ್ಷನು* ಆಳುತ್ತಿದ್ದ 'ಬಂಕಾಪುರ'ಕ್ಕೆ ಬಂದನಂತೆ. ಆ ಅಮೋಘವರ್ಷನನ್ನು—

ಸ ಸ್ವಸ್ಯ ಜಿನಸೇನರ್ಷಿಂ ವಿಧಾಯ ಪರಮಂ ಗುರುಮ್ |
ಸದ್ಧರ್ಮಂ ದ್ಯೋತಯಂಸ್ತಸ್ಥೌ ಪಿತೃವತ್ಪಾಲಯನ್ ಪ್ರಜಾಃ |

ಎಂದು ಹೇಳಿದೆ. ಅಲ್ಲಿರುವ ವಿದ್ವಾಂಸರನ್ನು ಕಾಳಿದಾಸನು ಹೀಯಾಳಿಸಿ ('ವಿದುಷೋಽವಗಣಯ್ಯ ಸಃ') ಆ ಕಾವ್ಯವನ್ನು ಅಮೋಘವರ್ಷನ ಮುಂದೆ ಓದಿ ಹೇಳಲು, ಕಾಳಿದಾಸನ ವಿದ್ಯಾಹಂಕೃತಿಯನ್ನು ನಿವಾರಿಸಲೆಂದೂ, ಆತನಿಗೆ 'ಸನಾಭಿಗೋತ್ರಬಾಧೆ'ಯನ್ನು ಉಂಟುಮಾಡಲೆಂದೂ, ತನ್ನ 'ಸತೀರ್ಥ್ಯ'ನಾದ ವಿನಯಸೇನನಿಂದ ಪ್ರೇರಿತನಾದ ಜಿನಸೇನನು, ಒಂದು ಸಾರಿ ಅದನ್ನು ಕೇಳಿದ ಮಾತ್ರದಿಂದಲೇ ತನ್ನ ಬುದ್ಧಿಯಲ್ಲಿಟ್ಟುಕೊಂಡು, ಅದರಲ್ಲಿಯ ಪಂತಿ ಪಂತಿಗಳನ್ನು ಕ್ರಮಶಃ ಪ್ರತಿ ವೃತ್ತದಲ್ಲಿ ಪೋಣಿಸಿ, ಈ 'ಪಾರ್ಶ್ವಾಭ್ಯುದಯ'ವನ್ನು ರಚಿಸಿ ಇದನ್ನು ಆಸ್ಥಾನದಲ್ಲಿ ಓದಿ ಹೇಳಿ, ತನ್ನೀ ಕಾವ್ಯದಿಂದ ತಾನೇ ಕಾಳಿದಾಸನು ಪ್ರತಿ ಶ್ಲೋಕದಿಂದ ಪಂತಿಗಳನ್ನು ಕದ್ದು ('ಸ್ತೇಯಾತ್') ಆ 'ಮೇಘದೂತ'ವನ್ನು ರಚಿಸಿದನೆಂದು ಆತನನ್ನು ಅವಹೇಳಿಸಿದನಂತೆ!!

ಆದರೆ ಇದರಷ್ಟು ಅಸಂಬದ್ಧವಾದ ಕಟ್ಟುಕಥೆಯು ಬೇರೊಂದಿಲ್ಲ. ಏಕೆಂದರೆ, ಕಾಳಿದಾಸನು ಜಿನಸೇನನಿಗಿಂತ ಕಡಿಮೆಯಿಂದ ಕಡಿಮೆಯೆಂದರೂ ಸುಮಾರು 200 ವರ್ಷಗಳಿಗೆ† ಹಿಂದೆ ಆಗಿಹೋದವನು; ಅಥವಾ 'ಮೇಘದೂತ'ಕ್ಕಿಂತ 'ಪಾರ್ಶ್ವಾಭ್ಯುದಯ'ವು ಹಳೆಯ ಕಾವ್ಯವೆಂದಾಗಲಾರದಾದರೂ, ಅದನ್ನು ಹಳೆಯದೆಂದು ಸಮರ್ಥಿಸಲಿಕ್ಕೆ ಈ ಅಸಂಬದ್ಧವಾದ ಜನಶ್ರುತಿಯನ್ನು ಪಂಡಿತಾಚಾರ್ಯನು ಆಧರಿಸಿ, ಅದನ್ನು ತನ್ನ ಅನುಬಂಧದಲ್ಲಿ ಸೇರಿಸಿ ಸಲುವಳಿಯನ್ನು ಇತ್ತುದರಿಂದ ಜಿನಸೇನನನ್ನು ಅಸತ್ಯವಾದಿಯಾಗಿ ಮಾಡಿದಂತಷ್ಟೇ ಆಯಿತಲ್ಲದೆ, ಅದಕ್ಕೆ ಇತಿಹಾಸದ ನೆರವೇನೂ ಒದಗುವಂತಿಲ್ಲವು; ಹಾಗೆಯೇ ಬಂಕಾಪುರವು ಅಮೋಘವರ್ಷನ ರಾಜಧಾನಿಯಲ್ಲವೆಂಬುದನ್ನು ಈ ಮೊದಲೇ ಹೇಳಿದೆಯಷ್ಟೆ. ಇವೆಲ್ಲ ಕಾರಣಗಳಿಂದ ತೋರುವುದೇನೆಂದರೆ, ಪಂಡಿತಾಚಾರ್ಯನು ತಾನು ಜನಶ್ರುತಿಯಿಂದೇನೋ ಕೇಳಿರಬಹುದಾದ ಕಟ್ಟುಕಥೆಯೊಂದನ್ನು ನಂಬಿ, ಅದನ್ನು ದೃಢೀಕರಿಸಲೆಂದೇನೋ ತನ್ನ ಅನುಬಂಧದಲ್ಲಿರಿಸಿ, ಅದರ ಆಧಾರದಿಂದಲೇ ಜಿನಸೇನನು ಅಮೋಘವರ್ಷನ ಗುರುವೆಂಬುದನ್ನು ಈ 'ಪಾರ್ಶ್ವಾಭ್ಯುದಯ'ದ ಪ್ರತಿ

* ಈ ಕಾವ್ಯದ ಕೊನೆಯ ಗದ್ಯಗಳಲ್ಲಾಗಲಿ, ಅನುಬಂಧದಲ್ಲಾಗಲಿ, ಅಥವಾ ಕಾವ್ಯದ ಪ್ರತಿ ಸರ್ಗಕ್ಕೆ ಕೊನೆಯಲ್ಲಿ ಸೇರಿಸಿದ ಗದ್ಯದಲ್ಲಾಗಲಿ, ಈ ಕಾವ್ಯದ (IV. ೭೦)ಲ್ಲಿ ತೋರುವ 'ಅಮೋಘವರ್ಷ'ನೆಂಬ ಹೆಸರೇ ಇದೆಯಲ್ಲದೆ, ಆತನ ರಾಜಧಾನಿಯು ನಾಮಾಂತರವಾದರೂ ಇಲ್ಲ.

† ಕ್ರಿ. ಶ. ೬೩೪ನೆಯ 'ಐಹೊಳೆ'ಯ ಶಾಸನದಲ್ಲಿ ಕಾಳಿದಾಸನ ಹೆಸರಿದೆ.
"ಸ ವಿಜಯತಾಂ ರವಿಕೀರ್ತಿಃ ಕವಿತಾಶ್ರಿತ ಕಾಳಿದಾಸ ಭಾರವಿ ಕೀರ್ತಿಃ॥"
(ಪ್ರಾ. ಲೇ. ಮಾ., ನಂ. ೧೬.)

ಸರ್ಗದ ಕೊನೆಯ ಗದ್ಯದಲ್ಲಿ ಬರೆದಿಟ್ಟು, ಅದೂ ಸಾಲದೆ ಅದನ್ನೇ ತನ್ನ ವ್ಯಾಖ್ಯೆಯ ಪ್ರತಿ ಸರ್ಗಾಂತದ ಗದ್ಯದಲ್ಲಿ ಪುನಃ ಏಕೆ ಹೇಳಿರಬೇಕು. ಆದುದರಿಂದ ಈ ಮೂಲ ಕಾವ್ಯದ ಸರ್ಗಾಂತ್ಯಗಳಲ್ಲಿಯ ಗದ್ಯದ ಒಕ್ಕಣೆಯು ಎಂದಿಗೂ ಜಿನಸೇನನ ಸ್ವತಃ ರಚನೆಯಾಗಿರಲಾರದು; ಅದು ಈ ವ್ಯಾಖ್ಯಾತೃವಾದ ಪಂಡಿತಾಚಾರ್ಯನು ಅಥವಾ ಬೇರೆ ಯಾವನೊಬ್ಬನು ಕೂಡಿಸಿರುವ ಪ್ರಕ್ಷೇಪವಾಗಿರಬೇಕು; ಹೇಗೂ ಇತಿಹಾಸ ದೃಷ್ಟ್ಯಾ ಅದರಲ್ಲಿಯ ಹೇಳಿಕೆಯು ಜಿನಸೇನನ ಕಾಲಕ್ಕಿಂತ ಎಷ್ಟೋ ಆಧುನಿಕವಾಗಿರಬೇಕೆಂಬುದರಿಂದ, ಅದನ್ನು ನಿರಾಧಾರವಾದ ಊಹೆಯೆಂದೇ ತೊರೆದು ಬಿಡಬೇಕಾಗುತ್ತದೆ.

ಪ್ರಾಚೀನ ಭಾರತದಲ್ಲಿಯ ಧರ್ಮಸಮವೃತ್ತಿ

ಈ ಸಂದರ್ಭದಲ್ಲಿ ಸುಸಂಗತವಾದೊಂದು ಮಾತನ್ನು ಹೇಳಬೇಕಾಗಿದೆ. ಈ ಭಾರತಭೂಮಿಯಲ್ಲಿ ಹಿಂದೆ ಆಳಿದ ಅರಸರು (ಹಾಗೆಯೇ ಇತರರೂ) ತಮ್ಮ ರಾಜ್ಯದಲ್ಲಿ ಅಥವಾ ಇತರತ್ರ ತಮ್ಮ ಸುತ್ತಮುತ್ತಲೂ ನೆಲಸಿರುವ ಬೇರೆ ಧರ್ಮಗಳೆಲ್ಲವನ್ನೂ, ಅನ್ಯ ಧರ್ಮಾನುಯಾಯಿಗಳನ್ನೂ ತಮ್ಮ ಧರ್ಮದಂತೆಯೂ ತಮ್ಮಂತೆಯೂ ಸಮಾನ ದೃಷ್ಟಿಯಿಂದ ಪುರಸ್ಕರಿಸುತ್ತಿದ್ದುದು ಮಾತ್ರವಲ್ಲ, ಅವರವರಿಗೆ ಬೇಕಾದಂತೆ ಅವರವರ ಧರ್ಮಕ್ಕೆ ನೆರವಾಗುವಂತೆ ದೇವಾಯತನಗಳನ್ನು ಕಟ್ಟಿಸಿಕೊಡುವುದೋ, ಅವಕ್ಕೆ ದತ್ತಿಗಳನ್ನು ಬಿಡುವುದೋ ಮುಂತಾದ ವಿವಿಧ ಸೌಕರ್ಯಗಳನ್ನು ಏರ್ಪಡಿಸುತ್ತಿದ್ದರೆಂಬುದಕ್ಕೂ ನಮ್ಮ ಇತಿಹಾಸದಲ್ಲಿ ಬೇಕಾದಷ್ಟು ದಾಖಲೆಗಳಿವೆ; ಅವುಗಳಿಂದ ದೃಷ್ಟಾಂತದ ಬಗ್ಗೆ ಕೆಲವನ್ನು ಇಲ್ಲಿ ಕೊಡುವೆನು:—

೧. ಮೌರ್ಯ ಸಮ್ರಾಜನಾದ ಅಶೋಕನು (ಕ್ರಿ. ಪೂ. 274—236) ಬೌದ್ಧ ಧರ್ಮವನ್ನು ಸ್ವೀಕರಿಸಿ, ತಾನು ಬೌದ್ಧನಾದನೆಂದು ಐತಿಹಾಸಿಕರ ನಂಬುಗೆಯಿದೆಯಷ್ಟೆ; ಇದನ್ನು ವಿತರ್ಕ ಮಾತ್ರವಾಗಿ ಒಪ್ಪಿಕೊಂಡರೂ, ಆತನು ಕಾಶ್ಮೀರದೇಶದಲ್ಲಿ ಸನಾತನ ಧರ್ಮದ ದೇಗುಲಗಳನ್ನು ಕಟ್ಟಿಸಿದನೆಂದೂ, ಜೀರ್ಣೋದ್ಧಾರ ಮಾಡಿಸಿದನೆಂದೂ 'ಕಲ್ಹಣ'ನ 'ರಾಜತರಂಗಿಣಿ'ಯಿಂದ ತೋರುತ್ತದೆ—

> ಅಥಾವಹದಶೋಕಾಖ್ಯಃ ಸತ್ಯಸಂಧೋ ವಸುಂಧರಾಮ್ ॥ I. ೧೦೧ ॥
> ಜೀರ್ಣಂ ಶ್ರೀವಿಜಯೇಶಸ್ಯ ವಿನಿವಾರ್ಯ ಸುಧಾಮಯಂ।
> ನಿಷ್ಕಲೂಷೇಣಾಶ್ಮಮಯಃ ಪ್ರಾಕಾರೋ ಯೇನ ಕಾರಿತಃ । I. ೧೦೪ ॥
> ಸಭಾಯಾಂ ವಿಜಯೇಶಸ್ಯ ಸಮೀಪೇ ಚ ವಿನಿರ್ಮಮೇ।
> ಶಾಂತಾವಸಾದಃ ಪ್ರಾಸಾದಾವಶೋಕೇಶ್ವರ ಸಂಜ್ಞಿತೌ । I. ೧೦೬ ।

೨. ಜೈನ ಧರ್ಮಾನುಯಾಯಿಯಾಗಿದ್ದ ಕಲಿಂಗದೇಶದ ಅರಸನಾದ ಮಹಾಮೇಘವಾಹನ ಖಾರವೇಲನು (ಕ್ರಿ. ಪೂ. ಸು. 169) ಸನಾತನ, ಬೌದ್ಧ, ಜೈನ ಧರ್ಮೀಯ ಸಾಧುಗಳನ್ನು ಸಮದೃಷ್ಟಿಯ ಗುರು ಭಕ್ತಿಯಿಂದ ಮನ್ನಿಸುತ್ತಿದ್ದನೆಂದೂ, ತನ್ನ ರಾಜ್ಯದಲ್ಲಿಯ ಅನ್ಯಾನ್ಯ ಧರ್ಮಗಳನ್ನು ಭೇದವಿಲ್ಲದೆ ಕಾಪಾಡು

ತ್ತಿದ್ದನೆಂದೂ 'ಉದಯಗಿರಿ'*ಯಲ್ಲಿಯ ಆತನದೊಂದು ಶಾಸನದಿಂದ ತಿಳಿಯುತ್ತದಂತೆ.

೭. ಗುಪ್ತ ಸಂತತಿಯ ಅರಸನಾದ 'ಸಮುದ್ರಗುಪ್ತ'ನು† (ಕ್ರಿ. ಶ. 330—375) ಸ್ವತಃ ವೈಷ್ಣವನಾಗಿದ್ದರೂ, ಸ್ವಧರ್ಮದಲ್ಲಿ ಹೇಗೋ ಹಾಗೆಯೇ ಬೌದ್ಧ, ಜೈನ ಧರ್ಮಿಯರಲ್ಲಿಯೂ ತುಂಬ ಪ್ರೀತಿಯುಳ್ಳವನಾಗಿದ್ದನು; ಆತನಿಗೆ ಬೌದ್ಧ ಯತಿಯಾದ 'ವಸುಬಂಧು' ಎಂಬವನಲ್ಲಿ ತುಂಬ ಗೌರವವಿದ್ದರೂ, ಆತನು ಸ್ವಧರ್ಮವನ್ನು ತೊರೆದು ಬೌದ್ಧನಾಗಲಿಲ್ಲ. ಸಿಂಹಲದೇಶದ ಅರಸನಾದ ಮೇಘವರ್ಣನು ತನ್ನ ದೇಶದಿಂದ ಈತನ ರಾಜ್ಯದಲ್ಲಿರುವ ಬುದ್ಧಗಯೆಗೆ ಹೋಗುವ ಯಾತ್ರಿಕರ ಸೌಕರ್ಯದ ಸಲುವಾಗಿ ಅಲ್ಲಿ ನಾನೊಂದು ವಿಹಾರವನ್ನು ಕಟ್ಟಿಸಲೀತನ ಅನುಮತಿಯನ್ನು ಅಪೇಕ್ಷಿಸುತ್ತಲೇ ಈತನು ಸಮ್ಮತಿಸಿದನೆಂದು ತೋರುತ್ತದೆ.

೮. ಚಾಲುಕ್ಯಾನ್ವಯದ ಸತ್ಯಾಶ್ರಯನೆಂಬ ಬಿರುದಿನ ಪುಲಕೇಶಿಯು ತನ್ನ ಪರಮಾಪ್ತನಾದ 'ರವಿಕೀರ್ತಿ' ಎಂಬ ('ಸತ್ಯಾಶ್ರಯಸ್ಯ ಪರಮಾಪ್ತವತಾ ....ರವಿಕೀರ್ತಿನಾ') ದಿಗಂಬರ ಶಾಖೆಯ (ಮತ್ತು ಬಹುಶಃ 'ನಂದಿ' ಸಂಘದ) ಜೈನ ಪಂಡಿತನಿಗೆ ಸಂಭವತಃ ತಾನೇ ಕಟ್ಟಿಸಿಕೊಟ್ಟ ಜಿನಾಲಯದಲ್ಲಿ ಆ ರವಿಕೀರ್ತಿಯಿಂದ ರಚಿತವಾಗಿ ಉತ್ಕೀರ್ಣವಾಗಿರುವ ಶಿಲಾಲೇಖವು (ಕ್ರಿ. ಶ. 634) ಜಿನ ಸ್ತುತಿ ಪರವಾದ ಪದ್ಯದಿಂದ ಆರಂಭಿಸುತ್ತದಾದರೂ, ಆ ಪುಲಕೇಶಿಯ ಇತರ ಲೇಖಗಳಲ್ಲಿ ವಿಷ್ಣು ಸ್ತುತಿ ಪರವಾದ ಪದ್ಯಗಳಿಂದಲೇ‡

* ಈ 'ಉದಯಗಿರಿ'ಯು ಒಡ್ರದೇಶದಲ್ಲಿ (Orissa) 'ಕಟಕ' (Cuttack) ಪಟ್ಟಣದಿಂದ ೧೯ ಮೈಲಿಗಳಷ್ಟು ದೂರದಲ್ಲಿದೆ.

† 'Men and thought in ancient India'—ಪು. 157—159. ಈ ಸಮುದ್ರಗುಪ್ತನ ಧ್ವಜವು ಗರುಡಧ್ವಜವಾಗಿತ್ತು: ನೃಪತುಂಗನು ಮೇಲೆ ಕೊಟ್ಟಿರುವ ಶಾಸನದಲ್ಲಿ ಆತನು ತಾನು 'ಗರುಡ ಲಾಂಛನ'ನೆಂದು ಹೇಳಿಕೊಂಡಿರುವುದನ್ನು ನೆನಪಿಗೆ ತಂದುಕೊಳ್ಳುವುದು.

‡ ಉದಾ.—(೧) ಈತನ ಶಾ. ಶ. ೫೩೨ (ಕ್ರಿ. ಶ. 610)ರ ಒಂದು ತಾಮ್ರ ಪಟ್ಟದ ಆರಂಭದಲ್ಲಿ ವರಾಹರೂಪಿಯಾದ ವಿಷ್ಣುವಿನ ಸ್ತುತಿಯಿದೆ:—

ಜಯತಿ ಜಲದವೃಂದ ಶ್ಯಾಮ ನೀಲೋತ್ಪಲಾಭಃ |
. . . .
ಧರಣಿಧರಸಿರೋಧಾತ್ರಿವ್ಯಸ್ತ ವಕ್ಷೋ ವರಾಹಃ ||

(೨) ಈತನ ಕ್ರಿ. ಶ. 641 (ಜನವರಿ 31)ರ ಶಾಸನದಲ್ಲಿ (E.C., X., ಗೌರಿಬಿದನೂರು. ನಂ. 48) ಈತನು ಸಂಗಮತೀರ್ಥದಲ್ಲಿ ಮಾಘ ಶು| ಹುಣ್ಣಿಮೆಯ ಚಂದ್ರಗ್ರಹಣದಂದು ಪಿಂದು 'ಪರಿಯಾಳ' ಎಂಬ ಗ್ರಾಮವನ್ನು, ಸಹಿರಣ್ಯ ಸೋದಕವಾಗಿ ಬ್ರಾಹ್ಮಣರಿಗೆ ದತ್ತಿಯಾಗಿ ಕೊಟ್ಟನೆಂದಿದೆ.

(೩) ಈತನ ಇನ್ನೊಂದು ತಾಮ್ರ ಪತ್ರದ (ಪ್ರಾ.ಲೇ.ಮಾ., ನಂ. 151) ಮೊದಲಣ ಶ್ಲೋಕವು ಹೀಗಿದೆ:—

ಜಯತಿ ಜಗತಾಂ ವಿಧಾತುಸ್ತ್ರಿವಿಕ್ರಮಾಕ್ರಾಂತ ಸಕಲ ಭುವನಸ್ಯ |
. . . . ನಖಾಂಶು ಜಟಿಲಂ ಪದಂ ವಿಷ್ಣೋಃ ||

ಆರಂಭಿಸುತ್ತವೆ; ಅಷ್ಟೇ ಅಲ್ಲ, ಆತನು ವಿಷ್ಣುಭಕ್ತನಾಗಿಯೇ ಇದ್ದನಲ್ಲದೆ ಜೈನ ಧರ್ಮವನ್ನು ಅವಲಂಬಿಸಲಿಲ್ಲವೆಂದು ಇತಿಹಾಸದಿಂದ ಗೊತ್ತಾಗುತ್ತದೆ.

೫. ಗುರ್ಜರದೇಶದರಸಾದ ಸಿದ್ಧರಾಜನು ಶ್ವೇತಾಂಬರ ಜೈನ ಯತಿಯಾದ ಹೇಮಚಂದ್ರಸೂರಿಯನ್ನು (ಕ್ರಿ. ಶ. 1087—1171) ತುಂಬ ಗೌರವಿಸುತ್ತಿದ್ದು, ತನಗೆ ಮಕ್ಕಳಿಲ್ಲವೆಂಬ ಚಿಂತೆಯಿಂದ ಹಿಂದೂ ಮತ್ತು ಜೈನ ಧರ್ಮಗಳ ಪವಿತ್ರ ಕ್ಷೇತ್ರಗಳನ್ನು ಆ ಹೇಮಚಂದ್ರನ ಜತೆಯಲ್ಲಿ ಸಂದರ್ಶಿಸಿದನಾದರೂ, ಸ್ವಧರ್ಮವಾದ ಸನಾತನ ಧರ್ಮವನ್ನು ತ್ಯಜಿಸಲಿಲ್ಲ. ಆತನಿಗೆ ಹೇಮಚಂದ್ರನಲ್ಲಿ ಗುರುಭಕ್ತಿಯಿದ್ದಿತು. ಆತನೊಂದಿಗೆ ಹೇಮಚಂದ್ರನು ಸೋಮೇಶ್ವರವೆಂಬ ಶಿವ ಕ್ಷೇತ್ರವನ್ನು ಸಂದರ್ಶಿಸಿದಾಗ, ತಾನು ಜೈನ ಯತಿಯಾಗಿದ್ದರೂ, ಪರಧರ್ಮದಲ್ಲಿ ವಿರೋಧವಿಲ್ಲದೆ, ಅಲ್ಲಿಯ ಶಿವಲಿಂಗವನ್ನು ಸ್ತುತಿಸಿದನೆಂದು ಪ್ರದ್ಯುಮ್ನಸೂರಿಯ 'ಪ್ರಭಾವಕ ಚರಿತ' (ಕ್ರಿ. ಶ. 1277)* ದಲ್ಲಿದೆ. ಆ ಸಿದ್ಧರಾಜನ ಬಳಿಕ ಪಟ್ಟಕ್ಕೆ ಬಂದ ಕುಮಾರಪಾಲನು (ಕ್ರಿ. ಶ. 1141—1171) ಜನ್ಮತಃ ಶೈವ ಧರ್ಮದವನಾಗಿದ್ದು, ಕಡೆಗೆ ಆ ಹೇಮಚಂದ್ರನಿಂದ ಜೈನ ಧರ್ಮವನ್ನು ಸ್ವೀಕರಿಸಿದನು; ಆದರೆ ಆ ಬಳಿಕಲಾದರೂ ಶಿವ ಭಕ್ತಿಯನ್ನು ಮರೆತಿದ್ದಿಲ್ಲವೆಂದು ಶ್ವೇತಾಂಬರ ಜೈನ ಜಯಸಿಂಹಸೂರಿಯು (ಕ್ರಿ. ಶ. ಸು. 1230) ರಚಿಸಿರುವ 'ವಸ್ತುಪಾಲ ತೇಜಃಪಾಲಪ್ರಶಸ್ತಿ'†ಯಿಂದ ತಿಳಿಯುತ್ತದೆ, ಇತ್ಯಾದಿ.

ಆದುದರಿಂದ ಯಾವನೊಬ್ಬ ಅರಸಾಗಲಿ (ಅಥವಾ ಇತರ ಯಾರೊಬ್ಬನಾಗಲಿ), ಸ್ವಧರ್ಮೀಯನಲ್ಲದ ಯಾರೊಬ್ಬ ಪರಧರ್ಮೀಯ ಯತಿಯನ್ನಾಗಲಿ, ಇತರ ಸಾಧುವನ್ನಾಗಲಿ (ಅಥವಾ ಕವಿಯನ್ನಾಗಲಿ) ಆತನಲ್ಲಿರುವ ಶ್ರೇಷ್ಠ ವಿಭೂತಿಗೆ ಮನಸೋತು, ಆತನನ್ನು ಗುರು ಭಾವದಿಂದ ಮನ್ನಿಸಿದರೆ, ಅದರಿಂದಲೇ ಆತನು ಆ ಅನ್ಯಮತೀಯನ ಶಿಷ್ಯನಾದನೆಂದಾಗಲಿ, ಆತನ ಉಪದೇಶದಿಂದ ಸ್ವಧರ್ಮವನ್ನು ತ್ಯಜಿಸಿ ಆತನ ಮತವನ್ನು ಸ್ವೀಕರಿಸಿದನೆಂದಾಗಲಿ ಆಪಾತತಃ ನಂಬುವುದು ಎಂದಿಗೂ ಸರಿಯಾಗದು; ಆದರೆ ಸಾಕೂತವಾದ ಮತ್ತು ಸಮರ್ಪಕವಾದ ಇತರ ಐತಿಹಾಸಿಕ

* ಸೂರಿಶ್ಚ ತುಷ್ಟುವೇ ತತ್ರ ಪರಮಾತ್ಮ ಸ್ವರೂಪತಃ ।
ಸನಾಮ ಜಾಪಿತೋಘೋಽಯಂ ಮುಕ್ತೇಃ ಪರಮಕಾರಣಮ್ ॥೩೪೬॥
ಯತ್ರ ತತ್ರ ಸಮಯೇ ಯಥಾ ತಥಾ ।
ಯೋಽಸಿ ಸೋಽಸ್ಯಭಿಧಯಾ ಯಯಾ ತಯಾ ॥
ವೀತದೋಷಕಲುಷಃ ಸಚೇದ್ಭವಾ ।
ನೇಕ ಏವ ಭಗವನ್ನಮೋಽಸ್ತು ತೇ ॥೩೪೭॥ (ಪ್ರಭಾವಕ ಚರಿತ, ಪು. ೨೦೭)

† ರಾಷ್ಟ್ರಂ ಪಾತಿಸ್ಮ ಕುಮಾರಪಾಲ ನೃಪತಿ .... ॥೨೪॥
ಜೈನಂ ಧರ್ಮಮುರೀಚಕಾರ ...... ।
.... ಗುರೂ ಚಕ್ರೇ ಸ್ಮರಧ್ವಂಸಿನಮ್ ॥೨೫॥
(Gækwad's Oriental Series—No. X. 'ಹಮ್ಮೀರ ಮದಮರ್ದನ'—ಪುಟ ೬೦).

ಸ್ವತಂತ್ರಾಧಾರಗಳಿದ್ದರೆ ಮಾತ್ರ, ಅಂತಹ ವಿಷಯವನ್ನು ಸಂದೇಹವಿಲ್ಲದೆ ಒಪ್ಪಬಹುದು; ಏಕೆಂದರೆ, ಗುರ್ಜರ ಕುಮಾರಪಾಲನು ಹೇಮಚಂದ್ರನ ಉಪದೇಶದಿಂದ ಜೈನನಾದನೆಂಬುದಕ್ಕೆ ಹೇಮಚಂದ್ರನ ಗ್ರಂಥಗಳಿಂದಲೂ (“ಕುಮಾರಪಾಲಶ್ಚಾಲುಕ್ಯೋ ರಾಜರ್ಷಿಃ ಪರಮಾರ್ಹತಃ”—ಹೇಮಚಂದ್ರನ ‘ಅಭಿಧಾನ ಚಿಂತಾಮಣಿ, ಶ್ಲೋಕ ೭೧೨), ಇತರ ಸಮಕಾಲೀನ ಮತ್ತು ಈಷತ್ಕಾಲಾಂತರದ ಗ್ರಂಥಗಳಿಂದಲೂ ಸಾಧಾರವಾದ ದಾಖಲೆಗಳು ದೊರೆವಾಗ, ಯಾರು ತಾನೆ ಅದನ್ನು ಐತಿಹಾಸಿಕ ತಥ್ಯವಲ್ಲವೆಂದು ಅಲ್ಲಗಳೆಯಬಹುದು?

(೫) ‘ಗಣಿತಸಾರ ಸಂಗ್ರಹ’

ಇದು ಜೈನ ಗಣಕನಾದ ‘ವೀರಾಚಾರ್ಯ’*ನೆಂಬವನ ಕೃತಿಯೆಂದು ಶ್ರೀಮಾನ್ ಪಾಠಕರವರು (ಕ. ಮಾ. ಭೂಮಿಕೆಯು ಪು. 6) ಹೇಳಿರುವರು; ಆದರೆ ಈತನ ಹೆಸರು ‘ಮಹಾವೀರಾಚಾರ್ಯ’ನೆಂದು ಕೈ. ವಾ. ಶ್ರೀ ಶಂಕರ ಬಾಲಕೃಷ್ಣ ದೀಕ್ಷಿತರವರ ‘ಭಾರತೀಯ ಜ್ಯೋತಿಃಶಾಸ್ತ್ರ’ ಎಂಬ ಮರಾಠೀ ಗ್ರಂಥದಿಂದಲೂ (ಪು. ೨೩೦), ಅಲಹಾಬಾದಿನಲ್ಲಿ ಪ್ರಕಟವಾಗುವ ‘ಸರಸ್ವತೀ’ ಎಂಬ ಹಿಂದೀ ಮಾಸಪತ್ರಿಕೆಯ ಜೂಲೈ (1927) ತಿಂಗಳ ಸಂಚಿಕೆ (ಪು. ೭೮೩) ಯಿಂದಲೂ

* ಈತನನ್ನು ಜಿನಸೇನನ ಗುರುವಾದ ‘ವೀರಸೇನ’ನೆಂದು ‘ಪ್ರತಿಷ್ಠಾತಿಲಕ’ದಲ್ಲಿ ಭಾವಿಸಿದೆಯೆಂದು ‘ಕವಿರಾಜಮಾರ್ಗ’ದ ಉಪೋದ್ಘಾತ (ಪು. ೧) ದಲ್ಲಿ ಉದ್ಧೃತವಾದ ಶ್ಲೋಕಗಳಿಂದ ತೋರುತ್ತದೆ; ಆದರೆ ಇದು ಸರಿಯಲ್ಲ, ಏಕೆಂದರೆ—(೧) ಆ ವೀರಸೇನನ ಶಿಷ್ಯನಾದ ಜಿನಸೇನನ ಯಾವುದೊಂದು ಗ್ರಂಥದಲ್ಲಾಗಲಿ, ಪುನ್ನಾಟಗಣದ ವೀರಸೇನನ ‘ಹರಿವಂಶ’ದಲ್ಲಾಗಲಿ, ಇಂದ್ರನಂದಿಯ ‘ಶ್ರುತಾವತಾರ’ದಲ್ಲಾಗಲಿ, ವೀರಸೇನನನ್ನು ಕುರಿತು— ‘ಕವಿವೃಂದಾರಕೋ ಮುನಿಃ,’ ‘ಸಿದ್ಧಾಂತೋಪನಿಬಂಧಾನಾಂ ವಿಧಾತುಃ,’ ‘ಕವೀನಾಂ ಚಕ್ರವರ್ತಿನಃ’ ಎಂಬಿತ್ಯಾದಿಯಾಗಿ ಹೇಳಿದೆಯಲ್ಲದೆ, ಆತನು ಗಣಕನೆಂದಾಗಲಿ, ಗಣಿತ ಗ್ರಂಥಗಳನ್ನು ರಚಿಸಿರುವನೆಂದಾಗಲಿ ಹೇಳಿಲ್ಲ; (೨) ನೃಪತುಂಗನು ಪಟ್ಟವೇರುವ ಮುಂಚೆಯೇ ಆ ವೀರಸೇನನು ಮೋಕ್ಷಕ್ಕೆ ಸಂದಿರಬೇಕೆಂಬುದೇ ಬಲವತ್ತರವೆಂದು ಕಾಣುತ್ತದೆ; (೩) ಈ ‘ಗಣಿತಸಾರ ಸಂಗ್ರಹ’ದ ಮೊತ್ತ ಮೊದಲ ಪದ್ಯದಲ್ಲಿ ಕವಿಯು ತನ್ನ ಆರಾಧ್ಯ ತೀರ್ಥಂಕರನನ್ನು ‘ಮಹಾವೀರ’ ಎಂಬ ಹೆಸರಿಂದಲೇ ಸ್ತುತಿಸಿರುವುದರಿಂದ, ಆ ಕವಿಯ ಹೆಸರಾದರೂ ಮಹಾವೀರ ಎಂದೇ ಇರಬೇಕೆಂದು ಹೇಳಬಹುದು; ಅಥವಾ ‘ವೀರ’ ಎಂದು ಆತನ ಹೆಸರಾಗಿದ್ದರೆ, ಆತನು ತನ್ನ ಹೆಸರ ಶ್ಲೇಷೆಯಿಂದ ತನ್ನ ತೀರ್ಥಂಕರನನ್ನೂ ‘ವೀರ’ ಎಂಬುದಾಗಿಯೇ ಸ್ತುತಿಸುತ್ತಿದ್ದನು. (ಮಹಾವೀರಸ್ವಾಮಿಗೆ ‘ವೀರ’ ಎಂದೂ ಹೆಸರಿದೆ ....“..... ಸನ್ಮತಿರ್ಮಹತಿಃ ಪಾರ್ಶ್ವೋರ್ವೀ ವೀರಃ .....”—ಹೇಮಚಂದ್ರನ ‘ಅಭಿಧಾನ ಚಿಂತಾಮಣಿಃ’ ಶ್ಲೋ. ೨೯); (೪) ಹಸ್ತಿಮಲ್ಲನ (ಕ್ರಿ. ಶ. ಸು. 1290) ‘ವಿಕ್ರಾಂತ ಕೌರವ’ ನಾಟಕದ ಕೊನೆಯಲ್ಲಿಯ ಪ್ರಶಸ್ತಿಯಿಂದ ಈ ಉಪೋದ್ಘಾತದಲ್ಲಿ ಎತ್ತಿಕೊಟ್ಟಿರುವ ಶ್ಲೋಕಗಳಲ್ಲಿಯೂ ‘ಶ್ರೀ ವೀರಸೇನೋ ಜನಿ ತಾರ್ಕಿಕ ಶ್ರೀಃ’ ಎಂಬಿದೆ; ಆದರೆ ಈ ಉಪೋದ್ಘಾತದಲ್ಲಿಯ ಉದ್ಧಾರದಲ್ಲಿ ತೋರುವ ‘ಅಸೀದಷ್ಟಾಂಗರೂಪೇಣ ಗಣಿತೇನ ಪ್ರಮಾಣಿತಮ್’ ಎಂಬ ಪಂಕ್ತಿಯು ಆ ‘ವಿಕ್ರಾಂತ ಕೌರವ’ದ ಅಚ್ಚಾದ ಪ್ರತಿಯಲ್ಲಿಯ (‘ಮಾಣಿಕಚಂದದಿಗಂಬರ ಜೈನ ಗ್ರಂಥಮಾಲಾ’—ನಂ. ೩. ಪು. ೧೬೩) ಪ್ರಶಸ್ತಿಯಲ್ಲಿ ಇಲ್ಲವೆಂಬುದರಿಂದ, ಅದು ಪ್ರಕ್ಷಿಪ್ತವಾಗಿರಬೇಕೆಂದು ಕಾಣುತ್ತದೆ.

ತಿಳಿಯುತ್ತದೆ. ಈತನು 'ವರಾಹಮಿಹಿರಾಚಾರ್ಯ' (ಕ್ರಿ. ಶ. ಸು. 505)*ನ ಮತ್ತು ಆತನ ಜ್ಯೋತಿಷ ಗ್ರಂಥಗಳ ವ್ಯಾಖ್ಯಾತೃವಾದ 'ಭಟ್ಟೋತ್ಪಲ' (ಕ್ರಿ. ಶ. 967)ನ ಕಾಲಗಳ ನಡುವೆ ಇದ್ದಿರಬೇಕೆಂದು ಶ್ರೀ ರಂಗಾಚಾರ್ಯರು ಹೇಳುವರು (ಪು. 6); ಆದರೆ ಯಾವ ಆಧಾರಗಳ ಮೇಲೆ ಹೀಗೆ ನಿರ್ಣಯಿಸಿದೆ ಎಂಬುದನ್ನೇನೂ ಅವರು ಹೇಳಿಲ್ಲವೆಂಬುದು ಕೊರತೆಯೆನಿಸುವುದು. ಇದು ಗಣಿತ ಗ್ರಂಥವಾದುದು, ಇದರ ಕರ್ತೃವು ಸ್ವಯಂ ಗಣಕನಾಗಿದ್ದರೂ, ಇದನ್ನು ತಾನು ರಚಿಸಿದ ಕಾಲವನ್ನು ಆತನು ಇದರಲ್ಲಿ ಹೇಳಿಲ್ಲವೆಂಬುದೂ ಸೋಜಿಗವೇ.

ಈ 'ಗಣಿತಸಾರ ಸಂಗ್ರಹ'ದ ಅವತಾರಿಕೆಯಲ್ಲಿಯ ಪ್ರಶಸ್ತಿಯಿಂದ ಶ್ರೀ ರಂಗಾಚಾರ್ಯರು ತಮ್ಮ ಉಪೋದ್ಘಾತ (ಪು. 7)ದಲ್ಲಿ ಉದ್ಧರಿಸಿರುವ ೮ ಶ್ಲೋಕಗಳಿಂದ ಸಮ್ರಾಟ್ ಲೋಕಕ್ಕೆ ಅನ್ವಯಿಸುವಷ್ಟು ಅಂಶವನ್ನು ಇಲ್ಲಿ ಕೊಡುವೆನು:—

ಅಲಂಘ್ಯಂ ತ್ರಿಜಗತ್ಸಾರಂ ಯಸ್ಯಾನಂತಚತುಷ್ಟಯಮ್ |
ನಮಸ್ತಸ್ಮೈ ಜಿನೇಂದ್ರಾಯ ಮಹಾವೀರಾಯ ತಾಯಿನೇ ‖ ೧ ‖
ಶ್ರೀಮದಾಮೋಘವರ್ಷೇಣ ಯೇನ ಸ್ವೇಷ್ಟಹಿತೈಷಿಣಾ ‖ ೩ ‖
ವಿಧ್ವಸ್ತೈಕಾಂತಪಕ್ಷಸ್ಯ ಸ್ಯಾದ್ವಾದನ್ಯಾಯವಾದಿನಃ |
ದೇವಸ್ಯ ನೃಪತುಂಗಸ್ಯ ವರ್ಧತಾಂ ತಸ್ಯ ಶಾಸನಮ್ ‖ ೮ ‖

ಇದರಲ್ಲಿ 'ವರ್ಧತಾಂ' (=ವರ್ಧಿಸಲಿ) ಎಂಬ ವರ್ತಮಾನಕಾಲಾರ್ಥವುಳ್ಳ ವಿಧ್ಯಾತ್ಮಕರೂಪವನ್ನು ಪ್ರಯೋಗಿಸಿರುವುದರಿಂದ, ಈ ಗ್ರಂಥವು ಬಹುಶಃ ಅಮೋಘವರ್ಷ—ನೃಪತುಂಗನೆಂಬ ಹೆಸರಿನೊಬ್ಬ ಅರಸನ ಆಳಿಕೆಯ ಕಾಲದಲ್ಲಿ ರಚಿಸಲ್ಪಟ್ಟಿರಬೇಕೆಂದು ಊಹಿಸಬಹುದು. ಆದರೆ ರಾಷ್ಟ್ರಕೂಟ ವಂಶದ ಉಭಯ ಶಾಖೆಯ ಅರಸರಲ್ಲಿ 'ಅಮೋಘವರ್ಷ—ನೃಪತುಂಗ' ಎಂಬ ಬಿರುದುಗಳುಳ್ಳ ಹಲವರಿದ್ದರೆಂಬುದರಿಂದ, ಈ ಅವತಾರಿಕೆಯಲ್ಲಿ ಹೆಸರಿಸಲ್ಪಟ್ಟಿರುವಾತನು ಸಮ್ರಾಟ್ ಲೋಕ ನಾಯಕನಾದ ನೃಪತುಂಗನೇ ಎಂದು ಹೇಗೆ ತಾನೆ ನಂಬಬಹುದು? ಈ ಆಚಾರ್ಯನು ತನ್ನ ಗ್ರಂಥವನ್ನು ಬರೆದ ಕಾಲವನ್ನಾಗಲಿ, ಸ್ಥಾನವನ್ನಾಗಲಿ, ತಾನು ಹೆಸರಿಸಿರುವ ಅರಸನ ಪೀಳಿಗೆಯ(ಅಥವಾ ತಂದೆಯ ಹೆಸರ)ನ್ನಾಗಲಿ ಹೇಳಿಲ್ಲವಾದುದರಿಂದ, ಈತನ ನೃಪತುಂಗನು ನಮ್ಮ ನೃಪತುಂಗನೇ ಆಗಿರಬೇಕೆಂದು ಶ್ರೀ ರಂಗಾಚಾರ್ಯರು ನಂಬಿರುವುದು ಸರಿಯೆಂದು ಒಪ್ಪಲಾಗುವುದಿಲ್ಲ.

ಅಥವಾ ಈ ಆಚಾರ್ಯನ ನೃಪತುಂಗನು ಸಮ್ರಾಟ್ ಲೋಕವಿದ ನೃಪತುಂಗನೇ ಎಂದು ನಿಶ್ಚಯವಾಗಿಯಾದರೂ ಒಪ್ಪಿಕೊಂಡು ವಿಚಾರಿಸೋಣ. ಈಗ ಈ ಕಾವ್ಯದಲ್ಲಿಯ 'ವಿಧ್ವಸ್ತ' ಎಂಬ ಶಬ್ದವೇನೂ ಚಿಕ್ಕ ಮಾತಲ್ಲವು.—'ವಿಧ್ವಸ್ತೈ

* ವರಾಹಮಿಹಿರನ ಮತ್ತು ಭಟ್ಟೋತ್ಪಲನ ಕಾಲಗಳನ್ನು ಶ್ರೀ ಮಹಾಮಹೋಪಾಧ್ಯಾಯ ಸುಧಾಕರ ದ್ವಿವೇದಿಯವರ 'ಗಣಕ ತರಂಗಿಣೀ' ಎಂಬ ಸಂಸ್ಕೃತ ಗ್ರಂಥದ ಆಧಾರವಿಂದ ಹೇಳಿದೆ; ಆ ಗ್ರಂಥದಲ್ಲಿ ಈ ಮಹಾವೀರಾಚಾರ್ಯ(ಅಥವಾ ಮಹಾವೀರಾಚಾರ್ಯ)ನ ಉಲ್ಲೇಖವಾದರೂ ಇಲ್ಲ.

ಕಾಂತ ಪಕ್ಷ' ಎಂದರೆ, 'ಏಕಾಂತಪಕ್ಷ'ವನ್ನು ನಿರ್ಮೂಲಿಸಿದವನೆಂದು ಅರ್ಥವು, ಮತ್ತು 'ಏಕಾಂತ ಪಕ್ಷ'ವೆಂದರೆ ಭಾಗವತ ವೈಷ್ಣವ ಧರ್ಮವು.* ಆದರೆ ನಮ್ಮ ನೃಪತುಂಗನ ಯಾವುದೊಂದು ಶಾಸನದಿಂದಾದರೂ, ಆತನನ್ನು ಕುರಿತು ಆತನ ಸಮಕಾಲೀನರಾರಾದರೂ ಬರೆದಿರುವ ಲೇಖಗಳಿಂದಾದರೂ, ಆತನನ್ನು ಕುರಿತು ಜಿನಸೇನ, ಗುಣಭದ್ರಾದಿಗಳು ಹೇಳಿರುವ ಮಾತುಗಳಿಂದಾದರೂ, ಹಾಗೆಯೇ ಆತನನ್ನು ಕುರಿತು ಇದುವರೆಗೆ ಉಪಲಬ್ಧವಾಗಿರುವ ಇತಿಹಾಸದಿಂದಾದರೂ, ಮೊಗಲ್ ಬಾದಶಹನಾದ ಔರಂಗಜೇಬನು ಹಿಂದೂ ಧರ್ಮವನ್ನೂ ಹಿಂದೂ ದೇವಾಲಯಗಳನ್ನೂ (ಹಾಗೆಯೇ ತಾನು 'ಸುನ್ನೀ' ಮಹಮ್ಮದೀಯನಾಗಿದ್ದುದರಿಂದ 'ಶೀಯಾ' ಮಹಮ್ಮದೀಯರ ಧರ್ಮ ಮಂದಿರಗಳನ್ನೂ) ವಿಧ್ವಂಸ ಮಾಡಿದಂತೆ, ಈ ನೃಪತುಂಗನೇನಾದರೂ ಮಾಡಿದುದಾಗಲಿ, ಮಾಡಿಸಿದುದಾಗಲಿ, ಮಾಡಲು ಯತ್ನಿಸಿದುದಾಗಲಿ ತಿಳಿವಳಿಕೆಗೆ ಬಂದುದುಂಟೇ? ತನ್ನ 'ಕವಿರಾಜಮಾರ್ಗ' ಕಾವ್ಯದಲ್ಲಿ ಕೂಡ ಯಾವ ಬಗೆಯ ಸಮಯವಿರುದ್ಧವನ್ನಾದರೂ ಮಾಡಲಾಗದೆಂದು (I. ೧೦೪) ಮುಕ್ತಕಂಠವಾಗಿ ಸಾರಿರುವ ಈತನು ಧರ್ಮ ವಿಧ್ವಂಸನದ ಕಾರ್ಯಕ್ಕೆ ಕೈಯಿಕ್ಕುವನೆಂದು ನಂಬಲಾದರೂ ಶಕ್ಯವೇ? ಆದುದರಿಂದ ನಮ್ಮ ನೃಪತುಂಗನು ಏಕಾಂತಪಕ್ಷವನ್ನು ನಿರ್ಮೂಲಿಸಿದನೆಂದು ಈ ಆಚಾರ್ಯನು ಹೇಳಿರುವುದನ್ನು ಹೇಗೆ ತಾನೆ ನಂಬಬಹುದು? ಇತಿಹಾಸವನ್ನು ಮೂಲೆಗೊತ್ತಿ, ಈತನು ಹೀಗೆ ಹೇಳಿರುವನೆಂಬುದರಿಂದಲೇ ಈತನ ಮಾತನ್ನು ನಂಬಬಹುದೇ? ಹಾಗೆ ನಂಬಲಾಗದೆಂದಾದರೆ, ಈ ನೃಪತುಂಗನು 'ಸ್ಯಾದ್ವಾದ ನ್ಯಾಯವಾದಿ', ಎಂದರೆ ಜೈನ ಮತೀಯನು ಎಂದು, ಅದರ ಹಿಂದೆಯೇ ಈತನು ಹೇಳಿರುವುದನ್ನು ಮಾತ್ರ ನಂಬಬಹುದೇ?

ಅಥವಾ, ಈ ಆಚಾರ್ಯನ ಅರ್ಥವು ಹಾಗಲ್ಲ—ಎಂದರೆ ನೃಪತುಂಗನು ಏಕಾಂತಪಕ್ಷವನ್ನೇ ಆಗಲಿ, ಆ ಏಕಾಂತಪಕ್ಷ ಸಂಬಂಧಿಯಾದ ಧರ್ಮಮಂದಿರ

---

* 'ಏಕಾಂತ ಪಕ್ಷ' ಅಥವಾ 'ಏಕಾಂತ ಧರ್ಮ'ವೆಂದರೆ 'ಮಹಾಭಾರತ'ದ 'ಶಾಂತಿಪರ್ವ' (ಮೋಕ್ಷ ಧರ್ಮ)ದಲ್ಲಿಯ 'ನಾರಾಯಣೀಯೋಪಾಖ್ಯಾನ'ದಲ್ಲಿಯೂ, 'ಶ್ರೀಮದ್ಭಗವದ್ಗೀತೆ'ಯಲ್ಲಿಯೂ ಹೇಳಲ್ಪಟ್ಟಿರುವ ಅಹಿಂಸಾಪ್ರಧಾನವಾದ ಭಾಗವತ ವೈಷ್ಣವ ಧರ್ಮವು; ಇದಕ್ಕೆ 'ಪಾಂಚರಾತ್ರ' ಎಂದೂ ಹೆಸರುಂಟು. (*Vide* Bhandarkar's "*Vaishnavism, Saivism* and other minor religious systems"—Strassburg.) ಇದನ್ನು ಕುರಿತು 'ಗರುಡಪುರಾಣ'ದಲ್ಲಿ (ಅಧ್ಯಾಯ ೧೩೧) ಹೀಗಿದೆ:—

ಏಕಾಂತೇನಾಸಮೋ ವಿಷ್ಣುರ್ಯಸ್ಮಾದೇಷಾಂ ಪರಾಯಣಃ |
ತಸ್ಮಾದೇಕಾಂತಿನಃ ಪ್ರೋಕ್ತಾಸ್ತದ್ಭಾಗವತಚೇತಸಃ ||
ಪ್ರಿಯಾಣಾಮಪಿ ಸರ್ವೇಷಾಂ ದೇವದೇವಸ್ಯ ಸ ಪ್ರಿಯಃ |
ಆಪತ್ಸ್ವಪಿ ಸದಾ ಯಸ್ಯ ಭಕ್ತಿರವ್ಯಭಿಚಾರಿಣೀ ||

ಜೈನ ಧರ್ಮಕ್ಕೆ 'ಅನೇಕಾಂತ' ಎಂಬ ಹೆಸರೆಂಬುದನ್ನು ಮರೆಯಲಾಗದು; ಹಾಗೆಯೇ ಜೈನ ಮತಕ್ಕೆ 'ಸ್ಯಾದ್ವಾದ ಮತ' ಎಂದೂ ಹೆಸರುಂಟು.

ಗಳನ್ನಾಗಲಿ, ಏಕಾಂತ ಪಕ್ಷೀಯರನ್ನಾಗಲಿ ವಿಧ್ವಂಸಿಸಿದನೆಂದಲ್ಲ; ಆದರೆ ತನಗೆ ಅದುವರೆಗೆ ಆ ಏಕಾಂತ ಪಕ್ಷದಲ್ಲಿದ್ದ ವಿಶ್ವಾಸ, ಶ್ರದ್ಧೆಗಳನ್ನು ನಿರ್ಮೂಲಿಸಿ, ತನಗೆ ಅದರಲ್ಲಿದ್ದ ಭಕ್ತಿಯನ್ನು ತನ್ನ ಅಂತರ್ಯದಿಂದ ಕಳಚಿಬಿಟ್ಟು ಎಂದರೆ, ಒಂದೇ ಮಾತಿನಲ್ಲಿ, ಅದುವರೆಗೆ ಸ್ವಧರ್ಮವಾಗಿದ್ದ ಏಕಾಂತ ಧರ್ಮವನ್ನು ತ್ಯಜಿಸಿ, ಧರ್ಮಾಂತರವನ್ನು ಹೊಂದಿ, ತಾನು 'ಸ್ಯಾದ್ವಾದ ನ್ಯಾಯವಾದಿ' ಎಂದರೆ ಜೈನನಾದನೆಂದು. ಈ ಆಚಾರ್ಯನ ಮಾತುಗಳ ಅರ್ಥವೆಂದು ಇಟ್ಟುಕೊಂಡು ವಿಚಾರಿಸಿ ನೋಡೋಣ.

ಈ ನೃಪತುಂಗನು ಜಿನಸೇನನಿಂದ ತಾನೆ ಜೈನದೀಕ್ಷೆ ಪಡೆದು ಮತಾಂತರಿಸಿದನೆಂದಾದರೆ, ಅದು ಜಿನಸೇನನ ಮರಣಕ್ಕೆ ಮುಂಚೆಯೇ ಆಗಿದ್ದಿರಬೇಕೆಂಬುದರಿಂದ ನಮ್ಮ ಊಹೆಯಂತೆ ಕ್ರಿ. ಶ. 848ರ ಹಿಂದೆಯಲ್ಲದೆ, ಆ ಬಳಿಕ ಆಗಿರಲಾರದಷ್ಟೆ. ಆದರೆ ಈತನ ಆಳಿಕೆಯ ೫೨ನೆಯ ವರ್ಷದ (ಕ್ರಿ. ಶ. 866) ಈ ಮುಂಚೆ ಕೊಟ್ಟಿರುವ ಶಾಸನದ ಶಿರೋಲೇಖದಿಂದ ಈತನು ಹರಿಹರಭಕ್ತನೆಂದು* ತೋರುತ್ತದಲ್ಲದೆ, ಜೈನನೆಂದೇನೂ ತೋರುವುದಿಲ್ಲ; ಹಾಗೆಯೇ ಅದೇ ಶಾಸನದಲ್ಲಿಯ 'ಗರುಡಲಾಂಛನಂ,' 'ಕೀರ್ತಿನಾರಾಯಣೋ,' 'ಮಹಾವಿಷ್ಣುವ ರಾಜ್ಯಂಬೊಲ್' ಮುಂತಾದುವುಗಳಿಂದ ಈತನು ವೈಷ್ಣವನಾಗಿರಬೇಕೆಂದೂ ಸ್ಪಷ್ಟವಾಗಿ ಕಾಣುತ್ತದೆ. ಈತನ ಆಳಿಕೆಯ ೬೩ನೆಯ ವರ್ಷದ (ಎಂದರೆ ಕ್ರಿ. ಶ. 877ನೆಯ ಇಸವಿಯ) ಸೊರಬ ನಂ. 85, (*E.* C., Vol. VIII., Pt. II)ನೆಯ ಶಾಸನದಿಂದಾದರೂ ಈತನು ಜೈನನಾಗಿದ್ದನೆಂದೇನೂ ತೋರುವುದಿಲ್ಲ. ಆದರೆ ಕ್ರಿ. ಶ. 877ರ ಬಳಿಕ ನೃಪತುಂಗನು ಜೈನ ಮತೀಯನಾಗಬಾರದೇಕೆ? ಎಂದು ಆಕ್ಷೇಪಿಸಬಹುದು. ಹಾಗಾಗಲೂ ಬಹುದು, ಹಾಗಾಗದಿರಲೂ ಬಹುದು; ಏಕೆಂದರೆ, ಕ್ರಿ. ಶ. 877ರಲ್ಲಿ ನೃಪತುಂಗನು ದೇಹಾವಸಾನವನ್ನು ಹೊಂದಿದನೋ, ಅಥವಾ ತನ್ನ ರಾಜ್ಯಭಾರದಿಂದ ನಿವೃತ್ತನಾಗಿ ವಾನಪ್ರಸ್ಥನೆಂಬಂತಾದನೋ ಎಂಬುದು ಇನ್ನೂ ನಿಷ್ಕೃಷ್ಟವಾಗಿರದ ವಿಷಯವು, ಮತ್ತಿದನ್ನು ಇತಿಹಾಸವು ಹೇಗೆಂದು ನಿಷ್ಕರ್ಷಿಸುವವರೆಗೆ, ಅದು ಹೀಗೆಯೇ ಆಗಿರಬೇಕೆಂದು ಹೇಳುವುದು ನೀತಿಯಲ್ಲ. ಅದು ಹೇಗೂ ಇರಲಿ; ನಮ್ಮ ಆಚಾರ್ಯನ ಹೇಳಿಕೆಯನ್ನು ವಿಚಾರಿಸುವುದಕ್ಕೆ ಅದರಿಂದೇನೂ ಬಾಧಕವಿಲ್ಲ; ಏಕೆಂದರೆ, 'ದೇವಸ್ಯ ನೃಪತುಂಗಸ್ಯ ವರ್ಧತಾಂ ತಸ್ಯ ಶಾಸನಮ್' ಎಂದು ಈತನು ಹೇಳುವುದರಿಂದ, ಆ ನೃಪತುಂಗನು ಆಗ್ಗೆ ಪಟ್ಟದಲ್ಲಿದ್ದು ಆಳುತ್ತಿದ್ದವನೇ ಅಲ್ಲದೆ, ರಾಜ್ಯಭಾರದಿಂದ

* ಭಾಗವತ ವೈಷ್ಣವ ಧರ್ಮದಲ್ಲಿ ಹರಿಹರರಲ್ಲಿ ಭೇದವಿಲ್ಲವೆಂಬುದನ್ನು 'ಶಾಂತಿಪರ್ವ'ದ ಆದಿ 'ನಾರಾಯಣೀಯೋಪಾಖ್ಯಾನ' (ಅಧ್ಯಾಯ ೧೮೦)ದಲ್ಲಿ ಹೇಳಿದೆ. "ಯಾರು ಶಂಕರನನ್ನು ಪೂಜಿಸದೆ ನನ್ನನ್ನು ಪೂಜಿಸುವರೋ ಅವರು ಕೆಟ್ಟುಹೋಗುವರು. ಅವರು ನನ್ನ ನಿಗ್ರಹಕ್ಕೆ ಪಾತ್ರರು. ನಮ್ಮಿಬ್ಬರಿಗೂ ಭೇದವಿಲ್ಲ" ('ಶ್ರೀ ಕೃಷ್ಣರಾಜ ವಾಣೀವಿಲಾಸ' ಎಂಬ ಮಹಾಭಾರತದ ಕನ್ನಡ ಟೀಕು; 'ಶಾಂತಿಪರ್ವ'ದಲ್ಲಿ 'ಮೋಕ್ಷಧರ್ಮ', ಪು. ೨೬೮.)

ನಿವೃತ್ತನಾದ (ಎಂದರೆ ಆ ಮುಂಚೆ ಆಳಿದ) ಅರಸನೆಂದು ಆಗುವುದಿಲ್ಲ; ಆದರೆ ಕ್ರಿ. ಶ. 877ರವರೆಗೆ ನೃಪತುಂಗನು ಜೈನನಾಗಿದ್ದಿರಲಾರನೆಂದು ನಾವು ಕಂಡಿರುವೆವಷ್ಟೆ.

ಜಿನಸೇನಾಚಾರ್ಯನು ಆಗಿನ ಕಾಲದ ಜೈನಮತಾಗ್ರಣಿಯಾಗಿರಬೇಕೆಂಬುದನ್ನು ಬೇರೆ ಹೇಳಬೇಕೆಂಬಿಲ್ಲ; ಹಾಗೆಯೇ ನಮ್ಮ ನೃಪತುಂಗನು ಆತನನ್ನು ಒಂದು ಬಾರಿ (ಅಥವಾ ಒಂದೇ ಬಾರಿ)ಯಾದರೂ ವಂದಿಸಿದನೆಂಬುದರಿಂದ, ಈ ಅರಸನಿಗೆ ಆತನಲ್ಲಿ ಗೌರವವಿದ್ದಿರಬೇಕೆಂಬುದನ್ನು ಒಪ್ಪಲೇ ಬೇಕು. ಹೀಗಿರುವಲ್ಲಿ ಈ 'ಗಣಿತಸಾರ ಸಂಗ್ರಹ'ದಲ್ಲಿ ಆ ಜಿನಸೇನನ ಹೆಸರಾದರೂ ಇಲ್ಲವೇಕೆ? ನೃಪತುಂಗನು ಜನ್ಮತಃ ಜೈನ ಮತೀಯನಲ್ಲವೆಂಬುದನ್ನು ಎಲ್ಲರೂ ಬಲ್ಲರಷ್ಟೆ; ಆದುದರಿಂದ ಆತನು ಜೈನನಾದನೆಂದಾದರೆ, ಯಾವನೊಬ್ಬ ಜೈನಾಚಾರ್ಯನ ಉಪದೇಶದಿಂದಲೇ ಆಗಿರಬೇಕು, ಮತ್ತು ಈ ವಿಷಯದಲ್ಲಿ ಆತನ ಉಪದೇಶಿಯು ಜಿನಸೇನಾಚಾರ್ಯನೆಂದು ನಂಬುವರಷ್ಟೆ. ಆದರೆ ಆ ಜಿನಸೇನನಿಂದ ಈ ನೃಪತುಂಗನು ಜೈನ ಮತೀಯನಾದನೆಂದೇನೂ ಈ 'ಗಣಿತಸಾರ ಸಂಗ್ರಹ'ದಲ್ಲಿ ಹೇಳಿಲ್ಲ; ಅಥವಾ ಜಿನಸೇನನಿಂದ ಅನ್ಯರು ಯಾರಾದರೂ ಜೈನಾಚಾರ್ಯನಿಂದ ನೃಪತುಂಗನು ಜೈನನಾದನೆಂದಾದರೂ ಹೇಳಿಲ್ಲ; ಏಕೆಂದರೆ, ಜನ್ಮತಃ ಜೈನನಾಗಿರದ ಅರಸನನ್ನು ಜೈನ ಧರ್ಮೀಯನೆಂದು ಹೊಗಳುವ ಈ ಪ್ರಶಸ್ತಿಯ ಹಲಪದ್ಯಗಳಲ್ಲಿ, ಆತನು ಯಾರ ಉಪದೇಶದಿಂದ ಜೈನ ಮತವನ್ನು ಅವಲಂಬಿಸಿದನೆಂದು ಒಂದೆರಡು ಮಾತುಗಳಿಂದಾದರೂ ಹೇಳುವುದು ಆ ಗ್ರಂಥಕರ್ತನ ಕರ್ತವ್ಯವಿತ್ತೆಂದು ನನಗೆ ತೋರುತ್ತದೆ.

ಆದುದರಿಂದ ಈ ಗಣಿತ ಗ್ರಂಥದ ಪ್ರಶಸ್ತಿಯಲ್ಲಿಯ ಹೇಳಿಕೆಯು ಆ ಆಚಾರ್ಯನು ತಾನು ಸ್ವತಃ ಅರಿತಿರುವ ಸತ್ಯವಲ್ಲವೆಂದೂ, ಕರ್ಣಪರಂಪರೆಯಿಂದ ಕೇಳಿದ ಸುದ್ದಿಯಿಂದ ತಾನೇ ಬಣ್ಣಿಸಿದ ಅತಿಶಯೋಕ್ತಿಯೆಂದೂ ಆಗುತ್ತದಲ್ಲದೆ, ಇದು ಐತಿಹಾಸಿಕ ದೃಷ್ಟಿಯಿಂದ ಬೆಲೆ ಬಾಳುವುದನ್ನು ನಂಬಲಾಗುವುದಿಲ್ಲ. 'ಪಾರ್ಶ್ವಾಭ್ಯುದಯ'ದ ಟೀಕಾಕಾರನು ಆ ಕಾವ್ಯದಲ್ಲಿಯ 'ಭುವನಮವತು ದೇವಃ ಸರ್ವದಾಮೋಘವರ್ಷಃ' ಎಂಬಷ್ಟೇ ಒಂದು ಆಶೀರ್ವಚನದಿಂದ (ಬಹುಶಃ ತಾನು ಕೇಳಿರುವ ಜನಶ್ರುತಿಯನ್ನಾಧರಿಸಿ) ದೊಡ್ಡದೊಂದು ಕಥೆಯ ತಂತುಜಾಲವನ್ನು ನೂತಂತೆ, ಈ ಆಚಾರ್ಯನಾದರೂ ಜಿನಸೇನನನ್ನು ನೃಪತುಂಗನು ಮನ್ನಿಸಿದನು (ಅಥವಾ ಮನ್ನಿಸುತ್ತಿದ್ದನು), ಎಂಬಷ್ಟೇ ಸಂಗತಿಯಿಂದ ಇಂತಹ ಅತಿಶಯೋಕ್ತಿಯನ್ನು ತನ್ನ ಗ್ರಂಥ ಪ್ರಶಸ್ತಿಯಲ್ಲಿ ಸೇರಿಸಿರಬೇಕೆಂದೇ ನನಗೆ ತೋರುತ್ತದೆ. ಆದರೆ ಯೋಗಿರಾಟ್ ಪಂಡಿತಾಚಾರ್ಯನಂತೆ ಈತನೇನೂ ಜಿನಸೇನ, ನೃಪತುಂಗರಿಗಿಂತ 550–600 ವರ್ಷಗಳ ಈಚೆಯವನಲ್ಲ; (ಬಹುಶಃ) ಅವರ ಸಮಕಾಲೀನನಷ್ಟೆ, ಎಂದು ಲಕ್ಷ್ಯಿಸಿದರೆ, ಜಿನಸೇನನೂ ಆ ಜಿನಸೇನನ ಖಾಸಾ ಶಿಷ್ಯನಾದ ಮತ್ತು ಅಮೋಘವರ್ಷ-ನೃಪತುಂಗನ ಆಳಿಕೆಯಲ್ಲಿಯೂ, ಆತನ ಕಾಲಾನಂತರ ಆತನ ಮಗನಾದ

ಅಕಾಲವರ್ಷನ ಆಳಿಕೆಯಲ್ಲಿಯೂ ಇದ್ದ ಗುಣಭದ್ರನೂ ಕೂಡ ಹೇಳದಿರುವ ಮಾತನ್ನು ಈ (ಮಹಾ) ವೀರಾಚಾರ್ಯನು ಹೇಳುವನೆಂದರೆ, ಅದನ್ನು ಹೇಗೆ ತಾನೆ ಐತಿಹಾಸಿಕ ತಥ್ಯವೆಂದು ನಂಬಬಹುದು?

ಈ ಆಚಾರ್ಯನಿಂದ ಹೇಳಲ್ಪಟ್ಟಿರುವ ನೃಪತುಂಗನು ನಮ್ಮ ನೃಪತುಂಗನೆಂದಾದರೆ, ಆತನ ಹೇಳಿಕೆಯಿಂದ ನೃಪತುಂಗನ ಅಜಸ್ರವಾದ ಸ್ವಧರ್ಮವು 'ಏಕಾಂತ ಪಕ್ಷ' ಎಂದರೆ ಭಾಗವತ ವೈಷ್ಣವ ಧರ್ಮವೆಂಬುದು ಸ್ಪಷ್ಟವಾಗುವಂತೆ ಕಾಣುತ್ತದೆ. ನೃಪತುಂಗನ ಈ ಮುಂಚೆ ಕೊಟ್ಟಿರುವ ಶಾಸನದ ಶಿರೋಲೇಖದಿಂದಲೂ ಅದರಲ್ಲಿಯ ಇತರ ಉಲ್ಲೇಖಗಳಿಂದಲೂ, ಹಾಗೆಯೇ 'ಕವಿರಾಜಮಾರ್ಗ'ದ ಅವತಾರಿಕೆಯಲ್ಲಿಯ ವಿಷ್ಣುಸ್ತುತಿಯೇ ಮೊದಲಾದುವುಗಳಿಂದಲೂ ನಮ್ಮ ಅನುಮಾನವು ಸಾಕಾದಷ್ಟು ಪುಷ್ಟಿ ಹೊಂದುತ್ತದೆ.

ಆದರೆ ಈ ಆಚಾರ್ಯನು ಹೆಸರಿಸಿರುವ ಅಮೋಘವರ್ಷ-ನೃಪತುಂಗನು ನಮ್ಮ ಲೇಖನ ನಾಯಕನಾಗಿರದೆ, ರಾಷ್ಟ್ರಕೂಟ ವಂಶದ (ಅಥವಾ ಇತರ ಯಾವ ವಂಶದ) ಬೇರೊಬ್ಬ ಅದೇ ಹೆಸರ ಅರಸನೆಂದಾದರೆ, ಈ ಆಚಾರ್ಯನ ಹೇಳಿಕೆಗೂ ಆ ಅರಸನಿಗೂ ಇರಬಹುದಾದ ಸಂಬಂಧವನ್ನು ತರ್ಕಿಸುವುದು ಈ ಲೇಖದ ಗೊಡವೆಯಲ್ಲವೆಂಬುದರಿಂದ, ಅಲವಾ.

(ಇ) 'ಪ್ರಶ್ನೋತ್ತರ ರತ್ನಮಾಲಿಕಾ'*

ಇದು ನೀತಿಮಾರ್ಗೋಪದೇಶಿಯಾದ ಚಿಕ್ಕದೊಂದು ಸಂಸ್ಕೃತ ಕಾವ್ಯವು. ಮುಂಬಯಿಯ 'ನಿರ್ಣಯಸಾಗರ' ಮುದ್ರಣಾಲಯದಿಂದ ಪ್ರಕಟಿತವಾದ 'ಕಾವ್ಯಮಾಲೆ'ಯ ಸಪ್ತಮ ಗುಚ್ಛಕದಲ್ಲಿ ಇದು ಮುದ್ರಿತವಾಗಿದೆ. ಅದರಲ್ಲಿ ೨೯ ಪದ್ಯಗಳಿವೆ; ಆದರೆ '*Indian Antiquary*' (Vol. XII)ಯಲ್ಲಿ ಈ ಕವಿತೆಯನ್ನು ಕುರಿತು ಪ್ರಸ್ತಾಪಿಸುವಲ್ಲಿ (ಪು. 218), ಇದರಲ್ಲಿ ೩೦ ಪದ್ಯಗಳಿವೆಯೆಂದು ಹೇಳಿದೆ. ಇದನ್ನು ಪ್ರಥಮತಃ ಬೆಳಕಿಗೆ ತಂದವರು ಶ್ರೀಮಾನ್ ಕೆ. ಬಿ. ಪಾಠಕರೆಂದು ಕಾಣುತ್ತದೆ; ಆದರೆ 'ಕವಿರಾಜಮಾರ್ಗ'ದ ಉಪೋದ್ಘಾತದಲ್ಲಿ ಇದನ್ನು ಕುರಿತು ಹೇಳುವಾಗ ಇದರಲ್ಲಿ ಒಟ್ಟು ಇಂತಿಷ್ಟು ಪದ್ಯಗಳಿವೆಯೆಂದು ಅವರಾದರೂ ಹೇಳಿರುವುದಿಲ್ಲ, ಹಾಗೆಯೇ ಅವರಿಗೆ ದೊರೆತ ಪ್ರತಿಯ ಕೊನೆಯಲ್ಲಿಯ ಒಂದೇ ಪದ್ಯವನ್ನಲ್ಲದೆ ಬೇರಾವ ಪದ್ಯವನ್ನಾದರೂ ಉದ್ಧರಿಸಲಿಲ್ಲ. ಆ ಉಪೋದ್ಘಾತದಲ್ಲಿ (ಪು. 9) ಈ ಕವಿತೆಯನ್ನು ಕುರಿತು ಅವರು ಹೀಗೆಂದಿರುವರು:—

"Nripatunga was not only a liberal patron of letters, but he is also known as a Sanskrit author. A few years ago, I dis-

* ಈ ಮೂಲ ಕವಿತೆಯೂ, ಪದ್ಯಗಳ ಇಂಗ್ಲಿಷ್ ಭಾಷಾಂತರ ಸಹಿತ ನನ್ನ ಲೇಖನವು '*Canara High School Magazine*' Mangalore, II ನೆಯ ಸಂಪುಟದ ೧ನೆಯ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ.

covered a small Jaina work entitled '*Prasnottara-ratnamala*', the concluding verse of which owns Amoghavarsha as its author—

ವಿವೇಕಾತ್ತ್ಯಕ್ತರಾಜ್ಯೇನ ರಾಜ್ಞೇಯಂ ರತ್ನಮಾಲಿಕಾ।
ರಚಿತಾಮೋಘವರ್ಷೇಣ ಸುಧಿಯಾ ಸದಲಂಕೃತಿಃ ॥

Several editions of this work have since been published in Bombay. It is variously attributed to Sankaracharya, Sankarananda, and a Svetambara writer Vimala. But the royal authorship of the '*Ratnamala*' is confirmed by a Thibetan translation of it discovered by Schiefner in which the author is represented to have been a king, and his Thibetan name, as re-translated into Sanskrit by the same scholar, is Amoghodaya, which obviously stands for Amoghavarsha. This work was composed between Saka 797–99; in the former year Nripatunga abdicated in favour of his son Akalavarsha."

ಇವರ ಈ ಹೇಳಿಕೆಯು ಸರಿಯಾಗಿರಬಹುದೋ ಎಂದು ವಿಚಾರಿಸುವ ಮುಂಚೆ, ಆ ವಿಚಾರಕ್ಕೆ ಆವಶ್ಯಕವಾಗಿರುವ ಕೆಲ ಪದ್ಯಗಳನ್ನು ಆ ಕವಿತೆಯಿಂದ ಆಯ್ದು ಇಲ್ಲಿ ಉದ್ಧರಿಸಬೇಕಾಗುತ್ತದೆ—

ಪ್ರಣಿಪತ್ಯ ವರ್ಧಮಾನಂ ಪ್ರಶ್ನೋತ್ತರ ರತ್ನಮಾಲಿಕಾಂ ವಕ್ಷ್ಯೇ।
ನಾಗ ನರಾಮರ ವಂದ್ಯಂ ದೇವಂ ದೇವಾಧಿಪಂ ವೀರಮ್ ॥ ೧ ॥
ಕಃ ಖಲು ನಾಲಂಕ್ರಿಯತೇ ದೃಷ್ಟಾದೃಷ್ಟಾರ್ಥ ಸಾಧನ ಪಟೀಯಾನ್।
ಕಂಠಸ್ಥಿತಯಾ ವಿಮಲ ಪ್ರಶ್ನೋತ್ತರ ರತ್ನಮಾಲಿಕಯಾ ॥ ೨ ॥
. . . .
ಇತಿ ಕಂಠಗತಾ ವಿಮಲಾ ಪ್ರಶ್ನೋತ್ತರ ರತ್ನಮಾಲಿಕಾ ಯೇಷಾಮ್।
ತೇ ಮುಕ್ತಾಭರಣಾ ಅಪಿ ವಿಭಾಂತಿ ವಿದ್ವತ್ಸಮಾಜೇಷು ॥ ೨೮ ॥

'ಕಾವ್ಯಮಾಲೆ'(Nirnayasagara Press)ಯ ಸಂಪಾದಕರು ಈ ಕವಿತೆಯನ್ನು ಪ್ರಕಟಿಸುವರೆ ದೊರೆಯಿಸಿಕೊಂಡ 'ಕ' ಮತ್ತು 'ಖ' (ಎಂದು ಅವರು ಅಂಕಿತ ಮಾಡಿರುವ) ಹಸ್ತಪ್ರತಿಗಳಲ್ಲಿಯ* 'ಕ' ಎಂಬುದರಲ್ಲಿ ಈ ಕವಿತೆಯ ಕೊನೆಯ ಪದ್ಯವು ಹೀಗಿದೆ—

ರಚಿತಾ ಸಿತಪಟ ಗುರುಣಾ ವಿಮಲಾ ವಿಮಲೇನ ರತ್ನಮಾಲೇವ।
ಪ್ರಶ್ನೋತ್ತರಮಾಲೇಯಂ ಕಂಠಗತಾ ಕಂ ನ ಭೂಷಯತಿ ॥ ೨೯ ॥

* 'ಕಾವ್ಯಮಾಲಾ'—ಸಪ್ತಮ ಗುಚ್ಛಕ (ಪು. ೧೨೧ ಮತ್ತು ೧೨೩).

ಇದಕ್ಕೆ ಬದಲಾಗಿ 'ಬಿ' ಪ್ರತಿಯಲ್ಲಿಯ ಕೊನೆಯ ಪದ್ಯವು ಹೀಗೆ ಬೇರೆಯಾಗಿದೆ:—

ವಿವೇಕಾತ್ತ್ಯಕ್ತರಾಜ್ಯೇನ ರಾಜ್ಞೀಯಂ ರತ್ನಮಾಲಿಕಾ।
ರಚಿತಾಮೋಘವರ್ಷೇಣ ಸುಧಿಯಾಂ* ಸದಲಂಕೃತಿಃ ॥ ೨೯ ॥

ಈಗ ಈ ಕೃತಿಯು ಶ್ರೀಮಚ್ಛಂಕರಾಚಾರ್ಯರಿಂದಲೂ, ಅವರ ಪರಂಪರೆಯಲ್ಲಿಯ (ಅವರಿಂದ ಈಚೆಯ) ಶಂಕರಾನಂದ ಯತಿಯಿಂದಲೂ ರಚಿತವಾಗಿರಬಹುದೆಂದು ಪ್ರತೀತಿಯಿರುತ್ತದೆಂಬುದರಿಂದ, ಈ ಕೃತಿಯು ಆ ಹಿಂದಣ ಕಾಲದಲ್ಲಿಯ ಹಸ್ತಪ್ರತಿಗಳಲ್ಲಿ (ಕೆಲವಲ್ಲಿಯಾದರೂ) ವರ್ಧಮಾನ ಜಿನಸ್ತುತಿಪರವಾದ ಅವತಾರಿಕೆಯ ಪದ್ಯವಿದ್ದಿರಲಾರದೆಂದೂ, ಹಾಗೆಯೇ ಅವುಗಳಲ್ಲಿ ಇದರ ಕೊನೆಯ ಪದ್ಯವಾದರೂ ('ವಿಮಲ'ನೆಂಬ ಶ್ವೇತಾಂಬರ ಗುರುವಿನ ಹೆಸರ ಪಾಠಾಂತರವಾಗಲಿ, ಅಮೋಘವರ್ಷನ ಹೆಸರ ಪಾಠಾಂತರವಾಗಲಿ) ಇದ್ದಿರಲಾರದೆಂದೂ ಊಹಿಸಬಹುದು. ಹೀಗೆ ಈ ಕವಿತೆಯ ಅವತಾರಿಕೆಯ ಪದ್ಯವೂ ಅಂತಿಮ ಪದ್ಯವೂ (ಯಾವ ಪಾಠಾಂತರದಿಂದಾಗಲಿ), ಈ ಕೃತಿಯ ರಚನಾನಂತರದ ಪ್ರಕ್ಷೇಪಗಳಾಗಿರಬೇಕೆಂದು ವಿತರ್ಕಮಾತ್ರವಾಗಿ ಒಪ್ಪಿಕೊಂಡರೂ, ಶಂಕರಾಚಾರ್ಯರಾಗಲಿ ಶಂಕರಾನಂದನಾಗಲಿ ಇದರ ಕರ್ತೃವಾಗಿರಲಾರರು; ಏಕೆಂದರೆ—

(೧) ಆತ್ಮ–ಪರಮಾತ್ಮರ ಐಕ್ಯತೆಯನ್ನು ಕುರಿತು ಇದರಲ್ಲಿ ಚಕಾರ ಶಬ್ದವಾದರೂ ಇಲ್ಲ; (೨) ಅಥವಾ ನೀತಿಬೋಧನಪರವಾದ ಇಷ್ಟೊಂದು ಚಿಕ್ಕ ಕವಿತೆಯಲ್ಲಿ ಸಿದ್ಧಾಂತವೆಲ್ಲಿಂದ ಬಂದು ಶಂಕೆಯಾಗಬಹುದಾದರೂ, ಇದರಲ್ಲಿ ಬರಿಯ ನೀತಿಯನ್ನಷ್ಟೇ ಬೋಧಿಸಿದೆಯಲ್ಲದೆ, ಧರ್ಮಬೋಧನದ ಗಂಧದ ಗಾಳಿಯಾದರೂ ಇಲ್ಲ; ಆದರೆ ಶಂಕರಾಚಾರ್ಯರ ಚಿಕ್ಕ ಕೃತಿಗಳಾದ 'ದ್ವಾದಶಪಂಜರಿ,' 'ಚರ್ಪಟಪಂಜರಿ'ಗಳಲ್ಲಾದರೂ ನೀತಿ ಮತ್ತು ಧರ್ಮಬೋಧನಗಳ ಜೋಡಣೆಯು ಪ್ರತಿ ಪದ್ಯದಲ್ಲಿ ತುಂಬಿ ತುಳುಕುತ್ತದೆ—ಅರ್ಥಾತ್ ಧರ್ಮ ಮತ್ತು ನೀತಿಯ ಪೃಥಕ್ಕರಣವು ಈ ಆಚಾರ್ಯರ ಕೃತಿಗಳಲ್ಲಿ ಕಾಣಸಿರುವುದನ್ನು ನಂಬಲಾಗುವುದಿಲ್ಲ; (೩) ಹಾಗೆಯೇ ಈ ಕವಿತೆಯಲ್ಲಿ ಭಕ್ತಿಯನ್ನು ಬೋಧಿಸುವ ಮಾತಿಲ್ಲ; ಯಾವ ಧರ್ಮದ ರೀತಿಯಿಂದಾದರೂ ಉಪಾಸನೆಯನ್ನು ಕುರಿತು ನುಡಿಯಿಲ್ಲ. ಇದರಿಂದ ಸ್ವಯಂಪ್ರಭವಾದ ರತ್ನದಂತಿರುವ ಈ ಚಿಕ್ಕ ಕವಿತೆಯ ಸೊಗಸು ಎಳ್ಳಷ್ಟಾದರೂ ಕೆಡದೆಂದಾದರೂ, ಇದು ಶಂಕರಾಚಾರ್ಯರ ಅಥವಾ ಶಂಕರಾನಂದನ ಕೃತಿಯಾಗಿರಬಹುದೆಂದು ಭಾವಿಸಲಾದರೂ ಶಕ್ಯವಿಲ್ಲ; (೪) ಇದರ ಮೊದಲಲ್ಲಾಗಲಿ ಕೊನೆಯಲ್ಲಾಗಲಿ ವಿಷ್ಣು ಅಥವಾ

* ಶ್ರೀಮಾನ್ ಪಾಠಕರು 'ಕವಿರಾಜಮಾರ್ಗ'ದ ಮುನ್ನುಡಿಯಲ್ಲಿ ಈ ಶ್ಲೋಕವನ್ನು ಉದ್ಧರಿಸಿರುವಲ್ಲಿ ಈ ಶಬ್ದವು 'ಸುಧಿಯಾ' ಎಂದಿದೆ; 'ಕಾವ್ಯಮಾಲೆ'ಯಲ್ಲಿ ಪ್ರಕಟಿತವಾದೀ ಕಾವ್ಯದಲ್ಲಿ ಇದು 'ಸುಧಿಯಾಂ' ಎಂದಿದೆ. 'ಸುಧಿಯಾ' ('ಸುಧೀ' ಶಬ್ದದ ತೃತೀಯೈಕವಚನ) ಎಂಬುದಕ್ಕಿಂತ 'ಸುಧಿಯಾಮ್' (ಅದೇ ಶಬ್ದದ ಷಷ್ಠೀವಿಭಕ್ತಿಯ ಬಹುವಚನ) ಎಂಬುದೇ ಸರಿಯೆಂದು ವಾಚಕರಿಗೆ ಮನಗಾಣದಿರದೆಂದು ನಂಬುತ್ತೇನೆ.

ಶಿವನ ಸ್ತುತಿಯಿಲ್ಲ, ಅವರ ಹೆಸರಾದರೂ ಇಲ್ಲ; ಆದರೆ ಈ ಹೆಸರುಗಳ ವಿನಾ ಈ ಆಚಾರ್ಯರ ಕೃತಿಗಳು ಇರಲಾರವೆಂದು ಊಹಿಸಲಾಗುವುದಿಲ್ಲ; (೫) ಇದರ ೧೨ನೆಯ ಪದ್ಯದಲ್ಲಿ—

‘ನಲಿನೀದಲ ಗತ ಜಲಲವ ತರಲಂ ಕಿಂ ಯೌವನಂ ಧನಮಥಾಯುಃ।’

ಎಂದಿರುವಂತೆ, ಶಂಕರಾಚಾರ್ಯರ ‘ದ್ವಾದಶಪಂಜರಿ’ಯ ೧೦ನೆಯ ಪದ್ಯದಲ್ಲಿಯೂ—

ನಲಿನೀದಲಗತ ಸಲಿಲಂ ತರಲಂ।
ತದ್ವಜ್ಜೀವಿತಮತಿಶಯ ಚಪಲಮ್ ॥

ಎಂದಿದೆ. ಆದರೆ ಇದರಿಂದಲೇ ಇವೆರಡರ ರಚಕನೊಬ್ಬನೇ ಆಗಿರಬೇಕೆಂದು ಹೇಳಲಾಗುವುದಿಲ್ಲ; ಏಕೆಂದರೆ ನಲಿನೀದಲದಲ್ಲಿ ನಿಂದಿರುವ ಜಲಬಿಂದುವಿನ ಚಂಚಲತೆಗೆ ನಮ್ಮ ಬಾಳ್ವೆಯನ್ನಾಗಲಿ, ಆಯುಸ್ಸನ್ನಾಗಲಿ, ಧನವನ್ನಾಗಲಿ ಉಪಮಿಸುವ ರೂಢಿಯು ಸನಾತನ, ಬೌದ್ಧ, ಜೈನ ಧರ್ಮಶಾಸ್ತ್ರಗಳ ಧೋರಣದಲ್ಲಿಯೂ, ಕವಿಸಮಯದಲ್ಲಿಯೂ ಎಷ್ಟೋ ಹಿಂದಣ ಕಾಲದಿಂದ ಈ ದೇಶದಲ್ಲಿ ವಾಡಿಕೆಯಾಗಿದೆ ಎಂಬುದನ್ನು ಬೇರೆ ಹೇಳಬೇಕೆಂದಿಲ್ಲ—ಇವೇ ಮೊದಲಾದ ಕಾರಣಗಳಿಂದ ಈ ಕವಿತೆಯು ಆ ಆಚಾರ್ಯರ ಕೃತಿಯಾಗಿರಲಾರದೆಂದು ನಿಸ್ಸ್ಪಷ್ಟವಾಗಿ ಹೇಳಬಹುದು.

ಹಾಗಾದರೆ ನೃಪತುಂಗನೇ ಈ ಕವಿತೆಯನ್ನು ರಚಿಸಿರಬಹುದೇ? ಶ್ರೀಮಾನ್ ಪಾಠಕರಂತಹ ವಿದ್ವಾಂಸರು ಇದು ನೃಪತುಂಗನ ಕೃತಿಯೇ ಎಂದು ಹೇಳಿರುವರಾದರೂ, ಈ ಕೆಳಗಣ ಕಾರಣಗಳಿಂದ ಅವರ ಅಭಿಪ್ರಾಯವನ್ನು ಸರಿಯೆಂದು ಒಪ್ಪಲಾಗುವುದಿಲ್ಲವು:—

(೧) ಮೇಲೆ ಹೇಳಿದ ‘ಕಾವ್ಯಮಾಲೆ’ಯಲ್ಲಿ ಹೇಳಿರುವ ‘ಖ’ ಎಂಬ ಹಸ್ತಪ್ರತಿಯಲ್ಲಿಯ ‘ವಿವೇಕಾತ್ತ್ಯಕ್ತರಾಜ್ಯೇನ’ ಎಂಬುದೊಂದೇ ಪದ್ಯ ವಿನಾ, ಬೇರೆ ೨೮ ಪದ್ಯಗಳೂ, ‘ಕ’ ಹಸ್ತಪ್ರತಿಯಲ್ಲಿಯ ತೀರ ೨೯ ಪದ್ಯಗಳೂ ಸಂಸ್ಕೃತ ‘ಆರ್ಯಾ’ ಎಂಬ ಛಂದಸ್ಸಿನಲ್ಲಿವೆ; ಆದರೆ ‘ಖ’ ಪ್ರತಿಯ ಇದೊಂದು ಕೊನೆಯ ಪದ್ಯವಷ್ಟೇ ‘ಅನುಷ್ಟುಭ್’ ಎಂಬ ಶ್ಲೋಕವಾಗಿದೆ—ಇದೇಕೆ? ನೃಪತುಂಗನು ಮಿಕ್ಕ ೨೮ ಪದ್ಯಗಳನ್ನು ‘ಆರ್ಯಾ’ ಛಂದಸ್ಸಿನಲ್ಲಿ ರಚಿಸಿ, ತಾನು ವಿವೇಕದಿಂದ ರಾಜ್ಯಭಾರವನ್ನು ತ್ಯಜಿಸಿ, ಆ ಬಳಿಕ ಈ ಕವಿತೆಯನ್ನು ಬರೆದೆನೆಂದಿರುವೀ ಪದ್ಯವನ್ನೇ ‘ಅನುಷ್ಟುಭ್’ ಶ್ಲೋಕದಲ್ಲಿ ಏಕೆ ರಚಿಸಿರಬೇಕು? ಇಷ್ಟು ಚಿಕ್ಕ ಕವಿತೆಯಲ್ಲಿ ಎರಡು ಬಗೆಯ ಛಂದಸ್ಸುಗಳೇಕೆ? ಆದರೆ ‘ಕ’ ಪ್ರತಿಯಲ್ಲಿಯ ಕೊನೆಯಲ್ಲಿ ಈ ಕೃತಿಯ ರಚಕನು ‘ವಿಮಲ’ನೆಂಬ ಶ್ವೇತಾಂಬರ ಗುರು ಎಂದು ಹೇಳುವ ಪದ್ಯವು ಆ ಕೃತಿಯ ಇತರ ಎಲ್ಲಾ ಪದ್ಯಗಳಂತೆ ‘ಆರ್ಯಾ’ ಛಂದಸ್ಸಿನಲ್ಲಿಯೇ ಇದ್ದು, ಕೃತಿಯ ರಚನದ ಸಮನ್ವಯಕ್ಕೆ ಸುಸಂಗತವಾಗಿದೆ; ಆದುದರಿಂದ ಮೂಲ ಕೃತಿಯ ಕೊನೆಯ ಪದ್ಯವು ಈ ‘ಕ’ ಪ್ರತಿಯಲ್ಲಿಯ ಕೊನೆಯ

'ಆರ್ಯ'ಯೇ ಆಗಿರಬೇಕೆಂದೂ, ಈ ಕವಿತೆಯ ರಚಕನು ಅದರಲ್ಲಿ ಹೇಳಿರುವ 'ವಿಮಲ'ನೇ ಆಗಿರಬೇಕೆಂದೂ ನನಗೆ ತೋರುತ್ತದೆ; (೨) ಈ ಕವಿತೆಯ ೧ನೆಯ, ೨ನೆಯ ಮತ್ತು ೨೮ನೆಯ ಪದ್ಯಗಳಲ್ಲಿ ಇದರ ಹೆಸರು 'ಪ್ರಶ್ನೋತ್ತರ ರತ್ನಮಾಲಿಕಾ' ಎಂದಿದೆ; 'ಕ' ಪ್ರತಿಯ ಕೊನೆಯಲ್ಲಿಯ ಪದ್ಯದ ಪ್ರಥಮ ಚರಣದಲ್ಲಿ ಇದನ್ನು 'ರತ್ನಮಾಲೆ'ಗೆ ಹೋಲಿಸಿರುವುದರಿಂದ, ಅದರ ದ್ವಿತೀಯ ಚರಣದಲ್ಲಿ ಇದರ ಹೆಸರನ್ನು ಹೇಳುವಾಗ 'ರತ್ನಮಾಲೆ' ಎಂದು ಪುನರುಕ್ತಿಮಾಡದೆ, 'ಪ್ರಶ್ನೋತ್ತರಮಾಲಾ' ಎಂದು ಹೇಳಿರುವುದು ಸಮಂಜಸವಾಗಿದೆ; ಮತ್ತು ಇವೆಲ್ಲ ಎಡೆಗಳಲ್ಲಿಯೂ ಇದರ ಹೆಸರ ಸಮಾಸ ಪದದ ಪೂರ್ವ ಪದವಾದ 'ಪ್ರಶ್ನೋತ್ತರ' ಎಂಬ ಪದವನ್ನು ಸುಪ್ರಕಾಶವಾಗಿ ಹೇಳಿದೆ. ಆದರೆ 'ಬ' ಪ್ರತಿಯ ಕೊನೆಯ 'ಅನುಷ್ಟುಭ್' ಶ್ಲೋಕದಲ್ಲಿ ಇದನ್ನು ಬರಿಯ 'ರತ್ನಮಾಲಿಕಾ' ಎಂದು ಹೆಸರಿಸಿ, ಇದರ ಹೆಸರಲ್ಲಿಯ ಪ್ರಧಾನ ಪದವಾದ 'ಪ್ರಶ್ನೋತ್ತರ' ಎಂಬ ಪೂರ್ವ ಪದವನ್ನೇ ಬಿಟ್ಟುಬಿಟ್ಟಿದೆ. ಆದುದರಿಂದ, ಈ ಕಾವ್ಯದ ಅಂಗದಲ್ಲಿಯ ಈ ಹೇಳಿಕೆಗಳಿಗೂ 'ಬ' ಪ್ರತಿಯ ಕೊನೆಯ ಪದ್ಯದಲ್ಲಿಯ ಹೇಳಿಕೆಗೂ ಎಡವಟ್ಟು ತೋರುವುದರಿಂದ, 'ಬ' ಪ್ರತಿಯ ಕೊನೆಯ ಪದ್ಯವು ಮೂಲ ಪ್ರತಿಯಲ್ಲಿ ಇದ್ದಿರಲಾರದೆಂದು ಊಹಿಸಬೇಕಾಗುತ್ತದೆ; (೩) ಈ ಕವಿತೆಯ ೨ನೆಯ ಮತ್ತು ೨೮ನೆಯ ಪದ್ಯಗಳಲ್ಲಿರುವ 'ವಿಮಲ' ಎಂಬ ಶಬ್ದವು 'ನಿರ್ಮಲ' ಎಂದಿಷ್ಟೇ ಅರ್ಥವುಳ್ಳ ಗುಣವಾಚಿಯಲ್ಲವೆಂದೂ, ಕವಿಯು ತನ್ನ ಹೆಸರನ್ನು ಶ್ಲೇಷೆಯಿಂದ ಮರೆಮಾಡಿಸುವಂತೆ ಉಪಯೋಗಿಸಿರಬೇಕೆಂದೂ ತಟ್ಟನೆ ವ್ಯಕ್ತವಾಗುತ್ತದೆ; ಮತ್ತು 'ಕ' ಪ್ರತಿಯ ಕೊನೆಯ ಪದ್ಯದಲ್ಲಿ ಆತನು ತನ್ನೀ ಆಶಯವನ್ನು ತುಂಬ ಸರಿಸಿಕೊಂಡಿರುವುದರಿಂದ ನಮ್ಮ ಊಹೆಯು ಸರಿಯೆಂದಾಗುತ್ತದೆ; ಈ ಕಾರಣದಿಂದಲೂ ಕವಿಯ ಹೆಸರು 'ವಿಮಲ'ನೆಂದೇ ಆಗಿರಬೇಕು; (೪) ನೃಪತುಂಗನು ಶಾ. ಶ. ೭೯೭ (ಕ್ರಿ. ಶ. 875)ರಲ್ಲಿ ತನ್ನ ಮಗನಾದ ಅಕಾಲವರ್ಷನಿಗೆ ತನ್ನ ಪಟ್ಟವನ್ನು ಬಿಟ್ಟುಕೊಟ್ಟು ತಾನು ರಾಜ್ಯಭಾರದಿಂದ ನಿವೃತ್ತನಾದನೆಂದು ಶ್ರೀಮಾನ್ ಪಾಠಕರು ಹೇಳಿರುವರು; ಆದರೆ ಇಂತಹ ನಿಷ್ಕೃಷ್ಟವಾದ ತಮ್ಮ ಹೇಳಿಕೆಗೆ ಅವರು ಆಧಾರವನ್ನೇನೂ ಕೊಟ್ಟಿಲ್ಲವೆಂಬುದು ವಿಸ್ಮಯನೀಯವೇ. ಈ ಹೇಳಿಕೆಯನ್ನು ಮಾತ್ರ ಒಪ್ಪಲಾಗುವುದಿಲ್ಲ; ಏಕೆಂದರೆ ಕ್ರಿ. ಶ. 875—76ರಲ್ಲಿಯ ಕೆಲ ಶಾಸನಗಳಲ್ಲಿ ನೃಪತುಂಗನ ಮಗನಾದ ಅಕಾಲವರ್ಷನೆಂಬ ಕೃಷ್ಣನ ಹೆಸರಿದೆಯಾದರೂ, ಆತನು ಅರಸನೆಂದಿಲ್ಲ, ಯುವರಾಜನೆಂದೂ, ತನ್ನ ತಂದೆಯಾದ ನೃಪತುಂಗನ ರಾಜ್ಯದ ದಕ್ಷಿಣ ಭಾಗದಲ್ಲಿಯ ಪ್ರತಿನಿಧಿಯೆಂದೂ ಇದೆ ಎಂಬುದರಿಂದ, *ರಾಜಧಾನಿಯಾದ ಮಾನ್ಯಖೇಟದಲ್ಲಿ ಆಗ ನೃಪತುಂಗನೇ ಪಟ್ಟದಲ್ಲಿದ್ದನೆಂಬುದು ಸ್ಪಷ್ಟವಾಗುತ್ತದೆ; ಇದಲ್ಲದೆ ಕ್ರಿ. ಶ. 877ನೆಯ ಇಸವಿಯ ಸೊರಬ ನಂ. 85ನೆಯ ಶಾಸನದಲ್ಲಿ, ಆಗ ನೃಪತುಂಗನೇ ರಾಜ್ಯಭಾರಗೆಯ್ಯುತ್ತಿದ್ದನೆಂದಿದೆ, ಎಂಬುದನ್ನು ಈ ಮೊದಲೇ ಹೇಳಿದೆಯಷ್ಟೆ. ಆದುದರಿಂದ ಕ್ರಿ. ಶ.

* I. A., Vol. XII, ಪು. 220.

877ರ ವರೆಗಾದರೂ ನೃಪತುಂಗನು ರಾಜ್ಯವನ್ನು ತ್ಯಜಿಸಲಿಲ್ಲವೆಂದು ವ್ಯಕ್ತವಾಗುತ್ತದೆ; (೫) ಈ 'ಪ್ರಶ್ನೋತ್ತರ ರತ್ನಮಾಲಿಕೆ'ಯ ತಿಬೇಟ ಭಾಷೆಯ ಅನುವಾದದಲ್ಲಿ ಇದನ್ನು ರಚಿಸಿದಾತನ ಹೆಸರು 'ಅಮೋಘೋದಯ'ನೆಂಬ ಅರಸನು ಎಂದಿದೆ, ಎಂಬುದರಿಂದ ಆತನೇ ಅಮೋಘವರ್ಷನಾಗಿರಬೇಕೆಂದು ಶ್ರೀ ಪಾಠಕರು ಹೇಳುವುದಾದರೂ ಸರಿಯಲ್ಲವೆಂದು ಕಾಣುತ್ತದೆ. ಏಕೆಂದರೆ—(೧) 'ಬಿ' ಪ್ರತಿಯ ಕೊನೆಯ ಪದ್ಯದಿಂದ ತೋರುವ ಮೇರೆಗೆ ಈ ಕವಿತೆಯ ರಚಕನಾದ ಅಮೋಘವರ್ಷನು ವಿವೇಕದಿಂದ ರಾಜ್ಯವನ್ನು ತ್ಯಜಿಸಿದನೆಂದಿದೆ; ಆದರೆ ತಿಬೇಟ ಭಾಷೆಯ ಅನುವಾದದಲ್ಲಿ ಅದರ ರಚಕನು ರಾಜ್ಯವನ್ನು ಬಿಟ್ಟಂತೆ ಇದೆಯೋ ಏನೆಂಬುದನ್ನು ಶ್ರೀಮಾನ್ ಪಾಠಕರು ಹೇಳಿಲ್ಲ; ಆ ಅನುವಾದದಲ್ಲಿ ಹಾಗೆ ಹೇಳಿಲ್ಲವಾದರೆ, ಅಮೋಘವರ್ಷನೂ ಅಮೋಘೋದಯನೂ ಒಬ್ಬನೇ ಎಂದಾಗುವುದು ಹೇಗೋ; (೨) ಅಥವಾ ಆ ತಿಬೇಟ್ ಭಾಷೆಯ ಅನುವಾದವು 'ವಿವೇಕಾತ್ತ್ಯಕ್ತ ರಾಜ್ಯೇನ' ಎಂಬ ಪ್ರಕ್ಷೇಪವನ್ನು ಒಡಗೂಡಿರುವ ಮೂಲಪ್ರತಿಯಿಂದಲೇ ಮಾಡಲ್ಪಟ್ಟಿರಲಾಗದೇ? ಹಾಗಾದರೆ ಅದನ್ನು ಹೇಗೆ ತಾನೆ ಅಸಂದಿಗ್ಧವಾದ ಪ್ರಮಾಣವೆಂದು ಸ್ವೀಕರಿಸಬಹುದು? (೩) ಹಾಗಲ್ಲದಿದ್ದರೂ 'ಅಮೋಘೋದಯ,' 'ಅಮೋಘವರ್ಷ' ಎಂಬ ಎರಡು ಹೆಸರುಗಳ ಅರ್ಥವು ಒಂದೇ ಎಂದಾಗುವುದು ಹೇಗೋ ನನ್ನಿಂದ ಗ್ರಹಿಸಲಳವಲ್ಲ; ಇವೆರಡರಲ್ಲಿ 'ಅಮೋಘ' ಎಂಬ ಪೂರ್ವಪದವಿದ್ದ ಮಾತ್ರಕ್ಕೆ ಇವೆರಡೂ ಒಂದೇ ಅರ್ಥದ ಹೆಸರುಗಳೆಂದೂ ಇವೆರಡು ಹೆಸರುಗಳಿಂದ ನಿರ್ದಿಷ್ಟರಾದ ಇಬ್ಬರೂ ಒಂದೇ ವ್ಯಕ್ತಿಯೆಂದೂ ಹೇಳುವುದಕ್ಕಾಗಲಿ, ಸರಿಯಾದ ಆಧಾರಗಳ ವಿನಾ ಯಾರಾದರೂ ಹೇಳಿದರೆ ಒಪ್ಪುವುದಕ್ಕಾಗಲಿ ನನ್ನ ಮನಸ್ಸು ಸರ್ವಾತ್ಮನಾ ಹಿಂಜರಿಯುತ್ತದೆ.

ಆದುದರಿಂದ ಈ ಕವಿತೆಯನ್ನು ಬರೆದಾತನು ಶ್ವೇತಾಂಬರ ಜೈನ ಗುರುವಾದ 'ವಿಮಲ' ಎಂಬಾತನಲ್ಲದೆ, ಇನ್ನೊಬ್ಬನಾಗಿರಲಾರನು; ಇದು ನೃಪತುಂಗನ ಕೃತಿಯಲ್ಲ—ಎಂದೇ ನನಗೆ ತೋರುತ್ತದೆ. ಈ ವಿಮಲಸೂರಿಯು ಕನ್ನಡದಲ್ಲಿಯೂ ಕಾವ್ಯ ರಚನೆ ಗೆಯ್ದಿರಬಹುದೇ? 'ಕವಿರಾಜಮಾರ್ಗ'ದಲ್ಲಿ ಹೇಳಿರುವ 'ವಿಮಳ' ('ವಿಮಳೋದಯ, ನಾಗಾರ್ಜುನ,.........' I, 29)ನೆಂಬಾತನು ಈತನಾಗಿರಬಹುದೇ?—ಇದನ್ನು ವಿದ್ವಾಂಸರು ವಿಚಾರಿಸತಕ್ಕುದು.

'ವಿವೇಕಾತ್ತ್ಯಕ್ತ ರಾಜ್ಯೇನ'* ಎಂಬ ಶ್ಲೋಕವು ಈ ಕವಿತೆಯಲ್ಲಿ ಪ್ರಕ್ಷಿಪ್ತವಾಗಿರಬೇಕೆಂದಷ್ಟೇ ಹೇಳಿರುವೆನಲ್ಲದೆ, ಅದು ನೃಪತುಂಗನಿಂದ ರಚಿತವಾಗಿರಬಹುದಾದ ಬೇರಾವುದೊಂದಾದರೂ ಸಂಸ್ಕೃತ ಕಾವ್ಯದಲ್ಲಿ ಇರಲಾಗದೆಂದು

* ಈ ನೃಪತುಂಗನ ಅಜ್ಜನು ರಾಜ್ಯಭಾರದಿಂದ ನಿವೃತ್ತನಾಗಬೇಕೆಂದು ಇಚ್ಛಿಸಿದಾಗ ಆತನ ಮಗನು ಅದಕ್ಕೆ ಒಪ್ಪದೆ, ಹಾಗೆ ಮಾಡಲಿಕ್ಕೆ ಬಿಡಲಿಲ್ಲವೆಂಬುದರಿಂದ ನೃಪತುಂಗನಾದರೂ ರಾಜ್ಯವನ್ನು ಬಿಟ್ಟುಬಿಡಲು ಎಳಸಿದನೆಂದಾದರೂ, ಆತನ ಮಗನು ತನ್ನ ಹಿರಿಯರ ಪದ್ಧತಿಯನ್ನು ಅನುಸರಿಸಿ ಅದಕ್ಕೆ ಒಪ್ಪಲಾರನೆಂದೂ ನನ್ನ ಊಹೆ.

ಹೇಳುವುದಲ್ಲ. ಆತನೇ ತಾನಾಗಲಿ, ಆತನನ್ನು ಕುರಿತು ಇತರರಾಗಲಿ ಕಾವ್ಯಗಳನ್ನು ಬರೆಯಲೂ ಬಹುದು; ಮತ್ತು ಅಂಥವುಗಳಲ್ಲಿ ಈ ಶ್ಲೋಕವು ಬಂದಿರಲೂ ಬಹುದು. ಆದರೆ ಆತನು ರಾಜ್ಯವನ್ನು ತ್ಯಜಿಸಿದುದನ್ನು ಕುರಿತು ಸರಿಯಾದ ಆಧಾರ ದೊರೆವವರೆಗೆ, ಆಗಂತುಕವಾದ ಯಾವುದೊಂದು ಶ್ಲೋಕವನ್ನು ನೆಚ್ಚಿ, ಅದನ್ನು ಐತಿಹಾಸಿಕ ತಥ್ಯವೆಂಬ ಅರ್ಥದಿಂದ ಸ್ವೀಕರಿಸುವುದು ಸರಿಯಲ್ಲವೆಂದು ನನಗೆ ತೋರುತ್ತದೆ. ಅಥವಾ ಈ 'ವಿವೇಕಾತ್ತ್ಯಕ್ತ ರಾಜ್ಯೇನ' ಎಂಬ ಶ್ಲೋಕವು ಐತಿಹಾಸಿಕ ತಥ್ಯವನ್ನೇ ಹೇಳುತ್ತದೆಂದು ಸಪ್ರಮಾಣವಾಗಿ ಒಪ್ಪಿದರೂ, ಇದರಿಂದ ನೃಪತುಂಗನು ಜೈನ ಮತವನ್ನು ಅವಲಂಬಿಸಿದನೆಂದೇನೂ ಅರ್ಥವಾಗುವುದಿಲ್ಲ; ವಿವೇಕದಿಂದ ತಾನೆ ರಾಜ್ಯಭಾರವನ್ನು ಬಿಟ್ಟನೆಂದು ಇದೆಯಲ್ಲದೆ, ಆ ವಿವೇಕೋದಯವು ಆತನಿಗೆ ಜೈನ ಧರ್ಮದಿಂದ ಆದುದೆಂದೇನೂ ಇಲ್ಲ. ಕ್ರಿ. ಶ. 815ರಿಂದ 877ರವರೆಗೆ ಸುಮಾರು 62—63 ವರ್ಷಗಳವರೆಗೆ ರಾಜ್ಯವನ್ನಾಳಿದ ಈತನಿಗೆ ಆಗ್ಗೆ 80—82ರ ವಯಸ್ಸಿಗಿಂತ ಕಡಿಮೆಯಾಗಲಾರದು, ಎಂಬುದರಿಂದ, ಆ ವಯಸ್ಸಿನ ಪ್ರಾಯದಲ್ಲಿ ಈತನು ರಾಜ್ಯಭಾರದಿಂದ ನಿವೃತ್ತನಾಗಿದ್ದರೆ, ಆ ವಿವೇಕವು ನೈಸರ್ಗಿಕವೇ. ಈತನಿಗಿಂತ ಮುಂಚೆ ಈತನ ಅಜ್ಜನಾದ ಧ್ರುವರಾಜನು ರಾಜ್ಯಭಾರದಿಂದ ನಿವೃತ್ತನಾಗಬೇಕೆಂದು ಎಳಸಿದುದನ್ನು ಕುರಿತು ಈ ಮೊದಲೇ ಹೇಳಿದೆಯಷ್ಟೆ.

(ಈ) 'ಕವಿರಾಜಮಾರ್ಗ'

ಇದೊಂದು ಕನ್ನಡ ಅಲಂಕಾರ ಗ್ರಂಥವು. ಇದು ನೃಪತುಂಗನ ಸ್ವಯಂಕೃತಿಯೋ, ಅಥವಾ ಆತನ ಆಸ್ಥಾನದಲ್ಲಿಯ ಯಾರೊಬ್ಬ ಕವಿಯು ಆತನ ಹೆಸರಿಂದ ರಚಿಸಿರಬಹುದೋ ಎಂಬುದನ್ನು ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆಯಾದರೂ, ನಮ್ಮ ಲೇಖದ ವಿಚಾರಕ್ಕೆ ಅದರಿಂದ ಯಾವ ಬಗೆಯ ಅಡಚಣೆಯಾದರೂ ಆಗದೆಂಬುದರಿಂದಲೂ, ಆ ತರ್ಕವು ನಮ್ಮ ಲೇಖದ ಆಯದ ಹೊರಗಣದೆಂಬುದರಿಂದಲೂ, ಅದಕ್ಕೆ ಕೈಹಾಕದೆ ನೆಟ್ಟಗೆ ಈ ಕಾವ್ಯದ ಪರಿಶೀಲನವನ್ನು ಮಾಡೋಣ.

ಈ ಗ್ರಂಥವು ನೃಪತುಂಗನ ಸ್ವಯಂಕೃತಿಯೇ ಎಂದಾದರೆ ಇದರ ಅವತಾರಿಕೆಯ ೨ ಕಂದ ಪದ್ಯಗಳಲ್ಲಿ ಈತನು (ತನ್ನ ಇಷ್ಟದೇವತೆಯಾಗಿರಬೇಕಾದ) ವಿಷ್ಣುವನ್ನು ಸ್ತುತಿಸಿರುವುದರಿಂದ,* ಈತನು ವೈಷ್ಣವನಾಗಿರಬೇಕೆಂದು ಸ್ವಯಂಸಿದ್ಧವಾಗುತ್ತದೆ. ಭಾಗವತ ವೈಷ್ಣವ ಧರ್ಮದಲ್ಲಿ ಹರಿಹರರು ಸಮಾನರೆಂಬುದನ್ನು ಈ ಮೊದಲು ಹೇಳಿದೆಯಷ್ಟೆ.

ಈ ಕಾವ್ಯದ ಮೊದಲಲ್ಲಿಯ ವಿಷ್ಣುಸ್ತುತಿಯು ಇಷ್ಟು ಸ್ಪಷ್ಟವಾಗಿರಲು, ಅದನ್ನು ಲಕ್ಷಿಸದೆ ಎಂಬಂತೆ, ಶ್ರೀಮಾನ್ ಪಾಠಕರು ಇದರಲ್ಲಿಯ I. ೯೦ ಮತ್ತು

* ಈ ಕಾವ್ಯದ ಮೂರನೆಯ ಪರಿಚ್ಛೇದದಲ್ಲಿಯ ೯೧, ೧೬೧, ೧೬೨, ೧೮೯, ೧೯೦, ೧೯೪ ನೆಯ ಪದ್ಯಗಳನ್ನು ಪರಿಶೀಲಿಸುವುದು.

III. ೧೪೮ ಇವೆರಡು ಪದ್ಯಗಳನ್ನು ತಾನೆ ಆಧಾರಿಸಿ, ಈ 'Two verses, which praise Jina, reflect the religious opinions of the author' (ಕ. ಮಾ. ಉ.—ಪು. ೭) ಎಂದು ಹೇಳಿರುವುದು ತುಂಬ ಸೋಜಿಗವೇ ಸರಿ; ಏಕೆಂದರೆ, ಇವೆರಡರಲ್ಲಿಯು I. ೯೦ ಈ ಕವಿಯು ಸ್ವಂತ ರಚನೆ ಎಂಬುದಕ್ಕಿಂತ ಈತನು 'ಸ್ವವಚನ ದೋಷ'ವನ್ನು ನಿದರ್ಶಿಸುವ ಬಗ್ಗೆ ಬೇರೆ ಯಾವುದೊಂದು ಕಾವ್ಯದಿಂದ ಆಯ್ದು ತೆಗೆದ ದೃಷ್ಟಾಂತವೆಂದೇ ತೋರುತ್ತದೆ; III. ೧೪೮ನೆಯ ಪದ್ಯವು ಈತನಿಂದಲೇ ರಚಿಸಲ್ಪಟ್ಟ ಕಂದವಾಗಿರಬಹುದು. ಸಕಲ ಧರ್ಮಗಳನ್ನೂ ಸಮಾನ ದೃಷ್ಟಿಯಿಂದ ಮನ್ನಿಸುವಾತನು ಈ ಕಂದವನ್ನು ರಚಿಸಿದುದರಿಂದ, ಅದರಿಂದಲೇ ಆತನನ್ನು ಜೈನನೆಂದು ಭಾವಿಸುವುದು ಅಸಂಗತವೇ ಸರಿ; ಅದಲ್ಲದೆ ಯಾವನೊಬ್ಬ ಕವಿಯು ತನ್ನ ಇಷ್ಟದೇವತೆಯನ್ನು ತನ್ನ ಗ್ರಂಥಾವತಾರದಲ್ಲಿ ತಾನೆ ಸ್ತುತಿಸುವುದಲ್ಲದೆ, ನಡುವಲ್ಲಿ ಅಲ್ಲಲ್ಲಿ ತಾನು ಕೊಟ್ಟಿರುವ ದೃಷ್ಟಾಂತ ಪದ್ಯಗಳಿಂದಲ್ಲ. ಬಹುಶಃ I. ೭೮ನೆಯ ಪದ್ಯವಾದರೂ ಜೈನ ಧರ್ಮ ಸಂಬಂಧಿಯಾದ ಪದ್ಯವಾಗಿರಬೇಕು. ಇದರಿಂದೇನು? ಕವಿಗೆ ಧರ್ಮ ಭೇದವುಂಟೇ? ಯಾವ ಧರ್ಮದಲ್ಲಿಯು ಒಳ್ಳೆತನ್ನಾದರೂ ಆಯ್ದುಕೊಳ್ಳುವುದು ಕವಿಯ ಧರ್ಮವಲ್ಲವೆ? ಒಳ್ಳಿತೆಂಬುದರಿಂದಲೇ ಒಳ್ಳಿತಲ್ಲದೆ, ಅದು ತನ್ನ ಧರ್ಮದಲ್ಲಿದ್ದರೆ ಮಾತ್ರ ಒಳ್ಳಿತು, ಅನ್ಯ ಧರ್ಮದಲ್ಲಿದ್ದರೆ ಒಳ್ಳಿತಲ್ಲ, ಎಂದು ಆ ಭೇದವು ಕವಿಗುಂಟೇ? ಇದಲ್ಲದೆ, 'ಕವಿರಾಜಮಾರ್ಗ'ದ I. ೧೦೩—೧೦೪ನೆಯ ಪದ್ಯಗಳಲ್ಲಿ ಈತನು 'ಸಮಯ ವಿರುದ್ಧ' ಎಂಬ ದೋಷವನ್ನು ಕುರಿತು ಪ್ರಸ್ತಾಪಿಸುವಾಗ, ಕಪಿಲ (ಸಾಂಖ್ಯ), ಸುಗತ (ಬೌದ್ಧ), ಕಣಚರ (= ಕಣಾದ; ವೈಶೇಷಿಕ), ಲೋಕಾಯತಿಕ (ನಾಸ್ತಿಕ) ಮೊದಲಾದ ಮತಗಳ ಸಂಬಂಧಿಯಾದ ಉದ್ಗಾರಗಳು ತತ್ತನ್ಮಾರ್ಗ ಭೇದಗಳಿಗೆ ಅನುಗುಣವಾಗಿರಬೇಕಲ್ಲದೆ, ಆಯಾ ಸಮಯಗಳ ಸೂತ್ರಗಳಿಗೆ ವಿರುದ್ಧವಾಗಿರಬಾರದೆಂದು ಈತನೇ ಹೇಳಿರುವುದಿಲ್ಲವೇ? ಅಂತಹವನು ಜಿನಸ್ತುತಿ ಪರವಾದ ಪದ್ಯಗಳನ್ನು ತನ್ನ ಕವಿತೆಯಲ್ಲಿ ಏಕೆ ತಾನೆ ಅಲ್ಲಲ್ಲಿ ಬರೆಯಲಾಗದು? ಅಥವಾ ಹಾಗೆ ಮಾಡಿರುವನೆಂಬುದರಿಂದಲೇ ಆತನನ್ನು ಕೂಡಲೆ ಜೈನನೆಂದು ಹೇಳಬಹುದೋಣವೇ?*

* ಜೈನರಲ್ಲಿ ಕೂಡ ಯಾವ ಬಗೆಯ ಧರ್ಮ ಭೇದವಿಲ್ಲವೆಂಬುವಕ್ಕೆ ಮಾನತುಂಗಾಚಾರ್ಯನ ಪವಿತ್ರವಾದ 'ಭಕ್ತಾಮರ ಸ್ತೋತ್ರ'ವೆಂಬ ಜಿನ ಸ್ತುತಿಯು ಸಾಕ್ಷಿಯಾಗಿದೆ:—

"ತ್ವಾಮವ್ಯಯಂ ವಿಭುಮಚಿಂತ್ಯಮಸಂಖ್ಯಮಾದ್ಯಂ।
ಬ್ರಹ್ಮಾಣಮೀಶ್ವರಮನಂತಮನಂಗಕೇತುಮ್॥
ಯೋಗೀಶ್ವರಂ ವಿದಿತಯೋಗಮನೇಕಮೇಕಂ।
ಜ್ಞಾನಸ್ವರೂಪಮಮಲಂ ಪ್ರವದಂತಿ ಸಂತಃ ॥ ೨೪ ॥
ಬುದ್ಧಸ್ತ್ವಮೇವ ವಿಬುಧಾರ್ಚಿತ ಬುದ್ಧಿಬೋಧಾ।
ತ್ವಂ ಶಂಕರೋಸಿ ಭುವನತ್ರಯ ಶಂಕರತ್ವಾತ್॥
ಧಾತಾಸಿ ಧೀರ ಶಿವಮಾರ್ಗ ವಿಧೇರ್ವಿಧಾನಾ।
ದ್ವ್ಯಕ್ತಂ ತ್ವಮೇವ ಭಗವನ್ ಪುರುಷೋತ್ತಮೋಸಿ" ॥ ೨೫ ॥

ನೃಪತುಂಗನು ಅರಸನಾಗಿದ್ದುದರಿಂದ ಕವಿಯಾಗಿರಲಾರನೆಂದು ಭಾವಿಸಲಾಗದು; ಏಕೆಂದರೆ ಪುರಾತನ ಭಾರತವರ್ಷದಲ್ಲಿ ಆಳಿಹೋದ ಹಲವರಸರು ಸ್ವಯಂ ಕವಿಗಳಾಗಿದ್ದರೆಂದೂ ತಿಳಿಯುತ್ತದೆ; ಹಾಗಿಲ್ಲದಿದ್ದರೆ 'ರಾಜಶೇಖರ'ನ (ಕ್ರಿ. ಶ. ಸುಮಾರು 880—920ರ ನಡುವೆ) 'ಕಾವ್ಯಮೀಮಾಂಸೆ'ಯಲ್ಲಿಯ*—"ರಾಜಾ ಕವಿಃ ಕವಿಸಮಾಜಂ ವಿದಧೀತ। ರಾಜನಿ ಕವೌ ಸರ್ವೋಲೋಕಃ ಕವಿಃ ಸ್ಯಾತ್॥" ಎಂಬ ಅಧಿಕಾರ ಸೂತ್ರದಂತಿರುವ ಹೇಳಿಕೆಯು ಕನಸಿನ ಮಾತೆಂದಾಗದೇ? ಇದಕ್ಕೆ ಈ ಕೆಲವು ಉದಾಹರಣೆಗಳನ್ನು ಕೊಡಬಹುದು:—(೧) ಸೋಡ್ಢಲ ದೇವನ (ಕ್ರಿ. ಶ. 11ನೆಯ ಶತಕ) 'ಉದಯಸುಂದರೀ ಕಥೆ'ಯಲ್ಲಿ†—"ಕವೀಂದ್ರೈಶ್ಚ ವಿಕ್ರಮಾದಿತ್ಯ, ಶ್ರೀಹರ್ಷ, ಮುಂಜ, ಭೋಜದೇವಾದಿ ಭೂಪಾಲೈಃ" ಎಂದಿದೆ; (೨) ಶ್ರೀಹರ್ಷವರ್ಧನನು (ಕ್ರಿ. ಶ. 606—647) ಸಂಸ್ಕೃತದಲ್ಲಿ 'ಪ್ರಿಯದರ್ಶಿಕಾ', 'ರತ್ನಾವಲೀ' ಮತ್ತು 'ನಾಗಾನಂದ' ಎಂಬ ೩ ನಾಟಕಗಳನ್ನು ಬರೆದಿರುವನು;‡ (೩) ಸಮುದ್ರಗುಪ್ತನ (ಕ್ರಿ. ಶ. 330—375) ಅಲಹಾಬಾದ ಸ್ತಂಭದಲ್ಲಿಯ ಪ್ರಶಸ್ತಿಯಿಂದ ಆತನು 'ಕವಿರಾಜ'ನೆಂದೂ ಗಾಂಧರ್ವ ವಿದ್ಯೆಯಲ್ಲಿಯೂ ವಿಶಾರದನೆಂದೂ ತೋರುತ್ತದೆ. ಇಷ್ಟೇ ಅಲ್ಲ, ಆತನು ಅಚ್ಚುಹಾಕಿಸಿದ ಹಲವು ಬಗೆಯ ನಾಣ್ಯಗಳಲ್ಲಿ ಆತನು ಪರ್ಯಂಕದಲ್ಲಿ ಸುಖಾಸೀನನಾಗಿ ವೀಣೆಯನ್ನು ಬಾರಿಸುವ ಚಿತ್ರವುಳ್ಳ ನಾಣ್ಯವಿದೆ.§ (೪) ಭೂಲೋಕಮಲ್ಲನೆಂಬ ಬಿರುದುಳ್ಳ (ಕ್ರಿ. ಶ. 1126—1138) ಚಾಲುಕ್ಯ ವಂಶದ ಅರಸಾದ ಮೂರನೆಯ ಸೋಮೇಶ್ವರನು¶ 'ಮಾನಸೋಲ್ಲಾಸ' ಅಥವಾ 'ಅಭಿಲಾಷಿತಾರ್ಥ ಚಿಂತಾಮಣಿ' ಎಂಬ ಸಂಸ್ಕೃತ ಗ್ರಂಥವನ್ನು ಬರೆದಿರುವನು; ಇತ್ಯಾದಿ.

ಆದರೂ ಈ 'ಕವಿರಾಜಮಾರ್ಗ'ವು ನೃಪತುಂಗನ ಸ್ವಯಂಕೃತಿಯಲ್ಲವೆಂದೂ, ಆತನ ಹೆಸರಿಂದ ಇತರ ಕವಿಯು ರಚಿಸಿರಬೇಕೆಂದೂ ಇಟ್ಟುಕೊಳ್ಳೋಣ—ಅದರಿಂದಾದರೂ ಏನು? (೧) ಕನ್ನಡ ಕವಿವರ್ಯರಾದ ಆದಿ ಪಂಪನೂ, ರನ್ನನೂ ಜೈನರೆಂಬುದನ್ನು ಯಾರು ತಾನೆ ಅರಿಯರು? ಆದರೆ ಪಂಪನ 'ವಿಕ್ರಮಾರ್ಜುನ ವಿಜಯ'ವೆಂಬ 'ಪಂಪ ಭಾರತ'ವನ್ನೂ, ರನ್ನನ 'ಗದಾ ಯುದ್ಧ'ವನ್ನೂ, ಜೈನ ಕವಿಗಳ ಕೃತಿಗಳೆಂದು ಭಾವಿಸಲಾದರೂ ಹೇಳಬಾರದೇ? ಇವುಗಳಲ್ಲಿ ಆಯಾ ಕವಿಯು ತನ್ನ ಪೋಷಕನಾದ ಅರಸನ ಸ್ವಧರ್ಮವನ್ನೇ ಅನುಸರಿಸಿಯೂ ಅನುಕರಿಸಿಯೂ ಅದಕ್ಕೆ ಅನುಗುಣವಾದ ವಿಷ್ಣು ಸ್ತುತಿ, ಶಿವ ಸ್ತುತಿ ಮೊದಲಾದುವುಗಳಿಂದ ತನ್ನ ಗ್ರಂಥವನ್ನಾರಂಭಿಸಿ, ಆ ಧರ್ಮದ ಧೋರಣೆಯಲ್ಲಿಯೇ ಅದನ್ನು ಅತ್ಯಂತವಾಗಿ ರಚಿಸಿರುವುದರಿಂದ, ಇವು ಸಮಗ್ರವಾಗಿ ವೈಷ್ಣವ ಧರ್ಮಮಯ

* '*Gaekwad's Oriental Series*', No. I., p. 54.

† *Ibid.*, No. XI., p. 150.

‡ '*Men and thought in ancient India*', pp. 171—172.

§ *Ibid.* pp. 154—155.

¶ *E.H.D.*, p. 67.

ವಾಗಿವೆ. ತಾನು ಜೈನನಾದರೂ ಆಯಾ ಕವಿಯು ತನ್ನ ಕಾವ್ಯದಲ್ಲಿ ತನ್ನ ಧರ್ಮದ ಮಾತನ್ನಾದರೂ ಎತ್ತಿರುವನೇ? ಆದುದರಿಂದ ಇವನ್ನು ರಚಿಸಿದ ಕವಿಗಳು ಸ್ವತಃ ಜೈನರಾದರೂ, ಅವುಗಳಲ್ಲಿ ಪ್ರತಿಫಲಿಸಿರುವ ಧರ್ಮವು ಆಯಾ ಕವಿಯ ಪೋಷಕರ ಸ್ವಧರ್ಮ ತಾನೆ ಅಲ್ಲದೆ, ಕವಿಯ ಸ್ವಧರ್ಮವಲ್ಲವೆಂದು ಯಾರು ತಾನೆ ಅರಿಯರು? (೨) ಕ್ರಿ. ಶ. ಸು. 1230ರಲ್ಲಿ ಜಯಸಿಂಹಸೂರಿಯೆಂಬ ಶ್ವೇತಾಂಬರ ಕವಿಯು ರಚಿಸಿದ 'ಹಮ್ಮೀರಮದಮರ್ದನ' ನಾಟಕದಲ್ಲಿ * ಜಿನ ಸ್ತುತಿಯಾಗಲಿ ಜೈನ ಧರ್ಮವನ್ನು ಕುರಿತು ಯಾವ ಮಾತಾಗಲಿ ಇಲ್ಲದಿರುವುದು ಮಾತ್ರವಲ್ಲ, ಅದನ್ನಾತನು ಬರೆದುದು:—

> ''ಸ್ತಂಭತೀರ್ಥನಗರೀ ಗರೀಯೋ ರತ್ನಾಂಕುರಸ್ಯ ತ್ರಿಭುವನ ವಿಭು ವಿನಮ್ರ ಮೌಲಿ ಮುಕುಟ ಮಣಿಕಿರಣ ಧೋರಣೀಧೌತ ಚರಣಾರವಿಂದಸ್ಯ ವೃಂದಾರಕವೃಂದ ವಿಕ್ರಮ ಚಮತ್ಕೃತಿ ಪರಿಪಾಕ ಲುಂಟಾಕ ದುಷ್ಟದನುತನುಜ ವಿಜಯ ಶ್ರೀ ಭೀಮಸ್ಯ ಶ್ರೀ ಭೀಮೇಶ್ವರಸ್ಯ ಯಾತ್ರಾಯಾಂ........ಶ್ರೀ ವಸ್ತುಪಾಲ ಕುಲಕಾನನ ಕೇಲಿ ಸಿಂಹೇನ ಶ್ರೀಮತಾ ಜಯಸಿಂಹೇನ''

ಸಮಾದಿಷ್ಟನಾಗಿ ಎಂದಿರುವನಲ್ಲದೆ, ಆ ನಾಟಕಾಂತ್ಯದಲ್ಲಿ ನಾಯಕನು ಮಾಡಿರುವ ಶಿವ ಸ್ತುತಿಯು ಸಾಕ್ಷಾತ್ ಶೈವ ಕವಿಯಿಂದಲೇ ರಚಿತವಾದಂತಿದ್ದು, ಆ ಪ್ರಾರ್ಥನೆಯನ್ನೊಲಿದು ಶಿವನು ಪ್ರತ್ಯಕ್ಷನಾಗಿ ನಾಯಕನ ಭರತ ವಾಕ್ಯವನ್ನು ಸಲಿಸಿದನೆಂದಿದೆ; (೩) ಹೊಯ್ಸಳವಂಶೀಯನಾದ ವೀರಬಲ್ಲಾಳನ (ಕ್ರಿ. ಶ. 1173–1220) ಆಶ್ರಿತನಾಗಿದ್ದ ಕನ್ನಡ ಜೈನ ಕವಿ ಜನ್ನನು ರಚಿಸಿದ 'ಯಶೋಧರಚರಿತೆ'ಯೂ 'ಅನಂತನಾಥ ಪುರಾಣ'ವೂ ಜೈನ ಕಾವ್ಯಗಳಾಗಿರುವುವಾದರೂ, ಈತನು ಆ ಅರಸನ ಬಗ್ಗೆ ರಚಿಸಿದ ಚೆನ್ನರಾಯಪಟ್ಟಣ ನಂ. 179ನೆಯ (ಕ್ರಿ. ಶ. 1191) ತಾಮ್ರ ಶಾಸನದ ಅವತಾರಿಕೆಯ ಸಂಸ್ಕೃತ ಶ್ಲೋಕವು ವಿಷ್ಣು ಸ್ತುತಿ ಪರವಾಗಿದೆ, ಆ ಬಳಿಕಣ ಉತ್ಪಲಮಾಲೆಯಲ್ಲಿ ವಿಷ್ಣುವಿನ ವರಾಹಾವತಾರವನ್ನು ಸ್ತುತಿಸಿದೆ; ಹಾಗೆಯೇ ಈತನಿಂದ ರಚಿತವಾದ ತರೀಕೆರೆ ನಂ. 45ನೆಯ (ಕ್ರಿ. ಶ. 1197) ಶಾಸನದ ಆದಿ ಪದ್ಯದಲ್ಲಿ 'ಅಮೃತೇಶ್ವರ'ನೆಂಬ ಶಿವನನ್ನೂ ಆ ಬಳಿಕಣದರಲ್ಲಿ ಹರಿಹರರನ್ನೂ ಸ್ತುತಿಸಿದೆ,† ಇತ್ಯಾದಿ. ಆದುದರಿಂದ ಈ 'ಕವಿರಾಜಮಾರ್ಗ'ವು ನೃಪತುಂಗನಿಂದ ರಚಿಸಲ್ಪಟ್ಟಿರದೆ, ಆತನ ಆಸ್ಥಾನದಲ್ಲಿಯ ಯಾರೊಬ್ಬ ಕವಿಯಿಂದ ರಚಿಸಲ್ಪಟ್ಟುದೆಂದಾದರೂ, ಅದರ ಅವತಾರಿಕೆಯ ವಿಷ್ಣು ಸ್ತುತಿಯಿಂದ ನಿರ್ದಿಷ್ಟವಾಗುವ ಧರ್ಮವು ನೃಪತುಂಗನ ಸ್ವಧರ್ಮವೇ ಆಗಿರಬೇಕಲ್ಲದೆ, ಅದರ ರಚಕನ ಸ್ವಧರ್ಮವೆಂದಾಗದು.

'ಕವಿರಾಜಮಾರ್ಗ'ದ ಅವತಾರಿಕೆಯ ಪದ್ಯಗಳು ವಿಷ್ಣು ಸ್ತುತಿ ಪರವಲ್ಲವೆಂದೂ, ಆ ಪದ್ಯಗಳಲ್ಲಿ ನೃಪತುಂಗನು ತನ್ನನ್ನೇ ಬಣ್ಣಿಸಿಕೊಂಡಿರಬೇಕೆಂದೂ

* *Gaekwad's Oriental Series*', No. X., ಪುಟ ೨ ಮತ್ತು ೫೬.

† 'ಜನ್ನನ ಶಾಸನಗಳ ಸಂಗ್ರಹ' ('ಕರ್ನಾಟಕ ಕಾವ್ಯಕಲಾನಿಧಿ', ನಂ. ೨೪. ಮೈಸೂರು.)

ಯಾರಾದರೂ ಆಕ್ಷೇಪಿಸಿದರೆ, ಅಂತಹ ಆಕ್ಷೇಪಣೆಯನ್ನು ನಿರಾಧಾರವೆಂದು ಈ ಈ ಕಾರಣದಿಂದ ನಿವಾರಿಸಬಹುದು; ಅದೇನೆಂದರೆ—

'ಕವಿಯು ತನ್ನ ಕಥಾನಾಯಕನನ್ನಾಗಲಿ ತನ್ನನ್ನೇ ಆಗಲಿ ತನ್ನ ಇಷ್ಟ ದೇವತೆಯೊಡನೆ ಹೋಲಿಸಿ, ಅಥವಾ ತನ್ನ ಇಷ್ಟದೇವತೆಯ ಅಭಿಧಾನದಿಂದ ಹೆಸರಿಸಿ, ಅಥವಾ ತನ್ನ ಇಷ್ಟದೇವತೆಯನ್ನು ತನ್ನ ಕಥಾನಾಯಕನ ಹೆಸರಿಂದಾಗಲಿ ತನ್ನ ಹೆಸರಿಂದಾಗಲಿ ಉಲ್ಲೇಖಿಸಿ ಸ್ತುತಿಸುವ ವಾಡಿಕೆಯು ಸಂಸ್ಕೃತ ಕಾವ್ಯಗಳಲ್ಲಿಯೂ ಕನ್ನಡ ಕಾವ್ಯಗಳಲ್ಲಿಯೂ ಬಹಳ ಹಿಂದಿನ ಕಾಲದಿಂದ ಇರುತ್ತದೆ; ಇದಕ್ಕೆ ಈ ಕೆಲ ದೃಷ್ಟಾಂತಗಳನ್ನು ಕೊಡಬಹುದು:—

(೧) 'ಭಾಸ' ಮಹಾಕವಿಯು 'ಪ್ರತಿಜ್ಞಾ ಯೌಗಂಧರಾಯಣ' ನಾಟಕದ ನಾಂದಿಯಲ್ಲಿಯ ಮಹಾಸೇನ(=ಸ್ಕಂದ) ಸ್ತುತಿಯಲ್ಲಿ ಅದರಲ್ಲಿಯ ಮುಖ್ಯ ಪಾತ್ರಗಳನ್ನು ಹೆಸರಿಸಿಯದೆ—

ಪಾತು ವಾಸವದತ್ತಾಯೋ ಮಹಾಸೇನೋತಿ ವೀರ್ಯವಾನ್ |
ವತ್ಸರಾಜಸ್ತು ನಾಮ್ನಾ ಸಶಕ್ತ್ಯಯೌಗಂಧರಾಯಣಃ ||೧||

ಆತನ 'ಪಂಚರಾತ್ರ' ಎಂಬ ನಾಟಕದ ನಾಂದಿಯ ಕೃಷ್ಣ ಸ್ತುತಿಯಲ್ಲಿ ಅದರಲ್ಲಿಯ ಪಾತ್ರಗಳನ್ನು ಉಲ್ಲೇಖಿಸಿದೆ—

ದ್ರೋಣಃ ಪೃಥಿವ್ಯರ್ಜುನ ಭೀಮದೂತೋ |
ಯಃ ಕರ್ಣಧಾರಃ ಶಕುನೀಶ್ವರಸ್ಯ ||
ದುರ್ಯೋಧನೋ ಭೀಷ್ಮ ಯುಧಿಷ್ಠಿರಃ ಸ |
ಪಾಯಾದ್ವಿರಾಡುತ್ತರಗೋಭಿಮನ್ಯುಃ ||೧||

(೨) ಆದಿ ಪಂಪನ 'ವಿಕ್ರಮಾರ್ಜುನ ವಿಜಯ'ದ ಅವತಾರಿಕೆಯ ವಿಷ್ಣು ಸ್ತುತಿಯಲ್ಲಿ ಆತನು ತನ್ನ ಪೋಷಕನಾದ ಚಾಲುಕ್ಯ ಅರಿಕೇಸರಿಯನ್ನು ವಿಷ್ಣುವಿನೊಡನೆ ಹೋಲಿಸಿರುವನು—

........................ಉದಾತ್ತ ನಾ |
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ||೧||

(೩) ರನ್ನನು ತನ್ನ 'ಗದಾ ಯುದ್ಧ'ದಲ್ಲಿ ತನ್ನ ಪೋಷಕನಾದ ಚಾಲುಕ್ಯ ಅರಸನಾದ ತೈಲಪ ಆಹವಮಲ್ಲನನ್ನು (ಕ್ರಿ. ಶ. 973—997) ವಿಷ್ಣುವಿನೊಡನೆಯೂ ಶಿವ, ಬ್ರಹ್ಮ, ಸೂರ್ಯ ಮುಂತಾದ ದೇವತೆಗಳೊಡನೆಯೂ ಹೋಲಿಸಿ ಕಾವ್ಯವನ್ನು ಆರಂಭಿಸಿರುವನು—

......ಆದಿ ಪುರುಷಂ ಪುರುಷೋತ್ತಮನೀ ಚಳುಕ್ಯ ನಾ |
ರಾಯಣ ದೇವನೀಗೆಮಗೆ ಮಂಗಳಕಾರಣಮುತ್ಸವಂಗಳಂ ||೧||

(೪) ಶ್ರವಣಬೆಳ್ಗೊಳದ ಗೋಮಟೇಶ್ವರ ಮಹಾ ಮೂರ್ತಿಯ (ಕ್ರಿ. ಶ. 981) ಪ್ರತಿಷ್ಠಾಪಕನಾದ ಚಾಮುಂಡರಾಯನ ಗುರುವಾದ ನೇಮಿಚಂದ್ರನು

ತನ್ನ 'ತ್ರಿಲೋಕಸಾರ' ಎಂಬ ಪ್ರಾಕೃತ ಗ್ರಂಥದಲ್ಲಿ ತನ್ನ ಇಷ್ಟ ತೀರ್ಥಂಕರನಾದ ೨೨ನೆಯ ಜಿನನ ಹೆಸರು 'ನೇಮಿನಾಥ' ಎಂದಿರುವುದಾದರೂ, ಆತನನ್ನು ತನ್ನ ಹೆಸರಿಂದ 'ನೇಮಿಚಂದ್ರ' ಎಂದೇ ಉಲ್ಲೇಖಿಸಿ, ಆತನ ಸ್ತುತಿಯಲ್ಲಿ ಶ್ಲೇಷೆಯಿಂದ ತನ್ನನ್ನೇ ಹೇಳಿಕೊಂಡಿರುವನು—

"ಬಲಗೋವಿಂದ ಸಿಹಾಮಣಿ ಕಿರಣಕಲಾವರುಣ ಚರಣಣಹಕಿರಣಂ।*
ವಿಮಲಯರ ಣೇಮಿಚಂದಂ ತಿಹುವಣಚಂದಂ ಣಮಂಸಾಮಿ" ॥ ೧ ॥

(೧೪) ಆದಿ ಪಂಪನ ಧರ್ಮ ಗ್ರಂಥವಾದ ಕನ್ನಡ 'ಆದಿ ಪುರಾಣ' (ಕ್ರಿ. ಶ. 941—42)ದ ೨ನೆಯ ಆಶ್ವಾಸದಿಂದ ಕೊನೆಯ ಆಶ್ವಾಸದವರೆಗಣ ಪ್ರತ್ಯೇಕ ಆಶ್ವಾಸದ ಮೊದಲ ಪದ್ಯಗಳಲ್ಲಿ, ಆತನು ಜಿನನನ್ನು ತನ್ನ ಬಿರುದಾದ 'ಸರಸ್ವತೀ ಮಣಿಹಾರ' ಎಂಬ ಹೆಸರಿಂದಲೇ ಹೇಳಿರುವನು—ಇತ್ಯಾದಿ.

ಆದುದರಿಂದ 'ಕವಿರಾಜಮಾರ್ಗ'ದ ಅವತಾರಿಕೆಯ ಎರಡು ಪದ್ಯಗಳಲ್ಲಿ ನೃಪತುಂಗನ ವಿವಿಧ ಬಿರುದಗಳು ಕೊಡಲ್ಪಟ್ಟಿವೆ, ಎಂಬುದರಿಂದ ಅವು ಆತನ ಸ್ವಪ್ರಶಸ್ತಿಯಷ್ಟೇ ಎಂದಾಗುವುದಿಲ್ಲ; ತನ್ನ ಆರಾಧ್ಯ ದೇವತೆಯಾದ ವಿಷ್ಣುವನ್ನು ಸ್ತುತಿಸುವಲ್ಲಿ, ಶ್ಲೇಷೆಯಿಂದ ತನ್ನ ಬಿರುದುಗಳನ್ನೂ ಹೇಳಿಕೊಂಡಿರುವನೆಂಬುದರಿಂದ, ಇವುಗಳಿಂದ ಆತನ ಸ್ವಧರ್ಮವು ತುಂಬ ವ್ಯಕ್ತವಾಗುತ್ತದೆ.

ನೃಪತುಂಗನು ಜೈನನಲ್ಲ

(೧) ಜಿನಸೇನನಾಗಲಿ ಗುಣಭದ್ರನಾಗಲಿ ನೃಪತುಂಗನು ಜೈನ ಮತವನ್ನು ಅವಲಂಬಿಸಿದನೆಂದು ತನ್ನ ಯಾವ ಗ್ರಂಥದಲ್ಲಿಯಾದರೂ ಹೇಳಿರುವುದಿಲ್ಲ. ಗುಣಭದ್ರನ 'ಉತ್ತರಪುರಾಣ'ದಲ್ಲಿಯ ಆ ಏಕಾಕಿಯಾದ ಶ್ಲೋಕದಿಂದಾದರೂ ಆ ಅರ್ಥ ಹೊರವಡದಿರುವುದು ಮಾತ್ರವಲ್ಲದೆ ನೃಪತುಂಗನು ಜಿನಸೇನನ ಶಿಷ್ಯನಾಗಿದ್ದನೆಂದಾದರೂ ಅರ್ಥವಾಗುವಂತೆ ತೋರುವುದಿಲ್ಲ;

(೨) ದಿಗಂಬರ ಜೈನರ 'ಸೇನ' ಗಣದ ಪಟ್ಟಾವಳಿಯಲ್ಲಿ ಹೇಳಲ್ಪಟ್ಟಿರುವ ಪ್ರತಿ ಗುರುವನ್ನು ಕುರಿತು ಆತನೆಸಗಿದ ವಿಶೇಷ ಕಾರ್ಯಗಳನ್ನು ಆತನ ಹೆಸರೊಂದಿಗೆ ಅದರಲ್ಲಿ ಉಲ್ಲೇಖಿಸಿದೆ.† ಆದರೆ ಅದರಲ್ಲಿ ಜಿನಸೇನನನ್ನು ಕುರಿತು ಇಷ್ಟೇ ಇದೆ—

---

* 'ಬಲಗೋವಿಂದ ಶಿಖಾಮಣಿ ಕಿರಣಕಲಾಪಾರುಣ ಚರಣನಖಕಿರಣಮ್।
ವಿಮಲತರ ನೇಮಿಚಂದ್ರಂ ತ್ರಿಭುವನಚಂದ್ರಂ ನಮಸ್ಯಾಮಿ ॥'

ಇಲ್ಲಿ 'ಬಲ'= (೧) ಬಲರಾಮ. (೨) ಚಾಮುಂಡರಾಯ; 'ಗೋವಿಂದ'= (೧) ಶ್ರೀಕೃಷ್ಣ, (೨) ಗಂಗ ಮಂತ್ರಿಯ ಅರಸಾದ ರಾಚಮಲ್ಲ; 'ನೇಮಿಚಂದ್ರ'= (೧) ೨೨ನೆಯ ತೀರ್ಥಂಕರನಾದ ಶ್ರೀ ನೇಮಿನಾಥಸ್ವಾಮಿ, (೨) ಗ್ರಂಥಕರ್ತೃವಾದ ನೇಮಿಚಂದ್ರ.

† ಉದಾ.—ಶ್ರವಣಬೆಳ್ಗೊಳದ ಗೋಮಟೇಶ್ವರ ಪ್ರತಿಷ್ಠಾಪಕನಾದ ಚಾಮುಂಡರಾಯನ ಪ್ರಥಮ ಗುರುವಾದ 'ಅಜಿತಸೇನಾಚಾರ್ಯ'ನನ್ನು ಕುರಿತು ಈ ಪಟ್ಟಾವಳಿಯಲ್ಲಿ ಹೀಗಿದೆ:—

'ದಕ್ಷಿಣ ಮಥುರಾನಗರ ನಿವಾಸಿ ಕ್ಷತ್ರಿಯವಂಶಶಿರೋಮಣಿ ದಕ್ಷಿಣ ತ್ರೈಲಿಂಗ ಕರ್ಣಾಟಕ ದೇಶಾಧಿಪತಿ ಚಾಮುಂಡರಾಯ ಪ್ರತಿಬೋಧಕ ಬಾಹುಬಲಿ ಪ್ರತಿಬಿಂಬ ಗೋಮಟ್ಟಸ್ವಾಮಿ ಪ್ರತಿಷ್ಠಾಚಾರ್ಯ ಶ್ರೀ ಅಜಿತಸೇನ ಭಟ್ಟಾರಕಾಣಾಮ್॥ (ಜೈ. ಸಿ. ಭಾ., I., 1, ಪು. ೬೮.)

"ಧವಲ ಮಹಾಧವಲ ಪುರಾಣಾದಿ ಸಕಲ ಗ್ರಂಥಕರ್ತಾರಃ ಶ್ರೀ ಜಿನಸೇನಾಚಾರ್ಯಾಣಾಮ್ ॥" (ಜೈ. ಸಿ. ಭಾ., I., 1, ಪು. ೩೯.)

(೨) ಜಿನಸೇನನಿಂದ ಈಚೆಯ ಜೈನ ಕೃತಿಗಳಲ್ಲಿ ಆತನನ್ನು ಹೊಗಳಿರುವ ಎಡೆಗಳಲ್ಲಿ ಕೂಡ, ಆತನು ನೃಪತುಂಗನ ಗುರುವೆಂದೇನೂ ಹೇಳಿಲ್ಲ, ಅಥವಾ ಆತನ ಹೆಸರೊಂದಿಗೆ ನೃಪತುಂಗನ ಹೆಸರನ್ನಾದರೂ ಹೇಳಿಲ್ಲ;

(೪) ಜಿನಸೇನನು ಕ್ರಿ. ಶ. ೮4೮ರ ಈಚೆಗೆ ಇದ್ದಿರಲಾರನೆಂಬುದರಿಂದ, ನೃಪತುಂಗನು ಜಿನಸೇನನಿಂದ ಮತಾಂತರ ಹೊಂದಿದ್ದರೆ, ಅದರ ಆಚೆಯಲ್ಲದೆ ಈಚೆಯಾಗಿರಲಾರದು; ಆದರೆ ನೃಪತುಂಗನ ಕಾಲದ ಕ್ರಿ. ಶ. ೮66ನೆಯ ಶಾಸನದಿಂದ ಆತನು ಅದುವರೆಗೆ ಜೈನನಾಗಿದ್ದಿಲ್ಲವೆಂದು ಮಾತ್ರವಲ್ಲ, ವಿಷ್ಣುಭಕ್ತನಾಗಿದ್ದಿರಬೇಕೆಂದೇ ವ್ಯಕ್ತವಾಗುತ್ತದೆ; ಆತನು 'ಮಹಾವಿಷ್ಣುವ ರಾಜ್ಯಂಬೊಲ್' ರಾಜ್ಯಂಗೆಯ್ಯುತ್ತಿದ್ದನೆಂದಿದೆಯಲ್ಲದೆ, ಜೈನ ಧರ್ಮದ ದ್ವಾದಶ ಚಕ್ರವರ್ತಿಗಳಲ್ಲಿ ಯಾವನೊಬ್ಬನದಾದರೂ ಉಪಮೆಯನ್ನು ಕೊಟ್ಟಿಲ್ಲ; *

(೫) ಅಮೋಘವರ್ಷ—ನೃಪತುಂಗ ಎಂಬ ಹೆಸರಿನ ಅರಸರು ಹಲವರಿದ್ದುದರಿಂದ, 'ಗಣಿತಸಾರ ಸಂಗ್ರಹ'ದಲ್ಲಿ ಹೇಳಲ್ಪಟ್ಟಿರುವಾತನು ನಮ್ಮ ನೃಪತುಂಗನೇ ಎಂದಾದರೆ (ಮತ್ತು ಹಾಗಾದರೆ ಮಾತ್ರ), ಆತನ ಜನ್ಮ ಧರ್ಮವು ಏಕಾಂತ ಪಕ್ಷ ಎಂದರೆ ವೈಷ್ಣವ ಧರ್ಮವೆಂಬುದು ಇನ್ನೂ ಬಲವಾಗುತ್ತದೆ; ಅನ್ಯಥಾ (ಇದೇ ಪಕ್ಷದಲ್ಲಿ) ಅದರಲ್ಲಿಯ ಹೇಳಿಕೆಯು ಇತಿಹಾಸ ದೃಷ್ಟ್ಯಾ ಅಸಮಂಜಸವೆಂಬುದರಿಂದ, ಅದನ್ನು ನಂಬಲಳವಲ್ಲ;

(೬) 'ಪ್ರಶ್ನೋತ್ತರ ರತ್ನಮಾಲಿಕೆ'ಯು ನೃಪತುಂಗನ ಕೃತಿಯಾಗಿರಲಾರದು; ಅದರಲ್ಲಿಯ 'ವಿವೇಕಾತ್ತ್ಯಕ್ತ ರಾಜ್ಯೇನ' ಎಂಬ ಶ್ಲೋಕವು ಅದರ ಮೂಲ ರಚನೆಯಿಂದ ಅರ್ವಾಚೀನವಾದ ಪ್ರಕ್ಷೇಪವಾಗಿರಬೇಕು. ಅಥವಾ ಆ ಶ್ಲೋಕದಲ್ಲಿಯ ಹೇಳಿಕೆಯನ್ನು ದಿಟವೆಂದು ನಂಬಿದರೂ, ಅದರಿಂದ ನೃಪತುಂಗನು ತನ್ನ ವಿವೇಕದಿಂದ ತಾನೆ ಪಟ್ಟವನ್ನು ಬಿಟ್ಟನೆಂದಾಗುತ್ತದಲ್ಲದೆ, ಜೈನ ಧರ್ಮವನ್ನು ಅವಲಂಬಿಸಿ (ಅಥವಾ ಅವಲಂಬಿಸಿದುದರಿಂದ) ಹಾಗೆ ಮಾಡಿದನೆಂದಾಗಲಿ, ಆ ವಿವೇಕವು ಆತನಿಗೆ ಜೈನ ಧರ್ಮದಿಂದ ಒದಗಿತೆಂದಾಗಲಿ ಸರ್ವಥಾ ಅರ್ಥವಾಗದು.

(೭) 'ಕವಿರಾಜಮಾರ್ಗ'ವನ್ನು ರಚಿಸಿದಾತನು ನೃಪತುಂಗನೇ ಇರಲಿ, ಅಥವಾ ಆತನ ಆಸ್ಥಾನದಲ್ಲಿಯ ಇತರರು ಯಾರೇ ಇರಲಿ; ಅದರಲ್ಲಿ ಪ್ರತಿಫಲಿಸಿರುವ ಧರ್ಮವು ನೃಪತುಂಗನ ಧರ್ಮವೇ ಆಗಿರಬೇಕಲ್ಲದೆ, ರಚಕನು ಅನ್ಯನಿದ್ದರೂ, ಅನ್ಯಮತೀಯನಿದ್ದರೂ ಆತನದಾಗಲಾರದು; ಆದುದರಿಂದ ಅದರ ಅವತಾರಿಕೆಯ

* ವಿಷ್ಣುವು ತನ್ನ ಹಲವು ಅವತಾರಗಳಲ್ಲಿ ಚಕ್ರವರ್ತಿಯಾಗಿದ್ದನೆಂದು 'ಶ್ರೀಮದ್ಭಾಗವತ' ಮೊದಲಾದ ಪುರಾಣಗಳಿಂದ ಕಾಣುತ್ತದೆ. (ಉದಾ.—ದಶರಥರಾಮ, ಋಷಭ ಚಕ್ರವರ್ತಿ, ಪೃಥು ಚಕ್ರವರ್ತಿ, ಇತ್ಯಾದಿ.) ಜೈನ ಧರ್ಮದ ದ್ವಾದಶ ಚಕ್ರವರ್ತಿಗಳನ್ನು ರನ್ನನ 'ಅಜಿತಪುರಾಣ'ದಲ್ಲಿ ಹೆಸರಿಸಿದೆ. ('ಕರ್ಣಾಟಕ ಕಾವ್ಯಕಲಾನಿಧಿ', ಸಂ. ೬೧, ಪುಟ ೧೮೩.)

ಪದ್ಯಗಳಲ್ಲಿ ಇಷ್ಟು ಸ್ಫುಟವಾಗಿರುವ ವಿಷ್ಣುಸ್ತುತಿಯಿಂದ ನೃಪತುಂಗನು ವೈಷ್ಣವನಾಗಿದ್ದನೆಂದು ವ್ಯಕ್ತವಾಗುತ್ತದೆ;

(೮) ಸೊರಬ ಸಂ. ೮೫ನೆಯ, ಕ್ರಿ. ಶ. 877ನೆಯ ಈ ನೃಪತುಂಗನ ಕಾಲದ (ಮತ್ತು ಈತನ ಆಳಿಕೆಯ ಕೊನೆಯ ವರ್ಷದ) ಶಾಸನವು, ಈ ರಾಷ್ಟ್ರಕೂಟ ವಂಶದ (ಈತನ ಹಿಂದೆ ಆಗಿಹೋದ ಹಾಗೆಯೇ ಈತನ ಒಳಿಕ ಆಳಿದ) ಇತರ ಅರಸರ ಶಾಸನಗಳ ಮಾದರಿಯಲ್ಲಿಯೇ ಇರುವುದರಿಂದ, ಅದುವರೆಗಾದರೂ ಈತನು ತನ್ನ ಪೂರ್ವಿಕರ ಧರ್ಮವನ್ನು ಬಿಟ್ಟಿಲ್ಲವೆಂದಾಗುತ್ತದೆ;

(೯) ಕ್ರಿ. ಶ. 877ರ ಒಳಿಕ ಈತನ ದೇಹಾವಸಾನವಾಯಿತೋ, ಅಥವಾ ಈತನು ರಾಜ್ಯಭಾರದಿಂದ ನಿವೃತ್ತನಾದನೋ ಎಂಬುದನ್ನು ನಿಷ್ಕೃಷ್ಟ ಮಾಡುವುದಕ್ಕೆ ತಕ್ಕ ಸಾಧನಗಳಿಲ್ಲವಾದರೂ, ಈತನ ಮಗನಾದ ಮತ್ತೀತನ ಹಿಂದೆಯೇ ಪಟ್ಟಕ್ಕೆ ಬಂದ 'ಅಕಾಲವರ್ಷ'ನೆಂಬ ಬಿರುದಿನ ಕೃಷ್ಣ(ಕನ್ನರ)ನು ತನ್ನ ಪೂರ್ವಿಕರ ಧರ್ಮದಲ್ಲಿಯೇ ಇದ್ದನೆಂಬುದರಿಂದ ನೃಪತುಂಗನು ಆಮರಣಾಂತ ತನ್ನ ಪೂರ್ವಿಕರ ಭಾಗವತ ವೈಷ್ಣವ ಧರ್ಮದಲ್ಲಿಯೇ ಇದ್ದಿರಬೇಕಲ್ಲದೆ ತನ್ನ ಕಡೆಯ ಕಾಲದಲ್ಲಾದರೂ ಜೈನಧರ್ಮವನ್ನು ಅವಲಂಬಿಸಲಿಲ್ಲವೆಂದೇ ಹೇಳಬೇಕು.

ಮಂಜೇಶ್ವರ ಗೋವಿಂದ ಪೈ.

ಈ ಲೇಖದಲ್ಲಿ ಉಪಯೋಗಿಸಿರುವ ಸಂಕೇತಗಳು, ಇತ್ಯಾದಿ

1. *E. H. D.*—'*Early History of the Dekkan*', by R. G. Bhandarkar (1884).
2. ಪ್ರಾ. ಲೇ. ಮಾ.—'ಪ್ರಾಚೀನ ಲೇಖಮಾಲಾ,' (in 3 parts), published by Nirnayasagara Press, Bombay.
3. *E. C.*—'*Epigraphia Carnatica*', published by the Government of Mysore.
4. **ಕ. ಮಾ.**—'**ಕವಿರಾಜಮಾರ್ಗ**', edited by K. B. Pathak (*Bibliotheca Carnatica*, Vol. V).
5. ಜೈ. ಸಿ. ಭಾ.—'ಜೈನಸಿದ್ಧಾಂತಭಾಸ್ಕರ', a Hindi Magazine published by ಜೈನ ಸಿದ್ಧಾಂತ ಭವನ (Arrah, Behar).
6. ವಿ. ರ. ಮಾ.—ಮುಂಬಾಯಿಯ 'ಜೈನ ಮಿತ್ರ' ಕಾರ್ಯಾಲಯದಿಂದ ಪ್ರಕಟವಾದ (1912), 'ವಿದ್ವದ್ರತ್ನಮಾಲಾ' ಎಂಬ ಹಿಂದೀ ಪುಸ್ತಕ (ಪ್ರಥಮ ಭಾಗ), ಲೇಖಕ—ಶ್ರೀ ನಾಥೂರಾಮ ಪ್ರೇಮೀ.
7. 'ದರ್ಶನಸಾರ'—ದೇವಸೇನಾಚಾರ್ಯನ 'ದರ್ಶನಸಾರ' (ಪ್ರಾಕೃತ ಗ್ರಂಥ), ಮುಂಬಾಯಿಯ 'ಜೈನಗ್ರಂಥ ರತ್ನಾಕರ'ದಿಂದ ಪ್ರಕಾಶಿತವಾದುದು.
8. 'ತ್ರಿಲೋಕಸಾರ'—ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯಿಂದ ವಿರಚಿತವಾದ ಪ್ರಾಕೃತ ಗ್ರಂಥ ('ಮಾಣಿಕಚಂದ ದಿಗಂಬರ ಜೈನ ಗ್ರಂಥಮಾಲಾ', ನಂ. ೧೨, ಮುಂಬಾಯಿ).
9. ಹೇಮಚಂದ್ರನ 'ಅಭಿಧಾನ ಚಿಂತಾಮಣಿ'—Nirnayasagara Press, Bombay.
10. *I. A.* (Vol. XII, 1883)—'*Indian Antiquary.*'
11. '**ಪಾರ್ಶ್ವಾಭ್ಯುದಯ ಕಾವ್ಯ**'—Nirnayasagara Press, Bombay.
12. '*Men and Thought in Ancient India*'—by Radhakumuda Mookerjea (Macmillan & Co.).
13. '**ಪ್ರಭಾವಕ ಚರಿತ**'—Nirnayasagara Press, Bombay.
14. '*Gaekwad's Oriental Series*'—Central Library, Baroda.
15. '**ಗಣಕ ತರಂಗಿಣೀ**'—'Medical Hall Press', Benares.
16. 'ಭಕ್ತಾಮರ ಸ್ತೋತ್ರ'—'ಕಾವ್ಯಮಾಲೆ'ಯ ಸಪ್ತಮ ಗುಚ್ಛಕದಲ್ಲಿ (Nirnayasagara Press, Bombay).

ಮೇಘ ದೂತ ಕಾವ್ಯದ ಸೊಬಗು

(ಮುಂದುವರಿದುದು)

ಯಕ್ಷನ ಸಂತಾಪ—ಮೇಘದೂತ ಕಾವ್ಯದಲ್ಲಿ ಕಾಳಿದಾಸನು ವಿರಹ ಸಂತಪ್ತನಾದ ಯಕ್ಷನ ಹೃದಯವನ್ನೇ ನಮ್ಮೆದುರಿಗೆ ಹಿಡಿದಿದ್ದಾನೆ. ಯಕ್ಷನು ಅಲಕಾ ನಗರದಲ್ಲಿ ತನ್ನ ಪ್ರಾಣ ಪ್ರಿಯಳೊಡನೆ ಸುಖಮಯವಾಗಿ ಕಾಲವನ್ನು ಕಳೆಯುತ್ತಿದ್ದನು. ವಿಲಾಸ ಪ್ರಿಯನಾಗಿ ಧರ್ಮ ವಿರುದ್ಧವಲ್ಲದ ಸಮಸ್ತ ಸುಖಗಳನ್ನೂ ಅನುಭವಿಸುತ್ತಿದ್ದನು. ತನ್ನ ಅರಸಿಯೇ ತನ್ನ ಪ್ರಾಣವೆಂದು ತಿಳಿದು, ಅನುಪಮವಾದ ದಾಂಪತ್ಯ ಸುಖವನ್ನನುಭವಿಸುತ್ತ, ಪ್ರೇಮ ಲಹರಿಯಲ್ಲಿ ತೇಲಾಡುತ್ತಿದ್ದನು. ಸುರಸುಂದರಿಯರನ್ನೇಳಿಸುವಷ್ಟು ಲಾವಣ್ಯವತಿಯಾಗಿ ಗುಣಮಣಿಯಾಗಿದ್ದ ವಧುವಿನೊಡನೆ ಸುಖವಾಗಿ ಬಾಳುತ್ತಿದ್ದನು. ಅಂತಹವನು ಶಾಪಗ್ರಸ್ತನಾಗುವನು. ಯಕ್ಷನು ಒಂದು ವರ್ಷಕಾಲ ರಾಮಗಿರಿಯಲ್ಲಿ ಏಕಾಕಿಯಾಗಿರಬೇಕೆಂಬುದಾಗಿ ಅವನಿಗೆ ಕುಬೇರನೇತಕ್ಕೆ ಅಪ್ಪಣೆಮಾಡಿದನೆಂಬ ವಿಷಯದಲ್ಲಿ ವ್ಯಾಖ್ಯಾನಕಾರರು ಎರಡು ವಿಧದ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಯಕ್ಷನು ಕುಬೇರನ ಉದ್ಯಾನ ರಕ್ಷಕನಾಗಿ ನೇಮಕ ಮಾಡಲ್ಪಟ್ಟಿದ್ದನೆಂದೂ, ಒಂದು ದಿನ ಅವನು ಅಶ್ರದ್ಧೆಯಿಂದ ಎಲ್ಲಿಗೋ ಹೊರಟುಹೋಗಲು, ಇಂದ್ರನ ಆನೆಯು ಅಲ್ಲಿಗೆ ನುಗ್ಗಿ ಪುಷ್ಪವಾಟಿಗಳನ್ನು ಧ್ವಂಸಮಾಡಿತೆಂದೂ, ಅದಕ್ಕಾಗಿ ಕುಬೇರನು ಕುಪಿತನಾಗಿ ಯಕ್ಷನಿಗೆ ಈ ವಿಧದ ಶಿಕ್ಷೆಯನ್ನು ವಿಧಿಸಿದನೆಂದೂ ಒಂದು ಮತ. ಇದು ಅಷ್ಟೇನೂ ಸಾಧುವಲ್ಲ. ಇಂದ್ರನ ಆನೆಯು ಅಮರಾವತಿಯಿಂದ ಅಲಕಾ ನಗರಕ್ಕೆ ಬರಲೇಕೆ? ಇದೂ ಹೋಗಲಿ, ಕುಬೇರನ ಉದ್ಯಾನಕ್ಕೆ ದಿಕ್ಕಾಗಿ ಯಕ್ಷನೊಬ್ಬನೇ ಕೋಲು ಗುದ್ದಲಿಯನ್ನು ಹಿಡಿದು ಹೊಣೆಯಾಗಿದ್ದನೆಂದೂ, ಅವನು ಎಲ್ಲಿಗೋ ಹೊರಟುಹೋದುದರಿಂದ, ಉದ್ಯಾನವನ್ನು ರಕ್ಷಿಸಲು ಮತ್ತಾರೂ ಅಲ್ಲಿರಲಿಲ್ಲವೆಂದೂ ನಾವೇತಕ್ಕೆ ಭಾವಿಸಬೇಕು? ನನ್ನ ಮನಸ್ಸಿಗೇನೋ ಈ ಸಿದ್ಧಾಂತವು ಸಮಂಜಸವಾಗಿರುವಂತೆ ತೋರುವುದಿಲ್ಲ. ವ್ಯಾಖ್ಯಾನಕಾರರ ಮತ್ತೊಂದು ಮತವಿದೆ. ಅದು ಸಮಂಜಸವಾಗಿರುವುದಲ್ಲದೆ, ಸೊಗಸಾಗಿಯೂ ಇದೆ. ಬೆಳಗಿನ ವೇಳೆಯಲ್ಲಿ ಹೊಸದಾಗಿ ಅರಳಿರುವ ಹೂಗಳನ್ನು ಕುಬೇರನ ಶಿವ ಪೂಜೆಗೆ ಒದಗಿಸುವುದು ಯಕ್ಷನಿಗೆ ಕೊಡಲ್ಪಟ್ಟಿದ್ದ ಊಳಿಗ. ಅವನು ಪ್ರತಿ ದಿನವೂ ಬಹಳ ಮುಂಚಿತವಾಗಿ ಎಚ್ಚತ್ತು, ಪುಷ್ಪಾಪಚಯಕ್ಕೆ ಹೋಗಿ ಬರಬೇಕಾಗಿದ್ದಿತು. ಅವನು ಪತ್ನಿಯನ್ನಗಲಿ ಹೋಗಲಾರದೆ, ಒಮ್ಮೆ ಹಿಂದಿನ ರಾತ್ರಿಯೇ ತಾನು ತಂದಿಟ್ಟಿದ್ದ ಕಮಲ ಪುಷ್ಪವನ್ನು ಕುಬೇರನಿಗೆ ಅರ್ಪಿಸಿದನು. ಕುಬೇರನು ಶಿವನನ್ನು ಅರ್ಚಿಸುವಾಗ ಕಮಲ ಪುಷ್ಪದಲ್ಲಿ ಅಡಗಿದ್ದ ತುಂಬಿಯು

ಅವನ ಕೈಯನ್ನು ಕಚ್ಚಿತು. ಕುಬೇರನು ನಿಜ ಸ್ಥಿತಿಯನ್ನು ತಿಳಿದು ಯಕ್ಷನ ಅಶ್ರದ್ಧೆಗಾಗಿ ಶಿಕ್ಷೆಯನ್ನು ವಿಧಿಸಿದನು. ಇದು ಸಮಂಜಸವಾಗಿದೆ.

ಯಕ್ಷನು ಒಂದು ವರ್ಷಕಾಲ ಪತ್ನೀ ವಿರಹಿತನಾಗಿ ರಾಮಗಿರಿಯಲ್ಲಿ ಏಕಾಕಿಯಾಗಿರಬೇಕೆಂಬ ಶಿಕ್ಷೆಯೂ ಈ ಸಂದರ್ಭಕ್ಕೆ ಒಪ್ಪುತ್ತದೆ. ಆದರೂ, "ಪುಷ್ಪಸಂಚಯಕ್ಕೂ ಆಳುಗಳಿರಲಿಲ್ಲವೆ? ಯಕ್ಷನೇ ಏತಕ್ಕೆ ಆ ಕೆಲಸಕ್ಕೆ ನೇಮಿಸಲ್ಪಟ್ಟಿದ್ದನು?" ಎಂಬ ಆಕ್ಷೇಪಣೆಯೂ ಹುಟ್ಟಬಹುದು. ಇದಕ್ಕೆ ಸಮಾಧಾನ ಹೇಳುವುದು ಕಷ್ಟವಲ್ಲ. ಕುಬೇರನ ಘನತೆಗೂ ಪದವಿಗೂ ತಕ್ಕಂತಹವನಲ್ಲವೇ ಅವನ ಶಿವಾರ್ಚನೆಗೆ ಪುಷ್ಪಗಳನ್ನೊದಗಿಸಬೇಕು? (ಚಕ್ರವರ್ತಿಗಳಿಗೆ ಸಾಂಕೇತಿಕವಾಗಿ ಪೀಕದಾನಿಯನ್ನು ಹಿಡಿಯುವ ಉದ್ಯೋಗವು ಈಗಲೂ ನಡೆದುಬರುತ್ತಿದೆಯಂತೆ. ಶ್ರೀಮಂತರು ಆ ಕೆಲಸಕ್ಕೆ ನೇಮಕಮಾಡಲ್ಪಡುವರಂತೆ. ಹಿಂದೆ ಭೋಜರಾಜನು ವ್ಯಾಧಿಗ್ರಸ್ತನಾದಾಗ ಅವನ ಪತ್ನಿಯೇ ಪ್ರೀತಿಯಿಂದ ಪಥ್ಯಕ್ಕೆ ಹುಗ್ಗಿಯನ್ನು ಮಾಡಿ ತಂದಿದ್ದಳಂತೆ. ಅಡಿಗೆಯವರೇ ಅರಮನೆಯಲ್ಲಿರಲಿಲ್ಲವೆಂಬುದು ಇದರ ತಾತ್ಪರ್ಯವೆ?) ಇದು ಹಾಗಿರಲಿ, ಕಾಳಿದಾಸನೇ ಶಿಕ್ಷೆಯ ಕಾರಣವನ್ನು ಹೇಳಿಲ್ಲ. ಹೀಗಿದ್ದೂ ನಾವು ಊಹಾ ಚಮತ್ಕಾರಗಳನ್ನೇಕೆ ವೃಥಾ ವೆಚ್ಚಮಾಡಿಕೊಳ್ಳಬೇಕು? ನಮ್ಮ ನಮ್ಮ ಸ್ವತ್ತುಗಳು ನಮ್ಮ ನಮ್ಮ ಬುಟ್ಟಿಗಳಲ್ಲಿಯೇ ಇರಲಿ. ಅಂತು, ಯಕ್ಷನಿಗೆ ಪತ್ನೀ ವಿರಹವು ಕೈಗಟ್ಟಿತು. ಅವನು ಆಕೆಯನ್ನು ಒಂದು ದಿನವೂ ಅಗಲಿದ್ದವನಲ್ಲ. ಭೋಗ ಸಾಮ್ರಾಜ್ಯದಲ್ಲಿ ಓಲಾಡುತ್ತಿದ್ದವನು ನಮ್ಮ ಯಕ್ಷ. ಆದುದರಿಂದ, ಅವನು ಪತ್ನಿಯನ್ನು ಅಗಲಿರಲಾರದೆ ಕಾಮಾರ್ತನಾಗಿ ಕಾತರನಾಗುವನು. ಅವನಿಗೆ ಸರ್ವದಾ ಅವಳ ಚಿಂತೆಯೇ. ಅವಳಿಗಾಗಿ ಕಂಬನಿ ಬಿಡುವುದೇ ಅವನ ಕೆಲಸ. ಬಂಡೆಗಳ ಮೇಲೆ ಅವಳ ಚಿತ್ರವನ್ನು ಬರೆದು ಬರೆದು ಅವನು ರೋದಿಸುವನು. ದೂರ ವಾರ್ತಾ ಶ್ರವಣ ಮುಂತಾದ ಅವನ ಮಹಿಮೆಗಳೆಲ್ಲ ಮುದುರಿಹೋಗಿವೆ. (ಆದುದರಿಂದಲೇ, ಕವಿಯು "ಶಾಪೇನಾಸ್ತಂಗಮಿತ ಮಹಿಮಾ" ಎಂದು ಮೊಟ್ಟಮೊದಲಿನಲ್ಲಿಯೇ ತಿಳಿಸಿದ್ದಾನೆ.) ಆದ ಕಾರಣ, ತನ್ನ ಪತ್ನಿಯ ವೃತ್ತಾಂತವೇ ಅವನಿಗೆ ತಿಳಿದಿಲ್ಲ. ಸುಕೋಮಲೆಯಾದ ಆ ರಮಣಿಯ ಅವಸ್ಥೆಯು ಏನಾಗಿದೆಯೋ ಎಂದು ಯಕ್ಷನಿಗೆ ತಳಮಳ. ಈ ಎಲ್ಲ ಆತಂಕಗಳೂ ಸೇರಿ, ಅವುಗಳ ಬೇಗುದಿಯಿಂದ ಅವನು ಬಳಲಿ ಬೆಂಡಾಗುವನು. ಎಲ್ಲಿ ನಿಲ್ಲುವುದಕ್ಕೂ ಅವನಿಗೆ ಮನಸ್ಸು ಬಾರದು. ಆದುದರಿಂದಲೇ, ಕವಿಯು "ರಾಮಗಿರ್ಯಾಶ್ರಮೇಷು" ಎಂದು ಗ್ರಂಥಾರಂಭದಲ್ಲಿಯೇ ತಿಳಿಸಿರುವುದು! ಯಕ್ಷನು ಇಂದು ಒಂದು ಕಡೆ ಪರ್ಣಶಾಲೆಯನ್ನು ಕಟ್ಟಿಕೊಂಡರೆ, ನಾಳೆ ಮತ್ತೊಂದು ಕಡೆ, ನಾಡಿದ್ದು ಮಗುದೊಂದು ಕಡೆ ಪರ್ಣಶಾಲೆಯನ್ನು ಕಟ್ಟಿಕೊಳ್ಳುತ್ತಿದ್ದನೆಂದು ಸೂಚಿಸಿರುವುದು! "ಅಯ್ಯೋ ಕವಿಯೆ! ಏನು ಕವಿತೆಯೋ ನಿನ್ನದು! ಎಂತಹ ಪ್ರಯೋಗಗಳೋ ನಿನ್ನವು!" ಎಂದು ನಾವು ಅಚ್ಚರಿಗೊಳ್ಳುವಂತೆ ಮಾಡಿರುವುದು! ಯಕ್ಷನು ಎಲ್ಲಿ ಗುಡಿಸಲು ಹಾಕಿ

ಕೊಂಡರೂ ನಿಲ್ಲಲಾರನು. ಬೆಂಕಿಯಲ್ಲಿ ಬಿದ್ದ ಹುಳುವಿನಂತೆ ಪರಿತಪಿಸುವವನಿಗೆ ಸ್ನಿಗ್ಧಚ್ಛಾಯೆಯುಳ್ಳ ತರುಗಳ ಸಂದಣಿಯಲ್ಲಿ, ಎಲ್ಲಿ, ಹೇಗೆ ಪರ್ಣಶಾಲೆಯನ್ನು ಹಾಕಿಕೊಂಡರೆ ತಾನೆ ತೃಪ್ತಿಯುಂಟಾದೀತು? ಅವನ ಮನಸ್ಸು ಹೇಗೆ ತಾನೆ ನೆಮ್ಮದಿಯಾಗಿ ನಿಂತೀತು?

ಭೋಗದ ಪರಾಕಾಷ್ಠ ದಶೆಯಲ್ಲಿದ್ದವನ ಪ್ರೇಮ—ಒಬ್ಬ ಗಂಧರ್ವನನ್ನೋ ಅಥವಾ ಕಿನ್ನರನನ್ನೋ ಕಾಳಿದಾಸನು ತನ್ನ ಕಾವ್ಯಕ್ಕೆ ತಂದು ಸೇರಿಸದೆ, ಯಕ್ಷನನ್ನೇ ಆರಿಸಿರುವುದಕ್ಕೂ ಅರ್ಥವಿದೆ. ಗಂಧರ್ವರು ಸಂಗೀತದಲ್ಲಿ ಹೇಗೆ ಸುಪ್ರಸಿದ್ಧರೋ, ಯಕ್ಷರು ಭೋಗಲಾಲಸೆಯಲ್ಲಿ ಹಾಗೆಯೇ ಸುಪ್ರಸಿದ್ಧರು. ಅವರ ಅಲಕಾ ನಗರವು ಭೋಗ ಸಾಮಗ್ರಿಗಳ ನೆಲೆ. ಅವರ ಜೀವನವು ವೈಭವಮಯವಾದುದು. ನಿಧಿಗಳ ನಾಯಕನಾದ ಕುಬೇರನೇ ಅವರ ಒಡೆಯನು. ವಿತ್ತೇಶನೇ ತಮ್ಮ ಒಡೆಯನಾದಮೇಲೆ, ತನ್ನಂತೆಯೇ ತನ್ನ ಪ್ರಜೆಗಳೂ ಧರ್ಮವಿರುದ್ಧವಲ್ಲದ ಭೋಗವನ್ನನುಭವಿಸಲೆಂದು ಅವನಿಗೂ ಆಸೆಯಿದ್ದಮೇಲೆ—ಇನ್ನು ಕೇಳಬೇಕಾದುದೇನು? ಅಲಕಾ ನಗರದಲ್ಲಿ ಎಲ್ಲ ವಿಧದ ಭೋಗ ಸಾಧನಗಳೂ ತುಂಬಿ ತುಳುಕುತ್ತಿವೆ. ಅಲ್ಲಿಯ ಉದ್ಯಾನಗಳ ಸೊಬಗನ್ನು ಹೊಗಳೋಣವೆ, ಅಲ್ಲಿಯ ಸೌಧಮಾಲೆಗಳ ವೈಭವವನ್ನು ವರ್ಣಿಸೋಣವೆ, ಅಲ್ಲಿಯ ಸ್ತ್ರೀಯರ ರೂಪ ಲಾವಣ್ಯಗಳನ್ನು ವರ್ಣಿಸೋಣವೆ, ಅವರ ಅಲಂಕಾರವನ್ನು ವರ್ಣಿಸೋಣವೆ—ಯಾವುದನ್ನೆಂದು ವರ್ಣಿಸೋಣ? ಉತ್ತರಮೇಘದ ಮೊಟ್ಟಮೊದಲನೆಯ ಶ್ಲೋಕವೇ, ಎಂದರೆ—

"ವಿದ್ಯುತ್ವಂತಂ ಲಲಿತವನಿತಾಃ ಸೇಂದ್ರಚಾಪಂ ಸಚಿತ್ರಾಃ।
ಸಂಗೀತಾಯ ಪ್ರಹತಮುರಜಾಃ ಸ್ನಿಗ್ಧಗಂಭೀರಘೋಷಂ ॥
ಅಂತಸ್ತೋಯಂ ಮಣಿಮಯ ಭುವಸ್ತುಂಗಮಭ್ರಂಲಿಹಾಗ್ರಾಃ।
ಪ್ರಾಸಾದಾಸ್ತ್ವಾಂ ತುಲಯಿತುಮಲಂ ಯತ್ರ ತೈಸ್ತೈರ್ವಿಶೇಷೈಃ ॥"

ಎಂಬ ಶ್ಲೋಕವೇ ಅಲಕಾ ನಗರದ ಜನರ ಭೋಗ ಪ್ರಿಯತೆಯನ್ನು ಪರೋಕ್ಷವಾಗಿ ವರ್ಣಿಸುತ್ತದೆ. ದಿನವನ್ನಣೆದು ನಿಂತಿರುವ ದಿವ್ಯ ಸೌಧಗಳು, ಸೊಕ್ಕು ಜವ್ವನದ ಮದದಿಂದ ಕೂಡಿ ವರ್ಚಸ್ವಿನಿಗಳಾಗಿರುವ ತರುಣಿಯರ ವಿಲೋಲ ದೃಷ್ಟಿ, ಸಂಗೀತಗೋಷ್ಠಿಗಳಲ್ಲಿ ಕೇಳಿಬರುವ ಮೃದಂಗ ನಿನಾದ ಇವೆಲ್ಲ ಈ ಶ್ಲೋಕದಲ್ಲಿ ವರ್ಣಿತವಾಗಿವೆ. ಅಲ್ಲಿಯ ಹೆಂಗಸರ ಪುಷ್ಪಾಲಂಕಾರದ ವೈಖರಿಯನ್ನು ಹಿಂದೆಯೇ ಅರಿಕೆಮಾಡಿದ್ದೇನೆ. ಇತರ ಅಲಂಕಾರ ಸಾಮಗ್ರಿಗಳಿಗೂ ಕೊರತೆಯಿಲ್ಲ. ಅಬಲೆಯರ ಅಲಂಕಾರ ಸಾಮಗ್ರಿಗಳನ್ನೆಲ್ಲ ಕಲ್ಪವೃಕ್ಷವೇ ಕೊಡುತ್ತಿರುವಲ್ಲಿ, ಯಾವುದಕ್ಕೇನು ಕೊರತೆ? ಯಕ್ಷರ ಹರ್ಮ್ಯಗಳಲ್ಲಿ ನೆಲಕ್ಕೆ ಚಂದ್ರಕಾಂತ ಶಿಲೆಗಳನ್ನು ಹರಡಿದ್ದರಂತೆ. ರತ್ನರಾಜಿಗಳೆಂದರಂತು ಅವರಿಗೆ ಲಕ್ಷ್ಯವೇ ಇಲ್ಲ. ಅಮರರು ಕೂಡ ಆಶಿಸುವಷ್ಟು ಸ್ಫುರದ್ರೂಪಿಣಿಗಳಾದ

ಅಲ್ಲಿಯ ಕನ್ಯೆಯರು, ರತ್ನಗಳನ್ನು ಮರಳಿನಲ್ಲಿ ಹೂಳಿ ಮುಚ್ಚಿಟ್ಟು ಅದನ್ನು ಹುಡುಕುವ ಆಟವನ್ನು ಆಡುತ್ತಿದ್ದರಂತೆ. ಅದನ್ನು—

"ಮಂದಾಕಿನ್ಯಾಃ ಸಲಿಲ ಶಿಶಿರೈಃ ಸೇವ್ಯಮಾನಾ ಮರುದ್ಭಿ|
ಮಂದಾರಾಣಾಮನುತಟರುಹಾಂ ಛಾಯಯಾ ವಾರಿತೋಷ್ಣಾಃ |
ಅನ್ವೇಷ್ಟವ್ಯೈಃ ಕನಕಸಿಕತಾ ಮುಷ್ಟಿ ನಿಕ್ಷೇಪ ಗೂಢೈಃ|
ಸಂಕ್ರೀಡಂತೇ ಮಣಿಭಿರಮರ ಪ್ರಾರ್ಥಿತಾ ಯತ್ರ ಕನ್ಯಾಃ ||"

ಎಂಬ ಶ್ಲೋಕದಲ್ಲಿ ಕವಿಯು ಮನೋಹರವಾಗಿ ವರ್ಣಿಸಿದ್ದಾನೆ. ಅಲ್ಲಿಯವರ ಸಂಪತ್ತು ಇನ್ನೆಷ್ಟು ಮಟ್ಟಿನದಾಗಿರಬೇಕು! ಯಕ್ಷರು ಇದ್ದರೋ ಇಲ್ಲವೋ—ಎಂಬುದು ಮುಖ್ಯವಲ್ಲ. ಕವಿಯು ತನ್ನ ಕಲ್ಪನಾ ಪ್ರಪಂಚಕ್ಕೆ ಎಷ್ಟು ಸೊಬಗನ್ನು ತುಂಬಿ, ಪ್ರವೃತ್ತಿ ಮಾರ್ಗದ ಪರಾಕಾಷ್ಠದಶೆಯನ್ನು ಎಷ್ಟು ಮಟ್ಟಿಗೆ ವರ್ಣಿಸಿರುವನೆಂಬುದೀಗ ಮುಖ್ಯ. ಏಕೆಂದರೆ, ಮೇಘ ದೂತದಂತಹ ಕಾವ್ಯಕ್ಕೆ ವೇದಾಭ್ಯಾಸ ಜಡನಾದ ಬಾಲಕಲು ಸ್ವಭಾವವುಳ್ಳ ವಿರಕ್ತನೊಬ್ಬನನ್ನು ನಾಯಕನನ್ನಾಗಿ ಮಾಡಿದ್ದರೆ, ಅದರ ಅಂದವೇ ಅಳಿಸಿಹೋಗುತ್ತಿದ್ದಿತು. ಯಕ್ಷನ ವೈಭವವನ್ನಾದರೂ ನೋಡಿ. ಆತನ ಮನೆಯಿರುವುದು ಕುಬೇರನ ಮನೆಗೆ ಉತ್ತರ ಭಾಗದಲ್ಲಿ. ಅದೂ ಹೆಚ್ಚು ದೂರದಲ್ಲಿಲ್ಲ. ಎಂದರೆ, ಕುಬೇರನ ಮನೆಯನ್ನೇ ಅದೂ ಹೋಲಬೇಕಾಯಿತು. ಇಲ್ಲವಾದರೆ ವಿತ್ತೇಶನ ಮನೆಯ ಬಳಿಯಲ್ಲಿ ಯಕ್ಷನ ಮನೆಯು ಇರುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಯಕ್ಷನ ಸೌಧಕ್ಕೆ ರತ್ನ ತೋರಣ. ಇಂದ್ರ ಧನುಸ್ಸಿನಂತೆ (ಕಾಮನ ಬಿಲ್ಲಿನಂತೆ) ಇರುವ ರತ್ನ ತೋರಣದಿಂದ ಹೊರಡುವ ವಿವಿಧ ವರ್ಣದ ಕಾಂತಿಪುಂಜ. ಸಮೀಪದಲ್ಲಿಯೇ ಯಕ್ಷನ ಪತ್ನಿಯು ಪುತ್ರಸ್ನೇಹದಿಂದ ಬೆಳೆಯಿಸಿದ ಬಾಲ ಮಂದಾರ ವೃಕ್ಷ. ಕೈಯೆತ್ತಿದರೆ ನಿಲುಕುವಂತಿರುವ ಅದರ ಹೂಗೊಂಚಲು—

"ತತ್ರಾಗಾರಂ ಧನಪತಿಗೃಹಾನುತ್ತರೇಣಾಸ್ಮದೀಯಂ |
ದೂರಾಲ್ಲಕ್ಷ್ಯಂ ಸುರಪತಿಧನುಶ್ಚಾರುಣಾ ತೋರಣೇನ ||
ಯಸ್ಯೋಪಾಂತೇ ಕೃತಕ ತನಯಃ ಕಾಂತಯಾ ವರ್ಧಿತೋ ಮೇ |
ಹಸ್ತಪ್ರಾಪ್ಯಸ್ತಬಕನಮಿತೋ ಬಾಲಮಂದಾರ ವೃಕ್ಷಃ ||"

ಎಂಬ ಶ್ಲೋಕದಲ್ಲಿ ಕವಿಯು ಇದನ್ನೆಲ್ಲ ಮನೋಜ್ಞವಾಗಿ ಬಣ್ಣಿಸಿದ್ದಾನೆ. ಯಕ್ಷನ ಸೌಧಕ್ಕೆ ಸೇರಿದಂತೆ "ಮರಕತಶಿಲಾಬದ್ಧ ಸೋಪಾನ ಮಾರ್ಗ"ವುಳ್ಳ ಒಂದು ಸರೋವರವೂ ಉಂಟು. ಅದರಲ್ಲಿ ಬಿಳಿಯ ಬಣ್ಣದ ನಾಳದಿಂದ ಕೂಡಿ ಥಳಥಳಿಸುವ ಸ್ವರ್ಣ ವರ್ಣದ ಕಮಲ ಪುಷ್ಪಗಳು! ಮಾನಸ ಸರೋವರದಿಂದ ಬಂದಿದ್ದು, ಮಾನಸ ಸರೋವರವನ್ನು ಉತ್ಕಂಠೆಯಿಂದ ಸ್ಮರಿಸದೆ ಆನಂದಮಯವಾಗಿ ಕಾಲಯಾಪನ ಮಾಡುತ್ತಿರುವ ರಾಜಹಂಸಗಳ ತಂಡ! ಇನ್ನು ಆ ಸರೋವರವು ಎಷ್ಟು ಅಂದವಾಗಿರಬೇಕು! ಸರೋವರದ ಸಮೀಪದಲ್ಲಿಯೇ

ಒಂದು ಕ್ರೀಡಾಶೈಲ! ಇಂದ್ರನೀಲ ಶಿಲೆಯಿಂದ ರಚಿತವಾದ ಅದರ ಶಿಖರದ್ಯುತಿ! ಕ್ರೀಡಾಶೈಲದ ಸುತ್ತಲೂ ಇರುವ ಕನಕ ಕದಳೀ ವೃಕ್ಷಗಳ ರಮ್ಯವಾದ ದೃಶ್ಯ! ಆ ಕ್ರೀಡಾಶೈಲದ ಮೇಲೊಂದು ಮಾಧವೀ ಮಂಟಪ. ಅದರ ಬಳಿಯಲ್ಲಿ ಮಂದಾನಿಲನಿಂದ ಆಂದೋಳಿತವಾಗುತ್ತಿರುವ ತಳಿರುಗಳ ತಂಡದಿಂದ ಕೂಡಿರುವ ರಕ್ತಾಶೋಕ ವೃಕ್ಷ. ಮಾಧವೀ ಮಂಟಪದ ಸುತ್ತಲೂ ಕುರಬಕ ಗಿಡಗಳ ಆವರಣ. ದೃಶ್ಯದ ಸೊಬಗಿನ ಜೊತೆಗೆ ಸುವಾಸನೆಯು ಸೊಗಸೂ ಸೇರುವಂತೆ ಮಾಡುವ ಬಕುಳ ವೃಕ್ಷ. ಈ ಕ್ರೀಡಾ ಶೈಲದಲ್ಲಿ ಯಾರಿಗೆ ತಾನೆ ಆನಂದವಿಲ್ಲ! ಯಕ್ಷನ ಸಹಧರ್ಮಿಣಿಗೆ ಅದು ಪ್ರಿಯವಾದುದೆಂದು ಯಕ್ಷನು ಹೇಳಿಕೊಳ್ಳುವುದರಲ್ಲಿ ಆಶ್ಚರ್ಯವು ತಾನೇ ಏನು! ಕ್ರೀಡಾ ಶೈಲದ ಮೇಲಿನ ಮತ್ತೊಂದು ಅಚ್ಚರಿಯ ನೋಟವನ್ನು ನೋಡಿ—

"ತನ್ಮಧ್ಯೇ ಚ ಸ್ಫಟಿಕ ಫಲಕಾ ಕಾಂಚನೀ ವಾಸಯಷ್ಟಿ।
ಮೂರ್ಲೇ ಬದ್ಧಾ ಮಣಿಭಿರನತಿ ಪ್ರೌಢವಂಶ ಪ್ರಕಾಶೈಃ॥
ತಾಲೈಃ ಶಿಂಜಾವಲಯ ಸುಭಗೈರ್ನರ್ತಿತಃ ಕಾಂತಯಾ ಮೇ।
ಯಾಮಧ್ಯಾಸ್ತೇ ದಿವಸ ವಿಗಮೇ ನೀಲಕಂಠಃ ಸುಹೃದ್ವಃ॥"

ಕವಿಯ ಕಲ್ಪನಾ ಶಕ್ತಿಗೆ ಎದುರೇ ಇಲ್ಲ. ಆ ಕ್ರೀಡಾಶೈಲದ ಮೇಲೆ ಅಶೋಕ ವೃಕ್ಷಕ್ಕೂ ಬಕುಳ ವೃಕ್ಷಕ್ಕೂ ನಡುವೆ ಒಂದು ಸ್ಫಟಿಕ ಫಲಕವಂತೆ. ಅದಕ್ಕೆ ಕಾಂಚನದ ಕಾಲುಗಳು, ಈ ಸ್ಫಟಿಕಶಿಲಾ ಪೀಠದ ಬಂಗಾರದ ಕಾಲುಗಳಿಗೆ ಪಚ್ಚೆಗಳನ್ನು ಕೆತ್ತಿದೆ. ಆ ಸ್ಫಟಿಕಶಿಲಾ ಪೀಠದ ಮೇಲೆ ನರ್ತಿಸುತ್ತಿರುವ ಸೋಗೆ ನವಿಲು, ಅದರ ಎದುರಿಗೆ ಕೈಗಳಿಂದ ನರ್ತನದ ಗತಿಗೆ ತಕ್ಕಂತೆ ಚಪ್ಪಾಳೆ ಹಾಕುತ್ತ ನವಿಲನ್ನು ಕುಣಿಸುತ್ತಿರುವ ಸ್ಫುರದ್ರೂಪಿಣಿಯಾದ ಯಕ್ಷನ ಗೇಹಿನಿ. ಅವಳ ಕಡಗಗಳ ಮತ್ತು ಬಳೆಗಳ ಮಧುರ ನಿನಾದ. ಅದನ್ನು ನೋಡಿ ನೋಡಿ ಆನಂದಿಸುತ್ತಿದ್ದ ಯಕ್ಷ. ಮನಸ್ಸಿನೆದುರಿಗೆ ಊಹಿಸಿಕೊಂಡರೂ ಕಣ್ಣುಗಳೇ ಬಳಲಿ ಹೋಗುವಂತೆ ತೋರುವ ದೃಶ್ಯವಿದು! ಯಾವುದೋ ಒಂದು ಪ್ರಪಂಚದ ಅನಿರ್ವಚನೀಯವಾದೊಂದು ಪ್ರಭೆಯು ಕಣ್ಣಿಗೆ ಅಪ್ಪಳಿಸಿದಂತಾಗುವ ಮನೋಹರತೆಯೂ ಮನಸ್ಸನ್ನು ಸೋಯಿಸುವಷ್ಟು ಹೆಚ್ಚಾಗಿರುವ ದೃಶ್ಯವಿದು! ಇಲ್ಲಿ ಪದ ಪ್ರಯೋಗವನ್ನು ನೋಡಿ: "ಸುಹೃದ್ವಃ" ಎಂದಿದೆ. ಆ ನವಿಲು ಆ ದಂಪತಿಗಳ ಮಿತ್ರನಂತೆ. ಎಂತಹ ಉದಾತ್ತ ಭಾವನೆ! ಮನುಷ್ಯತ್ವದಲ್ಲಿಯೇ ದೇವತ್ವವನ್ನು ಮುಟ್ಟಿರುವ ಕವಿಯಿಂದಲ್ಲದೇ ಈ ಮಾತುಗಳು ಹೊರಟಾವು! ಭೋಗ ಸಾಮಗ್ರಿಯಾದ ಪಕ್ಷಿ ಎಂಬ ಭಾವನೆಯಿಲ್ಲ. "ನೀಲಕಂಠಃ ಸುಹೃದ್ವಃ" ಎಂಬ ಮಾತುಗಳಲ್ಲವೇ ಯಕ್ಷನ ಬಾಯಿಂದ ಹೊರಡುವುವು! ಇದು ಹಾಗಿರಲಿ, ಯಕ್ಷನ ಮನೆಯ ವೈಭವವು ಎಷ್ಟು ಮಟ್ಟಿನದು ನೋಡಿ! "ಅಕ್ಷಯ್ಯಾಂತರ್ಭವನನಿಧಯಃ" ಎಂದು ಯಕ್ಷರ ಸಂಪತ್ತನ್ನು ಕಾಳಿದಾಸನು ಮೊದಲೇ ವರ್ಣಿಸಿದ್ದಾನೆ. ಎಷ್ಟು ಅನುಭವಿಸಿದರೂ ಮುಗಿಯದಷ್ಟು ಅಪಾರವಾದ ಸಂಪತ್ತು

ಅವರದು! ಅಂತು, ಯಕ್ಷನು ಮಹತ್ತರವಾದ ವಿಭವ ಮಧ್ಯದಲ್ಲಿ ಸುರಸುಂದರಿಯರನ್ನೇ ಹೀನೈಸುವಷ್ಟು ಸ್ವರೂಪಿಣಿಯಾಗಿ, ಗುಣದ ಗಣಿಯಾಗಿ, ಪತಿಪ್ರಾಣೆಯಾಗಿದ್ದ ಸಾಧ್ವಿಯೊಡನೆ ಸೌಖ್ಯಪರಂಪರೆಗಳನ್ನನುಭವಿಸುತ್ತಿದ್ದವನು. ಅಂತಹವನು ಕುಬೇರನ ಅಪ್ಪಣೆಯಿಂದ ಏಕಾಕಿಯಾಗಿ ರಾಮಗಿರಿಯಲ್ಲಿ ಒಂದು ವರ್ಷ ಕಾಲ ಭಿಕಾರಿಯಂತೆ ("ಅಸ್ತಂಗಮಿತ ಮಹಿಮನಾಗಿ") ವಾಸಮಾಡಬೇಕಾಗುವುದು. ಅವನ ಸಂತಾಪವು ಇನ್ನೆಷ್ಟು ಮಟ್ಟಿನದಾಗಿರಬೇಕು!

ಯಕ್ಷನದು ಸಾತ್ವಿಕ ಪ್ರೇಮ—ಯಕ್ಷನು ಸಾತ್ವಿಕ ಪ್ರೇಮವನ್ನು ಉಪಾಸಿಸುತ್ತಿರುವ ರಸಿಕನೇ ಹೊರತು, ವಿಷಯಲಂಪಟನಾದ ಕಾಮಿಯಲ್ಲ. ನಮಗೆಲ್ಲಿ ಯಕ್ಷನ ನಿಜಸ್ವಭಾವವು ತಿಳಿಯದೆ ಹೋದೀತೋ ಎಂದು ಕಾಳಿದಾಸನಿಗೇ ತಳಮಳ. ಆದುದರಿಂದಲೇ ಅವನು ಮೊಟ್ಟಮೊದಲನೆಯ ಶ್ಲೋಕದಲ್ಲಿಯೇ ಯಕ್ಷನು ಕಾಂತಾವಿರಹದಿಂದ ಪರಿತಪಿಸುತ್ತಿದ್ದನೆಂಬುದನ್ನು ಹೇಳಿದ ಉಸಿರಿನಲ್ಲಿಯೇ ಸೀತಾದೇವಿಯ ಸುದ್ದಿಯನ್ನು ಸೂಚಿಸಿಬಿಟ್ಟಿದ್ದಾನೆ:—

"**ಕಶ್ಚಿತ್ಕಾಂತಾ ವಿರಹಗುರುಣಾ ಸ್ವಾಧಿಕಾರಾತ್ಪ್ರಮತ್ತಃ ।**
ಶಾಪೇನಾಸ್ತಂಗಮಿತ ಮಹಿಮಾ ವರ್ಷಭೋಗ್ಯೇಣ ಭರ್ತುಃ ॥
ಯಕ್ಷಶ್ಚಕ್ರೇ ಜನಕತನಯಾ ಸ್ನಾನಪುಣ್ಯೋದಕೇಷು ।
ಸ್ನಿಗ್ಧಚ್ಛಾಯಾತರುಷು ವಸತಿಂ ರಾಮಗಿರ್ಯಾಶ್ರಮೇಷು ॥"

ಎಂದು ಕಂಠೋಕ್ತವಾಗಿ ಹೇಳಿದ್ದಾನೆ. ತನ್ನ ಅಧಿಕಾರವನ್ನು ಕಳೆದುಕೊಂಡು ಒಂದು ವರ್ಷಕಾಲ ಇರಬೇಕಾಗಿದ್ದ ಮತ್ತು ಶಾಪದಿಂದ ಅಸ್ತಂಗಮಿತ ಮಹಿಮನಾಗಿದ್ದ ಯಕ್ಷನು—ದುರ್ಭರವಾದ ಕಾಂತಾವಿರಹ ಸಂತಪ್ತನಾಗಿದ್ದ ಯಕ್ಷನು—ದಟ್ಟವಾದ ನೆರಳುಳ್ಳ ಮರಗಳಿಂದಲೂ, ಸೀತಾಮಾತೆಯು ಪೂರ್ವದಲ್ಲಿ ಸ್ನಾನಮಾಡಿದ್ದ ಪುಣ್ಯೋದಕದಿಂದಲೂ ಕೂಡಿದ್ದ ರಾಮಗಿರಿಯಲ್ಲಿ ಮತ್ತೆ ಮತ್ತೆ ಆಶ್ರಮಗಳನ್ನು ಕಲ್ಪಿಸಿಕೊಂಡು ವಾಸಮಾಡುತ್ತಿದ್ದನೆಂಬುದು ಇದರ ತಾತ್ಪರ್ಯ.

ಕಾಳಿದಾಸನು ಎಂತಹ ಇಂದ್ರಜಾಲವನ್ನು ಮಾಡಿದ್ದಾನೆ! ಮಸಿಯನ್ನು ತುಂಬಿದ ಬಟ್ಟಲನ್ನು ನಮ್ಮ ತಲೆಯಮೇಲೆ ಒರಗುಮಾಡುವನೆಂಬ ಭ್ರಮೆಯು ತೋರುತ್ತಿರುವಾಗಲೇ, ಅದೇ ಬಟ್ಟಲಿನಿಂದಲೇ ನಮ್ಮ ತಲೆಯಮೇಲೆ ಪನ್ನೀರು ಸುರಿಯುತ್ತಾನೆ. ಯಕ್ಷನ ದುರ್ಭರವಾದ ವಿರಹವೆಂದೊಡನೆಯೇ ವಿಷಯ ಸಂಗ್ರಾಮಭೂಮಿಗೆ ಪಯಣಮಾಡುವುದರಲ್ಲಿದ್ದ ನಮ್ಮ ಮನಸ್ಸು ಲೋಕಮಾತೆಯಾದ ಸೀತಾದೇವಿಯ ಹೆಸರನ್ನು ಕೇಳಿ, ಭಕ್ತಿರಸದಲ್ಲಿ ಸ್ನಾನಮಾಡಿ ಪವಿತ್ರವಾಗಲು ಅನುವಾಗುತ್ತದೆ. ಯಕ್ಷನ ಮನಸ್ಸಿನಲ್ಲಿ ಪತ್ನೀ ಪ್ರೇಮವು ರೂಢಮೂಲವಾಗಿ ನೆಲೆಗೊಂಡಿರುವುದು ನಿಜ. ಅವನು ವಿರಹಕಾತರನಾಗಿರುವುದೂ ನಿಜ. ಆದರೂ, ಅವನ ಮನಸ್ಸು ಅಳತೆಗೆಟ್ಟು ಹಿಡಿತದಿಂದ ತಪ್ಪಿಸಿಕೊಂಡಿಲ್ಲ. ಅವನ ಮನಸ್ಸಿನಲ್ಲಿರುವುದು ಕಾಮವಾಸನೆಯಿಂದ ಕೂಡಿದ ಮೋಹವಿಕಾರವಲ್ಲ. ಧರ್ಮಪತ್ನಿಯಲ್ಲಿ ನೆಲಸಿ ಅವಳ ಮೂರ್ತಿಯ ಮೇಲೆ ನಿರರ್ಗಳವಾಗಿ ಅಭಿಷೇಕವಾಗುತ್ತಿ

ರುವ ಪ್ರೇಮ ಸುಧಾ ತರಂಗ. ಅವನ ಮನಸ್ಸಿನಲ್ಲಿರುವುದು ಶಾಸ್ತ್ರ ಸಮ್ಮತವಾದ ದಾಂಪತ್ಯ ಪ್ರೇಮದ ಪರಿಸ್ಪಂದನ. ಅವನ ವಿರಹ ದುಃಖವು ಕಾಮ ದೋಷ ವಿವರ್ಜಿತವಾದುದೆಂಬುದನ್ನು ತೋರ್ಪಡಿಸುವುದಕ್ಕಾಗಿಯೇ ಕಾಳಿದಾಸನು ಶ್ಲೋಕದ ಉತ್ತರಾರ್ಧದಲ್ಲಿಯೇ ಸೀತಾ ಮಾತೆಯು ಸ್ನಾನಮಾಡುತ್ತಿದ್ದ ಪುಣ್ಯೋದಕದ ಸುದ್ದಿಯನ್ನೆತ್ತಿರುವುದು. ಯಕ್ಷನೂ ಅದರಲ್ಲಿ ಸ್ನಾನ ಮಾಡಿಯೇ ಇದ್ದಾನೆ. ಯಾವ ದೇವಿಯನ್ನು ಸ್ಮರಿಸಿದ ಮಾತ್ರವೇ ಪಾಪಿಯ ಹೃದಯದಲ್ಲಿಯೂ ಪಾವನ ಭಾವಗಳು ತಲೆದೋರುವುವೋ, ಯಾವ ದೇವಿಯ ಹೆಸರನ್ನೆತ್ತಿದೊಡನೆಯೇ ಹೃದಯದಲ್ಲಿ ಭಕ್ತಿ ತರಂಗಗಳು ಉಕ್ಕಿ ಹರಿಯುವುವೋ, ಯಾವ ದೇವಿಯು ಸಾತ್ವಿಕ ಪ್ರೇಮದ ನೆಲೆಯೆನಿಸಿ ಒಟ್ಟು ಸ್ತ್ರೀತ್ವಕ್ಕೇ ಆದರ್ಶ ಪ್ರಾಯಳಾಗಿರುವಳೋ—ಆ ಸೀತಾ ಮಾತೆಯು ಸ್ನಾನಮಾಡಿದ ಪುಣ್ಯೋದಕದ ಸನ್ನಿಧಿಯಲ್ಲಿರುವವನ ಮನಸ್ಸಿನಲ್ಲಿ ವಿಷಯಲಂಪಟತ್ವದ ವಾಸನೆ ಎಲ್ಲಿ ಬಂದೀತು? ಯಕ್ಷನ ಮನಸ್ಸಿನಲ್ಲಿರುವುದು ಸಾತ್ವಿಕ ಪ್ರೇಮ. ಪ್ರವೃತ್ತಿ ಮಾರ್ಗ ಭೂಮಿಕೆಯನ್ನು ಮತ್ತೆರಡು ಕಡೆಗಳಲ್ಲಿ ಹೀಗೆ ಕವಿಯು ಪವಿತ್ರಗೊಳಿಸಿದ್ದಾನೆ.

ಮೇಘವು ಚಿತ್ರಕೂಟ ಪರ್ವತವನ್ನಾಲಂಗಿಸಿ, ಚಿರಕಾಲದ ಮೇಲೆ ಮಿತ್ರನನ್ನು ಕಂಡ ಸಂತೋಷಕ್ಕಾಗಿ ಚಿತ್ರಕೂಟ ಪರ್ವತವು ಬಾಷ್ಪವನ್ನು ಸುರಿಸುವಂತೆ ಮಾಡಬೇಕೆಂಬುದನ್ನು ಸೂಚಿಸುವಾಗ್ಗೆ ಕವಿಯು—"ವಂದ್ಯೈಃ ಪುಂಸಾಂ ರಘುಪತಿ ಪದೈರಂಕಿತಂ ಮೇಖಲಾಸು" ಎಂದು ಹೇಳಿದ್ದಾನೆ. ಜಗದ್ವಂದ್ಯನಾದ ರಾಘವನ ಪದತಲಗಳಿಂದ ಅಂಕಿತವಾದುದೆನ್ನುವಾಗಲೇ ಈ ಶ್ಲೋಕದಲ್ಲಿ ಚಿತ್ರಿತವಾಗಿರುವ ಸ್ನೇಹ ಭಾವಕ್ಕೆ—ಸ್ವಭಾವ ಮನೋಹರವಾದ ಪ್ರಕೃತಿ ಸೌಂದರ್ಯದ ದೃಶ್ಯಕ್ಕೆ—ಪವಿತ್ರತೆಯ ಮುದ್ರೆಯನ್ನೊತ್ತಿದ್ದಂತಾಯಿತು. ಪ್ರವೃತ್ತಿ ಮಾರ್ಗ ಭೂಮಿಕೆಗೆ ಪವಿತ್ರತೆಯ ಮೊಹರು ಹಾಕುವ ಮೂರನೆಯ ಸನ್ನಿವೇಶವನ್ನು ನೋಡೋಣ. ಕವಿಯು ಉತ್ತರ ಮೇಘದಲ್ಲಿ ಯಕ್ಷರ ವೈಭವವನ್ನೂ, ಅವರ ಭೋಗ ಪ್ರಿಯತೆಯನ್ನೂ ವರ್ಣಿಸಿದ್ದಾನೆ. ಆದರೂ, ಅವರ ಭೋಗವಿಲಾಸಗಳು ಧರ್ಮ ವಿರುದ್ಧವಾಗಿರಲಿಲ್ಲವೆಂಬುದನ್ನು "ಪೂರ್ವ ಮೇಘ"ದ

"ಸಂತಪ್ತಾನಾಂ ತ್ವಮಸಿ ಶರಣಂ ತತ್ಪಯೋದ ಪ್ರಿಯಾಯಾಃ।
ಸಂದೇಶಂ ಮೇ ಹರ ಧನಪತಿ ಕ್ರೋಧವಿಶ್ಲೇಷಿತಸ್ಯ ॥
ಗಂತವ್ಯಾ ತೇ ವಸತಿರಲಕಾ ನಾಮ ಯಕ್ಷೇಶ್ವರಾಣಾಂ।
ಬಾಹ್ಯೋದ್ಯಾನ ಸ್ಥಿತಹರಶಿರಶ್ಚಂದ್ರಿಕಾ ಧೌತಹರ್ಮ್ಯಾ ॥"

[ಎಂದರೆ, ಸಂತಾಪ ಹೊಂದಿದವರಿಗೆ (ಬಿಸಿಲಿನಿಂದಾಗಲಿ, ಪ್ರವಾಸದಿಂದಾಗಲಿ ಸಂತಪ್ತರಾದವರಿಗೆ) ನೀನೇ ಶರಣನು. ಆದುದರಿಂದ, ಎಲೈ ಮೇಘವೆ! ಧನಪತಿಯ ಕ್ರೋಧದ ದೆಸೆಯಿಂದ ಪ್ರಿಯೆಯನ್ನಗಲಿ ಬಂದಿರುವ ನನ್ನ ಸಂದೇಶವನ್ನು ಪ್ರಿಯಳಿಗೆ ತಿಳಿಸು. ಬಾಹ್ಯೋದ್ಯಾನದಲ್ಲಿರುವ ಶಿವನ ಶಿರಸ್ಸಿನಲ್ಲಿರುವ ಚಂದ್ರನ ಬೆಳದಿಂಗಳಿನಿಂದ ಪ್ರಕಾಶಗೊಂಡಿರುವ ಸೌಧಗಳಿರತಕ್ಕ ಯಕ್ಷೇಶ್ವರ ವಸತಿಯಾದ

ಅಲಕಾ ನಗರಕ್ಕೆ ನೀನು ಹೋಗಬೇಕು ಎಂಬ ಅರ್ಥವುಳ್ಳ] ಶ್ಲೋಕದಲ್ಲಿಯೇ ಸೂಚಿಸಿಬಿಟ್ಟಿದ್ದಾನೆ. ಅವು ಧರ್ಮ ವಿರುದ್ಧವಾಗಿದ್ದ ಪಕ್ಷಕ್ಕೆ, ಮುನಿದರೆ ಫಾಲ ನೇತ್ರವನ್ನು ತೆರೆದು ಸಮಸ್ತವನ್ನೂ ದಹಿಸುವ ಸಾಮರ್ಥ್ಯವುಳ್ಳ ಮಹಾದೇವನೆಂದಿಗೂ ಅಲ್ಲಿರುತ್ತಿರಲಿಲ್ಲ. ವಿರಕ್ತರಲ್ಲಿ ಅಗ್ಗಳನಾದ ಪರಮೇಶ್ವರನೆಂದಿಗೂ ಧನಪತಿಯಾದ ಕುಬೇರನ ಮೈತ್ರಿಯಲ್ಲಿರುತ್ತಿರಲಿಲ್ಲ. ಇಷ್ಟಕ್ಕೂ, ದೈವಭಕ್ತಿಯಿಂದ ಹುಟ್ಟಿದ ದೈವಿಕ ಪ್ರೇಮವೂ, ಪ್ರಕೃತಿ ಪ್ರೇಮವೂ ಮತ್ತು ದಾಂಪತ್ಯ ಪ್ರೇಮವೂ ಮೂರೂ ಅಸ್ಖ್ಬತವಾಗಿಯೂ, ಮನೋಹರವಾಗಿಯೂ ಚಿತ್ರಿತವಾಗಿರುವ—

> "ಹಿತ್ವಾ ತಸ್ಮಿನ್ ಭುಜಗ ವಲಯಂ ಶಂಭುನಾ ದತ್ತಹಸ್ತಾ।
> ಕ್ರೀಡಾಶೈಲೇ ಯದಿಚ ವಿಚರೇತ್ ಪಾದಚಾರೇಣ ಗೌರೀ ॥
> ಭಂಗೀ ಭಕ್ತ್ಯಾ ವಿರಚಿತವಪುಃ ಸ್ತಂಭಿತಾಂತರ್ಜಲೌಘಃ।
> ಸೋಪಾನತ್ವಂ ಕುರು ಮಣಿತಟಾರೋಹಣಾಯಾಗ್ರಯಾಯೀ ॥"

[ಎಂದರೆ, ಪಾರ್ವತೀ ಪರಮೇಶ್ವರರ ಕ್ರೀಡಾಶೈಲವಾದ ಕೈಲಾಸಗಿರಿಯಲ್ಲಿ, ಪರಮೇಶ್ವರನು ತನ್ನ ಭುಜಗ ಕಂಕಣವನ್ನು ಬಿಟ್ಟು ಪಾದಚಾರಿಯಾಗಿ ನಡೆಯುತ್ತ ತನ್ನೊಡನೆ ಬರುತ್ತಿರುವ ಗೌರೀದೇವಿಯ ಕೈಯನ್ನು ಹಿಡಿದುಕೊಂಡು ಸಂಚರಿಸುತ್ತಿದ್ದರೆ, ನೀನು ಘನೀಭೂತವಾದ ಜಲೌಘವುಳ್ಳವನಾಗಿ ಮೆಟ್ಟಲು ಮೆಟ್ಟಲಾಗಿ ರೂಪಗೊಂಡು ಅವರ "ಮಣಿತಟಾರೋಹಣ"ಕ್ಕಾಗಿ ಮುಂದೆ ಹೋಗಿ ಸೋಪಾನತ್ವವನ್ನವಲಂಬಿಸು. ಎಂಬ ಅರ್ಥವುಳ್ಳ] ಶ್ಲೋಕವನ್ನು ಓದಿದಮೇಲೆ ಈ ಅಂಶಗಳು ದೃಢವಾಗಲೇ ಬೇಕಲ್ಲವೆ? ಈ ಶ್ಲೋಕವಾದರೂ ಎಂತಹ ಶ್ಲೋಕ! ದೇವತೆಗಳು ಕೂಡ ಓದಿ ನಲಿಯಬೇಕಾದ ಶ್ಲೋಕವೆಂದರೆ ತಪ್ಪಾದೀತೆ? ಹಿಮವತ್ಪರ್ವತವನ್ನೂ, ಅಲ್ಲಿ—"ಸ್ತಂಭಿತಾಂತರ್ಜಲೌಘ"ವಾದ ಮೇಘವನ್ನೂ ಬಿಸಿಲಿನ ಝಳದಲ್ಲಿ "ಮಣಿತಟ" ಭ್ರಾಂತಿಯನ್ನುಂಟುಮಾಡುತ್ತಿರುವ ಕೈಲಾಸಗಿರಿಯನ್ನೂ, ನೋಡಿದಾಗ—ಅದನ್ನು ನೋಡಿ ನೋಡಿ ಆನಂದಿಸಿದಾಗ—ಕಾಳಿದಾಸನಿಗೆ ಈ ಭಾವವು ತೋರಿಬಂದು, ಈ ಶ್ಲೋಕರೂಪದ ಅಮೃತರಸವಾಗಿ ಪರಿಣಮಿಸಿತೋ ಏನೋ! ಈ ವಚನಗಳನ್ನಾಡುವ ಯಕ್ಷನ ಮನಸ್ಸು ಇನ್ನೆಷ್ಟು ಪರಿಪಕ್ವವಾಗಿರಬೇಕು! ಅವನ ಹೃದಯದಲ್ಲಿ ಪ್ರೇಮವೆಂದು ಅಜ್ಞರೂ, ಮೋಹಾಂಧಕಾರವೆಂದು ಪ್ರಾಜ್ಞರೂ ಕರೆಯುವ ಪಾಶವಭಾವಕ್ಕೆ ಅವಕಾಶವೆಲ್ಲಿ ಬರಬೇಕು? ಸಾತ್ತ್ವಿಕತೆಯು ನೆಲೆಯೂರಿರುವ ಆತನ ಹೃದಯದಿಂದ ಈ ಮನೋಹರವಾದ ಭಾವವು ಹೊರಬಿದ್ದುದರಲ್ಲಿ ಆಶ್ಚರ್ಯವು ತಾನೇ ಎಲ್ಲಿಯದು? ಮೇಘವು ಯಕ್ಷನ ಪತ್ನಿಗೆ ಸಂದೇಶವನ್ನು ಒಯ್ಯುವುದಲ್ಲದೆ, ಜಗತ್ತಿನ ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರಿಗೆ ಸೋಪಾನತ್ವವನ್ನೂ ಅವಲಂಬಿಸಿ ಅವರನ್ನು ಸೇವಿಸಬೇಕಂತೆ. ಸಾತ್ತ್ವಿಕ ಪ್ರೇಮವು ದೇವತ್ವವನ್ನು ಸಮನಾಗಿಸಿರುವುದೆಂಬುದನ್ನು ಇದು ಸಾಂಕೇತಿಕವಾಗಿ ಸೂಚಿಸುವುದಿಲ್ಲವೆ? ಪ್ರೇಮವೇ

ದೇವ ಮಂದಿರವೆಂಬುದು ಇದರಿಂದ ಗೋಚರಿಸುವುದಿಲ್ಲವೆ? ಕೊನೆಯಪಕ್ಷ, ದೇವರ ಸೇವೆಮಾಡುವುದರಂತೆಯೇ ಸಾತ್ವಿಕ ಪ್ರೇಮವುಳ್ಳವನ ಸಂದೇಶವನ್ನು ಸಾಧ್ವಿಯಾದ ಅವನ ಸತಿಗೆ ಮುಟ್ಟಿಸುವುದೂ ಪುಣ್ಯಕಾರ್ಯವೆಂಬುದನ್ನಾದರೂ ಇದು ವ್ಯಂಗ್ಯವಾಗಿ ಸೂಚಿಸುವುದಿಲ್ಲವೆ?

ಸ್ವಾರ್ಥದ ಲವಲೇಶವೂ ಇಲ್ಲದವನ ಪ್ರೇಮ—ಯಕ್ಷನ ಹೃದಯದಲ್ಲಿ ಸ್ವಾರ್ಥದ ಲವಲೇಶವೂ ಇಲ್ಲ. ಸಾಧ್ವೀಶಿರೋಮಣಿಯಾದ ತನ್ನ ಪತ್ನಿಯು ತನ್ನ ಅಗಲಿಕೆಯನ್ನು ಸಹಿಸಲಾರದೆ ಎಲ್ಲಿ ಮೃತಪಡುವಳೋ ಎಂಬುದೇ ಅವನ ಕಳವಳ. ಸರ್ವದಾ ಅವನಿಗೆ ಅದೇ ಚಿಂತೆ. ಅದೇ ಕೊರಗಿನಿಂದಲೇ ಅವನ ಮೈಯೇ ಕರಗಿಹೋಗುತ್ತ ಇದೆ. **"ನೀತ್ವಾ ಮಾಸಾ ಕನಕ ವಲಯ ಭ್ರಂಶರಿಕ್ತ ಪ್ರಕೋಷ್ಠಃ"** ಎಂದು ಹೇಳಿ, ಯಕ್ಷನ ದೇಹವು ಬಡವಾಗಿದ್ದುದನ್ನು ಕವಿಯು ಮನೋಹರವಾಗಿ ಸೂಚಿಸಿದ್ದಾನೆ. ಯಕ್ಷನು ಕೈಗೆ ಹಾಕಿಕೊಂಡಿದ್ದ ಚಿನ್ನದ ಬಳೆಯು ಕೈಯಿಂದ ಜಾರಿ ಬಿದ್ದುಹೋಯಿತಂತೆ. ಕೆಲವು ತಿಂಗಳುಗಳನ್ನು ಅವನು ಪತ್ನೀ ವಿರಹದಿಂದ ಕಳೆಯುವುದರಲ್ಲಿಯೇ ಹೀಗಾಯಿತು. ಅವನು ಎಷ್ಟು ಬಡವಾಗಿದ್ದನೆಂಬುದನ್ನು ನಾವು ಇದರಿಂದಲೇ ಊಹಿಸಿಕೊಳ್ಳಬಹುದಾಗಿದೆ. ಕವಿಯೂ ಇದನ್ನು ಎಷ್ಟು ರಮಣೀಯವಾಗಿ ಸೂಚಿಸಿದ್ದಾನೆ! ಯಕ್ಷನ ಮೂಳೆಗಳು ಹಾಯ್ದುಕೊಂಡಿದ್ದುವೆಂದು ಮುಂತಾಗಿ ಬಣ್ಣಿಸಿ, ಹುಡುಗರನ್ನು ಹೆದರಿಸಿ ದೊಡ್ಡವರಿಗೆ ಅಸಹ್ಯವನ್ನುಂಟುಮಾಡುವ ಪ್ರಸಂಗಕ್ಕೆ ಅವನು ಕೈಹಾಕಿಲ್ಲ. ಯಕ್ಷನ ಕೈಯಲ್ಲಿದ್ದ ಚಿನ್ನದ ಬಳೆಯು ಮುಂಗೈಯನ್ನು ಕೂಡ ದಾಟಿ ಕೆಳಗೆ ಬಿದ್ದುಹೋಯಿತೆಂಬುದರಿಂದ, ಯಕ್ಷನ ದೇಹಸ್ಥಿತಿಯು ನಮ್ಮ ಕಣ್ಣಿಗೆ ಕಟ್ಟಿದಂತಾಗುತ್ತದೆ. ಅಲ್ಲದೆ, ಯಕ್ಷನು ಅಲಂಕಾರ ಪ್ರಿಯನಾಗಿದ್ದನೆಂಬುದೂ ಗೊತ್ತಾಗುತ್ತದೆ. ಯಕ್ಷನಿಗೆ ತಾನು ಬಡವಾಗಿರುವ ಚಿಂತೆಯೇ ಇಲ್ಲ. ಸಾಧ್ವೀಮಣಿಯಾದ—ಸುಕೋಮಲೆಯಾದ—ತನ್ನ ಪತ್ನಿಯು ವಿರಹ ದುಃಖವನ್ನು ತಾಳಲಾರದೆ ಎಲ್ಲಿ ಮೃತಪಡುವಳೋ ಎಂಬುದೇ ಅವನ ಆತಂಕ. ಆದುದರಿಂದಲೇ, ಕವಿಯು ಯಕ್ಷನನ್ನು **"ದಯಿತಾ ಜೀವಿತಾಲಂಬನಾರ್ಥೀ"** ಎಂದು ವರ್ಣಿಸಿರುವುದು! ತನ್ನ ಪ್ರಿಯಳು ಪ್ರಾಣದಿಂದಿರುವಂತೆ ಮಾಡಬೇಕೆಂಬ ಉದ್ದೇಶದಿಂದಲೇ ಯಕ್ಷನು ಮೇಘವನ್ನು ತನ್ನ ಸಂದೇಶವನ್ನು ಒಯ್ಯಬೇಕೆಂದು ಪ್ರಾರ್ಥಿಸುವುದು. ಯಕ್ಷನ ಕಳವಳಕ್ಕೆ ಕಾರಣವನ್ನು ನೋಡಿ—

"ತಾಂ ಚಾವಶ್ಯಂ ದಿವಸಗಣನಾ ತತ್ಪರಾಮೇಕಪತ್ನೀಂ।
ಮವ್ಯಾಪನ್ನಾಮವಿಹಿತ ಗತಿರ್ದ್ರಕ್ಷ್ಯಸಿ ಭ್ರಾತೃಜಾಯಾಂ।
ಆಶಾಬಂಧಃ ಕುಸುಮಸದೃಶಂ ಪ್ರಾಯಶೋಹ್ಯಂಗನಾನಾಂ।
ಸದ್ಯಃಪಾತಿ ಪ್ರಣಯಿ ಹೃದಯಂ ವಿಪ್ರಯೋಗೇ ರುಣದ್ಧಿ॥"

[ವಿಘ್ನವಿಲ್ಲದೆ ಮುಂದಕ್ಕೆ ಸಾಗಿ (ನೀನು ಅಲಕಾ ನಗರಕ್ಕೆ ಹೋದರೆ) ಹೇಗೋ ಜೀವವನ್ನು ಧರಿಸಿ (ಶಾಪಾವಧಿಯಲ್ಲಿ ಇನ್ನೂ ಉಳಿದಿರುವ) ದಿವಸಗಳನ್ನು ಎಣಿಸುವುದರಲ್ಲಿಯೇ ಮಗ್ನಳಾಗಿರುವ ಪತಿವ್ರತೆಯಾದ ನಿನ್ನ ಭ್ರಾತೃ

ಜಾಪೆಯನ್ನು ನೀನು ನೋಡುವೆ. ಪ್ರೀತಿಯಿಂದ ತುಂಬಿ ಕುಸುಮ ಸದೃಶವಾಗಿರುವ ಸ್ತ್ರೀಯರ ಹೃದಯವನ್ನು, ಪ್ರಾಯಶಃ ಆಶಾಬಂಧವು ವಿರಹಕಾಲದಲ್ಲಿ ಪ್ರತಿಬಂಧಿಸಿರುತ್ತದೆ.] ಈ ಶ್ಲೋಕದಲ್ಲಿ ಕವಿಯು "ಅವ್ಯಾಪನ್ನಾಂ" ಎಂಬ ಪದವನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಿದ್ದಾನೆ. "ಅವ್ಯಾಪನ್ನಾಂ" ಎಂದರೆ "ಮೃತಪಡದೆ ಇರುವವಳು" ಎಂದು ಅರ್ಥ. ಪತಿವಿರಹದಿಂದ ಕಂದಿ ಕುಂದಿ ಹೋಗಿದ್ದರೂ, ದೇಹವೇ ಶೀರ್ಣವಾಗಿಹೋಗಿದ್ದರೂ ಮುಂದೆ ಪತಿಯನ್ನು ಕಾಣುವುದು ಎಷ್ಟು ದಿನಗಳಿಗೆಂಬುದನ್ನೇ ಎಣಿಕೆಮಾಡುತ್ತ ಹೇಗೋ ಜೀವವನ್ನು ಬಿಗಿಹಿಡಿದಿರುವವಳೆಂಬುದು ಇದರ ತಾತ್ಪರ್ಯ. ಇದರ ಮೇಲೆ ಅವಳ ಹೃದಯವು ಕುಸುಮ ಸದೃಶವಾದುದು. ಆದುದರಿಂದಲೇ ತನ್ನ ಕಡೆಯಿಂದ ಸಂದೇಶವು ಹೋಗದಿದ್ದರೆ ಅವಳೆಲ್ಲಿ ಮೃತಪಡುವಳೋ ಎಂಬುದಾಗಿ ಯಕ್ಷನಿಗೆ ಕಳವಳ. ತಾನು ಜೀವದಿಂದಿರುವುದನ್ನು ಯಕ್ಷನು ಅವಳಿಗೆ ತಿಳಿಸಲಿಚ್ಛಿಸುವುದರ ಒಳಮರ್ಮವೇ ಇದು. ತನ್ನ ಪತಿಯು ಕ್ಷೇಮವಾಗಿರುವನೆಂಬುದನ್ನು ಕೇಳಿ ಅವನನ್ನು ಶೀಘ್ರದಲ್ಲಿಯೇ ಕಾಣುವ ಆಸೆಯಿಂದ, ಅವಳು ಹೇಗಾದರೂ ಜೀವವನ್ನು ಬಿಗಿಹಿಡಿದಿರುವಂತೆ ಮಾಡಬೇಕೆಂಬುದೇ ಅವನ ಸಂಕಲ್ಪ. ಭಕ್ತನು ಪ್ರೇಮಪಾರವಶ್ಯದಿಂದ ತನ್ನ ಮನಸ್ಸನ್ನು ಸ್ವಾಮಿಯ ಕಡೆಗೆ ತೇಲಿಬಿಡುವಂತೆ, ಯಕ್ಷನೂ ಶುದ್ಧ ಸಾತ್ವಿಕ ಪ್ರೇಮದಿಂದ ಸದಾ ಕಾಲದಲ್ಲಿಯೂ ತನ್ನ ಪತ್ನಿಯ ಚಿಂತೆಯನ್ನೇ ಮಾಡುತ್ತಿದ್ದಾನೆ. ಅವನ ಹೃದಯದಲ್ಲಿರುವುದು ಅವಳ ಪ್ರತಿಮೆ. ಅವನು ಚಿಂತಿಸುತ್ತಿರುವುದು ಅವಳ ವಿಷಯ. ಅವನು ಕಾತರನಾಗಿರುವುದು ಅವಳ ಕ್ಷೇಮಕ್ಕಾಗಿ. ಆದುದರಿಂದ, ಅವನ ಹೃದಯದಲ್ಲಿ ಸ್ವಾರ್ಥಪರತೆಯ ಕುರುಹು ಅಣುಮಾತ್ರವೂ ಇಲ್ಲ. ತನ್ನ ಪತ್ನಿಯ ಬಳಿಗೆ ಹೋಗಬೇಕೆಂಬುದೊಂದೇ —ಅವಳ ಸಂತಾಪವು ಕೊನೆಮುಟ್ಟುವಂತಾಗಬೇಕೆಂಬುದೊಂದೇ—ಅವನ ಬಯಕೆ. ತಾನು ದೂರದಲ್ಲಿದ್ದರೂ, ತನ್ನ ಪ್ರಾಣಸಖಿಯ ದೇಹವನ್ನೇ ತನ್ನೆದುರಿಗೆ ಭಾವಿಸಿಕೊಂಡು, ತನ್ನ ದೇಹವು ತನ್ನ ಪತ್ನಿಯ ದೇಹದ ಬಳಿಗೆ ಸೇರಿದಂತೆ ಆಲೋಚಿಸಿಕೊಳ್ಳುತ್ತಿರುವ ಯಕ್ಷನು ಭಗವಂತನಲ್ಲಿ ಆತ್ಮಾರ್ಪಣಮಾಡಿ ಲೀನವಾಗುವ ಭಕ್ತನನ್ನು ಹೋಲುವುದಿಲ್ಲವೆ? ಭಕ್ತಿಯೂ ಪ್ರೇಮದ ರೂಪ ಭೇದವೇ ತಾನೆ? ಸ್ವಾರ್ಥರಹಿತವಾದ ಪ್ರೇಮಿಯ ಸಾತ್ವಿಕ ಪ್ರೇಮ ಲಹರಿಗೂ, ಭಕ್ತನ ಭಕ್ತಿ ಲಹರಿಗೂ ಬಹಳ ವ್ಯತ್ಯಾಸವಿದೆಯೆ? ಯಕ್ಷನು ಪತ್ನೀ ವಿರಹದಿಂದ ಗಾಢ ತಪ್ತವಾಗಿ, ಉಷ್ಣೋಚ್ಛ್ವಾಸದಿಂದ ಕೂಡಿ ಕಂಬನಿಯನ್ನು ಸುರಿಸುತ್ತ ಉತ್ಕಂಠಿತವಾಗಿರುವ ತನ್ನ ತನುವು, ವಿಮುಖವಾಗಿರುವ ವಿಧಿಯಿಂದ ಅಡ್ಡಗಟ್ಟಲ್ಪಟ್ಟು ದೂರವರ್ತಿಯಾಗಿದ್ದೂ, ಗಾಢತಪ್ತವಾಗಿ, ಮತ್ತೂ ಉಷ್ಣೋಚ್ಛ್ವಾಸದಿಂದ ಕೂಡಿ, ಅವಿರಳವಾಗಿ ಅಶ್ರುಧಾರೆಯನ್ನು ಸುರಿಸಿ ತೊಯ್ದುಹೋಗಿರುವ (ಉತ್ಕಂಠಿತೆಯಾಗಿರುವ) ಪ್ರಿಯಳ ತನುವನ್ನು, ("ಸಂಕಲ್ಪ"ದಿಂದ, ಎಂದರೆ ಮನಸ್ಸಿನಲ್ಲಿ ಭಾವಿಸಿಕೊಳ್ಳುವುದರಿಂದ) ಬಳಿ ಸೇರುತ್ತದೆಂದು ಹೇಳಿದ್ದಾನೆ. ಹಾಗೆ ಹೇಳಿರುವ ಶ್ಲೋಕದ ಸೊಬಗನ್ನಾದರೂ ನೋಡಿ—

“ಅಂಗೇನಾಂಗಂ ಪ್ರತನು ತನುನಾ ಗಾಢತಪ್ತೇನ ತಪ್ತಂ।
ಸಾಸ್ರೇಣಾಶ್ರುದ್ರುತಮವಿರತೋತ್ಕಂಠಮುತ್ಕಂಠಿತೇನ॥
ಉಷ್ಣೋಚ್ಛ್ವಾಸಂ ಸಮಧಿಕತರೋಚ್ಛ್ವಾಸಿನಾ ದೂರವರ್ತೀ।
ಸಂಕಲ್ಪೈಸ್ತೈರ್ವಿಶತಿ ವಿಧಿನಾ ವೈರಿಣಾ ರುದ್ಧಮಾರ್ಗಃ॥”

ಯಕ್ಷನು ತನ್ನ ಗೋಳನ್ನು ತನ್ನ ಪತ್ನಿಗೆ ತಿಳಿಸುವುದಕ್ಕಾಗಿ ಸ್ವಾರ್ಥ ಬುದ್ಧಿಯಿಂದ ಹೀಗೆ ಹೇಳಿಲ್ಲ. ಇದು ಲೇಶಮಾತ್ರವೂ ಸ್ವಾರ್ಥಪರತೆಯಿಲ್ಲದೆ ನಿಜಸ್ಥಿತಿಯ ಸ್ವರೂಪವನ್ನು ಚಿತ್ರಿಸಿ, ತನ್ನ ಇನಿಯಳಿಗೆ ಸಮಾಧಾನ ಹೇಳುವನು ತನ್ನ ಹೃದಯದಿಂದ ಹೊರಗೆ ಸುರಿದಿರುವ ಪ್ರೇಮಾಲಾಪ. ಒಂದು ವೇಳೆ ಅವನು ತನ್ನ ದುಃಖದ ಪರಿತಪನೆಯನ್ನು ಮಾತ್ರವೇ ಹೇಳಿಕೊಳ್ಳುವ ಬಡಿವಾರದ ಬೆಡಗನ್ನು ಆಶ್ರಯಿಸಿದ್ದರೆ, ಅವನೆಂದಿಗೂ ಅವಳೂ ತನ್ನಂತೆಯೇ ದುಃಖಿಸಿಯೆಂದು ಭಾವಿಸುತ್ತಲೇ ಇರಲಿಲ್ಲ. ತನ್ನ ಪತಿಯೂ ತನ್ನಂತೆಯೇ ದುಃಖಿಸುತ್ತಿರುವುದರಿಂದಲೂ, ತಾನೂ ದುಃಖಿಸಿಯೆಂಬುದು ಅವನಿಗೆ ತಿಳಿದಿರುವುದರಿಂದಲೂ, ತಾನು ಹೇಗಾದರೂ ಮಾಡಿ ಸಂತಾಪವನ್ನು ಸಹಿಸಿಕೊಂಡಿರಬೇಕೆಂಬುದಾಗಿ, ಅವಳು ನಿರ್ಧರಿಸುವಂತಾಗಬೇಕೆಂಬ—ಸ್ವಾರ್ಥದೂರವಾದ—ಸಂಕಲ್ಪದಿಂದ ಯಕ್ಷನು ಹೀಗೆ ಹೇಳಿದ್ದಾನೆ. ಆದುದರಿಂದ ಇದೆಲ್ಲವನ್ನೂ ನೋಡಿದರೆ, ಅವನಲ್ಲಿ ಸ್ವಾರ್ಥದ ಲವಲೇಶವೂ ಇಲ್ಲವೆಂಬುದು ಗೊತ್ತಾಗುತ್ತದೆ. ಈ ಶ್ಲೋಕದಲ್ಲಿ ನಾವು ಮತ್ತೊಂದು ಅಂಶವನ್ನೂ ಗಮನಿಸಬೇಕು. ವಿಧಿಯು ವಿರೋಧವಾಗಿರುವುದರಿಂದ ತನಗೆ ವಿರಹದುಃಖವು ಸಂಘಟಿಸಿತೆಂದು ಯಕ್ಷನು ತಿಳಿಸಿದ್ದಾನೆಯೇ ಹೊರತು, ಅವನು ಕುಬೇರನ ಶಾಪದಿಂದ ತನಗೆ ಹೀಗಾಯಿತೆಂದು ಸೂಚಿಸಿಲ್ಲ. ಕುಬೇರನ ಮೇಲೆ ಕ್ರೋಧವನ್ನು ಕಾರಿಲ್ಲ. ಎಂದರೇನಾಯಿತು? ತನಗೆ ಶಿಕ್ಷೆಯು ವಿಧಿಸಲ್ಪಟ್ಟುದು ನ್ಯಾಯವೆಂದೇ ಭಾವಿಸಿ, ಶಿಕ್ಷೆಯ ಯಾತನೆಯನ್ನು ತಾಳಲಾರದೆ—ತನ್ನ ಪತ್ನಿಯೂ ವ್ಯಸನಸಂತಪ್ತಳಾದುದಕ್ಕಾಗಿ ಮತ್ತಷ್ಟು ಖಿನ್ನ ಮನಸ್ಕನಾಗಿ, ಅವಳು ಜೀವಿಸಿದ್ದರೆ ಸಾಕೆಂದು ಬಯಸುತ್ತಿರುವ—ಯಕ್ಷನು ತನಗೆ ವಿಧಿಯು ವಿರೋಧವಾಗಿರುವಂತೆ ಹೇಳಿಕೊಳ್ಳುತ್ತಾನೆ. ಅವನ ಮನಸ್ಸು ಸಂಸ್ಕೃತವಾದುದೆಂಬುದನ್ನು ಮತ್ತೆ ಬಿಡಿಸಿ ಹೇಳಲೂ ಬೇಕೆ? ಅವನಲ್ಲಿ ಸ್ವಾರ್ಥಪರತೆಯಿಂದ ಕೂಡಿದ ದುರಹಂಕಾರದ ಲವಲೇಶವೂ ಇಲ್ಲವೆಂಬುದಕ್ಕೆ ಇದೂ ಒಂದು ನಿದರ್ಶನವಲ್ಲವೆ?

ಯಕ್ಷನ ಕಾತರ—ಯಕ್ಷನ ಮನೋವೃತ್ತಿಯು ಹೇಗಿದ್ದಿತೆಂಬುದನ್ನು ನನ್ನ ಕೈಯಲ್ಲಾದ ಮಟ್ಟಿಗೂ ಅರಿಕೆ ಮಾಡಿದ್ದೇನೆ. ಪತ್ನಿಯ ವಿರಹದಿಂದ ತನಗೇ ಅಷ್ಟು ದುಃಖವಾಗಿರುವಲ್ಲಿ, “ಕುಸುಮ ಸದೃಶ”ವಾದ ಹೃದಯವುಳ್ಳವಳಾದ ಮತ್ತು ಪತಿವ್ರತೆಯಾದ ತನ್ನ ಪತ್ನಿಯ ಅವಸ್ಥೆಯು ಎಷ್ಟು ಮಟ್ಟಿಗಿದೆಯೋ ಎಂಬುದೇ ಅವನನ್ನು ಹಗಲಿರುಳೂ ಬಾಧಿಸುತ್ತಿರುವ ಹೃದಯಶಲ್ಯ. ಅವನು ತನ್ನ ಮನಸ್ಸಿನ ಪರಿತಾಪವನ್ನು ಸಹಿಸಲಾರದೆ ತಳಮಳಗೊಳ್ಳುವನು. ನಿಂತಲ್ಲಿ

ನಿಲ್ಲಲಾರದೆ ಸಂಕಟಪಡುವನು. ಹೃದಯ ವೇದನೆಯಿಂದ ಬಳಲಿ ಬೆಂಡಾಗಿ ಕೊನೆಗೆ ಹುಚ್ಚನಂತಾಗುವನು. ಒಳಗಿನ ಆವೇಗದಿಂದ ಅವನು ಹೊರಗಿನ ಪ್ರಪಂಚವನ್ನೇ ಮರೆಯುವನು. ಅದರ ನಾನಾವಸ್ತುಗಳ ಶಕ್ತಿ ಸಾಮರ್ಥ್ಯಗಳೂ, ಲಕ್ಷಣಗಳೂ ಯಾವುವೆಂಬುದನ್ನೇ ಮರೆತುಬಿಡುವನು. ಸುಮಕೋಮಲೆಯಾದ ತನ್ನ ಪತ್ನಿಯು ಯಾವ ಕ್ಷಣಕ್ಕೇನಾಗುವಳೋ ಎಂಬುದೇ ಅವನ ಪರಿತಾಪ. ಅರೆವಾಸಿ ಹುಚ್ಚನಾಗಿರುವ ಆತನ ಮನಸ್ಸಿಗೆ ಯಾವುದೂ ತೋರದು. ವಿವೇಚನೆಯ ಹಂಬಲೇ ಅವನಿಗಿಲ್ಲ. ಆದುದರಿಂದಲೇ, ಅವನು ಹೃದಯ ವೇದನೆಯಿಂದ ಪರಿತಪಿಸುತ್ತ, ಮೇಘವು ಚೇತನ ವಿಹೀನವಾದುದೆಂಬುದನ್ನೂ ಅರಿಯದೆ, ಪ್ರಕೃತಿ ಕೃಪಣನಾಗುವನು. ಮಳೆಯ ಮೇಘವನ್ನು ಅಂತರಿಕ್ಷದಲ್ಲಿ ನೋಡುವನು. ಮದದಾನೆಯಂತಹ ಮೇಘ. ಅದು ರಾಮಗಿರಿಯಿಂದ ಹಿಮವತ್ಪರ್ವತದ ಕಡೆಗೆ ಹೊರಟಿದೆ. (ಭೂಗೋಳಶಾಸ್ತ್ರವೂ ಇದು ನಿಜವೆಂಬುದನ್ನು ತಿಳಿಸುತ್ತದೆ.) ಯಕ್ಷನೋ, ಅರೆವಾಸಿ ಹುಚ್ಚ. ಅಲಕಾನಗರಕ್ಕೆ ತನ್ನ ಸಂದೇಶವನ್ನು ಒಯ್ಯುವವರು ಯಾರಾದರೂ ಸಿಕ್ಕುವರೇ ಎಂದು ಅವನು ತವಕಪಡುತ್ತಿದ್ದಾಗ, ಮೇಘವು ಅವನ ಕಣ್ಣಿಗೆ ಬೀಳುತ್ತದೆ. ಹೊರಗಿನ ಪ್ರಪಂಚದ ಜ್ಞಾನವೇ ಅವನಿಗಿಲ್ಲ. ತನ್ನ ಸಂದೇಶವನ್ನು ತನ್ನ ಪತ್ನಿಗೆ ತಿಳಿಸಬೇಕೆಂದು ಅವನು ಮೇಘವನ್ನು ಅಂಗಲಾಚಿ ಬೇಡಿಕೊಳ್ಳುತ್ತಾನೆ.

ವಿಕ್ರಮೋರ್ವಶೀಯ ನಾಟಕದಲ್ಲಿ ಊರ್ವಶಿಯು ಲತೆಯಾದ ಬಳಿಕ, ಪುರೂರವನು ಹುಚ್ಚನಂತಾಗಿ ತರುಲತೆಗಳನ್ನೂ, ಪಶುಪಕ್ಷಿಗಳನ್ನೂ ತನ್ನ ಪ್ರಿಯಳ ವಿಷಯವಾಗಿ ಪ್ರಶ್ನೆಮಾಡಿಲ್ಲವೆ? ಯಕ್ಷನೂ ಪುರೂರವನ ಸಹಪಙ್ಕ್ತಿಗೇ ಯೋಗ್ಯನು. ನಾನು ಮೊದಲೇ ಅರಿಕೆಮಾಡಿರುವಂತೆ ಕವಿಯೇ—

"ಧೂಮಜ್ಯೋತಿಃ ಸಲಿಲಮರುತಾಂ ಸನ್ನಿಪಾತಃ ಕ್ವಮೇಘಃ |
ಸಂದೇಶಾರ್ಥಾಃ ಕ್ವಪಟುಕರಣೈಃ ಪ್ರಾಣಿಭಿಃ ಪ್ರಾಪಣೀಯಾಃ ||
ಇತ್ಯೌತ್ಸುಕ್ಯಾದಪರಿಗಣಯನ್ಗುಹ್ಯಕಸ್ತಂ ಯಯಾಚೇ |
ಕಾಮಾರ್ತಾ ಹಿ ಪ್ರಕೃತಿ ಕೃಪಣಾಶ್ಚೇತನಾಚೇತನೇಷು ||"

[ಧೂಮ, ಜ್ಯೋತಿ, ಸಲಿಲ, ವಾಯು ಇವುಗಳ ಸಂಘಾತರೂಪದ ಮೇಘವೆಲ್ಲಿ? ಇಂದ್ರಿಯ ಸಾಮರ್ಥ್ಯವುಳ್ಳವರು ಒಯ್ಯಬೇಕಾದ ಸಂದೇಶಾರ್ಥವೆಲ್ಲಿ? ಯಕ್ಷನು ಇದನ್ನು ಪರಿಗಣಿಸದೆಯೇ ತನ್ನ ಸಂದೇಶವನ್ನು ಒಯ್ಯುವಂತೆ ಔತ್ಸುಕ್ಯದಿಂದ ಕೇಳಿದನು. ಕಾಮಾರ್ತರು ಚೇತನಾಚೇತನ ವಿಜ್ಞಾನವೇ ಇಲ್ಲದ ಪ್ರಕೃತಿ ಕೃಪಣರೇ ಸರಿ] ಎಂದು ಹೇಳಿ, ಯಕ್ಷನನ್ನು ಹಾಸ್ಯಮಾಡಬಹುದು. ಯಕ್ಷನು ಶಾಪಾಂತ್ಯದಲ್ಲಿ ತನ್ನ ಪತ್ನಿಯ ಬಳಿಗೆ ಸೇರಿದ ಮೇಲೆ, ಕಾಳಿದಾಸನು ಯಕ್ಷನ ಕಣ್ಣಿಗೆ ಬಿದ್ದನೆನ್ನಿ. ಆಗ ಅವನು "ನನ್ನ ಸಂಕಟವು ನಿನಗೇನಯ್ಯಾ ಗೊತ್ತು? ನೀನು ನನ್ನನ್ನು ಹಾಸ್ಯಮಾಡಿದೆ. ನೀನೂ ನನ್ನ ಹಾಗೆ ಆಗಿದ್ದರೆ, ಆಗ ನಿನ್ನ ವೈಖರಿಯು ಕಾಣುತ್ತಿತ್ತು.. ಮೇಲೆ ಹೋಗುತ್ತಿದ್ದ ಮೋಡವನ್ನಾದರೂ

ನಾನು ಕೇಳಿದೆನು. ನೀನೇ ನನ್ನ ಸ್ಥಿತಿಯಲ್ಲಿದ್ದ ಪಕ್ಷಕ್ಕೆ, ನಿನ್ನ ಸಂದೇಶವನ್ನು ಒಯ್ಯುವಂತೆ, ನೀನು ಅಚಲವಾದ ರಾಮಗಿರಿಯನ್ನೇ ಕೇಳಿಬಿಡುತ್ತಿದ್ದೆ." ಎಂದು ಹಾಸ್ಯಮಾಡುತ್ತಿದ್ದನೋ ಏನೋ! ಅದಕ್ಕೇ ಕಾಳಿದಾಸನು ಯಕ್ಷನ ಕೈಗೆ ಸಿಕ್ಕಲೂ ಇಲ್ಲ. ಯಕ್ಷನು ತನ್ನ ಪತ್ನಿಯನ್ನು ಸೇರಿದಂತಾಗಲಿ, ಮೇಘವು ಸಂದೇಶವನ್ನು ಅವಳಿಗೆ ತಲುಪಿಸಿದಂತಾಗಲಿ ಚಿತ್ರಿಸಲೂ ಇಲ್ಲ. ಅವನು ಹಾಗೆ ಚಿತ್ರಿಸಿದ್ದರೆ ನಾವು ಅವನ ಗ್ರಂಥವನ್ನು ಆದರಿಸುತ್ತಲೂ ಇರಲಿಲ್ಲ.

ಯಕ್ಷನಿಗೆ ತಕ್ಕ ಹೆಂಡತಿ—ಯಕ್ಷನ ಹೃದಯದಲ್ಲಿ ನೆಲಸಿರುವ ಸಾತ್ವಿಕ ಪ್ರೇಮಕ್ಕೆ ತಕ್ಕ ಹೆಂಡತಿಯು ಸಿಕ್ಕಿರುವುದು ಅವನ ಸೌಭಾಗ್ಯ. ಅವಳ ಸ್ಥಿತಿಯನ್ನು ಯಕ್ಷನೇ ವರ್ಣಿಸಿರುವುದೇನೋ ಸರಿ. ಆದರೆ, ಅವಳ ಸದ್ಗುಣಗಳಿಗೆ ಇದಕ್ಕಿಂತ ಹೆಚ್ಚಿನ ಮತ್ತಾವ ಪ್ರಮಾಣಪತ್ರಿಕೆಯು ಬೇಕು? ದಂಪತಿಗಳಿರ್ವರೂ ಅನನ್ಯಸಾಧಾರಣವಾದ ಪ್ರೇಮದಿಂದ ಅನುಪ್ರಾಣಿತರಾಗಿದ್ದಾರೆ. ಆದುದರಿಂದಲೇ ಪರಸ್ಪರವಾಗಿ ಅವರು ಮಿತಿಮೀರಿ ದುಃಖವನ್ನನುಭವಿಸುತ್ತ, ತಮ್ಮ ವಿರಹವೇದನೆಯನ್ನು ಅತಿಕಷ್ಟದಿಂದ ಸಹಿಸುತ್ತಿದ್ದಾರೆ. ಸಂಪದ್ಯುಕ್ತವಾದ ಅಲಕಾನಗರಿಯಲ್ಲಿ ಮಹಾವೈಭವ ಮಧ್ಯದಲ್ಲಿದ್ದೂ ಕೂಡ, ಯಕ್ಷನ ಪತ್ನಿಯು ವಿರಹಕಾತರಳಾಗಿ ಎಲ್ಲ ಅಲಂಕಾರಗಳನ್ನೂ ಪರಿತ್ಯಜಿಸಿ, ಸಮಸ್ತ ಸುಖಸಾಧನಗಳಿಗೂ ದೂರಳಾಗಿರುವಳು. ತನ್ನ ಪ್ರಿಯನ ಅಗಲಿಕೆಯಿಂದ ಅವಳಿಗೆ ಜೀವನವೇ ಭಾರವಾಗಿರುವುದು. ಅವಳಿಗೆ ಸರ್ವಕಾಲದಲ್ಲಿಯೂ ತನ್ನ ಪತಿಯ ಚಿಂತೆಯೇ. ಪತಿಯು ಶೀಘ್ರವಾಗಿಯೂ ಕ್ಷೇಮವಾಗಿಯೂ ಊರಿಗೆ ಬರಲೆಂಬ ಹಾರೈಕೆಯಿಂದ ದೇವತಾರ್ಚನೆಯಲ್ಲಿ ಮಗ್ನಳಾಗಿ ಅವಳು ಮೇಘದ ಕಣ್ಣಿಗೆ ಗೋಚರಿಸುವಳಂತೆ. ಅಥವಾ ವಿರಹಕೃಶನಾದ ಯಕ್ಷನ ಭಾವಚಿತ್ರವನ್ನು ಬರೆಯುತ್ತಿರುವಳಂತೆ. ಅದೂ ಇಲ್ಲದೆ ಹೋದರೆ, ಮೇಘವು ಅವಳನ್ನು ನೋಡಿದಾಗ್ಗೆ, ಪಂಜರದಲ್ಲಿರುವ ಮಧುರಭಾಷಿಣಿಯಾದ ಸಾರಿಕೆಯನ್ನು—"ಎಲೈ ರಸಿಕಳೆ! ನೀನು ನಿನ್ನ ಒಡೆಯನನ್ನು ನೆನಪಿನಲ್ಲಿಟ್ಟುಕೊಂಡಿರುವೆಯಾ, ಹೇಗೆ? ನೀನು ಅವನಿಗೆ ಪ್ರಿಯಳಾಗಿದ್ದೆ" ಎಂದು ಹೇಳುತ್ತಿರುವಳಂತೆ. ಯಕ್ಷನು ಮೇಘದೊಡನೆ ಈ ರೀತಿ ಹೇಳುವ—

"ಆಲೋಕೇ ತೇ ನಿಪತತಿ ಪುರಾ ಸಾ ಬಲಿವ್ಯಾಕುಲಾ ವಾ।
ಮತ್ಸಾದೃಶ್ಯಂ ವಿರಹತನು ವಾ ಭಾವಗಮ್ಯಂ ಲಿಖಂತೀ ॥
ಪೃಚ್ಛಂತೀವಾ ಮಧುರ ವಚನಾಂ ಸಾರಿಕಾಂ ಪಂಜರಸ್ಥಾಂ।
ಕಚ್ಚಿದ್ಭರ್ತುಃ ಸ್ಮರಸಿ ರಸಿಕೇ ತ್ವಂ ಹಿ ತಸ್ಯ ಪ್ರಿಯೇತಿ ॥"

ಎಂಬ ಶ್ಲೋಕವು ಬಂಧುರವಾಗಿದೆ. ಪಂಜರಸ್ಥವಾಗಿರುವ ಒಂದು ಹೆಣ್ಣುಗಿಳಿಯನ್ನೂ ಕೂಡ ಸಮಾನಸ್ಕಂಧತೆಯಿಂದ ಕಾಣುವವಳ ಹೃದಯವು ಎಷ್ಟು ಸಂಸ್ಕೃತವಾದುದು! ಪತಿಯು ದೂರಗತನಾಗಿರುವ ದುಃಖವು ಬಾಧಿಸುತ್ತಿದ್ದೂ

ಆಗಲೂ ಭಕ್ತಿಯಿಂದ ಅವಳು ದೇವತಾರಾಧನೆಯನ್ನು ನಡೆಯಿಸಬೇಕಾದರೆ ಅವಳ ಮನಸ್ಸಿನ ಸಮಾತಿಯು ಎಷ್ಟುಮಟ್ಟಿನದಾಗಿರಬೇಕು. ಅವಳು ಚಿತ್ರಕಲೆಯನ್ನು ಅಭ್ಯಾಸಮಾಡಿದವಳೂ ಹೌದು, ಅಷ್ಟೇ ಅಲ್ಲ—

"ಉತ್ಸಂಗೇ ವಾ ಮಲಿನವಸನೇ ಸೌಮ್ಯ ನಿಕ್ಷಿಪ್ಯ ವೀಣಾಂ।
ಮದ್ಗೋತ್ರಾಂಕಂ ವಿರಚಿತಪದಂ ಗೇಯಮುದ್ಗಾತು ಕಾಮಾ ॥
ತಂತ್ರೀಮಾರ್ದ್ರಾಂ ನಯನ ಸಲಿಲೈಃ ಸಾರಯಿತ್ವಾ ಕಥಂ ಚಿ।
ದ್ಭೂಯೋ ಭೂಯಃ ಸ್ವಯಮಪಿಕೃತಾಂ ಮೂರ್ಛನಾಂ ವಿಸ್ಮರಂತೀ ॥"

ಎಂಬ ಶ್ಲೋಕದ ಸೊಬಗನ್ನಾದರೂ ನೋಡಿ. ಆಕೆಯು ಮಲಿನವಸನವನ್ನು ಧರಿಸಿರುವಳಂತೆ. ತನ್ನ ಪತಿಯ ನಾಮಾಂಕಿತವು ಬರುವಂತೆ ತಾನೇ ರಚಿಸಿದ್ದ ಹಾಡನ್ನು ಗಟ್ಟಿಯಾಗಿ ಹೇಳಿಕೊಂಡು ವೀಣೆಯನ್ನು ಬಾರಿಸಬೇಕೆಂಬ ಸಂಕಲ್ಪದಿಂದ, ವೀಣೆಯನ್ನು ತೊಡೆಯಮೇಲಿಟ್ಟುಕೊಂಡು, ತನ್ನ ಕಣ್ಣೀರಿನಿಂದ ನೆನೆದು ಹೋಗಿರುವ ತಂತಿಗಳನ್ನು ಹೇಗೋ ಶ್ರುತಿಮಾಡುವಳಂತೆ. ಆದರೆ, ತಾನೇ ರಚಿಸಿದ್ದ ಆ ಹಾಡಿನ ಮೂರ್ಛನವನ್ನೇ (ಎಂದರೆ, ಸ್ವರಾರೋಹಾವರೋಹ ಕ್ರಮವನ್ನೇ) ಮತ್ತೆ ಮತ್ತೆ ಮರೆತುಬಿಡುತ್ತಿದ್ದಳಂತೆ. ತಾನು ಮಾಡಿದ ಹಾಡಿನ ಸ್ವರ ಕ್ರಮವನ್ನೇ ತಾನು ಮರೆತುಬಿಡುವವಳ ದುಃಖವು ಎಷ್ಟುಮಟ್ಟಿನದಾಗಿರಬೇಕು? ಅವಳು ವೀಣಾವಾದನದಲ್ಲಿಯೂ ಕವಿತೆಯಲ್ಲಿಯೂ ಪ್ರವೀಣೆ. ಆದರೂ, ಅವುಗಳಿಂದ ಅವಳಿಗೆ ಸುಖವಿಲ್ಲ. ಯಕ್ಷನು ಸಮೀಪದಲ್ಲಿದ್ದ ಪಕ್ಷದಲ್ಲಿ, ಅವಳು ಸರ್ವಾಲಂಕಾರ ಭೂಷಿತೆಯಾಗಿ, ತಾನು ರಚಿಸಿದ್ದ—ತನ್ನ ಪತಿಯ ನಾಮಾಂಕಿತದಿಂದ ಕೂಡಿದ—ಹಾಡನ್ನು ಸಂತೋಷದಿಂದಲೂ ಠೀವಿಯಿಂದಲೂ ಹಾಡಿ ಉಲ್ಲಾಸಪಡುತ್ತಿದ್ದಳು. ತನ್ನ ಕಲರವಕ್ಕೆ ಸರಿಯಾಗಿ ವೀಣೆಯನ್ನೂ ಬಾರಿಸಿ, ತನ್ನ ಪತಿಯನ್ನೂ ಆನಂದಪಡಿಸುತ್ತಿದ್ದಳು. ಆದರೆ, ಪತಿಯು ದೂರದಲ್ಲಿರುವುದರಿಂದ ಅವಳು ಮಲಿನಾಂಬರವನ್ನುಟ್ಟು, ವೀಣೆಯ ತಂತಿಯು ನೆನೆಯುವಂತೆ ಕಣ್ಣೀರನ್ನು ಸುರಿಸುತ್ತ, ಮೂರ್ಛನವನ್ನೇ ಮರೆತುಬಿಡುವಳು. ಇಷ್ಟು ದುಃಖವಿದ್ದರೂ ಹಗಲಿನಲ್ಲಿ ಮಾತ್ರ ಆಕೆಯು ಕೆಲಸಗಳ ಅವಲಂಬನದಿಂದ ಕಾಲವನ್ನು ಕಳೆಯುವಳು. ಧನಾಢ್ಯನಾದ ಯಕ್ಷನ ಮನೆಯ ಯಜಮಾನಿಯಾದವಳು ಎಷ್ಟೋ ಕೆಲಸಗಳನ್ನು ಮಾಡಬೇಕು. ಅವಳು ಗಳಗಳನೆ ಅಳುತ್ತ ಒಂದು ಕಡೆ ಕುಳಿತುಕೊಂಡರೆ ಕೆಲಸಗಳು ಸಾಗುವ ಬಗೆ ಹೇಗೆ? ಇದನ್ನೆಲ್ಲ ನೋಡಿದರೆ, ತಲೆಯನ್ನು ಕೂಡ ಬಾಚಿಕೊಳ್ಳದೆ, ಮಲಿನ ವಸ್ತ್ರವನ್ನು ಧರಿಸಿ, ದುಃಖದಿಂದ ಕಳೆಗುಂದಿರುವ ಶಕುಂತಲೆಯ ನೆನಪಾಗುತ್ತದೆ. ಯಕ್ಷನ ಪತ್ನಿಯು ಹಗಲನ್ನು ಹೇಗೋ ಕೆಲಸಗಳ ಗೊಂದಲದಲ್ಲಿ ಕಳೆಯುವಳು. ರಾತ್ರಿಯು ಸಮೀಪಿಸಿತೆಂದರೆ, ಏಕಾಂತದಲ್ಲಿ ಕಣ್ಣೀರನ್ನು ಸುರಿಸಲು ಅವಳಿಗೆ ಅವಕಾಶವು ದೊರೆಯುವುದು. ಅವಳು ಬರಿಯ ನೆಲದಮೇಲೆ ಮಲಗಿ ರೋದಿಸುವಳು. ಯಥೇಷ್ಟವಾದ ಸಂಪತ್ತಿನ ಮಧ್ಯದಲ್ಲಿದ್ದರೂ ಕೂಡ, ತನ್ನ ಮನೆಯ ಸೇವಕರಿಗಿಂತ ಕಡೆಯಾಗಿ

ಬರಿಯ ನೆಲದಮೇಲೆ ಮಲಗುವವಳ ವಿಷಮ ಸ್ಥಿತಿಯೂ, ಪತಿಯನ್ನಗಲಿರುವ ಕಾಲದಲ್ಲಿ ಸುಖಪರಾಜ್ಯಸ್ಥಿತಿಯೂ ಎಷ್ಟು ಮಟ್ಟಿಗೆ ಸಮಾನವಾಗಿರಬೇಕು! ಸೌಧಮಾಲೆಯಲ್ಲಿ ವಾಸ. ಸುಖಕ್ಕೆ ದೂರವಾಗಿ ಬರಿಯ ನೆಲದಮೇಲೆ ಬಿದ್ದು. ಇದರ ಮೇಲೆ ದುಃಖಾರ್ತತೆ, ಚಿಂತೆಯ ಆವೇಗ. ಪತಿಯ ವಿಷಯವನ್ನೇ ಚಿಂತಿಸುತ್ತಿದ್ದ ಆಕೆಯು, ಒಂದು ಪಾರ್ಶ್ವಕ್ಕೆ ಮಲಗಿದವಳು ಮತ್ತೊಂದು ಪಾರ್ಶ್ವಕ್ಕೆ ಕೂಡ ತಿರುಗುತ್ತಿರಲಿಲ್ಲವಂತೆ. ಚಿಂತಾಕ್ರಾಂತಳಾಗಿರುವವಳಿಗೆ ಈ ವಿಧದ ದೈಹಿಕ ವ್ಯಾಪಾರಗಳಿಗೆ ಅವಕಾಶವೆಲ್ಲಿ? ಇದನ್ನು ನೋಡಿದಾಗ—" When the mind is at ease, the body has leisure to be delicate " ಎಂಬ ವಾಕ್ಯವು ಯಾರಿಗೆ ತಾನೇ ಜ್ಞಾಪಕಕ್ಕೆ ಬರುವುದಿಲ್ಲ? ಹೀಗೆ ದುಃಖಾಕ್ರಾಂತಳಾಗಿ ಕಾಲವನ್ನು ಕಳೆಯುತ್ತಿದ್ದ ಯಕ್ಷನ ಪತ್ನಿಯು ದಿನ ದಿನವೂ ಕೃಶಳಾದುದರಲ್ಲಿ ಆಶ್ಚರ್ಯವೇನು? ಎಣ್ಣೆಯನ್ನು ಹಚ್ಚಿಕೊಂಡು ಅಭ್ಯಂಗಮಾಡದೆ ಕೇವಲ ಶುದ್ಧ ಸ್ನಾನ ಮಾಡುತ್ತಿದ್ದ ಅವಳ ಮುಂಗುರುಳು ಪರುಷತೆಯನ್ನು ಹೊಂದಿ, ಅವಳು "ಏಕವೇಣಿ" ಯಾದುದರಲ್ಲಿ ತಾನೆ ಆಶ್ಚರ್ಯವೆಲ್ಲಿಯದು? ಅವಳ ಸ್ಥಿತಿಯನ್ನು ವರ್ಣಿಸುವುದರಲ್ಲಿ ಕೊನೆಯದಾಗಿ ಯಕ್ಷನು ಹೇಳುವ ಶ್ಲೋಕವನ್ನು ನೋಡಿ—

"ಸಾ ಸಂನ್ಯಸ್ತಾಭರಣಮಬಲಾ ಪೇಶಲಂ ಧಾರಯಂತೀ।
ಶಯ್ಯೋತ್ಸಂಗೇ ನಿಹಿತಮಸಕೃದ್ದುಃಖ ದುಃಖೇನ ಗಾತ್ರಂ॥
ತ್ವಾಮಪ್ಯಸ್ರಂ ನವಜಲಮಯಂ ಮೋಚಯಿಷ್ಯತ್ಯವಶ್ಯಂ।
ಪ್ರಾಯಃ ಸರ್ವೋ ಭವತಿ ಕರುಣಾವೃತ್ತಿರಾರ್ದ್ರಾಂತರಾತ್ಮಾ॥"

[ಕೃಶಳಾಗಿಯೂ, ಆಭರಣಗಳನ್ನು ತ್ಯಜಿಸಿದವಳಾಗಿಯೂ ಇರುವ ಕೋಮಲ ಗಾತ್ರಳಾದ ಆಕೆಯು ದುಃಖಾವೇಗದಿಂದ ಮತ್ತೆ ಮತ್ತೆ ಎದ್ದು ಬಿದ್ದು ಹೊರಳಾಡುವುದನ್ನು ನೋಡಿ, ನೀನು ಕೂಡ ನವ ಜಲ ಮಯವಾದ ಬಾಷ್ಪವನ್ನು ಅವಶ್ಯವಾಗಿ ಸುರಿಸುವೆ. ಮೃದು ಹೃದಯವುಳ್ಳವರೆಲ್ಲರೂ ಪ್ರಾಯಶಃ ಕರುಣಾವೃತ್ತಿಯುಳ್ಳವರಾಗಿಯೇ ಇರುತ್ತಾರೆ—ಎಂಬುದು ಇದರ ತಾತ್ಪರ್ಯ] ಈ ಶ್ಲೋಕವನ್ನು ಓದಿದಾಗ ನಮ್ಮ ಹೃದಯವೂ ಕರಗಿಹೋಗುವುದು. (ಯಕ್ಷನು ಮೇಘವನ್ನು ಸಚೇತನ ವ್ಯಕ್ತಿಯರೀತಿ ಸಂಬೋಧಿಸಿ, ಮೇಘವು ಕಣ್ಣೀರು ಸುರಿಸುವಂತೆ ಭಾವಿಸಿರುವುದು ವಿಲಕ್ಷಣವಾಗಿರುವಂತೆ ಕೆಲವರಿಗೆ ತೋರಬಹುದು. ಯಕ್ಷನು ಅತಿವಾಸಿ ದುಃಖಿತನಾಗಿ, ಯಾವುದೋ ಒಂದು ಸ್ವಪ್ನ ರಾಜ್ಯದಲ್ಲಿದ್ದಾನೆ. ಆದುದರಿಂದ, ಅವನ ವರ್ತನೆಯಲ್ಲಿ ಸ್ವಭಾವ ವಿರುದ್ಧವಾದುದೇನೂ ಇಲ್ಲ. ಯಾರು, ತಾವೇ ಯಕ್ಷನ ಸ್ಥಿತಿಯಲ್ಲಿದ್ದಂತೆ ಭಾವಿಸಿಕೊಂಡು ವಿಮರ್ಶೆಯ ಆಳತೆಗೆ ಆರಂಭಿಸುವರೋ, ಅವರು ಇದನ್ನು ಅವಶ್ಯವಾಗಿ ಒಪ್ಪುವರೆಂದು ತೋರುತ್ತದೆ.) ಅಂತು, ಯಕ್ಷನ ಪತ್ನಿಯು ಅವನಿಗೆ ತಕ್ಕ ಹೆಂಡತಿ. ಸಂಸ್ಕೃತಳೂ, ಲೋಕೋತ್ತರ ಸೌಂದರ್ಯವುಳ್ಳವಳೂ, ಕಲಾಭಿಜ್ಞಳೂ, ಪತಿಪ್ರಾಣೆಯೂ ಆದ

ಸಾಧ್ವೀಮಣಿ. ಅವಳ ದಶೆಯನ್ನು ನೋಡಿ, ನಮಗೂ ಅನುತಾಪವುಂಟಾಗುವುದು.

ಸಂದೇಶದ ಸೊಗಸು—ಮೇಘ ದೂತ ಕಾವ್ಯದಲ್ಲಿ ಬರುವ ಸಂದೇಶವು ಪತ್ನಿಯ "ಜೀವಿತಾಲಂಬನಾರ್ಥ"ವಾದ ಯಕ್ಷನ ಪ್ರೇಮ ಹೃದಯದಿಂದ ಹೊರಟ ಸಂದೇಶ. ತನ್ನ ಸಂದೇಶವನ್ನು ತನ್ನ ಪತ್ನಿಗೆ ತಿಳಿಸುವಾಗಲೂ ಕೂಡ, ಮೇಘವು ಸಮಯ ಸಂದರ್ಭಗಳನ್ನು ನೋಡಬೇಕೆಂಬುದು ಯಕ್ಷನ ಹಾರ್ದಿಕೆ. ಈ ಸಂದರ್ಭದಲ್ಲಿ ಬರುವ ಭಾವಗಳ ಸೊಗಸನ್ನು ಎಷ್ಟು ವರ್ಣಿಸಿದರೂ ತೀರದು. ತನ್ನ ಪತ್ನಿಯ ಯೋಗಕ್ಷೇಮದಲ್ಲಿಯೂ, ಅವಳ ಸುಖದಲ್ಲಿಯೂ ಯಕ್ಷನಿಗೆ ಎಷ್ಟು ಆಸಕ್ತಿ ಇರುವುದೆಂಬುದು ಅದರಿಂದ ಗೊತ್ತಾಗುವುದು. ಅವಳು ಗುಣವತಿಯಾಗಿದ್ದುದೇ ಅದಕ್ಕೆ ಕಾರಣವೆಂಬುದನ್ನು ಮತ್ತೆ ಹೇಳಬೇಕಾದುದೇ ಇಲ್ಲ. ಮೇಘವು ಯಕ್ಷನ ಮನೆಯ ಬಳಿಗೆ ಹೋದಾಗ, ಅವಳಿಗೇನಾದರೂ ಅಲ್ಪ ಸ್ವಲ್ಪ ನಿದ್ರೆಯು ಹತ್ತಿದ್ದರೆ, ಮೇಘವು ಸದ್ದುಗಲಿಗಿಲ್ಲದೆ ಒಂದು ಯಾಮ ಕಾಲ ಕಾದಿದ್ದು, ಆ ಬಳಿಕ ಯಕ್ಷನ ಸಂದೇಶವನ್ನು ತಿಳಿಸಬೇಕಂತೆ. ಅಷ್ಟೇ ಅಲ್ಲ. ಹೊಸ ನೀರಿನ ತುಂತುರುಗಳಿಂದ ಕೂಡಿದ ಶೀತಲವಾದ ಮಂದಮಾರುತದಿಂದ ಅವಳು ಎಚ್ಚರಗೊಳ್ಳುವಂತೆ ಮಾಡಿ, ಆ ಬಳಿಕ ಮೇಘವು ಸಂದೇಶವನ್ನು ತಿಳಿಸಬೇಕಂತೆ. ಸಂದೇಶವು ಆರಂಭವಾಗುವ ಮೊದಲು ಮೇಘವು ಮಾತನಾಡಬೇಕಾದ ಸೊಬಗನ್ನಾದರೂ ನೋಡಿ:—

"ಭರ್ತುರ್ಮಿತ್ರಂ ಪ್ರಿಯಮವಿಧವೇ ವಿದ್ಧಿ ಮಾಮಂಬುವಾಹಂ।
ತತ್ಸಂದೇಶೈರ್ಹೃದಯ ನಿಹಿತೈರಾಗತಂ ತ್ವತ್ಸಮೀಪಂ ॥
ಯೋ ವೃಂದಾನಿ ತ್ವರಯತಿ ಪಥಿ ಶ್ರಾಮ್ಯತಾಂ ಪ್ರೋಷಿತಾನಾಂ।
ಮಂದ್ರಸ್ನಿಗ್ಧೈರ್ಧ್ವನಿಭಿರಬಲಾ ವೇಣಿಮೋಕ್ಷೋತ್ಸುಕಾನಿ ॥"

[ಎಲೈ ಸುಮಂಗಲಿಯೆ! ನಿನ್ನ ಪತಿಯ ಪ್ರಿಯ ಮಿತ್ರನಾದ ಮತ್ತು ಆತನ ಸಂದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ನಿನ್ನ ಸಮೀಪಕ್ಕೆ ಬಂದಿರುವ ಮೇಘವು ನಾನೆಂದು ತಿಳಿ. (ನಾನು ಎಂತಹ ಮೇಘವೆಂದು ತಿಳಿದಿರುವೆ?) ಪ್ರವಾಸಿಗಳಾದ ಜನರು ತಮ್ಮ ಆಗಮನವನ್ನೇ ಎದುರುನೋಡುತ್ತಿರುವ ತಮ್ಮ ಪತ್ನಿಯರಾದ ಅಬಲೆಯರ ಜಡೆಮುಡಿಯ ನಿಯಮವನ್ನು ಬಿಡಿಸಿ ಅವರ ಸಮೀಪವನ್ನೈದಿ ಆನಂದಿಸುವಂತೆ ನನ್ನ ಮಂದ್ರಸ್ನಿಗ್ಧವಾದ ಗುಡುಗಿನ ಧ್ವನಿಯಿಂದ ತ್ವರೆಗೊಳಿಸುವವನು ನಾನು.] ಈ ಶ್ಲೋಕದಲ್ಲಿ ಕವಿಯು ಪದಪ್ರಯೋಗ ಮಾಡಿರುವುದರ ಔಚಿತ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. 'ದಿವಂಗತರಾದ ರಂಗಾಚಾರ್ಯರೆಂಬ ಪಂಡಿತೋತ್ತಮರು ಹೇಳಿರುವಂತೆ "ಭರ್ತುರ್ಮಿತ್ರಂ" ಎಂಬುದಕ್ಕೆ ಬದಲಾಗಿ "ಮಿತ್ರಂ ಭರ್ತುಃ" ಎಂದು ಹೇಳಿದ್ದರೂ ಛಂದೋಭಂಗವಾಗುತ್ತಿರಲಿಲ್ಲ. ಆದರೂ, ಕವಿಯು ಉದ್ದೇಶಪೂರ್ವಕವಾಗಿ ಆ ರೀತಿ ಪದ ಪ್ರಯೋಗ ಮಾಡಿದ್ದಾನೆ. ಸಂದೇಶದ ರಚನೋಯುಕ್ತಿಯು ಪದ ಸರಣಿಯಿಂದಲೂ ವ್ಯಕ್ತವಾ

ಗುತ್ತದೆ. ದಿವಂಗತರಾದ ಆ ಪಂಡಿತೋತ್ತಮರು ಹೇಳಿರುವಂತೆ ಮೊಟ್ಟಮೊದಲು "ಭರ್ತುಃ" ಎಂಬ ಪದವು ಬಾರದೆ ಹೋಗಿದ್ದರೆ, ಯಕ್ಷನ ಪತ್ನಿಯು ಮೇಘದ ಮಾತಿಗೆ ಕಿವಿಗೊಡುತ್ತಲೇ ಇರಲಿಲ್ಲ. ಈ ಸಂದರ್ಭದಲ್ಲಿ ಅವರು—"He is asked to tell her after thus catching her attention that he is himself a person dear to her husband as a friend, and that her own lover and lord is quite well and alive. That is indeed why he is made to say at first that he is her husband's friend— भर्तुः मित्रम्, and then to address her as अविधवे; and it is natural that these words should make her prone to listen to him with attention as her husband's dear friend. Then it is that he tells her that he brings to her a well-remembered message from him, and makes himself known to her as one whose most worthy function in life is to hurry on separated lovers to go back to their beloved ones who are anxiously awaiting their arrival." ಎಂದೂ ಹೇಳಿದ್ದಾರೆ. ಮೇಘವು ಮೊದಲು ಅವಳ ಪತಿಯ ಸುದ್ದಿಯನ್ನೆತ್ತಿ, ಅವಳು ತನ್ನ ಮಾತಿಗೆ ಗಮನಕೊಡುವಂತೆ ಮಾಡಬೇಕು. ಅದಕ್ಕಾಗಿಯೇ ಮೊಟ್ಟಮೊದಲು "ಭರ್ತುಃ" ಎಂಬ ಪದವು ಪ್ರಯೋಗಿಸಲ್ಪಟ್ಟಿದೆ. ಬಳಿಕ, ಅವಳ ಗಂಡನಿಗೆ ತಾನು ಪ್ರಿಯ ಮಿತ್ರನೆಂಬುದನ್ನು ತಿಳಿಸಿ, ಮೇಘವು ತನ್ನಲ್ಲಿ ಅವಳಿಗೆ ಆದರ ವಿಶ್ವಾಸಗಳು ಹುಟ್ಟುವಂತೆ ಮಾಡಬೇಕು. (ಅದಕಾರಣ "ಮಿತ್ರಂ ಪ್ರಿಯಂ" ಎಂಬ ಪದಗಳಿವೆ.) ಇಷ್ಟಾದ ಬಳಿಕ, ಯಕ್ಷನು ಜೀವಂತನಾಗಿದ್ದಾನೆಂಬುದನ್ನು ಹೇಳಿ, ಬಾಡಿಹೋಗುವಂತೆ ಬೇಗೆಗೊಳಗಾಗಿರುವ ಅವಳ ಹೃದಯಕ್ಕೆ ಮೇಘವು ವಾರಿಸೇಚನವನ್ನೆಸಗಬೇಕು. ಅದಕ್ಕಾಗಿಯೇ ಕವಿಯು "ಅವಿಧವೇ" ಎಂಬ ಪದವನ್ನು ರತ್ನದ ಹರಳಿನಂತೆ ಬಿಗಿದಿದ್ದಾನೆ. ತನ್ನ ಪ್ರಿಯನಿಗೆ ಪ್ರಿಯ ಮಿತ್ರನಾದವನು ಸಂದೇಶವನ್ನು ತಂದಿರುವುದನ್ನೂ, ತಾನು ಸುಮಂಗಲಿಯಾಗಿರುವುದನ್ನೂ (ಎಂದರೆ, ತನ್ನ ಪತಿಯು ಜೀವಂತನಾಗಿರುವುದನ್ನೂ) ಅರಿತ ಬಳಿಕ, ತೀವ್ರಾಸಕ್ತಿಯಿಂದ ಅವಳು ಮೇಘದ ಮಾತುಗಳನ್ನು ಲಾಲಿಸುವಳೆಂಬುದು ತಿಳಿದೇ ಇದೆ. ಪ್ರವಾಸಿಗಳಾದ ಪಥಿಕರು ಕೂಡ ವಿರಹಕಾತರೆಯರಾಗಿ ತಮ್ಮ ಆಗಮನವನ್ನೆದುರು ನೋಡುತ್ತಿರುವ ಪ್ರಿಯ ಪತ್ನಿಯರ ಬಳಿಗೆ ಹೋಗುವಂತೆ ತ್ವರೆಗೊಳಿಸುವುದು ತನ್ನ ಜೀವನದ ಪವಿತ್ರ ಧ್ಯೇಯವೆಂದು, ಆ ಬಳಿಕ ಮೇಘವು ಸೂಚಿಸುತ್ತದೆಂದು ಪಂಡಿತ ರಂಗಾಚಾರ್ಯರು ತಿಳಿಸಿದ್ದಾರೆ. ಪ್ರವಾಸಿಗಳು ಬೇಗ ಊರು ಸೇರುವಂತೆ ತ್ವರೆಗೊಳಿಸುವವನು ತಾನೆಂದು ಮೇಘರಾಜನು ತಿಳಿಸುವುದರಲ್ಲಿ, ಮತ್ತೊಂದು ಆಶಯವೂ ಇರಬಹುದೆಂದು ನನ್ನ ಮನಸ್ಸಿಗೆ ತೋರುತ್ತದೆ. ಅಪರಿಚಿತರಾದ ಪಥಿಕರ ವಿಷಯದಲ್ಲಿಯೂ ಅವರ ಸಹಧರ್ಮಿಣಿಯರ ವಿಷಯದಲ್ಲಿಯೂ ತನಗೆ ಅಷ್ಟು ಸಹಾನುಭೂತಿಯೂ ಆದರವೂ ಇದ್ದಮೇಲೆ ತನ್ನ ಪ್ರಿಯ ಮಿತ್ರನಾದ ಯಕ್ಷನ

ವಿಷಯದಲ್ಲಿಯೂ, ಆ ಯಕ್ಷನ ಪ್ರಿಯ ಪತ್ನಿಯ ವಿಷಯದಲ್ಲಿಯೂ ಮತ್ತೂ ಹೆಚ್ಚಿನ ಸಹಾನುಭೂತಿಯು ಉಂಟೇ ಉಂಟೆಂಬುದನ್ನು ವ್ಯಂಗ್ಯವಾಗಿ ಸೂಚಿಸಿ, ತನ್ಮೂಲಕ ಯಕ್ಷನ ಪತ್ನಿಯು ತನ್ನ ಮಾತುಗಳಿಗೆ ತೂಕವನ್ನು ಕೊಟ್ಟು ತನ್ನಲ್ಲಿ ವಿಶೇಷ ಆದರವನ್ನು ತೋರ್ಪಡಿಸುವಂತೆ ಮಾಡಿಕೊಳ್ಳಲೋಸುಗ ಮೇಘವು ಹಾಗೆ ಹೇಳಬೇಕೆಂದು ಚಿತ್ರಿತವಾಗಿರುವಂತೆ ನನಗೆ ತೋರುವುದು. ನಾನು ಹೀಗೆಂದ ಮಾತ್ರನೇ, ಆ ದೊಡ್ಡ ಪಂಡಿತರಿಗಿಂತಲೂ ನಾನು ಹೆಚ್ಚಾಗಿ ತಿಳಿದವನೆಂಬ ಸ್ವಪ್ರತಿಷ್ಠೆಯಿಂದ ನಾನು ಈ ಅಂಶವನ್ನು ಸೂಚಿಸಿದ್ದೇನೆಂದು ವಾಚಕರು ಭಾವಿಸಕೂಡದೆಂದು ಪ್ರಾರ್ಥಿಸುತ್ತೇನೆ. ಪೂಜ್ಯರಾದ ಆ ಪಂಡಿತರು ಹೇಳಿರುವುದರ ಜೊತೆಗೆ ಮತ್ತೊಂದು ಭಾವವೂ ನನಗೆ ತೋರಿದುದರಿಂದ ಅದನ್ನು ವಾಚಕರಿಗೆ ವಿಜ್ಞಾಪಿಸಿದ್ದೇನೆ. ಚೇತನಾಚೇತನದ ಏಕೀಭಾವದ ವಿಷಯದಲ್ಲಿ—ತರುಲತೆಗಳಿಗೂ ಮನುಷ್ಯರಂತೆಯೇ ಸುಖದುಃಖಾದ್ಯನುಭವಗಳುಂಟೆಂಬ ವಿಷಯದಲ್ಲಿ—ಮನುಷ್ಯನಿಗೂ ಪ್ರಕೃತಿಗೂ ಪರಸ್ಪರವಾಗಿರತಕ್ಕ ಸಾಮರಸ್ಯದ ವಿಷಯದಲ್ಲಿ ಕಾಳಿದಾಸನು ಮೇಘ ಸಂದೇಶ ಕಾವ್ಯದಲ್ಲಿ ಸಂಮಿಳಿತವಾಗಿ ಸೇರಿಸಿರುವ ಉದಾತ್ತ ಭಾವಗಳನ್ನು ಕುರಿತು ಅವರು ವಿಚಾರಮಾಡಿಯೇ ಇಲ್ಲ. ಆದರೂ, ಇದು ನಾವು ಅತ್ಯವಶ್ಯವಾಗಿ ಗಮನಿಸಬೇಕಾದ ಅಂಶವೇ ಸರಿ. ಈ ಭಾಗದಲ್ಲಿಯೂ ಅವರಲ್ಲಿ ಕುಂದನ್ನೆಣಿಸುವ ಹೇಯಕೃತ್ಯವನ್ನು ನಾನೆಂದಿಗೂ ಮಾಡೆನು. ಒಬ್ಬರು ಘನವಿದ್ವಾಂಸರೇ ಸಂಗೀತವನ್ನು ಹಾಡಿರಬಹುದು. ಅವರು ಯಾವುದೋ ಒಂದು ರಾಗವನ್ನು—ನಾವು ಕೇಳಲು ಕುತೂಹಲಪಡುತ್ತಿರುವ ರಾಗವನ್ನು—ಹಾಡಲಿಲ್ಲವೆಂದ ಮಾತ್ರಕ್ಕೇ, ಅವರಿಗೆ ಆ ರಾಗವನ್ನು ಹಾಡಲು ಬರುವುದಿಲ್ಲವೆಂಬುದು ನಮ್ಮ ಅಭಿಪ್ರಾಯವೆ? ಅಥವಾ ಅವರು ಹಾಡಿದ ಉಳಿದ ರಾಗಗಳು ನಮ್ಮನ್ನು ಮುಗ್ಧಗೊಳಿಸಿ ನಮ್ಮ ಮನಸ್ಸನ್ನು ಆಕರ್ಷಿಸಲಿಲ್ಲವೆಂಬುದು ನಮ್ಮ ತಾತ್ಪರ್ಯವೆ?

ಅಂತು, ಮೇಲೆ ಸೂಚಿಸಿದ ಶ್ಲೋಕವು ಮನೋಹರವಾದುದು. ಅದರಲ್ಲಿ ಪದಗಳ ಜೋಡಣೆಯು ಎಷ್ಟು ರಮಣೀಯವಾಗಿದೆ! ಪತಿಯ ಅಗಲಿಕೆಯ ದೆಸೆಯಿಂದ ಯಕ್ಷನ ಪತ್ನಿಗೆ ಎಲ್ಲದರಲ್ಲಿಯೂ ಬೇಸರವು ಹುಟ್ಟಿಹೋಗಿದೆ. ಅವಳು ದುಃಖಾತುರಳಾಗಿದ್ದಾಳೆ; ಕೊರಗಿ ಕೊರಗಿ ಕೃಶಳಾಗಿ, ಪತಿಯನ್ನು ಕಾಣುವ ಆಶೆಯಿಂದ ಹೇಗೋ ಜೀವನವನ್ನು ಬಿಗಿಹಿಡಿದು ಬದುಕಿದ್ದಾಳೆ. ಅವಳ ಮನಸ್ಸಿನ ಸ್ಥಿತಿಯು ಅತಿ ಸೂಕ್ಷ್ಮವಾಗಿ ಪರಿಣಮಿಸಿದೆ. ಇಂತಹ ಸನ್ನಿವೇಶವನ್ನು ಚೆನ್ನಾಗಿ ಮನಗಂಡು, ಅದಕ್ಕೆ ತಕ್ಕಂತೆ ಪದಗಳನ್ನು ಜೋಡಿಸಿ, ಯಕ್ಷನು ಶ್ಲೋಕ ರಚನೆಮಾಡಿ ಕಲ್ಪಿಸಿದಂತೆ ಬರೆದಿರುವುದರಲ್ಲಿ ಕವಿಯ ಪ್ರತಿಭೆಯು ಸಾಮಾನ್ಯವಾದುದೆ? ಅದರ ಮುಂದಣ ಶ್ಲೋಕವನ್ನು ನೋಡಿ:—

"ಇತ್ಯಾಖ್ಯಾತೇ ಪವನ ತನಯಂ ಮೈಥಿಲೀವೋನ್ಮುಖೀ ಸಾ |
ತ್ವಾಮುತ್ಕಂಠೋಚ್ಛ್ವಸಿತಹೃದಯಾ ವೀಕ್ಷ್ಯ ಸಂಭಾವ್ಯ ಚೈವ ||

ಶ್ರೋಷ್ಯತ್ಯಸ್ಮಾತ್ಪರಮವಹಿತಾ ಸೌಮ್ಯಸೀಮಂತಿನೀನಾಂ।
ಕಾಂತೋದಂತಃ ಸುಹೃದುಪನತಃ ಸಂಗಮಾತ್ಕಿಂಚಿದೂನಃ ॥ ''

[ನೀನು ಹೀಗೆ ಹೇಳಿದೊಡನೆಯೇ, ಆಕೆಯೂ ಹಿಂದೆ ಸೀತಾದೇವಿಯು ಹನುಮಂತನ ವಿಷಯದಲ್ಲಿ ವರ್ತಿಸಿದಂತೆ ಔತ್ಸುಕ್ಯದಿಂದ ವಿಕಸಿತ ಚಿತ್ತಳಾಗಿ ನಿನ್ನ ಕಡೆಗೆ ನೋಡಿ, ನಿನ್ನನ್ನು ಆದರಿಸುತ್ತಾಳೆ. ಅಲ್ಲದೆ, ಅನಂತರ ನೀನು ಹೇಳುವುದನ್ನು ಅಪ್ರಮತ್ತ ಚಿತ್ತಳಾಗಿ ಆಲೈಸಿ ಕೇಳುವಳು. ಎಲೈ ಸೌಮ್ಯನೇ! ಸೀಮಂತಿನಿಯರಿಗೆ ತಮ್ಮ ಪತಿಗಳ ವಿಷಯವಾಗಿ ಸ್ನೇಹಿತರು ಸಮಾಚಾರವನ್ನು ತಂದು ಹೇಳಿದರೆ, ಅದರಿಂದ ಉಂಟಾಗುವ ಆನಂದವು ಪತಿ ಸಾನ್ನಿಧ್ಯದಿಂದುಂಟಾಗುವ ಆನಂದಕ್ಕಿಂತ ಎಲ್ಲೋ ಅಲ್ಪಸ್ವಲ್ಪ ಕಡಿಮೆಯಾದುದು—ಎಂಬುದು ಈ ಶ್ಲೋಕದ ತಾತ್ಪರ್ಯವು.] ಈ ಶ್ಲೋಕದಿಂದ ನಮ್ಮ ಮನಸ್ಸಿಗೆ ಉಂಟಾಗುವ ಸಂತೋಷವು ಅಷ್ಟಿಷ್ಟಲ್ಲ. ಸಂತೋಷದ ಮಾತು ಹಾಗಿರಲಿ. ಸೀತಾಮಾತೆಯ ಸುದ್ದಿಯೂ, ಹನುಮಂತನನ್ನು ಅವಳು ಸಂಭಾವಿಸಿ, ಆಸಕ್ತಿಯಿಂದ ಅವನ ನುಡಿಗಳನ್ನು ಕೇಳಿದ ಸುದ್ದಿಯೂ, ರಾಕ್ಷಸರಿಂದಾವೃತಳಾಗಿ ರಾಮಧ್ಯಾನಪರಾಯಣೆಯಾಗಿ ಭೂಲೋಕವನ್ನು ಪಾವನಗೊಳಿಸಲು ಮಾನುಷರೂಪದಿಂದ ಬಂದಿದ್ದ ಜಗನ್ಮಾತೆಯ ಮೇಲಣ ಭಕ್ತಿಯ ಪಾರವಶ್ಯದಿಂದ ಯಾವುದೋ ಹೊಳೆಯ ಮೇಲೆ ಯಾವುದೋ ಹರಿಗೋಲಿನಲ್ಲಿ ಎಲ್ಲಿಗೋ ನಮ್ಮ ಮನಸ್ಸನ್ನು ಕರೆದೊಯ್ಯುಬಿಡುವುವು. ಹೆಚ್ಚೇಕೆ? ಒಂದೆರಡು ಸಾಮಾನ್ಯವಾದ ಆಟದ ಸಾಮಾನುಗಳು ದೊರೆಯಬಹುದೆಂದು ಭಾವಿಸಿದ್ದ ಹುಡುಗನೆದುರಿಗೆ, ರಾಶಿ ರಾಶಿಯಾಗಿ ವಿವಿಧ ವಿಧದ ಆಟದ ಸಾಮಾನುಗಳು ಬಂದು ಬಿದ್ದರೆ ಅವನಿಗೆ ಯಾವ ವಿಧದ ಆನಂದವಾಗುವುದೋ, ಅದೇ ರೀತಿಯ ಆನಂದವು ಈ ಶ್ಲೋಕವನ್ನು ಓದಿದಾಗ ನಮಗೂ ಉಂಟಾಗುವುದು.

ಅಲ್ಲಿಂದ ಮುಂದೆ ಯಕ್ಷನು ತನ್ನ ಹೃದಯದ ಆರ್ತತೆಯನ್ನೂ, ತನ್ನ ಮನೋಭಾವಗಳನ್ನೂ ಹೇಳಿಕಳುಹಿರುವನು. ಯಕ್ಷನು ಜೀವಂತನಾಗಿರುವನೆಂಬುದು, ಅವನು ತನ್ನ ಪತ್ನಿಯ ಕುಶಲವನ್ನು ಕೇಳಿದನೆಂಬುದು, ಪತ್ನೀವಿರಹವನ್ನು ಸಹಿಸಲಾರದೆ ಅವನು ಕಂಬನಿ ಬಿಡುತ್ತಿರುವುದು, ಅವಳೂ ತನ್ನಂತೆಯೇ ಇರಬಹುದೆಂದು ಭಾವಿಸಿ ಅನುತಾಪಪಡುವುದು, ಯಕ್ಷನು ಪ್ರಿಯಂಗುಲತೆಯಲ್ಲಿ ತನ್ನ ಪತ್ನಿಯ ಅಂಗವನ್ನೂ, ಜಿಂಕೆಗಳ ಅವಲೋಕನದಲ್ಲಿ ಅವಳ ವಿಲೋಲ ದೃಷ್ಟಿಯನ್ನೂ, ಚಂದ್ರನಲ್ಲಿ ಅವಳ ದೇಹಕಾಂತಿಯನ್ನೂ, ನವಿಲುಗಳ ಗರಿಗಳ ತಂಡದಲ್ಲಿ ಅವಳ ಕೇಶವನ್ನೂ, ನೀರು ಹೆಚ್ಚಾಗಿಲ್ಲದ ನದಿಯ ಅಲೆಗಳಲ್ಲಿ ಅವಳ ಹುಬ್ಬುಗಳ ಮನೋಹರವಾದ ವಿಲಾಸವನ್ನೂ, ಕಾಣಬಹುದಾಗಿದ್ದರೂ, ಇವೆಲ್ಲವೂ ಸಮಷ್ಟಿ ಸ್ವರೂಪದಿಂದ ಎಲ್ಲಿಯೂ ತನಗೆ ಒಟ್ಟಿಗೆ ಕಂಡುಬಂದು, ತನ್ನ ಇನಿಯಳ ಸಾದೃಶ್ಯವನ್ನು ತೋರಿಸದೆ ಇರುವುದಕ್ಕಾಗಿ, ಪೇಚಾಡುತ್ತಿರುವುದು, ಅವಳು ಪ್ರಣಯ ಕುಪಿತಳಾಗಿರುವಂತೆಯೂ,

ತಾನು ಅವಳ ಪದತಲದಲ್ಲಿ ಬಿದ್ದಿರುವಂತೆಯೂ ಯಕ್ಷನು ಶಿಲೆಗಳ ಮೇಲೆ ಧಾತುರಾಗಗಳಲ್ಲಿ ಚಿತ್ರವನ್ನು ಬರೆಯಲಿಚ್ಛಿಸುವುದು, ಆದರೆ, ಅದು ಸಾಧ್ಯವಿಲ್ಲದಂತೆ ಕಣ್ಣುಗಳಲ್ಲಿ ನೀರು ತುಂಬಿಕೊಳ್ಳುವುದು, ಅಲ್ಪಸ್ವಲ್ಪ ನಿದ್ರೆಯು ಬಂದಾಗ ಯಕ್ಷನು ತನ್ನ ಪ್ರಿಯಳನ್ನು ಸ್ವಪ್ನದಲ್ಲಿ ಕಾಣುವುದು, ಅವಳನ್ನು ತಾನು ಆಲಿಂಗಿಸಿಕೊಳ್ಳಲು ಯತ್ನಿಸುವುದನ್ನು ನೋಡಿ ಸ್ಥಲದೇವತೆಗಳು ಕಂಬನಿಯನ್ನು ಸುರಿಸಿರುವರೋ ಎಂಬಂತೆ ತರುಕಿಸಲಯಗಳಲ್ಲಿ ಮುತ್ತುಗಳಂತಿರುವ ನೀರಿನ ಹನಿಗಳು ಬರುವುದು, ಹಿಮವತ್ಪರ್ವತದ ಕಡೆಯಿಂದ ದಕ್ಷಿಣಕ್ಕೆ ಬೀಸುತ್ತಿರುವ ಗಾಳಿಯು ತನ್ನ ಪ್ರಿಯಳ ಅಂಗಗಳನ್ನೂ ಸೋಕಿ ತನ್ನಲ್ಲಿಗೆ ಬಂದಿರಬಹುದೆಂಬ ಭಾವನೆಯಿಂದ ಯಕ್ಷನು ಅದನ್ನು ಆಲಿಂಗಿಸಿ ಸುಖಾನುಭವ ಮಾಡುವುದು—ಇವೇ ಮುಂತಾದ ಸಂಗತಿಗಳನ್ನೆಲ್ಲ ತನ್ನ ಪ್ರಾಣಕಾಂತೆಗೆ ತಿಳಿಸುವಂತೆ ಯಕ್ಷನು ಮೇಘವನ್ನು ಕೇಳುವನು. ಒಂದೊಂದು ಶ್ಲೋಕವೂ ಒಂದೊಂದು ಜೀವರತ್ನದಂತಿದೆ. ಒಂದೊಂದು ಶ್ಲೋಕದಲ್ಲಿಯೂ ಒಂದೊಂದು ಪ್ರಪಂಚವೇ ಅಡಗಿದೆ. ಸಮಷ್ಟಿ ಭಾವದಿಂದ ನೋಡಿದರೂ ಅವುಗಳ ಅಂದವು ಮನೋಮೋಹಕವಾಗಿ ಕಂಗೊಳಿಸುತ್ತದೆ.

ಯಕ್ಷನು ಇಷ್ಟು ದುಃಖಾರ್ತನಾಗಿದ್ದರೂ, ನಿರಾಶೆಯ ವಾತಾಹತಿಗೆ ತುತ್ತಾಗಿ ಕೆಳಕ್ಕುರುಳುವ ಕದಲೀವೃಕ್ಷವನ್ನು ಅವನೆಂದಿಗೂ ಹೋಲುವುದಿಲ್ಲ. ಚಂಡಮಾರುತವನ್ನೂ ಎದುರಿಸಿ ನಿಲ್ಲುವ ವಟವೃಕ್ಷವನ್ನು ಅವನು ಹೋಲುತ್ತಾನೆ. ತಾನೂ ಧೈರ್ಯವನ್ನು ತಾಳಿ, ತನ್ನ ಪತ್ನಿಗೂ ಅವನು ಧೈರ್ಯವನ್ನು ಹೇಳುತ್ತಾನೆ. ಅವನು ಹೇಳುವ—

"ನನ್ವಾತ್ಮಾನಂ ಬಹು ವಿಗಣಯನ್ನಾತ್ಮನೈವಾವಲಂಬೇ।
ತತ್ಕಲ್ಯಾಣಿ ತ್ವಮಪಿ ನಿತರಾಂ ಮಾ ಗಮಃ ಕಾತರತ್ವಂ॥
ಕಸ್ಯಾತ್ಯಂತಂ ಸುಖಮುಪನತಂ ದುಃಖಮೇಕಾಂತತೋವಾ।
ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿ ಕ್ರಮೇಣ॥"

[ಶಾಪಾಂತ್ಯದಲ್ಲಿ ಮುಂದೆ ನಾನು ಮಾಡುವುದನ್ನೆಲ್ಲ ಗುಣಿತ ಹಾಕುತ್ತ ನನಗೆ ನಾನೇ ಸಮಾಧಾನಮಾಡಿಕೊಂಡು ಬದುಕಿಲ್ಲವೆ? ಕಲ್ಯಾಣಿ! ನೀನು ಕೂಡ ಹೀಗೆಯೇ ಸಮಾಧಾನಮಾಡಿಕೊಂಡು ಹೆಚ್ಚು ಕಾತರಳಾಗದಂತೆ ನೋಡಿಕೊಂಡಿರು. ಅವಿಚ್ಛಿನ್ನವಾದ ಸುಖವಾಗಲಿ, ಶಾಶ್ವತವಾದ ದುಃಖ ಒಂದೇ ಆಗಲಿ, ಯಾರಿಗೆ ತಾನೇ ಉಂಟಾಗಿದೆ. ನಮ್ಮ ಅವಸ್ಥೆಯು ಎಂದರೆ, ಸುಖಾನುಭವವೂ, ದುಃಖಾನುಭವವೂ, ಚಕ್ರನೇಮಿಗಳಂತೆ ಮೇಲಿನಿಂದ ಕೆಳಕ್ಕೂ, ಕೆಳಗಿನಿಂದ ಮೇಲಕ್ಕೂ ಹೋಗುತ್ತಲೇ ಇರುತ್ತದೆ—ಎಂಬ ತಾತ್ಪರ್ಯವುಳ್ಳ ಶ್ಲೋಕವು]—ಅದರಲ್ಲಿಯೂ ಆ ಶ್ಲೋಕದ ಉತ್ತರಾರ್ಧವು—ಮನುಷ್ಯತ್ವಕ್ಕೇ ಮಾಡಲ್ಪಟ್ಟ ಉಪದೇಶದಂತಿದೆ. ಯಕ್ಷನ ಮನಸ್ಸಿನ ಸಮತೆಯು ಎಷ್ಟು ಮಟ್ಟಿನದೆಂಬುದನ್ನು ಈ ಶ್ಲೋಕವು ಚೆನ್ನಾಗಿ ತೋರ್ಪಡಿಸುತ್ತದೆ. ಫಲಶ್ರುತಿ

ಯನ್ನು ಹೇಳುವ ಪೌರಾಣಿಕನಂತೆ ಯಕ್ಷನು ಅದರ ಮುಂದಣ ಶ್ಲೋಕದಲ್ಲಿ ಶಾಪಾಂತ್ಯದಲ್ಲಿ ತಾವು ದಂಪತಿಗಳು ಪಡಬಹುದಾದ ಅಪರಿಮಿತ ಸುಖವನ್ನು ಸೂಚಿಸಿ, ತನ್ನ ಪತ್ನಿಗೆ ಆಶೆಯನ್ನೂ ಭರವಸೆಯನ್ನೂ ಉಂಟುಮಾಡಿ, ಅವಳ ಹೃದಯದಲ್ಲಿ ಧೈರ್ಯ ಸ್ಥೈರ್ಯಗಳ ಮಳೆಯು ಬೀಳುವಂತೆ ಮಾಡುತ್ತಾನೆ. ಆ ಶ್ಲೋಕದ ಮಾಧುರ್ಯವನ್ನು ಮೂಲದಲ್ಲಿ ಅನುಭವಿಸಿ ಆನಂದಿಸ ಬೇಕೇ ಹೊರತು, ಅದರ ವರ್ಣನೆಯನ್ನು ಅನ್ಯ ಭಾಷೆಯಲ್ಲಿ ದೊರೆಯಿಸು ವುದೇನೋ ತೀರ ಅಸಾಧ್ಯ—

"ಶಾಪಾಂತೋ ಮೇ ಭುಜಗಶಯನಾದುತ್ಥಿತೇ ಶಾರ್ಙ್ಗಪಾಣೌ।
ಶೇಷಾನ್ಮಾಸಾನ್ಗಮಯ ಚತುರೋ ಲೋಚನೇ ಮೀಲಯಿತ್ವಾ ।
ಪಶ್ಚಾದಾವಾಂ ವಿರಹಗುಣಿತಂ ತಂ ತಮಾತ್ಮಾಭಿಲಾಷಂ।
ನಿರ್ವೇಕ್ಷ್ಯಾವಃ ಪರಿಣತಶರಚ್ಚಂದ್ರಿಕಾಸು ಕ್ಷಪಾಸು ॥"

ಎಂಬುದೇ ಆ ಶ್ಲೋಕ. ಯಕ್ಷನ ಶಾಪವು ವಿಷ್ಣುವು ಭುಜಗಶಯನದಿಂದ ಏಳುವ ಉತ್ಥಾನದ್ವಾದಶಿಯ ವೇಳೆಗೆ ಕೊನೆ ಮುಟ್ಟುವುದು. ಆದಕಾರಣ, ಅದುವರೆಗೆ ನಾಲ್ಕು ತಿಂಗಳ ಕಾಲ ಅವಳು ಹೇಗಾದರೂ ಮಾಡಿ ಜೀವವನ್ನು ಬಿಗಿಹಿಡಿದುಕೊಂಡಿರಬೇಕೆಂದೂ, ಆ ಬಳಿಕ ತಾವಿಬ್ಬರೂ ವಿರಹ ಕಾಲದಲ್ಲಿ ಆಲೋಚಿಸಿಕೊಂಡಿದ್ದಂತೆ ಅಷ್ಟಿಷ್ಟು ಹೆಚ್ಚಾಗಿ ಸುಖವನ್ನನುಭವಿಸಬಹುದೆಂದೂ, ಯಕ್ಷನು ಅವಳಿಗೆ ಹೇಳಿಕಳುಹಿಸಿರುವುದನ್ನು ಈ ಶ್ಲೋಕವು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಕಾಮವೃತ್ತಿಯನ್ನು ಕುರಿತು ಅವನು ಪ್ರಸ್ತಾಪಿಸುತ್ತಿಲ್ಲವೆಂಬುದನ್ನು ಸೂಚಿಸುವುದಕ್ಕಾಗಿ ಕವಿಯು ಪೂರ್ವಾರ್ಧದಲ್ಲಿಯೇ ವಿಷ್ಣುವಿನ ಸುಪ್ತಿಯನ್ನೆತ್ತಿದ್ದಾನೆ. ಪೂರ್ವಾರ್ಧವನ್ನು ಓದಿದ ನಮಗೆ, ಧರ್ಮವಿರುದ್ಧವಲ್ಲದ ದಾಂಪತ್ಯ ಸುಖವನ್ನು ಮಾತ್ರವೇ ಯಕ್ಷನು ಪ್ರಸ್ತಾಪಿಸುತ್ತಿದ್ದಾನೆಂಬುದೂ, ದಾಂಪತ್ಯ ಸುಖದ ಹೆಸರಿನಲ್ಲಿ ನಡೆಯುವ ವಿಷಯಾತುರತೆಯ ಪಶುಭೋಗವು, ಅವನ ಗುರಿಯಲ್ಲವೆಂಬುದೂ ಸ್ಪಷ್ಟವಾಗಿ ತಿಳಿಯುತ್ತವೆ. ಯಕ್ಷನು ಕೊನೆಯದಾಗಿ ಆಕೆಗೆ ಹೇಳಿಕಳುಹಿಸುವ ಮಾತುಗಳನ್ನು ನೋಡಿ:—

"ಏತಸ್ಮಾನ್ಮಾಂ ಕುಶಲಿನಮಭಿಜ್ಞಾನ ದಾನಾದ್ವಿದಿತ್ವಾ !
ಮಾ ಕೌಲೀನಾದಸಿತನಯನೇ ಮಯ್ಯವಿಶ್ವಾಸಿನೀ ಭೂಃ ॥
ಸ್ನೇಹಾನಾಹುಃ ಕಿಮಪಿ ವಿರಹೇ ಧ್ವಂಸಿನಸ್ತೇ ತ್ವಭೋಗಾ।
ದಿಷ್ಟೇ ವಸ್ತುನ್ಯುಪಚಿತರಸಾಃ ಪ್ರೇಮರಾಶೀಭವಂತಿ ॥"

[ಆದಕಾರಣ, ನಾನು ಕಳುಹಿಸಿರುವ ಈ ಅಭಿಜ್ಞಾನ(ಸಂದೇಶ)ವನ್ನು ಕೇಳಿ, ನಾನು ಕುಶಲಿಯಾಗಿದ್ದೇನೆಂಬುದನ್ನು ಗ್ರಹಿಸು. ಲೋಕ ಪ್ರವಾದವನ್ನು ನಂಬಿ ನನ್ನ ವಿಷಯದಲ್ಲಿ ಮರಣಶಂಕಿನಿಯಾಗದಿರು. ವಿರಹಕಾಲದಲ್ಲಿ ಪ್ರೀತಿಯು ಧ್ವಂಸವಾಗುವುದೆಂದು ಏತಕ್ಕೋ ಏನೋ ಹೇಳಿಕೊಳ್ಳುವರು. (ಅಂತಹವರ ಮಾತು ಹಾಗಿರಲಿ) ವಿರಹಕಾಲದಲ್ಲಿ ಪ್ರವೃದ್ಧ ತೃಷ್ಣೆಯಿಂದ ಪ್ರೀತಿಯು

ಮತ್ತೆ ಮತ್ತೆ ಹೆಚ್ಚಿ, ಪ್ರೇಮರಾಜನಾಗಿ ಪರಿಣಮಿಸುತ್ತದೆ—ಎಂಬುದು ಇದರ ತಾತ್ಪರ್ಯ.]

ಇಷ್ಟಾದರೂ, ಯಕ್ಷನು ಮುಂದೆ ನಾಲ್ಕು ತಿಂಗಳ ಕಾಲವೂ ನಿರಾತಂಕನಾಗಿರುವುದಾಗಿ ಸೂಚಿಸಿದ್ದಾನೆಂಬುದಾಗಿ ನಾವು ಭಾವಿಸುವ ಹಾಗಿಲ್ಲ. ಅವನು ತನ್ನ ಪರಿತಾಪವನ್ನು ಸಹಿಸಲು ಮನಸ್ಸನ್ನು ಗಟ್ಟಿಮಾಡಿಕೊಳ್ಳಬಲ್ಲವನಾಗಿದ್ದಾನೆ. ತನ್ನ ಪ್ರಿಯಳಿಗೆ ಸಂದೇಶವನ್ನು ತಿಳಿಸಿ, ಅವಳಿಂದ ಅವಳ ಕುಶಲವಾರ್ತೆಯನ್ನೂ, ಅವಳ ಸಂದೇಶವನ್ನೂ ತನಗೆ ತಂದು ಮುಟ್ಟಿಸಿ, (ಹಿಂದಿನ ರಾತ್ರಿ ಅರಳಿದ್ದ) ಕುಂದಕುಸುಮವು ಪ್ರಾತಃಕಾಲದಲ್ಲಿ ತೊಟ್ಟು ಸಡಲಿದ್ದರೂ ಹೇಗೋ ಗಿಡಕ್ಕೆ ಅಂಟಿಕೊಂಡಿರುವಂತೆಯೇ, ದೇಹವನ್ನೇ ಬಿಟ್ಟುಹೋಗುವಂತಿರುವಷ್ಟು ಶಿಥಿಲವಾದ ತನ್ನ ಪ್ರಾಣವನ್ನೂ ಉಳಿಸಬೇಕೆಂದು ಯಕ್ಷನು ಮೇಘವನ್ನು ಕೇಳಿಕೊಳ್ಳುವನು. ಇಲ್ಲಿ ಕುಂದಕುಸುಮದ ಉಪಮಾನವು ಬಹು ಮನೋಹರವಾಗಿದೆ. "ಉಪಮಾ ಕಾಳಿದಾಸಸ್ಯ" ಎಂಬುದು ಸುಪ್ರಸಿದ್ಧವಾಗಿರುವಾಗ ಇದಕ್ಕೆ ಹೊಸದಾಗಿ ಕಣಿಯನ್ನು ಕೇಳುವ ಪ್ರಯತ್ನವೇಕೆ? ತನ್ನ ಪ್ರಿಯ ಪತ್ನಿಯ ಸಂದೇಶವನ್ನೂ, ಕುಶಲವಾರ್ತೆಯನ್ನೂ ತನಗೆ ತಿಳಿಸಿದ ಬಳಿಕ—ಸ್ನೇಹದಿಂದಲೇ ಆಗಲಿ, ವಿಧುರನೆಂಬ ಕಾರಣದಿಂದಲೇ ಆಗಲಿ, ತನ್ನಲ್ಲಿ ಅನುಕ್ರೋಶ ಬುದ್ಧಿಯಿಂದ ಮೇಘವು ಅನನುರೂಪವಾದ ತನ್ನ ಪ್ರಾರ್ಥನೆಯನ್ನು ಪಾಲಿಸಿ ಪ್ರಿಯಕರವಾದ ಈ ಕಾರ್ಯವನ್ನು ನೆರವೇರಿಸಿದ ಬಳಿಕ—ಮೇಘವು ಹೆಚ್ಚಿನ ತನುದ್ಯುತಿಯಿಂದ ಕೂಡಿ ಮಳೆಗರೆಯುತ್ತ, ಇಷ್ಟಬಂದ ದೇಶಗಳಲ್ಲಿ ಸುತ್ತಬಹುದೆಂದೂ, ಮೇಘಕ್ಕೆ ಪತ್ನಿಯಾದ ವಿದ್ಯುತ್ತಿನಿಂದ ಕ್ಷಣಕಾಲವೂ (ಯಕ್ಷನು ಅನುಭವಿಸುತ್ತಿರುವಂತಹ) ವಿರಹವು ಉಂಟಾಗದೆ ಇರಲೆಂದೂ ಯಕ್ಷನು ಹೇಳುವನು—

"ಏತತ್ಕೃತ್ವಾ ಪ್ರಿಯಮನುಚಿತ ಪ್ರಾರ್ಥನಾವರ್ತಿನೋ ಮೇ।
ಸೌಹಾರ್ದಾದ್ವಾ ವಿಧುರ ಇತಿವಾ ಮಯ್ಯನುಕ್ರೋಶಬುದ್ಧ್ಯಾ॥
ಇಷ್ಟಾನ್ದೇಶಾಞ್ಜಲದ ವಿಚರ ಪ್ರಾವೃಷಾ ಸಂಭೃತಶ್ರೀ।
ಮಾ ಭೂದೇವಂ ಕ್ಷಣಮಪಿ ಚ ತೇ ವಿದ್ಯುತಾ ವಿಪ್ರಯೋಗಃ॥"

ಇಲ್ಲಿಗೆ ಮೇಘ ದೂತ ಕಾವ್ಯವು ಕೊನೆಮುಟ್ಟುವುದು. ಕಾಳಿದಾಸನು ಕೊನೆಯಲ್ಲಿ ಕೂಡ, ತನ್ನ ಕೈವಾಡವನ್ನು ತೋರಿಸಿದ್ದಾನೆ. ತಾನು ನಮ್ಮೆದುರಿಗೆ ಹಿಡಿದಿರುವುದು ವಿರಹಕಾತರನಾಗಿ ವಿಕಾರಶೂನ್ಯನಾಗಿರುವವನ—ಪರಿಣಾಮದಲ್ಲಿ ಅರಿವಾಗಿ ಮುಕ್ತನಾಗುವವನ—ದೈನ್ಯಾಲಾಪದ ಹೃದಯ ಚಿತ್ರವೆಂಬುದನ್ನು ಕವಿಯು ಮತ್ತೊಮ್ಮೆ ನಮ್ಮ ನೆನಪಿಗೆ ತಂದು ಕಾವ್ಯವನ್ನು ಮುಗಿಸುವುದಕ್ಕಾಗಿ **"ಮಾ ಭೂದೇವಂ ಕ್ಷಣಮಪಿಚ ತೇ ವಿದ್ಯುತಾ ವಿಪ್ರಯೋಗಃ॥"** ಎಂದು ಹೇಳಿರುವಂತೆ ನನ್ನ ಮನಸ್ಸಿಗೆ ತೋರುತ್ತದೆ. ಇದನ್ನು ಪರಿಗ್ರಹಿಸುವುದು ಅಥವಾ ನಿರಾಕರಿಸುವುದು ವಾಚಕರ ಚಿತ್ತ. ನಿರ್ಜನ ಪ್ರದೇಶದಲ್ಲಿ

ನಿಂತಿರುವ (ಎಲೆಗಳೂ, ಕೊಂಬೆಗಳೂ ಇಲ್ಲದ) ಮೋಟುಮರವೊಂದನ್ನು ಅಂಧಕಾರಮಯವಾದ ಕಾಳರಾತ್ರಿಯಲ್ಲಿ ದೂರದಿಂದ ನೋಡಿದರೆ, ಕಳ್ಳನು ಅದೂ ತನ್ನಂತೆಯೇ ಕಳ್ಳತನಕ್ಕೆ ಹೊರಟಿರುವ ಮನುಷ್ಯನಾಗಿರಬೇಕೆಂದು ಭಾವಿಸಬಹುದು; ತಪ್ಪಿಸಿಕೊಂಡು ಹೋಗಿರುವವನನ್ನು ಹುಡುಕುತ್ತಿರುವವರು ಮೋಟುಮರವನ್ನು ಕಗ್ಗತ್ತಲೆಯಲ್ಲಿ ದೂರದಿಂದ ನೋಡಿ, ಆ ಮನುಷ್ಯನೇ ನಿಂತಿರಬೇಕೆಂದು ಭಾವಿಸಬಹುದು. ಯಾರು ಹೇಗೆ ಭಾವಿಸಿದರೂ ಅದೇನೋ ಮೋಟುಮರವೇ ಸರಿ. ವಿರಹಕಾತರನಾಗಿ ಚಿತ್ತಭ್ರಮಣೆಯಿಂದ ಕೂಡಿರುವ ಯಕ್ಷನು, ಮುಂಚು, ಮೇಘಕ್ಕೆ ಪತ್ರಿಯೆಂದು ಭಾವಿಸುವನು. ಆದರೂ, ಅವನ ಚಿತ್ತವೃತ್ತಿಯನ್ನು ನೋಡಿ, ಅವನ ಪ್ರೈಸಾಪ್ರಲಾಪವನ್ನು ಕೇಳಿ, ಅವನ ಸದ್ಗುಣಗಳನ್ನು ಗ್ರಹಿಸಿರುವ ನಮಗೆ ಅವನ ಅಜ್ಞತೆಗಾಗಿ ನಗು ಬರುವುದೇ ಇಲ್ಲ. ಅನಿರ್ವಚನೀಯವಾದ ಯಾವುದೋ ಒಂದು ಶಕ್ತಿ ವಿಶೇಷವು ನಮ್ಮ ಹೃದಯವನ್ನು ಹಿಂಡಿದಂತಾಗುತ್ತದೆ. ನಮ್ಮ ಹೃದಯವನ್ನು ಹಿಂಡಿದುದಾವುದೆಂದು ವಿಮರ್ಶಿಸುವಾಲೋಚನೆಯು ಹುಟ್ಟುವ ವೇಳೆಗೆ, ನಮ್ಮ ಮನಸ್ಸೇ ಕರಗಿ ಹೋಗಿರುತ್ತದೆ. ಪಟವನ್ನು ಕಳೆದುಕೊಂಡ ಹದಗು ಹಿಡಿತ ತಪ್ಪಿ ಮುಂದಾಳಿಲ್ಲದೆ ಎತ್ತ ಎಳೆದರೆ ಅತ್ತ ಆದಾವುದೋ ಒಂದು ಪ್ರಪಂಚದ ಗಾಂಭೀರ್ಯದಿಂದ ಮುಂದೆ ಮುಂದೆ ಸಾಗುವಂತೆ, ನಮ್ಮ ಬುದ್ಧಿಯೂ ನಮ್ಮನ್ನು ಹೇಳದೆ ಕೇಳದೆ ಎಲ್ಲಿಗೋ ಸಾಗಿಹೋಗುತ್ತದೆ. ನಮ್ಮ ಹೃದಯವೂ, ಮನಸ್ಸೂ, ಬುದ್ಧಿಯೂ ಉಪಾಧಿರಹಿತವಾಗಿ ನಮ್ಮ ಸ್ವಾಧೀನದಲ್ಲಿದ್ದ ಪಕ್ಷಕ್ಕೆ ಏನನ್ನು ಹೇಳಬಹುದಾಗಿತ್ತೆಂಬುದರ ಪರಿಜ್ಞಾನವೇ ಇಲ್ಲದೆ, ನಮ್ಮ ಬಾಯಿಯು ಮಾತ್ರ—ಅಲ್ಪ ಸ್ವಲ್ಪ ಜುರುಕಾಗಿರುವ ಎಳಬಿಸಿಲಿನ ಝಳವನ್ನೇ ಸಹಿಸಲಾರದೆ ಹೋಗಿ, ಏನೋ ಪ್ರಮಾದವುಂಟಾಯಿತೆಂಬಂತೆ ಚೀರಿಡುವ ಮರಿಗಿಳಿಯಂತೆ—''ಅಯ್ಯೋ ಪಾಪ! ಅಯ್ಯೋ ಪಾಪ!'' ಎಂದುಕೊಂಡು ಸುಮ್ಮನಾಗುತ್ತದೆ. ಹಾಗೆಯೇ ಸ್ವಲ್ಪ ಹೊತ್ತು ಕಳೆದು ನಮ್ಮ ಬುದ್ಧಿಯು ಮತ್ತೊಮ್ಮೆ ನಮ್ಮ ಸ್ವಾಧೀನಕ್ಕೆ ಬಂದಮೇಲೆ, ನಾವು ಹೆಚ್ಚೇನನ್ನೂ—ಹೇಳಲಾರದೆ, ''ಮಹಾಕವಿಯೆ! ಎಂತಹ ಇಂದ್ರಜಾಲವೋ ನಿನ್ನದು! ನಮ್ಮನ್ನು ಮುಗ್ಧಗೊಳಿಸಿದ ವರಕವಿಯಾದ ನಿನಗೆ--ಪಾಮರರು—ನಾವೇನನ್ನು ಕೊಟ್ಟೇವು? ನಮಗಿಂತ ಹೆಚ್ಚಾಗಿ ನಿನ್ನಲ್ಲಿ ಆದರ ಗೌರವಗಳನ್ನು ತೋರಿಸಿ, ನಿನ್ನ ಕವಿತೆಯನ್ನೋದಿ ಆನಂದಪಡುವ ಪುಣ್ಯಾತ್ಮರಿರುವ ಮತ್ತಾವುದಾದರೂ ದೇಶದಲ್ಲಿ ನೀನು ಹುಟ್ಟಬಾರದಾಗಿತ್ತೆ?'' ಎಂದುಕೊಂಡು ಕಣ್ಣೊರಸಿಕೊಳ್ಳಬೇಕಾಗುತ್ತದೆ.

ಗೂಢಾರ್ಥವೇನಾದರೂ ಇದೆಯೆ?—ಮೇಘದೂತ ಕಾವ್ಯದ ಬಾಹ್ಯ ಸೌಂದರ್ಯವು ವರ್ಣನಾತೀತವಾಗಿ ಜಗತ್ತನ್ನೇ ತಲೆದೂಗಿಸುವ ಹಾಗಿದೆ. ನಾನು ಈ ಮೊದಲೇ ಅರಿಕೆಮಾಡಿರುವಂತೆ ಈ ಕಾವ್ಯದಲ್ಲಿ ಕಾಳಿದಾಸನು ಸಾತ್ವಿಕ

ಪ್ರೇಮವನ್ನು ಚಿತ್ರಿಸಿದ್ದಾನಷ್ಟೆ. ಇದರಲ್ಲಿ ಗೂಢಾರ್ಥವೇನಾದರೂ ಇರಬಹುದೆ? ಜೀವನು ಪರಮಾತ್ಮನನ್ನಗಲಿಬಂದ ದುಃಖದ ದೆಸೆಯಿಂದ ಪರಿತಾಪಪಡುತ್ತಿರುವ ದೈನ್ಯಾಲಾಪವನ್ನೂ, ಭಕ್ತಿ ಪಾರವಶ್ಯದಿಂದ ಹುಟ್ಟುವ ಕಾತರತೆಯನ್ನೂ ಈ ಕಾವ್ಯದಲ್ಲಿ ಸಾಂಕೇತಿಕವಾಗಿ ಕವಿಯು ಚಿತ್ರಿಸಿರುವಂತೆ ತೋರುತ್ತದೆ. ಆಧ್ಯಾತ್ಮಿಕದೃಷ್ಟಿಯಿಂದ ಅರ್ಥಮಾಡುವುದಕ್ಕೂ ಕಾಳಿದಾಸನ ಕಾವ್ಯಗಳಲ್ಲಿ ಯಥೇಷ್ಟವಾಗಿ ಅವಕಾಶವಿದೆ. ಶಾಪಕ್ಕೆ ಕಾರಣವೇನೆಂಬುದನ್ನು ಕಾಳಿದಾಸನು ಕಂಠೋಕ್ತವಾಗಿ ಹೇಳಿಲ್ಲ. ಸೃಷ್ಟಿಗೆ ಮೊದಲು ಅಖಂಡ ಬ್ರಹ್ಮವೇ ಎಲ್ಲೆಲ್ಲಿಯೂ ವ್ಯಾಪಿಸಿದ್ದಿತೆಂದೂ, ಆ ಏಕೈಕ ಬ್ರಹ್ಮನು ತಾನೇ ಬಹುರೂಪನಾಗುವ ಇಚ್ಛೆಯಿಂದ ಕೂಡಿದನೆಂದೂ, ಅಲ್ಲಿಂದ ಮುಂದೆ ಅವಿದ್ಯೆಗೊಳಗಾದ ಜೀವಾತ್ಮನ ಬವಣೆಯೇ ಮುಂತಾದುವುಗಳಿಗೆ ಪ್ರಾರಂಭವಾಯಿತೆಂದೂ ಮುಂತಾಗಿ ಹೇಳುವರಷ್ಟೆ. ಜೀವನಿಗೆ ಅಜ್ಞಾನವು ಕವಿದು, ಪರಮಾತ್ಮನ ದೆಸೆಯಿಂದ ಜೀವಾತ್ಮನು ಆದಿಯಲ್ಲಿ ದೂರನಾದುದೇಕೆಂಬುದು ಗಭೀರ ಸಮಸ್ಯೆ. ಅದು ಅಭೇದ್ಯವಾದುದೆಂದರೂ ಸಲ್ಲುವುದು. ಈ ಸಮಸ್ಯೆಯನ್ನೇ ಸಾಂಕೇತಿಕವಾಗಿ ಸೂಚಿಸುವುದಕ್ಕಾಗಿಯೇ, ಕಾಳಿದಾಸನು ಶಾಪ ಕಾರಣವನ್ನು ತಿಳಿಸಿಲ್ಲವೆಂದು ನನ್ನ ಮನಸ್ಸಿಗೆ ತೋರುವುದು. ಯಕ್ಷನ ಆರ್ತತೆಯು ಭಕ್ತನ ಮನಸ್ಸಿನ ಕಾತರತೆಯನ್ನೂ, ಕಳವಳವನ್ನೂ ಸೂಚಿಸುತ್ತದೆ. ಇಲ್ಲಿ ಯಕ್ಷನು ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆದು ಅನೈಕ್ಯಭಾವದಿಂದ ಪರಿತೃಪ್ತನಾಗಿರುವ ಜೀವನ್ಮುಕ್ತನ ಸ್ಥಾನದಲ್ಲಿಲ್ಲ. ಕೆರೆಯ ನೀರು ಮತ್ತೆ ಕೆರೆಗೆ ಸೇರಿದ ಸ್ಥಿತಿಗೂ, ಅವನಿಗೂ ಬಹು ದೂರ. ಕೆರೆಯ ನೀರು ತಾನು ಕಮಲ ಕಲ್ಹಾರಗಳಿಂದ ಶೋಭಿಸುವ ಕೆರೆಯಲ್ಲಿ ಅಖಂಡವಾಗಿ ಆನಂದದಿಂದಿದ್ದ ವೈಭವವನ್ನು ನೆನೆದು ನೆನೆದು, ಮತ್ತೆ ಕೆರೆಗೆ ಹೋಗಿ ಸೇರಲು ಕಾತರಿಸಿ ಕಳವಳಪಡುವ ಸ್ಥಿತಿಯನ್ನು ಯಕ್ಷನು ನಮ್ಮ ನೆನಪಿಗೆ ತರುವನು. ಮಾಯೆಯ ಬಲೆಯೊಳಗೆ ಸಿಕ್ಕಿರುವ ತನ್ನ ನಿಜ ಸ್ಥಿತಿಯನ್ನರಿತು ಆತ್ಮ ಸಾಕ್ಷಾತ್ಕಾರಕ್ಕಾಗಿ ತೊಳಲಿ ತೊಳಲಿ ಬಾಯಿ ಬಿಡುವ ಜೀವಾತ್ಮನ ಸ್ಥಾನದಲ್ಲಿರುವವನು ನಮ್ಮ ಯಕ್ಷ. ಯಕ್ಷನು ಮೋಕ್ಷಾನುವರ್ತಿಯಾದ ಸಾಧಕನೆಂಬುದು ನಿಜವಾದರೂ, ವಿಶೇಷತಃ ನೋಡಿದಲ್ಲಿ ಅವನು ಭಗವಂತನನ್ನು ಒಲಿಸಿಕೊಂಡು ಅವನ ಸಾನ್ನಿಧ್ಯವನ್ನು ಸೇರಲಿಚ್ಛಿಸಿ ದುಃಖಕಾತರನಾಗಿರುವ ಭಕ್ತನೇ ಸರಿ. ಕಾಳಿದಾಸನು ವೇದಾಂತಿಯಾಗಿದ್ದೂ ಸಗುಣೋಪಾಸನೆಯ ಈ ಭಾವವನ್ನೇಕೆ ತಂದುಹಾಕಿದನೆಂಬುದಾಗಿ ಕೆಲವರಿಗೆ ತೋರಬಹುದು. ಅಂತಹವರು ಶ್ರೀಮಚ್ಛಂಕರಭಗವತ್ಪಾದಾಚಾರ್ಯರೇ ಅಪ್ಪಣೆಕೊಡಿಸಿರುವ ಆಣಿಮುತ್ತಿನಂತಹ ಮಾತುಗಳನ್ನು ಗಮನಿಸಬೇಕೆಂಬುದು ನನ್ನ ಪ್ರಾರ್ಥನೆ. **"ದಾಸಸ್ತೇಹಂ ದೇಹದೃಷ್ಟ್ಯಾಸ್ಮಿ ಶಂಭೋ।"** (ಶಂಭುವೆ, ದೇಹ ದೃಷ್ಟಿಯಿಂದ ನಾನು ನಿನ್ನ ದಾಸನಾಗಿದ್ದೇನೆ), **"ಮೋಕ್ಷ ಸಾಧನ ಸಾಮಗ್ರ್ಯಾಂ ಭಕ್ತಿರೇವ ಗರೀಯಸೀ।"** (ಮೋಕ್ಷಸಾಧನ ಸಾಮಗ್ರಿಗಳಲ್ಲಿ ಭಕ್ತಿಯೇ ಶ್ರೇಷ್ಠವಾದುದು.) ಎಂಬೀ ನುಡಿಗಳು ಆಣಿಮುತ್ತುಗಳಂತಹ

ಮಾತುಗಳಲ್ಲದೆ ಮತ್ತೇನು? ನಾವನ್ನರು ಅದ್ವೈತೋಪಾಸನೆಗೆ ಅರ್ಹರಾದ ಅಧಿಕಾರಿಗಳಾಗುವ ಬಗೆ ಹೇಗೆ? ಈ ಮಾತು ಹಾಗಿರಲಿ. ಪರಮಾತ್ಮ ಸಾಕ್ಷಾತ್ಕಾರಕ್ಕಾಗಿ ತೊಳಲುವ ಜೀವಾತ್ಮನ ತೊಳಲಿಕೆಯನ್ನು--ಭಗವಂತನ ಸಾನ್ನಿಧ್ಯವನ್ನು ಸೇರಲಿಚ್ಛಿಸಿ ಅದು ಸಾಧ್ಯವಿಲ್ಲದಕಾರಣ ಸರ್ವದಾ ಭಗವಂತನಲ್ಲಿಯೇ ಮನಸ್ಸಿಟ್ಟು, ಭಗವಂತನ ಅಗಲಿಕೆಯನ್ನು ತಾಳಲಾರದೆ ಉನ್ಮತ್ತನಂತೆ ತೋರುತ್ತಿರುವ ಭಕ್ತನ ಆರ್ತತೆಯನ್ನು—ಕಾಳಿದಾಸನು ಸಾಂಕೇತಿಕವಾಗಿ ಸೂಚಿಸಿದ್ದಾನೆ. ಈ ದೃಷ್ಟಿಯಿಂದಲೂ ಮೇಘ ಸಂದೇಶ ಕಾವ್ಯವು ಮನೋಹರವಾಗಿದೆ.

ನಾವು ಗ್ರಹಿಸಬಹುದಾದ ನೀತಿ—ಉತ್ತಮ ಕವಿಯಾದವನು ಯಾವನೂ, ಮತ ಬೋಧಕನಂತೆ ನೀತಿ ಬೋಧೆಗೆ ತೊಡಗುವುದಿಲ್ಲ. ಕವಿಯು ನೀತಿ ಬೋಧೆಗಾರಂಭಮಾಡಿದರೆ, ಉಬ್ಬು ಹಲ್ಲು ಹಾಯ್ದುಕೊಂಡಿರುವ ಮುಖದಂತೆ ಕಾವ್ಯವು ಶೋಭಾಹೀನವಾಗಿರುವುದು. ಆದರೂ, ಕವಿಯು ಜೀವನ ಚಿತ್ರವನ್ನೇ ಎತ್ತಿ ಹಿಡಿಯುವುದರಿಂದ, ಪ್ರತ್ಯಕ್ಷವಾಗಿಲ್ಲದಿದ್ದರೂ, ಪರೋಕ್ಷವಾಗಿ ಅವನ ಕಾವ್ಯವು ನೀತಿಯನ್ನು ಬೋಧಿಸಿಯೇ ಬೋಧಿಸುವುದು. ವ್ಯಂಗ್ಯವಾಗಿ, ಅನೇಕ ನೈತಿಕ ತತ್ತ್ವಗಳು ನಮಗೆ ಗೋಚರಿಸಿಯೇ ಗೋಚರಿಸುವುವು. ಹಾಗಾದರೆ, ಮೇಘದೂತ ಕಾವ್ಯದಿಂದ ನಾವು ಗ್ರಹಿಸಬಹುದಾದ ನೀತಿಗಳಾವುವು? ಈ ಲೇಖನವು ಈಗಾಗಲೇ ಬಹಳ ವಿಸ್ತರವಾಯಿತು. ಆದುದರಿಂದ, ನೀತಿಗಳ ವಿಷಯವನ್ನು ಹೆಚ್ಚಾಗಿ ಪ್ರಸ್ತಾಪಿಸಲು ನನಗೆ ಇಷ್ಟವಿಲ್ಲ. ಆದರೂ, ಚಾಪಲಾಯ ಚೋದಿತನಾಗಿ ಒಂದೆರಡು ಮಾತುಗಳನ್ನು ಹೇಳುವೆನು. ಕಾವ್ಯದ ಗೂಢಾರ್ಥವನ್ನು ಗ್ರಹಿಸಿ ನಾವೆಲ್ಲರೂ ಉಜ್ವಲವಾದ ದೈವಭಕ್ತಿಯಿಂದೊಡಗೂಡಿರಬೇಕೆಂಬುದು ನಾವು ಗ್ರಹಿಸಬೇಕಾದ ನೀತಿಗಳಲ್ಲೊಂದು. ಸ್ತ್ರೀ ಪುರುಷರೆಲ್ಲರೂ ಯಕ್ಷನನ್ನೂ, ಅವನ ಪತ್ನಿಯನ್ನೂ ಮಾದರಿಯನ್ನಾಗಿಟ್ಟುಕೊಂಡು, ಸಾತ್ವಿಕ ಪ್ರೇಮದಿಂದ ಉದ್ದೀಪ್ತರಾಗಿ ನಿಜವಾದ ಸಂಸ್ಕೃತಿಯ ನೆಲೆಯನ್ನರಿಯಬೇಕೆಂಬುದು ಅವುಗಳಲ್ಲಿ ಮತ್ತೊಂದು. ಲಲಿತ ಕಲೆಗಳಲ್ಲಿ ಅಭಿರುಚಿಯನ್ನೂ, ಪ್ರಾಕೃತಿಕ ವಸ್ತುಗಳಲ್ಲಿ ಕೇವಲ ಆತ್ಮೀಯತೆಯಿಂದ ಕೂಡಿರುವ ಉಜ್ವಲವಾದ ಪ್ರೇಮಭಾವವನ್ನೂ, ದಿನದಿನವೂ ಅಭಿವೃದ್ಧಿಗೊಳಿಸಿಕೊಳ್ಳಬೇಕೆಂಬುದು ಅವುಗಳಲ್ಲಿ ಮತ್ತೊಂದು. ಇವೆಲ್ಲಕ್ಕಿಂತಲೂ ಅಮೋಘವಾದ ಮಗುದೊಂದು ಉಪದೇಶವೂ ಮೇಘ ದೂತ ಕಾವ್ಯದಲ್ಲಿದೆ. ಅಲಕಾ ನಗರವು ಸರ್ವ ಸಮೃದ್ಧವಾಗಿ, ಅಕ್ಷಯ ಭಂಡಾರಗಳಿಂದೊಡಗೂಡಿರುವ ನಗರ; ಅಲ್ಲಿರುವ ಯಕ್ಷರ ಸಂಪತ್ತು ಎಷ್ಟು ಅನುಭವಿಸಿದರೂ ಮುಗಿಯುವ ಹಾಗಿಲ್ಲ. ಆದರೂ ಅವರೆಲ್ಲರಿಗೂ ಒಡೆಯನಾದ ಕುಬೇರನು ಮಹೇಶ್ವರನಲ್ಲಿ ಸ್ನೇಹವನ್ನು ಬಳೆಯಿಸಿದ್ದಾನೆ. ಎಂದರೇನಾಯಿತು? ಪ್ರವೃತ್ತಿ ನಿವೃತ್ತಿ ಮಾರ್ಗಗಳೆರಡೂ ಓತಪ್ರೋತವಾಗಿ ಸೇರಿದಲ್ಲದೆ, ನಿಜವಾದ ನಾಗರಿಕತೆಯೆಂದಿಗೂ ಲಭಿಸದೆಂಬುದು ಸಾಂಕೇತಿಕವಾಗಿ ತಿಳಿಸಲ್ಪಟ್ಟಂತಾಯಿತು. ಕವಿಯು ಈ ತತ್ತ್ವವನ್ನು

ಸಾರಿದುದಾದರೂ ಯಾವ ಸನ್ನಿವೇಶದಲ್ಲಿ? ಗುಪ್ತ ಚಕ್ರವರ್ತಿಗಳ ಚಕ್ರಾಧಿಪತ್ಯದಲ್ಲಿ ಭಾರತವರ್ಷವು ಚಿನ್ನ ಬೆಳ್ಳಿಗಳ ರಾಶಿಯನ್ನೇರಿ ಸಮಸ್ತ ಕಲೆಗಳಲ್ಲಿಯೂ ಮುಂದುವರಿದು ಜಗತ್ತನ್ನೇ ಮುಗ್ಧಗೊಳಿಸುವಂತಿದ್ದಾಗ. ಆಗ ಭಾರತವರ್ಷದಲ್ಲಿ ಧನಲಕ್ಷ್ಮಿಯೂ, ಧಾನ್ಯಲಕ್ಷ್ಮಿಯೂ ತಾಂಡವವಾಡುತ್ತಿದ್ದರು. ಆದರೇನು? ಹಲವು ಮಂದಿ ಧನಿಕರೂ, ರಾಜರುಗಳೂ ಧರ್ಮಪಕ್ಷಪಾತ ಬುದ್ಧಿಯನ್ನು ಪರಿತ್ಯಜಿಸಿ ಭೋಗಲಾಲಸೆಯನ್ನು ವೃದ್ಧಿಪಡಿಸಿಕೊಳ್ಳಲುಪಕ್ರಮಿಸಿದ್ದರು. "ರವಿ ಕಾಣದುದನ್ನು ಕವಿ ಕಾಣುವನು." ದಾರಿದ್ರ್ಯ ದಾವಾನಲ ದಂದಹ್ಯಮಾನವಾದ ನಮ್ಮ ಇಂದಿನ ದುರ್ಭರ ಜೀವನದಲ್ಲಿ ಪರಿಣಾಮಗೊಂಡ ಎಷ್ಟೋ ವಿಧದ ವಿಪತ್ಪರಂಪರೆಗಳಿಗೆ ಅಂದೇ ಶಂಕುಸ್ಥಾಪನೆಯಾಗತೊಡಗಿದುದನ್ನು ಕಂಡು, ಕವಿ ಕಾಳಿದಾಸನು ಆ ಉದಾತ್ತ ತತ್ತ್ವವನ್ನು ತನ್ನ ಕಾವ್ಯದಲ್ಲಿ ಹುದುಗಿಸಿ, ವಿಚಾರಪರರೆಲ್ಲರಿಗೂ ಅದು ಗೋಚರಿಸುವಂತೆ ಮಾಡಿದನು. ಕಾವ್ಯ ರಸಾಸ್ವಾದನದ ಮಧ್ಯದಲ್ಲಿ ಮಹತ್ತರವಾದ ಈ ನೀತಿಯು ನೆಲೆಗಟ್ಟೊ ನಮ್ಮ ಹೃದಯ ಮಧ್ಯದಲ್ಲಿ ಸ್ಥಾಪಿಸಲ್ಪಡುವಂತೆ ಮಾಡಿ ಧನ್ಯನಾದನು. ಹೆಚ್ಚೇಕೆ? ಅವನ ಕಾವ್ಯವು ದೇವಮೂರ್ತಿಯನ್ನೊಳಗೊಂಡಿರುವ ಹೂದೇರಿನಂತೆ ಕಂಗೊಳಿಸುತ್ತಿದೆ.

ಇತರ ಕೆಲವು ಸಂಗತಿಗಳು—ಮೇಘ ದೂತ ಕಾವ್ಯದ ವರ್ಣನೆಗಳು ಮನೋಹರವಾಗಿವೆ. ವಿಷಯಕ್ಕೆ ತಕ್ಕಂತಿರುವ ಮಂದಾಕ್ರಾಂತ ವೃತ್ತದ ದೆಸೆಯಿಂದ ಕಾವ್ಯದ ಸೊಬಗು ಮತ್ತಷ್ಟು ಕಳೆಯೇರಿ, ಪೂರ್ಣಚಂದ್ರ ಮಂಡಲದಂತೆ ಶೋಭಿಸುತ್ತ ಇದೆ. ಮೇಘದ ಪ್ರಯಾಣ ಮಾರ್ಗವು (ಭರತಖಂಡದಲ್ಲಿ ಮೇಘಮಾಲೆಯು ದಕ್ಷಿಣದಿಂದ ಹೊರಟು ಉತ್ತರ ದಿಕ್ಕಿಗೆ ಸಂಚರಿಸುವ ಕ್ರಮದ) ಪ್ರಾಕೃತಿಕ ಸನ್ನಿವೇಶಕ್ಕೆ ಸರಿಯಾಗಿದೆ. ಕಾವ್ಯವನ್ನೋದಿದಾಗ ಕಾಳಿದಾಸನು ಎಷ್ಟುಮಟ್ಟಿಗೆ ದೇಶಸಂಚಾರ ಮಾಡಿದ್ದನೆಂಬುದು ಗೋಚರಿಸಿ, ನಮ್ಮ ಮನಸ್ಸಿಗೆ ಆನಂದವಾಗುತ್ತದೆ. ಪ್ರಯಾಣ ಸೌಕರ್ಯಗಳು ಕೇವಲ ಪರಿಮಿತವಾಗಿದ್ದ ಆಗಿನ ಕಾಲದಲ್ಲಿ, ಅವನು ಅಷ್ಟೊಂದು ದೇಶಗಳನ್ನೂ ಸುತ್ತಿದ ಬಗೆ ಹೇಗೆಂದು ಆಶ್ಚರ್ಯವೂ ಆಗುತ್ತದೆ. ಕಾಳಿದಾಸನು ಉಜ್ಜಯಿನಿಯನ್ನು ಬಣ್ಣಿಸಿರುವ ಬಗೆಯನ್ನು ನೋಡಿ, ಅವನಿಗೆ ತನ್ನ ಜನ್ಮಭೂಮಿಯ ಮೇಲಿದ್ದ ಮಮತೆಯನ್ನಭಿನಂದಿಸಿ ತಲೆದೂಗುವಂತಾಗುತ್ತದೆ. ಅವನ ಅಸೀಮ ಪಾಂಡಿತ್ಯವೂ, ಅದ್ಭುತವಾದ ಅವನ ಕಲ್ಪನಾ ಸಾಮರ್ಥ್ಯವೂ, ಪ್ರಪಂಚವನ್ನೇ ಮುಗ್ಧಗೊಳಿಸುವ ಅವನ ಕವಿತಾ ಶಕ್ತಿಯೂ ಮೇಘ ದೂತ ಕಾವ್ಯದ ಪ್ರತಿಯೊಂದು ಪಙ್ಕ್ತಿಯಲ್ಲಿಯೂ ಪ್ರಕಾಶಿಸುತ್ತವೆ. ಕಾಳಿದಾಸ ಮಹಾಕವಿಯು ಪ್ರಕೃತಿ ಸೌಂದರ್ಯವನ್ನೂ, ಮಾನವ ಹೃದಯವನ್ನೂ ಸಾಮರಸ್ಯದಿಂದ ಒಟ್ಟುಗೂಡಿಸಿರುವುದು ಇನ್ನೆಲ್ಲಕ್ಕಿಂತಲೂ ಮಿಗಿಲಾದುದು. ಅದರ ದೆಸೆಯಿಂದ, ಮೇಘ ದೂತ ಕಾವ್ಯಕ್ಕೆ ಅಪೂರ್ವವಾದ ಶೋಭೆಯುಂಟು. ಕಾವ್ಯದ ಬಾಹ್ಯ ಸೌಂದರ್ಯಕ್ಕೂ, ಸ್ವಾಭಾವಿಕತೆಗೂ, ಲೇಶವೂ ಭಂಗಬಾರದಂತೆಯೇ, ಪ್ರಕೃತಿ ಪುರು

ಷರ ಲೀಲಾನುಭೂತಿಯನ್ನೂ ಸಾಂಕೇತಿಕವಾಗಿ ತನ್ನ ಕಾವ್ಯದಲ್ಲಿ ಸೇರಿಸಿರುವುದರಿಂದಂತೂ, ಕಾಳಿದಾಸ ಮಹಾಕವಿಯ ಯಶೋದುಂದುಭಿಯು ದಶದಿಕ್ಕುಗಳಲ್ಲಿಯೂ ಪ್ರತಿಧ್ವನಿತವಾಗಿ ಮೊಳಗುತ್ತಿದೆ; ಅವನ ಕೀರ್ತಿಲತೆಯು ಪ್ರಪಂಚವನ್ನೇ ಆವರಿಸಿದೆ: ಅದು ಅಲ್ಲಿಗೇ ನಿಲ್ಲದೆ ಸಾಧ್ಯವಾದರೆ ಸ್ವರ್ಗಲೋಕವನ್ನೂ ವ್ಯಾಪಿಸಿ, ಭಾರತವರ್ಷದ ವೈಭವವನ್ನು ಅಲ್ಲಿಯವರೂ ಕೊಂಡಾಡುವಂತೆ ಮಾಡಲೆಂಬುದೇ ನನ್ನ ಅಂತರವಾದ ಹಾರೈಕೆ. ನಾನು ಹೀಗೆ ಹಾರೈಸುವುದು—ನಮ್ಮ ದೇಶದ ಕವಿಯ ಮೇಲಿನ ಭಕ್ತಿ ಮಮತೆಗಳಿಂದ, ನಾನು ಹೀಗೆ ಹಾರೈಸುವುದು—ಅಕ್ಷಮ್ಯವಾದ ಅಪರಾಧವೆ?

ಸಿ. ಕೆ. ವೆಂಕಟರಾಮಯ್ಯ.

ಗ್ರಂಥ ವಿಮರ್ಶೆ

೧. ನೀನೇ ಮುದ್ದು ಕೃಷ್ಣ

ಲೇಖಕರು.—ಮ|| ರಾ|| ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ.

ಪ್ರಕಾಶಕರು.—ಆರ್ಯ ವಿದ್ಯಾಶಾಲೆ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬೆಲೆ ರೂ. ೦-೧೨-೦; ಪುಟಗಳು ೨೯.

"ತಿರಳುಗನ್ನಡದ ಸವಿಯು ಕೆಡದಂತೆ ಬರೆವುದರಲ್ಲಿ ಹೆಸರಾದ ಶ್ರೀ ವೆಂಕಟರಾಮಯ್ಯನವರು ಬರೆದ ಈ ಕಥೆಯು ಆಕಾರದಲ್ಲಿ ಕಿರಿದಾದರೂ ಸೊಂಪು ಸೊಗಸುಗಳಲ್ಲಿ ಹಿರಿದೆಂದು ಎಲ್ಲರೂ ಒಪ್ಪುವ ಮಾತು" ಎಂಬುದಾಗಿ ಪ್ರಕಾಶಕರು ಪುಸ್ತಕದ ಮುನ್ನುಡಿಯಲ್ಲಿ ಬರೆದಿದ್ದಾರೆ. ಕಥೆಯನ್ನು ಓದಿದವರೆಲ್ಲರಿಗೂ ಇದೇ ಅಭಿಪ್ರಾಯವುಂಟಾಗುವುದೆಂದು ಧೃಡವಾಗಿ ಹೇಳಬಹುದು. ವಿಮರ್ಶೆಯಲ್ಲಿ ಕಥೆಯನ್ನು ಹೇಳತೊಡಗಿದರೆ ಕಥೆಯ ಸ್ವಾರಸ್ಯವು ಕೆಡುವುದರಿಂದ ಎಲ್ಲರೂ ಕಥೆಯನ್ನು ಓದಿ ಅದರ ರಸಾಸ್ವಾದನೆಯನ್ನು ಮಾಡಬೇಕೆಂಬುದು ನಮ್ಮ ಬಯಕೆ. ಕಥಾ ಸಂವಿಧಾನಗಳು ಯುಕ್ತಿಯಿಂದ ಜೋಡಣೆಯಾಗಿವೆ.

ಈಗಣ ಕಾಲದ ವಿದ್ಯಾಭ್ಯಾಸ ಕ್ರಮದಲ್ಲಿ ತಂದೆತಾಯಿಗಳೂ ಉಪಾಧ್ಯಾಯರುಗಳೂ ಮಕ್ಕಳ ಮನೋವೃತ್ತಿಯನ್ನು ತಿಳಿಯದೆಯೂ ತಿಳಿಯಲು ಪ್ರಯತ್ನಪಡದೆಯೂ ಮಕ್ಕಳನ್ನೆಲ್ಲ ಒಂದೇ ಕವಾಯಿತು ಯಂತ್ರದಲ್ಲಿ ತೂರಿಸಿ ತೆಗೆಯುವುದು ತಪ್ಪು, ಎಂಬುದನ್ನು ವಿಶದಪಡಿಸಬೇಕೆಂಬುದು ಲೇಖಕರ ಉದ್ದೇಶವೆಂಬುದು ಸ್ಪಷ್ಟವಾಗುತ್ತದೆ. ಸ್ಕೂಲಿನಲ್ಲಿ ಇನಾಮು ಪುಸ್ತಕಗಳನ್ನು ಪಡೆದ ಹುಡುಗರೇ ಮುಂದೆ ಏಳಿಗೆಗೆ ಬಂದು ಯಶಸ್ವಿಗಳಾಗುವುದಿಲ್ಲ. ಬಾಲ್ಯದಲ್ಲಿ ಓದು ಬರಹಗಳಲ್ಲಿ ಅಸಡ್ಡೆಯನ್ನು ತೋರಿಸಿದ ಎಷ್ಟೋ ಮಂದಿ ಹುಡುಗರು ದೊಡ್ಡವರಾದ ಮೇಲೆ ಯಾವುದೋ ಕಲೆಯಲ್ಲಿ ನಿಪುಣರಾಗಿ ಹೆಸರನ್ನು ಸಂಪಾದಿಸಿರುವುದು ಅನೇಕರಿಗೆ ಗೊತ್ತು. ತಂದೆತಾಯಿಗಳೂ ಉಪಾಧ್ಯಾಯರುಗಳೂ ಮಕ್ಕಳ ಚಿತ್ತವೃತ್ತಿಯನ್ನರಿತು ಅದರ ಮುಖವಾಗಿ ಬುದ್ಧಿಯೋಡುವಂತೆ ಮಾಡಬೇಕಾದುದು ಅವರ ಕರ್ತವ್ಯ. ಗಿಣಿಯ ಹಾಗೆ ಹೇಳಿಕೊಟ್ಟುದನ್ನು ಮಾತ್ರ ಬಾಯಿಪಾಠವೊಪ್ಪಿಸುವುದು ಪ್ರಯೋಜನವಿಲ್ಲವೆಂಬುದನ್ನು ಲೇಖಕರು ಚೆನ್ನಾಗಿ ವಿಶದಪಡಿಸಿದ್ದಾರೆ. ಹಿರಿಯವನೂ ದೊಣ್ಣೆಯ ಭಾಗವತನೂ ಆದ ರಾಮಸ್ವಾಮಿಯು ದೊಡ್ಡವನಾಗಿ ಚಿತ್ರಕಲೆಯಲ್ಲಿ ಪ್ರಾವೀಣ್ಯವನ್ನು ಪಡೆಯುವುದಕ್ಕೆ ಮುಂಚೆ ತನ್ನ ತಂದೆಯು ಕ್ಷೌರಮಾಡಿಸಿಕೊಳ್ಳುವಾಗ ಆತನನ್ನು ನೋಡಿ

ಬರೆದ ಚಿತ್ರವನ್ನೂ ಇತರ ಸಂದರ್ಭಗಳಲ್ಲಿ ಬರೆದ ಒಂದೆರಡು ಚಿತ್ರಗಳನ್ನೂ ಪುಸ್ತಕದಲ್ಲಿ ಸೇರಿಸಬಹುದಾಗಿದ್ದಿತು. ಪುಸ್ತಕದ ಮೂರ್ತಿಯು ಚಿಕ್ಕದಾದರೂ ಅದರ ಕೀರ್ತಿಯು ದೊಡ್ಡದೆಂದು ಮರಳಿ ಹೇಳಿ ಈ ಪುಟ್ಟದಾದ ವಿಮರ್ಶೆಯನ್ನು ಮುಗಿಸುತ್ತೇವೆ.

ನಂ. ವೆಂ.

---

೨. ಗಾಂಧೀಜಿಯವರ ಆತ್ಮಕಥೆ ಅಥವಾ ಸತ್ಯಶೋಧನೆ

ಪ್ರಥಮ ಭಾಗ ; ಕ್ರೌನ್ ಅಷ್ಟಪತ್ರ; ಪುಟಗಳು ೧೮೦ ; ಬೆಲೆ ೧೨ ಆಣೆ.

೨ ನೆಯ ಭಾಗ ; ಪುಟಗಳು ೧೯೯ ; ಬೆಲೆ ೧೨ ಆಣೆ.

ಪ್ರಕಾಶಕರು.—ವಿಶ್ವಕರ್ಣಾಟಕ ಪುಸ್ತಕ ಪ್ರಕಟನಾಲಯ.

ಅನುವಾದಕರು.—ಕನ್ನಡಿಗರಿಬ್ಬರು.

ಶ್ರೀಯುತ ಗಾಂಧೀಜಿಯವರು ಪರಮ ಪೂಜ್ಯರು. ಅವರ ಖ್ಯಾತಿಯು ಪ್ರಪಂಚವನ್ನೇ ಒಳಸಿರುವುದಾದಕಾರಣ ಈಗಣ ಕಾಲದಲ್ಲಿ ಪ್ರಪಂಚದಲ್ಲೆಲ್ಲ ಎಲ್ಲರಿಗಿಂತಲೂ ದೊಡ್ಡವರಾರು ಎಂದರೆ ಗಾಂಧೀಜಿಯವರೇ ಎಂಬುದನ್ನು ಲೋಕವೇ (ಪೂರ್ವಾರ್ಧ ಪಶ್ಚಿಮಾರ್ಧ ಗೋಳ ಎರಡೂ) ಒಪ್ಪಿಕೊಂಡಿರುತ್ತದೆ. ಇಂತಹ ಚಾರಿತ್ರ ಪುರುಷರ ಜೀವನಚರಿತ್ರೆಯು ಅತ್ಯಂತ ಚಿತ್ತಾಕರ್ಷಕವಾಗಿಯೂ ಬೋಧಾವಹವಾಗಿಯೂ ಇರುವುದೊಂದಚ್ಚರಿಯಲ್ಲ. ಆದರೆ ಜೀವನ ಚರಿತ್ರೆಯನ್ನು ಬರೆವುದರಲ್ಲೊಂದು ವಿಶೇಷ. ಒರ್ವನ ಜೀವನ ಚರಿತ್ರೆಯನ್ನು ಮತ್ತೊಬ್ಬನು ಬರೆಯತೊಡಗಿದರೆ ಅಂತಹ ಚರಿತ್ರೆಯಲ್ಲಿ ಲೇಖಕನ ಮನೋವೃತ್ತಿಯ ಪರಿಣಾಮವು ಸಾಮಾನ್ಯವಾಗಿ ಕಂಡುಬರುವುದು. ಲೇಖಕನು ಎಷ್ಟೇ ಜಾಗರೂಕತೆಯಿಂದಿದ್ದರೂ ಆತನು ಯಾವ ಮನುಷ್ಯನ ಕಥೆಯನ್ನು ಬರೆಯುವನೋ ಆತನ ಕಾರ್ಯಗಳನ್ನೂ ಸಾಧನಗಳನ್ನೂ ವಿಶದಪಡಿಸುವಲ್ಲಿ ಲೇಖಕನ ಮನಸ್ಸಿನ ಸೋಂಕು ಇದ್ದೇ ಇರುವುದು. ತನ್ನ ಚರಿತೆಯನ್ನು ತಾನೇ ಬರೆಯುವುದರಲ್ಲಿ ಈ ಬಗೆಯ ದೋಷಕ್ಕವಕಾಶವಿರದು. ಆದರೆ ಮತ್ತೊಂದು ಬಗೆಯ ದೋಷಕ್ಕೆ ಎಡೆಯುಂಟು. ಅದೇನೆಂದರೆ, ತನ್ನ ಚಾರಿತ್ರ್ಯಕ್ಕೆ ಕುಂದನ್ನು ತರುವಂತೆ ತೋರಬಹುದಾದ ಘಟನೆಗಳನ್ನೆಲ್ಲ ಆತನು ಮುಚ್ಚಿಟ್ಟು ಲೋಕ ಖ್ಯಾತಿಗಾಗಿ ಬೆಡಗಾದುವುಗಳನ್ನ ಮಾತ್ರವೇ ಆತನು ಹೊರಗೆಡವಬಹುದು. ಆದರೆ ಗಾಂಧೀಜಿಯವರ ಆತ್ಮಕಥೆ ಆ ಪ್ರಕಾರವಾದುದಲ್ಲ. ಇದಕ್ಕೆ ಗಾಂಧೀಜಿಯವರೇ 'ಸತ್ಯಶೋಧನೆ' ಎಂಬ ಮತ್ತೊಂದು ಹೆಸರನ್ನು ಕೊಟ್ಟಿರುತ್ತಾರೆ. ಈ ಆತ್ಮ ಕಥೆಯು ಸತ್ಯ ಶೋಧನೆಯೇ ಹೌದು. ಗಾಂಧೀಜಿಯವರು ಸತ್ಯಾರ್ಥಿಗಳು, ಸತ್ಯಾನ್ವೇಷಕರು.

ಸತ್ಯವೇ ಅವರ ಪರಮಾದರ್ಶವು. ಸತ್ಯವೇ ಸರ್ವರ ಆದರ್ಶವಾಗಿರಬೇಕು. ಆದರೆ ಸಾಮಾನ್ಯವಾಗಿ ನಮ್ಮ ಆದರ್ಶಗಳಿಗೂ ಸತ್ಯಕ್ಕೂ ಎಷ್ಟು ಅಂತರವಿರುವು ದೆಂಬುದು ಎಲ್ಲರಿಗೂ ತಿಳಿದ ವಿಷಯವು. ಆದರ್ಶಕ್ಕೂ ಸತ್ಯಕ್ಕೂ ಅಂತರ ಹೆಚ್ಚಿದಷ್ಟು ನಮಗೆ ಈ ಜೀವನ ಯಾತ್ರೆಯಲ್ಲಿ ದಾರಿ ತಪ್ಪಿಹೋಗುವ ಸಂಭವ ಗಳು ಹೆಚ್ಚು. ಸತ್ಯ ಶೋಧನೆಯಲ್ಲಿ ಅನೇಕ ಸಂಕಟಗಳೂ, ಇಕ್ಕಟ್ಟುಗಳೂ, ಕಷ್ಟಗಳೂ ಒದಗಬಹುದಾದರೂ ಕೊನೆಯಲ್ಲಿ ಸತ್ಯಕ್ಕೇ ಜಯವು. ''ಸತ್ಯಮೇವ ಜಯತಿ ನಾನೃತಂ'' (ಸತ್ಯಕ್ಕೇ ಜಯ ಸುಳ್ಳಿಗಲ್ಲ.) ಇದು ಗಾಂಧೀಜಿಯವರ ಆತ್ಮ ಕಥೆಯಲ್ಲಿ ಪ್ರತಿಯೊಂದು ಪುಟದಲ್ಲಿಯೂ ವ್ಯಕ್ತವಾಗುತ್ತದೆ. ಅವರೆಸಗಿದ ಅದ್ಭುತ ಕಾರ್ಯಗಳೆಲ್ಲವೂ ಸತ್ಯ ಲಾಭಕ್ಕೆ ಸಾಧನಗಳು. ಪುಸ್ತಕದ ಪೀಠಿಕೆಯಲ್ಲಿ ಗಾಂಧೀಜಿಯವರು ಈ ಪ್ರಕಾರ ಬರೆದಿರುತ್ತಾರೆ:—''ನಾನು ಲಕ್ಷ್ಯವಾಗಿಟ್ಟಿರು ವುದು, ಈಗ ಮೂವತ್ತು ವರ್ಷಗಳಿಂದ ಸಾಧಿಸಬೇಕೆಂದು ಪ್ರಯತ್ನಪಡುತ್ತಿರು ವುದು–ಆತ್ಮಜ್ಞಾನ, ಈಶ್ವರ ಸಾಕ್ಷಾತ್ಕಾರ, ಮೋಕ್ಷ. ನಾನು ಇರುವುದು, ಚಲಿಸುವುದು, ಜೀವಿಸಿರುವುದು–ಇವೆಲ್ಲವೂ ಈ ದೃಷ್ಟಿಯಿಂದಲೇ. ನಾನು ಮಾತ ನಾಡುವುದು, ಬರೆಯುವುದು, ರಾಜಕೀಯ ವಿಚಾರಗಳಲ್ಲಿ ನನ್ನ ಪ್ರಯತ್ನಗಳು– ಇವೆಲ್ಲದರ ಲಕ್ಷ್ಯವೂ ಇದೇ. ಒಬ್ಬನ ಕೈಯಲ್ಲಾಗುವುದು ಎಲ್ಲರಿಗೂ ಸಾಧ್ಯ ವೆಂದು ನಾನು ನಿರಂತರವಾಗಿ ನಂಬಿರುವೆನಾದುದರಿಂದ ನನ್ನ ಸಾಧನೆಗಳು ಗುಪ್ತ ವಾಗಿ ಮಾಡಲ್ಪಡದೆ ಎಲ್ಲರಿಗೂ ಕಾಣುವಂತೆ ಮಾಡಿದುವುಗಳಾಗಿವೆ.'' ಆದುದ ರಿಂದ ಗಾಂಧೀಜಿಯವರ ಕಾರ್ಯಗಳೆಲ್ಲವೂ ''ಆತ್ಮನೋ ಮೋಕ್ಷಾಯ ಬಹುಜನ ಹಿತಾಯ'' (ತನ್ನ ಮೋಕ್ಷಕ್ಕಾಗಿಯೂ, ಲೋಕಹಿತಕ್ಕಾಗಿಯೂ) ಮಾಡಿದುವು ಗಳೇ. ಇಂತಹ ಮಹಾನುಭಾವರ ಆತ್ಮಕಥೆಯನ್ನು ಓದಿದ ಯಾವ ಮನುಷ್ಯನ ಮನಸ್ಸು ತಾನೇ ವಿಶಾಲವಾಗದೇ ಇದ್ದೀತು? ಯಾವನ ಹೃದಯ ತಾನೇ ಶುದ್ಧಿಯಾಗದೆ ಇದ್ದೀತು? ಆದುದರಿಂದ ಕನ್ನಡಿಗರೆಂದು ಹೇಳಿಕೊಳ್ಳುವವರೆಲ್ಲರೂ ಈ ಪುಸ್ತಕವನ್ನು ಕೊಂಡುಕೊಂಡು ಓದಬೇಕೆಂಬುದು ನಮ್ಮ ಹಾರೈಕೆ. ಈ ಪುಸ್ತಕವಿಲ್ಲದ ಕನ್ನಡಿಗನ ಪುಸ್ತಕ ಭಾಂಡಾರವು ಪುಸ್ತಕ ಭಾಂಡಾರವೆನಿಸಿ ಕೊಳ್ಳಲಾರದೆಂದು ನಿಸ್ಸಂದೇಹವಾಗಿ ಹೇಳಬಹುದು. ಶ್ರೀಯುತ ಗಾಂಧೀಜಿ ಯವರು ಆತ್ಮ ಕಥೆಯನ್ನು ಇನ್ನೂ ಬರೆಯುತ್ತಿದ್ದಾರೆ. ಪ್ರತಿವಾರವೂ 'ನವ ಜೀವನ' ಎಂಬ ಗುಜರಾತಿ ಪತ್ರಿಕೆಯಲ್ಲಿ ಕೆಲವು ಪುಟಗಳು ಪ್ರಕಟವಾಗುತ್ತಿವೆ. ಇದಲ್ಲದೆ ಇದರ ಆಂಗ್ಲ ಅನುವಾದವು '*Young India*' (ಬಾಲ ಭಾರತ) ಎಂಬ ಆಂಗ್ಲ ಸಪ್ತಾಹ ಪತ್ರಿಕೆಯಲ್ಲಿ ಹೊರಬೀಳುತ್ತಿದೆ. ಈ ಆಂಗ್ಲ ಭಾಷೆಯ ಅನುವಾದವೇ 'ಕನ್ನಡಿಗರಿಬ್ಬರ' ಅನುವಾದಕ್ಕೆ ಮೂಲವೆಂದು ತೋರುತ್ತದೆ.

ಕನ್ನಡದ ಅನುವಾದವು ತಿಳಿಗನ್ನಡದಲ್ಲಿ ಲಲಿತವೂ ಸುಲಭ ಗ್ರಾಹ್ಯವೂ ಆದ ಶೈಲಿಯಲ್ಲಿ ಬರೆದಿದೆ. ಇದಕ್ಕಾಗಿ ನಮ್ಮ ಅಭಿನಂದನವನ್ನು 'ಕನ್ನಡಿಗ ರಿಬ್ಬರಿಗೆ' ಸಮರ್ಪಿಸುತ್ತೇವೆ. ಅನುವಾದಕರಾದ 'ಕನ್ನಡಿಗರಿಬ್ಬರು' ಆರೆಂಬುದು

ನಮಗೆ ಗೊತ್ತು. ಆದರೆ ಅವರೇ ತಮ್ಮ ಹೆಸರುಗಳನ್ನು ಢಾಕ್ಕಾ ಮಸ್ಲಿನ್ ಬಟ್ಟೆಯಲ್ಲಿ ಮುಚ್ಚಿಟ್ಟುಕೊಂಡಿರುವಾಗ ನಾವು ಆ ಮಸ್ಲಿನ್ ಮುಸುಕನ್ನು ತೆಗೆಯುವುದೇಕೆ? ಅದು ಬಯಲ ಗುಟ್ಟು. ಅಂತು ಕನ್ನಡಿಗರನ್ನೆಲ್ಲ ಈ 'ಮಸ್ಲಿನ್ ಮುಸುಕಿನವರು' ತಮ್ಮ ಋಣಿಗಳನ್ನಾಗಿ ಮಾಡಿಕೊಂಡಿದ್ದಾರೆ.

ಪುಸ್ತಕದ ಮುದ್ರಣವು ಅಂದವಾಗಿದೆ; ಅದರ ಆಕಾರವೂ ಸುಂದರವಾಗಿದೆ. ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಗಳು, ಅನುಕ್ರಮಣಿಕೆ–ಇವುಗಳಿಂದ ಪುಸ್ತಕದ ಉಪಯೋಗ ಹೆಚ್ಚು. ಪುಸ್ತಕವು ಜೇಬಿನೊಳಕ್ಕೆ ಸುಲಭವಾಗಿ ಹೊಗುವುದಾದ ಕಾರಣ ಬೇಕಾದ ಕಡೆ ತೆಗೆದುಕೊಂಡುಹೋಗಿ ಓದಿ ಆನಂದಪಡಬಹುದು.

ಶ್ರೀಯುತ ಗಾಂಧೀಜಿಯವರಿಗೂ 'ಕನ್ನಡಿಗರಿಬ್ಬರಿಗೂ' ಜಗದೀಶನು ದೀರ್ಘಾಯುರಾರೋಗ್ಯ ಭಾಗ್ಯಗಳನ್ನು ಕೃಪೆಗೆಯ್ಯಲಿ, ಎಂದು ಪ್ರಾರ್ಥಿಸುತ್ತ ಆತ್ಮ ಕಥೆಯ ಉಳಿದ ಭಾಗಗಳು ಬೇಗನೆ ಪ್ರಕಟವಾಗುವುದನ್ನು ಎದುರು ನೋಡುತ್ತಿರುತ್ತೇವೆ.

ನಂ. ವೆಂ.

ಶ್ರೀ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೩] ವಿಭವ ಸಂ॥ ಚೈತ್ರ ಮಾಸ [ಸಂಚಿಕೆ ೧

ನೈಷಧೀಯ ಚರಿತಂ

ಪ್ರಥಮ ಸರ್ಗವು

ಪೂರ್ವ ಕಾಲದಲ್ಲಿ ನಿಷಧ ದೇಶದಲ್ಲಿ ನಳನೆಂಬ ಒಬ್ಬಾನೊಬ್ಬ ರಾಜನು ಅರಸಾಗಿ ಆಳುತ್ತಿದ್ದನು. ಆತನ ಗುಣ ವರ್ಣನ ರೂಪವಾದ ಕಥೆಗಳನ್ನು ಕೇಳಿದಷ್ಟಕ್ಕೂ ಜನಗಳಿಗೆ ತೃಪ್ತಿಯುಂಟಾಗುತ್ತಿದ್ದಿಲ್ಲ. ದೇವತೆಗಳಿಗಂತೂ ಅವನ ಕಥೆಗಳನ್ನು ಕೇಳುವ ಸಂಭ್ರಮದಲ್ಲಿ ಅಮೃತದ ನೆನಪೂ ಮರೆಯುತ್ತಿದ್ದಿತು. ಆ ಮಹಾರಾಜನ ಪ್ರತಾಪವೇ ಸುವರ್ಣ ದಂಡವಾಗಿಯೂ ಕೀರ್ತಿಯೇ ಶ್ವೇತ ಛತ್ರವಾಗಿಯೂ ಸದಾ ಅವನನ್ನು ಮರೆಮಾಡುತ್ತಿದ್ದಿತಲ್ಲದೆ ಈ ಕಾಲದಲ್ಲಿ ಯಾರು ಅವನ ಕಥೆಯನ್ನೆತ್ತಿ ಹೇಳುವರೋ ಅವರೂ ಪವಿತ್ರರಾಗುವುದರಲ್ಲಿ ಸಂದೇಹವಿಲ್ಲ. ಈತನು ವೇದ ವೇದಾಂಗಾದಿ ಚತುರ್ದಶ ವಿದ್ಯೆಗಳನ್ನು ಓದಿದುದು ಮಾತ್ರವೇ ಅಲ್ಲ; ಅದರ ಅರ್ಥವನ್ನೂ ಚೆನ್ನಾಗಿ ತಿಳಿದು, ಆ ಅರ್ಥವನ್ನು ನಿತ್ಯವೂ ತನ್ನ ಆಚರಣೆಗೆ ತಂದುದಲ್ಲದೆ ಅದನ್ನು ಇತರರಲ್ಲಿಯೂ ಪ್ರಚಾರಮಾಡುತ್ತಿದ್ದನು; ಇದರಿಂದ ಆತನು ಓದಿದ ಚತುರ್ದಶ ವಿದ್ಯೆಗಳಿಗೆ ಚತುರ್ದಶತ್ವ ಎಂದರೆ ನಾಲ್ಕು ಅವಸ್ಥೆಗಳು ಉಂಟಾಗಿದ್ದುವು. ಸೂದ ವಿದ್ಯಾ ಸರಸ್ವತಿಯು ಈ ಮಹಾರಾಜನ ನಾಲಿಗೆಯ ಮೇಲೆಯೇ ಕುಣಿಯುತ್ತಿದ್ದಳು. ಈತನು ದಿಕ್ಪಾಲಕರ ಅಂಶಭೂತನಾಗಿ ಸಕಲ ದಿಕ್ಕುಗಳನ್ನೂ ಆಳುತ್ತಿದ್ದುದರಿಂದಲೂ, ಕಾಮನೆಂಬ ಇಚ್ಛೆಯನ್ನು ನಿವಾರಿಸಿದ್ದುದರಿಂದಲೂ, ಶಾಸ್ತ್ರಗಳೆಂಬ ಮೂರನೆಯ ಕಣ್ಣೊಂದನ್ನು ಧರಿಸಿದವನಾದುದರಿಂದಲೂ ಎಲ್ಲರೂ ಈತನನ್ನು ತ್ರಿನೇತ್ರನಾದ ಪರಮೇಶ್ವರನ ಅವತಾರವೆಂದೇ ನಂಬಿದ್ದರು. ಈತನ ಕಾಲದಲ್ಲಿ ಕೃತಯುಗ ಲಕ್ಷಣವೇ ಇದ್ದು ಧರ್ಮವು ನಾಲ್ಕು ಪಾದಗಳಿಂದಲೂ ಸ್ಥಿರವಾಗಿದ್ದಿತು. ಆದರೆ ಅಧರ್ಮವು ಮಾತ್ರ ತನ್ನ ಕನಿಷ್ಠಾಂಗುಳಿಯನ್ನು ನೆಲಕ್ಕೆ ಊರಿ ಏಕ ಪಾದದ ಮೇಲೆ ನಿಂತು

ತಪನನ್ನು ಜಯಿಸುವಂತೆ ತೋರುತ್ತಿದ್ದಿತು. ಈತನು ದಿಗ್ವಿಜಯಕ್ಕೆ ಹೊರಡುವ ವೇಳೆ ಇವನ ಸೈನ್ಯದ ತುಳಿತದಿಂದ ಮೇಲಕ್ಕೆದ್ದ ಧೂಳು ಇವನ ಪ್ರತಾಪಾಗ್ನಿಯ ಹೊಗೆಯಂತೆ ತೋರುತ್ತಿದ್ದಿತಲ್ಲದೆ, ಇದೇ ಧೂಳಿನಿಂದಲೇ ಕ್ಷೀರಸಾಗರದಲ್ಲಿ ಕೆಸರೂ, ಚಂದ್ರನಲ್ಲಿ ಕಳಂಕವೂ ಕೂಡ ಉಂಟಾಗಿರಬೇಕೆಂದೂ ಎಣಿಸುತ್ತಿದ್ದರು. ಯುದ್ಧ ಕಾಲದಲ್ಲಿ ಇವನು ಧನುಷ್ಟಂಕಾರವೆಂಬ ಗುಡುಗಿನೊಡನೆ ಸುರಿಯುತ್ತಿದ್ದ ಬಾಣವೃಷ್ಟಿಯಿಂದ ಶತ್ರುಗಳ ಪ್ರತಾಪಾಗ್ನಿಯು ನಂದಿಹೋಗಿ ಬರಿಯ ಅಂಗಾರದಂತೆ ಆಗಿ ಅಪಕೀರ್ತಿಗೆ ಗುರಿಯಾಗುತ್ತಿದ್ದರು. ಇವನ ದಿಗ್ವಿಜಯದ ವೇಳೆ ಇವನ ಪ್ರತಾಪಾಗ್ನಿಯಿಂದ ಶತ್ರುನಗರಗಳು ಉರಿಯುತ್ತಿರಲಾಗಿ, ಭೂಮಂಡಲವನ್ನು ಪ್ರದಕ್ಷಿಣವಾಗಿ ಸುತ್ತುತ್ತಿದ್ದ ಈ ಮಹಾರಾಜನು ಭೂದೇವಿಗೆ ಎತ್ತುತ್ತಿದ್ದ ಆರತಿಯೋ ಎಂಬಂತೆ ಕಾಣಿಸುತ್ತಿದ್ದಿತು. ಈತನ ಕಾಲದಲ್ಲಿ ಭೂಮಿಯಲ್ಲಿ ಅತಿವೃಷ್ಟಿ, ಅನಾವೃಷ್ಟಿ ಮೊದಲಾದ ಈತಿಬಾಧೆಯೇ ಇಲ್ಲದಂತಾಯಿತು. ಆದರೆ ಅತಿವೃಷ್ಟಿ ಮಾತ್ರ ಈತನನ್ನು ಮರೆಹೊಕ್ಕುದರಿಂದ ಇವನ ಆಜ್ಞೆಯಂತೆ ಶತ್ರುಸ್ತ್ರೀಯರ ನೇತ್ರಗಳನ್ನು ಹೊಂದಿತೋ ಎಂಬಂತೆ, ಇವನ ರಿಪುಸ್ತ್ರೀಯರು ಯಾವಾಗಲೂ ಕಣ್ಣೀರು ಸುರಿಸುತ್ತಿದ್ದರು. ಯುದ್ಧ ಕಾಲದಲ್ಲಿ ಇವನ ವೀರರಾದ ಯೋಧರು ತಮ್ಮ ಖಡ್ಗಗಳಿಂದ ಹಾಯು ರುಂಡಗಳಿಂದ, ಶುಭ್ರವಾದ ಈತನ ಶೌರ್ಯಧೈರ್ಯವಾದಿ ಗುಣಗಳಿಂದ ಕಂತುಗಳನ್ನು ಹೇಳು ದಿಗಂಗನೆಯರಿಗೆ ಸ್ಪಷ್ಟವಾದ ಪಟ್ಟಿಗಳನ್ನು ಸಿದ್ಧಮಾಡುತ್ತಿದ್ದರು. ಈತನಿಗೆ ಶತ್ರುರಾಜರು ಹೇಗೆ ಭಯಪಡುತ್ತಿದ್ದರೋ ಹಾಗೆಯೇ ಹಿರಿದು ಧನುರ್ಗಳೂ ಕೂಡ ಹೆದರಿ ತಮ್ಮಲ್ಲಿರುವ ವೃತ್ತಾಕಾರವನ್ನು ಬಿಟ್ಟಂತೆ ಕಂಡುಬಂದುವು; ಎಂದರೆ ಕಾಂತಿಯಲ್ಲಿ ಮಿತ್ರಜಿತ್ತಾಗಿದ್ದ ಈ ರಾಜನು ಅಮಿತ್ರಜಿತ್ತು ಆಗಿದ್ದನು; ಚಾರದೃಕ್ಕಾಗಿದ್ದ ಈತನು ವಿಚಾರದೃಕ್ಕೂ ಆಗಿದ್ದನು. ಸೂರ್ಯನಂತೆ ಪ್ರಕಾಶಿಸುವ ಪ್ರತಾಪಾತಪವುಳ್ಳವನಾಗಿಯೂ, ಚಂದ್ರನಂತೆ ಶುಭ್ರವಾದ ಯಶಃಕಾಂತಿ ಸಹಿತನಾಗಿಯೂ ಇದ್ದ ಈ ಮಹಾರಾಜನಿದ್ದ ಮೇಲೆ ಇನ್ನು ಸೂರ್ಯಚಂದ್ರರಿಂದ ಉಪಯೋಗವೇನೆಂದು ಭಾವಿಸಿ ಬ್ರಹ್ಮನು ಪರಮೇಷದ ಸಿಸಾಮಿಂದ ಅವುಗಳ ಮೇಲೆ ಕುಂಡಲ ರೇಖೆಯನ್ನೆಳೆದಂತೆ ತೋರುತ್ತಿದ್ದಿತು. ನಳನು ರಾಜ್ಯಭಾರ ಮಾಡುತ್ತಿರುವ ವೇಳೆ ಅವನ ರಾಜ್ಯದಲ್ಲಿ ದಾರಿದ್ರ್ಯಕ್ಕೇ ದರಿದ್ರತ್ವ ಬಂದಿತೇ ಹೊರತು ಉಳಿದವರೆಲ್ಲರೂ ಅವನ ವಿತರಣಾದಿ ಗುಣಗಳಿಂದ ಸಮೃದ್ಧರಾಗಿಯೇ ಇದ್ದರು. ಇವನ ಔದಾರ್ಯದಿಂದ ಮೇರುಪರ್ವತವನ್ನು ವಿಭಾಗಿಸಿ ಸಮುದ್ರೋದಕದಿಂದ ಅರ್ಥಿಗಳಿಗೆ ದಾನವಾಗಿ ಕೊಟ್ಟು ಆ ಸಮುದ್ರವನ್ನು ಮರುಪ್ರದೇಶವನ್ನಾಗಿ ಮಾಡಲಿಲ್ಲವೆಂಬ ಈ ಅಪಕೀರ್ತಿಯನ್ನು ತಲೆಯ ಮೇಲೆ ಹೊತ್ತಿರುವನೋ ಎಂಬಂತೆ ಅವನ ತಲೆಯ ಮೇಲೆ ಕಪ್ಪಾದ ಕೇಶರಾಶಿಗಳು ಶೋಭಿಸುತ್ತಿದ್ದುವು. ಪೂಜ್ಯನಾದ ಸೂರ್ಯದೇವನು ಹೇಗೆ ಬುಧಕವಿಗಳ ಯೋಗದಿಂದ ದಿನದಿನವೂ ವೃದ್ಧಿಗೊಳ್ಳುತ್ತ ಬರುವನೋ ಹಾಗೆಯೇ ಪೂಜ್ಯನಾದ ನಳನೂ ಕೂಡ ಬುಧಕವಿಗಳ ಯೋಗದಿಂದ ದಿನದಿನವೂ ವೃದ್ಧಿಗೊಳ್ಳುತ್ತ ಬರುತ್ತಿದ್ದನು. ಊರ್ಧ್ವರೇಖಾಂಕಿತವಾದ ಪಾದಗಳು ಸರ್ವೋ

ಶ್ರೇಷ್ಠನಾದನೆಂದು ಹೊಗಳಿಕೆ ಕಾವ್ಯದಲ್ಲಿ ಬರೆದನು. ಇದನ್ನು ಸಹಿಸ ಸೌಂದರ್ಯದಲ್ಲಿಯೂ, ಪರಾಕ್ರಮದಲ್ಲಿಯೂ ಮನ್ಮಥನನ್ನೂ ಚಂದ್ರನನ್ನೂ ತಿರಸ್ಕರಿಸ ತಕ್ಕ ನಳನ ಪಾದಗಳು ಉತ್ತಮವಾಗಿ ಬೆಳೆದವು, ಅಂದವನ್ನು ನೋಡಲು ಬೇಕಾಗಿಯೋ ಎಂಬಂತೆ ಆ ಪಾದಗಳಲ್ಲಿ ಊರ್ಧ್ವರೇಖೆಗಳು ತುಂಬಿದ್ದುವು. ಈ ಮಹಾರಾಜನು ತನ್ನ ಚಿಕ್ಕವನಾಗಿರುವಾಗಲೇ ಜಗತ್ತನ್ನು ಗೆದ್ದು ತನ್ನ ಅಧೀನವಾಗ ಮಾಡಿಕೊಂಡನು. ಈ ಪ್ರಕಾರವಾಗಿ ವೃದ್ಧಿಗೊಳ್ಳುತ್ತಿದ್ದ ನಳನಿಗೆ ವಸಂತಋತುವು ಉದ್ಯಾನವನ್ನು ಆಶ್ರಯಿಸುವಂತೆ ಯೌವನವು ಆತನ ದೇಹ ವನ್ನು ಆಶ್ರಯಿಸಿತು.

ಯೌವನದಲ್ಲಿ ನಳನು ಬಹು ಸುಂದರನಾಗಿ ಶೋಭಿಸಿದನು. ಆ ಕಾಲದಲ್ಲಿ ಅವನ ಪಾದಗಳು ಪದ್ಮಗಳನ್ನು ಕೂಡ ತಿರಸ್ಕರಿಸುತ್ತಿದ್ದುವು. ಅವನ ಹಸ್ತ ಕಾಂತಿಯು ಚಿಗುರುಗಳನ್ನು ನಿಂದಿಸುತ್ತಿತ್ತು. ಅವನ ತೋಳುಗಳು ಅವನು ಜಯಿಸಿದ ಶತ್ರು ದುರ್ಗಗಳ ಅಗುಳಿಯಂತೆ ದೀರ್ಘವಾಗಿಯೂ ಸ್ಥೂಲವಾಗಿಯೂ ಇದ್ದುವು. ಅವನ ಎದೆಯು ಅದೇ ದುರ್ಗಗಳ ಬಾಗಿಲಿನ ಹಲಗೆಯಂತೆ ವಿಶಾಲವಾಗಿತ್ತು. ಅವನ ಕಣ್ಣುಗಳು ಕಮಲಕ್ಕಿಂತ ಸುಂದರವಾದುವು. ಅವನು ನಗುವಾಗ ಚಂದ್ರ ಕಿರಣಗಳನ್ನು ತಿರಸ್ಕರಿಸಿದಂತೆ ತೋರುತ್ತಿತ್ತು. ಹೀಗೆ ಅವನ ಕಣ್ಣುಗಳಿಂದಲೂ ನಗೆಯಿಂದಲೂ ಕಮಲವೂ ಚಂದ್ರನೂ ಸೋತು ಹೋದುದರಿಂದ ಮುಖಕ್ಕೆ ಉಪಮೆಯೇ ಇಲ್ಲದಂತಾಯಿತು. ಚಮರೀ ಮೃಗಗಳು ಆತನ ತಲೆಗೂದಲಿಗೆ ತಮ್ಮ ಪುಚ್ಛಗೂದಲು ಹೋಲುವುದು ಎಂದು ಎಣಿಸಿದ ತಮ್ಮ ಅಪರಾಧವನ್ನು ಮರೆಮಾಚುವುದಕ್ಕಾಗಿ 'ಇದು ಬಾಲ ಚಾಪಲ್ಯ, ಇದನ್ನು ಮರೆಯತಕ್ಕದು' ಎಂದು ಹೇಳಿಕೊಳ್ಳುವುದಕ್ಕೋ ಎಂಬಂತೆ ಸದಾ ಬಾಲವನ್ನು ಅಲ್ಲಾಡಿಸುತ್ತಿದ್ದುವು. ನಾಗಕಾಂತೆಯರಿಗೆ ಆತನ ಗುಣ ವರ್ಣನೆಯನ್ನು ಕಣ್ಣುಗಳಿಂದ ಕೇಳುತ್ತಿರುವಾಗ, ಆತನನ್ನು ನೋಡುವುದಕ್ಕೆ ಅಸಾಧ್ಯವಾದ ಕಾರಣ ಅವರು ತಮ್ಮ ಕಣ್ಣುಗಳನ್ನು ಒಮ್ಮೆ ಹೊಗಳುತ್ತಿದ್ದರು, ಒಮ್ಮೆ ದೂರುತ್ತಿದ್ದರು.

ಇತ್ತ ವಿದರ್ಭದೇಶದ ಕುಂಡಿನನಗರಾಧೀಶನಾದ ಭೀಮರಾಜನ ಮಗಳು ದಮಯಂತಿಗೂ ಯೌವನಾವಸ್ಥೆಯು ಪ್ರಾದುರ್ಭವಿಸತೊಡಗಿತು. ಆಗ, 'ಗರುಡಾರೂಢನಾಗಿ ತೆರಳಿದ ಶ್ರೀಕೃಷ್ಣನು, ಅಗ್ನಿಯಿಂದ ಸುತ್ತುಗಟ್ಟಿದ ಬಾಣಾಸುರನ ಪಟ್ಟಣವನ್ನು ಹೊಕ್ಕಂತೆ' ಬಾಲ್ಯಾಕ್ರಾಂತವಾದ ಆಕೆಯ ಮನಸ್ಸನ್ನು ಮನ್ಮಥನಿಗೆ ಅನುಕೂಲವಾದ ಯೌವನವು ಬಂದು ಸೇರಿತು.

ಆ ವೇಳೆಗೆ ನಳನ ಸುಂದರವಾದ ರೂಪದ ವರ್ಣನೆಯನ್ನು ದಮಯಂತಿಯ ಮುಂದೆ ಮಾಡಿದುದನ್ನು ಕೇಳಿ ಆಕೆಯ ಮನಸ್ಸು ಅವನಲ್ಲಿಯೇ ಲಗ್ನವಾಯಿತು. ಪ್ರತಿದಿನವೂ ಆಕೆಯು ತಂದೆಯ ಸಭೆಗಾಗಿ ಹೋಗುತ್ತಿದ್ದಳು. ಆ ಸಭೆ ಯಲ್ಲಿರುವ ವಂದಿಜನಗಳು ಮಹಾರಾಜನಾದ ಭೀಮನ ಮುಂದೆ ನಳನ ಗುಣಗಳನ್ನು ಹೊಗಳುವುದನ್ನು ಕೇಳಿ ಆಕೆಗೆ ಆನಂದದಿಂದ ಅಡಿಗಡಿಗೆ ರೋಮಾಂಚನವಾಗು

ತ್ತಿದ್ದಿತು. ಒಂದೊಂದು ವೇಳೆ ಆಕೆಗೆ 'ನಳ' ಎಂಬ ಒಂದಾನೊಂದು ಹುಲ್ಲಿನ ಹೆಸರನ್ನು ಎತ್ತಿದಾಗಲೂ ನಳ ಭೂಪಾಲನ ಜ್ಞಾಪಕವಾಗಿ ತಾನು ಮಾಡುತ್ತಿದ್ದ ಕಾರ್ಯವನ್ನು ಅಲ್ಲಿಗೇ ಬಿಡುತ್ತಿದ್ದಳು. ಮನ್ಮಥನು ಪರಮೇಶ್ವರನ ನೇತ್ರಾಗ್ನಿಯಿಂದ ದಗ್ಧನಾದ ಕಾರಣ ಅವನ ಸ್ಥಾನದಲ್ಲಿ ಯಾರನ್ನು ನಿಯಮಿಸಬಹುದು? ಎಂಬ ವಿವಾದದಲ್ಲಿ ನಳನನ್ನೇ ಅಭಿಷೇಕಿಸಬಹುದೆಂಬ ಮಾತನ್ನು ಕೇಳಿದೊಡನೆಯೇ ಆಕೆಯ ಅನುರಾಗವು ಹೆಚ್ಚುತ್ತಿದ್ದಿತು. ದೂತರು, ಬ್ರಾಹ್ಮಣರು, ವಂದಿಗಳು, ಚಾರಣರು ಇವರಲ್ಲಿ ಯಾರಾದರೂ ನಿಷಧದ ಕಡೆಯಿಂದ ಬಂದಿದ್ದರೆ ಅವರ ಮುಖದಿಂದ ನಳನ ಗುಣ ವರ್ಣನೆಯನ್ನು ಕೇಳಿ ಸಂತೋಷಪಡುತ್ತಿದ್ದಳು. ಲೋಕದಲ್ಲಿ ಪ್ರತ್ಯಕ್ಷ ದರ್ಶನ, ಚಿತ್ರ ದರ್ಶನವೆಂದು ದರ್ಶನಗಳಲ್ಲಿ ಎರಡು ವಿಧವಿರುವುದು. ದಮಯಂತಿಯು ಪ್ರತ್ಯಕ್ಷ ದರ್ಶನದಿಂದ ನಳನನ್ನು ಕಾಣುವುದು ಅಸಾಧ್ಯವಾದ ಕಾರಣ ಆತನ ಚಿತ್ರವನ್ನು ಬರೆಸಿಕೊಂಡು ನೋಡುತ್ತಿದ್ದಳು. ರಾತ್ರಿ ನಿದ್ರೆಯಲ್ಲಿ ಸ್ವಪ್ನದ ವೇಳೆಯೂ ಆ ನಳನೇ ಅವಳ ಮುಂದೆ ಬಂದು ನಿಲ್ಲುತ್ತಿದ್ದನು. ಆಕೆಗೆ ಆ ನಳನ ವಿರಹದಿಂದ ಹಿಮಕಾಲದಲ್ಲಿಯೂ ಹಗಲು ದೀರ್ಘವಾಗಿ ತೋರಿತು. ಸೆಕೆಗಾಲದಲ್ಲಿಯೂ ರಾತ್ರಿಯು ಅತ್ಯಂತ ಉದ್ದವಾಗಿ ಭಾಸವಾಯಿತು.

ಇತ್ತ ದಮಯಂತಿಯ ಸ್ಥಿತಿಯು ಹೀಗಿರುವಾಗ ಅತ್ತ ನಿಷಧದಲ್ಲಿ ಸೌಂದರ್ಯವೆಂಬ ಮುತ್ತುಗಳನ್ನು ಸದ್ಗುಣಗಳೆಂಬ ಸೂತ್ರಗಳಿಂದ ಪೋಣಿಸಿ ಹಾರವಾಗಿ ಧರಿಸಿದ್ದ ಈ ದಮಯಂತಿಯ ಗುಣಸಂದೋಹವನ್ನು ಆಗಂತುಕ ಜನರ ಮೂಲಕ ಕೇಳಿದ ನಳನಿಗೂ ಆಕೆಯಲ್ಲಿ ಅನುರಾಗವು ಮೊಳೆಯಿತು. ಆಗ ಮನ್ಮಥನು ಇದೇ ಸಮಯವೆಂದರಿತು ಸೌಂದರ್ಯದಲ್ಲಿ ತನ್ನನ್ನು ಗೆದ್ದ ಮತ್ಸರದಿಂದ ಆತನನ್ನು ದಮಯಂತಿಯ ಮೂಲಕ ಜಯಿಸಬೇಕೆಂದು ಇಚ್ಛಿಸಿ ತನ್ನ ಕಬ್ಬಿನ ಬಿಲ್ಲಿಗೆ ಹೆದೆಯನ್ನು ಬಿಗಿದು ಪುಷ್ಪಬಾಣಗಳನ್ನು ಆತನ ಕಡೆಗೆ ಎಸೆಯತೊಡಗಿದನು. ಆದರೂ ಮನ್ಮಥನಿಗೆ ತನ್ನ ಕಾರ್ಯದಲ್ಲಿ ಜಯವಾಗುವ ಆಶೆಯು ತೋರಲಿಲ್ಲ. ವಿಧಿ ಸಂಕಲ್ಪವೂ ಹೀಗೆಯೇ ಇದ್ದುದರಿಂದ ಮುಂದೆ ಕೆಲವು ದಿವಸಗಳಲ್ಲಿಯೇ ಮನ್ಮಥನ ಬಾಣವು ನಳನ ಹೃದಯವನ್ನು ನಾಟಿತು. ಸರ್ವರಿಗೂ ನಿಯಮವನ್ನು ವಿಧಿಸತಕ್ಕ ಆ ವಿಧಿಯೇ ಕಮಲವನ್ನು ಆಶ್ರಯಿಸಿದನು, ಎಂದ ಮೇಲೆ ಇನ್ನು ಉಳಿದವರ ವಿಷಯವನ್ನು ಏನು ಹೇಳಬೇಕು!

ನಳನು ಈ ಪ್ರಕಾರ ದಮಯಂತಿಯಲ್ಲಿ ಆಸಕ್ತನಾದರೂ ಬಹು ಅಭಿಮಾನಿಯಾದುದರಿಂದ ಅನ್ಯರನ್ನು ಯಾಚಿಸನೆಂಬ ನಿಯಮವನ್ನು ಬಿಡಲಾರದೆ ವಿದರ್ಭರಾಜನ ಬಳಿಯಲ್ಲಿ ತನ್ನ ಕನ್ಯಾರ್ಥಿತ್ವವನ್ನು ಸೂಚಿಸಲಿಲ್ಲ. ಕ್ರಮ ಕ್ರಮವಾಗಿ ಜಿತೇಂದ್ರಿಯನಾದ ನಳನಿಗೆ ತನ್ನ ಮನೋಭಾವವನ್ನು ಮರೆಮಾಡುವುದು ಅಸಾಧ್ಯವಾಗುತ್ತ ಬರಲು ತನ್ನ ಆಗಿನ ಸ್ಥಿತಿಗಾಗಿ ಅವನು ಆಗಾಗ ಲಜ್ಜಿತನಾಗುತ್ತಿದ್ದನು. ಮುಂದೆ ಆತನಿಗೆ ಧೈರ್ಯವನ್ನವಲಂಬಿಸಿ ಮನಸ್ಸನ್ನು ತಡೆಯು

ವುದು ತೀರ ಅಸಾಧ್ಯವೆಂದು ತೋರಿದಾಗ ಅವನು ಅರಮನೆಯನ್ನು ಬಿಟ್ಟು ದೇಶಾಂತರದಲ್ಲಿ ಸಂಚರಿಸಬೇಕು, ಅಥವಾ ವನವಿಹಾರವನ್ನು ಮಾಡಿ ಮನಸ್ಸನ್ನು ಸಮಾಧಾನಗೊಳಿಸಬೇಕು ಎಂದು ಸಂಕಲ್ಪಿಸಿಕೊಂಡು, ತನ್ನ ಸಮಾನ ವಯಸ್ಕರಾದ ಮಿತ್ರರನ್ನು ತನ್ನ ಸಂಗಡ ಬರುವಂತೆ ಹೇಳಿ, ವನವಿಹಾರಾರ್ಥವಾಗಿ ಅನುಕೂಲವಾದ ಯಾನಗಳನ್ನು ತರುವಂತೆ ಆಜ್ಞೆ ಮಾಡಿದನು. ಆಗ ಅಶ್ವರಕ್ಷಕನೊಬ್ಬನು ಸುಂದರವಾಗಿ ಅಲಂಕರಿಸಲ್ಪಟ್ಟುದಾಗಿಯೂ, ವೇಗವುಳ್ಳುದಾಗಿಯೂ, ಅಳತೆಯಲ್ಲಿ ಪುರುಷ ಪ್ರಮಾಣವನ್ನು ಮೀರಿಸಿದುದಾಗಿಯೂ, ಯಾವಾಗಲೂ ಚಂಚಲವಾದ ಸ್ವಭಾವವುಳ್ಳುದಾದುದರಿಂದ ತನ್ನ ಗೊರಸುಗಳಿಂದ ವಾಯುದ ಒಳಭಾಗವನ್ನು ಪುಡಿಗುಟ್ಟಿದುದಾಗಿಯೂ ಇದ್ದ ಬಿಳುಪಾದ ಒಂದು ದಿವ್ಯಾಶ್ವವನ್ನು ತಂದನು.

ಆ ಕುದುರೆಯು ಕುತ್ತಿಗೆಯಲ್ಲಿ ದೇವಮಣಿಯೆಂಬ ಆವರ್ತ ವಿಶೇಷವುಳ್ಳುದಾಗಿಯೂ ಹೆಗಲಮೇಲೆ ಚಂದ್ರ ಕಿರಣವನ್ನು ಹೋಲುವ ಬಿಳುಪಾದ ಕೂಲುಳ್ಳುದಾಗಿಯೂ, ಯಾವಾಗಲೂ ಭೂಮಿಯನ್ನು ಕಾಲಿನಿಂದ ಕುಟ್ಟುತ್ತಿರುವುದರಿಂದ ಹುಟ್ಟಿದ ಧೂಳಿನಿಂದ ವೇಗಾತಿಶಯವನ್ನು ಅಭ್ಯಾಸಮಾಡುವುದಕ್ಕಾಗಿ ಬಂದ ಜನಗಳ ಅಣುಮಾತ್ರವಾದ ಮನಸ್ಸನಂತಿರುವುದಾಗಿಯೂ, ನಳನು ಅಶ್ವಹೃದಯವನ್ನು ತಿಳಿದವನಾದಕಾರಣ ಆತನಿಗೆ ಬಾಯಿಂದ ಹೇಳತಕ್ಕುದೇನಿದೆ, ಎಂದು ಸ್ವಾಭಾವಿಕವಾಗಿ ಸ್ಫುರಿಸುತ್ತಿರುವ ಮೂಗಿನಿಂದ ತನ್ನ ವೇಗಾತಿರೇಕವನ್ನು ಸೂಚಿಸಲಿಕ್ಕೆ ಉದ್ಯುಕ್ತವಾಗಿದೆಯೋ ಎಂಬಂತೆ ಮೌನವಾಗಿಯೂ, ಮಹಾರಥನಾಗಿಯೂ ಚಕ್ರವರ್ತಿಯಾಗಿಯೂ ಇದ್ದ ಈ ನಳನನ್ನು ನಾನೊಬ್ಬನೇ ವಹಿಸುತ್ತಿದ್ದೇನೆ. ಆದರೆ ಮಹಾರಥನಾಗಿಯೂ ಚಕ್ರವರ್ತಿಯಾಗಿಯೂ ಇದ್ದ ಸೂರ್ಯನ ಏಕಚಕ್ರವುಳ್ಳ ರಥವನ್ನು ಏಳು ಕುದುರೆಗಳು ವಹಿಸಿವೆ, ಎಂದು ತನ್ನ ದಂತಕಾಂತಿಯಿಂದ ನಗುತ್ತಿರುವುದೋ ಎಂಬಂತೆಯೂ, ಯಾವಾಗಲೂ ಶುಭ್ರವಾಗಿ ಚಂಚಲವಾಗಿದ್ದ ಕೇಸರ ಮತ್ತು ಬಾಲದಿಂದ ಚಾಮರಯುಗ್ಮವನ್ನು ಧರಿಸಿ ತಾನು ವಾಜಿರಾಜನೆಂಬುದನ್ನು ಪ್ರಕಾಶಪಡಿಸುವುದಾಗಿಯೂ, ವೇಗದಲ್ಲಿ ಗರುಡನನ್ನೂ ಹಿಂದಿಕ್ಕಿದವನು ಎಂಬ ಹೆಮ್ಮೆಯಿಂದ ಕೂಡಿದ ಆ ಕುದುರೆಯು ಬಾಯಲ್ಲಿದ್ದ ಕಡಿವಾಣವು ಸರ್ಪ ಭಕ್ಷಣ ವಿಚಾರದಲ್ಲಿಯೂ ಆತನನ್ನು ಪ್ರತಿಘಟಿಸುವಂತೆ ಇರುವುದಾಗಿಯೂ, ಸಿಂಧುಜವಾಗಿಯೂ, ಚಂದ್ರಸಹೋದರವಾಗಿಯೂ ಇದ್ದ ಆ ದಿವ್ಯಾಶ್ವವನ್ನು, ಅಖಿಲ ಭೂಭೃಜ್ಜಿತನಾಗಿಯೂ ಅನಲ್ಪಲೋಚನನಾಗಿಯೂ ಭೂಲೋಕದ ಪಾಕಶಾಸನನಂತೆ ಇದ್ದ ಆ ನಳನು ಏರಿ ಕುಳಿತನು.

ಆ ವೇಳೆ ಕೈಯಲ್ಲಿ ಪದ್ಮರೇಖೆಯುಳ್ಳವನಾಗಿಯೂ ಪ್ರಕಾಶಮಾನನಾಗಿಯೂ ಇದ್ದ ಆ ಮಹಾರಾಜನನ್ನು ಪದ್ಮಹಸ್ತನಾದ ಸೂರ್ಯನನ್ನು ಕಿರಣಗಳು ಅನುಸರಿಸುವಂತೆ ಉಳಿದ ಅಶ್ವಪಾಲ ಸೇನೆಯು ಅನುಸರಿಸಿತು. ನಳನು

ಅಶ್ವವಾಹಕ್ಕೆ ಬೇಕಾದ ವೇಷಭೂಷಣಾನ್ವಿತನಾಗಿ ಕುದುರೆಯನ್ನೇರಿ ತನ್ನ ಸೌಂದರ್ಯದಿಂದ ಜನರನ್ನು ರಂಜಿಸುತ್ತ ರಾಜಧಾನಿಯ ಬೀದಿಯಲ್ಲಿ ಹೋಗುತ್ತಿರುವಾಗ ಪಟ್ಟಣಿಗರಾದ ಜನರು ತಮ್ಮ ಮಹಾರಾಜನ ಸೌಂದರ್ಯಾತಿಶಯವನ್ನು ರೆಪ್ಪೆಹಾಕದ ಕಣ್ಣಿನಿಂದ ನೋಡುತ್ತಿದ್ದರು. ಚಂದ್ರನಂತೆ ಪ್ರಕಾಶಿಸುವವನಾಗಿಯೂ, ಇಂದ್ರನಂತೆ ಪರಾಕ್ರಮಯುತನಾಗಿಯೂ ಇದ್ದ ಆ ನಳನು ವಾಯುವೇಗವನ್ನು ಮೀರುತ್ತಿರುವ ಕುದುರೆಯ ಸಹಾಯದಿಂದ ಜನದೃಷ್ಟಿಯಿಂದ ಸ್ವಲ್ಪಮಾತ್ರದೊಳಗೆ ಕ್ಷಣದಲ್ಲಿಯೇ ಪಟ್ಟಣದ ಹೊರಗೆ ಕಾಣಿಸಿಕೊಂಡನು. ಅಲ್ಲಿ ಆತನ ಸೇನೆಯ ಮುಂಗಡೆಯಲ್ಲಿರುವ ಸಾಮಂತರುಗಳು, ಬಿಡು, ಹೊಡೆ, ಗೆಲ್ಲು ಎಂದು ಒಬ್ಬರಿಗೊಬ್ಬರು ಉತ್ಸಾಹವನ್ನುಂಟುಮಾಡುತ್ತ ತೋಮರಾಗ್ರದಿಂದ ಮಿಥ್ಯಾಯುದ್ಧವನ್ನು ನಟಿಸತೊಡಗಿದರು. ಆಗ ಆ ಕುದುರೆಗಳ ವೇಗಕ್ಕೆ ಹಾರಿದ ಧೂಳು ಸಮುದ್ರವನ್ನು ಮುಚ್ಚಿ ನೆಲವಾಗಿ ಮಾಡುತ್ತಿರಲು ನಮ್ಮ ಕಾಲಾಟಕ್ಕೆ ಈ ನೆಲವು ಸಾಲದೆಂದು ಆ ಕುದುರೆಗಳೇ ಬೇಕಾಗಿ ಮಾಡುತ್ತಿವೆಯೋ ಎಂಬಂತೆ ತೋರುತ್ತಿದ್ದಿತು. ಹಿಂದೆ ನಮ್ಮಂತೆಯೇ ಹರಿಯೆಂಬ ಹೆಸರುಳ್ಳವನೊಬ್ಬನು ಒಂದೇ ಚರಣದಿಂದ ಇಡಿಯ ಆಕಾಶವನ್ನು ಲಂಘಿಸಿದನು. ನಾವಾದರೋ ಈಗ ನಾಲ್ಕು ಚರಣಗಳಿಂದ ಲಂಘಿಸಬೇಕಾಗಿ ಬಂದಿರುವುದು ಎಂಬ ನಾಚಿಕೆಯಿಂದ ಬಾಗಿದೆಯೋ ಎಂಬಂತೆ ತಲೆ ಬಗ್ಗಿಸಿಕೊಂಡು ಕುದುರೆಗಳು ನೆಗೆಯುತ್ತಿದ್ದುವು. ಕುದುರೆಗಳು ಈಗ ವಿಹಾರ ಪ್ರದೇಶವನ್ನು ಸೇರಿದುವು; ಅಲ್ಲಿ ಅವು ಜೈನದರ್ಶನದಲ್ಲಿ ತೋರುವ ಶ್ರದ್ಧಾವೃತ್ತದಂತೆ ಮಂಡಲವಾಗಿ ಚರಿಸತೊಡಗಿದುವು. ನಮ್ಮ ಮಹಾರಾಜನ ಶತ್ರುಗಳೆಲ್ಲರೂ ಪಲಾಯನವಾದರು. ಕೀರ್ತಿಯು ಸಮುದ್ರವನ್ನು ಗೋಷ್ಪದವಾಗಿ ಮಾಡಿತು. ಇನ್ನು ನಮಗೆ ಕಾರ್ಯವೇನಿದೆ ಎಂದು ಎಣಿಸಿ ಕುಣಿಯುತ್ತಿವೆಯೋ ಎಂಬಂತೆ ಆತನ ಉತ್ತಮಾಶ್ವಗಳು ಅರ್ಧವೃತ್ತ ಮೊದಲಾದ ಮಂಡಲೀಕರಣ ಗತಿವಿಶೇಷಗಳಿಂದ ಆ ಸ್ಥಳವನ್ನು ಅಲಂಕರಿಸುತ್ತಿದ್ದುವು. ಆ ವೇಳೆಗೆ ನಳನು ವಿನೋದಕ್ಕಾಗಿ ತಿರುಗಿಸಿದ ಮಂಡಲಗತಿಯನ್ನು ಕಂಡು ಈ ಹೊತ್ತಿಗೂ ಗಾಳಿಯು ಆ ವಿಧವಾದ ಮಂಡಲ ಗತಿಯನ್ನು ಅಭ್ಯಾಸಮಾಡುವುದಕ್ಕಾಗಿ ಸುಳಿಗಾಳಿಯ ರೂಪಿನಿಂದ ಬೀಸುತ್ತಿರುವುದು.

ಈ ವಿನೋದಗಳೆಲ್ಲವೂ ಮುಗಿದಮೇಲೆ ವಿಸ್ತೃತ ಮೇಘಚ್ಛಾಯೆಯಿಂದಲೂ ಪ್ರವಾಳರಾಗದಿಂದಲೂ ಕೂಡಿ ಜಲಾಶಗಳಾದ ಸರ್ಪಗಳಿಗೆ ಪ್ರಾಣಾಧಾರವಾಗಿರುವ ಸಮುದ್ರವನ್ನು ನಿದ್ರಾಪೇಕ್ಷೆಯಿಂದ ಹೊಗುವಂತೆ ನಳನೂ ಕೂಡ ವಿಲಾಸಯೋಗ್ಯವಾಗಿಯೂ ಪ್ರವಾಳಗಳ ಕೆಂಬಣ್ಣದಿಂದ ವ್ಯಾಪ್ತವಾಗಿಯೂ ನಿಬಿಡವಾದ ಛಾಯೆಯುಳ್ಳ ಕ್ರೀಡಾವನವನ್ನು ಸಂಚಾರಾಭಿಲಾಷೆಯಿಂದ ಹೊಕ್ಕನು. ಬಂಧುಗಳನ್ನು ಜಲಪ್ರದೇಶ ಪರ್ಯಂತವಾಗಿ ಕಳುಹಿಸಿ ಹಿಂದಿರುಗಬೇಕೆಂಬ ಆಗಮೋಕ್ತಿಯನ್ನನುಸರಿಸಿ ಆತನ ಪ್ರಿಯರಾದ ಪಟ್ಟಣಿಗರ ದೃಷ್ಟಿಯೂ ವನಪರ್ಯಂತವಾಗಿ ಅವನನ್ನು ಅನುಸರಿಸಿ ಬಂದು ಅಲ್ಲೇ ಕಣ್ಮರೆಯಾಗುತ್ತಲೇ ಮರಳಿದುದು.

ನಳನು ಕ್ರೀಡಾವನವನ್ನು ಹೊಕ್ಕನು. ಅವನಿಗೆ ವನಪಾಲಕನೊಬ್ಬನು ಅಲ್ಲಿಗೆ ಬಂದು ಫಲಪುಷ್ಪಗಳಿಂದ ಮನೋಹರವಾಗಿರುವ ಕಾನನದ ಸೌಂದರ್ಯವನ್ನು ಬೇರೆ ಬೇರೆಯಾಗಿ ವಿವರಿಸುತ್ತಿದ್ದನು. ಅಲ್ಲಿರುವ ಮರಬಳ್ಳಿಗಳು ತಮ್ಮ ಶಾಖಾಕರಗಳಲ್ಲಿ ಫಲಪುಷ್ಪಗಳನ್ನು ಹಿಡಿದು ವಾಯುವಿನಿಂದ ಮೆಲ್ಲಗೆ ಕಂಪಿಸುತ್ತಿರುವುದನ್ನು ಕಂಡರೆ ಈ ಪ್ರಕಾರ ಅತಿಥಿ ಸತ್ಕಾರ ಮಾಡುವುದನ್ನು ಇವು ಇಲ್ಲಿರುವ ವೃಕ್ಷ ಸಮೂಹದಿಂದ ಕಲಿತಿರಬೇಕು, ಎಂಬ ಭಾವನೆಯು ನಳನ ಮನಸ್ಸಿಗೆ ಬರುತ್ತಿದ್ದಿತು. ಒಂದೆಡೆ ಅರಳಿದ ಕೇತಕೀ ಕುಸುಮದ ಮೇಲೆ ತುಂಬಿಗಳು ಕುಳಿತಿರುವುದನ್ನು ಕಂಡಾಗ 'ಈ ಹೂವು ಶಿವನಿಂದ ಪರಿತ್ಯಜಿಸಲ್ಪಟ್ಟುದು' ಎಂಬ ಅಪಕೀರ್ತಿಯನ್ನು ತಲೆಯಮೇಲೆ ಹೊತ್ತಂತೆ ತೋರುತ್ತಿದ್ದಿತು. ಅದರ ಸೂಜಿಯಂತಹ ತುದಿಯನ್ನು ಕಂಡಾಗ ಮನ್ಮಥನು ಕಾಮಿಗಳ ಅಧೀರತ್ವವನ್ನು ಸೂಚಿಸುವ ದುರ್ಯಶವೆಂಬ ಪಟವನ್ನು ಹೊಲಿಯುವುದಕ್ಕಾಗಿ ಉಪಯೋಗಿಸುತ್ತಿದ್ದ ಸೂಜಿಯಂತೆಯೂ, ಅದರ ಪತ್ರಗಳು ವಿಯೋಗಿಗಳ ಹೃದಯವೆಂಬ ವೃಕ್ಷವನ್ನು ಸೀಳತಕ್ಕ ಗರಗಸದಂತೆಯೂ ಕಾಣಿಸುತ್ತಿದ್ದಿತು. ಆಗ ನಳನು ಆ ಸುಂದರವಾಗಿದ್ದ ಕೇತಕಿಯನ್ನು ಕಂಡು ಎಲೈ ಕೇತಕಿಯೇ! ಮನ್ಮಥನು ವಿಯೋಗಿಗಳ ಮೇಲೆ ಬಾಣವನ್ನು ಎಸೆಯುವಾಗ ಮಕರಂದದಲ್ಲಿ ಅದ್ದಿದ ತನ್ನ ಹಸ್ತವನ್ನು ನಿನ್ನ ಧೂಳಿಯಮೇಲೆ ಆಡಿಸಿ ಕೊಂಚ ದೊರಗಾಗಿ ಮಾಡಿಕೊಂಡು ತನ್ನ ಲಕ್ಷ್ಯಸ್ಥಾನಕ್ಕೆ ಕೈಚಳಕದಿಂದ ಎಸೆಯುತ್ತಾನೆ. ಹಾಗಲ್ಲದೆಹೋಗಿದ್ದರೆ ಆ ನುಣುಪಾದ ಬಿಲ್ಲು ಕೈಯಿಂದ ಜಾರಿ ಕೆಳಗೆ ಬೀಳದೆ ಇರುತ್ತಿದ್ದಿಲ್ಲ. ಇದು ದಾರಿಹೋಕರ ಮಾಂಸವನ್ನು ಹಿಡಿದು ತಿನ್ನುತ್ತಿದೆ ಎಂದು ಜನಗಳಿಗೆ ತೋರುವಂತೆಯೂ, ಅಥವಾ ಮನ್ಮಥನ ಅರ್ಧಚಂದ್ರಾಕೃತಿಯ ಬಾಣವೇ ಇದಾಗಿರಬೇಕೆಂದು ಊಹಿಸುವಂತೆಯೂ ವಿಯೋಗಿಗಳ ಹೃದಯವನ್ನು ಖಂಡಿಸತಕ್ಕ ಶಸ್ತ್ರವೇ ಇದೆಂಬಂತೆಯೂ ಎಣಿಸತಕ್ಕ ಅಶೋಕ ವೃಕ್ಷಗಳು ಮೊಗ್ಗೆಯೊಡನೆ ಸೇರಿ ಒಂದೆಡೆ ಶೋಭಿಸುತ್ತಿದ್ದುವು. ಬೇರೊಂದೆಡೆ ಮಾರ್ಗಸ್ಥರೆಂಬ ಪಕ್ಷಿಗಳ ಕೊಲೆಯಿಂದ ಬಂದ ಪಾಪಗಳು ಭ್ರಮರಗಳೆಂಬ ನೆವದಿಂದ ಬಂದು ಇದಕ್ಕೆ ಅಂಟುತ್ತಿವೆ, ಎಂದು ಊಹಿಸುವಂತೆ ಸಂಪಗೆಯ ಮೊಗ್ಗೆಗಳು ಸಂಪಗೆಯ ಮರಗಳಲ್ಲಿ ಎಸೆಯುತ್ತಿದ್ದುವು. ಮನ್ಮಥನ ಬಾಣಗಳಾದ ಪುಷ್ಪಗಳಲ್ಲಿದ್ದ ಪರಾಗಗಳನ್ನು ಮನಸ್ಸಿಗೆ ತರುವಾಗ ಇವು ಒಂದು ಕಾಲದಲ್ಲಿ ಧನುಸ್ಸೋದ್ಧೂಳಿತವಾದ ಮದನೋತ್ಸವನ ಮೈಯನ್ನು ತಗುಲಿದಾಗ ಅದಕ್ಕೆ ಅಂಟಿಕೊಂಡ ಭಸ್ಮವೆಂಬಂತೆ ತೋರುತ್ತಿದ್ದಿತು. ಬೇರೊಂದು ಕಡೆ ಮಾವಿನ ಮರಗಳು ಭ್ರಮರಝಂಕಾರವೆಂಬ ಹುಂಕಾರದೊಡನೆ, ವಾಯುವಿನಿಂದ ಚಲಿಸುತ್ತಿರುವ ಮುಕುಳಗಳೆಂಬ ಬೆರಳುಗಳಿಂದ ವಿಯೋಗಿಗಳಿಗೆ ಬೆದರಿಕೆಯನ್ನುಂಟುಮಾಡುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಕೋಗಿಲೆಗಳು ಒಂದೆಡೆ ಕುಳಿತು ಕೆಂಗಣ್ಣು ಬಿಡುತ್ತ—'ಎಲೆ! ಪಾಂಥ!! ನೀನು ದಿನದಿನಕ್ಕೂ ಕ್ಷೀಣನಾಗಿ ಬತ್ತಿಹೋಗು, ನಿರ್ಧೂತನಾಗು, ಮರಣವನ್ನು ಹೊಂದು' ಎಂದು ಕೂಗುತ್ತಿರುವಾಗ ಇವು

ನನ್ನನ್ನು ಹೀಗೆ ಪೀಡಿಸುತ್ತಿರುವಿರೋ ಎಂದು ನಳನು ಖೇದದಿಂದ ಅವುಗಳ ಕಡೆಗೆ ನೋಡಿದನು. ಇನ್ನೊಂದು ಕಡೆ ಸಂಪಗೆಯ ಮೊಗ್ಗುಗಳಿಗೆ ಮುತ್ತಿರುವ ಭ್ರಮರ ಪಙ್ಕ್ತಿಗಳನ್ನು ಕಂಡು ಇದು ವಿಯೋಗಿಗಳ ವಿಪತ್ತುಗಳಿಗೆ ಧೂಮಕೇತುವಿನಂತಿರುವುದು, ಎಂದು ಮನಸ್ಸಿನಲ್ಲಿ ಎಣಿಸಿಕೊಂಡನು. ಮತ್ತೊಂದು ಸ್ಥಳದಲ್ಲಿ ತುಂಬಿಗಳಿಂದ ಆವರಿಸಲ್ಪಟ್ಟು ಪರಾಗವನ್ನು ಸುರಿಸುತ್ತಿರುವ ನಾಗಕೇಸರವನ್ನು ಕಂಡಾಗ ಇದು ಮನ್ಮಥನ ಬಾಣಗಳನ್ನು ಸಾಣೆ ಹಿಡಿವಾಗ ಕಿಡಿ ಹಾರಿಸುವ ಸಾಣೆಗಲ್ಲೆಂಬಂತೆ ತೋರಿತು. ಒಂದೆಡೆ ಪಾಟಲ ವೃಕ್ಷಗಳಲ್ಲಿ ಹೂವುಗಳು ಗೊಂಚಲು ಗೊಂಚಲುಗಳಾಗಿ ಬಿಟ್ಟಿದ್ದುವು. ಅದನ್ನು ಕಂಡೊಡನೆಯೇ ನಳನ ಮನಸ್ಸಿನಲ್ಲಿ ಇವು ಮನ್ಮಥನ ಬತ್ತಳಿಕೆಗಳಾಗಿರಬೇಕೆಂಬ ಭ್ರಾಂತಿಯುಂಟಾಯಿತು. ಕೆಲವೊಂದೆಡೆ ಅಗಸ್ತ್ಯ ವೃಕ್ಷಗಳು ಮೊಗ್ಗು ಬಿಟ್ಟಿದ್ದುವು. ಅವುಗಳ ಎಲೆಗಳು ಕಪ್ಪಾಗಿದ್ದುದರಿಂದ ಸಿಂಹಿಕಾ ಪುತ್ರನಾದ ರಾಹುವು ಮುಂಚೆ ನುಂಗಿದ್ದ ಚಂದ್ರಕಳೆಯನ್ನು ಈಗ ಕಾರುತ್ತಿರುವನು, ಎಂಬಂತೆ ತೋರುತ್ತಿದ್ದಿತು. ಇನ್ನೊಂದು ಪ್ರದೇಶದಲ್ಲಿ ಫಲವೃಕ್ಷಗಳು ಫಲಭಾರದಿಂದ ಕೂಡಿ ಬಾಗಿರುವುದನ್ನು ನೋಡಲು ಅವು ತಮ್ಮನ್ನು ಈವರೆಗೆ ಪೋಷಿಸಿದ ಧಾತ್ರಿಯಾದ ಭೂಮಿಗೆ ವಂದಿಸುತ್ತಿವೆಯೋ ಎಂಬಂತೆ ತೋರುತ್ತಿದ್ದಿತು. ಇದನ್ನು ಕಂಡು ನಳನು ಆ ವೃಕ್ಷಗಳನ್ನು ಕೊಂಡಾಡಿದನು. ಆ ಉದ್ಯಾನದ ಮೇಲೆ ಬೀಳುತ್ತಿದ್ದ ಸೂರ್ಯಕಿರಣವು ಅಲ್ಲಿ ಬೀಸುತ್ತಿದ್ದ ತಂಪಾದ ಗಾಳಿಯಿಂದಲೂ, ಗಾಳಿಯಿಂದ ನಾಲ್ಕು ಕಡೆಗೆ ಚೆದರುತ್ತಿದ್ದ ಮಕರಂದಗಳಿಂದಲೂ ಕೇತಕೀ ಪುಷ್ಪಗಳ ಧೂಳಿನಿಂದಲೂ ನಡುಹಗಲಿನಲ್ಲಿಯೂ ಕೂಡ ಚಂದ್ರಕಿರಣದಂತೆ ತಂಪಾಗಿ ತೋರುತ್ತಿದ್ದಿತು. ಚಂದ್ರನಂತೆ ಅಂದವಾಗಿದ್ದ ನಳನ ಮುಖವನ್ನು ನೋಡುತ್ತ ಒಂದೆಡೆ ಕೆಂಗಣ್ಣಿಟ್ಟು ಕೂಗುತ್ತಿದ್ದ ಕೋಗಿಲೆಗಳು ನಮ್ಮ ವೈರಿಯಾದ ಚಂದ್ರನು ಇಲ್ಲಿಯೂ ಇರುವನೇ ಎಂದು ಕೋಪದಿಂದ ಅದನ್ನು ನುಂಗುವುದಕ್ಕಾಗಿ ರಾಹುವನ್ನು ಕರೆಯುತ್ತಿವೆಯೋ ಎಂಬಂತೆ ತೋರುತ್ತಿದ್ದಿತು. ಲೋಕದಲ್ಲಿ ಭಾಗ್ಯವಂತರಾದ ಜನರು ಎಲ್ಲಿದ್ದರೂ ಸುಖವನ್ನೇ ಅನುಭವಿಸುತ್ತಿರುವರು, ಎಂಬುದನ್ನು ದೃಷ್ಟಾಂತಪಡಿಸುವಂತೆ ಅಲ್ಲಿರುವ ವಿಲಾಸ ದೀರ್ಘಿಕೆಗಳಿಂದ ತೀರಕ್ಕೆ ಬಂದು ಹೊಡೆಯುವ ತೆರೆಯ ನಾದವೂ, ತುಂಬಿ ಮತ್ತು ಕೋಗಿಲೆಗಳ ಗೀತನಾದವೂ, ನವಿಲುಗಳ ನರ್ತನ ನೈಪುಣ್ಯವೂ ಇವೆಲ್ಲವೂ ವನದಲ್ಲಿಯೂ ಕೂಡ ಆ ನಳನನ್ನು ಸೇವಿಸಿದುವು. ನಲಸ್ತೋತ್ರವನ್ನು ಚೆನ್ನಾಗಿ ತಿಳಿದಿರುವ ಗಿಳಿಗಳು ಸ್ಪಷ್ಟವಾದ ವಚನಗಳಿಂದ ಅವನನ್ನು ಹೊಗಳಿದುವು. ಅವನ ಪೌರುಷವನ್ನು ಚೆನ್ನಾಗಿ ಹಾಡಬಲ್ಲ ಶಾರಿಕೆಗಳು ಮಧುರ ಸ್ವರದಿಂದ ಗಾನಮಾಡಿದುವು.

ಈ ವಿಧವಾಗಿ ನಳನು ಸುಗಂಧ ಯುಕ್ತವಾದ ಆ ವನದಲ್ಲಿ ಸಂಚರಿಸುತ್ತ ಶುಕ ಪಿಕಗಳಿಂದ ಸ್ತುತಿಸಲ್ಪಟ್ಟರೂ ಕೂಡ ಹೊರಗಿನಿಂದ ಆನಂದಪಟ್ಟವನಂತೆ ಕಾಣಿಸಿಕೊಂಡನೇ ಹೊರತು ಅವನ ಅಂತರಂಗವು ಮಾತ್ರ ಆನಂದಭರಿತ

ವಾಗಿ ಆಗಲಿಲ್ಲ. ತನ್ನ ಧ್ವಜವಾದ ಮೀನು ಈ ಆಲವಾಲಗಳ ನೀರಲ್ಲಿ ಎಲ್ಲಿ ಪ್ರವೇಶಿಸಿಬಿಡುವುದೋ ಎಂಬ ಶಂಕೆಯಿಂದ ಆ ಮೀನನ್ನು ರೇಖಾವ್ಯಾಜದಿಂದ ಕೈಯಲ್ಲಿ ಧರಿಸುತ್ತ, ಸಾರ್ವತ್ರಿಕನಾದ ಆ ವನದಲ್ಲಿ ಮಿತ್ರನಾದ ವಸಂತನೊಡನೆ ಸಂಚರಿಸುತ್ತಿರುವ ಮನ್ಮಥನಂತೆ ಕಾಣಿಸಿಕೊಂಡನು. ಗುಣವಂತನಾದ ಸೇವಕನೇ ಸ್ವಾಮಿಗೆ ಪ್ರಿಯನಾದವನು, ಎಂಬುದನ್ನು ಲೋಕಕ್ಕೆ ಸಾರುವಂತೆಯೂ ಲತೆಗಳೆಂಬ ಅಬಲೆಯರಿಗೆ ನರ್ತನ ಕಲೆಯನ್ನು ಕಲಿಸುವಂತೆಯೂ ಮಂದವಾಗಿಯೂ, ವೃಕ್ಷಗಳಲ್ಲಿಯ ಪುಷ್ಪಗಂಧವನ್ನು ಕಣ್ಣಿಬಲಿಗೇ ಅಪಹರಿಸುತ್ತಿರುವಂತೆ ಪರಿಮಳ ಯುಕ್ತವಾಗಿಯೂ, ಮಕರಂದವೆಂಬ ಪರಿಮಳೋದಕದಲ್ಲಿ ಮಿಂದವನಂತೆ ಶೈತ್ಯಯುಕ್ತವಾಗಿಯೂ ಇರುವ ವಾಯುವು ಈ ನಳನನ್ನು ಸೇವಿಸುತ್ತಿದ್ದಿತು. ಅದೇ ಸಮಯ ನಳನು ನಿಂತಿರುವ ಸ್ಥಳಕ್ಕೆ ಸಮೀಪವಾಗಿ, ತಿರುಗಿ ಇನ್ನೊಮ್ಮೆ ಮಥಿಸುವರೋ ಎಂಬ ಭಯದಿಂದ ಶ್ರೇಷ್ಠವಸ್ತುರೂಪವಾದ ಸ್ವಧನವನ್ನು ಸಂಗ್ರಹಿಸಿಕೊಂಡು ಬಂದು ಆ ವನದಲ್ಲಿ ಅಡಗಿ ವಾಸಮಾಡುತ್ತಿರುವ ಸಮುದ್ರವೋ ಎಂಬಂತೆ ವಿಸ್ತಾರವಾಗಿಯೂ ಆಳವಾಗಿಯೂ ಇರುವ ಒಂದಾನೊಂದು ಸರೋವರವು ಅಲ್ಲಿ ಇದ್ದಿತು. ಆ ಸರೋವರದ ತುಂಬ ನೀರಿದ್ದುದರಿಂದ ತಟಪ್ರದೇಶದಲ್ಲಿ ಹುಟ್ಟಿ ಶುಭ್ರವರ್ಣವಾಗಿ ತೋರುತ್ತಿದ್ದ ತಾವರೆಯ ನಾಳಗಳು ಮಹಾಶೇಷನ ಬಾಲದಂತೆ ಬಳುಕಾಗಿದ್ದು, ನೀರಲ್ಲಿ ಮುಳುಗಿದ್ದ ಐರಾವತ ಗಜಗಳ ದಂತಗಳಂತೆ ತೋರುತ್ತಿದ್ದಿತು.

ನಳನ ಕುದುರೆಗಳೆಲ್ಲವೂ ಸರೋವರದ ತೀರದಲ್ಲಿ ಬಂದು ನಿಂತು ವಿಶ್ರಾಂತಿಗೊಳ್ಳುತ್ತಿದ್ದುವು. ಅವುಗಳ ಪ್ರತಿಬಿಂಬಯುಕ್ತವಾದ ತೆರೆಗಳು ಬಂದು ತೀರವನ್ನು ಹೊಡೆಯುತ್ತಿರುವಾಗ ಕರೆಯಿಂದ ಹೊಡೆಯಲ್ಪಟ್ಟು ನೆಗೆಯುತ್ತಿರುವ ಸಾವಿರಾರು ಉಚ್ಚೈಃಶ್ರವಗಳಂತೆ ತೋರುತ್ತಿದ್ದಿತು. ತುಂಬಿಗಳಿಂದ ಕಪ್ಪಾದ ಗರ್ಭಪ್ರದೇಶವುಳ್ಳ ಹಲವು ಕಮಲಗಳು ಕಳಂಕಯುಕ್ತಗಳಾದ ಹಲವು ಚಂದ್ರಮಂಡಲಗಳಂತೆ ಶೋಭಿಸುತ್ತಿದ್ದುವು. ರಥಾಂಗವೆಂಬ ಚಕ್ರವಾಕ ಪಕ್ಷಿಗಳಿಂದಲೂ, ಪದ್ಮಗಳಿಂದಲೂ, ತುಂಬಿಗಳಿಂದಲೂ, ಮೃಣಾಳಗಳೆಂಬ ತಾವರೆಯ ದಂಟುಗಳಿಂದಲೂ ಯುಕ್ತವಾದ ಸರೋವರವು ಚಕ್ರಾಯುಧದಿಂದಲೂ, ಪದ್ಮೆಯೆಂಬ ಲಕ್ಷ್ಮಿಯಿಂದಲೂ, ಮೃಣಾಲದಂತೆ ಶುಭ್ರವರ್ಣದವನಾದ ಶೇಷನಿಂದಲೂ ಯುಕ್ತನಾದ ಮಹಾವಿಷ್ಣುವಿನಂತೆ ತೋರುತ್ತಿದ್ದಿತು. ಅದಲ್ಲದೆ ಆ ತಟಾಕವು ತರಂಗ ರೇಖೆಗಳೆಂಬ ವತ್ರಿಯರನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡುದಾಗಿಯೂ, ಸ್ವಲ್ಪ ಮಟ್ಟಿಗೆ ಮೇಲ್ಗಡೆಗೆ ತೋರುತ್ತಿರುವ ರಕ್ತೋತ್ಪಲದ ಮೊಗ್ಗೆಗಳೆಂಬ ಹವಳದ ಅಂಕುರವುಳ್ಳುದಾಗಿಯೂ, ಕರಿದು ಬಿಳಿದು ಎಂಬ ಈ ಉಭಯ ವರ್ಣಗಳ ಕಮಲಗಳಿಂದ ನೀರಲ್ಲಿ ಮೈಗರೆದಿರುವ ಚಂದ್ರ ಕಾಲಕೂಟಗಳಂತೆ ವಿಚಿತ್ರ ಕಾಂತಿ ಸಮೂಹವನ್ನು ಹರಡುವುದಾಗಿಯೂ ಮೇಲೆ ತೇಲುತ್ತಿರುವ ಹಾವಸೆಗಳ ಪರಂಪರೆಯಿಂದ ಒಳಗೆ ಉರಿಯುತ್ತಿರುವ ಬಾಡಬಾಗ್ನಿಯು

ಕಪ್ಪಾದ ಧೂಮವನ್ನು ಹೊರಗೆ ಉಗುಳಿದಂತೆಯೇ ಇದ್ದಿತು. ಅದಲ್ಲದೆ ತೀರದಲ್ಲಿರುವ ವೃಕ್ಷವೊಂದು ಆ ಸರೋವರದ ನೀರಲ್ಲಿ ಪ್ರತಿಬಿಂಬಿಸುತ್ತ, ತೆರೆಗಳಿಂದ ಚಲಿಸಿ ಎಲೆಗಳನ್ನು ಅಲ್ಲಾಡಿಸುತ್ತಿರುವಾಗ, ಇಂದ್ರಭಯದಿಂದ ಸಮುದ್ರವನ್ನು ಹೊಕ್ಕ ಪಕ್ಷಯುಕ್ತವಾದ ಮೈನಾಕಾದ್ರಿಯಂತೆ ತೋರುತ್ತಿದ್ದಿತು. ಕ್ಷೀರಸಾಗರದಂತೆ ಗಂಭೀರವಾಗಿಯೂ ವಿಸ್ತಾರವಾಗಿಯೂ ಇದ್ದ ಆ ಕ್ರೀಡಾಸರಸ್ಸಿಗೆ ಎಷ್ಟೋ ಹಂಸಪಕ್ಷಿಗಳು ಬಂದು ಅಲ್ಲಿ ಮಧುರ ಸ್ವರದಿಂದ ಕೂಗುತ್ತಿದ್ದುವು, ಆ ಕಡೆಗೆ ಲಕ್ಷ್ಯವಿಟ್ಟ ನಿಷಧ ರಾಜನಾದ ನಳನ ದೃಷ್ಟಿಗೆ ಬಂದು ಬಂಗಾರ ಬಣ್ಣದ ಗರಿಯುಳ್ಳ ಹಂಸೆಯು ಗೋಚರಿಸಲು, ಅದನ್ನು ಅವನು ಬಹು ಆಶ್ಚರ್ಯದಿಂದ ಕಾಣುತ್ತಿದ್ದನು.

ನಳನು ಈ ಪ್ರಕಾರ ಆ ವಿಚಿತ್ರವಾದ ಹಂಸವನ್ನು ಕಂಡನು. ಅವನ ಮನಸ್ಸು ಪ್ರಿಯಳ ವಿಯೋಗದಿಂದ ದುಃಖಿತವಾಗಿದ್ದರೂ ಮನಸ್ಸನ್ನು ವಿನೋದಗೊಳಿಸತಕ್ಕ ಆ ಪಕ್ಷಿಯನ್ನು ಕಂಡೊಡನೆಯೇ ಕೌತುಕದಿಂದ ಅದನ್ನು ಹಿಡಿದುಕೊಳ್ಳಬೇಕೆಂದು ಬಗೆದನು. ಮಹಾ ಧೀರೋದಾತ್ತನಾದ ನಳನಿಗೆ ಈ ಅಲ್ಪಬುದ್ಧಿಯಾದರೂ ಅವನ ಸ್ವೇಚ್ಛೆಯಿಂದ ಉಂಟಾದುದಲ್ಲ. ಸುಳಿಗಾಳಿಯಲ್ಲಿ ಸಿಕ್ಕಿದ ತೃಣಗಳು ಹೇಗೆ ಗಾಳಿಯ ಬಲದಿಂದ ಬಂದು ಆಕಾಶದಲ್ಲಿ ಸುತ್ತುವುವೋ ಹಾಗೆಯೇ ಪ್ರಾಣಿಗಳೂ ಕೂಡ ಮುಂದಿನ ಶುಭಾಶುಭವನ್ನು ಸೂಚಿಸಿ ವಿಧಾತ್ರನ ಇಚ್ಛೆಯೆಂಬ ಸುಳಿಗಾಳಿಯಲ್ಲಿ ಸಿಕ್ಕಿ ಸುತ್ತುತ್ತಿರುವುವು. ಹೀಗೆ ದೈವಾನುಕೂಲವಾದುದರಿಂದ ಸರಸ್ಸಿನಲ್ಲಿ ವಿಹರಿಸಿ ಬೇಸರಿಸಿದ ಆ ಹಂಸವು ತೀರದ ಬಳಿಗೆ ಬಂದು ಒಂದೇ ಪಾದದಲ್ಲಿ ನಿಂತು ತನ್ನ ಕುತ್ತಿಗೆಯನ್ನು ತಿರುಗಿಸಿ ತಲೆಯನ್ನು ರೆಕ್ಕೆಗಳಲ್ಲಿ ಮರೆಯಿಸಿ ನಿದ್ರಿಸತೊಡಗಿತು. ಆಗ ನಳನಿಗೆ ಅದರ ಸೌಂದರ್ಯವು—'ನಾಳಸಹಿತವಾದ ಕಾಂಚನ ಕಮಲವು ಆ ಹಂಸದ ಮುಖ ಶೋಭೆಗೆ ನಾಚಿ ತಲೆ ಬಾಗಿಸಿದಂತೆಯೂ ಅಥವಾ ಹವಳದ ದಂಡವುಳ್ಳ ಪೀತವರ್ಣದ ವರುಣನ ಚಾಮರದಂತೆಯೂ' ಮನಸ್ಸಿಗೆ ರಮ್ಯವಾಗಿ ತೋರತೊಡಗಿತು. ಆಗ ಆತನು ಕುದುರೆಯಿಂದಿಳಿದು ಹಗುರಾದ ಪಾದತ್ರಾಣಗಳನ್ನು ಧರಿಸಿ ಹಂಸದ ಬಳಿಗೆ ಹೊರಡುವಾಗ ಆತನ ಪಾದಗಳು ಕಮಲದೊಡನೆ ಅಥವಾ ಪ್ರವಾಳಗಳೊಡನೆ ಯುದ್ಧಮಾಡುವುದಕ್ಕಾಗಿ ಕವಚಗಳನ್ನು ತೊಟ್ಟವೋ ಎಂಬಂತೆ ತೋರಿತು. ಈ ವಿಧವಾದ ಪಾದಗಳಿಂದ ಆತನು ಮೆಲ್ಲ ಮೆಲ್ಲಗೆ ನಡೆದುಹೋಗಿ ಹಿಂದೆ ಮಹಾವಿಷ್ಣುವು ಬಲಿ ಬಂಧನಕ್ಕಾಗಿ ವಾಮನ ರೂಪವನ್ನವಲಂಬಿಸಿ ಬಲಿಯನ್ನು ಬಂಧಿಸಿದಂತೆ, ಆತನು ಹಂಸವನ್ನು ಹಿಡಿದುಕೊಂಡನು. ತತ್ಕ್ಷಣವೇ ಆ ಪಕ್ಷಿಗೆ ತನ್ನನ್ನು ಹಿಡಿದುದಾಗಿ ತಿಳಿಯಿತು. ಆಗ ಅದು ತನ್ನನ್ನು ಬಿಡಿಸಿಕೊಳ್ಳುವುದಕ್ಕಾಗಿ ಮೇಲಕ್ಕೆ ನೆಗೆಯಲು ಪ್ರಯತ್ನಿಸಿ ಅದು ಸಾಧ್ಯವಾಗದೆ ಗಟ್ಟಿಯಾಗಿ ಕೂಗಿ ನಳನ ಕೈಯನ್ನು ಕಚ್ಚತೊಡಗಿತು. ಈ ವ್ಯಾಪಾರವನ್ನು ಕಂಡು ಆ ಸರೋವರದಲ್ಲಿದ್ದ ಪಕ್ಷಿಗಳೆಲ್ಲವೂ ಭಯದಿಂದ ಚೀರಿ ನೆಗೆದುವು. ಆಗ ಆ ಸರೋ

ಸರವು ಆ ಪಕ್ಷಿಯ ಮೇಲಿನ ಅನುಕಂಪೆಯಿಂದ ಮಹಾರಾಜನಾದ ನಿನಗೆ ಈ ಪಕ್ಷಿಗ್ರಹಣವು ಉಚಿತವಲ್ಲವೆಂದು ತಾನು ತೆರೆಗಳಿಂದ ಕಂಪಿಸುತ್ತಿದ್ದ ಕಮಲಗಳೆಂಬ ಕೈಗಳಿಂದ ನಳನನ್ನು ತಿರಸ್ಕರಿಸುತ್ತಿರುವುದೋ ಎಂಬಂತೆ ತೋರುತ್ತಿದ್ದಿತು. ತೀರದಲ್ಲಿ ಕೂಗುತ್ತಿದ್ದ ಕಲಹಂಸಗಳ—ನಾದವು 'ಆ ಹಂಸದಿಂದ ವಂಚಿತವಾದ ಆ ಸರೋವರ ವಾಸವು ತನಗುಚಿತವಲ್ಲ'ವೆಂದು ತಿರಸ್ಕರಿಸಿ ಹೊರಟ ಲಕ್ಷ್ಮಿಯ ನೂಪುರ ಧ್ವನಿಯೋ ಎಂಬಂತೆ ತೋರುತ್ತಿತ್ತು. 'ಎಲೈ! ನೀಚನಾದ ನಳನೇ! ನೀನು ಮಹಾರಾಜನಾಗಿಯೂ, ಇಂತಹ ಘಾತುಕ ಕಾರ್ಯಕ್ಕೆ ಕೈಯಿಕ್ಕಿದ ಮೇಲೆ ನೀನಾಳುವ ಭೂಮಿಯಲ್ಲಿರುವುದು ಉಚಿತವಲ್ಲ' ಎಂದು ಹೇಳಲಿಕ್ಕೆ ನೆಗೆದ ಆ ಪಕ್ಷಿಗಳು ನಳನನ್ನು ತಿರಸ್ಕರಿಸುವುವೋ ಎಂಬಂತೆ ಆಕಾಶದಲ್ಲಿ ಎಲ್ಲವೂ ಗಟ್ಟಿಯಾಗಿ ಕೂಗಿದುವು.

ನಳನಿಗೆ ತನ್ನ ಕೈಯಲ್ಲಿ ಸಿಕ್ಕಿದ ಆ ಪಕ್ಷಿಯನ್ನು ಕಂಡು ಬಹಳ ಆನಂದವಾಯಿತು. ಅಂತಹ ಸುವರ್ಣವರ್ಣದ ಹಂಸವನ್ನು ಅವನು ಹಿಂದೆ ಎಲ್ಲಿಯೂ ಕಂಡಿರಲಿಲ್ಲ. ಹೀಗೆ ವಿನೋದದಿಂದ ಆತನು ಆ ಹಂಸವನ್ನು ನೋಡುತ್ತಿರುವಾಗ ಅದು ಆತನ ಕೈಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವೆಂದು ತಿಳಿದು ಮೆಲ್ಲಗೆ ಹೀಗೆ ಹೇಳತೊಡಗಿತು:—"ಎಲೈ ರಾಜನೇ! ಸ್ವರ್ಣಮಯವಾದ ನನ್ನೀ ರೆಕ್ಕೆಗಳನ್ನು ಕಂಡು ಇದಕ್ಕೆ ನೀನು ಆಶೆಪಟ್ಟಂತೆ ತೋರುತ್ತದೆ. ಅಂತಹ ನಿನ್ನ ನೀಚಬುದ್ಧಿಗೆ ಧಿಕ್ಕಾರವಿರಲಿ. ಸಮುದ್ರವೇ ಹಸ್ತಗತವಾಗಿರತಕ್ಕ ಮನುಷ್ಯನು ತುಷಾರ ಕಣಕ್ಕೆ ಆಶೆಪಟ್ಟಂತೆ ಶ್ರೀಮಂತನಾದ ನಿನಗೆ ನನ್ನೀ ರೆಕ್ಕೆಗಳಿಂದ ಏನು ಸಂಪತ್ತು ಹೆಚ್ಚಬಹುದು? ನಿನ್ನ ಸ್ವರೂಪವನ್ನು ಕಂಡು ನಿನ್ನಲ್ಲಿ ವಿಶ್ವಾಸವಿಟ್ಟದ್ದ ನನ್ನ ವಧೆಯು ಕೇವಲ ಪ್ರಾಣಿವಧೆ ಮಾತ್ರವೆಂದು ತಿಳಿಯಬೇಡ. ವಿಶ್ವಾಸಘಾತಕದ ಪಾಪವೂ ನಿನ್ನನ್ನು ಬಂದು ಸೇರುವುದು. ವಿಶ್ವಾಸದಿಂದ ಬಂದ ಶತ್ರುಗಳನ್ನು ಕೂಡ ಕೊಲ್ಲುವುದು ಅನುಚಿತವೆಂದಿರುವಾಗ ನಿನ್ನಲ್ಲಿ ವಿಶ್ವಾಸವಿಟ್ಟಿದ್ದು ನಿನಗೆ ಶತ್ರುವಲ್ಲದ ನನ್ನನ್ನು ಕೊಲ್ಲಬಹುದೇ? ಲೋಕದಲ್ಲಿ ಎಷ್ಟೋ ಮಂದಿ ವೀರರು ಇರುವರು. ಅವರೇನು ನಿನ್ನಂತೆ ಇಂತಹ ಹಿಂಸೆಗೆ ಕೈಹಾಕಿದ್ದರೇ? ಮಹಾರಾಜನಾದ ನಿನಗೆ ಈ ವಿಧವಾದ ಅವಧ್ಯವಧವು ನಿನ್ನ ಕುಕೀರ್ತಿಯನ್ನು ಪ್ರಕಟಿಸುವುದಿಲ್ಲವೇ? ಯಾವ ನಿನ್ನ ಈ ವಿಕ್ರಮವು ಕ್ಷುದ್ರಪ್ರಾಣಿಯಾಗಿಯೂ ದೀನನಾಗಿಯೂ ಇರುವ ಈ ಅಲ್ಪ ಪಕ್ಷಿಯೊಂದರಲ್ಲಿ ತೋರಲುದ್ಯುಕ್ತವಾಯಿತೋ ಅಂತಹ ವಿಕ್ರಮಕ್ಕೆ ಧಿಕ್ಕಾರವಿರಲಿ. ಮುನಿಗಳಂತೆ ಕಮಲಗಳ ಫಲಮೂಲಗಳನ್ನು ತಿಂದು ಬಾಳುವ ಯಾವ ವಿಧವಾದ ಅಪರಾಧವನ್ನೂ ಮಾಡದ ನನ್ನ ಮೇಲೆ ದಂಡವನ್ನು ಎತ್ತಿರುವ ನಿನ್ನನ್ನು ಕಂಡು ಈ ಭೂಮಿಯು ಹೇಗೆ ಹಿಗ್ಗುವಿಕೆಯನ್ನು ತೋರಿಸುವುದೋ ನಾನು ಕಾಣೆನು. ಅಕಾರ್ಯಕಾರಿಗಳಾದ ಪತಿಗಳನ್ನು ಕಂಡು ಗೃಹಿಣಿಯರು ಸ್ವಾಭಾವಿಕವಾಗಿಯೂ ನಿಂದಿಸುವರಲ್ಲವೇ?"

ಈ ಪ್ರಕಾರ ಆ ಹಂಸವು ತನ್ನನ್ನು ಜರೆದು ವಿಲಕ್ಷಣವಾಗಿ ಮಾತಾಡಿದುದನ್ನು ಕೇಳಿ, ಸ್ವಾಭಾವಿಕವಾಗಿಯೇ ದಯಾಸಮುದ್ರನಾದ ಆತನ ಮನಸ್ಸನ್ನು ಕರುಣಾರಸ ಭರಿತವಾದ ಹಂಸದ ಮಾತುಗಳೆಂಬ ನದಿಯೂ ಬಂದು ಸೇರಲು ಕೇಳಬೇಕೇ?

ಹಂಸವು ಮತ್ತೂ ಹೇಳತೊಡಗಿತು:—"ಮಹಾರಾಜ! ನನ್ನ ತಾಯಿಗೆ ನಾನೊಬ್ಬನೇ ಮಗನು. ನಾನು ಸತ್ತರೆ ಆಕೆಗೆ ಬೇರೆ ಮಕ್ಕಳಿಲ್ಲದುದು ಮಾತ್ರವಲ್ಲದೆ ಆಕೆಯು ವೃದ್ಧಳಾಗಿ ಅಶಕ್ತಳಾಗಿರುವಳು. ನನ್ನ ಪತ್ನಿಯಾದರೋ ನವಪ್ರಸೂತಳಾಗಿ ಇನ್ನೂ ದುಃಖದಲ್ಲಿಯೇ ಇರುವಳು. ನಾನೇ ಇವರಿಬ್ಬರಿಗೂ ರಕ್ಷಕನು. ಹೀಗಿರುತ್ತ ನನ್ನ ಸ್ಥಿತಿಯನ್ನು ಕಂಡು ನಿನಗೆ ಕರುಣೆಯುಂಟಾಗುವುದಿಲ್ಲವೆ? ಅಯ್ಯೋ! ಅಮ್ಮಾ!! ನಿನ್ನ ದುಃಖವನ್ನು ನೀನು ಹೇಗೆ ತಾಳಬಲ್ಲೆ! ಲೋಕದಲ್ಲಿ ಎಂತಹ ಮಿತ್ರರೂ ಕೂಡ ನಿಂದನೀಯವಾದ ಈ ಸಂಸಾರಕ್ಕಾಗಿ ಸ್ವಲ್ಪ ಕಾಲ ಮಾತ್ರವೇ ಅಳತಕ್ಕವರು. ಆದರೆ ತಾಯೇ! ನಿನ್ನ ಪರಿಯು ಹೀಗಲ್ಲ. ನೀನು ಪುತ್ರಶೋಕವೆಂಬ ಸಾಗರದಲ್ಲಿ ಮುಳುಗಿದವಳು, ತಿರುಗಿ ಉತ್ತರಿಸುವ ಸಂಭವವೇ ಇರದು. ಹೇ! ಪ್ರಿಯೇ!! ನಾನು ಸ್ವಲ್ಪ ಕಾಲ ಆಹಾರಾರ್ಥವಾಗಿ ದೂರದೇಶಕ್ಕೆ ತೆರಳಿದ ವೇಳೆ ನಿನಗೆ ಮೃಣಾಳ ನಾಳಗಳನ್ನು ಕಳುಹಿಸುವುದು ತಡವಾದಲ್ಲಿ ನನಗಾಗಿ ಅಳುತ್ತಿರುವ ನೀನು ಮುಂದೆ ನನ್ನ ವಿಯೋಗದುಃಖವನ್ನು ಹೇಗೆ ಸಹಿಸಬಲ್ಲೆ! ಹೇ ವಿಧಾತ! ನನ್ನ ಪ್ರಿಯೆಯ ಆ ಸುಂದರವಾದ ಶರೀರವನ್ನು ರಚಿಸಿದ ನಿನ್ನ ಕಮಲದಂತೆ ಮೃದುವಾಗಿಯೂ ತಂಪಾಗಿಯೂ ಇರುವ ಹಸ್ತದಿಂದಲೇ ಈ ವಿಧದ ವಿಯೋಗಕರವಾದ ನಿಷ್ಠುರಾಕ್ಷರಗಳನ್ನು ಬರೆದೆಯಾ? ಹೇ ಪ್ರಿಯೇ! ನನ್ನ ಈ ಸಂಘಚರಗಳಾದ ಹಂಸಗಳು ಸಿಡಿಲಿನಂತಹ ಈ ವೃತ್ತಾಂತವನ್ನು ನಿನಗೆ ತಿಳಿಸಲಾಗಿ ಅನಾಥೆಯಾದ ನಿನಗೆ ದಶದಿಕ್ಕುಗಳು ಶೂನ್ಯವಾಗಿ ತೋರುವುದು ನಿಜವು. ಹಾ! ವಿಚಿತ್ರಾಂಗಿ!! ನನ್ನ ವಿಪತ್ತಿಯನ್ನು ಕೇಳಿದ ನಿನ್ನ ಎದೆಯು ಬಿರಿದಾಗಿ ಸೀಳುವುದು ನಿಜವು. ಆ ವೇಳೆ ನಿನ್ನ ಶಿಶುಗಳೂ ಕೂಡ ಪೋಷಕಾಭಾವದಿಂದ ಮೃತಿಗೊಳ್ಳುವುದರಲ್ಲಿ ಸಂದೇಹವಿಲ್ಲ. ಹಾ! ನನ್ನ ಪ್ರಿಯ ಪುತ್ರರೇ!! ನಿಮ್ಮ ಮರಣದ ಭಾವನೆಯು ನನ್ನ ಮನಸ್ಸಿಗೆ ಬಂದೊಡನೆಯೇ ನನ್ನ ಮರಣದ ದುಃಖವು ದ್ವಿಗುಣಿತವಾಗಿ ನನ್ನನ್ನು ಪೀಡಿಸುವುದು. ಹೇ ಪ್ರಿಯೇ! ಹಲವು ಮನೋರಥಗಳೊಡನೆ ಕಷ್ಟದಿಂದ ಪಡೆದ ನಿನ್ನ ಮಕ್ಕಳಿಗೆ ಇನ್ನೂ ಕಣ್ಣೊಡೆಯಲಿಲ್ಲವಲ್ಲಾ! ಇನ್ನು ಸ್ವಲ್ಪ ಕಾಲದಲ್ಲಿಯೇ ಆ ನನ್ನ ಮಕ್ಕಳು ಗೂಡಿನಿಂದ ಕೆಳಗೆ ಉರುಳಿ ಮರಣವನ್ನು ಹೊಂದುವುದಲ್ಲವೇ? ಅಯ್ಯೋ! ಅಯ್ಯೋ!!! ಅಯ್ಯೋ! ಪುತ್ರರೇ!! ಇನ್ನು ನೀವು ಯಾರನ್ನು 'ಜುಂ ಜುಂ' ಎಂದು ಕರೆದು ಮಾತಾಡುವಿರಿ! ಯಾರು ನಿಮ್ಮನ್ನು ಚುಂಬಿಸುವರು! ಇನ್ನು ಸ್ವಲ್ಪ ಕಾಲದಲ್ಲಿಯೇ ನೀವು ಕಥಾಶೇಷವಾಗಿ ಮರಣವನ್ನು ಹೊಂದುವಿರಲ್ಲವೇ?" ಎಂದು ಹೇಳುತ್ತ, ಹೇಳುತ್ತ ಮೈಮರೆತಿತು.

ಮಹಾ ದಯಾಳುವಾದ ನಳ ಮಹಾರಾಜನಿಗೆ ಹಂಸವು ಹೇಳುತ್ತಿದ್ದ ಈ ಮಾತುಗಳು ಹೃದಯವನ್ನು ಕರಗಿಸಿ ನೀರಾಗಿ ಮಾಡಲು, ಅವನ ಕಣ್ಣುಗಳಿಂದ ಧಾರೆ ಧಾರೆಯಾಗಿ ನೀರು ಹೊರಡಹತ್ತಿತು. ಈ ನೀರಿನ ಧಾರೆಯಿಂದಲೇ ಸ್ವಲ್ಪ ಕಾಲದಲ್ಲಿ ಹಂಸವು ಒದ್ದೆಯಾಗಲು, ದೀನ ದಯಾಳುವಾದ ಆ ಮಹಾರಾಜನು ಆ ಪಕ್ಷಿಯನ್ನು ಕೈಯಿಂದ ಬಿಟ್ಟು—"ಅಪ್ಪಾ! ಹಂಸವೇ!! ನಾನೇನು ನಿನ್ನ ಕೊಲೆಗಾಗಿ ಹಿಡಿದೆನೆಂದು ಎಣಿಸಬೇಡ. ನೀನು ವಿಚಿತ್ರ ವರ್ಣದಿಂದ ಕಾಣಿಸಿಕೊಂಡ ಕಾರಣ ನಿನ್ನ ಅಪೂರ್ವವಾದ ಆಕೃತಿಯನ್ನು ನೋಡುವುದಕ್ಕಾಗಿ ಮಾತ್ರ ಹಿಡಿದೆನು. ಇನ್ನು ನೀನು ಬೇಕಾದತ್ತ ಹೊರಟುಹೋಗಬಹುದು" ಎಂದು ಬಿಟ್ಟುಬಿಡಲು; ಬಂಧ ಮುಕ್ತರನ್ನು ಕಂಡು ಬಾಂಧವರು ನೀರಾಜನವನ್ನು ಎತ್ತುವಂತೆ ಉಳಿದ ಹಂಸಗಳೆಲ್ಲವೂ ಆನಂದದಿಂದ ಚಕ್ರಾಕಾರವಾಗಿ ತಿರುಗಹತ್ತಿದುವು. ಬಂಧ ಮುಕ್ತವಾದ ಹಂಸಕ್ಕೂ ಯಾವ ಕಣ್ಣುಗಳಿಂದ ಮೊದಲು ದುಃಖಾಶ್ರುಗಳು ಹೊರಟಿದ್ದುವೋ ಅದೇ ಕಣ್ಣುಗಳಿಂದ ಈಗ ಆನಂದಾಶ್ರುಗಳು ಹರಿಯತೊಡಗಿದುವು.

ಎಂಬಲ್ಲಿಗೆ ನೈಷಧೀಯ ಚರಿತೆಯ ಪ್ರಥಮ ಸರ್ಗವು ಮುಗಿಯಿತು.

ದ್ವಿತೀಯ ಸರ್ಗವು

ದಯಾಳುವಾದ ನಳನು ಹಂಸವನ್ನು ಹಿಡಿದನು. ಆದರೆ ಸ್ವಲ್ಪ ಹೊತ್ತಿನಲ್ಲಿ ತಿರುಗಿ ಬಿಟ್ಟು ಬಿಟ್ಟನು. ಇದರಿಂದ ಆ ಹಂಸಕ್ಕೆ ಅತ್ಯಂತ ಆನಂದವಾಯಿತು. ಆಗ ಅದು ರಾಜನ ಹಿಡಿತದಿಂದ ಎದ್ದಿರುವ ಗರಿಗಳನ್ನು ಹಲವು ಸಲ ಝಾಡಿಸಿತು. ತನ್ನ ಪಕ್ಷಮೂಲದಲ್ಲಿ ಅವನ ಕರಪೀಡನದಿಂದ ಆದ ಏರು ತಗ್ಗುಗಳನ್ನು ಸರಿಮಾಡುವುದಕ್ಕಾಗಿ ಕೊಕ್ಕಿನಿಂದ ಬಾಚಿತು. ಒಂದು ಪಾದವನ್ನು ಎತ್ತಿ ಅದರಿಂದ ತನ್ನ ತಲೆಯನ್ನು ತುರಿಸಿಕೊಂಡು ತನ್ನ ಗೂಡನ್ನು ಕುರಿತು ಹಾರಿತು. ಅಲ್ಲಿ ತನ್ನ ಪಕ್ಷಗಳೆಂಬ ವನದುರ್ಗಗಳಲ್ಲಿ ಸೇರಿಕೊಂಡು ತೀಕ್ಷ್ಣವಾಗಿ ಕಚ್ಚುತ್ತಿರುವ ಕ್ಷುದ್ರ ಜಂತುಗಳನ್ನು ತನ್ನ ಮೊನೆಯಾದ ಕೊಕ್ಕಿನಿಂದ ಕುಟ್ಟಿ ತುರಿಸಿಕೊಂಡು ನವೆಯನ್ನು ಹೋಗಲಾಡಿಸಿಕೊಂಡಿತು. ಆಗ ತೀರದಲ್ಲಿರುವ ಹಂಸಗಳೆಲ್ಲ ಬಂದು ಅದನ್ನು ಸುತ್ತಿಕೊಂಡುವು. ಅದರೇನು! ನಳನ ಹಿಡಿತದಿಂದ ಅದರ ಮೈಯಲ್ಲಿ ಉಂಟಾದ ವಿಕಾರ ಸ್ಥಿತಿಯನ್ನು ಕಂಡಾಗ ಅವೆಲ್ಲವೂ ಸಂದೇಹಗೊಂಡು ಗಟ್ಟಿಯಾಗಿ ಕೂಗುತ್ತ ಮೇಲಕ್ಕೆ ನೆಗೆದುವು.

ಇತ್ತ ಈ ಹಂಸವು ರುದ್ರಾಕ್ಷಿಗಳಿಂದ ಕೂಡಿ ಕೆಂಪಾಗಿ ಒಪ್ಪುತ್ತಿದ್ದ ನಳನ ಹಸ್ತವನ್ನು ಕಂಡು ಭ್ರಮರ ಯುಕ್ತವಾದ ರಕ್ತೋತ್ಪಲದ ಭಾವನೆಯಿಂದಲೋ ಎಂಬಂತೆ ಬಹು ಶೈವಾಲ ಯುಕ್ತವಾದ ಆ ಸರೋವರದಿಂದ ನೆಗೆದು ಬಂದು ಸೇರಿತು. ಹೀಗೆ ಹಂಸವು ತಿರುಗಿ ಹಾರಿ ಬಂದು ತನ್ನ ಭುಜವನ್ನು ಸೇರಲಾಗಿ

ನಳನಿಗೆ ಪರಮಾಶ್ಚರ್ಯವಾಯಿತು. ಇದೇನು? ಈ ಹಂಸವು ತಿರುಗಿ ಏಕೆ ಬಂದಿತು? ಇದು ಹಿಂದೆ ನನ್ನ ಬಳಿ ಚಿರಕಾಲವಿದ್ದುದರಿಂದ ನನ್ನಲ್ಲಿ ವಿಶ್ವಾಸ ವಿಟ್ಟಿತೋ? ಹೀಗೆಂದು ಬಹಳವಾಗಿ ಸಂದೇಹಪಡುತ್ತ ಆನಂದಾಮೃತದ ಊರ್ಮಿಗಳಲ್ಲಿ ಸಿಕ್ಕಿ ಮುಳುಗುತ್ತಿದ್ದ ಆ ಮಹಾರಾಜನ ಮನಸ್ಸಿಗೆ ಕಲಶಗಳಂತೆ ಅವಲಂಬನವನ್ನು ಕೊಡತಕ್ಕ ಮಾತುಗಳನ್ನು ನುಡಿಯುತ್ತೊಡಗಿತು:—

"ಮಹಾರಾಜನೇ! ನೀನು ಆಕಾರದಿಂದ ಮಾತ್ರವೇ ಸುಂದರನಲ್ಲ, ಧರ್ಮದಿಂದಲೂ ಕೂಡ ಕೇವಲ ಸುಂದರನಾಗಿರುವೆ. ಏಕೆಂದರೆ, ರಾಜನಿಗೆ ಬೇಟೆಯು ನಿಂದಿತವಾದುದಲ್ಲ. ಹಾಗಿದ್ದರೂ ಕೂಡ ನೀನು ಕೈಗೆ ಸಿಕ್ಕಿದ ನನ್ನನ್ನು ಬಿಟ್ಟುದರಿಂದ ದಯಾಯುಕ್ತನಾದ ಧಾರ್ಮಿಕನೆಂದು ತಿಳಿಯುತ್ತೇನೆ. ಸ್ವಕುಲದಲ್ಲಿ ಹುಟ್ಟಿದ ದುರ್ಬಲಗಳಾದ ಮತ್ಸ್ಯಗಳನ್ನು ಹಿಡಿದು ನುಂಗುವ ಮೀನುಗಳನ್ನೂ, ವಿಣ್ಮೂತ್ರಾದಿಗಳಿಂದಲೂ ಫಲಭಕ್ಷಣಾದಿಗಳಿಂದಲೂ ತಮ್ಮ ಆಶ್ರಯಗಳಾದ ಮರಗಳನ್ನೇ ಕೆಡಿಸುವ ಪಕ್ಷಿಗಳನ್ನೂ, ಹುಲ್ಲುಗಳನ್ನು ಕತ್ತರಿಸಿ ತಿನ್ನುವ ನಿರಪರಾಧಿಗಳಾದ ಮೃಗಗಳನ್ನೂ ಹಿಂಸಿಸತಕ್ಕ ರಾಜನಿಗೆ ಮೃಗಯಾರೂಪವಾದ ವಧೆಯಿಂದ ಯಾವ ಪಾಪವೂ ಬರುವುದಿಲ್ಲ. ಇದರ ಬದಲು ರಾಜರು ಅಂತಹ ದುಷ್ಟರನ್ನು ಶಿಕ್ಷಿಸದೆಹೋದಲ್ಲಿ ಅದೇ ಅವರಿಗೆ ದೋಷವೆಂದು ಎಣಿಸಬೇಕು. ಎಲೈ ಅರಸನೇ! ನೀನು ಬಿಡುವೇಳೆ ನನ್ನನ್ನು ತಿರುಗಿ ಏಕೆ ಬಂದೆ? ಎಂದು ಕೇಳಬಹುದು! ಅದಕ್ಕೆ ಹೇಳುತ್ತೇನೆ, ಕೇಳು—ಹಿಂದೆ ನಾನು ನಿನಗೆ ಅಪ್ರಿಯವಾದ ಎಷ್ಟೋ ಮಾತುಗಳನ್ನು ಆಡಿರುವೆನು. ಸೂರ್ಯನು ತನ್ನ ತೀಕ್ಷ್ಣವಾದ ಕಿರಣಗಳಿಂದ ಮರಗಳಿಗೆ ಉಂಟುಮಾಡಿದ ಸಂತಾಪವನ್ನು ಉದಕಸೇಚನೆಯಿಂದ ಹೋಗಲಾಡಿಸುವಂತೆ ನಿನಗೆ ಪ್ರಿಯವನ್ನು ಮಾಡಿ ಹೋಗಲಾಡಿಸುವುದಕ್ಕೆ ಬಂದಿರುವೆನು. ನನ್ನನ್ನು ಬಿಟ್ಟುದರಿಂದ ಬಂದ ಸುಕೃತವೇ ನನಗೆ ಸಾಕು. ಅದಕ್ಕಿಂತ ಹೆಚ್ಚಿನ ಉಪಕಾರವೇನೂ ಬೇಕಾಗಿಲ್ಲವೆಂದು ತಿರಸ್ಕರಿಸಬೇಡ. ಅಯಾಚಿತವಾಗಿ ಬಂದ ಉಪಕಾರವನ್ನು ವೃಥಾ ಬಿಡತಕ್ಕದ್ದಲ್ಲ. ಪರಮ ಪವಿತ್ರನಾದ ಆ ಬ್ರಹ್ಮನೇ, ಆತನ ಹಸ್ತದಂತಿದ್ದ ಈ ಜನದಿಂದ ನಿನಗೆ ಪ್ರತ್ಯುಪಕಾರವನ್ನು ಮಾಡಿಸುವನೆಂದು ತಿಳಿ. ಏಕೆಂದರೆ ನಾನು ಉಪಕರಣ ಮಾತ್ರ; ವಿಧಿಯೇ ನಿನಗೆ ಕೊಡತಕ್ಕವನು. ನೀನು ಸಾರ್ವಭೌಮನು; ನಾನೇನೋ ಒಂದು ಪಕ್ಷಿ ಮಾತ್ರವಾಗಿರುವೆನು; ಹೀಗಿರುತ್ತ ನಿನ್ನಂಥವನಿಗೆ ನನ್ನಂಥವನಿಂದ ಉಪಕಾರವಾಗುವುದೆಂದರೇನು? ಏಕೆಂದರೆ, ಈ ವಿಚಾರವು ನನಗೆ ತಿಳಿದೇ ಇರುವುದು. ಆದರೂ ನನ್ನ ಮನಸ್ಸು ನಿನಗೆ ಪ್ರತ್ಯುಪಕಾರ ಮಾಡಬೇಕೆಂದೇ ನನ್ನನ್ನು ಪ್ರೇರಿಸುತ್ತಿದೆ. ಉಪಕಾರಿಯಾದವನಿಗೆ ಯಥಾಶಕ್ತಿಯಾದ ಪ್ರತ್ಯುಪಕಾರವನ್ನು ಶೀಘ್ರವಾಗಿ ಮಾಡಬೇಕು. ಇಂತಹ ಪ್ರತ್ಯುಪಕಾರವು ಅಲ್ಪವಾಗಿದ್ದರೂ ಅಥವಾ ಮಹತ್ತಾಗಿದ್ದರೂ ಗುಣಗ್ರಾಹಿಗಳಾದ ವಿದ್ವಾಂಸರು ಅದನ್ನು ಮನಸ್ಸಿಗೆ ತಾರದೆ ಪ್ರತ್ಯುಪಕಾರಿಯ ಕೃತಜ್ಞತೆಯನ್ನು ಮಾತ್ರ ಮನಸ್ಸಿಗೆ ತರುವರು. ಮಹಾರಾಜ! ನಾನು ಪಕ್ಷಿ. ಅದರಿಂದ, ನನ್ನ ಮಾತು

ನಿನ್ನ ಕಿವಿಗೆ ಇಂಪಾಗದೆ ಇರಬಹುದು. ಆದರೂ ಜನರು ಗೀತದ ನುಡಿಯನ್ನು ಕೌತುಕದಿಂದ ಹೇಗೆ ಕೇಳುವರೋ ಹಾಗಾದರೂ ಕೇಳು.

ದಯಾಳುವೇ! ನಿನಗೆ ವಿಶೇಷವಾದ ಒಂದು ವೃತ್ತಾಂತವನ್ನು ಹೇಳುತ್ತೇನೆ, ಕೇಳು. ಇಲ್ಲಿಗೆ ಸಮೀಪದಲ್ಲಿ ವಿದರ್ಭವೆಂಬ ಒಂದಾನೊಂದು ದೇಶವಿರುವುದು. ಆ ದೇಶವನ್ನು ಶತ್ರುಭಯಂಕರನಾದ ಭೀಮನೆಂಬ ಭೂಪನು ಆಳುತ್ತಿರುವನು. ಅಂತಹ ಧರ್ಮಾತ್ಮನಾದ ನ್ಯಾಯವನ್ನು ನಡೆಸುವ ಆ ವಿದರ್ಭಭೂಪಾಲನು ಇಂದ್ರನನ್ನೊಡೆಯನನ್ನಾಗಿ ಪಡೆದ ಸ್ವರ್ಗವನ್ನು ಕೂಡ ಕಂಡು ನಗುತ್ತಿರುವನು, ಎಂದಮೇಲೆ ಇನ್ನು ಉಳಿದ ದೇಶಗಳನ್ನು ಕುರಿತು ಕೇಳಬೇಕೆ? ಆ ಮಹಾರಾಜನು ಬಹುಕಾಲದವರೆಗೆ ದಮನನೆಂಬ ಬ್ರಾಹ್ಮಣನೊಬ್ಬ ಅಮೋಘ ವಾಕ್ಯನ ಶುಶ್ರೂಷೆಯನ್ನು ಸೇವಿಸುತ್ತ ಇರಲು, ಆ ಮಹರ್ಷಿಯ ವರದಿಂದ ತ್ರಿಕಾಲದಲ್ಲಿಯೂ ತ್ರಿಲೋಕದಲ್ಲಿಯೂ ಕೂಡ ಇರದ ಅನನ್ಯಸಾಧಾರಣ ಗುಣೋತ್ಕೃಷ್ಟತೆಯುಳ್ಳ ಕನ್ಯಾರತ್ನವೊಂದನ್ನು ಪಡೆದನು. ಆ ಶಿಶುವಿನ ಸೌಂದರ್ಯವನ್ನು ಕಂಡು ತಂದೆಯಾದ ಭೀಮ ಭೂಪಾಲನು ಹಿಗ್ಗಿ, ಈಕೆಯು ತ್ರಿಲೋಕ ಸುಂದರಿಯರ ಸೌಂದರ್ಯ ಗರ್ವವನ್ನು ದಮಿಸುವಳು, ಎಂದರೆ ಅಡಗಿಸುವಳು ಎಂಬ ಅಭಿಪ್ರಾಯದಿಂದ ನಾಮಕರಣದ ವೇಳೆ ಆಕೆಗೆ ದಮಯಂತಿ ಎಂದೇ ಹೆಸರಿಟ್ಟನು. ಮಹಾರಾಜ! ಆ ದಮಯಂತಿಯನ್ನು ಗುಣಸಾಗರನಾದ ಭೀಮ ನೃಪಾಲನಲ್ಲಿ ಹುಟ್ಟಿದ ಲಕ್ಷ್ಮಿಯೆಂದೇ ತಿಳಿ. ಆಕೆಯ ಕೇಶ ಸೌಂದರ್ಯವನ್ನು ಏನೆಂದು ವರ್ಣಿಸಲಿ! ಚಮರೀ ಮೃಗದ ಬಾಲದ ಕೂದಲಾದ ಚಾಮರವನ್ನು ಅದಕ್ಕೆ ಹೋಲಿಸುವ ಎಂದರೆ ಆ ಚಮರಿಯೇ ಅದನ್ನು ಹಿಂದಕ್ಕೆ ತಳ್ಳಿರುವುದು. ಅವಳ ಕಣ್ಣು ಮೃಗೀ ನೇತ್ರವನ್ನು ಹೋಲುತ್ತಿರುವುದು ಎನ್ನುವುದಕ್ಕೂ ಉಪಾಯವಿಲ್ಲ; ಏಕೆಂದರೆ, ಆ ಮೃಗಗಳೇ ದಮಯಂತಿಯ ವಿಸ್ತಾರವಾದ ನಯನಗಳಿಗೆ ಅಂಜಿ ಮುಚ್ಚಿಕೊಂಡ ತಮ್ಮ ತಮ್ಮ ನೇತ್ರಗಳನ್ನು ಕಂಡೂಯನದ ನೆವದಿಂದ ತಮ್ಮ ತಮ್ಮ ಕಾಲ ಗೊರಸುಗಳಿಂದ ಸಮಾಧಾನಪಡಿಸುತ್ತಿರುವುವು. ಆಕೆಯ ಅಧರವು ಬಿಂಬಫಲವನ್ನು ಹೋಲುತ್ತಿರುವುದು ಎನ್ನೋಣ ಎಂದರೆ, ಆ ತುಟಿಯು ಬಿಂಬಫಲವನ್ನೇ ಅಧರವಾಗಿ ಮಾಡಿರುವುದು. ಆಕೆಯ ಮುಖವನ್ನು ಚಂದ್ರಮಂಡಲಕ್ಕೆ ಹೋಲಿಸುವುದಕ್ಕೂ ಉಪಾಯವಿಲ್ಲ. ಚಂದ್ರ ಮಂಡಲದ ಮಧ್ಯವನ್ನು ಅಗೆದು ತೆಗೆದ ಸಾರವುಳ್ಳ ಪದಾರ್ಥದಿಂದಲೇ ಆಕೆಯ ಮುಖವನ್ನು ಮಾಡಿರಬೇಕು, ಅದೇ ರೀತಿಯೇ ಇನ್ನೂ ಚಂದ್ರ ಮಂಡಲದಲ್ಲಿ ಕಪ್ಪಾಗಿ ಕಾಣಿಸುತ್ತಿರುವುದು; ಅದನ್ನೇ ಜನರು ಚಂದ್ರ ಕಳಂಕವೆನ್ನುವರು, ಎಂಬಂತೆ ಆ ಮುಖವೇ ಚಂದ್ರನನ್ನು ತಿರಸ್ಕರಿಸುತ್ತಿರುವುದು. ಎಲೈ ಭೂಪನೇ! ಬಲಮದಗರ್ವಗಳನ್ನು ಗೆದ್ದು ಮಿತ್ರ ಸಹಿತರಾದ ಹಲವು ಮಂದಿ ಅರಸರನ್ನು ಕೂಡ ಜಯಿಸಿದ ನಿನಗೆ ಬಲದರ್ಪಸ್ವಭಾವದ ನೃಪಾಲಕರನ್ನು ಗೆದ್ದ ಭುಜಪ್ರತಾಪವಾಗಿಯೂ, ಮತ್ತು ಕೋಮಲಗಳಾದ ಕಮಲಗಳ ಶೋಭಾ ಸಂಪತ್ತಿಯನ್ನು ಕಿತ್ತುಕೊಂಡ ಹಸ್ತಪಲ್ಲವಗಳಿಂದಲೂ ಇರುವ ಆ ದಮ

ಯಂತಿಯು ನಿನಗೆ ಅನುರೂಪಳಾದ ಪತ್ನಿಯೆಂದೇ ನನ್ನ ಭಾವನೆಯು. ಶೂರನಿಗೆ ಶೂರಳೇ ಭಾರ್ಯೆಯಾಗುವುದು ಉಚಿತವಷ್ಟೆ!

ಮಹಾರಾಜ! ನೀನೆಲ್ಲಿ ಆಕೆಯನ್ನು ಕಂಡೆ? ಎಂದು ನೀನು ನನ್ನನ್ನು ಕೇಳಬಹುದು, ನಿಜ. ಆ ವೃತ್ತಾಂತವನ್ನು ಹೇಳುತ್ತೇನೆ, ಕೇಳು. ನಾನು ತಾವರೆಯ ನಾಳಗಳ ಭಕ್ಷಣೆಗಾಗಿ ಹಲವು ದೇಶಗಳಲ್ಲಿರುವ ಹಲವು ಸರೋವರಗಳನ್ನು ಹುಡುಕುತ್ತ ಸಂಚರಿಸುತ್ತಿರುವಲ್ಲಿ ಆ ಸುಂದರಿಯು ನನ್ನ ಗೋಚರಕ್ಕೆ ಬಂದಳು. ಅವಳ ಸೌಂದರ್ಯವನ್ನು ಕಂಡ ಮಾತ್ರಕ್ಕೆ ನನಗೆ ಈಕೆಯ ಸೌಂದರ್ಯಕ್ಕೆ ದೇವಕನ್ಯೆಯರೂ ಸರಿಯಲ್ಲವೆಂಬಂತೆ ತೋರಿತು; ಇಷ್ಟೇ ಅಲ್ಲ; ಈಕೆಯ ಸೌಂದರ್ಯಕ್ಕೆ ತಕ್ಕ ವರನನ್ನು ಬ್ರಹ್ಮನು ಎಲ್ಲಿ ನಿರ್ಮಿಸಿರುವನೋ ಎಂಬ ಭಾವನೆಯೂ ಮೊಳೆಯಿತು. ಎಲೈ ಸುಂದರನೇ! ಈಗ ನಿನ್ನನ್ನು ಕಂಡಾಗ ಬ್ರಹ್ಮನು ನಿನ್ನನ್ನೇ ಆಕೆಗೆ ಅನುರೂಪನಾದ ಪತಿಯನ್ನಾಗಿ ನಿರ್ಮಿಸಿರಬೇಕು, ಇದು ನಿಶ್ಚಯವೆಂಬ ಸಿದ್ಧಾಂತವು ನನ್ನಲ್ಲಿ ಹುಟ್ಟಿತು. ನಾನು ಆಕೆಯನ್ನು ಕಂಡು ಕೆಲವು ಕಾಲವು ದಾಟಿಹೋಗಿದ್ದಿತು. ಆದರೂ ಆಕೆಗೆ ಅನುರೂಪನಾದ ನಿನ್ನನ್ನು ಈಗ ನೋಡಿದಾಗ ತಿರುಗಿ ಆಕೆಯ ಸ್ಮರಣೆಯು ಮನಸ್ಸಿಗೆ ಬಂದಿತು. ಅಮೂಲ್ಯವಾದ ಮುತ್ತಿನ ಹಾರಗಳಿಗೆ ಸ್ತ್ರೀಯರ ಕೊರಳೇ ಹೇಗೆ ಉಚಿತವಾದ ಸ್ಥಾನವೋ ಹಾಗೆಯೇ ಆ ಸುಂದರಿಯ ಕಿಲಕಿಂಚಿತ ಮೊದಲಾದ ಶೃಂಗಾರ ಚೇಷ್ಟೆಗಳಿಗೆ ನೀನೇ ತಕ್ಕ ಸ್ಥಾನವು. ಹೇ ವೀರ! ನೀನು ಆ ದಮಯಂತಿಯನ್ನು ಪಡೆಯದೆ ಹೋದರೆ ಗೊಡ್ಡುಬಿದ್ದ ಮರಕ್ಕೆ ಪುಷ್ಪದಂತೆ ನಿನ್ನ ಸೌಂದರ್ಯವೂ ವ್ಯರ್ಥವೆಂದೇ ನನ್ನ ಭಾವವು. ಇಷ್ಟೇ ಅಲ್ಲ, ಸಂಪೂರ್ಣ ಸಂಪತ್ತಿನಿಂದ ಕೂಡಿದ ನಿನ್ನ ಈ ರಾಜ್ಯವಾಗಲಿ, ಪಿಕನಾದದಿಂದ ಸದಾ ಆನಂದಕರವಾದ ನಿನ್ನ ರಮ್ಯೋದ್ಯಾನವಾಗಲಿ ಎಲ್ಲವೂ ವ್ಯರ್ಥವೆಂದೇ ತಿಳಿ. ಆಕೆಯನ್ನು ಇಂದ್ರಾದಿಗಳೂ ಕೂಡ ಬಯಸುತ್ತಿದ್ದಾರೆ; ಆದಕಾರಣ, ಮಳೆಗಾಲದಲ್ಲಿ ಮೇಘಾವೃತವಾದ ಚಂದ್ರ ಕಿರಣಗಳ ಸಂಯೋಗವು ಕುಮುದಗಳಿಗೆ ಹೇಗೆ ಸುಲಭವಲ್ಲವೋ ಹಾಗೆಯೇ ನಿನಗೂ ಆಕೆಯ ಯೋಗವು ಸುಲಭವೆಂದು ತಿಳಿಯಬೇಡ. ಆದರೂ ನಿನಗಾಗಿ ನಾನು ಆಕೆಯ ಬಳಿಗೆ ಹೋಗಿ ನಿನ್ನ ಸೌಂದರ್ಯಾದಿ ಸದ್ಗುಣಗಳ ವರ್ಣನೆಯನ್ನು ಮಾಡಿ ಅವಳ ಮನಸ್ಸಿನಲ್ಲಿ ನಿನ್ನನ್ನು ಇಟ್ಟೆನೆಂದರೆ ಮುಂದೆ ಇಂದ್ರನೂ ಕೂಡ ಹೊರಡಿಸಲಾರನು. ಏಕೆಂದರೆ ಅವಳು ಮುಂದೆ ನಿನ್ನಲ್ಲಿಯೇ ಗಾಢಾನುರಕ್ತಳಾಗುವುದು ನಿಜವು. ಪೂಜ್ಯನೇ! ಹಾಗೆಯೇ ಮಾಡಬಹುದಿತ್ತಲ್ಲಾ, ನನ್ನೊಡನೆ ಅದನ್ನು ಹೇಳಿದುದರಿಂದ ಉಪಯೋಗವೇನೆಂದು ನೀನು ಕೇಳಬಹುದು. ನಿಜ, ಆದರೆ ಈ ಕಾರ್ಯದಲ್ಲಿ ನಿನ್ನ ಸಮ್ಮತಿಗಾಗಿ ಮಾತ್ರ ಆ ವೃತ್ತಾಂತವನ್ನೆಲ್ಲ ನಿನ್ನ ಮುಂದೆ ಹೇಳಿದೆನೆಂದು ತಿಳಿ. ಲೋಕದಲ್ಲಿ ಸಾಧುಗಳು ತಮ್ಮ ಉಪಕಾರವನ್ನು ಕಾರ್ಯದಿಂದ ಮಾತ್ರ ತೋರಿಸತಕ್ಕವರೇ ಹೊರತು ಮಾತಿನಿಂದ ಅಲ್ಲವೆಂಬುದು ನನಗೂ ತಿಳಿದಿರುವುದು.''

ಈ ರೀತಿಯಾಗಿ ಅಮೃತ ಮಯವಾದ ಮಾತುಗಳನ್ನಾಡಿ ಸುಮ್ಮನಾದ ಹಂಸವನ್ನು ಕಂಡು ಆ ಅಮೃತಪಾನದಿಂದ ತೃಪ್ತನಾಗಿ ಹೊರಗೂ ಸ್ವಲ್ಪ ಚೆಲ್ಲುವನೋ ಎಂಬಂತೆ ಆನಂದದಿಂದ ನಕ್ಕನು. ಅಲ್ಲದೆ ಚಂದ್ರಕಾಂತಿಗೆ ಸಮಾನವಾದ ತನ್ನ ಹಲ್ಲುಗಳಿಂದ ಅದರ ಗೌರವವನ್ನು ಸಾರುತ್ತ ಅತ್ಯಂತ ಸ್ನೇಹವಾದ ಮಾತುಗಳಿಂದ ಮಾತಾಡಹತ್ತಿದನು.

"ಎಲೈ ಪರಮ ಸಾಧುವಾದ ಹಂಸವೇ! ನಿನ್ನ ಆಕೃತಿಯು ಹೇಗೆ ಅಸದೃಶವಾದುದೋ ಹಾಗೆಯೇ ನಿನ್ನ ಸೌಶೀಲ್ಯವನ್ನೂ ಮಾತಿನಿಂದ ವರ್ಣಿಸುವುದು ಅಸಾಧ್ಯವೇ. ಈ ವಿಚಾರದಲ್ಲಿ *'ಯತ್ರಾಕೃತಿಸ್ತತ್ರ ಗುಣಾಃ' ಎಂಬ ಸಾಮುದ್ರಿಕ ಸಿದ್ಧಾಂತವು ನನಗೆ ನಿಜವಾಗಿ ತೋರುವುದು. ಮಿತ್ರನೆ! ಈಗ ನೋಡುವಲ್ಲಿ ನಿನ್ನ ಶರೀರ ಮಾತ್ರವೇ ಸುವರ್ಣಮಯವಾದುದಲ್ಲ, ನಿನ್ನ ವಚನವೂ ಸುವರ್ಣ ಮಯವಾದುದೇ. ನಿನ್ನ ಪಕ್ಷಪಾತಿತ್ವವು ನಿರವಲಂಬನವಾದ ಆಕಾಶದಲ್ಲಿ ಮಾತ್ರವೇ ಅಲ್ಲ. ನನ್ನಲ್ಲಿಯೂ ಕೂಡ ಇರುವಂತೆ ತೋರುತ್ತದೆ. ಬಹು ಸಂತಾಪಗೊಂಡಿರುವವನಾದ ನನಗೆ ನೀನು ಶೀಕರ ಯುಕ್ತವಾದ ಮಂದಮಾರುತನಂತೆ ಬಹು ಉಪಕಾರಿಯಾಗಿಯಾದೆ. ಪೂಜ್ಯನೇ! ಲೋಕದಲ್ಲಿ ಕುಬೇರ ಮೊದಲಾದ ಧನಿಕರಿಗೆ ಪದ್ಮ, ಶಂಖ ಮೊದಲಾದ ನವನಿಧಿಗಳು ಸಂಪತ್ತಾಗಿರುವಲ್ಲಿ ಗುಣಶಾಲಿಗಳಾದ ವಿದ್ವಜ್ಜನರಿಗೆ ನಿನ್ನಂತಹ ಸತ್ಪುರುಷರ ಸೇರಿಕೆಯೇ ಸಂಪತ್ತಾಗಿರುವುದು. ಲೋಕೈಕ ಸುಂದರಿಯಾದ ಆ ದಮಯಂತಿಯನ್ನು ಕುರಿತು ಹಿಂದೆ ಎಷ್ಟೋ ಜನರು ನನ್ನೊಡನೆ ಹೇಳಿದ್ದರು. ಆದರೂ ನಿನ್ನ ಮಾತಿನಿಂದ ಆಕೆಯನ್ನು ನಾನು ಪ್ರತ್ಯಕ್ಷ ಕಂಡವನಾದೆನು. ಮಿತ್ರನೇ! ಸ್ವದೃಷ್ಟಿಗಿಂತ ಆಪ್ತದೃಷ್ಟಿಯೇ ಮೇಲಾದುದು. ಆಪ್ತಮುಖದಿಂದಲೂ ಸ್ವಾಂತಃಕರಣದಿಂದಲೂ ಸಮಸ್ತ ಕಾರ್ಯಗಳನ್ನೂ ವಿಚಾರಿಸಿ ತಿಳಿಯತಕ್ಕ ಮನುಷ್ಯನಿಗೆ ಆತನ ಮೋರೆಯ ಮೇಲಿರುವ ಕಣ್ಣುಗಳು ಕೇವಲ ಮುಖಾಲಂಕಾರವೆಂದು ಮಾತ್ರವೇ ತಿಳಿಯಲ್ಪಡುತ್ತವೆ. ಹಿಂದೆ ವಿದರ್ಭ ದೇಶದಿಂದ ಇಲ್ಲಿಗೆ ಬಂದ ಎಷ್ಟೋ ಜನರು ಆ ಲೋಕೈಕ ಸುಂದರಿಯ ಗುಣ ವರ್ಣನೆಯನ್ನು ನನ್ನ ಮುಂದೆ ಮಾಡಿ ನನ್ನ ವಿರಹಾಗ್ನಿಯನ್ನು ಉಜ್ಜ್ವಲಗೊಳಿಸಿದರು. ಆದರೆ ಅಪಾರವಾದ ಮನೋವ್ಯಥೆಯೆಂಬ ಸಾಗರದಲ್ಲಿ ಮುಳುಗುತ್ತಿರುವ ನನಗೆ ನನ್ನ ದೈವವೇ ನಿನ್ನಂತಹ ಸನ್ಮಿತ್ರನೆಂಬ ಪೋತವೊಂದನ್ನು ಒದಗಿಸಿಕೊಟ್ಟಿತು. ಎಲೈ ಮಿತ್ರನೇ! ಸಹಾಯವಾದಲು ಮುಂದುವರಿದು ನೀನಾಗಿಯೇ ಬಂದ ನಿನಗೆ ನನ್ನ ಪ್ರಾರ್ಥನೆಯು ಪಿಷ್ಟಪೇಷಣದಂತೆ ವ್ಯರ್ಥವೆಂದೇ ಹೇಳಬೇಕು. ಸತ್ಪುರುಷರು ತಾವಾಗಿಯೇ ಪರೋಪಕಾರವನ್ನು ಮಾಡತಕ್ಕವರು; ಅವರನ್ನು ಅನ್ಯರು ಪ್ರೇರಿಸುವ ಅವಶ್ಯವಿಲ್ಲ. ಎಲೈ ಖಗವರ್ಯನೇ! ನಿನಗೆ ದಾರಿಯಲ್ಲಿ ಮಂಗಳವಾಗಲಿ. ನಿನ್ನ

* ಎಲ್ಲಿ ಆಕಾರವಿರುವುದೋ ಅಲ್ಲಿ ಗುಣಗಳು ಇವೆ. ತಾತ್ಪರ್ಯ—ಆಕಾರದ ನೋಟದಿಂದ ಗುಣವನ್ನು ಊಹಿಸಬಹುದು.

ಸಮಾಗಮವು ಶೀಘ್ರವಾಗಿ ದೊರೆಯುವಂತಾಗಲಿ. ನನ್ನ ಇಷ್ಟಾರ್ಥವನ್ನು ಕ್ಷಿಪ್ರದಲ್ಲಿಯೇ ಕೈಗೂಡಿಸುವವನಾಗು. ತಕ್ಕ ಸಮಯದಲ್ಲಿ ನನ್ನನ್ನು ಸ್ಮರಿಸುತ್ತಿರು. ಇನ್ನು ನೀನು ಹೊರಡಬಹುದು'' ಎಂದು ಧೈರ್ಯಶಾಲಿಯಾದ ಆ ನಳನು ಆ ಹಂಸನನ್ನು ಕಳುಹಿ, ಆ ವನದಲ್ಲಿದ್ದ ತನ್ನ ವಿಹಾರ ಗೃಹವನ್ನು ಹೊಕ್ಕನು.

ಇತ್ತ ಆ ರಾಜಹಂಸವು ಯಾವ ದಿನ ನಿಷಧ ರಾಜಧಾನಿಯ ಬಹಿರುಪವನದಿಂದ ಹೊರಟಿತೋ ಅದೇ ದಿನವೇ ವಿದರ್ಭ ರಾಜಧಾನಿಯಾದ ಕುಂಡಿನವನ್ನು ತಲುಪಿತು. ಆ ಪಕ್ಷಿಯು ಹೊರಡುವಾಗಲೇ ಮೊತ್ತಮೊದಲು ಕಾರ್ಯಸಿದ್ಧಿಯನ್ನು ಸೂಚಿಸುವಂತೆ ಜಲಪೂರ್ಣವಾದ ಕಲಶವೊಂದು ಅದರ ಇದಿರಿಗೆ ಬಂದಿತು. ಮುಂದೆ ತಾನು ಹೊರಡತಕ್ಕ ದಿಕ್ಕನ್ನು ನೋಡಿದ ಪ್ರಥಮ ದೃಷ್ಟಿಗೇ ಆ ಉದ್ಯಾನದಲ್ಲಿ ಫಲಭಾರದಿಂದ ತೂಗುತ್ತಿರುವ ಮಾವಿನ ಮರದ ಹಣ್ಣುಗಳು ಕಂಡಿತು. ಸ್ವಲ್ಪ ಮುಂಗಡೆಯಲ್ಲಿಯೇ ಮೇಘಗಳಿಂದಲೂ, ತರಕ್ಷು ಮೊದಲಾದ ವನಮೃಗಗಳಿಂದಲೂ, ವೃಕ್ಷಗಳಿಂದಲೂ ವ್ಯಾಪ್ತವಾದ ಪರ್ವತವೊಂದು ದೃಷ್ಟಿಗೆ ಗೋಚರವಾಯಿತು.

ಈ ಶುಭ ಶಕುನಗಳಿಂದ ಆನಂದಿತನಾದ ಆ ಹಂಸನು ತನ್ನ ಪಕ್ಷಮೂಲವನ್ನು ಸ್ವಲ್ಪ ಅಲ್ಲಾಡಿಸಿ ಮೇಲಕ್ಕೆ ನೆಗೆಯಿತಾಗಿ ಸ್ವಲ್ಪ ಕಾಲ ಅದರ ಇರವೇ ಕಣ್ಣಿಗೆ ಮರೆಯಾಯಿತು. ಕ್ಷಣದಲ್ಲಿಯೇ ತನ್ನ ರೆಕ್ಕೆಗಳನ್ನು ಹರಡಿ ನಿಶ್ಚಲವಾಗಿ ಮುಂದುವರಿಯುತ್ತಿತ್ತು. ಬಂಗಾರದ ರೆಕ್ಕೆಗಳುಳ್ಳ ಆ ಪಕ್ಷಿಯು ನೀಲ ವರ್ಣದ ಆಕಾಶದಲ್ಲಿ ಆ ವಿಧವಾಗಿ ಮುಂದುವರಿಯುತ್ತಿರಲು, ಕೆಳಗಡೆ ನಿಂತು ನೋಡತಕ್ಕವರಿಗೆ ಸುವರ್ಣವನ್ನು ಒರೆಗಲ್ಲಲ್ಲಿ ತಿಕ್ಕಿದಾಗ ಉಂಟಾಗತಕ್ಕ ಸ್ವರ್ಣರೇಖೆಯಂತೆ ತೋರುತ್ತಿದ್ದಿತು. ಅಲ್ಲಲ್ಲಿರುವ ಪಕ್ಷಿಗಳಿಗೆ ಈ ಹಂಸನು ಬರುವ ವೇಗದಿಂದ ಉಂಟಾದ ಝುಂಕಾರ ನಾದವನ್ನು ಕೇಳಿದೊಡನೆಯೇ 'ಗಿಡುಗವು ಬರುತ್ತಿದೆ' ಎಂಬ ಭಯದಿಂದ ಅವು ಅಲ್ಲಲ್ಲೇ ಅಡಗಿದುವು; ಕೆಲವು ಮಾತ್ರ ಒಕ್ಕಣ್ಣಿನಿಂದ ಮೇಲ್ಗಡೆಗೆ ನೋಡುತ್ತಿದ್ದುವು. ಅಲ್ಲಲ್ಲಿ ಜನಗಳು ಭೂಮಿಯ ಮೇಲೆ ಬಿದ್ದ ಅದರ ನೆಳಲನ್ನು ಕಂಡು ಮೇಲ್ಗಡೆ ನೋಡುವಷ್ಟಕ್ಕೇ ದೃಷ್ಟಿಪಥದಿಂದ ಮಾಯವಾಗಿ ಹೋಗುತ್ತಿದ್ದನು. ದಾರಿಯಲ್ಲಿ ಉನ್ನತವಾದ ವೃಕ್ಷಗಳನ್ನು ಕಂಡರೂ, ಬಂಧುಗಳಾದ ಇತರ ಹಂಸಗಳ ಧ್ವನಿಯನ್ನು ಕೇಳಿದರೂ ಆ ಹಂಸನು ಮಾತ್ರ ಎಲ್ಲಿಯೂ ವಿಶ್ರಾಂತಿಗೊಳ್ಳದೆ ಮಿತ್ರ ಕಾರ್ಯವನ್ನು ಕೈಗೂಡಿಸುವ ಲವಲವಿಕೆಯಿಂದ ಒಂದೇ ಸಮನಾಗಿ ಹೋಗುತ್ತಿದ್ದಿತು.

ಈ ಪ್ರಕಾರ ಹೋಗುತ್ತ ಹೋಗುತ್ತ ಮುಂದೆ ಕುಂಡಿನಪುರವು ಆ ಹಂಸನ ದೃಷ್ಟಿಗೆ ಗೋಚರವಾಯಿತು. ಆ ಪಟ್ಟಣದ ಪ್ರತಿ ಗೃಹಗಳ ಸ್ಫಟಿಕಮಯವಾದ ಗೋಡೆಗಳನ್ನೂ ಅವುಗಳಿಂದ ಹೊರಡುವ ಚಂದ್ರನ ಅಚ್ಛ ಕಿರಣವನ್ನು ಹೋಲುವ ಕಾಂತಿಯನ್ನೂ ಕಾಣಲಾಗಿ, ಈ ಭೂಮಿಯೆಂಬ ನಾಯಕಿಯು

ತನ್ನ ಪ್ರಿಯನಾದ ಭೂಪಾಲನ ದರ್ಶನದಿಂದ ಉಂಟಾದ ಆನಂದದಿಂದ ನಕ್ಕಂತೆ ತೋರುತ್ತಿದ್ದಿತು. ಆ ಪಟ್ಟಣದ ನೀಲಮಣಿ ಗೃಹಗಳ ಕಾಂತಿಯನ್ನು ಕಂಡಾಗ ಸೂರ್ಯನಿಗೆ ಭಯಪಟ್ಟ ಕತ್ತಲೆಯು ಆ ಕಾಂತಿಯ ರೂಪದಿಂದ ಅಲ್ಲಿ ಮರೆಯಾಗಿದ್ದು ಹಗಲಲ್ಲಿಯೂ ನಿರ್ಭಯವಾಗಿರುವಂತೆ ತೋರುತ್ತಿದ್ದಿತು. ಒಂದೆಡೆ ಸ್ಫಟಿಕ ಮಣಿಗಳಿಂದ ನಿರ್ಮಿತವಾದ ಗೃಹಗಳ ಕಾಂತಿಯಿಂದ ಪ್ರತಿ ದಿನ ರಾತ್ರಿಯೂ ಆ ಪ್ರದೇಶದಲ್ಲಿ ಪೂರ್ಣಿಮೆಯಂತೆಯೇ ತೋರುತ್ತಿದ್ದಿತು. ಪ್ರತಿ ಗೃಹದ ಒಳೆಯಲ್ಲಿಯೂ ಇರುವ ದೀರ್ಘಿಕೆಗಳೆಂಬ ಜಲಾಶಯಗಳು ಸ್ತ್ರೀಯರ ಸ್ನಾನದಿಂದ ಸೇರಿದ ಕುಂಕುಮದಿಂದ ಸರ್ವ ಕಾಲದಲ್ಲಿಯೂ ಪರಿಮಳಿಸುತ್ತಲೇ ಇದ್ದುವು. ಮಧ್ಯ ರಾತ್ರಿಯ ವೇಳೆ ನಿಶ್ಶಬ್ದವಾಗಿಯೂ, ಉರುಟಾದ ಕೋಟೆಯಿಂದ ಯುಕ್ತವಾಗಿಯೂ ಇದ್ದ ಆ ಪಟ್ಟಣವನ್ನು ನೋಡಲಾಗಿ ಆ ನಗರಿಯು ಯೋಗಪಟ್ಟವನ್ನು ಧರಿಸಿ ಮೌನವಾಗಿ ಧ್ಯಾನಾಸಕ್ತವಾದಂತೆಯೂ, ಆಕೆಯ ಅಂತರಂಗದಲ್ಲಿರುವ ಮನಸ್ಸಿಗೂ ವಾಕ್ಕಿಗೂ ಗೋಚರವಲ್ಲದ ಯಾವುದೋ ಒಂದು ಅತಿಶಯವಾದ ಜ್ಯೋತಿಯು ಹೊರಗೆ ಪ್ರಕಾಶಿಸುವಂತೆಯೂ ತೋರುತ್ತಿದ್ದಿತು. ಆ ನಗರದ ಹೊರಗಿನ ಪರಿಖೆಯ ಜಲದಲ್ಲಿ ಪ್ರತಿಬಿಂಬಿಸುವ ಪ್ರಾಸಾದಗಳನ್ನು ಕಂಡರೆ, ಈ ಮಡುವಿನಲ್ಲಿ ಬೇರೊಂದು ಅಮರಾವತಿಯೇ ಇದ್ದಂತೆ ತೋರುತ್ತಿದ್ದಿತು. ಆ ಮಹಾ ನಗರದ ರಾಜಮಂದಿರವು ಸುಧಾ ಲೇಪನದಿಂದ ಶುಭ್ರವಾಗಿಯೂ, ಮೇಘಾಚ್ಛಾದನದಿಂದ ನೀಲಕಂಠತ್ವವುಳ್ಳದಾಗಿಯೂ, ಎತ್ತರವಾದ ಶಿಖರದಿಂದ ತಲೆಯಲ್ಲಿ ಚಂದ್ರನನ್ನು ಧರಿಸಿದಂತೆಯೂ ಇದ್ದು ಸಾಕ್ಷಾತ್ ಪರಮೇಶ್ವರನಂತೆಯೇ ಕಾಣಿಸುತ್ತಿದ್ದಿತು. ಅಲ್ಲಿರುವ ಗೊಂಬೆಗಳ ಮುಖಗಳಮೇಲೆ ಬಿಡಿಸಿದ ಮೃಗಚಿತ್ರವನ್ನು ಕಾಣಲಾಗಿ, ಅರಮನೆಗಳ ಕಂಠಪ್ರದೇಶಗಳಲ್ಲಿ ಮಾಡಿಟ್ಟ ಸಿಂಹಗಳಿಂದ ಹಿಡಿಯಲ್ಪಟ್ಟ ಮೃಗಗಳಂತೆ ತೋರುತ್ತಿತ್ತು. ಸತ್ಯ ವಚನಾದ ನಾರದ ಮಹರ್ಷಿಯು ಪಾತಾಳ ಸ್ವರ್ಗವೆಂಬುದು ಮೇರು ಶಿಖರದಲ್ಲಿರುವ ಸ್ವರ್ಗಕ್ಕಿಂತ ಇನ್ನೂ ಮೇಲೆ ಇರುವುದು, ಎಂದು ನುಡಿದಿರುವನು. ಆದರೆ, ಭೂಮಿಗೆ ಅಲಂಕಾರಭೂತವಾದ ಈ ನಗರಿಯಾದರೋ ಆ ಪಾತಾಳ ಸ್ವರ್ಗವನ್ನೂ ಕೆಳಗೆ ಹಾಕಿದುದರಿಂದ ಸಕಲರಿಗೂ ಪೂಜ್ಯನಾದ ಆ ನಾರದನು ಈ ವಿಚಾರದಲ್ಲಿ ಸುಳ್ಳು ಹೇಳಿದನೆಂದು ತಿಳಿಕೊಳ್ಳುತ್ತಿದ್ದರು. ಆ ನಗರದ ಯಾವ ಬೀದಿಯಲ್ಲಿ ಸಂಚರಿಸಿದರೂ ಪಕ್ವಾನ್ನಗಳ ಪರಿಮಳವೂ, ಗೋಧಿ ಮೊದಲಾದ ಧಾನ್ಯಗಳನ್ನು ಬೀಸುತ್ತಿರುವ ಬೀಸುವ ಕಲ್ಲುಗಳ ಧ್ವನಿಯೂ ಜನರ ಮನಸ್ಸನ್ನು ಆಕರ್ಷಿಸುತ್ತಿದ್ದಿತು. ಆ ನಗರದ ಬಂಗಾರದ ಪ್ರಾಕಾರಗಳನ್ನು ಕಂಡಲ್ಲಿ, ಇದೇನು! [illegible] ತನ್ನ ತೊಡೆಯಿಂದ [illegible] ಇಲ್ಲಿಗೆ ಬಂದ ಅಮರಾವತಿಯನ್ನು ಸಂರಕ್ಷಿಸುವುದಕ್ಕಾಗಿ ಆಕೆಯನ್ನು ಅನುಸರಿಸಿ ಬಂದಿರುವುದೋ ಎಂಬಂತೆ ತೋರುತ್ತಿದ್ದಿತು; ಅಲ್ಲದೆ ಆ ಗೋಡೆಗಳಿಗೆ ಬಿಗಿದಿದ್ದ ಸೂರ್ಯಕಾಂತ ಶಿಲೆಗಳಿಗೆ ಹಗಲು ಸೂರ್ಯ ಕಿರಣಗಳ ಸಂಬಂಧವಾಗಿ ಉರಿಯುತ್ತಿರುವಾಗ ಆ

ನಗರವು ಬಾಣಾಸುರನ ಶೋಣಿತಪುರದ ವಿಡಂಬನವನ್ನುಂಟುಮಾಡುತ್ತಿದ್ದಿತು. ಆ ಪಟ್ಟಣದ ಅಂಗಡಿ ಬೀದಿಯಲ್ಲಿ ಕೇಳಿಸುತ್ತಿದ್ದ ಶಬ್ದದಿಂದ ಅದೊಂದು ಸಮುದ್ರದಂತೆ ತೋರುತ್ತಿದ್ದಿತು. ಅಲ್ಲಿ ಚಲ್ಲಿ ಬಿದ್ದಿರುವ ಪಚ್ಚಕರ್ಪೂರವೇ ಆ ಸಮುದ್ರ ತೀರದ ಮರಲು, ಅಲ್ಲಿಯ ರಂಗುಗಳೂ ಕವಡೆಯ ಎಣಿಕೆಗಾಗಿ ಅತ್ತಿತ್ತ ತಿರುಗುತ್ತಿರುವ ಜನರ ಹಸ್ತಗಳೂ ಸಹಜವಾದ ಶಂಖ ಮತ್ತು ಆ ಸಮುದ್ರದ ಅಲೆಗಳಂತೆ ತೋರುತ್ತಿದ್ದುವು. ಆ ನಗರದ ಉನ್ನತವಾದ ಮನೆಗಳ ತುದಿಯಲ್ಲಿರುವ ಚಂದ್ರಕಾಂತಗಳನ್ನು ಜಗದ ಪ್ರದೇಶಗಳು ಚಂದ್ರೋದಯದ ವೇಳೆ ಸ್ರವಿಸಿ ಹರಿಯುತ್ತಿರುವಾಗ, ಇದೇನು! ಪತಿಯಾದ ಸಮುದ್ರನ ವೃದ್ಧಿಯನ್ನು ಕಂಡು ಆಕಾಶಗಂಗೆಯೂ ಉಕ್ಕಿ ಹರಿಯುತ್ತಿರುವಳೋ! ಎಂಬ ಎಣಿಕೆ ಹುಟ್ಟುತ್ತಿದ್ದಿತು. ಅಲ್ಲಿಯ ಸುಗಂಧ ವ್ಯಾಪಾರಿಗಳ ಕೇರಿಯಲ್ಲಿ ಸಾಯಂಕಾಲದಲ್ಲಿ ವ್ಯಾಪಾರಕ್ಕಾಗಿ ಹರವಿಟ್ಟ ಕುಂಕುಮಕೇಸರಗಳನ್ನು ಕಂಡಾಗ ಮುಳುಗುವ ಸೂರ್ಯನ ಕಿರಣಗಳಿಗೆ ಆಶ್ರಯವು ತಪ್ಪಿ ಇಲ್ಲಿಯೇ ಬಿದ್ದಿರಬೇಕೆಂದು ಭ್ರಾಂತಿ ಪಡುವಂತಿದ್ದಿತು. ಅಲ್ಲಿಯ ಅಂಗಡಿ ಬೀದಿಯಲ್ಲಿ ಲೋಕದೊಳಗಿನ ಸಮಸ್ತ ಪದಾರ್ಥಗಳೂ ವ್ಯಾಪಾರವಾಗುತ್ತಿದ್ದುವು. ಒಂದೆಡೆ ಕಸ್ತೂರಿಯ ವ್ಯಾಪಾರವಾಗುತ್ತಿದ್ದಿತು. ಅಲ್ಲಿ ಆ ಕಸ್ತೂರಿಗೆ ಮುತ್ತಿಕೊಂಡ ತುಂಬಿಗಳೂ ಕಸ್ತೂರಿಯಂತೆಯೇ ಕಪ್ಪಾಗಿದ್ದು ಅವು ಮಾಡತಕ್ಕ ಗುಂಜಾ ಗುಂಜಾ ಎಂಬ ಗುಂಜಾನಾದವು ಕೂಡ ಜನಗಳ ಗದ್ದಲದಿಂದ ಕಿವಿಗೆ ಕೇಳಿಸದೆ ಹೋದಕಾರಣ ವ್ಯಾಪಾರಿಗಳು ಕಸ್ತೂರಿಯೊಡನೆ ತುಂಬಿಗಳನ್ನು ತೂಗುತ್ತಿದ್ದರು. ಅಲ್ಲಿಯ ಬೀದಿಗಳಲ್ಲಿ ಹಾಸಿದ್ದ ಚಂದ್ರಕಾಂತ ಶಿಲೆಗಳು ರಾತ್ರಿ ಕಾಲಗಳಲ್ಲಿ ಚಂದ್ರ ಕಿರಣಗಳ ಸಂಪರ್ಕದಿಂದ ಒಸರಿ ಹಗಲುಹೊತ್ತು ಗ್ರೀಷ್ಮರ್ತುವಿನಲ್ಲಿ ಕೂಡ ಜನಗಳ ಪಾದಗಳಿಗೆ ಬಾಧೆಯನ್ನುಂಟುಮಾಡುತ್ತಿದ್ದಿಲ್ಲ. ಅಲ್ಲಿಯ ಮಾಣಿಕ್ಯಮಯವಾದ ಆಲಯಗಳು ಬಲು ಎತ್ತರವಾಗಿದ್ದುವು. ಅವು ಹಗಲುಹೊತ್ತು ಸೂರ್ಯ ಕಿರಣದಿಂದ ಬಲು ಬಳಲಿಹೋಗಿದ್ದುದರಿಂದ ರಾತ್ರಿವೇಳೆ ಆ ಸಂತಾಪದ ನಿವಾರಣೆಗಾಗಿ ಚಂದ್ರ ಕಿರಣವನ್ನು ಕುಡಿಯುತ್ತಿವೆಯೋ ಎಂಬಂತೆ ಉದ್ದವಾದ ಕೆಂಬಣ್ಣದ ಪತಾಕೆಗಳು ಶೋಭಿಸುತ್ತಿದ್ದುವು. ಒಂದೆಡೆ ಸಾಲುಸಾಲಾಗಿರುವ ಬಿಳಿಯ ಪತಾಕೆಗಳ ಪಙ್ಕ್ತಿಯನ್ನು ಕಂಡಾಗ ಹಿಂದೆ ತ್ರಿಶಂಕುವಿಗಾಗಿ ನೂತನ ಸ್ವರ್ಗವನ್ನು ಸೃಷ್ಟಿಸುವುದಕ್ಕೆ ತೊಡಗಿ ಕೊನೆಗೆ ಸ್ವೇದಪಾತದಿಂದ ಪವಿತ್ರವಾದ ಬ್ರಹ್ಮನ ನಾಲಗೆಯಿಂದ ಹಾಗೆ ಮಾಡಬಾರದಾಗಿ ಪ್ರಾರ್ಥಿಸಲ್ಪಟ್ಟ ಮೇಲೆ ಅಲ್ಲಿಗೇ ಬಿಟ್ಟ ಆಕಾಶಗಂಗೆಯೋ ಎಂಬಂತೆ ಮರುಳುಗೊಳಿಸುತ್ತಿದ್ದಿತು. ಇನ್ನೊಂದೆಡೆ ನೀಲಮಯವಾದ ಮನೆಗಳ ಮೇಲ್ಗಡೆ ಎತ್ತಿಕಟ್ಟಿದ್ದ ಧೂಮ್ರ ವರ್ಣದ ಪತಾಕೆಗಳು ಕೂಡ ನೀಲ ವರ್ಣಕ್ಕೆ ಮಾರ್ಪಟ್ಟು ಸಾಲು ಸಾಲಾಗಿ ಶೋಭಿಸುತ್ತಿರಲಾಗಿ ಅವುಗಳನ್ನು ನೋಡತಕ್ಕ ಜನಗಳಿಗೆ ಸೂರ್ಯನ ತೊಡೆಯಮೇಲೆ ಹೊರಳುತ್ತಿರುವ ಯಮುನೆಯ ಬಾಲ್ಯವೆಂಬಂತೆ ಕಾಣುತ್ತಿದ್ದಿತು. ಮುಂದೆ ಒಂದೆಡೆ ರಾಜಕುಮಾರಿಯಾದ ದಮಯಂತಿಯು ಕ್ರೀಡಿಸತಕ್ಕ ಕ್ರೀಡಾವನವೊಂದಿದ್ದಿತು.

ಆ ವನದ ಸಮಸ್ತ ಗಿಡ ಬಳ್ಳಿಗಳಿಗೂ ಚಂದ್ರಕಾಂತ ಶಿಲೆಗಳ ಕಟ್ಟೆಯಿದ್ದುದರಿಂದ ರಾತ್ರಿ ವೇಳೆ ಆ ಶಿಲೆಗಳಿಂದ ಒಸರುತ್ತಿದ್ದ ನೀರಿನಿಂದಲೇ ಆ ತೋಟವು ಬೆಳೆಯುತ್ತಿದ್ದ ಕಾರಣ ಹಗಲು ಹೊತ್ತು ಅವುಗಳ ಬುಡಕ್ಕೆ ನೀರೆರೆಯುವುದು ವ್ಯರ್ಥವೆಂಬಂತೆ ತೋರುತ್ತಿದ್ದಿತು.

ಈ ಪ್ರಕಾರ ಮನೋಹರವಾದ ಆ ಕ್ರೀಡಾವನದ ಕಡೆಗೆ ಆ ಹಂಸನ ದೃಷ್ಟಿಯು ತಿರುಗಿದಾಗ ಅಲ್ಲಿ ನಕ್ಷತ್ರಗಳ ನಡುವೆ ಶೋಭಿಸುವ ಚಂದ್ರರೇಖೆಯಂತೆ ತನ್ನಂತೆಯೇ ಸುಂದರಿಯರಾದ ಕನ್ಯೆಯರ ನಡುವೆ ಒಪ್ಪುತ್ತಿದ್ದ ರಾಜಕುಮಾರಿಯನ್ನು ಕಂಡು ತಾನು ಇಲ್ಲಿಯೇ ಇಳಿಯಬೇಕೆಂದು, ಇನ್ನು ದಮಯಂತಿಯ ಮುಖವೆಂಬ ಚಂದ್ರನನ್ನು ಸೇವಿಸುವುದಕ್ಕಾಗಿ ಆಕಾಶದಿಂದ ಇಳಿಯುತ್ತಿರುವ ಚಂದ್ರ ಪರಿವೇಷವೋ ಎಂಬಂತೆ ತನ್ನ ರೆಕ್ಕೆಗಳ ಸ್ವರ್ಣಕಾಂತಿಯನ್ನು ಹರಡುತ್ತ ಇಳಿಯುವುದಕ್ಕೆ ಅನುಕೂಲವಾದ ಸ್ಥಳವನ್ನು ಹುಡುಕುವುದಕ್ಕಾಗಿ ಆ ರಾಜಹಂಸನು ಆಕಾಶದಲ್ಲಿ ಚಕ್ರಾಕಾರವಾಗಿ ಸುತ್ತುಗಟ್ಟತೊಡಗಿತು.

ಇಂತಲ್ಲಿಗೆ ನೈಷಧೀಯ ಚರಿತೆಯೊಳಗಣ ದ್ವಿತೀಯ ಸರ್ಗವು ಮುಗಿದುದು.

ತೃತೀಯ ಸರ್ಗವು

ಹಂಸವು ಕೆಳಗೆ ಇಳಿಯತೊಡಗಿತು. ಆಗ ತನ್ನ ರೆಕ್ಕೆಗಳನ್ನು ಸಂಕೋಚವಾಗಿ ಮಾಡಿಕೊಂಡು ದಮಯಂತಿಯ ಸಮೀಪದಲ್ಲಿಯೇ ಕೆಳಗಿಳಿದು ನೆಲಕ್ಕೆ ಹತ್ತಿರವಾಗಿ ಬರುತ್ತ ತಿರುಗಿ ರೆಕ್ಕೆಗಳನ್ನು ವಿಸ್ತರಿಸಿ ಅಲ್ಲಾಡಿಸುತ್ತ ಬಂದು ನೆಲದ ಮೇಲೆ ಕುಳಿತಿತು. ಆ ಕಾಲದಲ್ಲಿ ಅದರ ರೆಕ್ಕೆಯು ನೆಲಕ್ಕೆ ತಗುಲಿ ಉಂಟಾದ ವಿಚಿತ್ರವಾದ ಧ್ವನಿಯಿಂದ ಅನ್ಯಮನಸ್ಕಳಾಗಿದ್ದ ದಮಯಂತಿಗೆ ಒಂದು ವಿಧವಾದ ಸಂಭ್ರಾಂತಿಯುಂಟಾಯಿತು. ಕೂಡಲೆ ಆಕೆಯ ಮತ್ತು ಅವಳ ಸಖಿಯರ ನೇತ್ರಗಳು ಏಕವಾಗಿ ಆ ಹಂಸನ ಕಡೆಗೆ ತಿರುಗಿದುವು. ಆ ಹಂಸನ ಸೌಂದರ್ಯವನ್ನು ಕಂಡೊಡನೆಯೇ ದಮಯಂತಿಗೆ ಅದನ್ನು ಹಿಡಿಯಬೇಕೆಂಬ ಆಸೆಯುಂಟಾಯಿತು. ಇದರಿಂದ ಆಕೆಯು ಮೆಲ್ಲಗೆ ಸದ್ದುಮಾಡದೆ ಹೆಜ್ಜೆಗಳನ್ನಿಡುತ್ತ ಅದರ ಕಡೆಗೆ ನಡೆದಳು. ಆ ಹಂಸನಿಗೆ ದಮಯಂತಿಯ ಆಶಯವು ಅವಳ ಇಂಗಿತಗಳಿಂದಲೇ ತಿಳಿದುಬರಲು ಆಕೆಯನ್ನು ವಂಚಿಸುವುದಕ್ಕಾಗಿ ತಾನು ಮುಂದಕ್ಕೆ ನೆಗೆಯದೆ ಆಕೆಯ ಕೈಗೆ ಸಿಕ್ಕುವಂತೆ ಹತ್ತಿರ ಹೋಗುತ್ತ, ಸಮೀಪಕ್ಕೆ ಬಂದೊಡನೆಯೇ ಕುಪ್ಪಳಿಸಿ ಮುಂದಕ್ಕೆ ನೆಗೆಯುತ್ತ ಅವಳ ಪ್ರಯತ್ನವನ್ನು ವ್ಯರ್ಥವಾಗಿ ಮಾಡುತ್ತಿದ್ದಿತು. ಇದನ್ನು ಕಂಡು ಆಕೆಯ ಸಖಿಯರೆಲ್ಲರೂ ಕೈತಟ್ಟಿ ಕಿಲಕ್ಕನೆ ನಕ್ಕರು. ಆಗ ದಮಯಂತಿಯು ಕೋಪದ ಮುಖವನ್ನು ಗಂಟಿಕ್ಕಿಕೊಂಡು—'ಏನು! ನೀವೆಲ್ಲರೂ ಕೈತಟ್ಟಿ ಸಪ್ಪಳ ಮಾಡಿ ಇದನ್ನು ಓಡಿಸುತ್ತಿದ್ದೀರೇ? ನನ್ನ ಸಂಗಡ ಬರದ ನೀವು ನನಗೇ

ದ್ರೋಹವನ್ನು ಎಣಿಸುವಿರೇ?' ಎಂದು ಗದರಿಸಲು ಆಕೆಯ ಸಖಿಗಳೆಲ್ಲರೂ ಆಗ ಸುಮ್ಮನಾದರು. ದಮಯಂತಿಗೆ ಕೋಪ ಬಂದಿತೆಂದು ಅವರಿಗೆ ತಿಳಿಯಿತು. ಆಕೆಯಾದರೋ ತನ್ನ ಸಂಕಲ್ಪವನ್ನು ಅಲ್ಲಿಗೇ ಬಿಡದೆ ಸೂರ್ಯನನ್ನು ಇದಿರಿಸಿ ಹೋಗುವ ನೆಳಲಿನಂತೆ ತಿರುತಿರುಗಿ ಕೈಹಾಕುತ್ತ ಅದನ್ನು ಹಿಡಿಯುವ ಪ್ರಯತ್ನದಲ್ಲಿಯೇ ಇದ್ದಳು. ಆಗ ಅವಳ ಸಖಿಯರು ಇನ್ನೊಮ್ಮೆ—'ಅಮ್ಮಾ! ನಿನ್ನ ಶ್ರಮವನ್ನು ಇಲ್ಲಿಗೆ ಸಾಕುಮಾಡು. ಇದು ಶ್ರೇಯಸ್ಕರವೆಂದು ನಮಗೆ ತೋರುವುದಿಲ್ಲ' ಹೀಗೆಂದು ಅವರೆಲ್ಲರೂ ನಕ್ಕು ಹಾಸ್ಯಮಾಡಲು, ದಮಯಂತಿಯು—'ಎಲೇ! ನಗಬೇಡಿ. ಈ ಪಕ್ಷಿಯ ಅಂಗಗಳ ಸ್ವರೂಪವನ್ನು ಕಂಡರೆ ಇದು ನನಗೇನೋ ಒಂದು ಶುಭವನ್ನು ಸೂಚಿಸುವುದಕ್ಕಾಗಿ ಬಂದ ಶಕುನವೇ ಹೊರತು ಬರಿಯ ಶಕುನಿ ಮಾತ್ರವೇ ಎಂದು ತಿಳಿಯಬೇಡಿ' ಎಂದು ಹೇಳುತ್ತ, ತಿರುಗಿ ಪೂರ್ವದಂತೆಯೇ ಹಂಸವನ್ನು ಹಿಡಿಯುವ ಕಾರ್ಯಕ್ಕೆ ಕೈಯಿಕ್ಕಿದಳು. ಹಂಸವೂ ಕೂಡ ಪೂರ್ವದಂತೆಯೇ ಮುಂದು ಮುಂದಕ್ಕೆ ನೆಗೆಯುತ್ತ ವಿಲಕ್ಷಣವಾದ ಗತಿಯಿಂದ ಆಕೆಯನ್ನು ಹಾಸ್ಯಮಾಡುತ್ತಿರುವುದೋ ಎಂಬಂತೆ ಮುಂದು ಮುಂದೆ ಹೋಗುತ್ತಿದ್ದುದು; ಇದೋ! ಕೈಗೆ ಸಿಕ್ಕಿತು. ಇನ್ನೇನು! ಎಂಬಂತೆ ಆಕೆಗೆ ಆಶೆಯನ್ನು ಹುಟ್ಟಿಸುತ್ತ ಮುಂದು ಮುಂದಕ್ಕೆ ಸೆಳೆದು ಲತೆಗಳು ದಟ್ಟವಾಗಿ ಬೆಳೆದಿರುವ ಒಂದು ಪೊದರಿನ ಮರೆಗೆ ಹೋಯಿತು. ಈಗ ದಮಯಂತಿಯ ಬಳಿಯಲ್ಲಿ ಅವಳ ನೆಳಲಲ್ಲದೆ ಇನ್ನಾರೂ ಇರಲಿಲ್ಲ. ಸಖಿಯರ ಮೇಲೆ ಕೋಪದಿಂದ ತ್ಯಜಿಸಿ ಬಂದಿದ್ದಳು. ಅಷ್ಟು ದೂರ ಬಂದ ಶ್ರಮದಿಂದ ಮೈಯಲ್ಲಿಯೂ ಮುಖದಲ್ಲಿಯೂ ಬೆವರಿಳಿಯುತ್ತಿದ್ದಿತು. ಈ ಪ್ರಕಾರ ತನಗಾಗಿ ಶ್ರಮಪಟ್ಟು ಬಂದ ದಮಯಂತಿಯನ್ನು ಕಂಡು ಆ ಹಂಸನು ಇದು ತಕ್ಕ ಸ್ಥಾನವೆಂದು ಎಣಿಸಿ ಗಿಳಿಯಂತೆ ಸುಂದರವಾದ ಸ್ವರದಿಂದ ಮನುಷ್ಯರಂತೆ ಮಾತಾಡತೊಡಗಿತು:

"ಬಾಲೆ! ಇದೇನು? ಇಷ್ಟು ದೂರವೇಕೆ ನನ್ನನ್ನು ಅಟ್ಟಿಕೊಂಡು ಬಂದೆ? ವ್ಯರ್ಥವಾಗಿ ಏಕೆ ಶ್ರಮಪಡುತ್ತಿದ್ದೀಯೆ? ಈ ಭಯಂಕರವಾದ ಕಾಡುಗಳನ್ನು ಕಂಡಾಗ ನಿನಗೆ ಮನಸ್ಸಿನಲ್ಲಿ ಭಯವಾಗುವುದಿಲ್ಲವೇ? ದುರ್ಮಾರ್ಗದಲ್ಲಿ ನಡೆಯುತ್ತಿರುವವರನ್ನು ಕಂಡು ಮಿತ್ರರು ಬಾಯಿಂದಲೂ ಕೈಯಿಂದಲೂ ಅವರನ್ನು ಆಕ್ಷೇಪಿಸುವಂತೆ ಈ ವನ ಪಙ್ಕ್ತಿಯೂ ಕೂಡ ಗಾಳಿಯಿಂದ ಅಲ್ಲಾಡುತ್ತಿರುವ ಪಲ್ಲವವೆಂಬ ಹಸ್ತಗಳಿಂದ ಆಕ್ಷೇಪಿಸುತ್ತ ಕಪೋತಗಳ ಹುಂಕಾರದಿಂದ ನಿನ್ನನ್ನು ಗದರಿಸುವಂತೆ ಕಾಣುತ್ತಿದೆ, ನೋಡು. ಈಗ ನೀನು ಯೌವನಾವಸ್ಥೆಗೆ ಬಂದು ಮುಟ್ಟಿದ್ದರೂ ನಿನ್ನ ಬಾಲ್ಯವು ಇನ್ನೂ ಕಳೆಯಲಿಲ್ಲವೆಂದೇ ಎಣಿಸುತ್ತೇನೆ. ಏಕೆಂದರೆ, ಕೇವಲ ಭೂಮಿಯಲ್ಲಿ ಮಾತ್ರವೇ ಸಂಚರಿಸಬಲ್ಲ ನೀನು ಆಕಾಶಗಾಮಿಯಾದ ನನ್ನನ್ನು ಹಿಡಿಯಬಲ್ಲೆಯಾ? ಈ ವಿಚಾರವು ನಿನ್ನ ಮನಸ್ಸಿಗೆ ಹೊಳೆಯದ ಕಾರಣ ಇನ್ನೂ ನಿನಗೆ ಬುದ್ಧಿ ಬರಲಿಲ್ಲವೆಂದೇ ನನ್ನ ಭಾವನೆ. ನನ್ನನ್ನು ಸಾಮಾನ್ಯ ಹಂಸನೆಂದು ತಿಳಿಯಬೇಡ. ಬ್ರಹ್ಮನಿಗೆ ವಾಹನವಾದ ಆ ಶ್ರೇಷ್ಠ

[illegible] ದನೆಂದು [illegible] ಸ್ವರ್ಗದಲ್ಲಿದ್ದವರಿಗಲ್ಲದೆ [illegible] ಎಂದೇ ತಿಳಿ. ನಿನಗೆ ನನ್ನ ಬಂಗಾರದ [illegible] ರೆಕ್ಕೆಗಳನ್ನು ನೋಡಿ ಆಶ್ಚರ್ಯವಾಗಬಹುದು. ಇದರೆ ನನ್ನ ಆಹಾರವು ಸ್ವರ್ಗಗಂಗೆಯಲ್ಲಿರುವ ಸ್ವರ್ಣಕಮಲಗಳ ಮೃಣಾಲಗಳೆಂದು ನಿನಗೆ ತಿಳಿದರೆ ಅಂತಹ ಆಶ್ಚರ್ಯಕ್ಕೆ ಅವಕಾಶವಾಗದು. [illegible] ದಂತಾಯಿತು. ನನ್ನಂಥವನಿಗೆ ಜೇಡರು ಮೊದಲಾದವರು ಹಿಡಿಯುವ ಭಯವೂ ಇರುವುದಿಲ್ಲ. ಸ್ವರ್ಗಭೋಗಗಳನ್ನು ಅನುಭವಿಸಬಲ್ಲ ಭಾಗ್ಯವುಳ್ಳ ನಮಗೆ [illegible] ಬೇರೆ ಹೋಗಬೇಕಾಗಿಲ್ಲ [illegible] ಆಳುತ್ತಿರುವ ನಿಷಧದೇಶವೇ ಸ್ವರ್ಗಸಮಾನವಾದುದು. [illegible] ನೋಡಲು ದೊರೆಯುವುದು. ಅವನು ಕೇವಲ [illegible] ಮಾತ್ರವೇ ಅಲ್ಲ. [illegible]

ನಾರದನು ದೋಷವನ್ನೇ ನಿವಾರಿಸುತ್ತಿದ್ದುದರಿಂದ ತೃಪ್ತರಾದ ದೇವತೆಗಳು ಆವನ ಸಕಲ ಇಷ್ಟಾರ್ಥಗಳನ್ನೂ ಕೈಗೂಡಿಸಿಕೊಡುತ್ತಿರುವರು. ರಂಭೆಯೂ ಕೂಡ ಆ ನಳನನ್ನು ಬಯಸಿ, ಆತನು ದೊರೆಯದೆ ಹೋದುದರಿಂದ ನಾಮ ಸಾಮ್ಯದಿಂದ ನಳಕೂಬರನನ್ನು ವರಿಸಿದಳು. ದೇವಗಾಯಕರಾದ ಹಾಹಾ ಹೂಹೂಗಳು ಕೂಡ ಗಾನವಿದ್ಯೆಯಲ್ಲಿ ನಳನಷ್ಟು ಸಮರ್ಥರಲ್ಲ; ಇದರಿಂದಲೇ ಆಶ್ಚರ್ಯಸೂಚಕವಾದ ಹಾಹಾ, ಹೂಹೂ ಎಂಬ ಹೆಸರುಗಳು ಅವರಿಗೆ ಬಂದುವು. ಧರ್ಮಾಸಕ್ತಚಿತ್ತನಾದ ಬ್ರಹ್ಮನು ತನ್ನ ಭಾರ್ಯೆಯಾದ ವಾಗ್ದೇವಿಯು ಎಲ್ಲಿ ನಳನನ್ನು ವರಿಸುವಳೋ ಎಂಬ ಭಯದಿಂದ ಮೌನವ್ರತವನ್ನವಲಂಬಿಸಿ ಅವಳನ್ನು ತನ್ನ ಬಾಯಿಯಲ್ಲಿಯೇ ಬಿಗಿದಿಟ್ಟಿರುವನು. ಆದರೆ ಈ ಮೊದಲೇ ಆಕೆಯು ಆತನ ಕಂಠವನ್ನು ಆಶ್ರಯಿಸಿರುವುದನ್ನು ಮಾತ್ರ ತಿಳಿಯದಷ್ಟು ಮೂಢನಾಗಿ ಹೋದುದು ಕೇವಲ ಆಶ್ಚರ್ಯವೇ. ಆ ಮಹಾರಾಜನ ಸೌಂದರ್ಯಕ್ಕೆ ಮನ್ಮಥನು ಸಾಟಿಯಲ್ಲ; ಆವನ ಸಂಪತ್ತಿಗೆ ಇಂದ್ರನು ಎಣೆಯಲ್ಲ; ಕ್ಷಾಂತಿಯಲ್ಲಿ ಬುದ್ಧದೇವನನ್ನೂ, ನಿಯತ ಸ್ಥಿತಿಯಲ್ಲಿ ಶೇಷನನ್ನೂ ಮೀರಿಸತಕ್ಕವನು. ಆ ನಳನ ಪರಾಕ್ರಮವಾದರೋ ಸಾಮಾನ್ಯವೆಂದು ತಿಳಿಯಬೇಡ. ಆತನು ಶತ್ರುಗಳೊಡನೆ ಯುದ್ಧ ಮಾಡುವ ಸಮರಾಂಗಣದಲ್ಲಿ ರಕ್ತದ ನದಿಗಳೇ ಹರಿಯುವುವು. ಆವನ ಬಾಣ ಪರಂಪರೆಗಳೆಂಬ ಸರ್ಪಗಳು ಶತ್ರುಗಳ ಪ್ರಾಣವಾಯುವನ್ನು ಹೀರಿ ತೃಪ್ತಿಗೊಳ್ಳುವುವು. ಎಲೈ ಕೋಮಲಾಂಗಿಯೇ! ಆ ಮಹಾರಾಜನ ಸರ್ವ ಗುಣಗಳನ್ನೂ ಎಣಿಸಿ ಹೇಳುವುದು ನನ್ನಿಂದಾಗುವ ಕಾರ್ಯವಲ್ಲ. ನನ್ನಂತಹ ಹಂಸಗಳಿಗೆ ಆ ನಳನ ಅಂತಃಪುರದವರೆಗೂ ಹೋಗಿಬರುವುದಕ್ಕೆ ಯಾರ ಅಡ್ಡಿಯೂ ಇರುವುದಿಲ್ಲ. ನಾನು ಆವನ ಅಂತಃಪುರದ ಸ್ತ್ರೀಯರನ್ನು ಚೆನ್ನಾಗಿ ಅರಿತವನು. ಅವರ ವಿಶ್ವಾಸಕ್ಕೆ ಪಾತ್ರನಾದವನು. ನಾನು ಚತುರ್ಮುಖ ಬ್ರಹ್ಮನಿಂದಲೇ ವಾಙ್ನಿಯಮ ವಿದ್ಯೆಯನ್ನರಿತವನಾದಕಾರಣ ನನ್ನ ಮನಸ್ಸನ್ನು ಸೇರಿದ ಯಾವ ವೃತ್ತಾಂತವೂ ಯಾವ ವಿಧದಿಂದಲೂ ಹೊರಗೆ ಹೊರಡಲಾರದು. ಇದರಿಂದಲೇ ಆ ಸ್ತ್ರೀಯರಿಗೆ ನನ್ನಲ್ಲಿ ವಿಶ್ವಾಸವು. ಕಮಲಿನಿಗೆ ದುರ್ಲಭವಾದ ಚಂದ್ರಿಕೋತ್ಸವವು ಕುಮುದಿನಿಗೆ ದೊರೆತಂತೆ ನೀನು ಆ ನಳನನ್ನು ವರಿಸದೆ ಹೋದರೆ, ಅಲ್ಲಿ ದೊರೆಯುವ ಸ್ವರ್ಗ ಸುಖವು ಅನ್ಯ ಸ್ತ್ರೀಯ ಪಾಲಾಗುವುದು. ಇದು ನನಗೆ ದುಃಖವನ್ನುಂಟುಮಾಡುತ್ತಿರುವುದು. ನೀನು ಆ ನಳನನ್ನು ಕೈಹಿಡಿಯದೆ ಹೋದಲ್ಲಿ ನಿನ್ನ ಈ ಸೌಭಾಗ್ಯವಾಗಲಿ, ಸೌಂದರ್ಯವಾಗಲಿ ಎಲ್ಲವೂ ವ್ಯರ್ಥವೆಂದೇ ತಿಳಿಯುತ್ತೇನೆ. ನಿನಗೆ ಇದುವರೆಗೂ ವಿವಾಹವಾಗದಿರುವುದನ್ನು ಕಂಡರೆ ವಿಧಿಯು ನಿನ್ನನ್ನು ಆತನಿಗಾಗಿಯೇ ಸಂಕಲ್ಪಿಸಿರುವನೆಂದು ಎಣಿಸುತ್ತೇನೆ. ನಿನ್ನ ರೂಪ ಶೀಲಾದಿಗಳನ್ನೆಲ್ಲ ಪರೀಕ್ಷಿಸಿದಲ್ಲಿ ನೀನು ಆತನಿಗೆ ಅನುರೂಪಳೇ ಆಗುವುದರಿಂದ ಆತನನ್ನು ಹೊಂದುವುದೇನೂ ಅಸಾಧ್ಯವೆಂದು ತಿಳಿಯಬೇಡ. ನಿಶೆಗೆ ಚಂದ್ರನೊಡನೆಯೂ ಶಿವೆಗೆ ಶಿವನೊಡನೆಯೂ ಲಕ್ಷ್ಮಿಗೆ ಹರಿಯೊಡನೆಯೂ ಸಂಬಂಧವನ್ನುಂಟುಮಾಡಿದ ಆ ವಿಧಿಯು ಮಹಾ ಸಮರ್ಥ

ನೆಂದೂ ಚಾಪಲ್ಯವೆಂದೂ ಎಣಿಸು. ಆತನು ಅನುರೂಪರಾದ ಸ್ತ್ರೀಪುರುಷರಿಗೂ ಸಂಬಂಧವನ್ನು ಮೊದಲೇ ಕಲ್ಪಿಸುವನು. ಮೃದುವಾದ ಮಲ್ಲಿಗೆಯ ಮಾಲೆಯನ್ನು ದರ್ಭೆಯ ಗುಣದಿಂದ ಕಟ್ಟುವುದು ಹೇಗೆ ಅನುಚಿತವೋ ಹಾಗೆಯೇ ರೂಪ ಸುಶೀಲಾದಿ ಗುಣಗಳಿಗೆ ಪ್ರಮಾಣಭೂತಳಾದ ನಿನಗೆ ನಳನನ್ನು ಬಿಟ್ಟು ಇನ್ನೊಬ್ಬನನ್ನು ವರಿಸುವುದು ಸರ್ವಥಾ ಉಚಿತವಾಗಲಾರದು.

ಎಲೈ! ಸುಂದರಿ! ಹಿಂದೆ ಒಮ್ಮೆ ನಾನು ಬ್ರಹ್ಮನ ರಥವನ್ನು ಎಳೆಯುತ್ತಿರುವ ವೇಳೆ ಸಂದರ್ಭವಶಾತ್ ನಳನಿಗೆ ಉಚಿತಳಾದ ಕನ್ಯೆಯನ್ನು ಎಲ್ಲಿ ಸೃಷ್ಟಿಸಿರುವೆ? ಎಂದು ಆ ಬ್ರಹ್ಮನನ್ನೇ ಕೇಳಿದೆನು. ಅದಕ್ಕೆ ಆತನು 'ದಮಯಂತೀ' ಎಂದು ನಿನ್ನ ಹೆಸರನ್ನೇ ಹೇಳಿದನು. ಲೀಲಾವತಿ! ಆಗ ಆತನು ನಿನ್ನ ಹೆಸರನ್ನೇ ಹೇಳಿದುದು ಉಚಿತವೇ. ಏಕೆಂದರೆ, ಆ ವಿಧಿಯು ಮಹಾ ವಿಚಾರಶೀಲನೆಂದು ಇದುವರೆಗೆ ಪ್ರಸಿದ್ಧನಾಗಿದ್ದನು. ಅಂಥವನು ಏನಾದರೂ ತಪ್ಪುಮಾಡಿ ನಿನ್ನನ್ನು ಅನ್ಯನಿಗೆ ಹೊಂದಿಸಿದ್ದರೆ ಜನರ ದೂರಿನಿಂದ ಆತನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಹೇ ಕೃಶಾಂಗಿ! ಈಗ ಆ ವಿಷಯವು ಹಾಗಿರಲಿ. ನಿನ್ನನ್ನು ನಾನು ಇಷ್ಟು ಹೊತ್ತಿನವರೆಗೆ ಇಲ್ಲಿಯೇ ನಿಲ್ಲಿಸಿ ಏನೇನೋ ಹೇಳಿ ಶ್ರಮವನ್ನುಂಟುಮಾಡಿದ ಅಪರಾಧವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಯಾವ ಪ್ರತ್ಯುಪಕಾರವನ್ನು ಮಾಡಲಿ" ಎಂದು ಆ ದಮಯಂತಿಯ ಮನೋಭಾವವನ್ನು ತಿಳಿಯುವುದಕ್ಕಾಗಿ ಹಂಸನು ನುಡಿದು ಸುಮ್ಮನಾಯಿತು.

ಈಗ ದಮಯಂತಿಯು ಆ ಹಂಸನು ನುಡಿದ ಮಾತಿಗೆ ಹೇಗೆ ಯಾವ ವಿಧವಾಗಿ ಉತ್ತರಕೊಡಬೇಕೆಂದಾಲೋಚಿಸತೊಡಗಿದಳು. ಆಲೋಚನೆ ಎಲ್ಲವೂ ನಿಷ್ಪನ್ನವಾದಮೇಲೆ ಆ ಹಂಸನನ್ನು ಕುರಿತು,—"ಪೂಜ್ಯನೆ! ವಾತಾಹತಿಯಿಂದ ಹೊರಟ ಜಲವೀಚಿಯು ತೀರಸ್ಥಿತನಾದ ನಿನ್ನನ್ನು ಹೊಡೆದು ಉಪದ್ರವಿಸುವಂತೆ ಕೇವಲ ಬಾಲ್ಯದ ಚಾಪಲ್ಯದಿಂದ ನಿನ್ನನ್ನು ಅಟ್ಟಿಕೊಂಡು ಬಂದು ನಿನಗೆ ಶ್ರಮವನ್ನುಂಟುಮಾಡಿದ ನನ್ನ ಅಪರಾಧವನ್ನು ಕ್ಷಮಿಸು. ಮಹಾತ್ಮನೆ! ದರ್ಪಣವು ತನ್ನ ಬಳಿಗೆ ಬರುವ ಪದಾರ್ಥದ ಪ್ರತಿಬಿಂಬವನ್ನು ತಾನು ಧರಿಸುವಂತೆ ನೀನೂ ಕೂಡ ನನ್ನಿಂದ ನಿನಗಾದ ಅಪರಾಧವನ್ನು ನಿನ್ನಲ್ಲಿಯೇ ಆರೋಪಿಸಿಕೊಳ್ಳುತ್ತಿದ್ದೀಯೆ. ಸಾಧುವೆ! [illegible] ನೀನು ಹಂಸನಾದರೂ ಮಹಾ ಜ್ಞಾನಿಯಾದ ಕಾರಣ ಬಾಲ್ಯದ ಚಾಪಲ್ಯದಿಂದ ನಾನು ಮಾಡಿರುವ ಈ ಅನುಚಿತವಾದ ಕಾರ್ಯವನ್ನು ನೀನು ಸರ್ವಥಾ ಸಹಿಸುವೆ, ಎಂದು ಎಣಿಸುತ್ತೇನೆ. ನನ್ನ ಬಂಧುವೆ! ಚಂದ್ರನು ತನ್ನ ಅಮೃತಮಯವಾದ ಕಿರಣಗಳಿಂದ ಸರ್ವ ಜನರ ಕಣ್ಣಿಗೂ ಆಹ್ಲಾದವನ್ನುಂಟುಮಾಡುವ ಆ ಮಹೋಪಕಾರವನ್ನು ಬಿಟ್ಟು ಇನ್ನು ಏನು ಮಾಡತಕ್ಕದ್ದಿರುವುದು! ಅದರಂತೆಯೇ ನನ್ನ ಕಣ್ಣುಗಳಿಗೂ ನಿನ್ನ ದರ್ಶನವನ್ನು ಬಿಟ್ಟು ಇನ್ನೊಂದರಲ್ಲಿ ವಿಶ್ವಾಸವಿರುವುದೆಂದು ಎಣಿಸಬೇಡ. ದ್ವಿಜರಾಜ! ನನ್ನ ಮನೋಭಿಲಾಷೆಯನ್ನು ನಿನಗೆ ಹೇಳುವೆನೆಂದರೆ ಲಜ್ಜೆಯುಂಟಾಗುತ್ತಿದೆ.

ಬಾಲೆಯೊಬ್ಬಳು ತನ್ನ ಬಾಲ್ಯ ಚಾಪಲ್ಯದಿಂದ ಆಕಾಶದಲ್ಲಿರುವ ದ್ವಿಜರಾಜನನ್ನು ಬಯಸಿದಂತೆ ನನ್ನ ಬಯಕೆಯೂ ಇರುವುದು. ಇಂತಹ ಬಯಕೆಯನ್ನು ನಿನ್ನ ಮುಂದೆ ಹೇಗೆ ಹೇಳಲಿ'' ಎಂದು ಸುಮ್ಮನಾಗಲು; ಆ ಹಂಸನು ದ್ರಾಕ್ಷೆಯಂತೆ ಮೃದು ಮಧುರವಾದ ಆಕೆಯ ಮಾತುಗಳನ್ನು ಕೇಳಿ ಸಂತೋಷ ಪಟ್ಟಿತು. ಆದರೆ ಆಕೆಯ ಮಾತುಗಳಿಂದ ಅವಳ ಹೃದಯವೆಲ್ಲವೂ ಸ್ಪಷ್ಟವಾಗದುದರಿಂದ ಅದನ್ನು ಸಂಪೂರ್ಣವಾಗಿ ಗ್ರಹಿಸುವುದಕ್ಕಾಗಿ ತಿರುಗಿ ಹೇಳತೊಡಗಿತು :—

''ರಾಜಕುಮಾರಿ! ಶೂದ್ರನು ವೇದಾಕ್ಷರವನ್ನು ಕೇಳಬಾರದಂತೆ ನಿನ್ನ ಮನೋಭಿಲಾಷೆಯನ್ನೂ ನಾನು ಸ್ಪಷ್ಟವಾಗಿ ತಿಳಿಯಬಾರದೇ? ಸುಮ್ಮನೆ 'ಬಾಲೆಯು ದ್ವಿಜರಾಜನನ್ನು ಬಯಸಿದಂತೆ' ಎಂದು ಏಕೆ ಇನ್ನೂ ಗುಪ್ತವಾಗಿಯೆ ಮಾತಾಡುತ್ತಿರುವೆ? ನಿನ್ನ ಮನಸ್ಸಿನ ಬಯಕೆಯು ಕೈಗೂಡುವುದು ಅಸಾಧ್ಯವೆಂದು ಎಣಿಸಿ ಹೀಗೆ ಹೇಳುವೆಯಾದರೆ ಅದು ತಪ್ಪೆಂದು ಹೇಳುತ್ತೇನೆ. ಮನಸ್ಸಿಗೆ ಕೂಡ ಹೊಂದಲಸಾಧ್ಯವಾದ ಪರಬ್ರಹ್ಮನನ್ನು ಮಹರ್ಷಿಗಳು ತಮ್ಮ ಬುದ್ಧಿ ಯೋಗದಿಂದ ಸಾಧ್ಯವಾಗಿ ಮಾಡಿಕೊಂಡಿರುವರು, ಎಂದು ಆದಮೇಲೆ ನಿನ್ನ ಬಯಕೆಯು ಅಸಾಧ್ಯವೆಂದು ಎಣಿಸುವೆಯಾ? ನಾನೇನೋ ಸುಳ್ಳು ಹೇಳುವೆನೆಂದು ಎಣಿಸಿ ನನ್ನೊಡನೆ ಹೇಳದೆ ಇರುವೆಯಾದರೆ ಆ ನಿನ್ನ ಅಭಿಪ್ರಾಯವು ಕೇವಲ ತಪ್ಪೇ. ಎಂದರೆ ಬ್ರಹ್ಮಲೋಕವಾಸಿಯಾದ ನಾನು ಪಕ್ಷಿಯಾಗಿದ್ದರೂ ಸುಳ್ಳು ಹೇಳತಕ್ಕವನಲ್ಲ. ಪರಬ್ರಹ್ಮನ ಮುಖದಲ್ಲಿರತಕ್ಕ ಶ್ರುತಿಗಳ ಸಮೀಪ ವಾಸಿಸತಕ್ಕ ನಾವು ಸರ್ವಥಾ ಮೃಷಾವಾದಿಗಳಾಗತಕ್ಕವರಲ್ಲ. ದೋಷವಾಗಲಿ ಗುಣವಾಗಲಿ ಎಲ್ಲವೂ ಸಂಸರ್ಗದಿಂದ ಹೆಚ್ಚುವುದೆಂಬ ಈ ಲೋಕವಾರ್ತೆಯು ನಿಜವಾದರೆ ವೇದಗಳ ಸಂಸರ್ಗದಿಂದ ಬದುಕತಕ್ಕ ನಮ್ಮಲ್ಲಿ ಸರ್ವಥಾ ಮಿಥ್ಯಾವಾದವು ಬರಲಾರದೆಂದು ನಂಬು. ಎಲೈ ತನ್ವಂಗಿ! ಹೆಚ್ಚಾಗಿ ಹೇಳುವುದರಿಂದ ಉಪಯೋಗವಿಲ್ಲ; ದ್ವೀಪಾಂತರದಲ್ಲಿರತಕ್ಕ ವಸ್ತುವಾಗಲಿ ಅಥವಾ ಸಮುದ್ರ ಮುದ್ರಿತವಾದ ಲಂಕೆಯಲ್ಲಿರತಕ್ಕ ಪದಾರ್ಥವಾಗಲಿ ಎಲ್ಲವೂ ನಿನ್ನ ಕೈಯೊಳಗೇ ಇರುವುದನ್ನಾಗಿ ನೀನು ತಿಳಿಯಬಹುದು. ಆದುದರಿಂದ ಇನ್ನಾದರೂ ಸಂಕೋಚವನ್ನು ಬಿಟ್ಟು ನಿನ್ನ ಮನಸ್ಸಿನೊಳಗಿನ ಅಭಿಲಾಷೆಯನ್ನು ಹೇಳು'' ಎಂದು ನುಡಿದ ಆ ಹಂಸನ ಮಾತಿಗೆ ಆಕೆಯು ತೃಪ್ತಳಾಗಿ ಲಜ್ಜೆಯಿಂದಲೂ ಸಂತೋಷದಿಂದಲೂ ಮೆಲ್ಲಗೆ ಹೀಗೆ ಹೇಳತೊಡಗಿದಳು :—

''ಅಯ್ಯಾ! ಬಂಧುವೇ! ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ನಿನ್ನೊಡನೆ ಹೇಳುವುದಕ್ಕೆ ಸ್ತ್ರೀಸ್ವಭಾವದಿಂದ ಲಜ್ಜೆಯಾಗುತ್ತಿದೆ. ಆದರೂ ನನ್ನ ವಿಷಯದಲ್ಲಿ ಎದೆಗರಗತಕ್ಕ ನಿನ್ನಂತಹ ಬಂಧುವು ದೊರೆತುದರಿಂದ ಒಂದೆಡೆ ಆನಂದವೂ ಉಕ್ಕಿಬರುತ್ತಿದೆ. ನನ್ನ ಮನಸ್ಸು ಮಹಾರಾಜನಾದ ನಳನನ್ನಲ್ಲದೆ ಲಂಕೆಯನ್ನಾಗಲಿ ಅಥವಾ ಇನ್ನಾವ ಪದಾರ್ಥವನ್ನಾಗಲಿ ಬಯಸುವುದಿಲ್ಲ'' ಎಂದು ಹೇಳಿ ಸುಮ್ಮನಾಗಲು; ಆ ಹಂಸನು—''ಈಕೆಯು ಇನ್ನೂ ಲಜ್ಜೆಯಿಂದ ತನ್ನ

ಮನೋಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವುದಿಲ್ಲವಾಗಿ, ಅವಳ ಲಜ್ಜೆಯನ್ನು ತೊಲಗಿಸಬೇಕು" ಹೀಗೆಂದು ಎಣಿಸಿ—"ರಾಜಕುಮಾರಿ! ನಿನ್ನ ಮಾತಿನ ಅರ್ಥವಾಗಲಿ ನಿನ್ನ ಅಭಿಪ್ರಾಯವಾಗಲಿ ನನಗೆ ತಿಳಿಯದೆ ಹೋಗಲಿಲ್ಲ. ಆದರೂ ಸ್ತ್ರೀಯರ ಆದರಲ್ಲೂ ನಿನ್ನಂತಹ ಬಾಲೆಯ ಚಿತ್ತವು ಕೇವಲ ಚಂಚಲವಾದುದೆಂದು ಅರಿತ ನಾನು ನಿನ್ನ ಚಿತ್ತದ ಸ್ಥೈರ್ಯವನ್ನರಿಯುವುದಕ್ಕಾಗಿಯೇ ಹೀಗೆ ಪ್ರಶ್ನೆಹಾಕಿದೆನೆಂದು ತಿಳಿ. ಆ ನಳನೆಂದರೆ ಭೂಲೋಕದ ಇಂದ್ರನು. ನಿನ್ನ ನಿಜಸ್ಥಿತಿಯನ್ನು ತಿಳಿಯದೆಯೇ ಅವನೊಡನೆ ಪ್ರಾಕೃತ ಜನರಂತೆ ನಿನ್ನ ವಿಚಾರವನ್ನು ಹೇಗೆ ವಿಜ್ಞಾಪಿಸಿಕೊಳ್ಳಲಿ? ಅದಲ್ಲದೆ ನೀನು ನಿನ್ನ ತಂದೆಯ ಆಜ್ಞಾನುಸಾರವಾಗಿ ಅಥವಾ ಸ್ವೇಚ್ಛೆಯಿಂದ ಅನ್ಯ ಪುರುಷನನ್ನು ವರಿಸಿದೆಯಾದರೆ ನಿನಗಾಗಿ ನಾನು ಮಾಡುವ ಪ್ರಯತ್ನವೆಲ್ಲವೂ ವ್ಯರ್ಥವಾಗುವುದಿಲ್ಲವೆ? ಅಲ್ಲದೆ ಆತನಿಗೆ ಮುಂದೆ ನನ್ನ ಕಾರ್ಯದಲ್ಲಿ ನಂಬಿಕೆಯು ಹುಟ್ಟಬಹುದೇ? 'ರಾಜಕುಮಾರಿ! ನೀನು ಈ ವಿಚಾರವನ್ನು ಬಿಟ್ಟು ಬೇರೆ ಯಾವ ಕಾರ್ಯವನ್ನು ನನಗೊಪ್ಪಿಸಿದರೂ ನಿನಗಾಗಿ ಮಾಡುವೆನು. ಇದೊಂದು ವಿಚಾರದಲ್ಲಿ ಮಾತ್ರ ನನಗೆ ನಂಬಿಕೆಯು ಕಾಣದ ಕಾರಣ ನನ್ನನ್ನು ಅದರಲ್ಲಿ ನಿಯೋಗಿಸಬೇಡ" ಎಂದು ಹಂಸವು ಚಮತ್ಕಾರವಾಗಿ ಮಾತಾಡಲು, ರಾಜಪುತ್ರಿಗೆ ಆ ಹಂಸನ ವಾಕ್ಯವು ಕಿವಿಗೆ ಸೇರಿತೋ ಇಲ್ಲವೋ ಎಂಬಂತಿರುವಾಗಲೇ ಅವಳು ತನ್ನ ಶಿರಃಕಂಪನದಿಂದ ಆ ವಾಕ್ಯಕ್ಕೆ ತನ್ನ ಅಸಮ್ಮತಿಯನ್ನು ತೋರಿಸಿ, ತನ್ನನ್ನು ಎಡೆಬಿಡದೆ ಹಿಂದಟ್ಟಿ ಬಾಧಿಸುತ್ತಿದ್ದ ಲಜ್ಜೆಯನ್ನು ಪೂರ್ಣವಾಗಿ ತೊರೆದು ಹೇಳತೊಡಗಿದಳು :—

"ಎಲೈ ಬಂಧುವೇ! ನಿನ್ನ ಮನಸ್ಸಿನೊಳಗಣ ಆ ವಿಧವಾದ ಶಂಕೆಯನ್ನು ಬಿಟ್ಟುಬಿಡು. ನಿಶೆಯು ಯಾವಾಗಲೂ ಚಂದ್ರನನ್ನು ಬಿಟ್ಟು ಇನ್ನೊಬ್ಬನನ್ನು ವರಿಸುತ್ತದೆಯೇ? ಕಮಲಿನಿಯ ಮನಸ್ಸಿನ ರಾಗವನ್ನು ವೃದ್ಧಿಗೊಳಿಸತಕ್ಕದು ಸೂರ್ಯಕಾಂತಿಯಲ್ಲದೆ ಅನ್ಯ ಕಾಂತಿಯೇ? ನಳಮಹಾರಾಜನನ್ನು ಬಿಟ್ಟು ನಾನು ಅನ್ಯರನ್ನು ವರಿಸುವೆನೆಂಬ ಶಂಕೆಯನ್ನು ತಂದುಕೊಂಡ ನಿನ್ನ ಈ ಸಾಹಸಕ್ಕಾಗಿ ನನಗೆ ಆಶ್ಚರ್ಯವಾಗುತ್ತಿದೆ. ಒಮ್ಮೆ ನನ್ನ ತಂದೆಯು ನನ್ನ ಇಚ್ಛೆಗೆ ವಿರೋಧವಾಗಿ ಅನ್ಯರಿಗೆ ಕೊಟ್ಟು ಪಾಣಿಗ್ರಹಣ ಮಾಡಬೇಕೆಂದು ಬಯಸಿದನಾದರೆ ನಾನು ಅಗ್ನಿಯನ್ನು ಪ್ರವೇಶಿಸಿ ಈ ದೇಹವನ್ನು ದಹಿಸಿಬಿಡುವೆನಲ್ಲದೆ ಸರ್ವಥಾ ಇನ್ನೊಬ್ಬನನ್ನು ವರಿಸಲಾರೆನು. ನನ್ನ ಈ ಮಾತನ್ನು ಸತ್ಯವೆಂದೇ ನಂಬು. ನನ್ನ ಶರೀರಕ್ಕೆ ಮಾತ್ರ ನನ್ನ ತಂದೆಯು ಸ್ವಾಮಿಯಲ್ಲದೆ ನನ್ನ ಪ್ರಾಣಗಳಿಗಲ್ಲ. ನನ್ನ ಪ್ರಾಣಗಳಿಗೆ ನಳನೇ ಸ್ವಾಮಿಯು. ಆ ಪ್ರಾಣಗಳು ನನ್ನ ತಂದೆಯಿಂದ ಹುಟ್ಟಿದುವಲ್ಲವಾಗಿ ಈ ವಿಷಯದಲ್ಲಿ ನೀನು ಯಾವ ಸಂದೇಹವನ್ನೂ ಮನಸ್ಸಿಗೆ ತರಬಾರದು. ಆ ಪೂಜ್ಯನಾದ ನಳನ ಪತ್ನಿಯಾಗುವುದೇ ವಿಶೇಷ ಗೌರವವೆಂದು ತಿಳಿದಿರುವೆನು. ಒಂದುವೇಳೆ ನನಗಿಂತ ಉತ್ತಮನು

ಸಿಕ್ಕಿದರೆ ಅವನನ್ನು ವರಿಸಬಾರದೇ? ಎಂದರೆ, ಚಂದ್ರನು ಸುಧಾಕರನೆಂಬ ಹೆಸರಿನಿಂದ ಅಮೃತ ನಿಧಿಯಾಗಿದ್ದರೂ ಕೂಡ ನಳಿನಿಯು ಸೂರ್ಯನನ್ನು ಬಿಟ್ಟು ಆ ಚಂದ್ರನನ್ನು ಪ್ರೀತಿಸುತ್ತದೆಯೆ? ಎಲೈ ಹಿತಕಾರಿಯೆ! ತ್ರೈಲೋಕ್ಯ ಸಾರಭೂತನಾದ ಚಿಂತಾಮಣಿಯು ಲಭ್ಯವಾಗುವಂತಿದ್ದರೂ ಆ ನಳನ ಮುಖಪದ್ಮವೇ ನನಗೆ ಪರಮ ನಿಧಿಯಲ್ಲದೆ ಅನ್ಯಥಾ ಇನ್ನೊಂದನ್ನು ನನ್ನ ಮನಸ್ಸು ಬಯಸದು. ಹೀಗೆ ಪಥಿಕರು, ಚಾರಣರು, ಹಂಸಗಳು, ಬ್ರಾಹ್ಮಣರು ಮೊದಲಾದವರು ಬಂದು ನನ್ನ ಮುಂದೆ ಆ ನಳನ ವರ್ಣನೆ ಮಾಡಿದ್ದರು. ಅಂದಿನಿಂದಲೂ ನನ್ನ ಮನಸ್ಸು ಆತನಲ್ಲಿಯೇ ಸೇರಿದ್ದಿತು. ಈಗ ಆತನನ್ನು ಪಡೆಯುವುದಾಗಲಿ ಅಥವಾ ಆತನಿಗಾಗಿ ಪ್ರಾಣತ್ಯಾಗ ಮಾಡುವುದಾಗಲಿ ಎರಡೂ ನಿನ್ನ ಕೈಯಲ್ಲಿಯೇ ಇರುವುದಾದ ಕಾರಣ ಆತನನ್ನು ನನಗೆ ದೊರಕಿಸಿಕೊಟ್ಟು ನನಗೆ ಪ್ರಾಣದಾನ ಮಾಡಿದ ಪುಣ್ಯವನ್ನು ಕಟ್ಟಿಕೊ. ಈಗ ನನ್ನ ಹೃದಯವನ್ನೇ ನಿನಗೆ ನಿರ್ಲಜ್ಜೆಯಿಂದ ವಿವರಿಸಿ ಹೇಳಿದ ಮೇಲೆಯೂ ನನ್ನ ಮೇಲೆ ಸಂದೇಹವೇ? ಔದಾಸೀನ್ಯವೇ? ಆಶ್ರಿತರ ಮೇಲೆಯೂ ವಾಮತ್ವವನ್ನು ತೋರುವುದೇ? ವಚನಭಂಗವು ನಿನ್ನಂತಹ ಬುದ್ಧಿಶಾಲಿಗಳಿಗೆ ಉಚಿತವೇ? 'ನಿನ್ನ ಇಷ್ಟಾರ್ಥವನ್ನು ಸಲಿಸಿಕೊಡುವೆ'ನೆಂದು ನೀನು ಹಿಂದೆ ಹೇಳಿದ ಮಾತನ್ನು ಮರೆತುಬಿಡಬಹುದೇ? ಹಿಂದೆ ಜೀಮೂತವಾಹನಾದಿಗಳು ತಮ್ಮ ಪ್ರಾಣವನ್ನು ತೆತ್ತು ಅನ್ಯರ ಪ್ರಾಣಗಳನ್ನು ರಕ್ಷಿಸಲು ಪ್ರಯತ್ನಿಸಿರುವರಲ್ಲವೇ? ಹೇ ಪ್ರಾಣದಾತ? ನಿನ್ನಿಂದ ನನಗಾಗತಕ್ಕ ಉಪಕಾರಕ್ಕೆ ಪ್ರತಿಯಾಗಿ ನಾನು ಯಾವ ಉಪಕಾರವನ್ನೂ ಮಾಡಲಾರೆನು. ನಿನ್ನಂತಹ ಸಾಧುಗಳು ಪ್ರತ್ಯುಪಕಾರವನ್ನು ಬಯಸಿ ಉಪಕಾರವನ್ನು ಮಾಡತಕ್ಕವರಲ್ಲವೆಂಬುದು ನಿಜವೇ. ಸತ್ಪುರುಷರು ತಮಗೊಂದು ಕವಡೆಯಷ್ಟು ಉಪಕಾರ ಮಾಡಿದವರನ್ನೂ ಮರೆಯರು. ಆದರೆ ಶ್ರೀಮಂತರು ಇಂತಹ ಉಪಕಾರಗಳನ್ನು ಬಹು ಬೇಗನೆ ಮರೆಯುವರು ಎಂಬುದೇನೋ ನಿಜವೇ. ಆದರೆ, ಸಾಧುಗಳ ಸ್ವಭಾವವು ಹೀಗಲ್ಲ. ಅವರು ಪ್ರತ್ಯುಪಕಾರ ಮಾಡಲಾರದವರಾದರೂ 'ನಾನು ನಿನ್ನವನು. ನಿನ್ನಿಂದ ಉಳಿಸಲ್ಪಟ್ಟವ'ನೆಂಬ ಭಾವನೆಯನ್ನಾದರೂ ಮರೆಯತಕ್ಕವರಲ್ಲ. ದಿಕ್ಪಾಲಕರ ಅಂಶಭೂತನಾದ ನಳನನ್ನು ನಾನು ವರಿಸಿದುದು ದೇವತೆಗಳಿಗೂ ಇಷ್ಟವಾಯಿತೆಂದೇ ನನ್ನ ಭಾವವು; ಇಲ್ಲವಾದರೆ ನನ್ನ ಇಷ್ಟಿಗೆ ಅನುಕೂಲವಾಗಿ ನೀನೇಕೆ ಇಲ್ಲಿಗೆ ಬರಬೇಕು? ನೀನು ಅಕಸ್ಮಾತ್ತಾಗಿ ಇಲ್ಲಿಗೆ ಬಂದುದರಿಂದ ನನ್ನ ವಿರಹವು ಪ್ರಬಲಗೊಂಡಿತಾದರೂ ಅದು ನಿನ್ನಿಂದಲೇ ಶಮನವಾಗುವುದೆಂದು ನಂಬಿರುವೆನು. ಆಪದ್ಬಂಧುವೆ! ನೀನಿನ್ನು ವಿಳಂಬಮಾಡತಕ್ಕುದಲ್ಲ. ವಿಳಂಬ ವಿಚಾರಿಸಬೇಕಾದ ಕಾರ್ಯದಲ್ಲಿ ಮಾತ್ರ ಅಂತಹ ವಿಳಂಬವಿರಬೇಕೇ ಹೊರತು ಈ ಕಾರ್ಯದಲ್ಲಿಲ್ಲ. ಅದಲ್ಲದೆ ಅತ್ಯಂತ ಪ್ರತಿಭಾಶಕ್ತಿಯುಳ್ಳ ನಿನಗೆ ಇಂತಹ ಕಾಲಕ್ಷೇಪದ ಅವಶ್ಯಕತೆಯೂ ಇರುವುದಿಲ್ಲ.

ಅಯ್ಯಾ! ಹಂಸನೆ!! ನೀನು ಸಕಲವನ್ನೂ ತಿಳಿದವನಾದಕಾರಣ ನಿನಗೆ ನಾನು ವಿಶೇಷವಾಗಿ ಹೇಳತಕ್ಕದ್ದೇನೂ ಇರುವುದಿಲ್ಲ. ಆದರೂ ಒಂದು

ಸೂಚನೆಯನ್ನು ಹೇಳುತ್ತೇನೆ, ಕೇಳು. ಆ ನಳನು ಅಂತಃಪುರದಲ್ಲಿರುವ ವೇಳೆ ನನ್ನ ಪ್ರಾರ್ಥನೆಯನ್ನು ಅವನ ಮುಂದೆ ಹೇಳಬೇಡ. ಏಕೆಂದರೆ, ಆ ಕಾಲದಲ್ಲಿ ಅವನು ನನ್ನ ಬೇಡಿಕೆಯನ್ನು ಅಂಗೀಕರಿಸಿದರೂ ತಿರಸ್ಕರಿಸಬಹುದು. ಹೀರುವಿಕೆಯಿಂದ ತೃಪ್ತನಾದವನಿಗೆ ಸುವಾಸನೆಯುಳ್ಳ ಗಂಧ ಯುಕ್ತವಾಗಿಯೂ ಇರುವ ಪಾನವು ಕೂಡ ಹೇಗೆ ರುಚಿಸದೋ ಹಾಗೆಯೇ ತನ್ನ ರಾಣೀವಾಸದಲ್ಲಿದ್ದ ನಳನಿಗೆ ನನ್ನ ವಚನವು ರುಚಿಸದು. ಅದಲ್ಲದೆ ಆತನು ಕೋಪದಿಂದಿರುವಾಗಲೂ ಈ ವಾರ್ತೆಯನ್ನು ಅವನ ಮುಂದೆ ಎತ್ತಬೇಡ. ಏಕೆಂದರೆ ಪಿತ್ತದಿಂದ ದೂಷಿತವಾದ ನಾಲಗೆಗೆ ಸಕ್ಕರೆಯೂ ಕೂಡ ಕಹಿಯಾಗಿ ತೋರುವುದು ಸ್ವಾಭಾವಿಕವೇ. ಆತನು ಅನ್ಯಮನಸ್ಕನಾಗಿರುವಾಗಲೂ ಈ ಅರ್ಥವನ್ನು ಅವನ ಮುಂದೆ ಉಸುರಬೇಡ. ಆ ಕಾಲದಲ್ಲಿ ಅವನು ನಿದ್ರಿಸುವವನಂತೆ ನಿನ್ನ ಮಾತಿನ ಕಡೆಗೆ ಅಲಕ್ಷ್ಯದಿಂದಿರಬಹುದು. ವಿವೇಕಿಯಾದ ನೀನು ಸಮಯವನ್ನು ನೋಡಿ ಈ ಕಾರ್ಯವನ್ನು ಅವನ ಮುಂದೆ ವಿಜ್ಞಾಪಿಸಿಕೊಳ್ಳತಕ್ಕದ್ದು. ಹೀಗೆ ಸಮಯ ಪ್ರತೀಕ್ಷೆಯಿಂದ ವಿಜ್ಞಾಪಿಸಿಕೊಳ್ಳಲು ಕಾಲವಿಳಂಬವಾಗಬಹುದೆಂದು ಸರ್ವಥಾ ಶಂಕಿಸಿಕೊಳ್ಳಬೇಡ. ಚತುರನಾದ ನಿನಗೆ ನನ್ನ ಉಪದೇಶವು ಹಾಸ್ಯಾಸ್ಪದವಾದರೂ ಹೇಳುತ್ತೇನೆ. ಅವಸರವನ್ನು ತಪ್ಪಿ ವಿಜ್ಞಾಪಿಸಿಕೊಂಡು ಕಾರ್ಯಹಾನಿ ಮಾಡಿಕೊಳ್ಳುವುದಕ್ಕಿಂತ ವಿಳಂಬವಾಗಿಯಾದರೂ ಕಾರ್ಯವನ್ನು ಸಾಧಿಸಿಕೊಳ್ಳುವುದೇ ಮೇಲೆಂದು ನನ್ನ ಭಾವವು.”

ದಮಯಂತಿಯು ಈ ಪ್ರಕಾರ ಹೇಳಿ ಸುಮ್ಮನಾಗಲು, ಆ ಹಂಸನು ಈಕೆಗೆ ನಳನಲ್ಲಿ ನಿಶ್ಚಯವಾಗಿಯೂ ಅನುರಾಗವು ಹುಟ್ಟಿರುವುದು, ಎಂದು ನಿರ್ಣಯಿಸಿಕೊಂಡು ಬಹಳ ನಕ್ಕು ಆಮೇಲೆ ಸಂಗಡಲೇ ಮಾತಾಡತೊಡಗಿತು:—“ಅಮ್ಮಾ! ರಾಜಪುತ್ರಿಯೇ!! ಈ ವಿಚಾರದಲ್ಲಿ ನಾನೇನೂ ವಿಶೇಷವಾಗಿ ಮಾಡತಕ್ಕ ಕಾರ್ಯವಿರುವುದಿಲ್ಲ. ಆ ಪಂಚಬಾಣನೇ ಅನುರೂಪರಾದ ನಿಮ್ಮಿಬ್ಬರನ್ನು ಪರಸ್ಪರ ಸೇರುವಂತೆ ಅನುಕೂಲಿಸುವನು. ನಿನ್ನಲ್ಲಿಯೇ ಆಸಕ್ತಚಿತ್ತನಾಗಿರುವ ಆ ನಳನಿಗೆ ನನ್ನ ಮೂಲಕ ಈ ವಾರ್ತೆಯು ಅವನ ಕರ್ಣಪುಟವನ್ನು ತಲುಪಿದರೆ ಸಾಕು; ಕೂಡಲೆ ಅಮೃತಪಾನ ಮಾಡಿದಂತೆ ಎಣಿಸಿ ತಾನು ದೇವತ್ವವನ್ನು ಹೊಂದಿದೆನೆಂದು ಭಾವಿಸಿಕೊಳ್ಳುವನು. ಆತನೂ ಈಗ ನಿನಗಾಗಿ ವಿರಹ ದುಃಖವನ್ನು ಅನುಭವಿಸುತ್ತಿರುವನು. ಈ ವಿಷಯದಲ್ಲಿ ಮನ್ಮಥನು ಅವನಿಗೆ ವಿರೋಧಿಯೇ. ನನ್ನ ರೂಪವೂ ನಳನ ರೂಪವೂ ಸಮಾನವಾಗಿರುತ್ತ, ನಾನು ಮಾತ್ರ ಪರಮೇಶ್ವರನ ಲಲಾಟಾಗ್ನಿಯಿಂದ ದಗ್ಧನಾದೆನು. ಆತನು ಮಾತ್ರ ಹೀಗೆಯೇ ಇನ್ನೂ ಉಳಿದಿರುವನಲ್ಲಾ! ಎಂಬ ಮತ್ಸರದಿಂದ ಮನ್ಮಥನು ಅವನ ದೇಹವನ್ನು ಸದಾ ಸುಡುತ್ತಿರುವನು. ದಮಯಂತಿ! ನೀನು ಅತಿ ದೀರ್ಘವಾದ ಆ ನಳ ಸಂಬಂಧವಾದ ಮನೋರಥಗಳೆಂಬ ಸೋಪಾನಗಳನ್ನು ಸದಾ ಏರುತ್ತ ದಣಿದರೆ, ಆಯಾಸದಿಂದ ಉಂಟಾಗತಕ್ಕ ಬೆವರನ್ನು ಮಾತ್ರ ಆ ನಳನು ಬಹು

ತ್ತಿರುವನೆಂಬುವುದು ಬಹಳ ಆಶ್ಚರ್ಯಕರವಾದ ವಿಷಯವು! ಅದಲ್ಲದೆ ಆತನ ಮುಖವು ಚಂದ್ರನನ್ನು ಹೋಲುತ್ತಿದ್ದು, ಚಂದ್ರನು ಮನ್ಮಥನ ಮಿತ್ರನಾದ ಕಾರಣ ಏಕಾಂತದಲ್ಲಿರುವ ವೇಳೆ ಆತನ ಹೃದಯದ ರಹಸ್ಯವು ಆತನ ಮುಖದಿಂದ ಬಯಲಾಗುತ್ತಿದೆ. ಆತನ ಮನಸ್ಸಿನಲ್ಲಿ ನಿನ್ನಲ್ಲಿಯೇ ಐಕ್ಯವಾಗಿದ್ದುದರಿಂದ ನಿದ್ರೆಯನ್ನು ಕೂಡ ಅನ್ಯಸ್ತ್ರೀಯೆಂಬ ಭಾವನೆಯಿಂದ ಹತ್ತಿರ ಬರಗೊಡುವುದಿಲ್ಲ. ಆತನು ನಿನಗಾಗಿ ಚಿಂತಿಸುತ್ತ ಕಾರ್ಶ್ಯವನ್ನು ಹೊಂದಿದರೂ ಇನ್ನೂ ಲಾವಣ್ಯದಿಂದ ಶೋಭಿಸುತ್ತಲೇ ಇರುವನು. ಆ ನಳನು ಪಾಪಭೀರುವಾಗಿದ್ದರೂ ನಿನ್ನನ್ನು ಸಂಪಾದಿಸುವ ವಿಚಾರದಲ್ಲಿ ತನ್ನ ಸ್ವಭಾವವನ್ನು ಸ್ವಲ್ಪ ಮಾರ್ಪಡಿಸಿ ಅಲ್ಪವಾದ ಪಾಪಕೃತ್ಯಕ್ಕೆ ಕೈಹಾಕುವುದಕ್ಕೂ ಅಂಜದಿರುವಂತೆ ತೋರುತ್ತಿದೆ. ಆ ಮಹಾರಾಜನಿಗೆ ನಿನ್ನ ವಿಯೋಗ ದುಃಖವೇ ಮಿತಿಮೀರುತ್ತ ಬಂದು ಆ ದುಃಖವೆಂಬ ಯಮುನಾ ಪ್ರವಾಹದಲ್ಲಿ ಮೂರ್ಛೆಯೆಂಬುದೊಂದು ದ್ವೀಪವು ಆಶ್ರಯವಾಗಿ ದೊರೆಯದೆ ಹೋಗಿದ್ದರೆ ಮೋಹವೆಂಬ ಪಂಕದಲ್ಲಿ ಮಗ್ನವಾದ ಆ ನಳಕುಂಜರಕ್ಕೆ ಅವಲಂಬನವೇ ದೊರೆಯದೆ ಮುಳುಗಿಹೋಗುವುದೇ ನಿಜವಾಗಿದ್ದಿತು.

ಬಲ್ಲೆ ಕೋಮಲಾಂಗಿಯೇ! ನಳನು ನಿನಗಾಗಿ ಇಂತಹ ಅವಸ್ಥೆಗಳನ್ನು ಅನುಭವಿಸುತ್ತಿದ್ದರೂ ದಶಮಾವಸ್ಥೆಯು ಮಾತ್ರ ಆತನಿಗೆ ಆಕಾಶ ಪುಷ್ಪದಂತೆ ಎಂದಿಗೂ ಲಭ್ಯವಾಗದಿರಲಿ. ಅಮ್ಮಾ, ರಾಜಕುಮಾರಿ! ಈಗ ನನ್ನ ಯಥಾರ್ಥ ವಿಷಯವನ್ನು ಹೇಳುತ್ತೇನೆ ಕೇಳು. ನಿನಗಾಗಿ ಸತತವೂ ದುಃಖಪಡುತ್ತಿರುವ ಆ ನಳನಿಂದಲೇ ನಾನು ಇಲ್ಲಿಗೆ ಕಳುಹಿಸಲ್ಪಟ್ಟವನು. ಇಲ್ಲಿಗೆ ಬಂದ ನಾನು ಸಕಲ ವಿಧಗಳಿಂದಲೂ ನಿನ್ನ ಸ್ವಭಾವವನ್ನು ಪರೀಕ್ಷಿಸಿ ನೋಡಿ ಸಫಲೀಭೂತನಾದೆನು. ಧನ್ಯನಾದೆನು. ವೈದರ್ಭೀ! ನೀನು ಧನ್ಯಳಾದೆ!! ಧೀರೋದಾತ್ತನಾದ ಆ ನಳನ ಮನಸ್ಸನ್ನೂ ನೀನು ಈ ವಿಧವಾದ ನಿನ್ನ ಲಾವಣ್ಯಾದಿ ಸುಗುಣಗಳಿಂದ ಸೆಳೆದ ಮೇಲೆ ಚಂದ್ರಿಕೆಯಿಂದ ಗಂಭೀರವಾದ ಸಮುದ್ರವು ಕ್ಷೋಭೆಗೊಳ್ಳುವುದೆಂದು ಏಕೆ ಆಶ್ಚರ್ಯಪಡಬೇಕು. ಅಮ್ಮಾ! ಚಂದ್ರನಿಂದ ರಾತ್ರಿಯೂ ರಾತ್ರಿಯಿಂದ ಚಂದ್ರನೂ ಶೋಭಿಸುವಂತೆ ನಳನಿಂದ ನೀನೂ, ನಿನ್ನಿಂದ ನಳನೂ ಸದಾ ಶೋಭಿಸುತ್ತೀರಿ. ಪರಮ ಕಾರುಣಿಕನಾದ ಆ ಬ್ರಹ್ಮನು ನಿಶಾ ಶಶಿಗಳನ್ನು ಸದಾ ಸೇರಿಸುತ್ತಿದ್ದುದು, ನಿಮ್ಮಿಬ್ಬರನ್ನು ಹೊಂದಿಸುವುದಕ್ಕಾಗಿ ಮಾಡುತ್ತಿದ್ದ ಅಭ್ಯಾಸವೆಂದು ಈಗ ನನಗೆ ತೋರುವುದು. ನಿನ್ನ ಲೋಚನದ್ವಯಗಳಿಗೆ ಒಬ್ಬ ಚಂದ್ರನಿಂದಲೇ ತೃಪ್ತಿಯುಂಟಾಗದ ಕಾರಣ ಆ ನಳಮುಖ ಚಂದ್ರವು ನಿನ್ನ ಉಭಯ ನೇತ್ರಗಳನ್ನೂ ಮುಂದೆ ತೃಪ್ತಿಪಡಿಸುತ್ತಿರಲಿ. ಅಹೋ! ನಳನ ತಪೋಬೀಜವೆಂಬ ಕಲ್ಪತರು ಬೀಜವು ನಿನ್ನ ಬೆರಳುಗಳ ರೂಪದಲ್ಲಿ ಅಂಕುರಿಸಿ, ಹುಬ್ಬುಗಳ ರೂಪದಲ್ಲಿ ಎಲೆಬಿಟ್ಟು, ತುಟಿಯ ರೂಪದಲ್ಲಿ ಚಿಗುರಿ, ನಿನ್ನ ಹಸ್ತಗಳ ರೂಪದಲ್ಲಿ ಪಲ್ಲವಿಸಿ, ನಿನ್ನ ಮುಗುಳುನಗೆಯ ರೂಪದಿಂದ ಮುಕುಳಿಸಿ,

ನಿನ್ನ ಅವಯವಗಳ ವರ್ಣನದ ರೂಪದಿಂದ ಪುಷ್ಟಿ ಹೊಂದುದಕ್ಕೆ ಉತ್ತಮವಾದ ಫಲವನ್ನೀಯಲಿ. ಎಲೆ ಮುಗ್ಧೆಯೇ! ಸಮಾನಾನುರಾಗವುಳ್ಳ ಯುವ ಯುವತಿಯರ ಸಮಾಗಮವೇ ಅತ್ಯಂತ ಶ್ಲಾಘ್ಯವಾದುದು. ಆ ಮನ್ಮಥನೆಂಬ ಕೌಲಿಕನು ತನ್ನ ಬಾಣವೆಂಬ ತಕ್ಕಳಿಯ ದಂಡಕ್ಕೆ ಚಂದ್ರನೆಂಬ ಕಂಬವನ್ನು ಆತನ ಕಿರಣಗಳೆಂಬ ದಾರದಿಂದ ಕಟ್ಟಿ ನಿಮ್ಮಿಬ್ಬರ ಅನುರಾಗದ ಸಮಾಕರಣವನ್ನು ನಿಶ್ಚಯಿಸುವುದಕ್ಕಾಗಿ ತೂಗುತ್ತಿದ್ದಾನೆ. ಭೀಮಪುತ್ರಿ! ನೀವಿಬ್ಬರೂ ಅನ್ಯೋನ್ಯಾನುರಾಗದಿಂದ ನೈಷಧ ನಗರಿಯ ಉದ್ಯಾನಗಳಲ್ಲಿ ವಿಹರಿಸುತ್ತಿರುವ ವೇಳೆ ವಾಯುವಶದಿಂದ ಅಲ್ಲಾಡಲ್ಪಟ್ಟ ಮರಗಳಿಂದ ಸುರಿದ ಕುಸುಮಗಳು ದೇವತೆಗಳಿಂದ ಸುರಿಯಲ್ಪಟ್ಟ ಪುಷ್ಪವೃಷ್ಟಿಯಂತೆ ನಿಮಗೆ ಆನಂದವನ್ನುಂಟುಮಾಡಲಿ. ಅದಲ್ಲದೆ ಆ ಮನ್ಮಥನೂ ಕೂಡ ತನ್ನ ಪುಷ್ಪಚಾಪದಿಂದ ಜಿತೇಂದ್ರಿಯನಾದ ಆ ನಳನನ್ನು ಗೆಲ್ಲುವುದು ಅಸಾಧ್ಯವೆಂದು ಎಣಿಸಿ ಅದಕ್ಕಾಗಿ ಸದ್ವಂಶದಲ್ಲಿ ಹುಟ್ಟಿದುದಾಗಿಯೂ, ಗುಣಾಧಿಕವಾಗಿಯೂ, ಕೊರಳಿನ ಹಿಂಭಾಗದಲ್ಲಿ ಕಂಠಾಭರಣ ರೂಪದಿಂದ ತೂಗುತ್ತಿರುವ ಪಟ್ಟೆಯ ದಾರವೆಂಬ ಚಾಪ ಲತೆಯನ್ನು ಹೊಂದಿದುದಾಗಿಯೂ ಇರುವ ನಿನ್ನ ದೇಹವೆಂಬ ದೃಢವಾದ ಬಿಲ್ಲನ್ನು ಹೊಂದಿ ಹೆಮ್ಮೆಯಿಂದ ಕುಣಿಯುತ್ತಿದ್ದಾನೆ. ನಿನ್ನ ಕೊರಲೊಳಗಿನ ಮುತ್ತಿನ ಸರಗಳೊಳಗಣ ಮೌಕ್ತಿಕಗಳೆಂಬ ಉಂಡಲಿಗೆಯನ್ನು ಹಿಡಿದು ನಾಭಿಯೆಂಬ ಗುಳಿಕಾ ಸ್ಥಾನವುಳ್ಳ ಆ ಬಿಲ್ಲಿನಲ್ಲಿಟ್ಟು ಕಲಹಂಸವನ್ನು ಹೋಲುತ್ತಿರುವ ಆ ರಾಜಹಂಸನನ್ನು ಎಸೆಯುತ್ತಿರುವನು.''

ಈ ಪ್ರಕಾರ ಆ ಹಂಸನು ದಮಯಂತಿಯೊಡನೆ ಮಾತಾಡುತ್ತಿರುವ ವೇಳೆಗೆ ಸರಿಯಾಗಿ ಅವಳ ಸಖಿಯರು ಅವಳನ್ನು ಹುಡುಕುತ್ತ ಅಲ್ಲಿಗೆ ಬಂದು ಸೇರಿದರು. ಇದನ್ನು ಕಂಡ ಆ ಹಂಸನು 'ನಿನಗೆ ಶುಭವಾಗಲಿ' ಎಂದು ನುಡಿದು ನೆಗೆದು ನಿಷಧ ಕಡೆಗೆ ಹಾರತೊಡಗಿತು. ತನ್ನ ಕ್ಷೇಮಚಿಂತಕನಾದ ಆ ಹಂಸನೆಂಬ ಪ್ರಿಯ ಬಂಧುವನ್ನಗಲಿದುದರಿಂದ ದಮಯಂತಿಯ ಕಣ್ಣಿನಲ್ಲಿ ಧಾರಾಕಾರವಾಗಿ ನೀರಿಳಿಯಹತ್ತಿತು.

ಅತ್ತ ಹಂಸನು ತನ್ನ ರೆಕ್ಕೆಗಳ ಕಂಪನದಿಂದಲೇ ಕಾರ್ಯಸಿದ್ಧಿಯನ್ನು ಸೂಚಿಸುವುದಾಗಿ ನಿಷಧ ದೇಶವನ್ನು ಹೊಕ್ಕು ಅಲ್ಲಿ ನಳನಿಗೆ ಸರ್ವ ವೃತ್ತಾಂತವನ್ನು ತಿಳಿಸಿ ಹೊರಟುಹೋಯಿತು. ಇತ್ತ ದಮಯಂತಿಯು ಬಳಿಗೆ ಬಂದ ಸಖಿಯರಿಗೆ ಈ ವೃತ್ತಾಂತವೊಂದೂ ತಿಳಿಯದ ಕಾರಣ ಅವರು ಆಕೆಯನ್ನು ಸಂತಯಿಸುತ್ತ—'ಅಮ್ಮಾ! ನೀನು ಹೇಗೆ ಈ ಅರಣ್ಯವನ್ನು ಹೊಕ್ಕೆ? ದಾರಿಗಾಣದೆ ಇಲ್ಲಿ ತೊಳಲುತ್ತಿರುವೆಯಾ? ಕಣ್ಣಲ್ಲಿ ಏಕೆ ನೀರು ಸುರಿಯುತ್ತಿದೆ? ಈ ಕಡೆಗೆ ಬಾ' ಎಂದು ಹೇಳಿ ಆಕೆಯನ್ನು ಅರಮನೆಗೆ ಕರೆದುಕೊಂಡುಹೋದರು.

ಎಂಬಲ್ಲಿಗೆ ನೈಷಧೀಯ ಚರಿತೆಯೊಳಗಣ ತೃತೀಯ ಸರ್ಗವು ಮುಗಿದುದು.

ಚತುರ್ಥ ಸರ್ಗವು

ಅತ್ತ ದಮಯಂತಿಗೆ ಯಾವ ದಿನ ಅವಳು ಉಪವನದಲ್ಲಿ ಆ ಹಂಸನನ್ನು ಕಂಡು ಅದರ ಮೂಲಕ ನಳನ ವಾರ್ತೆಯನ್ನು ತಿಳಿದು ಅವನಲ್ಲಿಯೇ ನಟ್ಟ ಮನಸ್ಸುಳ್ಳವಳಾದಳೋ ಅಂದಿನಿಂದ ಅವಳ ಪ್ರಕೃತಿಯೇ ಬೇರೊಂದು ಸ್ಥಿತಿಗೆ ಬರತೊಡಗಿತು. ಅವಳಿಗೆ ಆಹಾರವೇ ರುಚಿಸಲಿಲ್ಲ; ಯಾವಾಗಲೂ ನಳನ ಕಥೆಯನ್ನು ಕೇಳುವುದರಲ್ಲಿಯೇ ಆತುರವುಳ್ಳವಳಾಗಿದ್ದಳು. ಆಮೇಲೆ ಆಕೆಯ ಮುಖದಮೇಲೆ ಒಮ್ಮೆಯೂ ನಗೆಯುಂಟಾದುದನ್ನು ಕಂಡವರಿಲ್ಲ; ಸದಾ ಏನೋ ಭ್ರಾಂತಿಗೊಂಡವಳಂತೆಯೂ, ಮೂಢಳಂತೆಯೂ ತೋರುತ್ತಿದ್ದಳು. ಅವಳ ಬಾಡಿಹೋದ ಮುಖವನ್ನೂ ಅವಳ ಈ ಅವಸ್ಥೆಯನ್ನೂ ಕಂಡು ಅವಳ ಸಖಿಯರೆಲ್ಲ ಚಿಂತೆಯಿಂದ ಕೊರಗುತ್ತಿದ್ದರು. ಆಕೆಯ ಹಸ್ತವಾದರೋ ಕಮಲಗಳಂತೆ ಮೃದುವಾಗಿಯೂ ಸುಂದರವಾಗಿಯೂ ಇದ್ದರೂ ಆಗ ಮಾತ್ರ ನೀರು ಬತ್ತಿಹೋದ ಕೆರೆಯಲ್ಲಿರುವ ಕಮಲಗಳು ಸೂರ್ಯಾತಪದಿಂದ ಬಾಡಿ ಬಳಲುತ್ತಿರುವಂತೆ ಬಾಡಿ ಬಳಲುತ್ತಿದ್ದುವು. ಪಾದಕ್ಕೆ ಒಂದು ಸಣ್ಣ ಮುಳ್ಳು ಚುಚ್ಚಿದ ಮಾತ್ರಕ್ಕೇ ಅದರ ನೋವನ್ನು ಸಹಿಸುವುದು ಅಸಾಧ್ಯವೆಂದಮೇಲೆ ಕೋಮಲಾಂಗಿಯಾದ ಆ ದಮಯಂತಿಯ ಹೃದಯವನ್ನು ಹೊಕ್ಕ ನಳನಿಂದ ಆಕೆಗೆ ಎಷ್ಟು ವ್ಯಥೆಯಾಗಿರಬಹುದೋ ಅದನ್ನು ಊಹಿಸುವುದೂ ಅಸಾಧ್ಯವಾಗಿರುವುದು. ತನ್ನ ಹೃದಯದಲ್ಲಿರುವ ನಳನ ಕಡೆಗೇ ಆಕೆಯ ಧ್ಯಾನವಿದ್ದುದರಿಂದ ಕಣ್ಣಿನ ಮುಂದೆ ಬಂದ ಯಾವ ಪದಾರ್ಥವೂ ಒಮ್ಮೆಯೂ ಅವಳ ಗೋಚರಕ್ಕೇ ಬರುತ್ತಿದ್ದಿಲ್ಲ. ಕಮಲವನ್ನು ಹೋಲುತ್ತಿರುವ ಆಕೆಯ ಕರಚರಣಗಳೂ ಮುಖವೂ ಕೂಡ ಹಿಂದೆ ಕುಡಿದಿರುವ ಸೂರ್ಯ ಕಿರಣವನ್ನು ಉಗುಳುತ್ತಿವೆಯೋ ಎಂಬಂತೆ ಬಲು ಬಿಸಿಯಾದುವು.

ದಮಯಂತಿಯು ಈ ಪ್ರಕಾರ ಸಂತಾಪಪಡುತ್ತ ಕಣ್ಣೀರು ಸುರಿಸುತ್ತಿರುವಾಗ ಆಕೆಯ ಸಖಿಯರೆಲ್ಲರೂ ಇವಳ ಈ ಅವಸ್ಥೆಯನ್ನು ಕಂಡು, ಈಕೆಗೆ ನಳನಲ್ಲಿ ಮನಸ್ಸು ನಾಟಿರುವುದೆಂದೂ ಆ ವಿರಹದಿಂದಲೇ ಈಕೆಯು ದುಃಖಿಸುತ್ತಿರುವಳೆಂದೂ ನಿಶ್ಚಯಿಸಿಕೊಂಡರು. ಅವಳನ್ನು ಸಂತಯಿಸುವುದಕ್ಕಾಗಿ ವಿವಿಧವಾದ ಉಪಚಾರಗಳನ್ನು ಮಾಡತೊಡಗಿದರು. ಆಕೆಯು ತಲೆಬಾಗಿಸಿಕೊಂಡು ಕಣ್ಣೀರಿಡುತ್ತಿರುವ ವೇಳೆ ಅವಳ ಕಣ್ಣೀರಿನಿಂದ ಒದ್ದೆಯಾದ ವಕ್ಷಸ್ಸಿನ ಮೇಲೆ ಮುಖ ಕಣ್ಣು ಮತ್ತು ತುಟಿಗಳು ಪ್ರತಿಬಿಂಬಿಸುತ್ತಿರುವಾಗ ಮನ್ಮಥನು ಕಮಲ, ನೈದಿಲೆ ಮತ್ತು ಬಂಧೂಕ ಪುಷ್ಪಗಳಿಂದಾದ ನೂತನವಾದ ಪಂಚಬಾಣಗಳನ್ನು ಅವಳ ಎದೆಗೆ ನಾಟಿಸಿದನೋ ಎಂಬಂತೆ ತೋರುತ್ತಿದ್ದಿತು.

ಈ ಪ್ರಕಾರ ದಮಯಂತಿಯು ನಳನ ಸಂಬಂಧವಾದ ವಿರಹದಿಂದ ಪರಿತಪಿಸುತ್ತಿರುವಲ್ಲಿ ಆಕೆಯ ಸಖಿಯರೂ ದಾಸಿಯರೂ ಆಕೆಗೆ ಶೈತ್ಯೋಪಚಾರವನ್ನು ಮಾಡುವುದರಲ್ಲಿಯೂ ಸಮಾಧಾನೋಕ್ತಿಗಳನ್ನು ಹೇಳುವುದರಲ್ಲಿಯೂ ತತ್ಪರ

ರಾಗಿದ್ದಳು. ಕನ್ಯಾಂತಃಪುರದಲ್ಲಿ ಇದೇ ಒಂದು ಗದ್ದಲವಾಗಿ ಪರಿಣಮಿಸಿರಲು ಭೀಮಭೂಪಾಲಕನು ಆ ಮಾರ್ಗವಾಗಿ ಹೋಗುತ್ತ, ಅದೇನೆಂದು ತಿಳಿಯು ವುದಕ್ಕಾಗಿ ಅಂತಃಪುರವನ್ನು ಹೊಕ್ಕನು. ಆಗ ಅಲ್ಲಿ ಕನ್ಯಾಂತಃಪುರಾಧಿಕಾರ ದಲ್ಲಿದ್ದ ಒಬ್ಬ ವೃದ್ಧ ಮಂತ್ರಿಯೂ, ಒಬ್ಬ ವೈದ್ಯನೂ ರಾಜನಿಗೆ ಇದಿರಾಗಿ ಬಂದು 'ಮಹಾರಾಜ! ಈಗ ನಿನ್ನ ಪುತ್ರಿಗೆ ಒಂದು ವಿಧವಾದ ಸಂತಾಪವುಂಟಾ ಗಿರುವುದು. ಆ ಸಂತಾಪವನ್ನು ಪರಿಹರಿಸತಕ್ಕ ಔಷಧವು ಸುಶ್ರುತನಲ್ಲಾಗಲಿ, ಚರಕನಲ್ಲಾಗಲಿ ದೊರೆಯುವಂತಿಲ್ಲ. ಅದಕ್ಕೆ ಸರಿಯಾದ ಔಷಧವಾವುದೆಂದರೆ ನಳನೊಡನೆ ಈಕೆಯನ್ನು ಸಂಘಟಿಸುವುದೇ ಇದಕ್ಕೆ ತಕ್ಕ ಮದ್ದು' ಹೀಗೆ ಹೇಳಿ ಅವರು ಸುಮ್ಮನಾಗಲು, ಭೀಮರಾಜನ ಮನಸ್ಸಿಗೆ ಶಂಕೆಯುಂಟಾಯಿತು. ಮಂತ್ರಿಯೂ, ವೈದ್ಯನೂ ಹೇಳಿದ ವಾಕ್ಯವು ಒಂದೇ ಆಗಿದ್ದರೂ ಅರ್ಥದಲ್ಲಿ ಮಾತ್ರ ವ್ಯತ್ಯಾಸವಿತ್ತು. ಮಂತ್ರಿಯು ಹೇಳಿದ ಮಾತಿಗೆ "ಚೆನ್ನಾಗಿ ಅರಿತಿರುವ ಚಾರಕನ ಮೂಲಕ ಈಕೆಯು ನಳನನ್ನು ಬಯಸುತ್ತಿರುವಳೆಂದು" ಅರಿತಿರುವೆ ನೆಂದೂ, ವೈದ್ಯನು ಹೇಳಿದ ಮಾತಿಗೆ * "ಈಕೆಯ ಸಂತಾಪಕ್ಕೆ ಸಂತಾಪ ಹಾರಕವಾದ 'ನಳದ'ವೆಂಬ ತೃಣವಿಶೇಷವನ್ನು ಬಿಟ್ಟು ಇನ್ನಾವ ಚಿಕಿತ್ಸೆಯೂ ಸುಶ್ರುತನಲ್ಲಾಗಲಿ, ಚರಕನಲ್ಲಾಗಲಿ ದೊರೆಯಲಾರದು" ಎಂದರ್ಥವಾಗಿದ್ದರೂ ಆ ರಾಜನಿಗೆ ಆ ಅರ್ಥವಿಶೇಷವೊಂದೂ ಕಿವಿಯ ರಂಧ್ರವನ್ನೇ ಪ್ರವೇಶಿಸಲಿಲ್ಲ. ಮಗಳಿಗೆ ಸಂತಾಪವೆಂದು ಕೇಳಿದ ಮಾತ್ರಕ್ಕೆ ನೂರಾರು ವಿಧವಾಗಿ ಚಿಂತಿಸ ತೊಡಗಿದನು.

ತಂದೆಯು ಕನ್ಯಾಂತಃಪುರಕ್ಕೆ ಬಂದಿರುವನೆಂದು ಕೇಳಿದ ಮಾತ್ರಕ್ಕೆ ದಮಯಂತಿಯು ಲಗುಬಗೆಯಿಂದೆದ್ದು ತನ್ನ ವಿರಹದುಃಖವನ್ನು ಮರೆಮಾಚಿ ಕೊಂಡು ಪಿತನ ಬಳಿಗೆ ಹೋಗಿ ತಂದೆಗೆ ವಂದಿಸಿದಳು. ಮಹಾಪ್ರಾಜ್ಞನಾದ ಭೀಮಭೂಪಾಲಕನಿಗೆ ಮಗಳ ಮುಖವನ್ನು ನೋಡಿದ ಮಾತ್ರಕ್ಕೆ ಅವಳ ಅಂತರಂಗವು ತಿಳಿದು, ನಮಸ್ಕರಿಸಿದ ಮಗಳ ಮುಖವನ್ನು ಎತ್ತಿ 'ಪ್ರಿಯ ಪುತ್ರಿಯೆ! ನಿನ್ನ ಮನೋಗತವೆಲ್ಲವೂ ನನಗೆ ತಿಳಿಯಿತು. ಇನ್ನು ಸ್ವಲ್ಪ ದಿವಸ ದಲ್ಲಿಯೇ ನೀನು ನಿನಗನುರೂಪನಾಗಿಯೂ ಗುಣಾಢ್ಯನಾಗಿಯೂ ಇರುವ ಪತಿಯನ್ನು ಸ್ವಯಂವರದಲ್ಲಿ ವರಿಸುವೆ' ಎಂದು ಆಶೀರ್ವದಿಸಿ, ಆಕೆಯ ಸಖಿ ಯರನ್ನು ಕರೆದು 'ಮುಂದೆ ಬರುವ ವಸಂತರ್ತುವಿನಲ್ಲಿ ನಿಮ್ಮ ಗೆಳತಿಗೆ ಸ್ವಯಂ ವರವು ನಡೆಯುವುದು. ಆವರೆಗೆ ಇವಳ ಸಂತಾಪವನ್ನು ಉಪಚಾರಗಳಿಂದ ಪರಿಹರಿಸುತ್ತಿರಿ' ಎಂದು ನುಡಿದು ಹೊರಟುಹೋದನು.

ಭೀಮಭೂಪಾಲಕನು ಕನ್ಯಾಂತಃಪುರದಿಂದ ಹೊರಟುಹೋದನು. ದಮಯಂತಿಗೆ ತಂದೆಯ ಮಾತಿನಿಂದ ಮನಸ್ಸಿಗೆ ಸಮಾಧಾನವಾಗಿ ಆನಂದ

* ದೇವಾಕರ್ಣಯ ಸುಶ್ರುತೇನ ಚರಕಸ್ಯೋಕ್ತೇನ ಜಾನೇಖಿಲಂ |
ಸ್ಯಾದಸ್ಯಾ ನಳದಂ ವಿನಾ ನ ದಳನೇ ತಾಪಸ್ಯ ಕೋಪಿಕ್ಷಮಃ ||

ವಾದರೂ ಲಜ್ಜೆಯ ದೆಸೆಯಿಂದ ಅದನ್ನು ಪ್ರಕಾಶಪಡಿಸಲು ಮಾತ್ರ ಸಾಧ್ಯವಾಗಲಿಲ್ಲ. ಆದರೂ ಆಕೆಯು ಮುಂದೆ ವಸಂತಋತುವಿನವರೆಗೆ ಹಿಂದಿನಷ್ಟು ಚಿಂತೆಗೆ ಗುರಿಯಾಗದೆ ಕಾಲಯಾಪನೆ ಮಾಡುತ್ತಿದ್ದಳು.

ಎಂಬಲ್ಲಿಗೆ ನೈಷಧೀಯ ಚರಿತೆಯೊಳಗಣ ಚತುರ್ಥ ಸರ್ಗವು ಮುಗಿಯಿತು.

ಪಂಚಮ ಸರ್ಗವು

ಇತ್ತ ವಸಂತಕಾಲವೂ ಬಂದಿತು; ಭೀಮರಾಜನು ಮಗಳ ಸ್ವಯಂವರಕ್ಕಾಗಿ ಸನ್ನಾಹಗಳನ್ನು ಮಾಡುತ್ತಿರಲು ನೆರೆಹೊರೆಯ ರಾಜರಿಗೆಲ್ಲ ಆಳುಗಳೂ ಪತ್ರಗಳೂ ಹೋಗತೊಡಗಿದುವು. ರಾಜಕುಮಾರರೂ ಈ ವಾರ್ತೆಯನ್ನು ಕೇಳಿ ಮೆಲ್ಲ ಮೆಲ್ಲನೆ ಕುಂಡಿನಪುರಕ್ಕೆ ಬರತೊಡಗಿದರು. ಈ ನಡುವೆ ಅತ್ತ ದೇವರ್ಷಿಯಾದ ನಾರದನು ಇಂದ್ರನನ್ನು ನೋಡುವ ಉದ್ದೇಶದಿಂದ ಅಮರಾವತಿಯನ್ನು ಕುರಿತು ತೆರಳಿದನು. ಅವನ ಮಿತ್ರನಾದ ಪರ್ವತನೂ ಅವನ ಜತೆಯಲ್ಲಿಯೇ ಹೊರಟನು. ಈ ಪ್ರಕಾರ ಈ ಮುನಿಗಳು ದೇವತೆಗಳಿಗೂ ಬೇಕಾಗಿದ್ದ ವಿಮಾನ ಮೊದಲಾದುವುಗಳ ತೊಡಕಿಲ್ಲದೆ ಕೇವಲ ತಮ್ಮ ತಪಸ್ಸಾಮರ್ಥ್ಯದಿಂದಲೇ ಮೇಲಕ್ಕೆ ಏರಿ ಹೋಗುತ್ತಿರುವಾಗ ಅಲ್ಲಲ್ಲಿ ವಿಮಾನವಾಸಿಗಳಾಗಿದ್ದ ದೇವತೆಗಳು ಈ ನಾರದ ಪರ್ವತರನ್ನು ಕಂಡು ಇವರಿಗೆ ಅತಿಥಿಸತ್ಕಾರವನ್ನು ಮಾಡಬಗೆದರೂ ನಾರದನಿಗೆ ಇಂದ್ರಭವನವನ್ನು ಸೇರುವ ಆತುರವಿದ್ದುದರಿಂದ ಅದಕ್ಕೆ ಆಸ್ಪದ ಕೊಡದೆ ಮುಂದಕ್ಕೆ ಸಾಗುತ್ತಿದ್ದನು. ಸೂರ್ಯನೂ ಕೂಡ ಈ ಮಹರ್ಷಿಯನ್ನು ಕಾಯಿಸುವುದಕ್ಕೆ ಹೆದರಿ ತನ್ನ ಕಿರಣವನ್ನು ಹಿಂದಕ್ಕೆ ಸೆಳೆದನೋ ಎಂಬಂತೆ ಸೂರ್ಯಕಾಂತಿಯು ಈ ತಪಸ್ವಿಗಳ ಮೇಲೆ ಚಂದ್ರ ಕಿರಣದಂತೆ ತಣ್ಣಗೆ ಬೀಳುತ್ತಿದ್ದಿತು. ಈ ಪ್ರಪಂಚದಲ್ಲಿ ಸರ್ವರೂ ತಾವು ಮಾಡಿದ ಕರ್ಮಫಲವನ್ನು ತಾವೇ ಅನುಭವಿಸುವರು ಎಂಬುದಕ್ಕೆ ದೃಷ್ಟಾಂತವಾಗಿ ಹಿಂದೆ ಸೂರ್ಯನು ದ್ವಿಜರಾಜನೊಬ್ಬನನ್ನು ತನ್ನ ಕರಗಳಿಂದ ತಿರಸ್ಕರಿಸಿದ್ದನು. ಅದರ ಫಲವಾಗಿ ಈಗ ತಾನು ಒಬ್ಬ ದ್ವಿಜರಾಜನ ಕರಗಳಿಂದ ತಿರಸ್ಕೃತನಾದನು. ಅಲ್ಲಿ ಮುಂದೆ ಹೋಗುತ್ತಿರುವಾಗ ಆಕಾಶಗಂಗೆಯು ಇದಿರಿಗೆ ಬಂದಿತು. ಆ ನದಿಯು ಈ ಮಹರ್ಷಿಯನ್ನು ಕಂಡು ತನ್ನ ತೀರದಲ್ಲಿ ಬೆಳೆದ ದರ್ಭೆಗಳಿಂದ ವಿಷ್ಟರವನ್ನೂ, ನೀರಿನಿಂದ ಪಾದ್ಯವನ್ನೂ, ಅಲ್ಲಿರುವ ವೃಕ್ಷಲತಾದಿಗಳ ಫಲಪುಷ್ಪಗಳಿಂದ ಅರ್ಘ್ಯವನ್ನೂ, ಪದ್ಮಗಳಿಂದ ಸ್ರವಿಸುತ್ತಿರುವ ಮಕರಂದಗಳಿಂದ ಮಧುಪರ್ಕವನ್ನೂ ಅರ್ಪಿಸಿ, ಇವರಿಬ್ಬರನ್ನೂ ಸತ್ಕರಿಸಿದಂತೆ ತೋರಿತು.

ಈ ಪ್ರಕಾರ ತೋರುತ್ತಿದ್ದ ಆ ಆಕಾಶಗಂಗೆಯನ್ನು ದಾಟಿ ಮತ್ತೂ ಮುಂದೆ ಹೋಗುತ್ತಿರುವಾಗ ಅಲ್ಲಿಯೇ ಇಂದ್ರಭವನವೂ ಬಂದಿತು. ಜಿತೇಂದ್ರಿ

ಪುರಾಣ ಮುನಿಗಳು ಅನಾಯಾಸದಿಂದ ಸಂಸಾರ ಸಾಗರವನ್ನು ದಾಟಿ ಪರಮಾನಂದ ಸ್ವರೂಪನಾದ ಪರಮಾತ್ಮನನ್ನು ಸೇರುವಂತೆ ಆ ಉಭಯ ಯೋಗಿಗಳೂ ಈಗ ಇಂದ್ರಭವನವನ್ನು ಸೇರಿದರು. ದೇವೇಂದ್ರನು ಈ ಮಹರ್ಷಿಗಳನ್ನು ಕಂಡ ಮಾತ್ರಕ್ಕೆ ಇವರನ್ನು ತಕ್ಕ ಉಪಚಾರಗಳಿಂದ ಪೂಜಿಸಿದನು. ಇವರಿಬ್ಬರಲ್ಲಿ ನಾರದನು ವಯಸ್ಸಿನಲ್ಲಿಯೂ ಜ್ಞಾನದಲ್ಲಿಯೂ ಹಿರಿಯನಾದ ಕಾರಣ ಆತನಿಗೆ ಪ್ರಥಮ ಪೂಜೆಯು ಸಂದಿತು. ಎರಡನೆಯದಾಗಿ ಪರ್ವತನಿಗೆ ಪೂಜೆ ಮಾಡಿದನು. ಈ ಪರ್ವತನು ಇಂದ್ರನ ಹಗೆಗಳಾದ ಪರ್ವತಗಳ ಸನಾಮನಾಗಿದ್ದರೂ ಅತಿಥಿ ಮತ್ತು ಬ್ರಾಹ್ಮಣನೆಂಬ ಭಾವದಿಂದ ವಿಬುಧನಾದ ಆತನು ಇವನನ್ನೂ ತಕ್ಕ ರೀತಿಯಿಂದಲೇ ಸತ್ಕರಿಸಿದನು.

ಉಪಚಾರಗಳೆಲ್ಲವೂ ಮುಗಿದುವು. ಆಗ ಇಂದ್ರನು ತನ್ನ ಸಭ್ಯರನ್ನೆಲ್ಲ ಮೌನದಿಂದಿರುವಂತೆ ಆಜ್ಞಾಪಿಸಿ, ದಿವ್ಯವಾದ ಕಥೆಗಳಿಗೂ ಲೋಕ ವೃತ್ತಗಳಿಗೂ ಆಕರಪ್ರಾಯನಾದ ನಾರದನನ್ನು ಕಂಡು—'ಎಲೈ ಮಹರ್ಷಿಯೇ! ನೀನರಿಯದ ಪ್ರಪಂಚವೇ ಇಲ್ಲ. ಆದುದರಿಂದ ನಿನ್ನ ವೃತ್ತಾಂತಗಳಿಂದ ನನ್ನ ಮನಸ್ಸಿಗೆ ಆನಂದವನ್ನುಂಟುಮಾಡು' ಎನಲು ವಿನೋದಪರನಾದ ಈ ಮಹರ್ಷಿಗೆ ಬೇಕಾದುದೂ ಅದುವೇ ಆದುದರಿಂದ ಮಾತಿನ ಮೇಲೆ ಮಾತುಗಳು ಹೊರಟುವು; ಆಗ ಇಂದ್ರನು—'ಮಹರ್ಷಿಯೇ! ಈ ಕಾಲದ ರಾಜವಂಶಗಳಲ್ಲಿ ಪೂರ್ವದಂತೆ ಉತ್ತಮಾಂಕುರಗಳು ಜನಿಸುವುದಿಲ್ಲವೇ? ಹಿಂದೆ ಇದ್ದ ರಾಜರು ಯುದ್ಧದಲ್ಲಿ ಶತ್ರುಗಳಿಂದ ಗಾಯಪಟ್ಟು ಪಾರ್ಥಿವ ವಿಕಾರವಾದ ತಮ್ಮ ಸ್ಥೂಲ ಶರೀರವನ್ನು ಭೂಮಿಯಲ್ಲಿಯೇ ಬಿಟ್ಟು ಸ್ವರ್ಗಕ್ಕೆ ಬಂದು ನನ್ನ ಆತಿಥ್ಯವನ್ನು ಸ್ವೀಕರಿಸುತ್ತಿದ್ದರು. ಈಗ ಕೆಲವು ದಿನಗಳಿಂದ ಅಂತಹ ಅತಿಥಿಗಳು ದೊರೆಯದ ಕಾರಣ ನನ್ನ ಸಂಪತ್ತೆಲ್ಲವೂ ನನ್ನ ಉದರಭರಣಕ್ಕಾಗಿಯೇ ಆದಂತೆ ನನಗೆ ಜುಗುಪ್ಸೆಯುಂಟಾಗುವುದು. ಪ್ರತಿಯೊಬ್ಬನಿಗೂ ಪೂರ್ವ ಪುಣ್ಯ ವಶದಿಂದಲೇ ಸಂಪತ್ತು ದೊರೆಯತಕ್ಕುದು; ಈ ಸಂಪತ್ತು ವಿಪತ್ತನ್ನೇ ತಂದೊಡ್ಡುವ ಕಾರಣ ಅಂತಹ ವಿಪತ್ತುಗಳಲ್ಲಿ ಆ ಸಂಪತ್ತನ್ನು ವಿದ್ಯಾ, ವೃತ್ತ, ತಪಸ್ಸಂಪನ್ನಗಳಾದ ಪಾತ್ರಗಳ ಅಧೀನವಾಗಿಮಾಡುವುದು, ಆ ವಿಪತ್ತನ್ನು ಪರಿಹರಿಸತಕ್ಕ ಶಾಂತಿಯು. ಅಂತಹ ಶಾಂತಿಯಿಂದ ಅವನ ಸುಕೃತವು ಹೆಚ್ಚುವುದೇ ಹೊರತು ಕಡಿಮೆಯಾಗಲಾರದು. ಮಹರ್ಷಿಯೇ! ಈ ವಿಚಾರಮಾಡಿದಷ್ಟು ನನ್ನ ಸಂಶಯವು ಹೆಚ್ಚುತ್ತ ಬರುವುದಲ್ಲದೆ ಕಡಿಮೆಯಾಗುವುದಿಲ್ಲ; ಇದರಿಂದ ರಾಜರು ಸ್ವರ್ಗಕ್ಕೆ ಬಾರದ ಕಾರಣವನ್ನು ನನಗೆ ಸ್ಪಷ್ಟವಾಗಿ ಹೇಳಬೇಕು' ಎಂದು ನುಡಿದು, ನಾರದನು ಏನು ಹೇಳುತ್ತಾನೋ ನೋಡಬೇಕೆಂದು ಆತನ ಮುಖವನ್ನು ನೋಡುತ್ತ ಕುಳಿತನು.

ಇಂದ್ರನ ಬಳಿಯಲ್ಲಿ ಕುಳಿತಿರುವವನಾದರೂ ಸಹಸ್ರಾಕ್ಷನು ಇಷ್ಟು ನಮ್ರನಾಗಿ ನುಡಿದುದನ್ನು ಕೇಳಿ ನಾರದನು ಸಂತೋಷದಿಂದ ಗದ್ಗದ ಸ್ವರ

ದೊಡನೆ ಮುಗುಳು ನಗೆ ನಗುತ್ತ ಹೇಳತೊಡಗಿದನು:—"ಎಲೈ! ಇಂದ್ರನೇ! ಬಹು ಕಷ್ಟಪಟ್ಟು ಸಂಪಾದಿಸಿದ ಅಧಿಕಾರದಲ್ಲಿ ದಾತೃತ್ವವನ್ನು ತೋರುವುದೆಂದರೆ ಬಹು ದುರ್ಲಭವೇ. ನೀನಾದರೋ ಬಹು ಕಷ್ಟಪಟ್ಟು ಮಾಡಿದ ಯಾಗಶತಗಳಿಂದ ಈ ಐಶ್ವರ್ಯವನ್ನು ಸಂಪಾದಿಸಿದ್ದರೂ ಈ ಸಂಪತ್ತನ್ನೆಲ್ಲ ಅರ್ಥಿಗಳ ವಶಮಾಡಬೇಕೆಂಬ ನಿನ್ನ ಔದಾರ್ಯವನ್ನು ಕಂಡರೆ ಯಾಚಕರೇ ಯಾಚನೆಯ ದುಃಖವನ್ನರಿತಿರುವರೆಂಬ ಲೋಕೋಕ್ತಿಯು ನಿಜವೆಂದೇ ನನಗೆ ತೋರುವುದು. ಅದಲ್ಲದೆ ನಿನ್ನ ಸಂಪತ್ತು ಯಾಚನೆಗೆ ದೂರವಾಗಿದ್ದರೂ ವಿನಯವನ್ನು ಮಾತ್ರ ಬಿಟ್ಟಿರುವುದಿಲ್ಲ. ಇದು ಲೋಕ ವಿರುದ್ಧವೆಂದೇ ನನ್ನ ಭಾವವು. ಎಲೈ ಇಂದ್ರನೇ! ನಿನ್ನಲ್ಲಿಯೂ ಐಶ್ವರ್ಯ ಹುಟ್ಟಿನ ವಿನಯವಿದೆ ಎಂದು ಈಗಲೇ ನನಗೆ ತಿಳಿಯಿತು. ಪೂರ್ವಪುಣ್ಯದಿಂದ ದೊರೆತ ಸಂಪತ್ತನ್ನು ಅತಿಥಿಗಳಿಗೂ ಹಂಚಿ ಪರೋಪಕಾರವಮಾಡುತ್ತಿರುವೆನಲ್ಲದೆ ಅದನ್ನೆಲ್ಲ ನನ್ನ ಹಿತಕ್ಕಾಗಿಯೇ ಉಪಯೋಗಿಸುವೆನೆಂದು ತಿಳಿದಿರುವುದು ಶ್ರೇಯಸ್ಕರವಲ್ಲವೆಂಬ ಭಾವನೆಯು ನಿನ್ನಲ್ಲಿರುವುದರಿಂದ ನೀನು ಬಹಿರಂಗದಲ್ಲಿ ಮಾತ್ರ ಸಹಸ್ರಾಕ್ಷನಲ್ಲ; ಅಂತರಂಗದಲ್ಲಿಯೂ ಸಹಸ್ರಾಕ್ಷನೆಂದೇ ತಿಳಿಯುವೆನು. ಎಲೈ ಇಂದ್ರನೇ! ಇಂತಹ ವಿನಯಯುಕ್ತವಾದ ಸಂಪತ್ತು ನಿನ್ನಲ್ಲಿ ಇರುವುದರಿಂದ ನೀನು ಅನಂತಕಾಲ ಈ ಸ್ವರ್ಗವನ್ನು ಪಾಲಿಸುತ್ತ ಸುಖದಿಂದಿರು.

ಸುರಪಾಲಕ! ಈಗ ನೀನು ಕೇಳಿರುವ ಪ್ರಶ್ನೆಗೆ ಉತ್ತರ ಕೊಡುವೆನು. ಯುದ್ಧದಲ್ಲಿ ಕ್ಷತವಿಕ್ಷತರಾಗಿ ತಮ್ಮ ತಮ್ಮ ಮೈಯಿಂದ ಸುರಿಯುತ್ತಿರುವ ರಕ್ತದಿಂದ ಪಾಪವನ್ನೆಲ್ಲ ತೊಳೆದುಕೊಂಡು ಯಾರು ಸ್ವರ್ಗಾರೋಹಣವನ್ನು ಮಾಡತಕ್ಕವರೋ ಆ ತರುಣರೆಲ್ಲರೂ ಈಗ ಅತ್ಯಂತ ಆನಂದಪ್ರದವಾದ ಒಂದಾನೊಂದು ಕಾರ್ಯದಲ್ಲಿ ತೊಡಗಿರುವರು. ಇದೇ ಅವರ ಸ್ವರ್ಗಾರೋಹಣಕ್ಕೆ ತೊಡಕಾಗಿರುವುದು. ಭೂಮಿಯಲ್ಲಿ ವಿದರ್ಭದೇಶದ ಭೀಮಭೂಪಾಲಕನೆಂಬವನೊಬ್ಬ ಧಾರ್ಮಿಕನಾದ ರಾಜನಿರುವನೆಂದು ಕೇಳಿಬಲ್ಲೆಯಾ? ಆತನ ಕುಮಾರಿಯಾದ ದಮಯಂತಿಯು ಭೂಮಿಗೇ ಭೂಷಣಪ್ರಾಯವಾದ ಅಮೂಲ್ಯ ಕನ್ಯಾರತ್ನವು. ಆಕೆಯು ಈಗ ಯೌವನಕ್ಕೆ ಬಂದಿದ್ದು ನೂತನ ಸೌಂದರ್ಯಯುಕ್ತಳಾಗಿರುವ ಕಾರಣ ಯೌವನಸ್ಥರೆಲ್ಲರೂ ಆ ವಿದರ್ಭನಗರದಲ್ಲಿ ಸೇರಿ ಆಕೆಯು ಯಾರ ಕೈ ಹಿಡಿಯುವಳೋ ಎಂದು ನಿರೀಕ್ಷಿಸುತ್ತಿರುವರು.

ವಿನೋದಪ್ರಿಯನಾದ ನಾರದನಿಗೆ ಈಗ ಇಂದ್ರನ ಮನಸ್ಸಿನಲ್ಲಿ ಮತ್ಸರವನ್ನುಂಟುಮಾಡಬೇಕೆಂದು ತೋರಿತು; ಆಗ ಆತನು ಆ ರಾಜಕುಮಾರಿಗೆ ಬೇರೊಬ್ಬ ಪುರುಷನಲ್ಲಿ ಆಸಕ್ತಿಯು ಬೇರೂರಿರುವುದೆಂಬುವುದನ್ನು ಸೂಚಿಸುತ್ತ; ಎಲೈ ದೇವರಾಜನೇ! ಅವಳ ಸೌಂದರ್ಯವನ್ನು ಏನೆಂದು ವರ್ಣಿಸಬೇಕು. ಕ್ಷಣಕ್ಷಣಕ್ಕೂ ಅವಳು ನೂತನವಾದ ಲಾವಣ್ಯ ವಿಶೇಷದಿಂದ ಕಾಣಿಸಿಕೊಳ್ಳುತ್ತಿರುವಳು. ಈ ರಾಜಕುಮಾರರೆಲ್ಲರೂ ಕನಸಿನ ದ್ರವ್ಯಕ್ಕೆ

ಗೋಚರಿಸುತ್ತದಂತೆ ಅವಳನ್ನು ಸುಮ್ಮನೆ ಬಯಸುತ್ತಿರುವರು; ಆದರೆ ಅವಳು ಮನಸ್ಸಿಟ್ಟಿರುವ ಪುರುಷನೇ ಬೇರೆ. ಅಯ್ಯ ಇಂದ್ರನೇ! ನಿನ್ನ ಮುಖಭಾವವನ್ನು ಕಂಡರೆ ಆ ಪುರುಷನು ಯಾರೆಂದು ನನ್ನನ್ನು ಕೇಳುವುದಕ್ಕೆ ಆತುರಿಸುವಂತೆ ತೋರುತ್ತಿದೆ. ಆದರೆ ನೀನು ಈ ಪ್ರಶ್ನೆಯನ್ನು ಸರ್ವಥಾ ಕೇಳಬಾರದು. ಇದರಿಂದ ನೀನು ನನ್ನನ್ನು ವೃಥಾ ಶ್ರಮಪಡಿಸುವಂತೆ ಮಾತ್ರವಾಗುತ್ತದಲ್ಲದೆ ನಾನೇನೂ ನಿಜವಾಗಿಯೂ ಆ ಪುರುಷನನ್ನು ನಿನಗೆ ಹೇಳಲಾರೆನು. ಆಕೆಯ ಬುದ್ಧಿಯು ಅನುರಾಗಪರಾಯಣವಾದುದು. ಅಂತಹ ಬುದ್ಧಿಯು ಗುಹೆಯಲ್ಲಿ ಮಲಗಿರುವ ಸಿಂಹದಂತೆ ಅಷ್ಟೊಂದು ಗುಹೆಯಲ್ಲಿ ನೆಲಸಿರುವುದರಿಂದ ಆಕೆಯು ತನ್ನ ಪತಿ ಯಾರೆಂದು ಅವನೇ ತನ್ನ ಬಾಯಿಯಿಂದ ಹೇಳುವ ಸಂಭವವಿಲ್ಲ. ನಾನೇ ತಿಳಿಯಬೇಕೆಂದರೆ ಅವಳಂತೆಯೇ ನನ್ನ ಬುದ್ಧಿಯೂ ಕೂಡ ಅನುಸರಣವಾದರೂ ಅವಳ ಅಂತರಂಗವನ್ನು ಪ್ರವೇಶಿಸುವ ಶಕ್ತಿಯುಳ್ಳದಲ್ಲ. ಹೀಗೆ ಅದರಿಂದ ನಾನು ಹೇಗೆ ಆ ವಿಷಯವನ್ನು ನಿನಗೆ ಹೇಳಲಿ. ಅವಳ ತಂದೆಯಾದ ಭೀಮರಾಜನಿಗೂ ತನ್ನ ಮಗಳು ಯಾವನಲ್ಲಿ ಅಪೇಕ್ಷೆಯಿಟ್ಟಿರುವಳೆಂಬುದು ತಿಳಿಯದು. ಆದರೂ ಅವಳ ಕಾರ್ಶ್ಯ, ಪಾಂಡುತ್ವ ಮೊದಲಾದ ಬಾಹ್ಯ ಚಿಹ್ನೆಗಳನ್ನು ಕಂಡು ಆಕೆಗೆ ಸ್ವಯಂವರವನ್ನೆಸಗಬೇಕೆಂದು ವಿಧಿಪ್ರೇರಣೆಯಿಂದ ಕೈಕೊಂಡಿರುವನು. ಈ ವಿಷಯವನ್ನು ಕೇಳಿದ ಅರಸರು ಯತ್ನವನ್ನು ವಿಶದಂತೆ ನಡೆಸಿರುವರು. ದಮಯಂತಿಯ ಮನೋರಂಜನೆಗಾಗಿ ನೂತನವಾದ ಗುಣಾತಿಶಯವನ್ನೂ ಅಲಂಕಾರಾತಿಶಯವನ್ನು ತೋರುವುದೇ ಪುರುಷಾರ್ಥವೆಂದೆಣಿಸಿರುವರು. ಇಂತಹ ರಾಜಕುಮಾರರಲ್ಲಿ ಯಾವಾತನಾದರೂ ವರನಾಗುವ ಸಂಭವವು ಸರ್ವಥಾ ಇರಲಾರದು. ಭೀಮಕುಮಾರಿಯನ್ನು ಬಯಸಿ ವಿದರ್ಭರಾಜಧಾನಿಯಾದ ಕುಂಡಿನಪುರಿಗೆ ತೆರಳಿದ ಆ ರಾಜಪುತ್ರರಿಗೆ ನಿನ್ನ ಆತಿಥ್ಯವನ್ನು ಸ್ವೀಕರಿಸುವುದರಲ್ಲಿ ಸರ್ವಥಾ ಇಷ್ಟವಿರದು. ನನಗಾದರೋ ಭೂಲೋಕದಲ್ಲಿ ಯುದ್ಧವೇ ಶೂನ್ಯವಾಗಿಹೋದುದನ್ನು ಕಂಡು ಬೇಸರಪಟ್ಟು ನಿನ್ನನ್ನು ನೋಡಿಯಾದರೂ ಯುದ್ಧ ಸುಖವನ್ನು ಅನುಭವಿಸೋಣವೆಂದು ಇಲ್ಲಿಗೆ ಬಂದೆನು."

ನಾರದನು ಇಂದ್ರನೊಡನೆ ಹೀಗೆ ಹೇಳಿದನು. ಆ ಮಹರ್ಷಿಯ ವಚನವನ್ನು ಕೇಳುತ್ತಿದ್ದಂತೆ ದೇವೇಂದ್ರನ ಮುಖಮುದ್ರೆಯು ಮಾರ್ಪಟ್ಟಿತು. ಆತನು ಈ ಮಹರ್ಷಿಯೊಡನೆ ಸಂಭಾಷಿಸುವುದು ಉಪಯೋಗಕ್ಕೆ ಬಂದಿತೆಂದು ತಿಳಿದನು. 'ತನ್ನ ಸಹೋದರನಾದ ಉಪೇಂದ್ರನು ತನ್ನ ರಕ್ಷಣಾಭಾರವನ್ನು ವಹಿಸಿರುವುದರಿಂದ ತನ್ನ ವಜ್ರಾಯುಧಕ್ಕೂ ಕೆಲಸವಿಲ್ಲದಂತಾಗಿದೆ' ಎಂದು ಇಂದ್ರನು ಆಲೋಚಿಸುತ್ತಿರುವಲ್ಲಿ ಮಹರ್ಷಿಯಾದ ನಾರದನು ತಾನು ನುಡಿಯಬೇಕೆಂದು ಸಂಕಲ್ಪಿಸಿರುವ ಮಾತುಗಳನ್ನೆಲ್ಲ ನುಡಿದು ಮೌನವಹಿಸಿ ಕುಳಿತನು. ಸ್ವಲ್ಪ ಸಮಯವು ಹೀಗೆಯೇ ದಾಟಿತು. ಆಮೇಲೆ ಆ ಮಹರ್ಷಿಯು ದೀರ್ಘವಾಗಿ ಉಸಿರ್ಗರೆದು ತಿರುಗಿ ಹೇಳತೊಡಗಿದನು.

'ಎಲೈ ಇಂದ್ರನೇ! ನಾನು ಇಲ್ಲಿಗೆ ಬಂದಿರುವ ಕಾರ್ಯವು ಮುಗಿಯಿತು. ನಿನ್ನನ್ನು ಕಂಡೆನು; ಧನ್ಯನಾದೆನು. ಇನ್ನು ಭೂಲೋಕವನ್ನು ಕುರಿತು ಹೊರಡಲುದ್ಯುಕ್ತನಾದ ನನಗೆ ಅನುಮತಿಯನ್ನು ಕೊಡು. ವಿದರ್ಭನಗರದಲ್ಲಿ ದಮಯಂತಿಯ ಸ್ವಯಂವರಾರ್ಥವಾಗಿ ಬಂದು ಸೇರಿದ ರಾಜರೆಲ್ಲ ಪರಸ್ಪರ ಕಲಹಮಾಡಲೆಂದು ತೀರ್ಮಾನಿಸಿರುವರೊ?' ಎಂದು ನುಡಿದವನೇ ಹೊರಟನು. ಇಂದ್ರನೂ ಮುನಿಯ ಗೌರವಾರ್ಥವಾಗಿ ಅತನು ಬೇಡವೆಂದರೂ ಕೇಳದೆ ಕೆಲವು ಹೆಜ್ಜೆಗಳನ್ನು ಅವನ ಹಿಂದೆಯೇ ನಡೆದನು. ನಾರದನ ಮಿತ್ರನಾದ ಪರ್ವತನೂ ನಾರದನು ಹೇಳಿದುದನ್ನೇ ಪ್ರತಿಧ್ವನಿಸುವನಲ್ಲದೆ ಪರ್ವತಗಳ ಪಕ್ಷಚ್ಛೇದಕನಾದ ಆ ಇಂದ್ರನೊಡನೆ ಸ್ವಪಕ್ಷವನ್ನು ಕುರಿತು ಯಾವ ಮಾತನ್ನೂ ಎತ್ತಲಿಲ್ಲ.

ಈ ವಿಧವಾಗಿ ಆ ಇಬ್ಬರು ಮುನೀಂದ್ರರೂ ಹೊರಟುಹೋಗಲಾಗಿ ಇತ್ತ ಇಂದ್ರನಿಗೆ ದಮಯಂತಿಯನ್ನು ತಾನು ವಿವಾಹವಾಗುತ್ತಿದ್ದರೆ ಉತ್ತಮವಾಗುತ್ತಿದ್ದಿತು ಎಂದು ಮನಸ್ಸಿನಲ್ಲಿ ಆಲೋಚನೆಯುಂಟಾಯಿತು. ಇದನ್ನರಿತ ಶಚಿಗೆ ಮನಸ್ಸಿನಲ್ಲಿ ಈರ್ಷ್ಯೆಯುಂಟಾಗಿ ಇನ್ನು ತನ್ನ ಗೌರವಕ್ಕೆ ಹಾನಿ ಬಂದಿತು, ಎಂದು ಎಣಿಸಿ ತಲೆ ಬಗ್ಗಿಸಿದಳು. ರಂಭೆ, ಘೃತಾಚಿ ಮೊದಲಾದ ದೇವತಾ ಸ್ತ್ರೀಯರೂ ಚಿಂತೆಯಿಂದ ನಿಟ್ಟುಸಿರು ಬಿಡತೊಡಗಿದರು. ತಿಲೋತ್ತಮೆಗಂತೂ ಬೀಸುತ್ತಿದ್ದ ಚಾಮರವು ತಾನಾಗಿಯೇ ಕೈಯಿಂದ ಜಾರಿ ಕೆಳಗೆ ಬಿದ್ದಿತು. ಇದನ್ನು ಕಂಡು ಆಕೆಯು 'ಇದರಂತೆಯೇ ನನಗೂ ಈ ಸ್ವರ್ಗದಿಂದ ಕೆಳಗೆ ಬೀಳುವುದೇ ಮೇಲೆಂದು' ಮೆಲ್ಲಗೆ ಅಂದುಕೊಂಡಳು. ಮೇನಕೆಯು ತನ್ನ ಮನಸ್ಸಿನ ದುಃಖವನ್ನು ಮರೆಮಾಡುವುದಕ್ಕೆ ಯತ್ನಿಸಿದರೂ ಅದು ಪುಟಪಾಕದಮೇಲಿನ ಕೆಸರು ಒಳಗಿನ ಗೂಢವನ್ನು ಅರುಹುವಂತೆ ಪ್ರಕಟಿಸಿತು. ಊರ್ವಶಿಯು ಈ ವಾರ್ತೆಯನ್ನು ಕೇಳಿ ಸ್ತಂಭದಂತೆ ಮೌನವಾಗಿ ನಿಂತಳು. ಮಿಶ್ರಕೇಶಿಯು ತನ್ನ ನೆರೆಮನೆಯ ಅಪ್ಸರೆಯನ್ನು ಕಂಡು—'ಅಕ್ಕಾ! ಇದೇನನ್ಯಾಯವು? ಯಾಗಶತವನ್ನು ಮಾಡಿ ಇಂದ್ರಪದವಿಯನ್ನು ಪಡೆದಿರುವ ಈ ದೇವೇಂದ್ರನು ತಾನು ಕಶ್ಯಪಪುತ್ರನಾಗಿದ್ದು ಸ್ವಲ್ಪವೂ ಹೇಸದೆ ಕಶ್ಯಪಪುತ್ರಿ (ಭೂಮಿ)ಯ ಕಡೆಗೆ ಹೊರಟಿರುವನಲ್ಲೇ?' ಎಂದೊಬ್ಬಳು ಇಂದ್ರನ ಕಿವಿಗೆ ಕೇಳಿಸುವಂತೆ ತನ್ನ ಸಖಿಯನ್ನು ಇದಿರಿಗಟ್ಟಿಕೊಂಡು—'ಎಲೇ! ಭೂಲೋಕದ ಮನುಷ್ಯ ಸ್ತ್ರೀಗಳನ್ನು ಕಣ್ಣಿನಿಂದ ನೋಡುವುದಕ್ಕೂ ಕೂಡ ಅಸಹ್ಯಪಡುತ್ತಿದ್ದ ನೀನು ಈಗ ಅವರನ್ನು ವಿವಾಹವಾಗುವುದಕ್ಕೆ ಹೇಗೆ ಇಚ್ಛಿಸುವೆ? ನಿನಗೆ ಸ್ವಲ್ಪವಾದರೂ ವಿವೇಕವಿರುತ್ತಿದ್ದರೆ ಇಂತಹ ಕಾರ್ಯಕ್ಕೆ ಕೈಹಾಕುತ್ತಿದ್ದಿಲ್ಲ'ವೆಂದು ಗಟ್ಟಿಯಾಗಿ ನುಡಿದಳು.

ಈ ಪ್ರಕಾರ ದೇವತಾ ಸ್ತ್ರೀಯರು ಅಲ್ಲಲ್ಲಿ ಗುಜುಗುಟ್ಟುತ್ತಿದ್ದರೂ ಇಂದ್ರನು ಅವರನ್ನು ಲಕ್ಷ್ಯಮಾಡದೆ ಹೊರಟುದನ್ನು ಕಂಡು ಅಗ್ನಿ, ಯಮ, ವರುಣರೂ ಅವನನ್ನನುಸರಿಸಿ ಹೊರಟರು. ದೇವೇಂದ್ರನು ಮೊದಲು ದಮಯಂತಿಯ ಮನಸ್ಸನ್ನು ತನ್ನ ಕಡೆಗೆ ಸೆಳೆಯುವುದಕ್ಕಾಗಿ ಚತುರರಾದ ದೂತಿಯ

ವನ್ನು ಆಕೆಯು ಅಂತಃಪುರಕ್ಕೆ ಕಳುಹಿಸಿದನು. ಅದರಂತೆಯೇ ಭೀಮಭೂಪಾಲನ ಬಳಿಗೂ ಬಂತು ಸ್ವಯಂವರಕ್ಕಾಗಿ ಗೂಢವಾಗಿ ಇಂದ್ರಾದ್ಯರನ್ನು ಕಳುಹಿದನು. ಇದನ್ನಾಲಿಸಿದ ಇಂದ್ರಾದಿಗಳೂ ಕೂಡ ಬೇಗ ಸ್ವರ್ಗವನ್ನು ಬಿಟ್ಟು ಭೂಮಿಯ ಕಡೆಗೆ ಹೊರಟರಲ್ಲಾ! ಎಂದರೆ ಅವರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಯಾರಿಗೆ ಎಲ್ಲಿ ಸುಖವಾಗಿ ತೋರುವುದೋ ಅವರಿಗೆ ಅಲ್ಲಿಯೇ ಸ್ವರ್ಗವಿರುವುದಲ್ಲವೆ? ಒಂದು ಸ್ಥಾನವೇ ನಿಯತವಾದ ಸ್ವರ್ಗವೆಂದು ಹೇಳಲು ಬರುವುದಿಲ್ಲ.

ಇಂದ್ರನು ಅಗ್ನಿ ಯಮ ವರುಣರನ್ನು ಕೂಡಿಕೊಂಡು ಕುಂಡಿನಪುರಿಯ ಕಡೆಗೆ ಹೊರಟನು. ಅವರ ವಾಹನಗಳು ಬಲು ಶೀಘ್ರಗಾಮಿಗಳಾದುದರಿಂದ ಸ್ವಲ್ಪ ಸಮಯದಲ್ಲಿಯೇ ಕುಂಡಿನಪುರದ ಬಳಿಗೆ ಬರುತ್ತ ದಾರಿಯಲ್ಲಿ ಗಂಭೀರವಾದ ಧ್ವನಿಯೊಂದನ್ನು ಕೇಳಿದರು. ಆ ಧ್ವನಿಯು ಏನಿರಬಹುದು? ಸಮುದ್ರಧ್ವನಿಯೇ! ಇಲ್ಲವೆ ಮೇಘಗರ್ಜನೆಯೇ? ಎಂದು ಸಂದೇಹಪಡುತ್ತಿರುವಲ್ಲಿ ತಮ್ಮ ಸಮೀಪಕ್ಕಾಗಿ ಬರುತ್ತಿರುವ ರಥವೊಂದನ್ನು ಕಂಡರು. ಈ ರಥವು ಯಾರದಿರಬಹುದು! ಎಂದು ವಿಚಾರಿಸುವಷ್ಟರಲ್ಲಿ ಸಾರಥಿಗೆ ವಿಶ್ರಾಂತಿಯನ್ನು ಕೊಡುವ ಉದ್ದೇಶದಿಂದ ಸ್ವಯಂ ರಥವನ್ನು ನಡೆಯಿಸುತ್ತ ಅಶ್ವಹೃದಯಜ್ಞನಾದ ನಳನೇ ಈತನು ಎಂದು ತಿಳಿದು ಜಲಾಧಿಪತಿಯಾದ ವರುಣನು ಆತನ ಸ್ವರೂಪವನ್ನು ನೋಡಿದೊಡನೆಯೇ ಜಡಭಾವವನ್ನು ಸ್ವೀಕರಿಸಿ ಜಡಪತಿ ಎಂಬ ಹೆಸರಿಗೆ ಕಾರಣನಾದನು. ಯಮನಂತೂ ಅವನ ಸುಂದರವಾದ ರೂಪವನ್ನು ಕಂಡು ಈರ್ಷ್ಯೆಯಿಂದ ನಳನನ್ನು ಹೊಂದಲು ಅದಕ್ಕಾಗಿ ಅವನಿಗೆ ಬಂದ 'ಕಾಲ'ನೆಂಬ ಹೆಸರು ಇಂದಿಗೂ ರೂಢಿಯಾಗಿಯೇ ಇರುವುದು. ಅಗ್ನಿಗೆ ಉಂಟಾದ ಸಂತಾಪವು ಆತನನ್ನು ಮುಂದೆ ಅನಲನನ್ನಾಗಿಯೇ ಮಾಡಿತು. ಇಂದ್ರನಾದರೋ ತನ್ನ ಸಹಸ್ರ ನಯನಗಳಿಂದಲೂ ಆತನನ್ನು ನೋಡಿ "ಮನ್ಮಥನಿಗೂ ಸೌಂದರ್ಯದಲ್ಲಿ ಅಪಜಯವನ್ನುಂಟುಮಾಡಿದ ಈ ಮಹಾತ್ಮನನ್ನು ದಮಯಂತಿಯು ಕಂಡರೆ ಇವನನ್ನೇ ವರಿಸುವುದು ನಿಶ್ಚಯವು. ಸೌಂದರ್ಯವಿಚಾರದಲ್ಲಿ ಈತನಿಗೂ ನಮಗೂ ಕೌಶಿಕನಿಗೂ ನಮಗೂ ಇರುವಷ್ಟೇ ವ್ಯತ್ಯಾಸವಿರುವುದು. ಈ ಪುಣ್ಯಪುರುಷನು ಮೂರುಲೋಕಗಳ ತ್ರಿಲೋಕದ ಸೌಂದರ್ಯದ ಒಬ್ಬನೆಯ ಮೂರ್ತಿಯೇ ತೋರುತ್ತಿರುವನು. ಈತನ ವೇಷಭೂಷಣಗಳಿಂದ ಇವನು ದಮಯಂತಿಯ ಸ್ವಯಂವರಕ್ಕಾಗಿ ಕುಂಡಿನಪುರಿಗೆ ಹೋಗತಕ್ಕವನೆಂದು ವ್ಯಕ್ತವಾಗುವುದು. ಇವನ ಸೌಂದರ್ಯವನ್ನೂ ಗಾಂಭೀರ್ಯವನ್ನೂ ನೋಡಿದ್ದಾಗ ತಂದರೆ ಇವನು ದಮಯಂತಿಗೆ ತಕ್ಕ ವರನು ಮಾತ್ರವೇ ಅಲ್ಲ; ನಾವು ಇಲ್ಲಿಯವರೆಗೆ ಬಂದು ಶ್ರಮಪಟ್ಟದ್ದು ವ್ಯರ್ಥವೆಂದೇ ತೋರುವುದು. ಆ ದಮಯಂತಿಯು ಈ ಪುರುಷನನ್ನು ವರಿಸಲಿ ವರಿಸದೆ ಹೋಗಲಿ ಹೇಗೂ ನಮಗೆ ಆಕೆಯು ದೊರೆಯುವಳಲ್ಲ. ಆಕೆಯು ಇವನನ್ನು ವರಿಸದೆಹೋದಲ್ಲಿ ಅವಳು ಗುಣಜ್ಞಳಲ್ಲವೆಂದೇ ವ್ಯಕ್ತವಾಗುವುದರಿಂದ ನಮ್ಮ ಸ್ವೀಕಾರಕ್ಕೆ ಹೇಗೂ

ಉಚಿತವಲ್ಲ. ಹಾಗಲ್ಲದೆ ನಳನನ್ನೇ ವರಿಸಿದವಳಾದರೆ ಪರಸ್ತ್ರೀಯಲ್ಲಿ ಲಕ್ಷ್ಯವಿಡುವುದು ನನ್ನಂಥವನಿಗೆ ಉಚಿತವಾದ ಕಾರ್ಯವೇ ಅಲ್ಲ. ಒಂದು ವೇಳೆ ಆಕೆಯು ಈ ನಳನ ರೂಪ ಔದಾರ್ಯಾದಿಗಳ ವಾರ್ತೆಯನ್ನು ಈ ಮುಂಚೆಯೇ ಕೇಳದೆ ಹೋಗಿದ್ದರೆ, ದೇವರಾಜನಾದ ನನ್ನನ್ನು ಆಕೆಯು ವರಿಸುವುದರಲ್ಲಿ ಸಂದೇಹವಿಲ್ಲ. ಆದರೆ, ಹಾಗಾಗದೆ ಮುಂಚೆಯೇ ಆಕೆಯ ಕಿವಿಗೆ ಬಂದುಹೋಗಿದ್ದರೆ ನಮ್ಮ ಯತ್ನವು ಕೈಗೂಡುವ ಸಂಭವವೇ ಇರದು. ನಾನು ಇಲ್ಲಿಯವರೆಗೂ ಬಂದು ದಮಯಂತಿಯನ್ನು ವರಿಸದೆ ಹೋದೆನಾದರೆ ಮುಂದೆ ನಮ್ಮ ಸ್ವರ್ಗದಲ್ಲಿ ಅಪ್ಸರರ ಮುಖವನ್ನು ನೋಡಲಾರೆನು. ಹಾಗೆ ಒಳಗೇ ಇರೋಣವೆಂದರೂ ಲಜ್ಜೆಯಿಂದ ನನ್ನ ಪತ್ನಿಯ ಮುಖವನ್ನು ಕಾಣುವುದೂ ಕೂಡ ನನಗೆ ಅಸಾಧ್ಯವೇ.”

ಈ ಪ್ರಕಾರ ಇಂದ್ರನು ಉಳಿದವರೊಡನೆ ಮಾತಾಡಿದನು. ಆದರೆ ಮುಂದೆ ಮಾಡತಕ್ಕುದೇನೆಂಬುದು ಮಾತ್ರ ಅವರಿಗೆ ಹೊಳೆಯದೆಹೋಯಿತು. ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು. ಆಗ ಕಪಟಪಟುವಾದ ಇಂದ್ರನು ಇದ್ದುದರಲ್ಲಿಯೇ ಸ್ವಲ್ಪ ಧೈರ್ಯವನ್ನು ತಂದುಕೊಂಡು ಏನಾದರೂ ಮಾಡಿ ನಳನನ್ನು ವಂಚಿಸಿ ತಮ್ಮ ಇಷ್ಟಾರ್ಥವನ್ನು ಕೈಗೂಡಿಸಿಕೊಳ್ಳಬೇಕೆಂದು ಬಗೆದು ಅವನೊಡನೆ ಗಟ್ಟಿಯಾಗಿ ಹೇಳತೊಡಗಿದನು:—

“ಅಹಾ! ಸೌಮ್ಯನೇ! ನೀನು ಯಾರು? ನಿನ್ನ ಆಕಾರದಿಂದಲೂ ಮುಖ ಲಕ್ಷಣದಿಂದಲೂ ನನ್ನ ಅಭಿಮಾನಕ್ಕೆ ಪಾತ್ರನಾದ ವೀರಸೇನ ಭೂಪಾಲನ ಮಗನಾದ ನಳನೇ ನೀನಾಗಿರಬೇಕೆಂದು ಎಣಿಸುತ್ತೇನೆ. ನನ್ನ ಊಹೆಯು ನಿಜವಾಗಿದ್ದರೆ ನಿನ್ನ ಸಪ್ತಾಂಗಗಳಿಗೂ ಕುಶಲವೇ? ಅದಲ್ಲದೆ ನೀನು ಈಗ ಎಲ್ಲಿಗೆ ಹೋಗತಕ್ಕವನು? ಏನು! ಎಂಬ ಈ ಪ್ರಶ್ನೆಗೆ ಅವಕಾಶವು ಉಳಿದಿರುವುದಿಲ್ಲ. ನಾವು ಯಾವ ಉದ್ದೇಶದಿಂದ ಹೊರಟಿರುವೆವೋ ಆ ಉದ್ದೇಶವು ನಿನ್ನ ದರ್ಶನದಿಂದ ಸಫಲವಾಯಿತೆಂದೇ ಎಣಿಸುತ್ತೇನೆ. ಮುಖ್ಯವಾಗಿ ನೀನು ಈಗ ಹೊರಟಿರುವುದು ನಮ್ಮ ಕಾರ್ಯಕ್ಕಾಗಿಯೇ ಎಂದು ನಾನು ತಿಳಿಯುವುದರಿಂದ ನಿನ್ನ ಆಗಮನ ಪ್ರಯೋಜನವನ್ನು ವಿಚಾರಿಸುವುದಿಲ್ಲ. ಎಲೈ ನಳನೇ! ನಾವು ನಿನ್ನನ್ನು ತಿಳಿದಮೇಲೆ ನಿನಗೂ ನಮ್ಮ ಪರಿಚಯವನ್ನು ಮಾಡಿಕೊಡುವುದು ಅವಶ್ಯವೇ. ಅದಕ್ಕಾಗಿ ಹೇಳುತ್ತೇನೆ ಕೇಳು. ಇವನೇ ಪ್ರಸಿದ್ಧನಾದ ಯಮನು. ಇವನು ಅಗ್ನಿಯು; ಇವನು ಯಾದಸ್ಸುಗಳ ಒಡೆಯನಾದ ವರುಣನು. ನಾನು ದೇವಲೋಕಾಧಿಪನಾದ ಇಂದ್ರನು. ನಾವು ನಾಲ್ವರೂ ಯಾವುದೋ ಒಂದು ಇಷ್ಟಾರ್ಥವನ್ನು ನಿನ್ನೊಡನೆ ಯಾಚಿಸಿ ಪಡೆಯುವುದಕ್ಕಾಗಿ ಬಂದಿರುವೆವು. ನಮ್ಮ ಅಧ್ವಶ್ರಮವನ್ನು ಕೊಂಚ ನಿವಾರಿಸಿಕೊಂಡು ಕಾರ್ಯ ವಿಶೇಷವನ್ನು ನಿನ್ನೊಡನೆ ವಿಜ್ಞಾಪಿಸಿಕೊಳ್ಳುವೆವು.” ಹೀಗೆ ಸುಮತಿಯೂ ಬೃಹಸ್ಪತಿಯ ಶಿಷ್ಯನಾದ ಇಂದ್ರನು ಮುಂದೆ ವಿಶೇಷವಾಗಿ ಮಾತಾಡದೆ ಮೌನವನ್ನು ಕೈಕೊಂಡನು.

‘ಇಂದ್ರಾದಿ ದೇವತೆಗಳು ತನ್ನನ್ನು ಯಾಚಿಸಲು ಬಂದಿರುವರು’ ಎಂದು ನಳನು ತಿಳಿದೊಡನೆಯೇ ಆತನ ಮೈಯೆಲ್ಲವೂ ರೋಮಾಂಚಗೊಂಡಿತು. ಆಗ

ನಳನು ಆ ದೇವತೆಗಳಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಮನಸ್ಸಿನಲ್ಲಿ ಹೀಗೆ ವಿಚಾರಿಸತೊಡಗಿದನು—'ಇದೇನು! ದೇವತೆಗಳಿಗೂ ಅಸಾಧ್ಯವಾದ ವಿಷಯವು ಇರುವುದೇ! ಅವರಿಗೆ ಅಸಾಧ್ಯವಾದುದು ನನ್ನಿಂದ ಕೈಗೂಡುವುದಾದರೂ ಹೇಗೆ? ಇದೆಲ್ಲವೂ ಒಂದಕ್ಕೊಂದು ವಿರೋಧವಾದ ವಿಷಯವು. ಇದರ ನಿರ್ಣಯವನ್ನಾದರೂ ಹೇಗೆ ಮಾಡಲಿ' ಎಂದು ನಳನು ಮನಸ್ಸಿನಲ್ಲಿ ವಿಚಾರಿಸತೊಡಗಿದನು. ಪ್ರಾಣಾವಧಿಯಾಗಿ ಸಕಲ ಪದಾರ್ಥಗಳನ್ನೂ ಯಾಚಕರಿಗೆ ಕೊಡುವುದು ಸರ್ವಸಾಧಾರಣವಾಗಿ ಇರತಕ್ಕ ವಿಷಯವೇ. ಆದರೆ ದೇವರಾಜನಾದ ಈ ಇಂದ್ರನೇ ಬಂದು ನನ್ನಲ್ಲಿ ಯಾಚಕವೃತ್ತಿಯನ್ನು ಕೈಕೊಳ್ಳಲಾಗಿ ಇವನಿಗೆ ತಕ್ಕಂತೆ ಕೊಡತಕ್ಕ ವಿಶೇಷ ವಸ್ತುವಾದರೂ ಯಾವುದು? ಆ ಭೀಮರಾಜನ ಪುತ್ರಿಯಾದ ದಮಯಂತಿಯು ಮಾತ್ರ ನನ್ನ ಹೃದಯದಲ್ಲಿ ಸದಾ ನೆಲೆಯಾಗಿರುವಳು. ಆಕೆಯು ನನ್ನ ಪಾಲಿಗೆ ನನ್ನ ಧನಕ್ಕಿಂತ ರಾಜ್ಯಕ್ಕಿಂತ ಎಷ್ಟೋ ಅಧಿಕವಾದವಳು. ಹೆಚ್ಚೇಕೆ, ನನ್ನ ಪ್ರಾಣಕ್ಕಿಂತ ಅವಳೇ ಅಧಿಕಳೆಂದು ನಾನು ಎಣಿಸುತ್ತೇನೆ. ಅವಳನ್ನು ಅನ್ಯರಿಗೆ ಈಯುವುದಕ್ಕೆ ಅವಳಿನ್ನೂ ನನ್ನವಳಾಗಲಿಲ್ಲ. ಒಮ್ಮೆ ನನ್ನವಳಾದರೂ 'ದೇಯಂ ದಾರ ಸುತಾದೃತೆ' ಎಂಬ ನ್ಯಾಯವನ್ನನುಸರಿಸಿ ಹೆಂಡಿರು ಮಕ್ಕಳನ್ನು ಅನ್ಯರಿಗೆ ಕೊಡುವುದಾದರೂ ಉಚಿತವಲ್ಲ. ಈಗ ನಾನು ಏನು ಮಾಡಲಿ! ಈತನ ಮನಸ್ಸಿನಲ್ಲಿರುವ ಇಷ್ಟವೇನೆಂಬುದನ್ನು ಹೇಗೆ ತಿಳಿದುಕೊಳ್ಳಲಿ. ಅರ್ಥಿಯಾದವನು ಮಾತಿನಿಂದ ಯಾಚಿಸುವುದಕ್ಕೆ ಮೊದಲೇ ಅವನ ಅಂತರಂಗವನ್ನು ತಿಳಿದು ಕೊಡತಕ್ಕ ದಾನವು ಉತ್ತಮ ದಾನವೆಂದು ಕರೆಯಲ್ಪಡುವುದು. ಅರ್ಥಿಯನ್ನು ಸುಮ್ಮನೆ ಚಾಟೂಕ್ತಿ, ಕಾಕೂಕ್ತಿಗಳಿಂದ ಹಾಸ್ಯಮಾಡುತ್ತ ಅತನಿಗೆ ಲಜ್ಜೆಯನ್ನುಂಟುಮಾಡಿ, ಹಲವು ಸಲ ಅತನು 'ದೇಹಿ, ದೇಹಿ' ಎಂದು ಬೇಡಿದಮೇಲೆ ಕೊಡತಕ್ಕ ದಾನವು ದಾತಾರನಿಗೆ ಪಾಪವನ್ನೇ ಸಂಪಾದಿಸಿಕೊಡುವುದಲ್ಲದೆ, ಅತನು ಸಂಪಾದಿಸಿದ ಪಾಪಕ್ಕೆ ಪ್ರಾಯಶ್ಚಿತ್ತವೂ ಇರಲಾರದು. ಆದಕಾರಣ ಅರ್ಥಿಯನ್ನು ತಿರುತಿರುಗಿ ಬೇಡುವಂತೆ ಮಾಡಿ ಅತನಿಗೆ ವಿಶೇಷ ಪೀಡೆಯನ್ನುಂಟುಮಾಡುವುದು ಸರಿಯಲ್ಲ. ಲಕ್ಷ್ಮಿಯು ಸದಾ ಕೆಸರಿನಿಂದ ದೂಷಿತವಾದ ಕಮಲವನ್ನೇ ಆಶ್ರಯಿಸಿರುವಳು. ಇದು ಅವಳಿಗೆ ತಕ್ಕ ಸ್ಥಳವಲ್ಲ. ಬಹು ಬುದ್ಧಿಶಾಲಿಯಾಗಿರುವ ಅರ್ಥಿಯ ಪಾಣಿ ಕಮಲವೆಂಬ ಪವಿತ್ರವಾದ ಸ್ಥಾನವೇ ಅವಳ ವಾಸಕ್ಕೆ ಉಚಿತವಾದ ನಿವಾಸವಾದ ಕಾರಣ ದ್ರವ್ಯವನ್ನು ಪಾತ್ರಾಪಾತ್ರವನ್ನು ವಿಚಾರಿಸಿ ನೋಡಿ ಪಾತ್ರನಾದವನ ಹಸ್ತಕಮಲದಲ್ಲಿಡಬೇಕಲ್ಲದೆ ಭೂಮಿಯಲ್ಲಿ ಹೂತಿಡುವುದು ಎಷ್ಟುಮಾತ್ರವೂ ಉಚಿತವಲ್ಲ. ಯಾವ ಮನುಷ್ಯನು ಬದುಕಿರುವಾಗ ತನ್ನ ದ್ರವ್ಯವನ್ನು ಸತ್ಪಾತ್ರಗಳಲ್ಲಿಯೂ ಸತ್ಕಾರ್ಯಗಳಲ್ಲಿಯೂ ವಿನಿಯೋಗಿಸುವುದಿಲ್ಲವೋ ಅವನ ದ್ರವ್ಯವು ಅವನ ತರುವಾಯ ದುರ್ಜನರ ಪಾಲಾಗುವುದು, ಎಂಬುದು ನಿಜವೇ. ಈಗ ಈ ದೇವತೆಗಳು ಜಗತ್ತಿನಲ್ಲಿರುವ ದಾತೃವರ್ಗವನ್ನೆಲ್ಲ ತಿರಸ್ಕರಿಸಿ ನನ್ನಲ್ಲಿಗೆ ಯಾಚಕರಾಗಿ ಬಂದಿರುವರು. ಈಗ ನಾನು ಇವರ ಇಷ್ಟಾರ್ಥವನ್ನು

ಸಲಿಸಿ ಹೇಗೆ ಲೋಕದಲ್ಲಿ ಕೀರ್ತಿಯನ್ನು ಸಂಪಾದಿಸುವೆನು! ಈ ಲೋಕದಲ್ಲಿ ಯಾವನೂ ತಾನು ಸಂಪಾದಿಸಿದ ದ್ರವ್ಯದೊಂದಿಗೆ ಪರಲೋಕವನ್ನು ಸೇರುವವನಿಲ್ಲ. ಆ ಬಂಧುಗಳೆಲ್ಲರೂ ಆತನು ಸಂಪಾದಿಸಿದ ದ್ರವ್ಯವನ್ನು ಹೊಂದುವವರಲ್ಲದೆ ಅದರಲ್ಲಿ ಸ್ವಲ್ಪ ಭಾಗವನ್ನಾದರೂ ಆತನಿಗೆ ಮುಟ್ಟಿಸುವವರಿಲ್ಲ. ಯಾವ ಮನುಷ್ಯನು ತಾನು ಸಂಪಾದಿಸಿದ ಧನದಲ್ಲಿ ಎಷ್ಟು ಭಾಗವನ್ನು ಅರ್ಥಿಗಳ ವಶಮಾಡುವನೋ ಅಷ್ಟು ದ್ರವ್ಯ ಮಾತ್ರವೇ ಆತನನ್ನು ಪರಲೋಕದಲ್ಲಿಯೂ ಅನುಸರಿಸಿ ಬರುವುದಾದಕಾರಣ ಇಂತಹ ಸತ್ಪಾತ್ರಗಳನ್ನೇ ಆಪದ್ಬಂಧುಗಳೆಂದೆಣಿಸಬೇಕು. 'ನಾದತ್ತಮುಪತಿಷ್ಠತೇ' ಎಂಬ ನ್ಯಾಯದಂತೆ ಇಲ್ಲಿ ಕೊಡದವನಿಗೆ ಅಲ್ಲಿ ಏನೂ ದೊರೆಯುವಂತಿಲ್ಲ; ಹಾಗಲ್ಲದೆ ಇಲ್ಲಿ ಕೊಟ್ಟವನಿಗೆ ಅಲ್ಲಿ ಕೋಟಿ ಗುಣಿತವಾದ ವೃದ್ಧಿಯೊಡನೆ ತಪ್ಪದೆ ದೊರೆಯುವುದು.

ಈ ಪ್ರಕಾರ ನಳನು ಕ್ಷಣಕಾಲ ಚಿಂತಿಸಿ ತರುವಾಯ ಸಂತೋಷದಿಂದ ತನ್ನಲ್ಲಿಗೆ ಯಾಚಕರಾಗಿ ಬಂದಿರುವ ಇಂದ್ರಾದಿಗಳ ಮುಖವನ್ನು ನೋಡುತ್ತ ಹೇಳತೊಡಗಿದನು:—"ಪೂಜ್ಯರೆ! ಲೋಕದಲ್ಲಿ ಕಾರ್ಯಕ್ಕೂ ಕಾರಣಕ್ಕೂ ಭೇದವಿಲ್ಲವೆಂದು ಒಂದು ಮತವಿರುವುದು. ಅದರಂತೆಯೇ ಅನ್ನದಿಂದ ಉಂಟಾದ ಈ ದೇಹಕ್ಕೂ ಅನ್ನಕ್ಕೂ ವ್ಯತ್ಯಾಸವಿಲ್ಲವೆಂದೇ ಹೇಳಿದಂತಾಯಿತು. ಅನ್ನದ ಪರಿಣಾಮವೇ ದೇಹವು; ಅದರಂತೆಯೇ ನೀವು ಅಮೃತವನ್ನುಂಡು ಬದುಕುವವರಾದ ಕಾರಣ ನಿಮ್ಮ ದೇಹವೂ ಅಮೃತಮಯವೇ; ಮಾತುಗಳೂ ಅಮೃತಮಯಗಳೇ. ಆದುದರಿಂದ ಅಂತಹ ಅಮೃತ ಸ್ವರೂಪರಾದ ನಿಮ್ಮನ್ನು ಕಂಡು ನಾನು ಕೃತಾರ್ಥನಾದೆನು. ನಾನೇನೋ ಪೂರ್ವದಲ್ಲಿ ಅಲ್ಪವಾದ ಪುಣ್ಯವನ್ನು ಸಂಪಾದಿಸಿರಬಹುದು. ಆದರೆ ಆ ಪುಣ್ಯದಿಂದಲೇ ನಿಮ್ಮಂತಹ ಪೂಜ್ಯರ ದರ್ಶನವೆಂಬ ಮಹಾಫಲವು ದೊರೆತುದು ಕೇವಲ ಆಶ್ಚರ್ಯವೇ. ಇದು ನನ್ನೊಬ್ಬನ ತಪಸ್ಸಿನ ಫಲವಲ್ಲ; ನನ್ನ ಪೂರ್ವ ಪುರುಷರೆಲ್ಲರೂ ಸೇರಿ ಸಂಪಾದಿಸಿದ ತಪಸ್ಸಿನ ಫಲವು. ಸಮಸ್ತ ಜನರೂ ಮಾಡುವ ಅವಮಾನವನ್ನು ಸಹಿಸುವುದರಿಂದಲೇ ಈ ಭೂಮಿಗೆ 'ಸರ್ವಂ ಸಹಾ' ಎಂದು ಹೆಸರು ಬಂದಿರುವುದು; ಅಂತಹ ಈ ಭೂಮಿಯ ಮೇಲೆ ಮಾಡಿದ ಯಾವ ಸತ್ಕಾರ್ಯದ ಫಲವೂ ಕಾರ್ಯಕರ್ತನನ್ನು ಸೇರುವುದು, ಎಂಬುದು ನಿಮ್ಮ ದರ್ಶನದಿಂದ ನನಗೆ ದೃಷ್ಟಾಂತವಾಯಿತು. ಮನುಷ್ಯನು ಬಾಲ್ಯದಿಂದ ಮರಣದವರೆಗೆ ಅತ್ಯಂತ ಪ್ರೀತಿಯಿಂದ ನೋಡತಕ್ಕ ವಸ್ತುವೆಂದರೆ ಈ ದೇಹವೇ. ಅಂತಹ ದೇಹವನ್ನು ಅವನು ಸತ್ಕಾರ್ಯಕ್ಕೇ ಉಪಯೋಗಿಸಬೇಕೆಂದು ಎಣಿಸುವುದಾದರೆ ನಿಮ್ಮಂತಹ ಪೂಜ್ಯರ ಚರಣಗಳನ್ನು ಪೂಜಿಸುವುದೆಂಬ ಈ ಅಲಭ್ಯವಾದ ಕಾರ್ಯದಂತಹ ಕಾರ್ಯವು ಇನ್ನೊಂದಿರದು."

ಹೀಗೆ ನಳನು ದೇವತೆಗಳನ್ನು ಹೊಗಳಿದನು. ಆತನು ಈ ಪ್ರಕಾರ ವಿಶ್ವಾಸದಿಂದಲೂ ವಿನಯದಿಂದಲೂ ಮಾತಾಡುತ್ತಿದ್ದರೂ ಇಂದ್ರನು ಮಾತ್ರ ಆತನ ಮಾತಿಗೆ ವಿಶೇಷ ಲಕ್ಷ್ಯಗೊಡದೆ ಕಪಟಯುಕ್ತವಾದ ತನ್ನ ಪ್ರತಿಕೂಲಾಭಿ

ಪ್ರಾಯವನ್ನೇ ಹೇಳತೊಡಗಿದನು:—"ಅಯ್ಯಾ! ನಳನೇ!! ಭೂಲೋಕದ ಚಂದ್ರನೆಂದರೆ ನೀನೇ. ನಾವಾದರೋ ದಮಯಂತಿಯ ಪಾಣಿಗ್ರಹಣವನ್ನು ಮಾಡಿಕೊಳ್ಳುವ ಉದ್ದೇಶದಿಂದ ಇಲ್ಲಿಯವರೆಗೂ ಬಂದಿರುವೆವು. ನೀನು ಈ ಕಾರ್ಯದಲ್ಲಿ ನಮ್ಮ ಕಡೆಯ ದೂತನಾಗಿ ನಮಗೆ ಸಹಾಯವನ್ನು ಮಾಡಬೇಕು. ಮಹಾರಾಜ! ಈ ಭೂಮಿಯಲ್ಲಿ ಎಷ್ಟೋ ಮಂದಿ ಅರಸರು ಇರುವರು. ಆದರೆ ಅವರೆಲ್ಲ ಕೂಪಕ್ಕೆ ಸಮಾನರು; ನೀನು ಮಾತ್ರ ಮಹಾಸಮುದ್ರದಂತೆ ಶೋಭಿಸುತ್ತಿರುವೆ. ಆಕಾಶದಲ್ಲಿ ಎಷ್ಟೋ ಗ್ರಹಗಳೂ, ನಕ್ಷತ್ರಗಳೂ, ಚಂದ್ರನೂ ಪ್ರಕಾಶಿಸುತ್ತಿದ್ದರೂ ಉಪಯೋಗವೇನು? ಅವೆಲ್ಲವೂ ಕಾಂತಿಯಲ್ಲಿ ಸೂರ್ಯನಿಗೆ ಸರಿಬರಲಾಪವೇ? ಸರ್ವಸ್ವವನ್ನೂ ತಿಳಿಯಬಲ್ಲವರಾದ ನಾವು, ದಯಾ, ದಾಕ್ಷಿಣ್ಯ, ಪವಿತ್ರ, ಸತ್ಯಸಂಧತೆ ಮೊದಲಾದ ಸಕಲ ಸದ್ಗುಣಗಳಿಗೂ ನೀನು ಸಮುದ್ರಪ್ರಾಯನೆಂದು ತಿಳಿದು ನೀನೇ ಈ ಕಾರ್ಯಕ್ಕೆ ಯೋಗ್ಯನೆಂಬ ಭಾವದಿಂದ ನಿನ್ನ ಬಳಿಗೆ ಬಂದೆವು." ಈ ಪ್ರಕಾರ ಇಂದ್ರನು ತಾನು ಶುದ್ಧ ವಂಶದಲ್ಲಿ ಹುಟ್ಟಿ ಗುಣಕ್ಕೆ ಸ್ಥಾನವಾಗಿದ್ದರೂ ಕೂಡ ಋಜುವಾಗಿಯೂ ಸಪಕ್ಷವಾಗಿಯೂ ಇದ್ದ ನಳನೆಂಬ ಬಾಣವನ್ನು ಎಸೆಯುವ ಸಂದರ್ಭದಲ್ಲಿ ಬಿಲ್ಲಿನಂತೆ ಕೇವಲ ವಕ್ರ ಸ್ವರೂಪವನ್ನು ಧರಿಸಿದನು.

'ಈಗ ಮಾತಾಡುತ್ತ ಮಾತಾಡುತ್ತ ನಳನಿಗೆ ಇಂದ್ರನ ಕಾಪಟ್ಯವು ತಿಳಿಯಿತು. ಆಗ ಅವನು *'ಆರ್ಜವಂ ಹಿ ಕುಟಿಲೇಷು ನ ನೀತಿಃ' ಎಂಬ ಲೋಕೋಕ್ತಿಯಂತೆ ತಾನೂ ಇವನೊಡನೆ ಕುಟಿಲತ್ವವನ್ನೇ ಆಚರಿಸಬೇಕೆಂದು ಎಣಿಸಿ, "ದೇವರಾಜನೇ! ನಾನು ಹಿಂದಿನ ಜನ್ಮದಲ್ಲಿ ಅಪಾರವಾದ ಯಾವುದೋ ಒಂದು ಪಾಪಕ್ಕೆ ಕೈಹಾಕಿರಬೇಕೆಂದು ಎಣಿಸುತ್ತೇನೆ; ಅದರಿಂದಲೇ ನನಗೆ ಈ ಜನ್ಮದಲ್ಲಿ ನಿಮ್ಮಂತಹ ಮಹಾ ಪವಿತ್ರರ ಆಜ್ಞೆಯನ್ನು ಕೂಡ ಉಲ್ಲಂಘಿಸುವ ಬುದ್ಧಿಯುಂಟಾಗುತ್ತಿದೆ. ಒಮ್ಮೊಮ್ಮೆ ಮೌನವು ಕಾರ್ಯ ವಿರೋಧಿಯಾಗಿ ಪರಿಣಮಿಸುವುದು; ಅದಲ್ಲದೆ ಮೌನವು ಸಮ್ಮತವನ್ನು ಕೂಡ ಸೂಚಿಸುವುದು; ಇದರಿಂದ ನನಗೆ ಲಜ್ಜೆಯುಂಟಾದರೂ ಸರಿಯೆ! ನಿಮ್ಮ ಅಭಿಪ್ರಾಯವನ್ನು ತಿರಸ್ಕರಿಸುವುದಕ್ಕಾಗಿ ಮಾತಾಡಬೇಕೆಂದೇ ನನಗೆ ತೋರುವುದು. ದೇವತೆಗಳಾದ ನಿಮಗೆ ಅರಿಯದ ವಿಚಾರವೊಂದೂ ಇಲ್ಲ. ಕನ್ನಡಿಯ ಮುಂದೆ ಬರುವ ಪದಾರ್ಥಗಳೆಲ್ಲ ಅದರಲ್ಲಿ ಪ್ರತಿಬಿಂಬಿಸುವಂತೆ, ನಿಮ್ಮ ಮುಂದೆ ಬರುವ ಪ್ರಾಣಿಗಳ ಮನೋಭಾವವೂ ನಿಮಗೆ ತಿಳಿಯುವುದು; ಇದರಿಂದ ನನ್ನ ಭಾವವನ್ನು ತಿಳಿದಿರುವ ನೀವು ಈ ವಿಧವಾಗಿ ಮಾತಾಡುವುದನ್ನು ಕೇಳಿದರೆ ನನ್ನನ್ನು ವಂಚಿಸುವುದಕ್ಕಾಗಿಯೇ ನೀವು ಹೊಂಚುಗಟ್ಟಿರುವಿರಿ, ಎಂದು ನನಗೆ ವ್ಯಕ್ತವಾಗುತ್ತಿದೆ. ಯಾವ ದಮಯಂತಿಯನ್ನು ವರಿಸುವುದಕ್ಕಾಗಿ ಈಗ ನಾನು ಹೋಗುತ್ತಿದ್ದೆನೋ ಆ ದಮಯಂತಿಯ ಬಳಿಗೇ ನಿಮ್ಮ ದೂತನಾಗಿ ಹೋಗುವುದಾದರೂ ಹೇಗೆ? ನಿಮ್ಮಂತಹ

* ವಂಚಕರೊಡನೆ ಸರಳಭಾವದಿಂದ ನಡೆಯುವುದು ನ್ಯಾಯವಲ್ಲ.

ಮಹಾತ್ಮರು ತೃಣತುಲ್ಯನಾದ ನನ್ನಂಥವನ ವಿಚಾರದಲ್ಲಿ ಇಂತಹ ವಂಚನೆಗೆ ಕೈಹಾಕುವುದರಲ್ಲಿ ದಯೆಬಾರದೆ ಹೋದುದು ದುಃಖಕರವಾದ ವಿಷಯ. ನನ್ನ ಸಂಕಲ್ಪರೂಪಳಾದ ಆ ದಮಯಂತಿಯನ್ನೇ ನಾನು ಮನಸ್ಸಿನಲ್ಲಿಟ್ಟುಕೊಂಡು ಇದುವರೆಗೂ ಬದುಕಿರುವೆನು. ಅಂತಹ ವಿಷಯಾಭಿಲಾಷಿಯಾದ ನಾನು ಈಗ ಆಕೆಯ ಬಳಿಗೆ ನಿಮ್ಮ ದೂತನಾಗಿ ಹೋಗಿ ನನ್ನ ಮನೋವಿಕಾರವನ್ನು ಹೇಗೆ ಅಡಗಿಸಲಿ. ಇದಲ್ಲದೆ ಇನ್ನೊಂದು ವಿಚಾರವೇನೆಂದರೆ:—ಅಂತಃಪುರ ರಕ್ಷಕರಾದ ಭಟರನ್ನು ಕೊಲ್ಲದೆ, ಆಕೆಯೊಡನೆ ಮಾತಾಡುವುದು ಇರಲಿ, ನೋಡುವುದು ಕೂಡ ಸಾಧ್ಯವಾದ ಕಾರ್ಯವೇ? ಒಂದು ವೇಳೆ ಸಾಲುಗಟ್ಟಲೆಯಾಗಿ ನಿಂತಿರುವ ಆ ಕಾವಲಿನವರನ್ನು ಕೊಂದು ಒಳಗೆ ಹೋದೆನೆನ್ನುವ; ಇದರಿಂದಾದರೂ ಕಾರ್ಯವು ಕೈಗೂಡುವುದಿದೆಯೋ? ಇಂತಹ ಪರಹತ್ಯೆಗೆ ಕೈಹಾಕಿದ ಕ್ರೂರ ಕರ್ಮವನ್ನು ಯಾವ ಬಾಲೆಯಾದರೂ ಒಲಿದು ವಿವಾಹವಾಗುವುದಿದೆಯೋ? ಹಿಂದೆ ದಧೀಚಿ ಋಷಿಯು ತನ್ನ ಪ್ರಾಣವನ್ನು ನಿಮಗೆ ಕೊಟ್ಟು ಕೀರ್ತಿಯನ್ನು ಸಂಪಾದಿಸಿದನು. ಅಂದಿನಿಂದ ಕೀರ್ತಿ ಸಂಪಾದನೆಗೆ ಪ್ರಾಣವೇ ನಿದಾನಸ್ಥಾನವಾಗಿ ರೂಢಿಗೆ ಬಂದಿರುವುದು. ಆದರೆ ಈಗ ನಾನಾದರೋ ಅದೇ ಕೀರ್ತಿ ಸಂಪಾದನೆಗಾಗಿ ಪ್ರಾಣಕ್ಕಿಂತ ಶತಾಧಿಕವಾದ ಬೆಲೆಯನ್ನು ಕೊಡುವುದಕ್ಕೆ ಹೇಗೆ ಯತ್ನಿಸಲಿ. ಅಲ್ಪ ವಸ್ತುಗಳಿಗಾಗಿ ಹೆಚ್ಚು ಬೆಲೆಯನ್ನು ಕೊಡುವವರನ್ನು ಲೋಕದಲ್ಲಿ ಮೂರ್ಖರೆಂದು ಕರೆಯುವರಲ್ಲವೇ? ಆ ದಮಯಂತಿಯ ವಿಷಯದಲ್ಲಿ ನೀವು ಹೇಗೆ ನನ್ನನ್ನು ಪ್ರಾರ್ಥಿಸಿದಿರೋ ಹಾಗೆಯೇ ನಾನೂ ನಿಮ್ಮನ್ನು ಪ್ರಾರ್ಥಿಸುವೆನು. ಅದಲ್ಲದೆ ನಾನೇ ಮೊತ್ತಮೊದಲು ಅವಳನ್ನು ಮನಸಾ ವರಿಸಿದೆನು. ಅವಳೂ ನನ್ನನ್ನು ವರಿಸಿರುವಳು. ಹೀಗಿರುತ್ತ ಈಗ ನಾನು ನಿಮ್ಮ ದೂತನಾಗಿ ಅವಳ ಬಳಿಗೆ ಹೋದರೂ ಆಕೆಯು ಸರ್ವಥಾ ನಿಮ್ಮನ್ನು ವರಿಸಲಾರಳು; ಆದಕಾರಣ ನೀವು ನನ್ನಲ್ಲಿ ಅನುಗ್ರಹ ಬುದ್ಧಿಯನ್ನು ತೋರಿ ಇಂತಹ ನೀಚವಾದ ದೌತ್ಯ ಕರ್ಮದಲ್ಲಿ ನನ್ನನ್ನು ನಿಯೋಗಿಸಬಾರದು. ಇದು ಜನರ ಹಾಸ್ಯಕ್ಕೆ ಮಾತ್ರ ಕಾರಣವಾಗಬಹುದಲ್ಲದೆ ಇದರಿಂದ ಹೆಚ್ಚಿನ ಯಾವ ಪ್ರಯೋಜನವೂ ದೊರೆಯಲಾರದು.''

ನಳರಾಜನು ಈ ಪ್ರಕಾರ ತನ್ನ ಮಾತುಗಳನ್ನು ಹೇಳಿ ಮುಗಿಸಿದೊಡನೆಯೇ ಇಂದ್ರನು ತನ್ನ ಅನುಯಾಯಿಗಳ ಮುಖವನ್ನು ನೋಡಿ ನಕ್ಕು ಹೇಳತೊಡಗಿದನು—“ಎಲೈ ಅರಸನೇ! ಚಂದ್ರವಂಶೋತ್ಪನ್ನನಾದ ನಿನಗೆ ಈ ಮಾತು ಉಚಿತವೇ? ಅರ್ಥಿಗಳ ಇಷ್ಟಾರ್ಥವನ್ನು ಸಲಿಸುವುದಾಗಿ ಮೊದಲು ಮಾತು ಕೊಟ್ಟು ಈಗ ನೀನು ನಿನ್ನ ನಾಲಗೆಯನ್ನು ವಕ್ರವಾಗಿ ಮಾಡುವುದನ್ನು ಕಂಡರೆ ನಮಗೆ ನಿನ್ನ ವಂಶವನ್ನು ಕುರಿತು ಸಂದೇಹವಾಗುತ್ತಿದೆ. ಈ ಲೋಕವು ಕ್ಷಣಭಂಗುರವಾಗಿರುವುದನ್ನು ನೀನು ನಿನ್ನ ಕಣ್ಣಿದಿರಿಗೇ ನೋಡುತ್ತಿದ್ದೀಯೆ. ಪ್ರಪಂಚವು ದುಃಖಮಯವಾದುದರಿಂದ ವಿಫಲವೆಂಬುದನ್ನೂ ಚೆನ್ನಾಗಿ ಅರಿತಿರುವೆ. ಹೀಗಿದ್ದರೂ ಕೂಡ ನಿನ್ನಂತಹ ಬುದ್ಧಿಶಾಲಿಯ ಮನಸ್ಸು ಶಾಶ್ವತವಾದ ಕೀರ್ತಿಯನ್ನು ಬಿಟ್ಟು ಅಸ್ಥಿರವಾದ ವಿಷಯದ ಕಡೆಗೆ ಚಲಿಸತೊಡಗಿತು, ಎಂದಾದ

ಮೇಲೆ ಹೀಗೆ ಹೇಳುವುದೇಕೆ! ಉತ್ತಮವಾದ ಕುಲದಲ್ಲಿ ಹುಟ್ಟಿದವರಲ್ಲಿ ಒಂದೆ ಬಾರಿಯೂ ಅರ್ಥಿಗಳ ಅರ್ಥವನ್ನು ಪೂರಯಿಸದೆ ವ್ಯರ್ಥವಾಗಿ ಮಾಡಿದವರಿಲ್ಲ; ನೀನು ಮಾತ್ರ ಈಗ ಈ ಕಾರ್ಯಕ್ಕೆ ಕೈಹಾಕುವುದರಿಂದ ಆ ಪೂಜ್ಯವಾದ ವಂಶಕ್ಕೇ ಕಳಂಕವನ್ನು ಉಂಟುಮಾಡುತ್ತೀಯೆ ಎಂದು ನನ್ನ ಭಾವವು. ವಿಚಾರಮಾಡಿ ನೋಡಿದರೆ ಅರ್ಥಿಗಳನ್ನು ನೋಡಿದ ಮಾತ್ರಕ್ಕೆ ವಿಕಾರಗೊಳ್ಳುವ ಮುಖಮುದ್ರೆಯೂ, ಮೌನವೂ, ಅಸಂತೋಷವೂ ಇನ್ನು ನಿನ್ನನ್ನೇ ಆ ವಂಶಕ್ಕೆ ಕಳಂಕಯುಕ್ತನನ್ನಾಗಿ ಹೇಳಬೇಕಲ್ಲದೆ ವಂಶದ ಮೂಲಪುರುಷನಾದ ಚಂದ್ರನನ್ನು ಕಳಂಕಿಯೆಂದು ಹೇಳಲು ಬರುವುದಿಲ್ಲ. ಆತನಲ್ಲಿರುವುದು ಮಹಾವಿಷ್ಣುವಿನ ಎದೆಯಲ್ಲಿರುವ ಶ್ರೀವತ್ಸದಂತಹ ಗುರುತು ಮಾತ್ರವೇ ಹೊರತು ಕಳಂಕವಲ್ಲ. ನೀನು ಚಿಕ್ಕಂದಿನಲ್ಲಿ ಅಕ್ಷರಾಭ್ಯಾಸದ ವೇಳೆ ನಕಾರವನ್ನು ಕಲಿಯಲಿಲ್ಲವೆಂದು ತೋರುವುದು. ಆದುದರಿಂದಲೇ ನೀನು ಈಗ ಒಲ್ಲೆನೆಂದು ಹೇಳುವುದರ ಬದಲು ಸುಮ್ಮಸುಮ್ಮನೆ ನೆಪವನ್ನು ಹೇಳುತ್ತ ಹೋಗುತ್ತೀಯೆ." ಇಂದ್ರನು ಈ ಪ್ರಕಾರ ಹೇಳಿ ಮುಗಿಸಿದ ತರುವಾಯ ಅಗ್ನಿಯು :—

"ಎಲೈ ನಳನೇ! ಇದೇನು!! ಕರಗತವಾದ ಕೀರ್ತಿಯನ್ನು ನೀನಾಗಿಯೇ ತಳ್ಳಿಬಿಡಲು ಯತ್ನಿಸುತ್ತೀಯೆ? ಲೋಕದಲ್ಲಿ ನಿನ್ನನ್ನು ಬಿಟ್ಟು ಇನ್ನು ಯಾವ ಮನುಷ್ಯನೂ ಕಲ್ಪವೃಕ್ಷಗಳಿಗೂ ಕೂಡ ಒಡೆಯನಾದ ಇಂದ್ರನು ಯಾಚಕನಾಗಿ ಬಂದಿರಲು ಅವನನ್ನು ಅಲಕ್ಷ್ಯದಿಂದ ಕಾಣನು. ಇದುವರೆಗೆ ದೇವತೆಗಳು ತಮ್ಮ ಕಾರ್ಯವನ್ನು ತಾವೇ ಸಾಧಿಸಿಕೊಳ್ಳಬಲ್ಲವರೆಂಬ ಕೀರ್ತಿ ಇದ್ದಿತು. ಆದರೆ ಅವರಿಗೆ ಈ ಕಾರ್ಯದಲ್ಲಿ ನಿನ್ನ ಸಹಾಯದ ಆವಶ್ಯಕತೆ ಇದ್ದುದರಿಂದ ದೇವತೆಗಳಿಗೂ ಸಹಾಯಮಾಡತಕ್ಕವನೆಂಬ ಕೀರ್ತಿಯನ್ನು ಕಟ್ಟಿಕೊಳ್ಳಲು ನಿನಗೆ ಇಷ್ಟವಿಲ್ಲವೇ?" ಎಂದು ಅಗ್ನಿಯು ತನ್ನ ಮಾತನ್ನು ಮುಗಿಸಿದೊಡನೆಯೇ ಯಮನು :—

"ವೀರಸೇನ ಕುಲದೀಪಕನಾದ ನಳನೇ! ಚಂದ್ರಕಿರಣವನ್ನು ಕತ್ತಲೆಯು ಗೆದ್ದಂತೆ ಚಂದ್ರವಂಶೋತ್ಪನ್ನನಾದ ನಿನಗೆ ಇಂತಹ ಮೋಹವೆಂಬ ಅಂಧಕಾರವು ಉಚಿತವಾದುದೇ? ಸಮುದ್ರ ರತ್ನಗಳಿಗೂ ಆಕರವಾದ ರೋಹಣಾದ್ರಿಯು ಬೆಟ್ಟವಾಗಿದ್ದರೂ, ಕಾಮಧೇನುವು ಪಶುವಾಗಿದ್ದರೂ ಅರ್ಥಿಗಳನ್ನು ಕುರಿತು ಅವು ಎಂದೂ ವಿಮುಖವಾದುವಲ್ಲ; ಹೀಗಿರುತ್ತ ನಿನ್ನಂತಹವನು ಆ ಪಶು ಪಾಷಾಣಗಳಿಗಿಂತ ಕೀಳಾದವನೋಲೆ ಮುಂದೆ ಇಲ್ಲ ಹೇಳುವುದೇಕೆ! ಪ್ರಾಣಿಗಳ ಬಾಳುವೆಯು ಬಲೆಯಾಟದಂತೆಯೂ, ಕಣ್ಣಾಲಿಯ ತಿರುಗಿಸುವಿಕೆಯಂತೆಯೂ ಕ್ಷಣಿಕವಾಗಿರಲು ಆ ಬಾಳುವೆಯಲ್ಲಿಯೇ ದೃಢವಾದ ವಿಶ್ವಾಸವನ್ನಿಟ್ಟಿರುವುದು ಮೂರ್ಖತನವಲ್ಲವೇ? ಮೇಘವಾದರೂ ತನ್ನನ್ನು ಯಾಚಿಸುತ್ತಿರುವ ಚಾತಕಗಳಿಗೆ ಜಲಬಿಂದುಗಳನ್ನು ಕೊಡಲಾರದೆ ಹೋದಲ್ಲಿ ಮ್ಲಾನತ್ವವನ್ನು ಹೊಂದುವು

ದೆಂದಮೇಲೆ ನಿನ್ನ ವಿಚಾರದಲ್ಲಿ ಬೇರೆ ಹೇಳಬೇಕೆ?'' ಎಂದು ಹೇಳಿ, ಯಮನು ತನ್ನ ಉಪನ್ಯಾಸವನ್ನು ಮುಗಿಸುವಷ್ಟಕ್ಕೆ ವರುಣನು ತನ್ನ ಕೈಯನ್ನೆತ್ತಿ:—

''ಎಲೈ ವೀರನೇ! ನಿನ್ನಂಥವನಿಗೆ ದಾನಧಾರೆಯೆಂಬ ಮುತ್ತಿನ ಹಾರವೇ ಉಚಿತವಾದ ಪತ್ನಿಯಲ್ಲದೆ, ಈ ಲೌಕಿಕವಾದ ಭೂಮಿಯನ್ನಾಗಲಿ ದಮಯಂತಿಯನ್ನಾಗಲಿ ಪತ್ನಿಯೆಂದು ತಿಳಿಯಬೇಡ. ಅದಲ್ಲದೆ ಯಾವ ಕರ್ಣನ ಸ್ವರ್ಣವರ್ಷವೇ ಅಭೇದ್ಯವಾದ ಕವಚವಾಗಿತ್ತೋ, ಯಾವ ದಧೀಚಿಯ ಮೂಳೆಗಳು ವಜ್ರಾಯುಧಗಳಾಗಿದ್ದುವೋ ಅಂತಹ ಕರ್ಣ ದಧೀಚಿಗಳು ಈ ಲೋಕದಲ್ಲಿ ಸ್ಥಿರವಾಗಿ ಬಾಳಿ ಉಳಿಯತಕ್ಕವರೇ? ಆದರೂ ಅವರ ಔದಾರ್ಯದ ಕೀರ್ತಿಯು ಮಾತ್ರ ಎಂದೆಂದಿಗೂ ಸ್ಥಿರವಾಗಿ ಉಳಿಯತಕ್ಕುದಷ್ಟೆ. ಅದರಂತೆಯೇ ನೀನೂ ಅವರ ದಾರಿಯನ್ನು ಹಿಡಿದು ಸ್ಥಿರವಾದ ಕೀರ್ತಿಯನ್ನು ಸಂಪಾದಿಸು. ಬಲಿಯಾಗಲಿ ವಿಂಧ್ಯನಾಗಲಿ ಯಾವ ಪ್ರತಿಜ್ಞಾಪಾಶದಿಂದ ಬಂಧಿತರಾಗಿ ಇಂದಿಗೂ ಆ ತಮ್ಮ ಪ್ರತಿಜ್ಞೆಯನ್ನು ಪಾಲಿಸುತ್ತಿರುವರೋ ಅವರ ಹಾದಿಯಲ್ಲಿಯೇ ನಿನ್ನಂತಹ ಬಲ್ಲವನೂ ನಡೆಯುವುದು ಉಚಿತವಷ್ಟೆ! ತಾನು ಪ್ರತಿಜ್ಞೆ ಮಾಡಿದ ಅರ್ಥವನ್ನು ನಡೆಯಿಸುವುದು ಎಷ್ಟು ತೊಂದರೆಯಾದರೂ, ಅದನ್ನು ನಿರ್ಬಂಧದಿಂದಾದರೂ ನಡೆಯಿಸಬೇಕಾದುದು ಕರ್ತವ್ಯವೇ. ಸ್ಥಿರವಾದುದನ್ನು ತ್ಯಜಿಸಿ, ಅಸ್ಥಿರವಾದುದಕ್ಕೆ ಕೈಯಿಕ್ಕುವಷ್ಟು ಮೂಢನು ನೀನಲ್ಲವಷ್ಟೆ! ಲೋಕದ ಜನರು ನಮ್ಮಂಥವರನ್ನು ಸಂಪಾದಿಸುವುದಕ್ಕಾಗಿ ತಪಸ್ಸು ಮೊದಲಾದ ಎಷ್ಟೋ ಪ್ರಯತ್ನಗಳನ್ನು ಮಾಡುತ್ತಿರುವರು. ಹೀಗಿರುವಾಗ ಅಂತಹ ಶಕ್ತಿಯುಳ್ಳ ನಾವೇ ಈಗ ನಿನ್ನನ್ನು ಯಾಚಿಸುವುದೆಂದರೆ ನಿನ್ನ ಭಾಗ್ಯಕ್ಕೆ ಎಣೆಯಿರುವುದೇ? ಈಗ ನಮ್ಮ ಇಷ್ಟಾರ್ಥವನ್ನು ನೀನು ಕೈಗೂಡಿಸಿಕೊಟ್ಟಲ್ಲಿ ನಿನ್ನ ಕೀರ್ತಿಯು ದಿಗಂತ ವಿಶ್ರಾಂತವಾಗುವುದೆಂದು ಬೇರೆ ಹೇಳಬೇಕಾದುದೇ ಇಲ್ಲ; ಅಷ್ಟು ಮಾತ್ರವೇ ಅಲ್ಲ; ನಮ್ಮ ಇಷ್ಟಾರ್ಥವನ್ನು ಪೂರಯಿಸದೆ ಹೋದಲ್ಲಿ ಆಗಲೂ ನಿನ್ನ ಅಪಕೀರ್ತಿಯು ದಿಗಂತ ವಿಶ್ರಾಂತವಾಗುವುದೆಂದು ಎಣಿಸು. ಕಲ್ಪವೃಕ್ಷವು ಕೂಡ ಈಗ ನಾವು ನಿನ್ನನ್ನು ಆಶ್ರಯಿಸಿದುದಕ್ಕಾಗಿ ದಾನಜನ್ಯವಾದ ಕೀರ್ತಿಯನ್ನು ಕಳಕೊಂಡು ಕೇವಲ ಶುಭ್ರವಾದ ತನ್ನ ಪುಷ್ಪಗಳಿಂದ ಮಾತ್ರ ಆಕಾಶವನ್ನು ಬೆಳಗುತ್ತಿರುವುದು. ಎಲೈ ಸತ್ಯಸಂಧನೇ!! ನಿನ್ನ ಯಾತ್ರೆಯು ವ್ಯರ್ಥವಾಗಿ ಪರಿಣಮಿಸಿತೆಂದು ಸರ್ವಥಾ ಎಣಿಸಬೇಡ. ಏಕೆಂದರೆ, ಜನಗಳು ಮನೆಯಿಂದ ಹೊರಗೆ ಹೊರಡುವಾಗ ಶುಭವಾಗಬೇಕೆಂದು ಭರತ, ಅರ್ಜುನ, ಪೃಥುಗಳೊಡನೆ ನಿನ್ನ ಹೆಸರನ್ನೂ ಸೇರಿಸಿ ಸ್ಮರಿಸುತ್ತಿದ್ದಾರೆ. ಹೀಗೆ ಅನ್ಯರಿಗೆ ಯಾತ್ರಾಮಂಗಳವನ್ನುಂಟುಮಾಡತಕ್ಕ ನಿನಗೆ ನಿನ್ನ ಯಾತ್ರೆಯಲ್ಲಿಯೂ ಮಂಗಳವಾಗದೇ? ಇದರಿಂದ ನಿನ್ನ ಮನಸ್ಸಿನ ಸಂದೇಹವನ್ನೆಲ್ಲ ಬಿಟ್ಟು ಸತ್ಯ ಪ್ರತಿಜ್ಞನೆಂಬ ಕೀರ್ತಿಗೆ ಭಾಗಿಯಾಗು. ಆ ನಿನ್ನ ಕೀರ್ತಿಯು ಮೂರು ಲೋಕವನ್ನೂ ವ್ಯಾಪಿಸಿಕೊಳ್ಳಲಿ?'' ಹೀಗೆ ಹೇಳಿ ವರುಣನು ಸುಮ್ಮನಾದನು.

ವರುಣನು ತನ್ನ ಉಪನ್ಯಾಸವನ್ನು ನಿಲ್ಲಿಸಿ ಸುಮ್ಮನಾದೊಡನೆಯೇ ನಳನು ಆ ದಿಕ್ಪಾಲಕರ ಮಾತನ್ನು ನಿರಾಕರಿಸದೆ ದಮಯಂತಿಯಲ್ಲಿ ಅನುರಾಗವೃಕ್ಷದ ನಾಶದರೂ ಬಲಾತ್ಕಾರದಿಂದ ಅವರ ಕಡೆಯ ದೂತನಾಗಲು ಒಪ್ಪಿಕೊಂಡನು. ಇದನ್ನು ಕಂಡು ದೇವೇಂದ್ರನಿಗೆ ಆನಂದವಾಯಿತು. ಆತನು 'ಎಲೈ ನಳನೇ ನಿನಗೆ ಈ ಕಾರ್ಯದಲ್ಲಿ ಅನುಕೂಲವಾಗುವಂತೆ ತಿರಸ್ಕರಿಣೀ ವಿದ್ಯೆಯನ್ನು ಕೊಟ್ಟಿರುವೆನು. ಎರಿದಕೆ ನಿನಗೆ ಯಾವಾಗ ಈ ವಿದ್ಯೆಯು ಉಪಯೋಗವಾಗಬೇಕೆಂದು ಮನಸ್ಸಿನಲ್ಲಿ ಎಣಿಸುವೆಯೋ ಆಗ ನೀನು ಇತರರ ಕಣ್ಣಿಗೆ ಅದೃಶ್ಯನಾಗುವೆ' ಎಂದು ನುಡಿದನು.

ಇಂತು ನೈಷಧೀಯ ಚರಿತೆಯೊಳಗಣ ಪಂಚಮ ಸರ್ಗವು ಮುಗಿಯಿತು.

ಷಷ್ಠ ಸರ್ಗವು

ನಳನು ದೇವೇಂದ್ರನ ದೌತ್ಯವನ್ನು ಸ್ವೀಕರಿಸಿದನು. ಸ್ವೀಕರಿಸಿದೊಡನೆಯೇ ಅಲ್ಲಿ ನಿಲ್ಲದೆ ತ್ವರೆಯಾಗಿ ಕುಂಡಿನಪುರದ ಕಡೆಗೆ ಹೊರಟನು. ಈತನನ್ನು ದಮಯಂತಿಯಲ್ಲಿ ಹುಟ್ಟಿದ ಪ್ರೇಮವು ತಿರುತಿರುಗಿ ಬಾಧಿಸುತ್ತಿದ್ದರೂ ಕೊನೆಗೆ ತಾನು ದೇವತೆಗಳ ದೌತ್ಯವನ್ನು ಸ್ವೀಕರಿಸಿ ಬಂದ ಮೇಲೆ ಅಂತಹ ವಿಕಾರವನ್ನಿಟ್ಟುಕೊಳ್ಳಬಾರದೆಂದು ಮನಸ್ಸನ್ನು ಗಟ್ಟಿಮಾಡಿಕೊಂಡು ಬರುತ್ತಿರುವಾಗ ಅಗಸ್ತ್ಯನಿಗೆ ಸಮುದ್ರಪಾನ ಕಾಲದಲ್ಲಿ ಜಾಠರಾಗ್ನಿಯಿಂದ ವಿಘ್ನವಾಗದಂತೆ ನಳನಿಗೂ ಬಾಧೆಯಾಗಲಿಲ್ಲ. ಈ ಪ್ರಕಾರ ಮನಸ್ಸನ್ನು ದೃಢಪಡಿಸಿಕೊಂಡು ನಳನು ಮುಂದಕ್ಕೆ ಹೊರಟುಹೋದನು. ಇತ್ತ ಇಂದ್ರಾದಿ ದೇವತೆಗಳು ನಳನಿಗೂ ದಮಯಂತಿಗೂ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ತಿಳಿಯಬೇಕೆಂದು ನಳನನ್ನು ಅವರು ಎಲ್ಲಿ ಅಗಲಿದರೋ ಅದೇ ಸ್ಥಳದಲ್ಲಿಯೇ ನಿಂತು ಅವನ ಬರವನ್ನು ಹಾರೈಸುತ್ತ ಅನಿಮೇಷ ದೃಷ್ಟಿಯಿಂದ ಕಾಣುತ್ತಿದ್ದರು.

ಆ ಕಡೆ ನಳನು ಕುಂಡಿನಪುರವೆಂಬ ಕೇವಲ ಶಬ್ದದಿಂದ ಮಾತ್ರವೇ ವ್ಯತ್ಯಾಸವನ್ನು ತೋರಿಸುವ ಭೂಸ್ವರ್ಗದಂತಿದ್ದ ವೈದರ್ಭ ನಗರವನ್ನು ಕಂಡು ನಗರದ ನಡುವೆ ಬರುತ್ತಿರುವಾಗ ಆತನಿಗೆ ಈ ರಾಜವೀಥಿಯು ದಮಯಂತಿಯ ಪಾದಸ್ಪರ್ಶದಿಂದ ಕೃತಾರ್ಥವಾದುದು, ಎಂಬ ಆಲೋಚನೆಯು ಬಂದೊಡನೆಯೇ ಮನಸ್ಸಿನಲ್ಲಿ ಒಂದು ವಿಧವಾದ ಕಳಕಳವಾದರೂ ಸಂಗಡಲೇ ತಾನು ದೇವತೆಗಳ ದೂತನೆಂಬ ಭಾವನೆಯು ಬಂದೊಡನೆಯೇ ಬಿಟ್ಟುಬಿಟ್ಟು ಆ ಚಿಂತನೆಯನ್ನು ಹೊರಗೆ ತಳ್ಳಿದನು. ಮುಂದೆ ಹೋಗುತ್ತ ಹೋಗುತ್ತ ಆತನಿಗೆ ಆ ಮಹಾನಗರದ ಸೌಂದರ್ಯವನ್ನು ಕಂಡು ಅವನ ಕಣ್ಣುಗಳು ರೋಮಾಂಚಗೊಂಡಂತೆ ಆನಂದಾಶ್ರುವನ್ನು ಸುರಿಸುತ್ತ ಬಿಡುವಿಡದೆ ನೋಡುತ್ತಿದ್ದಿತು.

ಬಲಗಣ್ಣು ನಗರದ ಸೌಂದರ್ಯವನ್ನು ನೋಡುವುದರಲ್ಲಿ ತತ್ಪರವಾಗಿದ್ದರೂ ಎಡೆಬಿಡದೆ ಕಂಪಿಸುತ್ತಿದ್ದಿತು.

ಹೀಗೆ ನಳನು ಕೆಲವು ದೂರ ವಿದರ್ಭ ನಗರಿಯ ರಾಜವೀಥಿಯಲ್ಲಿ ಬಂದೊಡನೆಯೇ ಮುಂದೆ ಬಂದು ಗೊತ್ತಾದ ಸ್ಥಳದಲ್ಲಿ ಅವನೂ ಅವನ ಸಾರಥಿಯೂ ರಥದಿಂದ ಕೆಳಗಿಳಿದರು. ನಳನು ದಮಯಂತಿಯ ಅಂತಃಪುರದ ಕಡೆಗೆ ಹೊರಡಲು ಸಿದ್ಧನಾಗಿ ಇಂದ್ರನು ಉಪದೇಶಿಸಿದ ತಿರಸ್ಕರಿಣೀ ವಿದ್ಯೆಯನ್ನು ನೆನೆಯುತ್ತ ತತ್‌ಕ್ಷಣವೇ ಅತನು ಅದೃಶ್ಯನಾಗಿಹೋದನು. ಇದರಿಂದ ನಳನಿಗೆ ಅತ್ಯಂತ ಅನುಕೂಲವಾಗಿ ಅತನು ಮೆಲ್ಲಮೆಲ್ಲನೆ ರಾಜವೀಧಿಯಲ್ಲಿ ಬರುತ್ತ ಸುಂದರವಾದ ಮನೆಗಳ ಸಾಲನ್ನೂ ವಿದ್ವಾಂಸರಾದ ಜನರ ಸಮೂಹವನ್ನೂ ಆನಂದದಿಂದ ನೋಡುತ್ತ, ಅರಮನೆಯ ಸಮೀಪಕ್ಕೆ ಬಂದನು. ದ್ವಾರಪಾಲಕರಾದ ವೀರ ಭಟರು ಸಾಯುಧರಾಗಿ ನಿಂತಿರಲು, ಅವರನ್ನು ಕಂಡು ತಿರಸ್ಕಾರ ಭಾವದಿಂದ ಮುಂದೊತ್ತುತ್ತ, ತಾನು ಗೂಢವಾಗಿ ಚರಿಸುತ್ತಿದ್ದೇನೆಂದು ಜ್ಞಾಪಕಕ್ಕೆ ಬಂದೊಡನೆಯೇ ತನಗೆ ಈ ವ್ಯಾಪಾರವು ಒಳ್ಳಿತಲ್ಲವೆಂದು ಲಜ್ಜಿತನಾದನು. ಸಂಗಡಲೇ ದಮಯಂತಿಯನ್ನು ನೋಡುವೆನೆಂಬ ಆನಂದವೂ, ನೋಡಿದರೂ ತಾನು ದೇವತೆಗಳ ದೂತನೆಂಬ ಭಾವನೆಯಿಂದ ದುಃಖವೂ ಈ ಪ್ರಕಾರ ಅವನ ಮನಸ್ಸಿನಲ್ಲಿ ಹಲವು ವಿಧದ ಭಾವಗಳುಂಟಾದುವು. ಅರಮನೆಯ ಬಾಗಿಲಲ್ಲಿದ್ದ ರಕ್ಷಾಧಿಕಾರಿಗಳು ಇವನನ್ನು ಕಾಣದೆ ಸುಮ್ಮನೆ ಒಳಗೆ ಬಿಟ್ಟರು. ಒಳಗೆ ಬಂದೊಡನೆಯೇ ದಮಯಂತಿಯು ಎಲ್ಲಿರುವಳೆಂಬುದನ್ನು ತಿಳಿಯುವುದಕ್ಕಾಗಿ ಸುತ್ತುಮುತ್ತಲೂ ಲಕ್ಷ್ಯವಿಟ್ಟು ನೋಡತೊಡಗಿದನು. ನಳನು ದ್ವಾರವನ್ನು ದಾಟಿ ಒಳಗೆ ಬಂದನು; ಆಗ ದ್ವಾರಪಾಲಕರು ಬೇರೆ ಯಾವನೋ ಒಬ್ಬನು ದ್ವಾರದ ಬಳಿಗೆ ಬರುತ್ತಿರುವುದನ್ನು ಕಂಡು, ಇವನು ಯಾರು? ಎಂದು ಗಟ್ಟಿಯಾಗಿ ಕೇಳಲು, ನಳನು ಸಂದೇಹದಿಂದ 'ಇವರು ನನ್ನನ್ನು ಕಂಡಿರಬಹುದೇ? ಕಂಡು ನನ್ನನ್ನೇ ಹೀಗೆ ವಿಚಾರಿಸುತ್ತಿರಬಹುದೇ?' ಎಂದು ಸಂಶಯದಿಂದ ತಿರುತಿರುಗಿ ನೋಡುತ್ತ ಮೆಲ್ಲಗೆ ಹೆಜ್ಜೆ ಹಾಕುತ್ತಿದ್ದನು.

ನಳನು ಬರುತ್ತ ಬರುತ್ತ ದಮಯಂತಿಯ ಅಂತಃಪುರವನ್ನೇ ಹೊಕ್ಕನು. ಆ ವೇಳೆ ಅಲ್ಲಿ ಒಬ್ಬ ಬಾಲೆಯು ಉದ್ವರ್ತನೆಗಾಗಿ ತನ್ನ ತೊಡೆಗಳನ್ನು ಸರಿಯಾಗಿ ಮುಚ್ಚಿಕೊಳ್ಳದಿರಲು ನಳನು ಆಕೆಯನ್ನು ಕಂಡೊಡನೆಯೇ ಪರಸ್ತ್ರೀ ಎಂಬ ಭಯದಿಂದ ಕಣ್ಣುಗಳನ್ನು ಮುಚ್ಚಿಕೊಂಡನು. ಅದೇ ಸಮಯದಲ್ಲಿ ಬೇರೊಬ್ಬ ಬಾಲೆಯು ಆ ಮಾರ್ಗವಾಗಿ ಹೋಗುತ್ತ ಅದೃಶ್ಯನಾದ ನಳನನ್ನು ಕಾಣದೆ ತಟ್ಟಾಡಿದಳು. ಈತನೂ ಕಣ್ಣನ್ನು ಮುಚ್ಚಿಕೊಂಡಿದ್ದುದರಿಂದ ಆಕೆಯು ಬರುವುದು ಇವನಿಗೆ ತಿಳಿಯಲಿಲ್ಲ. ಆ ಅಂತಃಪುರದಲ್ಲಿ ಅಪ್ಸರಃಸ್ತ್ರೀಯರಂತೆ ಸುಂದರಿಯರಾದ ಎಷ್ಟೋ ಮಂದಿ ಬಾಲೆಯರು ಇದ್ದರು. ಅಪರಿಚಿತನಾಗಿ ಹೋದ ನಳನಿಗೆ ಅವರಲ್ಲಿ ಯಾರನ್ನು ಕಂಡರೂ, 'ಈಕೆಯು ದಮಯಂತಿಯಾಗಿರ

ಬರುವದೇ?' ಎಂಬ ಧ್ವನಿಯು ಒಮ್ಮೆಯಾದರೂ ಉತ್ಪನ್ನವಾಗದೆ ಹೋದುದು ಆಶ್ಚರ್ಯವೇ. ಮುಂದೆ ಅಂತಃಪುರವನ್ನೆಲ್ಲ ತಿರುಗಿ ನೋಡಿದನು; ಆದರೂ ಎಲ್ಲಿಯೂ ದಮಯಂತಿಯ ಸುಳಿವೇ ದೊರೆಯಲಿಲ್ಲ; ಆಗ ಆತನು ನಿರಾಶೆಯಿಂದ ನಿಟ್ಟುಸಿರು ಬಿಡುತ್ತ ಇರುವಲ್ಲಿ ಅಕಸ್ಮಾತ್ ಆತನಿಗೆ ಮುಂಗಡೆ ದಮಯಂತಿಯು ಕುಳಿತಿರುವಂತೆ ಒಂದು ಭ್ರಾಂತಿಯು ಉತ್ಪನ್ನವಾಗಿ ಅಲ್ಲಿಯೇ ಕುಳಿತು, ಇಂದ್ರಾದಿ ದೇವತೆಗಳು ತನ್ನೊಡನೆ ಹೇಳಿದ ವಾಕ್ಯಗಳಲ್ಲಿ ಸ್ವಲ್ಪ ಭಾಗವನ್ನು ಮೆಲ್ಲಗೆ ಹೇಳಿದನು. ಇದರಿಂದ ಅಂತಃಪುರದಲ್ಲಿ ಮಹಾ ಕೋಲಾಹಲವು ಎದ್ದಿತು. ವಸ್ತುವು ಅದೃಶ್ಯವಾಗಿದ್ದರೂ ವಚನವು ಮಾತ್ರ ಕೇಳಬರುವುದರಿಂದ ಇದು ಯಾವುದೋ ಒಂದು ಭೂತವಾಗಿರಬೇಕೆಂದು ತಿಳಿದು ಭಯದಿಂದ ಆ ಬಾಲೆಯರೆಲ್ಲ ಕಲಕಲವನ್ನೆಬ್ಬಿಸಿದರು. ಇದರಿಂದ ನಳನು ಎಚ್ಚರಗೊಂಡು ಮುಂದೆ ನಡೆಯುತ್ತಿರಲು ಬೇರೊಬ್ಬ ಬಾಲೆಯು ತನ್ನ ಎದೆಯಮೇಲಿನ ಸೆರಗನ್ನು ತೆಗೆದು ಗಾಳಿಗೆ ಮೈಬಿಟ್ಟು ಕುಳಿತಿದ್ದಳು. ಇದನ್ನು ಕಂಡ ನಳನು ಲಜ್ಜಿತನಾಗಿ ಆಕೆಯ ಕಡೆಗೆ ನೋಡದೆ ತನ್ನ ಮುಖವನ್ನು ತಿರುಗಿಸಿದನು. ಆ ಅಂತಃಪುರದಲ್ಲಿ ಮನ್ಮಥನೆಂಬ ಬೇಟೆಗಾರನು ಆ ಬಾಲೆಯರ ಕಟಾಕ್ಷವಿಕ್ಷೇಪಗಳೆಂಬ ತಂತುಗಳಿಂದ ಹೆಣೆದ ಬಲೆಯಿಂದ ಆ ನಳನ ಅಕ್ಷಿದ್ವಂದ್ವಗಳೆಂಬ ಕೃಷ್ಣಸಾರಗಳನ್ನು ಬಂಧಿಸಿಡಲು ಪ್ರಯತ್ನಿಸಿದರೂ ಕೇವಲ ಜಿತೇಂದ್ರಿಯನಾಗಿದ್ದ ಕಾರಣ ಆ ಕಾರ್ಯವು ಮದನನಿಂದ ಸಾಧ್ಯವಾಗಲಿಲ್ಲ. ಆ ಅಂತಃಪುರವೆಲ್ಲವೂ ಸ್ತ್ರೀಮಯವಾಗಿಯೇ ಇದ್ದ ಕಾರಣ ಅಲ್ಲಿದ್ದ ಬಾಲೆಯರೆಲ್ಲ ಯಥೇಷ್ಟವಾಗಿ ವಿಹರಿಸುತ್ತಿದ್ದರು. ನಳನು ಮಾತ್ರ ಪಾಪಭೀರುವಾಗಿದ್ದ ಕಾರಣ ಅಂತಹ ಬಾಲೆಯರನ್ನು ಕಾಣುವುದು ಉಚಿತವಲ್ಲವೆಂದು ಎಣಿಸಿ ಆಗಾಗ ಕಣ್ಮುಚ್ಚಿಕೊಳ್ಳುತ್ತಿದ್ದನು. ಹೀಗೆ ಇವನು ಒಮ್ಮೆ ಕಣ್ಮುಚ್ಚಿರುವ ವೇಳೆಗೆ ಪರಸ್ಪರ ಅಭಿಮುಖರಾಗಿ ಬರುತ್ತಿರುವ ಇಬ್ಬರು ಬಾಲೆಯರು ಅದೃಶ್ಯನಾಗಿದ್ದ ನಳನನ್ನು ಕಾಣದೆ ತಟ್ಟಾಡಿದರು. ನಳನು ದೇವತೆಗಳ ಅದೃಶ್ಯ ವಿದ್ಯಾ ಬಲದಿಂದ ಕಣ್ಣಿಗೆ ಅಗೋಚರನಾದರೂ ಸ್ಪರ್ಶಕ್ಕೆ ಅಗೋಚರನಾಗಲಿಲ್ಲ. ಇದರಿಂದ ಪರಸ್ತ್ರೀ ಸ್ಪರ್ಶವಾದಾಗಲೆಲ್ಲ ಇವನು ತನ್ನನ್ನು ನಿಂದಿಸಿಕೊಳ್ಳುತ್ತಿದ್ದನು. 'ಕಣ್ಣನ್ನು ತೆರೆದು ಹೋಗುವೆನೆಂದರೆ ಪರಸ್ತ್ರೀಯರ ಅಂಗದರ್ಶನ ದೋಷವು ಬರುವುದು. ಮುಚ್ಚಿಕೊಳ್ಳುವೆನೆಂದರೆ ಅಂಗಸ್ಪರ್ಶನದ ಅಪರಾಧವಾಗುವುದು. ಇದಕ್ಕಾಗಿ ಮುಂದೆ ಏನು ಮಾಡಲಿ' ಎಂದು ಎಣಿಸಿ, ಕಡೆಗಣ್ಣಿನಿಂದ ಮಾತ್ರ ನೋಡುತ್ತ ಮುಂದುವರಿಯತೊಡಗಿದನು. ಇದೂ ಆತನಿಗೆ ಸರಿದೋರಲಿಲ್ಲ. ಏಕೆಂದರೆ ಹೀಗೆ ನೋಡುವುದು ಕಾಮುಕರ ಪದ್ಧತಿ. ಸಜ್ಜನರ ಪದ್ಧತಿಯಲ್ಲವೆಂದು ಎಣಿಸುತ್ತ ಕೇವಲ ಸತ್ಪುರುಷನಾದ ಕಾರಣ ಅನ್ಯರಿಂದ ಅಲ್ಲವಾದರೂ ತಾನಾಗಿಯೇ ತನ್ನ ಕಾರ್ಯಕ್ಕಾಗಿ ಲಜ್ಜೆ ಪಡುತ್ತಿದ್ದನು. ಆಮೇಲೆ ಆತನು ಇಂತಹ ಇಕ್ಕಟ್ಟಾದ ದಾರಿಯಲ್ಲಿ ಸಂಚರಿಸುವುದರಿಂದ ಪರಸ್ತ್ರೀಯರ ಸ್ಪರ್ಶಕ್ಕೆ ಕಾರಣವಾಗುವುದೆಂದು ಎಣಿಸಿ ಆ ಮಾರ್ಗವನ್ನೇ ಬಿಟ್ಟು ಹೊರಗಡೆಯಿರುವ ಒಂದು ಚತುಷ್ಪಥ

ದಲ್ಲಿ ಹೋಗಿ ನಿಂತನು. ಅಲ್ಲಿ ಆತನಿಗೆ ನಾಲ್ಕು ದಿಕ್ಕಿನಿಂದಲೂ ಪರಸ್ತ್ರೀಯರ ಮುಖದರ್ಶನವಾಗತೊಡಗಿತು. ಇದರಿಂದ ಅತನು ಇಲ್ಲಿಯೂ ಪಾಪಕ್ಕೆ ಹೆದರಿ ಪರಸ್ತ್ರೀಯರ ಮುಖಚಂದ್ರನಿಂದ ಈತನ ನೇತ್ರಪದ್ಮವು ಮುಚ್ಚಿಕೊಂಡಿತೊ ಎಂಬಂತೆ ಕಣ್ಣುಗಳನ್ನು ಚೆನ್ನಾಗಿ ಮುಚ್ಚಿಕೊಂಡನು. ಆಗ ನಾಲ್ಕು ಕಡೆಯಿಂದ ನಾಲ್ವರು ಸ್ತ್ರೀಯರು ಆ ಮಾರ್ಗವಾಗಿ ಬರುತ್ತ ಇವನನ್ನು ತಾಟಿಸಿ ಇದೆತ್ತಣ ಭೂತವೆಂದು ಹೆದರಿ ಕೂಗುತ್ತ ಪಲಾಯನವಾದರು. ಅವರಲ್ಲಿ ಒಬ್ಬಾಕೆಯು ಉಟ್ಟಿರುವ ಸೀರೆಯು ನಳನು ಧರಿಸಿರುವ ಭೂಷಣಗಳಿಗೆ ಕೆತ್ತಿರುವ ವಜ್ರದ ಮೊನೆಗೆ ಸಿಕ್ಕಿ ಕಿತ್ತುಹೋಗಲು, ಆಕೆಯು ಭಯದಿಂದ ಅದನ್ನು ಲಕ್ಷ್ಯಮಾಡದೆ ದಿಗಂಬರೆಯಾಗಿಯೇ ಓಡುತ್ತಿರಲು ನಳನು ಪರಸ್ತ್ರೀಯರ ವಸ್ತ್ರಾಪಹರಣಕ್ಕೆ ಗುರಿಯಾದೆನಲ್ಲ ಎಂದು ಇನ್ನೂ ಹೆಚ್ಚಿನ ಸಂತಾಪಕ್ಕೆ ಗುರಿಯಾದನು. ಒಬ್ಬಳು ಈತನನ್ನು ತನ್ನ ಕಾಲುಕಡಗದಿಂದ ಹಾದಳು; ಇನ್ನೊಬ್ಬಳ ಉಗುರಿನಿಂದ ಪರಚಲ್ಪಟ್ಟನು. ಬೇರೊಬ್ಬಳು ಧರಿಸಿದ್ದ ಕುಂಕುಮದಿಂದ ಇವನ ಮೈಮೇಲೆ ಬಣ್ಣವಾಯಿತು. ಒಬ್ಬಾಕೆಯು ಕೊರಳಲ್ಲಿ ಧರಿಸಿದ್ದ ರತ್ನಮಯವಾದ ಹಾರದಲ್ಲಿ ಛಾಯಾ ಸ್ವರೂಪಿಯಾದ ನಳನ ಪ್ರತಿಬಿಂಬವು ತೋರಬಂದು ಕ್ಷಣದಲ್ಲಿಯೇ ಮಾಯವಾದರೂ ಆಕೆಯು ಮಾತ್ರ ಬಹಳ ಹೊತ್ತಿನವರೆಗೆ ಅದನ್ನೇ ಎಣಿಸುತ್ತ ನಿಂತಳು. ಬೇರೊಂದೆಡೆ ಮಣಿಕುಟ್ಟಿಮದಲ್ಲಿ ಪ್ರತಿಬಿಂಬಿಸುತ್ತಿದ್ದ ಸುಂದರವಾದ ನಳನ ಪ್ರತಿಬಿಂಬವನ್ನು ಒಬ್ಬಾಕೆಯು ಕಂಡು ಇದಿರಿಗೆ ನೋಡಲಾಗಿ ಯಾವ ಪುರುಷನೂ ಕಾಣದೆ ಹೋದರೂ ಸ್ವಲ್ಪವೂ ಭಯಪಡದೆ ಆ ಪ್ರತಿಬಿಂಬದ ಸೌಂದರ್ಯಕ್ಕೆ ಮರುಳಾಗಿ ಅದನ್ನೇ ದಿಟ್ಟಿಸುತ್ತಿದ್ದಳು. ಆ ವೇಳೆಗೆ ಪುರುಷ ಸ್ಪರ್ಶವಾದಂತೆ ತೋರಿ ಹಜ್ಜೆಯ ಸಪ್ಪಳವೂ ಕೇಳಿಬರಲು ಆಕೆಯು ಇದೇನಾಗಿರಬಹುದೆಂದು ವಿಚಾರಿಸತೊಡಗಿದಳು. ಒಬ್ಬಾಕೆಗೆ ಒಂದೆಡೆ ನಳನ ಸ್ಪರ್ಶವಾದಂತೆ ತೋರಿ ಆಗ ಅವಳು ಬೆದರಿ ಓಡಿಹೋದರೂ ಇನ್ನೊಮ್ಮೆ ಅದೇ ಸ್ಥಳಕ್ಕೆ ಬಂದು ಧೂಳಿನಲ್ಲಿ ಅವನ ಹಜ್ಜೆಯ ಗುರುತುಗಳನ್ನು ಕಂಡು ಆತನ ದರ್ಶನವಾಗಬಹುದೇ ಎಂದು ಕೆಲವು ಹೊತ್ತಿನವರೆಗೆ ನಿರೀಕ್ಷಿಸಿಕೊಂಡಿದ್ದಳು; ಆದರೆ ನಳನು ಮಾತ್ರ ಆ ಸ್ಥಳವನ್ನು ಬಿಟ್ಟು ಹೊರಟುಹೋಗಿದ್ದುದರಿಂದ ಅವನ ದರ್ಶನಲಾಭವು ಅವಳಿಗೆ ದೊರೆಯದೆ ಹೋಯಿತು.

ಅರಮನೆಗಳ ಪರಂಪರೆಗಳಲ್ಲೆಲ್ಲ ಹುಡುಕಿದುದಾಯಿತು; ಆದರೆ ಇದುವರೆಗೆ ದಮಯಂತಿಯು ಮಾತ್ರ ಅವನ ಕಣ್ಣಿಗೆ ಗೋಚರವಾಗಲಿಲ್ಲ. ಇದರಿಂದ ಆತನು ಬಹಳ ಕ್ಷೀಣನಾಗಿ ಬೆಟ್ಟಗಳ ಪರಂಪರೆಯನ್ನೇ ಹೋಲುತ್ತಿರುವ ಆ ಅರಮನೆಗಳ ಬಳಿ ಒಂದೆಡೆ ಸುಮ್ಮನೆ ವಿಶ್ರಾಂತಿಗಾಗಿ ಕುಳಿತನು. ಕುಳಿತವನು ಸುಮ್ಮನೆ ಕೂಡಲಾರದೆ ದಮಯಂತಿಯ ಪ್ರತಿಕೃತಿಯನ್ನು ಬರೆದು ನೋಡತೊಡಗಿದನು. ಈತನು ಈವರೆಗೆ ದಮಯಂತಿಯನ್ನು ಕಾಣದಿದ್ದರೂ ಹಿಂದೆ ಆ ಹಂಸನು ತಾವರೆಯ ದಳದ ಮೇಲೆ ಬರೆದು ತೋರಿಸಿದ ಚಿತ್ರವನ್ನೇ ಮನಸ್ಸಿಗೆ

ತಂದು ಅವನ್ನೇ ತಿರುಗಿ ಬರೆದು ತನ್ನ ಕೊರಳೊಳಗಿನ ಮುತ್ತಿನ ಹಾರವನ್ನು ಆ ಚಿತ್ರಕ್ಕೆ ತೊಡಿಸಿದನು.

ಒಂದೆಡೆ ಮಕ್ಕಳ ಆಟಕ್ಕಾಗಿ ಕರ್ಪೂರ ಚೂರ್ಣದ ಮರಳನ್ನು ಹೊಯ್ದಿದ್ದರು. ಅಲ್ಲಿ ಚಕ್ರವರ್ತಿ ಲಕ್ಷಣ ಚಿಹ್ನಿತವಾದ ಪಾದನ್ಯಾಸವನ್ನು ಕಂಡು ಈ ಅಂತಃಪುರಕ್ಕೆ ಯಾವ ರಾಜಕುಮಾರನು ಬಂದಿರಬೇಕು! ಇಲ್ಲಿಗೆ ಅನ್ಯ ಪುರುಷರ ಪ್ರವೇಶವಿರುವುದಿಲ್ಲವಲ್ಲ! ಎಂದು ಅದನ್ನು ಕಂಡ ಸ್ತ್ರೀಯರೆಲ್ಲ ಆಶ್ಚರ್ಯಪಡುತ್ತಿದ್ದರು. ಒಂದೆಡೆ ಇಬ್ಬರು ಸ್ತ್ರೀಯರು ಪರಸ್ಪರ ಒಬ್ಬರ ಮುಖವನ್ನು ಒಬ್ಬರು ನೋಡುತ್ತ ಮಾತಾಡುತ್ತಿರುವ ವೇಳೆಗೆ ನಳನು ಅವರ ನಡುವೆ ಬರಲಾಗಿ ಒಂದು ಕ್ಷಣದವರೆಗೆ ಒಬ್ಬರ ಮುಖವು ಒಬ್ಬರಿಗೆ ತೋರದೆ ಮರೆಗಟ್ಟಿದಂತಾಯಿತು. ಇದರಿಂದ ಆ ಸ್ತ್ರೀಯರಿಗೆ ಅತ್ಯಾಶ್ಚರ್ಯವಾಗಿ ಸುತ್ತಲೂ ನೋಡುತ್ತಿದ್ದರು. ಬೇರೊಂದು ಕಡೆ ಕೆಲವು ಮಂದಿ ಸ್ತ್ರೀಯರು ಏನನ್ನೋ ನೋಡುತ್ತಿರುವಲ್ಲಿ ಅಕಸ್ಮಾತ್ತಾಗಿ ನಳನು ಅವರ ಇದಿರಿಗೆ ಬರಲು ಅವನು ಧರಿಸಿದ್ದ ಅತ್ಯಚ್ಛವಾದ ವಸ್ತ್ರಗಳಲ್ಲಿ ಆ ಸ್ತ್ರೀಯರ ಪ್ರತಿಬಿಂಬಗಳು ಹೊಳೆಯಲು, ಶೂನ್ಯದಲ್ಲಿ ಪ್ರತಿಬಿಂಬಗಳ ದರ್ಶನವಾದುದಕ್ಕಾಗಿ ಆ ನಾರಿಯರು ಆಶ್ಚರ್ಯಗೊಳ್ಳುತ್ತ ತಿರುತಿರುಗಿ ಅವನ್ನೇ ನೋಡುತ್ತಿದ್ದರು. ಅಂತಃಪುರದ ಒಂದು ಕಡೆ ಇಬ್ಬರು ಸ್ತ್ರೀಯರು ಒಬ್ಬಳ ಕಡೆಗೆ ಒಬ್ಬಳು ಚೆಂಡನ್ನೆಸೆದು ಆಟವಾಡುತ್ತಿರಲು, ಒಬ್ಬಳು ಎಸೆದ ಚೆಂಡು ನಡುವೆ ಬಂದ ನಳನ ಮೈಗೆ ತಗುಲಿ ಅವನ ಅಂಗರಾಗವು ಹತ್ತಿ ನಡುವೆಯಿಂದಲೇ ಹಿಂದಿರುಗಲು ಆ ಇಬ್ಬರಿಗೂ ಅತ್ಯಾಶ್ಚರ್ಯವಾಗಿ ಇದೇನಿರಬಹುದೆಂದು ತಿರುತಿರುಗಿ ವಿಚಾರಿಸಹತ್ತಿದರು.

ಅಂತಃಪುರ ಸಂಚಾರಿಗಳಲ್ಲಿ ಒಬ್ಬಳು ಮತ್ತೊಬ್ಬಳೊಡನೆ 'ಅಮ್ಮಾ! ಪುರುಷ ಪ್ರವೇಶವಿಲ್ಲದ ಈ ಸ್ಥಳದಲ್ಲಿ ಪುರುಷನ ಅಂಗಸ್ಪರ್ಶವಾದಂತೆ ನನಗೆ ತೋರಿತು. ಇದೇನಾಶ್ಚರ್ಯವು!' ಎಂದು ಒಬ್ಬಳೂ, ನಾನು ಪುರುಷನ ನೆರಳಿನಂತಹ ಛಾಯೆಯೊಂದನ್ನು ಕಂಡೆನೆಂದು ಮತ್ತೊಬ್ಬಳೂ, ಯಾರೋ ಪುರುಷ ಸ್ವರದಿಂದ ಮಾತಾಡಿದಂತೆ ಕೇಳಿದೆನೆಂದು ಮೂರನೆಯವಳೂ ಈ ಪ್ರಕಾರ ಪರಸ್ಪರ ಮಾತಾಡುತ್ತಿದ್ದರು. ಇವರ ಸಂಭಾಷಣವೆಲ್ಲವೂ ನಳನಿಗೆ ಕೇಳಿಸುತ್ತಲೇ ಇದ್ದಿತು.

ಈ ಪ್ರಕಾರ ಇತ್ತ ಅಂತಃಪುರದಲ್ಲಿ ಸ್ತ್ರೀಯರು ಭ್ರಮೆಯಿಂದ ಪರಸ್ಪರ ಮಾತಾಡುತ್ತಿರುವಲ್ಲಿ ಅತ್ತ ದಮಯಂತಿಯು ತನ್ನ ತಾಯಿಯಾದ ಪ್ರಿಯಂಗುಮಂಜರಿಗೆ ನಮಿಸುವುದಕ್ಕೆ ಹೋಗಿ ಹಿಂತಿರುಗಿ ಬರುತ್ತಿರುವಲ್ಲಿ ಮಧ್ಯೇ ದಾರಿಯಲ್ಲಿ ನಳನು ಆಕೆಯನ್ನು ಕಂಡರೂ ಹಿಂದೆ ನೋಡಿದಂತೆಯೇ ಇದೂ ಒಂದು ಭ್ರಮೆಯೇ ಆಗಿರಬೇಕೆಂದು ಎಣಿಸಿದನು. ದೇವತೆಗಳ ತಿರಸ್ಕರಿಣೀ ವಿದ್ಯಾಬಲದಿಂದ ಇವನಂತೂ ಆಕೆಯ ಕಣ್ಣಿಗೆ ಗೋಚರನೇ ಆಗಲಿಲ್ಲ. ದಮಯಂತಿಯು ಬರುತ್ತ ತಾಯಿಯು ಅನುಗ್ರಹಿಸಿ ಕೊಟ್ಟಿದ್ದ ಪುಷ್ಪಮಾಲೆಯೊಂದನ್ನು ಕೈಯಲ್ಲಿ ಹಿಡಿದಿದ್ದಳು. ಈಗ ಅಲ್ಲಿ ನಿಬದ್ಧ ಭೂಮಿಯಲ್ಲಿ ನಳನ ಪ್ರತಿಬಿಂಬವನ್ನು ಕಂಡೊಡ

ನೆಯೇ ನೋಡುವುದರಿಂದ ಅದರ ಕಡೆಗೆ ಎಸೆಯಲು ಅದು ದೈವಗತಿಯಿಂದ ಅಲ್ಲಿಯೇ ಸಮೀಪವಿರುತ್ತಿದ್ದ ನಳನ ಮೈಗೇ ತಗುಲಿತು. ತಗುಲಿದುದೇ ಮಾಯವಾಯಿತು. ಆಗ ನಳನು 'ಇದುವರೆಗೂ ಬುದ್ಧಿ ಭ್ರಾಂತಿಯಿಂದ ಎಷ್ಟೋ ದಮಯಂತೀ ಛಾಯೆಗಳನ್ನು ಕಂಡಿದ್ದೇನು. ಆದರೆ ಅವೊಂದೂ ನನಗೆ ಈ ವಿಧವಾದ ಅನುಗ್ರಹ ವನ್ನು ತೋರಿಸಲಿಲ್ಲ. ಆದರೆ ಈಗ ಕಾಣುತ್ತಿರುವ ಈ ಛಾಯೆಯು ಮಾತ್ರ ಇಂತಹ ಅನುಗ್ರಹವನ್ನು ತೋರಲು ಕಾರಣವೇನೆಂದು, ವಿಚಾರಿಸತೊಡಗಿದನು. ಅತ್ತ ದಮಯಂತಿಯೂ ಕೂಡ ತಾನು ಪ್ರತಿಬಿಂಬದ ಕಡೆಗೆ ಎಸೆದ ಪುಷ್ಪ ಮಾಲೆಯು ಮಾಯವಾಗಲು ಕಾರಣವೇನೆಂದು ಆಶ್ಚರ್ಯಪಡತೊಡಗಿದಳು. ಇವರಿಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಬಹು ಹೊತ್ತಿನವರೆಗೂ ಕಂಡರು. ದಮಯಂತಿಯು ನಳನ ಪ್ರತಿಬಿಂಬವನ್ನು ನೋಡುತ್ತಿದ್ದಳು. ನಳನಾದರೋ ನಿಜವಾದ ದಮಯಂತಿಯನ್ನೇ ಭ್ರಮೆಯಿಂದ ತಿಳಿವಿನಿಂದ ಕಾಣುತ್ತಿದ್ದನು. ಒಬ್ಬರ ಮೈಯು ಒಬ್ಬರಿಗೆ ತಗುಲಿತು; ಆದರೂ ನಳನ ಅದೃಶ್ಯತ್ವದಿಂದ ಯಾರಿಗೂ ನಿಜವಾದ ವಿಚಾರವೇ ಹೊಳೆಯಲಿಲ್ಲ.

ದಮಯಂತಿಯು ಈ ಪ್ರಕಾರ ಸ್ವಲ್ಪ ಹೊತ್ತು ಕಾಣುತ್ತಿದ್ದು ಕೊನೆಗೆ ಅಲ್ಲಿಂದ ಹೊರಟು ತನ್ನ ಆವಾಸವನ್ನು ಸೇರಿದಳು. ನಳನಾದರೋ ತಾನು ಅದುವರೆಗೂ ಮುಂದೆ ನೋಡುತ್ತಿದ್ದ ದಮಯಂತಿಯನ್ನು ಕಾಣದೆ ಭ್ರಾಂತನಾಗಿ ಸುತ್ತ ಮುತ್ತಲೂ ಹುಡುಕತೊಡಗಿದನು. ಕೊನೆಗೆ ಬರಿಗಾಲಿನಿಂದ ನಡೆಯುತ್ತ ಎಷ್ಟೋ ಶ್ರಮದಿಂದ ಬಲು ದೊಡ್ಡದಾಗಿ ಗಗನವನ್ನು ಚುಂಬಿಸುತ್ತಿರುವುದೋ ಎಂಬಂತಿದ್ದ ದಮಯಂತಿಯ ಪ್ರಾಸಾದವನ್ನು ತಲಪಿದನು. ಅಲ್ಲಿ ನೂರಾರು ಮಂದಿ ಬಾಲೆಯರು ಪರಸ್ಪರ ವಿನೋದವಾಗಿ ಮಾತಾಡುತ್ತ ಒಬ್ಬಳನ್ನೊಬ್ಬಳು ಕೆಣಕುತ್ತ ಕ್ರೀಡಿಸುತ್ತಿದ್ದರು. ಒಬ್ಬಳು ಪಿಕ, ವೇಣು, ವೀಣಾ ನಾದಗಳನ್ನೂ ತಿರಸ್ಕರಿಸುವಂತೆ ಮಧುರವಾಗಿ ಹಾಡುತ್ತಿದ್ದಳು. ಒಬ್ಬ ಬಾಲೆಯ ಕೈಯಲ್ಲಿದ್ದ ಒಂದು ಶಾರಿಕೆಯು ದಮಯಂತಿಯ ಕಡೆಗೆ ನೋಡಿ—'ಅಮ್ಮಾ ! ರಾಜಕುಮಾರಿಯೇ!! ನೀನೇಕೆ ನಳನಿಗಾಗಿ ಪರಿತಪಿಸುತ್ತಿರುವೆ? ಆತನು ಇಲ್ಲಿಯೇ ನಿನ್ನ ಬಳಿಯೇ ಇರುವನಲ್ಲಾ' ಎಂದು ನುಡಿಯಲು; ನಳನು 'ಓಹೋ ! ಈ ಕುಮಾರಿಯರು ನನ್ನನ್ನು ಅರಿತರು' ಎಂದು ಎಣಿಸಿ ಬೆದರಿದನು. ನಳನೂ ತನ್ನ ಮುಂದೆ ತೋರುತ್ತಿರುವ ದಮಯಂತಿಯನ್ನು ಕಪಟವೆಂದೇ ತಿಳಿದಿದ್ದನು. ಆಕೆಯು ನಳನನ್ನು ಪ್ರತ್ಯಕ್ಷ ಕಾಣಲಾರದಿದ್ದರೂ ಆತನ ಛಾಯೆಯನ್ನು ಮಾತ್ರ ನೆಲದಲ್ಲಿ ಕಂಡು ಆ ಪ್ರತಿಬಿಂಬದ ಕೊರಲಲ್ಲಿ ತನ್ನ ಸಖಿಯು ಸಮಯಕ್ಕೆ ಸರಿಯಾಗಿ ತಂದು ಕೊಟ್ಟ ಮಧೂಕ ಪುಷ್ಪಮಾಲೆಯನ್ನು ಲಜ್ಜೆಯಿಂದ ಇಟ್ಟಳು. ಆ ವೇಳೆ ಒಬ್ಬ ಬಾಲೆಯು ಬಂದು ಅವಳ ಹಣೆಗೆ ತಿಲಕವನ್ನಿಟ್ಟಳು. ಇನ್ನೊಬ್ಬಳು ವೀಣೆಯನ್ನು ಕೈಗೆ ತೆಗೆದುಕೊಂಡು ಅಪ್ಸರರ ಗಾನವನ್ನು ಕೂಡ ಮಿಗಿಸುವಂತೆ ಮನೋಹರ ವಾಗಿ ಹಾಡತೊಡಗಿದಳು. ಮೂರನೆಯವಳೊಬ್ಬಳು ಈ ಪುಷ್ಪಗಳು ಮನ್ಮಥನಿಗೆ ಬಾಣಗಳಾಗಿ ನಿನ್ನಂತಹ ಅಬಲೆಯರನ್ನು ಪೀಡಿಸುತ್ತಿರುವ ಕಾರಣ ಇವುಗಳಿಗೆ

ಪ್ರತೀಕಾರವನ್ನು ಮಾಡುವೆನು, ಎಂಬಂತೆ ಪುಷ್ಪಗಳನ್ನೆಲ್ಲ ಸೂಜಿಗೆ ಚುಚ್ಚಿ ಮಾಲೆಗಟ್ಟತೊಡಗಿದಳು. ಅದನ್ನು ಕಂಡು ದಮಯಂತಿಯು—'ಅಮ್ಮಾ! ನಿನ್ನ ಸಾಹಸವನ್ನು ಇಲ್ಲಿಗೇ ನಿಲ್ಲಿಸು. ತಾನೇ ಸುಡುತ್ತಿರುವ ಅಗ್ನಿಗೆ ವಾಯುವಿನ ಬೆಂಬಲವಾದಂತೆ ಮನ್ಮಥನಿಗೆ ಪುಷ್ಪಗಳನ್ನು ಗುಣದೊಡನೆ ಸೇರಿಸಿಕೊಡುವೆಯಾ?' ಎಂದಳು. ಇನ್ನೊಬ್ಬಾಕೆಯು ಗೆಳತಿಯರೊಡನೆ ಅಕ್ಷವಾಡುತ್ತ ಬೇರೊಬ್ಬಳನ್ನು ಕಂಡು—'ಎಲೇ! ಆ ಶಾರಿಯನ್ನು ಹೊಡೆ' ಎಂದು ಗಟ್ಟಿಯಾಗಿ ನುಡಿಯಲು, ಅಲ್ಲಿದ್ದ ಶಾರಿಕಾಪಕ್ಷಿಯು ತನ್ನನ್ನು ಹೊಡೆಯುವರೆಂಬ ಭಯದಿಂದ ಗಟ್ಟಿಯಾಗಿ ಕೂಗತೊಡಗಿತು. ಇದನ್ನು ಕೇಳಿ ಹೆಣ್ಣುಮಕ್ಕಳೆಲ್ಲ ಗೊಳ್ಳೆಂದು ನಕ್ಕರು. ನಳನಿಗೂ ನಗೆ ಬಂದಿತು. ಆ ದಮಯಂತಿಯ ಬಳಿಯಲ್ಲಿ ಬಂಗಾರದಿಂದ ಮಾಡಲ್ಪಟ್ಟ ಹಂಸಾಕೃತಿಯ ಒಂದು ತಾಂಬೂಲದ ಕರಡಿಗೆಯು ಇದ್ದಿತು. ಇದನ್ನು ಕಂಡೊಡನೆಯೇ ನಳನಿಗೆ ತನಗೆ ಹಿಂದೆ ಉಪಕಾರಮಾಡಿದ ಹಂಸದ ನೆನಪಾಗಿ ಅದೇ ಈ ಹಂಸವಾಗಿರಬಹುದೇ! ಎಂದಾಲೋಚಿಸತೊಡಗಿದನು. ಆ ಸಭಾಮಧ್ಯದಲ್ಲಿ ದಮಯಂತಿಯು ಯಾರೆಂದು ನಳನಿಗೆ ಇನ್ನೂ ಸ್ಪಷ್ಟವಾಗಿ ತಿಳಿಯಲಿಲ್ಲ. ಆತನು ಪರೀಕ್ಷಿಸತೊಡಗಿದನು. ಆಗ ಅನುಪಮ ಸೌಂದರ್ಯದಿಂದ ಶೋಭಿಸುತ್ತಿರುವ ಈ ಬಾಲೆಯೇ ಇವರಲ್ಲಿ ದಮಯಂತಿಯಾಗಿರಬೇಕೆಂದು ಒಂದು ನಿಶ್ಚಯ ಬುದ್ಧಿಯು ನಳನಿಗೆ ಹುಟ್ಟಿತು.

ಬಾಲೆಯರಲ್ಲಿ ಕೆಲವರು ದಮಯಂತಿಯ ವಿನೋದಕ್ಕಾಗಿ ಅಲ್ಲಲ್ಲಿ ನಳನ ಚಿತ್ರವನ್ನು ನೆಲದಮೇಲೆ ಚಿತ್ರಿಸಿದ್ದರು. ಆ ಚಿತ್ರದ ಸಮೀಪದಲ್ಲಿಯೇ ಬಿದ್ದಿದ್ದ ನಳನ ಪ್ರತಿಬಿಂಬಕ್ಕೂ ಆ ಚಿತ್ರಕ್ಕೂ ಯಾವ ವ್ಯತ್ಯಾಸವೂ ತೋರದೆ ಹೋಗಲು ಈಗ ಬಾಲೆಯರು ತಿರುಗಿ ಪ್ರತಿಬಿಂಬವನ್ನು ಹುಡುಕತೊಡಗಿದರು. ಈ ನಡುವೆ ಅಗ್ನಿ, ಯಮ, ವರುಣರು ತಂತಮ್ಮ ಕಡೆಯ ದೂತಿಯರನ್ನು ದಮಯಂತಿಯ ಬಳಿಗೆ ಕಳುಹಿಸಿದರು. ಮನಸ್ಸನ್ನು ತಿರುಗಿಸುವ ಚಾತುರ್ಯವುಳ್ಳ ಆ ದೂತಿಯರು ಬಗೆ ಬಗೆಯಾಗಿ ದಮಯಂತಿಯನ್ನು ಬೋಧಿಸಿದರೂ, ಸಾರ್ಥಕವಾಗದುದನ್ನು ಕಂಡು, ದಮಯಂತಿಯ ವಿಚಾರದಲ್ಲಿ ನಿರಾಶೆಯನ್ನು ಹೊಂದಿದ್ದ ಆತನ ಮನಸ್ಸು ತಿರುಗಿತು. ಆಮೇಲೆ ಇಂದ್ರನು ಕಳುಹಿಸಿದ ದೂತಿಯೊಬ್ಬಳು ಬಂದು ದಮಯಂತಿಯಿಂದಲೂ, ಆಕೆಯ ಸಖಿಯರಿಂದಲೂ ಮರ್ಯಾದೆಯನ್ನು ಹೊಂದಿ ಒಳಗಡೆ ಭಯವಿದ್ದರೂ ಇಂದ್ರಗೌರವದಿಂದ ಆತನ ವಚನವನ್ನು ಮೀರಲಾರದೆ ದಮಯಂತಿಗೆ ಉಪದೇಶಮಾಡತೊಡಗಿದಳು. ಅವಳ ವಚನವನ್ನು ಕೇಳಿ ನಳನ ಆಶೆಯು ನಿರಾಶೆಯಾಗುತ್ತ ಬಂದರೂ ಅವಳು ಏನೆನ್ನುವಳೋ ಕೇಳಬೇಕೆಂದು ನಳನು ಆ ವಚನಗಳಿಗೆ ಚೆನ್ನಾಗಿ ಕಿವಿಗೊಡತೊಡಗಿದನು.

ಇಂದ್ರದೂತಿಯು 'ರಾಜಕುಮಾರಿ! ದೈವ ಲಿಖಿತವನ್ನು ತಿಳಿಯುವುದು ಯಾರಿಗೂ ಸಾಧ್ಯವಲ್ಲ. ನಾನು ಈಗ ಇಂದ್ರನ ಕಡೆಯ ದೂತಿಯಾಗಿ ಬಂದು ನಿನ್ನೊಡನೆ ಮಾತಾಡುವುದರಿಂದ ನನ್ನ ಮಾತಿಗೆ ಕೊಂಚ ಲಕ್ಷ್ಯವಿಡುವಮ್ಮ.

ಅನುಗ್ರಹವನ್ನು ಮಾಡು. ದಮಯಂತಿ! ದೇವೇಂದ್ರನು ನಿನ್ನ ಅನಾಮಯವನ್ನು ವಿಚಾರಿಸಿರುವನು. ನಿನ್ನನ್ನು ವರಿಸಬೇಕೆಂಬುದೇ ಆತನ ಮುಖ್ಯವಾದ ಆಶೆಯು. ನಿನ್ನಂತಹ ಸುಂದರಿಯ ವಿಚಾರದಲ್ಲಿ ಆತನು ಈ ಆಶೆಯನ್ನಿಟ್ಟುದು ಅಪರಾಧವಾದ ಕಾರಣ ಆತನ ಕಂಠವನ್ನು ಸ್ವಯಂವರದ ವೇಳೆ ವರಣಮಾಲಿಕೆಯಿಂದ ಬಿಗಿ. ದೇವತೆಗಳು ಹಿಂದೆ ಇವನ ತಮ್ಮನಾದ ಉಪೇಂದ್ರನಿಗಾಗಿ ಕ್ಷೀರೋದಧಿಯನ್ನು ಕಡೆದು ಲಕ್ಷ್ಮಿಯನ್ನು ಪಡೆದರು. ಈಗ ಅವನಣ್ಣನಾದ ಇಂದ್ರನು ನಿನ್ನನ್ನು ವಿವಾಹವಾಗುವುದರಿಂದ ಆತನೂ ಲಕ್ಷ್ಮೀಪತಿಯೆಂಬ ಗುಣ ನಾಮವನ್ನು ಧರಿಸಲು ಯೋಗ್ಯನಾಗುವನು. ಸುಂದರೀ ಈ ಸ್ವರ್ಗಾದಿ ಲೋಕ ಪಙ್ಕ್ತಿಯಲ್ಲಿ ದ್ಯೌಎಂಬ ಸ್ವರ್ಗವೇ ಮೇಲಾದುದು. ಅದರಲ್ಲಿ ಅದಿತೇಯರೆಂಬ ದೇವತೆಗಳು ಉತ್ಕೃಷ್ಟರು. ಅವರಲ್ಲಿ ಮಹೇಂದ್ರನು ಮತ್ತೂ ಮೇಲಾದವನು. ಅಂತಹ ಇಂದ್ರನೇ ನಿನ್ನನ್ನು ಅರ್ಥಿಸಿ ಬಂದಿರಲು ಅವನಿಗಿಂತ ಉತ್ಕೃಷ್ಟನಾದ ವರನು ದೊರೆಯುವನೆಂದು ಎಣಿಸಿರುವೆಯಾ? ಯಾವ ಇಂದ್ರನು ಶತಯಾಗದ ಫಲರೂಪವಾದ ಆ ಇಂದ್ರ ಪದವಿಯನ್ನು ಹೊಂದಿರುವನೋ ಆ ಇಂದ್ರನು ನಿನ್ನನ್ನು ಬಂದು ಯಾಚಿಸುವುದೆಂದರೆ ಸಾಮಾನ್ಯವೆಂದು ತಿಳಿದಿರುವೆಯಾ? ನೀನು ಆತನಲ್ಲಿ ಅನುಗ್ರಹವಿಟ್ಟು ಅವನನ್ನು ಕೈಹಿಡಿದೆಯಾದರೆ ಇಂದ್ರಾಣಿಯೆಂಬ ಬಿರುದಿಗೆ ಪಾತ್ರಳಾಗುವೆಯಲ್ಲದೆ ನಿನ್ನ ಭಾಗ್ಯವನ್ನು ಏನೆಂದು ಹೇಳಲಿ. ನೀನು ಆತನನ್ನು ಮದುವೆಯಾದರೆ ಮಂದಾಕಿನೀ ತೀರದಲ್ಲಿಯೂ, ನಂದನ ವನದಲ್ಲಿಯೂ ವಿಹರಿಸುವ ಪುಣ್ಯವು ನಿನ್ನ ಪಾಲಿಗೆ ಬಂದಂತಾಗುವುದು. ಅದಲ್ಲದೆ ಮಾಧವನೇ ನಿನ್ನ ಭಾವನಾಗಿಯೂ, ಲಕ್ಷ್ಮಿಯು ನಿನ್ನ ಓರಗಿತ್ತಿಯಾಗಿಯೂ ಆಗುವರು. ಯತ್ನವಿಲ್ಲದೆ ಲಭ್ಯವಾಗತಕ್ಕ ಇಂತಹ ಶ್ರೇಯಸ್ಸುಗಳನ್ನೆಲ್ಲ ನೀನು ಒಲ್ಲೆನೆಂದು ತಳ್ಳಬಹುದೇ? ಹಿಂದೆ ತ್ರೈಲೋಕ್ಯ ರಾಜ್ಯಾಧಿಪತ್ಯವನ್ನು ಯಾಚಿಸುವುದಕ್ಕಾಗಿ ಬಲಿಯ ಬಳಿಗೆ ಹೋದ ವಿಷ್ಣುವೂ ಕೂಡ ವಾಮನನಾದನು. ಇಂತಹ ಕಷ್ಟತರವಾದ ಯಾಚನೆಯನ್ನು ಇಂದ್ರನು ನಿನಗಾಗಿ ಮಾಡುವನೆಂದರೆ ನಿನ್ನ ಭಾಗ್ಯವೇನು ಕಡಮೆಯಾದುದೇ? ಯಾವ ದೇವತೆಗಳಿಗೆ ನೀನು ತ್ರಿಸಂಧ್ಯೆಯಲ್ಲಿಯೂ ವಂದಿಸುತ್ತಿರುವೆಯೋ ಅಂಥವರ ಉಪಕಾರವನ್ನು ಮನಸ್ಸಿಗೆ ತಾರದೆ, ನಿನ್ನ ಪಾದದ ಬಳಿ ಬಿದ್ದಿರುವ ಅವರನ್ನು ಕೃತಾರ್ಥರನ್ನಾಗಿ ಮಾಡದೆ ಇರುವುದು ಉಚಿತವಲ್ಲ; ಹೀಗೆ ಹೇಳುತ್ತ ಇಂದ್ರನು ಅನುಗ್ರಹಿಸಿ ಕೊಟ್ಟಿರುವ ಪಾರಿಜಾತ ಪುಷ್ಪಮಾಲಿಕೆಯನ್ನು ದಮಯಂತಿಗೆ ಅರ್ಪಿಸಿದಳು. ಅದರ ವಾಸನೆಯು ಎಲ್ಲ ಆಕೆಗೂ ಹರಡಿದರೂ ನಳನಿಗೆ ಮಾತ್ರ ಅದು ನಿರಾಶೆಯನ್ನುಂಟುಮಾಡಿತು.

ಈ ಮಾತುಗಳನ್ನೆಲ್ಲ ಕೇಳುತ್ತಿದ್ದ ದಮಯಂತಿಯ ಸಖಿಯರಲ್ಲಿ 'ಆರ್ಯೆ! ದಮಯಂತಿ! ನೀನು ಇಂದ್ರನನ್ನು ವರಿಸುವ ವಿಚಾರದಲ್ಲಿ ಚಿಂತಿಸುತ್ತ ಕುಳ್ಳಿರುವುದು ಉಚಿತವಲ್ಲ' ಎಂದು ಒಬ್ಬಳೂ, 'ಇದು ಯೋಗ್ಯವಾದ ಸಂಬಂಧವು, ನೀನು ಅವಶ್ಯವಾಗಿ ಒಪ್ಪಬೇಕು' ಎಂದು ಮತ್ತೊಬ್ಬಳೂ, 'ಇದನ್ನು ಅಂಗೀ

ಕರಿಸುವುದೇ ಉಚಿತವಾದ ಉತ್ತರ'ವೆಂದು ಸೂಚನೆಯನ್ನೂ ಹೇಳಲಾಗಿ; ದಮಯಂತಿಯು 'ಅಮ್ಮಾ! ಗೆಳತಿಯೇ! ನಾನು ಹಿಂದೆ ಯಾವಾಗಲಾದರೂ ನಿನ್ನ ವಚನವನ್ನು ತಿರಸ್ಕರಿಸಿದುದಿದೆಯೆ? ಆದರೂ ಹೇಳತಕ್ಕ ವಿಶೇಷವು ಸ್ವಲ್ಪವಿರುವುದು' ಎನಲು, ಇಂದ್ರ ದೂತಿಗೂ ದಮಯಂತಿಯ ಸಖಿಯರಿಗೂ ಹಿಡಿಸಲಾರದ ಆನಂದವಾಯಿತು. ಇವಳು ತನ್ನ ಮಾತನ್ನು ಸ್ವೀಕರಿಸಿದಳೆಂದೇ ಅವರ ಭಾವನೆ. ಅತ್ತ ಅದೃಶ್ಯನಾಗಿದ್ದ ನಳನು ಮಾತ್ರ ಚಿಂತಿಸತೊಡಗಿದನು; ಅತ್ತ ಸ್ತ್ರೀರತ್ನವೂ ಲಭ್ಯವಾಗುವಂತೆ ತೋರುವುದಿಲ್ಲ; ಇತ್ತ ಪರೋಪಕಾರವೂ ಕೈಗೂಡಲಿಲ್ಲ; ಹೀಗೆಂದು ದಮಯಂತಿಯ ವಿಚಾರವಾಗಿ ಚಿಂತಿಸುತ್ತಿದ್ದ ಆ ನಳನ ಹೃದಯಾರವಿಂದವು ದಮಯಂತಿಯ ಮುಖಚಂದ್ರನಿಂದ ಸಂಕೋಚವಾದಂತೆ ತೋರಿತು. ದಮಯಂತಿಯು ಮಾತ್ರ ಮಂದಹಾಸದೊಡನೆ ತನ್ನ ಅಭಿಪ್ರಾಯಕ್ಕೆ ವಿರುದ್ಧವಾಗಿ ಮಾತಾಡುತ್ತಿರುವ ಗೆಳತಿಯರನ್ನೆಲ್ಲ ಗದರಿಸಿ, ಆ ಇಂದ್ರ ದೂತಿಯು ಕೊಟ್ಟ ಪಾರಿಜಾತ ಮಾಲಿಕೆಗೆ ವಂದಿಸಿ ಆಕೆಯೊಡನೆ ಹೀಗೆ ಉತ್ತರ ಹೇಳತೊಡಗಿದಳು:—

'ಅಮ್ಮಾ! ದೇವದೂತಿಯೇ!! ಇಂದ್ರನ ವಿಷಯಕವಾದ ಸ್ತುತಿಯಲ್ಲಿ ತೋರಿಸತಕ್ಕ ನಿನ್ನ ಸಾಹಸವನ್ನು ಇಲ್ಲಿಯೇ ನಿಲ್ಲಿಸು. ವೇದವು ಕೂಡ ಯಾವನನ್ನು ಪೂರ್ಣವಾಗಿ ತಿಳಿಯಲಾರದೋ ಅಂಥವನನ್ನು ನೀನು ವರ್ಣಿಸುವುದಾದರೂ ಹೇಗೆ? ಸರ್ವಜನರ ಮನಸ್ಸಿಗೆ ಸಾಕ್ಷಿಭೂತನಾದ ಆ ಇಂದ್ರನಿಗೆ ನಾನು ಪ್ರತ್ಯುತ್ತರವಾಗಿ ಹೇಳಿಕಳುಹಿಸುವುದಾದರೂ ಏನಿದೆ? ಮೂಢರಿಗೆ ಮಾತ್ರ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಬೇಕೇ ಹೊರತು ಸರ್ವಜ್ಞರಿಗಲ್ಲ. ಅಲ್ಲದೆ ಆ ದೇವರಾಜನ ವಿಚಾರದಲ್ಲಿ ಯಾರ ನಾಲಗೆಯೂ ಒಲ್ಲೆನೆಂಬ ಪರುಷವಾಕ್ಯವನ್ನು ನುಡಿಯಲಾರದು. ನಾನಾದರೋ ಕೇವಲ ಬಾಲೆಯಾದ ಕಾರಣ ಆತನ ಆಜ್ಞೆಯನ್ನು ತಿರಸ್ಕಾರಮಾಡಿದರೂ ಬಾಲ್ಯ ಚಾಪಲ್ಯದಿಂದ ಅಪರಾಧವನ್ನು ಮಾಡಲು ಬಗೆದಿರುವೆನು. ಇಂದ್ರನು ನನ್ನ ಮನೋದಾರ್ಢ್ಯದ ಪರೀಕ್ಷೆಗಾಗಿಯೇ ಈ ಕೃತಿಯನ್ನು ಮಾಡಿರುವನೆಂದು ನಾನು ತಿಳಿಯುವುದರಿಂದ ನನ್ನ ತಪಸ್ಸಿನ ಫಲವು ಕೈಗೂಡಿತೆಂದೇ ಭಾವನೆ. ನಾನಾದರೂ ಇಂದ್ರಾಜ್ಞೆಯನ್ನು ಪೂರ್ಣವಾಗಿ ಧಿಕ್ಕರಿಸುವುದಿಲ್ಲ. ಇಂದ್ರಾಂಶದಿಂದ ಹುಟ್ಟಿರುವ ನರಪತಿಯೊಬ್ಬನನ್ನು ವರಿಸುವೆನೆಂದು ಸಂಕಲ್ಪಿಸಿರುವೆನು. ನಾನು ಆ ಸಂಕಲ್ಪದಂತೆ ನಡೆಯದೆ ಹೋದರೆ ನನ್ನ ವ್ರತಕ್ಕೇ ಭಂಗವನ್ನು ತಂದಂತಾಗುವುದು. ನಾನು ವರಿಸುವ ಮಹಾರಾಜನು ಪ್ರತ್ಯಕ್ಷ ಇಂದ್ರನಲ್ಲವಾದರೂ ಪರೋಕ್ಷದಿಂದಾದರೂ ಇಂದ್ರನೇ. ದೇವದೂತಿಯೇ; ನೀನು ಇದುವರೆಗೆ ಇಂದ್ರನ ವಿಷಯದಲ್ಲಿ ಹೇಳಿದ ವಾಕ್ಯಗಳನ್ನೆಲ್ಲ ಆತನ ವಿಚಾರದಲ್ಲಿರುವ ಭಯಭಕ್ತಿಯಿಂದ ಮಾತ್ರ ಕೇಳಿದೆನು. ಹಾಗಲ್ಲವಾದರೆ ಪತಿವ್ರತಾಧರ್ಮಕ್ಕೆ ವಿರೋಧವಾದ ನಿನ್ನ ಮಾತುಗಳನ್ನು ನಾನು ಸರ್ವಥಾ ಕೇಳುತ್ತಿರಲಿಲ್ಲ. ನಾನು ಇದಕ್ಕೆ ಮೊದಲೇ ನನ್ನ ಮನಸ್ಸನ್ನು ದೇವತಾರೂಪಿಯಾದ ಇಂದ್ರನಲ್ಲಿ ಅಲ್ಲ ನರರೂಪಿಯಾದ ಇಂದ್ರನಲ್ಲಿ ಇಟ್ಟಿರುವ

ಕಾರಣ ನಾನು ಇನ್ನು ಮುಂದೆಯೂ ಆತನನ್ನೇ ಭಜಿಸದೆ ಹೋದರೆ ನನ್ನ ಪಾತಿವ್ರತ್ಯಕ್ಕೆ ಹಾನಿಯುಂಟಾಗುವುದರಲ್ಲಿ ಯಾವ ಸಂದೇಹವೂ ಇರದು. ಚೆನ್ನಾಗಿ ವಿಚಾರಿಸಿ ಮೋಕ್ಷ ಸುಖವು ಸಂಸಾರ ಸುಖಕ್ಕಿಂತ ಮೇಲಾದುದೆಂದು ನಿಶ್ಚಯಿಸಿ ಅಂತಹ ಸಂಸಾರ ಸುಖವನ್ನು ತ್ಯಾಗಮಾಡಿದ ಮನುಷ್ಯನು ಹೇಗೆ ಅದಕ್ಕಾಗಿ ಪಶ್ಚಾತ್ತಾಪಪಡನೋ ಹಾಗೆಯೇ ನಾನೂ ಕೂಡ ನನ್ನ ಪೂರ್ಣ ಮನಸ್ಸಿನಿಂದ ವಿಚಾರಿಸಿ ಒಪ್ಪಿಕೊಂಡ ಪುರುಷನ ವಿಚಾರದಲ್ಲಿಯೂ ಮುಂದಕ್ಕೆ ಪಶ್ಚಾತ್ತಾಪಕ್ಕೆ ಎಡೆಯಿರದು. ಪೂಜ್ಯರಾದ ಮಹರ್ಷಿಗಳು ಈ ಭಾರತವರ್ಷದಲ್ಲಿ ಪ್ರಚಾರಗೊಂಡಿರುವ ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಬಹು ಮೇಲಾದುದೆಂದು ಹೇಳಿರುವರು. ನಾನೂ ಅದನ್ನೇ ಇಚ್ಛಿಸಿ ಈ ಭಾರತವರ್ಷದಲ್ಲಿಯೇ ಗೃಹಸ್ಥಾಶ್ರಮದ ಸ್ವೀಕಾರಕ್ಕೆ ಇಚ್ಛೆಪಟ್ಟಿರುವೆನು. ಸ್ವರ್ಗವಾಸಿಗಳಾದ ದೇವತೆಗಳು ಸುಖವನ್ನು ಮಾತ್ರ ಅನುಭವಿಸಬಲ್ಲರೇ ಹೊರತು ಸತ್ಕಾರ್ಯಗಳನ್ನು ಎಂದೂ ಮಾಡಲಾರರು. ಈ ಭೂಮಿಯಲ್ಲಾದರೋ ಸತ್ಕಾರ್ಯಗಳನ್ನು ಮಾಡಬಹುದು; ತತ್ಫಲರೂಪವಾದ ಸುಕೃತವನ್ನೂ ಅನುಭವಿಸಬಹುದು. ಇಲ್ಲಿ ನರರು ತಾವೇ ಸುಖವನ್ನು ಅನುಭವಿಸುವುದು ಮಾತ್ರವೇ ಅಲ್ಲ; ಯಜ್ಞಾದಿಗಳಿಂದ ದೇವತೆಗಳಿಗೂ ತೃಪ್ತಿಯನ್ನು ಉಂಟುಮಾಡಬಲ್ಲರು. ಹೀಗಿರುವಾಗ ಕರ್ಮ, ಧರ್ಮ, ತೃಪ್ತಿರೂಪವಾದ ಈ ಲೋಕದ ಸುಖಗಳನ್ನೆಲ್ಲ ಬಿಟ್ಟು ಕೇವಲ ಸ್ವರ್ಗದ ಏಕ ಸುಖವನ್ನು ಮಾತ್ರ ನಾನು ಹೇಗೆ ಇಚ್ಛಿಸಲಿ. ಎಂತಹ ಸುಕೃತಿಯಾದರೂ ಸ್ವರ್ಗ ಸುಖವನ್ನೆಲ್ಲ ಅನುಭವಿಸಿದಮೇಲೆ ಕೊನೆಗೆ ಈ ಭೂಲೋಕಕ್ಕೆ ಬಂದು ಜನ್ಮಿಸುವನು. ಆದರೆ ಭೂಲೋಕದಲ್ಲಿ ಪುಣ್ಯವನ್ನು ಸಂಪಾದಿಸಿದವನು ಸ್ವರ್ಗಕ್ಕೇರುವನು. ವಿಚಾರಿಯಾದವನು ಭೂಲೋಕ ಸ್ವರ್ಗಲೋಕಗಳ ಫಲವಿಚಾರವನ್ನು ಮಾಡುತ್ತ ಹೋದಲ್ಲಿ, ಆತನಿಗೆ ಭೂಲೋಕವೇ ಉತ್ತಮವೆಂದು ತೋರದಿರಲಾರದು. ಅದಲ್ಲದೆ ನಾಕ ಸುಖವು ಬದುಕಿರುವ ವೇಳೆ ಯಾವನಿಗೂ ದೊರೆಯುವಂತಿಲ್ಲ. ಅಪಥ್ಯ ಭೋಜನದಂತೆ ಪ್ರಾರಂಭದಲ್ಲಿ ಸುಖಕರವಾಗಿದ್ದರೂ ಪರಿಣಾಮದಲ್ಲಿ ಆಸನ್ನ ಮರಣವನ್ನು ಕಾಣಿಸತಕ್ಕ ಸ್ವರ್ಗಸುಖವನ್ನು ಬಲ್ಲವನು ಯಾವನೂ ಅಪೇಕ್ಷಿಸಲಾರನು.

ಈ ಪ್ರಕಾರ ದಮಯಂತಿಯು ಇಂದ್ರ ದೂತಿಯನ್ನು ಕುರಿತು ನಡುನಡುವೆ ನಿಂತು ನಿಂತು ಹೇಳುತ್ತ ಕೊನೆಗೆ ಅರ್ಧೋಕ್ತಿಯಲ್ಲಿಯೇ ತಾನು ಹೇಳಬೇಕೆಂದಿರುವ ವಿಷಯವನ್ನು ಅಲ್ಲಿಗೇ ನಿಲ್ಲಿಸಿ ತನ್ನ ಸುತ್ತುಮುತ್ತಲೂ ಇರುವ ಸಖಿಯರ ಕಡೆಗೆ ತಿರುಗಿ ಹೀಗೆ ಹೇಳತೊಡಗಿದಳು:—'ಸಖಿಯರೆ! ನೀವೇಕೆ ನನ್ನನ್ನು ಸುಮ್ಮನೆ ದೂರುವಿರಿ. ನಾನು ನನ್ನ ಕರ್ಮದಿಂದ ಪ್ರಾಪ್ತವಾದ ಬುದ್ಧಿಗೋ ಅಥವಾ ದೈವಕ್ಕೋ ಅಧೀನಳಾಗಿರುವೆನು. ಹೀಗೆ ಪರತಂತ್ರಳಾಗಿರುವ ನನ್ನಿಂದ ಯಾವ ಕಾರ್ಯವನ್ನು ಸ್ವೇಚ್ಛೆಯಾಗಿ ಮಾಡಲು ಸಾಧ್ಯವಿದೆ? ಪ್ರಸಿದ್ಧರಾದ ಮಹಾ ಮಹಾವಿದ್ವಾಂಸರೂ ಕೂಡ ದೈವಕ್ಕೆ ಅಧೀನರಾಗಿದ್ದರೆಂದಮೇಲೆ ನನ್ನಂತಹ ಪಾಮರಳ ಮಾತೇನು? ಒಂದು ವೇಳೆ ದೈವವನ್ನೇ

ದೂರೋಣವೆಂದರೆ ಆ ದೂರಿನಿಂದಾದರೂ ಉಪಯೋಗವೇನು ? ಪ್ರಿಯ ಸಖಿಯರೆ ! ಇನ್ನೊಂದು ದೃಷ್ಟಾಂತವನ್ನು ಹೇಳುತ್ತೇನೆ, ಕೇಳಿರಿ: ಆನೆ ಕುದುರೆ ಮೊದಲಾದ ಕೆಲವು ಪ್ರಾಣಿಗಳು ಮೃದುವಾದ ಆಹಾರವನ್ನು ತಿನ್ನುತ್ತವೆ; ಆದರೆ ಒಂಟೆಯು ಮಾತ್ರ ಗಟ್ಟಿಯಾದ ಮುಳ್ಳುಗಳನ್ನು ಜಗಿಯುವುದರಲ್ಲಿಯೇ ತೃಪ್ತಿಗೊಂಡಿರುವುದು. ಈ ಪ್ರಾಣಿಗಳಲ್ಲಿ ಒಂದು ಮತ್ತೊಂದನ್ನು ದೂರಬಹುದು; ಆದರೆ ಆ ಎರಡು ತೆರದ ಪ್ರಾಣಿಗಳೂ ತಂತಮ್ಮ ಆಹಾರದಲ್ಲಿಯೇ ಪೂರ್ಣ ತೃಪ್ತಿಗೊಳ್ಳುವುದರಿಂದ, ಯಾವುದು ಮೇಲಾದುದು ಯಾವುದು ಕೀಳಾದುದು ಎಂದು ಹೇಗೆ ತೀರ್ಮಾನಿಸಬಹುದು? ಇಂತಹ ವಿಷಯಗಳಲ್ಲಿ ಆತ್ಮ ದೃಷ್ಟಾಂತದಿಂದಲೇ ತೀರ್ಮಾನಿಸಹೋಗುವುದಾದರೂ ಹಾಸ್ಯಾಸ್ಪದವಲ್ಲವೇ ? ದೇವೇಂದ್ರನಲ್ಲಿ ಎಷ್ಟು ಉತ್ಕೃಷ್ಟವಾದ ಗುಣಗಳಿದ್ದರೂ ಅವು ಮನುಷ್ಯನನ್ನೇ ಮೆಚ್ಚಿರುವ ನನ್ನ ಮನಸ್ಸನ್ನು ತಿರುಗಿಸಲಾರವು. ಧರ್ಮಾರ್ಥಕಾಮಗಳು ಮೋಕ್ಷಕ್ಕಿಂತಲೂ ಕೀಳಾಗಿದ್ದರೂ ಲೋಕವು ಮಾತ್ರ ಅವುಗಳಲ್ಲಿಯೇ ಆಸಕ್ತವಾಗಿರುವುದನ್ನು ನೀವು ಕಾಣುವುದಿಲ್ಲವೇ? ರಾಗಯುಕ್ತವಾದ ಮನಸ್ಸು ಗುಣವನ್ನು ಬಯಸುವುದಿಲ್ಲ. ಈ ಪ್ರಪಂಚದಲ್ಲಿ ಕೀಟದಿಂದ ತೊಡಗಿ ಕೈಟಭಾರಿಯವರೆಗೂ ಸರ್ವರೂ ತಂತಮ್ಮ ಇಷ್ಟಾರ್ಥವು ಕೈಗೂಡಿದಾಗಲೇ ಕೃತಾರ್ಥರಾದಂತೆ ತಿಳಿಯುವರು. ನಾನೂ ಕೂಡ ಇದಕ್ಕೇ ಒಳಗಾದವಳು. ನನ್ನ ಇಷ್ಟಾರ್ಥವು ನರ(ನಳ)ನಲ್ಲದೆ ಇಂದ್ರನಲ್ಲ. ಲೋಕದಲ್ಲಿ ಒಬ್ಬೊಬ್ಬರ ರುಚಿಯು ಒಂದೊಂದು ವಿಧವಾಗಿರುವುದು. ಈ ವಿಚಾರದಲ್ಲಿ ಯಾವ ನಿಯಮವೂ ಇರುವುದಿಲ್ಲ. ಅದರಂತೆಯೇ ನನ್ನ ರುಚಿಯು ನಿಮ್ಮ ರುಚಿಗೆ ಭಿನ್ನವಾಗಿರುವುದು. ಮುಂದೆ ಬರುವ ಆಪತ್ತನ್ನು ತಡೆಯಬಲ್ಲ ಬಂಧುಗಳಾದರೂ ತಮ್ಮನ್ನು ಕೇಳುವವರೆಗೆ ಮೌನವಾಗಿರುವುದೇ ಮೇಲಾದುದು. ಪ್ರತಿಯೊಬ್ಬನ ಶ್ರೇಯಸ್ಸಿಗೂ ಅವನವನ ಸ್ವೇಚ್ಛೆಯೇ ಮೇಲಾದುದು. ನಾನೂ ನನ್ನ ಇಚ್ಛೆಯನ್ನು ವಿಚಾರಿಸಿಯೇ ಈ ಅಭೀಷ್ಟಕ್ಕೆ ಕೈಯಿಕ್ಕಿರುವೆನಾದ ಕಾರಣ ನಿಮ್ಮ ಉಪದೇಶ ವಾಕ್ಯವನ್ನು ಇಲ್ಲಿಗೆ ಸಾಕುಮಾಡಿ' ಎಂದು ಹೇಳಿ ದಮಯಂತಿಯೂ ತನ್ನ ಉಪನ್ಯಾಸವನ್ನು ಅಲ್ಲಿಗೇ ಮುಗಿಸಿ, ತನ್ನ ಪಾಂಡಿತ್ಯದ ಬಲದಿಂದ ತನಗೆ ವಿರೋಧವಾಗಿ ಮಾತಾಡುತ್ತಿರುವ ಸಖಿಯರನ್ನೆಲ್ಲ ಮುಂದೆ ಏನೂ ನುಡಿಯದಂತೆ ಮಾಡಿದಳು. ಆಗ ಇಂದ್ರದೂತಿಯು ಬಾಲೆಯಾದ ದಮಯಂತಿಯ ಪಾಂಡಿತ್ಯಕ್ಕಾಗಿ ಆಶ್ಚರ್ಯಗೊಂಡು—'ಈಕೆಯ ಚಾತುರ್ಯವು ಬೃಹಸ್ಪತಿಯ ಚಾತುರ್ಯವನ್ನು ಕೂಡ ಮೀರುತ್ತಿರುವುದಲ್ಲಾ' ಎಂದು ತಲೆದೂಗಿದಳು.

ಮುಂದೆ ದಮಯಂತಿಯು ಇಂದ್ರದೂತಿಯ ಕಡೆಗೆ ತಿರುಗಿ—'ಅಮ್ಮಾ ! ಇಂದ್ರದೂತಿಯೇ ! ನಾನು ಇಷ್ಟು ಸಮಯವಾದರೂ ನಿನ್ನೊಡನೆ ಮಾತಾಡಿದುದು ಕೇವಲ ಇಂದ್ರನಲ್ಲಿರುವ ಗೌರವದಿಂದಲೇ ಎಂದು ತಿಳಿ; ಏಕೆಂದರೆ ಅಗ್ನಿ, ಯಮ, ವರುಣರ ಕಡೆಯ ದೂತಿಯರನ್ನು ಆಗಲೇ ಹಿಂದಕ್ಕೆ ಕಳುಹಿಸಿರುವೆನು. ನೀನೂ ಅದೇ ಮಾತನ್ನೇ ತಿರುತಿರುಗಿ ಹೇಳುವೆಯಾದರೆ ನಿನ್ನನ್ನೂ ಕಳುಹಿಸಿ

ಬಿಡುತ್ತೇನೆ. ಸರ್ವರ ಹೃದಯವನ್ನೂ ಪಾತಿವ್ರತ್ಯವನ್ನೂ ಅರಿತ ಇಂದ್ರನು ಈ ಕಾರ್ಯಕ್ಕಾಗಿ ನನ್ನನ್ನು ಅಪರಾಧಿನಿ ಎಂದು ಎಣಿಸಲಾರನು' ಎಂದು ನುಡಿದು, ಇಂದ್ರ ದೂತಿಯನ್ನು ಕಳುಹಿಸಲಾಗಿ, ಇತ್ತ ಅದೃಶ್ಯನಾಗಿ ಎಲ್ಲವನ್ನೂ ಕೇಳುತ್ತಿದ್ದ ನಳನಿಗೆ ಹೊರಟುಹೋದ ಜೀವವು ತಿರುಗಿ ಬಂದಂತಾಯಿತು. ಪುನರ್ಜನ್ಮವನ್ನು ಪಡೆದವನಂತೆ ಎಣಿಸಿ ನಿಟ್ಟುಸಿರು ಬಿಟ್ಟನು. ಇಂದ್ರಾದಿಗಳಿಂದ ಲಬ್ಧವಾದ ತಿರಸ್ಕರಿಣೀ ವಿದ್ಯಾ ಮಹಿಮೆಯಿಂದ ಈ ವಿಚಾರಗಳನ್ನೆಲ್ಲ ಕಿವಿಯಾರೆ ಕೇಳಿ, ಅನುರಾಗಯುಕ್ತವಾದ ದಮಯಂತಿಯ ಮಾತುಗಳಿಂದ ಪೂರ್ಣತೃಪ್ತನಾಗಿ ಆನಂದವನ್ನು ಹೊಂದಿದನು.

ಇಂತು ನೈಷಧೀಯ ಚರಿತೆಯೊಳಗಣ ಷಷ್ಠ ಸರ್ಗವು ಮುಗಿಯಿತು.

[ಸಶೇಷ]

ಶೃಂಗೇರಿಯ ಕೈಫಿಯತ್ತು

ಬ್ರಹ್ಮಾಂಡದೊಳಗೆ ಐವತ್ತು ಕೋಟಿ ವಿಸ್ತಾರವಾಗಿ ಕೆಳಗಿನಿಂದ ಮೇಲಣ ವರೆಗಿರುವ ಬ್ರಹ್ಮಾಂಡ ವಿವರದ ಆದಿಯಲ್ಲಿ ಇಪ್ಪತ್ತು ನಾಲ್ಕು ಕೋಟಿ ಯೋಜನ ಪರ್ಯಂತ ನೀರು ತುಂಬಿದೆ. ಆ ನೀರಿನಲ್ಲಿ **ಆದಿಕೂರ್ಮ**ನಾಗಿರುವವನು ಕಾಲೂರಿ ಕೊಂಡು ತನ್ನ ಬೆನ್ನು ನೀರಿಗೆ ಸಮವಾಗಿರುವಂತೆ ನಿಂತುಕೊಂಡಿದ್ದಾನೆ. ಅಂತಹ ಕೂರ್ಮನ ಮೇಲೆ ಎಂಟು ದಿಕ್ಕಿಗೂ **ಅಷ್ಟದಿಗ್ಗಜಗಳು,** ಮಧ್ಯೇ ಸಹಸ್ರ ಫಣಾ ಯುಕ್ತನಾಗಿರುವ **ಮಹಾಶೇಷ**ನು, ಅದರ ಮೇಲೆ (ಅಳತೆ) ಕೂರ್ಮಪೃಷ್ಠದಾರಭ್ಯ ಬ್ರಹ್ಮಾಂಡ ಘಟದ ಮಧ್ಯದಲ್ಲಿ ಒಂದು ಕೋಟಿ ಯೋಜನ ದಳ ಐವತ್ತು ಕೋಟಿ ವಿಸ್ತೀರ್ಣವಾಗಿರುವಂತಹ **ಭೂಮಿ.** ಈ ಭೂಮಿಯೊಳಗೆ—**ಅತಳ, ವಿತಳ, ಸುತಳ, ತಳಾತಳ, ಮಹಾತಳ, ರಸಾತಳ, ಪಾತಾಳ**ಗಳೆಂಬ ಸಪ್ತ ಲೋಕ ಗಳೂ ಈ ಭೂಮಿಯಮೇಲೆ ಅಂತರ್ಭೂತವಾಗಿರುತ್ತವೆ. ಅದರಮೇಲೆ ಈ ಭೂಮಿ ಯಲ್ಲಿ ಭೂಲೋಕವು ಐವತ್ತು ಕೋಟಿ ಯೋಜನ ವಿಸ್ತಾರವಾಗಿರುವಂತಹುದಾ ಗಿದೆ. ಇದರಮೇಲೆ ಅಂತರಿಕ್ಷ ಲೋಕಗಳು—**ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ;** ಈ ವಿಧವಾಗಿ ಈ ಬ್ರಹ್ಮಾಂಡದಲ್ಲಿ ಹದಿನಾಲ್ಕು ಲೋಕಗಳು ತರತರದಲ್ಲೊಪ್ಪುತ್ತಿವೆ.

ಈ ಲೋಕಗಳು—**ಸ್ವರ್ಗ, ಮರ್ತ್ಯ, ಪಾತಾಳ**ಗಳೊಂದು(ಗೂಡಿ) ತ್ರೈಲೋಕ್ಯವೆನಿಸಿಕೊಂಡಿವೆ. ಈ ಮಧ್ಯದಲ್ಲಿ ಮರ್ತ್ಯಲೋಕವಾದ ಭೂಲೋಕ ದಲ್ಲಿ ಮಧ್ಯದಲ್ಲಿ (೧) **ಜಂಬೂದ್ವೀಪ**ವು ಒಂದು ಲಕ್ಷ ಯೋಜನ. ಇದರ ಸುತ್ತಲೂ **ಲವಣ ಸಮುದ್ರ**ವು ಒಂದು ಲಕ್ಷ ಯೋಜನ. ಆ ಬಳಿಕ (೨) **ಪ್ಲಕ್ಷದ್ವೀಪ**ವೆರಡು ಲಕ್ಷ ಯೋಜನ ವಿಸ್ತಾರವಾಗಿ ಆವರಿಸಿಕೊಂಡಿದೆ. ಆ ಬಳಿಕ **ಇಕ್ಷುಸಮುದ್ರ**ವೆರಡು ಲಕ್ಷ ಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ (೩) **ಕುಶದ್ವೀಪ**ವು ನಾಲ್ಕು ಲಕ್ಷ ಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ (೪) **ಕ್ರೌಂಚದ್ವೀಪ**ವೆಂಟು ಲಕ್ಷ ಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ **ಸುರಾಸಮುದ್ರ**ವು ನಾಲ್ಕು ಲಕ್ಷ ಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ ಇದರ ಸುತ್ತಲೂ **ಘೃತಸಮುದ್ರ**ವಿದೆ. ಆ ಬಳಿಕ (೫) **ಶಾಕ ದ್ವೀಪ**ವು ಹದಿನಾರು ಲಕ್ಷ ಯೋಜನ ಪರಿಮಿತವಾಗಿ ವಿಸ್ತರಿಸಿದೆ. ಇದರ ಸುತ್ತಲೂ **ದಧಿಸಮುದ್ರ**ವು ಹದಿನಾರು ಲಕ್ಷ ಯೋಜನ ವಿಸ್ತಾರವಾಗಿದೆ. ಆ ಬಳಿಕ (೬) **ಶಾಲ್ಮಲದ್ವೀಪ**ವು ಮೂವತ್ತೆರಡು ಲಕ್ಷ ಯೋಜನ ವಿಸ್ತಾರ ವಾಗಿ ಸುತ್ತುವರಿದಿದೆ. ಇದರ ಸುತ್ತಲೂ **ಕ್ಷೀರಸಮುದ್ರ**ವು ಮೂವ

ತ್ತೈರಡು ಲಕ್ಷ ಯೋಜನ ವಿಸ್ತಾರವಾಗಿದೆ. ಆ ಬಳಿಕ (೭) **ಪುಷ್ಕರದ್ವೀಪವು** ಅರುವತ್ತು ನಾಲ್ಕು ಯೋಜನ ವಿಸ್ತೀರ್ಣದಿಂದಾವರಿಸಿದೆ. ಇದರ ಸುತ್ತಲೂ **ಸ್ವಾದೂದಕ ಸಮುದ್ರವು** ಅರುವತ್ತುನಾಲ್ಕು ಲಕ್ಷ ಯೋಜನ ವಿಸ್ತಾರವಾಗಿದೆ. ಇದರ ಸುತ್ತಲೂ **ಲೋಕಾಲೋಕ ಪರ್ವತವು** ಆವರಿಸಿಕೊಂಡಿದೆ. ಜಂಬೂದ್ವೀಪ ಮಧ್ಯದಲ್ಲಿ ಲಕ್ಷ ಯೋಜನದ ಎತ್ತರವಾಗಿ ಮೂವತ್ತೆರಡು ಸಹಸ್ರ ಯೋಜನ ಅಗಲವಾಗಿರುವ **ಮಹಾಮೇರು** ಪರ್ವತವಿದೆ. ಇದರ ಸುತ್ತಲೂ ನವಖಂಡ ಪೃಥ್ವಿ ಇದೆ.

ಆ ಮಹಾಮೇರು ಪರ್ವತದ ದಕ್ಷಿಣ ದಿಕ್ಕಿನಲ್ಲಿ **ಸಹ್ಯಾದ್ರಿಯಲ್ಲಿ** ವರಾಹ ದಂಷ್ಟ್ರದಲ್ಲಿ ಉದ್ಭವವಾಗಿ ಪ್ರವಹಿಸುತ್ತಿರುವ **ತುಂಗಭದ್ರಾ ನದೀ** ತೀರದಲ್ಲಿ **ವಿಭಾಂಡ ಋಷೀಶ್ವರರು** ತಪಸ್ಸು ಮಾಡಿಕೊಂಡು ತ್ರಿಕಾಲದಲ್ಲಿಯೂ ಸೂರ್ಯಾಭಿಮುಖವಾಗಿ ಸ್ನಾನವನ್ನು ಮಾಡಿಕೊಳ್ಳುತ್ತ, ತತ್ಸಮೀಪದಲ್ಲಿ **ಶ್ರೀ ಮಲ್ಲಿಕಾರ್ಜುನಸ್ವಾಮಿ**ಯನ್ನು ಪ್ರತಿದಿನವೂ ಪೂಜಿಸುತ್ತಿದ್ದರು. ಒಂದು ದಿನ ನದಿಯಲ್ಲಿ ಸ್ನಾನಮಾಡುವಾಗ ಇವರ ಸಮ್ಮುಖದಲ್ಲಿ **ಊರ್ವಶಿ**ಯೆಂಬ ಅಪ್ಸರ ಸ್ತ್ರೀಯು ಸಂಚರಿಸಿದುದರಿಂದ ಇವರ ಮನಸ್ಸು ಚಂಚಲವಾಗಿ ನೀರಿನಲ್ಲಿ ರೇತಸ್ಸು ಸ್ಖಲನವಾದುದರಿಂದ, ಬಂದಾನೊಂದು ಕೃಷ್ಣಮೃಗವು ತೃಷೆಯಿಂದ ತುಂಗಭದ್ರಾ ನದಿಗೆ ಬಂದು ನೀರುಕುಡಿಯುವ ವೇಳೆಯಲ್ಲಿ ಋಷಿ ವೀರ್ಯ ಸಹಿತವಾಗಿ ಉದಕ ಪಾನ ಮಾಡಿದುದರಿಂದ, ಅದರ ಗರ್ಭದಲ್ಲಿ ಋಷಿ ವೀರ್ಯವು ಬೆಳೆದು ನರಾಕೃತಿಯಾಗಿ ಶಿರಸ್ಸಿನಲ್ಲಿ ಶೃಂಗ ಸಹಿತವಾಗಿ ಜನಿಸಿತು. ಅಷ್ಟರಲ್ಲಿ ವಿಭಾಂಡ ಋಷೀಶ್ವರರ ಆಶ್ರಮಕ್ಕೆ **ಪಾರ್ವತೀಪರಮೇಶ್ವರರು** ಸಂಚರಿಸುತ್ತ ಬಂದಲ್ಲಿ, ಈ ಶಿಶುವನ್ನು ಕಂಡು ಮುಂದೆ ಕಾರಣಾಂತರವುಂಟೆಂದು ಮನಸ್ಸಿನಲ್ಲಿ ತಿಳಿದು, ಈತನಿರುವ ಸ್ಥಳದಲ್ಲಿ ಕ್ಷಾಮಡಾಮರಾದಿಗಳ ಉಪದ್ರವವಾಗದೆ ಸುರಕ್ಷಿತವಾಗಿರಲೆಂದು ವರವನ್ನು ಕೊಟ್ಟು ಮುಂದೆ **ಕೈಲಾಸಕ್ಕೆ** ತೆರಳಲಾಗಿ ವಿಭಾಂಡ ಋಷೀಶ್ವರರು ತಿಳಿದು ಆ ಶಿಶುವನ್ನು ಆಶ್ರಮಕ್ಕೆ ಕರೆತಂದು ಜಾತಕರ್ಮಾದಿ ಸಂಸ್ಕಾರಮಂ ಮಾಡಿ **ಋಷ್ಯಶೃಂಗ**ನೆಂದು ಹೆಸರಿಟ್ಟು ಉಪನಯನಾದಿಗಳಂ ಮಾಡಿ ವೇದಾಭ್ಯಾಸ ಮಾಡಿಸಲು ಅವರು ಸಕಲ ವಿದ್ಯಾ ಪ್ರೌಢರಾಗಿ ಪಿತೃ ಸೇವೆಯನ್ನು ಮಾಡಿಕೊಂಡಿರುತ್ತಿದ್ದರು.

ಇತ್ತ ಅಂಗದೇಶದಲ್ಲಿ **ರೋಮಪಾದ**ನೆಂಬ ರಾಜನು **ಶತಕ್ರತು**ವನ್ನು ಮಾಡಬೇಕೆಂದು ಆಲೋಚಿಸಿ **ಅಶೀತಿ ಯಜ್ಞ** ಪರ್ಯಂತ ನಡೆಯಿಸಲಾಗಿ, **ದೇವೇಂದ್ರ**ನು ಅಸೂಯೆದಿಂದ ಈ ರೋಮಪಾದ ರಾಜನ ದೇಶಕ್ಕೆ ಮಳೆ ಬಾರದಂತೆ ಮಾಡಿ ಯಜ್ಞಕ್ಕೆ ವಿಘ್ನಮಾಡುತ್ತಿರಲಾಗಿ, ದೇಶದಲ್ಲಿ ಮಳೆ ಬೆಳೆ ಇಲ್ಲದೆ ಸಮಸ್ತ ಪ್ರಜೆಗಳೂ ಬಂದು ದುರ್ಭಿಕ್ಷದ ಸಂಕಟವನ್ನು ರೋಮಪಾದ ರಾಜನಿಗೆ ಹೇಳಿಕೊಳ್ಳಲಾಗಿ ತನ್ನರಮನೆಯಲ್ಲಿ ಸಂಗ್ರಹಿಸಿದ್ದಂತಹ ಧನಧಾನ್ಯಾದಿಗಳನ್ನು ಕೊಟ್ಟು ಸಂತೈಸಿ ತಾನು ಮಹಾಚಿಂತಾಕ್ರಾಂತನಾಗಿರಲಾಗಿ, **ನಾರದರು**

ಬರಲು ಅವರಿಗೆ ಸತ್ಕಾರವಂ ಮಾಡಲು, ಅವರು ಈತನ ಚಿಂತೆಯಂ ತಿಳಿದು—“ರೋಮಪಾದ ರಾಜನೇ! ಕೇಳು, ನೀನು ಮಾಡುವಂತಹ ಯಜ್ಞಕ್ಕೆ ದೇವೇಂದ್ರನು ವಿಘ್ನಾಚರಣೆ ಮಾಡಿದ್ದಾನೆ. ತುಂಗಭದ್ರಾ ತೀರದಲ್ಲಿ ವಿಭಾಂಡ ಕುಮಾರರಾದ ಋಷ್ಯಶೃಂಗರಿದ್ದಾರೆ. ಅವರಿರುವಂತಹ ದೇಶದಲ್ಲಿ ದುರ್ಭಿಕ್ಷಭಯವಿಲ್ಲದೆ ಸುರಕ್ಷಿತವಾಗಿರಲೆಂದು ಈಶ್ವರನ ವರವುಂಟು. ಆತನಂ ಕರೆತಂದು ನಿನ್ನ ಮನೆಯಲ್ಲಿಟ್ಟುಕೊಂಡರೆ ನಿನ್ನ ದೇಶಕ್ಕೆ ಸುರಕ್ಷಿತವಾಗಿ ದುರ್ಭಿಕ್ಷ ಪರಿಹಾರವಾಗಿ ನಿನ್ನ ಮನೋರಥವು ಪೂರ್ಣವಾಗುತ್ತದೆ”—ಎಂದು ಹೇಳಲಾಗಿ, ರಾಜನು ಸಂತೋಷಪಟ್ಟು ತನ್ನ ದೇಶದಿಂದ ಅನೇಕವಾಗಿ ಸ್ತ್ರೀಯರಂ ಕಳುಹಿಸಿಕೊಟ್ಟಲ್ಲಿ ಆ ಸ್ತ್ರೀಯರೆಲ್ಲರೂ ಸೇರಿ ವಿಭಾಂಡಕ ಋಷೀಶ್ವರರ ಆಶ್ರಮಕ್ಕೆ ಸಮೀಪವಾದ **ನಾರವೆ ಅಗ್ರಹಾರ**ಕ್ಕೆ ಬಂದು ಅಲ್ಲಿ ಬಹಳ ದಿವಸವಿರುತ್ತ ಈ ಋಷ್ಯಶೃಂಗನು ಸಮಿತ್ಕುಶ ಪುಷ್ಪಾರ್ಥವಾಗಿ ವನದಲ್ಲಿ ಸಂಚರಿಸುವ ವೇಳೆಯನ್ನು ಸಾಧಿಸಿ ಕಾಣಿಸಿಕೊಂಡು ಸಂಭಾಷಣಾದಿಗಳಂ ಮಾಡಿ, ದಿನಚರ್ಯೆಯಲ್ಲಿ ಸ್ನೇಹವಂ ಬೆಳೆಯಿಸಿ, ಅವರಿಗೆ ಬೇಕಾದಂತಹ ರುಚಿಕರವಾದ ಹಣ್ಣು ಹಂಪಲನ್ನೂ ನಾನಾ ವಿಧವಾದ ಭಕ್ಷ್ಯಭೋಜ್ಯಾದಿಗಳನ್ನೂ ತಿನ್ನುವದಕ್ಕೆ ಕೊಟ್ಟು ತಮ್ಮ ಸ್ವಾಧೀನ ಮಾಡಿಕೊಂಡು, ಉಪಾಯದಿಂದ ಆ ರೋಮಪಾದರಾಜನ ಊರಿಗೆ ಕರೆತರಲಾಗಿ, ಆತನು ಮಹಾಸಂಭ್ರಮದಿಂದ ಇದಿರುಗೊಂಡು ಕರೆದುಕೊಂಡು ಹೋಗಿ ತನ್ನ ಮನೆಯಲ್ಲಿ ಬಹಳ ಉಪಚಾರಾದಿಗಳಂ ಮಾಡಿ ಇಟ್ಟುಕೊಂಡಿರಲಾಗಿ, ಈತನ ದೇಶದಲ್ಲಿ ಯಥೇಷ್ಟವಾಗಿ ಮಳೆ ಬೆಳೆಯಾಗಿ ಸುಭಿಕ್ಷವಾಗಲಾಗಿ ಯಜ್ಞ ಸಂಪೂರ್ಣವಂ ಮಾಡಿ ತನ್ನ ಮಗಳಾದ **ಶಾಂತಾದೇವಿ**ಯನ್ನು ಋಷ್ಯಶೃಂಗರಿಗೆ ವಿವಾಹಮಾಡಿಕೊಟ್ಟು ಸುಖದಿಂದಿರಿಸಿಕೊಂಡಿರುತ್ತಿದ್ದನು.

ಇತ್ತ **ಕೋಸಲದೇಶ**ದಲ್ಲಿ **ದಶರಥ**ರಾಜನೆಂಬ ಚಕ್ರವರ್ತಿಯು ಮಕ್ಕಳಿಲ್ಲದೆ ಚಿಂತಾಕ್ರಾಂತನಾಗಿರಲಾಗಿ **ವಶಿಷ್ಠಮುನೀಶ್ವರ**ನು ಬಂದು “**ಪುತ್ರಕಾಮೇಷ್ಟಿ** ಯಜ್ಞವನ್ನು ಮಾಡು; ನಿನ್ನಲ್ಲಿ ದೇವರು ದಯಮಾಡುವನು” ಎಂದು ಹೇಳಲಾಗಿ, ಆಗ **ಸುಮಂತ್ರ**ನೆಂಬ ಮಂತ್ರಿಯು ಈ ಋಷ್ಯಶೃಂಗ ಕಥಾವೃತ್ತಾಂತವನ್ನು ವಿಸ್ತಾರವಾಗಿ ಹೇಳಿ, ಆ ಋಷ್ಯಶೃಂಗನನ್ನು ಕರೆತಂದು ಪುತ್ರಕಾಮೇಷ್ಟಿ ಯಾಗ ಮಾಡಿದರೆ ಮನೋರಥ ಸಿದ್ಧಿಯಾಗುತ್ತದೆ ಎಂದು ಹೇಳಲಾಗಿ, ಆ ಮಾತನ್ನು ದಶರಥರಾಜನು ಕೇಳಿ ರೋಮಪಾದರಾಜನಲ್ಲಿಗೆ ಬಂದು, ಋಷ್ಯಶೃಂಗನಂ ಕರೆದುಕೊಂಡು ಅಯೋಧ್ಯಾಪಟ್ಟಣಕ್ಕೆ ಬಂದು, ವಸಿಷ್ಠ ಮೊದಲಾದ ಸಮಸ್ತ ಋಷಿಗಳನ್ನೂ ಕರೆಯಿಸಿಕೊಂಡು, ಪುತ್ರಕಾಮೇಷ್ಟಿಯಂ ಮಾಡಲಾಗಿ, **ನಾರಾಯಣ**ನು ಸಂತುಷ್ಟನಾಗಿ ಯಜ್ಞಕುಂಡದಲ್ಲಿ **ಯಜ್ಞನಾರಾಯಣ**ನ ರೂಪದಲ್ಲಿ ಬಂದು ಸುವರ್ಣಪಾತ್ರೆಯಲ್ಲಿ ಪರಮಾನ್ನವಂ ಕೊಡಲಾಗಿ, ದಶರಥನು ಪತ್ನಿಯರಾದ **ಕೌಸಲ್ಯೆ, ಕೈಕೆ, ಸುಮಿತ್ರೆ**ಯರೆಂಬ ಮೂರು ಮಂದಿ ಹೆಂಡರಿಗೂ ವಿಭಾಗಿಸಿ ಕೊಡಲು ಆ ಪರಮಾನ್ನವಂ ಭುಜಿಸಿ ಅವರು

ಗರ್ಭವಂ ಧರಿಸಲು, ಅವರಲ್ಲಿ **ರಾಮ, ಲಕ್ಷ್ಮಣ, ಭರತ, ಶತ್ರುಘ್ನ**ರೆಂಬ ನಾಲ್ಕು ಜನ ಸುತರು ಜನಿಸಿದರು.

ಈ ಋಷ್ಯಶೃಂಗನು ಅನಂತರದಲ್ಲಿ ತನ್ನ ಪತ್ನಿ ಶಾಂತಾದೇವೀ ಸಮೇತನಾಗಿ ತನ್ನ ಆಶ್ರಮಕ್ಕೆ ಬರಲಾಗಿ, ವಿಭಾಂಡಕ ಋಷಿಯು ಸಾಯುಜ್ಯ ಮೋಕ್ಷವನ್ನು ಪಡೆದಿದ್ದನು. ಋಷ್ಯಶೃಂಗನು ತುಂಗಭದ್ರಾ ನದೀ ತೀರವಾದ **ರುದ್ರಪಾದಕ್ಷೇತ್ರ**ದಲ್ಲಿ ಕುಳಿತು ಉಗ್ರ ತಪಸ್ಸಂ ಮಾಡಲು, **ಈಶ್ವರನು** ಪ್ರತ್ಯಕ್ಷನಾಗಲಾಗಿ, ಋಷ್ಯಶೃಂಗನು 'ತನ್ನ ತಂದೆ ಏನಾದ'ನೆಂದು ಕೇಳಿದನು. ನಮ್ಮಲ್ಲಿ ಸಾಯುಜ್ಯವಂ ಪಡೆದನೆಂದು ಈಶ್ವರನು ಹೇಳಲಾಗಿ, ತನಗೂ ಅದೇ ಪ್ರಕಾರ ಮೋಕ್ಷವನ್ನು ದಯಮಾಡಬೇಕು. ನರಸಿಂಹ ಪರ್ವತದ ಸಮೀಪದಲ್ಲಿ ಲಿಂಗರೂಪದಲ್ಲಿ ಉದ್ಭವಿಸಬೇಕೆಂದು ವರವಂ ಕೇಳಲು, ಈಶ್ವರನು ಕಟಾಕ್ಷವಿಟ್ಟು ವರವನ್ನು ಕೊಟ್ಟನು. ಅದೇ ಪ್ರಕಾರ ಈಶ್ವರನು ಲಿಂಗರೂಪಿನಲ್ಲಿ ಉದ್ಭವಿಸಲಾಗಿ, ಆ ಲಿಂಗದಲ್ಲಿ ಋಷ್ಯಶೃಂಗನು ಪತ್ನೀ ಸಮೇತನಾಗಿ ಸಾಯುಜ್ಯವಂ ಪಡೆದು, ತೋರುತ್ತಿದ್ದಾನೆ. ಋಷ್ಯಶೃಂಗನು ಆಶ್ರಮವನ್ನು ಮಾಡಿಕೊಂಡು ತಪಸ್ಸುಮಾಡುತ್ತಿದ್ದ ಆ ಸ್ಥಳಕ್ಕೆ **ಋಷ್ಯಶೃಂಗಪುರಿ** ಎಂದು ನಾಮಧೇಯವಾಯಿತು. ಇತ್ತ **ಕರ್ಣಾಟಕ ಭಾಷೆ**ಯಲ್ಲಿ ಈಗ **ಶೃಂಗೇರಿ**ಯೆಂಬ ನಾಮದಿಂದ ಕರೆಯುತ್ತಿದ್ದಾರೆ.

ಹೀಗೆ ಕೆಲವು ಕಾಲ ಕಳೆಯುತ್ತಿರಲಾಗಿ ಈ ವರ್ತಮಾನವಾದ **ಕಲಿಯುಗವು** ಪ್ರಾಪ್ತವಾದ ಕೆಲವು ಕಾಲಾನಂತರದಲ್ಲಿ ಬಹು ಮತಗಳು ಹುಟ್ಟಿ, ವರ್ಣಾಶ್ರಮ ಧರ್ಮಗಳೆಲ್ಲ ಕೆಟ್ಟು, ಜನರು ಮನಸ್ಸು ಬಂದಹಾಗೆ ನಡೆಯುತ್ತಿರಲು, ನಾರದರು ಕೈಲಾಸಕ್ಕೆ ಹೋಗಿ ಈ ವೃತ್ತಾಂತವನ್ನು ಈಶ್ವರನಿಗೆ ಹೇಳಲಾಗಿ, ಈಶ್ವರನು ನಾವು ಭೂಲೋಕದಲ್ಲಿ **ಶಿವಗುಗುರು ದೀಕ್ಷಿತ**ರಲ್ಲಿ ಅವತರಿಸಿ, ದುರ್ಮತಗಳನ್ನು ಖಂಡಿಸಿ ವರ್ಣಾಶ್ರಮ ಧರ್ಮಗಳು ನಿರ್ವಿಘ್ನವಾಗಿ ನಡೆದುಬರುವಹಾಗೆ ಮಾಡುತ್ತೇವೆಂದು ಅಪ್ಪಣೆ ಕೊಟ್ಟನು.

ಇತ್ತಲಾಗಿ ಭೂಲೋಕದಲ್ಲಿ **ಕೇರಳ ದೇಶದ ಕಾಲಟಿಗ್ರಾಮ**ದಲ್ಲಿ ಶಿವಗುರು ದೀಕ್ಷಿತನೆಂಬ ಬ್ರಾಹ್ಮಣನು ತನಗೆ ಮಕ್ಕಳಾಗಬೇಕೆಂದು ಈಶ್ವರನಂ ಕುರಿತು ತಪಸ್ಸು ಮಾಡುತ್ತಿದ್ದನು. ಶಿವನು ಒಂದಾನೊಂದು ದಿನ ಸ್ವಪ್ನದಲ್ಲಿ ಬಂದು, "ನಿನಗೆ ದೀರ್ಘಾಯುಷ್ಯನಾಗಿ ಮಂದಬುದ್ಧಿಯಾದ ಮಗನು ಬೇಕೋ ? ಅಲ್ಪಾಯುಷ್ಯನಾಗಿ ಖ್ಯಾತಿವಂತನಾದ ಮಗನು ಬೇಕೋ ?" ಎಂದು ಕೇಳಲಾಗಿ, "ಮಂದಬುದ್ಧಿಯಾದ ಮಗನು ಹುಟ್ಟುವುದಕ್ಕಿಂತ ಮಕ್ಕಳು ಹುಟ್ಟದಿರುವುದೇ ಉತ್ತಮವಾದುದರಿಂದ ಅಲ್ಪಾಯುಷ್ಯವಂತನಾದರೂ ಖ್ಯಾತಿವಂತನಾಗಿ ವಂಶೋದ್ಧಾರಕನಾದಂತಹ ಸತ್ಪುತ್ರನೇ ಆಗಬೇಕೆಂ"ದು ಕೇಳಿಕೊಂಡನು. ಅದೇ ಪ್ರಕಾರ ವರವನ್ನು ಕೊಟ್ಟು ಈಶ್ವರನು ಅದೃಶ್ಯನಾದನು. ತದಾರಭ್ಯ ಶಿವಗುರು ದೀಕ್ಷಿತರು ತಪಸ್ಸಂಪೂರ್ಣಾರ್ಥ ಬ್ರಾಹ್ಮಣ ಸಂತರ್ಪಣೆಯನ್ನು ಮಾಡುತ್ತಿರ

ಲಾಗಿ, ಇವರ ಪತ್ನಿಯಾಗಿರುವ **ಅಂಬಾದೇವಿಯು** ಗರ್ಭವನ್ನು ಧರಿಸಿ ಸುತನಂ ಪಡೆದಳು. ಜನನ ಕಾಲದಲ್ಲಿ ತ್ರಿಶೂಲ ಡಮರುಗಾದಿ ಚಿಹ್ನೆಯು ಜನರಿಗೆ ಕಾಣ ಬಂದಿತು. ತದನಂತರದಲ್ಲಿ ತಂದೆಯಾದ ಶಿವಗುರು ದೀಕ್ಷಿತರು **ಶಂಕರ**ನೆಂದು ನಾಮಕರಣ ಮಾಡಿ ಪಂಚಮ ವರ್ಷದಲ್ಲಿ ಚೌಲ, ಅಕ್ಷರಾರಂಭ, ಸಪ್ತಮ ವರ್ಷ ದಲ್ಲಿ ಉಪನಯನ ಇವುಗಳನ್ನು ಮಾಡಿ ಸಕಲ ವೇದಶಾಸ್ತ್ರದ ವಿದ್ಯಾಭ್ಯಾಸವನ್ನು ಮಾಡಿಸಿದರು.

ಒಂದಾನೊಂದು ದಿನ ಶಂಕರನು ನದಿಗೆ ಸ್ನಾನಕ್ಕೆ ಹೋಗಿ ಸ್ನಾನ ಮಾಡುತ್ತಿರಲಾಗಿ ನಕ್ರವು ಬಂದು ಪಾದಗ್ರಹಣವನ್ನು ಮಾಡಿ ಗ್ರಹಿಸುತ್ತಿರ ಲಾಗಿ, ಈ ಶರೀರವು ದುರ್ಮರಣದಿಂದ ವ್ಯರ್ಥವಾಗಿ ಹೋಗುತ್ತದೆ, ಎಂದು ಮನದಲ್ಲಿ ಪಶ್ಚಾತ್ತಾಪದಿಂದ ಭಗವತ್ಸ್ಮರಣೆಯಂ ಮಾಡಿ ಪ್ರೇಷೋಚ್ಚಾರಣೆ ಯನ್ನು ಮಾಡಿದುದರಿಂದ, ಆ ನಕ್ರವು ಪಾದವನ್ನು ಬಿಟ್ಟುಹೋಯಿತು. ಅನಂತರದಲ್ಲಿ ಗೃಹ ಸಮಿಾಪಕ್ಕೆ ಬಂದು, ತಮ್ಮ ತಾಯನ್ನು ಕರೆದು 'ತನಗೆ ಜಲದಲ್ಲಿ ಈ ಪ್ರಕಾರ ನಕ್ರಮುಖದಿಂದ ಜಲಕಂಟಕ ಪ್ರಾಪ್ತವಾದುದರಿಂದ ಸಂನ್ಯಾಸವನ್ನು ಅನುವರ್ತಿಸಿದುದಾಯಿತು. ಆದುದರಿಂದ ಜನ್ಮಭೂಮಿಯನ್ನು ತ್ಯಜಿಸಿ ದೇಶಾಂತರಕ್ಕೆ ಹೋಗಿ ಕರ್ಮಸಂನ್ಯಾಸವಂ ಮಾಡಬೇಕು' ಎಂದು ಹೇಳಲಾಗಿ, ತಾಯಿಯು ಮಹಾದುಃಖಪಟ್ಟು 'ತನಗೆ ಮುಪ್ಪು ಬಂದಿತು. ನಡೆಯ ಲಾರೆನು. ಸ್ನಾನಕ್ಕೆ ನದಿ ದೂರವಾಗಿದೆ'ಯೆಂದು ಹೇಳಲಾಗಿ ನದಿಯನ್ನು ಆಕರ್ಷಣೆಮಾಡಿ ಗೃಹ ಸಮಿಾಪಕ್ಕೆ ತಂದು ನಿಲ್ಲಿಸಿ **ಅಂಬಾತೀರ್ಥ**ವೆಂದು ನಾಮ ವಿಟ್ಟು, 'ನೀವು ಸ್ಮರಿಸಿದಾಗ ಬರುತ್ತೇನೆಂ'ದು ತಾಯಿಯ ಕೂಡೆ ಹೇಳಿ ದೇಶಾಟ ನಕ್ಕೆ ಹೋಗಿ **ಗೋವಿಂದಭಗವತ್ಪಾದಾಚಾರ್ಯರ** ದರ್ಶನವನ್ನು ಮಾಡಿ ಕರ್ಮ ಸಂನ್ಯಾಸವನ್ನು ಮಾಡಿಕೊಂಡು, ದೇಶವನ್ನು ಸಂಚರಿಸುತ್ತ **ತೋಟಕಾಚಾರ್ಯರು, ಹಸ್ತಾಮಲಕಾಚಾರ್ಯರು, ಪದ್ಮಪಾದಾಚಾರ್ಯರು** ಮೊದಲಾಗಿ ಮೂವರು ಶಿಷ್ಯರಂ ಮಾಡಿಕೊಂಡು, **ವ್ಯಾಸರ** ದರ್ಶನ ನಿಮಿತ್ತ **ಕಾಶಿಗೆ** ಹೋಗುತ್ತಿರ ಲಾಗಿ, ಮಧ್ಯಮಾರ್ಗದಲ್ಲಿ ಒಬ್ಬ ಬ್ರಹ್ಮರಾಕ್ಷಸನು **"ಆಕಾಮಾವೈಕೋನ ಸ್ನಾತಃ"** ಎಂದು ಕೇಳಲಾಗಿ, ಈ ಶಬ್ದವನ್ನು ಕೇಳಿ ಮರದಮೇಲೆ ನೋಡು ವಾಗ್ಗೆ ಬ್ರಹ್ಮರಾಕ್ಷಸನಂ ಕಂಡು **"ತ್ವಂ ನಸ್ನಾತಸ್ತೇನ ಪಿಶಾಚಃ"** ಎಂದು ಪ್ರತ್ಯುತ್ತರಮಂ ಕುಡಲಾಗಿ ಆಗ ಬ್ರಹ್ಮರಾಕ್ಷಸತ್ವವನ್ನು ಬಿಟ್ಟು ಬ್ರಾಹ್ಮಣ ದೇಹ ವನ್ನು ಧರಿಸಿ ನಮಸ್ಕಾರವಂ ಮಾಡಿ ತನ್ನ ಪೂರ್ವಜನ್ಮ ವೃತ್ತಾಂತವಂ ಹೇಳಿ 'ತನಗೆ ಮುಕ್ತಿಯಾಯಿತು' ಎಂದು ಸಂತೋಷಪಡುತ್ತಿರಲಾಗಿ, ಆಗ ಶಂಕರಾಚಾರ್ಯರು 'ನಾವಾದರೆ ವ್ಯಾಸದರ್ಶನಕ್ಕೆ ಬಂದವರಾಗಿದ್ದೇವೆ. ನಿನ್ನಿಂದ ಆಗತಕ್ಕ ಉಪಕಾರವೇನೆಂ'ದು ಕೇಳಲಾಗಿ, ಆತನು ಏನಾಗಬೇಕೆನಲು 'ನೀನು ವ್ಯಾಸರಿರುವಂತಹ ಸ್ಥಳವನ್ನೂ, ಅವರ ಸ್ವರೂಪವನ್ನೂ ತಿಳಿಸಿ, ಅವರ ದರ್ಶನ ವಾಗುವಂತೆ ಮಾಡಿಕೊಡಬೇಕೆ'ಂದು ಹೇಳಿದರು. 'ಅವರಾದರೆ ಈ ಕಲಿಯುಗ

ದಲ್ಲಿ ವೇಷಾಂತರದಿಂದ ಸಂಚರಿಸುತ್ತಿದ್ದಾರೆ. ಅವರಿರುವಂತಹ ಸ್ಥಿತಿಯನ್ನು ಹೇಳಿಕೊಟ್ಟರೆ ಶಾಪವನ್ನು ಕೊಟ್ಟಾರು. ತನಗೆ ಗತಿಯಿಲ್ಲದೆ ಹೋದೀತು'—ಎಂದು ಹೇಳುವಾಗ್ಗೆ 'ಅಂತಹುದು ಬಂದ ಕಾಲಕ್ಕೆ ನಾವು ನಿನ್ನನ್ನು ಬಿಡುವುದಿಲ್ಲ. ನಮ್ಮ ಮಠದಲ್ಲಿಟ್ಟುಕೊಳ್ಳುತ್ತೇವೆ'—ಎಂದು ಧೈರ್ಯವನ್ನು ಹೇಳಿ ಭರವಸವನ್ನು ಕೊಟ್ಟಲ್ಲಿ, ಆಗ ಬ್ರಹ್ಮರಾಕ್ಷಸತ್ವವನ್ನು ಬಿಟ್ಟಂತಹ **ಸಿಂಗಿರಿಭಟ್ಟನು** ಹೇಳಿದ ವಿವರ:—

''ವ್ಯಾಸರು **ಕಾಶಿಯಲ್ಲಿ** ಮಧ್ಯಾಹ್ನ ಕಾಲದಲ್ಲಿ **ಮಣಿಕರ್ಣಿಕಾ** ಸ್ನಾನಕ್ಕೆ ಬರುವಾಗ್ಗೆ ಜನರಿಗೆ ನೈಕಲ್ಯವಾಗುವಂತೆ ನಾಲ್ಕು ವೇದಗಳನ್ನು ನಾಲ್ಕು ಶ್ವಾನಗಳನ್ನಾಗಿ ಮಾಡಿಕೊಂಡು ಕಾಣಿಸಿಕೊಳ್ಳುತ್ತಿದ್ದಾರೆ. ಇವರು ವ್ಯಾಸರೆಂದು ತಿಳಿಯಬೇಕಾದರೆ ಮಾರ್ಗದಲ್ಲಿ ಬತ್ತದ ಹೊಟ್ಟು ಬಿದ್ದಿದ್ದರೆ ಅದನ್ನು ತುಳಿಯದೆ ಹೆಜ್ಜೆಯನ್ನು ಬೇರೆ ಸ್ಥಳದಲ್ಲಿಡುತ್ತ ಸಂಚರಿಸುತ್ತಾರೆ. ಈ ಗುರುತಿನಿಂದ ವ್ಯಾಸರೆಂದು ತಿಳಿಯಬೇಕು''—ಎಂದು ಹೇಳಲಾಗಿ, ಶಂಕರಾಚಾರ್ಯರು ತಮ್ಮ ಮೂರು ಮಂದಿ ಶಿಷ್ಯರನ್ನು ಕರೆದುಕೊಂಡು ಕಾಶಿಗೆ ಹೋಗಿ ಮಣಿಕರ್ಣಿಕಾ ಸ್ನಾನಘಟ್ಟದಲ್ಲಿ ವೇಳೆಯನ್ನು ಸಾಧಿಸಿಕೊಂಡು ಕಾದಿರಲಾಗಿ, ವ್ಯಾಸರು ಪೂರ್ವೋಕ್ತವಾದ ರೂಪಿನಿಂದ ಬರುತ್ತಿರಲು, ಶಂಕರಾಚಾರ್ಯರು ಹೋಗಿ ಅವರಿಗೆ ನಮಸ್ಕಾರವಂ ಮಾಡಿದರು. ವ್ಯಾಸರು—''ನೀವು ಸಂನ್ಯಾಸಿಗಳು. ನಾವು ದೂರಸ್ಥರಾಗಿರುವವರು. ನಮ್ಮನ್ನು ಮುಟ್ಟಬಾರದು. ನಮಗೆ ನಮಸ್ಕಾರ ಮಾಡಬಾರದು''—ಎಂದು ದೂರ ದೂರ ಹೋಗಲಾಗಿ, ಇವರು ಬಿಡದೆ ''ನೀವು ವ್ಯಾಸರೇ ಸರಿ! ಎಂದು ನಾನು ಬಲ್ಲೆನು'' ಎಂದು ಗಟ್ಟಿಯಾಗಿ ಕಾಲನ್ನು ಹಿಡಿದುಕೊಳ್ಳಲಾಗಿ, ವ್ಯಾಸರು ತಮ್ಮ ನಿಜರೂಪವನ್ನು ತೋರಿಸಿ, ''ನನ್ನ ಇರುವಿಕೆಯನ್ನು ನಿಮಗೆ ಹೇಳಿದವರಾರೆ''ಂದು ಕೇಳಲಾಗಿ, ಇವರು ಹೇಳದಿರಲು, ''ನೀವು ಹೇಳದಿದ್ದರೆ ನಮಗೂ ನಿಮಗೂ ಯಾವ ಮಾತಿಗೂ ಕಾರಣವಿಲ್ಲ''ವೆಂದು ಹೇಳಿದರು. ಆಗ ನಿಜವೃತ್ತಾಂತವನ್ನು ಹೇಳಬೇಕಾಗಿ ಬಂದಕಾರಣ ಸಿಂಗಿರಿಭಟ್ಟನು ಹೇಳಿದನೆಂದು ಹೇಳಲಾಗಿ, ''ಅವನಿಗೆ ಬ್ರಹ್ಮರಾಕ್ಷಸತ್ವವು ಎಂದೆಂದಿಗೂ ಬಿಡಬೇಡ''ವೆಂದು ಶಾಪವನ್ನು ಕೊಟ್ಟರು. ಇವರು ಆ ಕೋಪವನ್ನು ಸಮಾಧಾನಪಡಿಸಿ, ಅನಂತರದಲ್ಲಿ ತಾವು ಮಾಡಿದ ಕೆಲವು ವೇದಾಂತ ಭಾಷ್ಯಗಳಂ ತೋರಿಸಲಾಗಿ, ನೋಡಿ ಸಂತೋಷಪಟ್ಟು, ಇವರ ವಿದ್ವತ್ತೆಯನ್ನು ಪರೀಕ್ಷಿಸಿ ನೋಡಬೇಕೆಂದು ಪೂರ್ವಪಕ್ಷ ಸಿದ್ಧಾಂತಗಳಂ ಮಾಡುತ್ತ ಬರಲು ಅವರವರಿಗೆ ವಾಗ್ವಾದಗಳು ಬಹಳವಾಗಿ ನಡೆಯಿತು. ಆಗ್ಗೆ ಶಂಕರಾಚಾರ್ಯರ ಶಿಷ್ಯನು **''ಶಂಕರಃ ಶಂಕರಃ ಸಾಕ್ಷಾತ್ ವ್ಯಾಸೋ ನಾರಾಯಣೋಽವ್ಯಯಃ। ತಯೋರ್ವಿವಾದೇ ಸಂಪ್ರಾಪ್ತೇ ಕಿಂಕರಃ ಕಿಂಕರೋವ್ಯಹಂ''** ಎಂಬ ಗ್ರಂಥವಂ ಹೇಳಲಾಗಿ, ವ್ಯಾಸರೂ ಶಂಕರಾಚಾರ್ಯರೂ ವಾಗ್ವಾದವನ್ನು ಬಿಟ್ಟು ಸಮಾಧಾನವನ್ನು ಹೊಂದಿದರು. ಶಂಕರರು ''ಲೋಕದಲ್ಲಿ ಯಥಾರ್ಥವಾದ

ಅಭಿಪ್ರಾಯವುಳ್ಳ ಮತ ಯಾವುದು? ಯಾವುದನ್ನು ಸ್ಥಾಪನೆಮಾಡಬೇಕು?''—ಎಂಬ ವಿವರಗಳೆಲ್ಲವನ್ನೂ ಕೇಳಲಾಗಿ, ವ್ಯಾಸರು—'ನೀವು ಮಾಡಿದ ಭಾಷ್ಯಗಳೆಲ್ಲಿ? ನೋಡುವ' ಎಂದು ಯಾವತ್ತನ್ನೂ ನೋಡುತ್ತಿರಲು ಶುನಕರೂಪವಾದ ವೇದಂಗಳು ಆ ಪುಸ್ತಕವನ್ನೆಲ್ಲ ನೆಕ್ಕಲಾಗಿ, ನಿಶ್ಚಯವಾದ ಅಭಿಪ್ರಾಯವು ಆ ಪುಸ್ತಕದಲ್ಲಿ ನಿಂತಿತು. ''ಅದರಲ್ಲಿದ್ದ ಪ್ರಕಾರ ದುರ್ಮತಗಳಂ ಖಂಡಿಸಿ ವೇದಮೂಲವಾಗಿ ಶ್ರುತಿಮಾರ್ಗ ಸಮ್ಮತವಾದ ಮತಗಳಂ ಸ್ಥಾಪಿಸಿರಿ'' ಎಂದು ಹೇಳಿ ''ಇದಕ್ಕೆ **ಮಂಡನಮಿಶ್ರನು** ಕಲಿಯುಗದಲ್ಲಿ ಸಂನ್ಯಾಸಾಶ್ರಮವಿಲ್ಲನೆಂದು ಸ್ಥಾಪಿಸಿ ಕುಳಿತಿದ್ದಾನೆ. ಅವನು ಮೊದಲು ಜಯಿಸಿದರೆ ನೀವು ಮಾಡಿದ ಮತಗಳು ನಡೆದಾವು. ಇಲ್ಲದಿದ್ದರೆ ನಡೆಯವು. ಅವನು **ಬ್ರಹ್ಮನ** ಅವತಾರಭೂತನೆ''ಂದು ಹೇಳಲಾಗಿ, ಅವನಿರುವ ಲಕ್ಷಣ ಯಾವತ್ತನ್ನೂ ಕೇಳಿಕೊಂಡು ಆತನ ಪಟ್ಟಣಕ್ಕೆ ಹೋದರು.

ಅದು ಅತಿರಮಣೀಯವಾಗಿ ಕಾಣುತ್ತಿರಲಾಗಿ ಮುಂದೆ ಬೀದಿಯಲ್ಲಿ ಹೋಗುವಂತಹ ವೇಳೆಯಲ್ಲಿ, ಮಂಡನಮಿಶ್ರನ ಮನೆಗೆ ನೀರು ತರುವ ಹೆಂಗಸರು ಬರುತ್ತಿರಲಾಗಿ, 'ಮಂಡನಮಿಶ್ರನ ಮನೆ ಯಾವುದೆ'ಂದು ಕೇಳಲಾಗಿ, ಅವರೆಲ್ಲರೂ ಸಂಸ್ಕೃತ ಗ್ರಂಥರೂಪದಿಂದ ಮನೆಯಿರುವ ಲಕ್ಷಣವನ್ನು ಹೇಳಿದರು. ಆ ಮನೆಗೆ ಆಚಾರ್ಯಸ್ವಾಮಿಯವರು ಹೋಗುವಾಗ್ಗೆ, ಆತನ ಮನೆಯಲ್ಲಿ ಪಿತೃ ಪ್ರತಿಸಾಂವತ್ಸರಿಕ ಶ್ರಾದ್ಧವಾಗುತ್ತಿರಲಾಗಿ, ಆ ಮಂಡನಮಿಶ್ರನು ಬ್ರಾಹ್ಮಣಾರ್ಥಕ್ಕೆ ವ್ಯಾಸರೊಬ್ಬರನ್ನು ಮಾತ್ರ ಹೇಳಿಕೊಂಡು ಬೇರೆಯ ಜನರು ಬಾರದಂತೆ ಕವಾಟಬಂಧನವಂ ಮಾಡಿಸಿ, ವ್ಯಾಸರಿಗೆ ಪಾದಪ್ರಕ್ಷಾಳನವನ್ನು ಮಾಡುತ್ತಿರಲಾಗಿ, ಶಂಕರಾಚಾರ್ಯರು **ಘುಟಿಕಾಸಿದ್ಧಿ, ಪಾದುಕಾಸಿದ್ಧಿ**ಯಿಂದ ಪ್ರಾಕಾರೋಲ್ಲಂಘನೆಯಂ ಮಾಡಿ ಪಾದ್ಯಮಂಡಲಸ್ಥಾನದಲ್ಲಿ ನಿಂತರು. ಮಂಡನಮಿಶ್ರರು ಇದು ಯಾರ ಪಾದವೆಂದು ಇವರ ಮುಖವನ್ನು ನೋಡಲಾಗಿ, ಸಂನ್ಯಾಸಿಗಳದಾಗಿ ಕಾಣಲು ಮಹಾಕ್ರೋಧದಿಂದ 'ನೀನು ಯಾರು, ಈ ವೇಳೆಯಲ್ಲಿ ಬರಲು ಕಾರಣವೇನು' ಎಂದು ಕೇಳಿದರು. 'ನಾವು ಸಂನ್ಯಾಸವನ್ನು ಮಾಡಿದ್ದೇವೆ. ನಿನ್ನಲ್ಲಿ ವಾದಭಿಕ್ಷಕ್ಕೆ ಬಂದೆವೆ'ಂದು ಹೇಳಲು, ಮಂಡನಮಿಶ್ರರು ವ್ಯಾಸರ ಮುಖವಂ ನೋಡಲಾಗಿ, 'ಈಗ ಪಾದಪ್ರಕ್ಷಾಳನವಂ ಮಾಡಿ ಪೂರ್ವಪಙ್ಕ್ತಿಯಲ್ಲಿ ಕೂಡಿಸಿ ವಿಧವತ್ತಾಗಿ ಶ್ರಾದ್ಧವನ್ನು ಮಾಡಿ ಆ ತರುವಾಯ ವಿದ್ಯಾವಾದ ಮಾಡಬಹುದೆ'ಂದು ಹೇಳಿ, ಆ ಮಾತಿಗೆ ಒಪ್ಪಿಸಿ ಶ್ರಾದ್ಧ ಕರ್ಮ ತೀರಿ ಭೋಜನವಾದ ಬಳಿಕ ನೀವು ನೀವು ಮಾತನಾಡಿಕೊಳ್ಳಿರೆಂದು ಹೇಳಿ ವ್ಯಾಸರು ತಮ್ಮಾಶ್ರಮಕ್ಕೆ ಹೋದರು.

ಇತ್ತಲಾಗಿ ಮಂಡನಮಿಶ್ರರಿಗೂ ಶಂಕರಾಚಾರ್ಯರಿಗೂ ವಾದವಾಗುತ್ತಿರಲು ಮಂಡನಮಿಶ್ರರು ಕಲಿಯುಗದಲ್ಲಿ ಸಂನ್ಯಾಸವಿಲ್ಲವೆಂದು ಸ್ಥಾಪಿಸುತ್ತಿರಲಾಗಿ, ಶಂಕರಾಚಾರ್ಯರು ಆತನಮೇಲೆ ಪೂರ್ವಪಕ್ಷಮಾಡಿ 'ಸಂನ್ಯಾಸ

ಮಾಡಬಹುದೆ'ಂದು ಸ್ಥಾಪಿಸುತ್ತ, ಇದರಲ್ಲಿ ಸೋಲು ಗೆಲುವಾದರೆ ಈ ಮಾತಿಗೆ ಪ್ರತಿಜ್ಞೆ ಯೇನೆನ್ನಲಾಗಿ, ಶಂಕರಾಚಾರ್ಯರು ಸೋತರೆ ಗೃಹಸ್ಥಾಶ್ರಮವನ್ನು ಅನುಸರಿಸಬೇಕು. ಮಂಡನಮಿಶ್ರರು ಸೋತರೆ ಸಂನ್ಯಾಸವನ್ನನುಸರಿಸ ಬೇಕೆಂದು ಉಭಯರೂ ಪ್ರತಿಜ್ಞಾಪುರಸ್ಸರವಾಗಿ ಕುಳಿತರು. ಸೋಲು ಗೆಲುವಿಗೆ ಸಾಕ್ಷಿಗಳು ಯಾರು? ಎನ್ನುವಾಗ್ಗೆ ಮಂಡನಮಿಶ್ರರ ಪತ್ನಿಯೇ ಸರಿಯೆಂದು ಹೇಳಲಾಗಿ, 'ಎಲ್ಲಾದರೂ ಸ್ತ್ರೀ ಸಾಕ್ಷಿಯುಂಟೇ?' ಎಂದು ಮಂಡನಮಿಶ್ರರು ಹೇಳಿ ಸಾಕ್ಷಾತ್ **ಸರಸ್ವತೀದೇವಿ**ಯವರನ್ನು ಸಾಕ್ಷಿಗೆ ಗೊತ್ತುಮಾಡಿದರು. ವಾದಾರಂಭವಾಗಿ ನಿತ್ಯದಲ್ಲಿಯೂ ವಾಗ್ವಾದಗಳಾಗುವಾಗ್ಗೆ ಮಧ್ಯಾಹ್ನ ಕಾಲ ವಾಗುತ್ತಲೆ ಮಂಡನಮಿಶ್ರರಿಗೆ **ವೈಶ್ವದೇವ**ಕ್ಕೆ ಏಳಬೇಕೆಂದೂ ಶಂಕರಾಚಾರ್ಯರಂ ಭಿಕ್ಷಕ್ಕೆ ಏಳಿ ಎಂದೂ ಹೇಳುತ್ತಿರಲಾಗಿ, ಒಂದು ದಿನ ವಾದದಲ್ಲಿ ''ಮಂಡನ ಮಿಶ್ರರು ಹೇಳಿದಂತಹ ಗ್ರಂಥದಲ್ಲಿ ಯತಿಭಂಗವಾದಲ್ಲಿ ಶಂಕರಾಚಾರ್ಯರು **'ಅಸ್ಮಿನ್ಪದ್ಯೇ ಯತಿಭಂಗಃ'** ಎಂದು ನೀವು ಹೇಳಿದ ಕಕ್ಷಿಯಲ್ಲಿ ತಪ್ಪಿತು'' ಎಂದು ಹೇಳಲಾಗಿ, 'ನಾವು ಯತಿಭಂಗವಾಗಬೇಕೆಂತಲೇ ಹೇಳಿ ಸ್ಥಾಪಿಸು ವಂತಹ ಕಕ್ಷಿಯಲ್ಲಿ ಯತಿಭಂಗವಾದರೆ ದೋಷವಿಲ್ಲ'ವೆಂದು ಪ್ರಾಕೃತಭಾಷೆ ಯಿಂದ ಉದಾಹರಣೆ ಹೇಳಲಾಗಿ, ಶಾರದಾದೇವಿಯು ಮನಸ್ಸಿಗೆ ಸರಿಬಾರದೆ ತನ್ನ ಗಂಡನ ಪಕ್ಷದ ಕಕ್ಷಿ ಬಿತ್ತು ಎಂದು ತಿಳಿದು 'ಉಭಯರೂ ಭಿಕ್ಷಕ್ಕೆ ಏಳಿ' ಎಂದು ಹೇಳಲಾಗಿ, ಮಂಡನಮಿಶ್ರರು ತಾನು ಸೋತುದು ಸರಿಯೆಂದು ನಿಶ್ಚಯಿಸಿ, ಶಂಕರಾಚಾರ್ಯರಿಗೆ ನಮಸ್ಕಾರಮಾಡಲಾಗಿ, ಶಂಕರಾಚಾರ್ಯರು ಆಗ ಆತನಿಗೆ ಸಂನ್ಯಾಸವಂ ಕೊಟ್ಟು ಅವರಿಗೆ **ಸುರೇಶ್ವರಾಚಾರ್ಯರು** ಎಂದು ಹೆಸರಿಟ್ಟರು.

ಅನಂತರದಲ್ಲಿ ಶಾರದಮ್ಮನವರು **ಸತ್ಯಲೋಕ**ಕ್ಕೆ ಹೋಗುತ್ತಿರಲಾಗಿ, ಶಂಕರಾಚಾರ್ಯರು **ವನದುರ್ಗಾಮಂತ್ರ**ದಿಂದ ದಿಗ್ಬಂಧನವನ್ನು ಮಾಡಿ ನಿಲ್ಲಿಸಿ ಕೊಂಡು ಶಾರದಮ್ಮನವರನ್ನು ''ನನ್ನ ಮಠದಲ್ಲಿ ನೀನು ವಾಸವಾಗಿರಬೇಕೆಂಬು ದಕ್ಕಾಗಿ ನಿನ್ನನ್ನು ಕರೆದುಕೊಂಡು ಹೋಗುವ ಬಗ್ಗೆ ಬಂದೆನೇ ಹೊರತು ನನಗೆ ವಿಶೇಷ ಕಾರ್ಯವಿಲ್ಲ. ನೀನು ದಯಮಾಡಿ ಬರಬೇಕು'' ಎಂದು ಕೇಳಿ ಕೊಂಡರು. 'ತನ್ನ ಪತಿಗೆ ಸಂನ್ಯಾಸವಾಯಿತಲ್ಲಾ!' ಎಂಬ ಕ್ರೋಧದಿಂದ 'ನೀನು ನನಗೆ ವಿದ್ಯಾಪರೀಕ್ಷೆ ಕೊಟ್ಟರೆ ಬರುವೆ'ನೆಂದು ಹೇಳಲಾಗಿ, ಆಗ ಅಮ್ಮನವರು ಕೇಳಿದ ವಿದ್ಯೆಯಲ್ಲಿ ಶಂಕರಾಚಾರ್ಯರು ಪರೀಕ್ಷೆಯನ್ನು ಕೊಡಲು, ಅನಂತರ ಶಾರದಮ್ಮನವರು **ಕಲಾಶಾಸ್ತ್ರ**ದಲ್ಲಿ ಪರೀಕ್ಷೆಮಾಡಲಾಗಿ, 'ಈ ಶಾಸ್ತ್ರವನ್ನು ಓದಿದವನಲ್ಲ, ಓದಿ ಅನುಭವಮಾಡಿಕೊಂಡು ಬಂದು ಪರೀಕ್ಷೆ ಕೊಟ್ಟೇನು. ಆ ಪರ್ಯಂತ ಆರುತಿಂಗಳವರೆಗೆ ನೀನು ಇಲ್ಲಿ ಇರಬೇಕೆ'ಂದು ಕೇಳಿಕೊಳ್ಳಲು, ಅಮ್ಮನವರು ಆದೀತೆಂದು ಹೇಳಿದರು.

ಶಂಕರಾಚಾರ್ಯರು ನಾಲ್ಕು ಜನ ಶಿಷ್ಯರನ್ನು ಕರೆದುಕೊಂಡು ಸಂಚರಿಸುತ್ತ, **ಅಮರುಕರಾಜನ** ಪಟ್ಟಣದ ಸಮೀಪಕ್ಕೆ ಬರಲು, ಆ ವೇಳೆ

ಯಲ್ಲವನು ಮೃತನಾಗಿದ್ದಾನೆಂಬ ವರ್ತಮಾನವನ್ನು ತಿಳಿದು, ಆಚಾರ್ಯರು ಒಂದು ಅರಣ್ಯದಲ್ಲೊಂದು ಗುಹೆಯಲ್ಲಿ ತಮ್ಮ ದೇಹವನ್ನಿಟ್ಟು ಪರಕಾಯ ಪ್ರವೇಶವಂ ಮಾಡಿ ಕಲಾಶಾಸ್ತ್ರ ಪರಿಚಯವ ಮಾಡಬೇಕೆಂದು ಆಲೋಚಿಸಿ ತಮ್ಮ ಶಿಷ್ಯರಿಗೆ, "ನಾವು ಅಮರುಕರಾಜನ ಶರೀರ ಪ್ರವೇಶಮಾಡುತ್ತೇವೆ. ನಮ್ಮ ಶರೀರವನ್ನೀ ಗುಹೆಯಲ್ಲಿರಿಸುತ್ತೇವೆ. ನೀವು ಕಾದುಕೊಂಡಿರುತ್ತ ಏನಾದರೊಂದು ಉಪದ್ರವಬಂದರೆ ಆ ಕ್ಷಣವೇ ಪಟ್ಟಣಕ್ಕೆ ಬಂದು **ತತ್ತ್ವಮಸಿ** ಎಂಬ ವಾಕ್ಯ ಸೂಚನೆಯಿಂದ ನಮಗೆ ವರ್ತಮಾನವಂ ಹೇಳಬೇಕು" ಎಂದು ಹೇಳಿ ಗೊತ್ತುಮಾಡಿ, ತಾವು ಬಂದು ಅಮರುಕರಾಜನ ಶರೀರವಂ ಪ್ರವೇಶಮಾಡಲಾಗಿ, ಆತನ ಪತ್ನಿಯರಿಗೂ ಪ್ರಧಾನ ಮುಂತಾದವರಿಗೆಲ್ಲರಿಗೂ ಸಂತೋಷವಾಗಿ, ಪೂರ್ವ ಪ್ರಕಾರ ಆತನನ್ನು ಅರಸು ಎಂತಲೇ ತಿಳಿದು ತಮ್ಮ ಮರ್ಯಾದೆಯ ಪ್ರಕಾರ ನಡೆದುಕೊಳ್ಳುತ್ತಿದ್ದರು. ಬಂದಾನೊಂದು ದಿನ ಜ್ಯೇಷ್ಠ ಪತ್ನಿಯಾದವಳು—"ಆ ಶರೀರದಲ್ಲಿ ಪ್ರವೇಶವಾಗಿ ಅನುಭವಪಡುವಂತಹ ಜೀವನ ಚಮತ್ಕಾರಗಳಂ ನೋಡುವಾಗ್ಗೆ ಪೂರ್ವಕ್ಕಿಂತಲೂ ಅಲ್ಲಿ ಚಮತ್ಕಾರವಾಗಿ ಕಾಣುತ್ತದೆ. ಸರ್ವಥಾ ಈ ಶರೀರದಲ್ಲಿ ಯಾರೋ ಮಹಾಪುರುಷನು ಪ್ರವೇಶವಾಗಿರುತ್ತಾನೆ. ಪರಕಾಯಪ್ರವೇಶಮಾಡಬೇಕಾದರೆ ತಮ್ಮ ಪೂರ್ವದ ಶರೀರವಂ ಜೋಪಾನವಂ ಮಾಡಿದ್ದಾರು. ಅವರನ್ನು ಹುಡುಕಿ ತೆಗೆದು ಪರಿಹರಿಸಿಬಿಟ್ಟರೆ ಈ ಪುರುಷನೀ ದೇಹದಲ್ಲೇ ಇರುತ್ತಾನೆ" ಎಂದು ನಿಶ್ಚಯಿಸಿ, ತಮ್ಮ ಪ್ರಧಾನನಂ ಕರೆದು, "ನಮ್ಮ ದೇಶದೊಳಗಾಗಿ ಊರಲ್ಲಿಯಾಗಲಿ ವನದಲ್ಲಿಯಾಗಲಿ ಎಲ್ಲಿಯಾದರೂ ಸರಿಯೆ, ಮನುಷ್ಯ ಶವವಾಗಲಿ ಬದಲು ಯಾವ ರೂಪಿನ ಶವ ಬಿದ್ದರೂ ಅದನ್ನು ಅಗ್ನಿಯಲ್ಲಿ ದಗ್ಧವನ್ನು ಮಾಡಿಸಿಬಿಡು" ಎಂದು ಹೇಳಲಾಗಿ, ಆ ಪ್ರಧಾನನು ಚಾರರಂ ಕರೆದು ಈ ಪ್ರಕಾರ ನೇಮಕಮಾಡಿ ಕಳುಹಿಸಿದನು.

ಆ ಚಾರರು ಅದೇ ಪ್ರಕಾರ ದೃಷ್ಟಿಗೋಚರವಾದ ಕುಣಪಗಳನ್ನೆಲ್ಲಿ ದಹಿಸುತ್ತ ಮತ್ತು ಹುಡುಕುತ್ತ ಈ ಶಿಷ್ಯರು ಕಾದಿರುವಂತಹ ವನಾಂತರಕ್ಕೆ ಬಂದು, ಈ ಗುಹೆಯಲ್ಲಿದ್ದ ಶಂಕರಾಚಾರ್ಯರ ದೇಹವನ್ನು ತೆಗೆದು ಚಿತೆ ಬೊಟ್ಟಿ ಅಗ್ನಿಪ್ರವೇಶಮಾಡಿಸುತ್ತಿರಲಾಗಿ, ಈ ನಾಲ್ಕು ಜನ ಶಿಷ್ಯರು ಕಂಡು **ಶಾರದಗಾರ** ವೇಷವನ್ನು ಧರಿಸಿಕೊಂಡು ಕೈಯಲ್ಲಿ ತಂಬೂರಿಯನ್ನು ಹಿಡಿದು ಅಮರುಕರಾಜನ ಪಟ್ಟಣಕ್ಕೆ ಬಂದು '**ತತ್ತ್ವಮಸಿ**' ಎಂಬ ವಾಕ್ಯಾರ್ಥ ಯುಕ್ತವಾದ ಪದ್ಯದಿಂದ ಉಚ್ಚರಿಸುತ್ತ ಆ ಪಟ್ಟಣದಲ್ಲಿ ಸಂಚರಿಸುತ್ತ ಅರಮನೆಯ ಬಾಗಿಲಿಗೆ ಬಂದು ಗಾನವಂ ಮಾಡಲಾಗಿ, ಶಂಕರಾಚಾರ್ಯರು ತಿಳಿದು ತಮ್ಮ ದೇಹಕ್ಕೇನೋ ಉಪಹತಿ ತಟ್ಟಿನ್ನು ಸರಿಯೆಂದು ನಿಶ್ಚಯಿಸಿ, ಅಮರುಕರಾಜನ ದೇಹದಿಂದ ಹೊರಟು ವನಾಂತರಕ್ಕೆ ಬಂದು ನೋಡಲಾಗಿ, ಚಿತೆಯಲ್ಲಿರಿಸಿ ಅಗ್ನಿ ಪ್ರವೇಶವನ್ನು ಮಾಡಿಸಿರುವುದನ್ನು ಕಂಡು, **ನರಸಿಂಹನನ್ನು ಸ್ತುತಿ**ಮಾಡಿದುದರಿಂದ, ಆಕ್ಷಣವೇ ಮೇಘಾವೃತವಾಗಿ ಮಳೆ ಬಂದು ಅಗ್ನಿಯು ಶಾಂತ

ಮಾಡಿತು. ನರಸಿಂಹಸ್ವಾಮಿಯು ಬಂದು ಹಸ್ತದಿಂದ ಶಂಕರಾಚಾರ್ಯರ ದೇಹಸ್ಪರ್ಶವಮಾಡಿ ಕೈಹಿಡಿದು ಎತ್ತಲಾಗಿ, ಶಂಕರಾಚಾರ್ಯರು ತಮ್ಮ ಕಾಯವನ್ನು ಪ್ರವೇಶಮಾಡಿ ನರಸಿಂಹಸ್ವಾಮಿಯನ್ನು ಸ್ತುತಿಸಿ ಸಂತೋಷಪಡಿಸಿದರು. ಭಗವಂತನು ಅಂತರ್ಧಾನನಾದ ಬಳಿಕ, ಶಂಕರಾಚಾರ್ಯರು ತಮ್ಮ ಶಿಷ್ಯರನ್ನು ಕೂಡಿಕೊಂಡು ಶಾರದಮ್ಮನವರ ಬಳಿಗೆ ಬಂದು ಕಲಾಶಾಸ್ತ್ರವನ್ನು ಪರೀಕ್ಷಿಕೊಡಲು, ಅಮ್ಮನವರು ಸಂತುಷ್ಟರಾಗಿ 'ನಿನಗೇನು ಬೇಕೆ'ಂದು ಕೇಳಲಾಗಿ, ತನ್ನ ಮಠದಲ್ಲಿ ವಾಸವಾಗಿದ್ದುಕೊಂಡು ಶಿಷ್ಯ ಪರಂಪರೆಯಾಗಿ ಪೂಜಿಸಿಕೊಳ್ಳುತ್ತ ಬರಬೇಕೆಂದು ಪ್ರಾರ್ಥನೆಯಂ ಮಾಡಿದರು. ಶಂಕರಾಚಾರ್ಯರು ಉತ್ತರದಲ್ಲಿ **ಬದರಿಕಾಶ್ರಮ**ದಲ್ಲಿ ಒಂದು ಮಠ, ಪೂರ್ವದಲ್ಲಿ **ಜಗನ್ನಾಥಕ್ಷೇತ್ರ**ದಲ್ಲಿ ಒಂದು ಮಠ, ಪಶ್ಚಿಮ ದಿಕ್ಕಿಗೆ ದ್ವಾರಕೆಯಲ್ಲಿ ಒಂದು ಮಠ. ಈ ಪ್ರಕಾರ ಮೂರು ದಿಕ್ಕಿನಲ್ಲಿಯೂ ಮೂರು ಮಠವನ್ನು ಮಾಡಿ ಮೂರು ಮಂದಿ ಶಿಷ್ಯರನ್ನಿಟ್ಟು **ದಕ್ಷಿಣದೇಶಕ್ಕೆ** ಬಂದು ಶಾರದಮ್ಮನವರನ್ನು ಪ್ರತಿಷ್ಠೆಮಾಡುವುದಕ್ಕೆ ಸ್ಥಳ ಯಾವುದಾದೀತು ಎಂದು, ತುಂಗಭದ್ರಾ ತೀರದಲ್ಲಿ ವಿಭಾಂಡ ಕುಮಾರರಾದ ಋಷ್ಯಶೃಂಗರ ಆಶ್ರಮವಾದ ಶೃಂಗಪುರಕ್ಕೆ ಬಂದು, ನದೀತೀರದಲ್ಲಿ ಬರುತ್ತಿರಲು, ಆ ನದೀತೀರದಲ್ಲಿ ಬಂದು ಗರ್ಭಿಣಿಯಾದ ಕಪ್ಪೆಗೆ ಮಧ್ಯಾಹ್ನದ ಬಿಸಲಿನ ವೇಳೆಯಲ್ಲಿ ಒಂದು ಸರ್ಪವು ತನ್ನ ಹೆಡೆಯಿಂದ ನೆರಳುಮಾಡಿ ಹಿಡಿದಿರುವುದನ್ನು ಕಂಡು ಆಶ್ಚರ್ಯಪಟ್ಟು ಈ ಸ್ಥಳವು ಮಹಾ ಉತ್ತಮವಾದುದೆಂದು ನಿಶ್ಚಯಿಸಿ, ಅದೇ ಸ್ಥಳದಲ್ಲಿ ಮಠವನ್ನು ಕಟ್ಟಿಸಿ **ಚಕ್ರೋದ್ಧಾರ** ಯಂತ್ರವನ್ನು ಶಿಲೆಯಲ್ಲಿ ಬರೆದು, ಅಲ್ಲಿ ಶಾರದಮ್ಮನವರನ್ನು ಪ್ರತಿಷ್ಠೆಮಾಡಿ, ಆ ಮಠದಲ್ಲಿ **ಸುರೇಶ್ವರಾಚಾರ್ಯ**ರೆಂಬ ಶಿಷ್ಯರನ್ನಿಟ್ಟು ಅಮ್ಮನವರಂ ಪೂಜಿಸುತ್ತಿರಲಾಗಿ, ಶ್ರೀಶಾರದಮ್ಮನವರು ನಿತ್ಯದಲ್ಲಿಯೂ ಒಂದು ಕಲೆಯಿಂದಿರುತ್ತ ನವರಾತ್ರಿಯ ಕಾಲದಲ್ಲಿ ಪೂರ್ಣ ಷೋಡಶ ಕಲೆಯಿಂದಿರುತ್ತೇವೆಂದಪ್ಪಣೆ ಕೊಟ್ಟು, ತಾವು ಸತ್ಯಲೋಕದಲ್ಲಿ ವಾಸವಾಗಿ ಸರ್ವದಾ ಶೃಂಗೇರಿಯಲ್ಲಿ ನೆಲಸಿ ಶಿಷ್ಯ ಪರಂಪರೆಯಾಗಿ ಪೂಜೆಯನ್ನು ತೆಗೆದುಕೊಳ್ಳುತ್ತ ಅದ್ಯಾಪಿ ಇದ್ದಾರೆ. ಶಂಕರಾಚಾರ್ಯರು **ಶಿಂಗರಿ**ಯೆಂಬ ಬ್ರಹ್ಮರಾಕ್ಷಸನನ್ನು ಶೃಂಗೇರಿಯ ಮಠದಲ್ಲಿ ಕಾಯಿರುವ ಹಾಗೆ ನೇಮಕಮಾಡಿ ಅನಂತರದಲ್ಲಿ ದೇಶಸಂಚಾರವನ್ನು ಮಾಡುತ್ತ ದುರ್ಮತದ ಜನರಾದವರು ವಾದಕ್ಕೆ ಬರಲಾಗಿ ಅವರ ಮತಗಳನ್ನು ಶ್ರುತಿ ಸ್ಮೃತಿ ಪುರಾಣಾದಿ ವಾಕ್ಯ ಸಮ್ಮತದಿಂದ ಖಂಡನೆಮಾಡುತ್ತ, **ಅದ್ವೈತಮತ**ವನ್ನೇ ಸ್ಥಾಪನೆಮಾಡುತ್ತಿದ್ದರು.

ಕೇರಳದೇಶದ **ಕಾಲಟಿ**ಯೆಂಬ ಗ್ರಾಮದಲ್ಲಿ ತಮ್ಮ ಮಾತೃವಾದ ಅಂಬಾ ಎಂಬವರಿಗೆ ಅಂತ್ಯಕಾಲ ಸನ್ನಿಹಿತವಾಗುತ್ತಿರಲಾಗಿ "**ಶ್ರೀ ಶಂಕರ! ಶಂಕರ!**" ಎಂದು ಸ್ಮರಿಸಲು, ಆಕ್ಷಣವೇ ಅಲ್ಲಿಗೆ ಬಂದು ಮಾತನಾಡಿಸಲಾಗಿ, ತದನಂತರದಲ್ಲಿ ಅಮ್ಮನು ಸ್ವರ್ಗಸ್ಥಳಾದಳು. ಆ ದೇಶದಲ್ಲಿರುವ ಬ್ರಾಹ್ಮಣರನ್ನು ಕರೆದು 'ಶವಸಂಸ್ಕಾರ ಮಾಡುವುದಕ್ಕೆ ಆಗುವಂತಹ ಕರ್ತವ್ಯಕ್ಕೆ ಸಹಾಯವಾಗಿ ಬನ್ನಿ'—

ಎನ್ನಲು, ಅವರು ಬಾರದೆ ಇದ್ದುದರಿಂದ ಆ ಶವವನ್ನು ಮನೆಯಲ್ಲಿಯೇ ಅಗ್ನಿ ಪ್ರವೇಶವಂ ಮಾಡಿಸಿ ಸಂಸ್ಕರಿಸಿ, ಯತಿಧರ್ಮದಲ್ಲಿ ಮಾಡತಕ್ಕ ಕರ್ತವ್ಯವೇನುಂಟೋ ಆ ಕ್ರಮದಿಂದ ಆಗುವ ಕೃತ್ಯವಂ ಮಾಡಿ, ಆ ಕೇರಳದೇಶದ ಜನರಿಗೆ "ನೀವು ಅನಾಚಾರಯುಕ್ತರಾಗಿ ಹೋಗಿ" ಎಂದು ಶಾಪವನ್ನು ಕೊಟ್ಟು ಪುನಃ ದೇಶಸಂಚಾರಮಾಡುತ್ತ ದುರ್ಮತ ದುರಾಗ್ರಹ ಪ್ರವಿಷ್ಟರನ್ನೆಲ್ಲ ಖಂಡಿಸುತ್ತಿರಲಾಗಿ, ಭಟ್ಟಾಚಾರ್ಯರು ಶಂಕರರು ಅವತರಿಸಿದ್ದಾರೆಂಬ ವರ್ತಮಾನವಂ ಕೇಳಿ ಶಂಕರಾಚಾರ್ಯರ ದರ್ಶನವೆಂದಿಗಾದೀತೋ! ಎಂದು ಅಪೇಕ್ಷಿಸುತ್ತಿರಲಾಗಿ, ಶಂಕರಾಚಾರ್ಯರು ದೇಶಸಂಚಾರಮಾಡುತ್ತ ಆ ಸ್ಥಳಕ್ಕೆ ಹೋದರು. ಇವರೇ ಶಂಕರಾಚಾರ್ಯರೆಂದು ತಿಳಿದು ಭಟ್ಟಾಚಾರ್ಯರು ವಂದನೆಯಂ ಮಾಡಿ ಬಹಳ ಸಂತೋಷಪಟ್ಟು ಸಂದರ್ಶನದಿಂದ ಕೃತಕೃತ್ಯನಾದೆನೆಂದು ಬಹಳ ಸ್ತುತಿಸಲಾಗಿ, ಶಂಕರಾಚಾರ್ಯರು ಇವರು ಉತ್ತಮರಿದ್ದಾರೆಂದು ತಿಳಿದು ವಿದ್ಯಾ ಪರೀಕ್ಷೆ, ವೇದಾಂತ ಗ್ರಂಥಗಳು ಮುಂತಾಗಿ ಆಲೋಚನೆಗಳನ್ನು ಮಾಡುತ್ತ, ಅನಂತರದಲ್ಲಿ ಭಟ್ಟಾಚಾರ್ಯರಿಗೆ ಉಪದೇಶವಂ ಮಾಡಿ ಬ್ರಹ್ಮಸೂತ್ರಾರ್ಥವನ್ನು ತಿಳಿಯಪಡಿಸಿ, "ನೀವು ಭಾಗವತ ಸಂಪ್ರದಾಯಾನುಸಾರವಾಗಿ, ಇರಿ" "ನಿಮ್ಮ ಆಚಾರದ ಮೇರೆಗೆ ನಿಮ್ಮ ಶಿಷ್ಯರು ಲೋಕದಲ್ಲಿ ಪ್ರವರ್ತಿಸಲಿ" ಎಂಬುದಾಗಿ ಅವರಿಗೆ ಹೇಳಿ, ಅಲ್ಲಿಂದ ಹೊರಟು ಪುನಃ ದೇಶಸಂಚಾರವನ್ನು ಮಾಡುತ್ತ **ಕಾಂಚೀ ಪಟ್ಟಣಕ್ಕೆ** ಬಂದು ಅಲ್ಲಿ ಚಕ್ರಸ್ಥವಾದ **ಕಾಮಾಕ್ಷಮ್ಮ**ನವರ ದರ್ಶನವಂ ಮಾಡಿಕೊಂಡು, ಪೀಠವನ್ನೇರಿ, ಅಲ್ಲಿಂದ ಹೊರಟು ಪುನಃ ದೇಶಸಂಚಾರಮಾಡುತ್ತ, ಷಡ್ದರ್ಶನ ಸ್ಥಾಪನೆಯಂ ಮಾಡಿ, ತಮ್ಮ ಮೂವತ್ತೆರಡನೆಯ ವರ್ಷದಲ್ಲಿ ಮಾಘ ಶುದ್ಧ ಸಪ್ತಮಿ (ರಥಸಪ್ತಮಿ) ದಿವಸ ವ್ಯಾಸರ ಹಸ್ತವನ್ನು ಹಿಡಿದುಕೊಂಡು ಅಂತರ್ಧಾನವಂ ಪಡೆದರು.

ಅನಂತರ ಅವರ ಶಿಷ್ಯರಾದ ಸುರೇಶ್ವರಾಚಾರ್ಯರು ಶೃಂಗೇರಿಯಲ್ಲಿರುತ್ತಿದ್ದರು. ಇವರ ಶಿಷ್ಯರು:—

ಗುರು ಪರಂಪರೆ

೧. ಶಿವಾಯ
೧. ಹರಯೇ
೧. ಧಾತ್ರೇ
೧. ವಸಿಷ್ಠಾಯ
೧. ಶಕ್ತಯೇ
೧. ಪರಾಶರಾಯ
೧. ವ್ಯಾಸಾಯ

೧೧. **ಶಂಕರಾಚಾರ್ಯರು**
೧೨. ಸುರೇಶ್ವರಾಚಾರ್ಯರು
೧೩. ಬೋಧಘನಾಚಾರ್ಯರು
೧೪. ಸಂಜ್ಞಾನಾಚಾರ್ಯರು
೧೫. ಬೋಧಘನಾಚಾರ್ಯರು
೧೬. ಜ್ಞಾನಯೋಗಿಗಳು
೧೭. ಜ್ಞಾನಗಿರಯೇ

೧. ಶುಕಯೋಗಿನೇ　　೧೮. ಶ್ರೀ ಸಿಂಹಗಿರಯೇ
೧. ಗವುಡಪಾದಾಚಾರ್ಯರು　　೧೯. ಈಶ್ವರತೀರ್ಥರು
೧. ಗೋವಿಂದಭಗವತ್ಪಾದಾಚಾರ್ಯರು　　೨೦. ನೃಸಿಂಹಭಾರತಿಗಳು
　　೨೧. ವಿದ್ಯಾತೀರ್ಥರು
೧೦　　೨೨. ವಿದ್ಯಾಶಂಕರಾಚಾರ್ಯರು
　　೨೩. ಭಾರತೀಕೃಷ್ಣತೀರ್ಥರು
　　೨೪. **ವಿದ್ಯಾರಣ್ಯರು**

(ಇವರು ರಾಯರ ಸಂಸ್ಥಾನ ವಿಜಯನಗರ ಹಂಪೆಯಲ್ಲಿ ಸುವರ್ಣ ವೃಷ್ಟಿ ಮಾಡಸಿದವರು.)

೨. ಇವರ ಶಿಷ್ಯರು ಇಬ್ಬರು—
(೧) ಚಂದ್ರಶೇಖರಭಾರತಿಗಳು
(೧) ನರಸಿಂಹಭಾರತಿಗಳು

೨.

೨೬.
೨೭. ಪುರುಷೋತ್ತಮಭಾರತಿಗಳು
೨. ಇವರ ಶಿಷ್ಯರು ಇಬ್ಬರು—
(೧) ಚಂದ್ರಶೇಖರಭಾರತಿಗಳು
(೧) ನರಸಿಂಹಭಾರತಿಗಳು

೨

೨೯.
೩೦. ಪುರುಷೋತ್ತಮಭಾರತಿ, ಪ್ರಬಂಧ ಕರ್ತೃಗಳು.
೩೧. ರಾಮಚಂದ್ರಭಾರತಿ ಸ್ವಾಮಿಯವರು
೩೨. ನರಸಿಂಹಭಾರತಿಯವರು
೩೩. ನರಸಿಂಹಭಾರತಿಯವರು
೩೪. ಅಭಿನವ ನರಸಿಂಹಭಾರತಿಯವರು

(ಇವರು ಶಿಲಾಸ್ತಂಭದಲ್ಲಿ ವಿಘ್ನೇಶ್ವರ ದೇವರಂ ಪ್ರತ್ಯಕ್ಷನಃ ಮಾಡಿದರು. **ಈಗಲೂ ಪೂಜೆ ನಡೆಯುತ್ತಿದೆ.** ಭವಾನಿ ಅಮ್ಮನವರ ಪ್ರತಿಷ್ಠೆ ಮಾಡಿದರು.)

೩೫. ಇವರ ಶಿಷ್ಯರು ಸಚ್ಚಿದಾನಂದಭಾರತಿ ಸ್ವಾಮಿಗಳು
೩೬. ವಿದ್ಯಾನರಸಿಂಹಭಾರತಿಗಳು
೩೭. ಸಚ್ಚಿದಾನಂದಭಾರತಿಗಳು, ಬಹು ಪ್ರೌಢರು.
೩೮. ಅಭಿನವ ಸಚ್ಚಿದಾನಂದಭಾರತಿ ಸ್ವಾಮಿಗಳು

(ಇವರು ಶಾಲಿವಾಹನ ಶಕ ವ| ೧೬೨೬ನೆಯ ಕ್ರೋಧನ ಸಂವತ್ಸರದಲ್ಲಿ ತಿರುಪತಿಗೆ ಚಿತ್ತೈಸಿದ್ದಾರೆ.)

೪. ಶಂಕರಾಚಾರ್ಯರು ನಿರ್ಮಿಸಿದ ಮಠಗಳು ನಾಲ್ಕಕ್ಕೆ ವಿವರ:—

೧. **ದಕ್ಷಿಣ ದಿಶಿ** ರಾಮಕ್ಷೇತ್ರಂ, ಆದಿವರಾಹೋ ದೇವತಾ, ಶಾರದಾ ದೇವೀ, ತುಂಗಭದ್ರಾ ತೀರ್ಥಂ, ಶೃಂಗೇರೀ ಮಠಃ, ಭೂರಿವಾಳ ಸಂಪ್ರದಾಯಃ, ತತ್ರ ಪ್ರವರ್ತಕ ಸಂನ್ಯಾಸ ನಾಮಾನಿ ಸಂಪ್ರದಾಯಾಶ್ಚ ದಶ.

೧. **ಪಶ್ಚಿಮ ಸಮುದ್ರತೀರೇ,** ದ್ವಾರಕಾಕ್ಷೇತ್ರೇ, ಸಿದ್ಧೇಶ್ವರೋ ದೇವತಾ, ಭದ್ರಕಾಳೀ ದೇವೀ, ಗೋಮತೀ ತೀರ್ಥಂ, ಶಾರದಾ ಮಠಃ, ಕೀಟವಾಳ ಸಂಪ್ರದಾಯಃ, ತತ್ರ ಪ್ರವರ್ತಕೋ ಹಸ್ತಾಮಲಕಾಚಾರ್ಯಃ, ಸಂನ್ಯಾಸ ನಾಮಾನಿ—ಆಶ್ರಮ ತೀರ್ಥ—ಇತಿ ದ್ವಯಂ.

೧. **ಉತ್ತರ ದಿಶಿ**—ಬದರಿಕಾಶ್ರಮಕ್ಷೇತ್ರೇ, ನಾರಾಯಣೋ ದೇವತಾ, ಪೂರ್ಣಗಿರೀ ದೇವೀ, ಅಳಕನಂದಾ ತೀರ್ಥಂ, ಜ್ಯೋತಿರ್ಮಠಃ, ಆನಂದವಾಳ ಸಂಪ್ರದಾಯಃ, ತತ್ರ ಪ್ರವರ್ತಕಃ ತ್ರೋಟಕಾಚಾರ್ಯಃ, ಸಂನ್ಯಾಸ ನಾಮಾನಿ—ಗಿರಿ ಪರ್ವತ ಸಾಗರ—ಇತಿ ತ್ರಯಂ.

೧. **ಪೂರ್ವ ದಿಶಿ**—ಪುರುಷೋತ್ತಮಕ್ಷೇತ್ರೇ, ಜಗನ್ನಾಥೋ ದೇವತಾ, ವಿಮಲಾ ದೇವೀ, ಮಹೋದಧಿ ತೀರ್ಥಂ, ಭೋಗವಾಳ ಸಂಪ್ರದಾಯಃ, ತತ್ರ ಪ್ರವರ್ತಕಃ ಪದ್ಮಪಾದಾಚಾರ್ಯಃ, ಸಂನ್ಯಾಸ ನಾಮಾನಿ ವನ ಅರಣ್ಯ ಇಂದ್ರ—ಇತಿ ತ್ರಯಂ.

ಈ ಪ್ರಕಾರ ನಾಲ್ಕು ದಿಕ್ಕಿಗೂ ನಾಲ್ಕು ಮಠವನ್ನು ನಿರ್ಮಿಸಿ ನಾಲ್ಕು ಮಂದಿ ಶಿಷ್ಯರನ್ನಿಟ್ಟು ಅಲ್ಲಲ್ಲಿ ದೇವತಾ ಸೇವೆಯು ಶಿಷ್ಯ ಪರಂಪರೆಯಾಗಿ ನಡೆದು ಬರುವ ಹಾಗೆ ನೇಮಕಮಾಡಿದರು.

ಈ ಸೀಮೆಯಲ್ಲಿರುವ ನದಿಗಳು, ಅವುಗಳ ಹೆಸರು ಇವುಗಳ ವಿವರ:—

೨. **ತುಂಗಾ ಭದ್ರಾ** **ನದಿ**ಗಳೆರಡೂ **ಕೊಪ್ಪದ** ಸೀಮೆಯಲ್ಲಿರುವ **ಕೆರೆ ಗ್ರಾಮ**ದಲ್ಲಿ **ವೇದಸಾರ** ಎಂಬ ಪರ್ವತದ ಮೇಲೆ **ವರಾಹಸ್ವಾಮಿಯ** ಕೋರೆ ದಾಡೆಯಲ್ಲಿ ಹುಟ್ಟಿ ಬೇರೆ ಬೇರೆ ಬಂದು, **ಕೂಡಲಿ**ಯಲ್ಲಿ **ಸಂಗರಮ ಮನಿವಾರೆ** (?) ನದಿಯಾಗಿ ಹೋಗಿ **ಶ್ರೀ ಶೈಲಪರ್ವತ**ದ ಬಳಿಯ ಉಪನದಿಯಂ **ಕೂಡಿಕೊಂಡು,** ಮುಂದೆ ಸಮುದ್ರಗಾಮಿನಿಯಾಗಿದೆ.

೧. ಇದೇ ವರಾಹಸ್ವಾಮಿಯ ಕಣ್ಣಿನಿಂದ ಹುಟ್ಟಿದ **ನೇತ್ರವತಿ**ಯೆಂಬ ಒಂದು ನದಿ ಘಟ್ಟದ ಕೆಳಗೆ ಹೋಗಿ **ಕೊಡಿಯಾಲ**ದ ಬಳಿ ಸಮುದ್ರಗಾಮಿನಿಯಾಗಿದೆ.

೧. **ಇಕ್ಕೇರಿ** ಸೀಮೆಯಲ್ಲಿ **ಪಾರ್ವತೀದೇವಿ**ಯ ಕಾಲೊಳಗೆ ಹುಟ್ಟಿದ **ವರದಾನದಿ**ಯು **ಗಳಗನಾಥ**ದ ಬಳಿಯಲ್ಲಿ ತುಂಗಭದ್ರೆಗೆ ಕೂಡಿಹೋಗಿದೆ.

೨. **ಕುಶಾವತಿ, ಕುಮುದ್ವತಿ**ಯೆಂಬೆರಡು ನದಿಗಳು **ಹುಮಚತ್ತ ಉತ್ತ**ದಲ್ಲಿ **ಪದ್ಮಾವತಿ ದೇಶಿ** ಬಳಿಯಲ್ಲಿರುವ ಪರ್ವತದಲ್ಲಿ ಹುಟ್ಟಿ ಬೇರೆ ಬೇರೆ ಎರಡು ನದಿಗಳಾಗಿ ಹೋಗಿದೆ.

೧. ಕುಶಾವತಿಯು ಹೋಗಿ **ತೀರ್ಥಹಳ್ಳಿ** ಬಳಿಯ ತುಂಗಭದ್ರೆಗೆ ಕೂಡಿ ಮುಂದೆ ಹೋಗಿದೆ.

೧. ಕುಮುದ್ವತಿಯು ವರದಾನದಿಗೆ ಕೂಡಿಹೋಗಿದೆ.

೧. **ಕವುಲೆದುರ್ಗದ** ತಾಲ್ಲೂಕ **ಗೋಣಬೂರು** ಗ್ರಾಮದಲ್ಲಿ **ರಾಮಸ್ವಾಮಿದೇವರು ಮಾರೀಚನಂ** ಸಂಹಾರಮಾಡುವ ಬಗ್ಗೆ ಬಾಣ ಹೊಡೆದಾಗ, ಬಾಣದ ಧ್ವನಿಯಿಂದ ಈ ಪರ್ವತದಲ್ಲಿ ಹುಟ್ಟಿದ್ದರಿಂದ ಶರವತಿ (ಶರಾವತಿ ?) ಎಂಬ ನದಿಯಾಗಿ ಘಟ್ಟದ ಕೆಳಗೆ ಹೋಗಿ ಸಮುದ್ರಕ್ಕೆ ಕೂಡಿದೆ.

೧. ಕೊಪ್ಪದ ಸೀಮೆಯಲ್ಲಿ **ಮೇಲುಬಂಗಾಡಿ** ತಾಲ್ಲೂಕು **ಜವಳಿ ಗ್ರಾಮದ** ಬಳಿಯ **ವಿನಾಯಕ** ದೇವರ ಬಳಿಯಲ್ಲಿರುವ ಪರ್ವತದಲ್ಲಿ ಹುಟ್ಟಿ **ಮಹೆಮಾತಿ** (ಹೇಮಾವತಿ ?) ಎಂಬ ನದಿಯು **ಕೊಡಗಿನ ಸೀಮೆ**ಗಾಗಿ ಹೋಗಿ **ಕಾವೇರಿ**ಗೆ ಕೂಡಿಹೋಗಿದೆ.

೧. ಈ ಕೊಪ್ಪದ ತಾಲ್ಲೂಕ **ರೇಗಡ** ಗ್ರಾಮದಲ್ಲಿ ನರಸಿಂಹದೇವರ ಪರ್ವತದಲ್ಲಿ **ನಂದಿನೀ** ನದಿ ಹುಟ್ಟಿ ಘಟ್ಟದ ಕೆಳಗೆ ಹೋಗಿ ಸಮುದ್ರಗಾಮಿನಿಯಾಗಿ ಇದೆ.

೧. ಇದೇ ಕೊಪ್ಪದ ತಾಲ್ಲೂಕ **ಹಳಸರ ಸೀಮೆ**ಯಲ್ಲಿ **ಸೋಮಾವತಿ** ಎಂಬ ನದಿ **ಬ್ರಹ್ಮದೇವರು** ಯಜ್ಞಮಾಡಿದ ಭೂಮಿಯಲ್ಲಿ ಸೋಮಪಾತ್ರೆಯಲ್ಲಿ ಹುಟ್ಟಿದುದರಿಂದ ಸೋಮಾವತಿಯಾಗಿ ತುಂಗಭದ್ರೆಗೆ ಕೂಡಿದೆ.

೧. **ರಾಮಗಿರಿ**ಯಲ್ಲಿ **ಹರಿದ್ರಾನದಿ** ಹುಟ್ಟಿ ಅಲ್ಲಿಂದ **ಬಸವಾಪಟ್ಟಣದ ಸೂಳೆಕೆರೆ**ಗೆ ಬಂದು ಕೂಡಿ ಈ ಕೆರೆಯ ತೂಬಿನಿಂದ ಹರಿದುಹೋಗಿ **ಹರಿಹರದ** ಬಳಿಯಲ್ಲಿ ತುಂಗಭದ್ರೆಗೆ ಕೂಡಿಹೋಗಿದೆ.

ಅಂತು ನದಿ ೧೧ ಈ ಮೇರೆಗೆ ಇದೆ.

ಈ ಸೂಳೆಕೆರೆಯ ನೀರಿನಿಂದ ಪೈರುಗಳು ಆಗುತ್ತವೆ. ಕಡಿಮೆ ನದಿಗಳಿಂದ ಕಾಲುವೆ ಬಂದು ಪೈರಾಗುವುದಿಲ್ಲ. (ಸಶೇಷ)

ಬಿ. ರಾಮರಾವ್.

ಗ್ರಂಥ ವಿಮರ್ಶೆ

೧. ರಾಜಭಕ್ತಿ ಮುಕ್ತಾವಳಿ

(ನಮ್ಮ ಸ್ವಾಮಿ, ನಮ್ಮ ಸೀಮೆ)

ಗ್ರಂಥಕರ್ತರು.—ಬಿ. ಶ್ರೀಕಂಠಯ್ಯನವರು, ತುಮಕೂರು.

ಕ್ರೌನ್ ಅಷ್ಟಪತ್ರ ಪುಟಗಳು viii + ೭೨ + ೨೬; ೧೯೨೮.

ಗ್ರಂಥಕರ್ತರ ಹೃದಯದಲ್ಲಿ ರಾಜಭಕ್ತಿಯು ತುಂಬಿ ಕಾವ್ಯರೂಪವಾಗಿ ಹೊರಟಿರುವಂತೆ ತೋರುವುದು. ಇದರಲ್ಲಿ ೩೧ ಕಂದಪದ್ಯಗಳೂ ಅವುಗಳಲ್ಲನೇಕಕ್ಕೆ ಇಂಗ್ಲಿಷು ಪದ್ಯ ಕವಿತಾ ಭಾಷಾಂತರವೂ ಅಲ್ಲಲ್ಲಿಯೇ ಇರುವುವು. ಇದಲ್ಲದೆ, ಕನ್ನಡದಲ್ಲಿ ಉಪೋದ್ಘಾತವೂ, ಇಂಗ್ಲಿಷಿನಲ್ಲಿ ದೇಶಭಕ್ತಿಯ ವಿಚಾರವೂ ಇವೆ. ಕೊನೆಯ ೬೦ ಪುಟಗಳಲ್ಲಿ ಮೈಸೂರು ಸಂಸ್ಥಾನದ ಸಂಕ್ಷೇಪ ಚರಿತ್ರಾಂಶವು ("ನಮ್ಮ ಪ್ರಭುಗಳ ಜನನಾರಭ್ಯ ರಜತೋತ್ಸವ ಪರ್ಯಂತ") ಕನ್ನಡದಲ್ಲಿಯೂ, ಉಳಿದ ೨೬ ಪುಟಗಳಲ್ಲಿ ರಜತೋತ್ಸವದಿಂದೀಚಿನ ರಾಜ್ಯ ವಿಚಾರಗಳು ಇಂಗ್ಲಿಷಿನಲ್ಲಿಯೂ ಕೊಟ್ಟಿವೆ; ನಮ್ಮ ಮೈಸೂರು ದೊರೆಗಳ, ನಮ್ಮ ಯುವರಾಜರ, ನಮ್ಮ ಯುವರಾಜ ಕುಮಾರರ ಮತ್ತು ನಮ್ಮ ಈಗಿನ ದಿವಾನರ ಭಾವಚಿತ್ರಗಳನ್ನೂ ಸೇರಿಸಿದೆ. ಗ್ರಂಥಕರ್ತರ ರಾಜಭಕ್ತಿ, ದೇಶಭಕ್ತಿ, ಭಾಷಾಭಕ್ತಿಗಳು ಸ್ತೋತ್ರಾರ್ಹವಾದುವೇ ಸರಿ.

ಆದರೆ, ಇಂತಹ ಕಾವ್ಯಗಳು ಲೇಖಕರ ತಾತ್ಕಾಲಿಕೋತ್ಸಾಹವನ್ನು ಪ್ರದರ್ಶಿಸುವುದಕ್ಕೆ ಸಮರ್ಥವಾಗುವುವೇ ವಿನಾ ಶಾಶ್ವತವಾಗಿರಲು ಒರೆಗಲ್ಲಿನ ಪರೀಕ್ಷೆಗೆ ನಿಲ್ಲತಕ್ಕುವಲ್ಲವೆಂಬುದೇ ನಮ್ಮ ಅಭಿಪ್ರಾಯ.

---

೨. ಭೀಷ್ಮ ಚರಿತೆ

ಲೇಖಕರು.—ಸಿ. ವಾಸುದೇವಯ್ಯನವರು, ಬೆಂಗಳೂರು.

ಕ್ರೌನ್ ಅಷ್ಟಪತ್ರ ಪುಟಗಳು ೨೪೭; ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಿತವಾದುದು; ೧೯೨೭;

ಬೆಲೆ ರೂ. ೧–೮–೦.

ಈ ಗ್ರಂಥವನ್ನು ಶ್ರೀಯುತ ರಜನೀಕಾಂತಗುಪ್ತರಿಂದ ವಂಗಭಾಷೆಯಲ್ಲಿ ರಚಿತವಾದ 'ಭೀಷ್ಮ ಚರಿತೆ'ಯ ಆಧಾರದ ಮೇಲೆ, ಇತರ ಮಹಾಭಾರತ ಗ್ರಂಥಗಳ ಸಹಾಯದಿಂದ, "ಸ್ವಲ್ಪ ಮಟ್ಟಿಗೆ ವಿಸ್ತರಿಸಿ, ಮತ್ತೆ ಕೆಲವು ಹೆಚ್ಚು ಸಂಗತಿಗಳನ್ನು ಸೇರಿಸಿ" ಬರೆದಿರುವುದಾಗಿ ಗ್ರಂಥಕರ್ತರು ಪೀಠಿಕೆಯಲ್ಲಿ ಹೇಳಿರುವರು. "ಭೀಷ್ಮನ ಪರಿಸ್ಥಿತಿಯೂ ಅನನ್ಯ ಅಸಾಮಾನ್ಯ ಪಿತೃಭಕ್ತಿ, ಅಪೂರ್ವ ಸತ್ಯ

ಪರಾಯಣತೆ, ಅನನ್ಯ ಪರಾರ್ಥಪರತೆ, ಧರ್ಮಶೀಲತೆ, ಆತ್ಮ ಸಂಯಮತೆ, ವೀರ್ಯ ಶೌರ್ಯಾದಿ ಸದ್ಗುಣಗಳೂ'' ಪ್ರತಿ ವಿದ್ಯಾರ್ಥಿಯೂ ಪದೇ ಪದೇ ಓದಿ ಮನನಮಾಡಬೇಕಾದ ವಿಷಯಗಳಾಗಿರುವುವು. ಈ ಗ್ರಂಥವು ಮಹಾಭಾರತ ಕಥಾಸಂಗ್ರಹವೆಂದು ಹೇಳಬಹುದು.

ಮ॥ ವಾಸುದೇವಯ್ಯನವರ ಭಾಷಾ ಶೈಲಿಯು ಕನ್ನಡಿಗರಿಗೆ ಪರಿಚಯ ವಿಲ್ಲದೆ ಇಲ್ಲ. ಈ ಗ್ರಂಥದ ಶೈಲಿಯು ಸುಲಭವಾಗಿಯೂ ವಿಷಯವನ್ನು ಥಟ್ಟನೆ ಮನಸ್ಸಿಗೆ ಹಿಡಿಯುವಂತೆ ಬೋಧಿಸುವುದಾಗಿಯೂ ಇರುವುದು. ಗ್ರಂಥಕರ್ತರ ಉತ್ಸಾಹಾತಿಶಯವು ಪ್ರತಿ ಪುಟದಲ್ಲಿಯೂ ಕಾಣಬರುತ್ತಿರುವುದು. ಪುಸ್ತಕದ ಮುದ್ರಣದ ವಿಷಯದಲ್ಲಿಯೂ ಗ್ರಂಥಕರ್ತರು ಕೇವಲ ಆಸ್ಥೆಯನ್ನು ವಹಿಸಿ ಮುದ್ರಣವು ಅಂದವಾಗಿರುವಂತೆಯೂ, ಮುದ್ರಣದ ತಪ್ಪುಗಳು ಸಾಮಾನ್ಯವಾಗಿ ಬೀಳದಂತೆಯೂ ಮಾಡಿ ಪುಸ್ತಕದ ಉಪಯೋಗವನ್ನು ಹೆಚ್ಚಿಸಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ. ಇಂತಹ ಪುಸ್ತಕಗಳು ಕನ್ನಡದಲ್ಲಿ ಅನೇಕವಾಗಿ ಪ್ರಕಟವಾಗಬೇಕೆಂಬುದೇ ನಮ್ಮ ಹಾರೈಕೆ.

---

೩. ಪ್ರಬುದ್ಧ ವೈದ್ಯ ಬೋಧಿನಿ (೧ನೇ ಭಾಗ)

ಲೇಖಕರು.—ವೈದ್ಯಪಂಚಾನನ ವಿ. ಟಿ. ಪಂಡಿತರು,

ಆ. ವಿ. ಸ., ಸ. ಭಾ. ಮ. ಸ., ಬೆಂಗಳೂರು.

ಡೆಮ್ಮಿ ಅಷ್ಟಪತ್ರ ಪುಟಗಳು ೧೮೦; ಬೆಂಗಳೂರು ಮಹಾರಾಜ ಪ್ರೆಸ್ಸಿನಲ್ಲಿ ಮುದ್ರಿತವಾದುದು; ೧೯೨೭; ಬೆಲೆ ೮ ಆಣೆ.

ಈಗ ಕೆಲವು ವರುಷಗಳಿಂದೀಚೆಗೆ ಕನ್ನಡ ಪುಸ್ತಕ ಪ್ರಕಟನವು ಬಹಳ ಹೆಚ್ಚುತ್ತಿರುವಂತೆ ತೋರುವುದು. ಇದು ದೇಶಾಭಿವೃದ್ಧಿ ಸೂಚಕವೆಂದೆಣಿಸ ಬಹುದಾದರೂ, ಮನಸ್ಸಿಟ್ಟು ಪರೀಕ್ಷಿಸುವ ಭಾಷಾಭಿಮಾನಿಗಳಿಗೆ ಇದರಿಂದ ಅತೃಪ್ತಿಯೂ ಅಸಮಾಧಾನವೂ ಹುಟ್ಟದಿರಲಾರದು. ಜನರಲ್ಲಿ ಉತ್ಸಾಹವೇನೋ ಹೆಚ್ಚುತ್ತಿರುವುದು; ಆದರೆ ಆ ಉತ್ಸಾಹವನ್ನು ಗ್ರಂಥರೂಪದಲ್ಲಿ ಪ್ರಕಟಮಾಡು ವಾಗ ಲೇಖಕರು ತಕ್ಕಷ್ಟು ಜಾಗರೂಕತೆಯನ್ನು ವಹಿಸದೆ ಪುಸ್ತಕಗಳನ್ನು ಮುದ್ರಣ ಮಾಡಿಸಿ ಜನಸಾಮಾನ್ಯದಲ್ಲಿ ಹಂಚುವುದು ಅನೇಕ ಸಂದರ್ಭಗಳಲ್ಲಿ ಕೇಡಿಗೆ ಕಾರಣವಾಗಬಹುದು. ಪ್ರಕೃತ ಗ್ರಂಥದ ಲೇಖಕರು ಬಹಳ ಉತ್ಸಾಹ ಶಾಲಿಗಳೆಂದೂ, ಕನ್ನಡಿಗರ ಮೇಲ್ಮೆಯನ್ನು ಹೆಚ್ಚಾಗಿ ಬಯಸುತ್ತಿರುವವರೆಂದೂ ನಮಗೆ ತಿಳಿಯುವುದು. ಆದರೆ **ವೈದ್ಯ** ಗ್ರಂಥವನ್ನು ಇಷ್ಟು ಅಲಕ್ಷ್ಯದಿಂದ ಪ್ರಕಟಮಾಡಿರುವುದು ಬಹಳ ಶೋಚನೀಯವಾದ ವಿಷಯ. ಈ ಪುಸ್ತಕದಲ್ಲಿ ಮುದ್ರಣದ ತಪ್ಪುಗಳಿಗೆ ಮಿತಿಯೇ ಇಲ್ಲ; ಉಪಯೋಗಿಸಿರುವ ಕಾಗದವಂತೂ ಕೇವಲ ಕೀಳ್ತರದ್ದು; ಮಧ್ಯೇ ಇರುವ ೭-೮ ಬಿಳಿಯ ಕಾಗದಗಳು ಕಪ್ಪು ಮನುಷ್ಯನ ದೇಹದಲ್ಲಿಯ ತೊನ್ನಿನ ಚುಕ್ಕೆಗಳಂತೆ ಕಾಣುವುವು.

ಈ ಗ್ರಂಥದಲ್ಲಿ ಕೊಟ್ಟಿರುವ ಅನೇಕ ವಿಷಯಗಳು ಇಂಗ್ಲಿಷು ಪುಸ್ತಕಗಳಿಂದ ಸಂಗ್ರಹಿಸಿದುದಾಗಿ, ಹಿಂದುಗಳಲ್ಲಿ ತಕ್ಕಂತೆ ಪಚನವಾಗದೆ, ಹೊರಹೊಮ್ಮಿರುತ್ತವೆ. ಇಂತಹ ವಿಷಯಗಳನ್ನು ಏನೂ ಅರಿಯದ ವಾಚಕರ ಮುಂದಿಡುವುದರಿಂದ ಪ್ರಮಾದಕ್ಕೆ ಕಾರಣವಾಗಬಹುದು. ಆದುದರಿಂದ ದೇಶಾಭಿಮಾನಿಗಳಾದ ಕನ್ನಡ ಗ್ರಂಥಕಾರರನ್ನು ನಾವು ವಿನಯ ಪೂರ್ವಕವಾಗಿ ಬೇಡಿಕೊಳ್ಳುವುದೇನೆಂದರೆ—ಗ್ರಂಥವನ್ನು ಮುದ್ರಣ ಮಾಡಿಸುವುದಕ್ಕೆ ಮೊದಲು ಗ್ರಂಥದ ಪ್ರತಿಯನ್ನು ನುಸಿಸಿಟ್ಟು ಅನೇಕ ಬಾರಿ ಓದಿ ತಪ್ಪುಗಳಿದ್ದರೆ ತಿದ್ದಿ, ತರುವಾಯ, ಗ್ರಂಥದ ವಸ್ತು ವಿಷಯವನ್ನು ಚೆನ್ನಾಗಿ ಬಲ್ಲವರಿಗೆ ತೋರಿಸಿ, ಆವಶ್ಯಕವಿದ್ದಲ್ಲಿ ಅವರಿಂದ ತಿದ್ದಿಸಬೇಕು. ಮುದ್ರಣ ಮಾಡಿಸುವಲ್ಲಿ ಮುದ್ರಣದ ತಪ್ಪುಗಳು ಬೀಳದಂತೆ ತಕ್ಕ ಏರ್ಪಾಡನ್ನು ಮಾಡಬೇಕು. ಉಪಯೋಗಿಸುವ ಕಾಗದವು ಸಾಧ್ಯವಾದ ಮಟ್ಟಿಗೂ ಒಳ್ಳೆಯದಾಗಿರಬೇಕು. ಮುಖ್ಯವಾಗಿ, ಓದುವವರು ಜುಗುಪ್ಸೆಪಡದಂತೆ ಪುಸ್ತಕದ ರೂಪವನ್ನು ತಕ್ಕ ಮಟ್ಟಿಗೆ ಅಂದವಾಗಿ ಮಾಡಿ, ವಿಷಯಗಳನ್ನು ತಕ್ಕ ರೀತಿಯಲ್ಲಿ ನಿರೂಪಿಸಿ, ತಪ್ಪುಗಳಿಗೆ ಎಡೆಗೊಡದಂತೆಯೂ, ವಿಷಯಗ್ರಹಣದಿಂದ ವಾಚಕರಿಗೆ ಉಪಯೋಗವಾಗುವಂತೆಯೂ ಮಾಡಬೇಕು. ಹೀಗೆ ಮಾಡುವವರು ದೇಶಾಭಿವೃದ್ಧಿಗೆ ಮಾರ್ಗದರ್ಶಕರಾಗುವರು.

ಪ್ರಕೃತ ಗ್ರಂಥದಲ್ಲಿ, ಮೊದಲು **ಕೆಲವು** ಪುಟಗಳಲ್ಲಿ ಕಾಣಬರುವ **ಕೆಲವು** ತಪ್ಪುಗಳನ್ನು ಮಾತ್ರ ತೋರಿಸುವೆವು. ಭಾಷಾ ವಿಷಯಕವಾದ ವಿಮರ್ಶೆಯೇ ನಮ್ಮ ಮುಖ್ಯ ಕರ್ತವ್ಯವಾಗಿದ್ದರೂ ಆ ವಿಷಯವನ್ನು ಇಲ್ಲಿ ಪ್ರಸ್ತಾವಿಸುವುದು ಸಾರ್ಥಕವಲ್ಲವೆಂದು ತಿಳಿದು ವಸ್ತು ವಿಷಯವನ್ನು ಮಾತ್ರ ವಿಮರ್ಶೆಮಾಡುವೆವು.

ಪುಟ ೨.—"ಮನುಷ್ಯ ಶರೀರದ ಅಸ್ಥಿಪಂಜರದಲ್ಲಿ ಬೇರೆ ಬೇರೆಯಾದ ಸುಮಾರು ೨೪೦ ತರಹದ ಎಲುಕೆಗಳಿರುವವು."

'ತರಹದ' ಎಂದರೇನು ?

"ಮನುಷ್ಯ ಶರೀರದಲ್ಲಿನ ಚಿಕ್ಕ ಕರುಳು ಸುಮಾರು ೧೨ ಅಂಗುಲ ಅಗಲವಿರುವದು. ದೊಡ್ಡ ಕರುಳಿನ ಉದ್ದವು ಅವರವರ ಶರೀರದ ಎತ್ತರಕ್ಕಿಂತ ೬ ಪಾಲು ಹೆಚ್ಚಾಗಿರುವದು, ಅಂದರೆ, ಸುಮಾರು ೩೦—೩೫ ಅಂಗುಲವಿರುವದು.

ಚಿಕ್ಕ ಕರುಳಿನ **ಅಗಲ** ೧೨ ಅಂಗುಲವೆಂದರೆ ಏನು ? ದೊಡ್ಡ ಕರುಳಿನ **ಉದ್ದವು** ಮನುಷ್ಯನ ಶರೀರದ ಎತ್ತರಕ್ಕಿಂತ ೬ ಪಾಲು ಹೆಚ್ಚಾಗಿದ್ದು, ೩೦—೩೫ ಅಂಗುಲವಿದ್ದರೆ, ಮನುಷ್ಯನ **ಎತ್ತರವು** ೬ ಅಂಗುಲಕ್ಕಿಂತಲೂ ಕಡಿಮೆಯಾಗಿರಬೇಕಲ್ಲವೆ !!!

ಪುಟ ೪.—"ನಿರಂತರವಾಗಿ ಅಲ್ಪಾಹಾರ ಸೇವನೆಯ ಕ್ರಮವನ್ನು ಇಟ್ಟುಕೊಂಡ ಪಕ್ಷದಲ್ಲಿ ಅನ್ನಾಶಯವು ದುರ್ಬಲವಾಗುವದು."

ಹೀಗೆಂದರೆ, ಹೆಚ್ಚಾದ ಆಹಾರ ಸೇವನೆಯ ಕ್ರಮವನ್ನು ಇಟ್ಟುಕೊಳ್ಳಬೇಕೆಂಬ ಅರ್ಥವೋ ?

ಪುಟ ೫.—''ಒಬ್ಬ ಮನುಷ್ಯನ ಸಕಲ ಅಂಗಾಂಗಗಳ ಮೇಲೆ, ಸುಮಾರು ೩೦ ಅಥವಾ ೪೦ ಸಾವಿರ ಪೌಂಡು ತೂಕವುಳ್ಳ ಗಾಳಿಯು ಅಮುಕುವದು.''

ಹೀಗೆಂದರೇನು ?

ಪುಟ ೬.—''ಪ್ರತಿಯೊಂದು ಕೆಲಸಕ್ಕೂ ಸುಮಾರು ೭–೮ ಟನ್ ರಕ್ತವು ರಕ್ತಾಶಯದಲ್ಲಿ ಕೂಡಿಕೊಂಡು, ಅಷ್ಟೇ ರಕ್ತವು ಶೋಧಿಸಿಕೊಂಡು ಹೊರಗೆ ಬರುವದು.''

೮ ಟನ್ ಎಂದರೆ, ಸುಮಾರು ೨೦೦ ಮಣ. ರಕ್ತಾಶಯದ ಅಳತೆಯು ಮನುಷ್ಯನ ಹಿಡಿಯಷ್ಟಿರುವದು. ಇದರಲ್ಲಿ ೨೦೦ ಮಣ ರಕ್ತವು ''ಕೂಡಿಕೊಂಡಿ''ರುವದು ಹೇಗೆ ?

ಪುಟ ೭.—''ಶ್ವಾಸಕೋಶದಲ್ಲಿಯೂ, ವಾಯುಕೋಶದಲ್ಲಿಯೂ, ಇರುವ ಆಚ್ಛಾದನದ ಒಳಗಿನ ರಕ್ತ, ವಾಯು ಕೊಳವೆಗಳು ಮತ್ತು ವಾಯುಕೋಶದ ಸಂಬಂಧವು ಇವುಗಳು ಹಬೆಯೊಂದಿಗೆ ಭ್ರಮಣವಾಗುವಾಗ್ಯೆ ಸುಮಾರು ೪೦ ಸಾವಿರ ಚದುರಂಗುಲಕ್ಕಿಂತಲೂ ಹೆಚ್ಚಾಗಿರುವವು.''

ಈ ವಾಕ್ಯದ ಅರ್ಥವೇನು ? ನಮಗೆ ಮಾನುಷ ದೇಹ ಶಾಸ್ತ್ರ ವಿಚಾರಗಳು ಸ್ವಲ್ಪ ಮಟ್ಟಿಗೆ ತಿಳಿದಿದ್ದರೂ ಇದಕ್ಕೆ ಏನೂ ಅರ್ಥವಾಗುವದಿಲ್ಲ.

ಪುಟ ೮.—''ಅಗ್ನಿ ದಗ್ಧ ಘಾಯಗಳಿಂದ ಸಾಯುವ ಜನರಲ್ಲಿ, ಅಗ್ನಿ ದಗ್ಧದ ಪ್ರಕೋಪದಿಂದ ತಕ್ಷಣವೇ ಸಾಯುವ ಜನರು ದೊರಕುವದೇಯಿಲ್ಲವೆಂದು ಹೇಳಬಹುದು. ಆದ್ದರಿಂದ ಚರ್ಮದ ಕ್ರಿಯೆಯು ನಿಂತರೆ, ಮನುಷ್ಯರು ಸಾಯುವರು.''

ಹೀಗೆಂದರೆ, ''ಚರ್ಮದ ಕ್ರಿಯೆಯು'' ನಿಲ್ಲದಿದ್ದರೆ, ''ಅಗ್ನಿ ದಗ್ಧದ ಪ್ರಕೋಪದಿಂದ ತಕ್ಷಣವೇ'' ಮನುಷ್ಯರು ಸಾಯುವದಿಲ್ಲವೆಂದು ಅರ್ಥವೋ ?

''ನಮ್ಮ ನಾಲಿಗೆಯ ತಂತುಗಳನ್ನು ಒಂದಕ್ಕೊಂದು ಕೂಡಿಸಿದರೆ ಸುಮಾರು ೮ ಮೈಲಿಯಷ್ಟು ಉದ್ದವಾಗುವವು. ಮತ್ತು ಇವುಗಳನ್ನು ಒಂದೇ ದಾರದೋಪಾದಿಯಲ್ಲಿ ಮಾಡಿ ನೋಡಿದರೆ ಸುಮಾರು ೪ ಹಂದ್ರ''

ಇದು ನಮಗಂತೂ ಅರ್ಥವಾಗುವದಿಲ್ಲ.

ಪುಟ ೧೮.—''ಸರ್ಕಾರದ ಡಾಕ್ಟರಲ್ಲೊಬ್ಬನು, ಆ ಸತ್ತ ಮನುಷ್ಯನ ಅಟ್ರೋಪೈನ್ ಎಂಬ ಕಣ್ಣುಗೊಂಬೆಯನ್ನು ವಿಸ್ತೃತಮಾಡುವ ಔಷಧದಲ್ಲಿ ಚನ್ನಾಗಿ ಆಡಿಸಿ,......''

'ಅಟ್ರೋಪೈನ್' ಎಂಬುದು ಕಣ್ಣುಗೊಂಬೆಯೆ, ಅಥವಾ ಔಷಧವೆ?

ಪುಟ ೧೨ರಲ್ಲಿಯ ಕೋಷ್ಟಕದಲ್ಲಿ, ''ಆರೋಗ್ಯವಾದ ಗಂಡುಮಗುವಿನ ಸರಾಸರಿ ತೂಕವು, ಭೂಪತನವಾದ ತಕ್ಷಣವೆ'' ೬೮ ಪೌಂಡುಗಳಿರುವಂತೆಯೂ, ''ಪ್ರಥಮ ಮಾಸದಲ್ಲಿ'' ೭೪ ಪೌಂಡುಗಳಿರುವಂತೆಯೂ ಕಾಣಬರುವದು !!!

ಈ ವಿಮರ್ಶೆಯನ್ನು ಈ ರೀತಿಯಾಗಿ ಪ್ರಕಟಮಾಡುವದಕ್ಕೆ ನಮಗೆ ಅತ್ಯಂತ ವ್ಯಥೆಯುಂಟಾದರೂ ಇದು ನಮ್ಮ ಕರ್ತವ್ಯವೆಂದು ತಿಳಿದು ಬರೆದಿರುವೆವೇ ವಿನಾ ಗ್ರಂಥಕರ್ತರನ್ನು ನಿಂದಿಸಬೇಕೆಂದಲ್ಲ.

ಶ್ರೀ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೩] ವಿಭವ ಸಂ॥ ಆಷಾಢ ಮಾಸ [ಸಂಚಿಕೆ ೨

ಹದಿನಾಲ್ಕನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನ

ಈ ಸಮ್ಮೇಳನವು ಈ ಸಾರಿ ನಿಜಾಂ ಸರ್ಕಾರದ (ಹೈದರಾಬಾದು ಸಂಸ್ಥಾನದ) ಜಿಲ್ಲೆಗಳಲ್ಲೊಂದಾದ ಕಲ್ಬುರ್ಗಿ (ಗುಲ್ಬರ್ಗ) ಜಿಲ್ಲೆಯ ಕೇಂದ್ರಸ್ಥಾನವಾದ ಕಲ್ಬುರ್ಗಿ ಪಟ್ಟಣದಲ್ಲಿ ಮೈಸೂರು ವಿಶ್ವವಿದ್ಯಾಲಯದ ರಿಜಸ್ಟ್ರಾರರಾದ ಮ॥ ರಾ॥ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯೊಡನೆ ಜೂನ್ ತಿಂಗಳು ೧, ೨ ಮತ್ತು ೩ನೆಯ ತಾರೀಖುಗಳಲ್ಲಿ ಮೂರು ದಿವಸಗಳು ನಡೆಯಿತು. ಸಮ್ಮೇಳನವು ಅಲ್ಲಿ ಸೇರಿದುದಕ್ಕೆ ಅಲ್ಲಿಯ ನಿಜಾಂ ಕರ್ಣಾಟಕ ಸಂಘದ ಮತ್ತು ಅಲ್ಲಿಯ ಪ್ರಮುಖ ಪುರನಿವಾಸಿಗಳೇ ಮುಂತಾದವರ ಕರ್ಣಾಟಕ ಭಾಷಾಭಿಮಾನವೇ ಮುಖ್ಯ ಕಾರಣ. ಸಮ್ಮೇಳನವು ಜೂನ್ ೧ನೆಯ ತಾರೀಖು ಶುಕ್ರವಾರ ಸಾಯಂಕಾಲ ೬ ಗಂಟೆಗೆ ಕಲ್ಬುರ್ಗಿಯ ಮದನ ಥಿಯೇಟರಿನಲ್ಲಿ ಪ್ರಾರಂಭವಾಯಿತು. ಈ ನಾಟಕಶಾಲೆಯು ಬಗೆ ಬಗೆಯ ಬಣ್ಣದ ಬಾವುಟಗಳಿಂದಲೂ ತಳಿರು ತೋರಣಗಳಿಂದಲೂ ಅಲಂಕೃತವಾಗಿ ಕರ್ಣಾಟಕದ ನಾನಾ ಪ್ರಾಂತಗಳಾದ ಮೈಸೂರು ಸಂಸ್ಥಾನ, ಧಾರವಾಡ, ಬೆಳಗಾಂವಿ, ಬಿಜಾಪುರ, ನಿಜಾಂ ಕರ್ಣಾಟಕ ಮುಂತಾದ ಪ್ರದೇಶಗಳಿಂದ ಬಂದಿದ್ದ ಪ್ರತಿನಿಧಿಗಳಿಂದಲೂ, ಕಲ್ಬುರ್ಗಿಯ ಸರ್ಕಾರೀ ಅಧಿಕಾರಿಗಳಿಂದಲೂ ಪಟ್ಟಣದ ಮುಖಂಡರಿಂದಲೂ ತುಂಬಿ ಅತ್ಯಂತ ಶೋಭಾಯಮಾನವಾಗಿದ್ದಿತು. ಅಧ್ಯಕ್ಷರು ಸಭಾಮಂದಿರವನ್ನು ಪ್ರವೇಶ ಮಾಡಿದೊಡನೆ ಅಲ್ಲಿ ನೆರೆದಿದ್ದವರೆಲ್ಲರೂ ಎದ್ದು ಜಯಘೋಷದಿಂದ ಅವರಿಗೆ ಸ್ವಾಗತವನ್ನು ಬಯಸಿ ಅವರಿಗೆ ತಮ್ಮ ಹರ್ಷವನ್ನು ತೋರ್ಪಡಿಸಿದರು. ಹಿಂದೂ ಪದ್ಧತಿಯನ್ನನುಸರಿಸಿ ಮಂಗಳಾಶಾಸನವು ಆಗಲು ಸ್ವಾಗತ ಮಂಡಲಿಯ ಅಧ್ಯಕ್ಷರುಗಳ (ಮ॥ ರಾ॥ ಶರಣಪ್ಪ ದೇಸಾಯಿ ಮತ್ತು ಮ॥ ರಾ॥ ಜನಾರ್ದನರಾವ್ ದೇಸಾಯಿಗಳ) ಭಾಷಣವನ್ನು ಮ॥ ರಾ॥ ರಾಮಚಂದ್ರಾಚಾರ್ಯರು ಓದಿದರು. ಇದನ್ನು ಮುಂದೆ ಮುದ್ರಿಸಿದೆ.

ಇದಾದನಂತರ ಧಾರವಾಡದ ಕರ್ಣಾಟಕವೃತ್ತ ಮತ್ತು ಧನಂಜಯ ಪತ್ರಿಕೆಯ ಸಂಪಾದಕರಾದ ಮ॥ ರಾ॥ ಕೃಷ್ಣರಾವ್ ಮುದವೇಡಕರ್ ಅವರು ಎದ್ದು ಮ॥ ರಾ॥ ಬಿ. ಎಂ. ಶ್ರೀಕಂಠಯ್ಯನವರ ಕರ್ಣಾಟಕ ಮತ್ತು ಆಂಗ್ಲ ಸಾಹಿತ್ಯ ಪಾಂಡಿತ್ಯವನ್ನು ಕೊಂಡಾಡಿ ಅವರ ಗುಣಕಥನವನ್ನು ಮಾಡಿ ಕರ್ಣಾಟಕ ಸಾಹಿತ್ಯಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಸರ್ವ ವಿಧಗಳಲ್ಲಿಯೂ ಅರ್ಹರೆಂಬುದನ್ನು ಪ್ರತಿಪಾದಿಸಿ ಅವರು ಅಧ್ಯಕ್ಷಸ್ಥಾನವನ್ನು ಕೈಕೊಂಡು ಸಮ್ಮೇಳನ ಕಾರ್ಯವನ್ನು ಸಾಂಗವಾಗಿಯೂ ನಿರ್ವಿಘ್ನವಾಗಿಯೂ ನಡೆಯಿಸಿಕೊಡಬೇಕೆಂದು ಪ್ರಾರ್ಥಿಸಿದರು. ಈ ಸೂಚನೆಯನ್ನು ಬನಹಟ್ಟಿ ಮ॥ ರಾ॥ ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ. ಅವರು ಹಲವು ಯುಕ್ತಿಯುಕ್ತವಾದ ಮಾತುಗಳಿಂದ ಅನುಮೋದಿಸಲು, ಮ॥ ರಾ॥ ರಾಯಚೂರು ಕೃಷ್ಣರಾಯರು ರೆವರೆಂಡ್ ನಾಸಪ್ಪ ದೇಸಾಯಿ ಅವರೂ ಅದೇ ಸೂಚನೆಯನ್ನು ಪುಷ್ಟೀಕರಿಸಿದರು. ತರುವಾಯ ಮ॥ ರಾ॥ ಬಿ.ಎಂ. ಶ್ರೀಕಂಠಯ್ಯನವರೆದ್ದು ಜಯಘೋಷ ಮಧ್ಯದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿ, ತಮ್ಮನ್ನು ಆ ಸ್ಥಾನದಲ್ಲಿರಿಸಿದುದಕ್ಕಾಗಿ ಸಭೆಯಲ್ಲಿ ನೆರೆದಿರುವ ಮಹಾಜನರಿಗೆ ತಮ್ಮ ವಿನಯಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು. ಅನಂತರ ಕಾರ್ಯಕ್ರಮದಲ್ಲಿ ತೋರಿಸಿದ್ದಂತೆ ಕರ್ಣಾಟಕ ಸಾಹಿತ್ಯಪರಿಷತ್ತಿನ ವಿಭವಸಂವತ್ಸರದ ವರದಿಯನ್ನು ಅಧ್ಯಕ್ಷರ ಅಪ್ಪಣೆಯ ಮೇರೆ ಪರಿಷತ್ತಿನ ಕಾರ್ಯದರ್ಶಿಯವರು ಓದಿದರು. ಅದು ಮುಗಿದನಂತರ ಅಧ್ಯಕ್ಷರೆದ್ದು ನವಭಾವಪೂರಿತವೂ, ಶಬ್ದಚಾತುರ್ಯವುಳ್ಳದೂ, ಅಮೋಘವೂ ಆದ ತಮ್ಮ ಭಾಷಣವನ್ನು ಓದಿ ಸದಸ್ಯರನ್ನು ಆನಂದಗೊಳಿಸಿದರು. ಅನಂತರ ಹೈದರಾಬಾದ್ ಸಂಸ್ಥಾನಾಧೀಶರಾದ ನಿಜಾಂ ಸಾಹೇಬರವರಿಗೂ, ಮೈಸೂರು ಶ್ರೀಮನ್ಮಹಾರಾಜರವರಿಗೂ ಸಮ್ಮೇಳನದಲ್ಲಿ ನೆರೆದಿರುವವರ ಅಭಿನಂದನಗಳನ್ನು ಅಧ್ಯಕ್ಷರು ತಂತಿಯ ಮೂಲಕ ಕಳುಹಿಸಬೇಕೆಂದು ತೀರ್ಮಾನವಾಯಿತು. ಆ ಮೇಲೆ ಸಮ್ಮೇಳನಕ್ಕೆ ಬರುವುದಕ್ಕಾಗದೆ ಹೋದುದಕ್ಕಾಗಿ ತಮ್ಮ ವಿಷಾದವನ್ನು ಸೂಚಿಸಿ ಸಮ್ಮೇಳನವು ಯಶಸ್ವಿಯಾಗಲೆಂದು ತಮ್ಮ ಹಾರಯ್ಕೆಯನ್ನು ತಿಳಿಯ ಪಡಿಸಿ ಬರೆದು ಬಂದಿದ್ದ ಕೆಲವು ಮಹನೀಯರ ಪತ್ರಗಳನ್ನು ಓದಲಾಯಿತು. ಇದಾದನಂತರ ಸಮ್ಮೇಳನದಲ್ಲಿ ಚರ್ಚಿಸಬೇಕಾದ ವಿಷಯಗಳಾವುವೆಂಬುದನ್ನು ಕುರಿತು ವಿಷಯನಿರ್ಧಾರಣಸಭೆಯೊಂದು ನಿರ್ಮಿತವಾಯಿತು. ಈ ಸಭೆಯು ರಾತ್ರಿಭೋಜನಾನಂತರ ಪ್ರತಿನಿಧಿಗಳು ಉಳಿದುಕೊಂಡಿರುವ ನೂತನ ವಿದ್ಯಾಲಯ ದಲ್ಲಿ ಸೇರಬೇಕೆಂದು ಗೊತ್ತುಮಾಡಿದುದಾಯಿತು. ಆ ಬಳಿಕ ಸದಸ್ಯರೆಲ್ಲರೂ ಖೂಬಾ ಥಿಯೇಟರಿಗೆ ತೆರಳಿದರು. ಈ ಸಮ್ಮೇಳನಕ್ಕಾಗಿಯೇ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸಾಹಾಯ್ಯದಿಂದ ಬಂದಿದ್ದ ಮೈಸೂರು ಬೆಂಗಳೂರು ಕಾಲೇಜುಗಳ ಹಲವು ವಿದ್ಯಾರ್ಥಿಗಳು 'ಯಮನ ಸೋಲು, ಗದಾಯುದ್ಧ' ಎಂಬ ಎರಡು ಪುಟ್ಟ ನಾಟಕಗಳನ್ನು ಅಭಿನಯಿಸಿ ಪ್ರೇಕ್ಷಕರ ಚಿತ್ತಗಳನ್ನು ಅಪಹರಿಸಿದರು. ಯಮನ ಸೋಲು ಎಂಬುದು ಸಾವಿತ್ರೀ ಚರಿತ್ರೆ. ಇದು ಮೈಸೂರು ಕಾಲೇಜಿನ ಎಂ.ಎ.

ಕ್ಲಾಸಿನ ವಿದ್ಯಾರ್ಥಿಗಳಾದ ಕೆ. ವಿ. ಪುಟ್ಟಪ್ಪ, ಬಿ.ಎ. ಅವರಿಂದ ರಚಿತವಾದುದು. ಇದು ಅವರ ಕವಿತಾ ಶಕ್ತಿಯನ್ನು ಚೆನ್ನಾಗಿ ತೋರಿಸುವುದು. ಎರಡನೆಯದು, ರನ್ನನ ಗದಾಯುದ್ಧದ ಆಧಾರದ ಮೇಲೆ ಈ ಸಮ್ಮೇಳನದ ಅಧ್ಯಕ್ಷ ಪದವಿಯನ್ನಲಂಕರಿಸಿರುವ ಮ|| ರಾ|| ಬಿ. ಎಂ. ಶ್ರೀಕಂಠಯ್ಯನವರಿಂದ ರಚಿತವಾದುದು. ಇದು ಸೌಷ್ಠವವಾದುದು. ಇವೆರಡು ನಾಟಕಗಳ ಅಭಿನಯವು ಮುಗಿಯುವುದಕ್ಕೆ ರಾತ್ರಿ ೧೧ ಗಂಟೆಗೆ ಮೇಲೆ ಹಿಡಿಯಿತು. ಆದುದರಿಂದ ವಿಷಯ ನಿರ್ಧಾರಕ ಸಭೆಯು ಆ ರಾತ್ರಿ ಕೂಡಲು ಅವಕಾಶವಾಗಲಿಲ್ಲ.

ಎರಡನೆಯ ದಿವಸ (೨-೬-೨೮)

ಬೆಳಗ್ಗೆ ಸುಮಾರು ೯ ಗಂಟೆಗೆ ನೂತನ ವಿದ್ಯಾಲಯದಲ್ಲಿ ವಿಷಯ ನಿರ್ಧಾರಕ ಸಭೆಯು ಸೇರಿತು. ಸಮ್ಮೇಳನದಲ್ಲಿ ವಿಚಾರವಾಗತಕ್ಕ ಸೂಚನೆಗಳಾವುವೆಂಬುದನ್ನು ಸೂಚಿಸಲು, ಅವುಗಳನ್ನು ಬರೆದು ಅವುಗಳಿಗೆ ರೂಪು ಕೊಟ್ಟು ಸಮ್ಮೇಳನದ ಮುಂದಿಡಲು ಸಿದ್ಧಪಡಿಸುವ ಕಾರ್ಯವನ್ನು ಅಧ್ಯಕ್ಷರು ಮ|| ರಾ|| ಆಲೂರು ವೆಂಕಟರಾಯರು, ಮ|| ರಾ|| ಕೃಷ್ಣರಾವ್ ಮುದವೇಡಕರರು, ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯವರು, ಇನ್ನೂ ಕೆಲವರಿಗೆ ಒಪ್ಪಿಸಲಾಯಿತು. ಇದು ಮುಗಿಯುವುದಕ್ಕೆ ಮಧ್ಯಾಹ್ನಾತ್ಪರ ೨ ಗಂಟೆ ಆಯಿತು.

ಸಾಯಂಕಾಲ ೫-೩೦ಕ್ಕೆ ಸಮ್ಮೇಳನವು ಮದನ ಥಿಯೇಟರಿನಲ್ಲಿ ಕೂಡಿತು. ಹಾರ್ಮೋನಿಯಂ ಸಂಗಡ ಎರಡು ಹಾಡುಗಳನ್ನು ಹೇಳಿದ ಬಳಿಕ ಕಾರ್ಯೋಪಕ್ರಮವಾಯಿತು. ತರುವಾಯ ಮ|| ರಾ|| ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ. ಅವರು 'ಮುದ್ದು ಮಕ್ಕಳೆ ಎನ್ನ ಬಳಿಗೆ ಬನ್ನಿ' ಎಂಬ ಭಾಷಾ ಸ್ತುತಿಯನ್ನು ಓದಿದರು. ತರುವಾಯ ಸಮ್ಮೇಳನಕ್ಕೆ ಬರಲಾರದೆ ಇರುವುದಕ್ಕಾಗಿ ವಿಷಾದವನ್ನು ಸೂಚಿಸುವಂತಹ ಆ ದಿವಸದ ಟಪ್ಪಾಲಿನಲ್ಲಿ ಬಂದಿದ್ದ ಕೆಲವು ಪತ್ರಗಳನ್ನು ಓದಲಾಯಿತು. ಮರಾಠಿಯಲ್ಲಿ ಮ|| ರಾ|| ಗೋಖಲೆ ಎಂಬ ಮಹನೀಯರು ಬರೆದಿದ್ದ ಪತ್ರವನ್ನು ಓದಿ ಅದರ ಸಾರಾಂಶವನ್ನು ಸಭ್ಯರಿಗೆ ಕನ್ನಡದಲ್ಲಿ ಹೇಳಿದುದಾಯಿತು. ತರುವಾಯ ಈ ಕೆಳಗೆ ಕಂಡ ಠರಾವುಗಳು ಚರ್ಚೆಯಾಗಿ ಅಂಗೀಕೃತವಾದುವು:—

೧. ಕಲ್ಬುರ್ಗಿಯಲ್ಲಿ ಕೂಡಿರುವ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಈ ಹದಿನಾಲ್ಕನೆಯ ಸಮ್ಮೇಳನವು ಆಲಾ ಹಜರತ್ ಬಂದಗಾನ್ ಅಲಿಯವರಿಗೂ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಿಗೂ ಭಕ್ತಿ ವಿಶ್ವಾಸಗಳನ್ನು ಅತ್ಯಂತ ವಿನಯಪೂರ್ವಕವಾಗಿ ಸಮರ್ಪಿಸಿ ಶ್ರೀಮಂದರುಗಳು ಕರ್ಣಾಟಕ ಭಾಷೆಗೆ ಮತ್ತು ಸಾಹಿತ್ಯಕ್ಕೆ ನಿರಂತರವಾಗಿ ಪ್ರೋತ್ಸಾಹವನ್ನು ದಯೆಪಾಲಿಸಬೇಕೆಂದು ಪ್ರಾರ್ಥಿಸುತ್ತದೆ.

೨. ಕರ್ಣಾಟಕ ಸಾಹಿತ್ಯ ಸೇವೆಯನ್ನು ಸತತವಾಗಿ ಮಾಡಿ ಕೀರ್ತಿಶೇಷರಾದ—

(ಅ) ಧಾರವಾಡದ ಮುಖಂಡ ಕನ್ನಡಿಗರಾಗಿದ್ದ ಶ್ರೀ ಕಡಪ ರಾಘವೇಂದ್ರರಾಯರು;

(ಆ) ಹಿಂದೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳೂ ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರೂ ಆಗಿದ್ದ ಶ್ರೀ ಬಿ. ಕೃಷ್ಣಪ್ಪನವರು;

(ಇ) ಹಿಂದೂಸ್ಥಾನ ಸರ್ಕಾರದ ಶಿಲಾ ಶಾಸನ ಖಾತೆಯ ಮುಖ್ಯಾಧಿಕಾರಿಗಳಾಗಿದ್ದ ರಾವ್ ಬಹಾದ್ದೂರ್ ಶ್ರೀ ಹೊಸಕೋಟೆ ಕೃಷ್ಣಶಾಸ್ತ್ರಿಗಳು;

(ಈ) 'ಕೃಷ್ಣಸೂಕ್ತಿ' ಎಂಬ ಮಾಸಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಕೆರೋಡಿ ಸುಬ್ಬರಾಯರು

ಈ ಮಹನೀಯರುಗಳ ಮರಣದಿಂದ ಕರ್ಣಾಟಕಕ್ಕೆ ಆಗಿರುವ ನಷ್ಟದ ಸಲುವಾಗಿ ಈ ಸಮ್ಮೇಳನವು ತುಂಬ ವಿಷಾದಪಡುತ್ತದೆ.

ಸೂಚಕರು:—ಅಧ್ಯಕ್ಷರು.

೩. (೧) ನಿಜಾಂ ಕರ್ಣಾಟಕದಲ್ಲಿರುವ ಗುಲ್ಬರ್ಗ, ರಾಯಚೂರು, ಬೀದರ ಮುಂತಾದ ಜಿಲ್ಲೆಗಳು ಕನ್ನಡ ಜಿಲ್ಲೆಗಳಾದುದರಿಂದ ಆ ಭಾಗಗಳಲ್ಲಿರುವ ಕೋರ್ಟು ಕಚೇರಿಗಳ ಭಾಷೆಯು ಕನ್ನಡವಿರಬೇಕೆಂದು ಈ ಸಮ್ಮೇಳನವು ನಿಜಾಂ ಸರ್ಕಾರವನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತದೆ.

(೨) ಪೋಸ್ಟಾಫೀಸು ಮಣಿಯಾರ್ಡರು ಫಾರಂ ಮುಂತಾದುವುಗಳು ಕನ್ನಡದಲ್ಲಿಯೂ ಇರುವಂತೆ ಏರ್ಪಾಡು ಮಾಡಬೇಕೆಂದು ಆಯಾ ಅಧಿಕಾರಿಗಳನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತದೆ.

(೩) ರೈಲ್ವೆ ಸ್ಟೇಷನ್‌ಗಳಲ್ಲಿ ಸ್ಟೇಷನುಗಳ ಹೆಸರು ಮುಂತಾದುವುಗಳು ಕನ್ನಡದಲ್ಲಿರಲು ವಿನಂತಿ ಮಾಡಿಕೊಳ್ಳತಕ್ಕದ್ದು.

ಸೂಚಕರು:—ಮ॥ ರಾ॥ ರಾಘವೇಂದ್ರರಾವ್ ಚಾಕಲಬ್ಬಿ.

ಅನುಮೋದಕರು:—ರೆವರೆಂಡ್ ನಾನಪ್ಪ ದೇಸಾಯಿ.

೪. ನಿಜಾಂ ಕರ್ಣಾಟಕದಲ್ಲಿಯ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯ ಶಿಕ್ಷಣವೂ ಕನ್ನಡ ಬಾಲಕರ ಮಾತೃಭಾಷೆಯಲ್ಲದ ಭಾಷೆಗಳಲ್ಲಿ ನಡೆಯುತ್ತಿರುವುದರಿಂದ ಶಿಕ್ಷಣ ಪ್ರಗತಿಯು ಅತಿಶಯವಾಗಿ ಕುಂಠಿತವಾಗುತ್ತದೆ. ಆದುದರಿಂದ ಆ ಪ್ರಾಥಮಿಕ ಶಿಕ್ಷಣವೆಲ್ಲವೂ ಕನ್ನಡದಲ್ಲಿಯೇ ಇರಬೇಕೆಂದೂ ಮುಂದೆ ಅದು ಅವ್ಯಾಹತವಾಗಿ ಸಾಗುವಂತೆ ಏರ್ಪಾಡು ಮಾಡಲ್ಪಡಬೇಕೆಂದೂ ಈ ಸಮ್ಮೇಳನವು ನಿಜಾಂ ಸರ್ಕಾರವನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತದೆ.

ಸೂಚಕರು:—ಮ॥ ರಾ॥ ಕೃಷ್ಣರಾವ್ ಕಪಟ್ರಾಳ್.

ಅನುಮೋದಕರು:—ಮ॥ ರಾ॥ ನಾರಾಯಣಶಾಸ್ತ್ರೀ ಭಾವೂಶಾಸ್ತ್ರೀ, ಕೊಪ್ಪಳ.

೫. ನಿಜಾಂ ಕರ್ನಾಟಕದ ಗುಲ್ಬುರ್ಗ, ಬೀದರ ಮುಂತಾದ ಜಿಲ್ಲೆಗಳಲ್ಲಿ ಗ್ರಾಮಸ್ಥರ ದಫ್ತರಗಳು ಮರಾಠಿಯಲ್ಲಿರುವುದರಿಂದ ಕನ್ನಡ ಪ್ರಾಥಮಿಕ ಶಿಕ್ಷಣಕ್ಕೆ ಬಹಳ ತೊಂದರೆಯಾಗಿರುವುದು. ಆದಕಾರಣ ಈ ಭಾಗಗಳಲ್ಲಿಯೂ ಗ್ರಾಮಸ್ಥರ ದಫ್ತರಗಳು ಕನ್ನಡದಲ್ಲಿಯೇ ಇರುವಂತೆ ನಿಜಾಂ ಸರ್ಕಾರದವರು ಅಪ್ಪಣೆಕೊಡಿಸಿ ಶೀಘ್ರ ಜಾರಿಯಲ್ಲಿ ತರಬೇಕೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು:—ಮ॥ ರಾ॥ ಕೃಷ್ಣರಾವ್ ಕಪಟ್ರಾಳ್.

ಅನುಮೋದಕರು:—ಮ॥ ರಾ॥ ಸ್ವಾಮಿ ಗುರುಸಿದ್ಧ ಶಿವಾಚಾರ್ಯರ್.

ಪರಿಪೋಷಕರು:—ಮ॥ ರಾ॥ ಹಯಗ್ರೀವಾಚಾರ್ಯರ್.

೬. ೧೯೨೬ನೆಯ ಮೇ ತಿಂಗಳಲ್ಲಿ ನಡೆದ ಬಳ್ಳಾರಿಯ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಮಂಜೂರಾದ ಈ ಕೆಳಗಣ ನಿರ್ಣಯವನ್ನು ಈ ಸಮ್ಮೇಳನವು ಪುನಃ ಮಂಜೂರುಮಾಡಿ ಆ ನಿರ್ಣಯವನ್ನು ಶೀಘ್ರವೇ ಜಾರಿಯಲ್ಲಿ ತರಬೇಕೆಂದು ಮತ್ತೆ ಆ ನಿಜಾಂ ಸರ್ಕಾರವನ್ನು ಪ್ರಾರ್ಥಿಸುತ್ತದೆ.

೧. (ಕ) ನಿಜಾಂ ಸರ್ಕಾರದವರು ತಮ್ಮ ರಾಜ್ಯದಲ್ಲಿರುವ ಮತ್ತು ಮುಂದೆ ಸ್ಥಾಪಿಸಲ್ಪಡುವ ಖಾಸಗಿ ಶಾಲೆಗಳನ್ನು ಸರ್ಕಾರಿ ಅಪ್ಪಣೆಯನ್ನು ಪಡೆಯದೆ ನಡೆಯಿಸಬಾರದೆಂಬುದಾಗಿ ಕೊಟ್ಟಿರುವ ಹುಕುಮಿನಿಂದ ಪ್ರಸ್ತುತ ಕೊಡಲ್ಪಡುವ ದೇಶಭಾಷೆಯ ಶಿಕ್ಷಣಕ್ಕೆ ಹಾನಿಯುಂಟಾಗುವುದಲ್ಲದೆ ಅತಿ ವಿರಳವಾದ ಕನ್ನಡ ಮತ್ತು ಇತರ ದೇಶಭಾಷೆಯ ಪ್ರಾಥಮಿಕ ಶಿಕ್ಷಣವು ತಪ್ಪಿಹೋದಂತೆ ಆಗುವುದಲ್ಲದೆ ಜನತೆಯ ನೈಸರ್ಗಿಕವಾದ ಹಕ್ಕಿಗೂ ಕೂಡ ಬಾಧೆ ಬರುತ್ತದೆ. ಆದುದರಿಂದ ಆದಷ್ಟು ಶೀಘ್ರವಾಗಿ ಸದರಿ ಹುಕುಮನ್ನು ರದ್ದುಪಡಿಸುವ ವಿಷಯದಲ್ಲಿ ನಿಜಾಂ ಸರ್ಕಾರಕ್ಕೆ ಈ ಸಮ್ಮೇಳನವು ಶಿಫಾರಸು ಮಾಡುತ್ತದೆ.

(ಖ) ಮುಂಬಯಿ, ಮೈಸೂರು ಮತ್ತು ಬಂಗಾಲ ವಿಶ್ವವಿದ್ಯಾಲಯದಂತೆ ಪ್ರವೇಶ ಪರೀಕ್ಷೆಯವರೆಗೆ ಉರ್ದು ಹೊರತಾಗಿ ಬೋಧ ಭಾಷೆಯು ಕರ್ನಾಟಕ ಭಾಗದಲ್ಲಿ ಕನ್ನಡವೇ ಆಗಿರುವಂತೆ ಮಾಡುವುದನ್ನು ಕುರಿತು ವ್ಯವಸ್ಥೆ ಮಾಡುವುದಕ್ಕೆ ಉಸ್ಮಾನಿಯ ವಿಶ್ವವಿದ್ಯಾಲಯಕ್ಕೆ ವಿನಂತಿ ಮಾಡುತ್ತದೆ.

ಸೂಚಕರು:—ಅಧ್ಯಕ್ಷರು.

೭. ಕಲ್ಬುರ್ಗಿ ಮತ್ತು ಬಿದರೆ ಜಿಲ್ಲೆಗಳಲ್ಲಿಯ ವರ್ತಕರೂ ಸಾರ್ವಜನಿಕ ಸಂಸ್ಥೆಗಳೂ ಕನ್ನಡ ಭಾಷೆಗೆ ಪ್ರಾಧಾನ್ಯವನ್ನು ಕೊಡಬೇಕೆಂದೂ ಲೆಕ್ಕ ಪತ್ರ

ಮುಂತಾದುವುಗಳೆಲ್ಲವನ್ನೂ ಕನ್ನಡದಲ್ಲಿಯೇ ಇಡಬೇಕೆಂದೂ ಈ ಸಮ್ಮೇಳನವು ಅವರುಗಳನ್ನು ಪ್ರಾರ್ಥಿಸುತ್ತದೆ.

ಸೂಚಕರು:—ರೆವರೆಂಡ್ ನಾಸಪ್ಪ ದೇಸಾಯಿ.

ಅನುಮೋದಕರು:—ಮ॥ ರಾ॥ ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ.

೮. ನಿಜಾಂ ಕರ್ನಾಟಕದಲ್ಲಿರುವ ಎಷ್ಟೋ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಶಿಕ್ಷಣದ ವ್ಯವಸ್ಥೆ ಇಲ್ಲದಿರುವುದರಿಂದ ಆ ಸಂಸ್ಥೆಗಳ ಚಾಲಕರು ತೀವ್ರವೇ ಕನ್ನಡ ಶಿಕ್ಷಣವನ್ನು ಕೊಡುವ ವ್ಯವಸ್ಥೆಮಾಡಬೇಕೆಂದು ಈ ಸಮ್ಮೇಳನವು ಅವರಿಗೆ ಸೂಚಿಸುತ್ತದೆ.

ಸೂಚಕರು:—ಮ॥ ರಾ। ವೀರಣ್ಣಾಪ್ಪನವರು, ಕೊಂಡೇದ.

ಅನುಮೋದಕರು:—ಮ॥ ರಾ॥ ಎಂ. ಎಸ್. ಲಕ್ಷ್ಮೀನಾರಾಯಣ ರಾಯರು.

೯. ನಿಜಾಂ ಸರ್ಕಾರದಲ್ಲಿ ಕರ್ನಾಟಕ ಇತಿಹಾಸಕ್ಕೆ ಮುಖ್ಯ ಸಾಮಗ್ರಿಗಳಾಗಿರುವ ಶಿಲಾಶಾಸನಗಳು ಹೇರಳವಾದುವೂ ಮಹತ್ವವಾದುವೂ ಇರುವುದರಿಂದ ನಿಜಾಂ ಸರ್ಕಾರದವರು, ಮೈಸೂರು ಮತ್ತು ಬ್ರಿಟಿಷ್ ಸರ್ಕಾರಗಳು ವ್ಯವಸ್ಥೆ ಮಾಡಿರುವಂತೆಯೇ ಇಲ್ಲಿಯ ಕರ್ನಾಟಕ ಜಿಲ್ಲೆಗಳಲ್ಲಿ ಶಿಲಾಲಿಪಿಗಳ ಸಂಶೋಧನ ಕಾರ್ಯವನ್ನು ತೀವ್ರವೇ ಪ್ರಾರಂಭಿಸಿ ಯಾವತ್ತು ಸಂಸ್ಥಾನದ ಶಿಲಾಲಿಪಿಗಳ ಅಚ್ಚನ್ನು ತೆಗೆದುಕೊಂಡು ಮುದ್ರಿಸಬೇಕೆಂದು ಪ್ರಾರ್ಥಿಸುತ್ತದೆ.

ಸೂಚಕರು:—ಅಧ್ಯಕ್ಷರು.

೧೦. ನಿಜಾಂ ಸಂಸ್ಥಾನದಲ್ಲಿ ಕೈಬರೆಹದ ಅಸಂಖ್ಯಾತ ಗ್ರಂಥಗಳು ದೊರೆಯುವುದರಿಂದ ಅವುಗಳನ್ನು ಸಂಗ್ರಹಿಸಬೇಕೆಂದು ನಿಜಾಂ ಸರ್ಕಾರವನ್ನು ಪ್ರಾರ್ಥಿಸುತ್ತದೆ.

ಸೂಚಕರು:—ಅಧ್ಯಕ್ಷರು.

೧೧. ಜಮಖಂಡಿ ಸಂಸ್ಥಾನದ ಅಧಿಪತಿಗಳು ತಮ್ಮ ಸಂಸ್ಥಾನದಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿರುವುದಕ್ಕೋಸ್ಕರ ಈ ಸಮ್ಮೇಳನವು ಆ ಅಧಿಪತಿಗಳನ್ನು ಅಭಿನಂದಿಸುತ್ತದೆ; ಆದರೆ ಈಗಿರುವ ಶಾಲೆಗಳು ಸಾಕಾದಷ್ಟು ಇಲ್ಲದಿರುವುದರಿಂದ ಈ ಶಾಲೆಗಳನ್ನು ಹೆಚ್ಚಿಸಬೇಕೆಂದೂ, ಈ ಸಂಸ್ಥಾನದಲ್ಲಿ ಈಗಿರುವ ಕನ್ನಡ ಶಾಲೆಗಳನ್ನು ಕೂಡ ತೆಗೆದುಹಾಕಬೇಕೆಂಬಾಲೋಚನೆ ನಡೆದು ಅದರಿಂದ ಅಲ್ಲಿಯ ಪ್ರಜೆಗಳಿಗೆ ಅಂಜಿಕೆಯುಂಟಾಗಿರುತ್ತದೆಂದು ತಿಳಿದುಬಂದಿರುವುದರಿಂದ ಆ ಪ್ರಕಾರವಾದ ಆಲೋಚನೆ ನಡೆದಿದ್ದರೆ ಅದನ್ನು ಸರ್ವಥಾ ಬಿಟ್ಟುಕೊಡಬೇಕೆಂದೂ ಮತ್ತು ಆ ಪ್ರಕಾರದ ಆಶ್ವಾಸನವನ್ನು ಕೊಟ್ಟು ಪ್ರಜೆಗಳ ಅಂಜಿಕೆಯನ್ನು ದೂರಮಾಡಬೇಕೆಂದೂ ಈ ಸಮ್ಮೇಳನವು ಅವರನ್ನು ವಿಜ್ಞಾಪಿಸುತ್ತದೆ.

ಸೂಚಕರು:—ಮ॥ ರಾ॥ ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ.

ಅನುಮೋದಕರು:—ಮ॥ ರಾ॥ ವಾಮನರಾವ್.

೧೨. ಉತ್ತರ ಕರ್ಣಾಟಕದಲ್ಲಿರುವ ಕೊಲ್ಹಾಪುರ, ರಾಮದುರ್ಗ, ಮೀರಜ (ಸೀನಿಯರ್ ಮತ್ತು ಜೂನಿಯರ್), ಸಾಂಗಲಿ, ಕುರುಂದವಾಡ (ಜೂನಿಯರ್ ಮತ್ತು ಸೀನಿಯರ್), ಔಂಧ, ಅಕ್ಕಲಕೋಟೆ, ಜತ್ತ, ಮುಧೋಳ, ಜಮಖಂಡಿ ಮುಂತಾದ ಸಂಸ್ಥಾನಗಳಲ್ಲಿಯ ಕನ್ನಡ ಭಾಗಗಳ ಪ್ರಜೆಗಳ ಅನುಕೂಲ್ಯಕ್ಕೋಸ್ಕರ ಕನ್ನಡ ಶಾಲೆಗಳನ್ನು ಸ್ಥಾಪಿಸಬೇಕೆಂದೂ ಕೋರ್ಟು ಕಚೇರಿಗಳಲ್ಲಿ ಕನ್ನಡ ಭಾಷೆಗೆ ಅವಕಾಶ ಕೊಡಬೇಕೆಂದೂ ಈ ಸಮ್ಮೇಳನವು ವಿಜ್ಞಾಪಿಸುತ್ತದೆ.

ಸೂಚಕರು:—ಅಧ್ಯಕ್ಷರು.

೧೩. ಮೇಲಣ ೧೧ ಮತ್ತು ೧೨ನೆಯ ನಿರ್ಣಯಗಳ ವಿಷಯವಾಗಿ ಆಯಾ ಸಂಸ್ಥಾನಗಳಿಗೆ ಹೋಗಿ ಪ್ರಯತ್ನಿಸುವುದಕ್ಕೆ ಕೆಳಗೆ ಬರೆದ ಸದ್ಗೃಹಸ್ಥರದೊಂದು ಉಪಮಂಡಲವನ್ನು ಈ ಸಮ್ಮೇಳನವು ನಿಯಮಿಸುತ್ತದೆ:—

೧. ದಿವಾನ್ ಬಹಾದ್ದೂರ್ ಮ॥ ರಾ॥ ಶ್ರೀನಿವಾಸರಾವ್ ಕೊದ್ದ.
೨. ರಾವ್ ಸಾಹೇಬ್ ಮ॥ ರಾ॥ ಪಿ. ಜಿ. ಹಳಕಟ್ಟಿ.
೩. ಮ॥ ರಾ॥ ಹನುಮಂತರಾವ್ ಕೌಜಲಗಿ.
೪. ,, ಮುದವೇಡಕರ್ ಕೃಷ್ಣರಾಯರು.
೫. ,, ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ.
೬. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳು.

ಸೂಚಕರು:—ಅಧ್ಯಕ್ಷರು.

೧೪. ಕನ್ನಡ ಜಿಲ್ಲೆಯಾದ ಬಳ್ಳಾರಿ ಜಿಲ್ಲೆಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಿದುದನ್ನು ಈ ಸಮ್ಮೇಳನವು ಪುನಃ ತೀಕ್ಷ್ಣವಾಗಿ ನಿಷೇಧಿಸಿ ಆ ಜಿಲ್ಲೆಯನ್ನು ತೀವ್ರವೇ ಆಂಧ್ರ ವಿಶ್ವವಿದ್ಯಾಲಯದಿಂದ ಬೇರ್ಪಡಿಸುವುದು ಅತ್ಯಾವಶ್ಯಕವೆಂದು ಈ ಸಮ್ಮೇಳನವು ಮದರಾಸು ಸರ್ಕಾರವನ್ನು ಪ್ರಾರ್ಥಿಸುತ್ತದೆ. ಮತ್ತು ಈ ವಿಷಯದಲ್ಲಿ ಡಾ॥ ನಾಗಣ್ಣಗೌಡರು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ತಂದಿರುವ ಬಿಲ್ಲನ್ನು ಕರ್ಣಾಟಕದ ಪ್ರತಿನಿಧಿಗಳು ಶ್ರದ್ಧಾಪೂರ್ವಕವಾಗಿ ಸಮರ್ಥಿಸಬೇಕೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು:—ಅಧ್ಯಕ್ಷರು.

೧೫. ೧೯೨೬ನೆಯ ಮೇ ತಿಂಗಳಲ್ಲಿ ಬಳ್ಳಾರಿಯಲ್ಲಿ ಕೂಡಿದ ಸಾಹಿತ್ಯ ಸಮ್ಮೇಳನದಲ್ಲಿ ಮುಂಜೂರು ಮಾಡಿದ ನಿರ್ಣಯ ನಂಬರು ಎರಡನೆಯದನ್ನು ಈ ಸಮ್ಮೇಳನವು ಮತ್ತೆ ಮುಂಜೂರು ಕೊಡುತ್ತದೆ.

"ಬಳ್ಳಾರಿಯು ಕನ್ನಡ ಜಿಲ್ಲೆಯಾಗಿರುವುದರಿಂದ ಅಲ್ಲಿಯ ಕೋರ್ಟು ಕಚೇರಿಗಳಲ್ಲಿ ಇದುವರೆಗೂ ಕನ್ನಡವನ್ನು ಸರ್ಕಾರದವರು ವ್ಯವಹಾರದಲ್ಲಿ ತಾರದೆ

ಇರುವುದು ಅನ್ಯಾಯವಾಗಿರುವಕಾರಣ ಆದಷ್ಟು ತೀವ್ರದಲ್ಲಿ ಈ ಜಿಲ್ಲೆಯ ತಾಲ್ಲೂಕುಗಳಲ್ಲೆಲ್ಲ ಕನ್ನಡವನ್ನು ಉಪಯೋಗಿಸುವಂತೆ ಸರ್ಕಾರದವರು ಮಾಡ ತಕ್ಕದ್ದು. ಮತ್ತು ಇದಕ್ಕೆ ಸಂಬಂಧಿಸಿದ ಫಾರಮುಗಳನ್ನೂ ನೋಟೀಸು ಗಳನ್ನೂ ಕನ್ನಡದಲ್ಲೇ ಪ್ರಕಟಿಸತಕ್ಕದ್ದು. ಮತ್ತು ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿ, ಕನ್ನಡವನ್ನೇ ಪ್ರಧಾನವಾಗಿ ಕಲಿಸಲು ಸರ್ಕಾರದವರೂ ಲೋಕಲ್ ಬೋರ್ಡಿನವರೂ ಮ್ಯುನಿಸಿಪಾಲಿಟಿಯವರೂ ಪ್ರಾರಂಭಮಾಡಬೇಕು.''

ಸೂಚಕರು :—ಅಧ್ಯಕ್ಷರು.

೧೬. ಗ್ವಾಲಿಯರಲ್ಲಿ ಕೂಡಿದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನದವರು ತಾವಾಗಿಯೇ ಆಮಂತ್ರಣ ಕೊಟ್ಟು ಕರೆಯಿಸಿಕೊಂಡ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳನ್ನು ಆ ಪ್ರಕಾರ ಪ್ರತಿನಿಧಿಗಳಂತೆ ಗಣಿಸದಿದ್ದುದ ಕ್ಕೋಸ್ಕರ ಈ ಸಮ್ಮೇಳನಕ್ಕೆ ವಿಷಾದವಾಗುತ್ತದೆ.

ಸೂಚಕರು : —ಮ॥ ರಾ॥ ಕೃಷ್ಣರಾವ್ ಕಪಟ್ರಾಳ್.
,, ಮುದವೇಡು ಕೃಷ್ಣರಾವ್.
,, ಡಿ. ಆರ್. ಬೇಂದ್ರೆ.

ಇದಾದನಂತರ ಮ॥ ರಾ॥ ಕೆ. ವಿ. ಪುಟ್ಟಪ್ಪನವರು ಬರೆದಿರುವ 'ಕಿಂದರಿ ಜೋಗಿ' ಎಂಬ ಕವಿತೆಯನ್ನು ಅವರು ಓದಿದರು. ಅದು ಆಂಗ್ಲ ಭಾಷೆಯಲ್ಲಿ Browning ಎಂಬ ಕವಿಯು ತನ್ನ ಸ್ನೇಹಿತನ ಮಗನಿಗಾಗಿ ಬರೆದ 'Pied Piper of Hamline' ಎಂಬುದರ ಕನ್ನಡ ಅನುವಾದವು. ಇದು ಮೂಲ ಕ್ಕಿಂತಲೂ ಕೆಲವೆಡೆಗಳಲ್ಲಿ ಸೊಗಸಾಗಿದೆ. ಇದನ್ನು ಪಂಡಿತರು ಅದರ ಅನುವಾದ ವೆಂದು ಹೇಳಲಾರರು. ಶ್ರೀ ಪುಟ್ಟಪ್ಪನವರ ಸ್ವಂತ ಕವಿತೆಯೆಂದೇ ಹೇಳಬೇಕು. ಇದಾದಮೇಲೆ ಮ॥ ರಾ॥ ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ. ಅವರು ಕನ್ನಡ ಭಾಷೆಯ ಮಹತ್ವದ ವಿಷಯವಾಗಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಇಷ್ಟಕ್ಕೆ ಎರಡನೆಯ ದಿನದ ಕಾರ್ಯವು ಮುಗಿಯಿತು.

ಮೂರನೆಯ ದಿವಸ

೩ನೆಯ ಜೂನ್ ಭಾನುವಾರ ಬೆಳಗ್ಗೆ ೮–೪೫ಕ್ಕೆ ಮನಸ ಥಿಯೇಟರಿನಲ್ಲಿ ಮರಳಿ ಸಮ್ಮೇಳನವು ಕೂಡಿ ಹಿಂದಣ ದಿವಸ ಚರ್ಚೆಗೆ ಕಾಲ ಸಾಲದೆ ಉಳಿದಿದ್ದ ಠರಾವುಗಳು ಚರ್ಚೆಯಾಗಿ ಅಂಗೀಕೃತವಾದುವು.

೧೭. ಆಂಧ್ರ ಮತ್ತು ಮಹಾರಾಷ್ಟ್ರ ಪ್ರಾಂತಗಳ ನಮ್ಮ ನೆರೆಯ ಬಂಧು ಗಳು ಕರ್ಣಾಟಕವನ್ನು ಆಕ್ರಮಣ ಮಾಡುತ್ತಿರುವುದನ್ನು ಈ ಸಮ್ಮೇಳನವು ತೀಕ್ಷ್ಣವಾಗಿ ನಿಷೇಧಿಸುತ್ತದೆ. ಮತ್ತು ನಮ್ಮ ಮಹಾರಾಷ್ಟ್ರ ಬಂಧುಗಳು ತೊರಡಿಸುವ ಬೃಹನ್ಮಹಾರಾಷ್ಟ್ರದ ಕಲ್ಪನೆಯ ಕೆಲವು ಅಂಶಗಳು ಮತ್ತು

ಯಾದೀ ಪರಿಷತ್ತಿನ ಮಹಾರಾಷ್ಟ್ರದ ವ್ಯಾಖ್ಯೆ ಗ್ವಾಲಿಯರಲ್ಲಿಯ ಕೆಲವು ನಿರ್ಣಯಗಳು—ಇವೇ ಮುಂತಾದ ಅವರ ಕೃತ್ಯಗಳಿಂದಲೂ ಮತ್ತು ಅವರು ಸಾಮಾನ್ಯವಾಗಿ ಸ್ವೀಕರಿಸಿಕೊಂಡಿರುವ ಧೋರಣದಿಂದಲೂ ಅವರ ಆಕ್ರಮಣಶೀಲ ಬುದ್ಧಿಯು ಸ್ಪಷ್ಟವಾಗಿರುವುದಾದಕಾರಣ ಅದು ರಾಷ್ಟ್ರೀಯತ್ವಕ್ಕೆ ವಿರುದ್ಧವಾದುದೂ ಕರ್ನಾಟಕಕ್ಕೆ ಘಾತುಕವಾದುದೂ ಆಗಿರುವುದರಿಂದ ಆ ಪ್ರಕಾರವಾಗಿ ಆಚರಿಸಿ ಅವರು ನಿಷ್ಕಾರಣವಾಗಿ ಮನಸ್ತಾಪ ಬೆಳೆಯಿಸಬಾರದೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

ಸೂಚಕರು:—ಮ। ರಾ॥ ದತ್ತಾತ್ರೇಯ ರಾಮಚಂದ್ರ ಬೇಂದ್ರೆ.

ಅನುಮೋದಕರು:— ,, ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ.

೧೮. ಬ್ರಿಟಿಷ್ ಕರ್ನಾಟಕಕ್ಕೆ ಶಿಲಾಶಾಸನಗಳ ಇಲಾಖೆಯ ಶಾಖೆಯನ್ನು ಬ್ರಿಟಿಷ್ ಸರ್ಕಾರದವರು ತೀವ್ರವೇ ಸ್ಥಾಪಿಸಬೇಕೆಂದು ಈ ಸಮ್ಮೇಳನವು ಬ್ರಿಟಿಷ್ ಸರ್ಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು :—ಅಧ್ಯಕ್ಷರು.

೧೯. ಅಖಿಲ ಕರ್ನಾಟಕಕ್ಕೆ ಒಂದೇ ತೆರದ ಕ್ರಮಿಕ ಪುಸ್ತಕಗಳಿರುವುದು ಅವಶ್ಯವಿರುವುದರಿಂದ ಮೈಸೂರು, ಹೈದರಾಬಾದು ಮತ್ತು ಬ್ರಿಟಿಷ್ ಸರ್ಕಾರದವರು ಕೂಡಿ ಒಂದು ಕಮಿಟಿಯನ್ನು ಏರ್ಪಡಿಸಿ, ಆ ಪ್ರಕಾರದ ಕ್ರಮಿಕ ಪುಸ್ತಕಗಳನ್ನು ಸಿದ್ಧಪಡಿಸಬೇಕೆಂದು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಸೂಚಕರು :—ಅಧ್ಯಕ್ಷರು.

೨೦. ಮೈಸೂರು, ಮದರಾಸು, ಮುಂಬಯಿ ಸರ್ಕಾರಗಳ ಕನ್ನಡ ಶಾಲೆಗಳಲ್ಲಿ ಈಗ ಬಳಸುತ್ತಿರುವ ಬೇರೆ ಬೇರೆ ಬಾಲಬೋಧೆಗಳನ್ನು ಕ್ರೋಡೀಕರಿಸಿ, ಭಾಷೆ, ವಿಷಯಪ್ರತಿಪಾದನೆ ಮುಂತಾದುವು ಒಂದೇ ರೂಪವಾಗಿರುವಂತೆ ಪರಿಷ್ಕರಿಸಿ ಅಖಿಲ ಕರ್ನಾಟಕದಲ್ಲಿ ಒಂದೇ ಬಾಲಬೋಧೆಯನ್ನು ಪ್ರಚಾರಕ್ಕೆ ತರುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಮುಂದೆ ಹೇಳುವ ಪಂಡಿತ ಮಂಡಲಿಯ ಸಹಾಯವನ್ನು ಪಡೆದು ಮುಂದಿನ ಸಮ್ಮೇಳನದೊಳಗಾಗಿ ಪುಸ್ತಕವನ್ನು ಸಿದ್ಧಪಡಿಸಿ ಆಯಾ ಸರ್ಕಾರಗಳ ಅಪ್ಪಣೆಯನ್ನು ಪಡೆಯುವುದರ ಮೂಲಕ ಈ ಕಾರ್ಯವನ್ನು ಸಫಲಗೊಳಿಸಬೇಕೆಂದು ಈ ಸಮ್ಮೇಳನವು ನಿರ್ಧರಿಸುತ್ತದೆ.

ಮೈಸೂರು ಪ್ರಾಂತಕ್ಕೆ—

೧. ಮ॥ ರಾ॥ ಬಿ. ಎಂ. ಶ್ರೀಕಂಠಯ್ಯನವರು.
೨. ,, ಟಿ. ಎಸ್. ವೆಂಕಣ್ಣಯ್ಯನವರು.
೩. ,, ಎ. ಆರ್. ಕೃಷ್ಣಶಾಸ್ತ್ರಿಗಳು.
೪. ,, ಬಿ. ವೆಂಕಟನಾರಾಯಣಪ್ಪನವರು.

ಮದರಾಸು ಪ್ರಾಂತಕ್ಕೆ—

೧. ಮ॥ ರಾ॥ ಬಿ. ರಾಮರಾಯರು.
೨. ,, ಪಂಜೆ ಮಂಗೇಶರಾಯರು.
೩. ,, ಆರ್. ತಾತಾಚಾರ್ಯರು.
೪. ,, ಆರ್ಕಾಟು ಭೀಮಾಚಾರ್ಯರು.

ಮುಂಬಯಿ ಪ್ರಾಂತಕ್ಕೆ—

೧. ರಾವ್ ಸಾಹೇಬ್ ಮ॥ ರಾ॥ ಪಿ. ಜಿ. ಹಳಕಟ್ಟಿ.
೨. ಪಂಡಿತ ಮಹಾದೇವ ಪ್ರಭಾಕರ ಪೂಜಾರ.
೩. ಮ॥ ರಾ॥ ರಂಗನಾಥ ದಿವಾಕರರು.
೪. ,, ಮೊಹರೆ ಹನುಮಂತರಾಯರು.
೫. ,, ಎಚ್. ಚೆನ್ನಕೇಶವಯ್ಯಂಗಾರ್ಯರು.

ನಿಜಾಂ ಕರ್ನಾಟಕಕ್ಕೆ—

೧. ಮ॥ ರಾ॥ ಎಚ್. ವಿ. ಕೃಷ್ಣಸ್ವಾಮಿಯವರು.

ಕಾರ್ಯ ಪ್ರವರ್ತಕರು:—ಕ॥ ಸಾ॥ ಪರಿಷತ್ತಿನ ಗೌರವ ಕಾರ್ಯದರ್ಶಿಗಳು.

ಸೂಚಕರು:—ಎಚ್. ಚೆನ್ನಕೇಶವಯ್ಯಂಗಾರ್ಯರು.

ಅನುಮೋದಕರು:—ಸಾ. ಶ್ರೀ. ರಾಜಪುರೋಹಿತರು.

೨೧. ಕರ್ನಾಟಕದಲ್ಲಿರುವ ಮರಾಠಿ, ತೆಲುಗು, ತಮಿಳು ಮತ್ತು ಉರ್ದು ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯ ಜ್ಞಾನವಿರುವುದು ಅವಶ್ಯ ವಿರುವುದರಿಂದಲೂ ಆ ಪ್ರಕಾರದ ಜ್ಞಾನವು ಪರಸ್ಪರ ಸ್ನೇಹಭಾವವನ್ನು ಬೆಳಸು ವುದಕ್ಕೆ ಸಾಧಕವಾದುದರಿಂದಲೂ ಕರ್ನಾಟಕದ ಸ್ಥಾನಿಕ ಸಂಸ್ಥೆಗಳು ಆ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಸುವ ಏರ್ಪಾಡು ಮಾಡಬೇಕೆಂದು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಸೂಚಕರು:—ಮ॥ ರಾ॥ ಮೊಹರೆ ಹನುಮಂತರಾಯರು.

ಅನುಮೋದಕರು:—ಮುದವೇಡಕರ್ ಕೃಷ್ಣರಾಯರು.

೨೨. ಮುಂಬಯಿ ಕರ್ನಾಟಕದಲ್ಲಿಯ ವರ್ನಾಕ್ಯುಲರ್ ಸ್ಕೂಲ್ ಫೈನಲ್ ಪರೀಕ್ಷೆಗೆ ಬಹು ವರ್ಷಗಳಿಂದಲೂ ಒಂದೇ ಪಠ್ಯಪುಸ್ತಕವನ್ನು ನೇಮಿಸಿರುವುದ ರಿಂದ, ಹಾಗಿರುವುದು ಕರ್ನಾಟಕ ಸಾಹಿತ್ಯ ಜ್ಞಾನ ವಿಕಾಸಕ್ಕೆ ಅವಕಾಶವನ್ನು ತಪ್ಪಿಸುವುದಾದಕಾರಣ ಬೇರೆ ಬೇರೆ ಪುಸ್ತಕಗಳನ್ನು ಪ್ರತಿವರ್ಷವೂ ಬದಲಾಯಿಸಿ ಇಡಬೇಕೆಂದು ಈ ಸಮ್ಮೇಳನವು ಮುಂಬಯಿ ಸರ್ಕಾರವನ್ನೂ ಸ್ಥಾನಿಕ ಸರ್ಕಾರವನ್ನೂ ಕೇಳಿಕೊಳ್ಳುತ್ತದೆ.

ಸೂಚಕರು:—ಪಂಡಿತ ಕೇಶವಶರ್ಮಾ ಗಲಿಗಲಿ.

ಅನುಮೋದಕರು :—ಮ|| ರಾ|| ರಾಜಪುರೋಹಿತರು.

೨೩. ಅಖಿಲ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವಿರುವುದು ಕರ್ನಾಟಕದ ದೃಷ್ಟಿಯಿಂದ ಹಿತಕರವಾಗಿರುವುದರಿಂದ ಮೈಸೂರು, ಬ್ರಿಟಿಷ್ ಮತ್ತು ಹೈದರಾಬಾದು ಸರ್ಕಾರದವರು ಕೂಡಿ ಆ ಪ್ರಕಾರದ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಏತ್ನುಗಡೆಯನ್ನು ಮಾಡಬೇಕೆಂದು ಈ ಸಮ್ಮೇಳನವು ವಿಜ್ಞಾಪಿಸುತ್ತದೆ.

ಸೂಚಕರು :—ಮ|| ರಾ|| ಕೆ. ಸಂಪದ್ಗಿರಿರಾಯರು.

ಅನುಮೋದಕರು :—

೧. ಮ|| ರಾ|| ವಿ. ಬಿ. ಆಲೂರ.

೨. ,, ದತ್ತಾತ್ರೇಯ ಬೇಂದ್ರೆ.

೩. ,, ರಾಘವೇಂದ್ರರಾಯರು (ವಿದ್ಯಾರ್ಥಿ).

೪. ,, ಪಾಂಡುರಂಗರಾವ್ (,,).

೫. ,, ಎನ್. ಡಿ. ನಾಗರಾಜರಾವ್ (,,).

೬. ,, ಕಪಟ್ರಾಳ್ ಕೃಷ್ಣರಾಯರು.

೨೪. ಕನ್ನಡದಲ್ಲಿ ಮೈಸೂರು, ಮದರಾಸು ಇಲಾಖೆಗಳಲ್ಲಿರುವ ಪಂಡಿತ ಪರೀಕ್ಷೆಗಳಲ್ಲಿ ಪಾಸಾಗಿ ಬಂದವರನ್ನು ಮುಂಬಯಿ, ನಿಜಾಂ ಇಲಾಖೆಗಳಲ್ಲಿರುವ ಹೈಸ್ಕೂಲು ಮುಂತಾದುವುಗಳಲ್ಲಿ ನೇಮಿಸಿಕೊಂಡು ಅವರ ಪಾಂಡಿತ್ಯದ ಲಾಭವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡುವುದು ಇಷ್ಟವಾಗಿರುವುದರಿಂದ ಈ ಎರಡೂ ಸರ್ಕಾರದವರು ಆ ಪ್ರಕಾರ ನೇಮಿಸಿಕೊಳ್ಳಬೇಕೆಂದು ಈ ಸಮ್ಮೇಳನವು ಮುಂಬಯಿ, ನಿಜಾಂ ಸರ್ಕಾರದವರನ್ನು ಕೇಳಿಕೊಳ್ಳುತ್ತದೆ.

ಸೂಚಕರು :—ಅಧ್ಯಕ್ಷರು.

೨೫. ಕೊಪ್ಪಳ ಜಿಲ್ಲೆಯಲ್ಲಿ ಮೊದಲು ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡುತ್ತಿದ್ದುದನ್ನು ನಿಲ್ಲಿಸದುದರಿಂದ ಪುನಃ ಉಚಿತ ಶಿಕ್ಷಣವನ್ನೇ ಪ್ರಾರಂಭಿಸಬೇಕೆಂದು ನವಾಬ ಸಾಲಾರ್ ಜಂಗ್ ಬಹಾದ್ದೂರರವರಿಗೆ ಪ್ರಾರ್ಥಿಸಿಕೊಳ್ಳುತ್ತದೆ.

ಸೂಚಕರು :—ಮ|| ರಾ|| ರಾಘವೇಂದ್ರರಾವ್ ಚಾಕಲಬ್ಬಿ.

ಅನುಮೋದಕರು:— ,, ರಾಘವೇಂದ್ರರಾವ್ ದೇಸಾಯಿ, ಕುಕನೂರ.

೨೬. ಕರ್ನಾಟಕವು ವಿಶಿಷ್ಟವಾದ ಸುಡಿಯ ಸಾಂಸ್ಕೃತಿಯ ನಾಡು ಇರುವುದರಿಂದ ಮುಂಬಯಿ ಸರ್ಕಾರದವರು ದಕ್ಷಿಣ ಮಹಾರಾಷ್ಟ್ರವೆಂಬ ಅನಸ್ವರ್ಥಕವಾದ ಹೆಸರನ್ನು ತೆಗೆದುಹಾಕಿ ಮುಂಬಯಿ ಕರ್ನಾಟಕವೆಂಬ

ಹೆಸರನ್ನು ಕೊಡಬೇಕೆಂದು ಈ ಸಮ್ಮೇಳನವು ಮುಂಬಯಿ ಸರ್ಕಾರಕ್ಕೆ ಬಿನ್ನವಿಸುತ್ತದೆ.

ಸೂಚಕರು:—ಮ॥ ರಾ॥ ತಮ್ಮಪ್ಪ ಸತ್ಯಪ್ಪ, ಚಿಕ್ಕೋಡಿ.
ಅನುಮೋದಕರು:—ಮುದವೇಡಕರ್ ಕೃಷ್ಣರಾಯರು.

ಈ ಕಾರ್ಯವು ಮುಗಿದನಂತರ ಮ॥ರಾ॥ನಾರಾಯಣರಾವ್ ಹುಯಿಲಗೋಳ ಅವರು ರಚಿಸಿ ಕಳುಹಿಸಿದ್ದ 'ಗಜೇಂದ್ರ ಮೋಕ್ಷ' ಕಥೆಯಲ್ಲಿ ಕೆಲವು ಪದ್ಯಗಳನ್ನು, ಗ್ರಂಥಕರ್ತರು ಬಂದಿರಲಿಲ್ಲವಾದಕಾರಣ ಅವರಿಗೆ ಬದಲಾಗಿ ಮ॥ ರಾ॥ ಕೃಷ್ಣರಾವ್ ಮುದವೇಡಕರರು ಓದಿದರು. ತರುವಾಯ ದಕ್ಷಿಣ ಕನ್ನಡ ಜಿಲ್ಲೆಯ ಮಂಜೇಶ್ವರದ ನಿವಾಸಿಗಳೂ ದೊಡ್ಡ ಪಂಡಿತರೂ ಆದ ಮ॥ ರಾ॥ ಗೋವಿಂದ ಪೈ ಅವರು ಕಳುಹಿಸಿದ್ದ ಪ್ರಸಿದ್ಧ ಪಾರ್ಸಿ ಕವಿತೆ 'ಉಮರಾರ ಖಾಯಂ' ಎಂಬುದರ ಕನ್ನಡ ಅನುವಾದದ ಕೆಲವು ಪದ್ಯಗಳನ್ನು ಮ॥ ರಾ॥ ಎ. ಆರ್. ಕೃಷ್ಣಶಾಸ್ತ್ರಿಗಳು ಓದಿ ಹೇಳಿದರು. ಆಮೇಲೆ ಧಾರವಾಡದ ಮ॥ ರಾ॥ ಡಿ. ಆರ್. ಬೇಂದ್ರೆ, ಬಿ.ಎ. ಅವರು ತಮ್ಮಿಂದ ರಚಿತವಾದ ಹಲವು ಹಾಡುಗಳನ್ನೂ ಪದ್ಯಗಳನ್ನೂ ಬಹಳ ಸ್ವಾರಸ್ಯವಾಗಿ ಹೇಳಿ ವಿಶದಪಡಿಸಿದರು. ಮ॥ ರಾ॥ ಕೃಷ್ಣರಾವ್ ಮುದವೇಡಕರಾ ಅವರು ತೊದಲು ಮಾತು ಎಂಬ ಹಾಡನ್ನು ಹೇಳಿದರು. ಮ॥ ರಾ॥ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ ರಚಿತವಾದ 'ಇಂಗ್ಲಿಷ್ ಗೀತೆಗಳು' ಎಂಬುದರಿಂದ ದುಃಖ ಸೇತು ಎಂಬ ಕವಿತೆಯನ್ನು ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಅವರು ಓದಿದರು. ಇಲ್ಲಿಗೆ ಕಾವ್ಯ ಪಠನವು ಮುಗಿಯಿತು.

ಆಮೇಲೆ ಸಮ್ಮೇಳನದ ಅಧ್ಯಕ್ಷರು ಎದ್ದು ಸಮ್ಮೇಳನವು ಸ್ವಾಗತ ಮಂಡಲಿಯವರ ಉತ್ಸಾಹದಿಂದಲೂ ಕಲ್ಬುರ್ಗಿಯ ಮಹಾಜನಗಳ ಸಾಹಾಯ್ಯದಿಂದಲೂ ಅತಿಥಿಗಳ ಸತ್ಕಾರಕ್ಕಾಗಿ ನಿಯಮಿತರಾಗಿದ್ದ ಸ್ವಯಂಸೇವಕರ ಚಟುವಟಿಕೆ, ಅವರ ಕಾರ್ಯ ಕುಶಲತೆ, ಭಕ್ತಿ ಮುಂತಾದ ಸದ್ಗುಣಗಳಿಂದಲೂ ವಿಶೇಷ ವೈಭವದೊಡನೆ ನಿರ್ವಿಘ್ನವಾಗಿ ನಡೆದುದಕ್ಕಾಗಿ ಎಲ್ಲರನ್ನೂ ಕೊಂಡಾಡಿ ತಮ್ಮ ಉಪಸಂಹಾರ ಭಾಷಣವನ್ನು ಮುಗಿಸಿದರು. ಅನಂತರ ನಿಜಾಂ ಕರ್ಣಾಟಕ ಕಾರ್ಯದರ್ಶಿಯವರಾದ ಮ॥ ರಾ॥ ಕೃಷ್ಣರಾಯರು ಅಧ್ಯಕ್ಷರು ಇಷ್ಟು ದೂರ ಬಂದು ಸಮ್ಮೇಳನವನ್ನು ಸಾಂಗವಾಗಿ ಯಾವ ಭಾಗದಲ್ಲಿಯೂ ಕೊರತೆಯಿಲ್ಲದೆ ನಡೆಯಿಸಿಕೊಟ್ಟುದುದಕ್ಕಾಗಿ ಅವರಿಗೆ ಕಲ್ಬುರ್ಗಿಯ ಮಹಾಜನಗಳ ಪರವಾಗಿ ವಿಶೇಷ ವಂದನೆಗಳನ್ನು ಸಮರ್ಪಿಸಿದರು. ಕೊನೆಗೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ಅದರ ಗೌರವ ಕಾರ್ಯದರ್ಶಿಗಳಾದ ಮ॥ ರಾ॥ ಸಂಗಪುರಂ ವೆಂಕಟೇಶಯ್ಯಂಗಾರ್ಯರವರು ಅಧ್ಯಕ್ಷರಿಗೂ ಸ್ವಾಗತ ಮಂಡಲಿಯವರಿಗೂ, ಕಲ್ಬುರ್ಗಿಯ ಮಹಾಜನಗಳಿಗೂ, ಸ್ವಯಂಸೇವಕರಿಗೂ ವಿನಯಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು. ಕೊನೆಗೆ ಹೈದರಾಬಾದ್ ಸಂಸ್ಥಾನಾಧೀಶರಿಗೂ ಮೈಸೂರು ಶ್ರೀಮನ್ಮಹಾರಾಜರವರಿಗೂ ಜಯವಾಗಲೆಂದು ಸದಸ್ಯರೆಲ್ಲರೂ ಜಯಘೋಷ ಮಾಡಲು ಸಮ್ಮೇಳನವು ಮುಕ್ತಾಯವಾಯಿತು.

ಸ್ವಾಗತಾಧ್ಯಕ್ಷರ ಭಾಷಣ

ಅಧ್ಯಕ್ಷ ಮಹಾಶಯರೆ ಮತ್ತು ಮಹನೀಯರೆ! ಕನ್ನಡ ನಾಡಿನ ಅಭಿವೃದ್ಧಿಯಾಗಬೇಕೆಂಬ ಹಂಬಲಿಕೆಯಿಂದ ಕನ್ನಡ ನುಡಿಯ ಜ್ಯೋತಿಯನ್ನು ಬೆಳಗುವುದಕ್ಕಾಗಿ, ಮೈಮರೆತು ಮಲಗಿದ್ದ ನಿಜಾಮ ಕರ್ಣಾಟಕದಲ್ಲಿಯ ತಮ್ಮ ಬಂಧುಗಳನ್ನು ಜಾಗೃತಿಗೊಳಿಸಿ, ಅವರಲ್ಲಿ ಕನ್ನಡ ಸಂಸ್ಕೃತಿಯು ಪುನಃ ಪ್ರಜ್ವಲಿಸುವಂತೆ ಮಾಡಬೇಕೆಂಬ ಉದ್ದೇಶದಿಂದ ಇಂತಹ ಕಡುಬೇಸಗೆಯಲ್ಲಿ ಪ್ರವಾಸದ ಅನೇಕ ಕಷ್ಟನಷ್ಟಗಳನ್ನು ಲೆಕ್ಕಿಸದೆ ಕಲಬುರ್ಗಿಗೆ ದಯಮಾಡಿಸಿದ ವಿದ್ವನ್ಮಣಿಗಳಾದ ತಮ್ಮಗಳ ಉಪಕಾರವನ್ನು ಸ್ವಾಗತ ಮಂಡಳದ ಪರವಾಗಿ ನಾನು ನೆನೆಯುತ್ತೇನೆ. ತಮ್ಮಗಳ ಯೋಗ್ಯತೆಗೆ ಸರಿಯಾಗಿ ನಮ್ಮಿಂದ ಆದರಾತಿಥ್ಯವು ಆಗದಿದ್ದರೂ, ನಮ್ಮ ಯೋಗ್ಯತೆಗನುಸಾರವಾಗಿ ಅಂತಃಕರಣಪೂರ್ವಕವಾಗಿ ಮಾಡುವ ಅಲ್ಪವಾದ ಆದರಾತಿಥ್ಯವನ್ನು ತಾವೆಲ್ಲರೂ ಮನ್ನಿಸಿ ಸ್ವೀಕರಿಸುವಿರೆಂದು ಪೂರ್ಣವಾಗಿ ನಂಬಿದ್ದೇನೆ.

ಶಿಷ್ಟಾಚಾರಕ್ಕನುಸರಿಸಿ ನಮ್ಮ ಈ ನಿಜಾಮ ಕರ್ಣಾಟಕದ ಐತಿಹಾಸಿಕ ಮಹತ್ವವನ್ನು ಹೇಳುವುದಾದರೆ ಪೂರ್ವಕಾಲದಲ್ಲಿ ಕರ್ಣಾಟಕದ ಈ ಭಾಗವು ಕುಂತಳ ದೇಶದ ಒಂದು ಭಾಗವಾಗಿತ್ತೆಂದು ಕಲಬುರ್ಗಿ ತಾಲೂಕಿನ ಹರಸೂರ ಮತ್ತು ಕಾಳಗಿಯ ಶಿಲಾಶಾಸನಗಳಿಂದ ಗೊತ್ತಾಗುತ್ತದೆ. ಈ ನಾಡಿಗೆ ಇದ್ದಷ್ಟು ಐತಿಹಾಸಿಕ ಮಹತ್ವವು ಕರ್ಣಾಟಕದ ಇನ್ನಾವ ಭಾಗಕ್ಕೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ನಾಡು ಕರ್ಣಾಟಕದ ಇತಿಹಾಸಕ್ಕೆ ತವರುಮನೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರಾಷ್ಟ್ರಕೂಟರ ಮಳಖೇಡದ ಮತ್ತು ಕಲ್ಯಾಣದ ಚಾಲುಕ್ಯರ ರಾಜ್ಯಗಳು ಇಲ್ಲಿಯೇ ಅವ್ಯಾಹತವಾಗಿ ನಡೆದು, ಕರ್ಣಾಟಕದ ಜ್ಯೋತಿಯನ್ನು ದಿಕ್ಕು ದೇಶಗಳಲ್ಲೆಲ್ಲ ಬೆಳಗಿದುವು. ಅನಂತರ, ಈ ಪ್ರದೇಶದ ಕೆಲ ಭಾಗವು ದೇವಗಿರಿಯ ಯಾದವರ ರಾಜ್ಯಕ್ಕೆ ಸೇರಿತು. ಕೆಲ ಭಾಗವು ಓರಂಗಳದ ಕಾಕತೀಯರ ವಶಕ್ಕೊಳಗಾಯಿತು. ಯಾದಗಿರಿಯ ಕಿಲ್ಲೆಯು ದೇವಗಿರಿಯ ಯಾದವರ ಕಾಲದಲ್ಲಿ ಕಟ್ಟಲ್ಪಟ್ಟಿರುವುದು. ಹಿಂದೂ ಮುಸಲ್ಮಾನರ ಹೋರಾಟಕ್ಕೆ ಕಾರಣವಾದ ಮತ್ತು ಇರ್ವರ ರಣಾಂಗಣವೆನಿಸಿದ ರಾಯಚೂರ ಕೋಟೆಯು ಹನ್ನೆರಡನೆಯ ಶತಮಾನದಲ್ಲಿ ಓರಂಗಳದ ರಾಜನ ಒಬ್ಬ ದಂಡನಾಯಕನು ಕಟ್ಟಿಸಿದನೆಂದು ಅಲ್ಲಿಯ ಶಿಲಾಶಾಸನದಿಂದ ಗೊತ್ತಾಗುತ್ತದೆ. ಅದರಂತೆಯೇ ಕಲಬುರ್ಗಿಯ ಕೋಟೆಯನ್ನು ಸಹ ಓರಂಗಳದ ರಾಜನ ಮತ್ತೊಬ್ಬ ದಂಡನಾಯಕನು ಕಟ್ಟಿಸಿದನಂತೆ. ದಕ್ಷಿಣದಲ್ಲಿ ಹಿಂದೂ ಸಂಸ್ಕೃತಿಯ ಮೇಲೆ ದಾಳಿ ಬಂದಾಗ ಮುಸಲ್ಮಾನರ ಹಾವಳಿಗೆ ದೇವಗಿರಿಯ ಮತ್ತು ಓರಂಗಳದ ರಾಜರು ಬಲಿ ಬೀಳಲು, ಅದನ್ನು ತಡೆದು ಹಿಂದಕ್ಕೆ ಅಟ್ಟಿ, ಜನರಲ್ಲಿ ನವಚೈತನ್ಯವನ್ನುಂಟುಮಾಡಿ, ಹಿಂದೂ ಸಂಸ್ಕೃತಿಯು ಮತ್ತೊಮ್ಮೆ ಉಜ್ವಲವಾಗುವಂತೆ ಮಾಡಿದ ಆನೆಗುಂದಿಯ ರಾಜ್ಯವಾದರೂ ಇದೇ ಸೀಮೆಯಲ್ಲಿ

ಮೆರೆದಿರುವುದು. ಅದೇ ಕಾಲಕ್ಕೆ ಬಹಮನೀ ರಾಜ್ಯವೆಂಬ ಹೆಸರಿನಿಂದ ಮೆರೆದ ರಾಜ್ಯವಾದರೂ ಇದೇ ಹಸನಾಬಾದ(ಕಲಬುರ್ಗಿ)ದಲ್ಲಿ ಇದ್ದಿತು. ಹಂಪೆಯಂತೆ ಇಲ್ಲಿಯು ಹಾಳು ಸುಲ್ತಾನಪುರವಾದರೂ ಹಿಂದಿನ ವೈಭವವನ್ನು ನೆನಪಿಗೆ ತರುತ್ತದೆ. ಬಹಮನೀ ರಾಜ್ಯವು ಒಡೆದನಂತರ ಈ ನಾಡಿನ ಪಶ್ಚಿಮ ಭಾಗವಾದ ಕಲಬುರ್ಗಿ ಮುಂತಾದ ಪ್ರಾಂತವು ವಿಜಾಪುರದ ಆದಿಲಶಾಹೀ ರಾಜ್ಯಕ್ಕೆ ಸೇರಿತು. ಬೀದರ ಮುಂತಾದ ಭಾಗವು ಬರೀದಶಾಹೀ ರಾಜ್ಯಕ್ಕೆ ಒಳಪಟ್ಟಿತು. ದಕ್ಷಿಣ ಭಾಗವು ವಿಜಯನಗರ ರಾಜ್ಯದ ಆಡಳಿತದಲ್ಲಿ ಮೊದಲಿನಿಂದಲೇ ಇತ್ತು. ತಾಳೀಕೋಟೆಯ ಕಾಳೆಗದನಂತರ ಈ ಎಲ್ಲ ಪ್ರಾಂತವೂ ವಿಜಾಪುರದವರ ವಶವಾಯಿತು. ಮೊಗಲರ ಕಾಕದೃಷ್ಟಿಯು ದಕ್ಷಿಣ ಹಿಂದುಸ್ಥಾನದ ಮೇಲೆ ಬಿದ್ದ ಕೂಡಲೆ ಬಲಿಷ್ಠವಾದ ವಿಜಾಪುರದ ರಾಜ್ಯವು ಕೂಡ ಔರಂಗಜೇಬನ ತುತ್ತಾಯಿತು. ಇದೇ ಕಾಲಕ್ಕೆ ವಿಜಾಪುರ ರಾಜ್ಯದ ಸಂಕಟ ಸಮಯದಲ್ಲಿ ದಿಲೇರಖಾನನಂಥ ಔರಂಗಜೇಬನ ಮುಖ್ಯ ಸರದಾರನನ್ನು ನಸರತಾಬಾದ (ಈಗಿನ ಶಾಹಪುರ)ದಲ್ಲಿ ಸೋಲಿಸಿ ಹೊಡೆದೋಡಿಸಿ ವಿಜಾಪುರವನ್ನು ಉಳಿಸುವುದಕ್ಕೋಸ್ಕರ ಹೆಣಗಾಡಿದ ಪಾಮನಾಯಕನೂ ಮತ್ತು ವಿಜಾಪುರದ ರಾಜ್ಯವು ಅಳಿದನಂತರ ಔರಂಗಜೇಬನ ಹೊಡೆತದಿಂದ ಮರಾಟರೂ ಕೂಡ ತಲ್ಲಣಿಸಿ ಕಕ್ಕಾವಿಕ್ಕಿಯಾಗಲು ಅವರಿಗೆ ಆಶ್ರಯಕೊಟ್ಟು ಸಹಾಯಮಾಡಿ ಕಡೆಗೆ ದಿಲ್ಲೀ ಸಾಮ್ರಾಜ್ಯದ ಯಾವತ್ತು ಸಂಪತ್ತು ಮತ್ತು ಸೈನ್ಯವನ್ನು ಹರಣಮಾಡುವಂತೆ ನಾಲ್ಕು ತಿಂಗಳವರೆಗೆ ವಾಗನಗೇರಿ ಕೋಟೆಯಲ್ಲಿ ಔರಂಗಜೇಬನ ಸಂಗಡ ಕಾದಾಡಿದ ಪಿಡ್ಡನಾಯಕನೂ ಕನ್ನಡ ವೀರರಾದ ತಂದೆ ಮಕ್ಕಳಿರ್ವರೂ ಇಲ್ಲಿಯೇ ಆಗಿಹೋದರು. ಇದೇ ಪಿಡ್ಡನಾಯಕನು ಮುಂದೆ ಸುರಪುರವನ್ನು ನಿರ್ಮಿಸಿದನು. ಈ ಸಂಸ್ಥಾನವು ಚಿಕ್ಕದಾದಾಗ್ಯೂ ಪೇಶ್ವೆ ಟೀಪು ಸುಲ್ತಾನ ಮತ್ತು ನಿಜಾಮ ಈ ಮೂರು ಪರಸ್ಪರ ವಿರೋಧಿಯಾದ ಬಲಿಷ್ಠ ರಾಜ್ಯಗಳ ನಡುವೆ ಈಗಿನ ಬಫರ ಸ್ಟೇಟ (Buffer State)ದಂತೆ ಗಲಿಬಿಲಿಸೆಯು ಇಲ್ಲಿಯವರೆಗೆ ಬಾಳಿತು. ಇತ್ಯರ್ಥವೇನೆಂದರೆ, ಎಡೆಬಿಡದೆ ಸಾವಿರ ವರ್ಷಗಳವರೆಗೆ ರಾಜಕೀಯ ಇತಿಹಾಸದ ಕೇಂದ್ರಸ್ಥಾನವೇ ಈ ನಿಜಾಮ ಕರ್ನಾಟಕವು. ಕರ್ನಾಟಕದ ಇತಿಹಾಸ ಸಂಶೋಧಕರಿಗೆ ಈ ನಾಡು ಬಂಗಾರದ ಕಣಿಯೇ ಸರಿ. ಇತಿಹಾಸವು ರಾಷ್ಟ್ರದ ಜೀವಾಳವಾದರೆ, ಈ ನಾಡು ಕರ್ನಾಟಕದ ಜೀವಾಳವು. ಸಂಸ್ಕೃತಿಯ ಇತಿಹಾಸದ ದೃಷ್ಟಿಯಿಂದ ನೋಡಿದರೂ ಈ ನಾಡು ಇತರ ಭಾಗಗಳಿಗಿಂತ ಹಿಂದುಳಿದಿಲ್ಲವೆಂದು ಕಂಡುಬರುವುದು. ಸಾರ್ವಭೌಮ ಸತ್ತಾಧಾರಕನಾಗಿ ಇಂದಿಗೂ ಆಸೇತು ಹಿಮಾಚಲದವರೆಗೆ ವ್ಯವಹಾರ ನಿರ್ಣಯವನ್ನು ಮಾಡುತ್ತಿರುವ ಮಿತಾಕ್ಷರ ಕರ್ತನಾದ ವಿಜ್ಞಾನೇಶ್ವರ ಪಂಡಿತನು ಇದೇ ಕಲ್ಯಾಣದವನು. ದೇಶದಲ್ಲೆಲ್ಲ ಅರಾಜಕತೆಯು ಉಂಟಾದ ಸಂಕ್ರಮಣ ಕಾಲದಲ್ಲಿಯೂ ಇದೇ ಎರಗೋಳ ಗುಹೆಯಲ್ಲಿ ಕುಳಿತು ಶ್ರೀಮದಾನಂದತೀರ್ಥರ ಎಲ್ಲ ಗ್ರಂಥಗಳಿಗೆ ನ್ಯಾಯಸುಧಾ ಮುಂತಾದ ಜಗತ್ತಿಗೆ ಬೆರಗು ಮಾಡುವ ಟೀಕಾರೂಪ ವೇದಾಂತ

ಗ್ರಂಥಗಳನ್ನು ಬರೆದ ಜಯತೀರ್ಥ ಭಿಕ್ಷುವಿನ ಸ್ಥಳವಾದರೂ ಇದೇ ಮಳಖೇಡವು. ಅದ್ವೈತದಲ್ಲಿ ವಿದ್ಯಾರಣ್ಯರು, ದ್ವೈತದಲ್ಲಿ ಜಯತೀರ್ಥ ಮುನಿಯು, ಹಾಗೆಯೇ ವಿಶಿಷ್ಟಾದ್ವೈತದಲ್ಲಿ ನಿಗಮಾಂತ ದೇಶಿಕರು. ಇಂತಹ ನಿಗಮಾಂತ ದೇಶಿಕರ ಪ್ರತಿಯವತಾರವೆಂದು ಹೊಗಳಿಸಿಕೊಳ್ಳುವ ತತ್ತ್ವಮಾರ್ತಾಂಡ ಮುಂತಾದ ವೇದಾಂತ ಗ್ರಂಥಗಳನ್ನೂ, ವಿವರಣ ಮೊದಲಾದ ವ್ಯಾಕರಣ ಗ್ರಂಥಗಳನ್ನೂ, ದತ್ತರತ್ನ ಮೊದಲಾದ ಧರ್ಮಶಾಸ್ತ್ರ ಗ್ರಂಥಗಳನ್ನೂ, ಅಲ್ಲದೆ ನಾಟಕಾಲಂಕಾರ ಕಾವ್ಯಗಳನ್ನೂ ಬರೆದ, ಸುರಪುರ ಸಂಸ್ಥಾನಾಧಿಪತಿಯಾದ ಮೂರನೆಯ ಪಾಮ ನಾಯಕನ ಕುಲಗುರುವಾದ ಶ್ರೀನಿವಾಸಾಚಾರ್ಯನೂ ಮತ್ತು ಈತನ ತಮ್ಮನ ಮಗನಾದ ''ಸರ್ವತಂತ್ರ ಸ್ವತಂತ್ರ ಕವಿ,'' ''ತಾರ್ಕಿಕಾಲಂಕಾರ,'' ''ವಾಗೀಶ ಶ್ಲೇಷ್ಮಾತಕ ಚಕ್ರವರ್ತಿ'' ಮುಂತಾದ ಬಿರುದಾಂಕಿತನಾದ ''ಜಂಝಾಮಾರುತ''ವೆಂಬ ಗದಾಧರಿಯ ಖಂಡನವನ್ನೂ, ಅಲ್ಲದೆ ಅನೇಕ ವೇದಾಂತ ಗ್ರಂಥಗಳನ್ನೂ ಬರೆದ ಕಿರೀಟ ವೆಂಕಟಾಚಾರ್ಯರೂ ಇದೇ ಸುರಪುರದಲ್ಲಿ ಕೀರ್ತಿಶೇಷರಾಗಿರುವರು.

ಇನ್ನು ಕನ್ನಡ ಭಾಷೆಯ ದೃಷ್ಟಿಯಿಂದ ನೋಡಿದರೂ ಪೂರ್ವಕಾಲದಲ್ಲಿ ಎಂದರೆ ರಾಷ್ಟ್ರಕೂಟ ಚಾಳುಕ್ಯರ ಕಾಲದಲ್ಲಿ ಕನ್ನಡ ಭಾಷೆಯು ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂಬುದು ಸರ್ವ ಶ್ರುತವಿದೆ. ಅಷ್ಟೇಕೆ, ಕರ್ನಾಟಕ ಭಾಷಾ ವಾಙ್ಮಯವು ಹುಟ್ಟಿದ ಮೊದಲು ಬೆಳೆಯಿಸಿ ಪೋಷಿಸಿ ಉತ್ಕೃಷ್ಟ ಸ್ಥಿತಿಗೆ ತಂದ ರಾಜರುಗಳ ರಾಜಧಾನಿಗಳು ಇಲ್ಲಿಯೇ ಇರುವುವು. ''ಕವಿರಾಜಮಾರ್ಗ''ವೆಂಬ ಕನ್ನಡ ಸಾಹಿತ್ಯ ಗ್ರಂಥವನ್ನು ಬರೆದ ನೃಪತುಂಗ ಸಾಮ್ರಾಜನೂ ವೀರಶೈವ ಮತ ಪ್ರವರ್ತಕರಾದ ಆಳಂದಿ ಗ್ರಾಮದ ಏಕಾಂತ ರಾಮಯ್ಯ, ಬಸವೇಶ್ವರ, ಚನ್ನಬಸವ ಮುಂತಾದ ವಚನಕಾರರಾದ ಸಾಧುವರ್ಯರೂ, ''ಕರ್ನಾಟಕ ಕವಿ ಚೂತ ವನ ಚೈತ್ರ''ನಾದ ಕನ್ನಡ ಜೈಮಿನೀ ಭಾರತವನ್ನು ಬರೆದು ಕನ್ನಡ ನುಡಿಯು ''ಧರೆಯೊಳಾರಾಜಿಸುವಂತೆ'' ಮಾಡಿದ, ಸುರಪುರ ತಾಲೂಕಿನ ದೇವಪುರ ಗ್ರಾಮದ ಪ್ರತಿಭಾ ಸಂಪನ್ನ ಕವಿಯಾದ ಲಕ್ಷ್ಮೀಶನೂ, ಮುಂದೆ ಕನ್ನಡ ಭಾಷೆಯು ದುಸ್ಥಿತಿಯಲ್ಲಿರುವಾಗ ಕೇವಲ ನುಡಿದಾಯಿಯ ಮೇಲಣ ಹಂಬಲಿಂದಲೂ, ಪಾಮರರ ಉದ್ಧಾರದ ವಾತ್ಸಲ್ಯದಿಂದಲೂ, ಸಂಸ್ಕೃತ ಭಾಷೆಯ ರತ್ನ ಭಾಂಡಾರದಲ್ಲಿ ಬೀಗ ಮುದ್ರಿಕೆಯಾಗಿ ಬಿದ್ದ ವೇದಾಂತ-ಭಕ್ತಿ-ನೀತಿಯ ಸಾರ ಸರ್ವಸ್ವದ ಸುಧೆಯನ್ನು ಜನ ಸಾಮಾನ್ಯಕ್ಕೆ ಸೂರೆ ಮಾಡಿ ''ಪೊಂಗನ್ನಡ ಭಾಷೆಯ ದ್ವಾರಾ ಜ್ಞಾನೋಪದೇಶವನ್ನು ಮಾಡಲಾರಂಭಿಸಿ, ಜನತೆಯಲ್ಲಿ ಕನ್ನಡದ ಬಗ್ಗೆ ಆದರವು ಕುಂದದಹಾಗೆ ಹೊಸ ಚೈತನ್ಯವನ್ನುಂಟು ಮಾಡಿದ ದಾಸಕೂಟಕ್ಕೆ ಸೇರಿದ ವಿಜಯವಿಟ್ಠಲ, ಜಗನ್ನಾಥಾರ್ಯ, ಗೋಪಾಲವಿಟ್ಠಲ ಮುಂತಾದ ಭಗವದ್ಭಕ್ತಶಿರೋಮಣಿಗಳೂ ಇಲ್ಲಿಯೇ ಉದಯಿಸಿರುವರು.

ಆದರೆ ಪೂರ್ವಸ್ಥಿತಿಯು ಹೀಗಿದ್ದು ಈಗ ಈ ನಾಡಿನ ಭಾಷೆಗೆ ಉಂಟಾದ ದುರವಸ್ಥೆಯು ಅಷ್ಟಿಷ್ಟೆಂದು ಹೇಳಲಿಕ್ಕಾಗುವುದಿಲ್ಲ. ಆದರ ಹ್ರಾಸವು ಎಂದಿ

ನಿಂದ ಹೇಗೆ ಪ್ರಾರಂಭವಾಯಿತು, ಇಲ್ಲಿಯ ಜನರು ತಮ್ಮ ಮಾತೃಭಾಷೆಯನ್ನು ಅಲಕ್ಷಿಸುವುದಕ್ಕೆ ಕಾರಣಾಂತರಗಳೇನಾದುವು ಎಂಬ ಸಂಗತಿಗಳನ್ನು ಅರಿತುಕೊಳ್ಳುವುದು ಅತ್ಯಾವಶ್ಯಕವಿದ್ದಾಗ್ಗೂ ಇಂಥ ಐತಿಹಾಸಿಕ ವಿವೇಚನೆಯನ್ನು ಮಾಡುವ ಸ್ಥಳವಿದಲ್ಲವೆಂದು, ಪ್ರಕೃತದಲ್ಲಿ ಅದರ ಗೊಡವೆಗೆ ಹೋಗದೆ ಸದ್ಯಃಸ್ಥಿತಿಯನ್ನು ಹೇಳಿ ಇದನ್ನು ಮುಗಿಸುವೆನು.

ಕನ್ನಡ ನುಡಿಯು ಮರಾಠಿ, ಉರ್ದು ಮುಂತಾದ ಪರಭಾಷೆಗಳ ಇರುಕಿನಲ್ಲಿ ಸಿಕ್ಕಿ ದರಬಾರದಲ್ಲಿಯೂ ವ್ಯವಹಾರದಲ್ಲಿಯೂ ಸ್ಥಳವಿಲ್ಲದೆ ಹೋಗಿ ಬಳಲುತ್ತ ಮನೆಮಾರುಗಳಲ್ಲಿ ಮಾತ್ರ ಸೇರಿಕೊಂಡಿದೆ. ಶಾಲೆ ಶಾಲೆಗಳಲ್ಲಿ ಕಲಿಯುವುದು ಮರಾಠಿ, ಉರ್ದು, ಇಂಗ್ಲಿಷು. ಹಳ್ಳಿಗಳ ವ್ಯವಹಾರದ ಲೆಕ್ಕಪತ್ರಗಳೆಲ್ಲವೂ ಮರಾಠಿಯಲ್ಲಿ ಮತ್ತು ಕಚೇರಿಗಳಲ್ಲಿ ಉರ್ದು. ಈ ರೀತಿಯಾಗಿ ಕಲಬುರ್ಗಿ ಬೀದರಕೋಟೆಯ ಸುಮಾರು ೯ ಲಕ್ಷ ಕನ್ನಡಿಗರಿಗೆ ಕನ್ನಡ ಅಕ್ಷರಾಭ್ಯಾಸವು ಕೂಡ ಇಲ್ಲದಿರುವ ಶೋಚನೀಯ ಸ್ಥಿತಿಯಿರಲು, ಕನ್ನಡದ ಚಳವಳಿಯಾಗುವುದು ಎಷ್ಟು ಅವಶ್ಯಕವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಅತ್ಯುಜ್ಜ್ವಲವಾದ ಸ್ವಭಾಷೆ, ಸಂಸ್ಕೃತಿ, ಇತಿಹಾಸಗಳ ಗಾಢವಾದ ಅಜ್ಞಾನದ ಕಾರ್ಗತ್ತಲೆಯನ್ನು ಮಾಯಗೊಳಿಸುವುದಕ್ಕೆ ಅವುಗಳ ಸ್ಮೃತಿ, ಪರಿಚಯ, ಪರಿಜ್ಞಾನರೂಪಿಯಾದ ದೀಪವನ್ನು ಏಕಪ್ರಕಾರವಾಗಿ ಕಳೆಗುಂದದಂತೆ ಬೆಳಗಿಸುತ್ತ ಇಡುವುದೊಂದೇ ಇಲ್ಲಿಯ ಕನ್ನಡ ನುಡಿಯು ಈಗಣ ಹೀನಸ್ಥಿತಿಯಿಂದ ತಲೆಯೆತ್ತುವ ಉಪಾಯವಾಗಿದೆ. ಒಂದು ಕಾಲಕ್ಕೆ ಉತ್ತರಕ್ಕೆ ಗೋದಾವರಿಯಿಂದ ಸಾತಾರೆ, ಪುಣೆ, ಕೊಂಕಣ ಮುಂತಾದ ಆಧುನಿಕ ಮಹಾರಾಷ್ಟ್ರದ ತಿರುಳನಾಡಿನವರೆಗೆ ಹಬ್ಬಿದ ಕರ್ಣಾಟಕವು ಈ ದುರವಸ್ಥೆಗೀಡಾದದ್ದು ಈಗಣ ಕನ್ನಡಿಗನ ಅಧೀನದ ಮಾತಲ್ಲವಾದರೂ ತನ್ನ ಕಣ್ಣ ಮುಂದೆ ಪರಭಾಷೆಗಳ ದವಡೆಯಲ್ಲಿ ಸಿಲುಕಿ ನಾಥರಿಲ್ಲದೆ ನುಚ್ಚು ನೂರಾಗುತ್ತಿರುವ ಕನ್ನಡ ಗಡಿನಾಡುಗಳನ್ನು ಈ ಕ್ಷಯರೋಗದಿಂದ ಉಳುಹಲು ವಿಶ್ವಪ್ರಯತ್ನಗಳಿಂದ ಹೋರಾಡುವುದು ಪ್ರತಿಯೊಬ್ಬ ಸಿರಿಗನ್ನಡ ದೇವಿಯ ಮಗನಾದವನ ಆದ್ಯ ಕರ್ತವ್ಯವಲ್ಲವೆ? ಈ ಹೋರಾಟದಲ್ಲಿ ಇಲ್ಲಿಯ ಹಾಗೂ ಹೊರಗಿನ ಕನ್ನಡಿಗರಾದ ಎಲ್ಲರೂ ಪರಸ್ಪರ ದೃಢವಾದ ಸಹಕಾರ್ಯ ಸಂಘಟನೆಗಳನ್ನು ಬೆಳಸತಕ್ಕದ್ದು. ಅದು ಹೇಗೆಂದರೆ:—

(೧) ಕ. ಸಾ. ಪರಿಷತ್ತಿನ ಪರವಾಗಿಯೂ, ಇತರತ್ರವೂ ಕನ್ನಡ ಪಂಡಿತರೂ, ವಾಗ್ಮಿಗಳೂ ಆದ ಸಾಹಿತ್ಯ ಭಕ್ತರು ಇಲ್ಲಿಗೆ ಮೇಲಿಂದ ಮೇಲೆ ಬಂದು ಕನ್ನಡ ವಾಙ್ಮಯ, ಇತಿಹಾಸಗಳ ಜ್ಞಾನವನ್ನುಂಟುಮಾಡುವ ಉಪನ್ಯಾಸಗಳನ್ನು ನಡೆಯಿಸುವುದು.

(೨) ಕನ್ನಡ ಕೀರ್ತನೆ, ದಾಸರ ಪದ, ಸಂಗೀತ, ನಾಟಕ ಮುಂತಾದುವುಗಳಿಂದ ಭಾಷಾಭಿರುಚಿ, ಆದರಗಳನ್ನು ಹೆಚ್ಚಿಸುವುದು.

(೩) ಅಂದವೂ, ಬೋಧಪರವೂ ಆದ ಕನ್ನಡ ಚಿಕ್ಕ ಚಿಕ್ಕ ಪುಸ್ತಕಗಳನ್ನೂ, ಕರ್ಣಾಟಕದ ವಿಭೂತಿ ಶಿಲ್ಪ ಚಿತ್ರಕಲೆ ಮುಂತಾದವುಗಳ ಬಗ್ಗೆ

ಆತ್ಮೀಯತೆಯನ್ನು ಅಂಕುರಗೊಳಿಸುವ ಪಟಗಳನ್ನೂ ಅಲ್ಪ ಬೆಲೆಗೆ ಮಾರಿ ಪ್ರಚುರ ಪಡಿಸುವುದು.

(೪) ಪತ್ರಿಕಾಕರ್ತರು ತಮ್ಮ ಪ್ರಚಾರಕರನ್ನು ಹಳ್ಳಿಹಳ್ಳಿಗಳಲ್ಲಿ ಕಳುಹಿ ತಮ್ಮ ಪತ್ರಿಕೆಗಳನ್ನು ಪ್ರಸಾರಗೊಳಿಸುವುದೂ; ಅವುಗಳಲ್ಲಿ ಇಲ್ಲಿಯ ಪರಿಸ್ಥಿತಿಯನ್ನು ಮೇಲಿಂದಮೇಲೆ ಚರ್ಚಿಸುವುದು.

(೫) ಕರ್ಣಾಟಕ ಸಂಘವನ್ನೂ, ಅದರ ಶಾಖೋಪಶಾಖೆಗಳನ್ನೂ ಎಲ್ಲೆಡೆಯಲ್ಲಿಯೂ ಹೊರಡಿಸುವುದು.

(೬) ನಿಜಾಮ ಕರ್ಣಾಟಕದ ಇತಿಹಾಸ ಸಂಶೋಧನೆ.

(೭) ಇಲ್ಲಿಯ ಮುಖಂಡರು ಸರ್ಕಾರದಲ್ಲಿಯೂ, ವಿದ್ಯಾ ವಿಭಾಗದವರಲ್ಲಿಯೂ ಬಲವಾದ ಚಳವಳವನ್ನು ಮಾಡಿ, ಹಳ್ಳಿಹಳ್ಳಿಗಳ ಸರಕಾರೀ ದಫ್ತರವನ್ನು ಕನ್ನಡದಲ್ಲಿಯೇ ಇಡುವಂತೆಯೂ, ಎಲ್ಲೆಡೆಯಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಏರ್ಪಡಿಸುವಂತೆಯೂ ಅಪ್ಪಣೆಯನ್ನು ಪಡೆಯತಕ್ಕದ್ದು.

(೮) ದೊಡ್ಡದೊಡ್ಡ ಪಟ್ಟಣಗಳಲ್ಲಿ ಕನ್ನಡ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನೂ ಅಲ್ಲಲ್ಲಿ ವಾಚನಾಲಯ ಗ್ರಂಥಾಲಯಗಳನ್ನೂ ಸ್ಥಾಪಿಸುವುದು.

(೯) ಎಲ್ಲ ಕನ್ನಡಿಗರೂ ಲೆಕ್ಕಪತ್ರ ಮುಂತಾದ ತಮ್ಮ ದಿನದ ವ್ಯವಹಾರಗಳನ್ನೂ, ಲಗ್ನ, ಆಹ್ವಾನ, ಪ್ರಕಟನೆ ಮುಂತಾದ ಪತ್ರಿಕೆಗಳನ್ನೂ ಕನ್ನಡದಲ್ಲಿಯೇ ನಡೆಯುವಂತೆ ಕ್ರಮೇಣ ನೆರವೇರಿಸತಕ್ಕದ್ದು.

(೧೦) ಅಚ್ಚುಕೂಟಗಳ ಸ್ಥಾಪನೆ.

[ಈಗ ಇಲ್ಲಿ ಉಂಟಾದ ನವ ಜಾಗೃತಿಯ ಮೊದಲಡಿರೂಪವಾಗಿ ''ಕರ್ಣಾಟಕ ಸಂಘ''ವೂ. ''ಸರಸ್ವತೀ ವಿಲಾಸ''ವೆಂಬ ಕನ್ನಡ ಮುದ್ರಣಾಲಯವೂ ಸ್ಥಾಪಿತವಾಗಿವೆಯೆಂದು ತಿಳುಹಲು ಆನಂದವೆನಿಸುತ್ತದೆ.]

ಈ ಮೇರೆಗೆ ಕಾರ್ಯಗಳನ್ನು ಕೈಕೊಂಡು ವಿಶ್ವಕರ್ಣಾಟಕದಲ್ಲಿ ಏಕಭಾವನೆಯನ್ನು ಮೊಳೆಯಿಸಿ, ಬಲವಾಗಿ ಬೆಳೆಯಿಸಬೇಕೆಂದು ಎಲ್ಲ ಮಹನೀಯರನ್ನೂ ಬೇಡಿಕೊಳ್ಳುತ್ತೇನೆ.

ಇಂಥ ಈ ಭಾವಿ ಮಹತ್ಕಾರ್ಯದ ಆರಂಭರೂಪವಾಗಿ ಮೈಸೂರು, ಬೆಂಗಳೂರು, ಬಳ್ಳಾರಿ, ವಿಜಾಪುರ, ಧಾರವಾಡ ಮುಂತಾದ ಅನೇಕ ಭಾಗಗಳಿಂದ ಕನ್ನಡ ಭಾಷಾಭಿಮಾನಿಗಳೂ, ಪಂಡಿತರೂ, ಸಾಹಿತ್ಯ ಭಕ್ತರೂ ಆದ ತಾವುಗಳೆಲ್ಲರೂ ಈ ಸಮ್ಮೇಳನಕ್ಕೆ ನಮ್ಮನ್ನು ಜಾಗೃತಿಗೊಳಿಸುವುದಕ್ಕಾಗಿ ಬಂದು ಸಮ್ಮೇಳನವನ್ನು ಅಂದಗೊಳಿಸಿದುದಕ್ಕಾಗಿ ತಮ್ಮೆಲ್ಲರ ಉಪಕಾರವನ್ನು ಪುನಃ ಸ್ಮರಿಸಿ ಇನ್ನೊಂದು ಬಾರಿ ಸ್ವಾಗತಮಾಡಿ ತಮ್ಮ ಅಪ್ಪಣೆಯನ್ನು ಪಡೆದುಕೊಳ್ಳುತ್ತೇನೆ.

ದೊಡ್ಡಪ್ಪಾ ಅಪ್ಪಾ ಉರ್ಫ
ಶ್ರೀ ಸಾಧು ಶರಣ ಬಸಪ್ಪನವರು,
ಸ್ವಾಗತಾಧ್ಯಕ್ಷರು.

ಅಧ್ಯಕ್ಷರ ಆರಂಭ ಭಾಷಣ

ಆರ್ಯ ಮಹಾಶಯರೆ, ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ತುಂಬಿರುವ ಈ ಮಹಾಸಭೆಯಲ್ಲಿ ಅಗ್ರಾಸನಕ್ಕೆ ಅರ್ಹನಲ್ಲದ ನನಗೆ ತಾವು ಕೊಟ್ಟಿರತಕ್ಕ ಮರ್ಯಾದೆಗೆ ನಾನು ತಲೆಯನ್ನು ತಗ್ಗಿಸಬೇಕಾಗಿದೆ. ತಮ್ಮಲ್ಲಿ ಹಲವರು ದೇಶದ ಏಳಿಗೆಗಾಗಿಯೂ, ಭಾಷೆಯ ಅಭಿವೃದ್ಧಿಗಾಗಿಯೂ ಬಹಳವಾಗಿ ಕೆಲಸಮಾಡಿರುತ್ತೀರಿ; ನಾನು ಮಾಡಿರುವುದು ಅತ್ಯಲ್ಪವಾಗಿರುತ್ತದೆ. ಈಗಲೂ ನನಗೆ ಜ್ಞಾಪಕವಿದೆ—ಮದರಾಸಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ನನ್ನ ಸ್ನೇಹಿತರೂ ನಾನೂ ಸಾಯಂಕಾಲ ಸಮುದ್ರತೀರದಲ್ಲಿ ಮರಳಿನಮೇಲೆ ಕುಳಿತು, ಸಮಾಜದ ಮತ್ತು ಸಾಹಿತ್ಯದ ವಿಷಯಗಳನ್ನು ಚರ್ಚಿಸುತ್ತ, ಹೀಗೆ ಮಾಡಬೇಕು, ಹಾಗೆ ಮಾಡಬೇಕು, ಕನ್ನಡ ನಾಡಿಗೆ, ಕನ್ನಡ ನುಡಿಗೆ, ನಮ್ಮ ಬಾಳಿಕೆಯನ್ನೇ ಕಾಣಿಕೆಯಾಗಿ ಒಪ್ಪಿಸಿಬಿಡಬೇಕು ಎಂದು ಪೌರುಷವನ್ನು ಕೊಚ್ಚಿಕೊಳ್ಳುತಿದ್ದುದು; ಕನ್ನಡ ಕಾವ್ಯಗಳನ್ನೆಲ್ಲ ಓದಬೇಕು, ಜನರಲ್ಲಿ ಬಳಕೆಗೆ ತರಬೇಕು, ಉಪಾಧ್ಯಾಯನಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರೇಮವನ್ನು ಬಿತ್ತಬೇಕು, ಜನಸಾಮಾನ್ಯಕ್ಕೆ ತಿಳಿವಳಿಕೆಯೂ, ಹೊಸ ನಡೆವಳಿಕೆಯೂ ಹುಟ್ಟುವಂತೆ ಕಾಲಕ್ಕೆ ತಕ್ಕ ಪುಸ್ತಕಗಳನ್ನು ಬರೆಯಬೇಕು, ಷೇಕ್ಸ್ಪಿಯರಿನ ನಾಟಕಗಳನ್ನೂ, ಗ್ರೀಕರ ರುದ್ರನಾಟಕಗಳನ್ನೂ, ಪ್ಲೇಟೋವಿನ ಸಂವಾದಗಳನ್ನೂ, ಕಾರ್ಲೈಲಿನ ಧೀರೋಪದೇಶಗಳನ್ನೂ ಕನ್ನಡಕ್ಕೆ ತರಬೇಕು—ಎಂದಿವೇ ಮೊದಲಾದ ಸವಿಗನಸುಗಳನ್ನು ಕಂಡ ಆ ಯುವಕನ ಆಶೆ ಎಷ್ಟು! ಉದ್ಯೋಗದ ನಿರ್ಬಂಧಗಳಿಗೂ, ಸಂಸಾರದ ಮನಃಕ್ಲೇಶಗಳಿಗೂ, ಪ್ರಕೃತಿ ಧರ್ಮವಾದ ಅಸಡ್ಡೆ ಸೋಮಾರಿತನಗಳಿಗೂ ತುತ್ತಾಗಿ, ಇದ್ದಬದ್ದ ಅಲ್ಪಸ್ವಲ್ಪ ಶಕ್ತಿಯೂ ಕುಂದಿಹೋಗಿ, ಎಣಿಸುವುದಕ್ಕೆ ಹೋದರೆ ಕಾರ್ಯದಲ್ಲಿ ಈಗ ನಡಿಸಿರುವುದೆಷ್ಟು! ದೇಶಸೇವೆ, ಭಾಷಾಸೇವೆ, ಇವುಗಳ ಪುಣ್ಯವು ಬಯಸಿದವರಿಗೆಲ್ಲ ದೊರಕದೆನ್ನುವುದು ಚೆನ್ನಾಗಿ ಅನುಭವಕ್ಕೆ ಬಂದ ಹತಾಶನಿಗೆ ಈ ದಿನ ತಾವು ತೋರಿಸಿರುವ ವಿಶ್ವಾಸಕ್ಕೆ ಒಂದುಕಡೆ ನಾನು ಹೇಳಿದಂತೆ ತಲೆಯನ್ನು ತಗ್ಗಿಸಬೇಕಾಗಿದೆ; ಆದರೆ ಮತ್ತೊಂದು ಕಡೆ ತಮ್ಮಂತಹ ಮಹಾಜನರ ಸಂಘದಲ್ಲಿ ನಾನೂ ಒಬ್ಬನು ಸೇರಿ ದೀಕ್ಷೆಗೊಂಡುದಕ್ಕಾಗಿ ಹೆಮ್ಮೆಯೂ, ಉತ್ಸಾಹದ ಪುನರುತ್ಥಾನವೂ ಹೃದಯದಲ್ಲಿ ಹೊಮ್ಮುತ್ತಿವೆ. ಈ ಜೀವ ದಾನಕ್ಕೆ ತಮ್ಮಗಳಿಗೆಲ್ಲ ನಾನು ಬಹಳ ಕೃತಜ್ಞನಾಗಿರುತ್ತೇನೆ.

೨. ಮಹಾಶಯರೆ, ಒಂದು ದೇಶದ ಶ್ರೇಯೋಭಿವೃದ್ಧಿಗೆ ಆವಶ್ಯಕವಾದ ಅನೇಕ ಮುಖವಾದ ಸಾಧನಗಳಲ್ಲಿ ಸಾಹಿತ್ಯ ಕೃಷಿ ಒಂದಾಗಿರುತ್ತದೆ. ಈ ಸಾಹಿತ್ಯ ಪರಿಷತ್ತಿನಲ್ಲಿ ಮುಖ್ಯವಾಗಿ ನಾವು ವಿಚಾರಮಾಡತಕ್ಕುದೂ ಸಾಹಿತ್ಯ ವಿಷಯವೇ ಆಗಿರುತ್ತದೆ. ಒಳ್ಳೆಯ ಸಾಹಿತ್ಯವನ್ನು ಪಡೆದ ಜನಾಂಗದ ಹೃದಯದಲ್ಲಿ ಜ್ಞಾನವೂ, ನಿಷ್ಕಲ್ಮಷವಾದ ಆನಂದವೂ, ಸತ್ಪ್ರೇರಣೆಯೂ, ಸಮಾಜದ ಪುನರ್ನಿರ್ಮಾಣದ ಕಾರ್ಯದಲ್ಲಿ ಏಕಮತ್ಯವೂ ಬಲವಾಗಿ ಬೇರೂರುತ್ತವೆ. ಅಂತಹ ಸಾಹಿತ್ಯ, ಅಂತಹ ಪುಸ್ತಕಭಂಡಾರ ನಮ್ಮಲ್ಲಿ ಎಷ್ಟಿದೆ? ಕನ್ನಡ ನಾಡಿನಲ್ಲಿ ಅನೇಕ

ಜನರು—ಜನಸಾಮಾನ್ಯವು—ಗಂಡಸರು, ಹೆಂಗಸರು, ಮಕ್ಕಳು—ಈಗ ಓದು ಬರೆಹವನ್ನು ಕಲಿಯುತ್ತಿದ್ದಾರೆ; ಮುಂದೆ ಇನ್ನೂ ಹೆಚ್ಚಾಗಿ ಕಲಿಯುವವರಾಗಿದ್ದಾರೆ. ತಮ್ಮೆಲ್ಲರ ಘನೋದ್ದೇಶವೂ ದೇಶದಲ್ಲಿ ಸರ್ವರೂ ಅಕ್ಷರಸ್ಥರಾಗಿ, ವಿದ್ಯಾರ್ಥಿಗಳಾಗಿ, ಜ್ಞಾನಕಾಮರಾಗಿ, ಸತ್ಪ್ರಜೆಗಳಾಗಿ, ದೊಡ್ಡ ಬದುಕನ್ನು ಬದುಕಬೇಕೆಂಬುದೇ ಆಗಿದೆ. ಈ ಸಾಮಾನ್ಯರಾದ ಗಂಡಸರು ಹೆಂಗಸರು ಮಕ್ಕಳಿಗೆಲ್ಲ ವಿರಾಮಕಾಲವನ್ನು ಸದ್ವಿನಿಯೋಗಮಾಡುವುದಕ್ಕಾಗಿ ಸುಲಭವಾದ, ಪ್ರಯೋಜನಕಾರಿಯಾದ, ಶುಚಿಯಾದ, ಹರ್ಷಜನಕವಾದ, ಸದ್ಬೋಧಕವಾದ ಪುಸ್ತಕಗಳನ್ನು ಎಷ್ಟು ಮಟ್ಟಿಗೆ ಒದಗಿಸಿದ್ದೀರಿ? ಓದುವವರು ಕಡಿಮೆಯಾದರೆ, ಬರೆಯುವವರು ಇನ್ನೂ ಕಡಿಮೆ. ಒಕ್ಕಡೆ ನಮ್ಮ ಪುಸ್ತಕವನ್ನು ಕೇಳುವವರೇ ಇಲ್ಲವೆಂಬ ಕೂಗು; ಒಕ್ಕಡೆ ನಮ್ಮ ಹುಡುಗರಿಗೆ ಓದುವುದಕ್ಕೆ ಸರಿಯಾದ ಪುಸ್ತಕಗಳೇ ಇಲ್ಲವೆಂಬ ದೂರು. ಇದರಮೇಲೆ, ಇಂಗ್ಲಿಷಿನ ಮೇಲೆ ಮತ್ಸರ. ಮತ್ಸರವಿಲ್ಲದಿದ್ದರೂ ಅಸಮಾಧಾನ, ಅಸಡ್ಡೆ. ಹೋಗಲಿ, ಇಂಗ್ಲಿಷನ್ನು ಕಲಿತವನು ಕಾಣಬಹುದಾದ, ಹೊಕ್ಕು ಬಳಸಬಹುದಾದ, ಸಾಹಿತ್ಯದ ರಮಣೀಯವಾದ ಉದ್ಯಾನವನಗಳನ್ನು ಕನ್ನಡವನ್ನು ಬಲ್ಲವನು ಕಾಣುವಂತೆ, ಹೊಕ್ಕು ಬಳಸುವಂತೆ ಮಾಡಿರುತ್ತೀರಾ? ಇಲ್ಲವಾದರೆ, ಬಂಗಾರದ ಬಳೆಯೂ ಇಲ್ಲದೆ, ಹಿತ್ತಾಳೆಯ ಕಡಗವೂ ಇಲ್ಲದೆ, ಹಾಗೂ ಕೆಟ್ಟೆ, ಹೀಗೂ ಕೆಟ್ಟೆ ಎಂಬ ಸ್ಥಿತಿಗೆ ನಮ್ಮ ಮಕ್ಕಳನ್ನು ತಳ್ಳಿದಹಾಗೆ ಆಗುವುದಿಲ್ಲವೇ?

೨. ಒಳ್ಳೆಯದು, ತಾವು ಕೇಳಬಹುದು: ಇದೇನು, ಒಳ್ಳೆಯ ಸಾಹಿತ್ಯವೇ ನಮ್ಮಲ್ಲಿಲ್ಲವೆ? ಪುರಾತನರ ಪ್ರೌಢ ಸಾಹಿತ್ಯ, ಮಧ್ಯಕಾಲದವರ ಸುಲಭ ಸಾಹಿತ್ಯ, ನೂತನರ ರಂಜಕ ಸಾಹಿತ್ಯ—ಇವು ನಮ್ಮ ಜ್ಞಾನದಾನ ವ್ರತಕ್ಕೆ ಸಾಲದೆ? ಸಾಲದು; ಕ್ಷಮಿಸಬೇಕು; ಸಾಲದು. ಹೆಮ್ಮೆಯಿಂದ ತಮ್ಮ ಬೆನ್ನನ್ನು ತಾವು ತಟ್ಟಿಕೊಳ್ಳುವವರು ಬೇಕಾದುದನ್ನು ಹೇಳಿಕೊಳ್ಳಬಹುದು; ಹಾಗೆ ಜಂಭ ಹೊಡೆಯುವುದೇ ದೇಶಾಭಿಮಾನವೆಂದೂ, ಹಾಗೆ ಹೊಗಳದವರು ದೇಶದ್ರೋಹಿಗಳೆಂದೂ ಭಾವಿಸಿಕೊಳ್ಳಬಹುದು. ಆದರೆ ಅನೇಕ ಉತ್ತಮ ಸಾಹಿತ್ಯಗಳನ್ನು ದರ್ಶನಮಾಡಿರುವ, ವಿಶ್ವಪ್ರಪಂಚದ ಕವಿಮಹಾನುಭಾವರ ದಿವ್ಯಕಾವ್ಯತೀರ್ಥಗಳಲ್ಲಿ ಹೃದಯವನ್ನು ತೊಳೆದಿರುವ, ವಿಮರ್ಶೆಯ ತಾರತಮ್ಯಜ್ಞಾನವಿಲ್ಲದ ಅತಿಶ್ಲಾಘನೆಗೆ ಮನಸ್ಸಾಕ್ಷಿಯೊಪ್ಪಲಾರದ, ನಿರ್ವಂಚನೆಯಾಗಿ ನಿರ್ದಾಕ್ಷಿಣ್ಯವಾಗಿ ನಮ್ಮ ಸಾಹಿತ್ಯವನ್ನು ಕುಲುಮೆಗೆ ಹಾಕಿ, ಒರೆಗಲ್ಲಿನಲ್ಲಿ ಉಜ್ಜಿ, ಪರೀಕ್ಷೆಮಾಡುವುದು ಕರ್ತವ್ಯವೆಂದು ನಂಬಿರುವ ರಸಜ್ಞರು ಯಾರೂ ಆ ರೀತಿ ಭಾವಿಸರು. ತಾರತಮ್ಯಜ್ಞಾನವುಳ್ಳವರು ಯಾರು ತಾನೇ ಕೀಳನ್ನು ಮೇಲೆಂದೂ, ಸಾಮಾನ್ಯವಾದುದನ್ನು ಉತ್ಕೃಷ್ಟವೆಂದೂ, ಕಳಂಕಮಿಶ್ರವಾದುದನ್ನು ಪರಿಶುದ್ಧವೆಂದೂ, ಅರ್ಧಪಕ್ವವಾದ ಕಲಾ ಚಾತುರ್ಯವನ್ನು ಪೂರ್ಣ ಸಂಸ್ಕೃತ ಕಲೆಯ ಪರಮಪದವೆಂದೂ ಹೇಳಲಾದೀತು? ಅದರಲ್ಲಿಯೂ, ತಮ್ಮಂತಹ ಮಹಾ ಪರಿಷತ್ತಿನ ಸಭ್ಯರು

ನಿಷ್ಪಕ್ಷಪಾತವಾದ ವಿಮರ್ಶೆಯನ್ನು ಕೈಬಿಟ್ಟರೆ ಅದಕ್ಕೆ ಮತ್ತೆಲ್ಲಿ ಆಶ್ರಯ ದೊರೆತೀತು?

೪. ನವಜೀವನದಲ್ಲಿ ಕಾಲಿಡುತ್ತಿರುವ, ನವದರ್ಶನವನ್ನು ಕೈಕೊಳ್ಳುತ್ತಿರುವ ಜನಸಾಮಾನ್ಯಕ್ಕೆ ಹಳಗನ್ನಡದ ಮತ್ತು ಬಲುಮಟ್ಟಿಗೆ ನಡುಗನ್ನಡದ ಕಾವ್ಯಮಾಲೆಯಿಂದ ಅಷ್ಟು ಹೆಚ್ಚಾದ ಪ್ರಯೋಜನವಾಗಲಾರದೆಂದು ನಾನು ಶಂಕಿಸುತ್ತೇನೆ. ಒಟ್ಟಿನಮೇಲೆ, ಅದು ಪುರಾತನ ಪ್ರಪಂಚದ ಸಾಹಿತ್ಯ, ಭಾಷೆ ಕಷ್ಟ; ಹಳಗನ್ನಡ ಹಾಗಿರಲಿ, ಅನಾವಶ್ಯಕವಾದ ಕನ್ನಡಕ್ಕೆ ಒಂದು ಪುಷ್ಟಿಯನ್ನಾಗಲಿ, ಶಕ್ತಿಯನ್ನಾಗಲಿ, ಸೌಂದರ್ಯವನ್ನಾಗಲಿ ಕೊಡದ ನಿಸ್ಸಾರವಾದ ಪುಸ್ತಕದ ಸಂಸ್ಕೃತ ಶಬ್ದಗಳಿಂದ ಹೆಣೆದುಕೊಂಡಿರುವ ಸೀಗೆಯ ಮೆಳೆ. ಶೈಲಿ ಸಾಧಾರಣವಾಗಿ ಕೃತಕ, ನೀರಸ;—ಇನ್ನೂ ರೆಕ್ಕೆ ಬಲಿಯದೆ ಕುಪ್ಪಳಿಸುವ ಹಕ್ಕಿಯ ಮರಿಯ ಹಾಗೆ. ಸಣ್ಣ ಪದ್ಯಗಳಲ್ಲಿ ತೊಡರಿಕೊಂಡು ಕತ್ತರಿಸಿ ಬೀಳುವ ಸಣ್ಣ ಪುಟ್ಟ ವಾಕ್ಯಗಳು; ಕೆಲವು ನಿರುಕಾದ, ಆಡುವ ಮಾತಿನ ಮಟ್ಟವನ್ನು ಅಷ್ಟೇನೂ ಮೀರಿ ಏರದ, ವಾಕ್ಯರಚನೆ; ಮಾನವನ ವಿಶಾಲವಾದ ಮನೋವೃತ್ತಿಗಳನ್ನು ಛಾಯೆಯಂತೆ ಅನುಸರಿಸುವ ಪ್ರತಿಭಾವಿಷ್ಟವಾದ ಉದಾತ್ತ ವಾಣಿಯಲ್ಲ. ನುಡಿಗಳನ್ನು ಮುತ್ತಿನಂತೆ ಪೋಣಿಸಿ ಆಯುವ, ಮಿತವಾಗಿ ಬಳಸುವ, ಸೈನಿಕವ್ಯೂಹದಂತೆ ಸುಶಿಕ್ಷಿತವಾಗಿ ಒಮ್ಮೊನೆಗೆ ನುಗ್ಗುವ, ಚಿನ್ನಗಾರನಂತೆ ಅಲ್ಲಲ್ಲಿ ಚಿನ್ನವನ್ನು ತುಂಬುವ, ಸಮಯೋಚಿತವಾಗಿ ಸಹಜವಾಗಿ ಏರುವ, ಇಳಿಯುವ, ಸಮುದ್ರದ ತೆರೆಯಂತೆ ಹರಡಿ ಬೀಸುವ, ಹೊರಳುವ, ತಗ್ಗಿ ಕುಗ್ಗುವ, ಕುಲಸ್ತ್ರೀಯಂತೆ ಅರೆಮಾತಾಡುವ, ಮೌನದಿಂದಲೇ ಭಾವವನ್ನು ಸೂಚಿಸುವ ಜಾತಿ ವೀರನಂತೆ ಸಂದರ್ಭದಲ್ಲಿ ತಟಕ್ಕನೆ ವೀರಾವೇಶವನ್ನು ತಾಳುವ, ಹಾಗೆಯೇ ಶಾಂತವಾಗುವ, ಅಂತರ್‍ಯವನ್ನು ತೋರಿಸಿ ಮರಳ ಮೇಲೆ ನಗು ನಗುತ ಹರಿಯುವ ಹೊಳೆಯಂತೆ ಸ್ಪಷ್ಟವಾಗಿ ಸ್ವಚ್ಛವಾಗಿ ಹರಿಯುವ ಅಲ್ಲಲ್ಲಿ ಮೊರೆಯುವ, ದುಮುಕುವ, ಗಂಭೀರವಾಗಿ ತೂಗುವ, ನಲ್ಲೆಯ ಮೆಲ್ನುಡಿಯಂತೆ ಹೃದಯ ವೀಣೆಯ ತಂತಿಗಳನ್ನು ಮಿಡಿದು ನೋಯಿಸುವ, ನಲಿಯಿಸುವ ಅನಂತಾನಂತ ರೂಪವಾದ ಮಹಾ ವಾಣಿಯಲ್ಲ. ಶಾಸ್ತ್ರ ಶಿಕ್ಷೆಯನ್ನು ಪಡೆದಿರಬಹುದು; ಆಡಂಬರವಿರಬಹುದು; ಚಮತ್ಕಾರ, ಚೇಷ್ಟೆ, ಬಲವು, ಒಯ್ಯಾರ ಎಲ್ಲ ಇರಬಹುದು. ಆದರೆ ಎಲ್ಲ ಪಾಮರ ರಂಜನೆ, ಒಂದು ಬಗೆಯ ಪಂಡಿತರಿಗೆ ಮಾತ್ರ ರಂಜನೆ. ಕಥೆಯನ್ನು ರಚಿಸುವುದೂ ಅಷ್ಟೆ; ವ್ಯಕ್ತಿಗಳನ್ನು ಚಿತ್ರಿಸುವುದೂ ಅಷ್ಟೆ; ರಸ, ಭಾವ, ವರ್ಣನೆಗಳನ್ನು ಪ್ರತಿಪಾದಿಸುವುದೂ ಅಷ್ಟೆ:—ಏಕನಾದ, ಚರ್ವಿತ ಚರ್ವಣ, ಹರಿದ ಕಾಲುವೆಯಲ್ಲಿ ಪಾಚಿಗಟ್ಟಿ ಹರಿಯುವ ನೀರು. ವಿಷಯವೋ, ವೈರಾಗ್ಯ; ವೈರಾಗ್ಯದಲ್ಲಿ ವೈರಾಗ್ಯ ಹುಟ್ಟಿದಾಗ ಶೃಂಗಾರ—ಎಂತಹ ಶೃಂಗಾರ! ಭಕ್ತಿ, ಜ್ಞಾನ, ಧರ್ಮ, ನೀತಿ, ಮಾನವ ಪ್ರಪಂಚ, ಪ್ರಕೃತಿ—ಇವೆಲ್ಲ ಉತ್ತಮ ಕವಿತಾ ವಿಷಯಗಳೇ ಅಹುದು. ಆದರೆ—ಹೇಳುವ ರೀತಿ? ರಸಪುಷ್ಟಿ? ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆ

ಗಳಲ್ಲಿರುವ ಮಹಾ ಮಹಾ ಕವಿಗಳ ಪ್ರತಿಭೆಯೂ, ಕಲ್ಪನಾ ಶಕ್ತಿಯೂ, ಉದಾತ್ತ ಭಾವಗಳೂ, ರಸ ಪ್ರವಾಹವೂ, ಅದ್ಭುತ ಕವಿತಾ ದೃಷ್ಟಿಯೂ, ಮನುಷ್ಯ ಜಾತಿಯ ನಾನಾವಿಧವಾದ ಅನುಭವಗಳೂ, ಸಂಕಟಗಳೂ, ಮಹತ್ತ್ವಯತ್ನಗಳೂ, ನಗೆಯೂ, ಕಣ್ಣೀರೂ, ಸೋಲೂ, ಗೆಲವೂ, ಹೀಗೇ ಸರಿಯೆಂದು ನಿರ್ಣಯಕ್ಕೆ ಸಿಕ್ಕದ ಜೀವದ ರಹಸ್ಯವೂ, ಆಶ್ಚರ್ಯವೂ, ವೈವಿಧ್ಯವೂ, ಸೌಂದರ್ಯವೂ, ಭಯವೂ, ಶಾಂತಿಯೂ, ಮಂಗಳವೂ, ಅಮಂಗಳವೂ, ಆ ಅಮಂಗಳದಿಂದಲೇ ಮಂಗಳ ವನ್ನು ಹಿಂಡುವ ಆತ್ಮಶಕ್ತಿಯೂ, ಉತ್ತಮ ಸಾಹಿತ್ಯಗಳ ಸಮಕ್ಕೆ ತೂಗಬಲ್ಲುವು, ನಮ್ಮ ಪೂರ್ವದ ಸಾಹಿತ್ಯದಲ್ಲಿ ಎಷ್ಟು ಮಟ್ಟಿಗೆ ದೊರೆಯಬಹುದು? ಶುದ್ಧ ಕಲಾ ದೃಷ್ಟಿಯಿಂದ ಸಾಹಿತ್ಯ, ಕಾವ್ಯ ಎನ್ನಿಸಿಕೊಳ್ಳಬಹುದಾದ ಬರವಣಿಗೆ ನಮ್ಮ ಪೂರ್ವದ ಸಾಹಿತ್ಯದಲ್ಲಿ ಹೇರಳವಾಗಿದೆ ಎಂದು ಎಷ್ಟು ಮಟ್ಟಿಗೆ ಧೈರ್ಯವಾಗಿ ಹೇಳಬಹುದು?

೫. ಕರ್ಣಾಟಕ ಭಕ್ತರೆ, ಕ್ಷಮೆಯಿಂದ ಲಾಲಿಸಬೇಕು. ಈ ನ್ಯೂನತೆ ಗಳನ್ನು ಸಾಮಾನ್ಯವಾಗಿ ಹೇಳಿದೆನೇ ಹೊರತು, ನಮ್ಮ ಸಾಹಿತ್ಯದಲ್ಲಿಯೂ ಇರುವ ಉದ್ದಾಮ ಕವಿಗಳನ್ನೂ ಸೇರಿಸಿಕೊಂಡು ಹೇಳಲಿಲ್ಲ. ಒಂದೇ ಸಾಹಿತ್ಯದಲ್ಲಿ ಸಂಕುಚಿತ ದೃಷ್ಟಿಗಳಾಗದೆ, ಹಲವು ಸಾಹಿತ್ಯಗಳ ಉದ್ದಾಮ ಕವಿಗಳನ್ನೆಲ್ಲ ನೋಡಿ, ಅನುಭವಿಸಿ, ಸಂಸ್ಕಾರವನ್ನು ಪಡೆಯಬೇಕು ಎಂಬುದಕ್ಕಾಗಿ ಹೇಳಿದೆ. ನಮ್ಮದು, ಆದುದರಿಂದ ಹೆಮ್ಮೆಯದು ಎಂಬ ದುರಭಿಮಾನವನ್ನು ಬಿಡೋಣ. ತಾರತಮ್ಯ ವನ್ನು ಬಲ್ಲ ವಿಮರ್ಶೆಯನ್ನು ಅಭ್ಯಾಸಮಾಡೋಣ. ನೆರೆಮನೆಯ ಮಕ್ಕಳು ಮನೆಯ ಮಕ್ಕಳಿಗಿಂತ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ, ಅವರ ಚೆಲುವನ್ನು ಒಪ್ಪಿಕೊಳ್ಳೋಣ. ಆಗ್ಗೆ ನಮಗೆ ವಿನೀತರಲ್ಲಿ ಮರ್ಯಾದೆ ಹುಟ್ಟುವುದು. ನಿಜವಾದ ಸೌಂದರ್ಯದ ಸರಿಯಾದ ಪರಿಜ್ಞಾನವುಂಟಾಗುವುದು. ಮದದಿಂದ ಕಣ್ಣುಮುಚ್ಚಿಹೋಗದೆ, ಎಲ್ಲೆಲ್ಲಿ ದಿವ್ಯ ಜ್ಯೋತಿ ಪ್ರಕಾಶಿಸುವುದೋ ಅಲ್ಲೆಲ್ಲ ಶಿಷ್ಯರಾಗಿದ್ದರೆ ಕೊನೆಗೆ ನಮಗೂ ಗುರುತ್ವ ಲಭಿಸುವುದು. ಕೇವಲ ಮತ ಬೋಧನೆಗಾಗಿ, ಅಥವಾ ಪುರಾಣೇತಿಹಾಸ ಮಾಹಾತ್ಮ್ಯ ಪ್ರಸಾರಣೆಗಾಗಿ, ಅಥವಾ ಸುಖಪುರುಷ ರಂಜನೆಗಾಗಿ, ಅಥವಾ ಪಾಂಡಿತ್ಯ ಪ್ರದರ್ಶನಕ್ಕಾಗಿ, ಗತಿಸಿ ಹೋದ ಲೋಕದ ನೂಲೆಳೆಗಳನ್ನು ತೀರ ಹಳೆಯದಾದ ಮಗ್ಗಗಳಲ್ಲಿ ನೆಯ್ದು ನೆಯ್ದು ನೆಯ್ದು ರಾಶಿಹಾಕಿರುವ ಗ್ರಂಥಗಳು ಎಷ್ಟಿದ್ದರೇನು? ಎಷ್ಟು ಇನ್ನೂ ಅಚ್ಚಾಗದಿದ್ದರೇನು? ಎಷ್ಟೋ ಉತ್ತಮವಾದ ವ್ಯವಸಾಯಗಳಿಗೆ ವಿನಿಯೋಗಿಸ ಬೇಕಾಗಿಬಂದಿರುವ ಈ ನೂತನ ಕಾಲದಲ್ಲಿ ನಮ್ಮ ಹ್ರಸ್ವ ಜೀವಮಾನವನ್ನು ವಾತ್ಸಲ್ಯದಿಂದ ಪೂರ್ವ ಗ್ರಂಥಗಳಿಗೆ ಅರ್ಪಿಸಿ ಕೃಷಿಮಾಡಲು ಅವಕಾಶವುಂಟೆ? ಹಾಗೆ ಕನ್ನಡದ ಗ್ರಂಥ ರಾಶಿಯನ್ನೆಲ್ಲ ಪರೀಕ್ಷಿಸಿ ನೋಡುವುದಕ್ಕೆ ಪ್ರತಿಯೊಬ್ಬ ರಿಗೂ ಅವಕಾಶವಾಗದಿದ್ದರೂ ಪಂಪ, ಪೊನ್ನ, ರನ್ನ, ನಾಗವರ್ಮ, ನಾಗಚಂದ್ರ, ನೇಮಿಚಂದ್ರ, ಜನ್ನ, ಮಧುರ, ರತ್ನಾಕರ, ಬಸವೇಶ್ವರ, ವಚನಕಾರರು, ಹರೀಶ್ವರ, ರಾಘವಾಂಕ, ಸರ್ವಜ್ಞಮೂರ್ತಿ, ಚಾಮರಸ, ವಿರೂಪಾಕ್ಷ,

ಷಡಕ್ಷರಿ, ರುದ್ರಭಟ್ಟ, ಕುಮಾರವ್ಯಾಸ, ಕುಮಾರವಾಲ್ಮೀಕಿ, ನಿತ್ಯಾತ್ಮಶುಕ, ಲಕ್ಷ್ಮೀಶ, ದಾಸರು, ತಿರುಮಲಾರ್ಯ, ಹೊನ್ನಮ್ಮ—

ಹೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ?
ಹೆಣ್ಣಲ್ಲವೆ ಪೊರೆದವಳು?
ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು?

ಎಂದು ಮೊರೆದಲಿಸಿದ ಹೊನ್ನಮ್ಮ—ಇಂತಹ ಪ್ರಸಿದ್ಧ ಕವಿಗಳ ಕಾವ್ಯಗಳನ್ನಾದರೂ ಓದಿ, ವಿಮರ್ಶಿಸಿ, ಪರಸ್ಪರ ಯೋಗ್ಯತಾಪಕ್ಷವನ್ನು ನಿರ್ಧರಿಸಿ, ಅತ್ಯುತ್ತಮವಾದ ಕಾವ್ಯಗಳನ್ನೂ, ಕಾವ್ಯ ಭಾಗಗಳನ್ನೂ ಸಂಗ್ರಹಿಸಿ, ಸರ್ವತ್ರ ಪ್ರಚಾರಕ್ಕೆ ತರಬೇಕಾದುದು ನಮ್ಮ ಕರ್ತವ್ಯವಾಗಿದೆ. ಹೀಗೆ ಶೋಧಿಸಿದ ಪೂರ್ವ ಸಾಹಿತ್ಯದ ತಿರುಳು ಜನಸಾಮಾನ್ಯಕ್ಕೆ ಉತ್ತೇಜನಕೊಡುವುದೇ ಅಲ್ಲದೆ ಹೊಸ ಸಾಹಿತ್ಯವನ್ನು ರಚಿಸತಕ್ಕವರಿಗೂ ಮಾರ್ಗದರ್ಶಿಯಾಗಿ ಫಲಪ್ರದಾಯಕವಾಗುತ್ತದೆ.

೭. ಅಂತಹ ಉತ್ತಮ ಕಾವ್ಯಗಳೂ, ಕಾವ್ಯ ಭಾಗಗಳೂ ಕನ್ನಡದಲ್ಲಿ ಬೇಕಾದಷ್ಟು ಇಲ್ಲದೆ ಇಲ್ಲ. ಈ ವಿಷಯದಲ್ಲಿ ನಾವು ಯಾರಿಗೂ ತಲೆ ತಗ್ಗಿಸಬೇಕಾಗಿಲ್ಲ; ಅಹೋ ರೂಪಂ! ಅಹೋ ಧ್ವನಿಃ! ಎಂದು ಬೆರಗಾಗುವ ಅಸಂಸ್ಕೃತರ ಜಸ್ಟುಜಂಭಕ್ಕೆ ಮಾತ್ರ ನಾವು ತಲೆತಗ್ಗಿಸಬೇಕಾಗಿದೆ ಅಷ್ಟೆ! ಈಗ ಸುಮಾರು ೩೦ ವರ್ಷಗಳಿಂದ ನಾನು ಕನ್ನಡವನ್ನು ಪ್ರೀತಿಯಿಂದ ಓದುತ್ತಿದ್ದೇನೆ; ನಗುತ ಹೇಳಿದವರು ಕೆಡಹೇಳಿದರು ಎಂಬ ಪ್ರೀತಿಯಿಂದಲ್ಲ; ಬಯ್ದು ಹೇಳಿದವರು ಬದುಕ ಹೇಳಿದರು ಎಂಬ ಪ್ರೀತಿಯಿಂದ. ಉದಾರವಾದ ಸನಾತನ ಧರ್ಮ, ಉಜ್ಜ್ವಲವಾದ ಭಕ್ತಿ, ಸಂಸಾರದ ದುಸ್ಸಹವಾದ ದುಃಖ, ಮರಣ ಪ್ರಲಾಪ, ನಿಸ್ಸಾರವಸ್ತುವಿನಲ್ಲಿ ವೈರಾಗ್ಯ, ವಿಘ್ನಕ್ಕೆ ಜಗ್ಗದ ತಪಸ್ಸು, ಶೌರ್ಯ, ಕಾರುಣ್ಯ, ರಾಗಾವೇಶ, ಕ್ಷಮೆ, ಪ್ರೇಮ, ಮಕ್ಕಳ ಬಯಕೆ, ಪ್ರಕೃತಿಯ ಚೆಲುವ ನೋಟಗಳಲ್ಲಿ ಆನಂದ—ಇವೇ ಮುಂತಾದ ನಮ್ಮ ಜನಕ್ಕೆ ಸ್ವಾಭಾವಿಕವಾದ, ಸರ್ವಸಾಧಾರಣವಾದ ಅನೇಕ ಲಕ್ಷಣಗಳನ್ನು ಬಹು ಸುಖವಾಗಿ ಕಲಾಪ್ರಪಂಚದಲ್ಲಿ ಪ್ರತಿಬಿಂಬಿಸಿರುವುದು ನಮ್ಮ ಕನ್ನಡದಲ್ಲಿ ಬೇಕಾದಷ್ಟಿದೆ. ಏಕೆಂದರೆ, ನಮ್ಮ ಕವಿಗಳಲ್ಲಿ ಪ್ರಮುಖರಾದವರು ಎಷ್ಟೇ ಪಾಂಡಿತ್ಯದ ಹುಚ್ಚುಹೊಳೆಯ ಸೆಳೆತಕ್ಕೆ ಸಿಕ್ಕಿದ್ದರೂ, ಎಷ್ಟೇ ಶಾಸ್ತ್ರದ ನಿರರ್ಥಕವಾದ ನಿರ್ಬಂಧಗಳಿಗೆ ಕಟ್ಟುಬಿದ್ದಿದ್ದರೂ, ಎಷ್ಟೇ ಆ ಕಾಲದ ಅಭಿರುಚಿಯ ಸಂಕೇತಗಳಿಗೆ ಅಂಧ ಪರಂಪರೆಯಾಗಿ ಮನ್ನಣೆಯನ್ನು ತೆತ್ತಿದ್ದರೂ, ಎಷ್ಟೇ ತಮ್ಮ ತಮ್ಮ ಮತ ಸಿದ್ಧಾಂತಗಳನ್ನು ರಾದ್ಧಾಂತಮಾಡಿ, ವಿಸ್ತರಿಸಿ, ಲಂಬಿಸಿ, ಮರಳುಗಾಡಿನಲ್ಲಿ ಬಾಯಾರಿಕೆಯನ್ನಿಂಗಿಸುವ ಹೊಳೆ ಮುಚ್ಚಿಹೋಯಿತೆಂಬಂತೆ, ತೀರ್ಥಂಕರರ, ಪುರಾತನ ಭಕ್ತರ, ಅವತಾರ ಪುರುಷರ, ವೀರರ, ನಾಯಕರ, ದಿವ್ಯ ವಿಗ್ರಹಗಳನ್ನು ಸರ್ವಕಾಲದಲ್ಲಿಯೂ ಸರ್ವರೂ ಮೆಚ್ಚುವಂತೆ ಕಡೆದಿರಿಸಲಾರದೆ ಹೋದರೂ, ಈ

ಮತಾಭಿಮಾನಿಗಳಲ್ಲಿ, ಈ ಶಾಸ್ತ್ರ ಪಕ್ಷಪಾತಿಗಳಲ್ಲಿ, ಈ ಪಂಡಿತರಲ್ಲಿ, ಹೊಟ್ಟೆಯೊಳಗೆ ಒಬ್ಬ ಹುಟ್ಟು ಕವಿ ಅವಿತುಕೊಂಡಿದ್ದುದರಿಂದ, ಆ ಹುಟ್ಟು ಕವಿ ಸಹಜವಾದ, ಸ್ವತಂತ್ರವಾದ, ಸಂಪೂರ್ಣವಾದ, ವಿವಿಧ ಮಹಾನುಭವ ಚೋದಿತವಾದ ಶುದ್ಧ ಕಲಾಜ್ಯೋತಿಯು ಬಿಸಿಲಿನಲ್ಲಿ ಹೂವು, ಬೆಳದಿಂಗಳಿನಲ್ಲಿ ಹೂವಾಗದಿದ್ದರೂ, ಆ ಒಳಗಿದ್ದ ನಿಸರ್ಗ ಕವಿಯ ಪ್ರಭಾವದಿಂದ, ಶುಷ್ಕವಾದ ಅರಣ್ಯರೋದನದ ನಡುವೆ, ಸಮಯ ಬಂದ ಕೂಡಲೆ, ಒಂದು ಕ್ಷಣದಲ್ಲಿ ಹೃದಯ ಹಿಗ್ಗಿ, ರಸವು ಉಕ್ಕಿ, ಮರುಭೂಮಿಯಲ್ಲಿ ತಣ್ಣೀರು ಕೊಳವು ಊರಿಬಂದಂತೆ, ಸುಗ್ಗಿಯ ಹೊಸ ಮಾವಿನ ಚಿಗುರನ್ನು ಸವಿದ ಕೋಗಿಲೆಯ ಕಂಠವು ಇಂಪಾದಂತೆ, ಈ ಪಂಜರದ ಹಕ್ಕಿಗಳು, ಈ ಬಲೆಯ ಜಿಂಕೆಗಳು, ನೆಗೆದು, ನುಡಿದು, ಹಾರಿ, ಹಾಡಿ, ಸರಸ್ವತೀ ಪ್ರಸಾದದ ಪೂರ್ಣ ರಮಣೀಯತೆಯನ್ನು ಸಹೃದಯರಿಗೆ ಅನುಭವವಾಡಿಸಿ ಬಿಟ್ಟಿರುವರು.

೨. ಮಹಾಶಯರೆ, ನನ್ನ ಭಾಷಣದಿಂದ ಉಂಟಾಗಿರಬಹುದಾದ ತಮ್ಮಗಳ ಮನಸ್ಸಿನ ಆಯಾಸವನ್ನು ಪರಿಹಾರವಾಡುವುದಕ್ಕಾಗಿ, ಅಂತಹ ಕವಿ ಶ್ರೇಷ್ಠರ ಉತ್ತಮ ಕಾವ್ಯ ಭಾಗಗಳಲ್ಲಿ ಒಂದೆರಡನ್ನು ಓದಿ ಹೇಳಲು ಅಪ್ಪಣೆಯನ್ನು ಬೇಡುತ್ತೇನೆ. ವಿಕ್ರಮಾರ್ಜುನ ವಿಜಯ, ಗದಾ ಯುದ್ಧ, ಯಶೋಧರ ಚರಿತ, ಮುಂತಾದ ಪ್ರೌಢ ಗ್ರಂಥಗಳ ಕಥಾ ರಚನೆಯ ಸ್ವಾರಸ್ಯವನ್ನಾಗಲಿ, ಪಂಪನ ಬಾಹುಬಲಿ, ಪಂಪ ರನ್ನರ ದುರ್ಯೋಧನ, ನಾಗಚಂದ್ರನ ರಾವಣ, ಕುಮಾರ ವ್ಯಾಸನ ಶ್ರೀಕೃಷ್ಣ, ಮುಂತಾದ ಪಾತ್ರಗಳ ಸೃಷ್ಟಿಯ ಗಾಂಭೀರ್ಯವನ್ನಾಗಲಿ ಇಲ್ಲಿ ಪ್ರದರ್ಶಿಸುವುದು ಸಾಧ್ಯವಲ್ಲ. ಕೆಲವು ಪದ್ಯಗಳನ್ನು ಮಾತ್ರ ಮುಂದಿಡಲು ಸ್ವಲ್ಪ ಕಾಲವನ್ನು ಕೇಳಿಕೊಳ್ಳುತ್ತೇನೆ.

ಕವಿತಾ ಗುಣಾರ್ಣವನಾದ ಪಂಪನು ಅರ್ಜುನನ ತೀರ್ಥಯಾತ್ರೆಯನ್ನು ಎಂದಿನಂತೆ ವರ್ಣಿಸಿಕೊಂಡು ಬರುತ್ತ, ಆತನು ಬನವಾಸಿ ದೇಶಕ್ಕೆ ಬಂದನೆಂದ ಕೂಡಲೆ, ತನ್ನ ಹೃದಯದಲ್ಲಿದ್ದ ಕನ್ನಡ ನಾಡಿನ ಪ್ರೇಮವನ್ನೆಲ್ಲ ಸುರಿದುಬಿಟ್ಟಿರುವನು. ಇದನ್ನು ನುಡಿಯುವವನು, ಹಾಡುವವನು ಅರ್ಜುನನಲ್ಲ, ಪಂಪ:—

ಚಂ ॥ ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಪುಗಂ ।
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಳ್ಪೊಡಾವ ಬೆ
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್ ॥

ಉ ॥ ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ ।
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್ ॥

ಉ ॥ ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ।
ಪಂ ಕೆಳೆಗೊಂಡೊಡಂ ಮಧು ಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ॥

ಮ ॥ ಅಮರ್ದಂ ಮುಕ್ಕುಳಿಪಂತುಟಪ್ಪ ಸುಖಿಯೋದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ಚಾತುಂ ಕುಳಿರ್ ಕೋಲ್ಪಿ ಜೆಂ।
ಪಮುಮೇವೇಳ್ಪುದನುಳ್ಳ ಮೆಯ್ಯುಕಮುಮಿಂತಿನ್ನಂ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕ ನಾಡ ಮಱೆಯಲ್ಕಿನ್ನೇಂ ಮನಂ ಬರ್ಕುಮೇ ॥

ಇದು ಕನ್ನಡ ನಾಡಿನ ಜನ್ಮದ ಸುಖವಾಯಿತು; ಮಾನವ ಸಂಸಾರದ ದುಃಖವನ್ನು ಕೇಳಿ; ರನ್ನನು ಹೇಳುತ್ತಾನೆ:—

ಕಂ ॥ ನೆನೆಯದೆ ಕಾಣದೆ ಕೇಳದೆ
ತನುವಿನ ಪೊಲ್ಲಮೆಯನಱಿದುಮಱಿಯದೆ ತೊಱೆಯಲ್;
ಮನಮುಳ್ಳೊಡೆ ಜೀವಕ್ಕೀ
ತನುವಿರೆ ವೈರಾಗ್ಯಕಾರಣಂ ಪೆಱತುಂಟೇ ॥

ತನಗಲ್ಲದೊಡಲ್ಗೊಡಮೆಗೆ
ಮನಮಿಟ್ಟಪವರ್ಗ ಮಾರ್ಗಮಂ ಪೊರ್ದದೆ ತ।
ನ್ನನೆ ತಾನೆ ನಂಬಿಸುವೊಡಾ
ತ್ಮನಂತು ಪೇೞಿಮಾತ್ಮ ವಂಚಕರ್ ಪೆಱರೊಳರೇ ॥

ಮತಿಗೆಟ್ಟು ಜೀವಧರ್ಮಾ
ಮೃತಮಂ ಸೇವಿಸದಧರ್ಮಮಂ ಸೇವಿಸಿ ದು।
ರ್ಗತಿಗಿೞಿದೀ ಜವನೆಂಬೞಿ
ಸಿ ತಿಂಬ ದೈವಕ್ಕೆ ಪೋಗಿ ಪಾೞಿಂ ಬಿಡುವಯ್ ॥

ಎನಿತೆನಿತು ಕಱಿದ ಭವಮಂ
ನೆನೆದಪೆ ಎನಿತೆನಿತು ಭವದ ಬಂಧುಗಳಂ ನೀಂ।
ನೆನೆದಪೆ ಎನಿತೆನಿತೊಡಲಂ
ನೆನೆದಪೆ 'ಎಲೆ ಜೀವ ನೀನೆ ಪೇೞ್ ಪವಣೊಳವೆ ॥

ಎನಿತಂ ಕುಕ್ಕುೞಿಗುದಿದಪೆ
ಎನಿತಂ ಕಕ್ಕುೞಿಗೞಿಲ್ದಪಯ್ ಜೀವನೆ ನೀ।
ನೆನಿತಂ ಮಲ್ಮಲ ಮಱುಗುವೆ
ಎನಿತಂ ಸಂಸಾರದೊಳಗೆ ತಿೞಿನೆ ತಿರಿವಯ್ ॥

ಕಡೆಯಿಲ್ಲದ ಸಂಸಾರದ
ಕಡೆಗಾಹಲ್ ಬಗೆವೆಯಪ್ಪೊಡೆನ್ನುಕ್ತಿಗೊಡಂ।

ಬಡು ಜೀವ ನಿನ್ನ ಕಾಲಂ
ಪಿಡಿವೆಂ ಧರ್ಮಮನೆ ಮಗುೞ್ದಿತೆ ಬಳ್ವಿಡಿವಿಡಿಯಾ ||

ಜನನ ಮೃತಿ ದೇವ ನಾರಕ
ಮನುಷ್ಯ ತಿರ್ಯಗ್ವಿಕಲ್ಪ ಗತಿಗಳೊಳಿನಸುಂ |
ನಿನಗೆ ಸುಖವಿಲ್ಲ ನೆಟ್ಟನೆ
ಮನದೊಳ್ ಭಾವಿಪೊಡಸಾರವಿಾ ಸಂಸಾರಂ ||

ಈ ನಾರಕ ತಿರ್ಯಗ್ಗತಿ
ಗೀ ನರ ಸುರ ಗತಿಗೆ ಪೇಸಿದೆಂ ದರ್ಶನದಿಂ |
ಜ್ಞಾನದಿನೊಪ್ಪುವ ಪರಮ
ಸ್ಥಾನಮನಾಂ ಪಡೆವೆನಕ್ಕೆ ಪಂಚಮ ಗತಿಯಂ ||

ದಿವಸ ದಿವಸಂಗಳಿಂ ಕುಂ
ದುವುವಲ್ಲದೆ ಬಳೆಯುವಾಯುವುಂ ವಪುವುಂ ಪೆ |
ರ್ಚುವುವಲ್ಲವು ವಿಷಯ ಸುಖ
ಕ್ಕವಚತ್ತಂ ಪಡೆದುಕೊಳ್ವೆನಕ್ಷಯ ಸುಖಮಂ ||

ಜೀವನದ ಉತ್ಸಾಹವಾಯಿತು ; ಜೀವನದ ಜುಗುಪ್ಸೆಯಾಯಿತು. ವೃತ್ತವಾಯಿತು, ಕಂದವಾಯಿತು. ನಮ್ಮ ಕನ್ನಡದ ಮುದ್ದಾದ ಛಂದಸ್ಸಿನಲ್ಲಿ ಮಗನನ್ನು ಕಳೆದುಕೊಂಡ ಒಬ್ಬ ತಾಯಿಯ ಗೋಳನ್ನು ಕೇಳಿ. ರಾಘವಾಂಕನ ಹರಿಶ್ಚಂದ್ರ ಕಾವ್ಯದಿಂದ ಓದುತ್ತೇನೆ—ಕೆಲವು ಪಙ್ಕ್ತಿಗಳನ್ನು ಅಲ್ಲಲ್ಲಿ ಬಿಟ್ಟು ಬಿಟ್ಟು—

ಏವೇನೆವೆನೆಲೆ ಮಗನೇ ಮಗನೇ
ಸಾವೇಕಾಯಿತ್ತಲೆ ಚೆನ್ನಿಗನೇ |
ಇಱಿದೆಯೆಲಾ ಎನ್ನನು ಸುಕುಮಾರಾ
ಕೊಱಿತೆದೆಯೆಲಾ ಕೊರಲನು ಜಿತಮಾರಾ |
ಎತ್ತಣ ಬಱಿಸಿಡಿಲೆರಗಿತೊ ನಿನ್ನ
ಹುತ್ತದ ಹತ್ತಿರಲೊಱಿಗಿದೆ ಚೆನ್ನ |
ಹಾವು ಹಿಡಿಯೆ ಹಾ ಎಂದೆಯೊ ಕಂದಾ
ಸಾವಾಗವ್ವಾ ಎಂದೆಯೊ ಕಂದಾ |
ನೊಂದೆನು ಬೆಂದೆನು ಕುಂದಿದೆ ಮಗನೇ
ಕುಂದಿದೆ ಕುಗ್ಗಿದೆ ಮಗ್ಗಿದೆ ಮಗನೇ |
ರನ್ನದ ಕನ್ನಡಿಯೊಡೆದುದೊ ದೇವಾ
ಹೊನ್ನ ಕಳಸ ಕೆಡೆದುದೊ ಎಲೆ ದೇವಾ |
ಎನ್ನ ಕಡವರಂ ಸೂಱಿತೆಹೋಯ್ತೇ
ಚಿನ್ನದ ಪ್ರತಿಮೆಯುಸಿರು ಹಾರಿಹೋಯ್ತೇ |

ಆರಿಗೆನ್ನನೊಪ್ಪಯಿಸಿದೆ ಕಂದಾ
ಆರಯ್ಯದೆ ಹೋಹರೆ ಗುಣವೃಂದಾ।
ಹೆತ್ತ ಹೊಟ್ಟೆಯುರಿಯುತ್ತಿದೆ ಮಗನೇ
ಎತ್ತಿದ ತೋಳನು ಕೆತ್ತಿದೆ ಮಗನೇ।
ಹಾಡುವ ಬಾಯೊಳು ಮಣ್ಣನೆ ಹೊಯ್ದೆ
ನೋಡುವ ಕಣ್ಣೊಳು ಸುಣ್ಣವ ಹೊಯ್ದೆ।
ಪಾಪಿಯೆನ್ನ ನೀನೊಯ್ಯನೆ ನೋಡಾ
ಕೋಪವನುಳಿದೊಯ್ಯನೆ ಮಾತಾಡಾ।
ನುಡಿದರೆ ಪಾಪವೆ ಹೆತ್ತವರೊಡನೆ
ಕಡು ಮುನಿಸೇಕೆಲೆ ಮಗ ನನ್ನೊಡನೆ।
ಬಾರೈ ಬಹಳ ಸಿರಿಯ ಸಿಂಗಾರಾ
ಬಾರೈ ಸುಜನ ಜನಕ್ಕಾಧಾರಾ।
ಮುದ್ದುತನದ ಮೋಹದ ಮುಂಗುಡಿಯೇ
ಎದ್ದಪ್ಪೆನ್ನನು ಎಳಲತೆಗುಡಿಯೇ।
ಏಳೆನ್ನಾನಂದಾಮೃತ ಶರಧಿ
ಏಳಖಿಳ ಗುಣಾರ್ಣವ ಕಳಾನಿಧಿ।
ಧರೆಯನಾಳ್ವ ಸಿರಿಯಂ ಕಳೆದಿಂದು
ಉರಗನ ವಿಷದಗ್ನಿಯೊಳುರಿತೆ ಬೆಂದು।
ಅಡವಿಯೊಳೀ ಪರಿ ಕೆಡೆವರೆ ವೀರಾ
ಪೊಡವಿಯೊಡೆಯನಗ್ಗದ ಸುಕುಮಾರಾ।

ದಯವಿಟ್ಟು ಕೇಳುವುದಾದರೆ, ಇನ್ನೊಂದು ಗೀತವನ್ನು ಓದಿ—ಹಾಡುವುದಕ್ಕೆ ನನಗೆ ಬಾರದು—ನನ್ನ ಮನಸ್ಸನ್ನು ತೃಪ್ತಿಪಡಿಸಿಕೊಳ್ಳುತ್ತೇನೆ. ಮೈಸೂರು ಶ್ರೀಮನ್ಮಹಾರಾಜರಾಗಿದ್ದ ಚಿಕ್ಕದೇವರಾಜ ಒಡೆಯರು ಭಗವಂತನಲ್ಲಿ ಭಕ್ತರ ತಪ್ಪುಗಳನ್ನು ಕುರಿತು ಹೀಗೆ ಬಿನ್ನಹಮಾಡಿಕೊಳ್ಳುತ್ತಾರೆ—ಇದೂ ಕನ್ನಡ ಮಟ್ಟು:—

ತಪ್ಪದಾರದು ತಿಳಿದು ನೋಡೆ,
ತಪ್ಪದಾರದು।
ತಪ್ಪುನೆಪ್ಪುಗಳ ವಿಕಲ್ಪಿಸದೆಲ್ಲವ
ನೊಪ್ಪುಗೆಯ್ದೆನ್ನನೊಲಿದು ಪಾಲಿಸು ಕೃಷ್ಣ ॥

ಅರಯೆ ಮುಗ್ಗಿರಿವಂಧನ ತಪ್ಪೋ
ದಾರಿದೋರಿವ ದಂಡಧಾರನ ತಪ್ಪೋ।
ಮೇರೆಯರಿಯದೆನ್ನ ಮೇಲಣ ತಪ್ಪೋ
ನಾರಾಯಣ ನಿನ್ನ ನಟನೆಯ ತಪ್ಪೋ ॥

ತೊಂಡುಮೇವ ಪಸುವಿಂಡಿನ ತಪ್ಪೋ
ಕಂಡು ಕಾಯದ ತುಱುಗಾವನ ತಪ್ಪೋ।
ಗಂಡುವಿನಾರುವೆನ್ನ ಗೆಯ್ಮೆಯ ತಪ್ಪೋ
ಕೊಂಡಾಳುವ ನಿನ್ನ ಕೂರ್ಮೆಯ ತಪ್ಪೋ ॥

ಬಾವಿಯ ಬಳಸುವ ಪಸುಳೆಯ ತಪ್ಪೋ
ತಾ ವಂದು ತಡೆಯದ ತಾಯಿಯ ತಪ್ಪೋ।
ಈ ವಿಷಯಕೆ ಮುಗ್ಗುವೆನ್ನದು ತಪ್ಪೋ
ಆವೇಳೆಗಾವುಗೆಯ್ಯದ ನಿನ್ನ ತಪ್ಪೋ ॥

ಗುಱಿಯ ತಾಕದ ಮೊನೆಗೋಲಿನ ತಪ್ಪೋ
ಕುಱಿತೆಸೆಯದ ಬೀರಗುವರನ ತಪ್ಪೋ।
ಬಱಿಗೆಯ್ಮೆಗೆಯ್ವೆನ್ನ ಭಾವದ ತಪ್ಪೋ
ಅಱಿವುದೋಱಿಸದ ನಿನ್ನಾಟದ ತಪ್ಪೋ ॥

ಓಜೆಗುಂದುವ ವೀಣೆಯುಲುಹಿನ ತಪ್ಪೋ
ಬಾಜಿಸುವನ ಕಯ್ಯ ಪವಣಿನ ತಪ್ಪೋ।
ರಾಜ ಶ್ರೀ ಚಿಕದೇವರಾಯನಿಗೊಲಿದ ಶ್ರೀ
ರಾಜಗೋಪಾಲ ನಿರಾಕರಿಸದೆ ಪೇಳು ॥

ಮಹಾಶಯರೆ, ಈ ಕವನಗಳಲ್ಲಿ ಕಾಣಬರುವ ಭಾಷೆಯ ಲಾಲಿತ್ಯ, ವಿಷಯಕ್ಕನುಗುಣವಾದ ಶೈಲಿಯ ಸೌಂದರ್ಯ, ಭಾವ ರಸಗಳ ವೇಗ, ಲೋಕಾನುಭವದ ಕವಿತೆಯ ಸತ್ವ ಇವುಗಳನ್ನು ನೋಡಿದರೆ ಇನ್ನು ಕಾವ್ಯ ಕಲೆಯಲ್ಲಿ ಕವಿಯಾದವನು ಮಾಡಬಹುದಾದ ಕೆಲಸವಾದರೂ ಏನು? ಎನ್ನಿಸುತ್ತದೆ—ದೋಷೈಕದೃಷ್ಟಿಯಾದ ನನಗೇ ಎನ್ನಿಸುತ್ತದೆ. ಕನ್ನಡ ಕವಿತ್ವವೆಲ್ಲ ಹೀಗೆಯೇ ಇರಬಾರದೆ! ದೋಷಗಳ ಮೇಲೆ ಎಡವಿ ಎಡವಿ ಬೀಳುವ ನನಗೆ ಯಾವ ಬ್ರಹ್ಮರಾಕ್ಷಸನು "ಸ್ವಲ್ಪಕ್ಕೆ ತೃಪ್ತನಾಗಬೇಡ"—"ಅಸಂತೋಷಃ ಶ್ರಿಯೋ ಮೂಲಂ" ಎಂದು ಕಿವಿಯಲ್ಲಿ ಊದಿ ಹೋದನೋ ಕಾಣೆನು.

೮. ಅದು ಹೇಗಾದರೂ ಇರಲಿ. ವಿಮರ್ಶೆಯ ಮೂಲಕವಾಗಿ, ನಮ್ಮ ಪೂರ್ವ ಸಾಹಿತ್ಯ ರಾಶಿಯಿಂದ ಉತ್ತಮ ಕಾವ್ಯಗಳನ್ನೂ ಕಾವ್ಯ ಭಾಗಗಳನ್ನೂ ಶೋಧಿಸಿ ತೆಗೆದು ಕಾವ್ಯಕೋಶಗಳನ್ನು ಸಿದ್ಧಪಡಿಸುವುದೇ ನಮ್ಮ ಪ್ರಥಮ ಕರ್ತವ್ಯವೆಂದು ನಾನು ತಿಳಿದಿರುತ್ತೇನೆ. ಈ ಉತ್ತಮ ಕಾವ್ಯಕೋಶಗಳಿಂದ ವಿದ್ಯಾರ್ಥಿಗಳ ಮತ್ತು ಲೇಖಕರ ಮನಸ್ಸನ್ನೂ ಕನ್ನಡದ ಪ್ರೇಮವನ್ನೂ ವಿಶಾಲಪಡಿಸಿ, ಮುಂದೆ ಈ ಕಾಲಕ್ಕೆ ತಕ್ಕ ನೂತನ ಸಾಹಿತ್ಯವನ್ನು ನಿರ್ಮಾಣ ಮಾಡತಕ್ಕುದು ನಮ್ಮ ಎರಡನೆಯ ಕರ್ತವ್ಯ. ಏಕೆಂದರೆ, ಹಿಂದಿನ ಸಾಹಿತ್ಯವು ಎಷ್ಟೇ ಉತ್ತಮ ಭಾಗಗಳನ್ನು ಒಳಕೊಂಡಿದ್ದರೂ, ನಮ್ಮ ರಕ್ತದಲ್ಲಿ ಕೂಡಿಬಂದು

ಎಷ್ಟೇ ನಮ್ಮ ಅಭಿಪ್ರಾಯಗಳಿಗೆ ಒಗ್ಗಿ ಬಂದಿದ್ದರೂ ಅದು ಪುರಾತನ ಪ್ರಪಂಚಕ್ಕೆ ಸೇರಿದುದು. ಅಲ್ಲಿ ಹುಟ್ಟಿದುದು, ಬೆಳೆದುದು. ನೂತನ ಪ್ರಪಂಚದಲ್ಲಿ ಹುಟ್ಟಿ ಬೆಳೆಯುತ್ತಿರುವ ನಮಗೆ ಬೇಕಾದ ರುಚಿಗಳನ್ನೆಲ್ಲ ಸಂಸ್ಕಾರಗಳನ್ನೆಲ್ಲ ಅದು ಕೊಡಲಾರದು. ಯಾವ ವೃಕ್ಷದಲ್ಲಿ ಯಾವ ಫಲವನ್ನು ಹುಡುಕುವುದು? ಈ ನೂತನ ಪ್ರಪಂಚಕ್ಕೆ, ಈ ನೂತನ ಸಮಾಜದ ಅಭಿಲಾಷೆಗಳು, ರುಚಿಗಳು, ಜೀವನ ವ್ಯಾಪಾರಗಳು ಇವುಗಳಿಗೆ, ಅನುಕೂಲಿಸುವಂತಹ ಹೊಸ ಸಾಹಿತ್ಯವನ್ನು ನಿರ್ಮಾಣ ಮಾಡಿದಲ್ಲದೆ ಕನ್ನಡ ಭಾಷೆಯ ಸೇವೆಗಾಗಲಿ, ಕನ್ನಡ ದೇಶದ ಏಳಿಗೆಗಾಗಲಿ ನಾವು, ಈ ಪರಿಷತ್ತು, ಸಾಕಾದಷ್ಟು ಶ್ರದ್ಧೆಯನ್ನು ವಹಿಸಿ ಋಣವನ್ನು ತೀರಿಸಿದಂತಾಯಿತೆಂದು ನಾನು ಹೇಳಲಾರೆನು. ಹಾಗೆ ಮಾಡದಿದ್ದರೆ ಅರ್ಥಕ್ಕೆ ಹೆಚ್ಚಾಗಿಯೇ ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸದೆ ಅಸಡ್ಡೆಮಾಡಿದಂತಾಗುತ್ತದೆ.

೯. ಈ ಹೊಸ ಸಾಹಿತ್ಯವು, ಹಳೆಯ ಸಾಹಿತ್ಯದ ಸಾರವನ್ನೂ ಸಹಾಯವನ್ನೂ ಸ್ವೀಕಾರ ಮಾಡಿದರೂ ಮತ ಪ್ರಸಾರಣೆಗಾಗಲಿ, ಪೂರ್ವ ಕಥಾನುವಾದಕ್ಕಾಗಲಿ ಬರೆಯತಕ್ಕುದಲ್ಲ; ನೂತನ ಜ್ಞಾನ ಪ್ರಸಾರಣೆಗಾಗಿ, ಪೂರ್ಣ ಕಲಾನುಭವಕ್ಕಾಗಿ, ಉತ್ತಮ ಜೀವನ ಕಾರ್ಯಾರಂಭ ಪ್ರೇರಣೆಗಾಗಿ ಬರೆಯತಕ್ಕುದು. ಪ್ರಪಂಚದಲ್ಲಿ ತಿಳಿದಿರುವ, ನುಡಿದಿರುವ, ನಡೆದಿರುವ ಉತ್ತಮ ವಿಷಯಗಳೆಲ್ಲವನ್ನೂ ಸಿಂಹಾವಲೋಕನದಿಂದ ತಾನು ಸ್ವಾನುಭವಕ್ಕೆ ತಂದುಕೊಂಡು ಹಾಗೆ ತಿಳಿಯಲಾರದ ಇತರರಿಗೆ ತಿಳಿಸತಕ್ಕುದು. ಇದಕ್ಕೆ ಒಂದು ನಾಡಲ್ಲ, ಒಂದು ಬೀಡಲ್ಲ:—ಇದರ ಮೂಲ ಮಂತ್ರ—''ಉದಾರ ಚರಿತಾನಾಂ ತು ವಸುಧೈವ ಕುಟುಂಬಕಂ.'' ಈ ಹೊಸ ಮಾರ್ಗದ ಗ್ರಂಥಕರ್ತನು ಸ್ವತಂತ್ರನು; ಪದ್ಯಕ್ಕಿಂತಲೂ ಹೆಚ್ಚಾಗಿ ಗದ್ಯದಲ್ಲಿ ಕೆಲಸ ಮಾಡುವನು; ವಿಷಯಕ್ಕೆ ತಕ್ಕ ಶೈಲಿಯನ್ನು ಹೊಂದಿಸಿ ಸರ್ವರೂ ಅರ್ಥಮಾಡಿಕೊಳ್ಳುವಂತೆ ಬರೆಯುವನು. ಪ್ರಪಂಚದ ಎಲ್ಲಾ ಸಾಹಿತ್ಯಗಳಿಂದಲೂ ಮಾದರಿಗಳನ್ನೂ ವಿಷಯಗಳನ್ನೂ ಸ್ವೀಕರಿಸಿ ಯಾವ ಯಾವುದರಿಂದ ಕನ್ನಡಿಗರಿಗೆ ಉಪಯೋಗವುಂಟೆಂದು ತಿಳಿಯುವುದೋ ಅದೆಲ್ಲವನ್ನೂ ಕನ್ನಡಕ್ಕೆ ತಿರುಗಿಸುವನು. ಮತಗಳ ವಾದ ಪ್ರತಿವಾದಗಳನ್ನು ಬಿಟ್ಟು, ಸರ್ವ ಸಮಾನವಾದ, ಉದಾರವಾದ ಧರ್ಮ ಸಾರವನ್ನು ಹರಡುವನು. ಬರಿಯ ಶುಷ್ಕ ಕಲ್ಪನೆಗಳನ್ನು ಬಿಟ್ಟು, ವಾಸ್ತವಾಂಶಗಳನ್ನೂ, ಜೀವನ ಚರಿತ್ರೆಗಳನ್ನೂ, ಜನಾಂಗಗಳ ಚರಿತ್ರೆಗಳನ್ನೂ, ಮನುಷ್ಯ ಜಾತಿಯ ಸಾಙ್ಗವಾದ ಅಭ್ಯುದಯವನ್ನೂ ವಿವರಿಸುವನು. ಚಂಪೂ ಮಹಾಕಾವ್ಯಗಳನ್ನು ಹಿಂದಕ್ಕೆ ತಳ್ಳಿ, ಕಾದಂಬರಿಗಳಲ್ಲಿ ಮತ್ತು ಸಣ್ಣ ಕಥೆಗಳಲ್ಲಿ, ತನ್ನ ಕಾಲದ, ಅಥವಾ ಚರಿತ್ರೆ, ಸಾಹಿತ್ಯ ಶಾಸನ ಮುಂತಾದ ಆಧಾರಗಳ ಮೇಲೆ ಸಂಗ್ರಹಿಸಿದ ಪೂರ್ವ ಕಾಲದ, ಜನಜೀವನವನ್ನು ಚಿತ್ರಿಸುವನು. ತನ್ನ ಮತ್ತು ತನ್ನ ಸಮಕಾಲಿಕರ ಮನಸ್ಸಿನ ಘನೋದ್ದೇಶಗಳನ್ನೂ, ಹೃದಯದ ರಸೋದ್ರೇಕಗಳನ್ನೂ ಸಣ್ಣ ಕವನಗಳಲ್ಲಿ ಮತ್ತು ಭಾವಗೀತಗಳಲ್ಲಿ ಮುಂಗಾರು ಮಳೆಯ ಹುಯ್ಯಲಂತೆ ಒಂದು ಕ್ಷಣದಲ್ಲಿ ಸುರಿದು

ಬಿತ್ತುವನು. ಇವೆಲ್ಲಕ್ಕಿಂತಲೂ ಜನರಿಗೆ ಅತಿ ಪ್ರಿಯವಾದ, ರಂಗಸ್ಥಳಕ್ಕೆ ಒಪ್ಪುವ, ಮನೋರಂಜಕವಾದ ನಾಟಕಗಳಲ್ಲಿ ಜೀವನದ ಪ್ರತಿಬಿಂಬವನ್ನೂ, ಉದಾತ್ತ ಚರಿತರಾದ ಮಹಾಪುರುಷರ ಆದರ್ಶ ವ್ಯಕ್ತಿಗಳನ್ನೂ ಸ್ಫೂರ್ತಿಯಿಂದ ಸೃಷ್ಟಿಸುವನು. ವಿವಿಧ ವಿಷಯಗಳನ್ನು, ಪ್ರಕೃತಿ ಶಾಸ್ತ್ರಗಳ ಸಾರಾಂಶವನ್ನು, ಪ್ರಕೃತಿ ಶಾಸ್ತ್ರಾಭ್ಯಾಸದಿಂದ ಉತ್ಪನ್ನವಾಗುವ ಶಾಸ್ತ್ರೀಯ ಮನೋಭಾವವನ್ನು ಮತ್ತು ತನ್ನ ಇತರ ಸಾಧಾರಣವಾದ ಲೋಕಾನುಭವಗಳನ್ನು ಸ್ವಾರಸ್ಯವಾದ, ಚಿತ್ತಾಕರ್ಷಕವಾದ ಸಣ್ಣ ಪುಸ್ತಕಗಳಲ್ಲಿಯೂ, ಸಣ್ಣ ಪ್ರಸಂಗಗಳಲ್ಲಿಯೂ ತಂದು ತುಂಬುವನು. ಈ ನಮ್ಮ ಹೊಸ ಲೇಖಕನು ಹಿರಿಯರ ಸೇವೆಯಲ್ಲಿ ಸಣ್ಣ ಮಕ್ಕಳನ್ನು ಮರೆಯುವುದಿಲ್ಲ. "ಮನುಜನಿಗೆ ಮಗು ತಂದೆ" ಎಂಬ ತತ್ತ್ವವನ್ನು ಈತನು ಬಲ್ಲನು. ಆದುದರಿಂದ, ಆ ಚಿಕ್ಕ ಮಕ್ಕಳನ್ನು ತನ್ನ ಕಡೆಗೆ ಬರಿಸಿಕೊಂಡು, ಅವರಿಗೆ ಬೇಕಾದ, ಪುಟ್ಟದಾದ, ಚಿತ್ರಗಳಿಂದ ಕೂಡಿರುವ, ಮುದ್ದಾದ ಬಾಲ ಶೈಲಿಯಲ್ಲಿ ಬರೆದಿರುವ ಸಾಹಸ ಕಥೆಗಳು, ಆಶ್ಚರ್ಯ ಕಥೆಗಳು, ದೇಶ ಸಂಚಾರಗಳು, ಸಮುದ್ರಯಾನಗಳು, ಪ್ರಕೃತಿ ಶಾಸ್ತ್ರದ ಅದ್ಭುತ ನಿರ್ಮಾಣಗಳು, ಭರತಖಂಡದ ಪೂರ್ವ ಚರಿತ್ರೆಯ ಸಾರಾಂಶಗಳು, ವೀರರ ನೈಜ ವೃತ್ತಾಂತಗಳು—ಮುಂತಾದುವನ್ನು ನೀಡಲು ಸಿದ್ಧಮಾಡುವನು. ಆ ಬಳಿಕ ದೊಡ್ಡವರಿಗೆ ಬೋಧನೆ ಮಾಡುವುದಕ್ಕೆ ಹೊರಟು, ಕಾಲ ಗುಣ, ಸಮಾಜದ ನ್ಯೂನತೆಗಳು, ಸಂಸ್ಕರಣದ ಮಾರ್ಗಗಳು, ಸಾಧಕ ಬಾಧಕಗಳು, ಜಾತಿ ಮತಗಳ, ಪೂರ್ವ ಪದ್ಧತಿಗಳ ಮತ್ತು ಶಾಸ್ತ್ರವಿಧಿಗಳ ಗುಣ ದೋಷಗಳು, ಜನಾಂಗಗಳ ಸ್ವಾತಂತ್ರ್ಯ, ಸಾಧನೆಯ ತತ್ತ್ವಗಳು, ಅದಕ್ಕೆ ಅತ್ಯಾವಶ್ಯಕವಾದ ಸ್ವಾರ್ಥತ್ಯಾಗಬುದ್ಧಿ, ರಾಜ್ಯಭಾರದ ಕ್ರಮಗಳು, ರಾಜ ಪ್ರಜೆಗಳ ಪರಸ್ಪರ ಧರ್ಮಗಳು, ಲೋಕದ ಜನಾಂಗಗಳೆಲ್ಲವೂ ಪರಸ್ಪರ ಸೌಹಾರ್ದದಿಂದಲೂ, ಸಹಕಾರ ಬುದ್ಧಿಯಿಂದಲೂ, ಯುದ್ಧದ ಕೆಟ್ಟ ಕನಸು ಬೀಳದ ಅವಿಚ್ಛಿನ್ನ ಶಾಂತಿಯಿಂದಲೂ, ಭ್ರಾತೃಭಾವದಲ್ಲಿ ವರ್ತಿಸುವಂತೆ ಮಾಡುವುದಕ್ಕೆ ನಡಿಸಬೇಕಾದ ಪ್ರಯತ್ನಗಳು—ಇವೇ ಮುಂತಾದ ನೂತನ ಪ್ರಪಂಚದ ನೂತನ ಸಮಸ್ಯೆಗಳನ್ನು ವೃತ್ತಾಂತ ಪತ್ರಿಕೆಗಳಲ್ಲಿಯೂ, ಮಾಸಪತ್ರಿಕೆಗಳಲ್ಲಿಯೂ, ಉಪನ್ಯಾಸಗಳಲ್ಲಿಯೂ, ಸಣ್ಣ ಪುಸ್ತಕಗಳಲ್ಲಿಯೂ ಯಾವಾಗಲೂ ಚರ್ಚಿಸುತ್ತಿರುವನು. ಪುರಾತನರ ಜ್ಞಾನಕೋಶವನ್ನು ಮತ್ತೊಮ್ಮೆ ವಿಮರ್ಶಿಸಿ ಜಳ್ಳನ್ನು ತೂರಿ, ಕಾಳನ್ನು ಕಣಜಕ್ಕೆ ತುಂಬಿ, ಉಂಡು, ಮತ್ತೆ ಬಿತ್ತಿ ಹೊಸ ಬೆಳೆಯನ್ನು ನೂರರಷ್ಟು ಹೆಚ್ಚಿಸುವನು. ಈ ಬಗೆಯ ಬರೆವಣಿಗೆಗಾರನು ನೂತನ ಲೋಕದ ಶಿಶು; ನೂತನ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಿತನಾದವನು; ಇಂಗ್ಲಿಷ್ ಮುಂತಾದ ಪರಭಾಷೆಗಳನ್ನು ಕಲಿಯುವುದು ಒಂದು ಅಶುದ್ಧತೆ ಎಂದು ಬಗೆಯದವನು; ಅವನ್ನು ಕಲಿತುದರಿಂದ ತನ್ನ ಮಾತೃಭಾಷೆಯನ್ನು ತಿರಸ್ಕರಿಸದವನು; ತನ್ನ ಜ್ಞಾನವನ್ನು ತಾಯ್ನುಡಿಯ ಮೂಲಕ ತನ್ನ ಜನಕ್ಕೆ ಕೊಡಬಲ್ಲವನು, ತನ್ನ ದೇಶದ, ತನ್ನ ಜನರ ಪೂರ್ವದ ಮಹಿಮೆಗೂ, ಸಂಸ್ಕೃತಿಗೂ, ನ್ಯಾಯವಾದ ಭಕ್ತಿಯನ್ನು, ಅಲ್ಲದೆ, ನೂತನ ಸಂಸ್ಕೃತಿಗೂ, ಪಾಶ್ಚಾತ್ಯಕ್ಕೂ ತಕ್ಕ ಬೆಲೆ

ಯನ್ನು ಕಟ್ಟಬಲ್ಲವನು. ಈತನು ಇಂಗ್ಲಿಷಿನಲ್ಲಿ ಪ್ರವೀಣನಾಗಿರಬೇಕೆಂದು ನಾನು ಒತ್ತಿ ಹೇಳುತ್ತಿರುವುದನ್ನು ಒಂದು ತಪ್ಪಾಗಿ ತಾವು ಭಾವಿಸಕೂಡದು. ಇಂಗ್ಲಿಷ್ ಒಂದನ್ನೇ ಅನನ್ಯ ಭಾವದಿಂದ ಶರಣುಹೊಗಬೇಕೆಂದು ನನ್ನ ಭಾವವಲ್ಲ; ಅದಿಲ್ಲದೆ ಮುಕ್ತಿಯೇ ಇಲ್ಲವೆಂದು ನಾನು ಹೇಳುತ್ತಿಲ್ಲ. ನಮ್ಮ ದಿವ್ಯ ಸಂಸ್ಕೃತವಿದೆ, ಅದರಿಂದಲೂ ಹೀರಬಹುದಾದ, ತಂದು ಹೀರಬಹುದಾದ ತಿರುಳು ಅಪಾರವಾಗಿದೆ, ಅನಂತವಾಗಿದೆ. ಆದರೆ ಹಿಂದಿನ ಮುಂಜುಗಣ್ಣಿನಿಂದ, ಅಂಧಶ್ರದ್ಧೆಯಿಂದ, ಅಪೂರ್ಣ ಕಲಾಸಂಸ್ಕಾರದಿಂದ ದೊಡ್ಡದು ಮಾಡಿಕೊಂಡು ನಮ್ಮ ಕನ್ನಡದ ಬಯಲಿಗೆ ತಿದ್ದಿಕೊಂಡ ಕಾಲುವೆಗಳನ್ನೇ ಮತ್ತೆ ನಾವು ಈಗ ತಿದ್ದಬೇಕಾಗಿಲ್ಲ. ಎಷ್ಟೋ ಜನ ಘನಪಂಡಿತರು ಆ ಕೆಲಸವನ್ನು ಹಿಂದೆ ಮಾಡಿರುವರು; ಈಗಲೂ ಮಾಡುತ್ತಿರುವರು. ಇಂಗ್ಲಿಷ್ ಸಂಸ್ಕಾರದಿಂದ ಅಂಜನ ಹಾಕಿ ಪರೆ ತೆಗೆದ ಹೊಸ ಕಣ್ಣಿನಿಂದ, ಹೊಸ ಬೆಲೆಗಳ ತಿಳಿವಳಿಕೆಯಿಂದ, ವಿಮರ್ಶನ ಮಿಳಿತವಾದ ಶ್ರದ್ಧೆಯಿಂದ, ವೇದಗಳು, ಉಪನಿಷತ್ತುಗಳು, ಇತಿಹಾಸ ಪುರಾಣಗಳು, ದರ್ಶನಗಳು, ಶಾಸ್ತ್ರಗಳು, ಕಲೆಗಳು, ವೈದಿಕ ಬೌದ್ಧ ಜೈನ ವೈಷ್ಣವ ಶೈವ ಧರ್ಮಗಳು—ಇವುಗಳ ಪವಿತ್ರ ಮೂಲಗಳನ್ನು ಪರಿಶೋಧನೆ ಮಾಡಿ ಹಸಿದು ಕಂಗೆಟ್ಟಿರುವ ನಮ್ಮ ಜನಸಾಮಾನ್ಯಕ್ಕೆ ಶುದ್ಧಾಹಾರವನ್ನು, ದೇಹಪುಷ್ಟಿ, ಆತ್ಮಪುಷ್ಟಿ ಆಗುವ ನಿರ್ಮಲಾಹಾರವನ್ನು ಒದಗಿಸುವುದು ವಿದ್ಯಾವಂತರ ಕರ್ತವ್ಯವಲ್ಲವೆ?—ಪುಷ್ಟಿಗೊಳಿಸುವ ನಿರ್ಮಲಾಹಾರವನ್ನು, ಕಲ್ಲನ್ನಲ್ಲ, ಮರಳನ್ನಲ್ಲ, ಬಾಯಿಯಲ್ಲಿ ಬೂದಿಯಾಗುವ, ಹೊಟ್ಟೆಯಲ್ಲಿ ವಿಷವಾಗುವ ಆಹಾರವನ್ನಲ್ಲ. ಈ ವಿದ್ಯಾವಂತರು ತಾವು ಸಂಸ್ಕೃತದಲ್ಲಿ, ಕನ್ನಡದಲ್ಲಿ, ಪ್ರಾಕೃತದಲ್ಲಿ, ಪಾಳಿಯಲ್ಲಿ, ಇಂಗ್ಲಿಷಿನಲ್ಲಿ, ಗ್ರೀಕಿನಲ್ಲಿ—ಯಾವ ಭಾಷೆಯಲ್ಲಾದರೂ ಸಂಪಾದಿಸಿದ ಜ್ಞಾನವೇನುಂಟೋ, ಶೀಲವೇನುಂಟೋ, ಆನಂದವೇನುಂಟೋ, ಸುಪ್ರೇರಣೆಯೇನುಂಟೋ ಅದೆಲ್ಲವನ್ನೂ ಅಜ್ಞಾನದಲ್ಲಿ ಮುಳುಗಿ ಜಡರಾಗಿ ಚಲಿಸದಿರುವ ತಮ್ಮ ಅಣ್ಣ ತಮ್ಮಂದಿರಲ್ಲಿ, ಅಕ್ಕ ತಂಗಿಯರಲ್ಲಿ, ಹಸುಮಕ್ಕಳಲ್ಲಿ, ಕಡೆಗೆ ಅಜ್ಜ ಅಜ್ಜಿಯರಲ್ಲಿ—ಅವರೇನು ತೀರ ಕೈಬಿಟ್ಟುಬಿಡಬೇಕಾದವರೆ? ಅವರಿಂದ ನಮಗೆ ಅಡ್ಡಿಯಾಗಲಿ ಬೆಂಬಲವಾಗಲಿ ಬಾರದಿರುವುದೆ?—ಅಜ್ಜ ಅಜ್ಜಿಯರಲ್ಲಿ—"ಸುಲಿದ ಬಾಳೆಯ ಹಣ್ಣಿನಂದದಿ—ಕಳೆದ ಸಿಗುರಿನ ಕಬ್ಬಿನಂದದಿ" ಲಲಿತವಾದ, ಸುಖವಾದ, ಕನ್ನಡದಲ್ಲಿ ಧಾರೆಯೆರೆಯಬೇಕಲ್ಲವೇ? ಮಿತ್ರರಿರಾ, "ಬೆಳೆಯೇನೋ ಬೇಕಾದಹಾಗಿದೆ; ಕುಯ್ಯಲುಗಾರರು ಕಡಿಮೆ." ಬನ್ನಿ, ಜನ್ಮವನ್ನು ತಮ್ಮ ಜನರ ಬೋಧೆಗಾಗಿ ಸಮರ್ಪಣಮಾಡಿದ ಹೊಸ ಬಗೆಯ ದೀಕ್ಷಿತರಾಗಿ. ಪೂರ್ಣವಿದ್ಯರಾಗಿ. ಸ್ವತಂತ್ರಪ್ರಿಯರಾಗಿ (ಸ್ವತಂತ್ರವೆಂದರೆ ಸ್ವೇಚ್ಛೆಯಲ್ಲ). ಧರ್ಮಕಾಮರಾಗಿ. ಆತ್ಮಸಾಧಕರಾಗಿ. ವ್ಯಕ್ತಿ ವರ್ಚಸ್ಸುಳ್ಳವರಾಗಿ. ಸುಹೃದ್ದರ್ಶನವುಳ್ಳವರಾಗಿ. ಉದಾರಾನುಭವರಾಗಿ. ಕಲಾಪುತ್ರರಾಗಿ—ಉದ್ದೇಶ, ವಿಷಯ, ರೀತಿ, ಶೈಲಿ, ಭಾವ, ಛಂದಸ್ಸು,—ಹೊಸದು ಬೇಕಾದರೆ ಹೊಸದು, ಹಳದು ಸಾಕಾದರೆ ಹಳದು—ನಮ್ಮ ಸಿಂಗರವಾದ, ಮಂಗಳಮಯವಾದ ಕನ್ನಡ ನಾಡಿನಲ್ಲಿ ಬದುಕಾಗತಕ್ಕ

ವೇಸಿದ್ದರೂ ಎಲ್ಲವನ್ನೂ ಒಳಸಿಕೊಂಡು, ಹೊಸ ಜೀವನವನ್ನು ಎತ್ತಿಬ್ಬಿಸುವ ತುಂಬಿ! ಆಗ್ಗೆ, ವಿಶ್ವವಿದ್ಯಾನಿಲಯಗಳೂ, ಪರಿಷತ್ತುಗಳೂ, ಪಂಡಿತವರ್ಯರೂ, ಗ್ರಂಥಕರ್ತರೂ, ದೇಶಬಾಂಧವರೂ ಜನ್ಮವೆತ್ತಿದುದಕ್ಕೆ ಸಾರ್ಥಕತೆ ತೋರುವುದು. ಆಗ್ಗೆ ಕನ್ನಡಕ್ಕೆ ಹಿಂದಿನ ಸಾಹಿತ್ಯದ ಸೌಭಾಗ್ಯಕ್ಕಿಂತಲೂ, ಮುಂದಿನ ಸಾಹಿತ್ಯದ ಶಕ್ತಿ ಹೆಮ್ಮೆಯು ವಿಷಯವಾಗುವುದು. ಆಗ್ಗೆ ಕನ್ನಡಿಗರು ಇನ್ನೂ ತೇಜಸ್ವಿಗಳಾಗುವರು. ಹಿಂದುಳಿದಿರುವ ಜನಸಾಮಾನ್ಯದ ಮುಸುಕು ಮುಚ್ಚಿರುವ ಜ್ಞಾನವನ್ನೂ ಆತ್ಮಶಕ್ತಿಯನ್ನೂ ಬಿಡುಗಡೆ ಮಾಡಿದರೆ, ಎಷ್ಟು ಸಾಹಿತ್ಯ ಸಂಪತ್ತು ಹೊರಕ್ಕೆ ಹೊಮ್ಮುವುದೋ ನಾವು ಬಲ್ಲೆವೆ?

೧೨. ಮಹನೀಯರೆ, ನಮ್ಮ ಕನ್ನಡ ನಾಡು ಚಿಕ್ಕದಿರಬಹುದು; ನಮ್ಮ ಕನ್ನಡಿಗರು ಸ್ವಲ್ಪ ಜನವಿರಬಹುದು; ಚರಗವನ್ನು ಚೆಲ್ಲಿದಂತೆ ಚೆದರಿಹೋಗಿರಬಹುದು. ಆದರೆ ಕರ್ಣಾಟಕದ ಪೂರ್ವ ಚರಿತ್ರೆಯನ್ನೂ, ಪ್ರಕೃತ ಸಾಹಸಗಳನ್ನೂ ನೆನಸಿಕೊಂಡರೆ, ನಮ್ಮ ಪುರೋಭಿವೃದ್ಧಿಯಲ್ಲಿ ಯಾವ ಸಂದೇಹಕ್ಕೂ ಕಾರಣವಿರುವುದಿಲ್ಲ. ಈ ಪುಣ್ಯಕ್ಷೇತ್ರದಲ್ಲಿ ಬೇರೂರಿ, ಆಕಾಶ ಹಬ್ಬಿರುವ ಎಲ್ಲ ಪ್ರದೇಶಗಳಿಂದಲೂ ಗಾಳಿಯನ್ನೂ, ಬೆಳಕನ್ನೂ, ಆಹಾರವನ್ನೂ, ತೇಜಸ್ಸನ್ನೂ ಹೀರಿಕೊಳ್ಳುವ ಉದಾರ ಹೃದಯವೊಂದನ್ನು ನಾವು ಭದ್ರವಾಗಿ ಕಾಪಾಡಿಕೊಂಡರೆ;—ಅವರನ್ನು ಅನುಕರಿಸುವುದು, ಇವರನ್ನು ಧಿಕ್ಕರಿಸುವುದು, ಒಬ್ಬರ ವೇಷವನ್ನು ತಾಳಿ ಕುಣಿವುದು, ಮತ್ತೊಬ್ಬರ ಮಹಿಮೆಯನ್ನು ಸಹಿಸಲಾರದೆ ಕುಯುಕ್ತಿಗಳನ್ನು ಹೂಡಿ ಆಡಿಕೊಳ್ಳುವುದು—ಈ ಅಸಭ್ಯ ಚೇಷ್ಟೆಗಳನ್ನು, ಮನೋವಿಕಾರಗಳನ್ನು ಬಿಟ್ಟುಬಿಡುವುದಾದರೆ;—ಸ್ವಪ್ರಕೃತಿ, ಸ್ವಪ್ರತಿಭೆಯನ್ನು ವಿಚಾರಮಾಡಿ ಅರಿತು, ನಮ್ಮ ಆವರಣ, ನಮ್ಮ ಆನುಕೂಲ್ಯವನ್ನು ಮನದಟ್ಟುಮಾಡಿಕೊಂಡು, ನ್ಯೂನತೆಗಳನ್ನು ದೌರ್ಬಲ್ಯಗಳನ್ನು ಪರಿಶೋಧಿಸಿ ತ್ಯಜಿಸಿ, ಸತ್ಯಸಂಧರಾಗಿ, ಋಜುಮಾರ್ಗದಲ್ಲಿ ಕರ್ಮವೀರರಾಗಿ ಮುಂದಕ್ಕೆ ಹೆಜ್ಜೆಯನ್ನಿಡುವ ಪಕ್ಷದಲ್ಲಿ,—ನಮ್ಮ ಜನವೂ, ಜನದೊಡನೆ ಸಾಹಿತ್ಯವೂ, ಸಾಹಿತ್ಯದೊಡನೆ ಜನವೂ, ಅಮೂಲ್ಯವಾಗುವುದು, ಅಮೋಘವಾಗುವುದು, ಸತ್ಯಪ್ರತಿಷ್ಠಿತವಾಗುವುದು; ಧರ್ಮಪ್ರತಿಷ್ಠಿತವಾಗುವುದು. ಆಗ್ಗೆ ಅದರ ಯಶಸ್ಸಿಗೆ ಮಿತಿಯೆಲ್ಲಿ? ಗುಣವಿದ್ದಲ್ಲಿ ಗಾತ್ರವನ್ನು ಯಾರು ನೋಡುವರು? ವೀರ್ಯವಿದ್ದಲ್ಲಿ ವೇಷ ಭಾಷೆಗಳನ್ನು ಯಾರು ಕೇಳುವರು? ಎತ್ತಕಡೆಯಿಂದ ಶಿಕ್ಷೆಯನ್ನು ಪಡೆದರೂ, ಎತ್ತ ಕಡೆಯಿಂದ ಬೆಂಬಲವನ್ನು ಬಯಸಿದರೂ, ಜೇನುಹುಳು ಯಾವ ಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲ ತನ್ನ ಜೇನುತುಪ್ಪವನ್ನಾಗಿಯೇ ಹೇಗೆ ಮಾಡಿಕೊಳ್ಳುವುದೋ ಹಾಗೆ ಎಲ್ಲವೂ ಕನ್ನಡವೇ ಆಗಿಹೋದರೆ, ಆಗ ಹೊರಗಿನದು ಎಲ್ಲಿ ಬಂತು? ಮೊದಲಿನಿಂದಲೂ ನಮ್ಮ ಕರ್ಣಾಟಕದ ಚರಿತ್ರೆಯೇ ಹೀಗೆಂದು ತೋರುವುದು. ಆರ್ಯಾವರ್ತಕ್ಕೂ, ದಕ್ಷಿಣಾಪಥದ ಸಮುದ್ರದ ಗಡಿಗಳಿಗೂ ಓಡಾಡುವ ರಾಜಮಾರ್ಗವಾಗಿ, ಭಾಷೆ, ಸಂಸ್ಕೃತಿ, ಮತಗಳನ್ನು ತನ್ನಲ್ಲಿ ಯಥೇಷ್ಟವಾಗಿ ಚಲಿಸಿ, ಪಶ್ಚಿಮ ಸಮುದ್ರದ

ಎದೆಯಮೇಲೆ ತನ್ನ ಹಡಗುಗಳನ್ನು ತಾಂಡವಮಾಡಿಸುತ್ತ, ಪಾರಸಿಕರು ಬ್ಯಾಬಿಲೋನಿಯ ಮತ್ತು ಈಜಿಪ್ಟ್ ದೇಶದ ಜನರು, ಗ್ರೀಕರು, ರೋಮನರು ಮುಂತಾದ ನಾಗರಿಕ ಜನರೊಡನೆ ನಾಗರಿಕತೆಯಿಂದ ಸ್ಪರ್ಧಿಸುತ್ತ; ಐಹಿಕ ವಿಷಯಗಳಲ್ಲಾಗಲಿ, ಪಾರಲೌಕಿಕ ವಿಷಯಗಳಲ್ಲಾಗಲಿ, ಭಾವನಾ ಪ್ರಪಂಚದಲ್ಲಾಗಲಿ, ಕಾರ್ಯ ಪ್ರಪಂಚದಲ್ಲಾಗಲಿ ಯಾವುದರಲ್ಲೂ ಅತಿಗೆ ಹೋಗದೆ, ಒಂದೇ ಸಮನಾಗಿ, ಕ್ರಮವಾಗಿ, ಸಮ್ಮಿಳಿತವಾಗಿ ವೃದ್ಧಿಹೊಂದುತ್ತ; ಅನೇಕ ಜನ ಜಾತಿಗಳನ್ನು ತನ್ನ ಸೊಬಗಿನಿಂದ ಸೆಳೆಯುತ್ತ; ಅನೇಕ ರಾಜವಂಶಗಳನ್ನು ತನ್ನ ಪರಾಕ್ರಮದಿಂದ ಕೀರ್ತಿವಂತರನ್ನಾಗಿ ಮಾಡುತ್ತ; ಬೌದ್ಧ ಗುರುಗಳು, ಜೈನ ಯತಿಗಳು, ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರು, ಶ್ರೀ ಬಸವೇಶ್ವರರು—ಇಂತಹ ಪ್ರಧಾನರಾದ ಧರ್ಮಸಂಸ್ಥಾಪನಾಚಾರ್ಯರುಗಳಿಗೆ ತನ್ನ ಸಮತಾಬುದ್ಧಿಯಿಂದ ಆಶ್ರಯವನ್ನು ನೀಡುತ್ತ; ಶಿಲ್ಪಕಲೆ, ಚಿತ್ರಕಲೆ, ಗಾನಕಲೆ, ಸಾಹಿತ್ಯಕಲೆ, ಮುಂತಾದ ಆತ್ಮಸ್ಫುರಣೆಗಳಲ್ಲಿ ಸೌಂದರ್ಯಾನ್ವೇಷಣೆಯನ್ನು ಮಾಡುತ್ತ; ಕಾಲಕ್ಕೆ ತಕ್ಕಂತೆ ಪ್ರಜಾಸಮತೆಯನ್ನು ಪ್ರಜಾಹಿತವನ್ನು ಗುರಿಯಲ್ಲಿಟ್ಟುಕೊಂಡು, ಹೊಸಮತ, ಹೊಸಭಾಷೆ, ಹೊಸಕವನ, ಹೊಸಜೀವ ಮುಂತಾದ ಹೊಸ ಆರಂಭಗಳನ್ನು ಉದಾರ ಹೃದಯದಿಂದ ಸ್ವೀಕಾರ ಮಾಡುತ್ತ ಬೆಳೆದು, ಪಾಳಾಗಿ, ಪರಾಕ್ರಾಂತವಾಗಿ, ದುರ್ದಶೆಯಲ್ಲಿರುವಾಗ ಈಗ ಕೂಡ, ಗರ್ವದಿಂದ ಕಾಲೋಚಿತವಾದ ಶ್ರೇಯೋಮಾರ್ಗವನ್ನು ಸೂಚಿಸುವ ನೂತನ ಶಿಕ್ಷಣವನ್ನು ಪಡೆದು, ಸ್ವಲ್ಪ ಕಾಲದಲ್ಲಿಯೇ ನವಚೈತನ್ಯ ಮೂಡಿ, ನಿದ್ದೆಯುಳಿದು, ಮೈಮುರಿದು, ಮಲಗಿದ್ದೆದ್ದ ಸಿಂಹದಂತೆ ಮೇಲಕ್ಕೆ ನೆಗೆದು, ಕೇಸರವನ್ನು ಅಲುಗಿ, ಗರ್ಜಿಸುತ್ತಿರುವ ಈ ಕನ್ನಡ ನಾಡಿನ ಚರಿತ್ರೆ ಯಾವ ಕನ್ನಡಿಗನಿಗೆ ತಾನೇ ಆತ್ಮಗೌರವವನ್ನೂ, ಆತ್ಮಶ್ರದ್ಧೆಯನ್ನೂ, ಹೊಸ ಹುರುಪನ್ನೂ, ಹೊಸ ಆರಂಭವನ್ನೂ ಹೊಂದಿಸಿಕೊಡಲಾರದು?

೧೧. ಆದುದರಿಂದ, ಕನ್ನಡಿಗರೇ, ಏಳಿ, ಎಚ್ಚರಗೊಳ್ಳಿ, ಆರಂಭಮಾಡಿ. ಪೂರ್ವ ಚರಿತ್ರೆಯ, ವಿಶ್ವವಿದ್ಯಾನಿಲಯದ, ಸಾಹಿತ್ಯ ಪರಿಷತ್ತಿನ, ನೂತನ ಸಾಹಿತ್ಯಕಾರರ, ಉತ್ಸಾಹ ಪೂರಿತರಾಗಿ ಸೇವಾತುರರಾದ ಯುವಕ ದೇಶವತ್ಸಲರ, ಕರ್ನಾಟಕ ಭಾಷೋಜ್ಜೀವನವನ್ನು ಸದಾ ಕಾಲದಲ್ಲಿಯೂ ತಮ್ಮ ಘನವಾದ ದಿವ್ಯ ಚಿತ್ತದಲ್ಲಿ ಪರ್ಯಾಲೋಚಿಸುತ್ತಿರುವ ನಮ್ಮ ಮೈಸೂರು ಶ್ರೀಮನ್ಮಹಾರಾಜರವರ, ಸಾಹಿತ್ಯ ಸಂಸ್ಕೃತಿಗಳ ಕಟ್ಟಿನಿಂದ ಏಕಜನತೆಯನ್ನು ಬಯಸುತ್ತಿರುವ ಸಕಲ ಕರ್ನಾಟಕರ, ಮಹತ್ಪ್ರೇರಣೆಯಿಂದ, ಮಹತ್ಪ್ರಯತ್ನದಿಂದ ಸಾಧ್ಯವಾಗದ ಕಾರ್ಯವು ಯಾವುದು? ಏಳಿ, ಎಚ್ಚರಗೊಳ್ಳಿ, ಆರಂಭಮಾಡಿ. ಹಿಂದೆ ಯೂರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ, ಒಬ್ಬ ಮಹಾಪಂಡಿತನು—''ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ'' ಎಂದು ಘೋಷಿಸಿದನು. ನಾವು, ಕನ್ನಡಿಗರು, ಇಂದು, ಸತ್ತವರನ್ನು ಎಬ್ಬಿಸು

ವುದೇ ಅಲ್ಲ; ಒದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ ಮಾಡುವುದಕ್ಕೇ ಅಲ್ಲ; ಹೊಸ ಉತ್ತಮ ಸಾಹಿತ್ಯವೊಂದನ್ನು ಸೃಷ್ಟಿಮಾಡುವುದಕ್ಕೆ ಹೊರಟಿರುವೆವು. ಹೊರಟವರು ವಿಲಾಸವತಿಯ ಕೈಯೊಳಗಿನ ಪುಷ್ಪಮಾಲಿಕೆಯೇ ಅಲ್ಲ. ಸಾಹಿತ್ಯ, ಮಾನವ ಜೀವನದ ಪುನರ್ನಿರ್ಮಾಣ ಕಾರ್ಯದಲ್ಲಿ ಬದ್ಧಕಂಕಣನಾಗಿರುವ ವೀರನ ಕೈಯ ಖಡ್ಗವೂ ಆಹುದೆಂದು ತಿಳಿದಿರುವೆವು. "ನಾನು ಬಂದು ಶಾಂತಿಯನ್ನು ತರಲಿಲ್ಲ, ಖಡ್ಗವನ್ನು ತಂದೆನು" ಎಂದು ಕ್ರೂರ ಕಾರುಣ್ಯದಿಂದ ಸಾರಿದ ಒಬ್ಬ ಮಹಾತ್ಮ ಧರ್ಮಪುತ್ರನ ರಹಸ್ಯವನ್ನು ಹೃದಯದಲ್ಲಿಟ್ಟಿರುವೆವು. ಪುರಾತನ ಕರ್ಮವಾಸನೆಯಿಂದ ಆತ್ಮನು ಬದ್ಧನಾಗಿದ್ದರೂ, ಸಂಪೂರ್ಣವಾಗಿ ಬದ್ಧನಲ್ಲ; ಸ್ವತಂತ್ರನು; ಮುಕ್ತಿಗರ್ಹನು; ಹೊಸ ಕರ್ಮವನ್ನಾರಂಭಿಸಿ ವಿಶ್ವಾತ್ಮ ಪರಮಾತ್ಮನನ್ನು ತನ್ನಲ್ಲಿ ಅನುಭವಿಸಿ ಸಾಯುಜ್ಯವನ್ನು ಪಡೆಯುವ ಸಹಜವಾದ ಚೈತನ್ಯವುಳ್ಳವನು ಎಂದು ಆರ್ಯರಾದ ನಮ್ಮ ಹಿರಿಯರು ನಮಗೆ ಉಪದೇಶಮಾಡಿದ್ದಾರೆ. ಕನ್ನಡಿಗರಿರಾ, ಏಳಿ, ನಮ್ಮಲ್ಲಿ ಯಾವ ಯಾವ ಭಿನ್ನಾಭಿಪ್ರಾಯಗಳು, ಭಿನ್ನ ರುಚಿಗಳು ಇದ್ದರೂ, ನಮ್ಮ ನಮ್ಮಲ್ಲಿಯೇ ಅವು ಇರಲಿ. ಹಳೆಯ ಮಾರ್ಗವನ್ನು ಹಿಡಿಯುವವರು, ಹೊಸ ಮಾರ್ಗವನ್ನು ಹಿಡಿಯುವವರು; ಸಂಸ್ಕೃತಾಭಿಮಾನಿಗಳು, ಆಂಗ್ಲೇಯಾಭಿಮಾನಿಗಳು, ಭಾರತಮಾತೆಯಲ್ಲಿ ವೀರಾವೇಶವಾತ್ಸಲ್ಯವುಳ್ಳವರು, ವಿಶ್ವದೃಷ್ಟಿಯ ಸರ್ವಸಮಮೈತ್ರಿಯ ಸಾಧುಸಂತರು—ಯಾರೇ ಆಗಲಿ ಒಬ್ಬರಂತೆ ಒಬ್ಬರಿರುವೆವೆಂಬ ಬೂಟಾಟಿಕೆಯ ನಿರ್ಬಂಧ ಬೇಡ; ಒಬ್ಬರಂತೆ ಒಬ್ಬರಿಲ್ಲವೆಂಬ ಕಿತ್ತಾಟವೂ ಬೇಡ; ನಮಗೆ ಭಗವಂತನು ದಯಪಾಲಿಸಿರುವ ವರಪ್ರಸಾದಗಳನ್ನೂ, ಬಗೆ ಬಗೆಯಾದ ಶಕ್ತಿ ರುಚಿಗಳನ್ನೂ, ಕನ್ನಡ ನಾಡಿಗೆ, ಕನ್ನಡ ನುಡಿಗೆ ಒಮ್ಮನಸ್ಸಿನಿಂದ ಮುಡಿಪು ಕಟ್ಟೋಣ; ಒಮ್ಮೆಯ್ಯಾಗಿ ಅವುಗಳ ಏಳಿಗೆಯಲ್ಲಿ ಏಳಿಗೆಯಾಗೋಣ.

೧೭. ಸಾಹಿತ್ಯಕಲಾರಾಧಕರೆ, ಅಗೋ ನೋಡಿ, ಚಲನೆಯಿಲ್ಲದೆ ನಿಂತಿರುವಳು ಕರ್ಣಾಟಕ ಸರಸ್ವತೀ ದೇವಿ. ತಲೆಯಮೇಲೆ ಭಾರವಾದ ಕಿರೀಟ, ಅಂಗಾಂಗವೆಲ್ಲ ತೆರವಿಲ್ಲದೆ ಮುಳ್ಳು ಹುಯ್ದಂತೆ ಹೇರಿರುವ ಜವಾಹಿರಿ, ಶಾಸ್ತ್ರ ನಿಯಮಿತವಾದ ಒಂದು ಬಗೆಯ ನಿಲವಿನ ಭಂಗಿ, ಮುಖದಲ್ಲಿ ಕಲ್ಲಿನಲ್ಲ ಕಡೆದ ಏನೋ ಒಂದು ಬಗೆಯಾದ ನಿಂತ ನಿಲವಿನ ನಗೆ, ಹಾಗೇ ನೋಡುವವನ ಕಣ್ಣಿಗೆ ಕಣ್ಣು ನೆಟ್ಟು ದುರುಗುಟ್ಟಿಕೊಂಡು ನೋಡುತ್ತದೆ.—ಇಲ್ಲ, ಒಮ್ಮೊಮ್ಮೆ ಆಡುವಂತೆಯೂ ಕಾಣುತ್ತದೆ. ಮೈಯೆಲ್ಲ ಮುಸುಕಿದ ದಪ್ಪವಾದ ಹಳೆಯ ಜರತಾರಿಯ ವಸ್ತ್ರ: ಉಸಿರು ಬಿಗಿದು ಎದೆ ಹೊಯ್ದುಕೊಳ್ಳುವಳು:—ಎದೆ ಹೊಡೆಯುತ್ತಿದೆಯೋ? ಬರಿಯ ನಮ್ಮೆದೆಯ ಹೊಡೆದಾಟವೇನೊ? ಎಚ್ಚತ್ತಿರುವಳೋ, ನಿದ್ದೆ ಹೋಗುತ್ತಿರುವಳೋ? ಬನ್ನಿ, ಆಕೆಯನ್ನು ಎಚ್ಚರಿಸೋಣ. ಕಿರೀಟದ, ಜವಾಹಿರಿಯ, ಶಿಲ್ಪ ನಿಯಮದ, ಜರತಾರಿಯ, ಭಾರವನ್ನೂ ಬಿಗುಹನ್ನೂ ಬಿಡಿಸೋಣ. ವಿಶ್ವ

ವಾಣಿಯು, ದಿವ್ಯವಾಣಿಯು, ಸಂಜೀವನ ಮಣಿಯು ಸ್ಪರ್ಶದಿಂದ ಶಾಪಗ್ರಸ್ತಳಾದ ಶಿಲಾಮೂರ್ತಿಯನ್ನು ಜೀವವುಳ್ಳ ಚೆಲುವೆಯನ್ನಾಗಿ ಮಾಡೋಣ. ಆ ಉನ್ನತ ಪೀಠದಿಂದ ಆಗ ಆಕೆ ಇಳಿಯುವಳು, ನಾಡನೆಲ್ಲೆಲ್ಲ ಸುಳಿಯುವಳು. ಸ್ವಾತಂತ್ರ್ಯದಿಂದ ಸಹಜವಾಗಿ ಆಕೆಯ ಹೃದಯವು ಆಡುವುದು. ಕಣ್ಣು ಒಲಿದ ಹೆಣ್ಣಿನ ಕಣ್ಣು ಬಿನ್ನಾಣವನ್ನೆಲ್ಲ ಬೆಳಗಿ ಬೀರುವುದು. ಗಾಳಿಗೆ ಕೆದರಿದ ಕೂದಲು ಕನ್ನಡ ನಾಡಿನ ಬಯಲುಗಳ ಮೊಲ್ಲೆ ಮಲ್ಲಿಗೆಗಳನ್ನು ಧರಿಸಿ ಕಂಪು ಸೂಸುವುದು. ನಗುನಗುತ ಆಕೆ ನಮ್ಮೊಡನಾಡಿಯಾಗಿ, ಮನುಷ್ಯರೊಡನೆ ಮನುಷ್ಯಳಾಗಿ, ದಿವ್ಯಾತ್ಮರೊಡನೆ ದೇವಿಯಾಗಿ, ತಾನೂ ನಲಿದು, ನಮ್ಮನ್ನೂ ನಲಿಸುವಳು. ಆಗ ಆಕೆಯೂ ಧನ್ಯಳು—ನಾವೂ ಧನ್ಯರು; ತಾಯಿ ಧನ್ಯಳಾದರೆ; ಮಕ್ಕಳೂ ಧನ್ಯರಲ್ಲವೆ?

———

ಕರ್ಣಾಟಕ ಸಾಹಿತ್ಯ ಪರಿಷತ್ತು

ಸನ್ ೧೯೨೮ನೆಯ ಇಸವಿ ಜೂನ್ ತಿಂಗಳು ೩ನೆಯ ತಾರೀಖು ಭಾನುವಾರ ಸಾಯಂಕಾಲ ೫ ಗಂಟೆಗೆ ಕಲ್ಬುರ್ಗಿಯ ನೂತನ ವಿದ್ಯಾಲಯದ ಸಭಾಮಂದಿರದಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕಾಧಿವೇಶನದ ಕಾರ್ಯ ವಿವರ.

ಅಧಿವೇಶನಕ್ಕೆ ಬಂದಿದ್ದ ಸದಸ್ಯರು

೧.	ಮ॥ ರಾ॥	ಕೃಷ್ಣರಾವ್ ಕಪಟ್ರಾಳ್ ..	ಗುಲ್ಬರ್ಗ
೨.	,,	ಎಚ್. ವಿ. ಕೃಷ್ಣಸ್ವಾಮಿ, ಬಿ.ಎ., ಎಲ್ಎಲ್.ಬಿ.	ಹೈದರಾಬಾದ್
೩.	,,	ಎಂ. ಎಸ್. ಲಕ್ಷ್ಮೀನಾರಾಯಣರಾಯರು ..	,,
೪.	,,	ರೆವರೆಂಡ್ ನಾನಪ್ಪ ದೇಸಾಯಿ ..	ಸುರಪುರ
೫.	,,	ನಾರಾಯಣಶಾಸ್ತ್ರೀ ಭಾವೂಶಾಸ್ತ್ರೀ ..	ಕೊಪ್ಪಳ
೬.	,,	ರಾಘವೇಂದ್ರರಾವ್ ಚ್ಯಾಕಲಬ್ಬಿ ..	,,
೭.	,,	ಭೀಮಾಚಾರ್ಯ ಕೃಷ್ಣಾಚಾರ್ಯ ..	ಜವಳಗಿ
೮.	,,	ಹಳ್ಳೇರಾಯ ಕಕ್ಕೇರಿ, ಬಿ.ಎ. ..	ಉಸ್ಮಾನಾಬಾದ್
೯.	,,	ಟಿ. ಎಸ್. ಚಿಕ್ಕೋಡಿ ..	ಬನಹಟ್ಟಿ
೧೦.	,,	ವಾಮನ ಗೋವಿಂದರಾವ್ ಅಬಳೇಕರ್ ..	ಜಮಖಂಡಿ
೧೧.	,,	ಕೇಶವಶರ್ಮಾ ಗಲಗಲಿ ..	ಬಿಜಾಪುರ
೧೨.	,,	ವಿ. ಬಿ. ಆಲೂರ್, ಬಿ.ಎ., ಎಲ್ಎಲ್.ಬಿ. ..	ಧಾರವಾಡ
೧೩.	,,	ಕೃಷ್ಣರಾವ್ ಹನುಮಂತರಾವ್ ಮುದವೇಡಕರ್ ..	,,
೧೪.	,,	ಎಚ್. ಚೆನ್ನಕೇಶವಯ್ಯಂಗಾರ್ಯರು, ಪ್ರೊಫೆಸರ್	,,
೧೫.	,,	ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಬಿ.ಎ. ..	,,
೧೬.	,,	ನಾರಾಯಣ ಶ್ರೀನಿವಾಸ ರಾಜಪುರೋಹಿತರು ..	,,
೧೭.	,,	ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ. ..	ಮೈಸೂರು
೧೮.	,,	ಬಿ. ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ.ಎಲ್.	,,
೧೯.	,,	ವಿ. ಸೀತಾರಾಮಯ್ಯನವರು, ಎಂ.ಎ. ..	,,
೨೦.	,,	ಎ. ಆರ್. ಕೃಷ್ಣಶಾಸ್ತ್ರಿಗಳು, ಎಂ.ಎ. ..	ಬೆಂಗಳೂರು
೨೧.	,,	ಪಂಡಿತ ಕಡಬದ ನಂಜುಂಡಶಾಸ್ತ್ರಿಗಳು ..	,,
೨೨.	,,	ಕೆ. ಸಂಪದ್ಗಿರಿರಾಯರು, ಎಂ.ಎ. ..	,,
೨೩.	,,	ನಂಗಪುರಂ ವೆಂಕಟೇಶಯ್ಯಂಗಾರ್ಯರು, ಬಿ.ಎ. (ಗೌ॥ ಕಾರ್ಯದರ್ಶಿ)	

೧. ಮ॥ ರಾ॥ ಬಿ. ಎಂ. ಶ್ರೀಕಂಠಯ್ಯನವರು ವಾರ್ಷಿಕಾಧಿವೇಶನದ ಅಗ್ರಾಸನವನ್ನು ವಹಿಸಬೇಕೆಂಬ ಮ॥ ರಾ॥ ವಿ. ಬಿ. ಆಲೂರರವರ ಸೂಚನೆ

ಯನ್ನು ಮ॥ ರಾ॥ ಸಂ. ವೆಂಕಟೇಶಯ್ಯಂಗಾರ್ಯರು ಅನುಮೋದಿಸಲು ಎಲ್ಲರೂ ಅಂಗೀಕರಿಸಿದರು.

೨. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪ್ರಭವ ಸಂವತ್ಸರದ ವರದಿಯ ಪ್ರತಿಗಳನ್ನು ಹಾಜರಿದ್ದ ಸದಸ್ಯರಿಗೆಲ್ಲರಿಗೂ ಮೊದಲೇ ಹಂಚಿದ್ದುದರಿಂದ ವರದಿಯನ್ನು ಓದಲಾವಶ್ಯಕವಿಲ್ಲವೆಂದು ನೆರೆದಿದ್ದವರೆಲ್ಲರೂ ಒಪ್ಪಲು ಮ॥ ರಾ॥ ಎಚ್. ಚೆನ್ನಕೇಶವಯ್ಯಂಗಾರ್ಯರು ವಾರ್ಷಿಕ ವರದಿಯನ್ನು ಅಂಗೀಕರಿಸಬಹುದೆಂದು ಮಾಡಿದ ಸೂಚನೆಯನ್ನು ಮ॥ ರಾ॥ ವಿ. ಜಿ. ಆಲೂರರವರು ಅನುಮೋದಿಸಲು, ಇದು ಏಕಕಂಠ್ಯದಿಂದ ಅಂಗೀಕೃತವಾಯಿತು.

೩. ವರದಿಯಲ್ಲಿ ಕೊಟ್ಟಿರುವ ಪರಿಷತ್ತಿನ ಪ್ರಭವ ಸಂವತ್ಸರದ ಪರಿಶೋಧಿಸಲ್ಪಟ್ಟ ಆಯವ್ಯಯದ ಪಟ್ಟಿಯನ್ನು ಸದಸ್ಯರು ಅಂಗೀಕರಿಸಬಹುದೆಂದು ಮ॥ ರಾ॥ ಚಾಕಲಬ್ಬಿ ರಾಘವೇಂದ್ರರಾಯರು ಸೂಚಿಸಿದರು; ಅದನ್ನು ಮ॥ ರಾ॥ ಎಂ. ಎಸ್. ಲಕ್ಷ್ಮೀನಾರಾಯಣರಾಯರು ಅನುಮೋದಿಸಿದರು. ಇದು ಸರ್ವರಿಂದಲೂ ಅಂಗೀಕೃತವಾಯಿತು.

೪. ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಭವ ಸಂವತ್ಸರದ (೧೯೨೮–೨೯) ಆಯವ್ಯಯದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯವನ್ನು ಪರಿಷತ್ತಿನ ಉಪಾಧ್ಯಕ್ಷರೂ ಗೌರವ ಕಾರ್ಯದರ್ಶಿಯವರೂ ಗೌರವ ಕೋಶಾಧ್ಯಕ್ಷರೂ ಕಲೆತ ಉಪಸಭೆಯು ವಹಿಸಿ ಅಂದಾಜನ್ನು ಕಾರ್ಯನಿರ್ವಾಹಕ ಮಂಡಲಿಯ ಮುಂದಿಡತಕ್ಕುದೆಂದೂ ಆ ಮಂಡಲಿಯಿಂದ ಅಂಗೀಕೃತವಾದ ಅಂದಾಜು ಪಟ್ಟಿಯ ಪ್ರತಿಯನ್ನು ಪರಿಷತ್ತಿನ ಪ್ರತಿಯೊಬ್ಬ ಸದಸ್ಯನಿಗೂ ಕಳುಹಿಸಿಕೊಡಬೇಕೆಂದೂ ಮ॥ ರಾ॥ ಕೃಷ್ಣರಾವ್ ಮುದವೇಡಕರರು ಸೂಚಿಸಿದರು. ಅದನ್ನು ಮ॥ ರಾ॥ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಅನುಮೋದಿಸಲು ಅದು ಸರ್ವಾನುಮತದಿಂದ ಅಂಗೀಕೃತವಾಯಿತು.

೫. ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರಿಗಳನ್ನೂ, ವಿಭವ ಸಂವತ್ಸರಕ್ಕೆ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳನ್ನೂ ಬ್ಯಾಲೆಟ್ ಮೂಲಕ ಚುನಾಯಿಸುವುದಕ್ಕೆ ಮೊದಲು, ಮ॥ ರಾ॥ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಕಳುಹಿಸಿಕೊಟ್ಟಿದ್ದ ಕೆಳಗೆ ಕಂಡ ಸೂಚನೆಯ ವಿಚಾರವು ನಡೆಯಿತು :—

ಸೂಚನೆ.—ಪರಿಷತ್ತಿನ ೯ನೆಯ ನಿಬಂಧನೆಯನ್ನು ಮುಂದೆ ಹೇಳುವಂತೆ ತಿದ್ದತಕ್ಕುದ್ದು:—

> ಕಾರ್ಯ ನಿರ್ವಾಹಕ ಮಂಡಲಿಯು, ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಗೌರವ ಕಾರ್ಯದರ್ಶಿಯವರು, ಒಬ್ಬರು ಗೌರವ ಕೋಶಾಧ್ಯಕ್ಷರು, ಮೂವತ್ತು ಮಂದಿ ಸಾಧಾರಣ ಸದಸ್ಯರು—ಇವರುಗಳಿಂದ ಕೂಡಿರತಕ್ಕದ್ದು.

ಅಧ್ಯಕ್ಷರು ವಿನಾ ಮಿಕ್ಕವರನ್ನು ಪರಿಷತ್ತಿನ ಸದಸ್ಯರು ತಮ್ಮ ಮಂಡಲಿಯಿಂದ **ಬ್ಯಾಲಟ್ ಮೂಲಕವಾಗಿ ನಿಯಮಿಸತಕ್ಕದ್ದು.**

ಮ॥ ರಾ॥ ವೆಂಕಟನಾರಾಯಣಪ್ಪನವರು ಅಧಿವೇಶನಕ್ಕೆ ಬಂದಿರಲಿಲ್ಲವಾದ ಕಾರಣ ಮ॥ ರಾ॥ ಏ. ಜಿ. ಆಲೂರರವರು ಅದನ್ನು ಸೂಚಿಸಿದರು. ಅದನ್ನು ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯನವರು ಅನುಮೋದಿಸಿದರು.

ಮ॥ ರಾ॥ ಚ್ಯಾಕಲಬ್ಬಿ ರಾಘವೇಂದ್ರರಾಯರು ಎದ್ದು ನಿಜಾಂ ಕರ್ಣಾಟಕದ ಪ್ರತಿನಿಧಿಗಳಾಗಿ ಈಗ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಒಬ್ಬರೇ ಸದಸ್ಯರಿರುವುದಕ್ಕೆ ಬದಲಾಗಿ ಮುಂದೆ ಇಬ್ಬರಿರಬೇಕೆಂದು ಚರ್ಚಿಸಿ

> **"ಮೂವತ್ತು ಮಂದಿ ಸಾಧಾರಣ ಸದಸ್ಯರು"** ಎಂಬ ಕಡೆ **"ಮೂವತ್ತೊಂದು ಮಂದಿ ಸಾಧಾರಣ ಸದಸ್ಯರು"**

ಎಂಬುದಾಗಿ ತಿದ್ದುಪಡಿಯಾಗಬೇಕೆಂದು ಸೂಚಿಸಿದರು. ಅದನ್ನು ಮ॥ ರಾ॥ ಕಪಟ್ರಾಳ್ ಕೃಷ್ಣರಾಯರವರು ಅನುಮೋದಿಸಲು, ಈ ತಿದ್ದುಪಡಿಯೊಡನೆ ಮೇಲಿನ ಸೂಚನೆಯು ಅಂಗೀಕೃತವಾಯಿತು.

ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರಿಗಳ ಚುನಾವಣೆ

ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರಾದ ಸರ್ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹಾದ್ದೂರ್, ಜಿ.ಸಿ.ಐ.ಇ. ಮಹಾಸ್ವಾಮಿಯವರೇ ಉದಾರ ಮನಸ್ಸಿನಿಂದ ಪರಿಷತ್ತಿನ ಅಧ್ಯಕ್ಷ ಪದವಿಯನ್ನು ಮುಂದೆಯೂ ಅಲಂಕರಿಸಬೇಕೆಂದು ಈ ವಾರ್ಷಿಕಾಧಿವೇಶನದಲ್ಲಿ ನೆರೆದಿರುವ ಸದಸ್ಯರು ಪ್ರಾರ್ಥಿಸಿಕೊಳ್ಳತಕ್ಕುದೆಂಬ ಅಧ್ಯಕ್ಷರ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

ಈ ಘಟ್ಟದಲ್ಲಿ ಸಭಾಪತಿಗಳಾದ ಮ॥ ರಾ॥ ಬಿ. ಎಂ. ಶ್ರೀಕಂಠಯ್ಯನವರು ಕಾರ್ಯಾಂತರದಿಂದ ಸ್ವಲ್ಪ ಕಾಲ ಅಗ್ರಾಸನವನ್ನು ಬಿಡಬೇಕಾಯಿತು. ಮ॥ ರಾ॥ ಶ್ರೀಕಂಠಯ್ಯನವರು ಮರಳಿ ಬರುವ ವರೆಗೆ ರೆವರೆಂಡ್ ನಾನಪ್ಪ ದೇಸಾಯಿಯವರು ಅಗ್ರಾಸನಾಧಿಪತಿಗಳಾಗಿರಬೇಕೆಂದು ಮ॥ ರಾ॥ ಕೃಷ್ಣರಾವ್ ಮುಧೋಳಕರರು ಮಾಡಿದ ಸೂಚನೆಯನ್ನು ಮ॥ ರಾ॥ ಏ. ಬಿ. ಆಲೂರರವರು ಅನುಮೋದಿಸಿದರು; ಈ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

ರೆವರೆಂಡ್ ನಾನಪ್ಪ ದೇಸಾಯಿಯವರು ಸಭಾಪತಿತ್ವವನ್ನು ವಹಿಸಿದ ನಂತರ ಬ್ಯಾಲಟ್ಟಿನ ಮೂಲಕ ಕೆಳಗೆ ಕೊಟ್ಟಿರುವ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಉಪಾಧ್ಯಕ್ಷರನ್ನೂ ಗೌರವ ಕಾರ್ಯದರ್ಶಿಯವರನ್ನೂ ಗೌರವ ಕೋಶಾಧ್ಯಕ್ಷರನ್ನೂ ಚುನಾಯಿಸಲಾಯಿತು:—

ಉಪಾಧ್ಯಕ್ಷರು—

ರಾಜಸಭಾಭೂಷಣ, ವಿದ್ಯಾಭೂಷಣ ಕರ್ಪೂರ ಶ್ರೀನಿವಾಸರಾಯರು, ಬಿ.ಎಸ್‌ಸಿ., ಎಲ್.ಸಿ.ಇ.

ಗೌ॥ ಕಾರ್ಯದರ್ಶಿಯವರು—

ಮ॥ ರಾ॥ ಸಂಗಪುರಂ ವೆಂಕಟೇಶ ಅಯ್ಯಂಗಾರ್ಯರು, ಬಿ.ಎ.

ಗೌ॥ ಕೋಶಾಧ್ಯಕ್ಷರು—

ಮ॥ ರಾ॥ ಜೆಕ್ಕಾವೆ ವೆಂಕಟನಾರಾಯಣಪ್ಪನವರು, ಎಂ.ಎ.

ಇದಾದನಂತರ ೪೯ನ ಸಂವತ್ಸರಕ್ಕೆ ಕಾರ್ಯ ನಿರ್ವಾಹಕ ಮಂಡಲಿಯ ಸದಸ್ಯರುಗಳನ್ನು ಚುನಾಯಿಸಲಾಯಿತು. ಆಯಾ ಪ್ರಾಂತಕ್ಕೆ ಆಯಾ ಪ್ರಾಂತದ ಸದಸ್ಯರುಗಳಿಂದ ಚುನಾಯಿಸಲ್ಪಟ್ಟ ಸದಸ್ಯರುಗಳ ಹೆಸರನ್ನು ಕೆಳಗೆ ಕೊಟ್ಟಿದೆ:—

ಮೈಸೂರು ಪ್ರಾಂತಕ್ಕೆ—

೧.	ಮ॥ ರಾ॥ ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ.	ಬೆಂಗಳೂರು
೨.	,, ಎ. ಆರ್. ಕೃಷ್ಣಶಾಸ್ತ್ರಿಗಳು, ಎಂ.ಎ.	,,
೩.	,, ಬಿ. ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ.ಎಲ್.	ಮೈಸೂರು
೪.	,, ತಿರುಮಲೆ ತಾತಾಚಾರ್ಯ ಶರ್ಮರು	ಬೆಂಗಳೂರು
೫.	,, ಟಿ. ಅಪ್ಪೂರಾಯರು, ಬಿ.ಎ., ಬಿ.ಎಲ್.	,,
೬.	ರಾವ್ ಬಹಾದ್ದೂರ್ ಡಾಕ್ಟರ್ ಸಿ. ಬಿ. ರಾಮರಾಯರು, ಬಿ.ಎ., ಎಂ.ಡಿ.	,,
೭.	ಮ॥ ರಾ॥ ಕೆ. ಸಂಪದ್ಗಿರಿರಾಯರು, ಎಂ.ಎ.	,,
೮.	,, ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ.	ಮೈಸೂರು
೯.	,, ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ್ ಬಹಾದ್ದೂರ್ ನರಸಿಂಹಾಚಾರ್ಯರು, ಎಂ.ಎ.	ಬೆಂಗಳೂರು
೧೦.	ರಾಜ ಕವಿಭೂಷಣ ಮ॥ರಾ॥ ಎಚ್. ಲಿಂಗರಾಜ ಅರಸಿನವರು	ಮೈಸೂರು
೧೧.	ಮ॥ ರಾ॥ ಬಿ. ಐ. ಶಾಮರಾಯರು	ಬೆಂಗಳೂರು
೧೨.	,, ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಎಂ.ಎ.	ಮೈಸೂರು

ಮುಂಬಯಿ ಪ್ರಾಂತಕ್ಕೆ—

೧.	ಮ॥ ರಾ॥ ಕೌಜಲಗಿ ಶ್ರೀನಿವಾಸರಾಯರು, ಬಿ.ಎ., ಎಲ್‌ಎಲ್.ಬಿ.	ಬಿಜಾಪುರ
೨.	ರಾವ್ ಸಾಹೆಬ್ ಮ॥ ರಾ॥ ಪಿ. ಜಿ. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.	,,
೩.	ಮ॥ ರಾ॥ ಎಚ್. ಚೆನ್ನಕೇಶವಯ್ಯಂಗಾರ್ಯರು	ಧಾರವಾಡ
೪.	,, ವಿ. ಬಿ. ಆಲೂರ್, ಬಿ.ಎ., ಎಲ್‌ಎಲ್.ಬಿ.	,,

೫. ಮ|| ರಾ|| ಕೃಷ್ಣರಾವ್ ಹನುಮಂತರಾವ್ ಮುಂದವೇಡಕರ್ ಬೆಳಗಾಂವಿ
೬. ,, ನಾರಾಯಣ ಶ್ರೀನಿವಾಸ ರಾಜಪುರೋಹಿತರು ಧಾರವಾಡ
೭. ,, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಬಿ.ಎ. ,,
೮. ,, ಕೃಷ್ಣರಾವ್ ಗೋವಿಂದ ಗೆಜ್ಜಿ, ಬಿ.ಎ., ಎಲ್‌ಎಲ್.ಬಿ. ಬೆಳಗಾಂವಿ
೯. ,, ಪಂಡಿತ ಕೇಶವಶರ್ಮಾ ಗಲಗಲಿ ಬಿಜಾಪುರ

ಮದರಾಸು ಪ್ರಾಂತಕ್ಕೆ—ಇಲ್ಲಿಯ ಸದಸ್ಯರು ಯಾರೂ ವಾರ್ಷಿಕಾಧಿವೇಶನಕ್ಕೆ ಬಂದಿರಲಿಲ್ಲವಾದುದರಿಂದ ಕಳೆದ ವರುಷವಿದ್ದ ಸದಸ್ಯರುಗಳೇ ವಿಭವ ಸಂವತ್ಸರಕ್ಕೂ ಇರತಕ್ಕುದೆಂಬ ಸಭಾಪತಿಗಳ ಸೂಚನೆಯನ್ನು ಸರ್ವರೂ ಅಂಗೀಕರಿಸಿದರು.—

೧. ಮ|| ರಾ|| ಬೆನಗಲ್ ರಾಮರಾಯರು, ಎಂ.ಎ., ಎಲ್‌ಎಲ್.ಬಿ. ಮದರಾಸು
೨. ,, ರಾಜಗೋಪಾಲ ಕೃಷ್ಣರಾಯರು ಉಡಿಪಿ
೩. ,, ಎಚ್. ತಿಮ್ಮಕೃಷ್ಣರಾಯರು, ಬಿ.ಎ., ಬಿ.ಎಲ್. ಬಳ್ಳಾರಿ
೪. ,, ಕೆ. ಟಿ. ಶ್ರೀನಿವಾಸಾಚಾರ್ಯರು, ಬಿ.ಎ., ಎಲ್‌ಎಲ್.ಬಿ. ,,
೫. ,, ಸಿ. ವೆಂಕೋಬಾಚಾರ್ಯರು, ಎಂ.ಎ., ಎಲ್‌ಎಲ್.ಬಿ. ,,

ಉತ್ತರ ಕರ್ನಾಟಕಕ್ಕೆ—

೧. ಮ|| ರಾ|| ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ ಬನಹಟ್ಟಿ
೨. ,, ಗಂಗಾಧರಪ್ಪ ಸಂಗಪ್ಪ ಸಾಬೋಜಿ ಥಲಕವಾಡಿ

ಹೈದರಾಬಾದು ಸಂಸ್ಥಾನಕ್ಕೆ—

೧. ಮ|| ರಾ|| ಕೃಷ್ಣರಾವ್ ಕಪಟ್ರಾಳ್ ಗುಲ್ಬರ್ಗ
೨. ,, ರಾಘವೇಂದ್ರರಾವ್ ಚ್ಯಾಕಲಬ್ಬಿ ಕೊಪ್ಪಳ

ಕೊಡಗಿಗೆ—

೧. ಮ|| ರಾ|| ಎನ್. ಆರ್. ಸುಬ್ಬಣ್ಣಯ್ಯನವರು ನಿಡತ

ಸದಸ್ಯರುಗಳ ಚುನಾವಣೆ ಮುಗಿಯಲು, ಮ|| ಬಿ. ಎಂ. ಶ್ರೀಕಂಠಯ್ಯನವರು ಬಂದು ಮರಳಿ ಸಭಾಪತಿತ್ವವನ್ನು ವಹಿಸಿದರು.

೬. ಮ|| ರಾ|| ವಿ. ಬಿ. ಆಲೂರರವರು ಕಳುಹಿಸಿದ್ದ ಸೂಚನೆಗಳು:—

೧. ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಕರ್ನಾಟಕ ಭಾಷೆಯ ಬಗ್ಗೆ ಜಾಗೃತಿಯನ್ನುಂಟು ಮಾಡುವುದನ್ನು ಕುರಿತು ಒಬ್ಬ ಸ್ವತಂತ್ರ ಪ್ರಚಾರಕರನ್ನು ನೇಮಿಸಿ ಅವರನ್ನು ಮೊಗ

ಲಾಯಿಯ ಕನ್ನಡ ಪ್ರದೇಶಗಳಿಗೂ ಕೋಯಮುತ್ತೂರು, ಸೇಲಂ ಮುಂತಾದ ಗಡಿನಾಡುಗಳಿಗೂ ಕಳುಹಿಸಬೇಕು.

ಈ ಸೂಚನೆಯನ್ನು ಮ॥ ರಾ॥ ಪಿ. ಬಿ. ಆಲೂರರವರು ಸಭೆಯಲ್ಲಿ ವಿಶದಗೊಳಿಸಿದನಂತರ ಮ॥ ರಾ॥ ಚಿಕ್ಕಕಲಪ್ಪ ರಾಘವೇಂದ್ರರಾಯರು ಇದನ್ನು ಅನುಮೋದಿಸಲು, ಸರ್ವರೂ ಅಂಗೀಕರಿಸಿದರು.

೨. ಕರ್ನಾಟಕ ಸಾಹಿತ್ಯ ಪರಿಷತ್ತಿನವರು ವಿಶ್ವಕೋಶ ಮತ್ತು ನಿಘಂಟುಗಳ ನಿರ್ಮಾಣದ ಕಾರ್ಯವನ್ನು ಶೀಘ್ರ ಪ್ರಾರಂಭಿಸಬೇಕು.

ಈ ಸೂಚನೆಯ ವಿಷಯದಲ್ಲಿ ಮೈಸೂರು ಸರಕಾರದ ಸಂಪದಭ್ಯುದಯ ಶಾಖಾಧಿಕಾರಿಗಳು ಮಾಡುತ್ತಲಿರುವ ಪ್ರಯತ್ನಗಳನ್ನು ಪರಿಷತ್ತಿನ ಗೌರವ ಕಾರ್ಯದರ್ಶಿಯವರು ಸದಸ್ಯರಿಗೆ ಅರಿಕೆಮಾಡಲು, ಮ॥ ರಾ॥ ಪಿ. ಬಿ. ಆಲೂರರವರು ಆ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು.

೩. ಭಾಷೆಯ ತಿದ್ದುಪಡಿಯ ವಿಷಯದಲ್ಲಿ ಹೋದ ಸಾಹಿತ್ಯ ಪರಿಷತ್ತಿನ ಸಭೆಯಲ್ಲಿಯೂ ಸಮ್ಮೇಳನದಲ್ಲಿಯೂ ಆದ ನಿರ್ಣಯಗಳನ್ನು ಪುನಃ ಮುಂಜೂರುಮಾಡಬೇಕು; ಮತ್ತು ಅವು ಕಾರ್ಯತಃ ಫಲಕಾರಿಯಾಗುವುದಕ್ಕೆ ಏರ್ಪಾಡು ಮಾಡಬೇಕು.

ಈ ಸೂಚನೆಯನ್ನು ಮ॥ ರಾ॥ ಪಿ. ಬಿ. ಆಲೂರರವರು ಅಧಿವೇಶನದಲ್ಲಿ ವಿಚಾರಮಾಡಬೇಕಾದ ಆವಶ್ಯಕತೆಯಿಲ್ಲವೆಂದು ಹಿಂದಕ್ಕೆ ತೆಗೆದುಕೊಂಡರು.

೪. ಕೆಲ ಕೆಲವು ವಿಷಯಗಳಲ್ಲಿ ಪರಸ್ಥಳದ ವ್ಯವಸ್ಥಾಪಕ ಸದಸ್ಯರಿಂದ ಲಿಖಿತ ಮೂಲಕ ಬಂದ ಅಭಿಪ್ರಾಯಗಳನ್ನು ಮತ ಎಣಿಸುವಾಗ ಲೆಕ್ಕಕ್ಕೆ ಹಿಡಿದುಕೊಳ್ಳಬೇಕು. ಯಾವ ವಿಷಯಗಳಲ್ಲಿ ಆ ಪ್ರಕಾರ ಲೆಕ್ಕಕ್ಕೆ ಹಿಡಿಯಬೇಕೆಂಬುದನ್ನು ಕಾರ್ಯದರ್ಶಿಗಳೂ ಅಧ್ಯಕ್ಷರೂ ನಿರ್ಣಯಿಸಬೇಕು; ಅಥವಾ, ಯಾವುದೊಂದು ವಿಷಯದಲ್ಲಿ ಆ ಪ್ರಕಾರ ಲಿಖಿತ ಮೂಲಕ ಅಭಿಪ್ರಾಯಗಳನ್ನು ಲೆಕ್ಕಕ್ಕೆ ಹಿಡಿಯಬೇಕೆಂದು ಅಭಿಪ್ರಾಯಪಟ್ಟರೆ ಆತನ ಸೂಚನೆಯ ವಿಚಾರವನ್ನು ವ್ಯವಸ್ಥಾಪಕ ಕಮಿಟಿಯವರು ಮುಂಚೆ ಮಾಡಿ ಅನಂತರ ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಈ ಠರಾವಿನ ಉದ್ದೇಶವನ್ನು ಮ॥ ರಾ॥ ಆಲೂರರವರು ಸಭೆಯಲ್ಲಿ ವಿಶದಗೊಳಿಸಿದನಂತರ ಅದನ್ನು ಮ॥ ರಾ॥ ಕೃಷ್ಣರಾವ್ ಮುದವೇಡಕರರು ಅನುಮೋದಿಸಿದರು.

ತರುವಾಯ, ಮ॥ ರಾ॥ ಚಿಕ್ಕಕಲಪ್ಪ ರಾಘವೇಂದ್ರರಾಯರು ಕೆಳಗೆ ಕಂಡ ಪ್ರಕಾರ ಅದನ್ನು ತಿದ್ದಿ ಸದಸ್ಯರ ಮುಂದಿಟ್ಟರು :—

ಕಾರ್ಯಕಾರಿ ಸಭೆಯಲ್ಲಿ ಚರ್ಚೆಗೆ ಬಂದ ವಿಷಯಗಳ ಚರ್ಚೆಯ ಕಾಲಕ್ಕೆ ಪರಸ್ಥಳದ ವ್ಯವಸ್ಥಾಪಕ ಸದಸ್ಯರಿಂದ ಬಂದ ಲಿಖಿತ ಮೂಲಕ ಅಭಿಪ್ರಾಯಗಳನ್ನು ಮತ ಎಣಿಸುವಾಗ ಲೆಕ್ಕಕ್ಕೆ ಹಿಡಿದುಕೊಳ್ಳಬೇಕು. ಆದರೆ, ಯಾವ ವಿಷಯಗಳಲ್ಲಿ ನಿಶ್ಚಿತಾಭಿಪ್ರಾಯವನ್ನು

ಕೊಡಬೇಕಾಗಿರುವುದೋ ಅವರಲ್ಲಿ ಸದಸ್ಯರು ೧೩ನೆಯ ನಿಯಮದ ಪ್ರಕಾರ ಮಾಡಲಿಕ್ಕೇ ಬೇಕು.

ಇದನ್ನು ಮ॥ ರಾ॥ ಎಂ. ಎಸ್. ಲಕ್ಷ್ಮೀನಾರಾಯಣರಾಯರು ಅನುಮೋದಿಸಿದರು.

ಇದರ ಮೇಲೆ ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯನವರು ಎರಡನೆಯ ತಿದ್ದುಪಡಿಯನ್ನು ಸಭೆಯ ಮುಂದಿಟ್ಟರು; ಅದೇನೆಂದರೆ:—

ಮ॥ ರಾ॥ ಏ. ಬಿ. ಆಲೂರರವರ ಠರಾವನ್ನು ಪರಿಷತ್ತಿನ ಸಕಲ ಸದಸ್ಯರಿಗೂ ಕಳುಹಿಸಿ ಅವರ ಅಭಿಮತಗಳನ್ನು ತರಿಸಿಕೊಂಡು ಅವನ್ನು ಪರಿಷತ್ತಿನ ಸಾಮಾನ್ಯಾಧಿವೇಶನದ ಮುಂದಿಡತಕ್ಕದು.

ಇದನ್ನು ಮ॥ ರಾ॥ ಎ. ಆರ್. ಕೃಷ್ಣಶಾಸ್ತ್ರಿಗಳು ಅನುಮೋದಿಸಿದರು. ಮ॥ ರಾ॥ ವೆಂಕಣ್ಣಯ್ಯನವರ ತಿದ್ದುಪಡಿಯನ್ನು ಸದಸ್ಯರ ಮುಂದಿಡಲು, ಅದು ಬಹುಮತಾನುಸಾರವಾಗಿ ಅಂಗೀಕೃತವಾಗಲಿಲ್ಲ. ಅನಂತರ, ಮ॥ ರಾ॥ ಚ್ಯಾಕಲಬ್ಬಿ ರಾಘವೇಂದ್ರರಾಯರು ತಿದ್ದಿದ ಸೂಚನೆಯನ್ನು ಸದಸ್ಯರ ಮುಂದಿಡಲು, ಅದೂ ಅಂಗೀಕೃತವಾಗಲಿಲ್ಲ. ಕೊನೆಗೆ, ಮ॥ ರಾ॥ ಏ. ಬಿ. ಆಲೂರರವರ ಠರಾವನ್ನು ವೋಟಿಗೆ ಹಾಕಲು ಅದೂ ಅಂಗೀಕೃತವಾಗದೆ ಹೋಯಿತು.

೭. ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಸೂಚನೆ:—

ಪರಿಷತ್ತಿನ ನಿಬಂಧನೆಗಳನ್ನನುಸರಿಸಿ ಪ್ರತಿ ವರ್ಷವೂ ನಡೆಯತಕ್ಕ ಸಾಹಿತ್ಯ ಸಮ್ಮೇಳನವನ್ನು ಮೇ ತಿಂಗಳಿಗೆ ಬದಲಾಗಿ ಡಿಸೆಂಬರು ತಿಂಗಳಲ್ಲಿ ನಡೆಯಿಸತಕ್ಕದು.

ಇದನ್ನು ಸಭಾಪತಿಗಳು ಸದಸ್ಯರ ಮುಂದೆ ಓದಿ ಸೂಚನೆಯ ಉದ್ದೇಶವನ್ನು ತಿಳಿಸಿದರು. ಮ॥ ರಾ॥ ಕೃಷ್ಣರಾವ್ ಮುದವೇಡಕರರು ಎದ್ದು ಸಮ್ಮೇಳನ ಕಾಲವನ್ನು ಬದಲಾಯಿಸಕೂಡದೆಂದೂ ಈಗಿರುವಂತೆಯೇ ಇರತಕ್ಕದೆಂದೂ ಹೇಳಿದರು. ಮ॥ ರಾ॥ ಆಲೂರರವರು ಸಮ್ಮೇಳನವನ್ನು 'ಈಸ್ಟರು' ರಜಾ ದಿವಸಗಳಲ್ಲಿ ನಡೆಯಿಸಬಹುದೆಂದು ಸೂಚಿಸಿ, ತರುವಾಯ ಅದನ್ನು ವಿಚಾರ ಮಾಡಲಾವಶ್ಯಕವಿಲ್ಲವೆಂದು ತಮ್ಮ ತಿದ್ದಿದ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು. ಮ॥ ರಾ॥ ಕೃಷ್ಣರಾವ್ ಕಪಟ್ರಾಳ್‌ರವರು ಎದ್ದು ಎಂದಿನಂತೆ ಸಮ್ಮೇಳನವು ಮೇ ತಿಂಗಳಲ್ಲಿಯೇ ನಡೆಯಬೇಕೆಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ತರುವಾಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಅಸಲು ಸೂಚನೆಯನ್ನು ವೋಟಿಗೆ ಹಾಕಲು ಅದು ಅಂಗೀಕೃತವಾಗದೆ ಬಿದ್ದು ಹೋಯಿತು.

೮. ಮ॥ ರಾ॥ ಬೆಸಗಲ್ ರಾಮರಾಯರ ಸೂಚನೆ:—

ಕರ್ಣಾಟಕದೊಳಗಿನ ಪ್ರತಿ ಜಿಲ್ಲೆಯಲ್ಲಿಯ ಮತ್ತು, ಸಾಧ್ಯವಾದ ಮಟ್ಟಿಗೆ, ಕರ್ಣಾಟಕದ ಹೊರಗಣ ಪ್ರದೇಶಗಳಲ್ಲಿಯ ಕರ್ಣಾಟಕ ಪತ್ರಿಕಾ ಸಂಪಾದಕರು, ಕವಿಗಳು, ಲೇಖ

ಕರು, ಮುದ್ರಕರು, ಪ್ರಚಾರಕರು, ಪ್ರಮುಖರಾದ ಗಾಯಕರು, ನಟರು, ನಾಟಕ ಮಂಡಲಿಗಳ ಯಜಮಾನರು, ಕಲಾ ಕೋವಿದರು ಮತ್ತು ಪ್ರತಿಷ್ಠಿತರು, ಕರ್ಣಾಟ ಭಾಷಾಭಿಮಾನಿಗಳಾದ ಇತರ ಸ್ತ್ರೀ ಪುರುಷರು ಇವರ ಒಂದು ಪಟ್ಟಿಯನ್ನು ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯವರು ಬರುವ ಡಿಸೆಂಬರು ತಿಂಗಳ ಕೊನೆಯೊಳಗಾಗಿ ಪ್ರಯತ್ನಪಟ್ಟು ಸಂಗ್ರಹಿಸಿ ಆ ಮುಂದೆ ಪ್ರತಿ ವರ್ಷದ ಜನವರಿ ತಿಂಗಳ ಕೊನೆಯೊಳಗಾಗಿ ಆ ಪಟ್ಟಿಯನ್ನು ತಿದ್ದಿ ಸವರಿಸಿಕೊಳ್ಳುತ್ತಲಿರಬೇಕು. ಈ ಪಟ್ಟಿಯ ಬಾಬತು ನೂರಕ್ಕೆ ಕಡಿಮೆಯಿಲ್ಲದಷ್ಟು ಪ್ರತಿಗಳನ್ನು ತಯಾರಿಸಿಕೊಂಡು ಯಾವಾಗಲೂ ಸಿಲುಕಿನಲ್ಲಿ ಇಟ್ಟುಕೊಂಡಿರಬೇಕು; ಮತ್ತು ಅಪೇಕ್ಷಿಸುವವರಿಗೆ ಕ್ಲುಪ್ತವಾದ ಬೆಲೆಗೆ ಕೊಡತಕ್ಕದ್ದು. ಈ ಪಟ್ಟಿಯಲ್ಲಿ ಕನಿಷ್ಠಪಕ್ಷ ಐನೂರು ಹೆಸರುಗಳಾದರೂ ಇರುವುವೆಂದು ನಿರೀಕ್ಷಿಸಲಾಗುತ್ತಿದೆ.

ಇದನ್ನು ಕಳುಹಿಸಿದ ಸದಸ್ಯರು ಅಧಿವೇಶನಕ್ಕೆ ಬಂದಿರಲಿಲ್ಲವಾದುದರಿಂದ ಸಭಾಪತಿಗಳೇ ಇದನ್ನು ಸೂಚಿಸಿದರು.

ಈ ಠರಾವು ಸರ್ವರಿಂದಲೂ ಅಂಗೀಕೃತವಾಯಿತು.

೯. ಮ॥ ರಾ॥ ಹಲಕೂರು ವೆಂಕಟರಮಣಯ್ಯನವರ ಸೂಚನೆಗಳು:—

೧. ಈ ಪರಿಷತ್ತಿನ ಆವ ಸದಸ್ಯರಾಗಲಿ ತಾವು ರಚಿಸಿರುವ ಗ್ರಂಥಗಳ ವಿಷಯವಾದ ತಿಳಿವಳಿಕೆ (ನೋಟೀಸು)ಗಳ ಹಸ್ತಪ್ರತಿಗಳನ್ನು ಪರಿಷತ್ಪತ್ರಿಕೆಯ ಸಂಗಡ ಉಚಿತವಾಗಿ ಹರಡಬೇಕೆಂದು ಅಪೇಕ್ಷಿಸಿ ಗೌರವ ಕಾರ್ಯದರ್ಶಿಯವರಲ್ಲಿಗೆ ಕಳುಹಿಸಿದಲ್ಲಿ ಅವನ್ನು ಪರಿಷತ್ಪತ್ರಿಕೆಯ ಜೊತೆಯಲ್ಲಿ ಆವ ಪ್ರತಿಫಲವನ್ನೂ ಕೇಳದೆ ಉಚಿತವಾಗಿ ಹಂಚುವುದು.

ಈ ಠರಾವನ್ನು ಸಭಾಪತಿಗಳು ಸದಸ್ಯರ ಮುಂದಿಡಲು, ಸರ್ವರೂ ಅದನ್ನು ಅಂಗೀಕರಿಸಿದರು.

೨. ಆರಾದರೂ ಪರಿಷತ್ಪತ್ರಿಕೆಯಲ್ಲಿ ತಮ್ಮ ತಮ್ಮ ವ್ಯಾಪಾರ ಪ್ರಕಟನೆಗಳನ್ನು ಮುದ್ರಿಸಲು ತಕ್ಕ ದರದಂತೆ ಮುಂಗಡ ಹಣವನ್ನು ಕೊಟ್ಟು ಕೇಳುವವರಿಗೆ ತಕ್ಕ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟು ಅವನ್ನು ಪ್ರಕಟಿಸಿ ಅದರಿಂದ ಬಂದ ಆದಾಯವನ್ನು ಪರಿಷತ್ತಿನ ನಿಧಿಗೆ ಸೇರಿಸುವುದು.

ಈ ಠರಾವು ಅಂಗೀಕೃತವಾಗಲಿಲ್ಲ.

೩. ಪರಿಷತ್ಪತ್ರಿಕೆಯ ಎಂಟು ಅಥವಾ ಹದಿನಾರು ಪುಟಗಳನ್ನು ಪುರಾತನ ಕವಿಕೃತ ಉತ್ತಮ ಗ್ರಂಥಗಳ ಪ್ರಕಟನೆಗೂ, ನಾಲ್ಕು ಪುಟಗಳನ್ನು ಎಲ್ಲಾ ಬಗೆಯ ಗ್ರಂಥ ವಿಮರ್ಶೆಗೂ ಮೀಸಲಾಗುವಂತೆ ಮಾಡಿ ಉಳಿದ ಪುಟಗಳನ್ನು ಇತರ ವಿಷಯಗಳಿಗಾಗಿ ಉಪಯೋಗಿಸುವುದು.

ಈ ಸೂಚನೆಯನ್ನು ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯವರ ವಿಚಾರಕ್ಕೆ ತರತಕ್ಕುದೆಂದು ತೀರ್ಮಾನಿಸಲಾಯಿತು.

೪. ಪರಿಷತ್ತು ಸ್ವಂತವಾಗಿ ಒಂದು ಮುದ್ರಾಯಂತ್ರವನ್ನು ಇಡುವುದಕ್ಕೆ ತಕ್ಕ ಏರ್ಪಾಡು ಮಾಡುವುದು, ಎಂದರೆ, ಷೇರು ಒಂದಕ್ಕೆ ೧೦ ರೂಪಾಯಿಗಳಂತೆ ಗೊತ್ತುಮಾಡಿ ಷೇರು ಸಂಗ್ರಹಿಸುವುದು.

ಹಿಂದೆ ಈ ಪ್ರಯತ್ನವು ನಡೆದು ಸಫಲವಾಗದೆ ನಿಂತುಹೋದುದರಿಂದ ಈ ತರಾವಿನ ವಿಚಾರವು ಬೇಡವೆಂದು ತೀರ್ಮಾನಿಸಲಾಯಿತು.

ಇಷ್ಟು ಹೊತ್ತಿಗೆ ರಾತ್ರಿ ೯॥ ಗಂಟೆಯಾಗಲು, ಮ॥ ರಾ॥ ಟಿ. ಟಿ. ಶರ್ಮರವರ ಗೊತ್ತುವಳಿಗಳನ್ನು ಮುಂದೆ ವಿಚಾರಕ್ಕಿಟ್ಟುಕೊಳ್ಳಬೇಕೆಂದು ತೀರ್ಮಾನವಾಯಿತು.

ಸಭಾಪತಿಗಳಿಗೆ ವಂದನೆಯನ್ನು ಸಮರ್ಪಿಸಿದನಂತರ ಅಧಿವೇಶವು ಕೊನೆಗಂಡಿತು.

ನಾನಾ. ದೇಸಾಯಿ,
ಅಧ್ಯಕ್ಷ.

ಬಿ. ಎಂ. ಶ್ರೀಕಂಠಯ್ಯ,
ಅಧ್ಯಕ್ಷ.

ನಂ. ವೆಂಕಟೇಶ ಅಯ್ಯಂಗಾರ್,
ಗೌ॥ ಕಾರ್ಯದರ್ಶಿ.

"ಉಮರ್ ಖಯ್ಯಾಮ್"

ಕ್ರಿ. ಶ. ೧೧ನೆಯ ಶತಕದಲ್ಲಿದ್ದ 'ಉಮರ್ ಖಯ್ಯಾಮ್' (Omar Khayyam) ಎಂಬೊಬ್ಬ ಪಾರಸೀಕ ಕವಿಯ 'ರುಬಾಇಯಾತ್' (Rubaiyat) ಎಂಬ ಲೋಕಪ್ರಿಯವಾದೊಂದು ಕವಿತೆ ಇದೆ. 'ರುಬಾಇಯಾತ್' ಎಂಬುದು 'ರುಬಾಇ' (Rubai) ಎಂಬ ಅರಬೀ ಶಬ್ದದ ಬಹುವಚನವು; 'ರುಬಾಇ' ಎಂದರೆ "ಕ—ಕ—ಖ—ಕ" ಎಂಬಂತೆ ಅಂತ್ಯಾಕ್ಷರ ಪ್ರಾಸವುಳ್ಳ ಒಂದು ಬಗೆಯ ಚೌಪದಿಯ ಹೆಸರಷ್ಟೆ; ಈ ಕವಿತೆ ಆ ಚೌಪದಿಯಲ್ಲಿ ರಚಿಸಲ್ಪಟ್ಟಿದೆ. ಅದನ್ನು Fitzgerald ಎಂಬೊಬ್ಬ ಆಂಗ್ಲ ಕವಿ ನಾಲ್ಕು ಸಲವೇನೋ ಇಂಗ್ಲಿಷು ಭಾಷೆಯಲ್ಲಿ ಪರಿವರ್ತಿಸಿದನು. ಈ ಕನ್ನಡ ಅನುವಾದದಲ್ಲಿ ಆತನ ಆಂಗ್ಲ ಭಾಷಾಂತರದ ಪ್ರಥಮಾವೃತ್ತಿಯನ್ನು (ಕ್ರಿ. ಶ. 1859) ಅನುವರ್ತಿಸಿ, ಅದರಲ್ಲಿಯ ೭೫ ಪದ್ಯಗಳ ಸೂತ್ರದಿಂದ ೫೦ನ್ನಷ್ಟೇ ಆಯ್ದು ಕನ್ನಡಿಸಿದೆ.

ಈ ಮನೋಹರವಾದ ಕವಿತೆಯಲ್ಲಿಯ ಹಲ ಮಾತುಗಳು ಅಸಭ್ಯವೆಂದು ತೋರಬಹುದು; ಆದರೆ ಹಾಗಲ್ಲ, ಅವು ಲಾಕ್ಷಣಿಕ ಪದಗಳಷ್ಟೆ. ಅವು ಕವಿಸಮಯಾನುಸಾರವಾಗಿ ವ್ಯಂಗ್ಯಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆ; ಅವುಗಳ ಅರ್ಥವು ಹೀಗಿದೆ:—

(೧) ಕಳ್ಳು, ಮದಿರೆ, ಮಧು, ದ್ರಾಕ್ಷಿ, ಇತ್ಯಾದಿ = ಪರಮಾತ್ಮನಲ್ಲಿ ಅನನ್ಯಭಕ್ತಿ, ಅಥವಾ ದಿವ್ಯಜ್ಞಾನ; (೨) ತಿಳಿ, ಬಿಂದಿಗೆ, ಕುಡಿಕೆ, ಕೊಡ, ಇತ್ಯಾದಿ= ಮನುಷ್ಯನ ಹೃದಯ; (೩) ಕಳ್ಳಂಗಡಿ—ದೇವರನ್ನು ಸಾಧಿಸಲಿಕ್ಕೆ ಬೇಕಾದ ಏಕಾಂತತೆ, ಅಥವಾ ದೇವರನ್ನು ಅನನ್ಯಭಾವದಿಂದ ಸಾಧಿಸುವವರ ಒಡನಾಟ; (೪) ಕೋಳಿ—ಮನಸ್ಸಾಕ್ಷಿ, ಅಥವಾ ಹೃದಯದ ಜಾಗೃತಿ; (೫) ಇನಿಯೆ, ಅರಸಿ, ನಲ್ಲೆ, ಇತ್ಯಾದಿ = ಮಾರ್ಗದರ್ಶಕ, ಗುರು ಅಥವಾ ಸಹಕಾರಿ; (೬) ಮಧುಮಾಸ, ಸುಗ್ಗಿ—ಜೀವನ ಸಾರ್ಥಕ್ಯವನ್ನು ಮಾಡಿಕೊಳ್ಳತಕ್ಕ ಕಾಲ; (೭) ಕುಂಬಾರನ ಅಂಗಡಿ = ಈ ಜಗತ್ತು; (೮) ಮಣ್ಗೊಡಲು (ಮಣ್ಣಿನ ಪಾತ್ರ) = ಮನುಷ್ಯನೇ ಮೊದಲಾದ ಜೀವಿಗಳು; (೯) ಮತಿ (ಬುದ್ಧಿ) ಲೌಕಿಕ ಜ್ಞಾನವನ್ನು ಕೊಡುತ್ತದೆ, (ಕಳ್ಳು ಎಂದರೆ ಭಕ್ತಿ ದಿವ್ಯ ಜ್ಞಾನವನ್ನು ಕೊಡುತ್ತದೆ); (೧೦) ಕಳ್ಳಂಗಡಿಗೆ ಬಂದ ಯಕ್ಷನೆಂದರೆ ದೇವರನ್ನು ಸಾಧಿಸಿದ ಯಾವನೊಬ್ಬ ಜ್ಞಾನಿ; (೧೧) ದೇಗುಲ(ದೇವಾಲಯ)ವು ಮೂಢ ಮತ್ತು ಡಾಂಭಿಕ ಆಚಾರಗಳ ಆಶ್ರಯವೆಂಬುದರಿಂದ, ದೇವರು ಅಲ್ಲಿ ದೊರೆಯನು; ಆತನನ್ನು ತನ್ನ ಹೃದಯದ ಏಕಾಂತದ (ಕಳ್ಳಂಗಡಿಯ)ಲ್ಲಿ ತಾನೆ ಕಂಡುಕೊಳ್ಳಬೇಕು—ಇತ್ಯಾದಿ.

1. ಏಳು ಮುಂಬೆಳಗಿರುಳ ಬಟ್ಟಲಲಿ ಕಲ್ಲಂ
ಬಿಸುಡೆ ಪರಿದೋಡಿದುವು ತಾರಗೆಗಳೆಲ್ಲಂ।
ಅರಸನುಪ್ಪರಿಗೆಯಂ ಕೆಂಬಿಸಿಲಿನುರುಳ
ನ್ನೊಡ್ಡಿ ಸೆರೆವಿಡಿದನಿದೊ ಮೂಡೆಂಬ ಭಿಲ್ಲಂ ॥ ೧ ॥

2. ಬಾನೊಳೆಡಗೆಯ್ಯುಸೆಯ ಕಳ್ಳಿನಂಗಡಿಯಿಂ
[1]ತೆರಳ್ವ ದನಿಯಿನ್ನ [2]ಕನವರಿಸಿತೀ ನುಡಿಯಿಂ।
ಏಳಿ ಮಕ್ಕಳೆ ತುಂಬಿಸೀ [3]ತಿಳಿಗೆ ತೀವೆ
ಮದಿರೆ ಬತ್ತದ ಮುನ್ನ [4]ಬಾಳ ತಿಳಿಯೆಡೆಯಿಂ ॥ ೨ ॥

3. ಕೋಳಿ ಕೆಲೆವುದೆ ಕಳ್ಳಿನಂಗಡಿಯ ಮುಂದು
ನಿಂದರೊದರಿದರಾಗ ತೆರೆ ಕದವನೆಂದು।
ಬಲ್ಲೆ ನೀನೆನಿತಹಂ ತಳುವೆವಾವಿಲ್ಲಿ
ತೆರಳಲೊಮ್ಮೆಗೆ ಮರಳಿ ಬರಲಾರೆವೆಂದುಂ ॥ ೩ ॥

5. ಚಿರಚೈತ್ರವಿಂದಲ್ಲಿ [5]ಅಸುಗೆಯಾ ತಾನಂ
ಎಲ್ಲಿ ಬಲ್ಲರೆ [6]ಕೃಷ್ಣೆಯಕ್ಷಯಾಧಾನಂ।
ದ್ರಾಕ್ಷೆಯಾದೊಡೆ ಸುರಿಗು ಮುನ್ನಿನಿನಿಗೆಂಪಂ
ನೀರ ಕರೆಯಿಂದಿನ್ನು ಮಲರ್ಗುಮುದ್ಯಾನಂ ॥ ೪ ॥

6. ಸಿರಿಗನ್ನಡದಿ [7]ನಿಷಾದಸ್ವರತೆ ಸಂದು
ಕಳ್ಳು ಕೆಂಗಳ್ಳು ಕಳ್ಳೆಂದು ಕುಕಿಲೊಂದು।
ನೀಡುತಿದೆ ಮನವಿಯಂ ಮಾಂದಳಿರ್ಗೆ ಕೂಗಿ
ತನ್ನ ಕರಿ ಕೆನ್ನೆಯಂ ಕೆಂಪೇರಿಸೆಂದು ॥ ೫ ॥

7. ತಿಳಿಯ ತುಂಬಿಸು ಸುಗ್ಗಿಯಲರ ಬೆಂಕಿಯಲಿ
ಹಂಬಲದ ಕಂಬಳಿಯ ನೀಂಟಶಂಕೆಯಲಿ।
ಕಾಲವಕ್ಕಿಗೆ ತುಸಮೆ ಹಾರಲಿದೆ ದಾರಿ
ಮೇಣಿದಕೊ ಮಿಳ್ಳಿಸಿತು ಬಿಚ್ಚಿರಂಕೆಯಲಿ ॥ ೬ ॥

8. ನೋಡ ಹಗಲೊಡನೆ ಸಾಸಿರ ಹೂಗಳೆದ್ದು
ಸಾಸಿರಂ ಚದರಿ ಮಣ್ಣಾದುವಿಳಿಬಿದ್ದು।
ಮಾಧವಿಯ ಮಲರ್ಚುವೀ ಮೊದಲ ಮಧುಮಾಸಂ
ಕೊಂಡೊಯ್ವುದೆನಿತೊ ಸಿರಿಯಣುಗರಂ ಕದ್ದು ॥ ೭ ॥

1. ಅನಾಹುತ. 2. ಕನಸಿಂದ [illegible]. 3. [illegible] ಪಾನಪಾತ್ರ. 4. [illegible]. 5. ಅಶೋಕವನ. 6. ದ್ರೌಪದಿಯ ಅಕ್ಷಯಪಾತ್ರ. 7. ಸಪ್ತಸ್ವರಗಳಲ್ಲಿ [illegible] ಎಂಬ ಕೊನೆಯ ಸ್ವರ.

11\. ಇಲ್ಲಿ ರೆಂಬೆಯ ನೆಳಲಲಿನಿರೊಟ್ಟಿಯೊಂದು
ಕಳ್ಳ ಬಿಂದಿಗೆಯೊಂದು ಸವಿಗಬ್ಬವೊಂದು।
ನೀನೆನ್ನ ಬಳಿಯೆ ಕಾಡಲಿ ಹಾಡುವಂದು
ಕಾಡೆ ಗಡ ಸಗ್ಗದಿಂದೆನಗೆ ಲೇಸಂದು ॥ ೮ ॥

12\. ಬಗೆವರಿಳೆಯುಳಿಯಾಳ್ತನದಿ ಕೆಲಬರಿನಿದಂ
ಕೆಲಬರಿನ್ನಯ್ತ್ತುರುವ ಸಗ್ಗದಲಿ ಬಿನದಂ।
ಕಡವ ನೀಡಾಡು ದಕ್ಕಿಸು ಕೆಯ್ಯ ರೊಕ್ಕಂ
ಏಕೆ ಕಿವಿಗೆಟಕದಿಹ ಜಯಭೇರಿ ನಿನದಂ ॥ ೯ ॥

13\. ನೋಡ ನೀನತ್ತಿತ್ತಲಲರ್ವ ತಾವರೆಯಂ
ಜಗದಿ ನಗುತಾಂ ಬರುವೆನರಿಯೆನೇ ಪರಿಯಿಂ।
ಒಡನೆನ್ನ ಹಿಮ್ಮಣಿಯ ಹಗ್ಗಮಂ ಹರಿದು
ಕಡವರವನೆರಚಿ ತುಂಬಿಸುವೆನೀ ತೆರೆಯಂ ॥ ೧೦ ॥

16\. ಹಗಲಿರುಳ ಪರಿವಿಡಿಯೆ ತೆರಬಾಗಿಲಂತೆ
ಬಗೆಯಿೂ ಜಗಂ ಗಡಾ ಮುರುಕು [1]ತಳಿಯಂತೆ।
ತನ್ನ ಗಳಿಗೆಯ ಪೆಂಪನರಸನಾ ಹಿಂದೆ
ಮೆರಸುತರಸಂ ಪೋದನಿಲ್ಲಿ ಬಂದಂತೆ ॥ ೧೧ ॥

17\. ಗದರುತಿದೆ ಪುಲಿಯಂತೆ ಲೊಚಕುತಿದೆ ಹಲ್ಲಿ
ಮುನ್ನರಸರೊಲಿದು ನಲಿದರಮನೆಗಳಲ್ಲಿ।
ಉರು ಬೇಂಟಿಗನ ಮಣ್ಣಿನೊಲ್ಲಿಯಂ ಕತ್ತೆ
ಕೆರೆಯೆ ಕನಸಿಲ್ಲದೊರಗಿಹನರಸನಲ್ಲಿ ॥ ೧೨ ॥

18\. ಎದೆನೀರ್ ಬಸಿದ ವೀರರೊರಗಿದೆಡೆಯಿಂದ
ಹೂತ ಕಣಿಗಿಲ ಕಿಸುವ ಕಣಿಗಿಲೆಲ್ಲಿಂದ।
ತಿಳಿಯೆ ತೋಂಟವ ನಗಿಸುವೀ ಮೊಲ್ಲೆಯಿಲ್ಲಿ
ಉದಿರ್ದುವಂದೊಮ್ಮೆ ಚೆಲುವೆತ್ತ ಹೆರಳಿಂದ ॥ ೧೩ ॥

19\. ತನ್ನ ತನಿ ಹಸುರಿನೀ ತೊರೆಯುಲಿಗೆ ಗರಿಯಂ
ಬರಿಸುವಾನ್ನೆವ್ಮಿರುವ ಹಂಬಿನೀ ನಿರಿಯೇಂ।
ಮೆಲ್ಲನಿತೆ ಮಾಲು ಮೇಣಾರರಿವರಮುಮಾ
ಯಾವೊಮ್ಮೆಯಿಂದುಟಿಯಿನಿದು ಚಿಗಿತ ಪರಿಯಂ ॥ ೧೪ ॥

20\. ಹಿಂದಣನುತಾಪ ಮುಂದಣ ಭಯವ ಮರಸಿ
ಇಂದನೊಸೆಯಿಪ ತಿಳಿಗೆ ತುಂಬು ನನ್ನರಸಿ।

1\. ತಳಿ = ಸತ್ರ, ಧರ್ಮಶಾಲೆ.

ನಾಳೆ ಎಂಬೆಯು ಬಲ್ಲೆನೇ ನಾನೆ ನಾಳೆ
ನಿನ್ನೆಗಾಗೆನೆ ಸಂದ ಸಾಸಿರಂ ಬೆರಸಿ ॥ ೧೫ ॥

24. ಇಂದಿಗೆಂದಣೆಗೆಯ್ವ ತವಕಿಗರಿಗೆಲ್ಲ
ಮೇಣ್ ನಾಳೆಯುಂ ನಿಲುಕಿ ನಿಟ್ಟಿಪರಿಗೆಲ್ಲ।
ಕೂಗುತಿದೆ ಕತ್ತಲೆಯು ಕಾವಲಿನ ಕೋಳಿ
ಮರುಳೆ ಉಡುಗೆರೆಯೆ ಇಲ್ಲಿಲ್ಲವಲ್ಲಿಲ್ಲ ॥ ೧೬ ॥

26. ಅರಿದರಾಡಲಿ ಸೇರ ಗೆಳೆಯು ನೀ ಬಂದು
ಮುದಿಯ ಖಯ್ಯಾಮನೆಡೆಯು ನಿಸದವಿನಿತೊಂದು।
ಎಗರುತಿದೆ ಬಾಳ್ವೆ ಸವಿ ಸುಳ್ಳು ಮಿಕ್ಕಿಲ್ಲಂ
ಒಮ್ಮೆ ತಾನರಳ್ದ ಹೂವಿನ್ನರಳದೆಂದುಂ ॥ ೧೭ ॥

27. ಹರೆಯದಲಿ ಲವಲವಿಸಿ ನಾ ಕಲಿಯಲೆಂದೇ
ಬಲ್ಲವರ ಸಂತರೆಲ್ಲರ ಬಳಿಗೆ ಸಂದೆ।
ಸುಳಿನುಡಿಗೆ ಕಿವಿತೊಳಲಿ ಕಡೆಗೆಂದುಮಂತೆ
ಒಳಹೊಕ್ಕ ಬಾಗಿಲಿಂದಲೆ ಹೊರಗೆ ಬಂದೆ ॥ ೧೮ ॥

28. ಬಲ್ಲರಿಂ ಕಲ್ತರಿಮೆಯುಂ ಬಿತ್ತುತಂತೆ
ಕೆಯ್ಯಾರೆ ಗೇದೆ ನಾನದ ಬೆಳಸುವಂತೆ।
ಕೊನೆಗೆ ನಾನಳೆದ ದವಸಂ ಕಣಾ ಇನಿತೆ
ನೀರಂತೆ ಬಂದೆ ಪೋದಪೆ ಗಾಳಿಯಂತೆ ॥ ೧೯ ॥

29. ಅರಿಯೆನೇಕೆಂದರಿಯೆನೆಲ್ಲಿಂದವೆಂದು
ಜಗದಿ ಹರಿತಂದೆ ನೀರಂತೆ ನಾ ಬಂದು।
ಇಲ್ಲಿಂದ ಬಟ್ಟಬಯಲಿನ ಗಾಳಿಯಂತೆ
ಎಲ್ಲಿಗೆಂದರಿಯದಾಂ ಬೀಸುವೆನು ಮುಂದು ॥ ೨೦ ॥

30. ಕೇಳ್ದರಾರೆನ್ನನಿಲ್ಲಿಗೆ ನೂಕುವಂದು
ಕೇಳ್ವರಾರಿನ್ನುಮಿಲ್ಲಿಂ ದೂಡುವಂದು।
ಈ ದಿಟ್ಟತೆಯು ನೆನವ ಮುಳುಗಿಸಲು ತಾರ
ತುಂಬುತಿಳಿಯೊಂದು ಮೇಣಾತ್ತರ ಇನ್ನೊಂದು ॥ ೨೧ ॥

31. ನಡುಬುವಿಯಿನೆದ್ದು ಗೋಪುರವನೇಳನೆಯಾ
ದಾಂಟಿ ನಾ ಮಂಡಿಸಿದೆ ಗದ್ದುಗೆಯ ಶನಿಯಾ।
ಬಿಗುಗಂಟನೆನಿತೊ ಬಿಚ್ಚಿದೆನು ಪಯಣದಲಿ
ನರರ ನಿಯತಿಯ ಗಂಟನೊಂದುಳಿದು ಕೊನೆಯಾ ॥ ೨೨ ॥

32. ಮುಚ್ಚು ಕದವಿದೆ ಬೀಗ ತೆಗೆಯೆ ಗೊತ್ತಿಲ್ಲ
ಬಿಟ್ಟ ತೆರೆಯಾಚೆ ನನ್ನಿಣಕಲಳವಲ್ಲ।

ನನ್ನ ನಿನ್ನೆಂಬ ಕಿರುಕುಳದಿ ಲವಕಾಲಂ
ಬಳಿಕ ನೀನಾನೆಂಬ ಸುದ್ದಿಯುಣಮಿಲ್ಲ || ೩೩ ||

33. ಆಗಳಾನುರುಳ್ವ ಬಾಂಗಿಟ್ಟನೀ ವೊರೆಯಂ
ಏ ಸೋದರನೆತ್ತಿ ವಿಧಿ ಬಳಿವಿಡಿಸಿತರಿಯೆಂ।
ಕತ್ತಲೆಯೊಳೆಡಹುತಿಹ ತನ್ನ ಹಸುಳೆಗಳಂ
ಅಂಧಮತಿ ಎಂದು ಕೇಳಿಸಿತು ಪಡಿಯೊರೆಯಿಂ || ೩೪ ||

34. ಬಳಿಕ ಬಾಳ್ವೆಯ ಬುಗ್ಗೆಯೊಳಗುಟ್ಟ ಹೀರೆ
ಈ ಮಣ್ಣ ದೊನ್ನೆಗೆನ್ನಯ ತುಟಿಯನೂರೆ।
ತುಟಿಗೆ ತುಟಿಯೊತ್ತಿ ಮಿನುಕಿತು ಬದುಕಿಹನ್ನಂ
ಕುಡಿ ಮಡಿಯಲೊಮ್ಮೆಗೆಂದುಂ ಮರಳಲಾರೆ || ೩೫ ||

35. ನೆನೆವೆ ನಾನಿಂತು [1]ಕದಿದೆನಗೆ ತೊದಲುತ್ತಂ
ಮರುನುಡಿದ ದೊನ್ನೆ ಮುನ್ನೊಮ್ಮೆ ಸುಖಿಸುತ್ತಂ।
ಬಾಳ್ದುದೆಂದಾನೊತ್ತಿದದರ ತಣ್ದುಟಿಯಿಂ
ದೆನಿತಾನಲಿನಿತೀಯೆ [2]ನೆರೆದುದದು ಮುತ್ತಂ || ೩೬ ||

36. ಒಂದಿನಂ ಮುಚ್ಚಂಜೆ ಹಸಿ ಮಣ್ಣನುಂಡೆ
ಯಂ ಗುದ್ದುವೊಡ್ಡನಂ ಸಂತೆಯುಲಿ ಕಂಡೆ।
ನಾಲಗೆಯು ಸಾಲದುಲಿಯಿಂ ಗೊಜಗಿತಿಂತು
ಮೆಲ್ಲನೆಲೆ ತಟ್ಟಣ್ಣ ನನ್ನೊಳೇಂ ದಿಂಡೇ || ೩೭ ||

37. ತಿಳಿಯ ತುಂಬಿಸು ಎಂತು ನಮ್ಮಡಿಯ ಹಿಂದು
ಹೊತ್ತು ನುಣ್ಚುತಿದೆಂದು ಮರುಗಲೇಕಿಂದು।
ಇನ್ನುಮಾಗದ ನಾಳೆ ಅಳಿವೋದ ನಿನ್ನೆ
ಯನ್ನೇಕೆ ಹಲುಬುವೈ ಸವಿದೋರಲಿಂದು || ೩೮ ||

38. ಒಗ್ಗಳಿಗೆಯನಿತೆ ಪ್ರಳಯದ ಪಾಳಿನಲ್ಲಿ
ಒಗ್ಗಳಿಗೆ ಬಾಳ್ವೆಯೊರತೆಯಿನೀಂಟುವಲ್ಲಿ।
ಕಂದುತಿವೆ ತಾರೆ ಹೊರವಟ್ಟುದಿದೊ ಪಂಸೆ
ನಾಸ್ತಿಯರುಣೋದಯಕೆ ತಳುವೆ ಏಕಿಲ್ಲಿ || ೩೯ ||

40. ಬಲ್ಲಿರೈ ಗೆಳೆಯರಿರ ನಾನೆನಿತೊ ಹಿಂದೆ
ಮನೆಯೊಳವೃಕ್ಷಣವಿತ್ತು ಹೊಸಬಳಂ ತಂದೆ।
ಮುದಿಯ ದೊಡ್ಡಿಯ ಮತಿಯ ಬಾಗಿಲಿಂದಟ್ಟಿ
ದ್ರಾಕ್ಷೆಯಣುಗಿಗೆ ಮೆಚ್ಚಿ [3]ಮರುವಾಳ ನಿಂದೆ || ೪೦ ||

1. ಕದಿದು = ಮರೆಯಾಗಿ. 2. ನೆರೆದುದು = ಆತುರ್ದದು. 3. ಎರಡನೆಯ ಮದುವೆ.

42. ಕಳ್ಳಂಗಡಿಯು ಕಿಸಕದದಿ ಕೊಂಚ ಮುನ್ನಂ
ಮಬ್ಬಿನಲಿ ಮರಸಿ ಯಕ್ಷನೊಬ್ಬ ಚೆನ್ನಂ।
ಹೆಗಲ ಮೇಲ್ ಕೊಡವೆತ್ತಿ ಬಂದನಾ ಕೊಡದಿಂ
ಸವಿಯಲೆನಗಿತ್ತನೇಂ ದ್ರಾಕ್ಷೆಯಿನಿಗೆನ್ನಂ[1] ॥ ೩೧ ॥

46. ಕೆಳಗೆ ಮೇಲೊಳಗೆ ಹೊರಗರಿ ಸುತ್ತುಮುತ್ತು
ನೋಡಿಯಾ ನೆಳಲ ನಾಟಕಮಿದಂ ಗೆತ್ತು।
ಮಂಕು ಗೊಂಬೆಗಳಂತೆ ಬಳಸಿ ತಿರುಗುವೆವು
ಗೂಡ ನಡುಬತ್ತಿಯಾ ನೇಸರಿನ ಸುತ್ತು ॥ ೩೨ ॥

47. ನೀಂ ಕುಡಿವ ಮದಿರೆ ನೀನೊತ್ತುತಿರುವಧರಂ
ಮುಗಿವೊಲೆಲ್ಲಂ ಮುಗಿಯೆ ನಾಸ್ತಿಯಲಿ ಬೆದರಂ।
ಮಾಣ್ದಿದಂ ನಂಬು ನೀನಿರುವನ್ನವೆಂದುಂ
ನಾಸ್ತಿ ನೀಂ ಗಡ ಕಡಿಮೆಯಾಗೆ ನೀನದರಿಂ ॥ ೩೩ ॥

48. ತೆರೆದ ತಾವರೆ ತೀವೆ ತೊರೆತೊರೆಯ ತಡಿಯಾ
ಮುದಿಯ ಖಯ್ಯಮನೊಡನೆ ಮಿರುಮಧುವ ಕುಡಿಯಾ।
ಕಾಲಕೂಟವ ನಿನ್ನ ತುಟಿಗೊತ್ತೆ ಕಾಲಂ
[2]ಜುಣುಗದಲೆ ಹೀರದಂ ಕೇಳೆನ್ನ ನುಡಿಯಾ ॥ ೩೪ ॥

49. ಹಗಲಿರುಳ ಹಾಸಂಗಿಯೊಡ್ಡಿ ಮಾನವರಂ
ಕಾಯನಾಗಿಸಿ ವಿಧಿಯದಾಡಿಸುವುದವರಂ।
ಸುತ್ತಿಸುತಲತ್ತಿತ್ತ ಹೊಯ್ದು ತಡೆಗಟ್ಟಿ
ಒಂದೊಂದನೊಂದಿಸುಗು [3]ಕಂಟಲೆಯ ತವರಂ ॥ ೩೫ ॥

50. ಕೇಳ್ವುದೇನಹುದಲ್ಲವೆಂದು ಪುಟಚೆಂಡು
ನೆಗೆವುದೆಡಬಲಕೆಸುಗನೆಸೆಯ ಕೆಯ್ಕೊಂಡು।
ಮೇಗಣಿಂ ನಿನ್ನ ಕೆಳರಂಗಕೆಸೆದವನೇ
ಬಲ್ಲನವ ಬಲ್ಲನದನೆಲ್ಲ ಮುಂ ಕಂಡು ॥ ೩೬ ॥

51. ಸರಿಸರಿದು ಬರೆಯುತಿದೆ ಬೆರಳು ಬರೆಬರೆದು
ಸರಿಯುತಿದೆ ನಿನ್ನ ಸಯ್ಪುಕಟ ನಿನ್ನರಿದು।
ಓಂಗಿಸದದನ್ನೊರಸಲರೆ ಬಂತಿಯನಿತಂ
ತೊಳೆಯೆ ಒಂದಕ್ಷರವ [4]ಕಣ್ಣಾರೆ ಕರೆದು ॥ ೩೭ ॥

52. ಕವಿಚಿದೀ ದೊನ್ನೆಯಂ ಬಾನೆಂಬರರಿಯೆ
ಅಳಿದುಳಿದು [5]ಹುಳಿದಾಡುತಿಹೆವಿದರ ಮರೆಯೆ।

1. ಇನಿಗೆನ್ನಂ = ಸವಿಯಾದ ಕೆಂಬಣ್ಣ. 2. ಹಿಂಜರಿಯುಗೆ. 3. [illegible] 4. ಕಣ್ಣುಬತ್ತುವವರೆಗೆ.
5. ಹುಳುವಿನಂತೆ ತೆವಳು.

ಬರಿದೇತಕಿದಕೆ ಕೆಯ್ಮುಗಿವೆ ಕಾಯೆಂದು
ನಮ್ಮೊಲಿದುಮುಕ್ಷ್ಮಮಂ ಸರಿವುದೀ ಪರಿಯೇ ॥ ೩೮ ॥

56. ಸತ್ಯ ದೀಧಿತಿ ಎನ್ನನಕ್ಕರೆಯ ಜ್ಯೋತಿ
ಗೆಯ್ಯಲಲ್ಲವೆ ಕಿನಿಸಿನೆನ್ನನು ವಿಭೂತಿ।
ಕಳ್ಳಂಗಡಿಯೊಳದರ ಕಂಡ ಸುಳಿವೆ ವರಂ
ಕಳಕೊಳ್ವುದರಿನದಂ ದೇಗುಲದಿ ಪೂರ್ತಿ ॥ ೩೯ ॥

59. ಮುಂದೆ ಕೇಳ್ [1]ಕಾತಿಕೆಯ ಮಳೆ ಮುಗಿದು ಬಂದು
[2]ಸಿಂಗವೆರೆ ಇನ್ನುವೊಗೆಯದ ಸಂಜೆಯೊಂದು।
ಆ [3]ಕೆಳವ [4]ಕೋವನಂಗಡಿಯಲ್ಲಿ ನಿಂದೆ
ಮಣ್ಣ ಮಂದಿಗಳೋರಣಂ ಹಿಂದು ಮುಂದು ॥ ೪೦ ॥

60. ಸೋಜಿಗವಿದೆಂಬಿನಾ ಮಣ್ಣೊಡಲರಲ್ಲಿ
ತೊದಲಲಮ್ಮನಿಬರನಿಬರು ಮೂಗರಲ್ಲಿ।
ಅನ್ಯರಿಂ ಸಡಿಲುಲಿಯ ತಟ್ಟನಿಂತೊಂದು
ಕುಂಬವಾರ್ ಕುಂಬಾರನಾರ್ ಭೇದವೆಲ್ಲಿ ॥ ೪೧ ॥

61. ಬರಿದಲ್ಲುತ್ತ ನನ್ನೊಡಲನೆಂದುದಿನ್ನೊಂದು
ಮಹಿಯ ಮಣ್ಣಂ ಮೆತ್ತಿದುದು ನನ್ನನಿಂದು।
ಸೂಕ್ಷ್ಮದಿಂದೀ ರೂಪನೊಡರ್ಚಿದವನಿಳೆಯಾ
ಮಣ್ಣೊಳಗೆ ಮಗುಳೆ ಕಲಸುವನೇಕೆ ಮುಂದು ॥ ೪೨ ॥

62. ಹಟವೂರಿಯುಕ್ಕೆ ತಾನಾದೊಡಂ ಬಾಲಂ
ಪಾಲ್ಕುಡಿದ [5]ಕುಡಿಕೆಯುನ್ನೆಸಗನಿಪ್ಪಾಲಂ।
ಎಂದುದಿನ್ನೊಂದು ತಾನಕ್ಕರೆಯಿನೊಪ್ಪಿ
ಬಾಂದೊಡವೆಯೊಡೆವನೇ ಹಿಂಗಿನಿಸ ಕಾಲಂ ॥ ೪೩ ॥

63. ಮುಂದೆ ಮಾತಿಲ್ಲ ಮೋನಂ ಬಳಿಕದೊಂದು
ಸೊಟ್ಟ ಮಣ್ಣೊಡಲು ಮೆಲ್ಲುಲಿಯಿನಿಂತೆಂದು।
ಕೊರಳ ಕೊಂಕಿಗೆ ನನ್ನನೆಲ್ಲರಣಕಿಪರು
ಕೆಯ್ನಡುಗಿದನೆ ಕೋವನೆನ್ನ ಗೆಯ್ವಂದು ॥ ೪೪ ॥

65. ಬಳಿಕೊಂದು ನಿಡುಸುಯ್ಯುದಿಂತೆನ್ನ ಮಣ್ಣಂ
[6]ನಿಡುಮರವೆಯೊಣಗಿಸೆನಗಾದುದೀ ಬಣ್ಣಂ।
ಹಳೆಯ ಕೆಳೆಯಾ ಕಳ್ಳನಿಂದೆನ್ನ ತೀವೆ
ನನಗಂತರಿಂ[7] ಮರಳಿ ಸೇರ್ಗುಮಾ ತಿಣ್ಣಂ ॥ ೪೫ ॥

1. ಆಷಾಢಮಾಸ. 2. ಸಿಂಹಮಾಸದ ಚಂದ್ರ. 3. ಮುದುಕ. 4. ಕುಂಬಾರ. 5. ಪಾನಪಾತ್ರ. 6. ದೀರ್ಘ ವಿಸ್ಮೃತಿ. 7. ಅಂತರಿಂ=ಕ್ರಮೇಣ.

66. ಒಂದೊಂದರಂತೆಯಾ [1]ಭಾಜನಗಳುಲಿಯೆ
ಕಂಡುದೊಂದೆಲ್ಲರರಸುವ ಹೆರೆಯು ಕಲೆಯು।
ಒಡನೆ ಒಬ್ಬರನೊಬ್ಬರಡಚಿ ಕರೆದಣ್ಣಾ
ಕಿರಿಚುತಿದೆ ಕಳ್ಳ ಕಾವಡಿ ಕೇಳ ಬಳಿಯೆ ॥ ೪೬ ॥

67. ದ್ರಾಕ್ಷೆಯಂ ಹುಯ್ಯೆನ್ನ ಕಂದು ಜೀವನಕೆ
ಮಿಾಸೆನ್ನ ಕಳೆರೆದು [2]ತಣ್ತ ಭಾಜನಕೆ।
ದ್ರಾಕ್ಷೆಯೆಲೆಯಿಂ ಹೆಣೆದ ಹೆಣದುಡೆಯ ಹೊದಿಸಿ
ಮಡಗೆನ್ನನೊಯ್ದು ಮೇಣ್ ಮಧುರ ಮಧು ವನಕೆ ॥ ೪೭ ॥

72. ಅಕಟ ಮಾಧವಿಯೊಡನೆ ಮಧುಮಾಸ ಸಂತು
ಹರೆಯುದೀ ವಾಲೆ ಇನ್ನೋದದೇ ಮುಂತು।
ಯಾರರಿವರೀ ಮರದಿ ಬಗ್ಗಿಸಿದ ಕುಕಿಲು
ಎಲ್ಲಿಂದ ಬಂತು ಪಾರಿದುದೆಲ್ಲಿಗಂತು ॥ ೪೮ ॥

74. ಬಡವಾಗದೆನ್ನ ಮುದ್ದಿನ ತುಂಬುವೆರೆಯೇ
ಮರಳಿ ಬಾಂಬೆರೆ ನೋಡ ಮೂಡುತಿದೆ ನೆರೆಯೆ!
ಎನಿತೊ ಸೂಳಿನ್ನು ಮಿಾ ಶಶಿ ನಿಲುಕುತಕಟಾ
ಹೊಂಚುವುದು ನನ್ನನೀ ತೋಂಟದಲಿ ಬರಿಯೆ ॥ ೪೯ ॥

75. ಮಿರುವಜ್ಜೆಯಿಂದ ನೀ ಹಸಲೆಯುಲಿ ಕೆಳೆಯಿಂ
ತಾರೆಯೊಲು ಚದರಿರುವ ಬಿದ್ದಿನರ ಬಳಿಯಿಂ।
ಸುರಿದು ಸರಿವಂದೆನ್ನ ಕುಳಿತಿದ್ದ ಕಡೆಗೆ
ಮುಟ್ಟುವುದೆ ಮುಗಚೆಲೆಗೆ ಬರಿದೊಂದು ತಿಳಿಯಂ ॥ ೫೦ ॥

ಗೋವಿಂದ ಪೈ

1 ಭಾಜನ—ಪಾತ್ರ. 2. ಸತ್ತು ತಣ್ಣಗಾದ ದೇಹ.

ಗಜೇಂದ್ರ ಮೋಕ್ಷ

(ಭಾಮಿನೀ ಷಟ್ಪದಿ)

ಶ್ರೀ ಗಜನ ಕಾಯ್ದಾತನಮರನ
ಭೋಗಿ ಶಯನನ ಪಿರಿದುದಾರನ
ಯೋಗಿಪತಿಯಾ ವೀರನಾರಾಯಣನ ಚರಣದಲಿ ॥
ಬಾಗಿ ನಮಿಸುತೆ ಭಕ್ತಿರಸ ಯುತ
ನಾಗಿ ಪೇಳುವೆ ಕೇಳಿರೋದಿರಿ
ನಾಗವಲ್ಲಭನಂದು ಮೋಕ್ಷವ ಪಡೆದ ಕಥೆಯನ್ನು ॥ ೧ ॥

ಪೋಗು ಹಲಬರು ಪೇಳ್ದು ಕೇಳ್ದರು
ಭಾಗವಿದನುರೆ ಹಳೆಯದೆನ್ನದೆ
ಮೂಗು ಮುರಿಯದಿರೊಂದೆ ಧಾನ್ಯದಿ ವಿಧದಿ ರಚಿಸಿರ್ದ ॥
ಓಗರಕೆ ಬೇಸತ್ತು ಜರೆಯುವ
ಲೋಗರುಂಟೇ ಜಗದಿ ಪರಿಕಿಸಿ
ತೂಗಿ ನೋಡಿರಿ ತಿರುವಿ ಕಡಿದುಣಿರೀ ಕಥಾಮೃತವ ॥ ೨ ॥

ಸೋಜಿಗವ ನೋಡಾರು ಸಾವಿರ
ಯೋಜನದ ದೂರಿಂದ ನಕ್ರರ
ರಾಜನೊರ್ವನು ಹಸಿದು ಕಂಗಾಲಾಗಿಯಲ್ಲಲ್ಲಿ ॥
ಭೋಜನವನರಸುತ್ತೆ ಶರಧಿಯ
ನೀಜಿ ಬಂದನು ಮತ್ತೆ ವಿಪುಲ ಸ
ರೋಜಗಳು ತುಂಬಿರ್ದ ಮಡುವನು ಪೊಕ್ಕನೊಂದನ್ನು ॥ ೩ ॥

ಗಂಡು ಮೆಟ್ಟಿನ ಹಸ್ತಿಯೊಬ್ಬನು
ದಿಂಡುಗಟ್ಟಿದ ಮೈಯ ಕುಣಿಸುತೆ
ಹಿಂಡುಗಟ್ಟಿದ ಹೆಣ್ಣುಗಳ ಸಹಿತಾಗಿ ನಡೆತಂದ ॥
ಬಂದು ಹುಟ್ಟಿದ ಕಮಲ ಸಾಲ್ಗಳ
ಕಂಡು ನೆಟ್ಟನೆ ಸಾಗಿ ಪೊಕ್ಕನು
ಸೊಂಡೆಯಿಟ್ಟುಂಡಾಡಿದನು ಚಂಡಾಡಿದನು ಮುದದೆ ॥ ೪ ॥

ಮುಂದೆ ನಿಂದಿಹ ಕುತ್ತನರಿಯದೆ
ಮಿಂದು ತಿಂದುರೆ ಹೆಮ್ಮೆಯಿಂದಲಿ
ಮುಂದೆ ಹಿಂದಿನ ಹಿಂಡನಲ್ಲಿಯೆ ಬಿಟ್ಟು ಬರೆ ನಕ್ರ ॥

ಬಂದುದಿಂದೆಲೆ ತನಗೆ ತನ್ನಯ
ಬಂಧು ವೃಂದಕೆ ಜನ್ಮದನ್ನವಿ
ದೆಂದು ನಂದದಿ ನೋಡಿದನು ಹಿಗ್ಗಿದನು ಹರುಷದಲಿ ॥ ೫ ॥

ಉಬ್ಬಿದನು ಮುದದಿಂದ ಮನಸಿನ
ಗಬ್ಬದಲಿ ಯೋಚಿಸಿದನಾಗಳು
ಕೊಬ್ಬಿದೀತನ ಕೊಲದಲೊಮ್ಮೆಲೆ ನಿತ್ಯ ನೇಮದಲಿ ॥
ಕಬ್ಬಿನಂದದಿ ರಸವ ಹೀರುತೆ
ಹಬ್ಬದೂಟವ ಮಾಳ್ಪೆ ಕೂಳಿನ
ಹೆಬ್ಬರವು ತನಗಿಲ್ಲದಾಯ್ತೆಂತೆಂದನಾ ಮಕರ ॥ ೬ ॥

ಕರಿವರನು ಮನದಣಿಯೆ ತಿರುಗಿದ
ನರಿದು ನಕ್ರನು ಗಜನ ಮುಂದಲು
ಬರಲು ಧೈರ್ಯವು ಸಾಲದಿರೆ ತಾ ಬಂದು ಹಿಂದಿನಲಿ ॥
ಭರದಿ ಹಿಂದಿನ ಬಲದ ಕಾಲನು
ತೆರೆದ ಬಾಯಿಯ ದವಡೆಯಲಿ ಒಡಿ
ದುರವಣಿಸಿ ಸೆಳೆತೊಡಗಿದನು ನೀರಲ್ಲಿ ಬಲದಿಂದ ॥ ೭ ॥

ಮೊಸಳೆವಿಡಿದುದ ತಿಳಿದು ತನ್ನಯ
ತನುವಿಗಿವನೀಡಹನೆ ನಿಮಿಷದಿ
ಬಿಸುಟು ಪೋಗುವೆನೆಂದು ಸೆಳೆದನು ಗಜನು ಹೆಮ್ಮೆಯಲಿ ॥
ವಸುಧೆಯೊಳು ನೀರಲ್ಲಿ ಮೊಸಳೆಯು
ಅಸಮ ಬಲನಿಹನೆಂದು ತಿಳಿಯದ
ಲುಸಿರ ಬಿಗಿಹಿಡಿದೆಳೆದು ಜಗ್ಗಾಡಿದನು ಭ್ರಮೆಯಿಂದ ॥ ೮ ॥

ಮತ್ತೆ ನೆಲದೊಳು ಮೂರು ಕಾಲ್ಗಳ
ನೊತ್ತಿ ಸೊಂಡೆಯು ಹಿಡಿದ ಜೋಲ್ಗಳ
ಚುತ್ತಿ ದುರುಳನ ದವಡೆ ಸಾಲ್ಗಳನೊಡೆದು ಮುರಿವಂತೆ ॥
ಕಿತ್ತು ಹುಯ್ಯನೆ ಸೆಳೆಯೆ ಗೆಲ್ಗಳ
ಕುತ್ತ ನಕ್ರಸು ತನ್ನ ಪಲ್ಗಳ
ತೆತ್ತಿಸಿಟ್ಟನು ಜಲದಿ ಕಲ್ಗಳನಮುಚಿ ಬಲದಿಂದ ॥ ೯ ॥

ಹಣಿಕಿದನು ಗಜ ಕೆಣಕಿದನು ಬಲು
ತಿಣಿಕಿದನು ಕಡು ತುಣಕಿದನು ಬಲ
ಗುಣಿಸಿದನು ಕರವಣಿಸಿದನು ನೆರೆ ಸೆಣಸಿದನು ಮತ್ತೆ ॥
ದಣಿಸಿದನು ಕಾಲ್ಕುಣಿಸಿದನು ಉರ
ವಣಿಸಿದನು ಬಹು ಹೆಣಗಿದನು ಸಜೆ
ಗೊಣಗಿದನು ಬಿಡದೊಣಗಿದನು ಗಡ ಬಣಗಿದನು ಮತ್ತೆ ॥ ೧೦ ॥

ಅಂಗಗುಂದಿದುದಾಗಳಾನೆಯ
ಕಂಗೆ ಬಂದುದು ಕತ್ತಲೆಯು ಬಲ
ಹಿಂಗಿ ನಿಂದುದು ಮತ್ತೆ ಕಾಲ್ಗಳು ತರತರನೆ ನಡುಗೆ ॥
ಭಂಗ ಹೊಂದಲು ತನ್ನಯೊಳಗಿನ
ಅಂಗದಿಂದಲಿ ರಕುತ ಹೀರುತೆ
ನುಂಗುವಂದವ ನೋಡಿ ಮಕರಂಗೆಂದನೀ ನುಡಿಯ ॥ ೧೧ ॥

ಹೀನನೇ ಕಾಲ್ವಿಡಿದ ಕಾರಣ
ವೇನು ನನ್ನಯ ಮೈಯ ರಕುತವ
ಪಾನ ಮಾಡುವುದೇಕೆ ಕೊಲುವೆಯೊ ಹೇಳೆನಲು ಮಕರ ॥
ಆನೆ ದೊರೆ ಕೇಳ್ ನಿನ್ನ ಕೊಲ್ಲುವ
ಹೀನ ಕೃತ್ಯವ ಗೆಯ್ವುದಿಲ್ಲಲೆ
ದಾನಿ ನೀನೆಂಬುದನು ಕೇಳುತೆ ಬಂದೆ ನಿನ್ನೆಡೆಗೆ ॥ ೧೨ ॥

ತನು ಧನವು ಹೆಚ್ಚಿದುದು ಮಾಂಸದ
ಘನತೆಯಾದುದು ಮೆಯ್ಯೊಳಲಸಿಕೆ
ಜನಿಸಿ ಬಂದುದು ಮುಂದಿನಡಿಯಿಡಲಾರದಾಗಿರುವೆ ॥
ನಿನಗೆ ಗೆಳೆಯರು ಬೇಡವೇ ಮನ
ಸಿನಲಿ ನಿನ್ನಯ ಹಿತವ ಕೇವಲ
ನೆನೆದು ರಕುತವ ತೆಗೆಯುತಲಸವ ಕಳೆವೆನೆಂತೆಂದ ॥ ೧೩ ॥

ಬಲ್ಲೆ ಹಿತ ನಾನೆಲ್ಲ ಕಾಯಲು
ಕೊಲ್ಲದೊಡೆ ನೀರಲ್ಲಿ ನನ್ನನು
ಹಲ್ಲಿನಿಂದೆಳೆವೆಲ್ಲಿಗೆಂದಾ ಕರಿವರನು ಕೇಳೆ ॥
ಕ್ಷುಲ್ಲಕನೆ ನಿನಗಿಲ್ಲ ಮತಿಯದು
ಬಲ್ಲ ಜನಗಳು ಸೊಲ್ಲ ಕೇಳಿಲಿ
ಕೊಲ್ಲೆ ತಿಳಿವುದೆ ನಿಲ್ಲು ಸುಳ್ಳನುತಾಪ ಬೇಡೆಂದ ॥ ೧೪ ॥

ದುಷ್ಟ ಕೇಳೆಲೆ ಮಳೆಯ ನೀರನು
ಬಿಷ್ಟು ಮಂಜಿನ ನೀರ್ಗೆ ಕೈಯಿಡು
ವಷ್ಟು ತಾ ಕಡು ಮೂರ್ಖನಲ್ಲೈ ಇಷ್ಟು ದಿನಗಳಲಿ ॥
ಕಷ್ಟದಿಂ ಗಳಿಸಿರ್ದ ನಿನ್ನಯ
ಪುಷ್ಟ ತನುವನು ಮೆಯ್ದು ನನ್ನಯ
ಇಷ್ಟದೂಟವ ಗೈವೆನೆಂದನು ಸೆಳೆದು ಗಜನನ್ನು ॥ ೧೫ ॥

ಮೋಸ ಮಾಡಿದನಕಟ ನಕ್ರನು
ಗಾಸಿ ಮಾಡುವನಿನ್ನು ಬದುಕುವೊ
ಡಾಸೆ ತನಗಿಲ್ಲೆಂದು ಗಜವರನಾಗ ತಲೆವಾಗಿ ॥

ಮೊಸಲಬುಜವನೊಂದನರ್ಚನೆ
ಗೋಸುಗಾಗಳು ಪಿಡಿದು ಸೊಂಡೆಯ
ಬೀಸಿ ಮುಗಿಲೊಳಗೆತ್ತಿ ತುತಿಸಿದ ಪರಮ ಭಕುತಿಯಲಿ ||೧೬||

ಶ್ರೀ ಹರಿಯೆ ಮುರಹರಿಯೆ ಲಕುಮಿಯ
ಮೋಹಲಹರಿಯೆ ಪರಮ ಭಕುತರ
ಕಾಹುವಿನರಿಯೆ ಯೋಗಿ ಮುನಿ ಜನಗಳಿಗೆ ಹೆಗ್ಗುರಿಯೆ ||
ದಾಹ ಹಾರಿಯೆ ಕರುಣರಸ ಸಂ
ದೋಹ ಝರಿಯೇ ಸುರಪ ಶೌರಿಯೆ
ಗ್ರಾಹನಿವನಂತರಿಯೆ ಬಾರೈ ಹೊಗಳಲಾನರಿಯೆ ||೧೭||

ಚಾರ ವೇದದ ಸಾರ ಜಗದಾ
ಧಾರ ನಿರುಪಮ ವೀರ ಗುಣಗಂ
ಭೀರ ಭಕ್ತರ ತೋರ ಮುತ್ತಿನ ಹಾರ ಸುವಿಚಾರ ||
ಘೋರ ರಿಪು ಸಂಹಾರ ದುರಿತವಿ
ದೂರ ದುಃಖಿತ ಭಾರ ಹರ ವಸ
ಪೂರ ಸೌಖ್ಯಾಗಾರ ಪೊರೆಯುಲು ಬಾ ನಿರಾಕಾರ ||೧೮||

ಬಗೆಯೊಳೊಗೆದವನಪ್ಪ ಬಾರೈ
ಮುಗಿಲ ಮೆಯ್ಯವ ಬೇಗ ಬಾರೈ
ಪೊಗರನುಗುಳುವ ಕಣಿಯೆ ಕಡೆಮೊದಲಿಲ್ಲದನೆ ಬಾರೈ ||
ಹಗಲೊಡೆಯ ತಿಂಗಳರ ಕಣ್ಗಳ
ತೆಗೆದು ಕನಿಕರವಿತ್ತು ಕಾಯ್ದೈ
ಜಗುಳೆಯುಂದದಿ ಮೊಸಳೆಯಿಂವ ನೆತ್ತರವ ಹೀರುವನ್ನೈ ||೧೯||

ಎಂದು ಹೊಗಳಲು ದೇವತಿಲಕನು
ನೊಂದ ಭಕ್ತರ ದಾಸ ಗರುಡನ
ಸ್ಕಂಧವನು ತಾನೇರಿ ಬಂದನು ಗಂಧವಹನಂತೆ ||
ನಿಂದು ನೋಡುತ ಮೊಗದಿ ನಗೆಯನು
ತಂದು ನುಡಿದನು ದಯದ ದನಿಯಲಿ
ಕಂದ ಜಾಣನೊ ಮೂರ್ಖನೋ ನೀಂ ತಿಳಿಯೆ ನಾನೆಂದು ||೨೦||

ನಾಲ್ಕು ವರ್ಣಗಳಲ್ಲಿಯೊಂದನು
ನಾಲ್ಕು ಪುರುಷಾರ್ಥಗಳಲೊಂದನು
ಪಾಲ್ಕಡೆಗೆ ಮಾಡಿಟ್ಟು ಸಿಲ್ವನ ತೆರದಿ ನಡೆಯುವೆಲಾ ||
ಮೇಲ್ಕಡೆತ್ತಿದ ನಿನ್ನ ಚರಣವ
ಕಾಲ್ಕುಡತಿಯಂತಿರಿಸಿ ಬಲದಲಿ
ನಾಲ್ಕು ಕಾಲ್ಗಳನೂರಿ ನಿಂತೊಡೆ ತಾನೆ ಬಿಡುವಹುದು ||೨೧||

ಕುಂಜರಂ ಮಾತಿದಕೆ ನುಡಿದನು
ಕಂಜ ನಾಭನೆ ದಯದಿ ನೋಡಿದು
ಗುಂಜು ನೀರೊಳಗಲ್ಲಿ ಬಲ ವ್ಯಾಪಾರ ನಕ್ರಂಗೆ ||
ಹಿಂಜಡಿದು ಕಾಲೂರಗೊಡಸಿವ
ನಂಜು ಬಗೆಯುವನಾದೊಡಿಂತುಟು
ಖಂಜನಾದೆನು ದೇವ ದಯಮಾಡೆಂದು ವಿನಯದಲಿ || ೨೨ ||

ವಕ್ರಿಗಳು ತಾವಂತು ಮಾಡಲಿ
ಸ್ವಕ್ರಿಯೆಯ ಗೆಯ್ ಸಿದ್ಧನಾಗಿರು
ತಕ್ರವನು ಕಡೆವಂತೆ ಮಡುವನೆ ಕಡೆವೆ ನಾನೆಂದು ||
ಚಕ್ರವನು ಮುಂದಿಟ್ಟು ತಿರುವಿ ತ್ರಿ
ವಿಕ್ರಮಂ ನೀರ್ಗಳನು ಹಾರಿಸೆ
ನಕ್ರನತಿ ಬಲಗುಂದಿ ನಿಂತನು ಏರೆ ಜಲಧಾರೆ || ೨೩ ||

ಒಡನೆ ಗಜವರನಿತ್ತ ತನ್ನಡಿ
ಜಡಿದು ಪೊಡವಿಯಲಿಡಲು ಮುಸುಡದ
ಹಿಡಿತ ಸಡಿಲಿದುದಿಕ್ಕುಳದ ಬಾಯ್ ಬಿಡುವ ತೆರದಂತೆ ||
ತಡೆಯದಡಿಯನು ಕಿತ್ತು ಬಿಡುಗಡೆ
ವಡೆದು ನಡೆದನು ಸಡಗರದ ಸಿರಿ
ಯೊಡೆಯನಿದ್ದೆಡೆ ಬಹು ಕೃತಜ್ಞತೆಯಿಂದ ತಲೆವಾಗಿ || ೨೪ ||

ಆಳ್ದ ಕರಿಯನ್ನೆತ್ತಿ ಲಕುಮಿಯ
ನಾಳ್ದನತಿ ಪ್ರೇಮದಲಿ ಸಾಕೀ
ಹಾಳ್ದುಡುಕು ನಡೆಯಿನ್ನು ಮುಂದೀ ಕಥೆಯನೋದಿದರೆ ||
ಕೇಳ್ದು ನಡೆದರೆ ಪೇಳ್ದು ನಡೆದರೆ
ಬಾಳ್ದಪರು ಸುಖದಿಂದ ಮುಕುತಿಯ
ತಾಳ್ವಪರು ನೋಡೆಂದ ಗದುಗಿನ ವೀರನಾರಾಯಣ || ೨೫ ||

ನಾರಾಯಣರಾವ್ ಕೃಷ್ಣರಾವ್

[ಪ್ರಾಕ್ತನ ವಿಮರ್ಶವಿಚಕ್ಷಣ, ರಾವ್ ಬಹಾದೂರ್
ಮ. ರಾ. ನರಸಿಂಹಾಚಾರ್ಯ, ಎಂ. ಎ., ಅವರಿಂದ ಬರೆದುಬಂದುದು.]

ಶಾಸನ ಪದ್ಯಮಂಜರಿ

ಬೇಲೂರು ತಾಲ್ಲೂಕು ರನ್ನಘಟ್ಟದ ಶಾಸನ, ಸು. 1096

(ಮೈಸೂರು ಶಾಸನ ಇಲಾಖೆಯ ರಿಪೋರ್ಟು, 1926, 7ನೆಯ ಶಾಸನ)

ಇದರಲ್ಲಿ ಹೊಯ್ಸಳ ರಾಜನಾದ ವಿನಯಾದಿತ್ಯನ ಸಾಮಂತ ಭಾಸನು ರಣಕಿಯಕಟ್ಟದಲ್ಲ ಬೂಚೇಶ್ವರ ದೇವಾಲಯವನ್ನು ಕಟ್ಟಿಸಿ ಭೂಮಿಯನ್ನು ಬಿಟ್ಟಂತೆ ಹೇಳಿದೆ.

ವಿನಯಾದಿತ್ಯ

ಕಂ॥ ಸ್ವಸ್ತಿ ಸಮಸ್ತ ಧರಾಧಿಪ।
ಮಸ್ತಕ ವಿನ್ಯಸ್ತ ಹಸ್ತನುದಿತ ಜಯಶ್ರೀ ॥
ವಿಸ್ತಾರಿ ಸ್ತನ ಹಾರಂ।
ಪ್ರಸ್ತುತ್ಯಂ ಪುಣ್ಯಮೂರ್ತಿ ವಿನಯಾದಿತ್ಯಂ ॥

ಭಾಸ

ನೆಟ್ಟನೆಱಿಗಂಗೆ ಚಲದಿಂ।
ದೊಟ್ಟೈಸುವ ವೈರಿ ಭೂಪರಂ ನೋಡ ಮೊದ ॥
ಲ್ಗಟ್ಟದ ಭಾಸಂ ಪರಿಯಿಂ।
ದೊಟ್ಟಜಿಯಿಂ ಗೆಲ್ದುಮುಗ್ರ ಸಮರಾಂಗಣದೊಳ್ ॥
ಎಱಿಗಂಗೆ ಮಲೆದು ಚಲದಿಂ।
ದೆಱಿಗದ ರಿಪುಬಳಕೆ ಕಾಳಸರ್ಪಂ ತನ್ನಂ ॥
ನೆಱೆ ಪೊರೆವ ಪತಿಗೆ ಸನ್ನಣ।
ಮೆಱೆಯಂಗನ ಹನುಮನಲ್ತೆ ಮೊನೆಯೊಳ್ ಭಾಸಂ ॥

ಕಡೂರು ತಾಲ್ಲೂಕು ಮುಚ್ಚೇರಿಯ ಶಾಸನ, ಸು. 1120

(ಮೈಸೂರು ಶಾಸನ ಇಲಾಖೆಯ ರಿಪೋರ್ಟು, 1925, 30ನೆಯ ಶಾಸನ)

ಇದರಲ್ಲಿ ಹೊಯ್ಸಳ ರಾಜನಾದ ವಿಷ್ಣುವರ್ಧನನ ಮಂತ್ರಿ ಬೊಪ್ಪದೇವ ಮೊದಲಾದವರು ಮುಚ್ಚೇರಿಯ ಕಲಿದೇವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಭೂಮಿಯನ್ನು ಬಿಟ್ಟಂತೆ ಹೇಳಿದೆ.

ಬೊಪ್ಪದೇವ

ಕಂ|| ಆ ವಿಷ್ಣು ನೃಪನ ಮಂತ್ರಿ ಮ।
ಹೀ ವಳಯಮನಾತ್ಮ ಧವಳ ಕೀರ್ತಿ ಪ್ರಭೆಯಿಂ ||
ಶ್ರೀವಿ ಜಗಮೆಯ್ದೆ ಬಣ್ಣಿಸೆ।
ಜೀವಿಸಿದಂ ಬೊಪ್ಪದೇವ ದಂಡಾಧೀಶಂ ||

ಮ|| ಸ್ರ|| ತಿರೆಕಟ್ಟು ತೊಂದನೊಂದಪ್ಪಳಿಸೆ ಪೊಳೆವ ನಾನಾ ವಿಧಾಂಭಶ್ಶರಂಗಳ್।
ಪರಿವಾ ಗಂಭೀರ ನೀರಾಕರಮನನಿತುಮಂ ರಾಮನೊಂದಂಬು ಪೀರ್ವಂ ||
ತಿರೆ ಪಾಂಡ್ಯಕ್ಷೋಣಿಪಾಳ ಪ್ರಬಳ ಬಳ ಪಯೋರಾಶಿಯಂ ತನ್ನ ಖಡ್ಗಂ।
ಭರದಿಂದಂ ಪೀರೆ ಗೆಲ್ದಂ ಜಗ ಬಿರುದ ಝಳಪ್ಪಂ ಚಮೂನಾಥ ಬೊಪ್ಪಂ ||

ನಗರ ತಾಲ್ಲೂಕು ಹಾಲುಗುಡ್ಡೆಯ ವೀರಗಲ್ಲು, ಸು. 1162

(ಮೈಸೂರು ಶಾಸನ ಇಲಾಖೆಯ ರಿಪೋರ್ಟು, 1923, 64ನೆಯ ಶಾಸನ)

ಇದರಲ್ಲಿ ಸಾಂತರ ರಾಜನಾದ ತ್ರೈಲಪನು ಯುದ್ಧದಲ್ಲಿ ಸತ್ತ ಗೊಗ್ಗಿ ಗೋಸ್ಕರ ಹಾಲುಗುಡ್ಡೆ ಗ್ರಾಮವನ್ನು ಕೊಟ್ಟಂತೆ ಹೇಳಿದೆ.

ಗೊಗ್ಗಿ

ಕಂ|| ರೂಪಿನೊಳೆ ಕಾಮ ಸನ್ನಿಭ।
ಕೂರ್ಪಿನೊಳಾ ನರ ತನೂಜನಭಿಮನ್ಯುವೆ ತಾಂ||
ಬೇಳ್ಪಿ ಜನಕ್ಕೀವೆಡೆಯೊಳ್।
ನೋಳ್ಪೊಡೆ ಕಲಿ ಗೊಗ್ಗಿ ಕಲ್ಪವೃಕ್ಷಂ ಜಗದೊಳ್ ||

ಚಂ|| ಅಣಿಯರವೊಡ್ಡಿದಡ್ಡಣದ ವೀರರನಾಂತಿಸುತಿರ್ಪ ಬಿಲ್ಲ ಬ।
ಲ್ಲಣಿಯ ತುರಂಗ ಸಾಧನಮನಾಂತಿರ್ದೀವಲ್ಲಿ ಮಹಾ ಭಯಂಕರಂ ||
ನೆಣಮಯ ಖಂಡದಿಂದೆ ನೊರೆ ನೆತ್ತರ ಕಾರ್ಪ್ಪಿರಮಂದು ನೋಳ್ಪೊಡೇ।
ನಣಕಮೊ ಗೊಗ್ಗಿಯಾಂತಿರ್ದೊಂದ ವಿಕ್ರಮಮಾಹವ ರಂಗಭೂಮಿಯೊಳ್ ||

ಕಂ|| ಸಂಗರದೊಳಿರ್ದ ವೀರಮೆ।
ಶೃಂಗಾರಮನೆಕ್ಕೆವೆತ್ತ ಗೊಗ್ಗಿಯ ತಮ್ಮ ||
ತ್ಸಂಗದೊಳಿಟ್ಟುಯ್ದು ನಿಳಿಂ।
ಪಾಂಗನೆಯರ್ . . ಸಾರ್ದರಮರಾವತಿಯಂ ||

ಚಿಕ್ಕಮಗಳೂರು ತಾಲ್ಲೂಕು ಕಳಸಾಪುರದ ಶಾಸನ, ಸು. 1176

(ಮೈಸೂರು ಶಾಸನ ಇಲಾಖೆಯ ರಿಪೋರ್ಟು, 1923, 7ನೆಯ ಶಾಸನ)

ಇದರಲ್ಲಿ ಹೊಯ್ಸಳ ರಾಜನಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ದೇವಿ ಸೆಟ್ಟಿ ಕಟ್ಟಿಸಿದ ವೀರಬಲ್ಲಾಳ ಜಿನಾಲಯಕ್ಕೆ ದೊರೆ ಗ್ರಾಮವನ್ನು ಬಿಟ್ಟಂತೆ ಹೇಳಿದೆ.

ವಿನಯಾದಿತ್ಯ

ಮ|| ಘನ ಮಾರ್ಗಾನುಗತಂ ಜಗತ್ಪ್ರಣುತ ವಿತ್ತಂ ಮಂಡಲಾಗ್ರ ಪ್ರತಾ|
ಪ ನಿಯುಕ್ತಂ ರಿಪುಭೂಪ ಸಂತಮಸ ಭೇದಂ ಸಜ್ಜನ. . ||
ನ ಸಂತೋಷಕರಂ ಸ್ವಬಂಧುಜನ ಚಕ್ರಾಹ್ಲಾದಕಂ ಪುಟ್ಟಿದಂ|
ವಿನಯಾದಿತ್ಯ ನೃಪಾಳಕಂ ಯದುಕುಳೋತ್ತುಂಗೋದಯಾದ್ರೀಂದ್ರದಿಂ ||

ಏಚಲೆ

ಚಂ|| ಹಿಮ ರುಚಿಯಂ. . . . ರತಿಯಂ ಲತೆಯಂ ಸರಸೀಜನುಂ ಮನೋ|
ರಮ ಕುಸುಮಂಗಳಂ ಕದಲಿಯಂ ಮದನಂ ಬಿದಿಯಾಗಿ ತಾನೆ ತೊ ||
ಯ್ವಮೃತದಿನೆಯ್ದೆ ನಿರ್ಮಿಸಿದನೆನ್ನದೆ ಕೇಳೆಲಿರೆಯಂಗ. . ಭೂ|
ರಮಣನ ಕಾಂತೆಯಂ ಪೆಱತೆನೆನ್ನದಿರೇಚಲದೇವಿ ರಾಣಿಯಂ ||

ಕಡೂರು ತಾಲ್ಲೂಕು ಕೆರೆಸಂತೆಯ ಶಾಸನ, ಸು. 1181

(ಮೈಸೂರು ಶಾಸನ ಇಲಾಖೆಯ ರಿಪೋರ್ಟು, 1925, 64ನೆಯ ಶಾಸನ)

ಇದರಲ್ಲಿ ಹೊಯ್ಸಳ ರಾಜನಾದ ವೀರಬಲ್ಲಾಳನ ಆಳಿಕೆಯಲ್ಲಿ ವಿಷ್ಣು ಸಮುದ್ರದ ಮಹಾಜನಗಳು ಸಿದ್ಧೇಶ್ವರ ದೇವಸ್ಥಾನಕ್ಕೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ನಾರಸಿಂಹ I

ಕಂ|| ಅಂತೆನಿಸಿದ ವಿಷ್ಣು ಮಹೀ|
ಕಾಂತನ ತನಯಂ ನಯಾನುರೂಪೋಪಾಯಂ ||
ಸಂತತ ಭುಜಪ್ರತಾಪಾ|
ಕ್ರಾಂತಪರಂ ನಾರಸಿಂಹನಾಹವ ಸಿಂಹಂ ||

ಬಲ್ಲಾಳನ ಮಹಿಷಿ ಕೇತಲದೇವಿ

ಮ| ಪಡೆದಳ್ ಸುಗ್ಗಲದೇವಿ ಮುನ್ನೆ ಜಯಸಿಂಹೋರ್ವೀಶನೊಳ್ ಸಾಮ್ಯಮಂ
ಪಡೆದಳ್ ಶಾಂತಲದೇವಿ ಮತ್ತೆ ತೊದಳೇಂ ಶ್ರೀ ವಿಷ್ಣು ಭೂಪಾಲನೊಳ್ ||
ಪಡೆದಳ್ ಕೇತಲದೇವಿ ವಲ್ಲಭನೊಳೀ ಬಲ್ಲಾಳ ಭೂಪಾಳನೊಳ್|
ಪಡೆದರ್ ಮೂವರೊಳಿಂತುಟೀಯರಸಿಯರ್ ಸೌಭಾಗ್ಯ ಭಾಗ್ಯಂಗಳಂ ||

ವಿಷ್ಣುಸಮುದ್ರ

ಚಂ|| ಕುಡಿದು ಘಟೋದ್ಭವಂ ತವಿಸದಾ ರಘುವಂಶನ ತೀವ್ರ ಬಾಣದಿಂ|
ದುಡುಗದ ದೇವ ದಾನವ ಬಲಂ ಕಡೆಯಲ್ ಕದಡೆಯ್ದೆ ಭಂಗಮಂ ||
ಪಡೆಯದಪೇಯ ವಾರಿ ಪರಿಪೂರಿತಮಪ್ಪಿದನಂತ ಶಯ್ಯೆಯೊಳ್|
ಪೊಡೆಯಲರಾತನಿರ್ಪ ಮರವಾರಿಧಿಯೆಂಬುದು ವಿಷ್ಣುವಾರಿಧಿ ||

ಕಂ॥ ವನಧಿಯನಗಸ್ತ್ಯನಾಪೋ ।
ಶನಮಂ ಮಾಡಿದೊಡೆ ಬಲ್ಲಿಕದೊಂದಂಬುಧಿಯಂ ॥
ವನಜಭವಂ ಸಮೆದನೊ ಪೇ ।
ಳ್ಗೆನೆ ವಿಷ್ಣುಸಮುದ್ರಮದು ಸಮುದ್ರಮನಿಳ್ಳಿಕುಂ ॥

ಅಲವಣಮರಾಕ್ಷಸಾಶ್ರಯ ।
ವಿಲುಳಿತವದನೇತ್ರ (?) ಬಾಡಬಾನಳಮೆಸೆಗುಂ ॥
ಕಲಿಯುಗ ವಿಷ್ಣುಸಮುದ್ರಂ ।
ಜಲಧರ ವಿಲುಳಿತ ವಿಹಂಗ ಮಂಗಳ ಚರಿತಂ ॥

ಹಾಸನ ತಾಲ್ಲೂಕು ಸೋಂಪುರದ ಶಾಸನ,[1] ಸು. 1191

(ಮೈಸೂರು ಶಾಸನ ಇಲಾಖೆಯ ರಿಪೋರ್ಟು, 1926, 25ನೆಯ ಶಾಸನ)

ಇದರಲ್ಲಿ ಹೊಯ್ಸಳ ರಾಜನಾದ 2ನೆಯ ಬಲ್ಲಾಳನ ಆಳಿಕೆಯಲ್ಲಿ ದೋರ ಸಮುದ್ರದ ನಗರ ಜಿನಾಲಯಕ್ಕೆ ಶ್ರೀಸ್ಕರ ವಜ್ರನಂದಿ ಸೈದ್ಧಾಂತ ದೇವರಿಗೆ ನಾಡ ಗೌಂಡುಗಳು ಭೂಮಿಯನ್ನು ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಕಂ॥ ಮೂವರರಸುಗಳೊಳಂ ತಾಂ ।
ಭಾವಿಸೆ ಮಧ್ಯಮನದಾಗಿಯುಂ ನೃಪ ಗುಣ ಸ ॥
ದ್ಭಾವದಿನುತ್ತಮನಾದಂ ।
ಭಾವಿ ಭವದ್ಭೂತ ಜಿಷ್ಣು ವಿಷ್ಣು ನೃಪಾಳಂ ॥

ಬಲ್ಲಾಳ II

ಮ॥ ರಣರಂಗಾಂಗಣ ಶೂದ್ರಕಂ ನಡೆದೊಡಿಂತುಚ್ಚಂಗಿ ನುಚ್ಚಾಯ್ತು ತತ್ ।
ಕ್ಷಣದಿಂ ನೋಡೆ ವಿರಾಟರಾಜ ಪುರಮೊರ್ಬುತ್ತಾಯ್ತು ಮುನ್ನಾಂತ ಸೇ ॥
ವುಣರಾಪೋಶನ ಮಾತ್ರಕಂ ನೆಱಿಸರಿಲ್ಲೆಂದಂದು ಬಲ್ಲಾಳ ದೋ ।
ರ್ಗುಣಮಂ ಬಣ್ಣಿಸಲಣ್ಣ ಬಲ್ಲವರದಾರೀ ಭೂರಿ ಭೂಚಕ್ರದೊಳ್ ॥

ಮೂಡಬಿದರೆಯ ಹೊಸ ಬಸ್ತಿಯ ೧ನೆಯ ಶಾಸನ, ಸು. 1430

ಇದರಲ್ಲಿ ವಿಜಯನಗರದ ರಾಜನಾದ ಎರಡನೆಯ ದೇವರಾಯನ (೧೪೧೯–೧೪೪೬) ಆಳಿಕೆಯಲ್ಲಿ ನಾಗಮಂಗಲದ ದೇವರಾಜೊಡೆಯನು ಮಂಗಳೂರ ರಾಜ್ಯವಂ ಆಳುವಲ್ಲಿ ವೇಣುಪುರದ ಅಥವಾ ಮೂಡಬಿದರೆಯ ಭವ್ಯ ಜನಗಳು ತ್ರಿಭುವನ ಚೂಡಾಮಣಿ ಎಂಬ ಚೈತ್ಯಾಲಯವನ್ನು ಶಕ ೧೩೫೧ನೆಯ ಸೌಮ್ಯ ಸಂವತ್ಸರದಲ್ಲಿ ನಿರ್ಮಿಸಿದಂತೆ ಹೇಳಿದೆ. ಅದೇ ಚೈತ್ಯಾಲಯದ ಮುಖಮಂಟಪ ವನ್ನು ಇನ್ನು ಕೆಲವರು ಭವ್ಯ ಜನರು ಶಕ ೧೩೭೩ ಪ್ರಜಾಪತಿ ಸಂವತ್ಸರದಲ್ಲಿ (೧೪೫೧) ಕಟ್ಟಿಸಿದಂತೆಯೂ ಇದೇ ಶಾಸನದಲ್ಲಿ ಹೇಳಿದೆ.

1. ಪಂಚಕಜ್ಞಾಯ, pp. 151–153.

ತುಳುದೇಶ

ಉ॥ ಸಾರತರ ದ್ರುಮಪ್ರತತಿಯಿಂ ಪರಿಶೋಭಿಪ ಗೋಪ್ರತಾನದಿಂ।
ಕೀರ ಮರಾಳ ಸಾರಸದಿನೊಪ್ಪುವ ನಂದನ ವೃಂದದಿಂ ಪಯಃ॥
ಪೂರ ಸರಸ್ಸರೋಜ ವನದಿಂ ಬಿನದಕ್ಕೆಡೆಯಾದ ತಾಣದಿಂ।
ದಾರ ಮನಕ್ಕೆ ಮಾಡದೊಲವಂ ತುಳುದೇಶಮನೇಕದೇಶದೊಳ್॥

ಮಂಗಳೂರು

ಮ ಸ್ರ॥ ಚಲದೂರ್ಮಿವ್ರಾತ ಜಾತ ಪ್ರಹರಣ ರಣ ಕೃದಾರ್ದ್ರಿಯಿಂ ಮುಂದೆ ಸಾಲಿಂ।
ಬಳಸಲ್ ನಾನಾ ಮಣಿ ಪ್ರಸ್ಫುರಿತ ಪರಿವೃಢಾಗಾರದಿಂ ವಾರ ನಾರೀ॥
ಕುಲದಿಂ ಸ್ವರ್ಣಾದಿ ಪೂರ್ಣಾಪಣ ಗಣದಿನಣಂ ಶೋಭಿಕುಂ ಮಂಗಲೂರಾ।
ಸ್ಥಳದೊಳ್ ವ್ರೀಹ್ಯಾದಿ ಸಸ್ಯೋತ್ಕರುಷ ಹರುಷಿತಾತ್ರೀಯ ಪೌರ ಪ್ರತಾನಂ॥

ಮೂಡಬಿದರೆ

ಮ॥ ಘನ ವಕ್ಷೋರುಹ ಹಾರ ಭಾರ ವಿಚಲನ್ಮಧ್ಯಂ ಮನಃಪ್ರೀತರೊಂ।
ದನುರಾಗಕ್ಕೆಡೆಯಾಗೆ ಸಂಚರಿಪ ನಾರೀ ವೃಂದದಿಂ ಸಾರ ಕಾ॥
ವ್ಯ ನವಾರ್ಥಾಮೃತ ಸೇವೆಯಿಂ ತಣಿದ ಕಾವ್ಯ ಪ್ರೌಢರಿಂ ರತ್ನ ಕಾಂ।
ಚನ ಚೀನಾಂಬರ ವಿಕ್ರಯ ಕ್ರಯಿಕರಿಂ ಚೆಲ್ವಾದುದಂತಾ ಪುರಂ॥

ಕಂ॥ ಅಂತಾ ಪುರ ವಾಸ್ತವ್ಯರ್।
ಕಂತುಗೆ ರೂಪಿಂದೆ ಧನದಗಂ ಸಿರಿಯಿಂದ॥
ತ್ಯಂತ ವಿತರಣದಿನಾ ದಿನ।
ಕಾಂತ ತನೂಜಂಗೆ ಮಾಡುವರ್ ಕೌತುಕಮಂ॥

ಮೂಡಬಿದರೆಯ ಹೊಸ ಬಸ್ತಿಯ 2ನೆಯ ಶಾಸನ,[1] ಸು. 1460

ಇದರಲ್ಲಿ ಗೇರುಸೊಪ್ಪೆಯ ದೊರೆ ಭೈರವರಾಯನು ವೇಣುಪುರದ ತ್ರಿಭುವನ ಚೂಡಾಮಣಿ ಬಸ್ತಿಗೆ ತಾಮ್ರದ ಹೊದಕೆಯನ್ನೂ ಅದೇ ಸ್ಥಳದ ಚಂದ್ರನಾಥ ದೇವರಿಗೆ ಬೆಳ್ಳಿಯ ಕುಂಭ, ದಂಟಿಗೆ, ಸರಿಯಣ, ತಾಣದೀವಿಗೆ ಇವುಗಳನ್ನೂ ಮಾಡಿಸಿದನೆಂದು ಹೇಳಿದೆ.

ಗೇರುಸೊಪ್ಪೆ

ಮ॥ ಬಳಸಿರ್ದೊಪ್ಪುವ ನಂದನಾವಳಿಗಳಿಂ ಕಾಸಾರ ನೀರೇಜದಿಂ।
ಕಳಧೌತೋಜ್ವಲ ಸಾಲ ಕೊತ್ತಳಗಳಿಂದಟ್ಟಾಲ ಜಾಲಂಗಳಿಂ॥
ವಿಳಸದ್ಗೋಪುರದಿಂ ಸುಹರ್ಮ್ಯ ಚಯದಿಂ ಶ್ರೀ ಜೈನ ಗೇಹಂಗಳಿಂ।
ಚೆಲುವಂ ತಾಳ್ದಿದ ಗೇರುಸೊಪ್ಪೆ ಪುರಮಂ ಕೊಂಡಾಡಲಾರ್ ಬಲ್ಲರೈ॥

1. ಸಂ೮ಕ೨ಾಯ, pp. 153–156.

ಭೈರವರಾಯ

ಚಂ॥ ಕಡಲುಱೆ ತುಳ್ಕೆ ದಿಕ್ಪತಿಗಳಳ್ಕೆ ದಿಶಾ ಗಜಮುಳ್ಕೆ ಭೂತಳಂ।
ಜಡಿಯೆ ಕುಲಾಚಲಂ ಕೆಡೆಯೆ ವೈರಿ ನೃಪಾಲರ ಹೃದ್ಘಟಂಗಳಂ॥
ತೊಡೆಯೆ ಧಡಂ ಧಡಂ ಧಡಧಡೆಂದುದು ಭೂರಿ ಗಭೀರ ಭೇರಿ ದೀಂ।
ಕಿಡೆ ವಿಜಯ ಪ್ರಯಾಣದೊಳು ಭೈರವ ಭೂವರನೇಂ ಪ್ರತಾಪಿಯೋ॥

ಮಱೆವುಗೆ ಕಾವರೆಂಬರಿದು ಗಣ್ಯವೆ ಸೀರ್ ಮರ ಪುತ್ತು ಪುಲ್ಗಳುಂ।
ಮಱೆವುಗೆ ಕಾಯನೇ ದಿಟ ದರಿದ್ರರ ಕೋಟಲೆಗಳ್ಕೆ ಬಳ್ಕೆ ಬಂ॥
ದರಸುಱೆ ಕಾದು ತನ್ನ ಸಮನಾಗಿಯೆ ಮಾಳ್ಪ ಮಹಾತ್ಮಗೀತ ತಾ।
ನೆಱೆಯನೆನುತ್ತ ಸಾಱುವುದು ಭೈರವ ರಾಜನ ಕೀರ್ತಿ ಡಂಗುರಂ॥

ಮ॥ ಅರಿಭೂಪಾಲರ ದೇಶಮಂ ನಗರಮಂ ಭಂಡಾರಮಂ ಕೊಂಡು ಸಂ।
ಗರದೊಳ್ ಜೀವಮನಿತ್ತೊಡಾ ರಿಪು ನೃಪರ್ ದೇಶಾಂತರಂ ಪೋಗಿ ಸಂ॥
ಚರಿಪರ್ ದಂಡ ಕಮಂಡಲಾಜಿನ ಜಟಾ ಭಸ್ಮಾಂಗದಿಂದಾವಗಂ।
ತಿರಿವರ್ ಭೈರವ ಭೈರವೆಂದು ಭಯದಿಂ ಶ್ರೀ ಭೈರವಕ್ಷೋಣಿಪಾ॥

ಮ॥ ಸ್ರ॥ ದಾನ ಶ್ರೇಯಾಂಸನೆಂಬರ್ ಮುನಿಜನಕಿರದಾಹಾರವೀವಲ್ಲಿ ಮತ್ತಂ।
ಸಾನಂದಂ ಶಕ್ರನೆಂಬರ್ ಜನಪತಿ ಸವನೋದ್ಯೋಗದೊಳ್ ನಿಚ್ಚ ನಿಚ್ಚಂ॥
ದೀನಾನಾಥಾದಿ ವಂದಿ ಪ್ರತತಿ ಬಯಸಿದಂತೀವ ಕಾರುಣ್ಯದಿಂದಂ।
ಕಾನೀನಂ ತಾನೆನುತ್ತಂ ಪೊಗಳ್ವರಿಳೆಯೊಳಂ ಭೈರವಕ್ಷ್ಮಾಪ ನಿನ್ನಂ॥

ಸಾಗರ, 163 ಸು. 1488

ಇದರಲ್ಲಿ ಸಂಗೀತಪುರದ ರಾಜನಾದ ಸಾಳುವೇಂದ್ರನು ಪದ್ಮಣ ಮಂತ್ರಿಗೆ ಒಗೆಯಕೆರೆಯೆಂಬ ಗ್ರಾಮವನ್ನು ಕೊಟ್ಟಂತೆ ಹೇಳಿದೆ.

ತೌಳವದೇಶ

ಶಾ॥ ಶ್ರೀಮದ್ಭೂಭುವನ ಪ್ರಸಿದ್ಧತರ ಜಂಬೂದ್ವೀಪ ಮಧ್ಯಸ್ಥ ತುಂ।
ಗಾಮರ್ತ್ಯಾಚಲ ದಕ್ಷಿಣಾಂತ್ಯ ಭರತಾರ್ಯಾಖಂಡ ನೈಋತ್ಯ ದಿ॥
ಕ್ಷೀವೋಪಾಬ್ಧಿ ತಟೋಪಕಂಠ ವಿಲಸದ್ವರ್ಣಾಶ್ರಮಾಕೀರ್ಣ ಭೂ।
ಧಾಮಂ ತೌಳವ ದೇಶಮಿರ್ಪುದಿಳೆಯೊಳ್ ಸಪ್ತಾಂಗ ಸಂಪತ್ತಿಯಿಂ॥

ಸಂಗೀತಪುರ

ಮ॥ ಸ್ರ॥ ಅದಱೊಳ್ ಮಾಂಗಲ್ಯ ಗೇಹಂ ಬಹುವಿಧ ವಿಭವ ಪ್ರೋಲ್ಲಸಚ್ಚೈತ್ಯ ಗೇಹಂ
ಸುದತೀ ಸಂತಾನ ಜನ್ಮಾಲಯಮಖಿಲ ಸುಖಿ ತ್ಯಾಗಿ ಭೋಗಿ ಪ್ರವಾಹಂ॥
ಮದವದ್ದಂತ್ಯಶ್ವ ಯೂಥ ಪ್ರಬಲ ಪಟು ಭಟಾಕೀರ್ಣಮುತ್ತುಂಗ ಸೌಧೋ।
. . ರಾಜದ್ರಾಜ ಸಂಗೀತಪುರಮೆಸೆಗುಂ ಪ್ರೌಢ ಸಂಗೀಯಮಾನಂ॥

ಕಂ|| ಕವಿ ಗಮಕಿ ವಾದಿ ವಾಗ್ಮಿ |
ಪ್ರವೇಶ ಸಂಗೀತ ವಿಷಯ ಸಾಹಿತ್ಯ ರಸೋ ||
ದ್ಭವ [ಭಾವ] ಚತುರ ಸಂಸ್ತುತ |
ವಿವಿಧ ಕಲಾ ಭಂಗಿ ಸಂಗಿ ಸಂಗೀತಪುರಂ ||

ಪದ್ಮಣ ಮಂತ್ರಿ

ಮ|| ಜಿನ ಪಾದಾನತಿ ಮಸ್ತಕಕ್ಕೆ ಜಿನ ಬಿಂಬಾಲೋಕನಂ ದೃಷ್ಟಿಗಾ |
ಜಿನ ಶಾಸ್ತ್ರ ಶ್ರವಣಂ ಸ್ವಕರ್ಣ ವಿವರಕ್ಕೆ ಶ್ರೀ ಜಿನಸ್ತೋತ್ರಮಾ ||
ನನ ಪದ್ಮಕ್ಕೆ ಚಿದಾತ್ಮ ಭಾವನೆ ಮನಕ್ಕಂ ಪಾತ್ರ ದಾನಂ ಕರ |
ಕ್ಕೆ ನಿಜಾಲಂಕೃತಿಯಾಗೆ ಪದ್ಮಣ ಮಹಾ ಮಂತ್ರೀಶನೇಂ ಧನ್ಯನೋ ||

ಕಂ|| ಪದ್ಮಂ ವಿನಮಿತ ಜಿನ ಪದ |
ಪದ್ಮಂ ಸಜ್ಜನರೊಳೆಸೆವ ವಿಗತಚ್ಛದ್ಮಂ ||
ಪದ್ಮಾ ಪ್ರಿಯಕರ ಗುಣ ಗಣ |
ಸದ್ಮಂ ನಿತ್ಯ ಪ್ರಸನ್ನ ನಿಜಮುಖ ಪದ್ಮಂ ||

ಮೂಡಬಿದರೆಯ ಹೊಸ ಬಸ್ತಿಯ 5ನೆಯ ಶಾಸನ,[1] ಸು. 1550

ಈ ಶಾಸನವು ಅಸಮಗ್ರವಾಗಿದೆ. ಇದರಲ್ಲಿ ಸಾಳ್ವಮಲ್ಲ ಎಂಬ ದೊರೆಯ ಶೌರ್ಯ ಪ್ರತಾಪಗಳು ವರ್ಣಿತವಾಗಿವೆ.

ಸಾಳ್ವಮಲ್ಲ

ಮ|| ಪುರುಳೀತಂ ಮರುಳೀತನೀತನುರು ಶಾಸ್ತ್ರೋತ್ತುಂಗನೀತಂ ನಿರ |
ಕ್ಷರನೀತಂ ಸುಚರಿತ್ರನೀತನುಱಿ ದುಶ್ಚಾರಿತ್ರನೀತಂ ಗುಣೋ ||
ತ್ಕರನೀತಂ ಗುಣ ಹೀನನೆಂದವರ್ಗಳಂ ಕಂಡಾಕ್ಷಣಂ ಬಲ್ಲ ನೀ |
ಧರೆಯೊಳ್ ಸಾಳುವಮಲ್ಲರಾಯನೆ ವಲಂ ಭಾವಜ್ಞ ಚಕ್ರೇಶ್ವರಂ ||

ಜಗದೊಳ್ ಕ್ಷತ್ರಿಯ ರತ್ನನಂ ಯದು ನೃಪಾಲೋತ್ತಂಸ ಮಾಣಿಕ್ಯನಂ |
ಮೃಗಲಕ್ಷ್ಮಾನ್ವಯನಂ ಜಿನೇಂದ್ರ ಪದ ಪೂಜಾ ಶಕ್ರನಂ ಚಾಗ ಪೆಂ ||
ಪಿಗನಂ ಕಾಶ್ಯಪ ಗೋತ್ರನಂ ಸುಗುಣನಂ ಶ್ರೀ ಸಾಳ್ವಮಲ್ಲೇಶನಂ |
ಪೊಗೞ್ವೀ ನಾಲಗೆಯುಸ್ಸರಂ ಪೊಗೞ್ವದೇ ಪಾಲುಂಡು ಮೇಲುಂಬುದೇ ||

ಬಲಿಯಿಂ ಕರ್ಣನೆ ಚಾಗಿಯಾ ಬಲಿಯಿನುದ್ಯತ್ಕರ್ಣನಿಂ ಭೋಜನಾ |
ಬಲಿಯಿಂ ಕರ್ಣನಿನಂತೆ ಭೋಜ ವಿಭುವಿಂ ಮಾಂಧಾತನೀ ಲೋಕದೊಳ್ ||
ಬಲಿಯಿಂ ಕರ್ಣನಿನಂತೆ ಭೋಜ ವಿಭುವಿಂ ಮಾಂಧಾತನಿಂ ಚಾಗದ |
ಗ್ಗಲನಾದಂ ಕಲಿ ಸಾಳ್ವಮಲ್ಲನವನಂತಾರ್ ನೋಂತರೀ ಧಾತ್ರಿಯೊಳ್ ||

1. ಪಂಚಕಜ್ಞಾಯು, pp. 158–163.

ಚಂ॥ ಪರಮ ಜಿನೇಂದ್ರ ಭಕ್ತಿಗೆ ಸದುಕ್ತಿಗೆ ಚಾಗಕೆ ಭೋಗಕಾತನೊಳ್ ।
ಸಿರಿಗೆ ಪರಾಕ್ರಮಕ್ಕೆ ಕಡು ನನ್ನಿಗೆ ಸತ್ಕಳೆಗಂ ತ್ರಿಲೋಕದೊಳ್ ॥
ಸರಿ ದೊರೆ ಪಾಡು ತೋಡು ಪಡಿ ಪಾಸಟಿಯಾಡೆಣೆಯಿಲ್ಲೆನುತ್ತಹಂ ।
ಕರಿಸಿ ಪೊಗಳ್ದು ಬಾಜಿಸಿತು ಸಾಳುವ ಮಲ್ಲನ ಕೀರ್ತಿ ಡಿಂಡಿಮಂ ॥

ಸಾಗರ, 55 ಸು. 1560

ಇದರಲ್ಲಿ ಗೇರುಸೊಪ್ಪೆಯ ರಾಜನಾದ ದೇವರಾಯನ ಆಳಿಕೆಯಲ್ಲಿ ಅಂಬಣ ಸೆಟ್ಟಿ ಗೇರುಸೊಪ್ಪೆಯ ನೇಮಿ ಜಿನಾಲಯದ ಮುಂದೆ ಕಂಚಿನ ಮಾನಸ್ತಂಭವನ್ನು ನಿಲ್ಲಿಸಿದಂತೆ ಹೇಳಿದೆ.

ನೇಮಿನಾಥ ಸ್ತುತಿ

ಮ॥ ಸ್ರ॥ ಅಮೃತ ಶ್ರೀಕಾಂತಮಾಗಿರ್ದಖಿಲ ಸುಖ ಸಮುಚ್ಚಾಶ್ರಯಮಾಗಿರ್ದ ನಾನಾ ।
ಸಮಲ ಪ್ರಧ್ವಂಸಿಯಾಗಿರ್ದನಿಮಿಷ ಖಗ ಸಂಸೇವ್ಯಮಾಗಿರ್ದ ದೇವೋ ॥
ತ್ತಮನಾಗೇಶೋತ್ತಮಾಂಗಾರ್ಪಿತ ನಿಜಪದಮಾಗಿರ್ದ ಪಾರಾಶಿ ಚಂದ್ರಾ ।
ಪಮಮಾಗಿರ್ದೀ ನಿಜಾಕಾರಮೆ ರಮೆಗೆ ವಿಲಾಸಾಸ್ಪದಂ ನೇಮಿನಾಥಾ ।

ಮ॥ ಜನನೇತ್ರ ಭ್ರಮರಾವಲೀ ಕುಸುಮಿತೋದ್ಯಾನಂ ಮುನೀಂದ್ರೌಘ ಚಿ ।
ತ್ತ ನವೀನಾಂಬುರುಹ ಪ್ರಭಾತಸಮಯಂ ವಿದ್ವಜ್ಜನ ಸ್ತೋತ್ರ ದಿ ॥
ವ್ಯ ನದೀ ಪೂರ ಹಿಮಾಚಲಂ ನಿಜ ಮಹಾ ಸೌಂದರ್ಯಮೆಂದೆಂಬ ಸ ।
ಜ್ಜನತಾ ಸಂಸ್ತುತಿ ನಿನ್ನೊಳೀನಮುರ್ದ್ದ್ಯೆ ಶ್ರೀ ನೇಮಿ ತೀರ್ಥೇಶ್ವರಾ ॥

ಗೇರುಸೊಪ್ಪೆ

ಚಂ॥ ವರ ಜಿನ ಚೈತ್ಯ ಗೇಹ ನೃಪ ಸದ್ಮ ನಿಯೋಗಿ ನಿವಾಸ ವೈಶ್ಯ ಮಂ ।
ದಿರ ನಿಕುರುಂಬದಿಂ ವಿಮಲಧರ್ಮ ದಯಾನ್ವಿತ ದಾನ ಶೌಂಡರಿಂ ॥
ಗುರು ಯತಿ ವೃಂದದಿಂ ಕವಿ ಬುಧೋತ್ಕರದಿಂ ವರ ಭವ್ಯ ಕೋಟಿಯಿಂ ।
ಸುರುಚಿರ ಗೇರುಸೊಪ್ಪೆಯವೊಲಾವ ಪುರಂ ಜಗದೊಳ್ ಪ್ರಸಿದ್ಧಮೋ ॥

ಸಾಳ್ವಮಲ್ಲ

ಮ॥ ಸ್ರ॥ ಸಮರಾಂಭೋ ರಾಶಿಯೊಳ್ ಸುತ್ತುವ ಸುಳಿಗಳಿವೆಂಬಂತೆ ನೀನೇಱಿದಶ್ವೋ ।
ತ್ತಮದಿಂದಂ ವೇಡೆಯಂಗಳ್ ಪಸರಿಸೆ ರಿಪು ರಾಜೇಂದ್ರರೇಱಿರ್ದ ಮತ್ತೇ ॥
ಭ ಮಹಾ ವಾಜಿವ್ರಜಂಗಳ್ ಪಡಗುಗಳವೊಲಳ್ಳಿಲ್ಕೆ ನುಂಗುತ್ತುಮಿರ್ಕುಂ ।
ಕ್ರಮದಿಂ ತ್ವತ್ಪಾದ ಯುಗ್ಮಂ ಮಕರ ಯುಗದವೋಲ್ ಸಾಳ್ವಮಲ್ಲ ಕ್ಷಿತೀಶಾ ॥

ದೇವರಸಿ

ಉ॥ ಆತನ ಕಾಂತೆ ಶೀಲಗುಣವಂತೆ ಕಲಾ ಗುಣವಂತೆ ಜೈನ ಮಾ ।
ರ್ಗಾತತ ಚಿತ್ತೆ ಧರ್ಮಪರ ವಿತ್ತೆ ಜನಸ್ತುತ ವೃತ್ತೆ ಸತ್ಕುಲ ।

ಖ್ಯಾತ ಸುರೂಪೆ ಸನ್ಮತಿ ಕಲಾಪೆ ವಿನಿರ್ಗತ ಕೋಪೆಯೆಂದು ಧಾ।
ತ್ರೀ ತಳವೊಪ್ಪೆ ದೇವರಸಿಯಂ ಪೊಗಳ್ತಿರ್ಗ್ಗಂ ಗುಣರತ್ನ ರಾಶಿಯಂ ॥

ಯೋಜಣ್ಣ

ಕಂ॥ ಪ್ರಿಯತಮೆಯುದ್ವಯದಿಂದಂ।
ನಯನ ದ್ವಯದಿಂದೆ ವಕ್ತ್ರಮೊಪ್ಪುವ ತೆಱದಿಂ ॥
ಜಯದಂಕದಾನೆ ದಂತ।
ದ್ವಯದಿಂದೆಸೆವಂತೆಯೊಪ್ಪಿದಂ ಯೋಜಣ್ಣಂ ॥

ನಾಗಪ್ರ

ಮ॥ ಪತಿಚಿತ್ತಾನುಗುಣ ಪ್ರವರ್ತನದಿನತ್ಯಾಶ್ಚರ್ಯ ಸೌಕರ್ಯ ಸಂ।
ಯುತ ಶೀಲೋನ್ನತಿಯಿಂ ಜಿನೇಂದ್ರ ಪದ ಪೂಜಾಸಕ್ತ ಸದ್ಭಕ್ತಿಯಿಂ ॥
ಸತತೋತ್ಸಾಹ ಸುದಾನದಿಂ ಪರಹಿತ ವ್ಯಾಪಾರ ಚಾತುರ್ಯದಿಂ।
ಕ್ಷಿತಿಯೊಳ್ ನಾಗಮನಾಂತಳುತ್ತಮ ಯಶಃ ಸೌಭಾಗ್ಯಮಂ ಭಾಗ್ಯಮಂ ॥

ಮಾನಸ್ತಂಭ

ಮ॥ ಸ್ರ॥ ಭರದಿಂ ಜನ್ಮಾಬ್ಧಿಯಂ ದಾಂಟಿಸುವ ವರ ಮಹಾಧರ್ಮಮೆಂದೆಂಬ ಪೋತ।
ಕ್ಕುರು ಕೂಪಸ್ತಂಭಮಂ ಜಾಂಕನ ವಿಶದ ಯಶಃಪಟ್ಟಿಕಾ ಸ್ತಂಭಮೆಂಬಂ।
ತಿರೆ ಮಾನಸ್ತಂಭಮಾ ಕೂಟದೊಳೆಸೆವ ಚತುರ್ಜ್ಜಿನ ಬಿಂಬಾಂಘ್ರಿ ಪೂಜಾ।
ಪರಿಕೀರ್ಣಾಸ್ಸಾರ ಪುಷ್ಪಾಂಜಲಿವೊಲೆಸೆವುದೀ ವ್ಯೋಮ ತಾರಾ ಕದಂಬಂ ॥

ಕಾವ್ಯವೂ ತತ್ತ್ವಜ್ಞಾನವೂ

ಕಾವ್ಯದ ಮತ್ತು ತತ್ತ್ವಜ್ಞಾನದ ವಿಷಯಗಳು ಬೇರೆ ಬೇರೆಯಾಗಿರುವುವು. ಅವುಗಳಲ್ಲಿ ಯಾವ ಸಂಬಂಧವೂ ಇರುವುದಿಲ್ಲ. ಕಾವ್ಯವು ರಸಪೂರಿತವಾಗಿರುವುದು; ತತ್ತ್ವಜ್ಞಾನವು ನೀರಸವಾಗಿರುವುದು. ಇಂಥ ವಿಚಾರಗಳು ಸಾಧಾರಣವಾಗಿ ಎಲ್ಲರಲ್ಲಿಯೂ ಕಂಡುಬರುವುವು. ಆದುದರಿಂದಲೇ ಅವರು ಕಾವ್ಯಕ್ಕೂ ತತ್ತ್ವಜ್ಞಾನಕ್ಕೂ ಸಂಬಂಧವೇ ಇಲ್ಲೆಂದು ಹೇಳುವರು. ಕಾವ್ಯಸಾಗರದಲ್ಲಿ ಬುಡದವರೆಗೆ ಮುಳುಗಿ ಅಲ್ಲಿರುವ ಅನರ್ಘ್ಯ ರತ್ನಗಳನ್ನು ಕೂಡಿಸಿ ಹೊರದೆಗೆದು ಜನರ ಮುಂದಿಡುವ ಓದುಗರ ಅಭಿಪ್ರಾಯವಲ್ಲಿದು. ಜನಸಾಮಾನ್ಯದ ಅಭಿಪ್ರಾಯವು. "ಕಾವ್ಯವೂ ತತ್ತ್ವಜ್ಞಾನವೂ" ಎಂಬ ಶಬ್ದಪ್ರಯೋಗದಲ್ಲಿ ವಿರೋಧಾಭಾಸವು ಕಂಡುಬರುವುದು ತೋರಿಕೆಗೆ ಮಾತ್ರ. ನಿಜವಾಗಿಯೂ ವಿಚಾರಮಾಡುವಲ್ಲಿ ಕಾವ್ಯತತ್ತ್ವಜ್ಞಾನಗಳಲ್ಲಿ ವಿರೋಧವಿಲ್ಲವೇ ಇಲ್ಲ. ಅದ್ಯಂತವಾಗಿ ಅವುಗಳಲ್ಲಿ ಐಕ್ಯವೇ ಕಂಡುಬರುವುದು.

ಸೃಷ್ಟಿಯೊಳಗಿನ ಪ್ರತಿಯೊಂದು ವಸ್ತುವಿನ ವಿಷಯವಾಗಿ ತತ್ತ್ವಜ್ಞಾನವು ಏನಾದರೂ ಹೇಳುತ್ತಿರುತ್ತದೆ. ಆ ವಸ್ತುವು ಸಗುಣವಿರಲಿ, ನಿರ್ಗುಣವಿರಲಿ, ಸಣ್ಣದಿರಲಿ ದೊಡ್ಡದಿರಲಿ ತತ್ತ್ವಜ್ಞಾನವು ಅದರ ವಿವೇಚನವನ್ನು ಮಾಡಿಯೇ ತೀರುವುದು. ಎಂದರೆ ಜಗತ್ತಿನೊಳಗಿನ ಎಲ್ಲ ಗುಟ್ಟುಗಳನ್ನೂ ಒಡೆದು ಹೇಳುವುದೇ ಅದರ ಕರ್ತವ್ಯವು. ಅದನ್ನು ತತ್ತ್ವಜ್ಞಾನವು ಉತ್ಕೃಷ್ಟ ರೀತಿಯಿಂದ ಮಾರುಗಾಣಿಸುವುದು. ಸೃಷ್ಟಿಯಲ್ಲಿ ಕಾವ್ಯವು ಹೇಗೆ ಹುಟ್ಟಿತು, ಎಲ್ಲಿ ಹುಟ್ಟಿತು, ಏಕೆ ಹುಟ್ಟಿತು, ಮಾನವ ಸೃಷ್ಟಿಯಲ್ಲಿ ಅದರ ಉಪಯೋಗವೇನು—ಇವೇ ಮುಂತಾದ ಅನೇಕ ಗೂಢ ಪ್ರಶ್ನೆಗಳಿಗೆ ಯೋಗ್ಯವಾದ ಉತ್ತರವನ್ನು ಕೊಡುವುದು. ಇದಾದರೂ ತತ್ತ್ವಜ್ಞಾನದ ಕಾರ್ಯವೇ. ಕಾವ್ಯತತ್ತ್ವವು ತಿಳಿದಮೇಲೆಯೇ ಈ ಪ್ರಶ್ನೆಗಳಿಗೆ ಯೋಗ್ಯವಾದ ಉತ್ತರವು ತಾನಾಗಿಯೇ ದೊರೆಯುವುದು.

ಸೃಷ್ಟಿಯಲ್ಲಿ ಕಾವ್ಯವು ಹೇಗೆ ಹುಟ್ಟಿತೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಸೃಷ್ಟಿಯು ಹೇಗೆ ಹುಟ್ಟಿತೆಂಬುದನ್ನು ವಿಚಾರಿಸಬೇಕು. ಏಕೆಂದರೆ ಸೃಷ್ಟಿಯ ಉತ್ಪತ್ತಿಯ ನಿಯಮಗಳು ಕಾವ್ಯಕ್ಕೂ ಹತ್ತುವುವು. ತಾತ್ತ್ವಿಕ ವಿಷಯಗಳನ್ನು ವಿವೇಚಿಸುವ ಅನೇಕ ಗ್ರಂಥಗಳೂ ಅನೇಕ ಮಾರ್ಗಗಳೂ ಇವೆ. ಅವು ನಾಸ್ತಿಕ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಜೈನ, ಚಾರ್ವಾಕ ಮುಂತಾದವುಗಳು. ಇವುಗಳಲ್ಲಿ ಆವುದು ಶ್ರೇಷ್ಠವಾದುದು, ಆವುದು ಕನಿಷ್ಠವಾದುದು ಎಂಬುದನ್ನು ವಿಚಾರಿಸುವುದು ನಮ್ಮ ಕರ್ತವ್ಯವಲ್ಲ. ಆದರೆ ಯಾವ ಮನುಷ್ಯನಿಗೆ ಯಾವ ತತ್ತ್ವಜ್ಞಾನದ ಮೇಲೆ ವಿಶ್ವಾಸವಿರುವುದೋ ಅವನು ಆ ತತ್ತ್ವಗಳನ್ನನು

ನರಿಸಿ ಕಾವ್ಯವಿಷಯದ ಮೇಲಿನ ಪ್ರಶ್ನೆಗಳಿಗೆ ಉತ್ತರಹೇಳುವನು. ವಿಚಾರದಂತೆಯೇ ಆಚರಿಸುವುದು ಮನುಷ್ಯಧರ್ಮವಾಗಿದೆ. ದ್ವೈತವಾದಿಯು ಆ ಮತದಂತೆ ಕಾವ್ಯತತ್ತ್ವದ ವಿವೇಚನೆಯನ್ನು ಮಾಡಬಹುದು; ಅದ್ವೈತವಾದಿಯು ತನ್ನ ಮತದಂತೆ ಕಾವ್ಯವಿವೇಚನೆಯನ್ನು ಮಾಡಬಹುದು; ಜೈನಮತವಾದಿಯು ತನ್ನ ಮತದಂತೆ ಕಾವ್ಯವಿವೇಚನೆಯನ್ನು ಮಾಡಬಹುದು. ಅದರಲ್ಲಿ ದೋಷವೇನೂ ಇಲ್ಲ. ನನಗಂತೂ ಅದ್ವೈತಮತವೇ ಸತ್ಯವೆಂದು ತೋರುತ್ತಿದ್ದುದರಿಂದ ಅದ್ವೈತದೃಷ್ಟಿಯಿಂದಲೇ ಕಾವ್ಯವನ್ನು ತಿಳಿಯುವೆನು. ಹೀಗೆ ಮಾಡುವುದರಿಂದ ಕಾವ್ಯೋತ್ಪತ್ತಿಯ ಗುಟ್ಟನ್ನು ಕಂಡುಹಿಡಿಯಲಾಗುವುದೆಂದು ನನ್ನ ನಂಬುಗೆ.

ಸೃಷ್ಟಿಯಲ್ಲಿ ಕಂಡುಬರುವ ಪದಾರ್ಥಗಳ ಭಿನ್ನತೆಯಲ್ಲಿ ತತ್ತ್ವಜ್ಞಾನದ ಗುಟ್ಟಿನ ಉತ್ಪತ್ತಿಯು. ಸೃಷ್ಟಿಸೌಂದರ್ಯವನ್ನು ನೋಡುವವರ ಮನಸ್ಸನ್ನು ಅದರ ಬಾಹ್ಯಸ್ವರೂಪವು ಆಕರ್ಷಿಸುವುದು. ಕೋಟ್ಯವಧಿ ಪ್ರಾಣಿಗಳೂ, ಗಗನಚುಂಬಿತವಾದ ಪರ್ವತಗಳೂ, ಘೋರ ಕಾನನಗಳೂ, ಮೃದು ಶಾದ್ವಲಗಳೂ, ಗಂಭೀರವಾಗಿ ಪ್ರವಹಿಸುವ ನದಿನದಗಳೂ, ವಿಸ್ತಾರವಾದ ಪೃಷ್ಠಭಾಗದಮೇಲೆ ಅಲ್ಲೋಲಕಲ್ಲೋಲವಾಗಿ ಅಲೆಗಳನ್ನು ಹೊರಡಿಸುವ ಮಹಾಸಾಗರಗಳೂ, ಪ್ರಳಯಾಗ್ನಿಯಂತೆ ಧಗಧಗಿಸುವ ಜ್ವಾಲಾಮುಖಿಗಳೂ ಇವೇ ಮುಂತಾದ ಭೂಸ್ಥಿತವನಗಳೂ, ಅಸಂಖ್ಯಾತವಾದ ನಕ್ಷತ್ರಗಳೂ, ಚಕಚಕಿಸಿ ಸಕಲರಿಗೂ ಆನಂದೋತ್ಸಾಹಗಳನ್ನುಂಟುಮಾಡುವ ಸೂರ್ಯನಾರಾಯಣನೂ, ಪ್ರಮೋದಾಮೋದಗಳನ್ನು ಶೀತಳ ಕಿರಣಗಳಿಂದುಂಟುಮಾಡುವ ಸುಧಾಕರನೂ, ಕಾಲಪುರುಷನಂತೆ ಕಪ್ಪುವರ್ಣವನ್ನು ಧರಿಸಿ ಬರಸಿಡಿಲುಗಳೆಂಬ ಮಹಾಯುಧಗಳನ್ನು ಆದುಬರದಿಂದ ಹೊಯ್ಯುವ ಮೇಘಗಳೂ, ಮರಾಳಪಕ್ಷಿಗಳಂತೆ ಶುಭ್ರವಾಗಿ ಮಂದಗತಿಯಿಂದ ಅಲೆಯುತ್ತ ಹೋಗುವ ಶರದಭ್ರಗಳೂ ಇವೇ ಮುಂತಾದ ಆಕಾಶಸ್ಥಿತವನಗಳೂ ಮನಸ್ಸನ್ನು ಕ್ಷಣಕಾಲದವರೆಗೆ ಭ್ರಮೆಗೊಳಿಸುವುವು. ಸೃಷ್ಟಿಯಲ್ಲಿ ಇಂಥ ವೈಚಿತ್ರ್ಯಗಳು ಕಂಡುಬಂದರೂ ಸೃಷ್ಟಿಚಕ್ರವು ಒಂದು ನಿಯಮವನ್ನು ಅನುಸರಿಸಿ ನಡೆದುದನ್ನು ಮನಸ್ಸಿನಲ್ಲಿ ತಂದರೆ ಆಶ್ಚರ್ಯವು ದ್ವಿಗುಣಿತವಾಗುವುದು. ಸೃಷ್ಟಿಯ ವಿಸ್ತಾರವೂ, ನಾನಾತರದ ಅದರ ಬಾಹ್ಯಸ್ವರೂಪವೂ ಮನುಷ್ಯನಿಗೆ ಭ್ರಮೆಯನ್ನುಂಟುಮಾಡುವಷ್ಟು ಶಕ್ತಿಯುಳ್ಳವಾದರೂ ಅದರಿಂದ ಅವನ ಸಮಾಧಾನವಾಗದೆ, ಅದರ ವೈಚಿತ್ರ್ಯದೊಳಗಿನ ತತ್ತ್ವವನ್ನು ಶೋಧಿಸಿ ತೆಗೆಯುವ ಹವ್ಯಾಸಕ್ಕೆ ಅವನು ಬೀಳುವನು. ಅವನು ಹೀಗೆ ಪ್ರವೃತ್ತನಾಗಲು ಬಾಹ್ಯಸೃಷ್ಟಿಯಲ್ಲಿ ಕಂಡುಬರುವ ಪದಾರ್ಥಗಳಲ್ಲಿ ಏನೋ ಒಂದು ಗುಟ್ಟು ಇದೆಯೆಂದು ತೋರಹತ್ತುವದು. ಸಾಧಾರಣವಾಗಿ ಒಂದೇ ಜಾತಿಯ ಎರಡು ವಸ್ತುಗಳಲ್ಲಿ ಏನಾದರೂ ಅಂತರವು ಕಂಡುಬರುತ್ತದೆ; ಮತ್ತು ಸಮಾನವಾಗಿ ಕಾಣುವ ಎರಡು ಜಾತಿಗಳಲ್ಲಿಯೂ ಅಂತರವು ಕಂಡುಬರುತ್ತದೆ. ಹೀಗೆ ಸೂಕ್ಷ್ಮದೃಷ್ಟಿಯಿಂದ ವಸ್ತುಪರೀಕ್ಷೆ

ಯನ್ನು ನೋಡುತ್ತ ಹೋದ ಹೋದ ಹಾಗೆ ಪ್ರತಿಯೊಂದು ವಸ್ತುವಿನಲ್ಲಿ ಏನಾದರೊಂದು ಹೆಚ್ಚಿನ ಗುಣವು ತೋರುವುದು. ವಸ್ತುವಿನ ಬಾಹ್ಯ ಜ್ಞಾನದಿಂದಾಗುವ ಮನಸ್ಸಿನ ಸಮಾಧಾನಕ್ಕಿಂತ ಇಂಥ ಗೂಢವಾದ ಹೆಚ್ಚಿನ ಗುಣದಿಂದ ನಮ್ಮ ಬುದ್ಧಿಗೆ ಹೆಚ್ಚು ಸಮಾಧಾನವಾಗುವುದು. ವಿಚಾರಿಯಾದವನಿಗೆ ಬಾಹ್ಯ ಸ್ವರೂಪಕ್ಕಿಂತ ಅಂತರಂಗದೊಳಗಿನ ಗುಟ್ಟು ಹೆಚ್ಚು ಆಹ್ಲಾದವನ್ನುಂಟುಮಾಡುವುದು. ಮಾನಿನಿಯ ಮನೋಹರವಾದ ಮುಖ ಸೌಂದರ್ಯಕ್ಕಿಂತ ಅವಳ ಸ್ವಭಾವ ಸೌಂದರ್ಯವು ಹೆಚ್ಚು ಆನಂದಮಯವಾಗಿರುವುದು. ಬಾಲಕರ ಅಹೇತುಕವಾದ ಆಟಪಾಟ, ಲಾಸ್ಯ ಹಾಸ್ಯ ತೊದಲ್ನುಡಿಗಳಿಗಿಂತ ಅವರ ಅಂತಃಕರಣದ ಸರಲತೆಯು ಹೆಚ್ಚು ಹೃದಯಂಗಮವಾಗಿರುವುದು. ದೊಡ್ಡ ದೊಡ್ಡ ಬಂಡೆಗಲ್ಲುಗಳೂ, ಗಗನ ಚುಂಬಿತವಾದ ವೃಕ್ಷಗಳೂ ಉಳ್ಳ ಪರ್ವತವು ಎಲ್ಲ ಪ್ರಾಣಿಗಳಿಗೆ ಆಶ್ರಯಸ್ಥಾನವಾಗಿರುವುದೆಂಬ ವಿಚಾರವೇ ಹೆಚ್ಚು ಆನಂದವೀಯುವುದು. ಗಂಗಾನದಿಯ ವಿಸ್ತಾರವಾದ ಪಾತ್ರಕ್ಕಿಂತಲೂ ಅದರ ಪವಿತ್ರತೆಯೇ ಹೆಚ್ಚು ಉದಾತ್ತವಾಗಿದೆ. ಈ ರೀತಿಯಾಗಿ ಪ್ರತಿಯೊಂದು ವಸ್ತುವಿನ ಗುಟ್ಟನ್ನು ತಿಳಿದುಕೊಂಡು ಅದರಲ್ಲಿಯೇ ನಿರತರಾಗುವುದು ತತ್ತ್ವಜ್ಞಾನದ ಎರಡನೆಯ ಪಾತವು. ಸಕಲ ವಸ್ತುಗಳಲ್ಲಿಯ ಸಾಧಾರಣ ತತ್ತ್ವವನ್ನಿಂತು ತಿಳಿದುಕೊಂಡು, ಇಂಥ ತತ್ತ್ವಗಳಿಗೆ ಮೂಲಕಾರಣವಾದ ಒಂದೇ ಒಂದು ಗುಟ್ಟನ್ನು ಕಂಡುಹಿಡಿದರೆ ಅದು ಸರ್ವವ್ಯಾಪಿಯಾಗಿದೆಯೆಂದು ತಿಳಿದುಬರುವದು. ಈ ತತ್ತ್ವವನ್ನು ಕಂಡುಹಿಡಿಯಲು ಕಾರಣೀಭೂತವಾದ ನಮ್ಮ ಬುದ್ಧಿಗೆ ಪ್ರೇರಕಗಳೆನ್ನಿಸುವ ಎಲ್ಲರಲ್ಲಿಯೂ ವಾಸವಾಗಿ ಭಿನ್ನ ಭಿನ್ನವೆಂದು ಬಾಹ್ಯತಃ ತೋರುವ ಆತ್ಮಗಳು ಅಭಿನ್ನವಾಗಿರುವವು. ಆಮೇಲೆ ತಾನೇ ಭಿನ್ನ ಭಿನ್ನ ರೂಪವನ್ನು ತೊಟ್ಟು ಬೇರೆ ಬೇರೆ ರೀತಿಯಾಗಿ ನರ್ತಿಸುವನೆಂದು ಜ್ಞಾನವು ಉಂಟಾಗುವುದು. ಈ ಜ್ಞಾನವುಂಟಾದಮೇಲೆ ನಾನು ಎರಡನೆಯವನು ಎಂಬ ಭಾವವು ಲೋಪವಾಗಿ ಇಡೀ ವಿಶ್ವದಲ್ಲಿ ಸಾಮರಸ್ಯವನ್ನು ಮನುಷ್ಯನು ಹೊಂದುವನು. ಆಮೇಲೆ ಕಣ್ಣುಗಳಿದ್ದರೂ ಕಾಣುವುದಿಲ್ಲ, ಕಿವಿಗಳಿದ್ದರೂ ಕೇಳುವುದಿಲ್ಲ, ಮುಖವಿದ್ದರೂ ಮಾತಾಡಲಾಗುವುದಿಲ್ಲ. ಈ ಸ್ಥಿತಿಯೆಂದರೆ ನಿರ್ವಿಕಲ್ಪ ಸಮಾಧಿಯು ಸ್ಥೂಲಮಾನದ ಅದ್ವೈತ ತತ್ತ್ವವಿದು.

ಇಂಥ ಸಂಗತಿಯೇ ಕಾವ್ಯದಲ್ಲಿ ನಮ್ಮ ಅನುಭವಕ್ಕೆ ಬರುವುದು. ಕಾವ್ಯದಲ್ಲಿ ಬಾಹ್ಯತಃ ಪರೀಕ್ಷಿಸುವವನಿಗೆ ಶಬ್ದ ಯೋಜನೆಯ ಹೊರತು ಬೇರೆ ಯಾವ ಸಂಗತಿಯೂ ಕಂಡುಬರುವುದಿಲ್ಲ. ಕವಿಗಳು ಶಬ್ದ ಕಲ್ಪಕರೂ ಶಬ್ದ ಯೋಜಕರೂ ಆಗಿರುವರು. ಆದುದರಿಂದಲೇ ಭಾಷೆಯು ತಿಳಿಯಹತ್ತಿತೆಂದರೆ ಮೊದಲು ಇವರ ಶಬ್ದ ಸಂಗ್ರಹದ ವಿವಿಧತೆ, ಚಮತ್ಕಾರ ವೈಪುಲ್ಯಗಳಿಂದ (ಪದ, ಲಾಲಿತ್ಯ, ಯಮಕ ಮುಂತಾದ ಶಬ್ದಾಲಂಕಾರಗಳಿಂದ) ಓದುಗರ ಬುದ್ಧಿಯು ಆಕರ್ಷಿತವಾಗುವುದು. ಕಾವ್ಯ ತತ್ತ್ವದ ಮೊದಲನೆಯ ಮೆಟ್ಟಿಲು. ಮೊದಮೊದಲು ಶಬ್ದಗಳ ಬಾಹ್ಯ ರೂಪವೇ ಮನಸ್ಸನ್ನು ಆಕರ್ಷಿಸುವುದು. ಇಂಥ ಅಲಂಕಾರಗಳನ್ನೊಳಕೊಂಡ ಕಾವ್ಯವು ಬಹಿಸ್ಥ ಕಾವ್ಯವು. ಇದಲ್ಲದೆ ವರ್ಣನೆಗಳು, ಮನೋರಂಜಕ

ವಾದ ಕಥೆಗಳು, ಇವಾದರೂ ಕಾವ್ಯದ ಬಾಹ್ಯ ಸ್ವರೂಪಗಳೆಂದೇ ಹೇಳಬೇಕು. ಆದರೆ ಬುದ್ಧಿಯ ಬೆಳವಣಿಗೆಯು ಅದು ಅದು ಹಾಗೆ ಬಾಹ್ಯ ಸ್ವರೂಪದ ಅಂತರಂಗದಲ್ಲಿ ಅಡಗಿರುವ ರಸವನ್ನು, ಅದು ಹುಡುಕಿ ತೆಗೆಯುತ್ತ ಅದರಿಂದ ಆನಂದವನ್ನು ಪಡೆಯುವುದು; ಮತ್ತು ಕಾವ್ಯಗಳಲ್ಲಿ ಒಂದು ಅಥವಾ ಎಲ್ಲ ರಸಗಳು ಹೇಗೆ ಪರಿಪೋಷವನ್ನು ಹೊಂದಿರುವವೆಂಬುದನ್ನು ಕಂಡುಹಿಡಿಯುವುದರಲ್ಲಿ ಅದು ತಲ್ಲೀನವಾಗುವುದು. ಈ ಸಂದರ್ಭದಲ್ಲಿ ದಂಡಿಯ ಪದಲಾಲಿತ್ಯವು ಸಹ ಬೇಸರವನ್ನುಂಟುಮಾಡುವುದು. ಏಕೆಂದರೆ ಕಾವ್ಯದ ವ್ಯಾಖ್ಯೆಯನ್ನು ಮಾಡುವ ಕಾಲದಲ್ಲಿ ಲಕ್ಷಣಗ್ರಂಥಕಾರನು "ರಸಾತ್ಮಕಂ ವಾಕ್ಯಂ ಕಾವ್ಯಂ" ಎಂದು ಹೇಳಿರುವನು. ರಸಯುಕ್ತವಾದ ವಾಕ್ಯವು ಗದ್ಯವಿರಲಿ ಪದ್ಯವಿರಲಿ ಅದು ಕಾವ್ಯವಾಗುವುದು. ಬಾಣನ ಕಾದಂಬರಿಯು ಗದ್ಯವಾದರೂ ಅದು ಕಾವ್ಯವೇ; ಲಿಂಗಣ್ಣನ ಕೆಳದಿನೃಪವಿಜಯವು ಪದ್ಯರೂಪವಾಗಿದ್ದರೂ ಕಾವ್ಯವಾಗಲರಿಯದು. ಈ ರೀತಿಯಾಗಿ ಕಾವ್ಯಾಸ್ವಾದನೆಯ ಎರಡನೆಯ ಮೆಟ್ಟಿಲನ್ನು ಮನಸ್ಸು ಮುಟ್ಟಿರಲು ಕಾವ್ಯರಸವನ್ನು ಆಸ್ವಾದಿಸುತ್ತ, ಕಮಲದ ಮಕರಂದ ರಸವನ್ನು ಸವಿಯುವದರಲ್ಲಿ ಏಕಾಗ್ರವಾಗಿ ಸೂರ್ಯಾಸ್ತವನ್ನು ಮರೆತು ಅದರಲ್ಲಿಯೇ ಸೆರೆಸಿಕ್ಕು ಬೀಳುವ ಭ್ರಮರಗಳಂತೆ; ಮನಸ್ಸು ಅದರಲ್ಲಿಯೇ ತಲ್ಲೀನವಾಗಿ ಬಾಹ್ಯ ವ್ಯಾಪಾರವನ್ನು ಮರೆತುಬಿಡುವುದು. ಸುಭದ್ರೆಯ ಮೋಹಕ್ಕೆ ಮರುಳಾದ ತ್ರಿದಂಡಿ ಸಂನ್ಯಾಸಿಯನ್ನು ಪರಮಾನ್ನದಲ್ಲಿ ಉಪ್ಪನ್ನೂ, ಹಾಲಿನಲ್ಲಿ ಸಾರನ್ನೂ ಕಲಿಸುವಂತೆ ಮಾಡಿದುದು ಕವಿಯ ಕಾರ್ಯವು. ಸಂನ್ಯಾಸಿಯಾದ ಅರ್ಜುನನ ಮನವು ಊಟದಮೇಲಿರಲಿಲ್ಲ. ಏಕೆಂದರೆ ಬಾಹ್ಯ ವ್ಯಾಪಾರದ ಊಟಕ್ಕೆ ಅವನು ಆ ಕಾಲದಲ್ಲಿ ಬಾಹಿರನು. ಅವನ ಅಂತರಂಗವು ಶೃಂಗಾರ ರಸದಲ್ಲಿ ತನ್ಮಯವಾದುದರಿಂದ ಈ ರೀತಿಯಾಗಿ ಸಂಭವಿಸಿತೆಂದು ಹೇಳುವುದೇ ಕವಿಯ ಉದ್ದೇಶವು. ಕಾವ್ಯದಲ್ಲಿ ತುಂಬಿ ತುಳುಕುವ ರಸವು ಓದುಗರನ್ನು ಸಮಾಧಿಸ್ಥಿತಿಗೆ ಮುಟ್ಟಿಸುವುದು. ಆದರೆ ಆ ಸ್ಥಿತಿಯಲ್ಲಿಯೂ ಓದುಗರು ರಸಾಸ್ವಾದಕರೆಂಬ ಭಾವನೆಯು ಮಾತ್ರ ಮರೆತು ಹೋಗುವುದಿಲ್ಲ. ಕಾವ್ಯಸೃಷ್ಟಿಯೊಳಗಿನ ಕಲ್ಪನೆಗಳಿಂದ ಅವು—ಶೃಂಗಾರ, ವೀರ, ಅದ್ಭುತ, ಭಯಾನಕ ಮುಂತಾದ ನವರಸಗಳಲ್ಲಿ ಯಾವುವೇ ಇರಲಿ—ಓದುಗನು ಒಂದೇ ಕಾಲಕ್ಕೆ ತನ್ಮಯನಾಗಿ ಹೋದರೂ, ಅದರಿಂದುಂಟಾಗುವ ಚಿದಾನಂದವನ್ನು ಅನುಭವಿಸುವವನು ತಾನು, ಎಂಬ ಭಾವನೆಯು ಮಾತ್ರ ಲಯವಾಗದೆ ಇರುವುದರಿಂದ ಈ ಸಮಾಧಿ ಸುಖಕ್ಕೆ ಸವಿಕಲ್ಪ ಸಮಾಧಿಯೆಂದು ಬಲ್ಲವರು ಹೇಳುತ್ತಾರೆ. ಸಾಹಿತ್ಯದರ್ಪಣಕಾರನಾದರೂ ಕಾವ್ಯಾಸ್ವಾದವು 'ಬ್ರಹ್ಮಾಸ್ವಾದ ಸಹೋದರನು' ಎಂದು ಹೇಳಿರುವನು. ಸಹೋದರರು ಸಮಾನರಾದರೂ ಒಂದೇ ಅಲ್ಲ. ಅದರಂತೆ ಕಾವ್ಯಾನಂದ ಬ್ರಹ್ಮಾನಂದಗಳು ಸಮಾನವಾದರೂ ಒಂದೇ ಅಲ್ಲ. ಎರಡರಲ್ಲಿಯೂ ಆಸ್ವಾದಕರಿಗೆ ಸಮಾಧಿಯುಂಟು. ಕಾವ್ಯಾನಂದದಲ್ಲಿ ಅದು ಸವಿಕಲ್ಪವು, ಎಂದರೆ ಆಸ್ವಾದನೆಯ ವಿಕಲ್ಪವು ಅದರಲ್ಲಿ ಇರುವುದು. ಬ್ರಹ್ಮಾನಂದದಲ್ಲಿ ಮಾತ್ರ ಅದು ನಿರ್ವಿಕಲ್ಪವು. ಅದರಲ್ಲಿ ನಾನು ಆಸ್ವಾದಕನು

ಮನಸು ಎಂಬ ಭಾವನೆಯು ಸಹ ಬಲವಾಗಿರುವುದು. ಎರಡರೊಳಗಿನ ಇಷ್ಟು ಅಂತರವನ್ನು ಬಿಟ್ಟುಬಿಟ್ಟರೆ ಎರಡೂ ಸಮವೆಂದು ಹೇಳಬಹುದು.

ಈ ರೀತಿಯಾಗಿ ಕಾವ್ಯದಲ್ಲಿಯೂ ತತ್ತ್ವಜ್ಞಾನದಲ್ಲಿಯೂ ಮುಖ್ಯವಾಗಿ ಮೂರು ಅವಸ್ಥೆಗಳು ಕಂಡುಬರುವುವು. ಸ್ಥೂಲ ಪದಾರ್ಥಾತ್ಮಕವಾದ ಅಥವಾ ಸ್ಥೂಲ ಶಬ್ದಾತ್ಮಕವಾದ ವಸ್ತು ಸೃಷ್ಟಿಯೇ ಮೊದಲನೆಯ ಅವಸ್ಥೆಯಲ್ಲಿ ಆನಂದವನ್ನುಂಟುಮಾಡುವುದು. ಎರಡನೆಯ ಅವಸ್ಥೆಯಲ್ಲಿ ಅವುಗಳ ಅಂತರಂಗದಲ್ಲಿಯ ಗುಟ್ಟನ್ನು ಹುಡುಕುವುದರಲ್ಲಿ ಬುದ್ಧಿಯು ತೊಡಗಿರುವುದು. ಕೊನೆಗೆ ಆ ಗುಟ್ಟನ್ನು ಕಂಡುಹಿಡಿದಮೇಲೆ ತತ್ತ್ವಾತ್ಮಕವಾದ ಅಥವಾ ರಸಾತ್ಮಕವಾದ ಕಲ್ಪನೆಗಳಲ್ಲಿಯೇ ಲೀನವಾಗುವುದು. ಈ ಎರಡೂ ಕಾರ್ಯಗಳಲ್ಲಿ ಆನಂದವು ಸಾಧ್ಯವಸ್ತುವು. ಬಾಹ್ಯಸ್ವರೂಪವೂ, ಅದರಂತರಂಗದಲ್ಲಿಯ ಸೂಕ್ಷ್ಮವಾದ ಕಲ್ಪನೆಯೂ, ಸರ್ವಾಂತರ್ಯಾಮಿಯಾದ ಒಂದು ತತ್ತ್ವವೂ ಇವು ಮೂರು ಅದರ ಮೆಟ್ಟುಗಳು. ಹೀಗೆ ವಿಚಾರ ಮಾಡುತ್ತಿರಲು ಕಾವ್ಯ ತತ್ತ್ವಜ್ಞಾನಗಳು ಭಿನ್ನ ಭಿನ್ನವಾಗಿರದೆ ಅವು ಸಮಾಂತರವಾಗಿರುವುವೆಂದು ಕಂಡುಬರುವುದು. ಆದುದರಿಂದಲೇ ಉತ್ಕೃಷ್ಟವಾದ ಕಾವ್ಯವು ತತ್ತ್ವಜ್ಞಾನವಾಗುವುದು. ಮತ್ತು ತತ್ತ್ವಜ್ಞಾನವು ಉತ್ಕೃಷ್ಟ ಕಾವ್ಯವಾಗುವುದು. ರಾಮಚಂದ್ರ ಚರಿತ ಪುರಾಣದ ಹದಿನಾರನೆಯ ಆಶ್ವಾಸದಲ್ಲಿ ರಾಮವಿಲಾಪವು ಪ್ರಸಿದ್ಧವಾಗಿಯೇ ಇದೆ. ಲಕ್ಷ್ಮಣನು ಮರಣ ಹೊಂದಿರಲು ಅಂತಃಪುರದಲ್ಲಿ ಕೋಲಾಹಲವೆದ್ದಿತು. ರಾಮನಿಗೆ ಲಕ್ಷ್ಮಣನ ಮೇಲೆ ಅತಿಶಯವಾದ ಪ್ರೀತಿಯಿದ್ದುದರಿಂದ ದುಃಖಾವೇಗದಿಂದ ಆತನು ಮೂರ್ಛೆಗೊಂಡು ಎಚ್ಚತ್ತು, ದಹನ ಕ್ರಿಯೆಯನ್ನು ನಿಲಿಸಿ, ಶವವನ್ನು ಸಿಂಗರಿಸಿ ಅದನ್ನು ಹೊತ್ತುಕೊಂಡು ಆರು ತಿಂಗಳುಗಳವರೆಗೆ ಅಲೆಯುವನು. ಈ ಸಮಯದಲ್ಲಿ ಕವಿಯು ಸ್ವಾಭಾವಿಕವಾದ ಆವೇಶದಿಂದ—

ಮ|| ಸ್ರ|| ಮಮಕಾರಂ ವಾಸುದೇವಂ ಕರಂ ಪೊಡೆ ಬಲದೇವಂ ಪೆರ್ಚಿತ್ತು ವಸ್ತ್ರಾ|
ಭರಣ ಸ್ರಕ್ಚಂದನಾಲೇಪನ ಮುಕುರಮುಂ ಪ್ರೀತು ಕೊಂಡಿರ್ಪಂ ತ
ಚ್ಛರವಾಂಗಂ ನಿಶ್ಚಿದಾತ್ಮೀಯನೆನೆ ಬಿಸಿಲಂ ಮಾಣ್ಬುದಾಶ್ಚರ್ಯಮೇ ವಿ|
ಕ್ಕರಸಜ್ಞಾನಸಮಾಸ್ವಾದಿತ ಜಡರನೆಲೇ ಮೋಹ ಮೂರ್ಛಾತಿರೇಕಂ |

ಎಂದು ಬಿಟ್ಟಿರುವನು. ಇದು ತತ್ತ್ವಜ್ಞಾನವಲ್ಲವೇ? ಇದರಂತೆಯೇ ಬೃಹದಾರಣ್ಯಕೋಪನಿಷತ್ತಿನಲ್ಲಿ ಜೀವೋತ್ಕ್ರಮಣ ವಿಷಯದಲ್ಲಿ ದೃಷ್ಟಾಂತಕ್ಕಾಗಿ ಕೊಟ್ಟ ವಿವಾಹಿತನ ಸ್ಥಿತಿಯೂ, ಗರುಡನ ಸ್ಥಿತಿಯೂ ಉತ್ತಮವಾದ ಕಾವ್ಯಗಳಲ್ಲೆಂದು ಯಾರಿಗೆ ಹೇಳಲಾದೀತು?

ಆದುದರಿಂದ ಕಾವ್ಯ ತತ್ತ್ವಜ್ಞಾನಗಳು ಸಮಾಂತರವಾದುವೂ ಸಮವಾಗಿ ಹೋಗುವಂಥವೂ ಆಗಿ, ಒಂದನ್ನೊಂದು ಪೋಷಿಸುತ್ತ ಹೋಗುವುವೆಂಬುದು ಸಿದ್ಧವಾಗುವುದು.

ಕೆ. ಜಿ. ಕುಂದಣಗಾರ.

ಗ್ರಂಥ ವಿಮರ್ಶೆ

೧. ಇಂಗ್ಲಿಷ್ ಗೀತಗಳು

ಲೇಖಕರು.—ಶ್ರೀ.

ಪ್ರಕಾಶಕರು.—ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ಕ್ರೌನ್ ಅಷ್ಟಪತ್ರ ಪುಟ ೧೧೩; ೧೯೨೬.

ಈ ಗ್ರಂಥದಲ್ಲಿ ಅರವತ್ತೈದು ಕವಿತೆಗಳಿವೆ: ಮೂರು ಸ್ವಂತ ಕವನಗಳು; ಉಳಿದುವು ಇಂಗ್ಲೀಷು ಸಾಹಿತ್ಯದ ಪ್ರಸಿದ್ಧ ಕವಿತೆಗಳ ಭಾಷಾಂತರಗಳು. ಭಾಷಾಂತರಕಾರರು **ಗೀತೆಗಳು** ಎಂದು ಕರೆದಿರುವ ಪದ್ಯ ಜಾತಿಗೆ ಇಂಗ್ಲೀಷು ಸಾಹಿತ್ಯದಲ್ಲಿ **ಲಿರಿಕ್** ಎಂದು ಹೆಸರು. ಕವಿಯ ಹೃದಯದಲ್ಲಿ ಯಾವುದಾದರೂ ಒಂದು ಸಂದರ್ಭದಲ್ಲಿ ತಲೆದೋರುವ ರಾಗ ರಸಕ್ಕೆ ರೂಪವನ್ನು ಕೊಡುವುದು ಈ ರೀತಿಯ ಕಾವ್ಯದ ಮುಖ್ಯ ಲಕ್ಷಣ. ಇಂಥ ಕವಿತೆಗಳು ಇಂಗ್ಲೀಷು ಸಾಹಿತ್ಯದಲ್ಲಿ ಸಾವಿರಾರಿವೆ. ಅತ್ಯುತ್ತಮವಾದ ಗೀತೆಗಳೇ ಸೇರಿರುವ ಕಾವ್ಯಸಂಚಲಿಗಳೆಂಬವುಗಳಲ್ಲಿಯೇ ನೂರಾರು ಐದುನೂರರವರೆಗೆ ಇಂತಹ ಕವಿತೆಗಳಿವೆ. ನಾಟಕ, ಕಥೆ, ಉಪನ್ಯಾಸಗಳು ಹೇಗೋ ಹಾಗೆ ಲಿರಿಕ್ ಕವಿತೆಗಳೂ ಆ ಸಾಹಿತ್ಯದಲ್ಲಿ ಅತಿ ಮುಖ್ಯವಾದ ಕಾವ್ಯಶಾಖೆಯಾಗಿ ಇಂಗ್ಲೀಷು ಜನಾಂಗದ ಪ್ರತಿಭೆಯನ್ನು ವ್ಯಕ್ತಗೊಳಿಸಿವೆ. ಇಂಗ್ಲೀಷು ಸಾಹಿತ್ಯವನ್ನು ಕಾಣದೆ ಇರುವವರಿಗೆ ಆ ಸಾಹಿತ್ಯದ ಐಶ್ವರ್ಯವೆಂಥದೆಂದು ತಿಳಿಯುವುದಕ್ಕೆ ಕನ್ನಡದಲ್ಲಿ ಇಂಥ ಒಂದು ಭಾಷಾಂತರವು ಬೇಕಾಗಿತ್ತು. ಈ ಅತ್ಯವಶ್ಯವಾದ ಕಾರ್ಯವನ್ನು ಕೈಕೊಂಡದ್ದಕ್ಕಾಗಿ ಕನ್ನಡಿಗರು ಗ್ರಂಥಕರ್ತರನ್ನು ವಂದಿಸಬೇಕಾಗಿದೆ.

ಬಿ. ಎಂ. ಶ್ರೀಕಂಠಯ್ಯನವರು ಇಂಗ್ಲಿಷ್ ಭಾಷೆಯಲ್ಲಿ ಉನ್ನತ ಪಾಂಡಿತ್ಯವನ್ನು ಸಂಪಾದಿಸಿರುವರು; ಕನ್ನಡದಲ್ಲಿ ಅದಕ್ಕೆ ಕಡಿಮೆಯಿಲ್ಲದ ಶಕ್ತಿಯನ್ನು ಪಡೆದಿರುವರು. ಸ್ವಭಾವವಾದ ರಸಿಕತೆಯೂ ಅಭ್ಯಾಸದಿಂದ ಹಿರಿದೂ ನಯವೂ ಆಗಿರುವುದರಿಂದ ಇವರಿಗೆ ಕವಿತೆಯನ್ನೋದಿ ಕವಿಯ ಹೃದಯವನ್ನರಿಯುವುದು ಸುಲಭವಾಗಿರುವುದು. ಹೀಗೆ ಇವರು ಇಂಗ್ಲೀಷು ಸಾಹಿತ್ಯದ ಮೂಲ ಕಾವ್ಯದ ಸವಿಯನ್ನನುಭವಿಸುವುದಕ್ಕೂ ಅನುಭವಕ್ಕೆ ಬಂದ ಆ ಸವಿಯನ್ನು ಕನ್ನಡದಲ್ಲಿ ರೂಪುಗೊಟ್ಟು ತೋರುವುದಕ್ಕೂ ಶಕ್ತರಾದವರಾಗಿದ್ದಾರೆ.

ಭಾಷಾಂತರಕ್ಕೆ ಆರಿಸಿರುವುವು "ಇಂಗ್ಲಿಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಎಂದುಕೊಂಡವಲ್ಲ" ಎಂದು ಭಾಷಾಂತರಕಾರರು ಹೇಳಿದ್ದಾರೆ.

ಎಲ್ಲವೂ ನಾಯಕ ರತ್ನಗಳಲ್ಲದಿದ್ದರೂ ಇಲ್ಲಿರುವ ಹತ್ತಾರು ಪದ್ಯಗಳು ನಾಯಕ ರತ್ನಗಳೆಂದೇ ಹೇಳಬೇಕು. ಷೇಕ್ಸ್‌ಪಿಯರ Under the Greenwood Tree (**ಅಡವಿ ಮರದಡಿಯಲ್ಲಿ**), ಷೆಲ್ಲಿ ಕವಿಯ Skylark (**ಬಾನಾಡಿ**), ಸ್ಕಾಟಿನ To-Night (**ಇರುಳ ದೇವಿ**), Gathering Song (**ಕಾಳಗದ ಪದ**), Coronach (**ವೀರಗಲ್ಲು**), ಹೂಡ್ ಕವಿಯ The Bridge of Sighs (**ದುಃಖ ಸೇತು**), ಲ್ಯಾಂಡರ್ ಕವಿಯ Rose Aylmer (**ಪದುಮ**), ಕ್ಲೌ ಕವಿಯ Say Not the Struggle Naught Availeth (**ಹೇಳದಿರು ಹೋರಾಡಿ ಫಲವಿಲ್ಲವೆಂದು**), ನ್ಯೂಮನ್ ಕವಿಯ Lead Kindly Light (**ಕರುಣಾಳು ಬಾ ಬೆಳಕೆ**)—ಇವು ಇಂಗ್ಲೀಷು ಗೀತಾ ಸಾಹಿತ್ಯದಲ್ಲಿ ಅಗ್ರಪಙ್ಕ್ತಿಯ ಪದ್ಯಗಳು.

ಇಂಥ ಭಾಷಾಂತರವು ಬಹು ಕ್ಲೇಶದ ಕೆಲಸ. ಇಂಗ್ಲೀಷೂ ಕನ್ನಡದ ಸಂಬಂಧವಿರುವ ಭಾಷೆಯಲ್ಲ; ಜನರೂ ದೇಶ, ರೀತಿ—ಇವುಗಳಲ್ಲಿ ಬಹು ಭಿನ್ನರಾದವರು. ಅದ್ದರಿಂದ ಇಂಗ್ಲಿಷರ ಪದ್ಯಗಳನ್ನು ಕನ್ನಡಕ್ಕೆ ತರುವುದೇ ಕಷ್ಟ. ಕೆಲವುದರ ಅರ್ಥವು, ದೇಶದ ವಾಡಿಕೆಗಳು ಬೇರೆಯಾದುದರಿಂದ, ಕನ್ನಡದ ಮಾತಿಗೆ ಸಿಕ್ಕದೆ ಕೈತಪ್ಪಿಸಿಕೊಳ್ಳುತ್ತದೆ. **ಮಾದ ಮಾದಿ**ಯಂತಹ ಕವಿತೆಯು ಇದಕ್ಕೆ ಉದಾಹರಣೆ. **ಸುಂದರಿ ಕಮಲೆ**ಯಂತಹ ಕವಿತೆಯೂ ಈ ಕಾರಣದಿಂದ ಸ್ವಲ್ಪ ವಿಚಿತ್ರವಾಗಿ ಕಾಣುವುದು. **ಮುದಿಯ ರಾಮಗೌಡ**ನಂತಹ ಕವಿತೆಯಲ್ಲಿ 'ತಾನೂ ಹೋಗಿ ಹಡಗು ಸೇರಿಕೊಂಡದ್ದು ಮತ್ತೆ ಬಂದದ್ದು' ಎನ್ನುವ ಮಾತು ಕನ್ನಡ ಜನತೆಯ ಜೀವನದಲ್ಲಿ ಬರತಕ್ಕದ್ದಲ್ಲ. ಅದರ ಮುಂದಕ್ಕೆ ಬರುವ ಪ್ರಣಯ ಪ್ರಸಂಗವೂ ಇಲ್ಲಿಯವರಲ್ಲಿ ಊಹಿಸಬಹುದಾದುದರಿಂದ ಭಿನ್ನವಾಗಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಕವಿಯ ಭಾವವು ಬಹು ಸೂಕ್ಷ್ಮವಾಗಿರುವುದರಿಂದ ಭಾಷಾಂತರದಲ್ಲಿ ಅದರ ಸೊಗಸು ಮೈಗರೆದು ಹೋಗುತ್ತದೆ. ಷೆಲ್ಲಿ ಕವಿಯ **ಸ್ಕೈಲಾರ್ಕ್** ಕಾವ್ಯವು ಇದಕ್ಕೆ ಉದಾಹರಣೆ. ಈ ಪದ್ಯದ ಮೂಲದಲ್ಲಿ ಮಾತು ಸೇರಿರುವ ರೀತಿ ಇಂಗ್ಲೀಷು ಸಾಹಿತ್ಯದ ಶಬ್ದ ಕೌಶಲದ ಕೊನೆಯ ಮೆಟ್ಟಲನ್ನು ಮುಟ್ಟಿದೆ. ಅದರಲ್ಲಿ ಮಾತು ಮಾತಿಗೂ ಕಾವ್ಯ ಸಂಪ್ರದಾಯದಿಂದ ಸೇರಿಬಂದಿರುವ ಕಳೆಯೊಂದಿದೆ; ಇದರೊಡನೆ ವಿಚಾರವೂ ಪ್ರವಾಹದಂತೆ ಗಂಭೀರವಾಗಿ ಹರಿದು ಬರುತ್ತದೆ. ಹೊರಗಣ್ಣಿಗೆ ಸಿಕ್ಕಬಹುದಾದ ಸೌಂದರ್ಯ, ಒಳಗಣ್ಣಿಗೂ ಸಿಕ್ಕದಂಥ ತತ್ತ್ವದ ಅನ್ವೇಷಣ—ಇವೆರಡೂ ಇದರಲ್ಲಿ ಹೆಣೆದುಕೊಂಡಿವೆ. ಇಂಥ ಮೂಲ ಗ್ರಂಥದ ಸೊಗಸನ್ನು ಭಾಷಾಂತರದಲ್ಲಿ ಹೇಗೆ ತರಬಹುದು? ಮೂಲವು ಸಂಸ್ಕೃತವಾಗಿದ್ದರೆ ಕನ್ನಡದಲ್ಲಿ ತರಬಹುದಾಗಿತ್ತೇನೋ! ಈ ಸಂದರ್ಭದಲ್ಲಿ ಇದು ಸಾಧ್ಯವಲ್ಲ. ಆನಂದದಲ್ಲಿ ಹಾಡುತ್ತಿರುವ ಪಕ್ಷಿಯನ್ನು ಕುರಿತು, ಕವಿಯು—

Waking or asleep
Thou of death must deem

Things more true and deep
Than we mortals dream ;
Else how could thy song flow in such a
crystal stream?

ಎಂದು ಹೇಳುತ್ತಾನೆ.

ಇದನ್ನು ಭಾಷಾಂತರದಲ್ಲಿ—

ಜಡರು ಮರ್ತ್ಯರು ನಾವು, ತರ್ಕಿಸಿ
ಮರಣಮರ್ಮವನರಿವೆವೆ?
ಹಿಡಿದು ಕನಸಿನೊಳಾಳವೆಲ್ಲವ,
ಪರಮ ಶಾಂತಿಯ ಪಡೆದಿಹೆ ;
ಪಡೆಯದಿರಲಿಂತೆಂತು ಹರಿವುದು ರಾಗ ತಿಳಿಹೊಳೆಯಂದದೆ?

ಎಂದು ಮಾಡಿದೆ. ಕಡೆಯ ಪಾದದ ಅರ್ಥ ಸರಿಯಾಗಿ ಬಂದಿದೆ. ಆದರೆ ಉಳಿದ ವಿಚಾರವು ಮೂಲದಲ್ಲಿರುವ ಸರಣಿಯಲ್ಲಿ ಭಾಷಾಂತರದಲ್ಲಿ ಬಂದಿಲ್ಲ. ಕವಿಯ ಸಂಕೇತವು ಲೋಕಸಾಮಾನ್ಯವಲ್ಲದ್ದರಿಂದ ಇನ್ನು ಕೆಲವು ಪದ್ಯಗಳು ಚೆನ್ನಾಗಿ ಅರ್ಥವಾಗುವುದಿಲ್ಲ. **ಬಂದರು ದಾಟುವುದು** ಎನ್ನುವುದು ಇಂಥ ಪದ್ಯ. ಇಷ್ಟು ತೊಂದರೆಯಿದ್ದರೂ ಭಾಷಾಂತರಕಾರರು ಇಂಗ್ಲಿಷಿನ ಪದ್ಯಗಳನ್ನು ಕನ್ನಡದಲ್ಲಿ ಸಾಧ್ಯವಾದಷ್ಟು ಸುಲಕ್ಷಣವಾಗಿ ರಚಿಸಿದ್ದಾರೆ. ವಸ್ತು ಸಹಜವಾದ ತೊಡಕೇನೂ ಇಲ್ಲದಿರುವ ಲೋಕಸಾಮಾನ್ಯವಾದ ಭಾವಗಳನ್ನು ಕುರಿತ ಕವಿತೆಗಳಂತೂ ಭಾಷಾಂತರದಲ್ಲಿ ಅತ್ಯಂತ ಸುಂದರವಾಗಿವೆ. ಅಂತಹ ಪದ್ಯಗಳು ಭಾಷಾಂತರದಂತೆ ಕಾಣುವುದೇ ಇಲ್ಲ. **ಹೊಳೆಕರೆ, ಕಾಳಗದ ಪದ, ದುಃಖ ಸೇತು, ಪದುಮ, ಕರುಣಾಳು ಬಾ ಬೆಳಕೆ**—ಇವುಗಳಲ್ಲಿ ಕಾಣುವ ಮಾತೂ ಭಾವಗಳ ಸಾಮರಸ್ಯವೂ ಆನಂದದಾಯಕವಾಗಿವೆ. ಇದರ ಜೊತೆಗೆ ಮೂಲ ಕಾವ್ಯದ ಭಾವವನ್ನು ಅನುಸರಿಸಿರುವ ರೀತಿಯೂ ಆಶ್ಚರ್ಯವನ್ನುಂಟುಮಾಡುವಂತಿದೆ.—

ಮಲೆಯಲ್ಲಿ ಬಯಲಲ್ಲಿ
ನೆಲದಲ್ಲಿ ಜಲದಲ್ಲಿ
ತಲೆದೋರಿತಾನಂದವೆಲ್ಲೆಲ್ಲಿಯೂ!

ಕಣಿವೆಗಳ, ಬೆಟ್ಟಗಳ
ಗಡಿಯಿಂದ ಬನ್ನಿ.
ಕಣೆ, ಬಿಲ್ಲು, ಕುಡುಗೋಲು,
ಕೊಡಲಿಗಳ ತನ್ನಿ.
ಕೆಚ್ಚೆದೆಯ ಮಕ್ಕಳಿರ,
ವೈಜೋಡ ತೊಡಿರೊ!
ಬಿಚ್ಚುಗತ್ತಿಯ ಝುಳವ
ಕೈಝಾಡಿಸಿಡಿರೊ!

ಆಹ, ಎಲ್ಲಡಗಿತೋ
ಆರ್ಯ ಧರ್ಮದ ಕರುಣ,
ಆರ್ಯಜನಗಳ ಮರುಕ
ಉರಿಯುವನೆ ಬಲ್ಲ!
ಅಯ್ಯೊ, ಏನನ್ಯಾಯ,
ತುಂಬಿದೀ ಊರಲ್ಲಿ,
ಮನೆ ಇವಳಿಗಿಲ್ಲ.

* * *

ದುಃಖಿಗಳ, ಪಾಪಿಗಳ
ನಾವು ಧಿಕ್ಕರಿಸುವೆವು
ದೂರ ಅಟ್ಟುವೆವು.
ಅಟ್ಟನಾ ರೀತಿಯಲಿ
ತಂದೆ, ರಕ್ಷಕನು.

ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈಹಿಡಿದು ನಡಸೆನ್ನನು.

* * *

ಇಷ್ಟು ದಿನ ಸಲಹಿರುವೆ ಮೂರ್ಖನನು, ಮುಂದೆಯೂ
ಕೈಹಿಡಿದು ನಡಸದಿಹೆಯಾ?

ಈ ಉದಾಹರಣೆಗಳಲ್ಲಿ ಮೂಲದ ಭಾವವು ಭಾಷಾಂತರದಲ್ಲಿ ಉತ್ಕೃಷ್ಟ ರೀತಿಯಲ್ಲಿ ರೂಪುಗೊಂಡು ನಿಂತಿದೆ.

ಈ ಗ್ರಂಥದಿಂದ ಕನ್ನಡಿಗರಿಗೆ ಆಂಗ್ಲೇಯ ಗೀತೆಗಳ ಪರಿಚಯವು ತಕ್ಕ ಮಟ್ಟಿಗೆ ಆಗುತ್ತದೆ. **ಕಾರಿಹೆಗ್ಗಡೆಯ ಮಗಳು, ಚೋಳ ಕನ್ನೆಯರು** ಎಂಬ ಪದ್ಯಗಳಲ್ಲಿ ನಾಡ ಕತೆಗಳು ಗೀತೆಯಲ್ಲಿ ಹೇಗೆ ಉಪಯೋಗಿಸಲ್ಪಟ್ಟಿವೆ ಎಂಬುದು ತಿಳಿಯುವುದು. ಅಲ್ಲಲ್ಲಿ ಬಂದಿರುವ ಪ್ರೇಮ ಗೀತೆಗಳಲ್ಲಿ ಪಾಶ್ಚಾತ್ಯರು ಪ್ರೇಮದ ವಿಷಯದಲ್ಲಿ ಎಂತಹ ಪದ್ಯಗಳನ್ನು ಬರೆಯುತ್ತಾರೆಂದು ತಿಳಿಯುತ್ತದೆ. ಕೌಪರ್ ಕವಿಯ **ನನ್ನ ಮೇರಿ** ಎಂಬ ಪದ್ಯದಲ್ಲಿ, ಲ್ಯಾಂಬ್ ಕವಿಯ The Old Familiar Faces ಎಂಬ ಪದ್ಯದಲ್ಲಿ ಆಂಗ್ಲೇಯ ಕವಿಗಳು ಸೃಷ್ಟಿ ಸಾಮಾನ್ಯವಾದ ಭಾವಗಳನ್ನೇ ಅನುಭವಿಸಿದಾಗ ಎಂತಹ ಕಾವ್ಯವನ್ನು ಬರೆದರೆಂಬುದು ತೋರುತ್ತದೆ. ಮುಖ್ಯವಾಗಿ, ಈ ಕೃತಿಗಳನ್ನೋದಿ ನಮ್ಮವರು ಕಲಿಯಬೇಕಾದದ್ದು ಒಂದು ವಿಷಯ: ಸಮುದ್ರವೆಂದರೆ ತಿಮಿಂಗಿಲಗಿಲವನ್ನು ಬಣ್ಣಿಸುವುದೂ, ಸಂಜೆಯಾಗಸದ ಕೆಂಪಿಗಾಗಿ ಪಶ್ಚಿಮ ದಿಗಂಗನೆಯನ್ನು ಸೆಳೆದುಕೊಂಡು ಬರುವುದೂ

ವಾಡಿಕೆಯಾಗಿರುವ ನಮ್ಮ ಪಡಿಯಚ್ಚಿನ ಕವಿತೆಯ ರೀತಿಯಲ್ಲದೆ ಕಾವ್ಯದಲ್ಲಿ ಬೇರೊಂದು ರೀತಿಯಿದೆ. ಕಾವ್ಯ ಪ್ರಪಂಚದಲ್ಲಿ ಅಡಿಯಿಟ್ಟೊಡನೆ ಪಡಿಯಚ್ಚಿನ ಭಾವವನ್ನು ವರ್ಣಿಸುವುದು ಆವಶ್ಯಕವಲ್ಲ, ಸರಿಯೂ ಅಲ್ಲ. ಹೀಗೆ ಮಾಡುವುದಾದರೆ ಜನರ ಮುಂದೆ ಬರಬೇಕಾದಾಗಲೆಲ್ಲ ಮೊಗವಾಡವನ್ನು ಹಾಕಿಕೊಂಡಂತಾಗುವುದು. ಮೊಗವಾಡದಲ್ಲಿ ಮೂಗೂ, ಕಣ್ಣೂ ನಮ್ಮ ನಿಜವಾದ ಕಣ್ಣು ಮೂಗಿಗಿಂತ ಲಕ್ಷಣವಾಗಿರುವಂತೆ ಮಾಡಿಸಬಹುದು. ಆದರೆ ಅದರಲ್ಲಿ ಜೀವಕಳೆಯಿರುವುದಿಲ್ಲ. ಮೂಗು, ಕಣ್ಣು ಜೋಡಣೆಯಿಂದ ಕೋಟ್ಯಂತರ ಪರಸ್ಪರ ಭಿನ್ನವಾದ ಮುಖಗಳು ಆಗಿರುವಂತೆ ಒಂದೇ ಭಾವವು ಸಾವಿರ ಹೃದಯಗಳಲ್ಲಿ ಸಂದರ್ಭವನ್ನನುಸರಿಸಿ ಸಾವಿರ ರೂಪಗಳನ್ನು ತಾಳುತ್ತದೆ. ಕವಿಯಾದವನು ತನ್ನಲ್ಲಿ ಅದು ತಾಳುವ ರೂಪವನ್ನು ಹೊರಗೆ ತೋರಬೇಕು. ಅದು ಬಹಳ ಲಕ್ಷಣ ಯುಕ್ತವಾಗಿಲ್ಲದಿದ್ದರೂ ಅವನು ನಿಜವಾಗಿ ವರ್ಣಿಸಿದರೆ ಜೀವಕಳೆಯಿಂದ ಕೂಡಿರುತ್ತದೆ, ಮೊಗವಾಡದ ಕವಿತೆಗಿಂತ ಹೆಚ್ಚು ಸುಖವನ್ನು ಕೊಡುತ್ತದೆ. ಹೀಗೆ ಮಾಡಿದರೆಯೇ ಅವನು ಭಗವಂತನ ಸೃಷ್ಟಿಯ ವಿಚಿತ್ರವನ್ನು ಪ್ರಕಾಶಪಡಿಸುವನು. ಇದರಿಂದಲೇ ಅವನ ಜೀವನದ ಸಂಸಾರವು ಬೆಳೆಯುವುದು. ಇಂತಹ ಕಾವ್ಯಗಳನ್ನು ಓದುವವರಿಗೆ ಸತ್ಯಸೌಂದರ್ಯಗಳ ಪರಿಚಯವುಂಟಾಗುವುದು.

ಭಾಷಾಂತರಕಾರರು ಗ್ರಂಥವನ್ನು ಇಂಗ್ಲೆಂಡ್ ಮತ್ತು ಇಂಡಿಯಾದೇಶಗಳ ಆತ್ಮಗಳು ಬೆರೆಯಬೇಕೆಂದು ಭಾವಿಸುವ ತಮ್ಮ ಶಿಷ್ಯರಿಗೆ ಅಂಕನಮಾಡಿದ್ದಾರೆ. ಜನಾಂಗಗಳು ಪರಸ್ಪರ ಸಹಾನುಭೂತಿಯಿಂದ ಒಂದೊಂದರ ಗುಣವನ್ನು ಮತ್ತೊಂದು ಗ್ರಹಿಸಿ ಲೋಕದ ಕಲ್ಯಾಣಕ್ಕಾಗಿ ತಾವು ಜೊತೆಯಾಗಿ ಹೇಗೆ ವರ್ತಿಸಬೇಕೆಂದು ಅರಿತು ಮುಂದುವರಿಯುವುದು ಆವಶ್ಯಕ. ಭರತಖಂಡವನ್ನು ಬಿಟ್ಟರೆ ಇನ್ನೆಲ್ಲಿಯೂ ಉತ್ತಮ ಭಾವನೆ ಇಲ್ಲ ಎನ್ನುವುದು ಸರಿಯಲ್ಲ. ಹೀಗೆ ಹೇಳುವವರು ನಮ್ಮಲ್ಲಿ ಹಲವರುಂಟು. ಭರತಖಂಡದಲ್ಲಿ ಒಳ್ಳೆಯದೇನೂ ಇರಲಾರದು ಎನ್ನುವುದೂ ತಪ್ಪು. ಹೀಗೆ ಹೇಳುವವರು ಪರದೇಶೀಯರಲ್ಲಿ ಅನೇಕರಿರುವರು. ವಿವೇಚನೆಯಿಲ್ಲದೆ ಈ ರೀತಿ ಹೇಳುವವರ ಸಂಖ್ಯೆಯು ಬರಬರುತ್ತ ಕಡಿಮೆಯಾದರಲ್ಲದೆ ದೇಶ ದೇಶಗಳ ಮೈತ್ರಿ ಬೆಳೆಯುವ ಸಂಭವವಿಲ್ಲ. ನಮ್ಮ ಜನರಿಗೆ ಆಂಗ್ಲೇಯ ಸಾಹಿತ್ಯದ ಪರಿಚಯವನ್ನು ಮಾಡಿಕೊಡುವುದರಿಂದ ಆಂಗ್ಲೇಯರದೆಂದು ಹೇಳುವ ಜ್ಞಾನವೂ ಭಾರತೀಯವೆಂದು ಹೇಳುವ ಜ್ಞಾನವೂ ಒಂದೇ ಮೂಲದಿಂದ ಬಂದುದೆಂಬುದು ತಿಳಿಯುವುದು. "ಮುಸುಕಿದೀ ಮಬ್ಬಿನಲ್ಲಿ ಕೈಹಿಡಿದು ನಡೆಸೆನ್ನನು; ಇಷ್ಟು ದಿನ ನಾನು ನಿನ್ನನು ಬೇಡಲಿಲ್ಲ, ಆದರೂ ನೀನು ರಕ್ಷಿಸಿದೆ; ಇಂದು ನಾನು ನಿನ್ನ ಮೇಲೆ ಭಾರ ಹಾಕಿದ್ದೇನೆ; ನೀನು ನನ್ನನ್ನು ನಡಸಿ ಉದ್ಧಾರ ಮಾಡು" ಎನ್ನುವ ಮಾತು ಯಾವ ಭಾಷೆಯಲ್ಲಿದ್ದರೇನು? ಈ **ಪ್ರಾರ್ಥನೆ**ಯ ಪದ್ಯವನ್ನು ಓದಿದವರು ಅನೇಕರು, "ಇದೇನು! ಈ ಪದ್ಯ ನಮ್ಮವರು ಯಾರೋ ಬರೆದಂತಿದೆಯಲ್ಲಾ!" ಎನ್ನುತ್ತಾರೆ. ನಿಜ, ಅದು ನಮ್ಮವರೊಬ್ಬರು

ಬರೆದದ್ದು, ಮಾನವನೊಬ್ಬನು ಬರೆದದ್ದು. ಮಾನವ ವರ್ಗವೆಲ್ಲ ಒಂದು ಎಂಬ ಭಾವನೆಯು ಜನಾಂಗದಲ್ಲಿಯೂ ಬರಬೇಕು. ಈ ಭಾವನೆಯು ನಮ್ಮಲ್ಲಿ ಬರುವುದಕ್ಕೆ ಇಂಥ ಭಾಷಾಂತರಗಳು ಬಹಳ ಸಹಾಯಕವಾಗುತ್ತವೆ.

ಗ್ರಂಥದ ಶೈಲಿ, ಛಂದಸ್ಸು ಮುಂತಾದ ವಿಚಾರ ಒಂದೆರಡು ಮಾತುಗಳನ್ನು ಹೇಳುವುದು ಆವಶ್ಯಕ. ನಮ್ಮ ಭಾಷಾಂತರಕಾರರಿಗೆ ಅಚ್ಚಗನ್ನಡದ ಮಾತೆಂದರೆ ಹೆಚ್ಚು ಪ್ರೀತಿ. ಇದು ಸರ್ವಥಾ ಶ್ಲಾಘನೀಯವಾದುದು. ''ಕನ್ನಡಿಯೆ ದರ್ಪಣಮದಲ್ಲದೆ ಭೇದಮೇನಿದಕೆ'' ಎಂದು ಕನ್ನಡದ ಕವಿಯು ಬಹು ಹಿಂದೆ ನುಡಿದರೂ ದರ್ಪಣವೆನ್ನುವುದು ದೊಡ್ಡ ರೀತಿ, ಕನ್ನಡಿ ಎನ್ನುವುದು ಕಿರಿಯ ರೀತಿ ಎಂಬ ಅಜ್ಞಾನವು ನಮ್ಮಲ್ಲಿ ಇನ್ನೂ ಇದೆ. ನಮಗೆ ದರ್ಪಣವೂ ಬೇಕು ಕನ್ನಡಿಯೂ ಬೇಕು. ಸಂಸ್ಕೃತವನ್ನು ಬಿಡಬೇಕಾದದ್ದಿಲ್ಲ; ಕನ್ನಡವನ್ನು ಮರೆಯಬಾರದು. ಇದುವರೆಗಿನ ಅಸಡ್ಡೆಯಿಂದ ಮೂಲೆಗೆ ಬಿದ್ದಿರುವ ಕನ್ನಡದ ಮಾತುಗಳನ್ನು ನಾವು ಮತ್ತೆ ವಾಡಿಕೆಗೆ ತಂದು ನಮ್ಮ ಬಳಕೆಯ ಶಬ್ದಕೋಶವನ್ನು ವಿಸ್ತರಿಸಬೇಕಾಗಿದೆ. ಉತ್ತಮವಾದ ಕವಿತೆಯು ಶಬ್ದ ವಿವೇಚನೆಯು ರತ್ನ ಪರೀಕ್ಷೆಯಂತೆ ಒಂದು ಕುಶಲ ವಿದ್ಯೆ. ಈ ಗ್ರಂಥದಲ್ಲಿ ಒಂದೊಂದು ಪದ್ಯದಲ್ಲಿಯೂ ಈ ಕೌಶಲವು ಕಣ್ಣಿಗೆ ಬೀಳುತ್ತದೆ. ಇಂಗ್ಲಿಷಿನ ಭಾಷಾ ಪದ್ಧತಿಯನ್ನು ಅತಿ ಸಮೀಪವಾಗಿ ಅನುವರ್ತಿಸಿರುವುದರಿಂದ ಅಲ್ಲಲ್ಲಿ ಪದಪ್ರಯೋಗವು ಸ್ವಲ್ಪ ವಿಚಿತ್ರವಾಗಿ ಕಾಣುತ್ತದೆ. ''ಮನುಜನಿಗೆ ಮಗು ತಂದೆ'' ಎಂಬ ಉಕ್ತಿ ಇದಕ್ಕೆ ಉದಾಹರಣೆ. ಇಂಗ್ಲಿಷಿನಲ್ಲಿಯೇ ಈ ಮಾತು ವಿಚಿತ್ರವಾಗಿರುತ್ತದೆ; ಆದರೆ ವಿಚಾರದಿಂದ ಅರ್ಥವಾಗುತ್ತದೆ. ಕನ್ನಡದಲ್ಲಿಯಾದರೋ ಈ ರೀತಿಯ ಪ್ರಯೋಗವು ವಾಡಿಕೆ ಇಲ್ಲದ್ದರಿಂದ ಮಾತು ಅರ್ಥವಾಗುವುದಿಲ್ಲ. ''ಹಿಡಿಮುದ್ದು ಸೆರೆಬಿದ್ದು ಜಗ್ಗದೆಯೆ ಸುಗ್ಗಿದರು'' ಎಂಬಲ್ಲಿ ಬಿದ್ದು ಎಂದರೆ ಬಿದ್ದರೂ ಎಂಬ ಅರ್ಥವೆಂದು ಕಾಣುತ್ತದೆ; ಇದನ್ನು ಊಹಿಸಬೇಕಾಗಿದೆ. ಇಂಥ ಪದ ಪ್ರಯೋಗವಾಕ್ಯರೂಪಗಳಿಂದ **ಬಡವನ ಹುರುಡು** ಎಂಬ ಪದ್ಯವು ಬಹಳ ಕ್ಲಿಷ್ಟವಾಗಿದೆ.

> **ಮೆರೆವ ಪದವಿ ವರಹ ಮುದ್ರೆ,**
> **ಆಳು ಚಿನ್ನ, ಏನೆ ಇರಲಿ!**
>
> *　　*　　*
>
> **ಸೊಗಸು ಬೆಡಗು ತೆಗೆದು ಮಡಗು**
> **ಮಿಗುವುದಾಳು, ಏನೆ ಇರಲಿ.**
>
> *　　*　　*
>
> **ತಿರುಳಿನರಿವು, ಹಿರಿಯ ನಡತೆ**
> **ಮೇಲು ಸಾಲು, ಏನೆ ಇರಲಿ.**

ಎಂಬ ವಾಕ್ಯಗಳಿಗೆ ಅರ್ಥವಾಗುವುದು ಕಷ್ಟ. ಮೂಲದ ಒಂದು ಗ್ರಂಥವನ್ನನುಸರಿಸಿ ಅದರ ಅರ್ಥವನ್ನು ಬಿಡದಹಾಗೆ ಅದಕ್ಕೆ ಸಂಬಂಧವಿಲ್ಲದ ಭಾಷೆಯಲ್ಲಿ

ತರಬೇಕಾದರೆ ಹೀಗಾಗುವುದು ಸಹಜ. ಇದರೂ ಒಟ್ಟಿನಲ್ಲಿ, ತಿಳಿಯಾದ ಭಾಷೆ ಈ ಗ್ರಂಥದ ಮುಖ್ಯ ಲಕ್ಷಣವೆಂದು ಹೇಳಬೇಕು. ಮಾತುಗಳಲ್ಲಿ ಹೇಗೋ ಹಾಗೆಯೇ ಛಂದಸ್ಸಿನಲ್ಲಿಯೂ ಈ ಗ್ರಂಥಕಾರರು ಶ್ರೋತ್ರಾರ್ಹವಾದ ಉದ್ಯಮವನ್ನು ತೋರಿರುವರು. ದಿನದ ಉಪಯೋಗದಲ್ಲಿಲ್ಲದ ಸಂಸ್ಕೃತದಂಥ ಭಾಷೆಗೆ ಅದರ ನಿಯಮ ನಿಷ್ಠೆಗಳು ಸರಿ. ಕನ್ನಡದಂಥ ದಿನವೂ ಬಳಕೆಯಲ್ಲಿರುವ ಭಾಷೆಯಲ್ಲಿ ಶಬ್ದಗಳಿಗೆ ವ್ಯಾಕರಣದಲ್ಲಿರುವ ಸ್ಥಿರವಾದ ರೂಪು ನಾಲಿಗೆಯಮೇಲಿರುವುದಿಲ್ಲ. ದಿನದ ಬಳಕೆಯ ಮಾತಿನಲ್ಲಿ ಕಾವ್ಯವ ಬೆಳೆಯಬೇಕಾದರೆ ಕಾವ್ಯದ ಶೈಲಿಯು ನಾಲಿಗೆಯ ನುಡಿಯನ್ನು ಸಾಧ್ಯವಾದಷ್ಟು ಅನುಸರಿಸಬೇಕು. ಈ ಧ್ಯೇಯದಿಂದಲೇ ಕನ್ನಡದಲ್ಲಿ ಕವಿಗಳು ಕನ್ನಡಕ್ಕೆ ಸ್ವಭಾವ ಸಿದ್ಧವಾದ ಷಟ್ಪದಿಯನ್ನು ವಾಡಿಕೆಗೆ ತಂದರು. ಈಗ ಅದೇ ಗತಿಯಲ್ಲಿ ಕನ್ನಡದ ಛಂದಸ್ಸು ಎಷ್ಟು ವಿಸ್ತಾರವಾಗಬಹುದೆಂದು ನೋಡಬೇಕಾಗಿದೆ.

ಈ ಕೆಲಸದಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರು ಮಾರ್ಗದರ್ಶಿಗಳಾಗಿದ್ದಾರೆ. ಪಂಡಿತರಲ್ಲದವರು ಇಂಥ ಕೆಲಸವನ್ನು ಮಾಡುವ ಸಂದರ್ಭದಲ್ಲಿ ಪಂಡಿತರಾದವರು ಅದನ್ನು ವಿಚಾರವಿಲ್ಲದೆಯೇ ಖಂಡಿಸುವ ಸಂಭವವುಂಟು. ಸ್ವತಃ ಪಂಡಿತರಾದ ಈ ಭಾಷಾಂತರಕಾರರು ಈ ಕೆಲಸಕ್ಕೆ ಕೈಹಾಕಿದ್ದರಿಂದ ಕನ್ನಡ ಛಂದಸ್ಸಿನ ವಿಸ್ತಾರೀಕರಣವು ಎಷ್ಟು ಆವಶ್ಯಕವೆಂಬುದು ತೋರುವುದು. ಭಾಷೆಯ ಏಳಿಗೆಯಲ್ಲಿ ಮನಸ್ಸಿಕ್ಕಿದವರೆಲ್ಲರೂ ಇದರ ವಿಷಯದಲ್ಲಿ ಇನ್ನುಮೇಲೆ ಆದರವನ್ನಿಡದಿದ್ದರೆ ಸಹನವನ್ನಾದರೂ ತೋರಿಸುವಂತೆ ಇವರು ಮಾಡಿರುವರು. ಕನ್ನಡದ ಹೊಸ ಕವಿಗಳಿಗೆ ಬೇಕಾಗಬಹುದಾಗಿರುವ ಅನೇಕ ರೂಪಗಳು ಈ ಗ್ರಂಥದಲ್ಲಿ ಪ್ರಯೋಗಿಸಲ್ಪಟ್ಟಿವೆ. ಒಂದೆರಡರಲ್ಲಿ ಪದ್ಯದ ಮಾಟು ಕೈಗೆ ಸಿಕ್ಕುವುದಿಲ್ಲ. ಇಂಥ ವೃತ್ತ ಪದ್ಯಕ್ಕೆ ಅನುಕೂಲಿಸುವುದಿಲ್ಲ.—

ನಮ್ಮ ಸಂಕಟದಲಿ ಕ್ರಿಯೆಯುರೆಯಾಯಿತು ;
ತುತ್ತುರಿಯಾಯಿತು ಹಿಮ್ಮೆಟ್ಟಿಬರಲು.

ಬೇಸಗೆಯಲಿ ಸಂಜೆಯಾಯಿತು ; ಕೆಲಸವ
ಮುತ್ತಜ್ಜ ತೀರಿಸಿಕೊಂಡ.

ಇವು ಇದಕ್ಕೆ ಉದಾಹರಣೆಗಳು. ಇಲ್ಲಿ ಕೆಲವು ಅಕ್ಷರಗಳನ್ನು ಉದ್ದನಾಗಿ ಎಳೆದು ಕೆಲವನ್ನು ಹ್ರಸ್ವಮಾಡಿ ಈ ಪಂಕ್ತಿಗಳನ್ನು ಸಾಂಗತ್ಯದಂತೆ ಹೇಳಬಹುದು. ಆಗ್ಗೆ ಈ ಪಾದಗಳು ಹಾಡುವ ಕಾವ್ಯಕ್ಕೆ ಸೇರಿದಂತಾಗುವುವು. **ವಸಂತ** ಎಂಬ ಪದ್ಯದಲ್ಲಿ ನಡೆ ಹೀಗೆಯೇ ಅನಿಯತವಾದರೂ ಸ್ಪಷ್ಟವಾದ ಪ್ರಾಸದ ಸಂಕೇತದಿಂದ ಪದ್ಯ ಕಾವ್ಯಕ್ಕೆ ಅರ್ಹವಾಗಿದೆ.

ಚಳಿಯನು ಕೊಂದ, ಹಕ್ಕಿಗಳುಲಿಗಳ ಚೆಂದ
ಕುರಿ ನೆಗೆದಾಟ, ಕುರುಬರ ಕೊಳಲಿನೂದಾಟ
ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು

ಈ ಪಾದಗಳಲ್ಲಿ ತಂಪು, ಗುಂಪು ಮುಂತಾದ ಪ್ರಾಸಗಳು ವಿರಾಟು ಎಲ್ಲಿ ಬೀಳಬೇಕೆಂಬುದನ್ನು ತೋರಿಸಿಕೊಡುತ್ತವೆ. ಒಟ್ಟಿನಲ್ಲಿ, ಶ್ರೀ ಶ್ರೀಕಂಠಯ್ಯನವರು ಪ್ರಯೋಗಿಸಿರುವ ಛಂದೋ ರೂಪಗಳು ಸುಂದರವಾಗಿವೆ; ಕಾವ್ಯವಸ್ತುವಿಗೆ ಅನುಕೂಲವಾಗಿವೆ; ಕನ್ನಡದ ಮರ್ಯಾದೆಗೆ ಒಪ್ಪಿವೆ. ಮುಖ್ಯವಾಗಿ, ಶೈಲಿಯಲ್ಲಿಯೂ ಛಂದಸ್ಸಿನಲ್ಲಿಯೂ ಶ್ರೀಮಾನ್ ಶ್ರೀಕಂಠಯ್ಯನವರು ಮಾರ್ಗದರ್ಶಿಗಳು. ಇನ್ನುಮೇಲೆ ಬರುವ ಕವಿಗಳು ಇವರು ತೋರಿಸಿಕೊಟ್ಟಿರುವ ದಾರಿಯಲ್ಲಿ ಹೆಚ್ಚು ಹೆಚ್ಚಾಗಿ ನಡೆಯುವರೆಂಬುದರಲ್ಲಿಯೂ ಇದರಿಂದ ನಮ್ಮ ಸಾಹಿತ್ಯವು ಪಂಡಿತರಿಗೆ ಮಾತ್ರವಲ್ಲದೆ ಈಗ್ಗಿಂತಲೂ ಹೆಚ್ಚಾಗಿ ಜನ ಸಾಮಾನ್ಯಕ್ಕೆ ಸಿಲುಕುವಂತಾಗುತ್ತದೆಂಬುದರಲ್ಲಿಯೂ ಸಂದೇಹವಿಲ್ಲ.

ಇವಿಷ್ಟೂ ಭಾಷಾಂತರಗಳನ್ನು ಕುರಿತ ಮಾತೇ ಆಯಿತು. ಆದರೆ ಈ ಗ್ರಂಥದ ಕೊನೆಯಲ್ಲಿರುವ ಸ್ವತಂತ್ರ ಕವಿತೆಯಲ್ಲಿ ಕಾಣುವ ಕವಿತಾ ಶಕ್ತಿ ಭಾಷಾಂತರಗಳಲ್ಲಿ ಕಾಣುವುದಕ್ಕಿಂತ ಕಿರಿದಲ್ಲ. ಹೊರಗೆ ಕಾಣುವ ಸೌಂದರ್ಯವನ್ನೂ ಆ ಸೌಂದರ್ಯಕ್ಕಿಂತ ಕಿರಿದಲ್ಲದ ಒಳಗಣ ಒಂದು ಸೌಂದರ್ಯವನ್ನೂ ಈ ಕವಿ ಬಲ್ಲರು. ಈ ಎರಡು ಸೌಂದರ್ಯಗಳೊಡನೆ ಲೀನವಾಗಲು ಇವರ ಎದೆ ಹಂಬಲಿಸುತ್ತದೆ. ಇವರು ಹೆಚ್ಚು ಮಾತಿನವರಲ್ಲ. ಒಳ್ಳೆಯದನ್ನು ಅಪೇಕ್ಷಿಸುವುದರಲ್ಲಿಯೂ ನಯವನ್ನು ಮರೆಯುವವರಲ್ಲ. ಭರತಮಾತೆಯ ವಾಕ್ಯದಲ್ಲಿ ವ್ಯಕ್ತವಾಗುವ ದೇಶಭಕ್ತಿಯು ಈ ಕಾರಣದಿಂದ ಉಜ್ಜ್ವಲವಾದುದಲ್ಲವೆಂದು ವೀರ ಪಕ್ಷದವರಿಗೆ ತೋರಬಹುದು. ಆದರೆ ಇದು ಮೇಲು ನೋಟದಲ್ಲಿ ಬರುವ ಭಾವನೆ ಮಾತ್ರ. ಕವಿಯ ಅರ್ಥವನ್ನು ಸರಿಯಾಗಿ ಗ್ರಹಿಸುವವರಿಗೆ ಹೀಗೆ ಕಾಣಲಾರದು. ಪೂರ್ವದ ಋಷಿಗಳು, ಸತ್ಯದ ಕವಿಗಳು, ಧರ್ಮದ ಧಣಿಗಳು, ಜ್ಞಾನದ ಕಣಿಗಳು— ಇವರನ್ನು ಕುರಿತು ಕವಿ ಪಡುವ ಹೆಮ್ಮೆಯು ನಯವಾದ ಮಾತಿನಲ್ಲಿ ಉಕ್ತವಾದರೂ ಗಾಢವಾದದ್ದು. ಅದು ಒದರಿ ಹೇಳಿದರೇಯೇ ಹೆಮ್ಮೆಯೆ? ಒದರಿ ಹೇಳುವವರಲ್ಲಿ ಆ ಭಾವವು ಉರಿದೆದ್ದು ಬೀಳುವ ಕಿಚ್ಚಿನಂತೆ ಕುಗ್ಗುವ ಸಂಭವವೂ ಉಂಟು. ಗಂಭೀರವಾಗಿ ನುಡಿಯುವವರಲ್ಲಿ ಅದು ತನ್ನನ್ನು ತಾನು ಮರೆಯದೆ ಒಂದೇ ಸಮನೆ ಉರಿಯುವ ಬೆಳಕಿನಂತೆ ಹೆಚ್ಚು ಕಾಲ ಉಳಿಯುವುದು. ಕನ್ನಡ ನಾಡಿನ ಸೊಗಸನ್ನೂ ಆದರ ಪುಣ್ಯದಿಂದ ಅದಕ್ಕೆ ದೊರೆತಿರುವ ಋಷಿ ಕಲ್ಪನಾದ ಮಹಾರಾಜನ ಹಿರಿಮೆಯನ್ನೂ ಈ ಕವಿ ಸೊಗಸಾದ ಮಾತುಗಳಲ್ಲಿ ವರ್ಣಿಸಿರುವರು. ಆ ಮಾತುಗಳು ಯಾವ ಕನ್ನಡಿಗನ ಮನಸ್ಸಿನಲ್ಲಿಯೂ ಆನಂದವನ್ನು ಉಕ್ಕಿಸದೆ ಇರವು. ಶ್ರೀ ಶ್ರೀಕಂಠಯ್ಯನವರು ತಮಗೆ ಸಹಜವಾದ ಮೌನವನ್ನು ಬಿಟ್ಟು ಇಷ್ಟರ ಮಟ್ಟಿಗೆ ಮಾತನಾಡಿರುವುದು ಅವರ ದೇಶ ಭಕ್ತಿಯನ್ನೂ ಭಾಷಾಪ್ರೇಮವನ್ನೂ ಬೆಳಗುತ್ತಿದೆ. ಇವರು ಇದೇ ರೀತಿ ಮಿತವಾಗಿ ಆದರೂ ಎಡೆಬಿಡದೆ ತಮ್ಮ ಭಾವನೆಗಳನ್ನು ನಮ್ಮ ಜನಕ್ಕೆ ತಿಳಿಸುತ್ತಲೇ ಇರಲೆಂದು ನಾವು ಹಾರೈಸುತ್ತೇವೆ. ಈ ಗ್ರಂಥದಿಂದ ಈಗಾಗಲೇ ನಮ್ಮ ಜನ ಅನೇಕರಿಗೆ ಇವರ ಕವಿತಾ ಶಕ್ತಿಯ ಪರಿಚಯವಾಗಿದೆ. ಆದುದರಿಂದ ಇವರು ಇನ್ನುಮೇಲೆ

ರಚಿಸಬಹುದಾದ ಎಲ್ಲ ಕೃತಿಗಳಿಗೂ ಹೆಚ್ಚಿನ ಆದರವು ಕಾದಿದೆ. ಈ ಕವಿಯು ಕಾವ್ಯ ಸ್ಫೂರ್ತಿಯಿಂದ ಕನ್ನಡ ಸಾಹಿತ್ಯವು ಬೆಳೆಯಲೆಂದೂ ಕನ್ನಡಿಗರ ಮೇಲು ಮುಂದರಿಯಲೆಂದೂ ಪ್ರಾರ್ಥಿಸುತ್ತೇವೆ.

ಕವಿಯನ್ನು ಬಳಿಸಾರಿ ಕಾವ್ಯವನ್ನು ಹೊರಕ್ಕೆ ತಂದು ಎಲ್ಲರಿಗೂ ಅದರ ಪ್ರಯೋಜನವನ್ನು ಮಾಡಿಕೊಟ್ಟ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘಕ್ಕೂ ನಾವು ವಂದನೆಗಳನ್ನರ್ಪಿಸಬೇಕಾಗಿದೆ. ಈ ಸಂಘವು ಹೀಗೆಯೇ ಕನ್ನಡ ಸಾಹಿತ್ಯದಲ್ಲಿ ಇತರ ಉತ್ತಮ ಗ್ರಂಥಗಳನ್ನು ಹೊರಕ್ಕೆ ತರುವಂತಾಗಲೆಂದು ನಾವು ಮನಃಪೂರ್ವಕವಾಗಿ ಹಾರೈಸುತ್ತೇವೆ. **ಮಾ. ವೆಂ.**

---

೨. ಶ್ರೀ ಕೃಷ್ಣ ನಾಮಾಮೃತ

ಲೇಖಕರು.—ಪಂಡಿತ ಭೀ. ಜೀ. ಹುಲಿಕವಿ, ಎಸ್.ಟಿ.ಸಿ.

ಕ್ರೌನ್ ಅಷ್ಟಪತ್ರ ಪುಟಗಳು ೧೨೬+೮; ಧಾರವಾಡದ ಕರ್ಣಾಟಕ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಯಿತು; ೧೯೨೮; ಬೆಲೆ ರೂ. ೧.

ಇದು ಕಾಲಪರಿಸ್ಥಿತಿಯಿಂದ ಜನಸಾಮಾನ್ಯದಲ್ಲುಂಟಾಗಿರುವ ನಾಸ್ತಿಕತೆಯನ್ನು ಕಡಿಮೆ ಮಾಡಿ ನೀತಿ, ಸದಾಚಾರ, ಸದ್ಧರ್ಮ ಮೊದಲಾದುವನ್ನು ತಿಳಿಯಪಡಿಸುವುದಕ್ಕಾಗಿ ಮಹಾಭಾರತದಿಂದ ಅಲ್ಲಲ್ಲಿ ವಿಷಯಗಳನ್ನು ಸಂಗ್ರಹಿಸಿ ಅವುಗಳ ಭಾವವನ್ನು ಟೀಕಿಸುವಂತೆ ಬರೆದಿರುವ ಗದ್ಯಗ್ರಂಥವಾಗಿದೆ. ಇದು ಪ್ರಶ್ನೋತ್ತರ ರೂಪವಾಗಿಯೂ ಇರುವುದರಿಂದ, ಹಾಡುಗಳೂ ಪದ್ಯಗಳೂ ಅಂಕ ಮೊದಲಾದ ವಿಭಾಗಗಳೂ ಇಲ್ಲದ ನಾಟಕ ರೂಪವೆಂದು ಹೇಳಬಹುದು.

ಪ್ರಸ್ತಾವನೆಯಲ್ಲಿ—''ದಿವಸ ದಿವಸಕ್ಕೆ ಜ್ಞಾನವು ಬೆಳೆಯುತ್ತ ನಡೆದು, ಆಚಾರ ವಿಚಾರಗಳಲ್ಲಿ ವ್ಯತ್ಯಾಸಗಳಾಗಹತ್ತುತ್ತವೆ. ಅದರಂತೆಯೇ ಧರ್ಮ ಸಂಬಂಧವಾದ ಆಚಾರ ವಿಚಾರಗಳಲ್ಲಾದರೂ ಈ ವ್ಯತ್ಯಾಸವು ಅಪರಿಹಾರ್ಯವಾಗುತ್ತದೆ. ಅದನ್ನು ಲಕ್ಷಿಸದೆ ಇರುವದರಿಂದ ಅಥವಾ ವಿರೋಧಿಸುವದರಿಂದ ಸಮಾಜದ ಪ್ರಗತಿಯು ಸರ್ವಾಂಗ ಪರಿಪೂರ್ಣವಾಗಿ ಆಗಲಾರದು. ಇಂತಹ ಸಮಯದಲ್ಲಿ ಅರ್ಧಮರ್ಧ ಜ್ಞಾನದಿಂದ ಚಿಕಿತ್ಸಿತರಾದ ತರುಣರು ಅಶ್ರದ್ಧೆಯುಳ್ಳವರಾಗಿ ನಾಸ್ತಿಕರಾಗುವ ಸಂಭವವಿರುತ್ತದೆ''—ಎಂದೂ, ಪುಸ್ತಕದ ಮತ್ತೊಂದೆಡೆಯಲ್ಲಿ—''ಇದು ಕಾದಂಬರಿಯಂತೆ ಮನೋವೇಧಕವೂ, ಕಾವ್ಯದಂತೆ ಸಹೃದಯ ಹೃದಯಾಹ್ಲಾದಕವೂ, ಪುರಾಣದಂತೆ ಭಗವದ್ಭಕ್ತಿ ಬೋಧಕವೂ, ಇತಿಹಾಸದಂತೆ ಕಾಲಪರಿಸ್ಥಿತಿ ನಿದರ್ಶಕವೂ, ವೇದಾಂತದಂತೆ ಸತ್ತ್ವಾರ್ಥ ಪ್ರದರ್ಶಕವೂ, ಚರ್ಚಾತ್ಮಕ ಲೇಖದಂತೆ ಸಮ್ಯದೃಷ್ಟಿ ನಿರೂಪಕವೂ ಆಗಿದೆ''—ಎಂದೂ ಬರೆದಿರುವುದರಿಂದ ಲೇಖಕರ ಉದ್ದೇಶವು ವ್ಯಕ್ತವಾಗುವುದು.

ಈ ಪುಸ್ತಕವು ಯಾವ ಆಧಾರದ ಮೇಲೆ ಬರೆದುದು ಎಂಬುದನ್ನು ತಿಳಿಸುವುದಕ್ಕಾಗಿ ಲೇಖಕರು ಪ್ರಸ್ತಾವನೆಯಲ್ಲಿ—''ಶ್ರೀ ಕೃಷ್ಣ ಚರಿತ್ರವನ್ನು ಕುರಿತು ಜಗತ್ತಿನೊಳಗಿನ ದೊಡ್ಡ ದೊಡ್ಡ ವಿದ್ವಾಂಸರು ಅನೇಕ ಭಾಗಗಳಲ್ಲಿ ಅನೇಕ

ದೃಷ್ಟಿಗಳಿಂದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ವಂಗ ಲೇಖಕರಲ್ಲಿ ಹೆಸರಾದ ಬಾಬು ನವೀನ ಚಂದ್ರಸೇನ ಎಂಬವರು ಅವರಲ್ಲಿ ಒಬ್ಬರು. ಇವರು ಕುರುಕ್ಷೇತ್ರ, ರೈವತಕ ಮತ್ತು ಪ್ರಭಾಸ ಎಂಬ ಮೂರು ಪ್ರಸಿದ್ಧವಾದ ಕಾವ್ಯಗಳನ್ನು ಬರೆದಿದ್ದಾರೆ. ಈ ಮೂರೂ ಕಾವ್ಯಗಳಲ್ಲಿ ಮಹಾಭಾರತಾಂತರ್ಗತವಾದ ಮುಖ್ಯ ಕಥೆಯನ್ನು—ಅದರಲ್ಲಿಯೂ ಮುಖ್ಯವಾಗಿ ಶ್ರೀ ಕೃಷ್ಣ ಚರಿತ್ರವನ್ನು—ಕ್ರೋಡೀಕರಿಸುವದು ಅವರ ಉದ್ದೇಶವಾಗಿದೆ.........."

"ಸುಪ್ರಸಿದ್ಧ ಮಹಾರಾಷ್ಟ್ರ ಲೇಖಕರಾದ ಶ್ರೀ. ಅ. ವಿ. ಪರಳಕರ, ಬಿ.ಎ., ಎಲ್.ಎಲ್.ಬಿ. ಇವರು ಬಾಬು ನವೀನ ಚಂದ್ರಸೇನರ ಮೂರೂ ಕಾವ್ಯಗಳ ಅಧ್ಯಯನಮಾಡಿ, ಅವುಗಳನ್ನು ಮಹಾರಾಷ್ಟ್ರ ಭಾಷೆಯ ಮಾಸ ಪತ್ರಿಕೆಗಳಲ್ಲಿ ಆಗಾಗ ಪ್ರಸಿದ್ಧಿಸಿದ್ದಾರೆ. ಈ ಮೂರು ಕಾವ್ಯಗಳ ಬೇರೆ ಬೇರೆ ಪ್ರಕರಣಗಳೊಳಗಿಂದ ಆಯ್ದು, ಸಣ್ಣದಾದ ಒಂದು ಶ್ರೀ ಕೃಷ್ಣ ಚರಿತ್ರವನ್ನೂ ಅವರು ಬರೆದಿದ್ದಾರೆ. ಬಾಬು ನವೀನಚಂದ್ರರ ವಿಚಾರಗಳು ಸ್ಪಷ್ಟವಾಗಿ ತಿಳಿಯಲು ಶ್ರೀ. ಪರಳಕರ ಇವರ ಬರಹಗಳು ನಮಗೆ ಬಹಳ ನೆರವಾದವು.......... ಆದುದರಿಂದ ಈ ಪುಸ್ತಕದ ಸಂಪೂರ್ಣ ಶ್ರೇಯಸ್ಸು ಆ ಮಹನೀಯರಿಬ್ಬರಿಗೂ ಸಲ್ಲತಕ್ಕದ್ದಾಗಿದೆ" ಎಂದು ಬರೆದಿರುತ್ತಾರೆ.

ಈ ಗ್ರಂಥದಲ್ಲಿ—೧. ರುಕ್ಮಿಣಿಯೂ ಸತ್ಯಭಾಮೆಯೂ, ೨. ಅಧರ್ಮದ ಬೀಜ, ೩. ದುರ್ವಾಸನೂ ಅವನ ಶಿಷ್ಯರೂ, ೪. ಕಾರ್ಯವೂ ಶೈಲಜೆಯೂ, ೫. ಪಶ್ಚಾತ್ತಾಪ, ೬. ಉತ್ಸವದ ಹಗಲು, ೭. ವನಬಾಲೆ, ೮. ಉತ್ಸವದ ಇರುಳು, ೯. ಬಲರಾಮನ ಪ್ರಯಾಣ, ೧೦. ಕಪಟಾವಿಷ್ಕರಣ, ೧೧. ತೃಷ್ಣಾ ಶಮನ, ೧೨. ಶ್ರೀ ಕೃಷ್ಣ ನಾಮಾಮೃತ, ೧೩. ಪ್ರೇಮ ವೃಂದಾವನ, ೧೪. ಭವಿಷ್ಯದ್ವ್ಯವಸ್ಥೆ, ೧೫. ದಿವ್ಯ ದೃಷ್ಟಿ, ೧೬. ಅವತಾರ ರಹಸ್ಯ—ಎಂಬ ಹದಿನಾರು ಪ್ರಕರಣಗಳಿವೆ. ಪುಸ್ತಕದ ಆಕಾರವೂ ಮುದ್ರಣವೂ ಅಂದವಾಗಿವೆ. ಮುದ್ರಣದ ತಪ್ಪುಗಳಿಲ್ಲವೆಂದೇ ಹೇಳಬಹುದು. ಭಾಷಾಶೈಲಿಯು ಸುಲಭವಾಗಿಯೂ ಸರಳವಾಗಿಯೂ ಇದೆ. ವಾಕ್ಯಗಳ ರೀತಿಯು ಮೈಸೂರು ಕಡೆಯದಲ್ಲದಂತಿದ್ದರೂ ಓದುವವರಿಗೆ ವಿಷಯವು ಸರಿಯಾಗಿ ಗ್ರಹಿಸಲನುಕೂಲವಾಗಿದೆ. ವಾಕ್ಯಗಳ ಪ್ರಯೋಗವು—"ಪ್ರಭಾಸಕ್ಷೇತ್ರವು. ಮುಳುಗುತ್ತಿದ್ದ ಸೂರ್ಯನ ಹೊಂಬಣ್ಣದ ಕಿರಣಗಳು ಕಡಲ ತೆರೆಗಳ ಮೇಲೆ ಲೋಲಾಡುತ್ತಿದ್ದವು."—ಈ ರೀತಿಯಲ್ಲಿರುವುದರಿಂದ ಹೊಸ ಒಂದು ಬಗೆಯಾಗಿರುವಂತೆ ತೋರುವುದು. ಅಂದೇಯಲ್ಲವೇ, ರುಕ್ಮೋಷ್ಣವಾದ, ಇದ್ದಲಿಯನ್ನು, ಒಮ್ಮಿಂದೊಮ್ಮೆಲೆ, ಶೂರ್ಪಣಖಿಯೂ, ಸ್ಮಶಾನ, ಝುಂಝಾವಾತ—ಇತ್ಯಾದಿ ಶಬ್ದರೂಪಗಳು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಕಥಾಭಾಗಗಳೆಲ್ಲವೂ ಪ್ರಸಿದ್ಧವಾದ ಮಹಾಭಾರತಕ್ಕೆ ಸೇರಿ ಪುರಾತನವಾಗಿದ್ದರೂ ನಿರೂಪಣ ಕ್ರಮವು ಹೊಸ ರೀತಿಯಲ್ಲಿದ್ದು ವಾಚಕರಿಗೆ ಅಭಿರುಚಿಯನ್ನು ಹುಟ್ಟಿಸುವುದರಿಂದ ಉಪಯುಕ್ತವಾಗಿದೆ. ಎಲ್ಲರೂ ಇದನ್ನು ಗ್ರಹಿಸಿ ಓದುವುದರ ಮೂಲಕ ಪ್ರೋತ್ಸಾಹಿಸಲೆಂದು ಹಾರೈಸುತ್ತೇವೆ.

ಶ್ರೀಃ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೩] ವಿಭವ ಸಂ॥ ಆಶ್ವಯುಜ ಮಾಸ [ಸಂಚಿಕೆ ೩

ಕರ್ಣಾಟಕ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ

I

ಪ್ರಕೃತಿಗೂ ಪುರುಷನಿಗೂ ಇರುವ ಸಂಬಂಧವು ಅಗಾಧವಾದುದು. ಪುರುಷನು ಪ್ರಕೃತಿಯಿಂದ ಬೇರೆಯಾಗಿ ಜೀವಿಸಲಾರನು. ಆತನು ಪ್ರಕೃತಿಯ ಸಂಗಡಲೇ ಹುಟ್ಟಿ ಬೆಳೆದು ಅದರಲ್ಲಿಯೇ ಲೀನವಾಗುತ್ತಾನೆ. ಪ್ರಕೃತಿಯ ಸ್ಥಿತಿಯಲ್ಲಿ ಕಾಲ ಕಾಲಕ್ಕೆ ಯಾವ ಯಾವ ಬದಲಾವಣೆಗಳು ಉಂಟಾಗುವುವೋ ಅದೇ ರೀತಿಯಾದ ಬದಲಾವಣೆಗಳು ಮನುಷ್ಯನ ಜೀವನದ ಸ್ಥಿತಿಯಲ್ಲಿಯೂ ಉಂಟಾಗುವುವು. ಮನುಷ್ಯನಲ್ಲಿ ಚಲನ ವ್ಯಾಪಾರಗಳನ್ನುಂಟುಮಾಡುವ, ಯುಕ್ತಾಯುಕ್ತ ಪರಿಜ್ಞಾನವನ್ನು ಕೊಡುವ, ಜೀವನಾಧಾರವಾದ, ಆದ್ಯಂತ ರಹಿತನಾದ ಭಗವಂತನ ಯಾವ ಸ್ವರೂಪವಿರುವುದೋ ಆ ಸ್ವರೂಪವೇ ನಮ್ಮ ಎಲ್ಲ ಕಡೆಯಲ್ಲಿಯೂ ಕಾಣುವ, ಉನ್ನತ್ಯವನತಿಗಳನ್ನು ಪಡೆಯುವ, ಪ್ರಕೃತಿಯಲ್ಲಿಯೂ ಇರುವುದು. ಈ ತತ್ತ್ವವನ್ನು ಕಂಡುಹಿಡಿದು ಪ್ರಕೃತಿಯೂ ಪುರುಷನೂ ಸ್ನೇಹ ಭಾವದಿಂದ ಹೇಗೆ ಜೀವಿಸಬೇಕು ಎಂಬುದನ್ನು ವಿವೇಚಿಸುವುದೇ ಮನುಷ್ಯನ ಜೀವಮಾನದ ಒಂದು ಕೆಲಸವು.

ನಮ್ಮ ಪೂರ್ವಿಕರು ಜೀವನದಿಂದ ಕೂಡಿದ ಪ್ರಕೃತಿಯ ಮಧ್ಯದಲ್ಲಿ ವಾಸಿಸುತ್ತಿದ್ದರು. ಪ್ರಕೃತಿ ಸೌಂದರ್ಯಗಳಿಗೆ ಅರಣ್ಯಗಳೇ ತೌರುಮನೆಯು; ಈ ಅರಣ್ಯಗಳಲ್ಲಿಯೇ ಭಾರತೀಯ ನಾಗರಿಕತೆಯು ಹುಟ್ಟಿದುದು; ಅಲ್ಲದೆ, ಈ ಸುತ್ತುಮುತ್ತಲಿನ ಸೃಷ್ಟಿ ವೈಚಿತ್ರ್ಯಗಳಿಂದ ಈ ನಾಗರಿಕತೆಯು ಒಂದು ವಿಧವಾದ ಮಾರ್ಪಾಟನ್ನು ಹೊಂದಿತು. ಈ ನಾಗರಿಕತೆಯು ಬಾಹ್ಯದಲ್ಲಿ ಬದಲಾವಣೆಗಳನ್ನುಂಟುಮಾಡದೆ ಮನುಷ್ಯನ ಜೀವನದಲ್ಲಿ ಒಳಹೊಕ್ಕು ಪ್ರಕೃತಿಗೂ ಪುರುಷನಿಗೂ ಇರುವ ಸಂಬಂಧವನ್ನು ವ್ಯಕ್ತಗೊಳಿಸಿತು. ನಮ್ಮ ಪೂರ್ವಿಕರು ಅರಣ್ಯ

ಗಳಲ್ಲಿ ವಾಸಿಸುತ್ತಿದ್ದುದರಿಂದ ಇಂತಹ ಶ್ರೇಷ್ಠವಾದ ನಾಗರಿಕತೆಯನ್ನು ತಿಳಿದುಕೊಂಡರು. ಅವರಿಗೆ ಅರಣ್ಯಗಳಲ್ಲಿ ಜೀವಿಸುವುದಕ್ಕೆ ತಕ್ಕ ಅನುಕೂಲ್ಯಗಳೆಲ್ಲವೂ ಇದ್ದುವು. ಅಲ್ಲಿರುವ ಅನೇಕ ವಿಧವಾದ ಪ್ರಕೃತಿ ಸೌಂದರ್ಯಗಳು ಅವರ ಭಾವಗಳನ್ನು ಉದ್ರೇಕಗೊಳಿಸಿ ಜೀವನದ ಪ್ರೀತಿಯಲ್ಲಿ ಸ್ಫೂರ್ತಿಯನ್ನುಂಟುಮಾಡಿ ಜಗದುದಯ ಕಾರಣನಾದ ಪರಮಾತ್ಮನ ಮಹಿಮೆಯನ್ನು ಚೆನ್ನಾಗಿ ತೋರಿಸುವುವು; ಅಲ್ಲದೆ, ಪ್ರಕೃತಿಯಲ್ಲಿಯೂ ಮನುಷ್ಯನಲ್ಲಿಯೂ ಇರುವ ಆತ್ಮವು ಭಿನ್ನವಾಗಿಲ್ಲದೆ ಒಂದೇ ಒಂದು ಎಂಬುದನ್ನು ಕೂಡ ವ್ಯಕ್ತಗೊಳಿಸಿದುವು. ಇಂತಹ ತಿಳಿವಳಿಕೆಯುಳ್ಳ ಮತ್ತು ಸೃಷ್ಟಿ ಸಮತ್ವದ ಭಾವನೆಗಳಿಂದ ತುಂಬಿರುವ ಮನಸ್ಸುಳ್ಳವರೇ ಋಷಿಗಳು; ಅವರೇ ಕವಿಗಳು, ಅವರೇ ಪ್ರಕೃತಿ ವರ್ಣನೆಯಲ್ಲಿ ಉತ್ಕೃಷ್ಟವಾದ ಪ್ರತಿಭೆಯಿಂದ ಕೂಡಿದ ಶಕ್ತಿಯುಳ್ಳವರು. ಇಂತಹ ಕವಿಗಳು ಬಹು ವಿರಳರು; ಆದುದರಿಂದಲೇ ಜಗನ್ಮಾನ್ಯರು. "ಋಷಿಯಲ್ಲದವಂ ಕವಿಯೆನಿಸುವುದಶಕ್ಯಮೆಂದು ಲೋಕಮೊರೆವುದು ಸಾಜಂ" ಮತ್ತು "ನಾನೃಷಿಃ ಕುರುತೇ ಕಾವ್ಯಂ" ಎಂಬ ವಾಕ್ಯಗಳು ಸರ್ವಥಾ ನಿಶ್ಚಯವಾದುವು.

ಪ್ರಕೃತಿ ವರ್ಣನೆಯನ್ನು ಶ್ಲಾಘ್ಯವಾಗಿ ಮಾಡುವುದಕ್ಕೆ, ಮೊದಲು ಅದರ ವ್ಯಾಪಾರಗಳನ್ನು ಪರೀಕ್ಷಿಸಿ ನೋಡುವ ಶಕ್ತಿ ಇರಬೇಕು. ಆ ವ್ಯಾಪಾರಗಳು ಸಾಮಾನ್ಯನಿಗೆ ಕ್ಷಣ ಮಾತ್ರ ರಂಜನೆಯನ್ನುಂಟುಮಾಡಿ ಆಮೇಲೆ ಆತನ ಭಾವಗಳಲ್ಲಿ ವಿನೂ ಉದ್ರೇಕವನ್ನುಂಟುಮಾಡದೆ ಮಾಯವಾಗುತ್ತವೆ. ಕವಿತಾಶಕ್ತಿ ಇರುವ ಮನುಷ್ಯನಿಗಾದರೋ ಅವುಗಳು ಎಂದಿಗೂ ನಾಶವಾಗದೆ ಚಿರಕಾಲ ನಿಲ್ಲುವ, ಭಾವೋದ್ರೇಕಗೊಳಿಸುವ, ಚಿತ್ರಗಳನ್ನು ಮನಸ್ಸೆಂಬ ಪಟದ ಮೇಲೆ ಚಿತ್ರಿಸುತ್ತವೆ. ಕವಿಯು ಈ ಚಿತ್ರಗಳ ಮೇಲೆಯೇ ತನ್ನ ಮನಸ್ಸನ್ನು ನಿಲ್ಲಿಸಿ, ತನ್ನ ಹೃದಯವನ್ನು ಅವುಗಳ ಹೃದಯದಲ್ಲಿ ಸೇರಿಸಿ, ಪ್ರೇರಣೆಯಿಂದ ಧ್ಯಾನಮಾಡುವುದಕ್ಕೆ ಮೊದಲುಮಾಡುತ್ತಾನೆ. ಇದರಿಂದ ಜೀವನಕ್ಕೆ ಸಂಬಂಧಪಟ್ಟ ತತ್ತ್ವಗಳನ್ನು ಆತನು ಮನಗಾಣುವನು. ಹೀಗೆ ಮನಗಂಡ ಕೂಡಲೆ ಆತನಿಗೆ ಸ್ಫೂರ್ತಿಯುಂಟಾಗಿ, ಇಹಲೋಕದ ವ್ಯಾಪಾರಗಳನ್ನು ಮರೆತವನಾಗಿ, ತನ್ನದೇ ಒಂದು ಕವಿತಾ ಪ್ರಪಂಚದಲ್ಲಿ ವಿಹರಿಸುತ್ತ, ತನ್ನ ಭಾವಗಳನ್ನು ಬೆಳಗಿ ಉದ್ರೇಕಗೊಳಿಸಿದ ಆ ಪ್ರಕೃತಿಯ ದೃಶ್ಯಗಳನ್ನು ಕುರಿತು ವರ್ಣನಾಪೂರ್ವಕವಾದ ಮಾತುಗಳನ್ನು ಆಕಾಶದಲ್ಲಿ ಸ್ವಾತಂತ್ರ್ಯತೆಯಿಂದ ಗಾನಮಾಡುವ ಪಕ್ಷಿಯಂತೆ ನಿರರ್ಗಳವಾಗಿ ತನಗೆ ತೃಪ್ತಿಯುಂಟಾಗುವ ವರೆಗೆ, ತನ್ನ ಸ್ಫೂರ್ತಿಯ ಆವೇಶವು ಮಾಯವಾಗುವ ವರೆಗೆ, ಕವಿಯು ಸುರಿಯುತ್ತಾನೆ. ಹೀಗೆ ಮಾಡಲ್ಪಟ್ಟ ಪ್ರಕೃತಿ ವರ್ಣನೆಯೇ ಶ್ರೇಷ್ಠವಾದುದು.

ಪ್ರಕೃತಿಯ ರಹಸ್ಯಗಳನ್ನು ಅರಿತ ಮಾತ್ರಕ್ಕೇ ಸ್ಫೂರ್ತಿಯು ಸಾಮಾನ್ಯನಿಗೆ ತಾನಾಗಿ ಬರುವುದಿಲ್ಲ; ಅಂಥವನು ಶಾಸ್ತ್ರಜ್ಞನೆನಿಸುವನು; ಶಾಸ್ತ್ರಜ್ಞನಾಗಿ ಪ್ರಕೃತಿಯ ಪಂಚ ಭೂತಗಳ ಸಾಮಾನ್ಯ ಧರ್ಮಗಳನ್ನು ವಿವೇಚಿಸುತ್ತಾನೆ.

ಹಾಗೆ ವಿವೇಚನಾ ಶಕ್ತಿಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳನ್ನು ತನ್ನ ದಾಸರನ್ನಾಗಿ ಮಾಡಿಕೊಳ್ಳುತ್ತಾನೆ. ಆತನು ತಿಳಿದುಕೊಂಡಿರುವುದು ತಾನು ಪ್ರಕೃತಿಯಿಂದ ಬೇರೆಯಾದ ವಸ್ತುವೆಂದೂ, ತನಗೆ ಬೇಕು ಬೇಕಾದ ಅನುಕೂಲ್ಯಗಳೆಲ್ಲವನ್ನೂ ಪ್ರಯತ್ನಪೂರ್ವಕವಾಗಿ ಪ್ರಕೃತಿಯ ಸಂಗಡ ಹೋರಾಡಿ ಕಸುಕೊಳ್ಳಬೇಕೆಂದೂ; ಈ ವಿಧವಾದ ಭಾವನೆಯಿಂದ ಆತನು ತನ್ನ ಆತ್ಮೋನ್ನತಿಗೆ ಕುಂದನ್ನುಂಟುಮಾಡಿಕೊಳ್ಳುತ್ತಾನೆ. ಪೂರ್ವ ದಿಗ್ಭಿತ್ತಿಯ ಹಾರದಂತೆ ಶೋಭಿಸುವ ಕಾಮನಬಿಲ್ಲೂ ಆತನಿಗೆ ಮನೋರಂಜನೆಯನ್ನುಂಟುಮಾಡುವುದಿಲ್ಲ. ಆತನಿಗೆ ಅದು ಬರಿಯ ಶಾಸ್ತ್ರೋಕ್ತವಾದ ಪ್ರಕೃತಿಯ ವ್ಯಾಪಾರ: ಬಿಳಿಯ ಬಣ್ಣದ ಸೂರ್ಯನ ಕಿರಣಗಳು ಒಡೆದು ಏಳು ವಿಧವಾದ ಬಣ್ಣಗಳಾಗುವಿಕೆ ಮಾತ್ರ. ಕವಿಗಾದರೋ ಅದು ಮಾತಾಡುವುದಕ್ಕೆ ಶಕ್ತಿಯುಳ್ಳ ಸಜೀವವಾದ ಪರಮಾತ್ಮನ ಅಂಶದ ಒಂದು ಬೊಂಬೆಯು. ಅದು ವಿಶ್ವ ಚಿತ್ರಕನ ಲಾವಣ್ಯದ ಒಂದು ಭಾಸನ್ನ.

ಪ್ರಕೃತಿ ಸೌಂದರ್ಯಗಳನ್ನು ಚಿರ ಕಾಲ ನಿಲ್ಲುವ ಹಾಗೆ ವರ್ಣಿಸುವುದಕ್ಕೆ ಎರಡು ಮಾರ್ಗಗಳನ್ನು ಅವಲಂಬಿಸಬೇಕಾಗುವುದು. ಆ ಸೌಂದರ್ಯಗಳು ವ್ಯಕ್ತ ಸೌಂದರ್ಯ, ಅವ್ಯಕ್ತ ಸೌಂದರ್ಯ ಎಂದು ಎರಡು ವಿಧವಾಗಿರುವುವು. ವ್ಯಕ್ತ ಸೌಂದರ್ಯವು ನಮ್ಮ ಚರ್ಮ ಚಕ್ಷುಸ್ಸಿಗೆ ಗೋಚರವಾಗಿ ಮನಸ್ಸಿನಲ್ಲಿ ಕ್ಷಣಿಕವಾದ ಉದ್ರೇಕವನ್ನು ಹುಟ್ಟಿಸತಕ್ಕಂಥದು; ಅವ್ಯಕ್ತ ಸೌಂದರ್ಯವು ಮನೋನೇತ್ರಗಳಿಗೆ ಗೋಚರವಾಗಿ ಧ್ಯಾನಾನಂತರ ಮನಸ್ಸಿನಲ್ಲಿ ಎಂದೂ ಅಳಿಸಿ ಹೋಗದೆ ಇರುವ ಉದ್ರೇಕದ ಗುರುತುಗಳನ್ನು ನಿಲ್ಲಿಸುವಂಥದು. ಇವುಗಳ ಸ್ವರೂಪವು ಹೀಗೆಯೇ ಸರಿ ಎಂದು ನಿರ್ಧರಿಸಿ ಹೇಳುವುದಕ್ಕಾಗುವುದಿಲ್ಲ. ಇದು ಓದಿ ಅನುಭವದಿಂದ ತಿಳಿಯಬೇಕಾದ ವಿಷಯ. ಅವ್ಯಕ್ತ ಸೌಂದರ್ಯವು ಪ್ರಕೃತಿಯ ದೃಶ್ಯ ವಿಶೇಷದ ಹೃದಯಾಂತರದಲ್ಲಿ ಲೀನವಾಗಿರುವುದು. ಕವಿಯು ಆ ದೃಶ್ಯದ ಹೃದಯವನ್ನು ಅರಿತರೇನೇ ಅವ್ಯಕ್ತ ಸೌಂದರ್ಯದ ಚಿತ್ರವನ್ನು ಮಾತಿನಲ್ಲಿ ಬರೆಯಬಲ್ಲನು. ಇದರಲ್ಲಿ ದೂರದಿಂದ ಕೇಳಬರುವ ಸಂಗೀತದ ರಾಮಣೀಯಕತೆಯು ಇರುವುದು. ಅವ್ಯಕ್ತ ಸೌಂದರ್ಯದ ವರ್ಣನೆಯು ಸಂಪೂರ್ಣ ಪ್ರತಿಭಾ ಶಕ್ತಿ ಜನ್ಯವಾದುದು. ಕನ್ನಡ ಕವಿಗಳಲ್ಲಿ ಅವ್ಯಕ್ತ ಸೌಂದರ್ಯದ ವರ್ಣನೆಯು ದೊರೆಯುವುದು ಅತಿ ವಿರಳ. ವ್ಯಕ್ತ ಸೌಂದರ್ಯದ ವರ್ಣನೆಗೆ ಸ್ವಲ್ಪ ಪ್ರತಿಭೆ ಇದ್ದರೆ ಸಾಕು. ಹೊರಗಡೆ ಕಾಣುವ ಥಳುಕು ಬಳುಕುಗಳನ್ನು ಚೆನ್ನಾಗಿ ಕಾಣುವ ಮಾತುಗಳಿಂದ ವರ್ಣಿಸಬಹುದು. ಇಂತಹ ವರ್ಣನೆಗಳು ಕೆಲವು ಸಲ ಸ್ವಾಭಾವಿಕವಾಗಿರುವುವು, ಕೆಲವು ಸಲ ಆಲಂಕಾರಿಕವಾಗಿರುವುವು, ಇನ್ನು ಕೆಲವು ಸಲ ಪದಗುಂಫನದ ಸರಳತೆಯಿಂದ ರಂಜಕವಾಗಿರುವುವು.

ಯಾವ ವರ್ಣನೆಗೇ ಆಗಲಿ ಔಚಿತ್ಯವು ಒಂದು ಅಂಗವೆಂದು ಹೇಳಬಹುದು. ಪ್ರಕೃತಿ ವರ್ಣನೆಗಂತೂ ಔಚಿತ್ಯವು ಬೇಕೇ ಬೇಕು. ಕವಿಯು ವಾಚಕರ ಹೃದಯ

ದಲ್ಲಿ ಕರುಣ ರಸೋತ್ಪಾದವನ್ನುಂಟುಮಾಡಲೆಳಸಿ, ತಾನು ಕುರಿತು ಹೇಳುತ್ತಿರುವ ಮಾನುಷ್ಯಾವಸ್ಥೆಗಳನ್ನು ವರ್ಣಿಸುತ್ತಿರುವಾಗ, ಹೊರಗಡೆ ಕಾಣುವ ಪ್ರಕೃತಿಯ ಸಂತೋಷಾಂಶಗಳನ್ನು ವರ್ಣಿಸಿದರೆ ಹೃದಯದಲ್ಲಿ ಕರುಣೆಯು ಹೇಗೆ ತಾನೇ ಉದ್ಭವಿಸೀತು? ಪ್ರಕೃತಿಯೂ ಕೂಡ ಮನುಷ್ಯನ ಅವಸ್ಥೆಗಳಲ್ಲಿ ಭಾಗಿಯಾಗುತ್ತದೆ ಎಂಬ ಭಾವನೆಯನ್ನಿಟ್ಟುಕೊಂಡು ಅದರ ಹೃದಯವೂ ಮಿಡುಕುವುದು ಎಂದು ವರ್ಣಿಸಿದರೆ ಕಠಿನ ಹೃದಯನಾದ ಪಾಠಕನೂ ಕೂಡ ಕರಗುತ್ತಾನೆ. ಇಂತಹ ವರ್ಣನೆಯನ್ನು 'Pathetic Fallacy' ಎಂದು ಕರೆಯುತ್ತಾರೆ. ಆಂಗ್ಲ ಸಾಹಿತ್ಯದಲ್ಲಿ ಷೆಲ್ಲಿ ಕವಿಯು ಈ ವಿಧವಾದ ವರ್ಣನೆಯಲ್ಲಿ ಅಗ್ರಗಣ್ಯನು; ಕನ್ನಡ ಸಾಹಿತ್ಯದಲ್ಲಿ ಲಕ್ಷ್ಮೀಶನು ಅತುಲನು. ಈ ವಿಷಯವು ಚಂದ್ರಹಾಸನ ಬಾಲ್ಯವನ್ನೋ, ಸೀತಾ ವನವಾಸವನ್ನೋ, ಅಥವಾ ಗಿರಿಜೆಯ ತಪಶ್ಚರಣೆಯನ್ನೋ ಓದಿದರೆ ವ್ಯಕ್ತವಾಗುವುದು. ಮನುಷ್ಯನ ಸಂತೋಷ ಕಾಲದಲ್ಲಿಯೇ ಪ್ರಕೃತಿಯ ಸಂತೋಷವೂ ಕೂಡ ಶ್ರುತಿಯಿಡಲ್ಪಟ್ಟ ವೀಣೆಯು ಹೇಗೆ ಒಂದೇ ಒಂದು ರಾಗಾಲಾಪನದ ಜೊತೆಗೆ ಹಾಡುತ್ತದೆಯೋ ಹಾಗೆಯೇ ಪ್ರಕೃತಿಯೂ ಮನುಷ್ಯನ ಸುಖ ದುಃಖ ಕಾಲಗಳಲ್ಲಿ ಆಯಾ ಕಾಲಕ್ಕೆ ಸರಿಯಾದ ರೂಪವನ್ನು ಧರಿಸುತ್ತದೆ. ಅದೂ ಮನುಷ್ಯನ ಗಾನದ ಜೊತೆಗೆ ಹಾಡುತ್ತದೆ.

ಯಾವ ವಸ್ತುವು ನಮಗೆ ನಿಜವಾದ ಆನಂದವನ್ನುಂಟುಮಾಡುವುದಿಲ್ಲವೋ, ಯಾವುದು ನಮಗೆ ಸ್ವಲ್ಪ ಕಾಲವೇ ಉಪಯೋಗಕರವಾಗಿದ್ದು ಆಮೇಲೆ ಅದಕ್ಕೂ ನಮಗೂ ಇರುವ ಸಂಬಂಧವು ತಪ್ಪಿ ಉಪಯೋಗವಿಲ್ಲದ ಒಂದು ಹೊರೆಯಾಗುವುದೋ, ಅಂತಹ ವಸ್ತುವನ್ನು, ನಮಗೆ ಎಷ್ಟೇ ಕಷ್ಟವಾದರೂ, ದೂರ ಮಾಡಲು ಯತ್ನಿಸುತ್ತೇವೆ. ಅಂತಹ ವಸ್ತುಗಳು ನಮ್ಮ ದೃಷ್ಟಿಯ ಎಲ್ಲೆಯಿಂದ ಆಚೆಗಿರುವುವು. ಯಾವ ವಸ್ತುವು ತನ್ನಲ್ಲಿ ಶಾಶ್ವತವಾದ ಸೌಂದರ್ಯವನ್ನೊಳಕೊಂಡಿರುವುದೋ ಆ ವಸ್ತುವು ಸಂಪೂರ್ಣವಾಗಿ ನಮಗೆ ಸಂಬಂಧಪಟ್ಟುದು. ಏಕೆಂದರೆ, ಸೌಂದರ್ಯಯುಕ್ತವಾದ ವಸ್ತುವು ಸರ್ವಕಾಲವೂ ಆನಂದ ದಾಯಕವಾದುದು. ಸೌಂದರ್ಯವು ವಸ್ತುವಿನಲ್ಲಿ ಸೇರಿರುವುದರಿಂದ ಆ ವಸ್ತುವಿಗೆ ನಾವು ಪ್ರಾಧಾನ್ಯವನ್ನು ಕೊಡುತ್ತೇವೆ. ಬರಿಯ ಸೌಂದರ್ಯವನ್ನು ನಾವು ಅನುಭವಿಸಲು ಸಾಧ್ಯವಿಲ್ಲ; ಆದರೆ ಕವಿಗಳಿಗೆ ಅದು ಸುಲಭವಾದುದು. ಅದು ಪರಮಾತ್ಮನಂತೆ ನಿರಾಕಾರವಾದುದು. ಅದಕ್ಕೆ ಪ್ರಕೃತಿಯಲ್ಲಿಯ ಯಾವುದಾದರೂ ಒಂದು ವಸ್ತುವಿನ ಸಂಯೋಗವು ದೊರೆತ ಹೊರತು ಸೌಂದರ್ಯಾನುಭವಕ್ಕೆ ನಮಗೆ ದಾರಿಯೇ ಇಲ್ಲ. ಆದುದರಿಂದ ಸೌಂದರ್ಯಾನುಭವಕ್ಕೆ ಪ್ರಕೃತಿಯೇ ಮಾರ್ಗವು. ಸೌಂದರ್ಯವಿದ್ದಲ್ಲಿ ಆನಂದವೂ ಇರುವುದು. ಆನಂದಮಯವಾದ ಪ್ರಪಂಚವೇ ಕವಿತಾ ಪ್ರಪಂಚವು. ಹೀಗೆ ಹೇಳಿದರೆ ಸ್ವಲ್ಪ ವಿಪರೀತವಾಗಿ ಕಾಣಬಹುದು. ಬೇಕಾದರೆ ಷೆಲ್ಲಿಯನ್ನು ಕೇಳಿರಿ: "Our sweetest songs are those that tell of saddest thoughts." ಆನಂದವನ್ನು ದೊರಕಿಸುವುದೇ

ಸಾಹಿತ್ಯದ ಕರ್ತವ್ಯವು. ಇದರಿಂದ ಪ್ರಕೃತಿ ವರ್ಣನೆಯೂ ಅದರ ಧ್ಯೇಯವೂ ಎಷ್ಟು ಶ್ರಮ ಸಾಧ್ಯವೆಂಬುದು ಸ್ಪಷ್ಟವಾಗದಿರಲಾರದು.

ಸೌಂದರ್ಯಾನುಭವ ಮಾಡುವುದಕ್ಕೆ ಬೇಕಾದ ಮಾನಸಿಕ ಸಿದ್ಧಿಯು ಅಸಂಪೂರ್ಣವಾಗಿದ್ದರೆ ಪರಿಚಿತಕ್ಕೂ ಅಪರಿಚಿತಕ್ಕೂ, ಸೌಂದರ್ಯಕ್ಕೂ ಅಸೌಂದರ್ಯಕ್ಕೂ, ಸತ್ಯಕ್ಕೂ ಅಸತ್ಯಕ್ಕೂ ಭೇದವುಂಟಾಗುವುದು. ನಾವು ತಿಳಿದುಕೊಳ್ಳಬೇಕಾದ ವಿಶ್ವಕ್ಕೆ ಎಲ್ಲೆಯೇ ಇಲ್ಲ. ಪ್ರತಿದಿನವೂ ನಮ್ಮ ವಿಜ್ಞಾನಾದಿ ಶಾಸ್ತ್ರಗಳು ನೂತನ ವಿಷಯಗಳನ್ನು ಕಂಡುಹಿಡಿಯುತ್ತಲೇ ಇರುವುವು; ಪ್ರತಿದಿನವೂ ಪ್ರಪಂಚದ ಪರಿಚಯವು ಹೆಚ್ಚಾಗುತ್ತಲೇ ಇರುವುದು. ಆದರೆ ಸೌಂದರ್ಯಾನುಭವ ಮಾಡುವುದಕ್ಕೆ ಬೇಕಾದ ಜ್ಞಾನವು ಪ್ರಸಿದ್ಧರಾಗಿಯೂ ಪ್ರತಿಭಾ ಶಕ್ತಿ ಸಮನ್ವಿತರಾಗಿಯೂ ಇರುವ ಕವಿಜನಗಳು ಜನಿಸಿದ ಹಾಗೆಲ್ಲ ಮುಂದುವರಿಯುವುದು. ಸತ್ಯವು ಎಲ್ಲೆಲ್ಲಿಯೂ ಇರುವುದರಿಂದ ಎಲ್ಲವೂ ನಮ್ಮ ತಿಳಿವಳಿಕೆಗೆ ಅರ್ಹವಾದುವುಗಳು. ಹಾಗೆಯೇ, ಸೌಂದರ್ಯವೂ ವಿಶ್ವವ್ಯಾಪಿಯು; ಏಕೆಂದರೆ, ಎಲ್ಲವೂ ನಮಗೆ ಆನಂದ ದಾಯಕವು. ಅಲ್ಲದೆ, ''ಸತ್ಯವೇ ಸೌಂದರ್ಯ; ಸೌಂದರ್ಯವೇ ಸತ್ಯ'' ಎಂದು ಕೀಟ್ಸ್ ಎಂಬ ಕವಿಯು ಹೇಳುತ್ತಾನೆ. ಈ ಸೂತ್ರದ ವಿಸ್ತಾರವಾದ ಪ್ರತಿಪಾದನೆಗೆ 'ಸಾಹಿತ್ಯ' ಎಂಬ ಗ್ರಂಥವನ್ನು ಓದಬಹುದು. ಸೌಂದರ್ಯಾನುಭವದಿಂದ ಸತ್ಯವನ್ನು ಸಾಧಿಸಬಹುದು. ಅಂತಹ ಅನುಭವಕ್ಕೆ ಪ್ರಕೃತಿಯೇ ಮುಖ್ಯವಾದ ದಾರಿಯು. ಪ್ರಕೃತಿಯ ಆರಾಧನೆಯು ತನ್ನ ಸಂಗಡ ಪರಮಾತ್ಮನ ಮಹಿಮೆಯನ್ನೂ ಶಕ್ತಿಯನ್ನೂ ತಂದು ಕೊಟ್ಟು ಬುದ್ಧಿಯ ಸಾಮ್ರಾಜ್ಯವನ್ನೂ ರಾಗಗಳ ವೇಗವನ್ನೂ ವೃದ್ಧಿಹೊಂದಿಸುವುದು. ಇಂತಹ ಕೆಲಸವು ಬರಿಯ ತರ್ಕದಿಂದಲೂ ವಾದ ವಿವಾದಗಳಿಂದಲೂ ಜರುಗುವುದಿಲ್ಲ. ಜಿಹ್ವೆಯಿಲ್ಲದ ಮರಾಂತಸಲ್ಲಿ ವಾಗ್ಜಾಲವುಂಟು; ಗಮಿಸುತ್ತಿರುವ ನದಿಯಲ್ಲಿ ಮಧುರವಾದ ಗಾನವುಂಟು; ಇವು ಆತ್ಮನಲ್ಲಿ ಲೀನವಾಗಿರುವ, ಊಹಿಸಲಸಾಧ್ಯವಾದ ಒಂದು ವಸ್ತುವಿನ ಸಂಬಂಧವನ್ನು ಪಡೆದಿರುವುದರಿಂದ ನಮ್ಮ ಹೃದಯವನ್ನು ಹುರಿದುಂಬಿ ಆನಂದಮಯವಾದ ಕ್ಷೇತ್ರಕ್ಕೆ ಎಳೆಯುವುವು. ಆದುದರಿಂದ ದೇವರು ಪ್ರಕೃತಿಯನ್ನು ಸೃಷ್ಟಿಸಿದುದು ನಮಗಾಗಿ. ನಾವು ಅದರ ಸಹಾಯದಿಂದ, ಸೌಂದರ್ಯಾನುಭವದ ಮೂಲಕ, ಸತ್ಯವನ್ನು ಸಾಧಿಸಬೇಕು. ಹೀಗೆ ನಮ್ಮ ರಾಗಗಳ ಶಕ್ತಿಯು ಪರಿಪಕ್ವವಾಗಿ ಉಚ್ಚಸ್ಥಾನವನ್ನು ಹೊಂದಲು ಪ್ರಕೃತಿಯ ಸೌಂದರ್ಯವು ಎಷ್ಟು ಮುಖ್ಯವಾದುದಾಗಿದೆ!

ಮನುಷ್ಯನು ಪ್ರಕೃತಿಯಿಂದ ಹೊಂದಬಹುದಾದಷ್ಟು ಆತ್ಮೋನ್ನತಿಯನ್ನೂ ಭಾವ ಪರಿಪುಷ್ಟತೆಯನ್ನೂ ಸಂಪೂರ್ಣವಾಗಿ ಹೊಂದಬೇಕಾದರೆ ತನ್ನ ಶ್ರೇಷ್ಠತ್ವವನ್ನೂ ತನ್ನ ಉಪಮಾತೀತವಾದ ಬುದ್ಧಿಶಕ್ತಿಯ ಸತ್ವವನ್ನೂ ಮರೆತು, ತಾನು ತಿಳಿದುಕೊಳ್ಳಬೇಕಾದ ವಿಷಯಗಳು ಅಸಂಖ್ಯಾತವಾಗಿರುವುವು ಎಂಬ ಭಾವನೆಯಿಂದ ಪ್ರಕೃತಿಯಲ್ಲಿ ಶಿಷ್ಯತ್ವವನ್ನು ವಹಿಸಬೇಕು. ಆತನು

ವಿಷಯ ಭಾವದಿಂದ ತನ್ನ ಮನಸ್ಸಿನಲ್ಲಿರುವ ಕೆಟ್ಟ ಆಲೋಚನೆಗಳೆಲ್ಲವನ್ನೂ ದೂರೀಕರಿಸಿ, ತನ್ನ ಅಂತಃಕರಣದ ಬಾಗಿಲುಗಳನ್ನು ತೆರೆದು, ಜ್ಞಾನ ಸಾಗರದ ಶೀಕರಗಳನ್ನು ಗ್ರಹಿಸಲು ಸಿದ್ಧನಾಗಿರಬೇಕು. ಈ ಕಾಲದಲ್ಲಿ ಆತನ ಮನಸ್ಸಿನಲ್ಲಿ ಸ್ವಲ್ಪ ಮಾಂದ್ಯವು ಅಂಕುರಿಸಿದರೆ, ಆ ತತ್ತ್ವವು ಮಾಯವಾಗಿ ಹೋಗುವುದು; ತಿರುಗಿ ಅದನ್ನು ಸಾಧಿಸಲು ಬಹಳ ಕಾಲ ಬೇಕಾಗಬಹುದು. ನಮ್ಮ ಚರ್ಮಚಕ್ಷುಸ್ಸಿಗೆ ಅಗೋಚರವಾದ ಎಷ್ಟೋ ಶಕ್ತಿಗಳು ನಮ್ಮನ್ನು ಆವರಿಸಿಕೊಂಡಿವೆ. ಈ ಶಕ್ತಿಗಳಲ್ಲಿ ಸದ್ಗುಣಯುಕ್ತವಾದುವುಗಳನ್ನೇ ಹೊಂದಬೇಕಾದರೆ ಅವುಗಳ ಆವಾಸಕ್ಕೆ ಅನುಕೂಲ್ಯಗಳಾದ ದೇಹವನ್ನೂ ಹೃದಯ ಭಂಡಾರವನ್ನೂ ಆವಾಗಲೂ ಶುದ್ಧಿಗೊಳಿಸುತ್ತಿರಬೇಕಾಗುವುದು. ನಮ್ಮ ಕವಿವರ್ಯರಾದ ರವೀಂದ್ರನಾಥ ಠಾಕೂರರು ಹೇಳುವ—"Only let me make my life simple and straight like a flute of reed for thee to fill with music" ಎಂಬ ಮಾತು ಅತ್ಯಂತ ಅಭಿನಂದನೀಯವಾದುದು. ಹೀಗೆ ಮನುಷ್ಯನು ತನ್ನ ಜೀವನವನ್ನು ಸಾತ್ವಿಕ ಮಾರ್ಗದಲ್ಲಿ ನಡೆಯಿಸುತ್ತ ಪ್ರಕೃತಿಯಿಂದ ಸದಾ ಕಾಲವೂ ಹೊರಹೊಮ್ಮುತ್ತಿರುವ ಬೆಳಕಿನ ಛಾಯೆಯನ್ನು ಗ್ರಹಿಸಲು ಅರ್ಹತೆಯನ್ನು ಸಂಪಾದಿಸುವನು. ಮನುಷ್ಯನು ತನ್ನ ತಾರ್ಕಿಕಯುತವಾದ ಬುದ್ಧಿಶಕ್ತಿಯಿಂದ ಪ್ರಕೃತಿಯ ರಹಸ್ಯಾಂಶಗಳನ್ನು ಅರಿಯುವೆನೆಂದು ಉದ್ಯಮಿಸಬಾರದು. ತನ್ನ ಹೃದಯವನ್ನು ವಿಕಸಿತವಾದ ಕುಸುಮವೆಂದು ಭಾವಿಸಿ ಪ್ರಕೃತಿಯು ಅದನ್ನು ಮಧುವಿನಿಂದ ತುಂಬುವುದೆಂದು ತಿಳಿದು ವಿನೀತನಾಗಿ ಆ ನಿಯತ ಕಾಲದಲ್ಲಿ ಆತನು ಸಂಸ್ಕಾರವನ್ನು ಪಡೆಯಬೇಕು. ಇದರಿಂದಲೇ ವರ್ಡ್ಸ್‌ವರ್ತ್ ಎಂಬ ಆಂಗ್ಲ ಕವಿಯು " Let Nature be my teacher " ಎಂದು ಸಾರಿ ಸಾರಿ ಹೇಳುತ್ತಿರುವುದು. ಈ ಪ್ರಕೃತಿಯ ಗುರುತ್ವ ಭಾವನೆಯು ಇಲ್ಲದಿದ್ದರೆ ಆತ್ಮಸಂಸ್ಕಾರಕ್ಕೆ ಅತ್ಯಂತಾವಶ್ಯಕಗಳಾದ ಬುದ್ಧಿ ಸಂಸ್ಕಾರ ಮತ್ತು ರಾಗ ಸಂಸ್ಕಾರಗಳಲ್ಲಿ, ಬುದ್ಧಿ ಸಂಸ್ಕಾರವನ್ನು ಮಾತ್ರವೇ ಪಡೆಯಬಹುದು. ಆದುದರಿಂದ ರಾಗ ಸಂಸ್ಕಾರಕ್ಕೆ ಪ್ರಕೃತಿಯ ಸೌಂದರ್ಯ ರಾಶಿಗಳು ಅತ್ಯಂತ ಸಹಾಯವನ್ನು ಮಾಡುವುವು. ಈ ಸಹಾಯದ ಸಂಪೂರ್ಣ ಲಾಭವನ್ನು ನಾವು ಪಡೆಯಬೇಕಾದರೆ ಪ್ರಕೃತಿಯೆಂಬ ವಿಶ್ವ ಗುರುವಿನಲ್ಲಿ ನಾವು ಶಿಷ್ಯತ್ವವನ್ನು ಹೊಂದಲೇ ಬೇಕು.

ಪ್ರಕೃತಿಯ ರಹಸ್ಯಾಂಶಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ತೊಡಗುವುದು ಸ್ವಲ್ಪ ಅಸಾಧ್ಯವಾದ ಕೆಲಸ. ಏಕೆಂದರೆ, ಆ ಮಹಾ ಸಮುದ್ರದಲ್ಲಿ ಎಷ್ಟು ಕೋಟ್ಯಂತರ ರತ್ನರಾಶಿಗಳಿರುವುವೋ? ಎಷ್ಟು ವಿಧವಾದ ಅನಿರ್ವಚನೀಯವಾದ ವೈಚಿತ್ರ್ಯಗಳಿರುವುವೋ? ಆಧುನಿಕ ಲೇಖಕರಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಒಬ್ಬರು, "ನಾವೆಲ್ಲರೂ ಪ್ರಪಂಚದಲ್ಲಿರುವುದು, ತಾಯನ್ನು ತಿಳಿಯದೆ ಸುಮ್ಮನೆ ಅವಳ ಕೈಯಲ್ಲಿರುವ ಮಗುವಿನಂತೆ" ಎಂದು ಹೇಳಿರುತ್ತಾರೆ. ಮಗುವಿಗೆ ತಾಯನ್ನು ಕಂಡರೆ ಸಂತೋಷವಾಗುವುದು; ಹಾಗೆಯೇ ನಮಗೂ.

ತಾಯಿಯು ಮಗುವಿನ ಕುತೂಹಲಕ್ಕಾಗಿ ಅದಕ್ಕೆ ಬೇಕಾದ ಬಣ್ಣಬಣ್ಣದ ಆಟದ ಸಾಮಾನುಗಳನ್ನು ತೆಗೆದುಕೊಡುವಳು. ಹಾಗೆಯೇ ಪ್ರಕೃತಿಯೂ ತನ್ನ ವಿವಿಧ ವರ್ಣಯುಕ್ತವಾದ ಅನೇಕ ಚಿತ್ರಗಳಿಂದ ನಮ್ಮನ್ನು ಆನಂದಗೊಳಿಸುವುದು. ಈ ಚಿತ್ರಗಳು ಹೇಗೆ ರೂಪುಗೊಂಡುವು? ಯಾವನಿಂದ ಸೃಷ್ಟವಾದುವು? ಮನುಷ್ಯನ ಹೃದಯದ ಮೇಲೆ ಇವುಗಳ ಪರಿಣಾಮವೆಂತಹುದು? ಇವುಗಳ ಅಂತರದಲ್ಲಿ ಲೀನವಾಗಿರುವ ತತ್ತ್ವವು ಯಾವುದು?—ಇವೇ ಮೊದಲಾದ ವಿಷಯಗಳನ್ನು ತಿಳಿಯಲು, ಮಗುವಿನ ತಾಯನ್ನು ತಿಳಿದುಕೊಳ್ಳುವ ಉದ್ಯಮವು ವಿಫಲವಾಗುವಂತೆ ಮಾಡುವ ಉದ್ಯಮಗಳೆಲ್ಲವೂ ಸಾಮಾನ್ಯರಲ್ಲಿ ಫಲಕಾರಿಯಾಗುವುದಿಲ್ಲ. ಸ್ವಾಭಾವಿಕ ಕವಿಯಲ್ಲಿರುವ ಅಗ್ನಿ ಕಣವು ಈ ರಹಸ್ಯಮಾರ್ಗಗಳೆಲ್ಲವನ್ನೂ ಬೆಳಗಿ ಅವನಲ್ಲಿ ತತ್ತ್ವಜ್ಞಾನವನ್ನುಂಟುಮಾಡುವುದು.

ಒಟ್ಟಿನಲ್ಲಿ, ಪ್ರಕೃತಿಗೂ ಪುರುಷನಿಗೂ ಇರುವ ಸಂಬಂಧವೆಂತಹುದು? ರಾಗಸಂಸ್ಕಾರಕ್ಕೆ ಪ್ರಕೃತಿಯು ಸುಲಭವಾದ ಮಾರ್ಗವೆಂಬುದು ಹೇಗೆ? ಸೌಂದರ್ಯಸ್ವರೂಪವೆಂತಹುದು? ಸೌಂದರ್ಯಾನುಭವಕ್ಕೆ ಬೇಕಾದ ಸಂಸ್ಕಾರವು ಉಂಟಾಗುವುದು ಹೇಗೆ?—ಈ ವಿಷಯಗಳೆಲ್ಲವನ್ನೂ ನಿರೂಪಿಸಲಾಯಿತು. ಈಗ ಈ ಹೆಗ್ಗುರುತುಗಳನ್ನೇ ನಾವು ಆಧಾರವಾಗಿಟ್ಟುಕೊಂಡು, ಕರ್ಣಾಟಕ ಕವಿಗಳು—ಪ್ರಕೃತಿಯ ಮೂಲಕ ಆನಂದವನ್ನೂ ಜ್ಞಾನವನ್ನೂ ಸಂಪಾದಿಸಿರುವರೋ ಇಲ್ಲವೋ? ಪ್ರಕೃತಿಯಲ್ಲಿರುವ ಮಾನವೀಯ ಸ್ವಭಾವದ ಸೂಕ್ಷ್ಮಾಂಶಗಳನ್ನು ತಿಳಿದುಕೊಂಡು ಅದರಂತೆ ಅನುವರ್ತಿಸಿ ಜೀವನದ ಸಂತೋಷವನ್ನು ಅನುಭವಿಸಿರುವರೋ ಇಲ್ಲವೋ?—ಎಂಬ ಈ ವಿಷಯಗಳನ್ನು ವಿವೇಚಿಸಲಾಗುವುದು.

II

ಕನ್ನಡ ಸಾಹಿತ್ಯದಲ್ಲಿ ಒಳ್ಳೆಯ ಕಾವ್ಯಗಳ ಸಂಖ್ಯೆಯು ಬಹಳ ಕಡಿಮೆಯಾಗಿದೆ. ಇವುಗಳಲ್ಲಿರುವ ವರ್ಣನೆಗಳು ಬಹು ಮಟ್ಟಿಗೆ ಒಂದೇ ಮಾರ್ಗವನ್ನು ಅವಲಂಬಿಸಿರುತ್ತವೆ. ಹೇಳುವ ಮಾತುಗಳು ಬೇರೆ ಬೇರೆಯಾಗಿದ್ದರೂ ಅರ್ಥವು ಒಂದೇ. ಹೀಗೆ ಕನ್ನಡ ಕವಿಗಳು ಸಂಕುಚಿತ ಮಾರ್ಗಾನುಯಾಯಿಗಳಾಗುವುದಕ್ಕೆ ಮುಖ್ಯವಾದ ಎರಡು ಕಾರಣಗಳಿರುವುವು: ಮೊದಲನೆಯದು, ಲಾಕ್ಷಣಿಕರು ಕೆಲವು ಪ್ರಸಿದ್ಧವಾದ ಕಾವ್ಯಗಳನ್ನು ಮಾತ್ರವೇ ಓದಿ ಅವುಗಳನ್ನೇ ಮಾದರಿಯಾಗಿಟ್ಟುಕೊಂಡು ಇನ್ನು ಮುಂದೆ ಬರುವ ಕವಿಗಳೆಲ್ಲರೂ ಆ ಕಾವ್ಯಗಳ ಸರಣಿಯಲ್ಲಿಯೇ ನಡೆಯಬೇಕೆಂದು ನಿರ್ಬಂಧಿಸಿರುವುದು. ಎರಡನೆಯದು, ಈ ಸಾಹಿತ್ಯಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಮೀರಿ ಸ್ವತಂತ್ರವಾದ ಪ್ರತಿಭಾಶಕ್ತಿಯಿಂದಲೂ ಕಲ್ಪನಾ ಚಾತುರ್ಯದಿಂದಲೂ ಕಾವ್ಯಸೃಷ್ಟಿಯನ್ನು ಮಾಡಿದರೆ ಎಲ್ಲಿ ತಮ್ಮ ಕಾವ್ಯಗಳು ನಿಸ್ಸಾರವಾಗುವುವೋ ಎಂಬ ಕವಿಗಳಲ್ಲಿರುವ ಭೀತಿ. ಈ ಎರಡು ಪ್ರಬಲವಾದ ನಿರ್ಬಂಧಗಳಿಂದ ಉಂಟಾಗಿರುವ ಪರಿಣಾಮವು ಬಹಳ

ಶೋಚನೀಯವಾದ ಅವಸ್ಥೆಯನ್ನು ಕನ್ನಡ ಸಾಹಿತ್ಯಕ್ಕೆ ತಂದಿದೆ. ಇವುಗಳಲ್ಲಿ ಒಂದೊಂದನ್ನೂ ಬೇರೆ ಬೇರೆಯಾಗಿ ತೆಗೆದುಕೊಂಡು ವಿಚಾರಿಸಲು ಪ್ರಯತ್ನಿಸಲಾಗುವುದು.

ಲಾಕ್ಷಣಿಕರ ನಿರ್ಬಂಧವು ಒಂದು ಚಿನ್ನದ ಸಂಕೋಲೆಯು ಹಾಗಿದೆ. ಕೆಲವು ಕನ್ನಡ ಕಾವ್ಯಗಳನ್ನು ಓದಿದರೆ ಅವರು ಮಾಡಿರುವ ಕಟ್ಟುಗಳು ಅತ್ಯಂತ ಆವಶ್ಯಕವಾದುವೆನಿಸುವುದು ; ಆದರೆ ಒಳಹೊಕ್ಕು ನೋಡಿದರೆ ತಿರುಳಿಲ್ಲ. ಎಷ್ಟೋ ಜನ ಕವಿಗಳು ಸಂಕೋಲೆಯು ಹೇಗಾದರೂ ಇರಲಿ, ಅದು ಸುವರ್ಣಮಯವಾದುದು ಎಂದು ಭಾವಿಸಿ ಸುಲಭವಾಗಿ ಬದ್ಧರಾಗಿರುವರು. ಇನ್ನು ಕೆಲವರು ಈ ಶೃಂಖಲೆಯ ಕಷ್ಟಗಳನ್ನು ಪರಿಭಾವಿಸಿ ನೋಡಿ ಪ್ರತಿಭಟಿಸುವುದಕ್ಕೆ ತಕ್ಕ ಪ್ರತಿಭಾ ಶಕ್ತಿಯು ಸಾಲದೆ ತಮ್ಮದೂ ಒಂದು ಕಾವ್ಯವೆಂಬ ಹೆಸರಿನ ಗ್ರಂಥವು ಇರಲಿ ಎಂದು ಬರೆದಿರುವ ಹಾಗೆ ತೋರುತ್ತದೆ. ಇನ್ನು ಕೆಲವರು ಪ್ರತಿಭಾ ಶಕ್ತಿಸಮನ್ವಿತರೂ ವಾಕ್ಸಂಪತ್ತಿಯುಳ್ಳವರೂ ಆಗಿ ಧೈರ್ಯವಿಲ್ಲದೆ ಬದ್ಧರಾಗಿರುವರು. ಮಿಕ್ಕವರ ಮಾತೇನು? ಹೀಗೆ ಕವಿಜನಗಳ ಕವಿತಾ ಪ್ರಪಂಚಕ್ಕೆ ಒಂದು ಮೇರೆಯನ್ನು ಕಲ್ಪಿಸಿ ಅವರ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಸೆಳೆದುಕೊಂಡಿರುವ ಲಾಕ್ಷಣಿಕರ ನಿಯಮಗಳು ಕಾವ್ಯಗಳ ಸ್ವರೂಪವನ್ನೂ ಉದ್ದೇಶವನ್ನೂ ರಾಮಣೀಯತೆಯನ್ನೂ ಬಹಳ ಮಟ್ಟಿಗೆ ನಾಶಮಾಡಿರುವುವೆಂದರೆ ಅತಿಶಯೋಕ್ತಿಯಾಗಲಾರದು.

ಇನ್ನು, ಕವಿಗಳ ಮನಸ್ಸಿನಲ್ಲಿರುವ ಭೀತಿಗೆ ಈ ಅಲಂಕಾರಿಕ ಗ್ರಂಥಗಳೇ ಮೂಲ. ಒಬ್ಬ ಕವಿಯು ಒಂದು ಕಾವ್ಯವನ್ನು ಬರೆದನೆಂದರೆ ಅವನ ಮನಸ್ಸೆಲ್ಲವೂ, ಪಂಡಿತರು ಅದನ್ನು ಮೆಚ್ಚುತ್ತಾರೆಯೋ ಇಲ್ಲವೋ ಎಂಬ ಕಳವಳದಿಂದ ಆಕುಲಿತವಾಗುತ್ತಿದ್ದಿತು. ಏಕೆಂದರೆ, ಕಾವ್ಯವು ಎಷ್ಟೇ ಚೆನ್ನಾಗಿರಲಿ, ಪಂಡಿತರ ಅನುಮತಿಯು ಆಶ್ರಯವು ದೊರಕದಿದ್ದ ಪಕ್ಷದಲ್ಲಿ ಅದು ಬಹಳ ಕಾಲ ಬದುಕುವ ಸಂಭವವಿರಲಿಲ್ಲ. ಇದರಿಂದಲೇ ಕವಿಯು ಲಾಕ್ಷಣಿಕರ, ಅಥವಾ ಪಂಡಿತರ ನಿಯಮಗಳನ್ನು ಆಶ್ರಯಿಸಬೇಕಾಯಿತು. ಈ ನಿಯಮಗಳಿಂದ ಬದ್ಧನಾಗಿ ಕವಿಯು ಕಾವ್ಯಕ್ಕೂ ಜೀವನಕ್ಕೂ ಇರುವ ಸಂಬಂಧವನ್ನು ವ್ಯಕ್ತಗೊಳಿಸಲು ಅಸಮರ್ಥನಾದನು. ಕೆಲವು ಕನ್ನಡ ಕವಿಗಳು ಮಾತ್ರ ತಮ್ಮಲ್ಲಿರುವ ಶಕ್ತಿಯ ಮಹಿಮೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಈ ಕವಿಗಳು ಈಗಲೂ ಕರ್ಣಾಟಕ ಸಾಹಿತ್ಯದಲ್ಲಿ ಆದಿತ್ಯನಂತೆ ವಿರಾಜಮಾನರಾಗಿರುವರು. ಈ ಕವಿಗಳೇ ಪ್ರಕೃತಿ ವರ್ಣನೆಯಲ್ಲಿ ಬಹಳ ದೂರ ಮುಂದುವರಿದಿರುವರು. ಆದಿ ಕವಿಯಾದ ಪಂಪನು ಪ್ರಕೃತಿ ವರ್ಣನೆಯ ಮಾರ್ಗವನ್ನು ತೋರಿಸಿಕೊಟ್ಟನು. ಆದರೆ ಅವನ ಕಾಲವಾಗುತ್ತಲೇ ಬಂದ ಕವಿಗಳು ಅವನ ಮಾರ್ಗದ ರಾಮಣೀಯತೆಯಿಂದ ಮುಗ್ಧರಾಗದೆ ಲಾಕ್ಷಣಿಕರಿಂದ ನಿರೂಪಿತವಾದ ಕವಿಸಮಯಗಳ ಪಾಶದಲ್ಲಿ ಸಿಲುಕಿದರು.

ಮಹಾ ಕಾವ್ಯದಲ್ಲಿ ಹದಿನೆಂಟು ವರ್ಣನೆಗಳಿರಬೇಕೆಂಬುದು ಲಾಕ್ಷಣಿಕರ ನಿಯಮವು. ಉದಯಾದಿತ್ಯನು ಮಹಾ ಕಾವ್ಯದಲ್ಲಿ—

ಉದಧಿ ಪುರಾಧಿಪ ಸುತ ಮಂ
ತ್ರಿ ದೂತ ಗಮನಾಜಿ ವಿರಹ ಪರಿಣಯ ಸುರತ।
ಋತು ದಿನೇಶ ಚಂದ್ರ ಮಧು ಕುಭೃ
ದುದಕ ವನಸ್ಪತಿಯೆ ಕೃತಿಗೆ ಪದಿನೆಂಟಂಗಂ ॥

ಎಂಬ ಅಷ್ಟಾದಶ ವರ್ಣನೆಗಳಿರಬೇಕೆಂದು ಹೇಳುತ್ತಾನೆ. ಇವುಗಳಲ್ಲಿ ಪ್ರಕೃತಿ ವರ್ಣನೆಗಳಿಗೆ ಸಂಬಂಧಪಟ್ಟವು ಏಳು ವರ್ಣನೆಗಳು ಮಾತ್ರ. ನಾವು ಯಾವ ಕನ್ನಡ ಕಾವ್ಯವನ್ನು ತೆಗೆದುಕೊಂಡರೂ ಅದರಲ್ಲಿ ಈ ವರ್ಣನೆಗಳೆಲ್ಲವೂ ಇರುವುವು. ಪ್ರಾಯಶಃ ಈ ವರ್ಣನೆಗಳೆಲ್ಲವೂ ಒಂದೇ ಮಾರ್ಗವನ್ನು ಅವಲಂಬಿಸಿವೆ. ವರ್ಣನಾ ಪದಗಳಿಗೇನೂ ಕುಂದಿಲ್ಲ. ಪ್ರತಿಯೊಬ್ಬ ಕವಿಯೂ ತನ್ನ ಯೋಗ್ಯತೆಗೆ ತಕ್ಕ ಬೇರೆ ಬೇರೆ ಮಾತುಗಳಿಂದ ಒಂದೇ ವಸ್ತುವನ್ನು ಒಂದೇ ವಿಧವಾಗಿ ವರ್ಣಿಸುತ್ತಾನೆ. ಈಗ ಈ ಏಳು ವರ್ಣನೆಗಳಲ್ಲಿ ಒಂದೊಂದನ್ನಾಗಿ ತೆಗೆದುಕೊಂಡು ಪ್ರಾಚೀನ ಕವಿಗಳು ಲಾಕ್ಷಣಿಕರ ನಿಯಮಾನುಸಾರವಾಗಿ ಹೇಗೆ ವರ್ಣಿಸಿರುವರೆಂಬುದನ್ನು ವಿವೇಚಿಸಲಾಗುವುದು.

(೧) ಸಮುದ್ರ ವರ್ಣನೆ

ಯಾವ ಕನ್ನಡ ಕಾವ್ಯವನ್ನು ತೆಗೆದುಕೊಂಡರೂ ಕವಿ ಪ್ರಶಂಸಾತ್ಮಕವಾದ ಮತ್ತು ಕವಿ ವಿಷಯಕವಾದ ಪದ್ಯಗಳೋ ಅಥವಾ ಆಶ್ವಾಸಗಳೋ ಆದಮೇಲೆ ಮೊದಲು, "ವನರುಹ ಭವಾಂಡದೊಳಗೈವತ್ತು ಕೋಟಿ ಯೋಜನದ ವಿಸ್ತೀರ್ಣದಿಳೆಯುಂ ಸಪ್ತ ಶರನಿಧಿಗಳನುವೇಷ್ಟಿಸಿರಲದರ ಮಧ್ಯದೊಳ್ ವಿನುತ ಜಂಬೂದ್ವೀಪಮದರ ನಡುವೆ" ಎಂಬ ಅಭಿಪ್ರಾಯವನ್ನು ಕೊಡುವ ಪದ್ಯಗಳು ಬಂದೇ ಬರುತ್ತವೆ. ಈ ಸಂದರ್ಭದಲ್ಲಿ ಸಮುದ್ರ ವರ್ಣನೆಯನ್ನು ಮಾಡಬೇಕಾಗಿರುವುದು ಲಾಕ್ಷಣಿಕರ ಮತದ ರೀತ್ಯಾ ಅತ್ಯಂತಾವಶ್ಯಕವು. ಸಮುದ್ರ ವರ್ಣನೆಯನ್ನು ಮಾಡಬೇಕಾದರೆ, "ಜಳಧಿಯೊಳ್ ತಿಮಿ ತಿಮಿಂಗಿಳಗಿಳ ಮಕರ ಪ್ರಕರ ಶಂಖ ಸಂಘಮುಕ್ಕುಂ" ಎಂಬ ನಿಯಮವನ್ನು ಅನುಸರಿಸಬೇಕಾಗಿದ್ದಿತು. ಈ ನಿಯಮವನ್ನು ಎಲ್ಲ ಕವಿಗಳೂ ಒಪ್ಪಿರುವಹಾಗೆ ತೋರುತ್ತದೆ. ಆದರೆ ರನ್ನನು ತನ್ನ ಅಜಿತತೀರ್ಥಂಕರ ಪುರಾಣದಲ್ಲಿ ಸ್ವಲ್ಪ ಒಪ್ಪಿಗೆಯನ್ನು ತೋರಿಸಿದ್ದರೂ ಈ ನಿಯಮವನ್ನು ತನ್ನ ಗದಾಯುದ್ಧದಲ್ಲಿ ಸಂಪೂರ್ಣವಾಗಿ ತಿರಸ್ಕರಿಸಿರುತ್ತಾನೆ. ಏಕೆಂದರೆ, ಅದರಲ್ಲಿ ಸಮುದ್ರ ವರ್ಣನಾ ವಿಷಯಕವಾದ ಪ್ರಸ್ತಾವನೆಯನ್ನೇ ಮಾಡದೆ ದುಮ್ಮನೆ ಕಥಾ ಪ್ರಾರಂಭವನ್ನು ಮಾಡಿರುತ್ತಾನೆ. ಇದನ್ನು ನೋಡಿದರೆ ಪ್ರತಿಭಾ ಶಕ್ತಿ ಸಂಪನ್ನರೂ, ವಾಗ್ಗುಂಫವುಳ್ಳ ಕವಿಗಳೂ, ಲಾಕ್ಷಣಿಕರ ಬಂಧನಕ್ಕೆ ಸಿಲುಕಲಾರರು

ಎಂದು ತೋರುತ್ತದೆ. ಅಂತು, ಸಮುದ್ರ ವರ್ಣನೆಯ ಅವಸ್ಥೆಯು ಅದರ ನೈಜ ಸ್ಥಿತಿಯಿಂದ ಬೇರೆಯಾಯಿತು. ದೃಷ್ಟಿಯನ್ನು ಒಂದೇ ಮಾರ್ಗದಲ್ಲಿಟ್ಟು ಅತ್ತಿತ್ತ ತಿರುಗಿ ನೋಡದೆ ರುಜುವಾದ ದಾರಿಯಲ್ಲಿಯೇ ನಡೆಯುವುದು ಕುದುರೆಯ ತಪ್ಪೋ ಅಥವಾ ಕಣ್ಣಿನ ಪಕ್ಕವನ್ನು ಮುಚ್ಚಿಕೊಂಡಿರುವ ಮುಚ್ಚಳದ ತಪ್ಪೋ? ವಿಚಾರಮಾಡಿ ನೋಡಿದರೆ ಆಚ್ಛಾದನದ ತಪ್ಪೆಂದೇ ತೋರುವುದು. ಈ ತೆರೆಯೇ ಲಾಕ್ಷಣಿಕರ ನಿಯಮವು. ಉದಾಹರಣೆಗಾಗಿ ಕೆಲವು ಕವಿಗಳ ಸಮುದ್ರ ವರ್ಣನೆಯ ರೀತಿಯನ್ನು ತೋರಿಸಿ ಅವರ ಸಂಕುಚಿತವಾದ ಮಾರ್ಗಕ್ಕೆ ಬಂಧ ಮೋಕ್ಷವು ಎಲ್ಲಿ ಉಂಟಾಗಲು ಪ್ರಾರಂಭವಾಯಿತೋ ಅದನ್ನೂ ಸೂಚಿಸಲಾಗುತ್ತದೆ.—

ಮಿಳಿರ್ವರುಣ ಧ್ವಜಂಗಳ ನೆೞಲ್ಗಳನೊಂದೆರೆಗೆತ್ತು ವಾರ್ಧಿಯೊಳ್
ಪೊಳೆವೆಳವಾಳೆಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ।
ಗಳೆ ತಿಮಿಯಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ
ಗಿಳಮುಮನಾ ತಿಮಿಂಗಿಳಗಿಳಂ ತವೆ ನುಂಗಿದುದೊಂದು ತಾಣದೊಳ್ ॥

—ಗುಣವರ್ಮ

ಬಲ ವೈರಿ ಸ್ಫಾರ ವಜ್ರಾಧಿಕ ಭಯ ಚಕಿತೋದ್ಭ್ರಾಂತ ಮೈನಾಕ ಗೋತ್ರಾ
ಚಲ ಪಕ್ಷತ್ರಾಯಿ ಸಿಂಧು ಪ್ರಿಯತಮನತಿ ಗಂಭೀರನಂತರ್ನಿವಿಷ್ಟಾ।
ಖಿಲ ಲೋಕಂ ನಕ್ರ ಚಕ್ರ ಸ್ಫುರದುರುತರ ಯಾದಶ್ಚರಾಧ್ಯಾಸಿತ ಪ್ರೋ
ತ್ಕಲಿತಾಂಭಃ ಕುಂಭಿ ಕುಂಭೋನ್ಮದ ರಸ ವಿಲಸತ್ಕ್ಷೋಭ ರೌದ್ರಂ ಸಮುದ್ರಂ ॥

—ದುರ್ಗಸಿಂಹ

ವಿಲಸತ್ಕಲ್ಲೋಲ ಮಾಲಾ ಪ್ರತಿಹತ ವಿತತ ಪ್ರೋಚ್ಚಳಚ್ಛೈಳ ಕೋಲಾ
ಹಲಿತೋದ್ಯತ್ಫೇನ ನಾನಾ ಕರಿ ಮಕರ ವಿಪುಚ್ಛ ಪ್ರಹಾರ ಪ್ರತಾಪೋ।
ದ್ಗಳಿತಾನಂತ ಪ್ರರತ್ನ ಪ್ರಬಲ ಜಲಚರಾನೀಕ ಗಂಭೀರ ಭೀಮೋ
ಜ್ಜ್ವಳರಾವೋದ್ಭೂತ ತಪ್ತೋನ್ಮಿಳಿತ ಘುಳು ಘುಳು ಧ್ವಾನಮಂಭೋನಿಧಾನಂ ॥

—ಹರಿಹರ

ಪವಳದ ಬೀಡು ಕಂಬುಗಳ ನಾಡು ಜಲೇಶನ ಜೋಡು ನಾಡೆಯುಂ
ಕವಿಗಳ ಲೀಲೆ ಗಂಗೆಗಿವಿಯೋಲೆ ವನೇಭವ ಶಾಲೆ ಪದ್ಮಸಂ।
ಭವನ ನೆಗೞ್ತೆ ಪೂರ್ವದ ಪೊಗೞ್ತೆ ಕುದುರ್ಗಳಗೞ್ತೆ ಮಿಕ್ಕ ಬಾ
ಡವ ಶಿಖಿಗೋಗರಂ ಮಣಿಗಳಾಗರಮೆಂದೆಸೆದಿತ್ತು ಸಾಗರಂ ॥

—ಮಲ್ಲಿಕಾರ್ಜುನ

ವಿದ್ರುಮ ವನಾವೃತಂ ವಿದ್ರುಮ ವನಾವೃತಂ
. . . .
ಅಂಭೋಧಿಯುಜ್ಜೃಂಭಿಕುಂ ॥

—ಪದ್ಮಣಾಂಕ

ಅಂಭಃ ಕುಂಭೀನ ಕುಂಭೀನ ಸಮಕರ ಮಹಾ ಕೂರ್ಮ
................................|
....
..............................ಸಮುದ್ರಂ ||

—ಷಡಕ್ಷರಿ

ಸುಳಿದೊಂದು ಮೀನ ಮೀನನ್ನುಂಗಿತಾ ಮೀನನಾ
ಗಳೆ ನುಂಗಿತೊಂದು ಮೀನಾ ಮೀನ ನುಂಗಿದುದು
ಬಳಿಕೊಂದು ಮೀನದಂ ಮತ್ತೊಂದು ಮೀನ್ನುಂಗಿತಾ ಮೀನ ನುಂಗಿತೊಂದು |
ತೊಳಲುತೊಂದೊಂದನೊಂದಿಂತು ನುಂಗಲ್ ತಿಮಿಂ
ಗಿಲವೆಲ್ಲಮಂ ನುಂಗುತಿರ್ಪುದೆನೆ ಬೆದರಿ ಮೀ
ನ್ಗಳು ತಿರುಗುತಿರ್ದವೆರಕಗಳೊಡನೆ ಮುಂ ಪೊಕ್ಕ ಗಿರಿಗಳೆಡೆಯಾಡುವಂತೆ ||

—ಲಕ್ಷ್ಮೀಶ

ಈ ವರ್ಣನೆಗಳೆಲ್ಲವನ್ನೂ ಪರಿಶೀಲಿಸಿ ನೋಡಿದಲ್ಲಿ ನಿಜವಾಗಿಯೂ ಸಮುದ್ರವನ್ನು ಈ ಕವಿಗಳು ನೋಡಿದ್ದರೋ ಇಲ್ಲವೋ ಎಂಬ ಸಂಶಯವು ತಲೆದೋರುವುದು. ಒಂದು ವೇಳೆ ಎಲ್ಲರೂ ನೋಡಿದ್ದರೆಂದು ಭಾವಿಸಿದರೆ ಸಮುದ್ರದ ಸೌಂದರ್ಯ ಸಂಸ್ಫೋಟನಗಳು ಇವುಗಳಲ್ಲಿ ಏಕೆ ರೂಪುಗೊಂಡಿಲ್ಲ? ಅಂಬುಧಿಯ ಘನ ಘೋಷವೂ, ಪರಂಪರೆಯಾಗಿ ಬರುತ್ತಿರುವ ತರಂಗ ಮಾಲೆಗಳೂ, ಉಬ್ಬಿ ಮೇಲಕ್ಕೆ ಏಳುತ್ತಿರುವ ಫೇನ ವಿತಾನವೂ—ಇವುಗಳೆಲ್ಲವೂ ಎಲ್ಲಿ ಹೋದುವು? ಸಮುದ್ರವನ್ನು ನೋಡುವುದರಿಂದ ಉಂಟಾಗುವ ಸಂತೋಷದ ಗುರುತುಗಳು ಈ ವರ್ಣನೆಗಳಲ್ಲಿ ಎಲ್ಲಿಯಾದರೂ ಇವೆಯೆ? ಮೊದಲನೆಯ ಗುಣವರ್ಮನ ಸಮುದ್ರವರ್ಣನಾ ಪದ್ಯವನ್ನಂತೂ ಎರಡನೆಯ ನಾಗವರ್ಮನು ತನ್ನ ಕಾವ್ಯಾವಲೋಕನದ ನಿಯಮಾರ್ಥ ಪ್ರಕರಣದ ಮೊದಲನೆಯ ಸೂತ್ರಕ್ಕೆ ಉದಾಹರಣೆಯಾಗಿ ಕೊಟ್ಟಿದ್ದಾನೆ; ಎಂದಮೇಲೆ, ಆತನ ಸಮುದ್ರವರ್ಣನೆಯು ಲಾಕ್ಷಣಿಕರ ಮತವನ್ನು ಸಂಪೂರ್ಣವಾಗಿ ಅನುಸರಿಸುತ್ತದೆ ಎಂದು ಹೇಳಿದಹಾಗಾಯಿತು. ದುರ್ಗಸಿಂಹನ ವರ್ಣನೆಯಲ್ಲಿ 'ತಿಮಿಂಗಿಳಗಿಳ'ಗಳ ಪ್ರಸ್ತಾಪವೇನೂ ಕಂಡುಬರುವುದಿಲ್ಲ. ಆದರೆ ಆತನ ವರ್ಣನೆಯ ಶಬ್ದ ಬಂಧವನ್ನು ನೋಡಿದರೆ ಆತನೂ ಲಾಕ್ಷಣಿಕರ ಮತಾನುಯಾಯಿಯಾಗಲು ಸಂಪೂರ್ಣ ಮನಸ್ಸುಳ್ಳವನಾಗಿರುವನೆಂದು ಹೇಳಬಹುದು. ಹರಿಹರ ಪದ್ಮಣಾಂಕರೂ ಇದೇ ವರ್ಗಕ್ಕೆ ಸೇರಿದವರು. ಷಡಕ್ಷರಿ ಲಕ್ಷ್ಮೀಶರು ಆಲಂಕಾರಿಕರ ನಿಯಮಗಳನ್ನೂ ಒಪ್ಪುವರು, ಸ್ವಲ್ಪ ಸ್ವಾತಂತ್ರ್ಯವನ್ನೂ ವಹಿಸುವರು. ಈ ಇಬ್ಬರು ಕವಿಗಳು ಸ್ವಲ್ಪ ಆಧುನಿಕರು. ಇವರ ಮನಸ್ಸಿನಲ್ಲಿ ಸಾಂಪ್ರದಾಯಿಕವಾಗಿ ಬಂದಿರುವ ನಿಯಮಗಳ ಶೃಂಖಲೆಯನ್ನು ಭೇದಿಸಬೇಕೆಂಬ ಇಚ್ಛೆಯು ಇದ್ದಹಾಗೆ ತೋರುತ್ತದೆ. ಈ ಅಭಿಲಾಷೆಯು ಹೃದಯದಲ್ಲಿಯೇ ಭೀತಿಯಿಂದ ಕೊನೆಗಂಡಹಾಗಿದೆ. ಆದರೂ ಮುಂದೆ ಬರುವ ಕವಿಗಳಿಗೆ ಇವರು

ಮಾರ್ಗ ಲೇಶವನ್ನು ಮಾತ್ರ ತೋರಿಸಿಕೊಟ್ಟಿದ್ದಾರೆ. ಉದಾಹರಣೆಗಾಗಿ, ಮುಂದೆ ಬರುವ ಕವಿಯ ವರ್ಣನೆಯ ಜೊತೆಗೆ ಹೋಲಿಸುವುದಕ್ಕೆ ಷಡಕ್ಷರಿಯ ಸಮುದ್ರ ವರ್ಣನೆಯಿಂದ ಎರಡು ಪದ್ಯಗಳನ್ನು ಕೊಟ್ಟಿದೆ.—

ಎನ್ನೊಳ್ಪುಟ್ಟಿದ ಚಂದ್ರನಿಂದೆ ಪಡೆಗುಂ ಸಸ್ಯಾಳಿ ಸಂಪತ್ತನಂ
ತೆನ್ನೊಳ್ಪುಟ್ಟಿದ ಲಕ್ಷ್ಮಿಯಿಂದೆ ಪಡೆಗುಂ ಸೌಭಾಗ್ಯಮಂ ಧಾತ್ರಿ ಮೇ।
ಣೆನ್ನೊಳ್ಪುಟ್ಟಿದ ವಸ್ತುವಿಂದೆ ಪಡೆದಂ ಸರ್ವಾರ್ಥಮಂ ಜಿಷ್ಣು ತಾ
ನೆನ್ನೊಳ್ಪೇರ್ಸಿರಿಯಾವನೆಂದುಲಿವವೋಲುದ್ಘೋಷಿಕುಂ ಸಾಗರಂ ॥

ಅಳಿಯಂ ಪೂಗಣ್ಣನೆನ್ನಾ ಮಗಳೆ ಚಪಲೆ ಪುತ್ರಂ ಕರಂ ರಾಜಯಕ್ಷ್ಮ
ಕುಳನೆನ್ನ ರತ್ನಮಂ ನಿರ್ಜರರೆ ಕವರ್ದರೆನ್ನೊಳ್ವಿಷಂ ಪುಟ್ಟಿತೆನ್ನಂ।
ಕಳಶಪ್ರೋದ್ಭೂತನಂದೀಂಟಿದನಕಟ ಮಹಾ ಭಂಗಮಂ ತಾಳ್ದಿನೆಂ
ದೊಳಗಂಭೋರಾಶಿ ಚಿಂತಾಗ್ನಿಯುನೆ ತಳೆದವೋಲಾರ್ದ್ರಸಂತಪ್ತಮಿರ್ಕುಂ ॥

—ಷಡಕ್ಷರಿ

ಈ ಪದ್ಯಗಳನ್ನು ಓದಿದ ಕ್ಷಣವೇ ೧೭ನೆಯ ಶತಮಾನದ ಪ್ರಸಿದ್ಧರಾದ ಕವಿಗಳಲ್ಲಿ ಚಿಕುಪಾಧ್ಯಾಯನನ್ನುಳಿದು ಮಿಕ್ಕವರು ಸ್ವಾತಂತ್ರ್ಯವನ್ನು ಬಯಸಿದರೆಂಬುದು ವ್ಯಕ್ತವಾಗದಿರಲಾರದು. ಈ ವಿಷಯವನ್ನು ಇನ್ನೂ ಪುಷ್ಟೀಕರಿಸುವುದಕ್ಕಾಗಿ ಲಕ್ಷ್ಮೀಶನ ವರ್ಣನೆಯಿಂದ ಒಂದು ಪದ್ಯವನ್ನು ಉದಾಹರಿಸಿದೆ.—

ಮುನಿ ಮುನಿದು ಪೀರ್ದುದಂ ರಾಜವಂಶ ಕುಠಾರ
ಕನ ಕನಲ್ಕೆಗೆ ನೆಲಂ ಬಿಟ್ಟುದಂ ರಘುಜ ರಾ
ಮನ ಮನದ ಕೋಪದುರುಬೆಗೆ ಬಟ್ಟೆಗೊಟ್ಟುದಂ ಬಡಬಾನಲಂ ತನ್ನೊಳು।
ದಿನ ದಿನದೊಳವಘಡಿಸುತಿರ್ಪುದಂ ಬಹಳ ಜಡ
ತನ ತನಗೆ ಬಂದುದಂ ಭಂಗಮೆಡೆಗೊಂಡುದಂ
ನೆನೆ ನೆನೆದು ನಿಟ್ಟುಸಿರ್ವಿಟ್ಟು ಸುಯ್ಯಂತುದಧಿ ತೆರೆ ಪೆರ್ಚುಗೆಯೊಳಿರ್ದುದು ॥

ಷಡಕ್ಷರಿಯ ವರ್ಣನೆಯನ್ನೂ ಲಕ್ಷ್ಮೀಶನ ವರ್ಣನೆಯನ್ನೂ ಓದುತ್ತ ಹೋದರೆ ಪದ್ಯದ ಕೊನೆಯವರೆಗೂ ಇದು ಸಮುದ್ರ ವರ್ಣನೆ ಎಂಬ ಭಾವನೆಯು ಬೇಗ ಉಂಟಾಗುವುದಿಲ್ಲ. ಕೊನೆಯಲ್ಲಿ, "ಉದ್ಘೋಷಿಕುಂ ಸಾಗರಂ" ಎಂಬ ಮಾತುಗಳಿಂದ ಸಮುದ್ರದ ನಿಜವಾದ ಸ್ಥಿತಿಯು ಜ್ಞಾಪಕಕ್ಕೆ ಬರುತ್ತದೆ. ಹೀಗೆಯೇ, ಇನ್ನೂ ಆಧುನಿಕರಾದ ಲಕ್ಷ್ಮೀನಾರಣಪ್ಪನವರ ಶ್ರೀರಾಮ ಪಟ್ಟಾಭಿಷೇಕಾಂತರ್ಗತವಾದ ಸಮುದ್ರ ವರ್ಣನೆಯೂ ಕೂಡ. ಈ ಕವಿಯು ಹಿಂದಿನ ಕವಿಗಳಂತೆ ಕ್ಲಿಷ್ಟ ಪದ ಭೂಯಿಷ್ಠವಾದ ಪದ್ಯಗಳಿಂದ ಸಮುದ್ರ ವರ್ಣನೆಯನ್ನು ಮೊದಲು ಮಾಡದೆ, "ತೆಂಗಡಲಧಿಕ ಘೋಷದಿಂ ಕಂಗೊಳಿಸಿತು" ಎಂದು ಪೂರ್ವಭಾವಿಯಾಗಿಯೇ ಹೇಳಿ ವಾಚಕರ ಮನಸ್ಸಿನಲ್ಲಿ ಒಂದು ವಿಸ್ತಾರವಾದ ಚಿತ್ರವನ್ನು

ಕಲ್ಪಿಸುತ್ತಾನೆ; ಈ ಚಿತ್ರವನ್ನು ಇನ್ನೂ ವಿಶದೀಕರಿಸಲು ಮುಂದೆ ಪ್ರಯತ್ನ ಪಡುತ್ತಾನೆ. ಮೊದಲು ತೆರೆಗಳು, ಆಮೇಲೆ ಮಹಾನಿನಾದಗಳು, ಆಮೇಲೆ ಅವಿರತವಾದ ಸಾಗರದ ಅಲ್ಲಕಲ್ಲೋಲವು, ಆಮೇಲೆ ಅಬ್ಧಿಯ ಘೋರತ್ವವು ಮತ್ತೂ ಗರ್ಜಿಸುವಿಕೆಯೂ—ಇವಿಷ್ಟೂ, ಸಾಗರವು ತನ್ನ ನೈಜವಾದ ಸ್ಥಿತಿಯನ್ನು ಬಿಟ್ಟು ಮನಸ್ಸಿಗೆ ಭೀತಿಯನ್ನುಂಟುಮಾಡುವ ರೂಪವನ್ನು ಧರಿಸಿರುವಾಗ ಇರುವ ಚಿತ್ರವು. ಮುಂದೆ ಶಾಂತಿಮಯವಾದ ಸಾಗರದ ಚಿತ್ರವನ್ನು ಬರೆಯಲು ತೊಡಗುತ್ತಾನೆ: ಮಂದಮಾರುತನ ಚಲಿಸುವಿಕೆಯಿಂದುಂಟಾಗುವ ಕಿರುದೆರೆಗಳು, ಲೋಕೋಪಕಾರಕವಾದ ಹೆಮ್ಮೆಯನ್ನು ತೋರಿಸುವ ಆ ಸಾಗರದ ಮುಖಭಾವವು, ಶಾಂತಿಮಯರಾಗಿ ಆನಂದ ಜ್ಞಾನ ಲಾವಣ್ಯವನ್ನುಳ್ಳವರು ಉನ್ನತ್ತ್ವವಸತಿಗಳಲ್ಲಿ ಸಂತೋಷ ದುಃಖಗಳನ್ನು ಹೊಂದದೆ ಇರುವವರೆಂದು ತೋರಿಸುವ ಆ ಸಾಗರದ ಸ್ಥಿತಿಯೂ—ಇವೆಲ್ಲವೂ ಒಂದಾದಮೇಲೊಂದು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಆಮೇಲೆ ಸಮುದ್ರಕ್ಕೂ ಜೀವನ ಶರಧಿಗೂ ಸಾಮ್ಯವನ್ನು ಕಲ್ಪಿಸಿ ಸಾಹಿತ್ಯಕ್ಕೂ ಜೀವನಕ್ಕೂ ಇರುವ ಸಂಬಂಧವನ್ನು ತಕ್ಕ ಮಟ್ಟಿಗೆ ಈ ಕವಿಯು ಸೂಚಿಸಿರುತ್ತಾನೆ. ಒಟ್ಟಿನಲ್ಲಿ, ವರ್ಣನೆಯೆಲ್ಲವನ್ನೂ ಓದಿ ಮುಗಿಸಿದ ಮೇಲೆ ಕವಿಯು ನಿಜವಾಗಿಯೂ ಸಮುದ್ರವನ್ನು ನೋಡಿದ್ದನು ಎಂಬ ಭಾವನೆಯು ತಲೆದೋರಿ ಪುಷ್ಟಿಗೊಳ್ಳುವುದು. ಮುಂದುಗಡೆ ವಿಸ್ತಾರವಾದ ಮತ್ತು ಗಂಭೀರವಾದ ಆಕೃತಿಯಿಂದ ಕೂಡಿರುವ ಸಮುದ್ರ, ದಡದ ಮೇಲೆ ಕವಿತಾಶಕ್ತಿಯುತನಾದ ಒಬ್ಬ ಮನುಷ್ಯನು ಏಕಾಕಿಯಾಗಿ ನಿಂತಿರುವನು; ಅವನ ಮನಸ್ಸಿನಲ್ಲಿ ಉಂಟಾಗುವ ಆಲೋಚನಾ ತರಂಗಗಳ ಮತ್ತು ಅವನ ಹೃದಯದಲ್ಲಿ ಜನಿತವಾದ ಭಾವೋದ್ರೇಕಗಳ ಆಳವನ್ನು ಬಲ್ಲವರಾರು? ಆತನು ಅವುಗಳನ್ನು ಎಷ್ಟೇ ಸಂಪೂರ್ಣವಾಗಿ ಮಾತಿನಲ್ಲಿ ಶೇಖರಿಸಿಟ್ಟರೂ ಅತ್ಯಲ್ಪವಾದ ಹಾಗಾಗುವುದು. ಆ ಉದ್ರೇಕಗಳು ಕವಿಯ ಸಂಸ್ಕಾರಕ್ಕೆ ತಕ್ಕ ಹಾಗೆ ಇರುವುವು. ಲಕ್ಷ್ಮೀನಾರಣಪ್ಪನವರು ಈ ಭಾವಭಂಡಾರದ ಅಮೂಲ್ಯವಾದ ಒಡವೆಗಳನ್ನು ಈ ವರ್ಣನೆಯಲ್ಲಿ ಶೇಖರಿಸಿಟ್ಟಿರುವರೆಂದರೆ ಅತಿಶಯೋಕ್ತಿಯಾಗಲಾರದು. ಕರ್ಣಾಟಕ ಸಾಹಿತ್ಯದಲ್ಲಿ ಇಷ್ಟು ಹೃದಯಂಗಮವಾದ ವರ್ಣನೆಯು ಇನ್ನೆಲ್ಲಿಯೂ ದೊರಕಲಾರದು. ಪೂರ್ವೋಕ್ತವಾದ ಗುಣಾವಳಿಗಳ ಯಾವುದಾದರೂ ಒಂದಕ್ಕೆ ಉದಾಹರಣೆಯನ್ನು ಕೊಡಬೇಕೆಂದು ಹೊರಟರೆ ಯಾವ ಪದ್ಯವನ್ನು ಉದಾಹರಿಸಬೇಕೊ ತೋರುವುದಿಲ್ಲ. ಆ ವರ್ಣನೆಯ ಸುಮಾರು ಇಪ್ಪತ್ತು ಪದ್ಯಗಳನ್ನು ಪುನಃಪುನಃ ಓದಿದರೆ ಮನಸ್ಸಿಗೆ ತೃಪ್ತಿಯುಂಟಾಗುವುದು.

ಈ ಕವಿಯು ಪ್ರತಿಭಾ ಶಕ್ತಿಯುಳ್ಳವನೂ ಧೈರ್ಯವಂತನೂ ಆಗಿರುತ್ತಾನೆ. ಈತನು ಲಾಕ್ಷಣಿಕರ ನಿಯಮಗಳನ್ನು ಬಹು ಸುಲಭವಾಗಿ, ಅಲ್ಲವೆ ಸಂಪೂರ್ಣವಾಗಿ, ಉಲ್ಲಂಘಿಸಲು ಹೊರಟಿರುತ್ತಾನೆ. ಅಧುನಿಕ ಕವಿವರ್ಯರೊಬ್ಬರು ಹೇಳಿರುವ

ಹಾಗೆ, "ಈತನು ನೂತನ ಮಾರ್ಗವನ್ನು ಹುಡುಕಲಾರಂಭಿಸಿದ ಕವಿ." ಈ ಕವಿಯ ಇಷ್ಟು ಧೈರ್ಯಯುಕ್ತವಾದ ಉದ್ಯಮದ ಫಲವೇನೆಂದರೆ, ಲಾವಣ್ಯಯುಕ್ತವಾದ ಕಲಾವಸ್ತುವು ನಮಗೆಲ್ಲರಿಗೂ ಉಪಲಭ್ಯವಾಗಿರುವುದೇ. ಹೀಗೆ ಕಾಲಕ್ರಮೇಣ ಸಮುದ್ರ ವರ್ಣನೆಯಲ್ಲಿ ಕವಿಜನಗಳ ಮನಸ್ಸಿನಲ್ಲಿ ಒಂದು ವಿಧವಾದ ಸ್ವಾತಂತ್ರ್ಯತೆಯೂ ನೂತನತ್ವವೂ ಉದ್ಭವಿಸಿ ಅದೇ ಮಾರ್ಗದಲ್ಲಿಯೇ ಕವಿಗಳು ಸ್ವಲ್ಪ ದೂರ ಮುಂದುವರಿದಿರುತ್ತಾರೆ. ಆದರೆ ಸಮುದ್ರ ವರ್ಣನೆಯು ಇನ್ನೂ ಹೆಚ್ಚು ಸ್ವಾಭಾವಿಕವಾಗಿರಬಹುದಾಗಿದ್ದಿತು; ಇನ್ನೂ ಹೆಚ್ಚು ಸೊಗಸನ್ನು ಹೊಂದಬಹುದಾಗಿದ್ದಿತು ಎಂಬ ಅಭಿಪ್ರಾಯವು ಬೇರೆ ವಾಚಕರ ಮನಸ್ಸಿನಿಂದ ದೂರವಾಗುವಂತಿಲ್ಲ. ಇದುವರೆಗೆ ಕಂಡುಬರುವ ನೂತನತ್ವದ ಅಂಕುರವು ಷಡಕ್ಷರಿಯಲ್ಲಿಯೋ ಲಕ್ಷ್ಮೀಶನಲ್ಲಿಯೋ ಹುಟ್ಟಿತೆಂದು ಹೇಳಬಹುದು. ಆ ಅಂಕುರದ ಪುರೋಭಿವೃದ್ಧಿಯನ್ನೇ ಲಕ್ಷ್ಮೀನಾರಣಪ್ಪನವರು ಬಯಸಿದ ಹಾಗೆ ತೋರುತ್ತದೆ. ಇವರ ವರ್ಣನೆಯು ಮಾತ್ರ ಸಮಯೋಚಿತವಾಗಿದೆ. ಓದುತ್ತ ಹೋದಹಾಗೆಲ್ಲ ಇತಿಹಾಸಾಂಶಗಳು ಜ್ಞಾಪಕಕ್ಕೆ ಬರುತ್ತವೆ. ಉದಾಹರಣೆಗಾಗಿ, "ತಪ್ಪನೆಸಗಿದೆ ಹಿಂದೆ ಜಡಭರಿತನಾಗಿ," "ಹರಹರಾ ಕಾಲವುನ್ನೆಂತಿಹುದೊ" ಎಂಬ ಪದ್ಯಗಳನ್ನು ನೋಡಬಹುದು. ಇದು ಷಡಕ್ಷರಿ ಲಕ್ಷ್ಮೀಶರ ಮಾದರಿಯನ್ನು ಅನುಸರಿಸಿರುವುದರಿಂದ ಉದ್ಭವವಾದುದೆಂದು ಹೇಳಬಹುದು. ಒಟ್ಟಿನಲ್ಲಿ ನಮ್ಮ ಕವಿಗಳ ಸಮುದ್ರ ವರ್ಣನಾ ರೀತಿಯನ್ನು ಸಮಾಲೋಚಿಸಲಾಯಿತು.

(೨) ಋತು ವರ್ಣನೆ—೧. ವಸಂತ ಋತು ವರ್ಣನೆ

ಉದಯಾದಿತ್ಯನಿಂದ ನಿರೂಪಿತವಾದ ಪ್ರಕೃತಿ ವರ್ಣನೆಗಳಲ್ಲಿ ಎರಡನೆಯದು ಋತು ವರ್ಣನೆ. ಮಲ್ಲಿಕಾರ್ಜುನನು ಋತು ವರ್ಣನೆಯ ವಿಷಯದಲ್ಲಿ ಹೀಗೆ ಹೇಳುತ್ತಾನೆ:—

ತರು ಮೃಗ ಪಕ್ಷಿ ಮೇಘ ಜಳ ವಾಯು ದಿಶಾ ಜನ ಕಾಯಭೋಗ ಭಾ
ಸ್ಕರ ವಿಧು ರಾತ್ರಿ ವಾಸರ ಸುರಾಲಯವರ್ಬಿ ರತೋಪಚಾರ ಸಿಂ।
ಧುರ ಮದ ಜನ್ಮ ಯಾನ ಮದನೋದಯ ನಸ್ಯ ವಿಶೇಷ ಭಾವದೊಳ್
ಪರಿಣತನಪ್ಪವಂಗೆ ಋತು ವರ್ಣನ ವಿಸ್ತರವೊಪ್ಪಿ ತೋಱುಗುಂ ॥

ನಮ್ಮ ಕವಿಗಳು ಋತು ವರ್ಣನೆಯಲ್ಲಿ ತೋರಿಸಿರುವ ಶಕ್ತಿಯು ಆಶ್ಚರ್ಯಾವಹವಾಗಿದೆ. ಯಾವ ಕವಿಯೂ ಋತು ವರ್ಣನೆಯನ್ನು ಮಾಡದೆ ಬಿಟ್ಟಿಲ್ಲ; ಒಂದೊಂದು ಋತುವನ್ನಾದರೂ ಉದ್ದೇಶಿಸಿ ವರ್ಣಿಸದಿದ್ದರೆ ಅವರ ಮನಸ್ಸಿಗೆ ತೃಪ್ತಿಯುಂಟಾದ ಹಾಗೆ ಕಾಣುತ್ತಿರಲಿಲ್ಲ. ಋತು ವರ್ಣನೆಯನ್ನು ಮಾಡುವುದಕ್ಕೆ ಕಾವ್ಯದ ಕಥಾ ಭಾಗದಲ್ಲಿ ಸನ್ನಿವೇಶವು ದೊರಕದಿದ್ದರೂ ಅದನ್ನು ಕಲ್ಪಿಸಿಕೊಂಡು, ಋತುವಿನ ಆಗಮನವು ತನ್ನ ಸಂಗಡ ತರುತ್ತಿದ್ದ ಸಂತೋಷ

ವನ್ನೋ, ಅಥವಾ ಸ್ಫೂರ್ತಿಯನ್ನೋ ಮನೋಹರವಾದ ಮಾತುಗಳಲ್ಲಿ ನಮ್ಮ ಕವಿಗಳು ಸಂಗ್ರಹಿಸಿಟ್ಟಿರುವರು. ಅವುಗಳನ್ನು ಓದಿದರೆ ನಮ್ಮಲ್ಲಿ ಕೆಲವು ಪ್ರಸಿದ್ಧ ಕವಿಗಳ ಮಹತ್ವವಂತಹುದೆಂಬುದನ್ನು ಧಾರಾಳವಾಗಿ ಹೇಳಬಹುದು. ಇಲ್ಲಿ ಕವಿಗಳ ವರ್ಣನೆಗಳೂ ಬಹು ಮಟ್ಟಿಗೆ ಏಕ ರೂಪವಾಗಿದ್ದರೂ ಕೆಲವರಲ್ಲಿ ಸಂಪೂರ್ಣವಾದ ಎಚ್ಚರಿಕೆಯನ್ನು ಹೊಂದಿರುವ ಜೀವನದ ಚಲನವು ಕಂಡು ಬರುವುದು. ವಸಂತ ಋತುವು ನಮ್ಮ ಕವಿಗಳ ಹೃದಯಾಂತರದಲ್ಲಿ ಪೂಜೆಗೊಳ್ಳುತ್ತಿರುವ ಸೌಂದರ್ಯ ದೇವತೆಯು. ಮಾಗಿಯ ದೇಹ ಕಂಪನವನ್ನುಂಟುಮಾಡುವ ಚಳಿಯ ಜಂಜಡವು ಆಗ ತಾನೆ ಮಾಯವಾಗಲುಪಕ್ರಮಿಸಿದೆ. "ತರು ಗುಲ್ಮ ಲತಾ ವನಸ್ಥಳಗಳೆಲ್ಲ"ವೂ ವಸಂತ ಋತುವಿನ ಪ್ರಥಮ ಪ್ರವೇಶದಿಂದ ಹಸುರಾದ ಹೊಸ ಹೂವಿಕೆಯಿಂದ ಶೋಭಿಸಲು ತೊಡಗಿವೆ; ಪಕ್ಷಿಗಳು ಉಲ್ಲಾಸದಿಂದ ಅಖಿಲ ದಿಕ್ಕುಗಳನ್ನೂ ಗಾನಮಯವಾಗಿ ಮಾಡುತ್ತಿವೆ. ಇಂತಹ ಸೊಬಗೂ ಸೌಂದರ್ಯವೂ ಯಾವನಲ್ಲಿ ತಾನೆ ಉತ್ಸಾಹವನ್ನುಂಟುಮಾಡುವುದಿಲ್ಲ? ಇನ್ನು, ಕವಿಗಳ ಮನಸ್ಸಿನಲ್ಲಿ ಉಂಟಾಗುವ ಭಾವ ಕಲ್ಲೋಲಗಳ ಪರಿಯನ್ನು ಬಲ್ಲವರುಂಟೆ? ಹೃದಯವು ಉಲ್ಲಾಸದಿಂದ ಪರಿಪೂರ್ಣವಾಗಿ ಸಡಗರದಿಂದ ವಿಶ್ವ ನಿರ್ಮಾಪಕನನ್ನು ಅರಸಲು ಹೊರಟು ಅನಂತವಾದ ಉತ್ಸಾಹ ಸಮುದ್ರವನ್ನು ಸೇರಲು ಎಷ್ಟು ತವಕಿಸುವುದೊ! ಆದುದರಿಂದಲೇ ವಸಂತ ಋತುವನ್ನು ವರ್ಣಿಸದೆ ಇರುವ ಕವಿಗಳಿಲ್ಲ; ಅದರ ಸೊಗಸನ್ನು ನೋಡಿ ಇಹಲೋಕದ ವ್ಯಾಪಾರಗಳನ್ನು ಮರೆಯದೆ ಇರುವ ಗಾನಲೋಲರಿಲ್ಲ. ಈ ಉತ್ಸಾಹ ಸೂಚಕವಾದ ಜೀವನದ ಹೊಸ ಹುರುಪನ್ನು ತೋರಿಸಲು ನಮ್ಮ ಕವಿಜನಗಳಿಂದ ಕೆಲವು ವಸಂತ ಋತು ವರ್ಣನಾ ಪದ್ಯಗಳನ್ನು ಉದ್ಧರಿಸಿ ಬರೆದಿದೆ.—

ಎಳವಿಸಿಲೀಗಲೀಗಳೆ ಮುದಿರ್ದುದು ಚೂತ ಕುಜಾತವೀಗಳೀ
ಗಳೆ ನನೆದೋಱಿತಿಂದೊಳದಿನುಣ್ಮಿದ ಷಟ್ಪದ ವೃಂದವೀಗಳೀ।
ಗಳೆ ಮೊರೆದತ್ತು ಚಂದನದ ತಳ್ಕಬಲಾ ನಿಕರಕ್ಕದೀಗಳೀ
ಗಳೆ ನೆಗಳ್ದಿತ್ತಲೀ ಪುಗಿಲದಾಗಲೆವೇಡ ವಸಂತರಾಜನಾ ॥

—ಆದಿ ಪಂಪ

ಸಕಲ ಮಧುವ್ರತ ಪ್ರಚಯಮೆಂಬ ಪಿಕಾವಳಿಯೆಂಬ ಸದ್ವಚ
ಶ್ಶುಕ ಕುಳಮೆಂಬ ಮೆಚ್ಚಿಸಿದ ಗಾಯಕ ಸತ್ಪ್ರತಿಹಾರ ವೃತ್ತ ಪಾ।
ಠಕ ತತಿಗಿತ್ತನಗ್ಗಳದ ಮಾವಿನ ಪೂವಿನ ಮಾವಿನಂಕುರ
ಪ್ರಕರದ ಮಾವಿನೊಳ್ಮಿಡಿಯ ನಲ್ಮೆಯ ಜೀವಿತಮಂ ಬಸಂತದೊಳ್ ॥

—ಪೊನ್ನ

ಎಳವೆಱೆ ದಾಡೆ ಕೆಂದಳಿರೆ ನಾಲಗೆ ಮಾಮರದಳ್ಳಿಗೊಂಬಿನೊಳ್
ಮಿಳಿರ್ವೆಳವಳ್ಳಿ ಬಾಲಮಲರ್ದೊಂಗಲೆ ಕೇಸರಮೆಂಬಿನಂ ಮನಂ।

ಗೊಳೆ ಮಧು ಮಾಸ ಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ
ಗೊಳಿಸಿದುದುದ್ಧ ಕೀರ ಮದ ಕೋಕಿಲ ಗರ್ಜಿತ ತರ್ಜಿತಂಗಳಿಂ ॥

—ರನ್ನ

ವನಜಂಗಳ್ಪಳವೇೞ್ಕೆ ಚೂತ ಲತೆಗಳ್ನೀರೇೞ್ಕೆ ಶೀತಾಂಶು ತೊ
ಟ್ಟನೆ ಪೂರ್ವಾದ್ರಿಯನೇೞ್ಕೆ ಮನ್ಮಥ ಗಜಂ ಸೊರ್ಕೇೞ್ಕೆ ಪೊನ್ನುಯ್ಯಲಂ।
ವನಜಾತಾಕ್ಷಿಯರೇೞ್ಕೆ ಕಾಮನ ಸರಲ್ ಕೂರ್ಪೇೞ್ಕೆ ಪುಂಡ್ರೇಕ್ಷು ಚಾ
ಪನ ಚಾಪಂ ಗೊಲೆಗೇೞ್ಕೆ ಬಂದುದು ವಸಂತಂ ಸಂತತೋತ್ಸಾಹದಿಂ ॥

—ನಯಸೇನ

ಕಳಿದುದು ಮಾಗಿ ಕೂಗಿದುದು ಕೋಗಿಲೆ ಪಲ್ಲವಿಸಿತ್ತು ಮಾಮರಂ
ತಱಿವೆಳಗಾಯ್ತು ಪಾಂಥ ಜನಪ್ರೋಪರೊಳಾ ನವ ಭೋಗಮುಜ್ಜುಗಂ।
ಮೊಳೆತುವು ಕಾಮನೇಸು ಗುರಿಗಂಡುದು ತಂಡದೆ ಸಿಂದ ನಂದನಂ
ತಳೆದುವು ಕೊಡೆ ಕೆಂಪಿನ ಪಸುರ್ಪಿನ ಬೆಳ್ಪಿನ ಕರ್ಪಿನಂದಮಂ ॥

—ಹರಿಹರ

ಪೊಸ ಮಾಗೆ ಮದವಾರೆ ಮಾವಂಕುರಂದೋರೆ
ಯಸುಕೆ ತಳಿರಂ ಪೇರೆ ಲತೆ ನನೆಗಳಂ ಬೀರೆ
ಕುಸುಮ ರಜವಂ ತೂರೆ ತುಂಬಿ ಸುತ್ತಂ ಪಾರೆ ತಂಗಾಳಿ ತಂಪ ಬೀರೆ।
ಸಸಿಗೆ ಕಳೆಯೇರೆ ಕೋಕಿಲ ರವಂ ವಿಱಾರೆ ಕಾ
ಮ ಶರಂಗಳೂರೆ ವಿರಹಿಗಳ ಬಾಯಾರೆ ಮಾ
ಮಸಕದಿಂ ಬಂದನು ವಸಂತನು ವಿಯೋಗಿ ಹೃತ್ಕುಂತನು ಸುಖಾಕ್ರಾಂತನು ॥

—ರಾಘವಾಂಕ

ನವ ಪುಷ್ಪೋತ್ಕರ ಪಾಂಡು ಚೂತ ನಿವಹಂ ಶ್ವೇತಾತಪತ್ರಾಳಿ ಭೃಂ
ಗ ವಧೂ ಝುಂಕೃತಿ ಶಂಖ ಫೂತ್ಕೃತಿ ರುತಂ ಸನ್ಮಾಧವೀ ಕುಟ್ಮಳ।
ಸ್ತವಕಂ ಚಾಮರಮುದ್ಧ ಕೋಕಿಲ ರವಂ ಭೇರೀ ಘನ ಧ್ವಾನಮಾ
ಗೆ ವಸಂತಂ ಋತು ಸಾರ್ವಭೌಮ ವಿಭವಂ ಮೆಯ್ವೆತ್ತದೇಂ ಬಂದುದೋ ॥

—ಅಗ್ಗಳ

ಕ್ಷಿತಿಗತ್ಯಾನಂದಮಂ ಸಂಧಿಸಿತು ಸುರಭಿ ಮಾಸಂ ಸ್ಮರ ಶ್ರೀ ನಿವಾಸಂ।

—ಪಾರ್ಶ್ವಪಂಡಿತ

ನನೆದೋಱಿತ್ತು ದಿರ್ಗಂತಿ ಮುಂತೆ ಪನೆಗಳ್ ತೋರ್ಪಂತೆ ತೆಂಗಾಳಿ ಕೆಂ
ಗೊನರೊಳ್ ದಟ್ಟಡಿಯಿಟ್ಟುದೊಳ್ಳಗೆ ಪೊವಲ್ದತ್ತುಬ್ಬಿದೊಳ್ ಕೋಕಿಳಂ।
ಕೊನರಂ ಕರ್ಚಿ ತೊದಲ್ಚಿ ರಂಗೆಡೆದುದೆತ್ತಂ ನಂದನ ಶ್ರೀಯ ನಂ
ದನನಾನಂದನನನ್ಯಜಂಗಱುಗನಾಯ್ತಿಂತಾ ವಸಂತಾಗಮಂ ॥

—ಜನ್ನ

ಬಿರಯಿಗಳಂಜಿ ತಾೞೆ ಪಗಲಾಣ್ಮನ ಮೆಯ್ ಬಿಸುಪೇೞೆ ಮಾಗಿ ಚೆ
ತ್ತರದೊಳೆ ಪಾೞೆ ಸ್ವರ್ದೆಗೆದು ಬಿಂಕೆಗಳೂೞೆ ಕೆಸೞೆನಾೞೆ ತುಂಬಿಗಳ್ ॥
ಮೊರೆದಲರತ್ತ ಜಾೞೆ ನನೆಯಿಂ ತರದಿಂದದಿಮುರ್ಕತ್ತೆ ಪೇೞೆ ತಾ
ವರೆ ತಲೆದೋೞೆ ತೀಡಿದುದು ತೆಂಕಣ ಗಾಳಿ ಬಸಂತದೇೞ್ಗೆಯೊಳ್ ॥

—ಆಂಡಯ್ಯ

ಮಾಗಿಯನೊಕ್ಕಲಿಕ್ಕಿ ಮಕರಧ್ವಜನಾಜ್ಞೆಯನಾಂತು ಸೆತ್ತಿಯೊಳ್
ಕೋಗಿಲೆಗಿತ್ತು ನಾಲಗೆಯ ಸಂಪದಮಂ ಮದವನ್ಮದಾಳಿಗಳ್ ।
ರಾಗಿಸೆ ಬಳ್ಳಿ ಮಾವುಗಳ ಕಾವಣದೊಳ್ ನೆೞೆವೀಡುವಿಟ್ಟು ಚೈ
ತ್ರಾಗಮವೊಪ್ಪಿದತ್ತು ವಿರಹಿ ಪ್ರಕರಂ ನಡುಗುತ್ತುಮಿರ್ಪಿನಂ ॥

—ನಾಗರಾಜ

ಪರಿಯೆ ಮದವಂ ಮಾಗಿ ಕರೆಯೆ ಸೊಗಸಂ ಮಾವು
ನೆರೆಯೆ ಕಳೆವೆರ್ಚೆ ಸಸಿ ಮೆರೆಯೆ ಮಾಧವಿ ಪೂತು
ತೊರೆಯೆ ಲಜ್ಜೆಯುನವನಿ ಜರೆಯು ತಪಮಂ ಮುನಿಗಳರಿಯೆ ನನೆಗಣೆಯೋಪರಂ ।
ಮುರಿಯೆ ವಿರಹಿಯ ಗುಟ್ಟು ಬಿರೆಯೆ ಕುಸುಮೇಷು ಕುಕಿ
ಲಿರಿಯೆ ಕೋಕಿಲೆ ದುಃಖವೆರೆಯೆ ಸುಖಿಜನಕೆ ಕ
ಣ್ದೆರೆದುದು ವಸಂತ ಮಾಸಂ ಭೋಗಿ ತತಿ ಮುಖ ವಿಕಾಸಂ ಸುಖೈಕ ವಾಸಂ ॥

—ಪದ್ಮಣಾಂಕ

ಚಳಿಯೊಡ್ಡು ಜಾರೆ ತಂಗಾಳಿ ತಲೆದೋರೆ ಪೂ
ಗಳ ಕಂಪು ಮೀರೆ ಭೃಂಗಂ ನಲಿದು ಪಾರೆ ಕೋ
ಗಿಲೆಯ ದನಿ ಸಾರೆ ಮದನಂಗೆ ಬಲವೇರೆ ನದಿಗಳ್ತಾರೆ ಮಾಮರಗಳು ।
ತಳಿರುಗಳ ಪೇರೆ ವಿರಹಿಗಳ ಬಾಯಾರೆ ಸುಖಿ
ಗಳ ತಾಪಮಾರೆ ಮುನಿಗಳ ಮನಂ ಮೀರೆ ಭೂ
ವಲಯಕೆ ವಸಂತಾಗಮಂ ಮನೋರಾಗಮಂ ಮಾಡುತ್ತೆತರುತಿರ್ದುದು ॥

—ವಿರೂಪಾಕ್ಷ ಪಂಡಿತ

ಕೊನರ್ಗಳ ಗೊಂಚಲಂ ಕರ್ದುಕಿ ಚಂಚುವಿನಿಂದೆ ಸಿಡಿಲ್ದು ಸೋರ್ವ ನ
ಲ್ನೊನೆಗಳನೀಂಟಿ ಕಂಠಮುರಲುತ್ತಿರೆ ಪಾಂಥ ಧೃತಿ ಕ್ಷಮಾಧ್ರ ಭೇ
ದನ ಕುಲಿಶ ಸ್ವನಂ ವಿರಹಿ ಹಂಸ ಘನ ಧ್ವನಿಯೆಂಬಿನಂ ಕುಕಿ
ಲ್ವನುಪಮ ಕೋಕಿಲಾಳಿ ಕಲ ನಿಸ್ವನವೊಪ್ಪಿತು ಚೈತ್ರ ಮಾಸದೊಳ್ ॥

—ಚಿಕುಪಾಧ್ಯಾಯ

ಕಳಕಂಠೀ ಕಳ ನಾದ ಕಾಹಳಿ ಮಿಳದ್ಭೃಂಗಾವಳೀ ರಾವ ಮಂ
ಜುಳ ಗೀತಂ ಶುಕ ವಂದಿ ವೃಂದ ನಿನದಂ ಮಂದಾನಿಳಾಂದೋಳಿತೋ
ಜ್ವಳ ವಲ್ಲೀ ಮೃದು ಲಾಸ್ಯಮೊಪ್ಪಿರೆ ವನಶ್ರೀ ವಲ್ಲಭಂ ಸಮ್ಮದಂ
ದಳೆದೆಯ್ತಂದನಮಂದ ವೈಭವ ಯುತಂ ಚೈತ್ರ ಕ್ಷಮಾಧೀಶ್ವರಂ ॥

—ಷಡಕ್ಷರಿ

ಈಗ ಈ ವರ್ಣನೆಗಳ ವಿಮರ್ಶೆಗೆ ತೊಡಗೋಣ. ಪಂಪನ ವರ್ಣನೆಯಲ್ಲಿ ಅವ್ಯಕ್ತ ಸೌಂದರ್ಯದ ಅತಿಸ್ನಿಗ್ಧವಾದ ಛಾಯೆಯು ಕಂಡುಬರುವುದು. 'ಎಳ ವಿಸಿಲು ಈಗಲೀಗ ಮೆಲ್ಲಮೆಲ್ಲಗೆ ಹರಡಲು ತೊಡಗಿದೆ, ಈಗಲೀಗ ಮಾವಿನಮರಗಳು ಪುಷ್ಪಿತವಾಗಿ ತುಂಬಿಗಳಿಂದ ಕೂಡಿವೆ, ಈಗಲೀಗ ತುಂಬಿಗಳ ಝುಂಕಾರವು ಕೇಳಬರುತ್ತಿದೆ, ಈಗಲೀಗ ಅಬಲಾಜನದ ಪಿಕರವು ಚಂದನದ ತಳಿರುಗಳ ತಳ್ಕೆಯನ್ನು ಆಶಿಸುತ್ತಿದೆ; ಆದುದರಿಂದ ವಸಂತರಾಜನ ಆಗಮನವು ಆಗಲೇಬೇಕು.'

ಈ ವರ್ಣನೆಯ ಸೌಂದರ್ಯವೆಲ್ಲವೂ 'ಈಗಲೀಗಳೆ' ಎಂಬ ಮಾತುಗಳಲ್ಲಿ ಅಡಗಿರುವುದು. ಆ ಸೊಗಸು ಬಾಹ್ಯವಾಗಿ ಪ್ರಕಟಗೊಳ್ಳದೆ ಅವ್ಯಕ್ತವಾಗಿ ಹೃದಯವನ್ನು ಸೇರುತ್ತದೆ. ಆದರೆ ಪಂಪನ ಅವ್ಯಕ್ತ ಸೌಂದರ್ಯ ವರ್ಣನಾರೀತಿಯು ಈ ಪದ್ಯದಲ್ಲಿಯೇ ಸಂಪೂರ್ಣತೆಯನ್ನು ಹೊಂದಿಲ್ಲ; ವನಸ್ಪತಿ ವರ್ಣನೆಯಲ್ಲಿ ಅವನ ಶಕ್ತಿಯೆಲ್ಲವೂ ತೋರಿಸಲ್ಪಟ್ಟಿದೆ. ಈ ವಿಷಯವು ಮುಂದೆ ಸ್ಪಷ್ಟವಾಗಿ ನಿರೂಪಿಸಲ್ಪಡುವುದು. ಪೊನ್ನನ ವರ್ಣನೆಯಲ್ಲಿ ವಸಂತ ಮಾಸವು ತಾನು ಬರುವಾಗ ತನ್ನ ಸಂಗಡ ಲೋಕವೆಲ್ಲಕ್ಕೂ ಉಂಟುಮಾಡುವ ನವ ನವವಾದ ಜೀವನವು ನಿರೂಪಿತವಾಗಿದೆ; ಎಲ್ಲರ ಮನಸ್ಸೂ ಸೋಮಾರಿತನದಿಂದ ಬಿಡುಗಡೆಯನ್ನು ಹೊಂದಿ ವಿಕಸಿತವಾಗುತ್ತದೆ; ರಕ್ತ ನಾಡಿಗಳಲ್ಲಿ ಜೀವನ ರಸವು ವೇಗವಾಗಿ ಪ್ರವಹಿಸುತ್ತದೆ. ಇಷ್ಟೂ ಪೊನ್ನನ ಹೃದಯದ ಮೇಲೆ ವಸಂತಾಗಮನ ಕಾಲದಲ್ಲಿ ಉಂಟಾಗುವ ಪರಿಣಾಮವು.

ವಸಂತ ಋತುವು ರನ್ನನ ಹೃದಯದ ಭೀತಿಯ ತಂತಿಯನ್ನು ಮೀಟುತ್ತದೆ. ಆ ವರ್ಣನೆಯನ್ನು ಬರೆಯುವಾಗ ಆತನು ವಿಯೋಗಿಯಾಗಿದ್ದನೊ ಏನೊ ಯಾರಿಗೆ ಗೊತ್ತು! ಇಲ್ಲದಿದ್ದರೆ ಎಲ್ಲರಿಗೂ ಸಂತೋಷವನ್ನೂ ಸ್ಫೂರ್ತಿಯನ್ನೂ ಉಂಟುಮಾಡುವ ಚೈತ್ರ ಮಾಸವು ಈತನಲ್ಲಿ ಏತಕ್ಕೆ ವಿಜಾತೀಯವಾದ ಭೀತಿಯ ಭಾವವನ್ನು ಉಂಟುಮಾಡಿತು? ಆತನಿಗೆ ಸುರಭಿ ಮಾಸವು ಭಯಂಕರಾಕಾರವನ್ನು ಹೊಂದಿರುವ ಒಂದು ಸಿಂಹವಿದ್ದಹಾಗೆ: 'ಬಾಲಚಂದ್ರನೇ ಆ ಸಿಂಹದ ದಾಡೆಯಂತೆ; ಮಾವಿನ ಮರವನ್ನು ಆಶ್ರಯಿಸಿ ಅದರ ಶಾಖೆಗಳ ಮಧ್ಯದಲ್ಲಿ ತೂಗಾಡುತ್ತಿರುವ ಬಳ್ಳಿಯೇ ಅದರ ಬಾಲವಂತೆ; ಅರಳಿರುವ ಕುಸುಮ ರಾಶಿಗಳೇ ಅದರ ಕೇಸರವಂತೆ; ಗಿಳಿಗಳ ಮತ್ತು ಕೋಗಿಲೆಗಳ ಕಲಕಲ ನಿನಾದವೇ ಅದರ ಗರ್ಜನೆಯಂತೆ; ಇದೇನು! ಇಷ್ಟು ಭಯಂಕರವಾಗಿದೆ! ಎಂದೂ ಕೇಳದ, ನೋಡದ ವಸ್ತುವಾಗಿದೆಯಲ್ಲ!' ಎಂದು ಪಾಠಕರ ಮನಸ್ಸಿಗೆ ಪ್ರಶ್ನೆಯು ಬಾರದೆ ಇರಲಾರದು. ರನ್ನನ ಹೃದಯವು ವೀರ ರಸದಿಂದ ಸಂಪೂರ್ಣವಾಗಿದ್ದಿತೆಂಬುದಕ್ಕೆ ಆತನ ಗದಾಯುದ್ಧವೇ ಸಾಕ್ಷಿಯಾಗಿದೆ. ಅಷ್ಟು ಧೈರ್ಯಶಾಲಿಯಾದವನನ್ನೂ ವಸಂತನು ಹೆದರಿಸಿದನೇಕೆ? ಇದಕ್ಕೆ ಕಾರಣವನ್ನು ಹೀಗೆ ಊಹಿಸಬಹುದು. ಆತನು ಪ್ರಕೃತಿಯ ಸೌಂದರ್ಯ

ರಾತಿಗಳಿಂದ ಆಕರ್ಷಿಸಲ್ಪಟ್ಟವನಾದರೂ ದೂರದಲ್ಲಿಯೇ ನಿಂತು ಆ ಸೊಗಸುಗಳನ್ನು ಚೆನ್ನಾಗಿ ಅನುಭವಿಸುವವನಾಗಿದ್ದಿರಬಹುದು; ಅವುಗಳ ಸಮೀಪಕ್ಕೆ ಹೋಗುವುದಕ್ಕೆ ಆತನ ಮನಸ್ಸು ಹಿಂದೆಗೆಯುತ್ತಿದ್ದಿರಬಹುದು. ಏಕೆಂದರೆ, ಸೌಂದರ್ಯ ನಿಧಿಯಾದ ಆ ಪರಮಾತ್ಮನ ಗಡಗಡಿಸುವ ಕಾಂತಿಯಲ್ಲಿ ಭೀತಿಯೂ ಸಮ್ಮಿಳಿತವಾಗಿದೆ. ಆ ಕಾಂತಿಯನ್ನು ನೋಡುವುದಕ್ಕೇ ಸಾಧ್ಯವಿಲ್ಲ; ಇನ್ನು ಅದರ ಹತ್ತಿರ ಹೋಗುವುದು ಹೇಗೆ? ಎಂತಹ ಧೈರ್ಯಶಾಲಿಗಾದರೂ ಮನಸ್ಸು ಹಿಂದೆಗೆಯುವುದಿಲ್ಲವೆ? ಅಷ್ಟೇಕೆ? ವರ್ಷಾಕಾಲದ ಕರ್ಮೋಡಗಳು ಆಕಾಶವೆಲ್ಲವನ್ನೂ ಆವರಿಸಿಕೊಂಡು, ಭಯಂಕರವಾದ ಬಳ್ಳಿ ಮಿಂಚುಗಳನ್ನೆಸೆಯುತ್ತ, ಕರ್ಣಕುಹರವನ್ನು ಭೇದಿಸುವ ರೌದ್ರಯುಕ್ತವಾದ ಗುಡುಗಿನ ಶಬ್ದದಿಂದ ಭೀತಿಯನ್ನೆಸಗುತ್ತ, ಭೂಗರ್ಭವನ್ನು ಭೇದಿಸುವ ಸಿಡಿಲುಗಳನ್ನೆಸೆಯುತ್ತ, ವಾರಿಧಾರೆಯನ್ನು ವರ್ಷಿಸುತ್ತಿರುವಾಗ ಯಾವನಾದರೂ ಹೊರಹೊರಡಲು ಯತ್ನಿಸುವನೇ? ಮನೆಯ ಒಳಗಡೆ ನಿಂತು ಸಿಡಿಲು ಮಿಂಚುಗಳಿಂದ ಚಕಿತನಾದರೂ ಅವುಗಳಲ್ಲಿರುವ ಸೌಂದರ್ಯದಿಂದ ಸಂತುಷ್ಟನಾಗುವುದಿಲ್ಲವೆ? ರನ್ನನ ಮನಸ್ಸು ಈ ವಿಧವಾದುದೆಂದು ಆತನ 'ಮಧುಮಾಸ ಕೇಸರಿಯ' ವರ್ಣನೆಯನ್ನು ಓದಿದರೆ ಗೊತ್ತಾಗುವುದು. ಪಂಪನಲ್ಲಿರುವಷ್ಟು ರನ್ನನಲ್ಲಿ ಅವ್ಯಕ್ತ ಸೌಂದರ್ಯಾನುಭವದ ಶಕ್ತಿಯಿಲ್ಲ.

ಇನ್ನು, ಇತರ ಕವಿಗಳ ವರ್ಣನೆಗಳು ಲಾಕ್ಷಣಿಕರ ರೀತ್ಯಾ ವ್ಯಕ್ತ ಸೌಂದರ್ಯದ ವಿಜೃಂಭಣೆಯಾಗಿವೆ. ವಸಂತಕಾಲವು ಪ್ರಾಪ್ತವಾಯಿತೆಂದರೆ ಪ್ರಕೃತಿಯಲ್ಲಿ ಬದಲಾವಣೆಗಳುಂಟಾಗುವುದು ಸರ್ವಜನ ವಿದಿತವಾದ ವಿಷಯವು. ಮರಗಳು ಚಿಗುರುವುದೂ, ಕೋಕಿಲಾದಿ ಪಕ್ಷಿಗಳು ಗಾನಮಾಡುವುದೂ, ಮಂದಮಾರುತವು ಬೀಸುವುದೂ, ಇನ್ನೂ ಇತರ ವ್ಯಾಪಾರಗಳೂ ಪರಿಪಡಿಯಿಂದ ಉಕ್ತವಾಗಿವೆ. ಈ ಕವಿಗಳ ಕೈಗೆ ಕೋಕಿಲ ಭೃಂಗಾದಿಗಳು ಎತಕ್ಕೆ ಸಿಲುಕಿದುವೊ? ಎಲ್ಲರೂ ಅವುಗಳನ್ನೇ ವರ್ಣಿಸಿರುತ್ತಾರೆ. ಹರಿಹರ ಲಕ್ಷ್ಮೀಶರಿಗೆ ಮಾತ್ರ ವಸಂತ ಮಾಸವು, "ಕೆಂಪಿನ ಮಸುಕಿನ ಬೆಳ್ಳಿಸಂದವುಂ ಪಡೆದು" ನವಿಲುಗರಿಯಂತೆ ಮನೋಹರವಾಗಿದ್ದಿತು. ವಿರೂಪಾಕ್ಷ ಪಂಡಿತನ "ಚಳಿಯೊಡ್ಡು ಜಾರೆ" ಎಂಬ ವರ್ಣನೆಯು ಕನ್ನಡಿಗರ ಅತ್ಯಂತ ಆದರಕ್ಕೆ ಪಾತ್ರವಾಗಿದ್ದರೂ ಅದರಲ್ಲಿ ಅಷ್ಟೇನೂ ನೂತನತ್ವವು ಕಂಡುಬರುವುದಿಲ್ಲ; ಆತನ ವರ್ಣನೆಯು ಶಬ್ದಸೌಂದರ್ಯವೂ ಅಸದಳವಲ್ಲವೆಂದು ಹೇಳಬಹುದು. ಪದ್ಮಣಾಂಕ ರಾಘವಾಂಕರ ವರ್ಣನೆಗೆ ಹೋಲಿಸಿ ನೋಡಿದಲ್ಲಿ ಈ ವಿಷಯಗಳು ವ್ಯಕ್ತವಾಗದಿರಲಾರವು. ಮೂವರ ವರ್ಣನೆಗಳೂ ಬಹು ಮಟ್ಟಿಗೆ ಒಂದೇ ಜಾತಿಯವು. ವಿರೂಪಾಕ್ಷ ಪಂಡಿತನ ಮನಸ್ಸು ಈ ವರ್ಣನೆಯನ್ನು ಬರೆಯುವಾಗ ಸ್ಫುರತ್ತಾಗಿದ್ದ ಪಕ್ಷದಲ್ಲಿ ರಾಘವಾಂಕ ಪದ್ಮಣಾಂಕರ ಮನಸ್ಸುಗಳೂ ಸ್ಫುರತ್ತಾಗಿದ್ದಿರಬೇಕು. ಅಂತೆಯೇ ನಾಗರಾಜಾದಿಗಳ ವರ್ಣನೆಗಳೂ ಹೀಗೆಯೇ. ಬಸ್ವನ "ತೆಂಗಾಳಿ

ಕೆಂಗೊಸರೊಳ್ ದಟ್ಟಯಿಸುಟ್ಟುದು'' ಎಂಬ ಮಾತುಗಳಲ್ಲಿರುವ ಚಿತ್ರವೂ ಅದರ ಉಪಮೆಯೂ ಚೆನ್ನಾಗಿವೆ. ಆದರೆ ಹರಿಹರನೂ, ''ಬಂದು ಮುಂದಾ ಸಿಲಿಂ ಪುಗುತೊಂದೊಂದಯಿಸುಟ್ಟಂ'' ಎಂಬ ಮಾತುಗಳಲ್ಲಿ ಅದೇ ಚಿತ್ರಕ್ಕೆ ಅದೇ ಉಪಮೆಯನ್ನೇ ಕೊಟ್ಟಿರುವನು. ಒಟ್ಟಿನಲ್ಲಿ, ನಮ್ಮ ಕವಿಗಳ ವರ್ಣನೆಗಳು ಕವಿ ಸಮಯಗಳ ನಿರ್ಬಂಧದಿಂದ ಏಕ ಮಾರ್ಗಾವಲಂಬಿಗಳಾಗಿದ್ದರೂ ವಸಂತಾಗಮದ ಪರಿಣಾಮವು ಒಬ್ಬೊಬ್ಬರಲ್ಲಿ ಒಂದೊಂದು ವಿಧವಾಗಿರುವುದು. ಪಂಪನಲ್ಲಿ ಅವಿದಿತವಾದ ಉದ್ವಿಗ್ನತೆಯ ಧ್ವನಿಯೂ, ಪೊನ್ನನಲ್ಲಿ ಜೀವನವೂ, ರನ್ನನಲ್ಲಿ ಭೀತಿ ಪುರಸ್ಸರವಾದ ಲಾವಣ್ಯಾನುಭವವೂ, ನಯಸೇನನಲ್ಲಿ ಉತ್ಸಾಹವೂ, ಹರಿಹರನಲ್ಲಿ ವಿವಿಧ ವರ್ಣತೆಯೂ, ರಾಘವಾಂಕನಲ್ಲಿ ಮಾಮಸಕವೂ, ರುದ್ರಭಟ್ಟನಲ್ಲಿ ಭಾಸವೂ, ಅಗ್ಗಳನಲ್ಲಿ ಋತು ಸಾರ್ವಭೌಮ ವಿಭವದಿಂದುತ್ಪನ್ನವಾದ ಪ್ರತಿಭಾರಂಜನೆಯೂ, ಪಾರ್ಶ್ವಪಂಡಿತನಲ್ಲಿ ಅತ್ಯಾನಂದವೂ, ಆಂಡಯ್ಯನಲ್ಲಿ ಪಳ್ಗಿಯೂ, ಪದ್ಮಣಾಂಕನಲ್ಲಿ ಮುಖ ವಿಕಾಸವೂ, ವಿರೂಪಾಕ್ಷ ಪಂಡಿತನಲ್ಲಿ ಮನೋರಾಗವೂ, ಷಡಕ್ಷರಿಯಲ್ಲಿ ಅಮಂದ ವೈಭವವೂ—ಇವಿಷ್ಟು ಕವಿಜನಗಳಲ್ಲಿ ತಲೆದೋರುವ ವಿಧ ವಿಧವಾದ ಭಾವಾಂಕುರಗಳು. ಕನ್ನಡ ಕವಿಗಳು ಪ್ರಕೃತಿ ಸೌಂದರ್ಯದಿಂದ ಆನಂದವನ್ನು ಸಂಪಾದಿಸಿರುವರೆಂದು ಬೇರೆ ಹೇಳಬೇಕಾಗಿಲ್ಲ. ಲಾಕ್ಷಣಿಕರ ಬಂಧನವು ಇಲ್ಲದಿದ್ದರೆ ಇವರಲ್ಲಿ ಒಬ್ಬೊಬ್ಬನೂ ತನಗೆ ಸಹಜವಾದ ರೀತಿಯಲ್ಲಿ ಜಗದ್ವಿಖ್ಯಾತನಾಗುತ್ತಿದ್ದನೆಂದು ಧಾರಾಳವಾಗಿ ಹೇಳಬಹುದು.

೨. ಗ್ರೀಷ್ಮಋತು ವರ್ಣನೆ

ವಸಂತಮಾಸವು ಎಲ್ಲರ ಮನಸ್ಸಿನಲ್ಲಿಯೂ ತನ್ನ ಸುಖ ಸೌರಭ್ಯಗಳಿಂದ ಆನಂದೋತ್ಸಾಹಗಳನ್ನು ಉಬ್ಬಿಸಿದುದಾಯಿತು. ಅದು ಈಗ ಮೆಲ್ಲ ಮೆಲ್ಲಗೆ ಹಿಂಜರಿಯಲುಪಕ್ರಮಿಸಿದೆ. ರವಿಯ ಕಿರಣಗಳು ತೀಕ್ಷ್ಣವಾದುವು, ಮಂದಮಾರುತನ ಸುಗಂಧದ ಭಾರವು ಕಡಿಮೆಯಾಗಿ ಅದರ ಶೈತ್ಯ ಮಾಂದ್ಯಾದಿಗಳು ಬೇಸಗೆಯ ತಾಪಕ್ಕೆಡೆಗೊಟ್ಟುವು, ಕೋಕಿಲಾದಿ ಪಕ್ಷಿಗಳ ಸಂಕುಲವು ಮರಗಳ ನೆಳಲನ್ನು ಆಶ್ರಯಿಸಿ ಗಾನ ಮಾಡದೆ ನೀರವವಾದುವು, ಮರಗಳೂ ಬಳ್ಳಿಗಳೂ ಸೂರ್ಯನ ಕಿರಣಗಳಿಂದ ತಪ್ತವಾಗಿ ಕಳೆಗುಂದಿದುವು, ಕೆರೆ ತೊರೆ ಕಾಲುವೆಗಳು ಬತ್ತಿಹೋದುವು, ಜೀವರಾಶಿಗಳು ನೀರಡಸಿ ಬಹಳ ದೂರ ಬಿಸಿಲಿನಲ್ಲಿ ಅಲೆದಾಡಿ ಬಳಲಿದುವು; ಎಲ್ಲೆಲ್ಲಿ ನೋಡಿದರೂ ಬೇಸಗೆಯ ಝಳವೂ ತಾಪವೂ ಪಳ್ಗಿಯನ್ನು ಹೊಂದಿ ಜನಗಳನ್ನು ಪರಿತಪಿಸುತ್ತಿವೆ; ಸೂರ್ಯನು ಇಷ್ಟು ನಿರ್ದಯನಾಗಿ ಉಷ್ಣವೃಷ್ಟಿಯನ್ನು ಸುರಿಸಲು ಏಕೆ ತೊಡಗಿದನು? ಈಗ ಗ್ರೀಷ್ಮಋತುವು ಸನ್ನಿಹಿತವಾಯಿತು. ಕವಿಜನಗಳ ವಸಂತಮಾಸದ ಆನಂದ ಸೌಧಸ್ಥಿತವಾದ ಮನಸ್ಸೆಲ್ಲವೂ ಈಗ ಬೇಸಗೆಯ ಸಂತಾಪದಿಂದ ಆಕುಲಿತವಾಯಿತು. ಪ್ರಕೃತಿಯು ಆಯಾಸ ಸಾಗರದಲ್ಲಿ ಮುಳುಗಿ ನಿಟ್ಟುಸಿರಿಟ್ಟಳು. ಕವಿಗಳು ಸೂರ್ಯನ

ಕೋಪವನ್ನು ತಪಿಸಲೋಸುಗ ಗ್ರೀಷ್ಮ ಋತುವಿನ ವರ್ಣನಾ ಯುಕ್ತವಾದ ಗಾನವನ್ನು ಹಾಡಲುಪಕ್ರಮಿಸಿದರು.

ನಿದಾಘಾಗಮನದ ಸಂತಾಪವು ಎಲ್ಲ ಕವಿಗಳ ವರ್ಣನೆಗಳಲ್ಲಿಯೂ ರೂಪುಗೊಂಡಿದೆ. "ಬಂದತ್ತದೆಂದನುಭ್ರತನೊದವಿದವೋಘಂ ನಿದೋಘಂ ನಿದಾಘಂ", "ಬಂದುದು ತಾಂ ಸಂತಪ್ತ ತಿಗ್ಮಾತಪ ವಿಪುಳತರ ಜ್ವಾಳನಾ ಗ್ರೀಷ್ಮಕಾಲಂ" ಎಂದು ಕಮಲಭವನೂ, "ಕೆಲಸುಂ ಬಲಸುಂ ನೆಲಸುಂ ದವಾಗ್ನಿ ಸುಟ್ಟೊಲೆಯವೋಲಾಗೆ" ಎಂದು ಹರಿಹರನೂ, "ಘಲ್ಲಿಸುವ ಬೇಸಗೆಯ ಬಿಸಿಲಿಂದ ಮೂಜಗಂ ತಲ್ಲಣಿಸಿತು" ಎಂದು ಲಕ್ಷ್ಮೀಶನೂ, "ನೆಗಳ್ದುದಸದಳಂ ನೂತನ ಗ್ರೀಷ್ಮಕಾಲಂ" ಎಂದು ಸೋಮರಾಜನೂ, "ಉರಿವರಿವ ಬಿಸಿಲ ಬೆಂಕಿಯ ಭರಂ" ಎಂದು ರುದ್ರಭಟ್ಟನೂ, "ಬಂದತ್ತದೊಂದಗುರ್ವಂ ಜಗೆಗೆ ಪಡೆದವೋಘಂ ನಿದಾಘಂ" ಎಂದು ಅಗ್ಗಳನೂ, "ಉಗ್ರತರವಾಯ್ತೊ ಧಾತ್ರಿ ನಿರ್ಜೀವನಮೆನಿಸುವಿನಂ ಗ್ರೀಷ್ಮಮತ್ಯಂತ ಭೀಷ್ಮಂ" ಎಂದು ಪಾರ್ಶ್ವಪಂಡಿತನೂ, "ಬಿಸುಪೇರದಿಳಾತಲಮಲ್ಲದೆಲ್ಲಿಯುಂ" ಎಂದು ಎರಡನೆಯ ಗುಣವರ್ಮನೂ, "ಬಿರುಗಾಳಿ ಬೀಸೆ ಬೇಸಗೆ ಬಂದುದು", "ಉರಿಮರಿಯುತಂದು ಬಂದುದು ಬೇಸಗೆ" ಎಂದು ಕುಮುದೇಂದುವೂ, "ಬೇಸಗೆ ಪರ್ಚಿತು ಲೋಕಮೆಲ್ಲಮಂ", "ಬೇಸಗೆ ಯುಗ್ರಮದೆಂತುಟೋ" ಎಂದು ಷಡಕ್ಷರಿಯೂ—ಹೀಗೆ ಎಲ್ಲರೂ ತಮ್ಮ ತಮ್ಮ ಹೃದಯಗಳಲ್ಲಿ ಉಂಟಾದ ಗ್ರೀಷ್ಮ ಜನಿತವಾದ ಪರಿತಾಪವನ್ನು ತಿಳಿಸಿರುತ್ತಾರೆ.

ಕಮಲಭವನ ಶಾಂತೀಶ್ವರ ಪುರಾಣಾಂತರ್ಗತವಾದ ಗ್ರೀಷ್ಮ ಋತು ವರ್ಣನೆಯನ್ನು ಪರಿಶೀಲಿಸಿ ನೋಡಿದರೆ, ಆ ಕಾಲದಲ್ಲಿ ಪ್ರಕೃತಿಯಲ್ಲುಂಟಾಗುವ ಬದಲಾವಣೆಗಳೆಲ್ಲವೂ ಗೊತ್ತಾಗುವುದಲ್ಲದೆ ಕನ್ನಡ ಕವಿಗಳ ಬೇಸಗೆಯ ಕಾಲದ ವರ್ಣನಾರೀತಿಯೂ ಚೆನ್ನಾಗಿ ವ್ಯಕ್ತವಾಗುವುದು. ಈ ವರ್ಣನೆಗಳಲ್ಲಿ ಕೆಲವೆಡೆಗಳಲ್ಲಿ ಸ್ವಭಾವಕ್ಕೆ ವಿರುದ್ಧವಾದ ವ್ಯಾಪಾರಗಳು ಉಕ್ತವಾಗಿವೆ. ಗ್ರೀಷ್ಮ ಋತುವು ಪ್ರಾಪ್ತವಾಯಿತೆಂದರೆ ನಮ್ಮ ಕವಿಗಳು "ಅತಿ ತಪ್ತೋದ್ವೃತ್ತ ಧೂಳೀ ಪಿಹಿತ ನಭಸ್ತಲ"ವನ್ನೂ, "ತುಂಗ ವಾತೂಳಿಕಾಲಿಂಗಿತ ರೋದೋ ಮಂಡಲ"ವನ್ನೂ, "ಮೃಗತೃಷ್ಣಾ ಮಾಲಿಗಳ"ನ್ನೂ ಮೊದಲು ವರ್ಣಿಸುತ್ತಾರೆ. ಆಮೇಲೆ ಜಲಾಶಯಗಳು ಬತ್ತಿಹೋಗಿ ಸೈಕತಾಶಯಗಳಾಗುವುದನ್ನೂ, ಭೂಮಿಯು ವಿಶೇಷವಾಗಿ ಸೂರ್ಯನ ತೀಕ್ಷ್ಣವಾದ ರಶ್ಮಿಗಳಿಂದ ತಪ್ತವಾಗಿ ಬಿಸುಪನ್ನು ಹೊಂದುವುದನ್ನೂ, ಮೃಗಗಳ ಸಮೂಹವು ತೃಷೆಯಿಂದ ನೀರನ್ನು ಹುಡುಕಲು ಹೊರಟು ಮೃಗತೃಷ್ಣಿಕೆಯ ಬಳಿಗೆ ಬಂದು ಹತಾಶವಾಗಿ ಬಳಲುವುದನ್ನೂ, ಮಯೂರ ಹಂಸ ಪಕ್ಷಿಗಳ ಸಂತಾಪವನ್ನೂ, ಜಲೇಚರ ಜಂತುಜಾಲಗಳ ಸಂಕಟವನ್ನೂ ಕನ್ನಡ ಕವಿಗಳೆಲ್ಲರೂ ಏಕ ಕಂಠರಾಗಿ ವರ್ಣಿಸಿರುತ್ತಾರೆ. ಉದಾಹರಣೆಗಾಗಿ, ನಮ್ಮ ಕವಿಗಳು ಆನೆಗಳ ಸಂತಾಪವನ್ನು—

. . . .
. . . . ಮೆಟ್ಟದಡಿಯೊತ್ತಿದ ಕಾಲುರ್ಚಿ ಸೀಯೆ ನಿಂದಿರಲ್ |
ಚಲಿಯಿಸಲಾರ್ದಾತಪದೆ ಹಸ್ತಮನೆತ್ತಿ ಬಿಸಿಲ್ದ ಘೀಳಿಡು
ತ್ತೊಳೆದುದು ಚೇಷ್ಟೆಗುಂದಿದುದು ಜೋಲ್ದುದು ಬಿಸಿಲ್ದುದು ಬೆಂಡುದೊಂದಿಭಂ ||

—ಹರಿಹರ

ತನುವಂ ತಳೆದ್ದಿಯ್ಯ ತೀವ್ರಾತಪದುರ್ಬಿನ ಸರಕ್ಕಳಿ ಧೂಳಿವ್ರಜಾ ಸೇ
ಚನಮಂ ಮಾಳ್ಪಿ ಜುಗಂ ಮಿಸ್ತ್ರರಜೆ ಮೇಗೆಯುಲಾ ಭೂ ರಜಂ ವಿಸ್ಫುಲಿಂಗಾ |
ಘನಿಕ್ಯಷ್ಟೋಷ್ಣಷ್ಣ ರೇಣು ವ್ರಜಮನೆ ಮೊಗೆದಂತಾಗೆ ತತ್ತುಷ್ಟರಂ ಬೆಂ
ದೆನಸುಂ ಬಿಟರ್ನತ್ತೆ ಘೀಳಿಟ್ಟೊಳಟ್ಟು ಪರಿದುದೋರಂದದಿಂ ಹಸ್ತಿವೃಂದಂ ||

—ಕಮಲಭವ

ನೋಡಿ ಮರೀಚಿಕಾ ಜಳಮನಂಬುವಿದೆಂದೆಳಸುತ್ತೆ ಬಂದು ಕೈ
ನೀಡಿ ಕಲಂಕಿ ಪೊಕ್ಕು ತೆಗೆದಿಕ್ಕುತೆ ಪುಷ್ಕರಮಂ ನಿಜಾಸ್ಯದೊ|
ಳ್ಪಾಡಿ ಬಿಸಿಲ್ಪು ಬಲ್ಪಿರ್ದು ಘೀಳಿಡುತಂಗದೊಳೆತ್ತಲುಂ ಪುಗು
ಳ್ತೊಡಿರೆ ಬಿಸಿಲ್ದದರ್ಕಕರ ಕಲ್ಪಿತ ಸಂಜ್ವರನೊಂದು ಕುಂಜರಂ ||

—ಷಡಕ್ಷರಿ

ಈ ರೀತಿಯಾಗಿ ವರ್ಣಿಸಿರುತ್ತಾರೆ. ಇವರು ಹೇಳುವ ಆನೆಗಳ ಸಂತಾಪವೂ ಇನ್ನೂ ಇತರ ವ್ಯಾಪಾರಗಳೂ ಸಂದೇಹಾಸ್ಪದವಾಗಿವೆ.

ಗ್ರೀಷ್ಮದಾಗಮವು ಇಷ್ಟು ಸಂತಾಪಪ್ರದವಾದರೆ ಅದಕ್ಕೆ ಪ್ರಕೃತಿಯ ಸಾಮ್ರಾಜ್ಯವನ್ನು ಕೊಟ್ಟವರಾರು? ''ತರುಣಿ ವಸಂತ ಸಮ್ರಾಧಿಪನಾಗಿಯು ಮಿಂತುರೆ ಕಾಪ್ಪ''ನೇಕೆ? ಜೀವನ ಸಮುದ್ರದಲ್ಲಿ ನಿಮ್ನೋನ್ನತಿಗಳಿರುವುವೆಂದು ಸೂಚಿಸಲೋಸುಗ ಗ್ರೀಷ್ಮಋತುವು ಸಂಪ್ರಾಪ್ತವಾಯಿತೊ? ಇಲ್ಲವೆ, ಭಯಂಕರವಾದ ವಸ್ತುವಿನಲ್ಲಿಯೂ ಸೊಗಸಿರುವುದೆಂದು ಪ್ರಕಾಶಪಡಿಸಲು ಬಂದಿತೊ? ಹಾಗಾದರೆ ಇದರಲ್ಲಿ ಸೊಗಸೆಲ್ಲಿಯದು? ಗ್ರೀಷ್ಮ ಋತುವು ಬಾರದೆ ಇದ್ದಲ್ಲಿ ಶೀತಲವಾದ ಹೊಂಗೆಯ ಮರದ ನೆಳಲನ್ನು ಕೇಳುವವರಾರು? ''ಸ್ನಿಗ್ಧಚ್ಛಾಯಾ ತರುಷು ವಸತಿಂ ರಾಮಗಿರ್ಯಾಶ್ರಮೇಷು'' ಎಂದು ಕಾಳಿದಾಸನು ಏಕೆ ಹೇಳುತ್ತಿದ್ದನು? ''ಬಟ್ಟೆಬಟ್ಟೆಯೊಳೆಲ್ಲಿಯುಂ ಕುಳಿರ್ವೆರಸಿದರವಟ್ಟಿಗೆಯ ಸದನಂಗಳ''ನ್ನು ಲಕ್ಷ್ಮೀಶನು ತಾನೆ ಏಕೆ ವರ್ಣಿಸುತ್ತಿದ್ದನು? ದಾರಿಯನ್ನು ನಡೆದು ಅತುಲವಾದ ಆಯಾಸವನ್ನು ಹೊಂದಿ ಬಂದ ಪಥಿಕರು ಸೇರಿಸಲ್ಲಿರುವ ''ಸ್ವಾದು ಸ್ವಚ್ಛತೆ ಶೈತ್ಯವಮಾಪೋದಾದಿ''ಗಳನ್ನು ಅನುಭವಿಸಿ ಸುಖವನ್ನು ಹೊಂದುವ ಕಾಲವು ಇನ್ನಾವುದು? ಕನ್ನಡ ಕವಿಗಳಲ್ಲಿ ಕೆಲವರನ್ನು ಬಿಟ್ಟು ಉಳಿದವರೆಲ್ಲರೂ ಗ್ರೀಷ್ಮದ ಉಗ್ರ ಸ್ವರೂಪದ ಆರಾಧಕರಾಗಿರುವರು; ಕೆಲವು ವಸ್ತುಗಳಿಗೆ ಉಂಟಾಗುವ ಸೊಗಸನ್ನು ಅವರು ಸಂಪೂರ್ಣವಾಗಿ ಮರೆತಿರುವರು. ಕಮಲಭವನಂತಹ ಕವಿಗಳಿಗೆ ಕುಂಜವ್ರಾತದ ಶೀತಚ್ಛಾಯೆಗೂ ಕೂಡ ಅತ್ಯುಷ್ಣತೆ

ವುಂಟಾಗಿದ್ದಿತು! ನಾಗಚಂದ್ರನು ಬೇಸಗೆಯ ಕಾಲದ ಆಗಮನವನ್ನು ಹೀಗೆ ವರ್ಣಿಸಿರುವನು :—

ನೀರಸಮಾಗೆ ಬಳ್ಳಿ ಗಿಡು ಪೆರ್ಮರಗಳ್ ಕರಯಂತ್ರ ನಾಳದಿಂ
ಭೂ ರಸಮೆಲ್ಲಮಂ ತೆಗೆಯೆ ಭಾನು ದವಾನಲ ಧೂಮ ಧೂಸರಂ!
ಕಾರಿರುಳಂತೆ ಕಟ್ಟಿರ್ದ ದೆಸೆ ಬಂದುದು ಬೇಸಗೆ ಕಾಲಮಸ್ತ ಕಾ
ಸಾರಕ ಸಾರಮಸ್ತಮಿತ ಮಾರುತಮುದ್ಗತ ಚೀರಿಕಾ ರುತಂ ||

ಈ ವರ್ಣನೆಯಲ್ಲಿ ಮಾತ್ರ ಬಿಸಿಲು ಕಾಲದ ನೈಜ ಸ್ವಭಾವವು ಕೊಂಚ ಮಟ್ಟಿಗೆ ಅಡಕವಾಗಿದೆ. ಒಟ್ಟಿನಲ್ಲಿ, ಒಬ್ಬನು ವರ್ಣಿಸಿದ ರೀತಿಯಲ್ಲಿಯೇ ಮಿಕ್ಕವರೂ ವರ್ಣಿಸಿದರೆ ತಾವು ಕೃತಾರ್ಥರಾದೆವೆಂದು ಈ ಕವಿಗಳು ತಿಳಿದುಕೊಂಡಿದ್ದ ಹಾಗೆ ತೋರುತ್ತದೆ.

೩. ವರ್ಷಾಕಾಲದ ವರ್ಣನೆ

ಭೂಮಿಯ ಸಂತಾಪವನ್ನು ನೀಗಲು ವರ್ಷಾಕಾಲವು ತಲೆದೋರಿತು. ಸೂರ್ಯನ ಉಗ್ರವಾದ ತಾಪವು ಶಾಂತಿಯನ್ನು ಪಡೆಯಿತು, ಆಕಾಶದಲ್ಲಿ ಮೆಲ್ಲ ಮೆಲ್ಲಗೆ ಮೋಡಗಳು ತಲೆದೋರುತ್ತಿವೆ, ಪಶ್ಚಿಮ ಮಾರುತವು ಮೇಘಗಳೆಲ್ಲವನ್ನೂ ಒಟ್ಟುಗೂಡಿಸಲು ಪ್ರಯತ್ನಪಡುತ್ತಿದೆ, ತಂಡ ತಂಡವಾಗಿ ಕರ್ಮೋಡಗಳು ಸೇರಿ ಗ್ರೀಷ್ಮ ಋತುವಿನ ಪರಾಭವದಿಂದ ಪ್ರೇರಿತವಾಗಿ ಉತ್ಸಾಹ ಧ್ವನಿ ಸೂಚಕವಾದ ಗುಡುಗುಗಳಿಂದ ಕೂಡಿ ಮಿಂಚೆಂಬ ಕಣ್ಣುಗಳಿಂದ ಭೂಮಿಯ ಕಡೆ ನೋಡಿ ಅದನ್ನು ಸಂತೈಸಲೋಸುಗ ವಾರಿ ಧಾರೆಗಳೆಂಬ ಕೈಗಳಿಂದ ಕೆಳಕ್ಕಿಳಿದುವು. ಬೇಸಗೆಯ ದಿನಗಳು ಕಳೆದುಹೋಗಿ ಮಳೆಗಾಲದಲ್ಲಿ ಮೊದಲನೆಯ ಮಳೆಯು ಬಂದಾಗ ಜನಗಳ ಮನಸ್ಸಿಗೆ ಎಷ್ಟು ಹಿತವುಂಟಾಗುವುದೊ! ವಾಯುಮಂಡಲವು ನಿರ್ಮಲವಾಗಿ ಪಕ್ಷಿಗಳ ಸಂಚಾರದಿಂದ ಸೊಬಗನ್ನು ಪಡೆದು ಎಷ್ಟು ಉತ್ಸಾಹದಾಯಕವಾಗಿರುವುದೊ! ಜಲ ಪಾನದಿಂದ ತೃಪ್ತಳಾದ ಭೂ ಜನನಿಯು ಧೂಳೀ ವ್ರಜದಲ್ಲಿರುವ ಸುಗಂಧದಿಂದ ಎಷ್ಟು ತಂಪನ್ನುಂಟುಮಾಡುವಳೊ! ಈ ಹಿತವನ್ನೂ ಉತ್ಸಾಹವನ್ನೂ ತಂಪನ್ನೂ ನಮ್ಮ ಕನ್ನಡ ಕವಿಗಳು ಕಾಣದೆ ಹೋಗಿಲ್ಲ. ಕೆಲವು ವಿಚಿತ್ರವಾದ ವ್ಯಾಪಾರಗಳ ವರ್ಣನೆಗಳಿಂದ ಈ ಕವಿಗಳ ಸ್ವಾಭಾವಿಕ ವರ್ಣನೆಗಳು ಆಚ್ಛಾದಿತವಾಗಿ ವರ್ಷಾಕಾಲದ ಸೊಗಸು ಬಯಲಿಗೆ ಬಾರದ ಹಾಗೆ ಅಡಕವಾಗಿದೆ. ಪಂಪನು ವರ್ಷಾಕಾಲದ ಚಿತ್ರವನ್ನು ನಮ್ಮ ಮನೋನೇತ್ರಗಳ ಮುಂದೆ ಹೀಗೆ ವರ್ಣಿಸಿರುವನು:—

ದೆಸೆ ಪಸುರೇಱೆ ಪಚ್ಚೆವೊಳೆ ಮುಚ್ಚ ಮುಸುಂಕಿದ ಮಾಡ್ಕೆಯಾದುದಾ
ಗಗನಮೆ ನೀಳ ನೀಳಗಳ ಕಂಠ ತಮಾಳ ವಿನೀಳ ನೀರದ|
ಪ್ರಸರ ವಿಭಾಸಿಯಾದುದು ಸಮೀರಸುದಾರ ಕದಂಬ ಕೇತಕೀ
ಪ್ರಸರ ರಜಸ್ತರ ಪ್ರಕಟ ಪಾಂಸುಳಮಾದುದು ಮೇಘ ಕಾಲದೊಳ್ ||

ಈ ವರ್ಣನೆಯು ಪದ ಗುಂಫನವೊಂದರಿಂದಲೇ ಸುಂದರವಾಗಿಲ್ಲ; ಒಂದೊಂದು ಪಂಕ್ತಿಯಲ್ಲಿ ಉಂಟಾಗುವ ಒಂದೊಂದು ಚಿತ್ರದ ಭಾಗದ ಸೊಗಸಿನಿಂದಲೂ ಸುಂದರವಾಗಿದೆ: ದಿಕ್ಕುಗಳೆಲ್ಲವೂ ಹಸುರು ಬಣ್ಣದಿಂದ ವ್ಯಾಪ್ತವಾಗುವುದು ನಮಗೆ ಗೊತ್ತಿಲ್ಲದ ವಿಷಯ; ಇದು ಕವಿಯ ಅನುಭವವಾಗಿದ್ದರೂ ಇರಬಹುದು. ಆಕಾಶವು ನೀಲವಾದ ಮೋಡಗಳ ಕಪ್ಪಾದ ಕಾಂತಿಯಿಂದ ಕೂಡಿರುವುದು; ಕದಂಬ ಕೇತಕೀ ಸುಮಗಳ ಪರಾಗ ಪುಂಜ ಲಿಪ್ತವಾದ ವಾಯುವು ಬೀಸುವುದು—ಇವೆರಡೂ ಚೆನ್ನಾಗಿ ವರ್ಣಿತವಾಗಿವೆ. ಸೋಮರಾಜನ "ಕದಂಬ ಜಾಳಂ ಮುಗುಳೊತ್ತೆ" ಎಂಬ ಮಾತುಗಳಲ್ಲಿಯೂ, ಷಡಕ್ಷರಿಯ "ಅಲರ್ದುದು ಕಾಡ ಮಲ್ಲಿಗೆ ಮುಗುಳ್ವ್ರದು ಜಾದಿ ಕದಂಬ ಕುಟ್ಮಳಂ ಬಲಿದುದು ಪೂದೊಡಂಬೆಯುಮೊಡರ್ಚಿತು ಕೇತಕಿ" ಎಂಬ ಮಾತುಗಳಲ್ಲಿಯೂ ಪಂಪನು ವರ್ಣಿಸಿರುವುದೇ ವರ್ಣಿತವಾಗಿದ್ದರೂ ಇವರಲ್ಲಿ ಅವನಷ್ಟು ಚಿತ್ರವನ್ನು ಕೆತ್ತುವ ಶಕ್ತಿಯಿಲ್ಲ. ಪಂಪನ ಸಾರಯುಕ್ತವಾದ ಪ್ರಕೃತಿ ವರ್ಣನೆಗಳಲ್ಲಿ ಉತ್ಪ್ರೇಕ್ಷಾದ್ಯಲಂಕಾರಗಳು ವಿಶೇಷವಾಗಿಲ್ಲ. ಪೊನ್ನ ರನ್ನರನ್ನು ಬಿಟ್ಟು ಉಳಿದ ಕವಿಗಳಲ್ಲಿ ಇವು ಹೇರಳವಾಗಿವೆ. ಇದರಿಂದಲೇ ಪಂಪನ ವರ್ಣನೆಯಲ್ಲಿ ಯಾವಾಗಲೂ ಒಂದು ಸೊಬಗಿನ ಶಯ್ಯೆಯು ಮೂರ್ತೀಭವಿಸಿರುವುದು.

ವರ್ಷಾಕಾಲದ ವರ್ಣನೆಯನ್ನು ವಿಸ್ತಾರವಾಗಿ ಮಾಡಿರುವ ಕವಿಗಳಲ್ಲಿ ಷಡಕ್ಷರಿಯು ಮೊದಲನೆಯವನು. ಈತನ ವರ್ಣನೆಯನ್ನು ಆಮೂಲಾಗ್ರವಾಗಿ ಓದಿ ನೋಡಿದರೆ ನಮ್ಮ ಕವಿಗಳ ವರ್ಷರ್ತು ವರ್ಣನಾ ರೀತಿಯು ಗೊತ್ತಾಗುವುದು. ಸೋಮರಾಜನ ವರ್ಣನೆಯೂ ಕೂಡ ಇಂತಹುದೇ. ಷಡಕ್ಷರಿಯು "ಅಭ್ರ ನೀಲಾಭ್ರ ಜಾಲ"ವನ್ನು ಒಂದು ಚಮತ್ಕಾರವಾದ ಪದ್ಯದಲ್ಲಿ ವರ್ಣಿಸಿದ ಮೇಲೆ ಹಂಸಪಕ್ಷಿಗಳು ಓಡಿಹೋಗುವುದನ್ನು ವರ್ಣಿಸಿ, "ರವಿಚಂದ್ರ ಪ್ರಚುರ ಪ್ರಭಾ ಪ್ರಚಯಮುಮಂ ಮೇಘಂ ಮುಸುಂಕುತ್ತೆ ಕಾರ್ಷ್ಣ್ಯ ವಿಶಿಷ್ಟಂ ತಟಿದಂಕುರಾಲ್ಪ ರುಚಿಯುಂ ಬೀರಿತ್ತು" ಎಂದು ಹೇಳಿ, ಮಿಂಚನ್ನು ವರ್ಣಿಸಲು ಮೊದಲು ಮಾಡುತ್ತಾನೆ. ಷಡಕ್ಷರಿಯು ಮಿಂಚಿನಿಂದ ತನ್ನ ಮನಸ್ಸಿನಲ್ಲುಂಟಾಗುವ ಭೀತಿಯ ಭಾವವನ್ನು ಸ್ಪಷ್ಟವಾಗಿ ತೋರ್ಪಡಿಸಿಲ್ಲ; ಅದು ಆತನಿಗೆ ಒಂದು ಅದ್ಭುತ ವ್ಯಾಪಾರ ಮಾತ್ರ. "ಅಡಿಗಡಿಗುರ್ವಿ ಮಿಂಚುವೆಳಮಿಂಚು ಮರುದ್ಘಟನೆತ್ತಿ ಬೇಗದಿಂ ಪೊಡೆವ ಸುವರ್ಣ ಕೋಣಮನೆ" ಎಂಬುದೇ ಮುಂತಾದ ವರ್ಣನಾ ಭಾಗಗಳನ್ನು ನೋಡಿದರೆ ಈ ವಿಷಯವು ಸ್ಪಷ್ಟವಾಗುವುದು. ಮಿಂಚನ್ನು ವರ್ಣಿಸಿ ಆದಮೇಲೆ ಷಡಕ್ಷರಿಯು ಗುಡುಗು ಸಿಡಿಲುಗಳನ್ನೂ "ರಟಜ್ಝಂಝಾ ಮಾರುತ"ವನ್ನೂ ವರ್ಣಿಸಿ, ವರ್ಷಾಕಾಲವು ಈಶ್ವರನಂತೆ ಭಯಂಕರವಾಗಿ ನೋಟಕರ್ಗಳ ಬಗೆಗೊಂಡುದೆಂದು ಹೇಳುತ್ತಾನೆ. ಈ ಸಂದರ್ಭದಲ್ಲಿ ಷಡಕ್ಷರಿಯು "ಗಜ ರಿಪುವೊಲ್" ಎಂಬ ಪದವನ್ನು ಉಪಯೋಗಿಸಿರುವುದರಿಂದ ಆತನ ಮನಸ್ಸಿನಲ್ಲಿ ಭೀತಿಯು ಉದ್ಭವವಾಗಿದ್ದಿತೆಂದು ಊಹಿಸಲು ಅವಕಾಶವು

ದೊರೆಯುವುದು. ಈ ರೀತಿಯು ಚಿರಸ್ಥಾಯಿಯಾದುದಲ್ಲ, ಕ್ಷಣಿಕವಾದುದು; ಅತ್ಯಂತ ಅಸ್ಪಷ್ಟ. "ಮಿಂಚಿನಿಂದ ಸಿಡಿಲಿಂದ ಮಳೆಗರೆಯೆ ನಾನಾಗ ನಡುನಡುಗಿ ನಡೆ ನಡೆದೆನ್ನು" ಎಂಬ ಆಧುನಿಕ ಕವಿಗಳೊಬ್ಬರ ಮಾತುಗಳಲ್ಲಿ ತೋರಿಬರುವಷ್ಟು ಷಡಕ್ಷರಿಯ ರೀತಿಯು ಸ್ಪಷ್ಟವಾಗಿಲ್ಲ. ಈ ಮಾತುಗಳಲ್ಲಿ ಷಡಕ್ಷರಿಯ ಶಬ್ದಾಡಂಬರವಿಲ್ಲದಿದ್ದರೂ ಪದ್ಯಾವರ್ತನ ಶಬ್ದ ಸೌಲಭ್ಯವೂ ಭಾವ ಪರಿಪುಷ್ಟಿಯೂ ಶಕ್ತಿಯೂ ಅಡಕವಾಗಿವೆ. ಷಡಕ್ಷರಿಯು ಇನ್ನು ಮುಂದೆ ಮಳೆಯ ಸುರಿಯುವಿಕೆಯನ್ನು ವರ್ಣಿಸುತ್ತಾನೆ. ಇಲ್ಲಿಯೂ ಉತ್ಪ್ರೇಕ್ಷಾದ್ಯಲಂಕಾರಗಳು ಅವನನ್ನು ಬಿಟ್ಟಿಲ್ಲ: ಎಂದರೆ, ಅಲಂಕಾರಗಳನ್ನು ಉಪಯೋಗಿಸಬಾರದೆಂಬುದು ಅಭಿಪ್ರಾಯವಲ್ಲ; ಅವುಗಳನ್ನು ಉಚಿತವಾದೆಡೆಗಳಲ್ಲಿ ಹೇಳುವ ವರ್ಣನಾ ವಿಷಯವು ಸ್ಫುಟ ಸ್ಪಷ್ಟವಾಗುವ ಹಾಗೆ ಉಪಯೋಗಿಸಬೇಕು. ಹೀಗೆ ಉಪಯೋಗಿಸದಿದ್ದರೆ ಅಲಂಕಾರಗಳಿಂದ ಪ್ರಯೋಜನವಿಲ್ಲ. ಈ ವಿಷಯವು ಹಾಗಿರಲಿ. ಪ್ರಕೃತದಲ್ಲಿ, ಷಡಕ್ಷರಿಯು ಮಳೆಯು ಬರುವುದನ್ನು ಒಂದು ಹೃದಯಂಗಮವಾದ ಪದ್ಯದಲ್ಲಿ ಹೀಗೆ ವರ್ಣಿಸಿರುವನು:—

ಘುಡು ಘುಡು ಚಿಳಿ ಚಿಟಿಲೆಂದು
ಗ್ಗಡದ ಸಿಡಿಲ್ದನಿಯೆ ಪೊಡೆಯೆ ಗಗನ ಸ್ಥಲದಿಂ।
ದುಡುಗಳ್ ಪಳಿಪಳಿನುದಿರ್ವವೊ
ಲೆಡೆವಿಡದಿಳ್ಳಿವಾಲಿವರಲ ಮುತ್ತಿ ಬಗೆಗೊಳಿಕುಂ ॥

ಹೀಗೆ ಮಳೆಯನ್ನು ವರ್ಣಿಸಿಯಾದಮೇಲೆ ಚಾತಕಗಳ ಉತ್ಸಾಹವನ್ನೂ ನವಿಲುಗಳ ನರ್ತನವನ್ನೂ ಸಂಪ್ರದಾಯಕ್ಕನುಸಾರವಾಗಿ ಒಂದೆರಡು ಪದ್ಯಗಳಲ್ಲಿ ವರ್ಣಿಸಿ—

ಜಳಮಯಮಿಳೆ ಜಳದ ಮಯಂ
ಜಳಧರ ಮಾರ್ಗಂ ತಟಿನ್ಮಯಂ ದಿಗ್ವಳಯಂ।
ಕಳೆಗೊಳೆ ನವ ಸೃಷ್ಟಿಯನೇಂ
ತಳೆದುದೊ ಭುವನಂ ಘನಾಗಮಾಂಬುಜ ಭವನಿಂ ॥

ಎಂಬ ಪದ್ಯವನ್ನು ಹೇಳಿ ತೃಪ್ತಿಹೊಂದಿದವನಾಗಿ ತೋರುತ್ತಾನೆ. ಇದೇ ರೀತಿಯಲ್ಲಿಯೇ ಉಳಿದ ಕನ್ನಡ ಕವಿಗಳು ಮಳೆಗಾಲವನ್ನು ವರ್ಣಿಸಿರುತ್ತಾರೆ.

ಕರ್ನಾಟಕ ಕವಿಗಳಲ್ಲಿ ಕೆಲವರು ವರ್ಷರ್ತುವಿನ ವರ್ಣನೆಯಲ್ಲಿ ಗುಡುಗು ಮಿಂಚು ಸಿಡಿಲುಗಳನ್ನೇ ವಿಶೇಷವಾಗಿ ವರ್ಣಿಸದೆ ಆ ಋತುವಿನ ಆಗಮನದಿಂದ ಪ್ರಕೃತಿಯಲ್ಲುಂಟಾಗುವ ಕೆಲವು ಬೇರೆ ಸೂಚಕವಾದ ವ್ಯಾಪಾರಗಳನ್ನೇ ವರ್ಣಿಸುತ್ತಾರೆ. ಇಂತಹ ವರ್ಣನೆಗಳಲ್ಲಿ ರಾಘವಾಂಕ, ಸೋಮರಾಜ ಮತ್ತು ಲಕ್ಷ್ಮೀಶ—ಇವರ ವರ್ಣನೆಗಳು ಗಣ್ಯವಾದುವುಗಳು. ರಾಘವಾಂಕನು ತಾನು ವಸಂತಋತುವನ್ನು ವರ್ಣಿಸಿದ ತನಗೆ ಸಹಜವಾದ ರೀತಿಯಲ್ಲಿಯೇ—

ಇನನೋಡೆ ನವಿಲಾಡೆ ವಿರಹಿಗಳು ಕೂಡೆ ಭೂ
ಜನ ಹಾಡೆ ತೃಣ ಮೂಡೆ ಹಂಸಗಳು ಬಾಡೆ ಕಡ
ವಿನ ಸೊವಡು ತೀಡೆ ಚಾದಗೆ ನೋಡೆ ಘನನಾಡೆ ಧರೆಗಂಬು ಸೀಡೆ ಸಿಡಿಲು |
ದನಿ ಮಾಡೆ ಧರೆ ಕೂಡೆ ಬೆಳೆಗಳಂ ಸೂಡೆ ನೆಲೆ
ಯುನು ನದಿಗಳೀಡಾಡೆ ಬರ್ಪ ಕಾರ್ಗಾಲವೊ
ಯ್ಯನೆ ಮೊಳೆತು ದನಿದೋರಿ ಮೊಳಗಂ ಹೇರಿ ತೋರಿತ್ತು ದುರ್ದಿನವನು ||

ಎಂದು ಮನಸ್ಸೆಲ್ಲವೂ ಎಚ್ಚರವಾಗುವ ಹಾಗೆ ವರ್ಣಿಸುತ್ತಾನೆ; ಆದರೆ ಆ ಎಚ್ಚರಿಕೆಯು "ತೋರಿತ್ತು ದುರ್ದಿನವನು" ಎಂಬ ಮಾತುಗಳಲ್ಲಿ ತಿರುಗಿ ಮಾಂದ್ಯವನ್ನು ಹೊಂದುವಹಾಗಿರುವುದು. ಸೋಮರಾಜನು ಇಳೆಯೆಲ್ಲವೂ ಜಲಮಯವಾಗುವುದನ್ನು ಹೀಗೆ ವರ್ಣಿಸಿರುತ್ತಾನೆ:—

ಒಡೆಯೆ ತಟಾಕ ರಾಜಿ ಹೊನಲೇೞ್ಕೆ ಧರಿತ್ರಿ ಸಮಸ್ತ ಸಿಂಧುಗ
ಳ್ತುಡಿಯನೆ ಮಾೞ್ಕೆ ತಾಂ ಪರಿಯೆ ಬೆಂಚೆಗಳುರ್ವಿರೆ ನಿರ್ಝರಾಳಿ ಭೋಂ |
ರಿಡುತೆ ಮಹೀಧ್ರದಿಂ ಜಗುೞ್ತೆ ಡಂಗುರಗಳ್ ಪಿರಿದಾಗಿ ತೋೞ್ಕೆ ಕ
ರ್ಮಡು ಕಡು ಪೆರ್ಚೆ ಕಟ್ಟಿ ಕೞ್ಕಿದತ್ತು ಸುವೃಷ್ಟಿ ಪೊದೞ್ದು ಧಾತ್ರಿಯೊಳ್ ||

ಈ ವರ್ಣನೆಯು ರಾಘವಾಂಕನ ವರ್ಣನೆಯನ್ನು ಪೂರ್ತಿಗೊಳಿಸುವಂತೆ ತೋರುವುದು. ಇವೆರಡೂ ಸೇರಿದರೆ ಮನಸ್ಸಿಗೆ ಒಂದು ವಿಧವಾಗಿ ವಿಶದವಾದ ಕಲ್ಪನೆಯುಂಟಾಗುವುದು. ಇನ್ನು, ಲಕ್ಷ್ಮೀಶ ಕವಿಗೆ ಮಳೆಗಾಲವು "ಬೇಸಗೆಯ ಬೇಸರಂ ತವೆ ತವಿಸುತ" ಬಂದುದಲ್ಲದೆ—

ಜಾತ ನವ ಶಾಡ್ವಲದ ಸೊಂಪಿಡಿದೆಸೆವ ನೆಲದ
ಪೂತೆಸೆವ ಜಾಜಗಳ ವರ ಕುಟಜ ರಾಜಗಳ
ಕೇತಕಿಯ ಧೂಳಿಗಳ ಕೆದರುತಿಹ ಗಾಳಿಗಳ ಲಸದಿಂದ್ರಗೋಪ ಚಯದ |
ಕಾತೆಳೆಯ ಮಾವುಗಳ ಬನ ಬನದ ಠಾವುಗಳ
ನೂತನ ಸುವಾರಿಗಳನೆಡೆಗೊಂಡ ದಾರಿಗಳ
ಭೂತಳದ ಸಿರಿ ಮೆರೆಯೆ ಮುಗಿಲ್ಮೆದೆ ಮಳೆಗರೆಯೆ ವರ್ಷರ್ತು ಚೆಲ್ವಾದುದು ||

ಈ ವರ್ಣನೆಯು ತಾನಾಗಿಯೇ ಮಾತನಾಡುವ ಶಕ್ತಿಯನ್ನು ಹೊಂದಿರುವುದರಿಂದ ಇದರ ವಿಷಯವಾಗಿ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ಪಂಪನನ್ನು ಬಿಟ್ಟರೆ, ಪ್ರಕೃತಿಯ ಸೌಮ್ಯ ಸ್ವರೂಪದ ಗಾಯಕರಲ್ಲಿ ಈ ಮೂವರು ಕವಿಗಳೂ ಉತ್ತಮರೆಂದು ನಿಸ್ಸಂಶಯವಾಗಿ ಹೇಳಬಹುದು.

ಮಳೆಗಾಲದ ಸೊಗಸಿಗೆಲ್ಲ ಆಕರವಾದುದು ಅಭ್ರಮಾಲೆಗಳ ಮೇಲೆ ಹೊಳೆಯುವ ಕಾಮನಬಿಲ್ಲು. ಅದರ ಸೌಂದರ್ಯದಿಂದ ನಮ್ಮ ಕವಿಗಳು ಮೋಹಿತರಾಗದೆ ಇಲ್ಲ. ಅಷ್ಟು ಮನೋಹರವಾದ ದೃಶ್ಯವು ಯಾರ ನೋಟಕ್ಕೆ ತಾನೆ

ಬೆಡಗನ್ನುಂಟುಮಾಡದೆ ಇದ್ದೀತು? ಕನ್ನಡ ಕವಿಗಳಲ್ಲಿ ಕೆಲವರು ಅದರ ಸೊಗಸನ್ನು ಒಂದೆರಡು ಮಾತುಗಳಲ್ಲಿಯೇ ಹೇಳಿರುತ್ತಾರೆ. "ಮುಂಗಾರೊಳ್ ಜನಿಯಿಸಿದಮರೇಂದ್ರ ಶರಾಸನಸಗ್ಗದ ಸೊಬಗ ಬೀರುತ್ತಿರ್ದತ್ತಾಗಳ್" ಎಂದು ಸೋಮರಾಜನೂ, "ಕಾರುಂ ಗಗನಶ್ರೀ ರಮೆಯ ಮುಡಿಯೊಂಬಡ" ಎಂದು ಮಹಾಶ ಲೀಲೆಯನ್ನು ವರ್ಣಿಸುವಾಗ, "ತೋರಣಮಂದಿರಮೆಲ್" ಎಂಬ ಮಾತುಗಳಲ್ಲಿ ತನ್ನ ಮನಸ್ಸಿನಲ್ಲುಂಟಾಗುವ ಒಂದು ರಂಜನೆಯನ್ನು ಷಡಕ್ಷರಿಯೂ, "ತುಂಗ ನವ ಚಿತ್ರಮಯ ಸುಪ್ರಭಾಸುರ ಕಾರ್ಮುಕ"ವನ್ನು ಲಕ್ಷ್ಮೀಶನೂ ವಿಧವಿಧವಾಗಿ ಕೊಂಡಾಡಿದ್ದಾರೆ. ಮಳೆಯ ಬಿಲ್ಲಿನ ಸೊಗಸನ್ನು ಸಂಪೂರ್ಣವಾಗಿ ಮನಗಂಡವನು ಪಂಪನೊಬ್ಬನೇ ಎಂದು ಹೇಳಬಹುದು. ಏಕೆಂದರೆ, ಆತನು ಕಾಮನ ಬಿಲ್ಲಿನ ಹೃದಯಸ್ಥಿತವಾದ ಸೌಂದರ್ಯವನ್ನು ಸುಂದರತರವಾದ ಮಾತುಗಳಿಂದ ವರ್ಣಿಸಿರುತ್ತಾನೆ:—

ಪೊಳೆವಮರೇಂದ್ರಗೋಪದ ಪಸುರ್ತೆಳವುಲ್ಗಳ ತಳ್ತ ಕಾರ್ಮುಗಿ
ಲ್ಗಳ ಕಿಱುಗೊಂಕುಗೊಂಕಿದ ಪೊನಲ್ಗಳ ಕೆಂಪು ಪಸುರ್ಪು ಬೆ!
ಳ್ಪೊಳಕೊಳೆ ಶಕ್ರ ಕಾರ್ಮುಕ ವಿಳಾಸಮನೇನರ್ದೆಗೊಂಡು ಬೇಟದ
ತ್ತಳಗಮನುಂಟುಮಾಡಿದುದೊ ಕಾಮನ ಕಾರ್ಮುಕದಂತೆ ಕಾರ್ಮುಕಂ ||

ಈ ವರ್ಣನೆಯಲ್ಲಿ ಕಾಮನ ಬಿಲ್ಲಿನಲ್ಲಿ ತೋರಿಬರುವ ವಿಧ ವಿಧವಾದ ವರ್ಣಗಳೂ ಮತ್ತು ಆಕಾರವೂ ಚಿತ್ರಿತವಾಗಿವೆ. ಮಿಂಚುಹುಳುಗಳ ಬೆಳಕೂ ಎಳೆಯ ಗರಿಕೆಗಳ ಹಸುರು ಬಣ್ಣವೂ ಕಾರ್ಮೋಡಗಳ ನೀಲ ವರ್ಣವೂ ಕಾಮನ ಬಿಲ್ಲಿನ ವಿಧ ವಿಧವಾದ ಬಣ್ಣಗಳನ್ನು ನೆನಪಿಗೆ ತರುವುವಲ್ಲದೆ ವರ್ಷಾಕಾಲವು ಸಂಪ್ರಾಪ್ತವಾದಾಗ ಪ್ರಕೃತಿಯ ಹೊಸದಾದ ರೂಪ ಜಾಲವನ್ನೂ ವಿಶದೀಕರಿಸುತ್ತವೆ. ಆ "ಕಿರುಗೊಂಕುಗೊಂಕಿದ ಪೊನಲ್ಗಳ" ಎಂಬ ಮಾತುಗಳು ಕಾಮನಬಿಲ್ಲಿನ ಸ್ವಲ್ಪವೇ ಬಾಗಿರುವ ಆಕಾರವನ್ನು ಎಷ್ಟು ಚೆನ್ನಾಗಿ ಮನಸ್ಸಿಗೆ ಹಿಡಿಯುವ ಹಾಗೆ ಪ್ರತಿಬಿಂಬಿಸುತ್ತವೆ! ಪಂಪನು ಎಷ್ಟು ಮಿತವಾದ ಮಾತುಗಳಿಂದ ಎಷ್ಟು ಮನೋಹರವಾದ ಚಿತ್ರವನ್ನು ಬರೆಯಬಲ್ಲನು! ಈ ಶಕ್ತಿಯು "ಪಸರಿಪ ಕನ್ನಡಕ್ಕೊಡೆಯನೊರ್ವನೆ" ಆದ ಸತ್ಕವಿ ಪಂಪನಲ್ಲಿ ಯಾವಾಗಲೂ ಕಂಡುಬರುವುದು.

ಇನ್ನು, ಕೆಲವು ವಿಚಿತ್ರವಾದ ವರ್ಣನೆಗಳ ಕಡೆಗೆ ನಮ್ಮ ದೃಷ್ಟಿಯನ್ನು ತಿರುಗಿಸೋಣ. ಈ ವರ್ಣನೆಗಳನ್ನು ಓದುತ್ತಲೇ ಮನಸ್ಸಿಗೆ ಬೇಸರವೂ ಆಯಾಸವೂ ಉಂಟಾಗುವುವು. ವರ್ಷಾಕಾಲದಲ್ಲಿ ಕವಿಗಳು ಚಾತಕ ಪಕ್ಷಿಯ ಸಂತೋಷವನ್ನು ವರ್ಣಿಸುವುದು ವಾಡಿಕೆಯು. ಈ ವಿಚಿತ್ರವಾದ ಪಕ್ಷಿಯು ಎಂತಹುದೊ, ಅದು ಎಲ್ಲಿ ವಾಸಿಸುವುದೊ, ಅದರ ಆಕಾರವು ಹೇಗಿರುವುದೊ, ಇವೊಂದನ್ನೂ ಕಂಡವರಿಲ್ಲ, ಕೇಳಿದವರಿಲ್ಲ. ಇನ್ನು ಅದರ ಮಳೆಗಾಲದ ಸಂತಸವನ್ನು ವರ್ಣಿ

ಸಿದರೆ ಸಾಮಾನ್ಯರಿಗೆ ಕಲ್ಪನೆಯು ಹೇಗೆ ಉಂಟಾದೀತು ? ಏನೋ ಒಬ್ಬಿಬ್ಬರು ಕವಿಗಳು ಮಾತ್ರ, ಇದರ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿದ್ದ ಪಕ್ಷದಲ್ಲಿ ಆ ಕವಿಗಳ ಪ್ರತಿಭಾ ಶಕ್ತಿಗೆ ಇಂತಹುದೂ ಒಂದು ಪಕ್ಷಿಯು ಗೋಚರವಾಗಿದ್ದಿರಬಹುದೆಂದು ನಾವು, ಕವಿಗಳು "ಅಘಟಿತ ಘಟನಾ ನೂತನ ಬ್ರಹ್ಮರಲ್ಲೇ" ಎಂದು ತಿಳಿದು ಮನಸ್ಸಿನಲ್ಲಿ ಸ್ವಲ್ಪ ಸಮಾಧಾನವನ್ನು ಹೊಂದಬಹುದಾಗಿದ್ದಿತು. ಕವಿಯೆಂಬ ಹೆಸರಿನ ಪ್ರತಿಯೊಬ್ಬನೂ ತನ್ನ ವರ್ಷಾಕಾಲದ ವರ್ಣನೆಯಲ್ಲಿ ಚಾತಕ ಪಕ್ಷಿಯನ್ನು ವರ್ಣಿಸುವನಸೇ. ಹೀಗಾದರೆ, ಇನ್ನು ಓದುವವರ ಮನಸ್ಸಿಗೆ ಎಷ್ಟು ತಾಳ್ಮೆಯು ತಾನೇ ಇದ್ದೀತು? ಈ ಚಾತಕ ಪಕ್ಷಿಯ ವರ್ಣನಾ ವಿಷಯವು ಕವಿಸಮಯ ಪ್ರೋಕ್ತವಾದುದು ; ಆದುದರಿಂದಲೇ ಇಷ್ಟು ಮನದ ಆಯಾಸಕ್ಕೆ ಕಾರಣವಾಗಿದೆ. ಒಂದು ವೇಳೆ ಈ ವರ್ಣನೆಯನ್ನು ಲಾಕ್ಷಣಿಕರು ನಿರೋಧಿಸಿದ್ದರೆ, ಪ್ರತಿಯೊಬ್ಬ ಕವಿಯೂ ಇದನ್ನು ವರ್ಣಿಸದೆ ತನ್ನ ಪ್ರತಿಭಾ ಶಕ್ತಿಯನ್ನು ಸ್ವಚ್ಛವಾಗಿ ಬೇರೆ ರೀತಿಯಾದ ವರ್ಣನೆಯನ್ನು ಮಾಡಬಹುದಾಗಿದ್ದಿತು. ಇದರಿಂದ ವ್ಯಕ್ತವಾಗುವ ವಿಷಯವೇನೆಂದರೆ—ಕವಿಸಮಯಗಳು ಕವಿ ಜನರ ಪ್ರತಿಭಾ ವಿಹಂಗಮಕ್ಕೆ ಒಂದು ಪಂಜರವನ್ನು ಕಲ್ಪಿಸಿದುವು; ಅವರಿಗೆ ಸ್ವಾತಂತ್ರ್ಯವು ದುರ್ಲಭವಾಯಿತು. ನಾಗಚಂದ್ರ ರುದ್ರಭಟ್ಟಾದಿ ಕೆಲವು ಕವಿಗಳ ಚಾತಕ ಪಕ್ಷಿಯ ಸಂತೋಷದ ವರ್ಣನೆಗಳು ಚೆನ್ನಾಗಿ ತೋರಬರಬಹುದಾದರೂ ಆ ರಾಮಣೀಯತೆಯು ವರ್ಣನಾವಸ್ತುವಿನಿಂದುದ್ಭವವಾದುದಲ್ಲ, ಮೃದು ಮಧುರವಾದ ಪದಗಳ ಸರಣಿಯಿಂದ ಜನಿತವಾದುದು; ಲಲಿತವಾದ ಶೈಲಿಗೆ ನಾಗಚಂದ್ರನು ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧನೆಂಬ ವಿಷಯವು ಸರ್ವಜನ ವಿದಿತವಾದುದು. ಒಟ್ಟಿನಲ್ಲಿ, ವರ್ಷಾಕಾಲದ ವರ್ಣನೆಗಳನ್ನು ನೋಡಿದರೆ ವಸಂತ ಋತುವನ್ನು ಬಿಟ್ಟು ಕನ್ನಡ ಕವಿಗಳ ಪ್ರೀತಿಗೆ ಅತ್ಯಂತ ಪಾತ್ರವಾದ ಋತುವು ವರ್ಷರ್ತುವೆಂದು ಧಾರಾಳವಾಗಿ ಹೇಳಬಹುದು.

೪. ಶರದೃತು ವರ್ಣನೆ

ವರ್ಷಾಕಾಲದ ಚಿತ್ರವು ದೃಷ್ಟಿಪಥದಿಂದ ಸ್ವಲ್ಪ ಮರೆಯಾಗಲಿ; ಕಾರ್ಮೋಡಗಳು ಕಳೆಗುಂದಿ ಶುಭ್ರವಾಗಿ ಚದರಿಹೋಗಲಿ; ಗುಡುಗು ಮಿಂಚುಗಳ ಆರ್ಭಟವೂ ಕಾಂತಿಯೂ ಭೀತಿಯನ್ನೆಸಗದೆ ಇರಲಿ; ಕೆಂಪಾದ ನೀರಿನಿಂದ ಪರಿಪೂರಿತವಾದ ನದಿಗಳು ತಿಳಿಯಾಗಿ ಹರಿಯಲಿ; ಅಗೊ! ಶರದೃತುವು ಸ್ವಲ್ಪ ಸ್ವಲ್ಪವೇ ಮುಖ ಸಂದರ್ಶನವನ್ನು ಕೊಡುತ್ತಿರುವುದು. ರಾಜರು ದಿಗ್ವಿಜಯಯಾತ್ರೆಗೆ ಹೊರಡುವ ಕಾಲವು ಸಮೀಪಿಸಿತು; ಕವಿಗಳೂ ಅವರ ಜೊತೆಗೆ ಸೇರಿ ಶರದೃತುವನ್ನು ವರ್ಣಿಸುವುದಕ್ಕೆ ತೊಡಗಲಿ.

ದೇವಕವಿಯ ಶರದೃತು ವರ್ಣನೆಯನ್ನು ಆ ಋತು ಧರ್ಮಗಳನ್ನು ತಿಳಿಯುವುದಕ್ಕಾಗಿ ಸ್ವಲ್ಪ ವಿಚಾರಮಾಡೋಣ. ಮಳೆಗಾಲವು ಹಿಂದಕ್ಕೆ ಸರಿಯಲು,

“ಬಹುತ್ರ್ಯಕ್ಷತ್ರಾಕುಳ ರೋಹಿಣಾಂತದ ಕಾಲ”ವಾದ ಶರತ್ಕಾಲವು ಬಂದನು ; ದೆಸೆಗಳೆಲ್ಲವೂ ಪ್ರಸನ್ನವಾದುವು; ನದಿಯ ಕರೆಗಳೆಲ್ಲವೂ “ರಂಜಕ ಭೂಷೆಯ ವೋಲ” ನಕ್ರವಾಗಿ ತನತನೆಸುವ ಶೀಲಿಂದ ಮನೋಹರವಾದುವು; ಮೇಘ ಸಮೂಹವು “ಶುಭ್ರಾಂಶುಕ ಕೋಟಿಯಿಂದೊಗೆದು” ಅಂಬರವನ್ನು ವ್ಯಾಪಿಸಿದುದು; ಓಡಿಹೋದ ಹಂಸಪಕ್ಷಿಗಳು ಹಿಂದಿರುಗಿ “ಅಬ್ಜಾಕರ ಶ್ರೇಣಿ”ಯಲ್ಲಿ ವಿಲಾಸವನ್ನು ದ್ವಿಗುಣಿಸಿದುವು; ತುಂತುರುವನಿಗಳು “ತೆರತೆರಂ ಬೊಳೆಯುತ್ತುಂ” ಸುರಿದುವು; ಈ ಸಣ್ಣ ಮಳೆಯ ಜೊತೆಗೆ ಹಳದಿಯ ಬಣ್ಣದ ಬಿಸಿಲು ಸೇರಿ ಶರತ್ಸಮಯವು ಸೊಗಯಿಸಿತು. ದೇವಕವಿಯು ಇಷ್ಟು ವಿಸ್ತಾರವಾಗಿ ವರ್ಣಿಸಿದ ವ್ಯಾಪಾರಗಳನ್ನು ಪಂಪನು ಎರಡೇ ಮಾತುಗಳಲ್ಲಿ ಅಡಗಿಸಿರುತ್ತಾನೆ. ಸೋಮರಾಜನು ಶರದೃತು ವರ್ಣನೆಯನ್ನು ವಿಸ್ತಾರವಾಗಿ ಮಾಡಿದ್ದರೂ ಅವನಲ್ಲಿ ದೇವಕವಿಯಲ್ಲಿರುವ ಸೊಗಸಿಲ್ಲ, ಸೂಕ್ಷ್ಮವಾದ ಭಾವಗಳ ಮಾರ್ದವವಿಲ್ಲ, ಸ್ಫುರಿಸುವಿಕೆಯಿಲ್ಲ, ಶೈಲಿಯ ಸರಳತ್ವವೂ ಇಲ್ಲ. ಷಡಕ್ಷರಿಯ ಶರದೃತು ವರ್ಣನೆಯಲ್ಲಿ ನಮಗೆ ಹೆಚ್ಚು ತಿಳಿವಳಿಕೆಯನ್ನೂ ಮನೋರಂಜನೆಯನ್ನೂ ಉಂಟುಮಾಡುವ ವಿಷಯಗಳು ಇಲ್ಲದಿದ್ದರೂ ಆತನು ಶರತ್ಕಾಲದ ಮೋಡಗಳು ಬೆಳ್ಳಗಾಗುವುದನ್ನು ವರ್ಣಿಸುವಾಗ ಅವನ ಮನಸ್ಸು ಇತರ ಕಾಲಗಳಲ್ಲಿ ಅವಕ್ಕೆ ಸಹಜವಾದ ಆಡಂಬರದಿಂದ ಬಿಡುಗಡೆಯನ್ನು ಹೊಂದಿರುವುದು. ಷಡಕ್ಷರಿಯು ಇದೇ ರೀತಿಯಲ್ಲಿಯೇ ಉಳಿದ ವರ್ಣನೆಗಳನ್ನು ಮಾಡಿದ್ದರೆ ಆತನಿಗೆ ಈಗ ಇರುವ ಸ್ಥಾನಕ್ಕಿಂತ ಸ್ವಲ್ಪ ಉನ್ನತವಾದ ಸ್ಥಾನವು ದೊರೆಯುತ್ತಿದ್ದಿತು. ಈತನಿಗೆ ಶರನ್ಮೇಘಗಳು “ಚಿಂತೆಯಿಂ ಬೆಳ್ಪಡರ್ದು”ವಾದರೆ, ಲಕ್ಷ್ಮೀಶನಿಗೆ ಮುಗಿಲುಗಳು “ನಾಚಿ ಬೆಳ್ಪೇರಿದುವು.” ಈ ಚಿಂತೆಯೂ ಆ ನಾಚಿಕೆಯೂ ಷಡಕ್ಷರಿ ಲಕ್ಷ್ಮೀಶರು ತಮ್ಮ ತಮ್ಮ ವರ್ಣನೆಗಳನ್ನು ಮಾಡುವಾಗ ಅವರ ಮನಸ್ಸುಗಳಲ್ಲಿ ಉದ್ಭವವಾದ ಖಿನ್ನತೆಯ ಮತ್ತು ನಿರಹಂಕಾರದ ಭಾವಗಳನ್ನು ತೋರಿಸುತ್ತವೆ. ಚಿಕುಪಾಧ್ಯಾಯನಿಗೆ ಶರದಾಗಮವು “ಜೀವಂಗಳ ಕಣ್ಗಳ ಪೆಣ್ಗಳ ಮಂಗಳ ಪದ”ವಾಗಿದ್ದಿತು. ಒಟ್ಟಿನಲ್ಲಿ, ನಮ್ಮ ಕವಿಗಳು ಶರದೃತು ವರ್ಣನೆಯಲ್ಲಿ, ಆ ಋತುವಿನ ಬೆಳುದಿಂಗಳು ಬಹಳ ಮನೋಹರವಾಗಿದ್ದರೂ ಹೆಚ್ಚು ಉತ್ಸಾಹವನ್ನೂ ಶಕ್ತಿಯನ್ನೂ ವ್ಯಕ್ತಪಡಿಸಿಲ್ಲ. ಇರುವ ವರ್ಣನೆಗಳಲ್ಲಿ ದೇವಕವಿಯ ವರ್ಣನೆಯು ಸ್ವಲ್ಪ ಉತ್ತಮವಾದುದೆಂದು ಹೇಳಬಹುದು.

೫. ಹೇಮಂತ ಶಿಶಿರ ಋತುಗಳ ವರ್ಣನೆ

ಹೇಮಂತ ಶಿಶಿರ ಋತುಗಳಲ್ಲಿ ಪ್ರಕೃತಿಯಲ್ಲಿ ಉಂಟಾಗುವ ವ್ಯಾಪಾರಗಳು ಬಹಳ ಭಿನ್ನವಾಗಿಲ್ಲ. ಹಿಮಂತ ಋತುವಿನಲ್ಲಿ ವಿಶೇಷವಾಗಿ ಸುರಿಯುವ ಮಂಜಿನಿಂದಲೂ ಶಿಶಿರ ಋತುವಿನಲ್ಲಿ ಮೂಡಣ ಗಾಳಿಯ ಸಂಪರ್ಕದಿಂದಲೂ ಮರದ ಎಲೆಗಳು ಹಣ್ಣಾಗಿ ಉದುರಿಹೋಗುವುವು. ಸೂರ್ಯನು ದಕ್ಷಿಣಾಯನದಲ್ಲಿ ಸಂಚರಿಸುವನು. ಅವನ ತಾಪವು ಚಳಿಗಾಲದ ಶೀತವನ್ನು ಹೋಗಲಾಡಿ

ಚಿತ್ರವನ್ನುಂಟುಮಾಡುವುದು. ಹೀಗೆ ಈ ಎರಡು ಋತುಗಳ ಸ್ವಭಾವಗಳೂ ಒಂದೇ. ಕನ್ನಡ ಕವಿಗಳು ಈ ಋತುಗಳನ್ನು ಬೇರೆ ಬೇರೆಯಾಗಿ ವರ್ಣಿಸಿಲ್ಲ. ಈ ಎರಡು ಋತುಗಳ ಕಾಲಕ್ಕೆ ಮಾಗಿಯ ಕಾಲವೆಂದು ಹೆಸರಿಟ್ಟು ನಮ್ಮ ಕವಿಗಳು ಅದನ್ನು ವರ್ಣಿಸಿರುತ್ತಾರೆ. ಈ ಋತುಗಳನ್ನು ಸೋಮರಾಜನು ಬೇರೆ ಬೇರೆಯಾಗಿ ವರ್ಣಿಸಿರುವ ಹಾಗೆ ತೋರಿಬಂದರೂ ವರ್ಣನಾ ವಿಷಯಕವಾದ ವ್ಯಾಪಾರಗಳೂ ರೀತಿಯೂ ಒಂದೇ. ಈಗ ಮಾಗಿಯ ಕಾಲದ ವರ್ಣನೆಯ ವಿಮರ್ಶೆಗೆ ತೊಡಗೋಣ.

ಶರದೃತು ವರ್ಣನೆಯಲ್ಲಿ ದೇವಕವಿಯು ಎಷ್ಟು ರಾಮಣೀಯತೆಯನ್ನು ತೋರಿಸಿರುವನೋ ಅದಕ್ಕಿಂತಲೂ ಹೆಚ್ಚಾದ ಸೊಗಸನ್ನೂ ನೈಸರ್ಗಿಕತೆಯನ್ನೂ ತೋರಿಸಿರುವನು. ಚಳಿಗಾಲವು ಸಂಪ್ರಾಪ್ತವಾಗಲು ಮೂಡಣ ಗಾಳಿಯು "ನದೀ ನದ ನಿಕರಾಮಳೋದಕದೊಳಕ್ಕುಕೊಳುತ್ತ"ಲೂ, "ಅಸೋಜ ರಾಜಿಯ ದಳಂಗಳನುರ್ಚಿಕೊಳುತ್ತ"ಲೂ, "ಹಿಮೋದಿತ ಮಾರುತ"ವೃಳ್ಕ ದಾಗಿಯೂ ಬೀಸುವುದಕ್ಕೆ ತೊಡಗಿತು. ಅದರ ಸಂಗಡಲೇ—

ಮಾಲತಿಯಲ್ಲದೇವುದಿತರ ಪ್ರಸವಾವಳಿಯೆಂಬವೋಲ್ ಸಮು
ನ್ಮೀಲಿಸುತುಂ ಲತಾ ಕುಳದ ಪೂಗಳನುದ್ಧ ಹಿಮೋಗ್ರ ವಿಘ್ನಮಂ।
ಚಾಲಿಸುತುಂ ಪರಾಧಿಪ ದಿಶಾನಳ ವಾಹಮನೇರಿ ಬಂದುದಾ
ಭೀಳತೆವೆತ್ತು ಮಾಗೆ ತುಹಿನಾಳಿ ಕಳೇವರಮಾಗೆ ಬೇಗದಿಂ ॥

ಹೀಗೆ ಬಂದ ಮಾಗಿಯನ್ನು ನೋಡಿ ದೇವಕವಿಯು ಭೀತಿಗೊಂಡನು. 'ಕೋಮಲವಾಗಿರುವ ಲತೆಗಳ ಸಮೂಹದ ಸರ್ವಸ್ವವಾಗಿರುವ ಹೂಗಳನ್ನು ಮಾಗಿಯು ನಿರ್ಮೂಲಮಾಡಿದುದೇಕೆ? ಸ್ಪರ್ಶನದಿಂದ ಜನಗಳಿಗೆ ದುಃಖವನ್ನುಂಟು ಮಾಡುವ ಹಿಮವೆಂಬ ವಿಘ್ನವನ್ನು ಮಾಗಿಯು ಘಟಿಸಲೇಕೆ? ತಣ್ಣ ಪಣ್ಣನೆ ತೀಡಿದ ಪಶ್ಚಿಮಾನಿಲನನ್ನು ಪರಾಭವಿಸಿದುದೇಕೆ? ಆಹಾ! ಮಾಗಿಯು ಎಷ್ಟು ನಿರ್ದಯವಾದುದು, ಎಷ್ಟು ಕಠಿನವಾದುದು!' ಎಂಬ ಭಾವನೆಯು ದೇವಕವಿಯ ವರ್ಣನೆಯನ್ನು ಓದುತ್ತಲೇ ಹೃದಯವನ್ನು ಸೇರುವುದು. ಹೀಗೆ ದೇವಕವಿಯು ಮೊದಲೇ ನಮ್ಮ ಹೃದಯವನ್ನು ಆಕರ್ಷಿಸಿ ಮಾಗಿಯ ಕಾಲದಲ್ಲಿ ಕೆಲವು ಸಸ್ಯ ಜಾತಿಗಳಲ್ಲುಂಟಾಗುವ ಸೊಗಸನ್ನು ವರ್ಣಿಸುವಾಗ, "ಇಂಪಿನ ರಸದುರ್ಬ ನಾಳ್ಕು ನಯವೇರಿದುದಿಕ್ಷು ನಿಕಾಯಮುಯ್ಯು" ಎಂದು ಕಬ್ಬಿನ ತೋಟದ ಚಿತ್ರವನ್ನು ಕಲ್ಪಿಸಿ ಮಾಗಿಯ ತುಷಾರವನ್ನು ವರ್ಣಿಸಲುಪಕ್ರಮಿಸುತ್ತಾನೆ. ಹಿಮವು ಭೂಮಿಯ ಮೇಲೆ ಅಪಾರವಾಗಿ ಹರಡಲು ಪ್ರಕೃತಿಯಲ್ಲುಂಟಾಗುವ ಒಂದು ಕಾಂತಿ ಹೀನತೆಯನ್ನು—

ಮುಕುಳಿತ ವೃತ್ತಿಯಾಯ್ತು ಸತತಂ ಶತಪತ್ರ ಸಮಾಜವಾವಗಂ
ವಿಕಸಿತ ರೂಪಮಾಯ್ತು ಕುಮುದಾವಳಿ ಕೋಕ ಕುಳಂ ವಿಯೋಗ ಪಾ।

ವಕ ಪರಿಯುಕ್ತವಾಯ್ತು ನಿಶಮುಷ್ಟ ಚಕೋರ ಚಯಂ ನಿರಂತರಾ
ಧಿಕ ಮುದಮಾಯ್ತೆನಲ್ಕೆ ತುಹಿನೋತ್ಕಟ ಸಂಕಟಮಂತುಟು ಮಾಗೆಯ ಪ್ರಕ್ರಿಯೆಯೊಳ್॥

ಎಂಬ ಪದ್ಯದಲ್ಲಿ ಸೂಚಿಸಿರುತ್ತಾನೆ. ಇದು ಕವಿಸಮಯಗಳಿಂದ ಯುಕ್ತವಾಗಿದ್ದರೂ ಕನ್ನಡದಲ್ಲಿ ಎಷ್ಟು ಮೃದುಲವಾದ ಶೈಲಿಯಿಂದ ಬರೆಯಬಹುದೆಂಬುದನ್ನು ತೋರಿಸುವುದಕ್ಕಾಗಿ ಈ ಪದ್ಯವು ಉದಾಹೃತವಾಗಿದೆ. ಹೀಗೆ ತುಹಿನೋತ್ಕಟವನ್ನು ದೇವಕವಿಯು ವರ್ಣಿಸಿಯಾದಮೇಲೆ ಚಳಿಯಿಂದ ಪ್ರಾಣಿಗಳು ನಡುಗುವುದನ್ನು ತಿಳಿಯಪಡಿಸುವುದಕ್ಕಾಗಿ ಕಪಿಗಳನ್ನೂ ಪಕ್ಷಿಗಳ ಸಮೂಹವನ್ನೂ ವರ್ಣಿಸುತ್ತಾನೆ. ಈ ವರ್ಣನೆಗಳು ಎಷ್ಟು ವಿಶದವಾಗಿಯೂ ಸ್ವಭಾವಾನುಗುಣವಾಗಿಯೂ ಇರುವುವೆಂದು ತಿಳಿಯಬೇಕಾದರೆ ಮಾತುಗಳಲ್ಲಿರುವ ಚಿತ್ರವನ್ನು ಮನೋನೇತ್ರಗಳ ಮುಂದೆ ಕಲ್ಪಿಸಿಕೊಳ್ಳಬೇಕು. ಆಗ ನಮ್ಮ ಕವಿಗಳ ಕೆಲವು ವರ್ಣನೆಗಳ ಮಹತ್ವವನ್ನು ಎಲ್ಲರೂ ತಿಳಿಯಬಹುದು. ಆ ಪದ್ಯಗಳನ್ನು ತಮ್ಮ ಅವಗಾಹನೆಗೆ ತರುವುದಕ್ಕಾಗಿ ಮನಸ್ಸು ಆಸೆಪಡುವುದು.—

ಪರಿದಾಗಳ್ ಪನಿಪುಲ್ಲ ಬಿಂದುಗಳ ತಂದಲ್ ರೋಮ ರೋಮಂಗಳಂ
ನೆಟ್ಟಿಸೆ ಸಾರ್ಚುತ್ತಿರೆ ಜಾನು ಮಧ್ಯಗತ ಮೂರ್ಧಭ್ರಾಂತಮಾಗಿಂತು ಪ!
ಲ್ಬರೆಗುಟ್ಟುತ್ತಮೆ ವಾನರಾಳಿ ನಡುಗುತ್ತಿರ್ದತ್ತು ಶಾಖಾಗ್ರದೊಳ್
ನೆಟ್ಟನೆಗೆಯ್ವಂದವೆ ಮುಂಬಗಲ್ವರಮದೆತ್ತಂ ಪೋಗದಾ ಮಾಗೆಯೊಳ್ ॥

ಈ ವಾಕ್ಚಿತ್ರವನ್ನು ಮಾತುಗಳಲ್ಲಿಯೇ ಇನ್ನೂ ವಿಶದವಾಗಿ ಬರೆಯಲು ಸಾಧ್ಯವಿಲ್ಲ. "ಜಾನುಮಧ್ಯಗತ ಮೂರ್ಧಭ್ರಾಂತವಾಗಿ" ಎಂಬ ಪದವು ಕಪಿಯು ಕುಳಿತುಕೊಂಡಿರುವ ಸ್ಥಿತಿಯನ್ನು ಎಷ್ಟು ಚೆನ್ನಾಗಿ ತಿಳಿಸುತ್ತದೆ! ಚಳಿಯು ಅಧಿಕವಾದರೆ ಹಲ್ಲುಗಳು ಒಂದಕ್ಕೊಂದಕ್ಕೆ ಉಜ್ಜಿ ಉಂಟಾಗುವ ಶಬ್ದವನ್ನು ಎಲ್ಲರೂ ಅನುಭವದಿಂದ ಕೇಳಿರಬಹುದು. ಕಪಿಗೂ "ಪಲ್ಬರೆಗುಟ್ಟಿತ್ತು". ಈ ವರ್ಣನೆಯನ್ನು "ವಾನರಾಳಿ" ಎಂಬ ಪದಕ್ಕೆ ಬದಲಾಗಿ ಮನುಷ್ಯನಿಗೆ ಅನ್ವಯಿಸುವ ಒಂದು ಪದವನ್ನು ಹಾಕಿ ಓದಿದರೆ ಎಷ್ಟು ನಿಜವಾಗಿ ಅವನಿಗೂ ಈ ಪದ್ಯವು ಅನ್ವಯಿಸುವುದು! ಇನ್ನು, ಪಕ್ಷಿಗಳ ವಿಚಾರವಾಗಿ ದೇವಕವಿಯು—

ಪಕ್ಕದಿಂ ಕೊಂಬಿನೊಳ್ಪ್ರಿಯನಿಟ್ಟು ಕುಲಾಯಮನೊತ್ತಿಗೊಂಡು ಮೆ
ಯ್ಯಿಕ್ಕಿ ಕೊರಲ್ಕುನುಂಗಿ ನವಿರಗ್ರದೊಳಾ ಪನಿ ಪುಲ್ಲ ಬಿಂದುಗಳ್ ।
ತೆಕ್ಕನೆ ಕೀವೆ ಮುತ್ತಿನ ವಿಹಂಗಮದಂತೆ ವಿಹಂಗ ಮಂಡಳಂ
ನೊಕ್ಕಳವಾಗಿ ಮಾಗೆಯೊಳಗಿರ್ದುದು ಪಾರದೆ ಮುಂಬಗಲ್ವರಂ ॥

ಎಂದು ಹೇಳುತ್ತಾನೆ. ಇದರಲ್ಲಿ ಪಕ್ಷಿಗಳ ಸ್ವಭಾವವು ಎಷ್ಟು ಹೃದಯಂಗಮವಾಗಿ ನಿರೂಪಿತವಾಗಿದೆ! ಇವೆಲ್ಲವೂ ಮಾಗಿಯ ಕಾಲದ ಸ್ವಭಾವವಲ್ಲವೆ? ಈ ವರ್ಣನೆಗಳೆಲ್ಲವೂ ಆದಮೇಲೆ ದೇವಕವಿಯು ಹಿಂಡದ ಮತ್ತು ನೊಸಳೆಗಳ ಸಂಕಟವನ್ನು

ಒಂದೊಂದು ಪದ್ಯದಲ್ಲಿ ಮನಸ್ಸು ಕರಗುವ ಹಾಗೆ ಚಿತ್ರಿಸಿ ಮನುಷ್ಯನ ಜೀವನವು ಮಾಗಿಯ ಕಾಲದಲ್ಲಿ ಹೇಗಿರುವುದೆಂಬುದನ್ನು ಒಂದು ಪದ್ಯದಲ್ಲಿ ಹೇಳುತ್ತಾನೆ.—

ನಸು ಬಿಸಿಯಪ್ಪ ನಲ್ಲುಣಿಸಿನಿಂ ಘುಸೃಣಾರ್ದ್ರ ವಿಲೇಪದಿಂ ವಿರಾ
ಜಿಸುವ ಕದಂಬದಂಬುಲದಿನಂಚಿತ ಕಾಂಚನ ಭೂಷಣಂಗಳಿಂ ।
ದೆಸಕದ ಶೋಣ ವರ್ಣ ವಸನಾವೃತದಿಂ ಜನಮಾಗಳಿಂತು ಜೀ
ವಿಸಿತಿನಿತಲ್ಲದೊಂದುಸಿರ್ವುದೇ ಹಿಮದಾಗರವಾದ ಮಾಗೆಯೊಳ್ ॥

ಈ ಮಾಗಿಯ ಕಾಲದ ವರ್ಣನೆಯನ್ನು ಓದಿದರೆ ದೇವಕವಿಯು ಸಾಮಾನ್ಯನಲ್ಲವೆಂದು ತೋರುವುದು. ಅದನ್ನೆಲ್ಲವನ್ನೂ ಓದಿ ಮುಗಿಸಿದಮೇಲೆ ಮನಸ್ಸಿಗೆ ಶಾಂತಿಯೂ ಆನಂದವೂ ಉಂಟಾಗುವುವು. ಆತನ ಸರಳವಾದ ಶೈಲಿಯು ಹೃದಯವನ್ನು ಮೃದುವಾಗಿ ಮಾಡುವುದಲ್ಲದೆ ಆ ವರ್ಣನೆಗೇ ಒಂದು ಹೊಸ ಮೆರುಗನ್ನು ಕೊಟ್ಟಿದೆ. ಇಂತಹ ಅದ್ಭುತ ಶಕ್ತಿಯುಳ್ಳ ದೇವಕವಿಯು ತನ್ನ ಉಚ್ಚ ಭಾವಗಳ ಉದ್ರೇಕದ ಕಾಲದಲ್ಲಿ ಆವ ಆಂಗ್ಲ ಕವಿಗೂ ಕಡಿಮೆಯಾದವನಲ್ಲವೆಂದು ಹೇಳಲು ಅಭಿಮಾನವು ತವಕಪಡುವುದು.

ಮಾಗಿಯ ಕಾಲದ ವರ್ಣನೆಗಳಲ್ಲಿ ಉತ್ತಮವಾದುದನ್ನು ಓದಿ ಆನಂದಪಟ್ಟ ಮೇಲೆ ಇತರ ಕವಿಗಳು ಹೇಗೆ ವರ್ಣಿಸಿರುವರೆಂಬುದನ್ನು ಸ್ವಲ್ಪ ವಿಚಾರ ಮಾಡೋಣ. ಸೋಮರಾಜನ ವರ್ಣನೆಯು ವಿಸ್ತಾರವಾಗಿದೆ. ಅವನು ಮಾಗಿಯ ಕಾಲದಲ್ಲಿ ತೋರುವ ಸೂರ್ಯ ಚಂದ್ರಮಂಡಲಗಳನ್ನು ವರ್ಣಿಸಿರುವನು. ಈತನ ಮನಸ್ಸಿನಲ್ಲುಂಟಾದ ಒಂದು ನೂತನವಾದ ಭಾವವು ಒಂದು ಪದ್ಯದಲ್ಲಿ ಕೋಮಲವಾಗಿ ರೂಪುಗೊಂಡಿದೆ. ಆ ಪದ್ಯವನ್ನು ಇಲ್ಲಿ ಉದಾಹರಿಸಬಹುದು.—

ಮುಚ್ಚಿ ಮುಸುಂಕಿದಿಬ್ಬನಿಯನುಬ್ಬನಿಗಳ್ಮಿಗೆ ಸಿಲ್ಕಿ ತೋಱುವಾ
ಪಚ್ಚೆ ಪಸುರ್ಪಿಂಚುವೆಲೆಯಾಂತು ವಿರಾಜಿಸುಗುಂ ಕುಜೋತ್ಕರಂ ।
ನಿಚ್ಚ ಮಲಂಪಿನಿಂಪಿನ ವಸಂತನನಂದುಱಿತಿ ಪಾರ್ದು ನೊಂದು ತಾಂ
ಬೆಚ್ಚನೆ ಬಾಷ್ಪ ವಾರಿಯನೆ ತುಂಬಿ ವಿಜೃಂಭಿಸುವಂತೆ ಮಾಗೆಯೊಳ್ ॥

ಹೀಗೆಯೇ ಮನುಷ್ಯರು ದುಃಖ ಕಾಲಗಳಲ್ಲಿ ತಾವು ಸುಖವಾಗಿದ್ದ ಒಂದಾನೊಂದು ಕಾಲವನ್ನು ಜ್ಞಾಪಿಸಿಕೊಂಡು ವ್ಯಥೆಪಡುವರು. ಈತನ ವರ್ಣನೆಯಲ್ಲಿ ನಯವಿಲ್ಲ, ಗೂಢವಾದ ಭಾವಗಳ ವಿವರಣವಿಲ್ಲ. ರುದ್ರಭಟ್ಟನಲ್ಲಿ ಕಂಡುಬರುವ ಕೆಲವು ಭಾವಗಳು ದೇವಕವಿಯ ವರ್ಣನೆಯಲ್ಲಿಯೂ ತೋರಿಬರುವುವು. ದೇವಕವಿಯ "ಪಕ್ಕದಿರುಂಬನೊಳ್ಮರಿಯನಿಟ್ಟು" ಎಂಬ ಪದ್ಯವನ್ನು ರುದ್ರಭಟ್ಟನ "ತಳರ್ದು ಕುಲಾಯದಿಂ" ಎಂಬ ಪದ್ಯದೊಡನೆ ಹೋಲಿಸಿ ನೋಡಿದರೆ ಇಬ್ಬರ ವರ್ಣನೆಗಳಿಗೂ ಇರುವ ಸಾಮ್ಯವು ಸ್ಪಷ್ಟವಾಗುತ್ತದೆ. ಷಡಕ್ಷರಿಯ ವರ್ಣನೆಯಂತೂ ಭೂಲೋಕದ ಮಾಗಿಯ ಕಾಲದ ವರ್ಣನೆಯ ಹಾಗಿಲ್ಲ, ಅದು ವೈಕುಂಠ ಸತ್ಯಲೋಕಾಂತರಕ್ಕೆ ಸಂಬಂಧಪಟ್ಟುದು. ಈತನ ವರ್ಣನೆಯಲ್ಲಿ ಭಾವ ಪರಿಪುಷ್ಟಿ

ಯಿಲ್ಲ, ಗಾಂಭೀರ್ಯವಿಲ್ಲ, ಮಹಾ ಕವಿತೆಯಲ್ಲಿರಬೇಕಾದ ಸಂಸ್ಕಾರದ ಗುರುತುಗಳು ಕಾಣಬರುವುದಿಲ್ಲ; ಈತನ ಮನಸ್ಸು ಯಾವಾಗಲೂ ವಿಷಯ ಸೌಖ್ಯಗಳ ಕಡೆಗೆ ಓಡುವುದು, ಯಾವಾಗಲೂ ರಜೋಗುಣಯುಕ್ತವಾದುದು, ಮನಸ್ಸಿಗೆ ಶಾಂತತೆಯನ್ನುಂಟುಮಾಡುವುದಿಲ್ಲ. ಲಕ್ಷ್ಮೀಶನ ವರ್ಣನೆಯಲ್ಲಿಯೂ ಸಹಜಸ್ಫೂರ್ತಿಯ ಗಾಳಿಯು ಸ್ವಲ್ಪ ಬೀಸುತ್ತಿರುವುದು. ಆದರೆ, ಲಕ್ಷ್ಮೀಶನು ಸಮಯ ಸಂದರ್ಭಗಳಿಗನುಗುಣವಾಗಿ ತನ್ನ ಮನಸ್ಸನ್ನು ವಿಶೇಷವಾಗಿ ಸ್ವೇಚ್ಛೆಯಿಂದ ಬಿಡದೆ ನಿಯಮನಮಾಡಿಕೊಳ್ಳಬಲ್ಲನು. ಲಕ್ಷ್ಮೀಶನ ಇಂತಹ ವರ್ಣನೆಗಳು ಆತನ ಭಕ್ತಿಯುಕ್ತವಾದ ವರ್ಣನೆಗಳ ಮಾಧುರ್ಯದಿಂದ ಹೆಚ್ಚಾಗಿ ವಾಚಕರ ಮನಸ್ಸನ್ನು ಸೆರೆಹಿಡಿದುಕೊಳ್ಳಲಾರವು. ಹಾಗೆ ವಾಚಕರು ಪರವಶರಾದರೂ ಅವರು ನೋಡುವುದು ಮಾಗಿಯ ವರ್ಣನೆಯನ್ನು ಓದುವ ಕಾಲದಲ್ಲಿ ಮಾತ್ರ. “ಪುಷ್ಪಪದ ಕಮಲ ಮಧುಕರನಾದ” ನಾರದನ ವರ್ಣನೆಯಿಂದ ಓದುವರ ಮನಸ್ಸು ಕೂಡಲೆ ಪರಿಪೂತವಾಗುವುದು. ಬೊಬ್ಬುರು ರಂಗನ ಮಾಗಿಯ ಕಾಲದ ವರ್ಣನೆಯಲ್ಲಿ ಕೃತಕತ್ವವು ವಿಶೇಷವಾಗಿ ಕಾಣಬರುವುದು. ಈ ವಿಷಯವು “ವನಲಕ್ಷ್ಮಿಯುಂ ತಾನಸನೇರ್ಪನಾಗೆ” ಎಂಬ ಪದ್ಯವನ್ನು ಓದಿದರೆ ಸ್ಪಷ್ಟವಾಗುವುದು. ಈ ವರ್ಣನಾ ಪದ್ಯದಲ್ಲಿ ರಸೋತ್ಪಾದಕ ಶಕ್ತಿಯಿಲ್ಲ. ಒಟ್ಟಿನಲ್ಲಿ, ನಮ್ಮ ಕವಿಗಳ ಋತು ವರ್ಣನಾ ಪದ್ಧತಿಯನ್ನೂ ಅವುಗಳ ಕುಂದುಗಳನ್ನೂ ಗುಣಗಳನ್ನೂ ಸಮಷ್ಟಿಯಾಗಿ ನೋಡಿದುದಾಯಿತು. ಈ ಕವಿಗಳಿಗೆ ವಸಂತ ವರ್ಷ ಋತುಗಳೂ ಮತ್ತು ಮಾಗಿಯ ಕಾಲದ ಸೊಗಸುಗಳೂ ಅತ್ಯಂತ ಮನೋಹರವಾಗಿದ್ದುವು.

(೩) ಸೂರ್ಯನ ವರ್ಣನೆ

ಸೂರ್ಯೋದಯ ವರ್ಣನೆಯನ್ನು ಹಿಂದಿನ ಕವಿಗಳು ಮಾಡಬೇಕಾಗಿದ್ದ ರೀತಿಯನ್ನು ಮಲ್ಲಿಕಾರ್ಜುನನು ಹೀಗೆ ನಿರೂಪಿಸುತ್ತಾನೆ:—

ಹಳಹಳನಿರ್ದ ತಾರೆ ಕಳೆಗುಂದಿದ ಚಂದ್ರನಲರ್ಕೆಗುಂದಿದು
ತ್ಪಳ ವನ ಶೈತ್ಯಮುಪ್ಪಲರು ನಂದುವ ದೀಪಮುಗಲ್ವ ಜಾರೆಯರ್ ।
ಗಳಿಪುವ ಕೋಳಿ ಶಂಖಮುರುಣಚ್ಛವಿ ಕೆಂಪಿನ ಮುಂಡಲಂ ರತ
ಕ್ಕೆಳಸುವ ಕೋಕಮುಬ್ಜ ವಿಕಸಂ ಸಲೆ ಸೂರ್ಯನ ವರ್ಣನ ಕ್ರಮಂ ॥

ಈ ಸೂತ್ರದಲ್ಲಿ “ಹಳಹಳನಿರ್ದ ತಾರೆ”, “ಕಳೆಗುಂದಿದ ಚಂದ್ರಂ”, ‘ಶೈತ್ಯಮುಪ್ಪಲರು”, “ಗಳಿಪುವ ಕೋಳಿ”, “ಅರುಣಚ್ಛವಿ”, “ಇನಮಂಡಲ” —ಇವುಗಳ ವರ್ಣನೆಗಳು ಪ್ರಕೃತಿಯಲ್ಲಿ ಸೂರ್ಯೋದಯ ಕಾಲದಲ್ಲಿ ನಾವು ಅನುಭವಿಸುವ ಒಂದು ಸೊಬಗನ್ನು ತೋರಿಸುತ್ತವೆ. ಮೊದಲು ಸೂರ್ಯನು ಉದಯವಾಗುವಾಗ ತೋರಿಬರುವ ಅರುಣ ಕಾಂತಿಯುಕ್ತವಾದ ಸೌಂದರ್ಯವನ್ನು ನಮ್ಮ ಕವಿಗಳು ಹೇಗೆ ವರ್ಣಿಸುವರೆಂಬುದನ್ನು ವಿಚಾರಮಾಡೋಣ.—

ಹರಿಕಾಂತಾ ಕನತ್ಕಾಂಚೀಕೆಯು ತರಳ ಮಾಣಿಕ್ಯವೋ ಪೂರ್ವ ಧಾತ್ರೀ
ಧರ ಹರ್ಮ್ಯಾಗ್ರ ಸ್ಥಿತ ಶೋಣ ಮಣಿ ಕಳಶವೋ ವಿಸ್ಫುರದ್ಬ್ರಹ್ಮಾಂಡ ಪಿಂಡಾ।

ರ ರಜಂ ತಳ್ತೊಪ್ಪುವೈರಾವತ ಗಜದ ಶಿರಃಪಿಂಡವೋ ಪೇಳಿಮೆಂಬಂ
ತಿರೆ ಕೆಂಪಂ ತಾಳ್ದು ಪೂರ್ಣತ್ವಮನೆ ತಿಮಿರ ಕುಭೃತ್ತಂಬವಾ ಭಾನು ಬಿಂಬಂ ॥

—ಕಮಲಭವ

ಪುದಿದು ಕವಿದಿಡಿದ ತಮ ದೊ
ಡ್ಡದಿರ್ವಿನಮೊರ್ವೊದಲೊಳಿರ್ದ ಕಲ್ಲಿವೆಯು ಸಸಿವೊಲ್ ।
ಕದಿರ್ಗಳೊಳೆ ತುಱುಗಿ ಮೂಡಿದ
ನುದಯಾದ್ರಿಯೊಳರುಣನರುಣ ಕಿರಣ ಪ್ರಸರಂ ॥

—ಗುಣವರ್ಮ I

ಇದು ಚಂಚದ್ವ್ಯೋಮ ಲಕ್ಷ್ಮೀ ಕರ ಕಲಿತ ಸುವರ್ಣಾಬ್ಜವೋ ನೋಡು ನೋಡಿಂ
ತಿದು ಪೂರ್ವಾಶಾಂಗನಾ ಮಂಗಳ ಮಧುರಿಮ ಸೀಮಂತ ಮಾಣಿಕ್ಯವೋ ಪೇ ।
ಳಿದು ಶಕ್ರಾಶಾದ್ರಿ ಹರ್ಮ್ಯೋಜ್ಜ್ವಲ ಕಳಶವೊ ತಾನೆಂಬಿನಂ ಕಣ್ಗೆ ಚೆಲ್ವಾ
ದುದು ಚಂಚದ್ವೃಕ್ಷದಂಬಂ ತಿಮಿರ ಕುಧರ ಶಂಬಂ ದಿನಾಧೀಶ ಬಿಂಬಂ ॥

—ಷಡಕ್ಷರಿ

ದೇವಕುಲೇಂದ್ರನುಪ್ಪರಿಗೆಯುಗ್ಗದ ಕಾಂಚನ ಕುಂಭದಂತೆ ಚೆ
ಲ್ವಾವರಿಸಿರ್ಪಿನಂ ಮಿಱುಪ ಸಿಂದುರದೊಳ್ದೊರೆದಾದವೊಪ್ಪುವೈ ।
ರಾವತ ಕುಂಭದಂತೆ ದಿವಿಜೇಂದ್ರ ದಿಶಾ ಸರದಲ್ಲಿ ತೋರ್ಪ ಚೆಂ
ದಾವರೆಯಂತೆ ರಂಜಿಸಿದುದುಜ್ಜ್ವಳಿಪಂಬುಜ ಮಿತ್ರ ಮಂಡಲಂ ॥

—ಸೋಮರಾಜ

ಪ್ರಾಚೀ ಮಾಣಿಕ್ಯ ತಾಟಂಕವೊ ದಿವಸ ರಮಾ ಪಾಣಿ ಪಂಕೇಜಗ ವ್ಯಾ
ಕೋಚ ಸ್ವರ್ಣಾಬ್ಜವೋ ಪುಷ್ಕರ ಮುರಹರ ಹಸ್ತಾಬ್ಜ ವಿನ್ಯಸ್ತ ಚಂಚ ।
ದ್ರೋಚಿಶ್ಚಕ್ರವೋ ಮೇಣ್ಮಲಯ ಶಿಖರಿ ಬಂಧೂಕವೋ ಪೇಳಿಮೆಂಬಂ
ತಾಚಾಂತ ಧ್ವಾಂತ ವಾರಾಕರಮೆಸೆದುದಳುಂಬಂ ದಿನಾಧೀಶ ಬಿಂಬಂ ॥

—ಬಸವಪ್ಪಶಾಸ್ತ್ರಿ

..............ಆದಿತ್ಯನೊಳ್ ನೆರೆಯು
ಲೆಳಸಿ ಕುಂಕುಮದಿಂದ ಪೂರ್ವ ದಿಗ್ವನಿತೆ ಮಂ
ಗಳ ಮಜ್ಜನಂಗೈದಳೆಂಬಂತೆ ರಂಜಿಸಿತು ಮೂಡದೆಸೆ ಕೆಂಪಡರ್ದು ॥

—ಲಕ್ಷ್ಮೀಶ

ಈ ವರ್ಣನೆಗಳನ್ನು ಮೊದಲನೆಯ ಸಲ ವ್ಯುತ್ಪತ್ತಿಯಿಲ್ಲದವರು ಓದಿದರೆ ಅವರ ಮನಸ್ಸು ನಿಜವಾಗಿಯೂ ಕನ್ನಡ ಸಾಹಿತ್ಯವನ್ನೇ ದೂಷಿಸಲು ಮೊದಲುಮಾಡುವುದು; ಓದಿದರೆ ಅರ್ಥವಾಗದ ಹಾಗೆ ಸಂಸ್ಕೃತ ಶಬ್ದಗಳು ಹೆದರಿಸುವಂತೆ ತೋರುತ್ತಿವೆ. "ಈ ಹಾಳು ಕನ್ನಡ ಕವಿಗಳ ಪದ್ಧತಿಯೇ ಹೀಗೆ" ಎಂದು ಅನಭಿಜ್ಞರಾದವರು ಕನ್ನಡ ಸಾಹಿತ್ಯವನ್ನು ತಿರಸ್ಕರಿಸಿ ಅನಾದರಯುಕ್ತರಾಗಿರುವರು. ನಮ್ಮವರನ್ನು ನಾವೇ ದೂಷಿಸಿದಮೇಲೆ ಇನ್ನು ಹೊರಗಿನವರು ಹೇಗೆ

ತಾನೆ ಅವರನ್ನು ಮೆಚ್ಚುವರು? ಆದುದರಿಂದ ನಮ್ಮ ಕವಿಗಳನ್ನು ಸ್ವಲ್ಪ ಚೆನ್ನಾಗಿ ತಿಳಿದುಕೊಂಡು ಕೆಲವು ಒಳ್ಳೆಯ ಮಾತುಗಳನ್ನಾದರೂ ಹೇಳೋಣ. ಏನೊ! ಅವರು ಹಿಂದುಮುಂದಾಲೋಚನೆಯಿಲ್ಲದೆ ಪಾಂಡಿತ್ಯದ ಪ್ರಭಾವದಿಂದ ಅರ್ಥವಾಗದ ಪದಗಳನ್ನು ಹಾಕಿ ಬರೆದಿರಬಹುದು. ಅಷ್ಟಕ್ಕಾಗಿ ನಾವು ಅವರನ್ನು ತಿರಸ್ಕರಿಸಬಹುದೆ? "ಆನಂದ ಸಿಂಧುವಾ ಪರಾತ್ಪರನೆನಗೆ ಜಗದೊಳಾನಂದಮೇವರಂ ಕಳೆಯಲಹುದೇಂ" ಎಂಬ ಮಾತುಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ನಮ್ಮ ಕವಿಗಳ ವಿಷಯವಾಗಿ ಸ್ವಲ್ಪ ತಾಳ್ಮೆಯನ್ನು ವಹಿಸಿ ಅವರು ಮಾಡಿರುವ ವರ್ಣನೆಗಳನ್ನು ಸ್ವಲ್ಪ ಶ್ರಮದಿಂದಲಾದರೂ ತಿಳಿದುಕೊಂಡು, ಆಮೇಲೆ ವಿಮರ್ಶಿಸಿ ಯುಕ್ತವಾದುವುಗಳನ್ನು ಪರಿಗ್ರಹಿಸಿ ನಮ್ಮ ಸಾಹಿತ್ಯವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಸ್ಥಿತಿಗೆ ತರಲು ಪ್ರಯತ್ನಪಡೋಣ.

ಪ್ರಕೃತದಲ್ಲಿ, ಸೂರ್ಯನ ಈ ವರ್ಣನೆಗಳನ್ನು ಚೆನ್ನಾಗಿ ತಿಳಿದು ಅವುಗಳಲ್ಲಿರುವ ಸ್ವಾದುತ್ವವನ್ನು ನೋಡಬೇಕಾದರೆ ಊಹಾ ಬಲವನ್ನು ಸ್ವಲ್ಪ ವಿಸ್ತರಿಸಬೇಕಾಗುತ್ತದೆ. ಈಗ ಕಮಲಭವನ ವರ್ಣನೆಯನ್ನು ತೆಗೆದುಕೊಳ್ಳೋಣ. ಸೂರ್ಯಬಿಂಬವು ಪೂರ್ವದಿಕ್ಕೆಂಬ ವನಿತೆಯ ಕೊರಳಲ್ಲಿರುವ ಕಂಠಿಕೆಯೆಂಬ ಆಭರಣದ ಕೆಂಪು ರತ್ನದ ಹಾಗೂ, ಪೂರ್ವದಿಕ್ಕೆಂಬ ಅರಮನೆಯ ರತ್ನಮಯವಾದ ಕಳಶದ ಹಾಗೂ, ಐರಾವತವೆಂಬ ಆನೆಯ ಸಿಂಧೂರ ಲಿಪ್ತವಾದ ಕುಂಭಸ್ಥಳದ ಹಾಗೂ ಕೆಂಪು ಬಣ್ಣವನ್ನು ಹೊಂದಿ ಉದಯವಾಯಿತು. ಹೀಗೆಯೇ ಸ್ಥೂಲವಾಗಿ ಷಡಕ್ಷರಿ ಸೋಮರಾಜಾದಿಗಳ ವರ್ಣನೆಗಳೂ ಕೂಡ. ಕಮಲಭವನ ವರ್ಣನೆಯಲ್ಲಿ "ತರಳಮಾಣಿಕ್ಯ"ವೆಂದು ಸೂರ್ಯನಿಗೆ ವಿಶೇಷಣ ಹೇಳಿರುವುದರಿಂದ ಉದಯಕಾಲದ ಸೂರ್ಯನಲ್ಲಿ ಕ್ಷಣಕ್ಷಣಕ್ಕೂ ಬೇರೆ ಬೇರೆಯಾಗಿ ತೋರಿಬರುವ ಸೊಗಸುಗಳು ಜ್ಞಾಪಕಕ್ಕೆ ಬರುತ್ತವೆ. ಷಡಕ್ಷರಿಯ "ಚಂಚದ್ದೃಕ್ಕದಂಬಂ" ಎಂಬ ಮಾತುಗಳಲ್ಲಿಯೂ ಕೂಡ ಅದೇ ಭಾವವು ಮನಸ್ಸಿನಲ್ಲಿ ಉಂಟಾಗುವುದು. ಸೂರ್ಯಬಿಂಬವನ್ನು ನೋಡುತ್ತಲೆ ಷಡಕ್ಷರಿಗೆ ಅತಿಶಯವಾದ ಉತ್ಸಾಹವೊ, ಅಥವಾ ಮನೋರಂಜನೆಯೊ ಉಂಟಾಗಿದ್ದಿತೆಂಬುದು, "ನೋಡು ನೋಡಿಂತಿದು ಪೂರ್ವಾಶಾಂಗನಾ ಮಂಗಳ ಮಧುರಿಮ ಸೀಮಂತ ಮಾಣಿಕ್ಯಮೋ" ಎಂಬ ಮಾತುಗಳಲ್ಲಿ ಸೂಚಿತವಾಗಿದೆ. ಗುಣವರ್ಮನಿಗೆ ಮಾತ್ರ ಸೂರ್ಯನು, "ಅರುಣಸರುಣಕಿರಣ ಪ್ರಸರ"ವುಳ್ಳವನಾಗಿದ್ದನು. ಆಧುನಿಕರಾದ ಬನಸ್ಪತಿಶಾಸ್ತ್ರಿಗಳ ವರ್ಣನೆಯಲ್ಲಿ ಸೂರ್ಯನು "ಗುಂಜಯೋ [illegible] ಬಂಧೂಕವೋ" ಎಂಬ ಹಾಗೆ ಇದ್ದನು. ಈ ಮಾತುಗಳು ಭೋಜರಾಜನ "ಬಂಧೂಕ ಸ್ತಬಕ ಸುಂದರ ಬಂಧುರಾಗೇಣ ಪ್ರಾಚೀಮುಖೇನ" ಎಂಬ ಮಾತುಗಳಲ್ಲಿ ಅಡಕವಾಗಿರುವ ಚಿತ್ರವನ್ನು ಮನಸ್ಸಿನ ಮುಂದೆ ತರುವುವು. ಲಕ್ಷ್ಮೀಶನ ವರ್ಣನೆಯು ಸುಲಭವಾದ ಮಾತುಗಳಿಂದ ಕೂಡಿರುವುದರಿಂದಲೂ ಮತ್ತು ವಿಶದವಾಗಿರುವುದರಿಂದಲೂ ಕಲ್ಪನಾತೀತವಾಗಿಲ್ಲ. ಇದರಿಂದಲೇ ಆತನ ವರ್ಣನೆಯು ಜನರ ಮೆಚ್ಚಿಕೆಗೆ ಪಾತ್ರವಾಗಿದೆ.

ಈ ಕವಿಗಳ ವರ್ಣನೆಗಳೆಲ್ಲವೂ ಬಹಳ ವಿಚಿತ್ರವಾಗಿ ಕಾಣುವುವು; ಒಂದೊಂದು ವೇಳೆ ಊಹೆಗೂ ನಿಲುಕುವುದಿಲ್ಲ. ಇಂತಹ ಕೆಲವು ವರ್ಣನೆಗಳನ್ನು ನೋಡಿ ಆಂಗ್ಲ ಸಾಹಿತ್ಯಾಭಿಜ್ಞರು ನಮ್ಮ ದೇಶದ ಕವಿಗಳೆಲ್ಲರೂ "ಪೂರ್ವದೇಶೀಯಾತಿಶಯೋಕ್ತಿ"ಗಳೆಂಬ (Oriental hyperbole) ಭರಿತವಾದ ವರ್ಣನೆಗಳನ್ನು ಮಾಡುತ್ತಾರೆಂದು ಹಾಸ್ಯಮಾಡುತ್ತಿರುವರು; ಅವರ ಜೊತೆಗೆ ನಮ್ಮವರೇ ಆದ ಕೆಲವು ಜನರು ಸೇರಿ ನಗುತ್ತಲೂ ಹೀಯಾಳಿಸುತ್ತಲೂ ಇರುವರು. ಉದ್ದಾಮ ಕವಿಯಾದ ಮಿಲ್ಟನಿನ ಕಾವ್ಯಗಳಲ್ಲಿ ಎಷ್ಟು ಕಲ್ಪನಾತೀತವಾದ ವರ್ಣನೆಗಳಿರುವುವು! ಅತನು ಒಂದು ಸೂರ್ಯೋದಯವನ್ನು ಹೀಗೆ ವರ್ಣಿಸಿರುತ್ತಾನೆ:—

Now morn, her rosy steps in the Eastern clime
Advancing sowed the earth with Orient pearl

Paradise Lost, V.

ಈ ವರ್ಣನೆಯನ್ನು ನಮ್ಮವರು ಓದಿ ಆನಂದಪಟ್ಟು ತಲೆದೂಗಿ, "ಮಿಲ್ಟನ್ ಕವಿಯು ಎಷ್ಟು ಮಹಾನುಭಾವನು! ಅತನ ಪ್ರತಿಭಾ ಶಕ್ತಿಯು ಎಷ್ಟು ಅಸಾಧಾರಣವಾದುದು!" ಎಂದು ತಮ್ಮ ಮನಸ್ಸುಗಳಲ್ಲಿಯೇ ಹೇಳಿಕೊಳ್ಳುತ್ತಾರೆ. ಲಕ್ಷ್ಮೀಶನ "ಅತ್ತ ಪಲ್ಲವಿಸಿತಮಲ ಪೂರ್ವಾಶಾ ಲತಿಕೆಯೆನಲ್ಕೆಂಪಡರ್ದುದು ಮೂಡಲು", "ಪೂರ್ವ ದಿಗ್ವನಿತೆ ಮಂಗಳ ಮಜ್ಜನಗೈದಳೆಂಬಂತೆ ರಂಜಿಸಿತು ಮೂಡಣದೆಸೆ ಕೆಂಪಡರ್ದು" ಎಂಬ ವರ್ಣನೆಗಳು ಮಿಲ್ಟನಿನ ವರ್ಣನೆಗಿಂತ ಯಾವ ವಿಧದಲ್ಲಿ ಕಡಿಮೆಯಾಗಿದೆ? ಹೀಗೆ ಹೇಳಿದರೆ ನಮ್ಮ ಕವಿಗಳೆಲ್ಲರೂ ಮಿಲ್ಟನ್ನುಗಳೆಂದು ನನ್ನ ಅಭಿಪ್ರಾಯವಲ್ಲ; ಅವರಲ್ಲಿ ಕೆಲವರು ಒಂದೊಂದು ಕಾಲದಲ್ಲಿ ಒಂದೊಂದು ವರ್ಣನೆಯಲ್ಲಿ ಮಾತ್ರವೇ ಅತನಿಗೆ ಸಮಾನರೆಂದಿಷ್ಟೇ. ಕೆಲವು ಕವಿಗಳಲ್ಲಿರುವ ಅತಿಶಯೋಕ್ತ್ಯಾದಿ ಆಡಂಬರಗಳನ್ನು ಮನ್ನಿಸಿಬಿಡೋಣ. ಹಾಗೆ ಮಾಡಿದರೆ ನಮಗೆ ಕುಂದೆಲ್ಲಿಯದು?

ಇನ್ನು, ಸೂರ್ಯೋದಯ ಕಾಲದಲ್ಲಿ ಪ್ರಕೃತಿಯಲ್ಲಿ ತಲೆದೋರುವ ಕೆಲವು ಸೌಂದರ್ಯ ಯುಕ್ತವಾದ ಚಿಹ್ನೆಗಳ ವರ್ಣನೆಗಳ ಕಡೆಗೆ ನಮ್ಮ ಮನಸ್ಸನ್ನು ತಿರುಗಿಸಿ, ಕಾಂತಿಗುಂದಿ ಅದೃಶ್ಯವಾಗುವ ನಕ್ಷತ್ರಗಳನ್ನು ಮೊದಲು ತೆಗೆದುಕೊಳ್ಳೋಣ. ಕಮಲಭವನು ತಾರೆಗಳು ಪೋಪಳಿದು "ಹಳಹಳನಾಗು"ವುದನ್ನು ಹೀಗೆ ಚಿತ್ರಿಸಿರುತ್ತಾನೆ:—

ನೆಟ್ಟನೆ ತಾರಕಾ ಪತಿಯೆನಿಪ್ಪುದನೀಕ್ಷಿಸದೆಮ್ಮನಿಂದು ಕಾಂ
ತೊಟ್ಟನೆ ಬಿಟ್ಟು ಪೋದನಿರದೀಗಳೆ ತನ್ನಯ ತೀವ್ರ ಪಾದದಿಂ।
ದಿಟ್ಟೊಡ್ಡಿಸಲ್ಕೆ ಬರ್ಪನಿನನೆಂಬಿನಿಕುಮ್ಮಳವಾಗೆ ಕಾಂತಿ ಮೆ
ಯ್ಗೆಟ್ಟು ಜನಕ್ಕೆ ನಿಷ್ಪಳಿಸುವೆಯ್ದುದುದಾ ಭಗಣಂ ಪ್ರಭಾತದೊಳ್ ।

ಹೀಗೆಯೇ ಪ್ರಪಂಚದಲ್ಲಿ ಮಹಾತ್ಮರಾದವರು ತಮ್ಮ ಕಾಂತಿಯಿಂದ ಸಣ್ಣವರ ಕಾಂತಿಯನ್ನು ಮುಚ್ಚಿಬಿಡುವರಲ್ಲವೆ! ಮಲ್ಲಿಕಾರ್ಜುನನಿಗೆ ನಕ್ಷತ್ರಗಳು "ಸೀರೆಯೊಳಿಟ ಕಂದಿಲು ಬತ್ತಿ ಕಂದೀವ್ರಾಗ"ಳಿಗೆ ಸಮಾನವಾಗಿದ್ದುವು. ಈತನ ಈ ಉಪಮಾನವು ಬಹಳ ಕೋಮಲವಾಗಿರುವುದು.

ಚಂದ್ರನು ಕಳೆಗುಂದಿ "ಅಸ್ತ ಭೂಧರವನೆ ಬಟ್ಟು ಪಶ್ಚಿಮ ಪಯೋನಿಧಿಗಿಳಿ"ಯುವುದನ್ನು ಕಮಲಭವನು ಹೀಗೆ ವರ್ಣಿಸಿರುತ್ತಾನೆ:—

ಮೊದಲೊಳೆ ಪಿಂಗೆ ಸಾಂದ್ರ ನವ ಚಂದ್ರಿಕೆಯಿಾ ಧರಿತ್ರಿಯೊಳ್
ಕೆದಱಿತುಮಿರ್ಪ ತಣ್ಗದಿರ ತೊಂಗಲ ತೋರ್ಕೆಯಡಂಗೆ ತಳ್ತ ತ|
ಣ್ಗದಿರ ಪೊದಱ್ಕೆಯುಂ ಕಱೆತವ ನವ್ಯ ಕಳಾ ವಿಸರಂ ಮಸುಳ್ದು ಮಾ
ಸಿದ ಮುಕುರಾಂತದಂತೆ ಗಳಿತ ಪ್ರಭಮಾಯ್ತು ಮೃಗಾಂಕ ಮಂಡಲಂ ||

ಈ ಪದ್ಯದಲ್ಲಿ "ಕೆದರುತುಮಿರ್ಪ ತಣ್ಗದಿರ ತೊಂಗಲ ತೋರ್ಕೆ", "ನವ್ಯ ಕಳಾವಿಸರಂ ಮಸುಳ್ದು ಮಾಸಿದ ಮುಕುರಾಂತದಂತೆ" ಎಂಬ ಮಾತುಗಳು ಕವಿಯ ಚಿತ್ರ ಲೇಖನಿಯ ಚತುರತೆಯನ್ನು ಎಷ್ಟು ಚೆನ್ನಾಗಿ ಪ್ರತಿಬಿಂಬಿಸುವುವು! ಕಮಲಭವನ ವರ್ಣನೆಯಲ್ಲಿ ದೇವಕವಿಯ ಶೈಲಿಯ ಮೃದುಲತ್ವವೂ ಭಾವ ಕೋಮಲತೆಯೂ ಅಲ್ಲಲ್ಲಿ ಕಂಡುಬರುವುವು.

ಅರುಣೋದಯವಾಗುತ್ತಲೇ "ಪ್ರಭಾತ ಸಮಯ ಪ್ರೋದ್ಭೂತ ಶೀತಾನಿಲ"ನಿಂದ ಎಚ್ಚರಿಕೆಯನ್ನು ಹೊಂದಿ, "ಚಿಲಿಪಿಲಿಪ ವಿಹಗಂಗಳ ಕಳಕಳ"ದೊಡನೆ ಕೂಡಿರುವ ಪ್ರಕೃತಿದೇವಿಯ ಉಲ್ಲಾಸವನ್ನೂ, ಹೊಸ ದಿನದ ಸಡಗರವನ್ನು ಎಲ್ಲರಿಗಿಂತಲೂ ಮುಂದೆ ಅನುಭವಿಸಿ ಪ್ರಕಟಪಡಿಸುವ ಕೋಳಿಗಳನ್ನು ಕಮಲಭವನು ಹೀಗೆ ವರ್ಣಿಸುತ್ತಾನೆ:—

ತನುವಂ ತಳ್ಳೊಯ್ಯ ತಂಗಾಳಿಯ ಪದಪಿನೊಳೆಚ್ಚೆತ್ತು ಪಕ್ಷಂಗಳೊಳ್ಪ
ಟ್ಟುಸಿತುಂ ಪೋತಂಗಳಂ ವೀಕ್ಷಿಸುತೆಱಕೆಗಳಂ ಮೆಲ್ಲನುರ್ಚುತ್ತೆ ಸಿಂದೊ|
ಯ್ಯನೆ ಸಾರ್ದ್ರ ತೋರ್ಪಿಟಿಯಿಂದಂ ತೊಡೆದು ಗಱಿಗಳಂ ನುಣ್ಣವಿರ್ ಬಿರ್ಚಿ ಮೆಯ್ಯಂ
ತೊನೆದುದ್ದಂ ನೀಡಿ ಗೋಣಂ ನವ ದಿನ ಮುಖದೊಳ್ ಕುಕ್ಕುಟಂ ಕೂಗಿತಾಗಳ್ ||

ಈ ವರ್ಣನೆಯಲ್ಲಿ ಕೋಳಿಯು ಕೂಗುವಾಗ ಅದು ಧರಿಸುವ ರೂಪವನ್ನು ಕವಿಯು, ಚತುರನಾದ ಶಿಲ್ಪಿಯು ಶಿಲೆಯಲ್ಲಿ ಕೆತ್ತುವಹಾಗೆ, ಮಾತುಗಳಲ್ಲಿ ಕಡೆದಿರುತ್ತಾನೆ. ಕೋಳಿಯು ಕೂಗುವುದಕ್ಕೆ ಮೊದಲುಮಾಡಿರುವಾಗ ಅದು ಹೇಗೆ ರೆಕ್ಕೆಗಳನ್ನು ಬಡಿದುಕೊಂಡು ಕತ್ತನ್ನು ಉದ್ದವಾಗಿ ಸ್ವಲ್ಪ ನೆಟ್ಟಗೆ ಮೇಲಕ್ಕೆ ಎತ್ತಿ ಒಂದು ಆಕಾರವನ್ನು ಧರಿಸುವುದೋ, ಅದನ್ನು ಎಲ್ಲರೂ ನೋಡಿ ಬಲ್ಲರು. ಈಗ ಅದರ ಭಾವ ಚಿತ್ರವನ್ನು ಮನಸ್ಸಿನ ಮುಂದೆ ತಂದುಕೊಂಡು ಅದರ ಒಂದೊಂದು ಅಂಗವನ್ನೂ ಕಮಲಭವನ ಮಾತಿನ ಚಿತ್ರದ ಒಂದೊಂದು ಅಂಗಕ್ಕೂ

ಹೋಲಿಸಿ ನೋಡಿದಲ್ಲಿ ಎರಡೂ ಸಮನಾಗಿ ತೋರಿ ಕವಿಯು ಶಕ್ತಿವಂತನೆಂಬುವುದು ವ್ಯಕ್ತಗೊಳ್ಳುವುದು. "ಪಕ್ಕಂಗಳೊಳ್ ಪಟ್ಟಿಸಿತುಂ ಪೋತಂಗಳಂ ವೀಕ್ಷಿಸುತ್ತೆ", "ಬಿಮ್ಮನೆ ನಿಂದು", "ಸಾರ್ದ್ರ ತೋಟಿಯಿಂದಂ ತೊಡೆದು ಗರಿಗಳಂ" ಎಂಬ ಮಾತುಗಳಲ್ಲಿ ಕುಕ್ಕುಟದ ಸ್ವಭಾವವು ಎಷ್ಟು ಸುಲಭವಾಗಿ ಕಲ್ಪನೆಗೆ ಒಳಗಾಗುತ್ತದೆ! ಹೀಗೆಯೇ ದೇವಕವಿಯು ಪಕ್ಷಿ ಜಾತಿಯ ಅರುಣೋದಯದ ಸಡಗರವನ್ನು—

ಎಱಕೆಗಳೊಳ್ ಪೊದಱ್ದ ಪನಿವುಲ್ಲ ಪಯಃಕಣಮಂ ಬಿದಿರ್ಚಿ ಕ
ಣ್ದೆಱೆದಿದಿರ್ಗೊಂಬಿನೊಳ್ ತೊಡೆದು ಚಂಚುವನಂಟೆ ನಿಮಿರ್ಚಿ ನೀವಿ ನು।
ಣ್ಗುಱಿಂಗಳನೊರ್ವದಲ್ ಚಿಲಿಮಿಲಿ ಧ್ವನಿಗೆಯ್ದು ವಿಹಂಗಮಂಗಳ
ಕ್ಕಱಿಂಗುಟುಕಂ ಕೊಳಲ್ಕಿರದೆ ಪಾಱಿದುವೆಣ್ಸೆಗಂ ಪ್ರಭಾತದೊಳ್ ॥

ಎಂಬ ಪದ್ಯದಲ್ಲಿ ಹೇಳಿರುತ್ತಾನೆ. ಆ ಪಕ್ಷಿಗಳ ಜೊತೆಯಲ್ಲಿ ನಮ್ಮ ಮನಸ್ಸೂ ಓಡಿಹೋಗಿ ಅದರ ಸಂಗಡ ವಿಹರಿಸುವುದಿಲ್ಲವೆ! ಕನ್ನಡ ಕವಿಗಳೆಲ್ಲರೂ ಹೀಗೆ ಸ್ವಭಾವಕ್ಕೆ ಅನುಗುಣವಾದ ವರ್ಣನೆಯನ್ನು ಮಾಡಿದ್ದರೆ ಅವರ ವಿಚಾರದಲ್ಲಿ ಕುಂದಿಟ್ಟು ಮಾತನಾಡುವುದಕ್ಕೆ ಯಾರ ಮನಸ್ಸಾದರೂ ಒಪ್ಪುತ್ತಿದ್ದಿತೆ?

ಸೂರ್ಯಾಸ್ತಮಯದ ವರ್ಣನೆಯು ಸ್ಥೂಲವಾಗಿ ಸೂರ್ಯೋದಯದ ವರ್ಣನೆಯ ಹಾಗೆಯೇ ಇರುವುದೆಂದು ಹೇಳಬಹುದು. ಆದುದರಿಂದ ಸೂರ್ಯಾಸ್ತ ವರ್ಣನೆಯ ವಿಚಾರವಾಗಿ ದೀರ್ಘವಾದ ವಿಮರ್ಶೆಯು ಅನಾವಶ್ಯಕ. ಕವಿಸಮಯ ಪ್ರೋಕ್ತವಾದ ಕೆಲವು ವ್ಯಾಪಾರಗಳಲ್ಲಿ ಮಾತ್ರ ಎರಡಕ್ಕೂ ಭಿನ್ನತೆಯು ತೋರಬರುವುದು. ಮಾದರಿಗಾಗಿ, ತಿರುಮಲೆಯಾರ್ಯನ ಒಂದು ಸೂರ್ಯಾಸ್ತ ವರ್ಣನೆಯನ್ನು ಮಾತ್ರ ಉದಾಹರಿಸಬಹುದು.—

ಆಗಸಮೆಂಬಶೋಕೆ ತಳಿರಾಂತುದೊ ಕೆಂಗುಡಿ ತಳ್ತುದೋ ನಭ
ಸ್ಸಾಗರದೊಳ್ ವಿಹಾಯಸ ರಮಾಪತಿ ಪೊನ್ನುಡೆಯುಟ್ಟನೋ ವಿಯ।
ನ್ನಾಗಮುದಭ್ರಗೈರಿಕ ರಜಂಗಳೊಳದ್ದಿದೊ ತಾನಿದೆಂಬಿನಂ
ಬೈಗಿನ ಸಂಜೆಗೆಂಪು ಬಳೆದತ್ತೊಡನೊಂದು ಮನೋಜನೋಜದೊಳ್

ಪಂಪರನ್ನರ ಕೆಲವು ಸೂರ್ಯಾಸ್ತಮಯದ ವರ್ಣನೆಗಳು ಬೇರೆ ಜಾತಿಗೆ ಸೇರಿದುವಾಗಿರುವುದರಿಂದ ಆ ಜಾತಿಯ ವರ್ಣನೆಗಳನ್ನು ಬೇರೊಂದು ಪ್ರಕರಣದಲ್ಲಿ ವಿಚಾರಮಾಡೋಣ. ಚಂದ್ರೋದಯದ ವರ್ಣನೆಯನ್ನು ಮುಂದಿನ ಪ್ರಕರಣದಲ್ಲಿ ವಿಚಾರಮಾಡುವುದರಿಂದ ಕತ್ತಲೆಯ ವಿಚಾರವಾಗಿ ಒಂದೆರಡು ವರ್ಣನೆಗಳನ್ನು ಮಾತ್ರ ವಿಮರ್ಶಿಸುವುದಕ್ಕೆ ತೊಡಗೋಣ.

ಕತ್ತಲೆಯ ವರ್ಣನೆಗಳು ಬಹಳ ಚಮತ್ಕಾರವಾಗಿವೆ; ಅವುಗಳಲ್ಲಿ ಎದೆಯನ್ನು ತಗುಲುವ ಭಾವಗಳೇನೂ ಇಲ್ಲ; ಅವುಗಳಲ್ಲಿ ಊಹಾ ಬಲದ ವಿಪುಲತೆಯೂ ಕೃತಕತ್ವವೂ ಕಂಡುಬರುವುವು. ನಮ್ಮ ಕವಿಗಳು ನಿಜವಾಗಿಯೂ ಕತ್ತಲೆಯ

ರಹಸ್ಯವನ್ನು ಅರಿತವರಲ್ಲವೆಂಬುದು ಕೆಳಗಿನಂತಹ ವರ್ಣನೆಗಳಿಂದ ತಿಳಿದು ಬರುತ್ತದೆ:—

ಪಡೆಪಿಂದಂಬರ ಲಕ್ಷ್ಮಿಯೆಚ್ಚಕೊಳಲೆಂದೌತ್ಸುಕ್ಯದಿಂ ಕಜ್ಜಳಂ
ಪುದಿದೊಪ್ಪಿರ್ದ ಕರಂಡಮಂ ತೆಗೆದು ತನ್ನುತ್ಸಾಹದಿಂ ಮುಚ್ಚಳಂ।
ಮುದದಿಂದಂ ತೆಗೆಯುತ್ತುಮಿರ್ಪ ಪದದೊಳ್ ಕೈತಪ್ಪಿ ಬಿದ್ದಂಜನಂ
ಕೆದರ್ದೋತ್ತೆಂಬಿನಮುರ್ಬಿ ಮರ್ಬು ಪರ್ವಿದತ್ತೆತ್ತಂ ದಿಶಾಭಿತ್ತಿಯೊಳ್।

—ಚೌಂಡರಸ

ಈ ವರ್ಣನೆಯಲ್ಲಿ ಕವಿಯು ಚಮತ್ಕಾರವಾಗಿ ಕತ್ತಲೆಯು ಹರಡಿರುವುದನ್ನು ತಿಳಿಸುತ್ತಾನೆ. ಇದು ಒಂದು ಅಚಿರವಾದ ಹೃದಯರಂಜನೆಯನ್ನುಂಟುಮಾಡುವುದೇ ಹೊರತು ನಿಜವಾದ ಸಾಹಿತ್ಯವನ್ನು ಓದುವುದರಿಂದ ಉಂಟಾಗುವ ಆನಂದವನ್ನು ದೊರಕಿಸುವುದಿಲ್ಲ. ಇನ್ನು, ಇತರ ಕವಿಗಳ ವರ್ಣನೆಗಳೂ ಹೀಗೆಯೇ; ಅಲ್ಲದಿದ್ದರೆ ಇದಕ್ಕಿಂತಲೂ ವಿಚಿತ್ರವಾಗಿರುವುವು. ರವೀಂದ್ರನಾಥ ಠಾಕೂರರವರು ಕತ್ತಲೆಯ ರಹಸ್ಯವನ್ನು ಹೀಗೆ ವರ್ಣಿಸಿರುತ್ತಾರೆ:—

"And there comes the evening over the lonely
meadows deserted by herds, through trackless
paths, carrying cool draughts of peace in her
golden pitcher from the western ocean of rest."

—*Gitanjali*, 67.

ಇವರ ವರ್ಣನೆಯ ಸೊಗಸು ನಮ್ಮ ಕವಿಗಳಲ್ಲಿ ಎಂದಿಗೆ ಬರುವುದೊ? ನಡು ರಾತ್ರಿಯಲ್ಲಿ ನಕ್ಷತ್ರಗಳಿಂದ ನಿಬಿಡವಾದ ಆಕಾಶದ ಮೌನವನ್ನೂ ಶಾಂತಿಯನ್ನೂ ನಮ್ಮ ಕವಿಗಳು ಸ್ವಪ್ನದಲ್ಲಿಯೂ ಅರಿತವರಲ್ಲ. ಕತ್ತಲೆಯಿಂದ ಚಂದ್ರೋದಯದ ಅಚ್ಚಬೆಳ್ದಿಂಗಳ ಬೆಳಕಿಗೆ ತೆರಳೋಣ.

(೪) ಚಂದ್ರ ವರ್ಣನೆ

ಕರ್ಣಾಟಕ ಕವಿಗಳು ಚಂದ್ರೋದಯವಾಗುವಾಗ ವರ್ಣಿಸಿರುವ ವಿಷಯಗಳನ್ನು ಮಲ್ಲಿಕಾರ್ಜುನನು ಹೀಗೆ ನಿರೂಪಿಸುತ್ತಾನೆ:—

ಮೊದಲೊಳ್ ನೇಸರ್ಪಕ್ಕೆ ಕೋಕವಿರಹಂ ಸಂಕೋಚ ಪದ್ಮಂ ತಮಂ
ಪುದಿದಾ ಸಂಜೆಯ ತೂರ್ಯಮಾ ಕುಲಟೆಯರ್ ತಾರಾಳಿ ದೀಪಂ ಬಳಿ।
ಕ್ಕುದಯಂ ಕೆಂಪೆಳಗರ್ಪು ಚಂದ್ರಿಕೆ ಚಕೋರಂ ನೆಯ್ದಿಲಿಂದೂಪಳಂ
ಮದಿರಾಂದೋಳ ವಿಹಾರ ಲೀಲೆಯುಚಿತಂ ಚಂದ್ರೋದಯಕ್ಕಾಸ್ಪದಂ।

ಈ ಪದ್ಯದಲ್ಲಿ ಉಕ್ತವಾಗಿರುವ ವರ್ಣನೆಗಳಲ್ಲಿ ಕವಿಸಮಯಕ್ಕೆ ಸಂಬಂಧಪಟ್ಟುವೇ ಹೆಚ್ಚು; ಚಂದ್ರೋದಯವನ್ನು ನೋಡುವುದರಿಂದ ಮನಸ್ಸಿನಲ್ಲಿ ಉಂಟಾಗುವ ಭಾವೋದ್ರೇಕಗಳನ್ನು ನಮಗೆ ತಿಳಿಸಿರುವ ಕವಿಗಳು ಕೆಲವು ಮಂದಿ

ಮಾತ್ರ. ಇನ್ನು ಮುಕ್ಕವರು ಲಾಕ್ಷಣಿಕರ ಚಂದ್ರೋದಯ ವರ್ಣನೆಯ ನಿಯಮಕ್ಕೆ ಸ್ವಲ್ಪವೂ ಭಂಗವುಂಟಾಗದ ಹಾಗೆ ಬರೆದಿರುವರು. ಕವಿಸಮಯಗಳಿಂದಲೇ ತುಂಬಿರುವ ವರ್ಣನೆಗಳು ಹೆಚ್ಚು ವಿಚಾರಕ್ಕೆ ಅರ್ಹವಾದುವುಗಳಲ್ಲ; ಏಕೆಂದರೆ, ಎಲ್ಲ ಕವಿಗಳೂ ಹೇಳಿದುದನ್ನೇ ಹೇಳಿ, ವರ್ಣಿಸಿದುದನ್ನೇ ವರ್ಣಿಸಿ, ಸ್ವಲ್ಪವೂ ಅಭಿನವವಾದ ಕಲ್ಪನಾ ಸಾಮರ್ಥ್ಯವನ್ನು ತೋರದೆ ವಾಚಕ ವೃಂದಕ್ಕೆ ಬೇಸರವನ್ನುಂಟುಮಾಡಿರುವರು. ಮಲ್ಲಿಕಾರ್ಜುನನ ನಿಯಮದಲ್ಲಿ ಪ್ರಕೃತಿ ವರ್ಣನೆಗೆ ಸಂಬಂಧಪಟ್ಟವು ನಕ್ಷತ್ರಗಳು, ಚಂದ್ರನ ಉದಯ, ಕೆಂಪು ಮತ್ತು ಎಳಗರ್ಪು ಕೂಡಿದ ಒಂದು ಸ್ನಿಗ್ಧವಾದ ಕಾಂತಿ ಮತ್ತು ಚಂದ್ರಿಕೆ— ಇವು ಮಾತ್ರ. ಈಗ ಮೊದಲು ಚಂದ್ರಬಿಂಬ ಮತ್ತು ಅದರ ಉದಯದ ವರ್ಣನೆಯ ಕಡೆಗೆ ತಿರುಗೋಣ. ಚಂದ್ರನನ್ನು ವರ್ಣನೆ ಮಾಡದೆ ಇರುವವರು ಪ್ರಸಿದ್ಧರಾದ ಕವಿಗಳಲ್ಲಿ ಯಾರೂ ಇಲ್ಲ. ಏಕೆಂದರೆ, ಅದರ ಸೊಗಸಿನಿಂದ ಆಕರ್ಷಿಸಲ್ಪಟ್ಟವರಾಗಿ ಹೃದಯ ವಿಕಾಸವನ್ನೂ ಆನಂದವನ್ನೂ ಹೊಂದದೆ ಇರುವವರು ಇಲ್ಲ. ಕೆಲವು ಪ್ರಸಿದ್ಧ ಕವಿಗಳ ವರ್ಣನೆಗಳ ವಿಮರ್ಶೆಯನ್ನು ಮಾಡುವುದಕ್ಕೆ ತೊಡಗೋಣ.—

ಅದೊಂದಿನಿಸು ಬೇಗದಿಂ ನವ ಜಪಾ ಪ್ರಸೂನಾಭಮಾ
ಯ್ತದೊಂದಿನಿಸು ಬೇಗದಿಂ ಕನಕ ಕುಂಭದಂತಾಯ್ತು ಮ।
ತ್ತದೊಂದಿನಿಸು ಬೇಗದಿಂ ಮೃದು ಮೃಣಾಳ ಸಂಕಾಶಮಾ
ಯ್ತದೇಂ ಬಳಿಕೆ ಬಿಂಬಮುಜ್ವಳಿಕೆಯೋ ಸುಧಾ ಸೂತಿಯಾ ॥

—ಪಂಪ

ಜಗದಾಲೋಕನ ದರ್ಪಣಂ ಪ್ರಥಮ ದಿಕ್ಕಾಂತಾನನಂ ಕಂತು ರಾ
ಜ ಗಜೋದ್ದೀಪನ ಪಿಂಡಮಂಬರ ಸರಸ್ಯುತ್ತಂಸ ಹಂಸಂ ವಿಯೋ।
ಗಿ ಗಣಾಕೂತ ಕುರಂಗ ಪೋತ ಭಯಕೃತ್ಕಂಠೀರವಂ ಚೆಲ್ವುವೆ
ತ್ತೊಗೆದತ್ತರ್ಣವ ವೀಚಿ ನರ್ತನ ನಟಂ ಬಿಂಬಂ ಸುಧಾ ಸೂತಿಯಾ ॥

—ರನ್ನ

ದಾಂಗುಡಿವಿಟ್ಟು ದಳ್ಳಿಸುವ ಕೆಂದಳದಿಂದೊಸೆದೆತ್ತ ಲಕ್ಷ್ಮಿ ಕಾ
ಮಂಗೆ ಮಗಂಗೆ ಶೈಶವ ನಿರೀಕ್ಷಣ ಕೇಳಿಗೆ ನೇತ್ರ ಸೂತ್ರದಿಂ।
ದಿಂಗಡಲೆಂಬ ಸೆಜ್ಜೆವನೆಯೊಳ್ ತೆರೆದೊಟ್ಟಿಲ ಮೇಲೆ ಕೆಂಬರ
ಲ್ದಿಂಗಣೆಗಟ್ಟಿದಂತುದಯ ಶೈಲ ಶಿಖಂಡದೊಳಿಂದು ಮಂಡಲಂ ॥

—ನಾಗಚಂದ್ರ

ಕರಮೆಸೆದತ್ತು ಕೌಮುದಿಯ ಬಿತ್ತು ಚಕೋರಿಯ ತುತ್ತು ನೀರಜೋ
ತ್ಕರದ ವಿಪತ್ತು ತಾರೆಗಳ ತೊತ್ತು ಸುಧಾಂಬುಧಿಯೊತ್ತು ಮತ್ತಮಂ।
ಬರದ ಪುಳಿಂದಿ ತಾಳ್ದಿಸೆವ ಮೂಗಿನ ಮುತ್ತು ಮಗುಳ್ದು ನೋಡಲ
ಚ್ಚರಿಯೆನಿಸಿತ್ತು ಮೂಡ ವೆಸೆಯಿಂದೊಗೆತರ್ಪ ಹಿಮಾಂಶು ಮಂಡಲಂ ॥

—ಹರಿಹರ

ತವೆ ಶಾಂತನಮೃತರೂಪಂ ಶೈತ್ಯವರ್ಧನಂ
ಭುವನ ಪ್ರಕಾಶಂ ಜನಾವಲೋಕ ಪ್ರಿಯಂ
ಧವಳ ತನು ವೃತ್ತಂ ನಿರಂತರಂ ವಿಷ್ಣುಪದ ಸೇವಕಂ ಕೃಷ್ಣಾಂಕನು ‖

—ಲಕ್ಷ್ಮೀಶ

ಸ್ಮಿತ ಮುಖದೊಳ್ ಮಹೋನ್ನತಿಯನಾಂತುದಯಾಚಲ ಶೃಂಗಮೆಂಬ ಮಾ
ರುತಿ ಕುಡೆ ತಳ್ತ ಮೆಯ್ಬೆಮರ ಬಿಂದುಗಳಂದದೆ ಸಂದ ತಾರಕಾ।
ತತಿ ಪೊಗರೇಱಿದ ಸಾಂಧ್ಯ ರುಚಿ ವಲ್ಕಲ ಭಾಸುರನಭ್ರ ಜಾನಕೀ
ಪತಿ ತಳೆದಿರ್ಪ ಚೈತಬೆಯ ನುಣ್ಮಣಿಯಂತೆಸೆದತ್ತು ಚಂದ್ರಮಂ ‖

—ತಿರುಮಲೆಯಾರ್ಯ

ಅಂಬರ ಪುಷ್ಪವಾಟಿಯೊಳರಲ್ದುದು ಪುಷ್ಪ ಕದಂಬಮಂ ಚಕೋ
ರಾಂಬಕಿ ಪೂರ್ವ ದಿಗ್ವಧು ಕರಂ ತಿಱಿಯಲ್ ಕರಮೆತ್ತಿ ನಿಳ್ಕಿ ರಾ।
ಗಾಂಬರದಂತೆ ಸಂಜೆ ನಸು ಜಾಱಿದ ಜಲಕ್ಕನೆ ಪೊಣ್ಮಿದುದೊಂದು ರೂ
ಪಂ ಬಗೆವಂದು ರಂಜಿಪವೊಲುಜ್ವಲಮಾದುದು ಚಂದ್ರಮಂಡಲಂ ‖

—ಷಡಕ್ಷರಿ

ಪಂಪನ ವರ್ಣನೆಯಲ್ಲಿ, ಇತರ ಕವಿಗಳ ವರ್ಣನೆಗಳಲ್ಲಿರುವ ಹಾಗೆ, ಚಂದ್ರನ ಸೊಗಸನ್ನು ನೋಡುತ್ತಲೇ ಮನಸ್ಸಿನಲ್ಲಿ ಉಂಟಾಗುವ ರಂಜನೆಯು ಮಾತ್ರವೇ ಅಲ್ಲ, ಅದರಲ್ಲಿ ಕುತೂಹಲವೂ ಸಂತೋಷವೂ ಅಡಕವಾಗಿರುವುವು. ಚಂದ್ರನು ಮೆಲ್ಲಮೆಲ್ಲಗೆ ಹೊಸದಾದ ಜಪಾ ಕುಸುಮಗಳ ಕಾಂತಿಯನ್ನು ಹೊಂದುತ್ತಿರುವನು, ಮೆಲ್ಲಮೆಲ್ಲಗೆ ಮೇಲಕ್ಕೆ ಏಳುತ್ತ ಏಳುತ್ತ ಚಿನ್ನದ ಕುಂಭದ ಹಾಗೆ ಪೂರ್ಣತೆಯನ್ನು ಪಡೆಯುತ್ತಿರುವನು, ಮೆಲ್ಲಮೆಲ್ಲಗೆ ಕೋಮಲವಾಗಿ ಸಂಪೂರ್ಣವಾಗಿ ಅರಳಿರುವ ಕಮಲದ ರೂಪವನ್ನೂ ಸೌಂದರ್ಯವನ್ನೂ ಹೊಂದುತ್ತಿರುವನು; ಆಹ! ಚಂದ್ರನು ಎಷ್ಟು ಕಾಂತಿಯುಕ್ತನಾಗುತ್ತಿರುವನು ಎಂದು ಪಂಪನ ಹೃದಯವು ಆನಂದದಿಂದ ಪರಿಪೂರ್ಣವಾಗಿ ಮಾತುಗಳ ಪ್ರವಾಹರೂಪದಲ್ಲಿ ಹರಿಯುತ್ತದೆ. ರನ್ನನ ಮನಸ್ಸು ಚಂದ್ರೋದಯವನ್ನು ನೋಡುತ್ತಲೇ ವಿವಿಧವಾದ ವಸ್ತುಗಳನ್ನು ಜ್ಞಾಪಿಸಿಕೊಳ್ಳುವುದು. ಈತನಿಗೆ "ವಿಯೋಗಿ ಗಣಾಕೂತ ಕುರಂಗಪೋತ ಭಯಕೃತ್ಕಂಠೀರವ"ನಾದ ಚಂದ್ರನೂ ಚೆಲುವನಾಗಿದ್ದನು. ಇದು ರನ್ನನಿಗೆ ಸಹಜವಾದ ಒಂದು ಭಾವದ ಉದ್ರೇಕವು; ಆತನು ಭಯಂಕರವಾದ ವಸ್ತುವಿನಲ್ಲಿಯೂ ಸೌಂದರ್ಯವನ್ನು ನೋಡುವವನು. ನಾಗಚಂದ್ರನಿಗೆ ಚಂದ್ರಮಂಡಲವು ರಮಣೀಯವಾದ ಕೆಂಪು ಮಾಣಿಕದ ಗಟ್ಟಿಯಂತೆ ಉದಯಶೈಲ ಶಿಖರದಲ್ಲಿ ರಂಜಿಸುವ ಹಾಗೆ ತೋರಿತು. "ಮೂಡ ದೆಸೆಯಿಂದೊಗೆತರ್ಪ ಹಿಮಾಂಶು ಮಂಡಲ"ವನ್ನು ನೋಡಿ ಹರಿಹರನು ಆಶ್ಚರ್ಯವನ್ನು ಹೊಂದಿದನು. ಈತನ ವರ್ಣನಾ ಧಾಟಿಯು ಒಂದು ನೂತನವಾದ ಸೊಗಸನ್ನು ಪಡೆದಿದೆ; ಇದನ್ನು ಅನೇಕ ಕವಿಗಳು ಅನುಸರಿಸಿರುವರು. ರನ್ನನಿಗೆ ಹೇಗೆ ಚಂದ್ರನು ಕೆಲವು

ವಸ್ತುಗಳನ್ನು ನೆನಪಿಗೆ ತಂದನೋ ಹಾಗೆಯೇ ರಾಘವಾಂಕನಿಗೂ ಕೆಲವು
ವಸ್ತುಗಳ ನೆನಪುಂಟಾಯಿತು. ಲಕ್ಷ್ಮೀಶನಿಗೆ ಚಂದ್ರನು ಈ ವಸ್ತುಗಳನ್ನಾವು
ದನ್ನೂ ನೆನಪಿಗೆ ತರಲಿಲ್ಲ. ಆತನಿಗೆ ಚಂದ್ರನು ಶಾಂತಿಸ್ವರೂಪನಾಗಿಯೂ
ಶೈತ್ಯವರ್ಧನನಾಗಿಯೂ ಅತೀವ ಜನಪ್ರಿಯನಾಗಿಯೂ ಇದ್ದನು. ಈತನ ವರ್ಣ
ನೆಯು ಬೇರೆ ವಿಧವಾದ ಸೊಗಸನ್ನು ಪಡೆದು ಪಂಪನ ವರ್ಣನೆಗೆ ಸರಿಹೋಗುವ
ಹಾಗೆ ಇರುವುದು. ಇನ್ನು, ತಿರುಮಲೆಯಾರ್ಯನಿಗೆ ಚಂದ್ರಮಂಡಲವು "ಅಭ್ರ
ಜಾನಕೀಪತಿ ತಳೆದಿರ್ಪ ಜೈತಲೆಯ ಮಣ್ಣಿಗೆ"ಯಂತೆ ಕಾಣಿಸಿತು. ಚಂದ್ರೋ
ದಯವಾಗುವಾಗ ಆಕಾಶದಲ್ಲಿ ತೋರಿಬರುವ ಒಂದು ಚಿತ್ರವನ್ನು ಈತನ ವರ್ಣ
ನೆಯು ಕಣ್ಣಿಗೆ ಕಟ್ಟಿದ ಹಾಗೆ ವ್ಯಕ್ತಗೊಳಿಸುವುದು. ಸಂಧ್ಯಾರಾಗವು ಆಗ ತಾನೇ
ಪಶ್ಚಿಮ ದಿಕ್ಕಿನಲ್ಲಿ ಹರಡಿದೆ, ಚಂದ್ರನ ಕಾಂತಿಯು ಇನ್ನೂ ಅಷ್ಟು ಪ್ರಕಾಶವಾನ
ವಾಗಿಲ್ಲ, ತಾರೆಗಳು ಮೆಲ್ಲಮೆಲ್ಲನೆ ಒಂದಾದಮೇಲೊಂದು ತಲೆದೋರುತ್ತಿವೆ;
ಇವೆಲ್ಲವನ್ನೂ ನೋಡಿದರೆ ಸಂಧ್ಯಾರಾಗವೆಂಬ ವಲ್ಕಲವನ್ನು ಧರಿಸಿರುವ ಅಭ್ರ
ಜಾನಕೀ ಪತಿಯ ಜೈತಲೆಯ ಸುಂದರವಾದ ಮಣಿಯ ಹಾಗೆ ಚಂದ್ರನಿರುವುದೇ
ಸಾಶ್ಚರ್ಯ! ಅಲ್ಲದೆ, ಈತನಿಗೆ ಚಂದ್ರನು ಹಲವು ರೂಪಗಳನ್ನು ಧರಿಸಿದ್ದನು.
ಚಂದ್ರಮಂಡಲವು "ಉರಿಗೊಂಡು ಪೊಣ್ಮುವ ಭರಂಗಿಯ ಗುಂಡಿನ" ಹಾಗೂ,
ಮನ್ಮಥನು ದಿಗ್ವಿಜಯೋದ್ಯುಕ್ತನಾಗಲು, ಪೂರ್ವದಿಕ್ಕೆಂಬ ಕನ್ಯೆಯು ಎತ್ತಿದ
ಆರತಿಯ ಹೊಂಬೊಂದಟ್ಟೆಯ ಹಾಗೂ ತೋರಿತು. ತಿರುಮಲೆಯಾರ್ಯನು ಹೀಗೆಯೇ
ಚಂದ್ರಬಿಂಬವನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತ ಮಾಡುತ್ತ ಅದರಲ್ಲಿರುವ
ದೈವತ್ವವನ್ನು ಹೊರಪಡಿಸುವನು. ಚಂದ್ರನು ಜನಗಳಿಗೆ ಆಹ್ಲಾದವನ್ನು ಉಂಟು
ಮಾಡುವುದೇನೂ ಆಶ್ಚರ್ಯವಲ್ಲ, ಶಿಷ್ಟವಾದ ಕಾಂತೆಗೆ ರಂಜನೆಯನ್ನುಂಟು
ಮಾಡುವುದೇನೂ ಹೆಚ್ಚಲ್ಲ, ವಿಮಲವಾದ ಕಾಂತಿಯುಕ್ತನಾಗಿರುವುದು ಏನೂ
ಶ್ರೇಷ್ಠವಲ್ಲ; ಇನ್ನು, ಪರಮಾತ್ಮನ ಕಣ್ಣೆಂದೆನಿಸಿಕೊಳ್ಳುವುದು ಏನು ಹೆಚ್ಚು!
"ಚಂದ್ರನೆಸೆದತ್ತುದಯವಾಮನಿಷ್ವತ್ರಿವಿಕ್ರಮಂ ನೆಗಪಿದ ಪಾದದಂಗುಟದ
ಬಟ್ಟುಗುರೆಂಜನಮಂಬರಾಗ್ರದೊಳ್" ಎಂದು ತಿರುಮಲೆಯಾರ್ಯನು ಚಂದ್ರನನ್ನು
ಸ್ತುತಿಸುತ್ತಾನೆ. ಚಂದ್ರೋದಯ ವರ್ಣನೆಗಳಲ್ಲೆಲ್ಲ ಸ್ವಲ್ಪ ನೂತನತ್ವವನ್ನೂ
ಕಲ್ಪನಾ ಶಕ್ತಿಯನ್ನೂ ತೋರಿಸುವ ವರ್ಣನೆಯೆಂದರೆ ತಿರುಮಲೆಯಾರ್ಯನ ವರ್ಣನೆ
ಎಂದು ಹೇಳಬಹುದು. ಷಡಕ್ಷರಿಗೆ ಚಂದ್ರನು "ಸಂಜೆ ನಸು ಜಾರೆ" ಮನಸ್ಸಿನ
ಮುಂದೆ ಬಂದು ರಂಜಿಸುವ ಒಂದು ರೂಪವಾಗಿದ್ದಿತು. ಈತನ ವರ್ಣನಾ ಪದ್ಯಗಳು
ಆರ್ಭಟಯುಕ್ತವಾಗಿವೆ, ಸ್ವಲ್ಪವೂ ಚಂದ್ರನ ಶಾಂತಿ ಸ್ವರೂಪವನ್ನು ಮನಸ್ಸಿಗೆ
ತರುವುದಿಲ್ಲ; ಹಾಗೆ ಒಂದು ವೇಳೆ ಉಂಟಾಗುವ ಹಾಗೆ ತೋರಿಬಂದರೂ
ಅದು ಗಂಭೀರವಲ್ಲದ ಶೃಂಗಾರದಿಂದ ಮಲಿನತೆಯನ್ನು ಹೊಂದಿದೆ. ಆಧುನಿಕ
ರಾದ ಬಸವಪ್ಪಶಾಸ್ತ್ರಿಗಳಿಗೆ ಇಂದುಮಂಡಲವು "ಐಂದ್ರಿಯಿಟ್ಟಮಲ ಚಂದನ
ಬಿಂದುವಿ"ನ ಹಾಗೆ ಇದ್ದಿತು. ಇವರ ಪದ ಬಂಧನದ ಸೊಬಗನ್ನು ತೋರಿಸು
ವುದಕ್ಕೆ ಒಂದೇ ಒಂದು ವರ್ಣನಾ ಪದ್ಯವನ್ನು ಮಾತ್ರ ಉದಾಹರಿಸಿದೆ.—

ಜಾಱಿತ್ತು ತಮಂ ನಭೋಂಗಣದ ತಾರೆ ಕರಂ ತಲೆದೋಱಿತ್ತು ಕೈರವಂ
ಸೇಱಿತ್ತು ವಿಕಾಸಮಂ ಜಲಮನೂಱಿತ್ತು ವಿಧೂಪಲಮಬ್ಧಿ ಮೇರೆಯಂ।
ಮೀಱಿತ್ತು ಚಕೋರಿ ಪೇಱಿತ್ತು ಮುದಮಂ ಸಲೆ ಬೀರಮನಾಱಿತ್ತು ಮನ್ಮಥಂ
ತೋಱಿದುದೈಂದ್ರಿಯಿಟ್ಟಮಲ ಚಂದನ ಬಿಂದುವೊಲಿಂದು ಮಂಡಲಂ ॥

ಈ ಪದ್ಯವನ್ನು ಓದುತ್ತ ಹೋದರೆ ನಿಜವಾಗಿಯೂ ವರ್ಣಿತವಾಗಿರುವ ಚಂದ್ರಬಿಂಬದ ಸೊಗಸು ಎಲ್ಲಿಯೋ ಮಾಯವಾದ ಹಾಗೆ ಕಾಣುವುದು. ಆ ಪದಗಳ ಸೊಗಸು ಚಂದ್ರನ ಸೊಗಸನ್ನು ಮುಚ್ಚಿಬಿಡುವ ಹಾಗೆ ತೋರುವುದು. ಬೊಬ್ಬೂರು ರಂಗನ ಚಂದ್ರೋದಯ ವರ್ಣನೆಯು ಉತ್ಪ್ರೇಕ್ಷಾದ್ಯಲಂಕಾರಗಳಿಂದ ಪರಿಪೂರಿತವಾಗಿಯೂ ಅತಿ ಕೃತಕತ್ವದಿಂದ ಸಮ್ಮಿಶ್ರಿತವಾಗಿಯೂ ಭಾವೋದ್ರೇಕವನ್ನೇನೂ ಉಂಟುಮಾಡದೆ ಇರುವ ಪದಗಳ ಸಮೂಹ ಮಾತ್ರವಾಗಿದೆ; ಅದು ಚಂದ್ರವರ್ಣನೆಯೇ ಅಲ್ಲ. ಈ ವಿಷಯವು ಆತನ "ಹರಿ ನೀಲ ವರ್ಣಮಂ ಪರಿಹರಿಸಿ ನಿಶ್ಶಂಕೆ", "ದಿವಿಜ ಗಣ ಪ್ರೋತ್ಸಾಹಿತಂ", "ದ್ವಿಜ ನಿಕರಕಧಿನಾಥಂ" ಎಂಬ ಪದ್ಯಗಳನ್ನು ಓದಿದರೆ ಸ್ಪಷ್ಟಪಡುವುದು. ಒಟ್ಟಿನಲ್ಲಿ, ಕನ್ನಡ ಕವಿಗಳಲ್ಲಿ ಕೆಲವರು ಮಾತ್ರವೇ ಚಂದ್ರನ ಸೊಗಸಿನಿಂದ ಸ್ವಲ್ಪ ಮಟ್ಟಿಗೆ ಆನಂದವನ್ನು ಹೊಂದಿರುವರು. ಅವರಲ್ಲಿ ಪಂಪ ಲಕ್ಷ್ಮೀಶರು ಅಗ್ರಗಣ್ಯರು. ಸೌಂದರ್ಯಕ್ಕೆ ಸಮುದ್ರವಾದ ಚಂದ್ರನ ಚೆಲುವಿಕೆಯಲ್ಲಿ ಲವ ಲೇಶವು ಮಾತ್ರ ಕನ್ನಡ ಕವಿಗಳ ವರ್ಣನೆಗಳಲ್ಲಿ ರೂಪುಗೊಂಡಿದೆ. ಇನ್ನು, ಠಾಕೂರರ—

> "The smile that flickers on baby's lips when he sleeps—does anybody know where it was born ? Yes, there is a rumour that a young pale gleam of a crescent moon touched the edge of a vanishing autumn cloud and there the smile was first born in the dream of a dew-washed morning."

ಎಂಬ ಒಂದು ವರ್ಣನೆಯ ಸೌಂದರ್ಯ ಸೌಕುಮಾರ್ಯಗಳನ್ನು ನಮ್ಮ ಕನ್ನಡ ಕವಿಗಳಲ್ಲಿ ಹುಡುಕಿ ನೋಡಿದರೂ ಸಿಕ್ಕುವಂತಿಲ್ಲ. ಇದೆಲ್ಲವೂ ಇನ್ನು ಮುಂದೆ ಬೆಳೆಯುವ ಕನ್ನಡ ಸಾಹಿತ್ಯದಲ್ಲಿ ಬರಬೇಕಾಗಿದೆ. ಅಂತಹ ಸುದಿನವನ್ನು ನಾವು ನೋಡುವ ಆಶೆಯನ್ನು ಹೃದಯದಲ್ಲಿ ಧರಿಸೋಣ. ಚಂದ್ರನಿಂದ ಬೇರೆಯಾಗಿ ಬೆಳುದಿಂಗಳನ್ನು ವರ್ಣಿಸುವುದಕ್ಕೆ ತೊಡಗುವುದು, ಗುಲಾಬಿಯ ಹೂವನ್ನು ಮರೆತು ಅದರ ಬಣ್ಣವನ್ನು ವರ್ಣಿಸಿದ ಹಾಗಾಗುವುದು; ಏಕೆಂದರೆ, ಈಗ ನಾವು ನಮ್ಮ ಕವಿಗಳು ಮಾಡಿರುವ ಚಂದ್ರಿಕೆಯ ವರ್ಣನೆಯ ಕಡೆಗೆ ಮಾತ್ರ ತೆರಳುವವರಾಗಿರುತ್ತೇವೆ; ಆದರೂ ನಾವು ಚಂದ್ರನನ್ನು ಮರೆಯಲು ಸಾಧ್ಯವಿಲ್ಲ. ಬೆಳುದಿಂಗಳ ವರ್ಣನೆಗಳಲ್ಲಿ ತಿರುಮಲೆಯಾರ್ಯನ ವರ್ಣನೆಯು ಇತರ ಕವಿಗಳ ವರ್ಣನೆಗಳ ಹಾಗೆ ಮನಸ್ಸಿನಲ್ಲಿ ಮುತ್ತಿಬರುವ ಒಂದು ವಿಶೇಷ ಭಾವವನ್ನುಂಟುಮಾಡದೆ ನಿಜವಾಗಿಯೂ ಅದರ ಅವ್ಯಕ್ತವಾದ ಸೊಗಸಿನ ಒಂದು ಹೊಳಪನ್ನು ಮಾತ್ರ

ತೋರುತ್ತದೆ. ಆತನು ಬೆಳುದಿಂಗಳನ್ನು "ಬಗೆ ಪರಿಪಕ್ವ ಪೊಚ್ಚ ಪೊಸ ಜೊನ್ನದ ಬಳ್ಳಿರಿ ಹೇಮಗರ್ಭನೊಲ್ಪುಗಿಸುವ ಪಾದ್ಯದೋಜೆಯನೊಡಂಬಡೆ" ಎಂದೂ, "ನಾರಾಯಣನ ನಯನದಾಲೋಕಪಾದತ್ತ ಜೊನ್ನಂ" ಎಂದೂ ವರ್ಣಿಸಿರುತ್ತಾನೆ. ಲಕ್ಷ್ಮೀಶನ "ಪ್ರಾಚೀ ಪಿತಂಬಸಿಯ ಮುಟ್ಟು ಬಂಬದೆಳನಗೆಯ ರೋಚಿಗಳೊ" ಎಂಬ ಬೆಳ್ದಿಂಗಳಿನ ವರ್ಣನಾ ಪದ್ಯವು ಚೆನ್ನಾಗಿದ್ದರೂ ಮನಸ್ಸನ್ನು ತಿರುಗಿಸುವ ಶಕ್ತಿಯುಳ್ಳದಾಗಿ ತೋರುವುದು. ಷಡಕ್ಷರಿಯ ವರ್ಣನೆಯೂ ಹೀಗೆಯೇ. ಅಂತು, ಎಲ್ಲಿ ಜನರನ್ನು ಸಂತೋಷಪಡಿಸಿ ಮನಸ್ಸಿನ ಸಂತಾಪವನ್ನು ನೀಗುವ ಬೆಳ್ದಿಂಗಳು ನಮ್ಮ ಕವಿಗಳ ಮನಸ್ಸುಗಳಲ್ಲಿ ಏನೇನೋ ವಿಚಿತ್ರವಾದ ಭಾವೋತ್ಪತ್ತಿಯನ್ನು ಮಾಡಿರುವ ಹಾಗೆ ತೋರುತ್ತದೆ. ಇದು ಚಂದ್ರನ ಸೌಂದರ್ಯದ ತಪ್ಪಲ್ಲ; ನಮ್ಮ ಕವಿಗಳು ಆ ಸೌಂದರ್ಯದ ಮಾಹಾತ್ಮ್ಯವನ್ನು ಸಂಪೂರ್ಣವಾಗಿ ತಿಳಿಯದೆ ಸ್ವಲ್ಪಸ್ವಲ್ಪವಾಗಿಯೇ ತಿಳಿದುಕೊಂಡು ಋಜುಮಾರ್ಗವನ್ನು ತಪ್ಪಿರುವರು. ಈಗೀಗ ಕವಿಗಳು ಈ ಮಾಯೆಯಿಂದ ವಿಮುಕ್ತರಾಗಿ ಸಾಹಿತ್ಯದ ತಿರುಳನ್ನು ದೊರಕಿಸಲು ತೊಡಗಿ ಸ್ವಲ್ಪ ಮುಂದುವರಿದಿರುತ್ತಾರೆ.

(ಋ) ಪರ್ವತ ವರ್ಣನೆ

ಕನ್ನಡ ಸಾಹಿತ್ಯದಲ್ಲಿ ಇದುವರೆಗೂ ಒಳ್ಳೆಯ ಪರ್ವತ ವರ್ಣನೆಯಾಗಲಿ ಅರಣ್ಯ ವರ್ಣನೆಯಾಗಲಿ ಇರಲಿಲ್ಲ. ಈಚೆಗೆ ಅಂತಹ ವರ್ಣನೆಗಳು ನಮ್ಮೆಲ್ಲರಿಗೂ ಅತುಲವಾದ ಹೃದಯ ರಂಜನೆಯನ್ನುಂಟುಮಾಡಲು ಹೊರಟಿದ್ದಿವೆ. ಪ್ರಕೃತ, ಹಿಂದಿನ ಕವಿಗಳು ಪರ್ವತ ವರ್ಣನೆಯನ್ನು ಮಾಡಬೇಕಾಗಿದ್ದಲ್ಲಿ ತಮ್ಮ ಸುತ್ತುಮುತ್ತಲೂ ಕಾಣುವ, ಹತ್ತಿರಲೇ ಇರುವ ಪರ್ವತ ಸಮುದಾಯಗಳನ್ನು ಬಿಟ್ಟು ತಾವು ಎಂದೂ ನೋಡದ, ಕಾಣದ ಪರ್ವತಗಳನ್ನು ವರ್ಣಿಸಿರುವರು. ಹೀಗೆ ವರ್ಣನೆ ಮಾಡಲು ಆ ಕವಿಗಳಿಗೆ ಸಾಧ್ಯವಾಗಿದ್ದಿತು; ಏಕೆಂದರೆ ಅವರೆಲ್ಲರಿಗೂ ಮಲ್ಲಿಕಾರ್ಜುನನಂತಹ ಕೆಲವರು, ಪರ್ವತ ವರ್ಣನೆಯನ್ನು ಮಾಡಲು ಅನುಸರಿಸಬೇಕಾದ ಒಂದು ಪದ್ಧತಿಯನ್ನು ತೋರಿಸಿಕೊಟ್ಟರು. ಮಲ್ಲಿಕಾರ್ಜುನನು ಪರ್ವತ ವರ್ಣನೆಯ ವಿಷಯದಲ್ಲಿ ಹೀಗೆ ಹೇಳುತ್ತಾನೆ:—

> ತರುತತಿ ಬಳ್ಳಿ ಪುಲ್ಪೊದಱು ಪಕ್ಕಿ ಮೃಗಂ ಫಣಿ ಜೇರ್ವ್ಮೃಗವ್ರಮೊ
> ಜ್ಝರಮೆಸೆವುನ್ನತಿಕ್ಕೆ ಸಿಲೆ ಕೋಡು ಗುಹಾವಳಿ ತಾಪಸಾಶ್ರಮಂ।
> ದರಿ ಸರಿವಾನೆಗಳ್ ಸರಿಕೆಮೇವ (?) ಮುಗಿಲ್ ದೊಣೆ ಬಿಲ್ಲಿ ಪಳ್ಳಿ ಕಿ
> ನ್ನರ ಮಿಥುನಾಳಿಗಳ್ ವಿಷಯಮಾಗಿರೆ ತೀರ್ಪುದು ಶೈಲ ವರ್ಣನಂ ॥

ಅರಣ್ಯವನ್ನೂ ಪರ್ವತವನ್ನೂ ನೋಡಿದ ತತ್ಕ್ಷಣವೇ ಕವಿಯ ಮನಸ್ಸಿನಲ್ಲಿ ಉಂಟಾಗುವ ಭಾವಗಳನ್ನು ಪದಗಳಲ್ಲಿ ಸಂಗ್ರಹಿಸಿ ಇಡದೆ, ಅವುಗಳಲ್ಲಿ ಸ್ವಲ್ಪ ಭಾಗವನ್ನಾದರೂ ಜನಗಳಿಗೆ ದೊರಕಿಸದೆ, ಲಾಕ್ಷಣಿಕರು ಇಂತಹ ನಿಯಮವನ್ನು ಏಕೆ ನಿರ್ಮಿಸಿದರೋ? ನಮ್ಮ ಕವಿಗಳೆಲ್ಲರೂ ಇದನ್ನು ಏಕೆ ಅನುಸರಿಸಿದರೋ?

ಬೆಟ್ಟಗುಡ್ಡಗಳ ಸೌಂದರ್ಯವನ್ನೂ ಅಡವಿಗಳ ಭಯಮಿಶ್ರವಾದ ಸೊಗಸನ್ನೂ ನಮ್ಮ ಕವಿಗಳಲ್ಲನೇಕರು ಅನುಭವಿಸಿ ತಿಳಿದುಕೊಳ್ಳಲಿಲ್ಲ. ಬೆಟ್ಟಗಳನ್ನು ವರ್ಣಿಸುವುದಕ್ಕೆ ಹೊರಟು ಅವುಗಳ ಸ್ವಭಾವಜನ್ಯವಾದ ರಾಮಣೀಯತೆಯನ್ನು ವರ್ಣಿಸದೆ ಚಂದ್ರಕಾಂತ ಸೂರ್ಯಕಾಂತ ಶಿಲೆಗಳು, ಪ್ರಕೃತಿಯಲ್ಲಿ ನಾವು ಕಾಣದ ಕೆಲವು ಮೃಗ ಸಮುದಾಯಗಳು, ನವರತ್ನಗಳ ಕಾಂತಿಗಳು, ಇಂತಹವುಗಳನ್ನೇ ವರ್ಣಿಸಿದರೆ ರಂಜನೆಯು ಯಾರಿಗೆ ತಾನೆ ಉಂಟಾಗುವುದು? ವೃಕ್ಷಗಳನ್ನು ವರ್ಣಿಸಲು ಹೊರಟು ಅರಣ್ಯದಲ್ಲಿ ಇರುವ, ಇಲ್ಲದೆ ಇರುವ, ಮರಗಳ ಹೆಸರುಗಳೆಲ್ಲವನ್ನೂ ನಮ್ಮ ಕವಿಗಳು ಪಟ್ಟಿಯಾಗಿ ಹೇಳಿರುತ್ತಾರೆ. ಇಂತಹವು ನಿಜವಾಗಿಯೂ ಕಾವ್ಯವೆ? ಹೀಗೆಯೇ ಮೃಗಪಕ್ಷಿಗಳ ವರ್ಣನೆಯ ವಿಷಯದಲ್ಲಿಯೂ ಕವಿಗಳೇನೂ ಹೆಚ್ಚು ಸೊಗಸನ್ನು ತೋರಿಸಿಲ್ಲ. ಕವಿ ಸಾರ್ವಭೌಮನಾದ ರನ್ನನ ಅಜಿತತೀರ್ಥಂಕರ ಪುರಾಣಾಂತರ್ಗತವಾದ ಒಂದು ಪರ್ವತ ವರ್ಣನೆಯನ್ನು ತೆಗೆದುಕೊಳ್ಳೋಣ. ಈ ವರ್ಣನೆಯಲ್ಲಿ 'ವಿಜಯಾರ್ಧಾದ್ರಿ' ಎಂಬ ಒಂದು ಬೆಟ್ಟವು ಉಕ್ತವಾಗಿದೆ. ಇದನ್ನು ಓದಿದರೆ ಬೆಟ್ಟದ ಕಲ್ಪನೆಯೇನೂ ನಮಗೆ ಬರುವ ಹಾಗಿಲ್ಲ; ಏನೋ ಚಿತ್ರವಿಚಿತ್ರವಾದ ಪದಾರ್ಥಗಳ ಒಂದು ಸಮುದಾಯ ಮಾತ್ರವಾಗಿ ತೋರುವುದು. ಮೊದಲು ಆ ಬೆಟ್ಟವು "ಮೃದುವಾಕ್ಯಸ್ವರಗೀತ ನಿಸ್ವನ ನಟದ್ವಿದ್ಯಾಧರೀ ನಾಟ್ಯ ಸಂಪದ"ವನ್ನುಳ್ಳುದಾಗಿಯೂ, "ರತ್ನಮಯ ಪ್ರಸಿದ್ಧ ಶಿಖರಾಲಂಕಾರ ಸಿದ್ಧಾಲಯಾಸ್ಪದ"ವಾಗಿಯೂ ಇದ್ದಿತೆಂದು ಕವಿಯು ಹೇಳುತ್ತಾನೆ. ಆಮೇಲೆ ಚಂದ್ರಕಾಂತ ಸೂರ್ಯಕಾಂತ ಶಿಲೆಗಳನ್ನು ವರ್ಣಿಸಿ, ಪಚ್ಚೆಯ ರತ್ನವನ್ನು ನೋಡಿ ಹುಲ್ಲೆಂದು ಭ್ರಮಿಸಿ ತಿನ್ನುವುದಕ್ಕೆ ಹೋಗಿ ಭಗ್ನಾಶಗಳಾಗಿ ಬಂದ ಮೃಗಗಳನ್ನು ವರ್ಣಿಸುತ್ತಾನೆ. ಇದೆಲ್ಲವೂ ಆದ ಮೇಲೆ ಸಿಂಹದ ವರ್ಣನೆ; ಕೊನೆಗೆ, 'ಗಿರಿರಾಜ'ನನ್ನು 'ಕರಿರಾಜ'ನಿಗೆ ಹೋಲಿಸಿ, ತುಂಬಿಗಳ ಗಾನವನ್ನೂ ಗಿಳಿಗಳ ಮದೋನ್ಮತ್ತ ಜಲ್ಪವನ್ನೂ ನವಿಲುಗಳ ಕುಣಿತವನ್ನೂ ಒಳಗೊಂಡಿರುವ ಆ ಬೆಟ್ಟವು "ಸಂಗೀತಕ ಕ್ರೀಡೆಯಿಂ ಚಕ್ರಧರನಂ ಮರುಳ್ಚಿತ್ತು" ಎಂದು ಹೇಳಿ ರನ್ನನು ಬೆಟ್ಟದ ವರ್ಣನೆಯನ್ನು ಸಂಪೂರ್ಣ ಮಾಡುತ್ತಾನೆ. ಇದು ನಮ್ಮ ಕವಿಗಳ ಪರ್ವತ ವರ್ಣನಾ ಪದ್ಧತಿ. ಇನ್ನೂ ಇದನ್ನು ವಿಶದವಾಗಿ ತಿಳಿಯಬೇಕಾದರೆ ಲಕ್ಷ್ಮೀಶನ ಪರ್ವತ ವರ್ಣನೆಯನ್ನೊ, ಜನ್ನನ ಕಾವ್ಯದಲ್ಲಿರುವ ಒಂದು ಕಾನನ ವರ್ಣನೆಯನ್ನೊ ವಿಮರ್ಶಿಸಿ ನೋಡಬಹುದು. ಲಕ್ಷ್ಮೀಶನಲ್ಲಿ ವಿಚಿತ್ರವಾದ ವಸ್ತುಗಳ ವರ್ಣನೆಯು ಸ್ವಲ್ಪ ಕಡಿಮೆಯಾಗಿ ತೋರುವುದು. ಅರಣ್ಯದ ಭೀಕರತ್ವವನ್ನು ರಾಘವಾಂಕನೂ ಲಕ್ಷ್ಮೀಶನೂ ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿರುವರು. ರಾಘವಾಂಕನು ಅರಣ್ಯದ ಭೀಕರತ್ವವನ್ನು ಹೀಗೆ ವರ್ಣಿಸಿರುವನು:—

ತೆಕ್ಕೆಗತ್ತಲೆಗೆ ತರತರದ ನಾನಾ ಮೃಗ ಕು
ಲಕ್ಕೆ ನಾನಾ ಧ್ವನಿಗೆ ನಾನಾ ಭಯಂಕರ
ತ್ವಕ್ಕೆ ವನೆಯಾನೆಂದು ಬೊಬ್ಬಿಟ್ಟು ಪೇಳ್ವಂತೆ ಘೀಳಿಡುತ್ತಿಹುದಡವಿಯು ॥

ಇದರಲ್ಲಿ, ಅರಣ್ಯದಲ್ಲಿರುವ ಅನೇಕ ವಿಧವಾದ ಶಬ್ದಗಳ ಅಲ್ಲಕಲ್ಲೋಲವೂ ಅದರ ಅಂಧಕಾರವೂ ಭೀತಿಯ ಸ್ವಭಾವವೂ ರೂಪುಗೊಂಡಿದೆ. ಹೀಗೆಯೇ ಲಕ್ಷ್ಮೀಶನು ಒಂದು ಕಡೆ ಮಾತ್ರ ಅರಣ್ಯವನ್ನು ವರ್ಣಿಸಿರುವನು. ಇಷ್ಟಾದರೂ ಈ ವರ್ಣನೆಗಳಲ್ಲಿ ಗಿಡ್ಡಗುಲ್ಮಗಳ ಮತ್ತು ಕಾಡುಗಳ ಸೌಂದರ್ಯವು ನೆಲೆಗೊಂಡಿಲ್ಲ; ಪಂಪನ "ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್" ಎಂಬ ವರ್ಣನಾ ಪದ್ಯದಲ್ಲಿಯೂ ಅಷ್ಟು ನೆಲೆಗೊಂಡಿಲ್ಲ. ಆಂಗ್ಲ ಕವಿಗಳ ಅಡವಿಗಳ ವರ್ಣನೆಗಳನ್ನು ಓದಿ ಆನಂದಪಟ್ಟವರಿಗೆ ಈ ವರ್ಣನೆಗಳು ಹೇಗೆ ತಾನೆ ರುಚಿಸುವುವು! ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇರುವ ಕೆಲವು ವರ್ಣನೆಗಳು ನಮ್ಮ ಸಾಹಿತ್ಯಕ್ಕೇ ನೂತನವಾದುವು; ಅವುಗಳಲ್ಲಿ ಜೀವಕಳೆಯು ತುಂಬಿ ತುಳುಕುವುದು; ಇಂಪಾದ ಶಬ್ದರಚಿತವಾದ ಗಾನದ ಸೊಬಗಿನಂತೆ ಹೃದಯವನ್ನು ಆನಂದದಿಂದ ತುಂಬುವುವು; ಮನಸ್ಸಿಗೆ ಕುಂದು ಕೊರತೆಗಳುಂಟಾದಾಗ ಇವುಗಳ ಸೊಗಸು ಮಿಂಚಿನಂತೆ ಹೊಳೆದು ಮಾಲಿನ್ಯವನ್ನು ನೀಗಿ ಸೌಂದರ್ಯ ಸ್ವರೂಪವನ್ನು ವ್ಯಕ್ತಗೊಳಿಸುವುವು. ಈ ಕೆಳಗಿನ ವರ್ಣನೆಯನ್ನು ಓದಿ ಯಾರ ಹೃದಯವು ತಾನೆ ವಿಕಾಸವನ್ನು ಪಡೆಯುವುದಿಲ್ಲ:—

ಮಂದ ಪರಿಮಳಿತ ಶೀತಲ ವಾತ ಸಂಚಲಿತ
ಕುಸುಮ ಕಿಸಲಯ ಫಲ ಪ್ರಸರದಿಂದಂ
ಶಬ್ದ ಸರ್ವಸ್ವಾವತಾರಮೆಂದೆನಿಪ
ಮುನಿ ವಿಹಗ ಕೀಟಕ ಕೋಟಿ ನಾದದಿಂದಂ
ಸೊಗಯಿಪಾ ತರು ಗುಲ್ಮ ಲತೆಗಳಿಂ ನಿಬಿಡವಾಗಿ
ರವಿಯನವಗಡಿಸಿ ಯೋಜನ ಶತವನಿಂಬುಗೊಳಿಸಿ
ಸೃಷ್ಟಿ ಮಾಹಾತ್ಮ್ಯ ಸಂಸ್ಫೂರ್ತಿ ಪ್ರದಾತೃವೆನಿಸಿ
ಕೀರ್ತಿವಡೆದಿಹುದಾ ಮಹಾರಣ್ಯ ಸರಣಿಯುತ್ತಲ್

ಇಂತಹ ಹೂವುಗಳು ಅರಳಿರುವೆಂದರೆ ಮಧುಪಾನಾಸಕ್ತವಾದ ತುಂಬಿಗಳು ನಾನಾ ಕಡೆಗಳಿಂದ ಬರುವುದೇನಾಶ್ಚರ್ಯ!

(೬) ಉದಕ ವರ್ಣನೆ

ಉದಕ ವರ್ಣನೆ ಎಂದರೆ ನದಿಗಳು, ಕೆರೆಗಳು, ಸರೋವರಗಳು—ಇವೇ ಮೊದಲಾದ ಜಲಾಶಯಗಳ ವರ್ಣನೆಯೆಂದು ಉದಯಾದಿತ್ಯನು ಅಭಿಪ್ರಾಯ ಪಟ್ಟಿರಬಹುದು. ಜಲಾಶಯದ ವರ್ಣನೆಗಳು ಕನ್ನಡ ಕಾವ್ಯಗಳಲ್ಲಿ ವಿಶೇಷವಾಗಿ ಕಂಡುಬರುವುದಿಲ್ಲ. ಎಲ್ಲಿಯೋ ಕೆಲವು ಕವಿಗಳು ಮಾತ್ರ ನದಿಗಳ ವರ್ಣನೆಯನ್ನೂ ಸರೋವರದ ವರ್ಣನೆಯನ್ನೂ ಮಾಡಿರುತ್ತಾರೆ; ಕೆರೆಗಳ ವರ್ಣನೆಗಳು ಇಲ್ಲವೇ ಇಲ್ಲವೆಂದು ಹೇಳಬಹುದು; ಒಂದು ವೇಳೆ ಕವಿಗಳು ಅವುಗಳ ವರ್ಣನೆಯನ್ನು ಮಾಡಿದ್ದರೂ ಸರೋವರದ ವರ್ಣನೆಯ ಹಾಗೆಯೇ ಮಾಡಿರು

ತ್ತಾರೆ. ನದಿಗಳ ವರ್ಣನೆಯಲ್ಲಿ ನಮ್ಮ ನಾಡಿನಲ್ಲಿಯೇ ಇರುವ ಕಾವೇರಿ ಮುಂತಾದುವುಗಳನ್ನು ವರ್ಣಿಸದೆ ನರ್ಮದಾ ಗಂಗಾ ಯಮುನಾ ನದಿಗಳನ್ನು ನಮ್ಮ ಹಿಂದಿನ ಕವಿಗಳಲ್ಲನೇಕರು ವರ್ಣಿಸಿರುತ್ತಾರೆ. ಈ ಕವಿಗಳು ದೇಶ ಸಂಚಾರಕ್ಕೆ ಬೇಕಾದಷ್ಟು ಅನುಕೂಲ್ಯಗಳಿಲ್ಲದ ಆ ಕಾಲದಲ್ಲಿ ಗಂಗಾದಿ ತಟಿನಿಗಳನ್ನು ನೋಡಿದ್ದರೋ ಇಲ್ಲವೋ ನಿರ್ಧರಿಸಿ ಹೇಳಲು ಸಾಧ್ಯವಿಲ್ಲ. ಈ ನದಿಗಳ ವರ್ಣನೆಯನ್ನು ನಮ್ಮ ಕವಿಗಳು ಹೇಗೆ ಮಾಡಿದ್ದರೆಂಬ ಪ್ರಶ್ನೆಯು ಹುಟ್ಟಬಹುದು. ಅದಕ್ಕೆ ಎರಡು ಸಮಾಧಾನಗಳನ್ನು ಹೇಳಬಹುದು: ಮೊದಲನೆಯದು, ಸಂಸ್ಕೃತ ಕವಿಗಳ ಕಾವ್ಯಗಳಲ್ಲಿರುವ ನದಿಗಳ ವರ್ಣನೆಯನ್ನು ವಿಶೇಷವಾಗಿ ಓದಿ ನಮ್ಮ ಕವಿಗಳು ಆ ವರ್ಣನೆಗಳನ್ನೇ ಅನುಸರಿಸಿರುವರೆಂಬುದು; ಎರಡನೆಯದು, ಲಾಕ್ಷಣಿಕರು ಕೆಲವು ಗುರುತುಗಳನ್ನು ತೋರಿಸಿಕೊಟ್ಟಿರುವರು. ಈ ಹೆಗ್ಗುರುತುಗಳನ್ನೇ ಆಧಾರವಾಗಿಟ್ಟುಕೊಂಡು ಅವುಗಳ ಜೊತೆಗೆ ಸ್ವತಃ ಊಹಾ ಶಕ್ತಿಯನ್ನು ಸೇರಿಸಿ ನಮ್ಮ ಕವಿಗಳು ಜಲಾಶಯಗಳ ವರ್ಣನೆಗಳನ್ನು ಮಾಡಿರುವರು. ಉದಾಹರಣೆಗಾಗಿ, ಸೋಮರಾಜ ಕೃತವಾದ ತುಂಗಭದ್ರೆಯ ವರ್ಣನೆಯನ್ನು ತೆಗೆದುಕೊಳ್ಳೋಣ. ಉದ್ಭಟಕಾವ್ಯದ ಕಥಾನಾಯಕನಾದ ಉದ್ಭಟನೆಂಬ ಘೂರ್ಜರ ದೇಶಾಧಿಪತಿಯು ಪಂಪಾ ಕ್ಷೇತ್ರದಲ್ಲಿ ಭವಾನೀ ದರ್ಶನವನ್ನು ಮಾಡಿಕೊಂಡು ಬರುತ್ತಿರಲು ಅವನ ಎದುರಿಗೆ—

> **ಸುೞಿಯಿಂ ಬುದ್ಬುದದಿಂ ಮೀ**
> **ನ್ಗಳ ಸೊಂಪಿಂ ಕಿಱುದೆರೆಗಳ ಚೆಲ್ವಿಂದೆ ಸಮು।**
> **ಜ್ವಳ ಶೀಕರ ತತಿಯಿಂ ಕಂ**
> **ಗೊಳಿಸಿತ್ತಾ ತುಂಗಭದ್ರೆ ತುಳ್ಕುತೆ ಸೊಗಸಂ ॥**

ಲಾಕ್ಷಣಿಕರ ಮತದರೀತ್ಯಾ ನದೀ ವರ್ಣನೆಯಲ್ಲಿ ಸುಳಿಗಳನ್ನೂ ಬುದ್ಬುದಗಳನ್ನೂ ಮೀನುಗಳನ್ನೂ ಪುಳಿನಸ್ಥಳಗಳನ್ನೂ ಶೈವಾಲವನ್ನೂ ಕವಿಗಳು ವರ್ಣಿಸಬೇಕೆಂದಿರುವುದು. ಇವುಗಳನ್ನು ಏಕೆ ವರ್ಣಿಸಬೇಕೆಂಬ ಈ ನಿಯಮವನ್ನು ಮಾಡಿರುವ ಲಾಕ್ಷಣಿಕರೇ ಬಲ್ಲರು. ನದಿಯನ್ನು ನೋಡುತ್ತಲೇ ಅದರ ಸೊಗಸು ಹೃದಯದಲ್ಲಿ ಉದ್ಭವಿಸುವ ಭಾವಗಳನ್ನು ವರ್ಣಿಸದೆ ಪಾಚಿಯನ್ನು ಏಕೆ ವರ್ಣಿಸಬೇಕು? ಆ ಸೊಗಸಿನ ಆಳವನ್ನೂ ಅಂತರವನ್ನೂ ಅರಿಯದೆ ಮೇಲೆ ಮೇಲೆ ಕಾಣುವ ಪದಾರ್ಥಗಳ ಸಮೂಹಗಳನ್ನು ವರ್ಣಿಸಿದರೆ ಮನಸ್ಸಿನಲ್ಲಿ ಸ್ವಲ್ಪವಾದರೂ ಆನಂದ ಉಂಟಾಗುವುದೆ? ಇಂತಹ ಪ್ರಕೃತಿ ಸೌಂದರ್ಯದ ವರ್ಣನೆಯನ್ನು ಕೂಡ ನಮ್ಮ ಕವಿಗಳಲ್ಲಿ ಕೆಲವರು ನೀರಸವಾಗಿ ಮಾಡಿರುತ್ತಾರೆ. ಈ ವಿಷಯವು ಹಾಗಿರಲಿ. ಪ್ರಕೃತದಲ್ಲಿ ತುಂಗಭದ್ರಾ ನದಿಯ ವರ್ಣನೆಯ ವಿಚಾರವಾಗಿ ಇನ್ನೂ ಕೆಲವು ವಿಷಯಗಳನ್ನು ತಿಳಿದುಕೊಳ್ಳೋಣ. ಸೋಮರಾಜನು ಈ ವರ್ಣನೆಯನ್ನು ಲಲಿತರಗಳೆಯಲ್ಲಿ ಬರೆದಿರುತ್ತಾನೆ. ಮೊದಲನೆಯ ಹದಿನಾರು ಪಙ್ಕ್ತಿಗಳಲ್ಲಿ ನದಿಯಲ್ಲಿರುವ ಸುಳಿಗಳನ್ನೂ ಮೀನುಗಳನ್ನೂ

ವರ್ಣಿಸಿದಮೇಲೆ ಇನ್ನು ಮುಂದಿನ ಐವತ್ತೆರಡು ಪಙ್ಕ್ತಿಗಳಲ್ಲಿ ನದಿಯ ದಡಗಳನ್ನೂ ಅವುಗಳ ಮೇಲಿರುವ ಎಲ್ಲಾ ಜಾತಿಯ ವೃಕ್ಷಗಳನ್ನೂ ಪೈರುಪಚ್ಚೆಗಳನ್ನೂ ಕವಿಯು ನಿರೂಪಿಸುತ್ತಾನೆ. ಈ ನಿರೂಪಣೆಯು ಒಂದು ದೊಡ್ಡ ಪಟ್ಟಿ ಇರುವ ಹಾಗಿದೆ; ಏಕೆಂದರೆ, ಕಮನೀಯವಾದ ನಾನಾ ಭೂಮಿಜಗಳ ಹೆಸರುಗಳೆಲ್ಲವನ್ನೂ ಕ್ರಮವಾಗಿ ಹೇಳುತ್ತಾನೆ. ಹೊರಟದ್ದು ತುಂಗಭದ್ರಾ ನದೀ ವರ್ಣನೆ ಮಾಡಬೇಕೆಂಬ ಉದ್ದೇಶದಿಂದ; ಮಾಡಿರುವ ವರ್ಣನೆಯು ವಿವಿಧ ಸಸ್ಯಜಾತಿಗಳ ಸಮೂಹ. ಹೀಗೆ ವರ್ಣನೆಯನ್ನು ಮಾಡಿದರೆ ನದಿಯ ಕಲ್ಪನೆಯು ಹೇಗೆ ತಾನೆ ಉಂಟಾಗಬೇಕು? ಇಷ್ಟು ವಿಸ್ತಾರವಾಗಿ ತುಂಗಭದ್ರಾ ನದೀ ವರ್ಣನೆಯಲ್ಲದ ಒಂದು ವರ್ಣನೆಯನ್ನು ಮಾಡುವುದಕ್ಕಿಂತ ಸೋಮರಾಜನು ಕೆಲವು ಮಾತುಗಳಿಂದ ಸಂಗ್ರಹವಾಗಿ ವರ್ಣನೆಯನ್ನು ಮಾಡಿದ್ದರೆ ಎಲ್ಲರಿಗೂ ಹೆಚ್ಚು ಸುಖವನ್ನುಂಟುಮಾಡಬಹುದಾಗಿದ್ದಿತು; ಆದರೂ ವರ್ಣನೆಯ ಕೊನೆಯಲ್ಲಿರುವ—

ಅಳವಟ್ಟು ರಂಜಿಪಿರ್ಕಡಿಗಳ ಬೆಡಂಗಿನಿಂ
ತಿಳಿದು ಪರಿವಂಬು ಧಾರಾಳಿಯ ಬೆಡಂಗಿನಿಂ
ಮುಟ್ಟಿದವರಂ ಮುಮುಕ್ಷುಗಳನುರೆ ಮಾಡುತುಂ
ಮೆಟ್ಟಿದವರಂ ಘನಪವಿತ್ರರಂ ಮಾಡುತುಂ
ರಂಜಿಸಿದುದುರು ಪುಣ್ಯದೊಬ್ಬುಳಿಯಲಂಪಿನಿಂ
ಮಂಜುಳಾವೃತೆ ತುಂಗಭದ್ರೆ ಕಡುಸೊಂಪಿನಿಂ

'ಎಂಬ ಈ ಮಾತುಗಳಿಷ್ಟರಲ್ಲಿಯೇ ಕವಿಯು ಸುಖವನ್ನುಂಟುಮಾಡಿರುವನು. ಇಷ್ಟರಲ್ಲಿಯೇ ಆತನು ತೃಪ್ತನಾಗಿದ್ದರೆ ಎಷ್ಟು ಒಳ್ಳೆಯವನಾಗುತ್ತಿದ್ದನು! ಈತನ ವರ್ಣನೆಯು ಇತರ ಹಿಂದಿನ ಕವಿಗಳ ವರ್ಣನೆಗಳಿಗಿಂತ ಹೆಚ್ಚು ಸ್ವಾಭಾವಿಕವಾಗಿಯೂ ಹೃದಯಂಗಮವಾಗಿಯೂ ಇರುವುದು. ಲಕ್ಷ್ಮೀಶನ ನದೀ ವರ್ಣನೆಯು ಸ್ವಲ್ಪಮಟ್ಟಿಗೆ ಊಹಾಶಕ್ತಿ ಜನಿತವಾದುದಾಗಿಯೂ ಕೃತಕವಾಗಿಯೂ ತೋರುವುದು. ಈತನು ಗಂಗಾನದಿಯನ್ನು ವರ್ಣಿಸಿರುವನು; ಅದರ ಮಾಹಾತ್ಮ್ಯವನ್ನು ಮಾತ್ರ ಈತನು ತನ್ನ ವರ್ಣನೆಯಲ್ಲಿ ವಿಶದೀಕರಿಸುತ್ತಾನೆ; ನಮಗೆ ಅದರಲ್ಲಿ ಒಂದು ಗೌರವವನ್ನೂ ಪೂಜ್ಯಬುದ್ಧಿಯನ್ನೂ ಉಂಟುಮಾಡುವುದರಲ್ಲಿ ಲಕ್ಷ್ಮೀಶನು ನಿಪುಣನು.

ನಮ್ಮ ದೇಶಕ್ಕೆ ಅತ್ಯಂತ ಉಪಕಾರವನ್ನು ಮಾಡುತ್ತಿರುವ ಕಾವೇರೀ ನದಿಯ ವರ್ಣನೆಯಿಂದ ಅತುಲವಾದ ಆನಂದವನ್ನು ಅನುಭವಿಸುವುದಕ್ಕೆ ಸಿದ್ಧಪಡಿಸಿಕೊಳ್ಳೋಣ; ನಮ್ಮ ಅಂತಃಕರಣದ ಬಾಗಿಲುಗಳನ್ನು ತೆರೆದು ಆ ಲಾವಣ್ಯಪೂರ ಪ್ರವಾಹದ ತನಿ ಸೊಬಗನ್ನೂ ಶಾಂತಿಯನ್ನೂ ಮನಗಾಣಲು ತೊಡಗೋಣ; ಆ ನದಿಯು ನಮಗೆ ಕಲ್ಪಿಸಿಕೊಟ್ಟಿರುವ ವಿವಿಧವಾದ ಆನುಕೂಲ್ಯಗಳಿಗೆ ಕೃತಜ್ಞತಾಬುದ್ಧಿಯಿಂದ ನಾವು ಏನು ಕೊಟ್ಟರೆ ತಾನೆ ತೀರೀತು! ಆದರ ಸೊಗಸಿನ

ವಿಚಾರವಾಗಿಯೂ ಪಾಶ್ಚಾತ್ಯದ ವಿಚಾರವಾಗಿಯೂ ಕೆಲವು ಒಳ್ಳೆಯ ಮಾತುಗಳನ್ನಾದರೂ ಹೇಳೋಣ. ಹಾಗೆ ಹೇಳುವುದಕ್ಕೆ ಶಕ್ತಿಯು ಸಾಲದಿದ್ದರೆ ಶ್ರೇಷ್ಠರಾದ ನಮ್ಮ ಕವಿಜನಗಳು ಮಾಡಿರುವ ಆ ನದಿಯ ವರ್ಣನೆಯನ್ನಾದರೂ ಓದಿ ತೃಪ್ತಿಪಟ್ಟು ಅದನ್ನು ಪ್ರೀತಿಸುವುದಕ್ಕೂ ಗೌರವಿಸುವುದಕ್ಕೂ ಪ್ರಾರಂಭ ಮಾಡೋಣ.

ಕಾವೇರೀ ನದಿಯ ವರ್ಣನೆಯನ್ನು ಮಾಡಿರುವ ಹಿಂದಿನ ಕವಿಗಳಲ್ಲಿ ಚಿಕುಪಾಧ್ಯಾಯನು ಮೊದಲನೆಯವನೂ ಶ್ರೇಷ್ಠನೂ ಆಗಿರುವನು. ಇವನ ವರ್ಣನೆಯಲ್ಲಿ ಆ ನದಿಯಲ್ಲಿ ತನಗಿರುವ ಪ್ರೇಮವೂ ಭಕ್ತಿಯೂ ವ್ಯಕ್ತವಾಗಿವೆ. ತಮ್ಮ ದೇಶದಲ್ಲಿ ತಮಗಿರುವ ಪ್ರೇಮವನ್ನು ಕೆಲವು ಕವಿಗಳು ಮಾತ್ರ ಬಹಳ ಚೆನ್ನಾಗಿ ಹೇಳಿರುವರು. ಇಂತಹ ಕವಿಗಳಲ್ಲಿ ಪಂಪನು ಮೊದಲನೆಯವನೆಂಬುದು "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂಬ ಪದ್ಯಭಾಗವನ್ನು ಓದಿದರೆ ಗೊತ್ತಾಗುವುದು. ಚಿಕುಪಾಧ್ಯಾಯನಿಗೆ ತನ್ನ ದೇಶದಲ್ಲಿಯೂ ತನ್ನ ರಾಜನಲ್ಲಿಯೂ ವಿಶೇಷವಾದ ಪ್ರೇಮವಿದ್ದಿತೆಂದು ಕಾಣುವುದು. ಆತನಿಗೆ ಕನ್ನಡ ನಾಡಿನಲ್ಲಿಯೂ ಮೈಸೂರಿನಲ್ಲಿಯೂ ಎಷ್ಟು ಪ್ರೇಮವಿದ್ದಿತೆಂಬುದು—

ಗಾಡಿಯ ಸೀಮೆ ಚೆಲ್ವಿಗೆವ ತಾಣಮಲಂಪಿನ ಸಂತೆ ಪೆಂಪು ಸಾ
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ ।
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ತನೆ ಮುಕ್ತಿ ಕಾಂತೆ ಕೈ
ಗೂಡುವ ಬೀಡು ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪೆಂ ॥

ಎಂಬ ಪದ್ಯವನ್ನೂ

ಬೀರದ ಮಂದಿರಂ ಬಿನಯದಂಗಡಿಯೊಳ್ಪಿನ ಪೇಟೆ ನವ್ಯ ಶೃಂ
ಗಾರದ ಸಾಗರಂ ಜಸದ ಚಾವಡಿಯೋಜೆಯ ಬೀಡು ಭಾಗ್ಯದೊಂ ।
ದಾರವೆ ಸರ್ವ ಪುಣ್ಯದ ತವರ್ಮನೆಯ್ಸಿರಿಯಾಗರಂ ಮಹೀ
ಶೂರ ಪುರಂ ವಿರಾಜಿಸಿತು ಭೂ ರಮಣೀ ಲಸದಂಘ್ರಿ ನೂಪುರಂ ॥

ಎಂಬ ಮಾತುಗಳನ್ನು ಓದಿದರೆ ವಿದಿತವಾಗದಿರಲಾರದು. ಈತನ ಕಾವೇರೀ ನದಿಯ ವರ್ಣನೆಯೂ ಇದೇ ಪ್ರೇಮದಿಂದಲೂ ಇದೇ ಭಕ್ತಿಯಿಂದಲೂ ಉತ್ಪನ್ನವಾದುದು. ಈತನಿಗೆ ಆ ನದಿಯು ಬರಿಯ ನೀರಿನಿಂದ ಪರಿಪೂರ್ಣವಾದ ಒಂದು ಪ್ರವಾಹವಾಗಿರಲಿಲ್ಲ; ಆದರೆ—

ಸತತಂ ಮಜ್ಜದಶೇಷ ಮಾನವರ್ಗೆ ಮುಕ್ತಿಶ್ರೀಯ ಸಮ್ಮೇಳನೋ
ನ್ನತಿಯುಂ ಪ್ರೋರ್ಜಿಸ ಸಂಶ್ರಿತ ಪ್ರಜೆಗಳಂ ಸೌಭಾಗ್ಯ ಸಂಪತ್ತಿ ಗಿ ।
ರ್ಜಿತ ದೇವೇಂದ್ರರನಾಗಿಸುತ್ತೆ ವಿಲಸಚ್ಛ್ರೀರಂಗರಾಟ್ಪ್ರೀಕರ
ದ್ಯುತಿ ಪೂತೋದಕ ಪೂರಿತಾಶಯೆ ಮಹಾಕಾವೇರಿ ಕಣ್ಗೊಪ್ಪುಗುಂ ।

ಇನ್ನೂ ಆಧುನಿಕವಾದ ಕಾವೇರೀ ನದಿಯ ವರ್ಣನೆಯಲ್ಲಿ ದೇಶ ಪ್ರೀತಿಯು ಉಚ್ಚತರವಾದ ಭಾವಗಳಿಂದ ಸಮ್ಮಿಳಿತವಾಗಿ ಹೃದಯವನ್ನು ಹುರಿದುಂಬಿಸಿ ಆವೇಶದಿಂದ ತುಂಬುವುದು. ಮೊದಲು ಈ ವರ್ಣನೆಯು "ಜನುಮ ಬುವಿಯು ಮಮತೆ ಬಾಯ ಬಿಡಿಸುತಿರ್ಪುದು" ಎಂಬ ಒಂದು ಅತ್ಯಂತ ಮಾನ್ಯವಾದ ಹೃದಯಸ್ಥಿತ ಭಾವನೆಯಿಂದ ಉದ್ಭವವಾಗಿದೆ; ಎರಡನೆಯದು, ಇದರಲ್ಲಿ ವಿಶೇಷವಾಗಿ ವ್ಯಕ್ತಿತ್ವವಿದೆ. ಕಾವೇರೀ ನದಿಯ ಮೇಲೆಯೇ ನಮ್ಮ ಮನಸ್ಸನ್ನಿಟ್ಟು, ವರ್ಣನಾ ಪದ್ಯಗಳಲ್ಲಿ ಚಿತ್ರಿತವಾಗಿರುವ ಚಿತ್ರಗಳನ್ನು ಮನೋನೇತ್ರಗಳಿಂದ ನೋಡುತ್ತ ಆ ಪದ್ಯಗಳನ್ನು ಓದಿದರೆ ನಮ್ಮ ಹೃದಯವು ಆ ನದಿಯೊಡನೆ ಸೇರಿ ತಾಂಡವವಾಡುವುದು. ಆ ನದಿಯ ಕಿರುದೆರೆಗಳ ಏರಿಳಿತಗಳಲ್ಲಿ ಹತ್ತಿ ಇಳಿದು ಅದರ ಕೊಂಕು ಕೊಂಕಾದ ಮಾರ್ಗಗಳನ್ನು ಅನುಸರಿಸುತ್ತ ಅದು ಸುಳಿಯುವ ಹಾಗೆ ಸುಳಿದು, ಅದು ಸುತ್ತುವ ಹಾಗೆ ಸುತ್ತಿ, ಅದರ ಸಂಗಡಲೇ ಅಪಾರವಾದ ಆನಂದ ಸಾಗರಕ್ಕೆ ಸೇರುವ ನಮ್ಮ ಹೃದಯದ ನಾವೆಯ ತವಕವನ್ನು ತಿಳಿಯಬೇಕಾದರೆ, "ಶಿವಸಮುದ್ರ"ವನ್ನೋ, ಅಥವಾ "ಜೋಗದ ಜಲಪಾತ"ವನ್ನೋ ಓದಬೇಕು. ಕಾವೇರೀ ನದಿಯ ವಿಲಾಸವು—

> ಮೊಱೆಯುತೆ ನೊಱೆಯುತೆ ಭರದಿಂ
> ಪಱಿದೋಡುತೆ ಜಾಱಿ ಪಾಱಿ ಮುಕ್ತಾಂಜಲಿಯಿಂ।
> ಎಱಚುತಲೆಱಗುತೆ ರಭಸದಿ
> ಬಱುತಿರ್ಪ ಜಲ ವಿಲಾಸಮೇನತಿಶಯವೋ ॥

ಎಂಬ ಮಾತುಗಳಲ್ಲಿ ಎಷ್ಟು ವಿಶದವಾಗಿಯೂ ಹೃದಯಂಗಮವಾಗಿಯೂ ಚಿತ್ರಿತವಾಗಿದೆ! ಇದರಲ್ಲಿಯ ಮಧುರವಾದ ಸೌಂದರ್ಯ ಸ್ವರೂಪವನ್ನು ಸಂಪೂರ್ಣವಾಗಿ ಮನಗಂಡಮೇಲೆ ಆ ನದಿಯ ಮೊರೆಯುವಿಕೆಯನ್ನು ಕಿವಿಯಾರ ಕೇಳುವೆವು, ಅದರ ಹರಿಯುವಿಕೆಯನ್ನು ಕಣ್ಣಾರ ನೋಡುವೆವು, ಅದರ ಸಂಗಡಲೇ ಪರಿದೋಡುತ್ತ "ಜಾರಿ ಪಾರಿ" ಎಲ್ಲ ಕಡೆಗೂ ಚೆಲ್ಲಿ ಕೆದರಿಹೋಗುವ ತುಂತುರು ಹನಿಗಳ ಮುತ್ತುಗಳಾಗುವೆವು; ಕೊನೆಗೆ, ಅದರ ರಭಸಯುತವಾದ "ಜಲ ವಿಲಾಸದ" ವಿಲಾಸದಲ್ಲಿ ಲೀನರಾಗುವೆವು; "ರಾಜ್ಯೇಶ್ವರಿ"ಯಾದ ಕಾವೇರಿಯು ಓಡುತ್ತಿರುವುದನ್ನು ನೋಡಿ ಅನೇಕ ವಿಧವಾದ ಭಾವಗಳು ಕವಿಯ ಹೃದಯದಲ್ಲಿ ಏಕ ಕಾಲದಲ್ಲಿ ಉತ್ಪನ್ನವಾಗಿವೆ. ಈ ಭಾವಗಳು ಕ್ಷಣ ಕ್ಷಣಕ್ಕೂ ಸಂಜೆಯ ಸೂರ್ಯನ ಸೌಂದರ್ಯವು ಬೇರೆಬೇರೆಯಾಗಿ ತೋರುವ ಹಾಗೆ ಬದಲಾವಣೆಯನ್ನೂ ಬಣ್ಣವನ್ನೂ ಪಡೆಯುತ್ತವೆ. ಈ ಭಾವ ಸಮೂಹಕ್ಕೆ ಮೊದಲೂ ಕೊನೆಯೂ ನೆಲೆಯೂ ಇಲ್ಲವೆಂದು ತೋರುವುದು. ಭಯಂಕರಿಯಾದ ಕಾವೇರಿಯು ಭೀಮಾಕಾರವನ್ನು ಹೊಂದಿದವಳಾದರೂ ಸದಯಳು, ಆಕೆಯು ಸರಸಳೂ ಅಹುದು, ಕಾವ್ಯಾಶ್ರಯಳೂ ಅಹುದು. ಆಕೆಗೆ ಮಂದಾತ್ಮರನ್ನು ನಿಂದಿಸುವ ಶಕ್ತಿಯೂ, ಮಾನವರಿಗೆ ಔದಾರ್ಯವನ್ನೂ ಶಾಂತಿಯನ್ನೂ ಪ್ರಿಯತೆಯನ್ನೂ

[illegible] ಸದಿಯ ''ದೈವ ಕೃತಿಯ ಸೊಬಗ''ನ್ನು ತೋರಿಸುವುದಲ್ಲದೆ—

ಪುರುಷ ಬಲವ ಬೆಂಗರಿಸುತ ಜವರ ಪಳಿದು ವೊಳಗುಪುಂ
ಪರಿವಳಿ ಕವೇರ ತನಯ ಧೀರ ಜನನಿಯೆನಿಸುಪುಂ |

[illegible] ಕನ್ನಡ [illegible] ಯುಳ್ಳದೆ ಎಂಬುದನ್ನು ತೋರಿಸುವುದಲ್ಲವೆ?

[illegible] ಪಂಪ [illegible] ನುಡಿ [illegible] ಸೊಬಗು [illegible] ಹೀಗೆ ವರ್ಣಿಸಿರುತ್ತಾನೆ:—

[illegible]
ತ್ತಿಂಗಳಲಿರ್ದ ಬೆಳ್ಳಿ ಪೊಸ ಮುತ್ತಿನ ಕುಟ್ಟುವ ನೀರೊ ತೋರ್ಪ ವೆ|
ಳ್ದಿಂಗಲ ಬಯ್ಕೆಯೋ ಜಗದ ಧೀವರೆಯರ್ಕಳ ಕಣ್ಣ ಬೆಳ್ಪು ವೆ
ಳ್ದಿಂಗೆಪೆಪತೊತ್ತು ಪೇರ್ಮೆಮನೆ ನಿರ್ಮಲಮಾಪುದು ನೀರಜಾಕರಂ ||

ಈ [illegible] ''[illegible]'', ''ಜಗದ [illegible]'' [illegible] ''[illegible]'' [illegible] ಕನಕ [illegible] ವರ್ಣಿಸಿ. [illegible]

ಹಂಸಪಕ್ಷಿಯು ವಿಲಾಸವನ್ನೂ ಆ ತಿಳಿಗೊಳದ ನೀರಿನ ಶೀತಲತ್ವವನ್ನೂ ವರ್ಣಿಸಿ ಸರೋವರ ವರ್ಣನೆಯನ್ನು ಪೂರ್ತಿಮಾಡುತ್ತಾನೆ. ಇದೇ ರೀತಿಯಲ್ಲಿಯೇ ಇತರ ಕವಿಗಳ ಸರೋವರ ವರ್ಣನೆಗಳೂ ಇರುವುವು. ರನ್ನನ ವೈಶಂಪಾಯನ ಸರೋವರದ ವರ್ಣನೆಯಲ್ಲಿ ಮಾತ್ರ ಒಂದು ವಿಶೇಷವಾದ ವಿಷಯವು ವಿಚಾರಾರ್ಹವಾಗಿದೆ. ಈತನ ವರ್ಣನೆಯು ಸಮಯೋಚಿತವಾಗಿರುವುದಲ್ಲದೆ ಪ್ರಕೃತಿಯು ಕೆಟ್ಟವರ ವಿಷಯದಲ್ಲಿ ಹೇಗೆ ಅಸಹನೆಯನ್ನು ವಹಿಸುವಳೆಂಬುದೂ ಸೂಚಿತವಾಗಿದೆ. ಇದು ಬರಿ ಕವಿಕಲ್ಪನೆಯಾಗಿರಬಹುದೊ ಏನೊ! ಹೇಗಾದರೂ ಇರಲಿ.

ಕುರುಪತಿ ನಿನ್ನ ಪೊಕ್ಕ ತೊಟ್ಟನೆಗಳ್ತ್ರದಲಾಗಿರೆ ಬತ್ತಿದಪ್ಪುವೀ
ದೊರೆಯ ದುರಾತ್ಮನಂ ಬಳಸನಾಸೊಳಕೊಂಡೊಡೆ ಭೀಮನೀ ಸರೋ |
ವರಮುಮನೆಮ್ಮುಮಂ ಕದಡುಗುಂ ಪುಗದಿರ್ ತೊಲಗೆಂದು ಬಗ್ಗಿಸಂ
ತಿರೆ ನೆಗೆದತ್ತನೇಕ ಬಕ ಕೋಕ ಮರಾಳ ವಿಹಂಗಮ ಸ್ವನಂ ||

ಎಂಬ ಮಾತುಗಳನ್ನು ಓದಿದರೆ ಪ್ರಕೃತಿಯ ಅಸದ್ವರ್ತನೆಯ ಅಸಹನೆಯು ವ್ಯಕ್ತವಾಗದಿರಲಾರದು. ರನ್ನನು ಪ್ರಕೃತಿಯ ಈ ರಹಸ್ಯವನ್ನು ಅರಿತವನಾಗಿದ್ದಿರಬಹುದೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ, ದುರ್ಯೋಧನನ ವಿಷಯದಲ್ಲಿ ಇಷ್ಟು ಅಪ್ರಿಯವನ್ನು ತೋರಿಸಿದ ಈ ಸರೋವರವೇ ಭೀಮನ ವಿಷಯದಲ್ಲಿ ಎಷ್ಟು ಆದರವನ್ನು ಸೂಚಿಸಿದಳೆಂಬುದನ್ನು—

ವಿರವತ್ಸಾರಸ ರಾಜಹಂಸ ರವದಿಂದೇವಂದಿರೇ ಬನ್ನಿಮಿಂ
ತಿರಿಮೆಂದಾದರಿಸಂತುಟಾಯ್ತು ಪವನೋದ್ಧೂತೋತ್ತರಂಗಾಂಬುವಿಂ |
ತರದಿಂ ಕಾಲ್ಗೆಱಿಪಂತುಟಾಯ್ತು ವಿಕಚತ್ಕಂಕೇಜದಿಂ ಪಂಕಜಾ
ಕರಮರ್ಘ್ಯಂಗುಡುವಂತುಟಾಯ್ತು ನಿಲಜಂಗಭ್ಯಾಗತ ಪ್ರೀತಿಯಿಂ ||

ಎಂಬ ಮಾತುಗಳಲ್ಲಿ ರನ್ನನು ವಿಶದೀಕರಿಸಿರುವನು. ರನ್ನನು ವೈಶಂಪಾಯನ ಸರೋವರವನ್ನು ನೋಡಿದ್ದನೋ ಇಲ್ಲವೋ ಅದರ ವಿಚಾರ ಬೇರೆ; ಹಾಗೆ ನೋಡಿದ್ದಲ್ಲಿ ಆತನು ವ್ಯಕ್ತ ಸೌಂದರ್ಯವನ್ನು ವರ್ಣಿಸದೆ ಬಿಡುತ್ತಿರಲಿಲ್ಲ. ರನ್ನನ ಈ ವರ್ಣನೆಯು ಊಹಾ ಶಕ್ತಿ ಜನಿತವಾದುದಲ್ಲ; ಅದರಲ್ಲಿ ಪ್ರತಿಭೆಯೂ ಆಳವನ್ನು ಹೊಗುವ ಶಕ್ತಿಯೂ ಸಮ್ಮಿಳಿತವಾಗಿವೆ. ಇಂಗ್ಲಿಷ್ ಕವಿಗಳಲ್ಲಿ ವರ್ಡ್ಸ್‌ವರ್ತ್ ಎಂಬುವನು ಮೊದಲು ಈ ರಹಸ್ಯವನ್ನು ಅರಿತನು. ಈತನು ತನ್ನ ಅಸಾಧಾರಣವಾದ ಕವಿತೆಗಳಿಂದ ಈ ರಹಸ್ಯವನ್ನು ತನ್ನ ಜನರಿಗೆಲ್ಲರಿಗೂ ದೊರಕಿಸಿಕೊಟ್ಟಾಗ ಅದು ಅವರಿಗೆಲ್ಲ ಒಂದು ನವ ನವವಾದ ಜ್ಯೋತಿಯು ಬೆಳಕಿನಂತೆಯೇ ಕಂಡುಬಂದಿತು. ಈತನಿಗಿಂತ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಜೀವಿಸುತ್ತಿದ್ದ ಕನ್ನಡ ಕವಿಗಳಾದ ಪಂಪ ರನ್ನರು ಪ್ರಕೃತಿಗೂ ಪುರುಷನಿಗೂ ಇರುವ ಇದೊಂದು ಸಂಬಂಧದ ಸ್ವಭಾವವನ್ನು ತಿಳಿದಿದ್ದರೆಂದು ಹೇಳಿದರೆ ಪ್ರವಾದವೇನೂ ಇಲ್ಲವೆಂದು ತೋರುವುದು. ಪಂಪ ರನ್ನರು ಈ ರಹಸ್ಯಾನ್ವೇಷಣದ ವಿಚಾರವನ್ನು

ಪ್ರಸಿದ್ಧರಾದ ಕೆಲವು ಸಂಸ್ಕೃತ ಕವಿಗಳಿಂದಲೂ ವೇದಗಳಿಂದಲೂ ಅರಿತಿರ ಬಹುದೆಂಬುದು ಎಲ್ಲರೂ ನಂಬಬಹುದಾದ ಮಾತು.

ರನ್ನನ ಸರೋವರ ವರ್ಣನೆಯಿಂದ ಇಷ್ಟು ಗಹನವಾದ ವಿಚಾರವನ್ನು ತಿಳಿದುಕೊಂಡ ಮೇಲೆ ನಾವು, ಇತರ ಕನ್ನಡ ಕವಿಗಳ ವರ್ಣನೆಗಳನ್ನು ಪರಿಶೀಲಿಸಿ ತಿಳಿದುಕೊಳ್ಳಬಹುದಾದ ವಿಷಯವು ಏನಾದರೂ ಇದ್ದರೆ ವಿಚಾರ ಮಾಡೋಣ. ಲಕ್ಷ್ಮೀಶನು ಸಮಸ್ತರ ಪ್ರೀತಿಗೆ ಪಾತ್ರನಾದ ಕವಿಯಾದುದರಿಂದ ಮೊದಲು ಆತನ ಸರೋವರ ವರ್ಣನೆಯನ್ನು ತಿಳಿದುಕೊಳ್ಳೋಣ. ಆತನ ವರ್ಣನೆಯು ಲಾಕ್ಷಣಿಕರ ಮತವನ್ನು ಒಪ್ಪುವಂತಹವರಿಗೆ ಹೆಚ್ಚು ಮೆಚ್ಚಿಗೆಯನ್ನುಂಟು ಮಾಡುವ ಹಾಗೆ ಇರುವುದು. ಈ ವರ್ಣನಾ ಪದ್ಯಗಳು ಪದಬಂಧವೂ ಯಮಕಾದ್ಯಲಂಕಾರಗಳೂ ತುಂಬಿ ಅದು ಒಂದು ಸೊಗಸನ್ನು ಪಡೆದಿವೆ. ಉದಾಹರಣೆಗಾಗಿ—

ಪರಿಶೋಭಿಸಿತು ಮುಂದೆ ಹಂಸ ಕಾರಂಡ ಮಧು
ಕರ ಕೋಕ ಮಧುರ ಮೃದುತರ ಕಲಸ್ವನಮುದೋ
ತ್ಕರ ಕಮಲ ಕುವಲಯ ವಿರಾಜಿತ ಶ್ರೀಕರಂ ಪದ್ಮಾಕರಂ ಚೆಲ್ವಿನೆ ‖

ಎಂಬ ಪದ್ಯ ಭಾಗವನ್ನು ಓದಿದರೆ ಈ ವಿಷಯವು ತಾನಾಗಿ ಗೋಚರವಾಗದಿರಲಾರದು. ಹರಿಹರನ "ಸುರರ ವಿಹಾರದಂತೆಸೆವುದು ಪ್ರಕರಂ" ಎಂಬ ವರ್ಣನೆಯೂ ಈ ವರ್ಗಕ್ಕೆ ಸೇರುವುದು. ಸೋಮರಾಜನ "ನಳಿನೀ ಮಿತ್ರೇಂದು ಕಾಂತಾನೀಕಯುತ ಘನ ಸೋಪಾನ ಸಾಗರಂ" ಎಂದು ಮೊದಲಾಗುವ ಸರೋವರದ ವರ್ಣನೆಯು ಸಂಸ್ಕೃತ ಶಬ್ದಪುಂಜ ರಂಜಿತವಾಗಿ, ಲಾಕ್ಷಣಿಕರು ವಿಧಿಸಿರುವ ವರ್ಣನಾ ಭಾಗಗಳೆಲ್ಲವನ್ನೂ ಒಳಕೊಂಡು, ಕವಿಯ ಕೃತಕತ್ವವನ್ನು ಪ್ರತಿಬಿಂಬಿಸುತ್ತ ಅತ್ಯಂತ ನೀರಸವಾಗಿರುವುದು. ಷಡಕ್ಷರಿಯ ಸರೋವರದ ವರ್ಣನೆಯಂತೂ ಆತನಿಗೆ ಸ್ವಾಭಾವಿಕವಾದ ಅಗಾಂಭೀರ್ಯ ಯುಕ್ತವಾಗಿಯೂ ವಿಚಿತ್ರವಾದ ಊಹಾಶಕ್ತಿಯುಳ್ಳದಾಗಿಯೂ ಇರುವುದು. ಇನ್ನು, ರಾಘವಾಂಕನ ಸರೋವರ ವರ್ಣನೆಯು ಸುಲಭವಾಗಿಯೂ ಆಡಂಬರರಹಿತವಾಗಿಯೂ ಇರುವುದರಿಂದ ಸೋಮರಾಜಾದಿಗಳ ವರ್ಣನೆಗಳಿಗಿಂತ ಸ್ವಲ್ಪ ಹೃದಯಂಗಮವಾಗಿರುವುದೆಂದು ಹೇಳಬಹುದು. ಇನ್ನು ಆಧುನಿಕವಾದ 'ದಮಯಂತೀ ಸ್ವಯಂವರ'ದ ಕೃತಿಯ ಸರೋವರ ವರ್ಣನೆಯು ಅದರ ಪದಬಂಧದಿಂದ ಮನೋಹರವಾಗಿದೆಯೇ ಹೊರತು ಅದರಲ್ಲಿ ಮನಸ್ಸನ್ನು ಕರಗಿಸುವ ವಿಶೇಷವಾದ ಭಾವಗಳೇನೂ ಇಲ್ಲ. ಈ ವರ್ಣನೆಯನ್ನು ಬರೆದ ಕವಿಯು ಒಂದು ಸಂಸ್ಕೃತ ಕಾವ್ಯವನ್ನು ಬರೆದು ಅದರಲ್ಲಿ ಈ ವರ್ಣನೆಯನ್ನು ಸೇರಿಸಿದ್ದರೆ ಓದುವವರಿಗೆ ಹೆಚ್ಚು ರಂಜನೆಯನ್ನುಂಟು ಮಾಡಬಹುದಾಗಿತ್ತು; ಏಕೆಂದರೆ, ಆ ವರ್ಣನೆಯಲ್ಲಿ ಸಂಸ್ಕೃತ ಪದಗಳ ಪ್ರಯೋಗವು ಅಷ್ಟು ಹೆಚ್ಚು. ಈ ಕವಿಗಳ ವರ್ಣನೆಗಳೆಲ್ಲವನ್ನೂ ಪರಿಶೀಲಿಸಿದರೆ ನಮ್ಮ ರನ್ನನಿಗಿಂತ ಇವರು ಹೆಚ್ಚು ಮುಂದುವರಿಯಲಿಲ್ಲವೆಂದು ಗೊತ್ತಾಗುವುದು. ಆದರ

ಕಾಲವಾಗಿ ಸುಮಾರು ಹತ್ತು ಶತಮಾನಗಳಾಗಿದ್ದರೂ ಕನ್ನಡ ಸಾಹಿತ್ಯದಲ್ಲಿ ನೂತನತ್ವವೂ ಅಭಿವೃದ್ಧಿಯೂ ಉಂಟಾಗದಿರುವುದನ್ನು ನೋಡಿದರೆ ವಿಷಾದಪಡಬೇಕಾಗುವುದು. ಆದರೆ, ಈಗಲೇ ಕತ್ತಲೆಯ ತೆರೆಯು ಕವಿಜನಗಳ ಮನಸ್ಸಿನಿಂದ ಮಾಯವಾಗುತ್ತಿದೆ; ಹುಟ್ಟುತ್ತಿರುವ ಸೂರ್ಯನ ಹೊಂಬಣ್ಣದ ಬೆಳಕೂ ಲಾವಣ್ಯವೂ ಕವಿತಾ ಪ್ರಪಂಚದ ಮೇರೆಯನ್ನು ವಿಸ್ತರಿಸುತ್ತಿವೆ; ಶುಭ ಸೂಚನೆಗಳು ತಲೆದೋರಿವೆ; ಇನ್ನು ಕನ್ನಡ ಸಾಹಿತ್ಯಕ್ಕೆ ಏಳಿಗೆಯುಂಟಾಗದಿರದು.

(೭) ವನಸ್ಪತಿಗಳ ವರ್ಣನೆ

ವನಸ್ಪತಿಗಳು ಪ್ರಕೃತಿ ಸೌಂದರ್ಯದ ಕಣಿಯಾಗಿರುವುವು. ಎಳೆಯದಾದ ಚಿಗುರಿನಿಂದ ಕೂಡಿದ ಮರಗಳ ಕೋಮಲತೆಯೂ, ಬಣ್ಣ ಬಣ್ಣದ ಹೂಗಳ ಸೊಗಸೂ ಸುವಾಸನೆಯೂ, ನೇತ್ರಾನಂದಕರವಾದ ಹುಲ್ಲುಗಾವಲುಗಳ ಹಸುರು ಹೊದಿಕೆಯೂ, ಮಂದಮಾರುತನ ಸೋಂಕಿನಿಂದ ಬಳುಕುವ ಲತೆಗಳ ಸೌಕುಮಾರ್ಯವೂ—ಇವೆಲ್ಲವೂ ಈ ಪ್ರಪಂಚವನ್ನು ಸ್ವರ್ಗಕ್ಕಿಂತ ಮಿಗಿಲೆನಿಸುವುವಲ್ಲವೆ? ಇವೆಲ್ಲವೂ ಆತನ ಕುಶಲತೆಯನ್ನೂ ಮಹತ್ವವನ್ನೂ ಪ್ರೇಮವನ್ನೂ ದಯೆಯನ್ನೂ ಎಚ್ಚರಿಕೆಯನ್ನೂ ಕ್ಷೇಮಚಿಂತನೆಯನ್ನೂ ಪ್ರತಿಬಿಂಬಿಸುವುವಲ್ಲವೆ? ಸಸ್ಯಜಾತಿಗಳ ವಿಧವೂ ಬೆಡಗೂ ಉನ್ನತವಾದ ಭಾವಗಳನ್ನು ಉದ್ರೇಕಗೊಳಿಸುವ ರಾಮಣೀಯತೆಯೂ—ಇವೆಲ್ಲವೂ ಪರಮಾತ್ಮನ ಸೌಂದರ್ಯ ಸಾಗರದ ಅಲೆಗಳನ್ನು ನೆನಪಿಗೆ ತರುವುವಲ್ಲವೆ? ಭಗವಂತನ ಸ್ವರೂಪ ಜ್ಞಾನವನ್ನುಂಟುಮಾಡುವ ಈ ವನಸ್ಪತಿಗಳಾದರೋ ಮಾನವನಂತೆಯೇ ಸಚೇತನವಾದುವು, ಆತನಂತೆಯೇ ಸುಖ ದುಃಖಗಳಿಗೆ ಭಾಗಿಗಳಾಗುವುವು, ಹೆದರಿಕೆಯನ್ನೂ ಸಂತೋಷವನ್ನೂ ನೋವನ್ನೂ ಮನುಷ್ಯನ ಹಾಗೆಯೇ ತಾಳುವುವು, ಆತನ ಹಾಗೆಯೇ ಪ್ರಣಯಪರಿಪೂರಿತವಾಗುವುವು. ಇಂತಹ ವನಸ್ಪತಿಗಳು ಮನುಷ್ಯನ ಹೃದಯವನ್ನು ವಶಮಾಡಿಕೊಳ್ಳುವುದೇನಾಶ್ಚರ್ಯ! ಆತನ ಮನಸ್ಸಿಗೆ ವ್ಯಾಕುಲವುಂಟಾದಾಗ ಸಮಾಧಾನವನ್ನೂ ಶಾಂತಿಯನ್ನೂ ಉಂಟುಮಾಡುವ ಶಕ್ತಿಯು ವನಸ್ಪತಿಗಳಲ್ಲಿ ಹೇರಳವಾಗಿದೆ. ಇಂತಹ ಉದ್ವಿಗ್ನತೆಯ ಕಾಲಗಳಲ್ಲಿ ಮಾನವನ ಸಂಸ್ಕಾರಾನುಗುಣವಾಗಿ ಬೇರೆ ಬೇರೆ ರೂಪಗಳನ್ನು ತಾಳಿ, ಅವು ತಮ್ಮ ಸೌಂದರ್ಯವೃಷ್ಟಿಯಿಂದ ಹೃದಯ ವಿಕಾಸವನ್ನುಂಟುಮಾಡುವುವು. ಇದರಿಂದಲೇ, ವನಸ್ಪತಿ ವರ್ಣನೆಯನ್ನು ಮಾಡದಿರುವ ಕವಿಯಿಲ್ಲ, ಅವುಗಳ ಸೌಂದರ್ಯವನ್ನು ಚಿತ್ರಿಸದ ಕಲಾಕುಶಲರಿಲ್ಲ. ಕನ್ನಡ ಕವಿಗಳು ವನಸ್ಪತಿಗಳಿಂದ ಆನಂದವನ್ನೂ ಜ್ಞಾನವನ್ನೂ ಸಂಪಾದಿಸಿರುವರಲ್ಲದೆ ಅವುಗಳನ್ನು ವರ್ಣನಾಪೂರ್ವಕವಾದ ಮಾತುಗಳಲ್ಲಿ ಸಾಮಾನ್ಯರಿಗೂ ದೊರಕಿಸಿಕೊಟ್ಟಿರುತ್ತಾರೆ. ನಮ್ಮ ಕವಿಗಳ ಶಕ್ತಿಯೆಲ್ಲವೂ ವನಸ್ಪತಿಗಳ ವರ್ಣನೆಯಲ್ಲಿ ಕಂಡುಬರುವುದು. ಈಗ ಕೆಲವು ಕವಿಗಳ ಸಸ್ಯಗಳ ವರ್ಣನೆಗಳನ್ನು ವಿಮರ್ಶಿಸತೊಡಗೋಣ. ವನಸ್ಪತಿಗಳು ಅಸಂಖ್ಯಾಕವಾಗಿರುವುದರಿಂದ ಅವುಗಳ ವರ್ಣನೆಯೆಲ್ಲವೂ ದೊರೆಯುವುದು ಅಸಂಭವವು. ಮನುಷ್ಯನ ಪರಮ ಪ್ರೀತಿಗೆ

ಪಾತ್ರವಾದುದಾಗಿಯೂ ಆತನಿಗೆ ಭಾವೋದ್ರೇಕವನ್ನುಂಟುಮಾಡುವುದಾಗಿಯೂ ಸೌಂದರ್ಯ ನಿಧಿಯಾಗಿಯೂ ಇರುವ ವಸ್ತುಗಳು ಕೆಲವು ಮಾತ್ರ. ಇಂತಹ ವಸ್ತುಗಳ ವರ್ಣನೆಗಳನ್ನು ಮಾತ್ರ ಇಲ್ಲಿ ವಿಮರ್ಶಿಸಲಾಗುವುದು.

(೧) ಋತುಗಳಲ್ಲಿ ವಸಂತ ಋತುವು ಹೇಗೆ ನಮ್ಮ ಕವಿಜನಗಳ ಪರಮ ಪ್ರೀತಿಗೆ ಪಾತ್ರವಾಗಿರುವುದೋ ಹಾಗೆಯೇ ವನಸ್ಪತಿಗಳಲ್ಲಿ ಮಾವಿನ ಮರವು ಅವರ ಆದರಕ್ಕೆ ಆಸ್ಪದವಾಗಿರುವುದು. ಮಾವಿನ ಮರದ ಚಿಗುರಿನ ಸೊಗಸೂ ಗೊಂಚಲು ಗೊಂಚಲಾಗಿರುವ ಹೂಗಳ ಮಾಧುರ್ಯವೂ ಯಾರ ಹೃದಯವನ್ನು ತಾನೆ ಆಕರ್ಷಿಸುವುದಿಲ್ಲ! ಇವುಗಳ ವಿಲಾಸವೂ ಜೊತೆಗೂ ಕವಿಜನಗಳು ಗಾನಮಾಡುವಂತೆ ಪ್ರೇರಿಸುವುವು. ಈಗ ನೋಡಲು ಪಂಪನ ಗಾನದ ಇಂಪನ್ನು ಸವಿದು ಆನಂದವನ್ನು ಅನುಭವಿಸಲು ಸಿದ್ಧಪಡಿಸಿಕೊಳ್ಳೋಣ. ಹಿಂದಿನ ಕಾಲದ ಕವಿಗಳು ಸಂಪ್ರದಾಯಾನುಸಾರವಾಗಿ ಮಾವಿನ ಮರವನ್ನು ವರ್ಣಿಸಬೇಕಾದರೆ ಕೋಗಿಲೆಯ ಗಾನವನ್ನೂ ಮಕರಂದ ಪಾನ ಮಾಡುತ್ತಿರುವ ತುಂಬಿಗಳನ್ನೂ ಗಿಣಿಗಳ ಸಮೂಹವನ್ನೂ ನೋಡಲು ವರ್ಣಿಸಬೇಕಾಗಿದ್ದಿತು. ಈ ಸಂಪ್ರದಾಯಕ್ಕೆ ಅನುಸಾರವಾಗಿ ಪಂಪನು ಮಾವಿನ ಮರದ ಪ್ರಕೃತಿ ಸೌಂದರ್ಯವನ್ನು ಹೀಗೆ ವರ್ಣಿಸಿರುವನು :—

ತಳಿರೊಳ್ಗೊಂಬಿನೊಳೂಳ್ವ ಕೋಕಿಳ ಕುಳಂ ಪೂಗೊಂಬಿನೊಳ್ಪಾಡುತಿ
ರ್ಪಳಿವೃಂದಂ ತುಱುಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ಪಾಯ್ದು ಬಂ।
ದುಳಿಸುತ್ತಿರ್ಪ ಶುಕಾಳಿ ತಮ್ಮ ಬೆಸದಿಂ ತಂತಮ್ಮ ತಾಣಂದರಂ
ಗಳೊಳಿರ್ದಂಗಜ ತಂತ್ರದಂತೆಸೆವಿನಂ ಚೆಲ್ವಾದುವಿಮ್ಮಾವುಗಳ್ ॥

ಹೀಗೆ ಪಂಪನು ತನ್ನ ಹೃದಯದಲ್ಲಿ ಉಂಟಾದ ಪ್ರಕೃತಿ ಸೌಂದರ್ಯ ಜನಿತವಾದ ರಂಜನೆಯನ್ನು ಸೂಚಿಸಿ ಅಲ್ಲಿಂದ ಮೆಲ್ಲ ಮೆಲ್ಲಗೆ ತನ್ನನ್ನು ತಾನೇ ಮರೆತು, ಉಕ್ಕಿ ಮೇಲಕ್ಕೆ ಏಳುತ್ತಿರುವ ಆವೇಶದಿಂದ ಪರಿಪೂರ್ಣನಾಗಿ, ಮಾವಿನ ಮರಕ್ಕೂ ತನಗೂ ಭೇದವಿಲ್ಲೆಂಬ ಭಾವನೆಯಿಂದ ಅದರ ಸೊಗಸನ್ನು ವರ್ಣಿಸಲು ಉಪಕ್ರಮಿಸುತ್ತಾನೆ. ಈತನಿಗೆ ಮಾವಿನ ಮರವು ಒಂದು ಚೇತನ ರಹಿತವಾದ ವಸ್ತುವಲ್ಲ; ಅದು ಸಚೇತನವಾಗಿಯೂ ಮಾತಾಡುವುದಕ್ಕೆ ಶಕ್ತಿಯುಳ್ಳುದಾಗಿಯೂ ಮಾನವನ ಅಂತರ್ಭಾವಗಳನ್ನು ಅರಿಯತಕ್ಕ ಸಾಮರ್ಥ್ಯವುಳ್ಳುದಾಗಿಯೂ ಇದ್ದಿತು. ಇದರಿಂದಲೇ ಪಂಪನು ಮಾವಿನ ಮರವನ್ನು ಕುರಿತು ಹೀಗೆ ಹೇಳುವನು :—

ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀಂ ನೀರನೈ ಪುಷ್ಪಸಂ
ಕುಲದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತ ಪ।
ಣ್ಗಳಿನೊಪ್ಪೇ ಪೆಱತೇನೊ ನೀನೆ ಭುವನೈಕಾರಾಧ್ಯನೈ ಭೃಂಗ ಕೋ
ಕಿಲ ಕೀರ ಪ್ರಿಯ ಚೂತ ರಾಜ ತರುಗಳ್ ನಿನ್ನಂತೆ ಚೆನ್ನಂಗಳೇ ॥

ಈ ಮಾತುಗಳು ಪಂಪನ ಹೃದಯದಿಂದ ಹೊರಟುವು; ಆದುದರಿಂದಲೇ ಇವುಗಳಿಗೆ ಹೃದಯವನ್ನು ಸೇರುವ ಶಕ್ತಿ ಇರುವುದು. ಪಂಪನ ಭಾವಕೋಮಲತೆಯನ್ನು ಅರಿಯಬೇಕಾದರೆ ಇದೊಂದು ವರ್ಣನೆಯು ಸಾಕು. ಆತನ ಹೃದಯದ ಆವೇಶವು ಈ ವರ್ಣನೆಯಲ್ಲಿ ರೂಪುಗೊಂಡಿದೆ. ಮೊದಲು ಮಾವಿನ ಮರದ ಕೆಂಪಾದ ತಳಿರುಗಳನ್ನು ನೋಡುತ್ತಲೇ ಅವುಗಳ ಬೆಡಗಿನಲ್ಲಿ ಆಗಲೇ ಆವೇಶವು ಬಸಿರಿ ಕಿರುದೊರೆಯ ರೂಪವನ್ನು ಹೊಂದಿರುವುದು, ಮೊಗ್ಗುಗಳನ್ನು ನೋಡುತ್ತಲೇ ಅವುಗಳ ಸೊಬಗಿನ ಸಂಗಡ ಈ ಸಣ್ಣ ನದಿಯು ಸ್ವಲ್ಪ ವಿಸ್ತಾರವಾಗುವುದು; ಪುಷ್ಪಗಳನ್ನು ನೋಡುತ್ತಲೇ ಅವುಗಳ ಪರಾಗದ ಜೊತೆಯಲ್ಲಿಯೇ ಆವೇಶದ ಒಂದು ಬೇರೆ ನದಿಯು ಹೊರಟು ಈ ಸಣ್ಣ ನದಿಯನ್ನು ವೃದ್ಧಿಗೊಳಿಸುವುದು; ಹೀಗೆ ಈ ಆವೇಶದ ಒಂದು ನದಿಯು ಹರಿಯುತ್ತ ಹರಿಯುತ್ತ ಬರುತ್ತಿರುವ ಕಸುಗಾಯಿಗಳ ಚೆಲುವಿಕೆಯಿಂದಲೂ ಹಣ್ಣುಗಳ ಮಾಧುರ್ಯದಿಂದಲೂ ಉಂಟಾದ ಆವೇಶದ ವೇಗದೊಡನೆಯೂ ರಭಸದೊಡನೆಯೂ ಸೇರಿ ಅಪಾರವಾದ ಸಾಗರವನ್ನು ಸೇರುವಷ್ಟು ಹೊತ್ತಿಗೆ "ಭುವನೈಕಾರಾಧ್ಯ"ವಾಗಿಯೂ ವಿಸ್ತಾರವಾಗಿಯೂ ಶಾಂತತೆಯುಳ್ಳದಾಗಿಯೂ ಇರುವ ಒಂದು ನದಿಯಾಗುವುದು. ಕೊನೆಗೆ, "ಭೃಂಗ ಕೋಕಿಲ ಕೀರ ಪ್ರಿಯ ಚೂತ ರಾಜ ತರುಗಳ್ ನಿನ್ನಂತೆ ಚನ್ನಂಗಳೇ" ಎಂಬ ಮಾತುಗಳಲ್ಲಿರುವ ಹೊಗಳಿಕೆಯ ಸಮುದ್ರದಲ್ಲಿ ಆ ನದಿಯು ಲೀನವಾಗುವುದು. ಆಹಾ! ಪಂಪನ ಪ್ರತಿಭೆಯು ಎಷ್ಟು ಸೌಂದರ್ಯ ಸಂಪತ್ತಿಯಿಂದ ಕೂಡಿರುವುದು! ತಾನು ಮನಗಂಡ ಸೌಂದರ್ಯ ರಾಶಿಯನ್ನು ಎಷ್ಟು ಸುಲಭವಾದ ಮಾತುಗಳಿಂದ ಕಣ್ಣಿಗೆ ಕಟ್ಟಿದ ಹಾಗೆ ಆತನು ಚಿತ್ರಿಸಬಲ್ಲನು! ಪಂಪನ ಆವೇಶವು ಇಷ್ಟರಲ್ಲಿಯೇ ಕೊನೆಗಾಣುವುದಿಲ್ಲ. ಅದು ಆತನ ಪ್ರತಿಭಾಶಕ್ತಿಯಿಂದ ಸಮನ್ವಿತವಾಗಿ ಮಾವಿನ ಮರದ ಚೇತನ ಸ್ವರೂಪವನ್ನು ಅರಸಲು ಹೊರಡುವುದು. ಪಂಪನು ಉತ್ಕೃಷ್ಟತರವಾದ ತನ್ನ ಮಾನಸಿಕ ಲೋಕದಲ್ಲಿದ್ದಾಗ ಸೃಷ್ಟಿ ಸಮಸ್ತದ ಭಾವನೆಯನ್ನುಳ್ಳವನಾಗಿ ತೋರುವನು. ಆತನೊಬ್ಬನೇ ಕನ್ನಡ ಕವಿಗಳಲ್ಲಿ ಪ್ರಕೃತಿ ರಹಸ್ಯವನ್ನು ವಿಶದವಾಗಿ ತಿಳಿದವನು. ಮಾವಿನ ಮರದ ಹೀಚು ಹಣ್ಣುಗಳನ್ನು ಮಾನವನು ಸ್ವೋಪಭೋಗಕ್ಕಾಗಿ ಕಿತ್ತಾಗ ಆ ಮರಕ್ಕೆ ಉಂಟಾಗುವ ಒಂದು ಯಾತನೆಯನ್ನೂ ನೋವನ್ನೂ ಪಂಪನು ಬಲ್ಲನು. ಇದರಿಂದಲೇ ಆತನು ಮಾವಿನ ಮರವನ್ನು ಕುರಿತು—

> ನನೆಗಳ ಗೊಂಚಲಂ ತಳಿರ ತೊಂಗಲನಾಡುವ ಬೆಳ್ಳಪ್ಪ ಕೊಂ
> ಬಿನ ಮಿಡಿಯಂ ತೆರಳ್ಚಿ ತೆಗೆದೋವದೆ ಕಾಯದೆ ಕೂರ ಕರ್ಮದಿಂ।
> ಸೊನೆ ಸುರಿವನ್ನೆಗಂ ಪಱಿದು ನೋಯಿಸಿ ಕಾಡಿದವಿನ್ನದೊಂದುಮಂ
> ನೆನೆಯದೆ ನೀನುಮಾಮುಮೊಡನಿರ್ದಿರವಂ ನೆನೆ ಬಾಲ ಚೂತಮೇ ॥

ಎಂಬ ಮಾತುಗಳನ್ನು ಹೇಳಲು ಶಕ್ತನಾದನು. ಈ ಮಾತುಗಳನ್ನು ಹೇಳಲು ಪಂಪನ ಮನಸ್ಸು ಎಷ್ಟು ಸಂಸ್ಕಾರದಿಂದ ಕೂಡಿರಬೇಕು! ಆ ಮರದ ಮೊಗ್ಗು

ಗಳನ್ನೂ ಚಿಗುರನ್ನೂ ತೊನೆಯುತ್ತಿರುವ ಕಸುಗಾಯಿಗಳ ಗೊಂಚಲನ್ನೂ ಸ್ವಲ್ಪವೂ ಕರುಣೆಯಿಲ್ಲದೆ, ಅವನ್ನು ಕಾಪಾಡದೆ, ಕ್ರೂರತನದಿಂದ ಸೊಸೆಯು ಸುರಿಯುವ ವರೆಗೂ ತರಿಯುವದರಿಂದ ಆ ವೃಕ್ಷಕ್ಕೆ ಅತಿಶಯವಾದ ನೋವೂ ಸಂಕಟವೂ ಉಂಟಾದುವು. ಇವು ಪಂಪನ ಹೃದಯವನ್ನು ಸೇರಿ ಅವನನ್ನು "ಇನ್ನದೊಂದುಮಂ ನೆನೆಯದೆ ನೀನುಮಾಮುಮೊಡನಿರ್ದಿರಮಂ ನೆನೆ ಬಾಲ ಚೂತಮೇ" ಎಂದು ಹೇಳುವ ಹಾಗೆ, ಅದನ್ನು ಬೇಡಿಕೊಳ್ಳುವ ಹಾಗೆ, ಪ್ರೇರಿಸಿದುವು. ಮಾನವರಲ್ಲಿಯ ಭಗವದಂಶವು ಪ್ರಕೃತಿಯಲ್ಲಿಯೂ ಇರುವುದೆಂಬ ಒಂದು ನಂಬಿಕೆಯು ಪಂಪನ ಮನಸ್ಸಿನಲ್ಲಿ ತಾಂಡವವಾಡುತ್ತಿರುವುದು. ಆತನು ವೃಕ್ಷಲತಾದಿಗಳನ್ನು ಪೀಡಿಸುವುದು ಒಂದು ದೋಷವೆಂದು ತಿಳಿದಿದ್ದನು. ಈ ವಿಷಯವು—

ಪದೆದುತ್ತಂಸವತಂಸ ಶೋಭೆಗೆ ಭವದ್ಬಾಳಪ್ರವಾಳೋಲ್ಲಸ
ನ್ಮೃದುಪುಷ್ಪಸ್ತಬಕಂಗಳಂ ಪಱಿದೆವಿನ್ನಾ ದೋಷಮಂ ಕೊಳ್ಳದಿ।
ರ್ಪುದು ಕೇಳೀವನಪಾದಪಂಗಳಿರೆ ಚಿತ್ತಂಗೊಂಡು ಬೀೞ್ಕೊಂಡು ರಾ
ಗದೆ ನಿಮ್ಮಂ ಬಲಗೊಂಡು ಪೋಪ ಗುಣಮಂ ಕೊಳ್ಳಿಂ ಮನಃಪ್ರೀತಿಯಿಂ ॥

ಎಂದು ಪಂಪನು ಹೇಳಿಸಿರುವ "ಭರತಾಂತಃಪುರ ಸ್ತ್ರೀಸಮೂಹ"ದವರ ಮಾತುಗಳಿಂದ ತಿಳಿಯದಿರಲಾರದು. ಪಂಪನ ಈ ಚೂತಕುಜದ ವರ್ಣನಾ ಪದ್ಯಗಳನ್ನು ಓದಿನೋಡಿ, ಒಂದು ಸನ್ನಿವೇಶವು ದೊರಕಿದ್ದಾಗ, ಅವನ ವಿಷಯವಾಗಿ ಹೀಗೆ ಬರೆದಿದ್ದೆನು :—

" Pampa is the father of Canarese Literature. His wealth of expression and richness of imagery are unrivalled. He knows how to enter into the spirit of Nature and become one with the All-pervading Spirit of the Universe. His Conception of Nature is very sound and may be compared with Wordsworth in this sense that—

'It is my faith that every flower
Enjoys the air it breathes.'

Pampa feels an 'impulse in every vernal wood' and the fragrance of spring-time flowers finds an ample responsive utterance in his work. No other poet combines such loftiness in the simplicity of his style, such glowing sunny warmth and such creative power. His poetic genius is ineffable."

ಹೀಗೆ ಪಂಪನು ಪ್ರಕೃತಿ ವರ್ಣನೆಯಲ್ಲಿ ತಾನು ಮನಗಂಡ ಒಂದು ಸೌಂದರ್ಯ ಶ್ರೀಯನ್ನು ಶೇಖರಿಸಿಟ್ಟಿರುವನು. ಇದರಿಂದಲೇ ಈತನು ಪ್ರಕೃತಿ ವರ್ಣನೆಯ ಮಾರ್ಗವನ್ನು ತೋರಿಸಿಕೊಟ್ಟನೆಂದು ಹಿಂದೆ ಒಂದು ಸಲ ಹೇಳಿದುದು.

ಇನ್ನು, ಇತರ ಕವಿಗಳ ವರ್ಣನೆಗಳ ಕಡೆಗೆ ತಿರುಗೋಣ. ಈ ಕವಿಗಳ ವರ್ಣನೆಗಳನ್ನು ಓದುತ್ತ ಹೋದರೆ ಮನಸ್ಸಿಗೆ ವಿಶೇಷವಾದ ಬೇಸರವುಂಟಾಗುವುದು. ಏಕೆಂದರೆ, ಎಲ್ಲರೂ ವರ್ಣಿಸಿದುದನ್ನೇ ವರ್ಣಿಸಿರುವರು. ಆ ಕೋಗಿಲೆಗಳೂ ಗಿಳಿಗಳೂ ತುಂಬಿಗಳೂ ಮಾವಿನ ಮರವನ್ನು ಆಶ್ರಯಿಸಿರುವುದೇ ಒಂದು ತಪ್ಪಾಗಿ ಪರಿಣಮಿಸಿರುವುದು. ಈ ವರ್ಣನೆಗಳು ವ್ಯಕ್ತ ಸೌಂದರ್ಯದ ವರ್ಣನೆಗಳೂ ಆಗಿಲ್ಲ; ಕವಿ ಸಾಮಯಿಕ ವರ್ಣನೆಗಳೆಂದು ಮಾತ್ರ ಧಾರಾಳವಾಗಿ ಹೇಳಬಹುದು. ಅಗ್ಗಳನು "ಕಂತುವ ಜಯದಂಡದಿಂದೆ ಕರವೊಪ್ಪುದುಮಂದಿನ ಬಂದ ಮಾವುಗಳ್" ಎಂದು ಹೇಳಿ ಮಾಮರವನ್ನು ಸ್ತುತಿಯಿಸಿ, ಅದಕ್ಕೆ "ಕುಂಜರಾಜ ಸಾಮ್ರಾಜ್ಯಮು"ನಿತ್ತು, ಆಮೇಲೆ "ಮಧು ಸಮ್ಮದೋತ್ಸುಕ"ಗಳಾದ ತುಂಬಿಗಳನ್ನು ವರ್ಣಿಸಿ, ಮಾಮರವನ್ನು ಹೀಗೆ ವರ್ಣಿಸಿರುವನು:—

> ತಳಿರ್ಗಳಿನೊರ್ಮೆ ಪೂಗುಡಿಯಿನೊರ್ಮೆ ಪಸುರ್ಮಿಡಿಯಿಂದಮೊರ್ಮೆ ಕಾ
> ಯ್ಗಳಿನಿರದೊರ್ಮೆ ಪಣ್ಗಳಿನದೊರ್ಮೆ ಜನಕ್ಕೆ ಮನಃಪ್ರಮೋದಮಂ।
> ಬಳೆಯಿಸಿ ಮಾಣ್ದುದಲ್ತು ಸವಿಯಂ ಕಿವಿಗೋಲಗಿಸಿತ್ತು ಮತ್ತ ಕೋ
> ಕಿಳ ರವದೊರ್ಮೆ ಭೃಂಗ ರುತದೊರ್ಮೆ ಶುಕ ಸ್ವರದೊರ್ಮೆ ಮಾಮರಂ॥

ಅಗ್ಗಳನಿಗೆ ಇಂತಹ ವರ್ಣನಾ ರೀತಿಯಲ್ಲಿಯೂ ಶೈಲಿಯಲ್ಲಿಯೂ ಬಹಳ ಪ್ರೇಮವಿರುವ ಹಾಗೆ ತೋರುವುದು. ಏಕೆಂದರೆ, ಅವನು ಇನ್ನೂ ಕೆಲವು ವರ್ಣನೆಗಳನ್ನು ಹೀಗೆಯೇ ಮಾಡಿರುವನು. ಪಾರ್ಶ್ವಪಂಡಿತನು "ಸಹಕಾರ ಕುಂಜರ"ವನ್ನು ವರ್ಣಿಸಿಯಾದ ಮೇಲೆ ಕೋಕಿಲಾದಿಗಳನ್ನು ವರ್ಣಿಸುವಾಗ ಅಗ್ಗಳನ ರೀತಿಯನ್ನು ಅನುಕರಿಸಿರುವನು. ರುದ್ರಭಟ್ಟನು "ಎಳಮಾವಿನ ಸೊಂಪಸೆಗುಂ ವನಾಂತದೊಳ್" ಎಂಬ ಮಾತುಗಳಲ್ಲಿ ಒಂದು ಬಾಹ್ಯ ಚಿತ್ರವನ್ನು ಕಲ್ಪಿಸಿಕೊಟ್ಟಿರುತ್ತಾನೆ. ಆಂಡಯ್ಯನ ವರ್ಣನೆಯು ಇತರ ಕವಿಗಳ ವರ್ಣನೆಗಳಿಗಿಂತ ಹೆಚ್ಚು ವಿಶದವಾಗಿ ಆ ಮರದ ಕಲ್ಪನೆಯನ್ನುಂಟುಮಾಡುವ ಹಾಗಿರುವುದು. ಇನ್ನು ಮಿಕ್ಕ ಕವಿಗಳ ವರ್ಣನೆಗಳಲ್ಲಿ ವ್ಯಕ್ತಿತ್ವವು ಸ್ವಲ್ಪವೂ ಇಲ್ಲ. ಎಲ್ಲರ ವರ್ಣನಾ ರೀತಿಯನ್ನು ತೋರಿಸುವುದಕ್ಕಾಗಿ ಸೋಮರಾಜನ ವರ್ಣನೆಯನ್ನು ಉದಾಹರಿಸಲಾಗುವುದು.—

> ಅಲರ್ಗೊಂಚಲ್ಗೆಱಪುಂಚದುಂಬಿಗಳ ಶುಂಭದ್ಗಾನದಿಂ ಪಲ್ಲವಾ
> ವಲಿಯಿಂ ನಾಡೆ ಕರ್ದುಂಕಿ ನುಣ್ಚರಮನಿಂಬಾಗಲ್ ಪ್ರಸಾರಿಪ್ಪ ಕೋ।
> ಗಿಲೆವಿಂಡಿಂದಿನಿವಣ್ಗಳೆಚ್ಚ ರಸಮಂ ಮೇಣ್ಣೇಂಟೆ ಸಲ್ಲೀಲೆಯಿಂ
> ದುಲಿವಂಚಚ್ಛುಕ ಶಾಬಕ ಪ್ರಕರದಿಂದೊಪ್ಪಿರ್ದುದಾಮ್ರ ದ್ರುಮಂ॥

ಪಂಪನ ವರ್ಣನೆಗೂ ಇದಕ್ಕೂ ಎಷ್ಟು ಹೋಲಿಕೆ! ಇನ್ನು ಯಾವ ಮರಗಳನ್ನೂ ನಮ್ಮ ಕವಿಗಳು ವಿಶೇಷವಾಗಿ ವರ್ಣಿಸಿಲ್ಲ. ರಾಘವಾಂಕ ಪದ್ಮಾಕರರು ಮಾತ್ರ ತೆಂಗಿನ ಮರವನ್ನು ಬಹು ಚಮತ್ಕಾರವಾಗಿ ವರ್ಣಿಸಿರುತ್ತಾರೆ.

(೨) ತಾವರೆಯನ್ನು ಬಿಟ್ಟು ಉಳಿದ ಹೂಗಳಲ್ಲಿ ಮಲ್ಲಿಗೆಯು ನಮ್ಮ ಕವಿಗಳ ಆದರಕ್ಕೂ ಗೌರವಕ್ಕೂ ಪಾತ್ರವಾಗಿದೆ. ಮಲ್ಲಿಗೆಯು ಯಾರಿಗೆ ತಾನೆ ಬೇಡ? ಅದರ ಕೋಮಲತೆಯೂ ಸುಗಂಧವೂ ಶುಭ್ರತೆಯೂ ಯಾರನ್ನು ತಾನೇ ಸೋಲಿಸುವುದಿಲ್ಲ! ನಮ್ಮ ಕವಿಗಳು ಇದರ ಸೌಂದರ್ಯವನ್ನು ಕಾಣದೆ ಇಲ್ಲ. ಈಗ ಅದರ ವರ್ಣನೆಗಳಲ್ಲಿ ಕೆಲವನ್ನು ನೋಡೋಣ.--

ಮಗ ಮಗಿಸಲ್ಕೆ ಮುಂದಯಿಸಿ ದಿಕ್ತಟಮಂ ಬಲ್ಪಿಸಲ್ಕೆ ಪೀರ್ವ ತುಂ
ಬಿಗೆ ತಣಿಪಲ್ಕೆ ನಮ್ಮ ಜಸಮಂ ಬೆಳಗಲ್ಕಿವೆ ಸಾಲ್ಗುಮೆಂದು ತ |
ಳ್ತಗಲದಲಂಪಿನಿಂ ಮಧು ಮನೋಭವರಿರ್ವರುಮುಳ್ಳಿತ್ತವಟ್ಟ ಮ
ಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರಲ್ಲರೆ ಪಟ್ಟಬಂಧಮಂ ||

—ಪಂಪ

ಕುಸುಮ ಕುಳಕ್ಕೆ ನಿನ್ನರಸೆ ನಿನ್ನ ವಿಳಾಸಮೆ ನಿನ್ನ ಚೆಲ್ವೆ ನಿ
ನ್ನೆಸಕಮೆ ನಿನ್ನ ಸಲ್ಗೆ ಮಧುಲಕ್ಷ್ಮಿಯೊಳಾ ಮಲಯಾನಿಲೇಂದುಗಳ್ |
ಪೊಸಯಿಸೆ ನಿನ್ನ ಸೌರಭಮನೆಂದಭಿಷೇಕ ಪುರಸ್ಸರಂ ಸ್ಮರಂ
ನಸುವಿರಿದಿರ್ದ ಮಲ್ಲಿಗೆಗೆ ಕಟ್ಟಿದನಂಕದ ರಾಜ್ಯ ಪಟ್ಟಮಂ ||

—ಪೊನ್ನ

ಅನುನಯದಿಂದೆ ಮೂಡಿದ ಪಸುರ್ವನೆ ಬೆಳ್ಪನೆಯುಪ್ಪ ಪೊಂಗಿ ಬೆ
ಳ್ಪನೆ ಮುಗುಳಪ್ಪ ಬೇಗಿ ಮುಗುಳೊಯ್ಯನೆ ಬಲ್ಮುಗುಳಪ್ಪನುಕ್ರಮಂ |
ತನಗೆಸೆಯಲ್ ತೊಡಂಬೆ ಕೆಳಗಾಗಿ ಸಿಡಿಲ್ದು ಮುರಲ್ದರಲ್ದು ಕಂ
ಪಿನ ಕಣಿ ತುಂಬಿಯುಂ ನೆರಪುತಿರ್ದುದು ಮಲ್ಲಿಗೆ ಚೈತ್ರಮಾಸದೊಳ್ ||

—ರುದ್ರಭಟ್ಟ

ತಾನುಗುಳ್ತಿತ್ತುಮಿರ್ದ ಪೊಸಗಂಪುಮನಿತ್ತು ತೆಮಳ್ಚಿಕೊಂಡು ಮಂ
ದಾನಿಲನುಯ್ಯುತಿರ್ದ ತನಿಗಂಪುಮನಿತ್ತು ಮುರುಳ್ದು ಭೃಂಗ ಸಂ |
ತಾನಮುಣುತ್ತುಮಿರ್ದ ನರುಗಂಪುಮನಿತ್ತು ಗಡಂ ಪ್ರಫುಲ್ಲ ಮ
ಲ್ಲೀ ನವ ಪುಷ್ಪಮೋಗರದ ಕಂಪುಗಳಾಗರಮಾಯ್ತು ಸುಗ್ಗಿಯೊಳ್ ||

—ಅಗ್ಗಳ

ತಾವರೆಯು ನಮ್ಮ ಕವಿಗಳ ಸನ್ಮಾನಕ್ಕೆ ಪಾತ್ರವಾಗಿದೆಯೆಂಬ ಪ್ರತೀತಿ ಇದ್ದರೂ ಮಲ್ಲಿಗೆಯು ತಾವರೆಯಷ್ಟೇ ಆದರಣೀಯವಾಗಿರುವುದೆಂದು ಈ ಮೇಲಿನ ವರ್ಣನೆಗಳನ್ನು ಓದಿದರೆ ಗೊತ್ತಾಗುವುದು. ಪೊನ್ನನ "ಕುಸುಮ

ಕುಳಕ್ಕೆ ಸಿಸ್ತುರನೆ" ಎಂದು ಮಲ್ಲಿಗೆಯೊಡನೆ ಮಾತನಾಡಲುಪಕ್ರಮಿಸುತ್ತಾನೆ. ಅದರ ವಿಕಾಸವೂ ಅದರ ಬೆಳ್ಪುಕೆಯೂ ಅದರ ಪ್ರಕಾಶವೂ ಅದರ ಸೊಬಗೆಯೂ ಪೊನ್ನನ ಮನೋನೇತ್ರಗಳ ಮುಂದೆ ರೂಪುಗೊಂಡಿರುವುದು. ಈತನ ಈ ವರ್ಣನೆಯಲ್ಲಿ ಪಂಪನ ಮಾವಿನ ಮರದ ವರ್ಣನೆಯಲ್ಲಿ ತೋರಿಬರುವ ಒಂದು ಸೊಗಸಿರುವುದು. ಪೊನ್ನನ "ನನೆಯಿಸಿದ ಮಲ್ಲಿಗೆಗೆ ಕಟ್ಟಿದನಂಕದ ರಾಜ್ಯಪಟ್ಟಮಂ" ಎಂಬ ಮಾತುಗಳು ಪಂಪನ "ಮಲ್ಲಿಗೆಗೆ ವಸಂತದೊಳ್ ಬಯಸಿ ಮಾಡಿದರಲ್ತೆ ಪಟ್ಟಬಂಧಮಂ" ಎಂಬ ಮಾತುಗಳನ್ನು ನೆನಪಿಗೆ ತರುವುವು. ಪಂಪನ ವರ್ಣನೆಯು ಮಲ್ಲಿಗೆಯ ಹಾಗೆಯೇ "ಮುಗ ಮುಗನೆ"ವುದು. ರುದ್ರಭಟ್ಟನ ವರ್ಣನೆಯಲ್ಲಿ ಮಲ್ಲಿಗೆಯು ಚೈತ್ರಮಾಸದಲ್ಲಿ ಯಾವ ಯಾವ ರೂಪಗಳನ್ನು ಧರಿಸಿ ಕೊನೆಗೆ ಚಿತ್ತಾಕರ್ಷಕವಾದ ಒಂದು ಹೂವಾಗುವುದೋ ಅದು ಚಿತ್ರಿತವಾಗಿದೆ. ಮೊದಲು ಮೊದಲು ಹಸುರು ಬಣ್ಣದ ಮೊಗ್ಗು ತಲೆದೋರುವುದು; ಬರಬರುತ ಬೆಳಗಿರುವ ಮೊಗ್ಗಾಗುವುದು; ಹಾಗೆಯೇ ಆ ಬೆಳ್ಪನೆಯು ಬಲಿತು ದುಂಡಾದ ಮೊಗ್ಗಾಗುವುದು; ಆಮೇಲೆ ಆ ಮೊಗ್ಗುಗಳ ಗೊಂಚಲು ನಸು ಬಾಗಿ ಸುತ್ತಲೂ ಪರಿಮಳವನ್ನು ಬೀರುವ ಕುಸುಮಗಳಾಗುವುದು—ಈ ತೆರದ ರುದ್ರಭಟ್ಟನ ವರ್ಣನೆಯನ್ನು ನೋಡಿದರೆ ಹೃದಯಂಗಮವಾದ ವಿಕಾಸವುಂಟಾಗುವುದು. ಈತನ ವರ್ಣನೆಯಲ್ಲಿ ಪೊನ್ನನ ವರ್ಣನೆಯಲ್ಲಿರುವುದಕ್ಕಿಂತ ಹೆಚ್ಚು ವ್ಯಕ್ತಿತ್ವವಿರುವುದು. ಈತನಿಗೆ ಮಲ್ಲಿಗೆಯು "ಕಂಪಿನ ಕಣಿಯು." ಅಗ್ಗಳನು, ಮಲ್ಲಿಗೆಯು ತಾನು ಹೇಳುತ್ತಿರುವ ಮಾತುಗಳನ್ನು ನಮಗೆ ತಿಳಿಸುತ್ತಾನೆ. ಸೂಸುತ್ತಿರುವ ಪೊಸ ಕಂಪನ್ನೂ ಮಂದಮಾರುತನಲ್ಲಿರುವ ತನಿಗಂಪನ್ನೂ ತುಂಬಿಗಳ ಸಮೂಹವು ಕುಡಿಯುತ್ತಿರುವ ಮಧುಗಂಪನ್ನೂ ಕೊಟ್ಟೆನಲ್ಲವೆ—ಎಂದು ಅಗ್ಗಳನು ಬಿರಿದಿರುವ ಹೊಸದಾದ ಮಲ್ಲಿಗೆಯನ್ನು ವರ್ಣಿಸಿರುವನು. ಜನ್ನನ ವರ್ಣನೆಯು ಸ್ವಲ್ಪ ಶೃಂಗಾರದಿಂದ ಸಮ್ಮಿಳಿತವಾಗಿರುವುದು. ಮಲ್ಲಿಗೆಯ "ಬೆಳತುರ್ ಮುದ್ರಿಸಿದ ಬಾಯ್ಗಳಲರ್ ಬಿರಿವಂತು ಕಂಪು ಕೆಯ್ಯೊಳೆ ಬಿರಿದತ್ತು" ಎಂದು ಜನ್ನನು ತನ್ನ ಒಂದು ಮೆಚ್ಚಿಗೆಯನ್ನು ತೋರಿಸಿರುವನು. ಹೀಗೆ ನಮ್ಮ ಕವಿಗಳು ಮಲ್ಲಿಗೆಯ ವಿಚಾರವಾಗಿ ಇಷ್ಟು ಒಳ್ಳೆಯ ಮಾತುಗಳನ್ನು ಆಡಿರುವರು.

ಇನ್ನು ಯಾವ ಹೂವಿನ ವರ್ಣನೆಯೂ ವಿಶೇಷವಾಗಿ ದೊರಕುವುದಿಲ್ಲ. ಕೆಲವು ಕವಿಗಳ ಸಂಪಗೆಯ ವರ್ಣನೆಗಳಂತೂ ಅತಿ ನೀರಸವಾಗಿರುವುವು. ಪಂಪನು ಇರುವಂತಿಯನ್ನೂ ಮೊಲ್ಲೆಯನ್ನೂ ವರ್ಣಿಸಿ, ಸಂಪಗೆಯನ್ನು ವರ್ಣಿಸುವಾಗ ಅದಕ್ಕೆ ಸಮಾನವಾದ ಪುಷ್ಪಗಳಿಲ್ಲವೆಂದು ಹೇಳುತ್ತಾನೆ. ಏಕೆಂದರೆ, ಉಳಿದ ಹೂಗಳು ಸುವಾಸನೆಯಿಂದ ಕೂಡಿದ್ದರೆ ಅವುಗಳಿಗೆ ಕಣ್ಣಿಗೆ ಸೊಗಸನ್ನು ಬೀರುವ ಬಣ್ಣಗಳಿಲ್ಲ; ಇನ್ನು ಕೆಲವು ಹೂಗಳಿಗೆ ಸೊಗಸಾದ ಬಣ್ಣವಿದ್ದರೆ ವಾಸನೆಯಿಲ್ಲ; ಸಂಪಗೆಗೆ ಇವೆರಡೂ ಇರುವುವು. ಪಂಪನ ಸುರಹೊನ್ನೆಯ ವರ್ಣನೆಯು ಸ್ವಲ್ಪ

ಚಿತ್ರಾಕಾರವಾಗಿದೆ. ಆತನು ಸುರಹೊನ್ನೆಯ ಹೂಗಳನ್ನು ಹೀಗೆ ವರ್ಣಿಸಿರುವನು :—

ಎಸಳ್ಗಳನಯ್ದು ಕಂಡರಿಸಿ ಮುತ್ತಿನೊಳಲ್ಲಿ ಸುವರ್ಣ ಚೂರ್ಣಮಂ
ಪಸರಿಸಿ ಕೇಸರಾಕೃತಿಯೊಳಲ್ಲಿಗೆ ಕರ್ಣಿಕೆಯುಂಡವಾಗ ಕೀ |
ಲಿಸಿ ಪೊಸತಪ್ಪ ಮಾಣಿಕದ ನುಣ್ಬರಲಂ ಮಧು ಮನ್ಮಥಂಗೆ ಬ
ಣ್ಣಿಸಿ ಸಮೆದಂತೆ ತೋರುವುದು ಪೂಗಳೊಳೇಂ ಸುರಹೊನ್ನೆ ಚೆನ್ನನೋ ||

ಸಾಮಾನ್ಯರಿಗೆ ಸುರಹೊನ್ನೆಯು ರಂಜನೆಯನ್ನುಂಟುಮಾಡಲಾರದು. ಅದರ ಆಕೃತಿಯಂತೂ ರಮಣೀಯವಾಗಿರುವುದು. ಒಂದು ಜೋಳದ ಅರಳನ್ನು ತೆಗೆದುಕೊಂಡು ಅದರ ಮಧ್ಯೇ ಸ್ವಲ್ಪ ಕೆಂಪಾದ ಒಂದು ಬಿಂದುವನ್ನಿಟ್ಟರೆ ಅದು ಸುರಹೊನ್ನೆಯ ರೂಪವನ್ನು ಸ್ವಲ್ಪ ಮಟ್ಟಿಗೆ ತಾಳುವುದು. ಈ ರೂಪವನ್ನು ಪಂಪನು ಸಮರ್ಪಕವಾದ ಮಾತುಗಳಲ್ಲಿ ಚಿತ್ರಿಸಿರುವನು. ಒಂದು ಒಳ್ಳೆಯ ಮುತ್ತನ್ನು ತೆಗೆದು ಅದರಲ್ಲಿ ಪತ್ರಾಕಾರವಾದ ಐದು ಎಸಳ್ಗಳನ್ನು ನಾಜೋಕಾಗಿ ಬಿಡಿಸಿ, ಅದಕ್ಕೆ ಅಳಿಸಿಹೋಗದೆ ಇರುವ ಹೊಂಬಣ್ಣವನ್ನು ಸ್ವಲ್ಪವೇ ಇಟ್ಟು, ಅದರ ಮಧ್ಯೇ ಕೆಂಪು ರತ್ನದ ಒಂದು ಹರಳನ್ನು ಕರ್ಣಿಕೆಯ ರೀತಿಯಲ್ಲಿ ತೋರಿಸಿ ಕೇಸರಗಳನ್ನು ಸೇರಿಸಿದರೆ ಅದು ಸುರಹೊನ್ನೆಯಾಗುವುದು. ಆದರೆ ಇದಕ್ಕೆ ಜೀವವಿಲ್ಲ, ಸುವಾಸನೆಯಿಲ್ಲ. ಸ್ವಾಭಾವಿಕವಾದ ಪುಷ್ಪಕ್ಕೂ ಇದಕ್ಕೂ ಇರುವ ಭೇದವು ಇಷ್ಟು ಮಾತ್ರ. ಇಂತಹ ಹೂವನ್ನು ನೋಡಿ ಪಂಪನು, "ಪೂಗಳೊಳೇಂ ಸುರಹೊನ್ನೆ ಚೆನ್ನನೋ" ಎಂದು ಹೇಳಿರುವುದರಲ್ಲಿ ಅತಿಶಯೋಕ್ತಿಯೇನಿರುವುದು ? ಇಲ್ಲಿಯೂ ಪಂಪನು ತನ್ನ ಅಸಾಧಾರಣವಾದ ಚಿತ್ರಕಲ್ಪನಾ ಚಾತುರ್ಯವನ್ನು ವ್ಯಕ್ತಗೊಳಿಸಿರುವನು. ಹೀಗೆ ವನಸ್ಪತಿ ವರ್ಣನೆಯಲ್ಲಿ ನಮ್ಮ ಕವಿಗಳಲ್ಲಿ ಪ್ರಸಿದ್ಧರಾಗಿರುವವರು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ತೋರಿಸಿರುವರು. ಕೆಲವರಲ್ಲಿ ವ್ಯಕ್ತ ಸೌಂದರ್ಯದ ಅನುಭವಕ್ಕೆ ಬೇಕಾದ ಒಂದು ಶಕ್ತಿಯು ಇನ್ನೂ ಸಂಪೂರ್ಣವಾದ ಪುಷ್ಟಿಯನ್ನು ಪಡೆದಿಲ್ಲ.

ಇತರ ವರ್ಣನೆಗಳು

ಋತುವರ್ಣನಾದಿ ಲಾಕ್ಷಣಿಕರು ನಿರೂಪಿಸದೆ ಇರುವ ಕೆಲವು ವರ್ಣನೆಗಳು ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ದೊರೆಯುವುವು. ಈಗ ಇಂತಹ ವರ್ಣನೆಗಳಲ್ಲಿ ಕೆಲವನ್ನು ವಿಮರ್ಶಿಸೋಣ. ಇವುಗಳಲ್ಲಿ ಗಾಳಿಯ ವರ್ಣನೆಯನ್ನು ಮೊದಲು ತೆಗೆದುಕೊಳ್ಳೋಣ. ಇದನ್ನು ಋತು ವರ್ಣನೆಯ ಸಂಗಡಲೇ ವರ್ಣಿಸಬೇಕಾಗಿತ್ತು. ಆದರೆ, ಇದರ ವರ್ಣನೆಯನ್ನು ಮಾಡಿರುವ ಕವಿಗಳು ಹೇರಳರಾಗಿರುವುದರಿಂದ ಇದನ್ನು ಬೇರೆಯಾಗಿಯೇ ವಿಮರ್ಶಿಸಲಾಗಿದೆ.

(೧) ಗಾಳಿಯ ವರ್ಣನೆಯನ್ನು ನಮ್ಮ ಹಿಂದಿನ ಕವಿಗಳು ಹೆಚ್ಚು ಸ್ವಾಭಾವಿಕವಾಗಿ ಮಾಡಿಲ್ಲ. ವರ್ಣಿಸಿರುವ ಕವಿಗಳಲ್ಲಿ ಅನೇಕರು ಮಲಯ

ಮಾರುತವನ್ನು ವರ್ಣಿಸಿರುತ್ತಾರೆ. ಮಲಯ ಮಾರುತವು ನಮ್ಮ ಕವಿಗಳಿಗೆ ಕೋಗಿಲೆಯೂ ತಾವರೆಯೂ ಇದ್ದ ಹಾಗೆ. ಬೇಸಗೆಯ ಕಾಲದಲ್ಲಿ ಮರದ ನೆರಳಿನಲ್ಲಿ ಒಕ್ಕುಳಿಸಿಕೊಂಡು ಕುಳಿತಿರುವಾಗ ಬೀಸುವ ಸುಖವನ್ನುಂಟುಮಾಡುವ ಗಾಳಿಯು ಎಲ್ಲಿಯೋ ಹೋಯಿತು! ಎಲ್ಲ ಕಡೆಯೂ ನಮಗೆ ಮಲಯ ಮಾರುತವೇ ದೊರಕುವುದೇನು? ಹೀಗೇಕಾಗಿ ಕನ್ನಡ ಕವಿಗಳು ಎಲ್ಲರೂ ಮಲಯಮಾರುತವನ್ನು ಏಕೆ ವರ್ಣಿಸಿದರೋ? ಹೇಗಾದರೂ ಇರಲಿ, ಪರಿಶೀಲಿಸಿ ನೋಡುವುದು ನಮ್ಮ ಕರ್ತವ್ಯ.

ಕೆಲವು ಕವಿಗಳು ಗಾಳಿಯನ್ನು ಒಂದು ಆನೆಗೆ ಹೋಲಿಸಿ ವರ್ಣಿಸಿರುವರು.—

ಕೆದಱುತ್ತುಂ ಮಣಲಂ ತೆಮಱ್ಚಿಕೊಳುತುಂ ಭೂರೇಣುವಂ ಸೂಸುತುಂ
ನದ ನದ್ಯಚ್ಛ ಜಲಂಗಳಂ ಕೆದಱುತುಂ ಭೂಜಂಗಳಂ ಮುರ್ಗುತುಂ।
ಪೊಡೞ್ಚಿಂ ಸೀಳುತುಮೆಯ್ದೆ ವಂಶವನಮುಂ ಕಾಡಾನೆಯುಂ ಪೋಲ್ತು ಪೊ
ಕ್ಕುದು ಬೀಡಂ ಲಯ ಕಾಲ ಕಾಲ ವಿಚಲದ್ಭೀಮಾ ರುತಂ ಮಾರುತಂ ॥

—ಕಾವ್ಯಾವಲೋಕನ

ತಳಿರಂ ಮೆಲ್ಲನೆ ನೂಂಕಿ ಮಾಮಿಡಿಗಳಂ ಸೆಂಡಾಡುತುಂ ಕೂಡೆ ಪೂ
ಗಳ ಧೂಳಿಂ ಪೊಱಮೆಯ್ಯೊಳೊತ್ತುತುಂ ಸೊನೆಗಳೊಳ್ ನೀರಾಟಮಂ ಮಾಡುತುಂ।
ಬಳಿಯಿಂ ಕ್ರೌವಿಗೆ ಬರ್ಪ ತುಂಬಿಯುಲಿಯಿಂ ಡಂಡಂಗುರಂ ಬೊಯ್ಯುತಂ
ತಳರ್ದೆಂ ಬಂದುದೊ ಕಾವನಾನೆಯವೊಲಾ ತಂಗಾಳಿ ತನ್ನಿಚ್ಛೆಯಿಂ ॥

—ಆಂಡಯ್ಯ

ಸರಸೀ ವಾರಿಯೊಳಾದಮುೞ್ಗಿಕೊಳುತುಂ ಮಾಣಿಕ್ಯ ಸಂದೋಹ ಪು
ಷ್ಪ ರಜೋವ್ರಾತವನೋವದೊಟ್ಟಿಕೊಳುತುಂ ವಲ್ಲೀ ನಿವಾಸಂಗಳಂ।
ಪರಪುತ್ತುಂ ಮಲಯಾವನೀಧರ ಚರಂ ತಾಂ ಬಂದುದಾ ದಾನ ಬಂ
ಧುರ ಗಂಧಾಕುಲ ಭೃಂಗಮಂಗಜ ಗಜಂ ಬರ್ಪಂತೆ ಚೈತ್ರಾನಿಲಂ ॥

—ಅಗ್ಗಳ

ವನಜಮನೊಕ್ಕಲಿಕ್ಕಿ ಮಱಿದುಂಬಿಯನಾಳ್ದು ತರಂಗಮೆಂಬ ತ
ಕ್ಕಿನ ಪರಿಕಾಱರಂ ತುೞಿದು ಶೀಕರಮುಂ ತಳಿದೊಟ್ಟಿಕೊಂಡು ಪೂ।
ವಿನ ಪುಡಿಯುಂ ಮೃಗೇಂದ್ರ ಭಯದಿಂದೆ ತಿರೋಹಿತನಾಗಿ ಬರ್ಪ ಕಾ
ನನ ಕರಿಯಂತೆ ಬಂದುದೆಲರೊಯ್ಯನೆ ರಯ್ಯನೆ ವಾರಿ ದೇಶದಿಂ ॥

—ನೇಮಿಚಂದ್ರ

ಕಾವ್ಯಾವಲೋಕನದಲ್ಲಿ ಉದಾಹೃತವಾಗಿರುವ ಗಾಳಿಯ ವರ್ಣನೆಯು ಆವ ಕವಿಕೃತವಾದುದೋ ತಿಳಿಯದು. ಈ ವರ್ಣನೆಯು ಇತರ ಕವಿಗಳ ವರ್ಣನೆಗಳಿಗಿಂತ ಹೆಚ್ಚು ಸ್ವಾಭಾವಿಕವಾಗಿರುವುದು. ಏಕೆಂದರೆ, ಗಾಳಿಯು ಬೀಸುವಾಗ ಅದು ಮಾಡುವ ಕೆಲಸಗಳೆಲ್ಲವೂ ಈ ವರ್ಣನೆಯಲ್ಲಿ ಹೃದಯಂಗಮವಾಗಿ ನಿರೂಪಿತವಾಗಿವೆ. ಈ ವರ್ಣನೆಯು ಮಂದಮಾರುತನ ವರ್ಣನೆಯಲ್ಲಿ ಸ್ವಲ್ಪ ರಭಸವಾಗಿ

ಗಾಳಿಯು ಬೀಸುತ್ತಿರುವಾಗ ಭೂಮಿಯಿಂದ ಧೂಳೇಳುವುದೂ, ಜಲಾಶಯಗಳಲ್ಲಿ ಅಲೆಗಳು ವೇಗವಾಗಿ ಬಂದಾದನೊಂದು ದಡಕ್ಕೆ ತಾಗುವುದೂ, ಬಿದಿರು ಮೆಳೆಗಳಲ್ಲಿ ಹೊಕ್ಕು ಚೀತ್ಕಾರವನ್ನು ಮಾಡುವುದೂ—ಇವೆಲ್ಲವೂ ಸ್ವೇಚ್ಛೆಯಾಗಿ ಸಂಚರಿಸುವ ಆನೆಯ ವ್ಯಾಪಾರಗಳನ್ನು ಹೋಲುವುದಿಲ್ಲವೆ! ಆದುದರಿಂದಲೇ ಕವಿಯು, "ಕಾಡಾನೆಯುಂ ಪೋಲ್ತು ಪೊಕ್ಕುದು ಬೀಡಂ" ಎಂದು ಗಾಳಿಯನ್ನು ವರ್ಣಿಸಿರುವುದು. ಇನ್ನು ಮಿಕ್ಕ ಮೂರು ವರ್ಣನೆಗಳೂ ಸ್ಥೂಲವಾಗಿ ಒಂದೇ ವ್ಯಾಪಾರಗಳನ್ನು ಸೂಚಿಸುತ್ತವೆ. ನೇಮಿಚಂದ್ರನ "ಬಂದು ದೆಲರೊಯ್ಯನೆ ರಯ್ಯನೆ ವಾರಿ ದೇಶದಿಂ" ಎಂಬ ಮಾತುಗಳು ಗಾಳಿಯ ಮಂದಗಮನವನ್ನು ಸೂಚಿಸುವುವು. ಮಂಗರಸನಿಗೆ ಸಮೀರಣನು "ಪಥ ಪರಿಶ್ರಮ ವಾರಣ"ನಾಗಿದ್ದನು. ಚೌಂಡರಸನಿಗೆ ಮಂದಮಾರುತನು "ಪಲವು ವಿನೋದ"ದಿಂದ ವನದಲ್ಲಿ ಸುಳಿಯುತ್ತಿದ್ದನು. ಷಡಕ್ಷರಿಯ "ನಗಿಸುತ್ತಿರ್ಪಂ ಮಲ್ಲಿಕಾ ಕಾಮಿನಿಯನೆಳರವ ವ್ಯಾಜದಿಂ" ಎಂಬ ವರ್ಣನೆಯು ಗಂಭೀರವಾಗಿಲ್ಲ. ಲಕ್ಷ್ಮೀಶನು ಅರ್ಥಾಂತರ ನ್ಯಾಸದಿಂದ ಗಾಳಿಯನ್ನು ವರ್ಣಿಸಿದ್ದರೂ ಆತನ ಮನಸ್ಸಿನಲ್ಲಿ ಮನುಷ್ಯನ ದುಃಖ ಕಾಲದಲ್ಲಿ ಪ್ರಕೃತಿಯೂ ಭಾಗಿಯಾಗಿ ಅವನನ್ನು ಸಮಾಧಾನಪಡಿಸಲು ಪ್ರಯತ್ನಪಡುವುದೆಂಬ ಒಂದು ಭಾವವು ನಿರಂತರವೂ ಇರುವ ಹಾಗೆ ಕಾಣುತ್ತದೆ. ಇದರಿಂದಲೇ ಲಕ್ಷ್ಮೀಶನು (Pathetic fallacy) ಎಂಬ ಒಂದು ವಿಧವಾದ ವರ್ಣನೆಯಲ್ಲಿ ತನ್ನ ಪ್ರತಿಭಾ ಶಕ್ತಿಯನ್ನು ವಿಶೇಷವಾಗಿ ಪ್ರಕಟಿಸಿರುವನು. ಇನ್ನು, ಮಲಯ ಮಾರುತನ ವರ್ಣನೆಯನ್ನು ತೆಗೆದುಕೊಂಡರೆ ಹೆಚ್ಚು ರಂಜನೆಯನ್ನುಂಟುಮಾಡುವ ವಿಷಯಗಳಾವುವೂ ಇಲ್ಲ. ಕೆಲವು ವರ್ಣನೆಗಳ ಪದಗುಂಫನವಂತೂ ಒಂದು ನೂತನವಾದ, ಅಚಿರವಾದ ಆನಂದವನ್ನುಂಟುಮಾಡುವುದು. ಉದಾಹರಣೆಗಾಗಿ—

ಊದಿದುದಾಗಳಂಗಜ ಮಹಾ ಶಿಖಿ ಪೊತ್ತೆ ಪಟೀರ ಭೂಮಿ ಭೃ
ತ್ಪಾದ ವನಾಂತ ಚಾರಿ ಶಬರೀ ಕಬರೀ ಪರಿಫುಲ್ಲ ಮಲ್ಲಿಕಾ।
ಮೋದ ಝುರೀ ಧುರೀಣನನುಯಾತ ಮಧುವ್ರತ ನಿಸ್ವನೋ
ತ್ಪಾದಿತ ವಿಪ್ರಯುಕ್ತ ವನಿತಾ ಶ್ರವಣ ವ್ರಣನಾ ಸಮೀರಣಂ ॥

ಎಂಬ ಒಂದು ಪದ್ಯವನ್ನು ನೋಡಬಹುದು. ಇದರ ಬಂಧವು ಪಂಪನ "ಇದು ಮಲಯಾಚಲಂ ಮಲಯಜಂ ಮಲಯಾನಿಲನೆಂದು ಪೆಂಪುವೆತ್ತುದು" ಎಂಬ ಪದ್ಯದ ಬಂಧದಷ್ಟು ಮೃದುಲವಾಗಿಲ್ಲದಿದ್ದರೂ ಕೂಡ ಸ್ವಲ್ಪ ವೇಗವಾಗಿ ಹರಿಯುತ್ತಿರುವ ವಕ್ರಗಾಮಿನಿಯಾದ ಒಂದು ಝರಿಯ ರಾಮಣೀಯತೆಯನ್ನು ಒಳಗೊಂಡಿರುವುದು. ಇದು ಸಂಸ್ಕೃತ ಶಬ್ದಗಳ ಪ್ರಭಾವವೆಂದು ಬೇರೆ ಹೇಳಬೇಕಾಗಿಲ್ಲ.

ಅತ್ಯಂತ ಆಧುನಿಕವಾದ ಕನ್ನಡ ಸಾಹಿತ್ಯದಲ್ಲಿರುವ "ಶ್ರೀನಿವಾಸ"ರವರ "ತೆಂಗಾಳಿ" ಎಂಬ ಕವಿತೆಯು ಒಂದು ಅಪೂರ್ವವಾದ ಸೌಂದರ್ಯ ಸಂಪತ್ತಿಯಿಂದ

ಕೂಡಿರುವುದು. ಇದು ಹೃದಯದಿಂದ ತಾನಾಗಿ ಹೊರಟುಬಂದ ಒಂದು ಗೀತವು. ಇದರಲ್ಲಿ ಪ್ರತಿಭೆಯೂ ಆವೇಶವೂ ವೇದಾಂತವೂ ಸಮ್ಮಿಳಿತವಾಗಿವೆ. ಮನಸ್ಸು ಎಷ್ಟೇ ಆಯಾಸಪಟ್ಟಿರಲಿ, ಎಷ್ಟೇ ಕೊರತೆಗಳಿಂದ ಕಳಕ್ಕೆ ಇಳಿದುಹೋಗಿರಲಿ, ಎಷ್ಟೇ ಚಿಂತೆಗಳಿಂದ ಕೃಶವಾಗಿರಲಿ—ಅವುಗಳೆಲ್ಲವನ್ನೂ ಪರಿಹರಿಸಿ ಅದನ್ನು ಒಂದು ಉನ್ನತವಾದ ಕವಿತಾ ಪ್ರಪಂಚದ ರಮಣೀಯವಾದ ಸ್ಥಾನದಲ್ಲಿ ತೊಡಕಿಸಿ ಅವ್ಯಕ್ತ ಸೌಂದರ್ಯಸಿಂಧುವಿನ ಸಂದರ್ಶನವನ್ನು ಉಂಟುಮಾಡಿಸುವ ಶಕ್ತಿಯು ಈ ಕವಿತೆಯಲ್ಲಿ ಸಂಪೂರ್ಣವಾಗಿರುವುದು. ಷೆಲ್ಲಿ ಕವಿಯ "Ode to the West Wind" ಎಂಬ ಕವಿತೆಯನ್ನು ಓದುವುದರಿಂದ ಎಷ್ಟು ಆನಂದವನ್ನು ಪಡೆಯಬಹುದೋ ಅಷ್ಟು ಆನಂದವನ್ನು "ತೆಂಗಾಳಿ"ಯನ್ನು ಓದುವುದರಿಂದಲೂ ಪಡೆಯಬಹುದು. ಆ ಕವಿತೆಯ ಕೆಲವು ಭಾವಗಳು ಇದರಲ್ಲಿ ತಲೆದೋರಿವೆ. ಡ್ರಿಂಕ್ ವಾಟರ್ ಎಂಬುವನ ಮಾತುಗಳಲ್ಲಿ, ಈ ಎರಡು ಕವಿತೆಗಳ ವಿಚಾರವಾಗಿ ಹೀಗೆ ಹೇಳಬಹುದು :—

> "Both are poetry, springing from the same imaginative activity, living through the same perfect selection and ordering of words, and in our response quickening the same ecstasy. Although we are accustomed to look rather for the rhymed and stanzaic movement of the former in a lyric than for the stricter economy and uniformity of '* *Srinivasa's*' verse, yet both have the essential qualities of a lyric—of pure poetry."

(೨) ಕನ್ನಡ ಸಾಹಿತ್ಯದಲ್ಲಿ ಪ್ರಾಣಿಗಳ ವರ್ಣನೆಯು ವಿಶೇಷವಾಗಿ ಕಂಡುಬರುವುದಿಲ್ಲ. ನೇಮಿಚಂದ್ರನೂ ತ್ರಿಷಷ್ಟಿ ಪುರಾತನ ಚಾರಿತ್ರ ಕರ್ತೃವಾದ ಸುರಂಗನೂ ಕೆಲವು ಕಡೆ ಪ್ರಾಣಿಗಳ ವರ್ಣನೆಯನ್ನು ಮಾಡಿರುವರು. ಈ ಕವಿಗಳಲ್ಲಿ ಮೊದಲನೆಯವನು ಹಸು ಕರುಗಳ ವರ್ಣನೆಯನ್ನು ಮಾಡಿರುವನು. ಎರಡನೆಯವನು ಕಣ್ಣಪನ ಬೇಟೆಯನ್ನು ವರ್ಣಿಸುವಾಗ, ಹುಲಿ, ಕಾಡುಹಂದಿ, ಕಾಡೆಮ್ಮೆ—ಇವುಗಳ ವರ್ಣನೆಯನ್ನು, ಓದುವವರ ಮೈ ಜುಮ್ಮೆನ್ನುವಹಾಗೆ, ವರ್ಣಿಸಿರುವನು. ಕಾವ್ಯಾವಲೋಕನದಲ್ಲಿ ಉದಾಹೃತವಾಗಿರುವ ಒಂದು ಪದ್ಯದಲ್ಲಿ ಹುಲ್ಲೆಯ ವರ್ಣನೆಯು ದೊರೆಯುವುದು. ಈ ವರ್ಣನೆಯು ಆವ ಕವಿಕೃತವಾದುದೋ ತಿಳಿಯದು. ಅದನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಕೊಟ್ಟಿದೆ.—

ಮೃದು ಹರಿತ ಪ್ರವಾಳ ನವ ಶಾಡ್ವಲ ರಾಜಿಯನಾಯ್ದು ಮೇದು ತ
ಣ್ಣೊದವಿದ ನಿರ್ಝರಾಂಬುಗಳನೊಯ್ಯನೆ ಪೀರ್ದು ನಿಜಾಂತರಂಗದೊಳ್ ।

* The italics are my own.

ಪುದಿದನುರಾಗದಿಂದೆಳಸಿ ಪುಲ್ಲೆಗಳಾರೊಳಮೆಂದು ದೈನ್ಯಮಿ
ಲ್ಲದೆ ಸುಖಮಿರ್ಪುವೀ ವನ ನಿಕುಂಜ ವಿಭಾಗದೊಳೇಣ ಸಂಕುಲಂ ||

ಈ ಪದ್ಯದಲ್ಲಿ ಹರಿಣ ಸಂಕುಲಗಳ ಪ್ರಕೃತಿ ಸಹಜವಾದ ಜೀವನವು ಹೃದಯಂಗಮವಾಗಿ ಚಿತ್ರಿತವಾಗಿದೆ. ಹೀಗೆಯೇ ಇನ್ನೂ ಇತರ ಕವಿಗಳ ಕಾವ್ಯರಾಶಿಯಲ್ಲಿ ಅಡಗಿಕೊಂಡು ಪ್ರಯತ್ನಪೂರ್ವಕವಾಗಿ ಓದಿದ ಮೇಲೆ ದೊರೆಯುವ ಕೆಲವು ಪ್ರಾಣಿಗಳ ವರ್ಣನೆಯು ಇದೆ. ಇಂಥವುಗಳಲ್ಲಿ ಲಕ್ಷ್ಮೀಶನ ಅಶ್ವಮೇಧಯಾಗದ ಕುದುರೆಯ ವರ್ಣನೆಯಂಥ ವರ್ಣನೆಗಳು ಬೇಕಾದ ಹಾಗಿವೆ. ಲಕ್ಷ್ಮೀಶನ ವರ್ಣನೆಯು ಅಶ್ವಶಾಸ್ತ್ರಜ್ಞರಿಗೆ ಸ್ವಲ್ಪ ಸಂತೋಷವನ್ನು ಉಂಟುಮಾಡಬಲ್ಲುದೋ ಏನೊ! ಇಷ್ಟರ ಮಟ್ಟಿಗೆ ನಮ್ಮ ಕವಿಗಳ ಪ್ರಾಣಿಗಳ ವರ್ಣನೆಯು.

ಒಟ್ಟಿನಲ್ಲಿ, ನಮ್ಮ ಕವಿಗಳ ಪ್ರಕೃತಿ ವರ್ಣನೆಗಳನ್ನು ಸಮಾಲೋಚಿಸಿದುದಾಯಿತು; ಅವರ ರೀತಿಯನ್ನೂ ಧ್ಯೇಯವನ್ನೂ ಕವಿಸಮಯಗಳನ್ನೂ ತಕ್ಕಮಟ್ಟಿಗೆ ತಿಳಿದುಕೊಂಡುದಾಯಿತು. ಅವರ ರೀತಿಯು ಸ್ವಭಾವೋಕ್ತಿ ಎಂಬ ವರ್ಣನೆಯಲ್ಲಿ ಸುಮಾರಾಗಿ ಬಹುದು ಕಾಣುವುದು. ಇದು ಚೆನ್ನಾಗಿದೆಯೆಂದೇ ಹೇಳಬೇಕು. ಅವರ ಧ್ಯೇಯವು ಅಷ್ಟೇನೂ ಉನ್ನತವಾದುದಲ್ಲವೆಂಬುದನ್ನು ನಿಸ್ಸಂಕೋಚವಾಗಿ ನಾವು ಒಪ್ಪಿಕೊಳ್ಳಬೇಕಾಗಿದೆ. ಕವಿಸಮಯಗಳೇನೊ ತಮ್ಮ ಕೆಲಸವನ್ನು ಚೆನ್ನಾಗಿಯೇ ಮಾಡಿವೆ. ಆದರೆ ಇವು ಕಾವ್ಯಮಾಲೆಗೆ ಎಷ್ಟರ ಮಟ್ಟಿಗೆ ಉಪಯುಕ್ತವಾಗಿರುವುವು ಎಂಬ ವಿಚಾರವು ಸ್ವಲ್ಪ ಚರ್ಚಾಸ್ಪದವಾದುದು. ಹಳೆಯ ಮೊಂಡು ಮೊಂಡಾದ ಕೆಲವು ಕವಿಸಂಕೇತಗಳು ಈಗಿನವರಾದ ನಮಗೆ ಎಳ್ಳಷ್ಟೂ ಉಪಕಾರವನ್ನು ಮಾಡುವಂತಿಲ್ಲ. ಇವುಗಳನ್ನು ಎಷ್ಟು ದೂರದಲ್ಲಿಟ್ಟರೆ ಅಷ್ಟು ಒಳ್ಳೆಯದೆಂದು ತೋರುತ್ತದೆ.

ಈಗಿನ ಸಾಹಿತ್ಯದ ಪ್ರಕೃತಿ ವರ್ಣನೆಯ ಧ್ಯೇಯವು ಎಷ್ಟೋ ಉಚ್ಚತರವಾದುದಾಗಿದೆ. ಅವುಗಳ ರೀತಿಯೇ ಬೇರೆ, ದೃಷ್ಟಿಯೇ ಬೇರೆ, ಪರಿಪಾಕವೂ ಬೇರೆ, ಆವೇಶವೂ ಬೇರೆ. ಶುದ್ಧವಾದ ಹೃದಯದಿಂದಲೇ ಅರಿಯಬಹುದಾದ ಆಧ್ಯಾತ್ಮಿಕ ತತ್ತ್ವಗಳನ್ನು ಈಗಿನ ಕವಿಗಳು ಪ್ರಕೃತಿ ಸೌಂದರ್ಯದಲ್ಲಿ ಮನಗಾಣುತ್ತಿರುವರು. ಹಿಂದೆ ಕಳೆದುಹೋದ ಪಂಪ ರನ್ನರ ಕಾಲವು ಹೇಗೆ ಸಾಹಿತ್ಯದ ಚರಮ ಸೀಮೆಯನ್ನೈದಿದ್ದಿತೋ ಹಾಗೆಯೇ ಇನ್ನು ಮುಂದೆ ಬರುವ ಕಾಲವು ಪಂಪ ರನ್ನರ ಕಾಲಕ್ಕಿಂತ ಸೂರ್ಮಟಿಯನ್ನು ಉಚ್ಚತರವಾಗುವುದೆಂಬುದನ್ನು ಯಾರಾದರೂ ಒಪ್ಪಲೇ ಬೇಕು. ಷೇಕ್ಸ್ಪಿಯರಿನಂತಹ ಕವಿಗಳು ಇನ್ನು ಮುಂದೆ ಹುಟ್ಟಬೇಕು; ಹುಟ್ಟಿಯೇ ಇದ್ದಾರೆಯೋ ಏನೋ ಯಾರಿಗೆ ಗೊತ್ತು! ಅದಕ್ಕೆ ತಕ್ಕ ವಾತಾವರಣವೇನೋ ದಿನ ದಿನವೂ ಪರಿಶುದ್ಧವಾಗುತ್ತ ಬರುತ್ತಿರುವುದು. ಶುಭ ಚಿಹ್ನೆಗಳು ಅಲ್ಲಲ್ಲಿಯೂ ತಲೆದೋರಿವೆ. ಇನ್ನು ಮುಂದೆ,

ಯಾರು ಎಷ್ಟು ಪ್ರಯತ್ನಪಟ್ಟರೂ ತಡೆಯಲಾಗದ ಕಾವ್ಯ ಜೀವಜ್ಯೋತಿಯ ಹೊನಲು ನಮ್ಮೆಲ್ಲರನ್ನೂ ಮುಳುಗಿಸಿ ಆನಂದ ತಾಂಡವದಲ್ಲಿ, ಮನವನ್ನು ಮೋಹಿಸುವ ಗಾನದಲ್ಲಿ, ಲೀನರನ್ನಾಗಿ ಮಾಡುವುದು. ಬರುವುದು, ಬೇಗ ಬರುವುದು, ಅಂತಹ ಸುದಿನವು. ನಮ್ಮ ಜೀವನವನ್ನು ಆ ವಿಮಲ ಗಂಗಾ ತಟಿನಿಯಲ್ಲಿ ತೊಳೆಯೋಣ. ಅಲ್ಲಿಯ ವರೆಗೆ ಅಂತಃಕರಣಗಳನ್ನು ಶುದ್ಧಗೊಳಿಸುತ್ತ, ಮಧುಮಾಸದ ಬರವನ್ನು ಬಯಸುತ್ತ, ಪರಿಮಳವನ್ನು ಎಲ್ಲ ಕಡೆಯಲ್ಲಿಯೂ ಚೆಲ್ಲಲು ತವಕಿಸುತ್ತಿರುವ ಅಡವಿಯ ಹೂಗಳಂತೆ ಧ್ಯಾನಾಸಕ್ತರಾಗೋಣ. ದಯಾಮಯವಾದ ಪರಂಜ್ಯೋತಿಯು ಎಲ್ಲೆಲ್ಲಿಯೂ ತುಂಬಿ ಹೊರಹೊಮ್ಮುವುದು.

ಡಿ. ಎಲ್. ನರಸಿಂಹಾಚಾರ್ಯ, ಬಿ.ಎ.

ಕಲಿಂಗ ಚಕ್ರವರ್ತಿಯಾದ ಮಹಾರಾಜ ಖಾರವೇಲನ ಶಿಲಾಲೇಖದ ವಿವರಣೆ

ಹಿಂದೂ ಇತಿಹಾಸದ ಪುನರುದ್ಧಾರವು ಆಶ್ಚರ್ಯಜನಕವಾಗಿದೆ. ಗುಪ್ತ ನೃಪೇಂದ್ರರ ವೃತ್ತಾಂತವು ಯಾರಿಗೆ ಗೊತ್ತಿತ್ತು? ಚಂದ್ರಗುಪ್ತ ಮೌರ್ಯನ ಕೀರ್ತಿಯು ವಿಶಾಖದತ್ತನ ರಾಜ್ಯ ಕಾಲದವರೆಗೂ ಮಂಗ ಭಾರತೇಶ್ವರರ ವೃತ್ತವು ಕಾಳಿದಾಸನವರೆಗೂ ಜೀವಿತವಾಗಿತ್ತು. ಅನಂತರ ಗ್ರಂಥಗಳ ದ್ವಾರವಾಗಿಯೇ ನಾವು ಅವರನ್ನು ಇಂದಿನವರೆಗೆ ತಿಳಿದಿರುತ್ತೇವೆ. ಪರಂತು, ಸಮುದ್ರಗುಪ್ತ, ಕರ್ಣ, ಕಲಚುರಿ, ಖಾರವೇಲ ಇವರ ಹೆಸರಿನ ಚಿಹ್ನೆಯೂ ನಮ್ಮ ಗ್ರಂಥರಾಶಿಯಲ್ಲಿ ಕಂಡುಬರುವುದಿಲ್ಲ. ಉಲ್ಲಿಖಿತ ಸಮುದ್ರಗುಪ್ತಾದಿ ಮಹಾವೀರರು ಚಂದ್ರಗುಪ್ತ ಮೌರ್ಯ ತಥಾ ನೆಪೋಲಿಯನ್‌ನಿಂದ ಕಡಿಮೆಯಾಗಿರಲಿಲ್ಲ. ಇಷ್ಟೇ ಅಲ್ಲ, ಕೆಲವಂಶಗಳಲ್ಲಿ ಇವರು ಅವರಿಗಿಂತಲೂ ಹೆಚ್ಚಾಗಿದ್ದರೆಂದು ನಾವು ಹೇಳಬಲ್ಲೆವು. ಅವರ ಇತಿಹಾಸವು ತತ್ಸಮಯ ಸಂಬಂಧಿ ಲೇಖ, ಶಿಲೆ ಅಥವಾ ತಾಮ್ರ ಪತ್ರಗಳಲ್ಲಿ ಅಂಕಿತವಾದ ಪ್ರಶಸ್ತಿ ಮತ್ತು ಚರಿತ್ರೆಗಳಿಂದ ಹುಟ್ಟಿದೆ. ಶಿಲಾಲೇಖ ಮತ್ತು ದಾನ ಪತ್ರಗಳ ಮೂಲಕವಾಗಿ ಇತಿಹಾಸ ಜ್ಞಾನದ ಆವಿಷ್ಕಾರವನ್ನು ಮಾಡುವುದು ಪರ ತತ್ವಾನ್ವೇಷಿಗಳ ಪ್ರಾಚೀನ ಪದ್ಧತಿಯಾಗಿದೆ. ರಾಜತರಂಗಿಣಿಯ ಕರ್ತನಾದ ಕಲ್ಹಣನು ತನ್ನ ಕಾಶ್ಮೀರದ ಇತಿಹಾಸ ರಚನೆಯಲ್ಲಿ ಉಕ್ತ ಸಾಧನಗಳಿಂದಲೇ ತಾನು ಕಾರ್ಯವನ್ನು ಪೂರ್ಣಮಾಡಿರುವಂತೆ ಸ್ವಯಂ ಬರೆದಿರುತ್ತಾನೆ.

ಪ್ರಾಚೀನ ಹಿಂದೂ ರಾಜರು, ಹಾಗೆಯೇ ಪಂಡಿತರು ಈ ಪದ್ಧತಿಯನ್ನು ಚೆನ್ನಾಗಿ ಅರಿತಿದ್ದರು. ಒಂದು ವೇಳೆ ಅವರು ಈ ಪದ್ಧತಿಯಲ್ಲಿ ಅನಭಿಜ್ಞರಾಗಿದ್ದ ಪಕ್ಷದಲ್ಲಿ ಭೂಮಿ ದಾನ, ಕುಂಭ ದಾನ ಮುಂತಾದ ಸಾಮಾನ್ಯಾವಸರಗಳಲ್ಲಿಯೂ ದೀರ್ಘವಾದ ಚರಿತ್ರೆ ಮತ್ತು ರಾಜಕಾರ್ಯಗಳ ವರ್ಣನೆಯನ್ನು ಏಕೆ ಕೆತ್ತಿಸುತ್ತಿದ್ದರು? ಹಾಗೆಯೇ ದೇವಸ್ಥಾನಗಳ ಶಿಖರಗಳ ಕೆಳಗೂ, ಎಲುಬುಗಳೊಡನೆ ಸ್ತೂಪಗಳ ಒಳಗೂ ಲೇಖಗಳನ್ನು ಏಕೆ ಹೂಳುತ್ತಿದ್ದರು? ಇದು ಇತಿಹಾಸದ ದೀರ್ಘಾಯುವನ್ನು ಕಾಪಾಡುವ ಶೈಲಿಯು. ಅಶೋಕನಾದರೂ ಚಿರಸ್ಥಿತಿಯ ನಿಮಿತ್ತವಾಗಿಯೇ ಲೇಖಗಳು ಶಿಲೆಗಳಲ್ಲಿ ಕೆತ್ತಲ್ಪಟ್ಟಿವೆಯೆಂದು ಸ್ಪಷ್ಟವಾಗಿ ಬರೆದಿರುವನು. ಇವರು ಶಿಲಾಲೇಖ ಮುಂತಾದ ವೃತ್ತ ತಥಾ ಚರಿತ್ರೆಯನ್ನು ಪ್ರಾಯಃ ಇತಿಹಾಸದ ದೃಷ್ಟಿಯಿಂದಲೇ ಉಲ್ಲೇಖಿಸುತ್ತಿದ್ದರು. ಅರ್ಥಾತ್—ಗತ ಅಥವಾ ಸಾಂಪ್ರತ ವಚನಗಳನ್ನು ಸಂಕ್ಷೇಪದಿಂದ ಕಾವ್ಯರೂಪವಾಗಿ ಬರೆಯದೆ ತಥ್ಯ ದೃಷ್ಟಿಯಿಂದ ವರ್ಣಿಸುತ್ತಿದ್ದರು. ಡಾಕ್ಟರ್ ಫ್ಲೀಟನು

ಇದನ್ನು ಕಂಡೇ ಶಿಲಾಲೇಖ ಮತ್ತು ತಾಮ್ರ ಲೇಖಗಳನ್ನು ನೋಡುವುದರಿಂದ ಪ್ರಾಚೀನ ಹಿಂದೂಗಳು ಇತಿಹಾಸವನ್ನು ಬರೆಯುವುದರಲ್ಲಿ ಸಮರ್ಥರಾಗಿದ್ದರೆಂಬುದು ಸಿದ್ಧವಾಗುತ್ತದೆಂದು ಹೇಳಿರುತ್ತಾನೆ. ಪೌರಾಣಿಕ ಮತ್ತು ಕಾವ್ಯ ವರ್ಣನೆಗಳಿಂದ ಈ ಲೇಖಗಳ ಪದ್ಧತಿಯು ಸರ್ವಥಾ ಭಿನ್ನವಾಗಿದೆ. ಇವುಗಳ ಪರಂಪರೆಯೂ ಶೈಲಿಯೂ ದಸ್ತಾವೇಜಾಗಿದೆ. ಸಂಪೂರ್ಣವಾದ ಹೆಸರು, ಸ್ಥಾನ, ತಂದೆಯ ಹೆಸರು, ತಿಥಿ, ಸಂವತ್—ಮುಂತಾದುವುಗಳನ್ನು ಉಲ್ಲೇಖಿಸಿ ತಮ್ಮ ಕರಣ ಕಾರಣಗಳನ್ನು ತಿಳಿಸುತ್ತಿದ್ದರು. ಇಂತಹ ಲೇಖಗಳಲ್ಲಿ ಇದುವರೆಗೆ ಪ್ರಾಪ್ತವಾಗಿರುವ ಲೇಖಗಳಲ್ಲೆಲ್ಲ "ಹಸ್ತಿಗುಂಫಾ ಲೇಖ" ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದ ಕಳಿಂಗ ಚಕ್ರವರ್ತಿಯಾದ ಖಾರವೇಲ ಮಹಾರಾಜನ ಲೇಖವು ಅಗ್ರಸ್ಥಾನವನ್ನು ಹೊಂದಿದೆ. ಸಣ್ಣ ಸಣ್ಣ ಮೌರ್ಯ ಲೇಖಗಳನ್ನು ಹೊರತು ಕೇವಲ ಅಶೋಕ ಮಹಾರಾಜನ "ಧರ್ಮ ಲಿಪಿ"ಯೇ ಇದರಿಂದ ಪ್ರಾಚೀನವಾದುದು. ಪರಂತು, ಐತಿಹಾಸಿಕ ಘಟನೆಗಳನ್ನೂ ಜೀವನ ಚರಿತ್ರೆಯನ್ನೂ ಉಲ್ಲೇಖಿಸಿರುವ ಭಾರತವರ್ಷ ಸಂಬಂಧಿ ಲೇಖಗಳಲ್ಲೆಲ್ಲ ಇದೇ ಎಲ್ಲಕ್ಕಿಂತಲೂ ಮೊದಲನೆಯ ಶಿಲಾಲೇಖವು. ಈ ಲೇಖವು ಉಡೀಸ(ಉತ್ಕಲ)ಸ್ಥ ಭುವನೇಶ್ವರದ ಸಮೀಪ ಖಂಡಗಿರಿ ಉದಯಗಿರಿ ಪರ್ವತದಲ್ಲಿಯ ಒಂದು ವಿಶಾಲ ಗುಹೆಯ ಮೇಲೆ ಕೆತ್ತಲ್ಪಟ್ಟಿದೆ. ಪರ್ವತವನ್ನು ಛೇದಿಸಿ ನಿರ್ಮಾಪಿಸಲ್ಪಟ್ಟ ಜೈನ ದೇವಸ್ಥಾನಗಳೂ ಜೈನ ಸಾಧುಗಳಿಗಾಗಿ ನಿರ್ಮಾಪಿಸಲ್ಪಟ್ಟ ಮತ್ತವಂತಿರುವ ಪ್ರಾಚೀನ ಕಾಲ ಸಂಬಂಧಿ ಹಲವು ಗುಂಫಾ ಗೃಹಗಳೂ ಅಲ್ಲಿರುವುವು. ಇದೇ ಪ್ರಕಾರವಾಗಿ ಒಂದು ರಾಜಭವನವೂ ಪರ್ವತವನ್ನು ಛೇದಿಸಿ ನಿರ್ಮಾಪಿಸಲ್ಪಟ್ಟಿರುವುದು. ಇವುಗಳಲ್ಲಿಯ ಹಲವು ಕಟ್ಟಡಗಳಲ್ಲಿ ಕ್ರಿಸ್ತ ಸಂವತ್ಸರದ ಸುಮಾರು ಇನ್ನೂರು ವರ್ಷಗಳ ಪೂರ್ವದ ಬ್ರಾಹ್ಮೀ ಲಿಪಿಯೆಂದು ಕರೆಯಲ್ಪಡುವ ಸಂಸ್ಕೃತಾಕ್ಷರಗಳಲ್ಲಿ ಕೆತ್ತಲ್ಪಟ್ಟಿರುವ ಪ್ರಾಕೃತ ಲೇಖಗಳಿರುವುವು. ಅಲ್ಲಿ ಇವೆಲ್ಲ ಗುಂಫೆಗಳೆಂದು ಕರೆಯಲ್ಪಡುತ್ತವೆ. ಖಾರವೇಲನ ಅಗ್ರಮಹಿಷಿಯಿಂದ ನಿರ್ಮಾಪಿಸಲ್ಪಟ್ಟ ಎರಡು ಅಂತಸ್ತಿನ ಗುಂಫೆಯೊಂದೂ ಅಲ್ಲಿರುವುದು. ವಸ್ತುತಃ ಅದು ಮನೆಯೇ ಆಗಿರುವುದರಿಂದ ಅಲ್ಲಿಯವರು ಇದನ್ನು "ಪ್ರಾಸಾದ"ವೆಂದೇ ಕರೆಯುತ್ತಾರೆ. ಇದನ್ನು ಮಹಾರಾಣಿಯು ಕಲಿಂಗ ಸಂಬಂಧಿ ಶ್ರಮಣ ಅರ್ಥಾತ್—ಜೈನ ಮುನಿಗಳಿಗಾಗಿಯೇ ಮಾಡಿಸಿರುತ್ತಾಳೆ. ಲೇಖದಲ್ಲಿ ಮಹಾರಾಣಿಯು ಸ್ವಂತ ನಾಮವನ್ನು ಹೊರತು ಪತಿಯಾದ ಖಾರವೇಲನನ್ನು "ಕಲಿಂಗ ಚಕ್ರವರ್ತಿ" ಎಂದು ಉಲ್ಲೇಖಿಸಿದೆ. ಹಸ್ತಿಗುಂಫೆಯ ಲೇಖದಿಂದ ಮಹಾರಾಜನಾದ ಖಾರವೇಲನು ನಿಜವಾಗಿಯೂ ಚಕ್ರವರ್ತಿಯಾಗಿದ್ದನೆಂದು ಸಿದ್ಧವಾಗುವುದರಿಂದಲೇ ಇಂಗ್ಲೀಷಿನಲ್ಲಿ ಅವನನ್ನು ನಾನು "Emperor" ಎಂದು ಬರೆದಿರುತ್ತೇನೆ.

ಈ ನನ್ನ ಮತವನ್ನು ಪೂರ್ಣ ತತ್ತ್ವಾನ್ವೇಷಿಯಾದ ಡಾಕ್ಟರ್ ವಿನ್ಸೆಂಟ್ ಸ್ಮಿಥ್ ಮಹಾಶಯನೂ ಒಪ್ಪಿರುತ್ತಾನೆ. ಹಸ್ತಿಗುಂಫೆಯೆಂಬುದು ಅರ್ವಾಚೀನವಾದ ಹೆಸರಾಗಿದೆ. ಈ ಗುಂಫೆಯು ಸುಂದರವಾಗಿಲ್ಲ. ಇದು ಖಾರವೇಲನಿಗಿಂತ

ಮೊದಲೇ ಇದ್ದಿರಬೇಕೆಂದೂ ಯಾವುದೋ ಒಂದು ಕಾರಣದಿಂದ ಇದಕ್ಕೆ ಅಧಿಕ ಮಾನ್ಯತೆಯೂ ಪ್ರತಿಷ್ಠೆಯೂ ಇದ್ದುದರಿಂದ ಇದರಮೇಲೆ ಈ ಬೃಹಲ್ಲೇಖವನ್ನು ಕೆತ್ತಿಸಲ್ಪಟ್ಟಿರಬೇಕೆಂದೂ ತೋರುತ್ತದೆ. ಲೇಖವು ಹಲವಂಶಗಳಲ್ಲಿ ಗಲಿತವಾಗಿದೆ. ಹಲವು ಪಙ್ಕ್ತಿಗಳ ಆದಿಯಲ್ಲಿ ಸುಮಾರು ಹನ್ನೆರಡು ಅಕ್ಷರಗಳು ಶಿಲೆಯ ಪ್ರಸ್ತರದೊಡನೆ ಅಳಿಹೋಗಿವೆ; ಮತ್ತು ಹಲವು ಪಙ್ಕ್ತಿಗಳಲ್ಲಿ ಮಧ್ಯ ಮಧ್ಯದಲ್ಲಿ ಅಕ್ಷರಗಳು ಸರ್ವಥಾ ನಷ್ಟವಾಗಿವೆ. ಹಾಗೆಯೇ, ಯತ್ರ, ತತ್ರ ಸೇರಿಸಿದ ಅಕ್ಷರಗಳು ಉಜ್ಜಿಹೋಗಿವೆ. ಕೆಲವು ಕಡೆ ಅಕ್ಷರಗಳ ಕೆತ್ತನೆಗಳು ಹೆಚ್ಚಿರುವುವು. ಮತ್ತು ಜಲಸ್ರೋತ ತಥಾ ಅನ್ಯ ಕಾರಣಗಳಿಂದ ಭ್ರಮೆಯನ್ನುಂಟುಮಾಡುವ ಚಿಹ್ನೆಗಳು ದೃಷ್ಟಿಗತವಾಗುವುವು. ಕಾಲವು ಶಿಲೆಯನ್ನು ಭಕ್ಷಿಸುವುದು ಮಾತ್ರವಲ್ಲ, ಅವತಾರಗಳ ಕೀರ್ತಿಯನ್ನೂ ಲೋಪಮಾಡುವಾಗ ಖಾರವೇಲನ ಇತಿಹಾಸಾಂಶವನ್ನು ಲೋಪಮಾಡುವುದು ಆಶ್ಚರ್ಯವಲ್ಲ.

ಎರಡು ಸಾವಿರ ವರ್ಷಗಳು ಕಳೆದುಹೋದರೂ ಯಾವುದೋ ಒಂದು ವಿಧದಿಂದ ಇದರ ಅಸ್ತಿತ್ವವು ದೃಷ್ಟಿಗೋಚರವಾದುದೂ, ಸರಸ್ವತಿಯ ಪ್ರಸಾದದಿಂದ ಬೀಜಾಕ್ಷರಗಳು ಎಷ್ಟೋ ಅಲ್ಪ ಸ್ವಲ್ಪಾಂಶವನ್ನು ನಮಗೆ ಹೇಳಿರುವುದೂ, ಮೌನವಾಗಿದ್ದ ಕಾಲಪುರುಷನು ನಮಗೆ ಸಂತೋಷವನ್ನು ಮಾಡಿರುವುದೂ ಆಶ್ಚರ್ಯ ಮತ್ತು ಆನಂದವನ್ನುಂಟುಮಾಡತಕ್ಕ ಮಾತಾಗಿದೆ. ಈ ಲೇಖದ ವೃತ್ತಾಂತವು ನೂರು ವರ್ಷಗಳ ಹಿಂದೆ ಇತಿಹಾಸ ಸಂಶೋಧಕರ ಕಿವಿಗೆ ಬಿದ್ದರೂ ಇದನ್ನು ಸನ್ ೧೯೧೭ಕ್ಕೆ ಮುಂಚೆ ಪೂರ್ಣವಾಗಿ ಓದುವುದಕ್ಕಾಗುತ್ತಿರಲಿಲ್ಲ.

(ಸಶೇಷ)

ಕೆ. ಭುಜಬಲಿಶಾಸ್ತ್ರೀ, ಆರಾ.

ಗ್ರಂಥ ವಿಮರ್ಶೆ

೧. ವಿದ್ಯಾರಣ್ಯ ನಾಟಕವು, ೨. ಸೌಭದ್ರ ವಿಜಯ ನಾಟಕವು ೩. ಪುರಂದರದಾಸ ಚರಿತ್ರೆ (ರೂಪಕ)

ಲೇಖಕರು.—ಸಿ. ಹನುಮಂತಗೌಡರವರು, ಹೊಸಪೇಟೆ.

(೧) ಕ್ರೌನ್ ಅಷ್ಟಪತ್ರ ಪುಟಗಳು ೧೧೬; ಬೆಂಗಳೂರು ಪವರ್ ಪ್ರಿಂಟಿಂಗ್ ವರ್ಕ್ಸಿನಲ್ಲಿ ಮುದ್ರಿತವಾಯಿತು; ೧೯೨೭.

(೨) ಡೆಮ್ಮಿ ೬೨ ಪುಟಗಳು; ಹೊಸಪೇಟೆ ಇಸ್ಲಾಮಿಯಾ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಯಿತು; ಬೆಲೆ ೬ ಆಣೆ.

(೩) ಕ್ರೌನ್ ಅಷ್ಟಪತ್ರ ಪುಟಗಳು ೭೬; ಬೆಂಗಳೂರು ಪ್ರೆಸ್ನಲ್ಲಿ ಮುದ್ರಿತವಾಯಿತು; ಬೆಲೆ ೬ ಆಣೆ.

(೧) ಪುರಾತನ ವಿಜಯನಗರ ರಾಜ್ಯ ಚರಿತ್ರೆಯ ಮೊದಲನೆಯ ಭಾಗವನ್ನೊಳಕೊಂಡಿರುವ ಏಳು ಅಂಕಗಳಿಂದ ಕೂಡಿದ ನಾಟಕವಿದು. (೨) ಇದು ಅಭಿಮನ್ಯುವಿನ ಚರಿತ್ರೆಯನ್ನೊಳಕೊಂಡಿರುವ ಮೂರು ಅಂಕಗಳುಳ್ಳ ಗ್ರಂಥ. (೩) ಇದೂ ಮೂರು ಅಂಕಗಳುಳ್ಳದು. ಇದರಲ್ಲಿ ಪುರಂದರದಾಸರ ಜೀವನ ಚರಿತ್ರೆಯು ವರ್ಣಿತವಾಗಿರುವುದು.

ಲೇಖಕರು ಬಹು ಕಾಲದಿಂದ ನಾಟಕ ರಚನಾ ಕೌಶಲವುಳ್ಳವರೆಂದು ಪ್ರಸಿದ್ಧರಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇವರ ಮತ್ತೊಂದು ನಾಟಕವನ್ನು ಹಿಂದೆ ಪರಿಷತ್ಪತ್ರಿಕೆಯ ಐದನೆಯ ಸಂಪುಟದ ೧೫೪ನೆಯ ಪುಟದಲ್ಲಿ ವಿಮರ್ಶೆಮಾಡಿರುತ್ತದೆ. ಈ ನಾಟಕಗಳೂ ಎಲ್ಲ ವಿಷಯದಲ್ಲಿಯೂ ಅದರಂತೆಯೇ ಇರುವುವೆಂಬುದರಲ್ಲಿ ಸಂದೇಹವಿಲ್ಲ. ಎಲ್ಲರೂ ಈ ನಾಟಕಗಳನ್ನೋದಿ ಪ್ರೋತ್ಸಾಹಕರಾಗುವರೆಂದು ಹಾರೈಸುತ್ತೇನೆ.

---

೪. ಕಾವ್ಯಕಲ್ಪ

ಲೇಖಕರು.—ಹಾರನಹಳ್ಳಿ ಅನಂತರಾಯರು, ಎಮ್.ಎ.

ಕ್ರೌನ್ ಅಷ್ಟಪತ್ರ ಪುಟಗಳು ೭೨; ಕಾರವಾರದ ಸೆಂಟ್ರಲ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು; ೧೯೨೮; ಬೆಲೆ ೮ ಆಣೆ.

ಇದೊಂದು ಛಂದೋಬದ್ಧವಾದ ಕವಿತೆ. ಇದರಲ್ಲಿ—೧. ಗಣಪತಿ ಸ್ತವನ, ೨. ಕೋಗಿಲೆ, ೩. ಶೋಕ ಗೀತೆ, ೪. ಘೂರನ ಭಾವಚಿತ್ರವನ್ನುದ್ದೇಶಿಸಿ, ೫.

ಮಧ್ಯ ರಾತ್ರಿಯಲ್ಲಿ ಕೇಳಬಂದ ಆಂಗ್ಲ ಗಾನವು, ೬. ಪ್ರಾರ್ಥನಾ ಪಂಚಕ, ೭. ದಿವ್ಯಾರ್ಕಸಿರ್ದೇಂ ಫಲಂ, ೮. ದೇವಪಲ್ಲಿ ಅರಿಕೆ, ೯. ಪೋಷಿಸೀ ವಿರಹ, ೧೦. ಯಜ್ಞಕುಂಡ, ೧೧. ಯೌವನೋದಯ, ೧೨. ಗಂಗಾ ಲಹರಿ—ಈ ವಿಷಯಗಳನ್ನು ಕವಿತ ಹಾಡುಗಳು, ದ್ವಿಪದಿಗಳು, ಕಂದಗಳು, ಷಟ್ಪದಿಗಳು, ಬಗೆ ಬಗೆಯ ವೃತ್ತಗಳು ಇವುಗಳಿಂದ ಬರೆದಿರುತ್ತಾರೆ.

ಶೈಲಿಯು ಸರಳವಾಗಿಯೂ ತಿಳಿಗನ್ನಡವಾಗಿಯೂ ಇದೆ. ವಿಷಯ ನಿರೂಪಣವು ರಮ್ಯವಾಗಿ ಮನಸ್ಸಿಗೆ ಹಿಡಿಯುವಂತಿದೆ. ವ್ಯಾಕರಣ ವಿಷಯಗಳಿಗೆ ಅಷ್ಟು ಹೆಚ್ಚು ಗಮನವನ್ನು ಕೊಟ್ಟಿಲ್ಲ. ಕಾಗದವು ಉತ್ತಮವಾಗಿಯೂ ಮುದ್ರಣವು ಅಂದವಾಗಿಯೂ ಇದೆ. ಮುದ್ರಣದ ತಪ್ಪುಗಳು ಬಹಳ ಕಡಿಮೆ. ಅಲ್ಲಲ್ಲಿ—ಸವಿನಾಪದೋಃ, ಅಕ್ಕರ, ಮನಗುತ್ತಂ, ಓರ್ವ, ಬೆಳಿಪನೇಕೆ, ಎಳಿಸದ, ಅದನಂ, ಕಾಂತಿಂದೆ, ಅಡೊಂಬೊಲ, ತಿಪ್ಪಿ, ಅಧುನಿಕ, ಕಲಣ, ಪಠಣ—ನೊದಲಾದ ಕೆಲವು ಸಾಧಾರಣವಾದ ಅಶುದ್ಧ ರೂಪಗಳು ಕಾಣಬರುವುವು. ಗ್ರಂಥಕರ್ತರು ವಿಶೇಷ ಶ್ರಮವನ್ನು ವಹಿಸಿ ಹೊಸ ವಿಷಯಗಳನ್ನು ಸರ್ವ ಸುಲಭವಾಗಿರುವಂತೆ ಪದ್ಯರೂಪದಲ್ಲಿ ಬರೆದಿರುವುದು ಶ್ಲಾಘ್ಯವಾದುದೆಂಬುದಕ್ಕೆ ಸಂದೇಹವಿಲ್ಲ. ಎಲ್ಲರೂ ಇದನ್ನು ಓದಿ ಗ್ರಹಿಸಿ ಪ್ರೋತ್ಸಾಹಿಸಲೆಂದು ಕೋರುತ್ತೇವೆ.

---

೫. ಭೋಗಜಾಲ

ಲೇಖಕರು.—ಹಾರನಹಳ್ಳಿ ಅನಂತರಾಯರು, ಎಮ್.ಎ.

ಡೆಮ್ಮಿ ಅಷ್ಟಪತ್ರ ಪುಟಗಳು ೧೩೨; ಧಾರವಾಡದ ಕನ್ನಡ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಯ್ತು; ಬೆಲೆ ರೂ. ೧.

ಇದು ಒಂದು ದುಃಖ ಜನ್ಯ ನಾಟಕವು; ಇದರಲ್ಲಿ ಐದು ಅಂಕಗಳಿವೆ. ಇದರ ಇತಿವೃತ್ತವು ಕಲ್ಪಿತವಾದುದು. ನಾಟಕಗಳಲ್ಲಿರಬಹುದಾದ ಪದ್ಯಗಳೂ ಹಾಡುಗಳೂ ಇದರಲ್ಲಿಲ್ಲ. ಇದು ವಚನರೂಪವಾಗಿದೆ. ಭಾಷೆ ಸುಲಭವಾಗಿಯೂ ಲಲಿತವಾಗಿಯೂ ಇದೆ. ಪಾತ್ರಗಳ ಅಭಿನಯದಿಂದ ಅನೇಕ ಲೋಕಧರ್ಮಗಳೂ ಅನುಭವಗಳೂ ಕಥಾ ವಸ್ತುವೂ ವಿಶದವಾಗಿ ವಿದಿತವಾಗುವಂತಿದೆ. ಲೇಖಕರು ನಾಟಕಕ್ಕಿರುವ ಪೂರ್ವ ಲಕ್ಷಣಗಳನ್ನು ಅಷ್ಟು ಕಡಿದಾಗಿ ಅನುಸರಿಸಿಲ್ಲ. ಭಾಷೆಯೂ ಶೈಲಿಯೂ ಕೇವಲ ಪೂರ್ವದ ರೂಢಿ ಮಾರ್ಗವನ್ನೇ ಅವಲಂಬಿಸದೆ ಹೊಸ ರೀತಿಯನ್ನು ಅವಲಂಬಿಸಿರಬೇಕೆಂಬುದು ಇವರ ಲಕ್ಷ್ಯವಾಗಿರುವುದು. ಗ್ರಂಥ ರಚನೆಯ ವಿಚಾರದಲ್ಲಿ ಲೇಖಕರು ತಮ್ಮ ಅಭಿಪ್ರಾಯವನ್ನು ಈ ಗ್ರಂಥದ ಸಾಧಾರಣ ವಿಮರ್ಶೆಯೇ ಆಗುವಂತೆ ಪ್ರಸ್ತಾವನೆಯಲ್ಲಿ ಹೀಗೆ ಬರೆದಿರುತ್ತಾರೆ:-

"ಈ ನಾಟಕದಲ್ಲಿ ನನ್ನ ಭಾಷಾ ಶೈಲಿಯು ಕಠಿಣವಾಗಿರುವುದೆಂದು ಕೆಲವರು ನನಗೆ ಸೂಚಿಸಿದರು; ಆದರೆ ಅವರ ಸೂಚನೆಯು ನನಗೆ ಸರಿಗಾಣಲಿಲ್ಲ. ನನ್ನ ಶೈಲಿಯನ್ನು ಇದ್ದಂತೆಯೇ ಇಟ್ಟಿರುವೆನು. ಕೆಲವೆಡೆಗೆ ಶಬ್ದಪ್ರಯೋಗಗಳು ಅಪ್ರಶಸ್ತವಾಗಿರುವವಂತೆ; ಶಬ್ದ ಶಬ್ದದಲ್ಲಿಯೂ ವಿಶಿಷ್ಟಾರ್ಥವನ್ನು ಬಗೆಯುವ ನನಗೆ ಶಬ್ದಪ್ರಯೋಗವನ್ನು ಪಲ್ಲಟಿಸುವುದೂ ಸರಿಗಾಣಲಿಲ್ಲ. ತಪ್ಪೆಂಬುದೂ ಸರಿಯೆಂಬುದೂ ಕೇವಲ ರೂಢಿಯಿಂದಲೇ. ರೂಢಿಯನ್ನು ವಿರೋಧಿಸಿದ ಅಪವಾದವು ನನಗೆ ಬಂದರೂ ಅದು ದೋಷವಲ್ಲ. ಹೊಸ ಹೊಸ ವಿಚಾರಗಳನ್ನು ಹೊಸ ಹೊಸ ಬಗೆಯಿಂದ ಪ್ರಚಾರಗೊಳಿಸುವುದೇ ನನ್ನ ಧ್ಯೇಯವಾಗಿರುವುದು. ಹೊಸ ಶಬ್ದಗಳನ್ನೂ, ಹೊಸ ಪ್ರಯೋಗಗಳನ್ನೂ, ಹೊಸ ವಿಚಾರಗಳನ್ನೂ, ಹೊಸ ವಿಷಯಗಳನ್ನೂ, ಹೊಸ ಚೈತನ್ಯವನ್ನೂ ನನಗೆ ಎಷ್ಟು ಹೊಸ ಹೊಸ ಬಗೆಯಿಂದ ಹೇಳಿದರೂ ತೃಪ್ತಿಯಾಗುವುದಿಲ್ಲ. ನಿರ್ದೋಷವಾದ ನೀರಸ ಕೃತಿಗಿಂತ ದೋಷ ಪರಿಪ್ಲುತವಾದ ಸುರಸ ಕೃತಿಯೇ ನನಗೆ ಪ್ರಿಯಕರವಾಗಿರುವುದು. ಈ ರುಚಿ ದೋಷದ ಫಲವನ್ನು ನಾನೇ ಭೋಗಿಸಬೇಕಲ್ಲವೇ."

ಈ ಗ್ರಂಥವನ್ನೋದುವುದರಿಂದ ಅನೇಕ ಸಂಗತಿಗಳನ್ನು ಗ್ರಹಿಸಬಹುದಾಗಿದೆ. ಎಲ್ಲರೂ ಇದನ್ನೋದಿ ಈ ಗ್ರಂಥವನ್ನು ಪ್ರೋತ್ಸಾಹಿಸುವರೆಂದು ಕೋರುತ್ತೇವೆ.

---

೬. ತೊಳಿದ ಮುತ್ತು

ಲೇಖಕರು.—ಕೆರೂರು ವಾಸುದೇವಾಚಾರ್ಯರು.

ಪ್ರಕಾಶಕರು.—ಕನ್ನಡಿಗರ ಕೂಟ, ಧಾರವಾಡ.

ಕ್ರೌನ್ ಅಷ್ಟಪತ್ರ ಪುಟಗಳು ೧೬ ; ಕರ್ಣಾಟಕ ಪ್ರಿಂಟಿಂಗ್ ವರ್ಕ್ಸನಲ್ಲಿ
ಮುದ್ರಿತವಾಯ್ತು ; ೧೯೨೮ ; ಬೆಲೆ ರೂ. ೦-೧-೬.

ಇದೊಂದು ಚಿಕ್ಕ ಕತೆ. ಪ್ರಾಚೀನ ನವೀನ ಸಾಮಾಜಿಕ ಪದ್ಧತಿಯ ಗುಣದೋಷ ವಿಚಾರಮಾಡುವುದು ಇದರ ಉದ್ದೇಶವೆಂದು ತೋರುವುದು. ಸಾಹಿತ್ಯ ವಾಚನಾಭಿರುಚಿಯನ್ನು ಹುಟ್ಟಿಸಬೇಕೆಂಬುದು ಸಂಪಾದಕರ ಮಾತು. ಇದರ ಶೈಲಿಯೂ ಭಾಷೆಯೂ ಸುಲಭವಾಗಿಯೂ ಸರಳವಾಗಿಯೂ ಇವೆ. ವಾಕ್ಯ ಶೈಲಿಯು ಮೈಸೂರಿನ ಕಡೆಯಂತೆ ಇಲ್ಲ. ಶಬ್ದರೂಪಗಳು ಅಷ್ಟು ನಿಯಮವನ್ನನುಸರಿಸಿದಂತಿಲ್ಲ; ಹೊಸ ರೀತಿಯನ್ನನುಸರಿಸಿವೆ. ಕಾಗದವೂ ಮುದ್ರಣವೂ ಉತ್ತಮವಾಗಿವೆ. ಮುದ್ರಣದ ತಪ್ಪು ಬಹಳ ಕಡಿಮೆ. ಇದನ್ನೋದುವುದರಿಂದ ಸಾಮಾಜಿಕ ಪರಿಸ್ಥಿತಿ ವಿಚಾರಗಳನ್ನು ಗ್ರಹಿಸಬಹುದು. ಎಲ್ಲರೂ ಈ ಗ್ರಂಥಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವರೆಂದು ಹಾರೈಸುತ್ತೇವೆ.

---

೭. ಶ್ರೀ ಮಲ್ಲಾರಿ ಕೀರ್ತನ

ಲೇಖಕರು.—ರಾಮದಾಸ ತೋಸೀಖಾನಿ, ಹಾನಗಲ್ಲ.

ಪ್ರಕಾಶಕರು.—ಮುಂದಪುರ ರಾಮಚಂದ್ರ ಶಿವಪೂಜಿ, ದೇವಗಿರಿ.

ಡೆಮ್ಮೈ ಅಷ್ಟಪತ್ರ ಪುಟಗಳು ೪೪; ಆನಂದವನದ ಶ್ರೀ ಶೇಷಾಚಲ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು; ೧೯೨೮; ಬೆಲೆ ೫ ಆಣೆ.

ಇದು ಹರಿಕಥೆ ಅಥವಾ ಕೀರ್ತನ ರೂಪವಾದ ಗ್ರಂಥ. ಲೋಕ ಕಂಟಕನಾದ ಮಲ್ಲಾಸುರನನ್ನು ಮಾಲತೀಶನು ಸಂಹರಿಸಿ ಲೋಕೋದ್ಧಾರಮಾಡಿದ ಕಥೆಯು ಇದರಲ್ಲಿ ಉಕ್ತವಾಗಿದೆ. ಕಥೆಯು ಶ್ಲೋಕ, ಗದ್ಯ, ಪದ್ಯ, ಹಾಡು, ಮಟ್ಟು ಮೊದಲಾದುವುಗಳಿಂದ ಕೂಡಿದೆ. ಶೈಲಿಯು ಸುಲಭವಾಗಿಯೂ ಸರಳವಾಗಿಯೂ ಇದೆ. ಕಥೆಯನ್ನು ಗಾನವಾದ್ಯಗಳಿಂದ ಮಾಡುವ ಭಾಗವತರಿಗೂ ಕೀರ್ತನಕಾರರಿಗೂ ದಾಸರಿಗೂ ಇದು ಅನುಕೂಲವಾಗಿದೆ. ಭಗವಂತನ ಗುಣಮಹಿಮಾದಿಗಳನ್ನು ತಿಳಿಯಲಪೇಕ್ಷಿಸುವ ಆಸ್ತಿಕರಾದ ಭಕ್ತರೂ ಇತರರೂ ಓದಲು ಅರ್ಹವಾಗಿದೆ.

ಪ್ರಸ್ತಾವನೆಯಲ್ಲಿ—"ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕೀರ್ತನ ಗ್ರಂಥಗಳು ತೀರ ಕಡಿಮೆ, ಬಹುಶಃ ಬೆರಳೆಣಿಸುವಷ್ಟು ದೊರೆಯಬಹುದೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. .... ಮಾಲತೀಶನು ಅವತಾರಮಾಡಿ ಜಗದುದ್ಧಾರಮಾಡಿದ "ಮಲ್ಲಾರಿ ಮಾಹಾತ್ಮ್ಯ" ಕೀರ್ತನವನ್ನು ಬರಿಸಿ ಪ್ರಕಟಿಸಿದ್ದು ಕನ್ನಡಿಗರಿಗೂ ಮಾಲತೀಶನ ಭಕ್ತರಿಗೂ ಬಹಳ ಯೋಗ್ಯವಾಯಿತೆಂದು ಹೇಳಬಹುದು. ಈ ಕೀರ್ತನ ರೂಪವಾದ ಮಲ್ಲಾರೀ ಮಾಹಾತ್ಮ್ಯವು ಸುರಸವೂ, ಬೋಧಪ್ರದವೂ ಇರುವದಲ್ಲದೆ ನವವಿಧ ಭಕ್ತಿಯಿಂದ ತುಂಬಿ ತುಳುಕುತ್ತಿರುವದು. ಗ್ರಂಥಕರ್ತರು ಇದರ ಪೂರ್ವ ಪೀಠಿಕೆಯಲ್ಲಿ ಆಧ್ಯಾತ್ಮಿಕ ವಿಷಯವಾಗಿರುವ ಗೂಢ ತತ್ವಗಳನ್ನು ಸುಲಭವಾಗಿಯೂ, ಮನೋಬೋಧವಾಗಿಯೂ, ಸರಸವಾಗಿಯೂ ಪ್ರತಿಪಾದಿಸಿರುವರು" ಎಂದು ಪ್ರಸ್ತಾವನ ಲೇಖಕರು ಸೂಚಿಸಿರುತ್ತಾರೆ.

ಮುದ್ರಣದ ತಪ್ಪುಗಳು ಅಲ್ಲಲ್ಲಿ ಕಾಣಬರುವವಲ್ಲದೆ—ದೇವ್ಯೈಸದಾ, ಘುಟಿತ, ನಮಂಕೃತಿಃ, ಷಂಥಾನಾಂ; ಜಗದೋಳ್, ತನುಮನೋಳ್—ಮೊದಲಾದ ಅಶುದ್ಧ ರೂಪಗಳೂ ಇರುವವು. ಇಪ್ಪತ್ತನೆಯ ಪುಟದಲ್ಲಿರುವ ಶ್ಲೋಕದ ಉತ್ತರಾರ್ಧದಲ್ಲಿ ಛಂದೋಭಂಗಗಳಿರುವವು. ವಾಚಕರಿಗೆ ಅನುಕೂಲವಾಗುವಂತೆ ಇವುಗಳನ್ನು ಸರಿಪಡಿಸುವುದು ಅತ್ಯಾವಶ್ಯಕವಾದುದು. ಕಥಾ ಭಾಗವು ಸರ್ವರಿಗೂ ಆದರಣೀಯವಾಗಿರುವುದರಿಂದ ಈ ಗ್ರಂಥಕ್ಕೆ ಪ್ರೋತ್ಸಾಹವಾಗುವುದರಲ್ಲಿ ಸಂದೇಹವಿಲ್ಲ.

೮. ನವಜೀವನ (ಸಂಪುಟ ೪, ಸಂಚಿಕೆ ೧, ೨, ೩)

ಪ್ರಕಾಶಕರು.—ಕೃಷ್ಣಾ ಅಂಡ್ ಕೊ., ಬಳೇಪೇಟೆ, ಬೆಂಗಳೂರು.

ದೊಡ್ಡ ಪುಟಗಳು ಸುಮಾರು ೧೬ ; ಬೆಲೆ ಪ್ರತಿ ೧ಕ್ಕೆ ೩ ಆಣೆ.

ಇದೊಂದು ಸಚಿತ್ರ ವಾರ ಪತ್ರಿಕೆ. ಇದರಲ್ಲಿ ಕೊಡುವ ಚಿತ್ರಗಳು ಬಹಳ ಅಂದವಾಗಿರುವುವು. ಕಾಗದವೂ ಮುದ್ರಣವೂ ಬಹಳ ಉತ್ತಮವಾಗಿವೆ. ಅಚ್ಚಿನ ತಪ್ಪುಗಳಿಲ್ಲ. ತರುಣರ ಸಲುವಾಗಿ ಇದನ್ನು ಹೊರಡಿಸುವುದೆಂಬ ಉದ್ದೇಶದಿಂದ ವಿವಿಧ ವಿಷಯಗಳನ್ನು ಇದರಲ್ಲಿ ಪ್ರಕಟಿಸಿದೆ. ಆದರೆ ಅವುಗಳಲ್ಲಿ ಅನೇಕ ವಿಷಯಗಳು ತರುಣರಿಗುಪಯುಕ್ತವೆಂದು ಹೇಳಲಾಗುವುದಿಲ್ಲ. ಇದು ತರುಣರಿಗಾಗಿ ಹೊರಡುತ್ತಿರುವ ಪತ್ರಿಕೆಯಾದುದರಿಂದ ಸಾಧ್ಯವಾದ ಮಟ್ಟಿಗೂ ಭಾಷೆಯ ಶುದ್ಧತೆಗೆ ಲಕ್ಷ್ಯವನ್ನು ಕೊಡಬೇಕಾಗಿರುವುದು. ಅಶುದ್ಧ ರೂಪಗಳು ತುಂಬ ಹೋಗಿರುವುದು ಶೋಚನೀಯವಾದ ಸಂಗತಿ. ಇದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕಲ್ಲದೆ ಪತ್ರಿಕೆಯ ಉದ್ದೇಶವನ್ನನುಸರಿಸಿ ತರುಣರಿಗೆ ಆವಶ್ಯಕವಾದ ವಿಷಯಗಳನ್ನೇ ಇದರಲ್ಲಿ ಪ್ರಕಟಿಸುವುದು ಯುಕ್ತವಾಗಿ ತೋರುವುದು. ಈ ಪತ್ರಿಕೆಗೆ ಬಹು ಮಂದಿ ಸಹಾಯಕರಾಗುವರೆಂದು ನಂಬುತ್ತೇವೆ.

---

೯. ಮೈಸೂರು ಮಕ್ಕಳು (ನವೆಂಬರ್—೧೯೨೮)

ಸಂಪಾದಕರು.—ಎಸ್. ಎಸ್. ನಾರಾಯಣಶಾಸ್ತ್ರಿ, ಎಂ.ಎ., ಆರ್. ಕೆ. ಲಕ್ಕೂರ್.

ದೊಡ್ಡ ಪುಟಗಳು ೧೨ ; ಮೈಸೂರಿನ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು ; ವಾರ್ಷಿಕ ಚಂದಾ ರೂ. ೧ (ಅಂಚೆ ಹಾಸಲು ವಿನಾ); ಸ್ಕೂಲ್ ಮತ್ತು ವಾಚನಾಲಯಗಳಿಗೆ ರೂ. ೨.

ಇದೊಂದು ಸಚಿತ್ರ ಮಾಸಪತ್ರಿಕೆ. ಇದರಲ್ಲಿ ಮೈಸೂರು ಮಕ್ಕಳ ಚಿತ್ರ ಪರಿಚಯ, ಮೈಸೂರು ಮಕ್ಕಳ ಜೀವನ ಚರಿತ್ರೆ, ಬಳೆಯರು (ಪದ್ಯ), ನವರಾತ್ರಿ (ಒಂದು ಕಥೆ), ಕಥೆಗಳ ಕಟ್ಟು—ಬಲಿಚಕ್ರವರ್ತಿ, ಕಬ್ಬಗಳು ಕಲಿಯಬೇಕಾದುದು, ಆಟದ ಬೈಲು, ಹಿರಿಯಣ್ಣಂದಿರಿಗಾಗಿ, ಸಮರೂಪ (ಯೂನಿಫಾರಂ), ಶಿಬಿರದ ವಿಷಯವಾಗಿ, ಗೃಹ ಶಿಕ್ಷಣ, ಸ್ಕೌಟು ಸುದ್ದಿಗಳು, ವಿಮರ್ಶೆ, ಸ್ವೀಕಾರ—ಈ ವಿಷಯಗಳು ಪ್ರಕಟವಾಗಿವೆ. ಮಕ್ಕಳ ಉಪಯೋಗಕ್ಕಾಗಿ ಈ ಪತ್ರಿಕೆಯು ಹೊರಟಿರುವಂತೆ ತೋರುತ್ತದೆ. ಆದರೆ ಇದರ ಭಾಷಾ ಶೈಲಿಯು ಸುಲಭವಾಗಿಯೂ ಸರಳವಾಗಿಯೂ ಇರುವ ಅಷ್ಟು ಗಸ್ನಷವಲ್ಲ. ಕ್ಲಿಷ್ಟವಾಗಿಯೇ ಇರುವುದು. ಅಚ್ಚಿನ ತಪ್ಪುಗಳೂ ಅಶುದ್ಧ ರೂಪಗಳೂ ಯಥೇಚ್ಛವಾಗಿ ಬಿದ್ದಿರುವುದು ಶೋಚನೀಯವಾದ ಕೊರತೆ. ಮಕ್ಕಳಿಗೆ ಪರಿಚಯಾರಂಭದಲ್ಲಿ ಕೈಗೆ ಬರುವ ಪುಸ್ತಕಗಳಾದರೂ ನಿರ್ದುಷ್ಟವಾಗಿಲ್ಲದಿದ್ದರೆ ಅವರಿಗೆ ಶುದ್ಧ ಭಾಷಾ ಜ್ಞಾನವನ್ನುಂಟುಮಾಡುವುದು ಅಸಾಧ್ಯವಾಗಿ ಪರಿಣಮಿಸಬಹುದು. ಪುಸ್ತಕದ

ಕಾಗದವೂ ಮುದ್ರಣವೂ ಸರಿಯಾಗಿದೆ. ಮೇಲೆ ಹೇಳಿರುವ ನ್ಯೂನತೆಗಳಿಗೆ ಗಮನಕೊಟ್ಟು ಸುಧಾರಿಸಿ ಮುಂದೆ ಈ ಪತ್ರಿಕೆಯ ಸದುಪಯೋಗವನ್ನು ಹೆಚ್ಚಿಸುವರೆಂದು ನಿರೀಕ್ಷಿಸುತ್ತೇವೆ.

---

೧೦. ಜಯಕರ್ಣಾಟಕ (ವರ್ಷ ೭, ಸಂಚಿಕೆ ೧)

ಸಂಪಾದಕರು.—ಆಲೂರು ವೆಂಕಟರಾಯರವರು, ಬಿ.ಎ., ಎಲ್.ಎಲ್.ಬಿ.
ಧಾರವಾಡ.

ದೊಡ್ಡ ಪುಟಗಳು ೭೨: ವಾರ್ಷಿಕ ಚಂದಾ ರೂ. ೫-೮-೦ (ಅಂಚೆ ವೆಚ್ಚ ಸೇರಿ); ಮಂಗಳೂರು ಸದಾನಂದ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾಯ್ತು; ೧೯೨೮.

ಇದೊಂದು ಮಾಸಪತ್ರಿಕೆ. ಎಲ್ಲ ಕರ್ಣಾಟಕ ಪ್ರಾಂತದಲ್ಲಿರುವ ತಿಳಿವಳಿಕೆಯುಳ್ಳ ಕನ್ನಡಿಗರೂ ಭಾಷಾಭಿಮಾನಿಗಳೂ ತಮ್ಮ ಪಾಂಡಿತ್ಯದಿಂದಲೂ ಅನುಭವದಿಂದಲೂ ಪರಿಚಯದಿಂದಲೂ ಭಿನ್ನ ಭಿನ್ನ ವಿಷಯಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಿರುವರು. ಸಂಪಾದಕರು ಇಷ್ಟು ದೊಡ್ಡದಾದ ಮಾಸಪತ್ರಿಕೆಯನ್ನು ಆರು ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಯಿಸಿಕೊಂಡುಬರುತ್ತಿರುವುದು ಸ್ತುತ್ಯವಾಗಿರುವುದೆಂಬುದರಲ್ಲಿ ಸಂದೇಹವಿಲ್ಲ. ಇದು ವಾಚಕರಿಗೆ ಉಪಯುಕ್ತವಾದ ವಿವಿಧ ವಿಷಯಗಳ ಪರಿಚಯವನ್ನುಂಟುಮಾಡುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯ ಕಾಗದವೂ ಮುದ್ರಣವೂ ಉತ್ತಮವಾಗಿವೆ. ಪುಟ ಸಂಖ್ಯೆಯನ್ನು ಮುಂದೆ ೮೦ ಕ್ಕೆ ಹೆಚ್ಚಿಸುವಂತೆ ಸಂಪಾದಕರು ತಿಳಿಸುತ್ತಾರೆ. ಕನ್ನಡ ಮಾಸಪತ್ರಿಕೆಗಳಲ್ಲಿ ಇದು ಗಣ್ಯವಾದುದಾಗಿದೆ. ಮುದ್ರಣದ ತಪ್ಪುಗಳಿಗೆ ಗಮನಕೊಡಬೇಕಾದುದೊಂದು ಆವಶ್ಯಕವಾದ ಸಂಗತಿ. ಈ ಪತ್ರಿಕೆಯು ಶಾಶ್ವತವಾಗಿ ನಡೆದು ಜ್ಞಾನಾರ್ಜನೆಗೆ ಅವಕಾಶವನ್ನು ಕೊಡುವಂತೆ ಭಾಷಾಭಿಮಾನಿಗಳೂ ಇತರರೂ ಉದಾರಾಶ್ರಯವನ್ನು ಕೊಟ್ಟು ಪ್ರೋತ್ಸಾಹಿಸುವರೆಂದು ಹಾರೈಸುತ್ತೇವೆ.

---

೧೧. ಕರ್ಣಾಟ ಸಂಕ್ಷೇಪ ರಾಮಾಯಣಂ

(ಬಾಲ ಕಾಂಡ)

ಲೇಖಕರು.—ಗೋವಿಂದೇವ ನೃಸಿಂಹಶಾಸ್ತ್ರಿಗಳು, ಮೈಸೂರು.

ಡೆಮ್ಮಿ ಅಷ್ಟಪತ್ರ ಪುಟಗಳು ೨೫: ಮೈಸೂರು ಲಕ್ಷ್ಮೀನರಸಿಂಹ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು; ೧೯೨೮.

ಇದೊಂದು ಷಟ್ಪದೀ ಗ್ರಂಥವು. ಇದರಲ್ಲಿ ರಾಮಾಯಣದ ಬಾಲ ಕಾಂಡದ ಕಥೆಯನ್ನು ಸಂಕ್ಷೇಪವಾಗಿ ಭಾಮಿನೀ ಷಟ್ಪದಿಯಲ್ಲಿ ರಚಿಸಿದ್ದಾರೆ. ಇದರ ಶೈಲಿಯು ಸುಲಭವಾಗಿಯೂ, ಸರಳವಾಗಿಯೂ, ಲಲಿತವಾಗಿಯೂ ಇದೆ.

ಕವಿತಾ ಧೋರಣೆಯು ಚೆನ್ನಾಗಿದೆ. ಭಾಷೆಯು ಹೊಸಗನ್ನಡ ಹಳಗನ್ನಡ ಮಿಶ್ರವಾಗಿದ್ದರೂ ವ್ಯಾಕರಣಾಂಶ ಮೊದಲಾದುದು ಹೊಸಗನ್ನಡದ ಮಾರ್ಗವನ್ನೇ ಹೆಚ್ಚಾಗಿ ಅನುಸರಿಸಿದೆ. ಕಾಗದವೂ ಮುದ್ರಣವೂ ತಕ್ಕ ಮಟ್ಟಿಗೆ ಅಂದವಾಗಿವೆ. ಛಂದಸ್ಸು, ಶಬ್ದರೂಪಗಳೂ ದೋಷ ರಹಿತವಾಗಿವೆ. ಮುದ್ರಣದ ತಪ್ಪು ಕಡಿಮೆ. ಅಶುದ್ಧ ಪ್ರಯೋಗಗಳು ಇಲ್ಲವೆಂದು ಹೇಳುವಷ್ಟು ವಿರಳವಾಗಿವೆ. ರಾಮಾಯಣದ ಎಲ್ಲ ಕಾಂಡಗಳನ್ನೂ ಇದರಂತೆಯೇ ಒಟ್ಟು ೮೦೦ ಪದ್ಯಗಳಲ್ಲಿ ಮುಗಿಸಿರುವಂತೆ ಲೇಖಕರು ತಿಳಿಸುತ್ತಾರೆ. ಭಾಷಾ ಪರಿಚಯವನ್ನು ಮಾಡಿಕೊಳ್ಳುವವರೆಲ್ಲರಿಗೂ ಇದು ಓದಲು ಅರ್ಹವಾಗಿದೆ. ಲೋವರ್ ಸೆಕೆಂಡರೀ ಪರೀಕ್ಷೆಗೆ ಪಠ್ಯಪುಸ್ತಕವಾಗಿರುವುದಕ್ಕೆ ಇದು ತಕ್ಕುದೆಂಬುದರಲ್ಲಿ ಸಂದೇಹವಿಲ್ಲ. ಎಲ್ಲರೂ ಇದಕ್ಕೆ ತಕ್ಕ ಪ್ರೋತ್ಸಾಹಕೊಟ್ಟು ಇಂತಹ ಕವಿತೆಗಳು ಪ್ರಕಟವಾಗಲು ಸಹಾಯಕರಾಗಬೇಕೆಂಬುದೇ ನಮ್ಮ ಆಶಯವು.

---

೧೨. ಸಂಸ ಪದಂ

ಲೇಖಕರು.—ಸಂಸ.

ಕ್ರೌ ಅಷ್ಟಪತ್ರ ಪುಟಗಳು ೫೪; ಧಾರವಾಡದ ಕನ್ನಡ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಯಿತು; ೧೯೨೮.

ಇದೊಂದು ಪದ್ಯ ಕವಿತಾ ರೂಪವಾದ ಗ್ರಂಥವು. ಇದರಲ್ಲಿ ವಿವಿಧ ವೃತ್ತಗಳು (ಕೆಲವು ಅಪೂರ್ವ ವೃತ್ತಗಳು), ದ್ವಿಪದಿ, ತ್ರಿಪದಿ, ಷಟ್ಪದಿ, ದಂಡಕ, ಗೀತೆ, ಸೀಸ, ರಗಳೆ, ಕಂದ ಮೊದಲಾದ ಎಲ್ಲ ಬಗೆಯ ಅಕ್ಷರಗಣ ಮಾತ್ರಾಗಣಗಳುಳ್ಳ ಛಂದೋಬದ್ಧ ಕವಿತೆಗಳೂ ಇರುವುವು. ಇದನ್ನು ನೋಡಿದರೆ ಛಂದೋಬದ್ಧ ಕವನಗಳ ಮಾದರಿಯೆಂಬಂತೆ ತೋರುವುದು. ಲೇಖಕರು ತಮ್ಮ ರೂಢವಾದ ಹೆಸರನ್ನು ಕೊಡದೆ ಗೂಢವಾದ ಹೆಸರನ್ನು ಕೊಟ್ಟಿರುವುದರಿಂದಲೂ ತಮ್ಮ ಉದ್ದೇಶ ಮೊದಲಾದುವುಗಳನ್ನು ತಿಳಿಸುವ ಉಪೋದ್ಘಾತವನ್ನು ಬರೆಯದಿರುವುದರಿಂದಲೂ ವಾಚಕರಿಗೆ ಸಂದೇಹಗಳು ತೋರಬಹುದು. ಅವರೂ ಗ್ರಂಥಾಂತದಲ್ಲಿ "ಕವಿತ್ವ ಕವಿ ಸ್ತವನ ಸೂಚನ ಪ್ರಯುತ್ತಾತ್ಮಕಂ ಸಂಸಪದಂ ಸಮಾಪ್ತಂ" ಎಂದು ಹೇಳಿರುವುದನ್ನು ನೋಡಿದರೆ ಕವಿತ್ವ ರೀತಿಯನ್ನೂ ಕವಿಗಳನ್ನೂ ಪ್ರಶಂಸೆ ಮಾಡಲು ಇವರು ಪ್ರಯತ್ನಿಸಿರುವಂತೆ ಸ್ಪಷ್ಟವಾಗುವುದು. ಭಾಷೆಯೂ ಪ್ರಯೋಗಗಳೂ ಕವಿತ್ವ ಸರಣಿಯೂ ಹಳಗನ್ನಡವನ್ನೇ ಆಶ್ರಯಿಸಿರುವುವು. ಕವಿತಾ ಶೈಲಿಯು ನವೀನ ಮಾರ್ಗವನ್ನನುಸರಿಸದೆ ಪ್ರಾಚೀನ ಕವಿ ಮಾರ್ಗವನ್ನನುಸರಿಸಿರುವುದು. ವಿಷಯ ವಿವರಣೆ, ವರ್ಣನಾ ಚಾತುರ್ಯ, ರಸ, ಭಾವ ಮೊದಲಾದುವುಗಳ ವಿಚಾರವು ತೋರುವಂತೆ ಯಾವುದಾದರೂ ಕಥಾ ಭಾಗ, ಚರಿತ್ರಾಂಶ ಮೊದಲಾದುವನ್ನು ತೆಗೆದುಕೊಂಡು ಬರೆದಿದ್ದರೆ ಚೆನ್ನಾಗಿದ್ದಿತು.

ವಾಚಕರಿಗೆ ಈ ಗ್ರಂಥಕರ್ತರು ಅಂತಹ ವಿಷಯಗಳಲ್ಲಿ ಕಾವ್ಯವನ್ನು ಬರೆಯಬೇಕೆಂಬ ಕುತೂಹಲವನ್ನು ಹುಟ್ಟಿಸುತ್ತಿರುವುದು. ಇಂತಹ ಲಕ್ಷಣಬದ್ಧವಾದ ಕವಿತಾ ಗ್ರಂಥಗಳು ಪ್ರಕಟವಾಗುವುದೇ ಭಾಷೆಯ ಏಳ್ಗೆಗೂ ಪ್ರಸರಣೆಗೂ ಅಭ್ಯಾಸಕ್ಕೂ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಎಲ್ಲರೂ ಇದನ್ನೋದಿ ಗ್ರಂಥಕಾರರ ಪಾಂಡಿತ್ಯವನ್ನೂ, ಕವಿತಾ ಚಾತುರ್ಯವನ್ನೂ ಗ್ರಹಿಸಿ ಪ್ರೋತ್ಸಾಹಿಸದಿರಲಾರರೆಂದು ನಂಬುತ್ತೇವೆ.

---

೧೩. ಶ್ರೀ ಧನ್ವಂತರಿ (ಸಂಪುಟ, ಸಂಚಿಕೆ ೪–೫)

ಸಂಪಾದಕರು.—ವಿದ್ವಾನ್ ಕೆ. ಶೇಷಶಾಸ್ತ್ರಿಗಳು, ಶೃಂಗೇರಿ.

ದೊಡ್ಡ ಪುಟಗಳು ೧೬; ಉಡುಪಿ ಪ್ರಭಾಕರ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು; ೧೯೩೮.

ವಾರ್ಷಿಕ ಚಂದಾ ಅಂಚೇ ವೆಚ್ಚ ಸಹಿತ ರೂ. ೩; ಪೋಷಕರಿಗೆ ರೂ. ೫.

ಇದೊಂದು ಪಕ್ಷ ಪತ್ರಿಕೆ. ಇದರಲ್ಲಿ ಆಯುರ್ವೇದ ವೈದ್ಯಶಾಸ್ತ್ರ ವಿಚಾರಗಳನ್ನು ವಿವರಿಸಿದೆ. ಇದರಿಂದ ಅತ್ಯಂತ ಕಾಲದಿಂದಲೂ ಪ್ರಸಿದ್ಧವಾಗಿರುವ ವೈದ್ಯ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಮುಂತಾದ ಅಪೂರ್ವ ವಿಷಯಗಳು ವಾಚಕರ ಅವಗಾಹನೆಗೆ ಬರುವುವಾದ ಕಾರಣ ವೈದ್ಯಶಾಸ್ತ್ರ ಪ್ರಾಗಲ್ಭ್ಯವು ನಮ್ಮವರಲ್ಲಿಯೂ ಹೆಚ್ಚಾಗಿದ್ದುದು ವ್ಯಕ್ತವಾಗುವುದಲ್ಲದೆ ಇದು ಮುಂದೆ ಆ ಮಾರ್ಗವನ್ನನುಸರಿಸಿ ಕೆಲಸ ಮಾಡತಕ್ಕವರಿಗೆ ತಿಳಿವಳಿಕೆಯನ್ನುಂಟುಮಾಡಿ ಸಹಾಯಕವಾಗುವುದು. ವಿಷಯ ವಿವರಣೆಯೇ ಮುಖ್ಯವೆಂಬ ಭಾವನೆಯಿಂದ ಭಾಷೆಯ ಕಡೆಗೆ ಅಷ್ಟು ಲಕ್ಷ್ಯವನ್ನು ಕೊಟ್ಟಂತೆ ಕಾಣುವುದಿಲ್ಲ. ಎಲ್ಲರೂ ಇದಕ್ಕೆ ಗ್ರಾಹಕರಾಗಿ ತಕ್ಕ ಪ್ರೋತ್ಸಾಹವನ್ನು ಕೊಟ್ಟು ನಮ್ಮ ವೈದ್ಯಶಾಸ್ತ್ರದ ಪ್ರಚಾರಕ್ಕೂ ತಿಳಿವಳಿಕೆಗೂ ಸಹಾಯಕರಾಗುವರೆಂದು ಹಾರೈಸುತ್ತೇವೆ.

---

೧೪. ಮೈಸೂರು ದೇಶದ ವಾಸ್ತುಶಿಲ್ಪ

(ಮೊದಲನೆಯ ಭಾಗ)

ಲೇಖಕರು.—ಬಿ. ವೆಂಕೋಬರಾಯರವರು.

ಪ್ರಕಾಶಕರು.—ಕರ್ನಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ಡೆಮ್ಮಿ ಅಷ್ಟಪತ್ರ ಪುಟಗಳು ೮೮; ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಿತವಾಯಿತು; ೧೯೩೮.

ಇದು ಮೈಸೂರು ದೇಶದ ಪುರಾತನ ದೇವಾಲಯಗಳನ್ನು ವರ್ಣಿಸಿರುವ ಪುಸ್ತಕವು. ಇದರಲ್ಲಿ ನಮ್ಮ ದೇಶದ ಅನ್ಯಾದೃಶವಾದ ವಾಸ್ತುಶಿಲ್ಪ ಕಲಾ ಕೌಶಲವನ್ನು ಈಗಲೂ ಪ್ರತ್ಯಕ್ಷವಾಗಿ ತೋರಿಸುತ್ತಿರುವ ಬೇಲೂರು, ಹಳೆಬೀಡು, ಸೋಮನಾಥಪುರ ಮೊದಲಾದ ಅನೇಕ ಸ್ಥಳಗಳಲ್ಲಿರುವ ಪುರಾತನ

ದೇವಾಲಯಗಳ ವಿವರಣೆಯಿದೆ. ಆಯಾ ದೇವಸ್ಥಾನಗಳನ್ನು ವರ್ಣಿಸುತ್ತ ಅಲ್ಲಲ್ಲಿ ಅತ್ಯಂತ ಸುಂದರವಾದ ಅವುಗಳ ಚಿತ್ರವನ್ನೂ ತಳವಿನ್ಯಾಸ, ಚಿತ್ರಪಟ್ಟಿಕೆ, ನವರಂಗ, ಭುವನೇಶ್ವರಿ, ಗೋಪುರ, ವಿಗ್ರಹ ಮೊದಲಾದುವುಗಳ ಅನೇಕ ಚಿತ್ರಗಳನ್ನೂ ಕೊಟ್ಟು ಸಂದರ್ಭಗಳನ್ನು ವಿವರವಾಗಿ ಬರೆದಿದೆ. ಚಿತ್ರಗಳನ್ನು ನೋಡಿ ಓದುವುದರಿಂದ ಆಯಾ ಸ್ಥಳಗಳನ್ನು ಪ್ರತ್ಯಕ್ಷವಾಗಿ ನೋಡಿದಂತೆಯೇ ಆಗುವುದಲ್ಲದೆ ಅಲ್ಲಿಗೆ ಹೋಗಿ ನೋಡಿ ಬರಬೇಕೆಂಬ ಕುತೂಹಲವು ವಾಚಕರಿಗೆ ಉಂಟಾಗುವುದರಲ್ಲಿ ಸಂದೇಹವಿಲ್ಲ. ಈ ಮೊದಲನೆಯ ಭಾಗದಲ್ಲಿ ಹೊಯಿಸಳ ರೀತಿಯ ದೇವಾಲಯಗಳನ್ನು ವರ್ಣಿಸಿರುತ್ತದೆ. ಅಲ್ಲದೆ ಎರಡು ಮೂರನೆಯ ಭಾಗಗಳಲ್ಲಿ ದ್ರಾವಿಡ ರೀತಿ, ಮಹಮ್ಮದೀಯ ಮತ್ತು ಇತರ ರೀತಿಯ ಕಟ್ಟಡಗಳನ್ನು ವರ್ಣಿಸುವುದಾಗಿ ಲೇಖಕರು ಮುನ್ನುಡಿಯಲ್ಲಿ ಸೂಚಿಸಿರುವರು. ಪ್ರಾಚೀನ ಶಿಲ್ಪ ಚಾತುರ್ಯವನ್ನು ಎಲ್ಲರ ಅವಗಾಹನೆಗೆ ತರುವುದಕ್ಕಾಗಿ ಯತ್ನಿಸಿ ಬಹು ಶ್ರಮಪಟ್ಟು ಈ ಕಾರ್ಯವನ್ನು ಕೈಕೊಂಡಿರುವ ಲೇಖಕರ ಅಭಿಪ್ರಾಯವು ಸ್ತುತ್ಯವಾದುದು. ಈ ಉಪಕಾರವನ್ನು ನೆನೆದು ಎಲ್ಲರೂ ಇದನ್ನು ಗ್ರಹಿಸಿ ಓದಿ ಲೇಖಕರ ಶ್ರಮವನ್ನು ಸಾರ್ಥಕಗೊಳಿಸುವರೆಂದು ನಂಬುತ್ತೇವೆ.

---

೧೫. ಮಾಯಾವಿ (ಪತ್ತೇದಾರಿಯ ಕಾದಂಬರಿ)

ಲೇಖಕರು.—ಎಂ. ವೆಂಕಟಾದ್ರಿಶಾಸ್ತ್ರಿಗಳು, ಬೆಂಗಳೂರು.

ಪ್ರಕಾಶಕರು.—ಕೆ. ಮಾಣಿಕಂ ಕಂಪೆನಿಯವರು.

ಕ್ರೌನ್ ಅಷ್ಟಪತ್ರ ಪುಟಗಳು ೨೫೦; ಬೆಂಗಳೂರು ಪ್ರೆಸ್ಸಿನಲ್ಲಿ
ಮುದ್ರಿತವಾಯ್ತು; ೧೯೨೮; ಬೆಲೆ ರೂ. ೧-೧೨-೦.

ಇದು ಶ್ರೀಯುತ ಬಾಬು ಪಾಂಚಕೊರಿದೇ ಎಂಬವರು ಬಂಗಾಳಿಯಲ್ಲಿ ಬರೆದಿದ್ದುದರ ಕನ್ನಡದ ಪರಿವರ್ತನವು. ಇದೊಂದು ಕಟ್ಟುಕಥೆಯಾಗಿ ತೋರುವುದು. ಪರಿವರ್ತನಕಾರರು ಮುನ್ನುಡಿಯಲ್ಲಿ—

"ಇಂತಹ ಪುಸ್ತಕಗಳು ಜನಸಾಮಾನ್ಯರ ವಾಚನಾಭಿರುಚಿಯನ್ನು ವೃದ್ಧಿಗೊಳಿಸುವುದೂ ಅಲ್ಲದೆ ಪ್ರಾಪಂಚಿಕ ವ್ಯವಹಾರದಲ್ಲಿನ ಯುಕ್ತಾಯುಕ್ತ ವಿಚಾರಗಳನ್ನೂ ಸಾಧ್ಯಾಸಾಧ್ಯ ವಿವೇಚನೆಯನ್ನೂ ಅರಿತುಕೊಳ್ಳುವ ಮಟ್ಟಿಗೆ ಜನರ ಮನಶ್ಶಕ್ತಿಯನ್ನು ವಿಕಸನಗೊಳಿಸತಕ್ಕುವಾಗಿಯೂ ಇರುತ್ತವೆ. ....ಈ ಕಥೆಯಲ್ಲಿ ಚಿತ್ರಿತವಾಗಿರುವಂತಹ ಭೀಷಣ ಘಟನಾವಳಿಗಳನ್ನೂ ಅಲೌಕಿಕ ವ್ಯಾಪಾರಗಳನ್ನೂ ಕನ್ನಡಿಗರು ಓದಿ ಅರಿಯರು. ನಿಷ್ಕರುಣೆಯಾದ ಕೊಲೆ ಪಾತಕಿಯ ಸಾಹಸಕಾರ್ಯ ಕೌಶಲಗಳನ್ನೂ, ಕೊಲೆ ಪಾತಕನನ್ನು ಬಹಿರಂಗಪಡಿಸುವುದಕ್ಕೆ ಪ್ರಸಿದ್ಧ ಪತ್ತೇದಾರನಾದ ಅರಿಂದಮನು ಅವಲಂಬಿಸಿದ ರೀತಿ ನೀತಿಗಳನ್ನೂ, ದಸ್ಯು ದಳದವರ ಹತ್ಯಾ ರಹಸ್ಯಗಳನ್ನೂ, ಮಾಯಾವಿನಿಯಾದ ಜುಮೆಲೆಯ ಸಾಹಸ ಪೂರ್ಣವಾದ ಕಪಟಾಚರಣೆಗಳನ್ನೂ ಈ ಕಾದಂಬರಿಯಲ್ಲಿ ಕೌತುಕಪ್ರದವಾಗಿ ಚಿತ್ರಿಸಿ 'ಅಧರ್ಮಕ್ಕೆ ಎಂದಿಗೂ ಜಯವಿಲ್ಲ' ಎಂಬುದನ್ನು ನಿದರ್ಶನಗೊಳಿಸಿದೆ."

ಎಂದು ಬರೆದಿರುವುದರಿಂದ ಗ್ರಂಥದಲ್ಲಿ ವರ್ಣಿತವಾಗಿರುವ ವಿಷಯವೂ ಲೇಖಕರ ಉದ್ದೇಶವೂ ಸ್ಪಷ್ಟವಾಗಬಹುದು. ಪುಸ್ತಕದ ಕಾಗದವೂ ಮುದ್ರಣವೂ ಉತ್ತಮವಾಗಿವೆ; ಮುದ್ರಣದ ಸ್ಖಾಲಿತ್ಯಗಳೂ ಇಲ್ಲ. ವಿಷಯವನ್ನು ವಿವರಿಸಿ ತಿಳಿಸುವುದೇ ಮುಖ್ಯವೆಂದು ಭಾವಿಸಿ ಶಬ್ದಸ್ವರೂಪ, ಶಬ್ದಸೌಷ್ಠವ, ವ್ಯಾಕರಣ ಪ್ರಕ್ರಿಯೆ, ಶೈಲಿ ಮೊದಲಾದ ಭಾಷೆಯ ಸಂಬಂಧದ ಸಂಗತಿಗಳಿಗೆ ಲಕ್ಷ್ಯಕೊಡದೆ ಅನೇಕರು ಬರೆಯುತ್ತಿರುವುದು ವಾಡಿಕೆಯಾಗಿ ಬಂದಿದೆ. ಜಟಿಲಗ್ರಾಮ್ಯನಿಂದಲೂ ವಿಷಯ ವ್ಯಕ್ತತೆಯುಂಟಾಗಬಹುದು. ವಾಚಕರು ಭಾಷಾ ಜ್ಞಾನಾಭಿವೃದ್ಧಿಯನ್ನು ಪಡೆಯುವುದಕ್ಕೆ ಗ್ರಂಥಗಳೇ ಮುಖ್ಯ ಕಾರಣಗಳಾಗಿರುವುದರಿಂದ ಆ ಗ್ರಂಥ ಪಠನೆಯಿಂದ ಭಾಷಾ ಸ್ವರೂಪವು ವ್ಯಕ್ತವಾಗಿ ದೃಢವಾಗುವುದು ಸ್ವಭಾವವಾಗಿದೆ. ಹೀಗೆ ಅವರಲ್ಲಿ ಅಶುದ್ಧ ಭಾಷೆಯು ನೆಲೆಗೊಳ್ಳುವುದಕ್ಕೆ ಮೇಲ್ಪಙ್ಕ್ತಿಯಾಗದಂತೆ ಭಾಷೆಗೂ ವಿಷಯಕ್ಕೂ ನಿಕಟ ಸಂಬಂಧವಿದೆ ಎಂದು ಭಾವಿಸಿ ಭಾಷಾ ಶುದ್ಧತೆಗೆ ಅವಕಾಶವನ್ನು ಕೊಟ್ಟು ವಿಷಯ ವಿವರಣೆಯನ್ನು ಮಾಡುವುದು ಮುಖ್ಯವೂ ಅತ್ಯಾವಶ್ಯಕವೂ ಆಗಿರುತ್ತದೆ. ಇದನ್ನು ಲೇಖಕರೆಲ್ಲರೂ ಆದರಿಸಿ ಗ್ರಂಥಗಳನ್ನು ಬರೆಯುತ್ತ ಹೋದರೆ ವಾಚಕರಿಗೆ ಜ್ಞಾನಾಭಿವೃದ್ಧಿಯನ್ನೂ ಭಾಷಾಭಿವೃದ್ಧಿಯನ್ನೂ ಮಾಡಿದಂತಾಗಿ ಉಪಕಾರವಾಗುವುದು. ಈ ಗ್ರಂಥದಲ್ಲಿ ವಿವರಿಸಿರುವ ವಿಷಯಗಳು ಕನ್ನಡಿಗರಿಗೆ ಅಪೂರ್ವವಾಗಿರುವುದರಿಂದ ಎಲ್ಲರೂ ಇದನ್ನು ಗ್ರಹಿಸಿ ಲೇಖಕರ ಶ್ರಮವನ್ನು ಸಾರ್ಥಕಗೊಳಿಸುವರೆಂದು ಭಾವಿಸುತ್ತೇವೆ.

---

೧೬. ಶ್ರೀ ಜಿನ ವಿಜಯ (ವರ್ಷ ೨೩, ಸಂಚಿಕೆ ೫–೬)

ಸಂಪಾದಕರು.—ಅನಂತ ಆಡಿವಾಜಿ ಮಂಟಗಣೀಕರ,

ಆನರರಿ ಸೂಪರಿಂಟೆಂಡೆಂಟ್, ಜೈನ ಬೋರ್ಡಿಂಗ, ಹುಬ್ಬಳ್ಳಿ.

ಡೆಮ್ಮಿ ಪುಟ ೩೨: ಬೆಳಗಾವಿಯ ಶ್ರೀ ಮಹಾವೀರ ಮುದ್ರಣಾಲಯದಲ್ಲಿ ಮುದ್ರಿತವಾಯ್ತು; ೧೯೨೮; ವರ್ಷಕ್ಕೆ ಚಂದಾ ಅಂಚೆ ವೆಚ್ಚ ಸೇರಿ ರೂ. ೨.

ಇದೊಂದು ಮಾಸಪತ್ರಿಕೆ. ಇದು ದಕ್ಷಿಣ ಮಹಾರಾಷ್ಟ್ರ ಜೈನ ಸಭೆಯಿಂದ ಹೊರಡುತ್ತಿರುವುದು. ಮಹಾರಾಷ್ಟ್ರ ಭಾಷೆಯು ಪ್ರಚುರವಾಗಿ ಹರಡಿಕೊಂಡಿರುವ ದೇಶದಲ್ಲಿ ಈ ಕನ್ನಡದ ಪತ್ರಿಕೆಯು ಹೊರಟು ೨೩ ವರ್ಷಗಳಿಂದಲೂ ಪ್ರಕಟವಾಗುತ್ತಿರುವುದು ಅತ್ಯಾಶ್ಚರ್ಯಕರವಾಗಿರುವುದು. ಇದಕ್ಕಾಗಿ ಸಂಪಾದಕರ ಶ್ರದ್ಧೆಯೂ ಭಾಷಾಭಿಮಾನವೂ ಶ್ರಮೆಯೂ ಎಷ್ಟು ಮಟ್ಟಿನದೆಂದು ಹೇಳಬೇಕಾಗಿಲ್ಲ. ಇದರಲ್ಲಿ ಜೈನಮತಾನುಯಾಯಿಗಳಿಗೆ ಉಪಯುಕ್ತವಾದ ಆವಶ್ಯಕ ವಿಷಯಗಳು ಪ್ರಕಟವಾಗುವುದಾಗಿದ್ದರೂ ಇತರರೂ ಇದರಿಂದ ಅನೇಕ ಸಂಗತಿಗಳನ್ನು ಗ್ರಹಿಸಬಹುದಾಗಿರುವುದು. ೧. ಕೊಲ್ಹಾಪುರ ಸಂಸ್ಥಾನದೊಳಗಿನ ಕನ್ನಡ ಕವಿಗಳು, ೨. ಗುರುವಚನ ಸಾರವು, ೩. ಸಮಾಜದ ಏಳಿಗೆ

ಯೂ ಮಾಡತಕ್ಕ ಕರ್ತವ್ಯವೂ, ೪. ಕರ್ನಾಟಕಕ್ಕೆ ವಿಶ್ವವಿದ್ಯಾಲಯದ ಆವಶ್ಯಕತೆ, ೫. ಸುದಿನಸವು, ೬. ಕರ್ನಾಟಕದ ಸಂಸ್ಕೃತಿಯ ಇಂಗಿತ, ೭. ಸರಸ್ವತಿ—ಈ ವಿವಿಧ ವಿಷಯಗಳು ಪ್ರಕಟವಾಗಿವೆ. ಶೈಲಿಯು ಸುಲಭವಾದ ತಿಳಿಗನ್ನಡವಾಗಿದೆ. ಬಹು ಕಾಲದಿಂದ ನಡೆದುಬರುತ್ತಿರುವ ಈ ಪತ್ರಿಕೆಯನ್ನು ಶಾಶ್ವತಗೊಳಿಸಲು ಎಲ್ಲರೂ ಸಹಾಯಕರಾಗುವರೆಂದು ಆಶಿಸುತ್ತೇವೆ.

೧೭. ಕಿರಾತಾರ್ಜುನೀಯ ಸಾರ

ಲೇಖಕರು.—ಶ್ರೀ ಬಸವರಾಜಶಾಸ್ತ್ರೀ ಮಲ್ಲಿನಾಥಶಾಸ್ತ್ರೀ
ಕೋಡೀ ಕೊಪ್ಪಮಠ.

ಕ್ರೌನ್ ಅಷ್ಟಪತ್ರ ಪುಟಗಳು ೧೬೦; ವಿಜಾಪುರದ ಹಿತಚಿಂತಕ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ
ಮುದ್ರಿತವಾಯ್ತು; ೧೯೨೮; ಬೆಲೆ ರೂ. ೧.

ಇದು ಮಹಾ ಕವಿಯಾದ ಭಾರವಿಯು ಸಂಸ್ಕೃತದಲ್ಲಿ ಬರೆದಿರುವ ಕಿರಾತಾರ್ಜುನೀಯವೆಂಬ ಕಾವ್ಯದ ಸಂಕ್ಷಿಪ್ತವಾದ ಕರ್ನಾಟಕ ಗದ್ಯಾನುವಾದ ಗ್ರಂಥವಾಗಿದೆ. ಇದರ ಕಥೆಯು ಪ್ರಸಿದ್ಧವಾದ ಕಿರಾತಾರ್ಜುನರ ಕಥೆಯಾದರೂ "ಭಾರವೇರರ್ಥ ಗೌರವಂ" ಎಂದರೆ ಭಾರವಿಯ ಕವಿತೆಯಲ್ಲಿ ಅರ್ಥ ಗೌರವವು ಉತ್ಕೃಷ್ಟವಾಗಿರುವುದು ಎಂಬ ಬಿರುದನ್ನು ಹೊಂದಿರುವ ಭಾರವಿಯ ಕಾವ್ಯದಲ್ಲಿಯ ಅರ್ಥ ಗೌರವವನ್ನು ಕನ್ನಡಿಗರಿಗೆ ಪರಿಚಯಮಾಡಿಕೊಡಬೇಕೆಂಬ ಉದ್ದೇಶದಿಂದ ಲೇಖಕರು ಈ ಕಾರ್ಯದಲ್ಲಿ ತೊಡಗಿರುವುದು ಯುಕ್ತವಾಗಿರುವುದು. ಪೀಠಿಕೆಯಲ್ಲಿ ಲೇಖಕರು "ಮೂಲ ಸಂಸ್ಕೃತ ಗ್ರಂಥದಲ್ಲಿ ೧,೪೦೦ ಶ್ಲೋಕಗಳಿವೆ. ಅವುಗಳೊಳಗಿನ ವರ್ಣನ ಪರವಾದ ಶ್ಲೋಕಗಳನ್ನು ಬಿಟ್ಟು ಸಾರತರವಾದ ಮತ್ತು ನೀತಿಬೋಧಕವಾದ ೫೦೦ ಶ್ಲೋಕಗಳನ್ನೇ ಆರಿಸಿಕೊಂಡು ಕನ್ನಡ ಸಂಸ್ಕೃತ ಶಬ್ದಗಳನ್ನು ಅಂದವಾಗಿ ಬೆರಸಿ ನುಡಿಗೆ ಕುಂದುಬರದಂತೆ ಬರೆಯಲು ಪ್ರಯತ್ನಿಸಿದ್ದೇನೆ. ಅಲ್ಲಲ್ಲಿ ಟೀಕಾಕಾರರ ಕೆಲವು ನುಡಿಗಳನ್ನಾದರೂ ದಿಙ್ಮಾತ್ರವಾಗಿ ಉದಾಹರಿಸಿದ್ದೇನೆ. ಇದರಲ್ಲಿ ವೀರ, ಶಾಂತಿ, ಶೃಂಗಾರ, ಭಕ್ತಿ ಮೊದಲಾದ ರಸಗಳೂ, ಉತ್ಕೃಷ್ಟವಾದ ಭಾವಗಳೂ ಎದ್ದಾಗಿ ಮೂಡುವಂತೆ ಪ್ರಯಾಸಪಟ್ಟಿದ್ದೇನೆ" ಎಂದು ಸೂಚಿಸಿರುವರು.

ಒಟ್ಟು ಗ್ರಂಥವನ್ನು ಐದು ಭಾಗವಾಗಿ ವಿಂಗಡಿಸಿರುವುದಲ್ಲದೆ ಕಡೆಯ ಎಂಟು ಪುಟಗಳಲ್ಲಿ ಟಿಪ್ಪಣಿರೂಪವಾದ ಹಾಡುಗಳನ್ನೂ ಪದ್ಯಗಳನ್ನೂ ಸೇರಿಸಿರುತ್ತಾರೆ. ಮಹಾರಾಷ್ಟ್ರ ಪ್ರಚುರ ದೇಶದಲ್ಲಿ ಇಷ್ಟು ಶ್ರದ್ಧೆಯನ್ನು ವಹಿಸಿ ಭಾಷಾಭಿಮಾನದಿಂದ ಕನ್ನಡ ನುಡಿಯಲ್ಲಿ ಗ್ರಂಥವನ್ನು ಪ್ರಕಟಿಸಿರುವುದು ಶ್ಲಾಘ್ಯವಾದ ವಿಷಯ. ಭಾಷಾ ಶೈಲಿ ಮೊದಲಾದುವು ಮೈಸೂರು ದೇಶದ ಶೈಲಿಗೆ ಸ್ವಲ್ಪ ಭಿನ್ನವಾಗಿದ್ದರೂ ತಿಳಿಯುವುದಕ್ಕನುಕೂಲವಾಗಿದೆ. ಎಲ್ಲರೂ ಈ ಗ್ರಂಥವನ್ನೋದಿ ಪ್ರೋತ್ಸಾಹಿಸುವರೆಂದು ಭಾವಿಸುತ್ತೇವೆ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ

ಪ್ರಭವ ಸಂವತ್ಸರದ ವರದಿ

೧೯೨೮

ಶ್ರೀಃ

ಕರ್ಣಾಟಕ ಸಾಹಿತ್ಯ ಪರಿಷತ್ತು

ಪ್ರಭವ ಸಂವತ್ಸರದ ವರದಿ

೧. ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕಾಧಿವೇಶನವು ಸಾಮಾನ್ಯವಾಗಿ ಕರ್ಣಾಟಕ ಸಾಹಿತ್ಯ ಸಮ್ಮೇಳನ ಕಾಲದಲ್ಲಿ ನಡೆಯಬೇಕೆಂಬ ನಿಬಂಧನೆಯಿರುವುದರಿಂದಲೂ ವಾರ್ಷಿಕಾಧಿವೇಶನಕ್ಕೆ ಮುಂಚೆಯೇ ಸಮ್ಮೇಳನದ ಮುಂದೆ ವಾರ್ಷಿಕ ವರದಿಯನ್ನು ಓದುವ ವಾಡಿಕೆಯು ಬಿದ್ದಿರುವುದರಿಂದಲೂ ಈ ವರದಿಯನ್ನು ಈ ಸಭೆಯಲ್ಲಿ ತಮಗೆ ಅರ್ಪಿಸುವುದಕ್ಕೆ ಮುಂಚೆ ಯಾವ ಕರ್ಣಾಟಕ ಪ್ರಾಂತದಲ್ಲಿ ಕರ್ಣಾಟಕ ಭಾಷಾಭಿಮಾನಿಗಳು ಈ ಸಮ್ಮೇಳನವನ್ನು ತಮ್ಮ ಕೇಂದ್ರ ಸ್ಥಾನದಲ್ಲಿ ನೆರೆಯಿಸಲು ಪರಿಷತ್ತಿಗೆ ಆಹ್ವಾನವನ್ನು ಕೊಟ್ಟಿರುವರೋ ಅವರಿಗೆ ಧನ್ಯವಾದಗಳನ್ನು ಈ ಮೂಲಕ ವ್ಯಕ್ತಗೊಳಿಸುವುದು ಪರಿಷತ್ತಿನ ಕರ್ತವ್ಯವು. ಕರ್ಣಾಟಕ ಮಂಡಲವು ಹಲವು ಕಾರಣಗಳಿಂದ ಒಡೆದು ಐದಾರು ಮುರುಕುಗಳಾಗಿ ಈ ಮುರುಕುಗಳಿಗೆ ಪರಸ್ಪರ ಸಂಪರ್ಕವಿಲ್ಲದೆ ಕನ್ನಡಿಗರೆಲ್ಲರೂ ಕರ್ಣಾಟಕ ಭಾಷಾ ಮಾತೆಯೊಬ್ಬಳ ಮಕ್ಕಳಾಗಿದ್ದರೂ ಅವರಲ್ಲಿ ಪಾರ್ಥಕ್ಯಭಾವವು ಕಾಣಬರುತ್ತಿದ್ದುದು ಸಹಜ. ಈಗ ಅದು ಕಡಿಮೆಯಾಗುತ್ತ ಬರುತ್ತಿರುವುದು ಶುಭ ಸೂಚನೆ. ಮುಂದೆ ಈ ಭೇದ ಭಾವವು ಸಂಪೂರ್ಣವಾಗಿ ಅಳಿಸಿಹೋಗಿ ಕನ್ನಡಿಗರೆಲ್ಲರೂ ಒಬ್ಬ ತಾಯ ಮಕ್ಕಳು, ಒಂದು ಮನೆತನದವರು, ಎಂಬ ಭಾವನೆ ಹುಟ್ಟುವುದರಲ್ಲಿ ಸಂಶಯವಿಲ್ಲ. ಕಾಲಗತಿಗಳೂ ಆ ಪ್ರಕಾರವಾಗಿಯೇ ಇವೆ. ಈ ಬಗೆಯ ಪರಸ್ಪರ ಸೌಹಾರ್ದದ ಆವಿರ್ಭಾವಕ್ಕೆ ನಮ್ಮಾ ಕರ್ಣಾಟಕ ಸಾಹಿತ್ಯ ಪರಿಷತ್ತು ಸ್ವಲ್ಪ ಮಟ್ಟಿಗೆ ಕಾರಣವೆಂಬುದನ್ನು ತಿಳಿಸಲು ನಮಗೆ ಸಂತೋಷ. ಹೇಗೆಂದರೆ, ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರತಿವರ್ಷವೂ ಕರ್ಣಾಟಕ ಸಾಹಿತ್ಯ ಸಮ್ಮೇಳನವು ಕರ್ಣಾಟಕದ ಬೇರೆ ಬೇರೆ ಪ್ರಾಂತಗಳಲ್ಲೆಲ್ಲಾದರೂ ಒಂದು ಕಡೆ ನೆರೆಯುವುದರಿಂದ ಕರ್ಣಾಟಕ ಭಾಷಾಭಿಮಾನಿಗಳು ಎಲ್ಲ ಕಡೆಗಳಿಂದ ಬಂದು ಒಂದೆಡೆ ಸೇರಿ ಮೂರು ನಾಲ್ಕು ದಿವಸಗಳು ಬೆಳಗ್ಗೆ, ಸಂಜೆ, ಇರುಳು ಅವರ ಭಾವ ವಿನಿಮಯಕ್ಕೆ ಅವಕಾಶವುಂಟಾಗಿ ಇದರಿಂದ ಜನಿಸಿದ ಪರಸ್ಪರ ಪರಿಚಯವು ಬಲಿತು ಧೃಡವಾಗಿರುವ ವಿಷಯವು ಇಲ್ಲಿ ನೆರೆದಿರುವ ಸಭ್ಯರನೇಕರಿಗೆ ತಿಳಿದೇ ಇರುವುದು. ಕರ್ಣಾಟಕ ಸಾಹಿತ್ಯ

ಸಮ್ಮೇಳನವು ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ಏಳು ಸಲವೂ, ಮುಂಬಯಿ ಕರ್ನಾಟಕದಲ್ಲಿ ಮೂರು ಬಾರಿಯೂ, ಮದರಾಸು ಕರ್ನಾಟಕದಲ್ಲಿ ಮೂರಾವೃತ್ತಿಯೂ ನಡೆದಿರುವುದರಿಂದ ಈ ಕರ್ನಾಟಕ ಪ್ರಾಂತಗಳ ಪಂಡಿತರುಗಳಿಗೂ ಮತ್ತು ಕರ್ನಾಟಕ ಭಾಷಾಭಿಮಾನಿಗಳಿಗೂ ಪರಸ್ಪರ ಪರಿಚಯವಾಗಿರುತ್ತದೆ. ನಿಜಾಂ ಕರ್ನಾಟಕ, ಮುಂಬಯಿ ಉತ್ತರ ಕನ್ನಡ ಜಿಲ್ಲೆ, ಕೊಡಗು ಸೀಮೆ ಈ ಪ್ರಾಂತಗಳಲ್ಲಿ ಸಮ್ಮೇಳನವು ಕೂಡಲು ಇದುವರೆಗೆ ಅವಕಾಶ ದೊರೆಯಲಿಲ್ಲ. ಈ ಸಾರಿ ನಮ್ಮ ಪುಣ್ಯೋದಯದಿಂದ ನಿಜಾಂ ಕರ್ನಾಟಕದ ಕಲ್ಬುರ್ಗಿಯ ಕರ್ನಾಟಕ ಸಂಘದವರು ಪರಿಷತ್ತಿಗೆ ಆಹ್ವಾನವನ್ನು ಕೊಟ್ಟು ಈ ಸಮ್ಮೇಳನವನ್ನು ನಡೆಯಿಸುವ ಕಾರ್ಯವನ್ನು ಕೈಕೊಂಡುದಕ್ಕಾಗಿ ಪರಿಷತ್ತು ಆ ಸಂಘದವರನ್ನು ಬಹಳವಾಗಿ ಕೊಂಡಾಡಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ. ಮುಂದಣ ಎರಡು ವರ್ಷಗಳಲ್ಲಿ ಸಮ್ಮೇಳನವು ಉಳಿದಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಕೊಡಗು ಸೀಮೆಯಲ್ಲಿಯೂ ಅಲ್ಲಿಯ ಕರ್ನಾಟಕ ಭಾಷಾಭಿಮಾನಿಗಳ ಉತ್ಸಾಹ ಔದಾರ್ಯಗಳಿಂದ ನೆರೆಯುವ ಪಕ್ಷಕ್ಕೆ ಕರ್ನಾಟಕ ಮಂಡಲದ ಮುಖ್ಯ ಪ್ರದೇಶಗಳಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನದ ಪರ್ಯಟನವು ಒಂದು ಸಾರಿ ಮುಗಿದಂತೆ ಆಗುವುದು. ಈ ನಮ್ಮ ಕೋರಿಕೆಯು ನೆರವೇರುವುದೆಂಬ ಭರವಸೆಯು ನಮಗುಂಟು. ಏಕೆಂದರೆ, ಒಳ್ಳೆಯ ಎಣಿಕೆಗಳು ಸಿದ್ಧಿಸಲೇ ಬೇಕು.

ಈ ಮಹಾ ಸಭೆಯಲ್ಲಿ ನೆರೆದಿರುವ ನಮ್ಮ ದೇಶಬಾಂಧವರೇ, ಕರ್ನಾಟಕ ಭಾಷಾ ಮಾತೆಯ ಮಕ್ಕಳಾದುದರಿಂದ ನಮ್ಮ ಒಡಹುಟ್ಟಿದವರೇ, ಇನ್ನು ಪರಿಷತ್ತಿನ ಪ್ರಭವ ಸಂವತ್ಸರದ ವಾರ್ಷಿಕ ವರದಿಯನ್ನು ಆರಂಭಿಸುವ.

ಸಾಹಿತ್ಯ ಪರಿಷತ್ತಿನ ಅಕ್ಷಯ ಸಂವತ್ಸರದ ವರದಿಯಲ್ಲಿ ''ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಹನ್ನೆರಡು ವರ್ಷ ವಯಸ್ಸು ತುಂಬಿತು ಈ ಮೇ ತಿಂಗಳಿಗೆ. ಆದರೂ ಶೈಶವಾವಸ್ಥೆಯಲ್ಲಿಯೇ ಇದ್ದುಕೊಂಡು ಅದು ಈಗತಾನೆ ನೆಟ್ಟಗೆ ನಿಂತುಕೊಳ್ಳುವುದಕ್ಕೆ ಪ್ರಾರಂಭವಾಗಿದೆ'' ಎಂದು ವಿಜ್ಞಾಪಿಸಿದೆವು. ಆದುದರಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಈ ಮೇ ತಿಂಗಳಿಗೆ ಹದಿಮೂರು ತುಂಬಿತು. ಹನ್ನೆರಡು ವಯಸ್ಸಿಗೆ ಸಾಹಿತ್ಯ ಪರಿಷತ್ತು ನೆಟ್ಟಗೆ ನಿಂತುಕೊಳ್ಳುವುದಕ್ಕೆ ಮಾತ್ರ ಪ್ರಾರಂಭವಾಗಿದೆ, ಎಂದು ಹೇಳಿದ ಮೇಲೆ ಹದಿಮೂರು ವಯಸ್ಸಿಗೆ ಪರಿಷತ್ತು ಓಡಲಾರಂಭಿಸಿದೆ, ಎಂದು ಹೇಳಲಾದೀತೆ. ನೆಟ್ಟಗೆ ನಿಂತುಕೊಂಡು, ಹೆಜ್ಜೆಯಿಡುವುದನ್ನು ಕಲಿತು, ತರುವಾಯ ನಡೆಯುವುದಕ್ಕಾರಂಭಿಸಿ ಅನಂತರ ಓಡುವುದನ್ನು ಕಲಿಯಬೇಕಲ್ಲವೇ ? ಪರಿಷತ್ತು ಇನ್ನೂ ಶೈಶವಾವಸ್ಥೆಯಲ್ಲಿರುವುದಕ್ಕೆ ಅಕ್ಷಯ ಸಂವತ್ಸರದ ವರದಿಯಲ್ಲಿ ಕಾರಣವನ್ನು ತಿಳಿಸಿದುದಾಯಿತು. ಅದೇನಂದರೆ, ಪರಿಷತ್ತಿಗೆ ಪೋಷಣೆ ಸಾಲದೆ ಇರುವುದು. ಪರಿಷತ್ತಿನ ಸದಸ್ಯರುಗಳ ಸಂಖ್ಯೆ ಹೆಚ್ಚಾಗಿ ಪರಿಷತ್ತಿನ ವರಮಾನವು ಹೆಚ್ಚಬೇಕು. ಅಕ್ಷಯ ಸಂವತ್ಸರಾಂತ್ಯದಲ್ಲಿ ಪರಿಷತ್ತಿನ ಸದಸ್ಯರ ಸಂಖ್ಯೆ ೧೪೮; ಪ್ರಭವ ಸಂವತ್ಸರಾಂತ್ಯದಲ್ಲಿ ೧೪೯. ಅಕ್ಷಯ ಸಂವತ್ಸರದ ವರದಿಯಲ್ಲಿ ಪರಿಷತ್ತಿನ ಸದ

ಸ್ಯರ ಸಂಖ್ಯೆಯ ಪಟ್ಟಿಯು ಒಂದು ಮೈಲಿಯನ್ನು ಬೆಳೆಯಬೇಕೆಂಬುದು ನಮ್ಮ ಆಶಯವೆಂದು ತಿಳಿಸಿದೆವು. ಇದರ ಮೇಲೆ ಕಂಡಂತೆ ಸದಸ್ಯರ ಸಂಖ್ಯೆಯು ಇಳಿಯುತ್ತ ಹೋದರೆ ಸದಸ್ಯರ ಪಟ್ಟಿಯು ದೀರ್ಘವಾಗುವುದೋ ಅಥವಾ ಹ್ರಸ್ವವಾಗುವುದೋ ತಾವೇ ಆಲೋಚಿಸಬಹುದು. ಇದು ಅತ್ಯಂತ ಶೋಚನೀಯವಾದುದೆಂಬ ವಿಷಯವನ್ನು ನಮ್ಮ ಮುಂದೆ ಒತ್ತಿ ಹೇಳಬೇಕಾದುದಿಲ್ಲ. ಆದುದರಿಂದ ಕರ್ಣಾಟಕ ಭಾಷೆಯಲ್ಲಿ ಅಭಿಮಾನವುಳ್ಳ ಮಹಾ ಜನರೆಲ್ಲರೂ ಪರಿಷತ್ತಿನ ಏಳಿಗೆಯ ವಿಷಯದಲ್ಲಿ ಬದ್ಧಾದರರಾಗಿ ಆದಷ್ಟು ಹೆಚ್ಚು ಸದಸ್ಯರನ್ನು ಸಂಪಾದಿಸಿಕೊಟ್ಟು ನಮ್ಮೆಲ್ಲರ ಕಾರ್ಯವೂ ನೆರವೇರುವುದಕ್ಕೆ ಸಹಾಯಕರಾಗಬೇಕೆಂಬುದು ನಮ್ಮ ಸವಿನಯ ಪ್ರಾರ್ಥನೆ.

ಈ ಸಂದರ್ಭದಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣರಾದ ಘನವನ್ನು ಹೊಂದಿದ ಮೈಸೂರು ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಮೈಸೂರು ಸರ್ಕಾರದವರೂ ಪರಿಷತ್ತಿನ ಏಳಿಗೆಯ ವಿಚಾರದಲ್ಲಿ ಎಂದಿನಂತೆ ತಮ್ಮ ಉತ್ಸಾಹವನ್ನೂ ಉದಾರಭಾವವನ್ನೂ ತೋರಿಸುತ್ತಿರುವುದಕ್ಕಾಗಿ ಅವರಿಗೆ ಪರಿಷತ್ತು ಚಿರ ಕೃತಜ್ಞತಾ ಭಾವವನ್ನು ತೋರಿಸುವುದಲ್ಲದೆ ಈ ಸಭೆಯಲ್ಲಿ ಸಮ್ಮೇಳನದ ವಂದನೆಗಳನ್ನು ಘಂಟಾಘೋಷವಾಗಿ ಅವರುಗಳಿಗೆ ಅರ್ಪಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

ಮೈಸೂರು ಸರ್ಕಾರದಿಂದ ಪರಿಷತ್ತಿಗೆ ತಿಂಗಳೊಂದಕ್ಕೆ ಸಲ್ಲುತ್ತಿರುವ ೧೨೫ ರೂ. ಮಾಸಾಶನವು ಇದೇ ಇಸವಿ ಜೂನ್ ತಿಂಗಳ ಕೊನೆಗೆ ನಿಲ್ಲುತ್ತದೆಯಾದುದರಿಂದ ಈ ಮಾಸಾಶನವನ್ನು ಹೆಚ್ಚಿಸಿ ಕನಿಷ್ಠಪಕ್ಷ ವರ್ಷಕ್ಕೆ ೨,೦೦೦ ರೂಪಾಯಿ ವರ್ಷಾಶನವನ್ನು ಸದ್ಯಕ್ಕೆ ಮುಂದೆ ಐದು ವರ್ಷಗಳ ಕಾಲ ನಡೆಯಿಸಿಕೊಡಬೇಕೆಂದು ಮೈಸೂರು ಸರ್ಕಾರಕ್ಕೆ ಬಿನ್ನಹಮಾಡಿಕೊಂಡಿದೆ. ನಮ್ಮ ಪ್ರಾರ್ಥನೆಯು ಸಿದ್ಧಿಸುವುದೆಂದು ಕೋರಿದೆ.

೨. ಕಾರ್ಯ ನಿರ್ವಾಹಕ ಮಂಡಲಿ.—ಕಳೆದ ವರ್ಷ (೧೯೨೭) ಮೇ ತಿಂಗಳು ಮಂಗಳೂರಿನಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಜೊತೆಗೆ ಪರಿಷತ್ತಿನ ವಾರ್ಷಿಕ ಸಾಮಾನ್ಯಾಧಿವೇಶನವು 'ಕೋರಂ' ಸಾಲದೆ ನಡೆಯದೆ ಹೋದುದರಿಂದ ಆಗಸ್ಟು ತಿಂಗಳು ೨೮ನೆಯ ತಾರೀಖಿನ ದಿವಸ ಬೆಂಗಳೂರಿನಲ್ಲಿ ನಡೆಯಿತು. ಆಗ ಮೈಸೂರು ಪ್ರಾಂತಕ್ಕೆ ಮಾತ್ರ ಪ್ರಭವ ಸಂವತ್ಸರದ ಕಾರ್ಯನಿರ್ವಾಹಕ ಮಂಡಲಿಗೆ ಕೆಳಗೆ ಕೊಟ್ಟಿರುವ ಸದಸ್ಯರುಗಳನ್ನು ಚುನಾಯಿಸಲಾಯಿತು.

೧. ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹಾದ್ದೂರ್ ಮ|| ರಾ|| ರಾ. ನರಸಿಂಹಾಚಾರ್ಯರು, ಎಂ.ಎ.
೨. ಮ|| ರಾ|| ಸಿ. ಕೆ. ವೆಂಕಟರಾಮಯ್ಯನವರು, ಎಂ.ಎ., ಎಲ್‌ಎಲ್.ಬಿ.
೩. ,, ಟಿ. ಅಪ್ಪೂರಾಯರು, ಬಿ.ಎ., ಬಿ.ಎಲ್.
೪. ,, ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ.

೫. ಮ|| ರಾ|| ತಿ. ತಾ. ಶರ್ಮರವರು.
೬. ,, ಕೆ. ಸಂಪದ್ಗಿರಿರಾಯರು, ಎಂ.ಎ.
೭. ,, ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರು, ಎಂ.ಎ.
೮. ರಾವ್ ಬಹಾದ್ದೂರ್ ಡಾಕ್ಟರ್ ಸಿ. ಬಿ. ರಾಮರಾಯರು, ಬಿ.ಎ., ಎಂ.ಡಿ.
೯. ರಾಜಕವಿಭೂಷಣ ಮ|| ರಾ|| ಎಚ್. ಲಿಂಗರಾಜ ಅರಸಿನವರು.
೧೦. ಮ|| ರಾ|| ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ.
೧೧. ,, ಬಿ. ಐ. ಶಾಮರಾಯರು.
೧೨. ,, ಡಿ. ಕೊಂಗಾಡಿಯಪ್ಪನವರು.

ಮುಂಬಯಿ, ಮದರಾಸು, ನಿಜಾಂ ಕರ್ಣಾಟಕ, ಕೊಡಗು ಈ ಪ್ರಾಂತಗಳ ಸದಸ್ಯರಾರೂ ಅಧಿವೇಶನಕ್ಕೆ ಬಂದಿರಲಿಲ್ಲವಾದಕಾರಣ ಆ ಪ್ರಾಂತಗಳ ಪ್ರತಿನಿಧಿಗಳಾಗಿ ಅಕ್ಷಯ ಸಂವತ್ಸರಕ್ಕೆ ಸದಸ್ಯರಾಗಿದ್ದವರೇ ಪ್ರಥಮ ಸಂವತ್ಸರಕ್ಕೂ ಸದಸ್ಯರಾಗಿರತಕ್ಕದೆಂದು ತೀರ್ಮಾನವಾಯಿತು. ಅವರ ಹೆಸರುಗಳನ್ನು ಕೆಳಗೆ ಕೊಟ್ಟಿದೆ.

ಮುಂಬಯಿ ಪ್ರಾಂತಕ್ಕೆ

೧. ಮ|| ರಾ|| ಕೌಜಲಗಿ ಶ್ರೀನಿವಾಸರಾಯರು, ಬಿ.ಎ., ಎಲ್ಎಲ್.ಬಿ. (ಬಿಜಾಪುರ).
೨. ರಾವ್ ಸಾಹೇಬ್ ಮ|| ರಾ|| ಪಿ. ಜಿ. ಹಳಕಟ್ಟಿ, ಬಿ.ಎ., ಎಲ್ಎಲ್.ಬಿ. (ಬಿಜಾಪುರ).
೩. ಮ|| ರಾ|| ಕೃಷ್ಣಾಜಿ ಹನುಮಂತ ಮುದವೇಡಕರ್ (ಧಾರವಾಡ).
೪. ,, ಎಸ್. ಕೆ. ಹುಯಿಲಗೋಳ್, ಬಿ.ಎ., ಎಲ್ಎಲ್.ಬಿ. (ಗದಗ).
೫. ,, ಕೆ. ಜಿ. ಗೆಜ್ಜಿ, ಬಿ.ಎ., ಎಲ್ಎಲ್.ಬಿ. (ಬೆಳಗಾಂವಿ).
೬. ,, ವಿ. ಬಿ. ಆಲೂರ್, ಬಿ.ಎ., ಎಲ್ಎಲ್.ಬಿ. (ಧಾರವಾಡ).
೭. ,, ಆರ್. ಎ. ಜಹಗೀರದಾರ್, ಎಂ.ಎ., ಎಲ್ಎಲ್.ಬಿ. (ಮುಂಬಯಿ).
೮. ,, ರಂಗಪ್ಪ ಭೀಮಪ್ಪ ಪೋದ್ದಾರ್, ಬಿ.ಎ. (ಧಾರವಾಡ).
೯. ,, ಕೆ. ಜಿ. ಕುಂದಣಗಾರ್, ಎಂ.ಎ. (ಕೊಲ್ಹಾಪುರ).

ಮದರಾಸು ಪ್ರಾಂತಕ್ಕೆ

೧. ಮ|| ರಾ|| ಬೆನಗಲ್ ರಾಮರಾಯರು, ಎಂ.ಎ., ಎಲ್ಎಲ್.ಬಿ. (ಮದರಾಸು).
೨. ,, ಎನ್. ರಾಜಗೋಪಾಲಕೃಷ್ಣರಾಯರು, (ಉಡುಪಿ).
೩. ,, ಎಚ್. ತಿಮ್ಮಕೃಷ್ಣರಾಯರು, ಬಿ.ಎ., ಬಿ.ಎಲ್. (ಬಳ್ಳಾರಿ).
೪. ,, ಕೆ. ಟಿ. ಶ್ರೀನಿವಾಸಾಚಾರ್ಯರು, ಬಿ.ಎ., ಎಲ್ಎಲ್.ಬಿ. (ಬಳ್ಳಾರಿ).

೫. ಮ॥ ರಾ॥ ಪಿ. ವೆಂಕೋಬಾಚಾರ್ಯರು, ಎಂ.ಎ., ಎಲ್‌ಎಲ್.ಬಿ. (ಬಳ್ಳಾರಿ).

ಹೈದರಬಾದು ಸಂಸ್ಥಾನಕ್ಕೆ

೧. ಮ॥ ರಾ॥ ಕೃಷ್ಣರಾವ್ ಕಪಟ್ರಾಳ್, ಪ್ಲೀಡರ್ (ಗುಲ್ಬರ್ಗ).

ಉತ್ತರ ಕರ್ಣಾಟಕಕ್ಕೆ

೧. ಮ॥ ರಾ॥ ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿ (ಬನಹಟ್ಟಿ).
೨. ,, ಗಂಗಾಧರಪ್ಪ ಸಂಗಪ್ಪ ಸಾಬೋಜಿ (ಥಲಕವಾಡಿ).

ಕೊಡಗಿಗೆ

೧. ಮ॥ ರಾ॥ ಎನ್. ಆರ್. ಸುಬ್ಬಣ್ಣಯ್ಯನವರು (ಸಿಡತ).

೩. ಅಧಿವೇಶನಗಳು.—ಮೇಲೆ ತಿಳಿಸಿದಂತೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪ್ರಥಮ ಸಂವತ್ಸರದ ವಾರ್ಷಿಕಾಧಿವೇಶನವು ೧೯೨೭ನೆಯ ಇಸವಿ ಆಗಸ್ಟು ತಿಂಗಳು ೨೮ನೆಯ ತಾರೀಖಿನ ದಿವಸ ಬೆಂಗಳೂರು ಶಂಕರಪುರದಲ್ಲಿರುವ ಪರಿಷನ್ಮಂದಿರದಲ್ಲಿ ಕೂಡಿತು.

ಈ ವರುಷ ನಡೆದ ಕಾರ್ಯನಿರ್ವಾಹಕ ಮಂಡಲಿಯ ಅಧಿವೇಶನಗಳು ೪. (೧೯೨೭ನೆಯ ಮೇ ೫, ಜುಲೈ ೨೯, ಅಕ್ಟೋಬರು ೩೦, ೧೯೨೮ನೆಯ ಮಾರ್ಚಿ ೧೧.) ಈ ಅಧಿವೇಶನಗಳಿಗೆ ಬಂದಿದ್ದ ಸದಸ್ಯರ ಹೆಸರು ಮತ್ತು ಸಂಖ್ಯೆ :—

ಉಪಾಧ್ಯಕ್ಷರು ೩, ಗೌರವ ಕಾರ್ಯದರ್ಶಿಗಳು ४, ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹಾದ್ದೂರ್ ಮ॥ ರಾ॥ ನರಸಿಂಹಾಚಾರ್ಯರು ೧, ಮ॥ ರಾ॥ ಸಿ. ಕೆ. ವೆಂಕಟರಾಮಯ್ಯನವರು ೩, ಮ॥ ರಾ॥ ಟಿ. ಅಪ್ಪೂರಾಯರು ೩, ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯನವರು ೨, ಮ॥ ರಾ॥ ತಾತಾಚಾರ್ಯಶರ್ಮರವರು ೪, ಮ॥ ರಾ॥ ಕೆ. ಸಂಪದ್ಗಿರಿರಾಯರು ೨, ರಾವ್ ಬಹಾದ್ದೂರ್ ಡಾಕ್ಟರು ಸಿ. ಬಿ. ರಾಮರಾಯರು ೩, ಮ॥ ರಾ॥ ಕೆ. ಕೃಷ್ಣಯ್ಯಂಗಾರ್ಯರು ೨, ಮ॥ ರಾ॥ ಡಿ. ಕೊಂಗಾಡಿಯಪ್ಪನವರು ೨.

೪. ಸದಸ್ಯರು.—ಪ್ರಥಮ ಸಂವತ್ಸರಾಂತದಲ್ಲಿದ್ದ ಸದಸ್ಯರ ಸಂಖ್ಯೆ ಮೊದಲಾದುವು :—

ತರಗತಿ	ಸದಸ್ಯರ ಸಂಖ್ಯೆ	ಈ ವರುಷ ವಸೂಲಾದ ಚಂದಾ ಹಣ ರೂ. ಆ. ಪೈ.	ಬಾಕಿ ಬರಬೇಕಾದ ಚಂದಾ ಹಣ ರೂ. ಆ. ಪೈ.
* ಪ್ರದಾತೃಗಳು	೧	..	೨೪೦೦—೦—೦
ಸಹಾಯಕರು	೨೪	೨೯—೦—೦	೧೪೨೪—೦—೦

* ಇವರು ಸಾಧಾರಣ ಸದಸ್ಯರಾಗಿಯೂ ಇರುವರು.

ತರಗತಿ	ಸದಸ್ಯರ ಸಂಖ್ಯೆ	ಈ ವರುಷ ವಸೂಲಾದ ಚಂದಾ ಹಣ ರೂ. ಆ. ಪೈ.	ಬಾಕಿ ಬರಬೇಕಾದ ಚಂದಾ ಹಣ ರೂ. ಆ. ಪೈ.
ಆಜೀವ ಸದಸ್ಯರು	೭೮	೭೦—೦—೦	೩೯೬-೧೨—೦
ಸಾಧಾರಣ ಸದಸ್ಯರು	೬೧	೨೫೨—೦—೦	೫೪೮—೦—೦
ಒಟ್ಟು	೧೪೫	೩೪೭—೦—೦	೧,೫೮೯-೧೨—೦

ಪ್ರಭವ ಸಂವತ್ಸರದಲ್ಲಿ ಆಜೀವ ಸದಸ್ಯರಿಬ್ಬರು ದೈವಾಧೀನರಾದರು. ಹೊಸದಾಗಿ ಇಬ್ಬರು ಸಾಧಾರಣ ಸದಸ್ಯತ್ವದಿಂದ ವರ್ಗವನ್ನು ಬದಲಾಯಿಸಿಕೊಂಡರು. ಒಬ್ಬರು ರಾಜೀನಾಮೆಯನ್ನು ಕೊಟ್ಟರು. ಸಾಧಾರಣ ಸದಸ್ಯರಲ್ಲಿ ಒಬ್ಬರು ರಾಜೀನಾಮೆಯನ್ನು ಕೊಟ್ಟರು. ಇಬ್ಬರು ವರ್ಗವನ್ನು ಬದಲಾಯಿಸಿಕೊಂಡರು. ಒಬ್ಬರು ಹೊಸದಾಗಿ ಸೇರಿದರು.

೫. ಸಂಪಾದಕ ಮಂಡಲಿ.—ಪ್ರಭವ ಸಂವತ್ಸರಕ್ಕೆ ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯನ್ನು ೧೯೨೭ನೆಯ ಅಕ್ಟೋಬರು ಮಾಹೆ ೩೦ನೆಯ ತಾರೀಖಿನಲ್ಲಿ ನಡೆದ ಕಾರ್ಯನಿರ್ವಾಹಕ ಮಂಡಲಿಯ ಅಧಿವೇಶನದಲ್ಲಿ ಈ ಕೆಳಗೆ ಕಂಡ ಮಹನೀಯರನ್ನು ಚುನಾಯಿಸಲಾಯಿತು:—

೧. ಮ॥ ರಾ॥ ತಿ. ತಾ. ಶರ್ಮರವರು (ಬೆಂಗಳೂರು)
೨. ,, ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ. (ಬೆಂಗಳೂರು)
೩. ,, ಸಿ. ಕೆ. ವೆಂಕಟರಾಮಯ್ಯನವರು, ಎಂ.ಎ., ಎಲ್‌ಎಲ್.ಬಿ. (ಬೆಂಗಳೂರು)
೪. ,, ಆರ್ಕಾಟು ಭೀಮಾಚಾರ್ಯರು, ಎಂ.ಎ., ಎಲ್.ಟಿ. (ಬಳ್ಳಾರಿ)
೫. ,, ಪ್ರಭಾಕರ ಪೂಜಾರ ಮಹಾದೇವಶಾಸ್ತ್ರಿಗಳು (ಧಾರವಾಡ)
೬. ,, ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ. (ಮೈಸೂರು)
೭. ,, ಬಿ. ವೆಂಕಟನಾರಾಯಣಪ್ಪನವರು, ಎಂ.ಎ., ಗೌ॥ ಕೋಶಾಧ್ಯಕ್ಷರು (ಬೆಂಗಳೂರು)
೮. ,, ನಂ. ವೆಂಕಟೇಶಯ್ಯಂಗಾರ್ಯರು, ಬಿ.ಎ., ಗೌ॥ ಕಾರ್ಯದರ್ಶಿ ,,

೬. ಪರಿಷತ್ತಿನ ವಾಙ್ಮಯ ಕಾರ್ಯ ವಿಚಾರ.—

(೧) **ಪರಿಷತ್ಪತ್ರಿಕೆ.**—ಪರಿಷತ್ಪತ್ರಿಕೆಯನ್ನು ಕೈಯಲ್ಲಾದ ಮಟ್ಟಿಗೆ ಸಕಾಲದಲ್ಲಿ ಪ್ರಕಟಿಸುವುದಕ್ಕೆ ಅಕ್ಷಯ ಸಂವತ್ಸರಕ್ಕಿಂತಲೂ ಹೆಚ್ಚು ಅನುಕೂಲವು ದೊರಕಿತು. ಲೇಖನಗಳ ಅಭಾವವು ಅಷ್ಟೇನೂ ವಿಶೇಷವಾಗಿ ಕಂಡುಬರಲಿಲ್ಲ. ಚೈತ್ರಮಾಸದ ಸಂಚಿಕೆಯನ್ನು ಪುಷ್ಯಮಾಸದಲ್ಲಿಯೂ, ಆಷಾಢ ಮಾಸದ ಪತ್ರಿಕೆಯನ್ನು ಮಾಘ ಮಾಸದಲ್ಲಿಯೂ, ಆಶ್ವಯುಜ ಮಾಸದ ಪತ್ರಿಕೆಯನ್ನು ಫಾಲ್ಗುಣ ಮಾಸದಲ್ಲಿಯೂ ಪ್ರಕಟಿಸಲಾಯಿತು. ಪುಷ್ಯಮಾಸದ ಸಂಚಿಕೆಯು ಅಚ್ಚಿನಲ್ಲಿದೆ. ಕೆಲವು ಸಂದರ್ಭಗಳಲ್ಲಿ ಲೇಖನಗಳಿದ್ದರೂ ಮುದ್ರಣಾಲಯದಲ್ಲಿ ತಡವಾಗುವುದುಂಟು. ಪ್ರಭವ ಸಂವತ್ಸರದ ಸಂಚಿಕೆಗಳಿಗೆ ಲೇಖನಗಳನ್ನು ಬರೆದು ಕಳುಹಿಸಿದವರೆಲ್ಲರಿಗೂ ಪರಿಷತ್ತು ಧನ್ಯವಾದಗಳನ್ನು ಅರ್ಪಿಸುವುದಲ್ಲದೆ ಮುಂದೆಯೂ ಅವರು ಕ್ರಮವಾಗಿ ಲೇಖನಗಳನ್ನು ಕಳುಹಿಸಿಕೊಡಬೇಕೆಂದೂ,

ಕರ್ನಾಟಕದಲ್ಲಿ ಒಳ್ಳೆಯ ಲೇಖನಗಳನ್ನು ಬರೆಯುವ ಯೋಗ್ಯತೆಯುಳ್ಳವರೆಲ್ಲರೂ ಪರಿಷತ್ಪತ್ರಿಕೆಗೆ ಲೇಖನಗಳನ್ನು ಬರೆದುಕಳುಹಿಸಿ ಪರಿಷತ್ಪತ್ರಿಕೆಯ ಹೆಸರನ್ನೂ ಗೌರವವನ್ನೂ ಕಾಪಾಡುವುದು ತಮ್ಮ ಕರ್ತವ್ಯವೆಂದು ಭಾವಿಸಬೇಕೆಂದೂ ಪರಿಷತ್ತು ಅರಿಕೆಮಾಡಿಕೊಳ್ಳುತ್ತದೆ.

(೨) **ಪಂಪ ಭಾರತ.**—ಈ ಗ್ರಂಥವನ್ನು ಪರಿಶೋಧಿಸುವ ಕೆಲಸವು ಮುಗಿದು ಮೂಲವೆಲ್ಲವನ್ನೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಎರಡು ಭಾಗಗಳಾಗಿ ಪ್ರಕಟಮಾಡಲಾಗಿದೆ.* ಮೊದಲನೆಯ ಭಾಗದಲ್ಲಿ ಮೊದಲನೆಯ ಎಂಟು ಆಶ್ವಾಸಗಳೂ ಎರಡನೆಯ ಭಾಗದಲ್ಲಿ ಕೊನೆಯ ಆರು ಆಶ್ವಾಸಗಳೂ ಅಡಕವಾಗಿವೆ. ಕಥೆಯನ್ನು ವಚನರೂಪದಲ್ಲಿ ಬರೆಯುವ ಕೆಲಸವೂ ನಿಘಂಟುವಿನ ಕೆಲಸವೂ ನಡೆಯುತ್ತಿದೆ. ಈ ಕೆಲಸವು ಮುಗಿದನಂತರ ಉಪೋದ್ಘಾತ ಮೊದಲಾದುವನ್ನು ಸೇರಿಸಿ ಗ್ರಂಥವನ್ನೆಲ್ಲ ಒಂದೇ ಸಂಪುಟವಾಗಿ ಪ್ರಕಟಮಾಡಲಾಗುವುದು.

(೩) **ಕನ್ನಡ ಷಟ್ಪದೀ ಕಾವ್ಯಗಳ ನಿಘಂಟು.**—ಅನೇಕ ಮಂದಿ ಪಂಡಿತರು ಸೇರಿ ರಚಿಸಿರುವ ಹನ್ನೆರಡು ಷಟ್ಪದೀ ಕಾವ್ಯಗಳ ಈ ನಿಘಂಟುವನ್ನು ಜೋಕೆಯಿಂದ ಪರಿಶೋಧಿಸದ ಹೊರತು ಮುದ್ರಣಮಾಡಿಸುವುದು ಸಮರ್ಪಕವಾಗಲಾರದೆಂದು ಹಿಂದೆಯೇ ತಿಳಿಸಿರುವೆವಷ್ಟೆ. ಈ ಕೆಲಸವನ್ನು ಮಾಡಲು ನಮಗೆ ತಕ್ಕ ಅನುಕೂಲ್ಯಗಳು ದೊರೆಯುವ ಸಂಭವವು ಕಂಡುಬಾರದುದರಿಂದ ಪಂಡಿತರಿಂದ ಬಂದಿರುವ ನಿಘಂಟುವಿನ ಪ್ರತಿಗಳನ್ನೆಲ್ಲ ಒಟ್ಟುಗೂಡಿಸಿ ಪದಗಳನ್ನು ಅಕಾರಾದಿಯಾಗಿ ವಿಂಗಡಿಸಿ ಆ ಪದಗಳ ಪಟ್ಟಿಕೆಗಳನ್ನೇ ಕ್ರಮವಾಗಿ ಬೇರೆಯ ಕಾಗದಗಳ ಮೇಲೆ ಅಂಟುಹಾಕಿ ಒಟ್ಟು ನಿಘಂಟುವಿನ ಪ್ರತಿಯೊಂದನ್ನು ಸಿದ್ಧಮಾಡುವ ಕೆಲಸವು ನಡೆಯುತ್ತಿದೆ.

೭. **ಧರ್ಮಾರ್ಥದ ವಾಚನ ಮಂದಿರ.**—ಇದಕ್ಕೆ ಬೇರೆಯಾಗಿ ಮೈಸೂರು ಸರ್ಕಾರದಿಂದ ಸಲ್ಲುತ್ತಿದ್ದ ಮಾಸಾಶನವು ಕೆಲವು ವರ್ಷಗಳಿಂದ ನಿಂತುಹೋಗಿದ್ದರೂ ಪರಿಷತ್ತು ಸಾಧ್ಯವಾದ ಮಟ್ಟಿಗೆ ಅದನ್ನೂ ನಡಯಿಸಿಕೊಂಡು ಬರುತ್ತಿದೆ. ವಾಚಕರ ಸರಾಸರಿ ಸಂಖ್ಯೆ ದಿನ ೧ಕ್ಕೆ ೩೦.

ಈ ವಾಚನ ಮಂದಿರದಲ್ಲಿ ವಾಚಕರಿಗೆ ದೊರೆಯುವ ಪತ್ರಿಕೆಗಳು :—

ಕನ್ನಡ.—ಕಂಠೀರವ, ಕರ್ನಾಟಕ ವೃತ್ತ, ಕರ್ಮವೀರ, ಕೊಡಗು, ಕನ್ನಡಿಗ, ಕರ್ನಾಟಕ ವೈಭವ, ಪ್ರಾರ್ಥನಾ, ರಾಜಹಂಸ, ಶ್ರೀ ಧನ್ವಂತರೀ, ಸತ್ಯಾಗ್ರಹೀ, ಸ್ವದೇಶಾಭಿಮಾನಿ, ವಿಶ್ವ ಕರ್ನಾಟಕ, ವಿಶ್ವಬಂಧು, ವೃತ್ತಾಂತಪತ್ರಿಕೆ, ಒಕ್ಕಲಿಗನೂ ಒಕ್ಕಲತನವೂ, ಕನ್ನಡ ಸಹಕಾರ, ಕಾದಂಬರೀ ಸಂಗ್ರಹ, ಕರ್ನಾಟಕ ಕೇಸರಿ, ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ,

* ಈ ಪುಸ್ತಕಗಳು ಬೆಂಗಳೂರು ಕೋಟೆಯಲ್ಲಿರುವ ಸರ್ಕಾರದ 'ಸೆಂಟ್ರಲ್ ಬುಕ್ ಡಿಪೋ' ವಿನಲ್ಲಿ ಬೆಲೆಗೆ ದೊರೆಯುವುವು ; ಮೊದಲನೆಯ ಭಾಗದ ಬೆಲೆ ೧೪ ಆಣೆ ; ಎರಡನೆಯದರ ಬೆಲೆ ೧೩ ಆಣೆ.

ಜಯಕರ್ಣಾಟಕ, ದೇಶೀಯ ವಿದ್ಯಾಶಾಲಾ ಪತ್ರಿಕೆ, ಪ್ರೇಮ, ಪ್ರಬುದ್ಧ ಕರ್ಣಾಟಕ, ರಂಗಭೂಮಿ, ಮಕ್ಕಳ ಪುಸ್ತಕ, ಶಿವಾನುಭವ, ಸುಧಾರಕ, ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕ ಸಂಘದ ಪತ್ರಿಕೆ.

ತೆಲುಗು.—ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ, ಸುಭಾಷಿ, ರತ್ನಗಿರಿ.

ಮರಾಠಿ.—ವಿವಿಧ ಜ್ಞಾನ ವಿಸ್ತಾರ.

ಇಂಗ್ಲೀಷು.—Daily Post, Hindu, The Evening Mail, Mysore Gazette, Karnataka, Indian Antiquary, Modern Review, School Folk (Tumkur), The Volunteer, Quarterly Journal of the Mythic Society.

೮. ಹೋದ ಸಮ್ಮೇಳನದ ನಿರ್ಣಯಗಳ ವಿಷಯವಾಗಿ ನಡೆಯಿಸಿದ ಕಾರ್ಯಕ್ರಮ.—

ನಿರ್ಣಯ ೧.—ಮೊಗಲಾಯಿ ಕರ್ಣಾಟಕದಲ್ಲಿಯೂ, ಬಳ್ಳಾರಿ, ಕೊಯಮತ್ತೂರು, ಸೇಲಂ ಮೊದಲಾದ ಗಡಿನಾಡುಗಳಲ್ಲಿಯೂ ಕನ್ನಡ ಭಾಷೆಯನ್ನು ಕುರಿತು ಜಾಗೃತಿಯನ್ನುಂಟುಮಾಡುವ ಬಗ್ಗೆ ಪ್ರಚಾರಕರನ್ನು ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಕಳುಹಿಸತಕ್ಕದ್ದು.

ಈ ವಿಚಾರದಲ್ಲಿ ಧಾರವಾಡದ ಇತಿಹಾಸ ಮಂಡಲದ ಅಧ್ಯಕ್ಷರಾದ ಮ|| ರಾ|| ಎ.ಬಿ. ಆಲೂರರವರ ಸೂಚನೆಯಂತೆ ನಿಜಾಂ ಕರ್ಣಾಟಕದ ಕಲ್ಬುರ್ಗಿ ಮೊದಲಾದ ಊರುಗಳಲ್ಲಿ ಭಾಷಾ ಜಾಗ್ರತಿಯನ್ನುಂಟುಮಾಡಲು ಮ|| ರಾ|| ನಾರಾಯಣ ಶ್ರೀನಿವಾಸ ರಾಜಪುರೋಹಿತರನ್ನು ನಿಯಮಿಸಲಾಯಿತು. ಅವರು ತಮ್ಮ ಇತರ ಕೆಲಸಗಳ ಜೊತೆಗೆ ಪರಿಷತ್ತಿಗಾಗಿ ತಿಂಗಳಿಗೆ ೧೦ ದಿವಸಗಳ ಪ್ರಕಾರ ಎರಡು ತಿಂಗಳು ಕಾರ್ಯಮಾಡಿ ಕಲ್ಬುರ್ಗಿಯಲ್ಲಿ ನಿಜಾಂ ಕರ್ಣಾಟಕ ಸಂಘ ಸ್ಥಾಪನೆಗೆ ಏರ್ಪಾಡನ್ನೂ ಇತರ ಭಾಷಾ ಸೇವೆಯನ್ನೂ ಮಾಡಿರುತ್ತಾರೆ.

ನಿರ್ಣಯ ೨.—ವಿಜ್ಞಾನ ಶಾಸ್ತ್ರಗಳ ಪ್ರಚಾರಕ್ಕೆ ಪಾರಿಭಾಷಿಕ ಶಬ್ದಕೋಶವೊಂದು ಅತ್ಯಾವಶ್ಯಕವಾಗಿರುವುದಾದರೂ ಕೂಡ ಅಂಥ ಜ್ಞಾನಪ್ರಸಾರವನ್ನು ಸರ್ವತ್ರ ಹರಡಿಸುವ ಕಾರ್ಯಕ್ಕಿಂತ ಗ್ರಾಮ ಪಾಠಶಾಲೆಗಳ ಮುಖಾಂತರ ಪ್ರಾಥಮಿಕ ವಿದ್ಯಾಭ್ಯಾಸದಲ್ಲೇ ಪ್ರಾರಂಭಿಸುವುದು ಹೆಚ್ಚಿನ ಗರಜಿನ ಕಾರ್ಯವಾದುದರಿಂದ ಗ್ರಾಮ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಕೃತ ಉಪಯೋಗಕ್ಕೆ ಯೋಗ್ಯವೂ ಅನುಕೂಲವೂ ಇರುವಂತೆ ಸಾಧ್ಯವಿದ್ದಷ್ಟು ತ್ವರೆಯಿಂದ ಅಂಥ ಸಣ್ಣ ಕೋಶವೊಂದನ್ನು ತಯಾರಿಸಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸುಲಭಕ್ರಯಕ್ಕೆ ಪ್ರಕಟಗೊಳಿಸಬೇಕಾಗಿ ಈ ಸಮ್ಮೇಳನದ ಅಭಿಪ್ರಾಯವಿದೆ. ಇತರರ ಸಹಾಯದಿಂದ ಈ ರೀತಿಯ ಕೋಶವನ್ನು ತಯಾರಿಸಿ ಪರಿಷತ್ತಿಗೆ ಒಪ್ಪಿಸುವುದಕ್ಕೆ ಶ್ರೀಯುತ ಪಂಜೆ ಮಂಗೇಶರಾಯರವರನ್ನು ನೇಮಿಸಲಾಗಿದೆ.

ಈ ವಿಚಾರದಲ್ಲಿ ಪರಿಷತ್ತು ಮ॥ ರಾ। ಪಂಜೆ ಮಂಗೇಶರಾಯರವರಿಗೆ ಬಿನ್ನಹ ಮಾಡಿಕೊಂಡಿತು. ಕೆಲಸವು ಎಲ್ಲಿಯವರೆಗೆ ನಡೆದಿರುವುದೆಂಬುದಕ್ಕೆ ಅವರಿಂದ ಪ್ರತ್ಯುತ್ತರವು ಇನ್ನೂ ಬಂದಿರುವುದಿಲ್ಲ.

ನಿರ್ಣಯ ೩.—ದಕ್ಷಿಣ ಕನ್ನಡ ಜಿಲ್ಲೆಯೊಳಗಣ ಮೂಡಬಿದರೆ, ವಾರಂಗ, ಗುರುಪುರ, ಅತ್ತಾವರ, ಬೇಕಲ ಮುಂತಾದ ಕಡೆಗಳಲ್ಲಿರುವ ಅನೇಕ ಕರ್ಣಾಟಕ ಹಳೆಯ ಸಾಹಿತ್ಯ ಗ್ರಂಥಗಳ ಶೋಧನ, ಪ್ರಕಟನ ಕಾರ್ಯಗಳಲ್ಲಿ ಮದರಾಸು ಸರ್ಕಾರದವರು ಸಾಕಷ್ಟು ಲಕ್ಷ್ಯವನ್ನು ಇದುವರೆಗೆ ಕೊಡದೆ ಅಂಥ ಗ್ರಂಥಗಳು ತೀರ ಕಣ್ಮರೆಯಾಗಿಹೋಗುವ ಸಂಭವವಿರುವುದರಿಂದ ಇನ್ನಾದರೂ ಅಂಥ ಚಟುವಟಿಕೆಗೆ ಮದರಾಸು ಸರ್ಕಾರದ ಇಲಾಖೆಯವರು ತಕ್ಕ ಲಕ್ಷ್ಯ ಕೊಟ್ಟು ಪ್ರಕಟನೆಯ ಮತ್ತು ಸಂರಕ್ಷಣೆಯ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಈ ಸಮ್ಮೇಳನವು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ. ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕನ್ನಡ ನಾಡಿನ ಮುಖ್ಯ ಭಾಗಗಳಲ್ಲೊಂದಾಗಿರುವುದರಿಂದಲೂ ಅಖಿಲ ಕರ್ಣಾಟಕದ ಚರಿತ್ರೇತಿಹಾಸಗಳಲ್ಲಿ ದಕ್ಷಿಣ ಕನ್ನಡ ಚರಿತ್ರೆ ಕೂಡ ಪ್ರಧಾನವಾದ ಸ್ಥಾನವನ್ನು ಹೊಂದತಕ್ಕುದಾಗಿರುವುದರಿಂದಲೂ ಅಂಥ ಚರಿತ್ರೆಯ ಶೋಧನ ಕಾರ್ಯದಲ್ಲಿ ಈ ಜಿಲ್ಲೆಗಳಲ್ಲಿಯ ಶಿಲಾಶಾಸನಗಳು ಬಹಳ ಪ್ರಾಮುಖ್ಯತೆಯುಳ್ಳವಾಗಿರುವುದರಿಂದಲೂ ಮದರಾಸು ಸರ್ಕಾರದ ಶಾಸನ ಇಲಾಖೆಯವರು ಆ ಶಿಲಾಶಾಸನಗಳ ಸಂಗ್ರಹ ಮತ್ತು ಪ್ರಕಟನೆಯ ಕೆಲಸವನ್ನು ಇನ್ನಾದರೂ ವಿಳಂಬ ಮಾಡದೆ ಮುಂದುವರಿಸಬೇಕಾಗಿ ಈ ಸಮ್ಮೇಳನವು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ.

ಈ ನಿರ್ಣಯವನ್ನು ಮದರಾಸು ಸರ್ಕಾರದ ಚೀಫ್ ಸೆಕ್ರೆಟರಿಯವರಿಗೂ, ಇಂಡಿಯಾ ಸರ್ಕಾರದ ಶಾಸನ ಇಲಾಖೆಯ ಅಧ್ಯಕ್ಷರಿಗೂ ಕಳುಹಿಸಲಾಯಿತು.

ಈ ವಿಚಾರದಲ್ಲಿ ಶಾಸನದ ಇಲಾಖಾಧ್ಯಕ್ಷರು ಮದರಾಸು ಸರ್ಕಾರದ ಚೀಫ್ ಸೆಕ್ರೆಟರಿಯವರಿಗೆ ಕೊಟ್ಟ ಪ್ರತ್ಯುತ್ತರದ ನಕಲನ್ನು ನಮಗೆ ಕಳುಹಿಸಿರುತ್ತಾರೆ. ಅದರ ಸಾರಾಂಶ: "ಈ ವಿಷಯದಲ್ಲಿ ಆವಶ್ಯಕವಾದ ಪ್ರಯತ್ನಗಳು ನಡೆಯುತ್ತಲಿವೆ. ಇದುವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ೮೫೭ ಶಾಸನಗಳೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೩೮ ಶಾಸನಗಳೂ ಒಟ್ಟು ೧೧೯೫ ಶಾಸನಗಳ ನಕಲುಗಳನ್ನು ತೆಗೆಯಲಾಗಿದೆ. ಕಳೆದ ವರುಷ ಅನಂತಪುರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ೪೬ ಶಾಸನಗಳ ನಕಲುಗಳನ್ನು ತೆಗೆದುದಾಯಿತು. ಇನ್ನು ಮೇಲೆ ಮದ್ರಾಸು ಆಧಿಪತ್ಯದಲ್ಲಿ ಕನ್ನಡ ಶಾಸನಗಳನ್ನು ಸಂಗ್ರಹಿಸುವುದಕ್ಕಾಗಿ ಪ್ರತಿ ವರ್ಷವೂ ಒಬ್ಬ ಅಧಿಕಾರಿಯನ್ನು ಕಳುಹಿಸುವ ಏರ್ಪಾಡನ್ನು ಮಾಡುತ್ತೇನೆ."

ನಿರ್ಣಯ ೪.—(ಕ) ಮದರಾಸು ಕರ್ಣಾಟಕದ ಸೆಕಂಡರಿ ಶಾಲೆಗಳಲ್ಲಿಯ ವಿದ್ಯಾಭ್ಯಾಸವು ದೇಶಭಾಷೆಯಾದ ಕನ್ನಡದಲ್ಲಿಯೇ ನಡೆಯಬೇಕೆಂದು ಸರ್ಕಾರದ ಕಂಶೋಽಕ್ಷ್ಮನಾದ ಅಜ್ಞೆ ಇರುವುದಾದರೂ, ಪ್ರಸ್ತುತ ಅದು ಹಲವು ಶಾಲೆಗಳಲ್ಲಿ ಇಂಗ್ಲೀಷಿನಲ್ಲಿಯೇ ನಡೆಯುತ್ತಿರುವುದರಿಂದಲೂ, ಮುಖ್ಯವಾಗಿ ಬಾಲಿಕಾ ಪಾಠಶಾಲೆಗಳಲ್ಲಿ ಈ ಸ್ಥಿತಿ ತೋರಿಬರುತ್ತಿರುವುದರಿಂದಲೂ ಕನ್ನಡದ ಏಳಿಗೆಗೆ

ವಿಶೇಷವಾದ ಹಾನಿಯಾಗುವುದರಿಂದ ಮೇಲೆ ಹೇಳಿದ ಸರ್ಕಾರದ ಆಜ್ಞೆಯನ್ನು ಉಪಾಧ್ಯಾಯರೂ ಶಾಲೆಗಳ ನಿರ್ವಾಹಕರೂ ಅಕ್ಷರಶಃ ಅನುಸರಿಸುವಂತೆ ಅವರನ್ನು ಒತ್ತಾಯಪಡಿಸಬೇಕೆಂದು ಆ ಸರ್ಕಾರಕ್ಕೆ ಈ ಸಮ್ಮೇಳನವು ವಿನಯಿಸುತ್ತದೆ.

(ಬಿ) ಪ್ರವೇಶ ಪರೀಕ್ಷೆಯ ವಿದ್ಯಾಭ್ಯಾಸವು ಐಚ್ಛಿಕವಾಗಿ ಕನ್ನಡದಲ್ಲಿಯೇ ನಡೆಯಬಹುದೆಂದು ಮದರಾಸು ಸರ್ಕಾರದ ವಿದ್ಯಾ ಇಲಾಖೆಯವರು ಅಪ್ಪಣೆ ಕೊಟ್ಟಿದ್ದರೂ ಇದುವರೆಗೂ ಆಚರಣೆಯಲ್ಲಿ ತಾರದೆ ಇರುವುದರಿಂದ ಇನ್ನಾದರೂ ಈ ವಿಷಯದಲ್ಲಿ ತಕ್ಕಂತೆ ವರ್ತಿಸಿ ಭಾಷೋದ್ಧಾರಕರಲ್ಲಿ ಸಹಭಾಗಿಗಳಾಗಬೇಕೆಂದು ಮದರಾಸು ಸರ್ಕಾರದ ಶಾಲಾ ಅಧಿಕಾರಿಗಳನ್ನು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಈ ಎರಡು ಠರಾವುಗಳನ್ನು ಮದರಾಸು ನ್ಯಾಯ ಮತ್ತು ವಿದ್ಯಾ ಖಾತೆಯ ಸೆಕ್ರಿಟರಿಯವರಿಗೆ ಕಳುಹಿಸಿದುದಾಯಿತು.

ಠರಾವುಗಳು ತಲುಪಿವೆ ಎಂದು ಉತ್ತರವು ಬಂದಿರುತ್ತದೆ.

ನಿರ್ಣಯ ೫.—ಆಂಧ್ರ ವಿಶ್ವವಿದ್ಯಾಲಯ ಸ್ಥಾಪನೆಯಾದಂತೆ ಕನ್ನಡಿಗರ ಪ್ರೌಢ ಶಿಕ್ಷಣದ ಸೌಕರ್ಯಕ್ಕಾಗಿಯೂ ಏಕೀಕರಣಕ್ಕಾಗಿಯೂ ಅಖಿಲ ಕರ್ನಾಟಕಕ್ಕೂ ಒಂದು ಕರ್ನಾಟಕ ವಿಶ್ವವಿದ್ಯಾಲಯವು ಅತ್ಯಾವಶ್ಯಕವಾದುದರಿಂದ ಅಂತಹ ಒಂದು ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕಕ್ಕೂ ಕೊಡಬೇಕೆಂದೂ ಆ ಬಗೆಗೆ ಅಗತ್ಯವಿರುವ ಕಾರ್ಯಗಳನ್ನು ಕೂಡಲೆ ಕೈಕೊಳ್ಳಬೇಕೆಂದೂ ಒಂದು ಮನವಿಯನ್ನು ಸಿದ್ಧಪಡಿಸಿ, ಅದಕ್ಕೆ ಅಖಿಲ ಕರ್ನಾಟಕದ ಆದಷ್ಟು ಹೆಚ್ಚು ಸಹಿಗಳನ್ನು ಪಡೆದು ಅದನ್ನು ಇಂಡಿಯಾ ಸರ್ಕಾರಕ್ಕೂ, ಸಂಬಂಧಪಟ್ಟ ಪ್ರಾಂತಿಕ ಸರ್ಕಾರಗಳಿಗೂ ಕಳುಹಿಸತಕ್ಕದ್ದು. ಈ ಕೆಲಸಗಳನ್ನು ಮಾಡಲು—

ಮುಂಬಯಿ ಕರ್ನಾಟಕಕ್ಕೆ	ಶ್ರೀಯುತ ಆಲೂರ ವೆಂಕಟರಾಯರು
ಮದರಾಸು ,,	ಶ್ರೀಯುತ ಡಾಕ್ಟರ್ ಯು. ರಾಮರಾಯರು
ಮೈಸೂರು ,,	ಶ್ರೀಯುತ ಡಿ. ವಿ. ಗುಂಡಪ್ಪನವರು (ಕಾರ್ಯದರ್ಶಿ)

ಈ ಮೂವರು ಮಂದಿಯುಳ್ಳ ಒಂದು ಸಮಿತಿಯನ್ನು ಏರ್ಪಡಿಸತಕ್ಕದ್ದು. ಮತ್ತು ಈ ಸಮಿತಿಗೆ ಕಾರ್ಯ ಸೌಕರ್ಯಕ್ಕಾಗಿ ಇತರ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರವಿರತಕ್ಕದ್ದು.

ಈ ಠರಾವನ್ನು ಮೇಲೆ ತಿಳಿಸಿದ ಸಮಿತಿಯ ಸದಸ್ಯರೆಲ್ಲರಿಗೂ ತಿಳಿಸಿದ್ದಾಗಿದೆ. ಉಳಿದ ನಿರ್ಣಯಗಳನ್ನು ಅದದಕ್ಕೆ ಸಂಬಂಧಪಟ್ಟವರಿಗೆ ತಿಳಿಸಿರುತ್ತದೆ.

೬. ಆಯ ವ್ಯಯ.—ಇದರ ಪಟ್ಟಿಯನ್ನು ೧೩, ೧೪, ೧೫ನೆಯ ಪುಟಗಳಲ್ಲಿ ಕೊಟ್ಟಿದೆ. ಸಂವತ್ಸರಾದಿಯಲ್ಲಿ ನಮ್ಮಲ್ಲಿದ್ದ ಮೊಬಲಗು ರೂ. ೧೨,೬೪೨-೮-೭; ಈ ವರುಷ ವಸೂಲಾದದ್ದು ರೂ. ೨,೪೧೩-೫-೬; ಈ ವರುಷ ಪರಿಷತ್ತಿನಿಂದ ವೆಚ್ಚವಾದ ಮೊಬಲಗು ರೂ. ೨,೮೫೯-೫-೯. ಆಯಕ್ಕಿಂತಲೂ ವ್ಯಯವು ರೂ. ೫೫೪-೧೫-೯ ಕಡಮೆಯಾಗಿದೆ.

ಈ ವರುಷದ ನಮ್ಮ ಲೆಕ್ಕದ ಪಟ್ಟಿಗಳನ್ನು ಪರಿಶೀಲಿಸಿಕೊಟ್ಟುದಕ್ಕಾಗಿ ಬೆಂಗಳೂರು ಆದಾಯ ತೆರಿಗೆಯ ಇಲಾಖಾ ಅಸಿಸ್ಟೆಂಟು ಕಮೀಷನರಾದ ಮ॥ ರಾ॥ ಪಿ. ಮಾಧವರಾಯರು, ಬಿ.ಎ., ಬಿ.ಎಲ್. ಅವರಿಗೆ ಪರಿಷತ್ತಿನವರು ಬಹಳ ಕೃತಜ್ಞರಾಗಿರಬೇಕು.

೧೦. **ಪರಿಷತ್ತಿನ ಕಟ್ಟಡ.**—ಪರಿಷತ್ತಿನ ಕಟ್ಟಡಕ್ಕಾಗಿ ಬೆಂಗಳೂರು ಸಿಟಿ ಮುನ್ಸಿಪಾಲಿಟಿಯವರು ಶಂಕರಪುರದಲ್ಲಿ ಕೊಟ್ಟಿರುವ ನಿವೇಶನದಲ್ಲಿ ಕಟ್ಟಡವನ್ನು ಕಟ್ಟುವುದೋ ಇದಕ್ಕಿಂತಲೂ ಮಧ್ಯವರ್ತಿಯಾದ ಸ್ಥಳದಲ್ಲಿ ನಿವೇಶನವು ದೊರಕಿದರೆ ಅಲ್ಲಿ ಕಟ್ಟುವುದೋ ಎಂಬ ಆಲೋಚನೆಯು ನಡೆಯುತ್ತಿದೆ ಎಂದು ಕಳೆದ ವರ್ಷದ ವರದಿಯಲ್ಲಿ ಅರಿಕೆ ಮಾಡಿದೆವಷ್ಟೆ. ಈಗ ಮೈಸೂರು ದಿವಾನರ ಪದವಿಯನ್ನು ಅಲಂಕರಿಸಿರುವ ಅಮೀನ್-ಉಲ್-ಮುಲ್ಕ್ ಮಿ॥ ಮಿರ್ಜಾ ಮಹಮದ್ ಇಸ್ಮಾಯಿಲ್ ಸಾಹೇಬರವರು ಪರಿಷತ್ತಿನ ಕಟ್ಟಡದ ವಿಷಯದಲ್ಲಿ ಅತ್ಯಂತ ಸಹಾನುಭೂತಿಯನ್ನು ತೋರಿಸಿ ಬೆಂಗಳೂರು ಕೋಟೆಯ ಪಶ್ಚಿಮಕ್ಕೆ ವಿಂಟೋ ಕಣ್ಣಾಸ್ಪತ್ರೆಯ ಮುಂದಿರುವ ಮೈದಾನದಲ್ಲಿ 'ಶ್ರೀ ಕೃಷ್ಣರಾಜೇಂದ್ರ ಕರ್ಣಾಟಕ ಸಾಹಿತ್ಯ ಪರಿಷನ್ಮಂದಿರ' ಎಂಬ ಅಭಿಧಾನದಿಂದ ಶೋಭಿಸುವುದಕ್ಕೆ ಯೋಗ್ಯವಾದ ಕಟ್ಟಡವನ್ನು ಕಟ್ಟಲು ತಕ್ಕ ನಿವೇಶನವನ್ನು ದಯಪಾಲಿಸುವುದಾಗಿ ತಿಳಿಸಿರುತ್ತಾರೆ. ಈ ನಮ್ಮ ಹೊಸ ನಿವೇಶನದ ಅಕ್ಕಪಕ್ಕಗಳಲ್ಲಿ ನಿರ್ಮಿತವಾಗುತ್ತಿರುವ ಮುಂದೆ ನಿರ್ಮಿತವಾಗಬಹುದಾದ ಇತರ ಕಟ್ಟಡಗಳಿಗೆ ಸಮತೂಗುವ ಕಟ್ಟಡವನ್ನು ಪರಿಷತ್ತು ಕಟ್ಟಬೇಕೆಂಬ ಉದ್ದೇಶದಿಂದ ಘನವನ್ನು ಹೊಂದಿದ ಮೈಸೂರು ಸರ್ಕಾರದವರೇ ನಕಾಶೆಯನ್ನು ತಯಾರಿಸುತ್ತಲಿದ್ದಾರೆ. ಇನ್ನು ಕೆಲವು ತಿಂಗಳೊಳಗಾಗಿಯೇ ಕಟ್ಟಡದ ಕಾರ್ಯವು ಪ್ರಾರಂಭವಾಗುವುದೆಂದು ಪರಿಷತ್ತು ಹಾರೈಸುತ್ತದೆ.

೧೧. **ಉಪಸಂಹಾರ.**—ಇಂದಿಗೆ ಹದಿಮೂರು ವರ್ಷಗಳ ಮುಂಚೆ "ಕರ್ಣಾಟಕ ಭಾಷಾ ಸಂಸ್ಕರಣಕ್ಕಾಗಿಯೂ, ಕರ್ಣಾಟಕ ಗ್ರಂಥಾವಳಿಯ ಅಭಿವೃದ್ಧಿಗಾಗಿಯೂ" ಬೆಂಗಳೂರಲ್ಲಿ ಈ ಕರ್ಣಾಟಕ ಸಾಹಿತ್ಯ ಪರಿಷತ್ತು ಸ್ಥಾಪಿತವಾಯಿತಷ್ಟೆ. ಮೊದಲು ೧೨ ವರುಷ ಕಾಲದಲ್ಲಿ ಪರಿಷತ್ತು ಏನೇನು ಕಾರ್ಯವನ್ನು ಮಾಡಿರುವುದೋ ಅದರ ಸಂಕ್ಷೇಪ ವಿವರಣೆಯನ್ನು 'ಕರ್ಣಾಟಕ ಸಾಹಿತ್ಯ ಪರಿಷತ್ತಿನ ಹನ್ನೆರಡು ವರುಷದ ಕಾರ್ಯಕಲಾಪ'ವೆಂಬ ವರದಿಯಲ್ಲಿ ಕೊಟ್ಟಿದೆ. ಪರಿಷತ್ತಿನ ಉದ್ದೇಶಗಳು ಉಚ್ಚವಾದುವು ಮತ್ತು ಮಹತ್ತಾದುವು. ಅವುಗಳ ಸಿದ್ಧಿಗೆ ದೀರ್ಘಕಾಲ ಬೇಕಲ್ಲದೆ ವಿಶೇಷ ದ್ರವ್ಯಸಹಾಯವೂ ಕರ್ಣಾಟಕ ಭಾಷಾಭಿಮಾನಿಗಳ ಪ್ರೋತ್ಸಾಹವೂ ಅತ್ಯಾವಶ್ಯಕವು. ಹೊಟ್ಟೆ ಹಸಿದವನಿಂದ ಕಾರ್ಯ ಮಾಡಲಾಗುವುದಿಲ್ಲವೆಂಬುದು ಈ ಮಹಾಸಭೆಯಲ್ಲಿ ನೆರೆದಿರುವವರೆಲ್ಲರಿಗೂ ತಿಳಿದ ವಿಷಯವೇ. ಮನುಷ್ಯನಿಗೆ ಕಾರ್ಯ ಮಾಡುವುದಕ್ಕೆ ಹೇಗೆ ಶಕ್ತಿ ಅವಶ್ಯಕವೋ ಹಾಗೆಯೇ ಪರಿಷತ್ತಿನ ಉದ್ದೇಶ ಸಾಧನೆಗಾಗಿ ವಿಶೇಷ ದ್ರವ್ಯ ಸಹಾಯವು ಬೇಕಾಗಿರುವುದರಿಂದ ನೀವುಗಳೆಲ್ಲರೂ ಪರಿಷತ್ತಿಗೆ ಹೆಚ್ಚು ಸದಸ್ಯರನ್ನು ಸಂಪಾದಿಸಿಕೊಡಬೇಕೆಂದು ಮರಳಿ ತಮಗೆ ನಾವು ಅರಿಕೆ ಮಾಡಿಕೊಳ್ಳುತ್ತೇವೆ.

ಪ್ರತಿಯೊಬ್ಬ ಕರ್ನಾಟಕ ಭಾಷಾಭಿಮಾನಿಯೂ ಇದು ತನ್ನ ಕರ್ತವ್ಯವೆಂದು ತಿಳಿಯಬೇಕೆಂಬುದು ಪರಿಷತ್ತಿನ ಗಾಢಾಭಿಲಾಷೆ. ಇಂತಹ ಅಭಿಲಾಷೆಯನ್ನು ಪೂರೈಸುವುದು ತಮ್ಮೆಲ್ಲರನ್ನೂ ಅವಲಂಬಿಸಿರುತ್ತದೆ.

ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯಿಂದ ಆಜ್ಞಪ್ತನಾಗಿ ಇಂತು ಬಿನ್ನೈಸುವ,

ತಮ್ಮ ಸೇವಕ,

ನಂಗಪುರಂ ವೆಂಕಟೇಶಯ್ಯಂಗಾರ್,

ಗೌರವ ಕಾರ್ಯದರ್ಶಿ.

ಆಸ್ತಿ ಋಣಗಳ ಪಟ್ಟಿ

೧೯೨೮ನೆಯ ಏಪ್ರಿಲ್ ೧ನೆಯ ತಾರೀಖಿನಲ್ಲಿದ್ದಂತೆ

ಆಸ್ತಿ	ರೂ. ಆ. ಪೈ.	ಋಣ	ರೂ. ಆ. ಪೈ.
ಪುಸ್ತಕ ವ್ಯಾಪಾರಿಗಳಿಂದ	೨೨೬-೩-೦	ಸಿಬ್ಬಂದಿಯ ವೆಚ್ಚ	೫೮-೦-೦
ಇತರರಿಂದ	೧೪೦-೧-೦	ದೀಪದ ವೆಚ್ಚ	೩-೪-೬
ಸರ್ಕಾರದ ಗ್ರಾಂಟು	೧೨೫-೦-೦	ಸಹಾಯಕರ ಮತ್ತು ಆಜೀವ ಸದಸ್ಯರ ಚಂದಾ ಮೊಬಲಗು	೪,೧೫೩-೪-೦
ಬರಬಹುದಾದ ಚಂದಾ ಮೊಬಲಗು	೧,೫೦೦-೦-೦		
ಡಿಪಾಜಿಟ್ಟುಗಳು	೧೩,೦೯೭-೦-೦		
ಸಗದು ಹಣ	೯೯-೮-೪	ಕಟ್ಟಡದ ಹಣ	೫,೦೦೦-೦-೦
ಡಿಪಾಜಿಟ್ಟುಗಳ ಬಡ್ಡಿ (ಸುಮಾರು)	೧೦೦-೦-೦	ಗ್ರಂಥ ಮುದ್ರಣದ ಹಣ	೨,೫೦೦-೦-೦
ಕೈಯಲ್ಲಿರುವ ಅಚ್ಚಿನ ಕಾಗದ (ಸುಮಾರು)	೫೦-೦-೦	ಋಣಕ್ಕಿಂತಲೂ ಆಸ್ತಿಯು ಹೆಚ್ಚು	೯,೩೭೩-೩-೧೦
ಕೈಯಲ್ಲಿರುವ ಪುಸ್ತಕಗಳ ಬೆಲೆ (ಸುಮಾರು)	೧,೧೦೦-೦-೦		
ಪುಸ್ತಕ ಭಾಂಡಾಗಾರ (ಸುಮಾರು)	೩,೩೫೦-೦-೦		
ಸಾಮಾನುಗಳು ವಗೈರೆ (ಸುಮಾರು)	೧,೨೦೦-೦-೦		
ಆರಾ ಲೈಬ್ರೆರಿಯ ಪಂಪಭಾರತಕ್ಕಾಗಿ ಡಿಪಾಜಿಟ್ಟು	೧೦೦-೦-೦		
ಒಟ್ಟು ರೂ. ..	೨೧,೦೮೭-೧೨-೪	ಒಟ್ಟು ರೂ. ..	೨೧,೦೮೭-೧೨-೪

ಕರ್ಣಾಟಕ ಸಾಹಿತ್ಯ
ಪ್ರಭವ ಸಂವತ್ಸರದ

ಆಯ

		ರೂ.	ಆ.	ಪೈ.
೧.	ಹೋದ ವರ್ಷದ ಶಿಲ್ಕು	೧೨,೬೪೨	೮	೭
೨.	ತಿಂಗಳುಗಟ್ಲೆ ಸರ್ಕಾರದಿಂದ ಬಂದ ಸಹಾಯ ದ್ರವ್ಯ	೧,೫೦೦	೦	೦
೩.	ಪರಿಷತ್ತಿನ ಸದಸ್ಯರಿಂದ ಬಂದ ಚಂದಾ ಹಣ ..	೩೫೩	೦	೦
೪.	ಪರಿಷತ್ಪತ್ರಿಕೆಯ ಚಂದಾ ಹಣ ..	೨೧೯	೦	೦
೫.	ಪರಿಷತ್ತಿನ ಪುಸ್ತಕಗಳ ಮಾರಾಟದಿಂದ ಬಂದ ಹಣ	೩೩೪	೮	೯
೬.	ಡಿಪಾಜಿಟ್ಟುಗಳ ಮೇಲೆ ಬಂದ ಬಡ್ಡಿ ..	೭೮೫	೩	೯
೭.	ಮುಂಗಡ ಕೊಟ್ಟ ಹಣ ವಾಪಸು ..	೧೮೫	೭	೦
೮.	ಅಂಚೆಯ ಹಾಸಲು ವಸೂಲಾದುದು ..	೧೧	೨	೦
೯.	ಕೊಟಡಿಯ ಬಾಡಿಗೆ ..	೨೦	೦	೦
೧೦.	ಇತರ ಚಿಲ್ಲರೆ ಬಾಬುಗಳು ..	೫	೦	೦
	ಒಟ್ಟು ..	೧೬,೦೫೫	೧೪	೧

I have gone through the accounts and I find that the above statements of Receipts and Expenses are correct.

(Sd.) G. MADHAVA RAO,
Auditor.

ಪರಿಷತ್ತು, ಬೆಂಗಳೂರು

ಆಯ ವ್ಯಯದ ಪಟ್ಟಿ

ವ್ಯಯ

		ರೂ.	ಆ.	ಪೈ.
೧.	ಪರಿಷತ್ತಿನ ಆಫೀಸು ಸಿಬ್ಬಂದಿಗಾಗಿ ..	೬೮೫	೦	೦
೨.	ಪರಿಷನ್ಮಂದಿರದ ಬಾಡಿಗೆ	೩೬೦	೦	೦
೩.	ದೀಪದ ವೆಚ್ಚ	೩೯	೬	೦
೪.	ಸಾದಿಲ್ವಾರು	೪೩	೧	೬
೫.	ಅಂಚೆಯ ಹಾಸಲು	೧೯೧	೫	೩
೬.	ಮುದ್ರಣ ಮತ್ತು ಬೈಂಡಿಗಾಗಿ ..	೬೬೭	೭	೦
೭.	ಪುಸ್ತಕ ಭಾಂಡಾಗಾರಕ್ಕಾಗಿ	೭	೬	೦
೮.	ವಾಚನಮಂದಿರದ ಪತ್ರಿಕೆಗಳ ಚಂದಾ ಮೊಬಲಗು	೧೧೩	೪	೦
೯.	ಕಬ್ಬಿಣದ ಪೆಟ್ಟಿಗೆ	೮	೨	೦
೧೦.	ಸಮ್ಮೇಳನದ ಖರ್ಚು	೧೧೨	೩	೦
೧೧.	ಪ್ರಚಾರ ಕಾರ್ಯಕ್ಕೆ ವೆಚ್ಚ	೩೦	೦	೦
೧೨.	ಸಾಹಿತ್ಯ ಸೇವೆಗಾಗಿ ಬಹುಮಾನ ..	೩೫೦	೦	೦
೧೩.	ಪರಿಷತ್ಪತ್ರಿಕೆಯ ಹಳೆಯ ಸಂಚಿಕೆಗಳನ್ನು ಕೊಂಡುದು	೨೬	೧೨	೦
೧೪.	ಮುಂಗಡವಾಗಿ ಕೊಟ್ಟ ಹಣ ..	೨೨೫	೭	೦
	ಒಟ್ಟು ..	೨,೮೫೯	೫	೯
	* ಶಿಲ್ಕು ನಿಂತಿರುವುದು ..	೧೩,೧೯೬	೮	೪
	ಒಟ್ಟು ..	೧೬,೦೫೫	೧೪	೧

* ಶಿಲ್ಕಿಗೆ ತಪಸೀಲು :—

ಬೆಂಗಳೂರು ಸಿಟಿ ಕೋ॥ ಸೊಸೈಟಿಯಲ್ಲಿ			
ಫಿ॥ ಡಿಪಾಜಿಟ್ಟು	೧೨,೫೦೦	೦	೦
ಸೇವಿಂಗ್ಸ್ ಬ್ಯಾಂಕು ಡಿ॥	೫೯೭	೦	೦
ಗೌ॥ ಕಾರ್ಯದರ್ಶಿಯವರ ಬಳಿ ನಗದು	೯೯	೮	೪
ಒಟ್ಟು ರೂ. ..	೧೩,೧೯೬	೮	೪

(Sd.) N. VENKATESA IYENGAR, B.A.,
Honorary Secretary.

(Sd.) B. VENKATANARANAPPA, M.A.,
Honorary Treasurer.

ಪರಿಶಿಷ್ಟ

ಕರ್ಣಾಟಕ ಸಾಹಿತ್ಯ ಪರಿಷತ್ತಿನ

ಸದಸ್ಯರ ಪಟ್ಟಿ

(೧೯೩೧ನೆಯ ಇಸವಿ ಏಪ್ರಿಲ್ ಮೊದಲನೆಯ ತಾರೀಖಿನಲ್ಲಿದ್ದಂತೆ)

ಪ್ರದಾತೃಗಳು

*†೧. ರಾಜಸಭಾಭೂಷಣ ಮ|| ರಾ|| ಕರ್ಪೂರ ಶ್ರೀನಿವಾಸರಾಯರು, ಬಿ.ಎಸ್‌ಸಿ., ಎಲ್.ಸಿ.ಇ., ರಿ|| ಛೀಫ್ ಎಂಜನಿಯರ್, ಬೆಂಗಳೂರು.

ಸಹಾಯಕರು

*೨. ಮ|| ರಾ|| ಕೃಷ್ಣಾಜೀ ಗೋವಿಂದ ಗೆಜ್ಜಿ, ಬಿ.ಎ., ಎಲ್‌ಎಲ್.ಬಿ., ವಕೀಲ್, ಬೆಳಗಾಂವಿ.

೩. ನಾರಾಯಣ ಸ್ವಾಮಿರಾವ್ ಲೋಕೂರ. ,,

೪. ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರು. ಸಿ.ಐ.ಇ., ರಿ|| ಕೌನ್ಸಿಲರ್, ಬೆಂಗಳೂರು.

೫. ಶೇಷಗಿರಿ ತಿರುಮಲರಾವ್ ದಾತಾರ, ಬಿ.ಎ., ಎಲ್‌ಎಲ್.ಬಿ., ವಕೀಲ್, ಬೆಳಗಾಂವಿ.

*೬. ಶ್ರೀನಿವಾಸರಾವ್ ಕೌಜಲಗಿ, ಬಿ.ಎ., ಎಲ್‌ಎಲ್.ಬಿ., ಬಿಜಾಪುರ.

ಆಜೀವ ಸದಸ್ಯರು

(ಮೈಸೂರು ದೇಶದ ಸದಸ್ಯರು)

ಮ|| ರಾ|| ಗಳಾದ

೭. ಎಸ್. ಎನ್. ಅಪ್ಪಣ್ಣಯ್ಯಂಗಾರ್ಯರು, ಬಿ.ಎ., ಬಿ.ಎಲ್., ಅ|| ಕಮಿಷನರ್, ಚಾಮರಾಜಪೇಟೆ, ಬೆಂಗಳೂರು.

೮. ಪಿ. ಅಪ್ಪಾಜೀರಾಯರು, ಬಿ.ಎಸ್‌ಸಿ., 32, ಕಾಲೇಜು ಸ್ಟ್ರೀಟ್. ಬೌ ಬಜಾರ್, ಕಲ್ಕತ್ತ.

*೯. ಟಿ. ಅಪ್ಪೂರಾಯರು, ಬಿ.ಎ., ಬಿ.ಎಲ್., ಅಡ್ವೊಕೇಟ್, ಬೆಂಗಳೂರು.

೧೦. ಡಿ. ಆದೆಪ್ಪನವರು, ಸಾಹುಕಾರರು, ಜುಮ್ಮಾಮಸೀದಿ ರಸ್ತೆ, ಬೆಂಗಳೂರು.

೧೧. ಮಾಗಡಿ ಕರಣಿಕ ಕೃಷ್ಣಮೂರ್ತಿರಾಯರು, ಜಮೀನ್‌ದಾರರು, ಬಸವನಗುಡಿ, ಬೆಂಗಳೂರು.

೧೨. ಎ. ಕೃಷ್ಣರಾಯರು, ಬಿ.ಎ., ವಿದ್ಯಾಭ್ಯಾಸದ ಇಲಾಖೆಯ ರಿ|| ಡೆ. ಇನ್|| ಜನರಲ್, ತುಮಕೂರು.

---

* ಈ ಗುರುತು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರ ಹೆಸರನ್ನು ತೋರಿಸುತ್ತದೆ.
† ಇವರು ಸಾಮಾನ್ಯ ಸದಸ್ಯರಾಗಿಯೂ ಇರುವರು.

ಮ॥ ರಾ॥ ಗಳಾದ

೧೩. ಎ. ಕೇಶವಯ್ಯನವರು, ರಿ॥ ಸ್ಕೂಲ್ ಮಾಸ್ಟರು, ಚಿಕ್ಕಬಳ್ಳಾಪುರ.

*೧೪. ಡಿ. ಕೊಂಗಾಡಿಯಪ್ಪನವರು, ರಿ॥ ಹೆ॥ ಮಾಸ್ಟರ್, ದೊಡ್ಡಬಳ್ಳಾಪುರ.

೧೫. ಎಂ. ಎಸ್. ಗೋಪಾಲರಾಯರು, ಎಲೆಕ್ಟ್ರಿಕಲ್ ಡಿಪಾರ್ಟಮೆಂಟು, ಮಲ್ಲೇಶ್ವರ, ಬೆಂಗಳೂರು.

೧೬. ಎಚ್. ಚೆನ್ನಕೇಶವಯ್ಯಂಗಾರ್ಯರು. ಕರ್ನಾಟಕ ಕಾಲೇಜು, ಧಾರವಾಡ.

೧೭. ವಿ. ಆರ್. ತ್ಯಾಗರಾಜ ಅಯ್ಯರವರು, ಎಂ.ಎ., ರಿಟೈರ್ಡ್ ಎಕ್ಸೈಜ್ ಕಮಿಷನರ್, ಬೆಂಗಳೂರು.

೧೮. ವೈ. ನರಸಿಂಗರಾಯರು, ಬಿ.ಎ., ಬಿ.ಎಲ್., ಡೈರೆಕ್ಟರು, ಗಂಧದ ಎಣ್ಣೆಯ ಕಾರ್ಖಾನೆ, ಬೆಂಗಳೂರು.

೧೯. ಸಿ. ಆರ್. ನರಸಿಂಹಯ್ಯಂಗಾರ್ಯರು, ಬಿ.ಎ., ಜಿಯಾಲೊಜಿಸ್ಟ್, ಕಡಕೊಳ, (ಮೈಸೂರು).

೨೦. ಪ್ರಾಕ್ತನವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು, ಎಂ.ಎ., ರಿ॥ ಡೈರೆಕ್ಟರು, ಶಾಸನದ ಇಲಾಖೆ, ಮಲ್ಲೇಶ್ವರ, ಬೆಂಗಳೂರು.

*೨೧. ಬಿ. ನರಹರಿ ಶಾಸ್ತ್ರಿಗಳು, ಹೆ॥ ಮಾಸ್ಟರ್, ಬಸವನಗುಡಿ, ಬೆಂಗಳೂರು.

೨೨. ಎಂ. ಎಸ್. ಪುಟ್ಟಣ್ಣನವರು, ಬಿ.ಎ., ರಿ॥ ಅಮಲ್ದಾರರು, ಬಸವನಗುಡಿ.

೨೩. ಡಿ. ಕೆ. ಭಾರದ್ವಾಜರು, ವಿದ್ಯಾಭೂಷಣ, ಬಸವನಗುಡಿ.

೨೪. ವೈ. ಕೆ. ರಾಮಚಂದ್ರರಾಯರು, ಬಿ.ಎ., ಎಲ್.ಸಿ.ಇ., ಎಂಜನಿಯರು, ಮೈಸೂರು ರೈಲ್ವೆ, ಶಿವಮೊಗ್ಗ.

೨೫. ಸಿ. ರಾಮರಾಯರು, ರಿ॥ ಸೀ॥ ಅ॥ ಕ॥, ಚಾಮರಾಜಪೇಟೆ, ಬೆಂಗಳೂರು.

೨೬. ರಾವ್ ಸಾಹೆಬ್ ಎಂ. ರಾಮರಾಯರು, ರಿ॥ ಫಾರೆಸ್ಟ್ ಆಫೀಸರ್, ಬಸವನಗುಡಿ

೨೭. ಎಂ. ಎ. ರಾಮಾನುಜಯ್ಯಂಗಾರ್ಯರು, ''ಕಾವ್ಯಕಲಾನಿಧಿ''ಯ ಸಂಪಾದಕರು, ಮೈಸೂರು.

೨೮. ವೀಣೆ ರಂಗಸ್ವಾಮಯ್ಯಂಗಾರ್ಯರು, ಜಮೀನ್‌ದಾರರು, ಶ್ರೀರಂಗಪಟ್ಟಣ.

*೨೯. ರಾಜಕವಿಭೂಷಣ ಎಚ್. ಲಿಂಗರಾಜ ಅರಸಿನವರು, ಅರಮನೆಯ ಮುಜರಾಯಿಬಕ್ಷಿ, ಮೈಸೂರು.

೩೦. ಎಚ್. ಕೆ. ವೀರಬಸವಯ್ಯನವರು, ಬಿ.ಎ., ಬಿ.ಎಲ್., ಸ್ಪೆಷಲ್ ಮ್ಯಾಜಿಸ್ಟ್ರೇಟ್, ಕೋಲಾರ.

೩೧. ಎಂ. ವೆಂಕಟಕೃಷ್ಣಯ್ಯನವರು, ''ಸಾಧ್ವೀ'' ಸಂಪಾದಕರು, ಮೈಸೂರು.

*೩೨. ಬಿ. ವೆಂಕಟನಾರಾಯಣಪ್ಪನವರು, ಎಂ.ಎ., ರಿ॥ ಕಾಲೇಜು ಪ್ರೊ॥, ಬಸವನಗುಡಿ.

೩೩. ಪಲಕೂರು ವೆಂಕಟರಮಣಯ್ಯನವರು, ವಿದ್ಯಾನಿಧಿ, ಪಲಕೂರು (ಕೋಲಾರ ಡಿ॥).

*೩೪. ಎನ್. ವೆಂಕಟೇಶ ಅಯ್ಯಂಗಾರ್ಯರು, ಬಿ.ಎ., ರಿ॥ ಮಿಟಿಯೊರೊಲಾಜಿಕಲ್ ರಿಪೋರ್ಟರು, ಚಾಮರಾಜಪೇಟೆ, ಬೆಂಗಳೂರು.

೩೫. ಬಿ. ವೆಂಕಟೇಶಾಚಾರ್ಯರು, ಎಂ.ಎ., ಪ್ರೊಫೆಸರ್, ಸೆಂಟ್ರಲ್ ಕಾಲೇಜು, ಬೆಂಗಳೂರು.

೩೬. ಕೆ. ಶಂಕರನಾರಾಯಣರಾಯರು, ಎಂ.ಎ., ಬಿ.ಎಲ್., ಗೌ॥ ಅಡ್ವೊಕೇಟ್, ಬೆಂಗಳೂರು.

೩೭. ಕೆ. ಶ್ರೀನರಸಿಂಹಯ್ಯನವರು, ಎಂ.ಎ., ಎಲ್.ಟಿ., ವಿದ್ಯಾಭ್ಯಾಸದ ಇಲಾಖಾ ಡೆಪ್ಯುಟಿ ಡೈರೆಕ್ಟರು, ಮೈಸೂರು.

ಮ|| ರಾ|| ಗಳಾದ

೩೮. ಟಿ. ಶ್ರೀನಿವಾಸರಾಘವಾಚಾರ್ಯರು, ರಿ|| ಕನ್ನಡ ಪಂಡಿತರು, ಟ್ರೈನಿಂಗ್ ಕಾಲೇಜು, ಮೈಸೂರು.

೩೯. ಎಂ. ಶ್ರೀನಿವಾಸರಾಯರು, ಬಿ.ಎ., ರಿ|| ಸರ್ಕಲ್ ಇನ್ಸ್ಪೆಕ್ಟರು, ಮೈಸೂರು.

*೪೦. ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ., ಕನ್ನಡ ಪ್ರೊಫೆಸರು, ಮೈಸೂರು.

(ಮುಂಬಯಿ ಪ್ರಾಂತದ ಸದಸ್ಯರು)

೪೧. ಅಣ್ಣಪ್ಪ ಫಡೆಪ್ಪ ಚೌಗುಲೆ, ಪ್ಲೀಡರ್, ಬೆಳಗಾಂವಿ.

೪೨. ಅಣ್ಣಾರಾವ್ ಬಿ. ಲಠ್ಠೆ, ಪ್ಲೀಡರ್, ಬೆಳಗಾಂವಿ.

*೪೩. ವಿ. ಬಿ. ಆಲೂರ್, ಬಿ.ಎ., ಎಲ್ಎಲ್.ಬಿ., "ಜಯಕರ್ನಾಟಕ"ದ ಸಂಪಾದಕರು, ಧಾರವಾಡ.

*೪೪. ಗಂಗಾಧರಪ್ಪ ಸಂಗಪ್ಪ ಸಾಬೋಜಿ, ವರ್ತಕರು, ಥಳಕವಾಡಿ (ಬೆಳಗಾಂ ಡಿ||).

*೪೫. ಆರ್. ಎ. ಜಹಗೀರ್‌ದಾರ್, ಎಂ.ಎ., ಎಲ್ಎಲ್.ಬಿ., ಹೈಕೋರ್ಟು ವಕೀಲರು, ಮುಂಬಯಿ.

೪೬. ರಾವ್ ಬಹದ್ದೂರ್ ವಿ.ಬಿ. ಜೋಶಿ, ಬಿ.ಎ., ರಿ|| ಪ್ರಿನ್ಸಿಪಾಲ್, ಟ್ರೈನಿಂಗ್ ಕಾಲೇಜು, ಧಾರವಾಡ.

*೪೭. ಎಸ್. ಆರ್. ದೇಶಪಾಂಡೆ, ಬಿ.ಎ., ಎಲ್ಎಲ್.ಬಿ., ಪ್ಲೀಡರು, ಧಾರವಾಡ.

೪೮. ರಾ. ಹ. ದೇಶಪಾಂಡೆ, ಎಂ.ಎ., ಮಾಳಮಡ್ಡಿ, ಧಾರವಾಡ.

೪೯. ವಿ. ಬಿ. ಧಾರವಾರಕರ್, ಬಿ.ಎ., ಕಾಮನಕಟ್ಟಿ, ಧಾರವಾಡ.

೫೦. ನಾರಾಯಣ ತಿರುಮಲರಾವ್ ದಾತಾರ, ವಕೀಲ್, ಬೆಳಗಾಂವಿ.

೫೧. ನಾರಾಯಣ ಶ್ರೀನಿವಾಸ ರಾಜಪುರೋಹಿತರು, ಶುಕ್ರವಾರಪೇಟೆ, ಧಾರವಾಡ.

*೫೨. ಆರ್. ಬಿ. ಪೋತದಾರ್, ಗಿಬ್‌ಟ್ರೈನ್, ಧಾರವಾಡ.

೫೩. ಎಸ್. ಆರ್. ಪೋತದಾರ್, ಆರ್ಟಿಸ್ಟು, ಠಾಕುರದ್ವಾರ್, ಮುಂಬಯಿ.

೫೪. ಬಿ. ಬಿ. ಬಾಗಿ, ಲೆಕ್ಚರರ್, ಕರ್ನಾಟಕ ಕಾಲೇಜು, ಧಾರವಾಡ.

೫೫. ಬಿ. ಎಸ್. ಬೆಟ್ಟಗೆರೆ, ಸೇರಗಲ್ಲಿ, ಬೆಳಗಾಂವಿ.

೫೬. ವಿ. ಎಸ್. ಮುಗದಾಳ್, ಬಿ.ಎ., ಅಸಿಸ್ಟೆಂಟು ಎಜ್ಯುಕೇಷನಲ್ ಇನ್ಸ್ಪೆಕ್ಟರು, ಗದಗ.

೫೭. ರಾವ್ ಬಹದ್ದೂರ್ ಕೆಂಭಾವಿ ರಾಘವೇಂದ್ರರಾಯರು, ಪ್ಲೀಡರು, ಬಿಜಾಪುರ.

೫೮. ವೆಂಕಟೇಶ ತಿರಕೋ ಕುಲಕರಣಿ ಗಳಗನಾಥರು, ಹಾವೇರಿ.

೫೯. ಶ್ರೀನಿವಾಸ ಪಾಂಡುರಂಗ ಕೋಟೇ, ರೇಂಜು ಫಾರೆಸ್ಟು ಆಫಿಸರ್, ಪಾಟಣ, ಬೆಳಗಾಂವಿ.

೬೦. ಶ್ರೀನಿವಾಸ ರಾಜೇರಾವ ಮಂಗಳವೇಡೆ, ಪತ್ರಿಕಾ ಕರ್ತರು, ಬಾಗಲಕೋಟೆ.

೬೧. ಸಣ್ಣಪ್ಪನಾಯಿಕ ರಾಮಚಂದ್ರನಾಯಿಕ ಪಡಕೂಟ, ಹಲಸಿಗೆ (ಬೆಳಗಾಂ ಡಿ||).

*೬೨. ರಾವ್ ಸಾಹೆಬ್ ಪಿ. ಜಿ. ಹಳಕಟ್ಟಿ, ಬಿ.ಎ., ಎಲ್ಎಲ್.ಬಿ., ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಪ್ಲೀಡರ್, ಬಿಜಾಪುರ.

೬೩. ಷಣ್ಮುಖಪ್ಪ ನಿಂಗಪ್ಪ ಅಂಗಡಿ, ಬಿ.ಎ., ಎಲ್ಎಲ್.ಬಿ., ಎಮ್.ಎಲ್.ಸಿ., ವಕೀಲ್, ಬೆಳಗಾಂವಿ.

೬೪. ಪಂಡಿತಪ್ಪ ರಾಯಪ್ಪ ಚಿಕ್ಕೋಡಿ, ಪ್ರೆಸಿಡೆಂಟ್, ಡಿ|| ಲೋ|| ಬೋರ್ಡ್, ಬೆಳಗಾಂವಿ.

ಮ|| ರಾ|| ಗಳಾದ

(ಉತ್ತರ ಕರ್ಣಾಟಕ ಸಂಸ್ಥಾನಗಳ ಸದಸ್ಯರು)

*೬೫. ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ, ವರ್ತಕರು, ಬನಹಟ್ಟಿ (ಬೆಳಗಾಂ ಡಿ||).

೬೬. ರಾಮಚಂದ್ರ ಶಂಕರ ಮಂಗಸೂಲಿ, ಶಿರಹಟ್ಟಿ (ಧಾರವಾಡ ಡಿ||).

(ಹೈದರಾಬಾದು ಪ್ರಾಂತದ ಸದಸ್ಯರು)

ಮ|| ರಾ|| ಗಳಾದ

೬೭. ಬಿ.ವಿ. ಕೃಷ್ಣಯ್ಯಂಗಾರ್ಯರು, ಎ| ಎಂಜನಿಯರ್ ಐ.ಬಿ., ನಲಗೊಂದ, ಹೈದರಾಬಾದು.

೬೮. ಜಿ. ಗಿರಿರಾಯರು, ಹೈಕೋರ್ಟು ಜಡ್ಜರು, ರೆಸಿಡೆನ್ಸೀ, ಹೈದರಾಬಾದು.

೬೯. ಟಿ. ಆರ್. ರಾಮರಾಯರು, ಬಿ.ಎ., ಕನ್ನಡ ಪ್ರೊಫೆಸರ್, ಹೈದರಾಬಾದು.

೭೦. ಎಂ. ಎಸ್. ಲಕ್ಷ್ಮೀನಾರಾಯಣರಾಯರು, ಬಿ.ಎ., ಎಲ್‌ಎಲ್.ಬಿ. ಹೈಕೋರ್ಟು ವಕೀಲರು, ಹೈದರಾಬಾದು.

೭೧. ಕೆ. ವೆಂಕಟರಾಯರು, ಕೋ-ಆಪರೇಟಿವ್ ಸೊಸೈಟಿಗಳ ಇನ್‌ಸ್ಪೆಕ್ಟರು, C/o ಕೆ. ರಾಮರಾಯರು, ಅಬಕಾರಿ ಕಂಟ್ರಾಕ್ಟರು, ಮುಷಾಬಾದ್, ಪರಿಘ, ಹೈದರಾಬಾದು.

೭೨. ಶಂಕರರಾವ್ ಗೋಪಾಲರಾಯರು, ಮನ್ಸಬ್ದಾರ್, ಗುಲ್ಬರ್ಗ.

೭೩. ನಾರಾಯಣಶಾಸ್ತ್ರೀ ಭಾವೂಶಾಸ್ತ್ರೀ, ಕೊಪ್ಪಳ.

(ಮದರಾಸು ಪ್ರಾಂತದ ಸದಸ್ಯರು)

ಮ|| ರಾ|| ಗಳಾದ

*೭೪. ಆರ್. ತಾತಾಚಾರ್ಯರು, ಎಂ.ಎ., ಎಲ್.ಟಿ., ಡಿಸ್ಟ್ರಿಕ್ಟು ಎಜ್ಯುಕೇಷನಲ್ ಆಫೀಸರು, ವೆಸ್ಟು ಗೋದಾವರಿ, ಮಚಲೀಬಂದರು.

*೭೫. ಎಚ್. ತಿಮ್ಮಕೃಷ್ಣರಾಯರು, ಬಿ.ಎ., ಬಿ.ಎಲ್., ಹೈಕೋರ್ಟು ವಕೀಲರು, ಬಳ್ಳಾರಿ.

*೭೬. ಎ. ರಾಜಗೋಪಾಲಕೃಷ್ಣರಾಯರು, ಜಮೀನ್‌ದಾರರು ಮತ್ತು ಪತ್ರಿಕಾ ಕರ್ತರು, ಉಡುಪಿ.

*೭೭. ಬಿ. ರಾಮರಾಯರು, ಎಂ.ಎ., ಎಲ್‌ಎಲ್.ಬಿ., ಸೀನಿಯರ್ ಟ್ರಾನ್ಸ್‌ಲೇಟರ್, ಮದರಾಸು.

೭೮. ಪತ್ತಿಕೊಂಡ ವೆಂಗಣ್ಣನವರು, ವರ್ತಕರು, ಹೊಸಪೇಟೆ.

(ಸದಸ್ಯತ್ವಕ್ಕೆ ದರಖಾಸ್ತು ಕಳುಹಿಸದಿರುವವರು)

೭೯. ಜಾವಳಿ ಗಣೇಶರಾಯರು, ಜಾವಳಿ, ಕಡೂರು ಡಿಸ್ಟ್ರಿಕ್ಟು.

೮೦. ತಿಮ್ಮೇಗೌಡರು, ಎಕ್ಸೈಸ್ ಕಂಟ್ರಾಕ್ಟರು, ಚಿಕ್ಕಮಗಳೂರು.

೮೧. ಪುರದಪ್ಪನವರು, ಪಟೇಲರು, ಶಿವನೆ, ಕಡೂರು ಡಿಸ್ಟ್ರಿಕ್ಟು.

೮೨. ರಾಮಚಂದ್ರ ವೆಂಕಟೇಶ ಗೊಂಬಿ, ಪಬ್ಲಿಕ್ ಹೆಲ್ತ್ ಆ||, ಎಸ್.ಆರ್.ಡಿ., ಬೆಳಗಾಂವಿ.

೮೩. ರಾಮಸ್ವಾಮಯ್ಯನವರು, ಎಕ್ಸೈಸ್ ಕಂಟ್ರಾಕ್ಟರು, ಚಿಕ್ಕಮಗಳೂರು.

೮೪. ಹನುಮಾಬೋಯಿಯವರು, ಕಂಟ್ರಾಕ್ಟರು, ಲಕ್ಕವಳ್ಳಿ, ಕಡೂರು ಡಿಸ್ಟ್ರಿಕ್ಟು.

ಸಾಮಾನ್ಯ ಸದಸ್ಯರು

(ಮೈಸೂರು ಪ್ರಾಂತದ ಸದಸ್ಯರು)

ಮ|| ರಾ|| ಗಳಾದ

*೮೫. ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ., ನ್ಯಾಷನಲ್ ಹೈಸ್ಕೂಲು, ಬೆಂಗಳೂರು.

೮೬. ಎ. ಕೃಷ್ಣಸ್ವಾಮಿ ಅಯ್ಯಂಗಾರ್ಯರು, ಬಿ.ಎ., ರಿ|| ಅ|| ಕ||, ಲಕ್ಷ್ಮೀಪುರ, ಮೈಸೂರು.

೮೭. ಬೇಲೂರು ಕೇಶವದಾಸರು, ಹರಿಕಥಾ ವಿದ್ವಾನ್, ದೇವರಾಜ ಮೊಹಲ್ಲಾ, ಮೈಸೂರು.

೮೮. ಪಿ.ಎಸ್. ಗೋವಿಂದರಾಯರು, ರಿ|| ಡೆ|| ಕನ್ಸರ್ವೇಟರ್, ನಜರಾಬಾದ್, ಮೈಸೂರು.

೮೯. ಎಂ. ಚಿನ್ನಕೃಷ್ಣಯ್ಯನವರು, ಕನ್ನಡ ಪಂಡಿತರು, ಹೈಸ್ಕೂಲ್, ಕೋಲಾರ.

೯೦. ಕಾರ್ಯದರ್ಶಿ, ಜೈನ ಎಜ್ಯುಕೇಷನ್ ಫಂಡ್ ಅಸೋಸಿಯೇಷನ್, ಮೈಸೂರು.

*೯೧. ತಿರುಮಲೆ ತಾತಾಚಾರ್ಯ ಶರ್ಮರು, ''ವಿಶ್ವಕರ್ಣಾಟಕ''ದ ಸಂಪಾದಕರು, ಬೆಂಗಳೂರು.

೯೨. ಕೆ. ದುಗ್ಗಪ್ಪಯ್ಯನವರು. ಶೇಕದಾರರು, ಹೊಸೂರು ಹೋಬಳಿ, ಶಿಕಾರಿಪುರ (ಶಿವಮೊಗ್ಗ ಡಿ||).

೯೩. ಎನ್. ನರಸಿಂಹಮೂರ್ತಿಯವರು, ಎಂ.ಎ., ಬಿ.ಎಲ್., ಯೂನಿವರ್ಸಿಟಿ ಲೈಬ್ರೇರಿಯನ್, ಮೈಸೂರು.

೯೪. ಎಸ್. ಕೆ. ನರಸಿಂಹಯ್ಯನವರು, ವರ್ತಕರು, ಶಂಕರಪುರ, ಬೆಂಗಳೂರು.

೯೫. ಕೆ. ಸಂಜುಂಡಶಾಸ್ತ್ರಿಗಳು, ಕರ್ಣಾಟಕ ಸಾಹಿತ್ಯ ಪರಿಷತ್ಪಂಡಿತರು, ಬಸವನಗುಡಿ.

೯೬. ಪಿ. ಪದ್ಮನಾಭಯ್ಯನವರು, ಹೆಡ್ ಮಾಸ್ಟರ್, ಸೂಲಿಕುಂಟೆ (ಕೋಲಾರ ಡಿ||).

೯೭. ಡಿ. ಕೆ. ದಾರಾಷಾ, ಬಿ.ಎ., ರಿ|| ಸೂಪರಿಂಟೆಂಡೆಂಟರು, ರೆವಿನ್ಯೂ ಸರ್ವೇ, ಮೈಸೂರು.

೯೮. ಬಿ. ಪುಟ್ಟಯ್ಯನವರು, ಬಿ.ಎ., ಸೂಪರಿಂಟೆಂಡೆಂಟರು, ಗ|| ಪ್ರೆಸ್. ಬೆಂಗಳೂರು.

೯೯. ಎಚ್. ಕೆ. ಮಲ್ಲಪ್ಪನವರು, ಎಕನಾಮಿಕ್ ಸೂಪರಿಂಟೆಂಡೆಂಟರು, ಹಾಸನ.

೧೦೦. ಟಿ. ಮೂದಯ್ಯನವರು, ತಿಮ್ಮಸಂದ್ರ (ಚೆನ್ನಪಟ್ಟಣದ ತಾ||).

*೧೦೧. ರಾವ್ ಬಹದ್ದೂರ್ ಡಾ|| ಸಿ. ಬಿ. ರಾಮರಾಯರು, ಬಿ.ಎ., ಎಂ.ಡಿ., ಬಸವನಗುಡಿ.

೧೦೨. ಪಟ್ಟಣಗೆರೆ ರಂಗಣ್ಣನವರು, ಜಮೀನ್ದಾರರು, ಪಟ್ಟಣಗೆರೆ (ಕಡೂರು ತಾ||).

೧೦೩. ಬಿ. ವಿ. ಲಕ್ಷ್ಮಣರಾಯರು, ರಿ|| ಅ|| ಕಮಿಷನರು, ಶಂಕರಪುರ, ಬೆಂಗಳೂರು.

೧೦೪. ಕೆ. ಲಕ್ಷ್ಮೀನರಸಿಂಹಯ್ಯನವರು, ಪೋಸ್ಟುಮಾಸ್ಟರು, ಬರೋಡ.

೧೦೫. ಸಿ. ವಾಸುದೇವಯ್ಯನವರು, ವಿದ್ಯಾಭ್ಯಾಸದ ಇಲಾಖೆಯ ರಿ|| ಅಸಿಸ್ಟೆಂಟರು, ಮಲ್ಲೇಶ್ವರ.

೧೦೬. ಎಂ. ವೆಂಕಟನಾರಾಯಣಪ್ಪನವರು, ಬಿ.ಎ., ಕಬ್ಬಿಣದ ಕಾರ್ಖಾನೆ, ಭದ್ರಾವತಿ.

೧೦೭. ಸಿ. ವೆಂಕಟರಮಣಶಾಸ್ತ್ರಿಗಳು, ''ಕಾದಂಬರೀ ಸಂಗ್ರಹ''ದ ಸಂಪಾದಕರು, ಚಾಮರಾಜನಗರ.

೧೦೮. ಎಂ. ವೆಂಕಟೇಶಅಯ್ಯಂಗಾರ್ಯರು, ಎಂ.ಎ. ಸೀನಿಯರ್ ಅ|| ಕಮಿಷನರು, ಮೈಸೂರು ಸಬ್-ಡಿವಿಜನ್, ಮೈಸೂರು.

*೧೦೯. ಬಿ. ಐ. ಶಾಮರಾಯರು, ರಿ|| ಫಾರೆಸ್ಟ್ ಆಫೀಸರ್, ಬಸವನಗುಡಿ.

ಮ।। ರಾ।। ಗಳಾದ

*೧೧೦. ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್ ಎಂ. ಶಾಮರಾಯರು, ಎಂ.ಎ., ವಿದ್ಯಾಭ್ಯಾಸದ ರಿ।। ಇ।। ಜನರಲ್, ಚಾಮರಾಜಪೇಟೆ, ಬೆಂಗಳೂರು.

೧೧೧. ಮ. ಎಸ್. ಶ್ರೀಕಂಠಯ್ಯನವರು, ಹೆ। ಮಾ।, ದೇವರಾಜ ಪ್ರೈಮರಿ ಸ್ಕೂಲ್, ಮೈಸೂರು.

೧೧೨. ಎಂ. ಆರ್. ಶ್ರೀನಿವಾಸಮೂರ್ತಿಗಳು, ಬಿ.ಎ., ಅಸಿಸ್ಟೆಂಟು ಇನ್ಸ್‌ಪೆಕ್ಟರ್, ಮಂಡ್ಯ.

೧೧೩. ನಿಟ್ಟೂರು ಶ್ರೀನಿವಾಸರಾಯರು, ಬಿ.ಎಸ್‌ಸಿ., ಬಿ.ಎಲ್., ಬಸವನಗುಡಿ, ಬೆಂಗಳೂರು.

೧೧೪. ತಿರುಮಲೆ ಶ್ರೀನಿವಾಸಾಚಾರ್ಯರು, ಹೆ। ಕ್ಲಾ।।, ಸ್ಪೆಷಲ್ ಕೋರ್ಟು, ಹಾಸನ.

೧೧೫. ಸಿ. ಶೇಷಾಚಾರ್ಯರು, ಎಂ.ಎ., ಮೀಟಿಯೊರೊಲಾಜಿಕಲ್ ರಿಪೋರ್ಟರು, ಬಸವನಗುಡಿ.

೧೧೬. ಬಿ. ಸುಬ್ಬರಾಯರು, ಎಲೆಕ್ಟ್ರಿಕಲ್ ಡಿಪಾರ್ಟಮೆಂಟು, ಬಸವನಗುಡಿ.

೧೧೭. ಸಿ. ಸುಬ್ಬರಾಯರು, ಎಂ.ಎ., ಸ್ಕೌಟು ಕಮಿಷನರ್, ಬೆಂಗಳೂರು.

*೧೧೮. ಕೆ. ಸಂಪದ್ಗಿರಿರಾಯರು, ಎಂ.ಎ., ನ್ಯಾಷನಲ್ ಹೈಸ್ಕೂಲ್, ಬೆಂಗಳೂರು.

೧೧೯. ಎಚ್. ಹನುಮಂತಯ್ಯನವರು, ಸ್ಕೂ। ಹೆ।। ಮಾ।, ಹೆಸರುಘಟ್ಟ (ಬೆಂಗಳೂರು ತಾ।।).

೧೨೦. ಎಚ್. ಹನುಮಂತರಾಯರು, ಕನ್ನಡ ಪಂಡಿತರು, ಹೈಸ್ಕೂಲು, ಚಿತ್ರದುರ್ಗ.

೧೨೧. ಎಸ್. ಹಿರಿಯಣ್ಣಯ್ಯನವರು, ಎಂ.ಎ., ಬಿ.ಎಲ್., ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್, ಬೆಂಗಳೂರು.

*೧೨೨. ಸಿ. ಕೆ. ವೆಂಕಟರಾಮಯ್ಯನವರು, ಎಂ.ಎ., ಎಲ್‌ಎಲ್.ಬಿ., ೩೪೨, ವಿಶ್ವೇಶ್ವರಪುರ, ಬೆಂಗಳೂರು.

೧೨೩. ದೇವುಡು ನರಸಿಂಹಶಾಸ್ತ್ರಿಗಳು, ಎಂ.ಎ., ಹೆ। ಮಾ।।, ಆರ್ಯನ್ ಸ್ಕೂಲ್, ಬಳೇಪೇಟೆ, ಬೆಂಗಳೂರು.

(ಮುಂಬಯಿ ಪ್ರಾಂತದ ಸದಸ್ಯರು)

ಮ।। ರಾ।। ಗಳಾದ

*೧೨೪. ಕೆ. ಜಿ. ಕುಂದಣಗಾರ, ಎಂ.ಎ., ಕನ್ನಡ ಪ್ರೊ।, ಕರ್ನಾಟಕ ಕಾಲೇಜು, ಕೊಲ್ಹಾಪುರ.

೧೨೫. ಎಸ್. ಎಸ್. ಕುಲಕರಣಿ, ಹೆ।। ಮಾ।।, ಉಣಕಲ್ಲು (ಹುಬ್ಬಳ್ಳಿ ತಾ।।).

೧೨೬. ರಾವ್‌ಜಿ ಬಾಲಕೃಷ್ಣ ಕುಲಕರಣಿ, ಅ।। ಮಾಡಲ್ ಇಂ। ಸ್ಕೂಲ್, ಬೆಳಗಾಂವಿ.

೧೨೭. ಜಿ. ಮಹಾಲಿಂಗಪ್ಪ ನಿರ್ಜಿ, ಬಿ.ಎ., ಎಲ್‌ಎಲ್.ಬಿ., ಹೈ। ವಕೀಲ್, ಹುಬ್ಬಳ್ಳಿ.

*೧೨೮. ಕೃ. ಪ. ಮುದವೇಡಕರ್, ''ಕರ್ನಾಟಕ ವೃತ್ತ''ದ ಸಂಪಾದಕರು, ಧಾರವಾಡ.

*೧೨೯. ಎನ್. ಕೆ. ಹುಯಿಲಗೋಳ್, ಬಿ.ಎ., ಎಲ್‌ಎಲ್.ಬಿ., ಪ್ಲೀಡರ್, ಗದಗ.

(ಮದರಾಸು ಪ್ರಾಂತದ ಸದಸ್ಯರು)

ಮ।। ರಾ।। ಗಳಾದ

೧೩೦. ಪಿ. ನರಸಿಂಗರಾಯರು, ಬಿ.ಎ., ಪ್ಲೀಡರು, ಬಳ್ಳಾರಿ.

೧೩೧. ರಾವ್ ಬಹದ್ದೂರ್ ಎಚ್. ನಾರಾಯಣರಾಯರು, ಎಂ.ಎ., ರಿ।। ಪ್ರೊಫೆಸರ್, 'ಶಂಕರಬಾಗ್', ಕೀಲ್ಪಾಕ್, ಮದರಾಸು.

೧೩೨. ಬಿ. ಭೀಮರಾಯರು, ಬಿ.ಎ., ಬಿ.ಎಲ್., ಹೈ।। ವಕೀಲ್, ಬಳ್ಳಾರಿ.

೧೩೩. ಉಳ್ಳಾಳ ಮಂಗೇಶರಾಯರು, ಹೆ। ಮಾ।, ಟ್ರೈನಿಂಗ್ ಸ್ಕೂಲ್, ಮಂಗಳೂರು.

೧೩೪. ಐ. ವಸುಪಾಲಪ್ಪನವರು, ವರ್ತಕರು, ಹರಪನಹಳ್ಳಿ.

ಮ|| ರಾ|| ಗಳಾದ

*೧೩೫. ಪಿ. ವೆಂಕೋಬಾಚಾರ್ಯರು, ಎಂ.ಎ., ಎಲ್‌ಎಲ್.ಬಿ., ವಕೀಲರು, ಬಳ್ಳಾರಿ.

*೧೩೬. ಕೆ. ಟಿ. ಶ್ರೀನಿವಾಸಾಚಾರ್ಯರು, ಬಿ.ಎ., ಎಲ್‌ಎಲ್.ಬಿ., ವಕೀಲರು, ಬಳ್ಳಾರಿ.

೧೩೭. ಡಿ. ಎಸ್. ಹನುಮಂತರಾಯರು, ಬಿ.ಎ., ಪ್ಲೀಡರು, ಬಳ್ಳಾರಿ.

೧೩೮. ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿಗಳು, ಬಿ.ಎ., ಎಲ್‌ಎಲ್.ಬಿ., ಪ್ಲೀಡರು, ಬಳ್ಳಾರಿ.

(ಕೊಡಗಿನ ಸದಸ್ಯರು)

ಮ|| ರಾ|| ಗಳಾದ

೧೩೯. ಬಿ. ಎಸ್. ಕೃಷ್ಣಮೂರ್ತಿಗಳು, ಶ್ರೀ ಕಾವೇರೀ ಪ್ರಿಂ|| ವರ್ಕ್ಸ್ ಮ್ಯಾನೇಜರ್, ಮಡಕೇರಿ.

೧೪೦. ಸಿ. ಎಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್., ಅಡ್ವೊಕೇಟ್, ಮಡಕೇರಿ.

*೧೪೧. ಎಸ್. ಆರ್. ಸುಬ್ಬಣ್ಣಯ್ಯನವರು, ಕಾಫೀ ಪ್ಲಾಂಟರು, ಸಿದ್ದಾಪುರ (ಕೊಡಗು).

೧೪೨. ಎಂ. ಎಸ್. ಸುಬ್ಬರಾಯರು, ಸ್ಕೂ|| ಮಾ||, ನಾಪೋಕ್ಲು.

(ಹೈದರಾಬಾದು ಪ್ರಾಂತದ ಸದಸ್ಯರು)

ಮ|| ರಾ|| ಗಳಾದ

*೧೪೩. ಕೃಷ್ಣರಾವ್ ಕಪಟ್ರಾಲ್, ಪ್ಲೀಡರ್, ಗುಲ್ಬರ್ಗ.

೧೪೪. ಎಂ. ಸಿ. ರಂಗಯ್ಯಂಗಾರ್ಯರು, ಅಸಿಸ್ಟೆಂಟ್ ಸೂ|| ಪಿ.ಡಬ್ಲ್ಯು., ಹೈದರಾಬಾದು.

೧೪೫. ಭೀಮಾಚಾರ್ಯ ಗೋವಿಂದಾಚಾರ್ಯ ಚಿಮಲ್ಕೀಕರ್, ಗೌಳಿಗುಡ್ಡ, ಹೈದರಾಬಾದು.

1215-28. ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ

ಶ್ರೀ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೧೩]　　ವಿಭವ ಸಂ॥ ಪುಷ್ಯ ಮಾಸ　　[ಸಂಚಿಕೆ ೪

[ಪ್ರಾಕ್ತನ ವಿಮರ್ಶವಿಚಕ್ಷಣ, ರಾವ್ ಬಹಾದೂರ್
ಮ॥ ರಾ॥ ನರಸಿಂಹಾಚಾರ್ಯ, ಎಂ.ಎ. ಅವರಿಂದ ಬರೆದುಬಂದುದು]

ಶಾಸನ ಪದ್ಯಮಂಜರಿ

ಅರಸಿಯ ಕೆರೆ, 87 (ಅನುಬಂಧ), ಸು. 1100

ಈ ಶಾಸನದಲ್ಲಿ ಚಾಳುಕ್ಯ ರಾಜನಾದ ತ್ರಿಭುವನಮಲ್ಲನ ಆಳಿಕೆಯಲ್ಲಿ ಹೊಯ್ಸಳ ರಾಜನಾದ ಎರೆಯಂಗನ ಸಾಮಂತ ಕಚ್ಚವೆರ್ಗಡೆ ಅರಸಿಯ ಕೆರೆಯಲ್ಲಿ ಕನ್ನೆಗೆರೆಯನ್ನು ಕಟ್ಟಿಸಿ ತೂಬನಿಕ್ಕಿಸಿದಂತೆ ಹೇಳಿದೆ.

ಕಚ್ಚವೆರ್ಗಡೆ

ಕಡಿತಲೆಗೊಂಡೊಡೆ ರಾವಣ।
ನೆಡಱಿದರಂ ಗೆಲಲಿವೇಡಿ ಬಿಲ್ಗೊಂಡೊಡೆ. ॥
ಘಡ ಮಾತರ್ಜುನನಹಿತರ।
ಪಡೆಯುಂ ಕೊಲ್ವೆಡೆಗೆ ಕಚ್ಚವೆರ್ಗಡೆ ಭೀಮಂ ॥

ಧರ್ಮದೊಳಂ ದಾನದೊಳಂ।
ಪೆರ್ಮೆಯೊಳಂ ಶೌಚ ಗುಣದೊಳಂ ಸತ್ಯದೊಳಂ ॥
ನೂರ್ಮಡಿಯಯ್ನೂರ್ಮಡಿ ಸಾ।
ಸಿರ್ಮಡಿ ಜಗದೊಳಗೆ ಕಚ್ಚವೆರ್ಗಡೆಯಾರ್ಗಂ ॥

ಚೆನ್ನಾಳ್ವರಸಿಯ ಕೆಱೆಯೊಳ್ ।
ಮುನ್ನಾರ್ಗಂ ಕರಮಸಾಧ್ಯಮೆನಿಸಿದ ಕೆಱೆಯಂ ॥
ಕನ್ನೆಗೆಱೆಯಾಗೆ ಕಟ್ಟಿಸಿ ।
ಸನ್ನುತನೀ ಧರೆಗೆ ಕಚ್ಚವೆರ್ಗಡೆ ನೆಗೞ್ದಂ ॥

ಉಱೆ ತಾನಗೞ್ಸೆ ತೀವಿದ ।
ಕೆಱೆಗಾದರದಿಂದೆ ತೂಂಬನಿಕ್ಕಿಸಿದಂ ಪೊ ॥
ನ್ನೞಿ ನೂೞಿ ಸಮೆಯೆ ಧರ್ಮ ।
ಕ್ಕೆಱೆವಟ್ಟನೆನಿಪ್ಪ ಕಚ್ಚವೆರ್ಗಡೆ ಮುದದಿಂ ॥

ಬೇಲೂರು, 335 (ಅನುಬಂಧ), 1138

ಇದರಲ್ಲಿ (ಹೊಯ್ಸಳ ರಾಜನಾದ ವಿಷ್ಣುವರ್ಧನನ ಆಳಿಕೆಯಲ್ಲಿ) ಹೆಗ್ಗಡೆ ಮಲ್ಲಿಮಯ್ಯನು ಜಿನಾಲಯವನ್ನು ಕಟ್ಟಿಸಿ ಭೂಮಿಯನ್ನು ಬಿಟ್ಟಂತೆ ಹೇಳಿದೆ.

ಜಿನಸ್ತುತಿ

ಶ್ರೀ ದೇವೇಂದ್ರ ನತಶ್ರೀ ।
ಪಾದಂ ಶ್ರೀಪದ ವಿನಮ್ರ ಶಿಷ್ಯ ಜನಂಗ ॥
ಳ್ಗಾದರದಿಂದಂ ಗೆಯ್ಗೆ ಬು ।
ಭೋದಯಮಂ ಮುಕ್ತಿವಲ್ಲಭಂ ಮಲ್ಲಿಜಿನಂ ॥

ಕೊಂಡಕುಂದಾನ್ವಯದ ಮಲ್ಲಿಮಯ್ಯ

ಮುನಿಜನದೋದಿಸಿದೋಜೆಯೊ ।
ಳನುವದಿಪುದಿದೊಂದೆ ಕೊಂಡಕುಂದಾನ್ವಯ ನಂ ॥
ದನ ವನ ಸುಕಮೆಂದೆನಗಿನಿ ।
ತನುಗ್ರಹಂಗೆಯ್ಗೆ ಕರುಣದಿಂ ಮುನಿ ನಿವಹಂ ॥

ಗಂಗರಾಜ

ಶ್ರೀಮಜ್ಜಿನ ಧರ್ಮಶ್ರೀ ।
ಧಾಮಂ ಶಕ್ತಿತ್ರಯ ಪ್ರವರ್ಧಿತ ವಿಷ್ಣು ॥
ಶ್ರೀಮುಖ್ಯಂ ರತ್ನತ್ರಯ ।
ಭೂಮಿ ಮಹಾಮಾನ ಮೇರು ಶೃಂಗಂ ಗಂಗಂ ॥

ಬೇಲೂರು, 93 (ಅನುಬಂಧ), ಸು. 1150

ಇದರಲ್ಲಿ ಹೊಯ್ಸಳ ರಾಜನಾದ ಒಸೆಯ ನಾರಸಿಂಹನ ಆಳಿಕೆಯಲ್ಲಿ ಚಟ್ಟಬೋವನು ದತ್ತಿಯನ್ನು ಬಿಟ್ಟಂತೆ ತೋರುತ್ತದೆ.

ವಿಷ್ಣುವರ್ಧನ

ದನುಜರ ಕುಳಮಂ ನಿರ್ಮೂ।
ಳನಮಂ ಮಾಡಲ್ಕೆ ಪುಟ್ಟಿದಂದಿನ ಕೃಷ್ಣಂ ॥
ಮನವೊಲ್ದು ಭೂಪ ಕುಳದೊಳ್।
ಜನಿಯಿಸಿ ಬಳೆದಂತೆ ವಿಷ್ಣುವರ್ಧನನಾದಂ ॥

ಮಲೆಯಂ ಸಾಧಿಸಿ ಕೊಂಗು ಚಂಗ ವಿಷಯ ಕ್ಷೋಣೀಶರಂ ಗೆಲ್ದು ದೋ।
ರ್ಬಲದಿಂ ಕಪ್ಪಮನೆಯ್ದೆ ಕೊಂಡರಿಗಳಂ ಬೆಂಕೊಂಡು ಗಂಗೋರ್ವಿಗಂ ॥
ಚಲದಿಂ ಕೂಡೆ ನೊಳಂಬವಾಡಿ ಮಹಿಗಂ ಶ್ರೀ ಕೃಷ್ಣವೇಣೀ ನದೀ।
ಜಲದಿಂ ದಕ್ಷಿಣ ಭೂಮಿಗಂ ಪತಿಯೆನಲ್ ಶ್ರೀ ವಿಷ್ಣು ಕಣ್ಗೊಪ್ಪಿದಂ ॥

ನಾರಸಿಂಹ

ಜನನಿಯ ಗರ್ಭದಿಂದೊಗೆದ ಲಗ್ನದ ಮೇಲೆ ಬಳಿಕ್ಕೆ ಯಾಮದೊಳ್।
ಜನಕನರಾತಿಯಂ ಕವಿಯ ಕಾಳೆಗದೊಳ್ ನೆರೆ ಕೊಂದು ಗೆಲ್ದು ಬಂ ॥
ದನುನಯದಿಂ ಪ್ರತಾಪ ನರಸಿಂಹನೆನಲ್ ಪೆಸರಿಟ್ಟು ಪಟ್ಟಮಂ।
ಜನಿಯಿಸಿದಂದು ಕಟ್ಟಿದನೆನಲ್ ದೊರೆವೆತ್ತುದು ರಾಜ್ಯ ಸಂಪದಂ ॥

ಹೊಳೆಯ ನರಸೀಪುರ, 90 (ಅನುಬಂಧ), 1171

ಈ ವೀರಗಲ್ಲಿನಲ್ಲಿ ಕೊಂಗಾಳ್ವ ರಾಜನಾದ ತ್ರಿಭುವನಮಲ್ಲ ವೀರದುಡ್ಡ ಕೊಂಗಾಳ್ವದೇವನ ಆಜ್ಞಾನುಸಾರವಾಗಿ ತಮ್ಮಡಿಯ ರುದ್ರನು ಪೊಳತೆಯ ಪೀಡಿಸ ಯುದ್ಧದಲ್ಲಿ ಕಾದಿ ಮಡಿದನೆಂದು ಹೇಳಿದೆ.

ತಮ್ಮಡಿಯ ರುದ್ರ

ಎರೆವರ್ಥಿಜನಕೆ ಸುರತರು।
ನಿರುತಂ ಕಾಮಿನಿಯರಲ್ಲಿ ಗಭಿನವ ಕಾಮಂ ॥
ಪರಬಳಕೆ ಭೀಮಸೇನಂ।
ಹರ ಪದ ಯುಗ ಭೃಂಗನೆನಿಪ ತಮ್ಮಡಿ ರುದ್ರಂ ॥

ಕ್ಷುದ್ರತೆಯಿಲ್ಲದೆ ರಣದೊಳ್।
ಭದ್ರಗಜಂ ಪರಿದು ತಾಗುವಂತರಿ ಬಳಮಂ ॥
ರೌದ್ರಾಕಾರದೆ ಕೊಲ್ಗುಂ।
ರುದ್ರಂ ಕಾಳಾಗ್ನಿರುದ್ರನಂದದಿನಾಗಳ್ ॥

ಧರಣೀಪತಿ ಕೊಂಗಾಳ್ವಂ।
ಗನುವರವಾದೆಡೆಗೆ ಪರಿದು ತಮ್ಮಡಿ ರುದ್ರಂ ॥

ಪರಬಳವನಿರ್ಱಿದು ತರ್ಱಿದೊಡೆ।
ಸುರ ಕಾಂತೆಯರುಯ್ದ್ದುರವನನತಿಮುದದಿಂದಂ ॥

ಅರಸಿಯು ಕೆರೆ, 241 (ಅನುಬಂಧ), 1189

ಇದರಲ್ಲಿ ಹೊಯ್ಸಳರಾಜನಾದ ೨ನೆಯ ಬಲ್ಲಾಳನ ಆಳಿಕೆಯಲ್ಲಿ ಗಣಪಯ್ಯನು ದೇವಯ್ಯನಹಳ್ಳಿಯಲ್ಲಿ ಮಲ್ಲಿಕಾರ್ಜುನ ದೇವಸ್ಥಾನವನ್ನು ಕಟ್ಟಿಸಿ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಮಲೆಯಂ ಸಾಧಿಸಿ ಮಾಣ್ದನೇ ತಳವನಂ ಕಾಂಚೀಪುರಂ ಕೋಯತೂರ್ ।
ಮಲೆನಾಡಾ ತುಳುನಾಡು ನೀಲಗಿರಿಯಾ ಕೋಳಾಲವಾ ಕೊಂಗು ನಂ॥
ಗಲಿಯುಚ್ಚಂಗಿ ವಿರಾಟರಾಜನಗರಂ ವಲ್ಲೂರಿವೆಲ್ಲಂ ಸ್ವದೋ।
ರ್ಬಲದಿಂ ಲೀಲೆಯೆ ಸಾಧ್ಯಮಾದುವೆಣೆಯಾರ್ ವಿಷ್ಣುಕ್ಷಮಾಪಾಳನೊಳ್ ॥

ಬಲ್ಲಾಳ II

ಇದು ಸರ್ವಗ್ರಾಸಂಗೊ।
ಳ್ವುದು ಭಾಸ್ವದ್ರಾಜ ಮಂಡಳಂಗಳನಿಂ ಮೋ ॥
ಕ್ಷದ ದೆಸೆಯಿಲ್ಲೆಂಬಿನಮಿಾ।
ಯದುಪತಿ ಬಲ್ಲಾಳ ಬಾಹು ರಾಹು ವಿಚಿತ್ರಂ ॥

ಬೇಲೂರು, 375 (ಅನುಬಂಧ), 1195

ಇದರಲ್ಲಿ ಹೊಯ್ಸಳರಾಜನಾದ ೨ನೆಯ ಬಲ್ಲಾಳನ ಆಳಿಕೆಯಲ್ಲಿ ಮಹದೇವನು ಈಶ್ವರ ಪ್ರತಿಷ್ಠೆಯನ್ನು ಮಾಡಿ ಭೂಮಿಯನ್ನು ಬಿಟ್ಟಂತೆ ಹೇಳಿದೆ.

ಹೊಯ್ಸಳ ಎಂಬ ಹೆಸರು

ಸಳನೆಂಬನಾಗೆ ಯಾದವ।
ಕುಳದೊಳ್ ಪುಲಿ ಪಾಯೆ ಕಂಡು ಮುನಿ ಪುಲಿಯಂ ಪೊಯ್ ॥
ಸಳ ಎನೆ ಪೊಯ್ದುದರ್ಱಿಂ ಪೊ।
ಯ್ಸಳವೆಸರವನಿಂದಮಾಯ್ತು ತದ್ವಂಶಜರೊಳ್ ॥

ವಿನಯಾದಿತ್ಯ

ವಿನಯಂ ಪ್ರತಾಪಮೆಂಬೀ।
ಜನನಾಥೋರ್ಜಿತ ಚರಿತ್ರ ಯುಗದಿಂ ಜಗದೊಳ್ ॥
ಜನ ನಯನಮೆನಿಸಿ ನೆಗರ್ಳ್ದಂ।
ವಿನಯಾದಿತ್ಯಂ ಸಮಸ್ತ ಭುವನ ಸ್ತುತ್ಯಂ ॥

ಬಲ್ಲಾಳ II

ಆ ವಿಭುವಿನ ಪಟ್ಟಮಹಾ।
ದೇವಿಗೆ ಸದ್ಗುಣ ಚರಿತ್ರದಿಂದಂ ಸೀತಾ ॥
ದೇವಿಗೆ ಮಿಗಿಲಾದೇಚಲ।
ದೇವಿಗೆ ಬಲ್ಲಾಳ ದೇವನುದಯಂಗೆಯ್ದಂ ॥

ಮಹದೇವ

ಸಹವಾಸಿಪ್ರವರಂ ಮಹಾ ಭರತ ಶಾಸ್ತ್ರಾಂಭೋಜಿನೀ ಪ್ರೋಲ್ಲಸ।
ನ್ಮಿಹಿರಂ ಗೌತಮಗೋತ್ರ ವಾರ್ಧಿ ವಿಲಸತ್ಪೂರ್ಣೇಂದು ವರ್ಣಂ ತ್ರಯೀ ॥
ಮಹಿತಂ ವಿಶ್ವಜನಾಗ್ರಗಣ್ಯನನವದ್ಯಾಪಾರ ಪುಣ್ಯೋದಯಂ।
ಮಹದೇವಂ ಮನವೊಲ್ದು....ಮಮಹೇಶ ಸ್ಥಾಪನಂ ಮಾಡಿದಂ ॥

ಬೇಲೂರು, 361 (ಅನುಬಂಧ), ಸು. 1200

ಈ ವೀರಗಲ್ಲಿಸಲ್ಲಿ ಹೊಯ್ಸಳರಾಜನಾದ ೨ನೆಯ ಬಲ್ಲಾಳನ ಆಜ್ಞಾನುಸಾರವಾಗಿ ಅರಹಲ್ಲ, ಮದ್ದ ಎಂಬ ಸಹೋದರರು ಹಾನಿಯ ಕೋಟೆಯ ಯುದ್ಧದಲ್ಲಿ ಕಾದಿ ಮಡಿದರೆಂದು ಹೇಳಿದೆ.

ತೊಡೆ ಕಡಿವೋಗೆ ಕತ್ತು ಬಿಡೆ ಕಿಬ್ಬರಿಯಿಬ್ಬಗಿಯಾಗೆ ಪೇರುರಂ।
ಪಡಿದೆಱೆದಂತೆ ಬಾಯ್ದೆಱೆಯೆ ನೆತ್ತರ ಸುಟ್ಟುಱೆ ಮುಂದಮುಪ್ಪಿನಂ ॥
ಕಡಿತಲೆಯಿಂ ಸಿಡಿಲ್ ಪೊಡೆವವೋಲ್ ಪೊಡೆದಿಕ್ಕಿದರಾಂತ ಬೀರರಂ।
ತೊಡರ್ದರಹಲ್ಲನಾಯಕನುಮಾತನ ತಮ್ಮನೆನಿಪ್ಪ ಮದ್ದನುಂ ॥

ಹಾನಿಯ ಕೋಟೆಯ ಬವರದೊ।
ಳೇನುಂ ಸೆರಗಿಲ್ಲದಿಱಿದು ಮದ್ದಂ ದಿವಿಜಾ ॥
ಸ್ಥಾನಕ್ಕೆ ಪೋಗೆ ಪಗೆಯಂ।
ತಾನುಂ ತಳ್ತಿಱಿದು ಪೋದನೆಸೆವೆರಹಲ್ಲಂ ॥

ಪೆಣದ ಬಣಂಬೆ ನೆತ್ತರ ಕಡಲ್ ಕಿಱುಗಂಡದರಾಸಿ ಸುತ್ತಲುಂ।
ಕಣಕೆನೆ....ದ ಪಂದಲೆಯ....ಮರುಳ್ ಪಱೆಗುಟ್ಟೆ ಕಂಡದಿಂ ॥
ಕುಣಿವರಿ ವೀರರಟ್ಟೆ ಕರಮದ್ಭುತವಾಗಿರೆ ಯೋಗಿನೀ ಗಣ।
ಕ್ಕುಣಿಸಿನ ತಾಣಮಾದುದರಹಲ್ಲನ ಮದ್ದನ ಗೆಲ್ದ ಕೊಳ್ಗುಳಂ ॥

ಅರಸಿಯ ಕೆರೆ, 216 (ಅನುಬಂಧ), ಸು. 1200

ಇದರಲ್ಲಿ ಹೊಯ್ಸಳರಾಜನಾದ ೨ನೆಯ ಬಲ್ಲಾಳನ ಆಳಿಕೆಯಲ್ಲಿ ಎರಹಿಸೆಟ್ಟಿ ಕಲಿದೇವರಿಗೆ ಭೂಮಿಯನ್ನು ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಪರ ಮಂಡಳದಿಂ ರಕ್ಷಿಸಿ।
ಪರಿವಾರಮನಾತ್ಮ ಧಾತ್ರಿಯಂ ಭೂಸುರರ್ಗಂ ॥
ಸುರ ಪೂಜೆಗಮಿತ್ತನದಾರ್।
ದೊರೆ ವಿಷ್ಣು ನೃಪಂಗೆ ಬಳದೊಳಂ ದಾನದೊಳಂ ॥

ಬಲ್ಲಾಳ II

ಕರಿಗಳ್ ಪಣ್ಣಿದ ಪೊನ್ನ ಪಣ್ಣುಗೆಯುವೊಂದೇಱಿತೆಂಟು ನೂಱಿತಿಱ್ದಿ ಪೆ।
ರ್ದೆರೆಗಳ್ ಮೆಯ್ಯುಡೆದಂದದಿಂ ಕವಿವ ಜಾತ್ಯಶ್ವಂಗಳೇಱಿತೆಂಟು ಸಾ ॥
ಯಿರಮಸ್ತ್ರದ್ಯುತಿ ತಳ್ತ ಪಾಯ ದಳವೊಂದೇಱಿತೆಂಟು ಲಕ್ಕಂ ತೆರ।
ಳ್ತರೆ ಹುಃ ಸೇವುಣರಂ ಪಡಲ್ವಡಿಸನೇ ಬಲ್ಲಾಳನೊಂದಾನೆಯಿಂ ॥

ಅರಸುಗಳೆಂಬವರ್ ಬವರದೊಳ್ ಸೆರಗಿಂ ಪೆಱಗಿರ್ಪ ಬುದ್ಧಿಯಿಂ।
ದರ ನೆಲೆಯೆಂದು ಮಾಡಿ ಪೆಱಸಂ ಪೆಱರಿಂದಮೆ ಗೆಲ್ವರಲ್ಲದಿಂ ॥
ತಿರೆ ಪೆಱಗಾಗೆ ತನ್ನ ಬಲಮನ್ಯಬಲಂ ಬೆಱಗಾಗಲೊಂದೆ ಸಿಂ।
ಧುರದೊಳೆ ಗೆಲ್ವರೇ ಪಗೆಯನಾರ್ ಸಮಸಿಂತಸಹಾಯ ಶೂರನೊಳ್ ॥

ಶಿವಶಕ್ತಿ

ಕುಮತಮನೊಳ್ಪುವೆತ್ತ ನುಡಿಯಿಂ ನೆಱೆ ಭಂಗಿಸಿ ಪೆಂಪುವೆತ್ತ ಶೈ।
ವಮನಿಳೆಯೊಳ್ ಪ್ರತಿಷ್ಠಿಸಿ ಪರಾಕ್ರಮದಿಂದಮಿದಿರ್ಚೆ ತನ್ನ ವಿ ॥
ಕ್ರಮದೊಳದಿರ್ಪಿ ತಾನೆ ಪಡೆದಂ ಸಮಯ ಪ್ರತಿಪಾಳಕ ಪ್ರಭು।
ತ್ವಮನೆಲೆ ಪಾಟಿಯಾರೊ ಶಿವಶಕ್ತಿಯೊಳೀ ಮಹದೇವ ಜೀಯನೊಳ್ ॥

ಚಂದ್ರಭೂಷಣ

ಪ್ರತಿಮಾ ಲಕ್ಷಣಯುಕ್ತನೆಂದು ವಿದಿತ ಪ್ರಾಸಾದ ಸಲ್ಲಕ್ಷಣಾ।
ನ್ವಿತನೆಂದೀಶ ಪದಾರ್ಚನಾ ವಿಧಿ ವಿಧಾನ ಪ್ರೌಢನೆಂದನ್ಯ ದು ॥
ರ್ಮತ ನಿರ್ಮೂಳಕನೆಂದು ಧಾತ್ರಿ ಪೊಗೞ್ಗುಂ ಕಾಳಾಮುಖಸ್ಥಾಪಕೋ।
ದ್ಧತನಂ ಸದ್ಗುಣ ಚಂದ್ರಭೂಷಣನನುದ್ಯದ್ದಾನಿಯಂ ಮಾನಿಯಂ ॥

ರಾಜಪೂರ್

ಮದನಂಗೆ ರಾಜಪೂರ್ ಸುಖ।
ಸದನಂ ಬೆಳೆದಿರ್ಪ ಕೞ್ಮೆಯಿಂ ಕೆಯ್ವೊಲದಿಂ ॥
ಪುದಿದೊದವಿದ ಬನದಿಂ ತುಂ।
ಬಿದ ಕೆಱೆಯಿಂ ಫಳಿತವಾದ ತೆಂಗಿಂ ಕೌಂಗಿಂ ॥

ಅರಸಿಯ ಕೆರೆ, 217 (ಅನುಬಂಧ), 1232

ಇದರಲ್ಲಿ ಹೊಯ್ಸಳ ರಾಜನಾದ ೨ನೆಯ ನಾರಸಿಂಹನ ಆಳಿಕೆಯಲ್ಲಿ ದಾಮೋದರ ಸೆಟ್ಟಿ ಬೆಂಡೆಯ ಕೆರೆಯಲ್ಲಿ ದಾಮೋದರೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಯದುಕುಲ ವಾರ್ಧಿ ವರ್ಧನ ಸುಧಾಕರನುನ್ನತ ಕೀರ್ತಿಯುಕ್ತನ।
ತ್ಯುದಿತ ಯಶೋಭಿರಾಮನತಿಧಾರ್ಮಿಕನಾಹವ ಭೀಮ ಸತ್ಯ ಸಂ ॥
ಪದನತಿ ಧೀರನುನ್ನತ ಗಭೀರನುದಾರನೆನಿಪ್ಪ ಪೆಂಪಿನಿಂ।
ದುದಧಿ ಪರೀತ ಭೂತಳಮುಮಂ ನೆಱೆ ತಾಳ್ದಿದ ವಿಷ್ಣುವರ್ಧನಂ ॥

ಬಲ್ಲಾಳ II

ಮುಳಿಸಿಂದೆಱ್ಱಿಂದು ನಮ್ಮಂ ಬಳಸಿದೊಡರಿದಿಂತೀತನೊಳ್ ಕಾದಲುಂ ನ।
ಮ್ಮಳವಲ್ಲಂ ಕಾಣ್ಬಮೆಂದಾ ರಿಪು ನೃಪರಗಿದೆಯ್ತಂದು ದೇವಮ್ಮ ನೆಮ್ಮ ॥
ಸ್ಥಳದಿಂ ಬಟ್ಟೆಱ್ಱಿ ಪೋಪಂತಿರೆ ನೆನೆಯದಿರೆಂದರ್ಥ ಹಸ್ತ್ಯಶ್ವ ರತ್ನಾ।
ವಳಿಯಂ ತಂದಿತ್ತು ಪಾದಕ್ಕೆಱಗುವರಿರದಾ ವೀರಬಲ್ಲಾಳಗೆಂದುಂ ॥

ನಾರಸಿಂಹ II

ಉದಯಿಸಿದಂ ದಿವಾಕರನ ತೇಜದವೋಲ್ ಭವನಂತೆ ಶಕ್ತಿಯಿಂ।
ದುದಧಿಯ ಮಾೞ್ಕೆಯಿಂದತಿ ಗಭೀರತೆ ಮೇರುವಿನಂತೆ ಬಿಣ್ಪಿನಿಂ ॥
ಪದುಮಜನಂತಿರತ್ಯಧಿಕ ವಿದ್ಯೆಯೊಳಚ್ಯುತನಂತುಪಾಯದಿಂ।
ದೊದವಿ ನಿರಂತರಂ ಧರೆಯ ತಾಳ್ದಿದನೀ ನರಸಿಂಹ ಭೂಭುಜಂ ॥

ಪೊಡೆವ ನಿಸಾಳ ಕಾಹಳ ರವಂಗಳನಾಲಿಸಿ ವೈರಿ ರಾಯರಾ।
ರ್ಪೊಡರಿಪ ಶಕ್ತಿಯಂ ಬಿಸುಟು ಕೈಮುಗಿಸಂಜಕೆಯಿಂದೆ ಬಂದು ನಿ ॥
ನ್ನೊಡನೆ ವಿರೋಧಮಂ ನೆಗೞ್ದಿರಾರ್ ಬದುಕಿರ್ಪರದೆಲ್ಲಿ ಪೊಕ್ಕಪರ್।
ಕಡುಪನೆ ಮಾಣ್ಬ ಕಾವುದೆನುತಿರ್ಪರು ವೀರನೃಸಿಂಹರಾಯನೊಳ್ ॥

ತನಗಿದಿರಾಗಲಂಜಿ ಶರಣೆಂದವರ್ಗಿತ್ತಭಯಪ್ರದಾನಮಂ।
ತನಗಿದಿರಾಂತ ವೈರಿ ನೃಪರಂ ಪಲರಂ ತವೆ ಕೊಂದು ವಸ್ತು ವಾ ॥
ಹನ ತತಿಯಂ ಧರಿತ್ರಿಯ ನಿಜಾಸಿಯೊಳಂ ನೆಱೆ ಕೊಂಡು ಕೀರ್ತಿ ಕಾ।
ಮಿನಿಯನಿಳಾ ಜಯಾಂಗನೆಯನೊಲ್ದಿದನೀ ನರಸಿಂಹ ಭೂಭುಜಂ ॥

ದಾಮೋದರ ಸೆಟ್ಟಿಯ ಧರ್ಮ

ಕಟ್ಟಿಸಿದ ಕೆಱೆ ಸುರಾಲಯ।
ವಿಟ್ಟಾರವೆ ಪಲವು ಸತ್ರಮಱವಂಟಿಗೆಯುಂ ॥

ನೆಟ್ಟನೆ ಗಣಿಸಲ್ ನೆಱೆಯರಿಯಂ ।
ಸಿಟ್ಟಿಯ ಮಾಡಿದ ಚತುರ್ಮುಖಂ ನರರಳವೇ ॥

ಹೊಳೆಯ ನರಸೀಪುರ, 93 (ಅನುಬಂಧ), 1238

ಇದರಲ್ಲಿ ಹೊಯ್ಸಳ ರಾಜನಾದ ಸೋಮೇಶ್ವರನ ಆಳಿಕೆಯಲ್ಲಿ ಮಹಾಪಸಾಯಿತ ಸೋವಣ್ಣನು ಎಳ್ಳೇಶ್ವರ ದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಸೋವಣ್ಣ

ಸ್ಥಿರತರ ರೂಪು ಸಾಹಸದೊಳೊಂದಿದ ಪೌರುಷದೋಜೆಯಿಂ ನಿರಂ ।
ತರದೊಳೆ ಧೈರ್ಯ ಗುಣ್ಪು ನಿಜ ತೇಜವೊಡಂಬಡೆ ಸತ್ಯದಿಂ ಕರಂ ॥
ಸುರುಚಿರಮಾದ ಬಲ್ಪು ಧೃತಿ ದಾನಗುಣಂ ಸುಭಗತ್ವ ಶೌಚಮುಂ ।
ಸ್ಫುರಿಯಿಪ ಸತ್ವದಿಂ ನೆಗೞ್ದಿ ನಾಗನ ಸೋಮನ ನೈಜಮೀ ಗುಣಂ ॥

ಧುರದೊಳಿದಿರ್ಚಿದನ್ಯ ಸುಭಟಾಳಿಯ ಕಂಡು ಕನಲ್ದ ಕೋಪದಿಂ ।
ದುರವಣೆಯಿಂದಮೇಱಿ ನಿಜ ಖಡ್ಗದೆ ಪೊಯ್ದೊಡೆ ಸೀಸಕಂ ಶಿರಂ ॥
ಉರದ ತದೀಯ ಗದ್ದಿಗೆಯ ಪಲ್ಲಣವಂದಳ ಪಕ್ಕರಕ್ಕೆಯುಂ ।
ತುರಗಮನುರ್ಚಿತಾ ನಿಜದ ತೋಳ್ವಲ ನಾಗನ ಸೋಮನುರ್ವಿಯೊಳ್ ॥

ಹೊಳೆಯ ನರಸೀಪುರ, 83 (ಅನುಬಂಧ), 1303

ಈ ವೀರಗಲ್ಲಿನಲ್ಲಿ ಹೊಯ್ಸಳ ರಾಜನಾದ ೩ನೆಯ ಬಲ್ಲಾಳನ ಆಳಿಕೆಯಲ್ಲಿ ಸೋಮೆಯ ದಣ್ಣಾಯಕನು ಬೆಮ್ಮತ್ತೂರು ಕಲ್ಲಿನ ಯುದ್ಧದಲ್ಲಿ ಸೇವುಣರ ಸೇನಾನಾಯಕನಾದ ಕಂಪಿಲದೇವನೊಡನೆ ಕಾದಿ ಮಡಿದನೆಂದು ಹೇಳಿರುವಂತೆ ತೋರುತ್ತದೆ.

ಸೋಮೆಯ ದಣ್ಣಾಯಕ

ಜೀಯೆನುತಿರೆ ಪರಿವಾರಂ ।
ರಾಯಂ ಬಲ್ಲಾಳದೇವ ಚಾಗೆನೆ ರಿಪುಗಳ ॥
ಬಾಯನೊಱೆಮಾಡಿ ಖಡ್ಗಮ ।
ನಾಯತದಿಂ ತೊಡಿಸುತಿರ್ಪ ಮಯ್ದುನ ಸೋಮಂ ॥

ಅರ್ಜುನವಾಡದ (ಬೆಳಗಾಂ ತಾಲೂಕು) ಶಾಸನ,[1] 1259

ಈ ಶಾಸನದಲ್ಲಿ ಸೇವುಣ ರಾಜನಾದ ಕನ್ನರನ ಆಳಿಕೆಯಲ್ಲಿ ಮಹಾಪ್ರಧಾನ ನಾಗರಸನೂ ಚವುಡಿಸೆಟ್ಟಿಯೂ ಕವಿಳಾಸಪುರದ ಈಶ್ವರ ದೇವಸ್ಥಾನಗಳಿಗಾಗಿ ಬಸವನ ವಂಶೋದ್ಭವನಾದ ಯತಿರಾಯ ಹಾಲಬಸವದೇವನಿಗೆ ಭೂಮಿಯನ್ನು ಕೊಟ್ಟಂತೆ ಹೇಳಿದೆ.

1. ಶಿವಾನುಭವ III, 94.

ಶಿವಸ್ತುತಿ

ಶ್ರೀಯುಂ ಶ್ರೀ ಕಲ್ಲಿನಾಥಂ ಕುಡುಗೆ ಭವಹರಂ ಭಕ್ತ ಬೃಂದಕ್ಕೆ ಗೌರೀ।
ಜಾಯಾ ಕಾಯಾನುಷಂಗಾಕಲಿತ ಲಲಿತತಾ ಪ್ರೋಲ್ಲಸದ್ವಾಮ ಭಾಗಂ ॥
ಸ್ವೀಯಸ್ವಾಯತ್ತ ಶಕ್ತಿತ್ರಯಮಯ ಮಹಿಮಂ ದೇವ ದಾಯಾದ ಮಾಯಾ।
ಪಾಯಾಭಿಪ್ರಾಯ ಲೀಲಂ ಪ್ರಣತ ಜನ. . ತಾಪ ಸಂಘಟ್ಟ ಶೀಲಂ ॥

ಬಸವ

ಮಂಗಳ ಕೀರ್ತಿ ಪುರಾತನ।
ಜಂಗಮ ಲಿಂಗೈಕಭಕ್ತಿ ನಿರ್ಭರ ಲೀಲಾ ॥
ಸಂಗಂ ಸಂಗನ ಬಸವಂ।
ಸಂಗತಿಯುಂ ಮಾೞ್ಕೆ ಭಕ್ತಿಯೊಳಗನವರತಂ ॥

ಕನ್ನರ

ಯಾದವ ಭೂಮಿಪಾಳರಿಳೆಯಂ ಚತುರಬ್ಧಿಪರೀತೆಯಂ ನಿಸ।
ಗೋದಯರಾಳ್ವರಂತವರೊಳಶ್ವ ಚಮೂ ಚಯ ವಾರ್ಧಿ ಸಿಂಹಣ ॥
ಕ್ಷ್ಮಾದಯಿತಂ ತದಗ್ರತನಯ ಪ್ರಭವಂ ನೃಪಕನ್ನರಂ ಸಮ।
ಸ್ತೋದಧಿವೇಳೆಯಿಂ ಪೊಱಗೆ ಬೆಳ್ಗೊಡೆಯೊಳ್ನೆೞಲಂ ನಿಮಿರ್ಚಿದಂ ॥

ಸಲೆ ಭೂದೇವರ್ಕಳ್ಗೆ।
ತ್ತಲಸದೆ ಗೋ ಭೂಮಿ ಹೇಮ ವಸ್ತ್ರಾದಿಗಳಂ।
ಮಲೆವರಸುಗಳೊಳ್ ಕೊಳ್ವಂ।
ಬಲವಂತಂ ಕನ್ನರಂ ಪ್ರತಾಪ ಸಹಾಯಂ ॥

ಚಾವುಂಡ

ಚಾವುಂಡಂ ಪಾರ್ವತೀವಲ್ಲಭ ಚರಣ ಸರೋಜದ್ವಯಾಮೋದ ಭೃಂಗಂ।
ಚಾವುಂಡಂ ತ್ಯಾಗ ಭೋಗಾನುಭವ ಭವ ಸುಖಶ್ರೀ ವಧೂ ನೃತ್ಯರಂಗಂ ॥
ಚಾವುಂಡಂ ಸಾಮ ಭೇದಪ್ರಭೃತಿ ಸಕಲ ಮಂತ್ರಾಂಗ ವಿದ್ಯಾ ಸಮುದ್ರಂ
ಚಾವುಂಡಂ ವೀರ ವೈರಿಪ್ರಕರ ಸಮರ ಸಂಘಟ್ಟ ಕಾಲಾಗ್ನಿರುದ್ರಂ ॥

ನಾಗ

ತ್ಯಾಗ[ಗುಣಕ್ಕೆ ತಾಯ್ಮನೆ ಸಮಸ್ತ ನೃಪಾಲ ನಿಯೋಗ ವರ್ತನಾ।
ಶ್ರೀಗೆ ನಿವಾಸಮಿಷ್ಟರ ವಿಶಿಷ್ಟರ ತೋಷಣ ಪೋಷಣಂಗಳೊ ॥
ಳ್ಯಾಗರಮೆಂದು ಬಣ್ಣಿಸುವುದೀ ಧರೆ ಪಂಡಿತ ಪಾರಿಜಾತನಂ।
ನಾಗನನಾ ಜನಾರ್ದನನ ಭಕ್ತಿ ಭರ ಪ್ರಭವಾನುರಾಗನಂ ॥

ಬೇಲೂರು, 342 (ಅನುಬಂಧ), 1265

ಇದರಲ್ಲಿ ಹೊಯ್ಸಳ ರಾಜನಾದ ಇಸೆಯ ನಾರಸಿಂಹನು ತ್ರಿಕೂಟ ರತ್ನತ್ರಯ ಶಾಂತಿನಾಥ ಜಿನಾಲಯಕ್ಕಾಗಿ ಮಾಘನಂದಿ ಸೈದ್ಧಾಂತಿಗೆ ಕಲ್ಲಂಗೆರೆಯನ್ನು ಕಾಲುವಳ್ಳಿ ಸಹಿತವಾಗಿ ಕೊಟ್ಟಂತೆ ಹೇಳಿದೆ.

ಹೊಯ್ಸಳರ ಶಾರ್ದೂಲ ಚಿಹ್ನ

ಮುದದಿಂ ಜೈನವ್ರತೀಶಂ ಶಶಕಪುರದ ಪದ್ಮಾವತೀ ದೇವಿಯಂ ಮುಂ।
ತ್ರದಿನೆಂತುಂ ಸಾಧಿಸಲ್ ವಿಕ್ರಿಯೆಯೊಳೆ ಪುಲಿ ಮೇಲ್ವಾಯೆ ಯೋಗೀಶ್ವರಂ ಕುಂ ॥
ಚದಕಾವಿಂದಾಂತಪಂ ಪೊಯ್ ಸಳ ಎನಲಭಯಂ ಪೊಯ್ವುದುಂ ಪೊಯ್ಸಳಾಂಕಂ
ಯದು ಭೂಪರ್ಗಾದುದಂದಿಂದೆಸೆದುಪು ಸಳೆಯಿಂ ಲೋಲ ಶಾರ್ದೂಲ ಚಿಹ್ನಂ ॥

ವಿನಯಾದಿತ್ಯ

ಸತ್ಕುಲದೊಳಗಿಂದು ಮಹೀ।
ಭೃತ್ಕುಲದೊಳಗಚಲ ನಾಥನೆಸೆವಂತೆಸೆದಂ ॥
ತತ್ಕುಲದೊಳ್ ವಿಜಿತಾರಿ ಕು।
ಭೃತ್ಕುಲನಾದಿತ್ಯಮೂರ್ತಿ ವಿನಯಾದಿತ್ಯಂ ॥

ಎರೆಯಂಗ

ಶದಪತ್ಯಂ ರಿಪುನೃಪ ಭುಜ।
ಮದ ಮರ್ದನನಖಿಲ ವಿಬುಧ ಜನತಾ ಸೌಖ್ಯ ॥
ಪ್ರದನುದಿತೋದಿತ ಮಹಿಮಾ।
ಸ್ಪದನೆನಿಪೆರೆಯಂಗ ಭೂಪನಂಗಜ ರೂಪಂ ॥

ನಾರಸಿಂಹ II

ಕಲಿ ಬಲ್ಲಾಳನ ಸೂನು ಗೆಲ್ದ ರಣರಂಗಂ ತಳ್ತ ಮುಂಡಂಗಳಿಂ।
ದೆಲಿದೋಂಟಕ್ಕೆಣೆಯಾಯ್ತು ಭೇದಿಸಿದ ವೀರಾಸಾರದಿಂ ಧಾರೆವ ॥
ಟ್ಟಲಸಿಟ್ಟಂತೆಪೊಲಾಯ್ತು ಭಾನುವಳಯಂ ಶ್ರೀರಾಯ ಭೇರುಂಡನೆ।
ಕ್ಕಲಸಿಂಹಂ ನರಸಿಂಹನೇಂ ತುಱಿದನೋ ತನ್ನಾನೆಯಿಂದಾರ್ವರಂ ॥

ಸೋಮೇಶ್ವರ

ಹೊಗು ಬಾ ಹಮ್ಮೀರ ಹೋ ಗೂರ್ಜರ ಹೆಱತೆಗೆ ನಿಂದಲ್ಲಿ ನಿಲ್ಲಂಧ್ರ ನಿನ್ನೋ।
ಲಗವೇಱಿತ್ತು ಸಾರ್ ಮಾಳವ ಕುಡು ತೆಱಹಂ ಲಾಳ ಗೌಳಂಗೆ ಮಾಣ್ ಮಾ
ತುಗಳಂ ಬಂಗಾಳ ದೇವಂ ಬೆಸಸುವ ನುಡಿಯಂ ವಂಗ ಕೇಳೆಂಬರೆತ್ತಂ।
ನೆಗೞ್ದೀ ಸೋಮೇಶನಾಸ್ಥಾನದೊಳಿರೆ ಬಿರುವಕ್ಷತ್ರರಂ ವೇತ್ರ ಹಸ್ತರ್ ॥

ನಾರಸಿಂಹ III

ಮುಳಿಸಿಂದಂ ಕಂಬದಿಂ ಮೂಡಿದನೆನಿಸಿದ ಡೊಂಬಿಂಗೆ ಹೇವೈಸಿ ತಾಂ ಬಿ।
ಜ್ಜಳದೇವೀ ರಾಣಿಗಂ ಹೊಯ್ಸಳ ಕುಳ ತಿಳಕಂ ಸೋಯಿದೇವಂಗಮುರ್ವೀ ॥
ವಳಯಂ ಬಾಪ್ಪೆಂಬಿನಂ ಪುಟ್ಟಿದನಹಿತ ಹಿರಣ್ಯಾಕ್ಷ ದೈತ್ಯೇಂದ್ರ ವಕ್ಷ।
ಸ್ಥಳ ಚಂಡೋಗ್ರಾಸಿ ಧಾರಾ ನಖ ವಿದಳನ ಸಿಂಹಂ ನೃಪಂ ನಾರಸಿಂಹಂ ॥

ಬಳದಿಂದಂ ಚೋಳ ಪಾಂಡ್ಯಾವನಿಪರನೊಲವಿಂ ಸ್ಥಾಪನಂ ಗೆಯ್ದು ಹಿಮ್ಯಾ।
ಚಳದಿಂದಂ ಸೇತು ಸೀಮಾವನಿಯನಿಳೆ ಬಬಾಪ್ಪೆಂಬಿನಂ ಬಾಹು ಮೂಳ ॥
ಸ್ಥಳದೊಳ್ ಶ್ವೇತಾತಪತ್ರಂ ತನಗಮುರ್ವಿನೆಗಂ ತಾಳ್ವಿದಂ ರಾಯರೊಳ್ ಬಿ।
ಜ್ಜಳದೇವೀ ನಂದನಂ . . . ಕರಟಿ ಘಟಾ ಸಿಂಹನೀ ನಾರಸಿಂಹಂ ॥

ಇಳೆಯೊಳ್ ತನ್ನಾಣೆ ತನ್ನುಬ್ಬಟೆಯ ವಿತರಣಂ ತನ್ನ ತೋಳ್ವಲ್ಪು ತನ್ನು।
ಜ್ಜ್ವಳ ವೃತ್ತಂ ತನ್ನ ತೇಜಂ ಪಸರಿಸೆ ಧರಣೀಪಾಳರೊಳ್ ಕೀರ್ತಿಗಿಂತೇಂ ॥
ನೆಲೆಯಾಗಿರ್ದಪ್ಪನೋ ಬಾಪ್ಪೆನೆ ಸಕಳ ಜನಂ ಸೋಯಿದೇವಾತ್ಮಜಂ ಬಿ।
ಜ್ಜಳದೇವೀ ನಂದನಂ ಹೊಯ್ಸಳ ಕುಳ ಕಮಳೋತ್ತಂಸ ಹಂಸಂ ನೃಸಿಂಹಂ ॥

ಹೊಳೆಯ ನರಸೀಪುರ, 112 (ಅನುಬಂಧ), 1282

ಇದರಲ್ಲಿ ಹೊಯ್ಸಳ ರಾಜನಾದ ೩ನೆಯ ನಾರಸಿಂಹನು ಮಾವನೂರಲ್ಲಿ ದೇವರಸನ ಹೆಸರಿನಲ್ಲಿ ಅವನ ತಮ್ಮ ಅಪ್ಪರಸನು ಕಟ್ಟಿಸಿದ ದೇವೇಶ್ವರ, ಅಪ್ಪರಸನ ಹೆಸರಿನಲ್ಲಿ ಅವನ ಹೆಂಡತಿ ದೇವವ್ವೆ ಕಟ್ಟಿಸಿದ ಅಪ್ಪೇಶ್ವರ ಎಂಬ ಎರಡು ದೇವ ಸ್ಥಾನಗಳಿಗಾಗಿ ದೇವವ್ವೆಗೆ ತವಸಿಧಿ ಎಂಬ ಗ್ರಾಮವನ್ನು ಕೊಟ್ಟಂತೆ ಹೇಳಿದೆ.

ಮಾವನೂರೊಡೆಯ ದೇವರಸ

ಜಡೆ ಮುಡಿಯೊಳ್ ಸುರಾಪಗೆಯನಾಂತ ಮಹೇಶ್ವರನೊಲ್ದ ಶೈವ ಸಂ।
ಗಡಿಗನ ಪುಣ್ಯ ಪೋಷಕನ ವೀತ ಗುಣೌಘನ ಮರ್ತ್ಯ ಲೋಕದೊಳ್ ॥
ನಡೆವ ಶಶಾಂಕ ಶೇಖರನ ಸರ್ವ ಸಮ್ಯಕನ ಚಾರು ಮಾವನೂ।
ರೊಡೆಯರೆನಿಪ್ಪ ದೇವರಸನುನ್ನತ ಶೀಳಮಿಳಾ ವಿಭೂಷಣಂ ॥

ಅಪ್ಪರಸ ದೇವರಸರು

ಸ್ವಸ್ತಿ ಸಮಸ್ತ ಸಮುದ್ರ ಮುದ್ರಿತಮಪ್ಪ ಧರಾಕಾಂತೆಯ ಶಿರಃಕಂಜದಂತೆ, ಪುರತ್ರಯ ವಿಪಿನ ದಹನ ದಾವಾನಳನ ಸುಕೃತ ಸರ್ವಸ್ವದ ಗವಸಣಿಗೆಯಂತೆ, ಸಕಳ ಭಕ್ತರ ಪುಣ್ಯಶಾಲೆಯಂತೆ, ಮುಕ್ತ್ಯಂಗನೆಯ ತಾಯ್ಮನೆಯಂತೆ, ಧರ್ಮಾರ್ಥ ಕಾಮ ಮೋಕ್ಷಂಗಳಪ್ಪ ಚತುರ್ವಿಧ ಪುರುಷಾರ್ಥಂಗಳ ಜನ್ಮಕ್ಷೇತ್ರದಂತೆ, ಮಲ್ಲಿಕಾರ್ಜುನನ ಶ್ರೀ ಪರ್ವತದ ಮೇಲೆ ಮೂಜಗಕೆ ಸೋಜಿಗಮಪ್ಪೋಜೆಯಿಂ ರಾಜಿಸುವ ರಾಜೇಂದ್ರ ಚೂಡಾಮಣಿಯ, ಮನ್ಮಥ ಮತ್ತೇಭ ಮೃಗಾಧಿಪನ, ಕೀನಾಶ ಬಳ ಬಳಾಹಕ

ಮಹಾಬಳನ, ಶಾರ್ದೂಲ ದೈತ್ಯಧ್ವಾಂತ ಪ್ರದ್ಯೋತನನ, ದರ್ಪಿಷ್ಠ ಕುಂಜರಾಸುರ ಮರಾಳ ಹರ್ಷ ವಿಳಯ ಜಳದ ಗರ್ದನನ, ಸುರ ಸರಿತ್ಸಮುದ್ಧೂತ ಲೋಲತರ ಕಲ್ಲೋಲ ಮಾಲಾ ಸಂಘಟ್ಟಿತ ಜಟಾಜಾಲನ, ಶ್ರೀ ಪರ್ವತಾಧೀಶ್ವರನಪ್ಪ ಮಲ್ಲಿಕಾರ್ಜುನನ ಕಾರುಣ್ಯ ಕಾಂತಿ ಕಾಯಮಂ ತಳೆದಂತೆ ಜನಿಯಿಸಿದ ಪರ್ವತಯ್ಯ ಚಂದ್ರನುದಯದಿಂ ಮುನ್ನಂ ಬೆಳ್ದಿಂಗಳೊಗೆವಂತೆ, ಫಳ ರಸಮನೀಂಟುವುದಱಿಂ ಮುನ್ನಂ ಸವಿ ಜಿಹ್ವೆಯಂ ಮುತ್ತುವಂತೆ, ತನಗೆ ಗುರುಪ್ರಾಪ್ತಿಯಪ್ಪುದಱಿಂ ಮುನ್ನಮೆ ಪೂರ್ವ ವಾಸನಾ ಸಂಬಂಧದಿಂದುರ್ವಿ ಕೊರ್ವಿ ಪರ್ವತಮನೇಱೀ ಶ್ರೀ ಮಲ್ಲಿಕಾರ್ಜುನನಂ ಸುತ್ತಿ ಮುತ್ತಿ ಪತ್ತಿ ಪರಿದು ನೆರೆದಾಲಿಂಗಿಸಿ ತನ್ನ ಚಿತ್ತವನೀಶಾಂಘ್ರಿಯೊಳ್ ಪೆಱಿಸಿಯಿಟ್ಟ ನೇಹಮಂ ಕಂಡು ಶ್ರೀ ಮಲ್ಲಿಕಾರ್ಜುನಂ ಕಾರುಣ್ಯಂ ಮಾಡೆ ಗುರು ಕಾರುಣ್ಯಂ ಬಡೆದು ಶಾಂತಿಯಂ ತಳೆದ ನಿರ್ಮಳ ಜ್ಯೋತಿಯಂತೆ ಮೆಱೆಯುತ್ತಿರೆ, ಶಿವನುಭಯ ನೇತ್ರದಿಂ ಚಂದ್ರ ಸೂರ್ಯರೊಗೆದಂತೆ, ಪರ್ವತಯ್ಯನುಭಯವಹ ಕಾರುಣ್ಯ ಕಟಾಕ್ಷದಿಂದುದಯಿಸಿದ ಅಪ್ಪರಸ ದೇವರಸರ್ಗೆ ಚಂದ್ರಂಗೆ ಬೆಳ್ದಿಂಗಳಂ ಬೆಳ್ದಿಂಗಳಿಂಗೆ ಪರಿಮಳಮಂ ಪರಿಮಳಕ್ಕೆ ಸವಿಯಂ ಸವಿಗೆ ರೂಪಂ ರೂಪಿಂಗೆ ಸೌಂದರ್ಯಮಂ ಕೊಡುವಂತೆ ಉಪದೇಶಂ ಮಾಡೆ, ಕೈಕೊಂಡ ಅಪ್ಪರಸ ದೇವರಸರ್ ಪುಟವಿಟ್ಟ ಪುಣ್ಯಂ ಪುರುಷಾಕಾರವಾದಂತೆ, ಶಾಂತಿ ಸಾಕಾರವೆತ್ತಂತೆ, ಪರಮಾರ್ಥಂ ಶರೀರವಡೆದಂತೆ, ಭಕ್ತಿ ಜ್ಞಾನಂ ಸಂಸಾರವಂ ಸವಿವಂತೆ, ಮೆಱೆಯುತ್ತೆ, ಲೋಭವಡಿಯಿಡದ ಕರ ಪಲ್ಲವಂಗಳ, ಅನೃತವಂಕುರಿಸದ ರಸನಾಪ್ರದೇಶದ, ಸಂಸ್ಕೃತಿ ಸರಸವಾಡದ ಚರಿತ ಶುದ್ಧಿಯ, ಕಾಮನ ಡಾಮರಕೊಳಸೋರದ ಮನದ ಬಿನದದ, ಮಾಯೆಯಾಜ್ಞೆಯನುಲ್ಲಂಘಿಸಿದ ಚಿತ್ತವೃತ್ತಿಯ, ಶಬ್ದ ಸ್ಪರ್ಶ ರೂಪ ರಸ ಗಂಧಾದಿ ಭೋಗಕ್ಕೆಳಸದ ಕರಣಾವಳಿಯ, ಮಹಾಮಹಿಮರೆನಿಸಿ, ತಿಲ ಮಧ್ಯದೊಳಿರ್ಪ ತೈಲದಂತೆ, ಕಾಷ್ಠಮಧ್ಯದೊಳಿರ್ಪ ಅಗ್ನಿಯಂತೆ, ಜಳಮಧ್ಯದೊಳಿರ್ಪ ಕಮಳದಂತೆ, ತಾಂ ಮಾನುಷ ಚರಿತರಪ್ಪುದಱಿಂ ಸಂಸಾರಮಂ ಸೋಂಕದೆ ಅನವರತಂ ಶಿವನೊಳವಿರಳ ಪೂಜೆಯಂ ಮಾಡುತಂ ಮೂಲೋಕಮಂ ತೀವಿದ ಶೈವ ಕೀರ್ತಿಯಂ ತಳೆದು ಸುಖದೊಳಿರ್ದರ್.

ಕರ್ಣಾಟಕ ಧಾತ್ವರ್ಥ ಪ್ರಕಾಶಿಕೆ

ಕಂದ ಪದ್ಯಂಗಳ್

ಕಂ|| ಕನ್ನಡ ಧಾತುಗಳರ್ಥವ
ಸನ್ನುತ ಸಂಸ್ಕೃತದೆ ಕೇಶಿರಾಜ ಕವೀಂದ್ರಂ|
ಮುನ್ನೆರೆ ನಿರ್ಮಿಸಿದನದಂ
ಕನ್ನಡದೊಳ್ ಪೇಳ್ವೆನೀಗಳಾಂ ಕವಿ ಭೀಮಂ || ೧ ||

ಈಯೆನೆ ನೀಡೆಂದಕ್ಕುಂ
ಕಾಯೆನೆ ಸಲಪೋವೆನಲ್ಕೆ ನೇಹಿಸೆನಿಕ್ಕುಂ|
ಕೀಯೆನೆ ಕೀವಾಗೆನಿಕುಂ
ಕೇಯೆನೆ ರತಿಕೇಳಿಯೊಳ್ತೊಡಂಗೆಂದಕ್ಕುಂ || ೨ ||

ಮುಸುಕೆನೆ ಮುಚ್ಚೆಂದಕ್ಕುಂ
ಮಿಸುಕೆನೆ ಮಿಸುಗೆಂದುಮಕ್ಕುಮುಲುಕೆಂದಕ್ಕುಂ|
ಪಿಸುಕೆನೆ ಪಿಸುಂಕೆನಿಕ್ಕುಂ
ಕುಸುಕೆಂದು ಕುಸುಂಕೆನಲ್ಕೆ ತಿಕ್ಕೆಂದಕ್ಕುಂ || ೩ ||

ಇರುಕೆನೆ ತಡೆಯೆಂದಕ್ಕುಂ
ನುರುಕೆನೆ ನುಗ್ಗಾಗ್ಗಡು ತುರುಕು ತುರುಸೆಂದಕ್ಕುಂ|
ಕುರುಕೆನೆ ಕುರುಂಕೆನಿಕ್ಕುಂ
ಮುರುಕೆನೆ ಮುಖವಿಕೃತಿಯೊಳ್ ಬಿಡಂಗಿನೊಳಕ್ಕುಂ || ೪ ||

ನೂಂಕೆನೆ ನೂಕಿಸೆನಿಕ್ಕುಂ
ಸೊಂಕೆನೆ ಮುಟ್ಟೆಂದುಮಾಂಕು ಹಿಚುಕೆಂದಕ್ಕುಂ|
ಕೂಂಕೆನೆ ಪೋಗೆಂದಕ್ಕುಂ
ತೇಂಕೆನೆ ತೇಗೆಂದು ಸಾಕು ಸಲಪೆಂದಕ್ಕುಂ || ೫ ||

ಚಲಕು ಚಲಂಕೆನೆ ಕೈಯಿಂ
ಕೆಳಗಿಡೆನಿಕ್ಕುಂ ಕಲಂಕು ಕಲಕಿಸೆನಿಕ್ಕುಂ|
ಚಲುಕೆನೆ ಚಲುಂಕೆನಲ್ಕಾತ್ಂ
ಜಳಮಂಚಿಲ್ ಮಿಡುಕೆನಲ್ ಪರುಂಕೆಂದಕ್ಕುಂ || ೬ ||

ಉಲುಕೆನಲಲುಗೆಂದಕ್ಕುಂ
ಹಲಕೆನೆ ಗಿಡುವೇರು ಕೊಂಕು ಬಂಕೆಂದಕ್ಕುಂ|

ಮುಲುಕೆನೆ ಪ್ರಸವಿಸೆನಿಕ್ಕುಂ
ಕುಲುಕೆನಲೊತ್ತಿಡು ಪೊಳಂಕು ಪೊಳಕೆಂದಕ್ಕುಂ || ೭ ||

ಇಡುಕೆನಲಿಡುಂಕೆನಲ್ ತಾಂ
ಬಿಡೆನಿಕ್ಕುಂ ಕುಡುಕೆನಲ್ಕೆ ಕುಕ್ಕೆಂದಕ್ಕುಂ |
ತೊಡಕೆನೆ ತೊಡಂಕೆನಲ್ ಸೇರ್
ತುಡುಕೆಂದೆನೆ ಬೇಗದಿಂದೆ ಪಿಡಿಯೆಂದಕ್ಕುಂ || ೮ ||

ಅಡಕೆನಲಡಂಗೆನಿಕ್ಕುಂ
ಬಿಡಲೆಲ್ಲದಿಡೆಂದುಮಕ್ಕುಮಾಲಿಂಗನದೊಳ್ |
ಮುಡುಕುಂ ಮುದುಕುಮಿವಕ್ಕುಂ
ಪುಡುಕು ಪುಡುಂಕೆನೆ ಕರ್ದುಂಕು ಕುಕ್ಕೆಂಬುದರೊಳ್ || ೯ ||

ಮುದುಕೆನೆ ಮುಡುಕೆಂದಕ್ಕುಂ
ಬಿದಕೆಂದೆನೆ ಸೋದಿಸೆಂದು ಚಿವುಟೆಂದಕ್ಕುಂ |
ಕುದುಕೆನ ಕುಡುಕೆಂದಕ್ಕುಂ
ಶದುಕೆಂದೆನೆ ಬಡಿ ಬರ್ದುಂಕು ಜೀವಿಸೆನಿಕ್ಕುಂ || ೧೦ ||

ಕೆಱಕೆನೆ ತಡವೆಂದಕ್ಕುಂ
ಕೊಱಕೆಂಬುದು ಮೃಗದ ಹಾರಿಕೆಯೊಳೊಪ್ಪಿರ್ಕುಂ |
ಕುಱುಕೆನೆ ಕುಟ್ಟೆಂದಕ್ಕುಂ
ತಿಱಕೆಂಬುದಪಾನ ವಾಯುಗಾಸರಮಿರ್ಕುಂ || ೧೧ ||

ಉರ್ಕೆನೆ ಗರ್ವಿಸೆನಿಕ್ಕುಂ
ಜಿರ್ಕೆನಲುಗುರೊತ್ತು ಸಿರ್ಕು ಸಿಲ್ಕೆಂದಕ್ಕುಂ |
ಸುರ್ಕೆನೆ ಮುದುಡೆಂದಕ್ಕುಂ
ಸೆರ್ಕೆನೆ ವಸ್ತ್ರಾಂತರ ಪ್ರವೇಶಿಸೆನಿಕ್ಕುಂ || ೧೨ ||

ಇಕ್ಕೆನಲಿಡು ಬಡಿಯೆಂದುಂ
ಸಕ್ಕೆನೆ ನೆಕ್ಕೆನಿಕುವೊಳ್ಕು ಪ್ರವಹಿಸೆನಿಕ್ಕುಂ |
ಬಿಕ್ಕೆನೆ ಮೇಲುಸುರೆಂದುಂ
ಮುಕ್ಕೆನೆ ಕಾಳ್ತಿನ್ನು ಪಿಕ್ಕು ವಿವರಿಸೆನಿಕ್ಕುಂ || ೧೩ ||

ಒಕ್ಕೆನೆ ಚಲ್ಲೆಂದುಂ ಕೂ
ಡಿಕ್ಕೆಂದುಮೆನಿಕ್ಕುಮೆಕ್ಕು ಮುರಿಯೆಂದಕ್ಕುಂ
ಕೆಕ್ಕೆನೆ ಗೋಶಿಕ್ಷಾಧ್ವನಿ
ಗಕ್ಕುಂ ತೆಕ್ಕೆಂದೆನಲ್ಕೆ ತುರಿಸೆಂದಕ್ಕುಂ || ೧೪ ||

ಕುಕ್ಕೆನೆ ಕುದುಕೆಂದುಂ ಮೇ
ಱಕ್ಕುಂ ಬಟ್ಟೆಗಳನಿರ್ಕ್ಕರದಿನೊಗೆಯೆನುದ್ದಂ।
ನೊರ್ಕನೆ ಬೆದಂಸೆನಿಕ್ಕುಂ
ಸೊರ್ಕನಲುನ್ಮದಿಸು ಮಿನುಕು ಬೆಳಗೆಂದಕ್ಕುಂ ॥ ೧೫ ॥

ಅಳ್ಕನೆ ಹೆದರೆಂದಕ್ಕುಂ
ಬಳ್ಕನೆ ಬಾಗೆಂದುಮುಳ್ಕು ಬೆಳಗೆಂದಕ್ಕುಂ।
ನಿಳ್ಕನೆ ನಿಲುಕೆಂದಕ್ಕುಂ
ತಳ್ಕನಲಮರ್ದಪ್ಪು ಕಳ್ಕು ಜೀರ್ಣಿಸೆನಿಕ್ಕುಂ ॥ ೧೬ ॥

ತುಳುಕೆನೆ ತುಳುಂಕೆನಿಕ್ಕುಂ
ಮಳುಕೆನೆ ಮುಳುಕೆನೆ ಮುಳುಂಕು ಮುಳುಗೆಂದಕ್ಕುಂ।
ತೊಳಗೆನೆ ಬೆಳಗೆಂದಕ್ಕುಂ
ಮುಳುಗೆನಲಾಳ್ ಕೋಯೆನಲ್ಕೆ ಪೋಣಿಸೆನಿಕ್ಕುಂ ॥ ೧೭ ॥

ಉಗಿಯೆನಲೆಳೆಯೆಂದುಂ ಮೇ
ಱುಗುರೊತ್ತೆಂದಕ್ಕುಮಗಿಯೆನಲ್ತಿನ್ನೆಂದುಂ।
ಬಿಗುರೆಂದಕ್ಕುಂ ಸುಗಿಯೆನೆ
ಮುಗಿಯೆನೆ ಮುದುಡೆಂದು ಬಿಗಿಯೆನಲ್ಕಟ್ಟೆಂದುಂ ॥ ೧೮ ॥

ಬಗಿಯೆನೆ ಭಾಗಿಸೆನಿಕ್ಕುಂ
ಚಿಗಿಯೆನೆ ಪಲ್ಲವಿಸು ಪುಗು ಪ್ರವೇಶಿಸೆನಿಕ್ಕುಂ।
ಮಿಗೆನಲ್ ಮಿಾರೆಂದುಳಿಯಿಂ
ದುಗೆನಲ್ ಬಿಡು ಮುಗ್ಗು ಜೀರ್ಣಗಂಧದೊಳಕ್ಕುಂ ॥ ೧೯ ॥

ಒಗೆಯೆನೆ ಜನಿಸೆಂದುಂ ಬ
ಟ್ಟೆಗಳಂ ತೊಳೆಯೆಂದುಮುಳ್ಗು ನಾಶಿಸೆನಿಕ್ಕುಂ।
ತಗೆಯೆನೆ ನಿಲ್ಲಿಸೆನಿಕ್ಕುಂ
ಪೊಗೆಯೆನೆ ಹೊಗೆ ನೆಗೆಯೆನಲ್ಕೆ ಜಿಗಿಯೆಂದಕ್ಕುಂ ॥ ೨೦ ॥

ತೆಗೆಯಾಕರ್ಷಿಸೆನಿಕ್ಕುಂ
ಮೊಗೆಯೆನೆ ನೀರ್ದುಂಬು ಮೊಳಗು ಸಿಡಿಲ್ದನಿಯೊಳ್ ಮೇಣ್।
ಮಿಗೆ ವಾದ್ಯಂ ಬಡಿವುದರೊಳ್
ಸೊಗಯಿಕ್ಕುಂ ನಗೆಯೆನಲ್ಕೆ ನೆಗೆಯೆಂದಕ್ಕುಂ ॥ ೨೧ ॥

ಪಿಂಗೆನೆ ಪಿಂಜರಿಯುಕ್ಕುಂ
ನುಂಗೆನೆ ಸೊಣೆಯೊಣಗೆನಲ್ಕೆ ಶೋಷಿಸೆನಿಕ್ಕುಂ।
ಪೊಂಗೆನಲುಬ್ಬೆಂದಕ್ಕುಂ
ತಾಂಗೆನೆ ತಾಗೆಂದು ಬಗೆ ವಿಚಾರಿಸೆನಿಕ್ಕುಂ ॥ ೨೨ ॥

ಎಡೆಯುಡುಗೆನೆ ವಿಚ್ಛೇದಿಸು
ಮಡಗೆನೆ ಮುಚ್ಚಿಡು ಕುನುಂಗು ಮುದುಡೆಂದಕ್ಕುಂ।
ತೊಡಗೆಂದೆನಲಾರಂಭಿಸು
ನಡುಗೆನೆ ಕಂಪಿಸು ಜಿನುಂಗು ಜಿನುಗೆಂದಕ್ಕುಂ ॥ ೨೩ ॥

ಕರಗೆನೆ ದ್ರವಿಸೆಂದಕ್ಕುಂ
ಕೊರಗೆನೆ ಬಾಡೆಂದುಮೆರಗು ನಮಿಸೆಂದಕ್ಕುಂ।
ಹರಗೆನೆ ಹರಗೆಂದಕ್ಕುಂ
ಮರುಗೆನಲುಮ್ಮಳಿಸು ಮಿಡುಗು ದುಃಖಿಸೆನಿಕ್ಕುಂ ॥ ೨೪ ॥

ಒರಗೆನೆ ಮಲಗೆಂದಕ್ಕುಂ
ತುರುಗೆನೆ ತುಂಬೆನಿಕುಮುರುಗು ದ್ವೇಷಿಸೆನಿಕ್ಕುಂ।
ಮಿರುಗೆನೆ ಪೊಳೆಯೆಂದಕ್ಕುಂ
ಕರಂಗೆನಲ್ಕಳ್ಗೆನಲ್ಕೆ ಕಪ್ಪಾಗೆನಿಕುಂ ॥ ೨೫ ॥

ಉಳ್ಗೆನೆ ಸ್ನೇಹಿಸೆನಿಕ್ಕುಂ
ಮುಳ್ಗೆನೆ ಮುಗ್ಗೆಂದು ಮಳ್ಗೆನಲ್ಕಿಡೆನಿಕ್ಕುಂ।
ಪುಳ್ಗೆನೆ ದಹಿಸೆಂದಕ್ಕುಂ
ಮೊಳ್ಗೆನೆ ನಮಿಸೆಂದು ತಳ್ಗು ತಗ್ಗೆಂದಕ್ಕುಂ ॥ ೨೬ ॥

ಕುಳ್ಗೆನೆ ಕುಗ್ಗೆಂದಕ್ಕುಂ
ಬಳ್ಗೆನಲೊಳ್ಗೆಂದೆನಲ್ಕೆ ಕೂಡೆಂದಕ್ಕುಂ।
ನುಳ್ಗೆನೆ ನುಗ್ಗೆಂದಕ್ಕುಂ
ನೆಳ್ಗೆನೆ ನೆಗ್ಗೆಂದು ಕಳ್ಗು ಕಗ್ಗೆಂದಕ್ಕುಂ ॥ ೨೭ ॥

ಆಗೆನಲಾಗೆಂದಕ್ಕುಂ
ತಾಗೆನೆ ತಾಗೆಂದು ತೂಗು ತೂಗೆಂದಕ್ಕುಂ।
ತೇಗೆನೆ ತೇಗೆಂದಕ್ಕುಂ
ಬಾಗೆನೆ ಬಾಗೆಂದು ಬೀಗು ಹರ್ಷಿಸೆನಿಕ್ಕುಂ ॥ ೨೮ ॥

ಪೋಗೆನೆ ಗಮಿಸೆಂದಕ್ಕುಂ
ಕೂಗೆನಲೊದರೆಂದೆನಿಕ್ಕುಮೊಗ್ಗುಗ್ಗೆನಿಕುಂ।
ಕೇಗು ನವಿಲ್ದನಿಯೊಳಕ್ಕುಂ
ನೀಗೆನೆ ಸಂತ್ಯಜಿಸು ಹಸನದೊಳ್ನಗೆನಿಕ್ಕುಂ ॥ ೨೯ ॥

ಹುದುಗೆನಲಡಂಗೆನಿಕ್ಕುಂ
ಸಿದುಗೆನೆ ಕೈಯಿಂ ಪುಡುಂಕೆನಿಕ್ಕುಮುಡುಗೆನಲ್।
ಮುದುಡೆಂದಕ್ಕುಮಡಂಗೆನೆ
ಹುದುಗೆಂದಕ್ಕುಂ ಕಡಂಗಿದೌತ್ಸುಕ್ಯದೆ ದಲ್ ॥ ೩೦ ॥

ಅಲುಗೆನೆ ಚಲಿಸೆಂದಕ್ಕುಂ
ತೊಲಗೆನೆ ಪೋಗೆಂದುಮುಗಲ್ದು ನಡೆಯೆಂದಕ್ಕುಂ।
ಮಲಗೆನೆ ಮಲಗೆಂದಕ್ಕುಂ
ಚೆಲುಂಗೆನಲ್ ಕೈಬಿಡೆಂದು ಚಲ್ಲೆಂದಕ್ಕುಂ ॥ ೩೧ ॥

ಎಸಗೆನೆ ಮಾಡೆಂದಕ್ಕುಂ
ಮಸಗೆನೆ ಸಿಟ್ಟಾಗು ಸಿಟ್ಟಿನಿಂ ಕಾಳಗಮುಂ।
ಎಸಗೆಂದುಮೆನಿಕ್ಕುಂ ತಾಂ
ಮಿಸುಗೆನೆ ಬೆಳಗೆಂದೆನಲ್ಕೆ ಮಿಂಚೆಂದಕ್ಕುಂ ॥ ೩೨ ॥

ಚಾಂತಕ್ಕೆ

ಮಿಂಚೆಸೆ ಬೆಳಗೆಂದಕ್ಕುಂ
ಮುಂಚೆನೆ ಮುಂದಾಗು ಮೋಚು ಬೋಳಿಸೆನಿಕ್ಕುಂ ॥
ಪಿಂಚುಂ ಪಿಂಜರಿಯೆನಿಕುಂ
ಹೊಂಚೆನೆ ಜಪ್ಪಿಸು ಪಳಂಚು ತಾಗೆಂದಕ್ಕುಂ ॥ ೩೩ ॥

ಅರುಚನೆ ಕೂಗೆಂದಕ್ಕುಂ
ಜರುಚೆನೆ ಬಲ್ನುಡಿ ಮುಗುಳ್ಚು ಮುಗುಳೆಂದಕ್ಕುಂ।
ಕೆರಳು ಕೆರಳ್ಚೆನಲಕ್ಕುಂ
ಪೊರಳ್ಚೆನಲ್ ಪೊರಳುದಿರ್ಚು ಬೀಳಿಸೆನಿಕ್ಕುಂ ॥ ೩೪ ॥

ಎಚ್ಚೆನಲಲಗಿಡೆನಿಕ್ಕುಂ
ಕೆಚ್ಚೆನಲಿದಾರರದುದಿಯ ಕೂಡಿಸೆನಿಕ್ಕುಂ।
ನಚ್ಚೆನೆ ನಂಬೆಂದಕ್ಕುಂ
ಚುಚ್ಚೆನೆ ದಹಿಸೆಂದು ಸೂಚಿಸೆಂದುಮೆನಿಕ್ಕುಂ ॥ ೩೫ ॥

ಮೆಚ್ಚೆನಲೊಲಿಯೆಂದಕ್ಕುಂ
ಮುಚ್ಚೆನಲಾಚ್ಛಾದಿಸಚ್ಚು ಪಚ್ಚೆಂದಕ್ಕುಂ।
ಬಿಚ್ಚೆಂದಕ್ಕುಂ ಬಿರ್ಚೆನೆ
ಚುಚ್ಚೆನಿಕುಂ ಚುಚ್ಚು ಚುರ್ಚೆನಲ್ ಸುಡೆನಿಕ್ಕುಂ ॥ ೩೬ ॥

ಉರ್ಚೆನಲುಚ್ಚೆಂದಕ್ಕುಂ
ತೀರ್ಚೆನೆ ತೀರಿಸು ನಿಮಿರ್ಚು ಪಸರಿಸೆನಿಕ್ಕುಂ।
ಬಾರ್ಚೆನೆ ಬಾಚೆಂದಕ್ಕುಂ
ಪೇರ್ಚೆನೆ ವಿಸ್ತರಿಸು ಮರ್ಚು ಮಚ್ಚೆಂದಕ್ಕುಂ ॥ ೩೭ ॥

ಕರ್ಚೆನೆ ಕಚ್ಚೆಂದಕ್ಕುಂ
ಬೆರ್ಚೆನೆ ಬೆಚ್ಚೆಂದೆನಲ್ಕೆ ಬೆದರೆಂದಕ್ಕುಂ।

ಸೋರ್ಚಿನೆ ಸೋರೆಂದಕ್ಕುಂ
ಸಾರ್ಚುಗ ಸವಿಾಪಿಸು ತಳರ್ಚುಗ ಪೋಗೆಂದಕ್ಕುಂ ॥ ೩೮ ॥

ಕಿವುಚು ಕಿಮುಳ್ಚಿನಲಕ್ಕುಂ
ಕವಿಚಿನೆ ಮೇಲ್ವೀಳೆನಿಕ್ಕು ಮುತ್ತೆಂದಕ್ಕುಂ।
ಬಿವಿಯೆ ಬಿಮುರ್ಚಿನಲಕ್ಕುಂ
ತವೆ ಗಾಢಾಲಿಂಗನದೊಳಮುರ್ಚೆಂದಕ್ಕುಂ ॥ ೩೯ ॥

ನಾಣೆನೆ ನಾಚೆಂದುಂ ಕಡೆ
ಗಣ್ಚಿನೆ ವಿಾರೆಂದುಮೆಳೆಯೆಳಲ್ಚಿನಲಕ್ಕುಂ।
ನುಣ್ಚಿನೆ ನುಣುಚೆಂದಕ್ಕುಂ
ಮಾಣ್ಚು ನಿವಾರಿಸು ಕಳಲ್ಚು ಕಳಚೆಂದಕ್ಕುಂ ॥ ೪೦ ॥

ಭುಜಂಗ ಪ್ರಯಾತಂ

ಉರುಳ್ಚಿಂದೆನಲ್ ಬೀಳಿಸೆಂದರ್ಥಮಕ್ಕುಂ
ಕುರುಳ್ಚಿಂದೆನಲ್ ಶಸ್ತ್ರಮುಂ ಬೀಸೆನಿಕ್ಕುಂ।
ಸುರುಳ್ಚಿಂದೆನಲ್ ಸುರ್ಳಿಯಂ ಮಾಡೆನಿಕ್ಕುಂ
ಹರಳ್ಚಿಂದೆನಲ್ ನೇತ್ರಮುಂ ಮುಚ್ಚೆನಿಕ್ಕುಂ ॥ ೪೧ ॥
ಅಗುಳ್ಚಿಂದೆನಲ್ ನೀರ್ಮುಳುಂಗೆಂದೆನಿಕ್ಕುಂ
ತಗುಳ್ಚಿಂದೆನಲ್ ಕಾರ್ಯಮಂ ಮಾಡೆನಿಕ್ಕುಂ।
ನುಗುಳ್ಚಿಂದೆನಲ್ ದ್ವಾರಮಂ ಸೇರೆನಿಕ್ಕುಂ
ನೆಗಳ್ಚಿಂದೆನಲ್ ಖ್ಯಾತಿಯಂ ಪೊಂದೆನಿಕ್ಕುಂ ॥ ೪೨ ॥

ಉಪೇಂದ್ರ ವಜ್ರಾವೃತ್ತ

ತಗುಳ್ಚಿದಾ ಚಿಂತೆಯು ಬಾಧೆಯೊಳ್ತಾಂ
ನೆಗಳ್ಚಿದುದ್ಯೋಗದೊಳೊಪ್ಪಿ ತೋರ್ಕುಂ।
ಮಗುಳ್ಚಿನಲ್ ಪಿಂದಿರುಗೆಂದೆನಿಕ್ಕುಂ
ಮುಗುಳ್ಚಿನಲ್ ಕುಟ್ಮಲವಾಗೆನಿಕ್ಕುಂ ॥ ೪೩ ॥
ಒಡರ್ಚಿನಲ್ ಕೂಡಿಸೆನಿಕ್ಕುಮತ್ತಂ
ತೊಡಂಗೆನಿಪ್ಪರ್ಥಮಿದರ್ಕೆ ಬರ್ಕುಂ।
ಸಡಿಲ್ಚಿನಲ್ ತಾಂ ಸಡಿಲಾಗೆನಿಕ್ಕುಂ
ತೊಡರ್ಚಿನಲ್ ಬಂಧನ ಮಾಡೆನಿಕ್ಕುಂ ॥ ೪೪ ॥
ಅಲರ್ಚಿನಲ್ ಪುಲ್ಲವಿಸೆಂದೆನಿಕ್ಕುಂ
ಬಳಲ್ಚಿನಲ್ ತಾಂ ಬಳಲೆಂದೆನಿಕ್ಕುಂ।
ಎಲರ್ಚಿನಲ್ ಚೀತರಿಸೆಂದೆನಿಕ್ಕುಂ
ಬಳಿಲ್ಚಿನಲ್ ಜೋಲ್‌ಗೊಳಿಸೆಂದೆನಿಕ್ಕುಂ ॥ ೪೫ ॥

ಕಂ|| ಅಳಲಿಸಳಲ್ಗೆ ನಲಕ್ಕುಂ
ತೊಳಲಿಚೆನಲ್ ದುಃಖಿಸೆಂದು ಕಳುಹೆಂದಕ್ಕುಂ।
ಸಲಿ ಬಿರೆ ಪೊಣರ್ಚೆನಿಕ್ಕುಂ
ಬಲು ದರ್ಪದೆ ಪೆಟ್ಟುವೆರ್ಚು ತಾಂ ಬರುತಿರ್ಕುಂ || ೪೬ ||

ಪಕ್ಕಿಗಳಗಲ್ಗೆ ತಮ್ಮಯ
ರೆಕ್ಕೆಗಳಂ ಬಿರ್ಚುವುದಕೆ ರಥಮುರುಳುತ್ತುಂ।
ತಕ್ಕನೆ ಬೀಳ್ವುದಕಂ ತಾ
ವಕ್ಕರಿಗರ್ ಯೋಜಿಪರ್ ಬಿದಿರ್ಚೆಂದೊಪ್ಪಿಂ || ೪೭ ||

ಜಾಂತಕ್ಕೆ

ಅಂಜೆನೆ ಬೆದರೆಂದಕ್ಕುಂ
ಪಿಂಜು ಪೃಥಕ್ಕರಿಸು ವಿವರಿಸೆಂದುಮೆನಿಕ್ಕುಂ।
ನಂಜೆನೆ ನೆಕ್ಕೆಂದಕ್ಕುಂ
ಮಾಂಜು ಬೆರಂಜೆನಲಡಂಗು ಕೂಡಿಸೆನಿಕ್ಕುಂ || ೪೮ ||

ಟಾಂತಕ್ಕೆ

ಅಂಟೆನೆ ಮುಟ್ಟೆಂದಕ್ಕುಂ
ದೂಂಟೆನಲೊರ್ಕಾಲಿನಿಂದೆ ನಡೆಯೆಂದಕ್ಕುಂ।
ಸೀಂಟು ಗುದಂದೊಳೆಯೆನಿಕುಂ
ನಾಂಟೆನೆ ಬೇಗೊರ್ಳಿಸು ದಾಂಟು ದಾಟೆಂದಕ್ಕುಂ || ೪೯ ||

ಈಂಟೆನೆ ಕುಡಿಯೆಂದಕ್ಕುಂ
ಮಿಾಂಟು ಮುರುಂಟೆಂಡೆನಲ್ಕೆ ಕೀಳ್ ಸುಡೆನಿಕ್ಕುಂ
ಕೂಂಟೆನೆ ಕುಂಟೆಂದಕ್ಕುಂ
ತೇಂಟೆನೆ ಕೇರ್ ಮುದುಡು ದಲ್ ಸುರುಂಟೆನಲಕ್ಕುಂ || ೫೦ ||

[ಅಪೂರ್ಣ]

ವೈ. ಭೀಮಾಜಿ ಶ್ರೀನಿವಾಸರಾವ್.

ನೈಷಧೀಯ ಚರಿತಂ

ಸಪ್ತಮ ಸರ್ಗವು

ಇಂದ್ರ ದೂತಿಯು ಅತ್ತ ಹೊರಟುಹೋದಳು; ಇತ್ತ ನಳನು ದಮಯಂತಿಯ ಪ್ರಾಪ್ತಿಯ ವಿಚಾರದಲ್ಲಿ ತನ್ನ ಮನಸ್ಸಿನಲ್ಲಿ ಹುಟ್ಟಿದ್ದ ಆಶಾಂಕುರವು ಆಕೆಯ ದರ್ಶನದಿಂದ ಬೆಳೆದು ಫಲಿಸಿದಂತೆ ಭಾವಿಸಿಕೊಂಡನು. ಮೊತ್ತಮೊದಲು ಆತನಿಗೆ ದಮಯಂತಿಯ ದರ್ಶನದಿಂದ ಮನಸ್ಸಿನಲ್ಲಿ ಒಂದು ವಿಧವಾದ ಆನಂದವು ಉದ್ಭವಿಸಿತು. ಆ ಆನಂದದಿಂದ ಆತನ ಕಣ್ಣುಗಳಿಂದಲೂ ಆನಂದಾಶ್ರುವನ್ನು ಸುರಿಸುತ್ತಿದ್ದುವು. ಆತನು ದಮಯಂತಿಯನ್ನೂ ಆಕೆಯ ಸಖಿಯರನ್ನೂ ಆನಂದದಿಂದಲೂ ವಿಸ್ಮಯದಿಂದಲೂ ತಿರುತಿರುಗಿ ನೋಡುತ್ತ ತನ್ನಲ್ಲಿಯೇ ಹೀಗೆಂದುಕೊಂಡನು:—"ಬ್ರಹ್ಮನು ಮೊತ್ತಮೊದಲು ಸ್ತ್ರೀ ಸೃಷ್ಟಿಯನ್ನು ಮಾಡಿದನೆಂದು ಬಲ್ಲವರು ಹೇಳುವರು. ಈ ಸುಂದರಿಯಾದ ದಮಯಂತಿಯನ್ನು ನಿರ್ಮಿಸಬೇಕಾದರೆ ಕೈ ಚೆನ್ನಾಗಿ ತಿದ್ದಿರಬೇಕೆಂಬ ಭಾವನೆಯಿಂದ ಹಾಗೆ ತಿದ್ದಿಕೊಳ್ಳುವದಕ್ಕಾಗಿಯೇ ಆ ಸೃಷ್ಟಿಯನ್ನು ಮೊದಲು ಮಾಡಿದನೆಂದು ನನಗೆ ತೋರುವುದು. ಈಗ ಲೋಕದಲ್ಲಿರುವ, ಮುಂದೆ ಹುಟ್ಟುವ ಯಾವ ಸ್ತ್ರೀಯೂ ಸೌಂದರ್ಯದಲ್ಲಿ ಈಕೆಯನ್ನು ಹೋಲಳು ಎಂದು ನನಗೆ ತೋರುವುದು. ಈಕೆಯಲ್ಲಿ ಯಾವ ದೋಷಗಳೂ ಇಲ್ಲದುದನ್ನು ಕಂಡರೆ, ಕಂಡವರನ್ನು ಮೋಹಿಸತಕ್ಕ ಈಕೆಯು ನಮ್ಮನ್ನೂ ಮೋಹಿಸುವಳೋ ಎಂಬ ಭಯದಿಂದ ದೋಷಗಳು ಇವಳಿಗೆ ಅಂಜಿ ದೂರವಾದಂತೆ ತೋರುವುದು. ಅನ್ಯ ಸ್ತ್ರೀಯರಲ್ಲಿ ದೋಷಗಳೊಡನೆ ನವೆಯುತ್ತಿದ್ದ ಗುಣಗಳು ಈಕೆಯಲ್ಲಿ ಯಾವ ದೋಷವೂ ಇಲ್ಲದೆ ಸುಖವಾಗಿದ್ದಂತೆ ತೋರುವುದು. ಇವಳ ದೇಹವರ್ಣವಾದರೋ ಕಮಲದ ವರ್ಣವನ್ನು ಹೋಲುವುದು ಎಂದು ಹೇಳಲು ಬರುವಂತಿಲ್ಲ; ಏಕೆಂದರೆ ಕಮಲ ಕರ್ಣಿಕೆಯು ರೂಕ್ಷವಾಗಿರುವುದರಿಂದ ಈ ಕೋಮಲಾಂಗಿಯ ವರ್ಣಕ್ಕೆ ಅದು ಹೋಲುವುದಿಲ್ಲ. ಸ್ವರ್ಣ ಕೇತಕಿಯು ಕಂಟಕಯುಕ್ತವಾಗಿರುವುದರಿಂದ ಅದರ ಬಣ್ಣವನ್ನು ಹೋಲಿಸಲು ಬರುವುದಿಲ್ಲ. ಆದರೆ ನಿರ್ದೋಷವಾದ ಕೇತಕಿಯ ರಜವನ್ನು ಹೋಲುವುದೆಂದರೆ ಸರಿಯಾದ ಉಪಮೆ ಎಂದು ತೋರುವುದು. ಈಕೆಯ ದೇಹ ಸಂರಕ್ಷಣೆಗಾಗಿ ಇಂದ್ರನು ಕಳುಹಿಸಿರುವ ವಜ್ರಾಯುಧವು ಮಣಿಗಳ ರೂಪದಿಂದ ಬಂದು ಇವಳನ್ನು ಆಶ್ರಯಿಸಿಕೊಂಡಿರುವುದೋ ಎಂಬಂತೆ ತೋರುತ್ತಿರುವುದು. ಈ ದಮಯಂತಿಯ ತುಟಿಗಳಲ್ಲಿರುವ ಸಣ್ಣ ಸಣ್ಣ ರೇಖೆಗಳನ್ನು ಕಂಡರೆ, ಬ್ರಹ್ಮನು ಇವಳ ನಾಲಗೆಯಲ್ಲಿ ಎಷ್ಟು ವಿಧದ ವಿದ್ಯೆಗಳು ನರ್ತಿಸುತ್ತಿವೆ ಎಂಬುದನ್ನು ಸುಲಭ

ವಾಗಿ ಎಣಿಸುವುದಕ್ಕಾಗಿ ಹಾಕಿದ ಗುರುತಿನ ಗೆರೆಗಳಂತೆ ತೋರುವುದು. ವಿಷ್ಣುಪತ್ನಿಯಾದ ಲಕ್ಷ್ಮಿಯು ಪದ್ಮವನ್ನು ಆಶ್ರಯಿಸಿದ್ದುದನ್ನು ತಿಳಿದು ಅವಳ ಸಪತ್ನಿಯಾದ ಸರಸ್ವತಿಯು ಆ ಪದ್ಮವನ್ನು ಕೂಡ ಜಯಿಸತಕ್ಕ ದಮಯಂತಿಯ ಮುಖಚಂದ್ರನನ್ನು ಆಶ್ರಯಿಸಿರುವಳೋ ಎಂಬಂತೆ ಇವಳು ಮಹಾವಿದ್ಯಾವತಿಯಾಗಿಯೂ ಇರುವಳು.''

ಈ ಪ್ರಕಾರ ನಳನು ಬಗೆ ಬಗೆಯಾಗಿ ಅವಳ ಸುರೂಪವನ್ನು ಮನಸ್ಸಿನಲ್ಲಿಯೇ ವರ್ಣಿಸುತ್ತ ಇನ್ನು ಅವಳಿಗೂ ಅವಳ ಸಖಿಯರಿಗೂ ಪ್ರತ್ಯಕ್ಷನಾಗಬೇಕೆಂದು ಎಣಿಸಿ ಕೂಡಲೆ ತಿರಸ್ಕರಿಣೀ ವಿದ್ಯೆಯನ್ನು ಪರಿಹರಿಸಲು ನಳನು ಅಂತಃಪುರದೊಳಗಿನ ಸರ್ವ ಬಾಲೆಯರ ಕಣ್ಣಿಗೂ ಗೋಚರನಾದನು. ಇಂತಹ ಸುಂದರ ಪುರುಷನು ಅಕಸ್ಮಾತ್ತಾಗಿ ಅಂತಃಪುರದಲ್ಲಿ ಗೋಚರವಾದುದನ್ನು ಕಂಡು ಎಲ್ಲರಿಗೂ ಆಶ್ಚರ್ಯವೂ ಆನಂದವೂ ಏಕ ಕಾಲದಲ್ಲಿಯೇ ಉಂಟಾದುವು. ಎಲ್ಲರೂ ಆತನನ್ನು ಅನಿಮೇಷ ದೃಷ್ಟಿಯಿಂದ ನೋಡತೊಡಗಿದರು. ಎಲ್ಲರಿಗೂ ಮೈಯಲ್ಲಿ ರೋಮಾಂಚವಾಯಿತು. ಇಂದ್ರನ ಕಡೆಯ ದೌತ್ಯವನ್ನು ಸ್ವೀಕರಿಸಿ ಬಂದ ನಳನಿಗಾದರೂ ಬಹು ಕಾಲದವರೆಗೆ ಹಾಗೆಯೇ ಮರೆಯಲ್ಲಿರಲು ಸಾಧ್ಯವಾಗಲಿಲ್ಲ. ಕಿಚ್ಚಿನ ಗಂಟನ್ನು ಬತ್ತದ ಹೊಟ್ಟಿನಿಂದ ಎಷ್ಟು ದಟ್ಟವಾಗಿ ಮುಚ್ಚಿದರೂ ಅದು ತನ್ನ ಹೊಳಕೆಯನ್ನು ಹೊರಗೆ ಕಾಣಿಸದೆ ಬಿಡದು.

ನಳನನ್ನು ಕಂಡೊಡನೆಯೇ ದಮಯಂತಿಗೆ ಅವನಲ್ಲಿ ಒಂದು ವಿಧವಾದ ಮೋಹವು ಅಂಕುರಿಸಿತು. ನಳನಿಗೂ ಅದೇ ವಿಧವಾದ ಮೋಹವು ಅವಳಲ್ಲಿಯೂ ಹುಟ್ಟಿತು. ಆಕೆಯು ಇವನ ಆಕಾರಾದಿಗಳನ್ನು ಕಂಡು ಹಂಸವು ಹೇಳಿದ ರೀತಿಯಲ್ಲಿಯೇ ಇದ್ದುದನ್ನರಿತು ಈತನೇ ನಳನೆಂದು ಎಣಿಸಿ ಸಂತೋಷಪಟ್ಟಳು. ಮರುಕ್ಷಣದಲ್ಲಿಯೇ ‘‘ಇವನು ಹೀಗೆ ವಿಚಾರವಿಲ್ಲದೆ ತಟ್ಟನೆ ಅಂತಃಪುರವನ್ನು ಪ್ರವೇಶಿಸುವುದು ಮರ್ಯಾದೆಯಲ್ಲ''ವೆಂದು ತಿಳಿದು ಉದಾಸೀನಳಾದಳು. ನಳನೂ ಇವಳಂತೆಯೇ ಮೊತ್ತಮೊದಲು ಆಕೆಯನ್ನು ಕಂಡು ಅನುರಾಗಪೂರ್ಣನಾದರೂ ಕೊನೆಗೆ ತಾನು ಇಂದ್ರನ ದೂತನಾಗಿ ಬಂದವನೆಂಬ ಭಾವವು ಮನಸ್ಸಿಗೆ ಹೊಳೆದೊಡನೆಯೇ ಅನುಚಿತವೆಂದು ಆ ಅನುರಾಗವನ್ನು ಬಲಾತ್ಕಾರದಿಂದ ಹಿಂದಕ್ಕೆ ಸೆಳೆದನು. ಆ ಅಂತಃಪುರದಲ್ಲಿರುವ ದಮಯಂತಿಯ ಸಖಿಯರೂ ಆತನ ಸೌಂದರ್ಯಾತಿಶಯವನ್ನು ಕಂಡು ವಿಸ್ಮಯಗೊಂಡು ಆನಂದಪರವಶರಾದರು. ಅವರು ನಳನನ್ನು ಕಂಡೊಡನೆಯೇ ಪೀಠದಿಂದ ಎದ್ದು ಅಭ್ಯುತ್ಥಾನವನ್ನು ಮಾಡಬೇಕೆಂದು ಮನಸ್ಸಿನಲ್ಲಿ ಎಣಿಸಿದರೂ ಆನಂದೋದ್ರೇಕದಿಂದ ಹಾಗೆ ಮಾಡಲಾರದೆ ಹೋದರು. ನೀನು ಯಾರು, ಎಲ್ಲಿಂದ ಬಂದವನು? ಎಂದು ಕೇಳುವುದು ಕೂಡ ಅವರಿಂದಾಗಲಿಲ್ಲ. ದಮಯಂತಿಗಂತೂ ವರ್ಷಾಕಾಲದ ಗಿರಿನಿರ್ಝರದಂತೆ ಅವಳ ಮನಸ್ಸು ಉಚ್ಛೃಂಖಲವಾಗಿ ಹರಿಯತೊಡಗಿತು. ಈ ಲೋಕದಲ್ಲಿ ಯಾರ ಮನಸ್ಸೂ ಪರಿಶುದ್ಧವೆಂದು ಹೇಳಲು ಬರುವುದಿಲ್ಲ. ಅರಣ್ಯವಾಸಿ

ಗಳಾದ ತಪಸ್ವಿಗಳೂ ಒಮ್ಮೊಮ್ಮೆ ನೀಚ ಕಾರ್ಯಕ್ಕೆ ಕೈಹಾಕಲು ಎಣಿಸುವುದುಂಟು. ಅಂತಹ ಸಮಯದಲ್ಲಿ ಭಗವಂತನೇ ಅವರ ಮನಸ್ಸನ್ನು ತಡೆಯಬೇಕಲ್ಲದೆ ಅವರಿಂದಲೇ ಅದು ಸಾಧ್ಯವಲ್ಲ. ಅದರಂತೆಯೇ ಇಂದ್ರ ದೂತನಾಗಿ ಬಂದ ಈ ನಳನು ದಮಯಂತಿಯಲ್ಲಿ ಅನುರಾಗವನ್ನು ತೋರಿದುದು ಅಧರ್ಮವಾದರೂ ಕೊನೆಗೆ ಇವನೇ ಈಕೆಗೆ ಪತಿಯಾಗುವನೆಂಬ ಭಾವದಿಂದ ಆ ಇಂದ್ರಾದಿ ದೇವತೆಗಳೇ ಅವನಿಗೆ ಆ ಮನಸ್ಸನ್ನುಂಟುಮಾಡಿದುದರಿಂದ ಅದನ್ನು ಅಪರಾಧವೆಂದು ಹೇಳಲು ಬರುವುದಿಲ್ಲ.

ಮುಂದೆ ದಮಯಂತಿಗೆ ತನ್ನ ಮನಸ್ಸನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಅವಳು ತನ್ನ ಲಜ್ಜೆಯನ್ನೆಲ್ಲ ಬದಿಗೊತ್ತಿ ಭಯದಿಂದ ತಲೆ ಬಗ್ಗಿಸಿಕೊಂಡು ಗದ್ಗದವಾದ ಸ್ವರದಿಂದ ನಳನಿಗೆ ಹೀಗೆ ಹೇಳತೊಡಗಿದಳು:—"ಎಲೈ ಪುರುಷಶ್ರೇಷ್ಠನೇ! ಗೃಹಸ್ಥನು ತನ್ನ ಮನೆಗೆ ಬಂದ ಅತಿಥಿಗಳಿಗೆ ಮೊತ್ತಮೊದಲು ವಂದಿಸಿ ತನ್ನ ಶಿರೋರತ್ನ ಕಾಂತಿಯಿಂದ ಆತನಿಗೆ ಪಾದ್ಯವನ್ನೂ ಪ್ರಿಯವಾಕ್ಯಗಳೆಂಬ ರಸಧಾರೆಯಿಂದ ಮಧುಪರ್ಕವನ್ನೂ ಅರ್ಪಿಸಬೇಕೆಂದು ಹಿರಿಯರು ಹೇಳಿರುವರು. ಅತಿಥಿಗೆ ಗೃಹಸ್ಥನು ತನ್ನ ಶರೀರವನ್ನು ತೃಣದಂತೆ ಅರ್ಪಿಸಬೇಕು. ತಾನು ಕುಳಿತ ಸ್ಥಾನದಿಂದ ಎದ್ದು ಆತನನ್ನು ಅಲ್ಲಿ ಕೂಡಿಸಬೇಕು. ಆಮೇಲೆ ಆನಂದ ಬಾಷ್ಪಗಳನ್ನು ಆತನ ಪಾದೋದಕವಾಗಿ ಕಲ್ಪಿಸಿ, ಜೇನಿನಂತೆ ಸವಿಯಾದ ಮಾತುಗಳಿಂದ ಕುಶಲ ಪ್ರಶ್ನೆಯನ್ನು ಕೇಳಬೇಕು? ಇದೆಲ್ಲವೂ ಪ್ರಾಚೀನ ಪದ್ಧತಿ. ಅದರಂತೆಯೇ ಪುರುಷಶ್ರೇಷ್ಠನೇ, ನಾನು ನಿನ್ನನ್ನು ಕಂಡೊಡನೆಯೇ ನನ್ನ ಪೀಠದಿಂದ ಎದ್ದು ಈ ಪೀಠವನ್ನು ನಿನಗೆ ಅರ್ಪಿಸಿರುವೆನು. ಈ ಆಸನವು ನಿನಗೆ ತಕ್ಕುದಲ್ಲವಾದರೂ, ಅಥವಾ ನೀನು ಬೇರೆ ಕಡೆಗೆ ಹೋಗತಕ್ಕವನಾಗಿದ್ದರೂ ನಮ್ಮಂತಹ ಭಕ್ತಜನರ ಮೇಲಿನ ವಿಶ್ವಾಸದಿಂದ ಇಲ್ಲಿ ಕ್ಷಣ ಮಾತ್ರವಾದರೂ ಕುಳಿತು ಹೋಗಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ. ಪೂಜ್ಯನೆ! ಶಿರೀಷ ಕುಸುಮದಂತೆ ಮೃದುವಾದ ಈ ಪಾದಗಳನ್ನು ನಿರ್ದಯದಿಂದ ಎಲ್ಲಿಯವರೆಗೆ ಬಳಲಿಸಬೇಕೆಂದು ಎಣಿಸಿರುವೆ? ನೀನು ಎಲ್ಲಿಂದ ಬಂದವನು? ಯಾರು ನಿನ್ನನ್ನು ಇಲ್ಲಿಗೆ ಕಳುಹಿಸಿದರು? ಯಾವ ದೇಶವು ನಿನ್ನ ಅಗಲಿಕೆಯಿಂದ ವಸಂತಮುಕ್ತವಾದ ವನದಂತೆ ರಿಕ್ತಭಾವವನ್ನು ಹೊಂದಿರುವುದು? ನಿನ್ನ ಹೆಸರೇನು? ಈ ವಿಚಾರವನ್ನೆಲ್ಲ ತಿಳಿಸಿ ಈ ಜನವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ. ನೀನು ಈ ಅಂತಃಪುರವನ್ನು ಪ್ರವೇಶಿಸಿದುದು ವಿಸ್ತಾರವಾದ ಮಹಾಸಾಗರವನ್ನು ದಾಟಿ ಬಂದಂತೆ ಎಂದು ತಿಳಿಯುತ್ತೇನೆ. ಈ ಅಂತಃಪುರವನ್ನು ಪ್ರವೇಶಿಸುವಷ್ಟು ಸಾಹಸವನ್ನು ತೋರಿದುದರಿಂದ ನಿನಗೆ ದೊರೆಯಬೇಕಾದ ಫಲವಾದರೂ ಏನೆಂದು ನನಗೆ ತಿಳಿಯುವುದಿಲ್ಲ. ನಿನ್ನ ಸೌಂದರ್ಯವನ್ನು ಕಂಡು ನನ್ನ ಕಣ್ಣುಗಳು ತೃಪ್ತಿಗೊಂಡರೂ ವೀರ ಪುರುಷರಿಂದ ರಕ್ಷಿಸಲ್ಪಡುತ್ತಿರುವ ಈ ಅಂತಃಪುರವನ್ನು ಪ್ರವೇಶಿಸಿದ ವಿಧಾನವನ್ನು ತಿಳಿಯುವುದಕ್ಕಾಗಿ ನನ್ನ ಕಿವಿಗಳು

ಆತುರಪಡುತ್ತಿವೆ. ನಿನ್ನ ಸೌಂದರ್ಯವನ್ನೂ ನೈಪುಣ್ಯವನ್ನೂ ಕಂಡರೆ ದೇವತೆಗಳಿಗೆ ನೀನೇನೂ ಕಡಿಮೆಯಾದವನಲ್ಲವೆಂದು ಎಣಿಸುತ್ತೇನೆ. ಅದಲ್ಲದೆ ದ್ವಾರಪಾಲಕರ ಕಣ್ಣನ್ನು ಕುರುಡಾಗಿ ಮಾಡಿದ ನಿನ್ನ ಅಮಾನುಷ ಶಕ್ತಿಯೂ ನನ್ನ ಈ ಅಭಿಪ್ರಾಯವನ್ನು ಬಲಪಡಿಸುತ್ತದೆ. ನಿನ್ನನ್ನು ಮನ್ಮಥನೆಂದು ಎಣಿಸುವೆನೆಂದರೆ ಮನ್ಮಥನಿಗೆ ದೇಹವಿಲ್ಲ; ಅಶ್ವಿನೀಕುಮಾರನೆಂದು ಎಣಿಸುವೆನೆಂದರೆ ಏಕಾಂಗಿಯಾಗಿ ಬಂದಿರುವೆ. ಅಲ್ಲದೆ ನಿನ್ನಲ್ಲಿರುವ ಇತರ ಲಕ್ಷಣಗಳಿಂದಲೂ ನೀನು ಅವರನ್ನು ಮೀರಿಸಿದಂತೆ ತೋರುವೆ. ಸೌಂದರ್ಯ ಚಂದ್ರನಾದ ನಿನ್ನನ್ನು ಪಡೆದ ವಂಶವಾವುದರೂ ಸಮುದ್ರಕ್ಕೆ ಕಡಿಮೆಯಾದುದಲ್ಲ. ಎಲೈ ಮಹಾತ್ಮನೇ! ನಿನ್ನ ಆ ವಂಶವನ್ನಾದರೂ ತಿಳಿಯಬೇಕೆಂದು ನನ್ನೀ ಮನಸ್ಸು ಆತುರಪಡುವುದು."

ದಮಯಂತಿಯು ಇದುವರೆಗೆ ಆಡಿದ ಮಾತಿನಲ್ಲಿ ಅವನು ನಳನೇ ಆಗಿರಬೇಕೆಂದು ಗರ್ಭಾರ್ಥವು ತೋರುತ್ತಿದ್ದಿತು. ಹೀಗಿದ್ದರೂ ದಮಯಂತಿಯು ಅದನ್ನು ಪ್ರಕಾಶಗೊಳಿಸದೆ ನಲಸದೃಶನಾದ ಬೇರೊಬ್ಬ ದೇವತೆಯಂತೆಯೇ ಭಾವಿಸಿದವಳಹಾಗೆ ಅತಿಥಿಗೆ ಉಪಚಾರವನ್ನು ಮಾಡಿ ಪ್ರಿಯವಾದ ಮಾತುಗಳನ್ನು ನುಡಿದು ಮುಂದೆ ನಾಲಗೆಯನ್ನು ತಡೆಯಲಾರದೆ ನಳನನ್ನು ಹೊಗಳತೊಡಗಿದಳು: "ಎಲೈ ದಿವ್ಯ ಪುರುಷನೇ! ನಿನ್ನ ಸೌಂದರ್ಯವನ್ನು ಕಂಡು ಲಜ್ಜಿತನಾದ ಮನ್ಮಥನು ತನ್ನ ದೇಹವನ್ನೇ ಬಿಟ್ಟನು. ನಿನ್ನ ಸೌಂದರ್ಯಕ್ಕೂ ಕೀರ್ತಿಗೂ ಸೋತ ಕೈಲಾಸಕ್ಕೆ ಶಿರೋಭಾರವುಂಟಾಯಿತು; ಅಶ್ವಿನೀಕುಮಾರರಂತೂ ನಿನ್ನನ್ನು ಕಂಡು ಲಜ್ಜಿಸಿ ಕಣ್ಣೀರು ಸುರಿಸುತ್ತಿದ್ದಾರೆ. ಹಂಸಗಳು ನಿನ್ನ ಕೀರ್ತಿಯ ಶುಭ್ರತ್ವಕ್ಕೆ ಸೋತು ಘಾಸ್ಯಗಳ ಹೊಟ್ಟೆಸಂತೆ ಮೇಲಕ್ಕೆ ನೆಗೆಯುತ್ತ ನದಿಗಳಲ್ಲಿಯೂ ಸರೋವರಗಳಲ್ಲಿಯೂ ಈಗಲೂ ತೇಲುತ್ತಿವೆ. ಪರಮೇಶ್ವರನು ಮನ್ಮಥನನ್ನು ಸುಟ್ಟುಬಿಟ್ಟುದರಿಂದ ಲೋಕದಲ್ಲಿ ಸೌಂದರ್ಯವೇ ನಾಶವಾದಂತಾಗಲು ಇದನ್ನರಿತು ಆ ಶಿವನು ತಿರುಗಿ ಅನುಗ್ರಹ ಬುದ್ಧಿಯಿಂದ ನಿನ್ನನ್ನು ನಿರ್ಮಿಸಿರಬೇಕೆಂದು ಎಣಿಸುತ್ತೇನೆ. ಪೂಜ್ಯನೆ! ನೀನು ಮನುಷ್ಯನಾಗಿದ್ದರೆ ನಿನ್ನಿಂದ ಭೂಮಿಯೇ ಕೃತಾರ್ಥವಾಯಿತೆಂದು ಎಣಿಸುತ್ತೇನೆ. ಹಾಗಲ್ಲದೆ ದೇವನಾಗಿದ್ದರೆ ನಿನ್ನ ಸೌಂದರ್ಯಾತಿಶಯದಿಂದ ಸ್ವರ್ಗಕ್ಕೇ ಉತ್ಕರ್ಷತ್ವ ಬಂದಂತಾಯಿತು. ಒಂದು ವೇಳೆ ನೀನು ನಾಗಕುಲಕ್ಕೆ ಸೇರಿದವನಾಗಿದ್ದರೆ ಆ ನಾಗಲೋಕವು ಸರ್ವಲೋಕಗಳಿಗೂ ಕೆಳಗಿದ್ದರೂ ನಿನ್ನಿಂದ ಅದು ಸರ್ವಲೋಕಗಳಿಗೂ ಮೇಲಾದಂತೆಯೇ ಎಣಿಸುತ್ತೇನೆ. ಮಹರ್ಷಿಯಾದ ಅಗಸ್ತ್ಯನು ಸಮುದ್ರಪಾನ ಮಾಡಿದನೆಂದು ಲೋಕವು ಆಶ್ಚರ್ಯಪಡುತ್ತಿರುವುದು. ಆದರೆ ನಿನ್ನನ್ನು ನೋಡಿದ ನನಗೆ ಆ ಆಶ್ಚರ್ಯವು ತೋರುವುದಿಲ್ಲ; ಏಕೆಂದರೆ ಆ ಸಮುದ್ರದ ಗಾಂಭೀರ್ಯವನ್ನೆಲ್ಲ ನೀನು ಅಪಹರಿಸಿಕೊಂಡಮೇಲೆ ಗಾಢವಾದ ಆ ಜಲವನ್ನು ಮುನಿಯು ಕುಡಿದುದರಲ್ಲಿ ಆಶ್ಚರ್ಯವಿಲ್ಲ. ಅದಲ್ಲದೆ ಈ ಸಂಸಾರದಲ್ಲಿ ಬ್ರಹ್ಮನು ಬಿಂಬವನ್ನು ಹೋಲಿಸಿ ಪ್ರತಿಬಿಂಬವನ್ನು ಸೃಷ್ಟಿಸುವನಲ್ಲದೆ ಸ್ವತಂತ್ರವಾದ ಆಕಾರ ರೂಪ

ಗಳಿಂದ ವಿಕಾರವನ್ನೂ ಹುಟ್ಟಿಸುವುದಿಲ್ಲ. ಮಹಾತ್ಮನೆ, ಈಗ ನಿನ್ನ ಆಕಾರವನ್ನು ಕಂಡಲ್ಲಿ ನಿಷಧದ ವೀರಸೇನ ಮಹಾರಾಜನ ಮಗನಾದ ನಳನ ಪ್ರತಿಬಿಂಬವೇ ನಿನ್ನಲ್ಲಿ ತೋರಿಯುತ್ತಿರುವುದು. ನೀನು ಯಾವ ಕಾರ್ಯಕ್ಕಾಗಿ ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರುವೆಯೋ ಅದು ನನಗೆ ತಿಳಿಯದು. ಅಂತು ನಿನ್ನ ಪದ್ಮ, ಮಕರಾದಿ ರಾಜಚಿಹ್ನಗಳಿಂದ ಅಂಕಿತವಾದ ಪಾದಗಳು ಯಾರ ಬಳಿಗೆ ಹೋಗುವುವೋ ಅವರು ಧನ್ಯರೆಂದೇ ನನ್ನ ಭಾವಿಸಿರುವುದು. ಈಗ ನೀನು ನನ್ನ ಬಳಿಗೆ ಬಂದವನೋ ಅಥವಾ ಅನ್ಯರ ಬಳಿಗೆ ಬಂದವನೋ ಎಂಬುದನ್ನು ನಿಶ್ಚಯಿಸಲಾರದೆ ನನ್ನ ಮನಸ್ಸು ಸಂದೇಹದಲ್ಲಿ ಬಿದ್ದಿರುವುದು. ನಿನ್ನ ರೂಪವನ್ನು ಕಂಡು ಈ ಕಣ್ಣುಗಳು ಕೃತಾರ್ಥವಾದಂತೆ ನಿನ್ನ ವಚನಾಮೃತವನ್ನು ಸವಿದು ಈ ಕಿವಿಗಳು ಕೃತಾರ್ಥವಾಗಲು ಬಗೆದಿರುವುವು."

ಈ ಪ್ರಕಾರ ದಮಯಂತಿಯ ತುಟಿಗಳೆಂಬ ಬಿಲ್ಲಿನಿಂದ ಹೊರಟು ಜೇನಿನಂತೆ ಬಹು ಇಂಪಾದ ಮಾತುಗಳೆಂಬ ಪುಷ್ಪಬಾಣಗಳು ಬಂದು ನಳನ ಕರ್ಣರಂಧ್ರವನ್ನು ಪ್ರವೇಶಿಸಿದುವು. ಆತನಿಗೆ ಆ ಪ್ರಿಯವಾದ ಭಾಷಣವನ್ನು ಕೇಳಿ ಅಮೃತಪಾನ ಮಾಡಿದಂತೆ ಮನಸ್ಸಿಗೆ ಬಹಳ ಆನಂದವಾಯಿತು. ಶತ್ರುಗಳ ಬಾಯಿಂದಲೂ ಸ್ತುತಿಪರವಾದ ಮಾತುಗಳನ್ನು ಕೇಳುವಾಗ ಆನಂದವಾಗತಕ್ಕ ಸಂದರ್ಭದಲ್ಲಿ ಪ್ರಿಯ ಜನರ ಬಾಯಿಂದ ಹೊರಟ ಇಂತಹ ಮಾತುಗಳಿಂದ ಸುಖವುಂಟಾಗಲಾರದೆ? ಪೂರ್ವ ದಿಕ್ಕಿನಲ್ಲಿ ಉದಯಿಸಿ ಬರುತ್ತಿರುವ ಸೂರ್ಯನು ಲೋಕದಲ್ಲಿರುವ ಜನರು ಅರ್ಪಿಸುವ ಅರ್ಘ್ಯಾದಿಗಳನ್ನು ಸ್ವೀಕರಿಸಿ ಉದಯಾಚಲಸ್ಥಿತನಾಗುವಂತೆ ದಮಯಂತಿಯು ಆತಿಥ್ಯವನ್ನು ಸ್ವೀಕರಿಸಿ ತಾನು ದೂತನೆಂಬ ಭಾವನೆಯಿಂದ ದಮಯಂತಿಯು ಪೀಠದ ಮೇಲೆ ಕೂಡದೆ, ಆಕೆಯ ಸಖಿಯೊಬ್ಬಳು ಕುಳಿತ ಪೀಠದ ಮೇಲೆ ಕುಳಿತನು. ಕುಳಿತವನೇ ತನ್ನ ಮನೋಭಿಲಾಷೆಯನ್ನು ತಡೆದು ಧೈರ್ಯದಿಂದ ಮಾತಾಡತೊಡಗಿದನು. ವಿವೇಕವೆಂಬ ಜಲದಿಂದ ಹಲವು ಸಾರಿ ಮನಸ್ಸನ್ನು ತೊಳೆದು ಶುದ್ಧಮಾಡಿಕೊಂಡವರಿಗೆ ಮನ್ಮಥನಾದರೂ ಏನು ಮಾಡಬಲ್ಲನು? ನಳನು ಧೈರ್ಯದಿಂದ ಮಾತಿಗೆ ತೊಡಗಿದನು:—

"ರಾಜಪುತ್ರಿ! ನನ್ನನ್ನು ಇಂದ್ರಾದಿಗಳ ಕಡೆಯಿಂದ ಬಂದ ದೂತನೆಂದು ತಿಳಿ. ನಾನು ಬಂದ ಕಾರ್ಯವನ್ನು ಸಫಲಗೊಳಿಸಿದೆಯಾದರೆ ಅದೇ ನನಗೆ ವಿಶೇಷವಾದ ಉಪಕಾರವೆಂದು ಎಣಿಸುತ್ತೇನೆ. ಸುಂದರಿ! ನಿನ್ನ ದೇಹಕ್ಕೂ ಮನಸ್ಸಿಗೂ ಕುಶಲವೇ? ನೀನು ಸಾವಧಾನವಾಗಿ ನನ್ನ ಮಾತುಗಳನ್ನು ಕೇಳಬೇಕಾದುದರಿಂದ ಅದಕ್ಕೆ ತಕ್ಕಷ್ಟು ಅವಕಾಶವನ್ನು ಕೊಡು. ಚಿಕ್ಕಂದಿನಿಂದ ನಿನ್ನ ಶ್ರೇಷ್ಠ ಸುಗುಣಗಳು ಇಂದ್ರ, ಅಗ್ನಿ, ಯಮ, ವರುಣರೆಂಬ ದಿಕ್ಪಾಲಕರ ಮನಸ್ಸನ್ನು ಆಕರ್ಷಿಸಿದ್ದುದನ್ನು ನೀನು ತಿಳಿಯದೆ ಇರಬಹುದು. ಈಗ ನೀನು ಯೌವನಾವಸ್ಥೆಗೆ ಕಾಲಿಟ್ಟುದರಿಂದ ದುಷ್ಟನಾದ ಮನ್ಮಥನು ಆ ಇಂದ್ರಾದಿಗಳ ಧೈರ್ಯಧನವನ್ನು ಅಪಹರಿಸಿ ಅವರನ್ನು ವಿಶೇಷವಾಗಿ ಕಾಡುತ್ತಿದ್ದಾನೆ. ಅವರು

ತಮ್ಮ ತಮ್ಮ ಪತ್ನಿಯರಲ್ಲಿದ್ದ ಆಶೆಯನ್ನು ಕೂಡ ಪೂರ್ಣವಾಗಿ ಬಿಟ್ಟು ನಿನ್ನನ್ನು ಆಶ್ರಯಿಸಬೇಕೆಂದು ಬಗೆಸುತ್ತಿದ್ದಾರೆ. ಅದಲ್ಲದೆ ಚಂದ್ರನು ಎಷ್ಟರ ಮಟ್ಟಿಗೆ ಭ್ರಾಂತನಾಗಿರುವನೆಂದರೆ, ಅವನಿಗೆ ಮೂಡಿ ಬರುತ್ತಿರುವ ಸೂರ್ಯನನ್ನು ಕಂಡರೆ ಚಂದ್ರನಂತೆ ತೋರುವುದು. ತ್ರಿನೇತ್ರನಾದ ಪರಮೇಶ್ವರನನ್ನು ಕೆಣಕಿ ದೇಹಶೂನ್ಯ ನಾದ ಅನಂಗನು ಈಗ ಸಹಸ್ರನೇತ್ರನಾದ ಇಂದ್ರನನ್ನು ಕೆಣಕಿ ಯಾವ ಸ್ಥಿತಿಗೆ ಇಳಿಯುವನೋ ಕಾಣೆನು. ಕೋಗಿಲೆಯ ಮಧುರವಾದ ಗಾನಕ್ಕಾಗಿ ನಂದನ ವನ ಸಂಚಾರವನ್ನೂ ಜೂದಾ ಚಂದ್ರನಿಗಾಗಿ ಪರಮೇಶ್ವರನ ಆರಾಧನೆಯನ್ನೂ ಕೂಡ ಬಿಟ್ಟಿರುವನು. ಹೀಗೆ ವಿರಹ ಪಾರವಶ್ಯದಿಂದ ಕರ್ತವ್ಯ ಕರ್ಮವನ್ನು ಕೂಡ ಬಿಟ್ಟಿರುವನೆಂದು ಹೇಳಿದಮೇಲೆ ಮುಂದೆ ಹೇಳತಕ್ಕುದೇನಿದೆ? ಎಲೈ ದಮಯಂತಿ! ಇಂದ್ರನು ಮಾತ್ರನೇ ಈ ಅವಸ್ಥೆಗೆ ಗುರಿಯಾದನೆಂದು ಎಣಿಸ ಬೇಡ. ಅಷ್ಟಮೂರ್ತಿಯ ಅಂಗವಾಗಿದ್ದ ಅಗ್ನಿಗೂ ಇದೇ ಅವಸ್ಥೆಯೇ ಪ್ರಾಪ್ತ ವಾಗಿರುವುದು. ಹಿಂದೆ ಯಾವ ಪರಮೇಶ್ವರನ ನೇತ್ರಾಗ್ನಿಯಿಂದ ಕಾಮನು ದಗ್ಧನಾದನೋ ಆ ಕಾಮನೇ ಈಗ ನಿನ್ನ ನೇತ್ರವನ್ನು ಆಶ್ರಯಿಸಿ ಅಗ್ನಿಯನ್ನು ಸುಡುತ್ತಿದ್ದಾನೆ. ಅಂತೂ ಈ ವಿಧವಾಗಿ ಅಗ್ನಿಯನ್ನು ಸುಟ್ಟು ತಾನು ನಿರ್ವೈರ ವನ್ನು ಹೊಂದಬೇಕೆಂಬುವುದೇ ಅವನ ಭಾವನೆಂದು ತೋರುತ್ತದೆ. ಚಂದ್ರನ ಮೇಲಿನ ಕೋಪದಿಂದ ಆ ಅಗ್ನಿಯು ಯಜ್ಞದಲ್ಲಿ ಪೋಷಿಸುವ ಸೋಮವನ್ನು ಚಂದ್ರನಾಮ ಸಾಮ್ಯದಿಂದ ಶೀಘ್ರವಾಗಿ ಕುಡಿಯುತ್ತಿದ್ದಾನೆ. ಪರರಿಂದ ತಮಗಾದ ಅಪಮಾನವನ್ನು ಸಹಿಸಲಾರದ ತೇಜಸ್ವಿಗಳು ಶತ್ರುನಾಮ ಧಾರಿ ಗಳನ್ನು ಕೂಡ ನೋಡಿ ಸಹಿಸಲಾರರೆಂಬುದನ್ನು ದೃಷ್ಟಾಂತಪಡಿಸುವಂತೆ ತೋರುತ್ತಿದ್ದಾನೆ.

ಈಗ ಅಗ್ನಿಯನ್ನು ಬಿಡು. ಯಮನ ಅವಸ್ಥೆಯನ್ನು ಹೇಳುತ್ತೇನೆ ಕೇಳು. ಯಾವ ಯಮನಿಗೆ ಕಮಲಗಳ ಮಿತ್ರನಾದ ಸೂರ್ಯನು ತಂದೆಯೋ ಚಂದನ ಗಳಿಂದ ಪರಿಮಳಿತವಾದ ದಕ್ಷಿಣ ದಿಕ್ಕು ಅವನ ಸ್ಥಾನವಾಗಿರುವುದೋ ಆ ಯಮನು ತನ್ನ ಗೌರವವನ್ನೆಲ್ಲ ಬದಿಗಿಟ್ಟು ನಿನಗಾಗಿ ವಿರಹ ವೇದನೆಯನ್ನು ಅನು ಭವಿಸುತ್ತಿದ್ದಾನೆ. ಆಶ್ರಯ ದಾತನಿಗೆ ವಿಪತ್ತು ಬಂದಿರುವಾಗ ಆತನ ಸೇವೆ ಯನ್ನು ಮಾಡುವುದು ಉಚಿತವೆಂಬುದನ್ನು ಲೋಕಕ್ಕೇ ತೋರಿಸಿಕೊಡು ವಂತೆ ದಕ್ಷಿಣಾಶೆಯನ್ನು ಆಶ್ರಯಿಸಿರುವ ಮಲಯಜ ವೃಕ್ಷಗಳು ತಮ್ಮ ಚಿಗುರು ಗಳೆಂಬ ಹಸ್ತಗಳಿಂದ ಆತನ ಸೇವೆಯನ್ನು ಮಾಡುತ್ತಿರುವುವು. ಆ ಯಮನು ಶ್ಯಾಮಲ ವರ್ಣನಾಗಿದ್ದರೂ ಈಚೆಗೆ ನಿನ್ನ ವಿಯೋಗವೆಂಬ ತೀವ್ರ ಜ್ವರದಿಂದ ಬಿಳುಪುಗಟ್ಟಿ ಶುಭ್ರವಾಗಿ ಕಾಣುತ್ತಿರುವನು.

ಕೃಶಾಂಗಿ! ಯಾವ ವರುಣನು ಸಾಯಂಕಾಲದ ವೇಳೆ ಕುಂಕುಮವನ್ನು ಹಚ್ಚಿಕೊಂಡಂತೆ ಕೆಂಪಗೆ ತೋರುತ್ತಿರುವ ಪಶ್ಚಿಮ ದಿಗಂಗನೆಗೆ ಪತಿಯಾಗಿರು ವನೋ ಆ ವರುಣನು ನಿನ್ನಲ್ಲಿ ನಿಲುಕಿದ ಮನಸ್ಸನ್ನು ತಿರುಗಿಸಲಾರದೆ ವ್ಯಥೆ

ಪಡುತ್ತಿದ್ದಾನೆ. ಸಮುದ್ರಗಳ ನಡುವೆ ಸೇರಿ ಸದಾ ದಹಿಸುತ್ತಿರುವ ಬಡಬಾಗ್ನಿಯಿಂದ ಆತನಿಗೆ ಉಂಟಾಗುತ್ತಿರುವ ಸಂತಾಪಕ್ಕಿಂತ ಈ ವಿರಹ ತಾಪವೇ ಮೇಲೆಂದು ತಿಳಿಯುತ್ತಿರುವನು. ರಾಜಕುಮಾರಿ, ನಿನ್ನಿಂದಲೇ ಆ ಮನ್ಮಥನಿಗೆ ಇಷ್ಟು ಹೆಮ್ಮೆ ಬಂದು ಮೂರು ಲೋಕಕ್ಕೆ ಅಲಂಕಾರಪ್ರಾಯರಾದ ಆ ಇಂದ್ರಾದಿಗಳ ವಿಚಾರದಲ್ಲಿಯೂ ಸ್ವೇಚ್ಛೆಯಾಗಿ ನಡೆಯುತ್ತಿದ್ದಾನೆ. ನಾಳೆ ನಿನ್ನ ಸ್ವಯಂವರವಾಗುವುದೆಂಬ ಈ ವಾರ್ತೆಯು ಇಂದ್ರಾದಿಗಳ ಕಿವಿಗೂ ಬಿದ್ದು ಅಮೃತಧಾರೆಯಂತೆ ಅವರ ಮನಸ್ಸನ್ನು ತೃಪ್ತಿಪಡಿಸುತ್ತಿರುವುದು. ಅವರಿಗೆ ಅಧ್ವಗಮನ ಕಾಲದಲ್ಲಿ ಹಸಿವು ಬಾಯಾರಿಕೆಗಳುಂಟಾದರೂ ನಿನ್ನ ಧ್ಯಾನದಿಂದ ಅದೊಂದೂ ಅವರ ಗೋಚರಕ್ಕೆ ಬಾರದೆ ಸದಾ ತೃಪ್ತಿಯನ್ನೇ ತೋರಿಸುತ್ತಿದ್ದಾರೆ. ನಿನಗಾಗಿಯೇ ಆ ಮಹಾತ್ಮರು ಅಮರಾವತಿ ಮೊದಲಾದ ಸ್ಥಳಗಳನ್ನು ಬಿಟ್ಟು ಈಗ ಈ ಕುಂಡಿನಪುರದ ಸಮೀಪದಲ್ಲಿಯೇ ಇಳಿದುಕೊಂಡಿರುವರು. ನಾನು ಅವರ ಕಡೆಯ ದೂತನು; ಅವರ ಸಂದೇಶವನ್ನು ನಿನಗೆ ಅರ್ಪಿಸುವುದಕ್ಕಾಗಿ ಬಂದವನು. ದಮಯಂತಿ! ಆ ಇಂದ್ರಾದಿಗಳು ನಿನಗೆ ಹೀಗೆ ತಿಳಿಸಬೇಕೆಂದು ನುಡಿದಿರುವರು:—"ನಿನ್ನನ್ನು ಸಾವಿರಾರು ಮಂದಿ ಬಯಸಿರಬಹುದು. ಆದರೆ ನಮ್ಮ ಅಳಿವು ಉಳಿವು ನಿನ್ನ ಅನುಗ್ರಹವನ್ನೇ ಅವಲಂಬಿಸಿರುವುದು. ನಮ್ಮ ಈ ವಚನದಲ್ಲಿ ಕಪಟವಿದೆಯೆಂದು ಎಣಿಸುವೆಯಾದರೆ ಅದಕ್ಕೆ ನಮ್ಮ ಹೃದಯದಲ್ಲಿರುವ ಮನ್ಮಥನೇ ಪ್ರಮಾಣವೆಂದು ತಿಳಿ. ಬಹು ಕಾಲದಿಂದಲೂ ನಿನ್ನಲ್ಲಿ ಆಸಕ್ತರಾಗಿದ್ದ ನಮ್ಮನ್ನು ವಿಷ್ಣುವಿನ ಕೈಹಿಡಿದ ಲಕ್ಷ್ಮಿಯಂತೆ ಕೈಹಿಡಿ. ನಿನ್ನ ಮನಸ್ಸಿನಲ್ಲಿ ದಯೆಯೆಂಬ ಗುಣವು ಇರುವುದಾದರೆ ನಮ್ಮ ಮಾತಿನಂತೆ ಸ್ವರ್ಗವನ್ನು ಅಲಂಕರಿಸು. 'ಶುಭಸ್ಯ ಶೀಘ್ರಂ' ಎಂಬ ನ್ಯಾಯದಂತೆ ವಿಲಂಬಕ್ಕೆ ಅವಕಾಶವನ್ನು ಕೊಡಬೇಡ. ಹಾಗಲ್ಲದೆ ನೀನು ಭೂಮಿಯನ್ನು ಬಿಡಲು ಇಷ್ಟವಿಲ್ಲದವಳಾದರೆ ನಾವೂ ಕೂಡ ಇಲ್ಲಿಯೇ ಬಂದು ಭೂಮಿಯನ್ನೇ ಸ್ವರ್ಗವಾಗಿ ಮಾರ್ಪಡಿಸುವೆವು. ತನ್ವಿ! ನೀನು ಪ್ರತಿದಿನವೂ ನಮಗಾಗಿ ಮಾಡುತ್ತಿರುವ ಪೂಜೆಯಿಂದ ನಮಗೇನೂ ಅಷ್ಟು ತೃಪ್ತಿಯಿಲ್ಲ. ನಿನ್ನ ಅನುಗ್ರಹವೇ ನಮಗೆ ಪೂಜೆ. ನೀನು ಪೂಜಾ ಕಾಲಗಳಲ್ಲಿ ಅರ್ಪಿಸುವ ಸ್ವರ್ಣಪುಷ್ಪಾದಿಗಳಿಂದ ಸ್ವರ್ಣಾಚಲವಾಸಿಗಳಾದ ನಮಗೆ ತೃಪ್ತಿಯೇನು? ನಾವು ಪುಟವಿಟ್ಟ ಚಿನ್ನವನ್ನು ಹೋಲುತ್ತಿರುವ ನಿನ್ನ ಪಾಣಿ ಸಂಬಂಧವನ್ನು ಮಾತ್ರ ಯಾಚಿಸುತ್ತೇವೆ. ಅಮೃತ ಸರೋವರಗಳಲ್ಲಿಯೂ ಶಾಂತವಾಗದ ನಮ್ಮ ತಾಪವು ನಿನ್ನ ಮಮತಾವ್ಯಂಜಕವಾದ ಮಾತುಗಳಿಂದಲ್ಲದೆ ಅನ್ಯವಾದ ಉಪಾಯಗಳಿಂದ ಶಾಂತವಾಗಲು ಸಾಧ್ಯವಿದೆಯೇ? ಎಲೇ ದೇವಿ! ಕಲ್ಲುಸಕ್ಕರೆಯೆಂದರೆ ನಿನ್ನ ಮಾತೇ. ಉಳಿದ ತುಂಡುಗಳು ಕಲ್ಲುಸಕ್ಕರೆಯೆಂದಾಗುವುವೇ? ಇಕ್ಷುವೆಂದರೆ ಶೃಂಗಾರಾದಿ ರಸಯುಕ್ತವಾದ ನಿನ್ನ ಮಾತುಗಳೆಂಬ ಕಚ್ಛಪ್ರದೇಶದಲ್ಲಿ ಬೆಳೆಯುವ ಹುಲ್ಲುಗಳೆಂದು ಮಾತ್ರ ತಿಳಿಯುತ್ತೇವೆ. ನಿನಗೆ ಅಮರತ್ವವನ್ನು ಕೊಡೋಣವೆಂದರೆ ನಾವೇ ಅಮರತ್ವಕ್ಕಾಗಿ ನಿನ್ನನ್ನು ಆಶ್ರಯಿಸಿರುವಾಗ

'ನನಗೆ ಅನ್ನವಿಕ್ಕು, ನಿನಗೆ ಹಸಿವಾಗದಂತೆ ಮಾಡುವೆನು' ಎಂಬ ಮೂರ್ಖನ ಮಾತಿನಂತೆ ವ್ಯರ್ಥವಾಗುವುದಲ್ಲವೇ?"

ದಮಯಂತಿ! ಇಂದ್ರಾದಿಗಳ ಕಡೆಯಿಂದ ದೂತನಾಗಿ ಬಂದಿರುವ ನನ್ನ ಮಾತುಗಳು ಇಲ್ಲಿಗೆ ಮುಗಿದುವು. ನೀನು ಆ ಮಹಾತ್ಮರಾದ ಇಂದ್ರಾದಿಗಳಲ್ಲಿ ಒಬ್ಬನನ್ನು ವರಿಸಿ ನನ್ನ ದೌತ್ಯವನ್ನು ಸಾರ್ಥಕಪಡಿಸು" ಎಂದು ನಳನು ವಿಜ್ಞಾಪಿಸಿಕೊಂಡನು.

ಎಂಬಲ್ಲಿಗೆ ನೈಷಧೀಯ ಚರಿತೆಯೊಳಗಣ ಸಪ್ತಮ ಸರ್ಗವು ಮುಗಿದುದು.

ಅಷ್ಟಮ ಸರ್ಗವು

ದಮಯಂತಿಯು ನಳನು ಹೇಳುತ್ತಿದ್ದ ವರ್ಣನೆಯನ್ನು ಸುಮ್ಮನೆ ಕೇಳುತ್ತಿದ್ದಳು. ಕೇಳುತ್ತಿದ್ದಳು ಎಂಬುದರಿಂದ ಆಕೆಗೆ ದಿಕ್ಪಾಲಕರಲ್ಲಿ ಗೌರವವುಂಟಾಯಿತೆಂದಲ್ಲ; ನಳನ ಬಾಯಿಂದ ಹೊರಡುತ್ತಿದ್ದ ಆ ಮಾತುಗಳನ್ನು ಕೇಳಬೇಕೆಂಬುದೇ ಅವಳ ಆಶಯವಾಗಿದ್ದ ಕಾರಣ ತನ್ನ ಹುಬ್ಬುಗಳಿಂದಲೂ ಕಣ್ಣುಗಳಿಂದಲೂ ಆಗಾಗ ಇಂದ್ರಾದಿಗಳಲ್ಲಿ ತನಗಿರುವ ಅನಿಚ್ಛೆಯನ್ನು ಸೂಚಿಸುತ್ತಿದ್ದಳು. ನಳನ ಸಂದೇಶವೆಲ್ಲವೂ ಈಗ ಮುಗಿಯಿತು; ಆಗ ದಮಯಂತಿಯು ಅದನ್ನು ಕೇಳದವಳಂತೆಯೇ ನಟಿಸಿ ಈ ಮುಂದೆ ಹೇಳುವಂತೆ ತನ್ನ ಭಾಷಣವನ್ನು ಪ್ರಾರಂಭಿಸಿದಳು :—

"ಅಯ್ಯಾ ಶ್ರೀಮಂತನೆ, ನಾನು ನಿನ್ನನ್ನು ಕೇಳಿದುದೇನು; ನೀನು ಹೇಳುವುದೇನು? ನಿನ್ನ ಕುಲವನ್ನೂ ಹೆಸರನ್ನೂ ಕೇಳಿದರೆ ಅದನ್ನು ಹೇಳದೆ ಬೇರೆ ಏನೇನೋ ಬಡಬಡಿಸುತ್ತಿದ್ದೀಯೆ. ನನ್ನನ್ನು ಯಾಚಿಸುವುದಕ್ಕಾಗಿ ಬಂದಿರುವ ನೀನು ನನಗೆ ಅಧಮರ್ಣನಾಗಿರುತ್ತ ನನ್ನ ಯಾಚನೆಯನ್ನು ಸಲ್ಲಿಸದಿರುವುದು ನಾಚಿಕೆಯಲ್ಲವೇ? ನಿನ್ನ ಭಾಷಣದಲ್ಲಿ ನನ್ನ ಪ್ರಶ್ನೆಗೆ ಕೆಲವೆಡೆ ಉತ್ತರವು ಪ್ರಕಟವಾಗುತ್ತ ಕೆಲವೆಡೆ ಅಪ್ರಕಟವಾಗುತ್ತ ಇದ್ದುದರಿಂದ ನಿನ್ನ ವಾಕ್ಸರಸ್ವತಿಯು ಪ್ರತ್ಯಕ್ಷವಾದ ಸರಸ್ವತೀ ನದಿಯನ್ನೇ ಗೆಲ್ಲುವಂತೆ ತೋರುತ್ತಿದೆ. ನಿನ್ನ ಮಧುರವಾದ ಮಾತುಗಳನ್ನು ಕಿವಿಯಿಂದ ಕೇಳಿದೆನಾದರೂ ನಿನ್ನ ಹೆಸರನ್ನು ತಿಳಿಯತಕ್ಕ ವಿಚಾರದಲ್ಲಿ ನನಗಿದ್ದ ಆಶೆಯು ಇನ್ನೂ ನಿವೃತ್ತಿಗೊಂಡಿಲ್ಲ. ದೇವತೆಗಳ ಸಂದೇಶವನ್ನು ಕೇಳಿದ ಮಾತ್ರದಿಂದ ಆ ಆಶೆಯು ನಿವೃತ್ತಿಗೊಳ್ಳುವಂತೆಯೂ ಇಲ್ಲ. ಬಾಯಾರಿಕೆಯಿಂದ ಬಳಲಿರುವ ಮನುಷ್ಯನಿಗೆ ನೀರಿನಿಂದಲೇ ತೃಪ್ತಿಯಾಗಬೇಕಲ್ಲದೆ ಹಾಲಿನಿಂದಾಗಲಿ ಜೇನಿನಿಂದಾಗಲಿ ತೃಪ್ತಿಯಾಗುವುದಿದೆಯೆ? ಪೂಜ್ಯನೆ! ನಿನ್ನಂತಹ ನಾಯಕರತ್ನವನ್ನು ಹೊಂದಿರುವ ವಂಶವಾವುದೋ ಅದನ್ನು ತಿಳಿಯುವ ಇಚ್ಛೆಯು ನನ್ನನ್ನು ತಿರುತಿರುಗಿ ಬಾಧಿಸುತ್ತಿರುವುದು. ಅದರಿಂದ ನಿನಗೆ ಪ್ರಯೋಜನವೇನೆಂದು ಕೇಳಬಹುದು. ಅಹುದು, ಆದರೆ ಹಿಂದೆ

ನಾನು ನಿನ್ನನ್ನು ಸರ್ವ ಸಾಮಾನ್ಯನಾಗಿ ಬಣ್ಣಿಸಿ ಅವಮಾನಿಸಿದ್ದೆನು. ಈಗ ನಿನ್ನ ಉತ್ಕೃಷ್ಟವಾದ ವಂಶವನ್ನು ತಿಳಿದು ಅದನ್ನು ಬಹುಮಾನಿಸಬೇಕೆಂತಲೇ ಹೀಗೆ ಕೇಳಿರುವೆನಾಗಿ ಭಾವಿಸು."

ಈ ಪ್ರಕಾರ ದಮಯಂತಿಯು ನುಡಿದು ಬೇಸಗೆಯ ಅಂತ್ಯದಲ್ಲಿ ಬಾಯಾರಿಕೆಯಿಂದ ಕೂಗಿ ವಿಶ್ರಾಂತಿಗೊಂಡ ಚಾತಕಗಳ ಹಿಂಡಿನಂತೆ ಸುಮ್ಮನಾಗಲು, ಅವುಗಳ ತೃಪ್ತಿಗಾಗಿ ಮಳೆಗರೆಯುವ ಮೇಘ ಮಾಲೆಯ ಗರ್ಜನೆಯಂತೆ ನಳನು ಗಂಭೀರವಾಗಿ ಮಾತಾಡತೊಡಗಿದನು:—

"ರಾಜಪುತ್ರಿ! ಇದೊಂದು ನನ್ನ ಅಪರಾಧವೆಂದು ತಿಳಿಯಬೇಡ. ನನ್ನ ಕುಲವನ್ನೂ ಹೆಸರನ್ನೂ ಹೇಳುವುದರಿಂದ ವಿಶೇಷ ಉಪಯೋಗವಿಲ್ಲವೆಂದೇ ಹೇಳಲಿಲ್ಲವೆಂದು ತಿಳಿ. ಅರ್ಥ ಸ್ವಾರಸ್ಯವು ಕಡಿಮೆಯಾಗಿ ವಾಗಾಡಂಬರವೇ ಅಧಿಕವಾಗಿರುವ ಮಾತುಗಳನ್ನು ಹಿರಿಯರು ವಿಷ ಸಮಾನವಾದುದೆಂದು ತಿರಸ್ಕರಿಸಿ, ಅರ್ಥವತ್ತಾಗಿಯೂ ಸಂಕ್ಷೇಪವಾಗಿಯೂ ಇರುವ ಮಾತುಗಳೇ ವಾಗ್ಮಿತ್ವದ ಲಕ್ಷಣವೆಂದು ಪುರಸ್ಕರಿಸುತ್ತಿದ್ದಾರೆ. ನನ್ನ ಕುಲವನ್ನೂ ನಾಮವನ್ನೂ ಕೇಳುವುದರಲ್ಲಿ ನನ್ನ ಹೆಸರನ್ನು ತಿಳಿಯುವ ನಿನ್ನ ಆತುರವು ಕೇವಲ ವ್ಯರ್ಥವು. ನಿನ್ನ ಪ್ರಶ್ನೆಯೇ ವ್ಯರ್ಥವಾಗಿರುವಾಗ ನಾನು ಉತ್ತರ ಕೊಡುವುದಾದರೂ ಹೇಗೆ? ಈಗ ನನ್ನ ನಿನ್ನ ಸಂಭಾಷಣೆಗಳಿಗೆ ನನ್ನ ನಾಮ ರೂಪವನ್ನು ತಿಳಿಯುವ ಅವಶ್ಯವಾದರೂ ಏನಿರುವುದು. ನಾವಿಬ್ಬರೂ ಸಮೀಪದಲ್ಲಿಯೇ ಇರುವುದರಿಂದ ನೀನು ನಾನು ಎಂಬ ಪದಗಳನ್ನು ಮಾತ್ರ ಉಪಯೋಗಿಸಿದರೆ ಸಾಕಾಗುವುದಿಲ್ಲವೆ? ಒಂದು ವೇಳೆ ಅಧಿಕಪ್ರಸಂಗವಾದರೂ ನಿನ್ನ ತೃಪ್ತಿಗಾಗಿ ಕುಲವನ್ನು ಹೇಳೋಣವೆಂದರೆ ಅದು ಉತ್ತಮ ಕುಲವಲ್ಲದೆ ಹೋದಲ್ಲಿ ಅದನ್ನು ನಿನಗೆ ತಿಳಿಸುವುದು ಸರ್ವಥಾ ಉಚಿತವಲ್ಲ. ಒಂದು ವೇಳೆ ಅದು ಪ್ರಸಿದ್ಧವಾದ ಕುಲವೇ ಆಗಿದ್ದಲ್ಲಿ ಕೇವಲ ಅನ್ಯರ ದೌತ್ಯವನ್ನು ಸ್ವೀಕರಿಸಿ ಬಂದ ನನಗೆ ಆ ಕುಲದ ವಿಚಾರವನ್ನು ತಿಳಿಸುವುದು ಪರಿಹಾಸ್ಯಕ್ಕೆ ಕಾರಣವಾಗುವುದು. ಈ ಭಾವದಿಂದಲೇ ನನ್ನ ಕುಲವನ್ನೂ ನಾಮವನ್ನೂ ನಿನಗೆ ತಿಳಿಸಲಿಲ್ಲವೆಂದು ತಿಳಿ. ಇಂತಹ ವಿಷಯದಲ್ಲಿ ನೀನು ನನ್ನನ್ನು ನಿರ್ಬಂಧಿಸುವುದಾದರೂ ಉಚಿತವಲ್ಲ. ಈಗ ಸದ್ಯಃ ನಾನು ಇಂದ್ರಾದಿಗಳನ್ನು ಕುರಿತು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡು. ಎಲೈ ಬಲಾತ್ಕಾರಿಣಿಯೆ! ನೀನು ನನ್ನನ್ನು ಅಷ್ಟು ಹೆಚ್ಚಾಗಿ ಒತ್ತಾಯಪಡಿಸುವೆಯಾದರೆ ನನ್ನ ವಂಶವನ್ನು ಮಾತ್ರವೇ ನಿನಗೆ ಹೇಳುತ್ತೇನೆ. ಕೇಳು. ನಾನು ಚಂದ್ರವಂಶದಲ್ಲಿ ಹುಟ್ಟಿದವನು. ಈಗ ನಿನ್ನ ಇಷ್ಟಾರ್ಥವು ಕೈಗೂಡಿದಂತಾಯಿತಲ್ಲವೇ? ನನ್ನ ಹೆಸರನ್ನು ನನ್ನ ಬಾಯಿಂದ ಹೊರಡಿಸುವ ಪ್ರಯತ್ನವನ್ನು ಇನ್ನಾದರೂ ಬಿಟ್ಟುಬಿಡು. ಸತ್ಪುರುಷರು 'ತನ್ನ ಹೆಸರನ್ನು ತನ್ನ ಬಾಯಿಂದಲೇ ಹೇಳುವುದು' ಸರಿಯಲ್ಲವೆನ್ನುವರು. ಇಂತಹ ಲೋಕ ಪದ್ಧತಿಯನ್ನು ನಾನು ತ್ಯಜಿಸಿದಲ್ಲಿ ಸತ್ಪುರುಷರ ನಿಂದೆಗೆ ಗುರಿಯಾಗುವೆನು."

ಈ ಪ್ರಕಾರ ನಳನು ನುಡಿದು ಸುಮ್ಮನಾದನು. ಆಗ ದಮಯಂತಿಯು ಅಷ್ಟಕ್ಕೇ ತೃಪ್ತಳಾಗದೆ ತಿರುಗಿ ಹೇಳತೊಡಗಿದಳು:—"ಪೂಜ್ಯನೇ! ನೀನು ಸುಧಾಂಶು ವಂಶಾಭರಣನೆಂದು ಹೇಳಿದ ಮಾತಿನಿಂದ ನಿನ್ನ ನಾಮವನ್ನು ತಿಳಿಯಬೇಕೆಂಬ ವಿಶೇಷ ವಿಷಯದಲ್ಲಿದ್ದ ನನ್ನ ಸಂಶಯವು ನಿವೃತ್ತಿಯಾದಂತಾಗಲಿಲ್ಲ. ನೀನು ನನ್ನನ್ನು ವಂಚಿಸುತ್ತಿರುವೆ ಎಂಬುದು ನಿನ್ನ ಮಾತಿನಿಂದಲೇ ವ್ಯಕ್ತವಾಗುತ್ತಿರುವುದು. ನೀನು ನಿನ್ನ ನಾಮವನ್ನು ತಿಳಿಸದೆ ಹೋದಲ್ಲಿ ನಾನಾದರೂ ಇನ್ನು ಮುಂದೆ ನಿನ್ನೊಡನೆ ಸಂಭಾಷಿಸಲಾರೆನು. ನಿನ್ನ ಸಂದೇಶಕ್ಕೆ ಪ್ರತ್ಯುತ್ತರವನ್ನು ಕೊಡಲಾರೆನು. ನನಗಾದರೂ ಪರಪುರುಷನೊಡನೆ ಮಾತಾಡುವುದು ಕುಲಸ್ತ್ರೀಯ ಪದ್ಧತಿಯಲ್ಲ."

ದಮಯಂತಿಯ ಈ ಮಾತುಗಳನ್ನು ಕೇಳಿ ನಳನಿಗೆ ಆನಂದವಾಯಿತು; ಆತನು ಮನಸ್ಸಿನಲ್ಲಿಯೇ ತೃಪ್ತಿಗೊಂಡು ತನ್ನನ್ನು ಹೀಗೆ ತೊಡಕಿನಲ್ಲಿ ಸಿಕ್ಕಿಸಿದ ಆಕೆಯ ಜಾಣತನಕ್ಕಾಗಿ ಹಿಗ್ಗಿ ಮುಂದೆ ಮಾತಾಡಲಾರದೆ ನಕ್ಕು ಹೇಳತೊಡಗಿದನು:—"ಸುಂದರಿ! ನಿನ್ನ ಮಾತೆಲ್ಲವೂ ನಿಜವೇ. ಕುಲಸ್ತ್ರೀಯರಿಗೆ ಪರಪುರುಷನೊಡನೆ ಸಂಭಾಷಿಸುವುದು ಅನುಚಿತವೆಂಬುದೂ ಸತ್ಯವೇ. ಆದರೆ ನಿನ್ನ ಈ ಮಧುರವಾದ ಮಾತುಗಳನ್ನು ಸರ್ವಥಾ ಪರಪುರುಷರೊಡನೆ ನುಡಿಯಬೇಡ. ನೀನು ದಿಗೀಶರಲ್ಲಿ ಯಾರನ್ನೂ ವರಿಸದ ಕಾರಣ ನಾನು ಇಲ್ಲಿಯವರೆಗೆ ಬಂದ ನನ್ನ ಶ್ರಮವನ್ನು ವ್ಯರ್ಥವಾಗಿ ಮಾಡಿದೆ. ನಿನ್ನ ರಸಭರಿತವಾದ ಮಾತುಗಳಿಂದ ದಿಗೀಶರನ್ನು ಕುರಿತು ಯಾವ ಸಂದೇಶವನ್ನೂ ಕಳುಹಿಸುವಂತೆ ತೋರುವುದಿಲ್ಲ. ನಿನ್ನ ಚಿಂತೆಯಿಂದ ಬಹಳವಾಗಿ ತಪಿಸುತ್ತಿರುವ ದಿಗೀಶರಿಗೆ ನಿನ್ನ ಸಂದೇಶ ವಾಕ್ಯವು ದಾವಾಗ್ನಿಯಿಂದ ದಗ್ಧವಾಗುತ್ತಿರುವ ಅರಣ್ಯಕ್ಕೆ ಮಳೆಗರೆದಂತಾಗುವುದು ಎಂದು ಎಣಿಸುತ್ತೇನೆ. ನಾನು ಇನ್ನು ಹೆಚ್ಚುಕಾಲ ಇಲ್ಲಿ ವಿಳಂಬವನ್ನು ಮಾಡಲಾರೆನು. ಆದಕಾರಣ ತ್ವರೆಯಾಗಿ ನನಗೆ ಪ್ರತ್ಯುತ್ತರವನ್ನು ಕೊಡು. ತ್ವರೆಯಾಗಿ ನಡೆಯಿಸಬೇಕಾದ ಕಾರ್ಯದಲ್ಲಿ ನಾನು ಹೀಗೆ ಕಾಲಹರಣವನ್ನು ಮಾಡಿದುದು ನನ್ನ ಅಪರಾಧವು. ಪರರ ಕಾರ್ಯವನ್ನು ಕೈಕೊಂಡವನಲ್ಲಿ ಕ್ಷಿಪ್ರಕಾರಿತ್ವವೆಂಬ ಚಟುವಟಿಕೆಯು ಅವಶ್ಯವಾಗಿ ಇರಬೇಕು. ಆದರೆ ನನ್ನಲ್ಲಿ ಮಾತ್ರ ಆ ಗುಣವು ಇರುವುದಿಲ್ಲ. ನೀನು ನಿನ್ನ ಅಭಿಪ್ರಾಯವನ್ನು ತ್ವರೆಯಾಗಿ ತಿಳಿಸದೆಹೋದುದರಿಂದ ನಾನು ಅಸಮರ್ಥನೆಂಬ ನಿಂದೆಗೆ ಗುರಿಯಾಗಬೇಕಾಯಿತು."

ಹೀಗೆ ನಳನು ತನ್ನ ಮಾತುಗಳನ್ನೆಲ್ಲ ಮುಗಿಸಿ ಸುಮ್ಮನಾಗಲು ದಮಯಂತಿಯು:—"ದಿಗೀಶ್ವರರು ಎಂತಹ ಮೂಢರು. 'ನೋಜ್ಜ್ವಲಂ ರೂಪವಂತಂ ಚ ನಾರ್ಥವಂತಂ ನ ಚಾತುರಂ। ದೂತಂ ನಾಪಿ ದೂತೀಂ ವಾ ಬುಧಃ ಕುರ್ಯಾತ್ಕದಾಚನ॥'"* ಎಂದು ನ್ಯಾಯವಿರುತ್ತ ಭೂಲೋಕದ ಮನ್ಮಥನಂತಿದ್ದ

* ಉಜ್ಜ್ವಲವಾದ ರೂಪವಂತನನ್ನೂ, ಧನಿಕನನ್ನೂ, ರೋಗಾದಿಗಳಿಂದ ಪೀಡಿತನಾದವನನ್ನೂ ದೂತನನ್ನಾಗಿ ಅಥವಾ ದೂತಿಯನ್ನಾಗಿ ಸರ್ವಥಾ ಮಾಡಬಾರದು.

ಅವನನ್ನು ಇಂತಹ ದೂತಕೃತ್ಯದಲ್ಲಿ ನಿಯೋಗಿಸಬಹುದೇ? ಜಲಾಧಿಪತಿಯಾದ ವರುಣನು ನಿಜವಾಗಿಯೂ ಜಡಾಧಿಪತಿಯೇ. ಇಲ್ಲವಾದರೆ ಆತನು ನಿನ್ನನ್ನು ಈ ಕೆಲಸಕ್ಕೆ ನಿಯೋಗಿಸುತ್ತಿದ್ದಿಲ್ಲ. ಪರೇತ ರಾಜನಾದ ಯಮನು ಪ್ರೇತಪ್ರಾಯನೇ. ಇದರಿಂದಲೇ ನಿನ್ನನ್ನು ಕಳುಹಿಸಿದನು. ಇಂದ್ರನು ಮರುತ್ವಂತನಾದುದರಿಂದಲೇ (ಸುಳಿಗಾಳಿ) ಆತನೂ ಇದನ್ನು ಒಪ್ಪಿದನು. ಅಗ್ನಿಯು ಊರ್ಧ್ವಮುಖನು (ಸ್ಥೂಲದೃಷ್ಟಿಯುಳ್ಳವನು) ಎಂಬುದು ಇದರಿಂದ ವ್ಯಕ್ತವಾಯಿತು. ಇವರೇ ನಿನ್ನನ್ನು ಕಳುಹಿಸಿದವರು. ಇವರಿಂದಲೇ ನಿನ್ನ ಪ್ರಯತ್ನವೆಲ್ಲವೂ ವ್ಯರ್ಥವಾಗುವುದರಲ್ಲಿ ಆಶ್ಚರ್ಯವಿದೆಯೇ?'' ಎಂದು ಮನಸ್ಸಿನಲ್ಲಿಯೇ ಎಂದುಕೊಂಡಳು. ತರುವಾಯ ಮಹಾಪತಿವ್ರತೆಯಾದ ದಮಯಂತಿಯು ತನ್ನ ನಗೆಯನ್ನು ತಡೆದುಕೊಂಡು, ಆತನೊಡನೆ ಸಂಭಾಷಿಸಬೇಕೆಂಬ ಆತುರದಿಂದ ಮಾತಿಗೆ ಪ್ರಾರಂಭಿಸಿದಳು.

''ಪೂಜ್ಯನೇ! ನಿನ್ನ ಮಾತಿಗೆ ಉತ್ತರಕೊಡುವುದು ನನಗೆ ಇಷ್ಟವಲ್ಲವಾದರೂ ನಿನಗೆ ಅವಮಾನವಾಗಬಾರದೆಂಬ ದಾಕ್ಷಿಣ್ಯದಿಂದ, ಪ್ರತಿವಚನವನ್ನು ಹೇಳುತ್ತೇನೆ. ನಿರ್ದೋಷಿಗಳಾದ ಆ ಇಂದ್ರಾದಿಗಳು ಮನುಷ್ಯ ಜನ್ಮವೆಂಬ ಕಳಂಕವನ್ನು ಹೊಂದಿರುವ ನನ್ನಂಥವರನ್ನು ಕುರಿತು 'ತಮ್ಮಲ್ಲಿ ಒಬ್ಬನನ್ನು ಮದುವೆಯಾಗು' ಎಂದು ಹೇಗೆ ನುಡಿಯುವರೋ ಕಾಣೆನು. ಅದಲ್ಲದೆ ಲೋಕದಲ್ಲಿ ಪೂಜ್ಯರಾದ ಮಹನೀಯರು ತಮ್ಮನ್ನು ಆಶ್ರಯಿಸಿರುವ ಜನಗಳು ಎಷ್ಟು ನೀಚರಾಗಿದ್ದರೂ ಅವರ ಉಪಚಾರಕ್ಕಾದರೂ ಉನ್ನತವಾದ ಮಾತುಗಳಿಂದ ಅವರನ್ನು ಆನಂದಪಡಿಸುವರಲ್ಲದೆ ಬೇಸರಗೊಳಿಸಲಾರರು. ಈಗ ಇಂದ್ರಾದಿಗಳು ಇದನ್ನೂ ಮನಸ್ಸಿಗೆ ತರಲಿಲ್ಲ. ಅದಲ್ಲದೆ ದೇವತಾ ಸ್ತ್ರೀಯರ ಸಂಬಂಧದಿಂದ ಶೋಭಿಸತಕ್ಕ ಆ ಇಂದ್ರನು, ಹಂಸಾವಳಿಗಳಿಂದ ಶೋಭಿಸುವ ಸರೋವರವು ಬಕಪಙ್ಕ್ತಿಗಳ ಸಂಬಂಧದಿಂದ ಪರಿಹಾಸಕ್ಕೆ ಗುರಿಯಾಗುವಂತೆ ಮನುಷ್ಯ ಸ್ತ್ರೀಯನ್ನು ಬಯಸತಕ್ಕ ಆ ಇಂದ್ರನು ಅಮೃತದ ಝರಿಯೇ ಹರಿಯುತ್ತಿರುವ ವೇಳೆಯಲ್ಲಿ ಅದನ್ನು ತಿರಸ್ಕರಿಸಿ ಕಣ್ಣೀರಿಗೆ ಕೈಯೊಡ್ಡಿದ ಪುರುಷನಂತೆ ಹಾಸ್ಯಾಸ್ಪದನಾಗಿರುವುದರಲ್ಲಿ ಸಂದೇಹವಿಲ್ಲ. ದೇವ ಸ್ತ್ರೀಯರ ಮುಂದೆ ಮನುಷ್ಯ ಸ್ತ್ರೀಯೇ? ಎಲ್ಲಿ ದೇವತಾ ಸ್ತ್ರೀಯರು ಇಲ್ಲವೋ ಅಲ್ಲಿ ಮಾತ್ರ ಮನುಷ್ಯ ಸ್ತ್ರೀಯು ಶೋಭಿಸುವಳೇ ಹೊರತು ದೇವತಾ ಸ್ತ್ರೀಯರ ನಡುವೆ ಶೋಭಿಸತಕ್ಕವಳೇ? ಬಂಗಾರದ ಬಳೆಯನ್ನು ತೊಡಲಾರದ ದರಿದ್ರನ ಹೆಂಡತಿಯ ಕೈಯಲ್ಲಿ ಕಂಚಿನ ಬಳೆಯು ಶೋಭಿಸುವುದೇ ಹೊರತು ಚಿನ್ನದ ಬಳೆಗಳನ್ನು ತೊಟ್ಟಿರುವ ಶ್ರೀಮಂತನ ಪತ್ನಿಯ ಕೈಯಲ್ಲಿ ಅದು ಶೋಭಿಸುವುದೇ? ಶೋಭಿಸುವುದರ ಬದಲು ಪರಿಹಾಸ್ಯಕ್ಕೇ ಗುರಿಯಾಗುವುದಷ್ಟೆ. ಕುರಂಗ ಯುವತಿಯು ಹೇಗೆ ದ್ವಿಪಾಧಿಪತಿಯಾದ ಮತ್ತಗಜವನ್ನು ಬಯಸದೋ ಹಾಗೆಯೇ ನಾನಾದರೂ ಆ ಇಂದ್ರಾದಿ ಲೋಕಪಾಲಕರನ್ನು ಹೇಗೆ

ಬಯಸೇನು? ಆದಕಾರಣ ನೀನು ಆ ವಿಕ್ರಾಂತಕರ ವಿಷಯದಲ್ಲಿ ಎಷ್ಟು ಹೇಳಿದರೂ ಅದೆಲ್ಲವೂ ವ್ಯರ್ಥವೇ. ಆ ಮಾತುಗಳಲ್ಲಿ ಒಂದಾದರೂ ನನ್ನ ಕಿವಿಗೆ ತಗುಲುವಂತಿಲ್ಲ.''

ಈ ಪ್ರಕಾರ ದಮಯಂತಿಯು ನುಡಿದು ಮುಖವನ್ನು ತಗ್ಗಿಸಿದಳು. ಆಗ ಅವಳ ಬಳಿಯಲ್ಲಿದ್ದ ಸಖಿಯೊಬ್ಬಳು ನಳನ ಕಡೆಗೆ ತಿರುಗಿ—''ಪುರುಷ ಶ್ರೇಷ್ಠನೆ! ಈ ದಮಯಂತಿಯು ಹೇಳಬೇಕಾದ ಇನ್ನೂ ಕೆಲವು ಮಾತುಗಳನ್ನು ತಾನೇ ಹೇಳುವುದಕ್ಕೆ ನಾಚಿಕೊಂಡು ನನ್ನ ಮುಖದಿಂದ ಹೇಳುವುದಕ್ಕಾಗಿ ಪ್ರಯತ್ನಿಸಿರುವಳು. ಆದಕಾರಣ ಅವಳ ಅಂತರಂಗದಿಂದ ಹೊರಡತಕ್ಕ ಆ ಮಾತುಗಳನ್ನು ಹೇಳುತ್ತೇನೆ ಕೇಳು. ಬಹು ಕಾಲದಿಂದ ಈಕೆಯು ನಳಕುಮಾರನಿಗೇ ತನ್ನ ಅಂತರಂಗವನ್ನು ಅರ್ಪಿಸಿರುವಳು. ಅಂತಹ ಇವಳು ಅನ್ಯರ ವಿಚಾರದಲ್ಲಿ ಆಲೋಚಿಸುವುದಕ್ಕೂ ಹೆದರುತ್ತಿರುವಳು. ಪತಿವ್ರತೆಯರ ಪಾತಿವ್ರತ್ಯವು ಮೃಣಾಲ ತಂತುವಿನಂತೆ ಅತ್ಯಂತ ಸೂಕ್ಷ್ಮವಾದುದು. ಆ ತಂತುವು ಹೇಗೆ ಸ್ವಲ್ಪ ಕಾರಣದಿಂದಲೇ ತುಂಡಾಗಿಬಿಡುವುದೋ ಹಾಗೆಯೇ ಪಾತಿವ್ರತ್ಯವೂ ಕೂಡ ಸ್ವಲ್ಪ ಕಾರಣದಿಂದಲೇ ಕೆಡಬಹುದು. ತನ್ನ ಮನಸ್ಸು ಸ್ವಪ್ನಾವಸ್ಥೆಯಲ್ಲಿ ಕೂಡ ಪರಪುರುಷರನ್ನು ಆಶಿಸತಕ್ಕುದಲ್ಲವೆಂದು ಆದಮೇಲೆ ಸರ್ವ ಸಾಕ್ಷಿಗಳಾದ ಆ ಇಂದ್ರಾದಿಗಳಿಗೆ ತನ್ನ ಬುದ್ಧಿಯ ವಿಚಾರವನ್ನು ತಿಳಿಯುವುದು ಅಸಾಧ್ಯವಾಗಿ ಹೋಯಿತೆ? ಮನುಷ್ಯಳಾಗಿದ್ದ ನನ್ನಂಥವಳ ಮೇಲೆ ಇಂದ್ರಾದಿಗಳು ಇಷ್ಟರ ಅನುಗ್ರಹವನ್ನು ಮಾಡುವುದು ಅವರ ಕರ್ತವ್ಯವೇ. ಆ ಕರ್ತವ್ಯವನ್ನು ಅವರು ಸರಿಯಾಗಿ ನೆರವೇರಿಸುತ್ತಾರಾದರೆ ನಳನೆಂಬ ಭಿಕ್ಷೆಯನ್ನು ನನಗೆ ನೀಡುವುದರಲ್ಲಿ ಅವರು ಮನಸ್ಸಿಡಲಿ. ಈಕೆಯು ನಳನನ್ನಲ್ಲದೆ ಇನ್ನಾರ ಕಡೆಗೂ ಲಕ್ಷ್ಯವಿಡುವಂತಿಲ್ಲವೆಂಬುದನ್ನು ಅವರು ತಿಳಿದಿರಲಿ. ಇಗೋ ನನ್ನ ಮನಸ್ಸಿನ ಅಂತರಂಗವನ್ನು ನಿನ್ನೊಡನೆ ಸ್ಪಷ್ಟವಾಗಿ ಹೇಳುತ್ತೇನೆ. ಆ ನಳನು ನನ್ನನ್ನು ಕೈಹಿಡಿಯದೆ ಹೋದರೆ ಮುಂದೆ ನಾನು ಅಗ್ನಿಯಲ್ಲಿ ಬಿದ್ದು ಅಥವಾ ಜಲಕ್ಕಿಳಿದು ಇಲ್ಲವೇ ಕೊರಳಿಗೆ ಪಾಶವನ್ನು ಸಂದುಕೊಂಡು ಪ್ರಾಣಬಿಡುವೆನೇ ಹೊರತು ಅನ್ಯಥಾ ಇನ್ನೊಬ್ಬನ ಕೈಹಿಡಿಯಲಾರೆನು. ಇದೇ ನನ್ನ ಪ್ರತಿಜ್ಞೆ. ಒಂದು ವೇಳೆ ನೀನು ಆತ್ಮಹತ್ಯೆಯು ದೋಷವೆಂದು ಹೇಳಬಹುದು. ಆದರೆ ಆಪತ್ಕಾಲದಲ್ಲಿಯೂ ಧರ್ಮವನ್ನು ಕಾಪಾಡಿಕೊಳ್ಳುವುದೆಂದರೆ ಅಸಾಧ್ಯವಷ್ಟೆ! ಅಂತಹ ಸಮಯದಲ್ಲಿ ಸ್ತ್ರೀಯು ತನ್ನ ಪಾತಿವ್ರತ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ನಿಷಿದ್ಧವಾದ ಆಚರಣೆಯನ್ನಾದರೂ ಆಚರಿಸುವುದು ಯುಕ್ತವೇ. ಮಳೆಯ ನೀರಿನಿಂದ ಮಾರ್ಗವು ಕೆಸರಾಗಿರುವಾಗ ಎಲ್ಲವರೂ ಕೂಡ ದಾರಿ ಬಿಟ್ಟು ಕೆಲವು ದೂರ ನಡೆಯುವರಷ್ಟೆ. ಇಂದ್ರಾದಿಗಳ ಮುಕ್ಕೈಗೆ ಸ್ತ್ರೀಯಾದ ನಾನು ಸರಿಯಾಗಿ ಉತ್ತರವನ್ನು ಹೇಳಲಾರೆನು. ನನ್ನ ಅಭಿಪ್ರಾಯವನ್ನು ಮಾತ್ರ ನಿನಗೆ ತಿಳಿಸಿರುವೆನು. ಮುಂದೆ ನನಗೆ ಅನುಕೂಲವಾಗಿ ವಾಕ್ಯರಚನೆಯನ್ನು ಮಾಡುವ

ಭಾರವು ನಿನ್ನನ್ನೇ ಕೂಡಿರುವುದು. ಸರ್ವಥಾ ನನ್ನ ಅಭಿಪ್ರಾಯಕ್ಕೆ ಪ್ರತಿಕೂಲವಾದ ಮಾತನ್ನು ಮಾತ್ರ ನುಡಿಯಬೇಡ."

ದಮಯಂತಿಯು ಈ ಪ್ರಕಾರವಾಗಿ ಇಂದ್ರಾದಿಗಳನ್ನು ತಿರಸ್ಕರಿಸಿ ಅವರ ದೂತನೊಡನೆ ನುಡಿದಳು. ತನ್ನ ನುಡಿಯು ತನ್ನಂತೆಯೇ ಕುಹೂರವವನ್ನು ಅನುಕರಿಸುತ್ತಿದ್ದುದನ್ನು ಕಂಡು ಕೋಪಗೊಂಡ ಕೋಗಿಲೆಯಂತೆ ಈಗ ನಳನು ಕೂಡ ಕೊಂಚ ಕೋಪಿಸಿಕೊಂಡಂತೆ ನಟಿಸಿ ಸ್ವಲ್ಪ ಪರುಷವಾದ ನುಡಿಗಳಿಂದ ಮಾತಾಡತೊಡಗಿದನು.

"ಎಲೇ ರಾಜಪುತ್ರಿ! ಇಂದ್ರಾದಿಗಳು ನಿನ್ನನ್ನು ಬಯಸುತ್ತಿರುವಲ್ಲಿ ನೀನು ಮಾತ್ರ ಅವರ ಕಡೆಗೆ ಪರಾಙ್ಮುಖಿಯಾಗುವುದನ್ನು ಕಂಡರೆ ಆಶ್ಚರ್ಯವಾಗುತ್ತದೆ. ಧನಹೀನನಾದ ಬಡವನೊಬ್ಬನಿಗೆ ದೈವಗತಿಯಿಂದ ನಿಧಿಯು ಅವನ ಮನೆಬಾಗಿಲಿಗೆ ಬಂದರೂ ಆತನು ಬಾಗಿಲು ಮುಚ್ಚಿಕೊಂಡು ಆ ನಿಧಿಯನ್ನು ತಳ್ಳಿಬಿಡುವಂತೆ ನಿನ್ನಾಚರಣೆಯೂ ನನಗೆ ಕಾಣುವುದು. ಮನುಷ್ಯ ಸ್ತ್ರೀಯಾದ ನೀನು ಇಂದ್ರಾದಿಗಳನ್ನು ಬಯಸುವುದಿಲ್ಲವೆಂಬ ಈ ನೂತನ ವಿಚಾರವನ್ನು ಈಗ ಹೊಸತಾಗಿ ನಿನ್ನ ಮುಖದಿಂದ ಮಾತ್ರ ಕೇಳಿದೆನು. ಇದು ನಿನ್ನ ಗ್ರಹಗತಿಯಿಂದೇ ತಿಳಿಯುತ್ತೇನೆ. ಬೃಹಸ್ಪತಿಯು ಕೇಂದ್ರಸ್ಥಾನವನ್ನು ಪಡೆದಿರುವಾಗ ಸೂರ್ಯಾದಿ ಗ್ರಹಗಳಿಂದ ಹೇಗೆ ಬಾಧೆಯನ್ನುಂಟುಮಾಡಲು ಸಾಧ್ಯವಾಗದೋ* ಹಾಗೆಯೇ ನಿನ್ನನ್ನು ದಾರಿಗೆ ತರುವುದಾದರೂ ನಿನ್ನ ಗುರುವಿಗೆ ಮಾತ್ರ ಸಾಧ್ಯವು. ಮನುಷ್ಯ ಸ್ತ್ರೀಯನ್ನು ದೇವತೆಗಳು ಹೇಗೆ ಕೈಹಿಡಿಯಬಲ್ಲರೆಂದು ಎಣಿಸಬೇಡ. ಪಾದರಸಕ್ಕೆ ಕೆಲವು ಸಂಸ್ಕಾರಗಳನ್ನು ಕೊಟ್ಟು ಅದನ್ನು ಸಿದ್ಧರಸವಾಗಿ ಮಾರ್ಪಡಿಸುವರು. ಆ ಸಿದ್ಧರಸವು ಕಬ್ಬಿಣಕ್ಕೆ ತಗುಲಿದರೂ ಅದು ಬಂಗಾರವಾಗಿ ಮಾರ್ಪಡುವುದು. ಅದರಂತೆಯೇ ನೀನು ಇಂದ್ರಾದಿಗಳ ಕೈಹಿಡಿದ ಮಾತ್ರಕ್ಕೆ ನಿನಗೆ ದೇವತ್ವವೇ ಸಿದ್ಧಿಸುವುದಲ್ಲವೆ, ಮನುಷ್ಯತ್ವವು ಹೇಗೆ ಬಂದೀತು? ದಮಯಂತಿ! ಇಂದ್ರನನ್ನು (ದೇವನನ್ನು) ಬಿಟ್ಟು ನಳನನ್ನು (ನರನನ್ನು) ಇಚ್ಛಿಸುತ್ತಿರುವ ನಿನ್ನ ಪಾಂಡಿತ್ಯವನ್ನು ಕುರಿತು ತಿರುತಿರುಗಿ ಹೇಳುವುದಕ್ಕೆ ನನಗೆ ಲಜ್ಜೆಯಾಗುವುದಿಲ್ಲವೇ? ನವವಾದ ಕಬ್ಬನ್ನು ಬಿಟ್ಟು ಮುಳ್ಳು ಶಮಿಯನ್ನು ಕಡಿಯುವುದಕ್ಕೆ ಇಚ್ಛಿಸುತ್ತಿರುವ ಕರಭವೆಂಬ ಒಂಟೆಗಿಂತ ನೀನು ಇನ್ನೂ ಮೂಢಳೆಂಬ ಕಾರಣದಿಂದ ನಿನ್ನನ್ನು ನಾನು 'ಕರಭೋರು' ಎಂದು ಸಂಬೋಧಿಸುತ್ತೇನೆ. ಸಮಸ್ತ ಸುಪರ್ವರಿಗೂ ನಾಯಕನಾದ ದೇವೇಂದ್ರನನ್ನು ಬಿಟ್ಟು ನೀನು ಮನುಷ್ಯಮಾತ್ರನಲ್ಲಿ ಏಕೆ ಭ್ರಾಂತಿಗೊಂಡಿರುವೆ? ಇದು ನಿನ್ನ ಅಪರಾಧವೆಂದು ನಾನು ಎಣಿಸುವುದಿಲ್ಲ. ನಿಯತಿಯನ್ನು ತಪ್ಪಿಸುವುದು ಯಾರಿಗೆ ತಾನೆ ಸಾಧ್ಯವು! ನಾವು ಹೊರಗೆ ಬಿಡುತ್ತಿರುವ ನಿಶ್ವಾಸವನ್ನು ನೋಡು;

* 'ಕಿಂ ಕುರ್ವಂತಿ ಗ್ರಹಾಃ ಸರ್ವೇ ಕೇಂದ್ರಸ್ಥಾನೇ ಬೃಹಸ್ಪತೌ' ||
ಬೃಹಸ್ಪತಿಯು ಕೇಂದ್ರಸ್ಥಾನವನ್ನು ಪಡೆದಿರುವಾಗ ಉಳಿದ ಗ್ರಹಗಳು ಏನು ಮಾಡಲಾಪವು.

ವಿಸ್ತಾರವಾದ ಮುಖದ್ವಾರವನ್ನು ಬಿಟ್ಟು ಅದು ಇಕ್ಕಟ್ಟಾದ ನಾಸಾರಂಧ್ರದಿಂದ ಹೊರಗೆ ಬರುವುದಿಲ್ಲವೆ? ಮೂರ್ಖಳೆ! ವಿದ್ವಾಂಸರಾದ ಮಹಾತ್ಮರು ಮುಂದಣ ಜನ್ಮದಲ್ಲಾದರೂ ತಮಗೆ ಸ್ವರ್ಗವಾಸವು ದೊರೆಯಬೇಕೆಂಬ ಇಷ್ಟದಿಂದ ತಪೋಗ್ನಿಯಲ್ಲಿ ತಮ್ಮ ದೇಹವನ್ನು ಹೋಮಿಸುತ್ತಿದ್ದಾರೆ. ಅಂತಹ ಸ್ವರ್ಗವು ತಾನಾಗಿಯೇ ಬಂದು ನಿನ್ನ ಕೈಹಿಡಿದೆಳೆದರೂ ತಪ್ಪಿಸಿಕೊಳ್ಳಲು ಯತ್ನಿಸುವ ನೀನು ಇನ್ನೆಂತಹ ಮೂರ್ಖಳೋ ನಾನು ಕಾಣೆನು. ಎಲೇ ಮುಗ್ಧಳೇ! ಇನ್ನೂ ಹೇಳುತ್ತೇನೆ ಕೇಳು. ನಳನು ನಿನ್ನ ಕೈಹಿಡಿಯದೆ ಹೋದಲ್ಲಿ ಪಾಶಬಂಧನದಿಂದಾದರೂ ಆತ್ಮಹತ್ಯವನ್ನು ಮಾಡಿಕೊಳ್ಳುವೆನು ಎಂದು ನುಡಿಯುವೆಯಷ್ಟೆ. ಮೂರ್ಖಳೆ! ಈ ಘಾತುಕತ್ವದಿಂದಾದರೂ ನೀನು ಇಂದ್ರನ ಕೈಯಿಂದ ತಪ್ಪಿಸಿಕೊಳ್ಳಲಾರೆ. ಅಸ್ವಾಮಿಕವಾದ ದ್ರವ್ಯವು ರಾಜನನ್ನು ಸೇರಬೇಕೆಂಬ ನ್ಯಾಯವನ್ನವಲಂಬಿಸಿ ಅಸ್ವಾಮಿಕವಾದ ನಿನ್ನ ಆತ್ಮವು ಆಕಾಶದಲ್ಲಿ ಹಾರುತ್ತಿರುವ ವೇಳೆ ಆಕಾಶದ ಒಡೆಯನಾದ ಇಂದ್ರನು ಅದನ್ನು ಹಿಡಿಯದೆ ಬಿಡುವನೇ? ಇದರಿಂದ ನಾನು ನಿನಗೆ ಖಂಡಿತವಾಗಿ ಹೇಳುತ್ತೇನೆ. ಆತನು ಜನ್ಮಾಂತರದಲ್ಲಿ ಕೂಡ ನಿನ್ನನ್ನು ಬಿಡತಕ್ಕವನಲ್ಲ. ಅದಲ್ಲದೆ ನೀನು ಪಾಶಬಂಧನವನ್ನು ಬಿಟ್ಟು ಅಗ್ನಿಪ್ರವೇಶನಾದಿ ಆತ್ಮಹತ್ಯ ಮಾಡಿಕೊಳ್ಳುವೆಯಾದರೆ ಇನ್ನೂ ಅನುಕೂಲವೇ ಆಯಿತು. ಯಾವ ಅಗ್ನಿಯು ಬಂದು ನಿನ್ನನ್ನು ಯಾಚಿಸಿದರೂ ಅವನ ಕೈಹಿಡಿಯಲು ಒಪ್ಪದವಳು ಈಗ ನೀನಾಗಿಯೇ ಆ ಅಗ್ನಿಯನ್ನು ಸೇರುವುದರಿಂದ ಆತನಿಗೆ ಸುಲಭವಾಗಿಯೇ ನೀನು ದೊರೆತಂತಾಗುವೆ. ಜಲಪ್ರವೇಶವನ್ನು ಮಾಡಿದರೂ ಅಂತೆಯೇ. ಆ ಜಲಾಧಿಕಾರಿಯಾದ ವರುಣನಿಂದ ನೀನು ತಪ್ಪಿಸಿಕೊಳ್ಳಲಾರೆ. ಒಂದು ವೇಳೆ ನೀನು ಆತ್ಮಘಾತಕ್ಕಾಗಿ ಮೇಲೆ ಹೇಳಿದ ಉಪಾಯವನ್ನೆಲ್ಲ ಬಿಟ್ಟು ಉಪವಾಸಾದಿಗಳನ್ನು ಕೈಕೊಳ್ಳುವೆಯಾದರೆ; ಆಗ ನೀನು ಸುಲಭವಾಗಿಯೇ ಯಮನ ಕೈಸೇರುವೆ.

ಮುಗ್ಧೆ! ಒಂದು ವಿಧವಾಗಿ ಆಲೋಚಿಸಿದರೆ ನಿನ್ನೀ ನಟನೆಯು ಉಚಿತವೆಂದೇ ತೋರುವುದು. ಇಂದ್ರಾದಿಗಳನ್ನು ಕುರಿತು ಅಂತಹ ನಿಷೇಧ ವಾಕ್ಯವಾಗಲಿ ಅಥವಾ ನಿನ್ನ ಮಾತುಗಳಲ್ಲಿರುವ ವ್ಯಂಗ್ಯೋಕ್ತಿಯಾಗಲಿ ಇವೆಲ್ಲವೂ ಸ್ತ್ರೀಜಾತಿಯಲ್ಲಿ ಸ್ವಾಭಾವಿಕವಾಗಿ ಇರತಕ್ಕುದೇ. ನಿನ್ನ ವಕ್ರೋಕ್ತಿಗಳೆಂಬ ಮಡುವಿನಲ್ಲಿ ನನ್ನನ್ನು ಸಿಕ್ಕಿಸಿ ಸುಮ್ಮ ಸುಮ್ಮನೆ ತಿರುಗಿಸಬೇಡ. ಲಜ್ಜೆಯನ್ನು ತೊಲಗಿಸಿ ಈ ನಾಲ್ವರು ದೇವತೆಗಳಲ್ಲಿ ಯಾರನ್ನು ವರಿಸಲು ಸಿದ್ಧಳಾಗಿರುವೆ ಎಂದು ಸ್ಪಷ್ಟವಾಗಿ ಹೇಳು. ಪೂರ್ವದಿಗಧಿಪತಿಯಾದ ಇಂದ್ರನು ನಿನಗೆ ಸಮ್ಮತನಾದ ವರನೇ. ನಿನ್ನ ಸೌಂದರ್ಯಲಕ್ಷ್ಮಿಯನ್ನು ಸ್ಪಷ್ಟವಾಗಿ ನೋಡಿ ತಿಳಿಯುವುದಕ್ಕೆ ಸಾಹಸ್ರಾಕ್ಷನಾದ ಆ ಇಂದ್ರನನ್ನು ಬಿಟ್ಟು ಇನ್ನೊಬ್ಬನು ಇರಲಾರನೆಂದು ಎಣಿಸುತ್ತೇನೆ. ಇಂದ್ರಾಣಿಯಾದ ಶಚಿಯು ಸಪತ್ನಿಯಾಗುವುದು ಒಂದು ಭಾಗ್ಯವೆಂದೇ ತಿಳಿಯುತ್ತೇನೆ. ಎಲೈ ವಿಲಾಸಿನಿ! ನಿನ್ನ ಭಾವವು

ನನಗೆ ಈಗ ತಿಳಿಯಿತು. ನೀನು ಅಗ್ನಿಯಲ್ಲಿ ಅನುರಕ್ತಳಾಗಿರುವುದು ನಿಜವು. ಕ್ಷತ್ರಿಯ ಜಾತಿಯಲ್ಲಿ ಹುಟ್ಟಿದ ನಿನ್ನಂತಹ ರಾಜಪುತ್ರಿಯು ಮಹಾ ಓಜಸ್ಸಂಪನ್ನನಾದ ಅಗ್ನಿಯನ್ನು ಬಿಟ್ಟು ಬೇರೆ ಕಡೆಗೆ ಒಲಿಯದಿರುವುದೂ ಸಹಜವೇ. ತೇಜಸ್ವಿಗಳಾದ ನೀವಿಬ್ಬರೂ ಪರಸ್ಪರ ಸೇರಿದಲ್ಲಿ ಒಳ್ಳೆ ಅನುರೂಪರಾದ ದಂಪತಿಗಳಾಗುವಿರಾದ ಕಾರಣ ನಿನ್ನ ಅಭಿಪ್ರಾಯವು ಸರಿಯಾದುದೇ. ಆ ಅಗ್ನಿಯನ್ನು ವಿವಾಹವಾದಲ್ಲಿ ಆತನು ನಿನ್ನನ್ನು ದಹಿಸಿಬಿಡಬಹುದೆಂದು ಸರ್ವಥಾ ಭಯಪಡಬೇಡ. ಪತಿವ್ರತೆಯರಿಗೆ ಅಗ್ನಿಯು ಹಿಮದಂತೆ ಶೀತಳವಾಗುವುದೆಂಬುದು ಹಿಂದೆ ನೂರಾರು ಸಲ ಪರೀಕ್ಷಿಸಿದ ವಿಷಯವೇ. ಒಂದು ವೇಳೆ ಹಾಗಲ್ಲವಾದರೆ ಧರ್ಮಶೀಲನಾದ ಯಮನೊಡನೆ ಸಂಬಂಧವನ್ನು ಮಾಡುವುದಾದರೂ ಉತ್ತಮವೇ. ಯೋಗ್ಯರಿಗೆ ಯೋಗ್ಯರ ಸಂಬಂಧವೇ ಮೇಲಾದುದು. ಆ ದಕ್ಷಿಣ ದಿಕ್ಕಿನ ಅಧಿಪತಿಯಾದ ಯಮನನ್ನು ವರಿಸುವುದರಿಂದ ನಿನಗೆ ಮೃತ್ಯು ಭಯವು ತಪ್ಪಿತೆಂದೇ ತಿಳಿ. ಇದರಿಂದ ಅನಂತ ಕಾಲದವರೆಗೆ ದಾಂಪತ್ಯ ಸುಖವನ್ನನುಭವಿಸುತ್ತ ಸಾವಿರಾರು ವರುಷಗಳನ್ನು ನಿಮೇಷದಂತೆ ಕಳೆಯುತ್ತ ಇರಬಹುದು. ಮುಗ್ಧಾಂಗಿ! ವರುಣನನ್ನು ವರಿಸುವೆಯಾದರೆ ಅದೂ ಮೇಲಾದುದೇ. ಸ್ವಭಾವದಿಂದಲೇ ಮೃದುವಾದ ಆ ವರುಣನು ಮೃದ್ವಂಗಿಯಾದ ನಿನಗೆ ತಕ್ಕ ವರನೇ. ಸ್ವಭಾವದಿಂದ ಮೃದುವಾದ ನಿಶೆಯು ಸೂರ್ಯನನ್ನು ಬಿಟ್ಟು ಚಂದ್ರನನ್ನು ವರಿಸಿರುವುದು ಲೋಕಪ್ರಸಿದ್ಧವಾಗಿಯೇ ಇರುವುದಷ್ಟೆ! ನೀನು ಆ ವರುಣನನ್ನು ಕೈಹಿಡಿದೆಯಾದರೆ ಸದಾ ರಮಣೀಯವಾದ ಪಯೋಧಿಯಲ್ಲಿ ಪ್ರಿಯನೊಡನೆ ಕ್ರೀಡಿಸುತ್ತಿರಬಹುದು. ಲಕ್ಷ್ಮೀಪತಿಯಾದ ಮಹಾವಿಷ್ಣುವೂ ಕೂಡ ತನ್ನ ಸ್ವರ್ಗ ರಾಜ್ಯವನ್ನು ತ್ಯಜಿಸಿ ಬಂದು ತನ್ನ ಪತ್ನಿಯಾದ ರಮೆಯೊಡನೆ ಇಲ್ಲಿ ವಾಸವಾಗಿರುವನು ಎಂದಮೇಲೆ ಅದರ ರಮಣೀಯತೆಯನ್ನು ಬೇರಾಗಿ ಹೇಳಲಿಕ್ಕಿದೆಯೇ?"

ನಳನು ಈ ಪ್ರಕಾರ ತನ್ನ ಭಾಷಣವನ್ನಿಲ್ಲಿ ಹೇಳಿ ಮುಗಿಸಿದನು. ದಮಯಂತಿಯು ಇದನ್ನು ಬಲಗೈಯಮೇಲೆ ಇಟ್ಟ ಕಿವಿ ಕೆನ್ನೆಗಳಿಂದ ಸುಮ್ಮನೆ ಕೇಳುತ್ತಿದ್ದಳು. ನಳನ ಭಾಷಣವನ್ನು ಕೇಳುವ ಆನಂದದಿಂದ ಒಂದು ಕಿವಿಯನ್ನು ಮಾತ್ರ ಹೊರಗೆ ಬಿಟ್ಟು, ಇಂದ್ರಾದಿಗಳ ಹೊಗಳಿಕೆಯ ಕಡೆಗೆ ಅಲಕ್ಷ್ಯದಿಂದ ಬೇರೊಂದು ಕಿವಿಯನ್ನು ತನ್ನ ಹಸ್ತದಿಂದ ಚೆನ್ನಾಗಿ ಮುಚ್ಚಿಕೊಂಡು ಚಿಂತೆಯಿಂದ ತಲೆಗೆ ಕೈಗೊಟ್ಟು ಚಿಂತಿಸುತ್ತಿದ್ದಳು. ಕೆಲವು ಹೊತ್ತಿನವರೆಗೆ ಹೀಗೆ ಮೌನವಾಗಿಯೇ ಚಿಂತಿಸುತ್ತಿದ್ದಳು. ಕೊನೆಗೆ ಒಂದು ನಿಟ್ಟುಸಿರನ್ನು ಬಿಟ್ಟು ಕರುಣೆಯುಂಟಾಗುವಂತೆ ವಿಲಕ್ಷಣಳಾಗಿ ಮಾತಾಡ ತೊಡಗಿದಳು :—

"ಅಪ್ಪಾ! ಸುಂದರನೇ!! ನನ್ನ ಈ ಕಿವಿಯು ನಿಜವಾಗಿಯೂ ಭಯಂಕರವಾದ ಪಾಪವನ್ನು ಮಾಡಿ ಜನ್ಮಿಸಿರಬೇಕೆಂದು ಎಣಿಸುತ್ತೇನೆ. ಇಲ್ಲವಾದರೆ ಇಂದ್ರಾದಿಗಳ ಸಂದೇಶ ವಾಕ್ಯಗಳೆಂಬ ಸೂಜಿಗಳು ನನ್ನ ಕಿವಿಯನ್ನು ಚುಚ್ಚು

ತ್ತಿದ್ದೇನೆ? ಆದುದು ದೂತನಾಗಿ ಬಂದಿರುವ ನೀನಾದರೂ ನನ್ನನ್ನು ನೋಡುವೆಂದೇ ತಿಳಿದು ಇಷ್ಟು ಯಾತನೆಗೆ ಗುರಿಮಾಡುವೆ ಎಂದು ತೋರುತ್ತದೆ. ನಿನ್ನ ಈ ವಾಕ್ಯಗಳೆಲ್ಲವೂ ಕಿವಿಯನ್ನು ಹೊಕ್ಕ ಕೀಟಗಳಂತೆ ನನಗೆ ಪೀಡೆಯನ್ನುಂಟು ಮಾಡುತ್ತವೆ'' ಎಂದು ಇಷ್ಟು ಮಾತ್ರವೇ ನುಡಿದು ಉಳಿದುದನ್ನು ಹೇಳುವಂತೆ ತನ್ನ ಸಖಿಯೊಬ್ಬಳಿಗೆ ಹೇಳಿದಳು. ಆಗ ಆ ಸಖಿಯು ''ಸೌಮ್ಯ! ಈ ನನ್ನ ಗೆಳತಿಯಾದ ಭೈಮಿಯು ತನ್ನ ಒಂದು ನಾಲಗೆಯಿಂದ ಲಜ್ಜಾದೇವತೆಯ ಪೂಜಾನಿಮಿತ್ತವಾಗಿ ಮೌನವನ್ನು ಕೈಕೊಂಡಿರುವಳು. ಅವಳ ಇನ್ನೊಂದು ನಾಲಗೆಯಾದ ನನ್ನಿಂದ ನಿನಗೆ ಹೇಳಬೇಕಾದುದೇನೋ ಅದನ್ನು ಹೇಳುವಂತೆ ಅಜ್ಞಾಪಿಸಿರುವಳು. ಈಕೆಯ ತಂದೆಯಾದ ಭೀಮರಾಜನು ಈಕೆಗೆ ನಾಳೆಯೇ ಸ್ವಯಂವರವನ್ನು ಮಾಡುವುದಾಗಿ ನಿಶ್ಚಯಿಸಿರುವನು. ಈಕೆಯಾದರೋ ಆ ಸ್ವಯಂವರದ ವೇಳೆ ನಳನನ್ನು ವರಿಸುವುದೇ ನಿಶ್ಚಯವು. ನೀನು ಹಿಂದಿರುಗಿ ಆ ಇಂದ್ರಾದಿಗಳ ಬಳಿಗೆ ಹೋಗದೆ ಈಕೆಯ ಈ ಗೃಹದಲ್ಲಿಯೇ ಈ ದಿನ ವಾಸವಾಗಿದ್ದು ಈಕೆಯ ಕಣ್ಣುಗಳಿಗೆ ಹಬ್ಬವನ್ನು ಮಾಡು. ನಿನ್ನನ್ನು ಕಾಣುತ್ತ ಈ ದಿನವನ್ನು ಸುಖವಾಗಿ ಕಳೆಯಬೇಕೆಂದು ಈಕೆಯು ಬಯಸಿರುವಳು. ಹಿಂದೆ ನಳಮಹಾರಾಜನು ತನ್ನ ದೂತನಾದ ಹಂಸನ ಮೂಲಕ ಕಳುಹಿಸಿದ ಚಿತ್ರದಲ್ಲಿ ತೋರುವ ಅವನ ಆಕಾರಕ್ಕೂ ನಿನ್ನ ಆಕಾರಕ್ಕೂ ಯಾವ ಭೇದವೂ ಇರದ ಕಾರಣ ದಮಯಂತಿಯು ಈ ವಿಧವಾಗಿ ಬಯಸಿರುವಳು. ಇದಲ್ಲದೆ ನೀನು ಇಲ್ಲಿ ಇರುವುದರಿಂದ ನಿನಗೂ ಉಪಯೋಗವಿರುವುದು. ವಿಧಿಯು ನಿನ್ನನ್ನು ವಂಚಿಸಿ ನಿನ್ನ ಕಣ್ಣುಗಳಿಂದಲೇ ನಿನ್ನನ್ನು ನೋಡದ ಹಾಗೆ ಮಾಡಿರುವನು; ಆದಕಾರಣ ನೀನು ಇಲ್ಲಿಯೇ ಇದ್ದರೆ ನಾಳೆ ನಿನ್ನ ಮುಖವನ್ನೇ ಹೋಲುತ್ತಿರುವ ನಳನ ಮುಖಲಕ್ಷ್ಮಿಯನ್ನು ಕಂಡು ಆನಂದ ಪಡಬಹುದು. ನಾಳೆ ಅಗ್ನಿಸಾಕ್ಷಿಕವಾಗಿ ನಳನು ಈಕೆಯ ಕೈಹಿಡಿಯುವನು. ನೀನು ಅಪೇಕ್ಷಿಸದೆ ಅವನನ್ನು ಹೋಲುತ್ತಿರುವುದರಿಂದ ನೀನೂ ನಾಳೆ ಇಲ್ಲಿಯೇ ಇದ್ದರೆ ಅವನ ಸ್ನೇಹದಿಂದ ನಿನಗೆ ಸಂತೋಷವಾಗಬಹುದು. ನೀನು ಈ ವಿಷಯವಾಗಿ ಆ ದಿಕ್ಪಾಲಕರಿಗಾಗಿ ನನ್ನನ್ನು ನಿರ್ಬಂಧಿಸಬಾರದು. ಇದಕ್ಕಾಗಿ ನಿನ್ನನ್ನು ಕೈಮುಗಿದು ಬೇಡುತ್ತೇನೆ. ನೀನು ನನ್ನಲ್ಲಿ ಅನುಗ್ರಹವನ್ನು ಮಾಡಬೇಕು. ಅವಾಚ್ಯವಾದ ಈ ವಿಷಯವನ್ನು ನೀನು ಇನ್ನು ಮುಂದೆ ನುಡಿಯಬಾರದು. ನೀನು ವ್ಯರ್ಥವಾಗಿ ನನಗೆ ದುಃಖವನ್ನುಂಟುಮಾಡಬೇಡ. ನಿನ್ನ ಮಾತುಗಳನ್ನು ಕೇಳಿದರೆ ನನಗೆ ಅಳುವು ಬರುವುದು. ದಿಗೀಶರನ್ನು ವರಿಸೆಂದು ಹೇಳುವುದು ನಿನಗೆ ಸರ್ವಥಾ ಉಚಿತವಲ್ಲ. ನೀನು ಆಕೃತಿಯಲ್ಲಿ ಪೂರ್ಣವಾಗಿ ನಳನನ್ನೇ ಹೋಲುತ್ತಿದ್ದರೂ ನಳನಲ್ಲವೆಂಬ ಭಾವದಿಂದ ಅವನಲ್ಲಿಟ್ಟಿರುವ ಅನುರಾಗವನ್ನು ನಿನ್ನಲ್ಲಿಡಲಾರೆನು. [illegible] ವಾದ ಅಗ್ನಿಯಲ್ಲಿ ತನ್ನ ಬಾಳುವೆಯನ್ನು ತ್ಯಾಗಮಾಡುವೆನೇ ಹೊರತು ಅನ್ಯಥಾ ಅದಕ್ಕೆ ಲೋಪವನ್ನು ತಂದುಕೊಳ್ಳಲಾರೆನು. [illegible]

ಪತಿವ್ರತೆಯರನ್ನು ಏನುಮಾಡಬಲ್ಲನು. ಅವನು ಅಂದೇ ಭಸ್ಮಭೂತವಾಗಿ ಹೋಗಿರುವನು. ಅದಲ್ಲದೆ ಪೂಜ್ಯನಾದ ಆ ಅರ್ಹಂತನೂ ಕೂಡ ಸಮಾನದೃಷ್ಟಿ, ಜ್ಞಾನ, ವೃತ್ತಗಳೆಂಬ ರತ್ನತ್ರಯಗಳಲ್ಲಿ ಸ್ವಧರ್ಮವೆಂಬ ಚಿಂತಾಮಣಿಯನ್ನೂ ಸೇರಿಸಿರುವನು. ಅಂತಹ ಧರ್ಮಚಿಂತಾಮಣಿಯನ್ನು ಯಾವ ಸ್ತ್ರೀಯು ಶಿವನ ನೇತ್ರಾಗ್ನಿಯಿಂದ ಉರಿದುಹೋದ ಮನ್ಮಥನಿಗಾಗಿ ತ್ಯಜಿಸಿಬಿಡುವಳೋ ಆ ಸ್ತ್ರೀಯು ತನ್ನ ಕುಲವನ್ನೂ ಭಸ್ಮವಾಗಿ ಮಾಡತಕ್ಕವಳೇ. ಇದರಿಂದ ನಳೈಕವ್ರತಳಾದ ತನ್ನ ಮುಂದೆ ಮಹೇಂದ್ರಾದಿಗಳ ಹೆಸರನ್ನು ಕೂಡ ಎತ್ತಬಾರದೆಂಬುದೇ ಇವಳ ಅಭೀಷ್ಟವು.”

ಪ್ರಾಮಾಣಿಕನಾದ ನಳನು ದಮಯಂತಿಯು ತನ್ನ ಸಖಿಯ ಬಾಯಿಯಿಂದ ಹೇಳಿಸಿದ ಅಮೃತಮಯವಾದ ಮಾತುಗಳನ್ನೆಲ್ಲ ಕೇಳಿದನು. ಇದರಿಂದ ಆತನ ಮನಸ್ಸಿನಲ್ಲಿ ಕ್ಷಣಕ್ಷಣಕ್ಕೂ ದಮಯಂತಿಯಲ್ಲಿ ಉಂಟಾಗಿದ್ದ ಅನುರಾಗಾಗ್ನಿಯು ಪ್ರಜ್ವಲಿಸತೊಡಗಿತು. ಆಗ ಆತನು:—“ಈಕೆಯು ಹೇಳುವುದೆಲ್ಲ ನಿಜವೇ. ನಾನು ಈಕೆಯ ವಿಚಾರದಲ್ಲಿ ಕೈಕೊಂಡ ಕ್ರೌರ್ಯವನ್ನು ಮನಸ್ಸಿಗೆ ತಂದರೆ, ಯಮನ ಕಡೆಯಿಂದ ಬಂದ ದೂತನೆಂದು ಮಾತ್ರವೇ ನನ್ನನ್ನು ತಿಳಿಯತಕ್ಕುದಲ್ಲ. ಪ್ರತ್ಯಕ್ಷ ಯಮನೆಂದೇ ತಿಳಿಯಬೇಕು. ಆದರೆ ಮಾಡತಕ್ಕುದೇನು! ಈಕೆಯ ಮಾತುಗಳು ನನ್ನ ಮರ್ಮವನ್ನು ಕತ್ತರಿಸುತ್ತಿದ್ದರೂ ದೂತನಾಗಿ ಬಂದ ನಾನು ನನ್ನ ಕರ್ತವ್ಯವನ್ನು ಮರೆಯಬಹುದೇ!” ಹೀಗೆ ಆಲೋಚಿಸಿ ವಾಕ್ಚಾತುರ್ಯದಲ್ಲಿ ಬೃಹಸ್ಪತಿಗೆ ಸಮಾನನಾದ ಆ ನಳನು ತನ್ನ ಇಚ್ಛಾಭಂಗಕ್ಕಾಗಿ ನಿಟ್ಟುಸಿರುಬಿಡುತ್ತ ಮೆಲ್ಲಮೆಲ್ಲನೆ ಮತ್ತೂ ಹೇಳತೊಡಗಿದನು:—

“ಧೀರಳೆ! ಸ್ವರ್ಗಾಧಿಪತಿಯಾದ ಆ ಇಂದ್ರನೇ ಪ್ರತ್ಯಕ್ಷ ನೀನಿರುವಲ್ಲಿಗೆ ಬಂದು ನಿನ್ನನ್ನು ಯಾಚಿಸುವನೆಂದಾದಮೇಲೆ ನೀನು ಹೇಗೆ ಆತನನ್ನು ತಿರಸ್ಕರಿಸುವೆ? ಅಗ್ನಿಯೂ ಇಂದ್ರನಿಗೇನೂ ಕಡಮೆಯಾದವನಲ್ಲ. ನಿನ್ನನ್ನು ಪಡೆಯುವುದಕ್ಕಾಗಿಯೇ ಆತನು ಆಹವನೀಯಾದಿ ತನ್ನ ಮೂರ್ತಿಗಳಲ್ಲಿಯೇ ಹೋಲಿಸಿ ಯಜ್ಞವನ್ನು ಮಾಡುತ್ತಿದ್ದಾನೆ. ವೇದೋಕ್ತವಾದ ಈ ಕರ್ಮಾನುಷ್ಠಾನವು ಸರ್ವಥಾ ನಿಷ್ಫಲವಾಗಬಾರದಷ್ಟೆ. ಅದಲ್ಲದೆ ದಕ್ಷಿಣ ದಿಕ್ಪಾಲಕನಾದ ಧರ್ಮರಾಜನ ವಿಚಾರವನ್ನು ಹೇಳುತ್ತೇನೆ ಕೇಳು:—“ಆ ದಿಕ್ಕನ್ನು ಆಶ್ರಯಿಸಿರುವ ಅಗಸ್ತ್ಯ ಮುನಿಗೆ ಆತನು ಭಕ್ತನಾಗಿಯೇ ನಡೆದುಕೊಳ್ಳುತ್ತಿರುವನು. ಒಮ್ಮೆ ಎಲ್ಲಿಯಾದರೂ ಆತನು—‘ಭೀಮಭೂಪಾಲನ ಮಗಳಾದ ದಮಯಂತಿಯನ್ನು ನನಗೆ ಪತ್ನಿಯಾಗುವಂತೆ ದಯಪಾಲಿಸು’ ಎಂದು ಬೇಡಿದರೆ, ಆಗ ನಿನ್ನ ಸ್ಥಿತಿಯು ಏನಾಗಬೇಕು? ಜಲಾಧಿಪನಾದ ಆ ವರುಣನ ಮನೆಯಲ್ಲಿ ಎಷ್ಟು ಕಾಮಧೇನುಗಳಿವೆ ಎಂದು ಯಾರು ಬಲ್ಲರು. ಆ ಕಾಮಧೇನುಗಳಲ್ಲಿ ಯಾವುದಾದರೂ ಒಂದು ಧೇನುವಿನೊಡನೆ ‘ದಮಯಂತಿಯು ನನಗೆ ವಶಳಾಗುವಂತೆ ಅನುಗ್ರಹಿಸು’ ಎಂದು ಬೇಡಿದಲ್ಲಿ ನೀನು ಅವನ ಹಸ್ತಗತಳಾದಂತೆಯೇ ಎಣಿಸಬೇಕು. ಆಗ ನಿನ್ನನ್ನು ಅವನ ಕೈಯಿಂದ ಬಿಡಿಸಿ ಹಿಂದಕ್ಕೆ ಕರೆತರುವವ

ಯಾರು? ಇನ್ನೊಂದನ್ನು ಹೇಳುತ್ತೇನೆ ಕೇಳು. ನೀನು ಇಂದ್ರನನ್ನು ಮೆಚ್ಚದ ಕಾರಣ, ಆತನ ಪತ್ನಿಯಾದ ಶಚೀದೇವಿಯು ಸ್ವಯಂವರ ವಿಘ್ನ ಶಮನಕ್ಕಾಗಿ ಇಲ್ಲಿಯವರೆಗೆ ಬಾರದೆಹೋದರೆ ಹಿಂಸಕರಾದ ಈ ಕ್ಷತ್ರಿಯರ ಪರಸ್ಪರ ವಿರೋಧದಿಂದ ಸ್ವಯಂವರವಾದರೂ ಹೇಗೆ ನಡೆಯಬೇಕು? ಸ್ವಯಂವರವೇ ನಡೆಯದೆ ಹೋದಮೇಲೆ ನೀನು ನಳನನ್ನು ವರಿಸುವುದಾದರೂ ಹೇಗೆ? ಸ್ವಯಂವರ ಮಂಟಪವೇ ಯುದ್ಧರಂಗವಾಗಿ ಪರಿಣಮಿಸಿ, ಕೇಶಾಕೇಶಿ, ಮುಷ್ಟೀಮುಷ್ಟಿ, ದಂಡಾದಂಡಿ, ಭುಜಾಭುಜಿ ಯುದ್ಧಗಳು ನಡೆಯುವುದರಲ್ಲಿ ಸಂಶಯವಿರುವುದೆಂದು ತಿಳಿದಿರುವೆಯಾ? ಅಗ್ನಿಯು ಮುನಿದರೆ ಇನ್ನೂ ಒಂದು ಬಾಧೆಯು ಇರುವುದು. ನಳನು ನಿನ್ನನ್ನು ಅಗ್ನಿಸಾಕ್ಷಿಕವಾಗಿ ವರಿಸಬೇಕೆಂದಿರುವನಷ್ಟೆ. ಅಗ್ನಿಯೇ ಕೋಪದಿಂದ ಶಾಂತನಾದರೆ ಆತನು ನಿನ್ನನ್ನು ಅಗ್ನಿಸಾಕ್ಷಿಕವಾಗಿ ವರಿಸುವುದಾದರೂ ಹೇಗೆ? ಯಮನು ಕೋಪಗೊಂಡನಾದರೆ ವರನ ಅಥವಾ ವಧುವಿನ ಕುಲದಲ್ಲಿ ಸ್ವಯಂವರಕ್ಕೆ ಮೊದಲೇ ಯಾರನ್ನಾದರೂ ತನ್ನ ಅತಿಥಿಯನ್ನಾಗಿ ಮಾಡಿಕೊಂಡರಾಯಿತು. ವಿವಾಹವು ಮುಂದೆ ನಡೆಯಲು ಸಾಧ್ಯವಿದೆಯೇ. ನೀನು ಪಾಣಿಗ್ರಹಕ್ಕಾಗಿ ಹಸ್ತವನ್ನು ಮುಂದೆ ನೀಡಿದರೂ ಜಲಾಧಿಪತಿಯಾದ ವರುಣನು ಮುನಿದನಾದರೆ ನಿನ್ನ ತಂದೆಯಾದ ಭೀಮರಾಜನು ಧಾರಾಪೂರ್ವಕವಾಗಿ ನಿನ್ನನ್ನು ಹೇಗೆ ವಿವಾಹಮಾಡಿಕೊಡಬಲ್ಲನು? ಆದುದರಿಂದ ಎಲೈ ದಮಯಂತಿ! ನೀನು ನಿನ್ನ ಮನಸ್ಸಿನ ಮೋಹವನ್ನು ಬದಿಗೊತ್ತಿ ಆ ದೇವಾಧೀಶರಲ್ಲಿ ಯಾರನ್ನಾದರೂ ಒಬ್ಬನನ್ನು ವರಿಸದೆ ಹೋದಲ್ಲಿ ನಿನ್ನ ಇಷ್ಟಾರ್ಥವು ಕೈಗೂಡುವುದಾದರೂ ಹೇಗೆ? ದೇವತೆಗಳು ವಿಘ್ನವನ್ನುಂಟು ಮಾಡಿದಲ್ಲಿ ಕರಗತವಾದ ವಸ್ತುವೂ ಕೂಡ ಮಾಯವಾಗಬಹುದಲ್ಲವೇ?''

ಈ ಪ್ರಕಾರ ದೂತನಾಗಿ ಬಂದ ನಳನು ಬಗೆಬಗೆಯಾಗಿ ದಮಯಂತಿಗೆ ಉಪದೇಶವಾಕ್ಯಗಳನ್ನು ನುಡಿಯುತ್ತಿರಲು, ಆಕೆಯು ಮನಸ್ಸಿನಲ್ಲಿ ವಿಚಾರಿಸಿ ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡಳು. ಆಗ ಅವಳ ಎರಡು ಕಣ್ಣುಗಳಿಂದಲೂ ಶ್ರಾವಣ ಭಾದ್ರಪದ ಮಾಸಗಳ ವರ್ಷಧಾರೆಯಂತೆ ಕಣ್ಣೀರಿನ ಧಾರೆಯು ಹರಿಯ ಹತ್ತಿತು. ಕಾಡಿಗೆಯಿಂದ ಮಲಿನವಾದ ಅವಳ ಕಣ್ಣೀರ ಹನಿಗಳು ಅರಳಿದ ಉತ್ಪಲಗಳಿಂದ ಹೊರಟ ಭೃಂಗ ವಿಘುನಗಳಂತೆ ಜಾರಿ ಬಂದು ಎದೆಯಮೇಲೆ ಬಿದ್ದು ಹಾರ ಮಧ್ಯದಲ್ಲಿ ತೂಗುತ್ತಿರುವ ನೀಲಮಣಿಗಳಂತೆ ಕಾಣಿಸಿಕೊಂಡುವು. ದಮಯಂತಿಗೆ ಈಗ ತಾನು ಇಚ್ಛಿಸಿದ ವರನನ್ನೇ ಪಡೆಯುವುದು ಅಸಾಧ್ಯವೆಂದು ತೋರಿತು. ಆಗ ಅವಳು ಕಂಡವರ ಮನಸ್ಸು ಕರಗುವಂತೆ ರೋದಿಸತೊಡಗಿದಳು. ಅವಳ ಧೈರ್ಯವು ಲುಪ್ತವಾಯಿತು. ಅವಳ ಬುದ್ಧಿಗಿರುವ ತತ್ತ್ವಾವಧಾರಣ ಶಕ್ತಿಯು ನಷ್ಟವಾಯಿತು. ಆಗ ಆಕೆಯು ಭ್ರಾಂತಳಂತೆ:—''ಎಲೇ ಪಂಚೇಷುವಾದ ಮನ್ಮಥನೇ! ತ್ವರೆಮಾಡು. ನನ್ನ ದೇಹವನ್ನು ಸುಟ್ಟು ಭಸ್ಮವಾಗಿ ಮಾಡಿ ಸ್ತ್ರೀವಧೆಯಿಂದ ಸಂಪಾದಿಸಿದ ಕೀರ್ತಿಯನ್ನು ಕಟ್ಟಿಕೋ. ಎಲೈ ವಿಧಾತನೇ! ನನ್ನ ಕ್ರಿಯಾಫಲವನ್ನು ಭಕ್ಷಿಸತಕ್ಕವನಾದ ನೀನು ನಿಷ್ಫಲ

ವಾದ ನನ್ನ ಪ್ರಾಣಗಳನ್ನೂ ಕೂಡ ಭಕ್ಷಿಸಿ, ಸ್ತ್ರೀವಧ ಪಾತಕದಿಂದ ಪತಿತನಾಗಿ ಹೋಗು. ಎಲೇ! ವಿಯೋಗಾಗ್ನಿಯಿಂದ ದಹಿಸುತ್ತಿರುವ ಹೃದಯವೇ! ನೀನು ಉಕ್ಕಿನಿಂದಲೂ ಉಂಟಾದುದಲ್ಲ. ಏಕೆಂದರೆ, ಉಕ್ಕಿನಿಂದ ಉಂಟಾದ ಪದಾರ್ಥವೂ ತಾಪದಿಂದ ಕರಗುವುದು. ನೀನು ವಜ್ರಮಯವೆಂದು ನಾನು ಎಣಿಸಲಾರೆನು. ವಜ್ರಮಯವಾದ ಪದಾರ್ಥಗಳು ಮನ್ಮಥನ ಬಾಣಗಳಿಂದ ಒಡೆಯಲಾರವು. ಆದಕಾರಣ ನೀನು ಯಾವುದರಿಂದ ಉಂಟಾದವನು? ಏಕೆ ಒಡೆದು ನಾಶವಾಗುವುದಿಲ್ಲ? ಎಲೇ ಪ್ರಾಣವಾಯುವೇ! ಏಕೆ ತಡಮಾಡುತ್ತೀಯೆ? ತ್ವರೆಯಾಗಿ ಹೊರಡು. ನಿನ್ನ ಆವಾಸ ಗೃಹವಾದ ಹೃದಯವು ಈಗಲೇ ಉರಿದು ಹೋಗುವುದು. ಇಂತಹ ವಿಪತ್ತಿನ ವೇಳೆಯಲ್ಲಿಯೂ ನಿನ್ನ ಆಸನವನ್ನು ಬಿಟ್ಟು ಹೊರಡುವುದಿಲ್ಲವೇ? ಎಲೇ ಕಣ್ಣುಗಳೇ! ಪಾಪಿಗಳಾದ ನನ್ನೀ ಮನೋರಥಗಳು ನಿಮ್ಮನ್ನೂ ವಂಚಿಸಿದುವು. ನಳ ಸೌಂದರ್ಯ ದರ್ಶನಕ್ಕೆ ವಿಘಾತವನ್ನುಂಟು ಮಾಡಿದ ಜನ್ಮಾಂತರ ಕೃತವಾದ ನಿಮ್ಮ ಪಾಪವನ್ನು ಹೀಗೆಯೇ ನೂರಾರು ವರುಷಗಳವರೆಗೆ ಕಣ್ಣೀರು ಸುರಿಸುತ್ತ ತೊಳೆಯುತ್ತಿರಿ. ಎಲೈ ಮನಸ್ಸೆ! ನಿನ್ನ ಇಷ್ಟಾರ್ಥವು ಕೈಗೂಡದ ಮೇಲೆ ನಿನಗೆ ಮರಣವೇ ಉತ್ತಮವಾಯಿತು. ನಲ ವಿಯೋಗದಿಂದ ನಾನು ಹೀಗೆಯೇ ಬೇಯುತ್ತಿರಬೇಕೆಂದು ನೀನು ಎಣಿಸುವೆಯಾದರೆ ಅದೆಂದೂ ನಿನಗೆ ಕೈಗೂಡದೆಂದು ತಿಳಿದುಕೋ. ಚಂದ್ರಾದಿ ಶತ್ರುಗಳ ನಡುವೆ ಅತಿ ವಕ್ರನಾಗಿದ್ದ ಮನ್ಮಥನನ್ನು ಎಂದಿಗೂ ಪ್ರಾರ್ಥಿಸಲಾರೆನು. ಆದರೆ ದಕ್ಷಿಣ ದಿಕ್ಕಿನಿಂದ ಬೀಸುತ್ತಿರುವ ಮಲಯಾನಿಲನನ್ನು ಮಾತ್ರ ಹೀಗೆಂದು ಪ್ರಾರ್ಥಿಸುವೆನು:—'ಎಲೈ ಮಲಯಾನಿಲನೇ! ನೀನು ದಾಕ್ಷಿಣ್ಯವಂತನು; ನನ್ನ ಪ್ರಿಯನಾದ ನಳನು ಸಂಚರಿಸುತ್ತಿದ್ದ ದಿಕ್ಕಿನಿಂದ ಬೀಸತಕ್ಕವನು. 'ಮರಣಾಂತಾನಿ ವೈರಾಣಿ' ಎಂಬ ಮಾತನ್ನು ನೆನಪಿಗೆ ತಂದು ನಾನು ಸತ್ತ ಮೇಲೆ ನನ್ನ ಬೂದಿಯನ್ನು ಆ ದಿಕ್ಕಿಗೆ ಎರಚಿಬಿಡು. ಇದೊಂದು ನಿನ್ನ ಉಪಕಾರವು. ಅಯ್ಯೋ! ಕ್ಷಣಗಳು ಯುಗಗಳಂತೆ ಪರಿಣಮಿಸಿವೆಯಲ್ಲಾ! ನಾನು ಈ ವ್ಯಥೆಯನ್ನು ಹೇಗೆ ಸಹಿಸಲಿ. ನನಗೆ ಮರಣವೇ ಇಲ್ಲವೆಂಬಂತೆ ತೋರುತ್ತದೆ. ಆ ಪ್ರಿಯನಾದ ನಳನಾದರೋ ನನ್ನ ಅಂತರಾತ್ಮವನ್ನು ಬಿಟ್ಟು ತೊಲಗುವುದಿಲ್ಲ. ಈ ವ್ಯಥೆಯಿಂದ ಬದುಕುವುದಕ್ಕಿಂತ ಸಾಯುವುದೇ ಮೇಲೆಂದರೆ ಪ್ರಾಣವಾಯುಗಳು ನನ್ನ ದೇಹವನ್ನು ಬಿಟ್ಟು ಹೊರಡುವುದಿಲ್ಲವಲ್ಲಾ! ಅಯ್ಯೋ!! ಇನ್ನೇನು ಮಾಡಲಿ. ಎಲೈ ದೇವತೆಗಳೇ! ನೀವು ದಯಾಸಮುದ್ರರೆಂದು ಲೋಕವು ನುಡಿಯುವುದಷ್ಟೆ! ಆ ಸಮುದ್ರವು ಈಗ ಯಾರಿಂದ ಪಾನಮಾಡಲ್ಪಟ್ಟಿತು? ನೀವೇ ಲೋಭದಿಂದ ಪಾನಮಾಡಿರುವಿರೆಂದು ಎಣಿಸುತ್ತೇನೆ. ಹಾಗಲ್ಲವಾದರೆ ನಿಮ್ಮ ಸಂತೋಷಕ್ಕಾಗಿ ಲೋಕದಲ್ಲಿ ಸುಂದರಿಯರು ಶೂನ್ಯರಾದರೊ? ಅಯ್ಯೋ! ಬಂಧುಗಳೇ!! ನನ್ನ ಕಣ್ಣೀರಿನ ಸುರಿಯುವಿಕೆಯೆಂಬ ವರ್ಷರ್ತುವಿನಲ್ಲಿ ನೀವೂ ವಿಷ್ಣುವಿನಂತೆ ಶಯನಮಾಡಬೇಕೆಂದು ಎಣಿಸುತ್ತೇನೆ. ಇಲ್ಲವಾದರೆ ನನ್ನೀ ದುಃಖವು ಏಕೆ ಅರಣ್ಯರೋದನವಾಯಿತು. ಎಲೈ ನಳಮಹಾ

ರಾಜನೇ! ನಿನ್ನಲ್ಲಿಯೇ ತನ್ಮಯವಾಗಿದ್ದ ಈ ಜೀವದ ಯಾತನೆಯು ಇನ್ನೂ ನಿನ್ನ ದೃಷ್ಟಿಪಥಕ್ಕೆ ಗೋಚರವಾಗಲಿಲ್ಲವೇ? ಈ ನನ್ನ ಯಾತನೆಯನ್ನು ಆ ಪ್ರಿಯನಾದ ಹಂಸನ ಮೂಲಕವಾದರೂ ನಿನಗೆ ತಿಳಿಸುವೆನೆಂದರೆ ಅದನ್ನು ಆ ವಿಧಿಯು ಎಲ್ಲಿ ಅಡಗಿಸಿಟ್ಟನೋ ತಿಳಿಯದು. ಅಯ್ಯೋ ಪ್ರಾಣಬಂಧುವಾದ ಹಂಸನೇ! ನೀನು ಈಗ ಯಾವ ಸರೋವರದಲ್ಲಿ ಎಲ್ಲಿ ಇರುವೆಯೋ ತಿಳಿಯದು. ಒಮ್ಮೆ ಇಲ್ಲಿಯವರೆಗೆ ಬಂದು ನನ್ನ ದುಃಖವನ್ನು ಪರೀಕ್ಷಿಸಿ ನೋಡು. ಎಲೈ ಕೃಪಾಳುವಾದ ನಳನೇ ನನ್ನ ಮನಸ್ಸು ನಿನ್ನ ಪಾದಪದ್ಮದಲ್ಲಿಯೇ ಎರಕವಾಗಿರುವುದೆಂದು ನಿನಗೆ ತಿಳಿದಿದ್ದರೆ ಈಗ ಏಕೆ ನೀನು ನನ್ನಲ್ಲಿ ಅನುಗ್ರಹಬುದ್ಧಿಯನ್ನು ತೋರುವುದಿಲ್ಲ. ಎಲೈ ದಯಾಳುವೇ! ನಾನೇಕೆ ಸುಮ್ಮನೆ ನಿನ್ನನ್ನು ದೂರುತ್ತಿರಬೇಕು. ನೀಚನಾದ ವಿಧಿಯು ನಿನ್ನನ್ನು ಹೀಗೆ ಮೋಹಿಸಿರುವಾಗ ನಿನ್ನನ್ನು ಏಕೆ ನಿಂದಿಸುವೆನೆಂದು ದೂರಬೇಕು. ಹೇ ನಾಥ! ನಿನಗಾಗಿಯೇ ದಮಯಂತಿಯು ಕಥಾವಶೇಷವನ್ನು ಹೊಂದಿದಳೆಂದು ಒಂದು ದಿನ ನಿನಗೆ ತಿಳಿಯುದಿರದು. ಆಗಲಾದರೂ ನೀನು ನನ್ನನ್ನು ಅನುಗ್ರಹಿಸಿ ಈಕೆಯು ನನಗಾಗಿಯೇ ಸತ್ತಳೆಂದು ತಿಳಿದೆಯಾದರೆ ಅದೇ ನನಗೆ ಸಾಕು. ಈ ಜನ್ಮದಲ್ಲಿ ಅಸಾಧ್ಯವಾದರೂ ಇನ್ನೊಂದು ಜನ್ಮದಲ್ಲಾದರೂ ನಿನ್ನನ್ನು ಸೇರಬೇಕೆಂಬ ಆದರವು ನನಗಿರುವುದರಿಂದ ಅಂತಕಾಲದಲ್ಲಿ ನಿನ್ನ ಸ್ಮರಣವೇ ನನ್ನ ನಾಲಿಗೆಗೆ ಬರುವಂತೆ ನನ್ನ ಹೃದಯವನ್ನು ಬಿಟ್ಟು ತೊಲಗಬೇಡ.''

ಈ ಪ್ರಕಾರ ದಮಯಂತಿಯು ಬಹುವಿಧವಾಗಿ ಹಳವಿಸಹತ್ತಿದಳು. ಇದನ್ನು ಕೇಳಿ ನಳನು ತಾನು ಇಂದ್ರಾದಿಗಳ ದೂತನಾಗಿ ಬಂದ ಕಾರಣ ಅದುವರೆಗೆ ತನ್ನ ಹೃದಯವನ್ನು ಸ್ಥಿರವಾಗಿ ಇಟ್ಟಿದ್ದರೂ ಈಗ ಅದನ್ನು ಹಾಗೆ ಇಡಲಾರದೆ ಉನ್ಮತ್ತನಂತೆ ಭ್ರಮಿಸಹತ್ತಿದನು. ಈಗ ಅವನಿಗೆ ತಾನು ಇಂದ್ರಾದಿಗಳ ಕಡೆಯಿಂದ ಬಂದವನೆಂಬ ಭಾವನೆಯೇ ಮರೆತುಹೋಯಿತು. ತನ್ನ ಪ್ರಿಯೆಯ ಶೃಂಗಾರ ಚೇಷ್ಟೆಗಳೆಲ್ಲವೂ ಆತನ ಮನಸ್ಸಿಗೆ ಬಂದು ಬುದ್ಧಿಪೂರ್ವಕವಲ್ಲವಾದರೂ ಹೀಗೆ ಹೇಳತೊಡಗಿದನು :—

''ಪ್ರಿಯೆ! ಪ್ರಿಯೆ! ನೀನು ಯಾರಿಗಾಗಿ ಹೀಗೆ ಕಣ್ಣೀರಿನಿಂದ ನಿನ್ನ ಮುಖವನ್ನು ಮಲಿನವಾಗಿ ಮಾಡುತ್ತಿದ್ದೀಯೆ? ನಳನಿಗಾಗಿಯೇ ನೀನು ಹೀಗೆ ರೋದಿಸುವೆಯಾದರೆ ಆ ನಳನೇ ನಿನ್ನ ಮುಂದೆ ನಿಂತಿರುವನಲ್ಲಾ! ಅವನನ್ನೇಕೆ ನೋಡದಿರುವೆ! ಪ್ರತ್ಯಕ್ಷದಲ್ಲಿಯೂ ಪರೋಕ್ಷದಂತೆ ನಡೆಯಬೇಕೇ? ನಿನ್ನ ಕಣ್ಣಿನಿಂದ ಬಿಂದು ಬಿಂದುವಾಗಿ ಬೀಳುತ್ತಿರುವ ಈ ಬಾಷ್ಪಬಿಂದುಗಳ ಮೂಲಕ ನನ್ನ ಪಾಲಿಗೆ ಸಂಸಾರವನ್ನು ನಿಸ್ಸಾರವಾಗಿ ಮಾಡುತ್ತಿದ್ದೀಯೆ. ಅಂಗೈ ಕಮಲ ಕೋಮಲವಾದ ಹಸ್ತದ ಮೇಲೆ ನಿನ್ನ ಮುಖವನ್ನೇಕೆ ಕಮಲವನ್ನಾಗಿ ಇಟ್ಟಿರುವೆ? ಅದಲ್ಲದೆ ಹಾರಶೂನ್ಯವಾದ ನಿನ್ನ ವಕ್ಷಸ್ಥಳಕ್ಕೆ ಕಣ್ಣೀರಿನ ಬಿಂದುಗಳನ್ನೇ ಹಾರವನ್ನಾಗಿ ಮಾಡಲು ಎಣಿಸಿರುವೆಯಾ? ಇಂತಹ ನಿನ್ನ ದುಃಖಕ್ಕೆ

ಕಾರಣವೇನು? ಆ ನಿನ್ನ ಕಣ್ಣೀರನ್ನು ನನ್ನ ಕೈಯಿಂದ ಒರಸುತ್ತೇನೆ. ನಿನ್ನ ಮುಖಕ್ಕೆ ಅದೊಂದು ಅಮಂಗಲವೆಂದೇ ಎಣಿಸುತ್ತೇನೆ. ಕೋಪವನ್ನು ಬಿಡು. ನನ್ನೊಡನೆ ಮಾತಾಡು. ನೀನು ಇನ್ನೂ ಕೋಪವನ್ನು ಬಿಡದಿರುವೆಯಾದರೆ ನನ್ನ ಕಿರೀಟದಿಂದ ನಿನ್ನ ಪಾದವನ್ನು ಅಲಂಕರಿಸುತ್ತೇನೆ. ಅಂತೂ ನಾನು ನಿನ್ನ ಕೋಪಕ್ಕೆ ಪ್ರತಿಕೋಪವನ್ನು ತೋರಲಾರೆನು. ಯಾಚಕರಿಗೆ ಕಲ್ಪಲತೆಯಂತಿದ್ದ ನೀನು ನನ್ನನ್ನು ದೃಷ್ಟಿ ಮಾತ್ರದಿಂದಾದರೂ ಅನುಗ್ರಹಿಸಲಾರೆಯಾ? ಮೃದ್ವಂಗಿಯಾದ ನೀನು ಕಾಮನ ಬಾಣಗಳ ಹೊಡೆತವನ್ನು ಹೇಗೆ ಸಹಿಸಬಲ್ಲೆ? ನಿನ್ನ ಮುಖದಲ್ಲಿ ಮಂದಹಾಸವು ಕಾಣಿಸಲಿ. ನಿನ್ನ ಕಟಾಕ್ಷ ವೀಕ್ಷಣವನ್ನು ನನ್ನ ಮೇಲೆ ಹರಡು. ಕಣ್ಣೀರಿನ ಪ್ರವಾಹಕ್ಕೆ ಇಲ್ಲಿಗೇ ಅಂತ್ಯವಾಗಲಿ. ಮಂದಹಾಸವೆಂಬ ಚಂದ್ರಕಿರಣವು ಹರಡತೊಡಗಲಿ. ನಿನ್ನ ಉಭಯ ದೃಷ್ಟಿಗಳೆಂಬ ಖಂಜನ ಪಕ್ಷಿಗಳು ನನ್ನಲ್ಲಿ ವಿಸ್ತರಿಸಲಿ. ನಿನ್ನ ಮುಖವು ಅರಳಿದ ಪಂಕಜದಂತೆ ಶೋಭೆಯನ್ನು ಹೊಂದಲಿ. ಸುಂದರಿ! ನಿನ್ನ ವಿನೋದವಾದ ಮಾತುಗಳಿಂದ ನನ್ನ ಕಿವಿಗಳಿಗೆ ಕರ್ಣರಸಾಯನವನ್ನುಂಟುಮಾಡು. ನಿನ್ನ ನಗೆಯಿಂದ ನನ್ನ ಕಣ್ಣುಗಳಿಗೆ ಪಾಯಸ ಭೋಜನವನ್ನು ಮಾಡಿಸು. ನನ್ನೊಡನೆ ಈ ಪೀಠದ ಮೇಲೆ ಕುಳಿತುಕೋ. ತನ್ವಂಗಿ! ಈ ನಳನಿಗೆ ನೀನೇ ಜೀವಿತವು; ಚಂದ್ರಕಿರಣಗಳು ರಾತ್ರಿಯಿಂದ ಹೇಗೆ ಬದುಕುವುವೋ ಹಾಗೆ ನಾನು ನಿನ್ನಿಂದಲೇ ಬದುಕತಕ್ಕವನು.''

ಈ ಪ್ರಕಾರ ದಮಯಂತಿಯೊಡನೆ ಮಾತಾಡಿದಮೇಲೆ ಆತನಿಗೆ ತನ್ನನ್ನು ಪ್ರಕಟಗೊಳಿಸಿದುದು ಉತ್ತಮವಾಗಲಿಲ್ಲವೆಂದು ತೋರಿತು. ಪರಮ ತಪಸ್ವಿಯಾದ ಮಹರ್ಷಿಗೆ ಯೋಗ ಬಲದಿಂದ ಆತ್ಮ ತತ್ತ್ವವು ಪ್ರಕಾಶಿತವಾದರೂ ವಾಸನಾ ಬಲದಿಂದ ಬಾಹ್ಯ ವಿಚಾರವು ಅವನನ್ನು ಇನ್ನೂ ಬಿಡದಿರುವಂತೆ ಈ ನಳನನ್ನೂ ಸಂಸ್ಕಾರ ವಶದಿಂದ ದೂತ ಭಾವವು ಇನ್ನೂ ಬಿಡಲಿಲ್ಲ:—''ಅಯ್ಯೋ! ನಾನೇನು ಮಾಡಿದೆ!! ನನ್ನನ್ನೇಕೆ ಹೀಗೆ ಪ್ರಕಾಶಗೊಳಿಸಿದೆನು. ಇಂದ್ರನು ನನ್ನ ವಿಚಾರದಲ್ಲಿ ಏನು ತಿಳಿದುಕೊಳ್ಳುವನೊ! ನಾನು ಇನ್ನು ಮುಂದೆ ಅವನ ಮುಖವನ್ನಾದರೂ ಹೇಗೆ ನೋಡೇನು. ನಾನು ವ್ಯರ್ಥವಾಗಿ ನನ್ನ ಹೆಸರನ್ನು ಈಕೆಗೆ ತಿಳಿಸಿದೆನು. ಇದರಿಂದ ನಾನು ಬಂದ ಕಾರ್ಯವೇ ಕೆಟ್ಟುಹೋದಂತಾಯಿತು. ಹಿಂದೆ ಹನುಮಂತ ಮೊದಲಾದವರು ದೂತ ಪದ್ಧತಿಯನ್ನು ತಮ್ಮ ಕೀರ್ತಿಯಿಂದ ಶುಭ್ರವಾಗಿ ಮಾಡಿದ್ದರು. ನಾನಾದರೋ ಅದೇ ಪದ್ಧತಿಯನ್ನು ಶತ್ರುಗಳು ನಗೆಯಿಂದ ಶುಭ್ರವಾಗಿ ಮಾಡುವಂತೆ ಮಾಡಿದೆನು. ಆಗಲಿ ಇದರಲ್ಲೊಂದು ಸಮಾಧಾನವಿರುವುದು. ನಾನೇನು ಬುದ್ಧಿಪೂರ್ವಕವಾಗಿ ಈ ಅಪರಾಧವನ್ನು ಮಾಡಿದವನಲ್ಲ. ಜನರ ನಾಲಗೆಗೇನು ತಡೆಯಿದೆಯೇ! ಅವರು ಬೇಕಾದುದನ್ನು ಎಂದುಕೊಳ್ಳಲಿ. ಲೋಕ ರಕ್ಷಣೆಗಾಗಿ ಉದ್ಯುಕ್ತನಾದ ವಿಷ್ಣುವನ್ನು ಜನಾರ್ದನನೆಂದೂ, ಕಲ್ಪಾಂತ ಕಾಲದಲ್ಲಿ ಜಗತ್ತಿನ ಜೀವವನ್ನೇ ಕುಡಿಯು

ತಕ್ಕ ಪರಮೇಶ್ವರನನ್ನು ಶಿವನೆಂದೂ ಜನರು ಕರೆಯುವುದಿಲ್ಲವೇ? ನನ್ನ ಹೃದಯವು ಲಜ್ಜೆಯಿಂದ ಒಡೆಯುವುದೋ ಎಂಬಂತೆ ನನಗೆ ತೋರುವುದು. ಹಾಗೆ ಒಡೆದರೂ ನನಗೆ ಆನಂದವೇ! ಏಕೆಂದರೆ ದೇವತೆಗಳಾದರೂ ನನ್ನ ಹೃದಯದ ಪರಿಶುದ್ಧತೆಯನ್ನು ಕಂಡುಕೊಳ್ಳಲಿ. ಅಂತು ವಿಷಮ ಸ್ವಭಾವವುಳ್ಳ ಜನಗಳ ಬಾಯಿ ಮುಚ್ಚಿಸುವುದು ಸಾಧ್ಯವಲ್ಲ. ನನ್ನ ಶ್ರಮವೆಲ್ಲ ಸಾರ್ಥಕವಾಗುವ ಸಂದರ್ಭವು ಉಂಟಾಗಿದ್ದಿತು. ಆದರೆ ಮಾಡತಕ್ಕುದೇನು! ದೈವಗತಿಯಿಂದ ಅದೆಲ್ಲವೂ ಬಯಲಾಯಿತು. ದೈವವನ್ನು ತಡೆಯುವುದು ಇಂದ್ರನಿಗೂ ಸಾಧ್ಯವಲ್ಲ.”

ಈ ಪ್ರಕಾರ ನಳನು ತನ್ನನ್ನು ಪ್ರಕಟಗೊಳಿಸಿದುದಕ್ಕಾಗಿ ಬಗೆ ಬಗೆಯಾಗಿ ವ್ಯಥೆಪಡುತ್ತಿರಲು, ಇದನ್ನರಿತ ದಯಾಳುವಾದ ಆ ಹಂಸವು ಇವನನ್ನು ದುಃಖದಿಂದ ವಿಮೋಚನಗೊಳಿಸುವುದಕ್ಕಾಗಿ ತ್ವರೆಯಾಗಿ ಆ ಸ್ಥಳಕ್ಕೆ ಬಂದಿತು. ನಳನು ಇದೇನು ಶಬ್ದವಿರಬಹುದೆಂದು ಮೇಲೆ ನೋಡುವಾಗ ತನಗೆ ಹಿಂದೆ ಉಪಕಾರ ಮಾಡಿರುವ ಹಂಸವೇ ಇದೆಂದು ಆತನಿಗೆ ಸ್ಪಷ್ಟವಾಗಿ ತಿಳಿಯಿತು. ಆಗ ಆ ಹಂಸವು ಮೃದುವಾದ ಮಾತುಗಳಿಂದ:—“ಎಲೈ! ನಳನೇ! ನಿರ್ದಯನೇ!! ಇದೇನು ಮಾಡುತ್ತಿರುವೆ? ಈಕೆಗೆ ಹೀಗೆ ನಿರಾಶೆಯನ್ನುಂಟುಮಾಡಬಹುದೇ! ಈಕೆಯು ತನ್ನ ಪ್ರಾಣಗಳನ್ನು ನಿನಗಾಗಿ ತೊರೆಯಲು ನಿಶ್ಚಯಿಸಿರುವಳಲ್ಲಾ. ನೀನು ದೇವತೆಗಳ ವಿಚಾರದಲ್ಲಿ ಇದುವರೆಗೆ ಮಾಡಿರುವ ಪ್ರಯತ್ನವು ಸಾಕು. ನಿಜವಾಗಿಯೂ ಅನಪರಾಧಿಯಾಗಿರುವ ನಿನ್ನನ್ನು ಅಪರಾಧಿಯೆಂದು ತಿಳಿಯುವುದೇ ಮಹಾಪರಾಧವು. ಸತ್ಪುರುಷರ ಚಿತ್ತಶುದ್ಧಿಗೆ ಅವರವರ ಆತ್ಮವೇ ಸಾಕ್ಷಿಯಾಗಿರುವುದರಿಂದ ಹೊರಗಿನ ದೃಷ್ಟಾಂತಗಳ ಅವಶ್ಯವೇ ಇಲ್ಲವೆಂದು ಹೇಳುತ್ತೇನೆ.”

ಹೀಗೆ ಹಂಸನು ನಳನನ್ನು ಸಮಾಧಾನಪಡಿಸಿ, ನಳನೊಡನೆಯೂ ದಮಯಂತಿಯೊಡನೆಯೂ ಹೋಗಿಬರುವುದಾಗಿ ಹೇಳಿ ಹೊರಡಲು ಇತ್ತ ನಿಷಧಭೂಪಾಲಕನು ಇಂದ್ರಾದಿಗಳಿಗೆ ಮನಸ್ಸಿನಲ್ಲಿಯೇ ವಂದಿಸಿ ದಮಯಂತಿಯೊಡನೆ ಹೀಗೆ ಹೇಳತೊಡಗಿದನು:—“ಪ್ರಿಯೆ! ದಮಯಂತಿ! ನಾನು ದೇವದೂತನಾಗಿ ಬಂದಿರುವ ಕಾರಣ ಅವರ ಕಾರ್ಯವು ಕೈಗೂಡಬೇಕೆಂಬ ಬುದ್ಧಿಯಿಂದ ನಿನ್ನನ್ನು ಬಲುವಾಗಿ ಪೀಡಿಸಿದೆನು. ನಾನೇನೋ ನನ್ನ ಕರ್ತವ್ಯದಲ್ಲಿ ನಿಷ್ಕಪಟವಾಗಿ ನಡೆದಿದ್ದೆನು. ದೇವತೆಗಳು ಈ ವಿಚಾರಕ್ಕಾಗಿ ನನ್ನನ್ನು ಕ್ಷಮಿಸಿದರೂ ಸರಿಯೆ, ಅಥವಾ ಶಿಕ್ಷಿಸಿದರೂ ಸರಿಯೆ. ನಾನು ಇನ್ನುಮುಂದೆ ನಿನ್ನೊಡನೆ ಅಂತಹ ಕ್ರೂರವಾದ ಮಾತುಗಳನ್ನು ನುಡಿಯಲಾರೆನು. ನಾನು ಬುದ್ಧಿಗೆಟ್ಟು ನನ್ನ ಪರಿಚಯವನ್ನು ನಿನಗೆ ಹೇಳಿದುದೂ ಉಪಕಾರಕ್ಕೇ ಬಂದಿತು. ಹಾಗೆ ಹೇಳದೆ ಹೋಗಿದ್ದರೆ ನಾನು ಯಾವಜ್ಜೀವವೂ ನಿನ್ನ ವಿಯೋಗ ದುಃಖವನ್ನು ಅನುಭವಿಸಬೇಕಿದ್ದಿತು. ಅಜ್ಞಾನದಿಂದ ಉಂಟಾದ ದೋಷಗಳಿಗೆ ಅಲ್ಪತ್ವವನ್ನು ಹಿರಿಯರು ಹೇಳಿರುವರು. ಪ್ರಿಯೆ! ದೇವತೆಗಳು ನಿನ್ನಲ್ಲಿ ಅನುರಾಗವುಳ್ಳವರಾಗಿರುವರು.

ನನ್ನನ್ನಂತೂ ನಿನ್ನ ದಾಸನನ್ನಾಗಿ ಮಾಡಿಕೊಳ್ಳಲು ನೀನು ಸಮರ್ಥನಾಗಿಯೇ ಇರುವೆಯಷ್ಟೆ. ಆದರೆ ಯಾವ ಕಾರ್ಯವನ್ನೂ ನೀನು ವಿಚಾರಿಸಿ ಮಾಡಬೇಕು. ಹಾಗೆ ಮಾಡದೆ ಹೋದರೆ ಪಶ್ಚಾತ್ತಾಪಕ್ಕೆ ಗುರಿಯಾಗುವೆ. ನಾನು ನಿನಗೆ ಈ ಮಾತನ್ನು ಮಾಧ್ಯಸ್ಥ್ಯ ಭಾವದಿಂದ ಹೇಳುತ್ತೇನೆ. ದೇವತೆಗಳ ಭಯದಿಂದಾಗಲಿ ಅಥವಾ ನಿನ್ನ ಮೇಲಿನ ಅನುರಾಗದಿಂದಾಗಲಿ ಹೇಳುವೆನೆಂದು ಎಣಿಸಬೇಡ. ಒಂದು ವೇಳೆ ಚೆನ್ನಾಗಿ ವಿಚಾರಿಸಿಯೇ ನನ್ನನ್ನು ವರಿಸುವೆಯಾದರೆ ಆಗ ನನ್ನ ಪ್ರಾಣವನ್ನು ನಿನಗೆ ತೆತ್ತರೂ ನಿನ್ನ ಉಪಕಾರಕ್ಕೆ ಪ್ರತಿಯಾಗಲಾರದು.”

ಈ ಪ್ರಕಾರ ನಳನು ನುಡಿದು ತನ್ನ ಮಾತುಗಳನ್ನು ಮುಗಿಸಲಾಗಿ ದಮಯಂತಿಗೆ ವಸಂತಕಾಲದ ಕೋಗಿಲೆಯ ಧ್ವನಿಯನ್ನು ಕೇಳಿದಂತೆ ಆ ಮಾತುಗಳು ಕಿವಿಗೆ ಬಲು ಇಂಪಾಗಿ ಕೇಳಬಂದುವು. ಹಿಂದೆ ದಮಯಂತಿಯು ನಳನನ್ನು ದೇವದೂತನೆಂದೇ ತಿಳಿದು ಪತಿವ್ರತೆಯಾದ ನಿಮಿತ್ತ ಅಂತಹ ಪರಪುರುಷನೊಡನೆ ಮಾತಾಡುವುದಕ್ಕೆ ಅಸಹ್ಯಪಡುತ್ತಿದ್ದಳು. ಈಗಲಾದರೋ ನಳನೆಂದೇ ನಿಶ್ಚಯವಾದಮೇಲೆ ಆ ಜುಗುಪ್ಸೆಯನ್ನು ಪೂರ್ಣವಾಗಿ ತೊರೆದುಬಿಟ್ಟಳು. ಆಕೆಯು ರೋಮಾಂಚಗೊಂಡಳು. ನಾನು ಈತನ ಮುಂದೆ ಆಡಿದ ಮಾತುಗಳಿಂದಲೇ, ಇವನು, ತನ್ನನ್ನು ಈಕೆಯು ಅರಿತಳೆಂದು ಭಾವಿಸಿ ತನ್ನನ್ನು ಪ್ರಕಟಿಸಿಕೊಂಡನು. ಈತನು ಈಗ ಪ್ರಯೋಗಿಸಿದ ‘ಪ್ರಿಯೆ, ಮೊದಲಾದ ಈ ಮಾತುಗಳಿಂದಲೇ ತಾನು ದೂತನಲ್ಲನೆಂದು ಪ್ರಸಿದ್ಧಪಡಿಸಿದನು’ ಎಂದು ಆಕೆಯು ಎಣಿಸುತ್ತಲೇ ಅವಳಲ್ಲಿ ಪ್ರಬಲವಾದ ಲಜ್ಜೆಯುಂಟಾಗಿ ನಳನೊಡನೆ ಮುಂಚಿನಂತೆ ಮಾತಾಡಲಸಮರ್ಥಳಾದಳು. ಸಖಿಗೆ ತನ್ನ ಅಭಿಪ್ರಾಯವನ್ನು ತಿಳಿಸಿ ಅವಳ ಮೂಲಕವೂ ಮಾತಾಡಲಸಮರ್ಥಳಾದಳು. ಆಗ ಸಖಿಯು ದಮಯಂತಿಯ ಪರವಾಗಿ—
“ಪೂಜ್ಯನೇ! ನನ್ನ ಸಖಿಯಾದ ಈ ದಮಯಂತಿಯು ಈಗ ಮಾತಾಡದಿರುವುದು ಕೇವಲ ಲಜ್ಜೆಯಿಂದಲೇ ಹೊರತು ಬೇಸರದಿಂದಲ್ಲ. ಈಕೆಯು ನಿನ್ನನ್ನು ಕಾಣುವ ಮುಂಚೆ ನಿನ್ನ ಚಿತ್ರದ ಪಾದಗಳನ್ನು ತನ್ನ ಕಣ್ಣೀರಿನ ಪ್ರವಾಹದಿಂದ ತೊಳೆಯುತ್ತಿದ್ದಳು. ಎಲೈ ಚಂದ್ರವಂಶಾವತಂಸನೇ? ಈಕೆಯ ವಿಯೋಗ ದುಃಖವನ್ನು ಆ ಹಂಸವು ನಿನ್ನೊಡನೆ ನುಡಿಯಲಿಲ್ಲವೆಂದು ತೋರುತ್ತದೆ. ಇಲ್ಲವಾದರೆ ನಿನ್ನಂತಹ ದಯಾಳುವು ಇಂತಹ ಸ್ತ್ರೀವಧೆಯ ಕಾರ್ಯಕ್ಕೆ ಎಂದಿಗೂ ಕೈಯಿಕ್ಕುತ್ತಿರಲಿಲ್ಲ. ನೀನು ಮುಖದಲ್ಲಿ ಚಂದ್ರನನ್ನೂ, ರೂಪದಲ್ಲಿ ಮನ್ಮಥನನ್ನೂ ಗೆದ್ದಿರುವುದರಿಂದ ಆ ಸೇಡನ್ನು ಅವರು ಈಕೆಯ ಮೇಲೆ ತೀರಿಸಿಕೊಳ್ಳಬೇಕೆಂದಿರುವರು. ದೇವತೆಗಳ ಸಂಕಲ್ಪವು ಎಂದಿಗೂ ಅಮೋಘವಾದಕಾರಣ ಅವರ ಇಚ್ಛೆಯಂತೆಯೇ ನಡೆಯಲಿ. ನಿನ್ನ ಕೈಯಲ್ಲಿರುವ ಬಾಣಗಳನ್ನು ಮನ್ಮಥನಿಗೆ ಕೊಡು. ಆತನು ತನ್ನ ಕುಸುಮ ಬಾಣಗಳನ್ನು ಚೆಲ್ಲಿಬಿಟ್ಟು ನೀನು ಕೊಟ್ಟ ಆಯುಧಗಳಿಂದಲೇ ಈಕೆಯನ್ನು ಕೊಂದುಬಿಡಲಿ. ಇವಳು ನಿನ್ನನ್ನೇ ಧ್ಯಾನಿಸುತ್ತ ಪ್ರಾಣಬಿಟ್ಟು ಮುಂದಿನ ಜನ್ಮದಲ್ಲಿ ನೀನೇ ಆಗಿ ಆ ದುಷ್ಟ ಮನ್ಮಥ

ನನ್ನು ಗೆಲ್ಲಬೇಕೆಂದಿರುವನು. ನೀನು ಹೀಗೆ ಕೇಳಬಹುದು. ದೇವತೆಗಳನ್ನು ವೇದಗಳೂ ಹೊಗಳುತ್ತವಷ್ಟೆ ಎಂದು. ಆದರೆ ಆ ಹೊಗಳಿಕೆಯಿಂದ ಈಕೆಗೆ ಇರುವ ಉಪಯೋಗವೇನು? ನಿನ್ನ ಪಾದಪದ್ಮದಲ್ಲಿಯೇ ಮಗ್ನವಾದ ಈಕೆಯ ಮನಸ್ಸಿಗೆ ಆ ವೇದಗಳಿಂದಾದರೂ ಉಪಯೋಗವೇನು? ಜಲದಲ್ಲಿ ಇಳಿದು ಸ್ನಾನಮಾಡತಕ್ಕವರು ಮಾಡತಕ್ಕ ಸೂರ್ಯ ಪ್ರಾರ್ಥನೆಯಿಂದ ಕುಮುದಗಳಿಗೆ ಆನಂದವಾಗಬಹುದೇ? ಮಹಾರಾಜ! ಶರಣಾಗತರನ್ನು ವಜ್ರಾಯುಧ ದಿಂದಾದರೂ ರಕ್ಷಿಸತಕ್ಕುದು ನಿನ್ನಂತಹ ಧನುರ್ಧಾರಿಗಳ ಧರ್ಮವಾಗಿರುವಲ್ಲಿ ವಿಯೋಗ ದುಃಖದಿಂದ ಪರಿತಪಿಸತಕ್ಕ ಒಬ್ಬ ಅಬಲೆಯನ್ನು ರಕ್ಷಿಸಲಾರೆಯಾ? ಸ್ವಯಂವರದ ವೇಳೆ ಈಕೆಯು ನಿನ್ನನ್ನೇ ವರಿಸುವಳು. ಇದರಲ್ಲಿ ನಿನ್ನದೇನೂ ಅಪರಾಧವಿರದು. ಒಂದು ವೇಳೆ ದೇವತೆಗಳು ಅದನ್ನು ಅಪರಾಧವಾಗಿ ಎಣಿಸುವರೆಂದು ಭಯಪಡುವೆಯಾದರೆ ಯಜ್ಞಾದಿಗಳಿಂದ ಅವರನ್ನು ತೃಪ್ತಿಪಡಿಸಬಹುದು. ಆಗ ನಿನ್ನ ಅಪರಾಧವನ್ನು ಅವರು ಮನಸ್ಸಿನಲ್ಲಿ ಕೂಡ ಎಣಿಸರು. ಒಂದು ವೇಳೆ ದೇವತೆಗಳು ಸ್ವಯಂವರಕ್ಕೆ ಬರಲಿ, ಈಕೆಯು ಅವರ ಅನುಗ್ರಹವನ್ನು ಸಂಪಾದಿಸಿಯೇ ನಿನ್ನನ್ನು ವರಿಸುವಳು. ಇಂದ್ರಾದಿಗಳೇನೂ ಅಷ್ಟು ನಿರ್ದಯರಲ್ಲ.''

ಈ ಪ್ರಕಾರ ಸಖಿಯ ಮುಖದಿಂದ ದಮಯಂತಿಯು ನಳನಿಗೆ ಹೇಳಿಸಿ, ಸ್ವಯಂವರ ಮಂಟಪಕ್ಕೆ ಬರುವಂತೆಯೂ ಅಲ್ಲಿ ದೇವಾದಿಗಳ ಸಮಕ್ಷವಾಗಿ ತನ್ನನ್ನೇ ವರಿಸುವೆನೆಂದೂ ತಿಳಿಸಲು, ನಳನು ಆ ಮಾತುಗಳನ್ನು ಒಪ್ಪಿಕೊಂಡು ಹಿಂದಿರುಗಿದನು. ಇತ್ತ ದಮಯಂತಿಗೆ ನಾಳೆ ನಾನು ನಳನನ್ನು ವರಿಸುವೆನೆಂಬ ಆನಂದದಿಂದ ಕಣ್ಣಿಗೆ ನಿದ್ರೆಯೇ ಬಾರದು. ಎರಡು ಕಪೋಲಗಳಮೇಲೂ ಕಣ್ಣೀರು ಧಾರಾಕಾರವಾಗಿ ಇಳಿಯುತ್ತಿದ್ದಿತು. ರಾತ್ರಿಯು ನಾಲ್ಕು ಜಾವಗಳುಳ್ಳದಾದರೂ ಬ್ರಹ್ಮನು ಆಕೆಯ ಮೇಲಿನ ದಯೆಯಿಂದ ಅದನ್ನು ತ್ರಿಯಾಮವಾಗಿ ಮಾಡಿದನೋ ಎಂಬಂತೆ ಮುಂದೆ ರಾತ್ರಿಗೆ ತ್ರಿಯಾಮವೆಂದೇ ರೂಢಿಯಾಗಿ ಹೆಸರಾಯಿತು. ಆ ಕಡೆ ನಳನು ಇಂದ್ರಾದಿಗಳ ಬಳಿಗೆ ಹೋಗಿ ತಾನು ದಮಯಂತಿಯ ಬಳಿಗೆ ಹೋದ ವೃತ್ತಾಂತವನ್ನೆಲ್ಲ ವಿವರವಾಗಿ ತಿಳಿಸಿದನು. ತ್ರಿಭುವನದಲ್ಲಿಯೂ ನಡೆಯತಕ್ಕ ಸಮಸ್ತ ವೃತ್ತಾಂತವನ್ನೂ ಪ್ರತ್ಯಕ್ಷವಾಗಿ ತಿಳಿಯಬಲ್ಲ ಇಂದ್ರಾದಿಗಳು ನಳನ ಬಾಯಿಂದ ಪುನರ್ವೃತ್ತಾಂತವನ್ನೂ ಕೇಳಿ, ತಮ್ಮ ಪ್ರಾರ್ಥನದ ಅಲಕ್ಷ್ಯಕ್ಕಾಗಿ ಮನಸ್ಸಿನಲ್ಲಿ ಬೇಸರಗೊಂಡರು.

ಇಲ್ಲಿಗೆ ನೈಷಧೀಯ ಚರಿತೆಯೊಳಗಣ ಅಷ್ಟಮ ಸರ್ಗವು ಮುಗಿದುದು.

ನವಮ ಸರ್ಗವು

ಇತ್ತ ಕುಂಡಿನಪುರಿಯಲ್ಲಿ ಸ್ವಯಂವರದ ಸನ್ನಾಹವೆಲ್ಲವೂ ಸಿದ್ಧವಾಯಿತು. ಆಗ ಕುಲೀನರಾಗಿಯೂ, ಶಸ್ತ್ರಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಸಮರ್ಥರಾಗಿಯೂ, ಮನ್ಮಥನಂತೆ ರೂಪ ಸಂಪತ್ತುಳ್ಳವರಾಗಿಯೂ, ಕುಬೇರನಂತೆ ಧನಿಕ

ರಾಗಿಯೇ ಇದ್ದ ಎಷ್ಟೋ ಮಂದಿ ರಾಜಕುಮಾರರು ಸ್ವಯಂವರ ಮಂಟಪವನ್ನು ಕುರಿತು ಬಂದರು. ಕೆಲವರು ತಮ್ಮ ಸ್ವರೂಪಾದಿಗಳಿಂದ ದಮಯಂತಿಯನ್ನು ವರಿಸುವುದಕ್ಕಾಗಿಯೂ, ಅಂತಹ ಸ್ವರೂಪವಿಲ್ಲದವರು ಬಲಾತ್ಕಾರದಿಂದ ಆಕೆಯನ್ನು ಅಪಹರಿಸುವುದಕ್ಕಾಗಿಯೂ, ನಿಸ್ಪೃಹರಾದ ಕೆಲವರು ಆ ಸ್ವಯಂವರ ಮಹೋತ್ಸವವನ್ನು ನೋಡುವುದಕ್ಕಾಗಿಯೂ, ಉಳಿದವರಲ್ಲಿ ಕೆಲವರು ಸ್ವಯಂವರಕ್ಕೆ ಬರುತ್ತಿರುವ ರಾಜಕುಮಾರರನ್ನು ಸೇವಿಸುತ್ತಲೂ ಬಂದುದರಿಂದ ದಿಕ್ಕುಗಳೆಲ್ಲವೂ ಹಾಳುಬಿದ್ದಂತೆ ತೋರುತ್ತಿದ್ದಿತು. ಜನಸಂಬಾಧೆಯಿಂದ ಬಳಲುತ್ತಿದ್ದ ದಿಕ್ಕುಗಳಿಗೆ ಈಗ ವಿಶ್ರಾಂತಿ ದೊರೆತಂತಾಯಿತು. ಯಾರು ಮೊತ್ತಮೊದಲು ಕುಂಡಿನವನ್ನು ಸೇರುವರೋ ಅವರು ದಮಯಂತಿಯನ್ನು ವರಿಸುವರು ಎಂಬ ಬುದ್ಧಿಯಿಂದ ಅರಸರೆಲ್ಲರೂ ತಾನು ಮುಂದೆ ತಾನು ಮುಂದೆ ಎಂದು ಬರುತ್ತಿದ್ದರು. ಹೀಗೆ ಬರುತ್ತಿರುವವರಲ್ಲಿ ಒಬ್ಬ ರಾಜನಿಗೆ ಮುಂದುವರಿಸಲು ಮುಂದಿರುವ ಜನರಿಂದ ತಡೆಯಾಯಿತು; ಹಿಂದಿನ ಜನರು ತನ್ನನ್ನು ಬಹಳವಾಗಿ ಒತ್ತುತ್ತಿರಲು ತೈಲಯಂತ್ರದೊಳಗಿನ ಸಾಸುವೆಯಂತೆ ನಜ್ಜುಗುಜ್ಜಾಗಿ ಮಾರ್ಗದಲ್ಲಿಯೇ ಇಂತಹ ಸ್ಥಿತಿಗೆ ಬಂದ ತನಗೆ ಕನ್ಯೆಯು ಲಭ್ಯವಾಗುವುದು ಅಸಾಧ್ಯವೆಂದೇ ಎಣಿಸಿಕೊಂಡನು. ಕುಂಡಿನಪುರಕ್ಕೆ ಸಮೀಪವಾಗುತ್ತ ಬಂದಂತೆ ಜನಸಮ್ಮರ್ದವು ಹೆಚ್ಚುತ್ತ ಬಂದಿತು. ಇದರಿಂದ ರಾಜಕುಮಾರರ ಚಲನವು ಮಂದವಾಗಲು, ವಿದರ್ಭ ನಗರದ ರಾಜಭವನದ ಮೇಲೆ ತೂಗುತ್ತಿದ್ದ ಪತಾಕೆಗಳು ಗಾಳಿಯಿಂದ ಅಲ್ಲಾಡುತ್ತ ಹಿಂದೆ ಬಿದ್ದ ರಾಜಕುಮಾರರನ್ನು 'ಬೇಗ ಬನ್ನಿ, ಬೇಗ ಬನ್ನಿ' ಎಂದು ಕರೆಯುತ್ತಿದ್ದುವೋ ಎಂಬಂತೆ ತೋರುತ್ತಿದ್ದಿತು. ಬೇರೆಬೇರೆ ದಿಕ್ಕುಗಳಿಂದ ರಾಜ ಸಮೂಹವು ಕುಂಡಿನ ನಗರದ ಕಡೆಗೆ ಬರುತ್ತಿರುವಾಗ ಅವರ ಪಾದ ಹತಿಯಿಂದ ಎದ್ದ ಧೂಳು ದಿಕ್ಕುಗಳನ್ನು ಧೂಸರ ವರ್ಣವಾಗಿ ಮಾಡಲು ಆ ದಿಕ್ಕುಗಳೆಲ್ಲವೂ ಪತಿಯನ್ನಗಲಿದ ಸತಿಯಂತೆ ಮಲಿನವಾಗಿ ಕಾಣಿಸುತ್ತಿದ್ದುವು. ಇಂದ್ರ, ಅಗ್ನಿ, ಯಮ, ವರುಣರೆಂಬ ದಿಕ್ಪಾಲರೂ ಕೂಡ ಆ ದಮಯಂತಿಯ ಸೌಂದರ್ಯಾದಿ ಗುಣಗಳಿಂದ ಆಕರ್ಷಿತರಾಗಿ ಕುಂಡಿನ ನಗರಕ್ಕೆ ಬಂದರು. ಭೀಮರಾಜನ ಪುರೋಹಿತನು ಆ ಸ್ವಯಂವರದ ವೇಳೆ ರಕ್ಷೋಘ್ನ ಮಂತ್ರದ ಮೂಲಕ ಕುಂಡಿನ ನಗರವನ್ನು ರಾಕ್ಷಸರು ಪ್ರವೇಶಿಸದಂತೆ ತಡೆದಿರಲು ನಿರೃತಿ ಮೊದಲಾದ ರಕ್ಕಸರ ಪ್ರವೇಶವೇ ಇಲ್ಲದಂತಾಯಿತು. ವಾಯುವಿಗೆ ಕೂಡ ಆ ವಿವಾಹಕ್ಕೆ ಬರಲು ಸಾಧ್ಯವಾಗಲಿಲ್ಲ. ಆತನ ವಾಹನವಾದ ಮೃಗವು ದಮಯಂತಿಯ ನಯನಾರವಿಂದಗಳಿಂದ ಸೇವಿಸಲ್ಪಟ್ಟು ಆ ಕಡೆಗೆ ತಿರುಗಲಿಕ್ಕೆ ನಾಚಿಕೊಂಡುದರಿಂದ ಮಾರುತನಿಗೂ ಕುಂಡಿನಪುರಿಯ ಪ್ರವೇಶವಿಲ್ಲದಂತಾಯಿತು. ನಿರೃತಿ ವಾಯು ಇವರ ಅವಸ್ಥೆಯು ಹೀಗಾದರೂ ಶ್ರುತವಿತ್ತಾದಿಗಳಲ್ಲಿ ಸಂಪನ್ನನಾದ ಕುಬೇರನೇಕೆ ಸ್ವಯಂವರಕ್ಕೆ ತೆರಳಲಿಲ್ಲವೆಂದರೆ: ಮನ್ಮಥನು ಕುಲ, ವಿತ್ತ, ಗುಣ, ದ್ರವ್ಯ, ವಿದ್ಯಾದಿಗಳನ್ನು ಬಯಸತಕ್ಕವನಲ್ಲ; ಅವನು ಬಯಸುವುದೆಂದರೆ ರೂಪವನ್ನು ಮಾತ್ರ. ಹೀಗಿರುತ್ತ ಕುಬೇರನು ತನ್ನ

ಕಲ್ಪಿತ ರೂಪವನ್ನು ಸ್ಫಟಿಕಮಯವಾದ ಕೈಲಾಸದಲ್ಲಿ ಪ್ರತಿಬಿಂಬ ರೂಪದಿಂದ ಕಂಡ ಮೇಲೆ ಲೋಕೈಕ ಸುಂದರಿಯಾದ ಆ ದಮಯಂತಿಯಲ್ಲಿ ಆಶೆಯಿಟ್ಟು ಬರಲಾಪನೆ? ಈಶ್ವರನಿಗಂತೂ ಸ್ವಯಂವರಕ್ಕೆ ಬರಲು ಕಾರಣವೇ ಉಳಿಯಲಿಲ್ಲ. ಅವನ ದೇಹದ ಅರ್ಧವನ್ನು ಪಾರ್ವತಿಯು ಆಕ್ರಮಿಸಿರುವಳು. ಆಕೆಯು ಸಪತ್ನೀ ಮತ್ಸರದಿಂದ ಹೊರಡದಿರಲು ಉಳಿದ ಅರ್ಧವು ಚಲಿಸಿ ಕುಂಡಿನಪುರಿಗೆ ಬರುವುದಾದರೂ ಹೇಗೆ? ಲೋಕದಲ್ಲಿ ಪಿತಾಮಹನು ಮೊಮ್ಮಗಳನ್ನು ಮದುವೆಯಾದನು ಎಂಬ ವಾರ್ತೆಯು ಕೂಡ ಇಲ್ಲದ ಕಾರಣ, ಊರ್ಧ್ವ ದಿಕ್ಪತಿಯಾದ ಬ್ರಹ್ಮನೊಬ್ಬನೂ ಈ ವಿವಾಹಕ್ಕೆ ಬರಲಿಲ್ಲ. ಇಂದ್ರಾದಿ ನಾಲ್ವರು ದಿಕ್ಪಾಲರು ಮಾತ್ರ ತಂತಮ್ಮ ದೂತಿಗಳ ಮುಖದಿಂದ ದಮಯಂತಿಯು ತಮ್ಮನ್ನು ತಿರಸ್ಕರಿಸಿದ ವಾರ್ತೆಯನ್ನು ಕೇಳಿ ಬೇಸರಗೊಂಡು ಮಂದಗತಿಯೂ ವಿವರ್ಣಮುಖವೂ ಉಳ್ಳವರಾಗಿ ಮೆಲ್ಲಮೆಲ್ಲಗೆ ಆ ರಾಜಸಮಾಜವನ್ನು ಬಂದು ಸೇರುತ್ತ, ಆಕೆಯು ತಮ್ಮಲ್ಲೊಬ್ಬನನ್ನು ನಳನೆಂಬ ಭ್ರಾಂತಿಯಿಂದಾದರೂ ವರಿಸಲಿ ಎಂದು ಎಣಿಸಿ, ತಮ್ಮ ನಿಜಸ್ವರೂಪವನ್ನು ಮರೆಯಿಸಿ ನಳವೇಷವನ್ನು ಧರಿಸಿ ಸ್ವಯಂವರ ಮಂಟಪಕ್ಕೆ ಬಂದು ಕುಳಿತರು. ಆದರೆ ಮಾಡುವುದೇನು? ಈ ಇಂದ್ರಾದಿಗಳು ಎಷ್ಟು ಸಾಹಸವನ್ನು ಮಾಡಿದರೂ ನಳನಂತೆಯೇ ರೂಪಸಿದ್ಧಿಯನ್ನುಂಟುಮಾಡಿಕೊಳ್ಳುವುದು ಇವರಿಂದಾಗಲಿಲ್ಲ. ಸ್ವಾಭಾವಿಕಕ್ಕೂ ಕೃತ್ರಿಮಕ್ಕೂ ವ್ಯತ್ಯಾಸ ಇದೆ ಎಂಬುದನ್ನು ಇದರಿಂದ ಸಿದ್ಧಮಾಡಿಕೊಟ್ಟರು. ಒಮ್ಮೆ ಇಂದ್ರಾದಿಗಳು ತಮ್ಮ ಮುಖವನ್ನು ಚಂದ್ರನಂತೆ ಮಾರ್ಪಡಿಸಿಕೊಂಡರು. ಇನ್ನೊಮ್ಮೆ ಅರಳಿದ ಕಮಲದಂತೆ ವ್ಯತ್ಯಾಸಗೊಳಿಸಿದರು. ತಿರುತಿರುಗಿ ದರ್ಪಣದಲ್ಲಿ ನೋಡುತ್ತಿದ್ದರೂ ನಳಸ್ವರೂಪವನ್ನು ಹೊಂದದುದಕ್ಕಾಗಿ ತಮ್ಮನ್ನು ನಿಂದಿಸಿಕೊಂಡರು. ನಳಾನನಕ್ಕೆ ಸಮಾನವಾದ ಮುಖವನ್ನು ಪಡೆಯುವುದು ಇವರಿಂದ ಅಸಾಧ್ಯವಾದುದರಿಂದಲೇ ಆ ದೇವತೆಗಳಿಗೆಲ್ಲ ಮುಂದೆ ಅನಲಾನನರೆಂಬ ಹೆಸರುಂಟಾಯಿತು.

ಈಗ ಇಂದ್ರಾದಿ ದಿಕ್ಪಾಲಕರು ತಮ್ಮ ಆಕೃತಿಗಳನ್ನು ನಳನ ಆಕಾರದಂತೆ ಮಾರ್ಪಡಿಸಿಕೊಂಡರು. ಆದರೆ ಮಾಡತಕ್ಕುದೇನು? ಅದು ನಳನ ಆಕೃತಿಗೆ ಅನುಕಲ್ಪವಾಯಿತಲ್ಲದೆ ಪ್ರಥಮಕಲ್ಪವಾಗಲಿಲ್ಲ. ಸ್ವಯಂವರಾರ್ಥವಾಗಿ ರಾಜರೆಲ್ಲರೂ ಬಂದು ಕುಂಡಿನಪುರವನ್ನು ಸೇರಿದರು. ನಳನಿಗೂ ಇತರ ರಾಜರಿಗೂ ಇರುವ ವ್ಯತ್ಯಾಸವನ್ನು ದಮಯಂತಿಯು ಪ್ರತ್ಯಕ್ಷ ಕಣ್ಣಿಂದ ನೋಡಿ ತಿಳಿದುಕೊಳ್ಳಲಿ ಎಂಬುದಕ್ಕಾಗಿಯೇ ಬ್ರಹ್ಮನು ಈ ರಾಜರನ್ನು ಇಲ್ಲಿಗೆ ಕರೆಯಿಸಿದನೋ ಎಂದು ಪ್ರೇಕ್ಷಕರಲ್ಲಿ ಕೆಲಕೆಲವರು ಎಣಿಸುತ್ತಿದ್ದರು. ಇಂದ್ರಾದಿಗಳಿಗಿಂತ ನಳನು ಹೆಚ್ಚಿನವನು ಎಂದು ವ್ಯಕ್ತವಾಗುವುದಕ್ಕಾಗಿಯೇ ಅವನನ್ನು ಇಲ್ಲಿಗೆ ಬರಮಾಡಿಸಿದನು ಎಂದು ಜ್ಞಾನಿಗಳು ಎಣಿಸುತ್ತಿದ್ದರು. ಈಗ ನಳನು ಬರುವುದಕ್ಕೆ ಮೊದಲೇ ಇಂದ್ರಾದಿಗಳು ಬಂದು ನಳವೇಷದಲ್ಲಿಯೇ ಸಭೆಯಲ್ಲಿ ಕುಳಿತರು. ದೇಶಾಂತರವಾಸಿಗಳಾದ ಎಷ್ಟೋ ಮಂದಿ ರಾಜಕುಮಾರರು ಬಂದರು. ಬಂದವರ

ನ್ನೆಲ್ಲ ಕುಂಡಿನೇಶ್ವರನಾದ ಭೀಮಭೂಪಾಲಕನು ಸಂತೋಷದಿಂದ ಸತ್ಕರಿಸಿದನು. ಅರ್ಘ್ಯಾದಿಗಳಿಂದಲೂ ಗಂಧಮಾಲ್ಯಾದಿಗಳಿಂದಲೂ ವಿನಯವಾದಿಗಳಿಂದಲೂ ಅವರಿಗೆಲ್ಲ ತೃಪ್ತಿಯುಂಟಾಗುವಂತೆ ಮಾಡಿದನು. ಆ ಕುಂಡಿನಪುರಿಯು ಅಷ್ಟು ವಿಸ್ತಾರವಾಗಿರಲಿಲ್ಲ. ಅಲ್ಲಿ ಸೇರಿದ ಜನರಾದರೋ ಲೋಕದ ವಿಸ್ತಾರಕಷ್ಟು ಇದ್ದರು. ಇಂತಹ ಜನಸಮೂಹವು ಅಲ್ಲಿ ಸೇರಿದುದೆಂಬುದು ಅಗಸ್ತ್ಯನು ತನ್ನ ಅಂಗೈಯಲ್ಲಿ ಸಮುದ್ರವನ್ನು ತುಂಬಿಸಿಕೊಂಡಂತೆಯೂ, ಮಹಾವಿಷ್ಣುವಿನ ಜಠರದಲ್ಲಿ ಲೋಕಗಳಿದ್ದಂತೆಯೂ ಅತ್ಯದ್ಭುತವಾಗಿ ತೋರಿತು. ಕುಂಡಿನನಗರವಾಸಿಗಳು ಪ್ರತಿ ಗೃಹದ ದ್ವಾರಗಳನ್ನೂ ಮಾರ್ಗಗಳನ್ನೂ ಗೃಹಗಳನ್ನೂ ಕೂಡ ನಗರದಲ್ಲಿ ನಡೆಯುವ ಉತ್ಸವಕ್ಕಾಗಿ ಚಿತ್ರವಿಚಿತ್ರವಾಗಿ ಅಲಂಕರಿಸಿದರು. ಅಲ್ಲಿಗೆ ಬಂದು ಸೇರಿದ ರಾಜರ ಆಭರಣಗಳ ಕಾಂತಿಯಿಂದ ಆಕಾಶವು ವಿಚಿತ್ರವರ್ಣವಾಗಿ ತೋರತೊಡಗಿತು. ರಾಜರಿಗೂ ರಾಜಪರಿಚಾರಕರಿಗೂ ಯಾವ ಭೇದವೂ ತೋರುತ್ತಿರಲಿಲ್ಲವಾದ ಕಾರಣ ರಾಜರಾರು ಪರಿಚಾರಕರಾರು ಎಂದು ತಿಳಿಯುವುದಕ್ಕೆ ಸ್ವಲ್ಪ ವಿಚಾರಶಕ್ತಿಯೇ ಬೇಕಿದ್ದಿತು. ಆ ಸಭೆಯಲ್ಲಿ ಸೇರಿದ್ದ ದೇವತೆಗಳಿಗೂ ರಾಜರಿಗೂ ವ್ಯತ್ಯಾಸವು ತೋರಿಬರುತ್ತಿದ್ದಿಲ್ಲ. ಸ್ವಭಾವಿಕವಾಗಿಯೇ ದೇವತೆಗಳು ಮೈಬೆವರದವರು, ಕಣ್ಮುಚ್ಚದವರು, ಮ್ಲಾನವಾಗದ ಹೂಮಾಲೆಯುಳ್ಳವರು; ರಾಜರು ಕೂಡ ಚಾಮರಗಳ ವಾಯುಸೇವನೆಯಿಂದ ಮೈಬೆವರದೆಯೂ, ವಿಚಿತ್ರ ವಸ್ತುಗಳ ಪರೀಕ್ಷೆಯಿಂದ ಕಣ್ಮುಚ್ಚದೆಯೂ, ಆತಪತ್ರಗಳ ಕೆಳಗೆ ಬರುತ್ತಿದ್ದುದರಿಂದ ಹೂಮಾಲೆ ಬಾಡದೆಯೂ ದೇವತೆಗಳನ್ನೇ ಹೋಲುತ್ತಿದ್ದರು. ಅದಲ್ಲದೆ ದೇಶಾಂತರವಾಸಿಗಳಾದ ರಾಜರೂ ಮಹಾರಾಜರೂ ಬರುತ್ತಿರುವಾಗ ಒಬ್ಬರ ಭಾಷೆಯು ಒಬ್ಬರಿಗೆ ತಿಳಿಯಬೇಕೆಂಬ ಉದ್ದೇಶದಿಂದ ಸಂಸ್ಕೃತದಿಂದಲೇ ಮಾತಾಡುತ್ತಿದ್ದರು. ಹೀಗೆ ಇವರ ಭಾಷೆಯೂ ದೇವವಾಣಿಯಾಗಿದ್ದುದರಿಂದ ಸಮಾಜದಲ್ಲಿ ಬರುತ್ತಿರುವ ಜನಗಳಿಗೆ ಇವರಲ್ಲಿ ಮನುಷ್ಯರು ಯಾರು ದೇವತೆಗಳು ಯಾರು ಎಂಬುದು ಗೊತ್ತಾಗಲಿಲ್ಲ.

ರಾಜರೆಲ್ಲರೂ ಕುಂಡಿನಪುರಿಯಲ್ಲಿ ಸೇರಿದರು. ಸ್ವಯಂವರದ ದಿನ ಸೂರ್ಯೋದಯವಾಯಿತು. ಆಗ ಭೀಮಭೂಪಾಲನು ಸ್ವಯಂವರಕ್ಕಾಗಿ ಆಮಂತ್ರಿಸಿದ್ದ ರಾಜಕುಮಾರರನ್ನೆಲ್ಲ ಸ್ವಯಂವರ ಮಂಟಪಕ್ಕೆ ಬರುವಂತೆ ಹೇಳಿ ಕಳುಹಿಸಿದನು; ರಾಜಕುಮಾರರೆಲ್ಲ ವಿಚಿತ್ರವಾದ ವೇಷಭೂಷಣಗಳನ್ನು ತೊಟ್ಟು ಸ್ವಯಂವರ ಮಂಟಪವನ್ನು ಪ್ರವೇಶಿಸಿದರು. ಇಂದ್ರಾದಿಗಳೂ ಬಂದರು. ನಳನೂ ಬಂದನು. ಅಂಗರಾಗ ಶೋಭೆಯಿಂದ ನಳನು ಆ ಸಭಾಮಂಟಪವನ್ನು ಪ್ರವೇಶಿಸುತ್ತಲೇ, ಚಂದ್ರೋದಯವಾಗುತ್ತಲೇ ನಕ್ಷತ್ರಗಳ ಕಾಂತಿಯು ಮಸುಳುವಂತೆ ಅಲ್ಲಿರುವ ರಾಜಸಮೂಹದ ಕಾಂತಿಯೆಲ್ಲವೂ ಮಂದವಾಯಿತು. ಅವರು ಮೊದಲು ನಳನನ್ನು ಆಶ್ಚರ್ಯದಿಂದ ನೋಡುತ್ತಿದ್ದರು. ಆಮೇಲೆ ಆತನಲ್ಲಿ ಈರ್ಷ್ಯೆಯುಳ್ಳವರಾಗಿ ಕೋಣದೃಷ್ಟಿಯಿಂದ ನೋಡತೊಡಗಿದರು. ಪರರ ಶುಭವನ್ನು ಕಂಡು

ಸಹಿಸಲಾರದ ಮತ್ಸರಿಗಳು ಕೆಲವರು ಇವನೇನು ಭೂಲೋಕದ ಚಂದ್ರನೇ? ಎಂದರು. ಕೆಲವರು ಹಾಗಲ್ಲ ಇವನು ದ್ವಿತೀಯ ಮನ್ಮಥನೆಂದರು. ಕೆಲವರು ಇವನು ಮೂರನೆಯ ಅಶ್ವಿನೀ ಕುಮಾರನಾಗಿರಬೇಕೆಂದು ಮೆಲ್ಲಗೆ ನುಡಿದರು. ಈ ಪ್ರಕಾರ ಒಬ್ಬೊಬ್ಬರು ಒಂದೊಂದು ವಿಧವಾಗಿ ಸ್ತುತಿಸುವಂತೆ ತೋರುತ್ತ ನಿಂದಿಸುತ್ತಿದ್ದರು. ಕೆಲಕೆಲವರು ಈತನು ಚಂದ್ರನಿಗಿಂತ ಮೊದಲೇ ಹುಟ್ಟಿರಬೇಕು, ಅಥವಾ ದ್ವಿತೀಯ ಕಾಮನಾಗಿರಬೇಕು, ಎಂದು ತಿರುತಿರುಗಿ ಹೇಳುತ್ತಿದ್ದರು. ಆಗ ಕೆಲವರು ಎಲೈ! ಏನು ಹೇಳುತ್ತೀರಿ. ಆ ಕಡೆ ನೋಡಿರಿ. ಇನ್ನೂ ಮೂರು ನಾಲ್ಕು ಮಂದಿ ಇವನಂತೆಯೇ ಸ್ಫುರದ್ರೂಪಿಗಳಾಗಿಲ್ಲವೇ? ಎಂದು ನಳ ವೇಷಧಾರಿಗಳಾದ ಇಂದ್ರಾದಿಗಳನ್ನು ತೋರಿಸಿ ತಕ್ಕಮಟ್ಟಿಗೆ ಸಮಾಧಾನವನ್ನುಂಟುಮಾಡಿದರು. ನಿರ್ದೋಷವಾದ ಪದಾರ್ಥಗಳನ್ನು ಕುರಿತು ದೋಷವನ್ನಾರೋಪಿಸುವುದೇ ದುರ್ಜನರ ಹೆಗ್ಗುರುತು. ಹೀಗೆ ಆ ಸಭೆಯಲ್ಲಿ ಸಾಮಾನ್ಯರೆಲ್ಲರೂ ನಳನನ್ನು ದೂಷಿಸುವ ನೆವದಿಂದ ಹೊಗಳುತ್ತಿರಲು ಇಂದ್ರಾದಿಗಳು ಇವನು ಮನುಷ್ಯನಾಗಿ ಹುಟ್ಟಿದುದೇ ದೂಷ್ಯವೆಂದು ಹೊಗಳಿದರು.

ನಳನು ಸುತ್ತಲೂ ನೋಡಿದನು; ಆಗ ತನ್ನ ಬಳಿಯಲ್ಲಿಯೇ ಕುಳಿತಿರುವ ತನ್ನಂತೆಯೇ ಇದ್ದ ಇಂದ್ರಾದಿ ಲೋಕಪಾಲಕರನ್ನು ಕಂಡು: ಮರ್ಯಾದೆಯಿಂದ, “ಪೂಜ್ಯರೇ! ನೀವು ಯಾರು? ಅಶ್ವಿನೀಕುಮಾರರೇ? ಇಲಾದೇವಿಯಲ್ಲಿ ಹುಟ್ಟಿದ ಪುರೂರವ ಮಹಾರಾಜನೇ? ದರ್ಪಕನಾದ ಮನ್ಮಥನೇ? ನಿಮ್ಮ ನಾಲ್ವರ ರೂಪರೇಖೆಗಳನ್ನು ನೋಡುವಾಗ ನನಗೆ ಆ ನಾಲ್ವರ ಸ್ಮರಣೆಯಾಯಿತು” ಎಂದು ನುಡಿಯಲು; ಇಂದ್ರನು—“ಲೋಕಪೂಜ್ಯನೇ! ಹಾಗೆಂದಿಗೂ ಎಣಿಸಬೇಡ. ನಾವು ಇಳೆಯಲ್ಲಿ ಹುಟ್ಟಿದವರೂ ಅಲ್ಲ; ದರ್ಪಕಕೋಟಿಗೆ ಸೇರತಕ್ಕವರೂ ಅಲ್ಲ. ನಾವು ಅದರ್ಪಕರು. ನಾಸತ್ಯರಲ್ಲದವರು. ಆ ಇಳಾಪುತ್ರನಿಗೂ ಕಾಮದೇವನಿಗೂ ಬೇರೆಯಾದವರೆಂದು ತಿಳಿ. ಇಂತಹ ನೀವು ಇಲ್ಲಿಗೆ ಏಕೆ ಬಂದಿರೆಂದು ಕೇಳುವೆಯಾದರೆ ಹೇಳುತ್ತೇನೆ ಕೇಳು. ಈ ಬಹು ಸಮಾಜದಲ್ಲಿ ಭ್ರಮಿಸುತ್ತಿರುವ ದಮಯಂತಿಯು ನಮ್ಮಲ್ಲೊಬ್ಬನನ್ನು ವರಿಸಿದರೂ ವರಿಸಬಹುದೆಂದು ಎಣಿಸಿ ಇಲ್ಲಿಗೆ ಬಂದೆವು. ನಿನ್ನ ನಾವು ರೂಪವನ್ನರಿತವರಾದರೂ ಮುಗ್ಧಭಾವದಿಂದ ಆಶಾಪತಿತರಾದ ನಮ್ಮನ್ನು ಏನು ಕೇಳುವೆ? ನಮ್ಮ ವಿಬುಧತ್ವಕ್ಕೆ ಧಿಕ್ಕಾರವಿರಲಿ.

ಇಂದ್ರಾದಿಗಳು ಆಡಿದ ಈ ವ್ಯಾಜೋಕ್ತಿಯು ನಳನ ಕಿವಿಗೆ ಮುಟ್ಟಿತು; ಆದರೂ ಆತನು ತನ್ನ ಉದ್ದೇಶವು ಕೈಗೂಡುವಂತೆ ದೇವತಾ ಪ್ರಾರ್ಥನೆಯಲ್ಲಿಯೇ ಇದ್ದುದರಿಂದ ಇವರ ಮಾತಿನ ಗೂಢಭಾವವನ್ನು ಗ್ರಹಿಸಲಿಲ್ಲ. ಹೊರಗೆ ತೋರುವ ಅರ್ಥವು ಮಾತ್ರ ಇವನ ಮನಸ್ಸಿಗೆ ಹೊಳೆಯಿತು. ಲೋಕದಲ್ಲಿ ಯಾವನು ಸಂಘರ್ಷ ಸ್ಪರ್ಧೆಯಿಂದ ಅನ್ಯನನ್ನು ಗೆಲ್ಲಬೇಕೆಂದು ಎಣಿಸುವನೋ ಅವನು ತನ್ನ ಕಾರ್ಯದಿಂದಲೇ ತನ್ನ ಎದುರಾಳಿಯ ಉತ್ಕರ್ಷವನ್ನು ಒಪ್ಪಿಕೊಂಡಂತಾಗುವುದು.

ಈ ಸ್ವಯಂವರ ಮಹೋತ್ಸವವನ್ನು ನೋಡುವುದಕ್ಕಾಗಿ ಮಹಾವಿಷ್ಣುವು ಮಿಂಚಿನೊಡನೆ ಕೂಡಿರುವ ಮೇಘದಂತೆ ಲಕ್ಷ್ಮೀದೇವಿಯೊಡನೆ ಸೇರಿ ಆಕಾಶದಲ್ಲಿ ನಿಂತನು. ನಾಲ್ಮೊಗವುಳ್ಳವನಾದ ಬ್ರಹ್ಮನೂ ಬಂದು ತನ್ನ ಎಂಟು ಕಣ್ಣುಗಳಿಂದ ಎಂಟು ದಿಕ್ಕುಗಳನ್ನು ನೋಡುತ್ತ, ಆ ದಿನ ಜ್ಯೋತಿರ್ಲಿಂಗದ ಅಂತ್ಯವನ್ನು ಕಾಣಲಾರದೆ ಹೋದಂತೆ ಈ ದಿನವೂ ಆ ಜನಸಮೂಹದ ಕೊನೆ ಮೇರೆಯನ್ನು ಕಾಣಲಾರದೆ ಹೋದನು. ದ್ವಾದಶಾತ್ಮಕನಾದ ಸೂರ್ಯನೂ ತನ್ನೊಂದು ರೂಪದಿಂದ ಮೇರುವನ್ನು ಸುತ್ತುತ್ತ, ಇನ್ನೊಂದು ರೂಪವನ್ನು ವಿಷ್ಣುವಿನ ಬಲಗಣ್ಣಿಗೆ ಅರ್ಪಿಸಿಯೂ ಉಳಿದ ಹತ್ತು ರೂಪಗಳಿಂದ ಜನಸಂಪೂರ್ಣವಾದ ದಶದಿಕ್ಕುಗಳನ್ನು ದಿಟ್ಟಿಸತೊಡಗಿದನು. ಚಂದ್ರನಿಗಾದರೋ ಆ ಸ್ವಯಂವರವನ್ನು ನೋಡಲು ಅವಕಾಶವೇ ದೊರೆಯಲಿಲ್ಲ. ಆತನಿಗೆ ಒಂದೆಡೆ ದೇವತಾಭವನವನ್ನು ಸುತ್ತುವರಿಯಬೇಕಿತ್ತು; ಬೇರೊಂದೆಡೆ ಮೇರುವಿನ ಪ್ರದಕ್ಷಿಣವು. ಸಾಲದುದಕ್ಕೆ ವಿಷ್ಣುವಿನ ವಾಮನೇತ್ರವೂ ಚಂದ್ರನೇ. ಇಂತಹ ಚಂದ್ರನಿಗೆ ಸ್ವಯಂವರವನ್ನು ನೋಡುವುದಕ್ಕೆ ಅವಕಾಶವೆಲ್ಲಿದೆ? ಆದರೂ ಆತನು ವಿಷ್ಣುವಿನ ಎಡಗಣ್ಣನ್ನು ಆಶ್ರಯಿಸಿದ್ದುದರಿಂದ ಸ್ವಲ್ಪ ಅವಕಾಶ ದೊರೆಯಿತೆಂದೇ ಹೇಳಬೇಕು. ಕಾಠಕ ಕಾಲಾಪ ಮೊದಲಾದ ಶಾಖೆಗಳಿಂದ ಕೂಡಿ ತ್ರಿವೇದಗಳೆಂಬ ವೃಕ್ಷ ಪಙ್ಕ್ತಿಯುಳ್ಳ ಯಾವ ವಾಲ್ಮೀಕಿಯ ಕಂಠವೆಂಬ ಪಥದ ಮೂಲಕ ಛಂದೋಮಯಿಯಾದ ಸರಸ್ವತಿಯು ಅನಾಯಾಸವಾಗಿ ಸ್ವರ್ಗದಿಂದ ಭೂಮಿಗೆ ಇಳಿದು ಬಂದಳೋ ಅಂತಹ ಆದಿಕವಿಯಾದ ವಾಲ್ಮೀಕಿಯೂ ಆ ಸಭೆಯನ್ನು ಹೊಗಳಿದನು. ಸಭೆಯಲ್ಲಿದ್ದ ವಿದೂಷಕರ ವಿನೋದವಾದ ಮಾತುಗಳನ್ನು ಬೃಹಸ್ಪತಿಯೂ ಹೊಗಳಿದನು. ಆ ವಿದೂಷಕರ ನಾಲಗೆಯು ಸರಸ್ವತಿಯ ಪೀಠವೆಂಬಂತೆ ಸರ್ವರ ಗೌರವಕ್ಕೂ ಪಾತ್ರವಾಯಿತು. ದೈತ್ಯರ ಗುರುವಾದ ಶುಕ್ರಾಚಾರ್ಯನೂ ಸ್ವರ್ಗದಲ್ಲಿ ದಿವ್ಯವಾದ ಪ್ರಬಂಧಗಳ ಮೂಲಕ ಆ ಸಭೆಯನ್ನು ಹೊಗಳಿದನು. ಈ ರಾಜಸಭೆಯನ್ನು ಭೀಮನೃಪಾಲನೇ ಸೇರಿಸಿದುದಲ್ಲ, ದಮಯಂತಿಯೇ ಆಕರ್ಷಿಸಿದುದೂ ಅಲ್ಲ, ಬ್ರಹ್ಮನು ತನ್ನ ಶಿಲ್ಪಕೌಶಲವನ್ನು ತೋರಿಸುವುದಕ್ಕಾಗಿ ಈ ರಾಜಕುಮಾರರನ್ನೆಲ್ಲ ಇಲ್ಲಿ ಸೇರಿಸುವ ಪ್ರಯತ್ನವನ್ನು ಮಾಡಿರಬೇಕು; ಎಂದು ಶುಕ್ರನು ಹೊಗಳಿದನು. ಮನ್ಮಥನು ಏಕಾಂಗನಾಗಿದ್ದ ಪ್ರಯುಕ್ತ ಪರಮೇಶ್ವರನು ತನ್ನ ನೇತ್ರಾಗ್ನಿಯಿಂದ ಅವನನ್ನು ಉರಿಸಿಬಿಟ್ಟನು. ಆದಕಾರಣ ಆ ಮನ್ಮಥನು ಶಿವನ ಭಯವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಹೀಗೆ ಸಾವಿರಾರು ರೂಪಗಳನ್ನು ಧರಿಸಿದನೋ ಎಂಬಂತೆ ಅಲ್ಲಿ ಸೇರಿದ್ದ ರಾಜರೆಲ್ಲ ಮನ್ಮಥಕಲ್ಪರಾಗಿ ಶೋಭಿಸುತ್ತಿದ್ದರು. ಅವರ ಮುಖಗಳಲ್ಲಿ ಚಂದ್ರಬಿಂಬವನ್ನು ಕರಗಿಸಿ ಕರುವಿಟ್ಟಂತಿದ್ದಿತು. ಸ್ವಯಂ ಆತ್ಮಬೋಧೆಯುಂಟಾದವರಿಗೆ ಇತರ ಬೋಧೆಗಳು ಹೇಗೆ ನಿರುಪಯೋಗವೋ ಹಾಗೆಯೇ ರತ್ನಪ್ರಾಯರಾದ ಈ ಮಹಾರಾಜರಿಗೆ ರತ್ನಾಂತರಗಳಿಂದ ಉಪಯೋಗವಿಲ್ಲವೆಂದು ಕಂಡವರು ಹೇಳುತ್ತಿದ್ದರು. ಈ ಪ್ರಕಾರವಾಗಿ ಈ ಸಭೆಯು ಅನೇಕ ಮಂದಿ ಸುಂದರರಾದ ರಾಜಕುಮಾರರಿಂದ

ಸಮೃದ್ಧವಾಗಿರಲು ಪ್ರೇಕ್ಷಕರ ಮನಸ್ಸಿನಲ್ಲಿ ಒಬ್ಬ ಕಾಮನ ಬಾಧೆಯಿಂದ ಜಗತ್ತಿಗೆ ಯಾವ ಹಾನಿಯೂ ಬರಲಾರದು. ಸಮುದ್ರದಿಂದ ಒಂದು ಬಿಂದು ಬತ್ತಿದ ಮಾತ್ರಕ್ಕೆ ಪೂರ್ಣವಾದ ಆ ಸಾಗರವು ಬತ್ತಿದಂತಾಗುವುದೇ?

ಈ ವಿಧವಾಗಿ ಶೋಭಿಸುತ್ತಿದ್ದ ರಾಜಪುತ್ರರನ್ನೆಲ್ಲ ಭೀಮರಾಜನು ಅವರವರಿಗೆ ತಕ್ಕ ಪೀಠದ ಮೇಲೆ ಕೂಡಿಸಿ ಉಪಚರಿಸುತ್ತಿರಲಾಗಿ ಅವರೆಲ್ಲರೂ ಮೇರು ಪರ್ವತದ ಮೇಲೆ ಕುಳಿತಿರುವ ದೇವತೆಗಳಂತೆ ಶೋಭಿಸುತ್ತಿದ್ದರು. ಆ ರಾಜರನ್ನೂ ಮಹಾರಾಜರನ್ನೂ ಕಾಣುತ್ತ ಭೀಮರಾಜನು ಹೀಗೆ ಚಿಂತಿಸತೊಡಗಿದನು: ಈ ಬಂದಿರುವ ರಾಜಪುತ್ರರ ಕುಲಗೋತ್ರಗಳನ್ನು ವರ್ಣಿಸುವುದೆಂದರೆ ದೇವತೆಗಳಿಗೂ ಅಸಾಧ್ಯವು. ಇಂತಹ ಮಹಾತ್ಮರ ನಾಮ ಗೋತ್ರಗಳನ್ನು ಹೇಗೆ ಬಣ್ಣಿಸಲಿ? ಎಂದು ಚಿಂತಿಸತೊಡಗಿದನು. ಹೀಗೆ ಚಿಂತಿಸುತ್ತ ಚಿಂತಿಸುತ್ತ ಆತನು ಇಷ್ಟಾರ್ಥವನ್ನು ಕೈಗೂಡಿಸುವಲ್ಲಿ ಕಲ್ಪವೃಕ್ಷಗಳ ಕುಲದೇವತೆಯಾದ ಕೃಷ್ಣನನ್ನು ಏಕ ತಾನದಿಂದ ಪ್ರಾರ್ಥಿಸತೊಡಗಿದನು. ಭೀಮರಾಜನ ಪ್ರಾರ್ಥನೆಗೆ ಮೆಚ್ಚಿದ ಮಹಾವಿಷ್ಣುವು ಸರಸ್ವತಿಯನ್ನು ಕರೆದು ಎಲೈ ವಾಣಿಯೇ! ಈ ಭೀಮರಾಜನು ನಡೆಯಿಸುವ ಸ್ವಯಂವರದಲ್ಲಿ ರಾಜ ಸಮೂಹದ ನಾಮ ಗೋತ್ರಗಳನ್ನೂ ಕುಲ ಚರಿತ್ರೆಗಳನ್ನೂ ವಿವರಿಸುವುದಕ್ಕಾಗಿ ನಿನ್ನನ್ನು ನಿಯಮಿಸುತ್ತೇನೆ. ನಿನಗೆ ಇಲ್ಲಿಗೆ ಬಂದಿರುವ ನಾನಾ ದೇಶಗಳ ರಾಜರ ಕುಲ ಶೀಲಗಳೂ ಬಲ ವಿಚಾರಗಳೂ ಚೆನ್ನಾಗಿ ತಿಳಿದಿರುವುವು. ಇದರಿಂದ ನೀನು ಈಗ ಮೂಗಳಾಗದೆ ನಿನ್ನ ವಾಕ್ಚಾತುರ್ಯವನ್ನು ತೋರಿಸು. ಇಂತಹ ಪಂಡಿತ ಸಭೆಯು ಹಿಂದೆ ನಡೆದುದಾಗಲಿ ಮುಂದೆ ನಡೆಯುವುದಾಗಲಿ ಅಸಾಧ್ಯವೇ. ಇಂತಹ ಸಭೆಯಲ್ಲಿ ರಾಜರ ಗುಣ ಸಾಮರ್ಥ್ಯಾದಿ ವರ್ಣನೆಗಳ ಮೂಲಕ ನಿನ್ನ ಪಾಂಡಿತ್ಯವನ್ನು ಪ್ರಕಾಶಪಡಿಸು.

ಈ ಪ್ರಕಾರ ಮಹಾವಿಷ್ಣುವು ಹೇಳಿದ ಆಜ್ಞೆಯನ್ನು ಸರಸ್ವತಿಯು ಕೇಳಿ ಗೀರ್ವಾಣ ಚೂಡಾಮಣಿಗಳ ಘರ್ಷಣದಿಂದ ಉದ್ದಿಹೋಗಿ ಉಳಿದಿರುವ ಚರಣ ಪರಾಗವನ್ನು ಹರಿಯ ಅನುಗ್ರಹರೂಪವಾಗಿ ತನ್ನ ತಲೆಯ ಮೇಲೆ ಧರಿಸಿ ಗಂಧರ್ವ ವಿದ್ಯಾ ಪರಿಣತವಾದ ಕಂಠವೂ, ತ್ರಯೀಭೂತವಾದ ತ್ರಿವಳಿಗಳೂ, ಕವಿತ್ವ ಪೂರ್ಣವಾದ ದೃಷ್ಟಿ ತರಂಗಗಳೂ ಉಳ್ಳ ಆ ಸರಸ್ವತೀ ಬಾಲೆಯು ಆ ಸಭೆಯ ನಡುವೆ ಆಕಾಶದಿಂದ ಇಳಿದಳು. ಇಳಿದವಳೇ ಭೀಮರಾಜನನ್ನು ಕಂಡು:—"ಎಲೈ ರಾಜನೇ! ಇದು ನಿನಗೆ ಆನಂದಪಡುವ ಸಮಯವಲ್ಲದೆ ವಿಷಾದದ ಸಮಯವಲ್ಲ. ಇಲ್ಲಿ ಬಂದು ನೆರೆದಿರುವ ಸಮಸ್ತ ರಾಜಮಂಡಲಿಯ ಗೋತ್ರ ಚರಿತ್ರೆಗಳನ್ನು ನಾನು ವಿವರಿಸಿ ಹೇಳುವೆನು. ನೀನು ಯಾರು? ಎಲ್ಲಿಂದ ಬಂದವಳು ಎಂದು ನೀನು ಸಂಶಯಪಡಬೇಡ. ಯಾವ ಮಹಾಪುರುಷನ ಪಾದಪದ್ಮಗಳಲ್ಲಿ ಉಂಟಾದ ಮಕರಂದದಂತೆ ಗಂಗೆಯು ಆತನ ಪಾದಗಳಿಂದ ಇಳಿದುಬರುವಳೋ ಆ ಪುರುಷ ಶ್ರೇಷ್ಠನಿಗೆ ನಾನು ವಶವರ್ತಿನಿಯಾಗಿ ನಡೆಯುವವಳು. ಈಗಲೂ ಆತನ ಆಜ್ಞೆಯಿಂದಲೇ ಇಲ್ಲಿಗೆ ಬಂದಿರುವೆನು" ಎನಲು, ಇಂದ್ರಾದಿ ದಿಕ್ಪಾಲರಿಗೆ

ಸಮಾನನಾದ ಆ ಭೀಮರಾಜನು ಆಕೆಯನ್ನು ಕಂಡು ಪಕ್ಷಿಸ್ವರ ಚಂದ್ರಾದಿ ನಾಯಿಕಾ ಭೇದಗಳಿಂದಲೂ, ಅಕ್ಷಿಸ್ಪಂದಾದಿಗಳಿಂದಲೂ ಆಕೆಯು ಸರಸ್ವತಿಯೆಂದು ತಿಳಿದು ಅವಳಿಗೆ ಯುಕ್ತವಾದ ಪೂಜೆಯೇ ಮೊದಲಾದ ಸತ್ಕಾರಗಳನ್ನು ನಡೆಯಿಸಿದನು. ತರುವಾಯ ದಿಗಂತರಗಳಲ್ಲಿರುವ ರಾಜರನ್ನೂ ಮಹಾರಾಜರುಗಳನ್ನೂ ಕೂಡ ಆಕರ್ಷಿಸುವ ಸಿದ್ಧವಿದ್ಯೆಯಂತೆ ತನ್ನ ಕುಮಾರಿಯಾದ ದಮಯಂತಿಯನ್ನು ಆ ರಾಜಸಭಾ ಮಧ್ಯಕ್ಕೆ ಬರುವಂತೆ ಹೇಳಿಕಳುಹಿಸಿದನು.

ಪೂಜ್ಯನಾದ ಪಿತೃವಿನ ಆಜ್ಞೆಯಾದೊಡನೆಯೇ ಆ ಕನ್ಯಾಮಣಿಯು ಸರ್ವಾಲಂಕಾರ ಭೂಷಿತಳಾಗಿ ಪಾಲಕಿಯ ಮೇಲೆ ಕುಳಿತು ಆ ರಾಜಸಭಾ ಮಂಡಲಿಯನ್ನು ಪ್ರವೇಶಿಸಿದಳು. ಆಕೆಯ ಅಲಂಕೃತವಾದ ಅವಯವಗಳಿಗಿಂತ ಅಲಂಕೃತವಲ್ಲದ ಅವಯವಗಳೇ ಮನೋಹರಗಳಾಗಿದ್ದುವು. ಈ ವಿಧದ ಚೆಲ್ವಿನ ಗಣಿಯಂತಿದ್ದ ಆ ದಮಯಂತಿಯನ್ನು ಆ ರಾಜಮಂಡಲಿಯು ನೋಡಿ, ಬೆರಗಾಗಿ ಈಕೆಯು ಸಾಕ್ಷಾತ್ ಲಕ್ಷ್ಮೀಯಾಗಿರಬಹುದೇ ಎಂದು ಎಣಿಸುತ್ತ, ಆಕೆಯ ಸೌಂದರ್ಯವನ್ನು ತಂತಮ್ಮ ಕಡೆಗಣ್ಣುಗಳಿಂದ ಕುಡಿಯುತ್ತಿದ್ದರು. ಈ ವಿಧವಾದ ಅದ್ಭುತ ರಸಾಸ್ವಾದನದಿಂದ ಸರ್ವರ ಮೈಯೂ ರೋಮಾಂಚಗೊಂಡಿತು. ಎಲ್ಲರೂ ಆನಂದದಿಂದ ಚಿಟಿಕಿಹಾಕಿದರು. ಎಲ್ಲರೂ ಆನಂದದಿಂದ ತಂತಮ್ಮ ತಲೆಯನ್ನು ಅತ್ತಿತ್ತ ತೂಗಿದರು. ಎಲ್ಲರೂ ಅರ್ಥಾರ್ಥವಾದ ಅಕ್ಷರಗಳಿಂದ ಮಾತಾಡತೊಡಗಿದರು :—"ನಾವು ಈ ದಮಯಂತಿಯ ಸೌಂದರ್ಯ ವರ್ಣನೆಯನ್ನು ಜನಗಳ ಮುಖದಿಂದ ಕೇಳಿ ಎಷ್ಟೋ ದೂರದಿಂದ ಇಲ್ಲಿಗೆ ಬಂದಿರುವೆವು. ಆದರೆ ನಾವು ವಾಸ್ತವವಾಗಿ ಕೇಳಿದುದಕ್ಕಿಂತ ಈಕೆಯ ಸೌಂದರ್ಯವು ಎಷ್ಟೋ ಪಾಲಿಗೆ ಅಧಿಕವಾಗಿರುವುದು. ಹಿಂದೆಯೊಬ್ಬ ಲಕ್ಷ್ಮಿಯು ಕ್ಷೀರಸಾಗರದಲ್ಲಿ ಜನಿಸಿದಳು. ಈ ಲಕ್ಷ್ಮಿಯಾದರೋ ಶೃಂಗಾರಸಾಗರದಲ್ಲಿ ಜನ್ಮಿಸಿರಬೇಕು. ಹಾಗಲ್ಲವಾಗಿದ್ದರೆ ಈಕೆಗೆ ಇಂತಹ ಸೌಂದರ್ಯವೂ ಮಾಧುರ್ಯವೂ ಉಂಟಾಗುತ್ತಿದ್ದಿತೇ? ಬ್ರಹ್ಮನು ಈಕೆಯನ್ನು ತನ್ನ ಮನಸ್ಸಿನಿಂದಲೂ ನಿರ್ಮಿಸಿರಲಿಕ್ಕಿಲ್ಲ. ಕೈಯಿಂದಂತೂ ಖಂಡಿತವಾಗಿಯೂ ರಚಿಸಿಲ್ಲ; ವಿಧಿಯು ತನ್ನ ಕೈಯಿಂದ ನಿರ್ಮಿಸಿರುತ್ತಿದ್ದರೆ ಅವನ ಹಸ್ತಸ್ಪರ್ಶದಿಂದ ಮೃದುವಾದ ಈಕೆಯ ದೇಹವು ಅಲ್ಲಲ್ಲಿ ಒತ್ತಿಟ್ಟಂತೆ ವಿಕಾರವಾಗಿ ತೋರುತ್ತಿದ್ದಿತು. ಆದರಿಂದ ಇವಳನ್ನು ಅಂಗ ರಹಿತನಾದ ಮನ್ಮಥನು ನಿರ್ಮಿಸಿರಬೇಕು. ಬ್ರಹ್ಮನು ಈಕೆಯನ್ನು ಸೃಷ್ಟಿಸಿರಲಿಕ್ಕಿಲ್ಲವೆಂಬುವುದಕ್ಕೆ ಇನ್ನೂ ಒಂದು ಕಾರಣವಿರುವುದು. ಯಾವಾಗಲೂ ದರ್ಭೆಯನ್ನು ಹಿಡಿದು ದೊರಗಾದ ಕೈಯು ಈ ಕೋಮಲಾಂಗವನ್ನು ನಿರ್ಮಿಸುವುದಕ್ಕೆ ಉಚಿತವಾದುದೇ? ವಿರಕ್ತನಾದ ಆ ಬ್ರಹ್ಮನು ತನ್ನ ಮನಸ್ಸಿನಿಂದಲೂ ಇಂತಹ ಶೃಂಗಾರ ಸರ್ವಸ್ವವನ್ನು ಉಂಟುಮಾಡಲಾರನು. ಆಗ ನಳರೂಪದಿಂದ ಅಲ್ಲಿ ಕುಳಿತಿರುವ ಇಂದ್ರನು ದಮಯಂತಿಯನ್ನು ಕಂಡು ಶ್ಲೇಷಯುಕ್ತವಾದ ಮಾತಿನಿಂದ ಹೀಗೆ ವರ್ಣಿಸತೊಡಗಿದನು. ಈಕೆಯು ನಗೆಯಲ್ಲಿ ಗೌರಿಯು; ಕಣ್ಣಿನಿಂದ ಹರಿಣಿಯು; ಧ್ವನಿ

ವಿಚಾರದಲ್ಲಿ ವಾಚಸ್ಪತಿಯು; ದೇಹಪುಷ್ಟಿಯಲ್ಲಿ ಹೇರಂಬನು; ಉಳಿದ ಅಂಗ ಶೋಭೆಯಲ್ಲಿ ಮೇನಕೆಯು.''

ಈ ಪ್ರಕಾರ ನವರೂಪಧಾರಿಯಾದ ಇಂದ್ರನು ತನ್ನ ಬಳಿಯಲ್ಲಿಯೇ ಕುಳಿತಿದ್ದ ದಮಯಂತಿಯನ್ನು ಹೊಗಳುವುದನ್ನು ಕೇಳಿ ನಳನಿಗೆ ಮನಸ್ಸಿನಲ್ಲಿ ಸಂಶಯವುಂಟಾಯಿತು. ಇದು ಇಂದ್ರನಿಗೆ ತಿಳಿಯಲು ಅವನು ಇವನ ಸಂಶಯವನ್ನು ಪರಿಹರಿಸುವುದಕ್ಕಾಗಿ ಸಮಯೋಚಿತವಾದ ಮಾತುಗಳನ್ನೇ ಆಡತೊಡಗಿದನು. ದೇವರಾಜನಾದ ಇಂದ್ರನಿಗೂ ಇಂತಹ ವ್ಯಾಮೋಹವುಂಟಾದುದು ಕೇವಲ ಆಶ್ಚರ್ಯವೇ. ದಮಯಂತಿಯು ತನ್ನನ್ನು ತಿರಸ್ಕರಿಸಿದ ವೃತ್ತಾಂತವು ನಳನ ಬಾಯಿಂದ ಕೇಳಿದ ಮೇಲೆಯೂ ತಿರುಗಿ ಅದೇ ರೂಪವನ್ನು ಧರಿಸಿ ಸಭೆಯಲ್ಲಿ ಕೂಡಬೇಕೇ?

ಈ ವಿಧವಾಗಿ ದಮಯಂತಿಯು ಸ್ವಯಂವರೋಚಿತವಾದ ವೇಷಭೂಷಣಗಳಿಂದ ವಿವಾಹಮಂಟಪವನ್ನು ಹೊಕ್ಕಳು. ಭೂಲೋಕದ ಊರ್ವಶಿಯಂತೆ ತೋರುತ್ತಿದ್ದ ಆ ರಾಜಕುಮಾರಿಯು ಸ್ವಯಂವರ ಮಂಟಪವನ್ನು ಹೊಗುತ್ತಲೇ ನೋಟಕರಾಗಿ ಬಂದ ಜನರು ಜಯ ಜಯವೆಂದು ಆನಂದ ಘೋಷವನ್ನು ಮಾಡಿದರು.

ಎಂಬಲ್ಲಿಗೆ ನೈಷಧೀಯ ಚರಿತೆಯೊಳಗಣ ನವಮ ಸರ್ಗವು ಮುಗಿದುದು.

ದಶಮ ಸರ್ಗವು

ದಮಯಂತಿಯು ವಿವಾಹ ಮಂಟಪವನ್ನು ಹೊಕ್ಕಳು. ಅಲ್ಲಿರುವವರ ನೇತ್ರಗಳೆಲ್ಲವೂ ಅವಳನ್ನು ಅನಿಮೇಷ ದೃಷ್ಟಿಯಿಂದ ನೋಡತೊಡಗಿದುವು. ಅವರ ಮನಸ್ಸೂ ನೇತ್ರಗಳೂ ಮಾತ್ರವೇ ಆಕೆಯಲ್ಲಿ ನಿಮಗ್ನವಾದುದಲ್ಲ; ಅವಳು ಧರಿಸಿದ್ದ ರತ್ನವಿಭೂಷಣಗಳಲ್ಲಿ ಪ್ರತಿಫಲಿಸುವ ನೆವದಿಂದ ಅವರ ಇಡೀ ಶರೀರವೂ ಆಕೆಯಲ್ಲಿ ನಿಮಗ್ನವಾದಂತೆ ತೋರುತ್ತಿದ್ದಿತು. ಹಿಂದೆ ವಿಶ್ವಾಮಿತ್ರ ಮಹರ್ಷಿಯು ತ್ರಿಶಂಕು ಮಹಾರಾಜನಿಗಾಗಿ ಭೂಮ್ಯಂತರಿಕ್ಷಗಳ ನಡುವೆ ನೂತನವಾದುದೊಂದು ಸ್ವರ್ಗವನ್ನು ಸೃಷ್ಟಿಸಿದನೆಂದು ಪ್ರಸಿದ್ಧವಿರುವುದಷ್ಟೆ! ಆ ಸ್ವರ್ಗವೇ ಇದಾಗಿರಬಹುದೇ ಎಂದು ಜನಗಳೆಲ್ಲರೂ ಸಂದೇಹಪಡುವಂತೆ ಈ ಸ್ವಯಂವರ ದಿದೃಕ್ಷೆಯಿಂದ ದೇವಯಾನಗಳು ಆಕಾಶದಲ್ಲಿ ನಿಬಿಡವಾಗಿ ತುಂಬಿದುವು. ರಾಜಲೋಕದ ಮಧ್ಯದಿಂದ ಹೊರಡುತ್ತಿದ್ದ ಚಂದನ ಕರ್ಪೂರಾದಿ ಪರಿಮಳ ದ್ರವ್ಯಗಳ ಸುವಾಸನೆಗಾಗಿ ತುಂಬಿಯಿಂಡುಗಳು ಬಂದು ಬಂದು ಎರಗುತ್ತಿದ್ದುವು. ಎಲ್ಲಾ ಕಡೆಯಲ್ಲಿಯೂ ಮಂಗಲವಾದ್ಯಗಳು ಪ್ರತಿಧ್ವನಿಸುವಂತೆ ಶಬ್ದವಾಗುತ್ತಿರಲು, ವಿವಾಹಮಂಟಪದ ಮೇಲಿನ ಪತಾಕೆಗಳು ಆ ಶಬ್ದಕ್ಕೆ ಸರಿಯಾಗಿ ಹಸ್ತಾಭಿನಯಗಳಿಂದ ಕುಣಿಯುತ್ತವೋ ಎಂಬಂತೆ ತೋರುತ್ತಿದ್ದಿತು.

ಈ ಕಾಲದಲ್ಲಿ ಸಮಸ್ತ ಲೋಕಗಳಿಗೂ ಪೂಜ್ಯಳಾದ ಸರಸ್ವತಿಯು, ದಮಯಂತಿಯ ಎಡ ಭಾಗದಲ್ಲಿ ಬರುತ್ತ ನಸು ಕಂಧರದಿಂದ ವಿನೀತಳಾಗಿದ್ದ ಆ ರಾಜಪುತ್ರಿಗೆ:—"ಅಮ್ಮಾ! ದಮಯಂತಿ ಈ ಕಡೆಗೆ ನೋಡು. ಈ ದೇವತೆಗಳೆಲ್ಲ ನಿನ್ನ ಮೇಲಿನ ಅಭಿಲಾಷೆಯಿಂದ ಈ ಕಡೆ ಬಂದು ಸೇರಿರುವರು. ನಿನಗೆ ಇವರಲ್ಲಿ ಆಶೆಯುಂಟಾಗುವುದಾದರೆ ಇವರಲ್ಲಿ ಒಬ್ಬನನ್ನು ವರಿಸು. ದೇವಿ! ಇಗೋ! ಆ ಮುಂದೆ ತೋರುವವನೇ ಪುಷ್ಕರದ್ವೀಪದ ರಾಜನಾದ ಸವನನೆಂಬವನು. ನೀನು ಈತನನ್ನು ವರಿಸಿದೆಯಾದರೆ ಈತನೊಡನೆ ಸ್ವಾದೂದಕ ಸಮುದ್ರದಲ್ಲಿ ಜಲಕ್ರೀಡೆಯನ್ನಾಡುತ್ತ ಆನಂದಿಸಬಹುದು. ಕಮಲ ಪತ್ರಾಯತಾಕ್ಷಿ! ನೀನು ನನ್ನ ಸೂಚನೆಯನ್ನಂಗೀಕರಿಸಿ ಇವನನ್ನು ವರಿಸು. ಇವನ ರಾಜ್ಯವು ಭೂಸ್ವರ್ಗದಂತೆಯೂ ಈತನು ಭೂಲೋಕದ ದೇವೇಂದ್ರನಂತೆಯೂ ಇರುವುದರಿಂದ ನೀನು ಈ ಇಂದ್ರನಿಗೆ ಇಂದ್ರಾಣಿಯಾಗುವುದು ಉಚಿತವು. ಆ ಪುಷ್ಕರದ್ವೀಪದ ಒಂದಾನೊಂದು ಮನೋಹರವಾದ ಪ್ರದೇಶದಲ್ಲಿ ರಮ್ಯವಾದುದೊಂದು ಆಲದ ಮರವು ಇರುವುದು. ಆ ಆಲದ ಮರದ ತಂಪಾದ ನೆರಳಿನಲ್ಲಿ ಸ್ವಯಂಭುವಾದ ಬ್ರಹ್ಮನು ಸದಾ ವಾಸವಾಗಿರುವನು. ಆತನು ಅನನ್ಯ ಸಾಧಾರಣವಾದ ನಿನ್ನ ಸೌಂದರ್ಯವನ್ನು ಕಂಡು ತನ್ನ ಕರ ಕೌಶಲಕ್ಕಾಗಿ ಹಿಗ್ಗುವಂತೆ ಮಾಡು. ಆ ವಟವೃಕ್ಷವಾವದೋ ಸಾಮಾನ್ಯವಾದುದೆಂದು ಎಣಿಸಬೇಡ. ಅದರ ಅಡಿಯಲ್ಲಿ ಸೇರಿರುವವರಿಗೆ ವರ್ಷಾತಪಗಳ ನಿವಾರಣೆಯಾಗುವುದರಿಂದಲೂ, ಕೊಂಬೆಗೆ ಆಧಾರವಾಗಿರುವ ಬಿಳಲುಗಳಿಂದಲೂ, ಮೇಲುಗಡೆ ಇರುವ ಪಕ್ವವಾದ ಹಣ್ಣುಗಳಿಂದಲೂ, ಶ್ಯಾಮವರ್ಣದಿಂದ ಮನೋಹರವಾಗಿ ತೋರುವ ಪತ್ರಗಳಿಂದಲೂ ಕೂಡಿದೊಂದು ವಿಚಿತ್ರವಾದ ನವಿಲು ಗರಿಯ ಆತಪತ್ರದಂತೆ ತೋರುತ್ತಿರುವುದು. ಎಲೈ ಸುಂದರಿಯೇ! ಈ ಸವನನೆಂಬ ರಾಜಹಂಸನಿಗೆ ಪ್ರಿಯತಮವಾದ ಕೀರ್ತಿಯು ಶುಭ್ರವರ್ಣದಿಂದ ಸರ್ವತ್ರ ವ್ಯಾಪಿಸಿಕೊಂಡಿರಲಾಗಿ ನೀರನ್ನೂ ಕ್ಷೀರವನ್ನೂ ವಿಂಗಡಿಸಿ ತಿಳಿಯುವುದು ಕಷ್ಟವಾಯಿತು. ಎಂದ ಮೇಲೆ ಈ ಮಹಾರಾಜನ ಯೋಗ್ಯತೆಯನ್ನು ನೀನೇ ನಿಶ್ಚಯಿಸಿಕೊ."

ಈ ಪ್ರಕಾರ ಆ ದೇವಿಯು ಆ ಸವನರಾಜನ ಶೌರ್ಯೌದಾರ್ಯ ಪಾಂಡಿತ್ಯ ಶೃಂಗಾರ ಪರಿಣತಿಗಳನ್ನು ವಿವರಿಸಿ ಹೇಳಿದರೂ ಆತನಿಗೆ ನಳನೆಂಬ ಹೆಸರಿಲ್ಲವೆಂಬ ಒಂದೇ ಕಾರಣದಿಂದ ದಮಯಂತಿಯ ಮನಸ್ಸು ಆ ಮಹಾರಾಜನ ಕಡೆಗೆ ಹೋಗಲಿಲ್ಲ. ಅವಳು ತನ್ನ ಭ್ರೂಭಂಗದಿಂದಲೇ ತನಗೆ ಆತನಲ್ಲಿ ಉಂಟಾದ ಅನಾದರವನ್ನು ಸೂಚಿಸಲಾಗಿ ಆ ಸವನ ಮಹಾರಾಜನ ಕಂದಿ ಹೋದ ಮುಖವು ಅವನ ಹೃದಯದಲ್ಲುಂಟಾದ ಸಂತಾಪಾಗ್ನಿಯ ಧೂಮವೆಂಬಂತೆ ತೋರಿತು.

ಇತ್ತ ದಮಯಂತಿಯನ್ನು ಆಕೆಯ ಭೃತ್ಯ ಜನಗಳು ಅವಳ ಮುಖಭಾವದಿಂದಲೇ ಮನೋಗತವನ್ನು ತಿಳಿದು ಅನ್ಯ ರಾಜನೊಬ್ಬನ ಬಳಿಗೆ ಒಯ್ದರು. ಭೃತ್ಯರು ಸ್ವಾಮಿಭಕ್ತರಾಗಿಯೂ, ಸ್ವಾಮಿ ಕಾರ್ಯವನ್ನು ಕೈಗೂಡಿಸುವಲ್ಲಿ

ಧುರೀಣರಾಗಿಯೂ ನಿಷ್ಕಪಟಿಗಳಾಗಿಯೂ ಇದ್ದಲ್ಲಿ ಪ್ರತ್ಯೇಕವಾದ ಆಜ್ಞೆಗೆ ಕಾದುಕೊಂಡಿರದೆ ಮುಖಭಾವದಿಂದಲೇ ಅಂತರಂಗವನ್ನು ತಿಳಿದುಕೊಳ್ಳುವರು.

ದಮಯಂತಿಯು ಎರಡನೆಯವನೊಬ್ಬ ರಾಜನ ಬಳಿಗೆ ಬರುತ್ತಲೇ ಸರಸ್ವತಿಯು ಆತನನ್ನು ಅವಳಿಗೆ ತೋರಿಸಿ:—"ಅಮ್ಮಾ! ಈತನನ್ನಾದರೂ ಕಣ್ಣೆತ್ತಿ ನೋಡು. ರೂಪದಲ್ಲಿ ಅಶ್ವಿನಿಗಳೂ ಈತನಿಗೆ ಸಾಟಿಯಲ್ಲ. ಇವನು ಕುಲ, ಶೀಲ, ವೃತ್ತಗಳಲ್ಲಿ ಏನೂ ಕಡಮೆಯವನಲ್ಲ. ಕಣ್ಣಿಗೆ ಎಷ್ಟು ವಿನೀತನಾಗಿ ತೋರುತ್ತಾನೆ ನೋಡು. ಒಮ್ಮೆ ತಲೆ ಎತ್ತಿ ಈತನ ಕಡೆಗೆ ಲಕ್ಷ್ಯವಿಡು. ಈ ವಂದಿಜನಗಳು ಇವನ ಕೀರ್ತಿಯನ್ನು ಹೊಗಳುತ್ತಿದ್ದಾರೆ. ಇದನ್ನೇ ನಾನು ತಿರುಗಿ ನಿನಗೆ ವಿವರಿಸುತ್ತ ಹೋದಲ್ಲಿ ಪುನರುಕ್ತಿಯಾಗುವುದಾದಕಾರಣ ಆಕಾಶದಲ್ಲಿ ಸರ್ವತ್ರ ವ್ಯಾಪಿಸಿರುವ ಆ ವಂದಿಜನರ ಸ್ತೋತ್ರದ ಕಡೆಗೆ ನಿನ್ನ ಲಕ್ಷ್ಯವನ್ನು ತಿರುಗಿಸು. ಇಗೋ! ಈ ರಾಜನ ಹೆಸರು ಹವ್ಯನೆಂದು. ಇವನು ಶಾಕ ದ್ವೀಪಾಧಿಪತಿಯು. ಇವನ ವಿಷಯವಾಗಿ ಈ ವಂದಿಜನಗಳು ಮಾಡುತ್ತಿರುವ ಸ್ತುತಿರೂಪವಾದ ಪದ್ಯಗಳನ್ನು ಕೇಳಿ ನಿನ್ನ ಮನಸ್ಸಿನಲ್ಲಿ ಈತನ ವಿಚಾರವಾಗಿ ರಾಗವು ಉತ್ಪನ್ನವಾಗಲಿಲ್ಲವೇ? ಆ ದ್ವೀಪದಲ್ಲಿ ಗಿಳಿಯ ರೆಕ್ಕೆಯಂತೆ ಹಸುರಾದ ಪತ್ರ ಸಮೃದ್ಧಿಯುಳ್ಳ ಶಾಕವೃಕ್ಷವೊಂದು ವಿಸ್ತಾರವಾಗಿ ಬೆಳೆದಿರುವುದರಿಂದ ದ್ವೀಪಕ್ಕೆ ಆ ಹೆಸರು ಬಂದಿತು. ಆ ವೃಕ್ಷದ ಎಲೆಗಳ ಹಸುರು ಬಣ್ಣದಿಂದ ದಿಕ್ಕುಗಳೆಲ್ಲವೂ ಹಸುರಾಗಿ ತೋರುತ್ತಿರುವ ಕಾರಣ ಎಲೈ ಕೋಮಲಾಂಗಿ, ಮುಂದೆ ದಿಕ್ಕುಗಳಿಗೆ ಹರಿತವೆಂಬ ಹೆಸರೇ ರೂಢವಾಗಿ ಬಂದಿತು. ಆ ವೃಕ್ಷದ ಕಡೆಯಿಂದ ಬೀಸುತ್ತಿರುವ ವಾಯುವಿನ ಸ್ಪರ್ಶವಾದರೆ ಸಾಕು; ಅನಿರ್ವಾಚ್ಯವಾದ ಆನಂದವುಂಟಾಗುತ್ತಿರುವುದು. ಈ ಮಾತು ನನ್ನ ಬಾಯಿಯಿಂದ ಮಾತ್ರ ಹೊರಟಿತೆಂದು ಎಣಿಸಬೇಡ. ಪರಾಶರ ಮಹರ್ಷಿಗಳು ವಿಷ್ಣುಪುರಾಣದಲ್ಲಿಯೂ ಇದೇ ಮಾತನ್ನು ನುಡಿದಿರುವರು. ಅದಲ್ಲದೆ ಇದೇ ಕ್ಷೀರಸಾಗರದಲ್ಲಿ ನಿರಂತರ ಕ್ಷೀರಪಾನದಿಂದ ಕೊಬ್ಬಿದ ಮೈಯುಳ್ಳ ಮಹಾಶೇಷನು ಕುಂಡಲಾಕೃತಿಯಿಂದ ಇರಲು ಸುಧಾಧರನಾದ ಮಹಾವಿಷ್ಣುವು ಆತನ ಮೇಲೆ ಮಲಗಿರುವನು. ಆತನ ಪಾದಗಳನ್ನು ತನ್ನ ಮೃದುವಾದ ಅಂಗುಲಿಗಳಿಂದ ಒತ್ತುತ್ತಿದ್ದ ಲಕ್ಷ್ಮಿಯು ನಿನ್ನ ಸೌಂದರ್ಯವನ್ನು ಕಂಡು ತನ್ನ ಭರ್ತೃವಿನಲ್ಲಿ ಸಂದೇಹವುಳ್ಳವಳಾಗಿ ಆತನಿಗೆ ದೀರ್ಘಕಾಲದವರೆಗೂ ಎಚ್ಚರವಾಗದಂತೆ ಅವನ ಪಾದಸಂವಾಹನವನ್ನು ನಡಿಸುತ್ತಿರುವಂತೆ ಮಾಡು. ಎಲೈ ಬಾಲೆ! ಉದಯಾಚಲದ ಬಾಲಾತಪದಿಂದ ಅರುಣಿಮವಾಗಿ ತೋರುತ್ತಿರುವಂತೆ ಆ ಶಾಕ ದ್ವೀಪದ ವಿಹಾರ ವನಗಳಲ್ಲಿರುವ ಶಿಲಾಶಕಲಗಳು ನಿನ್ನ ಪಾದಗಳ ಲಾಕ್ಷಾರಸದಿಂದ ಕೆಂಬಣ್ಣವಾಗಿ ಗೈರಿಕಗಳಾಗಿ ಕಾಣಿಸುವಂತೆ ಮಾಡು. ಅಲ್ಲಿ ಉದಯಾಚಲದ ಮೇಲೆ ವಿನೋದವಾಗಿ ತಿರುಗುತ್ತಿರುವ ನಿನ್ನ ಮುಖವನ್ನು ಕಂಡ ಜನರಿಗೆ ಚಂದ್ರೋದಯದ ಭ್ರಾಂತಿಯುಂಟಾಗುವಂತೆ ಮಾಡು. ಎಲೌ ಭೈಮಿ! ನೀನು ಒಪ್ಪುವೆಯಾದರೆ ಈ ಹವ್ಯರಾಜನನ್ನು

ವಿವಾಹವಾಗಿ ನಿನ್ನಿಂದ ಈತನ ಸಂತತಿಯು ವೃದ್ಧಿಯಾಗುವಂತೆ ಮಾಡು. ಈ ಮಹಾರಾಜನು ಲಕ್ಷ್ಮೀ ಎಂಬ ಲತೆಗೆ ತನ್ನ ಭುಜವೆಂಬ ವೃಕ್ಷವನ್ನು ಆಧಾರಗೊಳಿಸಿದವನು. ಈತನ ಮನೋಹರವಾದ ಮುಖಮಂಡಲವು ಸರಸ್ವತಿಯ ನಿವಾಸ ಸ್ಥಾನವಾಗಿರುವುದು.''

ಈ ಪ್ರಕಾರ ವಾಗ್ದೇವಿಯು ಪದ್ಮರಾಜನನ್ನು ಹೊಗಳಿದರೂ ಈತನ ಬಳಿಗೆ ಇಂದ್ರನು ಯಾಚಕನಾಗಿ ಬರಲಿಲ್ಲವೆಂಬ ಒಂದೇ ದೋಷದಿಂದ ಇವನು ನಳನಿಗೆ ಸರಿಯುಲ್ಲವೆಂದು ದಮಯಂತಿಯು ಅವನನ್ನು ತಿರಸ್ಕರಿಸಿದಳು.

ದಮಯಂತಿಯ ಮನಸ್ಸು ಆ ಮಹಾರಾಜನ ಕಡೆಗೆ ಹರಿಯಲಿಲ್ಲವೆಂದು ತೋರಿದೊಡನೆಯೇ ವಿಮಾನವಾಹಕರಾದ ಜನರು ವಾಯುವು ಒಂದು ಹೂವಿನಿಂದ ಇನ್ನೊಂದು ಹೂವಿಗೆ ಪರಿಮಳವನ್ನು ಒಯ್ಯುವಂತೆ ದಮಯಂತಿಯನ್ನೂ ಬೇರೊಬ್ಬ ರಾಜನ ಬಳಿಗೆ ಒಯ್ದರು. ಆಗ ವಾಗ್ದೇವಿಯು ಸಿಂಹಾಸನದ ಮೇಲೆ ಕುಳಿತಿರುವ ಆ ರಾಜನನ್ನು ತೋರಿಸಿ:—''ಅಮ್ಮಾ! ದಮಯಂತಿ, ಈತನ ಕಡೆಗಾದರೂ ನಿನ್ನ ದೃಷ್ಟಿಯನ್ನು ಬೀರು. ಇವನು ತನ್ನ ಬಾಹುಬಲದಿಂದ ಬಹು ಸಲ ಶತ್ರುಗಳನ್ನು ಗೆದ್ದಿರುವನು. ಇವನೇ ಕ್ರೌಂಚ ದ್ವೀಪಾಧಿಪತಿಯಾದ ದ್ಯುತಿಮಂತನೆಂಬ ರಾಜನು. ಇವನ ರಾಷ್ಟ್ರದ ಸೆರೆಯಲ್ಲಿಯೇ ದಧಿಸಮುದ್ರದ ದಧಿಮಂಡವು ಒಂದು ರಾಶಿಯಾಗಿ ನಿಂತು ಶೋಭಿಸುತ್ತಿರುವುದು. ಆ ದ್ವೀಪದಲ್ಲಿ ಕ್ರೌಂಚವೆಂಬ ಹೆಸರಿನ ಮನೋಹರವಾದ ಪರ್ವತವೊಂದುಂಟು. ಆ ಪರ್ವತದ ವಿವರಗಳಲ್ಲಿ ಕಲಕಲ ನಾದವನ್ನು ಮಾಡುತ್ತಿರುವ ಪಕ್ಷಿಗಳಿಂದ ಆ ಬೆಟ್ಟವು ವಿವಾಹಾರ್ಥವಾಗಿ ನಿನ್ನನ್ನು ಕರೆಯುತ್ತಿರುವುದೋ ಎಂಬಂತೆ ತೋರುವುದು. ಆ ಕ್ರೌಂಚ ದ್ವೀಪದಲ್ಲಿ ಸಾಕ್ಷಾತ್ಕಾರವನ್ನು ಹೊಂದಿರುವ ಪರಮೇಶ್ವರನನ್ನು ದರ್ಶನಮಾತ್ರದಿಂದಾದರೂ ಸರಿಯೆ ಪೂಜಿಸಿದಲ್ಲಿ ಅಂತಹ ಪ್ರಾಣಿಯು ತಿರುಗಿ ಗರ್ಭವಾಸವನ್ನು ಮಾಡುವುದಿಲ್ಲವೆಂಬುದು ಸಿದ್ಧಾಂತವು. ಆದಕಾರಣ ನೀನು ಈತನನ್ನು ವಿವಾಹವಾದಲ್ಲಿ ಆ ಪರಮೇಶ್ವರನನ್ನು ಪೂಜಿಸಬಹುದು. ಅಲ್ಲಿರುವವರೆಲ್ಲ ಏಕ ಶಿವಾರಾಧನೆಯನ್ನಲ್ಲದೆ ಅನ್ಯ ದೈವತವನ್ನೂ ಪೂಜಿಸತಕ್ಕವರಲ್ಲ. ಎಲೆ ಬಾಲೆ! ನೀನು ಈತನನ್ನು ವಿವಾಹವಾಗಿ ಆ ದ್ವೀಪದಲ್ಲಿ ಭಕ್ತೇಷ್ಟದಾತೃವಾದ ಪರಮೇಶ್ವರನಿಗಾಗಿ ಉದಯಪರ್ವತವನ್ನು ಹೋಲುತ್ತಿರುವ ಹಲವು ಶಿವಾಲಯಗಳನ್ನು ನಿರ್ಮಿಸು. ಆ ದಧಿಸಮುದ್ರದ ಮೇಲಿಂದ ಬೀಸಿ ಬರುತ್ತಿರುವ ತಂಪಾದ ಗಾಳಿಯು ನಿನ್ನ ಶ್ರಮವನ್ನು ಪರಿಹರಿಸಲಿ. ಇವನ ಕೀರ್ತಿಯು ಹಂಸದಂತೆ ಸಕಲ ದಿಕ್ಕುಗಳಿಗೂ ವ್ಯಾಪಿಸಿರುವುದು.''

ಈ ಪ್ರಕಾರ ವಾಗ್ದೇವಿಯು ದ್ಯುತಿಮಂತನ ಗುಣಗಳನ್ನು ವರ್ಣಿಸಿದರೂ ಸರ್ವಗುಣ ಸಂಪನ್ನಳಾದ ದಮಯಂತಿಯ ಮನಸ್ಸು ಮಾತ್ರ ಆ ಕಡೆಗೆ ತಿರುಗಲಿಲ್ಲ. ದೈವವು ಕೆಟ್ಟಿರುವ ವೇಳೆ ಮನುಷ್ಯ ಪ್ರಯತ್ನವು ಸಫಲಕ್ಕೆ ಬರಲಾರದು. ದಮಯಂತಿಗೆ ಆ ದ್ಯುತಿಮಂತನಲ್ಲಿ ವಿಶ್ವಾಸ ಉಂಟಾಗಲಿಲ್ಲವೆಂದು ತೋರಿದೊಡ

ನೆಯೋ ಆಕೆಯು ಸಿವಿಗೆಯನ್ನು ಹೊತ್ತಿರುವ ಭೃತ್ಯಜನಗಳು ದೇವಾಸುರರು ಕ್ಷೀರಸಾಗರದಲ್ಲಿ ಹುಟ್ಟಿದ ಚಂದ್ರಲೇಖೆಯನ್ನು ಶಿವ ಶಿರಸ್ಸಿಗೆ ಒಯ್ದಂತೆ ಆ ಸಿವಿಗೆಯನ್ನು ಇನ್ನೊಬ್ಬ ರಾಯನ ಬಳಿಗೆ ಒಯ್ದರು.

ಈ ಪ್ರಕಾರ ಒಬ್ಬ ರಾಜನನ್ನು ತ್ಯಜಿಸಿ ಇನ್ನೊಬ್ಬ ರಾಜನ ಕಡೆಗೆ ಕ್ರಮವಾಗಿ ಹೋಗುತ್ತಿರುವ ಮಹಾವಿಷ್ಣುವಿನ ಧ್ಯಾನಾಂತರದಿಂದ ಜಾರಿದ ಲಕ್ಷ್ಮಿಯಂತಿದ್ದ ದಮಯಂತಿಯನ್ನು ಕಂಡು ಸರಸ್ವತಿಯು :—"ಅಮ್ಮಾ ಕೃಶೋದರಿಯೇ! ಈ ಮುಂದೆ ತೋರುವವನು ಕುಶದ್ವೀಪಾಧಿಪತಿಯಾದ ಜ್ಯೋತಿಷ್ಮಂತನೆಂಬವನು. ಈತನನ್ನು ನೀನು ವಿವಾಹವಾದಲ್ಲಿ ಆ ದ್ವೀಪದ ಬಳಿಯಿರುವ ಘೃತಸಮುದ್ರದ ತೀರದಲ್ಲಿ ಬೆಳೆದಿರುವ ಸಾಂದ್ರವಾದ ವನಪ್ರದೇಶಗಳಲ್ಲಿ ವಿಹರಿಸುತ್ತ ಆನಂದಿಸಬಹುದಲ್ಲವೇ? ಬಾಲೆ! ಆ ದ್ವೀಪದಲ್ಲಿ ಬೆಳೆದಿರುವ ದರ್ಭಸ್ತಂಬವೊಂದು ಆಕಾಶವನ್ನು ಚುಂಬಿಸುತ್ತಿರುವುದಾಗಿ ಗಾಳಿಯಿಂದ ಅಲ್ಲಾಡುತ್ತಿರುವ ಅದರ ಗರಿಗಳೆಂಬ ಕತ್ತಿಗಳಿಂದ ಮೇಘ ಪಙ್ಕ್ತಿಗಳು ಕತ್ತರಿಸಲ್ಪಟ್ಟು ಸುರಿಯುತ್ತಿರುವ ಜಲಸೇಕದಿಂದ ಬೆಳೆಯುತ್ತಿರುವ ಆ ಸ್ತಂಬವು ನಿನ್ನ ಕಣ್ಣುಗಳಿಗೆ ಆಶ್ಚರ್ಯವನ್ನುಂಟುಮಾಡಬಹುದಲ್ಲವೇ? ಸಮುದ್ರಮಥನದ ವೇಳೆ ಉಂಟಾದ ಮಹಾಲಕ್ಷ್ಮಿಯ ಪಾದಪದ್ಮಗಳಿಂದ ಪವಿತ್ರವಾದ ಶಿಲಾಸಮೂಹಗಳುಳ್ಳ ಸುಂದರ ಕಂದರಗಳು ಪತಿಯಿಂದ ಯುಕ್ತಳಾದ ನಿನ್ನ ವಿಹಾರಭೂಮಿಯಾಗಿ ಪರಿಣಮಿಸಬಹುದಲ್ಲವೇ? ಸಮುದ್ರಮಥನದ ವೇಳೆ ವಾಸುಕಿಯಿಂದ ನೂರಾರು ಸುತ್ತು ಸುತ್ತಲ್ಪಟ್ಟು ಅವನ ಭೋಗದ ಘರ್ಷಣದಿಂದುಂಟಾದ ಗುರುತುಗಳು ಆ ಮಂದರ ಪರ್ವತವನ್ನು ಏರಬೇಕೆಂದು ಇಚ್ಛಿಸುತ್ತಿರುವ ನಿನಗೆ ಹಂತಗಳಂತೆ ವಿನೋದಕರಗಳಾಗಿ ಆಗಬಹುದಲ್ಲವೇ? ಅಲ್ಲದೆ ಆ ವಾಸುಕಿಯ ಘರ್ಷಣ ಮಾರ್ಗದಿಂದ ಇಳಿದು ಬರುತ್ತಿರುವ ಗಿರಿನಿರ್ಝರವು ಮಹಾಶೇಷನು ತನ್ನ ತಲೆಗಳ ಮೇಲಿರುವ ಭೂಭಾರದಿಂದ ಬಳಲಿದವನಾಗಿ ಉಳಿದ ತನ್ನ ಮೈಯಿಂದ ಆ ಮಂದರವನ್ನು ಸುತ್ತಿಕೊಂಡಿರುವಂತೆ ನಿನಗೆ ವಿನೋದವನ್ನುಂಟುಮಾಡಬಹುದು."

ಈ ವಿಧವಾಗಿ ಸರಸ್ವತಿಯು ಕುಶದ್ವೀಪಾಧಿಪತಿಯಾದ ಜ್ಯೋತಿಷ್ಮಂತ ರಾಜನನ್ನು ಬಗೆಬಗೆಯಾಗಿ ಹೊಗಳಿದರೂ ದಮಯಂತಿಯ ಲಕ್ಷ್ಯವು ಮಾತ್ರ ಆ ಕಡೆಗೆ ತಿರುಗಲಿಲ್ಲ. ಆಗ ಆಕೆಯ ವಾಹನಾರೋಹಕರು ನಿರ್ಧನಿಕನಾದ ಪುರುಷನ ಬಳಿ ತಮ್ಮ ಯಾಚನೆಯು ನಿಷ್ಫಲವಾದೊಡನೆಯೇ ಧನಿಕನಾದವನ ಬಳಿ ಸೇರುವಂತೆ ದಮಯಂತಿಯನ್ನು ಮುಂದೊಬ್ಬ ರಾಜನ ಬಳಿಗೆ ಒಯ್ದರು. ಆಗ ಸರಸ್ವತಿಯು ಆ ರಾಜನನ್ನು ತನ್ನ ಬೆರಳಿಂದ ತೋರಿಸುತ್ತ :—"ಅಮ್ಮಾ! ಇವನ ಮೇಲಾದರೂ ನಿನ್ನ ಲಕ್ಷ್ಯವಿರಲಿ. ಇವನು ಮಹಾಗುಣವಂತನಾದ ರಾಜನು. ಇವನ ಗುಣಗಣಗಳ ಪರಿಚಯವು ನಿನಗಾಗಬೇಕಾದರೆ ಮೊದಲು ವಿವಾಹವಾಗಬೇಕು. ಇವನು ಶಾಲ್ಮಲದ್ವೀಪದ ರಾಜನಾದ ವಪುಷ್ಮಂತನು. ಆ ದ್ವೀಪದ ಸುತ್ತಲೂ ಸುರಾಸಮುದ್ರವು ಸುತ್ತುಗಟ್ಟಿದ್ದು ನಿನಗೆ ಮನೋಹರ

ವಾದ ವಿವಾಹಭೂಮಿಯಾಗುವುದರಲ್ಲಿ ಸಂದೇಹವಿರದು; ಅದಕಾರಣ ನಿನ್ನಭಿಪ್ರಾಯವೇನು? ಹಿಂದೆ ಅಗಸ್ತ್ಯ ಮುನಿಯು ಒಂದು ಸಮುದ್ರವನ್ನು ಕುಡಿದು ಬತ್ತಿಸಲಾಗಿ ಉಳಿದ ಐದು ಸಮುದ್ರಗಳು ಹೆದರುವುವು; ಆದರೆ ಈ ಸುರಾ ಸಮುದ್ರವು ಮಾತ್ರ ಬ್ರಾಹ್ಮಣನು ಸುರಾಪಾನವನ್ನು ಮಾಡಲಾರನೆಂಬ ನಂಬುಗೆಯಿಂದ ಹೆದರದೆ ಧೈರ್ಯವಾಗಿದ್ದಿತು. ಅದಕಾರಣ, ಕೃಶೋದರಿ, ನೀನು ಈತನನ್ನು ವಿವಾಹವಾದರೆ ಇವನೊಡನೆ ವಿನೋದವಾಗಿ ಸುರಾಪಾನವನ್ನು ಮಾಡುತ್ತ ವಿಹರಿಸಬಹುದು. ಆ ದ್ವೀಪದಲ್ಲಿರುವ ದ್ರೋಣವೆಂಬ ಪರ್ವತದ ಸೌಂದರ್ಯವನ್ನು ಏನೆಂದು ವರ್ಣಿಸಲಿ! ಆ ಪರ್ವತದ ಮೇಲಿರುವ ಜ್ಯೋತಿರ್ಲತೆಗಳಿಂದ ರಾತ್ರಿಯ ವೇಳೆ ಇಡೀ ದ್ವೀಪವೂ ಬೆಳಗುತ್ತಿರುವುದು ಮಾತ್ರವಲ್ಲ. ಆ ಲತಾದೀಪಗಳಿಂದ ಮೇಲಕ್ಕೆ ನೆಗೆದ ಕಜ್ಜಲವೋ ಎಂಬಂತೆ ಕಪ್ಪಾದ ಮೋಡಗಳು ಸರ್ವದಾ ಅದರ ಶಿಖರವನ್ನು ಮುಚ್ಚಿಕೊಂಡಿರುವುವು. ಆ ದ್ವೀಪದ ಹೆಸರಿಗೆ ಕಾರಣವಾದ ಅದ್ಭುತವಾದ ಒಂದು ಶಾಲ್ಮಲಿ ವೃಕ್ಷವು ಅಲ್ಲಿ ಹುಟ್ಟಿ ಬೆಳೆದು ತನ್ನ ಪತ್ರೆಯಿಂದ ಇಡೀ ದ್ವೀಪವನ್ನು ಹೊದೆಯುತ್ತಿರುವುದರಿಂದ, ಎಲೌ ಮಂದಗಮನೆ! ನಿನ್ನ ಮೃದುವಾದ ಚರಣಗಳಿಂದ ಅಲ್ಲಿ ಸಂಚರಿಸುತ್ತಿರುವಾಗ ನಿನಗೆ ಯಾವ ಬಾಧೆಯೂ ಉಂಟಾಗದೆ ಚಲಿಸಬಹುದು.''

ಈ ರೀತಿಯಾಗಿ ಸರಸ್ವತಿಯು ಆ ಶಾಲ್ಮಲಿದ್ವೀಪದ ರಾಜನಾದ ವಪುಷ್ಮಂತನನ್ನು ಬಗೆ ಬಗೆಯಾಗಿ ಹೊಗಳುತ್ತಿರಲು ದೈವೇಚ್ಛೆಯಿಂದ ದಮಯಂತಿಗೆ ಅದರಲ್ಲೇನೂ ಸವಿದೋರದೆ ದೃಷ್ಟಿ ಸಂಜ್ಞೆಯಿಂದ ವಾಹಕರಿಗೆ ಮುಂದುವರಿಯುವಂತೆ ಸೂಚಿಸಿದಳು. ವಾಹಕರೂ ಅದರಂತೆಯೇ ಮಾಡಿದರು. ಆಗ ಭಾರತಿಯು ಮುಂದಿರುವ ರಾಜನೊಬ್ಬನನ್ನು ತೋರಿಸಿ:—''ಮಂದಗಾಮಿನಿ! ಈತನು ಪ್ಲಕ್ಷವೃಕ್ಷಗಳು ಸಮೃದ್ಧಿಯಾಗಿ ಬೆಳೆದಿರುವ ಪ್ಲಕ್ಷದ್ವೀಪಾಧಿಪತಿಯು; ಈತನ ಹೆಸರು ಮೇಧಾತಿಥಿಯೆಂದು. ನೀನು ಈತನಿಗೆ ಅನುರಕ್ತಳಾದ ಪತ್ನಿಯಾದಲ್ಲಿ ಯಮಳಾರ್ಜುನ ವೃಕ್ಷಗಳನ್ನು ಮುರಿದ ಶ್ರೀಕೃಷ್ಣನ ಹೃದಯದಲ್ಲಿ ಶೋಭಿಸುವ ಲಕ್ಷ್ಮಿಯಂತೆ ನೀನೂ ಇವನ ಹೃದಯದಲ್ಲಿ ಶೋಭಿಸುವೆ. ಅದಲ್ಲದೆ ಆ ದ್ವೀಪಕ್ಕೆಲ್ಲ ನೆರಳನ್ನು ಕೊಡುತ್ತಿರುವ ವಿಸ್ತಾರವಾದ ಶಾಖೆಗಳಿಂದ ಕೂಡಿದ ಒಂದು ಪ್ಲಕ್ಷವೃಕ್ಷದ ಕೊಂಬೆಗಳಿಗೆ ದ್ವೀಪವಾಸಿಗಳು ಉಯ್ಯಾಲೆಗಳನ್ನು ಕಟ್ಟಿಕೊಂಡು ತೂಗಿಕೊಳ್ಳುತ್ತಿರುವುದನ್ನು ಕಂಡಲ್ಲಿ ನಿನಗೂ ಆ ವಿಧವಾದ ದೋಲಾಕ್ರೀಡೆಯಲ್ಲಿ ಇಷ್ಟವುಂಟಾಗಬಹುದಲ್ಲವೇ? ಚಕಿತ ಚಕೋರದಂತೆ ಚಂಚಲವಾದ ನಯನವುಳ್ಳ ದಮಯಂತಿಯೆ! ಪ್ಲಕ್ಷದ್ವೀಪಾಧಿಪತಿಯಾದ ಈ ಮೇಧಾತಿಥಿಯನ್ನು ಭೂಚಂದ್ರನೆಂದು ಭಾವಿಸು. ಇವನು ನಿನ್ನ ಅಧರಾಮೃತವನ್ನು ಸವಿದ ಮೇಲೆ ಈ ದ್ವೀಪವನ್ನು ಸುತ್ತುಗಟ್ಟಿರುವ ಇಕ್ಷುರಸಾಬ್ಧಿಯ ಜಲದ ಸವಿಯನ್ನು ಕೂಡ ಮರೆಯುವಂತಾಗಲಿ. ಆ ದ್ವೀಪದಲ್ಲಿ ಸೂರ್ಯನನ್ನು ಕಂಡಲ್ಲದೆ ಉಣ್ಣೆನೆಂಬ ಸೂರ್ಯಭಕ್ತರೂ, ಚಂದ್ರನನ್ನು ಕಂಡಲ್ಲದೆ ಭೋಜನಮಾಡೆವೆಂಬ ಚಂದ್ರಭಕ್ತರೂ ಇರುವರು. ಅಂತಹ ಚಂದ್ರಭಕ್ತನಿಗೆ ಅಮಾವಾಸ್ಯೆಯಲ್ಲಿ ಕೂಡ ನಿನ್ನ ಮುಖ

ನೆಂಬ ಪೂರ್ಣಚಂದ್ರನ ದರ್ಶನವಾಗುವುದರಿಂದ ಆತನಿಗೆ ಅಮಾವಾಸ್ಯೆಯ ಭೋಜನದಿಂದ ವ್ರತಭಂಗ ದೋಷವುಂಟಾಗಲಾರದು. ಅಷ್ಟು! ಆ ದ್ವೀಪದಲ್ಲಿ ಪ್ರವಹಿಸುತ್ತಿರುವ ವಿಪಾಶವೆಂಬ ನದಿಯೂ ಕೂಡ ದೂರವಾಗಿ ಹರಿಯುವುದಿಲ್ಲ. ಆ ನದಿಯಲ್ಲಿ ಸದಾ ಅರಳುತ್ತಿರುವ ನೂತನವಾದ ಪದ್ಮ ಪಙ್ಕ್ತಿಗಳು ನಿನ್ನ ಕಣ್ಣುಗಳಿಗೆ ನೀರಾಜನ ಸುಖವನ್ನುಂಟುಮಾಡಲಿ. ಬಾಲೆ! ನೀನು ಆ ಮೇಧಾತಿಥಿಯನ್ನು ವಿವಾಹವಾಗಿ ಇಂತಹ ಸುಖದಿಂದ ಕೂಡಿರುವ ಆ ದ್ವೀಪದಲ್ಲಿ ಆ ಮಹಾರಾಜನನ್ನು ರಂಜಿಸುವವಳಾಗು. ಆ ದ್ವೀಪದಲ್ಲಿರುವ ನೀರೆಲ್ಲವೂ ಆ ಮಹಾರಾಜನ ಬೆಳ್ಪಸದಿಂದ ಬಿಳುಪಾಗಿ ಕ್ಷೀರದಂತೆ ಕಾಣಿಸಿಕೊಳ್ಳಲು, ಹಂಸಪಕ್ಷಿಗಳು ನೀರ ಕ್ಷೀರ ವಿಭೇದವನ್ನು ಮಾಡಲಾರದೆ ಮುಗ್ಧವಾಗುತ್ತಿವೆ. ಕೋಮಲಾಂಗಿ! ಇದರಿಂದ ನಾನಾರ್ಥಕೋಶಗಳಲ್ಲಿ ನೀರಿಗೆ ಬಂದಿರುವ ಕ್ಷೀರವೆಂಬ ಹೆಸರು ಆ ದ್ವೀಪದ ಮಟ್ಟಿಗೆ ಅಸಂಭವವೆಂದು ನಿನಗೂ ತೋರಬಹುದು. ಈತನೇನು ನಳನಿಗೆ ಕಡಿಮೆಯೆಂದು ಎಣಿಸಬೇಡ. ನಳನು ಜಂಬೂದ್ವೀಪದ ರಾಜನಾದರೆ ಈತನು ಪ್ಲಕ್ಷದ್ವೀಪದೊಡೆಯನು. ಉಭಯರ ಕೀರ್ತಿಯೂ ಸಮುದ್ರವನ್ನು ದಾಟಿ ಒಂದು ಪರತೀರವನ್ನು ಆಕ್ರಮಿಸಿರುವುದು.''

ವಾಗ್ದೇವಿಯು ಈ ಪ್ರಕಾರ ಪ್ಲಕ್ಷದ್ವೀಪಾಧಿಪತಿಯಾದ ಮೇಧಾತಿಥಿಯನ್ನು ಹೊಗಳಿ ಮಾತಾಡಿದಳು. ಆದರೇನು? ಆ ಸುಂದರಿಯಾದ ದಮಯಂತಿಯು ಪೂರ್ವ ವಯಸ್ಕನಾಗಿ ಮನ್ಮಥನಂತೆ ರೂಪಸಂಪತ್ತಿನಿಂದ ಕೂಡಿದ ಆ ರಾಜನನ್ನು ಶಿವನು ಮನ್ಮಥನನ್ನು ಕಂಡಂತೆ ರೂಕ್ಷವಾದ ನೇತ್ರಗಳಿಂದ ನೋಡಿದಳು. ಆಗ ದಮಯಂತಿಯ ಭಾವವನ್ನರಿತ ವಿಮಾನಾರೋಹಕರು ಕುಮುದ ವನದ ಭಾಗ್ಯವಿಲಾಸಗಳು ಉದಯೋನ್ಮುಖವಾದ ಚಂದ್ರರೇಖೆಯನ್ನು ಜಗತ್ತಿನ ದೀಪವಾದ ಸೂರ್ಯನಿಂದ ಸೆಳೆದು ತರುವಂತೆ ಆ ಮೇಧಾತಿಥಿಯ ಬಳಿಯಿಂದ ಬೇರೊಂದೆಡೆಗೆ ಒಯ್ದರು. ಆ ಮುಂದೆ ಕುಳಿತಿರುವ ದ್ವೀಪಾಧಿಪತಿಗಳನ್ನೆಲ್ಲ ಆ ದಮಯಂತಿಯು ತೃಣಪ್ರಾಯರನ್ನಾಗಿ ಎಣಿಸಿ, ಅವರಲ್ಲಿ ಆಕೆಗೆ ಸ್ವಲ್ಪವೂ ಮನಸ್ಸು ಕೂಡದೆ ಹೋಯಿತು. ಇದನ್ನು ಕಂಡು ತನ್ನ ಕೈಯೊಳಗಿನ ವೀಣೆಗಿಂತ ಮೃದು ಮಧುರವಾದ ಧ್ವನಿಯಿಂದ ಮಾತಾಡುವ ಆ ವಾಗ್ದೇವತೆಯು ಆಶ್ಚರ್ಯಪಟ್ಟು ತಿರುಗಿಯೂ ಆ ದಮಯಂತಿಗೆ ಹೇಳುವುದಕ್ಕೆ ತೊಡಗಿದಳು.

''ಭೈಮಿ! ಇಕೋ ನೀನು ಈ ಜಂಬೂದ್ವೀಪದ ಶಿರೋರತ್ನವಾಗಿ ಜನ್ಮವೆತ್ತಿರುವೆ. ಈ ಜಂಬೂದ್ವೀಪವೂ ಕೂಡ ನಿನಗಾಗಿ ಬಂದು ಸೇರಿರುವ ರಾಜಲೋಕದಿಂದ ಪರಮೇಶ್ವರನ ಭಯದಿಂದ ನಡುಗುತ್ತ ತೂಗಿ ತುಂಡಾಗಿ ಸ್ವರ್ಗದಿಂದ ಕುಸಿದು ಬಿದ್ದಿರುವ ಮನ್ಮಥ ಲೋಕದಂತೆ ಶೋಭಿಸುತ್ತಿದೆ, ನೋಡು. ಅದಲ್ಲದೆ ಈ ದ್ವೀಪವು ಉಳಿದ ಪ್ಲಕ್ಷಾದಿ ದ್ವೀಪಗಳೆಂಬ ಪರಿವಾರಗಳಿಂದ ಆವೃತವಾಗಿಯೂ, ಹೇಮಾದ್ರಿಯೆಂಬ ಕನಕಾತಪತ್ರದಿಂದ ಶೋಭಿಸುತ್ತಲೂ ಕೈಲಾಸದ ಶ್ವೇತರಶ್ಮಿಜಾಲಗಳ ಚಾಮರ ಚಿಹ್ನಿತವಾಗಿ ಆ ಉಳಿದ ದ್ವೀಪಗಳ ಅಧಿರಾಜನಂತೆ ಶೋಭಿಸು

ತ್ತಿದೆ. ತರುಣಿ! ಇಲ್ಲಿರುವ ರಾಜ ಜಂಬೂವೃಕ್ಷದಿಂದ ಇದಕ್ಕೆ ಜಂಬೂದ್ವೀಪವೆಂದು ಹೆಸರಾಯಿತು. ಇಲ್ಲಿ ತಿರುಗುತ್ತಿರುವ ಸಿದ್ಧಸ್ತ್ರೀಯರು ಆ ಮರದಲ್ಲಿ ಗಂಡಶೈಲದಂತಿರುವ ಫಲಗಳನ್ನು ಕಂಡು ಗಜಸಮೂಹಗಳು ಈ ಮರವನ್ನು ಯಾವ ದಾರಿಯಿಂದ ಏರಿಹೋದವೆಂದು ಭ್ರಮೆಗೊಳ್ಳುತ್ತಿದ್ದಾರೆ! ಆ ಮರದ ಆನೆಯಷ್ಟು ಗಾತ್ರಗಳಾದ ಆ ಜಂಬೂಫಲಗಳು ಕೆಳಕ್ಕುದುರಿ ಒಡೆದು ಅಮೃತದಂತೆ ಸವಿಯಾದ ಅವುಗಳ ರಸವು ಹರಿಯುತ್ತಿರಲು, ಆ ರಸದಿಂದ ಉಂಟಾದ ಜಂಬೂನದಿಯು ಈ ದ್ವೀಪದ ಸರಹದ್ದಿನಲ್ಲಿ ಹರಿಯುತ್ತಿರುವುದು. ಆ ನದಿಯ ಉದಕವೆಂಬ ಆ ರಸವು ತಗುಲಿದ ಜಂಬೂನದಿಯ ಸರಹದ್ದಿನ ಮಣ್ಣೆಲ್ಲವೂ ಜಾಂಬೂನದವೆಂಬ ಅಚ್ಚಬಂಗಾರವಾಗಿ ಪರಿಶೋಭಿಸುತ್ತಿರುವುದು. ಎಲೌ ಕಂಬುಕಂಠಿ! ಆ ಬಂಗಾರವು ಅಷ್ಟು ಮೇಲಾಗಿದ್ದರೂ ಅದು ನಿನ್ನ ಮೈಬಣ್ಣಕ್ಕೆ ಕೀಳಾದುದೆಂದೇ ಎಣಿಸುತ್ತೇನೆ. ಇಕೋ! ಈ ಜಂಬೂದ್ವೀಪಾಧಿಪತಿಗಳಲ್ಲಿ ರಕ್ತದಿಂದ ತಮ್ಮ ಶತ್ರುಗಳನ್ನೂ, ಕಣ್ಣೀರಿನಿಂದ ತಮ್ಮ ಶತ್ರುಪತ್ನಿಯರನ್ನೂ ನೆನೆಸಿದ ಹಲವರು ರಾಜರು ಇಲ್ಲಿ ಸೇರಿರುವರು. ಇವರಲ್ಲಿ ನಿನ್ನ ಮನಸ್ಸನ್ನು ಸೆಳೆಯತಕ್ಕ ರೂಪಸಂಪತ್ತುಳ್ಳ ಕೆಲವರನ್ನು ನಿನಗೆ ವಿವರಿಸಿ ಹೇಳುತ್ತೇನೆ; ಲಕ್ಷ್ಯವಿಟ್ಟು ಕೇಳು.

ಇದೋ! ಈ ಮುಂದೆ ತೋರುವವನೇ ಅವಂತೀಶ್ವರನು. ಇವನ ಪರಾಕ್ರಮವನ್ನು ಏನೆಂದು ವರ್ಣಿಸಲಿ! ಶತ್ರುಪತ್ನಿಯರು ಧರಿಸಿರುವ ತಮಾಲಮಾಲೆಗಳಿಂದುಂಟಾದ ತಿಮಿರವನ್ನು ಪರಿಹರಿಸತಕ್ಕ ಶೌರ್ಯಸೂರ್ಯನಾಗಿ ಸಕಲ ಸದ್ಗುಣಗಳಿಗೂ ವಿಶ್ರಾಂತಿಭವನವಾಗಿರುವ ಈತನಲ್ಲಿ ನಿನಗೆ ಮನಸ್ಸೂರುವುದೇ ಏನು? ನೀನು ಈತನನ್ನು ವರಿಸಿದೆಯಾದರೆ, ಉಭಯ ತೀರಗಳಲ್ಲಿಯೂ ಉಪಾಶ್ರಮಗಳುಳ್ಳ ಸಿಪ್ರಾನದಿಯು ನಿನ್ನ ಜಲಕ್ರೀಡೆಯ ವೇಳೆ ತನ್ನ ತೆರೆಗಳೆಂಬ ಭುಜಗಳಿಂದ ನಿನ್ನನ್ನು ಅಪ್ಪಿಕೊಳ್ಳುತ್ತ, ಅರಳಿದ ಕಮಲಗಳೆಂಬ ತನ್ನ ಹಾಸ್ಯಯುಕ್ತವಾದ ಮುಖದಿಂದ ನಿನ್ನಲ್ಲಿ ಸಖೀಭಾವವನ್ನು ತೋರದಿರಳು. ಅಪ್ಪಾ! ಈ ಅವಂತೀಶನ ಕೈಹಿಡಿಯುವುದರಿಂದ ಸಿಪ್ರಾನದಿಯ ಕ್ರೀಡಾಸುಖವೊಂದೇ ನಿನಗೆ ಲಭ್ಯವಾಗುವುದೆಂದು ತಿಳಿಯಬೇಡ. ಭವಪತ್ನಿಯಾದ ಭವಾನಿಯು ಈ ಅವಂತೀಶ್ವರನ ರಾಜಧಾನಿಯಾದ ಉಜ್ಜಯಿನಿಯಲ್ಲಿ ಸದಾ ವಾಸವಾಗಿರುವಳು. ಸರ್ವಸೌಭಾಗ್ಯಪ್ರದಾಯಕಳಾದ ಆ ಭವಾನಿಗೆ ನೀನು ಶಿಷ್ಯಳಾಗಿಯೂ ಆಗಬಹುದು. ಈ ಮಹಾರಾಜನು ತನ್ನ ಸ್ತ್ರೀಯರಿಗೆ ಅನೇಕ ಅಪರಾಧಗಳನ್ನು ಮಾಡಿರಬಹುದು. ಆದರೆ ವಾಮೆಯರಾದ ಆ ಸ್ತ್ರೀಯರೊಬ್ಬರೂ ಯಾವ ಸಂದರ್ಭದಲ್ಲಿಯೂ ನಿಷ್ಠುರವಾಕ್ಯವನ್ನು ನುಡಿದವರಲ್ಲ. ಇದಕ್ಕೆ ಅಲ್ಲಿರುವ ಮಹಾಕಾಲನೆಂಬ ಪರಮೇಶ್ವರನ ಮೌಳಿಯಲ್ಲಿ ಸದಾ ಸನ್ನಿಹಿತವಾಗಿರುವ ಚಂದ್ರಕಲೆಯೇ ಕಾರಣವೆಂದು ಎಣಿಸುತ್ತೇನೆ. ಶುಕ್ಲಪ್ರತಿಪತ್ತಿಥಿಯ ಚಂದ್ರಕಲೆಯಿಂದ ಆ ದಿನವು ಅನಧ್ಯಾಯವಾಗಿ ಪರಿಣಮಿಸಿದಂತೆ, ಆ ಉಜ್ಜಯಿನಿಯಲ್ಲಿ

ಸದಾ ಪ್ರತಿಪಚ್ಚಂದ್ರನೇ ಗೋಚರನಾಗುತ್ತಿರುವುದರಿಂದ ಪರುಷಾಕ್ಷರ ವಚನಗಳಿಗೂ ಅಲ್ಲಿ ಸದಾ ಅನಧ್ಯಾಯವೆಂದು ಎಣಿಸುತ್ತೇನೆ.

ಸರಸ್ವತೀ ದೇವಿಯು ಈ ಪ್ರಕಾರ ಆ ಅವಂತೀನಾಥನನ್ನು ವರ್ಣಿಸಿ ಹೇಳಿದರೂ ಭೀಮಭೂಪಾಲ ಪುತ್ರಿಯಾದ ಆ ದಮಯಂತಿಯು ತನ್ನಲ್ಲಿ ಆಸಕ್ತನಾಗಿದ್ದ ಆ ರಾಜನನ್ನು ಕಣ್ಣೆತ್ತಿಯೂ ನೋಡಲಿಲ್ಲ. ಅನ್ಯರಲ್ಲಿಟ್ಟಿರುವ ಅನುರಾಗದಿಂದ ವಿರಸವಾದ ದೃಷ್ಟಿಯಿಂದ ನೋಡುವುದಕ್ಕಿಂತ ನೋಡದಿರುವುದೇ ಮೇಲು. ಆಕೆಯ ಶಿಬಿಕೆಯನ್ನು ಕೆಳಗಿನಿಂದ ಹೊತ್ತಿರತಕ್ಕವರಿಗೆ ಪ್ರತ್ಯಕ್ಷವಾಗಿ ಅವಳ ಚೇಷ್ಟೆಯು ತಿಳಿಯದೆ ಹೋದರೂ ಅವಂತೀನಾಥನ ರತ್ನಖಚಿತವಾದ ಆಭರಣಗಳ ಮಣಿಗಳಲ್ಲಿ ಪ್ರತಿಬಿಂಬಿಸುವ ದಮಯಂತಿಯ ಪ್ರತಿಬಿಂಬದಿಂದಲೇ ಇವಳ ಮನೋಭಾವವನ್ನು ತಿಳಿದು ಹಿಂದೆ ರಘುವಂಶ ದೀಪಕನಾದ ಭಗೀರಥನು ಭೀಷ್ಮನಿಂದ ಪಾವನವಾದಲ್ಲದೆ ಕುಚಕುಂಭವುಳ್ಳವಳಾಗಿಯೂ, ಶಿವನ ಶಿರೋಭೂಷಣಳಾಗಿಯೂ ಇದ್ದ ಗಂಗೆಯನ್ನು ಹೇಗೆ ಭೂಮಿಗೆ ಒಯ್ದನೋ ಹಾಗೆಯೇ ಸ್ವರ್ಣ ವರ್ಣಳಾಗಿಯೂ ಹಾರ ಚೂಡಕ ನೂಪುರಾದ ಆಭರಣ ಯುಕ್ತಳಾಗಿಯೂ ಇದ್ದ ಈ ದಮಯಂತಿಯನ್ನು ಅನ್ಯರಾಜನ ಬಳಿಗೆ ಒಯ್ದರು.

ಪಾಲಕಿಯನ್ನು ಹೊತ್ತಿರತಕ್ಕ ಜನ್ಯಜನರು ಗೌಡದೇಶಾಧೀಶ್ವರನ ಬಳಿಗೆ ಬಂದು ನಿಂತರು. ಆಗ ಸರಸ್ವತೀ ದೇವಿಯು ಅಮ್ಮಾ! ಲಜ್ಜಾಲಸೆಯಾದ ದಮಯಂತಿಯೇ!! ಇದೋ ಈ ಮುಂದೆ ತೋರತಕ್ಕವನೇ ಗೌಡದೇಶಾಧೀಶ್ವರನು. ಇವನಲ್ಲಿ ನೀನು ಕ್ರೀಡಾರಾಗವನ್ನು ವಹಿಸುವೆಯಾದರೆ ಅದನ್ನು ಸೂಚಿಸು. ಈತನ ಯಶಸ್ಸಿನಿಂದ ಚಂದ್ರಕಿರಣಗಳು ತೃಣೀಕೃತಗಳಾದುವು. ಇದರಿಂದಲೇ ಸುಧಾಂಬುನಿಧಿಯಾದ ಆ ಚಂದ್ರನಲ್ಲಿರುವ ತೃಣಗಳನ್ನು ಮೆಲ್ಲುವ ಇಚ್ಛೆಯಿಂದ ಹುಲ್ಲು ನೀರುಗಳು ಸಮೃದ್ಧವಾಗಿರುವ ಕಡೆ ಮೃಗಗಳು ವಾಸಿಸುವಂತೆ ಆ ಅಂಕಮೃಗವೂ ವಾಸಮಾಡುತ್ತಿರುವುದು. ಅದಲ್ಲದೆ ಕಮಲ ಯುಕ್ತಗಳಾಗಿ ಮನೋಹರಗಳಾದ ನಿನ್ನ ಹಸ್ತಗಳು ಈ ಮಹಾರಾಜನನ್ನು ಆಲಿಂಗಿಸಿದಾಗ ಕಮಲ ಯುಕ್ತಗಳಾದ ಮೇಘ ಪಙ್ಕ್ತಿಯನ್ನು ಮೇರುಪರ್ವತದ ಶೃಂಗ ರೇಖೆಯು ಅನುಸರಿಸಿದಂತೆಯೂ ಮನ್ಮಥನ ಶಿರೋರುಹವನ್ನು ಚಂಪಕ ದಾಮವು ಸುತ್ತಿಕೊಂಡಂತೆಯೂ ಮನೋಹರವಾಗಿ ತೋರುವುದು. ಯುದ್ಧದಲ್ಲಿ ಈ ಮಹಾರಾಜನ ಇದಿರಾಗಿ ಬರುತ್ತಿರುವ ವೈರಿಗಳ ಆನೆಗಳ ಕುಂಭಸ್ಥಳಗಳನ್ನು ತನ್ನ ಕೈಯ ಖಡ್ಗದಿಂದ ಸೀಳಿದ ನಿಮಿತ್ತ ಹೊರಹೊರಟ ಮುತ್ತುಗಳು ಇವನ ಭುಜಪ್ರತಾಪವನ್ನು ಸಹಿಸಲಾರದೆ ಆ ರಾಜರ ಸಂಪಲ್ಲಕ್ಷ್ಮಿಯು ಚೆಲ್ಲಿದಂತೆ ತೋರುತ್ತಿರುವುವು. ಅಮ್ಮಾ! ಈತನಲ್ಲಿರುವ ಇನ್ನೊಂದು ವಿಚಿತ್ರವನ್ನು ಕೇಳು. ಈತನು ಅಜಾನುಬಾಹುವಾಗಿದ್ದರೂ ಇವನ ಪ್ರತಾಪವು ದಿಗಂತದವರೆಗೂ ವ್ಯಾಪಿಸಿರುವುದು. ಇವನು ಶುದ್ಧಾಶಯದಿಂದ ನಡಸಿದ ಸಪ್ತತಂತುಗಳಿಂದ ಉಂಟಾದ ಯಶಃಪಟವು ಹದಿನಾಲ್ಕು ಲೋಕಗಳನ್ನು ವ್ಯಾಪಿಸಿರುವುದು.

ಈ ಪ್ರಕಾರ ಸರಸ್ವತಿಯು ತಾನು ಹೇಳುವುದನ್ನೇನೋ ಹೇಳಿದಳು. ಆದರೆ ದಮಯಂತಿಯು ಕಿವಿಯು ಮಾತ್ರ ಆಕೆಯ ಮಾತಿನ ಕಡೆಗೆ ಲಕ್ಷ್ಯಕೊಡದೆ ಆ ಗೌಡರಾಜನಲ್ಲಿ ಔದಾಸೀನ್ಯವನ್ನು ತೋರಿದುದನ್ನು ಕಂಡು ಯಾನವಾಹಿಗಳು ತಮ್ಮ ಸ್ವಾಮಿನಿಯ ಆಜ್ಞೆಯನ್ನು ನಿರೀಕ್ಷಿಸದೆಯೇ ಮುಂದುವರಿದರು, ಸ್ವಾಮ್ಯಾಂಗಿತವನ್ನು ತಿಳಿಯಬಲ್ಲ ಸೇವಕರಿಗೆ ಮಾತುಗಳಿಂದ ಪ್ರತ್ಯೇಕವಾಗಿ ಆಜ್ಞಾಪಿಸುವ ಅವಶ್ಯವಿಲ್ಲ. ಕುಮಾರಿಯ ಈ ಭಾವವನ್ನರಿತ ವಾಣಿಯು ಮುಂದಿರುವ ಬೇರೊಬ್ಬ ರಾಜನನ್ನು ತೋರಿ, ಎಲೇ ಪದ್ಮಮುಖಿಯೇ! ದಮಯಂತಿಯೇ!! ಇದೋ! ಈ ಮುಂದೆ ಕಾಣಿಸುವ ರಾಜನನ್ನಾದರೂ ನಿನ್ನ ವಿಶಾಲವಾದ ದೃಷ್ಟಿಯಿಂದ ನೋಡು. ಈತನು ಮಥುರಾ ನಗರಿಯ ರಾಜನು. ಶತ್ರುರಾಜರೆಂಬ ಪಯೋಧಿಯ ಮಥನದಲ್ಲಿ ಈತನು ಮಂದರ ಸಮಾನನು. ಆತನ ಮುಖವನ್ನು ನೋಡು. ಇನ್ನೂ ಗಡ್ಡ ಮೀಸೆಗಳು ಹುಟ್ಟದ ಆತನ ವದನವು ಸಕಲಂಕನಾದ ಚಂದ್ರನಿಗಿಂತ ಮೇಲೆಂಬಂತೆ ನಿಷ್ಕಲಂಕವಾಗಿ ಹೊಳೆಯುತ್ತಿದೆ ನೋಡು. ಬಾಲೆ! ಈತನ ಹಸ್ತವನ್ನು ನೋಡು. ಜ್ಯಾಘಾತದಿಂದುಂಟಾದ ಗಂಟಿನಿಂದ ಶೋಭಿಸುತ್ತಿರುವ ಇವನ ಹಸ್ತದಲ್ಲಿರುವ ಕಂಕಣ ಮಾಣಿಕ್ಯದ ಕಡೆಗೆ ಲಕ್ಷ್ಯವಿಡು. ಶತ್ರುರಾಜರಿಗೆ ಅದು ಧೂಮಕೇತುವಂತೆ ತೋರತಕ್ಕುದು. ಇವನ ಭುಜದಮೇಲೆ ಕಾಣಿಸುವ ಜ್ಯಾಘಾತ ರೇಖೆಯು ಭುಜವೆಂಬ ಅರಣಿಯಿಂದ ಉಂಟಾದ ವಿಕ್ರಮಾಗ್ನಿಯ ಧೂಮ ರೇಖೆಯಂತೆ ತೋರುತ್ತಿದೆಯಷ್ಟೆ. ಈ ಧೂಮ ರೇಖೆಯು ಶತ್ರುಗಳೆಂಬ ಮಶಕಗಳನ್ನು ದೂರಮಾಡುವುದಕ್ಕಾಗಿಯೂ, ಅವರ ಪತ್ನಿಯರ ನಯನ ಕಮಲದಲ್ಲಿ ಅಶ್ರುಸ್ರಾವವನ್ನುಂಟುಮಾಡುವುದಕ್ಕಾಗಿಯೂ ಹುಟ್ಟಿದುದೆಂದು ತಿಳಿ. ನೀನು ಈತನನ್ನು ವಿವಾಹವಾದರೆ ಭೂಲತಾಂಗಿಯ ಬಾಸೆಯಂತೆ ಕಪ್ಪಾಗಿ ಹರಿಯುತ್ತಿರುವ ಯಮುನೆಯ ಶೋಭೆಯನ್ನು ನೋಡಬಹುದು. ಅದಲ್ಲದೆ ಗೋವರ್ಧನ ಪರ್ವತದಲ್ಲಿರುವ ನವಿಲುಗಳಿಂದ ನಿಃಸರ್ಪವಾಗಿಯೂ, ಸಾಂದ್ರವಾಗಿ ಬೆಳೆದಿರುವ ಮರಗಳಿಂದ ಛಾಯೆಯುಳ್ಳುದಾಗಿಯೂ, ಫಲ ಪುಷ್ಪ ಸಮೃದ್ಧವಾಗಿಯೂ ಇರುವ ವೃಂದಾವನದಲ್ಲಿ ಈತನೊಡನೆ ಸೇರಿ ಯಥೇಷ್ಟವಾಗಿ ವಿಹರಿಸಬಹುದು. ಅದೂ ಅಲ್ಲದೆ ನಿನ್ನ ಮುಖಕ್ಕೆ ಸೋತು ನಿಸ್ತೇಜಸ್ಕನಾದ ಚಂದ್ರನಂತೆ ಬಿಳುಪಾದ ದಂತದ ಬಳೆಗಳನ್ನು ತೊಟ್ಟು ಆ ವೃಂದಾವನದಲ್ಲಿರುವ ಪಲ್ಲವಗಳನ್ನು ಕೊಯ್ಯುತ್ತಿರುವ ವೇಳೆ ನಿನ್ನ ಹಸ್ತಕ್ಕೂ ಚಿಗುರುಗಳಿಗೂ ಭೇದವಿಲ್ಲದೆ ಸಂದೇಹವಾಗುತ್ತಿದ್ದರೂ, ನಿನ್ನ ಕೈಯಲ್ಲಿ ತೊಟ್ಟಿರುವ ಬಳೆಗಳ ಮೂಲಕ ಸುಖವಾಗಿ ಪಲ್ಲವಾಪಚಯವನ್ನು ಮಾಡತಕ್ಕವಳಾಗಬಹುದು. ಈ ವನದಲ್ಲಿ ಸಂಚರಿಸಿದುದರಿಂದುಂಟಾದ ಆನಂದದಿಂದ ನಿನ್ನ ಮೈಯಲ್ಲಿ ರೋಮಾಂಚಗೊಂಡಿರುವ ವೇಳೆ ಅಲ್ಲಿ ಕುಂಟನಂತೆ ಮೆಲ್ಲಗೆ ನಡೆಯುತ್ತಿರುವ ವಾಯುವೆಂಬ ಪಥಿಕನು ಬಾಯಾರಿ ನಿನ್ನ ಮೈಯು ಕಂಟಕಿತವಾಗಿಯೂ, ಮೃಗಮದವೆಂಬ ಕೆಸರಿನಿಂದ ವ್ಯಾಪ್ತವಾದುದಾಗಿಯೂ

ಇಷ್ಟರೂ ಲಕ್ಷ್ಯಮಾಡದೆ ಆ ನಿನ್ನ ನ್ಯಾಯಲ್ಲಿ ಹೋಗುತ್ತಿರುವ ಜನರನ್ನು ಸಂತೋಷದಿಂದ ಕಾಯುವನು. ಸುಂದರಿ! ಶ್ರೀಮಂತನಾದ ಈ ಮಹಾರಾಜನು ಯಜ್ಞಾದಿ ಕರ್ಮಗಳಲ್ಲಿ ಪ್ರತಿದಿನವೂ ವಿದ್ವಾಂಸರಿಗೆ ಕೊಡುತ್ತಿದ್ದ ಸುವರ್ಣಗಳಿಂದ ಕಮಲಗಳಂತಿರುವ ಅವರ ಹಸ್ತಗಳು ಒಳಗೆ ಕರ್ಣಿಕೆಯುಳ್ಳ ಪದ್ಮದಂತೆ ಶೋಭಿಸುತ್ತಿರುವುದಲ್ಲ! ಈ ಧರಾವಲಯದಲ್ಲಿ ಇವನು ಏಕವೀರನೆಂದು ಹೆಸರಿಗೆ ಬಂದವನು. ಇವನಿಗೆ ಸದಾ ಶತ್ರುಶ್ರೀಯನ್ನಾಲಿಂಗಿಸದೆ ತೃಪ್ತಿಯಿರದು. ಬಾಲೆ! ಇಂತಹ ಈ ಮಧುರಾ ನಾಥನು ನಿನ್ನನ್ನು ಹೊಂದಿ ಮನ್ಮಥನ ಪುಷ್ಪಬಾಣಗಳ ಮಕರಂದವನ್ನು ಸವಿದು ತೃಪ್ತನಾಗಲಿ.

ಸರಸ್ವತಿಯು ಈ ಪ್ರಕಾರ ಆ ಮಹಾರಾಜನನ್ನು ವರ್ಣಿಸಿದರೂ ದಮಯಂತಿಯ ಚಿತ್ತವು ಮಾತ್ರ ಆತನೆಡೆಗೆ ಹರಿಯದೆ ಅಲ್ಲಿಂದ ದೃಷ್ಟಿಯನ್ನು ತಿರುಗಿಸಿ ಮುಂದಕ್ಕೆ ಲಕ್ಷ್ಯವಿಡಲಾಗಿ ಇದನ್ನರಿತ ವಾಹಕರು ಆ ಸ್ಥಳದಿಂದ ಮುಂದುವರಿಸಲುದ್ಯುಕ್ತರಾದರು. ಆಗ ಸರಸ್ವತಿಯು ಅವನನ್ನು ವರ್ಣಿಸುವುದನ್ನು ಬಿಟ್ಟು ಮುಂದಿರುವ ಕಾಶೀರಾಜನನ್ನು ತೋರಿಸಿ—

"ಅಮ್ಮಾ ಖಂಜನಾಕ್ಷಿ! ಇವನ ಕಡೆಗಾದರೂ ಲಕ್ಷ್ಯವಿಡು. ಇವನು ಕಾಶಿಯ ಮಹಾರಾಜನು. ಯಾವ ಕಾಶಿಯನ್ನು ಜನರು ಸಂಸಾರಾರ್ಣವವನ್ನು ದಾಟಿಸತಕ್ಕ ಧರ್ಮಸ್ವರೂಪವಾದ ಮಹಾ ನಾವೆಯೆಂದು ತಿಳಿಯುವರೋ ಆ ಕಾಶಿಯೇ ಈ ಮಹಾರಾಜನ ಕುಲಾಗತವಾದ ರಾಜಧಾನಿಯು. ಯಾವ ಕಾಶಿಯನ್ನು ಸೇರಿದ ಮಾತ್ರಕ್ಕೆ ಜನರು ತಮ್ಮ ಸಮಸ್ತ ಪಾಪಗಳಿಂದಲೂ ಮುಕ್ತರಾಗುವರೋ ಆ ಕಾಶಿಯೊಡೆಯನು ಈ ಮಹಾರಾಜನು. ಹಿಂದೆ ಪರಮೇಶ್ವರನು ಬ್ರಹ್ಮನ ಮುಂದಿನ ಸೃಷ್ಟಿಯಲ್ಲುಂಟಾಗತಕ್ಕ ಜಂತುಗಳ ದುಃಖಪರಂಪರೆಯನ್ನು ಮನಸ್ಸಿಗೆ ತಂದು ಅವರ ದುಃಖಶಮನಾರ್ಥವಾಗಿಯೇ ಈ ಕಾಶಿಯನ್ನು ನಿರ್ಮಿಸಿದನು. ಹರಿಣಾಕ್ಷಿ! ಈ ಕಾಶಿಯು ಭೂಮಿಯಲ್ಲಿದ್ದರೂ ಇದು ಭೂಮಿಗೆ ಸೇರಿದುದೆಂದು ತಿಳಿಯಬೇಡ. ಕಾಶಿಯ ವಾಸವೇ ಸ್ವರ್ಗವಾಸವು. ಇದರಿಂದ ಆ ಪವಿತ್ರವಾದ ಕಾಶಿಯಲ್ಲಿ ಯಾರು ದೇಹವನ್ನು ಬಿಡುವರೋ ಅವರಿಗೆ ಮುಕ್ತಿಯಲ್ಲದೆ ಬೇರೆ ಗತಿಯೇ ಇರುವುದಿಲ್ಲ. ನೀನು ಈ ಮಹಾರಾಜನನ್ನು ಕೈಹಿಡಿದಲ್ಲಿ ಮುಂದೆ ಇಲ್ಲಿಯ ಮಹಿಮೆಯಿಂದ ಪಾರ್ವತೀಪತಿಯಾದ ಪರಮೇಶ್ವರನ ಸಾಯುಜ್ಯವನ್ನು ಸಂಪಾದಿಸಬಹುದು. ಮೋಕ್ಷಸಾಧನವೆಂದರೆ ಸಾಮಾನ್ಯವಾದ ಕಾರ್ಯವೆಂದು ತಿಳಿಯಬೇಡ. ಸಂನ್ಯಾಸ ಮೊದಲಾದ ವ್ರತಗಳಿಂದ ಮೋಕ್ಷವನ್ನು ಪಡೆಯತಕ್ಕ ಜಂತುಗಳು ಇಲ್ಲಿ ಸಂಸಾರಸುಖವನ್ನನುಭವಿಸುತ್ತ ಮೋಕ್ಷವನ್ನು ಪಡೆಯುವರೆಂದಮೇಲೆ ಈ ಕ್ಷೇತ್ರದ ಮಾಹಾತ್ಮ್ಯವು ಸಾಮಾನ್ಯವಾಯಿತೇ? ಈ ನನ್ನ ವಚನವು ನಿನಗೆ ಹಿತವಾಗದೆ ಹೋದರೆ ನಾನು ಮೌನಳಾಗುತ್ತೇನೆ. ನೀನು ಈತನನ್ನು ವರಿಸಿದಲ್ಲಿ ಮುಂದೆ ಕಾಶಿಯೇ ಸ್ವರ್ಗಕ್ಕಿಂತ ಅಧಿಕವಾಗುವುದು, ಕಾಶಿಯೊಡೆಯನಾದ ಈ ರಾಜನೇ ಸುರರೊಡೆಯನಿ

ಗಿಂತ ಮೇಲಾದವನೆಂಬ ಜ್ಞಾನವು ನಿನಗೆ ಆಮೇಲೆ ತಾನಾಗಿಯೇ ಬರುವುದು. ನೀನೇನೂ ಅರಿಯದವಳಲ್ಲ. ಕಾಶಿಯಲ್ಲಿ ಸೇರಿ ಪುಣ್ಯವನ್ನು ಸಂಪಾದಿಸಬೇಕೆಂದು ನಾನೇನೂ ನಿನಗೆ ಬೇರೆ ಹೇಳಬೇಕಾಗಿಲ್ಲ. ಅರ್ಥಿಗಳಾಗಿ ಬಂದವರಿಗೆಲ್ಲ ಗಂಗೋದಕ (ಅಮೃತ) ದಾನವನ್ನು ಮಾಡಿ ಅಮೃತ ಸತ್ರನೆಂದು ಹೆಸರುಗೊಂಡ ಕಾಶಿಯನ್ನು ಕುರಿತು ಹೆಚ್ಚಾಗಿ ಹೇಳುವುದೇನಿದೆ.

ಅಮ್ಮಾ! ನೀನು ಈತನ ಕೈಹಿಡಿಯುವುದರಿಂದ ಹಿಂದೆ ಮಾಡಿದ ಅಪರಾಧವನ್ನು ಶಿವಾರಾಧನೆಯಿಂದ ಕಳೆಯುವುದಕ್ಕಾಗಿ ದೇಹವನ್ನು ಧರಿಸಿ ಹುಟ್ಟಿರುವ ರತಿ ಮನ್ಮಥರಂತೆ ಬಾಳುವೆ. ತನ್ನ ಬಿಲ್ಲಿನಿಂದಲೇ ಸಂಗ್ರಹಿಸಿದ ಕೀರ್ತಿಯುಳ್ಳ ಈ ಮಹಾರಾಜನು ಯುದ್ಧಕಾಲದಲ್ಲಿ ಶತ್ರುಗಳ ಕಂಠನಾಳವನ್ನು ಕಡಿದಿಡತಕ್ಕ ಪ್ರತಾಪವುಳ್ಳವನು; ಇಂಥವನು ನಿನಗೆ ತಕ್ಕ ವರನಾಗಲು ಯೋಗ್ಯನಲ್ಲವೇ? ಇವನ ಎದೆಯು ಶತ್ರುಗಳ ಮೊನೆಯಾದ ಬಾಣದಿಂದಲೂ ಗಾಯಗೊಳ್ಳದಷ್ಟು ಕಠಿನವಾಗಿದ್ದು ವಜ್ರಸದೃಶವಾದ ಕಾರಣ, ಅದರಿಂದ ಹೊರಟ ಅಂಕುರಗಳಂತಿದ್ದ ಇವನ ಭುಜಗಳ ಪರಾಕ್ರಮಾಗ್ನಿಯು ಶತ್ರು ಪತ್ನಿಯರ ಸುರಿಯುವ ಕಣ್ಣೀರಿನಿಂದಲೂ ನಂದುವಂತಿರುವುದಿಲ್ಲ. ಅಮ್ಮಾ! ಭೀಮಕುಮಾರಿಯೇ! ಜಗತ್ತಿನಲ್ಲಿ ಪಾತ್ರಾಪಾತ್ರವನ್ನರಿಯದೆ ಕೋಗಿಲೆಗೂ ಕಾಗೆಗೂ ಫಲದಾನವನ್ನು ಮಾಡತಕ್ಕ ಲಕ್ಷಾಂತರ ವೃಕ್ಷಗಳು ಬೆಳೆದಿದ್ದರೂ ಅವುಗಳಲ್ಲೆಲ್ಲ ದೇವತೆಗಳ ಇಷ್ಟಾರ್ಥವನ್ನು ಸಲಿಸತಕ್ಕ ಕಲ್ಪವೃಕ್ಷವೇ ಸ್ತುತ್ಯವಾಗಿರುವಂತೆ ಈ ಮಹಾರಾಜನು ಸಮಸ್ತ ರಾಜ ಸಮೂಹದಲ್ಲಿಯೂ ಮೇಲಾದವನೆಂದು ತಿಳಿ. ಈತನಿಗೆ ಸರ್ವ ಸಾಮಂತರಾಜರೂ ಸದಾ ಕಪ್ಪವನ್ನು ತೆರುತ್ತಿರುವರು. ಒಮ್ಮೆ ದೈವಗತಿಯಿಂದ ಕರದಾನವನ್ನು ತಿರಸ್ಕರಿಸಿದಲ್ಲಿ ಇವನ ಕೈಯಲ್ಲಿರುವ ಕೃಪಾಣವೇ ಕರದಾನವನ್ನು ಮಾಡಿಸತಕ್ಕ ಮಧ್ಯಸ್ಥ ಸ್ಥಾನವನ್ನು ವಹಿಸುವುದು. ಇವನು ಯುದ್ಧಕ್ಕೆ ಹೊರಡುತ್ತಿರುವ ವೇಳೆ ಸಾವಿರಗಟ್ಟಲೆಯಾಗಿ ಹೊರಡುವ ಇವನ ಕುದುರೆಗಳ ಖುರನ್ಯಾಸವೇ ತೋರದೆ ಆಕಾಶದಲ್ಲಿಯೇ ನೆಗೆದು ಹೋಗುವಂತೆ ಕಾಣಿಸುವುದರಿಂದ ಇವನಲ್ಲಿ ಸಾವಿರಾರು ಉಚ್ಚೈಃಶ್ರವಗಳಿವೆಯೆಂದೂ, ಒಂದೇ ಒಂದು ಕುದುರೆಯುಳ್ಳ ಇಂದ್ರನಿಗಿಂತ ಇವನು ಸಾವಿರ ಪಾಲಿಗೆ ಮೇಲಾದವನೆಂದೂ ಹೊಗಳುವರು.''

ಈ ವಿಧವಾಗಿ ಸರಸ್ವತಿಯು ಕಾಶೀರಾಜನನ್ನು ವರ್ಣಿಸುತ್ತಿರುವಾಗ ದಮಯಂತಿಯ ದೃಷ್ಟಿಯು ಮಾತ್ರ ಜನ ಸಮೂಹದ ಶೋಭೆಯನ್ನು ಕಾಣುವುದರ ಕಡೆಗಿದ್ದಿತೇ ಹೊರತು ಸರಸ್ವತಿಯ ವಚನದ ಕಡೆಗಿರಲಿಲ್ಲ. ದಮಯಂತಿಯು ಹೀಗೆ ಆ ಮಹಾರಾಜನನ್ನು ತಿರಸ್ಕರಿಸಿದುದನ್ನು ಕಂಡು ಸಕಲ ರಾಜರ ಮುಖವೂ ವಿವರ್ಣವಾಯಿತು.

ಇತ್ತ ದಮಯಂತಿಯು ತೇಜಸ್ವಿಗಳಾಗಿಯೂ, ತನ್ನಲ್ಲಿ ಆಶೆಯುಳ್ಳವರಾಗಿಯೂ, ವಿವಿಧ ಗುಣಾಕರರಾಗಿಯೂ ಇದ್ದ ರಾಜರನ್ನೂ ರಾಜಕುಮಾರ

ರನ್ನೂ ದೇವತೆಗಳನ್ನೂ ಕೂಡ ತ್ಯಜಿಸಿ, ಸುಂದರನಾಗಿಯೂ ಆನಂದಪ್ರದನಾಗಿಯೂ ಇದ್ದ ಒಬ್ಬ ಪುರುಷನನ್ನು ಮನಸ್ಸಿನಲ್ಲಿ ಲಕ್ಷ್ಯೀಕರಿಸಿಕೊಂಡು ಮುಂದುವರಿಯುತ್ತಿರುವಾಗ ಆಕೆಯು ಉಪನಿಷತ್ತುಗಳೆಂಬ ವೇದಾಂತ ವಾಕ್ಯಗಳಂತೆ ಕಾಣಬಂದಳು.

ಎಂಬಲ್ಲಿಗೆ ನೈಷಧೀಯ ಚರಿತ್ರೆಯೊಳಗಿನ ದಶಮ ಸರ್ಗವು ಮುಗಿದುದು.

[ಸಶೇಷ]

ಗ್ರಂಥ ವಿಮರ್ಶೆ

೧. ಕನ್ನಡ ಸುಬೋಧಿನಿ

ಲೇಖಕರು.—ಶಂಭು ತಿಮ್ಮಣ್ಣ ಹೆಗ್ಗಡೆ, ಶಿಕ್ಷಕ, ಹೊಲಸಗದ್ದೆ ಇವರು.

ಡೆಮ್ಮಿ ಅಷ್ಟಪತ್ರ ಪುಟಗಳು ೫೦; ಕುಮಟಾ ಶ್ರೀ ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿತವಾಯ್ತು; ೧೯೨೭; ಬೆಲೆ ೩ ಆಣೆ.

ಇದು ಅಕ್ಷರ ಪರಿಚಯಕ್ಕಾಗಿ ಬರೆದಿರುವ ಒಂದು ಬಾಲಬೋಧೆ. ಇದರಲ್ಲಿ ಮಕ್ಕಳಿಗೆ ಬಳಕೆಯಲ್ಲಿರುವ ವಸ್ತುಗಳನ್ನೇ ತೆಗೆದುಕೊಂಡು ಚಿತ್ರಗಳನ್ನು ತೋರಿಸಿ ಅಕ್ಷರಾಭ್ಯಾಸಕ್ಕನುಕೂಲಿಸುವಂತೆ ಮಾಡಿದೆ. ಇದು ಮಕ್ಕಳಿಗೆ ಅಕ್ಷರಗಳನ್ನೂ ಸುಲಭವಾದ ಶಬ್ದಗಳನ್ನೂ ಬೋಧಿಸಿ ಕಲಿಸುವುದಕ್ಕೆ ಎಲ್ಲ ವಿಷಯಗಳಲ್ಲಿಯೂ ತಕ್ಕಹಾಗಿದೆ. ಆದರೆ ಅಲ್ಲಲ್ಲಿರುವ—ಅಡಿಕೆ, ಇಳತ, ಊಡದಾರ, ನಾಯಿಶಾಬಾಲ, ಆದೆ, ಸೌದೀ, ರಾತ್ರೆ, ಆರಿಶಿಣ, ಲಿಂಬೇ, ಜೇಸಿಗೆ, ಸೆಂಟ; ಮೊದಲಾದ ಶಬ್ದ ರೂಪಗಳು ಶುದ್ಧವಾಗಿಲ್ಲ. ಪ್ರಾರಂಭದಲ್ಲಿ ಶಬ್ದ ಪರಿಚಯವನ್ನುಂಟುಮಾಡುವ ಉದ್ದೇಶದಿಂದ ಬರೆದಿರುವ ಇಂತಹ ಪುಸ್ತಕಗಳು ಅಶುದ್ಧ ಶಬ್ದರೂಪಗಳಿಂದ ಕೂಡಿದ್ದರೆ ಆ ರೂಪಗಳೇ ಮಕ್ಕಳ ಮನಸ್ಸಿನಲ್ಲಿ ಬೇರೂರಿ ಶುದ್ಧ ರೂಪವನ್ನು ತಿಳಿಯುವುದಕ್ಕವಕಾಶವಿಲ್ಲದಂತಾಗುವುದು. ಲೇಖಕರು ಈ ಸಂದರ್ಭಕ್ಕೆ ಆವಶ್ಯಕವಾಗಿ ಗಮನಕೊಟ್ಟು ಸರಿಪಡಿಸುವುದು ಮುಖ್ಯವಾದ ಸಂಗತಿ. ಇನ್ನೊಂದು ಮುದ್ರಣದಲ್ಲಾದರೂ ಇದನ್ನು ಸರಿಪಡಿಸಿ ಅನುಕೂಲಿಸುವಂತೆ ಮಾಡುವರೆಂದು ನಿರೀಕ್ಷಿಸುತ್ತೇವೆ.

---

೨. ಭಾರತೀಯ ಚಿತ್ರ ಕಲೆಯ ಸಂಕ್ಷಿಪ್ತ ಇತಿಹಾಸ

ಲೇಖಕರು.—ಅ. ಸ. ಕೃಷ್ಣರಾಯರು, ವಿಶ್ವೇಶ್ವರಪುರ, ಬೆಂಗಳೂರು.

ರಾಯಲ್ ಪುಟಗಳು ೮.

ಇದು ಭರತಖಂಡದ ಚಿತ್ರ ಕಲೆಯ ವಿಷಯವನ್ನು ತಿಳಿಸುವ ಪುಸ್ತಕವು. ಇದರಲ್ಲಿ ಆದಿಯಿಂದಲೂ ಕ್ರಮವಾಗಿ ಯಾವ ಕಾಲದಲ್ಲಿ ಯಾರಿಂದ ಚಿತ್ರ ಕಲೆಯು ಈ ದೇಶದಲ್ಲಿ ಅಭಿವೃದ್ಧಿಯಾಗಿ ಯಾವ ರೀತಿಯಲ್ಲಿ ಪ್ರಕಟವಾಗುತ್ತ ಬಂದಿದೆ, ಈಗ ಯಾವ ಸ್ಥಿತಿಯಲ್ಲಿದೆ, ಇದಕ್ಕಾಗಿ ಮುಂದೆ ಯಾವ ವಿಷಯಕ್ಕೆ ಗಮನ ಕೊಡಬೇಕು ಎಂಬ ಸಂಗತಿಗಳನ್ನು ಲೇಖಕರು ವಿವರಿಸಿರುವರು. ಚಿತ್ರ ಕಲಾ ವೃದ್ಧಿಗೂ ಪ್ರಚಾರಕ್ಕೂ ಯಾರು ಯಾರು ಎಷ್ಟರ ಮಟ್ಟಿಗೆ ಕಾರಣರಾಗಿದ್ದಾ

ರೆಂಬುದನ್ನು ಆಯಾ ಕಾಲದೊಡನೆ ತಿಳಿಯಲು ಈ ಪುಸ್ತಕವು ಸಹಾಯಕವಾಗಿರುತ್ತದೆ. ಎಲ್ಲರೂ ಈ ಪುಸ್ತಕವನ್ನೋದಿ ಗ್ರಹಿಸಬೇಕಾದುದು ಆವಶ್ಯಕವಾಗಿರುವುದರಿಂದ ಇದಕ್ಕೆ ಪ್ರೋತ್ಸಾಹಕರಾಗುವರೆಂದು ಭಾವಿಸುತ್ತೇವೆ.

---

೩. ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ

(ಸಂಪುಟ ೫, ಸಂಚಿಕೆ ೨, ೩)

ಸಂಪಾದಕರು.—ಮೈಸೂರು ವ್ಯವಸಾಯ ಶೋಧಕ ಸಂಘ, ಬೆಂಗಳೂರು.

ರಾಯಲ್ ಪುಟಗಳು ೨೪; ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಿತವಾಯಿತು; ೧೯೨೮; ವಾರ್ಷಿಕ ಚಂದಾ ರೂ. ೩; ಬಿಡಿ ಪ್ರತಿ ೧ಕ್ಕೆ ೪ ಆಣೆ.

ಇದು ಒಂದು ಮಾಸಪತ್ರಿಕೆ. ಇದರಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿವಿಧ ವಿಷಯಗಳು ಪ್ರಕಟವಾಗುತ್ತವೆ. ಈ ಸಂಚಿಕೆಗಳಲ್ಲಿ ಹೆಬ್ಬಾಳಿನ ವ್ಯವಸಾಯ ಪಾಠಶಾಲೆ, ಪ್ರಾಣಿಮಯ ಪ್ರಪಂಚ, ಮೈಸೂರು ದೇಶದಲ್ಲಿ ಕಬ್ಬಿನ ವ್ಯವಸಾಯ, ಸಸ್ಯ ವರ್ಗದ ರೋಗಗಳು, ಇಲಿಗಳ ಕಾಟ, ಬಿತ್ತನೆಯ ಬೀಜಗಳನ್ನಾರಿಸುವುದು, ಹಾಲಿನ ಉತ್ಪತ್ತಿ, ಹಿಂಡಿಗೊಂದು ಗೂಳಿಯನ್ನಾರಿಸುವಿಕೆ, ಭತ್ತದ ಸಾಗುವಳಿಯನ್ನು ಕುರಿತು ಕೆಲವು ಶೋಧನೆಗಳು, ಪರಸ್ಪರ ಸಹಾಯಕ ಸಂಘಗಳು ಮತ್ತು ಅವುಗಳ ನ್ಯೂನತೆಗಳು; ವ್ಯವಸಾಯ ಅನುಭವ, ವ್ಯವಸಾಯದ ರಾಯಲ್ ಕಮಿಷನ್, ಕಬ್ಬಿಗೆ ಕೃತಕ ಗೊಬ್ಬರಗಳನ್ನು ಕೊಟ್ಟು ನಡೆಯಿಸಿದ ಪರೀಕ್ಷೆ—ಈ ವಿಷಯಗಳು ವರ್ಣಿತವಾಗಿವೆ. ಪುಸ್ತಕದ ಕಾಗದವೂ ಮುದ್ರಣವೂ ಅಂದವಾಗಿವೆ. ಸಂದರ್ಭಾನುಸಾರವಾಗಿ ಅಲ್ಲಲ್ಲಿ ಬೇಕಾದ ಚಿತ್ರಗಳಿವೆ. ಭಾಷೆಯು ಲಲಿತವಾಗಿಯೂ ಸುಲಭವಾಗಿಯೂ ಇರುವುದರಿಂದ ಸಾಧಾರಣವಾಗಿ ಬೇಸಾಯಗಾರರು ಓದಿ ಗ್ರಹಿಸುವುದಕ್ಕನುಕೂಲವಾಗಿದೆ. ವಿಸಹ, ಕೈಲಿ, ಮೊರಸೇ, ಸಹಾ, ಸಡವಳಿಕೆ, ಅಥವ, ತರಹ, ಹಿಗಬೇಕಾದುದು, ಗಿಡ್ಡವಾಗಿ, ಬೇಸಿದೆ, ಶೋಧನಾ ಕೆಲಸ, ಎಂಥಾದ್ದು, ನಡೆಸಲು; ಮೊದಲಾದ ಶಬ್ದರೂಪಗಳು ಕೆಲವೆಡೆಗಳಲ್ಲಿ ಶುದ್ಧವಾಗಿಲ್ಲದಿರುವುದರಿಂದ ಈ ವಿಷಯಕ್ಕೆ ಗಮನಕೊಡಬೇಕಾದುದು ಆವಶ್ಯಕವಾಗಿದೆ. ಇದರಲ್ಲಿ ಶಾಸ್ತ್ರೀಯವಾಗಿಯೂ, ತಿಳಿದವರು ಮಾಡಿರುವ ಪರೀಕ್ಷೆಗಳಿಂದ ಗೊತ್ತಾಗಿಯೂ, ಉತ್ತಮವಾಗಿಯೂ ಇರುವ ವ್ಯವಸಾಯ ಶಾಸ್ತ್ರಗಳ ಸಂಗತಿಯನ್ನು ವಿವರಿಸುವುದರಿಂದ ಕೃಷಿಕರೆಲ್ಲರೂ ಇದನ್ನೋದಿ ತಿಳಿದುಕೊಂಡು ವ್ಯವಸಾಯಾಭಿವೃದ್ಧಿ ಮಾಡಿಕೊಳ್ಳಲು ಇದು ಬಹಳ ಸಹಾಯಕವಾಗುವುದೆಂಬುದರಲ್ಲಿ ಸಂದೇಹವಿಲ್ಲ.

೪. ಮಿಂಚಿಗೆ ಮರುಳು

ಲೇಖಕರು.—ಸವಿಗನ್ನಡ ಮಗು, ಕರ್ನಾಟಕ ತರುಣ ಸಂಘ, ರಾಯಚೂರು.

ಕ್ರೌ ಅಷ್ಟಪತ್ರ ಪುಟಗಳು ೮; ರಾಯಚೂರು ಶ್ರೀ ಬ್ರಹ್ಮಭೂಷಣ ಮುದ್ರಣಾಲಯದಲ್ಲಿ ಮುದ್ರಿತವಾಯ್ತು; ೧೯೨೮; ಬೆಲೆ ೧ ಆಣೆ.

ಇದು ರವಾ (ಜಾನ್‌ಸನ್) ಸಕ್ಕರೆಯ ವಿಷಯವನ್ನು ತಿಳಿಸುವುದಕ್ಕಾಗಿ ಬರೆದ ಸಾಂಗತ್ಯಗಳ ಪುಸ್ತಕವು. ಇದರಲ್ಲಿ ಆ ಸಕ್ಕರೆಯನ್ನು ನಿರ್ಮಿಸುವ ವಿಧಾನವನ್ನೂ ಗುಣದೋಷಗಳನ್ನೂ ೬೨ ಸಾಂಗತ್ಯ ಪದ್ಯಗಳಿಂದ ವಿವರಿಸಿದೆ. ಆ ಸಕ್ಕರೆಯು ಅಶುದ್ಧವೂ ಅನಾರೋಗ್ಯಕರವೂ ಅಯೋಗ್ಯವೂ ಆಗಿದೆಯೆಂಬುದನ್ನು ತಕ್ಕ ನಿದರ್ಶನಗಳಿಂದಲೂ ಪರೀಕ್ಷೆಗಳಿಂದಲೂ ಇದರಲ್ಲಿ ತೋರಿಸಿರುವುದರಿಂದ ಆ ಸಂಗತಿಯು ಚೆನ್ನಾಗಿ ವ್ಯಕ್ತವಾಗುವುದು. ಇದರ ಭಾಷಾ ಶೈಲಿಯು ಸುಲಭವಾಗಿಯೂ ಸರಳವಾಗಿಯೂ ಇದೆ. ದ್ವಾರ, ಎತ್ತಿನಿ, ಹುಡಗ, ಎಲವು, ಸಿಕ್ಕಲ್ಲಿ, ಲಕ್ಷಗಟ್ಲೇ, ಅಸ್ತಿ, ಇದ್ದಲ್ಲಿ, ಸಕ್ಕರಿ, ಎಸೂ, ಯೋಗ್ಯ, ಹೆಣ್ಣ, ತಿಂನ್ನು, ಇರಳು ಮೊದಲಾದ ಅಶುದ್ಧ ಶಬ್ದರೂಪಗಳೂ ಮುದ್ರಣದ ತಪ್ಪುಗಳೂ ಅಲ್ಲಲ್ಲಿ ಕಾಣಬರುವುವು. ಇದಕ್ಕೆ ಗಮನಕೊಡಬೇಕಾದುದು ಅವಶ್ಯಕವಾಗಿದೆ. ಈ ಪುಸ್ತಕವನ್ನೋದುವುದರಿಂದ ಜಾನ್‌ಸನ್ ಸಕ್ಕರೆಯ ಗ್ರಾಹ್ಯಾಗ್ರಾಹ್ಯತೆಯು ಗೊತ್ತಾಗುವುದರಿಂದ ಎಲ್ಲರೂ ಇದನ್ನು ಓದಿ ತಿಳಿಯುವುದು ಅವಶ್ಯಕವೆಂದು ತೋರುವುದು.

---

೫. ಬೆಂಗಳೂರು ಪಬ್ಲಿಕ್ ಲೈಬ್ರೆರಿಯ ಕನ್ನಡ ಪುಸ್ತಕಗಳ ಪಟ್ಟಿ

ಕ್ರೌ ಚತುಷ್ಪತ್ರ ಪುಟಗಳು ೩೫; ೧೯೨೮;
ಬೆಲೆ: ಕಾಗದದ ಪ್ರತಿ ೪ ಆಣೆ, ರಟ್ಟಿನ ಪ್ರತಿ ೬ ಆಣೆ.

ಸಂಗ್ರಹಕಾರರು.—ವೈ. ವಿ. ಚಂದ್ರಶೇಖರಯ್ಯ, ಬಿ.ಎ., ಎಲ್‌ಎಲ್.ಬಿ., ಲೈಬ್ರೇರಿಯನ್.

ಈ (ಲೈಬ್ರೆರಿಯು) ಪುಸ್ತಕಭಾಂಡಾಗಾರವು ೧೯೧೫ನೆಯ ಇಸವಿಯಲ್ಲಿ ಮೈಸೂರು ಸರಕಾರದಿಂದ ಸ್ಥಾಪಿತವಾಗಿ ಅಠಾರಾ ಕಛೇರಿಯ ಹಿಂಭಾಗದಲ್ಲಿ ಸರ್ ಕೆ. ಶೇಷಾದ್ರಿ ಅಯ್ಯರವರ ಜ್ಞಾಪಕಾರ್ಥವಾಗಿ ಕಟ್ಟಿರುವ ಪ್ರಾಸಾದದಲ್ಲಿ ನೆಲೆಗೊಂಡಿದೆ. ಇದರಲ್ಲಿ ಇಂಗ್ಲಿಷು ಪುಸ್ತಕಗಳೂ ನಿಯತಕಾಲಿಕ ಪತ್ರಿಕೆಗಳೂ ಮೊದಲಾದುವೇ ಹೇರಳವಾಗಿರುವುವು. ಈಚೆಗೆ ಕನ್ನಡಕ್ಕೂ ಎಡೆಗೊಟ್ಟು ಕನ್ನಡ ಪುಸ್ತಕಗಳನ್ನೂ ಸಂಗ್ರಹಿಸುತ್ತಿರುವರು. ಆದರೆ ಈ ಭಾಂಡಾಗಾರದಲ್ಲಿಯ ಒಟ್ಟು ಕನ್ನಡ ಪುಸ್ತಕಗಳು ಪ್ರಕೃತ ಪಟ್ಟಿಕೆಯಿಂದ ಎಂಟು ನೂರಕ್ಕೆ ಮೇಲ್ಪಟ್ಟಿರುವಂತಿಲ್ಲ. ಈ ಸಂಖ್ಯೆಯು ಹತ್ತರಷ್ಟಾದರೂ ಕನ್ನಡ ಪುಸ್ತಕಗಳಿರುವುವೆಂದು ತೋರುವುದು; ಆದರೆ ಎಲ್ಲವೂ ಉತ್ತಮ ತರಗತಿಗೆ ಸೇರಿದುವುಗಳೆಂದು ಹೇಳ

ಲಾಗುವುದಿಲ್ಲ. ಹೇಗೇ ಇರಲಿ, ಪ್ರಕಟವಾಗಿರುವ ಪ್ರತಿ ಕನ್ನಡ ಪುಸ್ತಕವನ್ನೂ ಇಂತಹ ಸಂಸ್ಥೆಯಲ್ಲಿಡದಿದ್ದರೆ ಮತ್ತೆಲ್ಲಿ ಯಾರಿಡುವರು? ಹಾಗಿಡುವುದರಿಂದ ಭಾಷಾಸ್ಥಿತಿಯು ಜನರಿಗೆ ಮನದಟ್ಟಾಗಿ ಕ್ರಮೇಣ ಅಭಿವೃದ್ಧಿಗೆ ಬರಬಹುದು.

ಈ ಪುಸ್ತಕಗಳ ಪಟ್ಟಿಯನ್ನು ಈ ಭಾಂಡಾಗಾರದ ಮುಖ್ಯಾಧಿಕಾರಿಗಳು ಬಹಳ ಶ್ರಮಪಟ್ಟು ಹೊಸ ನಮೂನೆಯಲ್ಲಿ ತಯಾರಿಸಿರುವರು. ಈ ನಮೂನೆಯು ಅಮೆರಿಕಾ ದೇಶದ ಡಾಕ್ಟರ್ ಮೆಲ್ವಿಲ್ ಡ್ಯೂಯಿಯವರ "ದಶಾಂಶ ಗ್ರಂಥ ವಿಭಾಗ" ಕ್ರಮವನ್ನನುಸರಿಸಿದೆ. ಈ ಕ್ರಮವು ಲಕ್ಷಾಂತರ ಪುಸ್ತಕಗಳಿರುವ ಭಾಂಡಾಗಾರಗಳಲ್ಲಿ ಉಪಯುಕ್ತವಾಗಿರುವುದೇನೋ ಸಹಜ; ಈಗ ಒಂದು ಸಾವಿರ ಪುಸ್ತಕಗಳು ಕೂಡ ಇಲ್ಲದಿರುವ ಮತ್ತು ಮುಂದೆಯೂ ಅಷ್ಟು ಹೆಚ್ಚಾಗಿ ಪುಸ್ತಕಗಳು ಪ್ರಕಟವಾಗುವುವೆಂಬ ಆಶೆಯೂ ಇಲ್ಲದಿರುವ ಭಾಷೆಯ ಭಾಂಡಾಗಾರಕ್ಕೆ ಇಂತಹ ನಮೂನೆಯು ಅಷ್ಟು ಪ್ರಯೋಜನಕಾರಿಯೆಂದು ನಾವು ನಂಬಲಾರೆವು. ಉತ್ಸಾಹಶಾಲಿಗಳಾದ ಈ ಪುಸ್ತಕಾಲಯಾಧಿಪತಿಗಳು ಕನ್ನಡ ಶಾಖೆಯನ್ನು ಅಭಿವೃದ್ಧಿಗೊಳಿಸಲು ತಕ್ಕ ಪ್ರಯತ್ನಗಳನ್ನು ಕೂಡಲೆ ಕೈಕೊಳ್ಳುವರೆಂದು ಹಾರೈಸುತ್ತೇವೆ.

---

೬. ಪ್ರಸನ್ನ ವೆಂಕಟರ ಕೀರ್ತನೆಗಳು

(ಭಾಗ ೧)

ಲೇಖಕರು.—ಪ್ರಸನ್ನ ವೆಂಕಟದಾಸರು.

ಸಂಪಾದಕರು.—ಕೌಜಲಗಿ ಬಂಡೇರಾಯರು.

ಕ್ರಾ ಅಷ್ಟಪತ್ರ ಪುಟಗಳು ೯೨; ಧಾರವಾಡದ ಕರ್ಮವೀರ ಮುದ್ರಣಾಲಯದಲ್ಲಿ ಮುದ್ರಿತವಾಯಿತು; ೧೯೨೮; ಬೆಲೆ ೮ ಆಣೆ.

ಇದೊಂದು ಕೀರ್ತನೆಗಳ ಪುಸ್ತಕ. ಇದರ ಕವಿಗಳ ಮತ್ತು ಈ ಗ್ರಂಥದ ವಿಷಯವನ್ನು ಸಂಕ್ಷೇಪವಾಗಿ ಸಂಗ್ರಹಿಸಿ ಮ॥ ರಾ। ವಿ. ಬಿ. ಆಲೂರವರು ಗ್ರಂಥಾರಂಭದಲ್ಲಿ ಪ್ರಸ್ತಾವನೆಯನ್ನು ಬರೆದಿರುವರು. ಗ್ರಂಥಕರ್ತರು ಸುಮಾರು ಇನ್ನೂರು ವರ್ಷಗಳ ಹಿಂದೆ ಬಾಗಲಕೋಟೆಯಲ್ಲಿದ್ದವರೆಂದು ತಿಳಿಯಬರುತ್ತದೆ. ಪುರಂದರದಾಸರು ಮೊದಲಾದ ಭಕ್ತಶಿರೋಮಣಿಗಳು ಲೋಕೋಪಕಾರಾರ್ಥವಾಗಿ ಹಾಡುಗಳನ್ನೂ ಪದಗಳನ್ನೂ ರಚಿಸಿರುವಂತೆ ಈ ದಾಸರೂ ರಸವತ್ತಾಗಿ ರಚಿಸಿರುವರು. ಭಕ್ತಿ, ಜ್ಞಾನ, ವೈರಾಗ್ಯಗಳು ವ್ಯಕ್ತವಾಗಿ ತೋರುವಹಾಗೆ ಭಗವಂತನ ಗುಣಚರಿತ್ರೆಗಳೂ ಆತನ ಮಹಿಮೆಗಳೂ ಸ್ತುತಿಯೂ ಇದರಲ್ಲಿ ತುಂಬಿರುವುವು. ಅನೇಕ ರಾಗಗಳು, ತಾಳಗಳು, ಮಟ್ಟುಗಳು ಇವುಗಳಿಂದ ಸುಲಭವಾದ ಕನ್ನಡದಲ್ಲಿ ಹಾಡುಗಳು ರಚಿತವಾಗಿವೆ. ಕ್ಲಿಷ್ಟ ಪದಗಳಿಗೆ ಅರ್ಥವು ಥಟ್ಟನೆ ಹೊಳೆಯದಿರುವೆಡೆಗಳಲ್ಲಿ ವಾಚಕರ ಅನುಕೂಲ್ಯಕ್ಕಾಗಿ ಶಬ್ದಾರ್ಥಗಳನ್ನು

ಕೊಟ್ಟಿರುವುದು ಬಹಳ ಅನುಕೂಲವಾಗಿದೆ. ಈ ಗ್ರಂಥವು ಈ ವರೆಗೂ ಮುದ್ರಿತವಾಗಿಲ್ಲವುದರಿಂದ ವಾಚಕರಿಗೆ ಹೊಸ ಪರಿಚಯಕ್ಕೆ ಕಾರಣವಾಗಿರುವುದು. ಇದರಂತೆ ಇದರ ೨, ೩, ೪ನೆಯ ಭಾಗಗಳನ್ನೂ ಮುದ್ರಿಸಿ ಪ್ರಚಾರಗೊಳಿಸುವುದಕ್ಕೆ ಸಂಪಾದಕರು ಯತ್ನಿಸುತ್ತಿರುವರು. ಹರಿಕಥೆಯು ದಾಸರಿಗೂ, ಕೀರ್ತನಕಾರರಿಗೂ, ಇತರ ಭಕ್ತರಿಗೂ ಇದು ಸಹಾಯಕರವಾಗಿರುತ್ತದೆ. ಎಲ್ಲರೂ ಇದನ್ನು ಗ್ರಹಿಸಿ ಗ್ರಂಥಕ್ಕೆ ಪ್ರೋತ್ಸಾಹಕರಾಗುವುದಲ್ಲದೆ ಮುದ್ರಣದಲ್ಲಿರುವ ಭಾಗಗಳನ್ನು ಪ್ರಕಟಿಸುವುದಕ್ಕೆ ಸಹಾಯಕರಾಗುವರೆಂದು ಹಾರೈಸುತ್ತೇವೆ.

---

೭. ಕೀಚಕ ವಧವು

ಲೇಖಕರು.—ಕರ್ಜಗಿಯ ರಾಜಗೋಪಾಲದಾಸರು.

ಸಂಪಾದಕರು.—ಕೌಜಲಗಿ ಬಂಡೆಪ್ಪನವರು.

ಸಣ್ಣ ಪುಟಗಳು ೪೫ ; ಧಾರವಾಡದ ಕರ್ಮವೀರ ಮುದ್ರಣಾಲಯದಲ್ಲಿ ಮುದ್ರಿತವಾಯ್ತು ; ಬೆಲೆ ೪ ಆಣೆ.

ಇದೊಂದು ಹಾಡಿನ ಪುಸ್ತಕ. ಇದರಲ್ಲಿ ಮಹಾಭಾರತದ ವಿರಾಟ ಪರ್ವದ ಕಥೆಯು ಉಕ್ತವಾಗಿರುವುದು. ಇದರಲ್ಲಿ ರಾಗ ತಾಳಗಳಿಂದ ಕೂಡಿದ ಮಟ್ಟುಗಳಿರುವುದಲ್ಲದೆ ಶ್ಲೋಕ, ವಚನ, ಆರ್ಯ, ಲಾವಣಿ ಇವುಗಳೂ ಸೇರಿವೆ. ಭಾಷೆಯು ಸುಲಭವಾಗಿಯೂ ಲಲಿತವಾಗಿಯೂ ಇದೆ. ಕ್ಲಿಷ್ಟ ಪದಗಳಿಗೆ ಅಲ್ಲಲ್ಲಿ ಅರ್ಥಗಳನ್ನು ಕೊಟ್ಟಿರುವುದರಿಂದ ವಾಚಕರಿಗೆ ಬಹು ಅನುಕೂಲವಾಗಿದೆ. ಇದು ಕಥಾರೂಪವಾಗಿರುವ ಹಾಡುಗಳಿಂದ ಕೂಡಿರುವುದರಿಂದ ಸ್ತ್ರೀಯರು ಓದಿ ಹೇಳಿಕೊಳ್ಳುವುದಕ್ಕೆ ತಕ್ಕಹಾಗಿದೆ. ಭಕ್ತಿರಸವೂ ಇದರಲ್ಲಿ ವ್ಯಕ್ತವಾಗಿ ತೋರಿಬರುವಂತಿದೆ; ಎಲ್ಲರೂ ಇದನ್ನು ಓದಿ ಗ್ರಹಿಸಲು ಅರ್ಹವಾಗಿರುವುದರಿಂದ ಈ ಗ್ರಂಥಕ್ಕೆ ಪ್ರೋತ್ಸಾಹಕರಾಗುವರೆಂದು ನಂಬುತ್ತೇವೆ.
